ಪಂಡಿತ ಪ್ರವರ ಕವಿವರ್ಯ ಟೇಕಚಂದ ಕೃತ

ಮೂಲಗ್ರಂಥ ಪ್ರಾಕೃತ ಹಾಗೂ ಢೂಂಢಾರಿ ಟೀಕೆಯ ಕನ್ನಡ ಅನುವಾದ

# ಸುದೃಷ್ಟಿ ತರಂಗಿಣಿ


ಲೇಖಕರು :

**ಪಂಡಿತ ಟೇಕಚಂದರು**

ಹಿಂದಿಯಿಂದ ಕನ್ನಡಕ್ಕೆ ಅನುವಾದಕರು :

**ಶ್ರೀಮತಿ ಧವಲಶ್ರೀ ಅಣ್ಣಾಸಾಹೇಬ ಪಾಟೀಲ,**

'ಶುದ್ಧಾತ್ಮ ಸದನ, ಹುಳಬತ್ತಿ ಕಾಲೋನಿ,

ಶಹಾಪುರ-ಬೆಳಗಾವಿ.



ಪ್ರಕಾಶಕರು :

**ಶ್ರೀ ದಿಗಂಬರ ಜೈನ ಸ್ವಾಧ್ಯಾಯ ಮಂಡಲ ಟ್ರಸ್ಟ,**

ಬೆಂಗಳೂರು.

- ಮೊದಲನೆಯ ಆವೃತ್ತಿ : ಐದುನೂರು ಪ್ರತಿಗಳು, (೫೦೦)

- ಜೇಷ್ಠ ಶುದ್ಧ ಪಂಚಮಿ - ಶ್ರುತ ಪಂಚಮಿಯ ಶುಭಸಂದರ್ಭದಲ್ಲಿ
  ೨೪-೦೫-೨೦೨೩



- ಎಲ್ಲ ಹಕ್ಕುಗಳು ಸುರಕ್ಷಿತ



- ಬೆಲೆ : ನೂರು ರೂಪಾಯಿ ೧೦೦/-
  (ಮೂಲ ಬೆಲೆ : ೩೫೦ ರೂ.)

- ದೊರಕುವ ಸ್ಥಳ :
  ದಿಗಂಬರ ಜೈನ ಸ್ವಾಧ್ಯಾಯ ಮಂಡಲ ಟ್ರಸ್ಟ,
  ೧೪೧, ರಂಗಸ್ವಾಮಿ ಗುಡಿ ಬೀದಿ,
  ಬೆಂಗಳೂರು - ೫೬೦ ೦೫೩.

  ''ಶ್ರುತ ಭಂಡಾರ'',
  ೩೬, ಶುದ್ಧಾತ್ಮ ಸದನ, ಹುಳಬತ್ತಿ ಕಾಲೋನಿ,
  ಶಹಾಪುರ-ಬೆಳಗಾವಿ.
  ಫೋನ ಃ ೨೪೬೬೯೧

- ಮುದ್ರಕರು :
  ಇಮೇಜ ಪ್ರಿಂಟ್ಸ,
  ೨೮೯೩, ಕಚೇರಿ ಗಲ್ಲಿ, ಶಹಾಪುರ, ಬೆಳಗಾವಿ.
  ಫೋನ : ೨೪೨೬೧೩೭

# ಪ್ರಕಾಶಕೀಯ

ಭ. ಕುಂದಕುಂದಾಚಾರ್ಯದೇವರ ಪಂಚಪರಮಾಗಮ ಮೊದಲು ಮಾಡಿಕೊಂಡು ಉತ್ತರವರ್ತಿ ಅನೇಕ ಆಚಾರ್ಯರ ಕೃತಿಗಳನ್ನು ಕನ್ನಡದಲ್ಲಿ ಪ್ರಕಾಶಿತ ಮಾಡಿದ ನಮ್ಮ ಸಂಸ್ಥೆಯು ನಿರಂತರವಾಗಿ ಪ್ರಕಾಶನ ಕಾರ್ಯದಲ್ಲಿ ಮುನ್ನಡೆಯುತ್ತ ಕನ್ನಡದ ಪಾಠಕರಿಗೆ ಹೆಮ್ಮೆಯ ಸ್ಥಾನವಾಗಿದೆ.

ಭವ್ಯ ಜೀವರುಗಳ ಪುಣ್ಯದ ಬಲದಿಂದ ತೀರ್ಥಂಕರ ಪ್ರಭುಗಳ ಸಮವಸರಣವು ಅವರಿರುವಲ್ಲಿಗೆ ವಿಹಾರ ಮಾಡುತ್ತಿತ್ತು ಮತ್ತು ದಿವ್ಯವಾಣಿಯ ಶ್ರವಣಯೋಗವು ಆ ಜೀವರುಗಳ ಭವ್ಯತೆಯು ಪ್ರಕಟವಾಗುವಲ್ಲಿ ನಿಮಿತ್ತವಾಗುತ್ತಿತ್ತು . ಅದೇ ಪ್ರಕಾರ ಈ ಪಂಚಮ ಕಾಲದಲ್ಲಿ ಪಾತ್ರ ಪಾಠಕರ ಪುಣ್ಯಯೋಗದಿಂದ ಪವಿತ್ರ ಮೋಕ್ಷಮಾರ್ಗವನ್ನು ಕಂಡುಕೊಳ್ಳುವಲ್ಲಿ ಪರಮ ನಿಮಿತ್ತವಾದ ಶ್ರುತಸಾಗರದ ಅಲೆಗಳಂತೆ ಒಂದೊಂದಾಗಿ ಗ್ರಂಥಗಳು ಕನ್ನಡದೊಳಗೆ ಇಳಿದು ಬಂದು ಪಾಠಕರ ಕೈ ಸೇರುವಲ್ಲಿ ಅವರ ಉಜ್ವಲ ಭವಿಷ್ಯವೇ ಪ್ರಮುಖ ಪಾತ್ರವಹಿಸುತ್ತಿದೆ. ಉಪಾದಾನವು ಪಕ್ವವಾದ ಮೇಲೆ ನಿಮಿತ್ತವಿರುವುದಿಲ್ಲವೆಂಬುದು ಅಸಂಭವವಿದೆ.

ಪಂ. ಟೇಕಚಂದರು ಬರೆದಿರುವ ಪ್ರಸ್ತುತ ಸುದೃಷ್ಟಿ ತರಂಗಿಣಿ ಗ್ರಂಥವು ಜೈನ ಸಿದ್ಧಾಂತದ ಸಂಗ್ರಹ ಕೃತಿಯೆಂದು ಹೇಳಿದರೆ ಅತಿಶಯೋಕ್ತಿಯಾಗುವುದಿಲ್ಲ. ಈ ಗ್ರಂಥದಲ್ಲಿ ಜೈನ ದರ್ಶನದ ಎಲ್ಲ ವಿಷಯಗಳ ಪರಿಚಯವನ್ನು ಮಾಡಿಸಲಾಗಿದೆ. ಯಾರು ಈ ಗ್ರಂಥದ ಸ್ವಾಧ್ಯಾಯ ಮಾಡುತ್ತಾರೆ ಅವರಿಗೆ ಜೈನ ದರ್ಶನದ ಎಲ್ಲ ವಿಷಯಗಳ ಸಾಮಾನ್ಯ ತಿಳಿವಳಿಕೆಯು ಮೂಡಿ ಬರುತ್ತದೆಯೆಂಬ ಮಾತನ್ನು ಪೂರ್ಣ ವಿಶ್ವಾಸದಿಂದ ಹೇಳಬಹುದಾಗಿದೆ.

ತೀರ್ಥಧಾಮ ಸಿದ್ಧಾಯತನದಿಂದ ೨೦೧೪ ರಲ್ಲಿ ಪ್ರಕಾಶಕಂಡ 'ಸುದೃಷ್ಟಿ ತರಂಗಿಣಿ' ಎಂಬ ಉಪಯುಕ್ತ ಕೃತಿಯ ಪ್ರಾಕೃತ ಹಾಗೂ ಢೂಂಢಾರಿ ಟೀಕೆಯ ಹಿಂದಿ ಅನುವಾದರೂಪ ಗ್ರಂಥದ ಕನ್ನಡ ಅನುವಾದವನ್ನು ಬೆಳಗಾವಿ ನಿವಾಸಿ ಶ್ರೀಮತಿ ಧವಲಶ್ರೀ ಪಾಟೀಲ ಅವರು ಮಾಡಿದ್ದಾರೆ ಮತ್ತು ಕರಡು ದೋಷಗಳನ್ನೂ ತಿದ್ದಿ ಗ್ರಂಥದ ನಿರ್ದೋಷತೆಗೆ ಸಹಕರಿಸಿರುವುದರಿಂದ ಅವರು ಅನಂತ ಸಾಧುವಾದಕ್ಕೆ ಪಾತ್ರರಿದ್ದಾರೆ.

ಇನ್ನು ಈ ಕನ್ನಡ ಕೃತಿಯ ಪ್ರಕಾಶನದ ಸಂಪೂರ್ಣ ಖರ್ಚನ್ನು ಜಿನವಾಣಿಯ ಸಲುವಾಗಿ ಅಪರಿಮಿತ ಭಕ್ತಿ-ಗೌರವವನ್ನಿಟ್ಟುಕೊಂಡಿರುವ ಬೆಂಗಳೂರಿನ ಗೌರವ ಇಡೀ ಭಾರತದ ಸ್ವಾಧ್ಯಾಯ ಪ್ರಿಯರ ಆತ್ಮೀಯರಾದ ಶ್ರೀ ರಮೇಶ ಭಂಡಾರಿಯವರು ತಮ್ಮ ಕಿರಿಯ ಸುಪುತ್ರ ಚಿ. ಅರ್ಚಿತರವರ ವಿವಾಹ ಸಂದರ್ಭವನ್ನು ನಿಮಿತ್ತ ಮಾಡಿಕೊಂಡು ಶಾಸ್ತ್ರದಾನದ ರೂಪದಲ್ಲಿ ಭರಿಸಿದ್ದಾರೆ. ಅವರ ಈ ಸದ್ಭಾವನೆಯು ಅವರಿಗೆ ಹಾಗೂ ಅವರ ಪರಿವಾರದವರಿಗೆ ಸಂಪೂರ್ಣ ಮೋಹದ ಅಭಾವಕ್ಕೆ ನಾಂದಿಯಾಗಲೆಂದು ಹಾರೈಸುತ್ತೇವೆ.

ಕೊನೆಯದಾಗಿ ಇದನ್ನು ಅಂತರ್ಬಾಹ್ಯ ಆಕರ್ಷಕವಾಗಿ ಮುದ್ರಿಸಿಕೊಟ್ಟಿರುವ ಇಮೇಜ ಪ್ರಿಂಟ್ಸ್‌ದ ಮಾಲಿಕರಾದ ಶ್ರೀ ಅಜಿತ ಪಾಟೀಲ ಬೆಳಗಾವಿ ಅವರಿಗೆ ಹಾಗೂ ಮುದ್ರಣ ಮಂದಿರದ ಕುಶಲ ಕಾರ್ಮಿಕರಿಗೆ ಅನೇಕ ಧನ್ಯವಾದಗಳನ್ನು ಅರ್ಪಿಸುತ್ತ ಈ ಸುಂದರವೂ, ಸುಲಭವೂ, ಪರಮ ಕಲ್ಯಾಣದ ನಿಮಿತ್ತವೂ ಆಗಿರುವಂಥ ಉದ್ಗ್ರಂಥವನ್ನು ಪಾಠಕರ ಕೈಗೆ ಕೊಡುತ್ತಿದ್ದೇವೆ.

ಚೈತ್ರ ಶುದ್ಧ ಪ್ರತಿಪದೆ
ದಿ. : ೨೨-೦೩-೨೦೨೩

**ಅಧ್ಯಕ್ಷರು**
ಶ್ರೀ ದಿಗಂಬರ ಜೈನ ಸ್ವಾಧ್ಯಾಯ ಮಂಡಲ ಟ್ರಸ್ಟ, ಬೆಂಗಳೂರು.

# ಪ್ರಸ್ತಾವನೆ

ಸಂಪೂರ್ಣ ಸಾಹಿತ್ಯಕ್ಕೆ ಮೂಲ ಆಧಾರವು ಸರ್ವಜ್ಞರ ವಾಣಿಯೇ ಇದೆ. ಅದರಲ್ಲಿ ವಿಶ್ವದ ಆರುದ್ರವ್ಯ , ಏಳು ತತ್ತ್ವ , ಒಂಭತ್ತು ಪದಾರ್ಥ ಮತ್ತು ಐದು ಅಸ್ತಿಕಾಯಗಳ ವಿವೇಚನೆಯು ತುಂಬಿಕೊಂಡಿದೆ. ವಿಶ್ವದ ಅನಂತ ಜೀವಗಳು ಸ್ವಯಂ ಜ್ಞಾನಸ್ವಭಾವಿಯಿದ್ದು ಸುಖ-ಶಾಂತಿಯ ಸಾಗರವಿದ್ದರೂ ಅದರ ಪರಿಚಯದ ಅಭಾವದಿಂದ ಅನಾದಿಯಿಂದಲೇ ಪರಾಧೀನತೆಯ ಸ್ವೀಕಾರದೊಂದಿಗೆ ದುಃಖದಲ್ಲಿ ಮುಳುಗಿ ಹೋಗಿವೆ. ಮತ್ತು ಆ ದುಃಖದ ಕೆಲಭಾಗ ಎಂದರೆ ದುಃಖದ ವಿಭಾಗವನ್ನೇ ಕಲ್ಪನೆಯಿಂದ ಸುಖವೆಂದು ಮನ್ನಿಸುತ್ತ ದುರ್ಲಭತೆಯಿಂದ ದೊರಕಿಕೊಂಡಿರುವ ಮತ್ತು ನಿಜಸ್ವಭಾವದ ಪರಿಚಯ ಮಾಡಿಕೊಳ್ಳುವ ಸಲುವಾಗಿಯೇ ಪ್ರಾಪ್ತವಾಗಿರುವ ಅಂತರಂಗ ಸಾಮರ್ಥ್ಯವೆಂಬ ಸಾಮಗ್ರಿಯನ್ನು ನೋಡು-ನೋಡುತ್ತಿರುವಂತೆ ನಿರರ್ಥಕವಾಗಿಸಿಕೊಂಡು ಯಥಾ ಪ್ರಕಾರ ಸಂಸಾರ ಚಕ್ರದಲ್ಲಿ ಉಳಿಯುತ್ತಿವೆ-ಭೀಕರವಾದ ಪರಾಧೀನತೆಯೊಂದಿಗೆ ದುಃಖ ಸಾಗರದಲ್ಲಿ ಕಳೆದು ಹೋಗುತ್ತಿವೆ.

ಜೀವನಿಗೆ ದುಃಖ ಪರಂಪರೆಯಿಂದ ಬಿಡುಗಡೆ ಹೊಂದುವ ಸಲುವಾಗಿ ಸಂಸಾರ ಚಕ್ರವನ್ನು ಭೇದಿಸುವ ಸಲುವಾಗಿ ಅಂತರಂಗ ಸಾಮಗ್ರಿ ಅರ್ಥಾತ್ ಯೋಗ್ಯ-ಅಯೋಗ್ಯ ಕರ್ತವ್ಯಗಳನ್ನು ಕಂಡು -ತಿಳಿದು, ಯೋಗ್ಯದ ಗ್ರಹಣ ಮತ್ತು ಅಯೋಗ್ಯದ ತ್ಯಾಗ ಮಾಡುವ ಜ್ಞಾನ ಸಾಮರ್ಥ್ಯವೇ ಮುಖ್ಯವಿದೆ; ಆದರೆ ಬಾಹ್ಯ ಸಾಮಗ್ರಿ ಎಂದರೆ ನಿಜ ಸ್ವಭಾವದಲ್ಲಿ ಅಂತರ್ನಿಮಗ್ನ-ವೀತರಾಗ ಸರ್ವಜ್ಞ ದೇವರು, ನಿಜ-ಪರಗಳ ಸ್ವರೂಪ ತಿಳಿಸುವ ಶಾಸ್ತ್ರ ಮತ್ತು ಸ್ವರೂಪ ಸಾಧಕ ಪರಮ ಕರುಣೆಯ ಸಾಕಾರ ಮೂರ್ತಿಗಳಾದ ನಗ್ನ ದಿಗಂಬರ ಗುರುಗಳ ಸಾನ್ನಿಧ್ಯ ದೊರಕದ ಕಾರಣ ಆ ದುರ್ಲಭತೆಯಿಂದ ದೊರಕಿದ ಅಂತರಂಗ ಸಾಮಗ್ರಿಯು ಅಯೋಗ್ಯ ಅಥವಾ ತನಗೆ ಮಹಾನ ಹಾನಿ-ನಷ್ಟವಾಗುವ ಕಾರ್ಯಗಳ ವ್ಯಸ್ತತೆಯಲ್ಲಿ ಕಳೆದು ಹೋಗಿ ಭವಸಾಗರದಲ್ಲಿಯೇ ಅಪರಿಮಿತ ದುಃಖ ದಾವಾನಲದಲ್ಲಿಯೇ ಪುನಃ ಹೊರಳಿ ಬೀಳುವಂತಾಗುತ್ತದೆ.

ಅಂಥ ಬಾಹ್ಯ ಸಾಮಗ್ರಿಗಳಲ್ಲಿ ಈ ಪಂಚಮ ಕಾಲದೊಳಗೆ ಒಂದು ನಿತ್ಯಬೋಧಕವಾದ ಶಾಸ್ತ್ರವೇ ಭಾಗ್ಯದಿಂದ ಸುಲಭವಾಗಿ ಲಭಿಸಿರುವ ಮಂಗಲಮಯ ಪ್ರಸಂಗವು ನಮಗೆ ಪ್ರಾಪ್ತವಾಗಿದೆ ಎಂದರೆ ಈಗ ನಮ್ಮ ಜೀವನವನ್ನು ಪರಮ ಮಂಗಲ ಮಾಡಿಕೊಳ್ಳುವ ಸಮಸ್ತ ಅಂತರ್ಬಾಹ್ಯ ಸಾಮಗ್ರಿಗಳನ್ನು ಪಡೆದ ನಾವು ಮಹಾ ಭಾಗ್ಯಶಾಲಿಗಳಿರುವುದರ ಪರಿಚಯವು ನಮಗೆ ಮೊದಲು ಆಗಿ, ಅದರ ದೃಢತೆಯಿಂದ ನಾವು ಅಂತಃತತ್ತ್ವದ ನಿರ್ಣಯವಾಗುವ ಪ್ರಯೋಜನಭೂತ ಕಾರ್ಯದಲ್ಲಿ ನಮ್ಮ ಜ್ಞಾನವನ್ನು ತೊಡಗಿಸಿ ದೃಷ್ಟಿಯ ನಿರ್ಮಲತೆಯನ್ನು ಸಾಧಿಸಿ ಆಚರಣೆಯ ಪವಿತ್ರತೆಯ ಸಲುವಾಗಿ ಉದ್ಯಮಶೀಲರಾಗಿ ನಿಜ-ಪರಗಳ ಉನ್ನತಿಯೊಂದಿಗೆ ಜಿನಧರ್ಮದ ಗೌರವವನ್ನು ಹೆಚ್ಚಿಸಬೇಕು ಅಥವಾ ಕಾಪಾಡಬೇಕು. ಉಳಿದ ಯಾವ ಕಾರ್ಯದಿಂದಲೂ ನಮ್ಮ ಜೀವನದ ಸಾರ್ಥಕತೆಯಾಗುವಂತಿಲ್ಲ . ಜ್ಞಾನವು ಸರ್ವಥಾ ಜ್ಞಾನದಲ್ಲಿ ಪ್ರತಿಷ್ಠಿತ-ವಾಗುವವರೆಗೆ ನಿರಂತರ ಜ್ಞಾನದ ಉದ್ಯಮಕ್ಕೆ ಉದಯದ ಅನುಕೂಲತೆಯಿರುವಾಗ ಮತ್ತು ಪ್ರತಿಕೂಲತೆ ಬಂದ ಮೇಲೆಯೂ ಕೂಡ ಜಿನವಾಣಿ-ಸತ್‌ಶ್ರುತದ ಅವಲಂಬನೆಯು ಬೇಕೇ ಬೇಕು !

ಜೈನಾಚಾರ್ಯರುಗಳ ಅನೇಕಾನೇಕ ಗ್ರಂಥಗಳ ರಹಸ್ಯವನ್ನು ಸಾಮಾನ್ಯ ಸರಳ ಹೃದಯಿಗಳಿಗೆ

ಸುಲಭವಾಗಿಯೇ ತಿಳಿಯುವಲ್ಲಿ ಆಧಾರವಾಗುವ ಈ 'ಸುದೃಷ್ಟಿತರಂಗಿಣಿ'ಯು ಮಹಾನ ಉಪಕಾರೀ ಕೃತಿಯಿದೆ. ಪಂ. ಟೇಕಚಂದರು ಜೈನ ದರ್ಶನದ ಸಮಸ್ತ ಸಿದ್ಧಾಂತಗಳನ್ನು ಇದೊಂದರಲ್ಲಿ ತುಂಬಿ ಬಿಟ್ಟಿದ್ದಾರೆ. ಸಿದ್ಧಾಂತಗಳನ್ನು ನಂಬಿ ಆಶ್ರಯಿಸಿ ಅಭ್ಯಸಿಸುವ ಜೀವದ ಸಿದ್ಧ ಅವಸ್ಥೆಯು ನಿಶ್ಚಿತವಾಗಿಯೇ ಅಲ್ಪ ಕಾಲದೊಳಗೆ ಪ್ರಕಟವಾಗುವ ಮಾತಂತೂ ಸರ್ವವಿದಿತವಿದೆ. ಮುಕ್ತಾವಸ್ಥೆಗೆ ಮೊದಲ ಮೆಟ್ಟಿಲು ಸುದೃಷ್ಟಿ ಎಂದರೆ ಸಮ್ಯಗ್ದೃಷ್ಟಿ-ಸಮ್ಯಗ್ದರ್ಶನವಿದೆ. ದೃಷ್ಟಿಯ ತರಂಗಗಳು ಸಮ್ಯಕ್ ಅಥವಾ ನಿರ್ಮಲವಾಗಬೇಕಾದರೆ ಜೀವದ ಜ್ಞಾನವು ಜ್ಞೇಯ ಮತ್ತು ಹೇಯ-ಉಪಾದೇಯಗಳ ಸ್ವರೂಪವನ್ನು ಅರಿತುಕೊಳ್ಳುವುದು ಅನಿವಾರ್ಯವಿದೆ.

ನಿತ್ಯದ ಜೀವನದಲ್ಲಿ ಸಂಸಾರದ ಸಂಬಂಧಗಳಲ್ಲಾಗುವ ಪ್ರತಿಯೊಂದು ವ್ಯವಹಾರದಲ್ಲಿ ಜ್ಞೇಯ-ಹೇಯ- ಉಪಾದೇಯಗಳ ವಿಭಾಗಗಳಾಗಬೇಕು. ತನ್ನ ಭಾವಗಳಲ್ಲಿ, ಧಾರ್ಮಿಕ ಕಾರ್ಯಗಳಲ್ಲೆಲ್ಲ, ಕರ್ಮಗಳ ಎಲ್ಲ ಜಾತಿಯ ಉದಯದ ಪ್ರಭಾವದಲ್ಲಿ, ತಾನು ಸಾಗಬೇಕಾದ ಉನ್ನತಿಯ ಪವಿತ್ರ ಮಾರ್ಗದ ಸಲುವಾಗಿ ಎಲ್ಲವನ್ನೂ ಹೇಗಿದೆಯೋ ಹಾಗೆ ತಿಳಿಯುವ ಕಾರ್ಯವು ಅತ್ಯಗತ್ಯವಿದೆ. ಮತ್ತು ಅದರಿಂದ ಆ ತಿಳಿವಳಿಕೆಯಿಂದ ಹೇಯ, ಉಪಾದೇಯಗಳ ವಿಭಾಗ ತನ್ನಿಂದ ತಾನೇ ಆಗುತ್ತ ಜೀವನು ತನಗೆ ಉಪಾದೇಯವಿರುವ ಕಾರ್ಯಗಳಲ್ಲಿ, ವಿಚಾರಗಳಲ್ಲಿ, ಶ್ರದ್ಧೆಯಲ್ಲಿ, ಆಚರಣೆಯಲ್ಲಿ ಸಾಗುವಂತಾಗಬೇಕು. ಹೇಯವಿದ್ದುದು ಬಿಟ್ಟುಹೋಗುತ್ತ ನಮ್ಮಗಳ ಜೀವನವು ಮಂಗಲಮಯವಾಗಬೇಕು, ಉತ್ತರೋತ್ತರ ಪವಿತ್ರವಾಗಬೇಕು ಈ ಕೃತಿಯ ಅಭ್ಯಾಸದಿಂದ ಆ ಕಾರ್ಯವು ಸುಲಭವಾಗಿಯೇ ಆಗುತ್ತದೆ ಏಕೆಂದರೆ ಎಲ್ಲ ರೀತಿಯ ಜ್ಞೇಯ-ಹೇಯ ಉಪಾದೇಯಗಳ ಚರ್ಚೆಯು ಇದರಲ್ಲಿದೆ.

ನಲವತ್ತೆರಡು ಪರ್ವ ಎಂದರೆ ವಿಭಾಗಗಳಲ್ಲಿ ಹರಡಿ ನಿಂತ ವಿಷಯವು ತತ್ತ್ವಾಭಿಲಾಷಿ ಜೀವರುಗಳಿಗೆ ವಿವಿಧ ವಿಷಯಗಳ ಭೂರಿ ಭೋಜನವನ್ನೇ ಮಾಡಿಸುವಂಥ ಈ ಕೃತಿಯು ಮಹಾಪುಣ್ಯದ ಉದಯದಿಂದ ನಮ್ಮ ಜೀವನದಲ್ಲಿ ಲಭಿಸಿದೆ. ಶ್ರಾವಕನ ಹನ್ನೊಂದು ನೆಲೆಗಳ ಚರ್ಚೆಯಂತೂ ಪಾಠಕರನ್ನು ಮಿಥ್ಯಾತ್ವ ಅವಸ್ಥೆಯಲ್ಲಿ ಕೂಡ ಸ್ವಯಂ ತಾನೇ ಆ ನೆಲೆಗಳ ಪವಿತ್ರತೆಗೆ ಪ್ರಾಪ್ತವಾಗಿರುವಂಥ ಅನುಭವವನ್ನೇ ಉಣ್ಣಿಸುತ್ತದೆ. ಉಚ್ಚ ಕುಲದವರ ಜೀವನವು ಯಾವ ರೀತಿ ಸಾಮಾನ್ಯ ಪ್ರಜೆಗಳಿಂದ ಬೇರೆಯಾಗಿದ್ದು ಎಲ್ಲರ ಮೇಲೆ ಪ್ರಭಾವ ಬೀರುತ್ತದೆ, ಉಚ್ಚ ಕುಲದವರು ತಮ್ಮ ಮಕ್ಕಳಿಗೆ ಯಾರ ಹತ್ತಿರ ವಿದ್ಯಾಧ್ಯಯನ ಮಾಡಿಸುತ್ತಾರೆ, ಅಲ್ಲಿ ಅವರು ಯಾವ ವಿದ್ಯೆಯನ್ನು ಬಾಲಕರಿಗೆ ಮೊದಲು ಬೋಧಿಸುತ್ತಾರೆ, ನಂತರ ಲೌಕಿಕ ವಿದ್ಯೆಗಳನ್ನು ಯಾವ ರೀತಿ ಕಲಿಸಿಕೊಡುತ್ತಾರೆ, ಆ ಬಾಲಕರ ಜೀವನವು ಯಾವ ರೀತಿ ಇಹ-ಪರ ಲೋಕಗಳಲ್ಲಿ ಜೀವನಿಗೆ ಸುಖದ ಆಧಾರವಾಗುತ್ತದೆ, ಹೀಗೆ ಹತ್ತು ಹಲವು ವಿಷಯಗಳು ನಮ್ಮ ಅಂತರಂಗಕ್ಕೆ ವೇದ್ಯವಾಗುತ್ತ ಯಾವುದೋ ಅರಿಯದ ಸುಂದರವಾದ ಲೋಕಕ್ಕೆ ನಮ್ಮನ್ನು ಕರೆದುಕೊಂಡು ಹೋಗುತ್ತದೆ.

ಮಹಾ ಅಧರ್ಮವೂ ಪಾಪದ ಮೂಲವೂ ಆದ ಹಿಂಸೆಯ ನಿಷೇಧವನ್ನು ಅನೇಕ ದೃಷ್ಟಾಂತಗಳೊಂದಿಗೆ ತಿಳಿಸಿಕೊಡುವ ರೀತಿಯಂತೂ ಎಂಥ ನಿಷ್ಠುರ ಹೃದಯಿಯನ್ನು ಕೂಡ ದಯಾವಂತನನ್ನಾಗಿಸುತ್ತದೆ. ಹಿಂಸೆಯಲ್ಲಿ ಧರ್ಮ, ಹಿಂಸೆಯಿಂದ ಸುಖವೆಂದು ಮನ್ನಿಸುವ ಅಜ್ಞಾನದ ನಿಷೇಧವನ್ನಂತೂ ಹೇಗೆ ಮಾಡಿದ್ದಾರೆಂದರೆ ಅಚೇತನವು ಜ್ಞಾನಸಹಿತವಾಗಿ ಮಾರ್ಪಟ್ಟರೆ, ಚೇತನವು ಜ್ಞಾನರಹಿತವಾಗಿ ಹೋದರೆ, ಕಲಹದಿಂದ ಕೀರ್ತಿಯಾದರೆ ಹಿಂಸೆಯು ಪುಣ್ಯದ ಫಲಕೊಡಬಹುದೆಂದು

ಹೇಳಿ ಪರಪದಾರ್ಥ - ಜಡ ವಿಷಯ ಸಾಮಗ್ರಿಗಳ ಸಂಗ್ರಹ ಬುದ್ಧಿಯ ಮೇಲೆ, ಸಂಗ್ರಹಿಸುವ ಕರ್ತೃತ್ವ ಬುದ್ಧಿಯ ಮೇಲೆ ನಿಜವಾಗಿ ಪ್ರಹಾರ ಮಾಡಿ ಪರಿಗ್ರಹ-ಖ್ಯಾತಿಗಳಲ್ಲಿ ಆಸಕ್ತರಿರುವ ಜೀವರುಗಳನ್ನು ಆಕುಲತೆಯರೂಪದ ಭಾವಹಿಂಸೆಯಿಂದ ಬಿಡಿಸಿದ್ದಾರೆ. ವ್ರತಿಗಳು ಮಂದಕಷಾಯದಿಂದ ಸುಖಿಯಿದ್ದಾರೆ ಮತ್ತು ದೇವಗಳು, ಇಂದ್ರರು, ಚಕ್ರವರ್ತಿಗಳು ಸಂಕ್ಲೇಶ ಸಹಿತ ಸುಖಿಯಿದ್ದಾರೆ ಅಂತೆಯೇ ಅವರೆಲ್ಲ ವ್ರತೀ ಪುರುಷರ ಪೂಜೆ ಮಾಡುತ್ತಾರೆ ಮತ್ತು ಅದರ ಫಲದಲ್ಲಿ ನಿರಾಕುಲ ಸುಖಪ್ರಾಪ್ತಿಯ ಪ್ರಾರ್ಥನೆ ಮಾಡುತ್ತಾರೆಂಬ ರಹಸ್ಯವನ್ನು ಸುಂದರ ರೀತಿಯಿಂದ ಈ ಕೃತಿಯಲ್ಲಿ ದರ್ಶಿಸಲಾಗಿದೆ.

ಮೂರು ಲೋಕಗಳ ಸ್ವರೂಪ, ಅಕೃತ್ರಿಮ ಜಿನಮಂದಿರಗಳ ಸ್ವರೂಪ, ತೀರ್ಥಂಕರ, ಚಕ್ರವರ್ತಿ, ಬಲಭದ್ರ , ನಾರಾಯಣ, ಪ್ರತಿನಾರಾಯಣ ಮೊದಲಾದ ಶಲಾಕಾ ಪುರುಷರ ನಾಮಾದಿಗಳ ಉಲ್ಲೇಖ, ತೀರ್ಥಂಕರರ ಮಾತಾ-ಪಿತರು, ಪೂರ್ವಜನ್ಮದ ದೀಕ್ಷಾ ಗುರುಗಳ ನಾಮೋಲ್ಲೇಖ, ನಾರದ, ರುದ್ರರ ನಾಮ ಹಾಗೂ ಸ್ವರೂಪ, ಮಹಿಮೆಗಳನ್ನು ತಿಳಿಸಿದ್ದಾರೆ. ಈ ಪಂಚಮಕಾಲದ ದಿಗಂಬರ ಭಾವಲಿಂಗೀ ಸಂತರಾದ ಆಚಾರ್ಯ ಮಾನತುಂಗರು ಹಾಗೂ ವಾದಿರಾಜ ಮುನಿರಾಜರು ಜಿನಧರ್ಮದ ಮಹಿಮೆಯನ್ನು ಎತ್ತಿಹಿಡಿದು ಅದೆಷ್ಟೋ ಜೀವರುಗಳನ್ನು ಸನ್ಮಾರ್ಗದಲ್ಲಿ ತೊಡಗಿಸಿದ ಕಥೆಗಳು ಅದ್ಭುತ ರಮ್ಯವಾಗಿ ಇಳಿದು ಬಂದಿವೆ. ಪಾಠಕರ ಹೃದಯವನ್ನು ಸೆರೆಹಿಡಿದುಬಿಡುತ್ತವೆ.

ಇದು ನಾಲ್ಕೂ ಅನುಯೋಗಗಳನ್ನೊಳಗೊಂಡ ಉಪಯುಕ್ತ ಕೃತಿಯಿದೆ. ಆತ್ಮನ ಅನುಭೂತಿ ಸಂಪನ್ನ ಜ್ಞಾನವು ಆಗಮದ ಸರ್ವಾಂಶಗಳನ್ನು ಅಲ್ಲ, ಅಲ್ಲ; ಸರ್ವಾಂಗಗಳನ್ನು ಸ್ಪಷ್ಟವಾಗಿ ತಿಳಿಯುತ್ತದೆ. ಜತೆಯಲ್ಲಿ ವಿಶೇಷ ಪ್ರತಿಭೆಯಿದ್ದರೆ ಅದು ಆಗಮದ ಅಂಗಗಳನ್ನೇ ಪ್ರಕಾಶಿತ ಪಡಿಸುತ್ತ ನಿಜಾನುಭೂತಿಗೆ ಆಧಾರವಾಗುತ್ತದೆಯೆಂಬ ಸತ್ಯವು ಈ ಕೃತಿಯ ವಾಚನದಿಂದ ಇನ್ನಷ್ಟು ಸತ್ಯವಾಗಿರುವುದರ ಮನವರಿಕೆಯಾಗುತ್ತದೆ. ಅಲ್ಲದೆ ಅಂತಃತತ್ತ್ವದ ಪರಿಚಯ ಪ್ರಾಪ್ತ ಜೀವನು ಕರ್ತೃತ್ವದ ಭಾರದಿಂದ ಯಾವ ರೀತಿ ನಿರ್ಭಾರನಿರುತ್ತಾನೆ, ಅವನು ತನ್ನ ಕಾರ್ಯದಲ್ಲಿ ಎಂದರೆ ಆ ನಿಜಾತ್ಮನ ಪುನರಾನುಭೂತಿ ಹಾಗೂ ಅಲ್ಲಿಯೇ ಸ್ಥಿರನಾಗುವ ಉದ್ಯಮದಲ್ಲಿ ಅದೆಷ್ಟು ಸಹಜವಾಗಿ ಯಶಸ್ಸನ್ನು ಸಾಧಿಸುತ್ತಾನೆ ಅರ್ಥಾತ್ ಸಾಧಕ ದಶೆಯು ಎಷ್ಟು ಸಹಜ ಮತ್ತು ಸ್ವಾಧೀನವಿದೆ ಸುಖಮಯವಿದೆಯೆಂಬುದು ತಿಳಿದುಬರುತ್ತದೆ.

ಕಾಲದ ಪ್ರಭಾವದಿಂದಲೋ ಅಥವಾ ತಮ್ಮ ಪರ್ಯಾಯದ ದುರ್ಬಲತೆಯಿಂದಲೋ ಪ್ರತ್ಯಕ್ಷ ಸಾಧಕ ಎಂದರೆ ಬಾಹ್ಯದೊಳಗೆ ಮುನಿಯೋಗ್ಯ ಚಾರಿತ್ರದ ಅಂಗೀಕಾರ ಮಾಡದ ಅದೆಷ್ಟೋ ಸಮ್ಯಗ್ದೃಷ್ಟಿ ಜೀವರುಗಳು ಆಂತರ್ಯದೊಳಗೆ ಕಾರ್ಯದ ಬಹಳಷ್ಟು ಸಾಧನೆ ಮಾಡಿದ್ದಾರೆ. ಹೇಯವಿರುವ ಕ್ಷಣಿಕ ಭಾವಗಳ ಮೇಲೆ ತಮ್ಮ ವಿಜಯಧ್ವಜ ಹಾರಿಸಿದ್ದಾರೆ, ಪರಾಧೀನತೆಯನ್ನು ತುಂಡರಿಸುತ್ತ ನಿರಾಕುಲ ಸುಖಾಮೃತದ ಪಾನ ಮಾಡುತ್ತ ಪಾತ್ರ ಜೀವರುಗಳಿಗೆ ಆದರ್ಶರೂ ಆಗಿದ್ದಾರೆ ಮತ್ತು ಆಧಾರರೂಪ ಕೃತಿಗಳನ್ನೂ ಒದಗಿಸಿ ಧನ್ಯರಾಗಿದ್ದಾರೆ. ನಾವು ಅವರ ಹಾಗೆಯೇ ಧನ್ಯ ಜೀವನದಲ್ಲಿ ಅನುರಾಗಿಗಳಾಗಿ ಸಫಲರಾಗೋಣವೆಂಬ ಮಂಗಲ ಭಾವನೆಯೊಂದಿಗೆ ಈ ವಕ್ತವ್ಯಕ್ಕೆ ವಿರಾಮ ಕೋರುತ್ತೇವೆ ಮತ್ತು ಗ್ರಂಥದಲ್ಲಿ ಅವಿಲಂಬ ಪ್ರವೇಶಕ್ಕೆ ಅವಕಾಶ ಮಾಡಿ ಕೊಡುತ್ತೇವೆ-

-ಧವಲಶ್ರೀ

# ವಿಷಯಾನುಕ್ರಮಣಿಕೆ


| ವಿಷಯ | ಪುಟ |
|---|---|
| 1 ಪರ್ವ - ಸರ್ವಾವಲೋಕನ ಪೀಠಿಕೆ | 3 |
| 2 ಪರ್ವ - ಶ್ರೋತೃ ಮತ್ತು ವಕ್ತಾರನ ಸ್ವರೂಪ | 14 |
| 3 ಪರ್ವ - ಗ್ರಂಥ ರಚನೆಯ ಉದ್ದೇಶ | 35 |
| 4 ಪರ್ವ - ಅನ್ಯಮತ-ನಿರಾಕರಣೆ | 50 |
| 5 ಪರ್ವ - ಮೋಕ್ಷಸುಖ ಹಾಗೂ ಜೀವ-ಅಜೀವಾದಿ ತತ್ತ್ವಗಳ ಸ್ವರೂಪ | 83 |
| 6 ಪರ್ವ - ಮೋಹೀ ಜೀವರುಗಳ ಸೋಗ | 102 |
| 7 ಪರ್ವ - ಭ್ರಮೆಯ ನಿವಾರಕ - ತತ್ತ್ವಜ್ಞಾನ | 116 |
| 8 ಪರ್ವ - ಸುದೇವ ಹಾಗೂ ಕುದೇವ - ಗುರುವಿನ ಸ್ವರೂಪ ವರ್ಣನೆ | 127 |
| 9 ಪರ್ವ - ಮುನಿ-ಧರ್ಮ, ಭೇದವರ್ಣನೆ | 148 |
| 10 ಪರ್ವ - ಉಪಾಧ್ಯಾಯ, ಶ್ರುತ, ಧರ್ಮದ ವರ್ಣನೆ | 159 |
| 11 ಪರ್ವ - ಧರ್ಮ-ಕುಧರ್ಮದಲ್ಲಿ ಹೇಯ-ಜ್ಞೇಯ-ಉಪಾದೇಯ | 180 |
| 12 ಪರ್ವ - ಸಂಗತಿಯಲ್ಲಿ ಜ್ಞೇಯ-ಹೇಯ-ಉಪಾದೇಯ | 192 |
| 13 ಪರ್ವ - ತಪಾದಿಗಳಲ್ಲಿ ಹೇಯ-ಜ್ಞೇಯ-ಉಪಾದೇಯ | 206 |
| 14 ಪರ್ವ - ಧರ್ಮದ ಅಂಗಗಳಲ್ಲಿ ಜ್ಞೇಯ-ಹೇಯ-ಉಪಾದೇಯ | 230 |
| 15 ಪರ್ವ - ತೀರ್ಥದಲ್ಲಿ ಜ್ಞೇಯ, ಹೇಯ, ಉಪಾದೇಯ | 242 |
| 16 ಪರ್ವ - ಚರ್ಚೆ-ವಾರ್ತೆಯಲ್ಲಿ ಜ್ಞೇಯ, ಹೇಯ, ಉಪಾದೇಯ | 247 |
| 17 ಪರ್ವ - ಅನುಮೋದನೆಯಲ್ಲಿ ಜ್ಞೇಯ, ಹೇಯ, ಉಪಾದೇಯ | 249 |
| 18 ಪರ್ವ - ಮೋಕ್ಷತತ್ತ್ವದಲ್ಲಿ ಜ್ಞೇಯ, ಹೇಯ, ಉಪಾದೇಯ | 251 |
| 19 ಪರ್ವ - ಜ್ಞಾನದಲ್ಲಿ ಜ್ಞೇಯ, ಹೇಯ, ಉಪಾದೇಯ | 255 |
| 20 ಪರ್ವ - ಅವಧಿ, ಮನಃಪರ್ಯಾಯ, ಕೇವಲಜ್ಞಾನದ ವರ್ಣನೆ | 275 |
| 21 ಪರ್ವ - ಜೀವನೋಪಯೋಗಿ ಜ್ಞೇಯ, ಹೇಯ, ಉಪಾದೇಯ | 283 |

## ವಿಷಯಾನುಕ್ರಮಣಿಕೆ


| ವಿಷಯ | ಪುಟ |
|---|---|
| 22 ಪರ್ವ - ಅಜ್ಞಾನಿ ಹಾಗೂ ಕವಿ ಪರೀಕ್ಷೆಯ ವರ್ಣನೆ | 300 |
| 23 ಪರ್ವ - ಉಪದೇಶ - ಸಾಪೇಕ್ಷ ಕಥನ ವರ್ಣನೆ | 319 |
| 24 ಪರ್ವ - ಜಾತಿ ವ್ಯವಹಾರಾದಿಗಳ ವರ್ಣನೆ | 336 |
| 25 ಪರ್ವ - ಯುಕ್ತಿಪೂರ್ಣ ಹಿತೋಪದೇಶ | 352 |
| 26 ಪರ್ವ - ಹಿತೋಪದೇಶ ಕಥನ | 367 |
| 27 ಪರ್ವ - ಲೇಶ್ಯೆ , ಯೋನಿ, ನಿಮಿತ್ತ-ಜ್ಞಾನಾದಿಗಳ ವರ್ಣನೆ | 386 |
| 28 ಪರ್ವ - ದಶ ಕರಣಾದಿಗಳ ವರ್ಣನೆ | 397 |
| 29 ಪರ್ವ - ಪ್ರಶ್ನಮಾಲೆ ಕರ್ಮವಿಪಾಕ | 411 |
| 30 ಪರ್ವ - ಹಿಂಸೆಯ ನಿಷೇಧ ಮತ್ತು ದಯೆಯ ಮಾಹಾತ್ಮ್ಯ | 453 |
| 31 ಪರ್ವ - ದೊರೆಯ ಗುಣ, ವಿದ್ಯೆಗಳು ಹಾಗೂ ಹದಿನಾರು ಸ್ವಪ್ನ | 469 |
| 32 ಪರ್ವ - 'ಸಾಗಾರ ಧರ್ಮ' - ಹನ್ನೊಂದು ನೆಲೆಗಳ ವರ್ಣನೆ | 485 |
| 33 ಪರ್ವ - ವ್ರತನೆಲೆ - ಮೂರು ಗುಣವ್ರತ | 507 |
| 34 ಪರ್ವ - ನಾಲ್ಕು ಶಿಕ್ಷಾವ್ರತ ಹಾಗೂ ಸಲ್ಲೇಖನದ ವರ್ಣನೆ | 517 |
| 35 ಪರ್ವ - ಸಾಮಾಯಿಕ ನೆಲೆಯ ವರ್ಣನೆ | 529 |
| 36 ಪರ್ವ - ನಾಲ್ಕನೆಯ-ಐದನೆಯ-ಆರನೆಯ ನೆಲೆಗಳ ವರ್ಣನೆ | 535 |
| 37 ಪರ್ವ - ಬ್ರಹ್ಮಚರ್ಯಾದಿಗಳ ಕಥನ | 539 |
| 38 ಪರ್ವ - ಉತ್ಕೃಷ್ಟ ಶ್ರಾವಕ ನೆಲೆಯ ಕಥನ | 560 |
| 39 ಪರ್ವ - ತೀರ್ಥಂಕರಾದಿ ಜಿನಕ್ಷೇತ್ರಗಳ ಕಥನ | 565 |
| 40 ಪರ್ವ - ಸಮವಸರಣ, ವಿಹಾರಕರ್ಮ ವರ್ಣನೆ | 602 |
| 41 ಪರ್ವ - ವಾದಿರಾಜ, ಮಾನತುಂಗಾಚಾರ್ಯರ ಚರಿತ್ರೆ | 612 |
| 42 ಪರ್ವ - ಕವಿ ಆಲೋಚನಾದಿ | 622 |
| ಆಗಮ ಮಹಾಸಾಗರದ ಅಮೌಲ್ಯ ಮೌಕ್ತಿಕಗಳು | 624 |

॥ ಓಂ ॥
ನಮಃ ಸಿದ್ಧೇಭ್ಯ
ಭೇದ ವಿಜ್ಞಾನಾಯ ನಮಃ

# ಸುದೃಷ್ಟಿ ತರಂಗಿಣಿ

ಪಂಡಿತ ಪ್ರವರ ಕವಿವರ್ಯ ಟೇಕಚಂದ ಕೃತ ಪ್ರಾಕೃತ ಮತ್ತು
ಢೂಂಡಾರಿ ಟೀಕೆಯ ಕನ್ನಡ ಅನುವಾದ

ಬಿಂದು ಸಹಿತ ಓ ಕಾರದ ಧ್ಯಾನವ ಯೋಗಿ ಜನರು ಸ್ವಯಂ ಮಾಡುವರು ಸತತ ।
ಭುಕ್ತಿ-ಮುಕ್ತಿ ಸುಖವೀಯುವಂಥ ಓಂ ನಮಃದ ಧ್ಯಾನವ ಧರಿಸುವರು ॥
ಘನ ಧಾರೆಯ ಸಮ ಧ್ವನಿ ನಿರಂತರ ಮಮ ಪಾಪ ತಾಪವ ನಾಶ ಮಾಡಲಿ ।
ಜಿನ-ಮುನಿ ಸೇವಿಪ ತೀರ್ಥ ಸ್ವರೂಪಿ ಮಾತೆ ಜಿನವಾಣಿಯು ಪಾಪ ಕಳೆಯಲಿ ॥
ಜ್ಞಾನ ಅಂಜನಾಮೃತ ಶಲಾಕೆಯಿಂದ ಮೋಹ-ಮಿಥ್ಯೆ-ಅಜ್ಞಾನ ಕಳೆವುದು ।
ಶ್ರೀ ಗುರುಗಳ ಆ ಪರಂಪರೆಗೆ ನಾ ನಮಿಸುವೆ ಮಾಡಲಿ ಕಲ್ಯಾಣವನು ॥
ಸರ್ವಜ್ಞ ಜಿನ ಪ್ರಣೀತ ಆಗಮವದು ಗುರು ಗಣಧರರಿಂ ಗ್ರಥಿತವದು ತಿಳಿ ।
ಕುಂದಕುಂದ ಸಮ ನಗ್ನ ಮುನಿಗಳು ಹೇಳಿದ ವಚನಾಮೃತ ಆಲಿಸಿ ಎಚ್ಚರು ನೀ ॥

೧

ಮಹಾಭಕ್ತಿಯನು ಮನದಲಿ ಧರಿಸಿ, ನಮಿಸುವೆ ದೇವ ಅರಹಂತರಿಗೆ ।
ಅಷ್ಟಗುಣಮಯ ಸಿದ್ಧರ ಪೂಜಿಪೆ, ವಂದಿಪೆ ಶೂರ ಆಚಾರ್ಯರಿಗೆ ॥
ಅಂಗಪೂರ್ವಧರ ಪಾಠಕರನು ನೆನೆದು, ನಮಿಪೆನು ಶಿವಪಥ ಸಾಧುವಿಗೆ ।
ಪಂಚ ಗುರುಗಳಿವರೇ ಜಗದೀಶರು, ಮಾಡಲಿ ಮಂಗಲ ಈ ಕೃತಿಗೆ ॥

೨

ವೃಷಭಸೇನರಿಂ ಗೌತಮರವರೆಗಿನ, ಗಣಧರರನು ಸ್ಮರಿಸುವೆ ನಾನು ।
ನಮಿಸುವೆ ನಾ ಗ್ರಂಥ ಕರ್ತಾರರಿಗೆ, ಮಿಥ್ಯಾಪಥವನು ನಾಶಿಪರವರು ॥

೩

ಸುಮತಿಯ ನೀಡಲಿ ಕುಮತಿಯ ಕಳೆಯಲಿ, ತುಂಬಲಿ ಜ್ಞಾನದ ಬೊಕ್ಕಸವ ।
ದಯೆಯ ಮೂರುತಿ ಸರ್ವಜ್ಞರು ಇಹರು, ದಾಟಿಸುವರು ಭವ ಸಾಗರವ ॥

೪

ಈ ವಿಧದಿಂ ಪಾವನ ಪಥ ಪಡೆವೆನು, ದೇವ-ಧರ್ಮ-ಗುರು ಮನ್ನಿಪೆನು ।
ಮನ-ವಚ-ಕಾಯದಿ ಜಾಗೃತನಿದ್ದು, ಹೃದಯದಿ ಭಕ್ತಿಯ ಹೆಚ್ಚಿಪೆನು ॥
ಅಲ್ಲದೆ ತೀರ್ಥಕೆ ವಂದಿಪೆ ನಾನು, ಸಿದ್ಧಿಯ ಪಡೆದರು ಮಹಾ ಸಾಧುಗಳು ।
ಕೃತ್ರಿಮ ಜಿನ ಬಿಂಬಗಳಿಗೆ ನಮಿಪೆನು, ಭಾವಿಪರಿಗೆ ಅನುದಿನ ಆಧಾರವು ॥

೫

ಈ ತೆರ ಇಷ್ಟದೇವರ ಪೂಜಿಸೆ, ಮುಂದಿನ ಮಾರ್ಗವು ಹೊಳೆಯುವುದು ।
ಅವರ ಅನುಗ್ರಹ ಪಡೆದು ರಚಿಸುವೆ, ಶುಭ ಫಲವೀಯುವ ಶುಭ ಗ್ರಂಥವನು ॥

೬

ನಾನಿರುವೆ ಆ ಇಷ್ಟದೇವರ ದಾಸನು, ಬಯಸುವೆ ಭಕ್ತಿಯಿಂ ಕಾರ್ಯದ ಶಕ್ತಿಯನು ।
ಎಲ್ಲರ ಕ್ಷಮಿಸುತ ನಿಜ ಸಮ ತಿಳಿದು, ಸ್ವಹಿತದ ಮಾರ್ಗವ ಹಿಡಿಯುವೆನು ॥

೭

ಈ ಗ್ರಂಥವು ಆಗಲಿ ಅರ್ಥದ ಸಾಗರ, ಜಲದಿಂ ತುಂಬಿ ಹರಿಯುತಲಿರಲಿ ।
ಬಹುದೃಷ್ಟಾಂತ ಯುಕ್ತಿಯ ಜತೆಗೆ, ನಯಗಳ ಅಲೆಗಳು ಏಳುತಲಿರಲಿ ॥
ಅದರಲಿ ಉದಿಸುವ ಅಧಿಕಾರಗಳು, ದ್ವೀಪದ ಹಾಗೆ ಮನೋಹರವಿರಲಿ ।
ತತ್ತ್ವಗಳೆಂಬ ಮಣಿಗಳ ಗಣಿಗಳು, ಅದರಲಿ ಸಕಲ ಸುಖವೀಯುತಲಿರಲಿ ॥

೮

ಸುಖದ ಗಣಿಯಲಿ ಸಮದೃಷ್ಟಿಯು ಪೋಗಲಿ, ಜಿನವಚನಗಳೆಂಬ ನೌಕೆಯನೇರಿ ।
ಬುದ್ಧಿ-ಬಾಹುಗಳ ಬಲದಿಂ ಯಾರೂ, ತಲುಪರು ಎಂದೂ ಯಾವ ಕಾಲದಲಿ ॥
ಅದರಿಂದ ಶ್ರದ್ಧೆಯ ನೌಕೆಯ ಗ್ರಹಿಸಿ, ನಿಶ್ಚಿತ ಶೀಘ್ರವೇ ಸಾಗರ ದಾಟು ।
ಬೇರಾವ ಉಪಾಯವು ಇಲ್ಲವೇ ಇಲ್ಲ, ಆಲಿಸು ಭವ್ಯನೇ ಹೃದಯದಿ ಧರಿಸು ॥

೯

ರಮಣ ಸ್ವಯಂಭೂ ಸಾಗರದಂತೆ, ಗಂಭೀರವಿದೆ ಈ ಶ್ರುತ ಉದಧಿಯು ।
ದಾಟುವನವನು ಜಿನನಾಗುವನು, ವರ್ಣನೆ ಮಾಡುವನವನೇ  ವೀರನು ॥

# ೧ : ಮೊದಲನೆಯ ಪರ್ವ
# ಸರ್ವಾವಲೋಕನ ಪೀಠಿಕೆ

ಸಂಕ್ಷಿಪ್ತ ಅರ್ಥ - ಈಗ ಮುಂದಿನ ವಚನಿಕೆಗಳ ವರ್ಣನೆಯನ್ನು ಹೇಳಲಾಗುವುದು.

ಈ ಪ್ರಕಾರ ಸ್ತುತಿ ಮಾಡಿ ಈಗ ಮೊದಲು ಈ ಗ್ರಂಥದಲ್ಲಿ ಪ್ರವೇಶ ಮಾಡುವಂಥ ಯಾವ ಸುಬುದ್ಧಿಗಳಿದ್ದಾರೆ ಅವರಿಗೆ ಧರ್ಮ ಶಾಸ್ತ್ರದ ವೇತ್ತಾರರು ಹೇಳುತ್ತಾರೆ. ಯಾರು ಉತ್ತಮವಾದ ಮೂರು ಕುಲಗಳಲ್ಲಿ ಉತ್ಪನ್ನರಾಗಿ ಸಮಾನ ಸದಾಚಾರಿ ಧರ್ಮಾತ್ಮರಿದ್ದಾರೆ, ಮೋಕ್ಷಾಭಿಲಾಷಿಯಿದ್ದಾರೆ ಆ ಸದಾಚಾರಿಗಳೇ ಇಂಥ ಧರ್ಮಶಾಸ್ತ್ರಗಳಲ್ಲಿ ಪ್ರವೇಶ ಮಾಡುತ್ತಾರೆ, ಅವುಗಳ ಸ್ವಾಧ್ಯಾಯ ಮಾಡುತ್ತಾರೆ; ಆದುದರಿಂದ ಈ ಗ್ರಂಥದ ಟಿಪ್ಪಣಿಯನ್ನು ಸಾಮಾನ್ಯರೂಪದಿಂದ ಬರೆಯಲಾಗುವುದು.

ಉತ್ತಮ ಶ್ರಾವಕರಿಗೆ ಪರಭವದ ಸುಧಾರಣೆಯ ಸಲುವಾಗಿ ಧರ್ಮ ಶಾಸ್ತ್ರಗಳ ಅಭ್ಯಾಸ ಮಾಡುವುದು ಯೋಗ್ಯವಿದೆ. ಇದು ಧರ್ಮಶಾಸ್ತ್ರವಿದೆ, ಇದರ ಸಾಮಾನ್ಯ ಟಿಪ್ಪಣಿಯನ್ನು ಹೇಳುತ್ತೇವೆ - ಇದನ್ನು ಮನಸ್ಸು ತೊಡಗಿಸಿ ಆಲಿಸುವುದು. ಮುಂದೆ ಯಾವ ಯಾವ ಕಥನಗಳು ಈ ಗ್ರಂಥದಲ್ಲಿ ಬರುವವು, ಕೇವಲ ಅವುಗಳ ಸೂಚನೆಯ ಸಾಮಾನ್ಯ ಟಿಪ್ಪಣಿ ರೂಪದ ಪೀಠಿಕೆ ಇದೆ. ಏಕೆಂದರೆ ಈ ಪೀಠಿಕೆಯನ್ನು ತಿಳಿಯುವುದರಿಂದ ಸಂಪೂರ್ಣ ಗ್ರಂಥದ ಸ್ಮರಣೆಯಾಗುತ್ತದೆ. ಅರ್ಥಾತ್ ಯಾವ ಅಧಿಕಾರದಲ್ಲಿ ಯಾವುದರ ಚಿಂತನೆ ಮಾಡಲಾಗಿದೆ ಆ ಅಧಿಕಾರದ ಅರ್ಥ (ಭಾವ)ದ ಸ್ಮರಣೆಯಾಗುತ್ತದೆ. ಆದುದರಿಂದ ಈ ಗ್ರಂಥದ ಪ್ರಾರಂಭದಲ್ಲಿ ಟಿಪ್ಪಣಿ ಬರೆಯಲಾಗುವುದು.

೧. ಎಲ್ಲಕ್ಕಿಂತ ಮೊದಲು ಗ್ರಂಥಕರ್ತರ ತಮ್ಮ ಇಷ್ಟ ದೇವರಿಗೆ ಮಂಗಲಾರ್ಥವಾಗಿ ನಮಸ್ಕಾರ ಕಥನವಿದೆ.
೨. ದೇವರ ಕಥನ ಮಾಡುತ್ತ ಪ್ರಸಂಗ ಪ್ರಾಪ್ತ ಸಿದ್ಧರುಗಳ ಸುಖದ ಕಥನವಿದೆ.
೩. ಈ ಗ್ರಂಥದ ಹೆಸರಿನ ಕಥನವಿದೆ.
೪. ಜ್ಞೇಯ, ಹೇಯ, ಉಪಾದೇಯ ವಸ್ತುಸ್ವರೂಪದ ಕಥನವಿದೆ.
೫. ಸ್ವಜ್ಞೇಯ-ಪರಜ್ಞೇಯಗಳ ವರ್ಣನೆಯಿದೆ.
೬. ಪ್ರಸಂಗಪ್ರಾಪ್ತ ಪಂಚಪ್ರಕಾರದ ಪರಾವರ್ತನದ ಕಥನವಿದೆ.
೭. ಸಮ್ಯಕ್ತ್ವವಾಗುವ ಮತ್ತು ಮಿಥ್ಯಾತ್ವವು ಬಿಟ್ಟು ಹೋಗುವುದರಲ್ಲಿ ಕಾರಣಭೂತವಿರುವ ಕ್ಷಯೋಪಶಮ ಮೊದಲಾದ ಪಂಚಲಬ್ಧಿಗಳ ಸ್ವರೂಪ ಕಥನವಿದೆ.
೮. ಸಮ್ಯಗ್ದರ್ಶನದ ಹತ್ತು ಭೇದಗಳ ಸ್ವರೂಪದ ವ್ಯಾಖ್ಯಾನವಿದೆ.
೯. ಸಮ್ಯಗ್ದರ್ಶನದ ಇಪ್ಪತ್ತೈದು ದೋಷಗಳಲ್ಲಿ ಜಾತಿಮದ ಮೊದಲಾದ ಎಂಟು ಮದಗಳು, ಶಂಕಾದಿ ಸಮ್ಯಕ್ತ್ವದ ಎಂಟು ದೋಷಗಳು, ಆರು ಅನಾಯತನ, ಮೂರು ಮೂಢತೆ -ಇವು ಇಪ್ಪತ್ತೈದರ ಸ್ವರೂಪ ಕಥನವಿದೆ.
೧೦. ಸಮ್ಯಕ್ತ್ವದ ಎಂಟು ಗುಣಗಳ ವ್ಯಾಖ್ಯಾನವಿದೆ.
೧೧. 'ಸಮ್ಯಗ್ದೃಷ್ಟಿಯನ್ನು ವೀತರಾಗವೆಂದಿದ್ದಾರೆ.' - ಇದರ ಕುರಿತಾಗಿ ಶಿಷ್ಯನ ಪ್ರಶ್ನೆಗಳಿಗೆ ಉತ್ತರದ ಕಥನ.
೧೨. ಶುಭ-ಅಶುಭ ಶ್ರೋತಾರರ ಕಥನವಿದೆ.
೧೩. ವಕ್ತಾರನ ಗುಣಗಳ ಕಥನವಿದೆ.
೧೪. ಗ್ರಂಥ ಕರ್ತೃಗಳು ತಮ್ಮ ಲಘುತೆಯೊಂದಿಗೆ ಗ್ರಂಥ ರಚಿಸುವ ಅಭಿಮಾನವನ್ನು ತೊರೆದು 'ಗ್ರಂಥಕರ್ತೃಗಳು ಕೇವಲಿಗಳಿದ್ದಾರೆ ನಾನಲ್ಲ' - ಎಂದು ಹೇಳುತ್ತಾರೆ.
೧೫. ಗ್ರಂಥದ ಅರ್ಥವನ್ನು ಕವೀಶ್ವರರು ಹೊಂದಿಸಿದ್ದಾರೆ, ಇದು ವ್ಯವಹಾರ ಮಾತ್ರವಿದೆ. ಇದರಲ್ಲಿ ಬುದ್ಧಿಯ ಹೀನತೆಯಿಂದ ಒಂದು ವೇಳೆ ಯಾವುದಾದರೂ ದೋಷವು ಉಳಿದುಕೊಂಡಿದ್ದರೆ ಅದನ್ನು ಶುದ್ಧ ಮಾಡುವ

ಸಲುವಾಗಿ ವಿಶೇಷ ಜ್ಞಾನಿಗಳಲ್ಲಿ ಪ್ರಾರ್ಥನೆ ಮಾಡಲಾಗಿದೆ. ಇದರ ಕುರಿತಾಗಿ ಶಿಷ್ಯನ ಪ್ರಶ್ನೆಗಳ ಉತ್ತರ ಸಹಿತ ಕಥನವಿದೆ.

೧೬. ಈ ಗ್ರಂಥದ ನಿರ್ಮಾಣದಲ್ಲಿ ತರ್ಕಕಾರನು ಮಾನಕಷಾಯವು ಕಾರಣವಿದೆಯೆಂದು ಹೇಳುತ್ತಾನೆ - ಈ ಪ್ರಕಾರ ಪ್ರಶ್ನೆ ಉತ್ಪನ್ನವಾದ ಮೇಲೆ ಅನೇಕ ಯುಕ್ತಿ ದೃಷ್ಟಾಂತ ಸಹಿತ ಉತ್ತರ ಕಥನವಿದೆ.

೧೭. ಗ್ರಂಥದಲ್ಲಿ ಗ್ರಂಥಕರ್ತೃಗಳು ತಮ್ಮ ನಾಮೋಲ್ಲೇಖ ಮಾಡುತ್ತಾರೆ. - ಹೀಗೆ ಪರಂಪರೆ ಇದೆ.

೧೮. ಸಜ್ಜನ ದುರ್ಜನ ಪಂಡಿತರುಗಳ ಪ್ರಕರಣದಲ್ಲಿ ಧರ್ಮಾರ್ಥಿ ಮತ್ತು ಯಾರು ಧರ್ಮ ರಹಿತ ನಾಮಮಾತ್ರ ಪಂಡಿತರಿದ್ದಾರೆ -ಅವರುಗಳ ದೃಷ್ಟಾಂತಪೂರ್ವಕ ಕಥನವಿದೆ.

೧೯. ತರ್ಕಕಾರನು ಹೇಳುತ್ತಾನೆ - 'ಗ್ರಂಥದಲ್ಲಿ ಯಾವುದಾದರು ಅಶುದ್ಧಿಯು ಉಳಿದುಕೊಂಡರೆ ದೋಷ ತಗಲುವುದು' - ಈ ಪ್ರಶ್ನೆಯ ಮೇಲೆ ಗ್ರಂಥಕರ್ತರ ನಿರ್ದೋಷತೆಯ ಕಥನವಿದೆ.

೨೦. ಗ್ರಂಥದ ಆರಂಭದಲ್ಲಿ ಆಚಾರ್ಯರು ಆರು ಕಾರ್ಯಗಳ ಕಥನ ಮಾಡುತ್ತಾರೆ -ಅವುಗಳ ವರ್ಣನೆಯಿದೆ.

೨೧. ಗ್ರಂಥದ ಪ್ರಾರಂಭದಲ್ಲಿ ಮಾಡಲು ಯೋಗ್ಯವಿರುವ ಮಂಗಲದ ಆರು ಭೇದಗಳ ಕಥನವಿದೆ.

೨೨. ಯಾವ ಗ್ರಂಥಗಳಲ್ಲಿ ಏಳು ಕಥೆಗಳು ಇರುತ್ತವೆ ಆ ಗ್ರಂಥಗಳು ಮಂಗಲಕಾರಿ ಇವೆ - ಎಂಬ ಕಥನವಿದೆ.

೨೩. ಜಿನ-ಸರ್ವಜ್ಞಭಾಷಿತ ತತ್ತ್ವ, ಜೀವ-ಅಜೀವಾದಿಗಳ ಕಥನವು ಸತ್ಯ ಇದೆ - ಹೀಗೆ ಹೇಳಿದ ಮೇಲೆ ತರ್ಕಕಾರನಿಂದ ಅನೇಕ ಮತಗಳ ಸಂಬಂಧವಾದ ತತ್ತ್ವವನ್ನು ಸತ್ಯವೆಂದು ತಿಳಿಸಿಕೊಡುವ ಸಲುವಾಗಿ ಪ್ರಶ್ನೆ ಮಾಡಲಾಗಿದ್ದು ಆ 'ಅನ್ಯ ಮತಗಳಲ್ಲಿ ಹೇಳಲಾದ ಜೀವಾದಿ ತತ್ತ್ವಗಳಲ್ಲಿ ಮತ್ತು ಸರ್ವಜ್ಞಭಾಷಿತ ತತ್ತ್ವದಲ್ಲಿ ಅಂತರವಿದೆ' - ಈ ಕಥನದ ಅನೇಕ ನಯ, ದೃಷ್ಟಾಂತ, ಯುಕ್ತಿಪೂರ್ವಕ ಕಥನವಿದೆ. ಅವರಲ್ಲಿ ಕೆಲವರು ಬ್ರಹ್ಮವಾದಿಗಳು ಸಂಸಾರದಲ್ಲಿ ಒಬ್ಬನೇ ಆತ್ಮನನ್ನು ಮನ್ನಿಸುತ್ತಾರೆ ತಮ್ಮ ಕೆಲವು ಅವತಾರವಾದಿಗಳು ಮುಕ್ತಾತ್ಮನ ಅವತಾರ (ಪುನರಾಗಮನ) ಮನ್ನಿಸುತ್ತಾರೆ, ಕೆಲವರು ಕ್ಷಣಿಕಮತಿಗಳು ಜೀವನನ್ನು ಪ್ರತಿಕ್ಷಣ ಶರೀರದಲ್ಲಿ ಉತ್ಪನ್ನನಾಗುತ್ತಾನೆಂದು ಮನ್ನಿಸುತ್ತಾರೆ, ಕೆಲವು ಕರ್ತಾವಾದಿಗಳು ಆತ್ಮನನ್ನು ಉತ್ಪನ್ನ ಮಾಡುವಂಥವನೊಬ್ಬನನ್ನು ಮನ್ನಿಸುತ್ತಾರೆ, ಕೆಲವು ನಾಸ್ತಿಕ ಮತಿಗಳು ಜೀವದ ಅಭಾವ ಮನ್ನಿಸುತ್ತಾರೆ, ಕೆಲವು ಅಜ್ಞಾನ ವಾದಿಗಳು ಮೋಕ್ಷದಲ್ಲಿ ಜ್ಞಾನದ ಅಭಾವ ಮನ್ನಿಸುತ್ತಾರೆ, ಕೆಲವರು ಅಜೀವವನ್ನು ಜೀವವೆಂದು ಮನ್ನಿಸುತ್ತಾರೆ, ಕೆಲವರು ಸ್ಥಿರವಾದಿಗಳು ಯಾವನು ಸಾಯುತ್ತಾನೆ ಅವನೇ ಉತ್ಪನ್ನನಾಗುತ್ತಾನೆಂದು ಮನ್ನಿಸುತ್ತಾರೆ, ಕೆಲವರು ಜೀವವನ್ನು ಅಜೀವವೆಂದು ಮನ್ನಿಸುತ್ತಾರೆ -ಇತ್ಯಾದಿ ಭ್ರಮವಾದಿಗಳ ಭ್ರಮೆಯನ್ನು ನಾಶ ಮಾಡುವ ಸಲುವಾಗಿ ಸರ್ವಜ್ಞ ಭಾಷಿತ ತತ್ತ್ವಗಳ ಸ್ವರೂಪದ ಕಥನವಿದೆ.

೨೪. ಸತ್ಯ-ಅಸತ್ಯ ಆಪ್ತ, ಆಗಮ, ಪದಾರ್ಥಗಳ ಕಥನವಿದೆ.

೨೫. ಶುದ್ಧ (ನಿಜವಾದ) ದೇವನನ್ನು ತಿಳಿದುಕೊಳ್ಳುವ ಸಲುವಾಗಿ ಮೂವತ್ತಾ ್ನಲ್ಕು ಅತಿಶಯ ಮೊದಲಾಗಿ ನಲವತ್ತಾರು ಗುಣಗಳ ಕಥನವಿದೆ.

೨೬. ಯಾರಲ್ಲಿ ಈ ದೋಷಗಳಿವೆ ಅವರು ದೇವರು ಇರುವುದಿಲ್ಲ; ಆ ದೋಷಗಳು ಯಾವವಿವೆ ? ಇವುಗಳ ಉತ್ತರದಲ್ಲಿ ಆ ಹದಿನೆಂಟು ದೋಷಗಳ ಕಥನ ಮಾಡಲಾಗಿದೆ.

೨೭. ಕುದೇವಗಳ ಕಥನವಿದೆ.

೨೮. ಕುಗುರುವಿನ ಪರಿಚಯ ಪಡೆಯುವ ಉದ್ದೇಶದಿಂದ ಗುಣ-ಲಕ್ಷಣಗಳ ಕಥನವಿದೆ.

೨೯. ಸುಗುರುವಿನ ಮೂಲ ಗುಣಗಳು ಇಪ್ಪತ್ತೆಂಟು ಇರುತ್ತವೆ, ಅವುಗಳಲ್ಲಿ ಏಷಣಾ ಸಮಿತಿಯ ಅಂತರ್ಗತ

ಮುನಿಯ ಭೋಜನ ಸಂಬಂಧದ ನಲವತ್ತಾರು ದೋಷಗಳಿವೆ - ಅವುಗಳ ಕಥನವಿದೆ. ಅಲ್ಲಿ ಭೋಜನಕ್ಕೆ ಸಂಬಂಧಿಸಿದ ಮೂವತ್ತಾರು ಅಂತರಾಯ ಹಾಗೂ ಹದಿನಾರು ಮಲದೋಷಗಳ ಕಥನ ಮಾಡಲಾಗಿದೆ.

೩೦. ಇಪ್ಪತ್ತೆರಡು ಪರೀಷಹಗಳ ಕಥನವಿದೆ.

೩೧. ಪಂಚ ಮಹಾವ್ರತ, ಪಂಚ ಸಮಿತಿ, ಷಟ್ ಆವಶ್ಯಕ, ಪಂಚೇಂದ್ರಿಯ ವಶೀಕರಣ (ಪಂಚೇಂದ್ರಿಯ ವಿಜಯ), ಉಳಿದ ಏಳು ಮೊದಲಾಗಿ ಇಪ್ಪತ್ತೆಂಟು ಮೂಲ ಗುಣಗಳ ಕಥನದಲ್ಲಿ ಷಟ್ ಆವಶ್ಯಕಗಳ ವಿಶೇಷ ಕಥನವಿದೆ.

೩೨. ಮುನೀಶ್ವರರ ಹತ್ತು ಭೇದಗಳ ಕಥನವಿದೆ.

೩೩. ಆಚಾರ್ಯರ ಗುಣಗಳಲ್ಲಿ ದಶಲಕ್ಷಣ ಧರ್ಮ, ಹನ್ನೆರಡು ತಪ, ಪಂಚಾಚಾರ, ಆರು ಆವಶ್ಯಕ, ಮೂರು ಗುಪ್ತಿ -ಇವು ಮೂವತ್ತಾರು ಗುಣಗಳ ಕಥನವಿದೆ.

೩೪. ಸತ್ಯ ಧರ್ಮ (ಸತ್ಯ ವಚನ)ದ ಹತ್ತು ಭೇದಗಳ ಕಥನವಿದೆ.

೩೫. ಹತ್ತು ಅತಿಚಾರಗಳು ಬ್ರಹ್ಮಚರ್ಯದವಿವೆ -ಅವುಗಳ ಕಥನವಿದೆ.

೩೬. ಉಪಾಧ್ಯಾಯರ ಇಪ್ಪತ್ತೈದು ಗುಣಗಳಲ್ಲಿ ಹನ್ನೊಂದು ಅಂಗ, ಹದಿನಾಲ್ಕುಪೂರ್ವಗಳ ಕಥನವಿದೆ. ಅವುಗಳೊಳಗಿಂದ ತ್ರಿಲೋಕ ಬಿಂದು ಪೂರ್ವದ ಕಥನದಲ್ಲಿ ಸಂಕ್ಷೇಪದೊಳಗೆ ಮೂರು ಲೋಕದ ಕಥನವಿದೆ. ಅದರ ಅಂತರ್ಗತವಾಗಿ ಮಧ್ಯಲೋಕದ ಕಥನದಲ್ಲಿ ಅಸಂಖ್ಯಾತ ದ್ವೀಪಗಳಿಂದ ಹಿಡಿದು ಪ್ರಾರಂಭದ ಹದಿನಾರು, ಕೊನೆಯ ಹದಿನಾರು ದ್ವೀಪಗಳ ಹೆಸರುಗಳಿವೆ. ಅವುಗಳಲ್ಲಿನ ಎರಡೂವರೆ ದ್ವೀಪ ಸಂಬಂಧದ ಧ್ರುವತಾರೆಗಳ ಪ್ರಮಾಣದ ಕಥನವಿದೆ.

೩೭. ಮಧ್ಯಲೋಕದಲ್ಲಿ ನಾಲ್ಕನೂರಾ ಐವತ್ತೆಂಟು ಅಕೃತ್ರಿಮ ಜಿನಮಂದಿರಗಳಿವೆ ಅವುಗಳ ಸ್ಥಾನದ ವರ್ಣನೆಯಿದೆ.

೩೮. ಸ್ವರ್ಗಲೋಕದ ಕಥನದಲ್ಲಿ ಎಂಟು ಯುಗಲ ಸಂಬಂಧದ ಹದಿನಾರು ಸ್ವರ್ಗಗಳ ಹೆಸರು ಅವುಗಳ ಸಂಬಂಧದ ದೇವಗಳ ಆಯು ಮತ್ತು ಕಾಯಗಳ ಪ್ರಮಾಣದ ಕಥನವಿದೆ. ಯುಗಲಗಳಲ್ಲಿ ಇಂದ್ರರುಗಳ ಪ್ರಮಾಣ ಮತ್ತು ಯುಗಲಗಳಲ್ಲಿ ವಿಮಾನಗಳ ಸಂಖ್ಯೆಯ ಕಥನವಿದೆ ಹಾಗೂ ಪೃಥ್ವಿಯಿಂದ ಎಷ್ಟೆಷ್ಟು ಎತ್ತರದಲ್ಲಿವೆ ಎಂಬುದರ ಪ್ರಮಾಣದ ಕಥನವಿದೆ. ವಿಮಾನಗಳ ವರ್ಣನೆಯಿದೆ. ಸ್ವರ್ಗಗಳ ಆಧಾರದ, ಸ್ವರ್ಗಗಳಲ್ಲಿ ಕಾಮ ಸೇವನೆಯ, ಒಬ್ಬ ದೇವನು ಮರಣಹೊಂದಿದ ನಂತರ ಅದೇ ಸ್ಥಾನದಲ್ಲಿ ಇನ್ನೊಬ್ಬ ದೇವನ ಉತ್ಪತ್ತಿಯ ಅಂತರ ಮತ್ತು ಯುಗಲಗಳಲ್ಲಿ ದೇವಗಳ ಅವಧಿ-ವಿಕ್ರಿಯೆಯ, ದೇವಗಳ ಶ್ವಾಸೋಚ್ಛ್ವಾಸದ ಅಂತರದ ಪ್ರಮಾಣ, ಮುಕುಟಗಳ ಚಿಹ್ನೆಯ, ವಿಮಾನಗಳ ವಿಸ್ತಾರದ, ಸ್ವರ್ಗಗಳಲ್ಲಿ ಲೇಶ್ಯೆ-ದೇವಾಂಗನೆಯರ ಉತ್ಪತ್ತಿ , ದೇವಿಯರ ಆಯು-ಈ ಪ್ರಕಾರ ಸಾಮಾನ್ಯ ರೂಪದಿಂದ ಊರ್ಧ್ವಲೋಕದ ಕಥನವಿದೆ.

ಇತ್ಯಾದಿ ಪ್ರಕಾರಗಳಿಂದ ತ್ರಿಲೋಕ ಬಿಂದು ಪೂರ್ವದಲ್ಲಿ ಹನ್ನೊಂದು ಅಂಗ, ಹದಿನಾಲ್ಕು ಪೂರ್ವ ಜ್ಞಾನ ಸಹಿತ ಉಪಾಧ್ಯಾಯರ ಗುಣಗಳ ಕಥನವಿದೆ.

೩೯. 'ಆಚಾರಸಾರ' ಗ್ರಂಥದ ಅನುಸಾರ ಮುನೀಶ್ವರರುಗಳ ವಿಚಾರ-ಯೋಗ್ಯ ಸಮಾಚಾರಗಳು ಹತ್ತು ಇವೆ, ಆಶ್ರಯಗಳು ಐದು ಇವೆ - ಅವುಗಳ ಕಥನವಿದೆ.

೪೦. ಧರ್ಮದ ಕಥನದಲ್ಲಿ ಮೊದಲು ಕುಧರ್ಮದ ಕಥನವಿದೆ.

೪೧. ಸುಧರ್ಮದ ಕಥನವಿದೆ.

೪೨. ಒಂಭತ್ತು ನಯಗಳ ಕಥನವಿದೆ.

೪೩. ಧರ್ಮದ ಪರೀಕ್ಷೆಯ ಸಲುವಾಗಿ ಪಂಚ ಪ್ರಮಾಣದ ಕಥನವಿದೆ.

೪೪. ಕುಸಂಗ ತ್ಯಾಗದ ಕಥನವಿದೆ.

೪೫. ಸುಸಂಗತಿಯ ಕಥನವಿದೆ.

೪೬. ಯಾವ ಯಾವ ಧ್ಯಾನಗಳು ಚಿಂತನೆ ಮಾಡಲು ಯೋಗ್ಯವಿವೆ; ಯಾವ ಯಾವವುಗಳನ್ನು ಮಾಡಬಾರದು - ಎಂಬುದರ ಕಥನವಿದೆ. ಅವುಗಳಲ್ಲಿ ಆರ್ತ, ರೌದ್ರಧ್ಯಾನಗಳನ್ನು ಮಾಡಬಾರದು ಮತ್ತು ಧರ್ಮ-ಶುಕ್ಲಧ್ಯಾನಗಳು ಮಾಡಲು ಯೋಗ್ಯವಿವೆ.

೪೭. ಆರ್ತದ ಚಿಹ್ನೆಗಳ ಕಥನವಿದೆ.

೪೮. ಸುಆಚಾರ-ಕುಆಚಾರಗಳ ಕಥನವಿದೆ.

೪೯. ಯೋಗ್ಯ-ಅಯೋಗ್ಯ ಭೋಜನ-ಪಾನೀಯಗಳ ಕಥನವಿದೆ.

೫೦. ಶುಭ-ಅಶುಭ ವಚನ ಭೇದಗಳ ಕಥನವಿದೆ.

೫೧. ಅಸತ್ಯದ ಹನ್ನೊಂದು ಭೇದಗಳ ಕಥನವಿದೆ.

೫೨. ಪರಸ್ಪರರಲ್ಲಿ ಯಾವುದೇ ಪ್ರಯೋಜನವಿಲ್ಲದೆ ಮಾತನಾಡುವುದು ವಿಕಥೆಯಿದೆ, ಇದರ ಇಪ್ಪತ್ತೈದು ಭೇದಗಳ ಕಥನವಿದೆ.

೫೩. ದ್ರವ್ಯ, ಕ್ಷೇತ್ರ, ಕಾಲ, ಭಾವದ ಕಥನದಲ್ಲಿ ಸ್ವದ್ರವ್ಯ, ಕ್ಷೇತ್ರ, ಕಾಲ, ಭಾವ ಹಾಗೂ ಪರದ್ರವ್ಯ, ಕ್ಷೇತ್ರ, ಕಾಲ, ಭಾವಗಳ ಕಥನವಿದೆ. ಅದರಲ್ಲಿ ಸ್ವದ್ರವ್ಯದ ಪರೀಕ್ಷೆಯ ಕಥನವಿದೆ ಅದರಲ್ಲಿಯೂ ಕೂಡ ದ್ರವ್ಯಗಳ ಪ್ರಮಾಣ ಕಥನದಲ್ಲಿ (ದ್ರವ್ಯ ಅಪೇಕ್ಷೆಯಿಂದ) ಮನುಷ್ಯದ್ರವ್ಯ ಅಲ್ಪವಿವೆ, ಕ್ಷೇತ್ರದ ಅಪೇಕ್ಷೆಯಿಂದ ಮನುಷ್ಯರ ಕ್ಷೇತ್ರವು ಅಲ್ಪವಿದೆ, ಕಾಲದ ಅಪೇಕ್ಷೆಯಿಂದ ಮನುಷ್ಯನ ಕಾಲವು ಅಲ್ಪವಿದೆ ಮತ್ತು ಭಾವದ ಅಪೇಕ್ಷೆಯಿಂದ ಮನುಷ್ಯರಲ್ಲಿ ಉತ್ಪನ್ನವಾಗುವಂಥ ಭಾವವು ಅಲ್ಪವಿವೆ - ಎಂಬ ಕಥನವಿದೆ.

೫೪. ಷಟ್‌ಕಾಯ ಜೀವಗಳ ಆಯು-ಕಾಯದ ಕಥನವಿದೆ.

೫೫. ಏಕೇಂದ್ರಿಯ ತಿರ್ಯಂಚಗಳಲ್ಲಿ ಸೂಕ್ಷ್ಮ-ಬಾದರದ ಕಥನವಿದೆ.

೫೬. ಷಟ್‌ಕಾಯಿಕ ಜೀವಗಳ ಶರೀರದ ಆಕಾರದ ಕಥನವಿದೆ.

೫೭. ಷಟ್‌ಕಾಯ ಜೀವಗಳು ಎಷ್ಟೆಷ್ಟು ಕರ್ಮಸ್ಥಿತಿಯಿಂದ ಬಂಧಿಸುತ್ತವೆ ? - ಎಂಬುದರ ಕಥನವಿದೆ.

೫೮. ಐದೂ ಇಂದ್ರಿಯಗಳ ವಿಷಯವು ಎಷ್ಟು ಇದೆ ? - ಎಂಬುದರ ವರ್ಣನೆಯಿದೆ.

೫೯. ಐದು ವೃತ್ತಗಳು ನಿಗೋದದವಿವೆ; ಅವು ಎಲ್ಲಿ ಎಲ್ಲಿ ಇವೆ ?

೬೦. ನಿಗೋದ ಜೀವಗಳ ಪ್ರಮಾಣದ ಅನಂತತೆಯು ಅತಿಶಯ ದೊಡ್ಡದಿದೆ.

೬೧. ನಿಗೋದದ ಎರಡು ಭೇದಗಳಿವೆ.

೬೨. ಷಟ್‌ಕಾಯ ಜೀವಗಳು ಜಘನ್ಯ ಆಯುವನ್ನು ಪ್ರಾಪ್ತ ಮಾಡಿಕೊಂಡರೆ ಒಂದು ಅಂತರ್ಮುಹೂರ್ತದಲ್ಲಿ ಎಷ್ಟು ಭವಗಳನ್ನು ಮಾಡುತ್ತವೆ.

೬೩. ಸುತಪ, ಕುತಪಗಳ ಕಥನವಿದೆ.

೬೪. ಸುತಪದ ಹನ್ನೆರಡು ಭೇದಗಳಿದ್ದು ಅವುಗಳಲ್ಲಿ ಆಲೋಚನಾ ತಪದ ಹತ್ತು ಅತಿಚಾರಗಳಿವೆ.

೬೫. ಯಾವನೋ ಮುನಿಗೆ ಒಂದು ವೇಳೆ ದೀರ್ಘ ದೋಷವು ತಗಲುತ್ತಿದ್ದರೆ ಆಚಾರ್ಯರು ಅವರಿಗೆ ಯಾವ ಯಾವ ದೀರ್ಘ ದಂಡನೆ ನೀಡುತ್ತಾರೆ - ಎಂಬುದರ ಕಥನವಿದೆ.

೬೬. ವಿನಯತಪದ ಐದು ಭೇದಗಳಿವೆ.

೬೭. ಸುವ್ರತದ ಹನ್ನೆರಡು ಭೇದಗಳಿವೆ, ಉಳಿದವುಗಳು ಕುವ್ರತಗಳಿವೆ.

೬೮. ಹನ್ನೆರಡು ಭಾವನೆ (ಹನ್ನೆರಡು ಅನುಪ್ರೇಕ್ಷೆಗಳಿವೆ)

೬೯. ಸುದಾನ-ಕುದಾನಗಳ ಕಥನವಿದೆ, ಅವುಗಳಲ್ಲಿ ಸುದಾನದ ನಾಲ್ಕು ಭೇದಗಳ ಕಥನವಿದೆ.

೭೦. ಯಾರಿಗೆ ದಾನ ಕೊಡಲಾಗುತ್ತದೆ ಅವರು ಪಾತ್ರರಿದ್ದಾರೆ ಅವರಲ್ಲಿ ಸುಪಾತ್ರ ಮತ್ತು ಕುಪಾತ್ರ ಎಂಬ ಎರಡು ಭೇದಗಳಿವೆ ಹಾಗೂ ವಿಶೇಷ ಭೇದಗಳು ಹದಿನೈದು ಇವೆ - ಅವುಗಳ ಮತ್ತು ಅವುಗಳಿಗೆ ದಾನ ಕೊಡುವುದರ ಫಲದ ಕಥನವಿದೆ.

೭೧. ಪೂಜೆಯ ಎರಡು ಭೇದಗಳಿವೆ - ಸುಪೂಜೆ ಮತ್ತು ಕುಪೂಜೆ.

೭೨. ತೀರ್ಥದ ಎರಡು ಭೇದಗಳಿವೆ - ಸುತೀರ್ಥ ಮತ್ತು ಕುತೀರ್ಥ.

೭೩. ಚರ್ಚೆಯ ಭೇದಗಳು ಎರಡು ಇವೆ - ಸುಚರ್ಚೆ ಮತ್ತು ಕುಚರ್ಚೆ.

೭೪. ಅನುಮೋದನೆಯ ಭೇದಗಳು ಎರಡು ಇವೆ - ಕೆಲವೊಂದು ಕಡೆ ಅನುಮೋದನೆ ನೀಡುವುದರಿಂದ ಪಾಪ ಬಂಧವಾಗುತ್ತದೆ, ಆ ಪಾಪದ ಅನುಮೋದನೆಯಂತೂ ಅಶುಭವಿದೆ; ಕೆಲವೊಂದು ಕಡೆಗೆ ಅನುಮೋದನೆ ನೀಡುವುದರಿಂದ ಪುಣ್ಯಬಂಧವಾಗುತ್ತದೆ, ಅದು ಶುಭ ಅನುಮೋದನೆ ಇದೆ.

೭೫. ಮೋಕ್ಷದ ಭೇದಗಳು ಎರಡು ಇವೆ - ಮುಗ್ಧ ಅಜ್ಞಾನಿ ಜೀವಗಳ ಕರ್ಮಮಲಸಹಿತ ಕಲ್ಪಿತ ಮೋಕ್ಷ ಮತ್ತು ಶುದ್ಧ ನಿರಂಜನ ಸರ್ವಕರ್ಮಮಲರಹಿತ ನಿರ್ದೋಷ ಮೋಕ್ಷ.

೭೬. ಕುಜ್ಞಾನ-ಸುಜ್ಞಾನ ಈ ಪ್ರಕಾರ ಜ್ಞಾನದ ಎರಡು ಭೇದಗಳಿದ್ದು ಅಲ್ಲಿ ಮತಿಜ್ಞಾನದ ಮೂರುನೂರಾ ಮೂವತ್ತಾರು ಭೇದರೂಪ ವರ್ಣನೆಯಿದೆ.

೭೭. ಶ್ರುತಜ್ಞಾನದ ಕಥನವಿದೆ. ಅಲ್ಲಿ ವ್ಯಯ, ಧ್ರೌವ್ಯ, ಉತ್ಪಾದ; ಜ್ಞಾತಾ, ಜ್ಞೇಯ, ಜ್ಞಾನ; ಧ್ಯಾತಾ, ಧ್ಯೇಯ, ಧ್ಯಾನ; ಕರ್ತಾ, ಕರ್ಮ, ಕ್ರಿಯೆಗಳ ಕಥನವಿದೆ. ಇದರಲ್ಲಿಯೇ ಸಂಕ್ಷೇಪದಿಂದ ಪಲ್ಯ, ಸಾಗರಗಳ ಕಥನವಿದೆ.

೭೮. ಕೃತಘ್ನಿ-ವಿಶ್ವಾಸಘಾತಿಯ ದೃಷ್ಟಾಂತಪೂರ್ವಕ ಕಥನವಿದೆ.

೭೯. ನಾಲ್ಕು ಗತಿ, ಪುಣ್ಯ-ಪಾಪದ ಫಲವನ್ನು ಪ್ರಗಟ(ಸ್ಪಷ್ಟರೂಪದಿಂದ) ತಿಳಿಸಿಕೊಡುವಂಥ ಆಗತಿ-ಜಾಗತಿ (ಬರುವ ಹೋಗುವ) ರೂಪ ದಂಡಕಗಳ ಕಥನವಿದೆ.

೮೦. ನಿಮಿತ್ತ-ಉಪಾದಾನದ, ಒಳ್ಳೆಯ ಕಾರ್ಯ-ಕೆಡಕು ಕಾರ್ಯ ಹಾಗೂ ಅದರ ನಂತರ ಶ್ರುತಜ್ಞಾನದ ಉಪಸಂಹಾರ ರೂಪದ ಕಥನವಿದೆ.

೮೧. ಅವಧಿಜ್ಞಾನದ ಕಥನವಿದೆ. ಅಲ್ಲಿ ದೇಶಾವಧಿ, ಪರಮಾವಧಿ, ಸರ್ವಾವಧಿ -ಈಪ್ರಕಾರ ಮೂರು ಭೇದರೂಪ ಕಥನವಿದೆ. ದೇಶಾವಧಿಯ ಹೀಯಮಾನಾದಿ ಆರು ಭೇದರೂಪ ಕಥನವಿದೆ.

೮೨. ಅದೇ ಅವಧಿಜ್ಞಾನದ ಭವಪ್ರತ್ಯಯ ಮತ್ತು ಗುಣಪ್ರತ್ಯಯವೆಂಬ ಎರಡು ಭೇದಗಳಿವೆ.

೮೩. ಮನಃಪರ್ಯಯಜ್ಞಾನದ ಋಜುಮತಿ ಮತ್ತು ವಿಪುಲಮತಿಯೆಂಬ ಎರಡು ಭೇದಗಳಿವೆ.

೮೪. ಸಂಕ್ಷೇಪದಲ್ಲಿ ಕೇವಲಜ್ಞಾನದ ಕಥನವಿದೆ.

೮೫. ಈ ಆತ್ಮನು ಮುತ್ತಿನ ಮಾಲೆಯಂತಿರುವ ತನ್ನ ಆಯುವಿನ ದಿವಸಗಳನ್ನು ವ್ಯರ್ಥವಾಗಿ ಕಳೆಯುತ್ತಿದ್ದಾನೆಂಬುದನ್ನು ಹೇಳುತ್ತಾರೆ.

೮೬. ಆತ್ಮನು ತನ್ನ ಅಪರಾಧದಿಂದ ತಾನೇ ಸ್ವಯಂ ಬಂಧಕ್ಕೆ ಪ್ರಾಪ್ತನಾಗುತ್ತಾನೆ ಎಂಬುದನ್ನು ದೃಷ್ಟಾಂತ ಕೊಟ್ಟು ತಿಳಿಸಿದ್ದಾರೆ.

೮೭. ಹದಿಮೂರು ಪ್ರಕಾರದ ಭಯಗಳು ಶುದ್ಧಾತ್ಮನಲ್ಲಿ ಇರುವುದಿಲ್ಲ.

೮೮. ಚಕ್ರಿ , ತ್ರಿಖಂಡಿ, ಮಹಾಮಂಡಲೇಶ್ವರಾದಿ ರಾಜರುಗಳ ವಿಭೂತಿಯು ಕೂಡ ವಿನಾಶಶೀಲವಿದೆ - ಎಂಬುದರ ಕಥನವಿದೆ.

೮೯. ಮಾತಾ-ಪಿತಾದಿಕರು ಸ್ವಕುಟುಂಬ ವರ್ಗದವರು ತಮ್ಮ ತಮ್ಮ ಸ್ವಾರ್ಥರೂಪ ಬಂಧನದಿಂದ ಬಂಧಿಸಲ್ಪಟ್ಟಿದ್ದಾರೆ.

೯೦. ಯಾವ ಯಾವ ವಸ್ತುಗಳ ಸ್ವಭಾವವು ಸಹಜವಾಗಿಯೇ ಚಂಚಲವಿದೆ, ಅದನ್ನು ನಾಶಮಾಡುವ ಸಲುವಾಗಿ ಯಾವುದೇ ಉಪಾಯವಿರುವುದಿಲ್ಲ.

೯೧. 'ಒಂದು ವೇಳೆ ಯಾವನೋ ಮಹಾ ಪಂಡಿತನಿದ್ದರೂ ಶ್ರದ್ಧೆಯಿಂದ ರಹಿತ, ಮಿಥ್ಯಾ ಶ್ರದ್ಧೆಯುಳ್ಳವನಾಗಿದ್ದರೆ ಅವನ ಮುಖದಿಂದ ಸಮ್ಯಗ್ದೃಷ್ಟಿಯು ಉಪದೇಶವನ್ನು ಆಲಿಸುವುದು ಯೋಗ್ಯವಿಲ್ಲ' ಎಂದು ಹೇಳಿದ್ದಾರೆ.

೯೨. ಸರ್ಪದ ಕ್ರೂರತೆಗಿಂತಲೂ ದುಷ್ಟ ಜೀವಗಳ ಕ್ರೂರತೆಯು ಅಧಿಕವೆಂದು ಹೇಳುವ ಕಥನವಿದೆ.

೯೩. ಸಜ್ಜನ-ದುರ್ಜನ ಜೀವಗಳ ಸ್ವರೂಪದ ಕಥನವನ್ನು ದೃಷ್ಟಾಂತಪೂರ್ವಕ ಮಾಡಲಾಗಿದೆ.

೯೪. ಒಳ್ಳೆಯ, ನಿಜವಾದ ಉಪದೇಶವು ಕೂಡ ಮೂರ್ಖ ಜೀವಗಳಿಗೆ ಕಾರ್ಯಕಾರಿಯಾಗುವುದಿಲ್ಲ.

೯೫. ಅದೆಷ್ಟೋ ಜೀವಗಳು ದಯಾರಹಿತರಿದ್ದಾರೆ. ವಿಶಿಷ್ಟ ವ್ಯಾಪಾರ ಮಾಡುವಂಥವರು ದಯಾರಹಿತರಿದ್ದಾರೆ ಎಂಬುದನ್ನು ತಿಳಿಸಿಕೊಡುವಂಥ ಕಥನವಿದೆ.

೯೬. ಕೃಪಣ(ಜಿಪುಣ)ನ ಧನದ ಅವಸ್ಥೆ ಏನಾಗುತ್ತದೆ ?

೯೭. ಇಂತಿಷ್ಟು ಜೀವಗಳು ದಯಾರಹಿತವೇ ಇರುತ್ತವೆ - ಅವುಗಳನ್ನು ತೋರಿಸಿಕೊಡುವ ಕಥನವಿದೆ.

೯೮. ಸಂತೋಷೀ ಆತ್ಮನು ಸ್ವಯಂ ತನ್ನನ್ನು ದರಿದ್ರಾವಸ್ಥೆಯಲ್ಲಿಯೂ ಸುಖಿಯೆಂದು ಮನ್ನಿಸುತ್ತಾನೆ, ದರಿದ್ರತೆಯನ್ನು ಕೂಡ ಆಶೀರ್ವದಿಸುತ್ತಾನೆ.

೯೯. ಧರ್ಮ ಸೇವನೆ ಮಾಡುವಂಥ ಜೀವನು ಸಂಸಾರದಲ್ಲಿ ನಾಲ್ಕು ಪ್ರಕಾರದ ಭಾವಗಳ ವಾಂಛೆಯಿಂದ ಸಹಿತನಿದ್ದು ಧರ್ಮದ ಸಾಧನೆ ಮಾಡುತ್ತಾನೆ.

೧೦೦. ಛಂದ-ಕಾವ್ಯದ ವಕ್ತಾರ ಕವೀಶ್ವರರು ಕಾವ್ಯ ಛಂದಗಳ ಜೋಡಣೆ ಮಾಡುವಲ್ಲಿ ಐದು ಪ್ರಕಾರದ ಪಂಡಿತರಿದ್ದಾರೆ. ಅವರು ತಮ್ಮ ತಮ್ಮ ಸ್ವಭಾವದ ಅನುಸಾರ ಛಂದಸ್ಸುಗಳ ನಿರ್ಮಾಣ ಮಾಡುತ್ತಾರೆ.

೧೦೧. ಪಂಚಮಕಾಲದ ಮಹಿಮೆಯಿದೆ, ಅದರಿಂದ ಇಲ್ಲಿ ಐಚ್ಛಿಕ ನಿಮಿತ್ತವಿರುವುದಿಲ್ಲ - ಎಂಬುದರ ಕಥನವಿದೆ.

೧೦೨. ತನ್ನ ಶುದ್ಧ ಭಾವಗಳ ಹೊರತಾಗಿ ತಪಸ್ಸು, ಸಂಯಮ, ಧ್ಯಾನಗಳು ಕಾರ್ಯಕಾರಿಯಾಗಿಲ್ಲವೆಂಬ ಕಥನವನ್ನು ದೃಷ್ಟಾಂತಪೂರ್ವಕ ಮಾಡಲಾಗಿದೆ.

೧೦೩. ಸುವರ್ಣವನ್ನು ಪರೀಕ್ಷಿಸುವ ಸಲುವಾಗಿ ಒರೆಗಲ್ಲಿನ ಸಮಾನ ಒಂಭತ್ತು ಸ್ಥಾನಗಳು ತನಗೆ ಹಿತರೂಪವಿವೆ - ಅವುಗಳ ಕಥನವಿದೆ.

೧೦೪. ಒರೆಗಲ್ಲಿನ ಸಮಾನ ಈ ಸ್ಥಾನಗಳ ಮೇಲೆ ಯಾರ ಪರೀಕ್ಷೆ ಮಾಡಬೇಕಾಗುವುದು ?

೧೦೫. ಒಂದು ರೋಗದ ದುಃಖದ ಉಪಚಾರವನ್ನು ಅನೇಕ ಜೀವಗಳು ಅನೇಕ ಪ್ರಕಾರದಿಂದ ತಮ್ಮ ತಮ್ಮ ದೃಷ್ಟಿಯ ಅನುಸಾರ ಹೇಳುತ್ತಾರೆ.

೧೦೬. ಗೃಹ, ಕುಟುಂಬವನ್ನು ತೊರೆದು ಪುನಃ ಗೃಹ-ಮನೆಯನ್ನು ಬಯಸುವುದು, ಕುಟುಂಬ ಮಿತ್ರಾದಿಗಳನ್ನು ಬಯಸುವುದು ದೀನ-ಹೀನನಾಗಿ ಮನೆ ಮನೆಗಳಲ್ಲಿ ಯಾಚನೆ ಮಾಡುವುದು -ಅದನ್ನು ಆಚಾರ್ಯರು ಏನೆಂದು ಹೇಳುತ್ತಾರೆ ?

೧೦೭. ಯಾವುದರ ಸಲುವಾಗಿ ಯಾವುದನ್ನು ಬಿಟ್ಟುಕೊಡಬೇಕಾಗುವುದು.
೧೦೮. ಯಾವ ದೇಶದಲ್ಲಿ ಇಂಥ ಕೆಲವು ವಿಶಿಷ್ಟ ವಸ್ತುಗಳು ಇಲ್ಲದಿರುವುದರಿಂದ ವಿವೇಕವಂತರು ಅಲ್ಲಿ ವಾಸ ಮಾಡುವುದಿಲ್ಲ.
೧೦೯. ಯಾವ ಹತ್ತು ಸ್ಥಾನಗಳಲ್ಲಿ ಲಜ್ಜೆ ಪಡಬಾರದು, ಆ ಹತ್ತು ಸ್ಥಾನಗಳನ್ನು ತಿಳಿಸಲಾಗಿದೆ.
೧೧೦. ಯಾರದು ಪಕ್ಷದ ಬಲವಿರುತ್ತದೆ ಅವನು ಬಲವಂತನಿದ್ದಾನೆ.
೧೧೧. ಸ್ನೇಹದ ಸಮಾನ ಬೇರೆ ಯಾವುದೂ ಬಲವಿಲ್ಲ; ಹಿತವಿದೆ, ಅದುವೇ ಭುಜಬಲ ಮತ್ತು ಸೈನ್ಯಬಲವಿದೆ.
೧೧೨. ಯಾವುದು ನೀತಿ ಮಾರ್ಗರೂಪ ಪರಿಣತಿ ಇದೆ, ಅದುವೇ ದೊಡ್ಡ ಸೇನೆಯಿದೆ ಮತ್ತು ಭುಜಬಲವಿದೆ.
೧೧೩. ಅನೇಕ ಸಂಕಟಗಳಲ್ಲಿ ಒಂದು ಪೂರ್ವೋಪಾರ್ಜಿತ ಪುಣ್ಯವು ಸಹಾಯಕವಿದೆ.
೧೧೪. ಇಂತಿಷ್ಟು ವಸ್ತುಗಳ ಇರುವಿಕೆಯು ಕಾರ್ಯಕಾರಿ ಇರುವುದಿಲ್ಲ.
೧೧೫. ಇಂತಿಷ್ಟು ವಸ್ತುಗಳು ಪರೋಪಕಾರದ ನಿಮಿತ್ತವಿವೆ.
೧೧೬. ಧರ್ಮಾತ್ಮಾ ಜೀವಗಳಿಗೆ ಇಂಥ ವಿಶಿಷ್ಟ ಸ್ಥಾನಗಳಲ್ಲಿ ಲಜ್ಜೆಯನ್ನಿಟ್ಟುಕೊಳ್ಳುವುದು ಉಚಿತವಿಲ್ಲ.
೧೧೭. ಸಂಕಟದಲ್ಲಿ ಸತ್ಪುರುಷರಿಗೆ ಸಾಹಸವೇ ಸಹಾಯಕವಿದೆ ಎಂಬ ಇಷ್ಟೇ ಮಾತನ್ನು ಹೇಳುತ್ತಾರೆ.
೧೧೮. ಯಾವ ಮೂರು ಸ್ಥಾನಗಳು ಪಂಡಿತರುಗಳ ಹಾಸ್ಯದ ಕಾರಣಗಳಿವೆ ಎಂಬುದನ್ನು ಹೇಳುತ್ತಾರೆ.
೧೧೯. ಸತ್ಸಂಗದ ಮೂಲಕ ಮಾಡಲಾದ ಅನಾದರವೂ ಕೂಡ ಗುಣಕಾರಿ ಇದೆ.
೧೨೦. ಮ್ಲೇಚ್ಛತನದ ಭೇದಗಳು ಆರು ಇವೆ.
೧೨೧. ಮೂಢತೆಯ ಏಳು ಭೇದಗಳನ್ನು ಹೇಳಲಾಗಿದೆ.
೧೨೨. ಸಮ್ಯಗ್ಜ್ಞಾನದಲ್ಲಿ ಮತ್ತು ಮಿಥ್ಯಾಜ್ಞಾನದಲ್ಲಿ ಇರುವ ಅಂತರ ಮತ್ತು ಫಲಭೇದವನ್ನು ದೃಷ್ಟಾಂತಪೂರ್ವಕ ತಿಳಿಸಲಾಗಿದೆ.
೧೨೩. ಇಂದ್ರಿಯ ಸುಖಗಳಿಂದ ಆತ್ಮನಿಗೆ ತೃಪ್ತಿಯಾಗುವುದಿಲ್ಲ.
೧೨೪. ನರಕ ಪಶುಗಳ ದೀರ್ಘ ದುಃಖಗಳಿಂದ ಭಯಪಡದಿದ್ದರೆ ತಪಸ್ಸು ಸಂಯಮಗಳ ಅಲ್ಪದುಃಖಗಳಿಂದ ಅದೇಕೆ ಭಯಪಡುತ್ತಿರುವಿರಿ.
೧೨೫. ಸರ್ವ ಕಷಾಯಗಳೊಳಗಿಂದ ಮಾಯಾ ಕಷಾಯದ ಪಾಪವನ್ನು ಅತಿ ದೊಡ್ಡದೆಂದು ಹೇಳುವಂಥ ಕಥನವಿದೆ.
೧೨೬. ಪುಣ್ಯವೃಕ್ಷದ ಫಲವು ಇಂದ್ರಿಯ ಸುಖವಿದೆ, ಅದು ನಿಜವಾಗಿ ಧರ್ಮದ ಘಾತಕವಿಲ್ಲ, ಜೀವನಿಗೆ ದುಃಖದಾಯಕವಿರುವುದಿಲ್ಲ.
೧೨೭. ಮುನೀಶ್ವರರುಗಳ ಮೋಕ್ಷಮಾರ್ಗದ ಸಾಧನವು ಓರ್ವ ಧರ್ಮಾತ್ಮಾ ಶ್ರಾವಕನ ಮನೆಯಿದೆ - ಎಂಬ ಕಥನವಿದೆ.
೧೨೮. ಬುದ್ಧಿಯನ್ನು ಪಡೆಯುವುದರ ಮತ್ತು ಧನ ಪಡೆಯುವುದರ ಪ್ರಯೋಜನವು ಯಾವುದು ಇದೆ ?
೧೨೯. ಕೆಲವೊಂದು ನಿಮಿತ್ತಗಳು ಕಾಲ (ಮೃತ್ಯು)ದ ಸಮಾನ ಎಂದು ತಿಳಿದುಕೊಂಡು ಬಿಟ್ಟುಕೊಡಲು ಯೋಗ್ಯವಿವೆ.
೧೩೦. ಇಂಥ ಕೆಲವು ಸ್ಥಾನಗಳ ಮೇಲೆ ಯತೀಶ್ವರರು ವಾಸಿಸುವುದಿಲ್ಲ; ಒಂದು ವೇಳೆ ವಾಸಿಸಿದರೆ ಸಂಯಮದಿಂದ ಭ್ರಷ್ಟರಾಗಿ ಹೋಗುತ್ತಾರೆ.
೧೩೧. ಇಂತಿಷ್ಟು ಜೀವಗಳ ವಿಶ್ವಾಸ ಮಾಡಬಾರದು.
೧೩೨. ಯಾರು ಮುಖದಿಂದಂತೂ ಮಧುರ ಮಾತುಗಳನ್ನಾಡುತ್ತಾರೆ ಆದರೆ ಹಿಂದೆ ದ್ವೇಷ ಭಾವವನ್ನಿಟ್ಟುಕೊಂಡಿರುತ್ತಾರೆ- ಅಂಥ ಮಿತ್ರರನ್ನು ದೂರದಿಂದಲೇ ಬಿಟ್ಟುಕೊಡಬೇಕಾಗುವುದು.

೧೩೩. ಕೆಲವು ಸಭೆಗಳಲ್ಲಿ ಸಭೆಯ ವಿರುದ್ಧ ಮಾತನಾಡಬಾರದು.

೧೩೪. ಧರ್ಮ ಶಾಸ್ತ್ರಗಳನ್ನು ಓದಿ ಒಂದು ವೇಳೆ ಇಂಥ ಕೆಲವು ಗುಣಗಳು ಇಲ್ಲದೇ ಹೋದರೆ ಶಾಸ್ತ್ರಗಳ ಓದುವಿಕೆಯು ಕಾಗೆಯ ಶಬ್ದದ ಸಮಾನವಿದೆ.

೧೩೫. ನಿದ್ರೆಯು ಮರಣಕ್ಕಿಂತಲೂ ಅನಿಷ್ಟವೆಂದು ತಿಳಿಸಿದ್ದಾರೆ.

೧೩೬. ದುಷ್ಟ ಜೀವಗಳ ಸ್ವಭಾವವನ್ನು ದೃಷ್ಟಾಂತದೊಂದಿಗೆ ತಿಳಿಸಿಕೊಟ್ಟಿದ್ದಾರೆ.

೧೩೭. ಪೂರ್ವದ ಪಾಪಕರ್ಮಗಳಿಂದ ಶರೀರದಲ್ಲಿ ರೋಗವಾಗುತ್ತದೆ ಎಂಬುದನ್ನು ವಿಸ್ತಾರದಿಂದ ಹೇಳಿದ್ದಾರೆ.

೧೩೮. ಅನ್ಯ ರೋಗಗಳ ಉಪಚಾರವಂತೂ ಇದೆ ಆದರೆ ಮೃತ್ಯುರೋಗಕ್ಕೆ ಔಷಧವಿಲ್ಲ.

೧೩೯. ಇಷ್ಟವಿಯೋಗ-ಅನಿಷ್ಟಸಂಯೋಗಗಳು ಎಲ್ಲಿ ಇವೆ ಮತ್ತು ಎಲ್ಲಿ ಇಲ್ಲ.

೧೪೦. ಕಾಲ(ಮರಣ)ಕ್ಕಿಂತ ಮುಂದೆ ಧಾವಿಸಿ ತಪ್ಪಿಸಿಕೊಳ್ಳಬಯಸುತ್ತಿರುವೆ ಆದರೆ ಅದೇನು ಉಪಾಯವಲ್ಲ.

೧೪೧. ಅಗ್ನಿಯ ಮೂರು ಭೇದಗಳಿವೆ. ಅವುಗಳಲ್ಲಿ ಯಾವ ಅಗ್ನಿಯಿಂದ ಯಾವುದು ಸುಡುತ್ತದೆ ?

೧೪೨. ತಪ, ಸಂಯಮ, ವಿದ್ಯಾದಿಗಳು ಸದ್ಗುಣರೂಪದ ರತ್ನಗಳಿವೆ. ಆದರೆ ಇಂದ್ರಿಯ ಸುಖದ ಅಭಿಲಾಷೆಯು ಅವುಗಳನ್ನು ವಂಚಿಸುವಂಥ ವಂಚಕನ ಸಮಾನ ಇದೆ ಎಂದು ಹೇಳುತ್ತಾರೆ.

೧೪೩. ಇಷ್ಟವಿಯೋಗದ ಎರಡು ಭೇದಗಳು.

೧೪೪. ಯಾವ ಪ್ರಕಾರದಿಂದ ಪರಿಣತಿಯು ವಿಷಯ ಕಷಾಯಗಳಲ್ಲಿ ಏಕಾಗ್ರವಾಗುತ್ತದೆ, ಅದೇ ಪ್ರಕಾರ ಒಂದು ವೇಳೆ ಧರ್ಮದಲ್ಲಿ ಏಕಾಗ್ರವಾಗಿ ಹೋದರೆ ಏನಾಗುತ್ತದೆ ?

೧೪೫. ಜಿಪುಣನು ತನ್ನ ಶರೀರವನ್ನು ವಂಚಿಸುತ್ತಾನೆ.

೧೪೬. ಅತಿಶಯ ಸಹಿತ ಉಪದೇಶ ವಚನಗಳು ಯಾರವಿವೆ ಮತ್ತು ಅತಿಶಯ ರಹಿತ ಉಪದೇಶ ವಚನಗಳು ಯಾರವು ಇವೆ ? -ಎಂಬುದರ ಕಥನವಿದೆ.

೧೪೭. ಭಿಕ್ಷುಕನು ಮನೆ ಮನೆಗೆ ಹೋಗಿ ಬೇಡುತ್ತಾನೆ; ಈ ಪ್ರಕಾರದಿಂದ ಅವನು ಅದೇನು ಉಪದೇಶವನ್ನೇ ಕೊಡುತ್ತ ತಿರುಗುತ್ತಿರುವಂತೆ ಕಂಡು ಬರುತ್ತಾನೆ.

೧೪೮. ಜೀವಗಳ ಉತ್ಪತ್ತಿಯ ಯೋಗ್ಯ ಯೋನಿ ಸ್ಥಾನಗಳ ಒಂಭತ್ತು ಭೇದಗಳು.

೧೪೯. ಗರ್ಭ ಯೋನಿಯ ಮೂರು ಭೇದಗಳಿವೆ.

೧೫೦. ಎಂಟು ಸ್ಥಾನಗಳಲ್ಲಿ ನಿಗೋದವಿರುವುದಿಲ್ಲ.

೧೫೧. ನಿಮಿತ್ತ ಜ್ಞಾನದ ಎಂಟು ಭೇದಗಳಿವೆ.

೧೫೨. ಜ್ಞಾನದ ಅಂಗಗಳು ಎಂಟು ಇವೆ.

೧೫೩. ಧ್ಯಾನ ಮಾಡಲು ಯೋಗ್ಯ ಸ್ಥಾನಗಳನ್ನು ಹೇಳಿದ್ದಾರೆ.

೧೫೪. ಆಲೋಚನಾದ ಅತಿಚಾರಗಳು ಹತ್ತು ಇವೆ.

೧೫೫. ಆಚಾರ್ಯರು ಯಾವ ಅವಸರ (ಕಾಲ)ದಲ್ಲಿ ದೀಕ್ಷೆ ಕೊಡುವುದಿಲ್ಲ ಅಂಥ ಕಾಲಗಳು ಹತ್ತು ಇವೆ. ಅವುಗಳನ್ನು ಬಿಟ್ಟು ದೀಕ್ಷೆ ಕೊಡುತ್ತಾರೆ.

೧೫೬. ಶ್ರೀ ಗೊಮ್ಮಟಸಾರ ಸಿದ್ಧಾಂತದ ಅನುಸಾರ ದಶಕರಣಗಳಿವೆ. ಅವುಗಳ ನಿಮಿತ್ತ ಪಡೆದು ಕರ್ಮದ ಅವಸ್ಥೆಗಳು ಅನೇಕ ಪ್ರಕಾರದವಾಗುತ್ತವೆ - ಆ ಕಾರಣಗಳ ಕಥನವಿದೆ.

೧೫೭. ಮಿಥ್ಯಾತ್ವದ ಎರಡು ಭೇದಗಳ ಕಥನವಿದೆ.

೧೫೮. ಭಾವದ ಮೂರು ಭೇದಗಳ ಕಥನವಿದೆ.
೧೫೯. ಭವ್ಯರಲ್ಲಿ ಮೂರು ಭೇದಗಳಿವೆ.
೧೬೦. ಅಂಗುಲದ ಮೂರು ಭೇದಗಳ ಕಥನವಿದೆ.
೧೬೧. ಅಳತೆ-ಪ್ರಮಾಣದ ಹತ್ತೊಂಭತ್ತು ಭೇದಗಳ ಕಥನವಿದೆ.
೧೬೨. ಅಕ್ಷರದ ಮೂರು ಭೇದಗಳ ಕಥನವಿದೆ.
೧೬೩. ಮೂರು ಭೇದ ಸಹಿತ ಪರ್ಯಾಪ್ತಿಗಳ ಸ್ವರೂಪವಿದೆ.
೧೬೪. ಚಕ್ಷು ದರ್ಶನದಲ್ಲಿ ಎರಡು ಭೇದಗಳಿವೆ.
೧೬೫. ಉಪಶಮ ಸಮ್ಯಕ್ತ್ವದ ಭೇದಗಳು ಎರಡು ಇವೆ.
೧೬೬. ಯೋಗಸ್ಥಾನದ ಭೇದಗಳು ಮೂರು ಇವೆ.
೧೬೭. ಧರ್ಮದಲ್ಲಿ ಅರುಚಿ ಉಂಟಾಗುವ ಕಾರಣಗಳು ಮೂರು ಇವೆ.
೧೬೮. ಮಿಥ್ಯಾತ್ವ ಪೋಷಿತವಾದ ಶಲ್ಯಗಳು ಮೂರು ಪ್ರಕಾರದವಿವೆ.
೧೬೯. ನಾಲ್ಕು ನಿಕ್ಷೇಪಗಳ ಕಥನವಿದೆ.
೧೭೦. ಅಲೌಕಿಕ ಮಾನವು ನಾಲ್ಕು ಪ್ರಕಾರದ್ದಿದೆ.
೧೭೧. ಆರ್ಯಿಕೆಯ ಗುಣಗಳು ನಾಲ್ಕು ಇವೆ.
೧೭೨. ದಾನದ ನಾಲ್ಕು ಭೇದಗಳ ಕಥನ.
೧೭೩. ಕುಲಂಕರರ ಕಾಲದಲ್ಲಿ ಅಪರಾಧವಾದ ಮೇಲೆ ದಂಡನೆ ಇತ್ತು, ಅದರ ನಾಲ್ಕು ಭೇದಗಳು.
೧೭೪. ಹಿಂಸೆಯಲ್ಲಿ ಯಾವುದೇ ಪ್ರಕಾರದಿಂದ ಪುಣ್ಯವಿಲ್ಲ - ಎಂಬುದರ ದೃಷ್ಟಾಂತಪೂರ್ವಕ ಕಥನ.
೧೭೫. ಅನೇಕ ದೃಷ್ಟಾಂತಗಳ ಪೂರ್ವಕ ದಯೆಯಲ್ಲಿ ಪುಣ್ಯವನ್ನು ತಿಳಿಸುವಂಥ ಕಥನ.
೧೭೬. ದೊರೆಗಳಲ್ಲಿ ಇಂಥಿಂಥ ಗುಣಗಳಿದ್ದರೆ ಪ್ರಜೆಗಳು ಸುಖಿ ಇರುತ್ತಾರೆ; ರಾಜ್ಯ, ತೇಜಸ್ಸು, ತಪಸ್ಸು ಹೆಚ್ಚುತ್ತದೆ, ಯಶಸ್ಸು ಹರಡುತ್ತದೆ, ಪರಭವದ ಸುಧಾರಣೆಯಾಗುತ್ತದೆ; ಆದುದರಿಂದ ದೊರೆಗಳಲ್ಲಿ ಈ ಗುಣಗಳು ಅವಶ್ಯವಾಗಿ ಇರಬೇಕಾಗುವುದು.
೧೭೭. ಹದಿನಾಲ್ಕು ವಿದ್ಯೆಗಳು ರಾಜ ಪುತ್ರರುಗಳಿಗೆ ಕಲಿತುಕೊಳ್ಳಲು ಯೋಗ್ಯವಿವೆ.
೧೭೮. ಹದಿನಾಲ್ಕು ವಿದ್ಯೆಗಳು ಲೌಕಿಕವೇ ಇರುತ್ತವೆ.
೧೭೯. ಚಕ್ರವರ್ತಿಯ ಪುಣ್ಯ ಯೋಗದಿಂದ ಒಂಭತ್ತು ನಿಧಿ, ಹದಿನಾಲ್ಕು ರತ್ನಗಳು ಇರುತ್ತವೆ.
೧೮೦. ಚತುರ್ಥ ಕಾಲದ ಪ್ರಾರಂಭದಲ್ಲಿ ಪ್ರಜೆಗಳ ಸುಖದ ಸಲುವಾಗಿ ಭರತ ಚಕ್ರವರ್ತಿಯು ಆರು ಕರ್ಮಗಳನ್ನು ತಿಳಿಸಿಕೊಟ್ಟನು.
೧೮೧. ಭರತ ಚಕ್ರವರ್ತಿಗೆ ಹದಿನಾರು ಸ್ವಪ್ನಗಳು ಕಾಣಿಸಿಕೊಳ್ಳುತ್ತವೆ. ಅವುಗಳ ಫಲವನ್ನು ಆದಿನಾಥ ಸ್ವಾಮಿಯು ಈಗ ಇಲ್ಲ; ಆದರೆ ಪಂಚಮ ಕಾಲದಲ್ಲಿ (ಈಗ ನಡೆಯುತ್ತಿರುವಂಥದು) ಮುಂದೆ ಮುಂದೆ ಪ್ರಕಟವಾಗುವುದು ಎಂದು ಹೇಳಿದರು.
೧೮೨. ಚಕ್ರವರ್ತಿಯ ಸೇನೆಯು ಆರು ಪ್ರಕಾರದ್ದಿರುತ್ತದೆ.
೧೮೩. ಶುದ್ಧ ಭಗವಂತ (ನಿಜವಾದ ದೇವ)ರ ಪರೀಕ್ಷೆಯ ಮುಖ್ಯಗುಣಗಳು ಮೂರು ಇವೆ.
೧೮೪. ತೀರ್ಥಂಕರರು ಯಾವಾಗ ಗರ್ಭದಲ್ಲಿ ಬರುತ್ತಾರೆ ಆಗ ಮಾತೆಗೆ ಮೊದಲು ಹದಿನಾರು ಸ್ವಪ್ನಗಳು ಬೀಳುತ್ತವೆ; ಅವುಗಳ ಹೆಸರು ಮತ್ತು ಫಲದ ಕಥನವಿದೆ.

೧೮೫. ತೀರ್ಥಂಕರಾದಿ ಮಹಾಪುರುಷರ ಭೋಗಗಳು ಹತ್ತು ಪ್ರಕಾರದವಿರುತ್ತವೆ, ಅವುಗಳ ಕಥನವಿದೆ. ಮಹಾಪುರುಷರ ಆರು ಗುಣಲಕ್ಷಣಗಳಿದ್ದು ಆ ಆರು ಗುಣಸಹಿತ ಇರುವಂಥವರನ್ನು ಪುಣ್ಯಾಧಿಕಾರಿಯೆಂದು ತಿಳಿಯುವುದು.

೧೮೬. ಆಭೂಷಣಗಳಲ್ಲಿ ಮಾಲೆಯು ಮುಖ್ಯವಿದೆ ಆ ಮಾಲೆಯಲ್ಲಿ ಹನ್ನೊಂದು ಭೇದಗಳಿದ್ದು ಅವುಗಳ ಕಥನವಿದೆ.

೧೮೭. ಕೈಲಾಸ ಪರ್ವತದ ಮೇಲೆ ಸ್ಥಿತ ಆದಿನಾಥ ಸ್ವಾಮಿಯ ನಿರ್ವಾಣವಾಗುವಲ್ಲಿ ಯಾವಾಗ ಹದಿನಾಲ್ಕು ದಿನಗಳು ಶೇಷವಿತ್ತು ಆಗ ಎಂಟು ಪುರುಷರಿಗೆ ಎಂಟು ಸ್ವಪ್ನಗಳು ಕಾಣಿಸುತ್ತವೆ.

೧೮೮. ನಾಯಕನೆಂಬ ಹೆಸರು ದೊಡ್ಡವರದಿದೆ, ಆ ನಾಯಕರಲ್ಲಿ ಮೂರು ಭೇದಗಳಿವೆ.

೧೮೯. ಶ್ರಾವಕ ಧರ್ಮದ ನೆಲೆಗಳು ಹನ್ನೊಂದು ಇವೆ. ಅವುಗಳಲ್ಲಿ ಪಂಚ ಔದುಂಬರ ಮತ್ತು ಮೂರು ಮಕಾರಗಳ ತ್ಯಾಗ ಮಾಡುವಂಥವರು ಅಷ್ಟಮೂಲಗುಣಧಾರಿ ಇದ್ದಾರೆ. ಆ ಮೂಲ ಗುಣಗಳ ಅತಿಚಾರಗಳಲ್ಲಿ ಏಳು ವ್ಯಸನಗಳ ಅತಿಚಾರಗಳ ಕಥನವಿದೆ. ಅವುಗಳಲ್ಲಿ ಮಾಂಸದ ಅತಿಚಾರದ ಸ್ವರೂಪ ಇಪ್ಪತ್ತೆರಡು ಅಭಕ್ಷಗಳ ಕಥನವಿದೆ.

೧೯೦. ಎರಡನೆಯ ನೆಲೆಯಲ್ಲಿ ಐದು ಅಣುವ್ರತ, ಮೂರು ಗುಣವ್ರತ, ನಾಲ್ಕು ಶಿಕ್ಷಾವ್ರತ - ಈ ಹನ್ನೆರಡು ವ್ರತಗಳ ಮತ್ತು ಅವುಗಳ ಅತಿಚಾರಗಳ ಹಾಗೂ ಹತ್ತು ಪ್ರಕಾರದ ಪರಿಗ್ರಹಗಳ ಕಥನವಿದೆ. ನವಧಾ ಭಕ್ತಿ , ದಾತೃವಿನ ಏಳು ಗುಣ, ಅಧಃಕರ್ಮ, ಭೋಜನದ ನಾಲ್ಕು ಭೇದಗಳ, ನಾಲ್ಕು ಪ್ರಕಾರದ ದಾನದ, ಸಲ್ಲೇಖನ ವ್ರತ ಮತ್ತು ಸಮ್ಯಗ್ದರ್ಶನ - ಇವುಗಳದ್ದು ಮೂವತ್ತಾರು ಅತಿಚಾರಗಳ ಸಹಿತ ಕಥನವಿದೆ. ಮೂರನೆಯ ನೆಲೆಯಲ್ಲಿ ಸಾಮಾಯಿಕ, ಸಾಮಾಯಿಕದ ಮೂವತ್ತೆರಡು ಅತಿಚಾರಗಳ ಅದರಲ್ಲಿಯೂ ಸಾಮಾಯಿಕ (ಕಾಯೋತ್ಸರ್ಗ)ದ ಇಪ್ಪತ್ತೆರಡು ಅತಿಚಾರಗಳ ಹಾಗೂ ಸಾಮಾಯಿಕವನ್ನು ಎಲ್ಲಿ ಮಾಡಬೇಕು - ಆ ಸ್ಥಾನಗಳ ಕಥನವಿದೆ.

೧೯೧. ಏಳನೆಯ ನೆಲೆಯು ಬ್ರಹ್ಮಚರ್ಯವಿದೆ. ಆ ಬ್ರಹ್ಮಚರ್ಯದ ನಾಲ್ಕು ಭೇದಗಳ, ಬ್ರಹ್ಮಚಾರಿ ಬ್ರಾಹ್ಮಣರ ಹತ್ತು ಅಧಿಕಾರಗಳ, ಶೀಲದ ಮಹಿಮೆ ಮತ್ತು ಕುಶೀಲದ ನಿಷೇಧವನ್ನು ಹತ್ತು ಗಾಥೆಗಳಲ್ಲಿ ಮಾಡಿ; ಆ ಬ್ರಾಹ್ಮಣನ ಪರೀಕ್ಷೆಯ ಸಲುವಾಗಿ ಮಸ್ತಕ, ಲಿಂಗಾದಿ ನಾಲ್ಕು ಚಿಹ್ನೆಗಳ, ಅಲ್ಲಿಯೇ ಶ್ರಾವಕರ ಭೋಜನದಲ್ಲಿ ಏಳು ಅಂತರಾಯಗಳ ಕಥನವಿದೆ.

೧೯೨. ಶ್ರಾವಕರು ಚಿಂತನೆ ಮಾಡಲು ಯೋಗ್ಯವಾದ ಹದಿನೇಳು ನಿಯಮಗಳ ಕಥನವಿದೆ.

೧೯೩. ಶ್ರಾವಕರ ಇಪ್ಪತ್ತೊಂದು ಗುಣಗಳ ಕಥನವಿದೆ.

೧೯೪. ಅನ್ಯ ಮತಗಳ ಅನುಸಾರ ಬ್ರಾಹ್ಮಣನ ಲಕ್ಷಣಗಳ ಮತ್ತು ಅಲ್ಲಿ ಅವರ ಶಾಸ್ತ್ರ ಹಾಗೂ ಶಾಸ್ತ್ರದ ಕರ್ತೃ ಆಚಾರ್ಯ - ಅವರ ಸಾಕ್ಷೀ ಸಹಿತ ಬ್ರಹ್ಮನ ಹಾಗೂ ಯಾರಲ್ಲಿ ಇಂತಿಷ್ಟು ಗುಣಗಳು ಇರುತ್ತವೆ, ಅವನು ಬ್ರಹ್ಮನಿದ್ದಾನೆ - ಎಂಬ ಕಥನವಿದೆ.

೧೯೫. ಅನ್ಯಮತ ಸಂಬಂಧದ ಮಾರ್ಕಂಡೇಯ ಆಚಾರ್ಯಕೃತ ಸುಮತಿ ಶಾಸ್ತ್ರದಲ್ಲಿ ನೀರನ್ನು ಶೋಧಿಸುವುದರ ಕಥನ ಮಾಡಲಾಗಿದೆ ಮತ್ತು ಶೋಧಿಸದೇ ಇರುವಂಥ ಜಲದ ದೋಷದ ಕಥನ ಮಾಡಿದೆ.

೧೯೬. ವ್ಯಾಸಕೃತ ಮಹಾಭಾರತವೆಂಬ ಹೆಸರಿನ ಶಾಸ್ತ್ರದ ಏಳನೆಯ ಸ್ಕಂಧದಲ್ಲಿ ಬ್ರಾಹ್ಮಣರಿಗೆ ಶೀಲ ಸಹಿತರಾಗಿರಬೇಕು, ವೈರಾಗ್ಯಾದಿಗುಣಸಹಿತವಾಗಿ ಇರಬೇಕಾಗುವುದೆಂಬ ವಚನವಿದೆ.

೧೯೭. ಸುಮತಿ ಶಾಸ್ತ್ರ ಮಾರ್ಕಂಡೇಯ ಋಷೀಶ್ವರಕೃತವಿದೆ, ಅದರಲ್ಲಿ ದಿವಸದ ನಾಲ್ಕು ಪ್ರಹರವು ಶೇಷವಿರುವಾಗ ಭೋಜನ ಮಾಡಿದರೆ ಯಾವ ಯಾವ ಫಲ ದೊರಕುತ್ತದೆ ? -ಎಂಬುದರ ಕಥನವಿದೆ.

೧೯೮. ಶಿವಪುರಾಣದಲ್ಲಿ ಬ್ರಾಹ್ಮಣರು ಇಂತಿಷ್ಟು ವಸ್ತುಗಳ ಭಕ್ಷಣ ಮಾಡದೇ ಇರುವುದು ಯೋಗ್ಯವಿದೆಯೆಂದು ಹೇಳಿದ್ದಾರೆ.

೧೯೯. ಅನ್ಯಮತದ ಕಶ್ಯಪನಾಮದ ಆಚಾರ್ಯರಿದ್ದು ಅವರು ಹೇಳುವುದೇನೆಂದರೆ ಯಾರು ವಿಷ್ಣು ಭಕ್ತರಿದ್ದಾರೆ ಅವರು ಕಂದಮೂಲ ಭಕ್ಷಣೆ ಮಾಡುವುದು ಯೋಗ್ಯವಿಲ್ಲ.

೨೦೦. ಶಿವಪುರಾಣವು ಅನ್ಯ ಮತಕ್ಕೆ ಸಂಬಂಧಿಸಿದ್ದಿದ್ದು ಅದರಲ್ಲಿ ದಯೆಯ ಸಮಾನ ತೀರ್ಥವಿಲ್ಲವೆಂದು ಹೇಳಿದ್ದಾರೆ.

೨೦೧. ಅನ್ಯ ಮತಗಳಲ್ಲಿ ಬ್ರಾಹ್ಮಣರ ಹತ್ತು ಭೇದಗಳನ್ನು ಹೇಳಿದ್ದಾರೆ.

೨೦೨. ಈ ಪ್ರಕಾರ ಅನ್ಯ ಮತಗಳ ರಹಸ್ಯವು ಕೂಡ ದಯಾ ಸಹಿತವೆಂದು ಹೇಳಿ, ಬ್ರಹ್ಮಚಾರಿಯ ಸ್ವರೂಪವನ್ನು ತಿಳಿಸಿಕೊಟ್ಟ ನಂತರ ಎಂಟನೆಯ ನೆಲೆಯಿಂದ ಹನ್ನೊಂದನೆಯ ನೆಲೆಯವರೆಗಿನ ಕಥನವಿದೆ.

೨೦೩. ಹನ್ನೊಂದನೇ ನೆಲೆಯಲ್ಲಿ ಶ್ರಾವಕರ ಐಲಕ, ಕ್ಷುಲ್ಲಕ - ಎಂಬ ಎರಡು ಭೇದ ಹೇಳಿದ್ದಾರೆ.

೨೦೪. ಮುನಿ-ಶ್ರಾವಕರ ಕಥನವನ್ನು ಪೂರ್ಣ ಮಾಡಿ, ಶಾಸ್ತ್ರಸಮಾಪನೆ ಮಾಡುತ್ತ ಕೊನೆಯಲ್ಲಿ ಮಂಗಲ ಸ್ವರೂಪದಿಂದ ಭರತ ಕ್ಷೇತ್ರದ ಮೂರು ಕಾಲ ಸಂಬಂಧದ ಇಪ್ಪತ್ತಾನ್ನಲ್ಕು ತೀರ್ಥಂಕರರ ಮತ್ತು ವರ್ತಮಾನ ಚೌಬೀಸಿಗಳ ಸಮಯದ ಪುರುಷರಿಗೆ ಮತ್ತು ಸಿದ್ಧಕ್ಷೇತ್ರಗಳಿಗೆ ನಮಸ್ಕಾರರೂಪ ಕಥನವಿದೆ.

೨೦೫. ಮೂರು ಲೋಕದಲ್ಲಿ ವಿರಾಜಮಾನವಿರುವ ಎಂಟು ಕೋಟಿ ಐವತ್ತಾರು ಲಕ್ಷ ತೊಂಭತ್ತೇಳು ಸಾವಿರದ ನಾಲ್ಕು ನೂರಾ ಎಂಭತ್ತೊಂದು ಅಕೃತ್ರಿಮ ಜಿನಮಂದಿರಗಳಿವೆ - ಅವುಗಳ ರಚನೆ ಮತ್ತು ವಿಸ್ತಾರದ ಕಥನ ಹಾಗೂ ಅವುಗಳಿಗೆ ಮಂಗಲದ ಉದ್ದೇಶದಿಂದ ನಮಸ್ಕಾರರೂಪ ಕಥನವಿದೆ.

೨೦೬. ಮಂಗಲದ ಉದ್ದೇಶದಿಂದ ಶಾಸ್ತ್ರದ ಕೊನೆಯಲ್ಲಿ ಪಂಚಪರಮೇಷ್ಠಿಗಳ ಕಥನವಿದೆ.

೨೦೭. ಅಂತ್ಯ ಮಂಗಲದ ಉದ್ದೇಶದಿಂದ ಶ್ರೀ ಅರಹಂತ ದೇವರು ವಿರಾಜಿಸುವಂಥ ಸಮವಸರಣದ ವಿಸ್ತಾರಸಹಿತ ವರ್ಣನೆಯಿದೆ. ಅಲ್ಲಿ ವಿರಾಜಮಾನರಿರುವಂಥ ಭಗವಂತರಿಗೆ ನಮಸ್ಕಾರ ಮಾಡಿದ್ದಾರೆ.

೨೦೮. ಭಗವಂತರ ವಿಹಾರ ಕ್ರಿಯೆಯ ವರ್ಣನೆಯಿದೆ.

೨೦೯. ಸ್ತೋತ್ರ ಕರ್ತೃ ವಾದಿರಾಜ ಗುರು ಮತ್ತು ಮಾನತುಂಗರೆಂಬ ಹೆಸರಿನ ಆಚಾರ್ಯ ಗುರುಗಳಿಗೆ ನಮಸ್ಕಾರವಿದೆ. ಗ್ರಂಥವು ಪೂರ್ಣವಾದ ಮೇಲೆ ಕವಿಗಳು ತಮ್ಮ ಜನ್ಮವು ಸಫಲವೆಂದು ತಿಳಿದು ಹರ್ಷಕ್ಕೆ ಪ್ರಾಪ್ತರಾಗಿದ್ದಾರೆ.

೨೧೦. ಗ್ರಂಥವು ಪೂರ್ಣವಾದ ಮೇಲೆ ಕವಿಗಳು ತಮ್ಮ ಹೆಸರು ಹೇಳಿ ಯಾವ ನಗರದಲ್ಲಿ ಪೂರ್ಣ ಮಾಡಿದ್ದಾರೆಂದು ತಿಳಿಸಿ ಆ ವರ್ಷ, ಮಾಸ, ದಿವಸವನ್ನು ಸಫಲವೆಂದು ತಿಳಿದು ಗ್ರಂಥವನ್ನು ಪೂರ್ಣ ಮಾಡುವ ಕಥನ ಮಾಡಿದ್ದಾರೆ.

ಈ ಪ್ರಕಾರ ಈ ಗ್ರಂಥದ ಸಾಮಾನ್ಯ ಟಿಪ್ಪಣಿ ಹೇಳಲಾಯಿತು. ವಿವೇಕವಂತ ಶ್ರೋತೃ ಹಾಗೂ ವಕ್ತಾರನು ಈ ಪೀಠಿಕೆಯ ಕಥನವನ್ನು ಸ್ಮರಣೆಯಲ್ಲಿ ಇಟ್ಟುಕೊಂಡು ಮನಸ್ಸಿನಲ್ಲಿ ಧಾರಣ ಮಾಡಿದರೆ ಈ ಗ್ರಂಥದ ಸ್ಮರಣೆ ಉಳಿಯುವುದು. ಈ ಪ್ರಕಾರ ಸಾಮಾನ್ಯ ಪೀಠಿಕೆಯನ್ನು ಹೇಳಲಾಯಿತು.

ಈ ಪ್ರಕಾರ ಶ್ರೀ ಸುದೃಷ್ಟಿತರಂಗಿಣಿ ಎಂಬ ಗ್ರಂಥದಲ್ಲಿ ಸರ್ವಾವಲೋಕನ
ಪೀಠಿಕೆ ಸಂಕ್ಷಿಪ್ತ ಅರ್ಥ ವರ್ಣನೆ ಎಂಬ ಹೆಸರಿನ ಮೊದಲಿನ
ಪರ್ವವು ಪೂರ್ಣವಾಯಿತು.

★★★★★

## ೨ : ಎರಡನೆಯ ಪರ್ವ
## ಶ್ರೋತೃ ಮತ್ತು ವಕ್ತಾರನ ಸ್ವರೂಪ

ಈಗ ಗ್ರಂಥದ ಆರಂಭರೂಪ ಕಥನ ಮಾಡುತ್ತಾರೆ. ಅಲ್ಲಿ ಪ್ರಥಮವೇ ಇಷ್ಟದೇವರಿಗೆ ನಮಸ್ಕಾರ ಮಾಡುತ್ತಾರೆ.

**ಅರಹಂತ ದೇವ ವಂದೇ, ಗುರುವಂದೇ ಣಗಣ ಣಾಣ ವೀಯರಾಯೋ ।**

**ಧಮ್ಮ ದಯಾಮಯ ವಂದೇ, ಕಮ್ಮಕ್ಖಯ ಕಾರಣಂ ಸುದ್ಧಂ ॥೧॥**

**ಗಾಥಾರ್ಥ :-** ತಮ್ಮ ಕರ್ಮಗಳನ್ನು ನಷ್ಟ ಮಾಡುವ ಸಲುವಾಗಿ ಅರಹಂತ ದೇವರಿಗೆ; ನಗ್ನ (ದಿಗಂಬರ) ಜ್ಞಾನೀ ವೀತರಾಗೀ ಗುರುಗಳಿಗೆ ಮತ್ತು ದಯಾಮಯ ಧರ್ಮಕ್ಕೆ ನಮಸ್ಕಾರವಿರಲಿ.

**ಭಾವಾರ್ಥ :-** ಯಾರು ತಮ್ಮ ಕರ್ಮ ಶತ್ರುಗಳನ್ನು ನಷ್ಟ ಮಾಡಿದ್ದಾರೆ, ಅದರಿಂದ ಅರಹಂತರು ದೇವರಿದ್ದಾರೆ - ಅಂಥ ಅರಹಂತ ದೇವರಿಗೆ ನಮ್ಮ ನಮಸ್ಕಾರವಿರಲಿ. ಸರ್ವ ಪರಿಗ್ರಹ ರಹಿತರೂ, ತನುವಿನ ಮಮತ್ವದ ತ್ಯಾಗಿಗಳೂ, ನಗ್ನರೂ, ರಾಗ-ದ್ವೇಷ ರಹಿತರೂ ಮತ್ತು ವೀತರಾಗಿಗಳಾದ ಗುರುಗಳಿಗೆ ನಮ್ಮ ನಮಸ್ಕಾರವಿರಲಿ. ಷಟ್ಕಾಯ ಜೀವಗಳ ರಕ್ಷಣೆಯನ್ನು ಮಾತೆಯ ಸಮಾನ ಮಾಡುವಂಥದು ದಯೆಯಿದೆ; ಆ ದಯಾಮಯವಾದ ಧರ್ಮ ಕಥನಸಹಿತ, ಸಪ್ತಭಂಗರೂಪ, ಸಮ್ಯಕ್ ಪ್ರಕಾರದಿಂದ - ಸರ್ವಜ್ಞ ವೀತರಾಗಿಗಳಿಂದ ಪ್ರರೂಪಿತ ಧರ್ಮಕ್ಕೆ ನಮ್ಮ ನಮಸ್ಕಾರವಿರಲಿ.

ಈ ಪ್ರಕಾರ ಧರ್ಮ ಮಂಗಲದ ಉದ್ದೇಶದಿಂದ ತಮ್ಮ ಇಷ್ಟದೇವ, ಗುರು, ಧರ್ಮಗಳಿಗೆ ಭಕ್ತಿಭಾವಸಹಿತ ನಮಸ್ಕಾರ ಮಾಡುವುದರಿಂದ ಪುಣ್ಯದ ಸಂಚಯವಾಯಿತು. ಹೇಗಿದ್ದಾರೆ ದೇವ, ಗುರು, ಧರ್ಮ ? - ಭಕ್ತ ಜೀವರುಗಳ ಕರ್ಮನಾಶದ ಕಾರಣರಿದ್ದಾರೆ. ಸರ್ವದೋಷರಹಿತ ಶುದ್ಧರಿರುವುದರಿಂದ ಭಕ್ತರಿಗೂ ಶುದ್ಧಿಯಲ್ಲಿ ಪರಂಪರೆಯಿಂದ ಕಾರಣರಿದ್ದಾರೆ.

ಯಾರು ಯಾರ ಸೇವೆ ಮಾಡುತ್ತಾರೆ. ಅವರಿಗೆ ಅಂಥದೇ ಫಲವಾಗುತ್ತದೆಯೆಂಬ ಮಾತು ಸತ್ಯವೇ ಇದೆ. ಯಾವ ಜೀವನು ಯಾರ ಸೇವೆ ಮಾಡುತ್ತಾನೆ ಅವನು ಪರಂಪರೆಯಿಂದ ಅವರ ಹಾಗೆಯೇ ಆಗುತ್ತಾನೆಂಬುದನ್ನು ಈ ಲೋಕದಲ್ಲಿಯೂ ಪ್ರಗಟರೂಪದಿಂದ ಕಾಣಲಾಗುತ್ತದೆ.

ಯಾವನು ರತ್ನಪರೀಕ್ಷನ ಸೇವೆ ಮಾಡುತ್ತಾನೆ ಅವನು ಪರಂಪರೆಯಿಂದ ರತ್ನ ಪರೀಕ್ಷಕನಾಗುತ್ತಾನೆ. ಯಾವನು ಚಿನ್ನ-ಬೆಳ್ಳಿಯ ವ್ಯಾಪಾರಿಯ ಹತ್ತಿರ ನೌಕರಿ ಮಾಡುತ್ತಾನೆ ಅವನು ಚಿನ್ನ-ಬೆಳ್ಳಿಯ ವ್ಯಾಪಾರಿಯಾಗುತ್ತಾನೆ. ದಿನಸಿ ವ್ಯಾಪಾರಿಯ ಸೇವೆ ಮಾಡುವಂಥವನು ದಿನಸಿ ಅಂಗಡಿಯನ್ನಿಡುತ್ತಾನೆ. ಹೀನ ಸಂಗತಿಯಲ್ಲಿ ಶಿಲ್ಪಿಯ ಸೇವೆ ಮಾಡಿದರೆ ಶಿಲ್ಪಿಯಾಗುತ್ತಾನೆ, ಬಡಿಗನ ಸೇವೆ ಮಾಡಿದರೆ ಪರಂಪರೆಯಿಂದ ಬಡಿಗನಾಗಿ ಹೋಗುತ್ತಾನೆ. - ಇತ್ಯಾದಿ ಎಂಥೆಂಥ ಸಂಗತಿ ಮಾಡುತ್ತಾನೆ, ಅಂಥದೇ ಪದವನ್ನು ಪ್ರಾಪ್ತ ಮಾಡಿಕೊಳ್ಳುತ್ತಾನೆ; ಅದೇ ಪ್ರಕಾರ ಶುದ್ಧ (ಸತ್ಯ) ದೇವ, ಗುರು, ಧರ್ಮದ ಸೇವೆ ಮಾಡುತ್ತಿದ್ದರೆ ಶುದ್ಧನಾಗುತ್ತಾನೆಂದು ಆಚಾರ್ಯರು ಹೇಳಿದ್ದಾರೆ. ಅದನ್ನೇ ತಿಳಿದುಕೊಂಡು ನಾನು ಕೂಡ ನಮ್ಮ ದೇವ, ಗುರು, ಧರ್ಮದ ವಂದನೆ ಮಾಡಿದ್ದೇನೆ. ಅದರ ಫಲಸ್ವರೂಪವಾಗಿ ನನ್ನ ಕರ್ಮಮಲವು ನಷ್ಟವಾಗಿ ನನಗೆ ಶುದ್ಧ ಅವಸ್ಥೆಯಾಗಲಿ.

ಇಲ್ಲಿ ಯಾವನೋ ಇಂದ್ರಿಯ ಸುಖದ ಲೋಭಿಯು ಪ್ರಶ್ನೆ ಕೇಳುತ್ತಾನೆ - ತಾವು ಕರ್ಮರಹಿತ, ಸಿದ್ಧಪದದ ಇಚ್ಛೆ ಮಾಡಿರುವಿರಿ; ಆದರೆ ಅಲ್ಲಿ ಆಹಾರ-ಪಾನೀಯ, ಸ್ತ್ರೀಯಭೋಗ, ವಿವಿಧ ಪ್ರಕಾರದ ಸುಗಂಧ, ವಸ್ತ್ರ ಆಭೂಷಣ, ನರ್ತನ-ಗಾಯನ ಮೊದಲಾದ ಭೋಗ ಸುಖಗಳಂತೂ ಇಲ್ಲವೇ ಇಲ್ಲವೆಂದ ಮೇಲೆ ಮೋಕ್ಷದಲ್ಲಿ ಮತ್ತಾವ ಸುಖವಿದೆ?

**ಉತ್ತರ :-** ಎಲೈ ವಿಷಯಾಭಿಲಾಷಿಯೇ ! ನಿನಗೆ ಸುಖದ ಅಭಿಲಾಷೆಯಿದ್ದರೆ, ಅಯ್ಯಾ ಸೋದರನೇ! ನೀನು ಸಂಸಾರದಲ್ಲಿ ಯಾವುದನ್ನು ದುಃಖವೆಂದು ತಿಳಿಯುವೆ ಮತ್ತು ಯಾವುದನ್ನು ಸುಖವೆಂದು ಮನ್ನಿಸುವೆ? ಮೊದಲು ಅದನ್ನಾದರೂ ಹೇಳು; ಆಮೇಲೆ ಸಿದ್ಧರ ಸುಖವನ್ನು ಹೇಳುತ್ತೇವೆ.

**ತರ್ಕಕರ್ತನು ಹೇಳುತ್ತಾನೆ -** ಸಂಸಾರದಲ್ಲಿ ಎಲ್ಲಕ್ಕಿಂತ ದೊಡ್ಡ ದುಃಖವಂತೂ ಜನ್ಮ-ಮರಣದ್ದಿದೆ.

**ಧರ್ಮಾತ್ಮನು ಅದಕ್ಕೆ ಹೇಳುತ್ತಾನೆ -** ಈ ದುಃಖವು ಸಿದ್ಧರಲ್ಲಿ ಇರುವುದಿಲ್ಲ.

**ಆಗ ತರ್ಕಕರ್ತನು -** ಒಂದು ದುಃಖವು ನಿರಂತರ ಹಸಿವು ಬಾಯಾರಿಕೆಗಳದ್ದಿದೆ.

**ಧರ್ಮಾತ್ಮನು -** ಇದು ಸಿದ್ಧರಲ್ಲಿ ಇರುವುದಿಲ್ಲ.

**ಪುನಃ ತರ್ಕಕರ್ತನು -** ಶೀತ-ಉಷ್ಣ, ರಾಗ-ದ್ವೇಷ, ಕ್ರೋಧ, ಮಾನ, ಮಾಯೆ, ಲೋಭ - ಇವು ದುಃಖಗಳಿವೆ ಅಲ್ಲದೆ ನಾನಾ ಪ್ರಕಾರದ ವಾಯು, ಪಿತ್ತ, ಕಫ, ಕೆಮ್ಮು, ದಮ್ಮು, ಶ್ವಾಸ, ಕುಷ್ಟ-ಕಜ್ಜಿ ಮೊದಲಾದ ರೋಗಗಳ ದುಃಖವಿದೆ ಹಾಗೂ ಸಂಪಾದನೆ ಮಾಡುವ, ದೇಶಾಂತರದಲ್ಲಿ ಭ್ರಮಿಸುವ ಇತ್ಯಾದಿ ಅನೇಕ ದುಃಖಗಳು ಸಂಸಾರದಲ್ಲಿವೆ.

**ಆಗ ಧರ್ಮಾತ್ಮನು ಹೇಳುತ್ತಾನೆ -** ಸೋದರನೇ ! ಸಂಸಾರದ ಈ ದುಃಖಗಳು ಸಿದ್ಧರಲ್ಲಿ ಒಂದು ಸಹ ಇಲ್ಲ. ಮತ್ತು ನೀನು ಸುಖವು ಇಂದ್ರಿಯ ಜನಿತವೆಂದು ಮನ್ನಿಸುವೆ ಅದನ್ನೂ ನೋಡು ! - ಯಾವಾಗ ಆರು ರಸಗಳು ನಾಲಿಗೆಯೊಂದಿಗೆ ಸೇರಿಕೊಳ್ಳುತ್ತವೆ, ಆಗ ಆ ನಾಲಿಗೆ(ಜಿಹ್ವೆ)ಯ ಮೂಲಕ ರಸದ ಜ್ಞಾನವಾಗುತ್ತದೆ ಆವಾಗಲೇ ಆರು ರಸಗಳ ಸುಖವೆನಿಸುತ್ತದೆ. ಒಂದುವೇಳೆ ನಾಲಗೆಯಿಂದ ಅಂತರ-ದೂರವುಳಿದರೆ ಸ್ವಾದದ ಸುಖವಾಗುವುದಿಲ್ಲ; ಆದರೆ ಯಾವ ಸಿದ್ಧರಿದ್ದಾರೆ ಅವರು ಅನಂತ ಪುದ್ಗಲ ಪರಮಾಣುಗಳು ಯಾವ-ಯಾವ ರಸರೂಪದಿಂದ ಪರಿಣಮಿಸುತ್ತವೆ, ಎಂಥೆಂಥ ರಸಗಳ ಅಂಶರೂಪವಿವೆ, ಆ ಮೂರೂ ಕಾಲ ಸಂಬಂಧದ ಪರಮಾಣುಗಳ ರಸದ ಸ್ವಾದವನ್ನು ಒಂದು ಸಮಯದಲ್ಲಿ ತಿಳಿಯುತ್ತ ಭೋಗಿಸುತ್ತಾರೆ.

ನೀನು ನೃತ್ಯಾದಿಗಳ ಸುಖ ಮನ್ನಿಸುತ್ತಿರುವೆ; ಆದರೆ ಅವು ಕೂಡ ಯಾವಾಗ ನಿನ್ನ ದೃಷ್ಟಿಯಲ್ಲಿ ಬರುವವು ಆಗ ಸುಖವಾಗುವುದು. ಒಂದುವೇಳೆ ದೃಷ್ಟಿಯಲ್ಲಿ ಬರದಿದ್ದರೆ ಸುಖವಾಗಲಾರದು; ಆದರೆ ಸಿದ್ಧರ ಜ್ಞಾನದಲ್ಲಂತೂ ಎಲ್ಲೆಲ್ಲಿ ದೇವ-ಮನುಷ್ಯರಲ್ಲಿ ಅನಂತ ಕಾಲದ ನೃತ್ಯವಾಗಿ ಹೋಗಿದೆ, ಆಗುತ್ತಲಿದೆ ಮತ್ತು ಆಗುವುದಿದೆ ಆ ತ್ರಿಕಾಲ ಸಂಬಂಧದ ಸಮಸ್ತ ನೃತ್ಯಗಳು ಕಂಡು ಬರುತ್ತವೆ ಮತ್ತು ಅವರು ಅವುಗಳ ಸುಖ ಭೋಗಿಸುತ್ತಾರೆ.

ಸಂಸಾರದಲ್ಲಿ ನೀನು ಗಾಯನ-ವಾದನಗಳ ಸುಖ ಮನ್ನಿಸುವೆ; ಆದರೆ ಯಾವಾಗ ನಿನ್ನ ಕಿವಿಗಳಿಂದ ಅವು ಕೇಳಿಬರುತ್ತವೆ ಆವಾಗಲೇ ಆ ಹಾಡುಗಾರಿಕೆ ಮತ್ತು ವಾದ್ಯಗಳ ಮಧುರನಾದ ಮೊದಲಾದವುಗಳಿಂದ ಸುಖಿಯಾಗ-ಬಹುದಾಗಿದೆ. ಒಂದುವೇಳೆ ಅವು ಕೇಳಿ ಬರದಿದ್ದರೆ ಸುಖವಾಗುವುದಿಲ್ಲ; ಆದರೆ ಯಾವ ಸಿದ್ಧರಿದ್ದಾರೆ ಅವರು ಅನಂತ ಕಾಲದ ಮೊದಲು ಯಾವ ಯಾವ ಗಾಯನಾದಿ ಆಗಿ ಹೋಗಿವೆ, ಅವೆಲ್ಲವನ್ನು ತಿಳಿಯುತ್ತಾರೆ. ಈ ಮೂರು ಲೋಕದಲ್ಲಿ ಯಾವ ಯಾವ ಗಾಯನಾದಿಗಳು ನಡೆದಿವೆ. ಅವುಗಳನ್ನು ತಿಳಿಯುತ್ತಾರೆ ಹಾಗೂ ಆಗಾಮಿ ಕಾಲದಲ್ಲಿ ಮೂರು ಲೋಕಗಳಲ್ಲಿ ಯಾವ ಯಾವ ಗಾಯನಾದಿಗಳು ಆಗುವವಿವೆ ಅವೆಲ್ಲವನ್ನು ಮೊದಲಿನಿಂದಲೇ ತಿಳಿಯುತ್ತಾರೆ.

ಇದೇ ಪ್ರಕಾರ ಮೂರು ಲೋಕದಲ್ಲಿ ಮೂರು ಕಾಲ ಸಂಬಂಧದ ಪುದ್ಗಲ ಸ್ಕಂಧಗಳು ಮಿಷ್ಟಸ್ವರೂಪವಾಗಿ ಪರಿಣಮಿತವಾಗುತ್ತವೆಯೋ ಅವೆಲ್ಲವನ್ನು ಪ್ರತಿ ಸಮಯ ತಿಳಿದುಕೊಂಡು ಸುಖ ಭೋಗಿಸುತ್ತಾರೆ. ಸುಗಂಧದ ಸುಖವು ಸಂಸಾರೀ ಜೀವಗಳಿಗೆ ಯಾವಾಗ ನಾಸಿಕದಿಂದ ತಿಳಿದು ಬರುತ್ತದೆ ಆಗ ಆಗುತ್ತದೆ; ಆದರೆ ಯಾವ ಸಿದ್ಧರಿದ್ದಾರೆ, ಅವರು ಮೂರುಕಾಲ-ಮೂರು ಲೋಕದ ಪುದ್ಗಲ ಪರಮಾಣುಗಳು ಎಂಥೆಂಥ ಸುಗಂಧರೂಪವಾಗಿ ಪರಿಣಮಿತವಾಗುತ್ತವೆ. ಅವೆಲ್ಲವನ್ನು ಪ್ರತಿಸಮಯ ತಿಳಿದುಕೊಂಡು ಸುಖ ಭೋಗಿಸುತ್ತಾರೆ.

ಸ್ಪರ್ಶನ ಇಂದ್ರಿಯದ ವಿಷಯ ಸುಖವು ಎಂಟು ಪ್ರಕಾರದ ಸ್ಪರ್ಶಗಳಲ್ಲಿ ಇದೆ. ಅವುಗಳನ್ನು ಸಂಸಾರೀ ಜೀವವಂತೂ ಯಾವಾಗ ಶರೀರದಿಂದ ಸ್ಪರ್ಶ ಮಾಡುತ್ತಾನೆ. ಆಗ ತಿಳಿದುಕೊಂಡು ಸುಖಿಯಾಗುತ್ತಾನೆ; ಆದರೆ ಯಾವ

ಸಿದ್ಧರಿದ್ದಾರೆ ಅವರು ತ್ರಿಕಾಲ ಸಂಬಂಧದ ತ್ರಿಲೋಕವರ್ತಿ ಸ್ಪರ್ಶಗಳ ಎಲ್ಲ ವಿಷಯಗಳನ್ನು ಪ್ರತಿಸಮಯ ತಿಳಿದುಕೊಂಡು ಭೋಗಿಸುತ್ತಾರೆ.

ಈ ಪ್ರಕಾರ ಎಲೈ ಸೋದರನೇ ! ಸಿದ್ಧರಿಗೆ ಸಂಸಾರದ ದುಃಖವಂತೂ ಒಂದೂ ಇರುವುದಿಲ್ಲ ಮತ್ತು ಅವರು ಇಂದ್ರಿಯ ಸುಖದ ಅನಂತಗುಣಿತ ಅತೀಂದ್ರಿಯ ಸುಖ ಭೋಗಿಸುತ್ತಾರೆ - ಇಂಥ ಅವಿನಾಶಿ, ನಿರಾಕುಲ ಸುಖವು ಸಿದ್ಧರಿಗಿದೆಯೆಂದು ತಿಳಿಯುವುದು.

ಈ ಪ್ರಕಾರ ಶುದ್ಧ(ಸತ್ಯ) ದೇವ, ಗುರು, ಧರ್ಮದ ಶ್ರದ್ಧೆಯುಳ್ಳ ಸಮ್ಯಗ್ದೃಷ್ಟೀ ಜೀವರುಗಳ ಜ್ಞಾನಸಾಗರದಲ್ಲಿ ಶುದ್ಧೋಪಯೋಗಮಯ ನಿರಾಕುಲ ಧಾರೆಯೊಂದಿಗೆ ಶುಭ ಫಲವನ್ನು ಉತ್ಪನ್ನ ಮಾಡುವಂಥ ತರಂಗಗಳಲ್ಲಿ ಅನೇಕ ಹೇಯ, ಜ್ಞೇಯ, ಉಪಾದೇಯರೂಪ ತತ್ತ್ವಜ್ಞಾನಮಯ ತರಂಗಗಳು ಉತ್ಪನ್ನವಾಗುತ್ತವೆ, ಅವುಗಳ ಕಥನವನ್ನು ಈ ಗ್ರಂಥದಲ್ಲಿ ಮಾಡಲಾಗಿದೆ. ಅಂತೆಯೇ ಈ ಗ್ರಂಥದ ಹೆಸರು ಸುದೃಷ್ಟಿ ತರಂಗಿಣಿ ಇದೆ. ಅದನ್ನೇ ಹೇಳುತ್ತಾರೆ.

**ಣಾಮ ಸುದಿಟ್ಠಿ ತರಂಗೋ ಗಂಥೋ ಜ್ಞೇಯಾ ಯ ಹೇಯೋಪಾದೇಯೋ ।**
**ದೋ ಭೇಯ ಜ್ಞೇಯ ಜ್ಞೇಯಂ ತಿರಕಾಪರ ಜ್ಞೇಯ ಸುಜ್ಞೇಯ ಆದೇಈ ॥೨॥**

**ಗಾಥಾರ್ಥ ಃ-** ಈ ಗ್ರಂಥದ ಹೆಸರು ಸುದೃಷ್ಟಿ ತರಂಗಿಣಿಯಿದೆ. ಇದರಲ್ಲಿ ಜ್ಞೇಯ, ಹೇಯ, ಉಪಾದೇಯಗಳ ಕಥನವಿದೆ. ಅಲ್ಲಿ ಜ್ಞೇಯವಂತೂ ಒಂದೇ ಇದ್ದು ಯಾವಾಗ ಅದರಲ್ಲಿ ಎರಡು ಭೇದ ಮಾಡಲಾಗುತ್ತದೆ, ಆಗ ಒಂದು ಜ್ಞೇಯವಂತೂ ತ್ಯಾಗಯೋಗ್ಯವಿದೆ ಮತ್ತು ಒಂದು ಉಪಾದೇಯವಿದೆ. ಸ್ವಜ್ಞೇಯವು ಉಪಾದೇಯವಿದೆ ಮತ್ತು ಪರಜ್ಞೇಯವು ತ್ಯಾಗ ಮಾಡಲು ಯೋಗ್ಯವಿದೆ.

**ಭಾವಾರ್ಥ ಃ-** ಸಮ್ಯಗ್ದೃಷ್ಟಿ ಜೀವರುಗಳಿಗೆ ಸ್ವ-ಪರ ಪದಾರ್ಥಗಳ ತಿಳಿವಳಿಕೆಯಿರುತ್ತದೆ. ಅದರಲ್ಲಿ ಸಹಜವಾಗಿಯೇ ಜ್ಞೇಯ, ಹೇಯ, ಉಪಾದೇಯ - ಈ ಪ್ರಕಾರ ಮೂರು ಭೇದಗಳಾಗುತ್ತವೆ. ಮೊದಲಂತೂ ಜ್ಞಾನದಲ್ಲಿ ತಿಳಿದು ಬರುವ ಸಮಸ್ತ ಸ್ವ-ಪರ ಪದಾರ್ಥಗಳು ಜ್ಞೇಯವಿವೆ; ನಂತರ ಅದೇ ಜ್ಞೇಯದಲ್ಲಿ ಎರಡು ಭೇದಗಳಾಗುತ್ತವೆ. ಅದೆಷ್ಟೋ ಪದಾರ್ಥಗಳು ತಮ್ಮ ಹಿತ ಯೋಗ್ಯವಿರುವುದಿಲ್ಲ, ಅವು ಹೇಯವಿವೆ. ಅದೆಷ್ಟೋ ಪದಾರ್ಥಗಳು ತಮ್ಮ ಹಿತ ಯೋಗ್ಯವಿರುತ್ತವೆ. ಮಿಥ್ಯಾದೃಷ್ಟಿ ಬಾಲಬುದ್ಧಿಗಳಿಗೆ ತ್ಯಾಗ ಮತ್ತು ಉಪಾದೇಯತೆ-ಯಾಗುವುದಿಲ್ಲ. ಒಂದುವೇಳೆ ಎಂದಾದರೂ ಆಗುತ್ತಿದ್ದರೆ ವಿಪರೀತವಾಗುತ್ತದೆ. ಒಳ್ಳೆಯ ವಸ್ತುವಿನ ತ್ಯಾಗ ಮಾಡುತ್ತಾರೆ ಮತ್ತು ಅಯೋಗ್ಯ ವಸ್ತುವಿನ ಗ್ರಹಣ ಮಾಡುತ್ತಾರೆ; ಈ ಪ್ರಕಾರದ ತ್ಯಾಗ-ಉಪಾದೇಯದಿಂದ, ಉಪಾದೇಯರೂಪ ವಸ್ತುವಿನ ತ್ಯಾಗವಾಗಿ ಪರಭವವು ಕೆಟ್ಟು ಹೋಗುತ್ತದೆ. ಸಮ್ಯಕ್ ಪ್ರಕಾರದ ಹೇಯ-ಉಪಾದೇಯದಲ್ಲಂತೂ ಸಮ್ಯಗ್ದೃಷ್ಟಿಗಳ ಉಪಯೋಗವೇ ಪ್ರವೇಶ ಮಾಡುತ್ತದೆ ಅದನ್ನೇ ಹೇಳುತ್ತಾರೆ.

ಸಮಸ್ತ ಜೀವ-ಅಜೀವ ಜ್ಞೇಯಗಳನ್ನು ತಿಳಿಯುವುದಂತೂ ಜ್ಞೇಯವಿದೆ. ಅದರಲ್ಲಿ ಅಜೀವ ಅಚೇತನ ಜಡವು ಪರಜ್ಞೇಯವಿದೆ ಹಾಗೂ ನೋಡುವ-ತಿಳಿಯುವಂಥ ಚೈತನ್ಯರೂಪ ಜೀವವಸ್ತುವು ಉಪಾದೇಯವಿದೆ. ಚೇತನ ಜ್ಞೇಯವು ಕೂಡ ಎರಡು ಭೇದರೂಪವಿದೆ. ಪರಸತ್ತಾ, ಪರಪ್ರದೇಶ, ಪರಗುಣ, ಪರಪರ್ಯಾಯರೂಪ ಆತ್ಮನು ಪರಜ್ಞೇಯವಿದ್ದಾನೆ. ಇಲ್ಲಿ ಯಾವ ಪರ ಆತ್ಮನು ಪರಜ್ಞೇಯವಿದ್ದಾನೆ ಅವನು ಹೇಯವಿದ್ದಾನೆ- ತ್ಯಾಗಯೋಗ್ಯವಿದ್ದಾನೆ. ಸ್ವಮಯವಾದ ಸ್ವಸತ್ತಾ, ಸ್ವಪ್ರದೇಶ, ಸ್ವಗುಣ, ಸ್ವಪರ್ಯಾಯದ ಏಕರೂಪತೆ - ಏಕರೂಪ ಅಖಂಡತೆಯು ಅದುವೇ ಸ್ವಜ್ಞೇಯವಿದೆ, ಉಪಾದೇಯವಿದೆ, ಅಂಗೀಕಾರ ಮಾಡಲು ಯೋಗ್ಯವಿದೆ.

**ವಿಶ್ಲೇಷಣಾರ್ಥ -** ಚೇತನ-ಅಚೇತನವೆಂದು ಜ್ಞೇಯಗಳು ಎರಡು ಭೇದಸ್ವರೂಪವಿವೆ. ಅವುಗಳಲ್ಲಿನ ಧರ್ಮದ್ರವ್ಯ, ಅಧರ್ಮದ್ರವ್ಯ, ಕಾಲ, ಆಕಾಶ ಮತ್ತು ಪುದ್ಗಲ - ಇವು ಐದು ಭೇದಗಳಂತೂ ಅಜೀವ ಜ್ಞೇಯದವಿವೆ.

ಇವೆಲ್ಲವಂತೂ ತನ್ನಿಂದ (ಆತ್ಮನಿಂದ) ಭಿನ್ನವೇ ಇವೆ; ಅದರಿಂದ ಹೇಯವಿವೆ, ತ್ಯಾಗ ಮಾಡಲು ಯೋಗ್ಯವಿವೆ. ಜೀವಗಳು ಅನಂತವಿದ್ದು ಅವು ತಮ್ಮ ತಮ್ಮ ದ್ರವ್ಯ, ಗುಣ, ಪರ್ಯಾಯ, ಸತ್ತಾ, ಪ್ರದೇಶಗಳಿಂದ ಭಿನ್ನ-ಭಿನ್ನವಿವೆ; ಎಂದರೆ ತಮ್ಮ ಆತ್ಮ ಸತ್ತಾದಿಂದ ಬೇರೆಯಾಗಿರುವ ಅನಂತ ಪರಜೀವಗಳ ಸತ್ತಾ ಪರಜ್ಞೇಯವಿದ್ದು ಅವೆಲ್ಲವೂ ತ್ಯಾಗ ಮಾಡಲು ಯೋಗ್ಯವಿವೆ.

ಜ್ಞಾನದ ತಿಳಿವಳಿಕೆಯಲ್ಲಿ ಬಂದಿರುವ ಆತ್ಮನ ಅನಂತ ಗುಣಗಳು ಸ್ವಜ್ಞೇಯವಿವೆ, ಉಪಾದೇಯವಿವೆ, ಅಂಗೀಕಾರ ಮಾಡಲು ಯೋಗ್ಯವಿವೆ.

ಪರಜ್ಞೇಯದ ಇತರ ಭೇದಗಳೂ ಅನೇಕವಿವೆ. ಅವು ವ್ಯವಹಾರ ನಯದಿಂದ ಕೆಲವಂತೂ ಆತ್ಮನಿಗೆ ಇಷ್ಟವಿದೆ. ಅದರಿಂದ ಉಪಾದೇಯವಿದೆ ಮತ್ತು ಕೆಲವು ಆತ್ಮನಿಗೆ ಅನಿಷ್ಟ, ಅಹಿತಕಾರಿಯಿವೆ, ದುಃಖಕಾರಿಯಿವೆ ಅದರಿಂದ ಹೇಯವಿವೆ.

ಪರಜ್ಞೇಯಗಳಲ್ಲಿ ಮಮತ್ವ ಮಾಡುವ ಕಾರಣದಿಂದ ಈ ಆತ್ಮನದು ಸಂಸಾರದಲ್ಲಿ ಭ್ರಮಣ ಮಾಡುತ್ತ ಅನಂತಾನಂತ ಪರಾವರ್ತನ ಕಾಲವು ಕಳೆದು ಹೋಗಿದೆ. ಪರಾವರ್ತನವು ಏನಿದೆಯೆಂಬುದನ್ನು ಈಗ ಹೇಳುತ್ತಾರೆ.

**ದವ್ವಖೇತ್ತಕಾಲೇ ಭವ ಭಾವೋ ಪಾವತ್ತಂ ಪಣ ಅಣಂತಕಯ ಆದಾ ।**
**ಭವ ಅಂತೇಪಣ ಲದ್ಧೀ ಭವ್ವೋ ಪಯ ಮೋಖ ಹೋಯ ಲವ ಕಾಲೇ ॥೩॥**

**ಗಾಥಾರ್ಥ :-** ಈ ಆತ್ಮನು ದ್ರವ್ಯ, ಕ್ಷೇತ್ರ, ಕಾಲ, ಭವ ಮತ್ತು ಭಾವ - ಈ ಐದು ಪರಾವರ್ತನ-ಪರಿವರ್ತನಗಳನ್ನು ಅನಂತ ಬಾರಿ ಮಾಡಿದ್ದಾನೆ. ಭವ್ಯ ಜೀವನು ಸಂಸಾರ ಸಮಾಪ್ತಿಯ ಸಮಯದಲ್ಲಿ ಐದು ಲಬ್ಧಿಗಳ ಮಾಧ್ಯಮದಿಂದ ಮೋಕ್ಷ ಮಾರ್ಗಿಯಾಗಿ ಅಲ್ಪಕಾಲದಲ್ಲಿಯೇ ಮೋಕ್ಷಪ್ರಾಪ್ತ ಮಾಡಿಕೊಳ್ಳುತ್ತಾನೆ.

**ಭಾವಾರ್ಥ :-** ಪರಾವರ್ತನದಲ್ಲಿ - ದ್ರವ್ಯ ಪರಾವರ್ತನ, ಕ್ಷೇತ್ರ ಪರಾವರ್ತನ, ಕಾಲ ಪರಾವರ್ತನ, ಭವ ಪರಾವರ್ತನ ಮತ್ತು ಭಾವ ಪರಾವರ್ತನವೆಂದು ಐದು ಭೇದಗಳಿವೆ. ಈಗ ಅವುಗಳ ಸಾಮಾನ್ಯ ಅರ್ಥ ಬರೆಯಲಾಗುವುದು.

**೧. ದ್ರವ್ಯ ಪರಾವರ್ತನದ ಸ್ವರೂಪ -** ಯಾವ ಪುದ್ಗಲ ಪರಮಾಣುಗಳನ್ನು ಜೀವನು ರಾಗ-ದ್ವೇಷ ಭಾವಮಾಡಿ ಅನಂತಬಾರಿ ಗ್ರಹಣ ಮಾಡಿದ್ದಾನೆ ಮತ್ತು ಬಿಟ್ಟಿದ್ದಾನೆ ಯಾವ ಪರಮಾಣುಗಳನ್ನು ಅಂಗೀಕಾರ ಮಾಡಿ ಬಿಟ್ಟಿದ್ದಾನೆ, ಅವೇ ಪರಮಾಣುಗಳನ್ನು ಯಾವಾಗ ಗ್ರಹಣ ಮಾಡುತ್ತಾನೆ ಆಗ ಎರಡನೆಯ ಬಾರಿ ಎಣಿಕೆಯಲ್ಲಿ ಬರುತ್ತದೆ ಈ ಪ್ರಕಾರ ಪ್ರತಿಯೊಂದು ಪರಮಾಣುವನ್ನು ಅನಂತ-ಅನಂತಬಾರಿ ಬಿಟ್ಟಿದ್ದಾನೆ ಮತ್ತು ಗ್ರಹಣ ಮಾಡಿದ್ದಾನೆ.

ಒಂದು ಪರಮಾಣುವನ್ನು ಗ್ರಹಣ ಮಾಡಿ ಬಿಟ್ಟುಕೊಟ್ಟ ನಂತರ ಅನಂತ ಕಾಲವು ಕಳೆದುಹೋದ ಮೇಲೆ ಅದೇ ಪರಮಾಣುವನ್ನು ಗ್ರಹಣ ಮಾಡುವ ನಿಮಿತ್ತವು ದೊರಕಿತು, ಪುನಃ ಅದನ್ನು ಬಿಟ್ಟುಕೊಟ್ಟನು. ಪುನಃ ಅನಂತಕಾಲವು ಕಳೆದ ಮೇಲೆ ಅದೇ ಪರಮಾಣುವನ್ನು ಗ್ರಹಣ ಮಾಡುವ ನಿಮಿತ್ತವು ದೊರಕಿತು-ಹೀಗೆ ಮಾಡುತ್ತ ಮಾಡುತ್ತ ಜೀವರಾಶಿಯಿಂದ ಅಧಿಕ ಅನಂತಾನಂತವಿರುವ ಪುದ್ಗಲ ಪರಮಾಣುಗಳನ್ನು ಅನಂತಾನಂತ ಬಾರಿ ಗ್ರಹಣ ಮಾಡಿದನು ಮತ್ತು ಬಿಟ್ಟುಕೊಟ್ಟನು. ಒಂದು ಪರಮಾಣುವನ್ನು ಒಂದು ಬಾರಿ ಬಿಟ್ಟುಕೊಟ್ಟ ನಂತರ ಪುನಃ ಅದರ ದೊರಕುವಿಕೆಯಲ್ಲಿ ಅನಂತ ಕಾಲವು ಬೇಕಾಗುತ್ತದೆ. ಈ ಪ್ರಕಾರ ಅನಂತ ಪರಮಾಣುಗಳನ್ನು ಗ್ರಹಣ ಮಾಡುವಲ್ಲಿ ಮತ್ತು ಬಿಟ್ಟು ಕೊಡುವಲ್ಲಿ ಎಷ್ಟು ಕಾಲವು ಬೇಕಾಗುತ್ತದೆ ಅದು ದ್ರವ್ಯ ಪರಾವರ್ತನವಿದೆ. ಇದನ್ನೇ ಪುದ್ಗಲ ಪರಾವರ್ತನವೆಂದೂ ಹೇಳುತ್ತಾರೆ. ಇದರ ಕಾಲವು ಕೇವಲಜ್ಞಾನಗಮ್ಯ ಅನಂತಕಾಲವಿದೆ.

**೨. ಕ್ಷೇತ್ರ ಪರಾವರ್ತನ -** ಲೋಕಾಕಾಶದ ಮಧ್ಯಭಾಗದಿಂದ ಇದರ ಎಣಿಕೆಯನ್ನು ಆರಂಭ ಮಾಡುತ್ತಾರೆ.

ಯಾವನೋ ಜೀವನು ಲೋಕಾಕಾಶದ ಮಧ್ಯಭಾಗದಲ್ಲಿ ಜನ್ಮ ಪಡೆದು ಸತ್ತು ಹೋಗುತ್ತಾನೆ. ಅದರ ನಂತರ ಬೇರೆ ಬೇರೆ ಕ್ಷೇತ್ರ(ಭಾಗ)ಗಳಲ್ಲಿ ಜನಿಸಿ ಮರಣ ಹೊಂದಿದನು; ಆದರೆ ಅದು ಎಣಿಕೆಯಲ್ಲಿ ಬರುವುದಿಲ್ಲ. ಅದೇ ಪ್ರಕಾರ ಜನ್ಮ-ಮರಣ ಮಾಡುತ್ತ ಮಾಡುತ್ತ ಅನಂತ ಕಾಲವು ಕಳೆದು ಹೋದ ಮೇಲೆಯೂ ಒಂದು ವೇಳೆ ಕರ್ಮ ಯೋಗದಿಂದ ಅದೇ ಆಕಾಶದ ಪ್ರದೇಶಗಳಲ್ಲಿ ಜನಿಸಿ ಸತ್ತು ಹೋದರೆ ಅದು ಕೂಡ ಎಣಿಕೆಯಲ್ಲಿ ಬರುವುದಿಲ್ಲ.

ಪುನಃ ಅನಂತಕಾಲ ಅನ್ಯ ಅನ್ಯ ಪ್ರದೇಶಗಳಲ್ಲಿ ಹುಟ್ಟಿ-ಸತ್ತನು, ಅದೂ ಎಣಿಕೆಯಲ್ಲಿ ಬರುವುದಿಲ್ಲ. ಹೀಗೆ ಮಾಡುತ್ತ ಮಾಡುತ್ತ ಅನಂತಕಾಲದ ನಂತರ ಅವೇ ಪ್ರದೇಶಗಳಿಗೆ ಹೊಂದಿಕೊಂಡಿರುವ ಎರಡನೆಯ ಪ್ರದೇಶ - ಕ್ಷೇತ್ರದಲ್ಲಿ ಬಂದು ಜನಿಸುತ್ತಾನೆ, ಆಗ ಎರಡನೆಯ ಭವವು ಎಣಿಕೆಯಲ್ಲಿ ಬರುತ್ತದೆ. ಪುನಃ ಸತ್ತು ಅನ್ಯ-ಅನ್ಯ ಪ್ರದೇಶಗಳಲ್ಲಿ ಹುಟ್ಟಿ ಸಾಯುತ್ತಾನೆ. ಅವು ಕೂಡ ಎಣಿಕೆಯಲ್ಲಿ ಬರುವುದಿಲ್ಲ. ಈ ಪ್ರಕಾರ ಸುತ್ತುತ್ತ ಸುತ್ತುತ್ತ ಅನಂತ ಕಾಲದಲ್ಲಿ ಎರಡನೆಯ ಪ್ರದೇಶದಿಂದ ಹೊರಟು ಮೂರನೆಯ ಪ್ರದೇಶದಲ್ಲಿ ಜನಿಸುತ್ತಾನೆ, ಆಗ ಮೂರನೆಯ ಭವವು ಎಣಿಕೆಯಲ್ಲಿ ಬರುತ್ತದೆ. ಮೇಲೆ ಹೇಳಿದ ಕ್ರಮದಿಂದ ಸಂಪೂರ್ಣ ಲೋಕಾಕಾಶದ ಅಸಂಖ್ಯಾತ ಪ್ರದೇಶಗಳಲ್ಲಿ ಜನಿಸುತ್ತಾನೆ ಮರಣ ಹೊಂದುತ್ತಾನೆ. ಹೀಗೆ ಮಾಡುವಲ್ಲಿ ಯಾವ ಸಮಯವು ಎಂದರೆ ಅನಂತ ಕಾಲವು ವ್ಯತೀತವಾಗುತ್ತದೆ, ಅದನ್ನು ಎರಡನೆಯ ಕ್ಷೇತ್ರ ಪರಾವರ್ತನವೆಂದು ತಿಳಿಯುವುದು.

**೩. ಕಾಲ ಪರಾವರ್ತನ -** ಜೀವನು ಉತ್ಸರ್ಪಿಣಿ ಕಾಲದ ಪ್ರಥಮ ಸಮಯದಲ್ಲಿ ಜನ್ಮ ಪಡೆದು ಮರಣ ಹೊಂದುತ್ತಾನೆ. ಪುನಃ ಇದೇ ಕಾಲದಲ್ಲಿ ಅನೇಕ ಜನ್ಮ-ಮರಣಗಳನ್ನು ಮಾಡುತ್ತಾನೆ, ಅದರ ಎಣಿಕೆಯಿರುವುದಿಲ್ಲ. ಅದೇ ಪ್ರಕಾರ ಜನ್ಮ-ಮರಣ ಮಾಡುತ್ತ-ಮಾಡುತ್ತ ಕಲ್ಪಕಾಲ-ಕಾಲಚಕ್ರವು ಪೂರ್ಣವಾಗುವುದು. ನಂತರ ಎರಡನೆಯ ಕಾಲಚಕ್ರವು ಪ್ರಾರಂಭವಾಗುವುದು. ಅದರಲ್ಲಿ ಮೊದಲನೆಯ ಕಾಲದ ಎರಡನೆಯ ಸಮಯವನ್ನು ಬಿಟ್ಟು ಅನ್ಯ-ಅನ್ಯಕಾಲ(ಸಮಯ)ಗಳಲ್ಲಿ ಜನ್ಮ-ಮರಣ ಮಾಡುತ್ತ ಮಾಡುತ್ತ ಅನೇಕ ಕಾಲ ಚಕ್ರಗಳು ಆಗಿಹೋಗುವವು. ಇದೇ ಪ್ರಕಾರ ಬಹುಕಾಲದವರೆಗೆ ಸುತ್ತುತ್ತ-ಸುತ್ತುತ್ತ ಉತ್ಸರ್ಪಿಣಿ ಕಾಲದ ಎರಡನೆಯ ಸಮಯದಲ್ಲಿ ಉತ್ಪನ್ನನಾದನು, ಆಗ ಎರಡನೆಯ ಭವವು ಗಣನೆಗೆ ಬರುತ್ತದೆ. ಪುನಃ ಮರಣ ಹೊಂದಿ ಜನಿಸುವನು. ಆದರೆ ಅನ್ಯ ಅನ್ಯ ಕಾಲದಲ್ಲಿ ಹುಟ್ಟಿ-ಸತ್ತನು. ಹೀಗೆ ಮಾಡುತ್ತ ಮಾಡುತ್ತ ಅನಂತ ಕಾಲದಲ್ಲಿ ಅನಂತಬಾರಿ ಜನ್ಮ-ಮರಣ ಮಾಡಿದನು. ಅದು ಎಣಿಕೆಗೆ ಬರಲಿಲ್ಲ. ಈ ಪ್ರಕಾರ ಸುತ್ತುತ್ತ-ಸುತ್ತುತ್ತ ಅನಂತ ಕಾಲವು ಕಳೆದು ಹೋದ ಮೇಲೆ ಉತ್ಸರ್ಪಿಣಿ ಕಾಲದ ಪ್ರಾರಂಭದ ಮೂರನೆಯ ಸಮಯದಲ್ಲಿ ಉತ್ಪನ್ನನಾದನು. ಆಗ ಮೂರನೆಯ ಭವವು ಗಣನೆಗೆ ಬಂತು. ಇದೇ ಪ್ರಕಾರ ಸುತ್ತುತ್ತ-ಸುತ್ತುತ್ತ ಪುನಃ ಯಾವಾಗ ಉತ್ಸರ್ಪಿಣಿಕಾಲದ ನಾಲ್ಕನೆಯ ಸಮಯದಲ್ಲಿ ಉತ್ಪನ್ನನಾಗಿ ಸತ್ತನು. ಇದೇ ಕ್ರಮದಿಂದ ಐದನೆಯ ಸಮಯ, ಆರನೆಯ ಸಮಯದಲ್ಲಿ ಹುಟ್ಟಿ ಸತ್ತು ಹೋದನು. ಹೀಗೆ ಒಂದೊಂದು ಸಮಯ ಹೆಚ್ಚುತ್ತ-ಹೆಚ್ಚುತ್ತ ಇಪ್ಪತ್ತು ಕೋಟಾ ಕೋಟಿ ಸಾಗರ ಕಾಲದಲ್ಲಿ ಎಷ್ಟು ಸಮಯಗಳಿರುತ್ತವೆ ಆ ಎಲ್ಲ ಸಮಯಗಳನ್ನು ಕ್ರಮದಿಂದ ಪೂರ್ಣಗೊಳಿಸುವಲ್ಲಿ ಎಷ್ಟು ಸಕ್ಷಯ ಅನಂತ ಕಾಲವು ಬೇಕಾಗುತ್ತದೆಯೋ, ಅದನ್ನು ಮೂರನೆಯ ಕಾಲಪರಾವರ್ತನವೆಂದು ಹೇಳುತ್ತಾರೆ.

**೪. ಭವ ಪರಾವರ್ತನ -** ಯಾವನೋ ಓರ್ವ ಜೀವನು ಪೃಥ್ವಿಕಾಯಿಕದ ಪ್ರಥಮ ಭವ ಪಡೆದು ಸತ್ತು ಹೋದನು. ಅಲ್ಲಿಂದ ಸತ್ತು ಜಲ, ಅಗ್ನಿ, ವಾಯು, ವನಸ್ಪತಿ, ದ್ವಿಂದ್ರಿಯ, ತ್ರಿಂದ್ರಿಯ, ಚತುರಿಂದ್ರಿಯ, ಪಂಚೇಂದ್ರಿಯ, ಸಂಜ್ಞೀ, ಅಸಂಜ್ಞೀ, ದೇವ, ಮನುಷ್ಯ, ನಾರಕಿಯಾಗಿ ಉತ್ಪನ್ನನಾದನು; ಆ ಭವಗಳು ಎಣಿಕೆಯಲ್ಲಿ ಬರಲಿಲ್ಲ. ಈ ಪ್ರಕಾರ ಸುತ್ತುತ್ತ ಸುತ್ತುತ್ತ ಅನಂತಕಾಲದ ನಂತರ ಅಷ್ಟೇ ಆಯುವನ್ನು ಪಡೆದು ಪೃಥ್ವಿಕಾಯಿಕದ್ದೇ ಭವ ಧಾರಣ ಮಾಡಿದನು. ಆಗ ಅದು ಎರಡನೆಯ ಭವವಾಗುತ್ತದೆ. ಪುನಃ ಸತ್ತು ಮೇಲೆ ಹೇಳಿದ ಪ್ರಕಾರದಿಂದ ನಾಲ್ಕೂ ಗತಿಗಳಲ್ಲಿ ಸುತ್ತಿದನು. ಈ ಪ್ರಕಾರ ಮಾಡುತ್ತ ಮಾಡುತ್ತ ಅನಂತಕಾಲದ ನಂತರ ಯಾವಾಗ ಪುನಃ ಅಷ್ಟೇ ಆಯುವನ್ನು

ತಗೆದುಕೊಂಡು ಪೃಥ್ವಿಕಾಯಿಕದ ಭವವನ್ನೇ ಪಡೆದನು, ಆಗ ಅದು ಮೂರನೆಯ ಭವವಾಗುತ್ತದೆ. ಹೀಗೆ ಸುತ್ತುತ್ತ-ಸುತ್ತುತ್ತ ಒಂದು ಭವದ ನಿಮಿತ್ತವು ಅನಂತಕಾಲದಲ್ಲಿ ದೊರಕುವುದು. ಈ ಪ್ರಕಾರ ಜನ್ಮ-ಮರಣ ಮಾಡುತ್ತ-ಮಾಡುತ್ತ ಪೃಥ್ವಿಕಾಯಿಕದ ಜಘನ್ಯ ಆಯು ಅಂತರ್ಮುಹೂರ್ತದಲ್ಲಿ ಅಸಂಖ್ಯಾತ ಸಮಯಗಳಿರುವುದರಿಂದ ಅಸಂಖ್ಯಾತ ಬಾರಿ ಅಲ್ಲಿಯೇ ಹುಟ್ಟಿದನು ಮತ್ತು ಸತ್ತು ಹೋದನು.

ಪುನಃ ಒಂದು ಸಮಯ, ನಂತರ ಎರಡು ಸಮಯ, ಮೂರು ಸಮಯ ಅಧಿಕವಿರುವ ಆಯುವಿನೊಂದಿಗೆ ಜನಿಸಿದನು ಮತ್ತು ಸತ್ತು ಹೋದನು. ಈ ಪ್ರಕಾರ ಹೀಗೆ ಮಾಡುತ್ತ ಮಾಡುತ್ತ ಅಸಂಖ್ಯಾತ ಭವ ಮಾಡುತ್ತಾನೆ, ಇದೇ ಅನುಕ್ರಮದಿಂದ ಅಸಂಖ್ಯಾತ ಅಗ್ನಿಕಾಯಿಕದ ಭವಗಳನ್ನು ಮಾಡುತ್ತಾನೆ, ಇದೇ ಅನುಕ್ರಮದಿಂದ ಅಸಂಖ್ಯಾತ ವಾಯುಕಾಯಿಕದ ಭವ ಮಾಡುತ್ತಾನೆ, ಇದೇ ಪ್ರಕಾರ ವನಸ್ಪತಿ, ಎರಡು ಇಂದ್ರಿಯ, ಮೂರು ಇಂದ್ರಿಯ, ನಾಲ್ಕು ಇಂದ್ರಿಯ, ಪಂಚೇಂದ್ರಿಯ ತಿರ್ಯಂಚದ ಭವಗಳನ್ನು ಅನುಕ್ರಮದಿಂದ ಮಾಡುತ್ತಾನೆ. ಹೀಗೆ ಅಸಂಖ್ಯಾತ-ಅಸಂಖ್ಯಾತ ಭವಗಳನ್ನು ಅನುಕ್ರಮದಿಂದ ಮಾಡಿದ ನಂತರ ಯಾವುದೋ ಪುಣ್ಯ ಯೋಗದಿಂದ ದೇವನಾಗಿ ಸುಖಭೋಗಿಸಿ ಸಾಯುತ್ತಾನೆ; ಮಧ್ಯದಲ್ಲಿ ಮನುಷ್ಯ, ತಿರ್ಯಂಚ, ನಾರಕಿಯಾದುದು ಗಣನೆಗೆ ಬರುವುದಿಲ್ಲ. ಪುನಃ ಮತ್ತೆ ಯಾವುದೋ ಪುಣ್ಯೋದಯದಿಂದ ದೇವನೇ ಆದರೆ ಎರಡನೆಯ ಭವವಾಗುತ್ತದೆ ಈ ಪ್ರಕಾರ ಸುತ್ತುತ್ತ-ಸುತ್ತುತ್ತ ಅಸಂಖ್ಯಾತ ದೇವ ಭವಗಳನ್ನು ಪೂರ್ಣ ಮಾಡಿದನು. ಇದೇ ಪ್ರಕಾರ ಕ್ರಮದಿಂದ ಅಸಂಖ್ಯಾತ ಮನುಷ್ಯ ಭವಗಳನ್ನು ಪೂರ್ಣ ಮಾಡಿದನು. ಹೀಗೆಯೇ ನಾರಕಿಯ ಅಸಂಖ್ಯಾತ ಭವಗಳನ್ನು ಮಾಡಿದನು. ತಿರ್ಯಂಚ ಪಂಚೇಂದ್ರಿಯದ ಭವಗಳನ್ನು ಮಾಡಿದನು ಇತ್ಯಾದಿ, ಹೀಗೆ ಅನುಕ್ರಮದಿಂದ ನಾಲ್ಕೂ ಗತಿಗಳಿಗೆ ಸಂಬಂಧಿಸಿದ ಸಮಸ್ತ ಭವಗಳನ್ನು ಮಾಡಿದನು. ಇವುಗಳಲ್ಲಿ ಎಷ್ಟು ಸಕ್ಷಯ ಅನಂತ ಕಾಲವು ಬೇಕಾಗುತ್ತದೆ, ಅದು ಭವಪರಾವರ್ತನವಿದೆ.

**೫. ಭಾವ ಪರಾವರ್ತನ -** ಯಾವುದರಿಂದ ಕರ್ಮಗಳ ಎಲ್ಲಕ್ಕಿಂತ ಕಡಿಮೆ ಸ್ಥಿತಿ ಮೊದಲಾದವು ಕಟ್ಟುತ್ತವೆ ಅಂಥ ಮೋಹಾದಿ ಸಹಿತ ಸೂಕ್ಷ್ಮ ನಿಗೋದ ಲಬ್ಧ್ಯಪರ್ಯಾಪ್ತಕ ಜೀವದ ಯಾವ ಅಕ್ಷರದ ಅನಂತದ ಒಂದು ಭಾಗದಷ್ಟು ಜಘನ್ಯ ಜ್ಞಾನವಿದೆ ಅದನ್ನು ಪಡೆದು ಸಾಯುತ್ತದೆ. ಪುನಃ ಅನೇಕ ಪರ್ಯಾಯಗಳಲ್ಲಿ ಉತ್ಪನ್ನವಾಯಿತು. ಅದು ಎಣಿಕೆಯಲ್ಲಿ ಬರಲಿಲ್ಲ ಹಾಗೂ ಒಂದು ವೇಳೆ ನಿಗೋದದಲ್ಲಿಯೇ ಉತ್ಪನ್ನವಾದರೂ ಅಧಿಕ ಜ್ಞಾನಧಾರಣ ಮಾಡಿ ಉತ್ಪನ್ನವಾದರೂ ಅದು ಎಣಿಕೆಗೆ ಬರುವುದಿಲ್ಲ; ಹೀಗೆ ಮಾಡುತ್ತ ಮಾಡುತ್ತ ಅನಂತ ಭವಗಳು ಕಳೆದ ಮೇಲೆ ಯಾವಾಗ ಯಾವುದೋ ಕರ್ಮಯೋಗದಿಂದ ಎಂಥ ಭವ ಪಡೆಯುತ್ತದೆಯೆಂದರೆ ಆ ಜಘನ್ಯ ಜ್ಞಾನಕ್ಕಿಂತ ಒಂದು ಅಂಶ ಅಧಿಕ ಜ್ಞಾನವಿದ್ದರೆ ಆಗ ಎರಡನೆಯ ಭವವು ಗಣನೆಯಲ್ಲಿ ಬರುತ್ತದೆ. ಪುನಃ ಸತ್ತು ಹೋಯಿತು ಉತ್ಪನ್ನವಾಯಿತು; ನಾಲ್ಕು ಗತಿಗಳಲ್ಲಿ ಇಂಥ ಅನೇಕ ಪರ್ಯಾಯಗಳನ್ನು ಅಧಿಕ ಜ್ಞಾನಸಹಿತ ಧಾರಣ ಮಾಡಿತು. ಅವುಗಳ ಎಣಿಕೆ ಮಾಡಲಾಗುವುದಿಲ್ಲ. ಈ ಪ್ರಕಾರ ಒಂದು ಅಂಶದಿಂದ ಹೆಚ್ಚುತ್ತ-ಹೆಚ್ಚುತ್ತ ಅನುಕ್ರಮದಿಂದ ಅಸಂಖ್ಯಾತ ಅಂಶ ಹೆಚ್ಚುವುದರಲ್ಲಿ ಎಷ್ಟು ಸಕ್ಷಯ ಅನಂತಕಾಲವು ಬೇಕಾಗುತ್ತದೆ, ಅದು ಐದನೆಯ ಭಾವ ಪರಾವರ್ತನದ್ದಿದೆ.

**ಪರಾವರ್ತನ ಕಾಲದ ಅಧಿಕತೆ ಹಾಗೂ ಹೀನತೆ -** ಮೊದಲೇ ಪುದ್ಗಲ ಪರಾವರ್ತನದ ಕಾಲವು ಸಕ್ಷಯ ಅನಂತವಿದೆ, ಅದರ ಅನಂತ ಗುಣಿತ ಕಾಲವು ಕ್ಷೇತ್ರ ಪರಾವರ್ತನದ್ದಿದೆ, ಅದರಿಂದ ಅನಂತ ಗುಣಿತ ಕಾಲವು ಕಾಲ ಪರಾವರ್ತನದ್ದಿದೆ, ಅದರ ಅನಂತ ಗುಣಿತ ಕಾಲವು ಭವ ಪರಾವರ್ತನದ್ದಿದೆ ಮತ್ತು ಅದರಿಂದ ಅನಂತ ಗುಣಿತ ಕಾಲವು ಭಾವ ಪರಾವರ್ತನದ್ದಿದೆ.

ಇಂಥಿಂಥ ಪರಾವರ್ತನಗಳನ್ನು ಮಾಡುತ್ತ ಎಂದರೆ ಸಂಸಾರ ಭ್ರಮಣ ಮಾಡುತ್ತ-ಭೋಗಿಸುತ್ತ, ಅನಂತ ಭವಗಳಾಗಿ ಹೋಗಿವೆ. ಯಾವಾಗ ಜೀವದ ಕಾಲಲಬ್ಧಿಯು ನಿಕಟವಾಗುತ್ತದೆ ಆಗ ಸಂಸಾರೀ ಜೀವನಿಗೆ ಪಂಚಲಬ್ಧಿಗಳ ಪ್ರಾಪ್ತಿಯಾಗುತ್ತದೆ. ಆ ಪಂಚಲಬ್ಧಿಗಳು ಈ ಪ್ರಕಾರವಿವೆ -

**ಖಯುವ ಸಮದೇಸವಿಸೋ ಈ ಪಾಯೋಗಮ ಕಣ್ಣಲದ್ಧೀ ಪಣ ಭೇವೋ ।**
**ಚಉು ಸಮ್ಮ ಭವ್ವಾಭವ್ವೋ ಕಣ್ಣೋ ಚ ಭವೇಯ ಸಮ್ಮತ್ತಂ ॥೪॥**

**ಗಾಥಾರ್ಥ ಃ-** ಕ್ಷಯೋಪಶಮ, ದೇಶನಾ, ವಿಶುದ್ಧಿ, ಪ್ರಾಯೋಗ್ಯ ಮತ್ತು ಕರಣ-ಇವು ಐದು ಲಬ್ಧಿಗಳಿವೆ. ಇವುಗಳೊಳಗಿಂದ ಮೊದಲಿನ ನಾಲ್ಕಂತೂ ಭವ್ಯ-ಅಭವ್ಯ ಇಬ್ಬರಿಗೂ ಆಗುತ್ತವೆ; ಆದರೆ ಕರಣಲಬ್ಧಿಯು ಮಾತ್ರ ಸಮಭಾವಿಯಾದ ಭವ್ಯರಿಗೇ ಆಗುತ್ತದೆ. ಇದು ಆದ ಮೇಲೆ ನಿಯಮದಿಂದ ಸಮ್ಯಕ್ತ್ವವಾಗುತ್ತದೆ.

**ಭಾವಾರ್ಥ ಃ-** ಕರ್ಮದ ಕ್ಷಯೋಪಶಮದಿಂದ ಪ್ರಗಟವಾಗುವಂಥ ಸಂಜ್ಞೀ ಪಂಚೇಂದ್ರಿಯತನ - ಇದರ ಶಕ್ತಿರೂಪದ ಭಾವವು 'ಕ್ಷಯೋಪಶಮಲಬ್ಧಿ' ಇದೆ; ಏಕೆಂದರೆ ಸಂಜ್ಞೀ ಪಂಚೇಂದ್ರಿಯವಿಲ್ಲದಿದ್ದರೆ ಸಮ್ಯಕ್ತ್ವ-ವಾಗುವುದಿಲ್ಲ ಅದರಿಂದ ಸಂಜ್ಞೀ ಪಂಚೇಂದ್ರಿಯತನದ ಕ್ಷಯೋಪಶಮವು ಬೇಕಾಗುವುದು.

ಗುರುವಿನ ಉಪದೇಶವನ್ನು ಧಾರಣ ಮಾಡುವ ಶಕ್ತಿಯು 'ದೇಶನಾಲಬ್ಧಿ'ಯಿದೆ; ಏಕೆಂದರೆ ಗುರೂಪದೇಶ ಧಾರಣ ಮಾಡುವ ಶಕ್ತಿಯಿಲ್ಲದಿದ್ದರೆ ಸಮ್ಯಕ್ತ್ವವಾಗುವುದಿಲ್ಲ; ಅದರಿಂದ ಗುರುಗಳ ಉಪದೇಶ ಧಾರಣ ಮಾಡುವ ಶಕ್ತಿಯಿರಬೇಕಾಗುವುದು.

ಪ್ರತಿ ಸಮಯ ಜೀವದ ಪರಿಣಾಮಗಳಲ್ಲಿ ಯಾವ ಅನಂತ ಗುಣಿತ ವಿಶುದ್ಧತೆಯಾಗುತ್ತದೆ ಅದು 'ವಿಶುದ್ಧಿಲಬ್ಧಿ'ಯಿದೆ. ಏಕೆಂದರೆ ಪರಿಣಾಮಗಳ ವಿಶುದ್ಧತೆಯಿಲ್ಲದಿದ್ದರೆ ಸಮ್ಯಕ್ತ್ವವಾಗುವುದಿಲ್ಲ; ಆದುದರಿಂದ ಪರಿಣಾಮಗಳ ವಿಶುದ್ಧತೆಯು ಬೇಕಾಗುವುದು.

ಮೋಹನೀಯ ಕರ್ಮದ ಸ್ಥಿತಿಯು ಎಪ್ಪತ್ತು ಕೋಟಾಕೋಟಿ ಸಾಗರವಿದೆ. ತನ್ನ ಪರಿಣಾಮಗಳ ವಿಶುದ್ಧತೆಯ ಬಲದಿಂದ ಆ ಕರ್ಮ ಸ್ಥಿತಿಯು ಕಡಿಮೆಯಾಗಿ ಅಂತಃಕೋಟಾಕೋಟಿ ಸಾಗರ ಉಳಿಯುವುದು, ಅದು 'ಪ್ರಾಯೋಗ್ಯಲಬ್ಧಿ'ಯಿದೆ. ಏಕೆಂದರೆ ಮೋಹಕರ್ಮದ ಉತ್ಕೃಷ್ಟಸ್ಥಿತಿಯಿದ್ದರೆ ಸಮ್ಯಕ್ತ್ವವಾಗುವುದಿಲ್ಲ; ಅದರಿಂದ ಮೋಹನೀಯ ಕರ್ಮದ ಸ್ಥಿತಿಯು ಘಟಿಸಬೇಕಾಗುವುದು.

'ಕರಣಲಬ್ಧಿ' - ಅಧಃಕರಣ, ಅಪೂರ್ವಕರಣ, ಅನಿವೃತ್ತಿಕರಣವೆಂದು ಇದರಲ್ಲಿ ಮೂರು ಭೇದಗಳಿವೆ. ಯಾವಾಗ ಅಧಃಕರಣವಾಗುತ್ತದೆ ಆಗ ಸಮಯ ಸಮಯಕ್ಕೆ ಪರಿಣಾಮಗಳ ವಿಶುದ್ಧತೆಯು ಹೆಚ್ಚುತ್ತ ಹೋಗುತ್ತದೆ. ಎಷ್ಟು ಕರ್ಮಗಳ ಸ್ಥಿತಿಯು ಮೊದಲು ಬಂಧಿಸುತ್ತಿತ್ತು . ಅದಕ್ಕಿಂತ ನವೀನ ಕರ್ಮಗಳ ಸ್ಥಿತಿಯು ಹೀನವಾಗುತ್ತ ಬಂಧಿಸುತ್ತದೆ. ಸಾತಾ ವೇದನೀಯ, ಆದೇಯ, ಸುಭಗ, ಯಶಃಕೀರ್ತಿ ಇತ್ಯಾದಿ ಶುಭಪ್ರಕೃತಿಗಳ ಅನುಭಾಗವು ಹೆಚುತ್ತ ಅಧಿಕ ಬಂಧವಾಗುತ್ತದೆ ಮತ್ತು ಅಸಾತಾವೇದನೀಯ, ಅಯಶಃಕೀರ್ತಿ, ಅನಾದೇಯ, ದುರ್ಭಗ ಇತ್ಯಾದಿ ಅಶುಭ ಕರ್ಮಗಳ ಅನುಭಾಗವು ಕಡಿಮೆಯಾಗುತ್ತ ಬಂಧಿಸುತ್ತದೆ. ಈ ಪರಿಣಾಮದಲ್ಲಿ ಮೊದಲಿನ - ನಂತರದ ಸಮಯದಲ್ಲಿ ಜೀವಗಳ ಪರಿಣಾಮಗಳು ಅಧಃಕರಣರೂಪವಿರುತ್ತವೆ. ಅವುಗಳ ವಿಶುದ್ಧತೆಯ ಸ್ಥಾನಗಳ ಹೊಂದಾಣಿಕೆಯಾಗುತ್ತದೆ ಅಥವಾ ಆಗುವುದೂ ಇಲ್ಲ ಅರ್ಥಾತ್ ಪರಸ್ಪರರಲ್ಲಿ ಸಮಾನತೆ - ಅಸಮಾನತೆ ಇರುತ್ತದೆ ಆದುದರಿಂದ ಇದರ ಹೆಸರು ಅಧಃಕರಣವಿದೆ.

ಯಾವ ಪರಿಣಾಮಗಳಲ್ಲಿ ಪ್ರತಿಸಮಯ ಅಸಂಖ್ಯಾತ ಗುಣಿತ ಕರ್ಮಗಳ ನಿರ್ಜರೆಯಾಗುತ್ತದೆ ಅದು ಅಪೂರ್ವಕರಣವಿದೆ. ಅಶುಭ ಕರ್ಮಗಳ ಅನುಭಾಗವು ಬದಲಾವಣೆಯಾಗಿ ಶುಭರೂಪವಾಗಿ ಹೋಗುತ್ತದೆ. ಪ್ರತಿಸಮಯ ಕರ್ಮಗಳ ಸ್ಥಿತಿಯು ಕಡಿಮೆಯಾಗುತ್ತ ಹೋಗುತ್ತದೆ. ಪ್ರತಿಸಮಯ ಶುಭಕರ್ಮಗಳ ಅನುಭಾಗವು ಹೆಚ್ಚುತ್ತ ಹೋಗುತ್ತದೆ. ಯಾವ ಜೀವರುಗಳು ಸಮಯ ಭೇದದಿಂದ ಕರಣವನ್ನು ಪ್ರಗಟ ಮಾಡಿದ್ದಾರೆ ಆ ಜೀವರುಗಳ ವಿಶುದ್ಧತೆಯಲ್ಲಿ ಪರಸ್ಪರ ಹೊಂದಾಣಿಕೆಯಾಗುವುದಿಲ್ಲ. ಯಾರೋ ಪ್ರಥಮ ಸಮಯದಲ್ಲಿ ಅಪೂರ್ವಕರಣವನ್ನು

ಪ್ರಗಟ ಮಾಡಿಕೊಂಡಿದ್ದಾರೆ ಮತ್ತು ಬೇರೆ ಯಾರೋ ಎರಡು, ನಾಲ್ಕು, ಐದು ಇತ್ಯಾದಿ ಸಮಯಗಳ ನಂತರ ಪ್ರಗಟ ಮಾಡಿಕೊಂಡರೆಂದರೆ ಯಾರು ಮೊದಲು ಕರಣ ಪ್ರಗಟ ಪಡಿಸಿಕೊಂಡಿದ್ದರು ಅವರ ವಿಶುದ್ಧತೆಯು ಮುಂದೆ ಮುಂದೆ ಮಹಾನಿರ್ಮಲವಾಗುತ್ತ ಹೋಗುತ್ತದೆ. ಅವರ ವಿಶುದ್ಧತೆಯನ್ನು ನಂತರದಲ್ಲಿ ಕರಣ ಪ್ರಗಟ ಮಾಡಿಕೊಳ್ಳುವಂಥ ಜೀವರುಗಳು ಎಂದೂ ಪ್ರಾಪ್ತ ಮಾಡಿಕೊಳ್ಳಲಾರರು. ಇವರುಗಳ ವಿಶುದ್ಧತೆಯು ಪರಸ್ಪರ ಅಸಾದೃಶವಿರುತ್ತವೆ; ಆದುದರಿಂದ ಇದರ ಹೆಸರು ಅಪೂರ್ವಕರಣವಿದೆ.

ಯಾವ ಕರಣದಲ್ಲಿ ಅನೇಕ ಜೀವರುಗಳ ಒಂದು ಸಮಯವರ್ತಿ ವಿಶುದ್ಧತೆಯು ಸಮಾನವಿರುತ್ತದೆ, ಅದು ಅನಿವೃತ್ತಿಕರಣವಿದೆ. ಅನಿವೃತ್ತಿಕಾಲದಲ್ಲಿ ಸ್ಥಿತವಿರುವ ತ್ರಿಕಾಲವರ್ತಿ ಜೀವರುಗಳ ವಿಶುದ್ಧತೆಯು ಒಂದೇ ಸಮಾನವಿರುತ್ತದೆ - ಇದು ಕರಣಲಬ್ಧಿಯಿದೆ.

ಈ ಪ್ರಕಾರ ಇವು ಐದು ಲಬ್ಧಿಗಳಿವೆ. ಇವುಗಳಲ್ಲಿರುವ ವಿಶೇಷತೆಯೆಂದರೆ ನಾಲ್ಕು ಲಬ್ಧಿಗಳಂತೂ ಭವ್ಯ-ಅಭವ್ಯರೆಲ್ಲರಿಗೂ ಆಗುತ್ತವೆ; ಎಂದರೆ ಸಮಾನವಿವೆ. ಕರಣಲಬ್ಧಿಯು ಸಮ್ಯಕ್ತ್ವವಾಗುವುದರ ನಿಕಟ ಸಂಸಾರಿ ಭವ್ಯಾತ್ಮರುಗಳಿಗೇ ಆಗುತ್ತದೆ. ಈ ಕರಣಲಬ್ಧಿಯು ಪೂರ್ಣವಾಗುವುದರ ಅಂತಿಮ ಸಮಯದಲ್ಲಿ ಸಮ್ಯಕ್ತ್ವವು ಪೂರ್ಣವಾಗಿ ಬಿಡುತ್ತದೆ. ಜೀವನು ಅಲ್ಪಸಂಸಾರೀ ಸಮ್ಯಗ್ದೃಷ್ಟಿಯಾಗಿ ಹೋಗುತ್ತಾನೆ.

ಇಂಥ ಆತ್ಮಸ್ವಭಾವದ ವೇತ್ತಾ , ಪರದ್ರವ್ಯಗಳಿಂದ ಉದಾಸೀನ, ತನ್ನ ಚೈತನ್ಯ ಸ್ವಭಾವವನ್ನು ತನ್ನ ರೂಪವಾಗಿ ತಿಳಿಯುವಂಥವನು ಮತ್ತು ಜಡ ಸ್ವಭಾವವನ್ನು ಪರರೂಪವಾಗಿ ತಿಳಿಯುವಂಥ ಭವ್ಯಾತ್ಮನನ್ನು ಸಮ್ಯಗ್ದೃಷ್ಟಿಯೆಂದು ಹೇಳಲಾಗುತ್ತದೆ.

ಈ ಪ್ರಕಾರ ಐದು ಲಬ್ಧಿಗಳ ಸಾಮಾನ್ಯ ಸ್ವರೂಪವನ್ನು ಹೇಳಲಾಯಿತು. ವಿಶೇಷವನ್ನು ಶ್ರೀ ಗೊಮ್ಮಟ ಸಾರದಿಂದ ತಿಳಿಯುವುದು. ಐದು ಲಬ್ಧಿಗಳ ಪೂರ್ಣತೆಯಾದ ಮೇಲೆ ಸಮ್ಯಗ್ದರ್ಶನವಾಗುತ್ತದೆ.

ಸಮ್ಯಗ್ದರ್ಶನದ ಹತ್ತು ಭೇದಗಳಿದ್ದು ಈಗ ಅವುಗಳನ್ನೇ ಹೇಳಲಾಗುವುದು.

**ಆಜ್ಞಾ ಮಗ ಉಪದೇಸೋ ಸೂತರ ಬೀಜಾ ಸಂಖೇಯ ವಿತ್ಥಾರೋ ।**

**ಅತ್ಥಾವಗಾಢ ಮಹಾಗಾಢೋ ಸಂಮತ ಜಿನ ಭಾಸ್ಯ ಯೇ ದಹಧಾ ॥೫॥**

**ಗಾಥಾರ್ಥ :-** ಆಜ್ಞಾ , ಮಾರ್ಗ, ಉಪದೇಶ, ಸೂತ್ರ , ಬೀಜ, ಸಂಕ್ಷೇಪ, ವಿಸ್ತಾರ, ಅರ್ಥ, ಅವಗಾಢ, ಪರಮಾವಗಾಢವೆಂಬ ಸಮ್ಯಕ್ತ್ವದ ಹತ್ತು ಭೇದಗಳು ಜಿನೇಂದ್ರ ಭಗವಂತರಿಂದ ಹೇಳಿರುವಂಥವಿವೆ.

**ಭಾವಾರ್ಥ :-** ಈಗ ಇವುಗಳ ಸಾಮಾನ್ಯ ಸ್ವರೂಪ ಹೇಳುತ್ತಾರೆ,-

೧. ಯಾವುದರಲ್ಲಿ ಉಪದೇಶವಿಲ್ಲದೆ ಜಿನ-ಆಜ್ಞೆಯ ದೃಢ ಶ್ರದ್ಧೆಯಾಗುವುದು, ಅದು ಆಜ್ಞಾಸಮ್ಯಕ್ತ್ವವಿದೆ. ಮುಗ್ಧ ಸರಳ ಪರಿಣಾಮೀ ಜೀವರುಗಳು ತಮ್ಮ ಅಲ್ಪಜ್ಞಾನದಿಂದಲೇ ನಾವಂತೂ ಅಲ್ಪಜ್ಞಾನಿಯಿದ್ದೇವೆ. ವಿಶೇಷ ತತ್ತ್ವಜ್ಞಾನ ಮಾಡಿಕೊಳ್ಳುವ ಶಕ್ತಿಯಿಲ್ಲ; ಆದರೆ ಜಿನದೇವರು ಹೇಳಿದ್ದಾರೆ ಅದು ಪ್ರಮಾಣವಿದೆ-ಸ್ವೀಕಾರ-ವಿದೆಯೆಂಬ ಶ್ರದ್ಧೆ ಮಾಡುತ್ತಾರೆ. ಈ ಪ್ರಕಾರ ದೃಢ ಶ್ರದ್ಧೆ ಮಾಡುತ್ತ ಕುದೇವ, ಕುಗುರು ಮೊದಲಾದವರ ಸೇವೆ-ವಂದನಾದಿಗಳನ್ನು ಮಾಡದಿರುವುದು 'ಆಜ್ಞಾಸಮ್ಯಕ್ತ್ವ'ವಿದೆ.

೨. ಯಾರು ಗುರುಗಳ ಉಪದೇಶದಿಂದ ದೇವ, ಧರ್ಮ, ಗುರುವಿನ ಸ್ವರೂಪ ತಿಳಿದಿದ್ದಾರೆ; ಸಮ್ಯಗ್ದರ್ಶನ, ಸಮ್ಯಗ್ಜ್ಞಾನ, ಸಮ್ಯಕ್ಚಾರಿತ್ರರೂಪ ರತ್ನತ್ರಯವೇ ಮೋಕ್ಷಮಾರ್ಗವಿದೆ-ಎಂಬ ಶ್ರದ್ಧೆ ಮಾಡಿದ್ದಾರೆ, ಅನ್ಯ ವಿಶೇಷ ಜ್ಞಾನವಂತೂ ಇಲ್ಲ; ಆದರೆ ಯಾರು ಸಮ್ಯಕ್ ರತ್ನತ್ರಯವಿಲ್ಲದೆ ಮೋಕ್ಷವನ್ನೆಂದೂ ಮನ್ನಿಸುವುದಿಲ್ಲ - ಈ ಪ್ರಕಾರದ ದೃಢ ಶ್ರದ್ಧೆಯು 'ಮಾರ್ಗಸಮ್ಯಕ್ತ್ವ'ವಿದೆ.

೩. ಯಾರು ತೀರ್ಥಂಕರ, ಚಕ್ರವರ್ತಿ, ಕಾಮದೇವ ಮೊದಲಾದವರ ಪುರಾಣ ಕೇಳಿ ಪುಣ್ಯ-ಪಾಪಗಳ ಭೇದವನ್ನು ತಿಳಿದುಕೊಂಡಿದ್ದಾರೆ ಮತ್ತು ತೀರ್ಥಂಕರಾದಿಕರ ಕಲ್ಯಾಣಕ ಮೊದಲಾದವುಗಳ ಅತಿಶಯವನ್ನು ಆಲಿಸಿ ಪುಣ್ಯದ ಇಚ್ಛೆಯು ಉತ್ಪನ್ನವಾಗಿದೆ, ಅವರಿಗೆ ಗುರುಗಳ ಉಪದೇಶವನ್ನು ಆಲಿಸಿ ಯಾವ ದೃಢ ಶ್ರದ್ಧೆಯ ಭಾವವು ಉತ್ಪನ್ನವಾಗಿದೆ, ಅದು 'ಉಪದೇಶಸಮ್ಯಕ್ತ್ವ'ವಿದೆ.

೪. ಆಚಾರಾಂಗಾದಿ ಸೂತ್ರಗಳ ಉಪದೇಶವನ್ನು ತಿಳಿದುಕೊಂಡು ಶ್ರದ್ಧೆಯು ದೃಢವಾಗುವುದು 'ಸೂತ್ರ ಸಮ್ಯಕ್ತ್ವ'ವಿದೆ.

೫. ವಿವಿಧ ಪ್ರಕಾರದ ಗಣಿತ ಶಾಸ್ತ್ರಗಳ ಸ್ವರೂಪವನ್ನು ತಿಳಿದುಕೊಂಡು ರಹಸ್ಯವನ್ನು ಅರಿತ ಮೇಲೆ ಶ್ರದ್ಧೆಯು ದೃಢವಾಗುವುದು 'ಬೀಜಸಮ್ಯಕ್ತ್ವ'ವಿದೆ.

೬. ಯಾರಲ್ಲಿ ಶಾಸ್ತ್ರಗಳ ಸಂಕ್ಷೇಪ ಅರ್ಥಾತ್ ಶ್ಲೋಕ, ಕಾವ್ಯ, ಗಾಥೆ, ಪದ್ಯ, ಪದ ಇತ್ಯಾದಿಗಳ ಸಾಮಾನ್ಯ ಅರ್ಥವನ್ನು ತಿಳಿದುಕೊಂಡು ನಿಜ-ಪರಗಳ ಭೇದಜ್ಞಾನದೊಂದಿಗೆ ಶ್ರದ್ಧೆಯು ದೃಢವಾಗಿದೆ, ಅದನ್ನು 'ಸಂಕ್ಷೇಪಸಮ್ಯಕ್ತ್ವ'ವೆಂದು ಹೇಳುತ್ತಾರೆ.

೭. ಅನೇಕ ಪ್ರಕಾರದಿಂದ ದ್ವಾದಶಾಂಗಗಳ ಸ್ವರೂಪವನ್ನು ಆಲಿಸಿ ಶ್ರದ್ಧೆಯು ದೃಢವಾಗುವುದು 'ವಿಸ್ತಾರ ಸಮ್ಯಕ್ತ್ವ'ವಿದೆ.

೮. ಯಾವನೋ ಓರ್ವನಿಗೆ ಗುರು ಹಾಗೂ ಶಾಸ್ತ್ರದ ಉಪದೇಶವನ್ನು ಆಲಿಸದೆಯೇ ಆಕಸ್ಮಿಕವಾಗಿ ಯಾವುದೋ ಉಲ್ಕಾಪಾತ ಇತ್ಯಾದಿ ದೃಷ್ಟಾಂತ ಕಂಡು, ಸಂಸಾರದ ದಶೆಯನ್ನು ನಶ್ವರವೆಂದು ತಿಳಿಯುತ್ತ ಉದಾಸೀನನಾಗಿ ದೃಢ ಶ್ರದ್ಧೆಯುಂಟಾಗುವುದು, ಅದು 'ಅರ್ಥ ಸಮ್ಯಕ್ತ್ವ'ವಿದೆ.

೯. ಅಂಗ-ಪೂರ್ವಗಳನ್ನು ಆಲಿಸುವುದರ ನಿಮಿತ್ತದಿಂದ ಯಾವ ದೃಢ ಶ್ರದ್ಧೆಯಾಗುತ್ತದೆ, ಅದು 'ಅವಗಾಢ ಸಮ್ಯಕ್ತ್ವ'ವಿದೆ.

೧೦. ಕೇವಲಜ್ಞಾನವಾಗುವುದರಿಂದ ಸರ್ವಲೋಕಾಲೋಕದ ಪ್ರತ್ಯಕ್ಷ ಜ್ಞಾನವಾದ ಮೇಲೆ ಯಾವ ಶ್ರದ್ಧೆಯು ದೃಢವಾಗುತ್ತದೆ, ಅದು 'ಪರಮಾವಗಾಢ ಸಮ್ಯಕ್ತ್ವ'ವಿದೆ.

ಈ ಪ್ರಕಾರ ಹತ್ತು ಭೇದರೂಪದ ಯಾವ ಸಮ್ಯಕ್ತ್ವ ಪರಿಣತಿಯನ್ನು ಹೇಳಿದ್ದಾರೆ, ಅದು ಮೋಕ್ಷರೂಪಿ ಕಲ್ಪವೃಕ್ಷದ ದೃಢವಾದ ಮೂಲವಿದೆ ಹಾಗೂ ಮೋಕ್ಷಮಂದಿರದ ಪ್ರಥಮ ಸೋಪಾನ(ಮೆಟ್ಟಲು) ಇದೆ.

ಉಪರ್ಯುಕ್ತ ಸಮ್ಯಕ್ತ್ವದ ದೋಷಗಳು ಇಪ್ಪತ್ತೈದು ಇದ್ದು, ಆ ದೋಷಗಳು ಯಾವುದರಲ್ಲಿ ಇರುವುದಿಲ್ಲ, ಅದು ಶುದ್ಧ ಸಮ್ಯಕ್ತ್ವವಿದೆ.

ಈಗ ಸಮ್ಯಕ್ತ್ವದ ಅವೇ ಇಪ್ಪತ್ತೈದು ದೋಷಗಳನ್ನು ಹೇಳುತ್ತಾರೆ.

**ಮದ ವಸು ಸಮ್ಮಕ ದೋಸಉ ಆಯತನ ಷಟ್ ಯ ತೀನ ಮೂಢಾಏ ।**
**ಇನದೋಸಯ ವಿಣ ಸಮ್ಮಂ ನಿಮ್ಮಲ ಸಿವ ದೀವ ಸಮ ಗೇಯ ॥೬॥**

**ಗಾಥಾರ್ಥ** :- ಎಂಟು ಮದ, ಸಮ್ಯಕ್ತ್ವ ಸಂಬಂಧದ ಎಂಟು ದೋಷ, ಆರು ಅನಾಯತನ, ಮೂರು ಮೂಢತೆ - ಇವು ಸಮ್ಯಕ್ತ್ವದ ಇಪ್ಪತ್ತೈದು ದೋಷಗಳಿವೆ. ಈ ದೋಷಗಳಿಂದ ರಹಿತ ನಿರ್ಮಲ, ಶಿವ, ಕಲ್ಯಾಣಕರವಾದ ಸಮ್ಯಕ್ತ್ವವು ದೀವಿಗೆಯ ಸಮಾನ ಪದಾರ್ಥಗಳನ್ನು ಯಥಾವತ್ ತಿಳಿದುಕೊಳ್ಳುತ್ತದೆ.

ಈಗ ಇವುಗಳ ಸಾಮಾನ್ಯ ಅರ್ಥ ಹೇಳುತ್ತಾರೆ-

ಎಂಟು ಮದಗಳು - ೧. ನಮ್ಮಂಥ ಸೋದರ ಮಾವ, ಅಜ್ಜ ಯಾರಿಗೂ ಇಲ್ಲ - ಈ ಪ್ರಕಾರ ಮಾತೆಯ ಕುಲದ ಪಕ್ಷವಹಿಸಿ ಗರ್ವ ಮಾಡುವುದು ಜಾತಿ ಮದವಿದೆ.

೨. ನಮ್ಮ ತಂದೆ ತಾತರು ಧನಾದಿಗಳಲ್ಲಿ ಬಹಳ ದೊಡ್ಡವರಿದ್ದರು - ಈ ಪ್ರಕಾರ ತಂದೆಯ ಕುಲಪಕ್ಷದ ಗರ್ವ ಮಾಡುವುದು ಕುಲಮದವಿದೆ.

೩. ನಾವು ಬಹಳಷ್ಟು ಗಳಿಸುವಂಥವರಿದ್ದೇವೆ. ಅನೇಕ ಪ್ರಕಾರದಿಂದ ಬುದ್ಧಿಯನ್ನು ತೊಡಗಿಸಿ ಧನ ಸಂಪಾದನೆ ಮಾಡುತ್ತೇವೆ - ಇತ್ಯಾದಿ ಪ್ರಕಾರ ತಮ್ಮ ಸಂಪಾದನೆಯ ಗರ್ವ ಮಾಡುವುದು ಲಾಭಮದವಿದೆ.

೪. ನಮ್ಮ ಸಮಾನ ರೂಪವು ಬೇರೆ ಯಾರದೂ ಇಲ್ಲ - ಇತ್ಯಾದಿ ಪ್ರಕಾರದಿಂದ ತಮ್ಮ ರೂಪದ ಮಹಿಮೆಯನ್ನು ಕಂಡು ಗರ್ವ ಮಾಡುವುದು ರೂಪಮದವಿದೆ.

೫. ನಾವು ದೊಡ್ಡ ತಪಸ್ವಿಯಿದ್ದೇವೆ - ಈ ಪ್ರಕಾರ ಮನ್ನಿಸಿ ತಮ್ಮ ತಪದ ಗರ್ವ ಮಾಡುವುದು ತಪಮದವಿದೆ.

೬. ತಮ್ಮ ಬಲದ ಅಧಿಕತೆಯನ್ನು ತಿಳಿದುಕೊಂಡು ನಮ್ಮಂಥ ಬಲಶಾಲಿಗಳು ಬೇರೆ ಯಾರೂ ಇಲ್ಲ - ಈ ಪ್ರಕಾರ ಮನ್ನಿಸಿ ಗರ್ವ ಮಾಡುವುದು ಬಲಮದವಿದೆ.

೭. ನಮ್ಮಂಥ ಪಂಡಿತರು ಬೇರೆ ಯಾರೂ ಇಲ್ಲ; ನಾವು ಅನೇಕ ಪ್ರಕಾರದ ತರ್ಕ, ವ್ಯಾಕರಣ, ಛಂದಸ್ಸು, ಪ್ರಾಕೃತ, ಕಾವ್ಯ, ಶ್ಲೋಕ ಶಾಸ್ತ್ರಾದಿಗಳನ್ನು ಓದಿದ್ದೇವೆ - ಈ ಪ್ರಕಾರ ತಮ್ಮ ಪಾಂಡಿತ್ಯದ ಗರ್ವ ಮಾಡುವುದು ವಿದ್ಯಾಮದವಿದೆ.

೮. ನಮ್ಮ ಆಜ್ಞೆಯು ಎಲ್ಲ ಕಡೆಗೂ ನಡೆಯುತ್ತದೆ, ರಾಜ್ಯ-ಪಂಚರು ಮೊದಲಾಗಿ ಎಲ್ಲರೂ ನಮ್ಮ ಆಜ್ಞೆ ಮನ್ನಿಸುತ್ತಾರೆ - ಈ ಪ್ರಕಾರ ಸ್ವಯಂ ತಮ್ಮನ್ನು ದೊಡ್ಡವರೆಂದು ತಿಳಿದು ಗರ್ವ ಮಾಡುವುದು ಅಧಿಕಾರ ಮದವಿದೆ.

ಮೇಲೆ ಹೇಳಿದ ಎಂಟು ಮದಗಳು ಇರುವುದರಿಂದ ಸಮ್ಯಕ್ತ್ವವು ಮಲಿನವಾಗುತ್ತದೆ. ಯಾವ ಪ್ರಕಾರ ಉಜ್ವಲ ವಸ್ತ್ರವು ಮಲದ ಸಂಬಂಧದಿಂದ ಮಲಿನವಾಗಿ ಹೋಗುತ್ತದೆ, ಅದೇ ಪ್ರಕಾರ ಈ ಮದಗಳ ನಿಮಿತ್ತ ಪಡೆದು ಸಮ್ಯಕ್ತ್ವ ಧರ್ಮವು ಮಲಿನವಾಗಿ ಹೋಗುತ್ತದೆ. ಅದರಿಂದ ಇವುಗಳ ಸ್ವರೂಪವನ್ನು ತಿಳಿದುಕೊಂಡು ಸಮ್ಯಗ್ದೃಷ್ಟಿಯು ಈ ಗರ್ವದ ಭಾವಗಳನ್ನು ಮಾಡುವುದಿಲ್ಲ. ಮಿಥ್ಯಾತ್ವ ಲಿಪ್ತ ಅಜ್ಞಾನಿ, ಮುಗ್ಧ, ಧರ್ಮಭಾವನೆಯಿಂದ ರಹಿತ, ಮೋಕ್ಷಮಾರ್ಗ(ಸುಖದ ಮಾರ್ಗ)ವನ್ನು ತಿಳಿಯುವಲ್ಲಿ ಅಂಧ ಪುರುಷನ ಸಮಾನ ಯಾರು ಪಾಪರೂಪ ಭಾರದ ಬಂಧ ಮಾಡಿಕೊಳ್ಳುವಂಥವರಿದ್ದಾರೆ, ಅವರೇ ಈ ಎಂಟು ಪ್ರಕಾರದ ಗರ್ವ ಮಾಡುತ್ತಾರೆ. ಯಾರು ಜಗತ್ತಿನಿಂದ ಉದಾಸರಿದ್ದಾರೆ, ಸುಖದ ಸಮೂಹರೂಪ ಸಮ್ಯಕ್ತ್ವಗುಣಗಳ ಉಪಾಸಕರೇ ಇದ್ದಾರೆ, ಗರ್ವವನ್ನು ಪಾಶದ ಸಮಾನ ಅಹಿತಕರವೆಂದು ತಿಳಿಯುತ್ತಾರೆ, ಅವರು ಇವುಗಳನ್ನು ಪಾಪ ಫಲಕಾರಕವೆಂದು ತಿಳಿದು ಈ ಗರ್ವ ಭಾವಗಳನ್ನು ಮಾಡುವುದಿಲ್ಲ, ಎಂದರೆ ಸಮಭಾವಿಗಳಿಗೆ ಇಂಥ ಮದಗಳು ಆಗುವುದಿಲ್ಲ.

ಅಷ್ಟಮಲ - ೧. ಧರ್ಮಕಾರ್ಯಗಳ ಸೇವನೆಯಲ್ಲಿ ಮಾತಾ-ಪಿತರು, ಕುಟುಂಬ ವರ್ಗದವರು, ದೊರೆ ಪಂಚರು ಇತ್ಯಾದಿ ನನ್ನನ್ನು ಪಾಪಿಯೆಂದು ತಿಳಿಯಬಹುದು - ಎಂಬ ವಿಚಾರದಿಂದ ಯಾವನೋ ಜೀವನು ಸಂದೇಹ ಸಹಿತನಾಗಿ ಧರ್ಮದ ಸೇವನೆಯನ್ನು ಮಾಡಿದರೆ ಸಮ್ಯಕ್ತ್ವ ಧರ್ಮಕ್ಕೆ ಮಲ(ದೋಷ)ವು ತಗಲುತ್ತದೆ. ಇದನ್ನು ಸಂಶಯ ಅಥವಾ ಶಂಕಾ ದೋಷವೆಂದು ಹೇಳುತ್ತಾರೆ.

೨. ಧರ್ಮದ ಸೇವನೆ ಮಾಡಿ ಪಂಚೇಂದ್ರಿಯ ಜನಿತ ಸುಖಗಳ ಅಭಿಲಾಷೆ ಮಾಡುವುದು, ಸಮ್ಯಕ್ತ್ವ ಧರ್ಮದಲ್ಲಿ ಕಾಂಕ್ಷೆಯೆಂಬ ಹೆಸರಿನ ದೋಷವಿದೆ.

೩. ಧರ್ಮಾತ್ಮಾ ಜೀವರುಗಳ ಶರೀರದಲ್ಲಿ ಕರ್ಮೋದಯದಿಂದ ರೋಗವು ಉತ್ಪನ್ನವಾದ ಮೇಲೆ ಶರೀರವು ಮಲಿನವಾಗುತ್ತದೆ; ದೇಹದಲ್ಲಿ ಹುಣ್ಣು, ಕೀವು ತುಂಬಿದ ಕುರು, ವಾಯು, ಪಿತ್ತ, ಕಫ, ಕೆಮ್ಮು, ಕುಷ್ಟ ಮೊದಲಾದ ರೋಗಗಳನ್ನು ಕಂಡು ತಮ್ಮ ಚಿತ್ತದಲ್ಲಿ ಗ್ಲಾನಿ ಮಾಡುವುದು, ಸಮ್ಯಕ್ತ್ವದಲ್ಲಿ ವಿಚಿಕಿತ್ಸೆಯೆಂಬ ಹೆಸರಿನ ದೋಷವಿದೆ.

೪. ಪರೀಕ್ಷೆ ಮಾಡದೇ ದೇವ, ಗುರು, ಧರ್ಮದ ಉಪಾಸನೆ ಮಾಡುವುದು, ಸಮ್ಯಕ್ತ್ವ ಧರ್ಮದಲ್ಲಿ ಮೂಢತೆಯೆಂಬ ಹೆಸರಿನ ದೋಷವಿದೆ.

೫. ಇತರರ ದೋಷವನ್ನು ಪ್ರಕಾಶಿತಗೊಳಿಸಿ ಅವರಿಗೆ ದುಃಖವನ್ನುತ್ಪನ್ನ ಮಾಡುವುದು, ಸಮ್ಯಕ್ತ್ವ ಧರ್ಮದಲ್ಲಿ ಅನುಪಗೂಹನ ದೋಷವಿದೆ.

೬. ಧರ್ಮದ ಉಪಾಸನೆ ಮಾಡುವ ಸಮಯದಲ್ಲಿ ತಮ್ಮ ಪರಿಣಾಮವನ್ನು ಸ್ಥಿರವಾಗಿ ಇಟ್ಟುಕೊಳ್ಳದಿರುವುದು ಮತ್ತು ಬೇರೆಯವರು ಧರ್ಮದ ಉಪಾಸನೆ ಮಾಡುತ್ತಿರುವುದನ್ನು ಕಂಡು ಅವರಲ್ಲಿ ಅಸ್ಥಿರತೆಯನ್ನು ಉತ್ಪನ್ನ ಮಾಡುವುದು, ಸಮ್ಯಕ್ತ್ವ ಧರ್ಮದಲ್ಲಿ ಅಸ್ಥಿತಿಕರಣವೆಂಬ ಹೆಸರಿನ ದೋಷವಿದೆ.

೭. ಯಾರಿಗೆ ಧರ್ಮಾತ್ಮರು ಹಾಗೂ ಧರ್ಮದ ಚರ್ಚೆ, ಧರ್ಮಕಥೆ, ಧರ್ಮಸ್ಥಾನ, ಧರ್ಮದ ಉಪಕರಣ, ಧರ್ಮದ ಉತ್ಸವಗಳಲ್ಲಿ ಧನ ಖರ್ಚಾಗುತ್ತಿರುವುದನ್ನು ನೋಡಿ ಒಳ್ಳೆಯದೆನಿಸುವುದಿಲ್ಲ ಮತ್ತು ಧರ್ಮದ ವಾರ್ತೆಗಳು ಇಷ್ಟವಾಗುವುದಿಲ್ಲ ಅವರ ವಾತ್ಸಲ್ಯರಹಿತ ಭಾವವು ಅವಾತ್ಸಲ್ಯ ದೋಷವಿದೆ.

೮. ಅನ್ಯ ಬಹಿರ್ಪ್ರವೃತ್ತಿಗಳಿರುತ್ತಿದ್ದರೂ ಧಾರ್ಮಿಕ ಉತ್ಸವಗಳು ಒಳ್ಳೆಯವೆನಿಸುವುದಿಲ್ಲ, ಅದು ಸಮ್ಯಕ್ತ್ವ ಧರ್ಮದ ಅಪ್ರಭಾವನೆಯೆಂಬ ಹೆಸರಿನ ಎಂಟನೆಯ ದೋಷವಿದೆ.

ಆರು ಅನಾಯತನಗಳು -

೧. ಮಿಥ್ಯಾದೇವನ ಪ್ರಶಂಸೆ ಮಾಡುವುದು.

೨. ರಾಗೀ, ದ್ವೇಷೀ, ಪರಿಗ್ರಹೀ ಜೀವಗಳನ್ನು ಗುರುವೆಂದು ತಿಳಿದುಕೊಂಡು ಪ್ರಶಂಸೆ ಮಾಡುವುದು.

೩. ದಯೆಯಿಂದ ರಹಿತ, ಹಿಂಸೆ, ಪಾಖಂಡಾದಿಗಳನ್ನು ಧರ್ಮವೆಂದು ಹೇಳುವಂಥ ಅಸತ್ಯವಾದೀ, ಅಜ್ಞಾನೀ ಜೀವರುಗಳ ಕಲ್ಪನೆಯಿಂದ ಮಾಡಲಾದ ಕುಧರ್ಮದ ಪ್ರಶಂಸೆ ಮಾಡುವುದು.

೪. ಅಸತ್ಯ, ಕಾಮ-ಕ್ರೋಧಾದಿಗಳಿಂದ ಯುಕ್ತ ಭಯಾನಕ ಕುದೇವಗಳ ಸೇವಕರ ಪ್ರಶಂಸೆ ಮಾಡುವುದು.

೫. ಕುಗುರುಗಳ ಸೇವಕರ ಪ್ರಶಂಸೆ ಮಾಡುವುದು.

೬. ಕುಧರ್ಮದ ಸೇವಕರ ಪ್ರಶಂಸೆ ಮಾಡುವುದು.

ಇವು ಆರು ಅನಾಯತನಗಳು ಸಮ್ಯಕ್ತ್ವಧರ್ಮದ ದೋಷವಿವೆ. ಆದುದರಿಂದ ಯಾರು ಸಮ್ಯಗ್ದೃಷ್ಟಿಯಿದ್ದಾರೆ ಅಥವಾ ಆಗ ಬಯಸುತ್ತಾರೆ ಅವರು ಇವುಗಳ ಪ್ರಶಂಸೆ ಮಾಡುವುದಿಲ್ಲ.

ಮೂರು ಮೂಢತೆ - ೧. ಪರೀಕ್ಷೆ ಮಾಡದೇ ದೇವಪೂಜೆ ಮಾಡುವುದು, ತಲೆ ಬಾಗಿಸುವುದು, ದೇವ ಮೂಢತೆಯಿದೆ. ೨. ಪರೀಕ್ಷೆ ಮಾಡದೇ ಗುರುವಿನ ಸೇವೆ ಮಾಡುವುದು, ಪೂಜೆ ಮಾಡುವುದು ತಲೆ ಬಾಗಿಸುವುದು, ಗುರು ಮೂಢತೆಯಿದೆ. ೩. ಪರೀಕ್ಷೆ ಮಾಡದೇ ಧರ್ಮದ ಉಪಾಸನೆ ಮಾಡುವುದು ಧರ್ಮಮೂಢತೆಯಿದೆ.

ಈ ಪ್ರಕಾರ ಅಷ್ಟಮದ, ಸಮ್ಯಕ್ತ್ವದ ಅಷ್ಟದೋಷ, ಷಟ್ ಅನಾಯತನ, ಮೂರು ಮೂಢತೆ - ಇವೆಲ್ಲ ಇಪ್ಪತ್ತೈದು ದೋಷಗಳಿಂದ ರಹಿತವಾಗಿರುವುದೇ ಶುದ್ಧ ಸಮ್ಯಕ್ತ್ವವಿದೆ.

ಸಮ್ಯಕ್ತ್ವದ ಅಷ್ಟಗುಣಗಳು - ನಿಃಶಂಕಿತ, ನಿಃಕಾಂಕ್ಷಿತ, ನಿರ್ವಿಚಿಕಿತ್ಸೆ, ಅಮೂಢದೃಷ್ಟಿ, ಉಪಗೂಹನ, ಸ್ಥಿತಿಕರಣ, ವಾತ್ಸಲ್ಯ, ಪ್ರಭಾವನೆ - ಇವು ಸಮ್ಯಕ್ತ್ವದ ಎಂಟು ಗುಣಗಳಿವೆ. ಇವು ಎಂಟು ಗುಣಗಳಿಂದ ಸಹಿತವಾದ ಸಮ್ಯಕ್ತ್ವವೇ ಶುದ್ಧ ಸಮ್ಯಕ್ತ್ವವಿದೆ. ಇವುಗಳಿಂದ ಸಮ್ಯಕ್ತ್ವವು ಉಜ್ವಲವಾಗುತ್ತದೆ. ಅದನ್ನೇ ಹೇಳುತ್ತಾರೆ,-

೧. ಧರ್ಮದ ಉಪಾಸನೆ ಮಾಡುತ್ತಿರುವಾಗ ಯಾವನೋ ದೇವ, ವ್ಯಂತರ, ಪಾಪಿಗಳಾದ ಕುಟುಂಬ ವರ್ಗದವರು ಹಾಗೂ ಪಂಚರ ಕುರಿತಾಗಿ ಸಂಶಯ ಪಡದಿರುವುದು, ನಿಃಶಂಕನಾಗಿ ಧರ್ಮದ ಸೇವನೆ ಮಾಡುವುದು ನಿಃಶಂಕ ಗುಣವಿದೆ. ಅಂಜನ ಚೋರನು ಈ ಗುಣದ ಪಾಲನೆ ಮಾಡಿದ್ದಾನೆ.

೨. ಧರ್ಮದ ಸೇವನೆ ಮಾಡಿ ಪಂಚೇಂದ್ರಿಯ ಸುಖಗಳ ವಾಂಛೆ ಮಾಡದಿರುವುದು ನಿಃಕಾಂಕ್ಷಿತ ಗುಣವಿದೆ. ಈ ಗುಣದ ಪಾಲನೆಯನ್ನು ಶ್ರೇಷ್ಠೀ ಪುತ್ರಿ ಗುಣವತಿಯಾದ ಅನಂತಮತಿಯು ಮಾಡಿದ್ದಾಳೆ.

೩. ಇಷ್ಟವೆನಿಸದಿರುವಂಥ ಪುದ್ಗಲ ಸ್ಕಂಧಗಳನ್ನು ನೋಡಿ ಗ್ಲಾನಿ ಮಾಡದಿರುವುದು, ನಿರ್ವಿಚಿಕಿತ್ಸೆಯೆಂಬ ಗುಣವಿದೆ. ಈ ಗುಣದ ಪಾಲನೆಯನ್ನು ಉದ್ದಾಯನ ದೊರೆಯು ಮಾಡಿದ್ದಾನೆ.

೪. ಸತ್ಯದೇವ, ಸತ್ಯಗುರು, ಸತ್ಯಧರ್ಮದ ಪರೀಕ್ಷೆ ಮಾಡಿ ಅವುಗಳ ಸೇವನೆ ಮಾಡುವುದು ಅಮೂಢದೃಷ್ಟಿ ಗುಣವಿದೆ. ಈ ಗುಣದ ಪಾಲನೆಯನ್ನು ರೇವತೀ ರಾಣಿಯು ಮಾಡಿದ್ದಾಳೆ.

೫. ಇತರರ ದೋಷವು ತಿಳಿದು ಬಂದ ಮೇಲೆಯೂ ಧರ್ಮಾತ್ಮಾ ಜೀವನು ಅವುಗಳನ್ನು ಪ್ರಕಟ ಪಡಿಸುವುದಿಲ್ಲ, ಅದು ಉಪಗೂಹನ ಗುಣವಿದೆ. ಈ ಗುಣದ ಪಾಲನೆಯನ್ನು ಜಿನೇಂದ್ರ ಭಕ್ತ ಜಿನದತ್ತ ಶ್ರೇಷ್ಠಿಯು ಮಾಡಿದ್ದಾನೆ.

೬. ಯಾವನೋ ಧರ್ಮಾತ್ಮಾ ಜೀವನು ಧರ್ಮ ಸೇವನೆ ಮಾಡುತ್ತ ಯಾವುದೋ ಕಾರಣವಶ ಧರ್ಮದಿಂದ ಚ್ಯುತನಾಗುತ್ತಿದ್ದರೆ; ರೋಗದಿಂದ ಅಥವಾ ವಿಭ್ರಮೆ ಮೊದಲಾದ ಕಾರಣಗಳಿಂದ ವಿಚಲಿತನಾದರೆ ಹಾಗೂ ಧರ್ಮ ಸೇವನೆಯಲ್ಲಿ ಅಸ್ಥಿರತೆಯಾಗುತ್ತಿದ್ದರೆ, ಅವನನ್ನು ತನದಿಂದ, ಧನದಿಂದ, ವಚನದಿಂದ ಧರ್ಮದಲ್ಲಿ ಸ್ಥಿರಗೊಳಿಸುವುದು ಸ್ಥಿತಿಕರಣ ಗುಣವಿದೆ. ಈ ಗುಣದ ಪಾಲನೆಯನ್ನು ಶ್ರೇಣಿಕ ದೊರೆಯ ಪುತ್ರ ವಾರಿಷೇಣ ಮುನಿಯು ಮಾಡಿದ್ದಾನೆ.

೭. ಧರ್ಮಾತ್ಮಾ ಜೀವಗಳನ್ನು ನೋಡಿ, ಧರ್ಮ ಸ್ಥಾನಗಳನ್ನು ನೋಡಿ ಹರ್ಷಿತನಾಗುವುದು ವಾತ್ಸಲ್ಯ ಗುಣವಿದೆ. ಈ ವಾತ್ಸಲ್ಯ ಗುಣವನ್ನು ವಿಷ್ಣುಕುಮಾರ ಮುನಿಗಳು ಪಾಲಿಸಿದ್ದಾರೆ.

೮. ಹೇಗಾದರೂ ಮಾಡಿ ಧರ್ಮದ ಪ್ರಭಾವನೆ ಮಾಡುವುದು - ಉದ್ಯೋತಗೊಳಿಸುವುದು. ಧರ್ಮೋತ್ಸವವನ್ನು ಕಂಡು ಸಂತುಷ್ಟನಾಗುವುದು ಪ್ರಭಾವನಾ ಅಂಗವಿದೆ. ಈ ಗುಣವನ್ನು ವಜ್ರಕುಮಾರನು ಪಾಲಿಸಿದ್ದಾನೆ.

(ಉಪರ್ಯುಕ್ತ ಇವರೆಲ್ಲರೂ ಇವುಗಳಲ್ಲಿ ಪ್ರಸಿದ್ಧರಾಗಿದ್ದಾರೆ) ಈ ಪ್ರಕಾರ ಇವು ಎಂಟು ಅಂಗಗಳಿವೆ. ಇವು ಎಂಟು ಅಂಗ(ಗುಣ)ಗಳಿಂದ ಸಹಿತವಾದ ಸಮ್ಯಗ್ದರ್ಶನದ ಧಾರಕ ಜೀವರುಗಳ ದೃಷ್ಟಿಯು ಸಹಜವಾಗಿಯೇ ಶುದ್ಧವಾಗಿರುತ್ತದೆ. ಇದರ ಪ್ರಸಾದದಿಂದ ಪದಾರ್ಥಗಳ ಸ್ವರೂಪವು ಹೇಗಿದೆಯೋ ಹಾಗೆ-ಯಥಾವತ್ ತಿಳಿದು ಬರುವುದರಿಂದ ಪದಾರ್ಥಗಳಲ್ಲಿ ರಾಗ-ದ್ವೇಷವಾಗುವುದಿಲ್ಲ.

**ಸಂದೇಹ** - ಸಮ್ಯಕ್ತ್ವವಾಗುವುದರಿಂದ ಪದಾರ್ಥಗಳಲ್ಲಿ ರಾಗ-ದ್ವೇಷವಾಗುವುದಿಲ್ಲವೆಂದು ತಾವು ಹೇಳುತ್ತಿರುವಿರಿ; ಆದರೆ ಅವಿರತ ಸಮ್ಯಗ್ದೃಷ್ಟಿಗಳಿಗಂತೂ ರಾಗ-ದ್ವೇಷ, ಹಿಂಸೆ, ಆರಂಭಗಳು ಪ್ರತ್ಯಕ್ಷ ಕಂಡು ಬರುತ್ತವೆ.

**ಸಮಾಧಾನ** - ರಾಗ-ದ್ವೇಷ ಮೊದಲಾದವುಗಳ ಅಭಾವವು ೧) ಪ್ರತ್ಯಕ್ಷ ರಾಗ-ದ್ವೇಷಗಳ ಅಭಾವ ಮತ್ತು ೨) ಶ್ರದ್ಧೆಯ ಪೂರ್ವಕ ಅಭಾವವೆಂದು ಎರಡು ಪ್ರಕಾರದಿಂದ ಆಗುತ್ತದೆ.

ಇವುಗಳೊಳಗಿಂದ ಪ್ರತ್ಯಕ್ಷ ರಾಗ-ದ್ವೇಷಗಳ ಅಭಾವವಂತೂ ಜಿನದೇವ ಕೇವಲಿ ಭಗವಂತರದು ಮತ್ತು ಹನ್ನೊಂದನೆಯ, ಹನ್ನೆರಡನೆಯ ಗುಣಸ್ಥಾನವರ್ತಿ ಮುನೀಶ್ವರರದು ಇದೆ ಹಾಗೂ ಆರನೆಯ ಗುಣಸ್ಥಾನದಿಂದ ಹತ್ತನೆಯ ಗುಣಸ್ಥಾನದವರೆಗಿನ ಮಹಾವ್ರತಿಗಳದ್ದು ಇದೆ. ಇದರಿಂದ ಕೆಳಗೆ ನಿಕಟ ಸಂಸಾರೀ ಭವ್ಯಾತ್ಮಾ ಅವ್ರತಿ ನಾಲ್ಕನೆಯ ಗುಣಸ್ಥಾನವರ್ತಿಗಳಿಗೆ ಸುದೃಷ್ಟಿ(ಸಮ್ಯಕ್‌ಶ್ರದ್ಧೆ)ಯಾಗಿ ಹೋಗಿರುವುದರಿಂದ ಶ್ರದ್ಧೆಯ ಪೂರ್ವಕ ರಾಗ-ದ್ವೇಷಗಳಿರುವುದಿಲ್ಲ. ಬಾಹ್ಯ ನಿಮಿತ್ತ ದೋಷದಿಂದ ರಾಗಿಯಂತೆ ಕಂಡು ಬರುತ್ತಾನೆ; ಆದರೆ ಶುದ್ಧದೃಷ್ಟಿಯ ಪ್ರಸಾದ(ಫಲ)ದಿಂದ ಅಂತರಂಗದಲ್ಲಿ ಅನಂತಾನುಬಂಧೀ ಸಂಬಂಧದ ರಾಗ-ದ್ವೇಷವಿರುವುದಿಲ್ಲ, ಯಾವುದೇ ಪ್ರಯತ್ನವಿಲ್ಲದೆ ಸಹಜ ಸ್ವಭಾವವೇ ಹೀಗಿರುತ್ತದೆ. ಇಂಥ ದೃಷ್ಟಿ(ಶ್ರದ್ಧೆ)ಯಾಗುವುದರಿಂದ ಅನೇಕ ತರಂಗಗಳು ಪರಿಣತಿಯಲ್ಲಿ ಏಳುತ್ತವೆ; ಯಾವ ಪ್ರಕಾರ ಸಾಗರದಲ್ಲಿ ತರಂಗಗಳೇಳುತ್ತವೆ, ಅದೇ ಪ್ರಕಾರ ಸಮಭಾವರೂಪದ

ಪರಿಣತಿಯಲ್ಲಿ ವಿಚಾರಗಳು ಮೂಡಿ ಬರುತ್ತವೆ. ಅದರದೇ ಪ್ರಸಾದದಿಂದ ಈ 'ಸುದೃಷ್ಟಿ ತರಂಗಿಣಿ' ಎಂಬ ಹೆಸರಿನ ಶಾಸ್ತ್ರದಲ್ಲಿ ಹೇಳುತ್ತೇನೆ-ಬರೆಯಲಾಗಿದೆ.

ಈ ಗ್ರಂಥವನ್ನು ಕೇಳುವ ಮತ್ತು ಹೇಳುವ ಸಲುವಾಗಿ ಶುಭ ಶ್ರೋತೃ ಮತ್ತು ಶುಭ ವಕ್ತಾರನಿರಬೇಕಾಗುವುದು. ಶ್ರೋತಾರರಲ್ಲಿ ಶುಭಾಶುಭರೂಪದಿಂದ ಅನೇಕ ಭೇದಗಳಾಗುತ್ತವೆ ಹಾಗೂ ವಕ್ತಾರರಲ್ಲಿಯೂ ಶುಭಾಶುಭರೂಪದಿಂದ ಅನೇಕ ಭೇದಗಳಿವೆ.

ಅವರಲ್ಲಿ ಮೊದಲಿಗೆ ಶ್ರೋತಾರರ ಸ್ವರೂಪ ಹೇಳುತ್ತಾರೆ, -

**ಸೋತಾ ಸುಹ ಯ ಅಸುಹೋ, ಚಉದಹ ಮಿಸ್ಸೋ ಯ ಚಉ ಯ ಸುಹೋಈ ।**
**ಸೋತಧರಾ ಮಣ ಆದಾ, ಣಿಯಣಿಯ ಪಣ್ಣತಿಲೇಯ ಸುಹ ಅಸುಹೋ ॥೭॥**

**ಗಾಥಾರ್ಥ ః-** ಶ್ರೋತಾರರು ಶುಭ ಮತ್ತು ಅಶುಭವೆಂದು ಎರಡು ಪ್ರಕಾರದವರಿರುತ್ತಾರೆ. ಹದಿನಾಲ್ಕು ಶ್ರೋತಾರರು ಮಿಶ್ರ ಮತ್ತು ನಾಲ್ಕು ಶ್ರೋತಾರರು ಶುಭವಿರುತ್ತಾರೆ. ಕರ್ಣ ಮತ್ತು ಮನಸ್ಸುಳ್ಳ ಸಂಜ್ಞೀ ಪಂಚೇಂದ್ರಿಯ ಜೀವಗಳು ತಮ್ಮ-ತಮ್ಮ ಪರಿಣತಿಯ ಅನುಸಾರ ಶುಭ-ಅಶುಭ ಫಲದ ಪ್ರಾಪ್ತಿ ಮಾಡಿಕೊಳ್ಳುತ್ತಾರೆ.

**ಭಾವಾರ್ಥ ః-** ಹದಿನಾಲ್ಕು ಮಿಶ್ರ ಶ್ರೋತಾರರಿದ್ದು ಅವರಲ್ಲಿ ಎಂಟಂತೂ ಅಶುಭ ಶ್ರೋತಾರರು ಮತ್ತು ಆರು ಶುಭ ಶ್ರೋತಾರರಿದ್ದಾರೆ. ೧) ಪಾಷಾಣದಂಥ, ೨) ಒಡಕು ಮಡಿಕೆಯಂಥ, ೩) ಟಗರದಂಥ, ೪) ಕುದುರೆಯಂಥ, ೫) ಚಾಳಿಗೆ(ಜರಡಿ)ಯಂಥ, ೬) ದೋಮೆಯಂಥ, ೭) ಸರ್ಪದಂಥ, ೮) ಎಮ್ಮೆಯಂಥವರು ಹೀಗೆ ಎಂಟು ಅಶುಭ ಶ್ರೋತಾರರ ಹೆಸರುಗಳಿವೆ. ಈಗ ಇವರ ಸ್ವಭಾವ ಹೇಳುತ್ತಾರೆ. ಅದನ್ನು ಧರ್ಮಾತ್ಮರು ಲಕ್ಷ್ಯವಿತ್ತು ಆಲಿಸುವುದು.

ಅಶುಭ ಶ್ರೋತೃ - ೧) ಯಾವ ಜೀವನು ಉಪದೇಶ ಕೇಳುತ್ತಾನೆ, ಪ್ರಶ್ನೆ ಮಾಡುತ್ತಾನೆ, ಸ್ವಯಂ ಓದುತ್ತಾನೆ. ಬಹಳಷ್ಟು ಸಮಯದ ಮೊದಲು ಹೇಳಿದ ಮಾತನ್ನು ನೆನಪಿನಲ್ಲಿಟ್ಟುಕೊಳ್ಳುತ್ತಾನೆ - ಇತ್ಯಾದಿಯಾಗಿ ಬಹಳಷ್ಟು ಕಾಲದವರೆಗೆ ಧರ್ಮಕ್ರಿಯೆ ಮಾಡುತ್ತಾನೆ; ಆದರೆ ಅಂತರಂಗದಲ್ಲಿ ಪಾಪಬುದ್ಧಿಯ ನಾಶವಾಗುವುದಿಲ್ಲ. ಅಭಕ್ಷ್ಯ ಭೋಜನ ಮತ್ತು ಹಿಂಸೆಯ ಮಾರ್ಗವನ್ನು ಬಿಟ್ಟುಕೊಡುವುದಿಲ್ಲ; ಕುದೇವ, ಕುಗುರು, ಕುಧರ್ಮಗಳನ್ನು ಪೂಜಿಸುವ ಶ್ರದ್ಧೆಯು ನಷ್ಟವಾಗುವುದಿಲ್ಲ. ಸ್ವಯಂ ಕ್ರೋಧ, ಮಾನಾದಿ ಕಷಾಯ ಭಾವಗಳನ್ನು ತ್ಯಜಿಸುವುದಿಲ್ಲ; ಅವನ ಹೃದಯದಲ್ಲಿ ಜಿನವಾಣಿಯು ರುಚಿಸುವುದಿಲ್ಲ, ಅವನು ಪಾಷಾಣದ ಸಮಾನ ಶ್ರೋತೃವಿದ್ದಾನೆ.

೨. ಯಾವನು ದಿನನಿತ್ಯವೂ ಶಾಸ್ತ್ರ ಕೇಳುತ್ತಾನೆ, ಕೇಳುವ ಸಮಯದಲ್ಲಂತೂ ಸಾಮಾನ್ಯ ಸ್ಮರಣೆಯಿರುತ್ತದೆ, ನಂತರ ಮರೆತು ಹೋಗುತ್ತಾನೆ, ಮನಸ್ಸಿನಲ್ಲಿ ಸ್ಮರಣೆ ಮಾಡುವುದಿಲ್ಲ ಅವನು ಒಡಕು ಮಡಿಕೆಯ-ಕೊಡದ ಸಮಾನ ಶ್ರೋತೃವಿದ್ದಾನೆ.

೩. ಯಾವ ಪ್ರಕಾರ ಟಗರು ಸಾಕಿದವನನ್ನೇ ಹೊಡೆಯುತ್ತದೆ-ಸಾಯಿಸಿ ಬಿಡುತ್ತದೆ, ಅದೇ ಪ್ರಕಾರ ಯಾವ ಶ್ರೋತೃವು ವಕ್ತಾರನಿಂದ ಅನೇಕ ದೃಷ್ಟಾಂತ ಯುಕ್ತಿಗಳನ್ನು ಕಲಿತುಕೊಂಡು, ಅನೇಕ ಶಾಸ್ತ್ರಕಲೆ ಮೊದಲಾದವುಗಳ ಕಥನವನ್ನು ಕೇಳಿ ಹಾಗೂ ಕಲಿತುಕೊಂಡು ಕೆಲಕಾಲದ ನಂತರ ದ್ವೇಷದಿಂದ ಆ ವಕ್ತಾರನ ಘಾತ ಮಾಡುತ್ತಾನೆ ಅವನು ಟಗರಿನ ಸಮಾನ ಶ್ರೋತೃವಿದ್ದಾನೆ.

೪. ಯಾವ ಪ್ರಕಾರ ಕುದುರೆಗೆ ಹುಲ್ಲು, ಕಾಳು, ಕಡಲೆಯ ವಿಶೇಷ ಆಹಾರ ಕೊಡುತ್ತಿದ್ದರೂ ಕುದುರೆಯು ಆಹಾರ ಕೊಡುವಂಥವನಿಗೆ ಬಾಧೆ ತಗಲಿಸುತ್ತದೆ, ಅದೇ ಪ್ರಕಾರ ಯಾರ ಹತ್ತಿರ ಉಪದೇಶವನ್ನಾಲಿಸುತ್ತಾನೆ, ಅದೇ ವಕ್ತಾರನ ದ್ವೇಷ ಮಾಡುವಂಥವನು ಕುದುರೆಯಂಥ ಶ್ರೋತೃವೆಂದು ತಿಳಿಯುವುದು.

೫. ಯಾವ ಪ್ರಕಾರ ಸಾರಣಿಗೆ(ಜರಡಿ)ಯು ಒಳ್ಳೆಯ ಹಿಟ್ಟನ್ನು ಬಿಟ್ಟುಕೊಡುತ್ತದೆ ಮತ್ತು ಹೊಟ್ಟನ್ನು ಇಟ್ಟುಕೊಳ್ಳುತ್ತದೆ, ಅದೇ ಪ್ರಕಾರ ಒಳ್ಳೆಯ ಉಪದೇಶವನ್ನು ಆಲಿಸಿ ಯಾರು ಗುಣವನ್ನಂತೂ ಗ್ರಹಣ ಮಾಡುವುದಿಲ್ಲ ಮತ್ತು ದೋಷಗಳನ್ನು ಗ್ರಹಣ ಮಾಡುತ್ತಾರೆ. ಶಾಸ್ತ್ರದ ಉಪದೇಶದಲ್ಲಿ ದಾನಕೊಡುವ ಚೈತ್ಯಾಲಯ ನಿರ್ಮಿಸುವ, ಧನಖರ್ಚು ಮಾಡುವ ಮಾತು ಹೇಳುತ್ತಿದ್ದಾರೆ, ಆದರೆ ನಮ್ಮ ಹತ್ತಿರ ಧನವೆಲ್ಲಿದೆ ? ಎಂಬ ವಿಚಾರದಿಂದ ಪಾಪಬಂಧ ಮಾಡಿಕೊಳ್ಳುತ್ತಾನೆ. ಒಂದುವೇಳೆ ಶಾಸ್ತ್ರದಲ್ಲಿ ತಪದ ಕಥನವನ್ನಾಲಿಸಿದನೆಂದರೆ ನಾವು ಶರೀರದಿಂದ ನಿರೋಗಿಯಿರುವುದರಿಂದ ನಮಗೆ ತಪಸ್ಸು ಮಾಡಲು ಹೇಳುತ್ತಿದ್ದಾರೆ; ಆದರೆ ನಮ್ಮಿಂದ ತಪವಾಗುವುದಿಲ್ಲ- ಎಂಬ ವಿಚಾರದಿಂದ ಪಾಪಬಂಧ ಮಾಡಿಕೊಳ್ಳುತ್ತಾನೆ ಹಾಗೂ ದಾನ, ಪೂಜೆ, ಶೀಲ, ಸಂಯಮ ಇತ್ಯಾದಿಗಳ ಉಪದೇಶವು ನಡೆಯುತ್ತಿದ್ದರೆ ಆಗ ತೂಕಡಿಸುತ್ತಾನೆ; ಚಿತ್ತದ ವಿಭ್ರಮೆಯಲ್ಲಿರುತ್ತಾನೆ ಎಂದರೆ ಆಲಿಸುವುದಿಲ್ಲ. ಆದರೆ ಯಾರಾದರೂ ನಿಂದೆ ಮಾಡಿದರೆ ಅಥವಾ ಯಾವನೋ ಮೂರ್ಖನು ಶಾಸ್ತ್ರದ ಸಭೆಯಲ್ಲಿ ಕಲಹ ಮಾಡತೊಡಗಿದರೆ ಅದನ್ನು ಸರಿಯಾಗಿ ಆಲಿಸುತ್ತಾನೆ.

ಯಾವುದಾದರೂ ಪಾಪಕಾರ್ಯದ ನಿಂದೆಯು ಎಂದರೆ ಅಭಕ್ಷ್ಯದ ಸೇವನೆಯು ಯೋಗ್ಯವಿಲ್ಲ, ಕಳವು ಮಾಡಬಾರದು, ಜೂಜು ಆಡಬಾರದು, ವೇಶ್ಯಾಗಮನ ಇತ್ಯಾದಿ ಕಾರ್ಯಗಳಿಂದ ಪಾಪಬಂಧವಾಗುತ್ತದೆಯೆಂದು ಶಾಸ್ತ್ರದಲ್ಲಿ ಬಂದರೆ ಅದನ್ನು ಆಲಿಸಿ ಅಭಕ್ಷ್ಯದ ಸೇವನೆ ಮಾಡುವಂಥವನು ನಮ್ಮ ದೋಷ ಹೇಳುತ್ತಿದ್ದಾರೆಂಬ ವಿಚಾರ ಮಾಡಿ ಅಭಕ್ಷ್ಯದ ಸೇವನೆಯನ್ನಂತೂ ಬಿಟ್ಟುಕೊಡುವುದಿಲ್ಲ ಆದರೆ ವಕ್ತಾರನ ದ್ವೇಷ ಮಾಡುತ್ತ ಪಾಪದ ಬಂಧ ಮಾಡಿಕೊಳ್ಳುತ್ತಾನೆ. 'ಇವರು ನನ್ನ ದೋಷ ತಿಳಿದಿದ್ದಾರೆ ಮತ್ತು ಅದನ್ನು ಪ್ರಕಟಪಡಿಸುತ್ತಿದ್ದಾರೆ' - ಎಂದು ತಿಳಿದುಕೊಂಡ ಜೂಜುಗಾರನು ಧರ್ಮಸಭೆಗೆ ಬರುವುದನ್ನು ಬಿಟ್ಟುಬಿಡುತ್ತಾನೆ. ಈ ಪ್ರಕಾರ ಗುಣಗಳನ್ನಂತೂ ಗ್ರಹಣ ಮಾಡುವುದಿಲ್ಲ ಮತ್ತು ಅವಗುಣಗಳ ಗ್ರಹಣವನ್ನು ನಿಶ್ಚಿತವಾಗಿ ಮಾಡುವಂಥವರು ಸಾರಣಿಗೆಯಂಥ ಶ್ರೋತೃವಿದ್ದಾರೆ.

೬. (ಮಶಕವೆಂದರೆ ದೋಮೆಯೂ ಇದೆ ಮತ್ತು ಚರ್ಮದ ಚೀಲವೆಂದೂ ಇದೆ. ಇಲ್ಲಿ ಎರಡನೇ ಅರ್ಥದ ಗ್ರಹಣ ಮಾಡಲಾಗಿದೆ) ಸಭೆಯಲ್ಲಂತೂ ಅನೇಕ ಪ್ರಕಾರದ ಧರ್ಮಚರ್ಚೆ ಮಾಡುತ್ತಾನೆ. ಧರ್ಮದ ಅನೇಕ ಪರಿಭಾಷೆಗಳನ್ನು ಸ್ಮರಣೆಯಲ್ಲಿ ಇಟ್ಟುಕೊಳ್ಳುತ್ತಾನೆ. ಅನೇಕ ಗಾಥೆ, ಕಾವ್ಯ ಕವಿತೆಗಳನ್ನು ಓದುತ್ತಾನೆ; ಅವುಗಳ ಅರ್ಥವನ್ನು ಇತರರಿಗೂ ತಿಳಿಸಿ ಕೊಡುತ್ತಾನೆ - ಇತ್ಯಾದಿ ರೂಪವಾಗಿ ಹೊರಗಿನಿಂದಂತೂ ಧರ್ಮಾತ್ಮನಂತೆ ಕಂಡು ಬರುತ್ತಾನೆ. ಆದರೆ ಅಂತರಂಗದಲ್ಲಿ ಧರ್ಮದ ಇಚ್ಛೆಯಿಂದ ರಹಿತ, ತೀವ್ರ ಕ್ರೋಧ-ಮಾನ-ಮಾಯೆ- ಲೋಭದಿಂದ ಸಹಿತ, ಶುದ್ಧ(ಸತ್ಯ) ಧರ್ಮದ ನಿಂದಕ, ಧರ್ಮಾತ್ಮಾ ಜೀವಗಳ ನಿಂದಕ, ಕುದೇವ-ಕುಗುರುವಿನ ಪ್ರಶಂಸಕ ಪಾಪರಸದಲ್ಲಿ ಲೀನ, ಅಂತರಂಗ ಧರ್ಮಭಾವನೆಯಿಂದ ರಹಿತನಿರುವಂಥವನು ಮಶಕದಂಥ ಶ್ರೋತೃವಿದ್ದಾನೆ. ಯಾವ ಪ್ರಕಾರ ಬರಿದಾದ ಮಶಕದಲ್ಲಿ ಗಾಳಿಯನ್ನು ತುಂಬಿ ಉಬ್ಬಿಸಲಾದರೆ ಅದು ಮೇಲಂತೂ ಜಲದಿಂದ ತುಂಬಿಕೊಂಡಿರುವಂತೆ ಕಂಡು ಬರುತ್ತದೆ; ಆದರೆ ಒಳಗೆ ಕೇವಲ ಗಾಳಿಯೇ ತುಂಬಿಕೊಂಡಿರುತ್ತದೆ.

೭. ಯಾವ ಪ್ರಕಾರ ಸರ್ಪಕ್ಕೆ ಸಕ್ಕರೆ ಮಿಶ್ರಿತ ಹಾಲು ಕುಡಿಸಿದರೂ ಅದರಲ್ಲಿ ಮಹಾದುಃಖದಾಯಕ ವಿಷವೇ ಇರುತ್ತದೆ. ಅದೇ ಪ್ರಕಾರ ಕೆಲವರಿಗೆ ಅಮೃತ ಸಮಾನ ಜಿನವಚನಗಳನ್ನು ಹೇಳಿದರೆ ಅವುಗಳನ್ನು ಆಲಿಸಿಯೂ ಪಾಪಾತ್ಮರು ಪಾಪದ ಬಂಧವನ್ನೇ ಮಾಡಿಕೊಳ್ಳುತ್ತಾರೆ. ಶಾಸ್ತ್ರದಲ್ಲಿ ಕೆಟ್ಟ ಕಾರ್ಯಗಳ ನಿಂದೆ ಮಾಡಲಾಗಿದ್ದರೆ, ಯಾವಾಗ ಶಾಸ್ತ್ರಗಳಲ್ಲಿ ಅಶುದ್ಧ ಭೋಜನ-ಪಾನಾದಿಗಳ ನಿಂದೆಯ ಕಥನವಿದ್ದರೆ, ಕ್ರೋಧಾದಿ ಕಷಾಯಗಳ ನಿಂದೆ ಹಾಗೂ ಸಪ್ತ ವ್ಯಸನಾದಿಗಳ ನಿಂದೆ ಮೊದಲಾಗಿ ಜಾತಿ ವಿರೋಧಿ, ಧರ್ಮ ವಿರೋಧಿ, ಪಂಚ ವಿರೋಧಿ ಕಾರ್ಯಗಳು ಪಾಪಕಾರ್ಯಗಳಿದ್ದು ಇವುಗಳನ್ನು ವಿವೇಕವಂತರು ಬಿಟ್ಟುಕೊಡುವುದು ಯೋಗ್ಯವಿದೆ - ಎಂಬ ಕಥನವು ಶಾಸ್ತ್ರ ಸಭೆಯಲ್ಲಿ ನಡೆಯುತ್ತಿದ್ದರೆ ಅದನ್ನು ಆಲಿಸಿ ಜೀವರುಗಳು ಅಂಥ ಪಾಪ ಕಾರ್ಯಗಳನ್ನು ಬಿಟ್ಟು ಧರ್ಮದ ಮಾರ್ಗದಲ್ಲಿ

ತೊಡಗುತ್ತಾರೆ. ಅದರಿಂದ ಅವರು ಈ ಭವದಲ್ಲಿ ಯಶಸ್ಸು ಪಡೆದು ಪರಭವದಲ್ಲಿ ಸುಖಿಯಾಗುತ್ತಾರೆ. ಇಂಥ ಅಮೃತದ ಸಮಾನ ಗುಣಕಾರೀ ವಚನಗಳನ್ನು ಆಲಿಸಿ ಯಾರು ಪಾಪಾತ್ಮರಿದ್ದಾರೆ - ಪಾಪದ ಆಚರಣೆ ಮಾಡುವಂಥ ಅಶುಭ ಆತ್ಮರಿದ್ದಾರೆ, ಅವರು ದ್ವೇಷದಿಂದ 'ಈ ದುರ್ಗುಣಗಳು ಇನ್ನೂ ನಮ್ಮಲ್ಲಿ ಇವೆ ಆದುದರಿಂದ ಇವೆಲ್ಲ ದೃಷ್ಟಾಂತಗಳ ವರ್ಣನೆಯನ್ನು ನಮ್ಮನ್ನೇ ಉದ್ದೇಶಿಸಿ ಮಾಡಲಾಗುತ್ತಿದೆ'ಯೆಂದು ಯೋಚಿಸಿ ಧರ್ಮದ ದ್ವೇಷಿಗಳಾಗುತ್ತಾರೆ ಅರ್ಥಾತ್ ವಕ್ತಾರ ಹಾಗೂ ಉಪದೇಶದ ದ್ವೇಷ ಮಾಡುತ್ತಾರೆ. ಅವರು ಸರ್ಪದ ಸಮಾನ ಶ್ರೋತೃವಿದ್ದಾರೆ.

೮. ಯಾವ ಪ್ರಕಾರ ಎಮ್ಮೆಯು ಸರೋವರದ ಜಲದಲ್ಲಿ ಪ್ರವೇಶ ಮಾಡಿ ನೀರನ್ನಂತೂ ಕಡಿಮೆ ಕುಡಿಯುತ್ತದೆ ಮತ್ತು ಅಲ್ಲೋಲ ಕಲ್ಲೋಲ ಮಾಡುತ್ತ ಸರೋವರದ ನೀರನ್ನೆಲ್ಲ ಕೊಳಚೆಮಯ ಮಾಡುತ್ತ ನೀರಿನ ನಿರ್ಮಲತೆಯನ್ನು ಹಾಳು ಮಾಡಿಬಿಡುತ್ತದೆ. ಇತರ ಪಶುಗಳ ಶರೀರ ಹಾಗೂ ತನ್ನ ಶರೀರವನ್ನು ಹೊಲಸು ಮಾಡಿಕೊಳ್ಳುತ್ತದೆ; ಅದೇ ಪ್ರಕಾರ ಸಭೆಯಲ್ಲಿ ಜಿನವಾಣಿಯ ಮಹಾನಿರ್ಮಲ ಕಥನವನ್ನು ಕೇಳಿ ಭವ್ಯರಂತೂ ಪಾಪದಿಂದ ಉದಾಸರಾಗಿ ಧರ್ಮವನ್ನು ಬಯಸುತ್ತಾರೆ. ಧರ್ಮದ ಪ್ರಶಂಸೆ ಮತ್ತು ಧರ್ಮಾತ್ಮಾ ಜೀವರುಗಳ ಪ್ರಶಂಸೆ ಮಾಡಿ ಅನುಮೋದನೆಯಿಂದ ಪುಣ್ಯದ ಬಂಧ ಮಾಡಿಕೊಂಡು ಹರ್ಷ ಮನ್ನಿಸುತ್ತಾರೆ. ಅಲ್ಲಿ ಅನೇಕ ಪ್ರಕಾರದ ಸಂದೇಹ-ಸಮಾಧಾನ ರೂಪದ ಪ್ರಶ್ನೋತ್ತರಗಳಾಗುವುದರಿಂದ ಅನೇಕ ಜೀವರುಗಳ ಸಂಶಯವು ನಾಶವಾಗಿ ಹೋಗುತ್ತದೆ. ಜ್ಞಾನದ ವೃದ್ಧಿಯಾಗುತ್ತದೆ. ಅದರಿಂದ ಶುದ್ಧ ತತ್ತ್ವದ ಶ್ರದ್ಧೆ ಮಾಡುವುದರಿಂದ ಸಮ್ಯಕ್ ಶ್ರದ್ಧೆಯು ದೃಢವಾಗುತ್ತದೆ - ಇಂಥ ಕಥನವಾಗುತ್ತಿದ್ದರೂ ಅದೆಷ್ಟೋ ಮುಗ್ಧ, ಮಂದಜ್ಞಾನಿ, ಕಷಾಯಗಳಿಂದ ಪೀಡಿತ ಜೀವರುಗಳು ಶಾಸ್ತ್ರ ಕಥನದ ವಿರುದ್ಧವಿರುವಂಥ, ಸಭೆಯಲ್ಲಿಯೇ ಜೀವರುಗಳ ಚಿತ್ತವು ಉದ್ವಿಗ್ನವಾಗುವಂಥ ಬಹಳಷ್ಟು ಪಾಪದ ಬಂಧವಾಗುವಂಥ ಮತ್ತು ತಾವೂ ಪಾಪ ಕಟ್ಟಿಕೊಂಡು ಪರಭವಗಳನ್ನು ಕೆಡಿಸಿಕೊಳ್ಳುವಂಥ ಪ್ರಶ್ನೆ ಕೇಳುತ್ತಾರೆ ಅಥವಾ ಕೋಲಾಹಲ ಉಂಟಾಗುವ ಚರ್ಚೆಯನ್ನು ಆರಂಭ ಮಾಡುತ್ತಾರೆ. ಅವರು ಎಮ್ಮೆಯಂಥ ಶ್ರೋತೃವಿದ್ದಾರೆ.

ಈ ಎಂಟು ಪ್ರಕಾರದ ಅಶುಭ ಪರಿಣಾಮಿ ಶ್ರೋತೃಗಳು ತಮ್ಮ ಪರಭವ ಕೆಡಿಸಿಕೊಂಡು ಇತರರಿಗೆ ದುಃಖವನ್ನುತ್ಪನ್ನ ಮಾಡಿ ಪಾಪದ ಬಂಧ ಮಾಡಿಕೊಳ್ಳುತ್ತಾರೆ.

ಇನ್ನು ಬೇರೆ ಹದಿನಾಲ್ಕು ಪ್ರಕಾರದ ಶ್ರೋತಾರರಿದ್ದಾರೆ ಅವರು ಮಿಶ್ರ ಪರಿಣಾಮಿಗಳಿದ್ದಾರೆ. ಅವರಲ್ಲಿ ಕೆಲವರಂತೂ ಕೆಟ್ಟವರಿದ್ದಾರೆ ಮತ್ತು ಅದೆಷ್ಟೋ ಶ್ರೋತೃಗಳು ಒಳ್ಳೆಯ ಪರಿಣಾಮದವರಿದ್ದಾರೆ. ಅವರುಗಳಲ್ಲಿ ಸಾರಣಿಗೆಯ ಸಮಾನ, ಪಾಷಾಣದ ಸಮಾನ, ಸರ್ಪದ ಸಮಾನ, ಎಮ್ಮೆಯ ಸಮಾನ ಮತ್ತು ಒಡಕು ಕೊಡದ ಸಮಾನ - ಈ ಐವರ ಸ್ವಭಾವವನ್ನಂತೂ ಮೇಲೆ ಎಂಟು ಪ್ರಕಾರದ ಶ್ರೋತೃಗಳ ವರ್ಣನೆಯಲ್ಲಿ ಹೇಳಿಯಾಗಿದೆ. ಅವರನ್ನು ಹೊರತುಪಡಿಸಿ ಬೇರೆ ಅದೆಷ್ಟೋ ಪ್ರಕಾರದ ಅಶುಭ ಸ್ವಭಾವದ ಶ್ರೋತೃಗಳಿದ್ದಾರೆ. ಅವರ ಸ್ವಭಾವ ಈಗ ಹೇಳುತ್ತಾರೆ.

೧. ಎಲ್ಲಿ ಧರ್ಮದ ಉದ್ಯೋತ (ಪ್ರಚಾರ-ಪ್ರಸಾರ)ವಾಗುತ್ತಿರುತ್ತದೆ ಅದನ್ನು ಕಂಡು, ಅದು ತಮ್ಮಿಂದ ಆಗುವ ಸಾಧ್ಯತೆಯಿಲ್ಲದಿರುವುದರಿಂದ ಧರ್ಮಘಾತದ ವಿಚಾರ ಮಾಡುತ್ತಾರೆ. ಎಲ್ಲಿಯಾದರೂ ಒಳ್ಳೆಯ ಶಾಸ್ತ್ರಗಳ ಉಪದೇಶವಾಗುತ್ತಿರುವುದು ಕಂಡು ಬಂದರೆ ಅಲ್ಲಿಯೂ ಧರ್ಮಘಾತದ ವಿಚಾರ ಮಾಡುತ್ತಾರೆ, ಅವರು ಮಾರ್ಜಾಲ (ಬೆಕ್ಕಿನ) ಸಮಾನ ಶ್ರೋತೃವಿದ್ದಾರೆ. ಹೇಗೆ ಬೆಕ್ಕು ಒಳ್ಳೆಯ ಹಾಲನ್ನಂತೂ ಕುಡಿಯುವುದಿಲ್ಲ; ಆದರೆ ಚೆಲ್ಲಿ ಬಿಡುತ್ತದೆ, ಪಾತ್ರೆಯನ್ನು ಒಡೆದು ಹಾಕುತ್ತದೆ. ಹಾಗೆಯೇ ಇವನು ಪುಣ್ಯಕಾರಕ ಉಪದೇಶವನ್ನಂತೂ ಧಾರಣ ಮಾಡುವುದಿಲ್ಲ; ಆದರೆ ಉಪದೇಶ ದಾತೃವನ್ನು ಕಂಡು ದ್ವೇಷ ಮಾಡುತ್ತಾನೆ, ಧರ್ಮಘಾತ ಮಾಡುತ್ತಾನೆ ಅವನು 'ಮಾರ್ಜಾಲದಂಥ ಅಶುಭ ಶ್ರೋತೃ'ನಿದ್ದಾನೆ.

೨. ಯಾರು ಮೇಲಂತೂ ಉಜ್ಜ್ವಲರಿದ್ದಾರೆ ಮತ್ತು ಅಂತರಂಗದಲ್ಲಿ (ಮನಸ್ಸು) ಮಲಿನವಿದೆ. ಹೇಗೆ ಬಕಪಕ್ಷಿಯು ಮೇಲಂತೂ ಬೆಳ್ಳಗಿದೆ ಆದರೆ ಅಂತರಂಗದಲ್ಲಿ ಜೀವಘಾತದ ಭಾವವನ್ನಿಟ್ಟುಕೊಂಡಿರುತ್ತದೆ; ಹಾಗೆಯೇ

ಕೆಲವು ಜೀವರು ಬಾಹ್ಯದಲ್ಲಂತೂ ವಿನಯಸಹಿತ ನಿರ್ಮಲ ವಚನಗಳನ್ನಾಡುತ್ತಾರೆ, ನಮಸ್ಕಾರ ಮಾಡುತ್ತಾರೆ, ಧಾರ್ಮಿಕರಂತೆ ಕಂಡು ಬರುತ್ತಾರೆ; ಆದರೆ ಅಂತರಂಗದಲ್ಲಿ ಮಾನೀ, ಕ್ರೋಧಿ, ಕಪಟೀ, ಲೋಭೀ ಬಹಳಷ್ಟು ಜೀವರುಗಳ ಕೇಡನ್ನು ಬಯಸುವಂಥ, ಧರ್ಮದ ಸೇವನೆ ಮಾಡುವಂಥವರನ್ನು ಕಂಡು ದ್ವೇಷ ಭಾವ ಮಾಡುವಂಥ, ಮಹಾ ಕುಆಚರಣೆ ಮಾಡುವಂಥ ದುರ್ಬುದ್ಧಿ, ರೌದ್ರ ಪರಿಣಾಮಿಯಿದ್ದಾರೆ ಅವರು ಧರ್ಮದ ಘಾತವನ್ನಂತೂ ಬಯಸುತ್ತಾರೆ ಆದರೆ ಧರ್ಮಸೇವನೆಯನ್ನು ಇಚ್ಛಿಸುವುದಿಲ್ಲ. ಅಂಥ ಅಂತರಂಗ ಮಲದಿಂದ ಲಿಪ್ತ ಹಾಗೂ ಮೇಲೆ ಒಳ್ಳೆಯವರಾಗಿ ಕಂಡು ಬರುವಂಥವರು 'ಬಕಪಕ್ಷಿಯ ಸಮಾನ ಅಶುಭ ಶ್ರೋತೃ'ವಿದ್ದಾರೆ.

೩. ಹೇಗೆ ಸೊಳ್ಳೆಯು ಅಲ್ಲಲ್ಲಿ ಕಚ್ಚುತ್ತ ಜೀವರುಗಳಿಗೆ ದುಃಖವನ್ನುತ್ಪನ್ನ ಮಾಡುತ್ತದೆ. ಹಾಗೆ ಯಾವ ಜೀವಗಳು ಸಭೆಯಲ್ಲಿ ಶಾಸ್ತ್ರ ಕಥನವಾದ ಮೇಲೆ ಉಪದೇಶ ದಾತೃ ಹಾಗೂ ಅನ್ಯ ಧರ್ಮಾತ್ಮಾ ಜೀವಗಳೊಂದಿಗೆ ದ್ವೇಷಭಾವ ಮಾಡಿ ಪುನಃ ಪುನಃ ಕುವಚನ, ಅವಿನಯ ವಚನಗಳನ್ನಾಡುತ್ತಾರೆ; ಸಭೆ ಹಾಗೂ ವಕ್ತಾರನಿಗೆ ಖೇದವನ್ನು ಉತ್ಪನ್ನ ಮಾಡುತ್ತಾರೆ. ಅವರು 'ಸೊಳ್ಳೆಯ ಸಮಾನ ಅಶುಭ ಶ್ರೋತೃ'ಗಳಿದ್ದಾರೆ.

೪. ಯಾವ ಪ್ರಕಾರ ಹಾಲಿನಿಂದ ತುಂಬಿಕೊಂಡಿರುವ ಕೆಚ್ಚಲಿನ ಮೇಲೆ ಅಂಟಿಕೊಂಡಿದ್ದರೂ ಜಿಗಳೆ(ಉಣ್ಣೆ)ಯು ರಕ್ತವನ್ನೇ ಹೀರುತ್ತದೆ. ಅದರ ಸ್ವಭಾವವು ಅಂಥದೇ ಇರುತ್ತದೆ; ಅದೇ ಪ್ರಕಾರ ಬೇಕಾದಂಥ ಒಳ್ಳೆಯ ಉಪದೇಶ ನೀಡಿದರೂ ಪಾಪಾಚಾರಿಯು ಅವಗುಣವನ್ನೇ ಗ್ರಹಣ ಮಾಡುತ್ತಾನೆ. ನಾವು ಇಂಥ ಉಪದೇಶ ಸಾಕಷ್ಟು ಕೇಳಿದ್ದೇವೆ ಯಾರು ನಮ್ಮದೇನು ಒಳಿತು ಮಾಡುವ ಸಾಧ್ಯತೆಯಿದೆ ? ನಮ್ಮ ಭಾಗ್ಯದಲ್ಲಿ ಹೇಗಿದೆಯೋ ಹಾಗೆ ಆಗುವುದಿದೆ-ಎಂಬ ಶ್ರದ್ಧೆಯು ಆ ದುರ್ಬುದ್ಧಿಯದಿರುತ್ತದೆ. ಅವನ ಮೇಲೆ ದಯೆ ಮಾಡಿ ಉಪದೇಶವಿತ್ತರೂ ಅವನು ದೋಷವನ್ನೇ ಗ್ರಹಣ ಮಾಡುತ್ತಾನೆ. ಅಂಥವನು 'ಜಿಗಳೆಯ ಸಮಾನ ಅಶುಭಶ್ರೋತೃ'ವಿದ್ದಾನೆ.

೫. ಹೇಗೆ ಗಿಳಿಗೆ ಏನನ್ನು ಹೇಳಿಸಲಾಗುತ್ತದೆಯೋ ಅದನ್ನೇ ಹೇಳುತ್ತದೆ. ಹಾಗೆಯೇ ಅನ್ಯರು ಹೇಳಿದಂತೆ ಹೇಳುತ್ತಾನೆ, ಅವರ ಅನುಸಾರ ಮಾತನಾಡುತ್ತಾನೆ. ಹೇಗೆ ಯಾರು ಹೇಳಿಸುತ್ತಾರೋ ಹಾಗೆಯೇ ಮಾತು (ಪರಿಭಾಷೆ) ಹೇಳುತ್ತಾನೆ. ತನ್ನಲ್ಲಿ ಭಾವ ಸಹಿತ ತಿಳಿಯುವ ಶಕ್ತಿಯಿರುವುದಿಲ್ಲ ಅವನು 'ಗಿಳಿಯಂಥ (ಮಧ್ಯಮ) ಶ್ರೋತೃವಿದ್ದಾನೆ.'

೬. ಹೇಗೆ ಜಲದ ಸಂಯೋಗವಾದ ಮೇಲೆ ಮಣ್ಣು ಮೃದುವಾಗಿ ಹೋಗುತ್ತದೆ ಹಾಗೂ ಅಗ್ನಿಯ ಸಂಯೋಗವಾದ ಮೇಲೆ ಕೋಮಲ (ಮೆತ್ತಗೆ) ಆಗುತ್ತದೆ. ಎರಡರ ಸಂಯೋಗದ ಅಭಾವವಾಗುತ್ತಿದ್ದಂತೆಯೇ ಒಣಗಿ, ಕಠೋರವಾಗುತ್ತದೆ; ಅದೇ ಪ್ರಕಾರ ಯಾವ ಜೀವನಿಗೆ ಎಷ್ಟು ಸಮಯ ಸಂಯೋಗವಿರುತ್ತದೆ, ಶಾಸ್ತ್ರಗಳ ಶ್ರವಣವಿರುತ್ತದೆ, ಧರ್ಮಾತ್ಮರ ಸಂಯೋಗವು ಲಭಿಸುತ್ತದೆ ಅಷ್ಟು ಸಮಯದವರೆಗಂತೂ ಧರ್ಮಭಾವ ಸಹಿತವಾಗಿರುತ್ತಾನೆ. ಕೋಮಲತೆಯು ಇರುತ್ತದೆ, ದಯೆಯುಳ್ಳವನಾಗಿ ಇರುತ್ತಾನೆ ಮತ್ತು ವ್ರತ-ಸಂಯಮದ ಭಾವನೆ ಮಾಡುತ್ತಿರುತ್ತಾನೆ. ಧರ್ಮಾತ್ಮರಲ್ಲಿ ಪ್ರೀತಿಯುಳ್ಳವನಾಗಿ ಅವರ ಸೇವೆ ಶುಶ್ರೂಷೆ ಮಾಡಬಯಸುತ್ತಾನೆ; ಆದರೆ ಯಾವಾಗ ಸತ್ಸಂಗ ಹಾಗೂ ಶಾಸ್ತ್ರಗಳ ನಿಮಿತ್ತವು ಲಭಿಸುವುದಿಲ್ಲ ಆಗ ಕಠೋರ, ಧರ್ಮರಹಿತ, ಕ್ರೂರ ಪರಿಣಾಮಿಯಾಗಿ ಬಿಡುತ್ತಾನೆ. ಅವನು 'ಮಣ್ಣಿನ ಸಮಾನ ಮಧ್ಯಮ ಶ್ರೋತೃ'ವಿದ್ದಾನೆ.

೭. ಯಾರು ಸಭೆಯಲ್ಲಿ ಸಮತೆಯ ಭಾವ ಸಹಿತರಾಗಿ ಕುಳಿತುಕೊಂಡು ಶಾಸ್ತ್ರದ ವ್ಯಾಖ್ಯಾನವನ್ನು ಆಲಿಸುತ್ತಾರೆ. ಬೇರೆ ಯಾರಾದರೂ ದಂತಕಥೆಯ ಚರ್ಚೆ ಮಾಡುತ್ತಿದ್ದರೆ ಅದನ್ನು ಕೇಳುವುದಿಲ್ಲ ತನ್ನ ಕಾರ್ಯದ ಕಡೆಗೇ ಲಕ್ಷ್ಯವೀಯುತ್ತಾನೆ ಅರ್ಥಾತ್ ಯಾವಾಗಲೂ ತನ್ನ ಧರ್ಮರೂಪದ ಕಾರ್ಯಸಿದ್ಧಿ ಮಾಡಿಕೊಳ್ಳುವುದರಲ್ಲಿಯೇ ತತ್ಪರನಾಗಿರುತ್ತಾನೆ. ಅವನು 'ಮೇಕೆಯ ಸಮಾನ ಶುಭ ಶ್ರೋತೃವಿದ್ದಾನೆ.' ಹೇಗೆ ಮೇಕೆಯು ಕೆಳಗೆ ಮುಖಮಾಡಿ ಹುಲ್ಲು ಮೇಯುತ್ತಿರುತ್ತದೆ ಯಾರೊಂದಿಗೂ ದ್ವೇಷ ಮಾಡುವುದಿಲ್ಲ, ಹಾಗೆಯೇ ಎಂದು ತಿಳಿಯುವುದು.

೮. ಯಾವ ಪ್ರಕಾರ ಹಸು ಹುಲ್ಲು-ಹೊಟ್ಟನ್ನು ತಿಂದು ಉತ್ತಮವಾದ ಹಾಲು ಕೊಡುತ್ತದೆ, ಅದೇ ಪ್ರಕಾರ

ಯಾರು ಅಲ್ಪ ಮಾತ್ರವೇ ಉಪದೇಶ ನೀಡಿದರೂ ಅದನ್ನು ರುಚಿಪೂರ್ವಕ ಗ್ರಹಣ ಮಾಡಿ ಬಹಳಷ್ಟು ತಮ್ಮ ಹಿತಮಾಡಿಕೊಳ್ಳುತ್ತಾರೆ. ಆ ಉಪದೇಶದಿಂದ ತಮಗೆ ತತ್ತ್ವಜ್ಞಾನದ ಲಾಭವಾಯಿತೆಂದು ತಿಳಿದುಕೊಂಡು ಪುನಃ ಪುನಃ ಪ್ರಶಂಸೆ ಮಾಡುತ್ತಾರೆ. ಉಪದೇಶ ದಾತೃವಿನ ಉಪಕಾರ ಮನ್ನಿಸುತ್ತಾರೆ. ಅವರು 'ಹಸುವಿನ ಸಮಾನ ಶುಭ ಶ್ರೋತೃವಿದ್ದಾರೆ.'

೯. ಹೇಗೆ ಹಂಸದ ಎದುರಿಗೆ ಹಾಲು ನೀರನ್ನು ಬೆರೆಸಿ ಇಟ್ಟರೂ ಕೂಡ ಅದು ಅದರಲ್ಲಿನ ಹಾಲನ್ನು ಮಾತ್ರ ಗ್ರಹಣ ಮಾಡುತ್ತದೆ ಆದರೆ ನೀರಿನ ಅಂಶವನ್ನು ಗ್ರಹಣ ಮಾಡುವುದಿಲ್ಲ. ಅದರ ಚುಂಚು ಆ ನೀರು ಬೆರೆತ ಹಾಲನ್ನು ಸ್ಪರ್ಶ ಮಾಡುತ್ತಿದ್ದಂತೆಯೇ ನೀರು ಮತ್ತು ಹಾಲಿನ ಅಂಶಗಳು ಬೇರೆ-ಬೇರೆಯಾಗಿ ಬಿಡುತ್ತವೆ ಆಗ ಅದು ನೀರನ್ನು ಬಿಟ್ಟು ಹಾಲಿನ ಅಂಶವನ್ನು ಗ್ರಹಣ ಮಾಡುತ್ತದೆ. ಅದೇ ಪ್ರಕಾರ ಶುದ್ಧ ದೃಷ್ಟಿಯ ಧಾರಕನಾದ ಸಮ್ಯಗ್ದೃಷ್ಟಿಯು ಅನೇಕ ಪ್ರಕಾರದ ಉಪದೇಶವನ್ನು ಆಲಿಸಿ ತನ್ನ ಬುದ್ಧಿಯಿಂದ ನಿರ್ಣಯ ಮಾಡುತ್ತಾನೆ. ನಂತರ ಒಳ್ಳೆಯ ರೀತಿಯಿಂದ ತತ್ತ್ವಜ್ಞಾನ ಸಹಿತ ಯಾವ ಅರ್ಥವಾಗುತ್ತದೆ, ಅದನ್ನು ಗ್ರಹಣ ಮಾಡುತ್ತಾನೆ. ಅಶುಭಕರ, ಅನಾಚಾರ, ಹಿಂಸೆಯಿಂದ ಕೂಡಿದ ಕ್ರಿಯೆಯ ಉಪದೇಶವನ್ನು ಆಲಿಸಿ ಆ ಕ್ರಿಯೆಯ ತ್ಯಾಗ ಮಾಡುತ್ತಾನೆ. ಈ ಪ್ರಕಾರ ಯಾವ ಹಿತದಾಯಕ ಉಪದೇಶವಿದೆ ಅದನ್ನಂತೂ ಗ್ರಹಣ ಮಾಡುತ್ತಾನೆ; ಜಿನಾಜ್ಞೆಯಲ್ಲಿ ಯಾವುದನ್ನು ಬಿಟ್ಟುಕೊಡಲು ಯೋಗ್ಯವೆಂದು ಹೇಳಿದ್ದಾರೆ ಅದರ ತ್ಯಾಗ ಮಾಡುತ್ತಾನೆ, ಗ್ರಹಣ ಮಾಡಲು ಯೋಗ್ಯವಿರುವುದನ್ನು ಗ್ರಹಣ ಮಾಡುತ್ತಾನೆ. ಅವನು 'ಹಂಸದ ಸಮಾನ ಶುಭ ಶ್ರೋತೃವಿದ್ದಾನೆ.'

ಈ ಪ್ರಕಾರ ಶ್ರೋತಾರರಲ್ಲಿ ಹದಿನಾಲ್ಕು ಜಾತಿಯಿವೆ. ಅವುಗಳಲ್ಲಿ ಸಾರಣಿಗೆ(ಜರಡಿ)ಯ ಸಮಾನ, ಮಾರ್ಜಾಲದ ಸಮಾನ, ಬಕಪಕ್ಷಿಯ ಸಮಾನ, ಪಾಷಾಣದ ಸಮಾನ, ಸರ್ಪದ ಸಮಾನ, ಎಮ್ಮೆಯ ಸಮಾನ, ಒಡಕು ಕೊಡದ ಸಮಾನ, ಸೊಳ್ಳೆ(ದೋಮೆ)ಯ ಸಮಾನ, ಉಣ್ಣೆ(ಜಿಗಳೆ)ಯ ಸಮಾನ - ಈ ಒಂಭತ್ತು ಜಾತಿಯ ಶ್ರೋತೃಗಳು ಹೀನ, ಪಾಪಾಚಾರಿಯಿದ್ದಾರೆ. ಮಣ್ಣಿನ ಸಮಾನ, ಗಿಳಿಯ ಸಮಾನ-ಇವರಿಬ್ಬರು ಮಧ್ಯಮ ಶ್ರೋತೃಗಳಿದ್ದಾರೆ ಮತ್ತು ಮೇಕೆಯ ಸಮಾನ, ಹಸುವಿನ ಸಮಾನ, ಹಂಸದ ಸಮಾನ - ಈ ಮೂವರು ಶ್ರೋತೃಗಳು ಉತ್ತಮರಿದ್ದಾರೆ. ಈ ಪ್ರಕಾರ ಹದಿನಾಲ್ಕು ತರಹದ ಶ್ರೋತಾರರ ಕಥನವಾಯಿತು.

ಮತ್ತೆ ಬೇರೆಯೂ ನಾಲ್ಕು ಪ್ರಕಾರದ ಉತ್ತಮ ಶ್ರೋತೃಗಳಿದ್ದಾರೆ - ಮೊದಲಿಗೆ ಅವರ ಹೆಸರು ಹೇಳುತ್ತಾರೆ- ನೇತ್ರದ ಸಮಾನ, ದರ್ಪಣದ ಸಮಾನ, ತಕ್ಕಡಿಯ ದಂಡಿಗೆಯ ಸಮಾನ ಮತ್ತು ಒರೆಗಲ್ಲಿನ ಸಮಾನ. ಈಗ ಅವರ ಲಕ್ಷಣ ಹೇಳುತ್ತಾರೆ.

೧. ಹೇಗೆ ನೇತ್ರದಿಂದ ಒಳ್ಳೆಯದು-ಕೆಟ್ಟದ್ದು ಎರಡೂ ಕಂಡು ಬರುತ್ತವೆ, ಹಾಗೆಯೇ ಉತ್ತಮ ಶ್ರೋತಾರನು ತನ್ನ ಜ್ಞಾನನೇತ್ರದಿಂದ ಒಳ್ಳೆಯ ಮತ್ತು ಕೆಟ್ಟ ಮಾರ್ಗವನ್ನು ಉಪದೇಶದ ಮೂಲಕ ತಿಳಿದುಕೊಂಡು ಯಾವ ಕೆಟ್ಟ ಆಚರಣೆ ಪಾಪರೂಪವಿದೆ ಅದನ್ನು ಬಿಟ್ಟುಕೊಡುತ್ತಾನೆ ಮತ್ತು ಒಳ್ಳೆಯ ಪುಣ್ಯಕಾರೀ ಉಪದೇಶವನ್ನು ಆಲಿಸಿ ಆ ಮಾರ್ಗದ ಅನುಸಾರ ತನ್ನ ಶ್ರದ್ಧೆ ಮಾಡುತ್ತಾನೆ. ಅವನು ನೇತ್ರದ ಸಮಾನ ಶ್ರೋತೃವಿದ್ದಾನೆ.

೨. ಯಾವ ಪ್ರಕಾರ ಕನ್ನಡಿಯಲ್ಲಿ ತಮ್ಮ ಮುಖ ನೋಡಿಕೊಳ್ಳುತ್ತಾರೆ ಮತ್ತು ಮುಖದ ಅವಸ್ಥೆಯನ್ನು ನೋಡಿ ತಮ್ಮ ಮುಖದ ಮೇಲೆ ರಜ, ಕಪ್ಪು ತಗಲಿದ್ದರೆ ಅದನ್ನು ಸ್ವಚ್ಛಗೊಳಿಸುತ್ತಾರೆ; ಅದೇ ಪ್ರಕಾರ ಒಳ್ಳೆಯ ಉಪದೇಶವನ್ನು ಆಲಿಸಿ ತಮ್ಮ ಚೈತನ್ಯ ಸ್ವಭಾವದ ಮೇಲೆ ಕರ್ಮರಜವಿರುವುದನ್ನು ತಿಳಿದುಕೊಂಡು ತಮ್ಮ ಆತ್ಮಪ್ರದೇಶವನ್ನು ನಿರ್ಮಲ ಮಾಡುವ ಉಪಾಯ ಮಾಡುವಂಥವರು ಕನ್ನಡಿಯ ಸಮಾನ ಶ್ರೋತೃವಿದ್ದಾರೆ.

೩. ಹೇಗೆ ತಕ್ಕಡಿಯ ದಂಡಿಗೆಯಿಂದ ಹೆಚ್ಚು ಅಥವಾ ಕಡಿಮೆಯ ತಿಳಿವಳಿಕೆಯು ಮೂಡಿ ಬರುತ್ತದೆ, ಹಾಗೆ ಒಳ್ಳೆ ಯ ಉಪದೇಶವನ್ನು ಆಲಿಸಿ ತಮ್ಮ ಬುದ್ಧಿಯ ರೂಪದ ತಕ್ಕಡಿಯ ದಂಡಿಗೆಯಿಂದ ಒಳಿತು-ಕೆಡಕು ಮಾಡುವಂಥ

ವಸ್ತುಗಳನ್ನು ತೂಗಿ ನೋಡಿ ಹೀನತೆಯ ತ್ಯಾಗ ಮಾಡಿ ಅಧಿಕ ಫಲದಾಯಕವನ್ನು ಗ್ರಹಣ ಮಾಡುವಂಥವರು ತಕ್ಕಡಿಯ ದಂಡಿಗೆಯ ಸಮಾನ ಶ್ರೋತೃವಿದ್ದಾರೆ.

೪. ಯಾವ ಪ್ರಕಾರ ಒರೆಗಲ್ಲಿನ ಮೇಲೆ ಉಜ್ಜಿ ಚಿನ್ನದ ಉತ್ತಮತೆಯನ್ನು ಪರೀಕ್ಷಿಸಲಾಗುತ್ತದೆ ಅದೇ ಪ್ರಕಾರ ಉತ್ತಮ ಶ್ರೋತೃವು ತನ್ನ ಬುದ್ಧಿಯ ರೂಪದ ಒರೆಗಲ್ಲಿನಿಂದ ಹಿತ ಮಾಡುವಂಥ ಮತ್ತು ಅಹಿತ ಮಾಡುವಂಥವುಗಳ ಪರೀಕ್ಷೆ ಮಾಡಿ ಗ್ರಹಣ-ತ್ಯಾಗ ಮಾಡುವಂಥವರು ಒರೆಗಲ್ಲಿನ ಸಮಾನ ಶ್ರೋತೃವಿದ್ದಾರೆ.

ಈ ಪ್ರಕಾರ ಇವು ನಾಲ್ಕು ಗುಣಸಹಿತ ಉತ್ತಮ ಶ್ರೋತಾರರಿದ್ದಾರೆ. ಕರ್ಣೇಂದ್ರಿಯವಿರುವಂಥವರನ್ನು ಶ್ರೋತೃವೆಂದು ಹೇಳುತ್ತಾರೆ. ಯಾರಿಗೆ ಕಿವಿಗಳಿದ್ದರೂ ಮನಸ್ಸು ಇರುವುದಿಲ್ಲ ಅಂಥವರು ಶುಭಾಶುಭ ವಿಚಾರರಹಿತ ಅಸಂಜ್ಞಿಗಳಿದ್ದು ಅವರಿಗೆ 'ಶ್ರೋತೃ' ಪದವು ಸಂಭವಿಸುವುದಿಲ್ಲ; ಆದುದರಿಂದ ಮನಸ್ಸಿನ ಧಾರಕರಾದ ಸಂಜ್ಞೀಯಿರಬೇಕಾಗುವುದು. ಈ ಪ್ರಕಾರ ಕರ್ಣೇಂದ್ರಿಯ ಮತ್ತು ಮನಸ್ಸು ಯಾರಿಗೆ ಇವೆಯೋ ಅವರು ಶಾಸ್ತ್ರದ ಉಪದೇಶಧಾರಣ ಮಾಡಲು ಯೋಗ್ಯರಿದ್ದಾರೆ. ಕಿವಿಗಳು ಮತ್ತು ಮನಸ್ಸು ಇರುತ್ತಿದ್ದರೂ ಕೂಡ ಯಾರು ಧರ್ಮೋಪದೇಶ ಧಾರಣ ಮಾಡುವಲ್ಲಿ ಸಮರ್ಥರಿಲ್ಲ ಅವರು ಧರ್ಮದ ಇಚ್ಛೆಯಿಂದ ರಹಿತ, ಅಜ್ಞಾನಿ ಆತ್ಮರುಗಳು ಶುಭಾಶುಭ ವಿಚಾರವಿಲ್ಲದ ಮನರಹಿತ ಅಸಂಜ್ಞಿಯ ಸಮಾನರಿದ್ದಾರೆ, ಅವರಿಗೆ ಧರ್ಮಲಾಭವಾಗುವುದಿಲ್ಲ.

ಅದೇ ಪ್ರಕಾರ ಕರ್ಣೇಂದ್ರಿಯವಿದ್ದರೂ ಆ ಕಿವಿಗಳಿಂದ ಧರ್ಮೋಪದೇಶ ರೂಪದ ಅಮೃತ ಪಾನ ಮಾಡಲಾಗುವುದಿಲ್ಲವೋ ಅವರು ಕಿವಿಗಳಿಂದ ರಹಿತ ಚತುರಿಂದ್ರಿಯ ಸಮಾನರಿದ್ದಾರೆ. ಅದರಿಂದ ಯಾರು ಕಿವಿ ಮತ್ತು ಮನಸ್ಸಿನ ಧಾರಕರಾದ ಶ್ರೋತಾರರಿದ್ದಾರೆ ಅವರು ತಮ್ಮ ತಮ್ಮ ಪರಿಣತಿಯ ಅನುಸಾರ ಫಲವನ್ನು ಪಡೆಯುತ್ತಾರೆ. ಕೆಲವು ಜೀವರುಗಳಂತೂ ಸಭೆಯಲ್ಲಿ ಕುಳಿತು ಶಾಸ್ತ್ರದ ಉಪದೇಶವನ್ನಾಲಿಸಿ ಒಳ್ಳೆಯ ಭಾವನೆ ಮಾಡುತ್ತ ಪುಣ್ಯಬಂಧದಿಂದ ಶ್ರೇಷ್ಠ ಸುಫಲದ ಭೋಕ್ತೃಗಳಾಗುತ್ತಾರೆ. ಅಂಥ ಭವ್ಯಾತ್ಮರುಗಳನ್ನು ಶುಭ ಶ್ರೋತೃಗಳು ಎನ್ನಲಾಗುತ್ತದೆ. ಯಾವ ಕೆಲವು ಜೀವರುಗಳು ಶಾಸ್ತ್ರದ ಧರ್ಮೋಪದೇಶವನ್ನಾಲಿಸಿ ಮಲಿನ ಭಾವ ಮಾಡಿ ಪಾಪಫಲದ ಭೋಕ್ತೃವಾಗುತ್ತಾರೆ. ಅವರನ್ನು ಅಶುಭ ಶ್ರೋತೃವೆನ್ನಲಾಗಿದೆ.

ಈ ಪ್ರಕಾರ ಶುಭ-ಅಶುಭವೆಂಬ ಎರಡು ಪ್ರಕಾರದ ಶ್ರೋತಾರರ ವರ್ಣನೆ ಮಾಡಲಾಯಿತು.

ಯಾವ ಶ್ರೋತೃಗಳಲ್ಲಿ ಎಂಟು ಗುಣಗಳಿರುತ್ತವೆ ಅವರು ತಮ್ಮ ಕಲ್ಯಾಣ ಮಾಡಿಕೊಳ್ಳುತ್ತಾರೆ. ಈಗ ಶ್ರೋತೃವಿನ ಆ ಎಂಟು ಗುಣಗಳನ್ನು ಹೇಳುತ್ತಾರೆ,-

**ವಾಂಛಾ ಸವಣಗ್ಗಹಣಂ, ಧಾರಣ ಸಮ್ಮಣ ಪುಚ್ಛ ಉತ್ತರಾಯ ।**
**ಣಿಚ್ಛಯ ಯೇ ವಸುಭೇಯೇ, ಸೋತಾ ಗುಣ ಸಗ್ಗಶಿವ ದೇಈ ॥೮॥**

**ಗಾಥಾರ್ಥ** :- ಇಚ್ಛೆ/ಬಯಕೆ, ಆಲಿಸುವುದು, ಗ್ರಹಣ ಮಾಡುವುದು, ಧಾರಣ ಮಾಡುವುದು, ಸ್ಮರಣೆಯಲ್ಲಿಟ್ಟುಕೊಳ್ಳುವುದು, ಪ್ರಶ್ನೆ ಕೇಳುವುದು, ಉತ್ತರ ನೀಡುವುದು, ನಿಶ್ಚಯ ಮಾಡುವುದು - ಇವು ಶ್ರೋತೃವಿನ ಎಂಟು ಭೇದ ಹೇಳಿದ್ದಾರೆ. ಈ ಗುಣಗಳು ಸ್ವರ್ಗ-ಮೋಕ್ಷವನ್ನು ಕೊಡುತ್ತವೆ.

**ಭಾವಾರ್ಥ** :- ಯಾರು ನಿಕಟ ಸಂಸಾರಿ, ಧರ್ಮಾತ್ಮಾ, ಶುಭ ಶ್ರೋತೃವಿದ್ದಾರೆ ಅವರಲ್ಲಿ ಈ ಎಂಟು ಗುಣಗಳಿರುತ್ತವೆ. ಅವನ್ನು ಈಗ ಹೇಳುತ್ತಾರೆ,-

೧) ಯಾವ ಶಾಸ್ತ್ರವನ್ನು ಸ್ವಯಂ ಆಲಿಸುತ್ತಾನೆ, ಅದರ ಕಥನದ ಪ್ರಶಂಸೆಯನ್ನು ಪುನಃ ಪುನಃ ಮಾಡುವುದು. ಯಾವಶಾಸ್ತ್ರಗಳಲ್ಲಿ ಒಳ್ಳೆಯ, ತತ್ತ್ವಜ್ಞಾನರೂಪ ಪುಣ್ಯ ಫಲದಾಯಕ ಕಥನವಿದೆ, ಅತ್ಯಂತ ಹರುಷಪೂರ್ವಕ ಆ ಶಾಸ್ತ್ರವನ್ನು ಆಲಿಸುವ ಅಭಿಲಾಷೆಯನ್ನು ಇಟ್ಟುಕೊಳ್ಳುವುದು, ಹೇಗೆ ಯಾವುದಾದರೂ ವಸ್ತುವು ತಮಗೆ ಒಳ್ಳೆಯದೆನಿಸುತ್ತದೆ

ಅಥವಾ ಸ್ವಯಂ ಆಲಿಸಿ ಯಾವುದಾದರೂ ವಾರ್ತೆಯು ಪ್ರಿಯವೆನಿಸುತ್ತದೆ, ಅದರ ಪ್ರಶಂಸೆಯನ್ನು ಮತ್ತೆ ಮತ್ತೆ ಮಾಡುತ್ತಾರೆ, ಅದನ್ನು ಪುನಃ ಪುನಃ ನೋಡುವ ಅಭಿಲಾಷೆಯನ್ನು ಇಟ್ಟುಕೊಳ್ಳುತ್ತಾರೆ ಮತ್ತು ತಮಗೆ ಪ್ರಿಯವೆನಿಸದಿರುವುದರ ಪ್ರಶಂಸೆಯನ್ನು ಮಾಡುವುದಿಲ್ಲ ಮತ್ತು ನೋಡುವ-ಕೇಳುವ ಅಭಿಲಾಷೆಯೂ ಇರುವುದಿಲ್ಲ; ಆದುದರಿಂದ ಧರ್ಮಾತ್ಮರಾದ ಶ್ರೋತೃಗಳಿಗೆ ಶಾಸ್ತ್ರವನ್ನಾಲಿಸುವ ಅಭಿಲಾಷೆ ಇರುವುದು ವಾಂಛಾ ಗುಣವಿದೆ.

೨) ಯಾರು ಯಾವ ವಸ್ತುವನ್ನು ತಮ್ಮ ಸಲುವಾಗಿ ಹಿತಕಾರಿಯೆಂದು ತಿಳಿಯುತ್ತಾರೆ, ಅವರು ಅದರ ಚರ್ಚೆಯನ್ನು ಆಲಿಸಿ ಸ್ವಯಂ ಹರ್ಷಿತರಾಗುತ್ತಾರೆ. ಆದುದರಿಂದ ಹರ್ಷದೊಂದಿಗೆ ಶಾಸ್ತ್ರವನ್ನು ಆಲಿಸಿ ತಮ್ಮ ಭವವನ್ನು ಸಫಲವೆಂದು ಮನ್ನಿಸುವುದು ಶ್ರವಣ ಗುಣವಿದೆ.

೩) ಯಾವ ವಸ್ತುವನ್ನು ಯಾರು ಸ್ವಯಂ ತಮಗೆ ಹಿತಕಾರಿಯೆಂದು ತಿಳಿಯುತ್ತಾರೆ. ಅದನ್ನು ಅಂಗೀಕಾರ ಮಾಡುವ ಉಪಾಯವನ್ನೂ ಮಾಡುತ್ತಾರೆ. ಅದೇ ಪ್ರಕಾರ ಯಾರು ಈ ಧರ್ಮವನ್ನು ಹಿತಕಾರಿಯೆಂದು ತಿಳಿಯುತ್ತಾರೆ, ಅವರು ಅದರ ಕಥೆಯನ್ನು ಕೇಳಿ ಅದರ ಅಂಗೀಕಾರ ಮಾಡುತ್ತಾರೆ ಅದು ಗ್ರಹಣ ಗುಣವಿದೆ.

೪) ಯಾವ ಪ್ರಕಾರ ವಿವೇಕವಂತರು ಅನೇಕ ಮಾತುಗಳನ್ನು ಆಲಿಸುತ್ತಾರೆ. ಅವುಗಳಲ್ಲಿನ ಯಾವ ಮಾತುಗಳು ಸ್ವಯಂ ತಮಗೆ ಹಿತಕರವೆನಿಸುತ್ತವೆ ಲಾಭದಾಯಕವೆನಿಸುತ್ತವೆ ಅವುಗಳನ್ನು ಸ್ಮರಣೆಯಲ್ಲಿಟ್ಟುಕೊಳ್ಳುತ್ತಾರೆ ಅದೇ ಪ್ರಕಾರ ಧರ್ಮಾತ್ಮಾ ಶ್ರೋತೃಗಳು ಯಾವ ಉಪದೇಶದಿಂದ ತಮ್ಮದು ಒಳ್ಳೆಯದಾಗುತ್ತದೆಯೆಂದು ತಿಳಿಯುತ್ತಾರೆ, ಅದನ್ನು ಸರಿಯಾಗಿ ಸ್ಮರಣೆಯಲ್ಲಿಟ್ಟುಕೊಳ್ಳುತ್ತಾರೆ, ಅದು ಧಾರಣಾ ಗುಣವಿದೆ.

೫) ತಮ್ಮ ಸಲುವಾಗಿ ಯಾವ ವಸ್ತುವನ್ನು ಸುಖಕಾರಿಯೆಂದು ತಿಳಿಯುತ್ತಾರೆ, ಅದನ್ನು ವಿವೇಕವಂತರು ಮೇಲಿಂದ ಮೇಲೆ ನೆನಪಿಗೆ ತಂದುಕೊಳ್ಳುತ್ತಿರುತ್ತಾರೆ; ಅದೇ ಪ್ರಕಾರ ಧರ್ಮಾತ್ಮಾ ಶ್ರೋತೃಗಳು ತಮ್ಮ ಸಲುವಾಗಿ ಯಾವ ಉಪದೇಶವು ಹಿತಕಾರಿಯೆಂದು ತಿಳಿಯುತ್ತಾರೆ ಅದನ್ನು ತಿರು-ತಿರುಗಿ ಸ್ಮರಿಸಿಕೊಳ್ಳುತ್ತ ಅದರ ಚರ್ಚೆ ಮಾಡುತ್ತಾರೆ. ಅದು ಸ್ಮರಣೆಯ ಗುಣವಿದೆ.

೬) ಹೇಗೆ ಯಾವನಿಗೋ ಯಾವುದೋ ವಸ್ತುವಿನ ಇಚ್ಛೆಯು ಬಹಳಷ್ಟು ಇದ್ದರೆ, ಅವನು ಅದರ ಕುರಿತಾಗಿ ಪುನಃ ಪುನಃ ವಿಚಾರಿಸುತ್ತಾನೆ; ಹಾಗೆಯೇ ಧರ್ಮಚರ್ಚೆಯು ಅತ್ಯಂತ ಪ್ರಿಯವೆನಿಸುವ ಕಾರಣ ಧರ್ಮಾತ್ಮಾ ಶ್ರೋತೃವು ಪುನಃ ಪುನಃ ಪ್ರಶ್ನೆ ಮಾಡುತ್ತಾನೆ, ಅದು ಪ್ರಶ್ನ ಗುಣವಿದೆ.

೭) ಯಾವ ಪ್ರಕಾರ ಯಾರಾದರೂ ಯಾವುದೇ ವಿಷಯದ ಕುರಿತಾಗಿ ವಿಚಾರಿಸಿದರೆ, ಅದನ್ನು ತಿಳಿದಂಥವರು ಅದರ ಉತ್ತರ ನೀಡುತ್ತಾರೆ; ಅದೇ ಪ್ರಕಾರ ತಾವು ಧರ್ಮಕಥೆ, ತತ್ತ್ವಜ್ಞಾನ ಮೊದಲಾದವುಗಳ ಬಗ್ಗೆ ತಿಳಿಯುತ್ತಿದ್ದರೆ ಆ ಪ್ರಶ್ನೆಗಳ ಉತ್ತರ ನೀಡುವುದು ಅದರ ಉತ್ತರ ಗುಣವಿದೆ.

೮) ಹೇಗೆ ಯಾವುದೋ ವಸ್ತುವು ತಮ್ಮ ಕೈಯಲ್ಲಿ ಬಂದು ಬಿಟ್ಟರೆ ಅದನ್ನು ಒಂದು ವೇಳೆ ಹಿತಕರವೆಂದು ತಿಳಿಯುತ್ತಿದ್ದರೆ, ಅದನ್ನು ಯತ್ನದಿಂದ ದೃಢವಾಗಿ ಇಟ್ಟುಕೊಳ್ಳುತ್ತಾನೆ. ಹಾಗೆಯೇ ಸಂಸಾರದಲ್ಲಿ ಸುತ್ತುತ್ತ-ಸುತ್ತುತ್ತ ಉತ್ತಮ ಧರ್ಮದ ಪ್ರಾಪ್ತಿಯಾಗಿರುವುದನ್ನು ತಿಳಿದುಕೊಂಡು, ಮಹಾಯತ್ನದಿಂದ ದೃಢನಾಗುತ್ತ ಧರ್ಮವನ್ನು ಕಾಯ್ದುಕೊಳ್ಳುವುದು ಅದು ಶುಭ ಶ್ರೋತೃವಿನ ನಿಶ್ಚಯಗುಣವಿದೆ.

ಈ ಪ್ರಕಾರ ಇವು ಎಂಟು ಗುಣಸಹಿತ ಹೃದಯ ಸಂಪನ್ನ ಶ್ರೋತೃವು ಮೋಹ ಪಾಶದಿಂದ ಹೊರಬರುವಂಥ ಮೋಕ್ಷಾಭಿಲಾಷೆಯುಳ್ಳವನಿದ್ದಾನೆಂದು ತಿಳಿಯುವುದು. ಇಂಥ ಶ್ರೋತೃವಿನ ಒಳಿತಿನ ಸಲುವಾಗಿ ಈ ಭಾವಗಳನ್ನು ಹೇಳಿದ್ದಾರೆ.

ಮುಂದೆ ವಕ್ತಾರನ ಗುಣಗಳನ್ನು ಹೇಳುತ್ತಾರೆ. ಈ ಗುಣ ಸಹಿತ ಸುಖದಾಯಕ ವಕ್ತಾರನು ಶ್ರೋತೃಗಳ ಕಲ್ಯಾಣ ಮಾಡುತ್ತಾನೆಂಬುದನ್ನು ಹೇಳುತ್ತಾರೆ,-

**ಸಮ ದಮ ಧರ ಬಹುಣಾಣೀ ಸಹುಹಿತ ಲೋಕೋಯಭಾವವೇತ್ತಾಯೇ ।**

**ಪ್ರಿಕ್ಷ ಖಿಮಯ ಬಿಯರಾಓ ಸಿಸಹಿತ ಇಚ್ಛೋಯ ಏವ ಗುರು ಪುಜೋ ॥೯॥**

**ಗಾಥಾರ್ಥ ಃ-** ಸಮತಾ ಸಹಿತ, ಮನ-ಇಂದ್ರಿಯಗಳನ್ನು ಜಯಿಸುವಂಥ-ಇವೆರಡರ ಧಾರಕ ಅರ್ಥಾತ್ ಶಮ ಹಾಗೂ ದಮದಿಂದ ಸಹಿತನಿರಬೇಕು, ವಿಶೇಷ ಜ್ಞಾನಿಯಿರಬೇಕು; ಎಲ್ಲರಿಗೂ ಸುಖದಾಯಕ, ಲೌಕಿಕ ಕಲೆಗಳ ವೇತ್ತಾರನು, ಪ್ರಶ್ನೆ ಕೇಳುವಂಥವರ ಮೇಲೆ ಕ್ಷಮಾಯುಕ್ತನಾಗಿ ಉತ್ತರಿಸುವಂಥವನಿರಬೇಕು, ವೀತರಾಗಿಯಿರಬೇಕು, ಶಿಷ್ಯರಿಗೆ ಒಳ್ಳೆಯ ಗತಿಯ ಬಯಕೆಯುಳ್ಳವನಿರಬೇಕು-ಅಂಥ ಗುರುವೇ ಪೂಜ್ಯನಿದ್ದಾನೆ.

**ಭಾವಾರ್ಥ ಃ-** ಗುರುವು ಇಂಥ ಉಪದೇಶ ದಾತೃವಿದ್ದರೇನೆ ಶಿಷ್ಯರ ಕಲ್ಯಾಣವಾಗುವುದು. ಅದನ್ನೇ ಹೇಳುತ್ತಾರೆ,-

೧. ಮೊದಲಂತೂ ಸಮತೆಯ ಭಾವದಿಂದ ಸಹಿತವಾದ ಮೂರ್ತಿಯಾಗಿರಬೇಕು. ಉಪದೇಶ ದಾತೃ ಗುರುವಿನ ಮುದ್ರೆಯು ಒಂದುವೇಳೆ ಭಯಾನಕವಿದ್ದರೆ, ಸಭೆಯ ಜನರಿಗೆ ಭಯವು ಉತ್ಪನ್ನವಾಗುವುದರಿಂದ ಅಂಥವರ ಶಿಷ್ಯರಿಗೆ ಜ್ಞಾನಲಾಭವಾಗುವುದಿಲ್ಲ. ಮನಸ್ಸಿನಲ್ಲಿ ಧರ್ಮಸ್ನೇಹದಿಂದ ಹರ್ಷದ ಉತ್ಪತ್ತಿಯಾಗುವುದಿಲ್ಲ. ಹೇಗೆ ಸಿಂಹದ್ದು ಭಯಾನಕ ಆಕಾರವಿರುವ ಕಾರಣ ಕಾನನದ ಪಶುಗಳೆಲ್ಲವು ಅದಕ್ಕೆ ಭಯಪಡುತ್ತವೆ ಮತ್ತು ಸಿಂಹಾಸನದ ಮೇಲೆ ಕುಳಿತುಕೊಳ್ಳುವ ದೊರೆಯು ಕ್ರೋಧಸಹಿತ ಭಯಾನಕನಾಗಿದ್ದರೆ ಅವನನ್ನು ನೋಡಿ ಸೇವಕರೆಲ್ಲರೂ ಅವನನ್ನು ಭಯಾನಕನೆಂದು ತಿಳಿದು ಸುಖದ ತ್ಯಾಗ ಮಾಡಿ ಭಯ ಭೀತರಾಗುತ್ತಾರೆ. ಅಂತೆಯೇ ಸಭೆಯ ನಾಯಕ ಉಪದೇಶ ದಾತೃವು ಶಾಂತ ಸ್ವಭಾವದವನಾಗಿರಬೇಕು. ಅವನ ನಿಮಿತ್ತ ಪಡೆದು ಶಿಷ್ಯರುಗಳಿಗೆ ಸಂತೋಷದ ಉತ್ಪತ್ತಿಯಾಗಬೇಕು.

೨. ಒಂದುವೇಳೆ ಉಪದೇಶಕೊಡುವಂಥ ಗುರುವು ಸಂಯಮಿ, ಇಂದ್ರಿಯ-ಮನಸ್ಸುಗಳನ್ನು ಜಯಸುವಂಥವನಾಗಿದ್ದರೆ ಸಭೆಯ ಜನರಿಗೂ ಸಂಯಮದ ಪ್ರಾಪ್ತಿಯಾಗುವುದು. ಒಂದುವೇಳೆ ಉಪದೇಶ ದಾತೃವು ವಿಷಯಗಳ ಲೋಲುಪಿಯಾಗಿದ್ದರೆ ಸಭಾ ಜನರು ಕೂಡ ಅಸಂಯಮಿಗಳಾಗಿ ಹೋಗುವರು. ಅದರಿಂದ ಗುರುವು ಸಂಯಮಿಯಾಗಿರಬೇಕು.

೩. ಉಪದೇಶ ಕೊಡುವಂಥವನು ವಿಶೇಷ ಜ್ಞಾನಿಯಾಗಿದ್ದರೆ ಸಭೆಯ ಜನರಿಗೂ ಜ್ಞಾನದ ಪ್ರಾಪ್ತಿಯಾಗುವುದು. ಉಪದೇಶ ಕೊಡುವಂಥವನು ಅಜ್ಞಾನಿಯಾಗಿದ್ದರೆ ಸಭಿಕರು ಕೂಡ ಅಜ್ಞಾನಿಯಾಗಿ ಉಳಿಯುವರು ಹೇಗೆ ದೊರೆಯು ಧನಾಢ್ಯನಿದ್ದರೆ ಅವನ ಸೇವಕರು ಕೂಡ ಧನವಂತರಾಗುತ್ತಾರೆ ಮತ್ತು ದೊರೆಯು ಧನರಹಿತನಾಗಿದ್ದರೆ ಅವನ ಸೇವಕರೂ ದರಿದ್ರರಾಗುತ್ತ ದುಃಖ ಪಡೆಯುತ್ತಾರೆ. ಅದರಿಂದ ಉಪದೇಶ ಕೊಡುವಂಥ ಗುರುಗಳು ಜ್ಞಾನಿಯಾಗಿರಬೇಕು.

೪. ಉಪದೇಶ ಕೊಡುವಂಥವನು ಎಲ್ಲ ಜೀವರುಗಳಿಗೆ ಹಿತಕಾರಕನಾಗಿರಬೇಕು. ಅವನು ಶಿಷ್ಯರುಗಳಿಗೆ ಪರಭವದಲ್ಲಿ ಸುಖವಾಗಲೆಂದು ಬಯಸುತ್ತಿದ್ದರೆ ಒಳ್ಳೆಯ ಉಪದೇಶವಿತ್ತು ಎಲ್ಲರ ಒಳಿತು ಮಾಡುವನು. ಉಪದೇಶ ಕೊಡುವಂಥವನು ಒಂದುವೇಳೆ ಶಿಷ್ಯ ಜನರ ಹಿತಕಾರಕನಿಲ್ಲದಿದ್ದರೆ ಅವನು ತನ್ನ ಹಿತ ಸಾಧಿಸುತ್ತ ಎಂದರೆ ತನ್ನ ಮಾನ-ಪ್ರತಿಷ್ಠೆಯಾಗಬೇಕು, ತನ್ನ ಪೂಜೆಯಾಗಬೇಕು, ಅನ್ಯ ಜನರು ತನ್ನ ಕಾಲಿಗೆರಗಬೇಕು, ಇತರರ ಧನವು ತನ್ನ ಮನೆಗೆ ಬರುವಂಥ ಉಪದೇಶ ನೀಡಿ ಅವನು ಶಿಷ್ಯರನ್ನು ವಂಚಿಸಿ ವಿಶ್ವಾಸವನ್ನು ಉತ್ಪನ್ನ ಮಾಡುತ್ತ ಕಷಾಯ ಸಹಿತ ಉಪದೇಶ ಕೊಡುತ್ತಾನೆ. ಶಿಷ್ಯರ ಜೀವನವು ಹಾಳಾಗಿ ಹೋದರೂ ಅದರಿಂದ ಇವನಿಗೆ ಯಾವ ವ್ಯತ್ಯಾಸವಾಗುವುದಿಲ್ಲ. ಅಂಥ ಗುರುವಿನ ಉಪದೇಶದಿಂದ ಜೀವರುಗಳ ಕಲ್ಯಾಣವಾಗುವುದಿಲ್ಲ. ಅದರಿಂದ ಗುರುವು ಶಿಷ್ಯರಿಗೆ ಹಿತಕಾರಕನಾಗಿರಬೇಕು.

೫. ಉಪದೇಶ ಕೊಡುವಂಥ ಗುರುವು ಲೌಕಿಕ ವ್ಯವಹಾರವನ್ನು ತಿಳಿದವನಾಗಿದ್ದರೆ ಲೋಕಪೂಜ್ಯ ಪದವನ್ನು ತಿಳಿಸಿಕೊಡುತ್ತಾನೆ. ಅವನು ಒಂದುವೇಳೆ ಲೌಕಿಕ ವ್ಯವಹಾರದ ತಿಳಿವಳಿಕೆಯಿಲ್ಲದವನಾಗಿದ್ದರೆ ಲೋಕವಿರುದ್ಧ ಉಪದೇಶ ನೀಡುವನು. ಅದರಿಂದ ಲೋಕನಿಂದೆಯಾಗುವುದು ಮತ್ತು ಶಿಷ್ಯರ ಕಲ್ಯಾಣವೂ ಆಗಲಾರದು. ಅದಕ್ಕಾಗಿ ಉಪದೇಶ ಕೊಡುವಂಥವನು ಲೋಕವ್ಯವಹಾರ ಬಲ್ಲವನಾಗಿರಬೇಕು.

೬. ಉಪದೇಶ ಕೊಡುವಂಥವನು ಇತರರ ಪ್ರಶ್ನೆಗಳನ್ನು ಆಲಿಸುವಲ್ಲಿ ಧೀರ-ವೀರನಾಗಿರಬೇಕು, ಉತ್ತರ ಕೊಡುವಂಥವನಿರಬೇಕು. ಅವನು ಒಂದುವೇಳೆ ಪ್ರಶ್ನೆಯನ್ನಾಲಿಸಿ ಕ್ರೋಧ ಮಾಡುತ್ತಿದ್ದರೆ - ಇತರರ ಪ್ರಶ್ನೆಗಳಿಗೆ ಉತ್ತರಿಸುವ ಜ್ಞಾನವು ಅವನಲ್ಲಿ ಇಲ್ಲದೆ ಹೋದರೆ ಶ್ರೋತೃಗಳು ಭಯದಿಂದ ಪ್ರಶ್ನೆ ಮಾಡಲಾರರು ಎಂದರೆ ಅವರು ಸಂದೇಹ ಸಹಿತ ಅಜ್ಞಾನಿಗಳಾಗಿ ಉಳಿಯುವರು. ಶುದ್ಧ ಶ್ರದ್ಧೆಯುಳ್ಳವರಾಗುವುದಿಲ್ಲ - ಸಮ್ಯಗ್ದೃಷ್ಟಿಗಳಾಗುವುದಿಲ್ಲ. ಅದರಿಂದ ಉಪದೇಶ ಕೊಡುವಂಥವನು ಇತರರ ಪ್ರಶ್ನೆಗಳನ್ನಾಲಿಸಿ ಸಮತೆಯ ಭಾವದೊಂದಿಗೆ ಉತ್ತರಿಸುವಂಥ, ವಿಶೇಷ ನಯ-ಯುಕ್ತಿ ಸಹಿತ ಜ್ಞಾನಿಯಾಗಿರಬೇಕು.

೭. ಉಪದೇಶ ಕೊಡುವಂಥ ಗುರುವು ವೀತರಾಗಿ ಅಥವಾ ವೀತರಾಗ ಭಾವದ ಶ್ರದ್ಧೆಯುಳ್ಳವನಾಗಿರಬೇಕು. ಒಂದುವೇಳೆ ಅವನು ರಾಗೀ-ದ್ವೇಷಿಯಾಗಿದ್ದರೆ ಕ್ರೋಧ, ಮಾನ, ಮಾಯೆ, ಲೋಭದ ವಶನಾಗಿ ಅಶುದ್ಧ ಉಪದೇಶ ಕೊಡುವನು. ಯಾರೋ ತನ್ನ ಸೇವೆ ಶುಶ್ರೂಷೆ ಮಾಡುತ್ತಿದ್ದರೆ, ಅವರಲ್ಲಿ ರಾಗ ಮಾಡಿ ಉಪದೇಶ ಕೊಡಬಹುದಾಗಿದೆ ಮತ್ತು ಯಾರು ತನ್ನ ಆಜ್ಞೆಯನ್ನು ಮನ್ನಿಸುವುದಿಲ್ಲ ಅವರ ಮೇಲೆ ಕ್ರೋಧ ಮಾಡಿ ಉಪದೇಶ ಹೇಳಬಹುದಾಗಿದೆ. ಯಾರಿಂದ ಧನದ ಲಾಭವಾಗುವುದು ಅವರನ್ನು ನಿಜವಾದ ಭಕ್ತರೆಂದು ಹೇಳಬಹುದಾಗಿದೆ. ಈ ಪ್ರಕಾರ ಕೆಲವರಲ್ಲಿ ರಾಗ, ಕೆಲವರಲ್ಲಿ ದ್ವೇಷ ಮಾಡುತ್ತ ಅವನು ಯಥಾವತ್ ಉಪದೇಶ ಕೊಡದಿರುವುದರಿಂದ ಶಿಷ್ಯರಿಗೆ ಧರ್ಮಲಾಭವಾಗುವ ಸಾಧ್ಯತೆಯಿಲ್ಲ. ಅದರಿಂದ ಉಪದೇಶ ಕೊಡುವಂಥವನು ಧರ್ಮಧಾರಕ ವೀತರಾಗಿಯಾಗಿರಬೇಕು.

೮. ಉಪದೇಶ ಕೊಡುವಂಥ ಗುರುವು ಒಂದು ವೇಳೆ ಶಿಷ್ಯರಿಗೆ ಸ್ವರ್ಗ-ಮೋಕ್ಷವಾಗುವುದನ್ನು ಬಯಸುತ್ತಿದ್ದರೆ ನಿರ್ದೋಷ ಉಪದೇಶವಿತ್ತು ಒಳಿತು ಮಾಡುವನು; ಆದರೆ ಅವನು ಶಿಷ್ಯರುಗಳ ಒಳಿತನ್ನು ಬಯಸದೇ ಹೋದರೆ ಮಿಥ್ಯಾ ಉಪದೇಶವನ್ನಿತ್ತು ಶಿಷ್ಯರ ಕೇಡು ಮಾಡುವಂಥವನಾಗುವನು. ಅದರಿಂದ ಉಪದೇಶ ಕೊಡುವಂಥ ಗುರುವು ಶಿಷ್ಯರ ಸಲುವಾಗಿ ಒಳ್ಳೆಯ ಗತಿಯನ್ನಿಚ್ಛಿಸುವಂಥವನಿರಬೇಕಾಗುವುದು.

ಉಪದೇಶ ಕೊಡುವಂಥ ಗುರುವು ಉಪರ್ಯುಕ್ತ ಅನೇಕ ಗುಣಗಳಿಂದ ಕೂಡಿದವನಾಗಿರಬೇಕು. ಅವನೇ ಒಳ್ಳೆಯ ಶ್ರೋತಾರರ ಗುರುವಿದ್ದಾನೆ. ಸಮ್ಯಗ್ದೃಷ್ಟಿಗಳ ಗುರುವಿದ್ದಾನೆ. ಇಂಥ ಗುಣ ಸಹಿತ ಗುರುವು ಎಲ್ಲರಿಗೂ ದೊರಕುವಂತಾಗಲಿ ಮತ್ತು ರಾಗ-ದ್ವೇಷದಿಂದ ಕೂಡಿದ ಗುರುವು ಯಾವ ಶತ್ರುವಿಗೂ ದೊರಕದಿರಲೆಂಬ ಭಾವನೆಯು ನಮ್ಮದಿದೆ.

ಈ ಪ್ರಕಾರ ಶ್ರೀ ಸುದೃಷ್ಟಿತರಂಗಿಣಿ ಗ್ರಂಥದಲ್ಲಿ ಶ್ರೋತಾರ - ವಕ್ತಾರರ ಸಾಮಾನ್ಯ ಸ್ವರೂಪವೆಂಬ ಹೆಸರಿನ ಎರಡನೆಯ ಪರ್ವವು ಪೂರ್ಣವಾಯಿತು.

★★★★★

## ೩ : ಮೂರನೆಯ ಪರ್ವ
## ಗ್ರಂಥ ರಚನೆಯ ಉದ್ದೇಶ

ಈ ಪ್ರಕಾರ ಶ್ರೋತಾರ ಮತ್ತು ವಕ್ತಾರರ ಶುಭಾಶುಭ ಸ್ವಭಾವ ಹೇಳಲಾಯಿತು. ಇವರೊಳಗಿಂದ ಶುಭ ಶ್ರೋತಾರ ಮತ್ತು ವಕ್ತಾರನ ಗುಣಗಳು ಯಾರಲ್ಲಿ ಇವೆ ಅವರು ಈ ಗ್ರಂಥವನ್ನು ಓದುವುದು, ಧಾರಣ ಮಾಡುವುದು. ಈ ಗ್ರಂಥದಲ್ಲಿ ಅನೇಕ ರಚನೆಯ ರೂಪ ಕಥನಗಳಿವೆ. ಈ ಗ್ರಂಥದಲ್ಲಿ ಯಾವ ಅರ್ಥವಿದೆ ಅದಂತೂ ಅನಾದಿನಿಧನವಿದೆ. ಯಾರಿಂದಲೂ ಮಾಡಿರುವದಂಥದ್ದಿರುವುದಿಲ್ಲ. ತತ್ತ್ವಗಳ ಸ್ವರೂಪವನ್ನು ಕೇವಲಿ ಭಗವಂತರು ಹೇಗೆ ಹೇಳಿದ್ದಾರೆ ಹಾಗೆಯೇ ಇದೆ. ಅಸಂಖ್ಯ ಜಿನೇಂದ್ರ ಕೇವಲಜ್ಞಾನಿಗಳು ಅನಾದಿಯಿಂದ ತತ್ತ್ವಗಳ ಸ್ವರೂಪವನ್ನು ಹೇಗೆ ಹೇಳುತ್ತ ಬಂದಿದ್ದಾರೆ ಹಾಗೆಯೇ ಅರ್ಥವು ಇದರಲ್ಲಿ ಇದೆ.

ಈ ಪ್ರಕಾರ ಈ ಗ್ರಂಥದಲ್ಲಿ ಅರ್ಥವಂತೂ ಕವಿರಾಜರ ಇಚ್ಛಾನುಸಾರ ಇರುವುದಿಲ್ಲ ಆದರೆ ಅಕ್ಷರಗಳ ಸಂಯೋಗವು ಕವಿಗಳ ಬುದ್ಧಿಯ ಅನುಸಾರವಿದೆ. ಅರ್ಥವಂತೂ ಯಾವನೋ ವಾದಿಯ ಮೂಲಕ ಖಂಡಿತಗೊಳಿಸುವ ಸಾಧ್ಯತೆ ಇಲ್ಲ. ಏಕೆಂದರೆ ಅದಂತೂ ಸರ್ವಜ್ಞ ಕೇವಲಜ್ಞಾನಿಯ ವಚನಗಳ ಅನುಸಾರವಿದೆ. ಅದನ್ನು ವಾದಿ ಹೀನಜ್ಞಾನಿಗಳು ಹೇಗೆ ಖಂಡಿತಗೊಳಿಸುವ ಸಾಧ್ಯತೆ ಇದೆ ? ಯಾವ ಪ್ರಕಾರ ಯಾವುದೋ ಒಂದು ಸ್ಥಂಭವನ್ನು ಕೋಟ್ಯಂತರ ಯೋಧರುಗಳ ಮೂಲಕ ನಿಲ್ಲಿಸಲಾಗಿದ್ದರೆ ಅದನ್ನು ಯಾವನೋ ಹಸ್ತಅಂಗರಹಿತ ರೋಗಿ, ದೀನ, ತುಚ್ಛ ಬಲದ ಧಾರಿಯಾದ ರಂಕ ಪುರುಷನು ಹೇಗೆ ಕಿತ್ತೆಸೆಯುವ ಸಾಧ್ಯತೆ ಇದೆ ? ಹಾಗೂ ಅಕ್ಷರಗಳ ಜೋಡಣೆಯಂತೂ ತುಚ್ಛ ಬುದ್ಧಿಗಳ ಯೋಗದ ಮೂಲಕ ಮಾಡಲಾಗಿದೆ. ಇದರಲ್ಲಿ ಯಾವುದೋ ದೋಷವು ಸಂಭವಿಸುವ ಸಾಧ್ಯತೆ ಇದೆ. ಏಕೆಂದರೆ ಸಾಮಾನ್ಯ ಬುದ್ಧಿಗಳಿಂದಲೇ ಅಕ್ಷರವನ್ನು ಜೋಡಿಸಲಾಗಿದೆ. ಆ ದೋಷದ ಸುಧಾರಣೆಯ ಸಲುವಾಗಿಯೂ ಉಪಾಯವನ್ನು ಯೋಜಿಸಲಾಗಿದೆ. ಮೊದಲಂತೂ ನಾನೂ ಕೂಡ ಇದನ್ನು ಪುನಃ ನೋಡಿಕೊಂಡು ಅಕ್ಷರಗಳನ್ನು ಸರಿಪಡಿಸುವೆನು. ಆದಾಗ್ಯೂ ಒಂದು ವೇಳೆ ಗ್ರಂಥದ ಪ್ರಚುರತೆಯಿಂದ ದೋಷವು ಉಳಿಯಬಹುದಾಗಿದೆ. ಹಾಗಾದ ಮೇಲೆ ಇನ್ನೊಂದು ನಿಮಿತ್ತ ಉಪಾಯವು ಇದೆ –

ಧರ್ಮಾತ್ಮರುಗಳಲ್ಲಿ ವಿನಂತಿಯ ರೂಪದಿಂದ ನಮ್ಮ ಮಾತು – ಯಾರು ವಿಶುದ್ಧ ಬುದ್ಧಿ, ಸಮ್ಯಕ್ ದೃಷ್ಟಿ, ನಿರ್ಮಲ ಬುದ್ಧಿಯ ಧಾರಕ, ಜಿನಾಜ್ಞೆಯ ರಹಸ್ಯಗಳನ್ನು ತಿಳಿಯುವಂಥವರು ವಾತ್ಸಲ್ಯ ಅಂಗದ ಧಾರಕರಾದ ಧರ್ಮಾತ್ಮಾ ಪುರುಷರಿದ್ದಾರೆ ಅವರಲ್ಲಿ ನಾನು ಹೀಗೆ ವಿನಂತಿಸಿಕೊಳ್ಳುತ್ತೇನೆ– ಓ ಪ್ರಭಾವನಾ ಅಂಗದ ಧಾರಕರಾದ ಧರ್ಮಾತ್ಮರುಗಳೇ ! ತಾವು ಸಜ್ಜನ ಅಂಗಧಾರೀ ಇರುವಿರಿ ಮತ್ತು ಇತರರ ತುಚ್ಛ ಗುಣಗಳ ಮೇಲೆಯೂ ಅನುರಾಗವಿರುವಂಥವರಿರುವಿರಿ. ಅದರಿಂದ ಈ ಕವಿರಾಜನು ತಮ್ಮಲ್ಲಿ ವಿನಂತಿ ಮಾಡುವುದೇನೆಂದರೆ ಈ ಗ್ರಂಥದ ರಚನೆಯಲ್ಲಿ ಒಂದು ವೇಳೆ ಎಲ್ಲಿಯಾದರೂ ಅರ್ಥ ಹಾಗೂ ಅಕ್ಷರ ಮಾತ್ರೆಗಳಲ್ಲಿ ಬುದ್ಧಿಯ ನ್ಯೂನ್ಯತೆಯಿಂದ ನಾನು ತಪ್ಪಿ ಹೋದರೆ ತಾವು ನನ್ನ ಮೇಲೆ ವಾತ್ಸಲ್ಯ ಭಾವವನ್ನಿಟ್ಟು ಅದನ್ನು ಶುದ್ಧ ಮಾಡುವುದು. – ಈ ವಿನಂತಿಯನ್ನು ಜಿನೇಂದ್ರ ದೇವರ ಆಜ್ಞೆಯ ಅನುಸಾರ ಧರ್ಮದ ಶ್ರದ್ಧೆ ಮಾಡುವಂಥ ತತ್ತ್ವಗಳ ಸ್ವರೂಪವನ್ನು ಯಥಾರ್ಥ ತಿಳಿಯುವಂಥ ಸಮ್ಯಕ್ ರುಚಿಯ ಧಾರಕರಲ್ಲಿ ಮಾಡಿದ್ದೇನೆ. ಈ ಪ್ರಕಾರ ಎಲ್ಲಿಯಾದರೂ ಛಂದಸ್ಸುಗಳ ಜೋಡಣೆಯಲ್ಲಿ, ಟೀಕೆ ಬರೆಯುವಲ್ಲಿ, ಅಕ್ಷರಗಳ ಲಲಿತತೆಯಲ್ಲಿ ಅಥವಾ ಸರಳತೆಯಲ್ಲಿ ಆಗದೇ ಹೋದರೆ ಛಂದಸ್ಸು ಕಲೆಯ ಜ್ಞಾನ ಸಂಪತ್ತನ್ನು ಧರಿಸಿರುವಂಥ ಭವ್ಯಾತ್ಮರು ಸರಳಗೊಳಿಸುವುದು. ತಾವು ಇಷ್ಟು ಉಪಕಾರ ಮಾಡಿ ಈ ಗ್ರಂಥದಲ್ಲಿ ಒಂದಾಗಿ ತಮ್ಮ ಧರ್ಮಾನುರಾಗವನ್ನು ಪ್ರಕಟ ಮಾಡಬೇಕು. ಹೀಗೆ ಸಜ್ಜನರಲ್ಲಿ ವಿನಂತಿ ಇದೆ. ಇನ್ನು ಉಳಿದ ಅಶುದ್ಧಿಯು ಈ ಪ್ರಕಾರ ಶುದ್ಧವಾಗುವುದು.

ಇಲ್ಲಿ ಯಾವನೋ ತರ್ಕ ಮಾಡುತ್ತಾನೆ - ಮೊದಲೂ ಕೂಡ ಜಿನಾಜ್ಞೆಯ ಅನುಸರಣೆ ಮಾಡುವಂಥ ಬಹಳಷ್ಟು ಗ್ರಂಥಗಳಿದ್ದವು ಅವುಗಳದೇ ಅಭ್ಯಾಸ ಮಾಡಬಹುದಾಗಿತ್ತು. ತಮಗೆ ಇಂಥ ಗಾಥೆ, ಛಂದಸ್ಸು ಸಹಿತ ದೊಡ್ಡ ಗ್ರಂಥ ರಚಿಸುವ ಅಧಿಕಾರಿಯಾದರೂ ಯಾವುದರ ಸಲುವಾಗಿ ಆಗುವುದಿತ್ತು ? ಎಂದರೆ ಮಾನ ಬುದ್ಧಿಯ ಯೋಗದಿಂದ ನೀವು ಈ ಗ್ರಂಥವನ್ನು ರಚಿಸಿದ್ದೀರಿ. ಆದರೆ ಇದರಿಂದ ನಿಮ್ಮ ಮನೋರಥವು ಪೂರ್ಣವಾಗುವುದು ಕಂಡು ಬರುತ್ತಿಲ್ಲ. ಏಕೆಂದರೆ ಗ್ರಂಥವು ದೊಡ್ಡದಿದೆ. ಇದರಲ್ಲಿ ದೋಷಗಳಾದರೆ ನಿಂದೆಯನ್ನೇ ಪಡೆಯುವಿರಿ. ಆದುದರಿಂದ ಗ್ರಂಥ ರಚನೆ ಮಾಡದೇ ಇರುತ್ತಿದ್ದರೆ ಒಳೆಯದಿತ್ತು.

ಅವರಿಗೆ ಹೇಳುತ್ತಾರೆ - ಓ ಸೋದರನೇ ! ಮಾನದ ಪೋಷಣೆಗಾಗಿ ಗ್ರಂಥಾರಂಭ ಮಾಡಿದ್ದೇವೆಂದು ತಾವು ಹೇಳುತ್ತಿರುವಿರಿ, ಆದರೆ ಜಿನಾಜ್ಞೆಯ ಅನುಸಾರ ಶ್ರದ್ಧೆಯುಳ್ಳವರು ಶಾಸ್ತ್ರ ಬರೆಯುವಲ್ಲಿ ಮಾನಾದಿ ಪ್ರಯೋಜನರೂಪ ಕಷಾಯಗಳನ್ನು ಯಾವುದೇ ರೂಪದಿಂದ ಮಾಡುವುದಿಲ್ಲ. ಈ ಕಾರ್ಯವನ್ನಂತೂ ಸಾತಿಶಯ ಪುಣ್ಯಬಂಧದ ನಿಮಿತ್ತ ಮಾಡಲಾಗಿದೆ.ಇದರಲ್ಲಿ ಮಾನದ ಪ್ರಯೋಜನವೇನೂ ಇಲ್ಲ.

ಪುನಃ ತರ್ಕಕರ್ತನು ಒಂದು ವೇಳೆ ಮಾನ-ಪ್ರಯೋಜನವಿರದಿದ್ದರೆ ಕೇವಲ ಪುಣ್ಯದ್ದೇ ಇಚ್ಛೆಯಾಯಿತು, ಆದರೆ ಮೊದಲಿನ ಶಾಸ್ತ್ರಗಳು ಅನೇಕವಿವೆ. ಅವುಗಳ ಸ್ವಾಧ್ಯಾಯ ಮಾಡಿ ಅರ್ಥದ ಧಾರಣ ಮಾಡುತ್ತಿದ್ದರೆ ಮಹಾ ಪುಣ್ಯದ ಸಂಚಯವಾಗುವುದಿಲ್ಲವೇನು.

ಅವರಿಗೆ ಹೇಳುತ್ತಾರೆ - ಎಲೈ ಸೋದರನೇ ! ತಾವು ಹೇಳಿರುವುದು ಸತ್ಯವಿದೆ ಆದರೆ ಉಪಯೋಗದ ಒಂದು ಸ್ವಭಾವವು ಎಂಥದ್ದಿರುತ್ತದೆ ಎಂದರೆ ಅದು ನವೀನ ವಸ್ತುವಿನಲ್ಲಿ ವಿಶೇಷ ಸ್ಥಿರತೆ ಹೊಂದುತ್ತದೆ. ನವೀನ ಗ್ರಂಥ ಜೋಡಣೆಯಲ್ಲಿ ಚಿತ್ತವು ವಿಶೇಷ ರೂಪದಿಂದ ಏಕಾಗ್ರವಾಗುತ್ತದೆ. ಆದುದರಿಂದ ಚಿತ್ತವು ವಿಶೇಷವಾಗಿ ತೊಡಗುವುದನ್ನು ಕಂಡು ಧರ್ಮಾನುರಾಗವು ಅಧಿಕವಾಗುತ್ತದೆ. ಧರ್ಮ ಧ್ಯಾನದಲ್ಲಿ ಕಾಲವು ವಿಶೇಷ ತೊಡಗುವುದರಿಂದ ಗ್ರಂಥ ರಚನೆಯ ವಿಚಾರ ಮಾಡಲಾಗಿದೆ. ಮಾನದ ಯಾವುದೇ ಪ್ರಯೋಜನವಿಲ್ಲ. ಮಾನವನ್ನಂತೂ ಸಂಸಾರದಲ್ಲಿ ದೀರ್ಘ ಕರ್ಮಸ್ಥಿತಿಯ ಧಾರಕ ಜೀವಗಳು, ಕಷಾಯಗಳಿಂದ ಪ್ರೇರಿತ ಮಿಥ್ಯಾದೃಷ್ಟಿ-ಮೋಹ ರಸದಲ್ಲಿ ನೆನೆದು ಹೋದ ಪ್ರಾಣಿಗಳು ಬಯಸುತ್ತಾರೆ. ಧರ್ಮಿಯು ಬಯಸುವುದಿಲ್ಲ ಎಂಬುದನ್ನು ತಿಳಿಯುವುದು.

**ಆಗ ತರ್ಕಕಾರ -** ಒಂದು ವೇಳೆ ಹೀಗೆ ಇದ್ದರೆ ಸರಿ ಇದೆ. ಆದರೆ ಗ್ರಂಥದಲ್ಲಿ ಅಶುದ್ಧಿಯಾದರೆ ಪಂಡಿತ ಜನರು ನಿಮ್ಮ ಬುದ್ಧಿಯ ನಿಂದೆ ಮಾಡುವರು. ಇದರಿಂದ ತಾವು ಹಾಸ್ಯಕ್ಕೆ ಗುರಿಯಾಗುವಿರಿ.

**ಸಮಾಧಾನ :-** ಸೋದರನೇ ! ಧರ್ಮ ಸೇವನೆಯಲ್ಲಿ ನಿಂದೆಯಾಗುವುದರದಂತೂ ಯಾವ ಕಾರ್ಯವೇ ಇರುವುದಿಲ್ಲ. ಧರ್ಮ ಕಾರ್ಯದ ನಿಂದೆ ಮಾಡುವಂಥ ಧರ್ಮ ಭಾವನೆರಹಿತ ಜೀವರುಗಳು ಯಾರಿದ್ದಾರೆ.

**ಆಗ ತರ್ಕಕರ್ತರು -** ಧರ್ಮ ಸೇವನೆ ಮಾಡುವುದರದಂತೂ ನಿಂದೆ ಆಗುವುದಿಲ್ಲ. ಆದರೆ ಗ್ರಂಥದಲ್ಲಿ ಅಶುದ್ಧಿಯನ್ನು ಕಂಡು ಪಂಡಿತರು ನಿಂದೆ ಮಾಡುವರು.

**ಅವರಿಗೆ ಹೇಳುತ್ತಾರೆ -** ಸೋದರನೇ ! ಪಂಡಿತರು ೧) ಧರ್ಮಾರ್ಥಿ ಪಂಡಿತ, ೨) ಮಾನಾರ್ಥಿ ಪಂಡಿತರೆಂದು ಎರಡು ಪ್ರಕಾರದವರಿರುತ್ತಾರೆ. ಈ ಎರಡೂ ಪ್ರಕಾರದ ಪಂಡಿತರುಗಳ ಅಂತರಂಗದ ಸ್ವಭಾವವು ಭಿನ್ನ-ಭಿನ್ನವಿದೆ. ಇವರಿಬ್ಬರೂ ಪಂಡಿತರು ಘನ, ತನ ಸಮಾನರಿದ್ದಾರೆಂದು ತಿಳಿಯುವುದು.

ಹೇಗೆ ಘನ ಅರ್ಥಾತ್ ಮೇಘಗಳು ಅಂತರಂಗದಲ್ಲಿಯಂತೂ ನಿರ್ಮಲ ಜಲದಿಂದ ತುಂಬಿಕೊಂಡಿರುತ್ತವೆ. ಆದರೆ ಮೇಲು ನೋಟದಲ್ಲಿ ಶ್ಯಾಮರೂಪವಿರುತ್ತವೆ. ಅದೇ ಪ್ರಕಾರ ಯಾರ ಅಂತರಂಗವಂತೂ ಶುದ್ಧ, ಮಹಾ

ನಿರ್ಮಲ, ಧರ್ಮಸ್ನೇಹರೂಪದ ಜಲದಿಂದ ತುಂಬಿಕೊಂಡಿದೆ. ಆದರೆ ಮೇಲುನೋಟದಲ್ಲಿ ಸಂಸಾರ ದಶೆಯಿಂದ ಉದಾಸೀನ, ಸಂಯಮಿ, ದೇಹದಿಂದ ಕ್ಷೀಣ, ಮಲಿನ, ಶ್ಯಾಮದಂತೆ ಕಂಡು ಬರುತ್ತಾರೆ. ಅವರು ಧರ್ಮಾರ್ಥಿ ಪಂಡಿತರಿದ್ದಾರೆ.

ಮಾನಾರ್ಥಿ ಪಂಡಿತರು ತನುವಿನ ಸಮಾನರಿದ್ದಾರೆ. ಹೇಗೆ ಮನುಷ್ಯರ ದೇಹವು ಮೇಲ್ನೋಟಕ್ಕೆ ಅಂತೂ ಮಹಾ ಸುಂದರ ಸರ್ವ ಜನರುಗಳಿಗೆ ಒಳ್ಳೆಯದೆನಿಸುವಂಥದ್ದಿರುತ್ತದೆ, ಆದರೆ ಅಂತರಂಗದಲ್ಲಿ ಮೂಳೆ, ಮಾಂಸ, ರುಧಿರ, ಚರ್ಮರೂಪ ಮಹಾ ಮಲೀನ, ಘೃರ್ಣಾಸ್ಪದ, ಸಪ್ತಧಾತುಮಯವಿರುತ್ತದೆ, ಅದೇ ಪ್ರಕಾರ ಮಾನಾರ್ಥಿ ಪಂಡಿತರು ಮೇಲುನೋಟಕ್ಕೆಯಂತೂ ಮಹಾ ಸುಂದರ ಕಾವ್ಯ ಛಂದಸ್ಸು, ಮನೋಜ್ಞವಾಣಿ ಸಹಿತರಿರುತ್ತಾರೆ. ಅದರಿಂದ ಎಲ್ಲರಿಗೂ ಒಳ್ಳೆಯವರೆನಿಸುತ್ತಾರೆ. ಆದರೆ ಅಂತರಂಗದಲ್ಲಿ ಧರ್ಮಬುದ್ಧಿಯಿಂದ ರಹಿತ, ಮಹಾಮಾನಿ, ಇತರರ ಮಾನವನ್ನು ಖಂಡಿತಗೊಳಿಸುವ ಅಭಿಲಾಷಿಗಳೂ ಸಜ್ಜನತೆಯಿಂದ ರಹಿತರೂ ಇತರರ ಒಳ್ಳೆಯ ಗುಣಗಳಲ್ಲಿ ಅಪ್ರೀತಿಯ ಭಾವವನ್ನು ಇಟ್ಟುಕೊಳ್ಳುವವರು, ವಜ್ರಪರಿಣಾಮಿಗಳೂ ಇರುತ್ತಾರೆ.

ಈ ಪ್ರಕಾರ ಎಲೈ ಸೋದರನೇ ! ಸಂಸಾರದಲ್ಲಿ ಎರಡು ಪ್ರಕಾರದ ಪಂಡಿತರಿದ್ದಾರೆ. ಯಾರು ಧರ್ಮಾರ್ಥಿಪಂಡಿತರಿದ್ದಾರೆ ಅವರಂತೂ ಮಹಾ ಸಜ್ಜನ, ಸರಳ ಸ್ವಭಾವಿ ಇರುವುದರಿಂದ ಈ ಗ್ರಂಥದಲ್ಲಿ ಅಶುದ್ಧಿಯನ್ನು ಕಂಡು ಅಶುದ್ಧಿಯಾದರೆ ಏನಾಯಿತು ಯಾವ ದೊಡ್ಡ ದೊಡ್ಡ ಪಂಡಿತರಿದ್ದಾರೆ ಅವರೂ ತಪ್ಪುತ್ತಾರೆ ಎಂದು ವಿಚಾರಮಾಡುತ್ತಾರೆ. ಹೇಗೆ ಯಾವಾಗಲೂ ಬರಹೋಗುವಂಥ ದೊಡ್ಡ ದೊಡ್ಡ ಜನರೂ ಕೂಡ ಮಹಾ ಅಟವಿ, ದೀರ್ಘ ಉದ್ಯಾನ ಮಾರ್ಗದಲ್ಲಿ ಮಾರ್ಗವನ್ನು ತಪ್ಪಿ ಬಿಡುತ್ತಾರೆ. ಎಂದಾಗ ಅಂಥ ಮಾರ್ಗದ ಮೇಲೆ ಎಂದಾದರೊಮ್ಮೆ ಬರು ಹೋಗುವಂಥವರು ಅಂಧರ ಸಮಾನ ಪುರುಷರು ಅಲ್ಲವೇ ಕಾಣಿಸುವುದರ ಕಾರಣ ಒಂದು ವೇಳೆ ತಪ್ಪಿ ಹೋದರೆ ಆಶ್ಚರ್ಯವೇನಿದೆ ? ಆದರೆ ಅಂಥ ಅಂಧರ ಸಮಾನ ಜೀವರುಗಳ ಪುರುಷಾರ್ಥ ಹಾಗೂ ಅಭಿರುಚಿಯು ಪ್ರಶಂಸನೀಯವಿದೆ. ಅದರಿಂದ ಇಂಥ ವಿಕಟ ಪಥಗಳಲ್ಲಿಯೂ ಗಮನ ಮಾಡುತ್ತಾರೆ.

ಇದೇ ಪ್ರಕಾರ ಇವರದೂ ಧರ್ಮಾನುರಾಗವು ಪ್ರಶಂಸನೀಯವಿದೆ. ಎಂದರೆ ಕಡಿಮೆ ಕಾಣಿಸುತ್ತಿದ್ದರೂ ಕೂಡ ಇಂಥ ವಿಷಮ ಮಾರ್ಗದ ಮೇಲೆ ಗಮನ ಮಾಡಿ ತೀರ್ಥಯಾತ್ರೆಯ ಉದ್ಯಮ ಮಾಡುತ್ತಾರೆ. ಇದು ಇವರದು ವಿಶೇಷ ಧರ್ಮಾನುರಾಗವಿದೆಯೆಂದು ತಿಳಿದುಕೊಂಡು ಅವರ ಕೈ ಹಿಡಿದು ಅವರನ್ನು ಮಾರ್ಗದ ಮೇಲೆ ತೊಡಗಿಸಿ ಅವರ ವಾಂಛೆಯನ್ನು ಪೂರ್ಣಗೊಳಿಸುತ್ತಾರೆ. ಅದೇ ಪ್ರಕಾರ ಧರ್ಮಾರ್ಥಿ ಪಂಡಿತರು ವಿಚಾರ ಮಾಡುವುದೇನೆಂದರೆ ನವೀನ ಗ್ರಂಥಗಳ ರಚನೆ ಮಾಡುವಲ್ಲಿ ದೊಡ್ಡ ದೊಡ್ಡ ಪಂಡಿತರೂ ತಪ್ಪುತ್ತಾರೆ, ಈ ಅಲ್ಪ ಜ್ಞಾನಿಯು ತಪ್ಪಿದರೆ ದೋಷವೇನಿದೆ ? ಆದರೆ ಈತನ ಬುದ್ಧಿಯು ಪ್ರಶಂಸನೀಯವಿದೆ. ಎಂದು ತಿಳಿದುಕೊಂಡು ಧರ್ಮಾರ್ಥಿ ಪಂಡಿತರು ಇವರ ಕಾರ್ಯದ ಹಾಸ್ಯ ಮಾಡುವುದಿಲ್ಲ.

ಇನ್ನು ತಾವು ಮಾನಾದಿಗಳ ಮಾತು ಹೇಳುತ್ತಿದ್ದರೆ ಧರ್ಮದ ಅಭಿಲಾಷೀ ವಕ್ತಾರನಿಗೆ ಮಾನಾದಿಗಳ ಪ್ರಯೋಜನವಿರುವುದಿಲ್ಲ. ತಮ್ಮದೇ ಬುದ್ಧಿಯಲ್ಲಿ ವಿಪರೀತ ವಿಕಾರವು ಉತ್ಪನ್ನವಾಗಿದೆ ಎಂದು ತಿಳಿದು ಬರುತ್ತದೆ.

ಹೇಗೆ ಯಾವನೋ ಧತ್ತೂರಿಯನ್ನು ತಿನ್ನುವಂಥ ಮನುಷ್ಯನು ಆಕಾಶದಲ್ಲಿ ಅನೇಕ ಪ್ರಕಾರದ ರತ್ನಮಯ ರಚನೆಯಿಂದ ಯುಕ್ತ ನಗರವನ್ನು ಕಂಡು ಒಮ್ಮೆ ಹರುಷಿತನಾಗುತ್ತಾನೆ, ನಗುತ್ತಾನೆ, ಒಮ್ಮೆ ಅನೇಕ ಪ್ರಕಾರದ ಭಯಾನಕ ಸಿಂಹ, ಆನೆ, ಸರ್ಪ ಮೊದಲಾದ ಜೀವಗಳ ವಿಕರಾಳ ಆಕಾರವನ್ನು ಕಂಡು ಮಹಾ ಭಯದಿಂದ ರೋದನೆ ಮಾಡುತ್ತಾನೆ. ಅಲ್ಲಿ ಆಕಾಶವಂತೂ ಮಹಾ ನಿರ್ಮಲ, ನಿರ್ದೋಷವಿದೆ. ಆಕಾಶದಲ್ಲಿಯಂತೂ ರತ್ನಮಯ ನಗರಗಳೂ ಇಲ್ಲ, ಸಿಂಹಾದಿ ಭಯಾನಕ ಜೀವಗಳೂ ಇರುವುದಿಲ್ಲ. ಆದರೆ ಧತ್ತೂರಿಯ ಪ್ರಯೋಗದಿಂದ ಇವನ ದೃಷ್ಟಿಯಲ್ಲಿ

ವಿಪರೀತತೆಯು ಭಾಸಿತವಾಗುತ್ತಿದೆ. ಅದೇ ಪ್ರಕಾರ ಗ್ರಂಥಗಳ ಕರ್ತೃಗಳಾದ ಆಚಾರ್ಯಾದಿಕರು ಒಳ್ಳೆಯ ಕವಿಗಳಿಗೆ ಮಾನದ ಭಾವವಿರುವುದಿಲ್ಲವೆಂದು ತಿಳಿಯುತ್ತಾರೆ.

ಧರ್ಮದ ಧಾರಕರು, ಪರಂಪರೆಯಿಂದ ಜಿನಭಾಸಿತ ಧರ್ಮಪ್ರವೃತ್ತಿಯ ವಾಂಛೆಯುಳ್ಳವರು, ಸಮತೆಯ ರಸದ ಆಸ್ವಾದಿಗಳು, ಒಳ್ಳೆಯ ಕವಿಗಳಿಗಂತೂ ಸತ್ಕಾರ, ಪೂಜೆ, ಮಾನ, ದೊಡ್ಡಸ್ತನ ಮೊದಲಾದವುಗಳ ವಾಂಛೆಯು ಇರುವುದಿಲ್ಲ. ಇವನೇ ಮಿಥ್ಯಾತ್ವರೂಪದ ಧತ್ತೂರಿಯ ಗ್ರಹಣ ಮಾಡಿರುವುದರಿಂದ ಇವನಿಗೆ ಗ್ರಂಥದ ರಚನೆ ಮಾಡುವಂಥ ಒಳ್ಳೆಯ ಕವಿಗಳಲ್ಲಿ ಮಾನವು ಭಾಸಿತವಾಗುತ್ತಿದೆ.

ಯಾವ ಪ್ರಕಾರ ಯಾವನಿಗೋ ಕಾಮಾಲೆಯ ರೋಗವಾಗಿದ್ದರೆ ಅವನಿಗೆ ಬೆಳ್ಳನೆಯ ವಸ್ತುವು ಕೂಡ ಹಳದಿಯಾಗಿ ಭಾಸಿತವಾಗುತ್ತದೆ. ಆ ವಸ್ತುವಂತೂ ತನ್ನ ಸ್ವಭಾವರೂಪ ಶ್ವೇತವೇ ಇದೆ. ಆದರೆ ಈ ಪುರುಷನ ನೇತ್ರಗಳಲ್ಲಿ ಕಾಮಾಲೆಯ ರೋಗವಾಗಿದೆ. ಅದರಿಂದ ಆ ಶ್ವೇತ ವಸ್ತುವು ಹಳದಿಯಾಗಿ ಭಾಸಿತವಾಗುತ್ತಿದೆ. ಅದೇ ಪ್ರಕಾರ ಗ್ರಂಥ ಕರ್ತೃ ಕವಿರಾಜರಿಗಂತೂ ಮಾನ, ದೊಡ್ಡಸ್ತನದ ಇಚ್ಛೆ ಇರುವುದಿಲ್ಲ. ಆದರೆ ಈ ಅಲ್ಪ ಬುದ್ಧಿ ಮುಗ್ಧ ಜೀವಿಯ ಜ್ಞಾನವೇ ವಿಪರೀತ ರೂಪವಿದೆ.

ತರ್ಕಕಾರನು ಹೇಳುತ್ತಾನೆ - ಇದರಲ್ಲಿ ನಿಮ್ಮದು ಮಾನ, ದೊಡ್ಡಸ್ತನ ಇರುವುದಿಲ್ಲ, ಹಾಗಾದರೆ ಗ್ರಂಥದಲ್ಲಿ ನಿಮ್ಮ ಹೆಸರಿನ ಉಲ್ಲೇಖವನ್ನೇಕೆ ಮಾಡುತ್ತೀರಿ.

ಸಮಾಧಾನ - ಎಲೈ ಸೋದರನೇ ! ತಮ್ಮ ಹೆಸರಿನ ಉಲ್ಲೇಖವನ್ನು ಒಳ್ಳೆಯ ಕವಿಯು ಮಾನದ ಇಚ್ಛೆಯಿಂದ ಮಾಡುವುದಿಲ್ಲ. ಆದರೆ ತನ್ನ ಧರ್ಮದ ಬುದ್ಧಿಯ ಕಾರಣ ಪಾಪದಿಂದ ಭಯಭೀತನಾಗಿ ಮಾಡುತ್ತಾನೆ. ಅನಾದಿ ಕಾಲದಿಂದ ಒಳ್ಳೆಯ ಕವಿಗಳ ಪರಂಪರೆಯು ಇದೇ ಪ್ರಕಾರ ನಡೆಯುತ್ತಲಿದೆ. ಒಂದು ವೇಳೆ ಗ್ರಂಥಕರ್ತನು ತನ್ನ ನಾಮೋಲ್ಲೇಖವನ್ನು ತಾನು ರಚಿಸಿದ ಗ್ರಂಥದಲ್ಲಿ ಮಾಡದೇ ಹೋದರೆ ಅವನಿಗೆ ದೋಷವು ಬರುವುದು. ಅವನು ಅನ್ಯ ಕವಿಗಳ ಚೋರನಾಗುವನು, ಆಚಾರ್ಯ ಪರಂಪರೆಯ ಲೋಪವಾಗಿ ಹೋಗುವುದು. ಅದರಿಂದ ಪಾಪಬಂಧವಾಗುವುದು. ಹೆಸರು ಹಾಕುವುದರಿಂದ ಈ ಗ್ರಂಥವು ಇಂಥ ಕವಿಯು ಬರೆದಿದುದಿದೆ ಅವನ ಹೆಸರನ್ನು ತಿಳಿದುಕೊಂಡು ಧರ್ಮಾತ್ಮರುಗಳು ವಿಚಾರ ಮಾಡುವುದೇನೆಂದರೆ ಆ ಕವಿಯಂತೂ ಒಳ್ಳೆಯ ತತ್ತ್ವಜ್ಞಾನಿ ಇದ್ದಾನೆ ಹಿತಕರ ಸಮ್ಯಕ್‌ಜ್ಞಾನದ ಧಾರಕನಿದ್ದಾನೆ, ದೃಢ ಶ್ರದ್ಧೆಯುಳ್ಳವನಿದ್ದಾನೆ ಆದ್ದರಿಂದ ಆತನ ವಚನಗಳು ಪ್ರಮಾಣ ಇವೆ ಅಂಥ ಧರ್ಮಾರ್ಥಿ ಪ್ರಸಿದ್ಧ ತತ್ತ್ವಜ್ಞಾನಿಯು ಒಂದು ವೇಳೆ ಎಲ್ಲಿಯಾದರೂ ತಪ್ಪಿದರೂ ವಿವೇಕಿ ಧರ್ಮಾತ್ಮರು ಇದಂತೂ ಜ್ಞಾನದ ನ್ಯೂನ್ಯತೆಯಿಂದ ಭಾವವು ಭಾಸಿತವಾಗದಿರುವ ಕಾರಣದಿಂದ ಇಂಥ ಶಬ್ದಗಳನ್ನು ಬರೆದಿದ್ದಾರೆ ಆದರೆ ಅವರ ಶ್ರದ್ಧೆಯು ಅತ್ಯಂತ ದೃಢವಿದೆಯೆಂದು ತಿಳಿದುಕೊಂಡು ಆ ಕವಿಯ ನಾಮೋಲ್ಲೇಖವಿರುವುದರಿಂದ ಅವನನ್ನು ಸಮ್ಯಕ್ ಶ್ರದ್ಧೆಯುಳ್ಳವನೆಂದು ತಿಳಿದು ದೋಷ ತಗಲಿಸದೆ ಅವನ ವಚನಗಳನ್ನು ಪ್ರಮಾಣವೆಂದೇ ಮನ್ನಿಸುತ್ತಾರೆ. (ಆದರೆ ಬಹಳಷ್ಟು ಆಚಾರ್ಯರುಗಳು ತಮ್ಮ ಹೆಸರನ್ನು ಹಾಕಿಲ್ಲವೆಂಬುದು ವಿಶೇಷವಿದೆ.)

ಯಾವುದೋ ಗ್ರಂಥದ ಕರ್ತೃವು ಅತತ್ತ್ವ ಶ್ರದ್ಧೆಯ ಕವಿಯಾಗಿದ್ದರೆ ಅವನ ನಾಮೋಲ್ಲೇಖದಿಂದ ಹೆಸರನ್ನು ತಿಳಿದುಕೊಂಡ ವಿವೇಕಿಗಳು ಈ ಗ್ರಂಥದ ಕರ್ತೃವು ಅತತ್ತ್ವಶ್ರದ್ಧಾನಿ ಇದ್ದಾನೆ. ಅವನ ಮೂಲಕ ಹೇಳಲಾಗಿರುವ ಯಾವುದೇ ಶಬ್ದವು ಜಿನಾಜ್ಞೆಯ ಅನುಸಾರವಿರುವುದಿಲ್ಲ. ಅದರಿಂದ ಆ ವಕ್ತಾರನ ವಚನಗಳು ಪ್ರಮಾಣವಿರುವುದಿಲ್ಲ. ಈ ಪ್ರಕಾರ ನಾಮೋಲ್ಲೇಖದಿಂದ ಒಳ್ಳೆಯ ಕವಿಗಳ ಮತ್ತು ಧರ್ಮಶೂನ್ಯ ಕವಿಗಳ ಪರೀಕ್ಷೆ ಮಾಡಲಾಗುತ್ತದೆ. ಕವಿಗಳ ಹೆಸರಿನ ಮೂಲಕ ಗ್ರಂಥಗಳ ವಚನಗಳು ಪ್ರಮಾಣ, ಅಪ್ರಮಾಣವೆಂದು ಸಿದ್ಧವಾಗುತ್ತವೆ. ಆದುದರಿಂದ ತಮ್ಮ ಹೆಸರನ್ನು ಬರೆಯಲಾಗುತ್ತದೆ. ಇಲ್ಲಿ ಮಾನ ಕಷಾಯದ ಯಾವ ಕಾರ್ಯವು ಇಲ್ಲ.

ಇಲ್ಲಿಯಂತೂ ಧರ್ಮಾತ್ಮಾ ಜೀವರುಗಳ ಅನುಮೋದನೆಯಾಗುವ ಸಲುವಾಗಿ ನವೀನ ಗ್ರಂಥಗಳ ರಚನೆ ಮಾಡಲಾಗುತ್ತದೆ. ಇವುಗಳನ್ನು ಓದಿ ಸಾಮಾನ್ಯ ಬುದ್ಧಿಗಳಂತೂ ಜ್ಞಾನವನ್ನು ಹೆಚ್ಚಿಸಿಕೊಳ್ಳುವರು ಮತ್ತು ನಮಗಿಂತ ವಿಶೇಷ ಜ್ಞಾನಿಗಳು, ಜ್ಞಾನಸಂಪದದಧಾರಕರೂ ಧರ್ಮಾತ್ಮರೂ ವಿಚಾರ ಮಾಡುವುದೇನೆಂದರೆ ತತ್ತ್ವ, ಅರ್ಥಸಹಿತ ಈ ವಿಶಾಲ ಗ್ರಂಥದ ರಚನೆಯನ್ನು ಯಾರು ಮಾಡಿದ್ದಾರೆ ಅವರು ಧನ್ಯವಾದಕ್ಕೆ ಪಾತ್ರರಿದ್ದಾರೆ ಎಂದು ತಿಳಿದುಕೊಂಡು ಧರ್ಮಾನುರಾಗವನ್ನು ಹೆಚ್ಚಿಸಿಕೊಳ್ಳುವರು. ವಿಶೇಷ ಜ್ಞಾನಿಗಳು ಈ ಗ್ರಂಥವನ್ನು ಸುಲಭವೆಂದು ತಿಳಿದುಕೊಂಡು ಅಭ್ಯಾಸ ಮಾಡದೇ ಹೋದರೂ ಕೂಡ ವಕ್ತಾರರು ಎಂದರೆ ಯಾರು ಸಾಮಾನ್ಯ ಬುದ್ಧಿಯ ಧಾರಕರಿದ್ದಾರೆ ಆ ಭವ್ಯಾತ್ಮರು ಧರ್ಮಾನುರಾಗದ ಶುಭ ಫಲವನ್ನು ಹಾಗೂ ತತ್ತ್ವಜ್ಞಾನವನ್ನು ಹೆಚ್ಚಿಸಿಕೊಳ್ಳುವ ಸಲುವಾಗಿ ಈ ಗ್ರಂಥದ ಅಭ್ಯಾಸ ಮಾಡುವರು. ಈ ಗ್ರಂಥದಿಂದ ಜಿನಾಜ್ಞೆಯ ಸಾಮಾನ್ಯ ರಹಸ್ಯವನ್ನು ತಿಳಿದುಕೊಂಡು ನಂತರ ವಿಶೇಷ ಗ್ರಂಥಗಳಲ್ಲಿ ಪ್ರವೇಶ ಪಡೆಯುವರು. ಅದರಿಂದ ಪುಣ್ಯದ ಸಂಚಯ ಮಾಡಿಕೊಂಡು ತತ್ತ್ವಗಳ ರಹಸ್ಯವನ್ನು ತಿಳಿಯ ಬಹುದಾಗಿದೆ. ಆದುದರಿಂದ ಈ ಗ್ರಂಥವು ಭವ್ಯರಿಗೆ ಲಾಭದಾಯಕವಿದೆ. ಇದರಲ್ಲಿ ಯಾವುದಾದರೂ ಸಾಮಾನ್ಯ ಅಶುದ್ಧಿಯು ಉಳಿದುಕೊಂಡಿದ್ದರೆ ನಾವು ಶುದ್ಧ ಪಡಿಸುವೆವು - ಎಂಬುದಾಗಿ ಪಂಡಿತರು, ಧರ್ಮಾತ್ಮರು ವಿಚಾರ ಮಾಡುತ್ತಾರೆ. ಈ ಪ್ರಕಾರ ಉಳಿದುಕೊಂಡಿರುವ ಅಶುದ್ಧಿಯು ಕೂಡ ಶುದ್ಧವಾಗಿ ಹೋಯಿತು.

ಇನ್ನು ಎರಡನೆಯ ಮಾನಾರ್ಥಿ ಪಂಡಿತರು - ಯಾರು ಇತರರ ಮಾನವನ್ನು ಖಂಡಿತಗೊಳಿಸುವಲ್ಲಿ ಯಾವಾಗಲೂ ಉಪಾಯ ಮಾಡುತ್ತಿರುತ್ತಾರೆ, ಇತರರ ಮಾನವು ಖಂಡಿತವಾಗಿ ಹೋದ ಮೇಲೆ ಸುಖ ಪಡೆಯುತ್ತಾರೆ; ಅದರಿಂದ ಗ್ರಂಥದಲ್ಲಿ ದೋಷಗಳು ಇಲ್ಲದಿದ್ದರೂ ದೋಷ ತಗಲಿಸುತ್ತಾರೆ. ಹಾಗಿದ್ದ ಮೇಲೆ ದೋಷವಿದ್ದ ಮೇಲಂತೂ ದೋಷವೆಂದು ಹೇಳಿಯೇ ಹೇಳುವರು. ಅವರು ತಮ್ಮ ಸ್ವಭಾವವನ್ನು ಹೇಗೆ ಬಿಡುವರು ? ಹಾಸ್ಯ ಮಾಡಿಯೇ ಮಾಡುವರು. ಅದರಿಂದ ಅಂಥ ಧರ್ಮಭಾವನೆಯಿಂದ ರಹಿತ ಮಾನೀ ಪಂಡಿತರುಗಳ ಭಯವು ನಮಗಿಲ್ಲ.

ನನಗೆಯಂತೂ ಜಿನಾಜ್ಞೆಯಿಂದ ಸಹಿತರಾದ ಧರ್ಮಾತ್ಮಾ ಪಂಡಿತ ಪುರುಷರುಗಳ ಭಯವಿದೆ. ಅವರುಗಳ ಭಯವಿರುವುದು ಯೋಗ್ಯವೂ ಇದೆ. ಏಕೆಂದರೆ ಈ ಗ್ರಂಥದಲ್ಲಿ ನನ್ನ ಬುದ್ಧಿಯ ನ್ಯೂನ್ಯತೆಯಿಂದ ಜಿನಾಜ್ಞೆಯಿಂದ ಬಾಹಿರವಿರುವ ಅತತ್ತ್ವಶ್ರದ್ಧೆಯ ಪೋಷಕವಾದ ಯಾವುದಾದರೂ ಶಬ್ದವು ಬರೆಯಲ್ಪಟ್ಟರೆ ಹಾಗೂ ಯಾವುದಾದರೂ ಅರ್ಥವು ಪಾಪ ಪ್ರವೃತ್ತಿಯನ್ನು ನಡೆಸುವಂಥದ್ದಾದರೆ ಆ ತತ್ತ್ವಜ್ಞಾನಿ ಉತ್ತಮ ಬುದ್ಧಿಯ ಧಾರಕರೂ, ಜಿನ ಭಾಷಿತ ತತ್ತ್ವಗಳ ರಹಸ್ಯವನ್ನು ತಿಳಿಯುವಂಥವರು ಅಂಥ ತಪ್ಪನ್ನು ನೋಡಿ ಕವಿಯ ಶ್ರದ್ಧೆಯು ಹೀಗಿತ್ತೇನು ? -ಎಂಬ ಸಂದೇಹ ಸಹಿತ ವಿಚಾರವು ಒಂದು ವೇಳೆ ಧರ್ಮಾರ್ಥಿ ಪಂಡಿತರಿಗೆ ಬಂದು ಬಿಟ್ಟರೆ ಈ ಮಾತಿನಲ್ಲಂತೂ ನಾನೂ ಅವರನ್ನು ಶ್ರದ್ಧೆಯಲ್ಲಿ ದೋಷಿತರೆಂದು ನೋಡುವೆನು. ಅದರಿಂದಲೇ ಇತರ ಧರ್ಮಾರ್ಥಿಗಳ ಸಮಾನ ನನ್ನನ್ನೂ ಶ್ರದ್ಧೆಯ ಬಾಹಿರನೆಂದು ತಿಳಿಯುವರು. ಅದರಿಂದ ನನ್ನ ಶ್ರದ್ಧೆಗೆ ಹಾಗೂ ಶುದ್ಧ ಧರ್ಮದ ಸೇವನೆಗೆ ದೋಷ ಬರುವುದು. ಅದರಿಂದ ನನಗೆ ಅವರದಂತೂ ಭಯವಿದೆ.

ಇನ್ನು ಈ ಧರ್ಮಾತ್ಮರು ಗ್ರಂಥದ ಸಂಪೂರ್ಣ ರಹಸ್ಯವನ್ನು ಕಂಡು, ಗ್ರಂಥದ ಸಂಪೂರ್ಣ ರಹಸ್ಯವಂತೂ ಒಳ್ಳೆಯ ರೀತಿಯಿಂದ ಜಿನಾಜ್ಞೆಯ ಅನುಸಾರವೇ ಇದೆ. ಒಂದೆರಡು ಕಡೆಗೆ ದೋಷ ಸಂಭವಿಸಿದ್ದರೆ ಅವೇನು ಶ್ರದ್ಧೆಗೆ ಸಂಬಂಧಪಟ್ಟ ದೋಷಗಳಲ್ಲ. ಅವಂತೂ ಬುದ್ಧಿಯ ಮಂದತೆಯ ಕಾರಣ ಅಜ್ಞಾನದಿಂದ ಬರೆಯಲ್ಪಟ್ಟಿವೆ ಎಂದು ವಿಚಾರ ಮಾಡಿ ಸಜ್ಜನರು ಅವುಗಳನ್ನು ಸರಿಪಡಿಸುವರು. ನನಗೆ ದೋಷ ತಗಲಿಸಲಾರರು.ಇಂಥ ಸಜ್ಜನರು ಗುಣಗಳ ಧಾರಕರು, ವಿಶೇಷ ಜ್ಞಾನಿಗಳು, ಧರ್ಮಾತ್ಮಾ ಪುರುಷರಿದ್ದಾರೆ. ಅವರು ದೊಡ್ಡವರಿದ್ದಾರೆ ಅವರುಗಳ ಭಯವಂತೂ ಇರಲೇಬೇಕು. ಅದರಿಂದಲೇ ನಮಗೆ ತತ್ತ್ವಗಳ ಶ್ರದ್ಧೆಯಲ್ಲಿ ಸಹಾಯಕವಾಗುತ್ತದೆ. ಆ ಪುರುಷರ ಭಯವು ನಮಗೆ

ಗುಣಕಾರಿಯಿದೆ. ಅದರಿಂದ ಇವರುಗಳ ಹಾಸ್ಯ, ನಿಂದೆಯ ಭಯವಿದೆ. ಹಾಗಿರುವುದರಿಂದಲೇ ಅತತ್ತ್ವ ಶ್ರದ್ಧೆಯಲ್ಲಿ ನಮ್ಮ ಜ್ಞಾನವು ಪ್ರವೇಶ ಮಾಡುವುದಿಲ್ಲ. ಇದು ಅಂಥ ಪುರುಷರ ಭಯದ್ದೇ ಉಪಕಾರವಿದೆ. ಅದರಿಂದ ನಮಗೆ ಅಂಥ ಸಜ್ಜನ ಜೀವರುಗಳ ಭಯವೇ ಇರಬೇಕಾಗುವುದು. ಆದರೆ ಜಿನಾಜ್ಞೆಯಿಂದ ರಹಿತ ಜಿನವಚನವನ್ನು ತಿಳಿದುಕೊಳ್ಳುವಲ್ಲಿ ಅಂಧರ ಸಮಾನ ಮಿಥ್ಯಾಶ್ರದ್ಧಾನಿ, ಧರ್ಮದ ತ್ಯಾಗಿ, ಧರ್ಮದ ಅಭಿಲಾಷೆಯಿಂದರಹಿತ, ಅಕ್ಷರ ಜ್ಞಾನಿ ಪಂಡಿತರುಗಳ ಭಯವು ನಮಗೆ ಇಲ್ಲ. ಅವರು ಮಾನಾರ್ಥಿಗಳಿದ್ದಾರೆ. ಪರಂಪರೆಯಿಂದ ನಡೆದುಕೊಂಡು ಬಂದಿರುವ ಕವಿ ಪರಂಪರೆಯನ್ನು ನಾಶ ಮಾಡುವಂಥವರಿದ್ದಾರೆ. ಆದುದರಿಂದ ಅವರ ಭಯವು ವಿವೇಕವಂತರಿಗೆ ಯೋಗ್ಯವಿರುವುದಿಲ್ಲ.

ಹೇಗೆ ಯಾವನೋ ರತ್ನ ವ್ಯಾಪಾರಿಯ ಹತ್ತಿರ ಎರಡು ರತ್ನಗಳಿದ್ದವು. ಅವು ಉತ್ಕೃಷ್ಟ ಮೌಲ್ಯದವಿದ್ದವು. ಆ ರತ್ನಗಳನ್ನು ಕೊಳ್ಳುವ ಸಲುವಾಗಿ ಯಾವನೋ ಗ್ರಾಹಕನು ಬರುತ್ತಾನೆ. ಅವನು ಬಹಳಷ್ಟು ಮೌಲ್ಯ ಕೊಟ್ಟು ಅವುಗಳನ್ನು ಕೊಂಡು ಕೊಳ್ಳುತ್ತಾನೆ ಮತ್ತು ನಾನು ಇವುಗಳನ್ನು ತೋರಿಸಿ ತರುತ್ತೇನೆ ಎಂದರೆ ಪರೀಕ್ಷೆ ಮಾಡುತ್ತೇನೆಂದು ಹೇಳಿ ಹೊರಟು ಹೋಗುತ್ತಾನೆ. ಅವನು ತುಚ್ಛ ಜ್ಞಾನಿ, ಮೂರ್ಖ, ರತ್ನಪರೀಕ್ಷೆಯ ಜ್ಞಾನ ರಹಿತ, ವಯೋವೃದ್ಧ, ಹುಲ್ಲು ಕಾಷ್ಠಗಳನ್ನು ಮಾರುವಂಥ ಜಡ ಬುದ್ಧಿಗಳಿಗೆ ಆ ರತ್ನಗಳನ್ನು ತೋರಿಸುತ್ತ ಇವುಗಳಿಗೆ ಒಂದೊಂದು ಲಕ್ಷ ಸುವರ್ಣ ಮುದ್ರೆಗಳನ್ನು ಕೊಟ್ಟಿದ್ದೇನೆ. ನೀವು ವಯೋವೃದ್ಧರಿರುವುದರಿಂದ ಬಹಳಷ್ಟು ರತ್ನಗಳನ್ನು ನೋಡಿದ್ದೀರಿ ಅದರಿಂದ ಈ ರತ್ನಗಳು ಎಂಥವಿವೆ, ಎಂಬುದನ್ನು ಹೇಳಬೇಕು ಎನ್ನುತ್ತಾನೆ. ಆಗ ಹುಲ್ಲು ಮಾರುವಂಥವರೆಲ್ಲರೂ ಹೇಳುತ್ತಾರೆ - ''ಸೋದರನೇ ಇವು ಪ್ರತ್ಯಕ್ಷ ವರ್ಣಮಯ ಗಾಜಿನ ತುಂಡುಗಳಿವೆ. ಅಲ್ಪ ಮೌಲ್ಯದವಿವೆ. ನೀವು ದ್ರವ್ಯವನ್ನೇಕೆ ಕಳೆದುಕೊಳ್ಳುವಿರಿ ?'' ಎಲ್ಲ ಹುಲ್ಲು ಮಾರಾಟ ಮಾಡುವಂಥವರ ಇದೇ ಪ್ರಕಾರದ ಉತ್ತರವನ್ನು ಆಲಿಸಿ ಇವನು ವಿಚಾರಮಾಡುತ್ತಾನೆ. ಇವರಂತೂ ವಯೋವೃದ್ಧರಿದ್ದಾರೆ, ಬಹಳಷ್ಟು ತಿಳಿಯುವಂಥವರಿದ್ದಾರೆ ಇವರು ಇವುಗಳನ್ನು ಗಾಜಿನ ತುಂಡುಗಳೆಂದು ಹೇಳುತ್ತಾರೆಂದ ಮೇಲೆ ಇದು ಸತ್ಯವಿದೆ - ಎಂದು ತಿಳಿದುಕೊಂಡ ಆ ಗ್ರಾಹಕನು ರತ್ನಗಳನ್ನು ತೆಗೆದುಕೊಂಡು ರತ್ನ ವ್ಯಾಪಾರಿಯ ಹತ್ತಿರ ಬರುತ್ತಾನೆ ಮತ್ತು ''ಇವುಗಳನ್ನಂತೂ ತುಂಬ ವಯಸ್ಸಾದ ವಯೋವೃದ್ಧ ಮನುಷ್ಯರು ಗಾಜಿನ ತುಂಡುಗಳೆಂದು ಹೇಳುತ್ತಿದ್ದಾರೆ'' ಎನ್ನುತ್ತಾನೆ.

ಆಗ ರತ್ನವ್ಯಾಪಾರಿಯು ಹೇಳುತ್ತಾನೆ - ನೀನು ಇವುಗಳನ್ನು ಯಾರಿಗೆ ತೋರಿಸಿದೆ ? ಆ ರತ್ನವ್ಯಾಪಾರಿಯ ಅಂಗಡಿಗಳು ಯಾವ ಪೇಟೆಯಲ್ಲಿವೆ ? ಅಲ್ಲದೆ ಅವರು ಏನು ಮಾಡುತ್ತಾರೆ ? ಎಂಬುದನ್ನು ಹೇಳು.

ಆಗ ಗ್ರಾಹಕನು ಹೇಳುತ್ತಾನೆ - ಅಂಗಡಿಗಳಂತೂ ಇಲ್ಲ, ರತ್ನವ್ಯಾಪಾರಿಗಳೂ ಇಲ್ಲ, ಅವರು ಹುಲ್ಲು, ಕಾಷ್ಠಗಳನ್ನು ಮಾರುತ್ತ ಪೇಟೆಯಲ್ಲಿ ನಿಂತುಕೊಂಡಿರುತ್ತಾರೆ.

ಆಗ ರತ್ನ ವ್ಯಾಪಾರಿಯು ತಿಳಿದುಕೊಳ್ಳುತ್ತಾನೆ ಮತ್ತು ವಿಚಾರ ಮಾಡುತ್ತ ಆ ಹುಲ್ಲು ಕಾಷ್ಠಗಳನ್ನು ಮಾರುವಂಥ ಮೂರ್ಖ ಜನರು ರತ್ನಗಳನ್ನು ಗಾಜಿನ ತುಂಡುಗಳೆಂದು ಹೇಳಿದ್ದಾರೆ ಅದರಿಂದೇನಾಗುವುದು ? ಅವರ ವಚನವು ಮಾನ್ಯವಿಲ್ಲ. ಎಂದು ತಿಳಿದುಕೊಂಡು ರತ್ನ ವ್ಯಾಪಾರಿಯು ಖೇದ ಪಡಲಿಲ್ಲ ಮತ್ತು ಗ್ರಾಹಕನಿಗೆ ಹೇಳುತ್ತಾನೆ-

''ಈ ರತ್ನಗಳ ಪರೀಕ್ಷೆಯು ಹುಲ್ಲು ಕಾಷ್ಠಗಳನ್ನು ಮಾರುವವರಿಂದ ಆಗುವುದಿಲ್ಲ. ಯಾರೋ ರತ್ನ ವ್ಯಾಪಾರಿಗಳಿಗೆ ತೋರಿಸಿ ಬಾ'' - ಎನ್ನುತ್ತಾನೆ.

ಆಗ ಗ್ರಾಹಕನು ಹೇಳುತ್ತಾನೆ - ಅವರೂ ವಯೋವೃದ್ಧ, ತುಂಬ ದೊಡ್ಡವರಿದ್ದಾರಲ್ಲ !

ಆಗ ರತ್ನ ವ್ಯಾಪಾರಿಯು ಹೇಳುತ್ತಾನೆ,- 'ದೊಡ್ಡವರಿದ್ದರೆ ಏನಾಯಿತು ? ಅವರು ಮುಗ್ಧರಿದ್ದಾರೆ, ಜ್ಞಾನ

ದರಿದ್ರಿ ಎಂದರೆ ಹೀನ ವ್ಯಾಪಾರ ಮಾಡುವಂಥವರು ಇರುವುದರಿಂದ ರತ್ನ ಪರೀಕ್ಷೆಯ ಜ್ಞಾನದಿಂದ ರಹಿತರಿದ್ದಾರೆ. ಅದರಿಂದ ಅವರು ಈ ನಿಜವಾದ ರತ್ನಗಳನ್ನು ಗಾಜಿನ ತುಂಡುಗಳೆಂದು ಹೇಳಿದ್ದಾರೆ. ಅವರುಗಳ ಈ ವಚನವು ಮಾನ್ಯವಿಲ್ಲ. ನೀನು ಯಾರೋ ರತ್ನ ವ್ಯಾಪಾರಿಗಳಿಗೆ ತೋರಿಸಬೇಕು.'

ಆಗ ಆ ಗ್ರಾಹಕನು ಓರ್ವ ದೊಡ್ಡ ರತ್ನ ವ್ಯಾಪಾರಿಗೆ ರತ್ನಗಳನ್ನು ತೋರಿಸುತ್ತಾನೆ. ರತ್ನ ವ್ಯಾಪಾರಿಯು ಆ ರತ್ನಗಳನ್ನು ನೋಡಿ ಎಲ್ಲ ಪ್ರಕಾರದ ಯೋಗ್ಯ ಅಯೋಗ್ಯವನ್ನು ತಿಳಿಯುತ್ತಾನೆ. ರತ್ನ ಪರೀಕ್ಷೆಯನ್ನು ತಿಳಿಯುವಂಥ ವಿವೇಕ ಸಂಪನ್ನ ನಿಜವಾದ ದೃಷ್ಟಿಯ ಧಾರಕನಾದ ಆ ರತ್ನ ವ್ಯಾಪಾರಿಯು ಹೇಳುತ್ತಾನೆ,- ''ಎಲೈ ಮಿತ್ರನೇ ! ಒಂದು ರತ್ನವಂತೂ ಸರ್ವ ದೋಷ ರಹಿತವಿದೆ, ಅದರಿಂದ ಒಂದು ಲಕ್ಷ ಸುವರ್ಣ ಮುದ್ರೆಗಳ ಬೆಲೆಯುಳ್ಳದ್ದಿದೆ. ಇನ್ನೊಂದು ರತ್ನದಲ್ಲಿ ಸ್ವಲ್ಪ ನ್ಯೂನ್ಯತೆಯಿದೆ. ಅದರಿಂದ ಈ ರತ್ನವು ಆ ಮೊದಲಿನ ರತ್ನಕ್ಕಿಂತ ೧೦ ಸಾವಿರ ಸುವರ್ಣ ಮುದ್ರೆಗಳಷ್ಟು ಕಡಿಮೆ ಮೌಲ್ಯದ್ದಿದೆ'' ಎಂದು ತಿಳಿಯುವುದು.

ಆಗ ಗ್ರಾಹಕನು ಆಶ್ಚರ್ಯ ಚಕಿತನಾಗಿ ಹೇಳುತ್ತಾನೆ - ''ಓ ಸುಬುದ್ಧಿ ಮಿತ್ರನೇ ! ಈ ಎರಡೂ ರತ್ನಗಳ ವರ್ಣವಂತೂ ಒಂದೇ ರೀತಿ ಇದೆ, ಎರಡರ ಆಕಾರವೂ ಒಂದೇ ಇದೆ, ತೂಕವೂ ಅಷ್ಟೇ ಇದೆ ಎಂದ ಮೇಲೆ ಇವುಗಳಲ್ಲಿ ಮೌಲ್ಯದ ಅಂತರವು ಇಷ್ಟು ಹೇಗೆ ಆಯಿತು ? ಅದನ್ನು ತಿಳಿಸಿರಿ.''

ರತ್ನದ ಮಾಲೀಕ ರತ್ನ ವ್ಯಾಪಾರಿಯೂ ಒಂದರ ಬೆಲೆಯು ಕಡಿಮೆ ಎಂಬುದನ್ನು ಆಲಿಸಿ ಆಶ್ಚರ್ಯಚಕಿತನಾಗಿ ಆ ದೊಡ್ಡ ರತ್ನ ವ್ಯಾಪಾರಿಗೆ ಹೇಳುತ್ತಾನೆ- '' ಓ ಮಿತ್ರರೇ ! ಈ ರತ್ನಗಳನ್ನು ಹುಲ್ಲು ಕಾಷ್ಠಗಳನ್ನು ಮಾರುವಂಥವರು ಗಾಜಿನ ತುಂಡು ಎಂದಿದ್ದಾರೆ, ಆಗ ಅವರನ್ನು ಮಂದ ಜ್ಞಾನಿಗಳೆಂದು ತಿಳಿದುಕೊಂಡು ನಾನು ಭಯಪಟ್ಟಿರಲಿಲ್ಲ. ಆದರೆ ತಾವು ಈ ಒಂದರ ಬೆಲೆಯು ಹತ್ತುಸಾವಿರ ಸುವರ್ಣ ಮುದ್ರೆಗಳಷ್ಟು ಕಡಿಮೆಯಿದೆ ಎಂದು ಹೇಳುತ್ತಿದ್ದೀರಿ. ಇದರಿಂದ ನನಗೆ ತುಂಬ ಚಿಂತೆ ಆಗಿದೆ. ತಾವು ವಿವೇಕಿ ಇದ್ದೀರಿ ರತ್ನ ಪರೀಕ್ಷೆಯಲ್ಲಿ ಪ್ರವೀಣರಿದ್ದೀರಿ. ನಮಗೆ ಅಂಥ ಸೂಕ್ಷ್ಮ ದೋಷವು ಕಂಡು ಬರುವುದಿಲ್ಲ. ಅದರಿಂದ ತಮ್ಮ ವಚನವು ನಮಗೆ ಸ್ವೀಕೃತವಿದೆ.''

ಆಗ ಆ ದೊಡ್ಡ ವ್ಯಾಪಾರಿಯು ಹೇಳುತ್ತಾನೆ - ಸೋದರನೇ ! ಈಗ ನೀನೇ ನೋಡು ! ಇದರ ಬೆಲೆಯು ಕಡಿಮೆ ಇರುವುದರ ಕಾರಣಭೂತ ದೋಷವನ್ನು ತೋರಿಸಿ ಕೊಡುತ್ತೇನೆ. ಅದರಿಂದ ಇದರ ಬೆಲೆಯು ಕಡಿಮೆ ಆಗಿದೆ. ನಂತರ ಆ ದೊಡ್ಡ ರತ್ನ ವ್ಯಾಪಾರಿಯು ನೀರಿನಿಂದ ತುಂಬಿದ ಒಂದು ದೊಡ್ಡ ಪಾತ್ರೆಯನ್ನು ತಂದು ಅವರ ಎದುರಿಗಿಟ್ಟು ಅದರಲ್ಲಿ ಒಂದು ಗಸಗಸೆಯ ತೆನೆಯನ್ನು ಬೋರಲಾಗಿ ತೇಲಿ ಬಿಟ್ಟನು ಅದರ ಮೇಲೆ ಮೊದಲು ಶುದ್ಧ ರತ್ನವನ್ನಿಟ್ಟು ಆ ಪಾತ್ರೆಯ ನೀರಿನಲ್ಲಿ ತೇಲಿಸುತ್ತಾನೆ ಅದರಿಂದ ಪಾತ್ರೆಯಲ್ಲಿರುವ ನೀರೆಲ್ಲ ರತ್ನದ ವರ್ಣದ್ದಾಗಿ ಹೋಯಿತು. ಅದನ್ನು ಎಲ್ಲರಿಗೂ ತೋರಿಸಿ ನಂತರ ಆ ರತ್ನವನ್ನು ಹೊರಗೆ ತೆಗೆಯುತ್ತಾನೆ. ಅದರ ನಂತರ ಆ ಕಡಿಮೆ ಬೆಲೆಯ ರತ್ನವನ್ನು ಆ ಗಸಗಸೆಯ ತೆನೆಯ ಮೇಲಿಟ್ಟು ತೇಲಿಸುತ್ತಾನೆ, ಅದರಿಂದಲೂ ನೀರೆಲ್ಲ ರತ್ನದ ವರ್ಣದ್ದಾಗಿ ಹೋಯಿತು, ಆದರೆ ಒಂದು ಸಾಸಿವೆ ಕಾಳಿನಷ್ಟು ನೀರಿನಲ್ಲಿ ಆ ವರ್ಣವು ಹರಡಲಿಲ್ಲ ಎಂದರೆ ಅಷ್ಟು ಜಲವು ಜಲದ ರೂಪವಾಗಿಯೇ ಉಳಿಯಿತು, ರತ್ನದ ವರ್ಣದ್ದಾಗಲಿಲ್ಲ. ನೀರಿನಲ್ಲಿ ಎಲ್ಲಿ ಎಲ್ಲಿ ಆ ತೆನೆಯನ್ನು ರತ್ನಸಹಿತವಾಗಿ ತಿರುಗಿಸಲಾಯಿತು ಅಲ್ಲಲ್ಲಿ ಸಾಸಿವೆ ಕಾಳಿನಷ್ಟು ಜಲವೇ ಕಾಣಿಸಿತು.

ಆಗ ಆ ದೊಡ್ಡ ರತ್ನ ವ್ಯಾಪಾರಿಯು ರತ್ನದ ಮಾಲೀಕನಿಗೆ ಹೇಳುತ್ತಾನೆ - ಮಿತ್ರನೇ ನೋಡು ಈ ನೆರಳಿನ ಕಾರಣದಿಂದ ಇದರ ಬೆಲೆಯು ಹತ್ತು ಸಾವಿರದಷ್ಟು ಕಡಿಮೆ ಆಯಿತು, ಇಷ್ಟು ದೋಷವಿದೆ. ನೀನು ನಿನ್ನ ರತ್ನದ ದೋಷವನ್ನು ನೋಡು, ನಿನ್ನ ಸಲುವಾಗಿ ಯಾವ ದ್ವೇಷವು ನಮ್ಮಲ್ಲಿ ಇಲ್ಲ, ಆದರೆ ನಿಜವಾದ ದೃಷ್ಟಿಯ ಧಾರಕ ರತ್ನವ್ಯಾಪಾರಿಯದು ಯಾವುದು ಹೇಗೆ ಇದೆ ಹಾಗೇ ಹೇಳುವುದು ಧರ್ಮವಿದೆ.

ಆಗ ಅವನ ವಚನವನ್ನಾಲಿಸಿ ಅವನ ನಿಜವಾದ ಜ್ಞಾನದ ವಿಶ್ವಾಸವಾಯಿತು. ಗ್ರಾಹಕನು ರತ್ನವನ್ನು ಕೊಂಡುಕೊಂಡನು ಆತನ ಜ್ಞಾನದ ಪ್ರತೀತಿಯನ್ನು ಕಂಡು ರತ್ನ ವ್ಯಾಪಾರಿಯು ಕೂಡ ಹತ್ತು ಸಾವಿರ ಸ್ವರ್ಣ ಮುದ್ರೆಗಳನ್ನು ಮರಳಿ ಅವನಿಗೆ ಕೊಟ್ಟನು ಮತ್ತು ಆ ದೊಡ್ಡ ರತ್ನ ವ್ಯಾಪಾರಿಯ ವಿಶೇಷ ಜ್ಞಾನವನ್ನು ತಿಳಿದುಕೊಂಡು ಅದರ ಪ್ರಶಂಸೆಯನ್ನು ಮಾಡಿದನು. ಅಜ್ಞಾನಿ ಹುಲ್ಲು ಕಾಷ್ಠಗಳನ್ನು ಮಾರುವಂಥವರು ರತ್ನಗಳನ್ನು ಗಾಜಿನ ತುಂಡುಗಳೆಂದು ಹೇಳಿದ್ದರು, ಅವರ ಮಾತಿನದಂತೂ ಅವನು ಪ್ರತೀತಿ ಮಾಡಿರಲಿಲ್ಲ; ಆದರೆ ವಿಶೇಷ ಜ್ಞಾನದ ಪ್ರತೀತಿ ಮಾಡಿದನು.

ಅದೇ ಪ್ರಕಾರ ಕ್ರೋಧ-ಮಾನ-ಮಾಯೆ-ಲೋಭದ ಧಾರಕರು, ಧರ್ಮ ವಾಸನೆಯಿಂದ ರಹಿತ ಲೌಕಿಕ ಪಂಡಿತರಂತೂ ಜಿನಭಾಸಿತ ತತ್ತ್ವ ರತ್ನಗಳ ಪರೀಕ್ಷೆ ಮಾಡುವ ಸಲುವಾಗಿ ಹುಲ್ಲು ಕಾಷ್ಠಗಳನ್ನು ಮಾರುವಂಥವರ ಸಮಾನ ತುಚ್ಛ ಜ್ಞಾನಿ, ವಿಶೇಷ ಅರ್ಥವನ್ನು ತಿಳಿಯುವಲ್ಲಿ ಅಸಮರ್ಥ ಮತ್ತು ಕಷಾಯಗಳ ದಾಸರಿದ್ದಾರೆ. ಅಂಥವರುಗಳಿಂದ ಮಾಡಲಾದ ಹಾಸ್ಯ ನಿಂದೆಯ ಭಯವಿಲ್ಲ - ಎಂದು ತಿಳಿದುಕೊಂಡು ಈ ಗ್ರಂಥದ ಆರಂಭ ಮಾಡುವೆನು. ಅಜ್ಞಾನಿ ಜೀವರುಗಳ ಭಯವು ವಿವೇಕವಂತರಿಗೆ ಇರುವುದಿಲ್ಲ.

ಹೇಗೆ ಯಾವುದೋ ಎತ್ತು ಅಥವಾ ದೊಡ್ಡದಾದ ಒಂಟೆಯಿದೆ ಅದನ್ನು ನೋಡಿ ನಗ್ನ ಪುರುಷನು ಲಜ್ಜೆ ಅಥವಾ ಭಯಪಡುವುದಿಲ್ಲ. ನಗ್ನನಾಗಿ ಕುಳಿತುಕೊಂಡಿರುತ್ತಾನೆ ಆದರೆ ಅದೇ ಮನುಷ್ಯನು ಹತ್ತು ವರ್ಷದ ಬಾಲಕನನ್ನು ನೋಡಿಯೂ ಕೂಡ ಲಜ್ಜಿತನಾಗುತ್ತಾನೆ. ಎತ್ತು ಒಂಟೆಗಳಂತೂ ಇಪ್ಪತ್ತು ಇಪ್ಪತ್ತೈದು ವರ್ಷಗಳದ್ದಿವೆ ದೀರ್ಘ ದೇಹಧಾರಿ ಇವೆ, ಅವುಗಳ ಕುರಿತಾಗಿಯಂತೂ ಲಜ್ಜಿತನಾಗುವುದಿಲ್ಲ ಹಾಗೂ ಆ ಮನುಷ್ಯನು ಬಾಲಕನ ದೃಷ್ಟಿಯನ್ನು ಕಂಡು ಲಜ್ಜಿತನಾಗುತ್ತಾನೆ ಅದು ಹೇಗೆ ? ಏಕೆಂದರೆ ಪಶುಗಳಿಗೆ ನಗ್ನತೆಯ ಜ್ಞಾನವಿಲ್ಲ ಹಾಗೂ ಬಾಲಕನಿಗೆ ನಗ್ನತೆಯ ಜ್ಞಾನವಿದೆ, ಅದರಿಂದ ಬಾಲಕನಿಂದ ಲಜ್ಜಿತನಾಗುವುದು ಯೋಗ್ಯವಿದೆ.

ಹಾಗೆಯೇ ಅಜ್ಞಾನಿ, ಧರ್ಮ ವಾಸನೆಯಿಂದ ರಹಿತ, ಪಶು ಸಮಾನರಾದ ಅಜ್ಞಾನಿಗಳ ಆಶಂಕೆ ಹಾಗೂ ಭಯದಿಂದ ಧರ್ಮ ಕಾರ್ಯದ ತ್ಯಾಗ ಮಾಡುವುದು ಯೋಗ್ಯವಿರುವುದಿಲ್ಲ - ಹೀಗೆ ತಿಳಿದುಕೊಂಡು ಗ್ರಂಥಾರಂಭ ಮಾಡಲಾಗಿದೆ.

ತರ್ಕಕಾರನು ಹೇಳುತ್ತಾನೆ - ಪ್ರಾರಂಭವನ್ನಂತೂ ಮಾಡಿದ್ದೀರಿ ಆದರೆ ಸಾವಧಾನತೆಯನ್ನು ಇಟ್ಟುಕೊಳ್ಳುವುದು. ಛಂದಸ್ಸುಗಳ ಜೋಡಣೆಯು ನಷ್ಟವಾಗಬಾರದು, ಅರ್ಥದ ಶುದ್ಧತೆಯೊಂದಿಗೆ ವಚನದ ಮಿಷ್ಟತೆ ಹಾಗೂ ಪದ ಲಾಲಿತ್ಯ ಮೊದಲಾದುವನ್ನು ಕವೀಶ್ವರರುಗಳ ಪರಂಪರೆಯ ಅನುಸಾರ ನಿರ್ದೋಷವಾಗಿಡುವುದು.

ಅವನಿಗೆ ಹೇಳುವುದೇನೆಂದರೆ, ಸೋದರನೇ ! ಸರ್ವದೋಷ ರಹಿತ ಗ್ರಂಥಾರಂಭವಂತೂ ದೊಡ್ಡ ಕವೀಶ್ವರರುಗಳ ಅಧಿಪತಿ, ಮೂವತ್ತಾರು ಗುಣಗಳ ಧಾರಕ, ನಾಲ್ಕು ಜ್ಞಾನಧಾರಿಗಳಾದ ಆಚಾರ್ಯರು ಮಾಡುತ್ತಾರೆ, ಹನ್ನೊಂದು ಅಂಗ, ಹದಿನಾಲ್ಕು ಪೂರ್ವಗಳ ಜ್ಞಾನಧಾರಕರಾದ ಉಪಾಧ್ಯಾಯರು ಶುದ್ಧ, ಸರ್ವದೋಷ ರಹಿತ ಗ್ರಂಥಾರಂಭ ಮಾಡುತ್ತಾರೆ. ಅನ್ಯ ಯತೀಶ್ವರರು ದೀರ್ಘ ಜ್ಞಾನದ ಧಾರಿಗಳು ಅನೇಕ ಛಂದಸ್ಸು, ಅರ್ಥದ ಲಾಲಿತ್ಯ , ಶುದ್ಧ ಹಾಗೂ ಮಿಷ್ಟತೆಯೊಂದಿಗೆ ಗ್ರಂಥಗಳ ಆರಂಭ ಮಾಡುತ್ತಾರೆ. ಅಲ್ಲದೆ ಸರ್ವ ಯತಿಗಳ ಸ್ವಾಮಿ ನಾಲ್ಕು ಜ್ಞಾನಗಳ ಧಾರಕರಾದ ಗಣಧರದೇವರು ಸರ್ವ ದೋಷ ರಹಿತ ಗ್ರಂಥಗಳ ಆರಂಭ ಮಾಡುತ್ತಾರೆ.

ಯಾರು ಸಾಮಾನ್ಯ ಜ್ಞಾನದ ಧಾರಕರಿದ್ದಾರೆ, ಧರ್ಮಾನುರಾಗಿ ಕವಿಗಳಿದ್ದಾರೆ, ಅವರಿಂದ ಹೊಂದಾಣಿಕೆಯಲ್ಲಿ ಹಾಗೂ ಗ್ರಂಥಾರಂಭದಲ್ಲಿ ಸಾಮಾನ್ಯ ವಿಶೇಷ ದೋಷಗಳಾಗುವ ಸಾಧ್ಯತೆಯಿದೆ. ನಮ್ಮಿಂದ ಎಲ್ಲ ಪ್ರಕಾರ ನಿರ್ದೋಷ ಗ್ರಂಥಾರಂಭವು ಹೇಗೆ ಸಂಭವಿಸುವ ಸಾಧ್ಯತೆಯಿದೆ. ಆದರೆ ಸಾಮಾನ್ಯ ದೋಷದ ಭಯದಿಂದ ಒಂದು ವೇಳೆ

ಗ್ರಂಥಾರಂಭವನ್ನೇ ಮಾಡದಿದ್ದರೆ ಕ್ರಮದಿಂದ ಕವಿಗಳ ಮಾರ್ಗವು ನಿಂತುಹೋಗಬಹುದಾಗಿದೆ. ಅದರಿಂದ ಅಲ್ಪ ದೋಷದಲ್ಲಿ ಪಾಪವಿಲ್ಲ. ಪಾಪವಂತೂ ಕೇವಲ ಕಷಾಯಗಳಿಂದ ಇದೆ. ಒಂದು ವೇಳೆ ಕಷಾಯ ಸಹಿತ ನಮ್ಮ ಮಾನ ಪ್ರತಿಷ್ಠೆಯ ಸಲುವಾಗಿ ಸ್ವೇಚ್ಛೆಯೊಂದಿಗೆ ಶಬ್ದ ಅರ್ಥವನ್ನು ತಿಳಿದು ತಪ್ಪು ಮಾಡಿದರೆ, ಅದರಿಂದ ಪಾಪವಾಗುವುದು. ಶುದ್ಧ ಶ್ರದ್ಧೆಯೊಂದಿಗೆ ಗ್ರಂಥದ ಆರಂಭವಾದರೆ ನಮ್ಮ ಬುದ್ಧಿಯ ನ್ಯೂನ್ಯತೆಯಿಂದ ಯಾವುದಾದರೂ ದೋಷವು ಉಳಿದುಕೊಂಡರೂ ವಿಶೇಷ ಜ್ಞಾನಿಗಳು ಅದನ್ನು ಸರಿಪಡಿಸಲಿ; ಎಂಬುದಾಗಿ ವಿನಂತಿಸಿಕೊಂಡರೆ ಪಾಪವಿಲ್ಲ ಎಂದು ತಿಳಿದು ಗ್ರಂಥದ ಆರಂಭ ಮಾಡಲಾಗುವುದು.

ಹೇಗೆ ಯಾವನೋ ಓರ್ವ ವಿಶೇಷ ಜ್ಞಾನಿಯ ಹತ್ತಿರ ಅನೇಕ ಸಾಮಾನ್ಯ ಬುದ್ಧಿಯ ಧಾರಕರು ಜ್ಞಾನಾಭ್ಯಾಸ ಮಾಡುತ್ತಾರೆ. ತಮ್ಮ ತಮ್ಮ ಬುದ್ಧಿಯ ಅನುಸಾರ ಆ ಎಲ್ಲ ಬಾಲಕರು ಪಾಟಿಯ (ಕಪ್ಪು ಹಲಿಗೆ-ಸ್ಲೇಟ) ಮೇಲೆ ಬರೆಯುತ್ತಾರೆ ಹಾಗೂ ಬಂದು ಬಂದು ಆ ವಿಶೇಷ ಜ್ಞಾನಿಗೆ ತೋರಿಸುತ್ತಾರೆ. ಅವರು ಆ ಎಲ್ಲ ಸಾಮಾನ್ಯ ಬುದ್ಧಿಧಾರಿಗಳ ಪಾಟಿಗಳನ್ನು ನೋಡುತ್ತಾರೆ. ಯಾರು ಯಾರು ಶುದ್ಧ, ಪೂರ್ಣ ಶುದ್ಧ ಬರೆದಿದ್ದಾರೆ ಅವರ ಬುದ್ಧಿಯ ಪ್ರಶಂಸೆ ಮಾಡುತ್ತಾರೆ. ಕೆಲವರ ಪಾಟಿಯ ಮೇಲೆ ಒಂದೆರಡು ದೋಷಗಳಿದ್ದರೂ ಉಳಿದುದೆಲ್ಲ ಪಾಟಿಯ ಮೇಲೆ ಬರೆದಿದ್ದು ಶುದ್ಧವಿರುವುದರಿಂದ ವಿಶೇಷ ಜ್ಞಾನಿಯು ಅವರ ಪ್ರಶಂಸೆಯನ್ನೂ ಮಾಡುತ್ತಾನೆ. ಮತ್ತು ಆ ಒಂದೆರಡು ತಪ್ಪುಗಳನ್ನು ತಿಳಿಸಿಕೊಟ್ಟು ಹೇಳುವುದೇನೆಂದರೆ ಈತನ ಬುದ್ಧಿಯು ಒಳ್ಳೆಯದಿದೆ, ಇವನು ಒಳ್ಳೊಳ್ಳೆ ರಹಸ್ಯಗಳಿಂದ ಕೂಡಿದ ಪಾಠವನ್ನು ಬರೆದಿದ್ದಾನೆ ಎಂದಾಗ ಅವನು ಸಂತುಷ್ಟನಾಗುತ್ತಾನೆ.

ಈ ಪ್ರಕಾರ ಸಾಮಾನ್ಯ ಬುದ್ಧಿಯ ಧಾರಕ ಕವಿಗಳ ಅಭಿಪ್ರಾಯವಿದೆ. ನಾವಂತೂ ನಮ್ಮ ಜ್ಞಾನ ಸಾಮರ್ಥ್ಯದ ಅನುಸಾರ ತತ್ತ್ವಾರ್ಥ ಅಕ್ಷರಗಳದ್ದೇ ಶುಭ ಜೋಡಣೆ ಮಾಡುವೆವು ಒಂದು ವೇಳೆ ಯಾವುದಾದರೂ ಸೂಕ್ಷ್ಮ ತತ್ತ್ವಾರ್ಥ- ಭಾವವು ನಮಗೆ ಭಾಷಿತವಾಗದಿದ್ದರೆ ಮತ್ತು ವಿಶೇಷ ಜ್ಞಾನಿಗಳಿಗೆ ಆ ದೋಷವು ಕಂಡು ಬಂದರೆ ಅವರು ನಮ್ಮ ಮೇಲೆ ಧರ್ಮ ಸ್ನೇಹ ಮಾಡಿ ಅದನ್ನು ಶುದ್ಧಗೊಳಿಸಲಿ.

ಈ ಪ್ರಕಾರ ದೀರ್ಘ ಜ್ಞಾನಿ, ಜಿನಾಜ್ಞೆಯ ಅನುಸಾರ ಜೀವ ಅಜೀವ ತತ್ತ್ವಗಳನ್ನು ತಿಳಿದುಕೊಂಡು, ಜ್ಞಾನದ ಮೂಲಕ ಯಾರು ಯಥಾವತ್ ತತ್ತ್ವ ಭೇದದ ರಸ ಪ್ರಾಪ್ತ ಮಾಡಿಕೊಂಡಿದ್ದಾರೆ-ಅಂಥ ಧರ್ಮಾತ್ಮ ಜೀವರುಗಳಲ್ಲಿ ವಿನಂತಿ ಮಾಡಲಾಗಿದೆ.

ಇಲ್ಲಿ ಯಾವನೋ ತರ್ಕಕಾರನು ಹೇಳುತ್ತಾನೆ. ಸಜ್ಜನರಲ್ಲಿ ಏನು ವಿನಂತಿ ಮಾಡುವಿರಿ ? ಸಜ್ಜನರಂತೂ ದೋಷವಿದ್ದರೆ ಶುದ್ಧ ಮಾಡಿಯೇ ಮಾಡುವರು. ಸಜ್ಜನರು-ಜೀವದಯೆಯ ಪ್ರತಿಪಾಲಕರಾದ ಪುರುಷರ ಸಹಜ ಸ್ವಭಾವವೇ ಅಂಥದ್ದಿದೆ, ಆದರೆ ಯಾರು ದುಷ್ಟ, ಪಾಪಿ ಇದ್ದಾರೆ ಅವರಲ್ಲಿಯೇ ವಿನಂತಿ ಮಾಡಬೇಕಾಗುವುದು. ದುರ್ಜನ ಸ್ವಭಾವಿ, ಪರನಿಂದೆ ಮಾಡುವಂಥ ಜೀವರುಗಳನ್ನು ಉಪಶಾಂತಗೊಳಿಸುವ ಸಲುವಾಗಿ ಅವರಲ್ಲಿ ವಿನಂತಿ ಮಾಡಿಕೊಳ್ಳುವುದು ಯೋಗ್ಯವಿತ್ತು .

ಅವರಿಗೆ ಹೇಳುತ್ತಾರೆ. ಸೋದರನೇ ಯಾರು ದುಷ್ಟರಿದ್ದಾರೆ ಅವರದಂತೂ ಅಂಥದೇ ಒಂದು ಅಕೃತ್ರಿಮ ಅನಾದಿನಿಧನ ಸ್ವಭಾವವಿದೆ - ಅವರು ಇತರರ ಒಳ್ಳೆಯ ಕಾರ್ಯವನ್ನು ಸಹಿಸುವುದಿಲ್ಲ. ಅವರಿಗೆ ಯಾರಾದರೂ ಬಹಳಷ್ಟು ವಿನಂತಿ ಮಾಡಿದರೂ ಆ ಪಾಪಾತ್ಮರುಗಳು ಇತರರ ಒಳ್ಳೆಯ ವಸ್ತುವಿಗೆ ದೋಷ ತಗಲಿಸಿದಲ್ಲದೆ ಇರುವ ಸಾಧ್ಯತೆಯಿಲ್ಲ. ಅಂಥ ಕುಬುದ್ಧಿಗಳನ್ನು ಸಂತುಷ್ಟ ಪಡಿಸುವ ಸಲುವಾಗಿ ಯಾವ ಉಪಾಯ ಮಾಡಿದರೂ ವ್ಯರ್ಥವಿದೆ.

ಯಾವ ಪ್ರಕಾರ ಬೇವನ್ನು ಸಿಹಿ ಮಾಡುವ ಸಲುವಾಗಿ ಅನೇಕ ಸಿಹಿ ರಸಗಳನ್ನು ಹಾಲು ತುಪ್ಪಗಳನ್ನು ಬೇವಿನ ಮೂಲದಲ್ಲಿ ದೀರ್ಘಕಾಲದವರೆಗೆ ಸಿಂಪಡಿಸುತ್ತಿದ್ದರೂ, ಎರೆಯುತ್ತಿದ್ದರೂ, ಬೇವಿನ ರಸವು ಸಿಹಿಯಾಗುವುದಿಲ್ಲ. ಸಿಹಿ

ರಸವುಳ್ಳ ಎಷ್ಟು ಒಳ್ಳೆಯ ವಸ್ತುಗಳನ್ನು ಆ ಬೇವಿನ ಮೂಲದಲ್ಲಿ ಹಾಕಲಾಗುವುದು ಅದೆಲ್ಲವೂ ನಿರರ್ಥಕವಾಗಿ ಹೋಗುವುದು. ಅದೇ ಪ್ರಕಾರ ದುಷ್ಟರನ್ನು ಸಂತುಷ್ಟ ಪಡಿಸುವ ಸಲುವಾಗಿ ಯಾವ ಉಪಾಯ ಮಾಡಿದರೂ ಎಲ್ಲವೂ ನಿರರ್ಥಕವಾಗಿ ಹೋಗುವುದು.

ಅದರಿಂದ ಸೋದರನೇ ! ಯಾವ ವಸ್ತುವು ಸರಿಯಾಗಲು ಯೋಗ್ಯವಿದೆ ಅದರ ಉಪಾಯವನ್ನು ಮಾಡುವುದು ಆದರೆ ಯಾವುದರಲ್ಲಿ ಸುಧಾರಣೆ ಆಗುವುದು ಸಾಧ್ಯವೇ ಇಲ್ಲ, ಅದರಲ್ಲಿ ಉಪಾಯ ಮಾಡುವುದರ ಲಾಭವೇನು? ಆದುದರಿಂದ ಸಜ್ಜನರು ಸರಳ ಸ್ವಭಾವಿಯಿದ್ದಾರೆ ಅಂತೆಯೇ ಅವರಲ್ಲಿ ವಿನಂತಿ ಮಾಡಲಾಗಿದೆ. ಆದರೆ ಯಾರು ದುಷ್ಟರಿದ್ದಾರೆ ಅವರಲ್ಲಿ ವಿನಂತಿ ಮಾಡಿದರೂ ಏನಾಗುವುದು. ಅವರಂತೂ ಯೋಗ್ಯ ವಸ್ತುವಿನಲ್ಲಿ ದೋಷ ತಗಲಿಸಿಯೇ ತಗಲಿಸುತ್ತಾರೆ. ಯಾರು ದುಷ್ಟರಿದ್ದಾರೆ ಅವರದಂತೂ ಇತರರ ನಿಂದೆ ಮಾಡುವುದು, ಹಾಸ್ಯ ಮಾಡುವುದು, ಇತರರಿಗೆ ಪೀಡೆಯನ್ನುತ್ಪನ್ನ ಮಾಡುವುದು ಮತ್ತು ಅದರಿಂದ ಸ್ವಯಂ ಸುಖಿಗಳೆಂದು ಮನ್ನಿಸುವುದು ಸ್ವಭಾವವೇ ಇದೆ. ಅದನ್ನು ತಿಳಿದುಕೊಂಡೇ ಸಜ್ಜನರಲ್ಲಿ ವಿನಂತಿ ಮಾಡಲಾಗಿದೆ. ಏಕೆಂದರೆ ಆ ಸಜ್ಜನರು ತಪ್ಪು ತಡೆಗಳನ್ನು ತಿದ್ದಿ ಗ್ರಂಥವನ್ನು ಶುದ್ಧ ಮಾಡುವರು. ಇತರರ ಅವಗುಣಗಳನ್ನು ನೋಡುವಂಥವರ ಕುರಿತಾಗಿ ಸಮಭಾವವನ್ನಿಟ್ಟುಕೊಂಡು ಗ್ರಂಥದ ರಚನೆಯ ಉಪಾಯ ಮಾಡುತ್ತೇವೆ.

ಗ್ರಂಥದ ಆರಂಭದಲ್ಲಿಯೇ ಷಟ್‌ಕಾರ್ಯಗಳು ಆಚಾರ್ಯರ ಪರಂಪರೆಯಿಂದ ನಡೆಯುತ್ತ ಬಂದಿದೆ. ಯಾವ ಆಚಾರ್ಯರು ಹಾಗೂ ಗ್ರಂಥಕರ್ತೃ ಕವಿಗಳಾಗಿದ್ದಾರೆ ಅವರು ಗ್ರಂಥಾರಂಭದಲ್ಲಿಯೇ ಷಟ್‌ಕಾರ್ಯಗಳ ವರ್ಣನೆ ಮಾಡುತ್ತ ಬಂದಿದ್ದಾರೆ. ಅದೇ ಪರಂಪರೆಯ ಅನುಸಾರ ಈ ಗ್ರಂಥದ ಪ್ರಾರಂಭದಲ್ಲಿ ಅವುಗಳನ್ನು ಹೇಳಲಾಗುವುದು -

**ಮಂಗಲ ಣಿಮಿತ್ತ ಹೇಊ, ಜೋಏ ಪಮಾಣ ಣಾಮ ಕತ್ತಾಏ ।**
**ಸೂರೋ ಗ್ರಂಥಾರಂಭ ಯ, ಏ ಷಡ ಕಾಜೋ ಯ ಧಮ್ಮ ಸುತ್ತಾದೋ ।।೧೦।।**

**ಗಾಥಾರ್ಥ :-** ಮಂಗಲ, ನಿಮಿತ್ತ , ಹೇತು, ಪ್ರಮಾಣ, ನಾಮ, ಕರ್ತೃ - ಇವು ಆರು ಇವೆ. ಆಚಾರ್ಯರು ಯಾವಾಗ ಗ್ರಂಥಾರಂಭ ಮಾಡುತ್ತಾರೆ ಆಗ ಪ್ರಾರಂಭದಲ್ಲಿ ಇವುಗಳ ಸ್ವರೂಪದ ವರ್ಣನೆ ಮಾಡುತ್ತಾರೆ.

**ಭಾವಾರ್ಥ :-** ಈಗ ಇವುಗಳ ಸಾಮಾನ್ಯ ಸ್ವರೂಪ ಹೇಳುತ್ತಾರೆ. ಮಂಗಲ, ಪುಣ್ಯ , ಪವಿತ್ರ , ಶುಭ, ಕ್ಷೇಮ, ಕಲ್ಯಾಣ, ಸುಖ, ಸಾತಾ ಇತ್ಯಾದಿ ಇವೆಲ್ಲವು ಮಂಗಲದ ಹೆಸರುಗಳಿವೆ. ಇವುಗಳಲ್ಲಿ ಆರು ಭೇದಗಳಿವೆ.

ಅವುಗಳನ್ನೇ ಈಗ ಹೇಳುತ್ತಾರೆ,-

**ಣಾಮ ಸಥಾಪಣ ದವ್ವೋ, ಖೇತ್ತೋ ಕಾಲೋ ಯ ಭಾವ ಷಡ್ ಭೇದೋ ।**
**ಮಂಗಲ ಪುಣದಯ ಭಾವೋ, ಗ್ರಂಥಾರಂಭೇ ಯ ಸವ್ವ ಕರಈ ।।೧೧।।**

**ಗಾಥಾರ್ಥ :-** ನಾಮ ಮಂಗಲ, ಸ್ಥಾಪನಾ ಮಂಗಲ, ದ್ರವ್ಯ ಮಂಗಲ, ಕ್ಷೇತ್ರ ಮಂಗಲ, ಕಾಲ ಮಂಗಲ, ಭಾವ ಮಂಗಲ - ಇವು ಆರು ಪ್ರಕಾರದ ಮಂಗಲಗಳಿವೆ.

**ಭಾವಾರ್ಥ :-** ಈಗ ಇವುಗಳ ವಿಶೇಷತೆ ಹೇಳುತ್ತಾರೆ -

ನವೀನ ಗ್ರಂಥದ ಆರಂಭದಲ್ಲಿ ಪ್ರಥಮದಲ್ಲಿಯೇ ಮಂಗಲ ಮಾಡುತ್ತಾರೆ. ''ಪಾಪದ ನಾಶವು ಅದುವೇ ಮಂಗಲವಿದೆ'' ಪಂಚ ಪರಮೇಷ್ಠಿಗಳ, ವೃಷಭಾದಿ ಅನೇಕ ತೀರ್ಥಂಕರರುಗಳ, ಗಣಧರ ದೇವಾದಿ ಮಹಾಪುರುಷರ,

ಹಾಗೂ ಚರಮ ಶರೀರಿ ಮೊದಲಾದ ಧರ್ಮಾತ್ಮಾ ಪುರುಷರ ಹೆಸರು ಹೇಳುವುದರಿಂದ ಪಾಪದ ನಾಶವಾಗುತ್ತದೆ. ಇದು ನಾಮ ಮಂಗಲವಿದೆ.

ತೀರ್ಥಂಕರ ದೇವರ ಶರೀರದ ಆಕೃತಿಯನ್ನು ನಿರ್ಮಿಸಿ ಸ್ಥಾಪನೆ ಮಾಡಿ ಪೂಜೆ ಮೊದಲಾದುವನ್ನು ಮಾಡುವುದು ಸ್ಥಾಪನಾ ಮಂಗಲವಿದೆ.

ಅರಹಂತ ಮೊದಲಾದ ಪರಮೇಷ್ಠಿಗಳ ಶರೀರಗಳನ್ನು ನೋಡುವುದು, ಪೂಜಿಸುವುದು, ಸ್ಮರಣೆ ಮಾಡುವುದು ಅದರಿಂದ ಪಾಪದ ನಾಶಮಾಡಿಕೊಳ್ಳುವುದು ಪುಣ್ಯದ ಸಂಚಯ ಮಾಡಿಕೊಳ್ಳುವುದು, ದ್ರವ್ಯ ಮಂಗಲವಿದೆ.

ಯಾವ ಸ್ಥಾನದಿಂದ ಯತೀಶ್ವರರು ಧ್ಯಾನಾಗ್ನಿಯ ಮೂಲಕ ಅಷ್ಟ ಕರ್ಮಗಳನ್ನು ನಷ್ಟ ಮಾಡಿ ಸಿದ್ಧ ಲೋಕಕ್ಕೆ ಪ್ರಾಪ್ತರಾಗಿದ್ದಾರೆ ಅಂಥ ಗಿರನಾರ, ಸಮ್ಮೇದ ಶಿಖರ, ಪಾವಾಪುರ ಮೊದಲಾದ ಆ ಉತ್ತಮ ಕ್ಷೇತ್ರಗಳ ಹೆಸರು ಹೇಳಿ ಪೂಜೆ, ವಂದನೆ ಮಾಡುವುದರಿಂದ ಪುಣ್ಯದ ಬಂಧವಾಗುತ್ತದೆ, ಪಾಪದ ನಾಶವಾಗುತ್ತದೆ ಅದರಿಂದ ಅದು ಕ್ಷೇತ್ರ ಮಂಗಲವಿದೆ.

ಯಾವ ಕಾಲದಲ್ಲಿ ಜಿನೇಂದ್ರರುಗಳ ಗರ್ಭ, ಜನ್ಮ, ತಪ, ಜ್ಞಾನ, ನಿರ್ವಾಣ ಮೊದಲಾದ ಪಂಚ ಕಲ್ಯಾಣಕಗಳು ಆಗಿರುತ್ತವೆ ಹಾಗೂ ನಂದೀಶ್ವರದಲ್ಲಿ ಅಷ್ಟಾಹ್ನಿಕ ಮೊದಲಾದ ಜಿನ ಪೂಜೆಯ ದಿವಸಗಳಿವೆ ಅವು ಕಾಲ ಮಂಗಲವಿವೆ. ಆ ಕಾಲಗಳ ಹೆಸರು ಹೇಳುವುದರಿಂದ ವಂದನೆ ಮಾಡುವುದರಿಂದ, ಧ್ಯಾನ ಮಾಡುವುದರಿಂದ ಪಾಪದ ನಾಶವಾಗುತ್ತದೆ, ಪುಣ್ಯದ ಲಾಭವಾಗುತ್ತದೆ ಅದರಿಂದ ಕಾಲ ಮಂಗಲವಿದೆ.

ಅಷ್ಟ ಕರ್ಮ ರಹಿತರಾದ ಸಿದ್ಧಭಗವಂತರು ಹಾಗೂ ನಾಲ್ಕು ಘಾತಿಕರ್ಮ ರಹಿತ ಅನಂತ ಚತುಷ್ಟಯಸಹಿತ ಸಮವಸರಣಾದಿ ಉತ್ಕೃಷ್ಟ ಸಂಪದವನ್ನು ಪಡೆದು ದಿವ್ಯಧ್ವನಿಯ ಮೂಲಕ ಉಪದೇಶ ಕೊಡುವಂಥ ಪ್ರತ್ಯಕ್ಷ ತೀರ್ಥಂಕರ ಭಗವಂತರಿದ್ದಾರೆ, ಅವರ ಹೆಸರು ಹೇಳುವುದರಿಂದ ಸ್ಮರಣೆ ಮಾಡುವುದರಿಂದ, ಧ್ಯಾನ ಮಾಡುವುದರಿಂದ ಪಾಪಗಳ ನಾಶವಾಗಿ ಪುಣ್ಯದ ಲಾಭವಾಗುತ್ತದೆ ಅದರಿಂದ ಭಾವಮಂಗಲವಿದೆ.

ಈ ಪ್ರಕಾರ ಇವು ಆರು ಪ್ರಕಾರದ ಮಂಗಲಗಳಿವೆ. (ಈಗ ಮಂಗಲಾದಿ ಆರು ಗುಣಗಳ ಸ್ವರೂಪ ಹೇಳುತ್ತಾರೆ)

೧) ಯಾವುದು ಭವ್ಯಜೀವರುಗಳಿಗೆ ಗ್ರಂಥಾರಂಭದಲ್ಲಿ, ಶಾಸ್ತ್ರವನ್ನು ಆಲಿಸುವುದರಲ್ಲಿ, ಓದುವುದರಲ್ಲಿ, ಪೂಜೆ ಮಾಡುವುದರಲ್ಲಿ, ಮಂಗಲಕಾರಿ ಇದೆ ಅದು ಮಂಗಲವೆಂಬ ಹೆಸರಿನ ಗುಣವಿದೆ. ಅದು ಒಳ್ಳೆಯ ಕವಿಗಳಿಗೆ ಪ್ರಥಮ ಗ್ರಂಥಾರಂಭ ಮಾಡುವ ಸಮಯದಲ್ಲಿ ಮಂಗಲಕಾರಿ ಆಗುತ್ತದೆ.

೨) ಗ್ರಂಥಾರಂಭ ಮಾಡುವ ಸಮಯದಲ್ಲಿ ಭವ್ಯ ಜೀವರುಗಳ ಪಾಪನಾಶದ ಸಲುವಾಗಿ, ಅವರ ಮಿಥ್ಯಾತ್ವ ನಾಶವಾಗಿ ಸಮ್ಯಕ್ತ್ವವಾಗುವ ಸಲುವಾಗಿ ಹಾಗೂ ಪರಭವದಲ್ಲಿ ಸ್ವರ್ಗಮೋಕ್ಷವಾಗುವ ಸಲುವಾಗಿ, ಇತ್ಯಾದಿ ಧರ್ಮಾರ್ಥಿ ಭವ್ಯ ಜೀವರುಗಳಿಗೆ ಶುಭ ಫಲದ ಪ್ರಾಪ್ತಿಯ ನಿಮಿತ್ತದಿಂದ ಈ ಗ್ರಂಥದ ರಚನೆ ಮಾಡಲಾಗುವುದು ಎಂದು ವಿಚಾರ ಮಾಡುತ್ತಾರೆ. ಇದು ನಿಮಿತ್ತವೆಂಬ ಹೆಸರಿನ ಗುಣವಿದೆ.

೩) ಭವ್ಯ ಜೀವರುಗಳ ಸಲುವಾಗಿ ಓದುವ, ಕೇಳುವ, ಉಪದೇಶ ನೀಡುವ ಉದ್ದೇಶದಿಂದ ಶಾಸ್ತ್ರ ಬರೆಯುತ್ತಾರೆ. ಇದು ಅದರ ಹೇತುವೆಂಬ ಹೆಸರಿನ ಗುಣವಿದೆ.

೪) ಪ್ರಮಾಣದಲ್ಲಿ ೧) ಅರ್ಥ ಪ್ರಮಾಣ, ೨) ಅಕ್ಷರಪದ ಪ್ರಮಾಣವೆಂದು ಎರಡು ಭೇದಗಳಿವೆ.

ಅರ್ಥಪ್ರಮಾಣವಂತೂ ಅನಂತವಿದೆ. ಅದರ ತಾರತಮ್ಯತೆಯ ಭೇದವನ್ನು ಸರ್ವಜ್ಞ ಕೇವಲಜ್ಞಾನಿಗಳು ತಿಳಿಯುತ್ತಾರೆ. ಅದು ಛದ್ಮಸ್ಥರಿಗೆ ಜ್ಞಾನಗಮ್ಯವಿರುವುದಿಲ್ಲ. ಅದರಿಂದ ಅದನ್ನು ಬರೆಯಲಾಗುವುದಿಲ್ಲ. ಅಕ್ಷರ ಪ್ರಮಾಣವು ಅಕ್ಷರಗಳ ಎಣಿಕೆಯ ರೂಪವಿದೆ. ಈ ಗ್ರಂಥದಲ್ಲಿ ಇಂತಿಷ್ಟು ಶ್ಲೋಕಗಳಿವೆ - ಎಂಬುದು ಅಕ್ಷರ ಪ್ರಮಾಣವಿದೆ. ಹೀಗೆ ಎರಡು ಪ್ರಕಾರದ ಪ್ರಮಾಣವೆಂಬ ಹೆಸರಿನ ಗುಣವಿದೆ.

೫. ಗ್ರಂಥವು ಪೂರ್ಣವಾದ ಮೇಲೆ ಮೋಕ್ಷಮಾರ್ಗ ಸೂಚಕ ಶುಭನಾಮವನ್ನು ವಿಚಾರ ಮಾಡಿ ಗ್ರಂಥಕ್ಕೆ ಯಾವುದಾದರೂ ಪುಣ್ಯಾಧಿಕಾರೀ ಒಳ್ಳೆಯ ಹೆಸರನ್ನಿಡುವುದು. ಅದು ನಾಮವೆಂಬ ಹೆಸರಿನ ಗುಣವಿದೆ.

೬. ಗ್ರಂಥವು ಪೂರ್ಣವಾದ ಮೇಲೆ ಮಂಗಲಾಚರಣೆ ಮಾಡಿ, ಗ್ರಂಥಕರ್ತರು ತಮ್ಮ ನಾಮೋಲ್ಲೇಖ ಮಾಡುತ್ತಾರೆ. ಅದು ಕರ್ತಾ ಎಂಬ ಹೆಸರಿನ ಗುಣವಿದೆ.

ಈ ಪ್ರಕಾರ ಇವು ಆರುಗುಣಗಳ ಕಥನವನ್ನು ಗ್ರಂಥದ ಪ್ರಾರಂಭದಲ್ಲಿ ಮಾಡಲಾಯಿತು.

ಹೇಗೆ ಸಮುದ್ರದಲ್ಲಿ ಅನೇಕ ತರಂಗಗಳು ಉತ್ಪನ್ನವಾಗುತ್ತವೆ ಹಾಗೆಯೇ ನನ್ನ ಸುದೃಷ್ಟಿರೂಪದ ಸಮುದ್ರದಲ್ಲಿ ಅನೇಕ ತತ್ತ್ವ ಭೇದ, ವಸ್ತುಗಳ ಸ್ವಭಾವ, ಜೀವರುಗಳ ಬಾಹ್ಯ-ಅಭ್ಯಂತರ ರೂಪ ಕರ್ಮಗಳ ಚೇಷ್ಟೆಗೆ ಸಂಬಂಧಿಸಿದ ಪ್ರವೃತ್ತಿ ಮೊದಲಾದ ಜ್ಞಾನ ತರಂಗಗಳು ಉತ್ಪನ್ನವಾಗುತ್ತಲಿವೆ, ಅವೇ ತರಂಗಗಳನ್ನು ಈ ಗ್ರಂಥದಲ್ಲಿ ಬರೆಯುತ್ತೇವೆ, ಆದುದರಿಂದ ಈ ಗ್ರಂಥದ ಹೆಸರು ''ಸುದೃಷ್ಟಿ ತರಂಗಿಣಿ'' ಎಂದು ಹೇಳಲಾಗಿದೆ. ಈ ಗ್ರಂಥವು ಶುಭವನ್ನು ಮಾಡುವಂಥದ್ದಿದೆ. ಇದು ಸಮ್ಯಕ್‌ದೃಷ್ಟಿಗಳಿಗೆ ಧಾರಣೆ ಮಾಡಲು ಯೋಗ್ಯವಿದೆಯೆಂದು ತಿಳಿಯುವುದು. ಇತರರು ಕೂಡ ಯಾವ ಭವ್ಯಾತ್ಮರಿದ್ದಾರೆ ಅವರು ಈ ಗ್ರಂಥದ ಅಭ್ಯಾಸ ಮಾಡುವರು, ಅವರಿಗೂ ತತ್ತ್ವಗಳ ಜ್ಞಾನವಾಗುವುದು, ಇದರಿಂದ ಸಮ್ಯಕ್ತ್ವ ಪಡೆದು ಅತಿಶಯ ಸಹಿತ ಶುಭಫಲ ಕೊಡುವ ಪುಣ್ಯದ ಲಾಭವಾಗುವುದು.

ಯಾವ ಗ್ರಂಥದಲ್ಲಿ ಏಳು ಪ್ರಕಾರದ ಕಥೆಗಳಿರುವವು ಅವು ಒಳ್ಳೆಯ ಫಲದಾತೃ ಮಂಗಲಕರವೆಂದು ತಿಳಿಯುವುದು ಅವುವೇ ಏಳು ಭೇದರೂಪದ ಕಥನಗಳನ್ನು ಈ ಗ್ರಂಥದಲ್ಲಿ ತಿಳಿಯುವುದು. ಆ ಕಥೆಗಳು ಯಾವ ಯಾವವಿವೆ ಎಂಬುದನ್ನೇ ಈಗ ಹೇಳುತ್ತಾರೆ -

**ದವ್ವ ಯ ಖೇತ್ತ ಯ ಕಾಲ ಯ, ಭಾವೋ ತಿತ್ಥ ಯ ಹೋಯ ಫಲ ಆದಾ ।**
**ಪಸಥಾವೋ ಯಹ ಸತ್ತೋ, ಧಮ್ಮ ಕಥಾಈ ಧಮ್ಮ ಫಲ ದೇಈ ॥೧೨॥**

**ಗಾಥಾರ್ಥ :-** ದ್ರವ್ಯಕಥೆ, ಕ್ಷೇತ್ರಕಥೆ, ಕಾಲಕಥೆ, ಭಾವಕಥೆ, ತೀರ್ಥಕಥೆ, ಫಲಕಥೆ, ಪ್ರಸ್ತಾವ ಕಥೆ - ಇವು ಏಳು ಕಥೆಗಳಿದ್ದು ಇವುಗಳನ್ನು ಧರ್ಮಕಥೆಗಳೆಂದು ಹೇಳುತ್ತಾರೆ. ಇವುಗಳ ವರ್ಣನೆಯು ಯಾವುದರಲ್ಲಿ ಇರುತ್ತದೆ, ಆ ಶಾಸ್ತ್ರವು ಧರ್ಮಫಲದ ದಾತೃವೆಂದು ತಿಳಿಯುವುದು. ಒಂದು ವೇಳೆ ಯಾರಾದರೂ ಭವ್ಯರು ಈ ಏಳು ಕಥೆಗಳ ಚರ್ಚೆಯನ್ನು ಪರಸ್ಪರರಲ್ಲಿ ಮಾಡುತ್ತಿದ್ದರೆ ಅದನ್ನು ಧರ್ಮ ಕಥೆಯೆಂದು ಹೇಳುತ್ತಾರೆ.

**ಭಾವಾರ್ಥ :-** ಈಗ ಇವುಗಳ ಸಾಮಾನ್ಯ ಸ್ವರೂಪ ಹೇಳುತ್ತಾರೆ - **ದ್ರವ್ಯಕಥೆ -** ಜೀವದ್ರವ್ಯ, ಪುದ್ಗಲದ್ರವ್ಯ, ಧರ್ಮದ್ರವ್ಯ, ಅಧರ್ಮದ್ರವ್ಯ, ಕಾಲದ್ರವ್ಯ, ಆಕಾಶದ್ರವ್ಯ ಇವು ಆರು ದ್ರವ್ಯಗಳಿವೆ. ಇವುಗಳ ಚರ್ಚೆ, ಇವುಗಳ ಗುಣ ಪರ್ಯಾಯಗಳ ಪರಸ್ಪರ ಚರ್ಚೆಯು ಧರ್ಮಫಲದಾಯಕವಿರುವುದರಿಂದ ಧರ್ಮಕಥೆಯೆನಿಸಿಕೊಳ್ಳುತ್ತದೆ. ಈ ಕಥೆಗಳ ವ್ಯಾಖ್ಯಾನವನ್ನು ಯಾವ ಶಾಸ್ತ್ರದಲ್ಲಿ ಮಾಡಲಾಗಿದೆ ಅದು ಧರ್ಮಶಾಸ್ತ್ರವಿದೆ. ಅಂಥ ಶಾಸ್ತ್ರಗಳನ್ನು ಓದುವ, ಕೇಳುವ, ಉಪದೇಶ ನೀಡುವುದರಿಂದ ಪುಣ್ಯ ಫಲದ ಲಾಭವಾಗುತ್ತದೆ ಅದು ದ್ರವ್ಯಕಥೆ ಇದೆ.

**ಕ್ಷೇತ್ರಕಥೆ -** ಊರ್ಧ್ವ, ಮಧ್ಯ, ಪಾತಾಳಲೋಕದೊಳಗಿಂದ ಊರ್ಧ್ವ ಲೋಕದಲ್ಲಿ ಕಲ್ಪವಾಸೀ ದೇವಗಳ ಹದಿನಾರು ಸ್ವರ್ಗಗಳು, ಆ ದೇವ-ದೇವಿಯರ ಆಯು, ಕಾಯ, ಸುಖದ ಚರ್ಚೆ ಮಾಡುವುದು; ಒಂಭತ್ತು ಗ್ರೈವೇಯಿಕ, ಒಂಭತ್ತು ಅನುದಿಶೆ, ಪಂಚ ಅನುತ್ತರ ಮೊದಲಾದವುಗಳ ನಿವಾಸಿಯರ ಆಯು, ಕಾಯ, ಸುಖದ ಕಥನಾದಿ ರೂಪ ಊರ್ಧ್ವ ಲೋಕದ ವ್ಯಾಖ್ಯಾನವು ಅದು ಊರ್ಧ್ವಲೋಕ ಸಂಬಂಧದ ಕ್ಷೇತ್ರಕಥೆ ಇದೆ.

ಮಧ್ಯ ಲೋಕದಲ್ಲಿ ಅಸಂಖ್ಯಾತ ದ್ವೀಪ, ಸಮುದ್ರ ಅವು ಇಪ್ಪತ್ತೈದು ಕೋಟಾ-ಕೋಟಿ ಮಧ್ಯ ಪಲ್ಯ ಪ್ರಮಾಣ, ಅವುಗಳ ರಚನೆ ಹಾಗೂ ಎರಡೂವರೆ ದ್ವೀಪ, ಪಂಚಮೇರು, ಒಂದೊಂದು ಮೇರುವಿಗೆ ಸಂಬಂಧಿಸಿದ ಮೂವತ್ತೆರಡು-ಮೂವತ್ತೆರಡು ವಿದೇಹ ಹಾಗೂ ಭರತ-ಐರಾವತ ಕ್ಷೇತ್ರಗಳ ವರ್ಣನೆ ಮತ್ತು ಮೂವತ್ತಾನ್ಲಕ್ಕು-ಮೂವತ್ತಾನ್ಲಕ್ಕು ವಿಜಯಾರ್ಧ ಪರ್ವತ, ಅವುಗಳ ಎರಡೆರಡು ಶ್ರೇಣಿಗಳು, ಅವುಗಳಲ್ಲಿ ವಿದ್ಯಾಧರರ ನೂರಾಹತ್ತು ನಗರಗಳ ಕಥನ, ಷಟ್‌ಕುಲಾಚಲ, ಷಟ್‌ದ್ರಹಗಳಿಂದ ಹೊರಡುವಂಥ ಹದಿನಾಲ್ಕು ಮಹಾನದಿಗಳ ಜಂಬೂ-ಶಾಲ್ಮನಿ ವೃಕ್ಷ ಮೊದಲಾದ ಒಂದೊಂದು ಮೇರು ಸಂಬಂಧದ ರಚನೆಯ ಕಥನ ಹಾಗೂ ಪುಷ್ಕರ ದ್ವೀಪದ ಮಧ್ಯ ಭಾಗದಲ್ಲಿ ಸುವರ್ಣಮಯ ಮಾನುಷೋತ್ತರ ಪರ್ವತದ ಕಥನವಿದೆ; ಅಲ್ಲಿಯವರೆಗೇನೆ ಮನುಷ್ಯಲೋಕದ ಸೀಮೆಯಿದೆ. ಅಲ್ಲಿ ವಿರಾಜಮಾನವಿರುವ ನಾಲ್ಕೂದಿಕ್ಕಿನ ನಾಲ್ಕು ಜಿನಮಂದಿರಗಳ ಕಥನ ಹಾಗೂ ಎಂಟನೆಯ ನಂದೀಶ್ವರ ದ್ವೀಪದಲ್ಲಿ ನಾಲ್ಕು ಅಂಜನಗಿರಿ, ಒಂದೊಂದು ಅಂಜನಗಿರಿಗೆ ಸಂಬಂಧಿಸಿದ ನಾಲ್ಕು-ನಾಲ್ಕು ವಾಪಿಗಳು ಆ ವಾಪಿಗಳ ಮಧ್ಯಭಾಗದಲ್ಲಿ ಹದಿನಾರು ದಧಿಮುಖ ಪರ್ವತ ಹಾಗೂ ಮೂವತ್ತೆರಡು ರತಿಕರ ಪರ್ವತಗಳಿವೆ. ಈ ಪರ್ವತಗಳು ಕೆಳಗೆಯಂತೂ ಅನೇಕ ಪ್ರಕಾರದ ರತ್ನಮಯ ವಿಚಿತ್ರ ಶೋಭೆಯನ್ನು ಧಾರಣ ಮಾಡಿವೆ ಆದರೆ ಮೇಲೆ ಮೇಲಿನ ಶಿಖರಗಳು ಕೆಂಪು ಇವೆ, ಅದರಿಂದ ರತಿಕರವೆನಿಸಿಕೊಳ್ಳುತ್ತವೆ. ಇದೇ ಪ್ರಕಾರ ಕೆಳಗೆಯಂತೂ ಅನೇಕ ರತ್ನಮಯ ಶೋಭೆಯಿಂದ ಸಹಿತವಿವೆ ಆದರೆ ಮೇಲಿನ ಶಿಖರಗಳು ಬೆಳ್ಳಗೆ ಇರುವುದರಿಂದ ಇವುಗಳ ಹೆಸರು ದಧಿ ಮುಖವಿದೆ. ಇನ್ನು ಕೆಳಗೆಯಂತೂ ಅನೇಕ ರತ್ನಮಯವಿವೆ ಆದರೆ ಅವುಗಳ ಮೇಲಿನ ಶಿಖರಗಳು ಶ್ಯಾಮವಿರುವಂಥವು ಅವು ಅಂಜನಗಿರಿ ಇವೆ. ಒಂದೊಂದು ವಾಪಿಗೆ ಸಂಬಂಧಿಸಿದಂತೆ ನಾಲ್ಕು-ನಾಲ್ಕು ವನಗಳ ಕಥನ, ಈ ಪರ್ವತಗಳ ಮೇಲೆ ಸ್ಥಿತವಿರುವ ಐವತ್ತೆರಡು ಚೈತ್ಯಾಲಯಗಳ ಕಥನವಿದೆ. ಹನ್ನೊಂದನೆಯ ಕುಂಡಲ ದ್ವೀಪದ ಮಧ್ಯಭಾಗದಲ್ಲಿ ಕುಂಡಲಗಿರಿ ಪರ್ವತವಿದೆ. ಅಲ್ಲಿ ಸ್ಥಿತವಿರುವ ನಾಲ್ಕು ಜಿನಮಂದಿರಗಳ ಕಥನ ಹಾಗೂ ಅಸಂಖ್ಯಾತ ದ್ವೀಪಗಳ ಸ್ಥಿತಿ, ಅಸಂಖ್ಯಾತ ವ್ಯಂತರ ದೇವಗಳ ನಗರಗಳ ರಚನೆ, ಹದಿಮೂರನೆಯ ರುಚಕ ದ್ವೀಪದ ಮಧ್ಯಭಾಗದಲ್ಲಿ ಸುಶೋಭಿತವಿರುವ ರುಚಕ ಗಿರಿಯ ಮೇಲೆ ವಿರಾಜಮಾನವಿರುವಂಥ ನಾಲ್ಕು ಜಿನಮಂದಿರಗಳ ಕಥನ ಇತ್ಯಾದಿಗಳ ವರ್ಣನೆ ಇದೆ. ಇದೇ ಪ್ರಕಾರ ಅಸಂಖ್ಯಾತ ದ್ವೀಪಗಳ ಅಂತ್ಯದಲ್ಲಿ ಸ್ವಯಂಭೂರಮಣ ಸಮುದ್ರದ ನಾಲ್ಕೂ ಕೋನವರ್ತಿ ಕ್ಷೇತ್ರದಲ್ಲಿ ಇರುವಂಥ ಉತ್ಕೃಷ್ಟ ಅವಗಾಹನಧಾರಿ ತಿರ್ಯಂಚಗಳ ಕಥನ ಮತ್ತು ಅಸಂಖ್ಯಾತ ದ್ವೀಪಗಳಲ್ಲಿ ಸ್ಥಿತ ಒಂದು ಪಲ್ಯದ ಆಯುವುಳ್ಳ ತಿರ್ಯಂಚಗಳ ಕಥನ - ಇತ್ಯಾದಿ ಅನೇಕ ರಚನೆಗೆ ಸಂಬಂಧಿಸಿದ ಕಥನ ಸಹಿತವಿರುವ ಮಧ್ಯಲೋಕದ ಕಥನವಿದೆ. ಇವೆಲ್ಲವುಗಳ ಚರ್ಚೆಯನ್ನು ಪರಸ್ಪರರಲ್ಲಿ ಮಾಡುವುದು ಮಹಾಪುಣ್ಯ ಫಲವನ್ನು ಕೊಡುವಂಥದ್ದಿದೆ.

ಅಧೋಲೋಕದಲ್ಲಿ ಹತ್ತು ಜಾತಿಯ ಭವನವಾಸಿ ಮತ್ತು ವ್ಯಂತರ ದೇವಗಳ ಸಂಬಂಧದ ಭವನಗಳ ಪ್ರಮಾಣದ ಕಥನ, ದೇವಗಳ ಆಯುಕಾಯದ ಕಥನ, ಅವುಗಳಿಂದ ಕೆಳಗೆ ಪ್ರಥಮ ನರಕ, ಅವರ ಆಯುಕಾಯದ ಕಥನ ಹಾಗೂ ಕೆಳಗೆ ಷಟ್‌ನಾರಕೀ ಮತ್ತು ಅವರುಗಳ ಆಯು, ಕಾಯ, ದುಃಖದ ಕಥನ - ಇತ್ಯಾದಿ ಮೂರು ಲೋಕದ ಕಥನ ಹಾಗೂ ಮೂರು ಲೋಕದ ಶಿಖರದ ಮೇಲೆ ವಿರಾಜಮಾನ, ಅಷ್ಟ ಕರ್ಮರಜರಹಿತ ಶುದ್ಧಾತ್ಮಾ, ಜ್ಯೋತಿಸ್ವರೂಪ, ಕೇವಲಜ್ಞಾನದ ಧಾರಿ, ಅನಂತಸುಖದ ಅಧಿಪತಿಗಳಾದ ಅನಂತ ಸಿದ್ಧಭಗವಂತರಿದ್ದಾರೆ. ಆ ಸರ್ವ

ಸಿದ್ಧಪರಮಾತ್ಮ ಭಗವಂತರಿಗೆ ಪುನಃ ಪುನಃ ನಮ್ಮ ನಮಸ್ಕಾರವಿರಲಿ. ಅವರ ಅವಗಾಹನದ ಕಥನವಿದೆ. ಈ ಪ್ರಕಾರ ಸಾಮಾನ್ಯರೂಪದಿಂದ ಮೂರು ಲೋಕದ ಕಥನ, ಪುರುಷಾಕಾರ ಒಂದು ಮೃದಂಗದ ಮೇಲೆ ಅರ್ಧ ಮೃದಂಗವನ್ನಿರಿಸಿದ ಆಕಾರ, ಮೂರನೂರಾನಲವತ್ಮೂರು ರಾಜು ಘನಾಕಾರ ಕ್ಷೇತ್ರದ ಕಥನವಿದೆ. ಈ ಪ್ರಕಾರ ಮೂರು ಲೋಕದ ಚರ್ಚೆಯನ್ನು ಪರಸ್ಪರ ಮಾಡುವುದು ಧರ್ಮಚರ್ಚೆ ಇದೆ. ಇದರ ಕಥನವು ಯಾವ ಶಾಸ್ತ್ರದಲ್ಲಿ ಇದೆ, ಅದು ಧರ್ಮಫಲದಾಯಕ ಶಾಸ್ತ್ರವಿದೆ.

**ಕಾಲಕಥೆ -** ಮೂರು ಕಾಲದ ಕಥನದಲ್ಲಿ ಅತೀತ ಕಾಲವು ಅನಂತ ವ್ಯತೀತವಾಗಿ ಹೋಗಿದೆ, ವರ್ತಮಾನ ಕಾಲವು ಒಂದು ಸಮಯವರ್ತಿ ಮತ್ತು ಅನಾಗತ ಕಾಲವು ಅತೀತ ಕಾಲಕ್ಕಿಂತ ಅನಂತ ಗುಣಿತವಿದೆ. ಉತ್ಸರ್ಪಿಣಿ-ಅವಸರ್ಪಿಣಿ ಕಾಲದ ಪರಿವರ್ತನೆಯಿಂದ ಆಗುವಂಥ ಮೊದಲನೆಯ ಎರಡನೆಯ ಮೊದಲಾದ ಷಟ್‌ಕಾಲಗಳಲ್ಲಿನ ಆಯು, ಕಾಯ, ಸುಖ-ದುಃಖಗಳ ಕಥನದ ಚರ್ಚೆ- ಇತ್ಯಾದಿ ರೂಪದಲ್ಲಿ ಮೂರು ಕಾಲದ ಕಥನವಿದೆ. ಈ ಕಥನದ ಚರ್ಚೆ-ವಾರ್ತೆಯನ್ನು ಪರಸ್ಪರದಲ್ಲಿ ಮಾಡುವುದು ಪುಣ್ಯದಾಯಕ ಕಾಲ ಕಥೆಯಿದೆ. ಯಾವ ಶಾಸ್ತ್ರಗಳಲ್ಲಿ ಇವುಗಳ ಕಥನವಿರುತ್ತದೆ ಅವು ಧರ್ಮ ಶಾಸ್ತ್ರವಿವೆ. ಅವುಗಳನ್ನು ಪೂಜಿಸುವುದರಿಂದ, ಓದುವುದರಿಂದ, ಕೇಳುವುದರಿಂದ ಹಾಗೂ ಅವುಗಳ ಉಪದೇಶ ಕೊಡುವುದರಿಂದ ಪುಣ್ಯಫಲವಾಗುತ್ತದೆ.

**ಭಾವಕಥೆ -** ಔಪಶಮಿಕಭಾವ, ಕ್ಷಾಯೋಪಶಮಿಕಭಾವ, ಔದಯಿಕಭಾವ, ಕ್ಷಾಯಿಕಭಾವ ಮತ್ತು ಪಾರಿಣಾಮಿಕ ಭಾವ - ಇವು ಐದು ಭಾವಗಳಿವೆ.

ಯಾವವು ಕರ್ಮಗಳ ಉಪಶಮದಿಂದ ಆಗುತ್ತವೆ ಅವುಗಳನ್ನು ಔಪಶಮಿಕಭಾವವೆಂದು ಹೇಳುತ್ತಾರೆ. ಅವುಗಳಲ್ಲಿ ೧. ಔಪಶಮಿಕ ಸಮ್ಯಕ್ತ್ವ, ೨. ಔಪಶಮಿಕ ಚಾರಿತ್ರ ಎಂದು ಎರಡು ಭೇದಗಳಿವೆ. ಇವೆರಡು ಭಾವಗಳು ತಮ್ಮ ಘಾತಿಕರ್ಮಗಳ ಉಪಶಮ ಮಾಡಿ ಪ್ರಕಟವಾಗುವುದರಿಂದ ಔಪಶಮಿಕ ಭಾವವಿವೆ.

ಯಾವುದರಲ್ಲಿ ಕರ್ಮಗಳ ಅದೆಷ್ಟೋ ಅಂಶಗಳಂತೂ ಉದಯಭಾವರೂಪ ಇವೆ. ಮತ್ತು ಅದೆಷ್ಟೋ ಅಂಶಗಳು ಉಪಶಮ ಮತ್ತು ಕ್ಷಯರೂಪವಾಗಿ ಇರುತ್ತವೆ. ಅವುಗಳ ಉದಯವಾದ ಮೇಲೆ ರಸವು ಪ್ರಗಟವಾಗುವ ಸಮಯದಲ್ಲಿ ಆತ್ಮನೊಳಗೆ ಯಾವ ಭಾವಗಳಾಗುತ್ತವೆ ಅವನ್ನು ಕ್ಷಾಯೋಪಶಮಿಕ ಭಾವವೆಂದು ಹೇಳುತ್ತಾರೆ. ಅವುಗಳಲ್ಲಿ - ಮೂರು ಕುಜ್ಞಾನ, ನಾಲ್ಕು ಸುಜ್ಞಾನ, ಮೂರು ದರ್ಶನ, ಕ್ಷಾಯೋಪಶಮಿಕ ಸಮ್ಯಕ್ತ್ವ, ಕ್ಷಾಯೋಪಶಮಿಕ ಚಾರಿತ್ರ, ದೇಶಸಂಯಮ ಮತ್ತು ಐದು ಅಂತರಾಯಗಳ ಕ್ಷಯೋಪಶಮ-ಹೀಗೆ ಹದಿನೆಂಟು ಭೇದಗಳಿವೆ.

ಯಾವ ಗುಣಗಳ ಪ್ರತಿಪಕ್ಷಿ ಕರ್ಮಗಳು ಸರ್ವಥಾ ನಷ್ಟವಾಗಿ ಹೋಗಿವೆ ಅವು ಕ್ಷಾಯಿಕ ಭಾವವಿವೆ. ಕ್ಷಾಯಿಕ ಭಾವದಲ್ಲಿ - ಕ್ಷಾಯಿಕ ಜ್ಞಾನ, ಕ್ಷಾಯಿಕ ದರ್ಶನ, ಕ್ಷಾಯಿಕ ಚಾರಿತ್ರ, ಕ್ಷಾಯಿಕ ಸಮ್ಯಕ್ತ್ವ, ಪಂಚಲಬ್ಧಿಗಳು - ಕ್ಷಾಯಿಕ ಜ್ಞಾನ, ಕ್ಷಾಯಿಕ ಲಾಭ, ಕ್ಷಾಯಿಕ ಭೋಗ, ಕ್ಷಾಯಿಕ ಉಪಭೋಗ, ಕ್ಷಾಯಿಕ ವೀರ್ಯವೆಂದು ಒಂಭತ್ತು ಭೇದಗಳಿವೆ.

ಯಾವ ಭಾವಗಳು ಕರ್ಮಗಳ ಉದಯದಿಂದ ಆಗುತ್ತವೆ ಅವು ಔದಯಿಕ ಭಾವಗಳಿವೆ. ಅವುಗಳಲ್ಲಿ - ನಾಲ್ಕು ಕಷಾಯ, ನಾಲ್ಕು ಗತಿ, ಆರು ಲೇಶ್ಯೆ, ಮೂರು ವೇದ, ಮಿಥ್ಯಾತ್ವ, ಅಜ್ಞಾನ, ಅಸಂಯಮ, ಅಸಿದ್ಧತ್ವವೆಂದು ಇಪ್ಪತ್ತೊಂದು ಭೇದಗಳಿವೆ.

ಕರ್ಮ ಸಹಾಯರಹಿತ ಸ್ವಯಂಸಿದ್ಧವಾದ ಆತ್ಮನ ಭಾವವು ಪಾರಿಣಾಮಿಕ ಭಾವವಿದೆ. ಅದರಲ್ಲಿ - ಜೀವತ್ವ, ಭವ್ಯತ್ವ ಮತ್ತು ಅಭವ್ಯತ್ವವೆಂದು ಮೂರು ಭೇದಗಳಿವೆ.

ಇವೆಲ್ಲವೂ ಸೇರಿ ಐದು ಮೂಲ ಭಾವ ಮತ್ತು ಐವತ್ಮೂರು ಉತ್ತರ ಭಾವವೆಂದು ತಿಳಿಯುವುದು. ಈ ಐದು

ಭಾವಗಳ ಮೂಲ ಭೇದ, ಉತ್ತರ ಭೇದ ಮೊದಲಾದ ಅನೇಕ ಭಾವಗಳ ಕಥನವು ಯಾವುದರಲ್ಲಿ ಇರುತ್ತದೆ ಅದು ಧರ್ಮಶಾಸ್ತ್ರವಿದೆ. ಈ ಭಾವಗಳ ಚರ್ಚೆಯನ್ನು ಪರಸ್ಪರರಲ್ಲಿ ಮಾಡುವುದು ಭಾವಕಥೆಯಿದೆ.

**ತೀರ್ಥಕಥೆ –** ಎಲ್ಲಿಂದ ಯತೀಶ್ವರರು ಕರ್ಮನಾಶ ಮಾಡಿ ಸಿದ್ಧರಾಗಿದ್ದಾರೆ, ಅವು ಸಿದ್ಧಕ್ಷೇತ್ರವಿವೆ. ಎಂದರೆ – ಗಿರನಾರ, ಸಮ್ಮೇದ ಶಿಖರ, ಶತ್ರುಂಜಯ, ಸೋನಾಗಿರಿ, ಮಾಂಗಿತುಂಗಿ, ಗಜಪಂಥ ಇತ್ಯಾದಿ. ಈ ಸಿದ್ಧಕ್ಷೇತ್ರಗಳ ಕಥನವು ಯಾವುದರಲ್ಲಿ ಇದೆ, ಆ ಧರ್ಮಶಾಸ್ತ್ರವು ಉತ್ತಮ ಫಲ ನೀಡುವಂಥದ್ದೆಂದು ತಿಳಿಯುವುದು. ಈ ಸಿದ್ಧಕ್ಷೇತ್ರಗಳ ಚರ್ಚೆಯನ್ನು ಪರಸ್ಪರರಲ್ಲಿ ಮಾಡುವುದು ಧರ್ಮಕಥೆಯಿದೆ. ಪಂಚ ಕಲ್ಯಾಣಿಕಗಳ ಯಾವ ಕ್ಷೇತ್ರಗಳಿವೆ, ಅವುಗಳ ಕಥೆ ಹಾಗೂ ಬೇರೆಯೂ ಯಾವ ಧರ್ಮದ ಸ್ಥಳಗಳಿವೆ ಅವುಗಳ ಕಥೆಯನ್ನು ಹೇಳುವುದು ತೀರ್ಥಕಥೆ ಇದೆ.

**ಫಲ ಕಥೆ –** ಜೀವ, ಪುದ್ಗಲಾದಿ ದ್ರವ್ಯಗಳ; ಜೀವ, ಅಜೀವ, ಆಸ್ರವ, ಬಂಧ, ಸಂವರ, ನಿರ್ಜರೆ ಮತ್ತು ಮೋಕ್ಷ ಈ ಏಳು ತತ್ತ್ವಗಳ ಹಾಗೂ ಇವುಗಳಲ್ಲಿ ಪುಣ್ಯ ಮತ್ತು ಪಾಪಗಳನ್ನು ಸೇರಿಸಿ ಒಂಭತ್ತು ಪದಾರ್ಥಗಳ ಕಥನವು ಯಾವ ಶಾಸ್ತ್ರದಲ್ಲಿ ಇರುತ್ತದೆ, ಅದು ಧರ್ಮಶಾಸ್ತ್ರವಿವೆ. ಈ ಏಳು ತತ್ತ್ವಗಳ ವಿಶೇಷ ಚರ್ಚೆಯನ್ನು ಭೇದಾಭೇದರೂಪದಿಂದ ಮಾಡುವುದು ಫಲಕಥೆ ಇದೆ.

**ಪ್ರಸ್ತಾವ ಕಥೆ –** ಅನೇಕ ದೃಷ್ಟಾಂತ – ಯುಕ್ತಿಯನ್ನು ನೀಡಿ ವಿವಿಧ ನಯಗಳ ಮೂಲಕ ಮಿಥ್ಯಾತ್ವದ ನಾಶಕ, ಧರ್ಮಸಾಧಕ, ಪಾಪಕರ್ಮನಾಶಕ, ಅನೇಕ ಅಲಂಕಾರಗಳ ಕಥನವು ಜಿನಶಾಸ್ತ್ರಗಳಲ್ಲಿ ಇರುವುದರಿಂದ ಅವು ಧರ್ಮಶಾಸ್ತ್ರವಿವೆ. ತಮ್ಮ ಬುದ್ಧಿಯ ಮೂಲಕ ಧರ್ಮಸ್ಥಾಪನೆಯ, ಪಾಪಗಳ ಮಾರ್ಗಭೇದನೆಯ ದೃಷ್ಟಾಂತ ಯುಕ್ತಿಯೊಂದಿಗೆ ಪ್ರಶ್ನೆ, ಉತ್ತರಗಳಿಂದ ಚರ್ಚೆ ಮಾಡುವುದು ಪ್ರಸ್ತಾವ ಕಥೆಯಿದೆ.

ಉಪರ್ಯುಕ್ತ ಏಳು ಭೇದಗಳು ಧರ್ಮಕಥೆಯವಿವೆ. ಈ ಏಳು ಕಥೆಗಳ ಕಥನವು ಯಾವ ಶಾಸ್ತ್ರದಲ್ಲಿ ಇರುತ್ತದೆ ಅದು ಧರ್ಮಶಾಸ್ತ್ರವಿದೆ. ಈ ಏಳು ಕಥೆಗಳಿಂದ ರಹಿತ ಅನ್ಯ ಕಥನ ಸಹಿತ ಯಾವ ಶಾಸ್ತ್ರಗಳಿವೆ, ಅವು ಮಿಥ್ಯಾತ್ವಮಯ ಶಾಸ್ತ್ರಗಳು ಸಾಮಾನ್ಯವೆಂದು ತಿಳಿದುಕೊಂಡು ತ್ಯಾಗ ಮಾಡಲು ಯೋಗ್ಯವಿವೆ. ಈ ಪ್ರಕಾರ ಶುಭಕಥೆಗಳು ಏಳು ಇದ್ದು ಇವುಗಳಿಲ್ಲದೆ ವಿಷಯಗಳ ಕಾರಣ, ಹಿಂಸೆಯನ್ನು ಹೆಚ್ಚಿಸುವಂಥ, ಮಿಥ್ಯಾ ಶ್ರದ್ಧೆಯನ್ನುಂಟು ಮಾಡುವ ಯಾವ ಶಾಸ್ತ್ರಗಳಿವೆ ಅವು ಲೋಕಕಥಾಮಯ ವಿಕಥೆ ಇವೆ.

ಭವ್ಯರೇ ! ಈ ಶಾಸ್ತ್ರದಲ್ಲಿ ಏಳೂ ಕಥೆಗಳ ರಹಸ್ಯವು ಪ್ರಾಪ್ತವಾಗುತ್ತದೆ. ಎಲ್ಲ ಪ್ರಕಾರದಿಂದ ಧರ್ಮಕಥೆಯು ಧರ್ಮಫಲದಾಯಕವಿದೆ. ಅದರಿಂದ ಧರ್ಮಾತ್ಮಾ ಜೀವರುಗಳಿಗೆ ಈ ಗ್ರಂಥವು ಅಧ್ಯಯನ ಯೋಗ್ಯವಿದೆ.

ಈ ಪ್ರಕಾರ ಶ್ರೀ ಸುದೃಷ್ಟಿ ತರಂಗಿಣಿಯೆಂಬ ಹೆಸರಿನ ಗ್ರಂಥದಲ್ಲಿ ಇಷ್ಟದೇವ ನಮಸ್ಕಾರಪೂರ್ವಕ
ಗ್ರಂಥ ರಚಿಸುವ ಪ್ರತಿಜ್ಞೆ ಮಾಡಿ, ತಮ್ಮ ಆಲೋಚನೆ ಸಹಿತ, ಸಮ್ಯಕ್ತ್ವದ ಇಪ್ಪತ್ತೈದು
ದೋಷದ ಕಥನ ಸಹಿತಮೊದಲಾದ ಮಂಗಲದ ಆರೂ ಭೇದ, ಧರ್ಮ ಕಥೆಯ
ಏಳು ಭೇದ ಇತ್ಯಾದಿಗಳ ವರ್ಣನೆ ಮಾಡುವಂಥ
ಮೂರನೆಯ ಪರ್ವವು ಪೂರ್ಣವಾಯಿತು.

★★★★★

## ೪ : ನಾಲ್ಕನೆಯ ಪರ್ವ
## ಅನ್ಯಮತ-ನಿರಾಕರಣೆ

ಮೋಕ್ಷಮಂದಿರದ ಮೇಲೆ ಹತ್ತುವ ಸಲುವಾಗಿ ಸೋಪಾನದ ಸಮಾನವು ಮತ್ತು ಶಿವರೂಪಿ ಕಲ್ಪವೃಕ್ಷದ ಮೂಲವಾದ ಯಾವ ಸಮ್ಯಗ್ದರ್ಶನವಿದೆ ಅದರ ಉತ್ಪತ್ತಿಯ ಕಾರಣವು ಭೇದವಿಜ್ಞಾನವಿದೆ. ಅದು ಜಿನೇಂದ್ರ ದೇವರುಗಳ ಮೂಲಕ ಹೇಳಲಾದ ಜೀವತತ್ತ್ವ, ಅಜೀವತತ್ತ್ವ ಎಂದು ಎರಡು ಭೇದಮಯವಿದೆ. ಒಂದಂತೂ ಚೇತನ ಲಕ್ಷಣ ಸಹಿತ ನೋಡುವ, ತಿಳಿಯುವಂಥ ಜೀವತತ್ತ್ವವಿದೆ ಹಾಗೂ ಎರಡನೆಯದು ಅಜೀವತತ್ತ್ವವಿದ್ದು ಜಡವಿದೆ. ಚೇತನಾಗುಣದ ಧಾರಕ ಆತ್ಮತತ್ತ್ವಜ್ಞಾನಿಗೆ ಮೋಕ್ಷವಾಗುತ್ತದೆ ಈಗ ಅದರ ಉತ್ಪತ್ತಿಯ ಕಾರಣ ಹೇಳುತ್ತಾರೆ. ಮನ-ವಚನ-ಕಾಯ ರೂಪದ ಉತ್ತಮ ಮೂರು ಪವಿತ್ರ ಕುಲದಿಂದ ಉತ್ಪನ್ನ ಸದಾಚಾರಿ ಬಾಲಕರಿಗೆ ಅವರುಗಳ ಮಹಾಧರ್ಮಾತ್ಮರಾದ ಮಾತಾ-ಪಿತರು ತಮ್ಮ ಕುಲದ ಆಚಾರ, ಧರ್ಮಪರಂಪರೆಯನ್ನು ನಡೆಸುವ ಸಲುವಾಗಿ ಹಾಗೂ ಪುತ್ರರಿಗೆ ಈ ಲೋಕದಲ್ಲಿ ಕೀರ್ತಿಯುಕ್ತ ಮತ್ತು ಪರಭವದಲ್ಲಿ ಸುಖಿಯಾಗುವ ಸಲುವಾಗಿ ಪುತ್ರರುಗಳ ಮೇಲೆ ಸ್ನೇಹದೃಷ್ಟಿ ಮಾಡಿ ಐದು, ಏಳು ವರ್ಷದ ಅವಸ್ಥೆಯಲ್ಲೇ ವಿದ್ಯೆಯ ಅಭ್ಯಾಸ ಮಾಡಿಸುವ ಸಲುವಾಗಿ ಗೃಹಸ್ಥಾಚಾರ್ಯರುಗಳ ಹತ್ತಿರ ಓದಿಸುತ್ತಾರೆ.

ಮಹಾಧರ್ಮದ ಧಾರಕರು, ಎಲ್ಲ ಕಲೆಗಳಲ್ಲಿ ಪ್ರವೀಣರು, ಅನೇಕ ಶಸ್ತ್ರ-ಶಾಸ್ತ್ರಗಳ ವಿದ್ಯೆಯನ್ನು ತಿಳಿಯುವಂಥವರು, ಮಹಾದಯಾಳು, ಕೋಮಲ, ಸೌಮ್ಯಮೂರ್ತಿ, ಶುಭಾಚಾರಿ, ಇತ್ಯಾದಿ ಉತ್ತಮ ಗುಣಸಹಿತ, ನಿರ್ಮಲ ಚಿತ್ತದ, ಮಹಾ ಪಂಡಿತ, ಗೃಹಸ್ಥಾಚಾರ್ಯರುಗಳ ಹತ್ತಿರ ಒಳ್ಳೆಯ ಶ್ರಾವಕರ ಬಾಲಕರು ಓದುತ್ತಾರೆ. ಅವರು ಸುಬುದ್ಧಿ ಗುರುಗಳಿಂದ ಕೊಡಲ್ಪಟ್ಟ ಅಕ್ಷರವನ್ನು ಮಹಾವಿನಯದಿಂದ ಅಂಗೀಕಾರ ಮಾಡುತ್ತಾರೆ. ಗೃಹಸ್ಥಾಚಾರ್ಯರು ಆ ಶಿಷ್ಯನನ್ನು ಶುಭಲಕ್ಷಣವುಳ್ಳ, ವಿನಯ, ವಾತ್ಸಲ್ಯಾದಿ ಗುಣಸಹಿತ ಎಂದು ತಿಳಿದುಕೊಂಡು ಅನೇಕ ಪ್ರಕಾರದಿಂದ ಬಾಲಕನ ಪರೀಕ್ಷೆ ಮಾಡಿ ಶುಭಚೇಷ್ಟೆಗಳನ್ನು ತಿಳಿದುಕೊಂಡು ಅವನಿಗೆ ಇಹಭವ-ಪರಭವದಲ್ಲಿ ಕಲ್ಯಾಣಕರವು, ಸುಖವನ್ನು ಮಾಡುವಂಥ ಉತ್ತಮ ವಿದ್ಯೆಯನ್ನು ಕಲಿಸುತ್ತಾರೆ. ಅದರಲ್ಲಿ ಮೊದಲಂತೂ ಧರ್ಮಶಾಸ್ತ್ರ, ನಂತರ ಕರ್ಮಶಾಸ್ತ್ರಗಳ ಅಭ್ಯಾಸ ಮಾಡಿಸುತ್ತಾರೆ.

ಅಲ್ಲಿ ಧರ್ಮಶಾಸ್ತ್ರದಲ್ಲಿಯೂ ಮೊದಲಂತೂ ಪ್ರಥಮಾನುಯೋಗ ಕಲಿಸುತ್ತಾರೆ. ಅದರಿಂದ ಪುಣ್ಯ-ಪಾಪಗಳ ಫಲವನ್ನು ತಿಳಿದುಕೊಂಡು, ಪಾಪಕರ್ಮಗಳ ಫಲವು ನರಕ ತಿರ್ಯಂಚಗಳ ಮಹಾತೀವ್ರ ದುಃಖವೆಂದು ತಿಳಿದುಕೊಂಡು ಪಾಪದಿಂದ ಭಯಭೀತರಾಗಿ ಅದನ್ನು ಮಾಡಲಿಚ್ಛಿಸುವುದಿಲ್ಲ ಮತ್ತು ಪುಣ್ಯದ ಫಲವು ಮನುಷ್ಯರಲ್ಲಿ ಚಕ್ರವರ್ತಿ, ಕಾಮದೇವ, ನಾರಾಯಣ, ಬಲಭದ್ರ, ಮಂಡಲೇಶ್ವರ ಮೊದಲಾದ ಮಹಾನ್ ದೊರೆಗಳ ವಾಂಛಿತ ಭೋಗ ಹಾಗೂ ದೇವಗಳ ಉತ್ತಮ ಸುಖ ಇತ್ಯಾದಿ ಒಳ್ಳೆಯ ಫಲವನ್ನು ತಿಳಿದುಕೊಂಡು ಪುಣ್ಯವನ್ನು ಪ್ರಾಪ್ತಮಾಡಿಕೊಳ್ಳುವ ಉದ್ಯಮ ಮಾಡುತ್ತಾರೆ. ಈ ಪ್ರಕಾರ ಪುಣ್ಯ-ಪಾಪಗಳ, ಶುಭಾಶುಭ ಫಲವನ್ನು ತಿಳಿಸುವ ಸಲುವಾಗಿ ಪ್ರಥಮಾನುಯೋಗದ ಅಭ್ಯಾಸವನ್ನು ಪ್ರಥಮದಲ್ಲಿಯೇ ಮಾಡಿಸುತ್ತಾರೆ.

ಇದರ ನಂತರ ಕರಣಾನುಯೋಗ ಕಲಿಸುತ್ತಾರೆ. ಅದರಿಂದ ಮೂರು ಲೋಕಗಳ ಸ್ವರೂಪ, ಆಕಾರ, ಸ್ವಭಾವದ ಜ್ಞಾನವಾಗುತ್ತದೆ. ಅವುಗಳ ಜ್ಞಾನವಾಗುವುದರಿಂದ ಮುಗ್ಧ ಜೀವಗಳ ಹಾಗೆ ಈ ಲೋಕವನ್ನು ಯಾರಾದರೂ ನಿರ್ಮಿಸಿದ್ದಾರೆ ಈ ಲೋಕದ ಕರ್ತೃ ಬೇಕಾದರೆ ಲೋಕವನ್ನು ನಾಶ ಮಾಡಬಹುದು ಅದರಿಂದ ಸಂಸಾರದ ಅಭಾವವಾಗಿ ಶೂನ್ಯತೆಯಾಗಿ ಬಿಡುವುದು ಎಂಬ ಭ್ರಾಂತಿಯು ಉತ್ಪನ್ನವಾಗುವುದಿಲ್ಲ. ಈ ಪ್ರಕಾರ ಈ ಲೋಕವು ಕೃತ್ರಿಮವಿದೆ ಎಂದು ಬಾಲಕನ ಸಮಾನ ಮುಗ್ಧ ಜೀವರುಗಳು ಹೇಳುತ್ತಾರೆ. ಅವರ ವಚನವನ್ನು ಆಲಿಸಿ ಕರಣಾನುಯೋಗ ತಿಳಿಯುವಂಥವರಿಗೆ

ಭ್ರಾಂತಿಯು ಉತ್ಪನ್ನವಾಗುವುದಿಲ್ಲ. ಅವರು ನಿಜವಾದ ಜ್ಞಾನದ ಮಾಧ್ಯಮದಿಂದ ಲೋಕವನ್ನು ಸ್ವಯಂ ಸಿದ್ಧವೆಂದು ತಿಳಿಯುತ್ತಾರೆ. ಆದುದರಿಂದ ಕರಣಾನುಯೋಗ ಕಲಿಸುತ್ತಾರೆ.

ಅದರ ನಂತರ ಚರಣಾನುಯೋಗ ಕಲಿಸುತ್ತಾರೆ. ಅದರಿಂದ ಮುನಿ-ಶ್ರಾವಕರ ಆಚಾರವನ್ನು ತಿಳಿಯಲಾಗುತ್ತದೆ. ಮುನಿಗಳ ನಿರ್ದೋಷ ಭೋಜನ, ಗಮನ, ಮಾತನಾಡುವ, ಕುಳಿತುಕೊಳ್ಳುವ, ಮಲಗಿಕೊಳ್ಳುವ ಮೊದಲಾದ ಆಚಾರಗಳ ಜ್ಞಾನವಾಗುತ್ತದೆ. ಮತ್ತು ಶ್ರಾವಕರ ಭೋಜನ, ಪಾನಾದಿ ಯೋಗ್ಯ-ಅಯೋಗ್ಯ ಆಚಾರ, ಧರ್ಮಸೇವನಾದಿ ಕ್ರಿಯೆಗಳು ಜ್ಞಾತವಾಗಿ ಬಿಡುತ್ತವೆ. ಇದರಿಂದ (ಸಾತ್ವಿಕ ಜೀವನು) ತನ್ನ ಉಚ್ಚ ಕುಲದ ಉಚ್ಚ ಧರ್ಮ, ಉಚ್ಚ ಆಚಾರವನ್ನು ಬಿಟ್ಟುಕೊಡುವುದಿಲ್ಲ. ಅಭಕ್ಷ್ಯ ಭಕ್ಷಣೆ ಮಾಡುವಂಥ ಮ್ಲೇಚ್ಛರ ಸಂಗತಿಯಿಂದ ಅವನು ಕುಆಚಾರ ಗ್ರಹಣ ಮಾಡುವುದಿಲ್ಲ ಆದುದರಿಂದ ಚರಣಾನುಯೋಗ ಕಲಿಸುತ್ತಾರೆ.

ಅದರ ನಂತರ ಗುರುಗಳಿಂದ ದ್ರವ್ಯಾನುಯೋಗವನ್ನು ಓದಬೇಕು ಇದರಿಂದ ಜೀವ ಮತ್ತು ಅಜೀವದ ಭೇದವು ತಿಳಿದು ಬರುತ್ತದೆ. ಈ ಜೀವ ಅಜೀವಗಳ ದ್ರವ್ಯ, ಗುಣ, ಪರ್ಯಾಯಗಳನ್ನು ತಿಳಿಯಬೇಕು ಇದರಿಂದ ಸಂಸಾರ ದಶೆಯು ತನ್ನಿಂದ ಭಿನ್ನವಿರುವುದು ತಿಳಿದು ಬರುತ್ತದೆ. ತನ್ನ ಶರೀರದಿಂದಲೂ ಜಡತ್ವ ಭಾವವನ್ನು ತಿಳಿದುಕೊಂಡು ಏಕತ್ವವನ್ನು ಬಿಡಬೇಕು. ತನು-ಧನ ಕುಟುಂಬಾದಿಗಳ ವಿಯೋಗವಾಗಿ ಹೋದಮೇಲೆ ಅಜ್ಞಾನಿ ಮೋಹೀ ಜೀವರುಗಳ ಸಮಾನ ಅವನು ದುಃಖಿಯಾಗುವುದಿಲ್ಲ ಅದರ ಸಲುವಾಗಿ ದ್ರವ್ಯಾನುಯೋಗವನ್ನು ಕಲಿಸುತ್ತಾರೆ.

ಈ ಪ್ರಕಾರ ಧರ್ಮಶಾಸ್ತ್ರದ ರಹಸ್ಯವನ್ನು ತಿಳಿಸಿಕೊಟ್ಟು ಧರ್ಮದ ಕುರಿತಾದ ಭ್ರಮೆಯನ್ನು ನಾಶಪಡಿಸುತ್ತಾರೆ. ಇದರ ಪ್ರಸಾದದಿಂದ ಮಿಥ್ಯಾಧರ್ಮದ ರುಚಿಯು ಉಳಿಯುವುದಿಲ್ಲ. ಸದ್ಧರ್ಮದ ಅಂಗೀಕಾರ ಮಾಡಿ ಅವನು ಪರಭವವನ್ನು ಸುಧಾರಿಸಿಕೊಳ್ಳುತ್ತಾನೆ.

ಅದರ ನಂತರ ಕರ್ಮಶಾಸ್ತ್ರ (ಲೌಕಿಕ ಶಾಸ್ತ್ರ) ಕಲಿಸುತ್ತಾರೆ. ಅಲ್ಲಿ ಜ್ಯೋತಿಷ, ನಿಮಿತ್ತ ಶಾಸ್ತ್ರ, ವೈದ್ಯಕೀಯ, ಚಿತ್ರಕಲೆ, ಸಂಗೀತ ಕಲೆ, ಶಿಲ್ಪಶಾಸ್ತ್ರ, ಸಾಮುದ್ರಿಕ ಶಾಸ್ತ್ರ, ಛಂದಸ್ಸು ವ್ಯಾಕರಣ ಶಾಸ್ತ್ರ, ರತ್ನಪರೀಕ್ಷೆ, ಧಾತು ಪರೀಕ್ಷೆ ಇತ್ಯಾದಿ ಅನೇಕ ದೇಶಭಾಷೆಗಳು, ಅನೇಕ ದೇಶಗಳ ಲಿಪಿ, ಸ್ಥಾಪನೆ ಮೊದಲಾದ ಅನೇಕ ಶಾಸ್ತ್ರ ಕಲೆಗಳನ್ನು ಕಲಿಸಿ ಕೊಟ್ಟು ಪ್ರವೀಣನನ್ನಾಗಿಸುತ್ತಾರೆ. ಇವುಗಳ ಯೋಗದಿಂದ ಈ ಲೋಕದಲ್ಲಿ ಶ್ರೇಷ್ಠತೆಯು ಪ್ರಾಪ್ತವಾಗುತ್ತದೆ. ಎಲ್ಲ ಉತ್ತಮ ಜನರಿಂದ ಪೂಜ್ಯ ಪದದ ಪ್ರಾಪ್ತಿಯಾಗುತ್ತದೆ. ಪಾಪಿ ಪಾಖಂಡಿಗಳಿಂದ ವಂಚಿಸಲ್ಪಡುವುದಿಲ್ಲ. ಎಲ್ಲ ಕಲೆಗಳಿಂದ ಪೂರ್ಣ ಸುಖಿಗಳಾಗುತ್ತಾರೆ ಆದುದರಿಂದ ಅನೇಕ ಕರ್ಮ ಕಲೆಗಳನ್ನು ಕಲಿಸುತ್ತಾರೆ.

ಈ ಪ್ರಕಾರ ಗುರುವಿನ ದಯೆಯಿಂದ ಪ್ರಾಪ್ತವಾದ ಯಾವ ವಿದ್ಯಾನಿಧಿಯಿದೆ ಅದರಿಂದ ಉತ್ತಮ ಕುಲದ ಬಾಲಕರು ತಮ್ಮ ಬುದ್ಧಿಯನ್ನು ನಿರ್ಮಲ ಮಾಡಿಕೊಂಡು ಸರ್ವ ಸಂಸಾರ ದಶೆಯ ವೇತ್ತಾರರಾಗುತ್ತಾರೆ. ಗುರುಪ್ರಸಾದದ ಯೋಗದಿಂದ ಯಾರು ಜೀವ-ಅಜೀವ ತತ್ತ್ವಗಳ ಭೇದವನ್ನು ಪ್ರಾಪ್ತ ಮಾಡಿಕೊಳ್ಳುತ್ತಾರೆ ಅದರಿಂದ ನಿರ್ಮಲ ಬುದ್ಧಿ, ಪರದ್ರವ್ಯಗಳಿಂದ ಚಿತ್ತವನ್ನು ಭಿನ್ನಮಾಡಿಕೊಂಡು ಶರೀರಾದಿ ಜಡ ಪದಾರ್ಥಗಳ ಕುರಿತು ನಿರ್ಮಮತ್ವರಾಗಿ ಕರ್ಮ ಬಂಧನದಿಂದ ಬಿಡುಗಡೆ ಹೊಂದುವ ಇಚ್ಛೆಯಿಂದ ಜನ್ಮ ಮರಣ ದುಃಖದಿಂದ ಭಯಭೀತರಾಗಿ ದೀಕ್ಷೆಯ ಧಾರಣ ಮಾಡುತ್ತಾರೆ.

ಹಾಗೂ ಒಂದು ವೇಳೆ ದೀಕ್ಷೆ ತೆಗೆದುಕೊಳ್ಳುವ ಸಾಮರ್ಥ್ಯವಿಲ್ಲದಿದ್ದರೆ ಅಶುಭೋಪಯೋಗರೂಪ, ಪಾಪಾರಂಭದ ಫಲವನ್ನು ದುಃಖವೆಂದು ತಿಳಿದುಕೊಂಡು ಪಾಪಕಾರ್ಯಗಳಲ್ಲಿ ಯತ್ನಪೂರ್ವಕ ದಯಾಮಯ ಭಾವದೊಂದಿಗೆ ಪ್ರವರ್ತಿಸುತ್ತಾರೆ. ಶ್ರಾವಕ ಧರ್ಮದ ಸಾಧನೆ ಮಾಡುತ್ತ ಒಂದು ವೇಳೆ ಗೃಹಸ್ಥರಾಗಿ ಉಳಿದರೆ ಚಾರಿತ್ರ ಮೋಹದ ಉದಯದಿಂದ ಕುಟುಂಬ, ಶರೀರಾದಿಗಳ ಪೋಷಣೆಯ ಸಲುವಾಗಿ ತಮ್ಮ ಮನಸ್ಸು, ಇಂದ್ರಿಯಗಳು ಒಂದು ವೇಳೆ ವಶೀಭೂತವಾಗದಿದ್ದಲ್ಲಿ ಅವುಗಳ ಪೋಷಣೆಯ ಸಲುವಾಗಿ ತಮ್ಮ ಪದಯೋಗ್ಯ ಕಷಾಯಗಳ ಯೋಗದಿಂದ ಮಾನ

ದೊಡ್ಡಸ್ತನದ ಪೋಷಣೆಯ ಸಲುವಾಗಿ, ತಮ್ಮ ಗುರುಗಳಿಂದ ಕೊಡಲ್ಪಟ್ಟ ಜ್ಞಾನವನ್ನು ಪ್ರಕಟಪಡಿಸುವ, ಜಗತ್ತಿನಲ್ಲಿ ಕೀರ್ತಿರೂಪದ ಬಳ್ಳಿಯನ್ನು ವೃದ್ಧಿಸುತ್ತ ನ್ಯಾಯ ಮಾರ್ಗದಿಂದ ತಮ್ಮ ಬುದ್ಧಿ, ಬಲಗಳಿಂದ ಧನದ ಉಪಾರ್ಜನೆ ಮಾಡುತ್ತಾರೆ. ಅದರಿಂದ ತಮ್ಮ ಶರೀರ, ಕುಟುಂಬಗಳ ರಕ್ಷಣೆ ಮಾಡುತ್ತಾರೆ. ಸಮಸ್ತ ಕುಟುಂಬ ಜನರಲ್ಲಿ ಯಥಾಯೋಗ್ಯ ವಿನಯದ ವಚನಗಳನ್ನಾಡುತ್ತ ಎಲ್ಲರಿಗೂ ಹಿತವನ್ನುಂಟು ಮಾಡುತ್ತಾರೆ. ತಮ್ಮ ಗುರುಜನರೊಂದಿಗೆ, ಮಾತಾ-ಪಿತರೊಂದಿಗೆ ನಮ್ರತೆಯಿಂದ ಕೂಡಿದ ಸುಂದರ ವಿನಯ ಸಹಿತ ವಚನಗಳನ್ನಾಡುತ್ತ ಅವರನ್ನು ಸುಖಿಗಳನ್ನಾಗಿ ಮಾಡುತ್ತಾರೆ. ಯಾರು ತಮಗಿಂತ ಚಿಕ್ಕವರಿದ್ದಾರೆ ಅವರೊಂದಿಗೆ ಹಿತ-ಮಿತ, ಅಮೃತ ಸಮಾನ ಕೋಮಲ ವಚನಗಳನ್ನಾಡುತ್ತ ಹಸನ್ಮುಖಮುದ್ರೆಯೊಂದಿಗೆ ಸೌಮ್ಯ ದೃಷ್ಟಿಯಿಂದ ನೋಡಿಕೊಳ್ಳುತ್ತ ಅವರ ಮೇಲೆ ಪ್ರೀತಿ ಮಾಡುತ್ತ ಸುಖಿಗಳನ್ನಾಗಿ ಮಾಡುತ್ತಾರೆ. - ಈ ಪ್ರಕಾರ ಯಥಾಯೋಗ್ಯ ಸಂಭಾಷಣೆಯೊಂದಿಗೆ ಎಲ್ಲರಿಗೂ ಸುಖವನ್ನುಂಟು ಮಾಡುತ್ತಾರೆ.

ಈ ತತ್ತ್ವವೇತ್ತಾರರು ಸದೈವ ರಾಜ ಸಂಪದಾದಿಗಳನ್ನು ಭೋಗಿಸುತ್ತ ಚಿತ್ತದಲ್ಲಿ ವಿಚಾರ ಮಾಡುವುದೇನೆಂದರೆ - ನಾನು ಅನಾದಿ ಕಾಲದಿಂದ ಸಂಸಾರದಲ್ಲಿ ಭ್ರಮಣ ಮಾಡುತ್ತ ನರಕಾದಿ ಕುಗತಿಗಳಲ್ಲಿ ಪಾಪದ ಫಲವನ್ನು ಭೋಗಿಸಿ ದುಃಖಿಯಾದೆನು. ಕೆಲವೊಮ್ಮೆ ಶುಭ ಪರಿಣತಿಯ ಫಲದಲ್ಲಿಪುಣ್ಯದಿಂದ ದೇವಾದಿ ಶುಭ ಗತಿಗಳ ಇಂದ್ರಿಯ ಜನಿತ ಮನೋವಾಂಛಿತ ಸುಖ ಭೋಗಿಸಿದ್ದೇನೆ; ಆದರೆ ಈ ಜೀವದ ಭೋಗತೃಷ್ಣೆಯು ನಾಶವಾಗಲಿಲ್ಲ. ಸಂಸಾರ ಭ್ರಮಣವು ನಿಂತು ಹೋಗಲಿಲ್ಲ. ನಾನು ಜನ್ಮ-ಮರಣದ ದುಃಖಗಳಿಂದ ಯಾವಾಗ ಬಿಡುಗಡೆಯಾಗುವೆನು ? ಧನ್ಯರಿದ್ದಾರೆ ಮುನಿವರರು, ತೀರ್ಥಂಕರ ದೇವರು ! ಅವರು ರಾಜಸಂಪದವನ್ನು ತ್ಯಾಗ ಮಾಡಿ ಸಿದ್ಧಲೋಕವನ್ನು ಪ್ರಾಪ್ತಮಾಡಿಕೊಂಡರು. ನಾನು ಕೂಡ ಈಗ ಒಳ್ಳೆಯ ಅವಸರವನ್ನು ಪ್ರಾಪ್ತ ಮಾಡಿಕೊಂಡಿದ್ದೇನೆ ಆದುದರಿಂದ ಈಗ ಸಂಸಾರದ ಭ್ರಮಣವು ನಾಶವಾಗಿ ಬಿಡುವಂಥ ಕಾರ್ಯ ಮಾಡುವೆನು. ಯಾವಾಗಲೂ ಇದರ ಉಪಾಯದ ವಿಚಾರವನ್ನೇ ಮಾಡುತ್ತಿರುತ್ತಾನೆ.

ದೀಕ್ಷೆಗೆ ಯೋಗ್ಯವಾದ ದ್ರವ್ಯ, ಕ್ಷೇತ್ರ, ಕಾಲ, ಭಾವಗಳ ಏಕತೆಯ ಪ್ರಸಂಗವು ಕೂಡಿ ಬರದಿರುವುದರಿಂದ ಧರ್ಮಾತ್ಮಾ ಶ್ರಾವಕನು ತನ್ನ ಬುದ್ಧಿಯ ಬಲದಿಂದ ಜಲದಲ್ಲಿನ ಕಮಲದ ಸಮಾನ ಅಲಿಪ್ತನಾಗಿ ಮನೆಯಲ್ಲಿ ಇರುತ್ತಾನೆ. ಸಮಸ್ತ ಗೃಹ ಪಾಲನೆಯ ಉದ್ಯಮ ಮಾಡುತ್ತಾನೆ. ಇತರರಿಗೆ ಮೋಹಿಯಂತೆ ಕಂಡು ಬರುತ್ತಾನೆ. ಅನೇಕ ತನಕ್ರಿಯೆ, ವಚನಕ್ರಿಯೆಗಳಿಂದ ಎಲ್ಲರನ್ನು ಸಂತುಷ್ಟಗೊಳಿಸುತ್ತ ಸುಖವನ್ನುತ್ಪನ್ನ ಮಾಡುತ್ತಾನೆ; ಆದಾಗ್ಯೂ ಈ ಧರ್ಮಾತ್ಮನು ಗುರುಗಳ ಹತ್ತಿರ ಕಲಿತುಕೊಂಡಿರುವ ಪ್ರಥಮಾನುಯೋಗದ ರಹಸ್ಯರೂಪ ಪಾಪಾರಂಭದ ಫಲವನ್ನು ಅನಿಷ್ಟಕರವೆಂದು ತಿಳಿದುಕೊಂಡು ಗೃಹಕಾರ್ಯಗಳಲ್ಲಿ ಒಂದಾಗಿ ಹೋಗುವುದಿಲ್ಲ. ಈ ತತ್ತ್ವವೇತ್ತನು ಉದಾಸೀನ ವೃತ್ತಿಯ ಧಾರಕನು ಪಾಪರಂಭ ರಹಿತನಾಗುತ್ತ ತನ್ನ ಎರಡೂ ಭವಗಳ ಸುಧಾರಣೆ ಮಾಡಿಕೊಳ್ಳುತ್ತ ತನ್ನ ಶುದ್ಧ ಧರ್ಮದ ರಕ್ಷಣೆ ಮಾಡಿಕೊಳ್ಳುತ್ತ ವಿಚಕ್ಷಣ, ತನ್ನ ಕುಟುಂಬ ವರ್ಗದವರಾದ ಪತ್ನಿ, ಪುತ್ರರ ರಕ್ಷಣೆ ಮಾಡುತ್ತಾನೆ. ಈ ಪ್ರಕಾರ ಈ ಭವ್ಯ ಪ್ರಾಣಿಯು ಮನೆಯಲ್ಲಿ ಇರುತ್ತಿದ್ದರೂ ಕೂಡ ಪರಭವದಲ್ಲಿ ಸುಖಿಯಾಗುತ್ತಾನೆ.

ಯಾರು ಬಾಲ್ಯಾವಸ್ಥೆಯಲ್ಲಿಯೇ ಅಜ್ಞಾನಿ, ಕುಆಚಾರಿ, ಪಾಪಭಯರಹಿತ, ಶರೀರ ಭೋಗಗಳಲ್ಲಿ ಮೋಹಿತ, ಇಂದ್ರಿಯ ಸುಖಗಳ ಲೋಭಿ, ತನು-ಧನ-ಸಂಪದವನ್ನು ಅವಿನಶ್ವರ-ಸ್ಥಾಈಯೆಂದು ತಿಳಿಯುವಂಥವರು ಧರ್ಮ ಭಾವನಾ ರಹಿತರಿದ್ದಾರೆ, ಆ ಜೀವರುಗಳು ಗೃಹಾರಂಭದಲ್ಲಿ ದಯೆಯಿಂದ ರಹಿತವಾಗಿ ಪ್ರವರ್ತಿಸುವ ಕಾರಣ ಪಾಪಬಂಧದಿಂದ ಕುಗತಿಗಳಲ್ಲಿ ದುಃಖಿಯಾಗುತ್ತಾರೆ. ಅದರಿಂದ ಪ್ರಾಯಃ ಮನ-ವಚನ-ಕಾಯರೂಪದ ಮೂರು ಉತ್ತಮ ಕುಲಗಳಲ್ಲಿ ಉತ್ಪನ್ನ ಸುಬುದ್ಧಿಯ ಬಾಲಕರಿಗೆ ಅವರುಗಳ ಸುಖದ ನಿಮಿತ್ತವಾಗಿ ಬಾಲ್ಯಾವಸ್ಥೆಯಲ್ಲಿಯೇ ವಿದ್ಯೆ ಕಲಿಸುವುದು ಯೋಗ್ಯವಿದೆ.

ಒಂದು ವೇಳೆ ಪುತ್ರನು ಧರ್ಮಾತ್ಮನಿದ್ದರೆ, ವಿದ್ಯಾವಂತನಿದ್ದರೆ, ಮಾತಾ-ಪಿತರನ್ನು ಸುಖಿಗಳನ್ನಾಗಿಸುತ್ತಾನೆ; ಆದರೆ ಒಂದು ವೇಳೆ ಪುತ್ರನು ಮೂರ್ಖ, ಅಜ್ಞಾನಿ, ಪಾಪಾಚಾರಿ, ಅವಿನಯಿಯಾಗಿದ್ದರೆ ಮಾತಾ-ಪಿತರನ್ನು ದುಃಖಿಗಳನ್ನಾಗಿ ಮಾಡುತ್ತಾನೆ - ಎಂದು ತಿಳಿದುಕೊಂಡು ಧರ್ಮಾತ್ಮರಾದ ವಿವೇಕ ಸಂಪನ್ನ ಪುರುಷರು ತಮ್ಮ ಪುತ್ರರನ್ನು ಧರ್ಮಶಾಸ್ತ್ರಗಳಲ್ಲಿ ಪ್ರವೇಶ ಮಾಡಿಸುತ್ತಾರೆ. ಯಾವ ಪಂಡಿತರು ಧರ್ಮಾತ್ಮಾ ಪುರುಷರು ಧರ್ಮಶಾಸ್ತ್ರಗಳ ಅಭ್ಯಾಸ ಮಾಡುತ್ತಾರೆ ಅವರಿಗೆ ಧರ್ಮ ಶಾಸ್ತ್ರಗಳ ಅಭ್ಯಾಸದಿಂದ ಸಮ್ಯಕ್ತ್ವದ ಲಾಭವಾಗುತ್ತದೆ. ಸಮ್ಯಕ್ತ್ವವಾಗುವುದರಿಂದ ಜೀವ-ಅಜೀವ ತತ್ತ್ವಗಳ (ಭಾವರೂಪ) ತಿಳಿವಳಿಕೆ ಉಂಟಾಗುತ್ತದೆ. ಅದರಲ್ಲಿ ಜೀವ ತತ್ತ್ವವಂತೂ ನೋಡುವ ತಿಳಿಯುವ ರೂಪವಿದೆ. ಹಾಗೂ ಅಜೀವ ತತ್ತ್ವದ ಐದು ಭೇದಗಳಿದ್ದು ಅವೆಲ್ಲವೂ ಜಡವಿವೆ, ಜ್ಞಾನರಹಿತವಿವೆ. ಈ ಜೀವ-ಅಜೀವ ತತ್ತ್ವಗಳ ಪ್ರರೂಪಣೆಯನ್ನು ಜಿನದೇವರು ಯಾವ ರೂಪದಿಂದ ಮಾಡಿದ್ದಾರೆ ಅದೇ ರೂಪದಿಂದ ಸಮ್ಯಕ್‌ದೃಷ್ಟಿಯು ಶ್ರದ್ಧೆ ಮಾಡಿ ಪದಾರ್ಥಗಳಲ್ಲಿ ಹೇಯ ಉಪಾದೇಯ ಮಾಡುತ್ತಾನೆ. ಅವನು ವಿಚಾರ ಮಾಡುವುದೇನೆಂದರೆ ಜೀವ-ಅಜೀವ ತತ್ತ್ವಗಳ ಭೇದವನ್ನು ಜಿನೇಂದ್ರ ಭಗವಂತರು ಹೇಳಿರುವುದು ಪ್ರಮಾಣವಿದೆ, ಸತ್ಯವಿದೆ; ಎಂಬ ದೃಢ ಶ್ರದ್ಧೆಯು ವ್ಯವಹಾರ ಸಮ್ಯಕ್ತ್ವವಿದೆ.

ದರ್ಶನ ಮೋಹನೀಯದ ಮೂರು, ಅನಂತಾನುಬಂಧಿಯ ನಾಲ್ಕು - ಹೀಗೆ ಏಳು ಪ್ರಕೃತಿಗಳ ಉಪಶಮ, ಕ್ಷಯವಾದಮೇಲೆ ಪ್ರಕಟವಾಗುವ ಜೀವ-ಅಜೀವ ತತ್ತ್ವಗಳ, ಆತ್ಮನ ಹಾಗೂ ಅನ್ಯ ಜೀವಗಳ ಯಥಾವತ್ ಗುಣ, ಪರ್ಯಾಯಗಳ ಸಹಿತ ಅನುಭವಪೂರ್ವಕ ಪೃಥಕ್ ಪೃಥಕ್ ತಿಳಿವಳಿಕೆಯಿಂದ ಕೂಡಿದ ಶುಭ ಜ್ಞಾನವು ಸಮ್ಯಕ್ತ್ವವಿದೆ. ಇದರಿಂದ ಷಟ್‌ದ್ರವ್ಯಗಳ ವಿಷಯದಲ್ಲಿ ಯಾವ ಭಾವವು ಜ್ಞಾತವಾಗುತ್ತದೆ ಅದುವೇ ಜೀವ-ಅಜೀವವೆಂಬ ಎರಡು ತತ್ತ್ವಗಳ ಭೇದವಿದೆ. ಅವುಗಳಲ್ಲಿ ಐದು ದ್ರವ್ಯಗಳು ಜಡ, ಜ್ಞಾನರಹಿತ ಅಚೇತನವಿದೆ. ಅವುಗಳ ಗುಣಗಳೂ ಅಚೇತನವಿವೆ ಮತ್ತು ಪರ್ಯಾಯಗಳೂ ಅಚೇತನವಿವೆ. ಒಂದು ಜೀವ ತತ್ತ್ವವೇ ಚೇತನವಿದ್ದು ಅದರ ಗುಣ ಪರ್ಯಾಯಗಳು ಕೂಡ ನೋಡುವ, ತಿಳಿಯುವಂಥ ಚೇತನವಿವೆ. ಜೀವ ತತ್ತ್ವಗಳು ಕೂಡ ಅನಂತವಿವೆ. ಎಲ್ಲ ಜೀವಗಳು ತಮ್ಮ ತಮ್ಮ ಸತ್ತಾವನ್ನು ಭಿನ್ನ-ಭಿನ್ನ ರೂಪದಿಂದ ಧಾರಣ ಮಾಡುತ್ತವೆ. ಯಾವುದೇ ಜೀವವು ಬೇರೆ ಯಾವುದೇ ಜೀವದೊಂದಿಗೆ ಬೆರೆತು ಹೋಗುವುದಿಲ್ಲ. ಎಲ್ಲವುಗಳ ಸತ್ತಾ ಭಿನ್ನ-ಭಿನ್ನವಿದೆ.

ಎಲ್ಲವುಗಳ ಗುಣ ಪರ್ಯಾಯಗಳೂ ಭಿನ್ನ-ಭಿನ್ನ ಸತ್ತಾವುಳ್ಳವಿವೆ. ಯಾವುದರ ಗುಣ ಪರ್ಯಾಯವು ಬೇರೆ ಯಾವುದರ ಗುಣ ಪರ್ಯಾಯಗಳಲ್ಲಿ ಬೆರೆತು ಹೋಗುವುದಿಲ್ಲ - ಈ ಪ್ರಕಾರ ಸಂಸಾರೀ ಸರ್ವ ಜೀವಗಳು ಅನಂತವಿವೆ.

ಅವುಗಳೊಳಗಿಂದ ನಾನು ಒಂದು ಭಿನ್ನ ಸತ್ತಾ, ಗುಣ, ಪರ್ಯಾಯಧಾರಕ ಆತ್ಮನಿದ್ದೇನೆ. ನನ್ನ ಶುಭಾಶುಭ ಕರ್ಮಗಳ ಫಲವನ್ನು ಭೋಗಿಸುವಂಥ ಹಾಗೂ ನನ್ನ ಭಾವಗಳ ಅನುಸಾರ ಶುಭಾಶುಭ ಕರ್ಮಗಳ ಬಂಧ ಮಾಡಿಕೊಳ್ಳುವಂಥವನು ನಾನೇ ಇದ್ದೇನೆ. ಅದರಿಂದ ನಾನೇ ರಾಗಾದಿ ಉಪಾಧಿಗಳಿಂದ ಬಿಡುಗಡೆಯಾದರೆ ಕರ್ಮಬಂಧನವು ನಷ್ಟವಾಗಿ ಸಿದ್ಧ ಲೋಕದ ನಿವಾಸಿಯಾಗುವೆನು - ಈ ಪ್ರಕಾರ ಆತ್ಮನ ಭೇದಾಭೇದರೂಪ ಅನುಭವಪೂರ್ವಕ ದೃಢ ಶ್ರದ್ಧೆಯಾಗುವುದು ನಿಶ್ಚಯ ಸಮ್ಯಕ್ತ್ವವಿದೆ. ಇದು ಮುಕ್ತಿ ಸುಂದರಿಯ ಜೊತೆಗೆ ವಿವಾಹದ ಸಲುವಾಗಿ ಮೊದಲನೆಯ ನಿಶ್ಚಿತಾರ್ಥದ ಸಮಾನವಿದೆ. ಉಪರ್ಯುಕ್ತ ವ್ಯವಹಾರ-ನಿಶ್ಚಯ ಸಮ್ಯಕ್ತ್ವವು ತತ್ತ್ವ ಶ್ರದ್ಧೆಯಾದ ಮೇಲೆ ಆಗುತ್ತದೆ. ಅದರಿಂದ ಭವ್ಯ ಜೀವರುಗಳು ಜಿನೇಂದ್ರ ದೇವರ ಮೂಲಕ ಪ್ರರೂಪಿಸಲ್ಪಟ್ಟ ಜೀವ-ಅಜೀವ ತತ್ತ್ವಗಳ ಯಥಾವತ್ ದೃಢ ಶ್ರದ್ಧೆ ಮಾಡುವುದು ಯೋಗ್ಯವಿದೆ.

ಪ್ರಶ್ನೆ :- ಜೀವ-ಅಜೀವ ಇವು ಎರಡು ತತ್ತ್ವಗಳನ್ನಂತೂ ಬೇರೆಯೂ ಅನೇಕ ಮತಗಳಲ್ಲಿ ಹೇಳಿದ್ದಾರೆ ನೀವು ಜಿನೇಂದ್ರ ದೇವರಿಂದಲೇ ಭಾಷಿತವೆಂದು ಹೇಳುವುದರಲ್ಲಿ ಯಾವ ವಿಶೇಷತೆಯಿದೆ ? ಇದರಲ್ಲಿ ಮಹತ್ವವೇನಿದೆ ?

**ಸಮಾಧಾನ ಃ-** ಸೋದರನೇ ! ನೀನು ಹೇಳುವುದಂತೂ ಸತ್ಯವಿದೆ, ಎಲ್ಲ ಮತಗಳಲ್ಲಿ ಜೀವ-ಅಜೀವ ತತ್ತ್ವಗಳ ಭೇದವನ್ನು ಹೇಳಿದ್ದಾರೆ; ಆದರೆ ಜಿನದೇವರ ಹೇಳುವಿಕೆಯಲ್ಲಿ ಮತ್ತು ಅನ್ಯ ಮತಗಳು ಹೇಳಿರುವುದರಲ್ಲಿ ಮಹಾ ಅಂತರವಿದೆ ಬಾಲಕರ ವಚನ ಮತ್ತು ದೊಡ್ಡ ಪಂಡಿತ ಪುರುಷರ ವಚನದಲ್ಲಿ ಅಂತರವಿರುವ ಸಮಾನವೆಂದು ತಿಳಿಯುವುದು. ಹೇಗೆ ಬಾಲಕನಂತಿರುವ ಅಜ್ಞಾನಿ ಮುಗ್ಧ ಜೀವರುಗಳ ವಚನವು ಪ್ರತೀತಿರಹಿತವಿರುತ್ತದೆ ಮತ್ತು ದೊಡ್ಡ ಪಂಡಿತ ಪುರುಷರ ವಚನಗಳು ಪ್ರತೀತಿ ಸಹಿತವಿರುತ್ತವೆ, ಹಾಗೆಯೇ ಸಾಮಾನ್ಯ ಜ್ಞಾನದ ಧಾರಕ ತುಚ್ಚಬುದ್ಧಿ, ಅಜ್ಞಾನಿಗಳ ವಚನದಲ್ಲಿ ಹಾಗೂ ಅಂತರ್ಯಾಮೀ, ಸರ್ವಜ್ಞ ಕೇವಲಿಗಳ ವಚನದಲ್ಲಿ ಮಹದಂತರವಿದೆ. ಜಿನದೇವರಿಂದ ಹೇಳಲ್ಪಟ್ಟ ಜೀವ-ಅಜೀವಾದಿ ತತ್ತ್ವಗಳೇ ಸತ್ಯವಿವೆ ತುಚ್ಚ ಜ್ಞಾನಿಗಳಿಂದ ಹೇಳಲ್ಪಟ್ಟ ತತ್ತ್ವಭೇದವು ಸತ್ಯವಿರುವುದಿಲ್ಲ. ಅದರಿಂದ ಸೋದರನೇ ! ಜಿನೇಂದ್ರ ದೇವರ ಮೂಲಕ ಹೇಳಲಾಗಿರುವ ತತ್ತ್ವಗಳ ಮಹಿಮೆಯು ಇದ್ದೇ ಇರುವುದು.

ಅಲ್ಲದೆ ಸಾಮಾನ್ಯ ಜ್ಞಾನಿಗಳ ವಚನಗಳಂತೂ ಅಸತ್ಯವಿರುತ್ತವೆ ಮತ್ತು ಕೇವಲಜ್ಞಾನಿ ಸರ್ವಜ್ಞ ಭಗವಂತರ ವಚನಗಳು ಸತ್ಯವಿರುತ್ತವೆ - ಅದರಿಂದ ಪ್ರಮಾಣವಿವೆ; ಆದುದರಿಂದ ಇವುಗಳ ಧಾರಣ ಮಾಡಿದ ಮೇಲೆ ನಿನ್ನದೂ ಭ್ರಮೆಯು ನಷ್ಟವಾಗಿ ಹೋಗುವುದು, ಜ್ಞಾನದ ಪ್ರಾಪ್ತಿಯಾಗಿ ಸಮ್ಯಕ್ತ್ವದ ಲಾಭವಾಗುವುದು. ನೀನು ಧರ್ಮಾರ್ಥಿ ಇರುವೆ, ಅದರಿಂದ ಎಲೈ ಭವ್ಯನೇ ! ನೀನು ಒಂದು ವೇಳೆ ಶುಭಫಲವನ್ನು ಹೊಂದುವ ಇಚ್ಛೆಯುಳ್ಳವನಾಗಿದ್ದರೆ ಮಿಥ್ಯಾತ್ವರೂಪದ ಪಾಶದಿಂದ ಬಿಡಿಸಿಕೊಳ್ಳುವ ಬಯಕೆಯುಳ್ಳವನಾಗಿದ್ದರೆ ಇವುಗಳನ್ನು ಒಳ್ಳೆಯ ರೀತಿಯಿಂದ ಧಾರಣ ಮಾಡುವುದು.

ಎಲೈ ಭವ್ಯನೇ ! ಅನ್ಯ ಮತಗಳಲ್ಲಿ ಯಾವ ತತ್ತ್ವಗಳ ಸ್ವರೂಪ ಹೇಳಿದ್ದಾರೆ ಅದಂತೂ ಯಾವುದನ್ನೋ ಯಾವುದೋ ರೂಪದಿಂದ ಹೇಳಿದ್ದಾರೆ. ಯಾವ ರೀತಿ ಅಂಧರು ಆನೆಯನ್ನು ನೋಡುತ್ತಾರೆ ಹಾಗೆಂದು ತಿಳಿಯುವುದು ಆನೆಯ ಒಂದೊಂದು ಅಂಗವನ್ನು ಹೇಳುತ್ತ-ಹೇಳುತ್ತ ಅವರು ಆನೆಯ ಆಕಾರದ ಅಭಾವ ಮಾಡುತ್ತಾರೆ ಹಾಗೆಯೇ ಮುಗ್ಧ ಜನರುಗಳ ತತ್ತ್ವಭೇದ ಹೇಳುವಿಕೆ ಇದೆ. ತತ್ತ್ವದ ಒಂದೊಂದು ಅಂಗವನ್ನು ಗ್ರಹಣ ಮಾಡಿ ಪ್ರಕಾಶಿತ ಪಡಿಸುತ್ತ ಅವರು ತತ್ತ್ವದ ಸ್ವಭಾವವನ್ನು ಅತತ್ತ್ವರೂಪವೆಂದು ಹೇಳುತ್ತಾರೆ.

ಹೇಗೆ ಆರು ಜನ ಅಂಧರು ಒಂದು ಆನೆ ಬರುತ್ತಿರುವುದನ್ನು ಕೇಳಿ - ನಾವಂತೂ ಆನೆಯನ್ನು ನೋಡಲಿಲ್ಲ, ಎನ್ನುತ್ತ ಒಂದು ಆನೆ ಬಂದಿದೆ ಅದನ್ನು ಹಿಡಿದುಕೊಳ್ಳೋಣ, ಅದರ ಮೈಮೇಲೆ ಕೈಯಾಡಿಸೋಣ ನಮಗೂ ಆನೆಯ ಜ್ಞಾನವಾಗಬಹುದಾಗಿದೆ ಎಂದು ವಿಚಾರಮಾಡಿ ಅವರು ಆನೆಯ ಹತ್ತಿರ ಹೋಗಿ ಆನೆಯನ್ನು ಹಿಡಿದುಕೊಳ್ಳುತ್ತಾರೆ. ಆ ಆರೂ ಜನ ಅಂಧರು ಆನೆಯ ಆರು ಅಂಗಗಳನ್ನು ಹಿಡಿದುಕೊಂಡರು. ಒಬ್ಬನು ಕಾಲನ್ನು ಹಿಡಿದರೆ ಇನ್ನೊಬ್ಬನು ಕಿವಿ, ಮತ್ತೊಬ್ಬನು ಹಲ್ಲು, ಬೇರೊಬ್ಬನು ಸೊಂಡೆ, ಒಬ್ಬನು ಬಾಲ, ಮತ್ತೊಬ್ಬನು ಹೊಟ್ಟೆ ಇತ್ಯಾದಿ ಒಂದೊಂದು ಅಂಗವನ್ನು ಹಿಡಿದುಕೊಂಡು ಅದರ ಮೇಲೆ ತಮ್ಮ ಕೈಯಾಡಿಸಿದರು ಮತ್ತು ಆನೆಯು ಹೀಗೆಯೇ ಇರುತ್ತದೆ ಎಂದು ಶ್ರದ್ಧೆಮಾಡಿದರು. ತಮ್ಮ ಮನಸ್ಸಿನಲ್ಲಿ ಭಿನ್ನ-ಭಿನ್ನ ಕಲ್ಪನೆಯನ್ನು ಮಾಡಿ ಆನೆಯನ್ನು ಬಿಟ್ಟುಕೊಟ್ಟರು ನಂತರ ಅವರೆಲ್ಲರೂ ತಮ್ಮ ತಮ್ಮಲ್ಲಿಯೇ ಚರ್ಚೆ ಮಾಡುತ್ತ -

ಕಾಲು ಹಿಡಿದುಕೊಂಡಿರುವ ಒಬ್ಬ ಅಂಧನು ಹೇಳುತ್ತಾನೆ - ಸೋದರನೇ ! ನಾವು ಆನೆಯನ್ನು ಕಂಡಿದ್ದೇವೆ ಆನೆಯು ಕಂಬದ ಸಮಾನವಿದೆ ನಾವು ಒಳ್ಳೆಯ ರೀತಿಯಿಂದ ನೋಡಿದ್ದೇವೆ.

ಕಿವಿಯನ್ನು ಹಿಡಿದುಕೊಂಡಿರುವಂಥವನು ಹೇಳುತ್ತಾನೆ - ನೀನು ಅಸತ್ಯವನ್ನಾಡುತ್ತಿರುವೆ, ಆನೆಯು ಮೊರದ ಸಮಾನವಿರುತ್ತದೆ ನಾವು ಒಳ್ಳೆಯ ರೀತಿಯಿಂದ ನೋಡಿದ್ದೇವೆ.

ದಂತವನ್ನು ಹಿಡಿದುಕೊಂಡವನು ಹೇಳುತ್ತಾನೆ - ನೀನೂ ಸರಿಯಾಗಿ ನೋಡಿಲ್ಲ ಆನೆಯು ಒನಕೆಯ ಸಮಾನವಿರುತ್ತದೆ.

ಸೊಂಡೆಯನ್ನು ಹಿಡಿದುಕೊಂಡಂಥವನು ಹೇಳುತ್ತಾನೆ - ನೀನಾದರೂ ಎಲ್ಲಿ ನೋಡಿರುವೆ ಆನೆಯು ಜಟ್ಟಿಯ ಬಾಹುವಿನಂತೆ ಇರುತ್ತದೆ.

ಹೊಟ್ಟೆಯನ್ನು ಹಿಡಿದುಕೊಂಡಂಥವನು ಹೇಳುತ್ತಾನೆ - ನೀನು ಹೇಳುವುದೂ ಅಸತ್ಯವಿದೆ, ಆನೆಯು ಗೋಡೆಯಂತೆ ಇರುತ್ತದೆ.

ಬಾಲವನ್ನು ಹಿಡಿದುಕೊಂಡಿರುವಂಥವನು ಹೇಳುತ್ತಾನೆ - ಸೋದರನೇ ! ನೀನು ವ್ಯರ್ಥವಾದ ಪ್ರಲಾಪವನ್ನೇಕೆ ಮಾಡುತ್ತಿರುವೆ, ನಾನು ಆನೆಯನ್ನು ಚೆನ್ನಾಗಿ ಕಂಡಿದ್ದೇನೆ, ಆನೆಯು ಚಾಬೂಕದ (ಚಾಟಿಯ) ಸಮಾನವಿದೆ.

ಈ ಪ್ರಕಾರ ಆ ಆರೂ ಜನ ಅಂಧರು ವಾದ-ವಿವಾದ ಮಾಡುತ್ತಾರೆ. ಏಕೆಂದರೆ ಆ ಎಲ್ಲ ಕಥನಗಳು ಅಸತ್ಯವಿವೆ. ಕೇವಲ ಒಂದು ಅಂಗವೇ ಆನೆ ಇರುವುದಿಲ್ಲ. ಅವರು ಆನೆಯ ಒಂದು ಅಂಗ ಮಾತ್ರವನ್ನೇ ನೋಡಿದ್ದಾರೆ ಅದರಿಂದ ಅವರು ಒಂದು ಅಂಗವನ್ನು ಆನೆಯೆಂದು ಹೇಳುತ್ತಾರೆ. ಒಂದು ವೇಳೆ ಅವರಿಗೆ ಕಣ್ಣುಗಳಿರುತ್ತಿದ್ದರೆ ಆನೆಯ ಸಂಪೂರ್ಣ ಸ್ವರೂಪವನ್ನು ನೋಡಬಹುದಾಗಿತ್ತು ; ಆದರೆ ಅವರಿಗೆ ಕಣ್ಣುಗಳಂತೂ ಇಲ್ಲ ಅದರಿಂದ ಅವರುಗಳ ವಿವಾದವು ಮುಗಿಯುವುದಿಲ್ಲ. ಎಲ್ಲರೂ ಹಠದಿಂದ ತಮ್ಮ ತಮ್ಮ ಅಂಗವನ್ನು ಆನೆಯೆಂದು ಹೇಳುತ್ತಾರೆ.

ಇದೇ ಪ್ರಕಾರ ತತ್ತ್ವಗಳ ಸ್ವರೂಪವನ್ನು ಅತತ್ತ್ವರೂಪವನ್ನಾಗಿ ಮಾಡಿ ಹೇಳುತ್ತಾರೆ. ಅದೇ ಸ್ವರೂಪವನ್ನು ನಿನಗೆ ಸಾಮಾನ್ಯರೂಪದಿಂದ ಇಲ್ಲಿ ತಿಳಿಸಿಕೊಡಲಾಗುವುದು ಅದನ್ನು ಎಲೈ ಭವ್ಯನೇ ! ನೀನು ಚನ್ನಾಗಿ ಧಾರಣ ಮಾಡು.

ಸೋದರನೇ ! ಯಾವದೋ ಮತದವರಂತೂ ಜೀವಾತ್ಮನನ್ನು ಸಮಸ್ತ ಸಂಸಾರಿಗಳ ಶರೀರಾಕಾರವೆಂದು ಮನ್ನಿಸುತ್ತಾರೆ. ದೇವ, ನಾರಕ, ಪಶು, ಮನುಷ್ಯ ಇವು ಅನಂತ ಅಸಂಖ್ಯಾತ ಶರೀರದಲ್ಲಿ ಒಬ್ಬ ಆತ್ಮನನ್ನು ಮನ್ನಿಸುತ್ತಾರೆ.

ಮತ್ತೆ ಕೆಲವರು ಒಂದು ಜ್ಯೋತಿ ಸ್ವರೂಪ ಪರಬ್ರಹ್ಮನಿದ್ದಾನೆ ಸಂಪೂರ್ಣ ಜಗತ್ತಿನ ಘಟಪಟಗಳು ಅವನ ಅಂಶವಿವೆ. ಅಣು-ಪರಮಾಣು, ನೆಲ-ಜಲ, ಅಗ್ನಿ-ಪವನ, ಮೊದಲಾದ ಎಲ್ಲ ಕಡೆಗೂ ಅವನು ವ್ಯಾಪ್ತನಾಗಿದ್ದಾನೆ. ಎಲ್ಲಿ ನೋಡಿದರೂ ಓರ್ವ ಪರಬ್ರಹ್ಮನ ರೂಪವೇ ಹರಡಿಕೊಂಡಿದೆ. ಏನೆಲ್ಲ ಮಾಡುತ್ತಾನೆ ಅವನೇ ಮಾಡುತ್ತಾನೆ ಅಂಥ ಕರ್ತೃ-ಹರ್ತೃ ಇದ್ದಾನೆ, ಎಂಬ ಜ್ಞಾನವನ್ನೇ ದೃಢ ಮಾಡಿಕೊಳ್ಳುತ್ತಿದ್ದಾರೆ.

ಕೆಲವರು ಆತ್ಮನನ್ನು ಕ್ಷಣಭಂಗುರನೆಂದು ಮನ್ನಿಸುತ್ತಾರೆ. ಕ್ಷಣಿಕ ಮತಿಗಳು ಶರೀರದಲ್ಲಿ ಕ್ಷಣಕ್ಷಣಕ್ಕೆ ಬೇರೆ ಬೇರೆ ಆತ್ಮನೇ ಬರುತ್ತಾನೆ ಎಂದು ಹೇಳುತ್ತಾರೆ. ಕೆಲವು ಕರ್ತಾವಾದಿಗಳು ಜೀವನನ್ನು ಯಾರೋ ಉತ್ಪನ್ನ ಮಾಡುತ್ತಾರೆ ಎಂದು ಹೇಳುತ್ತಾರೆ. ಅವರು ಭಗವಂತನು ನವೀನ ಜೀವವನ್ನು ನಿರ್ಮಾಣ ಮಾಡಿ ಮಾಡಿ ಸಂಸಾರದಲ್ಲಿ ಕಳಿಸುತ್ತಿರುತ್ತಾನೆ. ಅವನೇ ಯಾವಾಗ ಇಚ್ಛಿಸುತ್ತಾನೆ ಆಗ ಈ ಜೀವಗಳನ್ನು ಸಾಯಿಸುತ್ತಾನೆಂದು ಹೇಳುತ್ತಾರೆ.

ಬೇರೊಂದು ಮತದವರು ಜೀವದ ಅಭಾವವನ್ನೇ ಮನ್ನಿಸುತ್ತಾರೆ. ಮತ್ತೆ ಕೆಲವರು ಮುಕ್ತಾತ್ಮನು ಸಂಸಾರದಲ್ಲಿ ಅವತರಿಸುತ್ತಾನೆಂದು ಮನ್ನಿಸುತ್ತಾರೆ.

ಬೇರೆ ಮತ್ತೊಂದು ಮತದವರು ಮೋಕ್ಷದಲ್ಲಿ ಆತ್ಮನನ್ನು ಜ್ಞಾನರಹಿತನೆಂದು ಮನ್ನಿಸುತ್ತಾರೆ. ಆ ಅಜ್ಞಾನವಾದಿಗಳು ಆತ್ಮನಲ್ಲಿ ಪರವಸ್ತುಗಳನ್ನು ತಿಳಿಯುವ ಜ್ಞಾನವಿದೆ ಅದುವೇ ಉಪಾಧಿಯಿದೆ, ಯಾವಾಗ ಜ್ಞಾನವು ನಾಶವಾಗುವುದು ಆವಾಗ ಮೋಕ್ಷವಾಗುವುದೆಂದು ಹೇಳುತ್ತಾರೆ.

ಕೆಲವು ಸ್ಥಿರವಾದಿಗಳು ದೇವನು ಸತ್ತು ದೇವನೇ ಆಗುತ್ತಾನೆ, ಮನುಷ್ಯನು ಸತ್ತು ಮನುಷ್ಯನೇ ಆಗುತ್ತಾನೆ, ಪಶು ಸತ್ತು ಪಶುವೇ ಆಗುತ್ತದೆ, ನಾರಕಿಯು ಸತ್ತು ನಾರಕಿಯ ರೂಪದಲ್ಲಿಯೇ ಉತ್ಪನ್ನವಾಗುತ್ತಾನೆ, ಸ್ತ್ರೀಯು ಸತ್ತು ಸ್ತ್ರೀಯ ರೂಪದಲ್ಲಿಯೇ ಉತ್ಪನ್ನವಾಗುತ್ತಾಳೆ, ದರಿದ್ರನು ಸತ್ತು ದರಿದ್ರನಾಗಿಯೇ ಉತ್ಪನ್ನನಾಗುತ್ತಾನೆ, ದೊರೆಯು ಸತ್ತು ದೊರೆಯ ರೂಪದಲ್ಲಿಯೇ ಉತ್ಪನ್ನನಾಗುತ್ತಾನೆಂದು ಮನ್ನಿಸುತ್ತಾರೆ.

ಈ ಪ್ರಕಾರ ಅನೇಕ ಮತದವರು ಜೀವತತ್ತ್ವದ ಸ್ವರೂಪವನ್ನು ತಮ್ಮ ತಮ್ಮ ಇಚ್ಛೆಯ ಅನುಸಾರ ಹೇಳುತ್ತಾರೆ.

ಕೆಲವು ಮತದವರು ಅಜೀವ ತತ್ತ್ವವನ್ನು ಕೂಡ ಯಾವುದನ್ನೋ ಬೇರಾವುದೋ ಎಂದು ಹೇಳುತ್ತಾರೆ.

ಕೆಲವು ಮತದವರು ಜಡವಿರುವ ಕಾಲದ್ರವ್ಯವನ್ನು ಚೈತನ್ಯರೂಪವೆಂದು ಮನ್ನಿಸುತ್ತಾರೆ. ಅವರು ಈ ಕಾಲದ್ರವ್ಯವು ಯಮನಿದ್ದಾನೆಂದು ಹೇಳುತ್ತಾರೆ.

ಕೆಲವು ಬಾಲಬುದ್ಧಿಗಳು ಅಚೇತನವಿರುವ ಮೇಘಗಳನ್ನು ದೇವಗಳ ಅಧಿಪತಿ ಇಂದ್ರನೆಂದು ಮನ್ನಿಸುತ್ತಾರೆ.

ಇತ್ಯಾದಿ ರೂಪಗಳಲ್ಲಿ ಜೀವ, ಅಜೀವ ತತ್ತ್ವಗಳ ಭೇದವನ್ನು ಅನ್ಯ ಮತದವರು ಬೇರೆ-ಬೇರೆ ಪ್ರಕಾರಗಳಲ್ಲಿ ಹೇಳುತ್ತಾರೆ. ಹೇಗೆ ಉನ್ಮತ್ತನು (ಹುಚ್ಚನು) ವಸ್ತುವನ್ನು ಯಾವುದನ್ನೋ ಬೇರಾವುದೋ ಎಂದು, ವಿಪರೀತವಾಗಿಯೇ ಹೇಳುತ್ತಾನೆ, ಹಾಗೆಂದು ತಿಳಿಯುವುದು.

ಎಲೈ ಭವ್ಯನೇ ! ನೀನು ಆಲಿಸು ! ಏಕಾಗ್ರ ಚಿತ್ತದಿಂದ ನೀನು ಈ ಮಾತನ್ನು ಧಾರಣೆ ಮಾಡು, ಇದರಿಂದ ಅನೇಕ ನಯಗಳ ಜ್ಞಾನವು ಬೆಳೆಯುತ್ತ ಸಂಶಯದ ನಾಶವಾಗುವುದು. ಅದರಿಂದ ಈಗ ಎಲ್ಲರ ಭ್ರಮೆಯನ್ನು ನಾಶ ಮಾಡುವುದರ ಸಲುವಾಗಿ ಜಿನಮತದ ಅನುಸಾರ ಕೇವಲಜ್ಞಾನಧಾರೀ ಸರ್ವಜ್ಞ ಭಗವಂತರಿಂದ ಹೇಳಿರುವಂಥ ತತ್ತ್ವ ಭೇದವನ್ನು ಹೇಗಿದೆಯೋ ಹಾಗೆಯೇ ಹೇಳುತ್ತೇವೆ. ಅದನ್ನು ತಿಳಿದುಕೊಂಡು ಶ್ರದ್ಧೆ ಮಾಡುವುದರಿಂದ ಸಮ್ಯಗ್ದರ್ಶನ, ಸಮ್ಯಗ್ಜ್ಞಾನವಾಗುತ್ತದೆ ಮತ್ತು ಅನೇಕ ಧರ್ಮಾರ್ಥಿ ಜೀವರುಗಳ ಭ್ರಮೆಯು ನಷ್ಟವಾಗಿ ಹೋಗುತ್ತದೆ.

**ಪ್ರಶ್ನೆ :-** ನೀವು ಅದನ್ನು ಆಲಿಸುವುದರಿಂದ ಎಲ್ಲ ಜೀವರುಗಳ ಭ್ರಮೆಯು ನಷ್ಟವಾಗಿ ಹೋಗುತ್ತದೆ ಎಂಬುದಾಗಿ ಸಮುಚ್ಚಯ ವಚನವನ್ನೇಕೆ ಹೇಳಲಿಲ್ಲ ? ಧರ್ಮಾರ್ಥಿ ಜೀವಗಳ ಭ್ರಮೆಯು ನಷ್ಟವಾಗಿ ಹೋಗುತ್ತದೆಂದು ಏಕೆ ಹೇಳಿದಿರಿ ?

**ಸಮಾಧಾನ :-** ಯಾರ ಭ್ರಮೆಯು ನಷ್ಟವಾಗುವ ಸಾಧ್ಯತೆಯಿದೆ ಅವರ ಸಲುವಾಗಿಯೇ ಕಥನ ಮಾಡುತ್ತಾರೆ. ಯಾರ ಭ್ರಮೆಯು ನಷ್ಟವಾಗುವ ಸಾಧ್ಯತೆಯಿಲ್ಲ ಅವರುಗಳ ಸಲುವಾಗಿ ಕಥನವನ್ನು ಏತಕ್ಕಾಗಿ ಮಾಡುವರು ? ಯಾವ ರೀತಿ ಸೂರ್ಯನ ಉದಯದಿಂದ ಸಮಸ್ತ ಸಂಸಾರದ ಅಂಧಕಾರವು ನಷ್ಟವಾಗಿ ಹೋಗುತ್ತದೆ; ಆದರೆ ಪರ್ವತಗಳ ಗುಹೆಗಳಲ್ಲಿನ ಅಂಧಕಾರವು ನಷ್ಟವಾಗುವುದಿಲ್ಲ ಎಂದ ಮೇಲೆ ಗುಹೆಗಳಲ್ಲಿನ ಅಂಧಕಾರವು ನಷ್ಟವಾಗಿ ಹೋಗುತ್ತದೆಯೆಂದು ಹೇಗೆ ಹೇಳುವುದು ? ಅದರಿಂದ ಯಾರ ಭ್ರಮೆಯು ನಷ್ಟವಾಗುವ ಸಾಧ್ಯತೆಯಿದೆ ಅವರ ಸಲುವಾಗಿಯೇ ಇಲ್ಲಿ ಕಥನ ಮಾಡಲಾಗಿದೆ.

ಆದುದರಿಂದ ಯಾರು ಧರ್ಮಾತ್ಮಾ, ನಿಕಟ ಭವ್ಯ , ಶಾಂತಸ್ವಭಾವಿ ಇದ್ದಾರೆ ಅವರಂತೂ ಪಾಪದ ಫಲವನ್ನು ನರಕಾದಿಗಳ ದುಃಖವೆಂದು ತಿಳಿದುಕೊಂಡು, ಪಾಪ ಮಾರ್ಗದಿಂದ ಉದಾಸೀನರಾಗಿ ಪಾಪವನ್ನು ಬಿಟ್ಟುಕೊಡುತ್ತಾರೆ ಮತ್ತು ಧರ್ಮದ ಫಲವನ್ನು ಸ್ವರ್ಗಾದಿ, ಪರಂಪರೆಯಿಂದ ಮೋಕ್ಷ ಸುಖವನ್ನು ಕೊಡುವಂಥದ್ದೆಂದು ತಿಳಿದು ಧರ್ಮದ ಸೇವನೆ ಮಾಡುತ್ತಾರೆ ಅವರ ಚಿತ್ತವು ಜಿನದೇವರ ಆಜ್ಞೆಯ ರೂಪವಾಗಿ ಪ್ರವರ್ತಿಸುತ್ತದೆ. ಜಿನಾಜ್ಞೆಯ ಪ್ರತೀತಿ (ವಿಶ್ವಾಸ) ವಾಗುವುದರಿಂದ ಜೀವ-ಅಜೀವ ತತ್ತ್ವಗಳ ನಿರ್ಣಯವಾಗುತ್ತದೆ. ಅದರಿಂದ ಅವರು ಸಮ್ಯಗ್ದೃಷ್ಟಿಯಾಗುತ್ತಾರೆ. ಆ ಸಮ್ಯಕ್ತ್ವವಾಗುವುದರಿಂದ ಈ ಧರ್ಮಾರ್ಥಿಗಳ ಭ್ರಮೆಯು ನಷ್ಟವಾಗಿ ಹೋಗುತ್ತದೆ.

ಯಾರು ಧರ್ಮಾರ್ಥಿಗಳಿಲ್ಲ ಅವರು ಪಾಪಬುದ್ಧಿಯಿಂದ ಉದಾಸೀನರಾಗುವುದಿಲ್ಲ. ಧರ್ಮದ ಫಲವನ್ನು ಬಯಸುವುದಿಲ್ಲವೆಂದ ಮೇಲೆ ಅವರುಗಳ ಭ್ರಮೆಯು ಹೇಗೆ ನಷ್ಟವಾಗುವ ಸಾಧ್ಯತೆಯಿದೆ? ಅಂಥ ಭ್ರಾಂತ ಬುದ್ಧಿಯುಳ್ಳವರು ಧರ್ಮದ ಅನೇಕ ಅಂಗಗಳ ಸೇವನೆ ಮಾಡಿದರೂ, ವಿವಿಧ ಪ್ರಕಾರದ ತಪಸ್ಸು ಮಾಡಿದರೂ, ಅನೇಕ ಶಾಸ್ತ್ರಗಳನ್ನು ಓದಿದರೂ, ಒಳ್ಳೊಳ್ಳೆಯ ಚರ್ಚೆ ಮಾಡಿದರೂ, ಧರ್ಮ ಕಥೆಗಳನ್ನು ಹೇಳುತ್ತಿದ್ದರೂ, ಅವರಿಗೆ ಧರ್ಮದ ಲಾಭವಾಗುವುದಿಲ್ಲ. ಅವರು ಮೋಕ್ಷಮಾರ್ಗವನ್ನು ಮರೆತು ವಿಪರೀತ ಮಾರ್ಗದ ಮೇಲೆ ನಡೆಯುವಂಥವರು ಮೋಕ್ಷ

ಸ್ಥಾನವನ್ನು ಪ್ರಾಪ್ತ ಮಾಡಿಕೊಳ್ಳಲಾರರು. ಆ ಭ್ರಾಂತ ಬುದ್ಧಿಗಳು ಹೇಗೆ ಹೇಗೆ ಅನೇಕಾನೇಕ ತಪ ಮಾಡುತ್ತಾರೆ, ವಿವಿಧ ಶಾಸ್ತ್ರಗಳ ಅಭ್ಯಾಸ ಮಾಡುತ್ತಾರೆ ಹಾಗೆ ಹಾಗೆ ಮೋಕ್ಷ ಮಾರ್ಗದಿಂದ ಅಧಿಕ ಅಧಿಕ ದೂರವಾಗುತ್ತ ಹೋಗುತ್ತಾರೆ.

ಹೇಗೆ ಯಾವನೋ ದ್ವೀಪಾಂತರಗಳಲ್ಲಿ ಗಮನ ಮಾಡುವಂಥ ಪಥಿಕನು ಪಥವನ್ನು ಮರೆತು ಬಿಟ್ಟು ವಿರುದ್ಧ ಮಾರ್ಗವನ್ನು ಹಿಡಿದುಕೊಂಡರೆ-ಅವನಿಗೆ ಹೋಗುವುದಂತೂ ಪೂರ್ವ ದಿಕ್ಕಿನಲ್ಲಿತ್ತು ಮತ್ತು ಅವನು ಪಶ್ಚಿಮ ದಿಕ್ಕಿನ ಮಾರ್ಗದಲ್ಲಿ ಹೊರಟಿದ್ದಾನೆ. ಆ ಮಾರ್ಗವನ್ನು ಮರೆತು ಹೋದ ವ್ಯಕ್ತಿಯು ದಿನಾಲು ಎಷ್ಟೆಷ್ಟು ಗಮನ ಮಾಡುತ್ತಾನೆ ಅಷ್ಟಷ್ಟು ಪೂರ್ವ ದಿಕ್ಕಿನಿಂದ ದೂರ ದೂರ ಹೋಗುತ್ತಾನೆ. ಹಾಗೆಯೇ ಈ ಭ್ರಾಂತ ಬುದ್ಧಿಯು ತಾನು ಒಳ್ಳೆಯ ಮಾರ್ಗದಲ್ಲಿದ್ದೇನೆಂದು ತಿಳಿದುಕೊಂಡು ಸಾಗುತ್ತಿರುವಾಗ ಸ್ವೇಚ್ಛಾಚಾರಿಯಾಗಿ ಯಾರ ಉಪದೇಶವನ್ನು ಮನ್ನಿಸುವುದಿಲ್ಲ ಅದರಿಂದ ಈ ಧರ್ಮ ಭಾವನಾರಹಿತನಿಗೆ ಜಿನಾಜ್ಞೆಯ ಉಪದೇಶವು ಗುಣಕಾರಿಯಾಗುವುದಿಲ್ಲ. ಆದುದರಿಂದ ಅವನ ಭ್ರಮೆಯು ನಷ್ಟವಾಗುವ ಸಲುವಾಗಿ ಯಾವ ಮಾತನ್ನು ಹೇಳಿಲ್ಲವೆಂಬುದು ನಿನ್ನ ಪ್ರಶ್ನೆಯ ಉತ್ತರವಿದೆ.

ಧರ್ಮಾರ್ಥಿಯ ಭ್ರಮೆಯೇ ನಷ್ಟವಾಗುವ ಸಾಧ್ಯತೆಯಿದೆ. ಧರ್ಮ ಭಾವನೆಯಿಂದ ರಹಿತ, ಮೋಹಿ, ಮಿಥ್ಯಾದೃಷ್ಟಿಯ ಭ್ರಮೆಯು ನಷ್ಟವಾಗುವ ಸಾಧ್ಯತೆಯಿಲ್ಲ. ಆದುದರಿಂದ ಧರ್ಮಾರ್ಥಿಗಳ ಭ್ರಮೆಯು ನಷ್ಟವಾಗುವ ಸಲುವಾಗಿ ಧರ್ಮ ಧುರಂಧರ, ಧರ್ಮದ ಧಾರಕ, ಪರಂಪರೆಯಿಂದ ನಿಜವಾದ ಧರ್ಮದ ಪ್ರಕಾಶವನ್ನು ಬಯಸುವಂಥ, ಮಿಥ್ಯಾತ್ವಗಿರಿಗೆ ವಜ್ರದ ಸಮಾನ ಸುದೃಷ್ಟಿಸಂಪನ್ನ, ಜಿನೇಂದ್ರ ದೇವರ ಆಜ್ಞೆಯ ಅನುಸಾರ ಧರ್ಮಪ್ರವೃತ್ತಿ ಮಾಡುವಂಥ ಭೇದಜ್ಞಾನೀ, ಸಮ್ಯಕ್‌ದೃಷ್ಟಿ, ಜಿನಮತದ ಉಪಾಸಕ, ಅನೇಕಾಂತ ಮತವನ್ನು ತಿಳಿಯುವಂಥ, ಅನೇಕ ನಯಗಳ ಜ್ಞಾತಾರರಾದ ಸ್ಯಾದ್ವಾದಿ ಆಚಾರ್ಯರು ತತ್ತ್ವಗಳ ಸ್ವರೂಪವನ್ನು ಹೇಳುತ್ತಾರೆ.

ಎಲೈ ಏಕಾಂತಮತದ ಧಾರಕರಾದ ಸುಬುದ್ಧಿ ಪಂಡಿತರೇ ! ನಾನು ನಿಮಗೆ ಪರಮಾರ್ಥದ ನಿಮಿತ್ತವಾದ ಜಿನಭಾಷಿತ (ಜಿನೇಂದ್ರ ಭಗವಂತರುಗಳ ಮೂಲಕ ಹೇಳಲ್ಪಟ್ಟಿರುವ) ಅನೇಕಾಂತ ಧರ್ಮಗಳ ರಹಸ್ಯವನ್ನು ಹೇಳುತ್ತಿದ್ದೇನೆ.

ಎಲೈ ಏಕಾಂತಮತದ ಧಾರಕರೇ ! ಸರ್ವ ಸಂಸಾರೀ ಜೀವರುಗಳ ಅನೇಕ ಶರೀರಗಳಲ್ಲಿ ಒಬ್ಬನೇ ಆತ್ಮನು ವ್ಯಾಪ್ತನಿದ್ದಾನೆಂದು ನೀವು ಮನ್ನಿಸುತ್ತೀರಿ ಮತ್ತು ಪರಮಾತ್ಮನು ಒಬ್ಬನಿದ್ದಾನೆಂದು ನೀವು ಹೇಳುತ್ತೀರಿ. ಅವನದೇ ಶಕ್ತಿಯು ಸರ್ವಜಗತ್ತಿನಲ್ಲಿ ಘಟ-ಪಟ, ಜಲ-ನೆಲ, ಪರ್ವತ-ಪವನ ಮೊದಲಾಗಿ ಎಲ್ಲದರಲ್ಲಿ ವ್ಯಾಪ್ತವಿದೆಯೆಂದು ಹೇಳುತ್ತಿರುವಿರಿ - ಅಂಥ ಭ್ರಮೆಯು ನಿಮ್ಮಲ್ಲಿ ಕಂಡು ಬರುತ್ತದೆ. ಎಲೈ ಭವ್ಯಾತ್ಮರೇ ! ಅದನ್ನು ಈಗ ನೀವು ಚನ್ನಾಗಿ ವಿಚಾರಮಾಡಿ ನೋಡುವುದು ಪರಮಾತ್ಮನಂತೂ ನಿರ್ದೋಷ ನಿರ್ಮಲನಿದ್ದಾನೆ ಮತ್ತು ಸಂಸಾರೀ ಜೀವರುಗಳೆಲ್ಲರೂ ರಾಗ, ದ್ವೇಷ, ಕ್ರೋಧ, ಮಾನ, ಮಾಯೆ, ಲೋಭ ರೂಪದ ಮಲದೋಷ ಸಹಿತ ಮಹಾ ಮಲಿನರಿದ್ದಾರೆ, ಎಂದಾಗ ಎಲೈ ಸುಬುದ್ಧಿಗಳೇ! ನಿರ್ಮಲ ಪರಮಾತ್ಮನ ಶಕ್ತಿಯು ಮಲಿನವೇ ಆಗಿ ಹೋಯಿತು. ದೋಷರಹಿತ ಹೇಗೆ ಆಗುವ ಸಾಧ್ಯತೆಯಿದೆ ? -ಎಂಬುದರ ವಿಚಾರ ಮಾಡಿ ನೋಡಿರಿ.

ಹಾಗೂ ಪರಮಾತ್ಮನಂತೂ ಮಹಾ ಸುಖಿಯಿದ್ದಾನೆ. ರಾಗ, ದ್ವೇಷ, ಜನ್ಮ, ಮರಣ, ಕ್ಷುಧೆ, ತೃಷೆ, ವಾತ, ಪಿತ್ತ, ಜ್ವರ, ಕಷ್ಟಾದಿ, ಸಮಸ್ತ ದುಃಖಗಳಿಂದ ರಹಿತನಿದ್ದಾನೆ. ಸುಖದ ಸಮೂಹನಿದ್ದಾನೆ ಹಾಗೂ ಸಮಸ್ತ ಸಂಸಾರೀ ಜೀವಗಳಂತೂ ಇಷ್ಟ ವಿಯೋಗ, ಅನಿಷ್ಟ ಸಂಯೋಗಗಳ ದುಃಖ, ಶಾರೀರಿಕದುಃಖ, ಮಾನಸಿಕದುಃಖ, ಧನದುಃಖ, ಇತ್ಯಾದಿ ಅನೇಕ ದುಃಖ ಸಾಗರದಲ್ಲಿ ಮುಳುಗಿಕೊಂಡಿವೆ. ಎಲೈ ಭವ್ಯನೇ ! ಮಹಾಸುಖಿ ರೋಗರಹಿತ ಪರಮಾತ್ಮನ ಶಕ್ತಿಯು ದುಃಖದಾಯಕ ಹೇಗಾಗುವ ಸಾಧ್ಯತೆಯಿದೆ ಎಂಬುದರ ವಿಚಾರ ಮಾಡು. ಪರಮಾತ್ಮನಂತೂ ಅವಿನಾಶಿ, ಸುಖಿ, ನಿರ್ದೋಷ, ಜನ್ಮ ಮರಣ ರಹಿತನಿದ್ದಾನೆ. ಅದರಿಂದ ಒಂದು ವೇಳೆ ಪರಮಾತ್ಮನ ಶಕ್ತಿಯು ಸರ್ವವ್ಯಾಪಕವಿರುತ್ತಿದ್ದರೆ ಸಮಸ್ತ ಜೀವಗಳೂ ಕೂಡ ನಿರೋಗ, ನಿರ್ದೋಷ, ಜನ್ಮ ಮರಣ ರಹಿತವಾಗಿ ಎಲ್ಲರೂ ಅವಿನಾಶಿಯಾಗುತ್ತಿದ್ದರು, ನಿರ್ಮಲರಾಗಿರುತ್ತಿದ್ದರು, ಜನ್ಮ ಮರಣರಹಿತರಾಗಿರುತ್ತಿದ್ದರು.

ಹೇಗೆ ಅಗ್ನಿಯು ಸ್ವಯಂ ತಾಪಮಯವಿದೆ ಎಂದ ಮೇಲೆ ಅದರ ಪ್ರಭೆಯ ರೂಪ ಶಕ್ತಿಯೂ ಕೂಡ ತಾಪಮಯವಿದೆ; ದೀವಿಗೆಯು ಸ್ವಯಂ ಪ್ರಕಾಶರೂಪವಿದೆ ಎಂದ ಮೇಲೆ ಅದರ ಪ್ರಭೆಯು ಕೂಡ ಪ್ರಕಾಶಮಯವಿದೆ. ವಸ್ತುವು ಎಂಥದ್ದಿರುತ್ತದೆ ಅಂಥದ್ದೇ ಅದರ ಶಕ್ತಿಯಿರುತ್ತದೆ; ಆದರೆ ಪರಮಾತ್ಮನ ಶಕ್ತಿಯಂತೂ ಸಂಸಾರೀ ಜೀವಿಗಳಲ್ಲಿ ಒಂದೂ ಕಂಡು ಬರುವುದಿಲ್ಲ. ಸೋದರನೇ ! ಒಂದು ವೇಳೆ ಜೀವರುಗಳಲ್ಲಿ ಪರಮಾತ್ಮನ ಸತ್ತಾ ಇರುತ್ತಿದ್ದರೆ ಒಂದು ಜೀವನಿಗೆ ಸುಖವಾದ ಮೇಲೆ ಎಲ್ಲ ಜೀವಗಳು ಸುಖಿಯಾಗುತ್ತಿದ್ದವು ಮತ್ತು ಒಂದು ಜೀವನಿಗೆ ದುಃಖವಾದ ಮೇಲೆ ಎಲ್ಲ ಜೀವಗಳೂ ದುಃಖಿಯಾಗಿ ಹೋಗುತ್ತಿದ್ದವು. ಒಂದು ಜೀವದ ನಾಶವಾದ ಮೇಲೆ ಎಲ್ಲ ಜೀವಗಳ ನಾಶವಾಗುತ್ತಿತ್ತು. ಒಂದು ವೇಳೆ ಎಲ್ಲವುಗಳದ್ದೂ ಒಂದೇ ಸತ್ತಾ ಇರುತ್ತಿದ್ದರೆ ಒಂದು ಜೀವದ ಅವಸ್ಥೆಯು ಯಾವುದಾಗುತ್ತಿತ್ತು ಅದುವೇ ಎಲ್ಲ ಜೀವಗಳದ್ದೂ ಆಗುತ್ತಿತ್ತು.

ಹೇಗೆ ಓರ್ವ ಸೂರ್ಯನ ಸತ್ತಾಮಯ ಅನೇಕ ಕಿರಣಗಳು ಅನೇಕ ಘಟ-ಪಟ ಮತ್ತು ಪೃಥ್ವಿಯನ್ನು ಪ್ರಕಾಶಮಾನ ಮಾಡುತ್ತವೆ, ಸೂರ್ಯ ಮತ್ತು ಸೂರ್ಯನ ಕಿರಣಗಳು ಈ ಎರಡರಲ್ಲಿ ಏಕ ಸತ್ತಾ ಇದೆ. ಆ ಸೂರ್ಯ ಸತ್ತಾದ ಪ್ರಕಾಶವು ಭೂಮಿಯ ಮೇಲೆ ಎಷ್ಟು ಘಟ-ಪಟ, ನೆಲ-ಜಲ, ಪವನ-ಪಾಷಾಣ, ಒಳಿತು-ಕೆಡಕು ವಸ್ತುಗಳು ಇತ್ಯಾದಿ ಸರ್ವ ಪದಾರ್ಥಗಳನ್ನು ತಿಳಿದುಕೊಂಡು ಪ್ರಕಾಶಮಾನ ಮಾಡುತ್ತದೆ. ಸರ್ವವನ್ನೂ ಪ್ರಕಾಶಿತಗೊಳಿಸುತ್ತದೆ, ಎಲ್ಲದರಲ್ಲೂ ರವಿಪ್ರಭೆಯು ಒಂದೇ ರೀತಿ ಕಂಡು ಬರುತ್ತದೆ; ಆದರೆ ಯಾವಾಗ ಸೂರ್ಯನು ಅಸ್ತನಾಗಿ ಹೋಗುತ್ತಾನೆ, ಆಗ ಅವನ ಜತೆಯಲ್ಲಿಯೇ ಅವನ ಶಕ್ತಿರೂಪ ಕಿರಣಗಳು ಅಸ್ತವಾಗಿ ಹೋಗುತ್ತವೆ ಏಕೆಂದರೆ ಅವುಗಳದು ಏಕ ಸತ್ತಾ ಇದೆ. ಆದುದರಿಂದ ಸೂರ್ಯನು ಅಸ್ತವಾಗಿ ಹೋಗುವುದರಿಂದ ಕಿರಣಗಳು ಅಸ್ತವಾಗಿ ಹೋದವು ಮತ್ತು ಕಿರಣಗಳು ಅಸ್ತವಾಗಿ ಹೋಗುತ್ತಿದ್ದಂತೆಯೇ ಸಮಸ್ತ ಪೃಥ್ವಿಯ ಮೇಲೆ ಅಂಧಕಾರವಾಗಿ ಬಿಡುತ್ತದೆ.

ಹಾಗೆಯೇ ಒಂದು ವೇಳೆ ಸರ್ವ ಜೀವರುಗಳದು ಸತ್ತಾ ಏಕವಿರುತ್ತಿದ್ದರೆ ಸರ್ವ ಜೀವರುಗಳಿಗೆ ಸುಖ-ದುಃಖಗಳು ಒಂದೇ ಕಾಲದಲ್ಲಿ ಸಮಾನವಾಗಿರುತ್ತಿದ್ದವು. ಆದರೆ ಸಂಸಾರದಲ್ಲಿಯಂತೂ ಕೆಲವರು ಸುಖಿಯಿದ್ದಾರೆ, ಕೆಲವರು ದುಃಖಿಯಿದ್ದಾರೆ, ಕೆಲವರು ದರಿದ್ರರಿದ್ದಾರೆ, ಕೆಲವರು ದೊರೆಯಿದ್ದಾರೆ, ಕೆಲವರು ರೋಗಿ ಇದ್ದಾರೆ, ಕೆಲವರು ನಿರೋಗಿ ಇದ್ದಾರೆ, ಕೆಲವರು ದುಃಖದಿಂದ ರೋದನ ಮಾಡುತ್ತಿದ್ದರೆ, ಕೆಲವರು ಸುಖದಿಂದ ಪ್ರಫುಲ್ಲಿತರಿದ್ದಾರೆ, ಯಾರದೋ ಮದುವೆಯಿದ್ದರೆ, ಯಾವನೋ ಸತ್ತು ಹೋಗುತ್ತಿದ್ದಾನೆ, ಯಾವನೋ ಜೀವನು ಸತ್ತು ಅನ್ಯ ಗತಿಯಲ್ಲಿ ಹೋಗುತ್ತಾನೆ, ಇನ್ನಾವನೋ ಇಲ್ಲಿ ಬಂದು ಉತ್ಪನ್ನನಾಗುತ್ತಾನೆ - ಹೀಗೆ ಸಾಂಸಾರಿಕ ದಶೆಯು ಭಿನ್ನ-ಭಿನ್ನವಾಗಿ ಕಂಡು ಬರುತ್ತದೆ. ಅದರಿಂದ ಎಲೈ ಏಕಾಂತಮತದ ಧಾರಕ ಭವ್ಯನೇ ! ನೀನು ಒಳ್ಳೆಯ ರೀತಿಯಿಂದ ವಿಚಾರ ಮಾಡು ಎಲ್ಲ ಜೀವರುಗಳದು ಏಕ ಸತ್ತಾ ಹೇಗೆ ಸಂಭವವಿದೆ ?

ಅಲ್ಲದೆ ಒಂದು ವೇಳೆ ಪರಮಾತ್ಮನು ಜಗತ್ತಿನಲ್ಲೆಲ್ಲ ವ್ಯಾಪಕನಾಗಿದ್ದು ಜೀವರುಗಳಿಂದ ಶುಭಾಶುಭ ಕರ್ಮ ಮಾಡಿಸುತ್ತಿದ್ದರೆ ಆಗ ಪರಮಾತ್ಮನಿಗೆ ಪುಣ್ಯ ಪಾಪದ ಬಂಧವಾಗುತ್ತಿತ್ತು ಒಂದು ವೇಳೆ ನೀನು ಪರಮಾತ್ಮನಿಗೆ ಕರ್ಮದ ಬಂಧವಾಗುವುದಿಲ್ಲವೆಂದು ಹೇಳಿದರೆ ಈ ಪಾಪ-ಪುಣ್ಯದ ಬಂಧವು ಯಾರಿಗೆ ಆಗುವುದು? ಯಾರಿಗೂ ಇಲ್ಲವೆಂದು ನೀನು ಹೇಳಿದರೆ ಪಾಪ-ಪುಣ್ಯದ ಫಲವು ವ್ಯರ್ಥವಾಗುವುದು ಮತ್ತು ಪಾಪ-ಪುಣ್ಯದ ಫಲವು ವ್ಯರ್ಥವಾಗಿ ಹೋದ ಮೇಲೆ ಪಾಪೀ ಜೀವರುಗಳಂತೂ ಪಾಪವನ್ನು ಹೆಚ್ಚಿಸುವರು, ಬಿಟ್ಟು ಕೊಡುವುದಿಲ್ಲ. ಫಲವಂತೂ ಯಾರಿಗೂ ದೊರಕುವುದೇ ಇಲ್ಲವೆಂದು ಅವರು ಹೇಳಬಹುದಾಗಿದೆ. ಆಗ ಪುಣ್ಯ ಪ್ರಾಪ್ತಿಯ ಸಲುವಾಗಿ ಯಾವನಾದರೂ ದಾನ, ಪೂಜೆ, ತಪ, ಸಂಯಮಗಳನ್ನು ಏತಕ್ಕಾಗಿ ಮಾಡುವನು, ಏಕೆಂದರೆ ಪುಣ್ಯದ ಫಲವಂತೂ ದೊರಕುವುದೇ ಇಲ್ಲ. ಆದುದರಿಂದ ಇಂಥ ಶ್ರದ್ಧೆ ಮಾಡುವುದರಿಂದಂತೂ ಪೃಥ್ವಿಯ ಮೇಲೆ ಪಾಪವು ಅಧಿಕವಾಗಿ ಹರಡಬಹುದಾಗಿದೆ.

ಶಾಸ್ತ್ರಗಳ ಉಪದೇಶ, ಮಂದಿರ ನಿರ್ಮಾಣ, ತಪ, ಸಂಯಮ, ತೀರ್ಥವಂದನೆ, ಇತ್ಯಾದಿ ಧರ್ಮದ ಸರ್ವ ಅಂಗಗಳು ನಾಶವಾಗಬಹುದಾಗಿವೆ. ಅದರಿಂದ ಈ ವಚನ ಹೇಳುವಂಥವರಲ್ಲಿ ಪ್ರತ್ಯಕ್ಷವಾಗಿಯೇ ಮಹಾವಿಪರೀತತೆಯು ಉಂಟಾಗುವುದು. ಪಾಪಾಚಾರೀ ವಿಷಯಾಭಿಲಾಷಿಗಳು ನಮ್ಮ ಶಕ್ತಿಯು ಪಾಪ ಮಾಡುವಂಥದ್ದಿಲ್ಲ; ಯಾವುದೆಲ್ಲ ಆಗುತ್ತದೆಯೋ ಅದನ್ನು ಪರಮಾತ್ಮನೇ ಮಾಡಿಸುತ್ತಾನೆಂದು ಹೇಳಬಹುದಾಗಿದೆ. ಅದರಿಂದ ಪಾಪದ್ದೇ ವೃದ್ಧಿಯಾಯಿತು ಮತ್ತು ಒಂದು ವೇಳೆ ಪಾಪ-ಪುಣ್ಯದ ಫಲವು ಸಂಸಾರೀ ಜೀವರುಗಳಿಗೆ ದೊರಕುತ್ತದೆ ಎಂದು ನೀನು ಹೇಳಿದರೆ ಪರಮಾತ್ಮನ ಏಕ ಸತ್ತಾದ ಮಾಹಾತ್ಮ್ಯವಾದರೂ ಎಲ್ಲಿ ಉಳಿಯಿತು ?

ಅದರಿಂದ ಎಲೈ ಸೋದರನೇ ! ನೀನು ಇಂಥ ಭ್ರಮೆಯನ್ನು ಬಿಟ್ಟುಕೊಟ್ಟು ಯಾವ ಜೀವನು ಪುಣ್ಯ-ಪಾಪ ಮಾಡುತ್ತಾನೆ ಅದರ ಫಲವನ್ನು ಅದೇ ಜೀವನು ಸ್ವರ್ಗ ನರಕಾದಿ, ಸುಖ-ದುಃಖಗಳ ರೂಪದಲ್ಲಿ ಭೋಗಿಸುತ್ತಾನೆಂಬುದನ್ನು ದೃಢವಾಗಿ ನಂಬು, ಇಂಥ ಶ್ರದ್ಧೆಯಾಗುವುದರಿಂದ ಈ ಜೀವನು ಪಾಪದ ಫಲವು ಮಹಾ ದುಃಖದ ರೂಪವೆಂದು ತಿಳಿದುಕೊಂಡು ಅದನ್ನಂತೂ ಬಿಟ್ಟುಕೊಡುತ್ತಾನೆ. ಹಾಗೂ ದಾನ, ಪೂಜೆ, ದುರ್ಧರ ತಪಸ್ಸು, ಸಂಯಮ ಇತ್ಯಾದಿ ಶುಭಕಾರ್ಯಗಳನ್ನು ಮಾಡುತ್ತಾನೆ. ಅದರಿಂದ ಅದೇ ಜೀವನು ಸ್ವರ್ಗಾದಿಗಳಲ್ಲಿ ಬಹಳಷ್ಟು ಪ್ರಕಾರದ ಇಂದ್ರಿಯ ಜನ್ಯ ಸುಖ ಭೋಗಿಸುತ್ತಾನೆ. ಆದುದರಿಂದ ಎಲೈ ಮುಗ್ಧ ಧರ್ಮಾಭಿಲಾಷಿಯೇ ! ಯಾರು ಮಾಡುತ್ತಾರೆ ಅವರೇ ಪಡೆಯುತ್ತಾರೆ ಎಂಬುದನ್ನು ನೀನು ತಿಳಿದುಕೊಳ್ಳುವುದು.

ನಮಗಂತೂ ಪಾಪ ಕರ್ಮದ ಬಂಧವಾಗುವುದಿಲ್ಲವೆಂದು ಯಾವನೋ ಭ್ರಾಂತಬುದ್ಧಿಯು ಹೇಳುತ್ತಾನೆ. - ಈ ಅಜ್ಞಾನಿಯ ಆತ್ಮನಂತೂ ತನ್ನ ದೃಷ್ಟಿಯನ್ನು ಆ ಮೊಲದ ಸಮಾನ ಮಾಡಿಕೊಂಡಿದ್ದಾನೆ, ಹೇಗೆ ಮೊಲವು ಕಿವಿಗಳಿಂದ ತನ್ನ ಕಣ್ಣು ಮುಚ್ಚಿಕೊಳ್ಳುತ್ತದೆ ಮತ್ತು ಸಂತುಷ್ಟವಾಗುತ್ತದೆ ಆದರೆ ಅದರಿಂದೇನಾಗುವುದು ? ಎಲ್ಲಿಯವರೆಗೆ ಈ ಬೇಟೆಗಾರನು ಅದನ್ನು ಸಾಯಿಸುವುದಿಲ್ಲ ಅಲ್ಲಿಯವರೆಗೆ ಅದು ಸುಖಿಯಾಗಿರುತ್ತದೆ. ಎಂದರೆ ಯಾವನೋ ಓರ್ವ ಬೇಟೆಗಾರನು ಒಂದು ಮೊಲವನ್ನು ಹೊಡೆಯುವ ಸಲುವಾಗಿ ವನದೊಳಗೆ ಹೋಗಿದ್ದನು. ಅದನ್ನು ಕಂಡು ಮೊಲವು ಓಡಿ ಹೋಯಿತು. ಬೇಟೆಗಾರನು ಅದರ ಬೆನ್ನು ಹತ್ತಿ ಹೋದನು. ಯಾವಾಗ ಮೊಲದಿಂದ ಅಧಿಕ ಓಡುವುದಾಗಲಿಲ್ಲ ಆಗ ಅದು ಕಿವಿಗಳಿಂದ ಕಣ್ಣು ಮುಚ್ಚಿಕೊಂಡು ಕುಳಿತುಕೊಂಡಿತು. ಮತ್ತು ನನಗೆ ಈಗ ಇಲ್ಲಿ ಯಾರೂ ಕಂಡು ಬರುತ್ತಿಲ್ಲ ಎಂದರೆ ಬೇಟೆಗಾರನು ಹೊರಟುಹೋಗಿರಬೇಕು - ಎಂದು ವಿಚಾರ ಮಾಡುತ್ತ ಸಂತುಷ್ಟವಾಗುತ್ತಿದ್ದರೆ ಅದರಿಂದೇನಾಗುವುದು ? ಹಿಂದಿನಿಂದ ಬೇಟೆಗಾರನು ಬಂದು ಅದನ್ನು ಶಸ್ತ್ರದಿಂದ ಸಾಯಿಸಿಬಿಡುತ್ತಾನೆ. ಈ ಪ್ರಕಾರ ತನ್ನ ಮೂರ್ಖತೆಯ ಕಾರಣದಿಂದ ಅದು ಸತ್ತು ಹೋಯಿತು.

ಅದೇ ಪ್ರಕಾರ ಈ ಏಕಾಂತವಾದೀ ಮುಗ್ಧ ಜೀವನು ! ವಿಚಾರ ಮಾಡುವುದೇನೆಂದರೆ ಈ ಪಾಪವು ನನಗೆ ತಗಲುವುದಿಲ್ಲ - ಎಂದು ತಿಳಿದುಕೊಂಡು ಸಂತುಷ್ಟನಾಗುತ್ತ ಪಾಪದ ಭಾರವನ್ನು ಹೊತ್ತುಕೊಂಡು ನರಕಾದಿಗಳ ದುಃಖಕ್ಕೆ ಪ್ರಾಪ್ತನಾಗುತ್ತಾನೆ. ಆ ಪಾಪಾಚಾರಿಯು - ಇತರರ ಧನವನ್ನು ಹರಣಮಾಡುವಂಥ, ಇತರರ ಮಾನವನ್ನು ಹರಣ ಮಾಡುವಂಥ, ತನ್ನ ದೊಡ್ಡಸ್ತಿಕೆಯನ್ನು ಹೇಳುವಂಥ, ಇತರರನ್ನು ವಂಚಿಸಿ ಅನೇಕ ಉಪಾಯದಿಂದ ಅವರ ಅಭಿಮಾನವನ್ನು ಖಂಡಿತಗೊಳಿಸಿ, ತನ್ನ ಮಹತ್ವದ ಸ್ವಲ್ಪ ಚಮತ್ಕಾರವನ್ನು ಇತರರಿಗೆ ತೋರಿಸಿಕೊಟ್ಟು, ತನ್ನ ಬುದ್ಧಿಯ ಚತುರತೆಯ ಮೂಲಕ ಮಾಯಾಚಾರ, ವಂಚನೆಗಳಿಂದ ವಿಚಾರ ಮಾಡುತ್ತ ಮುಗ್ಧ ಜೀವರುಗಳ ಧನ-ಮಾನಗಳ ಹರಣ ಮಾಡಿ ಅವರನ್ನು ಹುರಿದುಂಬಿಸುತ್ತ ಕುಪಥದ ಮೇಲೆ ತೊಡಗಿಸಿ ತನ್ನನ್ನು ಧರ್ಮಾತ್ಮನೆಂದು ತಿಳಿದುಕೊಂಡು ನಮಗಂತೂ ಪಾಪವು ತಗಲುವುದಿಲ್ಲ ಎಂದು ಮನ್ನಿಸುತ್ತಾನೆ. ಹೀಗೆ ವಿಚಾರ ಮಾಡಿ ಪಾಪಬಂಧ ಮಾಡಿಕೊಂಡು ಪರಭವದಲ್ಲಿ ಕುಗತಿಗಳಿಗೆ ಪಾತ್ರನಾಗುತ್ತಾನೆ.

ಆದುದರಿಂದ ಎಲೈ ಭವ್ಯನೇ ! ಯಾವನು ಮಾಡುತ್ತಾನೆ ಅವನೇ ಭೋಗಿಸುತ್ತಾನೆ ಎಂದು ನೀನು ತಿಳಿ. ಸಂಸಾರದಲ್ಲಿ ಅನಂತ ಜೀವರುಗಳಿದ್ದಾರೆ ಅವರುಗಳ ಸತ್ತಾ ಕೂಡ ಭಿನ್ನ-ಭಿನ್ನ ಅನಂತವಿದೆ. ತಮ್ಮ ತಮ್ಮ ಪರಿಣಾಮಗಳ ಮೂಲಕ ಮಾಡಲಾಗುವಂಥ ಪುಣ್ಯ-ಪಾಪದ ಫಲಗಳನ್ನು ಅವರು ಸ್ವಯಂ ಭೋಗಿಸುತ್ತಾರೆಂದು ನೀನು ತಿಳಿದುಕೊಳ್ಳು! ಪಾಪಾತ್ಮನು ಪಾಪವನ್ನು ಸ್ವಯಂ ಮಾಡುತ್ತಾನೆ ಮತ್ತು ಅದರ ಫಲವು ಇತರರಿಗೆ ದೊರಕುತ್ತದೆಯೆಂದು ಅಥವಾ ಫಲವೇ ದೊರಕುವುದಿಲ್ಲವೆಂದು ಮನ್ನಿಸುತ್ತಾನೆ. ಯಾರು ಇಂಥ ಜೀವರುಗಳಿದ್ದಾರೆ ಅವರುಗಳ ಇಚ್ಛೆಯು ಪಾಪವನ್ನು ಬಿಟ್ಟುಕೊಡುವುದಿರುವುದಿಲ್ಲ. ಅಂಥ ದುರಾತ್ಮರು ಪಾಪದ ಆರಂಭ ಮಾಡುವಂಥವರು ಕುಗತಿಗಾಮಿಗಳಾಗುತ್ತಾರೆ.

ಧರ್ಮಿಯಂತೂ ಪುಣ್ಯ-ಪಾಪಗಳ ಫಲವು ಸ್ವಯಂ ಆಯಾ ಜೀವಗಳಿಗೆ ದೊರಕುತ್ತದೆಯೆಂದು ತಿಳಿದುಕೊಂಡು ಪಾಪದಿಂದ ಭಯಭೀತನಾಗುತ್ತ ಪಾಪಗಳ ತ್ಯಾಗಮಾಡಿ ಶುಭಭಾವಗಳ ರೂಪನಾಗುತ್ತಾನೆ, ಎಲೈ ಭವ್ಯನೇ ! ಒಂದು ವೇಳೆ ಹೀಗೆ ಇರದಿದ್ದರೆ ದೊಡ್ಡ ದೊಡ್ಡ ಪಂಡಿತ ಪುರುಷರು ದಾನ, ಪೂಜೆ, ತಪ, ಸಂಯಮ, ತೀರ್ಥವಂದನೆಗಳನ್ನು ಏತಕ್ಕಾಗಿ ಮಾಡುತ್ತಾರೆ ? ಅದರಿಂದ ಎಲೈ ಭವ್ಯನೇ ! ಯಾವನು ಮಾಡುತ್ತಾನೆ ಅವನೇ ಅದರ ಫಲವನ್ನು ಪಡೆಯುತ್ತಾನೆಂಬುದನ್ನು ನೀನು ತಿಳಿದುಕೊ. ಜಗತ್ತಿನಲ್ಲಿ ಸಮಸ್ತ ಜನರುಗಳು ಕೂಡ 'ಯಾವನು ಮಾಡುತ್ತಾನೆ ಅವನು ಭೋಗಿಸುತ್ತಾನೆ'ಂದು ಹೇಳುತ್ತಾರೆ ಆದುದರಿಂದ ಯಾವನು ಮಾಡಿದ ಕರ್ಮವಿದೆ ಅದರ ಫಲವು ಅವನಿಗೇ ದೊರಕುತ್ತದೆ.

ಯಾವಾಗ ಈ ಆತ್ಮನು ಪಾಪ-ಪುಣ್ಯಗಳಿಂದ ರಹಿತನಾಗುತ್ತಾನೆ, ಆಗ ಪರಮಾತ್ಮನಾಗುತ್ತಾನೆ. ಇವನನ್ನೇ ಪರಬ್ರಹ್ಮನೆಂದು ಹೇಳುತ್ತಾರೆ, ಇವನನ್ನೇ ಭಗವಂತನೆಂದು ಹೇಳುತ್ತಾರೆ. - ಎಂಬುದನ್ನು ದೃಢವಾಗಿ ತಿಳಿದುಕೊಂಡು ದಯಾಭಾವ ಸಹಿತನಾಗಿ ಪ್ರವರ್ತಿಸುವುದು ಯೋಗ್ಯವಿದೆ.

ಈ ಪ್ರಕಾರ ಜಗತ್ತಿನಲ್ಲಿ ಅನಂತ ಜೀವರುಗಳಿದ್ದಾರೆ ಅವರ ಸತ್ತಾ ಪೃಥಕ್ ಪೃಥಕ್ ಇದೆ. ತಮ್ಮ ಪರಿಣಾಮಗಳ ಫಲದಿಂದ ಅವರು ಸುಖಿ-ದುಃಖಿಗಳಾಗುತ್ತಾರೆ ಯಾರ ಮತದಲ್ಲಿ ಆಪ್ತ ಆಗಮ ಪದಾರ್ಥಗಳಲ್ಲಿ ಸರ್ವ ಜೀವರುಗಳದು ಒಂದೇ ಸತ್ತಾ ಎಂದು ಮನ್ನಿಸಲಾಗಿದೆ, ಅದು ಅಸತ್ಯವಿರುವುದರಿಂದ ತ್ಯಾಗ ಯೋಗ್ಯವಿದೆ.

ಈ ಪ್ರಕಾರ ಸರ್ವ ಜಗತ್ತಿನಲ್ಲಿ ಸರ್ವ ಜೀವರುಗಳ ಏಕ ಸತ್ತಾ ಮನ್ನಿಸುವಂಥವರಿಗೆ ತಿಳಿಸಿಕೊಟ್ಟು ಅವರ ಅತತ್ತ್ವ ಶ್ರದ್ಧೆಯನ್ನು ಬಿಡಿಸಿ ಜಿನಭಾಷಿತ ತತ್ತ್ವಗಳ ಶ್ರದ್ಧೆ ಮಾಡಿಸಲಾಯಿತು - ಅವರನ್ನು ಸತ್ಯ ಧರ್ಮದ ಸನ್ಮುಖ ಮಾಡಲಾಯಿತು.

ಈ ಪ್ರಕಾರ ಸರ್ವ ಜೀವರುಗಳ ಏಕ ಸತ್ತಾ ಮನ್ನಿಸುವಂಥ ಏಕಾಂತವಾದಿಗಳ ಭ್ರಮೆಯ ನಿವಾರಣೆ ಮಾಡಲಾಯಿತು.

ಈಗ ಕ್ಷಣಿಕ ಮತಿಗಳನ್ನು ಸಂಬೋಧಿಸುತ್ತಾರೆ - ಯಾವನೋ ಕ್ಷಣಿಕಮತಿಯು ಆತ್ಮನನ್ನು ಕ್ಷಣಭಂಗುರ; ಒಂದು ಶರೀರದಲ್ಲಿ ಅನೇಕ ಆತ್ಮರುಗಳು, ಪ್ರತಿಕ್ಷಣ ಹೊಸ ಹೊಸದಾಗಿ ಉತ್ಪನ್ನರಾಗುತ್ತಾರೆ ಎಂದು ಮನ್ನಿಸುತ್ತಾನೆ, ಅವನಿಗೆ ತಿಳಿಸಿಕೊಡುತ್ತ ಎಲೈ ಭವ್ಯಾತ್ಮನೇ ! ಕ್ಷಣಿಕ ಮತದ ಧಾರಕನೇ ! ನೀನು ಆತ್ಮನನ್ನು ಕ್ಷಣಸ್ಥಾಯಿಯೆಂದು ಮನ್ನಿಸಿರುವೆ ಒಂದು ಶರೀರದಲ್ಲಿ ಕ್ಷಣ ಕ್ಷಣಕ್ಕೆ ಆತ್ಮರುಗಳು ಬರುತ್ತಾರೆಂದು ಮನ್ನಿಸಿರುವೆ, ಇದರದು ನಮಗೆ ತುಂಬ ಆಶ್ಚರ್ಯವಿದೆ. ನಿನ್ನಂಥ ಬುದ್ಧಿವಂತನು ಇಂಥ ಅಪರಾಧ ಮಾಡಿದರೆ ಮುಗ್ಧ ಜೀವರುಗಳ ಗತಿಯೇನು ? ಎಲೈ ವಿಚಕ್ಷಣನೇ ! ನೀನೇ ವಿಚಾರ ಮಾಡು - ವರ್ಷ ಎರಡುವರ್ಷಗಳ ಮೊದಲಿನ ಯಾವುದೋ ಹತ್ತಾರು ಮಾತುಗಳು ನಿನ್ನ ಸ್ಮರಣೆಯಲ್ಲಿ ಇವೆಯೋ ಅಥವಾ ಇಲ್ಲ. ಅಥವಾ ಒಂದೆರಡು ಪ್ರಹರಗಳ ಮೊದಲಿನ ಮಾತುಗಳು, ಘಟನೆಗಳು ನಿನಗೆ ಸ್ಮರಣೆಯಲ್ಲಿವೆಯೋ ಅಥವಾ ಇಲ್ಲ. ಒಂದು ವೇಳೆ ಸ್ಮರಣೆಯಲ್ಲಿದ್ದರೆ ಆತ್ಮನು ಕ್ಷಣಭಂಗುರನಿಲ್ಲವೆಂಬುದನ್ನು ನೀನು ವಿಚಾರಮಾಡು. ಒಂದು, ಎರಡು ವರ್ಷಗಳ ಮೊದಲು ನೀನು ಯಾರಿಗಾದರೂ ಹತ್ತು ಸಾವಿರ ರೂಪಾಯಿ ಸಾಲ

ಕೊಟ್ಟಿದ್ದರೆ ಅದು ನಿನಗೆ ಸ್ಮರಣೆಯಲ್ಲಿ ಇದೆಯೋ ಅಥವಾ ಇಲ್ಲ . ನೀನು ಅವನಿಂದ ಪತ್ರ ಬರೆಯಿಸಿಕೊಂಡಿದ್ದೆ, ಅದರ ಮೇಲೆ ಸಜ್ಜನ ಪುರುಷರಿಂದ ಸಾಕ್ಷೀರೂಪವಾಗಿ ರುಜು ಹಾಕಿಸಿಕೊಂಡಿದ್ದೆ, ಅದು ನಿನಗೆ ಸ್ಮರಣೆಯಲ್ಲಿದೆಯೋ ಅಥವಾ ಇಲ್ಲ. ಒಂದು ವೇಳೆ ಸ್ಮರಣೆಯಲ್ಲಿ ಇದೆಯೆಂದು ನೀನು ಹೇಳಿದರೆ ನಿನ್ನ ಮತದ ಆಪ್ತ , ಆಗಮ, ಪದಾರ್ಥಗಳು ಅಸತ್ಯವಾಗುವವು.

ಒಂದು ವೇಳೆ ನನ್ನ ಆಪ್ತ, ಆಗಮ, ಪದಾರ್ಥಗಳು ಅಸತ್ಯವಿಲ್ಲ, ಸತ್ಯವಿವೆ; ಆತ್ಮನು ಕ್ಷಣಭಂಗುರನೇ ಇದ್ದಾನೆಂದು ಹೇಳಿದರೆ ನಿನ್ನ ಆ ಎರಡು ವರ್ಷಗಳ ಮೊದಲಿನ ಪತ್ರಗಳಿವೆ, ಅವು ಅಸತ್ಯವೆಂದು ಸಿದ್ಧವಾಗುತ್ತವೆ; ಆಗ ನಿನಗೆ ಆ ಸಾಲದ ಹಣವು ಮರಳಿ ದೊರಕುವುದಿಲ್ಲ. ಏಕೆಂದರೆ ಆತ್ಮನಂತೂ ಕ್ಷಣಭಂಗುರನಿದ್ದಾನೆ, ಒಂದು ಶರೀರದಲ್ಲಿ ಕ್ಷಣ ಕ್ಷಣಕ್ಕೆ ಹೊಸ ಹೊಸ ಆತ್ಮನು ಬರುತ್ತಾನೆ. ಯಾವನೋ ಸಾಲ ಕೊಡುವಂಥವನಿದ್ದನು, ಅವನಂತೂ ಸಾಲವನ್ನು ಮರಳಿ ಪಡೆಯುವ ಸಮಯದಲ್ಲಿ ಉಳಿಯಲಿಲ್ಲ, ಹೊಸ ಆತ್ಮನು ಬಂದಿದ್ದಾನೆ. ಈ ಪ್ರಕಾರದ ಕೊಡ ಕೊಳ್ಳುವಿಕೆಯಂತೂ ಅವನಿಂದ ಸರಿಯಿಲ್ಲ. ಎಂದರೆ ನಿನ್ನ ಹಣವು ಹೋಯಿತು ಮತ್ತು ಸಾಕ್ಷೀದಾರರು ಎಲ್ಲರೂ ಕ್ಷಣಭಂಗುರರಿದ್ದಾರೆ ಅವರೂ ಬದಲಾಗಿ ಹೋದರು. ಅವರುಗಳ ದೇಹದಲ್ಲಿಯಂತೂ ಬೇರೆ ಬೇರೆ ಆತ್ಮರುಗಳು ಬಂದಿದ್ದಾರೆ ಅದರಿಂದ ಅವರ ಸಾಕ್ಷಿಯು ಸರಿಯಾಗಿಲ್ಲ. ಸಾಕ್ಷೀಯೂ ಕೂಡ ಅಸತ್ಯವಾಯಿತು. ಪತ್ರ ಬರೆಯಿಸಿಕೊಂಡಿದ್ದನು ಅದು ಕೂಡ ಅಸತ್ಯವಾಯಿತು. ಧನವು ಹೋಯಿತು. ಇನ್ನು ಒಂದು ವೇಳೆ ಧನವು ಹೇಗೆ ಹೋಯಿತು, ಸಜ್ಜನರುಗಳ ರುಜುವಾತು ಇದೆ, ನನಗೆ ಸರಿಯಾಗಿ ತಿಥಿ, ವಾರ, ದಿನಾಂಕ ಎಲ್ಲವೂ ಸ್ಮರಣೆಯಲ್ಲಿದೆ, ಅವನಿಂದ ಎರಡು ಸಾವಿರ ರೂಪಾಯಿ ನನಗೆ ಬಂದಿದೆ. ಅದು ನನಗೆ ಸ್ಮರಣೆಯಲ್ಲಿದೆ, ನನಗೆ ನನ್ನ ಸಾಲದಲ್ಲಿ ಯಾವ ಸಂದೇಹವು ಇಲ್ಲ ಇದರಲ್ಲಿ ಸಂದೇಹಕ್ಕೆ ಅವಕಾಶವಾದರೂ ಎಲ್ಲಿದೆ ? - ಎಂದು ಕೇಳಿದರೆ ಸೋದರನೇ! ನಿನ್ನ ಮತವನ್ನು ನೀನೇ ವಿಚಾರ ಮಾಡಿ ನೋಡು. ನಿನ್ನ ಮತವು ನಿನ್ನ ಶ್ರದ್ಧೆಯ ಮೂಲಕವೇ ಅಸತ್ಯವಾಯಿತು ಎಂದ ಮೇಲೆ ಇತರ ವಿವೇಕಿಗಳು ಪರಭವದ ಸುಖದ ಸಲುವಾಗಿ ನಿನ್ನ ಕ್ಷಣಭಂಗುರ ಮತವನ್ನು ಹೇಗೆ ಅಂಗೀಕಾರ ಮಾಡುವರು. ಇನ್ನೊಂದು ಮಾತು ನಿನ್ನ ಕ್ಷಣಿಕ ಮತದ ನಿಷೇಧವನ್ನು ಕೇವಲ ನಮ್ಮ ಆಗಮಗಳಿಂದಲೇ ಮಾಡಲಾಗಿಲ್ಲ ಆದರೆ ಸಂಸಾರದಲ್ಲಿ ಇನ್ನೂ ಅದೆಷ್ಟೋ ತುಚ್ಛ ಬುದ್ಧಿಯ ಬಾಲಗೋಪಾಲರಿದ್ದಾರೆ. ಅವರುಗಳ ಮೂಲಕವೂ ಕೂಡ ನಿಷೇಧಿಸಲಾಗಿದೆ. ನೀನು ಯಾವನೋ ಓರ್ವ ಬಾಲಕನನ್ನು ಉದ್ದೇಶಿಸಿ ಮಗು ! ನಿನಗೆ ಹತ್ತು ಹನ್ನೆರಡು ದಿವಸಗಳ ಮೊದಲಿನ ಮಾತು ಸ್ಮರಣೆಯಲ್ಲಿ ಇದೆಯೇನು ? ಎಂದು ಕೇಳಿದರೆ ಆ ಬಾಲಕನು - ನನಗಂತೂ ತಿಂಗಳು ಎರಡು ತಿಂಗಳುಗಳ ಮೊದಲಿನ ಮಾತುಗಳೂ ಸ್ಮರಣೆಯಲ್ಲಿವೆ, ಎಂದು ಹೇಳುತ್ತಾನೆ. ಆಗ ಆ ಬಾಲಕನಿಗೆ 'ಆತ್ಮನಂತೂ ಕ್ಷಣಭಂಗುರನಿದ್ದಾನೆ ಅವನು ಶರೀರದಲ್ಲಿ ಕ್ಷಣ ಕ್ಷಣಕ್ಕೆ ಬೇರೆಯವನು ಬರುತ್ತಾನೆಂದ ಮೇಲೆ ನಿನಗೆ ಮೊದಲಿನ ಮಾತುಗಳು ಹೇಗೆ ಸ್ಮರಣೆಯಲ್ಲಿ ಇರುವ ಸಾಧ್ಯತೆ ಇದೆಯೆಂದು ನೀನು ಕೇಳಿದರೆ' ಆಗ ಬಾಲಕನೂ ಕೂಡ - ಈ ಮಾತು ಅಸತ್ಯವಿದೆ, ನಾನು ಬೇಕಾದರೆ ನಾಲ್ಕಾರು ತಿಂಗಳುಗಳ ಹಿಂದಿನ ಹತ್ತಿಪ್ಪತ್ತು ಮಾತುಗಳನ್ನೂ ಹೇಳುವೆನು, ಆಗ ನನ್ನನ್ನು ಸತ್ಯ ಮಾತನಾಡುತ್ತಿದ್ದೇನೆಂದು ತಾವು ಹೇಳಬಹುದಾಗಿದೆ. ಆತ್ಮನನ್ನು ಯಾವನು ಕ್ಷಣಭಂಗುರನೆಂದು ಹೇಳುತ್ತಾನೆ ಅದು ಅಸತ್ಯವಿದೆ ಎಂದು ಬಾಲಕನೂ ಹೇಳುತ್ತಾನೆ. ಆದುದರಿಂದ ಸೋದರನೇ ! ಆಲಿಸು ಚೆನ್ನಾಗಿ ಅವಲೋಕನೆ ಮಾಡು !! ಬಾಲಕನು ಅಜ್ಞಾನಿ ಇದ್ದಾನೆ, ಮುಗ್ಧನಿದ್ದಾನೆ ಅವನೂ ಕೂಡ ನಿನ್ನ ಕ್ಷಣಿಕ ಮತವನ್ನು ಅಸತ್ಯವೆಂದು ಹೇಳುತ್ತಾನೆಂದ ಮೇಲೆ ವಿವೇಕಿಗಳು ಸತ್ಯವೆಂದು ಹೇಗೆ ಮನ್ನಿಸುವರು.

ಮತ್ತೆ ಹೇಳುತ್ತಾರೆ - ಯಾವನೋ ಮುಗ್ಧ, ಅಜ್ಞಾನೀ, ದನಗಳನ್ನು ಮೇಯಿಸುವಂಥ ಗೊಲ್ಲನು ಯಾವನೋ ಕ್ಷಣಿಕವಾದಿಯ ದನಗಳನ್ನು ಮೇಯಿಸುತ್ತಿದ್ದನು. ಅವನು ಆ ದನಗಳ ಮಾಲೀಕನ ಹತ್ತಿರ ಹೋಗಿ, ಸಾಹುಕಾರರೇ! ನಿಮ್ಮ ದನಗಳನ್ನು ಮೇಯಿಸುತ್ತ ನಾಲ್ಕು ತಿಂಗಳುಗಳು ಕಳೆದು ಹೋಗಿವೆ ಅದರಿಂದ ನನ್ನ ಸಂಬಳವನ್ನು ಕೊಟ್ಟು ಬಿಡಿರಿ, ಎಂದಾಗ ಆ ಕ್ಷಣಿಕ ಮತಿಯು ಹೇಳುತ್ತಾನೆ - ಎಲೈ ಗೊಲ್ಲನೇ ! ಆತ್ಮನಂತೂ ಕ್ಷಣಭಂಗುರನಿದ್ದಾನೆ, ಶರೀರದಲ್ಲಿ ಕ್ಷಣ

ಕ್ಷಣಕ್ಕೆ ಬೇರೆ ಬೇರೆ ಆತ್ಮನು ಬರುತ್ತಾನೆ. ಆದುದರಿಂದ ನಾಲ್ಕು ತಿಂಗಳ ಹಿಂದೆ ಯಾವ ಆತ್ಮನು ಸಂಬಳವನ್ನು ಹೇಳಿದ್ದನು, ಆ ಆತ್ಮನು ಈಗ ಇಲ್ಲ ಮತ್ತು ಆ ಗೊಲ್ಲನೂ ಈಗ ಇಲ್ಲ. ಇದನ್ನು ಕೇಳಿ ಗೊಲ್ಲನು ಹೇಳುತ್ತಾನೆ ಸಾಹುಕಾರರೇ ! ಇಷ್ಟು ದೊಡ್ಡ ಮನುಷ್ಯರಿದ್ದು ತಾವು ಇಂಥ ಮಹಾ ಅಸತ್ಯವನ್ನು ವ್ಯರ್ಥವಾಗಿ ಏಕೆ ಹೇಳುತ್ತಿರುವಿರಿ ? ಶರೀರದಲ್ಲಿ ಕ್ಷಣ ಕ್ಷಣಕ್ಕೆ ಹೊಸ ಹೊಸ ಆತ್ಮನು ಬರುತ್ತಾನೆಂದು ಇಲ್ಲಿಯವರೆಗೆ ನಾನು ಕೇಳಿಯೇ ಇಲ್ಲ. ಅದೆಷ್ಟೋ ಸಾವಿರಾರು ಮಾತುಗಳನ್ನಂತೂ ಇಪ್ಪತ್ತು ಇಪ್ಪತ್ತು ವರ್ಷಗಳಿಂದ ನಾನು ಕಂಡಿದ್ದೇನೆ ನೂರು ನೂರು ವರ್ಷಗಳ ಹಿಂದಿನ ಮಾತನ್ನು ಹಿರಿಯರ ಮುಖದಿಂದ ಕೇಳಿದ್ದೇನೆ. ಅವೆಲ್ಲವೂ ನನಗೆ ಸ್ಮರಣೆಯಲ್ಲಿವೆ; ಆದರೆ ತಾವು ಹೇಳುತ್ತಿರುವಂಥ ಅಸತ್ಯ ಮಾತನ್ನು ಇದುವರೆಗೆ ನಾನು ಕೇಳಿಲ್ಲ. ನನ್ನ ಸಂಬಳವನ್ನು ಕೊಟ್ಟು ಬಿಡಿರಿ ಎಂದು ಹೇಳುತ್ತಾನೆ. ಆದರೆ ಅಷ್ಟು ಹೇಳಿದ ಮೇಲೆಯೂ ಸಾಹುಕಾರನು ಆತನ ಸಂಬಳವನ್ನು ಕೊಡಲಿಲ್ಲ.

ಆಗ ಗೊಲ್ಲನು ತನ್ನ ಮನಸ್ಸಿನಲ್ಲಿಯೇ ಯೋಚಿಸಿ, ನಿರ್ಣಯಮಾಡಿ ಅವನ ಹಸುಗಳನ್ನು ತನ್ನ ಮನೆಗೆ ಒಯ್ದು ಕಟ್ಟುತ್ತಾನೆ, ಎರಡು ದಿನಗಳ ನಂತರವೂ ದನಗಳು ಬರಲಿಲ್ಲ. ಆಗ ಗೊಲ್ಲನನ್ನು ಕರೆಯಿಸಿ ಸಾಹುಕಾರನು ಕೇಳುತ್ತಾನೆ - ಎರಡು ದಿವಸಗಳಿಂದ ನಮ್ಮ ಹಸುಗಳು, ಎಮ್ಮೆಗಳು ಮನೆಗೆ ಬಂದಿಲ್ಲ ಇದರ ಕಾರಣವೇನು ? - ಆಗ ಗೊಲ್ಲನು, ಸಾಹುಕಾರರೇ ! ಎಂಥ ಹಸುಗಳು, ಎಂಥ ಎಮ್ಮೆಗಳು ? ನನಗೆ ಯಾವುದೂ ಸ್ಮರಣೆಯಲ್ಲಿ ಇಲ್ಲ. ಶರೀರದಲ್ಲಿ ಕ್ಷಣ ಕ್ಷಣಕ್ಕೆ ಬೇರೆ ಬೇರೆ ಆತ್ಮನು ಬರುತ್ತಾನೆ ಅದರಿಂದ ಮೊದಲಿನವನಂತೂ ಹೊರಟು ಹೋದನು ನಾನು ಈಗ ಬಂದಿದ್ದೇನೆ. ನನಗೆ ಯಾರ ಪಶುಗಳ ಸ್ಮರಣೆ ಇಲ್ಲ. ಆಗ ಸಾಹುಕಾರನು ಎಲೈ ಮೂರ್ಖನೇ ! ನಮ್ಮೊಂದಿಗೆ ಧೂರ್ತತೆಯನ್ನು ಮಾಡಿ ಅಸತ್ಯವನ್ನು ಆಡುತ್ತಿರುವೆಯೇನು ? ನಂತರ ಸಾಹುಕಾರನು ನಗರ ಪಾಲಕನ ಹತ್ತಿರ ಹೋಗಿ ಗೊಲ್ಲನನ್ನು ಕರೆಸುತ್ತಾನೆ. ಆಗ ಗೊಲ್ಲನು ನನ್ನನ್ನೇಕೆ ಕರೆಸಿರುವಿರಿ ಎಂದು ಕೇಳುತ್ತಾನೆ. ಆಗ ನಗರ ಪಾಲಕನು ಈ ಸಾಹುಕಾರನ ಹಸುಗಳು ಎಲ್ಲಿವೆ? -ಎಂದಾಗ, ಗೊಲ್ಲನು ಹೇಳುತ್ತಾನೆ - ನನಗೆ ನ್ಯಾಯಬೇಕು, ನಗರ ಪಾಲಕನು ಎಂಥ ನ್ಯಾಯ ಎಂದು ಕೇಳುತ್ತಾನೆ. ಗೊಲ್ಲನು ಈ ಸಾಹುಕಾರನನ್ನೇ ವಿಚಾರಿಸಿರಿ ಎಂದು ಹೇಳುತ್ತಾನೆ ಆಗ ನಗರಪಾಲಕನು ಸಾಹುಕಾರನನ್ನು ವಿಚಾರಿಸಿದಾಗ ಸಾಹುಕಾರನು ಇಂದಿಗೆ ನಾಲ್ಕು ತಿಂಗಳುಗಳಿಂದ ಈ ಗೊಲ್ಲನು ನಮ್ಮ ಹಸುಗಳನ್ನು ಮೇಯಿಸಲು ಒಯ್ಯುತ್ತಾನೆ, ಆದರೆ ಈಗ ಎರಡು ದಿವಸಗಳಿಂದ ಅವುಗಳನ್ನು ಮನೆಗೆ ತಂದಿಲ್ಲ ಎಂದಾಗ -

ನಗರಪಾಲಕನಿಗೆ ಗೊಲ್ಲನು ಹೇಳುತ್ತಾನೆ - ಯಜಮಾನರೇ ! ಈತನ ಮತದಲ್ಲಿ ಕ್ಷಣ ಕ್ಷಣಕ್ಕೆ ಈ ಶರೀರದಲ್ಲಿ ಹೊಸ ಹೊಸ ಆತ್ಮನು ಬರುತ್ತಾನೆ. ನಾನು ಇವನಿಂದ ಸಂಬಳ ಕೇಳಿದಾಗ, ಇವನು ಯಾರ ಸಂಬಳ ? ಕೊಡಕೊಳ್ಳುವಂಥ ಆ ಆತ್ಮನು ಈಗ ಇಲ್ಲಿ ಇಲ್ಲವೆಂದು ಹೇಳುತ್ತಾನೆ ಅದಕ್ಕಾಗಿ ಇವನ ಹಸುಗಳನ್ನು ನಾನು ನನ್ನ ಮನೆಯಲ್ಲಿ ಕಟ್ಟಿದ್ದೇನೆ. ಈ ಸಾಹುಕಾರನು ತನ್ನ ಮತವನ್ನು ಅಸತ್ಯವೆಂದು ಹೇಳಿ ನನ್ನ ಸಂಬಳವನ್ನು ನನಗೆ ಕೊಡಲಿ. ಮತ್ತು ತನ್ನ ಪಶುಗಳನ್ನು ತೆಗೆದುಕೊಂಡು ಹೋಗಲಿ. ಆಗ ನಗರಪಾಲಕನು ಸಾವಿರಾರು ಜನರ ಮಧ್ಯದಲ್ಲಿ ಆ ಸಾಹುಕಾರನನ್ನು ಅಸತ್ಯವೆಂದು ಹೇಳಿ ಗೊಲ್ಲನ ಸಂಬಳವನ್ನು ಗೊಲ್ಲನಿಗೆ ಕೊಡಿಸಿದನು.

ಅದರಿಂದ ಎಲೈ ಸೋದರನೇ ! ಕ್ಷಣಿಕ ಮತದ ಧಾರಕನೇ ! ನಿನ್ನ ಮತವನ್ನು ಅಶಿಕ್ಷಿತ, ಅಜ್ಞಾನಿ, ದನಕಾಯುವಂಥ ಗೊಲ್ಲನು ಕೂಡ ಅಸತ್ಯವೆಂದು ಹೇಳುತ್ತಾನೆ. ಈ ಬಾಲಗೋಪಾಲರು ಸಂಸಾರದಲ್ಲಿ ಎಲ್ಲರಿಗಿಂತ ಹೀನ, ಅಜ್ಞಾನಿ ಇದ್ದಾರೆ, ಅವರೂ ಕೂಡ ನಿನ್ನ ಮತವನ್ನು ಅಸತ್ಯವೆಂದು ಹೇಳುತ್ತಾರೆಂದಮೇಲೆ ಕ್ಷಣಿಕ ಮತಿಯೇ ಯಾರು ವಿವೇಕಿಗಳಿದ್ದಾರೆ, ಅವರು ಕ್ಷಣಿಕ ಮತವನ್ನು ಹೇಗೆ ಸತ್ಯವೆನ್ನುವರು ? ಆದುದರಿಂದ ಯಾರ ಮತದಲ್ಲಿ ಆತ್ಮನು ಕ್ಷಣಭಂಗುರವೆಂದು ಹೇಳುತ್ತಾರೆ ಅವರುಗಳ ಆಪ್ತ, ಆಗಮ, ಪದಾರ್ಥಗಳು ಅಸತ್ಯವಿವೆ. ಈ ಪ್ರಕಾರ ಆತನ ಕ್ಷಣಿಕ ಮತವನ್ನು ಪ್ರತ್ಯಕ್ಷ ಅಸತ್ಯವೆಂದು ತಿಳಿಸಿಕೊಟ್ಟು ಸ್ಯಾದ್ವಾದ ಮತದ ಸನ್ಮುಖ ಮಾಡಲಾಯಿತು.

ಈಗ ಕರ್ತಾವಾದಿಗಳನ್ನು ಸಂಬೋಧಿಸುತ್ತಾರೆ - ಯಾವುದೋ ಮತದವರು ನವೀನವಾಗಿ ಆತ್ಮನನ್ನು ಉತ್ಪನ್ನಮಾಡುವಂಥವನು ಇದ್ದಾನೆಂದು ಮನ್ನಿಸುತ್ತಾರೆ. ಅವರು ಹೇಳುವುದೇನೆಂದರೆ ಹೊಸ ಹೊಸ ಆತ್ಮಗಳನ್ನು ನಿರ್ಮಿಸಿ ಪೃಥ್ವಿಯ ಮೇಲೆ ಇರಿಸುವಂಥ ಒಬ್ಬ ಭಗವಂತನಿದ್ದಾನೆ ಅದೇ ಭಗವಂತನಿಗೆ ಯಾವಾಗ ಇಚ್ಛೆಯಾಗುತ್ತದೆ ಆಗ ಆ ಆತ್ಮನನ್ನು ನಾಶ ಮಾಡುತ್ತಾನೆ. ಯಾವನು ಉತ್ಪನ್ನಮಾಡುತ್ತಾನೆ ಅವನೇ ಸಾಯಿಸುತ್ತಾನೆ. ಎಂದು ಯಾರು ಹೇಳುತ್ತಾರೆ ಅವರಿಗೆ ಹೇಳುವುದೇನೆಂದರೆ -

ಸೋದರನೇ ! ಆತ್ಮನು ಯಾರೋ ಉತ್ಪನ್ನ ಮಾಡುವುದರಿಂದ ಉತ್ಪನ್ನನಾಗುವುದಿಲ್ಲ, ನಿರ್ಮಿಸುವುದರಿಂದ ನಿರ್ಮಾಣವಾಗುತ್ತಿದ್ದರೆ ಲೋಕದಲ್ಲಿ ಸಂತಾನದ ಉತ್ಪತ್ತಿಯ ಸಲುವಾಗಿ ವಿವಾಹಾದಿಗಳನ್ನು ಏತಕ್ಕಾಗಿ ಮಾಡುವುದು? ಯಾವ ಪುರುಷನು ನವೀನ ಆತ್ಮನನ್ನು ನಿರ್ಮಿಸುತ್ತಾನೆ ಅವನ ಉಪಾಸನೆಯನ್ನೇ ಮಾಡುವುದು, ಆಗ ಅವನೇ ಪ್ರಸನ್ನನಾಗಿ ನೂರು, ಇನ್ನೂರು ಅಥವಾ ಲಕ್ಷ,ಎರಡುಲಕ್ಷ ಅಕ್ಷೌಹಣಿ ಸಂಖ್ಯೆಯಲ್ಲಿ ಆತ್ಮರುಗಳನ್ನು ನಿರ್ಮಿಸಬಹುದಾಗಿದೆ. ಹೇಗೆ ಯಾರ ಸೇವೆಯನ್ನು ನೋಡುತ್ತಾನೆ, ಅದರ ಅನುಸಾರ ಪ್ರಸನ್ನನಾಗಿ ಆತ್ಮರುಗಳನ್ನು ನಿರ್ಮಿಸಬಹುದಾಗಿದೆ. ಹೀಗಾದ ಮೇಲೆ ಸೇವಕರು, ಸೈನಿಕರು, ಮೊದಲಾದವರನ್ನು ಏತಕ್ಕಾಗಿ ಇಟ್ಟುಕೊಳ್ಳಬಹುದು ? ವಿವಾಹಾದಿಗಳನ್ನು ಮಾಡಿಕೊಂಡು ಕುಟುಂಬಾದಿಗಳ ವೃದ್ಧಿಯನ್ನು ಏತಕ್ಕಾಗಿ ಮಾಡುವುದು ? ಆದರೆ ಇಂಥ ಎಂದರೆ ಯಾರೋ ಯಾರ ಸಲುವಾಗಿಯೋ ಹತ್ತಿಪ್ಪತ್ತು ಆತ್ಮರುಗಳನ್ನು ನಿರ್ಮಿಸಿ ಕೊಟ್ಟಿರುವ ಪ್ರವೃತ್ತಿಯನ್ನು ಯಾರೂ ಕೇಳಿಲ್ಲ. ಈಗಲೂ ಕೂಡ ಇಂಥ ಓರ್ವ ನವೀನ ಜೀವವನ್ನು ನಿರ್ಮಿಸುತ್ತಿರುವಂಥ ಯಾವ ದೇವ ದಾನವರು ಕಂಡು ಬರುತ್ತಿಲ್ಲ.

ಇನ್ನು ಒಂದು ವೇಳೆ ಯಾವನೋ ಜೀವದ ಕರ್ತೃವಿದ್ದಾನೆಂಬುದೇ ನಿಮ್ಮ ಹಟವಿದ್ದರೆ ಆ ಕರ್ತೃ ಯಾವಾಗ ಮೊದಲನೇ ಯಾವನೋ ಜೀವವನ್ನು ನಿರ್ಮಿಸಿದ್ದನೋ ಆಗ ಸೃಷ್ಟಿ ಇತ್ತೋ ಅಥವಾ ಇರಲಿಲ್ಲ ? ಅಥವಾ ಆ ಕರ್ತೃ ಏಕಾಕಿ ಇದ್ದನು ? ಆಗ ಕರ್ತೃ ಮೊಟ್ಟ ಮೊದಲು ಯಾವ ಜೀವವನ್ನುನಿರ್ಮಿಸಿದನು ? ಎಂಬುದನ್ನು ಹೇಳಿರಿ. ಅದರ ನಂತರ ಯಾವುದನ್ನು ನಿರ್ಮಿಸಿದನು, ಯಾವಾಗ ಯಾವ ವಸ್ತುವನ್ನು ನಿರ್ಮಿಸಲಾಗುತ್ತದೆ ಆಗ ಯಾರದಾದರು ನಕಲು ಮಾಡಿ ನಿರ್ಮಿಸಲಾಗುತ್ತದೆ ಅರ್ಥಾತ್ ಮೊದಲು ಯಾವುದಾದರು ವಸ್ತು ಇರಬೇಕಾಗುತ್ತದೆ. ಆಗ ಹೊಸದನ್ನು ಮಾಡಲಾಗುತ್ತದೆ ಹೇಗೆ ಯಾವನೋ ಸಿಂಹದ ಆಕಾರ ಮಾಡುತ್ತಾನೆಂದರೆ ಮೊದಲೊಂದು ಸಿಂಹವಿರಬೇಕಾಗುವುದು ಅದನ್ನು ನೋಡಿ ಅದರ ನಕಲುರೂಪ ಇನ್ನೊಂದು ಸಿಂಹವನ್ನು ಮಾಡಬಹುದಾಗಿದೆ. ನಕಲು ಮಾಡಿದಲ್ಲದೆ ನವೀನ ವಸ್ತು ಹೇಗಾಗುತ್ತದೆ. ಆಗ ಆ ಕರ್ತೃವು ಜೀವವನ್ನು ನಿರ್ಮಿಸಿದನು-ಪರಮಬ್ರಹ್ಮನು ಆತ್ಮನನ್ನು ನಿರ್ಮಿಸಿದನೆಂದು ಹೇಳಿದರೆ, ಆ ಪರಮಬ್ರಹ್ಮ ಆತ್ಮನನ್ನು ಯಾರು ನಿರ್ಮಿಸಿದರು ? ಎಂಬುದನ್ನು ಹೇಳಿರಿ - ಕರ್ತೃವಿನ ಕರ್ತೃವು ಯಾರು ಎಂಬುದನ್ನು ಹೇಳಿರಿ.

ಒಂದು ವೇಳೆ ನೀನು ಸೃಷ್ಟಿಯು ಅನಾದಿಯಿದೆ, ಅದರ ಕರ್ತೃವೂ ಅನಾದಿಯೇ ಇದ್ದಾನೆಂದು ಹೇಳಿದರೆ ಸೋದರನೇ ! ಸೃಷ್ಟಿಯು ಅನಾದಿಯಿರುತ್ತಿದ್ದರೆ ನವೀನ ಕರ್ತೃವಿನ ಅಭಾವವು ಸಿದ್ಧವಾಯಿತು. ಸಂಸಾರವು ಸ್ವಯಂ ಸಿದ್ಧ, ಅನಾದಿ ನಿಧನವಿದೆ, ಅನಾದಿಕಾಲದಿಂದ ಇದೆ ; ಆದರೆ ನೀನಂತೂ ಸ್ವಯಂ ಸಿದ್ಧ ಆತ್ಮನನ್ನು ಮನ್ನಿಸುವುದಿಲ್ಲ ಅವನು ಹೊಸದಾಗಿ ಉತ್ಪನ್ನವಾಗಿದ್ದಾನೆಂದು ಮನ್ನಿಸುತ್ತಿರುವೆ; ಆದುದರಿಂದ ಕರ್ತೃ ಯಾರೆಂಬುದನ್ನು ಹೇಳು. ಯಾವನು ಸೃಷ್ಟಿಯನ್ನು ನಿರ್ಮಿಸಿದ್ದಾನೆ ಅವನೇ ಜೀವದ ಕರ್ತೃವಿದ್ದಾನೇನು ? ಇನ್ನು ಈ ಕರ್ತೃ ಸೃಷ್ಟಿಯನ್ನು ನಿರ್ಮಿಸಿರಲಿಲ್ಲ ಆಗ ಏನಾದರೋ ಇತ್ತೋ ಅಥವಾ ಇರಲಿಲ್ಲ ? ನೀನು ಒಂದು ವೇಳೆ ಮೊದಲು ಏನೂ ಇರಲಿಲ್ಲ, ಕರ್ತೃ ನಿರ್ಮಿಸಿದ್ದಾನೆ ಆಗ ಆಯಿತು-ಎಂದು ಹೇಳಿದರೆ ಮೊದಲು ಶೂನ್ಯತೆಯಾಗುವುದಲ್ಲ? ಮತ್ತು ಒಂದು ವೇಳೆ ಕರ್ತೃ ಇಲ್ಲದೆಯೂ ಸಂಸಾರವಿತ್ತೆಂದು ಹೇಳಿದರೆ ಆಗ ನಿನ್ನ ಕರ್ತೃವಿನ ಅಭಾವವಾಗಿ ಹೋಯಿತು. ಆದುದರಿಂದ ಎಲೈ ವಿವೇಕಿಯೇ ! ನೀನು ಒಂದು ವಚನದ ನಿರ್ಣಯ ಮಾಡಿ ಹೇಳು.

ಆಗ ಕರ್ತಾವಾದಿಯು ವಿಚಾರ ಮಾಡುತ್ತ-ಒಂದು ವೇಳೆ ಕರ್ತೃವಿದ್ದಾನೆಂದು ಹೇಳಿದರೆ ಸಂಸಾರ ಮತ್ತು ಕರ್ತೃ- ಇವೆರಡರದೂ ಅಂತ್ಯದ ಪ್ರಸಂಗವು ಬರುತ್ತದೆ ಅದರಿಂದ ಅವನು ಹೇಳುವುದೇನೆಂದರೆ ಕರ್ತೃವೂ ಅನಾದಿಯಿದ್ದಾನೆ ಮತ್ತು ಸೃಷ್ಟಿಯೂ ಅನಾದಿಯಿದೆ. ಆಗ ಸ್ಯಾದ್ವಾದಿಯು ಹೇಳುತ್ತಾನೆ - ಒಂದು ವೇಳೆ ಸೃಷ್ಟಿಯು ಅನಾದಿಯಿದೆಯೆಂದ ಮೇಲೆ ಕರ್ತೃವಿನ ಮಹತ್ವ ಎಲ್ಲಿ ಉಳಿಯುತ್ತದೆ ? 'ಕರ್ತೃ' ಈ ಶಬ್ದವೇ ವ್ಯರ್ಥವಾಯಿತು.

ಸೋದರನೇ ! ಇನ್ನೂ ಆಲಿಸು ನೀನು ಒಂದು ವೇಳೆ ಕರ್ತೃವಂತೂ ಮೊದಲು ನಿರ್ಮಿಸುತ್ತಾನೆ ನಂತರ ತನ್ನ ಇಚ್ಛೆಯನುಸಾರ ನಾಶಮಾಡುತ್ತಾನೆ; ಎಂದು ಹೇಳಿದರೆ ಅದರಲ್ಲಿ ಯಾವ ಗಂಭೀರತೆಯೂ ಇರುವುದಿಲ್ಲ. ಮೊದಲಂತೂ ಮಾಡುತ್ತಾನೆ ನಂತರ ಅದನ್ನು ತಾನೇ ನಷ್ಟಪಡಿಸುತ್ತಾನೆ, ಇದಂತೂ ಬಾಲಕನ ಸಮಾನ ಲೀಲೆ ಆಯಿತು. ಹೇಗೆಂದರೆ ಬಾಲಕನು ಮೊದಲಂತೂ ವಿವಿಧ ಪ್ರಕಾರದ ರಚನೆಗಳನ್ನು ಆಟವಾಡುತ್ತ ಆಡುತ್ತಾ ಮಾಡುತ್ತಾನೆ, ನಂತರ ಅವುಗಳನ್ನೇ ನಷ್ಟಮಾಡಿ ಬಿಡುತ್ತಾನೆ. ಅದರಿಂದ ಎಲೈ ಭವ್ಯನೇ ! ಮೊದಲಂತೂ ಮಾಡುವುದು ನಂತರ ನಷ್ಟ ಮಾಡುವುದು ಎಂದು ಹೇಳಿದರೆ ಅವನಂತೂ ಬಾಲಕನ ಸಮಾನ ಅಜ್ಞಾನಿಯೆಂದು ತಿಳಿಯುವುದು.

ಹಾಗೂ ಸಂಸಾರದಲ್ಲಿ ಯಾರಾದರೂ ಒಂದು ಜೀವವನ್ನು ಸಾಯಿಸಿದರೆ ಅವರಿಗೆ ದೋಷ ತಗಲುತ್ತದೆಯೆಂದ ಮೇಲೆ ಅನಂತ ಜೀವಗಳನ್ನು ಸಾಯಿಸುವಂಥವನಂತೂ ದೊಡ್ಡ ದೋಷಿಯಾದನು, ಅಪರಾಧಿಯಾದನು ಅಲ್ಲದೆ ಯಾರನ್ನು ಸ್ವಯಂ ಉತ್ಪನ್ನ ಮಾಡುತ್ತಾನೆ, ಅವನಂತೂ ಪುತ್ರನ ಸಮಾನ ಇದ್ದಾನೆ. ಅವನನ್ನೇ ಸಾಯಿಸಿದರೆ ಪುತ್ರನನ್ನು ಸಾಯಿಸಿದ ಸಮಾನ ದೋಷವಾಯಿತು. ಆದುದರಿಂದ ಕರ್ತೃವಿಗೆ ಹರ್ತೃತ್ವವು ಸಂಭವಿಸುವುದಿಲ್ಲ.

ಒಂದು ವೇಳೆ ಕರ್ತೃವು ನಾಶಮಾಡಿದರೆ ಅದರಿಂದ ದೋಷವಾಗುವುದಿಲ್ಲವೆಂದು ಹೇಳುತ್ತಿದ್ದರೆ ಯಾವಾಗ ಯಾವನೋ ಯಾರನ್ನೋ ಸಾಯಿಸುತ್ತಾನೆ ಆಗ ಕ್ರೋಧಾಗ್ನಿಯು ಉತ್ಪನ್ನವಾದಮೇಲೆಯೇ ಇತರರ ಘಾತಮಾಡುತ್ತಾನೆ. ಕಷಾಯವಿಲ್ಲದೆ ಪರರ ಘಾತವಾಗುವುದಿಲ್ಲ ಅಲ್ಲದೆ ಯಾರಿಗೆ ಕಷಾಯವಿರುತ್ತದೆ ಅವರು ಸಂಸಾರೀ, ದೇಹಧಾರೀ, ಜಗತ್ತಿನ ಜೀವವೆಂದು ತಿಳಿಯುವುದು. ಅವನಲ್ಲಿ ನವೀನ ಜೀವವನ್ನು ಉತ್ಪನ್ನಮಾಡುವ ಶಕ್ತಿಯು ಇರುವುದಿಲ್ಲ; ಆದುದರಿಂದ ಎಲೈ ಸೋದರನೇ ! ಬಹಳಷ್ಟು ಎಲ್ಲಿಯವರೆಗೆಂದು ಹೇಳುವುದು ? ಅನೇಕ ನಯಗಳಿಂದ ಕರ್ತಾತನದ ವಚನವು ಖಂಡಿತವಾಗುತ್ತದೆ. ಅದರಿಂದ ಎಲೈ ಧರ್ಮಾರ್ಥಿಯೇ ! ಇಂಥ ಶ್ರದ್ಧೆಯನ್ನು ಬಿಟ್ಟುಕೊಡುವುದೇ ಯೋಗ್ಯವಿದೆ.

ಈಗ ನೀನು ಆಲಿಸು ! ಈ ಸಂಸಾರವು ಅನಾದಿನಿಧನವಿದೆ. ಯಾರೂ ಮಾಡಿರುವಂಥದ್ದಿಲ್ಲ. ಈ ಸಂಸಾರದಲ್ಲಿ ಅನಂತ ಜೀವಗಳಿವೆ, ಅವೆಲ್ಲವೂ ಅನಾದಿನಿಧನವಿವೆ. ಯಾರ ಸಲುವಾಗಿ ಮಾಡಿರುವಂಥವುಗಳಿಲ್ಲ. ಅನಂತ ಜೀವ ದ್ರವ್ಯಗಳು ತಮ್ಮತಮ್ಮ ಭಿನ್ನ-ಭಿನ್ನ ಸತ್ತಾವನ್ನು ಧಾರಣ ಮಾಡುತ್ತ ತಮ್ಮ ತಮ್ಮ ಗುಣಪರ್ಯಾಯಸಹಿತ ಅನಾದಿ ಕಾಲದಿಂದ ನಾಲ್ಕು ಗತಿಗಳಲ್ಲಿ ಸುಖ-ದುಃಖಗಳನ್ನು ಭೋಗಿಸುತ್ತಲಿವೆ. ಎಂಥ ಎಂಥ ಪರಿಣತಿಯು ತನ್ನದಾಗುತ್ತದೆ ಅದರ ಅನುಸಾರ ಪುಣ್ಯ ಪಾಪಗಳ ಫಲವನ್ನು ಭೋಗಿಸುತ್ತ, ಪುಣ್ಯ ಪಾಪಗಳ ಬಂಧ ಮಾಡಿಕೊಳ್ಳುತ್ತ ಜಗತ್ತಿನಲ್ಲಿ ಭ್ರಮಣ ಮಾಡುತ್ತಿರುತ್ತವೆ. ಅದರದೇ ಫಲ ಸ್ವರೂಪವಾಗಿ ಸ್ವರ್ಗ ನರಕಾದಿಗಳ ಸುಖ ದುಃಖಗಳನ್ನು ಪಡೆಯುತ್ತವೆ.

ಈ ಆತ್ಮನು ಯಾವಾಗ ಪುಣ್ಯ ಪಾಪಗಳ ಉತ್ಪಾದನೆಯಿಂದ ರಹಿತನಾಗುತ್ತಾನೆ ಆಗ ವೀತರಾಗ ದಶೆಯನ್ನು ಧಾರಣ ಮಾಡುತ್ತಾನೆ. ಆಗ ಸರ್ವಕರ್ಮಗಳನ್ನು ನಷ್ಟಗೊಳಿಸಿ ಪರಮಾತ್ಮಾ - ಸಿದ್ಧಪದವನ್ನು ಧಾರಣ ಮಾಡುತ್ತಾನೆ. ಆ ಸಿದ್ಧಭಗವಂತರು ಜ್ಯೋತಿಸ್ವರೂಪ, ಸ್ವಯಂಸಿದ್ಧ ಜಗನ್ನಾಥ, ಯಾರ ಕರ್ತೃ-ಹರ್ತೃಗಳಿರುವುದಿಲ್ಲ. ಯಾರು ಯಾರು ಕರ್ತೃ-ಹರ್ತೃವಾಗುತ್ತಾರೆ ಅವರು ಭಗವಂತರಿರುವುದಿಲ್ಲ. ಸಿದ್ಧನಾಗಿ ಹೋದ ಮೇಲೆ ಕರ್ತೃ-ಹರ್ತೃವಾಗುವುದಿಲ್ಲ. ಆದುದರಿಂದ ನವೀನ ಆತ್ಮನನ್ನು ಯಾರಾದರೂ ಉತ್ಪನ್ನ ಮಾಡುತ್ತಾರೆ- ಎಂಬ ಶ್ರದ್ಧೆಯು ಯಾರ ಮತದಲ್ಲಿ ಇದೆ ಅವರ ಆಪ್ತ, ಆಗಮ, ಪದಾರ್ಥಗಳು ಅಸತ್ಯವಿವೆ.

'ಈ ಪ್ರಕಾರ ನವೀನ ಜೀವದ ಕರ್ತೃಗಳು ಯಾರಾದರೂ ಇದ್ದಾರೆ' ಎಂದು ಯಾರು ಮನ್ನಿಸುತ್ತಿದ್ದರು ಅವರ ಶ್ರದ್ಧೆಯನ್ನು ನಷ್ಟಮಾಡಲಾಯಿತು ಮತ್ತು ಶುದ್ಧ ಶ್ರದ್ಧೆ ಮಾಡಿಸಲಾಯಿತು. 'ಆತ್ಮನು ಸ್ವಯಂ ಸಿದ್ಧನಿದ್ದಾನೆ ಯಾರಿಂದ ಮಾಡಲ್ಪಟ್ಟಿರುವಂಥವನಿಲ್ಲ' ಎಂದು ದೃಢಗೊಳಿಸಿ ಜಿನಭಾಷಿತ ಶ್ರದ್ಧೆಯನ್ನು ದೃಢಪಡಿಸಲಾಯಿತು. ಈ ಪ್ರಕಾರ ತಿಳಿಸಿಕೊಟ್ಟು ಕರ್ತಾವಾದಿಗಳನ್ನು ಶುದ್ಧ ಮಾಡಲಾಯಿತು.

ಈಗ ಕೆಲವುನಾಸ್ತಿಕ ಮತಿಗಳ ಸಂವಾದ - ಯಾವದೋ ಮತದವರು ಜೀವದ ನಾಸ್ತಿಯನ್ನೇ ಮನ್ನಿಸುತ್ತಾರೆ. ಅವರು ಹೇಳುವುದೇನೆಂದರೆ, 'ಜೀವವಸ್ತುವು ಇಲ್ಲವೇ ಇಲ್ಲ' ಅವರು ಜೀವದ ಅಭಾವವನ್ನು ಮನ್ನಿಸುತ್ತಾರೆ. ಆ ನಾಸ್ತಿಕ ವಾದಿಗಳು ಹೇಳುವುದೇನೆಂದರೆ ಒಂದು ವೇಳೆ ಜೀವವು ಇರುತ್ತಿದ್ದರೆ ದಯೆಮಾಡಬಹುದಾಗಿತ್ತು ? ಏಕೆಂದರೆ ಜೀವನು ಇಲ್ಲ. ಅದರಿಂದ ಜೀವದ ಅಭಾವದಲ್ಲಿ ದಯೆಯ ಅಭಾವವು ಆಯಿತು ಹಾಗೂ ದಯೆಯ ಅಭಾವದಿಂದ ಪುಣ್ಯಪಾಪಗಳದ್ದೂ ಅಭಾವವಾಯಿತು. ಜೀವವೇ ಇಲ್ಲವೆಂದಿರುವಾಗ ಪುಣ್ಯ ಪಾಪಗಳ ಫಲವನ್ನು ಯಾರು ಭೋಗಿಸುವರು? ಆದುದರಿಂದ ಪುಣ್ಯ ಪಾಪಗಳೂ ಇರುವುದಿಲ್ಲ ಮತ್ತು ಪುಣ್ಯ ಪಾಪಗಳ ಫಲದ ಅಭಾವದಲ್ಲಿ ಪರಲೋಕದ್ದೂ ಅಭಾವವಿದೆ. ಪರಲೋಕವೇ ಇಲ್ಲವೆಂದಿರುವಾಗ ಪುಣ್ಯಪಾಪಗಳ ಫಲರೂಪದ ಸ್ವರ್ಗ ನರಕಾದಿ ಗತಿಗಳಾದರೂ ಎಲ್ಲಿಂದ ಇರುವವು ? ಅದರಿಂದ ಜೀವನು ಇಲ್ಲ, ಪುಣ್ಯ ಪಾಪಗಳೂ ಇಲ್ಲ, ನರಕ ಸ್ವರ್ಗಾದಿ ಗತಿಗಳೂ ಇಲ್ಲ ಮತ್ತು ಸಂಸಾರವೂ ಕೂಡ ಇಲ್ಲವೆಂಬುದು ನಾಸ್ತಿಕ ಮತಿಗಳ ಮತವಿದೆ.

ಇಂಥ ನಾಸ್ತಿಕ ಮತಿಗಳಿಗೆ ತಿಳಿಸಿಕೊಡುತ್ತ - ಎಲೈ ನಾಸ್ತಿಕ ಮತಿಯೇ ! ನೀನು ಜೀವವನ್ನು ಮನ್ನಿಸುವುದಿಲ್ಲ ಆದರೆ ಈ ಪ್ರಶ್ನೋತ್ತರ ಮಾಡುವಂಥವರು ಯಾರಿದ್ದಾರೆ ಎಂಬುದರ ವಿಚಾರವನ್ನಾದರೂ ಮಾಡು ಹಾಗೂ 'ಈ ನೀನು' ಈ ಜ್ಞಾನವನ್ನು ತಿಳಿಯುವಂಥವನು ಯಾವನಿರುವೆ ? ಈ ಜ್ಞಾನದಿಂದ ಯಾವನ ವಿಚಾರವಾಗುತ್ತದೆ ಅವನನ್ನು ನೀನು ನಿಶ್ಚಯದಿಂದ ಆತ್ಮನೆಂದೇ ತಿಳಿಯು, ಆತ್ಮನಿಲ್ಲದೆ ಸಂದೇಹವು ಬೇರೆ ಯಾರದೂ ಇರುವುದಿಲ್ಲ. ಆತ್ಮನಿಗೇನೆ ವಿಕಲ್ಪಗಳು ಉತ್ಪನ್ನವಾಗುತ್ತವೆ ಎಂಬುದನ್ನು ನೀನು ತಿಳಿಯು !

ಇದು ಶರೀರವಿದೆ, ಇದು ಜಡವಿದೆ, ಅಚೇತನವಿದೆ, ಮೂರ್ತಿಕವಿದೆ ಇದರಲ್ಲಿ ನೋಡುವ, ತಿಳಿಯುವ ಶಕ್ತಿಯಿಲ್ಲ ಈ ಶರೀರಕ್ಕೆ ವಿಕಲ್ಪಗಳಾಗುವುದಿಲ್ಲ ಆದುದರಿಂದ ಈ ವಿಚಾರಿಸುವಂಥವನು, ಸಂದೇಹ ಪಡುವಂಥವನು, ಹಠ ಮಾಡುವಂಥವನು, ಸಿಹಿ ಕಹಿಗಳ ಸ್ವಾದವನ್ನು ತಿಳಿಯುವಂಥವನು, ಒಳಿತು ಕೆಡಕು ಮನ್ನಿಸಿ ರಾಗದ್ವೇಷ ಮಾಡುವಂಥವನು ಕ್ರೋಧ, ಮಾನ, ಮಾಯೆ, ಲೋಭ ಮಾಡುವಂಥವನು ಬೇರೆ ಯಾವನೋ ಇದ್ದಾನೆ. ಅವನನ್ನೇ ನೀನು ಆತ್ಮನೆಂದು ತಿಳಿ. ಲೌಕಿಕ ವಿಷಯದಲ್ಲಿಯೂ ಕೂಡ ಜನರು ಹೇಳುತ್ತಾರೆ - ಇಂಥ ವ್ಯಕ್ತಿಯು ಸತ್ತು ಹೋಗಿದ್ದನು ಅವನು ಇಂಥ ಭೂತವಾಗಿದ್ದಾನೆ. ಕೆಲವರು ಹೇಳುತ್ತಾರೆ ನಮ್ಮಲ್ಲಿ ಇಂಥವನೊಬ್ಬ ವೃದ್ಧನು ಮೊದಲು ಸತ್ತಿದ್ದನು ಅವನು ಈಗ ಬಂದು ನಮಗೆ ಪೂಜೆ ಮಾಡೆಂದು ಕೇಳುತ್ತಿದ್ದಾನೆ. ಇನ್ನೂ ಕೆಲವರು ಹೇಳುತ್ತಾರೆ ಇಂಥವನು ಭೂತವಾಗಿದ್ದನು ಅವನು ಇಂದು ಆ ವ್ಯಕ್ತಿಯನ್ನು ಪೀಡಿಸುತ್ತಿದ್ದಾನೆ - ಇತ್ಯಾದಿ ಮಾತುಗಳು ಜಗತ್ತಿನಲ್ಲಿ ಪ್ರಸಿದ್ಧವಿವೆ, ಎಲ್ಲರೂ ಹೇಳುತ್ತಾರೆ. ಎಲೈ ನಾಸ್ತಿಕ ಮತಿಯೇ ! ಈಗ ನಿನಗೆ ಯಾರಾದರೂ ಸ್ಮಶಾನ ಭೂಮಿಯಲ್ಲಿ ರಾತ್ರಿಯನ್ನು ಕಳೆಯಬೇಕೆಂದು ಹೇಳಿದರೆ, ನೀನು ಕೂಡ ಅಲ್ಲಿ ಭೂತ-ಪ್ರೇತಗಳು ಇವೆಯೆಂದು ಹೇಳಬಹುದಾಗಿದೆ. ನಾನು ಅಂಥ ಭಯಾನಕ ಪ್ರದೇಶದಲ್ಲಿ ಹೋಗುವುದಿಲ್ಲವೆಂದು ಜನರು ಕೂಡ ಹೇಳುತ್ತಾರೆ.

ಆದುದರಿಂದ ಎಲೈ ನಾಸ್ತಿಕ ಮತಿಯೇ ! ನೀನು ವಿಚಾರ ಮಾಡು ! ಯಾವನೋ ಜೀವನಿದ್ದಾನೆ ಅಂತೆಯೇ ಭೂತವಾಗಿದ್ದಾನೆ. ಯಾವುದೋ ಪರಲೋಕವಿದೆ ಅಂತೆಯೇ ವ್ಯಂತರ ದೇವನಿದ್ದಾನೆ; ಆದುದರಿಂದ ಎಲೈ ನಾಸ್ತಿಕ ಬುದ್ಧಿಯೇ! ಜೀವನೂ ಇದ್ದಾನೆ, ಪರಲೋಕವೂ ಇದೆ ಎಂದು ನೀನು ತಿಳಿ. ಪಾಪದ ಫಲದಿಂದ ಜೀವನು ನರಕ, ಪಶುಗಳ ದುಃಖ ಪಡೆಯುತ್ತಾನೆ, ಪಾಪದ ಫಲವುಳ್ಳವನು ಒಂದು ವೇಳೆ ಮನುಷ್ಯನಾದರೆ ಕುರುಡ, ಕುಂಟ, ಕಿವುಡ,

ದರಿದ್ರ , ಅಭಿಮಾನಿ, ರೋಗಿ, ದೀನ, ಅನ್ನ ವಸ್ತ್ರರಹಿತನಾಗುತ್ತಾನೆ. ಪುಣ್ಯದ ಫಲದಲ್ಲಿ ದೇವನಾಗುತ್ತಾನೆ. ಮತ್ತು ಒಂದು ವೇಳೆ ಮನುಷ್ಯನಾದರೆ ಸರ್ವದುಃಖ ರಹಿತ, ಸುಖಿಯಾಗುತ್ತಾನೆ. ಆದುದರಿಂದ ಯಾರು ವಿವೇಕವಂತರಿದ್ದಾರೆ ಅವರು ಪಾಪ ಮಾಡುವುದಿಲ್ಲ. ಬುದ್ಧಿವಂತರು ಶುಭಕಾರ್ಯ ಮಾಡುತ್ತಾರೆ.

ಅಜ್ಞಾನಿ ದರಿದ್ರನೂ ಕೂಡ ಹೇಳುತ್ತಾನೆ - ನಮ್ಮ ಆತ್ಮನು ಅನ್ನವಸ್ತ್ರಗಳಿಲ್ಲದೆ ದುಃಖಿಯಿದ್ದಾನೆ ಯಾರಾದರೂ ನಮ್ಮ ಮೇಲೆ ದಯೆ ಮಾಡಿ ಅನ್ನವಸ್ತ್ರಗಳನ್ನಿತ್ತು ನಮ್ಮ ಪೋಷಣೆ ಮಾಡಿದರೆ ನಮ್ಮನ್ನು ಸುಖಿಗಳನ್ನಾಗಿ ಮಾಡಿದರೆ ಅವರಿಗೆ ಪುಣ್ಯವಾಗುವುದು. - ಆದುದರಿಂದ ಎಲೈ ಭವ್ಯಾತ್ಮನೇ ! ಜೀವನೂ ಇದ್ದಾನೆ, ಜೀವದಯೆಯೂ ಇದೆ. ಪಾಪವೂ ಇದೆ, ಪಾಪದ ಫಲವಾದ ನರಕಾದಿ ದುಃಖಗಳೂ ಇವೆ. ಪುಣ್ಯವೂ ಇದೆ, ಪುಣ್ಯ ಫಲವಿರುವ ಸ್ವರ್ಗಾದಿಗಳೂ ಇವೆ.- ಎಂದು ತಿಳಿದುಕೊಂಡು ಅನೇಕ ಮತಗಳ ಧರ್ಮಾತ್ಮಾ ಜೀವರುಗಳು ಪಾಪದ ನಿಷೇಧ ಮಾಡುತ್ತಾರೆ ಹಾಗೂ ಪುಣ್ಯ ಮಾಡುವುದನ್ನು ಉಪಾದೇಯವೆಂದು ಹೇಳುತ್ತಾರೆ. ಪಾಪ - ಪುಣ್ಯಗಳ ಫಲದ ಸ್ಥಾನವಾದ ಅನಾದಿ ಸಾಂಸಾರಿಕ ದೇವಾದಿ ನಾಲ್ಕು ಗತಿಗಳ ರಚನೆಯಿಂದ ಸಹಿತ, ಷಟ್‌ದ್ರವ್ಯಗಳಿಂದ ನಿರ್ಮಾಣಗೊಂಡ ಈ ಜಗತ್ತು ಅನಾದಿಯಿಂದ ಇದೆ. ಅದರಿಂದ ಎಲೈ ನಾಸ್ತಿಕ ಬುದ್ಧಿಯೇ ! ಸಂಸಾರವೂ ಇದೆ, ಮತ್ತು ಸರ್ವಕರ್ಮನಾಶಮಾಡುವಂಥ ಧರ್ಮವೂ ಕೂಡ ಇದೆ. - ಸರ್ವ ದುಃಖಗಳಿಂದ ರಹಿತ, ಸುಖ ಸಮೂಹ, ಅತೀಂದ್ರಿಯ ಭೋಗದ ಆಸ್ವಾದಿ, ಅನಂತ ಬಲಶಾಲಿ, ಜ್ಯೋತಿಸ್ವರೂಪ, ಪರಮ ಬ್ರಹ್ಮ, ಭಗವತ್ ಪದದ ಧಾರಕರು ಸದೈವ ಮೋಕ್ಷರೂಪರಿದ್ದಾರೆ ಆದುದರಿಂದ ಮೋಕ್ಷವೂ ಕೂಡ ಇದೆ.

ಎಲೈ ನಾಸ್ತಿಕ ಮತಿಯೇ ! ನಿನ್ನ ನಾಸ್ತಿಕ ಮತವು ಸರ್ವ ಮತಗಳಿಂದ ಖಂಡಿತವಾಗುತ್ತದೆ. ಏಕೆಂದರೆ ನಿನ್ನ ನಾಸ್ತಿಕ ಮತದ ಶ್ರದ್ಧೆಯಾದ ಮೇಲೆ ಸರ್ವ ಮತಗಳೂ, ಮಂದಿರ,ದಾನ, ಪೂಜೆ, ಭಗವಂತರ ಭಕ್ತಿ , ಜಪ, ತಪ, ಸಂಯಮ, ಶೀಲ ಮೊದಲಾದ ಜಗತ್ತಿನ ಎಲ್ಲ ಶ್ರೇಷ್ಠ ಪೂಜ್ಯ ಗುಣಗಳ ಅಭಾವವಾಗಿ ಹೋಗುತ್ತದೆ.

ನಿನ್ನ ಮತದ ಹೊಂದಾಣಿಕೆಯು ಯಾವುದೇ ಮತದ ಜೊತೆಗೆ ಆಗುವುದಿಲ್ಲ. ಸರ್ವ ಮತಗಳ ಶಾಸ್ತ್ರಗಳ ಅಭಿಪ್ರಾಯದಿಂದ ಮತ್ತು ಲೌಕಿಕ ಪ್ರವೃತ್ತಿಯಿಂದ ನಾಸ್ತಿಕ ಮತವು ಅಸತ್ಯವಾಯಿತು. ಲೋಕದಲ್ಲಿಯಂತೂ ದಾನ, ಪೂಜಾದಿ ಗುಣಗಳು ಪೂಜ್ಯವೆಂದು ಕಂಡು ಬರುತ್ತವೆ ಆದುದರಿಂದ ನಾಸ್ತಿಕ ಮತವು ಅನೇಕ ಭಾವಗಳಿಂದ ವಿಚಾರ ಮಾಡಿದ ಮೇಲೆ ಅಸತ್ಯವೆಂದು ಸಿದ್ಧವಾಗುತ್ತದೆ. ಎಂದರೆ ಯಾರ ಮತದಲ್ಲಿ ಆತ್ಮನ ನಾಸ್ತಿ ಹೇಳಲಾಗಿದೆ ಅವರ ಆಪ್ತ , ಆಗಮ, ಪದಾರ್ಥಗಳು ಅತ್ಯಂತ ಹೇಯವಿವೆ.

ಈ ಪ್ರಕಾರ ನಾಸ್ತಿಕ ಮತಿಯ ಶ್ರದ್ಧೆಯನ್ನು ನಾಶಮಾಡಿ ಅವನನ್ನು ಸ್ಯಾದ್ವಾದ ಮತದ ಸನ್ಮುಖ ಮಾಡಲಾಯಿತು.

ನಾಸ್ತಿಕಮತಿಯೊಂದಿಗೆ ಸಂವಾದ ವಿಜಯ ಕಥನವು ಪೂರ್ಣವಾಯಿತು.

ಈಗ ಅವತಾರವಾದೀ ಏಕಾಂತಮತಿಗಳ ಸಂವಾದ - ಯಾರೋ ಅವತಾರವಾದಿಗಳು ಮೋಕ್ಷಕ್ಕೆ ಹೋದ ಆತ್ಮನು ಪುನಃ ಅವತರಿಸುತ್ತಾನೆ ಎಂದು ಮನ್ನಿಸುತ್ತಾರೆ. ಅವರಿಗೆ ಹೇಳುವುದೇನೆಂದರೆ ಮುಕ್ತ ಜೀವರುಗಳ ಅವತಾರ ಮನ್ನಿಸುವಂಥ ಭವ್ಯಾತ್ಮನೇ ನೀನು ಆಲಿಸು ! ಯಾವುದರಿಂದ ಅಕ್ಕಿಯು ಹೊರಡುತ್ತದೆ ಅಂಥ ಧಾನ್ಯವನ್ನು ಬಿತ್ತುವುದರಿಂದ ನಾಟುತ್ತದೆ ಆದರೆ ಧಾನ್ಯವನ್ನು ಕುಟ್ಟಿ ಅದರ ಸಿಪ್ಪೆಯನ್ನು ದೂರಗೊಳಿಸಿ ಶುದ್ಧವಾದ ಅಕ್ಕಿಯಾದ ಮೇಲೆ ಅದರದೇ ತೌಡಿನಲ್ಲಿಟ್ಟು ಬಿತ್ತಿದರೆ ಅದು ನಾಟುವುದಿಲ್ಲ. ಅದೇ ಪ್ರಕಾರ ಎಷ್ಟು ಕಾಲದವರೆಗೆ ಈ ಸಂಸಾರೀ ಅಶುದ್ಧ ಆತ್ಮನಿಗೆ ಕರ್ಮರೂಪದ ಸಿಪ್ಪೆಯು ಅಂಟಿಕೊಂಡಿದೆ ಅಷ್ಟು ಕಾಲದವರೆಗಂತೂ ನಾಲ್ಕು ಗತಿ - ಶರೀರದಲ್ಲಿ ಉತ್ಪನ್ನನಾಗುತ್ತ ಶುಭಾಶುಭ ಫಲವನ್ನು ಭೋಗಿಸುತ್ತಾನೆ; ಆದರೆ ಯಾವಾಗ ಸಮ್ಯಕ್‌ಚಾರಿತ್ರ ಸಹಿತನಾಗಿ ತಪಸ್ಸು ಮಾಡಿ ಅಷ್ಟಕಮಗಳ ನಾಶದಿಂದ ಕರ್ಮರಹಿತ ಶುದ್ಧಾತ್ಮನಾಗಿ ಸಿದ್ಧ ಲೋಕದಲ್ಲಿ ವಿರಾಜಮಾನನಾಗಿ ಹೋಗುತ್ತಾನೆ, ಆಗ ಪುನಃ ಸಾಂಸಾರಿಕ

ಶರೀರವನ್ನೆಂದೂ ಧಾರಣ ಮಾಡುವುದಿಲ್ಲ. ಯಾವ ಆತ್ಮನು ಅವತಾರ (ಜನ್ಮ) ತೆಗೆದುಕೊಳ್ಳುತ್ತಾನೆ ಅವನು ಸಂಸಾರಿ ಇದ್ದಾನೆ, ಶುದ್ಧಾತ್ಮನಿಲ್ಲ-ಶುದ್ಧಾತ್ಮನ ಅವತಾರವಾಗುವುದಿಲ್ಲ.

ಆಗ ಯಾರೋ ಹೇಳುತ್ತಾರೆ - ಭಗವಂತರಂತೂ ಶುದ್ಧರಿದ್ದಾರೆ; ಆದರೆ ಯಾವಾಗ ದೇವ, ದಾನವ, ರಾಕ್ಷಸನು ಭಗವಂತರ ಪ್ರಜೆಗಳಿಗೆ ಪೀಡೆ ತಗಲಿಸುತ್ತಾನೆ; ಆಗ ಆ ಜ್ಯೋತಿ ಸ್ವರೂಪ ಪರಮಾತ್ಮಾ - ಭಗವಂತನು ಪ್ರಜೆಗಳ ರಕ್ಷಣೆ ಮಾಡುವ ಸಲುವಾಗಿ ರಾಕ್ಷಸರನ್ನು ಸಾಯಿಸುವುದರ ಸಲುವಾಗಿ ಅವತರಿಸುತ್ತಾನೆ, ಈ ಪ್ರಕಾರ ಶುದ್ಧಾತ್ಮನು ಅವತಾರ ಪಡೆಯುವುದು ಸಿದ್ಧವಾಗುತ್ತದೆ.

ಅವರಿಗೆ ಹೇಳುತ್ತಾರೆ - ಎಲೈ ಸೋದರನೇ ! ನೀನು ಯಾವುದನ್ನು ಹೇಳಿದೆ ಅದರಲ್ಲಿ ಇನ್ನೂ ದೋಷವು ಪ್ರಗಟವಾಗುತ್ತದೆ. ಭಗವಂತರ ಪ್ರಜೆಗಳನ್ನು ರಾಕ್ಷಸ, ದೇವ, ದಾನವರು ಪೀಡಿಸುತ್ತಾರೆ ಆಗ ರಾಕ್ಷಸಾದಿಗಳನ್ನು ಸಾಯಿಸುವುದರ ಸಲುವಾಗಿ ಮತ್ತು ಪ್ರಜೆಗಳ ರಕ್ಷಣೆಯ ನಿಮಿತ್ತವಾಗಿ ಭಗವಂತರು ಅವತಾರವೆತ್ತುತ್ತಾರೆ ಎಂದು ನೀನು ಹೇಳಿರುವೆ. ಆದರೆ ಪ್ರಜೆಗಳಲ್ಲಂತೂ ರಾಗ-ಭಾವವಾಯಿತು ಮತ್ತು ರಾಕ್ಷಸಾದಿಗಳೊಂದಿಗೆ ಅಲ್ಲಿ ದ್ವೇಷವಾಯಿತು. ಸೋದರನೇ ! ಯಾರಿಗೆ ರಾಗ-ದ್ವೇಷಗಳಾಗುತ್ತವೆ ಅವರಂತೂ ಭಗವಂತರಿರುವುದಿಲ್ಲ. ಭಗವಂತರಿಗೆ ರಾಗ-ದ್ವೇಷಗಳಾಗುವುದಿಲ್ಲ; ಇತರರನ್ನು ಸಾಯಿಸುವಂಥವರು ಕ್ರೋಧಿಯಿದ್ದಾರೆ, ಅಂಥ ಕ್ರೋಧಿಗಳ ನಿಂದೆಯನ್ನು ಜಗತ್ತಿನ ಜನರು ಮಾಡುತ್ತಾರೆ. ಆದುದರಿಂದ ಯಾರು ಕ್ರೋಧಿ ಇದ್ದಾರೆ ಅವರು ಸಂಸಾರಿಯಿದ್ದಾರೆ, ಭಗವಂತರಿಲ್ಲ.

ಅದಕ್ಕಾಗಿ ಎಲೈ ಧರ್ಮಾರ್ಥಿಯೇ ! ಯಾರಲ್ಲಿ ಕಾಮ, ಕ್ರೋಧ, ರಾಗ, ದ್ವೇಷ, ಮಾನ, ಮತ್ಸರ, ಛಲ, ಕಪಟ, ಜನ್ಮ,ಮರಣಗಳಿರುತ್ತವೆ ಅವರು ಭಗವಂತರಿರುವುದಿಲ್ಲ. ಆಲಿಸು ! ಗರ್ಭವಾಸವನ್ನು ನಾಶ ಮಾಡುವ ನಿಮಿತ್ತವಾಗಿ ಅನೇಕ ಪ್ರಕಾರದಿಂದ ದುರ್ಧರ ತಪಸ್ಸು ಮಾಡಿ ಇಪ್ಪತ್ತೆರಡು ಪರೀಷಹಗಳ ಮಹಾ ಸಂಕಟವನ್ನು ಸಹಿಸಿ ವೀತರಾಗ ಭಾವದ ಮೂಲಕ ಮಹಾಕಠಿಣತೆಯಿಂದ ಕರ್ಮ ನಾಶಮಾಡಿದ ಮೇಲೆ ಶರೀರವೆಂಬ ಕಾರಾಗೃಹದಿಂದ ಬಿಡುಗಡೆ ಹೊಂದುತ್ತಾರೆ, ಗರ್ಭವಾಸದ ಮಹಾ ದುಃಖಗಳಿಂದ ತಪ್ಪಿಸಿಕೊಳ್ಳುತ್ತಾರೆ; ಅಂಥವರು ಪುನಃ ಗರ್ಭವಾಸದ ವಿಕಟ ದುಃಖಗಳಲ್ಲಿ ಹೇಗೆ ಹೋಗುವ ಸಾಧ್ಯತೆಯಿದೆ ? ಎಂದೂ ಹೋಗುವುದಿಲ್ಲ.

ಹೇಗೆ ಯಾವನೋ ಸಜ್ಜನ ಪುರುಷನಿಗೆ ದೋಷ ತಗಲಿಸಿ ಕೋತವಾಲನು ಬಂಧಿಸಿ ಕಾರಾಗೃಹದಲ್ಲಿ ಹಾಕಿ ಬಿಟ್ಟನು. ಅಲ್ಲಿ ತೀರ ಅಲ್ಪ ಅನ್ನ ಜಲಾದಿಗಳನ್ನು ನೀಡುತ್ತಾನೆ, ಹೀಗಾಗಿ ಮರಣದ ಸಮಾನ ಅವನು ಮಹಾದುಃಖವನ್ನು ಸಹಿಸುತ್ತಾನೆ. ದಿನನಿತ್ಯವು ಅನೇಕ ಪ್ರಕಾರದ ದುಃಖಗಳನ್ನು ಭೋಗಿಸುವುದು, ಇತರರಿಂದ ಕಟುವಚನಾದಿಗಳನ್ನು ಸಹಿಸುವುದು ಇತ್ಯಾದಿ ಮಹಾ ದುಃಖಗಳನ್ನು ಕಂಡು ವ್ಯಾಕುಲನಾಗಿ ಅವನು ವಿಚಾರ ಮಾಡುವುದೇನೆಂದರೆ ಈ ಕಾರಾಗೃಹದಲ್ಲಿ ದುಃಖ ಭೋಗಿಸುತ್ತ ನನ್ನದು ದೀರ್ಘಕಾಲವು ಕಳೆದು ಹೋಗಿದೆ. ಈಗ ಇಲ್ಲಿಂದ ಹೇಗೆ ಬಿಡುಗಡೆಯಾಗಲಿ.

ಆಗ ಅವನು ಯಾವನೋ ಮಧ್ಯಸ್ಥನ ಸ್ತುತಿ ಮಾಡಿ ಅವನಿಗೆ ಹೇಳುವುದೇನೆಂದರೆ ನಾನು ಇಲ್ಲಿ ಮಹಾ ದುಃಖಿಯಿದ್ದೇನೆ. ಈ ಕೋತವಾಲನು ಏನನ್ನು ಕೇಳುತ್ತಾನೋ ಅದನ್ನೆಲ್ಲ ಕೊಟ್ಟು ನನ್ನನ್ನು ಇಲ್ಲಿಂದ ಬಿಡಿಸು. ನಾನು ಮಹಾ ವ್ಯಾಕುಲನಿದ್ದೇನೆ; ಆಗ ಮಧ್ಯಸ್ಥ ವ್ಯಕ್ತಿಯು ಅವನ ಮೇಲೆ ದಯೆ ಮಾಡಿ ಕೋತವಾಲನಿಗೆ ಬಹಳಷ್ಟು ಧನಕೊಟ್ಟು ಅವನನ್ನು ಬಿಡಿಸುತ್ತಾನೆ. ವಾಂಛಿತ ಧನವನ್ನು ನೀಡಿ ಮಧ್ಯಸ್ಥನ ಸ್ತುತಿಯನ್ನು ಬಹಳಷ್ಟು ಮಾಡಿ ಉಪಕಾರ ಮನ್ನಿಸುತ್ತ ಅವನು ಅಲ್ಲಿಂದ ಬಿಡುಗಡೆಯಾದನು. ಕಠಿಣತೆಯಿಂದ ತನ್ನ ಮನೆ ತಲುಪಿದನು, ಕುಟುಂಬ ವರ್ಗದವರೊಂದಿಗೆ ಬೆರೆತು ಮಹಾ ಸುಖಿಯಾದನು. ಆಗ ಯಾವನೋ ಆ ಸಜ್ಜನ ವ್ಯಕ್ತಿಗೆ ನೀನು ಪುನಃ ಆ ಕೋತವಾಲನ ಕಾರಾಗೃಹಕ್ಕೆ ನಡೆಯೆಂದು ಹೇಳಿದರೆ ಅವನು ಎಂದೂ ಬರುವ ಸಾಧ್ಯತೆಯಿಲ್ಲ.

ಅದೇ ಪ್ರಕಾರ ಶರೀರ ರೂಪದ ಕಾರಾಗೃಹದಲ್ಲಿ ಮಹಾದುಃಖ ಭೋಗಿಸುತ್ತ, ಯಾವುದೋ ಪುಣ್ಯದಿಂದ ಗುರುಗಳ ನಿಮಿತ್ತ ಪಡೆದು ಬಿಡುಗಡೆ ಹೊಂದುವ ಉಪಾಯವನ್ನು ತಿಳಿಯುತ್ತಾನೆ. ಆಗ ರಾಜ್ಯಸಂಪದವನ್ನು ತ್ಯಾಗ

ಮಾಡಿ ಚಾರಿತ್ರದ ಅಂಗೀಕಾರ ಮಾಡಿ, ವಿವಿಧ ಪ್ರಕಾರದ ತಪಸ್ಸು ಮಾಡಿ ಸಮ್ಯಕ್‌ರತ್ನತ್ರಯದ ಪೂರ್ಣತೆಯಿಂದ ಕರ್ಮಬಂಧನವನ್ನು ನಾಶಗೊಳಿಸಿ ಸಿದ್ಧಲೋಕಕ್ಕೆ ಪ್ರಾಪ್ತನಾದನು, ನಿರ್ಬಂಧನಾಗಿ ಮಹಾ ಸುಖಿಯಾದನು. ಆ ಜಗತ್ಪೂಜ್ಯ ಪದವನ್ನು ಪ್ರಾಪ್ತಮಾಡಿಕೊಂಡ ಕೇವಲಜ್ಞಾನದ ಧಾರಕ, ಪರಮಾತ್ಮಾ ಭಗವಂತನು ಈಗ ಈ ದುರ್ಗಂಧ ಸ್ಥಾನ, ಸಪ್ತಧಾತುಮಯವಾದ ಗರ್ಭಸ್ಥಾನದಲ್ಲಿ ಹೇಗೆ ಬರುವ ಸಾಧ್ಯತೆಯಿದೆ ?- ಎಂದೂ ಸಾಧ್ಯವಿಲ್ಲ. ಆದುದರಿಂದ ಎಲೈ ಭವ್ಯನೇ ! ಯಾರ ಮತದಲ್ಲಿ ಮೋಕ್ಷದ ನಂತರ ಪುನಃ ಅವತಾರವಾಗುತ್ತದೆ ಅವರ ಆಪ್ತ ,ಆಗಮ, ಪದಾರ್ಥಗಳು ಹೇಯವಿವೆ.

ಈ ಪ್ರಕಾರ ಅವತಾರವಾದಿಗಳ ಸಂವಾದ ಕಥನವು ಪೂರ್ಣವಾಯಿತು.

ಈಗ ಅಜ್ಞಾನವಾದಿಗಳ ಸಂವಾದ - ಈಗ ಯಾವುದೋ ಮತದವರು ಮುಕ್ತ ಆತ್ಮನನ್ನು ಜ್ಞಾನರಹಿತನೆಂದು ಮನ್ನಿಸುತ್ತಾರೆ. ಅವರು ಹೇಳುವುದೇನೆಂದರೆ ಆತ್ಮನಲ್ಲಿ ಪರಪದಾರ್ಥಗಳನ್ನು ತಿಳಿಯುವಂಥ ಎಷ್ಟು ಜ್ಞಾನವಿದೆ, ಅದುವೇ ಉಪಾಧಿಯಿದೆ; ಯಾವಾಗ ಪರವನ್ನು ತಿಳಿಯುವಂಥ ಜ್ಞಾನದ ಅಭಾವವಾಗುತ್ತದೆ, ಆಗ ಮೋಕ್ಷವಾಗುತ್ತದೆ.

ಅವರಿಗೆ ಹೇಳುತ್ತಾರೆ - ಎಲೈ ಮುಕ್ತ ಆತ್ಮನನ್ನು ಜ್ಞಾನರಹಿತನೆಂದು ಮನ್ನಿಸುವಂಥವರೇ ! ನೀವು ಆತ್ಮನನ್ನು ಮೋಕ್ಷದಲ್ಲಿ ಜ್ಞಾನರಹಿತನೆಂದು ಮನ್ನಿಸುತ್ತೀರಿ; ಆದರೆ ಆತ್ಮನಲ್ಲಿ ಪರಪದಾರ್ಥಗಳನ್ನು ತಿಳಿಯುವಂಥ ಯಾವ ಜ್ಞಾನವಿದೆ ಅದಂತೂ ಆತ್ಮನ ಸ್ವಭಾವವಿದೆ. ಜ್ಞಾನಸ್ವಭಾವದ ನಾಶವಾದ ಮೇಲೆ ಆತ್ಮನದೇ ಅಭಾವವಾಗಿ ಹೋಗುವುದು. ಯಾವ ಪ್ರಕಾರ ಅಗ್ನಿಯಲ್ಲಿ ಉಷ್ಣ ಗುಣವಿದೆ ಒಂದು ವೇಳೆ ಆ ಉಷ್ಣ ಗುಣದ ಅಭಾವವಾಗಿ ಹೋದರೆ ಅಗ್ನಿಯದೂ ನಾಶವಾಗಿ ಹೋಗುತ್ತದೆ. ದೀವಿಗೆಯ ಗುಣವು ಪ್ರಕಾಶವಿದೆ ಒಂದು ವೇಳೆ ಪ್ರಕಾಶದ ನಾಶವಾದರೆ ದೀವಿಗೆಯದೂ ಅಭಾವವಾಗಿ ಹೋಗುವುದು. ಆದುದರಿಂದ ಎಲೈ ಭವ್ಯನೇ ! ಪರಪದಾರ್ಥಗಳನ್ನು ತಿಳಿಯುವಂಥ ಜ್ಞಾನರೂಪದ ಸ್ವಭಾವವು ಆತ್ಮನದಿದೆ. ಜ್ಞಾನದ ಅಭಾವದಿಂದ ಆತ್ಮನ ಅಭಾವವಾಗಿ ಹೋಗುವುದು. ಆತ್ಮ ದ್ರವ್ಯದ ಅಭಾವವು ಎಂದೂ ಆಗುವುದಿಲ್ಲ. ಅದರಿಂದ ಎಲೈ ಭವ್ಯಾತ್ಮನೇ ! ಆತ್ಮನು ಪರಪದಾರ್ಥಗಳನ್ನು ತಿಳಿಯುತ್ತಾನೆ. ಪರಪದಾರ್ಥಗಳನ್ನು ತಿಳಿಯುವುದರಲ್ಲಿಯಾವುದೇ ದೋಷವಿಲ್ಲ. ದೋಷವಂತೂ ಜ್ಞಾನತನವನ್ನು ತ್ಯಜಿಸಿ ರಾಗ-ದ್ವೇಷಗಳನ್ನು ಮಾಡುವುದರಲ್ಲಿ ಇದೆ. ರಾಗ-ದ್ವೇಷ ಪೂರ್ವಕ ಪರಪದಾರ್ಥಗಳನ್ನು ನೋಡುವುದೇ ಆತ್ಮನ ಅಶುದ್ಧತೆಯಿದೆ.

ಹಾಗೂ ಎಲೈ ಅಜ್ಞಾನವಾದಿಯೇ ! ನೀನು ಮೋಕ್ಷವಾದ ನಂತರ ಆತ್ಮನನ್ನು ಜ್ಞಾನರಹಿತನೆಂದು ಮನ್ನಿಸುತ್ತಿದ್ದರೆ ಭಗವಂತರ ಸರ್ವಜ್ಞತೆಯ ಅಭಾವವಾಗಿ ಹೋಗುವುದು. ಆಗ ಭಗವಂತರಿಗೆ ಅಂತರ್ಯಾಮೀತನದ ಪದವು ಸಂಭವಿಸುವುದಿಲ್ಲ. ಅಂತರ್ಯಾಮೀತನವು ಇಲ್ಲವಾದ ಮೇಲೆ ಭಗವಂತರಿಗೆ ಅಜ್ಞಾನತೆಯು ಬರುವುದು. ಅಜ್ಞಾನತೆಯು ಬರುತ್ತಿದ್ದಂತೆಯೇ ಅಜ್ಞಾನಿಗೆ ಜಗತ್ತಿನ ಒಡೆಯತನವು ಸಂಭವಿಸುವುದಿಲ್ಲ. ಎಲೈ ಅಜ್ಞಾನವಾದಿಯೇ ! ಸುಖವಂತೂ ಪರಪದಾರ್ಥಗಳನ್ನು ತಿಳಿಯುವುದರಲ್ಲೇ ಇದೆ. ಆ ತಿಳಿಯುವಿಕೆಯು ಜ್ಞಾನದಿಂದ ಆಗುತ್ತದೆ ಆದುದರಿಂದ ಜ್ಞಾನವಿಲ್ಲದೆ ಸುಖವಿಲ್ಲ ಸುಖವಿಲ್ಲದಿದ್ದರೆ ದುಃಖಿಯಾಗಿ ಉಳಿಯುವನು. ಮುಕ್ತ ಜೀವನು ದುಃಖಿಯಾಗಿರುವುದು ಸಂಭವವಿಲ್ಲ. ಅವನಂತೂ ಅನಂತ ಸುಖದಅಧಿಪತಿ ಭಗವಂತನಿದ್ದಾನೆ. ಕೇವಲಜ್ಞಾನವೇ ಸುಖದ ಕಾರಣವಿದೆ.

ಇನ್ನೂ ಆಲಿಸು ! ಲೋಕದಲ್ಲಿ ಯಾರು ಕಡಿಮೆ ಪದಾರ್ಥಗಳನ್ನು ನೋಡುತ್ತಾರೆ, ತಿಳಿಯುತ್ತಾರೆ, ಅರ್ಥಾತ್ ಜ್ಞಾನವು ಕಡಿಮೆ ಇರುತ್ತದೆ, ಅವರಿಗೆ ಸುಖವೂ ಕೂಡ ಕಡಿಮೆಯಿರುತ್ತದೆ. ವಿಶೇಷ ಜ್ಞಾನಿಗಳಿಗೆ ವಿಶೇಷ ಸುಖವಿರುತ್ತದೆ. ಯಾವ ಪ್ರಕಾರ ಯಾವನೋ ಪುರುಷನು ಅನೇಕ ದೇಶಗಳಲ್ಲಿ ವಿಹಾರ ಮಾಡುತ್ತಾನೆ, ಅನೇಕ ರಾಜ ಸಭೆಗಳಲ್ಲಿ ಕುಳಿತುಕೊಳ್ಳುತ್ತಾನೆ, ಅನೇಕ ಮನುಷ್ಯರೊಂದಿಗೆ ಮಾತನಾಡುತ್ತಾನೆ, ಅನೇಕ ಪ್ರಕಾರದ ನೃತ್ಯ ಗೀತೆಗಳನ್ನು ನೋಡುತ್ತಾನೆ, ಅನೇಕ ಜಾತಿಯ ಲೌಕಿಕ ಚಾರಿತ್ರಗಳನ್ನು ನೋಡುವಂಥವನಿದ್ದಾನೆ, ಅನೇಕ ಶಾಸ್ತ್ರಗಳನ್ನು ನೋಡುವ-ತಿಳಿಯುವಂಥವನಿದ್ದಾನೆ, ಅವನಿಗೆ ಜ್ಞಾನವೂ ವಿಶೇಷವಿರುತ್ತದೆ. ಯಾರು ಇಷ್ಟು ಸ್ಥಾನಗಳನ್ನು ನೋಡುವುದಿಲ್ಲ ಅವರ

ಜ್ಞಾನವೂ ಅಲ್ಪವಿರುತ್ತದೆ. ಯಾರ ಜ್ಞಾನವು ಅಧಿಕವಿದೆ ಅವರು ಅಧಿಕ ಸುಖಿಯಿದ್ದಾರೆ ಮತ್ತು ಯಾರಿಗೆ ಅಲ್ಪ ಜ್ಞಾನವಿದೆ ಅವರಿಗೆ ಸುಖವೂ ಅಲ್ಪವಿದೆ ಹಾಗೂ ಯಾವುದೋ ಸ್ಥಾನದಲ್ಲಿ ನೃತ್ಯ , ಗೀತೆ ಮೊದಲಾದ ಅನೇಕ ಕೌತುಕಗಳಾಗುತ್ತಿದ್ದರೆ ಅಲ್ಲಿ ಯಾರಿಗಾದರೂ ಕಾಣಿಸದಿದ್ದರೆ ಅವರಿಗೆ ಅದರ ಸುಖವೂ ಇರುವುದಿಲ್ಲ. ಯಾರಿಗೆ ಸ್ವಲ್ಪ ಕಾಣಿಸುತ್ತದೆ, ಅವರಿಗೆ ಅಲ್ಪ ಸುಖವಿದೆ. ಯಾವ ಪುರುಷನು ಎತ್ತರದ ಸ್ಥಾನದ ಮೇಲೆ ಮತ್ತು ಹತ್ತಿರ ಕುಳಿತಿದ್ದಾನೆ, ಅವನಿಗೆ ಎಲ್ಲವೂ ಕಾಣಿಸುತ್ತಿದೆ; ಅದರಿಂದ ಯಾರು ಎಲ್ಲವನ್ನೂ ನೋಡುತ್ತಾರೆ, ಅವರು ಸರ್ವಸುಖಿಯೆಂದು ತಿಳಿಯುವುದು.

ಹೇಗೆ ಯಾವನೋ ಓರ್ವ ಶ್ರೀಮಂತನ ಮನೆಯಿದ್ದು ಅದು ಅನೇಕ ಪ್ರಕಾರದ ಮಹಿಮೆಯಿಂದ ಸಹಿತವಿದೆ. ಒಂದು ಕಡೆ ಅನೇಕ ರತ್ನಜಡಿತ ಶೋಭೆಯಿದೆ, ಅದೆಷ್ಟೋ ಅನೇಕ ಪ್ರಕಾರದ ಚಿತ್ರಗಳಿವೆ. ಇನ್ನೊಂದು ಕಡೆ ಮನೋಜ್ಞ ಮಹಲುಗಳಿಂದ ಕೂಡಿದ ಉಪವನಗಳಿವೆ, ಅಲ್ಲಿ ಅನೇಕ ನೀರಿನ ಚಿಲುಮೆಗಳು ಚಿಮ್ಮುತ್ತಿವೆ. ಒಂದು ಕಡೆ ನೃತ್ಯ ಗಾಯನವೂ ನಡೆಯುತ್ತಿದೆ, ಕೆಲವು ಕಡೆ ಅನೇಕ ಪ್ರಕಾರದ ಮೃದುವಾದ ಜಮಖಾನೆಗಳನ್ನು ಹಾಸಲಾಗಿದೆ. ಮಹಾ ಸುಂದರ ನರ ನಾರಿಯರು ಅನೇಕ ವಾದ್ಯಗಳನ್ನು ನುಡಿಸುತ್ತಿದ್ದಾರೆ, ಕ್ರೀಡಿಸುತ್ತಿದ್ದಾರೆ - ಇತ್ಯಾದಿ ಅನೇಕ ಶೋಭೆಗಳಿಂದ ಸಹಿತವಾದ ಮನೆಯಿದೆ. ಕೆಲವೊಮ್ಮೆ ಅನೇಕ ಪರದೇಶದ ಪುರುಷರು ಈ ಮನೆಯ ಶೋಭೆಯನ್ನು ನೋಡಲು ಬರುತ್ತಾರೆ. ಅಲ್ಲಿ ಕೆಲವರು ಒಂದು ಸ್ಥಾನವನ್ನು ನೋಡಿದರೆ ಕೆಲವರು ಎರಡು, ಕೆಲವರು ನಾಲ್ಕು, ಕೆಲವರು ಹತ್ತು, ಕೆಲವರು ಸರ್ವಸ್ಥಾನಗಳನ್ನು ನೋಡುತ್ತಾರೆ. ಈಗ ಅದರ ವಿಚಾರ ಮಾಡಿದರೆ ಯಾರು ಎಷ್ಟೆಷ್ಟು ಸ್ಥಾನಗಳನ್ನು ನೋಡುತ್ತಾರೆ -ಅವರ ಜ್ಞಾನದಲ್ಲಿ ಬರುತ್ತವೆ, ಅವರಿಗೆ ಅಷ್ಟಷ್ಟೇ ಸುಖವಾಗುತ್ತದೆ. ಯಾರು ಸರ್ವಸ್ಥಾನಗಳನ್ನು ನೋಡುತ್ತಾರೆ, ಅವರಿಗೆ ಸರ್ವಸುಖವಾಗುತ್ತದೆ.

ಹಾಗೆಯೇ ಈ ಮೂರು ಲೋಕವೆಂಬ ಮನೆಯಲ್ಲಿ ಅನೇಕ ರಚನೆಗಳು ಪ್ರಾಪ್ತವಿವೆ. ಇದರಲ್ಲಿ ಅನಂತ ಜೀವಗಳು ಪರದೇಶಿಗರು, ಪ್ರೇಕ್ಷಕರು ಬಂದಿದ್ದಾರೆ. ಆ ಜೀವರುಗಳಿಗೆ ಇಲ್ಲಿ ಎಷ್ಟೆಷ್ಟು ಪರಪದಾರ್ಥಗಳ ಜ್ಞಾನವಾಗುತ್ತದೆ ಅವರಿಗೆ ಅಷ್ಟಷ್ಟೇ ಸುಖವಾಗುತ್ತದೆ. ಶ್ರುತಜ್ಞಾನದ ಅಂಶಗಳೂ ಕೂಡ ಅನೇಕವಿವೆ. ಯಾವ ಜೀವನು ಶ್ರುತಜ್ಞಾನದ ಕೆಲವು ಅಂಶವನ್ನು ಓದಿದ್ದಾನೆ ಅವನಿಗೆ ಸುಖವು ಅಲ್ಪವಿದೆ. ಯಾರು ಬಹಳಷ್ಟು ಅಂಗ-ಪೂರ್ವಗಳನ್ನು ಓದುತ್ತಾರೆ ಅವರಿಗೆ ಅಧಿಕ ಸುಖವಿದೆ. ಅವಧಿಜ್ಞಾನಿಗಳು ತಮ್ಮ ಜ್ಞಾನದಿಂದ ಲಕ್ಷಾಂತರ ಯೋಜನ ಪ್ರಮಾಣ ಕ್ಷೇತ್ರವನ್ನು ತಿಳಿಯುತ್ತಾರೆ. ಅವರು ಇವರಿಗಿಂತ ವಿಶೇಷ ಸುಖಿಯಿದ್ದಾರೆ. ಈ ಜ್ಞಾನವು ಒಂದು ಸ್ಥಾನದ ಮೇಲೆ ವಿದ್ಯಮಾನವಿದ್ದು ದೂರವರ್ತಿ ಪದಾರ್ಥಗಳನ್ನು ತಿಳಿಯುತ್ತದೆ. ಅದರಿಂದ ಇದಕ್ಕೆ ಸುಖವು ವಿಶೇಷವೇ ಇರುತ್ತದೆ. ಮನಃಪರ್ಯಯ ಜ್ಞಾನದಿಂದ ಇತರರ ಮನಸ್ಸಿನಲ್ಲಿ ಯಾವ ವಿಕಲ್ಪವಾಗುತ್ತವೆ ಅವೆಲ್ಲವನ್ನು ತಿಳಿಯುತ್ತಾರೆ ಅವರಿಗೆ ಇನ್ನೂ ಅಧಿಕ ಸುಖವಾಗುತ್ತದೆ. ಮತ್ತು ಅವರಿಗಿಂತ ಅನಂತ ಗುಣಿತ ಸರ್ವಲೋಕದ ಘಟ-ಪಟಗಳನ್ನು ತಿಳಿಯುವಂಥ ಕೇವಲ ಜ್ಞಾನಿಗಳು ಮಹಾಸುಖಿಗಳಿದ್ದಾರೆ. ಅದರಿಂದ ಎಲೈ ಅಜ್ಞಾನವಾದಿಯೇ ! ಪರಪದಾರ್ಥಗಳನ್ನು ತಿಳಿಯುವಂಥ ಜ್ಞಾನವು ಸುಖದ ಕಾರಣವಿದೆಯೆಂಬುದನ್ನು ನೀನು ತಿಳಿ. ಆದರೆ ವಿಶೇಷವೇನೆಂದರೆ ಸಂಸಾರಿ ಜೀವನು ಪರಪದಾರ್ಥಗಳನ್ನು ತಿಳಿಯುತ್ತಾನೆ, ಅದು ರಾಗ-ದ್ವೇಷ ಸಹಿತ ತಿಳಿಯುತ್ತಾನೆ; ಅದರಿಂದ ಕರ್ಮಬಂಧದ ಕರ್ತೃವಾಗುತ್ತಾನೆ. ವೀತರಾಗ ಸರ್ವಜ್ಞ ಕೇವಲಿಗಳು ಪರಪದಾರ್ಥಗಳನ್ನು ರಾಗ-ದ್ವೇಷ ರಹಿತರಿದ್ದು ತಿಳಿಯುತ್ತಾರೆ. ಅದರಿಂದ ರಾಗ-ದ್ವೇಷಗಳ ಅಭಾವದಿಂದ ಅವರಿಗೆ ಕರ್ಮಬಂಧವಾಗುವುದಿಲ್ಲ. ಅಂತೆಯೇ ರಾಗ-ದ್ವೇಷ ಸಹಿತ ಪರಪದಾರ್ಥಗಳ ಜ್ಞಾನವು ಸಂಸಾರದ ಕಾರಣವಿದೆ, ಅದು ಆತ್ಮನಿಗೆ ದುಃಖದಾಯಕವಿದೆ. ರಾಗ-ದ್ವೇಷ ರಹಿತ (ಸಮಭಾವಸಹಿತ) ಪರಪದಾರ್ಥಗಳನ್ನು ತಿಳಿಯುವಿಕೆಯ ರೂಪದ ಜ್ಞಾನವು ಸುಖದಾಯಕವಿದೆ. ಆದುದರಿಂದ ಎಲೈ ಸೋದರನೇ ! ಅಜ್ಞಾನವಾದಿಯೇ 'ಜ್ಞಾನವಂತೂ ಆತ್ಮನ ಗುಣವಿದೆ, ಜ್ಞಾನವಿಲ್ಲದೆ ಜೀವವಿರುವುದಿಲ್ಲ, ಜೀವವಿಲ್ಲದೆ ಜ್ಞಾನವಿರುವುದಿಲ್ಲ, ಜ್ಞಾನ ಹಾಗೂ ಜೀವದಲ್ಲಿ ಗುಣ-ಗುಣಿತನವಿದೆ. ಗುಣಿಯ ನಾಶದಿಂದ ಗುಣದ ನಾಶವಾಗುತ್ತದೆ. ಗುಣಗಳ ನಾಶದಿಂದ

ಗುಣಿಯ ನಾಶವಾಗುತ್ತದೆ. ಆದುದರಿಂದ ಗುಣ-ಗುಣಿಯಲ್ಲಿ ನಾಮ ಭೇದವಿದೆ, ಸತ್ತಾಭೇದವಿಲ್ಲ' ಎಂಬುದನ್ನು ನೀನು ದೃಢವಾಗಿ ನಂಬು.

ಯಾವ ಪ್ರಕಾರ ಲವಣ ಮತ್ತು ಕ್ಷಾರಗುಣದಲ್ಲಿ ನಾಮ ಭೇದವಿದೆ, ಸತ್ತಾಭೇದವಿಲ್ಲ. ಲವಣವು ಗುಣಿ ಇದೆ ಮತ್ತು ಕ್ಷಾರತನವು ಲವಣದ ಗುಣವಿದೆ. ಗುಣವು ಗುಣಿಯ ಆಶ್ರಿತವಿರುತ್ತದೆ. ಅದೇ ಪ್ರಕಾರ ಆತ್ಮನಲ್ಲಿ ಮತ್ತು ಜ್ಞಾನದಲ್ಲಿ ಗುಣ-ಗುಣಿತನವನ್ನು ತಿಳಿಯುವುದು. ಆತ್ಮನಂತೂ ಗುಣಿ ಇದ್ದಾನೆ ಮತ್ತು ಜ್ಞಾನವು ಗುಣವಿದೆ. ಯಾವುದರಿಂದ ಗುಣಿಯನ್ನು ತಿಳಿಯಲಾಗುತ್ತದೆ ಅದು ಗುಣವಿದೆ. ಆತ್ಮನನ್ನು ಜ್ಞಾನದಿಂದ ತಿಳಿಯುತ್ತಾರೆ - ಈ ಪ್ರಕಾರ ಗುಣ ಮತ್ತು ಗುಣಿಯಲ್ಲಿ ಏಕತೆಯನ್ನು ತಿಳಿಯುವುದು. ಒಂದರ ಅಭಾವದಲ್ಲಿ ಎರಡರದೂ ಅಭಾವವಾಗುತ್ತದೆ. ಹೇಗೆ ಸೂರ್ಯನಂತೂ ಗುಣಿ ಇದ್ದಾನೆ ಮತ್ತು ಯಾವುದರಿಂದ ಸೂರ್ಯನನ್ನು ತಿಳಿಯಲಾಗುತ್ತದೆ - ಅಂಥ ಪ್ರಕಾಶವು ಅದು ಸೂರ್ಯನ ಗುಣವಿದೆ. ಸೂರ್ಯನ ಅಭಾವದಲ್ಲಿ ತೇಜಸ್ಸಿನ, ಪ್ರಕಾಶದ ಅಭಾವವಾಗುತ್ತದೆ. ಪ್ರಕಾಶದ ಅಭಾವದಲ್ಲಿ ಸೂರ್ಯನ ಅಭಾವವಾಗುತ್ತದೆ.

ಅದೇ ಪ್ರಕಾರ ಆತ್ಮನಲ್ಲಿ ಮತ್ತು ಜ್ಞಾನದಲ್ಲಿ ಏಕತೆಯನ್ನು ತಿಳಿಯುವುದು. ನಾಮಭೇದವಿದೆ, ಪ್ರದೇಶ-ಸತ್ತಾ ಭೇದವಿಲ್ಲ; ಆದ್ದರಿಂದ ಎಲೈ ಸುಬುದ್ಧಿಯೇ ! ನೀನು ಆತ್ಮನಲ್ಲಿ ಜ್ಞಾನವನ್ನು ಉಪಾಧಿಯೆಂದು ತಿಳಿಯಬೇಡ. ಜ್ಞಾನವನ್ನು ಆತ್ಮನ ಗುಣವೆಂದು ತಿಳಿ. ಜ್ಞಾನದ ಅಭಾವದಿಂದ ಆತ್ಮನ ಅಭಾವವಾಗುತ್ತದೆ, ಆತ್ಮನ ಅಭಾವದಿಂದ ಮೋಕ್ಷದ ಅಭಾವವಾಗುತ್ತದೆ, ಮೋಕ್ಷದ ಅಭಾವದಿಂದ ಕರ್ಮಗಳ ಬಂಧವಾಗುತ್ತದೆ, ಕರ್ಮಗಳ ಬಂಧದಿಂದ ಜಗತ್ತಿನಲ್ಲಿ ಪರಿಭ್ರಮಣವಾಗುತ್ತದೆ ಮತ್ತು ಜಗತ್‌ಪರಿಭ್ರಮಣದಿಂದ ದುಃಖದಲ್ಲಿ ವೃದ್ಧಿಯಾಗುತ್ತದೆ ಆದುದರಿಂದ ಎಲೈ ಭವ್ಯಾತ್ಮನೇ! ನೀನು ಒಂದು ವೇಳೆ ಜಗತ್ತಿನಿಂದ ಬಿಡುಗಡೆ ಇಚ್ಛಿಸುತ್ತಿದ್ದರೆ ಹಾಗೂ ಸುಖವನ್ನು ಭೋಗಿಸಲಿಚ್ಛಿಸುತ್ತಿದ್ದರೆ ಆತ್ಮನನ್ನು ಮೋಕ್ಷದಲ್ಲಿ ಕೇವಲಜ್ಞಾನ ಸಹಿತನೆಂದು ತಿಳಿ. ಯಾರ ಮತದಲ್ಲಿ ಮುಕ್ತ ಆತ್ಮನು ಜ್ಞಾನರಹಿತನಿದ್ದಾನೆ ಅವರ ಆಪ್ತ, ಆಗಮ, ಪದಾರ್ಥಗಳು ಅಸತ್ಯವಿವೆ.

-ಈ ಪ್ರಕಾರ ಅಜ್ಞಾನವಾದಿಗಳಿಗೆ ತಿಳಿಸಿಕೊಟ್ಟು ಶುದ್ಧ-ಸತ್ಯಶ್ರದ್ಧೆ ಮಾಡಿಸುವಂಥ ಕಥನವು ಪೂರ್ಣವಾಯಿತು.

ಈಗ ಸ್ಥಿರವಾದಿಗಳ ಸಂವಾದ - ಯಾವನೋ ಸ್ಥಿರವಾದಿಯು ಮನ್ನಿಸುವುದೇನೆಂದರೆ ಯಾವನು ಹೇಗೆ ಸಾಯುತ್ತಾನೆ ಹಾಗೆಯೇ ಉತ್ಪನ್ನನಾಗುತ್ತಾನೆ. ದೇವನು ಸತ್ತರೆ ದೇವನೇ ಆಗುತ್ತಾನೆ. ನಾರಕಿಯು ಸತ್ತರೆ ನಾರಕಿಯ ರೂಪದಲ್ಲಿ ಉತ್ಪನ್ನನಾಗುತ್ತಾನೆ. ತಿರ್ಯಂಚವು ಸತ್ತರೆ ತಿರ್ಯಂಚವಾಗಿಯೇ ಉತ್ಪನ್ನವಾಗುತ್ತದೆ. ಅದರಲ್ಲಿಯೂ ಯಾವ ಜಾತಿಯ ಪಶು ಸಾಯುತ್ತದೆ ಅದೇ ಜಾತಿಯ ಪಶುವಿನ ರೂಪದಲ್ಲಿ ಉತ್ಪನ್ನವಾಗುತ್ತದೆ. ಆನೆಯು ಸತ್ತರೆ ಆನೆಯಾಗಿಯೇ ಉತ್ಪನ್ನವಾಗುತ್ತದೆ, ಕುದುರೆಯು ಸತ್ತರೆ ಕುದುರೆಯಾಗಿಯೇ ಉತ್ಪನ್ನವಾಗುತ್ತದೆ ಇತ್ಯಾದಿ ಯಾವ ಜಾತಿಯಲ್ಲಿ ಹೇಗೆ ಸಾಯುತ್ತಾನೋ ಹಾಗೆಯೇ ಉತ್ಪನ್ನನಾಗುತ್ತಾನೆ, ಎಂದರೆ ತನ್ನ ಸ್ಥಾನವನ್ನು ಬಿಡುವುದಿಲ್ಲ. ಮನುಷ್ಯನು ಸತ್ತರೆ ಮನುಷ್ಯನಾಗಿಯೇ ಉತ್ಪನ್ನನಾಗುತ್ತಾನೆ. ಅದರಲ್ಲೂ ದೊರೆಯು ಸತ್ತರೆ ದೊರೆ, ದರಿದ್ರನು ಸತ್ತರೆ ದರಿದ್ರನಾಗಿ ಉತ್ಪನ್ನನಾಗುತ್ತಾನೆ. ಈ ಪ್ರಕಾರ ಯಾವನು ಸಾಯುತ್ತಾನೆ ಅವನೇ ಉತ್ಪನ್ನನಾಗುತ್ತಾನೆ. ಇವನ ಮತದಲ್ಲಿ ಇರುವ ರಹಸ್ಯವೇನೆಂದರೆ ನಾಲ್ಕು ಗತಿಗಳ ರೂಪದ ಸಂಸಾರವಂತೂ ಇದೆ; ಆದರೆ ಹೇಗೆ ಸಾಯುತ್ತಾನೆಯೋ ಹಾಗೆಯೇ ಉತ್ಪನ್ನನಾಗುತ್ತಾನೆ. ತಮ್ಮ ಮತದ ಪೋಷಣೆಯ ಸಲುವಾಗಿ ಅವರ ಗ್ರಂಥದಲ್ಲಿ ಹೇಳಿರುವುದೇನೆಂದರೆ -

'ರಾಜ್ಯ ಮಾಡುತ್ತ ಯಾವನು ಸಾಯುವನು, ಅವನು ಪುನಃ ರಾಜ್ಯ ಮಾಡುವನು ।
ಭಿಕ್ಷೆ ಬೇಡುತ್ತ ಸಾಯುವಂಥ ಮನುಷ್ಯನು, ಅವನು ಭಿಕ್ಷೆಯನ್ನೇ ಬೇಡುವನು ॥'

ಇಂಥ ಶಬ್ದಗಳ ಮೂಲಕ ಸ್ಥಿರವಾದಿಯು ತನ್ನ ಮತವನ್ನು ದೃಢವಾಗಿ ಇರಿಸುತ್ತಾನೆ. ಅಂಥ ಸ್ಥಿರವಾದಿಗಳಿಗೆ ಹೇಳುವುದೇನೆಂದರೆ ಎಲೈ ಸೋದರನೇ ! ನೀನು ಆಲಿಸು ! ನಿನ್ನ ಮತವಂತೂ ಪ್ರತ್ಯಕ್ಷವಾಗಿ ಅನೇಕ ನಯಗಳಿಂದ

ಖಂಡಿತವಾಗುತ್ತದೆ. ನಿನ್ನ ಮತವು ಯಾವುದೇ ಮತದ ಜೊತೆಗೆ ಬೆರೆಯುವಂಥದ್ದಿಲ್ಲ; ಅದರಿಂದ ಅಸತ್ಯವಿದೆ. ನೀನು ಪ್ರತ್ಯಕ್ಷವಾಗಿ ನೋಡು ! ಒಂದು ವೇಳೆ ನಿನ್ನ ಮತವು ಪ್ರಮಾಣವಿರುತ್ತಿದ್ದರೆ ಸಂಸಾರದಲ್ಲಿ ಮತಾಂತರವೇ ಆಗುತ್ತಿರಲಿಲ್ಲ ಮತ್ತು ಯಾರಾದರೂ ಧರ್ಮ ಸೇವನೆಯನ್ನು ಏತಕ್ಕಾಗಿ ಮಾಡುತ್ತಿದ್ದರು ? ಯಾವನೋ ಹೇಗೆ ಸಾಯುತ್ತಾನೆ, ಹಾಗೆಯೇ ಉತ್ಪನ್ನನಾಗುತ್ತಿದ್ದರೆ ಧರ್ಮದ ಅಂಗಗಳ ಫಲವೇನು ? ಅದರಿಂದ ಅನೇಕ ಮತವುಳ್ಳ - ಕೆಲವರಂತೂ ಬಹಳಷ್ಟು ತಪ ಮಾಡುತ್ತಾರೆ ಕೆಲವರು ನಿರಂತರ ಜಪ ಮಾಡುತ್ತಿರುತ್ತಾರೆ, ಕೆಲವರು ದಾನ ಕೊಡುತ್ತಾರೆ, ಕೆಲವರು ಭಗವಂತನ ಪೂಜೆ ಮಾಡುತ್ತಾರೆ ಇತ್ಯಾದಿ ಧರ್ಮದ ಅಂಗಗಳ ಸೇವನೆ ಮಾಡಿ ಈ ಧರ್ಮದ ಪ್ರಸಾದದಿಂದ ನಮಗೆ ಕುಗತಿಯಾಗದಿದ್ದರೆ, ಒಳ್ಳೆಯದಿದೆ ಎಂದು ವಿಚಾರ ಮಾಡುತ್ತಾರೆ.

ಧರ್ಮದ ಉಪಾಸನೆ ಮಾಡುವುದರಿಂದ ದೇವಾದಿ ಶುಭಗತಿಗಳಾಗುತ್ತವೆ, ಅದರ ನಿಮಿತ್ತವಾಗಿ ಅದೆಷ್ಟೋ ಧರ್ಮಾತ್ಮರಂತೂ ತೀರ್ಥಯಾತ್ರೆ ಮಾಡುತ್ತಾರೆ, ಅದರಲ್ಲಿ ಬಹಳಷ್ಟು ಧನ ಖರ್ಚು ಮಾಡುತ್ತಾರೆ ಮತ್ತು ಶರೀರದ ಖೇದವನ್ನು ಸಹಿಸುತ್ತಾರೆ. ಅನೇಕರು ಉದ್ಯೋಗ ವ್ಯವಸಾಯಗಳ ತ್ಯಾಗ ಮಾಡಿ, ಕುಟುಂಬಾದಿಕರಿಂದ ಮೋಹ ತೊರೆದು ದೇಶಾಂತರಕ್ಕೆ ಹೋಗುತ್ತಾರೆ. ಕೆಲವರು ಪರಭವದಲ್ಲಿ ಸುಖಿಯಾಗುವ ಸಲುವಾಗಿ ಬಹಳಷ್ಟು ತಪಸ್ಸು ಮಾಡುತ್ತಾರೆ, ಕೆಲವರು ಪರಭವದಲ್ಲಿ ಸುಖಿಯಾಗುವ ಸಲುವಾಗಿ ವಾಂಛಿತ ದಾನಕೊಡುತ್ತಾರೆ, ಕೆಲವರು ಭಗವಂತರ ಮಂದಿರಗಳನ್ನು ಕಟ್ಟಿಸುತ್ತಾರೆ, ಕೆಲವರು ಧರ್ಮಫಲವನ್ನು ಪ್ರಾಪ್ತ ಮಾಡಿಕೊಳ್ಳುವ ಸಲುವಾಗಿ ಭಗವಂತರ ನಾಮಸ್ಮರಣೆ ಮಾಡುತ್ತಾರೆ, ಕೆಲವರು ರಾಜ್ಯ, ಸಂಪತ್ತು, ಕುಟುಂಬ, ಲೋಕ, ಇಂದ್ರಿಯ ಸುಖ, ಶರೀರದ ಮಮತ್ವ, ಇತ್ಯಾದಿ ಸುಖ ಸಮೂಹವನ್ನು ಬಿಟ್ಟುಕೊಟ್ಟು ದೀಕ್ಷೆ ಧಾರಣ ಮಾಡಿ ವನದಲ್ಲಿ ಧ್ಯಾನದ ಮೂಲಕ ತಮ್ಮ ಪಾಪನಾಶ ಮಾಡ ಬಯಸುತ್ತಾರೆ. ಇತ್ಯಾದಿ ಅನೇಕ ಜೀವಗಳು ಅನೇಕ ಮತದಲ್ಲಿ ಅನೇಕ ಪ್ರಕಾರದಿಂದ ಧರ್ಮದ ಸಾಧನೆ ಮಾಡುತ್ತಿರುವುದು ಕಂಡು ಬರುತ್ತದೆ ಅದರಿಂದ ಎಲೈ ಸೋದರನೇ ! ನಿನ್ನ ಮತದ ರಹಸ್ಯವನ್ನು ಸ್ವೀಕಾರ ಮಾಡಿದರೆ ಸರ್ವಧರ್ಮ ಸೇವನೆಯ ಅಭಾವವಾಗಿ ಹೋಗುವುದು. ನಿನ್ನ ಮತವು ಯಾರ ಮತದಲ್ಲಿಯೂ ಕಂಡು ಬರುವುದು ಸಂಭವವಿಲ್ಲ; ಅದರಿಂದ ಅಸತ್ಯವಿದೆ.

ನೀನು ವಿಚಾರ ಮಾಡಿ ನೋಡು ! ಜಗತ್ತಿನಲ್ಲಿಯೂ ಜನರು ಹೀಗೆ ಮಾತನಾಡುತ್ತಿರುತ್ತಾರೆ - ಯಾರು ಧರ್ಮದ ಸೇವನೆ ಮಾಡುವರು ಅವರು ದೇವ ಪದವಿಯನ್ನು ಪ್ರಾಪ್ತ ಮಾಡಿಕೊಳ್ಳುವರು. ಮನುಷ್ಯರಾದರೆ ಮಹಾ ಪುಣ್ಯದ ಅಧಿಕಾರಿ ರಾಜ್ಯಪದವಿಯನ್ನು ಪ್ರಾಪ್ತ ಮಾಡಿಕೊಳ್ಳುವರು, ಶ್ರೀಮಂತರಾಗುವರು. ಯಾರು ಪಾಪಾಚಾರಿ, ದುರ್ಬುದ್ಧಿಗಳು ಪಾಪದ ಸೇವನೆಯನ್ನು ಮಾಡುವರು, ಅವರು ಪಶುಗಳಾಗುವರು. ಅಲ್ಲಿ ಹಸಿವೆ, ಬಾಯಾರಿಕೆ, ಶೀತ, ಉಷ್ಣ, ಮೊದಲಾದವುಗಳ ಅನೇಕ ದುಃಖ ಭೋಗಿಸುವರು ಹಾಗೂ ಪಾಪ ಮಾಡುವಂಥವರು ನರಕದಲ್ಲಿ ಬಹಳಷ್ಟು ಪ್ರಕಾರದ ಛೇದನ, ಭೇದನಾದಿ ದುಃಖಗಳನ್ನು ಪಡೆಯುವರು. ಲೋಕದಲ್ಲಿ ಹಾಗೂ ಶಾಸ್ತ್ರಗಳಲ್ಲಿಯೂ ಕೂಡ ಹೇಳುತ್ತಾರೆ - ಇಂಥ ಓರ್ವ ಧರ್ಮಾತ್ಮನು ಧರ್ಮದ ಪ್ರಸಾದದಿಂದ ದೇವನಾದನು. ಇಂಥವನೊಬ್ಬ ಪಾಪಾಚರಣೆ ಮಾಡುವಂಥವನು ನರಕಕ್ಕೆ ಹೋದನು ಎಂಬ ವ್ಯಾಖ್ಯಾನಗಳು ಲೋಕದಲ್ಲಿ ಪ್ರಕಟರೂಪದಿಂದ ಕೇಳಿ ಬರುತ್ತವೆ.

ಒಂದು ವೇಳೆ ಯಾವನು ಹೇಗೆ ಸಾಯುತ್ತಾನೆ ಅವನು ಹಾಗೆಯೇ ಉತ್ಪನ್ನನಾಗುತ್ತಿದ್ದರೆ, ಪುಣ್ಯ-ಪಾಪಗಳ ಫಲವನ್ನು ಜೀವನೇ ಭೋಗಿಸುವನು, ಎಂಬ ಮಾತು ಅಸತ್ಯವಾಗುವುದು. ಅದರಿಂದ ಎಲೈ ಭವ್ಯಾತ್ಮನೇ ! ಈ ನಾಲ್ಕು ಗತಿಗಳ ರೂಪದ ಸಂಸಾರದಲ್ಲಿ ಜೀವನು ಅನಾದಿ ಕಾಲದಿಂದ ರಾಟಳ ಗಡಿಗೆಯಂತೆ ಸುತ್ತುತ್ತಿದ್ದಾನೆ. ಪಾಪದ ಫಲದಿಂದ ಅಧೋಗತಿಯಲ್ಲಿ ಮತ್ತು ಪುಣ್ಯದ ಫಲದಿಂದ ಊರ್ಧ್ವಗತಿಯಲ್ಲಿ ಜೀವನು ಉತ್ಪನ್ನನಾಗುತ್ತಾನೆ. ಆದುದರಿಂದ ಯಾರ ಮತದಲ್ಲಿ ಪುಣ್ಯ-ಪಾಪಗಳ ಫಲವನ್ನು ನಷ್ಟಗೊಳಿಸಿ ಇದ್ದಕ್ಕಿದ್ದಂತೆಯೇ ಉತ್ಪನ್ನನಾಗುತ್ತಾನೆಂದು ಮನ್ನಿಸುತ್ತಾರೆ ಅವರ ಆಪ್ತ,ಆಗಮ, ಪದಾರ್ಥಗಳು ಅಸತ್ಯವಿವೆ, ಹೇಯವಿವೆ. ಅದರಿಂದ ಎಲೈ ಭವ್ಯನೇ ! ಧರ್ಮಾರ್ಥಿಯೇ ! ಅಶುಭ

ಕರ್ಮ ಮಾಡುವುದರಿಂದ ಜೀವರುಗಳು ದುಃಖ ಸ್ಥಾನದಲ್ಲಿ ಉತ್ಪನ್ನರಾಗುತ್ತಾರೆ ಮತ್ತು ಶುಭಕರ್ಮದಿಂದ ಸುಖ ಸ್ಥಾನದಲ್ಲಿ ಉತ್ಪನ್ನರಾಗುತ್ತಾರೆ-ಹೀಗೆ ಶ್ರದ್ಧೆಮಾಡಿ ಮಿಥ್ಯಾ ಶ್ರದ್ಧೆಯನ್ನು ಬಿಟ್ಟುಕೊಟ್ಟರೆ ನಿನ್ನದು ಕಲ್ಯಾಣವಾಗುವುದು.

ಈ ಪ್ರಕಾರ ಈ ಸ್ಥಿರವಾದಿಯ ಭ್ರಮೆಯನ್ನು ದೂರಮಾಡಿ ಜಿನಭಾಷಿತ ಶ್ರದ್ಧೆ ಮಾಡಿಸಲಾಯಿತು.

ಕೆಲವು ವಿಪರೀತ ಮತಿಗಳು ಅಜೀವದಿಂದ ಜೀವದ ಉತ್ಪತ್ತಿಯಾಗುತ್ತದೆ ಎಂದು ಮನ್ನಿಸುತ್ತಾರೆ. ಅವರಿಗೆ ತಿಳಿಸಿಕೊಡಲಾಗುವುದು - ಅದೆಷ್ಟೋ ಮುಗ್ಧ ಜೀವರುಗಳು ಹೇಳುವುದೇನೆಂದರೆ ಈ ಯಾವ ಆಕಾಶದಿಂದ ನೀರು ಸುರಿಯುತ್ತದೆ, ಅದು ಇಂದ್ರನಿದ್ದಾನೆ. ಅವರ ಭ್ರಮೆಯನ್ನು ದೂರ ಮಾಡುತ್ತ ಅವರಿಗೆ ಹೇಳುವುದೇನೆಂದರೆ - ಎಲೈ ಸೋದರನೇ ! ಮೇಘವಂತೂ ವರ್ಷಾಋತುವಿನಲ್ಲಿ ಋತುವಿನ ಕಾರಣ ಪಡೆದು ಪುದ್ಗಲದ ಜಲಮಯ ಪರಿಣಮನವಿದೆ. ಪುದ್ಗಲಗಳ ಸ್ಕಂಧಗಳು ವರ್ಷಾಋತುವಿನ ಕಾರಣದಿಂದ ಜಲರೂಪವಾಗಿ ಧಾರಾಕಾರವಾಗಿ ಸುರಿಯುತ್ತವೆ. ಈ ಜಲವು ಅಚೇತನವಿದೆ, ಜಡವಿದೆ, ಚೇತನವಿಲ್ಲ. ಮೂರ್ತಿಕ ಪುದ್ಗಲ ಸ್ಕಂಧಗಳು ಜಲಮಯವಾದಮೇಲೆ ಅಂತರ್ಮುಹೂರ್ತಕಾಲದ ನಂತರ ಆ ಜಲದಲ್ಲಿ ಜಲಕಾಯಿಕ, ಏಕೇಂದ್ರಿಯ - ಸ್ಥಾವರ ನಾಮಕರ್ಮದ ಉದಯರೂಪ ಮಹಾಪಾಪದ ಫಲದಿಂದ ಅಲ್ಲಿ ಬಂದು ಏಕೇಂದ್ರಿಯ ಜೀವಗಳು ಉತ್ಪನ್ನವಾಗುತ್ತವೆ. ಅವು ಮಹಾದುಃಖಿಯಿವೆ ಅವುಗಳಿಗೆ ಒಂದು ಶರೀರರೂಪ ಸ್ಪರ್ಶನ ಇಂದ್ರಿಯವೇ ಇದೆ. ಉಳಿದ ನಾಲ್ಕು ಇಂದ್ರಿಯಗಳು ಇರುವುದಿಲ್ಲ. ಅವು ಪಾಪದ ಉದಯದಿಂದ ಹಾಗೇ ಆಗುತ್ತವೆ.

ಮತ್ತು ಇಂದ್ರನಂತೂ ಪಂಚೇಂದ್ರಿಯನಿದ್ದಾನೆ. ಮಹಾ ತಪಸ್ಸು, ಸಂಯಮ, ಧ್ಯಾನ, ಪೂಜೆ, ದಾನ ಮೊದಲಾದ ಅನೇಕ ಧರ್ಮದ ಫಲಗಳಿಂದ ಆಗುವಂಥ ಆ ಇಂದ್ರನು ದೇವಗಳ ಅಧಿಪತಿ, ಮಹಾಶಕ್ತಿಯ ಧಾರಕ, ಅದ್ಭುತ ಮಹಾಲಕ್ಷ್ಮಿಯ ಈಶ್ವರನಿದ್ದು ಅನೇಕ ದೇವಾಂಗನೆಯರ ಸುಖವನ್ನು ಭೋಗಿಸುವಂಥವನಿದ್ದಾನೆ. ಇಂಥ ಇಂದ್ರ ಪದವು ವೀತರಾಗಿ, ಯೋಗೀಶ್ವರ, ಸಮತೆಯ ರಸದ ಆಸ್ವಾದಿ, ಷಟ್‌ಕಾಯಗಳ ರಕ್ಷಕ, ದೀನದಯಾಳು, ಜಗತ್‌ಗುರುವಿಗೆ ಉತ್ಕೃಷ್ಟ ದಯೆಯ ಫಲದಲ್ಲಿ ಪ್ರಾಪ್ತವಾಗುತ್ತದೆ. ಹೀನ ಪುಣ್ಯವಂತರಿಗೆ ಇಂದ್ರಪದ ವಾಗುವುದಿಲ್ಲ. ಈ ಪ್ರಕಾರ ಇಂದ್ರನಂತೂ ದೇವಗಳ ಅಧಿಪತಿಯಿದ್ದಾನೆ ಮತ್ತು ಮೇಘಗಳು ಪುದ್ಗಲ ಸ್ಕಂಧಗಳಿಂದ ಋತುವಿನ ಕಾಲ ಪಡೆದು ಜಲವಾಗಿ ಸುರಿಯುತ್ತವೆ. ಅವುಗಳಲ್ಲಿ ಪಾಪ ಮಾಡುವಂಥ, ಮಹಾಹಿಂಸೆ ಮಾಡುವಂಥ, ಜೀವಗಳು ಏಕೇಂದ್ರಿಯವಾಗಿ ಉತ್ಪನ್ನವಾಗುತ್ತವೆ.

**ಪ್ರಶ್ನೆ :-** ಒಂದು ವೇಳೆ ಅವನು ಇಂದ್ರನಿಲ್ಲದಿದ್ದರೆ ಅಂಥ ನಿರ್ಮಲ ಆಕಾಶದಲ್ಲಿ ಅನೇಕ ಪ್ರಕಾರದ ಮೇಘಮಾಲೆ ಮತ್ತು ಭಯಂಕರ ಗರ್ಜನೆಯ ಶಬ್ದವನ್ನು ಯಾರು ಮಾಡುತ್ತಾರೆ. ನೀವು ಪುದ್ಗಲ ಸ್ಕಂಧವೆಂದು ಹೇಳುತ್ತಿದ್ದೀರಿ. ಆದರೆ ಪುದ್ಗಲಗಳಂತೂ ಅಚೇತನವಿದ್ದು ಅವುಗಳಲ್ಲಿ ಇಂಥ ಶಕ್ತಿಯು ಹೇಗೆ ಸಂಭವವಿದೆ ?

**ಸಮಾಧಾನ :-** ಎಲೈ ಸೋದರನೇ ! ಶಬ್ದಾದಿಗಳ ಶಕ್ತಿಯು ಇಂದ್ರನಿಲ್ಲದೆ ಹೇಗೆ ಸಂಭವವಿದೆ ? - ಎಂದು ನೀನು ಕೇಳುತ್ತಿರುವೆ. ಎಲೈ ಸುಬುದ್ಧಿಯೇ ! ಪುದ್ಗಲದ ಶಕ್ತಿಯಂತೂ ವಿಶಾಲವಿದೆ. ಚಿಂತಾಮಣಿ ರತ್ನವು ಜಡವಿದ್ದರೂ ಅದರಲ್ಲಿ ಮನೋವಾಂಛಿತ ಫಲ ನೀಡುವ ಶಕ್ತಿ ಇದೆ. ಪರುಷ ಮಣಿಯು ಕಲ್ಲು ಇದೆ, ಅದರಲ್ಲಿ ಲೋಹವನ್ನು ಚಿನ್ನವನ್ನಾಗಿಸುವ ಶಕ್ತಿಯಿದೆ. ಕಲ್ಪವೃಕ್ಷವು ಜಡವಿದೆ ಅದರಲ್ಲಿಯೂ ಐಚ್ಛಿಕ ಫಲವನ್ನುಕೊಡುವ ಶಕ್ತಿಯಿದೆ. ಮತ್ತು ಅನೇಕ ಔಷಧಗಳು ಜಡವಿದ್ದರೂ ಅವುಗಳಲ್ಲಿ ಅನೇಕ ರೋಗಗಳನ್ನು ನಾಶ ಮಾಡುವ ಶಕ್ತಿಯಿದೆ. ಧತ್ತೂರಿಯಲ್ಲಿ ವಿವೇಕಿಯ ಜ್ಞಾನವನ್ನು ಭಂಗಗೊಳಿಸುವ ಶಕ್ತಿಯಿದೆ ಇತ್ಯಾದಿ. ಜಡವಸ್ತುಗಳಲ್ಲಿ ಇವೆಲ್ಲ ಶಕ್ತಿಗಳು ಇವೆಯೋ ಅಥವಾ ಇಲ್ಲ ? ಇನ್ನೂ ಆಲಿಸು ! ಅರಿಶಿಣವು ಹಳದಿ ಇದೆ, ಸುಣ್ಣವು ಬೆಳ್ಳಗಿದೆ ಅವೆರಡೂ ಬೆರೆಯುವುದರಿಂದ ಕೆಂಪು ವರ್ಣದ್ದಾಗಿ ಬಿಡುತ್ತದೆ. ಚಕಮಕಿ ಹಾಗೂ ಲೋಹ ಪಾಷಾಣಗಳ ಬೆರೆಯುವಿಕೆಯಿಂದ ಅಗ್ನಿಯು ಉತ್ಪನ್ನವಾಗುತ್ತದೆ ಹೀಗೆ ಅನ್ಯವೂ ಅನೇಕ ಶಕ್ತಿಗಳು ಪುದ್ಗಲ ಜಡದ್ರವ್ಯದಲ್ಲಿ ಇರುತ್ತವೆ. ಹಾಗೆಯೇ ಮೇಘ ಗರ್ಜನೆಯ ಶಬ್ದವನ್ನು ಕೂಡ

ನೀನು ಪುದ್ಗಲ ಸ್ಕಂಧಮಯವೆಂದು ತಿಳಿಯುವುದು. ಆದುದರಿಂದ ಎಲೈ ಸೋದರನೇ ! ಆ ಮೇಘದಲ್ಲಿ ಜೀವತ್ವವಿಲ್ಲ ಅದು ಅಚೇತನವಿದೆ. ಅದಕ್ಕಾಗಿ ನೀನು ಈ ಜಡ ದ್ರವ್ಯದಲ್ಲಿ ಜೀವತ್ವದ ಕಲ್ಪನೆ ಮಾಡಬೇಡ. ಅದು ದೇವಗಳ ಅಧಿಪತಿ ಇಂದ್ರವಲ್ಲ.

ಈ ಮೇಘವನ್ನಂತೂ ಜಗತ್ತಿನಲ್ಲಿ ಎಲ್ಲರೂ ಇಂದ್ರನೆಂದೇ ಹೇಳುತ್ತಾರಲ್ಲ ! ಎಂದು ನೀನು ಹೇಳಬಹುದಾಗಿದೆ?

ಎಲೈ ಸೋದರನೇ ! ಯಾರು ಮುಗ್ಧರಿದ್ದಾರೆ ಸತ್ಯಶಾಸ್ತ್ರಗಳ ಜ್ಞಾನದಿಂದ ರಹಿತ ಜೀವರುಗಳಿದ್ದಾರೆ ಅವರು ನಾಮರೂಢಿಯಿಂದ ಇದರ ಹೆಸರನ್ನು ಇಂದ್ರನೆಂದು ಇಟ್ಟಿದ್ದಾರೆ. ಹೇಗೆ ಯಾವನೋ ಭಿಕ್ಷುಕನ ಹೆಸರು ಇಂದ್ರದತ್ತನೆಂದು ಇರುತ್ತದೆ; ಆದರೆ ಇಂದ್ರದತ್ತನೆಂದಂತೂ ಯಾವನು ಇತರರಿಗೆ ಇಂದ್ರ ಪದವಿಯನ್ನು ಕೊಡುತ್ತಾನೆ ಅವನಿಗೆ ಹೇಳಲಾಗುತ್ತದೆ ಇವನು ಭಿಕ್ಷುಕನಿದ್ದಾನೆ, ದೀನನಿದ್ದಾನೆ ಅದರಿಂದ ರೂಢಿನಯ (ಸಮಭಿರೂಢನಯ)ದಿಂದಲೇ ಇವನ ಹೆಸರು ಇಂದ್ರದತ್ತನು ಎನ್ನಲಾಗಿದೆ. ಅದೇ ಪ್ರಕಾರ ಯಾವ ಸಹಾಯವಿಲ್ಲದೆ ಆಕಾಶದಿಂದ ಜಲದ ವೃಷ್ಟಿಯಾಗುವುದನ್ನು ಕಂಡು ಗರ್ಜನೆಯಾಗುತ್ತಿರುವುದನ್ನು ಕಂಡು ಮುಗ್ಧ ಪ್ರಾಣಿಗಳು ದೇವತ್ವದ ಕಲ್ಪನೆ ಮಾಡಿ ಆ ಮೇಘಗಳಿಗೆ ಇಂದ್ರನೆಂಬ ಹೆಸರು ಕೊಟ್ಟಿದ್ದಾರೆ. ವಾಸ್ತವದಲ್ಲಿ ಈ ಇಂದ್ರನು ದೇವಗಳ ಅಧಿಪತಿ ಅಲ್ಲ. ಇದರಲ್ಲಿ ಚೇತನವಿಲ್ಲ, ಇದು ಜ್ಞಾನಸಹಿತವಾಗಿಲ್ಲ. ಪುದ್ಗಲಗಳ ಸ್ಕಂಧವೇ ವರ್ಷಾಋತುವಿನ ನಿಮಿತ್ತ ಪಡೆದು ಜಲಮಯವಾಗುತ್ತವೆ ಅದುವೇ ಈ ಮೇಘವಿದೆ.

ಹೇಗೆ ಶೀತ ಋತುವಿನ ನಿಮಿತ್ತ ಪಡೆದು ಸರ್ವ ಆಕಾಶದಲ್ಲಿ ಪುದ್ಗಲಗಳು ಮಹಾಶೀತರೂಪವಾಗುತ್ತವೆ, ಉಷ್ಣ ಋತುವಿನ ನಿಮಿತ್ತ ಪಡೆದು ಸರ್ವ ಆಕಾಶದಲ್ಲಿ ಪುದ್ಗಲ ಸ್ಕಂಧಗಳು ಉಷ್ಣರೂಪವಾಗುತ್ತವೆ. ಇವೆರಡೂ ಋತುಗಳ ಕರ್ತೃ ಯಾರೂ ಇಲ್ಲ, ಅನಾದಿಯಿಂದಲೇ ಅಂಥದೇ ಸ್ವಭಾವವಿದೆ. ಕಾಲದ ನಿಮಿತ್ತವು ಎಂಥದ್ದಿರುತ್ತದೆ ಅದರ ಅನುಸಾರ ಪುದ್ಗಲಗಳು ಪರಿಣಮನ ಮಾಡುತ್ತವೆ ಎಂದು ನೀನು ನಿಶ್ಚಿತವಾಗಿ ತಿಳಿದುಕೋ. ಈ ಮೇಘವನ್ನು ಇಂದ್ರವೆಂದು ಹೇಳುತ್ತಾರೆ, ಆದರೆ ಅದು ಈ ಇಂದ್ರವು ಚೇತನವಿಲ್ಲ, ಜಡವಿದೆ. ಅದಕ್ಕಾಗಿ ಎಲೈ ಭವ್ಯನೇ ! ಯಾರು ವಿವೇಕವಂತರಿದ್ದಾರೆ, ಅವರು ಅಜೀವದಲ್ಲಿ ಜೀವ ಮನ್ನಿಸುವುದು ಯೋಗ್ಯವಿಲ್ಲ. ಈ ಪ್ರಕಾರ ಮೇಘಗಳ ಅಚೇತನತ್ವದಲ್ಲಿ ಇಂದ್ರಪದ ಮನ್ನಿಸುವಂಥ ಶ್ರದ್ಧೆಯನ್ನು ನಾಶಮಾಡಿ ಯಥಾವತ್ ಸರ್ವಜ್ಞ ಕೇವಲಿ ಭಾಷಿತ ಶ್ರದ್ಧೆ ಮಾಡಿಸಲಾಯಿತು. ಯಾರ ಮತದಲ್ಲಿ ಮೇಘಗಳನ್ನು ದೇವನಾಥ ಇಂದ್ರನೆಂದು ಮನ್ನಿಸುತ್ತಾರೆ ಅವರ ಆಪ್ತ, ಆಗಮ, ಪದಾರ್ಥಗಳು ಸತ್ಯವಿರುವುದಿಲ್ಲ. ಹೀಗೆ ಯಾರು ಜಡ ಮೇಘವನ್ನು ದೇವನಾಥನೆಂದು ಮನ್ನಿಸುತ್ತಾರೆ ಅವರ ಸಂದೇಹ ನಿವಾರಣೆಯ ಕಥನವು ಪೂರ್ಣವಾಯಿತು.

ಬೇರೆಯೂ ಅದೆಷ್ಟೋ ಮುಗ್ಧ ಜೀವರುಗಳು ಮಂದ ಜ್ಞಾನದಿಂದ ಅಜೀವ ತತ್ತ್ವದಲ್ಲಿ ಜೀವ ತತ್ತ್ವವನ್ನು ಮನ್ನಿಸುತ್ತಾರೆ. ಅವರು ಈ ಅಚೇತನ ಕಾಲದ್ರವ್ಯದ ಸಂಬಂಧದಲ್ಲಿ ಹೇಳುವುದೇನೆಂದರೆ ಈ ಕಾಲದ್ರವ್ಯವು ಯಮನಿದ್ದಾನೆ ಇವನು ಭಗವಂತನ ಹತ್ತಿರುವಿರುವಂಥ ಸೇವಕನಿದ್ದಾನೆ. ಇವನು ಭಗವಂತರ ಆಜ್ಞೆ ಪಡೆದು ಜೀವವನ್ನು ಶರೀರದಿಂದ ಬೇರೆ ಮಾಡುತ್ತಾನೆ. ಈ ಯಮನು ಮಹಾನಿರ್ದಯಿ ಇದ್ದಾನೆ. ಯಾವ ಜೀವನು ಮೋಹದ ಯೋಗದಿಂದ ಕುಟುಂಬವನ್ನು ಬಿಟ್ಟುಕೊಡಲು ಇಚ್ಛಿಸುವುದಿಲ್ಲ, ಆ ಕುಟುಂಬದಲ್ಲಿ ಮತ್ತು ದೇಹದಲ್ಲಿ ಸುಖಿಯಿದ್ದಾನೆ, ಅವನನ್ನು ಇವನು ಚಾಟಿಯಿಂದ ಹೊಡೆ ಹೊಡೆದು ಮಹಾದುಃಖಿಯನ್ನಾಗಿಸಿ ಬಲಪೂರ್ವಕವಾಗಿ ಶರೀರದಿಂದ ಬಿಡಿಸುತ್ತಾನೆ. ಅದೆಷ್ಟೋ ಜೀವರುಗಳು ಭಗವಂತರ ಭಕ್ತರಿದ್ದಾರೆ ಅವರನ್ನು ಇವನು ಹೊಡೆಯುವುದಿಲ್ಲ, ಅವನ ಶರೀರದಲ್ಲಿ ವಿಶೇಷ ಚಿಹ್ನೆಗಳು, ಕೊರಳಲ್ಲಿ ಮಾಲೆಯನ್ನು ನೋಡಿ ಅವರ ಶರೀರದಿಂದ ದೂರವಿದ್ದುಕೊಂಡೇ ವಿನಯದಿಂದ ಜೀವವನ್ನು ತೆಗೆಯುತ್ತಾನೆ; ಆದರೆ ಯಾರನ್ನೂ ಬಿಡುವುದಿಲ್ಲ ಅದರಲ್ಲಿ ರಾತ್ರಿಯಿರಲಿ, ಹಗಲಿರಲಿ, ಶೀತ, ಉಷ್ಣ, ಮಳೆ, ಚಳಿ,

ದುಃಖಿಯಾಗಿರಲಿ, ಮದುವೆಯಾಗುತ್ತಿರಲಿ, ಶೋಕ ಮಾಡುತ್ತಿರಲಿ, ಭೋಜನ ಮಾಡುತ್ತಿರಲಿ, ಮಲಗಿಕೊಂಡಿರಲಿ, ಧನಿಕನಿರಲಿ, ದರಿದ್ರನಿರಲಿ, ರೋಗಿಯಾಗಿರಲಿ, ನಿರೋಗಿಯಿರಲಿ, ಇತ್ಯಾದಿ ಬೇಕಾದಂಥ ಸಮಯವಿದ್ದರೂ ಈ ದಯಾರಹಿತ ಯಮನು ಯಾರನ್ನೂ ಬಿಡುವುದಿಲ್ಲ - ಇಂಥ ವಿಭ್ರಮೆಯನ್ನು ಉತ್ಪನ್ನ ಮಾಡಿಕೊಂಡು ಅಜೀವತತ್ತ್ವದಲ್ಲಿ ಜೀವತತ್ತ್ವದ ಕಲ್ಪನೆ ಮಾಡುತ್ತಾರೆ.

ಅಂಥವರಿಗೆ ಹೇಳುವುದೇನೆಂದರೆ - ಎಲೈ ಸೋದರನೇ ! ಭಗವಂತನಂತೂ ಯಾರನ್ನೂ ಸಾಯಿಸುವುದಿಲ್ಲ. ಮತ್ತು ಯಾರನ್ನೂ ಸಾಯಿಸುವ ಆಜ್ಞೆಯನ್ನು ನೀಡುವುದಿಲ್ಲ. ಭಗವಂತನಂತೂ ಜಗತ್ತಿನ ತಂದೆ, ಸರ್ವರಕ್ಷಕ, ದಯಾನಿಧಾನ, ವೀತರಾಗ, ಕೇವಲಜ್ಞಾನಿ, ಶುದ್ಧಾತ್ಮಾ, ನಿರ್ದೋಷನಿದ್ದು ಯಾರನ್ನೂ ಸಾಯಿಸುವ ವಿಚಾರವನ್ನು ಕೂಡ ಮಾಡುವುದಿಲ್ಲ. ಈ ಲೋಕದಲ್ಲಿಯೂ ಯಾರಿಗಾದರೂ ಹೇಳಿ ಯಾರನ್ನಾದರೂ ಸಾಯಿಸುವುದರಿಂದಲೂ ಪಾಪವಾಗುತ್ತದೆ, ಅಂಥವರಿಗೆ ದಂಡನೆಯಾಗುತ್ತದೆ, ಶಿಕ್ಷೆಯಾಗುತ್ತದೆ. ಯಾರು ಅತಿ ಅಲ್ಪ ಧರ್ಮವನ್ನು ಧಾರಣ ಮಾಡಿರುವಂಥ ಜೀವರುಗಳಿದ್ದಾರೆ, ಅಂಥವರೂ ಕೂಡ ಪಾಪದಿಂದ ಹೆದರಿ 'ನೀನು ಅವನನ್ನು ಸಾಯಿಸು' ಎಂಬ ವಚನವನ್ನು ಆಡುವುದಿಲ್ಲ. ಯಾರಾದರೂ ಕಷಾಯದ ವಶರಾಗಿ ಒಂದು ವೇಳೆ ಹೇಳುತ್ತಿದ್ದರೆ ಅವರು ಧರ್ಮಕ್ಕೆ ದೋಷ ತಗಲಿಸುತ್ತಾರೆ. ಹಾಗೂ ಇವನು ಮಹಾಪಾಪಿಯಿದ್ದಾನೆ, ಇವನು ಅವನನ್ನು ಆ ವ್ಯಕ್ತಿಯ ಕೈಯಿಂದ ಸಾಯಿಸಿದನು - ಎಂದು ಲೋಕದಲ್ಲಿಯೂ ಹೇಳಲಾಗುತ್ತದೆ. 'ಶಾಸ್ತ್ರಗಳಲ್ಲಿಯೂ ಮನ, ವಚನ, ಕಾಯ, ಕೃತ, ಕಾರಿತ, ಅನುಮೋದನೆ ಇವುಗಳದು ಪುಣ್ಯ- ಪಾಪದಲ್ಲಿ ಸಮಾನರೂಪದ ಫಲವಿದೆ'ವೆಂಬ ಉಪದೇಶವಿದೆ.

ಎಲೈ ಸೋದರನೇ ! ನೀನು ವಿಚಾರ ಮಾಡಿ ನೋಡು. ಜಗತ್‌ಪತಿ, ದಯಾನಿಧಾನ, ವೀತರಾಗಿ, ಭಗವಂತರು ಇತರರನ್ನು ಸಾಯಿಸುವ ವಚನವನ್ನು ಹೇಗೆ ಹೇಳುವ ಸಾಧ್ಯತೆಯಿದೆ ? ಭಗವಂತರಿಗೆ ಇಂಥ ದೋಷ ತಗಲಿಸುವುದು ಯೋಗ್ಯವಿಲ್ಲ. ಒಂದು ವೇಳೆ ಯಾವನೋ ನಿರ್ದೋಷನಿಗೆ ದೋಷ ತಗಲಿಸುತ್ತಿದ್ದರೆ ಅವನನ್ನು ಮಹಾಪಾಪಿಯೆನ್ನಲಾಗುತ್ತದೆ. ಎಲೈ ಭವ್ಯನೇ ಭಗವಂತರಂತೂ ನಿರ್ದೋಷರಿದ್ದಾರೆ - ವೀತರಾಗ, ದಯೆಯ ಭಂಡಾರ, ಸರ್ವಲೋಕದ ರಕ್ಷಕರಿದ್ದಾರೆ. ಆ ಭಗವಂತರ ವಚನಗಳು ಸರ್ವ ಜೀವರುಗಳ ಸಲುವಾಗಿ ಅಮೃತದ ಸಮಾನ ಸುಖದಾಯಕವಿರುತ್ತದೆ. ಲೌಕಿಕ ಅಮೃತದಿಂದಂತೂ ದೇಹದ ಆತಾಪವು ದೂರವಾಗುತ್ತದೆ, ಆದರೆ ಭಗವಂತರ ವಚನಗಳ ರೂಪದ ಅಮೃತದಿಂದಂತೂ ಜನ್ಮ-ಮರಣಗಳ ಆತಾಪವು ನಾಶವಾಗುತ್ತದೆ, ಆದುದರಿಂದ ಭಗವಂತರ ವಚನಗಳು ಪರಘಾತರೂಪವಾಗುವುದೇ ಇಲ್ಲ. ಯಾವ ಯಮನನ್ನು ನೀನು ಜೀವವೆಂದು ಮನ್ನಿಸುತ್ತಿರುವೆ ಆ ಯಮನು ಯಾವ ಜೀವವಸ್ತು ಇಲ್ಲ.

ಯಾರನ್ನು ನೀನು ಯಮನೆಂದು ಹೇಳುತ್ತಿರುವೆ, ಅದಂತೂ ಜಡ ಕಾಲದ್ರವ್ಯವಿದೆ; ಜೀವವಿಲ್ಲ. ಈ ಸಂಸಾರದಲ್ಲಿ ಷಡ್‌ದ್ರವ್ಯಗಳಿದ್ದು ಅವುಗಳಲ್ಲಿ ಒಂದು ಜೀವ ಮತ್ತು ಐದು ಅಜೀವವಿವೆ. ಆ ಅಜೀವ ದ್ರವ್ಯಗಳಲ್ಲಿಯೂ ಒಂದು ಪುದ್ಗಲ ದ್ರವ್ಯವಂತೂ ಜಡ ಮೂರ್ತಿಕವಿದೆ. ಉಳಿದ ನಾಲ್ಕು ಅಮೂರ್ತಿಕವಿವೆ. ಅವೆಲ್ಲ ಅಮೂರ್ತಿಕ ದ್ರವ್ಯಗಳು ಭಿನ್ನ-ಭಿನ್ನ ಗುಣಪರ್ಯಾಯ ಸಹಿತ ಭಿನ್ನ-ಭಿನ್ನ ಸತ್ತಾವುಳ್ಳವಿವೆ. ಅವುಗಳಲ್ಲಿ ಒಂದು ಕಾಲದ್ರವ್ಯವಿದ್ದು ಅದರ ಗುಣವಂತೂ ವರ್ತನೆಯಿದೆ ಹಾಗೂ ವ್ಯವಹಾರ ಪರ್ಯಾಯವು ಸಮಯ, ಗಳಿಗೆ, ಪ್ರಹರ, ದಿವಸ, ಪಕ್ಷ, ಮಾಸ, ವರ್ಷ, ಪೂರ್ವ, ಪಲ್ಯ ಮತ್ತು ಸಾಗರವಿದೆ. ಅದು ಪ್ರತಿ ಸಮಯ ಬದಲಾಗುತ್ತ ಬದಲಾಗುತ್ತ, ಜೀವದ ಎಂಥೆಂಥ ಪಲ್ಯ-ಸಾಗರಗಳ ಆಯುವಿರುತ್ತದೆ, ಅದು ವ್ಯತೀತವಾಗಿ ಹೋಗುತ್ತಿರುತ್ತದೆ. ಯಾವ ಜೀವನು ಪೂರ್ವ ಭವದಲ್ಲಿ ಎಷ್ಟು ಸಮಯಗಳ ಆಯುವನ್ನು ಕಟ್ಟಿಕೊಂಡಿದ್ದಾನೆ ಇಲ್ಲಿ ಅಷ್ಟೇ ಶ್ವಾಸೋಚ್ಛ್ವಾಸ ಭೋಗಿಸಿ ಪರ್ಯಾಯವನ್ನು ಪೂರ್ಣ ಮಾಡಿ ಪರಗತಿಗೆ ಹೊರಟು ಹೋಗುತ್ತಾನೆ. ಆಗ ಮುಗ್ಧ ಜೀವರು ಕಾಲವು (ಯಮನು) ತೆಗೆದುಕೊಂಡು ಹೋದನು ಎಂದು ಹೇಳುತ್ತಾರೆ.

ಆ ಯಮನೇನು ಚೇತನನಿಲ್ಲ. ಈ ಕಾಲದ್ರವ್ಯದ್ದೇ ಸಮಯ ಸಮಯ ಪ್ರವರ್ತಿಸಿ ವ್ಯವಹಾರ ಪರ್ಯಾಯವು ಕ್ಷಣ, ಗಳಿಗೆ, ದಿನ, ಪಕ್ಷ, ವರ್ಷಾದಿಗಳ ರೂಪದಿಂದ ನಷ್ಟವಾಗುತ್ತ ಹೋಗುತ್ತದೆ. ಯಾರ ಆಯುಷ್ಯವು ಎಷ್ಟು ಇರುತ್ತದೆ ಅಷ್ಟು ಸಮಯವೇ ಅವನು ಇಲ್ಲಿ ಇರುತ್ತಾನೆ. ನಂತರ ದೇಹದ ತ್ಯಾಗ ಮಾಡುತ್ತಾನೆ. ಕಟ್ಟಿಕೊಂಡು ಬಂದಿರುವ ಆಯುವಿನ ಸಮಯಗಳನ್ನು ಭೋಗಿಸಿದ ನಂತರ ಒಂದು ಸಮಯವೂ ಕೂಡ ಆ ದೇಹದ ಜೊತೆಗೆ ಉಳಿಯುವ ಸಾಧ್ಯತೆ ಇಲ್ಲ. ದೇವ, ಇಂದ್ರ , ಚಕ್ರವರ್ತಿ ಮೊದಲಾದವರು ಕೂಡ ಸಮಯವು ಪೂರ್ಣವಾದ ಮೇಲೆ ಒಂದು ಗಳಿಗೆಯೂ ಉಳಿಯುವುದಿಲ್ಲ. ಯಾವ ಸಮಯ ಸ್ಥಿತಿಯು ಪೂರ್ಣವಾಯಿತು, ಅದೇ ಸಮಯ ಆತ್ಮನು ಶರೀರವನ್ನು ಬಿಟ್ಟುಕೊಡುತ್ತಾನೆ. ಇದಕ್ಕೇನೆ ಮುಗ್ಧ ಪ್ರಾಣಿಗಳು ಇವನನ್ನು ಯಮನು ಕೊಂಡೊಯ್ದನೆಂದು ಹೇಳುತ್ತಾರೆ. ಈ ಕಾಲವೇನು ಜೀವವನ್ನು ತೆಗೆದುಕೊಂಡು ಹೋಗುವ ಸಲುವಾಗಿ ಸ್ವಯಂ ಜೀವವಲ್ಲ. ಇದಂತೂ ಜಡವಿದೆ ಹಾಗೂ ಜಡತ್ವವೇ ಇದರ ಪರ್ಯಾಯವಿದೆ.

ಈ ವ್ಯವಹಾರ ಪರ್ಯಾಯವು ತನ್ನ ಸ್ವಭಾವದ ಅನುಸಾರ ಪ್ರತಿ ಸಮಯ ಪರಿವರ್ತಿತವಾಗುತ್ತ ನಷ್ಟವಾಗಿ ಹೋಗುತ್ತದೆ. ಅದಂತೂ ಅನಾದಿ ಕಾಲದಿಂದ ಅನಂತ ಪರಿವರ್ತನರೂಪವಾಗುತ್ತ ನಡೆದುಕೊಂಡು ಬರುತ್ತಲಿದೆ. ಅದರಲ್ಲಿ ಈ ಸಂಸಾರಿ ಜೀವಗಳ ಸ್ಥಿತಿಯೂ ಸಮಯಪೂರ್ಣವಾಗುತ್ತಿದ್ದಂತೆ ಅವು ಹೊರಟು ಹೋಗುತ್ತಿರುತ್ತವೆ. ಇದೇ ಸ್ಥಿತಿಪೂರ್ಣತೆಯ ಹೆಸರನ್ನು ಮರಣವೆನ್ನಲಾಗುತ್ತದೆ. ಇದು ಆಯಾ ಜೀವದ ಮೂಲಕವೇ ಮಾಡಿದ್ದಿರುವಂಥದ್ದಿದೆ.

ಜೀವನಿಗೆ ಶುಭ ಪರಿಣಾಮಗಳಿಂದಂತೂ ದೇವಗಳ ಹಾಗೂ ಉತ್ಕೃಷ್ಟ ಭೋಗ ಭೂಮಿಯ ಆಯು ಕರ್ಮವು ಪ್ರಾಪ್ತವಾಗುತ್ತದೆ ಮತ್ತು ಪಾಪ ಕರ್ಮದಿಂದ ನರಕಾದಿಗಳ ಉತ್ಕೃಷ್ಟ ಆಯು ಕರ್ಮವನ್ನು ಪಡೆಯುತ್ತಾನೆ. ಒಳ್ಳೆಯ ಸ್ಥಾನ ಹಾಗೂ ಉಚ್ಚ ಕುಲದಲ್ಲಿ ಉತ್ಪನ್ನನಾಗಿ ಹೀನ-ಅಲ್ಪ ಆಯು ಪಡೆದು ಮರಣಹೊಂದಿದರೆ ಅದು ಪರಜೀವಗಳ ಹಿಂಸೆಯ ಫಲವೆಂದು ತಿಳಿಯುವುದು. ಈ ಜೀವದ ಪರಿಣತಿಯು ಹೇಗೆ ಹೇಗೆ ಶುಭಾಶುಭವಾಗುತ್ತದೆ, ಹಾಗೆ ಹಾಗೆ ಅಷ್ಟೇ ಸ್ಥಿತಿಯನ್ನು ಪ್ರಾಪ್ತ ಮಾಡಿಕೊಳ್ಳುತ್ತದೆ ಮತ್ತು ಅದರ ಪೂರ್ಣತೆಯಾದ ಮೇಲೆ ಪರ್ಯಾಯವನ್ನು ಬಿಟ್ಟು ಕೊಡುತ್ತದೆ; ಅದರಿಂದ ಎಲೈ ಸೋದರನೇ ! ಯಾವನೋ ಯಮನು ಜೀವಗಳನ್ನು ಕೊಂಡೊಯ್ಯುತ್ತಾನೆಂಬ ಭ್ರಮೆಯನ್ನು ನೀನು ತ್ಯಾಗ ಮಾಡು. ಈ ಕಾಲವು ಯಾವ ಜೀವವಿಲ್ಲ, ಜಡವಿದೆ. ಆದುದರಿಂದ ಯಾರ ಮತದಲ್ಲಿ ಕಾಲವೆಂಬ ಜಡ ದ್ರವ್ಯವನ್ನು ಯಮನೆಂಬ ಹೆಸರಿನಿಂದ ಮನ್ನಿಸುತ್ತಾರೆ ಅವರ ಆಪ್ತ, ಆಗಮ, ಪದಾರ್ಥಗಳು ಅಸತ್ಯವಿವೆ - ಈ ಪ್ರಕಾರ ಕಾಲವನ್ನು ಯಮನೆಂಬ ಹೆಸರಿನ ಜೀವವೆಂದು ಮನ್ನಿಸುವಂಥವರ ಭ್ರಮೆಯನ್ನು ನಾಶಮಾಡಿ ಶುದ್ಧ ಶ್ರದ್ಧೆ ಮಾಡಿಸಲಾಯಿತು.

ಈ ಪ್ರಕಾರ ಜಡ ಕಾಲದ್ರವ್ಯವನ್ನು ಯಮನೆಂದು ಮನ್ನಿಸುವಂಥ ಜೀವರುಗಳ ಶ್ರದ್ಧೆಯ ಪರಿವರ್ತನದ ಕಥನವು ಪೂರ್ಣವಾಯಿತು.

ಯಾವುದೋ ಮತದವರು ಅಜೀವ ವಸ್ತುಗಳಿಂದ ಜೀವವಸ್ತುವಿನ ಉತ್ಪತ್ತಿಯಾಗುತ್ತದೆ ಎಂದು ಮನ್ನಿಸುತ್ತಾರೆ. ಅವರನ್ನು ಸಂಬೋಧಿಸುತ್ತ ಈಗ ಹೇಳುತ್ತಾರೆ - ಯಾವನೋ ಅಲ್ಪಜ್ಞಾನಿಯು ಐದು ಅಜೀವ ವಸ್ತುಗಳ ಕೂಡುವಿಕೆಯಿಂದ ಜೀವದ ಉತ್ಪತ್ತಿಯಾಗುತ್ತದೆ ಎಂದು ಮನ್ನಿಸುತ್ತಾನೆ. ಅಂಥವರು ಜೀವ ವಸ್ತುವೊಂದು ಬೇರೆಯಾಗಿ ಇಲ್ಲವೇ ಇಲ್ಲವೆಂದು ಹೇಳುತ್ತಾರೆ. ಅಜೀವ ತತ್ತ್ವಗಳ ಸಂಯೋಗದಿಂದ ಒಂದು ಜೀವ ಶಕ್ತಿಯು ಉತ್ಪನ್ನವಾಗುತ್ತದೆ. ಹೇಗೆಂದರೆ ಇಪ್ಪೆ, ಆಲ, ಬೆಲ್ಲ, ಮೊಸರು ಇತ್ಯಾದಿ ಅಜೀವ ವಸ್ತುಗಳು - ಜಡ ದ್ರವ್ಯಗಳು ಅಚೇತನವಸ್ತುಗಳನ್ನು ಭಿನ್ನ-ಭಿನ್ನವಾಗಿ ನೋಡಿದರೆ ಅಮಲಿನ ಶಕ್ತಿಯಿರುವುದಿಲ್ಲ. ಆದರೆ ಇವೆಲ್ಲವನ್ನು ಏಕತ್ರಿತಗೊಳಿಸಿ ಯಂತ್ರದ ಮೂಲಕ ಅರ್ಕ ತೆಗೆಯಲಾದರೆ ಮದ್ಯದ ರೂಪದಲ್ಲಿ ಮದ ಶಕ್ತಿಯು ಪ್ರಕಟವಾಗುತ್ತದೆ. ಅದನ್ನು ಕುಡಿಯುವುದರಿಂದ ಅಮಲೇರಿ

ಉನ್ಮತ್ತನಾಗಿ ಹೋದ ಮೇಲೆ ಬಹಳಷ್ಟು ಶಕ್ತಿಯು ಪ್ರಕಟವಾಗುವುದರಿಂದ ಈ ಜೀವನು ಅನೇಕ ಜಾತಿಯ ಚರಿತ್ರ ಮಾಡುತ್ತಾನೆ. ನಶೆಯು ಇಳಿದು ಹೋದಮೇಲೆ ವಿವಿಧ ಚೇಷ್ಟೆಗಳನ್ನು ಮಾಡುವಂಥ ಶಕ್ತಿಯು ನಷ್ಟವಾಗಿ ಹೋಗುತ್ತದೆ.

ಅದೇ ಪ್ರಕಾರ ಪೃಥ್ವಿ, ಜಲ, ಅಗ್ನಿ, ವಾಯು ಮತ್ತು ಆಕಾಶ - ಇವು ಐದು ತತ್ತ್ವಗಳ ಸಂಯೋಗದಿಂದ ಜೀವ ಶಕ್ತಿಯು ಪ್ರಕಟವಾಗುತ್ತದೆ. ಭಿನ್ನ-ಭಿನ್ನವಾಗಿ ನೋಡಿದರೆ ಅವುಗಳಲ್ಲಿ ಜೀವತ್ವ ಶಕ್ತಿಯಂತೂ ಯಾವುದರಲ್ಲೂ ಇರುವುದಿಲ್ಲ. ಅವುಗಳ ಸಂಯೋಗದಿಂದ ಜೀವ ಶಕ್ತಿಯು ಪ್ರಕಟವಾಗುತ್ತದೆ. ಯಾವಾಗ ಆ ಶಕ್ತಿಯು ಪ್ರಕಟವಾಗುತ್ತದೆ, ಆಗ ನೋಡುವ, ತಿಳಿಯುವ ರೂಪ ಕ್ರಿಯೆಗಳನ್ನು ಮಾಡುತ್ತಾನೆ ಮತ್ತು ಯಾವಾಗ ತತ್ತ್ವಗಳ ಸಂಯೋಗ ಬಿಟ್ಟು ಹೋಗುತ್ತದೆ ಆಗ ಐದೂ ತತ್ತ್ವಗಳು ತಮ್ಮ ತಮ್ಮ ತತ್ತ್ವಗಳಲ್ಲಿ ಒಂದಾಗಿ ಹೋಗುತ್ತವೆ ಮತ್ತು ಶಕ್ತಿಯು ನಷ್ಟವಾಗಿ ಹೋಗುತ್ತದೆಯೆಂದು ಹೇಳುವ ಅವರು ಒಂದು ದೃಷ್ಟಾಂತವನ್ನು ಕೊಟ್ಟು ತಮ್ಮ ಮತದ ಪೋಷಣೆ ಮಾಡುತ್ತಾರೆ -

**ಪವನ ಪೇಚ ಆಟೀ ಪರೀ, ಧರ್ಯೋ ಬಭೂರ್ಯೋ ನಾಮ ।**

**ನಿಕಾಸ ಪೇಚ ಬಾಹಲ ಪರ್ಯೋ, ನಾಮ ಠಾಮ ನಹಿ ಗ್ರಾಮ ॥**

ಈ ತತ್ತ್ವ ವಾದಿಗಳ ಮತದಲ್ಲಿ ಹೇಳಿರುವುದೇನೆಂದರೆ - ಯಾವ ಪವನ ವೇಗದಿಂದ ಸುಂಟರಗಾಳಿಯ ನಿರ್ಮಾಣವಾಗುತ್ತದೆ ಅದರ ಯೋಗದಿಂದ ರಜಗಳು, ಮರಳು, ಒಣಗಿದ ಎಲೆಗಳು, ಹುಲ್ಲು ಮೊದಲಾದ ಪದಾರ್ಥಗಳು ಹಾರಾಡುತ್ತವೆ ಅದನ್ನು ಎಲ್ಲರೂ ನೋಡಿದ್ದಾರೆ. ಎಲ್ಲರೂ ಅದಕ್ಕೆ ಸುಂಟರಗಾಳಿ ಎಂದು ಹೆಸರು ಇಟ್ಟಿದ್ದಾರೆ. ವೇಗವು ಮಂದವಾದ ಮೇಲೆ ಗಾಳಿಯ ತಿರುವು ನಿಂತು ಹೋಗುತ್ತದೆ. ಆಗ ಅದರ ಹೆಸರು ಸುಂಟರಗಾಳಿಯೆಂದು ಉಳಿಯುವುದೂ ಇಲ್ಲ. ಹಾಗೆಯೇ ಸುಂಟರಗಾಳಿಯ ಸಮಾನ ಐದೂ ತತ್ತ್ವಗಳ ಸಂಯೋಗವು ಎಲ್ಲಿಯವರೆಗೆ ನಷ್ಟವಾಗುವುದಿಲ್ಲ ಅಷ್ಟು ಕಾಲದವರೆಗಂತೂ ಜೀವವೆಂಬ ಹೆಸರಿನ ವಿಕಾರವು ಪ್ರಕಟವಿರುತ್ತದೆ ಅದನ್ನೆಲ್ಲರೂ ನೋಡಿದ್ದಾರೆ; ಆದರೆ ಯಾವಾಗ ತತ್ತ್ವಗಳು ಭಿನ್ನ-ಭಿನ್ನವಾಗಿ ತಮ್ಮ ತಮ್ಮ ತತ್ತ್ವಗಳಲ್ಲಿ ಒಂದಾಗಿ ಹೋಗುತ್ತವೆ ಆಗ ನೋಡಿದರೆ ಜೀವತತ್ತ್ವವೆಂಬ ಹೆಸರಿನ ಯಾವ ವಸ್ತುವು ಉಳಿದೇ ಇಲ್ಲ. ಹೀಗೆ ಕೆಲವು ತತ್ತ್ವವಾದಿಗಳ ಮತವಿದೆ.

ಅವರುಗಳ ಮಿಥ್ಯಾತ್ವವನ್ನು ದೂರ ಮಾಡುವ ಸಲುವಾಗಿ ಸ್ಯಾದ್ವಾದಿಗಳು ಹೇಳುತ್ತಾರೆ - ಎಲೈ ತತ್ತ್ವವಾದಿಯೇ! ಆಲಿಸು, ಸಿಂಹಿಣಿಯ ಗರ್ಭದಿಂದ ಮೃಗಗಳ ಜನ್ಮವಾಗುವುದಿಲ್ಲ, ಜಿಂಕೆಗಳ ಗರ್ಭದಿಂದ ಸಿಂಹದ ಜನ್ಮವಾಗುವುದಿಲ್ಲ ಅದೇ ಪ್ರಕಾರ ಜಡ-ಅಚೇತನ ವಸ್ತುಗಳಿಂದ ಚೇತನ ವಸ್ತುವಿನ ನಿರ್ಮಾಣವಾಗುವುದಿಲ್ಲ, ಜೀವವಸ್ತುವಿನಿಂದ ಅಜೀವ ವಸ್ತುವಿನ ನಿರ್ಮಾಣವಾಗುವುದಿಲ್ಲ ಎಂಬುದು ನಿಯಮವಿದೆ. ಒಂದು ವೇಳೆ ಐದು ಜಡ ತತ್ತ್ವಗಳಿಂದ ಜೀವದ ಉತ್ಪತ್ತಿಯಾಗುತ್ತಿದ್ದರೆ ಐದು ತತ್ತ್ವಗಳಿಂದ ಲೋಕವು ತುಂಬಿಕೊಂಡಿದೆ ಯಾರು ಬೇಕಾದರೂ ಐದು ತತ್ತ್ವಗಳನ್ನು ಒಂದುಗೂಡಿಸಿ ಜೀವತತ್ತ್ವದ ನಿರ್ಮಾಣ ಮಾಡಬಹುದಾಗಿತ್ತು. ಪುತ್ರ, ಪತ್ನಿಯರ ನಿರ್ಮಾಣದ ಸಲುವಾಗಿ ಅಂಥ ಉಪಾಯವನ್ನು ಯಾರಾದರೂ ಅದೇಕೆ ಮಾಡುವುದಿಲ್ಲ ? ಎಲೈ ತತ್ತ್ವವಾದಿಯೇ ! ಐದು ತತ್ತ್ವಗಳನ್ನು ಕೂಡಿಸಿ ನೀನು ನಮ್ಮ ಎದುರಿಗೆ ಜೀವ ತತ್ತ್ವವನ್ನು ನಿರ್ಮಿಸು ನೋಡೋಣ ! ಹೇಗೆ ಮನುಷ್ಯನ ನಿರ್ಮಾಣವಾಗುತ್ತದೆಂಬುದನ್ನು ನೋಡೋಣ.

ಹೇಗೆ - ನೀನು ಮದ್ಯದ ದೃಷ್ಟಾಂತ ಕೊಟ್ಟಿರುವೆ ಅದರ ಅನುಸಾರ ಬೆಲ್ಲ, ಮೊಸರು, ಇಪ್ಪೆ, ಆಲ ಇತ್ಯಾದಿಗಳನ್ನು ಬೆರೆಸಿ ಯಾರು ಬೇಕಾದವರು ಮದ್ಯದ ನಿರ್ಮಾಣ ಮಾಡುತ್ತಾರೆ. ಅದೇ ಪ್ರಕಾರ ನೀನು ಕೂಡ ಒಂದೆರಡು ಜೀವಗಳನ್ನು ನಿರ್ಮಿಸಿ ತೋರಿಸು. ಒಂದು ವೇಳೆ ನಾನು ನಿರ್ಮಿಸುವುದರಿಂದ ಆಗುವುದಿಲ್ಲವೆಂದು ನೀನು ಹೇಳುತ್ತಿದ್ದರೆ ಅಂಥ ಶ್ರದ್ಧೆಯು ಅಸತ್ಯವಿದೆ. ನೀನು ವ್ಯರ್ಥವಾಗಿಯೇ ಹಟಗ್ರಾಹಿಯಾಗುತ್ತಿರುವೆ. ಅಜೀವ ವಸ್ತುವಿನಿಂದ ಜೀವ ವಸ್ತುವಿನ ನಿರ್ಮಾಣವಾಗುವುದಿಲ್ಲ. ಜಗತ್ತಿನಲ್ಲಿ ಜೀವ ಮತ್ತು ಅಜೀವ - ಇವು ಎರಡು ತತ್ತ್ವಗಳು

ಅನಾದಿನಿಧನವಿವೆ. ಅಜೀವ ವಸ್ತುವಿನ ಮೂಲಕ ಜೀವ ವಸ್ತುವಿನ ನಿರ್ಮಾಣವಾಗುವುದಿಲ್ಲ; ಅದರಿಂದ ಯಾರ ಮತದಲ್ಲಿ ಐದು ಅಜೀವ ತತ್ತ್ವಗಳಿಂದ ಜೀವದ ಉತ್ಪತ್ತಿಯಾಗುತ್ತದೆಯೆಂದು ಮನ್ನಿಸುತ್ತಾರೆ ಅವರ ಆಪ್ತ, ಆಗಮ, ಪದಾರ್ಥಗಳು ಅಸತ್ಯವಿವೆ.

ಈ ಪ್ರಕಾರ ಯಾರು ಅಜೀವದಿಂದ ಜೀವ ತತ್ತ್ವದ ಉತ್ಪತ್ತಿಯಾಗುತ್ತದೆಯೆಂದು ಮನ್ನಿಸುತ್ತಾರೆ ಅವರಿಗೆ ತಿಳಿಸಿಕೊಟ್ಟು ಯಥಾಯೋಗ್ಯ ಜಿನಭಾಷಿತ ತತ್ತ್ವಗಳ ಶ್ರದ್ಧೆ ಮಾಡಿಸಲಾಯಿತು.

ಈಗ ಇವೆಲ್ಲ ಮಿಥ್ಯಾವಾದಿಗಳ ಒಂದು ಪಕ್ಷವನ್ನು ಮಿಥ್ಯಾತ್ವವೆಂದು ತಿಳಿಸಿಕೊಟ್ಟು ಅವರೇ ಹೇಳಿರುವ ವಚನಗಳನ್ನು ಯಾವುದೋ ನಯದ ಮೂಲಕ ಸ್ಯಾದ್ವಾದ ಮತದಿಂದ ಹೊಂದಿಸುತ್ತ ಸತ್ಯವನ್ನು ತಿಳಿಸಿಕೊಡುತ್ತಾರೆ-

ಹೇಗೆ ಅಂಧರ ಆನೆ, ಅಂಧರ ವಚನಗಳ ಮೂಲಕ ಒಂದು ಪಕ್ಷದಿಂದ ಅಸತ್ಯವಿದೆ. ನೇತ್ರವುಳ್ಳವನು ಅಂಧರುಗಳ ವಚನಗಳನ್ನು ಏಕತ್ರಿತಗೊಳಿಸಿ ಎಲ್ಲವನ್ನು ಆನೆಯೆಂದು ಹೇಳುತ್ತಾನೆ. ಯಾವುದೋ ಅಪೇಕ್ಷೆಯಿಂದ ಅಂಧರುಗಳ ಮೂಲಕ ಆನೆಯೆಂದು ಹೇಳಲಾಗುವಂಥ ವಚನಗಳನ್ನು ಸತ್ಯವೆಂದು ತಿಳಿಸಿಕೊಡುತ್ತಾರೆ. ಹಾಗೆಯೇ ಇಲ್ಲಿ ಕಥನ ಮಾಡುತ್ತಾರೆ -

ಎಲೈ ಸಂಸಾರದಲ್ಲಿ ಓರ್ವ ಆತ್ಮನನ್ನೇ ಮನ್ನಿಸುವಂಥವರೇ ! ನೀವು ಸರ್ವಲೋಕದಲ್ಲಿ ಒಬ್ಬನೇ ಆತ್ಮನ ಸತ್ತಾ ಮನ್ನಿಸುವಂಥವರಿದ್ದೀರಿ. ಅದನ್ನು ಆ ಅಪೇಕ್ಷೆಯಿಂದಂತೂ ಅಸತ್ಯವೆಂದು ಹೇಳಿ ಬಂದಿದ್ದೇವೆ. ಯಾವ ರೀತಿ ಅಂಧನು ಜಟ್ಟಿಯ ಬಾಹುವಿನ ಸಮಾನ ಆನೆಯೆಂದು ಮನ್ನಿಸುತ್ತಾನೆ, ಅದಂತೂ ಅಸತ್ಯವಿದೆ ಬಾಹುವಿನ ಸಮಾನ ಆನೆಯಿರುವುದಿಲ್ಲ ಆದಾಗ್ಯೂ ಆ ಅಂಧನ ವಚನವು ಯಾವುದೋ ಅಪೇಕ್ಷೆಯಿಂದ ಆನೆಯ ಒಂದು ಅಂಗ-ಸೊಂಡೆಯು ಬಾಹುವಿನ ಸಮಾನವಿದೆ, ಈ ಅಪೇಕ್ಷೆಯಿಂದ ಸತ್ಯವಿದೆ. ಇದೇ ಪ್ರಕಾರ ಸಮಸ್ತ ಸಂಸಾರದಲ್ಲಿ ಓರ್ವ ಆತ್ಮನಿದ್ದಾನೆಂಬ ಮಾತು ಯಾವ ಅಪೇಕ್ಷೆಯಿಂದ ಸತ್ಯವಿದೆಯೆಂಬುದನ್ನು ಆಲಿಸಿರಿ. ಈ ಜಗತ್ತಿನಲ್ಲಿ ಅನಂತ ಜೀವಗಳು ಭಿನ್ನ-ಭಿನ್ನ ಸತ್ತಾವನ್ನು ಧಾರಣ ಮಾಡಿಕೊಂಡು ಸಮಸ್ತ ಲೋಕದಲ್ಲಿ ಸೂಕ್ಷ್ಮ ಜಾತಿಯ ರೂಪದಿಂದ ತುಂಬಿಕೊಂಡಿವೆ. ಪೃಥ್ವಿಕಾಯಿಕ ಸೂಕ್ಷ್ಮ, ಜಲಕಾಯಿಕ ಸೂಕ್ಷ್ಮ, ಅಗ್ನಿಕಾಯಿಕ ಸೂಕ್ಷ್ಮ, ವಾಯುಕಾಯಿಕ ಸೂಕ್ಷ್ಮ, ವನಸ್ಪತಿಕಾಯಿಕ ಸೂಕ್ಷ್ಮ - ಇವು ಐದು ಸ್ಥಾವರ ಸೂಕ್ಷ್ಮಗಳಿಂದ ಈ ಲೋಕವು ತುಪ್ಪದ ಕೊಡದ ಹಾಗೆ ತುಂಬಿಕೊಂಡಿದೆ.

ಯಾವ ಪ್ರಕಾರ ತುಪ್ಪದ ಕೊಡವು ತುಂಬಿಕೊಂಡಿದೆ ಅದರಲ್ಲಿ ಯಾವುದೇ ಸ್ಥಳವು ಬರಿದಾಗಿಲ್ಲ ಅದೇ ಪ್ರಕಾರ ಈ ಲೋಕವು ಸೂಕ್ಷ್ಮ ಜೀವಗಳಿಂದ ತುಂಬಿಕೊಂಡಿದೆ. ಅಲ್ಲಿ ವನಸ್ಪತಿ ಸೂಕ್ಷ್ಮಗಳಂತೂ ಅನಂತವಿವೆ, ನಾಲ್ಕು ಸ್ಥಾವರಸೂಕ್ಷ್ಮಗಳು ಅಸಂಖ್ಯಾತ ಇವೆ. ಈ ಸಮಸ್ತ ಲೋಕವು ಸೂಕ್ಷ್ಮ ಜೀವಗಳಿಂದ ಪರಿಪೂರ್ಣವಿದೆ. ಯಾವುದೇ ಸ್ಥಾನವು ಬರಿದಾಗಿ-ರಿಕ್ತವಾಗಿಲ್ಲ. ಜಲ, ನೆಲ, ಅಗ್ನಿ, ವಾಯು, ಆಕಾಶ, ಪಾಷಾಣ, ಘಟ, ಪಟ ಎಲ್ಲ ಸ್ಥಾನಗಳಲ್ಲಿ ಸೂಕ್ಷ್ಮ ಜೀವಗಳಿವೆ. ಜೀವವಿಲ್ಲದ ಕ್ಷೇತ್ರವು ಯಾವುದೂ ಇಲ್ಲ. ಈ ಪ್ರಕಾರ ನಿಮ್ಮ ವಚನವು ಸತ್ಯವಿದೆ. ಏಕಸತ್ತಾರೂಪ ಸರ್ವ ಜೀವವುಳ್ಳವನು ಎಂಬ ಯಾವ ನಿಮ್ಮ ವಚನವಿದೆ ಅದಂತೂ ಅಸತ್ಯವೇ ಇದೆ; ಎಂಬುದು ವಿಶೇಷವೆನ್ನುವುದನ್ನು ತಿಳಿಯುವುದು. 'ಎಲ್ಲ ಜೀವಗಳ ಸತ್ತಾ ಭಿನ್ನ-ಭಿನ್ನವಿದೆ'. - ಎಂಬ ಜಿನವಚನವೇ ಸತ್ಯವಿದೆ. ಇದರಿಂದಲೇ ಧರ್ಮೋಪದೇಶವೂ ಕೂಡ ಸಂಭವವಿದೆ ಮತ್ತು ಪುಣ್ಯ-ಪಾಪಗಳ ಫಲವೂ ಸಂಭವವಿದೆ. ಆದುದರಿಂದ ಸರ್ವ ಸಂಸಾರದಲ್ಲಿ ಜೀವಗಳಿವೆ ಆದರೆ ಏಕಸತ್ತಾರೂಪವಿಲ್ಲ, ಎಲ್ಲರ ಸತ್ತಾ ಭಿನ್ನ-ಭಿನ್ನ ಇದೆ, ಎಂಬ ಶ್ರದ್ಧೆ ಮಾಡುವುದು.

ಆಚಾರ್ಯ ಕುಂದಕುಂದ ದೇವರು ಆತ್ಮನ ಸರ್ವಗತತ್ವ ಮತ್ತು ಸರ್ವಜ್ಞತೆಯ ಅಪೇಕ್ಷೆಯನ್ನು ಸಿದ್ಧ ಮಾಡುತ್ತ ಪ್ರವಚನಸಾರದಲ್ಲಿ ಗಾಥೆ ೨೩ ಮತ್ತು ೨೬ರಲ್ಲಿ ಹೀಗೆ ಹೇಳಿದ್ದಾರೆ.

**ಆತ್ಮನು ಜ್ಞಾನಪ್ರಮಾಣನಿದ್ದು ಜ್ಞಾನವು ಜ್ಞೇಯಪ್ರಮಾಣವೆಂದು ಪೇಳಲಾಗಿದೆ ।**
**ಮತ್ತೆ ಜ್ಞೇಯವು ಲೋಕಾಲೋಕವಿರುವುದರಿಂದ ಜ್ಞಾನವು ಸರ್ವವ್ಯಾಪಕವಿದೆ ॥೨೩॥**

**ಜಿನವರ ಸರ್ವಗತ ಮೇಣ್ಜಗದ ಸರ್ವಪದಾರ್ಥ ಜಿನವರಗತವಿವೆ ।**
**ಜಿನರು ಜ್ಞಾನಮಯಮೇಣ್ಸರ್ವಪದಾರ್ಥಗಳ್ಜಿನರವಿಷಯಮೆಂದು ಪೇಳಿದೆ ॥೨೬॥**

ಆತ್ಮನು ಜ್ಞಾನ ಪ್ರಮಾಣನಿದ್ದಾನೆ ಮತ್ತು ಜ್ಞಾನವು ಜ್ಞೇಯ ಪ್ರಮಾಣವೆಂದು ಹೇಳಿದ್ದಾರೆ, ಜ್ಞೇಯವು ಲೋಕಾಲೋಕವಿದೆ ಆದುದರಿಂದ ಜ್ಞಾನವು ಸರ್ವಗತವಿದೆ. ಜ್ಞಾನಮಯರಾಗಿರುವುದರಿಂದ ಗಣಧರಾದಿಗಳಲ್ಲಿ ಪ್ರಧಾನರಾದ ಸರ್ವಜ್ಞ ಭಗವಂತರು ಸರ್ವಗತರಿದ್ದಾರೆ ಮತ್ತು ಆ ಸರ್ವಜ್ಞ ಭಗವಂತರ ಜ್ಞೇಯರೂಪ ವಿಷಯವಾಗುವುದರಿಂದ ಜಗತ್ತಿನಲ್ಲಿ ಸ್ಥಿತ ಆ ಎಲ್ಲ ಪದಾರ್ಥಗಳು ಸರ್ವಜ್ಞಗತವಿವೆ - ಎಂದು ಹೇಳಲಾಗಿದೆ.

(ಈ ಎರಡೂ ಗಾಥೆಗಳ ಎಲ್ಲ ಟೀಕೆಗಳಲ್ಲಿ ಈ ತಥ್ಯವನ್ನು ವಿಸ್ತಾರದಿಂದ ಸ್ಪಷ್ಟಪಡಿಸಲಾಗಿದೆ ಅದನ್ನು ಮೂಲದಿಂದಲೇ ಅವಲೋಕನ ಮಾಡುವುದು.) ಅದರಿಂದ ಯಾವುದೋ ನಯದಿಂದ ಸರ್ವ ಸಂಸಾರದಲ್ಲಿ ಘಟ, ಪಟ, ಭೂಮಿ, ಪವನ, ಜಲದಲ್ಲಿ ಆತ್ಮನಿದ್ದಾನೆ ಎಂಬ ಕಥನವು ಪೂರ್ಣವಾಯಿತು.

ಈಗ ಅವತಾರವಾದಿಗಳ ವಚನವನ್ನು ಯಾವುದೋ ಅಪೇಕ್ಷೆಯಿಂದ ಸತ್ಯವಿದೆ ಎಂಬುದನ್ನು ತಿಳಿಸಿಕೊಡುತ್ತಾರೆ-

ಅಯ್ಯಾ ಅವತಾರವಾದಿಗಳೇ ! ನೀವು ಮುಕ್ತ ಆತ್ಮನ ಅವತಾರ ಮನ್ನಿಸುವಿರಿ; ಆದರೆ ಆ ಮೋಕ್ಷವು ಎರಡು ಪ್ರಕಾರದ್ದಿದೆ.

೧) ಸಾಲೋಕ ಮೋಕ್ಷ - ಮುಗ್ಧ ಜೀವರುಗಳು ಈ ಸಾಲೋಕ ಮೋಕ್ಷವನ್ನೇ ಮೋಕ್ಷವೆಂದು ಹೇಳುತ್ತಾರೆ. ಅದು ಈ ನಾಲ್ಕುಗತಿಗಳ ಸಮಾನವೇ ಜನ್ಮ, ಮರಣ, ದುಃಖಸಹಿತವಿರುತ್ತದೆ. ಅಲ್ಲಿ ಇಂದ್ರಿಯಜನ್ಯ ಸುಖವು ಬಹಳಷ್ಟು ಇರುತ್ತದೆ. ಒಂದು ಶರೀರದಲ್ಲಿ ಜೀವನವು ಬಹುಕಾಲದ್ದಿರುತ್ತದೆ - ಸಾಗರೋಪಮ ಪರ್ಯಂತ, ಅಸಂಖ್ಯಾತ ವರ್ಷಗಳವರೆಗೆ ಜೀವನವಿರುವಂಥ, ಇಂದ್ರಲೋಕವನ್ನು ಮುಗ್ಧ ಜೀವರುಗಳು ಮೋಕ್ಷವೆಂದು ಹೇಳುತ್ತಾರೆ. ಇದುವೇ ಸಾಲೋಕ ಮೋಕ್ಷವಿದೆ.

ಇಲ್ಲಿ ಯಾರೋ ಸಂದೇಹ ವ್ಯಕ್ತಪಡಿಸುತ್ತಾರೆ - ದೇವಲೋಕವನ್ನು ಮೋಕ್ಷವೆಂದು ಮುಗ್ಧ ಜೀವರುಗಳು ಯಾವ ಅಪೇಕ್ಷೆಯಿಂದ ಮನ್ನಿಸಿದ್ದಾರೆ ?

**ಉತ್ತರ** - ಎಲೈ ಭವ್ಯನೇ ! ಮೋಕ್ಷವು ಕರ್ಮರಹಿತವಿದೆ ಅಲ್ಲಿ ವಿರಾಜಮಾನರಿರುವಂಥ ಸಿದ್ಧರು ಮಹಾಸುಖಿಗಳಿದ್ದಾರೆ. ಅವರು ಎಂದೂ ಮರಣ ಹೊಂದುವುದಿಲ್ಲ. ಅದರಿಂದ ಆ ಮುಕ್ತ ಜೀವರುಗಳನ್ನು ಅಮರರೆಂದು ಹೇಳಲಾಗುತ್ತದೆ. ಇಂದ್ರ ಲೋಕದಲ್ಲಿ ದೇವಗಳು ಕೂಡ ದೀರ್ಘಆಯುವುಳ್ಳವರಿರುತ್ತಾರೆ ಅವರು ಮನುಷ್ಯರ ಅಪೇಕ್ಷೆಯಿಂದ ಬಹಳಷ್ಟು ಅಧಿಕ ಕಾಲದವರೆಗೆ ಜೀವಿಸುತ್ತಾರೆ. ಮನುಷ್ಯರ ಅಸಂಖ್ಯಾತ ಭವಗಳು ದೊಡ್ಡ ದೊಡ್ಡ ಆಯುವಿನವು ಪೂರ್ಣವಾಗಿ ಹೋದರೂ ದೇವನ ಒಂದು ಭವವು ಪೂರ್ಣವಾಗುವುದಿಲ್ಲ. ದೇವನ ಆಯುಕರ್ಮವು ದೊಡ್ಡದಿರುತ್ತದೆ; ಆದುದರಿಂದ ಶಾಸ್ತ್ರಗಳಲ್ಲಿ ದೇವಗಳಿಗೂ ಅಮರರೆಂಬ ಹೆಸರು ಇದೆ. ಮತ್ತು ಸಿದ್ಧರ ಹೆಸರೂ ಅಮರವಿದೆ. ಈ ಅಮರತ್ವದ ಕಲ್ಪನೆಯಿಂದ ಮುಗ್ಧ ಜೀವರುಗಳು ದೇವಲೋಕವನ್ನು ಮೋಕ್ಷವೆಂದು ಮನ್ನಿಸಿದ್ದಾರೆ. ಬಾಲಬುದ್ಧಿ ಜ್ಞಾನಿಗಳು ಇದೇ ಕಾರಣದಿಂದ ಇಂದ್ರನನ್ನು ಭಗವಂತನೆಂದು ತಿಳಿದು ಹೇಳುವುದೇನೆಂದರೆ - ಆ ಮೋಕ್ಷದಲ್ಲಿ ಬಹಳಷ್ಟು ರತ್ನಮಯ ಮಹಲುಗಳಿವೆ ಅಲ್ಲಿ ಭಗವಂತರು ವಿರಾಜಿಸುತ್ತಾರೆ, ದೊಡ್ಡ ದೊಡ್ಡ ದೇವ, ದಾನವರು ಭಗವಂತರ ಹತ್ತಿರ ಯಾವಾಗಲೂ ಕೈಜೋಡಿಸಿ ನಿಂತಿರುತ್ತಾರೆ, ಅನೇಕ ಅಪ್ಸರೆಯರು ಭಗವಂತರ ಎದುರಿಗೆ ನೃತ್ಯ ಗಾಯನ ಮಾಡುತ್ತಿರುತ್ತಾರೆ - ಹೀಗೆ ಭಗವಂತರು ಅನೇಕ ಸುಖಗಳಿಂದ ಕೂಡಿರುತ್ತಾರೆ.

ಇದೇ ಪ್ರಕಾರ ಇನ್ನೂ ಅನೇಕ ಪ್ರಕಾರದ ಬಹಳಷ್ಟು ಪಂಚೇಂದ್ರಿಯ ಜನಿತ ಸುಖಗಳ ಅಧಿಕತೆಯನ್ನು ತಿಳಿದುಕೊಂಡು ಇದನ್ನೇ ಮೋಕ್ಷವೆಂದು ಹೇಳುತ್ತಾರೆ. ಈ ಸಾಲೋಕ ಮೋಕ್ಷದ ಅಧಿಪತಿಯು ಇಂದ್ರನಿದ್ದಾನೆ.

ಅದರಿಂದ ಮುಗ್ಧ ಜನರು ಇಂದ್ರನನ್ನು ಭಗವಂತನೆಂದು ಮನ್ನಿಸುತ್ತಾರೆ. ಇಂದ್ರ ಲೋಕವನ್ನು ಮೋಕ್ಷವೆಂದು ಮನ್ನಿಸುತ್ತಾರೆ. ಎಲೈ ಅವತಾರವಾದೀ ಭವ್ಯನೇ ! ಈ ಸಾಲೋಕ ಮೋಕ್ಷದಿಂದ ಇಂದ್ರಾದಿಗಳು ಸತ್ತು ಅವತಾರ (ಜನ್ಮ) ತಗೆದುಕೊಳ್ಳುತ್ತಾರೆ. ಈ ಅಪೇಕ್ಷೆಯಿಂದ ಅವತಾರವಾದಿಗಳ ಮತವು ಪ್ರಗಟವಾಯಿತು.

೨) ನಿರಾಲೋಕ ಮೋಕ್ಷ - ಈ ಮೋಕ್ಷವು ಅಷ್ಟ ಕರ್ಮಗಳ ನಾಶದಿಂದ ಶುದ್ಧ ಪರಿಣತಿಯ ಧಾರಕರಾದ ಯತೀಶ್ವರರಿಗೆ ಆಗುತ್ತದೆ. ಯಾವಾಗ ಈ ಆತ್ಮನು ಕರ್ಮಗಳನ್ನು ನಾಶ ಮಾಡಿ ಶರೀರವನ್ನು ಬಿಟ್ಟುಕೊಟ್ಟು ಮುಕ್ತನಾಗುತ್ತಾನೆ ಆಗ ಪುನಃ ಸಂಸಾರದಲ್ಲಿ ಅವತರಿಸುವುದಿಲ್ಲ ಇದರ ಹೆಸರು ನಿರಾಲೋಕ ಮೋಕ್ಷವಿದೆ. ಈ ಮೋಕ್ಷದಲ್ಲಿ ಜನ್ಮ-ಮರಣಗಳಿಲ್ಲ, ಇಂದ್ರಿಯಜನಿತ ಸುಖವಿಲ್ಲ, ಶರೀರದ ಪೌದ್ಗಲಿಕ ಆಕಾರವಿರುವುದಿಲ್ಲ, ನಿರಂಜನ, ನಿರಾಕಾರ, ನಿರ್ದೋಷ, ಶುದ್ಧ ಸಿದ್ಧ ಭಗವಂತರಿದ್ದಾರೆ. ಅದನ್ನು ನಿರಾಲೋಕ ಮೋಕ್ಷವೆಂದು ತಿಳಿಯುವುದು. ಎಲೈ ಅವತಾರವಾದೀ ಭವ್ಯನೇ ! ಇದು ಶುದ್ಧ ಮೋಕ್ಷವಿದೆ ಇಲ್ಲಿಂದ ಅವತಾರವಾಗುವುದಿಲ್ಲವೆಂದು ತಿಳಿಯುವುದು. ನಿನ್ನ ಮತದ ವಚನವು ಯಾವ ಸಾಲೋಕ ಮೋಕ್ಷ ಎಂದರೆ ಇಂದ್ರಲೋಕವಿದೆ ಅಲ್ಲಿಂದ ಅವತಾರವಾಗುತ್ತದೆ ಎಂದು ತಿಳಿಯುವುದು.

ಈ ಪ್ರಕಾರ ಅವತಾರವಾದಿಯ ಮೋಕ್ಷದಿಂದ ಅವತಾರ ಕಥನವು ಪೂರ್ಣವಾಯಿತು.

ಈಗ ಕ್ಷಣಿಕಮತಿ ನಯದ ಸ್ಥಾಪನೆ ಮಾಡುತ್ತಾರೆ - ಇದು ಕೂಡ ಏಕಾಂತ ನಯದಿಂದಂತೂ ಅಸತ್ಯವಿದೆ; ಆದರೆ ಯಾವುದೋ ಅಪೇಕ್ಷೆಯಿಂದ ಆತ್ಮನು ಕ್ಷಣಭಂಗುರನಿದ್ದಾನೆ ಎಂದು ಹೇಳಲಾಗುತ್ತದೆ - ಎಲೈ ಕ್ಷಣಿಕಮತವಾದೀ ಭವ್ಯನೇ! ನೀನು ಒಂದು ಶರೀರದಲ್ಲಿ ಅನೇಕ ಆತ್ಮರುಗಳು ಕ್ಷಣ ಕ್ಷಣಕ್ಕೆ ಬರುತ್ತಾರೆಂದು ಮನ್ನಿಸಿರುವೆ ಈ ನಿನ್ನ ಮತವನ್ನು ನಿನಗೆ ಪ್ರತ್ಯಕ್ಷ ಅಸತ್ಯವೆಂದು ತೋರಿಸಿಕೊಡಲಾಯಿತು, ಅದರಿಂದ ನಿನ್ನ ಈ ಮನ್ನಣೆಯು ಖಂಡಿತವಾಗಿ ಹೋಗಿದೆ. ಆದರೆ ಯಾವ ನಯದಿಂದ ಆತ್ಮನು ಕ್ಷಣಭಂಗುರನಿದ್ದಾನೆ, ಅದನ್ನು ನಿನಗೆ ಜಿನ ಆಜ್ಞೆಯ ಅನುಸಾರ ಹೇಳಲಾಗುತ್ತದೆ ಆಲಿಸು-

ಒಂದು ಶರೀರದಲ್ಲಿ ವಾಸಿಸುತ್ತ ಈ ಜೀವನು ತನ್ನ ವಿಶೇಷ ಆಯುಕರ್ಮದ ಯೋಗದಿಂದ ಅನೇಕ ಅಲ್ಪಾಯುವಿನ ಧಾರಕ ಮನುಷ್ಯ ತಿರ್ಯಂಚಗಳ ಪರ್ಯಾಯಗಳು ನಷ್ಟವಾಗಿ ಹೋಗುವುದನ್ನು ಕಂಡು ಈ ನಿಕಟ ಸಂಸಾರಿಯು ಜೀವಗಳ ಪರ್ಯಾಯಗಳು ನಷ್ಟವಾಗುವುದನ್ನು ಕಂಡು ಉದಾಸನಾಗುತ್ತ ವಿಚಾರ ಮಾಡುತ್ತಾನೆ - ನಾನು ನೋಡುತ್ತಿದ್ದಂತೆಯೇ ಇಷ್ಟು ಪರ್ಯಾಯಗಳು ಉತ್ಪನ್ನವಾದವು, ಇಷ್ಟು ಪರ್ಯಾಯಗಳು ನಷ್ಟವಾಗಿ ಹೋದವು, ಅದರಿಂದ ಸಂಸಾರದಲ್ಲಿ ಜೀವರುಗಳ ಪರ್ಯಾಯಗಳು ಕ್ಷಣಭಂಗುರವಿವೆ. ಜಗತ್ತಿನ ಜೀವರುಗಳ ಜೀವನವು ಇಷ್ಟು ಕ್ಷಣಭಂಗುರವಿದೆ; ನನ್ನ ಪರ್ಯಾಯವು ಕೂಡ ಹೀಗೆಯೇ ಕ್ಷಣಭಂಗುರವೆಂದು ತಿಳಿದುಕೊಂಡು ಉದಾಸನಾಗಿ ರಾಜ್ಯ ಸಂಪದವನ್ನು ತ್ಯಜಿಸಿ ದೀಕ್ಷೆಯ ಅಂಗೀಕಾರ ಮಾಡುತ್ತಾನೆ. ಅದರಿಂದ ಇಂಥ ಕ್ಷಣಭಂಗುರತೆಯನ್ನು ತಿಳಿಯುವುದು ಕಲ್ಯಾಣಕರವಿದೆ.

ಆತ್ಮನು ಒಂದು ಶರೀರದಲ್ಲಿಯೇ ಇರುವುದಿಲ್ಲ. ಕೆಲವೊಮ್ಮೆ ದೇವನಾಗಿ ಸಾಯುತ್ತಾನೆ, ಕೆಲವೊಮ್ಮೆ ಮನುಷ್ಯನಾಗಿ ಸಾಯುತ್ತಾನೆ, ಕೆಲವೊಮ್ಮೆ ಪಶುವಾಗಿ ಸಾಯುತ್ತಾನೆ, ಕೆಲವೊಮ್ಮೆ ನಾರಕಿಯಾಗಿ ಸಾಯುತ್ತಾನೆ -ಈ ಪ್ರಕಾರ ನಾಲ್ಕು ಗತಿಗಳಲ್ಲಿ ಅನಾದಿ ಕಾಲದಿಂದ ಪರಿಭ್ರಮಣ ಮಾಡುತ್ತ ಬರುತ್ತಿದ್ದಾನೆ, ಎಲ್ಲಿಯೂ ಸ್ಥಿರನಾಗಿ ಉಳಿಯುವುದಿಲ್ಲ. ಸ್ಥಿರನಾಗಿ ಉಳಿಯುವಂಥ ಸ್ಥಾನವಂತೂ ಒಂದು ಮೋಕ್ಷವಿದೆ. ಎಂದು ಯೋಚನೆ ಮಾಡಿ ಸಂಸಾರದಶೆಯನ್ನು ಕ್ಷಣಭಂಗುರವೆಂದು ತಿಳಿದುಕೊಂಡು ಸಂಸಾರದಿಂದ ಉದಾಸನಾಗಿ ಪರಿಗ್ರಹಗಳ ತ್ಯಾಗ ಮಾಡಿ ಮೋಕ್ಷಾಭಿಲಾಷಿಯು ತನ್ನ ಕಲ್ಯಾಣ ಮಾಡಿಕೊಳ್ಳುತ್ತಾನೆ. ಅದರಿಂದ ಎಲೈ ಭವ್ಯ ಕ್ಷಣಿಕಮತವಾದಿಯೇ ! ನೀನು ಸಂಸಾರದಲ್ಲಿ ಆತ್ಮನನ್ನಂತೂ ಸದೈವ ಶಾಶ್ವತವೆಂದು ತಿಳಿ. ಆದರೆ ಪರ್ಯಾಯವು ಚತುರ್ಗತಿ ರೂಪವಿದೆ. ಅದನ್ನು ಕ್ಷಣಭಂಗುರವೆಂದು ತಿಳಿ. ಇಂಥ ಶ್ರದ್ಧೆ ಮಾಡಿದರೆ ನಿನ್ನದು ಕಲ್ಯಾಣವಾಗುವದು.

ಈ ಪ್ರಕಾರ ಕ್ಷಣಿಕಮತಿಗಳ ಭ್ರಮೆಯ ನಿವಾರಕವಾದ ಕಥನವು ಪೂರ್ಣವಾಯಿತು.

ಈಗ ಯಾರೋ ಕರ್ತಾವಾದಿಗಳು 'ಆತ್ಮನನ್ನು ಭಗವಂತನು ಉತ್ಪನ್ನ ಮಾಡುತ್ತಾನೆ.' - ಎಂದು ಮನ್ನಿಸುತ್ತಾರೆ. ಅವರ ಶ್ರದ್ಧೆಯನ್ನಂತೂ ಮೊದಲೇ ಖಂಡಿತಗೊಳಿಸಲಾಗಿದೆ. ಆದರೆ ಕರ್ತಾತನವು ಕೂಡ ವಸ್ತುವಿನ ಒಂದು ಅಂಗವಿದೆ; ಅದರಿಂದ ಜಿನಾಜ್ಞೆಯ ಅನುಸಾರ ಕರ್ತಾ ಸ್ವಭಾವವನ್ನು ಹೇಳುತ್ತೇವೆ. ಎಲೈ ಕರ್ತಾವಾದೀ ಭವ್ಯಾತ್ಮನೇ ! ನೀನು ನವೀನ ಆತ್ಮನ ಕರ್ತೃವು ಭಗವಂತನೆಂದು ಮನ್ನಿಸಿರುವೆ - ಈ ನಿನ್ನ ಏಕಾಂತ ಮನ್ನಣೆಯು ಅಸತ್ಯವಿದೆ; ಆದರೆ ಕರ್ತಾ ಶಬ್ದವು ಯಾವುದೋ ವಸ್ತುವಿನ ವಾಚ್ಯವಿದೆ. ಅದರ ಆಗ್ರಹ ಪಡೆದು ಮುಗ್ಧ ಜೀವರುಗಳು ಯಾವನೋ ಭಗವಂತನನ್ನು ಕರ್ತೃವೆಂದು ಮನ್ನಿಸಿಕೊಂಡಿದ್ದಾರೆ. ಸಾಂಸಾರಿಕ ಜೀವರುಗಳ ಪರ್ಯಾಯಗಳ ಕರ್ತೃವು ಭಗವಂತನಿದ್ದಾನೆಂದು ಹೇಳುತ್ತಾರೆ ಆದರೆ ಹಾಗಂತೂ ಇಲ್ಲ.

ಈಗ ಸಂಸಾರಿ ಜೀವರುಗಳ ಪರ್ಯಾಯಗಳ ಕರ್ತೃವನ್ನು ತಿಳಿಸಿಕೊಡುತ್ತಾರೆ - ಕರ್ತೃವಿನಲ್ಲಿ ೧) ಭಾವಕರ್ಮದ ಕರ್ತೃ ೨) ದ್ರವ್ಯಕರ್ಮದ ಕರ್ತೃವೆಂದು ಎರಡು ಭೇದಗಳಿವೆ. ಭಾವಕರ್ಮಗಳ ಕರ್ತೃವಂತೂ ಈ ಸಂಸಾರಿ ಆತ್ಮನಿದ್ದಾನೆ. ತನ್ನ ರಾಗ-ದ್ವೇಷ ಭಾವಗಳಿಂದ ಶುಭಾಶುಭ ಪರಿಣಾಮ ಮಾಡಿ ಚತುರ್ಗತಿಗಳಲ್ಲಿ ಉತ್ಪತ್ತಿಗೆ ಯೋಗ್ಯವಾದ ವಿಕಲ್ಪಗಳನ್ನು ಮಾಡುತ್ತಾನೆ, ಅದು ಭಾವಕರ್ಮವಿದೆ ಹಾಗೂ ಆ ಭಾವಕರ್ಮಗಳ ಅನುಸಾರ ಪ್ರವರ್ತಿತವಾಗುವಂಥ ಲೋಕಸ್ಥಿತ ಜ್ಞಾನಾವರಣಾದಿ ಕರ್ಮರೂಪ ಪುದ್ಗಲ ಸ್ಕಂಧ ದ್ರವ್ಯಕರ್ಮಗಳಿವೆ. ಆ ದ್ರವ್ಯಕರ್ಮಗಳ ಯೋಗದಿಂದ ಆತ್ಮನು ದೇವ, ಮನುಷ್ಯ, ನಾರಕ, ಪಶು, ಏಕೇಂದ್ರಿಯ, ವಿಕಲೇಂದ್ರಿಯ, ಪಂಚೇಂದ್ರಿಯ ಮೊದಲಾದವುಗಳ ಉತ್ಪತ್ತಿರೂಪ ಆಕಾರ, ಅನೇಕ ಪ್ರಕಾರದ ಶುಭಾಶುಭ ಶರೀರಗಳನ್ನು ಪ್ರಾಪ್ತ ಮಾಡಿಕೊಳ್ಳುತ್ತಾನೆ ಅವುಗಳ ಕರ್ತೃವು ದ್ರವ್ಯಕರ್ಮವಿದೆ.

ಎಂಥ ಎಂಥ ಆಕಾರವು ಶರೀರದ್ದಿರುತ್ತದೆ ಅಂಥ ಅಂಥದು ಆತ್ಮನ ಆಕಾರವಿರುತ್ತದೆ. ಅದರ ಅನುಸಾರವಾಗಿಯೇ ಆತ್ಮನು ಸುಖ-ದುಃಖಗಳ ಭೋಕ್ತೃವಾಗುತ್ತಾನೆ. ಎಲೈ ಕರ್ತಾವಾದಿಯೇ ! 'ಈ ಶರೀರ ಹಾಗೂ ನಾಲ್ಕು ಗತಿಗಳ ಕರ್ತೃವಂತೂ ಪುದ್ಗಲ ದ್ರವ್ಯಕರ್ಮವಿದೆ. ಭಾವಕರ್ಮವಂತೂ ರಾಗ-ದ್ವೇಷರೂಪವಿದೆ, ಅದರ ಕರ್ತೃವು ಆತ್ಮನಿದ್ದಾನೆ. ಎಂಥ ಎಂಥ ಭಾವಕರ್ಮದ ಉಪಾರ್ಜನೆಯನ್ನು ಆತ್ಮನು ಮಾಡುತ್ತಾನೆ, ಅಂಥ ಅಂಥ ಶುಭಾ-ಶುಭ ಶರೀರಾಕಾರವಾಗುತ್ತಾನೆ; ಅದರಿಂದ ಅದರ ಕರ್ತೃವು ಆತ್ಮನೇ ಇದ್ದಾನೆ'- ಎಂದು ತಿಳಿಯುವುದು. ಭಗವಂತರು ಯಾವುದರ ಕರ್ತೃಗಳಿಲ್ಲ ಅಂತೆಯೇ ಧರ್ಮಾತ್ಮರುಗಳು ಪಾಪ ಕಾರ್ಯಗಳ ಕರ್ತಾತನವನ್ನು ತ್ಯಾಗ ಮಾಡಿ ಶುಭ ಕಾರ್ಯಗಳ ಕರ್ತೃವಾಗುವುದು ಯೋಗ್ಯವಿದೆ.

ಈ ಪ್ರಕಾರ ಕರ್ತಾವಾದಿಗಳ ಏಕಾಂತನಯವನ್ನು ದೂರಮಾಡಿ ಜೀವಾದಿ ತತ್ತ್ವಗಳ ಕರ್ತಾತನವನ್ನು ಯಾವುದೋ ನಯದಿಂದ ತಿಳಿಸಿಕೊಡಲಾಯಿತು.

ಈಗ ನಾಸ್ತಿಕಮತಿಗಳು ಪೂರ್ಣರೂಪದಿಂದ ಜೀವದ ಅಭಾವ ಮನ್ನಿಸುತ್ತಾರೆ, ಅವರುಗಳ ಏಕಾಂತವನ್ನು ಬಿಡಿಸಿ ಆತ್ಮನದು ಯಾವುದೋ ನಯದಿಂದ ನಾಸ್ತಿಯೂ ಕೂಡ ಇದೆ ಎಂಬ ಕಥನವನ್ನು ಹೇಳುತೇವೆ - ಎಲೈ ನಾಸ್ತಿಕ ಮತಿಯೇ! ನಿನ್ನ ಮತವು ಪೂರ್ಣ ರೂಪದಿಂದ ಜೀವದ ನಾಸ್ತಿಯನ್ನು ಮನ್ನಿಸುತ್ತದೆ ;ಆದರೆ ಈ ಏಕಾಂತವಂತೂ ಅಸತ್ಯವಿದೆ ಜೀವದ್ರವ್ಯದ ನಾಶವಂತೂ ಎಂದೂ ಆಗುವುದಿಲ್ಲ ಆದಾಗ್ಯೂ ಯಾವ ಅಪೇಕ್ಷೆಯಿಂದ ಜೀವದ ನಾಸ್ತಿ ಇದೆ, ಆ ಉಪದೇಶವನ್ನು ಜಿನಭಾಷಿತ ತತ್ತ್ವಗಳ ಅನುಸಾರ ನಿನಗೆ ತಿಳಿಸಿಕೊಡುತ್ತೇವೆ. ನೀನು ಮನಸ್ಸನ್ನು ತೊಡಗಿಸಿ ಆಲಿಸು.

ಎಲೈ ಭವ್ಯನೇ ! ಜೀವವು ದ್ರವ್ಯಾರ್ಥಿಕನಯದಿಂದಂತೂ ಸದೈವ ಶಾಶ್ವತವಿದೆ. ದ್ರವ್ಯ-ವಸ್ತುವಿನ ನಾಶವೆಂದೂ ಆಗುವುದಿಲ್ಲ ಆದರೆ ದೇವ, ನರಕಾದಿ ನಾಲ್ಕುಗತಿಗಳ ರೂಪದ ಪರ್ಯಾಯಗಳು ನಾಸ್ತಿರೂಪವಿವೆ. ಪರ್ಯಾಯದ ನಾಶದಿಂದ ಜೀವದ ನಾಶವೆಂದು ಹೇಳುವುದು ವ್ಯವಹಾರ ನಯವಿದೆ. ಈ ವ್ಯವಹಾರ ನಯದಿಂದ ಪರ್ಯಾಯದ

ನಾಶವಾದ ಮೇಲೆ ಈ ದೇವ ಜೀವನು ಸತ್ತು ಹೋದನು, ಈ ನಾರಕಿ ಜೀವನು ಸತ್ತು ಹೋದನು, ಈ ಮನುಷ್ಯ ಜೀವನು ಸತ್ತು ಹೋದನು, ಈ ತಿರ್ಯಂಚ ಜೀವನು ಸತ್ತು ಹೋದನು ಎಂದು ಲೋಕದಲ್ಲಿ ಹೇಳುತ್ತಾರೆ. ಪರ್ಯಾಯದ ನಾಶದಿಂದ ಜೀವದ ನಾಸ್ತಿ ಹೇಳುತ್ತಾರೆ ಅದು ಪರ್ಯಾಯಾರ್ಥಿಕ ನಯದಿಂದಯೆಂದು ತಿಳಿಯುವುದು.

ಈ ಪ್ರಕಾರ ನಾಸ್ತಿಕ ನಯವನ್ನು ಸರ್ವ ಪ್ರಕಾರದಿಂದ ಅಸತ್ಯವೆಂದು ತಿಳಿಸಿ ಕೊಟ್ಟು ಯಾವುದೋ ನಯದಿಂದ ನಾಸ್ತಿ ಹೇಳುವುದರ ಕಥನ ಮಾಡಲಾಯಿತು.

ಈಗ ಯಾವುದೋ ಮತದವರು ಮುಕ್ತ ಆತ್ಮನನ್ನು ಪೂರ್ಣತಃ ಜ್ಞಾನರಹಿತನೆಂದು ಮನ್ನಿಸುತ್ತಾರೆ. ಅವರುಗಳ ಏಕಾಂತವನ್ನು ದೂರಮಾಡಿ ಯಾವುದೋ ನಯದಿಂದ ಮುಕ್ತ ಜೀವನು ಜ್ಞಾನರಹಿತನೆಂದು ತಿಳಿಸಿಕೊಡುತ್ತೇವೆ.

ಎಲೈ ಅಜ್ಞಾನವಾದಿ ಭವ್ಯ ಆತ್ಮನೇ ! ನೀನು ಪೂರ್ಣರೂಪದಿಂದ ಮುಕ್ತ ಆತ್ಮನನ್ನು ಜ್ಞಾನರಹಿತನೆಂದು ಮನ್ನಿಸಿರುವೆ. ಆತ್ಮನಲ್ಲಿ ಪರಪದಾರ್ಥಗಳನ್ನು ನೋಡುವ, ತಿಳಿಯುವ ಶಕ್ತಿಯನ್ನು ಉಪಾಧಿಯೆಂದು ಹೇಳುತ್ತಿರುವೆ. ಯಾವಾಗ ಪರಪದಾರ್ಥಗಳನ್ನು ನೋಡುವ, ತಿಳಿಯುವ ಶಕ್ತಿಯು ನಾಶವಾಗುತ್ತದೆ, ಆಗ ಜೀವನಿಗೆ ಮೋಕ್ಷವಾಗುತ್ತದೆ- ಹೀಗೆ ನಿನ್ನದು ಏಕಾಂತಮತವಿದೆ; ಅದರ ಅಸತ್ಯತೆಯನ್ನಂತೂ ಮೊದಲೇ ನಿನಗೆ ತಿಳಿಸಿಕೊಟ್ಟಿದ್ದೇವೆ.

ಈಗ 'ಮುಕ್ತ ಆತ್ಮನು ಜ್ಞಾನರಹಿತನಿದ್ದಾನೆ'- ಈ ವಚನವು ಯಾವ ಅಪೇಕ್ಷೆಯಿಂದ ಇದೆ - ಅದನ್ನು ನಿನಗೆ ಹೇಳುತ್ತೇವೆ, ನೀನು ಸ್ಥಿರಚಿತ್ತದಿಂದ ಆಲಿಸು ! ನೋಡುವುದು ತಿಳಿಯುವುದಂತೂ ಜೀವದ ಸ್ವಭಾವವಿದೆ, ಅದರಿಂದ ಜ್ಞಾನದ ಅಭಾವವಾದ ಮೇಲೆಯಂತೂ ಜೀವದ ಅಭಾವವಾಗಿ ಹೋಗುವುದು; ಆದರೆ ಎಷ್ಟು ಇಂದ್ರಿಯಜನಿತ ಪದಾರ್ಥಗಳನ್ನು ನೋಡುವ, ತಿಳಿಯುವಿಕೆ ಇದೆ, ಅದು ಆತ್ಮನಲ್ಲಿ ಉಪಾಧಿಯಿದೆ. ಅದು ಎಲ್ಲಿಯವರೆಗೆ ಇದೆ ಅಲ್ಲಿಯವರೆಗೆ ಆತ್ಮನಿಗೆ ಮೋಕ್ಷವಾಗುವುದಿಲ್ಲ. ಇಂದ್ರಿಯಜನಿತ ಜ್ಞಾನದ ಅಭಾವವಾದ ಮೇಲೆ ಕೇವಲಜ್ಞಾನವಾಗುವುದು, ಆಗ ಜೀವನು ಮುಕ್ತನಾಗುವನು. ಇಂದ್ರಿಯಜನಿತ ಉಪಾಧಿಜ್ಞಾನವಂತೂ ಇಂದ್ರಿಯ ಜ್ಞಾನವಿದೆ. ಅದು ಎಲ್ಲಿಯವರೆಗೆ ಇರುತ್ತದೆ ಅಲ್ಲಿಯವರೆಗೆ ಪದಾರ್ಥಗಳಲ್ಲಿ ರಾಗ-ದ್ವೇಷಗಳಾಗುತ್ತವೆ.

ಯಾವಾಗ ಇಂದ್ರಿಯ ಜ್ಞಾನವು ನಾಶವಾಗಿ ಕೇವಲಜ್ಞಾನವಾಗುತ್ತದೆ, ಅದುವೇ ಅತೀಂದ್ರಿಯ ಜ್ಞಾನವಿದೆ ಮತ್ತು ಅತೀಂದ್ರಿಯ ಜ್ಞಾನವು ಆತ್ಮನ ಸ್ವಭಾವವಿದೆ. ಪದಾರ್ಥಗಳಲ್ಲಿ ರಾಗ-ದ್ವೇಷಗಳು ಆಗದಿರುವುದರಿಂದ ಅದು ಪ್ರಗಟವಾಗುತ್ತದೆ. ಆದುದರಿಂದ ಎಲೈ ಭವ್ಯನೇ ! ಅಜ್ಞಾನವಾದಿಯೇ ! ಆಲಿಸು - ಮುಕ್ತಾತ್ಮರು ಸರ್ವಜ್ಞರು ಲೋಕಾಲೋಕವನ್ನು ತಿಳಿಯುವಂಥವರು, ಎಲ್ಲದರ ಆಂತರ್ಯವನ್ನು ಅರಿಯುವಂಥವರು, ಅಂತರ್ಯಾಮಿ ಭಗವಂತರ ಜ್ಞಾನವು ಅತೀಂದ್ರಿಯವಿದೆ ಅದು ಕರ್ಮಬಂಧನರಹಿತವಿದ್ದು ಅದಂತೂ ಮುಕ್ತ ಜೀವರುಗಳ ಸ್ವಭಾವವಿದೆಯೆಂದು ತಿಳಿಯುವುದು. ಮುಕ್ತ ಆತ್ಮನಲ್ಲಿ ಇಂದ್ರಿಯಜ್ಞಾನವಿರುವುದಿಲ್ಲ. ಈ ಇಂದ್ರಿಯ ಜ್ಞಾನವು ವಿನಾಶಶೀಲವಿದೆ, ಚಂಚಲವಿದೆ, ಹೀನವಿದೆ, ಕರ್ಮಬಂಧಮಾಡಿಸುವಂಥದ್ದಿದೆ. ಈ ಇಂದ್ರಿಯ ಜ್ಞಾನರಹಿತರನ್ನು ಮುಕ್ತ ಆತ್ಮರುಗಳೆಂದು ತಿಳಿಯುವುದು. ಈ ಅಪೇಕ್ಷೆಯಿಂದ ಮುಕ್ತ ಆತ್ಮನನ್ನು ಜ್ಞಾನರಹಿತವೆನ್ನಲಾಗಿದೆ.

ಈ ಪ್ರಕಾರ ಮುಕ್ತ ಆತ್ಮನು ಯಾವ ನಯದಿಂದ ಜ್ಞಾನರಹಿತನಿದ್ದಾನೆ ಎಂಬುದರ ಕಥನ ಮಾಡಲಾಯಿತು.

ಈಗ ಯಾವುದೋ ಮತದವರು ಜೀವನು ಹೇಗೆ ಸಾಯುತ್ತಾನೆ ಹಾಗೆಯೇ ಉತ್ಪನ್ನನಾಗುತ್ತಾನೆಂದು ಮನ್ನಿಸುತ್ತಾರೆ. ಅವರ ಏಕಾಂತಮತವನ್ನು ಖಂಡಿತಗೊಳಿಸಿ, ಯಾವ ಅಪೇಕ್ಷೆಯಿಂದ ಹೇಗೆ ಸಾಯುತ್ತಾನೆ ಹಾಗೆಯೇ ಉತ್ಪನ್ನನಾಗುತ್ತಾನೆ ಎಂಬುದನ್ನು ಈಗ ಹೇಳುತ್ತೇವೆ - ಎಲೈ ಸ್ಥಿರವಾದಿಯೇ ! ನಿನ್ನ ಮತ ಮತ್ತು ನಿನ್ನ ನಯವಂತೂ ಅಸತ್ಯವಿದೆ ಎಂಬುದನ್ನು ನಿನಗೆ ಮೊದಲೇ ತಿಳಿಸಿ ಕೊಟ್ಟಿದ್ದೇವೆ ಈಗ ಯಾವ ಅಪೇಕ್ಷೆಯಿಂದ ನಿನ್ನ ವಚನಗಳು ಸತ್ಯವಿವೆ ಎಂಬುದನ್ನು ಹೇಳುತ್ತೇವೆ, ಅದನ್ನು ಆಲಿಸು - ಎಂಥ ಪರ್ಯಾಯವನ್ನು ಬಿಡುತ್ತಾನೆ ಅಂಥದೇ ಪರ್ಯಾಯದಲ್ಲಿ

ಉತ್ಪನ್ನನಾಗುತ್ತಾನೆಂದು ನೀನು ತಿಳಿಯುತ್ತಿರುವೆ ಇಂಥ ಏಕಾಂತ ಮತವು ಪೂರ್ಣವಾಗಿ ಅಸತ್ಯವಿದೆ; ಆದರೆ ಯಾವುದೋ ನಯದಿಂದ ಅವನೇ ಪರ್ಯಾಯ ಧಾರಣ ಮಾಡುತ್ತಾನೆ, ಯಾವುದೋ ನಯದಿಂದ ಬೇರೆ ಪರ್ಯಾಯವನ್ನು ಧಾರಣ ಮಾಡುತ್ತಾನೆ ಅದನ್ನು ನೀನು ಆಲಿಸು-

ಜಿನದೇವರ ಆಜ್ಞೆಯ ಅನುಸಾರ ಯಾವ ಮನುಷ್ಯನು ಸಾಯುತ್ತಾನೆ, ಅವನು ಶುಭಭಾವಗಳಿಂದ ದೇವನಾಗುತ್ತಾನೆ, ಅಶುಭ ಭಾವಗಳಿಂದ ನಾರಕಿ ಮತ್ತು ಪಶುವಾಗುತ್ತಾನೆ ಮತ್ತು ಯಾವುದೋ ಸರಳ ಭಾವದಿಂದ ಮನುಷ್ಯನಿದ್ದವನು ಮನುಷ್ಯನಾಗಿಯೇ ಉತ್ಪನ್ನನಾಗುತ್ತಾನೆ - ಎಂದು ತಿಳಿಯುವುದು. ತಿರ್ಯಂಚವು ಸಾಯುತ್ತದೆ ಅದು ಕೂಡ ಶುಭ ಭಾವಗಳಿಂದ ದೇವ, ಅಶುಭ ಭಾವಗಳಿಂದ ನಾರಕಿ, ಯಾವುದೋ ಸರಳ ಭಾವದಿಂದ ಮನುಷ್ಯ ಹಾಗೂ ಆರ್ತ ಭಾವದಿಂದ ಪಶುವು ಸತ್ತು ಪಶುವಾಗಿಯೂ ಉತ್ಪನ್ನವಾಗುತ್ತದೆ ಎಂದು ತಿಳಿಯುವುದು. ನಾರಕಿಯು ಸತ್ತು ನಾರಕಿಯಾಗುವುದಿಲ್ಲ ಇದು ನಿಶ್ಚಯವಿದೆ, ದೇವನು ಸತ್ತು ದೇವನಾಗುವುದಿಲ್ಲ; ಈ ಪ್ರಕಾರ ಯಾವನು ಹೇಗೆ ಸಾಯುತ್ತಾನೆ ಹಾಗೆಯೇ ಉತ್ಪನ್ನನಾಗುತ್ತಾನೆ ಮತ್ತು ಯಾವುದೋ ಬೇರೊಂದು ಪರ್ಯಾಯದಲ್ಲಿ ಸತ್ತು ಇನ್ನಾವುದೋ ಬೇರೊಂದು ಪರ್ಯಾಯದಲ್ಲಿ ಉತ್ಪನ್ನನಾಗುತ್ತಾನೆ - ಎಂದು ಜಿನಭಗವಂತರು ಹೇಳಿದ್ದಾರೆ.

ನಿನ್ನ ಮತದಲ್ಲಿ ಯಾವನು ಸಾಯುತ್ತಾನೆ ಅವನೇ ಉತ್ಪನ್ನನಾಗುತ್ತಾನೆ ಎಂದು ಹೇಳಿರುವುದು ಅದು ಪರ್ಯಾಯ ನಯದಿಂದ ಸಂಭವಿಸುತ್ತದೆ ಅದನ್ನು ನೀನು ಯಾವನು ಸಾಯುತ್ತಾನೆ, ಅವನೇ ಉತ್ಪನ್ನನಾಗುತ್ತಾನೆ ಅರ್ಥಾತ್ ಆತ್ಮನೇ ಪರ್ಯಾಯವನ್ನು ಬಿಟ್ಟು ಕೊಡುತ್ತಾನೆ - ಮರಣ ಹೊಂದುತ್ತಾನೆ ಮತ್ತು ಅದೇ ಆತ್ಮನು ಅನ್ಯ ಪರ್ಯಾಯದಲ್ಲಿ ಉತ್ಪನ್ನವಾಗುತ್ತಾನೆ. ಇದೇ ಆತ್ಮನು ಅನೇಕ ಪರ್ಯಾಯಗಳಲ್ಲಿ ಮರಣ ಹೊಂದುತ್ತಾನೆ. ಇದೇ ಆತ್ಮನು ತನ್ನ ಭಾವಗಳ ಅನುಸಾರ ಶುಭಾಶುಭ ಗತಿಗಳಲ್ಲಿ ಉತ್ಪನ್ನನಾಗುತ್ತಾನೆ. ಇದೇ ಪ್ರಕಾರ ಅನಂತ ಕಾಲದಿಂದ ಪರಿಭ್ರಮಣ ಮಾಡುತ್ತ ಇದೇ ಆತ್ಮನು ಸತ್ತನು ಮತ್ತು ಇದೇ ಆತ್ಮನು ಉತ್ಪನ್ನನಾದನೆಂದು ತಿಳಿಯುವುದು. ಈ ಅಪೇಕ್ಷೆಯಿಂದ ಯಾವನು ಸಾಯುತ್ತಾನೆ ಅವನೇ ಉತ್ಪನ್ನನಾಗುತ್ತಾನೆಂಬ ವಚನವು ಸತ್ಯವಿದೆ. ಮೋಕ್ಷವಾದನಂತರ ಸಾಯುವುದೂ ಇಲ್ಲ ಮತ್ತು ಉತ್ಪನ್ನನೂ ಆಗುವುದಿಲ್ಲವೆಂದು ತಿಳಿಯುವುದು.

ಈ ಪ್ರಕಾರ ಸ್ಥಿರವಾದಿಗಳ ವಚನಗಳನ್ನು ಯಾವುದೋ ಅಪೇಕ್ಷೆಯಿಂದ ಸತ್ಯವೆಂದು ತಿಳಿಸಿಕೊಡುವ ಕಥನವು ಪೂರ್ಣವಾಯಿತು.

ಈ ಪ್ರಕಾರ ಸುದೃಷ್ಟಿತರಂಗಿಣಿ ಎಂಬ ಹೆಸರಿನ ಗ್ರಂಥದಲ್ಲಿ ಏಕಾಂತವಾದಿಗಳ ಏಕಾಂತನಯ ವಚನಗಳನ್ನು ಅಸತ್ಯಗೊಳಿಸಿ ಯಾವುದೋ ಅಪೇಕ್ಷೆಯಿಂದ ಆ ವಚನಗಳು ಪ್ರಮಾಣವಿವೆಯೆಂದು ತಿಳಿಸಿಕೊಟ್ಟು; ಹೇಗೆ ಅಂಧರ ಆನೆ, ಒಂದೊಂದು ಅಂಗದಿಂದಂತೂ ಆನೆಯಿಲ್ಲ, ಎಲ್ಲರೂ ಅಸತ್ಯರಿದ್ದಾರೆ. ಅಂಗಗಳ ಸಮೂಹವು ಆನೆಯಿದೆ ಯಾವುದೋ ಅಪೇಕ್ಷೆಯಿಂದ ಒಂದು ಅಂಗದಿಂದ ಸತ್ಯವೂ ಇದೆ ಎಂಬ ಕಥನ ಮಾಡುವಂಥ ನಾಲ್ಕನೆಯಪರ್ವವು ಪೂರ್ಣವಾಯಿತು.

★★★★★

ಯದ್ದ್ರವ್ಯವಿದೆಯದು ಗುಣವಲ್ಲ ಮೇಣ್ಗುಣವದು ದ್ರವ್ಯವಲ್ಲ ಸ್ವರೂಪದಿಂ ।
ಇದು ಅತದ್ಭಾವವಿದೆ ಸರ್ವಥಾ ಅಭಾವವಲ್ಲೆಂದು ಜಿನದೇವ ಪೇಳಿಹರು ॥

## ೫ : ಐದನೆಯ ಪರ್ವ
## ಮೋಕ್ಷಸುಖ ಹಾಗೂ ಜೀವ-ಅಜೀವಾದಿ ತತ್ತ್ವಗಳ ಸ್ವರೂಪ

ಹಿಂದಿನ ಪ್ರಕರಣಗಳಲ್ಲಿ ಅನೇಕ ಮತಗಳ ಕುರಿತು ವಿಚಾರ ಮಾಡಲಾಯಿತು. ಯಾವ ಧರ್ಮಾರ್ಥಿ ಜೀವಗಳು ಆ ಅನ್ಯಮತದವರಿದ್ದರು ಅವರಿಗೆ ತಿಳಿಸಿಕೊಟ್ಟು ಈಗ ಜಿನದೇವರಿಂದ ಹೇಳಲಾದ ಜೀವ-ಅಜೀವ ತತ್ತ್ವಗಳ ಸ್ವರೂಪ ಹೇಳುತ್ತೇವೆ. ಯಾರು ಮೋಕ್ಷಾಭಿಲಾಷಿ ಜೀವರಿದ್ದಾರೆ, ಅವರು ಈ ತತ್ತ್ವಗಳ ಭೇದಗಳನ್ನು ತಿಳಿಯುವುದು. ಯಾವ ಮೋಕ್ಷದ ಸಲುವಾಗಿ ತತ್ತ್ವದ ಭೇದ ತಿಳಿಯುತ್ತಾರೆ, ತಪಸ್ಸು, ಚಾರಿತ್ರ ಮಾಡುತ್ತಾರೆ; ಆ ಮೋಕ್ಷದ ಸ್ವರೂಪವನ್ನು ಎಲ್ಲಕ್ಕಿಂತ ಮೊದಲು ಹೇಳಲಾಗುವುದು. ಎಲೈ ಮೋಕ್ಷಾಭಿಲಾಷಿಯೇ ! ನೀನು ಧರ್ಮಾರ್ಥಿ ಇರುವೆ, ಆದುದರಿಂದ ಎಲ್ಲಕ್ಕಿಂತ ಮೊದಲು ಮೋಕ್ಷಸುಖದ ಸ್ವರೂಪವನ್ನು ಆಲಿಸು ! ನಂತರ ನಿನಗೆ ಆ ಮೋಕ್ಷದ ಇಚ್ಛೆಯುಂಟಾದರೆ ನಿನಗೆ ಮೋಕ್ಷದ - ಸುಖದ ಮಾರ್ಗವನ್ನೂ ತಿಳಿಸಿಕೊಡಲಾಗುವುದು.

ಆ ಮೋಕ್ಷವು ಸಂಸಾರದಲ್ಲಿ ಆಗುವಂಥ ಜನ್ಮ, ಮರಣ, ಹಸಿವೆ, ಬಾಯಾರಿಕೆ, ವಾತ, ಪಿತ್ತ, ಕುಷ್ಠಾದಿ ರೋಗ ಇತ್ಯಾದಿ ವಿವಿಧ ದುಃಖ, ದೋಷಗಳಿಂದ ರಹಿತವಿದೆ. ಅವಿನಾಶಿ, ನಿರಾಕುಲ, ಇಂದ್ರಿಯ ರಹಿತ ಸುಖದ ಸ್ಥಾನವಿದೆ ಹಾಗೂ ಅನುಪಮ ಸರ್ವಲೋಕಾಲೋಕವರ್ತಿ ಪದಾರ್ಥಗಳನ್ನು ತಿಳಿಯುವಂಥ ಕೇವಲಜ್ಞಾನದಿಂದ ಸಹಿತ ಭಗವತ್ ಪದ ಸಂಪನ್ನ ಜಗತ್ತಿನಿಂದ ಪೂಜಿಸಲು ಯೋಗ್ಯವಿದೆ. ಈ ಮೋಕ್ಷವನ್ನು ಇಂದ್ರ, ದೇವ, ಚಕ್ರವರ್ತಿ, ಗಣಧರ, ಮುನಿ ಮೊದಲಾದವರೆಲ್ಲರು ಯಾವಾಗಲೂ ಇದರ ಇಚ್ಛೆಯಿಂದ ಸಹಿತರಾಗಿ ಪೂಜಿಸುತ್ತಾರೆ. ಅಲ್ಲಿಯ ಸುಖವು ಅಖಂಡವಿದೆ, ಅವಿನಾಶಿಯಿದೆ, ಸರ್ವಕರ್ಮಮಲರಹಿತವಿದೆ, ನಿರಾಬಾಧವಿದೆ, ಆ ಸುಖದ ಕೊನೆಯೆಂದೂ ಬರುವುದಿಲ್ಲ ಮತ್ತು ಸಂಸಾರದಲ್ಲಿರುವ ದೇವ, ಇಂದ್ರ, ಅಹಮಿಂದ್ರ, ಚಕ್ರವರ್ತಿ, ಕಾಮದೇವ, ವಿದ್ಯಾಧರ ಇವರೆಲ್ಲರ ಅನಾದಿ ಕಾಲೀನ ಅನಂತಕಾಲದಲ್ಲಿ ಆಗಿ ಹೋಗಿರುವಂಥ ಯಾವ ಸುಖವಿದೆ; ಅದೆಲ್ಲವನ್ನೂ ಏಕತ್ರಿತಗೊಳಿಸಿದರೂ, ಮೋಕ್ಷ ಸುಖದ ಒಂದು ಸಮಯಮಾತ್ರದಷ್ಟು ಕೂಡ ಅದು ಆಗುವುದಿಲ್ಲ.

**ಪ್ರಶ್ನೆ :-** ಅಹಮಿಂದ್ರ, ಇಂದ್ರರುಗಳ ಸುಖಕ್ಕಿಂತಲೂ ಅಧಿಕ ಸುಖವು ಎಂಥದ್ದಿದೆ ?

**ಉತ್ತರ :-** ಭವ್ಯನೇ ಆಲಿಸು ! ಹೇಗೆ ಬಿಸಿಲಿನಲ್ಲಿ ಒಂಟೆಯ ಸವಾರಿ ಮಾಡುವಂಥ ಯಾವನೋ ಪುರುಷನು ದಾರಿಯಲ್ಲಿ ಒಂಟೆಯ ಮೇಲೆ ಕುಳಿತು ಓಡುತ್ತಿದ್ದಾನೆ, ಒಬ್ಬ ವೈರಿಯು ಅವನನ್ನು ಸಾಯಿಸುವ ಸಲುವಾಗಿ ಬೆನ್ನಟ್ಟಿಕೊಂಡು ಹಿಂಬಾಲಿಸಿದ್ದಾನೆ, ಅದನ್ನು ಕಂಡು ಭಯಭೀತನಾಗಿ ಒಂಟೆಯನ್ನು ಓಡಿಸುತ್ತ, ಜಿಗಿಸುತ್ತ ಹೊರಟಿದ್ದಾನೆ. ಹಿಂದೆ ಹಿಂದೆ ವೈರಿಯೂ ಬರುತ್ತಿದ್ದಾನೆ. ದಾರಿಯಲ್ಲಿ ಹೋಗುವಾಗ ತೀವ್ರ ಹಸಿವೆ, ಬಾಯಾರಿಕೆಗಳಾಗುತ್ತವೆ ಅವನ ಹತ್ತಿರ ಉಂಡೆಗಳಿದ್ದವು, ತಂಪಾದ ನೀರೂ ಇತ್ತು ಅದರಿಂದ ಉಂಡೆಯನ್ನು ತಿನ್ನುತ್ತ ಬಟ್ಟಲು ತುಂಬ ನೀರನ್ನು ಕುಡಿಯುತ್ತ ಒಂಟೆಯನ್ನು ಓಡಿಸುತ್ತಿದ್ದಾನೆ ಆಗ ಸ್ವಲ್ಪ ಅನ್ನ ನೀರು ಬಾಯಲ್ಲಿ, ಸ್ವಲ್ಪ ಭೂಮಿಯ ಮೇಲೆ ಬಿದ್ದು ಹೋಗುತ್ತದೆ, ಆ ಪುರುಷನು ಒಂಟೆಯ ಮೇಲೆ ಕುಳಿತು ಉಂಡೆ ತಿಂದು ನೀರು ಕುಡಿದು ಕ್ಷುಧೆ, ತೃಷೆಗಳನ್ನು ದೂರಗೊಳಿಸಿ ಸುಖವೆಂದು ಮನ್ನಿಸುತ್ತಾನೆ. ಬೇರೆ ಯಾವನೋ ಪುರುಷನು ತನ್ನ ಮನೆಯ ಉದ್ಯಾನದಲ್ಲಿ ವಿಶಾಲ ವೃಕ್ಷದ ಛಾಯೆಯಲ್ಲಿ ಕುಳಿತಿದ್ದಾನೆ. ಅವನ ಹತ್ತಿರ ಅನೇಕ ಸುಖಕಾರಿ ಸಜ್ಜನರು ಕುಳಿತುಕೊಂಡಿದ್ದಾರೆ, ಯಾರೂ ದ್ವೇಷಿಗಳಿಲ್ಲ. ಆ ಪುರುಷನೂ ಹಸಿವೆ, ಬಾಯಾರಿಕೆಯನ್ನು ದೂರಗೊಳಿಸುವ ಸಲುವಾಗಿ ಭೋಜನ ಮಾಡಿದನು, ತಂಪಾದ ಜಲವನ್ನು ಕುಡಿದನು ಮತ್ತು ಸುಖದಿಂದ ಮಲಗಿಕೊಂಡನು.

ಇವರಿಬ್ಬರಲ್ಲಿ ಬಹಳಷ್ಟುಸುಖವು ಯಾರಿಗಿದೆ ? ಉಂಡೆ, ಜಲವನ್ನಂತೂ ಒಂಟೆಯ ಮೇಲೆ ಕುಳಿತಿರುವ ಪುರುಷನೂ ತಿಂದನು ಮತ್ತುಕುಡಿದನು ಮತ್ತು ಮನೆಯಲ್ಲಿ ಕುಳಿತಿರುವಂಥವನೂ ತಿಂದನು, ಕುಡಿದನು, ಆದಾಗ್ಯೂ ಅವರಿಬ್ಬರ ಸುಖದಲ್ಲಿ ಅಂತರವಿದೆ. ಅದೇ ಪ್ರಕಾರ ದೇವೇಂದ್ರ, ಅಹಮಿಂದ್ರರ ಸುಖದಲ್ಲಿ ಹಾಗೂ ಮೋಕ್ಷ ಸುಖದಲ್ಲಿಯೂ ಅಂತರವಿದೆ. ಮೋಕ್ಷದ

ಸುಖವಂತೂ ನಿರಾಕುಲವಿದೆ, ಭಯರಹಿತವಿದೆ, ಅವಿನಾಶಿಯಿದೆ ಮತ್ತು ಇಂದ್ರ , ಅಹಮಿಂದ್ರ , ದೇವಗಳ ಸುಖವು ವಿನಾಶಶೀಲವಿದೆ ಅವರ ಹಿಂದೆ ಕಾಲರೂಪದ ವೈರಿಯು ಧಾವಿಸುತ್ತಿರುವುದರಿಂದ ಭಯ ಸಹಿತ ಸುಖವಿದೆ. ಈ ಪ್ರಕಾರ ಸಾಮಾನ್ಯ ದೃಷ್ಟಾಂತದ ಭಾವ ತಿಳಿಯುವುದು. ಎಲೈ ಸೋದರನೇ ! ಸಂಸಾರೀ ಇಂದ್ರಾದಿಕರ ಇಂದ್ರಿಯಜನಿತ ಸುಖದಿಂದ ಮೋಕ್ಷದ ಅತೀಂದ್ರಿಯ ಸುಖದಲ್ಲಿ ಅನಂತಾನಂತ ಗುಣಿತ ಅಂತರವಿದೆ, ಜಾತಿಯೇ ಭಿನ್ನವಿದೆ ಆದುದರಿಂದ ಎಲೈ ಮೋಕ್ಷ ಸುಖದ ಅಭಿಲಾಷಿಯಾದ ಭವ್ಯನೇ ! ಮೋಕ್ಷ ಪ್ರಾಪ್ತ ಮಾಡಿಕೊಳ್ಳುವ ಉಪಾಯ ಮಾಡಬೇಕು.

ಈ ಪ್ರಕಾರದ ಉಪದೇಶವನ್ನು ಆಲಿಸಿ ಮೋಕ್ಷ ಸುಖದ ಅಭಿಲಾಷಿಯಾದ ಯಾವನೋ ಭವ್ಯಾತ್ಮನು ಕೇಳುತ್ತಾನೆ- ಓ ಗುರುಗಳೇ ! ತಾವು ಮೋಕ್ಷದ ಸುಖವನ್ನು ಸರ್ವದುಃಖರಹಿತವೆಂದು ಹೇಳಿದ್ದೀರಿ - ಅಂಥ ಮೋಕ್ಷವು ಹೇಗೆ ಪ್ರಾಪ್ತವಾಗುವುದು ? - ಅದರ ಮಾರ್ಗವನ್ನು ತಿಳಿಸಿಕೊಡಿರಿ.

ಶಿಷ್ಯನ ಪ್ರಶ್ನೆಯನ್ನು ಆಲಿಸಿ ಗುರುಗಳು ಅವನ ಹಿತದ ಸಲುವಾಗಿ ಹೇಳುತ್ತಾರೆ.

ಎಲೈ ಭವ್ಯನೇ ! ಆಲಿಸು ! ಸಮ್ಯಗ್ದರ್ಶನ, ಸಮ್ಯಗ್ಜ್ಞಾನ, ಸಮ್ಯಕ್ಚಾರಿತ್ರವು ಮೋಕ್ಷದ ಮಾರ್ಗವಿದೆ. ಎಲೈ ಭವ್ಯನೇ ಸಮ್ಯಗ್ದರ್ಶನದಿಂದಂತೂ ಮೋಕ್ಷದ ಶ್ರದ್ಧೆಯಾಗುತ್ತದೆ. ಮೋಕ್ಷವು ಅನಂತ ಸುಖದ ಸ್ಥಾನವಿದ್ದು ಅವ್ಯಾಬಾಧಸುಖಮಯ ದಶೆಯಿದೆ, ಎಂದು ಶ್ರದ್ಧೆಯಾಗುತ್ತಿದ್ದಂತೆಯೇ ಸಮ್ಯಗ್‌ಜ್ಞಾನವಾಗುತ್ತದೆ, ಅದರಿಂದ ಮೋಕ್ಷದ ಮಾರ್ಗವು ತಿಳಿದು ಬರುತ್ತದೆ. ಅದರ ನಂತರ ಮೋಕ್ಷಮಾರ್ಗದಲ್ಲಿ ಗಮನವಾಗುತ್ತದೆ, ಸಮ್ಯಕ್ಚಾರಿತ್ರವಾಗುತ್ತದೆ. ಆದುದರಿಂದ ಎಲ್ಲಕ್ಕಿಂತ ಮೊದಲು ಶ್ರದ್ಧೆಯಾಗಬೇಕಾಗುವುದು, ನಂತರ ತಿಳುವಳಿಕೆಯಾಗಬೇಕಾಗುವುದು ಆಗ ಮಾರ್ಗದಲ್ಲಿ ನಡೆಯುವುದಾಗುತ್ತದೆ- ಅದರಿಂದ ವಾಂಛಿತ ಸ್ಥಾನ ತಲುಪಲಾಗುತ್ತದೆ, ಮೋಕ್ಷದ ಪ್ರಾಪ್ತಿಯಾಗುತ್ತದೆ. ಅದರಿಂದ ಎಲೈ ಭವ್ಯನೇ ! ಮೊದಲಂತೂ ನನಗೆ ಅಂಥ ಮೋಕ್ಷವು ಯಾವಾಗ ಆಗುವುದೆಂಬ ಶ್ರದ್ಧೆ ಮಾಡು.

ಗುರುಗಳ ಇಂಥ ವಚನವನ್ನು ಆಲಿಸಿ, ಮಹಾವಿನಯದಿಂದ ಅವನು ಕೇಳುತ್ತಾನೆ. ಶ್ರದ್ಧೆಯ ಅಭಿರುಚಿಯನ್ನು ಮಾಡಿಸುವಂಥ ಗುರುಗಳೇ ! ಸಮ್ಯಕ್ತ್ವವು ಹೇಗೆ ಆಗುತ್ತದೆಯೆಂಬುದನ್ನು ನನಗೆ ತಿಳಿಸಿಕೊಡಿರಿ.

ಆಗ ಗುರುಗಳು ಆ ಶಿಷ್ಯನನ್ನು ಅಭಿರುಚಿಯುಳ್ಳವನೆಂದು ತಿಳಿದುಕೊಂಡು 'ತತ್ತ್ವಾರ್ಥಸೂತ್ರ'ದ ಸೂತ್ರವನ್ನು ಹೇಳುತ್ತಾರೆ - 'ತತ್ತ್ವಾರ್ಥಶ್ರದ್ಧಾನಂ ಸಮ್ಯಗ್ದರ್ಶನಮ್' ಇದರ ಅರ್ಥವು ತತ್ತ್ವಾರ್ಥಗಳ ಶ್ರದ್ಧೆಯು ಸಮ್ಯಗ್ದರ್ಶನವಿದೆ.

ಆಗ ಶಿಷ್ಯನು - ಓ ಗುರುಗಳೇ ! ತತ್ತ್ವವೆಂದರೇನು ? ಅದನ್ನು ಹೇಳಬೇಕು.

ಆಗ ಗುರುಗಳು - ಎಲೈ ವತ್ಸನೇ ! ಜೀವ-ಅಜೀವಗಳ ರೂಪದಿಂದ ತತ್ತ್ವಗಳಲ್ಲಿ ಎರಡು ಭೇದಗಳಿವೆ.

ಆಗ ಶಿಷ್ಯನು - ಗುರುಗಳೇ ! ಜೀವ-ಅಜೀವಗಳ ಸ್ವರೂಪವನ್ನು ನನಗೆ ವಿಶೇಷವಾಗಿ ತಿಳಿಸಿಕೊಡಿರಿ.

ಗುರುಗಳು - ಎಲೈ ಭವ್ಯನೇ ! ನೀನು ಶಾಂತಚಿತ್ತದಿಂದ ಆಲಿಸು ! ನಿನ್ನ ಸಲುವಾಗಿ ಅಜೀವದ ಸ್ವರೂಪವನ್ನು ಮೊದಲು ಹೇಳುತ್ತೇನೆ. ಅಜೀವ ದ್ರವ್ಯವು - ಧರ್ಮದ್ರವ್ಯ , ಅಧರ್ಮದ್ರವ್ಯ , ಕಾಲದ್ರವ್ಯ , ಆಕಾಶದ್ರವ್ಯ , ಪುದ್ಗಲದ್ರವ್ಯವೆಂದು ಐದು ಅಜೀವ ದ್ರವ್ಯರೂಪ ಜಡವಿವೆ. ಇವುಗಳಲ್ಲಿ ಧರ್ಮ-ಅಧರ್ಮ, ಆಕಾಶ, ಕಾಲ -ಇವು ನಾಲ್ಕು ಅಜೀವ ದ್ರವ್ಯಗಳು ಅಮೂರ್ತಿಕವಿವೆ. ಇವುಗಳ ಸ್ವರೂಪವನ್ನು ಮುಂದೆ ಹೇಳಲಾಗುವುದು.

ಪುದ್ಗಲ ಅಜೀವ ದ್ರವ್ಯವು ಮೂರ್ತಿಕವಿದೆ. ಅದರಲ್ಲಿ ೧) ನೋಕರ್ಮ, ೨) ದ್ರವ್ಯಕರ್ಮವೆಂದು ಎರಡು ಭೇದಗಳಿವೆ. ಯಾವುದನ್ನು ನೋಡಿ ಯಾವ ಕರ್ಮವು ಪ್ರಕಟವಾಗುತ್ತದೆ ಅದು ಅದರ ನೋಕರ್ಮವಿದೆ. ಹೇಗೆಂದರೆ ಒಂದು ವೇಳೆ ತಮ್ಮ ವೈರಿಯನ್ನು ನೋಡಿದರೆ ಕ್ರೋಧವು ಪ್ರಕಟವಾಗುತ್ತದೆ, ಆಗ ವೈರಿಯನ್ನು ಕ್ರೋಧದ ನೋಕರ್ಮವೆನ್ನಲಾಗುವುದು ಮತ್ತು ಸುಂದರ ಸ್ತ್ರೀಯನ್ನು ನೋಡಿ ವಿಕಾರಭಾವವಾಗುತ್ತದೆ, ಆಗ ವಿಕಾರಭಾವದ ನೋಕರ್ಮವು ಸ್ತ್ರೀಯಿದ್ದಾಳೆ - ಹೀಗೆ ಸರ್ವತ್ರ ನೋಕರ್ಮದ ಸ್ವರೂಪ ತಿಳಿಯುವುದು.

ದ್ರವ್ಯ ಕರ್ಮವು ಪೌದ್ಗಲಿಕವಿದೆ ಅದರಲ್ಲಿ ಇಪ್ಪತ್ಮೂರು ಭೇದಗಳಿವೆ - ಅಣುವರ್ಗಣಾ, ಸಂಖ್ಯಾತಾಣುವರ್ಗಣಾ, ಅಸಂಖ್ಯಾತಾಣುವರ್ಗಣಾ, ಅನಂತಾಣುವರ್ಗಣಾ, ಆಹಾರಾಣುವರ್ಗಣಾ, ಆಹಾರಅಗ್ರಾಹ್ಯಾಣುವರ್ಗಣಾ, ತೈಜಸಅಣುವರ್ಗಣಾ, ತೈಜಸಅಗ್ರಾಹ್ಯಾಣುವರ್ಗಣಾ, ಭಾಷಾಣುವರ್ಗಣಾ, ಭಾಷಾಅಗ್ರಾಹ್ಯಾಣುವರ್ಗಣಾ, ಮನೋವರ್ಗಣಾ, ಮನೋಅಗ್ರಾಹ್ಯಾಣುವರ್ಗಣಾ, ಕಾರ್ಮಣವರ್ಗಣಾ, ಧ್ರುವವರ್ಗಣಾ, ಸಾಂತರವರ್ಗಣಾ, ಶೂನ್ಯವರ್ಗಣಾ, ಪ್ರತ್ಯೇಕವರ್ಗಣಾ, ಧ್ರುವಶೂನ್ಯವರ್ಗಣಾ, ಬಾದರನಿಗೋದವರ್ಗಣಾ, ಬಾದರಶೂನ್ಯವರ್ಗಣಾ, ಸೂಕ್ಷ್ಮನಿಗೋದವರ್ಗಣಾ, ನಭೋವರ್ಗಣಾ ಮತ್ತು ಮಹಾಸ್ಕಂಧವರ್ಗಣಾ - ಇವು ಇಪ್ಪತ್ಮೂರು ಪುದ್ಗಲ ವರ್ಗಣಾಗಳ ಭೇದಗಳಿವೆ. ಇವು ತಮ್ಮ ತಮ್ಮ ಸ್ವಭಾವರೂಪವಾಗಿ ಸದೈವ ವಿದ್ಯಮಾನವಿರುತ್ತವೆ.

ಪುದ್ಗಲದ ಇವೆಲ್ಲ ಭೇದಗಳು ಮೂರು ಲೋಕ ಪ್ರಮಾಣ ಮಹಾಸ್ಕಂಧದಲ್ಲಿ ಇರುತ್ತವೆ. ಈ ಮಹಾಸ್ಕಂಧವು ಲೋಕದಲ್ಲಿ ವಿದ್ಯಮಾನವಿದ್ದು ಎಲ್ಲ ಪರಮಾಣುಗಳ ಏಕಬಂಧನರೂಪವಿದೆ. ಈ ಮಹಾಸ್ಕಂಧವು ಅನಾದಿನಿಧನ ಮಹಾವಜ್ರಸಮಾನವೆಂದು ತಿಳಿಯುವುದು. ಅದರಲ್ಲಿ ಅನಂತ ಪರಮಾಣುಗಳಂತೂ ಅವು ಸ್ಕಂಧರೂಪವಾಗುವುದೇ ಇಲ್ಲ. ಒಂದೊಂದೇ ಇರುತ್ತವೆ ಅಂಥವಿವೆ, ಅನಂತ ಸ್ಕಂಧಗಳು ಎರಡೆರಡು ಪರಮಾಣುಗಳವಿವೆ, ಅನಂತ ಸ್ಕಂಧಗಳು ಮೂರು ಮೂರು ಪರಮಾಣುಗಳವಿವೆ ಇದೇ ಪ್ರಕಾರ ಒಂದೊಂದು ಅಧಿಕ ಪರಮಾಣುಗಳ ಸ್ಕಂಧ, ನಾಲ್ಕು ಪರಮಾಣುಗಳ ಸ್ಕಂಧ, ಐದರ, ಆರರ ಇತ್ಯಾದಿ ಉತ್ಕೃಷ್ಟ ಸಂಖ್ಯಾತ ಪರ್ಯಂತವೆಂದು ತಿಳಿಯುವುದು - ಇವು ಸಂಖ್ಯಾತಾಣುಸ್ಕಂಧವಿವೆ.

ಈ ಸಂಖ್ಯಾತಾಣು ಸ್ಕಂಧಗಳಿಂದ ಒಂದು ಅಧಿಕ ಪರಮಾಣುವಿನ ಅನಂತ ಸ್ಕಂಧಗಳಿವೆ. ಇದು ಜಘನ್ಯ ಅಸಂಖ್ಯಾತಾಣು ಸ್ಕಂಧವಿದೆ. ಇದಕ್ಕಿಂತ ಒಂದು ಪರಮಾಣು ಅಧಿಕದ ಅನಂತ ಸ್ಕಂಧಗಳಿವೆ. ಅನಂತ ಸ್ಕಂಧಗಳು ಉತ್ಕೃಷ್ಟ ಸಂಖ್ಯಾತಕ್ಕಿಂತ ಮೂರು ಪರಮಾಣು ಅಧಿಕವೆಂದು ತಿಳಿಯುವುದು. ನಾಲ್ಕು ಪರಮಾಣು ಅಧಿಕದ ಅನಂತ ಸ್ಕಂಧಗಳಿವೆ. ಐದು ಅಧಿಕದ ಅನಂತ ಸ್ಕಂಧಗಳಿವೆ ಇತ್ಯಾದಿ ರೂಪದಲ್ಲಿ ಉತ್ಕೃಷ್ಟ ಸಂಖ್ಯಾತಕ್ಕಿಂತ ಒಂದೊಂದು ಅಧಿಕ ಪರಮಾಣುಗಳ ಸ್ಕಂಧಗಳು ಹೆಚ್ಚುತ್ತ ಹೆಚ್ಚುತ್ತ ಉತ್ಕೃಷ್ಟ ಅನಂತದವರೆಗೆಂದು ತಿಳಿಯುವುದು. ಈ ಪ್ರಕಾರ ಒಂದೊಂದು ಪರಮಾಣುಗಳಿಂದ ಅಧಿಕ ಸಂಖ್ಯೆಯುಳ್ಳ ಅನಂತ ಅನಂತ ಸ್ಕಂಧಗಳಿವೆ ಎಂದು ತಿಳಿಯುವುದು. ಉತ್ಕೃಷ್ಟ ಅನಂತ ಪರಮಾಣುಗಳಿಗಿಂತ ಒಂದು ಪರಮಾಣು ಅಧಿಕದ ಸ್ಕಂಧಗಳು ಅನಂತ ಇವೆ. ಇವು ಜಘನ್ಯ ಅನಂತಾಣುಗಳ ಸ್ಕಂಧವಿವೆ. ಎರಡು ಪರಮಾಣು ಅಧಿಕದ ಸ್ಕಂಧಗಳು ಅನಂತವಿವೆ. ಅವು ಮೂರು ಅಧಿಕ, ನಾಲ್ಕು ಅಧಿಕ ಇತ್ಯಾದಿ ಸ್ಕಂಧಗಳ ಒಂದೊಂದು ಜಾತಿಯ ಅನಂತ ಅನಂತ ಸ್ಕಂಧಗಳಿವೆ. ಅವೆಲ್ಲವೂ ಅನಂತಾಣು ಪುದ್ಗಲ ಸ್ಕಂಧಗಳಿವೆ - ಈ ಪ್ರಕಾರ ಸಂಖ್ಯಾತ, ಅಸಂಖ್ಯಾತ, ಅನಂತ ಪರಮಾಣುಗಳ ಸ್ಕಂಧಗಳಿವೆ. ಎಲ್ಲ ಜಾತಿಯ ಸ್ಕಂಧಗಳು ಅನಂತ-ಅನಂತವಿವೆ ಹೀಗೆ ಪುದ್ಗಲದ ಸ್ಕಂಧಗಳು ಅನೇಕ ಪ್ರಕಾರವಿವೆ.

ಅಲ್ಲಿ ಯಾವ ತೈಜಸ ಜಾತಿಯ ಪುದ್ಗಲ ಸ್ಕಂಧಗಳಿವೆ ಅವುಗಳಿಂದ ತೈಜಸ ಶರೀರವಾಗುತ್ತದೆ. ಭಾಷಾ ಜಾತಿಯ ಪುದ್ಗಲ ಸ್ಕಂಧಗಳಿಂದ ಭಾಷೆಗೆ ಯೋಗ್ಯ ಎರಡು ಇಂದ್ರಿಯ ಮೊದಲಾದ ಜೀವಗಳ ಯಥಾಯೋಗ್ಯ ವಚನ ಮಾತನಾಡುವ ಶಕ್ತಿ ಸಹಿತ ಕಂಠಾದಿ ಸ್ಥಾನ ನಿರ್ಮಿಸಿ ಭಾಷೆಯು ಹೊರಡುತ್ತದೆ. ಮನೋಜಾತಿಯ ವರ್ಗಣಾದಿಂದ ಸಂಜ್ಞೀ ಪಂಚೇಂದ್ರಿಯ ಜೀವರುಗಳ ಹೃದಯ ಕಮಲದಲ್ಲಿ ಅಷ್ಟದಳವುಳ್ಳ ಕಮಲಾಕಾರದ ದ್ರವ್ಯಮನವಾಗುತ್ತದೆ, ಅದರಿಂದ ಆತ್ಮನಲ್ಲಿ ಶುಭಾಶುಭ ವಿಚಾರದ ಶಕ್ತಿಯಾಗುತ್ತದೆ. ಬಾದರ ನಿಗೋದ ವರ್ಗಣಾಗಳ ಸ್ಕಂಧಗಳಿಂದ ಬಾದರ ನಿಗೋದಿ ಜೀವಗಳ ಶರೀರಗಳು ನಿರ್ಮಾಣವಾಗುತ್ತವೆ - ಸೂಕ್ಷ್ಮ ನಿಗೋದ ವರ್ಗಣಾಗಳ ಸ್ಕಂಧಗಳಿಂದ ಸೂಕ್ಷ್ಮ ನಿಗೋದಿ ಜೀವಗಳ ಶರೀರಾಕಾರವಾಗುತ್ತದೆ. ಪ್ರತ್ಯೇಕ ಜಾತಿಯ ವರ್ಗಣಾಗಳಿಂದ ಪ್ರತ್ಯೇಕ ಶರೀರಗಳ ಬಂಧನವಾಗುತ್ತದೆ. ಕಾರ್ಮಣ ವರ್ಗಣಾಗಳಿಂದ ಜ್ಞಾನಾವರಣಾದಿ ಅಷ್ಟಕರ್ಮರೂಪ ಕರ್ಮಸ್ಕಂಧಮಯವಾದ ಕಾರ್ಮಣ ಶರೀರವಾಗುತ್ತದೆ, ಕರ್ಮರೂಪವಾಗಲು ಯೋಗ್ಯ ಪುದ್ಗಲ ಸ್ಕಂಧಗಳು ಕಾರ್ಮಣ ವರ್ಗಣಾ ಇವೆ.

ಅಲ್ಲಿ ಆತ್ಮನು ಎಂಥೆಂಥ ರಾಗ-ದ್ವೇಷ ಭಾವಗಳಿಂದ ಸಹಿತನಾಗಿ ಪರಿಣಮನ ಮಾಡುತ್ತಾನೆ ಅದರ ಅನುಸಾರ ಕಾರ್ಮಣವರ್ಗಣಾಗಳು ಅಷ್ಟಕರ್ಮರೂಪವಾಗಿ ಪರಿಣಮಿತವಾಗುತ್ತವೆ.

ಪ್ರಶ್ನೆ :- ಈ ಅಷ್ಟಕರ್ಮಗಳು ಯಾವ ಯಾವವಿವೆ ?

ಉತ್ತರ :- ಜ್ಞಾನಾವರಣ, ದರ್ಶನಾವರಣ, ವೇದನೀಯ, ಮೋಹನೀಯ, ಆಯು, ನಾಮ, ಗೋತ್ರ ಮತ್ತು ಅಂತರಾಯ - ಇವು ಅಷ್ಟಕರ್ಮಗಳಂತೂ ಮೂಲವಿವೆ ಮತ್ತು ಇವುಗಳ ಉತ್ತರ ಪ್ರಕೃತಿಗಳು ನೂರ ನಲವತ್ತೆಂಟು ಇವೆ.

ಜ್ಞಾನಾವರಣದ ಪ್ರಕೃತಿಗಳ ಐದು ಹೆಸರುಗಳು - ಮತಿಜ್ಞಾನಾವರಣ, ಶ್ರುತಜ್ಞಾನಾವರಣ, ಅವಧಿಜ್ಞಾನಾವರಣ, ಮನಃಪರ್ಯಯಜ್ಞಾನಾವರಣ, ಕೇವಲಜ್ಞಾನಾವರಣ. ಯಾವುದು ಯಾವ ಯಾವ ಜ್ಞಾನದ ಆವರಣವಿದೆ ಆಯಾಯಾ ಜ್ಞಾನವನ್ನು ಅದು ಆಚ್ಛಾದಿತಗೊಳಿಸುತ್ತದೆ, ಆದುದರಿಂದ ಅವುಗಳ ಹೆಸರು ಆವರಣವಿದೆ. ಜ್ಞಾನವೆಂಬ ಹೆಸರಂತೂ ತಿಳಿಯುವುದರದಿದೆ. ಯಾವುದರಿಂದ ಜ್ಞೇಯವು ತಿಳಿದು ಬರುತ್ತದೆ, ಅದು ಜ್ಞಾನವಿದೆ. ಅದು ಜ್ಞಾನತ್ವದ ಅಪೇಕ್ಷೆಯಿಂದ ಒಂದೇ ಇದ್ದರೂ ಆ ಒಂದು ಜ್ಞಾನವನ್ನು ಎಷ್ಟೆಷ್ಟು ಇವು ಐದು ಜ್ಞಾನಾವರಣಗಳು ಆಚ್ಛಾದಿತಗೊಳಿಸಿವೆ ಅಷ್ಟಷ್ಟು ಜ್ಞಾನದ ಈ ಐದು ಭೇದಗಳಲ್ಲಿ ಕಲ್ಪನೆಯಿದೆ. ಹಾಗೂ ಯಾವಾಗ ಈ ಆವರಣಗಳ ಅಭಾವವಾಗುತ್ತದೆ ಆಗ ಭೇದ-ಭಾವವು ದೂರವಾಗಿ ಒಂದು ಜ್ಞಾನಭಾವವೇ ಉಳಿಯುತ್ತದೆ. ಐದು ಭೇದಗಳನ್ನು ಜ್ಞಾನಾವರಣದ ನಿಮಿತ್ತದಿಂದ ಹೇಳಲಾಗಿದೆ ಎಂದು ತಿಳಿಯುವುದು.

ದರ್ಶನಾವರಣದ ಪ್ರಕೃತಿಗಳು ಒಂಭತ್ತು ಇವೆ. - ಚಕ್ಷುದರ್ಶನಾವರಣ, ಅಚಕ್ಷುದರ್ಶನಾವರಣ , ಅವಧಿ ದರ್ಶನಾವರಣ, ಕೇವಲದರ್ಶನಾವರಣ - ಇವು ನಾಲ್ಕಂತೂ ತಮ್ಮ ಆವರಣ ಯೋಗ್ಯ ದರ್ಶನವನ್ನು ಆವೃತಗೊಳಿಸುತ್ತವೆ ಮತ್ತು ನಿದ್ರಾ , ನಿದ್ರಾ ನಿದ್ರಾ , ಪ್ರಚಲಾ, ಪ್ರಚಲಾ ಪ್ರಚಲಾ, ಸ್ತ್ಯಾನಗೃದ್ಧಿ- ಇವು ಒಂಭತ್ತುದರ್ಶನವನ್ನು ಘಾತ ಮಾಡುತ್ತವೆ.

ಸಂದೇಹ - ದರ್ಶನವಂತೂ ನಾಲ್ಕು ಭೇದರೂಪವಿವೆ ಮತ್ತು ದರ್ಶನದ ಆವರಣಗಳು ಒಂಭತ್ತು ಇವೆ. ನಾಲ್ಕು ದರ್ಶನಾವರಣವಂತೂ ನಾಲ್ಕು ದರ್ಶನಗಳನ್ನು ಘಾತ ಮಾಡುತ್ತವೆ, ಈ ಐದು ನಿದ್ರೆಗಳು ಯಾವುದನ್ನು ಘಾತ ಮಾಡುತ್ತವೆ?

ಸಮಾಧಾನ - ನಾಲ್ಕು ದರ್ಶನಗಳ ಘಾತವಂತೂ ನಾಲ್ಕುದರ್ಶನಾವರಣವಿವೆ ಮತ್ತು ದರ್ಶನದ ನೋಡುವ ರೂಪದ ಪ್ರವೃತ್ತಿಯನ್ನು ಐದು ನಿದ್ರಾದಿಗಳು ಘಾತಿಸುತ್ತವೆ ಎಂದು ತಿಳಿಯುವುದು.

ವೇದನೀಯದ ಸಾತಾ-ಅಸಾತಾ ಎಂದು ಎರಡು ಭೇದಗಳಿವೆ. ಒಂದು ವೇಳೆ ಮೋಹಸಹಿತ ಜೀವನಿಗೆ ಸಾತಾ ವೇದನೀಯದ ಉದಯವಿದ್ದರೆ ತನ್ನ ಉದಯವನ್ನು ತಿಳಿಸಿಕೊಟ್ಟು ಜೀವನನ್ನು ಸುಖಿಯನ್ನಾಗಿ ಮಾಡುತ್ತದೆ ಮತ್ತು ಅಸಾತಾದ ಉದಯದಿಂದ ಮೋಹಿ ಜೀವನು ದುಃಖಿಯಾಗುತ್ತಾನೆ - ಹೀಗೆ ವೇದನೀಯವಿದೆ.

ಮೋಹನೀಯ ಕರ್ಮದ ಭೇದಗಳು - ೧) ದರ್ಶನ ಮೋಹನೀಯ, ೨) ಚಾರಿತ್ರ ಮೋಹನೀಯ. ದರ್ಶನ ಮೋಹನೀಯದ ಮೂರು ಭೇದಗಳಿದ್ದು ಅವು ಮಿಥ್ಯಾತ್ವ, ಸಮ್ಯಗ್ಮಿಥ್ಯಾತ್ವ, ಸಮ್ಯಕ್‌ಪ್ರಕೃತಿ ಮಿಥ್ಯಾತ್ವ. ಚಾರಿತ್ರ ಮೋಹದ ೨೫ ಭೇದಗಳಿವೆ - ಅನಂತಾನುಬಂಧಿ, ಅಪ್ರತ್ಯಾಖ್ಯಾನಾವರಣ, ಪ್ರತ್ಯಾಖ್ಯಾನಾವರಣ, ಸಂಜ್ವಲನ - ಇವು ನಾಲ್ಕರ ಕ್ರೋಧ, ಮಾನ, ಮಾಯೆ, ಲೋಭದಿಂದ ಹದಿನಾರು ಭೇದಗಳು. ಹಾಸ್ಯ , ರತಿ, ಅರತಿ, ಶೋಕ, ಭಯ, ಜುಗುಪ್ಸೆ, ಪುರುಷವೇದ, ಸ್ತ್ರೀವೇದ, ನಪುಂಸಕವೇದ - ಇವು ಒಂಭತ್ತು ನೋಕಷಾಯಗಳು- ಈ ಪ್ರಕಾರ ಒಟ್ಟು ಇಪ್ಪತ್ತೈದು ಚಾರಿತ್ರ ಮೋಹನೀಯದ ಭೇದಗಳಿವೆ. ಇವುಗಳ ಸಾಮಾನ್ಯ ಅರ್ಥ ಹೇಳುತ್ತಾರೆ.

ಅನಂತಾನುಬಂಧಿಯ ಚೌಕಡಿ - ಅನಂತಾನುಬಂಧೀ ಕ್ರೋಧ - ಮಹಾತೀವ್ರ ಪಾಷಾಣ ರೇಖೆಯ ಸಮಾನವಿದೆ. ಅದರ ವಾಸನಾ ಕಾಲವು ಅನಂತ ಭವದಲ್ಲಿಯೂ ಹೋಗುವುದಿಲ್ಲ. ಯಾರೊಂದಿಗೆ ಒಂದು ಸಲ ಕ್ರೋಧವಾಗಿ ಹೋಗಿದ್ದರೆ ಅನಂತಭವಗಳ ನಂತರವೂ ಅವರ ಕುರಿತಾಗಿ ಸಮತೆಯ ಭಾವವಾಗುವುದಿಲ್ಲ. ಅದರ ಉದಯದಿಂದ ಜೀವನು ಅನಂತ

ಕಾಲ ಸಂಸಾರದಲ್ಲಿ ಸುತ್ತುತ್ತಾನೆ. ಹೀಗೆ ಅನಂತಾನುಬಂಧೀ ಕ್ರೋಧವಿದೆಯೆಂದು ತಿಳಿಯುವುದು.

ಅನಂತಾನುಬಂಧೀ ಮಾನ - ಮಹಾತೀವ್ರ ಪಾಷಾಣ ಸ್ತಂಭದ ಸಮಾನವಿದೆ. ಮಾನೀ, ಕಠೋರ ಪರಿಣಾಮಿ, ಪ್ರಾಣ ಕೊಡುವ ಬೆಲೆತೆತ್ತು ಕೂಡ ಬಾಗುವುದಿಲ್ಲ. ಇದರದೂ ವಾಸನಾ ಕಾಲವು ಅನಂತಕಾಲವಿದೆ. ಒಂದು ಬಾರಿ ಯಾರಿಂದ ಮಾನವು ಖಂಡಿತವಾಗಿ ಹೋಗಿದ್ದರೆ ಅವರ ಕುರಿತಾಗಿ ಅನಂತ ಭವದಲ್ಲಿಯೂ ನಿರ್ಮಾನ ಭಾವದಿಂದ ಬಾಗುವುದಿಲ್ಲ - ಹೀಗೆ ಅನಂತಾನುಬಂಧೀ ಮಾನವಿದೆಯೆಂದು ತಿಳಿಯುವುದು.

ಅನಂತಾನುಬಂಧೀ ಮಾಯೆ - ಮಹಾತೀವ್ರ ಬಿದಿರಿನ ಮೂಲದ ಗಂಟುಗಳ ಸಮಾನ ಮಾತು ಮಾತಿನಲ್ಲಿ ಕುಟಿಲತೆಯರೂಪದ ಭಾವಗಳಿರುತ್ತವೆ. ಇದರ ವಾಸನಾ ಕಾಲವು ಅನಂತಕಾಲವಿದೆ. ಯಾರಿಂದ ಒಂದು ಬಾರಿ ಪರಿಣತಿಯಲ್ಲಿ ದ್ವೇಷ ಭಾವವಾದರೆ ಅನಂತಕಾಲದಲ್ಲಿಯೂ ಅವರಲ್ಲಿ ನಿಃಶಲ್ಯಭಾವ, ಸರಳತೆಯಾಗುವುದಿಲ್ಲ. ಅದನ್ನು ಅನಂತಾನುಬಂಧೀ ಮಾಯೆಯೆಂದು ತಿಳಿಯುವುದು.

ಅನಂತಾನುಬಂಧೀ ಲೋಭ - ಮಹಾತೀವ್ರ ಕ್ಯಾನವಾಸ ಬಟ್ಟೆಯ ವರ್ಣದ ಸಮಾನವಿದೆ ಎಂದರೆ ಬಟ್ಟೆಯು ಹರಿದು ಹೋದರೂ ಅದಕ್ಕೆ ತಗಲಿದ ವರ್ಣವು ಹೋಗುವುದಿಲ್ಲ ಹಾಗೆಯೇ ಈ ಲೋಭವಿದೆ. ಇದರ ವಾಸನಾ ಕಾಲವು ಅನಂತವಿದೆ. ಒಂದು ಬಾರಿ ಲೋಭವು ಪ್ರಕಟವಾಗಿ ಹೋದಮೇಲೆ ಅನಂತಕಾಲದ ನಂತರವೂ ಕೂಡ ಸಮತೆಯ ಭಾವವು, ನಿರ್ಲೋಭತೆಯು ಪ್ರಕಟವಾಗುವುದಿಲ್ಲ.

ಈ ಪ್ರಕಾರ ಈ ಅನಂತಾನುಬಂಧಿಯ ಚೌಕಡಿ ಇದೆ. ಇದರ ಫಲದಿಂದ ಅನಂತಕಾಲದವರೆಗೆ ಸಂಸಾರದೊಳಗಿನ ಪರಿಭ್ರಮಣವು ನಾಶವಾಗುವುದಿಲ್ಲ. ಇದರ ಉದಯವಿದ್ದಮೇಲೆ ಸಮ್ಯಕ್‌ಭಾವವಾಗುವುದಿಲ್ಲ.

ಅಪ್ರತ್ಯಾಖ್ಯಾನದ ಚೌಕಡಿ - ಅಪ್ರತ್ಯಾಖ್ಯಾನ ಕ್ರೋಧವು ಸ್ವಲ್ಪ ಮಂದವಿದೆ. ನೇಗಿಲ ರೇಖೆಯಂತೆ. ಯಾವ ಪ್ರಕಾರ ನೇಗಿಲದ ರೇಖೆಯು ಆರು ತಿಂಗಳದಲ್ಲಿ ಮಳೆ ಮೊದಲಾದವುಗಳ ಕಾರಣ ಪಡೆದು ನಾಶವಾಗುತ್ತದೆ ಹಾಗೆಯೇ ಅಪ್ರತ್ಯಾಖ್ಯಾನ ಕ್ರೋಧವು ನಾಶವಾಗಿ ಹೋಗುತ್ತದೆ.

ಅಪ್ರತ್ಯಾಖ್ಯಾನ ಮಾನ - ಇದು ಅಸ್ಥಿ ಸ್ತಂಭದ ಸಮಾನವಿದೆ. ಹೇಗೆ ಅಸ್ಥಿಯ ಸ್ತಂಭವು ವಿಶೇಷ ಪ್ರಯತ್ನ ಮಾಡಿದ ಮೇಲೆ ಬಾಗುತ್ತದೆ, ಹಾಗೆಯೇ ಈ ಮಾನವು ಕಾರಣಪಡೆದು ವಿಶೇಷ ಕಾಲವು ಕಳೆದು ಹೋದಮೇಲೆ ನಾಶವಾಗಿ ಬಿಡುತ್ತದೆ.

ಅಪ್ರತ್ಯಾಖ್ಯಾನ ಮಾಯೆ - ಜಿಂಕೆಯ ಕೋಡುಗಳ ಸಮಾನ. ಗಂಟನ್ನು ಧಾರಣ ಮಾಡುತ್ತದೆ. ಈ ಮಾಯೆಯು ಬಹುಕಾಲವು ಕಳೆದು ಹೋದ ಮೇಲೆ ನಾಶವಾಗಿ ಬಿಡುತ್ತದೆ.

ಅಪ್ರತ್ಯಾಖ್ಯಾನ ಲೋಭ - ಕುಸುಂಭದ ವರ್ಣದ ಸಮಾನ. ಹೇಗೆ ವಿಶೇಷ ಪ್ರಯತ್ನದಿಂದ ಕುಸುಂಭದ ವರ್ಣವು ನಾಶವಾಗಿ ಬಿಡುತ್ತದೆ ಹಾಗೆಯೇ ಬಹಳಷ್ಟು ಕಾಲವು ಕಳೆದು ಹೋದ ಮೇಲೆ ಈ ಲೋಭವು ಹೊರಟು ಹೋಗುತ್ತದೆ.

ಈ ಪ್ರಕಾರ ಈ ಅಪ್ರತ್ಯಾಖ್ಯಾನದ ಚೌಕಡಿಯು ಶ್ರಾವಕರ ಅಣುವ್ರತಗಳ ಸ್ಥಾನರೂಪ ಪಂಚಮ ಗುಣಸ್ಥಾನವನ್ನು ತಡೆಯುತ್ತದೆ - ಇದರ ಉದಯದಲ್ಲಿ ಪಂಚಮ ಗುಣಸ್ಥಾನವಾಗುವುದಿಲ್ಲ.

ಪ್ರತ್ಯಾಖ್ಯಾನ ಚೌಕಡಿ - ಪ್ರತ್ಯಾಖ್ಯಾನ ಕ್ರೋಧವು ವಾಹನದ ರೇಖೆಯ ಸಮಾನವಿದೆ. ಹೇಗೆ ಪ್ರಹರ (ಮೂರು ಗಂಟೆ) ನಾಲ್ಕು, ಐದು ದಿವಸ ಅಥವಾ ಪಕ್ಷ(೧೫ ದಿನ)ದಲ್ಲಿ ವಾಹನದ ರೇಖೆಯು ನಾಶವಾಗಿ ಬಿಡುತ್ತದೆ ಅದೇ ಪ್ರಕಾರ ಅಲ್ಪ ಕಾಲದಲ್ಲಿ ಪ್ರತ್ಯಾಖ್ಯಾನದ ಕ್ರೋಧವು ಉಪಶಮವಾಗಿ ಹೋಗುತ್ತದೆ.

ಪ್ರತ್ಯಾಖ್ಯಾನ ಮಾನ - ಇದು ಸ್ವಲ್ಪ ಮಂದವಿದ್ದು ಹೇಗೆ ಕಾಷ್ಠದ ಸ್ಥಂಭವು ಅಲ್ಪ ಪ್ರಯತ್ನದಿಂದ ಬಾಗುತ್ತದೆ, ಹಾಗೆಯೇ ಕೇವಲ ಸ್ತುತಿ ಮಾಡುವುದರಿಂದ ಇದು ಅಲ್ಪ ಕಾಲದಲ್ಲಿ ಉಪಶಾಂತವಾಗಿ ಹೋಗುತ್ತದೆ.

ಪ್ರತ್ಯಾಖ್ಯಾನ ಮಾಯೆ - ಮೇಕೆಯ ಕೋಡುಗಳಲ್ಲಿ ಅಲ್ಪ ಗಂಟು ಇರುತ್ತದೆ ಹಾಗೆಯೇ ಈ ಮಾಯೆಯ ಉದಯವು ಅಲ್ಪ ಕಾಲವಿದ್ದು ನಾಶವಾಗಿ ಹೋಗುತ್ತದೆ.

ಪ್ರತ್ಯಾಖ್ಯಾನ ಲೋಭ - ಇದು ಅರಿಶಿಣದ ವರ್ಣದ ಸಮಾನವಿರುತ್ತದೆ. ಹೇಗೆ ಅರಿಶಿಣದ ವರ್ಣವು ಅಲ್ಪ ಪ್ರಯತ್ನದಿಂದ ನಾಶವಾಗಿ ಬಿಡುತ್ತದೆ ಹಾಗೆಯೇ ಪ್ರತ್ಯಾಖ್ಯಾನ ಲೋಭವು ಶೀಘ್ರವೇ ನಾಶವಾಗಿ ಹೋಗುತ್ತದೆ.

ಈ ಪ್ರಕಾರ ಪ್ರತ್ಯಾಖ್ಯಾನ ಚೌಕಡಿಯಿದ್ದು ಇದು ತನ್ನ ಉದಯದಲ್ಲಿ ಮುನಿಪದವಾಗಗೊಡುವುದಿಲ್ಲ.

ಸಂಜ್ವಲನದ ಚೌಕಡಿ - ಸಂಜ್ವಲನದ ಕ್ರೋಧವು ಮಹಾ ಮಂದವಿದೆ. ಹೇಗೆ ಜಲದ ಮೇಲಿನ ರೇಖೆಯು ಕೂಡಲೇ ನಷ್ಟವಾಗಿ ಹೋಗುತ್ತದೆ, ಹಾಗೆಯೇ ಈ ಸಂಜ್ವಲನ ಕ್ರೋಧವು ನಾಶವಾಗಿ ಹೋಗುತ್ತದೆ.

ಸಂಜ್ವಲನ ಮಾನ - ಇದು ಉದಯಹೊಂದಿ ಬಿದಿರಿನ ಸಮಾನ ತಕ್ಷಣವೇ ಮಾರ್ದವಭಾವವಾಗುತ್ತದೆ, ಹೇಗೆ ಹಸಿ ಬಿದಿರಿನ ಸ್ತಂಭವು ತಕ್ಷಣವೇ ಬಾಗುತ್ತದೆ ಹಾಗೆಂದು ತಿಳಿಯುವುದು.

ಸಂಜ್ವಲನ ಮಾಯೆ - ಇದು ಹಸುವಿನ ಕೊಂಬುಗಳ ಸಮಾನ ಸ್ವಲ್ಪ ವಕ್ರವಿದ್ದು ಸರಳವಿದೆ. ಇದರ ಉದಯವಿದ್ದ ಮೇಲೆ ಅಲ್ಪರಸ - ಫಲಕೊಟ್ಟು ತಕ್ಷಣವೇ ನಾಶವಾಗಿ ಹೋಗುತ್ತವೆ.

ಸಂಜ್ವಲನ ಲೋಭ - ಇದು ಪಾತರಗಿತ್ತಿ ಮೊದಲಾದವುಗಳ ವರ್ಣಗಳ ಸಮಾನವಿದೆ. ಹೇಗೆ ಪಾತರಗಿತ್ತಿ ಮೊದಲಾದವುಗಳ ವರ್ಣವು ತಕ್ಷಣ ನಾಶವಾಗಿ ಬಿಡುತ್ತದೆ ಹಾಗೆಯೇ ಸಂಜ್ವಲನ ಲೋಭದ ಉದಯವಾಗಿ ಅಲ್ಪರಸವಿತ್ತು ಹೊರಟು ಹೋಗುತ್ತದೆ.

ಈ ಪ್ರಕಾರ ಸಂಜ್ವಲನದ ಚೌಕಡಿಯು ತನ್ನ ಉದಯವಿದ್ದಮೇಲೆ ಯಥಾಖ್ಯಾತ ಚಾರಿತ್ರವಾಗಗೊಡುವುದಿಲ್ಲ. (ಗೊಮ್ಮಟಸಾರ ಜೀವಕಾಂಡ ಗ್ರಂಥದಲ್ಲಿ ಈ ಉದಾಹರಣೆಗಳು ಬೇರೆ ಇವೆ ಆದುದರಿಂದ ಗೊಮ್ಮಟಸಾರ ಜೀವಕಾಂಡದ ೨೮೪ ರಿಂದ ೨೮೭ ಗಾಥೆಗಳು ದೃಷ್ಟವ್ಯವಿವೆ) - ಇವಂತೂ ಸಾಮಾನ್ಯ ಹದಿನಾರು ಕಷಾಯಗಳೆಂದು ತಿಳಿಯುವುದು.

ಒಂಭತ್ತು ನೋ ಕಷಾಯಗಳು - ಯಾವುದರ ಉದಯದಲ್ಲಿ ಜೀವರುಗಳಿಗೆ ಹಾಸ್ಯ , ಕೌತುಕವು ಪ್ರಕಟವಾಗುತ್ತದೆ ಅದು ಹಾಸ್ಯ ಕರ್ಮವಿದೆ. ಯಾವುದರ ಉದಯದಲ್ಲಿ ಜೀವನಿಗೆ ಪರವಸ್ತುವು ಶುಭವೆನಿಸುತ್ತದೆ, ಸುಖ ಉತ್ಪನ್ನಮಾಡುತ್ತದೆ ಅದು ರತಿಕರ್ಮವಿದೆ. ಯಾವುದರ ಉದಯದಲ್ಲಿ ಜೀವನಿಗೆ ಪರವಸ್ತುಗಳು ಅನಿಷ್ಟವೆನಿಸುತ್ತವೆ ಅದು ಅರತಿಕರ್ಮವಿದೆ. ಯಾವುದರ ಉದಯದಲ್ಲಿ ಜೀವನಿಗೆ ಚಿಂತೆ-ಶೋಕವಾಗುತ್ತದೆ ಅದು ಶೋಕಕರ್ಮವಿದೆ. ಯಾವ ಕರ್ಮದ ಉದಯದಲ್ಲಿ ಜೀವದ ಹೃದಯವು ಕಂಪಾಯಮಾನವಾಗುತ್ತದೆ, ಪರವಸ್ತುವಿನ ಕುರಿತು ಭಯ ಉತ್ಪನ್ನವಾಗುತ್ತದೆ ಅದು ಭಯ ಕರ್ಮವಿದೆ. ಯಾವ ಕರ್ಮದ ಉದಯದಲ್ಲಿ ಜೀವನಿಗೆ ಪರವಸ್ತುವನ್ನು ಕಂಡು ಗ್ಲಾನಿಯು ಉತ್ಪನ್ನವಾಗುತ್ತದೆ ಅದು ಜುಗುಪ್ಸಾ ಕರ್ಮವಿದೆ. ಯಾವ ಕರ್ಮದ ಉದಯದಲ್ಲಿ ಜೀವನಿಗೆ ಸ್ತ್ರೀಯ ಸ್ಪರ್ಶ ಮೊದಲಾದವುಗಳನ್ನು ಮಾಡುವ ಅಭಿಲಾಷೆಯಾಗುತ್ತದೆ ಅದು ಪುರುಷವೇದ ಕರ್ಮವಿದೆ. ಯಾವ ಕರ್ಮದ ಉದಯದಲ್ಲಿ ಜೀವನಿಗೆ ಪುರುಷನ ಸೇವನೆ -ಸ್ಪರ್ಶ ಮೊದಲಾದವುಗಳ ಇಚ್ಛೆಯಾಗುತ್ತದೆ ಅದು ಸ್ತ್ರೀವೇದ ಕರ್ಮವಿದೆ. ಯಾವ ಕರ್ಮದ ಉದಯದಲ್ಲಿ ಯುಗಪತ್ ಸ್ತ್ರೀ ಪುರುಷರ ಸ್ಪರ್ಶದ ಇಚ್ಛೆಯರೂಪದ ಭಾವವಾಗುತ್ತದೆ ಅದು ನಪುಂಸಕವೇದ ಕರ್ಮವಿದೆ - ಈ ಪ್ರಕಾರ ಇವು ಚಾರಿತ್ರ ಮೋಹದ ೨೫ ಪ್ರಕೃತಿಗಳಿವೆ.

ದರ್ಶನ ಮೋಹದ ಸ್ವರೂಪವನ್ನು ಮುಂದೆ ಹೇಳಲಾಗುವುದು.

ದೇವಾಯುವಿನ ಉದಯವು ಎಷ್ಟು ಕಾಲವಿರುತ್ತದೆ ಅಷ್ಟುಕಾಲ ದೇವನ ಶರೀರವು ಆತ್ಮನಿಂದ ಭಿನ್ನವಾಗುವುದಿಲ್ಲ, ಅದು ದೇವ ಆಯು ಕರ್ಮವಿದೆ. ಯಾವುದರ ಉದಯದಲ್ಲಿ ಮನುಷ್ಯನ ಶರೀರವು ಆತ್ಮನಿಂದ ಬೇರೆಯಾಗುವುದಿಲ್ಲ, ಅದು ಮನುಷ್ಯಆಯು ಕರ್ಮವಿದೆ. ಯಾವ ಕರ್ಮದ ಉದಯದಲ್ಲಿ ಜೀವನು ತಿರ್ಯಂಚ ಗತಿಯನ್ನು ಬಿಟ್ಟು

ಕೊಡಲಾಗುವುದಿಲ್ಲ, ಅದು ತಿರ್ಯಂಚ ಆಯು ಕರ್ಮವಿದೆ. ಯಾವ ಕರ್ಮದ ಉದಯದಲ್ಲಿ ಜೀವವು ನಾರಕಿಯ ಶರೀರವನ್ನು ಬಿಡುವುದು ಸಾಧ್ಯವಾಗುವುದಿಲ್ಲ, ಅದು ನಾರಕ ಆಯುಕರ್ಮವಿದೆ - ಈ ಪ್ರಕಾರ ನಾಲ್ಕು ಆಯು ಕರ್ಮಗಳಿವೆ.

ನಾಮಕರ್ಮ ವರ್ಣಚತುಷ್ಕ - ಅದರಲ್ಲಿ ಸ್ಪರ್ಶದ ಎಂಟು -ಯಾವುದರ ಉದಯದಲ್ಲಿ ಶರೀರವು ಕಠೋರವಿರುತ್ತದೆ, ಅದು ಕಠೋರ ಕರ್ಮವಿದೆ. ಶರೀರವು ಕೋಮಲವಿರುತ್ತದೆ, ಅದು ಕೋಮಲ ಕರ್ಮವಿದೆ; ಶರೀರವು ಭಾರವುಳ್ಳದ್ದಿರುತ್ತದೆ ಅದು ಭಾರಕರ್ಮವಿದೆ, ಶರೀರವು ಹಗುರವಿರುತ್ತದೆ ಅದು ಹಗುರ ಕರ್ಮವಿದೆ; ಶರೀರವು ಉಷ್ಣವಿರುತ್ತದೆ ಅದು ಉಷ್ಣಕರ್ಮವಿದೆ; ಶರೀರವು ಶೀತಲವಿರುತ್ತದೆ ಅದು ಶೀತಲಕರ್ಮವಿದೆ; ಶರೀರವು ಸ್ನಿಗ್ಧವಿರುತ್ತದೆ, ಅದು ಸ್ನಿಗ್ಧಕರ್ಮವಿದೆ, ಶರೀರವು ರೂಕ್ಷವಿದ್ದರೆ ಅದು ರೂಕ್ಷಕರ್ಮವಿದೆ.

ರಸದ ಐದು ಪ್ರಕಾರ - ಯಾವುದರ ಉದಯದಲ್ಲಿ ಶರೀರವು ಕಹಿ ಇರುತ್ತದೆ ಅದು ಕಹಿ ಕರ್ಮವಿದೆ, ಶರೀರವು ಸಿಹಿ ಇದ್ದರೆ ಅದು ಸಿಹಿ ಕರ್ಮವಿದೆ, ಶರೀರವು ಒಗರು ಇದ್ದರೆ ಅದು ಒಗರು ಕರ್ಮವಿದೆ, ಶರೀರವು ಹುಳಿ ಇದ್ದರೆ ಅದು ಹುಳಿ ಕರ್ಮವಿದೆ, ಶರೀರವು ಖಾರವಿದ್ದರೆ ಅದು ಖಾರ ಕರ್ಮವಿದೆ.

ಗಂಧದ ಎರಡು ಭೇದಗಳು - ಯಾವುದರ ಉದಯದಿಂದ ಶರೀರದಲ್ಲಿ ಸುಗಂಧವಿರುತ್ತದೆ ಅದು ಸುಗಂಧ ಕರ್ಮವಿದೆ; ಶರೀರದಲ್ಲಿ ದುರ್ಗಂಧವಿದ್ದರೆ ದುರ್ಗಂಧ ಕರ್ಮವಿದೆ.

ವರ್ಣ ಕರ್ಮದ ಐದು ಭೇದಗಳು - ಯಾವುದರ ಉದಯದಲ್ಲಿ ಶರೀರವು ಕೆಂಪು ಇರುತ್ತದೆ ಅದು ಕೆಂಪು ಕರ್ಮವಿದೆ. ಯಾವುದರ ಉದಯದಲ್ಲಿ ಶರೀರವು ನೀಲಿ ಇರುತ್ತದೆ ಅದು ನೀಲಿ ಕರ್ಮವಿದೆ. ಯಾವುದರ ಉದಯದಲ್ಲಿ ಶರೀರವು ಶ್ಯಾಮ ವಿರುತ್ತದೆ ಅದು ಶ್ಯಾಮ ಕರ್ಮವಿದೆ. ಯಾವುದರ ಉದಯದಲ್ಲಿ ಶರೀರವು ಹಳದಿ ಇರುತ್ತದೆ ಅದು ಹಳದಿ ಕರ್ಮವಿದೆ. ಯಾವುದರ ಉದಯದಲ್ಲಿ ಶರೀರವು ಶ್ವೇತವಿರುತ್ತದೆ ಅದು ಶ್ವೇತ ಕರ್ಮವಿದೆ.

ಈ ಪ್ರಕಾರ ಸ್ಪರ್ಶ, ರಸ, ಗಂಧ, ವರ್ಣ - ಇವು ವರ್ಣ ಚತುಷ್ಕವಿವೆ.

ಆರು ಸಂಹನನ - ವಜ್ರವೃಷಭನಾರಾಚ, ವಜ್ರನಾರಾಚ, ನಾರಾಚ, ಅರ್ಧನಾರಾಚ, ಕೀಲಿಕ, ಸ್ಫಾಟಿಕ (ಅಸಂಪ್ರಾಪ್ತಾಸೃಪಾಟಿಕಾ) - ಇವು ಆರು ಸಂಹನನಗಳಿವೆ.

ವೃಷಭವೆಂದು ಸ್ನಾಯುಗಳಿಗೆ ಹೇಳುತ್ತಾರೆ ಮತ್ತು ನಾರಾಚವೆಂದು (ಜೋಡಣೆ)ಕೀಲುಗಳಿಗೆ ಹೇಳುತ್ತಾರೆ ಹಾಗೂ ಸಂಹನನವೆಂದು ಮೂಳೆಗಳಿಗೆ ಹೇಳುತ್ತಾರೆ ಈ ಪ್ರಕಾರ ಯಾವುದರ ಉದಯದಲ್ಲಿ ಸ್ನಾಯು, ಮೂಳೆ ಮತ್ತು ಕೀಲುಗಳು ವಜ್ರಮಯವಿರುತ್ತವೆ ಅದು ವಜ್ರವೃಷಭನಾರಾಚ ಸಂಹನನ ಕರ್ಮವಿದೆ. ಯಾವುದರ ಉದಯದಿಂದ ಶರೀರದಲ್ಲಿ ಸ್ನಾಯುಗಳಂತೂ ವಜ್ರರಹಿತವಿರುತ್ತವೆ ; ಆದರೆ ಕೀಲು ಮತ್ತು ಮೂಳೆಗಳು ವಜ್ರಮಯವಿರುತ್ತವೆ ಅದು ವಜ್ರನಾರಾಚ ಸಂಹನನ ಕರ್ಮವಿದೆ. ಯಾವುದರ ಉದಯದಲ್ಲಿ ಸಂಧಿಗಳಲ್ಲಿ ದೃಢವಾದ ಜೋಡಣೆ ಇರುತ್ತದೆ; ಮೂಳೆ, ಕೀಲು ಮತ್ತು ಸ್ನಾಯು ಮೂರೂ ವಜ್ರರಹಿತವಿರುತ್ತವೆ,ಅದು ನಾರಾಚ ಸಂಹನನ ಕರ್ಮವಿದೆ. ಯಾವುದರ ಉದಯದಿಂದ ಸಂಧಿಗಳಲ್ಲಿ ಅರ್ಧ ಕೀಲಿಕಾ ಇರುತ್ತದೆ ಅದು ಅರ್ಧನಾರಾಚ ಸಂಹನನ ಕರ್ಮವಿದೆ. ಶರೀರದಲ್ಲಿ ಕೀಲು ರಹಿತ ಮೂಳೆಗಳು ತುದಿಯಿಂದ ತುದಿಯವರೆಗೆ ತಡೆಯಲ್ಪಡುತ್ತವೆ ಹಾಗೂ ಗಂಟುಗಳಿಂದ ದೃಢವಿರುತ್ತವೆ ಅದು ಕೀಲಿಕ ಸಂಹನನ ಕರ್ಮವಿದೆ. ಶರೀರದ ಮೂಳೆಗಳು, ಹುಲ್ಲಿನ ಗುಡ್ಡೆಯ ಸಮಾನ ಸ್ನಾಯುಗಳು ಮತ್ತು ಚರ್ಮದಿಂದ ದೃಢವಿರುತ್ತವೆ ಅದು ಸ್ಫಾಟಿಕಾ ಸಂಹನನ ಕರ್ಮವಿದೆ. - ಈ ಪ್ರಕಾರ ಇವು ಆರು ಸಂಹನನ ಕರ್ಮಗಳಿವೆ.

ಆರು ಸಂಸ್ಥಾನಗಳು - ಸಮಚತುರಸ್ರ , ನ್ಯಗ್ರೋಧಪರಿಮಂಡಲ, ಸ್ವಾತಿ, ಕುಬ್ಜಕ, ವಾಮನ ಮತ್ತು ಹುಂಡಕ- ಇವು ಆರು ಸಂಸ್ಥಾನಗಳಿವೆ. ಯಾವ ಕರ್ಮದ ಉದಯದಲ್ಲಿ ಶರೀರವು ಮಹಾಸುಂದರ, ಶಾಸ್ತ್ರೋಕ್ತ ಪ್ರಮಾಣದ ಅನುಸಾರ ಅಂಗೋಪಾಂಗ ಸಹಿತವಿರುತ್ತದೆ ಅದು ಸಮಚತುರಸ್ರ ಸಂಸ್ಥಾನಕರ್ಮವಿದೆ. ಯಾವುದರ ಉದಯದಲ್ಲಿ ಶರೀರವು

ಮೇಲಿನಿಂದ ಅಗಲ ಮತ್ತು ಕೆಳಗಿನಿಂದ ಕೃಶವಿರುತ್ತದೆ ಅದು ನ್ಯಗ್ರೋಧಪರಿಮಂಡಲ ಸಂಸ್ಥಾನ ಕರ್ಮವಿದೆ. ಶರೀರವು ಮೇಲಿನಿಂದ ಕೃಶವಿದ್ದು ಕೆಳಗಿನಿಂದ ದೀರ್ಘವಿರುತ್ತದೆ ಅದು ಸ್ವಾತಿನಾಮ ಕರ್ಮವಿದೆ. ಶರೀರದಲ್ಲಿ ಬೆನ್ನು, ಎದೆಯು ಎತ್ತರವಿರುತ್ತದೆ ಅದು ಕುಬ್ಜಕ ಸಂಸ್ಥಾನ ಕರ್ಮವಿದೆ. ಶರೀರವು ಕಾಲಮರ್ಯಾದೆಯಿಂದ ಬಹಳಷ್ಟು ಕುಳ್ಳಗಿರುವುದು ಅದು ವಾಮನನಾಮ ಕರ್ಮವಿದೆ. ಶರೀರವು ವಿದ್ರೂಪ ರುಂಡ-ಮುಂಡ, ಹೀನಾಧಿಕ ಅಂಗೋಪಾಂಗ ಸಹಿತ ಅಶುಭವಿರುವುದು ಅದು ಹುಂಡಕ ಸಂಸ್ಥಾನವಿದೆ.

ನಾಲ್ಕು ಗತಿಗಳು - ಯಾವುದರ ಉದಯದಲ್ಲಿ ದೇವದ ಶರೀರವಾಗುತ್ತದೆ ಅದು ದೇವಗತಿಕರ್ಮವಿದೆ. ಯಾವುದರ ಉದಯದಲ್ಲಿ ಮನುಷ್ಯ ಶರೀರವು ಪ್ರಾಪ್ತವಾಗುತ್ತದೆ ಅದು ಮನುಷ್ಯ ಗತಿಕರ್ಮವಿದೆ. ಯಾವ ಕರ್ಮದ ಉದಯದಲ್ಲಿ ತಿರ್ಯಂಚದ ಶರೀರವು ಪ್ರಾಪ್ತವಾಗುತ್ತದೆ ಅದು ತಿರ್ಯಂಚಗತಿ ಕರ್ಮವಿದೆ. ಯಾವ ಕರ್ಮದ ಉದಯದಲ್ಲಿ ನಾರಕ ಶರೀರವು ಪ್ರಾಪ್ತವಾಗುತ್ತದೆ ಅದು ನರಕಗತಿ ಕರ್ಮವಿದೆ.

ನಾಲ್ಕು ಗತ್ಯಾನುಪೂರ್ವೀ - ದೇವಗತಿಯಲ್ಲಿ ಉತ್ಪನ್ನವಾಗುವಂಥ ಮನುಷ್ಯ ಅಥವಾ ತಿರ್ಯಂಚವು ತನ್ನ ಆಯುವನ್ನು ಭೋಗಿಸಿ ಶರೀರವನ್ನು ತ್ಯಾಗ ಮಾಡಿ ಯಾವ ಕರ್ಮದ ಉದಯದಲ್ಲಿ ಅದೇ ಮನುಷ್ಯ ಅಥವಾ ತಿರ್ಯಂಚದ ಆಕಾರ ಆತ್ಮ ಪ್ರದೇಶಗಳನ್ನು ಅಂತರಾಲದಲ್ಲಿ - ವಿಗ್ರಹ ಗತಿಯಲ್ಲಿ ಇರಿಸಿಕೊಳ್ಳುವುದು, ಅನ್ಯರೂಪವಾಗದಿರುವುದು ಅದು ದೇವಗತ್ಯಾನುಪೂರ್ವೀ ಕರ್ಮವಿದೆ. ಮನುಷ್ಯ ಗತಿಯಲ್ಲಿ ಉತ್ಪನ್ನವಾಗುವಂಥ ಜೀವನು ಅನಿಯತಗತಿಯಿಂದ ಬಂದರೆ ಆಗ ಅಲ್ಲಿ ಅವನ ತೈಜಸ ಶರೀರದ ಆಕಾರ ಆತ್ಮಪ್ರದೇಶಗಳನ್ನು ಅಂತರಾಲದಲ್ಲಿ - ವಿಗ್ರಹ ಗತಿಯಲ್ಲಿ ಕಾಯ್ದುಕೊಳ್ಳುವುದು, ಬದಲಿಸದಿರುವುದು ಅದು ಮನುಷ್ಯಗತ್ಯಾನುಪೂರ್ವೀ ಕರ್ಮವಿದೆ.

ಯಾವ ಕರ್ಮದ ಉದಯದಿಂದ ತಿರ್ಯಂಚ ಗತಿಯಲ್ಲಿ ಉತ್ಪನ್ನವಾಗುವಂಥ ಜೀವವು ಯಾವ ಶರೀರವನ್ನು ತ್ಯಾಗ ಮಾಡಿ ಬರುತ್ತದೆ, ಅದರ ಆಕಾರವನ್ನು ಉತ್ಪನ್ನವಾಗುವ ಸ್ಥಾನದವರೆಗೆ ತೆಗೆದುಕೊಂಡು ಹೋಗುವುದು ಅನ್ಯರೂಪವಾಗದಿರುವುದು, ಅದು ತಿರ್ಯಂಚಗತ್ಯಾನುಪೂರ್ವೀ ಕರ್ಮವಿದೆ. ಯಾವ ಕರ್ಮದ ಉದಯದಲ್ಲಿ ನರಕದೊಳಗೆ ಉತ್ಪನ್ನವಾಗುವಂಥ ಜೀವವು ಪರಗತಿಯಲ್ಲಿ ಎಂಥ ಶರೀರವನ್ನು ಬಿಟ್ಟಿದೆ, ಅಂಥದೇ ಆಕಾರ ನರಕದಲ್ಲಿ ಉತ್ಪನ್ನವಾಗುವ ಸ್ಥಾನದವರೆಗೆ ತೆಗೆದುಕೊಂಡು ಬರುವುದು, ಆತ್ಮಪ್ರದೇಶಗಳು ಅನ್ಯರೂಪವಾಗಗೊಡದಿರುವುದು, ಅದು ನರಕಗತ್ಯಾನುಪೂರ್ವೀ ಕರ್ಮವಿದೆ.

ಪಂಚ ಶರೀರಗಳು - ಯಾವ ಕರ್ಮದ ಉದಯದಲ್ಲಿ ಗ್ರಹಣ ಮಾಡಿದ ಪುದ್ಗಲಗಳ ಪರಿಣಮನವು ಮನುಷ್ಯ-ತಿರ್ಯಂಚಗಳ ಶರೀರರೂಪವಿರುವುದು, ಅದು ಔದಾರಿಕ ಶರೀರವಿದೆ, ಯಾವ ಕರ್ಮದ ಉದಯದಲ್ಲಿ ವೈಕ್ರಿಯಿಕ ಶರೀರರೂಪ ಪುದ್ಗಲಗಳನ್ನು ಪರಿಣಮಿತಗೊಳಿಸಿ ಶರೀರದ ಬಂಧನ (ಸಂಘಟನ) ಮಾಡಿಕೊಂಡು ಪುಣ್ಯ-ಪಾಪಗಳ ಫಲದಿಂದ ದೇವ, ನಾರಕಿಯಾಗುತ್ತಾನೆ, ಅದು ವೈಕ್ರಿಯಿಕ ಶರೀರವಿದೆ. ಯಾವುದರ ಉದಯದಲ್ಲಿ ಆಹಾರಕ ಜಾತಿಯ ಶರೀರರೂಪ ಪುದ್ಗಲಗಳ ಸ್ಕಂಧವನ್ನು ಪರಿಣಮಿತಗೊಳಿಸಿ ಆಹಾರಕ ಶರೀರದ ಬಂಧನವಾಗುತ್ತದೆ ಅದು ಆಹಾರಕ ಶರೀರವಿದೆ. ಯಾವ ಕರ್ಮದ ಉದಯದಲ್ಲಿ ತೈಜಸ ಜಾತಿಯ ಪುದ್ಗಲಗಳನ್ನು ಗ್ರಹಣ ಮಾಡಿ ಆತ್ಮನು ಶರೀರದ ಬಂಧನರೂಪ ಮಾಡುವನು ಅದು ತೈಜಸ ಶರೀರವಿದೆ. ಯಾವ ಕರ್ಮದ ಉದಯದಲ್ಲಿ ಸಂಸಾರಿ ಜೀವನು ಪೂರ್ವಬದ್ಧ ಕರ್ಮದ ಉದಯದಿಂದ ಆಗುವಂಥ ಶುಭಾಶುಭ ಪರಿಣಾಮಗಳಿಂದ ಜ್ಞಾನಾವರಣಾದಿ ಕರ್ಮರೂಪವಾಗಲು ಯೋಗ್ಯವಿರುವ ಕಾರ್ಮಣ ವರ್ಗಣಾಮಯ ಪುದ್ಗಲ ಸ್ಕಂಧಗಳನ್ನು ಗ್ರಹಣ ಮಾಡಿ ಅಷ್ಟ ಕರ್ಮರೂಪ ಶರೀರದ ಬಂಧನ ಮಾಡಿಕೊಳ್ಳುವನು ಅದು ಕಾರ್ಮಣ ಶರೀರವಿದೆ.

ಪಂಚ ಬಂಧನ ಮತ್ತು ಪಂಚ ಸಂಘಾತ - ಹೇಗೆ ಗಾರೆ, ಇಟ್ಟಿಗೆ, ಪಾಷಾಣಾದಿಗಳಿಂದ ಗೋಡೆಯನ್ನು

ನಿರ್ಮಿಸಲಾಗುತ್ತದೆ, ಅದಂತೂ ಬಂಧನವಿದೆ ಹಾಗೂ ಆ ಗೋಡೆಯ ಮೇಲೆ ಲೇಪ ಮಾಡಿ ಅದನ್ನು ಸರಿಪಡಿಸಲಾಗುವುದು (ಸ್ನಿಗ್ಧಗೊಳಿಸಲಾಗುವುದು) ಅದು ಸಂಘಾತವಿದೆ. ಅದೇ ಪ್ರಕಾರ ಶರೀರಗಳ ಬಂಧನ - ಸಂಘಾತವಿವೆ. ಅಲ್ಲಿ ಇವು ಐದು ಶರೀರಗಳ ಸ್ನಾಯು, ಮೂಳೆ, ಮಾಂಸಾದಿ ಅವಯವಗಳ ಬಂಧನ ಮಾಡಿ ಶರೀರರೂಪಗೊಳಿಸುವುದು ಬಂಧನವಿದೆ. ಇವು ಐದೂ ಶರೀರಗಳ ಅನುಸಾರವೆಂದೇ ತಿಳಿಯುವುದು ಹಾಗೂ ಈ ಶರೀರಗಳಲ್ಲಿ ಚರ್ಮಾದಿಗಳ ಹೊದಿಕೆಯರೂಪದಿಂದ ಶುದ್ಧಗೊಳಿಸಲಾಗುವುದು ಅವು ಐದು ಸಂಘಾತವಿವೆ.

ಐದು ಜಾತಿ - ಅಲ್ಲಿ ಯಾವುದರ ಉದಯದಿಂದ ಏಕೇಂದ್ರಿಯದ ಕ್ಷಯೋಪಶಮವಿರುತ್ತದೆ ಅದರಿಂದ ಸ್ಪರ್ಶನ ಇಂದ್ರಿಯ ಸಹಿತ ಏಕೇಂದ್ರಿಯದ ಶರೀರದಲ್ಲಿ ಆತ್ಮನ ಇರುವಿಕೆಯು ಅದು ಏಕೇಂದ್ರಿಯ ಜಾತಿಯಿದೆ. ಯಾವ ಕರ್ಮದಉದಯದಿಂದ ಸ್ಪರ್ಶನ, ರಸನಾ -ಇವು ಎರಡು ಇಂದ್ರಿಯಗಳ ಕ್ಷಯೋಪಶಮ ಸಹಿತ ಶರೀರದಲ್ಲಿ ಆತ್ಮನ ಇರುವಿಕೆಯು, ಅದು ದ್ವೀಂದ್ರಿಯ ಜಾತಿ ಇದೆ. ಯಾವ ಕರ್ಮದ ಉದಯದಿಂದ ಸ್ಪರ್ಶನ, ರಸನ, ಘ್ರಾಣ ಇವು ಮೂರು ಇಂದ್ರಿಯಗಳ ಕ್ಷಯೋಪಶಮ ಸಹಿತ ಶರೀರದ ಧಾರಣವಾಗುವುದು ಅದು ತ್ರೀಂದ್ರಿಯ ಜಾತಿ ಇದೆ. ಯಾವ ಕರ್ಮದ ಉದಯದಲ್ಲಿ ಸ್ಪರ್ಶನ, ರಸನ, ಘ್ರಾಣ ಮತ್ತು ಚಕ್ಷು -ಇವು ನಾಲ್ಕು ಇಂದ್ರಿಯಗಳ ಕ್ಷಯೋಪಶಮ ಸಹಿತ ಶರೀರದ ಧಾರಣವಾಗುವುದು ಅದು ಚತುರಿಂದ್ರಿಯ ಜಾತಿ ಇದೆ. ಯಾವ ಕರ್ಮದ ಉದಯದಿಂದ ಐದೂ ಇಂದ್ರಿಯಗಳ ಕ್ಷಯೋಪಶಮ ಸಹಿತ ಶರೀರದ ಧಾರಣವಾಗುವುದು ಅದು ಪಂಚೇಂದ್ರಿಯ ಜಾತಿ ಇದೆ.

ಅಂಗೋಪಾಂಗ - ಎರಡು ಕೈಗಳು, ಎರಡು ಕಾಲುಗಳು, ಒಂದು ಮಸ್ತಕ, ಒಂದು ನಿತಂಬ, ಒಂದು ಎದೆ, ಒಂದು ಬೆನ್ನು - ಇವು ಎಂಟಂತೂ ಅಂಗಗಳಿವೆ ಹಾಗೂ ಅಂಗಗಳಲ್ಲಿ ಯಾವ ಲಕ್ಷಣಗಳಿರುತ್ತವೆ ಅವು ಉಪಾಂಗಗಳಿವೆ. ಹೇಗೆ ತಲೆಯಲ್ಲಿ ಕಣ್ಣು, ಮೂಗು, ಬಾಯಿ, ಕಿವಿ ಮೊದಲಾದವು ಉಪಾಂಗಗಳಿವೆ ಹಾಗೂ ಕೈ ಕಾಲುಗಳ ಬೆರಳು ಮೊದಲಾದ ಅನೇಕ ಚಿನ್ಹೆಗಳು ಉಪಾಂಗವಿವೆ.

ಈ ಅಂಗ-ಉಪಾಂಗಗಳು ಮೂರು ಶರೀರಗಳಲ್ಲಿ ಇರುತ್ತವೆ; ತೈಜಸ, ಕಾರ್ಮಣದಲ್ಲಿ ಇರುವುದಿಲ್ಲ. ಅಲ್ಲಿ ಯಾವ ಕರ್ಮದ ಉದಯದಿಂದ ಮನುಷ್ಯ ತಿರ್ಯಂಚಗಳ ಶರೀರದಲ್ಲಿ ಅಂಗೋಪಾಂಗಗಳಾಗುತ್ತವೆ ಅದು ಔದಾರಿಕ ಅಂಗೋಪಾಂಗವಿದೆ. ಯಾವ ಕರ್ಮದ ಉದಯದಿಂದ ಪ್ರಮತ್ತಗುಣಸ್ಥಾನವರ್ತಿ ಮುನೀಶ್ವರರ ಮಸ್ತಕದಿಂದ ಸಂಶಯಾದಿಗಳ ನಿಮಿತ್ತ ಪಡೆದು ಉತ್ಪನ್ನವಾಗುವಂಥ ಆಹಾರಕ ಶರೀರದಲ್ಲಿ ಅಂಗೋಪಾಂಗವಿರುವುದು ಅದು ಆಹಾರಕ ಅಂಗೋಪಾಂಗವಿದೆ. ಯಾವ ಕರ್ಮದ ಉದಯದಲ್ಲಿ ದೇವ, ನಾರಕಿಗಳ ವೈಕ್ರಿಯಿಕ ಶರೀರದಲ್ಲಿ ಅಂಗೋಪಾಂಗಗಳು ಇರುವುದು ಅದು ವೈಕ್ರಿಯಿಕ ಅಂಗೋಪಾಂಗವಿದೆ.

ವಿಹಾಯೋಗತಿ ಕರ್ಮ - ಯಾವ ಕರ್ಮದ ಉದಯದಲ್ಲಿ ಜೀವದ ಶುಭಾಚರಣೆ ಇರುವುದು, ಅದು ಶುಭ ವಿಹಾಯೋಗತಿ ಕರ್ಮವಿದೆ. ಯಾವುದರ ಉದಯದಲ್ಲಿ ಅಶುಭ ನಡೆವಳಿಕೆ ಇರುವುದು, ಅದು ಅಶುಭ ವಿಹಾಯೋಗತಿ ಕರ್ಮವಿದೆ.

ಈ ಪ್ರಕಾರ ಇವು ಅರವತ್ತೈದು ಪಿಂಡ ಪ್ರಕೃತಿಗಳನ್ನು ಹೇಳಲಾಯಿತು.

ಅಪಿಂಡ ಪ್ರಕೃತಿಗಳು - ಅಲ್ಲಿ ಯಾವ ಕರ್ಮದ ಉದಯದಿಂದ ಜೀವದ ಶರೀರಾಕಾರ ಆತ್ಮ ಪ್ರದೇಶಗಳು ಯಥಾವತ್ ಇರುವವು, ಹಗುರ, ಭಾರವಿರುವುದು ಅದು ಅಗುರುಲಘುಕರ್ಮವಿದೆ. ಯಾವುದರ ಉದಯದಿಂದ ಶರೀರದಲ್ಲಿ ವಾಯುವನ್ನು ಗ್ರಹಣ ಮಾಡುವಂಥ ಮತ್ತು ಬಿಟ್ಟುಕೊಡುವಂಥ ಸ್ಥಾನವಿರುವುದು ಅದು ಶ್ವಾಸೋಚ್ಛ್ವಾಸ ಕರ್ಮವಿದೆ. ಯಾವುದರ ಉದಯದಲ್ಲಿ ಎಂಥ ಶರೀರವಿರುತ್ತದೆಯೆಂದರೆ ಅದು ಮೂಲದಲ್ಲಂತೂ ಶೀತಲವಿರುತ್ತದೆ ಹಾಗೂ ಅದರ ಪ್ರಭೆಯು ಉಷ್ಣವಿರುತ್ತದೆ ಅದು ಆತಪಕರ್ಮವಿದೆ, ಈ ಪ್ರಕೃತಿಯು ಸೂರ್ಯವಿಮಾನ ಸಂಬಂಧದ ಪೃಥ್ವಿಕಾಯಿಕ

ಜೀವದ್ದಿರುತ್ತದೆ. ಈ ಏಕೇಂದ್ರಿಯಗಳನ್ನು ಹೊರತುಪಡಿಸಿ ಇತರ ಸ್ಥಾವರಗಳಲ್ಲಿ ಇಂಥ ಉದಯ ವಿರುವುದಿಲ್ಲ. ಯಾವುದರ ಉದಯದಲ್ಲಿ ಶರೀರವು ಶೀತಲವಿರುತ್ತದೆ ಹಾಗೂ ಅದರ ಪ್ರಭೆಯೂ ಶೀತಲವಿರುತ್ತದೆ ಅದು ಉದ್ಯೋತಕರ್ಮವಿದೆ. ಈ ಪ್ರಕೃತಿಯು ಏಕೇಂದ್ರಿಯ ಮೊದಲಾದ ಪಂಚೇಂದ್ರಿಯ ತಿರ್ಯಂಚಗಳಿಗೆ ಉದಯವಿರುತ್ತದೆ- ಉಳಿದ ಮೂರು ಗತಿಗಳಲ್ಲಿ ಇರುವುದಿಲ್ಲ.

ಯಾವುದರ ಉದಯದಿಂದ ಯಾವ ಶರೀರದಲ್ಲಿ ಎಂಥ ಚಿಹ್ನೆಗಳು ಮತ್ತು ಅಂಗೋಪಾಂಗಗಳು ಇರುತ್ತವೆ ಎಂದರೆ ಅದರಿಂದ ತನ್ನದೇ ಘಾತವಾಗುತ್ತದೆ ಅಂಥ ಸಾರಂಗದ ಕೊಂಬು ಮೊದಲಾದವು, ಅವುಗಳ ಭಾರದಿಂದ ಅದು ಸತ್ತು ಹೋಗುತ್ತದೆ, ಅದು ಉಪಘಾತ ಕರ್ಮವಿದೆ. ಯಾವುದರ ಉದಯದಿಂದ ಶರೀರದಲ್ಲಿ ಎಂಥ ಚಿಹ್ನೆ ಅಂಗೋಪಾಂಗಗಳಿರುತ್ತವೆ, ಅದರಿಂದ ಅದು ಸ್ವಯಂ ಇತರರ ಘಾತಮಾಡಬಹುದಾಗಿದೆ - ಅದು ಪರಘಾತಕರ್ಮವಿದೆ.

ನಿರ್ಮಾಣಪ್ರಕೃತಿಯ ಎರಡು ಭೇದಗಳು - ೧) ಸ್ಥಾನ ನಿರ್ಮಾಣ, ೨) ಪ್ರಮಾಣ ನಿರ್ಮಾಣ. ಯಾವುದರ ಉದಯದಿಂದ ಶರೀರದಲ್ಲಿ ಅಂಗೋಪಾಂಗಗಳು ಯಥಾಸ್ಥಾನದಲ್ಲಿ ಇರುತ್ತವೆ ಅದು ಸ್ಥಾನ ನಿರ್ಮಾಣ ಕರ್ಮವಿದೆ. ಯಾವುದರ ಉದಯದಿಂದ ಶರೀರದಲ್ಲಿ ಅಂಗೋಪಾಂಗಗಳ ಪ್ರಮಾಣವು ಯಥಾವತ್ ಇರುತ್ತದೆ ಅದು ಪ್ರಮಾಣ ನಿರ್ಮಾಣ ಕರ್ಮವಿದೆ. ಒಂದು ವೇಳೆ ಪ್ರಮಾಣ ನಿರ್ಮಾಣವು ಸರಿಯಾಗಿ ಇರದೇ ಹೋದರೆ ಅಂಗೋಪಾಂಗಗಳು ಹೀನಾಧಿಕವಿರುತ್ತವೆ, ಬೆರಳುಗಳು ನಾಲ್ಕು ಇರುವುದು ಅಥವಾ ಆರು ಇರುವುದು ಹಾಗೂ ಕೈಗಳು-ಕಾಲುಗಳು, ಕಣ್ಣುಗಳು, ಕಿವಿಗಳು, ಮೂಗು ದೊಡ್ಡದು ಇಲ್ಲವೇ ಚಿಕ್ಕದು ಇರುವುದು ಹಾಗೂ ಒಂದು ವೇಳೆ ಸ್ಥಾನ ನಿರ್ಮಾಣವು ಸರಿಯಾಗಿ ಇರದೇ ಹೋದರೆ ಅಂಗೋಪಾಂಗಗಳು ಸ್ಥಾನದಲ್ಲಿ ಇರುವುದಿಲ್ಲ ಆಗ ಅಸುಂದರವಾಗಿ ಕಾಣುವವು ಈ ಪ್ರಕಾರ ನಿರ್ಮಾಣ ಪ್ರಕೃತಿಗಳ ಎರಡು ಪ್ರಮಾಣಗಳನ್ನು ತಿಳಿಯುವುದು.

ಯಾವನೋ ಜೀವನು ಪೂರ್ವ ಭವದಲ್ಲಿ ಷೋಡಶಕಾರಣ ಭಾವನಾದಿಗಳ ನಿಮಿತ್ತದಿಂದ ತೀರ್ಥಂಕರ ಕರ್ಮವನ್ನು ಕಟ್ಟಿಕೊಂಡಿದ್ದರೆ ಅದರ ಉದಯದಲ್ಲಿ ಪಂಚಕಲ್ಯಾಣಕಗಳು ಆಗುತ್ತವೆ ಮತ್ತು ದೀಕ್ಷೆಯ ಮೊದಲು ಎಂಟು ವರ್ಷಗಳ ಹಿಂದೆ ಯಾರು ತೀರ್ಥಂಕರ ನಾಮಕರ್ಮ ಕಟ್ಟಿಕೊಂಡಿದ್ದಾರೆ ಅವರಿಗೆ ಮೂರು ಕಲ್ಯಾಣಕಗಳು ಆಗುತ್ತವೆ. ದೀಕ್ಷೆಯ ನಂತರ ಕಟ್ಟಿಕೊಂಡಿದ್ದರೆ ಎರಡು ಕಲ್ಯಾಣಕಗಳಾಗುತ್ತವೆ. ಮತ್ತು ಯಾರು ಆಯುವಿನ ಅಂತರ್ಮುಹೂರ್ತವೇ ಶೇಷವಿರುವಂಥ ಯತೀಶ್ವರರು ತೀರ್ಥಂಕರರ ಕರ್ಮವನ್ನು ಕಟ್ಟಿಕೊಂಡಿದ್ದರೆ ಅವರಿಗೆ ಜ್ಞಾನ-ನಿರ್ವಾಣ ಎರಡೂ ಕಲ್ಯಾಣಕಗಳು ಒಂದೇ ಸಮಯದಲ್ಲಿ ಆಗುತ್ತವೆ. ಸಮವಸರಣಾದಿ ವಿಭೂತಿಯು ಪ್ರಕಟವಾಗುವುದಿಲ್ಲ. ಯಾವ ಕರ್ಮದ ಉದಯದಿಂದ ಪಂಚ ಕಲ್ಯಾಣಕ ಹಾಗೂ ಮೂರು ಕಲ್ಯಾಣಕ ಮೊದಲಾದವುಗಳು ಆಗುತ್ತವೆ ಅದರಿಂದ ಸಮವಸರಣಾದಿ ವಿಭೂತಿಯು ಪ್ರಗಟವಾಗುತ್ತದೆ ಅದು ತೀರ್ಥಂಕರ ಕರ್ಮವಿದೆ - ಈ ಪ್ರಕಾರ ಅಗುರವಾಷ್ಟಕ - ಅಗುರುಲಘು ಮೊದಲಾದ ಎಂಟು ಪ್ರಕೃತಿಗಳು ಇವೆ.

ಈಗ ದಶಯುಗಲ ಪ್ರಕೃತಿಗಳನ್ನು ಹೇಳುತ್ತಾರೆ - ಅಲ್ಲಿ ಯಾವುದರ ಉದಯದಿಂದ ಜೀವನು ತನಗೆ ಯೋಗ್ಯವಾದ ನಾಲ್ಕು, ಐದು, ಆರು ಪರ್ಯಾಪ್ತಿಗಳನ್ನು ಧಾರಣ ಮಾಡುತ್ತಾನೆ ಅದು ಪರ್ಯಾಪ್ತಿ ಕರ್ಮವಿದೆ. ಯಾವುದರ ಉದಯದಲ್ಲಿ ಶರೀರ ಪರ್ಯಾಪ್ತಿಯು ಪೂರ್ಣವಾಗುವುದಿಲ್ಲ, ಮೊದಲೇ ಮರಣವಾಗಿ ಹೋಗುತ್ತದೆ ಅದು ಅಪರ್ಯಾಪ್ತಿ ಕರ್ಮವಿದೆ. ಯಾವ ಕರ್ಮದ ಉದಯದಲ್ಲಿ ಒಂದು ಶರೀರದ ಸ್ವಾಮಿಯು ಒಂದೇ ಜೀವವಿರುತ್ತದೆ ಅದು ಪ್ರತ್ಯೇಕ ಕರ್ಮವಿದೆ. ಯಾವುದರ ಉದಯದಲ್ಲಿ ಒಂದು ಶರೀರದ ಸ್ವಾಮಿ ಅನಂತ ಜೀವವಿರುತ್ತವೆ ಅದು ಸಾಧಾರಣ ಕರ್ಮವಿದೆ. ಯಾವುದರ ಉದಯದಲ್ಲಿ ದುಃಖವು ಬಂದಮೇಲೆ ದುಃಖವನ್ನು ನಾಶ ಮಾಡುವ ಶಕ್ತಿಯಿರುತ್ತದೆ ಮತ್ತು ಸುಖಿಯಾಗುವ ಸಲುವಾಗಿ ತನ್ನ ಶಕ್ತಿಯ ಅನುಸಾರ ಶರೀರವನ್ನು ಚಂಚಲ ಮಾಡಬಹುದಾಗಿದೆ ಅದು ತ್ರಸನಾಮಕರ್ಮವಿದೆ. ಯಾವುದರ ಉದಯದಲ್ಲಿ ಸುಖ-ದುಃಖಗಳು ಬಂದ ಮೇಲೆ ತನ್ನ ಸ್ಥಾನದ ಮೇಲೆಯೇ ಇದ್ದು ಸಹಿಸುವುದು, ದೂರ ಮಾಡಲು ಅಸಮರ್ಥವಿರುವುದು

ಅದು ಸ್ಥಾವರ ಕರ್ಮವಿದೆ. ಯಾವುದರ ಉದಯದಲ್ಲಿ ಪ್ರಾಪ್ತವಾಗುವ ಶರೀರದಿಂದ ಇತರ ಬಾದರ ಪದಾರ್ಥಗಳನ್ನು ಸ್ವಯಂ ತಡೆಯುವುದು ಹಾಗೂಇತರ ಬಾದರ ಪದಾರ್ಥಗಳಿಂದ ತಾನು ತಡೆಯಲ್ಪಡುವುದು ಅದು ಬಾದರ ಕರ್ಮವಿದೆ. ಯಾವುದರ ಉದಯದಲ್ಲಿ ಜೀವನಿಗೆ ಪ್ರಾಪ್ತವಾಗುವ ಶರೀರದಿಂದ ಯಾವುದೇ ಪರ್ವತ, ವಜ್ರಾದಿಗಳಿಂದಲೂ ತಡೆಯಲ್ಪಡುವುದಿಲ್ಲ ಹಾಗೂ ಸ್ವಯಂ ತಾನೂ ಕೂಡ ಯಾರನ್ನೂ ತಡೆಯುವುದಿಲ್ಲ;ಅಗ್ನಿ, ಶಸ್ತ್ರ, ಇತ್ಯಾದಿ ನಿಮಿತ್ತಗಳಿಂದ ಸಾಯುವುದಿಲ್ಲ ಅದು ಸೂಕ್ಷ್ಮ ಕರ್ಮವಿದೆ. ಯಾವುದರ ಉದಯದಲ್ಲಿ ಮಹಾಮಿಷ್ಟ ಸುಸ್ವರ ಎಲ್ಲರಿಗೂ ಪ್ರಿಯವೆನಿಸುವಂಥ ಶಬ್ದಗಳು ಹೊರಡುತ್ತವೆ ಅದು ಸುಸ್ವರ ಕರ್ಮವಿದೆ. ಯಾವುದರ ಉದಯದಲ್ಲಿ ಎಲ್ಲರಿಗೂ ಕೆಡಕೆನಿಸುವಂಥ, ತನಗೂ ಕೆಡಕೆನಿಸುವಂಥ ಶಬ್ದಗಳು ಹೊರಡುತ್ತವೆ ಅದು ದುಃಸ್ವರ ಕರ್ಮವಿದೆ.

ಯಾವುದರ ಉದಯದಿಂದ ಶರೀರದ ಅಂಗೋಪಾಂಗಗಳಲ್ಲಿ ಎಂಥ ಒಂದು ಶುಭ ಚಿಹ್ನೆ ಇರುತ್ತದೆಯೆಂದರೆ ಅದರಿಂದ ಅವನು ಎಲ್ಲರಿಗೂ ಪ್ರಿಯವಾಗುತ್ತಾನೆ ಅದು ಶುಭಕರ್ಮವಿದೆ. ಯಾವುದರ ಉದಯದಿಂದ ಯಾವುದಾದರೂ ಒಂದು ಚಿಹ್ನೆ ಇದ್ದು ಅದರಿಂದ ತಾನು ಎಲ್ಲರಿಗೂ ಒಳ್ಳೆಯವನೆನಿಸುವುದಿಲ್ಲ, ಅದು ಅಶುಭಕರ್ಮವಿದೆ. ಯಾವುದರ ಉದಯದಿಂದ ಶರೀರದ ಸಪ್ತಧಾತು ಮೊದಲಾದ ಪುದ್ಗಲ ಸ್ಕಂಧಗಳು ಸ್ಥಿರವಿರುತ್ತವೆ, ರೋಗಾದಿ ರೂಪವಾಗಿ ಪರಿಣಮಿಸುವುದಿಲ್ಲ, ಅದು ಸ್ಥಿರ ಕರ್ಮವಿದೆ. ಯಾವುದರ ಉದಯದಿಂದ ಶರೀರದ ಸಪ್ತಧಾತು ಮೊದಲಾದವು ಚಲಿತವಾಗುತ್ತವೆ ಅದರಿಂದ ರೋಗಮಯ ಶರೀರವಾಗುತ್ತದೆ, ಅದು ಅಸ್ಥಿರ ಕರ್ಮವಿದೆ.

ಯಾವುದರ ಉದಯದಲ್ಲಿ ಆತ್ಮನು ಎಲ್ಲಿ ಹೋಗುತ್ತಾನೋ ಅಲ್ಲೆಲ್ಲ ಆದರವು ಪ್ರಾಪ್ತವಾಗುತ್ತದೆ, ಅದು ಆದೇಯ ಕರ್ಮವಿದೆ. ಯಾವುದರ ಉದಯದಲ್ಲಿ ಆತ್ಮನು ಎಲ್ಲಿ ಹೋಗುತ್ತಾನೆ ಅಲ್ಲಿ ಅನಾದರವು ಪ್ರಾಪ್ತವಾಗುತ್ತದೆ, ಅಪಮಾನದಿಂದ ಆತ್ಮನು ದುಃಖಿಯಾಗುತ್ತಾನೆ, ಅದು ಅನಾದೇಯ ಕರ್ಮವಿದೆ. ಯಾವುದರ ಉದಯದಲ್ಲಿ ಜೀವನು ಸುಖಿಯಾಗಿರುತ್ತಾನೆ, ಎಲ್ಲ ಜನರು ಅವನನ್ನು ಸುಖಿ ಎಂದು ಹೇಳುತ್ತಾರೆ, ಒಳ್ಳೆಯವನೆಂದು ಹೇಳುತ್ತಾರೆ ಅದು ಸುಭಗ ಕರ್ಮವಿದೆ. ಯಾವುದರ ಉದಯದಲ್ಲಿ ಜೀವನು ದುಃಖ-ದಾರಿದ್ರ್ಯದಿಂದ ಪೀಡಿತನಾಗುತ್ತಾನೆ, ಅವನ ಜನ್ಮವಾಗುತ್ತಿದ್ದಂತೆಯೇ ಮಾತಾ-ಪಿತರು, ಕುಟುಂಬದ ಜನರು ಮರಣಕ್ಕೆ ಪ್ರಾಪ್ತರಾಗುತ್ತಾರೆ, ಮಹಾದುಃಖಿಗಳಾಗುತ್ತಾರೆ, ಜನರು ಅವನನ್ನು ದೀನ, ದರಿದ್ರನೆಂದು ಹೇಳುತ್ತಾರೆ, ಅದು ದುರ್ಭಗ ಕರ್ಮವಿದೆ. ಯಾವುದರ ಉದಯದಿಂದ ಜಗತ್ತಿನಲ್ಲಿ ಯಶಸ್ಸು ಪ್ರಾಪ್ತವಾಗುತ್ತದೆ, ನೋಡದೆಯೇ, ತಿಳಿಯದೆಯೇ ಜನರು ಅವನ ಗುಣಗಾನ ಮಾಡುತ್ತಾರೆ, ಅದು ಯಶಸ್ಕೀರ್ತಿ ಕರ್ಮವಿದೆ. ಯಾವುದರ ಉದಯದಿಂದ ಜಗತ್ತಿನಲ್ಲಿ ಜನರು ಅವನನ್ನು ನೋಡದೆಯೇ, ತಿಳಿಯದೆಯೇ ನಿಂದೆ ಮಾಡುತ್ತಾರೆ, ಅಪಕೀರ್ತಿಗೆ ಪಾತ್ರನಾಗುತ್ತಾನೆ, ಅದು ಅಯಶಸ್ಕೀರ್ತಿ ಕರ್ಮವಿದೆ. ಈ ಪ್ರಕಾರ ನಾಮಕರ್ಮದ ತೊಂಭತ್ಮೂರು ಪ್ರಕೃತಿಗಳನ್ನು ತಿಳಿಯುವುದು.

ಗೋತ್ರ ಕರ್ಮ - ಯಾವುದರ ಉದಯದಲ್ಲಿ, ಬ್ರಾಹ್ಮಣ, ಕ್ಷತ್ರಿಯ, ವೈಶ್ಯ - ಇವು ಮೂರು ಕುಲಗಳ ಮನುಷ್ಯರಲ್ಲಿ ಹಾಗೂ ನಾಲ್ಕು ಪ್ರಕಾರಗಳ ದೇವಗಳಲ್ಲಿ ಉತ್ಪನ್ನನಾಗುತ್ತಾನೆ, ಅದು ಉಚ್ಚಗೋತ್ರ ಕರ್ಮವಿದೆ. ಯಾವುದರ ಉದಯದಲ್ಲಿ ನರಕ, ತಿರ್ಯಂಚ - ಇವೆರಡು ಗತಿಗಳಲ್ಲಿ ಉತ್ಪನ್ನನಾಗುತ್ತಾನೆ ಹಾಗೂ ಮನುಷ್ಯನಾಗಿ ಹೀನಾಚಾರಿ ಶೂದ್ರರಲ್ಲಿ ಉತ್ಪನ್ನನಾಗುತ್ತಾನೆ, ಅದು ನೀಚಗೋತ್ರ ಕರ್ಮವಿದೆ.

ಅಂತರಾಯ ಕರ್ಮ - ಯಾವ ಕರ್ಮದ ಉದಯದಲ್ಲಿ ಧನಾದಿಗಳು ಪ್ರಾಪ್ತವಾದರೂ ದಾನ ಕೊಡುವುದಿಲ್ಲ, ಅದು ದಾನಾಂತರಾಯ ಕರ್ಮವಿದೆ. ಯಾವ ಕರ್ಮದ ಉದಯದಲ್ಲಿ ಅನೇಕ ದಿವಸಗಳವರೆಗೆ ವ್ಯಾಪಾರ ಮಾಡಿದರೂ, ಇತರರ ಸೇವೆ ಮಾಡಿ ಅವರನ್ನು ಪ್ರಸನ್ನ ಪಡಿಸಿದ ಮೇಲೆಯೂ, ತನ್ನ ಚತುರತೆಯಿಂದ ಎಲ್ಲರನ್ನು ಪ್ರಸನ್ನವಾಗಿ ಇರಿಸಿದ ಮೇಲೆಯೂ, ಅನೇಕ ಉಪಾಯ ಮಾಡುತ್ತಿದ್ದರೂ, ಸಮುದ್ರದಲ್ಲಿ ವಿಹರಿಸಿ ವ್ಯಾಪಾರಾದಿಗಳನ್ನು ಮಾಡಿದ ಮೇಲೆಯೂ ಲಾಭವಾಗುವುದಿಲ್ಲ, ಅದು ಲಾಭಾಂತರಾಯ ಕರ್ಮವಿದೆ. ಯಾವ ಕರ್ಮದ ಉದಯದಿಂದ ದೊರಕಿಕೊಂಡ ವಸ್ತುವನ್ನು

ಕೂಡ ಭೋಗಿಸಲಾಗುವುದಿಲ್ಲ, ತನ್ನ ಮನಸ್ಸು ತನ್ನ ಮನೆಯಲ್ಲಿ ಅನೇಕ ಒಳ್ಳೊಳ್ಳೆಯ ವಸ್ತುಗಳನ್ನು ಕಂಡು ಭೋಗಿಸಬಯಸುತ್ತಿದ್ದರೂ ಭೋಗಿಸಲಾಗುವುದಿಲ್ಲ, ಅದು ಭೋಗಾಂತರಾಯ ಕರ್ಮವಿದೆ. ಯಾವ ಕರ್ಮದ ಉದಯದಿಂದ ಮನೆಯಲ್ಲಿ ಅನೇಕ ಉಪಭೋಗ ಯೋಗ್ಯ ವಸ್ತುಗಳು - ಮೆತ್ತನೆಯ ಹಾಸಿಗೆ, ರತ್ನಗಳ ಆಭೂಷಣ, ಆನೆ, ಕುದುರೆ, ಮನೆ, ಪತ್ನಿ, ಸ್ಥಾನಾದಿಗಳಿದ್ದರೂ ಭೋಗಿಸಲಾಗುವುದಿಲ್ಲ, ಅದು ಉಪಭೋಗಾಂತರಾಯ ಕರ್ಮವಿದೆ. ಯಾವ ಕರ್ಮದ ಉದಯದಲ್ಲಿ ಅನೇಕ ಔಷಧಾದಿಗಳ ಪ್ರಯತ್ನ ಮಾಡಿದ ಮೇಲೆಯೂ, ಅನೇಕ ಪ್ರಕಾರದ ಷಟ್ ರಸಮಿಶ್ರಿತ ಭೋಜನ ಮಾಡಿದ ಮೇಲೆಯೂ ಶರೀರದಲ್ಲಿ ಪುರುಷಾರ್ಥ-ಪರಾಕ್ರಮವಿರುವುದಿಲ್ಲ ಅದು ವೀರ್ಯಾಂತರಾಯ ಕರ್ಮವಿದೆ.

ಈ ಪ್ರಕಾರ ಅಷ್ಟಮೂಲ ಕರ್ಮಗಳ ಒಂದನೂರಾ ನಲವತ್ತೆಂಟು ಉತ್ತರ ಪ್ರಕೃತಿಗಳನ್ನು ಹೇಳಲಾಯಿತು.

ಘಾತಿ-ಅಘಾತಿ ಭೇದ-ಜ್ಞಾನಾವರಣ, ದರ್ಶನಾವರಣ, ಮೋಹನೀಯ, ಅಂತರಾಯ - ಇವು ನಾಲ್ಕು ಘಾತಿ ಕರ್ಮಗಳಿವೆ, ಇವುಗಳ ಪ್ರಕೃತಿಗಳು ನಲವತ್ತೇಳು ಇವೆ. ವೇದನೀಯ, ಆಯುಷ್ಯ, ನಾಮ, ಗೋತ್ರ - ಇವು ನಾಲ್ಕು ಅಘಾತಿ ಕರ್ಮಗಳಿವೆ, ಇವುಗಳ ಪ್ರಕೃತಿಗಳು ಒಂದುನೂರಾ ಒಂದು ಇವೆ.

ಘಾತಿ ಕರ್ಮದಲ್ಲಿಯೂ - ೧) ದೇಶಘಾತಿ, ೨) ಸರ್ವಘಾತಿಯೆಂದು ಎರಡು ಭೇದಗಳಿವೆ. ಅಲ್ಲಿ ಕೇವಲಜ್ಞಾನಾವರಣವನ್ನು ಹೊರತು ಪಡಿಸಿ ನಾಲ್ಕು ಜ್ಞಾನಾವರಣ, ಮೂರು ದರ್ಶನಾವರಣ, ಐದು ಅಂತರಾಯ, ಹಾಸ್ಯಾದಿ ಒಂಭತ್ತು ನೋಕಷಾಯ, ಸಂಜ್ವಲನದ ನಾಲ್ಕು ಮತ್ತು ಸಮ್ಯಕ್‌ಪ್ರಕೃತಿ - ಇವು ಇಪ್ಪತ್ತಾರು ಪ್ರಕೃತಿಗಳು ದೇಶಘಾತಿ ಇವೆ ಹಾಗೂ ಕೇವಲಜ್ಞಾನಾವರಣ, ಕೇವಲದರ್ಶನಾವರಣ, ಐದು ನಿದ್ರೆ, ಅನಂತಾನುಬಂಧಿ ನಾಲ್ಕು, ಅಪ್ರತ್ಯಾಖ್ಯಾನ ನಾಲ್ಕು, ಪ್ರತ್ಯಾಖ್ಯಾನ ನಾಲ್ಕು, ಮಿಥ್ಯಾತ್ವ ಮತ್ತು ಸಮ್ಯಗ್ಮಿಥ್ಯಾತ್ವ - ಇವು ಇಪ್ಪತ್ತೊಂದು ಪ್ರಕೃತಿಗಳು ಸರ್ವಘಾತಿ ಇವೆ. ಯಾವವು ತನ್ನಿಂದ ಘಾತಿಸಲು ಯೋಗ್ಯ ಗುಣ (ಪರ್ಯಾಯ)ಗಳನ್ನು ಪೂರ್ಣರೂಪದಿಂದ ಘಾತಿಸುವುದಿಲ್ಲ ಏಕದೇಶವಾಗಿ ಘಾತಿಸುತ್ತವೆ ಅವನ್ನು ದೇಶಘಾತಿಯೆನ್ನುತ್ತಾರೆ; ಮತ್ತು ಯಾವವು ತಮ್ಮಿಂದ ಘಾತಿಸಲು ಯೋಗ್ಯ ಗುಣ (ಪರ್ಯಾಯ)ಗಳನ್ನು ಪೂರ್ಣ ರೂಪದಿಂದ ಘಾತ ಮಾಡುತ್ತವೆ, ಅವು ಸರ್ವಘಾತಿಯೆನಿಸುತ್ತವೆ - ಈ ಪ್ರಕಾರ ಘಾತಿ ಕರ್ಮದ ಎರಡು ಭೇದಗಳಿವೆ.

ಇವುಗಳದೇ ವಿಪಾಕದ ಅಪೇಕ್ಷೆಯಿಂದ ಪುದ್ಗಲ ವಿಪಾಕಿ, ಜೀವ ವಿಪಾಕಿ, ಭವ ವಿಪಾಕಿ, ಕ್ಷೇತ್ರ ವಿಪಾಕಿ - ಇವು ನಾಲ್ಕು ಭೇದಗಳಿವೆ.

ಪುದ್ಗಲ ವಿಪಾಕಿ - ಐದು ಶರೀರಗಳು, ಐದು ಸಂಘಾತ, ಐದು ಬಂಧನ, ಮೂರು ಅಂಗೋಪಾಂಗ, ಆರು ಸಂಹನನ, ಆರು ಸಂಸ್ಥಾನ, ವರ್ಣ ಚತುಷ್ಕದ ಇಪ್ಪತ್ತು, ಸ್ಥಿರ, ಉದ್ಯೋತ, ಆತಪ, ನಿರ್ಮಾಣ, ಅಸ್ಥಿರ, ಅಗುರುಲಘು, ಅಶುಭ, ಸಾಧಾರಣ, ಪ್ರತ್ಯೇಕ, ಉಪಘಾತ, ಶುಭ, ಪರಘಾತ - ಇವು ಅರವತ್ತೆರಡು ಪ್ರಕೃತಿಗಳು ಪುದ್ಗಲ ವಿಪಾಕಿಯಿವೆ. ಇವೆಲ್ಲವುಗಳ ಉದಯವು ಶರೀರ ಸ್ಕಂಧಗಳ ಮೇಲೆಯೇ ಆಗುತ್ತವೆ, ಜೀವದ ಮೇಲೆ ಇವುಗಳ ಬಲವಿರುವುದಿಲ್ಲ, ಅದರಿಂದ ಇವು ಪುದ್ಗಲ ವಿಪಾಕಿ ಇವೆ.

ಜೀವ ವಿಪಾಕಿ - ಘಾತಿ ಕರ್ಮದ ನಲವತ್ತೇಳು, ಗೋತ್ರದ ಎರಡು, ವೇದನೀಯದ ಎರಡು, ಜಾತಿಯ ಐದು, ವಿಹಾಯೋಗತಿ ಎರಡು, ಗತಿ ನಾಲ್ಕು, ತೀರ್ಥಂಕರ, ಉಚ್ಛ್ವಾಸ, ಪರ್ಯಾಪ್ತಿ, ಅಪರ್ಯಾಪ್ತಿ, ತ್ರಸ, ಸ್ಥಾವರ, ಸೂಕ್ಷ್ಮ, ಬಾದರ, ಸುಸ್ವರ, ದುಃಸ್ವರ, ಆದೇಯ, ಅನಾದೇಯ, ಸುಭಗ, ದುರ್ಭಗ, ಯಶಸ್ಕೀರ್ತಿ, ಅಯಶಸ್ಕೀರ್ತಿ - ಇವು ಎಪ್ಪತ್ತೆಂಟು ಪ್ರಕೃತಿಗಳು ತಮ್ಮ ಉದಯವನ್ನು ಜೀವದ ಮೇಲೆ ಮಾಡಿ ಸುಖ-ದುಃಖಗಳನ್ನುಂಟು ಮಾಡುತ್ತವೆ; ಆದುದರಿಂದ ಇವನ್ನು ಜೀವ ವಿಪಾಕಿಯೆನ್ನಲಾಗಿದೆ.

ಕ್ಷೇತ್ರ ವಿಪಾಕಿ - ನಾಲ್ಕು ಆನುಪೂರ್ವಿಯ ಉದಯವು ತಮ್ಮ ಯೋಗ್ಯ ಅಂತರಾಳದ ಕ್ಷೇತ್ರದಲ್ಲಿಯೇ ಆಗುತ್ತದೆ.

**ಭಾವಾರ್ಥ** - ಯಾವಾಗ ಜೀವನು ವರ್ತಮಾನ ಶರೀರವನ್ನು ಬಿಟ್ಟುಕೊಟ್ಟು ವಕ್ರಗತಿ ಸಹಿತ ಅನ್ಯ ಪರ್ಯಾಯದಲ್ಲಿ ಉತ್ಪನ್ನವಾಗುವ ಸಲುವಾಗಿ ಹೋಗುತ್ತಾನೆ ಆಗ ಅಂತರಾಳದಲ್ಲಿ ಕಾರ್ಮಣ ಅವಸ್ಥೆಯ ಕ್ಷೇತ್ರದಲ್ಲಿ (ವಿಗ್ರಹ ಗತಿಯಲ್ಲಿ) ಆನುಪೂರ್ವಿಯ ಉದಯವಿರುತ್ತದೆ.

ಭವ ವಿಪಾಕಿ - ನಾಲ್ಕು ಆಯು ಕರ್ಮಗಳ ಉದಯವು ತಮ್ಮ ತಮ್ಮ ಭವದಲ್ಲಿಯೇ ಆಗುತ್ತದೆ; ಅದರಿಂದ ನಾಲ್ಕು ಆಯುಗಳನ್ನು ಭವ ವಿಪಾಕಿಯೆಂದು ತಿಳಿಯುವುದು.

ಈ ಪ್ರಕಾರ ಪುದ್ಗಲ ವಿಪಾಕಿಯ ಅರವತ್ತೆರಡು, ಜೀವ ವಿಪಾಕಿಯ ಎಪ್ಪತ್ತೆಂಟು, ಕ್ಷೇತ್ರ ವಿಪಾಕಿಯ ನಾಲ್ಕು, ಭವ ವಿಪಾಕಿಯ ನಾಲ್ಕು - ಇವು ಒಂದುನೂರಾ ನಲವತ್ತೆಂಟು ಪ್ರಕೃತಿಗಳಿವೆ. ಇವು ಮೊದಲು ಹೇಳಲಾದ ಮೂಲ ಎಂಟು ಕರ್ಮಗಳು ದ್ರವ್ಯಕರ್ಮವಿವೆ. ಇವೆಲ್ಲ ದ್ರವ್ಯಕರ್ಮಗಳು ಪುದ್ಗಲ ಸ್ಕಂಧಗಳೆಂದು ತಿಳಿಯುವುದು - ಈ ಎಂಟು ಕರ್ಮಗಳಿಂದ ಸಮಸ್ತ ಸಂಸಾರಿ ಜೀವಗಳು ಬಂಧಿಸಲ್ಪಟ್ಟಿವೆ.

ಜೀವರಾಶಿಯ ಎರಡು ಭೇದಗಳು - ೧) ಸಂಸಾರೀ, ೨) ಮುಕ್ತ ಜೀವ. ಇವುಗಳಲ್ಲಿಯೂ ಸಂಸಾರಿಯ ಎರಡು ಭೇದಗಳಿವೆ. - ೧) ಭವ್ಯ , ೨) ಅಭವ್ಯ . ಅವುಗಳಲ್ಲಿ ಅಭವ್ಯರಾಶಿ ಹಾಗೂ ಭವ್ಯ ರಾಶಿಯ ಅನಂತಾನಂತ ಜೀವಗಳು ದೂರಾನುದೂರ ಭವ್ಯ ಅರ್ಥಾತ್ ಅಭವ್ಯದ ಸಮಾನ ಎಂದೂ ಮೋಕ್ಷಕ್ಕೆ ಯೋಗ್ಯವಾಗುವುದಿಲ್ಲ. ಅಲ್ಲದೆ ಬೇರೆಯೂ ಕೂಡ ಅದೆಷ್ಟೋ ಮಿಥ್ಯಾದೃಷ್ಟಿ ಜೀವಗಳು ಮೋಹ-ರಾಗ-ದ್ವೇಷದ ಬಲದಿಂದ ಕರ್ಮಸಂಕಲೆಯಿಂದ ಬಂಧಿಸಿ ಮೋಹರೂಪದೊರೆಯ ಕಾರಾಗೃಹದಲ್ಲಿ ಬಿದ್ದುಕೊಂಡಿವೆ, ಅವು ಮಿಥ್ಯಾತ್ವಯೋಗ್ಯ ಬಂಧನದಿಂದ ಎಂದೂ ಬಿಡುಗಡೆಯಾಗುವುದಿಲ್ಲ. ಈ ಪ್ರಕಾರ ಅನಾದಿ ಮಿಥ್ಯಾತ್ವ ಧಾರಕ ಜೀವಗಳು ಅನಂತವಿವೆ. ಇವುಗಳಲ್ಲಿ ಅದೆಷ್ಟೋ ಜೀವಗಳು ಮೋಕ್ಷಕ್ಕೆ ಹೋಗಲು ಯೋಗ್ಯವಿದ್ದು, ಅವು ಕಾರಣ ಪಡೆದು ಮುಕ್ತವಾಗುವವು. ಈ ಪ್ರಕಾರ ಇಷ್ಟಂತೂ ಸಂಸಾರರಾಶಿ ಎನ್ನಲಾಗಿದೆ.

ಎರಡನೆಯದಾದ ಸಾಸಾದನ ಗುಣಸ್ಥಾನದಿಂದ ಹಿಡಿದು ಅಯೋಗಿ ಗುಣಸ್ಥಾನದವರೆಗಿನ ನಿಕಟ ಭವ್ಯ ಜೀವಗಳು ಮುಕ್ತಜೀವವಿವೆ, ಇವೆಲ್ಲವೂ ಮೋಕ್ಷಕ್ಕೆ ಹೋಗಲು ಯೋಗ್ಯವಿವೆ. ಇವುಗಳಲ್ಲಿ ಯಥಾಯೋಗ್ಯ ಕರ್ಮಗಳ ಸಂಬಂಧವಿದೆ. ಕೆಲವು ಕರ್ಮಬಂಧಮಾಡಿಕೊಳ್ಳಲು ಯೋಗ್ಯವಿವೆ. ಈ ಜೀವಗಳು ಯಾವ ದ್ರವ್ಯಕರ್ಮಗಳೊಂದಿಗೆ ಬಂಧಿಸಲ್ಪಡುತ್ತಿವೆ ಎಂಬುದನ್ನು ಹೇಳುತ್ತಾರೆ -

ಎಲ್ಲ ಎಂಟು ಕರ್ಮಗಳ ಪ್ರಕೃತಿಗಳು ಒಂದುನೂರಾ ನಲವತ್ತೆಂಟು ಇವೆ. ಇವುಗಳೊಳಗಿನ ಬಂಧ ಯೋಗ್ಯ ಪ್ರಕೃತಿಗಳು ಒಂದು ನೂರಾ ಇಪ್ಪತ್ತು ಇವೆ, ಉಳಿದ ಇಪ್ಪತ್ತೆಂಟನ್ನು ಇವುಗಳಲ್ಲಿಯೇ ಗರ್ಭಿತ ಮಾಡಲಾಗಿದೆ. ವರ್ಣ ಚತುಷ್ಕದ ಇಪ್ಪತ್ತರೊಳಗಿಂದ ನಾಲ್ಕೇ ಮೂಲವಿದ್ದು ಉಳಿದ ಹದಿನಾರು ಉತ್ತರ ಭೇದಗಳನ್ನು ಇವು ನಾಲ್ಕರಲ್ಲಿಯೇ ಗರ್ಭಿತಗೊಳಿಸಲಾಗಿದೆ. ಇದೇ ಪ್ರಕಾರ ಐದು ಬಂಧನ, ಐದು ಸಂಘಾತ ಇವು ಹತ್ತು ಪ್ರಕೃತಿಗಳನ್ನು ಐದು ಶರೀರಗಳಲ್ಲಿ ಒಂದುಗೂಡಿಸಲಾಗಿದೆ. ದರ್ಶನಮೋಹದ ಮೂರು ಭೇದಗಳಿದ್ದು ಅದರ ಎರಡು ಭೇದಗಳನ್ನು (ಬಂಧಯೋಗ್ಯವಿರದಂಥವು) ಒಂದು ಮಿಥ್ಯಾತ್ವದಲ್ಲಿಯೇ ಬೆರೆಸಲಾಗಿದೆ - ಈ ಪ್ರಕಾರ ವರ್ಣಾದಿ ಹದಿನಾರು, ಶರೀರಾದಿ ಹತ್ತು , ದರ್ಶನ ಮೋಹದ ಎರಡು - ಇವೆಲ್ಲ ಇಪ್ಪತ್ತೆಂಟೂ ಆ ಒಂದುನೂರಾ ಇಪ್ಪತ್ತರಲ್ಲಿಯೇ ಗರ್ಭಿತವಿವೆ. ಈ ಪ್ರಕಾರ ಒಂದುನೂರಾ ಇಪ್ಪತ್ತು ಬಂಧಯೋಗ್ಯ ಪ್ರಕೃತಿಗಳನ್ನು ಅನೇಕ ಜೀವಗಳ ಅಪೇಕ್ಷೆಯಿಂದ ತಿಳಿಯುವುದು. ಅವುಗಳನ್ನು ಈಗ ಗುಣಸ್ಥಾನಗಳಲ್ಲಿ ಹೇಳುತ್ತಾರೆ -

ಮಿಥ್ಯಾತ್ವ ಗುಣಸ್ಥಾನದಲ್ಲಿ ಆಹಾರಕದ್ವಿಕ (ಆಹಾರಕ ಶರೀರ, ಆಹಾರಕ ಅಂಗೋಪಾಂಗ) ಹಾಗೂ ಒಂದು ತೀರ್ಥಂಕರ - ಇವು ಮೂರು ಪ್ರಕೃತಿಗಳು ಬಂಧಿಸುವುದಿಲ್ಲ. ಮೇಲಿನ ಗುಣಸ್ಥಾನದಲ್ಲಿ ಯಥಾಯೋಗ್ಯಬಂದು ಸೇರಿಕೊಳ್ಳುತ್ತವೆ. ಮಿಥ್ಯಾತ್ವ ಬಿಟ್ಟುಹೋಗಿ ಯಾವಾಗ ಈ ಜೀವನಿಗೆ ಮೇಲಿನ ಗುಣಸ್ಥಾನದ ಪ್ರಾಪ್ತಿಯಾಗುತ್ತದೆ ಆಗ ಅವುಗಳ ಬಂಧವಾಗುತ್ತದೆ. ಮಿಥ್ಯಾತ್ವದಲ್ಲಿ ಒಂದು ನೂರಾ ಹದಿನೇಳು ಪ್ರಕೃತಿಗಳು ಅನೇಕ ಜೀವಗಳ ಅಪೇಕ್ಷೆಯಿಂದ ಬಂಧಯೋಗ್ಯವಿವೆ.

ಸಾಸಾದನದಲ್ಲಿ ಯಾವ ಹದಿನಾರು ಪ್ರಕೃತಿಗಳ ಬಂಧವಾಗುವುದಿಲ್ಲ, ಮಿಥ್ಯಾತ್ವದಲ್ಲಿಯೇ ಆಗುತ್ತದೆ, ಅವುಗಳ ಹೆಸರು - ಮಿಥ್ಯಾತ್ವ, ನಪುಂಸಕವೇದ, ನರಕತ್ರಿಕ, (ನರಕಗತಿ, ನರಕಗತ್ಯಾನುಪೂರ್ವಿ, ನರಕಾಯು-ಇವು ಮೂರು) ಸೃಪಾಟಿಕ ಸಂಹನನ, ಹುಂಡಕ ಸಂಸ್ಥಾನ, ಏಕೇಂದ್ರಿಯಾದಿ ನಾಲ್ಕು ಜಾತಿ, ಸೂಕ್ಷ್ಮ, ಸಾಧಾರಣ, ಅಪರ್ಯಾಪ್ತಿ, ಆತಪ, ಸ್ಥಾವರ - ಇವು ಹದಿನಾರರ ಬಂಧವು ಎರಡನೆಯ ಸಾಸಾದನ ಗುಣಸ್ಥಾನದಲ್ಲಿ ಆಗುವುದಿಲ್ಲ; ಅದರಿಂದ ಸಾಸಾದನದಲ್ಲಿ ಒಂದುನೂರಾ ಒಂದು ಪ್ರಕೃತಿಗಳ ಬಂಧವಿದೆ.

ಮೂರನೆಯ (ಮಿಶ್ರ) ಗುಣಸ್ಥಾನದಲ್ಲಿ ಎರಡನೇ ಸಾಸಾದನದ ಇಪ್ಪತ್ತೈದು ಪ್ರಕೃತಿಗಳ ವ್ಯುಚ್ಛಿತ್ತಿ ಇದೆ. ಅವುಗಳ ಹೆಸರು - ಅನಂತಾನುಬಂಧಿ ನಾಲ್ಕು, ಮಧ್ಯದ ನಾಲ್ಕು ಸಂಹನನ, ಮಧ್ಯದ ನಾಲ್ಕು ಸಂಸ್ಥಾನ, ಮೂರು ನಿದ್ರೆ, (ಸ್ತ್ಯಾನಗೃದ್ಧಿ ಆದಿ) ತಿರ್ಯಂಚತ್ರಿಕ (ತಿರ್ಯಂಚ ಗತಿ, ತಿರ್ಯಂಚಗತ್ಯಾನುಪೂರ್ವಿ, ತಿರ್ಯಂಚಾಯು), ದುರ್ಭಗ, ದುಃಸ್ವರ, ಅನಾದೇಯ, ಸ್ತ್ರೀವೇದ, ನೀಚಗೋತ್ರ, ಉದ್ಯೋತ, ಅಶುಭವಿಹಾಯೋಗತಿ - ಇವು ಇಪ್ಪತ್ತೈದನ್ನು ಹೊರತು ಪಡಿಸಿ ಮೂರನೆಯ ಗುಣಸ್ಥಾನದಲ್ಲಿ ಎಪ್ಪತ್ತಾರು ಹಾಗೂ ಇಲ್ಲಿ ದೇವ ಮತ್ತು ಮನುಷ್ಯ ಆಯುವಿನ ಬಂಧವೂ ಆಗುವುದಿಲ್ಲ - ಈ ಪ್ರಕಾರ ಎಪ್ಪತ್ನಾಲ್ಕರ ಬಂಧವು ಮೂರನೆಯ ಗುಣಸ್ಥಾನದಲ್ಲಿ ಇದೆ. ಇಲ್ಲಿ ವ್ಯುಚ್ಛಿತ್ತಿ ಇಲ್ಲ.

ಇವೇ ಎಪ್ಪತ್ನಾಲ್ಕನ್ನು ತೆಗೆದುಕೊಂಡು ನಾಲ್ಕನೆಯ ಗುಣಸ್ಥಾನಕ್ಕೆ ಬರುತ್ತಾನೆ. ಇಲ್ಲಿ ದೇವಾಯು, ಮನುಷ್ಯಾಯು, ತೀರ್ಥಂಕರ - ಇವು ಮೂರು ಸೇರಿಕೊಳ್ಳುತ್ತವೆ ಆಗ ಎಲ್ಲವೂ ಸೇರಿ ಎಪ್ಪತ್ತೇಳು ಪ್ರಕೃತಿಗಳ ಬಂಧವು ನಾಲ್ಕನೆಯ ಗುಣಸ್ಥಾನದಲ್ಲಿ ಇದೆ. ಇಲ್ಲಿ ಹತ್ತರ ವ್ಯುಚ್ಛಿತ್ತಿ ಇದೆ. ಅವುಗಳ ಹೆಸರು - ಪ್ರತ್ಯಾಖ್ಯಾನದ ನಾಲ್ಕು, ಮನುಷ್ಯತ್ರಿಕ (ಮನುಷ್ಯಗತಿ ಮನುಷ್ಯಗತ್ಯಾನುಪೂರ್ವಿ, ಮನುಷ್ಯಾಯು), ಔದಾರಿಕ ಶರೀರ, ಔದಾರಿಕ ಅಂಗೋಪಾಂಗ, ವಜ್ರವೃಷಭನಾರಾಚ ಸಂಹನನ - ಇವು ಹತ್ತರ ವ್ಯುಚ್ಛಿತ್ತಿ ಮಾಡಿ ಅರವತ್ತೆಂಟರ ಬಂಧವನ್ನು ತೆಗೆದುಕೊಂಡು ಐದನೆಯ ಗುಣಸ್ಥಾನದಲ್ಲಿ ಬರುತ್ತಾನೆ. ಇಲ್ಲಿ ಪ್ರತ್ಯಾಖ್ಯಾನ ಚೌಕಡಿಯ ವ್ಯುಚ್ಛಿತ್ತಿ ಮಾಡುತ್ತಾನೆ.

ಅರವತ್ಮೂರನ್ನು ತೆಗೆದುಕೊಂಡು ಆರನೆಯ ಗುಣಸ್ಥಾನಕ್ಕೆ ಬರುತ್ತಾನೆ. ಇಲ್ಲಿ ಪ್ರಮತ್ತದಲ್ಲಿ ಅರವತ್ಮೂರರ ಬಂಧವಿದೆ. ಆರರ ವ್ಯುಚ್ಛಿತ್ತಿ ಇದೆ. ಅವುಗಳ ಹೆಸರು - ಅಸ್ಥಿರ, ಅಶುಭ, ಅಸಾತಾ, ಅಯಶಸ್ಕೀರ್ತಿ, ಅರತಿ, ಶೋಕ.

ಉಳಿದ ಐವತ್ತೇಳನ್ನು ತೆಗೆದುಕೊಂಡು ಏಳನೆಯ ಗುಣಸ್ಥಾನದಲ್ಲಿ ಬಂದನು. ಇಲ್ಲಿ ಆಹಾರಕದ್ವಿಕ ಸೇರುವುದರಿಂದ ಅಪ್ರಮತ್ತದಲ್ಲಿ ಐವತ್ತೊಂಭತ್ತರ ಬಂಧ ಹಾಗೂ ದೇವಾಯುವಿನ ವ್ಯುಚ್ಛಿತ್ತಿ ಇದೆ.

ಐವತ್ತೆಂಟನ್ನು ತೆಗೆದುಕೊಂಡು ಎಂಟನೆಯ ಗುಣಸ್ಥಾನದಲ್ಲಿ ಬರುತ್ತಾನೆ. ಇಲ್ಲಿ ಮೂವತ್ತಾರು ಪ್ರಕೃತಿಗಳ ವ್ಯುಚ್ಛಿತ್ತಿಯು ಏಳು ಭಾಗಗಳಲ್ಲಿ ಇದೆ. ಮೊದಲನೆಯ ಭಾಗದಲ್ಲಿ ನಿದ್ರಾ, ಪ್ರಚಲಾ; ಇದರ ನಂತರ ನಾಲ್ಕು ಭಾಗಗಳಲ್ಲಿ ವ್ಯುಚ್ಛಿತ್ತಿ ಇರುವುದಿಲ್ಲ. ಅಗುರುಲಘು, ಉಚ್ಛ್ವಾಸ, ಉಪಘಾತ ಮತ್ತು ಪರಘಾತ ಇವು ಅಗುರುಲಘುಚತುಷ್ಕ, ತೀರ್ಥಂಕರ, ನಿರ್ಮಾಣ, ಪರ್ಯಾಪ್ತ, ಪ್ರತ್ಯೇಕ, ತ್ರಸ, ಬಾದರ, ಸುಸ್ವರ, ಶುಭ, ಸ್ಥಿರ, ಆದೇಯ, ಸುಭಗ, ವರ್ಣಾದಿ ನಾಲ್ಕು, ಪಂಚೇಂದ್ರಿಯ, ಸಮಚತುರಸ್ರಸಂಸ್ಥಾನ, ಶುಭವಿಹಾಯೋಗತಿ, ದೇವಗತಿ, ದೇವಗತ್ಯಾನುಪೂರ್ವಿ, ವೈಕ್ರಿಯಿಕ ಅಂಗೋಪಾಂಗ, ಆಹಾರಕ ಅಂಗೋಪಾಂಗ, ವೈಕ್ರಿಯಿಕ ಶರೀರ, ಆಹಾರಕ ಶರೀರ, ತೈಜಸ ಶರೀರ, ಕಾರ್ಮಣ ಶರೀರ-ಇವು

ಮೂವತ್ತು ಪ್ರಕೃತಿಗಳ ವ್ಯುಚ್ಛಿತ್ತಿಯು ಆರನೆಯ ಭಾಗದಲ್ಲಿ ಇದೆ ಮತ್ತು ಏಳನೆಯ ಭಾಗದಲ್ಲಿ ಹಾಸ್ಯ, ರತಿ, ಭಯ, ಜುಗುಪ್ಸೆ - ಇವು ನಾಲ್ಕರ - ಈ ಪ್ರಕಾರ ಎಲ್ಲ ಏಳು ಭಾಗಗಳಲ್ಲಿ ಮೂವತ್ತಾರರ ವ್ಯುಚ್ಛಿತ್ತಿಯನ್ನು ಎಂಟರಲ್ಲಿ ಹೇಳಿದ್ದಾರೆ.

ಒಂಭತ್ತರಲ್ಲಿ ಇಪ್ಪತ್ತೆರಡರ ಬಂಧವಿದೆ. ಇಲ್ಲಿ ಅನಿವೃತ್ತಿಯಲ್ಲಿ ಸಂಜ್ವಲನ ಚೌಕಡಿ ಹಾಗೂ ಪುರುಷವೇದ - ಇವು ಐದರದೂ ವ್ಯುಚ್ಛಿತ್ತಿ ಆಯಿತು.

ಹದಿನೇಳು ಪ್ರಕೃತಿಗಳ ಬಂಧವನ್ನು ತೆಗೆದುಕೊಂಡು ಹತ್ತನೆಯ ಗುಣಸ್ಥಾನದಲ್ಲಿ ಬರುತ್ತಾನೆ. ಜ್ಞಾನಾವರಣ ಐದು, ಅಂತರಾಯ ಐದು, ದರ್ಶನಾವರಣ ನಾಲ್ಕು, ಉಚ್ಚಗೋತ್ರ, ಯಶಸ್ಕೀರ್ತಿ - ಇವು ಹದಿನಾರರ ವ್ಯುಚ್ಛಿತ್ತಿ ಹತ್ತನೆಯ ಗುಣಸ್ಥಾನದಲ್ಲಿ ಆಯಿತು. ಈಗ ಒಂದು ಸಾತಾವೇದನೀಯವೇ ಉಳಿಯಿತು. ಅದರ ಬಂಧವು ಹನ್ನೊಂದು, ಹನ್ನೆರಡು ಮತ್ತು ಹದಿಮೂರು - ಇವು ಮೂರು ಗುಣಸ್ಥಾನದಲ್ಲಿ ಆಗುತ್ತದೆ.

ಹದಿಮೂರರೊಳಗಿಂದ ಹದಿನಾಲ್ಕರಲ್ಲಿ ಹೋಗುವ ಸಮಯದಲ್ಲಿ ಸಾತಾದ ವ್ಯುಚ್ಛಿತ್ತಿಯನ್ನು ಹದಿಮೂರಲ್ಲಿ ಮಾಡಿ ಹದಿನಾಲ್ಕನೆಯ ಗುಣಸ್ಥಾನಕ್ಕೆ ಬರುತ್ತಾನೆ. ಅಲ್ಲಿ ಬಂಧವಿರುವುದಿಲ್ಲ. ಸಯೋಗ ಗುಣಸ್ಥಾನವರ್ತಿ ಭಗವಂತರ ಯಾವ ಈ ಸಾತಾವೇದನೀಯ ಕರ್ಮದ ಬಂಧ ಹೇಳಲಾಗಿದೆ ಅದನ್ನು ಯೋಗಗಳ ನಿಮಿತ್ತ ಪಡೆದು ಉಪಚಾರದಿಂದ ಹೇಳಲಾಗಿದೆ. ಈ ಬಂಧವು ಸ್ಥಿತಿರಹಿತವಿದೆ ಆದರೆ ನಿಮಿತ್ತದ ಸದ್ಭಾವವಿರುವುದರಿಂದ ಪ್ರಕೃತಿ, ಪ್ರದೇಶ ಬಂಧವಿದೆ. ಆತ್ಮನಿಗೆ ಸುಖ-ದುಃಖಕರವಿಲ್ಲ, ಸುಖ-ದುಃಖದಾಯಕವಂತೂ ಸ್ಥಿತಿ-ಅನುಭಾಗ ಬಂಧವಿದೆ, ಇಲ್ಲಿ ಮೋಹದ ಅಭಾವದಿಂದ ಕಷಾಯಗಳ ಅಭಾವವಿದೆ ಮತ್ತು ಕಷಾಯಗಳ ಅಭಾವದಿಂದ ಸ್ಥಿತಿ, ಅನುಭಾಗ ಬಂಧದ ಅಭಾವವಿದೆ. ಆದಾಗ್ಯೂ ಇಲ್ಲಿ ಯೋಗತ್ರಿಕವಿರುವುದರಿಂದ ಯೋಗಗಳ ನಿಮಿತ್ತದಿಂದ ಹದಿಮೂರನೇ ಗುಣಸ್ಥಾನದವರೆಗೆ ಕರ್ಮದ ಬಂಧ ಹೇಳಲಾಗಿದೆ.

(ಕೇವಲಿಗಳ ಸಾತಾವೇದನೀಯದ ಬಂಧವು ಒಂದು ಸಮಯದ ಸ್ಥಿತಿಯುಳ್ಳದ್ದಿರುತ್ತದೆ ಆದುದರಿಂದ ಅದು ಉದಯರೂಪವೇ ಇದೆ. ಅಂತೆಯೇ ಕೇವಲಿಗಳಲ್ಲಿ ಅಸಾತಾದ ಉದಯವು ಕೂಡ ಸಾತಾರೂಪದಿಂದ ಪರಿಣಮಿತವಾಗುತ್ತದೆ ಏಕೆಂದರೆ ಕೇವಲಿಗಳಲ್ಲಿ ವಿಶೇಷ ವಿಶುದ್ಧಿಯಾಗಿರುವುದರಿಂದ ಅಸಾತಾವೇದನೀಯದ ಅನುಭಾಗ ಶಕ್ತಿಯು ಅನಂತಗುಣಿತ ಹೀನವಾಗಿ ಹೋಗುತ್ತದೆ ಮತ್ತು ಮೋಹನೀಯದ ಸಹಾಯತೆಯೂ ಕೂಡ ಉಳಿದಿರುವುದಿಲ್ಲ. ಅದರಿಂದ ಅಸಾತಾವೇದನೀಯದ ಉದಯವು ಅವ್ಯಕ್ತವಿರುತ್ತದೆ ಮತ್ತು ಬಂಧನಯೋಗ್ಯ ಸಾತಾ ವೇದನೀಯದ ಅನುಭಾಗವು ಅನಂತಗುಣಿತ ಅಧಿಕವಿರುತ್ತದೆ; ಏಕೆಂದರೆ ಕೇವಲಿಗಳ ವಿಶುದ್ಧಿಯು ವಿಶೇಷವಿದೆ ಮತ್ತು ವಿಶುದ್ಧತೆಯಿಂದ ಅನುಭಾಗವು ಅಧಿಕವಾಗುತ್ತದೆ ಅಂತೆಯೇ ಅಸಾತಾದ ಉದಯವು ಕೂಡ ಸಾತಾರೂಪವಾಗಿ ಪರಿಣಮಿಸುತ್ತದೆ. ಉಕ್ತ ಕಾರಣದಿಂದ ಕೇವಲಿಗಳಿಗೆ ನಿರಂತರ ಸಾತಾದ್ದೇ ಉದಯವಿರುತ್ತದೆ. ಆದುದರಿಂದ ಅಸಾತಾದ ಉದಯದ ನಿಮಿತ್ತದಿಂದ ಆಗುವಂಥ ಕ್ಷುಧೆ, ತೃಷೆ, ಶೀತ, ಉಷ್ಣ, ದಂಶಮಶಕ, ಚರ್ಯೆ, ಶಯ್ಯೆ, ವಧೆ, ರೋಗ, ತೃಣಸ್ಪರ್ಶ ಮತ್ತು ಮಲ ಪರೀಷಹಗಳು ಕೇವಲಿಗಳಿಗೆ ಇರುವುದಿಲ್ಲ. ತತ್ತ್ವಾರ್ಥಸೂತ್ರದಲ್ಲಿಯೂ ಕೂಡ ಅದನ್ನು ''ಏಕಾದಶಜಿನೇ'' ಎಂದು ಹೇಳಿದ್ದಾರೆ ಅದನ್ನು ಕಾರಣದಲ್ಲಿ ಕಾರ್ಯದ ಉಪಚಾರ ಮಾಡಿಯೇ ಹೇಳಿದ್ದಾರೆ. ಮುಖ್ಯರೂಪದಿಂದ ಕೇವಲಿಗಳಲ್ಲಿ ಅವುಗಳ ಅಭಾವವಿದೆ - ಗೊಮ್ಮಟಸಾರ, ಜೀವಕಾಂಡ ಗಾಥೆ - ೨೭೩ರ ಟೀಕೆ.)

ಅದೆಷ್ಟೋ ಅತತ್ತ್ವ ಶ್ರದ್ಧಾನಿಗಳು ತೀವ್ರ ಮೋಹದ ಉದಯದಿಂದ ನಾವು ಸಮ್ಯಕ್ತ್ವವಂತರಿದ್ದೇವೆ, ಅದರಿಂದ ನಮಗೆ ಕರ್ಮಬಂಧವಾಗುವುದಿಲ್ಲವೆಂದು ಮನ್ನಿಸುತ್ತಾರೆ. ನಾವು ಅಬಂಧರಿದ್ದೇವೆ ಎಂದು ವಿಪರೀತ ಶ್ರದ್ಧೆ ಮಾಡಿ ಕರ್ಮಬಂಧವನ್ನು ನಾಶಮಾಡುವಲ್ಲಿ ನಿರುದ್ಯಮಿಗಳಾಗುತ್ತಾರೆ. ಅಶುದ್ಧರಾಗಿದ್ದರೂ ಕೂಡ ತಮ್ಮನ್ನು ಶುದ್ಧವೆಂದು ಮನ್ನಿಸಿ ಅನೇಕ ಅಸಂಯಮ ಕ್ರಿಯೆಗಳಿಂದ ವಿಷಯ ಕಷಾಯಗಳ ರೂಪವಾಗಿ ಪರಿಣಮನ ಮಾಡುತ್ತ ತಮ್ಮ ಪರಭವ ಕೆಡಿಸಿಕೊಳ್ಳುತ್ತಾರೆ.

ಅವರಿಗೆ ಹೇಳುತ್ತಾರೆ - ಎಲೈ ವಿಷಯ ಲೋಭಿಗಳೇ ! ತಾವು ನೋಡಿರಿ ! ಕರ್ಮಗಳ ಬಂಧವು ಮುನೀಶ್ವರರಿಂದ ಹಿಡಿದು ಕೇವಲಿ ಭಗವಂತರವರಗೆ ಯಥಾಯೋಗ್ಯ ಗುಣಸ್ಥಾನದವರೆಗೆ ಭೂಮಿಕೆಯ ಅನುಸಾರ ಸಮಸ್ತ ಸಂಸಾರಿ ಜೀವರುಗಳಿಗೆ ಆಗುತ್ತದೆ. ಕರ್ಮರಹಿತ ಜೀವರುಗಳಿಗೆ ಕರ್ಮದ ಬಂಧವಾಗುವುದಿಲ್ಲ; ಆದುದರಿಂದ ಎಲೈ ಭವ್ಯಾತ್ಮರೇ! ನೀವು ಸ್ವೇಚ್ಛಾಚಾರೀ ಪರಿಣಾಮಗಳನ್ನು ಬಿಟ್ಟುಕೊಟ್ಟು ಜಿನದೇವರ ಮೂಲಕ ಪ್ರರೂಪಿಸಲ್ಪಟ್ಟ ತತ್ತ್ವಗಳ ಶ್ರದ್ಧೆ ಮಾಡಿ ನಿಮ್ಮ ಅನಾದಿ ಸಂಚಿತ ಕರ್ಮಬಂಧರೂಪ ಮಲದಿಂದ ಶುದ್ಧರಾಗುವ ಉಪಾಯ ಮಾಡಿರಿ ಅದರಿಂದ ಅತೀಂದ್ರಿಯ ಸುಖದ ಭೋಕ್ತಾರರಾಗುವಿರಿ.

ಈ ಪ್ರಕಾರ ಸಯೋಗಕೇವಲೀ ಗುಣಸ್ಥಾನದಲ್ಲಿ ಒಂದು ಸಾತಾವೇದನೀಯದ ಬಂಧವಿತ್ತು ಅದರ ವ್ಯುಚ್ಛಿತ್ತಿ ಮಾಡಿ ಅಯೋಗ ಕೇವಲಿಗಳಾಗಿ ಅಲ್ಪ ಕಾಲ ಇದ್ದುಕೊಂಡು ಸಿದ್ಧಪದ ಪಡೆಯುತ್ತಾರೆ.

ಈ ಪ್ರಕಾರ ಬಂಧದ ಸಾಮಾನ್ಯ ಸ್ವರೂಪ ಹೇಳಲಾಯಿತು.

ಈಗ ಗುಣಸ್ಥಾನಗಳಲ್ಲಿ ಕರ್ಮಗಳ ಉದಯ ಹೇಳುತ್ತಾರೆ - ಅಲ್ಲಿ ಬಂಧದೊಳಗೆ ಮಿಥ್ಯಾತ್ವವೊಂದಿತ್ತು, ಇಲ್ಲಿ ಉದಯದಲ್ಲಿ ದರ್ಶನಮೋಹನೀಯದ ಮೂರೂ ಇವೆಯೆಂದು ತಿಳಿಯುವುದು. ಈ ಪ್ರಕಾರ ಬಂಧದ ಒಂದುನೂರಾ ಇಪ್ಪತ್ತರಲ್ಲಿ ಸಮ್ಯಗ್ಮಿಥ್ಯಾತ್ವ, ಸಮ್ಯಕ್‌ಪ್ರಕೃತಿ -ಇವು ಎರಡನ್ನು ಸೇರಿಸುವುದರಿಂದ ಒಂದುನೂರಾ ಇಪ್ಪತ್ತು ಉದಯ ಯೋಗ್ಯವಾದವು.

ಈಗ ಅನೇಕ ಜೀವರುಗಳ ಅಪೇಕ್ಷೆಯಿಂದ ಗುಣಸ್ಥಾನದ ಅನುಸಾರ ಹೇಳುತ್ತಾರೆ - ಮಿಥ್ಯಾತ್ವದಲ್ಲಿ ಆಹಾರಕದ್ವಿಕ, ತೀರ್ಥಂಕರ, ಸಮ್ಯಗ್ಮಿಥ್ಯಾತ್ವ, ಸಮ್ಯಕ್‌ಪ್ರಕೃತಿ -ಇವು ಐದು ಪ್ರಕೃತಿಗಳು ಉದಯಯೋಗ್ಯವಿರುವುದಿಲ್ಲ. ಅದರಿಂದ ಪ್ರಥಮ ಗುಣಸ್ಥಾನದಲ್ಲಿ ಒಂದುನೂರಾ ಹದಿನೇಳರ ಉದಯವಿರುತ್ತದೆ ಹಾಗೂ ಸೂಕ್ಷ್ಮ, ಸಾಧಾರಣ, ಅಪರ್ಯಾಪ್ತಿ, ಆತಪ ಮತ್ತು ಮಿಥ್ಯಾತ್ವ - ಇವು ಐದು ಪ್ರಕೃತಿಗಳು ಮಿಥ್ಯಾತ್ವದಲ್ಲಿ ವ್ಯುಚ್ಛಿನ್ನವಾದವು.

ಒಂದುನೂರಾ ಹನ್ನೆರಡು ಪ್ರಕೃತಿಗಳೊಳಗಿಂದ ಸಾಸಾದನದಲ್ಲಿ ನರಕಗತ್ಯಾನುಪೂರ್ವಿಯ ಉದಯವಿಲ್ಲ-ದಿರುವುದರಿಂದ ಒಂದುನೂರಾ ಹನ್ನೊಂದರ ಉದಯ ಹಾಗೂ ಅನಂತಾನುಬಂಧಿ ನಾಲ್ಕು, ಜಾತಿ ನಾಲ್ಕು, ಸ್ಥಾವರ - ಇವು ಒಂಭತ್ತರ ವ್ಯುಚ್ಛಿತ್ತಿ ಇದೆ.

ಮಿಶ್ರ ಗುಣಸ್ಥಾನದಲ್ಲಿ (ಗತ್ಯಾನುಪೂರ್ವಿಯ ಉದಯವಿಲ್ಲದಿರುವುದರಿಂದ) ಒಂದುನೂರಾ ಎರಡು ಪ್ರಕೃತಿಗಳೊಳಗಿಂದ ಮೂರು ಆನುಪೂರ್ವಿಯನ್ನು ಕಡಿಮೆ ಮಾಡಿದ ಮೇಲೆ ಶೇಷ ಉಳಿದ ತೊಂಭತ್ತೊಂಭತ್ತರಲ್ಲಿ ಒಂದು ಮಿಶ್ರ ಮೋಹನೀಯವನ್ನು ಸೇರಿಸುವುದರಿಂದ ಇಲ್ಲಿ ನೂರು ಪ್ರಕೃತಿಗಳ ಉದಯವಿದೆ. ಹಾಗೂ ಮಿಶ್ರ ಮೋಹನೀಯದ ವ್ಯುಚ್ಛಿತ್ತಿಯು ಈ ಮೂರನೆಯ ಗುಣಸ್ಥಾನದಲ್ಲಿ ಇರುತ್ತದೆ.

ನಾಲ್ಕನೆಯ ಗುಣಸ್ಥಾನದಲ್ಲಿ ನಾಲ್ಕು ಆನುಪೂರ್ವಿ ಮತ್ತು ಸಮ್ಯಕ್‌ಪ್ರಕೃತಿ - ಇವು ಐದು ಸೇರುವುದರಿಂದ ಒಂದುನೂರಾ ನಾಲ್ಕರ ಉದಯವಿರುತ್ತದೆ. ಇಲ್ಲಿ ಹದಿನೇಳರ ವ್ಯುಚ್ಛಿತ್ತಿ ಇದೆ. ಅವುಗಳ ಹೆಸರು ಅಪ್ರತ್ಯಾಖ್ಯಾನ ನಾಲ್ಕು, ದೇವಗತಿ, ದೇವಗತ್ಯಾನುಪೂರ್ವಿ, ದೇವಾಯು, ನರಕಗತಿ, ನರಕಗತ್ಯಾನುಪೂರ್ವಿ, ನರಕಾಯು, ವೈಕ್ರಿಯಿಕ, ವೈಕ್ರಿಯಿಕದ ಅಂಗೋಪಾಂಗ, ತಿರ್ಯಂಚಗತ್ಯಾನುಪೂರ್ವಿ, ಮನುಷ್ಯಗತ್ಯಾನುಪೂರ್ವಿ, ದುರ್ಭಗ, ಅಯಶಸ್ಕೀರ್ತಿ, ಅನಾದೇಯ - ಇವು ಇವೆ.

ಐದನೆಯ ಗುಣಸ್ಥಾನದಲ್ಲಿ ಎಂಭತ್ತೇಳರ ಉದಯವಿದೆ ಮತ್ತು ಪ್ರತ್ಯಾಖ್ಯಾನ ನಾಲ್ಕು, ತಿರ್ಯಂಚಗತಿ, ತಿರ್ಯಂಚಾಯು, ನೀಚಗೋತ್ರ, ಉದ್ಯೋತ - ಇವು ಎಂಟರ ವ್ಯುಚ್ಛಿತ್ತಿ ಇರುತ್ತದೆ.

ಆರನೆಯ ಪ್ರಮತ್ತದಲ್ಲಿ ಆಹಾರದ್ವಿಕ ಸೇರುವುದರಿಂದ ಎಂಭತ್ತೊಂದರ ಉದಯವಿರುತ್ತದೆ ಹಾಗೂ ಆಹಾರಕದ್ವಿಕ ಸ್ತ್ಯಾನಗೃದ್ಧಿ ಮೊದಲಾದ ಮೂರು ನಿದ್ರೆಗಳು - ಇವು ಐದರದೂ ವ್ಯುಚ್ಛಿತ್ತಿ ಇರುತ್ತದೆ.

ಏಳನೆಯ ಅಪ್ರಮತ್ತದಲ್ಲಿ ಎಪ್ಪತ್ತಾರರ ಉದಯವಿರುತ್ತದೆ. ಇಲ್ಲಿ ಕೊನೆಯ ಮೂರು ಸಂಹನನ ಮತ್ತು ಸಮ್ಯಕ್‌ಪ್ರಕೃತಿ - ಇವು ನಾಲ್ಕರ ವ್ಯುಚ್ಛಿತ್ತಿ ಇರುತ್ತದೆ.

ಎಂಟನೆಯ ಗುಣಸ್ಥಾನದಲ್ಲಿ ಎಪ್ಪತ್ತೆರಡರ ಉದಯವಿರುತ್ತದೆ. ಇಲ್ಲಿ ಹಾಸ್ಯಾದಿ ಆರರ ವ್ಯುಚ್ಛಿತ್ತಿ ಇದೆ. ಒಂಭತ್ತರಲ್ಲಿ ಅರವತ್ತಾರರ ಉದಯವಿದೆ. ಇಲ್ಲಿ ಮೂರು ವೇದಗಳು, ಲೋಭವಿಲ್ಲದ ಸಂಜ್ವಲನದ ಮೂರು - ಇವು ಆರರ ವ್ಯುಚ್ಛಿತ್ತಿ ಇರುತ್ತದೆ.

ಅರವತ್ತು ಪ್ರಕೃತಿಗಳನ್ನು ತೆಗೆದುಕೊಂಡು ಹತ್ತನೆಯ ಗುಣಸ್ಥಾನಕ್ಕೆ ಬರುತ್ತಾನೆ. ಹತ್ತರಲ್ಲಿ ಸೂಕ್ಷ್ಮ ಲೋಭದ ವ್ಯುಚ್ಛಿತ್ತಿ ಆಯಿತು. ಹನ್ನೊಂದರಲ್ಲಿ ಐವತ್ತೊಂಭತ್ತರ ಉದಯವು ಹಾಗೂ ನಾರಾಚ, ವಜ್ರನಾರಾಚ - ಇವು ಎರಡರ ವ್ಯುಚ್ಛಿತ್ತಿ ಆಯಿತು.

ಇಲ್ಲಿ ವಿಶೇಷ ತಿಳಿಯಬೇಕಾಗಿರುವುದೇನೆಂದರೆ ನಾರಾಚ, ವಜ್ರನಾರಾಚ - ಇವು ಎರಡು ಸಂಹನನ ಸಹಿತ ಕ್ಷಪಕಶ್ರೇಣಿಯ ಆರೋಹಣೆಯಾಗುವುದಿಲ್ಲ. ಉಪಶಾಂತದ ಮಾರ್ಗದಲ್ಲಿ ಉಪಶಮ ಶ್ರೇಣಿಯುಳ್ಳವನು ಬರುತ್ತಾನೆ. ಯಾವ ಜೀವನು ಕ್ಷಪಕಶ್ರೇಣಿಯನ್ನು ಹತ್ತುತ್ತಾನೆ ಅವನು ಐದು ಸಂಹನನಗಳ ವ್ಯುಚ್ಛಿತ್ತಿಯನ್ನು ಏಳನೆಯ ಗುಣಸ್ಥಾನದಲ್ಲಿಯೇ ಮಾಡುತ್ತಾನೆ. ಒಂದು ವಜ್ರವೃಷಭನಾರಾಚಸಂಹನನ ಸಹಿತ ಕ್ಷಾಯಿಕ ಶ್ರೇಣಿಯನ್ನು ಹತ್ತಿ ಹತ್ತನೆಯ ಗುಣಸ್ಥಾನದಿಂದ ನೇರವಾಗಿ ಹನ್ನೆರಡರಲ್ಲಿಯೇ ಬರುತ್ತಾನೆ, ಹನ್ನೊಂದರೊಳಗೆ ಹೋಗುವುದಿಲ್ಲ ಎಂದು ತಿಳಿಯುವುದು. ಇಲ್ಲಿ ಉಪಶಮಶ್ರೇಣಿಯುಳ್ಳವನ ಅಪೇಕ್ಷೆಯಿಂದ ಹನ್ನೊಂದರಲ್ಲಿ ನಾರಾಚ, ವಜ್ರನಾರಾಚ ಸಂಹನನಗಳ ವ್ಯುಚ್ಛಿತ್ತಿ ಹೇಳಲಾಗಿದೆ. ಪ್ರಥಮ ಸಂಹನನವುಳ್ಳವನಂತೂ ಎರಡೂ ಶ್ರೇಣಿಗಳನ್ನು ಹತ್ತುತ್ತಾನೆಂದು ತಿಳಿಯುವುದು.

ಈಗ ಐವತ್ತೇಳು ತೆಗೆದುಕೊಂಡು ಹನ್ನೆರಡನೆಯ ಗುಣಸ್ಥಾನದಲ್ಲಿ ಬರುತ್ತಾನೆ. ಅವುಗಳೊಳಗಿನ ಜ್ಞಾನಾವರಣ ಐದು, ದರ್ಶನಾವರಣ ಆರು, ಅಂತರಾಯ ಐದು -ಇವು ಹದಿನಾರು ಪ್ರಕೃತಿಗಳ ವ್ಯುಚ್ಛಿತ್ತಿಯು ಹನ್ನೆರಡರಲ್ಲಿ ಆಯಿತು. ಹದಿಮೂರರಲ್ಲಿ ಬಂದ ಮೇಲೆ ತೀರ್ಥಂಕರ ಪ್ರಕೃತಿಯು ಬಂದು ಸೇರಿಕೊಂಡಿತು, ಅದರಿಂದ ನಲವತ್ತೆರಡರ ಉದಯವು ಸಯೋಗದಲ್ಲಿ ಇರುತ್ತದೆ. ಇವುಗಳೊಳಗಿಂದ ವರ್ಣಚತುಷ್ಕ, ಅಗುರುಚತುಷ್ಕ, ಸಂಸ್ಥಾನ ಆರು, ವಿಹಾಯೋಗತಿ ಎರಡು, ಔದಾರಿಕ, ಔದಾರಿಕ ಅಂಗೋಪಾಂಗ, ತೈಜಸ, ಕಾರ್ಮಣ, ಶುಭ, ಅಶುಭ, ಸ್ಥಿರ, ಅಸ್ಥಿರ, ಸುಸ್ವರ, ದುಃಸ್ವರ, ಪ್ರತ್ಯೇಕ ನಿರ್ಮಾಣ, ವಜ್ರವೃಷಭನಾರಾಚಸಂಹನನ, ವೇದನೀಯ - ಇವು ಮೂವತ್ತರ ವ್ಯುಚ್ಛಿತ್ತಿಯು ಹದಿಮೂರರಲ್ಲಿ ಆಯಿತು.

ಉಳಿದ ಹನ್ನೆರಡನ್ನು ತೆಗೆದುಕೊಂಡು ಅಯೋಗಗುಣಸ್ಥಾನಕ್ಕೆ ಹೋಗುತ್ತಾನೆ. ಅಲ್ಲಿ ಹದಿನಾಲ್ಕರಲ್ಲಿ ಹನ್ನೆರಡರ ಉದಯ ಹಾಗೂ ಹನ್ನೆರಡೂ ಪ್ರಕೃತಿಗಳ ವ್ಯುಚ್ಛಿತ್ತಿ ಇದೆ. ಅವು - ಪಂಚೇಂದ್ರಿಯ, ಪರ್ಯಾಪ್ತಿ, ತ್ರಸ, ಬಾದರ, ಮನುಷ್ಯಗತಿ, ಮನುಷ್ಯಾಯು, ಉಚ್ಚಗೋತ್ರ, ಯಶಸ್ಕೀರ್ತಿ, ಆದೇಯ, ಸುಭಗ, ತೀರ್ಥಂಕರ, ವೇದನೀಯಗಳಿವೆ.

ಅದರ ನಂತರ ಆತ್ಮನು ಅಷ್ಟಕರ್ಮರಹಿತ ಶುದ್ಧ, ಪರಮಾತ್ಮಾ, ನಿರಂಜನ, ಅಮೂರ್ತಿಕ ಇತ್ಯಾದಿ ಗುಣಗಳನ್ನು ಪ್ರಕಟಪಡಿಸಿಕೊಂಡು ಸಿದ್ಧಲೋಕಕ್ಕೆ ಪ್ರಾಪ್ತನಾಗುತ್ತಾನೆ - ಇಂಥ ಸಿದ್ಧ ಭಗವಂತರಿಗೆ ನಮಸ್ಕಾರವಿರಲಿ ! - ಈ ಪ್ರಕಾರ ಉದಯದ ಸಾಮಾನ್ಯ ಸ್ವರೂಪ ಹೇಳಲಾಯಿತು.

ಈಗ ಸತ್ತಾದ ಸ್ವರೂಪವನ್ನು ಸಂಕ್ಷೇಪದಲ್ಲಿ ಹೇಳುತ್ತಾರೆ. ಅಲ್ಲಿ ಸತ್ತಾಯೋಗ್ಯ ಪ್ರಕೃತಿಗಳು ಒಂದುನೂರಾ ನಲವತ್ತೆಂಟು ಇವೆ. ಅನೇಕ ಜೀವಗಳ ಅಪೇಕ್ಷೆಯಿಂದ ಎಲ್ಲಿ ವಿಶೇಷವಿವೆ ಎಂಬುದನ್ನು ಮೊದಲು ಹೇಳುತ್ತಾರೆ -

ಯಾವ ಜೀವನು ಸಮ್ಯಕ್ತ್ವ ಪಡೆದು ಮೇಲಿನ ಗುಣಸ್ಥಾನಗಳಲ್ಲಿ ಎಂದೂ ಹೋಗಿಲ್ಲ, ಅಂಥ ಅನಾದಿ ಮಿಥ್ಯಾದೃಷ್ಟಿಗೆ ಆಹಾರಕ ಚತುಷ್ಕ (ಆಹಾರಕ ಶರೀರ, ಆಹಾರಕ ಬಂಧನ, ಆಹಾರಕ ಸಂಘಾತ, ಆಹಾರಕ ಅಂಗೋಪಾಂಗ) ಸಮ್ಯಕ್‌ಪ್ರಕೃತಿ, ಸಮ್ಯಕ್ ಮಿಥ್ಯಾತ್ವ ಮತ್ತು ತೀರ್ಥಂಕರ - ಇವು ಏಳನ್ನು ಹೊರತುಪಡಿಸಿ ಒಂದುನೂರಾ ನಲವತ್ತೊಂದರ ಸತ್ತಾ ಇರುತ್ತದೆ.

ಸಾದಿ ಮಿಥ್ಯಾದೃಷ್ಟಿಯಲ್ಲಿ ಯಾರದು ಮಿಶ್ರ ಮೋಹನೀಯದ ಸತ್ತಾ ಇರುತ್ತದೆ ಅವರಿಗೆ ಒಂದುನೂರಾ ನಲವತ್ತೆರಡರ ಸತ್ತಾ ಇದೆ. ಎಲ್ಲಿ ಮಿಶ್ರ ಮೋಹನೀಯದ ಸತ್ತಾ ಇರುವುದಿಲ್ಲ ಆದರೆ ಅದರ ಸ್ಥಾನದಲ್ಲಿ ಸಮ್ಯಕ್‌ಪ್ರಕೃತಿಯ ಸತ್ತಾ ಇರುತ್ತಿದ್ದರೂ ಒಂದುನೂರಾ ನಲವತ್ತೆರಡರ ಸತ್ತಾ ಇರುತ್ತದೆ ಹಾಗೂ ಒಂದುನೂರಾ ನಲವತ್ತೊಂದಂತೂ ಮೊದಲಿನ ಮತ್ತು ಮಿಶ್ರ ಮೋಹನೀಯ ಹಾಗೂ ಸಮ್ಯಕ್‌ಪ್ರಕೃತಿ - ಇವು ಎರಡರ ಸೇರುವಿಕೆಯಿಂದ ಒಂದುನೂರಾ ನಲವತ್ಮೂರರ ಸತ್ತಾ ಆಗುತ್ತದೆ. ಯಾರದು ತೀರ್ಥಂಕರರ ಸತ್ತಾ ಇರುತ್ತದೆ, ಮಿಶ್ರ ಮೋಹನೀಯದ ಸತ್ತಾವಿರುವುದಿಲ್ಲ ಅವರದು ಒಂದುನೂರಾ ನಲವತ್ಮೂರರದೇ ಸತ್ತಾ ಇರುತ್ತದೆ. ಯಾರದು ಮಿಶ್ರಮೋಹನೀಯ ಮತ್ತು ಆಹಾರಕ ಚತುಷ್ಕದ ಸತ್ತಾ ಇರುತ್ತದೆ, ಅವರದು ಒಂದುನೂರಾ ನಲವತ್ತೆಂಟರ ಸತ್ತಾ ಇರುತ್ತದೆ - ಈ ಪ್ರಕಾರ ಸಾಮಾನ್ಯ ಸತ್ತಾದ ಸ್ವರೂಪ ಹೇಳಲಾಗಿದೆ.

ವಿಶೇಷ ಭಾಗವನ್ನು ಇಲ್ಲಿ ಗ್ರಂಥವು ವಿಸ್ತಾರವಾಗುವುದರ ಭಯದಿಂದ ಮತ್ತು ಇದು ಬಾಲಬೋಧ ಗ್ರಂಥವಿರುವ ಕಾರಣ ಕಠಿಣವಾಗಬಹುದೆಂಬ ಭಯದಿಂದ ಬರೆಯಲಾಗಿಲ್ಲ. ಇದರ ವಿಶೇಷವನ್ನು ಶ್ರೀ ಗೊಮ್ಮಟಸಾರ, 'ಕರ್ಮಕಾಂಡ' ಮಹಾಧಿಕಾರದ 'ವಿಶೇಷ ಸತ್ತಾ ಅಧಿಕಾರ'ದಿಂದ ತಿಳಿಯುವುದು - ಈ ಪ್ರಕಾರ ಸತ್ತಾಯೋಗ್ಯ ಪ್ರಕೃತಿಗಳು ಅನೇಕ ಜೀವಗಳ ಅಪೇಕ್ಷೆಯಿಂದ ಒಂದುನೂರಾ ನಲವತ್ತೆಂಟು ಇವೆ.

ಅಲ್ಲಿ ಮೊದಲನೆಯ ಗುಣಸ್ಥಾನದಲ್ಲಿ ಒಂದುನೂರಾ ನಲವತ್ತೆಂಟರ ಸತ್ತಾ ಇದೆ. ಆಹಾರಕದ್ವಿಕ, ತೀರ್ಥಂಕರ - ಇವು ಮೂರನ್ನು ಹೊರತುಪಡಿಸಿ ಸಾಸಾದನದಲ್ಲಿ ಒಂದುನೂರಾ ನಲವತ್ತೈದರ ಸತ್ತಾ ಇರುತ್ತದೆ. ಇವು ಮೂರು ಪ್ರಕೃತಿಗಳ ಸತ್ತಾ ಯಾರಿಗೆ ಇರುತ್ತದೆ ಅವರಿಗೆ ಎರಡನೆಯ ಗುಣಸ್ಥಾನವಾಗುವುದಿಲ್ಲ.

ಮೂರನೇ ಮಿಶ್ರಗುಣಸ್ಥಾನದಲ್ಲಿ ಆಹಾರಕದ್ವಿಕವು ಸೇರುವುದರಿಂದ ಒಂದುನೂರಾ ನಲವತ್ತೇಳರ ಸತ್ತಾ ಉಳಿಯಿತು.

ನಾಲ್ಕನೆಯ ಗುಣಸ್ಥಾನದಲ್ಲಿ ತೀರ್ಥಂಕರವೂ ಸೇರುವುದರಿಂದ ಒಂದುನೂರಾ ನಲವತ್ತೆಂಟರ ಸತ್ತಾ ಇದೆ.

ನಾಲ್ಕನೆಯ ಗುಣಸ್ಥಾನದಲ್ಲಿ ನರಕಾಯುವಿನ ವ್ಯುಚ್ಛಿತ್ತಿ ಮಾಡಿ ಐದನೆಯ ಗುಣಸ್ಥಾನಕ್ಕೆ ಬರುತ್ತಾನೆ.

ತಾತ್ಪರ್ಯವೆಂದರೆ - ಯಾರಿಗೆ ನರಕಾಯುವಿನ ಸತ್ತಾವಿರುತ್ತದೆ ಅವರಿಗೆ ಪಂಚಮಗುಣಸ್ಥಾನವಾಗುವುದಿಲ್ಲ ಆದುದರಿಂದ ಐದರಲ್ಲಿ ಒಂದುನೂರಾ ನಲವತ್ತೇಳರ ಸತ್ತಾ ಇರುತ್ತದೆ. ಯಾರಿಗೆ ತಿರ್ಯಂಚಾಯುವಿನ ಸತ್ತಾ ಇರುತ್ತದೆ ಅವರಿಗೆ ಮಹಾವ್ರತಗಳಾಗುವುದಿಲ್ಲ ಎಂದರೆ ತಿರ್ಯಂಚಾಯುವಿನ ವ್ಯುಚ್ಛಿತ್ತಿಯು ಐದರಲ್ಲಿ ಆಗಿ ಹೋಗುತ್ತದೆ.

ಆರನೆಯ ಪ್ರಮತ್ತದಲ್ಲಿ ಒಂದುನೂರಾ ನಲವತ್ತಾರರ ಸತ್ತಾ ಇರುತ್ತದೆ. ಇಲ್ಲಿ ವ್ಯುಚ್ಛಿತ್ತಿ ಇರುವುದಿಲ್ಲ. ಮುಂದೆ ಯಾವ ಜೀವನು ಉಪಶಮಶ್ರೇಣಿ ಹತ್ತುವನು ಅವನಿಗೆ ಹನ್ನೊಂದನೆಯ ಗುಣಸ್ಥಾನದವರೆಗೆ ಒಂದುನೂರಾ ನಲವತ್ತಾರರ ಸತ್ತಾ ಇರುತ್ತದೆ, ಅದರಿಂದ ಮುಂದೆ ಇವನ ಗಮನವಾಗುವುದಿಲ್ಲ.

ಕ್ಷಾಯಿಕಶ್ರೇಣಿ ಹತ್ತುವಂಥ ಜೀವನು ಏಳನೆಯ ಅಪ್ರಮತ್ತ ಗುಣಸ್ಥಾನದಲ್ಲಿ ಅನಂತಾನುಬಂಧಿಯ ನಾಲ್ಕು, ದರ್ಶನಮೋಹನೀಯದ ಮೂರು, ದೇವಾಯು - ಇವು ಎಂಟರ ವ್ಯುಚ್ಛಿತ್ತಿ ಮಾಡುತ್ತಾನೆ. ಒಂದುನೂರಾ ನಲವತ್ತೆಂಟನ್ನು ತಗೆದುಕೊಂಡು ಎಂಟನೆಯ ಗುಣಸ್ಥಾನಕ್ಕೆ ಬರುತ್ತಾನೆ ಅಲ್ಲಿ ವ್ಯುಚ್ಛಿತ್ತಿ ಇರುವುದಿಲ್ಲ.

ಅಲ್ಲಿಂದ ಒಂಭತ್ತರಲ್ಲಿ ಹೋದನು. ಇಲ್ಲಿ ಪ್ರತ್ಯಾಖ್ಯಾನದ ನಾಲ್ಕು, ಅಪ್ರತ್ಯಾಖ್ಯಾನದ ನಾಲ್ಕು, ಲೋಭವನ್ನುಳಿದು

ಸಂಜ್ವಲನದ ಮೂರು, ಹಾಸ್ಯಾದಿ ಒಂಭತ್ತು - ಇವು ಇಪ್ಪತ್ತು ಮೋಹದ, ದರ್ಶನಾವರಣದ ಸ್ತ್ಯಾನಗೃದ್ಧಿ ಮೊದಲಾದ ಮೂರು ನಿದ್ರೆ ಹಾಗೂ ನಾಲ್ಕು ಜಾತಿ, ನರಕಗತಿ, ನರಕಗತ್ಯಾನುಪೂರ್ವಿ, ತಿರ್ಯಂಚಗತಿ, ತಿರ್ಯಂಚಗತ್ಯಾನುಪೂರ್ವಿ, ಸೂಕ್ಷ್ಮ, ಸಾಧಾರಣ, ಅಪರ್ಯಾಪ್ತಿ, ಆತಪ, ಸ್ಥಾವರ - ಇವು ಹದಿಮೂರು ನಾಮಕರ್ಮದವು - ಎಲ್ಲವೂ ಸೇರಿ ಮೂವತ್ತಾರರ ವ್ಯುಚ್ಛಿತ್ತಿ ಆಯಿತು.

ಹತ್ತರಲ್ಲಿ ಒಂದುನೂರಾ ಎರಡರ ಸತ್ತಾ ಇರುತ್ತದೆ ಮತ್ತು ಸೂಕ್ಷ್ಮ ಲೋಭದ ವ್ಯುಚ್ಛಿತ್ತಿ ಇರುತ್ತದೆ.

ಹನ್ನೆರಡರಲ್ಲಿ ಒಂದುನೂರಾ ಒಂದರ ಸತ್ತಾ ಇರುತ್ತದೆ. ಅವುಗಳೊಳಗಿಂದ ಇಲ್ಲಿ ಜ್ಞಾನಾವರಣದ ಐದು, ದರ್ಶನಾವರಣದ ಆರು, ಅಂತರಾಯದ ಐದು -ಇವು ಹದಿನಾರರ ವ್ಯುಚ್ಛಿತ್ತಿ ಆಯಿತು.

ಇದರ ನಂತರ ಎಂಭತ್ತೈದು ಪ್ರಕೃತಿಗಳನ್ನು ತೆಗೆದುಕೊಂಡು ಹದಿಮೂರರಲ್ಲಿ ಹೋದನು, ಅಲ್ಲಿ ವ್ಯುಚ್ಛಿತ್ತಿ ಇರುವುದಿಲ್ಲ.

ಹದಿನಾಲ್ಕರಲ್ಲಿ ಎಂಭತ್ತೈದರ ಸತ್ತಾ ಇರುತ್ತದೆ ಮತ್ತು ಇಲ್ಲಿಯೇ ಅವುಗಳ ವ್ಯುಚ್ಛಿತ್ತಿಯೂ ಇರುತ್ತದೆ. ಈ ಗುಣಸ್ಥಾನದ ಎರಡು ಉಪಾಂತಸಮಯದಲ್ಲಿ ಎಪ್ಪತ್ತೆರಡು ಮತ್ತು ಕೊನೆಯಲ್ಲಿ ಹದಿಮೂರು ಈ ಪ್ರಕಾರ ಅಂತಿಮ ಸಮಯದಲ್ಲಿ ಎಂಭತ್ತೈದರ ವ್ಯುಚ್ಛಿತ್ತಿ ಇದೆ.

ಉಪಾಂತ ಸಮಯದಲ್ಲಿ ವೇದನೀಯದ ಒಂದು, ಗೋತ್ರದ ಒಂದು ನೀಚ ಗೋತ್ರ, ವರ್ಣ ಚತುಷ್ಕದ ಇಪ್ಪತ್ತು, ಆರು ಸಂಸ್ಥಾನ, ಆರು ಸಂಹನನ, ಐದು ಶರೀರ, ಐದು ಬಂಧನ, ಐದು ಸಂಘಾತ, ಮೂರು ಅಂಗೋಪಾಂಗ, ಎರಡು ವಿಹಾಯೋಗತಿ, ದೇವಗತಿ, ದೇವಗತ್ಯಾನುಪೂರ್ವಿ, ಅಗುರುಲಘು, ನಿರ್ಮಾಣ, ಉಚ್ಛ್ವಾಸ, ಉಪಘಾತ, ಪರಘಾತ, ಉದ್ಯೋತ, ಪ್ರತ್ಯೇಕ, ಸ್ವರದ್ವಿಕ, ಶುಭ, ಅಶುಭ, ಸ್ಥಿರ, ಅಸ್ಥಿರ, ದುರ್ಭಗ, ಅನಾದೇಯ, ಅಯಶಸ್ಕೀರ್ತಿ - ಇವೆಲ್ಲವೂ ಸೇರಿ ಎಪ್ಪತ್ತೆರಡೆಂದು ತಿಳಿಯುವುದು. ಇವುಗಳದು ಹದಿನಾಲ್ಕನೇ ಗುಣಸ್ಥಾನದ ಸರ್ವಕಾಲದೊಳಗಿಂದ ಅಂತಿಮ ಎರಡು ಸಮಯ ಶೇಷ ಉಳಿಯುವವರೆಗಂತೂ ವ್ಯುಚ್ಛಿತ್ತಿ ಇರುವುದಿಲ್ಲ; ದ್ವಿಚರಮದಲ್ಲಿ ವ್ಯುಚ್ಛಿತ್ತಿ ಇದೆ.

ಅದರ ನಂತರ ಪಂಚೇಂದ್ರಿಯ, ಪರ್ಯಾಪ್ತಿ, ತ್ರಸ, ಬಾದರ, ಮನುಷ್ಯಗತಿ, ಮನುಷ್ಯಗತ್ಯಾನುಪೂರ್ವಿ, ಮನುಷ್ಯಾಯು, ಉಚ್ಚಗೋತ್ರ, ಯಶಸ್ಕೀರ್ತಿ, ಆದೇಯ, ಸುಭಗ, ತೀರ್ಥಂಕರ, ವೇದನೀಯ -ಇವು ಹದಿಮೂರು ಪ್ರಕೃತಿಗಳ ವ್ಯುಚ್ಛಿತ್ತಿಯು ಚರಮ ಸಮಯದಲ್ಲಿ ಆಗಿ ಜೀವನು ಸಿದ್ಧನಾಗಿ ಹೋಗುತ್ತಾನೆ.

ಈ ಪ್ರಕಾರ ಅಯೋಗ ಗುಣಸ್ಥಾನದಲ್ಲಿ ಎಂಭತ್ತೈದು ಕರ್ಮಪ್ರಕೃತಿಗಳ ವ್ಯುಚ್ಛಿತ್ತಿ ಆಗಿ ಸರ್ವಕರ್ಮರಜರಹಿತ ಶುದ್ಧ ನಿರಂಜನ ಅಮೂರ್ತಿಕ, ಸಿದ್ಧಪರಮಾತ್ಮರಾಗುತ್ತಾರೆ - ಇಂಥ ಶುದ್ಧ ಆತ್ಮನಿಗೆ ಪುನಃ ಪುನಃ ನಮಸ್ಕಾರವಿರಲಿ.

ಈ ಪ್ರಕಾರ ಈ ಪುದ್ಗಲ ದ್ರವ್ಯವು ಸಂಸಾರಿ ಜೀವರುಗಳ ರಾಗ-ದ್ವೇಷ ಪರಿಣಾಮದ ಮೂಲಕ ಜ್ಞಾನಾವರಣಾದಿ ಅಷ್ಟಕರ್ಮರೂಪವಾಗಿ ಜೀವರುಗಳಿಗೆ ಬಂಧ ಉದಯ, ಸತ್ತಾರೂಪವಾಗಿ ನರ-ನಾರಕಾದಿ ಅನೇಕ ಗತಿಗಳಲ್ಲಿ ಭ್ರಮಣ ಮಾಡಿಸುತ್ತಿರುತ್ತದೆ.

ಈ ಪ್ರಕಾರ ಶ್ರೀ ಸುದೃಷ್ಟಿತರಂಗಿಣಿಯೆಂಬ ಹೆಸರಿನ ಗ್ರಂಥದಲ್ಲಿ ಅಜೀವತತ್ತ್ವರೂಪ
ಪೌದ್ಗಲಿಕ ದ್ರವ್ಯಕರ್ಮದ ಬಂಧ, ಉದಯ, ಸತ್ತಾರೂಪ ಪರಿಣಮನಶಕ್ತಿ ಸಹಿತ
ಕರ್ಮಕಥನವೆಂಬ ಹೆಸರಿನ ಐದನೆಯ ಪರ್ವವು ಪೂರ್ಣವಾಯಿತು.

★★★★★

# ೬ : ಆರನೆಯ ಪರ್ವ
# ಮೋಹೀ ಜೀವರುಗಳ ಸೋಗ

ಈಗ ಮೋಹೀ ಜೀವಗಳನ್ನು ದ್ರವ್ಯಕರ್ಮವು ಹೇಗೆ ನರ್ತಿಸ ಹಚ್ಚುತ್ತದೆ ಹಾಗೆಯೇ ಅವು ನರ್ತಿಸುತ್ತವೆ. ಹೇಗೆ ಮಂಗನ ಆಟ ಮಾಡಿಸುವಂಥವನು ಕೋಲಿನಿಂದ ಮಂಗನನ್ನು ಹೊಡೆದು ಅನೇಕ ಪ್ರಕಾರದಿಂದ ಆಟವಾಡಿಸುತ್ತಾನೆ, ಕುಣಿಸುತ್ತಾನೆ. ಅದೇ ಪ್ರಕಾರ ಸಂಸಾರೀ ಜೀವಗಳನ್ನು ಕರ್ಮರೂಪದ ಮಂಗನಾಡಿಸುವಂಥವನು ಆಸೆಯರೂಪದ ಕೋಲಿನಿಂದ ಹೊಡೆಯುತ್ತ ಅನೇಕ ಪ್ರಕಾರದಿಂದ ಆಟವಾಡಿಸುತ್ತಾನೆ, ಕುಣಿಸುತ್ತಾನೆ.

ಹೇಗೆ ಯಾವನೋ ಅಭಿನಯಕಾರನು ಧನದ ಲೋಭದಿಂದ ತನ್ನ ದೇಹದಲ್ಲಿ ಅನೇಕ ಸೋಗುಗಳನ್ನು ಧಾರಣ ಮಾಡಿ ಜನರಿಗೆ ತೋರಿಸುತ್ತ ಆಶ್ಚರ್ಯವನ್ನುತ್ಪನ್ನ ಮಾಡುತ್ತಾನೆ - ಕೆಲವೊಮ್ಮೆ ದೊರೆಯಸೋಗು ಧಾರಣ ಮಾಡುತ್ತಾನೆ, ಕೆಲವೊಮ್ಮೆ ದರಿದ್ರನ ಸೋಗು, ಕೆಲವೊಮ್ಮೆ ಸ್ತ್ರೀ, ಕೆಲವೊಮ್ಮೆ ಪುರುಷ, ಕೆಲವೊಮ್ಮೆ ಸಿಂಹ, ಕೆಲವೊಮ್ಮೆ ಮೇಕೆ, ಕೆಲವೊಮ್ಮೆ ಸರ್ಪ ಮೊದಲಾಗಿ ತನ್ನ ಶರೀರದ ಮೇಲೆ ಅಂಥ ಚರ್ಮರೂಪದ ವಸ್ತ್ರವನ್ನು ಬದಲಾಯಿಸುತ್ತ ಬದಲಾಯಿಸುತ್ತ ಅನೇಕ ಸೋಗುಗಳಿಂದ ದರ್ಶಕರಿಗೆ ಹರ್ಷ-ವಿಷಾದವನ್ನುಂಟು ಮಾಡುತ್ತಾನೆ. ಅದೇ ಪ್ರಕಾರ ಈ ಜೀವರೂಪದ ಅಭಿನಯಕಾರನು ತನ್ನ ಕರ್ಮಜನಿತ ಶರೀರಗಳ ಆವರಣವನ್ನು ಬದಲಿಸುತ್ತ ಬದಲಿಸುತ್ತ ಅನೇಕ ಸೋಗುಗಳ ಮೂಲಕ ನರ್ತಿಸುತ್ತಾನೆ. ಅನೇಕ ಸೋಗುಗಳನ್ನು ಧಾರಣ ಮಾಡಿ ಜಗತ್ತಿನಲ್ಲಿ ನರ್ತನ ಮಾಡುತ್ತ ಗಮನ ಮಾಡುತ್ತಾನೆ. ಈ ಜೀವದ ಗಮನ ಮಾಡುವ ಮಾರ್ಗಗಳು ಹದಿನಾಲ್ಕು ಇವೆ. ಇವುಗಳಲ್ಲಿಯೇ ಜೀವನು ಅನಾದಿ ಕಾಲದಿಂದ ಗಮನ ಮಾಡುತ್ತಲಿದ್ದಾನೆ. ಅವುವೇ ಮಾರ್ಗಗಳನ್ನು ಗೊಮ್ಮಟಸಾರದ ಜೀವಕಾಂಡ ಗಾಥೆ ೧೪೨ರಲ್ಲಿ ಈ ಪ್ರಕಾರ ಹೇಳಿದ್ದಾರೆ -

**ಗಇ ಇಂದಿಯೇ ಚ ಕಾಯೇ, ಜೋಏ ವೇಏ ಕಸಾಯ ಣಾಣೇ ಯ ।**
**ಸಂಜಮ ದಂಸಣ ಲೇಸ್ಸಾ, ಭವಿಯಾ ಸಮ್ಮತ್ತ ಸಣ್ಣಿ ಆಹಾರೇ ॥**

ನಾಲ್ಕು ಗತಿಗಳು, ಐದು ಇಂದ್ರಿಯಗಳು, ಆರು ಕಾಯಗಳು, ಹದಿನೈದು ಯೋಗಗಳು, ಮೂರು ವೇದಗಳು, ಇಪ್ಪತ್ತೈದು ಕಷಾಯಗಳು, ಎಂಟು ಜ್ಞಾನಗಳು, ಏಳು ಸಂಯಮಗಳು, ನಾಲ್ಕು ದರ್ಶನಗಳು, ಆರು ಲೇಶ್ಯೆಗಳು, ಭವ್ಯ ಅಭವ್ಯ ಎರಡು, ಆರು ಸಮ್ಯಕ್ತ್ವ, ಎರಡು ಸಂಜ್ಞಿ ಮತ್ತು ಎರಡು ಆಹಾರ - ಈ ಭೇದಗಳಿಂದ ಸಹಿತವಾದ ಹದಿನಾಲ್ಕು ಮಾರ್ಗಣಾಗಳಿವೆ.

(ಸಂಸಾರದಲ್ಲಿ ಕರ್ಮಾನುಸಾರವಾಗಿ ಸಂಸಾರಿ ಜೀವನು ನರ್ತಿಸುತ್ತಾನೆ - ಈ ಕಥನದ ಅಭಿಪ್ರಾಯವೇನೆಂದರೆ- ಯಾವಾಗ ಈ ಜೀವನು ಸ್ವಯಂ ತನ್ನ ಯೋಗ್ಯತೆಯ ಅನುಸಾರ ವಿಕಾರರೂಪವಾಗಿ ಪರಿಣಮಿತನಾಗುತ್ತಾನೆ, ಆಗ ಅದರಲ್ಲಿ ಕರ್ಮದ ಉದಯವು ನಿಮಿತ್ತವಿರುತ್ತದೆ- ಎಂಬುದಾಗಿದೆ. ಜಡ ಹಾಗೂ ಭಿನ್ನದ್ರವ್ಯವಿರುವ ಕಾರಣ ಕರ್ಮದಲ್ಲಿ ಒತ್ತಾಯ ಪೂರ್ವಕವಾಗಿ ಜೀವವನ್ನು ಕುಣಿಸುವ ಕ್ಷಮತೆ-ಸಾಮರ್ಥ್ಯವಿರುವುದಿಲ್ಲ.)

ಈಗ ಇವುಗಳ ಸಾಮಾನ್ಯ ಅರ್ಥ ಹೇಳುತ್ತಾರೆ - ಅಲ್ಲಿ ಗತಿನಾಮಕರ್ಮದ ಉದಯದಲ್ಲಿ ಗತಿಸಂಬಂಧದ ಶರೀರಾಕಾರವನ್ನು ಧಾರಣ ಮಾಡುವುದು ಗತಿಯಿದೆ.

ಇಂದ್ರಿಯನಾಮಕರ್ಮದ ಉದಯದಿಂದ ಅಷ್ಟು ಇಂದ್ರಿಯಗಳಿಗೆ ಯೋಗ್ಯ ತನ್ನ ಶರೀರದ ಆಕಾರವಾಗುವುದು ಇಂದ್ರಿಯಮಾರ್ಗಣಾ ಇದೆ.

ತ್ರಸ-ಸ್ಥಾವರನಾಮಕರ್ಮದ ಉದಯದಿಂದ ತ್ರಸ-ಸ್ಥಾವರ ಪರ್ಯಾಯಗಳಲ್ಲಿ ಜನ್ಮ ತೆಗೆದುಕೊಳ್ಳುವುದು ಕಾಯವಿದೆ.

ನೋ ಇಂದ್ರಿಯ ಕರ್ಮದ ಬಲದಿಂದ ಎಂಟು ದಳಗಳುಳ್ಳ ಕಮಲಾಕಾರ ದ್ರವ್ಯಮನದ ನಿಮಿತ್ತಪಡೆದು ಆತ್ಮನ ಪ್ರದೇಶಗಳು ಚಂಚಲವಾಗುವುದು ಮನೋಯೋಗವಿದೆ. ಸ್ವರಕರ್ಮದ ಉದಯದಿಂದ ವಚನವನ್ನಾಡುವ ಯೋಗ್ಯತೆಯ ನಿಮಿತ್ತ ಪಡೆದು ಆತ್ಮನ ಪ್ರದೇಶಗಳು ಚಂಚಲವಾಗುವುದು ವಚನಯೋಗವಿದೆ. ಐದು ಪ್ರಕಾರವುಳ್ಳ ಶರೀರಗಳ ಉದಯದಿಂದ ಯಥಾಯೋಗ್ಯ ಕಾಯದ ನಿಮಿತ್ತ ಪಡೆದು ಆತ್ಮನ ಪ್ರದೇಶಗಳ ಚಂಚಲತೆಯಾಗುವುದು ಕಾಯಯೋಗವಿದೆ.

ವೇದಕರ್ಮದ ಉದಯದಿಂದ ಸ್ತ್ರೀಯ ಇಚ್ಛೆ, ಪುರುಷನ ಇಚ್ಛೆ ಹಾಗೂ ಸ್ತ್ರಿ-ಪುರುಷರ ಯುಗಪತ್ ಇಚ್ಛಾದಿ ಭಾವವಾಗುವುದು ವೇದವಿದೆ.

ಚಾರಿತ್ರ ಮೋಹದ ಉದಯದಿಂದ ಕ್ರೋಧ-ಮಾನಾದಿ ಇಪ್ಪತ್ತೈದು ಕಷಾಯಗಳು ಇರುವುದು ಕಷಾಯವಿದೆ.

ಯಾವುದರಿಂದ ಆತ್ಮನು ಸ್ವಪರಪದಾರ್ಥಗಳನ್ನು ತಿಳಿಯುತ್ತಾನೆ ಅದು ಜ್ಞಾನವಿದೆ.

ಮೋಹದ ತೀವ್ರ ಉದಯದಿಂದ ವಿಷಯಗಳಲ್ಲಿ ಮೋಹಿತನಾಗಿ ದಯೆಯಲ್ಲಿ ಪ್ರಮಾದಿಯಾಗುತ್ತ ಪ್ರವರ್ತಿಸುವುದು ಅಸಂಯಮವಿದೆ. ಅಪ್ರತ್ಯಾಖ್ಯಾನದ ಉದಯದಿಂದ ಸಹಿತ ಆತ್ಮನು ವ್ರತಾವ್ರತರೂಪ ಯುಗಪತ್ ಪ್ರವರ್ತಿಸುವುದು, ದೇಶಸಂಯಮ (ಸಂಯಮಾ-ಸಂಯಮ) ವಿದೆ. ಸರ್ವಸಾವದ್ಯರಹಿತ ಕ್ರಿಯಾರೂಪ ಪ್ರವರ್ತಿಸುವುದು ಸಕಲಸಂಯಮವಿದೆ. ಇದರಲ್ಲಿ ಐದು ಭೇದಗಳು ಇವೆ.

ದರ್ಶನಾವರಣದ ಕ್ಷಯೋಪಶಮದಿಂದ ಸ್ವ-ಪರಗಳನ್ನು ನೋಡುವ (ಸಾಮಾನ್ಯ ಅವಲೋಕನ ಮಾಡುವ) ಶಕ್ತಿಯು ದರ್ಶನವಿದೆ.

ಕಷಾಯಗಳಿಂದ ರಂಜಿಸಲ್ಪಡುವಂಥದು ಯೋಗಲೇಶ್ಯೆ ಇದೆ.

ಮೋಕ್ಷವಾಗಲು ಯೋಗ್ಯವಿರುವ ಸಮ್ಯಗ್ದರ್ಶನಾದಿ ಸಾಮಗ್ರಿಗಳು ಪ್ರಗಟವಾಗುವಂಥ ಯೋಗ್ಯತೆಯ ಅಭಾವವು ಅಭವ್ಯತ್ವವಿದೆ. ಮೋಕ್ಷಯೋಗ್ಯ ಸಮ್ಯಕ್‌ರತ್ನತ್ರಯಾದಿ ಸಾಮಗ್ರಿಗಳು ಯಾವುದಕ್ಕೆ ಪ್ರಗಟವಾಗುತ್ತವೆ ಅವು ಭವ್ಯವಿದ್ದು ಅದರಲ್ಲಿ ಮೂರು ಭೇದಗಳಿವೆ.

ಜೀವ-ಅಜೀವ ತತ್ತ್ವಗಳನ್ನು ಒಳ್ಳೆಯ ರೀತಿಯಿಂದ ತಿಳಿದುಕೊಂಡು ಅವುಗಳ ದೃಢವಾದ ಶ್ರದ್ಧೆಯಾಗುವುದು ಸಮ್ಯಕ್ತ್ವವಿದೆ. (ಮಿಥ್ಯಾತ್ವ, ಸಾಸಾದನ, ಮಿಶ್ರ , ಔಪಶಮಿಕ, ಕ್ಷಾಯೋಪಶಮಿಕ-ವೇದಕ, ಕ್ಷಾಯಿಕರೂಪದಲ್ಲಿ) ಅದು ಅತತ್ತ್ವಶ್ರದ್ಧೆ ಹಾಗೂ ತತ್ತ್ವಶ್ರದ್ಧೆಗೆ ಸಂಬಂಧಿಸಿದಂತೆ ಆರು ಭೇದರೂಪವಿದೆ.

ಮನಸ್ಸಿನ ಕ್ಷಯೋಪಶಮವಾಗಲು ಯೋಗ್ಯ ಹಾಗೂ ಮನಸ್ಸಿಗೆ ಕ್ಷಯೋಪಶಮ ಯೋಗ್ಯವಾಗದಂಥ ಭೇದರೂಪದ ಸಂಜ್ಞಿಮಾರ್ಗಣಾ ಇದೆ.

ಔದಾರಿಕ, ವೈಕ್ರಿಯಿಕ, ಆಹಾರಕ -ಇವು ಮೂರು ಶರೀರರೂಪ ಪುದ್ಗಲಗಳ ಗ್ರಹಣವು ಆಹಾರಕವಿದೆ. ಅಂತರಾಳ (ವಿಗ್ರಹ ಗತಿ)ದಲ್ಲಿ ಇವು ಮೂರು ಶರೀರಗಳ ಗ್ರಹಣವಾಗದಿರುವುದು ಅನಾಹಾರಕವಿದೆ.

ಈ ಪ್ರಕಾರ ಜೀವದ ಆವಾಗಮನ ಮಾಡುವಂಥ ಹದಿನಾಲ್ಕು ಮಾರ್ಗ (ಮಾರ್ಗಣಾ) ಹೇಳಿದ್ದಾರೆ. ಜೀವದ ಗಮನಸ್ಥಾನಗಳು ಬೇರೆಯೂ ಇವೆ, ಅವುಗಳನ್ನು ಗೊಮ್ಮಟಸಾರ ಜೀವಕಾಂಡ ಗಾಥೆ ೨ ರಲ್ಲಿ ಈ ಪ್ರಕಾರ ಹೇಳಿದ್ದಾರೆ-

**ಗುಣ ಜೀವಾ ಪಜ್ಜತ್ತೀ , ಪಾಣಾಸಣ್ಣಾ ಯ ಮಗ್ಗಣಾಓ ಯ ।**
**ಉವಓಗೋ ವಿ ಯ ಕಮಸೋ, ಬೀಸಂತು ಪರೂವಣಾ ಭಣಿದಾ ॥**

ಗುಣಸ್ಥಾನ, ಜೀವಸಮಾಸ, ಪರ್ಯಾಪ್ತಿ, ಪ್ರಾಣ, ಸಂಜ್ಞೆ, ಹದಿನಾಲ್ಕು ಮಾರ್ಗಣಾಗಳು, ಉಪಯೋಗ -

ಇವು ಇಪ್ಪತ್ತು ಪ್ರರೂಪಣೆಗಳನ್ನು ತಿಳಿಯುವುದು. ಈಗ ಇವುಗಳ ಸಾಮಾನ್ಯ ಅರ್ಥದಲ್ಲಿ ಸರ್ವಪ್ರಥಮವಾಗಿ ಗುಣಸ್ಥಾನಗಳ ಸಾಮಾನ್ಯಾರ್ಥ ಹೇಳಲಾಗುವುದು -

೧) ದರ್ಶನಮೋಹದ ಮೂರು, ಅನಂತಾನುಬಂಧಿಯ ನಾಲ್ಕು - ಇವು ಏಳು ಕರ್ಮ ಪ್ರಕೃತಿಗಳ ಉದಯದಲ್ಲಿ ಜೀವನಿಗೆ ಅತತ್ತ್ವಶ್ರದ್ಧೆಯ ರೂಪದ ಭಾವವಾಗುವುದು, ಅದರಿಂದ ಐದು ಪ್ರಕಾರದ ಮಿಥ್ಯಾತ್ವವಿರುವುದು ಅದು ಮಿಥ್ಯಾತ್ವ ಗುಣಸ್ಥಾನವಿದೆ. ಇದು ಇದ್ದ ಮೇಲೆ ಎಲ್ಲ ಗುಣಗಳು ಮಿಥ್ಯಾತ್ವರೂಪವಾಗುತ್ತವೆ ಅದರಿಂದ ಇದರ ಹೆಸರು ಮಿಥ್ಯಾತ್ವ ಗುಣಸ್ಥಾನವಿದೆ.

೨) ಪ್ರಥಮೋಪಶಮ ಸಮ್ಯಕ್‌ಧಾರಿಯ ತನ್ನ ಯೋಗ್ಯ ಅಂತರ್ಮುಹೂರ್ತಕಾಲವನ್ನು ಪೂರ್ಣಗೊಳಿಸುತ್ತ ಉತ್ಕೃಷ್ಟವೆಂದರೆ ಆರು ಆವಲಿಕಾಲ, ಜಘನ್ಯವೆಂದರೆ ಒಂದು ಸಮಯ ಶೇಷ ಉಳಿದ ಮೇಲೆ ಅನಂತಾನುಬಂಧಿಯ ನಾಲ್ಕರೊಳಗಿಂದ ಯಾವುದಾದರೊಂದು ಕಷಾಯದ ಉದಯವಾದ ಮೇಲೆ ಮಿಥ್ಯಾತ್ವರಹಿತ ಅನಂತಾನುಬಂಧಿಯ ಸಹಿತವಿರುವುದು, ಅದು ಸಾಸಾದನ ಸಮ್ಯಕ್ತ್ವವೆನಿಸಿಕೊಳ್ಳುತ್ತದೆ. ಈ ಸಾಸಾದನವು ಮಿಥ್ಯಾತ್ವದ ಸಮಾನ ಗುಣವನ್ನು ಧಾರಣ ಮಾಡುತ್ತದೆ. ಹೇಗೆಂದರೆ - ಕ್ಷೀರಭೋಜನ ಮಾಡಿದ ನಂತರ ವಮನವಾಗಿ ಹೋದ ಮೇಲೆಯೂ ಒಂದು ವೇಳೆ ಅದರ ಅಂಶವು ಉಳಿದುಕೊಂಡಿದ್ದರೆ ಕೆಲಸಮಯದವರೆಗೆ ಕ್ಷೀರದ ಸ್ವಾದವು ಉಳಿಯುತ್ತದೆ, ನಂತರ ನಷ್ಟವಾಗಿ ಹೋಗುತ್ತದೆ; ಅದೇ ಪ್ರಕಾರ ಸಮ್ಯಕ್ತ್ವವು ಪ್ರಾಪ್ತವಾದ ಮೇಲೆ ಅದರ ವಮನ ಅರ್ಥಾತ್ ತ್ಯಾಗ ಮಾಡಿ ಮಿಥ್ಯಾತ್ವ (ವಿಪರೀತಾಭಿನಿವೇಷ) ಕ್ಕೆ ಪ್ರಾಪ್ತವಾಗಿ ಹೋಗುತ್ತದೆ, ಆದಾಗ್ಯೂ ಸಮ್ಯಕ್ತ್ವದ ಕಾಲವಿರುವುದರಿಂದ ಇದನ್ನು ಸಮ್ಯಕ್ತ್ವವೆಂದು ಹೇಳಿದ್ದಾರೆ. - ಈ ಪ್ರಕಾರ ಸಾಸಾದನ ಸಮ್ಯಕ್ತ್ವವಿದೆ.

೩. ಮಿಶ್ರ ಮೋಹದ ಉದಯದಿಂದ ಮಿಶ್ರ ಶ್ರದ್ಧೆಯಾಗುವುದು. ಯಾವ ಪ್ರಕಾರ ಸಕ್ಕರೆ ಮತ್ತು ಮೊಸರನ್ನು ಬೆರೆಸಿ ತಿಂದ ಮೇಲೆ ಸಿಹಿ ಹುಳಿ ಎರಡರ ಸ್ವಾದವು ಏಕಕಾಲದಲ್ಲಿ ಬರುತ್ತದೆ, ಅದೇ ಪ್ರಕಾರ ಮಿಥ್ಯಾತ್ವ ಮತ್ತು ಸಮ್ಯಕ್ತ್ವ - ಇವೆರಡರ ರೂಪ ಒಂದು ಶ್ರದ್ಧೆಯಾಗುತ್ತದೆ; ಅದರಿಂದ ಇದರ ಹೆಸರು ಮಿಶ್ರ ಗುಣಸ್ಥಾನವಿದೆ.

೪. ದರ್ಶನ ಮೋಹದ ಮೂರು, ಅನಂತಾನುಬಂಧಿಯ ನಾಲ್ಕು - ಇವು ಏಳರ ಉಪಶಮ, ಕ್ಷಯೋಪಶಮ, ಅಥವಾ ಕ್ಷಯದಿಂದ ಆತ್ಮನಿಗೆ ಆಗುವ ಆರು ದ್ರವ್ಯ, ಒಂಭತ್ತು ಪದಾರ್ಥ, ಐದು ಅಸ್ತಿಕಾಯ ಹಾಗೂ ಇವುಗಳ ಗುಣಪರ್ಯಾಯಗಳ ಯಥಾವತ್ ಶ್ರದ್ಧೆ ಮತ್ತು ಆತ್ಮ ಸ್ವಭಾವದ ಅನುಭವ - ಇದುವೇ ಸತ್ಯದೃಷ್ಟಿ, ಸಮ್ಯಕ್ತ್ವವಿದೆ. ಇವನು ಚಾರಿತ್ರಮೋಹದ ಉದಯದಿಂದ ಸಂಯಮಧಾರಣ ಮಾಡಲಾಗುವುದಿಲ್ಲ, ಅಸಂಯಮಿ ಇದ್ದಾನೆ ಅದರಿಂದ ಅವ್ರತಸಮ್ಯಗ್ದೃಷ್ಟಿಯೆನಿಸಿಕೊಳ್ಳುತ್ತಾನೆ.

೫. ಎಲ್ಲಿ ಅಪ್ರತ್ಯಾಖ್ಯಾನಾವರಣದ ಅಭಾವದೊಳಗೆ ಅಲ್ಪವ್ರತಗಳಂತೂ ಆಗುತ್ತವೆ ಆದರೆ ಪ್ರತ್ಯಾಖ್ಯಾನಾವರಣದ ಉದಯವಿರುವುದರಿಂದ ಪೂರ್ಣ ವ್ರತಗಳಾಗುವುದಿಲ್ಲ, ಅದು ವ್ರತಾವ್ರತವಿದೆ. ತ್ರಸಹಿಂಸೆ ಮೊದಲಾದವುಗಳ ತ್ಯಾಗವಾಗುವುದು ವ್ರತವಿದೆ, ಪಂಚಸ್ಥಾವರಗಳ ಹಿಂಸೆ ಮೊದಲಾದವುಗಳಲ್ಲಿ ಯಥಾಸಂಭವ ವ್ರತ ಮಾಡಲು ಬಯಸುತ್ತಾನೆ ಆದರೆ ಸರ್ವಪ್ರಕಾರದ ಹಿಂಸಾದಿಗಳಿಂದ ತಪ್ಪಿಸಿಕೊಳ್ಳಲಾಗುವುದಿಲ್ಲ, ನಿಮಿತ್ತ ಪಡೆದು ಸ್ಥಾವರ ಹಿಂಸೆ ಮೊದಲಾದವು ಆಗುತ್ತವೆ ಆದುದರಿಂದ ಸ್ಥಾವರ ಹಿಂಸೆ ಮೊದಲಾದವುಗಳ ತ್ಯಾಗವಿರುವುದಿಲ್ಲ. ಮನಸ್ಸು ಮತ್ತು ಇಂದ್ರಿಯಗಳು ವಶದಲ್ಲಿ ಇರುವುದಿಲ್ಲ; ಅದರಿಂದ ಅವ್ರತವಿದೆ. - ಈ ಪ್ರಕಾರ ಈ ಪಂಚಮ ಗುಣಸ್ಥಾನದಲ್ಲಿ ವ್ರತ - ಅವ್ರತ ಎರಡೂ ಇರುತ್ತವೆ ಅದರಿಂದ ಇದರ ಹೆಸರು ವ್ರತಾವ್ರತವಿದೆ. ಅಲ್ಪ ವ್ರತದ ಯೋಗದಿಂದ ಇದರ ಹೆಸರು ದೇಶವ್ರತವೂ ಇದೆ.

೬. ಎಲ್ಲಿ ಪ್ರತ್ಯಾಖ್ಯಾನದ ಅಭಾವದಿಂದ ಸಕಲ ಸಂಯಮವಂತೂ ಆಗುತ್ತದೆ ಆದರೆ ಏಕಾಗ್ರಧ್ಯಾನದ

ಅವಲಂಬನೆಯು ಬಿಟ್ಟು ಹೋಗಿ ಕಿಂಚಿತ್ ಪ್ರಮಾದದ ವಶದಿಂದ ಆಹಾರ, ವಿಹಾರ, ಉಪದೇಶಾದಿ ಕ್ರಿಯೆಯ ರೂಪ ವಚನಗಳು ಇತ್ಯಾದಿಯ ಪ್ರವೃತ್ತಿಯಾಗುತ್ತದೆ, ಅದು ಪ್ರಮತ್ತ ಗುಣಸ್ಥಾನವಿದೆ.

೭. ಯಾರು ವಿಹಾರ, ಉಪದೇಶಾದಿ ಕ್ರಿಯೆಯಿಂದ ರಹಿತ ಧ್ಯಾನಾವಲಂಬಿ ಯೋಗೀಶ್ವರರಿದ್ದಾರೆ, ಅವರನ್ನು ಪ್ರಮಾದರಹಿತ ಅಪ್ರಮತ್ತಗುಣಸ್ಥಾನಧಾರಿಯೆಂದು ಹೇಳಲಾಗುತ್ತದೆ.

೮. ಎಲ್ಲಿ ಕಾರಣದ ನಿಮಿತ್ತ ಪಡೆದು ಪರಿಣಾಮಗಳ ಮಹಾವಿಶುದ್ಧತೆಯ ಯೋಗದಿಂದ ಪ್ರತಿ ಸಮಯ ಅನಂತಗುಣಿತ ವಿಶುದ್ಧತೆಯ ಕಾರಣ, ಪ್ರತಿ ಸಮಯ ಕರ್ಮಗಳ ಅಸಂಖ್ಯಾತ ಗುಣಿತ ನಿರ್ಜರೆಯಾಗುತ್ತದೆ, ಅದು ಅಪೂರ್ವಕರಣ ಗುಣಸ್ಥಾನವಿದೆ.

೯. ಅಪೂರ್ವಕರಣಕ್ಕಿಂತ ಅಧಿಕ ವಿಶುದ್ಧತೆಯ ಕಾರಣ, ಹಾಸ್ಯಾದಿ ನೋಕಷಾಯಗಳು ರಸರಹಿತವಾಗುವುದು, ತಮ್ಮ ಗುಣಯೋಗ್ಯ, ಒಂದು ಕಾಲದಲ್ಲಿ ಒಂದು ರೂಪಪರ್ವತನೆಯು ಆಗುವುದು, ಅನೇಕ ಜೀವಗಳದು ಏಕಸಮಾನ ವಿಶುದ್ಧತೆಯು ಆಗುವುದು, ಭಿನ್ನತೆಯಾಗದಿರುವುದು ಅನಿವೃತ್ತಿಕರಣಗುಣಸ್ಥಾನವಿದೆ.

೧೦. ಮೋಹದ ಅಲ್ಪ ಅಂಶಗಳ ಸದ್ಭಾವ, ಶೇಷ ಸಕಲ ಮೋಹದ ಅಭಾವಸಹಿತ ನಿರಾಕುಲ ಸುಖದ ಸ್ಥಾನವು ಸೂಕ್ಷ್ಮ ಸಾಂಪರಾಯ ಗುಣಸ್ಥಾನವಿದೆ.

೧೧. ಆತ್ಮ ಪ್ರದೇಶಗಳಲ್ಲಿ ಸಕಲ ಮೋಹದ ಉಪಶಮಭಾವದಿಂದ ಪ್ರಕಟವಾಗುವಂಥ ಅಡೋಲ ನಿರಾಕುಲ ಸುಖಮಯ ಯಥಾಖ್ಯಾತ ಚಾರಿತ್ರದ ಸ್ಥಾನವು ಉಪಶಾಂತ ಮೋಹ ಗುಣಸ್ಥಾನವಿದೆ.

೧೨. ಸಕಲ ಮೋಹದ ಕ್ಷಯಭಾವದಿಂದ ಪ್ರಕಟವಾಗಿರುವಂಥ ಮಹಾಸುಖ ಸ್ಥಾನ ಕೇವಲಜ್ಞಾನದ ನಿಕಟವರ್ತಿಯಾದ ಹನ್ನೆರಡನೆಯದು ಕ್ಷೀಣ ಮೋಹ ಗುಣಸ್ಥಾನವಿದೆ.

೧೩. ನಾಲ್ಕು ಘಾತಿ ಕರ್ಮರಹಿತ, ಅನಂತಚತುಷ್ಟಯಸಹಿತ, ಕೇವಲಜ್ಞಾನಿ, ಸಕಲಭಗವಂತ, ರಾಗ-ದ್ವೇಷ ಕಷಾಯ ರಹಿತ, ಮನ-ವಚನ-ಕಾಯಯೋಗ ಸಹಿತ ಸಯೋಗ ಗುಣಸ್ಥಾನವಿದೆ. ಅಲ್ಲಿ ಭವ್ಯಜೀವರುಗಳ ಸಂಬೋಧನೆಯ ನಿಮಿತ್ತವಾಗಿ ವಚನಪ್ರಾಣದ ಶಕ್ತಿಸಹಿತ ವಚನಯೋಗದ ನಿಮಿತ್ತದಿಂದ ವಚನದ ಉಪದೇಶರೂಪ ಪ್ರಸಾರವಾಗುತ್ತದೆ ; ಭವ್ಯರಿಗೆ ಶಿವಸುಖದ ಮಾರ್ಗವನ್ನು ತಿಳಿಸಿಕೊಡುವ ಉದ್ದೇಶದಿಂದ ದಿವ್ಯಧ್ವನಿಯ ಮೂಲಕ ಉಪದೇಶವಾಗುತ್ತದೆ. ಕಾಯಬಲ ಪ್ರಾಣದ ಕಾರಣವಾಗಿ ಕಾಯಯೋಗದಿಂದ ಅನೇಕ ದೇಶಗಳಲ್ಲಿ ವಿಹಾರ ಕ್ರಿಯೆಯಾಗುತ್ತದೆ, ಸಮವಸರಣ ಸಹಿತ ವಿಹಾರವಾಗುತ್ತದೆ ಅದು ಹದಿಮೂರನೆಯ ಗುಣಸ್ಥಾನವಿದೆ. ಇದೇ ಗುಣಸ್ಥಾನದಲ್ಲಿ ಅಂತರ್ಮುಹೂರ್ತ ಶೇಷವಿರುವಾಗ ಕೆಲವು ಕೇವಲಿಗಳಿಂದ ಸಮುದ್ಘಾತವಾಗುತ್ತದೆ.

ಸಮುದ್ಘಾತದ ಏಳು ಭೇದಗಳಿವೆ - ಇಲ್ಲಿ ಕೇವಲಿ ಸಮುದ್ಘಾತದ ಪ್ರಸಂಗದಲ್ಲಿ ಸಮುದ್ಘಾತದ ಭೇದ ಹಾಗೂ ಸ್ವರೂಪವನ್ನು ಹೇಳಲಾಗುವುದು. -

ವೇದನಾ, ಕಷಾಯ, ವೈಕ್ರಿಯಿಕ, ಮಾರಣಾಂತಿಕ, ತೈಜಸ, ಆಹಾರಕ, ಕೇವಲ - ಇವು ಏಳಂತೂ ಸಮುದ್ಘಾತವಿವೆ. ಅಲ್ಲದೆ ಇನ್ನೊಂದು ಉತ್ಪಾದವೆಂಬ ಭೇದ - ಇವು ಎಂಟು ಭೇದಗಳಿವೆ.

**೧) ವೇದನಾ ಸಮುದ್ಘಾತ** - ಮಹಾವೇದನೆಯ ಯೋಗದಿಂದ ಆತ್ಮನ ಪ್ರದೇಶಗಳು ಶರೀರದಿಂದ ಹೊರಗೆ ಬರುವುದು ವೇದನಾ ಸಮುದ್ಘಾತವಿದೆ. ಇದರಲ್ಲಿ ವಾತ, ಪಿತ್ತ, ಜ್ವರ, ಮಸ್ತಕ, ಹೊಟ್ಟೆ, ಕಣ್ಣು, ಕ್ರಿಮಿಕೀಟ ಇತ್ಯಾದಿ ಅನೇಕ ರೋಗ ಸಹಿತ ಯಾವುದೋ ಜೀವದ ಶರೀರದಿಂದ ಒಂದು ಪ್ರದೇಶ, ಯಾವುದರದೋ ಎರಡು ಪ್ರದೇಶ, ಯಾವುದರದೋ ಮೂರು ಪ್ರದೇಶ ಇತ್ಯಾದಿ ಅನೇಕ ಜೀವಗಳ ಸಂಬಂಧದಲ್ಲಿ ಒಂದೊಂದು ಪ್ರದೇಶದ ಅಪೇಕ್ಷೆಯಿಂದ ಬಂಧಕ್ಕಿಂತ ಅಸಂಖ್ಯಾತ ಪ್ರದೇಶ ಅಧಿಕ ಭೇದಗಳಾಗುತ್ತವೆ. ಅವು ಉತ್ಕೃಷ್ಟ ರೂಪದಿಂದ ಮೂಲ ಶರೀರದಿಂದ ಒಂಭತ್ತು

ಗುಣಿತ ಹಾಗೂ ಶರೀರ ಪ್ರಮಾಣ ಎತ್ತರವಾಗುತ್ತವೆ, ಆತ್ಮನಿಗೆ ತೀವ್ರ ವೇದನೆಯಾದ ಮೇಲೆ ವೇದನೆಯ ಕಾರಣವಾಗಿ ಶರೀರವನ್ನು ಬಿಟ್ಟುಕೊಟ್ಟು ಹೊರಗೆ ಬರುತ್ತವೆ. ಈ ವೇದನಾ ಸಮುದ್ಘಾತವುಳ್ಳ ವನಸ್ಪತಿ ಜೀವಗಳು ಮೂರು ಅಶುಭ ಲೇಶ್ಯೆ ಸಹಿತ ಅನಂತವಿವೆ. ವಾಯು, ಅಗ್ನಿ, ಜಲ, ಪೃಥ್ವಿ - ಇವು ನಾಲ್ಕು ಸ್ಥಾವರಗಳಲ್ಲಿ ಮೂರು ಅಶುಭ ಲೇಶ್ಯೆಸಹಿತ ಜೀವಗಳು ಅಸಂಖ್ಯಾತ - ಅಸಂಖ್ಯಾತವಿವೆ. ಇವುಗಳ ಕ್ಷೇತ್ರವು ಮೂರುಲೋಕವಿವೆ.

ನಿಷ್ಕರ್ಷವೆಂದರೆ - ಈ ಆತ್ಮನು ಅನಂತ ಅನಂತಬಾರಿ ಮಹಾ ದುಃಖ ಭಾವಗಳ ಮೂಲಕ ವೇದನಾ ಸಮುದ್ಘಾತದಿಂದ ಸ್ಪರ್ಶಮಾಡಿರದಂಥದು ಇದರಲ್ಲಿ ಯಾವೊಂದು ಪ್ರದೇಶ ಅಥವಾ ಕ್ಷೇತ್ರವು ಶೇಷವಿಲ್ಲ - ಈ ಪ್ರಕಾರ ಸರ್ವಲೋಕ ಪ್ರದೇಶದಲ್ಲಿ ವೇದನೆಯನ್ನು ಭೋಗಿಸಿದ್ದಾನೆ, ಇದು ಪಾಪಪರಿಣತಿಯ ಫಲವಿದೆ.

**೨. ಕಷಾಯ ಸಮುದ್ಘಾತ** - ಎಲ್ಲಿ ಕ್ರೋಧಾದಿ ತೀವ್ರ ಕಷಾಯಗಳ ನಿಮಿತ್ತದಿಂದ ಮೂಲ ಶರೀರವನ್ನು ಬಿಟ್ಟುಕೊಡದೆ ಯಾವುದೋ ಜೀವದ್ದು ಒಂದು ಪ್ರದೇಶ ಇನ್ನಾವುದೋ ಜೀವದ್ದು ಎರಡು ಪ್ರದೇಶ, ಮೂರು ಪ್ರದೇಶ ಮೊದಲಾಗಿ ಒಂದೊಂದು ಪ್ರದೇಶ ಅಧಿಕವಾಗುತ್ತ ಆಗುತ್ತ ಆತ್ಮನ ಪ್ರದೇಶಗಳು ಮೂಲ ಶರೀರಕ್ಕಿಂತ ಮೂರು ಗುಣಿತ ಹಾಗೂ ಶರೀರ ಪ್ರಮಾಣ ಎತ್ತರದಲ್ಲಿ ಹೊರ ಬರುತ್ತವೆ. ಅದು ಕಷಾಯ ಸಮುದ್ಘಾತವಿದೆ. ಒಂದು ವೇಳೆ ಇವುಗಳದ್ದು ಘನರೂಪ ಮಾಡಲಾದರೆ ಮೂಲ ಶರೀರಕ್ಕಿಂತ ಒಂಭತ್ತು ಗುಣಿತವಾಗುತ್ತವೆ. ಈ ಕಷಾಯ ಸಮುದ್ಘಾತಯುಕ್ತ ಜೀವಗಳು ಅಶುಭ ಮೂರು ಲೇಶ್ಯೆಯುಳ್ಳ ವನಸ್ಪತಿಗಳಲ್ಲಿ ಅನಂತವಿವೆ ಮತ್ತು ವಾಯು, ಅಗ್ನಿ, ಜಲ, ಪೃಥ್ವಿ ಇವು ನಾಲ್ಕು ಸ್ಥಾವರಗಳಲ್ಲಿ ಅಸಂಖ್ಯಾತ ಅಸಂಖ್ಯಾತವಿವೆ.

ತಾತ್ಪರ್ಯವು ಹೀಗಿದೆ - ಈ ಲೋಕದ ಯಾವೊಂದು ಪ್ರದೇಶವೂ ಜೀವನು ಅನೇಕ ಬಾರಿ ಕಷಾಯ ಸಮುದ್ಘಾತದಿಂದ ಸ್ಪರ್ಶ ಮಾಡದೇ ಇರುವಂಥದು ಉಳಿದಿಲ್ಲ ಅರ್ಥಾತ್ ಸರ್ವ ಲೋಕ ಪ್ರದೇಶಗಳ ಮೇಲೆ ಇವನು ಕಷಾಯ ಸಮುದ್ಘಾತ ಮಾಡಿದ್ದಾನೆ, ಇದು ಕೂಡ ಅಶುಭ ಉದಯದ್ದೇ ಫಲವೆಂದು ತಿಳಿಯುವುದು.

**೩. ಮಾರಣಾಂತಿಕ ಸಮುದ್ಘಾತ** - ಮೂರು ಅಶುಭ ಲೇಶ್ಯಾ ಸಹಿತ ಮಾರಣಾಂತಿಕ ಸಮುದ್ಘಾತವುಳ್ಳ ಜೀವಗಳ ಕ್ಷೇತ್ರವು ಸರ್ವ ಲೋಕವಿದೆ. ಅಲ್ಲಿ ಜೀವನು ಮರಣದ ಅಂತರ್ಮುಹೂರ್ತ ಮೊದಲು ತನ್ನ ಶರೀರವನ್ನು ಬಿಟ್ಟುಕೊಡದೇ ಆತ್ಮ ಪ್ರದೇಶಗಳನ್ನು ಹೆಚ್ಚಿಸಿ ತಾನು ಉತ್ಪನ್ನವಾಗುವ ಸ್ಥಾನ-ಕ್ಷೇತ್ರಕ್ಕೆ ಹೋಗಿ ಸ್ಪರ್ಶ ಮಾಡಿ ಮರಳಿ ಮೂಲ ಶರೀರದಲ್ಲಿ ಒಂದಾಗುತ್ತಾನೆ ನಂತರ ಮರಣಕ್ಕೆ ಪ್ರಾಪ್ತನಾಗುತ್ತಾನೆ. ಈ ಪ್ರಕಾರ ಮೊದಲು ಅಲ್ಲಿಯವರೆಗೆ ಆತ್ಮಪ್ರದೇಶಗಳ ದಾರವು ಪಂಕ್ತಿರೂಪದಿಂದ ವಿಸ್ತೃತವಾಗುತ್ತದೆ ಅದು ಮಾರಣಾಂತಿಕ ಸಮುದ್ಘಾತವಿದೆ.

ಭಾವವು ಹೀಗಿದೆ - ಮೂರು ಲೋಕದ ಕ್ಷೇತ್ರದಲ್ಲಿ ಈ ಆತ್ಮನು ಅನಂತಬಾರಿ ಮಾರಣಾಂತಿಕ ಸಮುದ್ಘಾತದ ಮೂಲಕ ಸ್ಪರ್ಶ ಮಾಡದೇ ಇರುವಂಥ ಯಾವೊಂದು ಪ್ರದೇಶವು ಉಳಿದಿಲ್ಲ. ಸರ್ವ ಲೋಕಾಕಾಶ ಕ್ಷೇತ್ರದಲ್ಲಿ ಇವನು ಮಾರಣಾಂತಿಕ ಸಮುದ್ಘಾತ ಮಾಡಿದ್ದಾನೆ. ಇದು ಪಾಪದ ಉದಯದ ಫಲವಿದೆ.

ಈ ಪ್ರಕಾರ ವೇದನಾ, ಕಷಾಯ, ಮಾರಣಾಂತಿಕ - ಇವು ಮೂರು ಸಮುದ್ಘಾತಗಳಿಂದ ಸಹಿತ ಮೂರು ಅಶುಭ ಲೇಶ್ಯೆಯುಳ್ಳ ಜೀವಗಳು ವನಸ್ಪತಿಯಲ್ಲಿ ಅನಂತ ಹಾಗೂ ಸ್ಥಾವರ ಮೊದಲಾದ ಸ್ಥಾನಗಳಲ್ಲಿ ಅಸಂಖ್ಯಾತ ಮತ್ತು ಮನುಷ್ಯರಲ್ಲಿ ಸಂಖ್ಯಾತವಿವೆ - ಈ ಪ್ರಕಾರ ಮೂರು ಅಶುಭ ಲೇಶ್ಯೆಗಳಲ್ಲಿ ಸಮುದ್ಘಾತ ಹೇಳಿದ್ದಾರೆ.

ಈಗ ಮೂರು ಶುಭ ಲೇಶ್ಯೆಗಳಲ್ಲಿ ಸಮುದ್ಘಾತ ಹೇಳುತ್ತಾರೆ -

ಅಲ್ಲಿ ಕಷಾಯ ಹಾಗೂ ವೇದನಾ ಸಮುದ್ಘಾತದಲ್ಲಂತೂ ಪ್ರದೇಶಗಳ ಹೊರ ಬರುವಿಕೆಯು ಮೂಲ ಶರೀರಕ್ಕಿಂತ ಒಂಭತ್ತು ಗುಣಿತ ಅಗಲ, ಶರೀರ ಪ್ರಮಾಣ ಎತ್ತರ ಅಶುಭ ಲೇಶ್ಯೆಯ ಸಮಾನವೆಂದು ತಿಳಿಯುವುದು. ಮಾರಣಾಂತಿಕ ಸಮುದ್ಘಾತದಲ್ಲಿ ಪೀತ ಲೇಶ್ಯೆಯುಳ್ಳ ಭವನತ್ರಿಕ ಹಾಗೂ ಸೌಧರ್ಮ-ಈಶಾನದ ದೇವಗಳು ವಿಹಾರದ ಯಾವುದೋ

ನಿಮಿತ್ತ ಪಡೆದು ಮೂರನೆಯ ನರಕ ಪೃಥ್ವಿಯವರೆಗೆ ಹೋಗುತ್ತಾರೆ. ಅಲ್ಲಿಯೇ ಆಯುವಿನ ಕೊನೆಯು ಬಂದು ಬಿಡುವುದರಿಂದ ಮರಣ ಮಾಡಿದರೆ ಆ ಜೀವಗಳು ಎಂಟನೆಯ ಮೋಕ್ಷ ಶಿಲೆಯಲ್ಲಿ ಬಾದರ ಪೃಥ್ವಿಕಾಯದೊಳಗೆ ಉತ್ಪನ್ನರಾಗುತ್ತಾರೆ. ಮರಣದ ಪೂರ್ವದಲ್ಲಿ ತಮ್ಮ ಅಶುಭ ಭಾವಗಳ ಕಾರಣದಿಂದ ಹೀಗೆ ಜೀವಗಳು ಒಂಭತ್ತು ರಾಜು ಕ್ಷೇತ್ರದವರೆಗೆ ಆತ್ಮ ಪ್ರದೇಶಗಳನ್ನು ಹೆಚ್ಚಿಸಿಕೊಂಡು ತಾವು ಉತ್ಪನ್ನವಾಗುವ ಕ್ಷೇತ್ರವನ್ನು ಸ್ಪರ್ಶ ಮಾಡುತ್ತಾರೆಂದು ತಿಳಿಯುವುದು.

**೪. ತೈಜಸ ಸಮುದ್ಘಾತ –** ತೈಜಸ ಸಮುದ್ಘಾತದಲ್ಲಿ ಆತ್ಮ ಪ್ರದೇಶಗಳು ಹನ್ನೆರಡು ಯೋಜನ ಉದ್ದ, ಒಂಭತ್ತು ಯೋಜನ ಅಗಲ ಮತ್ತು ಸೂಚ್ಯಂಗುಲದ ಸಂಖ್ಯಾತದ ಒಂದು ಭಾಗ ಎತ್ತರ ವಿಸ್ತೃತವಾಗುತ್ತವೆ. ಯಾವುದೋ ದೇಶದಲ್ಲಿ ಪ್ರಜೆಗಳಿಗೆ ತೀವ್ರ ವೇದನೆಯಾಗುತ್ತಿದ್ದರೆ ಅಥವಾ ಯಾವುದೋ ದೇಶವು ಮಹಾದುಃಖ ಈತಿ-ಭೀತಿಯಿಂದ ವ್ಯಾಪ್ತವಾಗಿದ್ದರೆ ಅದನ್ನು ನೋಡಿ ಒಂದು ವೇಳೆ ಋದ್ಧಿಧಾರಿ ಮುನಿಗೆ ಕರುಣೆಯು ಉತ್ಪನ್ನವಾದರೆ ಆ ಮುನೀಶ್ವರರ ಬಲ ಭುಜದಿಂದ ತೈಜಸ ಪುತ್ಥಳಿಯು ಹೊರಡುತ್ತದೆ. ಅದು ಹನ್ನೆರಡು ಯೋಜನ ಉದ್ದ ಮತ್ತು ಒಂಭತ್ತು ಯೋಜನ ಅಗಲದ ಕ್ಷೇತ್ರದವರೆಗಿನ ಜೀವರುಗಳ ಸಮಸ್ತ ವೇದನೆಯನ್ನು ತಕ್ಷಣವೇ ನಷ್ಟಮಾಡಿ, ಸರ್ವ ಪ್ರಜೆಗಳನ್ನು ಸುಖಿಯನ್ನಾಗಿ ಮಾಡುತ್ತದೆ. ಒಂದು ವೇಳೆ ಪ್ರಜೆಗಳ ಪಾಪದ ಉದಯವು ಬಂದುಬಿಟ್ಟರೆ ಋದ್ಧಿಧಾರಿ ಮುನಿಗೆ ಕ್ರೋಧವು ಉತ್ಪನ್ನವಾದರೆ ಎಡ ಭುಜದಿಂದ ಅಶುಭ ತೈಜಸ್ಸು ಹೊರಡುತ್ತದೆ. ಅದು ತನ್ನ ವಿಷಯ-ಯೋಗ್ಯ ಕ್ಷೇತ್ರವನ್ನು ಭಸ್ಮಮಾಡಿ ಮುನಿಯ ಶರೀರದಲ್ಲಿ ಪ್ರವಿಷ್ಟವಾಗಿ ಆ ಮುನಿಯ ಶರೀರವನ್ನು ಕೂಡ ಭಸ್ಮಮಾಡಿ ಬಿಡುತ್ತದೆ – ಈ ಪ್ರಕಾರ ತೈಜಸದ ಎರಡು ಭೇದಗಳಿವೆ.

**೫. ಆಹಾರಕ ಸಮುದ್ಘಾತ –** ಆಹಾರಕ ಸಮುದ್ಘಾತದಲ್ಲಿ ಒಂದು ಜೀವದ ಅಪೇಕ್ಷೆಯಿಂದ ಯಾರೋ ಯೋಗೀಶ್ವರರಿಗೆ ತತ್ತ್ವಜ್ಞಾನದ ವಿಚಾರದಲ್ಲಿ ಸಂಶಯವು ಉತ್ಪನ್ನವಾಗಿ ಬಿಟ್ಟರೆ ಋದ್ಧಿಧಾರಿ ಮುನಿಗಳಿಗೆ ಋದ್ಧಿಯೋಗದಲ್ಲಿ ಆಹಾರಕ ಪುತ್ಥಳಿಯು ಹೊರಡುತ್ತದೆ, ಅದರಲ್ಲಿ ಸಂಖ್ಯಾತ ಯೋಜನ ಎರಡೂವರೆ ದ್ವೀಪ ಪ್ರಮಾಣ ಕ್ಷೇತ್ರದಷ್ಟು ಉದ್ದ ಮತ್ತು ಸೂಚ್ಯಂಗುಲದ ಸಂಖ್ಯಾತದ ಒಂದು ಭಾಗದಷ್ಟು ಅಗಲ – ಎತ್ತರ ವಿಸ್ತಾರಸಹಿತ ಆತ್ಮ ಪ್ರದೇಶಗಳಾಗುತ್ತವೆ.

**೬. ಕೇವಲಿ ಸಮುದ್ಘಾತ –** ಶುಕ್ಲ ಲೇಶ್ಯೆಯಲ್ಲಿ ಅನ್ಯ ಸಮುದ್ಘಾತಗಳನ್ನಂತೂ ಪೂರ್ವವತ್ ತಿಳಿಯುವುದು, ಕೇವಲಿ ಸಮುದ್ಘಾತದಲ್ಲಿ ವಿಶೇಷವಿದೆ. ಈ ಪ್ರಕಾರ ಕೇವಲಿ ಸಮುದ್ಘಾತದ ನಾಲ್ಕು ಭೇದಗಳು – ದಂಡ, ಕಪಾಟ, ಪ್ರತರ, ಲೋಕಪೂರ್ಣ. ದಂಡದಲ್ಲಿಯೂ ಎರಡು ಭೇದಗಳಿವೆ – ಸ್ಥಿತಿ ದಂಡ, ಉಪವಿಷ್ಟ ದಂಡ. ಪದ್ಮಾಸನ ಸಹಿತ ದಂಡ ಸಮುದ್ಘಾತವಾಗುವುದು ಸ್ಥಿತಿ ದಂಡ ಸಮುದ್ಘಾತವಿದೆ. ಕಾಯೋತ್ಸರ್ಗಾಸನ ಸಹಿತ ದಂಡವಾಗುವುದು ಉಪವಿಷ್ಟ ದಂಡ ಸಮುದ್ಘಾತವಿದೆ. ಸ್ಥಿತಿ ದಂಡ ಸಮುದ್ಘಾತದಲ್ಲಿ ಒಂದು ಜೀವದ ಅಪೇಕ್ಷೆಯಿಂದ ಪ್ರದೇಶಗಳ ವಿಸ್ತಾರ ವಾತವಲಯವನ್ನು ಹೊರತು ಪಡಿಸಿ ಲೋಕದ ಎತ್ತರದ ಅನುಸಾರ ಕಿಂಚಿತ್ ನ್ಯೂನ ಹದಿನಾಲ್ಕು ರಾಜು ಪ್ರಮಾಣ ಉದ್ದ , ಹನ್ನೆರಡು ಅಂಗುಲ ಪ್ರಮಾಣ ಅಗಲ ವೃತ್ತಾಕಾರ ಪ್ರದೇಶವಾಗುತ್ತದೆ. ಉಪವಿಷ್ಟ ದಂಡ ಸಮುದ್ಘಾತದಲ್ಲಿ ಎತ್ತರವಂತೂ ಮೊದಲಿನಷ್ಟೇ ಇರುತ್ತದೆ ಅಗಲದ ಸ್ಥಿತಿಯು ದಂಡಕ್ಕಿಂತ ಮೂರು ಗುಣಿತ, ಮೂವತ್ತಾರು ಅಂಗುಲ ಪ್ರಮಾಣ ವೃತ್ತಾಕಾರ ದಂಡವಾಗುತ್ತದೆ.

**ಕಪಾಟ ಸಮುದ್ಘಾತದ ನಾಲ್ಕು ಭೇದಗಳು –** ೧. ಪೂರ್ವಾಭಿಮುಖ ಸ್ಥಿತಿ ಕಪಾಟ, ೨. ಉತ್ತರಾಭಿಮುಖ ಸ್ಥಿತಿ ಕಪಾಟ, ೩. ಪೂರ್ವಾಭಿಮುಖ ಉಪವಿಷ್ಟ ಕಪಾಟ, ೪. ಉತ್ತರಾಭಿಮುಖ ಉಪವಿಷ್ಟ ಕಪಾಟ.

೧) ಯಾವುದರಲ್ಲಿ ಪೂರ್ವ ದಿಶಾಮುಖ ಸಹಿತ ಕೇವಲಿ ಪದ್ಮಾಸನರಾಗಿ ಕಪಾಟ ಮಾಡುತ್ತಾರೆ ಅದು ಪೂರ್ವಾಭಿಮುಖ ಸ್ಥಿತಿ ಕಪಾಟವಿದೆ. ಈ ಕಪಾಟದಲ್ಲಿ ಆತ್ಮನ ಪ್ರದೇಶಗಳು ವಾತವಲಯವನ್ನು ಹೊರತು ಪಡಿಸಿ ಲೋಕ

ಪ್ರಮಾಣ, ಸ್ವಲ್ಪ ಕಡಿಮೆ ಹದಿನಾಲ್ಕು ರಾಜು ಎತ್ತರ ಉತ್ತರ-ದಕ್ಷಿಣ ದಿಶೆಯಲ್ಲಿ ಲೋಕದ ಅಗಲದ ಸರಿಸಮಾನ, ಏಳು ರಾಜು ಅಗಲ ಹಾಗೂ ಪೂರ್ವ-ಪಶ್ಚಿಮ ದಿಶೆಗಳಲ್ಲಿ ಹನ್ನೆರಡು ಅಂಗುಲ ದಪ್ಪದಷ್ಟು ಎತ್ತರವಾಗುತ್ತವೆ.

೨. ಯಾವುದರಲ್ಲಿ ಪೂರ್ವ ದಿಶೆಯೊಳಗೆ ಮುಖಸಹಿತ ಕೇವಲಜ್ಞಾನಿಯು ಕಾಯೋತ್ಸರ್ಗ ಆಸನ ಸಹಿತ ಕಪಾಟ ಸಮುದ್ಘಾತ ಮಾಡುತ್ತಾರೆ ಅದು ಪೂರ್ವಾಭಿಮುಖ ಉಪವಿಷ್ಟ ಕಪಾಟ ಸಮುದ್ಘಾತವಿದೆ. ಅದರಲ್ಲಿ ಒಂದು ಜೀವದ ಅಪೇಕ್ಷೆಯಿಂದ ಪ್ರದೇಶಗಳ ಎತ್ತರವು ಸ್ವಲ್ಪ ಕಡಿಮೆ ಹದಿನಾಲ್ಕು ರಾಜು, ಅಗಲವು ಏಳು ರಾಜು ಮತ್ತು ಮೂವತ್ತಾರು ಅಂಗುಲ ದಪ್ಪ ಪ್ರಮಾಣ ಪ್ರದೇಶಗಳು ಎತ್ತರವಾಗುತ್ತವೆ.

೩. ಯಾವುದರಲ್ಲಿ ಉತ್ತರ ದಿಶಾಮುಖ ಸಹಿತ ಕೇವಲಿಗಳು ಪದ್ಮಾಸನದಲ್ಲಿ ಕಪಾಟ ಸಮುದ್ಘಾತ ಮಾಡುತ್ತಾರೆ ಅದು ಉತ್ತರಾಭಿಮುಖ ಸ್ಥಿತಿ ಕಪಾಟ ಸಮುದ್ಘಾತವಿದೆ. ಇದರಲ್ಲಿ ಸ್ವಲ್ಪ ಕಡಿಮೆ ಹದಿನಾಲ್ಕು ರಾಜು ಉದ್ದ ಪೂರ್ವ-ಪಶ್ಚಿಮ ದಿಕ್ಕುಗಳಲ್ಲಿ ಅಧೋಲೋಕದಲ್ಲಿ ಕೆಳಗೆ ಏಳು ರಾಜು ಅಗಲ ಅದರಿಂದ ಮೇಲೆ ಕ್ರಮದಿಂದ ಕಡಿಮೆ ಯಾಗುತ್ತ ಆಗುತ್ತ ಮಧ್ಯಲೋಕದಲ್ಲಿ ಒಂದು ರಾಜು ಅಗಲ ಅದರಿಂದ ಮೇಲೆ ಕ್ರಮದಿಂದ ಹೆಚ್ಚುತ್ತ ಹೆಚ್ಚುತ್ತ ಬ್ರಹ್ಮಸ್ವರ್ಗದವರೆಗೆ ಐದು ರಾಜು, ಅದರ ಮೇಲೆ ಕ್ರಮದಿಂದ ಕಡಿಮೆ ಆಗುತ್ತ ಆಗುತ್ತ ಲೋಕ ಶಿಖರದ ಮೇಲೆ ಒಂದು ರಾಜು ಅಗಲ - ಈ ಪ್ರಕಾರ ಪೂರ್ವ-ಪಶ್ಚಿಮ ದಿಶೆಗಳಲ್ಲಿ ಲೋಕ ಪ್ರಮಾಣ ಪ್ರತರವಾಗುತ್ತವೆ, ಉತ್ತರ-ದಕ್ಷಿಣ ದಿಶೆಗಳಲ್ಲಿ ಹನ್ನೆರಡು ಅಂಗುಲ ದಪ್ಪ ಪ್ರದೇಶಗಳಾಗುತ್ತವೆ.

೪. ಉತ್ತರ ದಿಕ್ಕಿನ ಕಡೆಗೆ ಮುಖ ಮಾಡಿ ಕಾಯೋತ್ಸರ್ಗ ಆಸನ ಸಹಿತ ಕೇವಲಜ್ಞಾನಿಗಳು ಯಾವ ಕಪಾಟ ಮಾಡುತ್ತಾರೆ ಅದನ್ನು ಉತ್ತರಾಭಿಮುಖ ಉಪದಿಷ್ಟ ಕಪಾಟ ಸಮುದ್ಘಾತವೆನ್ನುತ್ತಾರೆ. ಇದರಲ್ಲಿ ಆತ್ಮ ಪ್ರದೇಶಗಳ ಉದ್ದವು ಸ್ವಲ್ಪ ಕಡಿಮೆ ಹದಿನಾಲ್ಕು ರಾಜು, ಎತ್ತರವು ಹನ್ನೆರಡು ಅಂಗುಲ ಪ್ರಮಾಣ ಮತ್ತು ದಪ್ಪವು ಅದಕ್ಕಿಂತ ಮೂರು ಗುಣಿತ ಮೂವತ್ತಾರು ಅಂಗುಲ ಪ್ರಮಾಣವಿರುತ್ತದೆ.

**ಪ್ರತರ ಸಮುದ್ಘಾತ** - ಮೂರು ವಾತ ವಲಯಗಳನ್ನು ಹೊರತು ಪಡಿಸಿ ಸರ್ವ ಲೋಕದಲ್ಲಿ ಆತ್ಮ ಪ್ರದೇಶಗಳು ಹರಡುವುದು ಸರ್ವ ಕ್ಷೇತ್ರ ಪ್ರತರ ಸಮುದ್ಘಾತವಿದೆ.

**ಲೋಕಪೂರಣ ಸಮುದ್ಘಾತ** - ವಾತ ವಲಯ ಸಹಿತ ಸರ್ವಲೋಕ ಅರ್ಥಾತ್ ಹದಿನಾಲ್ಕು ರಾಜು ಪುರುಷಾಕಾರದಲ್ಲಿ ಎಲ್ಲ ಕಡೆಗೂ ಆತ್ಮ ಪ್ರದೇಶಗಳು ಹರಡುವುದು ಲೋಕಪೂರಣ ಸಮುದ್ಘಾತವಿದೆ. ಅದಕ್ಕಾಗಿಯೇ ಒಂದು ಜೀವದ ಪ್ರದೇಶಗಳು ಲೋಕಪ್ರಮಾಣವೆಂದು ಹೇಳಲಾಗಿದೆ.

ಇದನ್ನೇ ತತ್ತ್ವಾರ್ಥಸೂತ್ರದಲ್ಲಿಹೇಳಿದ್ದಾರೆ - 'ಅಸಂಖ್ಯೇಯಾಃ ಪ್ರದೇಶಾಃ ಧರ್ಮಾಧರ್ಮೈಕ ಜೀವಾನಾಮ್' - ಪಂಚಮೋಧ್ಯಾಯ, ಸೂತ್ರ ೮. ಇದರ ಅರ್ಥವು-ಧರ್ಮ-ಅಧರ್ಮ ದ್ರವ್ಯಗಳು ಮತ್ತು ಒಂದು ಜೀವ ದ್ರವ್ಯ - ಇವು ಮೂರರ ಪ್ರದೇಶಗಳು ಲೋಕಪ್ರಮಾಣ ಅಸಂಖ್ಯಾತವಿವೆ.

ಈ ಪ್ರಕಾರ ಸಮುದ್ಘಾತಗಳ ಸಾಮಾನ್ಯ ಸ್ವರೂಪ ಹೇಳಲಾಯಿತು. ಇವುಗಳ ವಿಶೇಷ ಸ್ವರೂಪವನ್ನು ಶ್ರೀ ಗೊಮ್ಮಟಸಾರದಿಂದ ತಿಳಿಯುವುದು. ಅಲ್ಲಿ ಹದಿಮೂರನೆಯ ಗುಣಸ್ಥಾನದಲ್ಲಿ ಆಗುವಂಥ ಕೇವಲಿ ಸಮುದ್ಘಾತದ್ದೂ ವಿಶೇಷ ಕಥನವಿದೆ.

ಈ ಪ್ರಕಾರ ಕೇವಲಿ ಸಮುದ್ಘಾತ ಮಾಡಿ, ನಂತರ ಸಮುದ್ಘಾತವನ್ನು ನಷ್ಟಗೊಳಿಸಿ ಸರ್ವ ಆತ್ಮ ಪ್ರದೇಶಗಳು ಮೂಲ ಶರೀರದಲ್ಲಿ ಬಂದು ಸೇರುತ್ತವೆ, ಅಲ್ಲಿ ಹದಿಮೂರನೆಯ ಗುಣಸ್ಥಾನವು ಸಯೋಗ ಕೇವಲಿಯದಿದೆ.

೧೪ - ಅಂತಮುರ್ಹೂತದ ನಂತರ ಅಯೋಗ ಕೇವಲಿ ಗುಣಸ್ಥಾನವಾಗುತ್ತದೆ. ಅಲ್ಲಿ ಮನ-ವಚನ-ಕಾಯ ವಿರುವುದಿಲ್ಲ. ಆದುದರಿಂದ ಹದಿನಾಲ್ಕನೇ ಗುಣಸ್ಥಾನವು ಅಯೋಗ ಕೇವಲಿಯದಿದೆ. ಅಲ್ಲಿ ಲಘು ಐದು ಅಕ್ಷರ ಕಾಲ ಪ್ರಮಾಣ ಸ್ಥಿತಿಯು ಪೂರ್ಣವಾದ ಮೇಲೆ ನಿರ್ವಾಣವಾಗಿ ಹೋಗುತ್ತದೆ.

**ಜೀವ ಸಮಾಸ –** ಏಕೇಂದ್ರಿಯ – ಸೂಕ್ಷ್ಮ–ಬಾದರ, ದ್ವೀಂದ್ರಿಯ, ತ್ರೀಂದ್ರಿಯ, ಚತುರಿಂದ್ರಿಯ, ಪಂಚೇಂದ್ರಿಯ – ಸಂಜ್ಞಿ – ಅಸಂಜ್ಞಿ – ಇವು ಏಳರ ಪರ್ಯಾಪ್ತ, ಅಪ್ರಯಾಪ್ತದ ಅಪೇಕ್ಷೆಯಿಂದ ಹದಿನಾಲ್ಕು ಭೇದಗಳು ಜೀವ ಸಮಾಸದವಿವೆ. ಇವುಗಳದ್ದೇ ವಿಶೇಷ ಭೇದವು ಒಂದು, ಎರಡು, ಮೂರು, ನಾಲ್ಕು ಮೊದಲಾಗಿ ಒಂದೊಂದರ ವೃದ್ಧಿಯಾಗುತ್ತ ಹತ್ತೊಂಭತ್ತು ಭೇದಗಳಾಗುತ್ತವೆ. ಮೂವತ್ತೆಂಟು, ಐವತ್ತೇಳು, ನಾಲ್ಕುನೂರಾ ಆರು ಭೇದಗಳು ಕೂಡ ಇವೆ. ಅವುಗಳನ್ನು ಮುಂದೆ ಹೇಳಲಾಗುವುದು. ಅವು ಕೂಡ ಈ ಹದಿನಾಲ್ಕರಲ್ಲೇ ಗರ್ಭಿತವಿವೆ.

ಪರ್ಯಾಪ್ತಿ – ಶರೀರಾದಿ ಯಥಾಯೋಗ್ಯ ಇಂದ್ರಿಯಗಳ ಪೌದ್ಗಲಿಕ ಆಕಾರವಾಗುವುದು ಪರ್ಯಾಪ್ತಿಯಿದೆ.

ಅಲ್ಲಿ ಔದಾರಿಕ, ವೈಕ್ರಿಯಿಕ, ಆಹಾರಕ – ಇವು ಮೂರು ಶರೀರಗಳ ಜಾತಿಯ ಪುದ್ಗಲ ಪರಮಾಣುಗಳನ್ನು ಗ್ರಹಣ ಮಾಡಿ, ಇವು ಮೂರು ಶರೀರರೂಪ ಪರಿಣಮಿತಗೊಳಿಸಿ, ಅದೆಷ್ಟೋ ಪರಮಾಣುಗಳ ಮೂಳೆ, ಚರ್ಮ, ನರ, ಮಾಂಸಾದಿ ಕಠಿಣ ಅವಯವರೂಪವಾಗುವುದು ಖಲರೂಪಪರಿಣಮನವಿದೆ ಮತ್ತು ಅದೆಷ್ಟೋ ಪರಮಾಣುಗಳ ಶ್ರೋಣಿತ, ವೀರ್ಯಾದಿ ರಸಭಾಗಮಯ ತೆಳುವಾದ ಅವಯವರೂಪ ಪರಿಣಮನವಾಗುವುದು ರಸರೂಪ ಪರಿಣಮನವಿದೆ.– ಈ ಪ್ರಕಾರ ಅಂತರ್ಮುಹೂರ್ತದವರೆಗೆ ಯಥಾಯೋಗ್ಯ ಕ್ರಿಯೆಯಾಗುವುದು ಆಹಾರ ಪರ್ಯಾಪ್ತಿ ಇದೆ. ಈ ಗ್ರಹಿತ ಪುದ್ಗಲ ಸ್ಕಂಧಗಳನ್ನು ಆಕರ್ಷಿತ ಮಾಡಿ ಶರೀರರೂಪ ಪರಿಣಮಿತ ಮಾಡುವುದು, ಅದು ಶರೀರ ಪರ್ಯಾಪ್ತಿ ಇದೆ.

**ಸಂದೇಹ –** ತಾವು ಆಹಾರ ಪರ್ಯಾಪ್ತಿಯಲ್ಲಿ ಪುದ್ಗಲಗಳನ್ನು ಮೂಳೆ ಮಾಂಸಾದಿ ರೂಪವೆಂದು ಹೇಳಿದ್ದೀರಿ. ಆದರೆ ವೈಕ್ರಿಯಿಕ, ಆಹಾರಕ ಶರೀರಗಳಲ್ಲಿ ಮೂಳೆ, ಮಾಂಸಾದಿಗಳು ಹೇಗೆ ಸಂಭವವಿವೆ ?

**ಸಮಾಧಾನ –** ಯಾವ ಪುದ್ಗಲಗಳು ಮೂರೂ ಶರೀರವಾಗಲು ಯೋಗ್ಯವಿವೆ ಅವುಗಳನ್ನು ಆತ್ಮನು ಆಕರ್ಷಿತ ಮಾಡಿ ಖಲರೂಪ, ರಸರೂಪ ಮಾಡುತ್ತಾನೆ. ಯಾವುದನ್ನು ಖಲರೂಪ ಮಾಡುತ್ತಾನೆ ಅದನ್ನಂತೂ ಕಠೋರ ಅವಯವ ರೂಪದಲ್ಲಿ ತನಗೆ ಶರೀರ ಯೋಗ್ಯವನ್ನಾಗಿಸುತ್ತಾನೆ ಹಾಗೂ ಯಾವುದನ್ನು ರಸರೂಪ ಮಾಡುತ್ತಾನೆ ಅದನ್ನು ಪ್ರವಹಿಸಲು ಯೋಗ್ಯ ರಸಮಯ ತೆಳುವಾದ ಅವಯವರೂಪವನ್ನಾಗಿ ಮಾಡುತ್ತಾನೆ. ನಂತರ ತಮ್ಮ ತಮ್ಮ ಶರೀರಗಳ ಅಂಗೋಪಾಂಗ ರೂಪ ಪರಿಣಮನವಾಗುತ್ತದೆ. ಅಲ್ಲಿ ಆಹಾರಕ, ವೈಕ್ರಿಯಿಕ ಶರೀರಗಳದ್ದಂತೂ ಅವುಗಳ ಅನುಸಾರ ಅಂಗೋಪಾಂಗಗಳಾಗುತ್ತವೆ ಮತ್ತು ಔದಾರಿಕ ಶರೀರದ ಅಂಗೋಪಾಂಗಗಳು ಔದಾರಿಕ ಶರೀರದ ಅನುಸಾರ ಆಗುತ್ತವೆ – ಈ ಪ್ರಕಾರ ತಮ್ಮ ತಮ್ಮ ಶರೀರ ಯೋಗ್ಯ ಪುದ್ಗಲ ಸ್ಕಂಧಗಳ ಪರಿಣಮನವಿದ್ದು ಅದು ಸಹಜವಾಗಿಯೇ ಪರಿಣಮನವಾಗುತ್ತದೆ. ಅಸಹಾಯ ಯಾವುದೇ ಪ್ರಯತ್ನವಿಲ್ಲದೆ ಈ ಪರಿಣಮನವಿದೆಯೆಂದು ತಿಳಿಯುವುದು.

ಈ ಪ್ರಕಾರ ಆಹಾರ ಪರ್ಯಾಪ್ತಿಯನ್ನು ಮಾಡಿದ ಮೇಲೆ ಆ ಗ್ರಹಣ ಮಾಡಲಾದ ಪರಮಾಣುಗಳ ಕಠೋರ ಹಾಗೂ ಮೃದು ಅವಯವರೂಪ ಪುದ್ಗಲಗಳದ್ದು ಶರೀರರೂಪ ಬಂಧನವಾಗುವುದು ಶರೀರ ಪರ್ಯಾಪ್ತಿಯಿದೆ.

ಮಾಡಲಾದ ಶರೀರದಲ್ಲಿ ಯಥಾಯೋಗ್ಯ ಇಂದ್ರಿಯಗಳ ಆಕಾರ, ಸಂಸ್ಥಾನಗಳ ಸ್ಥಾನವಾಗುವುದು ಇಂದ್ರಿಯ ಪರ್ಯಾಪ್ತಿಯಿದೆ.

ಶರೀರದಲ್ಲಿ ಶ್ವಾಸೋಚ್ಛ್ವಾಸ ತೆಗೆದುಕೊಳ್ಳುವ ಸ್ಥಾನವಾಗುವುದು, ಯಾವುದರಿಂದ ಪವನವನ್ನು ಅಂಗೀಕಾರ ಮಾಡಿ ಹೊರಗಿನಿಂದ ಒಳಗೆ ಎಳೆದುಕೊಳ್ಳುವುದು ಪುನಃ ಹೊರಗೆ ಹಾಕುವುದು – ಇಂಥ ಪೌದ್ಗಲಿಕ ಆಕಾರವು ಶರೀರದಲ್ಲಿ ಆಗುವುದು ಶ್ವಾಸೋಚ್ಛ್ವಾಸ ಪರ್ಯಾಪ್ತಿಯಿದೆ.

ಯಾವ ಸ್ಥಾನಗಳಿಂದ ವಚನಗಳನ್ನಾಡಲಾಗುತ್ತದೆ ಅಂಥ ಪೌದ್ಗಲಿಕ ಆಕಾರವು ಶರೀರದಲ್ಲಿ ನಿರ್ಮಾಣವಾಗುವುದು ಭಾಷಾ ಪರ್ಯಾಪ್ತಿಯಿದೆ. ಯಾವುದರಿಂದ ಶುಭಾಶುಭ ವಿಚಾರಗಳಾಗುತ್ತವೆ ಅಂಥ ಹೃದಯದಲ್ಲಿ ವಿಕಲ್ಪ ಮಾಡುವ ಆಕಾರ, ಅಷ್ಟದಳವುಳ್ಳ ಕಮಲಾಕಾರ ದ್ರವ್ಯಮನಸ್ಸುರೂಪ ಪೌದ್ಗಲಿಕ ಸ್ಕಂಧಗಳ ಪರಿಣಮನವು ಮನೋಪರ್ಯಾಪ್ತಿಯಿದೆ.

**ಪ್ರಾಣ -** ಶರೀರಾದಿ ಯಥಾಯೋಗ್ಯ ಇಂದ್ರಿಯಗಳಲ್ಲಿ ತಮ್ಮ ತಮ್ಮ ವಿಷಯಗ್ರಹಣದ ಶಕ್ತಿರೂಪ ಪರಿಣಮನವಾಗುವುದು ಪ್ರಾಣವಿದೆ. ಅದರಿಂದ ಐದು ಇಂದ್ರಿಯಗಳು ತಮ್ಮ ತಮ್ಮ ವಿಷಯದಲ್ಲಿ ಪ್ರವೃತ್ತಿ ಮಾಡುತ್ತವೆ. ಸ್ಪರ್ಶನ ಇಂದ್ರಿಯವನ್ನು ತನ್ನ ಯೋಗ್ಯ ಎಂಟು ವಿಷಯಗಳ ನಿಮಿತ್ತವು ದೊರೆತ ಮೇಲೆ ಅವುಗಳಲ್ಲಿ ಪ್ರವೃತ್ತವಾಗುವ ಶಕ್ತಿಯು ಸ್ಪರ್ಶನ ಇಂದ್ರಿಯ ಪ್ರಾಣವಿದೆ. ರಸನೇಂದ್ರಿಯದ ತನ್ನ ಯೋಗ್ಯ ಐದು ವಿಷಯಗಳಲ್ಲಿ ಪ್ರವೃತ್ತಿಯಾಗುವುದು ರಸನಾ ಇಂದ್ರಿಯ ಪ್ರಾಣವಿದೆ. ಘ್ರಾಣ ಇಂದ್ರಿಯದ ತನ್ನ ಯೋಗ್ಯ ಎರಡು ವಿಷಯಗಳಲ್ಲಿ ಪ್ರವೃತ್ತಿಯಾಗುವುದು ಘ್ರಾಣ ಇಂದ್ರಿಯ ಪ್ರಾಣವಿದೆ. ಚಕ್ಷು ಇಂದ್ರಿಯದ ತನ್ನ ಯೋಗ್ಯ ಐದು ವಿಷಯಗಳಲ್ಲಿ ಪ್ರವೃತ್ತಿಯಾಗುವುದು ಚಕ್ಷು ಇಂದ್ರಿಯ ಪ್ರಾಣವಿದೆ. ಶ್ರೋತ್ರ ಇಂದ್ರಿಯದ ತನ್ನ ಯೋಗ್ಯ ವಿಷಯಗಳಲ್ಲಿ ಪ್ರವೃತ್ತಿಯಾಗುವುದು ಶ್ರೋತ್ರ ಇಂದ್ರಿಯ ಪ್ರಾಣವಿದೆ.- ಇವು ಐದು ಇಂದ್ರಿಯ ಪ್ರಾಣಗಳಿವೆ.

ಮನಸ್ಸಿನಲ್ಲಿ ಶುಭಾಶುಭ ಸಂಕಲ್ಪ-ವಿಕಲ್ಪಗಳ ಮೂಲಕ ಹರ್ಷ-ವಿಷಾದಗಳನ್ನು ಉತ್ಪನ್ನ ಮಾಡುವಂಥ ಶಕ್ತಿಯು ಮನೋಪ್ರಾಣವಿದೆ. ವಚನವನ್ನಾಡುವ ಶಕ್ತಿಯು ವಚನಪ್ರಾಣವಿದೆ. ಕಾಯದಲ್ಲಿ ಹಲನ-ಚಲನೆಯ ರೂಪ ಗಮನಾಗಮನದ ಶಕ್ತಿಯು ಕಾಯ (ಶರೀರ) ಪ್ರಾಣವಿದೆ. ಶರೀರದಲ್ಲಿ ಶ್ವಾಸೋಚ್ಛ್ವಾಸ ತೆಗೆದುಕೊಳ್ಳುವ ಶಕ್ತಿಯು ಶ್ವಾಸೋಚ್ಛ್ವಾಸ ಪ್ರಾಣವಿದೆ. ಅನೇಕ ದುಃಖ ಸುಖಗಳಲ್ಲಿಯೂ ಕೂಡ ಆತ್ಮನು ಶರೀರದಿಂದ ಯಾವ ಕಾರಣವಾಗಿ ಭಿನ್ನವಾಗುವುದಿಲ್ಲವೋ ಅದು ಆಯು ಪ್ರಾಣವಿದೆ. ಇವು ಸಾಮಾನ್ಯವಾಗಿ ಹತ್ತು ಪ್ರಾಣಗಳೆಂದು ತಿಳಿಯುವುದು.

**ಸಂಜ್ಞೆ -** ವಸ್ತುವಿನ ಇಚ್ಛೆ ಅಥವಾ ಅಭಿಲಾಷೆಯಾಗುವುದು ಸಂಜ್ಞಾ ಅಥವಾ ಸಂಜ್ಞೆ ಇದೆ. ಅದರಲ್ಲಿ ಆಹಾರದ ನಿಮಿತ್ತವು ದೊರಕಿದ ಮೇಲೆ ಆಹಾರದ ಇಚ್ಛೆಯಾಗುವುದು ಆಹಾರ ಸಂಜ್ಞೆಯಿದೆ. ಭಯದ ನಿಮಿತ್ತವು ದೊರೆತ ಮೇಲೆ ಭಯದ ಇಚ್ಛೆಯಾಗುವುದು ಭಯಸಂಜ್ಞೆಯಿದೆ. ಮೈಥುನದ ಸಾಮಗ್ರಿ ಸಹಿತ ಇಚ್ಛೆಯು ಮೈಥುನಸಂಜ್ಞೆ ಇದೆ. ಪರಿಗ್ರಹದ ನಿಮಿತ್ತವು ದೊರೆತ ಮೇಲೆ ಪರಿಗ್ರಹದ ಇಚ್ಛೆಯು ಪರಿಗ್ರಹಸಂಜ್ಞೆಯಿದೆ. ಇವುಗಳನ್ನು ಸಾಮಾನ್ಯವಾಗಿ ಸಂಜ್ಞೆಗಳೆಂದು ಹೇಳಿದ್ದಾರೆ.

ಈಗ ಯಾವ ಹದಿನಾಲ್ಕು ಮಾರ್ಗಣಾಗಳ ಸ್ವರೂಪವನ್ನು ಮೊದಲು ಹೇಳಲಾಗಿತ್ತು ಅವುಗಳ ನಾಮಮಾತ್ರವನ್ನು ಹೇಳುತ್ತಾರೆ - ಗತಿ, ಇಂದ್ರಿಯ, ಕಾಯ, ಯೋಗ, ವೇದ, ಕಷಾಯ, ಜ್ಞಾನ, ಸಂಯಮ, ದರ್ಶನ, ಲೇಶ್ಯೆ , ಭವ್ಯತ್ವ, ಸಮ್ಯಕ್ತ್ವ, ಸಂಜ್ಞೀ, ಆಹಾರ-ಇವು ಹದಿನಾಲ್ಕು ಮಾರ್ಗಣಾಗಳಿವೆ.

ಉಪಯೋಗ - ಇಲ್ಲಿ ಜ್ಞಾನೋಪಯೋಗದ ಎಂಟು ಮತ್ತು ದರ್ಶನೋಪಯೋಗದ ನಾಲ್ಕು - ಈ ಪ್ರಕಾರ ಜ್ಞಾನ, ದರ್ಶನ ಇವೆರಡನ್ನು ಸೇರಿಸಿ ಉಪಯೋಗದ ಹನ್ನೆರಡು ಭೇದಗಳನ್ನು ತಿಳಿಯುವುದು.

ಈ ಪ್ರಕಾರ ಸಾಮಾನ್ಯದಿಂದ ಗುಣಸ್ಥಾನ, ಮಾರ್ಗಣಾದಿಗಳ ಸ್ವರೂಪ ಹೇಳಲಾಯಿತು.

ಇವುವೇ ಗುಣಸ್ಥಾನಗಳಲ್ಲಿ ಮಾರ್ಗಣಾಗಳನ್ನು ತಿಳಿಸಿಕೊಡುವ ಆಲಾಪ ಹೇಳುತ್ತಾರೆ. ಸರ್ವಪ್ರಥಮ ಗುಣಸ್ಥಾನದಲ್ಲಿ ಮಾರ್ಗಣಾದಿ ಇಪ್ಪತ್ನಾಲ್ಕು ಸ್ಥಾನಗಳನ್ನು ತೊಡಗಿಸಲಾಗಿದೆ. -

**ಗತಿ ಮಾರ್ಗಣಾ -** ನಾಲ್ಕನೇ ಗುಣಸ್ಥಾನದವರೆಗಂತೂ ನಾಲ್ಕು ಗತಿಗಳಿವೆ. ಐದನೆಯ ಗುಣಸ್ಥಾನದಲ್ಲಿ ಮನುಷ್ಯ ಹಾಗೂ ತಿರ್ಯಂಚ ಗತಿಯಿದೆ. ಆರರಿಂದ ಮೇಲಿನ ಗುಣಸ್ಥಾನಗಳಲ್ಲಿ ಒಂದು ಮನುಷ್ಯಗತಿಯನ್ನೇ ತಿಳಿಯುವುದು.

**ಇಂದ್ರಿಯ ಮಾರ್ಗಣಾ -** ಮೊದಲನೆಯ ಗುಣಸ್ಥಾನವಂತೂ ಐದೂ ಇಂದ್ರಿಯ ಧಾರಕ ಜೀವಗಳದ್ದಿರುತ್ತದೆ. ಎರಡನೆಯ ಗುಣಸ್ಥಾನದಿಂದ ಹದಿನಾಲ್ಕನೆಯ ಗುಣಸ್ಥಾನದವರೆಗೆ ಸರ್ವ ಸ್ಥಾನಗಳು ಸಂಜ್ಞೀ ಪಂಚೇಂದ್ರಿಯದವಿರುತ್ತವೆ. ಕೆಲವು ಆಚಾರ್ಯರು ಏಕೇಂದ್ರಿಯಾದಿ ಅಸಂಜ್ಞಿಯವರೆಗಿನ ಜೀವಗಳಿಗೂ ಸಾಸಾದನ ಹೇಳಿದ್ದಾರೆ; ಆದರೆ ಅದರ ಮುಖ್ಯತೆ ಇಲ್ಲವೆಂದು ತಿಳಿಯುವುದು - ಯಥಾಯೋಗ್ಯ ತಿಳಿದುಕೊಳ್ಳಬೇಕು.

**ಕಾಯಮಾರ್ಗಣಾ -** ಪ್ರಥಮ ಗುಣಸ್ಥಾನವಂತೂ ಷಟ್‌ಕಾಯ ಜೀವಗಳದ್ದೂ ತಿಳಿಯುವುದು. ಎರಡರಿಂದ ಹದಿನಾಲ್ಕರವರೆಗಿನ ಸ್ಥಾನವು ತ್ರಸಕಾಯಗಳದ್ದಿರುತ್ತದೆ.

**ಯೋಗ ಮಾರ್ಗಣಾ -** ಪ್ರಥಮ ಗುಣಸ್ಥಾನದಲ್ಲಿ ಆಹಾರಕ ದ್ವಿಕವನ್ನು ಹೊರತುಪಡಿಸಿ ಹದಿಮೂರು ಯೋಗಗಳಿವೆ. ಸಾಸಾದನದಲ್ಲಿಯೂ ಇವುವೇ ಹದಿಮೂರು ಯೋಗಗಳಿವೆ. ಮಿಶ್ರದಲ್ಲಿ ಮನಸ್ಸಿನ ನಾಲ್ಕು, ವಚನದ ನಾಲ್ಕು, ಕಾಯದ ಎರಡು - ಇವು ಹತ್ತು ಯೋಗಗಳಿವೆ. ಅಸಂಯತ ನಾಲ್ಕರಲ್ಲಿ ಆಹಾರಕ ದ್ವಿಕವನ್ನು ಹೊರತು ಪಡಿಸಿ ಹದಿಮೂರು ಯೋಗಗಳಿವೆ. ಐದರಲ್ಲಿ ಒಂಭತ್ತು, ಆರರಲ್ಲಿ ಆಹಾರಕದ್ವಿಕ ಸಹಿತ ಹನ್ನೊಂದು ಯೋಗಗಳಿವೆ. ಏಳರಿಂದ ಹನ್ನೆರಡರವರೆಗೆ ಒಂಭತ್ತು ಯೋಗಗಳಿವೆ. ಹದಿಮೂರರಲ್ಲಿ ಏಳು ಯೋಗಗಳಿವೆ, ಹದಿನಾಲ್ಕರಲ್ಲಿ ಯೋಗಗಳಿರುವುದಿಲ್ಲ.

**ವೇದಮಾರ್ಗಣಾ -** ಪ್ರಥಮದಿಂದ ಒಂಭತ್ತನೇ ಗುಣಸ್ಥಾನದ ಸವೇದ ಭಾಗದವರೆಗೆ ಮೂರು ವೇದಗಳಿವೆ. ಮುಂದೆ ವೇದಗಳಿರುವುದಿಲ್ಲ.

**ಕಷಾಯ ಮಾರ್ಗಣಾ -** ಮೊದಲನೇ ಮತ್ತು ಎರಡನೆಯದರಲ್ಲಿ ಇಪ್ಪತ್ತೈದು ಕಷಾಯಗಳಿವೆ, ಮೂರನೇ, ನಾಲ್ಕನೇ ಗುಣಸ್ಥಾನದಲ್ಲಿ ಇಪ್ಪತ್ತೊಂದು ಕಷಾಯಗಳಿವೆ. ಐದರಲ್ಲಿ ಹದಿನೇಳು ಕಷಾಯಗಳಿವೆ. ಆರರಿಂದ ಅಪೂರ್ವಕರಣದವರೆಗೆ ಹದಿಮೂರು ಕಷಾಯಗಳಿವೆ, ಒಂಭತ್ತರಲ್ಲಿ ಏಳು ಇವೆ. ಹತ್ತರಲ್ಲಿ ಒಂದು ಸೂಕ್ಷ್ಮ ಲೋಭವಿದೆ. ಇದರಿಂದ ಮುಂದೆ ಕಷಾಯಗಳಿರುವುದಿಲ್ಲ.

**ಜ್ಞಾನ ಮಾರ್ಗಣಾ -** ಮೊದಲನೇ ಮತ್ತು ಎರಡನೆಯದರಲ್ಲಿ ಮೂರು ಕುಜ್ಞಾನಗಳಿವೆ. ಮೂರರಲ್ಲಿ ಮಿಶ್ರಜ್ಞಾನವಿದೆ, ನಾಲ್ಕು, ಐದರಲ್ಲಿ ಮೂರು ಸುಜ್ಞಾನಗಳಿವೆ, ಪ್ರಮತ್ತದಿಂದ ಹಿಡಿದು ಹನ್ನೆರಡರವರೆಗೆ ನಾಲ್ಕು ಜ್ಞಾನಗಳಿವೆ. ಹದಿಮೂರು ಹದಿನಾಲ್ಕರಲ್ಲಿ ಒಂದು ಕೇವಲಜ್ಞಾನವಿದೆ.

**ಸಂಯಮ ಮಾರ್ಗಣಾ -** ಮಿಥ್ಯಾತ್ವದಿಂದ ಅಸಂಯತದವರೆಗೆ ಅಸಂಯಮವಿದೆ. ಐದರಲ್ಲಿ ಒಂದು ದೇಶಸಂಯಮವಿದೆ. ಪ್ರಮತ್ತ ಅಪ್ರಮತ್ತ - ಇವು ಎರಡರಲ್ಲಿ ಸಾಮಾಯಿಕ, ಛೇದೋಪಸ್ಥಾಪನಾ, ಪರಿಹಾರವಿಶುದ್ಧಿ - ಇವು ಮೂರು ಸಂಯಮವಿವೆ. ಎಂಟು ಒಂಭತ್ತರಲ್ಲಿ ಸಾಮಾಯಿಕ - ಛೇದೋಪಸ್ಥಾಪನಾ - ಇವು ಎರಡು ಸಂಯಮಗಳಿವೆ. ಹತ್ತರಲ್ಲಿ ಸೂಕ್ಷ್ಮ ಸಾಂಪರಾಯ ಸಂಯಮವಿದೆ. ಇದರಿಂದ ಮುಂದೆ ಒಂದು ಯಥಾಖ್ಯಾತ ಸಂಯಮವೇ ಇರುತ್ತದೆ.

**ದರ್ಶನ ಮಾರ್ಗಣಾ -** ಮೊದಲಿನಿಂದ ಮೂರರ ವರೆಗೆ ಎರಡು ದರ್ಶನಗಳಿವೆ. ನಾಲ್ಕರಿಂದ ಹನ್ನೆರಡರವರೆಗೆ ಮೂರು ದರ್ಶನಗಳಿವೆ. ಹದಿಮೂರು ಹದಿನಾಲ್ಕರಲ್ಲಿ ಒಂದು ಕೇವಲ ದರ್ಶನವಿದೆ.

**ಲೇಶ್ಯಾ ಮಾರ್ಗಣಾ -** ನಾಲ್ಕನೆಯ ಗುಣಸ್ಥಾನದವರೆಗೆ ಆರೂ ಲೇಶ್ಯೆಗಳಿರುತ್ತವೆ. ಐದರಿಂದ ಏಳರವರೆಗೆ ಮೂರು ಶುಭಲೇಶ್ಯೆಗಳಿರುತ್ತವೆ. ಎಂಟರಿಂದ ಹದಿಮೂರನೆಯ ಗುಣಸ್ಥಾನದವರೆಗೆ ಒಂದು ಶುಕ್ಲಲೇಶ್ಯೆ ಇರುತ್ತದೆ. ಹದಿನಾಲ್ಕರಲ್ಲಿ ಲೇಶ್ಯೆಗಳಿರುವುದಿಲ್ಲ.

**ಭವ್ಯ ಮಾರ್ಗಣಾ -** ಯಾರು ಎಂದೂ ಮೋಕ್ಷಕ್ಕೆ ಹೋಗುವುದಿಲ್ಲ ಅವರು ಅಭವ್ಯರಿದ್ದಾರೆ. ಮೋಕ್ಷಕ್ಕೆ ಹೋಗಲು ಯೋಗ್ಯವಿರುವಂಥವರನ್ನು ಭವ್ಯರೆಂದು ಹೇಳಲಾಗುವುದು. ಮೊದಲನೆಯ ಗುಣಸ್ಥಾನದಲ್ಲಿ ಭವ್ಯ- ಅಭವ್ಯ ಇಬ್ಬರೂ ಇರುತ್ತಾರೆ. ಮುಂದಿನ ಎಲ್ಲ ಗುಣಸ್ಥಾನಗಳು ಭವ್ಯರಿಗೇನೇ ಆಗುತ್ತವೆ.

**ಸಮ್ಯಕ್ತ್ವ ಮಾರ್ಗಣಾ -** ಮಿಥ್ಯಾತ್ವದಲ್ಲಿ ಮಿಥ್ಯಾತ್ವ ಸಮ್ಯಕ್ತ್ವವಿದೆ. ಸಾಸಾದನದಲ್ಲಿ ಸಾಸಾದನ ಸಮ್ಯಕ್ತ್ವವಿದೆ. ಮಿಶ್ರದಲ್ಲಿ ಮಿಶ್ರವಿದೆ. ಅಸಂಯತದಿಂದ ಹಿಡಿದು ಅಪ್ರಮತ್ತದವರೆಗೆ ಔಪಶಮಿಕ, ಕ್ಷಾಯೋಪಶಮಿಕ ಮತ್ತು ಕ್ಷಾಯಿಕ -

ಇವು ಮೂರು ಸಮ್ಯಕ್ತ್ವಗಳಿರುತ್ತವೆ. ಎಂಟರಿಂದ ಹನ್ನೊಂದರವರೆಗೆ ಔಪಶಮಿಕ ಮತ್ತು ಕ್ಷಾಯಿಕ - ಎರಡು ಇರುತ್ತವೆ. ಹನ್ನೆರಡರಿಂದ ಸಿದ್ಧರವರೆಗೆ ಕ್ಷಾಯಿಕ ಸಮ್ಯಕ್ತ್ವವಿರುತ್ತದೆ.

**ಸಂಜ್ಞೀ ಮಾರ್ಗಣಾ** - ಮೊದಲನೆಯ ಗುಣಸ್ಥಾನದಲ್ಲಿ ಸಂಜ್ಞಿ-ಅಸಂಜ್ಞಿ ಎರಡೂ ಇರುತ್ತವೆ. ಎರಡರಿಂದ ಹನ್ನೆರಡರವರೆಗೆ ಸಂಜ್ಞಿಗಳೇ ಇರುತ್ತವೆ. ಹದಿಮೂರು, ಹದಿನಾಲ್ಕರಲ್ಲಿ ಎರಡೂ ಇರುವುದಿಲ್ಲ.

**ಆಹಾರ ಮಾರ್ಗಣಾ** - ಮೊದಲನೆಯ ಎರಡನೆಯ ಮತ್ತು ನಾಲ್ಕನೆಯ ಗುಣಸ್ಥಾನದಲ್ಲಿ ಆಹಾರಕ, ಅನಾಹಾರಕ ಎರಡೂ ಇರುತ್ತವೆ ಮೂರನೆಯ ಮತ್ತು ಐದನೆಯದರಲ್ಲಿ ಒಂದು ಆಹಾರಕವೇ ಇರುತ್ತದೆ. ಆರರಲ್ಲಿ ಆಹಾರಕ, ಅನಾಹಾರಕ ಎರಡೂ ಇರುತ್ತವೆ. ಅಪ್ರಮತ್ತದಿಂದ ಹನ್ನೆರಡರವರೆಗೆ ಆಹಾರಕವಿರುತ್ತವೆ. ಹದಿಮೂರರಲ್ಲಿ ಎರಡೂ ಇರುತ್ತವೆ. ಹದಿನಾಲ್ಕರಲ್ಲಿ ಅನಾಹಾರಕವಿದೆ.

**ಗುಣಸ್ಥಾನ ಪ್ರರೂಪಣೆ** - ಅಲ್ಲಿ ಗುಣಸ್ಥಾನದ ಸ್ವರೂಪವು ತಮ್ಮ ತಮ್ಮ ಗುಣಸ್ಥಾನದಲ್ಲಿ ಸ್ವಕೀಯ ಗುಣಸ್ಥಾನ - ಈ ಪ್ರಕಾರ ಹದಿನಾಲ್ಕನ್ನೇ ಸಾಮಾನ್ಯವತ್ ಎಂದು ತಿಳಿಯುವುದು.

ಈಗ ಗುಣಸ್ಥಾನದ ಮೇಲೆ ಜೀವಸಮಾಸ ಮೊದಲಾದುವನ್ನು ತೊಡಗಿಸುತ್ತಾರೆ. ಅಲ್ಲಿ ಮೊದಲನೆಯ ಗುಣಸ್ಥಾನದಲ್ಲಿ ಹದಿನಾಲ್ಕೂ ಜೀವ ಸಮಾಸಗಳಿವೆ. ಸಾಸಾದನ, ಅಸಂಯತ, ಪ್ರಮತ್ತ , ಸಯೋಗಕೇವಲಿ ಈ ನಾಲ್ಕು ಗುಣಸ್ಥಾನದಲ್ಲಿ, ಪಂಚೇಂದ್ರಿಯದ ಪರ್ಯಾಪ್ತ-ಅಪರ್ಯಾಪ್ತ ಈ ಎರಡೂ ಜೀವ ಸಮಾಸಗಳಿರುತ್ತವೆ. ಉಳಿದ ಎಲ್ಲ ಗುಣಸ್ಥಾನಗಳಲ್ಲಿ ಒಂದು ಪಂಚೇಂದ್ರಿಯ ಪರ್ಯಾಪ್ತ ಜೀವ ಸಮಾಸವಿರುತ್ತದೆ.

**ಪರ್ಯಾಪ್ತಿ ಪ್ರರೂಪಣೆ** - ಮೊದಲನೆಯ ಗುಣಸ್ಥಾನದಿಂದ ಹದಿನಾಲ್ಕನೆಯ ಗುಣಸ್ಥಾನದವರೆಗೆ ಆರೂ ಪರ್ಯಾಪ್ತಿಗಳಿರುತ್ತವೆ.

**ಪ್ರಾಣ ಪ್ರರೂಪಣೆ** - ಮಿಥ್ಯಾತ್ವದಿಂದ ಹನ್ನೆರಡನೆಯ ಗುಣಸ್ಥಾನದವರೆಗೆ ಹತ್ತು ಪ್ರಾಣಗಳಿರುತ್ತವೆ.

ಹದಿಮೂರನೆಯ ಗುಣಸ್ಥಾನದವರದು ಅಪ್ರಯಾರ್ಪ್ತಿಯಲ್ಲಂತೂ ಆಯು, ಕಾಯ - ಇವು ಎರಡು ಪ್ರಾಣಗಳಿರುತ್ತವೆ. ಪ್ರಯಾಪ್ತಿಯಲ್ಲಿ ನಾಲ್ಕು ಇರುತ್ತವೆ. ಅಯೋಗದಲ್ಲಿ ಒಂದು ಆಯು ಪ್ರಾಣವಿರುತ್ತದೆ.

**ಸಂಜ್ಞಾ ಪ್ರರೂಪಣೆ** - ಸಂಜ್ಞೆಗಳು ನಾಲ್ಕು ಇವೆ. ಅಲ್ಲಿ ಮೊದಲನೆಯ ಗುಣಸ್ಥಾನದಿಂದ ಆರನೇ ಪ್ರಮತ್ತದವರೆಗೆ ನಾಲ್ಕೂ ಸಂಜ್ಞೆಗಳಿರುತ್ತವೆ. ಏಳನೆಯ, ಎಂಟನೆಯ ಗುಣಸ್ಥಾನದಲ್ಲಿ ಆಹಾರವನ್ನು ಹೊರತು ಪಡಿಸಿ ಮೂರು ಸಂಜ್ಞೆಗಳಿರುತ್ತವೆ. ಒಂಭತ್ತರಲ್ಲಿ ಮೈಥುನ, ಪರಿಗ್ರಹ - ಇವು ಎರಡು ಸಂಜ್ಞೆಗಳಿರುತ್ತವೆ. ಹತ್ತರಲ್ಲಿ ಒಂದು ಪರಿಗ್ರಹ ಸಂಜ್ಞೆ ಇರುತ್ತದೆ. ಮುಂದೆ ಕಷಾಯಗಳ ಅಭಾವದಿಂದ ಸಂಜ್ಞೆಗಳದ್ದೂ ಅಭಾವವಿದೆ. ಈ ಸಂಜ್ಞೆಗಳು ಕಷಾಯಗಳ ಯೋಗದಿಂದ ಆಗುತ್ತವೆ. ಅಪ್ರಮತ್ತದಲ್ಲಿ ಧ್ಯಾನದ ಅವಸ್ಥೆ ಇರುವುದರಿಂದ ಆಹಾರ - ವಿಹಾರಾದಿ ಪ್ರಮಾದಗಳ ಅಭಾವವಿರುವುದರಿಂದ ಆಹಾರ ಸಂಜ್ಞೆಯ ಅಭಾವವಿರುತ್ತದೆ. ಭಯ ಕಷಾಯದ ನಿಮಿತ್ತದಿಂದ ಭಯ ಸಂಜ್ಞೆಯು ಉತ್ಪನ್ನವಾಗುತ್ತದೆ. ವೇದ ಕಷಾಯದಿಂದ ಮೈಥುನ ಸಂಜ್ಞೆಯಾಗುತ್ತದೆ. ಲೋಭಕಷಾಯದ ನಿಮಿತ್ತ ಪಡೆದು ಪರಿಗ್ರಹ ಸಂಜ್ಞೆಯಾಗುತ್ತದೆ. ಎಲ್ಲಿ ಕಷಾಯವಿರುವುದಿಲ್ಲ ಅಲ್ಲಿ ಸಂಜ್ಞೆಯೂ ಇರುವುದಿಲ್ಲ.

**ಉಪಯೋಗ** - ಉಪಯೋಗವು ಹನ್ನೆರಡು ಪ್ರಕಾರದ್ದಿದೆ. - ಮಿಥ್ಯಾತ್ವ, ಸಾಸಾದನ - ಇವು ಎರಡು ಗುಣಸ್ಥಾನಗಳಲ್ಲಿ ಎರಡು ದರ್ಶನ, ಮೂರು ಕುಜ್ಞಾನ ಇವು ಐದು ಉಪಯೋಗಗಳಿರುತ್ತವೆ. ಮಿಶ್ರ ಗುಣಸ್ಥಾನದಲ್ಲಿ ಮಿಶ್ರಜ್ಞಾನ ಮೂರು, ದರ್ಶನ ಎರಡು - ಇವು ಐದು ಉಪಯೋಗಗಳು ಇರುತ್ತವೆ. ಕೆಲವು ಆಚಾರ್ಯರು ಇಲ್ಲಿ ಮೂರು ದರ್ಶನಗಳನ್ನು ಕೂಡ ಹೇಳುತ್ತಾರೆ, ಆ ಅಪೇಕ್ಷೆಯಿಂದ ಆರು ಉಪಯೋಗಗಳಿರುತ್ತವೆ. ನಾಲ್ಕನೆಯ ಮತ್ತು ಐದನೆಯದರಲ್ಲಿ ಸುಜ್ಞಾನ ಮೂರು, ದರ್ಶನ ಮೂರು - ಇವು ಆರು ಉಪಯೋಗಗಳು ಇರುತ್ತವೆ. ಆರರಿಂದ ಹನ್ನೆರಡನೆಯ

ಗುಣಸ್ಥಾನದವರೆಗೆ ನಾಲ್ಕು ಜ್ಞಾನ, ಮೂರು ದರ್ಶನ - ಇವು ಏಳು ಉಪಯೋಗಗಳು ಇರುತ್ತವೆ. ಹದಿಮೂರನೆಯ, ಹದಿನಾಲ್ಕನೆಯದರಲ್ಲಿ ಕೇವಲಜ್ಞಾನ, ಕೇವಲದರ್ಶನ - ಇವು ಎರಡು ಉಪಯೋಗಗಳು ಇರುತ್ತವೆ.

ಈ ಪ್ರಕಾರ ಸಾಮಾನ್ಯವಾಗಿ ಇಪ್ಪತ್ತು ಪ್ರರೂಪಣೆಗಳ ಕಥನವು ಪೂರ್ಣವಾಯಿತು.

ಈಗ ಧ್ಯಾನ, ಆಸ್ರವ, ಜಾತಿ, ಕುಲ -ಇವು ನಾಲ್ಕರ ವರ್ಣನೆ ಮಾಡುತ್ತಾರೆ.

**ಝಾಣವೇಯ ಪತ್ತಾವೇಯ ಜಾಯಏ, ಕುಲಕೋಡ ಸಂಜಯಾ ಸವ್ವೇ ।**
**ಗಾಹಾ ತಯೇಣ ಭಣಿಯಾ, ಕಮೇಣ ಚೌಬೀಸ ಠಾಣಾಣಿ ॥೧೩॥**

**ಗಾಥಾರ್ಥ :-** ಧ್ಯಾನ, ಪ್ರತ್ಯಯ (ಆಸ್ರವ), ಜಾತಿ ಮತ್ತು ಕುಲ ಕೋಟಿಗಳ ಜೊತೆಗೆ ಯಾವಾಗ (ಹದಿನಾಲ್ಕು ಗುಣಸ್ಥಾನ, ಜೀವ ಸಮಾಸ, ಪರ್ಯಾಪ್ತಿ , ಪ್ರಾಣ, ಸಂಜ್ಞೆ , ಮಾರ್ಗಣಾ ಮತ್ತು ಉಪಯೋಗ) ಇವು ಪೂರ್ವೋಕ್ತಗಳನ್ನು ಗ್ರಹಣ ಮಾಡಲಾಗುತ್ತಿದ್ದರೆ ಕ್ರಮಪರ್ಯಂತದವರೆಗೆ ವರ್ಣಿಸಲಾದ ಹದಿನಾಲ್ಕರಿಂದ ಇಪ್ಪತ್ತಾ ್ನಲ್ಕು ಸ್ಥಾನಗಳಾಗುತ್ತವೆ - ಈ ಪ್ರಕಾರ ಜಿನೇಂದ್ರ ಭಗವಂತರು ಹೇಳಿದ್ದಾರೆ.

**ಭಾವಾರ್ಥ :-** ಹದಿನಾರು ಧ್ಯಾನಗಳು, ಐವತ್ತೇಳು ಆಸ್ರವ - ಐದು ಮಿಥ್ಯಾತ್ವ, ಹನ್ನೆರಡು ಅವ್ರತ, ಇಪ್ಪತ್ತೈದು ಕಷಾಯಗಳು, ಹದಿನೈದು ಯೋಗಗಳು - ಇವು ಐವತ್ತೇಳು ಆಸ್ರವಗಳಿವೆ.

ಆ ಧ್ಯಾನ ಹಾಗೂ ಆಸ್ರವಗಳ ಸ್ವರೂಪವನ್ನು ಮೊದಲು ಹೇಳಲಾಗಿದೆ. ಆದರಿಂದ ಇಲ್ಲಿ ಹೇಳಲಾಗುತ್ತಿಲ್ಲ, ಅಲ್ಲಿಂದ ತಿಳಿಯುವುದು.

ಜಾತಿ - ಏಕೇಂದ್ರಿಯ ಜಾತಿಯಲ್ಲಿ ಪೃಥ್ವಿ, ಜಲ, ಅಗ್ನಿ, ವಾಯು ಹಾಗೂ ಸಾಧಾರಣ ವನಸ್ಪತಿಯ ಇತರ ನಿಗೋದ - ನಿತ್ಯ ನಿಗೋದ - ಇವು ಎರಡು ಭೇದಗಳು - ಹೀಗೆ ಆರು ಸ್ಥಾವರಗಳ ಏಳು - ಏಳು ಲಕ್ಷ ಜಾತಿಗಳಿವೆ. ಪ್ರತ್ಯೇಕ ವನಸ್ಪತಿಯ ಹತ್ತು ಲಕ್ಷ ಜಾತಿಗಳಿವೆ. ಎರಡು ಇಂದ್ರಿಯ, ಮೂರು ಇಂದ್ರಿಯ, ನಾಲ್ಕು ಇಂದ್ರಿಯ - ಇವು ಮೂರರ ಎರಡು ಎರಡು ಲಕ್ಷ ಜಾತಿಗಳಿವೆ. ದೇವ, ಪಂಚೇಂದ್ರಿಯ ತಿರ್ಯಂಚ, ನಾರಕಿ -ಇವು ಮೂರರ ನಾಲ್ಕು ನಾಲ್ಕು ಲಕ್ಷ ಜಾತಿಗಳಿವೆ. ಮನುಷ್ಯರ ಹದಿನಾಲ್ಕು ಲಕ್ಷ ಜಾತಿಗಳಿವೆ - (೪೨+೧೦+೬+೧೨+೧೪=೮೪ ಲಕ್ಷ) ಇವೆಲ್ಲವು ಸೇರಿ ಎಂಭತ್ತಾ ್ನಲ್ಕು ಲಕ್ಷ ಜಾತಿಗಳೆಂದು ತಿಳಿಯುವುದು.

ಕುಲ - ಅದರಲ್ಲಿ ಪೃಥ್ವಿ ಕಾಯಿಕದ ಇಪ್ಪತ್ತೆರಡು ಲಕ್ಷ ಕೋಟಿ ಕುಲಗಳಿವೆ. ಜಲ, ವಾಯು - ಇವೆರಡರಲ್ಲಿ ಏಳು ಏಳು ಲಕ್ಷ ಕೋಟಿ ಕುಲಗಳಿವೆ. ತೈಜಸ ಕಾಯಿಕದ ಮೂರು ಲಕ್ಷಕೋಟಿ ಕುಲಗಳಿವೆ. ವನಸ್ಪತಿಯ ಇಪ್ಪತ್ತೆಂಟು ಲಕ್ಷ ಕೋಟಿ ಕುಲಗಳಿವೆ. ಎರಡು ಇಂದ್ರಿಯಗಳ ಏಳು ಲಕ್ಷ ಕೋಟಿ ಕುಲಗಳಿವೆ. ಮೂರು ಇಂದ್ರಿಯದ ಎಂಟು ಲಕ್ಷ ಕೋಟಿ ಕುಲಗಳಿವೆ. ನಾಲ್ಕು ಇಂದ್ರಿಯದಲ್ಲಿ ಒಂಭತ್ತು ಲಕ್ಷ ಕೋಟಿ ಕುಲಗಳಿವೆ. ಪಂಚೇಂದ್ರಿಯಗಳೊಳಗೆ ನೀರಿನಲ್ಲಿಯೇ ಇರುವಂತಹ ಜಲಚರ ಜೀವಗಳ ಹನ್ನೆರಡೂವರೆ ಲಕ್ಷ ಕೋಟಿ ಕುಲಗಳಿವೆ. ಭೂಮಿಯ ಮೇಲೆ ವಿಹಾರ ಮಾಡುವಂಥ ಎರಡು ಪದ, ನಾಲ್ಕು ಪದ ಥಲಚರ ಜೀವಗಳಲ್ಲಿ ಹತ್ತು ಲಕ್ಷ ಕೋಟಿ ಕುಲಗಳಿವೆ. ಆಕಾಶದಲ್ಲಿ ಹಾರಾಡುವಂಥ ಪಕ್ಷಿ ಮೊದಲಾದ ನಭ ಚರಗಳಲ್ಲಿ ಹನ್ನೆರಡು ಲಕ್ಷ ಕೋಟಿ ಕುಲಗಳಿವೆ. ಎದೆಯಿಂದ ನಡೆಯುವಂಥ ಸರ್ಪಾದಿ ಜೀವಗಳಲ್ಲಿ ಒಂಭತ್ತು ಲಕ್ಷ ಕೋಟಿ ಕುಲಗಳಿವೆ. ಮನುಷ್ಯರಲ್ಲಿ ಹನ್ನೆರಡು ಲಕ್ಷ ಕೋಟಿ ಕುಲಗಳಿವೆ. ದೇವಗಳಲ್ಲಿ ಇಪ್ಪತ್ತಾರು ಲಕ್ಷ ಕೋಟಿ ಕುಲಗಳಿವೆ. ನಾರಕಿಗಳಲ್ಲಿ ಇಪ್ಪತ್ತೈದು ಲಕ್ಷ ಕೋಟಿ ಕುಲಗಳಿವೆ. (೨೨+೧೪+೩+೨೮+೭+೮+೯+೧೨ ೧/೨+೨+೧೦+೧೨+೯+೧೨+೨೬+೨೫=೧೯೭ ೧/೨ ಲಕ್ಷ ಕೋಟಿ ಕುಲಗಳಿವೆ) - ಇವೆಲ್ಲವೂ ಸೇರಿ ಒಂದುನೂರಾ ತೊಂಭತ್ತೇಳೂವರೆ ಲಕ್ಷ ಕೋಟಿ ಕುಲಗಳೆಂದು ತಿಳಿಯುವುದು.

ಈಗ ಧ್ಯಾನ, ಆಸ್ರವ, ಜಾತಿ, ಕುಲ - ಇವು ನಾಲ್ಕನ್ನು ಗುಣಸ್ಥಾನಗಳಲ್ಲಿ ಲಗತ್ತಿಸಲಾಗುತ್ತದೆ -

೧. ಧ್ಯಾನ - ಮೊದಲನೆಯ - ಎರಡನೆಯ ಗುಣಸ್ಥಾನದಲ್ಲಿ ಆರ್ತ - ರೌದ್ರ ಧ್ಯಾನದ ಎಂಟು ಭೇದಗಳಿರುತ್ತವೆ. ಮೂರನೆಯ ಮಿಶ್ರದಲ್ಲಿ ಆರ್ತ-ರೌದ್ರದ ಎಂಟು, ಧರ್ಮ ಧ್ಯಾನದ ಒಂದು ಆಜ್ಞಾವಿಚಯ - ಇವು ಒಂಭತ್ತು ಧ್ಯಾನಗಳಿರುತ್ತವೆ. ಅಸಂಯತದಲ್ಲಿ ಆರ್ತ-ರೌದ್ರದ ಎಂಟು ಭೇದ ಹಾಗೂ ಆಜ್ಞಾ-ಅಪಾಯವಿಚಯ ಇವು ಎರಡು ಧರ್ಮಧ್ಯಾನಗಳು - ಈ ಪ್ರಕಾರ ಒಟ್ಟು ಹತ್ತು ಭೇದಗಳಿರುತ್ತವೆ. ಐದರಲ್ಲಿ ಆರ್ತ-ರೌದ್ರದ ಎಂಟು, ಸಂಸ್ಥಾನ ವಿಚಯವನ್ನು ಹೊರತು ಪಡಿಸಿ ಧರ್ಮಧ್ಯಾನದ ಮೂರು - ಹೀಗೆ ಎಲ್ಲ ಸೇರಿ ಹನ್ನೊಂದು ಧ್ಯಾನಗಳಿರುತ್ತವೆ. ಪ್ರಮತ್ತದಲ್ಲಿ ಧರ್ಮಧ್ಯಾನದ ನಾಲ್ಕು, ನಿದಾನ ಬಂಧವನ್ನು ಹೊರತು ಪಡಿಸಿ ಆರ್ತ ಧ್ಯಾನದ ಮೂರು - ಇವು ಏಳು ಧ್ಯಾನಗಳಿರುತ್ತವೆ. ಅಪ್ರಮತ್ತದಲ್ಲಿ ಧರ್ಮಧ್ಯಾನದ ನಾಲ್ಕು ಭೇದಗಳಿರುತ್ತವೆ. ಎಂಟರಿಂದ ಹನ್ನೊಂದರ ವರೆಗೆ ಒಂದು ಪೃಥಕ್ತ್ವವಿತರ್ಕವೀಚಾರವೆಂಬ ಹೆಸರಿನ ಶುಕ್ಲಧ್ಯಾನವಿರುತ್ತದೆ. ಹನ್ನೆರಡನೆಯ ಗುಣಸ್ಥಾನದಲ್ಲಿ ಏಕತ್ವವಿತರ್ಕವೀಚಾರವೆಂಬ ಹೆಸರಿನ ಶುಕ್ಲ ಧ್ಯಾನವಿರುತ್ತದೆ. ಹದಿಮೂರರಲ್ಲಿ ಸೂಕ್ಷ್ಮಕ್ರಿಯಾಪ್ರತಿಪಾತಿ ಎಂಬ ಹೆಸರಿನ ಶುಕ್ಲ ಧ್ಯಾನವಿರುತ್ತದೆ. ಹದಿನಾಲ್ಕರಲ್ಲಿ ವ್ಯುಪರತಕ್ರಿಯಾನಿವರ್ತಿ ಎಂಬ ಹೆಸರಿನ ಶುಕ್ಲಧ್ಯಾನವಿರುತ್ತದೆ.

೨. ಆಸ್ರವ - ಆಸ್ರವಗಳು ಐವತ್ತೇಳು ಇವೆ. ಅವುಗಳೊಳಗಿಂದ ಮಿಥ್ಯಾತ್ವದಲ್ಲಿ ಆಹಾರಕದ್ವಿಕ ಕಾಯಯೋಗವನ್ನು ಹೊರತು ಪಡಿಸಿ ಐವತ್ತೈದು ಆಸ್ರವಗಳಿರುತ್ತವೆ. ಸಾಸಾದನದಲ್ಲಿ ಐದು ಮಿಥ್ಯಾತ್ವ, ಆಹಾರಕದ್ವಿಕವನ್ನು ಹೊರತು ಪಡಿಸಿ ಐವತ್ತು ಆಸ್ರವಗಳಿರುತ್ತವೆ. ಮಿಶ್ರದಲ್ಲಿ ಇಪ್ಪತ್ತೊಂದು ಕಷಾಯ, ಹತ್ತು ಯೋಗ, ಹನ್ನೆರಡು ಅವ್ರತ -ಎಲ್ಲ ಸೇರಿ ಮೂವತ್ಮೂರು ಆಸ್ರವಗಳಿರುತ್ತವೆ. ನಾಲ್ಕರಲ್ಲಿ ಹನ್ನೆರಡು ಅವ್ರತ, ಇಪ್ಪತ್ತೊಂದು ಕಷಾಯ, ಹದಿಮೂರು ಯೋಗ - ಎಲ್ಲ ಸೇರಿ ನಲವತ್ತಾರು ಆಸ್ರವಗಳಿರುತ್ತವೆ. ಐದರಲ್ಲಿ ಹದಿನೇಳು ಕಷಾಯ, ಒಂಭತ್ತು ಯೋಗ, ಹನ್ನೊಂದು ಅವ್ರತ - ಎಲ್ಲ ಸೇರಿ ಮೂವತ್ತೇಳು ಆಸ್ರವಗಳಿರುತ್ತವೆ. ಪ್ರಮತ್ತದಲ್ಲಿ ಹದಿಮೂರು ಕಷಾಯ, ಹನ್ನೊಂದು ಯೋಗ - ಎಲ್ಲ ಸೇರಿ ಇಪ್ಪತ್ತಾನ್ಲಾಲ್ಕು ಆಸ್ರವಗಳಿರುತ್ತವೆ. ಏಳು ಮತ್ತು ಎಂಟರಲ್ಲಿ ಹದಿಮೂರು ಕಷಾಯ, ಒಂಭತ್ತು ಯೋಗ - ಸೇರಿ ಇಪ್ಪತ್ತೆರಡು ಆಸ್ರವಗಳಿರುತ್ತವೆ. ಒಂಭತ್ತರಲ್ಲಿ ಏಳು ಕಷಾಯ, ಒಂಭತ್ತು ಯೋಗ - ಸೇರಿ ಹದಿನಾರು ಆಸ್ರವಗಳಿರುತ್ತವೆ. ಹತ್ತರಲ್ಲಿ ಒಂದು ಕಷಾಯ, ಒಂಭತ್ತು ಯೋಗ - ಸೇರಿ ಹತ್ತು ಆಸ್ರವಗಳಿರುತ್ತವೆ. ಹನ್ನೊಂದು ಮತ್ತು ಹನ್ನೆರಡರಲ್ಲಿ ಒಂಭತ್ತು ಯೋಗ ಆಸ್ರವಗಳಿರುತ್ತವೆ. ಹದಿಮೂರರಲ್ಲಿ ಏಳು ಯೋಗ ಆಸ್ರವವಿರುತ್ತವೆ. ಹದಿನಾಲ್ಕರಲ್ಲಿ ಆಸ್ರವವಿರುವುದಿಲ್ಲ.

೩. ಜಾತಿ - ಎಂಭತ್ತಾನ್ಲಾಲ್ಕು ಲಕ್ಷ ಜಾತಿಗಳಿವೆ. ಮೊದಲನೆಯ ಗುಣಸ್ಥಾನದಲ್ಲಂತೂ ಎಲ್ಲ ಜಾತಿಗಳಿರುತ್ತವೆ. ಸಾಸಾದನ, ಮಿಶ್ರ, ಅಸಂಯತ ಇವು ಮೂರರಲ್ಲಿ ದೇವ, ನರಕ, ಪಂಚೇಂದ್ರಿಯ ತಿರ್ಯಂಚ, ಮನುಷ್ಯ -ಇವುಗಳ ಇಪ್ಪತ್ತಾರು ಲಕ್ಷ ಜಾತಿಗಳಿರುತ್ತವೆ.

ಐದರಲ್ಲಿ ಮನುಷ್ಯ, ತಿರ್ಯಂಚಕ್ಕೆ ಸಂಬಂಧಿಸಿದ ಹದಿನೆಂಟು ಲಕ್ಷ ಜಾತಿಗಳಿರುತ್ತವೆ. ಪ್ರಮತ್ತದಿಂದ ಅಯೋಗದವರೆಗೆ ಮನುಷ್ಯನಿಗೆ ಸಂಬಂಧಿಸಿದ ಹದಿನಾಲ್ಕು ಲಕ್ಷ ಜಾತಿಗಳಿವೆ.

೪. ಕುಲ - ಒಟ್ಟು ಒಂದುನೂರಾ ತೊಂಭತ್ತೇಳೂವರೆ ಲಕ್ಷ ಕೋಟಿ ಕುಲಗಳಿವೆ. ಅವುಗಳೊಳಗಿಂದ ಮಿಥ್ಯಾತ್ವದಲ್ಲಿ ಎಲ್ಲ ಕುಲಗಳಿರುತ್ತವೆ. ಸಾಸಾದನ, ಮಿಶ್ರ, ಅಸಂಯತ - ಇವುಗಳಲ್ಲಿ ಏಕೇಂದ್ರಿಯ, ವಿಕಲೇಂದ್ರಿಯ ಸಂಬಂಧದ ಕುಲಗಳನ್ನು ಕಡಿಮೆ ಮಾಡಿ ಒಂದುನೂರಾ ಆರೂವರೆ ಲಕ್ಷ ಕೋಟಿ ಕುಲಗಳಿರುತ್ತವೆ. ಐದನೆಯ ಗುಣಸ್ಥಾನದಲ್ಲಿ ಪಂಚೇಂದ್ರಿಯ ತಿರ್ಯಂಚ, ಮನುಷ್ಯನಿಗೆ ಸಂಬಂಧಿಸಿದ ಐವತ್ತೈದೂವರೆ ಲಕ್ಷ ಕೋಟಿ ಕುಲಗಳಿವೆ. ಪ್ರಮತ್ತದಿಂದ ಹಿಡಿದು ಹದಿನಾಲ್ಕನೆಯ ಗುಣಸ್ಥಾನದವರೆಗೆ ಮನುಷ್ಯನಿಗೆ ಸಂಬಂಧಿಸಿದ ಹನ್ನೆರಡು ಲಕ್ಷ ಕೋಟಿ ಕುಲಗಳಿವೆ.

ಈ ಪ್ರಕಾರ ಸಾಮಾನ್ಯರೂಪದಿಂದ ಗುಣಸ್ಥಾನಗಳಲ್ಲಿ ಇಪ್ಪತ್ತಾನ್ಲಾಲ್ಕು ಸ್ಥಾನಗಳನ್ನು ಘಟಿಸಲಾಯಿತು.

ಈಗ ಹೇಳಲಾಗಿರುವ ಈ ಜೀವಗಳಲ್ಲಿ ಸ್ಥಾವರಗಳ ಐದು ಭೇದಗಳೊಳಗಿಂದ ವನಸ್ಪತಿ ಜೀವಗಳ ಉತ್ಪತ್ತಿಯ ಕಾರಣಭೂತವಿರುವ ಬೀಜಗಳು ಏಳು ಪ್ರಕಾರದವುಗಳಿರುತ್ತವೆ. ಅವುಗಳನ್ನು ಹೇಳಲಾಗುವುದು –

**ಪಲ್ಲವ ಮೂಲೋ ಪವ್ವೋ , ಕಂದೋ ಖಂದೋ ಯ ಬೀಯ ಸಂಮುಚ್ಛೋ ।**

**ಭೇಯೋ ಸತ್ತ ಪಯಾರೋ, ಇಕ ಅಕ್ಖೋ ವಣಪ್ಪದೀ ಬೀಯೋ ॥೧೪॥**

**ಗಾಥಾರ್ಥ :-** ಪಲ್ಲವ, ಮೂಲ, ಪರ್ವ, ಕಂದ, ಸ್ಕಂಧ, ಬೀಜ, ಸಮ್ಮೂರ್ಚ್ಛನ – ಇವು ಏಳು ಭೇದಗಳು ವನಸ್ಪತಿಯು ಉತ್ಪನ್ನವಾಗುವ ಸಲುವಾಗಿ ಬೀಜದ ಸಮಾನವಿದೆ.

**ಭಾವಾರ್ಥ :-** ಯಾವುದರ ಚಿಕ್ಕ ರೆಂಬೆಯನ್ನು ಮೇಲಿನಿಂದ ತುಂಡರಿಸಿ ಹಚ್ಚುವುದರಿಂದ ಬೇರೊಂದು ಗಿಡವಾಗುತ್ತದೆ – ಇಂಥವು ಅದೆಷ್ಟೋ ಚೆಂಡು ಮೊದಲಾಗಿ ಸಾವಿರಾರು ವನಸ್ಪತಿಗಳಿವೆ. ಯಾವುದರ ಪಲ್ಲವವನ್ನು ಹಚ್ಚುವುದರಿಂದ ಬೇರೊಂದು ವನಸ್ಪತಿಯಾಗುತ್ತದೆ, ಅಂಥವು ಪಲ್ಲವ ಬೀಜ ಅಥವಾ ಅಗ್ರಬೀಜಗಳು ಇರುತ್ತವೆ.

ಅದೆಷ್ಟೋ ವನಸ್ಪತಿಗಳು ಮೂಲವನ್ನು ಹಚ್ಚುವುದರಿಂದ ಬೆಳೆಯುತ್ತವೆ. ಅಂಥವು ಬಾಳೆ ಮೊದಲಾದ ಅನೇಕ ವನಸ್ಪತಿಗಳು ಇರುತ್ತವೆ. ಅವುಗಳಿಗೆ ಮೂಲವೇ ಬೀಜವಿದೆ. ಮೂಲದಿಂದಲೇ ಉತ್ಪನ್ನವಾಗುತ್ತವೆ ಆದುದರಿಂದ ಇವುಗಳ ಮೂಲವನ್ನೇ ಬೀಜವೆಂದು ಹೇಳಲಾಗುತ್ತದೆ.

ಅದೆಷ್ಟೋ ವನಸ್ಪತಿಗಳು ಪರ್ವದಿಂದಲೇ ಉತ್ಪನ್ನವಾಗುತ್ತವೆ. ಪರ್ವಗಂಟನ್ನು ಭೂಮಿಯಲ್ಲಿ ನೆಡುವುದರಿಂದ ಮತ್ತೆ ಅಂಥ ವನಸ್ಪತಿಗಳಾಗುತ್ತವೆ. ಕಬ್ಬು,  ಬಿದಿರು ಮೊದಲಾದವುಗಳ ಬೀಜವು ಪರ್ವವೇ ಇರುತ್ತದೆ, ಅದರಿಂದ ಇವುಗಳನ್ನು ಪರ್ವ ಬೀಜವೆಂದು ಹೇಳಿದ್ದಾರೆ.

ಅದೆಷ್ಟೋ ವನಸ್ಪತಿಗಳು ಕಂದವನ್ನು ನೆಡುವುದರಿಂದಲೇ ಹೊಸ ವನಸ್ಪತಿಗಳಾಗುತ್ತವೆ ಅವುಗಳನ್ನು ಕಂದವೆಂದು ಹೇಳುತ್ತಾರೆ. ಭೂಮಿಯಲ್ಲಿಯೇ ಬೆಳೆಯುವಂಥ ಶುಂಠಿ, ಅರಿಷಿಣ, ಗೆಣಸು, ಬೆಳ್ಳೊಳ್ಳಿ ಮೊದಲಾದವುಗಳು ಕಂದದಿಂದಲೇ ಉತ್ಪನ್ನವಾಗುತ್ತವೆ. ಆದುದರಿಂದ ಇವುಗಳನ್ನು ಕಂದ ಬೀಜವೆನ್ನುತ್ತಾರೆ.

ಅದೆಷ್ಟೋ ವನಸ್ಪತಿಗಳು ಸ್ಕಂಧ ಅರ್ಥಾತ್ ಶಾಖೆ, ಚಿಕ್ಕ ದೊಡ್ಡ ಶಾಖೆಗಳನ್ನು ತುಂಡರಿಸಿ ಭೂಮಿಯಲ್ಲಿ ನೆಡುವುದರಿಂದಲೇ ಅಂಥ ಹೊಸ ವನಸ್ಪತಿಗಳಾಗುತ್ತವೆ. ಗುಲಾಬಿ, ಮಲ್ಲಿಗೆ, ಅಮೃತ ಬಳ್ಳಿ ಮೊದಲಾದ ವನಸ್ಪತಿಗಳು ಸ್ಕಂಧ ಬೀಜವಿವೆ.

ಅದೆಷ್ಟೋ ವನಸ್ಪತಿಗಳು ಬೀಜದ ಕಾರಣದಿಂದಲೇ ಉತ್ಪನ್ನವಾಗುತ್ತವೆ, ಬೀಜವಿಲ್ಲದೇ ಉತ್ಪನ್ನವಾಗುವುದಿಲ್ಲ. ಗೋದಿ, ಭತ್ತ ಮೊದಲಾದ ಧಾನ್ಯಗಳು ಬೀಜದಿಂದಲೇ ಉತ್ಪನ್ನವಾಗುತ್ತವೆ. ಇವುಗಳ ಬೀಜಗಳು ಧಾನ್ಯಾದಿಗಳಿವೆ.

ಅದೆಷ್ಟೋ ವನಸ್ಪತಿಗಳು ಉಪರ್ಯುಕ್ತ ಯಾವುದೇ ಕಾರಣವಿಲ್ಲದೆ ಉತ್ಪನ್ನವಾಗುತ್ತವೆ. ಬೀಜವಿಲ್ಲದೆ ಸಹಜವಾಗಿಯೇ ಉತ್ಪನ್ನವಾಗುತ್ತವೆ. ಹುಲ್ಲು, ಕಸ, ಔಷಧೀಯ ಸಸ್ಯಗಳು ಮೊದಲಾದ ವನಸ್ಪತಿಗಳ ಉತ್ಪತ್ತಿಯ ಕಾರಣವು ಬೀಜಾದಿಗಳಿರುವುದಿಲ್ಲ. ಸಮ್ಮೂರ್ಚ್ಛನತ್ವವೇ ಇವುಗಳಲ್ಲಿ ಬೀಜವಿದೆ.

ಈ ಪ್ರಕಾರ ವನಸ್ಪತಿಗಳ ಉತ್ಪತ್ತಿಯ ಏಳು ಭೇದಗಳನ್ನು ಹೇಳಲಾಯಿತು.

ಈ ಪ್ರಕಾರ ಶ್ರೀ ಸುದೃಷ್ಟಿ ತರಂಗಿಣಿ ಎಂಬ ಹೆಸರಿನ ಗ್ರಂಥದಲ್ಲಿ ಜೀವತತ್ತ್ವದ ವರ್ಣನೆಯೊಳಗೆ ಸಾಮಾನ್ಯ ಗುಣಸ್ಥಾನದಲ್ಲಿ ಹದಿನಾಲ್ಕು ಪ್ರರೂಪಣೆ, ಸಮುದ್ಘಾತದ ಲಕ್ಷಣ ಹಾಗೂ ವನಸ್ಪತಿಗಳ ಉತ್ಪತ್ತಿಯ ಏಳು ಭೇದ ಇತ್ಯಾದಿಗಳ ಕಥನ ಮಾಡುವಂಥ ಆರನೆಯ ಪರ್ವವು ಪೂರ್ಣವಾಯಿತು.

★★★★★

## ೭ : ಏಳನೆಯ ಪರ್ವ

## ಭ್ರಮೆಯ ನಿವಾರಕ - ತತ್ತ್ವಜ್ಞಾನ

ಈಗ ಗುಣಸ್ಥಾನ ಸಂಬಂಧದ ಜೀವರುಗಳ ಸಂಖ್ಯೆಯನ್ನು ಹೇಳಲಾಗುತ್ತದೆ. ಅಲ್ಲಿ ಪ್ರಥಮದಲ್ಲಿಯೇ ಮಿಥ್ಯಾತ್ವೀ ಜೀವಗಳ ಸಂಖ್ಯೆಯನ್ನು ಹೇಳುತ್ತಾರೆ.

**ಥಾವರ ಮಿಚ್ಛ ಅಣಂತೋ, ವಿಕಲ ತ್ತಿಯ ಸವ್ವ ಬಿಣಸಂಖಾ ।**

**ದೇವ ಅಸಂಖಾ ಣಾರಯ, ಣರ ಸಂಖ ಭಾಸಿಯಂ ದೇವ ॥೧೫॥**

**ಗಾಥಾರ್ಥ :-** ಸ್ಥಾವರ, ಏಕೇಂದ್ರಿಯ, ಮಿಥ್ಯಾದೃಷ್ಟಿಗಳ ಸಂಖ್ಯೆಯು ಅನಂತವಿದೆ. ವಿಕಲತ್ರಯ ಮಿಥ್ಯಾದೃಷ್ಟಿಗಳ ಸಂಖ್ಯೆಯು ಅಸಂಖ್ಯಾತವಿದೆ. ಮಿಥ್ಯಾದೃಷ್ಟಿ ದೇವಗಳು ಅಸಂಖ್ಯಾತರಿದ್ದಾರೆ. ಮಿಥ್ಯಾದೃಷ್ಟಿ ನಾರಕಿಗಳು ಅಸಂಖ್ಯಾತರಿದ್ದಾರೆ. ಮಿಥ್ಯಾದೃಷ್ಟಿ ಮನುಷ್ಯರು ಸಂಖ್ಯಾತರಿದ್ದಾರೆ - ಈ ಪ್ರಕಾರ ನಾಲ್ಕು ಗತಿಗಳ ಸಂಬಂಧದಲ್ಲಿ ಮಿಥ್ಯಾದೃಷ್ಟಿಗಳ ಪ್ರಮಾಣ ಹೇಳಿದ್ದಾರೆ.

**ಭಾವಾರ್ಥ :-** ಪಂಚ ಸ್ಥಾವರಗಳಿವೆ, ಅವುಗಳಲ್ಲಿ ಅಗ್ನಿಕಾಯಿಕ ಜೀವಗಳು ಎಲ್ಲಕ್ಕಿಂತ ಕಡಿಮೆಯೆಂದು ತಿಳಿಯುವುದು. ಅವು ಕೂಡ ಇಂಥ ಅಸಂಖ್ಯಾತ ಲೋಕಗಳ ಎಷ್ಟು ಪ್ರದೇಶವಿವೆ, ಅಷ್ಟು ಇವೆ. ಅಗ್ನಿಕಾಯಿಕಕ್ಕಿಂತ ವಾಯುಕಾಯಿಕ ಜೀವಗಳ ಸಂಖ್ಯೆಯು ಅಸಂಖ್ಯಾತ ಅಧಿಕ ಇದೆ. ಅಗ್ನಿಕಾಯಿಕದ ಅಸಂಖ್ಯಾತದ ಒಂದು ಭಾಗ ಕಡಿಮೆ ಎರಡು ಇಂದ್ರಿಯ ಜೀವಗಳಿವೆ. ಎರಡು ಇಂದ್ರಿಯಗಳಿಗಿಂತ ಅಸಂಖ್ಯಾತ ಕಡಿಮೆ ಮೂರು ಇಂದ್ರಿಯಗಳಿವೆ. ಮೂರು ಇಂದ್ರಿಯಗಳಿಗಿಂತ ನಾಲ್ಕು ಇಂದ್ರಿಯಗಳು ಅಸಂಖ್ಯಾತ ಕಡಿಮೆ ಇವೆ, ನಾಲ್ಕು ಇಂದ್ರಿಯಗಳಿಗಿಂತ ಪಂಚೇಂದ್ರಿಯಗಳು ಅಸಂಖ್ಯಾತ ಕಡಿಮೆ ಇವೆ. - ಈ ಪ್ರಕಾರ ಪಂಚೇಂದ್ರಿಯಗಳು ಎಲ್ಲಕ್ಕಿಂತ ಕಡಿಮೆ ಇವೆ; ಅವುಗಳಲ್ಲಿಯೂ ಮಿಥ್ಯಾತ್ವಿಗಳು ಬಹಳಷ್ಟು ಇವೆ.

ಐದೂ ಸ್ಥಾವರಗಳಲ್ಲಿ ಎಷ್ಟು ಜೀವಗಳನ್ನು ಹೇಳಿದ್ದಾರೆ, ಅವುಗಳಿಂದ ಅನಂತ ಗುಣಿತ ವನಸ್ಪತಿ ಜೀವಿಗಳ ಪ್ರಮಾಣವೆಂದು ತಿಳಿಯುವುದು. ಈ ಐದೂ ಸ್ಥಾವರಗಳಲ್ಲಿ ಸೂಕ್ಷ್ಮ ಜೀವರಾಶಿಯು ಬಹಳಷ್ಟು ಇದ್ದು ಬಾದರಗಳು ಕಡಿಮೆ ಇವೆ; ಇದರ ಕಾರಣವನ್ನು ಹೇಳುತ್ತಾರೆ - ಸೂಕ್ಷ್ಮ ಜೀವಗಳ ಕ್ಷೇತ್ರವಂತೂ ಸರ್ವಲೋಕವಿದೆ. ಸರ್ವಲೋಕವು ಸೂಕ್ಷ್ಮ ಪಂಚ ಸ್ಥಾವರಗಳಿಂದ ಜಲಘಟದ ಹಾಗೆ ತುಂಬಿಕೊಂಡಿದೆ.

ಬಾದರಗಳು ಆಶ್ರಯದಿಂದ ಇರುತ್ತವೆ ಹಾಗೂ ಆಶ್ರಯದ ಕ್ಷೇತ್ರವು ಅಲ್ಪವಿದೆ; ಆದುದರಿಂದ ಸೂಕ್ಷ್ಮ ಜೀವರಾಶಿಯು ಅಧಿಕವಿದೆ, ಬಾದರ ರಾಶಿಯು ಕಡಿಮೆ ಎಂದು ತಿಳಿಯುವುದು. ಈ ಸ್ಥಾವರ, ವಿಕಲತ್ರಯ ರಾಶಿಯಂತೂ ಮಿಥ್ಯಾತ್ವ ಸಮುದ್ರದಲ್ಲಿಯೇ ಮಗ್ನವಿದೆ. ನಾಲ್ಕು ಗತಿಗಳ ಸಂಬಂಧದಲ್ಲಿ ಪಂಚೇಂದ್ರಿಯಗಳಲ್ಲಿಯೂ ಮಿಥ್ಯಾತ್ವ ರಾಶಿಯು ಅಧಿಕವಿದೆ ಸಮ್ಯಗ್ದೃಷ್ಟಿಗಳು ಕಡಿಮೆ ಇದ್ದಾರೆ.

ಮುಂದಿನ ಗಾಥೆಯಲ್ಲಿ ಮನುಷ್ಯ ಗತಿಗೆ ಸಂಬಂಧಿಸಿದ ಸಾಸಾದನ, ಮಿಶ್ರ ಗುಣಸ್ಥಾನ, ಅವಿರತ ಸಮ್ಯಗ್ದೃಷ್ಟಿ ಹಾಗೂ ಪಂಚಮ, ಆರರಿಂದ ಹಿಡಿದು ಹದಿನಾಲ್ಕನೇ ಗುಣಸ್ಥಾನವರ್ತಿ ಜೀವರುಗಳ ಪ್ರಮಾಣ ಹೇಳುತ್ತಾರೆ.

**ಬಾವಣ ಇಕ ಸಯ ಚಉಕ್ಕೋ, ಸತ್ತಸಯ ತಿದಸ ಯ ಕೋಡೀಏ ।**

**ಸಾಸಾ ಮಿಸ್ಸಾ ಸಂಜಯ, ದೇಸ ಸಂಜಾಯ ಹೋಯ ಣರ ಭವ್ವಾ ॥೧೬॥**

**ಗಾಥಾರ್ಥ :-** ಭವ್ಯರಾಶಿ ಮನುಷ್ಯರಲ್ಲಿ - ಸಾಸಾದನ ಗುಣಸ್ಥಾನವರ್ತಿ ಮನುಷ್ಯರು ಐವತ್ತೆರಡು ಕೋಟಿ ಇದ್ದಾರೆ, ಮಿಶ್ರ ಗುಣಸ್ಥಾನವರ್ತಿ ಮನುಷ್ಯರು ಒಂದುನೂರಾ ನಾಲ್ಕು ಕೋಟಿ ಇದ್ದಾರೆ ಹಾಗೂ ಅಸಂಯತ ನಾಲ್ಕನೇ

ಗುಣಸ್ಥಾನವರ್ತಿ ಮನುಷ್ಯರು ಏಳು ನೂರು ಕೋಟಿ ಇದ್ದಾರೆ. ಪಂಚಮಗುಣಸ್ಥಾನವರ್ತಿ ಮನುಷ್ಯರು ಹದಿಮೂರು ಕೋಟಿ ಇದ್ದಾರೆ – ಈ ಪ್ರಕಾರ ಸಾಸಾದನದಿಂದ ಹಿಡಿದು ಪಂಚಮ ಗುಣಸ್ಥಾನವರ್ತಿ ಮನುಷ್ಯರ ಸಂಖ್ಯೆಯನ್ನು ಉತ್ಕೃಷ್ಟ ರೂಪದಿಂದ ಹೇಳಲಾಗಿದೆ, ಇದಕ್ಕಿಂತ ಅಧಿಕವಿರುವುದಿಲ್ಲ – ಎಂದು ತಿಳಿಯುವುದು. ಈ ಪ್ರಕಾರ ಮನುಷ್ಯರಲ್ಲಿ ಪಂಚಮ ಗುಣಸ್ಥಾನದವರೆಗಿನ ಜೀವರುಗಳ ಪ್ರಮಾಣ ಹೇಳಲಾಯಿತು.

ಈಗ ದೇವ, ನಾರಕಿ, ತಿರ್ಯಂಚಗಳಲ್ಲಿ ಸಾಸಾದನ, ಮಿಶ್ರ , ಅಸಂಯತರ ಪ್ರಮಾಣ ಹಾಗೂ ಪಂಚಮ ಗುಣಸ್ಥಾನವರ್ತಿ ತಿರ್ಯಂಚ ಮತ್ತು ಆರನೆಯ ಗುಣಸ್ಥಾನದಿಂದ ಹಿಡಿದು ಹದಿನಾಲ್ಕನೇ ಗುಣಸ್ಥಾನದವರೆಗಿನ ಮನುಷ್ಯರ ಪ್ರಮಾಣ ಹೇಳುತ್ತಾರೆ.

**ಸುರ ಪಸು ಣಾರಯ ಗತಯೋ, ಸಾಸಾ ಮಿಸ್ಸೋ ಅಸಂಜ ವಿಣ ಸಂಖಾ ।**
**ಅಸಂಖ ಪಸು ಅಣುವರತಿ, ಪಮತ್ತಾದೋ ಣೋ ಕೋಡಿ ತಿ ಊಣಂ ॥೧೭॥**

**ಗಾಥಾರ್ಥ :-** ದೇವ, ನಾರಕಿ, ತಿರ್ಯಂಚ – ಇವರು ಅಸಂಯತ ಸಮ್ಯಗ್ದೃಷ್ಟಿ, ಮಿಶ್ರ ಮತ್ತು ಸಾಸಾದನ ಹಾಗೂ ತಿರ್ಯಂಚ ದೇಶಸಂಯಮಿ – ಇವರೆಲ್ಲರೂ (ಪ್ರತಿಯೊಂದರಲ್ಲಿ) ಅಸಂಖ್ಯಾತ ಅಸಂಖ್ಯಾತವೆಂದು ತಿಳಿಯುವುದು. (ಮನುಷ್ಯರಲ್ಲಿ) ಪ್ರಮತ್ತರಿಂದ ಹಿಡಿದು ಅಯೋಗಿಯವರೆಗಿನ ಜೀವರುಗಳ ಪ್ರಮಾಣವು ಮೂರು ಕಡಿಮೆ ಒಂಭತ್ತು ಕೋಟಿ ಎಂದು ತಿಳಿಯುವುದು.

**ಭಾವಾರ್ಥ :-** ಮೂರು ಗತಿ ಸಂಬಂಧದ ಸಾಸಾದನ, ಮಿಶ್ರ, ಅಸಂಯಮಿ, ದೇಶಸಂಯಮಿ – ಇವರುಗಳ ಪ್ರಮಾಣದ ಅಧಿಕತೆ ಮತ್ತು ಹೀನತೆಯನ್ನು ಹೇಳುತ್ತಾರೆ – ಎಲ್ಲಕ್ಕಿಂತ ಅಧಿಕ ಸಮ್ಯಗ್ದೃಷ್ಟಿಗಳು ದೇವಗಳಲ್ಲಿ ಇದ್ದಾರೆ. ಅದು ಈ ಪ್ರಕಾರ – ಪ್ರಥಮ ಯುಗಲದಲ್ಲಿ ಸಮ್ಯಗ್ದೃಷ್ಟಿಗಳು ಎಲ್ಲಕ್ಕಿಂತ ಹೆಚ್ಚು ಅಸಂಖ್ಯಾತರಿದ್ದಾರೆ, ಅವರೆಲ್ಲರನ್ನು ಪಲ್ಯದ ಅಸಂಖ್ಯಾತದ ಒಂದು ಭಾಗವೆಂದು ತಿಳಿಯುವುದು. ಇದೇ ಯುಗಲದಲ್ಲಿ ಸಮ್ಯಗ್ದೃಷ್ಟಿಯಿಂದ ಅಸಂಖ್ಯಾತದ ಒಂದು ಭಾಗ ಇಲ್ಲಿಯ ಮಿಶ್ರ ಗುಣಸ್ಥಾನಿಗಳಿದ್ದಾರೆ, ಈ ಮಿಶ್ರದಿಂದ ಸಂಖ್ಯಾತದ ಒಂದು ಭಾಗದಷ್ಟು ಸಾಸಾದನಿಗಳಿದ್ದಾರೆ.

ಪ್ರಥಮ ಯುಗಲದ ಸಾಸಾದನಿಗಳಿಂದ ಎರಡನೇ ಯುಗಲದ ಸಮ್ಯಗ್ದೃಷ್ಟಿಗಳು ಅಸಂಖ್ಯಾತದ ಒಂದು ಭಾಗದಷ್ಟಿದ್ದಾರೆ. ಇದೇ ಸಮ್ಯಗ್ದೃಷ್ಟಿಗಳಿಂದ ಅಸಂಖ್ಯಾತದ ಒಂದು ಭಾಗ ಇಲ್ಲಿಯ ಮಿಶ್ರ ಗುಣಸ್ಥಾನಿಗಳಿದ್ದಾರೆ. ಈ ಮಿಶ್ರದಿಂದ ಸಂಖ್ಯಾತದ ಒಂದು ಭಾಗ ಇದರಲ್ಲಿ ಸಾಸಾದನಿಗಳಿದ್ದಾರೆ.

ಎರಡನೇ ಯುಗಲದ ಸಾಸಾದನಿಗಳಿಂದ ಅಸಂಖ್ಯಾತದ ಒಂದು ಭಾಗದಷ್ಟು ಮೂರನೇ ಯುಗಲದಲ್ಲಿ ಸಮ್ಯಗ್ದೃಷ್ಟಿಗಳ ಪ್ರಮಾಣ ಇದೆ. ಈ ಸಮ್ಯಗ್ದೃಷ್ಟಿಗಳಿಂದ ಅಸಂಖ್ಯಾತದ ಒಂದು ಭಾಗ ಇಲ್ಲಿಯ ಮಿಶ್ರರಿದ್ದಾರೆ. ಇದೇ ಮಿಶ್ರರಿಂದ ಸಂಖ್ಯಾತದ ಒಂದು ಭಾಗ ಸಾಸಾದನಿಗಳಿದ್ದಾರೆ.

ಮೂರನೆಯ ಯುಗಲದಲ್ಲಿ ಸಾಸಾದನಿಗಳಿಂದ ಅಸಂಖ್ಯಾತದ ಒಂದು ಭಾಗದಷ್ಟು ನಾಲ್ಕನೇ ಯುಗಲದ ಸಮ್ಯಗ್ದೃಷ್ಟಿಗಳಿದ್ದಾರೆ. ಇವರಿಂದ ಅಸಂಖ್ಯಾತದ ಒಂದು ಭಾಗ ಮಿಶ್ರ ಗುಣಸ್ಥಾನಿಗಳಿದ್ದಾರೆ, ಮಿಶ್ರದಿಂದ ಸಂಖ್ಯಾತದ ಒಂದು ಭಾಗ ಸಾಸಾದನಿಗಳಿದ್ದಾರೆ.

ನಾಲ್ಕನೆಯ ಯುಗಲದ ಸಾಸಾದನಿಗಳಿಂದ ಅಸಂಖ್ಯಾತದ ಒಂದು ಭಾಗದಷ್ಟು ಐದನೇ ಯುಗಲದಲ್ಲಿ ಸಮ್ಯಗ್ದೃಷ್ಟಿಗಳಿದ್ದಾರೆ. ಈ ಸಮ್ಯಗ್ದೃಷ್ಟಿಗಳಿಂದ ಅಸಂಖ್ಯಾತದ ಒಂದು ಭಾಗ ಮಿಶ್ರ ಗುಣಸ್ಥಾನಿಗಳಿದ್ದಾರೆ. ಮಿಶ್ರದಿಂದ ಸಂಖ್ಯಾತದ ಒಂದು ಭಾಗ ಇಲ್ಲಿಯೇ ಸಾಸಾದನಿಗಳಿದ್ದಾರೆ.

ಐದನೆಯ ಯುಗಲದ ಸಾಸಾದನಿಗಳಿಂದ ಆರನೇ ಯುಗಲದ ಸಮ್ಯಗ್ದೃಷ್ಟಿಗಳು ಅಸಂಖ್ಯಾತ ಗುಣಿತ ಕಡಿಮೆ ಇದ್ದಾರೆ, ಈ ಸಮ್ಯಗ್ದೃಷ್ಟಿಗಳಿಂದ ಅಸಂಖ್ಯಾತದ ಒಂದು ಭಾಗ ಮಿಶ್ರ ಗುಣಸ್ಥಾನಿಯಿದ್ದಾರೆ, ಮಿಶ್ರದಿಂದ ಸಂಖ್ಯಾತದ ಒಂದು ಭಾಗ ಇಲ್ಲಿಯೇ ಸಾಸಾದನಿಗಳಿದ್ದಾರೆ.

ಆರನೆಯ ಯುಗಲದ ಸಾಸಾದನಿಗಳಿಂದ ಅಸಂಖ್ಯಾತದ ಒಂದು ಭಾಗದಷ್ಟು ಜ್ಯೋತಿಷ ದೇವಗಳಲ್ಲಿ ಸಮ್ಯಗ್ದೃಷ್ಟಿಗಳಿದ್ದಾರೆ, ಇವರಿಂದ ಅಸಂಖ್ಯಾತದ ಒಂದು ಭಾಗ ಮಿಶ್ರ ಗುಣಸ್ಥಾನಿಯಿದ್ದಾರೆ, ಮಿಶ್ರದಿಂದ ಸಂಖ್ಯಾತದ ಒಂದು ಭಾಗ ಜ್ಯೋತಿಷಿಗಳಲ್ಲಿ ಸಾಸಾದನಿಗಳಿದ್ದಾರೆ.

ಜ್ಯೋತಿಷಿಗಳ ಸಾಸಾದನಿಗಳಿಂದ ಅಸಂಖ್ಯಾತದ ಒಂದು ಭಾಗ ವ್ಯಂತರರಲ್ಲಿ ಸಮ್ಯಗ್ದೃಷ್ಟಿಗಳಿದ್ದಾರೆ. ಇಲ್ಲಿಯ ಸಮ್ಯಗ್ದೃಷ್ಟಿಗಳಿಂದ ಅಸಂಖ್ಯಾತದ ಒಂದು ಭಾಗ ಮಿಶ್ರರಿದ್ದಾರೆ, ಮಿಶ್ರದಿಂದ ಸಂಖ್ಯಾತದ ಒಂದು ಭಾಗ ಸಾಸಾದನಿ ವ್ಯಂತರರಿದ್ದಾರೆ.

ಸಾಸಾದನಿ ವ್ಯಂತರರಿಂದ ಅಸಂಖ್ಯಾತದ ಒಂದು ಭಾಗ ಭವನವಾಸಿಗಳಲ್ಲಿ ಸಮ್ಯಗ್ದೃಷ್ಟಿಗಳಿದ್ದಾರೆ, ಇಲ್ಲಿಯ ಸಮ್ಯಗ್ದೃಷ್ಟಿಗಳಿಂದ ಅಸಂಖ್ಯಾತದ ಒಂದು ಭಾಗ ಮಿಶ್ರರಿದ್ದಾರೆ, ಮಿಶ್ರರಿಂದ ಸಂಖ್ಯಾತದ ಒಂದು ಭಾಗ ಭವನವಾಸಿ ಸಾಸಾದನಿ ಇದ್ದಾರೆ.

ಸಾಸಾದನಿ ಭವನವಾಸಿಗಳಿಂದ ಅಸಂಖ್ಯಾತದ ಒಂದು ಭಾಗ ತಿರ್ಯಂಚಗಳಲ್ಲಿ ಸಮ್ಯಗ್ದೃಷ್ಟಿ ಇವೆ. ಸಮ್ಯಗ್ದೃಷ್ಟಿಗಳಿಂದ ಅಸಂಖ್ಯಾತದ ಒಂದು ಭಾಗ ಮಿಶ್ರ ಗುಣಸ್ಥಾನಿ ತಿರ್ಯಂಚಗಳಿವೆ, ಮಿಶ್ರದಿಂದ ಸಂಖ್ಯಾತದ ಒಂದು ಭಾಗ ಸಾಸಾದನಿ ತಿರ್ಯಂಚವಿವೆ.

ಸಾಸಾದನಿ ತಿರ್ಯಂಚಗಳಿಂದ ಅಸಂಖ್ಯಾತದ ಒಂದು ಭಾಗ – ಅಸಂಖ್ಯಾತ ದೇಶಸಂಯಮಿ ತಿರ್ಯಂಚಗಳಿವೆ.

ಎಷ್ಟು ದೇಶಸಂಯಮಿ ತಿರ್ಯಂಚಗಳಿವೆ, ಅಷ್ಟೇ ಪ್ರಥಮ ನರಕದ ಸಮ್ಯಗ್ದೃಷ್ಟಿ ಇದ್ದಾರೆ. ಇವರಿಂದ ಅಸಂಖ್ಯಾತದ ಒಂದು ಭಾಗ ಮಿಶ್ರ ಸಮ್ಯಗ್ದೃಷ್ಟಿ ಇದ್ದಾರೆ. ಈ ಮಿಶ್ರರಿಂದ ಸಂಖ್ಯಾತದ ಒಂದು ಭಾಗ ಪ್ರಥಮ ನರಕದ ಸಾಸಾದನಿಗಳಿದ್ದಾರೆ.

ಪ್ರಥಮ ನರಕದ ಸಾಸಾದನಿಗಳಿಂದ ಅಸಂಖ್ಯಾತದ ಒಂದು ಭಾಗ ಎರಡನೇ ನರಕದ ಸಮ್ಯಗ್ದೃಷ್ಟಿಗಳಿದ್ದಾರೆ. ಇವರಿಂದ ಅಸಂಖ್ಯಾತದ ಒಂದು ಭಾಗ ಮಿಶ್ರ ಸಮ್ಯಕ್ತ್ವಿ ಇದ್ದಾರೆ. ಇದೇ ಮಿಶ್ರರಿಂದ ಸಂಖ್ಯಾತದ ಒಂದು ಭಾಗದಷ್ಟು ಸಾಸಾದನಿಗಳಿದ್ದಾರೆ.

ಎರಡನೇ ಪೃಥ್ವಿಯ ಸಾಸಾದನಿಗಳಿಂದ ಅಸಂಖ್ಯಾತದ ಒಂದು ಭಾಗ ಮೂರನೇ ನರಕದಲ್ಲಿ ಸಮ್ಯಗ್ದೃಷ್ಟಿಗಳಿದ್ದಾರೆ. ಈ ಸಮ್ಯಗ್ದೃಷ್ಟಿಗಳಿಂದ ಅಸಂಖ್ಯಾತದ ಒಂದು ಭಾಗ ಮಿಶ್ರರಿದ್ದಾರೆ. ಮಿಶ್ರರಿಂದ ಇಲ್ಲಿಯ ಸಾಸಾದನಿಗಳು ಸಂಖ್ಯಾತದ ಒಂದು ಭಾಗದಷ್ಟಿದ್ದಾರೆ.

ಮೂರನೆಯ ನರಕದ ಸಾಸಾದನಿಗಳಿಂದ ಅಸಂಖ್ಯಾತದ ಒಂದು ಭಾಗ ನಾಲ್ಕನೇ ನರಕದ ಸಮ್ಯಗ್ದೃಷ್ಟಿಗಳಿದ್ದಾರೆ. ಈ ಸಮ್ಯಗ್ದೃಷ್ಟಿಗಳಿಂದ ಅಸಂಖ್ಯಾತದ ಒಂದು ಭಾಗ ಇಲ್ಲಿಯೇ ಮಿಶ್ರರಿದ್ದಾರೆ. ಇದೇ ಮಿಶ್ರರಿಂದ ಸಂಖ್ಯಾತದ ಒಂದು ಭಾಗ ಸಾಸಾದನಿಗಳಿದ್ದಾರೆ.

ನಾಲ್ಕನೇ ನರಕದ ಸಾಸಾದನಿಗಳಿಂದ ಅಸಂಖ್ಯಾತದ ಒಂದು ಭಾಗ ಐದನೇ ನರಕದ ಸಮ್ಯಗ್ದೃಷ್ಟಿಗಳಿದ್ದಾರೆ. ಇವರಿಂದ ಅಸಂಖ್ಯಾತದ ಒಂದು ಭಾಗ ಮಿಶ್ರ ಸಮ್ಯಕ್ತ್ವಿಗಳಿದ್ದಾರೆ. ಮಿಶ್ರರಿಂದ ಸಂಖ್ಯಾತದ ಒಂದು ಭಾಗ ಸಾಸಾದನಿಗಳಿದ್ದಾರೆ.

ಐದನೆಯ ನರಕದ ಸಾಸಾದನಿಗಳಿಂದ ಅಸಂಖ್ಯಾತದ ಒಂದು ಭಾಗ ಆರನೆಯ ನರಕದ ಸಮ್ಯಗ್ದೃಷ್ಟಿಗಳಿದ್ದಾರೆ. ಇವರಿಂದ ಅಸಂಖ್ಯಾತದ ಒಂದು ಭಾಗದಷ್ಟು ಇಲ್ಲಿಯೇ ಮಿಶ್ರರಿದ್ದಾರೆ. ಇವರಿಂದ ಸಂಖ್ಯಾತದ ಒಂದು ಭಾಗ ಸಾಸಾದನಿಗಳಿದ್ದಾರೆ.

ಆರನೆಯ ನರಕದ ಸಾಸಾದನಿಗಳಿಂದ ಏಳನೆಯ ನರಕದ ಸಮ್ಯಗ್ದೃಷ್ಟಿಗಳು ಅಸಂಖ್ಯಾತದ ಒಂದು

ಭಾಗದಷ್ಟಿದ್ದಾರೆ. ಈ ಸಮ್ಯಕ್ತ್ವಿಗಳಿಂದ ಅಸಂಖ್ಯಾತದ ಒಂದು ಭಾಗದಷ್ಟು ಇಲ್ಲಿಯ ಮಿಶ್ರ ಸಮ್ಯಕ್ತ್ವಿಗಳಿದ್ದಾರೆ. ಮಿಶ್ರರ ಸಂಖ್ಯಾತದ ಒಂದು ಭಾಗದಷ್ಟು ಸಾಸಾದನಿಗಳಿದ್ದಾರೆ.

ಇಲ್ಲಿಯವರೆಗೆ ಆರು ಯುಗಲ, ಭವನತ್ರಿಕ, ಪಂಚೇಂದ್ರಿಯ ತಿರ್ಯಂಚ ಹಾಗೂ ಏಳೂ ನರಕದ ಸಮ್ಯಗ್ದೃಷ್ಟಿಗಳಿಂದ ಅಸಂಖ್ಯಾತದ ಒಂದು ಭಾಗ ಮಿಶ್ರ ಹಾಗೂ ಮಿಶ್ರದಿಂದ ಸಂಖ್ಯಾತದ ಒಂದು ಭಾಗ ಸಾಸಾದನಿಗಳ ಇಂಥ ಅನುಕ್ರಮವನ್ನು ಹೇಳಲಾಯಿತು.

ಏಳನೇ ಯುಗಲದಿಂದ ಮೇಲೆ ಮುಂದಕ್ಕೆ ಸಂಖ್ಯಾತ ಭಾಗದ ಅನುಕ್ರಮ ತಿಳಿಯುವುದು.

ಏಳನೇ ನರಕದ ಸಾಸಾದನಿಗಳಿಂದ ಅಸಂಖ್ಯಾತದ ಒಂದು ಭಾಗ ಏಳನೇ ಯುಗಲದ ಅಸಂಯತದ ಸಮ್ಯಗ್ದೃಷ್ಟಿ ದೇವಗಳಿದ್ದಾರೆ. ಏಳನೇ ಯುಗಲದ ಸಮ್ಯಗ್ದೃಷ್ಟಿಗಳಿಂದ ಸಂಖ್ಯಾತದ ಒಂದು ಭಾಗದಷ್ಟು ಎಂಟನೇ ಯುಗಲದ ಅಸಂಯತ ಸಮ್ಯಗ್ದೃಷ್ಟಿಗಳ ಪ್ರಮಾಣವಿದೆ. ಎಂಟನೇ ಯುಗಲದ ಸಮ್ಯಗ್ದೃಷ್ಟಿಗಳಿಂದ ಸಂಖ್ಯಾತದ ಒಂದು ಭಾಗದಷ್ಟು ಮೊದಲನೆಯ ಗ್ರೈಯವೇಕದ ಅಸಂಯತ ಸಮ್ಯಗ್ದೃಷ್ಟಿಗಳಿದ್ದಾರೆ; ಇದೇ ಕ್ರಮದಿಂದ ಒಂಭತ್ತನೇ ಗ್ರೈವೇಯಕದವರೆಗಿನ ಅಸಂಯತ ಸಮ್ಯಗ್ದೃಷ್ಟಿಗಳ ಪ್ರಮಾಣ ಬರುವವರೆಗೆ ತೆಗೆದುಕೊಂಡು ಹೋಗಬೇಕಾಗುವುದು. ಒಂಭತ್ತು ಗ್ರೈವೇಯಕದ ಮೇಲೆ ಮಿಥ್ಯಾತ್ವಿಗಳಿರುವುದಿಲ್ಲ, ಎಲ್ಲರೂ ಸಮ್ಯಗ್ದೃಷ್ಟಿಗಳೇ ಇರುತ್ತಾರೆ. ಒಂಭತ್ತನೇ ಗ್ರೈವೇಯಕದ ಸಮ್ಯಗ್ದೃಷ್ಟಿಗಳ ಸಂಖ್ಯಾತದ ಒಂದು ಭಾಗದಷ್ಟು ಅನುದಿಶೆಗಳ ಅಸಂಯತ ಸಮ್ಯಗ್ದೃಷ್ಟಿಗಳಿದ್ದಾರೆ ಹಾಗೂ ಇವರುಗಳ ಸಂಖ್ಯಾತದ ಒಂದು ಭಾಗದಷ್ಟು ವಿಜಯ, ವೈಜಯಂತ, ಜಯಂತ ಮತ್ತು ಅಪರಾಜಿತ ಈ ನಾಲ್ಕು ಅನುತ್ತರಗಳ ಅಸಂಯತ ಸಮ್ಯಗ್ದೃಷ್ಟಿಗಳಿದ್ದಾರೆ. ಇವರ ಅಸಂಖ್ಯಾತದ ಒಂದು ಭಾಗ ಆನತ-ಪ್ರಾಣತವೆಂಬ ಹೆಸರಿನ ಏಳನೇ ಯುಗಲದ ಮಿಶ್ರ(ಸಮ್ಯಗ್ಮಿಥ್ಯಾದೃಷ್ಟಿ) ದೇವಗಳಿದ್ದಾರೆ - ಇದೇ ಕ್ರಮದಿಂದ ಒಂಭತ್ತು ಗ್ರೈವೇಯಕದವರೆಗಿನ ಮಿಶ್ರ(ಸಮ್ಯಗ್ಮಿಥ್ಯಾದೃಷ್ಟಿ) ದೇವಗಳವರೆಗೆ ತಿಳಿದುಕೊಳ್ಳುವುದು. ಇವರುಗಳ ಸಂಖ್ಯಾತದ ಒಂದು ಭಾಗದಷ್ಟು ಏಳನೇ ಯುಗಲದ ಸಾಸಾದನ ಸಮ್ಯಗ್ದೃಷ್ಟಿಗಳಿದ್ದಾರೆ. ಇದೇ ಪ್ರಕಾರ ಎಂಟನೇ ಯುಗಲದಿಂದ ಹಿಡಿದು ಒಂಭತ್ತು ಗ್ರೈವೇಯಕದವರೆಗೆ ಸಾಸಾದನ ಸಮ್ಯಗ್ದೃಷ್ಟಿಗಳವರೆಗೆ ಹೋಗಬೇಕಾಗುವುದು ಮತ್ತು ಒಂಭತ್ತು ಗ್ರೈವೇಯಕದ ಸಾಸಾದನ ಸಮ್ಯಗ್ದೃಷ್ಟಿಗಳ ಅಸಂಖ್ಯಾತದ ಒಂದು ಭಾಗದಷ್ಟು ಸರ್ವಾರ್ಥಸಿದ್ಧಿ, ವಿಮಾನವಾಸಿ ದೇವಗಳಿದ್ದಾರೆ. ಅವರೆಲ್ಲರೂ ಸಂಖ್ಯಾತವೆಂದು ತಿಳಿಯುವುದು. ಅವರೆಲ್ಲರೂ ಎರಡೂವರೆ ದ್ವೀಪದಲ್ಲಿ ವಾಸಮಾಡುವಂಥ ಮನುಷ್ಯರಿಂದ ಒಂಭತ್ತುಗುಣಿತ (ಮನುಷ್ಯಿನಿಗಳಿಂದ ಮೂರು ಗುಣಿತ ಅಥವಾ ಏಳು ಗುಣಿತ) ಇದ್ದಾರೆ - ಈಪ್ರಕಾರ ನಾಲ್ಕು ಗತಿಗೆ ಸಂಬಂಧಿಸಿದ  ಸಮ್ಯಗ್ದೃಷ್ಟಿ, ಮಿಶ್ರ , ಸಾಸಾದನ ಮತ್ತು ದೇಶ ಸಂಯಮಿಗಳ ಸಾಮಾನ್ಯ ಪ್ರಮಾಣ ಹೇಳಲಾಯಿತು.

ಈಗ ಗಾಥೆಯಲ್ಲಿ ಹೇಳಿದುದರ ಅನುಸಾರ ಆರರಿಂದ ಹದಿನಾಲ್ಕನೇ ಗುಣಸ್ಥಾನವರ್ತಿಗಳು ಮೂರು ಕಡಿಮೆ ಒಂಭತ್ತುಕೋಟಿ ಸಕಲ ಸಂಯಮಿಗಳ ಪ್ರಮಾಣವನ್ನು ಗುಣಸ್ಥಾನದ ಮುಖ್ಯತೆಯಿಂದ ಹೇಳುತ್ತಾರೆ.

ಆರನೆಯ ಗುಣಸ್ಥಾನವರ್ತಿ ಯತಿಗಳ ಪ್ರಮಾಣವು ಐದು ಕೋಟಿ ತೊಂಭತ್ತುಮೂರು ಲಕ್ಷ ತೊಂಭತ್ತೆಂಟು ಸಾವಿರದ ಎರಡುನೂರಾ ಆರು (೫೯೩೯೮೨೦೬) ಎಂದು ತಿಳಿಯುವುದು. ಅಪ್ರಮತ್ತ ಏಳನೇ ಗುಣಸ್ಥಾನವರ್ತಿ ಮುನಿಗಳ ಪ್ರಮಾಣವು ಎರಡು ಕೋಟಿ ತೊಂಭತ್ತಾರು ಲಕ್ಷ ತೊಂಭತ್ತೊಂಭತ್ತು ಸಾವಿರದ ಒಂದು ನೂರಾ ಮೂರು (೨೯೬೯೯೧೦೩) ಎಂದು ತಿಳಿಯುವುದು.

ನಾಲ್ಕು ಉಪಶಮ ಶ್ರೇಣಿಗಳ ಗುಣಸ್ಥಾನವುಳ್ಳ ಜೀವಗಳು ಹನ್ನೊಂದುನೂರಾ ತೊಂಭತ್ತಾರೆಂದು (೧೧೯೬) ತಿಳಿಯುವುದು. ಹಾಗೂ ನಾಲ್ಕೂ ಕ್ಷಪಕಶ್ರೇಣಿ ಗುಣಸ್ಥಾನದ ಜೀವರುಗಳು ಉಪಶಮ ಶ್ರೇಣಿಯವರಿಗಿಂತ ಎರಡು ಪಟ್ಟು ಅರ್ಥಾತ್ ಇಪ್ಪತ್ಮೂರುನೂರಾ ತೊಂಭತ್ತೆರಡು (೨೩೯೨) ಎಂದು ತಿಳಿಯುವುದು.

ಹದಿಮೂರನೆಯ ಸಯೋಗ ಗುಣಸ್ಥಾನವರ್ತಿ ಜೀವರುಗಳ ಪ್ರಮಾಣವು ಎಂಟು ಲಕ್ಷ ತೊಂಭತ್ತೆಂಟು ಸಾವಿರದ

ಐದೂನೂರಾ ಎರಡು (೮೯೮೫೦೨) ಎಂದು ತಿಳಿಯುವುದು. ಹದಿನಾಲ್ಕನೆಯ ಗುಣಸ್ಥಾನದ ಕುರಿತಾಗಿ ಜೀವರುಗಳ ಪ್ರಮಾಣವು ಐದುನೂರಾ ತೊಂಭತ್ತೆಂಟು (೫೯೮) ಎಂದು ತಿಳಿಯುವುದು.

ಈ ಪ್ರಕಾರ ಪ್ರಮತ್ತ(ನಗ್ನ ಮುನಿ)ದಿಂದ ಹಿಡಿದು ಅಯೋಗ (ಜಿನಕೇವಲಿ)ವರೆಗೆ ಎಂಟು ಕೋಟಿ ತೊಂಭತ್ತೊಂಭತ್ತು ಲಕ್ಷ ತೊಂಭತ್ತೊಂಭತ್ತು ಸಾವಿರದ ಒಂಭೈನೂರಾ ತೊಂಭತ್ತೇಳು (೮೯೯೯೯೯೯೭) ಒಟ್ಟು ಸಂಖ್ಯೆ ತಿಳಿಯುವುದು. ಈ ಅನೇಕ ಜೀವಗಳು ವಿಭಿನ್ನ ಕಾಲದ ಅಪೇಕ್ಷೆಯಿಂದ ಉತ್ಕೃಷ್ಟ ರೂಪದಲ್ಲಿ ಹೇಳಿದ್ದಾರೆ. ಇದಕ್ಕಿಂತ ಅಧಿಕ ಪ್ರಮಾಣವಿರುವುದಿಲ್ಲ. - ಎಂದು ನಿಶ್ಚಯ ಶ್ರದ್ಧೆ ಮಾಡುವುದು.

ಆರು ತಿಂಗಳು ಎಂಟು ಸಮಯದಲ್ಲಿ ಆರುನೂರಾ ಎಂಟು ಜೀವಗಳು ಮೋಕ್ಷಕ್ಕೆ ಹೋಗುತ್ತವೆ. - ಈ ಪರಂಪರೆಯು ಅನಾದಿಯಿಂದ ನಡೆಯುತ್ತ ಬರುತ್ತಲಿದೆ. ಕಡಿಮೆ ಅಥವಾ ಹೆಚ್ಚು ಹೋಗುವುದಿಲ್ಲ. ಎಷ್ಟೋ ಅನಂತ ಕಾಲವು ವ್ಯತೀತವಾಗಿ ಹೋದ ಮೇಲೆ ಕದಾಚಿತ್ ವಿರಹ ಕಾಲ ಬರುವುದು, ಆಗ ಆರು ತಿಂಗಳು ಮೋಕ್ಷವು ನಿಂತು ಹೋಗುತ್ತದೆ, ಯಾರೂ ಮೋಕ್ಷಕ್ಕೆ ಹೋಗುವುದಿಲ್ಲ, ಕೊನೆಯ ಎಂಟು ಸಮಯದಲ್ಲಿ ಆರುನೂರಾ ಎಂಟುಜೀವರುಗಳು ಮೋಕ್ಷಕ್ಕೆ ಹೋಗುತ್ತಾರೆ- ಎಂದು ತಿಳಿಯುವುದು.

ಕದಾಚಿತ್ ಉಪಶಮ ಶ್ರೇಣಿಯದು ವಿರಹವಾಗಿ ಹೋದರೆ ಆರು ತಿಂಗಳವರೆಗೆ ಒಂದೂ ಜೀವವು ಉಪಶಮ ಶ್ರೇಣಿಯನ್ನು ಹತ್ತುವುದಿಲ್ಲ, ಕೊನೆಯ ಎಂಟು ಸಮಯದಲ್ಲಿ ಮೂರುನೂರಾ ನಾಲ್ಕು ಜೀವಗಳು ಉಪಶಮ ಶ್ರೇಣಿಯ ಆರೋಹಣ ಮಾಡುತ್ತಾರೆ. ಅದರ ವಿಧಿಯು - ಪ್ರಥಮ ಸಮಯದಲ್ಲಿ ಹದಿನಾರು, ಎರಡನೆಯ ಸಮಯದಲ್ಲಿ ಇಪ್ಪತ್ತಾ ನ್ನಾಲ್ಕು, ಮೂರನೆಯ ಸಮಯದಲ್ಲಿ ಮೂವತ್ತು , ನಾಲ್ಕನೆಯ ಸಮಯದಲ್ಲಿ ಮೂವತ್ತಾರು, ಐದನೆಯ ಸಮಯದಲ್ಲಿ ನಲವತ್ತೆರಡು, ಆರನೆಯ ಸಮಯದಲ್ಲಿ ನಲವತ್ತೆಂಟು, ಏಳನೆಯ ಸಮಯದಲ್ಲಿ ಐವತ್ತಾ ನ್ನಾಲ್ಕು ಮತ್ತು ಎಂಟನೆಯ ಸಮಯದಲ್ಲಿ ಐವತ್ತಾ ನ್ನಾಲ್ಕು - ಈ ಪ್ರಕಾರ ಎಂಟು ಸಮಯದಲ್ಲಿ ಮೂರನೂರಾ ನಾಲ್ಕು ಜೀವಗಳು ನಿರಂತರ ಉಪಶಮ ಶ್ರೇಣಿ ಮಂಡಿಸುತ್ತಾರೆ.

ಎಂದಾದರೂ ಕ್ಷಾಯಿಕ ಶ್ರೇಣಿಯ ಉತ್ಕೃಷ್ಟ ಅಂತರವಾಗಿ ಹೋದರೆ ಆರು ತಿಂಗಳುಗಳದ್ದಾಗುತ್ತದೆ, ಆಗ ಕೊನೆಯ ಎಂಟು ಸಮಯದಲ್ಲಿ ಆರುನೂರಾ ಎಂಟು ಜೀವಗಳು ನಿರಂತರ ಶ್ರೇಣಿ ಮಂಡಿಸುತ್ತಾರೆ. ಅದು ಈ ಪ್ರಕಾರ - ಪ್ರಥಮ ಸಮಯದಲ್ಲಿ ಮೂವತ್ತೆರಡು, ಎರಡನೆಯ ಸಮಯದಲ್ಲಿ ನಲವತ್ತೆಂಟು, ಮೂರನೆಯ ಸಮಯದಲ್ಲಿ ಅರವತ್ತು , ನಾಲ್ಕನೆಯ ಸಮಯದಲ್ಲಿ ಎಪ್ಪತ್ತೆರಡು, ಐದನೆಯ ಸಮಯದಲ್ಲಿ ಎಂಭತ್ತಾ ನ್ನಾಲ್ಕು , ಆರನೆಯ ಸಮಯದಲ್ಲಿ ತೊಂಭತ್ತಾರು, ಏಳನೆಯ ಸಮಯದಲ್ಲಿ ಒಂದು ನೂರಾ ಎಂಟು, ಎಂಟನೆಯ ಸಮಯದಲ್ಲಿ ಒಂದು ನೂರಾ ಎಂಟು.

ಕದಾಚಿತ್ ಒಂದು ಸಮಯದಲ್ಲಿ ಯುಗಪತ್ ಕ್ಷಾಯಿಕ ಶ್ರೇಣಿ ಮಂಡಿಸಿದರೆ ನಾಲ್ಕುನೂರಾ ಮೂವತ್ತೆರಡು ಜೀವಗಳು ಮಂಡಿಸುತ್ತಾರೆ. ಅದು ಈ ಪ್ರಕಾರ - ಇವರಲ್ಲಿ ಯಾವ ಯಾವ ಜೀವರುಗಳು ಶ್ರೇಣಿಯನ್ನು ಹತ್ತುತ್ತಾರೆ ಅವರು - ಬುದ್ಧಿಬೋಧಿತ ಋದ್ಧಿಯಧಾರಕರು ಒಂದು ನೂರಾ ಎಂಟು ಜೀವಗಳು, ಪುರುಷವೇದ ಸಹಿತ ಶ್ರೇಣಿ ಹತ್ತುವಂಥವರು ಒಂದುನೂರಾ ಎಂಟು ಜೀವಗಳು, ಸ್ವರ್ಗದಿಂದ ಬಂದು ಮನುಷ್ಯರಾಗಿ ಮಹಾವ್ರತಧಾರಣ ಮಾಡಿ ಶ್ರೇಣಿ ಹತ್ತುವಂಥವರು ಒಂದುನೂರಾ ಎಂಟು ಜೀವಗಳು, ಪ್ರತ್ಯೇಕ ಬುದ್ಧಿಋದ್ಧಿಯ ಧಾರಕ ಕ್ಷಪಕ ಶ್ರೇಣಿ ಹತ್ತುವಂಥವರು ಹತ್ತು ಜೀವಗಳು, ತೀರ್ಥಂಕರ ಪದವಿಯ ಧಾರಕ ಕ್ಷಾಯಿಕ ಶ್ರೇಣಿ ಹತ್ತುವರು ಆರು ಜೀವಗಳು, ಸ್ತ್ರೀವೇದ ಸಹಿತ ಶ್ರೇಣಿ ಹತ್ತುವಂಥವರು ಇಪ್ಪತ್ತು ಜೀವಗಳು, ನಪುಂಸಕವೇದ ಸಹಿತ ಶ್ರೇಣಿಹತ್ತುವಂಥವರು ಹತ್ತು ಜೀವಗಳು, ಮನಃಪರ್ಯಯಜ್ಞಾನ ಸಹಿತ ಶ್ರೇಣಿ ಮಂಡಿಸುವಂಥವರು ಇಪ್ಪತ್ತು ಜೀವಗಳು, ಅವಧಿಜ್ಞಾನ ಸಹಿತ ಶ್ರೇಣಿ ಹತ್ತುವಂಥವರು ಇಪ್ಪತ್ತೆಂಟು ಜೀವಗಳು, ಉತ್ಕೃಷ್ಟ ಅವಗಾಹನ ಧಾರಕ ಮೋಕ್ಷವಾಗಲು ಯೋಗ್ಯಶರೀರಸಹಿತ ಕ್ಷಾಯಿಕ ಶ್ರೇಣಿ ಹತ್ತುವಂಥವರು ಎರಡು ಜೀವಗಳು, ಮೋಕ್ಷವಾಗಲು ಯೋಗ್ಯ ಜಘನ್ಯ ಅವಗಾಹನದ ಧಾರಕ ನಾಲ್ಕು ಜೀವಗಳು,

ಮಧ್ಯಮ ಅವಗಾಹನದ ಧಾರಕ ಶ್ರೇಣಿ ಹತ್ತುವಂಥ ಎಂಟು ಜೀವಗಳೆಂದು ಹೇಳಿದ್ದಾರೆ. ಆ ಜೀವಗಳು ಯುಗಪತ್ ಒಂದು ಸಮಯದಲ್ಲಿ (೧೦೮+೧೦೮+೧೦೮+೧೦+೬+೨೦+೧೦+೨೦+೨೮+೨+೪+೮=೪೩೨) ನಾಲ್ಕುನೂರಾ ಮೂವತ್ತೆರಡು ಜೀವಗಳು ಕ್ಷಾಯಿಕ ಶ್ರೇಣಿ ಹತ್ತುತ್ತಾರೆ - ಎಂದು ತಿಳಿಯುವುದು.

ಯುಗಪತ್ ಒಂದು ಸಮಯದಲ್ಲಿ ಉಪಶಮ ಶ್ರೇಣಿ ಹತ್ತುವಂಥವರು ಕ್ಷಾಯಿಕಕ್ಕಿಂತ ಅರ್ಧ ಇವುವೇ ಪದಗಳಲ್ಲಿ ಸ್ಥಿತ ಜೀವಗಳು ಎರಡುನೂರಾ ಹದಿನಾರು ಎಂದು ತಿಳಿಯುವುದು.

ಕದಾಚಿತ್ ಕೇವಲಜ್ಞಾನದ ವಿರಹಕಾಲವು ಒಂದು ಬಿಟ್ಟರೆ ಆರು ತಿಂಗಳವರೆಗೆ ಯಾವುದೇ ಜೀವನಿಗೆ ಕೇವಲಜ್ಞಾನದ ಉತ್ಪತ್ತಿಯಾಗುವುದಿಲ್ಲ. ಅದರ ನಂತರ ಎರಡೂವರೆ ದ್ವೀಪದಲ್ಲಿ ಕೊನೆಯ ಎಂಟು ಸಮಯಗಳಲ್ಲಿ ಇಪ್ಪತ್ತೆರಡು ಜೀವಗಳಿಗೆ ಕೇವಲಜ್ಞಾನವಾಗುತ್ತದೆ. ಅದು ಈ ಪ್ರಕಾರ - ಪ್ರಾರಂಭದ ಆರು ಸಮಯಗಳಲ್ಲಿ ಮೂರು-ಮೂರು ಜೀವ, ಒಂದು-ಒಂದು ಸಮಯದಲ್ಲಿ ಕೇವಲಿಯಾಗುತ್ತಾರೆ. ಕೊನೆಯ ಎರಡು ಸಮಯಗಳಲ್ಲಿ ಎರಡು-ಎರಡು ಜೀವಗಳು ಕೇವಲಿಗಳಾಗುತ್ತಾರೆ. ಈ ಪ್ರಕಾರ ಕೊನೆಯ ಎಂಟು ಸಮಯದಲ್ಲಿ ಮೂವತ್ತೆರಡು ಎಂದು ಹೇಳಿದ್ದಾರೆ. ಕೆಲವು ಆಚಾರ್ಯರು ಕೊನೆಯ ಎಂಟು ಸಮಯದಲ್ಲಿ ನಲವತ್ತಾ ಲ್ಕು ಕೇವಲಿಗಳಾಗುತ್ತಾರೆಂದು ಹೇಳಿದ್ದಾರೆ. ಅವರ ಅನುಸಾರ ಪ್ರಾರಂಭದ ಆರು ಸಮಯಗಳಲ್ಲಿ ಆರು-ಆರು ಮತ್ತು ಕೊನೆಯ ಎರಡು ಸಮಯಗಳಲ್ಲಿ ನಾಲ್ಕು-ನಾಲ್ಕು ಜೀವಗಳು ಕೇವಲಿಗಳಾಗುತ್ತಾರೆ.

ಕೆಲವು ಆಚಾರ್ಯರು ಎಂಭತ್ತೆಂಟು ಕೇವಲಿಗಳಾಗುತ್ತಾರೆಂದು ಹೇಳಿದ್ದಾರೆ. ಅವರ ಅನುಸಾರ ಪ್ರಾರಂಭದ ಆರು ಸಮಯದಲ್ಲಿ ಹನ್ನೆರಡು-ಹನ್ನೆರಡು ಮತ್ತು ಕೊನೆಯ ಎರಡು ಸಮಯಗಳಲ್ಲಿ ಎಂಟು-ಎಂಟು ಕೇವಲಿಗಳಾಗುತ್ತಾರೆ.

ಕೆಲವು ಆಚಾರ್ಯರು ಕೊನೆಯ ಎಂಟು ಸಮಯಗಳಲ್ಲಿ ಒಂದುನೂರಾ ಎಪ್ಪತ್ತಾರು ಕೇವಲಿಗಳಾಗುತ್ತಾರೆಂದು ಹೇಳಿದ್ದಾರೆ. ಅವರ ಅನುಸಾರ ಪ್ರಾರಂಭದ ಆರು ಸಮಯಗಳಲ್ಲಿ ಇಪ್ಪತ್ತಾ ಲ್ಕು-ಇಪ್ಪತ್ತಾ ಲ್ಕು ಮತ್ತು ಕೊನೆಯ ಎರಡು ಸಮಯಗಳಲ್ಲಿ ಹದಿನಾರು-ಹದಿನಾರು ಕೇವಲಿಗಳಾಗುತ್ತಾರೆ.

ಈ ಪ್ರಕಾರ ಕೇವಲಿಗಳ ವಿಶೇಷವನ್ನು ತಿಳಿಯುವುದು. ಇದು ಉತ್ಕೃಷ್ಟ ಕಥನವಿದೆ ಇದಕ್ಕಿಂತ ಅಧಿಕವಾಗುವುದಿಲ್ಲವೆಂದು ತಿಳಿಯುವುದು. (ಸರ್ವ ಕಥನಗಳಲ್ಲಿ ಯಾವುದನ್ನು ಕೇವಲಿ ಭಗವಂತರು ನೋಡಿದ್ದಾರೆ ಅದು ಪ್ರಮಾಣವಿದೆ)

ಈ ಪ್ರಕಾರ ಸಾಮಾನ್ಯರೂಪದಿಂದ ಹದಿನಾಲ್ಕು ಗುಣಸ್ಥಾನಗಳ ಸಂಬಂಧದಲ್ಲಿ ಜೀವರುಗಳ ಸಂಖ್ಯೆಯನ್ನು ಹೇಳಲಾಯಿತು. ವಿಶೇಷವನ್ನು ಗೊಮ್ಮಟಸಾರದ 'ಜೀವಕಾಂಡ'ದಿಂದ ತಿಳಿಯುವುದು. ಇಲ್ಲಿ ಮಾರ್ಗಪ್ರಾಪ್ತಿಯ ನಿಮಿತ್ತ ಹಾಗೂ ಸ್ಮರಣೆಯಲ್ಲಿ ಇಟ್ಟುಕೊಳ್ಳುವ - ಕಲಿತುಕೊಳ್ಳುವ ನಿಮಿತ್ತ ಕಥನ ಮಾಡಲಾಗಿದೆ ಆದುದರಿಂದ ಧರ್ಮಾತ್ಮಾ ಜೀವರು ಇದರ ಸಾಮಾನ್ಯ ಕಥನವನ್ನು ತಿಳಿದುಕೊಂಡು ಮಹಾಗ್ರಂಥದಲ್ಲಿ ಪ್ರವೇಶ ಮಾಡುವುದು, ಅದರಿಂದ ಮೋಹವು ಮಂದವಾಗಿ ಜ್ಞಾನಸೂರ್ಯನ ಸಮ್ಯಕ್‌ಪ್ರಕಾಶವಾಗುವುದು - ಹೀಗೆ ತಿಳಿದುಕೊಂಡು ಆತ್ಮ ಕಲ್ಯಾಣದ ಇಚ್ಛೆಯುಳ್ಳ ಜೀವರುಗಳು ಆ ಗ್ರಂಥಗಳಲ್ಲಿ ಪ್ರವೇಶ ಮಾಡುವುದು ಯೋಗ್ಯವಿದೆ.

ಇಲ್ಲಿ ವಿಶೇಷವೇನೆಂದರೆ ಮೇಲೆ ಹೇಳಲಾಗಿರುವ ಸಮ್ಯಗ್ದೃಷ್ಟಿಗಳಲ್ಲಿ ಕ್ಷಾಯೋಪಶಮಿಕ ಸಮ್ಯಗ್ದೃಷ್ಟಿಗಳು ಅಧಿಕರಿದ್ದಾರೆ, ಅವರಿಂದ ಅಸಂಖ್ಯಾತದ ಒಂದು ಭಾಗದಷ್ಟು ಕ್ಷಾಯಿಕ ಸಮ್ಯಗ್ದೃಷ್ಟಿಗಳಿದ್ದಾರೆ. ಅವರಿಂದ ಅಸಂಖ್ಯಾತದ ಒಂದು ಭಾಗದಷ್ಟು ಔಪಶಮಿಕ ಸಮ್ಯಗ್ದೃಷ್ಟಿಗಳಿದ್ದಾರೆ. ಅವರಿಂದ ಅಸಂಖ್ಯಾತದ ಒಂದು ಭಾಗದಷ್ಟು ಮಿಶ್ರ ಸಮ್ಯಗ್‌ಧಾರಿಗಳಿದ್ದಾರೆ. ಮಿಶ್ರರಿಂದ ಸಂಖ್ಯಾತದ ಒಂದು ಭಾಗದಷ್ಟು ಸಾಸಾದನಿಗಳಿದ್ದಾರೆ. ಅವರಲ್ಲಿಯೂ ವಿಶೇಷವೇನೆಂದರೆ ಸಮ್ಯಗ್ದೃಷ್ಟಿಗಳು ದೇವಲೋಕದಲ್ಲಿ ಅಧಿಕರಿದ್ದಾರೆ. ಅವರಲ್ಲಿಯೂ ಕೂಡ ಮೂರು ಗತಿಯ ಸಮ್ಯಗ್ದೃಷ್ಟಿಗಳಿಗಿಂತ ಪ್ರಥಮ ಯುಗಲದಲ್ಲಿ ಅಸಂಖ್ಯಾತ ಗುಣಿತ ಅಧಿಕರಿದ್ದಾರೆ.

ಈ ಪ್ರಕಾರ ನಾಲ್ಕೂ ಗತಿರೂಪದ ಸಂಸಾರದಲ್ಲಿ ಇರುವಂಥ ಜೀವರುಗಳ ಸಂಖ್ಯೆ ಹಾಗೂ ತಮ್ಮ ತಮ್ಮ ಗತಿಗೆ ಸಂಬಂಧಿಸಿದ ಗುಣಸ್ಥಾನವರ್ತಿ ಜೀವರುಗಳ ಸಂಖ್ಯೆಯನ್ನು ಹೇಳಲಾಯಿತು. ಈ ಸಂಖ್ಯೆಯಲ್ಲಿ ಸಂಸಾರಿ ಜೀವನು ಶರೀರ ಧಾರಣ ಮಾಡುತ್ತಾನೆ, ಸತ್ತು ಹೋಗುತ್ತಾನೆ, ಶುಭಾಶುಭ ಫಲವನ್ನು ಭೋಗಿಸುತ್ತ ಅನಾದಿಯಿಂದ ಪರಿಭ್ರಮಣ ಮಾಡುತ್ತಿದ್ದಾನೆ. ಇವರುಗಳಲ್ಲಿ ವಿರಳ ಭವ್ಯಾತ್ಮರು ಸತ್ಸಂಗದ ನಿಮಿತ್ತದಿಂದ ಜಿನದೇವನ ವಚನಗಳ ಪ್ರತೀತಿ ಮಾಡಿ ಸಮ್ಯಗ್ದರ್ಶನಾದಿ ಮೋಕ್ಷಮಾರ್ಗಯೋಗ್ಯ ಸಾಮಗ್ರಿಗಳನ್ನು ಪ್ರಾಪ್ತಮಾಡಿಕೊಂಡು, ಕರ್ಮಗಳನ್ನು ನಷ್ಟಗೊಳಿಸಿ ಶುದ್ಧರಾಗುತ್ತ ಮುಂದೆ ಮೋಕ್ಷಕ್ಕೆ ಪ್ರಾಪ್ತರಾಗುವರು.

ಧರ್ಮದ್ರವ್ಯ - ಅಜೀವತತ್ತ್ವಗಳಲ್ಲಿ ಧರ್ಮದ್ರವ್ಯವು ಒಂದಿದೆ ಅದರ ಗುಣವು ಗಮನದಲ್ಲಿ ಸಹಾಯಕವಿದೆ. ಮೂರು ಲೋಕಗಳಲ್ಲಿ ಸ್ಥಿತವಿರುವಂಥ ಜೀವ ಪುದ್ಗಲಗಳಿಗೆ ಗಮನಮಾಡುವಲ್ಲಿ ಧರ್ಮದ್ರವ್ಯವು ಸಹಾಯ ಮಾಡುತ್ತದೆ. ಹೇಗೆ ಜಲಚರ ಮೀನು ಮೊದಲಾದವುಗಳಿಗೆ ಗಮನದಲ್ಲಿ ಜಲವು ಸಹಾಯಕವಿದೆ, ಪ್ರೇರಕವಾಗಿ ಗಮನಮಾಡಿಸುವುದಿಲ್ಲ. ಒಂದು ವೇಳೆ ಮೀನು ಮೊದಲಾದಜೀವಗಳು ಜಲದಲ್ಲಿ ಗಮನ ಮಾಡತೊಡಗಿದರೆ ಉದಾಸೀನ ವೃತ್ತಿ ಸಹಿತ ಸಹಜವಾಗಿಯೇ ಜಲವು ಸಹಾಯಕವಾಗುತ್ತದೆ, ಅದೇ ಪ್ರಕಾರ ಈ ಧರ್ಮದ್ರವ್ಯವು ಪ್ರೇರಕವಾಗಿ ಜೀವಾದಿ ಪದಾರ್ಥಗಳನ್ನು ಗಮನ ಮಾಡಿಸುವುದಿಲ್ಲ. ಒಂದು ವೇಳೆ ಜೀವ-ಪುದ್ಗಲಗಳು ತಮ್ಮ ಶಕ್ತಿಯಿಂದ ಗಮನ ಮಾಡಿದರೆ ಉದಾಸೀನ ವೃತ್ತಿಯಿಂದ ಗಮನದಲ್ಲಿ ಸಹಾಯಕವಾಗುತ್ತದೆ. ಹೀಗೆ ಈ ದ್ರವ್ಯದ ಸ್ವಭಾವವು ಅನಾದಿನಿಧನವಿದೆ. ಇಂಥ ಚಲನ ಸಹಾಯಕ ಗುಣ ಸಹಿತ ಧರ್ಮದ್ರವ್ಯದ ಸ್ಥಿತಿಯು ಅನಾದಿಯಿಂದ ಲೋಕದಲ್ಲಿ ಇದೆಯೆಂದು ತಿಳಿಯುವುದು. ಈ ಧರ್ಮದ್ರವ್ಯ (ಹಾಗೂ ಪ್ರತಿಯೊಂದು ದ್ರವ್ಯ)ದ (ಗುಣ) ಪರ್ಯಾಯಗಳು ಎರಡು ಪ್ರಕಾರದವಿವೆ - ೧) ಅರ್ಥ ಪರ್ಯಾಯ - ದ್ರವ್ಯದ ಪರಿಣಮನ ರೂಪ ಸಾಮಾನ್ಯ ಪರ್ಯಾಯವಿದೆ. ೨) ವ್ಯಂಜನ ಪರ್ಯಾಯವು ದ್ರವ್ಯದ ಆಕಾರವಿದೆ.

ಧರ್ಮದ್ರವ್ಯದ ವ್ಯಂಜನ ಪರ್ಯಾಯವು ಮೂರು ಲೋಕ ಪ್ರಮಾಣವಿದೆ, ಒಂದು ಪಟಲ ರೂಪವಿದೆ, ಖಂಡರೂಪವಿಲ್ಲ. ಪುದ್ಗಲ ಪರಮಾಣುರೂಪದ ಅಳತೆಯಿಂದ ಅಳತೆ ಮಾಡಿದರೆ ಅಸಂಖ್ಯಾತ ಪ್ರದೇಶಿಯಿದೆ - ಈ ಪ್ರಕಾರ ಇದರ ಸಾಮಾನ್ಯ ಸ್ವರೂಪವಿದೆ. ಧರ್ಮವೆಂಬ ಹೆಸರಿನ ದ್ರವ್ಯವಿದೆ, ಚಲನಸಹಾಯಕರೂಪದ ಗುಣವಿದೆ ಹಾಗೂ ಪರ್ಯಾಯವು ಮೂರು ಲೋಕದ ಸಮಾನವಿದೆ.

ಅಧರ್ಮದ್ರವ್ಯ - ಅಧರ್ಮದ್ರವ್ಯದ ಗುಣವು ಸ್ಥಿತಿಕರಣವಿದೆ. ಮೂರು ಲೋಕದಲ್ಲಿ ಸ್ಥಿತವಿರುವ ಜೀವಪುದ್ಗಲಗಳಿಗೆ ಅದು ಸ್ಥಿತಿಕರಣದಲ್ಲಿ ಸಹಾಯಕವಿದೆ; ಪ್ರೇರಕವಾಗಿ ಸ್ಥಿತಿಮಾಡಿಸುವುದಿಲ್ಲ. ಜೀವ ಪುದ್ಗಲಗಳು ತಮ್ಮ ಶಕ್ತಿಯಿಂದ ಸ್ಥಿತಿ ಮಾಡಿದರೆ ಈ ಅಧರ್ಮದ್ರವ್ಯವು ಉದಾಸೀನ ವೃತ್ತಿಯಿಂದ ಸ್ಥಿತಿ ಮಾಡುವಲ್ಲಿ ಸಹಕಾರಿಯಿದೆ. ಹೇಗೆ ಮಾರ್ಗದಲ್ಲಿ ನಡೆಯುವಂಥ ಪಥಿಕನಿಗೆ ಗ್ರೀಷ್ಮ ಋತುವಿನಲ್ಲಿ ವೃಕ್ಷದ ಛಾಯೆಯು ಸ್ಥಿತಿ ಮಾಡುವಲ್ಲಿ ಸಹಾಯಕವಾಗುತ್ತದೆ; ವೃಕ್ಷವು ಪಥಿಕನನ್ನು ಕೂಗಿ ಕರೆದು ತನ್ನ ಛಾಯೆಯಲ್ಲಿ ನಿಲ್ಲಿಸುವುದಿಲ್ಲ. ಪಥಿಕನು ತನ್ನ ಇಚ್ಛೆಯಿಂದಲೇ ದಾಹವನ್ನು ನಾಶ ಮಾಡುವ ಸಲುವಾಗಿ ವೃಕ್ಷದ ಕೆಳಗೆ ಕುಳಿತುಕೊಂಡರೆ ಅದು ಉದಾಸೀನವೃತ್ತಿಪೂರ್ವಕ ಪಥಿಕನಿಗೆ ಕುಳಿತುಕೊಳ್ಳುವಲ್ಲಿ ಕಾರಣವಾಗುತ್ತದೆ, ಇದೇ ಪ್ರಕಾರ ಅಧರ್ಮದ್ರವ್ಯದ ಗುಣವು ಸ್ಥಿತಿ ಮಾಡುವುದೆಂದು ತಿಳಿಯುವುದು. ಅಧರ್ಮದ್ರವ್ಯದ ಪರ್ಯಾಯಗಳೂ ಕೂಡ ಅರ್ಥ ಪರ್ಯಾಯ, ವ್ಯಂಜನ ಪರ್ಯಾಯದ ರೂಪದಿಂದ ಎರಡು ಪ್ರಕಾರದವಿವೆ. ಅರ್ಥ ಪರ್ಯಾಯವಂತೂ ರತ್ನದ ಅಲೆಯ ಸಮಾನ ದ್ರವ್ಯದ ಪರಿಣಮನವಿದೆ. ವ್ಯಂಜನ ಪರ್ಯಾಯವು ಧರ್ಮದ್ರವ್ಯದ ಪ್ರಮಾಣ ಲೋಕದ ಆಕಾರವಿದೆ. ಈ ಪ್ರಕಾರ ಅಧರ್ಮದ್ರವ್ಯದ ಗುಣ ಮತ್ತು ಪರ್ಯಾಯ ಹೇಳಲಾಯಿತು.

ಕಾಲದ್ರವ್ಯ - ಕಾಲವಂತೂ ದ್ರವ್ಯವಿದೆ, ಅದರ ಗುಣವು ವರ್ತನಾ (ಪರಿಣಮನ) ಲಕ್ಷಣವಿದೆ. ಪರ್ಯಾಯವು

ಎರಡು ಪ್ರಕಾರದ್ದಿದೆ. ೧) ಅರ್ಥ ಪರ್ಯಾಯವಂತೂ ರತ್ನದ ಅಲೆಯ ಹಾಗೆ ದ್ರವ್ಯದ ಪರಿಣಮನವಿದೆ. ೨) ವ್ಯಂಜನ ಪರ್ಯಾಯವು ದ್ರವ್ಯದ ಆಕಾರವಿದೆ. ಹೇಗೆ ನದಿಯಂತೂ ದ್ರವ್ಯ , ನದಿಯ ಎರಡೂ ದಡಗಳ ಸಮುದ್ರದವರೆಗಿನ ಉದ್ದದ ಆಕಾರವು ಅದರ ವ್ಯಂಜನ ಪರ್ಯಾಯವಿದೆ ಹಾಗೂ ನಿರಂತರ ಜಲದ ಪ್ರವಾಹವು ಪ್ರವಹಿಸುವುದು, ಹಗಲಿರುಳು ನೀರು ಹರಿಯುವುದು ನದಿಯ ಗುಣವಿದೆ. ನದಿಯ ಜಲದಲ್ಲಿ ಅನೇಕ ಪ್ರಕಾರದ ತರಂಗಗಳು ಉತ್ಪನ್ನವಾಗುವುದು, ಅದರಲ್ಲಿಯೇ ನಷ್ಟವಾಗುವುದು - ಇದು ನದಿಯ ಅರ್ಥ ಪರ್ಯಾಯವಿದೆ. ಇದೇ ಪ್ರಕಾರ ನದಿಯ ಸಮಾನ ನಿರಂತರ ವರ್ತಿಸುವುದು ಕಾಲದ್ರವ್ಯದ ಲಕ್ಷಣಗುಣವಿದೆ. ಪುದ್ಗಲಾಣುದ್ರವ್ಯದ ಮಂದ ಗಮನದಿಂದ ಬದಲಾಗುವುದು, ಒಂದು ಆಕಾಶ ಪ್ರದೇಶದ ಮೇಲೆ ಕುಳಿತುಕೊಂಡಿರುವ ಪುದ್ಗಲಾಣುವು ಮಂದ ಗತಿಯಿಂದ ಗಮನ ಮಾಡಿ ಅದಕ್ಕೆ ಹೊಂದಿಕೊಂಡಿರುವ ಇನ್ನೊಂದು ಪ್ರದೇಶದ ಮೇಲೆ ಬರುವುದು, ಇದರಲ್ಲಿ ಬೇಕಾಗುವಂಥ ಕಾಲದ ಹೆಸರು ಸಮಯವಿದೆ. ಈ ಸಮಯವು ಕಾಲದ ವ್ಯವಹಾರ ಪರ್ಯಾಯವಿದೆ. ಈ ಸಮಯದಿಂದ ಭಿನ್ನವಾದ ಯಾವುದೇ ಸೂಕ್ಷ್ಮ ಅಂಶವು ಕಾಲಕ್ಕಿರುವುದಿಲ್ಲ.

ಇಂಥ-ಇಂಥ 'ಸಮಯ' ಜಘನ್ಯಯುಕ್ತಾಸಂಖ್ಯಾತವಾದ ಮೇಲೆ ಒಂದು ಆವಲಿಯೆಂಬ ಹೆಸರಿನ ಕಾಲದ ಪರ್ಯಾಯವಾಗುತ್ತದೆ. ಇಂಥ-ಇಂಥ ಸಾವಿರಾರು ಆವಲಿಗಳು ವ್ಯತೀತವಾಗಿ ಹೋದಮೇಲೆ ಒಂದು ಶ್ವಾಸೋಚ್ಛ್ವಾಸ ಕಾಲದ ಪ್ರಮಾಣವಾಗುತ್ತದೆ. ಏಳು ಶ್ವಾಸೋಚ್ಛ್ವಾಸದ ಒಂದು ಸ್ತೋಕವೆಂಬ ಹೆಸರಿನ ಕಾಲದ ಪರ್ಯಾಯವಾಗುತ್ತದೆ. ಏಳು ಸ್ತೋಕಗಳದ್ದು ಒಂದು ಲವ ಮಾತ್ರ ಕಾಲ ಪರ್ಯಾಯವಾಗುತ್ತದೆ. ನಲವತ್ತೆಂಟೂವರೆ ಲವಗಳದ್ದು ಒಂದು ನಾಲಿಯಾಗುತ್ತದೆ. ಈ ನಾಲಿಯದೇ ಹೆಸರು ಗಳಿಗೆ ಇದೆ. ಎರಡು ಗಳಿಗೆಗಳ ಹೆಸರು ಒಂದು ಮುಹೂರ್ತವಿದೆ. ಎರಡು ಸಮಯ ಕಡಿಮೆ ಎರಡು ಗಳಿಗೆಗಳ ಹೆಸರು ಅಂತರ್ಮುಹೂರ್ತವಿದೆ. ಮೂವತ್ತು ಮುಹೂರ್ತಗಳದ್ದು ಒಂದು ಅಹೋರಾತ್ರಿ , ಹದಿನೈದು ಅಹೋರಾತ್ರಿಗಳದ್ದು ಒಂದು ಪಕ್ಷ, ಎರಡು ಪಕ್ಷಗಳದ್ದು ಒಂದು ಮಾಸ, ಎರಡು ಮಾಸಗಳದ್ದು ಒಂದು ಋತು, ಮೂರು ಋತುಗಳದ್ದು ಒಂದು ಅಯನ, ಎರಡು ಅಯನಗಳದ್ದು ಒಂದು ವರ್ಷವಾಗುತ್ತದೆ. ಎಪ್ಪತ್ತು ಲಕ್ಷ ಐವತ್ತಾರು ಸಾವಿರ ಕೋಟಿ ವರ್ಷಗಳದ್ದು ಒಂದು ಪೂರ್ವಕಾಲವಾಗುತ್ತದೆ. ಇಂಥ ಅಸಂಖ್ಯಾತ ಪೂರ್ವ ಕಾಲಗಳದ್ದು ಒಂದು ಪಲ್ಯವಾಗುತ್ತದೆ, ಹತ್ತು ಕೋಟಾಕೋಟಿ ಪಲ್ಯಗಳದ್ದು ಒಂದು ಸಾಗರವಾಗುತ್ತದೆ, ಇಪ್ಪತ್ತು ಕೋಟಾ ಕೋಟಿ ಸಾಗರಗಳದ್ದು ಒಂದು ಕಾಲಚಕ್ರವಾಗುತ್ತದೆ. ಇಂಥ-ಇಂಥ ಅನಂತಾನಂತ ಕಾಲಚಕ್ರಗಳು ವ್ಯತೀತವಾಗಿ ಹೋದ ಮೇಲೆ ಒಂದು ಕಾಲಪರಾವರ್ತನವಾಗುತ್ತದೆ. ಈ ಪ್ರಕಾರ ಕಾಲದ ವ್ಯವಹಾರ ಪರ್ಯಾಯಗಳ ಸ್ವರೂಪ ತಿಳಿಯುವುದು.

ಈ ಪ್ರಕಾರ ಕಾಲವಂತೂ ದ್ರವ್ಯ , ಗುಣಪರಾವರ್ತನ-ವರ್ತನಾ(ಪರಿಣಮನ)ವು ಲಕ್ಷಣ ಹಾಗೂ ಕಾಲಾಣುವಿನ ಉತ್ಪನ್ನವಾಗುವಂಥ ಸಮಯ, ಗಳಿಗೆ, ದಿವಸ, ಮಾಸ, ವರ್ಷ, ಪೂರ್ವ, ಪಲ್ಯ , ಸಾಗರ - ಇವು ಪರ್ಯಾಯಗಳಿವೆ.

ಆಕಾಶ ದ್ರವ್ಯ - ಆಕಾಶವಂತೂ ದ್ರವ್ಯವಿದೆ, ಅವಗಾಹನ ಕೊಡುವುದು ಇದರ ಗುಣವಿದೆ, ಪರ್ಯಾಯವು ಲೋಕಾಲೋಕ ಪ್ರಮಾಣವಿದೆ. ಈ ಆಕಾಶದಲ್ಲಿ ಒಂದು ಅಲೋಕಾಕಾಶವಿದ್ದು ಅದು ಅನಂತ ಪ್ರದೇಶಿಯಿದೆ. ಇಲ್ಲಿ ಯಾವ ದ್ರವ್ಯಗಳೂ ಇರುವುದಿಲ್ಲ ಶೂನ್ಯತೆಯಿಂದ ಸಹಿತ ಶುದ್ಧ (ಕೇವಲ) ಒಂದು ಆಕಾಶವೇ ಇರುತ್ತದೆ. ಎರಡನೆಯದು ಲೋಕಾಕಾಶವಿದೆ. ಇದರಲ್ಲಿ ಆರು ದ್ರವ್ಯಗಳ ರಚನೆ ಸಹಿತ (ಜೀವನು) ನಾಲ್ಕು ಗತಿರೂಪದ ಸಂಸಾರವನ್ನು ಧಾರಣ ಮಾಡುತ್ತಾನೆ ಮತ್ತು ಕರ್ಮರಹಿತ ಶುದ್ಧ ಜೀವರುಗಳಿದ್ದಾರೆ - ಇವುಗಳಿಂದ ಯುಕ್ತವಾದ ಅಸಂಖ್ಯಾತ ಪ್ರದೇಶಿ, ಎಲ್ಲ ರಚನೆಯೂ ಯಾವುದರಲ್ಲಿಕಂಡು ಬರುತ್ತದೆ ಅದು ಲೋಕಾಕಾಶವಿದೆ, ಇದರಲ್ಲಿ ಆರು ದ್ರವ್ಯಗಳಿರುತ್ತವೆ.

ಈ ಪ್ರಕಾರ ಈ ಆರೂ ದ್ರವ್ಯಗಳು ತಮ್ಮ ತಮ್ಮ ಗುಣ ಪರ್ಯಾಯ ಸಹಿತ ತಮ್ಮ ತಮ್ಮ ಸ್ವಭಾವದಲ್ಲಿ ಇವೆ. ಒಂದು ಕ್ಷೇತ್ರದಲ್ಲಿ ಎಲ್ಲವೂಗಳ ಸ್ಥಿತಿ ಇದೆ; ಆದರೆ ಯಾವುದೂ ಯಾವುದರಲ್ಲೂ ಬೆರೆತು ಹೋಗುವುದಿಲ್ಲ. ಇಂಥದೊಂದು ಅನಾದಿ ವ್ಯವಹಾರವಿದ್ದು ಯಾವುದೇ ದ್ರವ್ಯವು ಯಾವ ದ್ರವ್ಯದೊಂದಿಗೆ ಸೇರಿ ಒಂದಾಗುವುದಿಲ್ಲ, ಯಾವುದರ ಗುಣದಿಂದ ಯಾವುದರ ಗುಣದ ಹೊಂದಾಣಿಕೆಯಾಗುವುದಿಲ್ಲ, ಯಾವುದೇ ಪರ್ಯಾಯದ ಜೊತೆ ಯಾವ ಪರ್ಯಾಯವೂ ಬೆರೆತು

ಹೋಗುವುದಿಲ್ಲ - ಇಂಥ ಉದಾಸೀನ ವೃತ್ತಿ ಇದೆ. ಹೇಗೆ ಒಂದು ಗುಹೆಯಲ್ಲಿ ಆರು ಮುನಿಗಳು ಬಹು ದಿವಸಗಳವರೆಗೆ ಇರುತ್ತಾರೆ. ಆದರೆ ಯಾರೂ ಯಾರ ಮೇಲೆ ಮೋಹಿತರಾಗುವುದಿಲ್ಲ, ಉದಾಸೀನತೆಯೊಂದಿಗೆ ಒಂದು ಕ್ಷೇತ್ರದಲ್ಲಿ ಇರುತ್ತಾರೆ, ಅದೇ ಪ್ರಕಾರ ಆರೂ ದ್ರವ್ಯಗಳು ಒಂದು ಲೋಕ ಕ್ಷೇತ್ರದಲ್ಲಿ ಇರುತ್ತವೆಯೆಂದು ತಿಳಿಯುವುದು. ಅವುಗಳಲ್ಲಿ ಐದು ದ್ರವ್ಯಗಳು ಅಜೀವವಿವೆ ಮತ್ತು ಒಂದು ಜೀವ ದ್ರವ್ಯವಿದೆ. ಈ ಐದೂ ಅಜೀವ ದ್ರವ್ಯಗಳ ಗುಣಗಳು ಕೂಡ ಅಜೀವವಿವೆ ಮತ್ತು ಪರ್ಯಾಯಗಳೂ ಕೂಡ ಅಜೀವವಿವೆ. ಒಂದು ಚೇತನ ದ್ರವ್ಯವಿದೆ ಅದರ ದ್ರವ್ಯ, ಗುಣ, ಪರ್ಯಾಯಗಳು ಕೂಡ ಚೇತನವಿವೆ.

ಅದರಿಂದ ಎಲೈ ಭವ್ಯಾತ್ಮನೇ ! ನೀನು ಆಲಿಸು ಈ ಜೀವವು ಜ್ಞಾನರೂಪವಿದೆ ನೋಡುವ, ತಿಳಿಯುವ ರೂಪವಿದೆ ಎಂಬುದನ್ನು ನೋಡು ಆದರೆ ಅನಾದಿಯಿಂದ ಪರದ್ರವ್ಯಗಳ ಮೋಹದಲ್ಲಿ, ಪರದಲ್ಲಿ ಮಮತ್ವ ಭಾವ ಮಾಡಿ ತನ್ನನ್ನು (ತನ್ನಲ್ಲಿ ಅರ್ಥಾತ್ ಜ್ಞಾನಪಿಂಡದಲ್ಲಿ ತನ್ನತನವನ್ನು) ಮರೆತು ಪರದ್ರವ್ಯವನ್ನು ತನಗೆ ಇಷ್ಟವೆಂದು ತಿಳಿದುಕೊಂಡು ಪರರೂಪದ ಹಾಗೆ ಆಗಿ ಹೋಗಿದೆ. ಸ್ವಯಂ ಅಮೂರ್ತಿಕವಿದೆ, ಅದನ್ನು ಮರೆತು ತನ್ನನ್ನು ಮೂರ್ತಿಕ, ಜಡಭಾವರೂಪವೆಂದು ಮನ್ನಿಸುತ್ತಲಿದೆ; ಆದರೆ ಜಡವಾಗಿಲ್ಲ, ತನ್ನ ಚೇತನಾದ ವ್ಯವಹಾರವನ್ನು ಬಿಟ್ಟುಕೊಟ್ಟಿಲ್ಲ.

ಹೇಗೆ ಯಾವನೋ ಅಭಿನಯಕಾರ ಮನುಷ್ಯನು ಲೋಭದ ವಶೀಭೂತನಾಗುತ್ತ ತನ್ನ ಶರೀರದ ಮೇಲೆ ಸಿಂಹದ ಚರ್ಮವನ್ನು ಹೊದ್ದುಕೊಂಡು ಸಿಂಹದ ಸೋಗು ಧಾರಣ ಮಾಡುತ್ತಾನೆ;ಅನೇಕ ಚೇಷ್ಟೆ, ಹಾರುವುದು, ಗರ್ಜಿಸುವುದು ಮೊದಲಾದುವನ್ನೂ ಮಾಡುತ್ತಾನೆ. ಅದನ್ನು ನೋಡಿ ಅಜ್ಞಾನಿ ಮುಗ್ಧ ಜೀವಗಳು ಅವನನ್ನು ಸಿಂಹವೆಂದು ತಿಳಿದುಕೊಂಡು ಭಯಭೀತರಾಗುತ್ತಾರೆ; ಆದರೆ ಅವನು ಸಿಂಹನಿಲ್ಲ. ಲೋಭದ ವಶೀಭೂತನಾಗಿ ಈ ಅಭಿನಯಕಾರನು ತನ್ನನ್ನು ಪಶುರೂಪದವನನ್ನಾಗಿ ಮಾಡಿದ್ದನು. ಸ್ವಯಂ ತನ್ನನ್ನು ಪಶುವೆಂದು ಮನ್ನಿಸಿ ತಿರುಗುತ್ತಿದ್ದರೂ ಅವನು ಪಶುವಾಗಿಲ್ಲ ಮನುಷ್ಯನೇ ಇದ್ದಾನೆ.

ಅದೇ ಪ್ರಕಾರ ಈ ಸಂಸಾರಿ ಜೀವನು ತನ್ನ ಅನಾದಿ ಅಜ್ಞಾನದಿಂದ ಯಾವ ಗತಿಯಲ್ಲಿ ಹೋಗುತ್ತಾನೆ ಅದೇ ಗತಿರೂಪನಾಗಿ ಇರುತ್ತಾನೆ ನಾಲ್ಕು ಗತಿಗಳಿಗೆ ಸಂಬಂಧಿಸಿದ ಅನೇಕ ಪೌದ್ಗಲಿಕ ಶರೀರವನ್ನು ಧಾರಣ ಮಾಡಿ ಸ್ವಯಂ ತನ್ನನ್ನು ದೇವ, ನಾರಕಾದಿ ಆಕಾರರೂಪನೆಂದು ಮನ್ನಿಸುತ್ತಾನೆ; ನಾನು ದೇವನಿದ್ದೇನೆ, ನಾನು ನಾರಕಿ ಇದ್ದೇನೆ, ನಾನು ಪಶು ಇದ್ದೇನೆ, ನಾನು ಮನುಷ್ಯನಿದ್ದೇನೆ, ನಾನು ಸುಖಿ ಇದ್ದೇನೆ, ನಾನು ದುಃಖಿ ಇದ್ದೇನೆ, ಈ ಧನ-ಧಾನ್ಯಾದಿ ಕುಟುಂಬ ವರ್ಗದವರು ನನ್ನವರಿದ್ದಾರೆ, ನಾನು ದೊಡ್ಡ ಶರೀರಧಾರಕನಿದ್ದೇನೆ, ನಾನು ಚಿಕ್ಕ ಶರೀರಧಾರಕನಿದ್ದೇನೆ. – ಈ ಪ್ರಕಾರ ಕರ್ಮನಿಮಿತ್ತದಿಂದ ಪೌದ್ಗಲಿಕ ದೇಹವನ್ನು ಧಾರಣ ಮಾಡುತ್ತ ಸ್ವಯಂ ತನ್ನನ್ನು ಜಡ ಸಮಾನ ಅಚೇತನದ ಚೇಷ್ಟೆಯುಳ್ಳವನೆಂದು ಹೇಳುತ್ತಾನೆ ಆದರೆ ತನ್ನ ವಿಶೇಷತೆಯಾದ ನೋಡುವ, ತಿಳಿಯುವ ರೂಪದ ಚೈತನ್ಯ ಭಾವವು ಎಂದೂ ಬಿಟ್ಟು ಹೋಗುವುದಿಲ್ಲ ತಾನು ಜೀವನೇ ಇದ್ದಾನೆ. ಹೇಗೆ ಅಭಿನಯ ಮಾಡುವಂಥವನು ಯಾವಾಗ ಸಿಂಹದ ಚರ್ಮವನ್ನು ಬಿಟ್ಟುಕೊಡುತ್ತಾನೆ ಆಗ ಎಲ್ಲರ ಭ್ರಮೆಯು ನಾಶವಾಗುತ್ತದೆ. ಎಲ್ಲರೂ ಅವನನ್ನು ಮನುಷ್ಯನೆಂದು ಮನ್ನಿಸ ತೊಡಗುತ್ತಾರೆ, ಅವನು ಕೂಡ ಮನುಷ್ಯನೇ ಉಳಿದನು, ಮೊದಲು ಕೂಡ ಅವನು ಮನುಷ್ಯನೇ ಇದ್ದನು. ಭ್ರಾಂತಿಯಿಂದ ಸಿಂಹನಾಗಿದ್ದನು ಅದೇ ಪ್ರಕಾರ ಶರೀರ ರೂಪದ ಚರ್ಮವನ್ನು ಬಿಟ್ಟುಕೊಟ್ಟಾಗ ಇವನು ಶುದ್ಧ ಆತ್ಮರೂಪದಿಂದ ಪ್ರಗಟನಾಗುತ್ತಾನೆ – ಈ ಪ್ರಕಾರ ಜೀವ-ಅಜೀವಗಳ ಸ್ವರೂಪವಿದೆ.

ಎಲೈ ಭವ್ಯನೇ ! ಜೀವ-ಅಜೀವಗಳ ಸ್ವರೂಪವನ್ನು ಹೇಗೆ ಹೇಳಲಾಗಿದೆಯೋ ಹಾಗೆಯೇ ಸಮ್ಯಕ್ ನಿರ್ಣಯವಾದ ಮೇಲೆ ಈ ವಿಚಾರವು ಸಹಜವಾಗಿಯೇ ಉತ್ಪನ್ನವಾಗುತ್ತದೆ ಎಂದು ನೀನು ನಿಶ್ಚಿತವಾಗಿ ತಿಳಿ. ಪರವಸ್ತುಗಳಿಂದ ಮಮತ್ವವು ಬಿಟ್ಟುಹೋಗಿ ಭ್ರಮೆಯ ನಾಶವಾಗಿ ಶುದ್ಧ ಶ್ರದ್ಧೆಯಾಗುತ್ತದೆ. ಸಮ್ಯಗ್ದೃಷ್ಟಿಯು ತನ್ನ ಅನುಭವದಲ್ಲಿ ಅಮೂರ್ತಿಕ ಶುದ್ಧ ಆತ್ಮನು ಸಿದ್ಧಭಗವಂತರ ಸ್ವರೂಪದಂಥವನೆಂದು ವಿಚಾರ ಮಾಡುತ್ತಾನೆ –

ಹದಿನಾಲ್ಕನೇ ಗುಣಸ್ಥಾನದಲ್ಲಿ ಯಾವ ಶರೀರದಲ್ಲಿ ಆತ್ಮನು ಸ್ಥಿತನಿದ್ದನು ಅವನು ತನ್ನ ಶುದ್ಧ ಪರಿಣತಿಯ ಯೋಗದಿಂದ ಆ ಶರೀರದ ಮೂಳೆ, ಮಾಂಸ, ಚರ್ಮ, ನರಮಂಡಲ ಮೊದಲಾದ ಪೌದ್ಗಲಿಕ ಆಕಾರ - ಸ್ಕಂಧಗಳನ್ನು ಬಿಟ್ಟುಕೊಟ್ಟು ಆ ಶರೀರದ ಆಕಾರ ತಾನು ಚೇತನರೂಪ ಸಿದ್ಧದೇವನಾಗಿ ವಿರಾಜಮಾನನಾಗುತ್ತಾನೆ; ಅದೇ ಪ್ರಕಾರ ದ್ರವ್ಯದೃಷ್ಟಿಯಿಂದ (ಸ್ವಭಾವದ ಅಪೇಕ್ಷೆಯಿಂದ) ವಾಸ್ತವದಲ್ಲಿ ತನ್ನ ಚೈತನ್ಯಭಾವವು ಕೂಡ ಈ ಪುದ್ಗಲ ಶರೀರದಿಂದ ಹಾಗೆಯೇ ಭಿನ್ನವಿದೆ. ನಾನು ವರ್ತಮಾನದಲ್ಲಿ ಈ ಶರೀರ ಕ್ಷೇತ್ರದಲ್ಲಿ ವಾಸಿಸುತ್ತಿದ್ದೇನೆ ಆದಾಗ್ಯೂ ಈ ಶರೀರದಲ್ಲಿ ನೋಡುವ, ತಿಳಿಯುವಂಥ ಗುಣವಂತೂ ನನ್ನದಿದೆ, ಈ ಶರೀರವಂತೂ ಜಡವಿದೆ ಅದು ಆಯುವಿನ ಕೊನೆಯು ಬಂದ ಮೇಲೆ ಬಿಟ್ಟು ಹೋಗುತ್ತದೆ ಹಾಗೂ ಸಿದ್ಧನಾಗಿ ಹೋದ ಮೇಲೆ ಬಿಟ್ಟುಹೋಗುತ್ತದೆ. ನಾನಂತೂ ಕೇವಲ ಈ ಕ್ಷೇತ್ರದಲ್ಲಿ ಇದ್ದೇನೆ. ಈ ಶರೀರದ ಯಾವ ಚರ್ಮ, ಮೂಳೆ, ಮಾಂಸ, ನರಮಂಡಲ ಪೌದ್ಗಲಿಕ ಆಕಾರವು ಮೂರ್ತಿಕವಿವೆ, ಅವು ನನ್ನ ಅಂಗಗಳಲ್ಲ ನಾನು ಚೈತನ್ಯನಿದ್ದೇನೆ. ಈ ಶರೀರದ ಈ ಚರ್ಮವು ಬಿಟ್ಟು ಹೋದರೆ ಹೋಗಲಿ, ಮಾಂಸ ಸ್ಕಂಧಗಳು ಬಿಟ್ಟು ಹೋದರೆ ಬಿಟ್ಟು ಹೋಗಲಿ, ಮೂಳೆಗಳು ನಷ್ಟವಾಗಿ ಹೋಗುತ್ತಿದ್ದರೆ ಹೋಗಲಿ, ಇತ್ಯಾದಿ ಪೌದ್ಗಲಿಕ ಸ್ಕಂಧಗಳು ನಷ್ಟವಾಗುತ್ತಿದ್ದರೆ ಆಗಿ ಹೋಗಲಿ, ನಾನು ನೋಡುವ, ತಿಳಿಯುವಂಥವನಂತೂ ನನ್ನ ಸ್ಥಾನದಲ್ಲಿ ಇದ್ದೇನೆ. ಎಲ್ಲ ಪೌದ್ಗಲಿಕ ಮೂರ್ತಿಕವು ನನ್ನ ಪ್ರದೇಶಗಳಿಂದ ಒಂದು ಕ್ಷೇತ್ರದಲ್ಲಿ ಇದ್ದವು, ಅವೆಲ್ಲವು - ಮೂರ್ತಿಕಗಳು ಪ್ರಥಕ್ ಆಗಿ ಹೋಗಿವೆ; ನಾನಂತೂ ಒಂದು ಅಮೂರ್ತಿಕ ನೋಡುವ - ತಿಳಿಯುವಂಥ ಸಿದ್ಧ ಸಮಾನ ಆತ್ಮನೇ ಉಳಿದಿದ್ದೇನೆ. ಸಮ್ಯಕ್ತ್ವವಾದ ಮೇಲೆ ಹೀಗೆ ಸ್ವಪರಗಳ ವಿಚಾರವು ಆಗುತ್ತಿರುತ್ತದೆ.

ಈ ಪ್ರಕಾರದ ವಿಚಾರಗಳಿಂದ ಸಮ್ಯಗ್ದೃಷ್ಟಿ ಜೀವಗಳದ್ದು ಶರೀರಾದಿ ಪರವಸ್ತುಗಳಿಂದ ಮಮತ್ವವು ಬಿಟ್ಟು ಹೋಗುತ್ತದೆ. ಪರವಸ್ತುಗಳಿಂದ ಮಮತ್ವವು ಬಿಟ್ಟುಹೋಗುವುದರಿಂದ ಸಹಜವಾಗಿಯೇ ನಿರಾಕುಲತೆಯು ಪ್ರಗಟವಾಗುತ್ತದೆ. ನಿರಾಕುಲತೆಯು ಪ್ರಗಟವಾಗುವುದರಿಂದ ಚಾರಿತ್ರದಲ್ಲಿ ವೃದ್ಧಿಯಾಗುತ್ತದೆ. ಚಾರಿತ್ರದ ವೃದ್ಧಿಯಿಂದ ವಿಶುದ್ಧತೆಯ ವೃದ್ಧಿಯು ವಿಶೇಷವಾಗಿ ಆಗುತ್ತದೆ. ವಿಶುದ್ಧತೆಯು ವೃದ್ಧಿಸುವುದರಿಂದ ಕೇವಲಜ್ಞಾನದ ಪ್ರಾಪ್ತಿಯಾಗುತ್ತದೆ. ಕೇವಲಜ್ಞಾನವಾದ ಮೇಲೆ ಸಂಸಾರ ಭ್ರಮಣವು ನಾಶವಾಗಿ ಸಕಲ ಶುದ್ಧ ಸಿದ್ಧಪದವು ಪ್ರಾಪ್ತವಾಗಿ ಪೂರ್ಣ ಸುಖಿಗಳಾಗುತ್ತಾರೆ ನಂತರ ಸಿದ್ಧಸ್ಥಾನದ ಮೇಲೆ ವಿರಾಜಮಾನರಾಗಿ ಅಕಲಂಕ, ನಿರ್ದೋಷ ಸಿದ್ಧರಾಗುತ್ತಾರೆ. ಜಗತ್‌ಪೂಜ್ಯ ಪದವನ್ನು ಧಾರಣ ಮಾಡಿ ಅವಿನಾಶಿ ಸುಖರೂಪರಾಗುತ್ತಾರೆ - ಇಂಥ ಸಿದ್ಧ ಪದವಿಗೆ ನಮ್ಮ ನಮಸ್ಕಾರವಿರಲಿ. ಇವರುಗಳ ಭಕ್ತಿಯ ಪ್ರಸಾದದಿಂದ ನನಗೆ ಇವರುಗಳ ಸಮಾನವಾದ ಪದದ ಪ್ರಾಪ್ತಿಯಾಗಲಿ. ಈ ಪ್ರಕಾರದ ಭಾವನೆಯನ್ನು ಭಾವಿಸಿ ಸಮ್ಯಗ್ದೃಷ್ಟಿಯು ಸಾತಿಶಯ ಪುಣ್ಯ ಬಂಧದ ಸಂಚಯ ಮಾಡುತ್ತಾನೆ.

**ಸಂದೇಹ -** ಸಮ್ಯಗ್ದೃಷ್ಟಿಗೂ ಪುಣ್ಯದ ಇಚ್ಛೆ ಇರುತ್ತದೆಯೇನು ? ಹಾಗೂ ತಾವು ಹೇಳಿರುವ ಹಾಗೆ ಸಾತಿಶಯ ಪುಣ್ಯದ ಬಂಧವನ್ನು ಸಮ್ಯಗ್ದೃಷ್ಟಿಯೇ ಮಾಡಿಕೊಳ್ಳುತ್ತಾನೆಂದಾದರೆ ಅಂಥ ಪುಣ್ಯವು ಇತರ ಜನರಿಗೆ ಅದೇಕೆ ಆಗುವುದಿಲ್ಲ? ಹಾಗೂ ಯಾವುದನ್ನು ಸಾತಿಶಯ ಪುಣ್ಯವೆಂದು ಹೇಳುತ್ತಾರೆ ?

**ಸಮಾಧಾನ :-** ಎಲೈ ಭವ್ಯನೇ ! ಯಾವ ಪುಣ್ಯದ ಬಂಧವಾದ ಮೇಲೆ ಆ ಪುಣ್ಯವು ಹೀನವಾಗುವುದಿಲ್ಲ ಒಂದು ವೇಳೆ ಎಂಟು ಹತ್ತು ಭವಗಳು ಶೇಷವಿದ್ದರೆ, ಅಷ್ಟುಉಚ್ಚ ಉಚ್ಚ ಭವಗಳನ್ನು ಧಾರಣ ಮಾಡಿ ನಂತರ ಯಾರಿಗೆ ಮೋಕ್ಷವೇ ಆಗುತ್ತದೆ, ಆ ಪುಣ್ಯವನ್ನು ಸಾತಿಶಯ ಪುಣ್ಯವೆಂದು ಹೇಳುತ್ತಾರೆ.

ಕೆಲವೊಮ್ಮೆ ಶುಭಭಾವಗಳಿಂದ ಪುಣ್ಯಬಂಧವಾಗುತ್ತದೆ. ಒಮ್ಮೊಮ್ಮೆ ಅಶುಭಭಾವಗಳಿಂದ ಪಾಪಬಂಧವಾಗುತ್ತದೆ ಪುಣ್ಯಬಂಧವಾಗುತ್ತ-ಆಗುತ್ತ ನಿಂತು ಹೋದರೆ ಅದರ ಫಲದಲ್ಲಿ ಒಮ್ಮೆ ದೇವ, ಕೆಲವೊಮ್ಮೆ ಪಶುವಾಗುತ್ತಾನೆ ಆ ಪುಣ್ಯವು ಅತಿಶಯರಹಿತ - ನಿರತಿಶಯವೆನಿಸಿಕೊಳ್ಳುತ್ತದೆ. ಈ ಪುಣ್ಯವು ಸಂಸಾರದ್ದೇ ಕಾರಣವಿದೆ ಎಂದು ತಿಳಿಯುವುದು ಹಾಗೂ

ಎಲೈ ಭವ್ಯನೇ ! ಆಲಿಸು ಸಮ್ಯಗ್ದೃಷ್ಟಿಗಂತೂ ಪುಣ್ಯಬಂಧದ ಇಚ್ಛೆ ಇರುವುದಿಲ್ಲ; ಆದರೆ ಸಮ್ಯಕ್ತ್ವವಾದ ಮೇಲೆ ಎರಡು, ಮೂರು ಭವಗಳನ್ನು ಧಾರಣ ಮಾಡಿದರೆ ಅಷ್ಟು ಕಾಲದವರೆಗೆ ಸಂಸಾರದಲ್ಲಿ ಉಳಿಯುತ್ತಾನೆ. ಬಂಧವಾದ ಮೇಲೆ ಸಮ್ಯಗ್ದೃಷ್ಟಿಗಳಿಗೆ ಪುಣ್ಯದ ಫಲವು ಬಿಟ್ಟು ಹೋಗುವುದಿಲ್ಲ. ಎಲ್ಲಿಯವರೆಗೆ ಸಂಸಾರದಲ್ಲಿ ಇರುತ್ತಾರೆ ಅಲ್ಲಿಯವರೆಗೆ ದೇವ, ಇಂದ್ರ, ಚಕ್ರವರ್ತಿ, ಮಹಾನ್‌ದೊರೆಗಳ ರೂಪದಲ್ಲಿ ಸುಖಿಯಾಗುತ್ತ ನಂತರ ಪರಂಪರೆಯಿಂದ ಮೋಕ್ಷಕ್ಕೇ ಹೋಗುತ್ತಾರೆ. ಸಮ್ಯಗ್ದೃಷ್ಟಿಗಳದು ಇಂಥದೇ ಅತಿಶಯ ಸಹಿತ ಪುಣ್ಯಬಂಧವಾಗುತ್ತದೆ ಅಂಥದೇ ಸಹಜ ಭಾವವು ಅವರದ್ದಿರುತ್ತದೆ ಎಂದು ತಿಳಿಯುವುದು.

ಈ ಪ್ರಕಾರ ಜೀವ-ಅಜೀವ ತತ್ತ್ವಗಳ ಸ್ವರೂಪವನ್ನು ಹೇಗೆ ಜಿನದೇವರು ದಿವ್ಯಧ್ವನಿಯ ಮೂಲಕ ಹೇಳಿದ್ದಾರೆ ಹಾಗೆಯೇ ಗಣಧರ ದೇವರು ಪ್ರರೂಪಣೆ ಮಾಡಿದ್ದಾರೆ. ಅದರ ಅನುಸಾರ ಪರಂಪರೆಯಿಂದ ಆಚಾರ್ಯರು ಪ್ರರೂಪಣೆ ಮಾಡುತ್ತ ಬಂದಿದ್ದಾರೆ. ಅದರಿಂದ ಭೇದಜ್ಞಾನವನ್ನು ಪ್ರಾಪ್ತ ಮಾಡಿಕೊಂಡು ಅನೇಕ ಭವ್ಯ ಪ್ರಾಣಿಗಳು ಅನಾದಿ ಮಿಥ್ಯಾತ್ವದ ಬಂಧನವನ್ನು ಮುರಿದು ಹಾಕಿ ಸಮ್ಯಗ್ದೃಷ್ಟಿಗಳಾಗಿದ್ದಾರೆ. ಅದರದೇ ಅನುಸಾರವಾಗಿ ಇಲ್ಲಿಯೂ ಕೂಡ ಸಾಮಾನ್ಯದಿಂದ ತತ್ತ್ವ ಸಂಬಂಧದ ಭೇದಜ್ಞಾನ ಹೇಳಲಾಯಿತು. ಇದರ ರಹಸ್ಯವನ್ನು ತಿಳಿದುಕೊಂಡು ಈಗ ಎಲೈ ಭವ್ಯನೇ ! ನೀನು ತತ್ತ್ವಜ್ಞಾನಿಯಾಗು - ಈ ಪ್ರಕಾರ ಜಿನದೇವರ ಕಥನದ ಅನುಸಾರ ಸಾಮಾನ್ಯ ತತ್ತ್ವಭೇದದ ಕಥನವು ಪೂರ್ಣವಾಯಿತು.

ಈ ಪ್ರಕಾರ ಅನಾದಿ ಭ್ರಮೆಯಿಂದ ಮರೆತು ಹೋದ, ಮುಗ್ಧ ಚೇಷ್ಟೆಗಳ ಧಾರಕ, ಅತತ್ತ್ವಶ್ರದ್ಧಾನಿ ಕುಗುರುಗಳ ಉಪದೇಶ ರೂಪದ ಪಾಶದಿಂದ ಬಂಧಿಸಲ್ಪಟ್ಟ, ಧರ್ಮವಾಸನಾರಹಿತ, ಸಂಸಾರ ಭೋಗಗಳ ಅಭಿಲಾಷಿ, ಸಮತಾರಸದ ಅಭಾವದಲ್ಲಿ ತೃಷ್ಣೆಯರೂಪದ ದಾಹದಿಂದ ದುಃಖಿಯಾದ, ಜ್ಞಾನಚಕ್ಷುರಹಿತ ಅಂಧರ ಸಮಾನನಿರುವ ಬಾಲಕರಂತೆ ಲೀಲೆ ಮಾಡುವ, ಮುಗ್ಧ ಪ್ರಾಣಿಯನ್ನು ಸೌಮ್ಯ ಬುದ್ಧಿ - ಪಾತ್ರ, ಧರ್ಮಾರ್ಥಿಯೆಂದು ತಿಳಿದುಕೊಂಡು ದಯಾಭಾವದಿಂದ ಅವರಿಗೆ ತಿಳಿಸಿಕೊಡುವ ಸಲುವಾಗಿ ಕುದೇವಾದಿಗಳ ಮುಖಾಂತರ ಪ್ರರೂಪಿತವಿರುವ ಅನೇಕ ಕಲ್ಪಿತ ಮತಗಳಲ್ಲಿ ಯಾರು ಸ್ವೇಚ್ಛೆಯಿಂದ, ಬುದ್ಧಿಯಿಂದ, ಕಲ್ಪನೆಯಿಂದ ಭಿನ್ನ-ಭಿನ್ನ ತತ್ತ್ವಭೇದ ಹೇಳುತ್ತಾರೆ, ಅವರುಗಳ ಅಸತ್ಯತೆಯನ್ನು ಪ್ರಕಟಪಡಿಸಿ ಜಿನಭಾಷಿತ ಜೀವ-ಅಜೀವ ತತ್ತ್ವ, ದ್ರವ್ಯ-ಗುಣ-ಪರ್ಯಾಯಸಹಿತ, ಭಿನ್ನ-ಭಿನ್ನ ನಯಗಳ ಮೂಲಕ ಹೇಳಲಾಯಿತು. ಈ ಸರ್ವಜ್ಞಭಾಷಿತ ತತ್ತ್ವಭೇದವು ಸತ್ಯವಿದೆ. ಯಾರೋ ವಾದಿಗಳ ಮೂಲಕ ಇದನ್ನು ಖಂಡಿತಗೊಳಿಸುವ ಸಾಧ್ಯತೆಯಿಲ್ಲ, ಅದರಿಂದ ಪ್ರಮಾಣವಿದೆ. ಈ ಜೀವ-ಅಜೀವ ಮೊದಲಾದ ತತ್ತ್ವಗಳೇ ಸತ್ಯವಿವೆ. .....

ಈ ಪ್ರಕಾರ ಶ್ರೀ ಸುದೃಷ್ಟಿತರಂಗಿಣಿ ಎಂಬ ಗ್ರಂಥದಲ್ಲಿ ಅತತ್ತ್ವಶ್ರದ್ಧೆ ಮತ್ತು ಅನ್ಯಮತಗಳ ಸಂಬಂಧದ
ಜೀವ-ಅಜೀವ ತತ್ತ್ವಗಳ ವಿಪರೀತ ಕಥನ ಮಾಡುವಂಥ ಕುವಾದಿಗಳ ಭ್ರಮೆಯನ್ನು
ನಾಶ ಮಾಡಿ ಜಿನಭಾಷಿತ ತತ್ತ್ವಜ್ಞಾನದ ವರ್ಣನೆಯೆಂಬ ಹೆಸರಿನ
ಏಳನೆಯ ಪರ್ವವು ಪೂರ್ಣವಾಯಿತು.

★★★★★

■ ಯಾವ ಮನುಷ್ಯನು ನಿರಂತರ ದೇವ-ಶಾಸ್ತ್ರ-ಗುರುಗಳ ಭಕ್ತಿ ಮಾಡುತ್ತಾನೆ, ಸಮಸ್ತ ಜೀವಧಾರಿಗಳ ಮೇಲೆ ದಯೆ ಮಾಡುತ್ತಾನೆ; ಸ್ತುತಿ, ನಿಯಮ ಮತ್ತು ತ್ಯಾಗದಲ್ಲಿ ಅನುರಾಗಿಯಿದ್ದಾನೆ, ಯಾವನು ಇತರರ ನಿಂದೆ ಮಾಡುವುದಿಲ್ಲ, ಯಾರ ಇಂದ್ರಿಯಗಳು ವಶವರ್ತಿಯಿವೆ - ಆ ಪುರುಷನ ಧ್ಯಾನವು ಧರ್ಮಧ್ಯಾನವೆನಿಸಿಕೊಳ್ಳುತ್ತದೆ.

# ೮ : ಎಂಟನೆಯ ಪರ್ವ
# ಸುದೇವ ಹಾಗೂ ಕುದೇವ - ಗುರುವಿನ ಸ್ವರೂಪ ವರ್ಣನೆ

ಈ ಶುದ್ಧ ತತ್ತ್ವಗಳ ಸಮ್ಯಕ್(ತರ್ಕ-ಯುಕ್ತಿ ಸಂಗತ) ಕಥನವು ಯಾವುದರಲ್ಲಿ ಕಂಡು ಬರುತ್ತದೆ ಅದು ಶುದ್ಧ ಆಗಮವಿದೆ. ಯಾವ ಅನ್ಯ ಆಗಮಗಳಿವೆ ಅವು ತತ್ತ್ವಗಳ ಸಮ್ಯಕ್ ನಿರೂಪಣೆ ಮಾಡದಿರುವುದರಿಂದ ಶುದ್ಧ ಆಗಮಗಳಲ್ಲ. ಯಾರು ಇಂಥ ಶುದ್ಧ ಆಗಮಗಳ ಕರ್ತೃವಿದ್ದಾರೆ (ಉಪದೇಶಕರಿದ್ದಾರೆ) ಅವರೇ ಸರ್ವಜ್ಞ ಭಗವಾನ ವೀತರಾಗ, ಶುದ್ಧ ಆಪ್ತರಿದ್ದಾರೆ. ಆಪ್ತರೆಂದು ಭಗವಂತರಿಗೆ ಹೇಳುತ್ತಾರೆ. ಆ ಶುದ್ಧ ಭಗವಂತರನ್ನು ತಿಳಿದುಕೊಳ್ಳಬೇಕಾಗುವುದು.

**ಪ್ರಶ್ನೆ** -ಅವರನ್ನು ಹೇಗೆ ತಿಳಿಯುವುದು ?

**ಉತ್ತರ** -ಎಲೈ ವಿವೇಕಿಯೇ ! ಯಾವ ವಸ್ತುವನ್ನು ಯಾವಾಗ ತಿಳಿಯುವುದಾಗುತ್ತದೆ ಆಗ ಅದನ್ನು ಗುಣದಿಂದ ತಿಳಿಯಲಾಗುತ್ತದೆ ಅದರಿಂದ ಪ್ರಥಮದಲ್ಲಿಯೇ ಭಗವಂತರ ಗುಣಗಳನ್ನು ತಿಳಿದುಕೊಂಡರೆ ಶುದ್ಧ ಭಗವಂತನನ್ನು ತಿಳಿಯುವುದಾಗುತ್ತದೆ ಎಂಬುದರ ವಿಚಾರ ಮಾಡು. ಅದಕ್ಕಾಗಿ ಈಗ ಭಗವಂತರ ಗುಣಗಳನ್ನು ಹೇಳುತ್ತಾರೆ -

ಭಗವಂತರು ವೀತರಾಗಿ ಇರುತ್ತಾರೆ, ವೀತರಾಗ ಭಾವವಿಲ್ಲದೆ ಸರಾಗಿ ಜೀವಗಳಿಂದ ಯಥಾವತ್ ಉಪದೇಶವಾಗುವ ಸಾಧ್ಯತೆ ಇಲ್ಲ. ತನ್ನ ಭಕ್ತನಿದ್ದರೆ ಅವನ ಪ್ರಶಂಸೆ ಮಾಡುವುದು, ರಕ್ಷಣೆ ಮಾಡುವುದು; ತನ್ನ ಭಕ್ತನಿಲ್ಲದಿದ್ದರೆ ಅವನ ನಿಂದೆ ಮಾಡುವುದು, ಅವನ ಕೇಡನ್ನು ಬಯಸುವುದು - ಇಂಥ ದೇವಗಳ ವಚನವು ಪ್ರಮಾಣವಿರುವ ಸಾಧ್ಯತೆಯಿಲ್ಲ. ಯಥಾವತ್ ಉಪದೇಶವು ವೀತರಾಗಿಗಳಿಲ್ಲದಿದ್ದರೆ ಸಾಧ್ಯವಾಗುವುದಿಲ್ಲ ಆದುದರಿಂದ ದೇವರು ವೀತರಾಗಿಯಾಗಿರಬೇಕಾಗುವುದು.

ದೇವರು ಸರ್ವಜ್ಞರಿರಬೇಕಾಗುವುದು. ಸರ್ವಜ್ಞರನ್ನು ಹೊರತು ಪಡಿಸಿ ಲೋಕಾಲೋಕವನ್ನು ತಿಳಿಯುವುದು ಸಂಭವವಿಲ್ಲ. ಜೀವಗಳ ಅಂತರಂಗವನ್ನು ಘಟಪಟಾದಿಗಳನ್ನು ತಿಳಿಯದಿರುವಂಥ ತುಚ್ಛ ಜ್ಞಾನಿಗಳ ವಚನವು ಪ್ರಮಾಣವಿರುವುದಿಲ್ಲ, ಆದುದರಿಂದ ಭಗವಂತರು ಸರ್ವಜ್ಞರಾಗಿರಬೇಕಾಗುವುದು.

ವೀತರಾಗ, ಸರ್ವಜ್ಞರಂತೂ ಇರುತ್ತಾರೆ; ಆದರೆ ಹಿತೋಪದೇಶಕರಿಲ್ಲದಿದ್ದರೆ ಅಂಥ ಭಗವಂತರಿಂದ ಪ್ರಯೋಜನವೇನು ? ಯಾವ ಒಳಿತನ್ನಂತೂ ಮಾಡುವುದಿಲ್ಲ ಅದರಿಂದ ಭಗವಂತರು ದಡ ತಲುಪಿಸುವಂಥವರಿರ-ಬೇಕಾಗುವುದು. ಅವರ ನಾಮಸ್ಮರಣೆ ಮಾಡುವುದರಿಂದ, ಧ್ಯಾನ ಮಾಡುವುದರಿಂದ, ಪೂಜೆ ಮಾಡುವುದರಿಂದ ಭಕ್ತರ ಒಳಿತು ಆಗುವಂಥವರಿರಬೇಕು.

**ಸಂದೇಹ** - ವೀತರಾಗಿ ಭಗವಂತರು ದಡ ತಲುಪಿಸುವಂಥವರು ಹೇಗಾಗುವ ಸಾಧ್ಯತೆ ಇದೆ ? ದಡ ತಲುಪಿಸುವಂಥ ಕಾರ್ಯವಂತೂ ಸರಾಗಿಗಳದ್ದಿರುತ್ತದೆ. ವೀತರಾಗಿಗಳಿಗೆ ಭಕ್ತರನ್ನು ದಡ ತಲುಪಿಸುವಂಥ ಇಚ್ಛೆಯಾದ ಮೇಲೆ ವೀತರಾಗ ಭಾವವು ಹೇಗೆ ಉಳಿಯುವ ಸಾಧ್ಯತೆ ಇದೆ. ? ಇಚ್ಛೆ ಇಲ್ಲದೆ ಭಕ್ತರ ಒಳಿತು ಹೇಗಾಗುವುದು.?

**ಸಮಾಧಾನ** - ಹೇಗೆ ಸೂರ್ಯನಿಗೆ ನಾನು ಉದಯಕ್ಕೆ ಪ್ರಾಪ್ತನಾಗುವೆನು ಅದರಿಂದ ಕಮಲಗಳು ಪ್ರಫುಲ್ಲಿತವಾಗಲಿ ಎಂಬ ಇಚ್ಛೆ ಇರುವುದಿಲ್ಲ; ಆದಾಗ್ಯೂ ಸೂರ್ಯನ ಉದಯವಾದ ಮೇಲೆ ಸಹಜವಾಗಿಯೇ ಕಮಲಗಳು ಪ್ರಫುಲ್ಲಿತವಾಗುತ್ತವೆ. ಸೂರ್ಯನಲ್ಲಿ ಅಂಥದೊಂದು ಗುಣವು ಸಹಜವಾಗಿಯೇ ಕಂಡು ಬರುತ್ತದೆ, ಅದೇ ಪ್ರಕಾರ ಭಗವಂತರಿಗೆ ನಾನು ಭಕ್ತರ ಒಳಿತು ಮಾಡುವೆನು; ಎಂಬ ಇಚ್ಛೆಯಂತೂ ಇರುವುದಿಲ್ಲ, ಆದರೆ ಭಗವಂತರಲ್ಲಿ ದಡ ತಲುಪಿಸುವಂಥ ಗುಣವು ಸಹಜವಾಗಿಯೇ ಕಂಡು ಬರುತ್ತದೆ; ಅದರ ಕಾರಣದಿಂದ ಭಕ್ತರ ಒಳಿತು ಆಗಿಯೇ ಆಗುತ್ತದೆ.

ಹಾಗೂ ಹೇಗೆ ಯಾವನೋ ಸೂರ್ಯನ ಕಡೆಗೆ ನೆಟ್ಟ ನೋಟದಿಂದ ನೋಡಿದರೆ ಅವನ ನೇತ್ರಗಳ ಎದುರಿಗೆ ಅಂಧಕಾರವು ಕವಿಯುತ್ತದೆ, ಕಣ್ಣುಗಳ ಜ್ಯೋತಿಯು ಮಂದವಾಗಿ ಹೋಗುತ್ತದೆ, ಇಲ್ಲಿ ಆ ಸೂರ್ಯನಿಗೆ ಇವರು ನನ್ನ

ಕಡೆಗೆ ಕ್ರೂರತೆಯಿಂದ ನೋಡುತ್ತಾರೆ ಅದರಿಂದ ಅವರನ್ನು ಕುರುಡರನ್ನಾಗಿ ಮಾಡುವ ಇಚ್ಛೆಯಂತೂ ಇರುವುದಿಲ್ಲ. ಆದಾಗ್ಯೂ ಸೂರ್ಯನ ತೇಜಸ್ಸಿನಲ್ಲಿ ಸಹಜವಾಗಿಯೇ ಅಂಥದೊಂದು ಅತಿಶಯವಿರುತ್ತದೆ; ಅದರಿಂದ ಸೂರ್ಯನ ಕಡೆಗೆ ಕ್ರೂರ ದೃಷ್ಟಿಯಿಂದ ನೋಡುವಂಥವರ ನೇತ್ರ ಜ್ಯೋತಿಯು ಮಂದವಾಗಿ ಹೋಗುತ್ತದೆ, ಅದೇ ಪ್ರಕಾರ ಭಗವಂತರಿಗೆ ತಮ್ಮ ನಿಂದಕರ ಕೇಡು ಮಾಡುವ ಇಚ್ಛೆಯಂತೂ ಇರುವುದಿಲ್ಲ, ಆದಾಗ್ಯೂ ಅಂಥದ್ದೊಂದು ಅತಿಶಯವು ಇರುತ್ತದೆ, ಅದರಿಂದ ಭಗವಂತರ ನಿಂದೆ ಮಾಡುವಂಥವರಿಗೆ ನರಕಾದಿ ದುಃಖವು ಸಹಜವಾಗಿಯೇ ಪ್ರಾಪ್ತವಾಗುತ್ತದೆ.

ಈ ಪ್ರಕಾರ ಭಗವಂತರಲ್ಲಿ ವೀತರಾಗತೆ, ಸರ್ವಜ್ಞತೆ, ದಡ ತಲುಪಿಸುವ ಗುಣಗಳು ಮುಖ್ಯವಿವೆ. ಅವುಗಳನ್ನು ಹೊರತು ಪಡಿಸಿ ಇನ್ನೂ ಅನಂತ ಗುಣಗಳಿರುತ್ತವೆ. ಅವುಗಳಲ್ಲಿ ಯಾವವುಗಳನ್ನು ತಿಳಿಯುವುದರಿಂದ ಭಗವಂತರ ಪರಿಚಯವಾಗುತ್ತದೆ ಆ ಅದೆಷ್ಟೋ ಅತಿಶಯರೂಪದ ಬಾಹ್ಯ -ಅಭ್ಯಂತರ ಗುಣಗಳನ್ನು ಹೇಳುತ್ತಾರೆ.

**ದೋಸ ಅಠಾರಹ ರಹಿಯೋ, ಗುಣ ಸಡಚಾಲೀಸ ಹೋಯ ಸಂಜುತ್ತೋ ।**
**ಸವಗ್ಗೋ ವೀಯರಾಯೋ, ಸದೇವೋ ಭವ್ವತಾರ ಪಣಮಾಮಿ ॥೧೮॥**

**ಗಾಥಾರ್ಥ ಃ-** ಹದಿನೆಂಟು ದೋಷಗಳಿಂದ ರಹಿತರೂ ನಲವತ್ತಾರು ಗುಣಗಳಿಂದ ಯುಕ್ತರು, ಸರ್ವಜ್ಞರು ವೀತರಾಗಿಗಳು, ಭವ್ಯರನ್ನು ಭವ ಸಮುದ್ರದಿಂದ ದಾಟಿಸುವಂಥವರು ಆಗಿರುವ ದೇವರಿಗೆ ನಮಸ್ಕಾರ ಮಾಡುತ್ತೇನೆ.

**ಭಾವಾರ್ಥ ಃ-** ಯಾರಲ್ಲಿ ರಾಗ-ದ್ವೇಷಗಳಿಲ್ಲ ಅವರು ವೀತರಾಗಿ ಇದ್ದಾರೆ, ಯಾರು ಕೇವಲಿಜ್ಞಾನ ಸಹಿತರಿದ್ದಾರೆ ಅವರು ಸರ್ವಜ್ಞರಿದ್ದಾರೆ. ಯಾರ ನಾಮಸ್ಮರಣೆಯಿಂದ ಪಾಪಗಳ ನಾಶವಾಗುತ್ತದೆ ಅಂಥ ಅತಿಶಯದಧಾರಕರಿದ್ದಾರೆ ಹಾಗೂ ಕ್ಷುಧಾದಿ ಹದಿನೆಂಟು ದೋಷಗಳಿಂದ ರಹಿತರಿದ್ದಾರೆ ಮತ್ತು ನಲವತ್ತಾರು ಗುಣಗಳಿಂದ ಸಹಿತರಿದ್ದಾರೆ ಅವರನ್ನು ದೇವರೆಂದು ತಿಳಿಯುವುದು.

ಇಲ್ಲಿ ಮೊದಲು ಹದಿನೆಂಟು ದೋಷಗಳ ಸ್ವರೂಪ ಹೇಳುತ್ತಾರೆ,-

೧) **ಕ್ಷುಧೆ –** ಜಗತ್ತಿನ ಜೀವಗಳನ್ನು ಮಹಾದುಃಖಿಯನ್ನಾಗಿ ಮಾಡುವಂಥ, ಯಾವುದರ ಪೂರ್ತಿಯಾದಲ್ಲದೆ ಮರಣಾಂತಕವಾಗಿ ಹೋಗುವಂಥ ಈ ಕ್ಷುಧೆಯು ಮಹಾರೋಗವಿದೆ. ಯಾರಿಗೆ ಕ್ಷುಧೆ ಇದೆ ಅವರು ದೇವರಿರುವುದಿಲ್ಲ. ಯಾರದು ಸ್ವಯಂ ಕ್ಷುಧೆಯರೂಪದ ಮಹಾ ವ್ಯಾಧಿಯು ನಷ್ಟವಾಗಿ ಹೋಗಿಲ್ಲ, ಅವರು ಭಕ್ತರ ಕ್ಷುಧೆಯನ್ನು ಹೇಗೆ ನಷ್ಟ ಮಾಡುವರು ? – ಭಗವಂತರಿಗೆ ಕ್ಷುಧೆಯ ರೋಗವಿರುವುದಿಲ್ಲ.

೨) **ತೃಷೆ –** ಇದರ ಸಮಾನ ದುಃಖದಾಯಕವಾದ ತೀವ್ರ ರೋಗವು ಇನ್ನೊಂದಿಲ್ಲ. ಒಂದು ವೇಳೆ ಜಲವೆಂಬ ಹೆಸರಿನ ಔಷಧಿಯು ದೊರಕದಿದ್ದರೆ ಪ್ರಾಣವು ಹೊರಟು ಹೋಗುತ್ತದೆ. ಇಂಥ ತೃಷೆಯ ರೂಪದ ವ್ಯಾಧಿಯು ಯಾರಿಗೆ ಇದೆ ಅವರು ದೇವರಿಲ್ಲ. ಯಾರದು ತಮ್ಮ ತೃಷೆಯ ದಾಹವು ನಷ್ಟವಾಗಿಲ್ಲ ಅವರು ಭಕ್ತರ ತೃಷೆಯ ದಾಹವನ್ನು ಹೇಗೆ ನಷ್ಟ ಮಾಡಬಹುದಾಗಿದೆ ? ಭಗವಂತರಿಗೆ ತೃಷೆಯ ರೋಗವಿರುವುದಿಲ್ಲ.

೩) **ರಾಗ –** ರಾಗಭಾವವಿರುವಂಥವರು ಭಗವಂತರಿಲ್ಲ. ಭಗವಂತರಿಗೆ ರಾಗ ಭಾವವಿರುವುದಿಲ್ಲ.

೪) **ದ್ವೇಷ –** ಯಾರಿಗೆ ದ್ವೇಷಭಾವವಿದೆ ಅವರು ಇತರರ ಕೇಡು ಮಾಡುವರು ಆದುದರಿಂದ ಯಾರಿಗೆ ದ್ವೇಷವಿದೆ ಅವರು ಭಗವಂತರಿರುವುದಿಲ್ಲ – ಭಗವಂತರಿಗೆ ದ್ವೇಷ ಭಾವವಿರುವುದಿಲ್ಲ.

೫) **ಜನ್ಮ –** ಯಾರು ಮಾತೆಯ ಗರ್ಭದಲ್ಲಿ ಬರುತ್ತಾರೆ, ಗರ್ಭದ ಮಹಾದುಃಖ ಹಾಗೂ ಮಲಮೂತ್ರಗಳಲ್ಲಿ ಒಂಭತ್ತು ತಿಂಗಳವರೆಗೆ ಇದ್ದು, ತಲೆ ಕೆಳಗೆ ಕಾಲು ಮೇಲೆ ಮಾಡಿ ಮಹಾಸಂಕಟದಿಂದ ಜನ್ಮ ಪಡೆಯುತ್ತಾರೆ ಅವರು ಭಗವಂತರಿರುವುದಿಲ್ಲ. ಭಗವಂತರ ಜನ್ಮ(ಅವತಾರ)ವಿರುವುದಿಲ್ಲ.

**೬) ಜರೆ -** ಜರೆ (ವೃದ್ಧಾಪ್ಯ)ಯಿಂದ ಎಲ್ಲ ಅಂಗಗಳು ಶಿಥಿಲವಾಗಿ ಹೋಗುತ್ತವೆ. ದೀನತೆಯು ಪ್ರಾಪ್ತವಾಗುತ್ತದೆ. ಇಂಥ ಜರೆಯು ಯಾರಿಗೆ ಇರುತ್ತದೆ ಅವರು ಭಗವಂತರಿರುವುದಿಲ್ಲ. ಭಗವಂತರಿಗೆ ಜರೆ ಇರುವುದಿಲ್ಲ.

**೭) ಮರಣ -** ಯಾರಿಗೆ ಮರಣವಾಗುತ್ತದೆ ಅವರು ಭಗವಂತರಿರುವುದಿಲ್ಲ. ಯಾರು ತಮ್ಮ ಮರಣವನ್ನೇ ನಷ್ಟಮಾಡಲಾಗಿಲ್ಲ, ಅವರು ಭಕ್ತರ ಮರಣವನ್ನು ಹೇಗೆ ನಷ್ಟಗೊಳಿಸುವರು ? - ಅದರಿಂದ ಭಗವಂತರಿಗೆ ಮರಣವಿರುವುದಿಲ್ಲ.

**೮) ರೋಗ -** ಯಾರಿಗೆ ರೋಗವಿರುತ್ತದೆ ಅವರು ದೇವರಿರುವುದಿಲ್ಲ. ಯಾರು ತಮ್ಮ ರೋಗವನ್ನೇ ನಷ್ಟ ಮಾಡುವ ಸಾಧ್ಯತೆಯಾಗಿಲ್ಲ, ಅವರು ಭಕ್ತರನ್ನು ಹೇಗೆ ಸುಖಿಗಳನ್ನಾಗಿ ಮಾಡುವರು ?- ಅದರಿಂದ ಭಗವಂತರಿಗೆ ರೋಗವಿರುವುದಿಲ್ಲ.

**೯) ಶೋಕ -** ಯಾರಿಗೆ ಇಷ್ಟವಸ್ತುವಿನ ವಿಯೋಗವಾಗಿ ಹೋದಮೇಲೆ ಶೋಕವಾಗುತ್ತದೆ, ಅವರು ದೇವರಿರುವುದಿಲ್ಲ. ಯಾರು ತಮ್ಮ ಶೋಕವನ್ನೇ - ದುಃಖವನ್ನೇ ದೂರಮಾಡುವುದು ಸಾಧ್ಯವಾಗಿಲ್ಲ, ಆ ದೇವರು ಭಕ್ತರ ಶೋಕವನ್ನು ಹೇಗೆ ದೂರ ಮಾಡುವ ಸಾಧ್ಯತೆಯಿದೆ ? - ಅದರಿಂದ ಭಗವಂತರಿಗೆ ಶೋಕವಿದ್ದರೆ ಅವರು ಭಗವಂತರಿಲ್ಲ.

**೧೦) ಭಯ -** ಯಾರಿಗೆ ಶತ್ರು , ರೋಗ, ಮರಣಾದಿ ದುಃಖಗಳ ಭಯವಿರುತ್ತದೆ ಅವರು ಭಗವಂತರಿರುವುದಿಲ್ಲ. ಯಾರು ತಮ್ಮ ಭಯವನ್ನೇ ದೂರ ಮಾಡುವುದಾಗಿಲ್ಲ ಅವರು ಭಕ್ತರನ್ನು ಹೇಗೆ ಸುಖಿಗಳನ್ನಾಗಿಸುವರು ? - ಅದರಿಂದ ಸರ್ವಜ್ಞ ಭಗವಂತರಿಗೆ ಭಯವಿರುವುದಿಲ್ಲ.

**೧೧) ವಿಸ್ಮಯ -** ವಿಸ್ಮಯ ಅರ್ಥಾತ್ ಇದೇನಾಗಿ ಹೋಯಿತು, ಎಂಥ ಆಶ್ಚರ್ಯವಿದೆಯಲ್ಲ ! ಎಂಬ ಭಾವವು ಜ್ಞಾನರಹಿತ ಅಜ್ಞಾನಿಗಳಿಗೆ ಆಗುತ್ತದೆ - ಇಂಥ ವಿಸ್ಮಯವು ಯಾರಿಗೆ ಇರುತ್ತದೆ ಅವರು ಭಗವಂತರಿಲ್ಲ. ಕೇವಲಜ್ಞಾನಿಗಳಿಗೆ ಯಾವುದೇ ಪ್ರಕಾರದ ವಿಸ್ಮಯವಿರುವುದಿಲ್ಲ.

**೧೨) ನಿದ್ರೆ -** ನಿದ್ರೆಯ ತೀವ್ರತೆಯಲ್ಲಿ ಎಲ್ಲ ಬಾಹ್ಯದ ಸಾವಧಾನತೆಯು ಮರೆತು ಹೋಗುತ್ತದೆ. ಮಹಾ ಪ್ರಮಾದವನ್ನುಂಟು ಮಾಡುವಂಥ ಮೃತಕದ ಸಮಾನ ಮಾಡಿಬಿಡುವಂಥ ಈ ನಿದ್ರೆಯು ಯಾರಲ್ಲಿ ಇದೆ, ಅವರು ಭಗವಂತರಿಲ್ಲ. ಸದೈವ ಚೈತನ್ಯಮೂರ್ತಿ, ಜಾಗೃತ ದಶೆಯ ರೂಪ, ಸರ್ವಪ್ರಮಾದ ರಹಿತ ಜಗದ್ಗುರುಗಳಾದ ಭಗವಂತರಿಗೆ ನಿದ್ರೆಯಿರುವುದಿಲ್ಲ.

**೧೩) ಖೇದ -** ಯಾರಿಗೆ ಖೇದವಿದೆ ಅವರು ದೇವರಲ್ಲ. ಯಾರು ತಮ್ಮ ಖೇದವನ್ನೇ ನಷ್ಟಗೊಳಿಸುವುದು ಸಾಧ್ಯವಾಗಿಲ್ಲ ಅವರು ಭಕ್ತರನ್ನು ಹೇಗೆ ಖೇದರಹಿತ ಮಾಡುವ ಸಾಧ್ಯತೆಯಿದೆ ?- ಅದರಿಂದ ಸರ್ವ ಸುಖಿಗಳಾದ ಭಗವಂತರಿಗೆ ಖೇದ(ದುಃಖ)ವಿರುವುದಿಲ್ಲ.

**೧೪) ಸ್ವೇದ -** ಶರೀರದಲ್ಲಿ ಸ್ವೇದವು (ಬೆವರು) ಹೀನ ಪರಾಕ್ರಮದಿಂದ ಬರುತ್ತದೆ ಅದರಿಂದ ಯಾರಿಗೆ ಸ್ವೇದವಿರುತ್ತದೆ ಅವರು ಭಗವಂತರಿರುವ ಸಾಧ್ಯತೆಯಿಲ್ಲ. ಅನಂತ ಬಲಶಾಲಿ ಭಗವಂತರಿಗೆ ಸ್ವೇದವಿರುವುದಿಲ್ಲ.

**೧೫) ಮದ -** ಅಭಿಮಾನಿ, ಸಂಸಾರಿ, ಅನೇಕ ಕ್ರೋಧಾದಿ ಕಷಾಯಗಳಿಗೆ ಪಾತ್ರರಿರುವಂಥ ಜೀವರುಗಳ ಮಾನ ಕರ್ಮದ ಉದಯದಿಂದ ಗರ್ವವು ಉತ್ಪನ್ನವಾಗುತ್ತದೆ. ಅದರಿಂದ ಯಾರಿಗೆ ಮದವಿರುತ್ತದೆ ಅವರು ಭಗವಂತರಿರುವುದಿಲ್ಲ. ಭಗವಂತರಿಗೆ ಮದವಿರುವುದಿಲ್ಲ.

**೧೬) ಅರತಿ -** ಪರವಸ್ತುವನ್ನು ಕಂಡು ಅರತಿ ಕರ್ಮದ ಉದಯದಿಂದ ಅರತಿ-ಅಪ್ರೀತಿಯಾಗುತ್ತದೆ. ಯಾರಿಗೆ ಅರತಿ ಕರ್ಮದ ಉದಯವಿದೆ ಅವರು ಭಗವಂತರಿಲ್ಲ. ವೀತರಾಗ ಭಗವಂತರಿಗೆ ಅರತಿ ಇರುವುದಿಲ್ಲ.

**೧೭) ಮೋಹ -** ಮಹಾದುಃಖದ ಮೂಲ, ಸಂಸಾರದ ಬೀಜ-ಸಂಸಾರದಲ್ಲಿ ಪರಿಭ್ರಮಣ ಮಾಡಿಸುವಂಥ ಮೋಹವು ಯಾರಲ್ಲಿ ಇರುತ್ತದೆ ಅವರು ಭಗವಂತರಿಲ್ಲ. ಜಗತ್ ಉದಾಸೀನ ಭಗವಂತರಿಗೆ ಮೋಹವಿರುವುದಿಲ್ಲ.

೧೮) ರತಿ – ರತಿ ಕರ್ಮದ ಉದಯದಿಂದ ಅನೇಕ ವಸ್ತುಗಳಲ್ಲಿ ಹರ್ಷ ಮನ್ನಿಸುವುದು, ರಂಜಿಸುವುದು – ಇಂಥ ರತಿಕರ್ಮದ ಪ್ರಬಲತೆಯು ಯಾರಿಗೆ ಇರುತ್ತದೆ ಅವರು ದೇವರಿಲ್ಲ. ಭಗವಾನ ವೀತರಾಗ ದೇವರಿಗೆ ರತಿ ಇರುವುದಿಲ್ಲ.

ಉಪರ್ಯುಕ್ತ ಹದಿನೆಂಟು ದೋಷಗಳು ಯಾರಲ್ಲಿ ಕಂಡು ಬರುತ್ತವೆ ಅವರು ಭಗವಂತರಿಲ್ಲ. ಭಗವಂತರಿಗೆ ಈ ಹದಿನೆಂಟು ದೋಷಗಳು ಸಂಪೂರ್ಣವಾಗಿ ಇರುವುದಿಲ್ಲವೆಂದು ತಿಳಿಯುವುದು.

ಭಗವಂತರಿಗೆ ನಲವತ್ತಾರು ಗುಣಗಳಿರುತ್ತವೆ. ಅವು ಈ ಪ್ರಕಾರ ಇವೆ,–

**ಮೂವತ್ತಾ ನ್ಲುಕ್ಕ ಅತಿಶಯ** – ಭಗವಂತರದು ಅಂತಿಮ ಶರೀರವಿರುವುದು. ಜನ್ಮದಿಂದಲೇ ಅದರಲ್ಲಿ ಹತ್ತು ಅತಿಶಯಗಳಿರುತ್ತವೆ – ಶರೀರದಲ್ಲಿ ಬೆವರು ಬಾರದಿರುವುದು, ಸಮಚತುರಸ್ರ ಸಂಸ್ಥಾನವಿರುತ್ತದೆ, ವಜ್ರವೃಷಭನಾರಾಚ ಸಂಹನನ, ಶರೀರದಿಂದ ಮಲವು ಹೊರಡದಿರುವುದು, ಶರೀರವು ಮಹಾಸುಗಂಧಮಯ, ಅನಂತ ಸುಂದರರೂಪ, ಶರೀರದಲ್ಲಿ ಅನೇಕ ಶುಭ ಲಕ್ಷಣಗಳಿರುವುದು, ದೇಹದ ರಕ್ತವು ಶುಭ್ರವಿರುವುದು, ವಚನಗಳು ಮಹಾ ಸುಂದರ, ಮಧುರವಿರುವುದು, ದೇಹದಲ್ಲಿ ಅತುಲ ಬಲವಿರುವುದು – ಇವು ಹತ್ತು ಅತಿಶಯಗಳಂತೂ ಜನ್ಮದಿಂದಲೇ ಇರುತ್ತವೆ, ಅವರನ್ನು ಭಗವಂತರೆಂದು ತಿಳಿಯುವುದು.

ಹತ್ತು ಅತಿಶಯಗಳು ಕೇವಲಜ್ಞಾನವಾದ ಮೇಲೆ ಆಗುತ್ತವೆ. ಅವು ಈ ಪ್ರಕಾರ ಇವೆ. – ಸಮವಸರಣದಲ್ಲಿ ಚತುರ್ಮುಖ ಕಾಣಿಸುವುದು. ಎಲ್ಲಿ ಭಗವಂತರ ಸಮವಸರಣವಿರುತ್ತದೆ ಅಲ್ಲಿಂದ ನಾಲ್ಕೂಕಡೆಗೆ ನೂರು ಯೋಜನಗಳವರೆಗೆ ದುರ್ಭಿಕ್ಷವಿಲ್ಲದಿರುವುದು ಎಲ್ಲ ಜೀವರುಗಳಲ್ಲಿ ದಯೆಯ ಭಾವ, ನಿರ್ಮಲ ಆಕಾಶದಲ್ಲಿ ಗಮನ ಮಾಡುವುದರಿಂದ ಜೀವಗಳಿಗೆ ಯಾವುದೇ ಬಾಧೆಯಿಲ್ಲದಿರುವುದು, ಕೇವಲಜ್ಞಾನವಾದಮೇಲೆ ಜಗತಬಂಧುವಿಗೆ ಉಪಸರ್ಗವಾಗದಿರುವುದು, ಕೇವಲಿಯ ಶರೀರದ ನೆರಳು ಬೀಳದಿರುವುದು, ಸಮಸ್ತ ವಿದ್ಯೆಗಳ ಅಧಿಪತಿಯಿರುವುದು, ಕೇಶ, ನಖಗಳು ವೃದ್ಧಿಸದಿರುವುದು, ಕೇವಲಜ್ಞಾನವು ಉತ್ಪನ್ನವಾಗುವ ಸಮಯದಲ್ಲಿ ಶರೀರದ ಆಕಾರವು ಎಷ್ಟಿತ್ತು ಅಷ್ಟೇ ಉಳಿದು ಬಿಡುವುದು, ಅನಂತ ಬಲಶಾಲಿ ಭಗವಂತರ ಕಣ್ಣುಗಳ ರೆಪ್ಪೆಗಳು ಹೊಡೆಯದಿರುವುದು, ಕವಲಾಹಾರವಿಲ್ಲದಿರುವುದು – ಈ ಪ್ರಕಾರ ಭಗವಂತರಿಗೆ ಕೇವಲಜ್ಞಾನವಾದ ಮೇಲೆ ಇವು ಹತ್ತು ಅತಿಶಯಗಳು ಪ್ರಗಟವಾಗುತ್ತವೆ.

**ಸಂದೇಹ** – ಆಹಾರದ ಭೇದಗಳು ಆರು ಇವೆ. ಅವುಗಳಲ್ಲಿನ ಕವಲಾಹಾರದ ನಿಷೇಧವನ್ನೇ ಇಲ್ಲಿ ಮಾಡಲಾಗಿದೆಯೆಂದ ಮೇಲೆ ಕೇವಲಜ್ಞಾನಿಗಳಿಗೆ ಶೇಷ ಐದು ಆಹಾರಗಳಿರುತ್ತವೆಯೇನು ?

**ಸಮಾಧಾನ** – ಎಲೈ ಭವ್ಯನೇ ! ನೀನು ಆರು ಪ್ರಕಾರದ ಆಹಾರಗಳ ಸ್ವರೂಪವನ್ನು ಆಲಿಸು ಅದರಿಂದ ನಿನ್ನ ಸಂದೇಹವು ನಾಶವಾಗಿ ಹೋಗುವುದು. ಕರ್ಮಆಹಾರ, ನೋಕರ್ಮಆಹಾರ, ಓಜ ಆಹಾರ, ಮಾನಸಿಕ ಆಹಾರ, ಕವಲಾಹಾರ, ಲೇಪಾಹಾರ – ಇವು ಆರು ಆಹಾರಗಳಿವೆ.

ಕರ್ಮ ಆಹಾರ – ಜ್ಞಾನಾವರಣ ಮೊದಲಾದ ಕರ್ಮವರ್ಗಣಾಗಳ ಗ್ರಹಣ ಮಾಡುವುದು ಕರ್ಮ ಆಹಾರವಿದೆ. ಕೇವಲಿಗಳಿಗೆ ಅನ್ಯ ಕರ್ಮಗಳ ಬಂಧ ವಾಗುವುದಿಲ್ಲ, ಬಂಧದ ಅಭಾವದಿಂದ ಕರ್ಮದ ಆಹಾರವಿರುವುದಿಲ್ಲ. ಒಂದು ಸಾತಾವೇದನೀಯದ ಬಂಧವಿರುತ್ತದೆ, ಅದು ಕೂಡ ನಾಮಮಾತ್ರ ಉಪಚಾರಬಂಧವಿದೆ; ಸ್ಥಿತಿ ಅನುಭಾಗರಹಿತವಿದೆ. ಆದುದರಿಂದ ಉಪಚಾರದಿಂದ ಕರ್ಮ ಆಹಾರವನ್ನು ಇಲ್ಲಿ ಹೇಳಲಾಗಿದೆ.

ಔದಾರಿಕ ಶರೀರ ಜಾತಿಯ ನೋಕರ್ಮದ ಪರಮಾಣುಗಳ ಗ್ರಹಣವು ಹದಿಮೂರನೆಯ ಗುಣಸ್ಥಾನದವರೆಗೆ ಇರುತ್ತದೆ. ಅದರಿಂದ ನೋಕರ್ಮ ಆಹಾರವು ಕೇವಲಿಗಳಿಗೆ ಕಂಡು ಬರುತ್ತದೆ. ಆದರೆ (ಈ ಪ್ರಕರಣದಲ್ಲಿ) ಕವಲಾಹಾರದ ಮುಖ್ಯತೆಯಿರುವುದರಿಂದ ಇವುಗಳ ವಿಚಾರ ಮಾಡಲಾಗಿಲ್ಲ.

ಗುಬ್ಬಚ್ಚಿ ಮೊದಲಾದವು ಮೊಟ್ಟೆಗಳನ್ನು ಎದೆಯ ಕೆಳಗೆ ದಬ್ಬಿ ಇಟ್ಟುಕೊಂಡು ಕುಳಿತಿರುತ್ತವೆ ಅದರಿಂದಲೇ ಮೊಟ್ಟೆಗಳೊಳಗಿಂದ ಉತ್ಪನ್ನವಾಗುವಂಥವುಗಳ ಪೋಷಣೆಯಾಗುತ್ತದೆ - ಅದನ್ನು ಓಜ ಆಹಾರವೆನ್ನಲಾಗುತ್ತದೆ. ಈ ಆಹಾರವು ಮುಖ್ಯರೂಪದಿಂದ ಅಂಡಜ ಜೀವಗಳಲ್ಲಿ ಇರುತ್ತದೆ. ಕೇವಲಿಗಳಿಗೆ ಓಜ ಆಹಾರವು ಕೂಡ ಇರುವುದಿಲ್ಲ.

ಮನಸ್ಸಿನಲ್ಲಿ ಭೋಜನದ ಇಚ್ಛೆಯಾಗುತ್ತಿದ್ದಂತೆಯೇ ತೃಪ್ತಿಯಾಗಿ ಹೋಗುವುದು ಮಾನಸಿಕ ಆಹಾರವಿದೆ. ಈ ಆಹಾರವು ಮುಖ್ಯವಾಗಿ ದೇವಗಳಿಗೆ ಇರುತ್ತದೆ. ಜಿನದೇವರಿಗೆ ಮಾನಸಿಕ ಆಹಾರವು ಕೂಡ ಇರುವುದಿಲ್ಲ.

ಶರೀರದ ಮೇಲೆ ಹಚ್ಚುವುದರಿಂದ -ಲೇಪಿಸುವುದರಿಂದ ತೃಪ್ತತೆಯಾಗುವುದು, ಅದು ಲೇಪ ಆಹಾರವಿದೆ. ಅದು ಮುಖ್ಯವಾಗಿ ಏಕೇಂದ್ರಿಯಗಳಿಗೆ ಇರುತ್ತದೆ. ಕೇವಲಿ ಭಗವಂತರಿಗೆ ಲೇಪ ಆಹಾರವು ಕೂಡ ಇರುವುದಿಲ್ಲ.

ಮನುಷ್ಯ ಮತ್ತು ತಿರ್ಯಂಚಗಳಿಗೆ ಇರುವಂಥ ಅನ್ನ, ಮಿಠಾಯಿ, ಜಲ ಮೊದಲಾದವುಗಳ ಆಹಾರವು ಕವಲಾಹಾರವಿದೆ. ಜಿಹ್ವೇಂದ್ರಿಯದ ಮೂಲಕ ಇದರ ಗ್ರಹಣವಾಗುತ್ತದೆ. ಈ ಕವಲಾಹಾರವು ಕೂಡ ನಿರ್ದೋಷ ಜಿನಭಗವಂತರಿಗೆ ಇರುವುದಿಲ್ಲ. ಇಲ್ಲಿ ಮುಖ್ಯವಾಗಿ ಕವಲಾಹಾರದ ಮೇಲೆ ವಿಚಾರ ಮಾಡಲಾಗುತ್ತಿದೆ ಅದರಿಂದ ಭಗವಂತರಿಗೆ ಆಹಾರವಿರುವುದಿಲ್ಲ ಎಂದು ತಿಳಿಯುವುದು. ಈ ಪ್ರಕಾರ ಭಗವಂತರಿಗೆ ಕೇವಲಜ್ಞಾನವಾಗುತ್ತಿದ್ದಂತೆಯೇ ಕವಲಾಹಾರವಿರುವುದಿಲ್ಲ.

ದೇವಕೃತ ಹದಿನಾಲ್ಕು ಅತಿಶಯ - ಕೇವಲಿ ಭಗವಂತರದು ಸಮವಸರಣದಲ್ಲಿ ಯಾವ ವಾಣಿಯು ಹೊರಡುತ್ತದೆ ಅದನ್ನು ಸರ್ವ ಪ್ರಾಣಿಗಳು ತಮ್ಮ ತಮ್ಮ ಭಾಷೆಯಲ್ಲಿ ಆಲಿಸಿ ತಿಳಿದುಕೊಳ್ಳುತ್ತೇವೆ ಅಂಥ ಅತಿಶಯವಿರುತ್ತದೆ. ಎಲ್ಲಿ ಭಗವಂತರು ವಿರಾಜಮಾನರಿರುತ್ತಾರೆ ಅಲ್ಲಿರುವಂಥ ಸರ್ಪ, ಮಯೂರ, ಸಿಂಹ, ಹಸು ಇತ್ಯಾದಿ ಜಾತಿವಿರೋಧಿ ಜೀವಗಳು ದ್ವೇಷವನ್ನು ಬಿಟ್ಟುಕೊಟ್ಟು ಮಿತ್ರತೆಯ ಧಾರಣ ಮಾಡುತ್ತವೆ. ಅಲ್ಲಿಯ ಭೂಮಿಯು ಕನ್ನಡಿಯ ಸಮಾನ ನಿರ್ಮಲವಾಗಿರುತ್ತದೆ. ಭಗವಂತರು ಎಲ್ಲಿ ವಿರಾಜಮಾನರಿರುತ್ತಾರೆ ಆ ವನದಲ್ಲಿ ಆರೂ ಋತುಗಳ ಫಲ-ಪುಷ್ಪಗಳು ಒಟ್ಟಿಗೆ ಬಂದು ಬಿಡುತ್ತವೆ. ಸಮವಸರಣದ ನಾಲ್ಕೂ ಕಡೆಗೆ ಮಂದ ಸುಗಂಧ ಮಾರುತವು ಬೀಸುತ್ತದೆ ಅದರಿಂದ ಸರ್ವ ಜೀವಗಳು ಸುಖಿಯಾಗುತ್ತವೆ. ಎಲ್ಲಿ ಭಗವಂತರು ವಿರಾಜಮಾನರಿರುತ್ತಾರೆ ಅಲ್ಲಿಯ ಪ್ರಾಣಿಗಳು ಸದೈವ ಸಹಜವಾಗಿಯೇ ಸುಖಿಯಾಗಿರುತ್ತವೆ. ಸಮಸ್ತ ಭೂಮಿಯು ಕಂಟಕ ರಹಿತವಾಗಿ ಹೋಗುತ್ತದೆ. ಮಹಾಸುಗಂಧಮಯ ಜಲದ ತುಷಾರವೃಷ್ಟಿಯಾಗುತ್ತಿರುತ್ತದೆ. ಭಗವಂತರು ಯಾವಾಗ ವಿಹಾರ ಕರ್ಮ ಮಾಡುತ್ತಾರೆ ಆಗ ಹೆಜ್ಜೆ ಹೆಜ್ಜೆಗೆ ದೇವಗಳು ಕಮಲಗಳ ರಚನೆ ಮಾಡುತ್ತ ಹೋಗುತ್ತಾರೆ. ಭಗವಂತರು ಎಲ್ಲಿ ಪಾದವಿರಿಸುತ್ತಾರೆ ಅಲ್ಲಿ ದೇವಗಳು ಹದಿನೈದು ಹದಿನೈದು ಕಮಲಗಳ ಹದಿನೈದು ಹದಿನೈದು ಪಂಕ್ತಿಗಳನ್ನು ಮಾಡುತ್ತ ಎರಡುನೂರಾ ಇಪ್ಪತ್ತೈದು ಕಮಲಗಳ ಚೌಕಾಕಾರದ ಸಮೂಹ ರಚಿಸುತ್ತ ಹೋಗುತ್ತಾರೆ. ಆಕಾಶವು ನಿರ್ಮಲವಾಗಿ ಹೋಗುತ್ತದೆ. ಧೂಳು - ಮೋಡ ಮೊದಲಾದವುಗಳು ಉಳಿಯುವುದಿಲ್ಲ. ಹತ್ತೂ ದಿಕ್ಕುಗಳು ಮಹಾಶೋಭಾಯಮಾನವಾಗಿ ನಿರ್ಮಲವಾಗಿ ಬಿಡುತ್ತವೆ. ವಿಹಾರದ ಸಮಯದಲ್ಲಿ ದೇವನು ತನ್ನ ಮಸ್ತಕದ ಮೇಲೆ ಧರ್ಮ ಚಕ್ರವನ್ನು ತೆಗೆದುಕೊಂಡು ಮುಂದೆ ಮುಂದೆ ಚಲಿಸುತ್ತಾನೆ. ಛತ್ರ, ಚಾಮರ, ಕಲಶ, ಗಿಂಡಿ, ಕನ್ನಡಿ, ಬೀಸಣಿಕೆ, ಧ್ವಜ, ಗಂಟೆ - ಇವು ಅಷ್ಟ ಮಂಗಲ ದ್ರವ್ಯಗಳು ಪ್ರತಿಯೊಂದು ನೂರೆಂಟು ಇರುತ್ತವೆ. - ಈ ಪ್ರಕಾರ ಇವು ಎಂಟುನೂರಾ ಅರವತ್ನಾಲ್ಕು ಆಗುತ್ತವೆ. ಒಬ್ಬೊಬ್ಬ ದೇವನು ಈ ಒಂದೊಂದು ಮಂಗಲ ದ್ರವ್ಯವನ್ನು ವಿನಯಸಹಿತವಾಗಿ ತೆಗೆದುಕೊಂಡು ಭಕ್ತಿಯಿಂದ ವಿಹಾರದ ಸಮಯದಲ್ಲಿ ನಡೆಯುತ್ತಾನೆ. ಆಕಾಶದಲ್ಲಿಅಸಂಖ್ಯ ದೇವಗಳು ಜಯ ಜಯಕಾರ ಮಾಡುತ್ತ ಸಾಗುತ್ತಾರೆ - ಈ ಪ್ರಕಾರ ಹದಿನಾಲ್ಕು ಅತಿಶಯಗಳು ದೇವಕೃತ ಇವೆ.

ಈ ಅತಿಶಯಗಳ ಮಾಹಾತ್ಮ್ಯವಂತೂ ಭಗವಂತರದ್ದಿದೆ, ದೇವಗಳ ಭಕ್ತಿಯು ನಿಮಿತ್ತ ಮಾತ್ರ ಸಹಾಯಕವಿದೆ. ಇವೆಲ್ಲವು ಸೇರಿ ಮೂವತ್ತಾನ್ಲುಕ್ಕು ಅತಿಶಯಗಳಿವೆ.

ಈಗ ಎಂಟು ಪ್ರಾತಿಹಾರ್ಯಗಳನ್ನು ಹೇಳುತ್ತಾರೆ, -

**ತರು-ಅಸೋಯ ಸವಿಶೀ, ದಿವಧುಣಿ ಚಮರ ಸಿಹಪೀಠಾಯಾ ।**

**ಭಾಮಂಡಲ ದುಂದುಭಿ ಬಬಯಣೋ, ಆತಪಹರ ಪಾತಹಾಜ ವಸು ಭೇಯೋ ॥೧೯॥**

**ಗಾಥಾರ್ಥ :-** ಅಶೋಕ ವೃಕ್ಷ, ಮಹಾಸುಗಂಧಮಯ ಪುಷ್ಪಗಳ ವೃಷ್ಟಿ, ದಿವ್ಯಧ್ವನಿ, ಚಾಮರ, ಸಿಂಹಾಸನ, ಪ್ರಭಾಮಂಡಲ, ದುಂದುಭಿ ಬಾರಿಸುತ್ತಿರುವುದು ಮತ್ತು ಮುಕ್ಕೊಡೆ - ಇವು ಎಂಟು ಪ್ರಾತಿಹಾರ್ಯಗಳಿವೆ.

**ಭಾವಾರ್ಥ :-** ೧) ಭಗವಂತರು ವಿರಾಜಮಾನರಾಗುವಂಥ ಗಂಧಕುಟಿಯ ಮೇಲೆ ಅಶೋಕವೆಂಬ ಹೆಸರಿನ ರತ್ನಮಯ ವೃಕ್ಷವಿರುತ್ತದೆ. ಇದನ್ನು ನೋಡುವುದರಿಂದ ಮಹಾತೀವ್ರ ಶೋಕವು ನಷ್ಟವಾಗಿ ಹೋಗುತ್ತದೆ ಜೀವನು ಸುಖಿಯಾಗಿ ಬಿಡುತ್ತಾನೆ ಅಂಥ ಅತಿಶಯವು ಇದರಲ್ಲಿ ಕಂಡು ಬರುತ್ತದೆ.

೨) ಎಲ್ಲಿ ಭಗವಂತರು ವಿರಾಜಮಾನರಿರುತ್ತಾರೆ ಅಲ್ಲಿ ಕಲ್ಪವೃಕ್ಷಗಳ (ಪೃಥ್ವಿಕಾಯಿಕ) ರತ್ನಮಯ ಮಹಾಸುಗಂಧಿತ ಕೋಮಲವಾದ ಅನೇಕವರ್ಣದ ಪುಷ್ಪಗಳ ವೃಷ್ಟಿಯಾಗುತ್ತದೆ.

೩) ಭಗವಂತರ ಓಂ ನಿರಕ್ಷರ ದಿವ್ಯಧ್ವನಿ, ಮೇಘ ಗರ್ಜನೆಯ ಸಮಾನವಿರುತ್ತದೆ ಅದರಲ್ಲಿ ಓಷ್ಟಗಳ ಚಲನೆ ಇರುವುದಿಲ್ಲ. ಅದು ಎಲ್ಲ ಜೀವಗಳಿಗೆ ಹಿತ ಮಾಡುವಂಥದು, ತಮ್ಮ ಅನೇಕ ಸಂಶಯಗಳ ನಾಶ ಮಾಡುವಂಥದ್ದಿರುತ್ತದೆ. ಒಂದು ದಿವಸದಲ್ಲಿ ಮೂರು ಬಾರಿ - ಪ್ರಭಾತ, ಮಧ್ಯಾಹ್ನ ಮತ್ತು ಸಾಯಂಕಾಲ ಹೊರಡುತ್ತದೆ. ಅದೇಷ್ಟೋ ಶಾಸ್ತ್ರಗಳಲ್ಲಿ ಮಧ್ಯರಾತ್ರಿಯಲ್ಲೂ ಹೊರಡುತ್ತದೆ ಎಂದು ಹೇಳಲಾಗಿದೆ. ಆ ಅಪೇಕ್ಷೆಯಿಂದ ಒಂದು ದಿವಸದಲ್ಲಿ ನಾಲ್ಕು ಬಾರಿ ವಾಣಿಯು ಹೊರಡುತ್ತದೆ. ಇವು ನಾಲ್ಕಂತೂ ಕಾಲಗಳಿವೆ ಮತ್ತು ಗಣಧರದೇವ, ಇಂದ್ರ ಅಥವಾ ಸಭಾನಾಯಕ ದೊರೆಯ ನಿಮಿತ್ತ ಪಡೆದು ಅಕಾಲದಲ್ಲಿಯೂ ವಾಣಿಯು ಹೊರಡುತ್ತದೆ. ಪ್ರತಿಸಲ ಈ ಧ್ವನಿಯ ಕಾಲವು ಆರು - ಆರು ಗಳಿಗೆ ಇರುತ್ತದೆ. ಇದನ್ನು ದಿವ್ಯಧ್ವನಿ ಪ್ರಾತಿಹಾರ್ಯವೆಂದು ಹೇಳುತ್ತಾರೆ.

೪) ಇಂದ್ರರುಗಳ ಕೈಯಿಂದ ಅರವತ್ತಾ ನ್ಲುಕ್ಕು ಚಾಮರಗಳು ಢಾಳಿಸುತ್ತಿರುತ್ತವೆ.

೫) ಅತ್ಯಂತ ರಮಣಿಯ ಮಹಾಮನೋಜ್ಞ ಅನೇಕ ಶೋಭೆಗಳಿಂದ ಕೂಡಿದ, ರತ್ನಮಯವಾದ, ಮೇರು ಸಮಾನ ಉತ್ತುಂಗತೆಯನ್ನು ಧಾರಣ ಮಾಡುವಂಥ, ಸಿಂಹಾಸನವಿರುತ್ತದೆ. ಅದರ ನಾಲ್ಕೂ ಕಾಲುಗಳ ಹತ್ತಿರ ನಾಲ್ಕು ಕುಳಿತಿರುವ ಸಿಂಹಗಳ ಆಕಾರವು ರತ್ನಮಯ ಮಹಾಸೌಮ್ಯ ಮೂರ್ತಿಯ ಸರ್ವಾಂಗ ಸುಂದರ ನೇತ್ರ , ಕರ್ಣ, ಮುಖ, ಜಿಹ್ವೆ, ಕೇಶರಾಶಿ ಮೊದಲಾಗಿ ಎಲ್ಲ ನಖ, ಶಿಖಯುಕ್ತ ಅದೇನು ಪ್ರತ್ಯಕ್ಷ ಯಾವನೋ ಧರ್ಮಾತ್ಮಾ, ಶ್ರಾವಕವ್ರತಗಳಧಾರಕ, ಸಿಂಹವೇ ಭಕ್ತಿಯಿಂದ ಸಂಯುಕ್ತವಾಗಿ ಸಿಂಹಾಸನ ಧಾರಣ ಮಾಡಿ ಕುಳಿತುಕೊಂಡಿರುವಂತೆ ಕಂಡು ಬರುತ್ತದೆ - ಇಂಥ ಸಿಂಹಾಸನ ಪ್ರಾತಿಹಾರ್ಯವಿದೆ.

೬) ಭಗವಂತರ ಶರೀರದ ಪ್ರಭೆಯು ನಾಲ್ಕೂ ಕಡೆಗೆ ಮಂಡಲಾಕಾರವಾಗುವುದು ಪ್ರಭಾಮಂಡಲವಿದೆ. ಅದರಲ್ಲಿ ನೋಡುವುದರಿಂದ ಜೀವಗಳಿಗೆ ತಮ್ಮ ಅನೇಕ ಭವಗಳು ಕಂಡು ಬರುತ್ತವೆ.

೭) ಅನೇಕ ಪ್ರಕಾರದ ವಾದ್ಯಗಳ ಮಹಾಮಧುರ ಶಬ್ದಸಹಿತ ಏಕ ರಾಗದ ರೂಪವಾಗಿ ಬಾರಿಸುತ್ತಿರುವುದು ದುಂದುಭಿ ಪ್ರಾತಿಹಾರ್ಯವಿದೆ.

೮) ಭಗವಂತರ ಮಸ್ತಕದ ಮೇಲೆ ಮೂರು ಛತ್ರಗಳಿರುತ್ತವೆ. ಅವು ಅದೇನು ಮೂರು ಲೋಕಗಳ ಪ್ರಭುತೆಯನ್ನೇ ಹೇಳುತ್ತಿರುವಂತೆ ಕಂಡು ಬರುತ್ತವೆ ಇದು ಮುಕ್ಕೊಡೆ ಪ್ರಾತಿಹಾರ್ಯವಿದೆ.

ಯಾವುದು ಅನಂತ ಪದಾರ್ಥಗಳನ್ನು ನೋಡುವ, ತಿಳಿಯುವ ರೂಪದಿಂದ ಪರಿವರ್ತಿತವಾಗುತ್ತದೆ ಅದನ್ನು ಅನಂತಜ್ಞಾನ-ದರ್ಶನವೆಂದು ಹೇಳುತ್ತಾರೆ. ಅನಂತಪದಾರ್ಥಗಳನ್ನು ನೋಡುವ, ತಿಳಿಯುವುದರಿಂದ ಅತೀಂದ್ರಿಯ

ಸುಖವು ಕೂಡ ಅನಂತವಿದೆ. ಅಂತರಾಯ ಕರ್ಮದ ನಾಶದಿಂದ ಅನಂತ ಪದಾರ್ಥಗಳನ್ನು ನೋಡುವ ಯಾವ ಶಕ್ತಿಯು ಪ್ರಕಟವಾಗಿದೆ ಅದು ಅನಂತವೀರ್ಯವಿದೆ - ಇವು ಅನಂತ ಚತುಷ್ಟಯವಿವೆ.

ಈ ಪ್ರಕಾರ ಜನ್ಮದ ಹತ್ತು , ಕೇವಲಜ್ಞಾನದ ಹತ್ತು , ದೇವಕೃತ ಹದಿನಾರು, ಎಂಟು ಪ್ರಾತಿಹಾರ್ಯ ಹಾಗೂ ಅನಂತ ಚತುಷ್ಟಯ - ಇವೆಲ್ಲವೂ ಸೇರಿ ನಲವತ್ತಾರು ಗುಣಗಳಿವೆ. ಈ ಗುಣಗಳು ಯಾರಲ್ಲಿ ಕಂಡು ಬರುತ್ತವೆ ಅವರು ತರಣ-ತಾರಣ ಶುದ್ಧ ಭಗವಂತರು ಸಮ್ಯಗ್ದೃಷ್ಟಿಗಳ ಮೂಲಕ ಪೂಜಿಸಲು ಯೋಗ್ಯರೆಂದು ತಿಳಿಯುವುದು. ಈ ಭಗವಂತರೇ ಉಪಾದೇಯರಿದ್ದಾರೆ.

ಈಗ ಕುದೇವನ ಲಕ್ಷಣ ಹೇಳುತ್ತಾರೆ - ಯಾರಲ್ಲಿ ಈ ಮುಂದೆ ಹೇಳಲಾಗುವ ಲಕ್ಷಣಗಳಿರುತ್ತವೆ ಅವರು ಕುದೇವರಿದ್ದಾರೆ. ಯಾರು ಸರಾಗಿಗಳಿರುವುದರಿಂದ ಭಕ್ತರನ್ನು ಕಂಡು ಪ್ರಸನ್ನರಾಗುತ್ತಾರೆ ತಮ್ಮ ಕುರಿತಾಗಿ ಅವಿನಯ ಮಾಡುವಂಥವರನ್ನು ಕಂಡು ಕ್ರೋಧ ಮಾಡುತ್ತಾರೆ -ಈ ಪ್ರಕಾರ ರಾಗಿ-ದ್ವೇಷಿಗಳಿದ್ದಾರೆ ಅವರ ಕುರಿತಾಗಿ ಲೋಕದ ಮುಗ್ಧ ಜೀವನು ಹೇಳುವುದೇನೆಂದರೆ  ಒಂದು ವೇಳೆ ಈ ದೇವನು ಪ್ರಸನ್ನನಾದರೆ ರಾಜ್ಯ ಸಂಪದವನ್ನು ಕೊಟ್ಟು ಸುಖಿಯನ್ನಾಗಿ ಮಾಡುತ್ತಾನೆ; ಈ ದೇವನು ಒಂದು ವೇಳೆ ಕ್ರೋಧಿತನಾಗಿ ಹೋದರೆ ದುಃಖಿಯನ್ನಾಗಿ ಮಾಡುತ್ತಾನೆ, ರೋಗಿಗಳನ್ನಾಗಿ ಮಾಡುತ್ತಾನೆ, ಪೀಡೆ ಕೊಡುತ್ತಾನೆ, ಧನರಹಿತನನ್ನಾಗಿ ಮಾಡುತ್ತಾನೆ, ಮರಣವನ್ನು ಮಾಡಿಸುತ್ತಾನೆ.

ಕಲ್ಪವಾಸಿ, ಭವನವಾಸಿ, ವ್ಯಂತರ, ಜ್ಯೋತಿಷಿ - ಈ ನಾಲ್ಕು ಜಾತಿಯ ದೇವಗಳಿದ್ದಾರೆ ಅವರು ಯೋನಿ ಭೂತ ದೇವರಿದ್ದಾರೆ, ಜನ್ಮ ಮರಣಸಹಿತರಿದ್ದಾರೆ. ತಾವು ಮಾಡಿದ ಪುಣ್ಯದ ಫಲವನ್ನು ಭೋಗಿಸುತ್ತಾರೆ, ಇವರು ಸೌಮ್ಯದೃಷ್ಟಿಗಳಿದ್ದಾರೆ, ಇವರನ್ನು ನೋಡುವುದರಿಂದ ಸುಖವಾಗುತ್ತದೆ, ಇವರು ಯಾರನ್ನೂ ದುಃಖಿಯನ್ನಾಗಿ ಮಾಡುವುದಿಲ್ಲ.

ಅದೆಷ್ಟೋ ಮುಗ್ಧ ಪ್ರಾಣಿಗಳು ತಮ್ಮ ಮತಿಕಲ್ಪನೆಯಿಂದ ದೇವವೆಂಬ ಹೆಸರಿನಿಂದ ಕೆಲವು ದೇವಗಳನ್ನು ಸ್ಥಾಪನೆ ಮಾಡಿಕೊಂಡಿದ್ದಾರೆ ಅವರು ಲೌಕಿಕ ದೇವರಿದ್ದಾರೆ. ಆ ದೇವಗಳು ಜನರಿಗೆ ಆಶ್ಚರ್ಯವನ್ನುಂಟು ಮಾಡುತ್ತಾರೆ. ಅವರು ಹೀಗೆ ಹೇಳುತ್ತಾರೆ - ನಮ್ಮ ಪೂಜೆ ಮಾಡಿರಿ, ನಮ್ಮನ್ನು ತೃಪ್ತಪಡಿಸಿರಿ, ಅನೇಕ ಭೋಗಯೋಗ್ಯ ವಸ್ತುಗಳನ್ನು ನಮ್ಮ ಸಲುವಾಗಿ ಸಮರ್ಪಿತ ಮಾಡಿರಿ, ಹಾಗೆ ಮಾಡಿದಿರಿಯಾದರೆ ನಾವು ಪ್ರಸನ್ನರಾಗುವೆವು. ಇದನ್ನು ಆಲಿಸಿ ಅದೆಷ್ಟೋ ಮುಗ್ಧ ಜೀವಗಳು ಇವನು ಈ ಎಣ್ಣೆಯನ್ನು ಅರ್ಪಿಸುವುದರಿಂದ ಪ್ರಸನ್ನನಾಗುತ್ತಾನೆಂದು ಹೇಳಿದರೆ, ಕೆಲವರು ಹೇಳುತ್ತಾರೆ ಈ ದೇವನು ಸಿಂಧೂರವನ್ನು ಅರ್ಪಿಸುವುದರಿಂದ ಪ್ರಸನ್ನನಾಗುತ್ತಾನೆ, ಕೆಲವರು ಹೇಳುತ್ತಾರೆ ಈ ದೇವನು ನೈವೇದ್ಯವನ್ನು ಅರ್ಪಿಸುವುದರಿಂದ ಪ್ರಸನ್ನನಾಗುತ್ತಾನೆ, ಕೆಲವರು ಹೇಳುತ್ತಾರೆ ಈ ದೇವನು ಹಳೇ ವಸ್ತ್ರಗಳನ್ನು ಅರ್ಪಿಸುವುದರಿಂದ ಹೊಸ ವಸ್ತ್ರಗಳನ್ನು ಕೊಡುತ್ತಾನೆ, ಕೆಲವರು ಈ ದೇವನಿಗೆ ಬೆಲ್ಲವನ್ನು ಸಮರ್ಪಿಸುತ್ತೇವೆಂದರೆ, ಕೆಲವರು ಈ ಜೀವನಿಗೆ ಉಂಡೆಯನ್ನು ಸಮರ್ಪಿಸುತ್ತೇವೆ ಎಂದು ಹೇಳುತ್ತಾರೆ, ಕೆಲವರು ಹೇಳುತ್ತಾರೆ ಈ ದೇವನು ಫಲ, ಪುಷ್ಪ, ಪತ್ರ ಮೊದಲಾದವುಗಳನ್ನು ಅರ್ಪಿಸುವುದರಿಂದ ಪ್ರಸನ್ನನಾಗುತ್ತಾನೆ, ಕೆಲವರು ಇವನಿಗೆ ಮದ್ಯದ ಧಾರೆಯನ್ನು  ಎರೆಯುವುದರಿಂದ ಮತ್ತೆ ಕೆಲವರು ಇವನಿಗೆ ಜೀವಗಳ ಮಾಂಸವನ್ನು ಅರ್ಪಿಸುವುದರಿಂದ ಪ್ರಸನ್ನನಾಗುತ್ತಾನೆಂದು ಹೇಳುತ್ತಾರೆ. ಇಂಥವರು ಅನೇಕ ಲೌಕಿಕ ದೇವಗಳಿದ್ದಾರೆ. ಇವರುಗಳ ಚೇಷ್ಟೆಯು ರಾಗ-ದ್ವೇಷ ರೂಪದ್ದೆಂದು ತಿಳಿದುಕೊಂಡು ಸಮ್ಯಗ್ದೃಷ್ಟಿ ಜೀವಗಳಿಗೆ ಇವರ ಕುರಿತಾಗಿ ಸಹಜವಾಗಿ ಹೇಯ ಭಾವವಿರುತ್ತದೆ. ಇವರು ತ್ಯಾಗ ಮಾಡಲು ಯೋಗ್ಯರಿದ್ದಾರೆ. ಇವರುಗಳ ಸೇವೆ, ಪೂಜೆ, ಭಕ್ತಿಯು ಸುಖವನ್ನು ಕೊಡುವಲ್ಲಿ ಸಮರ್ಥವಿಲ್ಲ. ಇವರೆಲ್ಲರು ಸಂಸಾರಿ ದೇವಗಳಿದ್ದಾರೆ ಎಂದು ತಿಳಿಯುವುದು.

ಈಗ ಗುರು ಪರೀಕ್ಷೆಯಲ್ಲಿ ಜ್ಞೇಯ, ಹೇಯ, ಉಪಾದೇಯ ಹೇಳುತ್ತಾರೆ, -

**ಕೋಹಾದೀಯ ಕಸಾಯೋ, ಗಂಥೋ ಗಹ ತಂತಮಂತ ಚ ಕತ್ತಾಏ ।**
**ಪರವಂಚಣಪಾಸಂಡೋ, ಪೂಜಾ ಸಕ್ಕಾರ ವಂಚ್ಛಈ ಕುಗುರೋ ॥೨೦॥**

**ಗಾಥಾರ್ಥ** - ಯಾರು ಕ್ರೋಧಾದಿ ಕಷಾಯಗಳಿಂದ ಸಹಿತರಿದ್ದಾರೆ, ಗ್ರಂಥಿ ಅರ್ಥಾತ್ ಪರಿಗ್ರಹಗಳ ಧಾರಕರಿದ್ದಾರೆ, ತಂತ್ರ-ಮಂತ್ರ-ನಾಡಿ ಪರೀಕ್ಷೆ, ವೈದ್ಯಕೀಯ ಮಾಡುತ್ತಿರುತ್ತಾರೆ, ಇತರರನ್ನು ವಂಚಿಸುತ್ತಾರೆ, ಪಾಖಂಡಿಗಳಾಗಿ ಪೂಜೆ-ಮಾನ-ದೊಡ್ಡಸ್ತನವನ್ನು ಸ್ವತಃ ಬಯಸುತ್ತಾರೆ ಅವರನ್ನು ಕುಗುರುವೆಂದು ತಿಳಿಯುವುದು.

**ಭಾವಾರ್ಥ** - ತಮ್ಮ ಮಾನ-ಸನ್ಮಾನಾದಿಗಳಾದಮೇಲೆ ಪ್ರಸನ್ನರಾಗುವುದು, ತಮ್ಮ ಅವಮಾನವಾದ ಮೇಲೆ ಕ್ರೋಧಿತರಾಗುವುದು, ಯಾರಾದರು ಬಂದು ತಮಗೆ ನಮಸ್ಕಾರ ಮಾಡಿದರೆ, ಸ್ತುತಿ ಮಾಡಿದರೆ ಪ್ರಸನ್ನರಾಗುವುದು ಹಾಗೂ ಒಳ್ಳೆಯ ಭೋಜನ ನೀಡಿದ ಮೇಲೆ ಸಂತುಷ್ಟರಾಗುವುದು, ಬೇರೆಯವರನ್ನು ಧನವಂತರೆಂದು ತಿಳಿದುಕೊಂಡು ಅವರ ಆದರವನ್ನು ವಿಶೇಷವಾಗಿ ಮಾಡುವುದು, ಯಾರಾದರು ತಮಗೆ ಧನವನ್ನಿತ್ತರೆ ಅವರನ್ನು ಒಳ್ಳೆಯ ಸೇವಕರೆಂದು ಮನ್ನಿಸುವುದು - ಇತ್ಯಾದಿ ಲಕ್ಷಣಗಳಿಂದ ಕುಗುರುವಿನ ಸ್ವರೂಪ ತಿಳಿಯುವುದು.

ಪರಿಗ್ರಹ ಧಾರಣ ಮಾಡಿ ಸ್ವಯಂ ತಮಗೆ ಗುರು ಪದವಿ ಮನ್ನಿಸುವುದು, ರಾಗ-ದ್ವೇಷ-ಭಾವಸಹಿತರಾಗಿರುವುದು ಬಹಳಷ್ಟು ಧನದ ಅಧಿಪತಿಯಾಗಿರುವುದು ಹಾಗೂ ಮತ್ತೆ ಧನವನ್ನು ಪ್ರಾಪ್ತ ಮಾಡಿಕೊಳ್ಳುವ ಇಚ್ಛೆಯನ್ನಿಟ್ಟುಕೊಳ್ಳುವುದು, ಬಹಳಷ್ಟು ಖೇದದಿಂದಲೂ ಕೂಡ ದ್ರವ್ಯವನ್ನುಸಂಗ್ರಹಿಸುವ ಸಲುವಾಗಿ ಮಹಾಲೋಭಿಯಾಗುವುದು, ತಮ್ಮ ಗುರು ಪದವನ್ನು ಇತರರು ಮನ್ನಿಸುವ ಸಲುವಾಗಿ ಮಂತ್ರ , ತಂತ್ರ , ಜಂತ್ರ , ವೈದ್ಯಕೀಯ, ಜ್ಯೋತಿಷ ಇತ್ಯಾದಿ ಅನೇಕ ಚಮತ್ಕಾರಗಳನ್ನು ಪ್ರಕಟ ಮಾಡಿ ಮುಗ್ಧ ಜೀವರುಗಳಿಗೆ ವಿಸ್ಮಯವನ್ನುಂಟು ಮಾಡಿ ಮೋಹಿತಗೊಳಿಸುವುದು. ಅವರೆಲ್ಲರು ಕುಗುರುಗಳಿದ್ದಾರೆ.

ಇತರರನ್ನು ವಂಚಿಸುವ ಸಲುವಾಗಿ ಮಹಾಚತುರರಿರುವುದು. ತಮ್ಮ ಮನಸ್ಸಿನ ಮಾತನ್ನು ಅತ್ಯಂತ ಗುಪ್ತವಾಗಿರಿಸಿ ತಮ್ಮ ಬುದ್ಧಿಯ ಬಲದಿಂದ ಮುಗ್ಧ ಜೀವರುಗಳ ಧನ ಅಪಹರಿಸುವ ಸಲುವಾಗಿ ತಾವು ಮಹಾ ಸಮತೆಯ ಭಾವ ಧಾರಣ ಮಾಡುವುದು. ಅನೇಕ ಮಿಷ್ಟ ವಚನಗಳನ್ನು ಆಡುವುದು. ಬಂದಿರುವಂಥ ಭಕ್ತರ ಸತ್ಕಾರವನ್ನು ಒಳ್ಳೆಯ ರೀತಿಯಿಂದ ಮಾಡುವುದು. ಇತರರಿಗೆ ಸಂತೋಷ ವಿಶ್ವಾಸವನ್ನು ಉತ್ಪನ್ನ ಮಾಡಿ ಅವರಿಂದ ತಮ್ಮ ಪೂಜೆ ಮಾಡಿಸಿಕೊಳ್ಳುವುದು. ಆ ಮುಗ್ಧ ಜೀವರುಗಳಿಂದ ನಮಸ್ಕಾರ ಮಾಡಿಸಿಕೊಳ್ಳುವುದು ಅಂಥವರು ಕುಗುರುಗಳಿದ್ದಾರೆ. ತಮಗೆ ಗುರು ಬಲವನ್ನು ಮನ್ನಿಸಿ ಹಿಂಸೆಯ ರೂಪವಾಗಿ ಪ್ರವರ್ತಿಸುವುದು, ಹಿಂಸೆಯ ಉಪದೇಶ ಕೊಡುವುದು, ಸ್ವಯಂ ಕ್ರಿಯಾಹೀನನಾಗುವುದು, ಖಾದ್ಯ , ಅಖಾದ್ಯಗಳ ವಿಚಾರಗಳಿಂದ ರಹಿತನಿರುವುದು, ಉಪಸರ್ಗವು ಬಂದ ಮೇಲೆ ದೀನನಾಗಿ ಬಿಡುವುದು, ಅನುಕೂಲತೆಯಾದಾಗ ಪ್ರಫುಲ್ಲಿತರಾಗಿರುವುದು, ಚರ್ಮ, ಹುಲ್ಲು, ವಲ್ಕಲಾ - ಇತ್ಯಾದಿ ವಸ್ತ್ರಧಾರಣ ಮಾಡುವುದು, ದರಿದ್ರವೃತ್ತಿಯೊಂದಿಗೆ ಯಾಚನೆ ಮಾಡುವುದು - ಅವರು ಕುಗುರುವಿದ್ದಾರೆ.

ತಮ್ಮ ಅವಮಾನವಾದಮೇಲೆ ಹಾಗೂ ತಮಗೆ ಮನೋವಾಂಛಿತ ದಾನವು ದೊರಕದಿರುವಾಗ ಇತರರಿಗೆ ಶಾಪ ಕೊಡುವ ಸಲುವಾಗಿ ಮಹಾಕ್ರೋಧಿತರಾಗುವುದು, ಸ್ವಯಂ ತಮ್ಮನ್ನು ಗುರುವೆಂದು ಮನ್ನಿಸಿ ಗರ್ವ ಮಾಡುವುದು, ಪರಪೀಡೆಯ ಸಲುವಾಗಿ ನಿರ್ದಯರಾಗುವುದು ಹಾಗೂ ಇತರರ ಆಶ್ರಯವನ್ನುಬಯಸುವುದು, ಮಧುರ ಸ್ವರದಲ್ಲಿ ಗಾಯನ, ಮೊದಲಾದ ಕ್ರಿಯೆ ಮಾಡಿ ಅನ್ಯ ಗೃಹಸ್ಥರನ್ನು ಪ್ರಸನ್ನಗೊಳಿಸುವ ಉಪಾಯ ಮಾಡುವುದು,ರಸಾಯನ, ರಸಕೂಪ, ಧಾತು, ಸಾಯಿಸುವಲ್ಲಿ ಪ್ರವೀಣತೆಯನ್ನು ತಿಳಿಸಿಕೊಟ್ಟು ತಮ್ಮ ವಶೀಭೂತ ಮಾಡಿಕೊಳ್ಳುವ ಇಚ್ಛೆಯನ್ನಿಟ್ಟು ಕೊಳ್ಳುವುದು, ಹಸಿವೆ, ಬಾಯಾರಿಕೆ, ಶೀತ, ಉಷ್ಣ ಮೊದಲಾದ ಪರೀಷಹಗಳು ಬಂದ ಮೇಲೆ ಅತ್ಯಂತ ಹೇಡಿಯಾಗುವುದು. ಕಾಮ ವಿಕಾರವನ್ನು ತಡೆಯುವಲ್ಲಿ ಅಸಮರ್ಥರಾಗಿ ಸ್ತ್ರೀ ಸಹಿತರಾಗಿರುವುದು, ಮನಸ್ಸು- ಇಂದ್ರಿಯಗಳನ್ನು ಜಯಿಸುವಲ್ಲಿ ದೀನನಾಗಿರುವುದು, ಶರೀರದ ಅವಯವಗಳನ್ನು ಭೇದಿಸಿಕೊಂಡು ಅದರಲ್ಲಿ ಸಂಕಲೆ ಅಥವಾ ಲೋಹದ ಸಲಾಕೆಯನ್ನು

ಹಾಕಿಕೊಳ್ಳುವುದು, ಸಂಸಾರೀ ಗೃಹಸ್ಥರ ಸಮಾನ ವ್ಯವಹರಿಸುವುದು, ಹೋಳಿ ಹಬ್ಬ, ದೀಪಾವಳಿ ಮೊದಲಾದ ಹಬ್ಬಗಳು ಬಂದ ಮೇಲೆ ಸೋದರಿಯರಿಗೆ ಕಾಣಿಕೆ ಕೊಡುವುದು - ಅಂಥವರು ಕುಗುರು ಇದ್ದಾರೆ.

ಧ್ಯಾನ ಅಧ್ಯಯನದಲ್ಲಿ ಪ್ರಮಾದಿಯಾಗಿರುವುದು, ಶರೀರವನ್ನು ತೊಳೆಯುವ, ಒರೆಸುವ, ತಿನ್ನಿಸುವ, ಉಣ್ಣಿಸುವ, ಮಲಗಿಸುವ, ಏಳಿಸುವ ಮೊದಲಾದ ಶರೀರ ರಕ್ಷಣೆಯಲ್ಲಿ ಚತುರನಾಗಿರುವುದು, ಆಚಾರ್ಯರ ಪರಂಪರೆಯಿಂದ ನಡೆಯುತ್ತ ಬಂದಿರುವ ರೀತಿಯನ್ನು ಲುಪ್ತಗೊಳಿಸುವಂಥವರು, ರಾತ್ರಿಯಲ್ಲಿ ಅನ್ನ ಜಲಾದಿಗಳ ಗ್ರಹಣ ಮಾಡುವಂಥವರು, ಜ್ಞಾನರಹಿತ ತಪಸ್ಸು ಮಾಡುವಂಥವರು, ಮಂದಿರ ಮಹಲುಗಳಲ್ಲಿ ಮನೆಯನ್ನು ನಿರ್ಮಿಸಿಕೊಂಡು ಅವುಗಳಲ್ಲಿ ವಾಸಿಸುವಂಥವರು, ಬಾವಿ, ಕೆರೆ, ವಾಪಿಗಳನ್ನು ತೋಡಿಸುವುದು, ಉದ್ಯಾನವನಗಳನ್ನು ನಿರ್ಮಿಸುವುದು, ತಮ್ಮ ಹೆಸರಿನ ಪರಂಪರೆಯನ್ನು ನಡೆಸುವ ಇಚ್ಛೆಯನ್ನಿಟ್ಟುಕೊಳ್ಳುವುದು - ಇತ್ಯಾದಿ ಅನೇಕ ವೇಷಗಳನ್ನು ಮಾಡಿಕೊಂಡು ತಮ್ಮ ತಮ್ಮ ಪರಿಣತಿ ಸಹಿತ ಜಗತ್ತಿನಲ್ಲಿ ತಮಗೆ ಗುರುಪದ ಮನ್ನಿಸುವುದು - ಇವೆಲ್ಲವು ಕುಗುರುಗಳ ಲಕ್ಷಣಗಳಿವೆ. ಇವರನ್ನು ಹೇಯವೆಂದು ತಿಳಿಯುವುದು.

ಸಂಸಾರದ ದಡ ತಲುಪಿಸುವಂಥ ಸುಗುರುಗಳು ಸಂಸಾರ ಸಾಗರ ದಾಟಿಸುವ ಸಲುವಾಗಿ ನೌಕೆಯ ಸಮಾನರಿದ್ದಾರೆ. ಅವರ ಸ್ವರೂಪ ಹೇಳುತ್ತಾರೆ -

**ಅರಿ ಮಿತ ಜೀತ ಮರಣಂ, ತಿಣ ಧಣ ಸುಹ ದುಹ ಸಕಲ ಸಮಭಾವೋ ।**
**ಯೋ ಗುರು ಭವದಧಿ ಣಾವೋ ವಿರಾಈ ಣಗಣ ಣಾಣಮಯೀ ಜೋಈ ॥೨೧॥**

**ಗಾಥಾರ್ಥ -** ಯಾರು ಶತ್ರು-ಮಿತ್ರ, ಜೀವನ-ಮರಣ, ತೃಣ-ಚಿನ್ನ, ಸುಖ-ದುಃಖದಲ್ಲಿ ಸಮಭಾವ-ವುಳ್ಳವರಿದ್ದಾರೆ, ಭವಸಾಗರವನ್ನು ದಾಟುವ ಸಲುವಾಗಿ ನೌಕೆಯ ಸಮಾನರಿದ್ದಾರೆ, ವೀತರಾಗಿ ಇದ್ದಾರೆ, ನಗ್ನರಿದ್ದಾರೆ, ಜ್ಞಾನಮೂರ್ತಿ ಇದ್ದಾರೆ, ಆ ಯತೀಶ್ವರರು ನಮ್ಮ ಗುರುಗಳಿದ್ದಾರೆ.

**ಭಾವಾರ್ಥ -** ಯಾವ ಯತೀಶ್ವರರಿಗೆ ತಮ್ಮ ನಿಂದೆ ಮಾಡುವಂಥವರ, ಕ್ರೂರ ಸ್ವಭಾವಿಗಳ, ಅವಿನಯಿಗಳ, ತಮ್ಮ ದ್ವೇಷಿ ಹಾಗೂ ತಮ್ಮ ಸೇವೆ ಮಾಡುವಂಥವರ, ವಿನಯವಂತ, ಶಿಷ್ಯ ತಮ್ಮ ಮಿತ್ರ - ಇವರೆಲ್ಲರಲ್ಲಿ ಸಮಭಾವವಿದೆ ಆ ಗುರುಗಳು ಪೂಜ್ಯರಿದ್ದಾರೆ. ಆತ್ಮನು ಶರೀರದಲ್ಲಿ ಇರುವುದು ಜೀವನ ಹಾಗೂ ಆತ್ಮನಿಂದ ಶರೀರವು ಬಿಟ್ಟು ಹೋಗುವುದು ಮರಣವಿದೆ - ಇವೆರಡರಲ್ಲಿ ಯಾರಿಗೆ ಸಮಭಾವವಿದೆ ಅವರು ಜಗದ್ಗುರು ಇದ್ದಾರೆ. ಶರೀರವನ್ನು ಪುಷ್ಟಗೊಳಿಸುವ ಸಲುವಾಗಿ ವಿಭಿನ್ನ ಪ್ರಕಾರದ ಭೋಜನ, ಬಹಳಷ್ಟು ಪ್ರಕಾರದಿಂದ ಶರೀರದಲ್ಲಿ ನಿರೋಗತೆ ಮೊದಲಾದವುಗಳ ಅನೇಕ ಸುಖ ಅಥವಾ ಅನೇಕ ಪರೀಷಹಗಳ ದುಃಖ, ಶರೀರದ ರೋಗಾದಿ ಅನೇಕ ದುಃಖಗಳಲ್ಲಿ ಯಾರಿಗೆ ಸಮತೆಯ ಭಾವವಿದೆ ಅವರು ಸುಗುರುವಿದ್ದಾರೆ.

ಕೊಳೆತ ಹುಲ್ಲು ಕಡ್ಡಿಯಲ್ಲಿ ಹಾಗೂ ವಿಭಿನ್ನ ಪ್ರಕಾರದ ರತ್ನಗಳಲ್ಲಿ, ಸ್ವರ್ಣದಲ್ಲಿ ಸಮತೆ ಇರುವುದು ಇತ್ಯಾದಿ ವೀತರಾಗತೆಯಿಂದ ಯುಕ್ತ ಗುಣಗಳು ಯಾರಲ್ಲಿ ಇರುತ್ತವೆ ಆ ಗುರುಗಳು ಭವಸಮುದ್ರವನ್ನು ದಾಟಿಸುವಲ್ಲಿ ನೌಕೆಯ ಸಮಾನರಿದ್ದಾರೆ. ಯಾವ ಗುರುಗಳದು ಯಾರ ಜೊತೆಗೂ ರಾಗ-ದ್ವೇಷಗಳಿರುವುದಿಲ್ಲ ಅವರು ವೀತರಾಗಿಗಳಿದ್ದಾರೆ. ಅಂತರಂಗದಲ್ಲಿ ಕಷಾಯರೂಪದ ಕೆಸರಿನಿಂದ ರಹಿತರಿದ್ದು ಮಹಾನ್ ನಿರ್ಮಲರಿದ್ದಾರೆ ಹಾಗೂ ಬಾಹ್ಯದಲ್ಲಿ ಎಲ್ಲ ಪ್ರಕಾರದ ಪರಿಗ್ರಹಗಳಿಂದ ರಹಿತ ಯಥಾಜಾತ (ಶಿಶುವತ್) ನಗ್ನರಿದ್ದಾರೆ, ಮತಿ, ಶ್ರುತ, ಅವಧಿ, ಮನಃಪರ್ಯಾಯ ಇತ್ಯಾದಿ ಮಹಾನ್ ಅತಿಶಯಕಾರಿ ಜ್ಞಾನದ ಧಾರಕರಿದ್ದಾರೆ - ಅಂಥ ಯೋಗೀಶ್ವರರೇ ಸುಗುರುಗಳಿದ್ದಾರೆ. ಅವರು ಇಂದ್ರ, ದೇವಾದಿ, ಚಕ್ರವರ್ತಿ ಮೊದಲಾದ ಸಮ್ಯಗ್ದೃಷ್ಟಿ ಜೀವಗಳಿಂದ ಪೂಜ್ಯರಿದ್ದಾರೆ.

ಈಗ ಸುಗುರುವಿನದೇ ವಿಶೇಷ ಸ್ವರೂಪ ಹೇಳುತ್ತಾರೆ -

**ಮಣ ಇಂದೀಜಯ ಸೂರಾ, ವೀರಾ ಸಂಕಟಸಹಣ ದೋ ವೀಸಾ ।**
**ತಣಖೀಣಾ ಮಣ-ಸುಖಿಯಾ, ಸೋ ಹೋಈ ಗುರು ತರಣ ತಾರಾಏ ॥೨೨॥**

**ಅರ್ಥ** - ಐದು ಇಂದ್ರಿಯಗಳು ಹಾಗೂ ಮನಸ್ಸು ಮಹಾಬಲವಂತವಿವೆ; ಇಂದ್ರ, ಚಕ್ರವರ್ತಿ ಮೊದಲಾದ ಮೂರು ಲೋಕದ ರಾಜ ಮಹಾರಾಜರು ಕೂಡ ಇವುಗಳ ಆಧೀನರಿದ್ದಾರೆ; ಮನಸ್ಸು ಇಂದ್ರಿಯಗಳಅನುಸಾರ ಇಂದ್ರಾದಿಗಳೂ ಪ್ರವೃತ್ತಿ ಮಾಡುತ್ತಾರೆ ಆದುದರಿಂದ ಸಂಸಾರದಲ್ಲಿ ಈ ಮನಸ್ಸು - ಇಂದ್ರಿಯಗಳೇ ಮಹಾನ್ ಯೋಧವಿವೆ. ಇವುಗಳನ್ನು ಜಯಿಸುವ ಸಲುವಾಗಿ ಯತೀಶ್ವರರೇ ಮಹಾ ಶೂರ-ವೀರರಿದ್ದಾರೆ. ಯಾವವುಗಳನ್ನು ನೋಡುತ್ತಿದ್ದಂತೆಯೇ ದೊಡ್ಡ ದೊಡ್ಡ ಸಾಹಸಿಗಳ ಸಾಹಸವು ಭಯದಿಂದ ನಷ್ಟವಾಗಿ ಹೋಗುತ್ತದೆ, ಅಂಥ ದುರ್ಧರ ಸಂಕಟರೂಪದ ಪರೀಷಹಗಳನ್ನು ಜಯಿಸುವ ಸಲುವಾಗಿ ಯೋಗೀಶ್ವರರು ಮಹಾನ್ ಧೀರ-ವೀರರಿದ್ದಾರೆ. ಈ ಪರೀಷಹಗಳ ಸ್ವರೂಪವನ್ನು ಮುಂದೆ ಹೇಳಲಾಗುವುದು  ಆದುದರಿಂದ ಇಲ್ಲಿ ಅವುಗಳನ್ನು ವಿಶೇಷವಾಗಿ ಹೇಳಲಾಗಿಲ್ಲ. ವಿವಿಧ ಪ್ರಕಾರದ ತಪಸ್ಸು ರೂಪದ ಅಗ್ನಿಯಲ್ಲಿ ಶರೀರವು ತಪ್ತವಾಗಿ ಹೋಗುವ ಕಾರಣ ಮಹಾಕ್ಷೀಣವಾಗಿದೆ. ಕೇವಲ ಮೂಳೆ, ಚರ್ಮ, ನರಮಂಡಲದ ಜಾಲವೇ ಉಳಿದುಕೊಂಡಿದೆ. ಈ ಪ್ರಕಾರ ಶರೀರವು ಕ್ಷೀಣವಿದೆ ಆದರೆ ಮನಸ್ಸಿನಲ್ಲಿ ಸಮತೆಯ ಭಾವದ ಮೂಲಕ ಅನುಪಮ ಅಮೃತಪ್ರಾಶನ ಮಾಡುವುದರಿಂದ ಅವರು ಮಹಾಸುಖಿಗಳಿದ್ದಾರೆ. ಆ ಗುರುಗಳೇ ದಡ ತಲುಪಿಸುವಂಥವರಿದ್ದಾರೆ. ಅವರೇ ಸಮ್ಯಗ್ದೃಷ್ಟಿಗಳ ಮೂಲಕ ಪೂಜ್ಯರಿದ್ದಾರೆ, ಉಪಾದೇಯರಿದ್ದಾರೆ.

ಮುಂದೆ ಸುಗುರುಗಳ ಸ್ವರೂಪವನ್ನು ಇನ್ನಷ್ಟು ಹೇಳುತ್ತಾರೆ.

**ಪಂಚ ಮಹವ್ವಯ ಸಹಿಯೋ, ಸಮಪನ ಅಕ್ಖಗಯಂದ ವಶೀಕರಈ ।**
**ಅವಸಿ ಷಟ್ ಸೇಸೋ ಜೋ ಸತ್ತ ಅಟ್ಠಬೀಸ ಮೂಲಗುಣ ಸಾಹೂ ॥೨೩॥**

**ಗಾಥಾರ್ಥ** - ಪಂಚ ಮಹಾವ್ರತ ಸಹಿತ ಪಂಚ ಸಮಿತಿಗಳ ಮೂಲಕ ಜೀವಗಳ ರಕ್ಷಕರು, ಪಂಚ ಇಂದ್ರಿಯ ರೂಪದ ಹಸ್ತಿಗಳನ್ನು ವಶದಲ್ಲಿಟ್ಟುಕೊಳ್ಳುವಂಥವರು, ಆರು ಆವಶ್ಯಕಗಳಲ್ಲಿ ಸಾವಧಾನರು ಹಾಗೂ ಏಳು ಶೇಷ ಗುಣಗಳ ಧಾರಕರು - ಇವು ಇಪ್ಪತ್ತೆಂಟು ಮೂಲ ಗುಣಗಳು ಜಿನಮುನಿಯವಿವೆ, ಅವರು ಸುಗುರುವಿದ್ದಾರೆ.

**ಭಾವಾರ್ಥ** - ಧ್ಯಾನ ಅಧ್ಯಯನದಲ್ಲಿ ಪ್ರವೀಣ, ಜಗದ್ಗುರು ಯೋಗೀಶ್ವರರು ಇಪ್ಪತ್ತೆಂಟು ಮೂಲ ಗುಣಗಳ ಪಾಲನೆಯಲ್ಲಿ ಪ್ರಮಾದರಹಿತವಾಗಿ ಪ್ರವರ್ತಿಸುತ್ತಾರೆ. ಈ ಮೂಲ ಗುಣಗಳೇ ಯತೀಶ್ವರರ ಧರ್ಮವಿವೆ; ಆದುದರಿಂದ ಅವುಗಳನ್ನು ತಿಳಿಸಿಕೊಡಲಾಗುವುದು - ಪಂಚ ಮಹಾವ್ರತ, ಪಂಚ ಸಮಿತಿ, ಪಂಚೇಂದ್ರಿಯ ವಿಜೇತ, ಆರು ಆವಶ್ಯಕ; ಭೂಮಿಶಯನ, ಸ್ನಾನತ್ಯಾಗ, ವಸ್ತ್ರತ್ಯಾಗ, ಕೇಶಲೋಂಚ, ದಿವಸದಲ್ಲಿ ಒಂದು ಬಾರಿ ಭೋಜನ, ನಿಂತುಕೊಂಡು ಭೋಜನ, ಹಲ್ಲುಜ್ಜುವುದರ ತ್ಯಾಗ ಇವು ಏಳು ಹೀಗೆ ಒಟ್ಟು ಇಪ್ಪತ್ತೆಂಟು ಮೂಲ ಗುಣಗಳಿವೆ. ಈಗ ಇವುಗಳ ಸಾಮಾನ್ಯ ಸ್ವರೂಪ ಹೇಳಲಾಗುವುದು.

**ಪಂಚ ಮಹಾವ್ರತ** - ಸರ್ವತ್ರ ತ್ರಸ, ಸ್ಥಾವರ ಜೀವಗಳ ಮೇಲೆ ಸಮತೆಯ ಭಾವನೆಯನ್ನು ಧಾರಣಮಾಡಿ ಜಗತ್ತಿನ ಕಷ್ಟವನ್ನು ದೂರ ಮಾಡುವಂಥವರು, ಪರಮ ದಯಾಳುಗಳು, ಕೋಮಲ ಚಿತ್ತದ ಧಾರಕರಾದ ಮುನಿರಾಜರು ಜಗತ್ತಿನ ಸರ್ವ ಜೀವಗಳನ್ನು ತಮ್ಮ ಸಮಾನವೆಂದು ತಿಳಿದುಕೊಂಡು ಎಲ್ಲ ಜೀವಗಳ ರಕ್ಷಣೆ ಮಾಡುತ್ತಾರೆ, ಸರ್ವ ಪ್ರಕಾರ ಹಿಂಸೆಯ ತ್ಯಾಗ ಮಾಡುತ್ತಾರೆ - ಅದು ಅಹಿಂಸಾ ಮಹಾವ್ರತವಿದೆ. ಇದರ ಹೆಸರೇ ಅಭಯದಾನವಿದೆ.

ಕೆಲವು ಮುಗ್ಧ ಜೀವಗಳು ತಕ್ಷಣ ಜನಿಸಿದ ಹಸುವಿನ ಕರುವಿನ ಮುಖದಲ್ಲಿ ಸ್ವರ್ಣ ಮುತ್ತುಗಳನ್ನು ಇಟ್ಟು ದಾನಕೊಡುವುದನ್ನು ಅಭಯದಾನವೆಂದು ಹೇಳುತ್ತಾರೆ. ಆದರೆ ಈ ಉಪದೇಶವಂತೂ ಲೋಭದ ಮಾಹಾತ್ಮ್ಯದಿಂದ

ಮುಗ್ಧ ಜೀವಗಳಿಗೆ ಲೋಭೀ ಗುರುಗಳು ಹೇಳಿರುವಂಥದ್ದಿದೆ. ವಾಸ್ತವದಲ್ಲಂತೂ ಯಾರನ್ನಾದರು ಸಮಸ್ತ ಭಯಗಳಿಂದ ರಹಿತಗೊಳಿಸಿ ಮರಣದ ಭಯದಿಂದ ರಕ್ಷಿಸುವುದರ ಹೆಸರು ಅಭಯದಾನವಿದೆ. ಈ ಅಭಯದಾನವು ಯಾರು ಹಿಂಸೆಯಿಂದ ರಹಿತ ವ್ರತಗಳ ಧಾರಕರಿದ್ದಾರೆ ಅವರಿಗೇನೆ ಆಗುತ್ತದೆ.

ಯಾವುದು ಎಲ್ಲ ಪ್ರಕಾರದಿಂದ ಅಸತ್ಯದ ತ್ಯಾಗರೂಪವಿದೆ, ಜಿನಾಜ್ಞೆಯ ಅನುಸಾರ ಮಾತನಾಡುವಂಥದ್ದಿದೆ ಅದು ಸತ್ಯ ಮಹಾವ್ರತವಿದೆ. ಕೊಡದೇ ಇರುವಂಥ ಪದಾರ್ಥವನ್ನು ಎಲ್ಲ ಪ್ರಕಾರದಿಂದ ಗ್ರಹಿಸದೇ ಇರುವುದು ಅದತ್ತಾದಾನವಿದೆ. ದಾರಿಯಲ್ಲಿ ಬಿದ್ದಿರುವ ವಸ್ತುವನ್ನು ಮನ-ವಚನ-ಕಾಯದ ಮೂಲಕ ತೆಗೆದುಕೊಳ್ಳದೇ ಇರುವುದು - ಇತ್ಯಾದಿ ರೂಪದಿಂದ ಚೋರಿಯ ತ್ಯಾಗವು ಅಚೌರ್ಯಮಹಾವ್ರತವಿದೆ. ಸರ್ವ ಪ್ರಕಾರದಿಂದ ಸ್ತ್ರೀಯ ವಿಷಯಗಳನ್ನು ಮನ-ವಚನ-ಕಾಯ-ಕೃತ-ಕಾರಿತ-ಅನುಮೋದನದಿಂದ ದೇವಸ್ತ್ರೀ , ಪಶುಸ್ತ್ರೀ , ಮನುಷ್ಯಸ್ತ್ರೀ, ಪಾಷಾಣ ಕಾಷ್ಠಗಳಿಂದ ನಿರ್ಮಿಸಲಾದ ಅಚೇತನಸ್ತ್ರೀ - ಈ ನಾಲ್ಕು ಪ್ರಕಾರದ ಸ್ತ್ರೀಯರುಗಳ ಭೋಗ-ಸ್ಪರ್ಶನಾದಿಗಳ ವಿಷಯದ ತ್ಯಾಗವು ಬ್ರಹ್ಮಚರ್ಯ ಮಹಾವ್ರತವಿದೆ.

**ಸಂದೇಹ -** ಚೇತನಸ್ತ್ರೀಯ ತ್ಯಾಗವು ಶೀಲವಿದೆ, ಇಲ್ಲಿ ಅಚೇತನಸ್ತ್ರೀಯ ಭೋಗದ ತ್ಯಾಗವು ಬ್ರಹ್ಮಚರ್ಯ ಮಹಾವ್ರತವೆಂದು ಹೇಳಿದ್ದಾರೆ, ಆದರೆ ಅಚೇತನ ಸ್ತ್ರೀಯ ಭೋಗವು ಯಾವ ಪ್ರಕಾರ ಸಂಭವವಿದೆ ?

**ಸಮಾಧಾನ -** ಎಲೈ ಭವ್ಯನೇ ! ಯಾವ ಭೋಗಗಳಿವೆ ಅವು ಯಥಾಯೋಗ್ಯ ಮನಸ್ಸಿನಿಂದ, ವಚನದಿಂದ, ಕಾಯದಿಂದ - ಮೂರು ಪ್ರಕಾರದಿಂದ ಆಗುತ್ತದೆ. ಚೇತನ ಸ್ತ್ರೀಯ ಭೋಗವಂತೂ ಮೂರು ಪ್ರಕಾರದಿಂದ ಆಗುತ್ತದೆ ಅದನ್ನಂತೂ ಎಲ್ಲರೂ ಒಳ್ಳೆಯ ರೀತಿಯಿಂದ ತಿಳಿಯುತ್ತಾರೆ. ಅಚೇತನ ಸ್ತ್ರೀಯ ಭೋಗವಂತೂ ಕಾಯ ಹಾಗೂ ವಚನದಿಂದ ಸಂಭವಿಸುವುದಿಲ್ಲ ಆದರೆ ಮನಸ್ಸಿನ ಭೋಗದಲ್ಲಿ ಅಚೇತನ ಸ್ತ್ರೀಯು ಕಾರಣವಾಗಿ ಬಿಡುತ್ತಾಳೆ. ಅಚೇತನ ಸ್ತ್ರೀಯನ್ನು ಕಂಡು ಹರ್ಷ ಮನ್ನಿಸುವುದು, ಚಿತ್ರ , ಕಾಷ್ಠ , ಪಾಷಾಣದ ಸ್ತ್ರೀಯು ಮಹಾಸುಂದರಳಿದ್ದಾಳೆ ಇವಳ ರೂಪವು ದೇವಾಂಗನೆಯ ಸಮಾನವಿದೆ, ಇತ್ಯಾದಿ ಅಚೇತನ ಸ್ತ್ರೀಯನ್ನು ಕಂಡು ಚೇತನ ಸ್ತ್ರೀಯ ಸ್ಮರಣೆಯೊಂದಿಗೆ ಹರುಷ ಮನ್ನಿಸುವುದು ಅದು ಮನ ಸಂಬಂಧದ ಹಾಗೂ ಯಾವುದೋ ಪ್ರಕಾರದಿಂದ ವಚನ ಸಂಬಂಧದ ಭೋಗವೂ ಸಂಭವಿಸಿತೆಂದು ತಿಳಿಯುವುದು. ಆದುದರಿಂದ ಬ್ರಹ್ಮಚರ್ಯ ವ್ರತದ ಧಾರಕರು ಅಚೇತನ ಹಾಗೂ ಚೇತನ ಎರಡೂ ಪ್ರಕಾರದ ಸ್ತ್ರೀಯರ ತ್ಯಾಗಿ ಇರುತ್ತಾರೆಂದು ತಿಳಿಯುವುದು ಇದು ಬ್ರಹ್ಮಚರ್ಯ ಮಹಾವ್ರತವಿದೆ.

ಒಂಭತ್ತು ನೋಕಷಾಯ, ಒಂದು ಮಿಥ್ಯಾತ್ವ, ಕಷಾಯಚತುಷ್ಕ - ಇವು ಹದಿನಾಲ್ಕು ಪ್ರಕಾರದ ಅಂತರಂಗ ಪರಿಗ್ರಹಗಳಿವೆ. ಹಾಗೂ ಧನ, ಧಾನ್ಯ , ದಾಸಿ, ದಾಸ, ಮೊದಲಾಗಿ ಹತ್ತು ಪ್ರಕಾರದ ಬಾಹ್ಯ ಪರಿಗ್ರಹಗಳಿವೆ -ಇವು ಇಪ್ಪತ್ತಾ ನಾಲ್ಕು ಪ್ರಕಾರದ ಪರಿಗ್ರಹಗಳ ತ್ಯಾಗವು ಯಾವ ನಗ್ನ ಯತಿವರರಿಗೆ ಇದೆ, ಅವರು ಪರಿಗ್ರಹ ತ್ಯಾಗ ಮಹಾವ್ರತಿ ಇದ್ದಾರೆ.

**ಪಂಚ ಸಮಿತಿ -** ದಯೆಯ ಸಾಗರರಾದ ಯತೀಶ್ವರರು ಯಾವಾಗ ಭೂಮಿಯ ಮೇಲೆ ವಿಹಾರ ಮಾಡುತ್ತಾರೆ, ಆಗ ಮುಂದಿನ ನಾಲ್ಕು ಮೊಳ ಭೂಮಿಯನ್ನು ನೋಡುತ್ತ ನಡೆಯುತ್ತಾರೆ. ಎಲ್ಲ ಜೀವರುಗಳ ಕುರಿತಾಗಿ ಮಹಾ ಕೋಮಲ ಚಿತ್ತದ ಧಾರಕರಾದ ಕರುಣಾನಿಧಾನರು ಯಾವ ಜೀವವೂ ನಮ್ಮ ಶರೀರದಿಂದ ಪೀಡಿತವಾಗದಿರಲಿ ಎಂಬ ಭಾವನೆಯೊಂದಿಗೆ ಭೂಮಿಯನ್ನು ನೋಡುತ್ತ ನಡೆಯುತ್ತಾರೆ. ಹೇಗೆ ಯಾರದೋ ರತ್ನವು ಭೂಮಿಯ ಮೇಲೆ ಬಿದ್ದು ಹೋಗಿದ್ದರೆ ಆ ರತ್ನ ಹುಡುಕುವ ಸಲುವಾಗಿ ಅವರು ದೃಷ್ಟಿ ಕೆಳಗೆ ಹಾಕಿ ಭೂಮಿಯನ್ನು ನೋಡುತ್ತ ನಡೆಯುತ್ತಾರೆ. ಅದೇ ಪ್ರಕಾರ ಜಗತ್ತಿನ ಪೀಡೆಯನ್ನು ದೂರ ಮಾಡುವಂಥ ಯತಿಗಳು ತಮ್ಮಸಮಾನವಿರುವ ಜೀವ ರೂಪ ರತ್ನದ ರಕ್ಷಣೆಯ ನಿಮಿತ್ತವಾಗಿ ಕೆಳಗೆ ನೋಡುತ್ತ ನಡೆಯುತ್ತಾರೆ - ಇದು ಈರ್ಯಾ ಸಮಿತಿ ಇದೆ.

ಯತೀಶ್ವರರು ಒಂದು ವೇಳೆ ಮಾತನಾಡಿದರೆ ಹಿತ-ಮಿತ ರೂಪದ ವಚನ ಮಾತನಾಡುತ್ತಾರೆ. ಅದನ್ನು ಆಲಿಸುವಂಥ ಅನ್ಯ ಜೀವಗಳು ಸುಖಿಯಾಗುತ್ತ ಪುಣ್ಯದ ಬಂಧ ಮಾಡಿಕೊಳ್ಳುತ್ತಾರೆ. ಇಂಥ ಪಾಪರಹಿತ ಜಿನಾಜ್ಞೆ ಸಹಿತ ಮಿಷ್ಟ ವಚನಗಳನ್ನಾಡುವುದು ಭಾಷಾ ಸಮಿತಿ ಇದೆ.

ಭೋಜನದ ಸಮಯದಲ್ಲಿ ಯತಿಗಳು ಒಂದು ವೇಳೆ ಭೋಜನ ಮಾಡಿದರೆ ಮನ-ವಚನ-ಕಾಯದ ಏಕಾಗ್ರತೆಯೊಂದಿಗೆ ಭೋಜನದ ಮೇಲೆ ದೃಷ್ಟಿಯನ್ನಿಡುತ್ತಾರೆ. ನಿರ್ದೋಷ, ನಲವತ್ತಾರು ದೋಷ (ಮೂವತ್ತೆರಡು ಅಂತರಾಯ, ಹದಿನಾಲ್ಕು ಮಲದೋಷ)ಗಳನ್ನು ದೂರ ಮಾಡಿ ಜಗತ್ತಿನ ಭೋಗಗಳಿಂದ ಉದಾಸೀನ, ದೇಹ ಮಮತೆಯಿಂದ ರಹಿತ, ನಿಸ್ಪೃಹತೆಯಿಂದ ಭೋಜನ ಮಾಡುತ್ತಾರೆ. ಮುನಿಗಳ ಭೋಜನವು ಐದು ಪ್ರಕಾರದ್ದಿರುತ್ತದೆ - ಗೋಚರಿ, ಭ್ರಾಮರಿ, ಗರ್ತಪೂರಣ, ದಾಹಶಮನ, ಒಂಗನ ಎಂದರೆ ಹೆರೆ.

ಹೇಗೆ ಹಸು ವನದಲ್ಲಿ ಮೇಯುತ್ತದೆ. ಯಾವ ಹುಲ್ಲು, ಒಣಗಿದ ಎಲೆಗಳನ್ನು ತಿನ್ನುತ್ತದೆ ಅವುಗಳನ್ನು ಮೂಲದಿಂದ ಕೀಳುವುದಿಲ್ಲ, ಮೇಲೆ ಮೇಲಿಂದಲೇ ಮೇಯುತ್ತವೆ; ಅದೇ ಪ್ರಕಾರ ಮುನಿಗಳು ಗೃಹಸ್ಥರನ್ನು ಪೀಡಿಸುವುದಿಲ್ಲ. ಸಹಜ ಭ್ರಮಣ ಮಾಡುತ್ತ ಭೋಜನ ತೆಗೆದುಕೊಳ್ಳುತ್ತಾರೆ. ಅದು ಗೋಚರೀ ವೃತ್ತಿಯಿದೆ.

ಹೇಗೆ ಭೃಂಗವು-ದುಂಬಿಯು ಪುಷ್ಪಕ್ಕೆ ಬಾಧೆ ತಗಲಿಸದೇ ದೂರದಿಂದಲೇ ಮಕರಂದವನ್ನು ಹೀರುತ್ತದೆ; ಅದೇ ಪ್ರಕಾರ ಮುನಿಗಳು ಗೃಹಸ್ಥನಿಗೆ ತೊಂದರೆ ಆಗದಂತೆ ಗೃಹಸ್ಥರ ಮನೆಯಿಂದ ದೂರದ ಅಂತರವಿಟ್ಟುಕೊಂಡು ಗಮನ (ಮಾರ್ಗಾದಿಗಳ ಮೇಲೆ ಗಮನ) ಮಾಡುತ್ತಾರೆ. ಗೃಹಸ್ಥರು ಬಲಗೊಂಡರೆ ಆಗ ಅವರ ಮನೆಯೊಳಗೆ ಹೋಗಿ ಭೋಜನ ತೆಗೆದುಕೊಳ್ಳುತ್ತಾರೆ - ಇದು ಭ್ರಾಮರೀವೃತ್ತಿ ಇದೆ.

ಹೇಗೆ ಒಂದು ವೇಳೆ ಯಾವುದಾದರು ತಗ್ಗು ತುಂಬುವುದಿದ್ದರೆ ಹುಲ್ಲು, ಒಣ ಕಟ್ಟಿಗೆ, ಪಾಷಾಣದ ಹರಳುಗಳು, ಬೂದಿ, ಮಣ್ಣು, ಧೂಳು ಮೊದಲಾಗಿ ಯಾವುದು ಕೈಗೆ ಬರುತ್ತದೆಯೋ ಅದರಿಂದಲೇ ತಗ್ಗು-ಹೊಂಡ ತುಂಬಿ ಬಿಡಲಾಗುತ್ತದೆ. ಅದೇ ಪ್ರಕಾರ ಮುನಿರಾಜರು ಉದರರೂಪದ ತಗ್ಗನ್ನು ತುಂಬುತ್ತಾರೆ. ಭೋಜನವು ರಸರಹಿತವಾಗಿರಲಿ, ಅಥವಾ ರಸಯುಕ್ತವಾಗಿರಲಿ. ಮುನಿಯೋಗ್ಯ ಆಚಾರ ಸಹಿತ ಭೋಜನ ಗ್ರಹಿಸುತ್ತಾರೆ. ಭೋಜನವು ಹೇಗಾದರೂ ಇರಲಿ (ಆದರೆ ಅಭಕ್ಷವಿರಬಾರದು) ಅವರಿಗೆ ಸ್ವಾದದಿಂದ ಯಾವ ಪ್ರಯೋಜನವು ಇಲ್ಲ, ಉದರ ರೂಪದ ಹೊಂಡವನ್ನು ಯಾವುದೋ ಪ್ರಕಾರದಿಂದ ತುಂಬಿಕೊಳ್ಳುತ್ತಾರೆ - ಇದು ಗರ್ತಪೂರಣವೃತ್ತಿ ಇದೆ.

ಯಾವ ಪ್ರಕಾರ ಮನೆಯಲ್ಲಿ ಅಗ್ನಿಯು ಹೊತ್ತಿಕೊಂಡಿದ್ದರೆ ಆಗ ಬೂದಿ, ಧೂಳು, ನೀರು ಮೊದಲಾದವುಗಳಿಂದ ಹೇಗೆ ಅಗ್ನಿಯನ್ನು ನಂದಿಸಲಾಗುತ್ತದೆ ಅದೇ ಪ್ರಕಾರ ಮುನಿರಾಜರಿಗೆ ನೀರಸ ಹಾಗೂ ಸ್ವಾದಿಷ್ಟ ಎಂಥದೇ ಭೋಜನವು ದೊರಕಿದರೂ ಅವರು ಕ್ಷುಧಾಗ್ನಿಯನ್ನು ನಂದಿಸಿ ಬಿಡುತ್ತಾರೆ - ಇದು ದಾಹಶಮನವೃತ್ತಿ ಇದೆ.

ಯಾವಾಗ ಎತ್ತಿನ ಬಂಡಿಯು ನಡೆಯುವುದಿಲ್ಲ ಆಗ ಗಾಲಿಗಳಿಗೆ ಎಳ್ಳು, ಎಣ್ಣೆ, ತುಪ್ಪವನ್ನು ಹೊಗೆಯಲ್ಲಿ ಕಪ್ಪಗೆ ಮಾಡಿ (ಗ್ರೀಸ ಮೊದಲಾದ ಸ್ನಿಗ್ಧ ಪದಾರ್ಥ) ಹಚ್ಚಿ ಯಾವುದೋ ರೀತಿಯಿಂದ ಮಾರ್ಗದಲ್ಲಿ ನಡೆಸುತ್ತ ಮನೆ ತಲುಪಿ ಬಿಡುತ್ತಾರೆ. ಅದೇ ಪ್ರಕಾರ ಮುನಿರಾಜರು ಮೋಕ್ಷ ರೂಪದ ಮನೆಗೆ ಹೋಗುವ ಸಮಯದಲ್ಲಿ ದೇಹ ರೂಪದ ಬಂಡೆಯ ಮೇಲೆ ಹತ್ತಿ ಚಲಿಸುತ್ತಾರೆ ಅದಕ್ಕೆ ಎಂಥದಾದರೂ ಹಸಿ-ಬಿಸಿ, ಶೀತ-ಉಷ್ಣ ಹೇಗಿದ್ದರೂ ಶುದ್ಧ ಆಹಾರ ಬೇಕು. ಈ ಪ್ರಕಾರ ಯಾವಾಗ ಕ್ಷುಧೆಯ ನಿಮಿತ್ತವಾಗುತ್ತದೆ ಆಗ ಭೋಜನದ ಹೆರೆಯನ್ನಿತ್ತು ಮೋಕ್ಷ ರೂಪದ ಮನೆಯಲ್ಲಿ ತಲುಪಿ ಬಿಡುತ್ತಾರೆ ಇದು ಹೆರೆಯ ವೃತ್ತಿಯಿದೆ.

ಯತಿಗಳು ಒಂದು ವೇಳೆ ಆಹಾರ ತೆಗೆದುಕೊಂಡರೆ ದೋಷರಹಿತವಿರುವುದನ್ನೇ ತೆಗೆದುಕೊಳ್ಳುತ್ತಾರೆ. ಈಗ ಆ ದೋಷಗಳನ್ನು ಹೇಳುತ್ತಾರೆ.

**ದೋಸ ಛಿಯಾಲಿಸ ರಹಿಯೋ, ಭಣಿಯೋ ಅಂತರಾಯ ತೀಸ ದೋ ಶುದ್ಧೋ ।**
**ದಹ ಚವ ಮಲ ದೋಸ ಹೀಣೋ, ಮುಣಿ ಭೋಯಣ ಹೋಇ ಣಿದ್ದೋಸೋ ॥೨೪॥**

**ಗಾಥಾರ್ಥ :-** ನಲವತ್ತಾರು ದೋಷ, ಮೂವತ್ತಾರು ಅಂತರಾಯ ಮತ್ತು ಹದಿನಾಲ್ಕು ಮಲದೋಷಗಳಿಂದ ರಹಿತವಾದ ಆಹಾರವೇ ಮುನೀಶ್ವರರ ಶುದ್ಧ ಆಹಾರವಿದೆ.

**ಭಾವಾರ್ಥ :-** ಭೋಜನವು ನಿರ್ದೋಷವಿದ್ದರೆ ಯತಿಗಳು ತೆಗೆದುಕೊಳ್ಳುತ್ತಾರೆ. ಒಂದು ವೇಳೆ ದೋಷವು ತಗಲಿದರೆ ಅಂತರಾಯ ಮಾಡುತ್ತಾರೆ. ಈಗ ಅವೇ ದೋಷಗಳನ್ನು ಹೇಳುತ್ತಾರೆ.

ನಲವತ್ತಾರು ದೋಷಗಳು - ಅವುಗಳಲ್ಲಿ ಮೊದಲಿನ ಹದಿನಾರು ಉದ್ಗಮ ದೋಷಗಳಿವೆ. ಅವು ದಾತೃವಿನ ಆಧೀನವಿವೆ, ಅವುಗಳಿಂದ ರಕ್ಷಣೆ ಮಾಡುವುದು, ದಾತೃವಿನ ಆಧೀನವಿದೆ. ಅವುಗಳ ಕುರಿತಾಗಿ ದಾತೃವು ಸಾವಧಾನತೆ-ಯನ್ನಿಟ್ಟುಕೊಳ್ಳುತ್ತಾನೆ. ಇಲ್ಲದೇ ಹೋದರೆ ದಾತೃವಿಗೆ ದೋಷ ತಗಲುತ್ತದೆ. ಅವು ಈ ಕೆಳಗಿನಂತಿವೆ,-

೧) ಮುನಿಗಳ ನಿಮಿತ್ತದಿಂದ ಒಂದು ವೇಳೆ ಭೋಜನವನ್ನು ಸಿದ್ಧಪಡಿಸಲಾಗಿದ್ದರೆ ದಾತೃವಿಗೆ ದೋಷವು ತಗಲುತ್ತದೆ, ಇದರ ಹೆಸರು ಉದ್ದಿಷ್ಟದೋಷವಿದೆ.

೨) ಯಾರು ಮೊದಲು ಭೋಜನವನ್ನು ಸಿದ್ಧಪಡಿಸಿದ್ದಾರೆ ಹಾಗೂ ಮುನಿರಾಜರು ಬರುತ್ತಿರುವುದನ್ನು ಕಂಡು ಆ ಭೋಜನವನ್ನು ಅಲ್ಪವೆಂದು ತಿಳಿದುಕೊಂಡು ಅದರಲ್ಲಿ ಮತ್ತಷ್ಟು ಅನ್ನಾದಿಗಳನ್ನು ಬೆರೆಸಿ ಮುನಿಗಳಿಗೆ ಭೋಜನವಿತ್ತರೆ ಅದು ಸಾಧಿಕ (ಅಧ್ಯಧಿ) ದೋಷವಿದೆ.

೩) ಮುನೀಶ್ವರರಿಗೆ ಅಪ್ರಾಸುಕ - ಸಚಿತ್ತ ಭೋಜನ ನೀಡುವುದು ಪೂತಕರ್ಮದೋಷವಿದೆ.

೪) ಅಸಂಯಮಿಗಳ ಹಾಗೆ ಮುನಿಗೆ ಭೋಜನ ನೀಡುವುದು ಮಿಶ್ರದೋಷವಿದೆ.

೫) ಯಾವ ಪಾತ್ರದಲ್ಲಿ ಭೋಜನ (ಅಡುಗೆ) ಮಾಡಲಾಗಿತ್ತೋ ಅದರಿಂದ ತೆಗೆದು ಬೇರೆ ಪಾತ್ರೆಗಳಲ್ಲಿ ಇರಿಸಿ ಮುನಿಗೆ ಭೋಜನ ನೀಡುವುದು ಸ್ಥಾಪಿತ (ಸ್ಯೋಪಿಮನ್ಯಸ್ತ) ದೋಷವಿದೆ.

೬) ಯಾರೋ ವ್ಯಂತರಾದಿ ದೇವಗಳ ನಿಮಿತ್ತದಿಂದ ತಯಾರಿಸಲಾದ ಭೋಜನದಿಂದ ಮುನಿಗೆ ದಾನ ನೀಡುವುದು ಬಲಿದೋಷವಿದೆ.

೭) ಕಾಲದ ಹೀನತೆ - ಅಧಿಕತೆ ಹಾಗೂ ಭೋಜನದ ಸಮಯವು ಹೊರಟು ಹೋದ ಮೇಲೆ ಬಲಗೊಳ್ಳುವುದು, ದುರ್ಭಿಕ್ಷ ಅಥವಾ ಅಕಾಲದ ಕಾರಣ ಅಗ್ಗವಾದ ಧಾನ್ಯದ ಭೋಜನವನ್ನು ಮುನಿಗೆ ನೀಡುವುದು ಅಥವಾ ಅಗ್ಗವಾಗಿ ದೊರೆತ ಮೇಲೆ ಒಳ್ಳೆಯ ಭೋಜನ ನೀಡುವುದು ಅಥವಾ ತನ್ನನ್ನು ಆಕುಲಿತನೆಂದು ತಿಳಿದು ಬೇಗ ಬೇಗನೆ ಭೋಜನ ನೀಡುವುದು ಅಥವಾ ತೀರ ನಿದಾನವಾಗಿ ಭೋಜನ ನೀಡುವುದು - ಈ ಪ್ರಕಾರ ಕಾಲದ ಹೀನತೆ - ಅಧಿಕತೆಯಿಂದ ಯಥಾಯೋಗ್ಯ ಭೋಜನ ನೀಡದಿರುವುದು ಪ್ರಾಭೃತಕ ದೋಷವಿದೆ.

**ವಿಶೇಷ -** ಮುನಿಗಳು ಆಹಾರ ಮಾಡಿ ಹೋದಮೇಲೆ ಭೋಜನದ ಪಾತ್ರೆಗಳನ್ನು ಮಣೆಯ ಮೇಲಿಂದ ತೆಗೆದು ಪುನಃ ನವೀನ ಮಣೆಯನ್ನುಮಂಡಿಸಿ ಭೋಜನ ಮಾಡುವುದು ದಾತೃವಿನ ಪ್ರಾವೃತಕರಣ ದೋಷವಿದೆ.

೮) ಮುನಿ ಮಹಾರಾಜರು ಮನೆಯಿಂದ ಹೊರಟು ಹೋದಮೇಲೆ ಭೋಜನದ ಪಾತ್ರೆಗಳನ್ನು ಅನ್ಯ ಸ್ಥಾನದಿಂದ ಅನ್ಯ ಸ್ಥಾನಕ್ಕೆ ಕೊಂಡೊಯ್ಯುವುದು, ಪಾತ್ರೆಗಳನ್ನು ಬೂದಿಯಿಂದ ಉಜ್ಜುವುದು, ಜಲದಿಂದ ತೊಳೆಯುವುದು, ಮಂಟಪವನ್ನು ತೆಗೆದು ಬಿಡುವುದು, ದೀವಿಗೆಯಿಂದ ಪ್ರಕಾಶ ಮಾಡುವುದು, ಪ್ರಾದುಷ್ಕರ ದೋಷವಿದೆ.

೯) ಮುನೀಶ್ವರರು ಭೋಜನದ ನಿಮಿತ್ತವಾಗಿ ಬರುತ್ತಿರುವುದನ್ನು ಕಂಡು ತತ್‌ಕ್ಷಣವೇ ತಮ್ಮ ಸಚಿತ್ತ ದ್ರವ್ಯಅಥವಾ

ಅಚಿತ್ತ ದ್ರವ್ಯ ನೀಡಿ ಆಹಾರವನ್ನು ಖರೀದಿಸಿ ತಂದು ಸಾಧುವಿಗೆ ಆಹಾರ ಕೊಡುವುದು ಅಥವಾ ಮಂತ್ರ , ತಂತ್ರ , ವಿದ್ಯೆಗಳಿಂದ ಇತರರಿಗೆ ಕೊಟ್ಟು ಭೋಜನ ತಯಾರಿಸಿ ಮುನಿಗೆ ದಾನ ಕೊಡುವುದು ಕ್ರೀತದೋಷವಿದೆ.

೧೦) ತಮ್ಮ ಶಕ್ತಿಯು ಇಲ್ಲದಿದ್ದರೂ ಬೇರೆಯವರಿಂದ ಸಾಲ ತೆಗೆದುಕೊಂಡು ಮುನಿಗೆ ಭೋಜನ ನೀಡುವುದು ಪ್ರಾಮಿತ್ಯರಿಣ ದೋಷವಿದೆ. (ಪ್ರಾಮೃಷ್ಯ ದೋಷ - ಭಗವತೀ ಆರಾಧನೆ, ಗಾಥೆ ೨೫೦)

೧೧) ತಮ್ಮ ಮನೆಯ ತುಚ್ಛ ಆಹಾರ ಜೋಳ-ಕೋದ್ರವಗಳನ್ನು ಬದಲಿಸಿ ಅಕ್ಕಿ, ಗೋದಿಯನ್ನು ತಂದು ಮುನಿಗೆ ಆಹಾರ ದಾನ ನೀಡುವುದು ಪರಿವರ್ತನ ದೋಷವಿದೆ.

೧೨) ಇತರರ ಮನೆಯಿಂದ, ಇನ್ನೊಂದು ಊರಿನಿಂದ,ಸ್ವದೇಶ ಅಥವಾ ಅನ್ಯ ದೇಶದಿಂದ ಬಂದಿರುವಂಥ ಭೋಜನವನ್ನು ದಾತೃವಿನ ಮೂಲಕ ಮುನಿಗಳನ್ನು ಬಲಗೊಂಡು ಕೊಡುವುದು ಅಭಿಘಟ (ಅಭಿಹೃತ) ದೋಷವಿದೆ.

೧೩) ಯತಿಯನ್ನು ಬಲಗೊಂಡು ತಂದ ನಂತರ ಮುಚ್ಚಳವನ್ನು ಮುಚ್ಚಿ ಇರಿಸಿದ ಡಬ್ಬಗಳಲ್ಲಿ ಇಡಲಾದ ವಸ್ತುಗಳನ್ನು ಡಬ್ಬಿಯ ಮುಚ್ಚಳ ತೆಗೆದು ಮುನಿಗೆ ದಾನ ಕೊಡುವುದು ದಾತೃವಿನ ಉದ್ಭಿನ್ನ ದೋಷವಿದೆ.

೧೪) ಮುನಿಗಳು ಬಂದ ನಂತರ ಯಾವುದೇ ವಸ್ತುವನ್ನು ಮೇಲಿನ ಮನೆಯಿಂದ ತಂದು ಮುನಿಗೆ ಭೋಜನದಲ್ಲಿ ನೀಡುವುದು ಮಾಲಾರೋಹಣ ದೋಷವಿದೆ.

೧೫) ಶ್ರಾವಕನಿಗಂತೂ ಮುನಿಗಳಿಗೆ ದಾನ ಕೊಡುವ ಇಚ್ಛೆ ಇರುವುದಿಲ್ಲ, ಪರಿಣಾಮಗಳಲ್ಲಿ ಭಕ್ತಿ ಇರುವುದಿಲ್ಲ; ಆದರೆ ದೊರೆ, ಹಿರಿಯರು, ನಗರದ ಧರ್ಮಾತ್ಮಾ ಜನರುಗಳ ಭಯದಿಂದ ಲೋಕದಲ್ಲಿ ತೋರಿಸಿಕೊಳ್ಳುವ ಸಲುವಾಗಿ ಮುನಿಗೆ ದಾನ ಕೊಡುವುದು ಆಚ್ಛೇದ ದೋಷವಿದೆ.

೧೬) ಅನಿಸೃಷ್ಟ (ನಿಷಿದ್ಧ) ದೋಷವು ೧) ಈಶ್ವರ, ೨) ಅನೀಶ್ವರವೆಂದು ಎರಡು ಪ್ರಕಾರದ್ದಿದೆ. ಎಲ್ಲಿ ಮನೆಯ ಮಾಲೀಕನು ಮಂತ್ರಿ ಮೊದಲಾದವರ ಅಧೀನನಿದ್ದಾನೆ, ಅದು ಸಾರಕ್ಷಈಶ್ವರತೆಯಿದೆ ಹಾಗೂ ಯಾರು ಮಂತ್ರಿ ಮೊದಲಾದವರ ಆಧೀನವಿರುವುದಿಲ್ಲ ಅದು ಅಸಾರಕ್ಷ ಈಶ್ವರತೆಯಿದೆ.ಯಾರು ಮಂತ್ರಿ ಮೊದಲಾದವರ ಆಧೀನವಿರದೆ ಅವರಿಂದ ಸಲಹೆ ಪಡೆದು ಕಾರ್ಯ ಮಾಡುತ್ತಾರೆ ಅದು ಸಾರಕ್ಷಾಸಾರಕ್ಷ ಈಶ್ವರತೆಯಿದೆ. ಈ ಪ್ರಕಾರ ಈಶ್ವರದಿಂದ ಪ್ರತಿಸಿದ್ಧ ಆಹಾರವನ್ನು ನೀಡುವುದು ಈಶ್ವರ ನಿಷಿದ್ಧ ದೋಷವಿದೆ. ಎಲ್ಲಿ ಸ್ವಾಮಿಯ ಅನುಪಸ್ಥಿತಿಯಲ್ಲಿ ಯಾರೋ ಬೇರೆಯವರು ಬಂದು ಆಹಾರ ದಾನ ಕೊಡುವುದು ಅದು ಅನೀಶ್ವರನಿಷಿದ್ಧ ದೋಷವಿದೆ.

ಈ ದೋಷಗಳಿಂದ ಸುರಕ್ಷೆಯ ಪ್ರಯತ್ನವನ್ನು ದಾತೃವು ಮಾಡುತ್ತಾನೆ. ಇವು ಹದಿನಾರು ಉದ್ಗಮ ದೋಷಗಳಿವೆ.

ಹದಿನಾರು ಉತ್ಪಾದನ ದೋಷಗಳು ಪಾತ್ರದ ಆಧೀನವಿದ್ದು ಈಗ ಅವುಗಳನ್ನು ಹೇಳಲಾಗುವುದು -

೧) ಮುನೀಶ್ವರರು ದಾತೃವಿನ ಮನೆಗೆ ಭೋಜನದ ಸಲುವಾಗಿ ಹೋಗಿ ಅವರ ಮಕ್ಕಳನ್ನು ದಾದಿಯ ಸಮಾನ ಆಡಿಸುವುದು, ಅವರ ಶೃಂಗಾರಾದಿಗಳನ್ನು ಮಾಡುವುದು ಅದು ಯತಿಯ ಧಾತ್ರಿನಾಮಕ ದೋಷವಿದೆ.

೨) ಯತೀಶ್ವರರು ಭೋಜನದ ಸಲುವಾಗಿ ದಾತೃವಿನ ಮನೆಗೆ ಹೋಗಿ ಅವರಿಂದ ಅವರ ಸಂಬಂಧಿಗಳ ಅಥವಾ ದೂರದೇಶದಲ್ಲಿರುವವರ ಸಮಾಚಾರವನ್ನು ಹೇಳಿದರೆ ಅದು ಪಾತ್ರನ ದೂತನಾಮಕ ದೋಷವಿದೆ.

೩) ಮುನೀಶ್ವರರು ದಾತೃವಿಗೆ ನಿಮಿತ್ತ ಜ್ಞಾನಾದಿ ಅತಿಶಯಗಳನ್ನು ತಿಳಿಸಿಕೊಟ್ಟು (ತೋರಿಸಿಕೊಟ್ಟು) ಭೋಜನ ಮಾಡುತ್ತಿದ್ದರೆ ಅದು ಅವರ ನಿಮಿತ್ತನಾಮಕ ದೋಷವಿದೆ.

೪) ಮುನೀಶ್ವರರು ದಾತೃವಿನ ಮನೆಗೆ ಹೋಗಿ ವರ್ತಮಾನದಲ್ಲಿ ಭೋಜನದ ನಿಮಿತ್ತವು ಕಡಿಮೆಯಾಗುತ್ತಿದೆ, ಇತ್ಯಾದಿ ರೂಪದಲ್ಲಿ ಆಜೀವಿಕೆಯ ಮಾತುಗಳನ್ನು ಹೇಳಿ ಭೋಜನ ಮಾಡುತ್ತಿದ್ದರೆ ಅದು ಅವರ ಆಜೀವಿಕೆನಾಮದ ದೋಷವಿದೆ.

೫) ಯತೀಶ್ವರರು ದಾತೃವಿನ ಮನೆಗೆ ಭೋಜನ ಸಲುವಾಗಿ ಹೋಗಿ ಅವರ ಮನಸ್ಸಿಗೆ ಹಿತವೆನಿಸುವಂಥ ಮಾತು ಹೇಳಿ ಭೋಜನ ತೆಗೆದುಕೊಳ್ಳುತ್ತಿದ್ದರೆ ಅದು ಅವರ ವಿನಯಕ ನಾಮದ ದೋಷವಿದೆ.

೬) ಮುನಿಗಳು ದಾತೃವಿನ ಮನೆಗೆ ಭೋಜನದ ಸಲುವಾಗಿ ಹೋಗಿ ನಾಡಿ ಪರೀಕ್ಷೆ ಅಥವಾ ವೈದ್ಯಕೀಯ ಸಂಬಂಧದ ಔಷಧಾದಿಗಳನ್ನು ತಿಳಿಸಿಕೊಟ್ಟು ಭೋಜನ ಮಾಡುತ್ತಿದ್ದರೆ ಅದು ಅವರ ಚಿಕಿತ್ಸೆನಾಮದ ದೋಷವಿದೆ.

೭) ಮುನೀಶ್ವರರು ಭೋಜನದ ಸಮಯದಲ್ಲಿ ಯಾರ ಮೇಲೆಯಾದರೂ ಕ್ರೋಧ ಮಾಡಿ ಭೋಜನ ಮಾಡುತ್ತಿದ್ದರೆ ಅದು ಅವರ ಕ್ರೋಧನಾಮದ ದೋಷವಿದೆ.

೮) ಮುನಿಗಳು ಸ್ವಯಂ ತಮ್ಮನ್ನು ಉತ್ತಮರಾಜವಂಶಜರೆಂದು ತಿಳಿದು ದಾತೃವಿನ ಮನೆಯಲ್ಲಿ ಮಾನ ಸಹಿತ ಭೋಜನ ಮಾಡುತ್ತಿದ್ದರೆ ಅದು ಅವರ ಮಾನನಾಮದ ದೋಷವಿದೆ.

೯) ಯತೀಶ್ವರರು ತಮ್ಮ ಮನಸ್ಸಿನ ಗುಪ್ತ ಮಾತನ್ನು ಯಾರಿಗೂ ಹೇಳದೆ ಭೋಜನ ಮಾಡುತ್ತಿದ್ದರೆ ಅದು ಮಾಯಾ ನಾಮದ ದೋಷವಿದೆ.

೧೦) ಯತಿಗಳು ಒಳ್ಳೆಯ ಭೋಜನವನ್ನು ರುಚಿಪೂರ್ವಕ ಗ್ರಹಣ ಮಾಡಿದರೆ ಅದು ಅವರ ಲೋಭನಾಮದ ದೋಷವಿದೆ.

೧೧) ಮುನಿರಾಜರು ದಾತೃವಿನ ಮನೆಗೆ ಹೋಗಿ ಭೋಜನ ಮಾಡುವ ಮೊದಲು ದಾತೃವಿನ ಸ್ತುತಿ ಮಾಡಿದರೆ ಅದು ಪೂರ್ವಸ್ತುತಿ ದೋಷವಿದೆ.

೧೨) ಯತೀಶ್ವರರು ಭೋಜನದ ನಂತರ ದಾತೃವಿನ ಸ್ತುತಿ ಮಾಡಿದರೆ ಅದು ಪಶ್ಚಾತಸ್ತುತಿ ದೋಷವಿದೆ.

೧೩) ಯತೀಶ್ವರರು ಶ್ರಾವಕರಿಗೆ ಪಾಠ ಹೇಳಿ ಭೋಜನ ಮಾಡಿದರೆ ಅದು ವಿದ್ಯಾದೋಷವಿದೆ.

೧೪) ಯತಿಗಳು ಮಂತ್ರ , ತಂತ್ರ , ಚಮತ್ಕಾರ ಇತ್ಯಾದಿ ಅನೇಕ ತಮ್ಮ ಅತಿಶಯಗಳನ್ನು ಶ್ರಾವಕರಿಗೆ ತೋರಿಸಿಕೊಟ್ಟು ಅವರಲ್ಲಿ ಭೋಜನ ಮಾಡುತ್ತಿದ್ದರೆ ಅದು ಅವರ ಮಂತ್ರದೋಷವಿದೆ.

೧೫) ಮುನೀಶ್ವರರು ಗೃಹಸ್ಥರಿಗೆ ಕಣ್ಣುಗಳ ಅಂಜನ, ಉದರ ರೋಗದ ಸಲುವಾಗಿ ಚೂರ್ಣ, ತಿಳಿಸಿಕೊಟ್ಟು ಭೋಜನ ಮಾಡಿದರೆ ಅದು ಚೂರಣ (ವೈಶ್ಯಕರ್ಮ) ದೋಷವಿದೆ.

೧೬) ಋಷೀಶ್ವರರು ಶ್ರಾವಕರನ್ನು ವಶೀಭೂತ ಮಾಡಿಕೊಂಡು ಮಂತ್ರಾದಿಗಳನ್ನು ತಿಳಿಸಿಕೊಟ್ಟು ಭೋಜನ ಮಾಡುತ್ತಿದ್ದರೆ ಅದು ಅವರ ಮೂಲಕರ್ಮ (ವಶ್ಯಕರ್ಮ) ದೋಷವಿದೆ.

ಒಂದು ವೇಳೆ ಯತಿಯು ಈ ಹದಿನಾರು ಪ್ರಕಾರದ ದೋಷಗಳ ಕುರಿತಾಗಿ ಸಾವಧಾನತೆಯನ್ನು ಇಟ್ಟುಕೊಳ್ಳದಿದ್ದರೆ ಮುನಿಗೆ ದೋಷವು ತಗಲುತ್ತದೆ. ಯತಿಯ ಪದವು ಕಲಂಕಿತವಾಗಿ ಹೋಗುತ್ತದೆ. ಇವು ಹದಿನಾರು ಉತ್ಪಾದನ ದೋಷಗಳಿವೆ.

ಏಷಣಾ ಸಂಬಂಧದ ಹತ್ತು ದೋಷಗಳು -

೧) ಭೋಜನ ಮಾಡುತ್ತಿರುವಾಗ ಭೋಜನದ ಶುದ್ಧಿ, ಅಶುದ್ಧಿಯ ಕುರಿತಾಗಿ ಸಂದೇಹವುಂಟಾದ ಮೇಲೆಯೂ ಭೋಜನ ಮಾಡುವುದು ಶಂಕಿತ ದೋಷವಿದೆ.

೨) ದಾತೃವಿನ ಕೈಗಳು ಅಥವಾ ಪಾತ್ರೆಗಳು ಸ್ನಿಗ್ಧವಿರುವುದನ್ನು ನೋಡಿಯೂ ಕೂಡ ಭೋಜನ ಮಾಡುವುದು ಮೃಕ್ಷಿತ ನಾಮದ ದೋಷವಿದೆ.

೩) ಸಚಿತ್ತ ವಸ್ತುವಿನಿಂದ ಅಥವಾ ಭಾರವಾದ ಅಚಿತ್ತ ವಸ್ತುವಿನಿಂದ ಮುಚ್ಚಿಡಲಾದ ಭೋಜನಾದಿ ವಸ್ತುಗಳನ್ನು ಗ್ರಹಣ ಮಾಡುವುದು ಪಿಹಿತ ದೋಷವಿದೆ.

೪)ಸಚಿತ್ತ ಪೃಥ್ವಿ, ಜಲ, ಅಗ್ನಿ, ವನಸ್ಪತಿ ಬೀಜ ಅಥವಾ ತ್ರಸ ಜೀವಗಳ ಮೇಲೆ ಇರಿಸಲಾದ ಆಹಾರವನ್ನು ಗ್ರಹಣ ಮಾಡುವುದು ನಿಕ್ಷಿಪ್ತ ದೋಷವಿದೆ.

೫) ಸೂತಕದ ಮನೆಯೊಳಗೆ, ರೋಗಿಯ ಕೈಯಿಂದ, ವೃದ್ಧ, ಬಾಲಕ, ನಪುಂಸಕ, ಗರ್ಭಸಹಿತ ಸ್ತ್ರೀಯ ಕೈಯಿಂದ ಆಹಾರ ತೆಗೆದುಕೊಳ್ಳುವುದು, ಉರಿಯುತ್ತಿರುವ ಅಗ್ನಿಯನ್ನು ನಂದಿಸುತ್ತಿರುವುದನ್ನು ನೋಡಿ ಅಥವಾ ಬಾಲಕನಿಗೆ ಹಾಲುಣಿಸುತ್ತಿರುವ ಸ್ತ್ರೀಯನ್ನು, ಬಾಲಕನನ್ನು ಮಡಿಲಿನಿಂದ ದೂರಮಾಡುತ್ತಿರುವುದನ್ನು ನೋಡಿಯೂ ಕೂಡ ಭೋಜನ ಮಾಡುವುದು ದಾಯಕ ದೋಷವಿದೆ.

೬) ಪೃಥ್ವಿ, ಜಲ, ಹರಿತಕಾಯ, ಪತ್ರ, ಪುಷ್ಪ, ಫಲ, ಬೀಜ ಇತ್ಯಾದಿಗಳಿಂದ ಕೂಡಿದ ಭೋಜನ ಗ್ರಹಣ ಮಾಡುವುದು ಮಿಶ್ರ ದೋಷವಿದೆ.

೭) ಭಯದಿಂದ ಅಥವಾ ಆದರದಿಂದ ವಸ್ತ್ರಾದಿಗಳನ್ನು ಯತ್ನಾಚಾರವಿಲ್ಲದೆ ಎಳೆದುಕೊಳ್ಳುತ್ತ ಮುನೀಶ್ವರರಿಗೆ ಆಹಾರ ಕೊಡುವುದು ವ್ಯವಣ (ಸಾಧಾರಣ) ದೋಷವಿದೆ.

೮) ವಸ್ತುವಿನ ಬಣ್ಣವು ಬದಲಾಗದ ಹೊರತು ಅಥವಾ ಅರ್ಧ ಬೆಂದಿರುವ ವಸ್ತುವನ್ನು ಆಹಾರದಲ್ಲಿ ತೆಗೆದುಕೊಳ್ಳುವುದು ಯತೀಶ್ವರರ ಅಪರಿಣತನಾಮದ ದೋಷವಿದೆ.

೯) ಭೋಜನದ ಸಮಯದಲ್ಲಿ ದಾತೃವಿನ ಕೈಗಳು, ಪಾತ್ರೆ, ಬಟ್ಟಲು, ಸೌಟು ಮೊದಲಾದ ಅನ್ಯ ಪಾತ್ರೆಗಳು ಅನ್ನ ಮೊದಲಾದವುಗಳಿಂದ ಅಥವಾ ಆಹಾರ ಸಾಮಗ್ರಿಗಳಾದ ಸಾರು ಮೊದಲಾದವುಗಳಿಂದ ಲಿಪ್ತವಾಗಿರುವುದನ್ನು ಕಂಡು ಕೂಡ ಒಂದು ವೇಳೆ ಗುರುನಾಥರು ಭೋಜನ ಮಾಡಿದರೆ ಅದು ಅವರ ಲಿಪ್ತನಾಮಕ ದೋಷವಿದೆ.

೧೦) ಹಸ್ತಗಳ ಚಂಚಲತೆಯಿಂದ ಮಜ್ಜಿಗೆ, ತುಪ್ಪ, ಹಾಲು ಮೊದಲಾದವು ಸೋರುತ್ತಿರುವುದು ಅಥವಾ ಛಿದ್ರಸಹಿತ ಹಸ್ತಗಳಿಂದ ಬಹಳಷ್ಟು ಭೋಜನವು ಬಿದ್ದು ಹೋದಮೇಲೆಯೂ ಅಥವಾ ಅಲ್ಪ ಭೋಜನ ಗ್ರಹಣ ಮಾಡಿದ ನಂತರ ಹಸ್ತ ಪುಟವನ್ನು ಪೃಥಕ್‌ಗೊಳಿಸಿ ಭೋಜನ ತೆಗೆದುಕೊಳ್ಳುವುದು ತ್ಯಕ್ತದೋಷವಿದೆ.

ಈಗ ನಾಲ್ಕು ಪ್ರಕಾರದ ಅನ್ಯ ದೋಷ ಹೇಳುತ್ತಾರೆ,-

೧) ಸುಖದ ಸಲುವಾಗಿ ಶೀತ, ಉಷ್ಣ ವಸ್ತುಗಳನ್ನು ಬೆರೆಸಿ ಗ್ರಹಣ ಮಾಡುವುದು ಸಂಯೋಗ ದೋಷವಿದೆ.

೨) ಭೋಜನದ ಪ್ರಮಾಣವನ್ನು ಉಲ್ಲಂಘಿಸಿ ಭೋಜನ ಮಾಡುವುದು ಪ್ರಮಾಣ ದೋಷವಿದೆ.

೩) ಒಳ್ಳೆಯ ಭೋಜನ, ಆರು ರಸಯುಕ್ತ ಮಿಷ್ಟಭೋಜನವನ್ನು ರಾಗಸಹಿತನಾಗಿ ಗ್ರಹಣ ಮಾಡುವುದು ಪ್ರಸನ್ನನಾಗಿ ದಾತೃವಿನ ಶುಶ್ರೂಷೆ ಮಾಡುವುದು, ಅಂಗಾರ ದೋಷವಿದೆ.

೪) ರಸರಹಿತವಾದಂಥ ಪ್ರಕೃತಿ ವಿರುದ್ಧವಾದಂಥ ಭೋಜನವು ದೊರಕಿದ ಮೇಲೆ ಅರುಚಿಪೂರ್ವಕ ಗ್ರಹಣ ಮಾಡುವುದು ಧೂಮದೋಷವಿದೆ.

ಈ ಪ್ರಕಾರ ಹದಿನಾಲ್ಕು ಉದ್ಗಮ, ಹದಿನಾರು ಉತ್ಪಾದನ, ಹತ್ತು ಏಷಣಾ, ಅನ್ಯ ನಾಲ್ಕು - ಇವು ನಲವತ್ತಾರು ದೋಷಗಳಿಂದ ರಹಿತವಾದ ಆಹಾರವು ಶುದ್ಧ ಆಹಾರವಿದೆ.

ಮೂವತ್ತೆರಡು ಅಂತರಾಯಗಳು :-

೧) ಭೋಜನ ಮಾಡುತ್ತಿರುವಾಗ ಮುನಿಯು ಒಂದು ವೇಳೆ ಯಾವುದೋ ಕಾಗೆ ಮೊದಲಾದ ಜೀವವು ಮಲವಿಸರ್ಜನೆ ಮಾಡುತ್ತಿರುವುದನ್ನು ನೋಡಿದರೆ ಭೋಜನದ ತ್ಯಾಗ ಮಾಡುತ್ತಾರೆ, ಇದರ ಹೆಸರು ಕಾಕಅಂತರಾಯವಿದೆ.

೨) ಗಮನ ಮಾಡುತ್ತಿರುವಾಗ ಸಾಧುವಿನ ಕಾಲುಗಳಲ್ಲಿ ಕೊಳೆಯು-ಹೊಲಸು ತಗಲಿದರೆ ಅವರು ಭೋಜನ ಮಾಡುವುದಿಲ್ಲ, ಇದು ಅಮೇಧ್ಯನಾಮದ ಅಂತರಾಯವಿದೆ.

೩) ಭೋಜನ ಮಾಡುವ ಸಮಯದಲ್ಲಿ ಮುನಿಗೆ ವಾಂತಿಯಾಗಿ ಹೋದರೆ ಅವರು ಭೋಜನದ ತ್ಯಾಗ ಮಾಡುತ್ತಾರೆ, ಇದರ ಹೆಸರು ಛರ್ದಿಅಂತರಾಯವಿದೆ.

೪) ಭೋಜನದ ಸಲುವಾಗಿ ಹೊರಟಿರುವ ಸಮಯದಲ್ಲಿ ಮುನೀಶ್ವರರನ್ನು ಯಾರಾದರು ತಡೆದರೆ ಅವರು ಭೋಜನದ ತ್ಯಾಗ ಮಾಡುತ್ತಾರೆ, ಇದರ ಹೆಸರು ರೋಧನ ಅಂತರಾಯವಿದೆ.

೫) ಭೋಜನದ ಸಮಯದಲ್ಲಿ ಮುನಿಗಳು ಸ್ವಯಂ ತಮ್ಮ ಅಥವಾ ಬೇರೆಯವರ ಅಂಗಾದಿಗಳಿಂದ ರಕ್ತವು ಒಸರುತ್ತಿರುವುದನ್ನು ನೋಡಿದರೆ ಭೋಜನದ ತ್ಯಾಗ ಮಾಡುತ್ತಾರೆ, ಇದರ ಹೆಸರು ರುಧಿರ ಅಂತರಾಯವಿದೆ.

೬) ಸಾಧುಗಳು ದುಃಖ ಶೋಕಾದಿಗಳಿಂದ ತಮ್ಮನ್ನು ಅಶ್ರುಪಾತಯುಕ್ತವಾಗಿ ಕಂಡರೆ ಅಥವಾ ಸಮೀಪವರ್ತಿ ಜನರ ಮರಣಾದಿಗಳಿಂದ ಅತ್ಯಂತ ರೋದನ, ವಿಲಾಪ ಮಾಡುತ್ತಿರುವುದನ್ನು ಆಲಿಸಿದರೆ ಭೋಜನದ ತ್ಯಾಗ ಮಾಡುತ್ತಾರೆ, ಇದರ ಹೆಸರು ಅಶ್ರುಪಾತ ಅಂತರಾಯವಿದೆ.

೭) ಭೋಜನ ಮಾಡುವ ಸಮಯದಲ್ಲಿ ದಾತೃವು ಅಥವಾ ಪಾತ್ರನು ಪ್ರಮಾದದ ಕಾರಣ ತೊಡೆ ಅಥವಾ ಕೆಳಗಿನ ಅಂಗ ಸ್ಪರ್ಶ ಮಾಡಿಕೊಂಡರೆ  ಯತಿಗಳು ಭೋಜನದ ತ್ಯಾಗ ಮಾಡುತ್ತಾರೆ, ಇದರ ಹೆಸರು ಜಾನ್ವಧಃ ಪರಾಮರ್ಶ ದೋಷವಿದೆ.

೮) ಭೋಜನ ಮಾಡುವ ಸಮಯದಲ್ಲಿ ದಾತೃ ಅಥವಾ ಪಾತ್ರಗಳ ಪ್ರಮಾದ ವಶದಿಂದ ಮೊಳಕಾಲುಗಳಿಂದ ಮೇಲಿನ ಅವಯವಗಳ ಸ್ಪರ್ಶವಾಗಿ ಹೋದರೆ ಯತಿಗಳು ಭೋಜನದ ತ್ಯಾಗ ಮಾಡುತ್ತಾರೆ, ಇದರ ಹೆಸರು ಜಾನೂಪರಿವ್ಯತಿಕ್ರಮ ಅಂತರಾಯವಿದೆ.

೯) ಭೋಜನ ಮಾಡುತ್ತಿರುವಾಗ ಯಾವನೋ ಮನುಷ್ಯನು ನಾಭಿಯಿಂದ ಕೆಳಗಿನವರೆಗೆ ಬಾಗಿ ಮಗುವನ್ನು ಎತ್ತಿಕೊಳ್ಳುತ್ತಿರುವುದನ್ನು ನೋಡಿದರೆ ಯತಿಗಳು ಭೋಜನದ ತ್ಯಾಗ ಮಾಡುತ್ತಾರೆ, ಇದರ ಹೆಸರು ನಾಭ್ಯಧೋನಿರ್ಗಮನ ಅಂತರಾಯವಿದೆ.

೧೦) ಮುನಿಯು ಭೋಜನದಲ್ಲಿ ತ್ಯಾಗ ಮಾಡಿರುವಂಥ ವಸ್ತುವಿನ ಗ್ರಹಣವಾಗಿ ಹೋದರೆ ಭೋಜನದ ತ್ಯಾಗ ಮಾಡುತ್ತಾರೆ, ಇದರ ಹೆಸರು ಪ್ರತ್ಯಾಖ್ಯಾತ ಸೇವನ ಅಂತರಾಯವಿದೆ.

೧೧) ಭೋಜನ ಮಾಡುವ ಸಮಯದಲ್ಲಿ ಬೇರೆಯವರಿಂದ ಯಾವುದೋ ಜೀವದ ವಧೆ ಮಾಡಿದ ಮೇಲೆ ಭೋಜನದ ತ್ಯಾಗ ಮಾಡುತ್ತಾರೆ, ಇದರ ಹೆಸರು ಜಂತುವಧ ಅಂತರಾಯವಿದೆ.

೧೨) ಭೋಜನ ಮಾಡುತ್ತಿರುವಾಗ ಕೈಯೊಳಗಿನ ತುತ್ತನ್ನು ಕಾಗೆ ಮೊದಲಾದವು ಕಚ್ಚಿಕೊಂಡು ಹೋದರೆ ಯತಿಗಳು ಭೋಜನದ ತ್ಯಾಗ ಮಾಡುತ್ತಾರೆ, ಇದರ ಹೆಸರು ಕಾಕಾದಿಪಿಂಡಹರಣ ಅಂತರಾಯವಿದೆ.

೧೩) ಭೋಜನ ಮಾಡುತ್ತಿರುವಾಗ ದಾತೃವಿನ ಕೈಯೊಳಗಿನಿಂದ ಅಥವಾ ಪಾತ್ರದ ಕೈಯೊಳಗಿಂದ ತುತ್ತು ಭೂಮಿಯ ಮೇಲೆ ಬಿದ್ದು ಹೋದರೆ ಯತಿಗಳು ಭೋಜನದ ತ್ಯಾಗ ಮಾಡುತ್ತಾರೆ, ಇದರ ಹೆಸರು ಪಾಣಿಪಾತ್ರಪಿಂಡಪತನ ಅಂತರಾಯವಿದೆ.

೧೪) ಭೋಜನ ಮಾಡುತ್ತಿರುವಂಥ ಸಾಧುವಿನ ಕೈಯಲ್ಲಿ ಜೀವವು ಸ್ವಯಂ ಹಾರಿಬಂದು ಸತ್ತು ಹೋದರೆ ಭೋಜನದ ತ್ಯಾಗ ಮಾಡುತ್ತಾರೆ, ಇದರ ಹೆಸರು ಪಾಣಿಪಾತ್ರಜಂತುವಧ ಅಂತರಾಯವಿದೆ.

೧೫) ಭೋಜನದ ಸಮಯದಲ್ಲಿ ಯತಿಗಳು ಮಾಂಸ ಅಥವಾ ಶವವನ್ನು ನೋಡಿದರೆ ಭೋಜನದ ತ್ಯಾಗ ಮಾಡುತ್ತಾರೆ, ಇದರ ಹೆಸರು ಮಾಂಸಾದಿ ದರ್ಶನ ಅಂತರಾಯವಿದೆ.

೧೬) ಭೋಜನದ ಸಮಯದಲ್ಲಿ ಯಾವುದಾದರು ಉಪಸರ್ಗವಾದರೆ ಯತಿಗಳು ಭೋಜನದ ತ್ಯಾಗ ಮಾಡುತ್ತಾರೆ, ಇದರ ಹೆಸರು ಉಪಸರ್ಗ ಅಂತರಾಯವಿದೆ.

೧೭) ಭೋಜನ ಮಾಡುವ ಸಮಯದಲ್ಲಿ ಯತಿಗಳು ತಮ್ಮ ಎರಡೂ ಕಾಲುಗಳ ಮಧ್ಯದೊಳಗಿಂದ ಪಂಚೇಂದ್ರಿಯ ಜೀವವು ಹಾದು ಹೋಗುತ್ತಿರುವುದನ್ನು ತಿಳಿದರೆ ಅವರು ಭೋಜನದ ತ್ಯಾಗ ಮಾಡುತ್ತಾರೆ, ಇದರ ಹೆಸರು ಪಂಚೇಂದ್ರಿಯ ಜೀವ ಗಮನ (ಪಾದಾಂತರ)ಅಂತರಾಯವಿದೆ.

೧೮) ಭೋಜನ ಮಾಡುವ ಸಮಯದಲ್ಲಿ ಒಂದು ವೇಳೆ ದಾತೃವಿನ ಕೈಯಿಂದ ಪಾತ್ರೆಯು ಭೂಮಿಯ ಮೇಲೆ ಬಿದ್ದು ಹೋದರೆ ಯತಿಗಳು ಭೋಜನ ಗ್ರಹಣ ಮಾಡುವುದಿಲ್ಲ, ಇದರ ಹೆಸರು ಭಾಜನಸಂಪಾತನ ಅಂತರಾಯವಿದೆ.

೧೯) ಭೋಜನ ಮಾಡುತ್ತಿರುವ ಮುನೀಶ್ವರರು ಒಂದು ವೇಳೆ ತಮ್ಮ ಮಲವು ಹೊರಡುತ್ತಿರುವುದನ್ನು ತಿಳಿದುಕೊಂಡರೆ ಭೋಜನವನ್ನು ತೆಗೆದುಕೊಳ್ಳುವುದಿಲ್ಲ, ಇದರ ಹೆಸರು ಉಚ್ಚಾರ ಅಂತರಾಯವಿದೆ.

೨೦) ಭೋಜನ ಮಾಡುತ್ತಿರುವಾಗ ಯತಿಗಳು ತಮ್ಮ ಮೂತ್ರವು ಹೊರಡುತ್ತಿರುವುದನ್ನು ತಿಳಿದರೆ ಅಂತರಾಯವಾಗುತ್ತದೆ, ಇದರ ಹೆಸರು ಪ್ರಸ್ರವಣ ಅಂತರಾಯವಿದೆ.

೨೧) ಭೋಜನದ ಸಮಯದಲ್ಲಿ ಮುನಿಯು ಪ್ರಮಾದವಶ ದೋಷದಿಂದ ಚಾಂಡಾಲಾದಿಕರ ಮನೆಯಲ್ಲಿ ಪ್ರವೇಶ ಮಾಡಿ ಬಿಟ್ಟಿದ್ದರೆ ಅಂತರಾಯ ಮಾಡುತ್ತಾರೆ, ಇದರ ಹೆಸರು ಅಭೋಜ್ಯಗೃಹಪ್ರವೇಶ ಅಂತರಾಯವಿದೆ.

೨೨) ಭೋಜನ ಮಾಡುತ್ತಿರುವ ಯತಿಯು ಯಾರೋ ಮೂರ್ಚ್ಛಿತರಾಗಿ ಬೀಳುತ್ತಿರುವುದನ್ನು ನೋಡಿದರೆ ಅಂತರಾಯ ಮಾಡುತ್ತಾರೆ, ಇದರ ಹೆಸರು ಪತನ ಅಂತರಾಯವಿದೆ.

೨೩) ಭೋಜನದ ಸಮಯದಲ್ಲಿ ಕರ್ಮವಶದಿಂದ ಮರೆತು ಅಥವಾ ಪ್ರಮಾದದಿಂದ ಹಾಗೂ ಶರೀರದ ದುರ್ಬಲತೆಯಿಂದ ಒಂದು ವೇಳೆ ಮುನಿಯು ಕುಳಿತುಕೊಂಡರೆ ಅಂತರಾಯವಿದೆ, ಇದರ ಹೆಸರು ಉಪವೇಶಣ ಅಂತರಾಯವಿದೆ.

೨೪) ಭೋಜನ ಮಾಡುತ್ತಿರುವಾಗ ಒಂದು ವೇಳೆ ನಾಯಿ, ಬೆಕ್ಕುಗಳು ಕಚ್ಚುತ್ತಿರುವುದನ್ನು ನೋಡಿದರೆ ಭೋಜನ ತ್ಯಾಗ ಮಾಡುತ್ತಾರೆ, ಇದರ ಹೆಸರು ಸದಂಶದೃಷ್ಟ ಅಂತರಾಯವಿದೆ.

೨೫) ಭೋಜನದ ಪೂರ್ವದೊಳಗೆ ಸಿದ್ಧ ಭಕ್ತಿಯ ಸಮಯದಲ್ಲಿ ಮಸ್ತಕದಿಂದ ನಮಸ್ಕಾರ ಮಾಡುತ್ತಿರುವಾಗ ಭೂಮಿ ಸ್ಪರ್ಶಿತವಾಗಿ ಹೋದರೆ ಅಂತರಾಯವಿದೆ, ಇದರ ಹೆಸರು ಭೂಮಿಸಂಸ್ಪರ್ಶ ಅಂತರಾಯವಿದೆ.

೨೬) ಭೋಜನ ಮಾಡುತ್ತಿರುವಾಗ ಮುನೀಶ್ವರರಿಗೆ ಸ್ವತಃ ಕಫಾದಿಗಳ ನಿಷ್ಠೀವನ (ಹೊರಬರುತ್ತಿರುವುದು) ವಾಗುತ್ತಿದ್ದರೆ ಅಂತರಾಯವಿದೆ, ಇದರ ಹೆಸರು ನಿಷ್ಠೀವನ ಅಂತರಾಯವಿದೆ.

೨೭) ಭೋಜನದ ಸಮಯದಲ್ಲಿ ಮುನಿಯು ತನ್ನ ಉದರದಿಂದ ಕ್ರಿಮಿಗಳು ಹೊರಡುತ್ತಿರುವುದನ್ನು ತಿಳಿದರೆ ಅಂತರಾಯ ಮಾಡುತ್ತಾರೆ, ಇದರ ಹೆಸರು ಉದರಕೃಮಿನಿರ್ಗಮನ ಅಂತರಾಯವಿದೆ.

೨೮) ಭೋಜನದ ಸಮಯದಲ್ಲಿ ದಾತೃಕೊಡದೇ ಇರುವಂಥ ಭೋಜನವನ್ನು ಯತಿಯು ಪ್ರಮಾದ ಯೋಗದಿಂದ ಮನಸ್ಸಿನಿಂದ ಅಂಗೀಕಾರ ಮಾಡಿದರೆ ಭೋಜನ ತ್ಯಾಗ ಮಾಡುತ್ತಾರೆ, ಇದರ ಹೆಸರು ಅದತ್ತಗ್ರಹಣದೋಷ ಅಂತರಾಯವಿದೆ.

೨೯) ಭೋಜನದ ಸಮಯದಲ್ಲಿ ಖಡ್ಗಾದಿಗಳಿಂದ ಯಾರೋ ಸಾಧುವಿನ ಘಾತ ಮಾಡಿದರೆ ಅಥವಾ ಬೇರೆಯವರ ಘಾತ ಮಾಡಿದರೆ ಅಂತರಾಯವಾಗುತ್ತದೆ, ಇದರ ಹೆಸರು ಶಸ್ತ್ರಪ್ರಹಾರ ಅಂತರಾಯವಿದೆ.

(ಭೋಜನದ ಸಮಯದಲ್ಲಿ ಮುನೀಶ್ವರರು ನಗರದಲ್ಲಿ ಬರುತ್ತಿರುವುದನ್ನು ಯಾವನೋ ದ್ವಾರಪಾಲನು ಹಬ್ಬಾಗಿಲಿನಲ್ಲಿ ತಡೆದರೆ ಅಥವಾ ಗೃಹಸ್ಥರ ಮನೆಗೆ ಹೋಗುವ ಸಲುವಾಗಿ ಮುನಿಗಳಿಗೆ ಯಾರಾದರೂ ನಿಷೇಧ ಮಾಡಿದರೆ ಅಂತರಾಯವಾಗುತ್ತದೆ, ಇದರ ಹೆಸರು ಪ್ರಾಹಾರ ಅಂತರಾಯವಿದೆ.)

೩೦) ಭೋಜನದ ಸಮಯದಲ್ಲಿ ಮುನಿರಾಜರು ನಗರದಲ್ಲಿ ಬರುತ್ತಿರುವಾಗ ನಗರದಲ್ಲಿ ಅಗ್ನಿಯು ಹೊತ್ತಿಕೊಂಡಿರುವುದನ್ನು ನೋಡಿದರೆ ಅವರು ಭೋಜನದ ತ್ಯಾಗ ಮಾಡುತ್ತಾರೆ, ಇದರ ಹೆಸರು ಗ್ರಾಮದಾಹ ಅಂತರಾಯವಿದೆ.

೩೧) ಭೋಜನದ ಸಲುವಾಗಿ ನಗರದಲ್ಲಿ ಹೋಗುತ್ತಿರುವಾಗ ಭೂಮಿಯ ಮೇಲೆ ಬಿದ್ದಿರುವ ಯಾವುದೋ ವಸ್ತುವನ್ನು ಕಾಲುಗಳಿಂದ ಗ್ರಹಣ ಮಾಡಿದರೆ ಅವರು ಭೋಜನದ ತ್ಯಾಗ ಮಾಡುತ್ತಾರೆ, ಇದರ ಹೆಸರು ಪಾದಗ್ರಹಣ ಅಂತರಾಯವಿದೆ.

೩೨) ಭೋಜನದ ಸಲುವಾಗಿ ನಗರದೊಳಗೆ ಹೋಗುವ ಸಮಯದಲ್ಲಿ ಪ್ರಮಾದವಶದಿಂದ ದಾರಿಯಲ್ಲಿ ಬಿದ್ದಿರುವ ವಸ್ತುವನ್ನು ಕೈಗಳಿಂದ ಸ್ಪರ್ಶ ಮಾಡಿದರೆ ಭೋಜನದ ತ್ಯಾಗ ಮಾಡುತ್ತಾರೆ, ಇದರ ಹೆಸರು ಕರಗ್ರಹಣ ಅಂತರಾಯವಿದೆ.

ಈ ಪ್ರಕಾರ ಜಗತ್ತಿನ ಗುರು, ಶರೀರದ ಕುರಿತಾಗಿರುವ ಮೋಹದ ತ್ಯಾಗ ಮಾಡುವಂತಹ, ಸಾಂಸಾರಿಕ ಸುಖಗಳಿಂದ ಉದಾಸ, ಇಂದ್ರಿಯಜನಿತ ಆನಂದದಿಂದ ನಿಸ್ಪೃಹರಿರುವಂಥ ಮುನಿರಾಜರು ಈ ಮೂವತ್ತೆರಡು ಅಂತರಾಯಗಳನ್ನು ಭೋಜನದ ಸಮಯದಲ್ಲಿ ದೂರಮಾಡುತ್ತಾರೆ, ಆಗ ಶುದ್ಧ ಭೋಜನವಾಗುತ್ತದೆ.

ಹದಿನಾಲ್ಕು ಮಲದೋಷಗಳು -

ಉಗುರು, ರೋಮ, ಮೃತಕಜೀವ, ಮೂಳೆ, ಗೋದಿ, ಜವೆಗೋದಿ, ಮೊದಲಾದ ಅನ್ನಾದಿಗಳ ಬಾಹ್ಯ ಅಭ್ಯಂತರ ಅವಯವ, ಪಕ್ವವಾದ ಎಳ್ಳು ಮೊದಲಾದ ಅಭ್ಯಂತರ ಸೂಕ್ಷ್ಮ ಅವಯವ, ಪಕ್ವವಾದ ರಕ್ತ ಅರ್ಥಾತ್ ಕೀವು, ಚರ್ಮ, ರಕ್ತ , ಮಾಂಸ, ಮೊಳೆಯಲು ಯೋಗ್ಯವಿರುವ ಬೀಜ, ಫಲ, ಹಸಿ ಶುಂಠಿ ಮೊದಲಾದ ಕಂದ ಮೂಲಾದಿ ಮೂಲ ಇವು - ಹದಿನಾಲ್ಕು ಮಲದೋಷಗಳಿವೆ. ಒಂದು ವೇಳೆ ಅವು ಮುನಿಯ ಭೋಜನದಲ್ಲಿ ಬಂದು ಬಿಟ್ಟರೆ ಅಥವಾ ಎಷ್ಟೋ ಕಂಡು ಬಿಟ್ಟರೆ ಅವರು ಭೋಜನದ ತ್ಯಾಗ ಮಾಡುತ್ತಾರೆ.

ಈ ಪ್ರಕಾರ ನಲವತ್ತಾರು ದೋಷ, ಮೂವತ್ತೆರಡು ಅಂತರಾಯ ಮತ್ತು ಹದಿನಾಲ್ಕು ಮಲದೋಷಗಳಿಂದ ರಹಿತವಾದ ಶುದ್ಧ ಭೋಜನವು ವೀತರಾಗಿ ಗುರುಗಳದಿರುತ್ತದೆ. ಇದರ ಹೆಸರು ಮೂರನೆಯ ಏಷಣಾ ಸಮಿತಿ ಇದೆ.

ಆದಾನ ಅರ್ಥಾತ್ ತೆಗೆದುಕೊಳ್ಳುವುದು ಹಾಗೂ ನಿಕ್ಷೇಪಣ ಅರ್ಥಾತ್ ಇಡುವುದು. ಪುಸ್ತಕ, ಪಿಂಛಿ, ಕಮಂಡಲು, ಶರೀರವನ್ನು ನಿರ್ಜಂತುಕ ಸ್ಥಾನ ನೋಡಿ ಇರಿಸುವಾಗ ಹಾಗೂ ಎತ್ತಿಕೊಳ್ಳುವಾಗ ಪ್ರಯತ್ನಪೂರ್ವಕವಾಗಿ ಆಚರಿಸುವುದು - ಇದು ಆದಾನ-ನಿಕ್ಷೇಪಣ ಸಮಿತಿ ಇದೆ.

ಯತಿಗಳು ಶರೀರದ ಮಲಮೂತ್ರ ಮೊದಲಾದುವನ್ನು ನಿರ್ಜೀವ ಭೂಮಿ ನೋಡಿ ಕ್ಷೇಪಣ ಮಾಡುವುದು ಅದು ಪ್ರಸ್ಥಾನಿ (ಪ್ರತಿಷ್ಠಾಪನಾ-ವ್ಯುತ್ಸರ್ಗ) ಸಮಿತಿ ಇದೆ.

ಪಂಚೇಂದ್ರಿಯ ವಿಜಯ -

೧) ಸ್ಪರ್ಶದ ವಿಷಯಗಳು ಎಂಟು ಇವೆ. ಈ ಎಂಟರ ನಿಮಿತ್ತವು ಉಂಟಾದ ಮೇಲೆಯೂ ಯಾರು ರಾಗ-ದ್ವೇಷಗಳನ್ನು ಮಾಡುವುದಿಲ್ಲ ಅವರು ಸ್ಪರ್ಶನೇಂದ್ರಿಯ ವಿಜಯಿ ಸಾಧುವಿದ್ದಾರೆ.

೨) ರಸನಾ ಇಂದ್ರಿಯದ ವಿಷಯಗಳು ಐದು ಇವೆ. ಈ ಐದರ ನಿಮಿತ್ತವು ಸಂಭವಿಸಿದ ಮೇಲೆಯೂ ಯಾರು ಅವುಗಳಲ್ಲಿ ರಾಗ-ದ್ವೇಷ ಮಾಡುವುದಿಲ್ಲ, ಅವರು ರಸನಾ ಇಂದ್ರಿಯ ವಿಜಯಿ ಸಾಧು ಇದ್ದಾರೆ.

೩) ಘ್ರಾಣ ಇಂದ್ರಿಯದ ವಿಷಯಗಳು ಎರಡು ಇವೆ, ಇವುಗಳ ನಿಮಿತ್ತವು ಸಂಭವಿಸಿದ ಮೇಲೆಯೂ ಕೂಡ ಯಾರು ರಾಗಿ-ದ್ವೇಷಿಗಳಾಗುವುದಿಲ್ಲ, ಅವರು ಘ್ರಾಣ ಇಂದ್ರಿಯ ವಿಜಯಿ ಸಾಧು ಇದ್ದಾರೆ.

೪)ಚಕ್ಷು ಇಂದ್ರಿಯದ ವಿಷಯಗಳು ಐದು ಇವೆ. ಇವುಗಳ ನಿಮಿತ್ತವು ಒದಗಿ ಬಂದ ಮೇಲೆಯೂ ಕೂಡ ಯಾರು ರಾಗಿ-ದ್ವೇಷಿಗಳಾಗುವುದಿಲ್ಲ ಅವರು ಚಕ್ಷು ಇಂದ್ರಿಯ ವಿಜಯಿ ಸಾಧು ಇದ್ದಾರೆ.

೫) ಶ್ರೋತ್ರ ಇಂದ್ರಿಯದ ವಿಷಯಗಳು ಏಳು ಇವೆ. ಇವುಗಳ ನಿಮಿತ್ತವು ಸಂಭವಿಸಿದ ಮೇಲೆಯೂ ಕೂಡ ಯಾರು ರಾಗಿ-ದ್ವೇಷಿಗಳಾಗುವುದಿಲ್ಲ ಅವರು ಶ್ರೋತ್ರ ಇಂದ್ರಿಯ ವಿಜಯಿ ಸಾಧು ಇದ್ದಾರೆ.

ಈ ಪ್ರಕಾರ ಐದು ಇಂದ್ರಿಯಗಳ ವಿಷಯದ ನಿಮಿತ್ತವು ಸಂಭವಿಸಿದ ಮೇಲೆಯೂ ಕೂಡ ಯಾರು ರಾಗಿ-ದ್ವೇಷಿಗಳಾಗುವುದಿಲ್ಲ ಅವರು ಪಂಚೇಂದ್ರಿಯ ವಿಜಯಿ ಸಾಧು ಇದ್ದಾರೆ.

ಈಗ ಆರು ಆವಶ್ಯಕಗಳ ಸ್ವರೂಪ ಹೇಳುತ್ತಾರೆ -

೧) ಸಾಮಾಯಿಕ ಆವಶ್ಯಕ -

**ಣಾಮ ಸಥಾಪಣ ದವ್ವೋ ಖೇತ್ತೇ ಕಾಲೇ ಯ ಭಾವ ಸಮ್ಮಾಯೋ ।**
**ಏ ಸಡ ಭೇಯ ಮುಣಿಂದೋ, ಅಹಣಿಸ ಧಾರಣೇಯ ಆವಸಿಯೋ ॥೨೫॥**

**ಅರ್ಥ** :- ನಾಮ ಸಾಮಾಯಿಕ, ಸ್ಥಾಪನಾ ಸಾಮಾಯಿಕ, ದ್ರವ್ಯ ಸಾಮಾಯಿಕ, ಕ್ಷೇತ್ರ ಸಾಮಾಯಿಕ, ಕಾಲ ಸಾಮಾಯಿಕ ಮತ್ತು ಭಾವ ಸಾಮಾಯಿಕ - ಇವು ಸಾಮಾಯಿಕದ ಆರು ಭೇದಗಳಿವೆ.

ಗೀತೆ, ನೃತ್ಯ, ರೂಪ, ರತ್ನ,ಚಿನ್ನ, ಸುಪುತ್ರ, ಸೋದರ, ಮಾತಾ-ಪಿತ, ದೊರೆ, ಮನೋರಂಜನೆ ಇತ್ಯಾದಿ ಇಷ್ಟ ಪದಾರ್ಥರೂಪ ವಸ್ತುಗಳ ಹೆಸರನ್ನು ಆಲಿಸಿ ರಾಗ ಮಾಡದಿರುವುದು; ಹಾಗೂ ಶತ್ರು, ಅವಿನಯಿ, ದುರಾಚಾರಿ, ಇತ್ಯಾದಿ ಅನಿಷ್ಟ ಹೆಸರುಗಳನ್ನು ಆಲಿಸಿ ದ್ವೇಷ ಮಾಡದಿರುವುದು ನಾಮ ಸಾಮಾಯಿಕವಿದೆ. ಇದೇ ಪ್ರಕಾರ ನಾನು ಸಾಮಾಯಿಕ ಮಾಡುತ್ತಿದ್ದೇನೆ ಇತ್ಯಾದಿ ಭಾವನೆಯು ಕೂಡ ನಾಮಸಾಮಾಯಿಕವಿದೆ.

ಅನ್ಯ ಮನುಷ್ಯ, ಪಶು ಹಾಗೂ ಮಣ್ಣು, ಕಾಷ್ಠ, ಪಾಷಾಣದ ಮನುಷ್ಯ, ಪಶುಗಳ ಅನೇಕ ಆಕಾರ ಪ್ರಕಾರಗಳನ್ನು ನೋಡಿ ಇವು ಒಳ್ಳೆಯವಿವೆ, ಇವು ಒಳ್ಳೆಯವಿಲ್ಲ - ಹೀಗೆ ಚಿಂತನೆ ಮಾಡದಿರುವುದು ಹಾಗೂ ಬಾವಿ, ಕೆರೆ, ಮನೆ ಮೊದಲಾದುವನ್ನು ಕಂಡು ರಾಗ-ದ್ವೇಷದ ಇಷ್ಟ ಅನಿಷ್ಟ ವಿಚಾರ ಮಾಡದಿರುವುದು ಸ್ಥಾಪನಾ ಸಾಮಾಯಿಕವಿದೆ.

ಅನ್ಯ ಚೇತನ-ಅಚೇತನ ದ್ರವ್ಯ ಪದಾರ್ಥಗಳನ್ನು ಕಂಡು ರಾಗ-ದ್ವೇಷ ಮಾಡದಿರುವುದು ಹಾಗೂ ದ್ರವ್ಯ ಸಾಮಾಯಿಕದ ಸರ್ವ ಪಾಠವನ್ನು ತಿಳಿಯುವಂಥ ಯಾವನೋ ಭವ್ಯಾತ್ಮನು ಸಂಧ್ಯಾ ಸಮಯದಲ್ಲಿ ಸಾಮಾಯಿಕ ಮಾಡುವ ಸಲುವಾಗಿ ಅಥವಾ ಕಾಯೋತ್ಸರ್ಗರೂಪ ಶರೀರದ ಮುದ್ರೆಯೊಂದಿಗೆ ಕುಳಿತುಕೊಂಡಿರುತ್ತಾನೆ ಆದರೆ ಅವನ ಮನಸ್ಸು ಅವನ ವಶದಲ್ಲಿರುವುದಿಲ್ಲ, ಅನೇಕ ಕಡೆಗೆ ಭ್ರಮಣ ಮಾಡುತ್ತಿರುತ್ತದೆ; ಆದಾಗ್ಯೂ ಪಾಠವನ್ನು ಶುದ್ಧವಾಗಿ ಪಠಿಸುತ್ತ ಕುಳಿತುಕೊಂಡಿದ್ದರೆ ಆ ಜೀವನು ಶರೀರದಿಂದ ಸಾಮಾಯಿಕರೂಪನಿದ್ದಾನೆ - ಇದು ದ್ರವ್ಯಸಾಮಾಯಿಕವಿದೆ.

ಸ್ವರ್ಗ, ನರಕ, ಪಾತಾಳ, ಮಧ್ಯಲೋಕದ ಅನೇಕ ದ್ವೀಪ-ಸಮುದ್ರ, ಎರಡೂವರೆ ದ್ವೀಪದಲ್ಲಿ ವಿದ್ಯಮಾನವಿರುವ ಆರ್ಯ, ಮ್ಲೇಚ್ಛ, ಕ್ಷೇತ್ರ, ವನ, ಉಪವನ, ಪರ್ವತ ಇತ್ಯಾದಿ ಸುಖ-ದುಃಖರೂಪದ ಶುಭಾಶುಭ ದೇಶ, ಗ್ರಾಮ, ಕ್ಷೇತ್ರಗಳಲ್ಲಿ ರಾಗ-ದ್ವೇಷ ಮಾಡದಿರುವುದು ಕ್ಷೇತ್ರ ಸಾಮಾಯಿಕವಿದೆ.

ವಸಂತಾದಿ ಆರು ಋತು, ಶೀತ, ಉಷ್ಣ, ಮಳೆಗಾಲ, ಶುಕ್ಲಪಕ್ಷ, ಕೃಷ್ಣಪಕ್ಷ, ಹಗಲು, ರಾತ್ರಿ , ವಾರ, ನಕ್ಷತ್ರಾದಿಗಳನ್ನು ಶುಭಾಶುಭರೂಪವೆಂದು ಕಂಡು ಅವುಗಳಲ್ಲಿ ರಾಗದ್ವೇಷ ಮಾಡದಿರುವುದು ಹಾಗೂ ಉತ್ಸರ್ಪಿಣಿ, ಅವಸರ್ಪಿಣಿ ಸಂಬಂಧದ ಮೊದಲನೆಯ, ಎರಡನೆಯ, ಮೂರನೆಯ, ನಾಲ್ಕನೆಯ, ಐದನೆಯ, ಆರನೆಯ ಕಾಲ - ಇವು ಎಲ್ಲ ಕಾಲಗಳ ಪ್ರವೃತ್ತಿಯಲ್ಲಿ ಶುಭಾಶುಭವಾಗದಿರುವುದು, ರಾಗ-ದ್ವೇಷ ಮಾಡದಿರುವುದು ಕಾಲ ಸಾಮಾಯಿಕವಿದೆ.

ಸಾಮಾಯಿಕ ಮಾಡುತ್ತಿರುವಾಗ ಜೀವ-ಅಜೀವ ಮೊದಲಾದ ತತ್ತ್ವಗಳಲ್ಲಿ ಉಪಯೋಗದ ಪ್ರವೃತ್ತಿ , ಶರೀರದ ಏಕಾಗ್ರತೆ, ನಿಶ್ಚಲತೆ ಮತ್ತು ಮಿಥ್ಯಾತ್ವ ಪ್ರಮಾದದ ಅಭಾವದಿಂದ ಶುದ್ಧ ಸಮತೆಯ ರಸದಿಂದ ನೆನೆದುಹೋದಂಥ ಭಾವ, ವಚನ, ಕಾಯದ ಏಕತೆಯ ಸಹಿತ ಸಾಮಾಯಿಕದಲ್ಲಿಯೇ ಭಾವಗಳ ಪ್ರವೃತ್ತಿ , ಸಮಸ್ತ ಜೀವಗಳಲ್ಲಿ ಸ್ನೇಹ ಭಾವ, ಸಮಸ್ತ ಜೀವಗಳ ರಕ್ಷಣೆಯ ಭಾವ, ವ್ರತ, ಸಂಯಮದ ವೃದ್ಧಿರೂಪ ಪರಿಣಾಮ, ಧರ್ಮ-ಶುಕ್ಲಧ್ಯಾನಮಯ ಭಾವ ಚೇಷ್ಟೆ - ಇದು ಭಾವ ಸಾಮಾಯಿಕವಿದೆ.

೧. ಇವು ಆರು ಭೇದರೂಪ ಸಾಮಾಯಿಕಗಳನ್ನು ಧರಿಸುವಂಥ ಶುದ್ಧ ಭಾವಗಳಿಂದ ಸಹಿತ, ಜಗತ್‌ಗುರು, ಮುನೀಶ್ವರರು, ಷಟ್‌ಕಾಯ ಜೀವಗಳ ದುಃಖ ಹರಣ ಮಾಡುವಂಥವರು ಸದ್ದೈವ, ಸರ್ವಕಾಲ, ಸರ್ವ ಸಂಯಮದ ಧಾರಕ ಗುರುವಿನ ಸಾಮಾಯಿಕವು ಆವಶ್ಯಕವಿದೆ.

೨. ಯತೀಶ್ವರರ ಮೂಲಕ ಪುನಃ ಪುನಃ ಮಾಡಲಾಗುವ ಅರಹಂತ-ಸಿದ್ಧರ ಸ್ತುತಿಯು ಸ್ತವನ ಆವಶ್ಯಕವಿದೆ.

೩. ಅರಹಂತ-ಸಿದ್ಧರಿಗೆ ಮನ-ವಚನ-ಕಾಯದಿಂದ ಪುನಃ ಪುನಃ ನಮಸ್ಕಾರ ಮಾಡುವುದು ವಂದನಾ ಆವಶ್ಯಕವಿದೆ.

೪. ಪ್ರಮಾದ ವಶದಿಂದ ಸಂಯಮದಲ್ಲಿ ಯಾವುದಾದರೂ ದೋಷವು ತಗಲಿದ ಮೇಲೆ ಅದನ್ನು ಸ್ಮರಿಸಿಕೊಂಡು ಅದನ್ನು ದೂರ ಮಾಡುವ ಕ್ರಿಯೆ ಮಾಡುವುದು ಪ್ರತಿಕ್ರಮಣ ಆವಶ್ಯಕವಿದೆ.

೫. ಪಾಪ ಕ್ರಿಯೆಗಳ ತ್ಯಾಗವು ಪ್ರತ್ಯಾಖ್ಯಾನ ಆವಶ್ಯಕವಿದೆ.

೬. ಶರೀರದಿಂದ ಮೋಹರಹಿತರಾಗಿ ಪ್ರವರ್ತಿಸುವುದು, ಧ್ಯಾನರೂಪವಿರುವುದು, ಶರೀರತ್ಯಾಗರೂಪ ಉದಾಸ ಭಾವನೆ, ಕಾಯೋತ್ಸರ್ಗ ಆಸನದಿಂದ ಕುಳಿತುಕೊಳ್ಳುವುದು ಕಾಯೋತ್ಸರ್ಗ ಆವಶ್ಯಕವಿದೆ.

ಈ ಪ್ರಕಾರ ಪಂಚ ಮಹಾವ್ರತ, ಪಂಚ ಸಮಿತಿ, ಪಂಚೇಂದ್ರಿಯ ವಿಜಯ, ಆರು ಆವಶ್ಯಕ, ಏಳು ಶೇಷ ಗುಣಗಳು- ಇವು ಇಪ್ಪತ್ತೆಂಟು ಮೂಲ ಗುಣಗಳ ರಕ್ಷಣೆಯ ರೂಪದಿಂದ ಯಾವಾಗಲೂ ಪ್ರವರ್ತಿಸುವಂಥ ಗುರುಗಳು ವಂದನೆ ಮಾಡಲು ಯೋಗ್ಯರಿದ್ದಾರೆ.

ಈ ಪ್ರಕಾರ ಶ್ರೀ ಸುದೃಷ್ಟಿತರಂಗಿಣಿ ಎಂಬ ಹೆಸರಿನ ಗ್ರಂಥದಲ್ಲಿ ದೇವರ ಸ್ವರೂಪಪೂರ್ವಕ ಗುರುಗಳ
ಇಪ್ಪತ್ತೆಂಟು ಮೂಲ ಗುಣಗಳೊಳಗಿಂದ ಏಷಣಾ ಸಮಿತಿಯ ಅಂತರ್ಗತ ನಲವತ್ತಾರು ದೋಷ,
ಮೂವತ್ತೆರಡು ಅಂತರಾಯ, ಹದಿನಾಲ್ಕು ಮಲದೋಷ ಸಹಿತ ಶುದ್ಧ ಏಷಣಾ
ಸಮಿತಿಯೊಂದಿಗೆ ಮೂಲಗುಣಗಳ ವರ್ಣನೆಯೆಂಬ ಹೆಸರಿನ
ಎಂಟನೆಯ ಪರ್ವವು ಪೂರ್ಣವಾಯಿತು.

★★★★★

## ೯ : ಒಂಭತ್ತನೆಯ ಪರ್ವ
## ಮುನಿ-ಧರ್ಮ, ಭೇದವರ್ಣನೆ

ಮುಂದೆ ಪುನಃ ಮುನಿಧರ್ಮದ ಪ್ರವೃತ್ತಿಯನ್ನು ಹೇಳುತ್ತಾರೆ. ಅಲ್ಲಿ ಹದಿಮೂರು ಪ್ರಕಾರದ ಚಾರಿತ್ರರೂಪ ಉತ್ತಮ ಧರ್ಮದೊಳಗಿಂದ ಪಂಚ ಮಹಾವ್ರತ ಪಂಚ ಸಮಿತಿಗಳ ಸ್ವರೂಪವನ್ನಂತೂ ಮೊದಲೇ ಹೇಳಿ ಬಂದಿದ್ದೇವೆ. ಈಗ ಮೂರು ಗುಪ್ತಿಗಳ ಸ್ವರೂಪ ಹೇಳಲಾಗುವುದು.

ಯಾರ ಮನಸ್ಸಿನ ಚಿಂತನೆಗಳೆಲ್ಲವೂ ಜಿನ ಆಜ್ಞೆಯ ಅನುಸಾರ ಇರುತ್ತವೆ; ಸರ್ವ ಜೀವಗಳಿಗೆ ಸುಖರೂಪ, ಪ್ರಮಾದ ರಹಿತ ಮನಸ್ಸಿನ ವಿಚಾರ, ತಮ್ಮ ಅಭಿಪ್ರಾಯವಿಲ್ಲದೆ ಅನ್ಯ ರೂಪವಾಗದಿರುವುದು ಅವರನ್ನು ಮನೋವಿಜಯಿಯೆಂದು ತಿಳಿಯುವುದು. ಇದರ ಹೆಸರು ಮನೋಗುಪ್ತಿ ಇದೆ.

ಯಾರ ವಚನಗಳನ್ನಾಡುವಿಕೆಯು ಸ್ವ-ಪರ ಹಿತಕಾರಕವಿರುತ್ತದೆ, ಜಿನಾಜ್ಞೆಯ ಅನುಸಾರವಿರುತ್ತದೆ ಆತ್ಮನ ಅಭಿಪ್ರಾಯವಿಲ್ಲದೆ ಪ್ರಮಾದರೂಪ ವಚನಗಳನ್ನು ಆಡುವುದಿಲ್ಲ -ಈ ಪ್ರಕಾರ ಪ್ರಮಾದ ರಹಿತ ಶುದ್ಧ ಸತ್ಯ ಜಿನಾಜ್ಞೆಯ ಅನುಸಾರ ವಚನಗಳನ್ನಾಡುವಂಥವರನ್ನು ವಚನವಿಜಯಿ ಎಂದು ತಿಳಿಯುವುದು. ಇದರದೇ ಹೆಸರು ವಚನಗುಪ್ತಿಯಿದೆ.

ಎಲ್ಲಿ ಶರೀರದ ಪ್ರವೃತ್ತಿಯು ಸಮಿತಿಪೂರ್ವಕವಿರುತ್ತದೆ, ತಮ್ಮ ಅಂಗೋಪಾಂಗಗಳ ಹಲನ-ಚಲನ ಮೊದಲಾದುವೆಲ್ಲವು ಜಿನಾಜ್ಞೆಯ ಅನುಸಾರವಿರುತ್ತವೆ, ಮಹಾ ದಯೆಯ ಭಾವದಿಂದ ಸಹಿತವಿರುತ್ತವೆ, ಶಾಂತ ಮುದ್ರೆಯಿಂದ ಸಹಿತವಾಗಿರುವುದು, ಅಶುಭ ಶರೀರದ ಶುಶ್ರೂಷೆಯ ರೂಪದ ಕ್ರಿಯೆಗಳು ಇರುವುದಿಲ್ಲ, ತಮ್ಮ ಕಾಯದಿಂದ ಯಾವುದೇ ಪ್ರಾಣಿಯು ಭಯಭೀತವಾಗದಂಥ ಸೌಮ್ಯ ಮುದ್ರೆಯನ್ನಿಟ್ಟುಕೊಳ್ಳುವುದು, ಆತ್ಮನ ಅಭಿಪ್ರಾಯವಿಲ್ಲದೆ ಪ್ರಮಾದದಿಂದ ಕಾಯಕ್ರಿಯೆ ಮಾಡದಿರುವುದು ಅದು ಕಾಯವಿಜಯವಿದೆ - ಕಾಯಗುಪ್ತಿಯಿದೆ.

ಇವು ಹದಿಮೂರು ಪ್ರಕಾರದ ಚಾರಿತ್ರವೆಂದು ತಿಳಿಯುವುದು. ಈ ಚಾರಿತ್ರ ಸಹಿತ ಯಾವ ಮುನಿಗಳಿದ್ದಾರೆ ಅವರನ್ನು ನಿಜವಾದ ಗುರುವೆಂದು ತಿಳಿಯುವುದು. ಈ ಗುರುಗಳೇ ಸಮ್ಯಗ್ದರ್ಶನ, ಸಮ್ಯಗ್ಜ್ಞಾನ, ಸಮ್ಯಕ್ಚಾರಿತ್ರರೂಪ ರತ್ನತ್ರಯಸಹಿತರಿದ್ದಾರೆ. ಸಮ್ಯಗ್ದರ್ಶನ, ಸಮ್ಯಕ್ಚಾರಿತ್ರಗಳ ಸ್ವರೂಪವನ್ನಂತೂ ಮೊದಲು ಹೇಳಿಯೇ ಬಂದಿದ್ದೇವೆ.

ಇಲ್ಲಿ ಸಮ್ಯಗ್ಜ್ಞಾನದ ಸ್ವರೂಪ ಹೇಳಲಾಗುವುದು - ಸಮ್ಯಗ್ಜ್ಞಾನವು ಐದು ಪ್ರಕಾರದ್ದಿದೆ. ಜಿನ ಆಜ್ಞೆಯ ಅನುಸಾರ ಸ್ವಪರಪದಾರ್ಥಗಳ ಸ್ವಭಾವ ತಿಳಿಯುವುದು ಸಮ್ಯಗ್ಜ್ಞಾನವಿದೆ.

ಇದರ ಸ್ವರೂಪವನ್ನು ಮುಂದೆ ಹೇಳುವುದಿದೆ ಅಲ್ಲಿಂದ ತಿಳಿದುಕೊಳ್ಳುವುದು. ಈ ಶುದ್ಧ ರತ್ನತ್ರಯದ ಧಾರಕರಾದ ಯೋಗೀಶ್ವರರು ಸಮ್ಯಗ್ದೃಷ್ಟಿಗಳ ಗುರುವಿದ್ದಾರೆ, ಪೂಜಿಸಲು ಯೋಗ್ಯರಿದ್ದಾರೆ. ಇದೇ ಗುರುಗಳು ಮಹಾಧೀರ, ಕರ್ಮಶತ್ರುವನ್ನು ಜಯಿಸುವ ಸಲುವಾಗಿ ಮಹಾಸಾಮಂತ ಸಮಾನ, ಶರೀರ ಮಮತ್ವದ ತ್ಯಾಗಿ, ಜಗತ್‌ಗುರು, ಕರ್ಮಶತ್ರುಗಳ ಮೂಲಕ ಮಾಡಲಾಗುವಂಥ ಮಹಾ ಘೋರ ಪರೀಷಹಗಳನ್ನು ಸಹನೆ ಮಾಡುವಲ್ಲಿ ಸಾಹಸಿಗಳಿದ್ದಾರೆ.

ಆ ಪರೀಷಹಗಳ ಇಪ್ಪತ್ತೆರಡು ಭೇದಗಳಿವೆ. ಅವುಗಳನ್ನೇ ಹೇಳುತ್ತಾರೆ -

**ಛುದ ತಿಸ ಸೀತಯ ಉಸಣಊ, ದಂಸಾ ಣಗಣಾ ಯ ಅರತಿ ತೀಯ ಚಜ್ಜಾವಿ ।**
**ಆಸಣ ಸಯಣ ಕುವಯಣಂ, ಬಧಬಂಧಾ ಜಾಚಣಾ ಲಾಭೋ ॥೨೬॥**
**ಗದ ತಣಫಾಸ ಯ ಮಲ್ಲಯ, ಸತಕಾರೋ ಪುರಸಕಾರ ಪಣ್ಣಾ ಯ ।**
**ಅಣ್ಣಾಣೋ ಯ ಅದಂಸಣಂ ಸವ್ವೇ ವಾಬೀಸ ಮುಣ ಸಹಧೀರಾ ॥೨೭॥**

**ಗಾಥಾರ್ಥ :-** ಕ್ಷುಧೆ, ತೃಷೆ, ಶೀತ, ಉಷ್ಣ, ದಂಶಮಶಕ, ನಗ್ನತ್ವ, ಅರತಿ, ಸ್ತ್ರೀ, ಚರ್ಯಾ, ಆಸನ, ಶಯನ,

ದುರ್ವಚನ, ವಧ-ಬಂಧನ, ಯಾಚನಾ, ಅಲಾಭ, ರೋಗ, ತೃಣ ಸ್ಪರ್ಶ, ಮಲ, ಸತ್ಕಾರ-ಪುರಸ್ಕಾರ, ಪ್ರಜ್ಞಾ , ಅಜ್ಞಾನ, ಅದರ್ಶನ - ಇವು ಇಪ್ಪತ್ತೆರಡು ಪರೀಷಹಗಳಿವೆ.

**ಭಾವಾರ್ಥ :-** ಈಗ ಇವುಗಳ ಸ್ವರೂಪ ಹೇಳುತ್ತಾರೆ -

೧. ಎಲ್ಲಿ ಮುನೀಶ್ವರರು ಅನೇಕ ಉಪವಾಸಗಳ ನಂತರ ಪಾರಣೆಯಸಲುವಾಗಿ ಭೋಜನದ ಸಮಯದಲ್ಲಿ ನಗರದೊಳಗೆ ಹೋಗುತ್ತಾರೆ, ಅಂತರಾಯವು ಬಂದ ಮೇಲೆ ಯತಿವ್ರತದ ಲೋಭಿಗಳಾದ ಮುನಿರಾಜರು ಮರಳಿ ಪುನಃ ವನದೊಳಗೆ ಬಂದು ಬಿಡುತ್ತಾರೆ. ಕ್ಷುಧೆಯಿಂದ ಶರೀರವು ಮಹಾಕ್ಷೀಣವಾಗಿ ಹೋಗುತ್ತದೆ ಆದಾಗ್ಯೂ ಜಗತ್‌ಗುರುಗಳು ಪರಿಣತಿಯನ್ನು ಖೇದರೂಪ ಮಾಡುವುದಿಲ್ಲ. ಆಹಾರವಿಲ್ಲದೆ ಶರೀರವು ತನ್ನ ಸತ್ತಾವನ್ನು ಬಿಟ್ಟುಕೊಟ್ಟರೂ ಯತಿಗಳು ತಮ್ಮ ಮನಸ್ಸಿನ ಪುರುಷಾರ್ಥವನ್ನು ಬಿಟ್ಟುಕೊಡುವುದಿಲ್ಲ. ಹೀಗೆ ಶಿಥಿಲವಾಗಿರುವಂಥ ಶರೀರವನ್ನು ತಮ್ಮ ಪುರುಷಾರ್ಥದಿಂದ ಯಥಾವತ್ ಉಚಿತ ಕ್ರಿಯೆಯಿಂದ ನಡೆಯಿಸುತ್ತ ಹೇಗೆ ದ್ವೀಪಾಂತರಗಳಲ್ಲಿ ಹೋಗುವಂಥ ಯಾವನೋ ಶ್ರೇಷ್ಠಿಯು ಹಳೆಯ ರಥವನ್ನು ಹತ್ತಿ ಹೊರಟಿರುತ್ತಾನೆ ಅಲ್ಲಿ ವಿಕಟ ಪಾಷಾಣಗಳಿಂದ ಕೂಡಿದ ಪರ್ವತಗಳ ಘಟ್ಟ ಪ್ರದೇಶವು ಬಂದ ಮೇಲೆ ತನ್ನ ರಥವನ್ನು ಹಳೆಯದೆಂದು ತಿಳಿದುಕೊಂಡು ಯತ್ನಪೂರ್ವಕವಾಗಿ ಸಾಧಿಸುತ್ತ ದ್ವೀಪಾಂತರ ತಲುಪಿ ಬಿಡುತ್ತಾನೆ. ಅದೇ ಪ್ರಕಾರ ಮೋಕ್ಷರೂಪದ ಉದ್ದೇಶದಿಂದ ಗಮನ ಮಾಡುವಂಥ ಯತಿಗಳು ದೇಹರೂಪ ರಥದ ಮೇಲೆ ಹತ್ತಿ ಹೊರಟಿದ್ದಾರೆ. ಅಲ್ಲಿ ಕ್ಷುಧಾಪರೀಷಹ ರೂಪದ ದುರ್ಗಮ ಪ್ರದೇಶವು ಬಂದು ಬಿಟ್ಟರೆ ಆಗ ಮಹಾ ಉದಾಸೀನ, ವ್ರತಗಳ ಧಾರಕರು ತಮ್ಮ ಸಾಹಸ ವೃತ್ತಿಯಿಂದ ಕ್ಷುಧಾಪರೀಷಹವನ್ನು ಜಯಿಸುತ್ತಾರೆ - ಅವರು **ಕ್ಷುಧಾಪರೀಷಹ** ವಿಜಯೀ ಸಾಧು ಇದ್ದಾರೆ.

೨. ಯಾವ ಗುರುಗಳು ಅನೇಕ ದುರ್ಧರ (ಘೋರ) ತಪಸ್ಸು, ಉಪವಾಸ ಮಾಡುತ್ತಾರೆ ಜೇಷ್ಠ ಮಾಸದ ತೀವ್ರ ಬಿಸಿಲಿನ ನಿಮಿತ್ತ ಪಡೆದು ಶರೀರದೊಳಗೆ ದಾಹದ ಜ್ವಾಲೆಯುಂಟಾಗುವಂಥ ಋತುವಿನಲ್ಲಿ ಭೋಜನದ ಸಲುವಾಗಿ ನಗರದೊಳಗೆ ಹೋಗುತ್ತಾರೆ. ಅಲ್ಲಿ ಪ್ರಕೃತಿ ವಿರುದ್ಧ ದಾಹಕರ ಭೋಜನದ ನಿಮಿತ್ತವು ದೊರಕಿತು ಅಥವಾ ಮಾಸೋಪವಾಸಿಗೆ ನಗರದಲ್ಲಿ ಅಂತರಾಯವಾಯಿತು. ಅದರ ಕಾರಣದಿಂದ ದೇಹದಲ್ಲಿ ತೃಷೆಯ ವೇದನೆಯು ವೃದ್ಧಿಸಿಹೋಗುವುದರಿಂದ ಸಂಪೂರ್ಣ ಶರೀರವು ಅಗ್ನಿವತ್ ತಪಿಸಲಾರಂಭಿಸುತ್ತದೆ. ಕಣ್ಣುಗಳಿಗೆ ಕತ್ತಲು ಕವಿಯಲಾರಂಭಿಸುತ್ತದೆ, ನೇತ್ರಗಳಿಂದ ಕಿಡಿಗಳು ಹೊರಬರಲಾರಂಭಿಸುತ್ತವೆ, ಕಣ್ಣು ರೆಪ್ಪೆಗಳನ್ನು ಮುಚ್ಚಲಾಗುವುದಿಲ್ಲ - ಇತ್ಯಾದಿ ರೂಪದಿಂದ ತೃಷೆಯ ಬಾಧೆಯನ್ನು ಸಹಿಸುತ್ತ ಧೀರ ಸಾಧುಗಳು, ವೀತರಾಗಿ ಮುನಿಗಳು, ಖೇದದ ಭಾವ ಮಾಡುವುದಿಲ್ಲ; ಅವರು **ತೃಷಾ ಪರೀಷಹ** ವಿಜಯೀ ಸಾಧುವಿದ್ದಾರೆ.

೩. ಯಾರು ರಾಜ್ಯಾವಸ್ಥೆಯಲ್ಲಿ ಶೀತದ ಬಾಧೆಯನ್ನು ದೂರ ಮಾಡುವ ಸಲುವಾಗಿ ಅನೇಕ ಉಪಾಯ ಮಾಡುತ್ತಿದ್ದರು; ಅಗ್ನಿ, ಅರಳೆ, ರೋಮ, ರತ್ನಗಂಬಳಿ, ಮೆತ್ತನೆಯ ಹೊದಿಕೆ, ಕೋಮಲ ಸ್ತ್ರೀಯ ತನುವಿನ ಉಷ್ಣ ಸ್ಪರ್ಶ, ಅನೇಕ ಬಿಸಿ-ಬಿಸಿಯಾದ ಭೋಜನ, ಮಿಠಾಯಿ ಮತ್ತು ಔಷಧಾದಿಗಳ ರಸವನ್ನು ಭೋಗಿಸುವುದು ಅನೇಕ ಮಹಲುಗಳ ಗರ್ಭಗೃಹದ ಒಳಗೆ ಮಲಗಿಕೊಳ್ಳುವುದು ಇತ್ಯಾದಿ ಗೃಹಸ್ಥ ಅವಸ್ಥೆಯಲ್ಲಿ ತನುವಿನ ಸಲುವಾಗಿ ಯತ್ನ ಮಾಡುತ್ತಿದ್ದರು, ಅವರು ಈಗ ಯತಿಪದದಲ್ಲಿ ನದಿಗಳ ದಡ, ವಿಶಾಲವಾದ ಭೂಪ್ರದೇಶ, ವನ, ಇತ್ಯಾದಿ ಶೀತದ ಸ್ಥಾನಗಳ ಮೇಲೆ ಕುಳಿತುಕೊಳ್ಳುವಂಥ ಯೋಗೀಶ್ವರರು ಸಮತೆಯ ರಸದ ಪಾನ ಮಾಡುತ್ತ ಧ್ಯಾನಾಗ್ನಿಯ ಉಷ್ಣತೆಯಲ್ಲಿ ತಪಿಸುತ್ತಾರೆ. ಶೀತದ ಬಾಧೆಯನ್ನು ಗಣಿಸುವುದಿಲ್ಲ; ಅವರು **ಶೀತಪರೀಷಹ** ವಿಜಯೀ ಸಾಧು ಇದ್ದಾರೆ.

೪. ಚೈತ್ರ , ವೈಶಾಖ, ಜೇಷ್ಠ ಮಾಸಗಳ ಬಿಸಿಲಿನಿಂದ ನದಿ ಸರೋವರಗಳ ಜಲವು, ವನದ ವೃಕ್ಷಗಳ ಪರ್ಣಗಳು ಒಣಗಿ ಹೋಗಿರುತ್ತವೆ. ಬಾವಿ, ವಾಪಿಗಳ ನೀರು ಆಳಕ್ಕೆ ಹೋಗಿರುತ್ತವೆ ಅಲ್ಲದೆ ಪೃಥ್ವಿ, ಪರ್ವತಗಳು ಅಗ್ನಿಯ ಕೆಂಡದಂತಾಗಿರುತ್ತವೆ. ವನ-ಉಪವನಗಳು ಬರಡಾಗಿ ಹೋಗಿರುತ್ತವೆ, ಅನೇಕ ವನಚರ ಜೀವಗಳು ಘೋರ ಬಿಸಿಲಿನಲ್ಲಿ

ಗಮನ ಮಾಡುವುದನ್ನು ಬಿಟ್ಟು ಕೊಟ್ಟು ತಮ್ಮ ತಮ್ಮ ಸ್ಥಾನಗಳಲ್ಲಿ ಕುಳಿತುಕೊಂಡಿರುತ್ತವೆ. ಅನೇಕ ಪಶು-ಪಕ್ಷಿಗಳು ನೆರಳಿನಲ್ಲಿ ಕುಳಿತುಕೊಂಡಿರುತ್ತವೆ. ಮಾರ್ಗಗಮನ ಮಾಡುವಂಥ ಪಥಿಕರು ಕೂಡ ಮಾರ್ಗವನ್ನು ಬಿಟ್ಟುಕೊಟ್ಟು ಕುಳಿತುಕೊಂಡಿರುತ್ತಾರೆ- ಇಂಥ ಪ್ರಚಂಡ ಬಿಸಿಲಿನಲ್ಲಿ ಸಮತೆಯ ರೂಪದ ಅಮೃತದ ಆಸ್ವಾದಿಗಳು, ತಪಸ್ಸು ಮಾಡುವುದರಿಂದ ಯಾರ ಶರೀರವು ಕ್ಷೀಣವಾಗಿ ಹೋಗಿದೆ ಈ ಪ್ರಕಾರ ತಪಸ್ಸು ಹಾಗೂ ಜ್ಞಾನದ ಶೋಭೆಯನ್ನು ಪ್ರಕಟಪಡಿಸುತ್ತ ತಪಸ್ಸು, ಜ್ಞಾನದ ಭಂಡಾರರಾದ ಆ ಯತೀಶ್ವರರು ಪರ್ವತಗಳ ಶಿಖರದ ಮೇಲೆ ವಿಶಾಲವಾದ ಬಂಡೆಗಲ್ಲುಗಳ ಮೇಲೆ, ಸಮತೆಯ ಅಮೃತರಸದ ಪಾನ ಮಾಡುತ್ತ ಸುಖದಿಂದ ಅಕಂಪರಾಗಿ ಶರೀರದಲ್ಲಿ ವಿರಾಜಿಸುತ್ತ ಪರಿಣತಿಯೊಳಗೆ ಖೇದ-ಖಿನ್ನರಾಗುವುದಿಲ್ಲ; ಆ ಯತೀಶ್ವರರು **ಉಷ್ಣ ಪರೀಷಹ ವಿಜಯೀ** ಸಾಧುಗಳಿದ್ದಾರೆ.

೫. ಮಳೆಗಾಲದಲ್ಲಿ ಮಳೆಯ ನಿಮಿತ್ತ ಪಡೆದು ವೃಕ್ಷದ ಕೆಳಗೆ ಸೊಳ್ಳೆ, ದೋಮೆ, ಚೇಳು, ಜಿರಳೆ ಮೊದಲಾದ ದುಃಖವನ್ನುತ್ಪನ್ನ ಮಾಡುವಂಥ ಜೀವಗಳು ಮುನಿಯ ದೇಹದ ಮೇಲೆ ಹರಿದಾಡುತ್ತ ಉಪದ್ರವ ಮಾಡುತ್ತವೆ. ಆ ಯತಿಗಳ ಶರೀರವನ್ನು ಕಚ್ಚುತ್ತವೆ. ಶರೀರಕ್ಕೆ ಅಂಟಿಕೊಳ್ಳುತ್ತವೆ, ಆ ಬಾಧೆಗಳ ಎದುರಿಗೆ ಜಗತ್ತಿನ ಪೀಡೆಯನ್ನು ಹರಣ ಮಾಡುವಂಥ ದಯೆಯ ಭಂಡಾರರಾದ ಮುನಿಗಳು ತಮ್ಮ ಶರೀರವನ್ನು ಅಲುಗಾಡಿಸುವುದಿಲ್ಲ. ಅವರು ವಿಚಾರ ಮಾಡುವುದೇನೆಂದರೆ ಒಂದು ವೇಳೆ ನನ್ನ ಶರೀರವು ಚಂಚಲವಾಗಿ ಹೋದರೆ ಈ ಹೀನ ಶಕ್ತಿಯ ಧಾರಕ ದೀನ ಜೀವಗಳು ಭಯಭೀತವಾಗಬಹುದಾಗಿದೆ. ದೀನ ಜೀವಗಳ ಘಾತವಾಗಿಹೋದರೆ ಹಿಂಸೆಯ ದೋಷವು ತಗಲುವುದು - ಹೀಗೆ ತಿಳಿದುಕೊಂಡು ಆ ದೀನ ಜೀವಗಳ ರಕ್ಷಣೆಯ ಸಲುವಾಗಿ ಧೀರವೀರರಾದ ಮುನಿಗಳು ತಮ್ಮ ನಿಶ್ಚಲತೆಯೊಂದಿಗೆ ಬಾಧೆಯನ್ನು ಸಹಿಸುತ್ತ ಹೇಡಿತನವನ್ನು ತ್ಯಜಿಸುತ್ತಾರೆ; ಅವರು **ದಂಶಮಶಕಪರೀಷಹ ವಿಜಯೀ** ಸಾಧು ಇದ್ದಾರೆ.

೬. ಯಾರು ಗೃಹಸ್ಥಾವಸ್ಥೆಯಲ್ಲಿ ಸ್ವಯಂ ಚಕ್ರವರ್ತಿ, ಕಾಮದೇವ, ಮಂಡಲೇಶ್ವರ, ಮಹಾಮಂಡಲೇಶ್ವರ ಮೊದಲಾದ ದೊಡ್ಡ ದೊಡ್ಡ ಪದಗಳ ಧಾರಕರಿದ್ದು ರಾಜಸಂಪದದಲ್ಲಿ ಅನೇಕ ಪ್ರಕಾರದಿಂದ ದೇಹದ ಶೃಂಗಾರ ಮಾಡಿಕೊಳ್ಳುತ್ತಿದ್ದರು ಸ್ವಲ್ಪ ಮಾತ್ರವಾದರೂ ಶರೀರವು ನಿರ್ವಸ್ತ್ರವಾಗಿ ಹೋದಮೇಲೆ ಲಜ್ಜಿತರಾಗುತ್ತಿದ್ದರು. ತಮ್ಮ ಶರೀರದ ಶೋಭೆಯನ್ನು ತಾವೇ ನೋಡಿ-ನೋಡಿ ಇದರ ಎದುರಿಗೆ ದೇವಗಳ ರೂಪವು ನ್ಯೂನವಿದೆಯೆಂದು ಮನ್ನಿಸುತ್ತಿದ್ದರು; ಮಹಾಭೋಗಿಗಳಾದ ಅವರು ಶರೀರದ ಅಂಗ-ಉಪಾಂಗಗಳನ್ನು ನಿರ್ವಸ್ತ್ರ ಮಾಡುವ ಸಮಯದಲ್ಲಿ ಸಾಶಂಕಿತರಾಗುತ್ತಿದ್ದರು, ಅವರೇ ಈಗ ಸಂಸಾರದ ದಶೆಯು ವಿನಾಶಶೀಲವೆಂದು ತಿಳಿದುಕೊಂಡು, ಸಮಸ್ತ ರಾಜ ಸಂಪದವನ್ನು ಕೋಲ್ಮಿಂಚಿನ ಸಮಾನ ಚಂಚಲವೆಂದು ತಿಳಿದುಕೊಂಡು ಅದರಿಂದ ಮಮತೆಯ ತ್ಯಾಗ ಮಾಡಿ ನಗ್ನ ಅವಸ್ಥೆಯನ್ನು ಧಾರಣ ಮಾಡಿ ನಿಃಶಂಕ, ನಿರ್ವಿಕಾರ ಪದದ ಧಾರಕ ಜಗತ್ತಿನ ಸಂದೇಹವನ್ನು ತೊರೆದು ನಗ್ನ ಪದವನ್ನು ಧಾರಣ ಮಾಡಿರುತ್ತಾರೆ; ಅವರು **ನಗ್ನ ಪರೀಷಹ ವಿಜಯೀ** ಸಾಧು ಇದ್ದಾರೆ.

೭. ಯಾರು ವೀತರಾಗಿಯಿದ್ದಾರೆ, ಇಂದ್ರಿಯಗಳಿಗೆ ಅನಿಷ್ಟ ಸಾಮಗ್ರಿಗಳ ಸಂಯೋಗವಾದ ಮೇಲೆಯೂ ಕೂಡ ಮನಸ್ಸನ್ನು ಅರತಿರೂಪ ಮಾಡುವುದಿಲ್ಲ ಅವರು **ಅರತಿ ಪರೀಷಹ ವಿಜಯೀ** ಸಾಧು ಇದ್ದಾರೆ.

೮. ಯಾರು ನಿರ್ವಿಕಾರ ಯತಿಗಳಿದ್ದಾರೆ, ದೇವಾಂಗನೆ, ಮನುಷ್ಯನಿ, ತಿರ್ಯಂಚಿನಿ, ಕಾಷ್ಠ, ಪಾಷಾಣ, ಚಿತ್ರಾಮಗಳ ಸುಂದರ ಪುತ್ಥಳಿಗಳು - ಈ ಚೇತನ-ಅಚೇತನರೂಪ ನಾಲ್ಕು ಪ್ರಕಾರದ ಸ್ತ್ರೀಯರುಗಳ ನಿಮಿತ್ತವು ದೊರಕಿದ ಮೇಲೆಯೂ ರಾಗ-ದ್ವೇಷ ಮಾಡುವುದಿಲ್ಲ ಅಲ್ಲಿ ಯಾವಳೋ ದೇವಾಂಗನೆ ಅಥವಾ ವಿದ್ಯಾಧರೆಯು ಬಂದು ಅನೇಕ ಪ್ರಕಾರದ ಹಾವ-ಭಾವ, ವಿನಯ, ಮಂದಹಾಸ್ಯ, ನೇತ್ರಗಳಿಂದ ಸರಾಗತೆಯನ್ನು ವ್ಯಕ್ತಪಡಿಸುತ್ತ ಯತಿಯನ್ನು ವಿಕಾರಗೊಳಿಸಲಿಚ್ಛಿಸಿದರೂ ಆ ಜ್ಞಾನ ಸಂಪದದ ಧಾರಕರು ಸುಮತಿರೂಪದ ಸಖಿಯಿಂದ ಮುಕ್ತಿ ರಮಣಿಯ ಸ್ವರೂಪ ಹಾಗೂ ಸುಖವನ್ನು ತಿಳಿಯುವಂಥ, ಮುಕ್ತಿ ಸುಂದರಿಯಲ್ಲಿ ಅನುರಾಗಿಗಳಾದ ಯತಿವರ್ಯರು ಈ ನಾಲ್ಕು ಪ್ರಕಾರದ ಸ್ತ್ರೀಯರಲ್ಲಿ ಶುಭಾಶುಭ ಭಾವಗಳನ್ನು ಕಂಡು ರಾಗ-ದ್ವೇಷ ಮಾಡುವುದಿಲ್ಲ; ಅವರು **ಸ್ತ್ರೀ ಪರೀಷಹ ವಿಜಯೀ** ಸಾಧುವಿದ್ದಾರೆ.

೯. ರಾಜ್ಯ ಅವಸ್ಥೆಯಲ್ಲಿ ಯಾರು ರಥ, ಪಲ್ಲಕ್ಕಿ, ಕುದುರೆ ಮೊದಲಾದವುಗಳ ಸವಾರಿಮಾಡುತ್ತಿದ್ದರು, ಎಂದೂ ಕಾಲ್ನಡಿಗೆಯಿಂದ ನಡೆಯುತ್ತಿರಲಿಲ್ಲ; ಅವರೇ ಸುಕುಮಾರರು ಸತ್ಸಂಗದ ನಿಮಿತ್ತ ಪಡೆದು ಸರ್ವಸಂಪತ್ತನ್ನು ವಿನಾಶಶೀಲವೆಂದು ತಿಳಿದುಕೊಂಡು ಸಮಸ್ತ ವಾಹನ ಸವಾರಿಗಳ ತ್ಯಾಗ ಮಾಡಿ ನಗ್ನ ಅವಸ್ಥೆಯನ್ನು ಧಾರಣ ಮಾಡಿ ಏಕಾಕಿಯಾಗಿ ಕಾನನದಲ್ಲಿ ಕಾಲ್ನಡಿಗೆಯಿಂದ ನಡೆಯುತ್ತಾರೆ; ವಿಹಾರಮಾಡುವಾಗ ಅವರ ಕೋಮಲ ಪಾದಗಳಿಗೆ ವನಹುಲ್ಲುಕಡ್ಡಿ, ಮುಳ್ಳು, ಕಲ್ಲುಚೂರುಗಳು, ಕಠೋರ ಭೂಮಿಯು ಚುಚ್ಚುತ್ತದೆ. ಅವರ ಕಾಲುಗಳಿಂದ ರಕ್ತದಧಾರೆಯು ಪ್ರವಹಿಸಲಾರಂಭಿಸುತ್ತದೆ ಆದಾಗ್ಯೂ ಸಮತೆಯ ರಸದಿಂದ ತುಂಬಿಕೊಂಡಿರುವಂಥ ಅವರು ಧೀರ-ವೀರ ಸಾಹಸಿಗಳು ಸಂಯಮದ ಲೋಭಿಗಳಾದ ಯತಿಗಳು ಖೇದಮಾಡುವುದಿಲ್ಲ; ಅವರು ಚರ್ಯಾಪರೀಷಹ ವಿಜಯೀ ಸಾಧು ಇದ್ದಾರೆ.

೧೦. ಮುನಿಗಳು ಗುಹೆ, ಸ್ಮಶಾನ, ವೃಕ್ಷಗಳ ಪೊಟರೆ, ವನಾದಿಗಳಲ್ಲಿ ವಾಸಿಸುತ್ತಾರೆ - ಕುಳಿತುಕೊಳ್ಳುತ್ತಾರೆ. ಅಲ್ಲಿ ಅವರಿಗೆ ಹಿಂದೆ ಮುಂದಿನ ವಿಚಾರಗಳು ಬರುತ್ತವೆ - ಇಲ್ಲಿ ಗುಹೆ ಮೊದಲಾದವುಗಳಲ್ಲಿ ಸಿಂಹಾದಿ ಜೀವಗಳ ಚಿಹ್ನೆ ಬಿಲವಿರುವುದು ಕಂಡು ಬರುತ್ತಿವೆ. ಅದರಿಂದ ಈ ಸ್ಥಾನದಲ್ಲಂತೂ ಇರುವುದು ಯೋಗ್ಯವಿಲ್ಲ. ಈ ಸ್ಥಾನವು ಮೊದಲು ಯಾವುದೇ ಜೀವಗಳಿಂದ ಉಪಯೋಗಿಸಲ್ಪಟ್ಟಿರಬಹುದೇನು ? ಒಂದು ವೇಳೆ ಯಾವನೋ ದೇವನ ಕ್ರೀಡೆಯ ಸ್ಥಾನವಾಗಿರಬಹುದೇನು ? ಹಾಗೂ ಯಾವುದೋ ಸ್ಥಾನದ ಮೇಲೆ ಯಾರದಾದರೂ ಮಮತೆಯ ಭಾವವಿದ್ದರೆ ಅಂಥ ಸ್ಥಾನಗಳಲ್ಲಿ ಯತಿಗಳು ಇರುವುದಿಲ್ಲ - ಹೀಗೆ ಅನೇಕ ವಿಚಾರಗಳಿಂದ ಸಹಿತರಾಗಿ ಅವರು ನಿರ್ದೋಷ ಮಮತ್ವರಹಿತ ಸ್ಥಾನದಲ್ಲಿ ಉಳಿಯುತ್ತಾರೆ, ಕುಳಿತುಕೊಳ್ಳುತ್ತಾರೆ. ಅಲ್ಲಿ ಉಳಿದುಕೊಂಡ ನಂತರ ಯಾವನಾದರೂ ದೇವ, ವಿದ್ಯಾಧರ, ಸಿಂಹ ಮೊದಲಾದ ಕ್ರೂರ ಮೃಗಗಳು ಉಪದ್ರವವನ್ನುಂಟು ಮಾಡಿ ಮುನಿಗಳನ್ನು ಆ ಸ್ಥಾನದಿಂದ ಹೊರಹಾಕ ಬಯಸಿದರೆ ಮಹಾ ಧೈರ್ಯದ ಧಾರಕರಾದ ಶೂರ-ವೀರ ಸಾಹಸಿ, ಸಮತಾ ರಸದ ಆಸ್ವಾದಿಗಳಾದ ಯತಿಗಳು ಸಕಲ ಪರೀಷಹವನ್ನು ಸಹನೆ ಮಾಡಿಯೂ ಕೂಡ ಆಸನವನ್ನು ತ್ಯಜಿಸುವುದಿಲ್ಲ, ಆ ಜಗತ್‌ಗುರುಗಳು ಆಸನ ಪರೀಷಹ ವಿಜಯೀ ಇದ್ದಾರೆ.

೧೧. ಮುನಿನಾಥರು ಹಗಲಿರುಳು ಧ್ಯಾನ ಅಧ್ಯಯನದಲ್ಲಿಯೇ ಕಳೆಯುತ್ತಾರೆ, ಪ್ರಮಾದದ ವಶೀಭೂತರಾಗುವುದಿಲ್ಲ. ಎಂದಾದರೊಮ್ಮೆ ಪ್ರಮಾದದಿಂದ ನಿದ್ರಾಕರ್ಮದ ಉದಯವು ಬಂದು ಬಿಟ್ಟರೆ ರಾತ್ರಿಯ ಕೊನೆಯ ಪ್ರಹರದಲ್ಲಿ ಅಲ್ಪ ನಿದ್ರೆಯನ್ನು ಗ್ರಹಣ ಮಾಡಿ ಪ್ರಮಾದವನ್ನು ನಾಶ ಮಾಡುತ್ತಾರೆ. ಅಲ್ಲಿಯೂ ಕೂಡ ಮಹಾ ವಿಕಟ ಆಸನದಿಂದ ಮಲಗುತ್ತಾರೆ, ಆ ಆಸನದ ಹೆಸರು ಈ ಪ್ರಕಾರ ಇವೆ - ಗೋದೋಹನ ಆಸನ, ವೀರಾಸನ, ಧನುಷ್ಕಾಸನ, ವಜ್ರಾಸನ, ಮಡಾಸನ, ಇತ್ಯಾದಿ ಅನೇಕ ಆಸನಗಳಿವೆ. ಯಾವ ಪ್ರಕಾರ ಹಸುವಿನ ಹಾಲು ಕರೆಯುವ ಸಲುವಾಗಿ ಗೊಲ್ಲನು ಕುಳಿತುಕೊಳ್ಳುತ್ತಾನೆ ಅದೇ ಪ್ರಕಾರ ಯತಿಗಳು ಪ್ರಮಾದವನ್ನು ದೂರ ಮಾಡುವ ಸಲುವಾಗಿ ಕುಳಿತುಕೊಳ್ಳುತ್ತಾರೆ, ಅದು ಗೋದೋಹನ ಆಸನವಿದೆ. ಯಾವ ಪ್ರಕಾರ ಲೋಕದಲ್ಲಿ ಮುಗ್ಧ ಜನರು ಹನುಮಂತನ ಸ್ಥಾಪನೆ ಮಾಡಿದ್ದಾರೆ, ಅದು ವೀರಾಸನವಿದೆ. ಹೇಗೆ ಶೂರ-ವೀರರು ಹೋರಾಡುವ ಸಲುವಾಗಿ ನಿಂತುಕೊಳ್ಳುತ್ತಾರೆ ಹಾಗೆಯೇ ಯತಿಗಳು ಪ್ರಮಾದ ರೂಪದ ಶತ್ರುವಿನ ಜೊತೆಗೆ ಹೋರಾಡುವ ಸಲುವಾಗಿ ವೀರಾಸನ ಮಾಡುತ್ತಾರೆ. ಯಾವ ಪ್ರಕಾರ ಲೋಕದಲ್ಲಿ ಬಿಲ್ಲು ಬಾಗಿರುತ್ತದೆ ಅದೇ ಪ್ರಕಾರ ಯತೀಶ್ವರರು ಶರೀರವನ್ನು ಬಾಗಿಸಿ ಭೂಮಿಯ ಮೇಲೆ ಇರಿಸಿ ಶಯನ ಮಾಡುತ್ತಾರೆ, ಅದು ಧನುಷ್ಕಾಸನವಿದೆ. ಯಾವ ಪ್ರಕಾರ ವಜ್ರದಂಡವನ್ನು ಭೂಮಿಯ ಮೇಲೆ ಎಸೆಯುವುದರಿಂದ ಅದು ನೇರವಾಗಿ ಬಿದ್ದು ಬಿಡುತ್ತದೆ, ಅದೇ ಪ್ರಕಾರ ಯತಿಗಳು ನೇರವಾಗಿ ಶರೀರವನ್ನು ಮಾಡಿ ಮಲಗುತ್ತಾರೆ, ಅದು ವಜ್ರಾಸನವಿದೆ. ಯಾವ ಪ್ರಕಾರ ಸ್ಮಶಾನ ಭೂಮಿಯಲ್ಲಿ ಬಿದ್ದುಕೊಂಡಿರುವ ಮೃತ ಶರೀರವು ಚೇತನಾರಹಿತ ಅಕಂಪವಾಗಿ ಬಿದ್ದುಕೊಂಡಿರುತ್ತದೆ, ಅದೇ ಪ್ರಕಾರ ಯತಿಗಳು ಸ್ಮಶಾನಭೂಮಿ ಮೊದಲಾದವುಗಳಲ್ಲಿ ಶ್ವಾಸೋಚ್ಛ್ವಾಸವನ್ನು ತಡೆದು ಶರೀರವನ್ನು ಕಾಯಗುಪ್ತಿಯ ಯೋಗದ ಮೂಲಕ ನೀಳವಾಗಿಟ್ಟುಉಳಿಯುತ್ತಾರೆ, ಅದು ಮಡಾಸನ (ಶವಾಸನ) ಇದೆ.

ಇತ್ಯಾದಿ ಕ್ರಿಯೆಗಳಿಂದ ಪ್ರಮಾದವನ್ನು ನಷ್ಟಮಾಡಿ ಧ್ಯಾನ ಅಧ್ಯಯನಗಳಲ್ಲಿ ಸ್ಥಿರವಾಗಿ ಉಳಿಯುತ್ತಾರೆ, ಅವರು **ಶಯನಾಸನ ಪರೀಷಹ ವಿಜಯೀ ಸಾಧು ಇದ್ದಾರೆ.**

೧೨. ಯಾವನೋ ದುಷ್ಟ ಮನುಷ್ಯನು ಯೋಗೀಶ್ವರರನ್ನು ಕಂಡು ದುರ್ವಚನವನ್ನಾಡುತ್ತ ಇವನು ಚೋರನಿದ್ದಾನೆ, ವಂಚಕನಿದ್ದಾನೆ, ಪಾಖಂಡಿ ಇದ್ದಾನೆ, ದೀನನಿದ್ದಾನೆ, ದರಿದ್ರನಿದ್ದಾನೆ, ಕೈಲಾಗದ ಹೇಡಿ ಇದ್ದಾನೆಂದು ಹೇಳುತ್ತಾನೆ. ಇನ್ನಾವನೋ ಇವನಿಗೆ ರಾಜ್ಯ ನಡೆಸಲು ಬರುವುದಿಲ್ಲ ಆದುದರಿಂದ ರಾಜ್ಯದ ತ್ಯಾಗ ಮಾಡಿ ಹೊಟ್ಟೆ ಹೊರೆದು ಕೊಳ್ಳುವ ಸಲುವಾಗಿ ಮುನಿಯಾಗಿದ್ದಾನೆ - ಇತ್ಯಾದಿ ರೂಪದಿಂದ ದುಷ್ಟ ಅಜ್ಞಾನೀ ಜೀವರುಗಳು ವಚನರೂಪದ ಬಾಣಗಳಿಂದ ಮುನಿಗೆ ಪೀಡೆಯ ನಿಮಿತ್ತವಾಗುತ್ತಾರೆ ಆದರೂ ಸಮತೆಯ ರಸದಿಂದ ತುಂಬಿಹೋದ ವೈರಾಗ್ಯದ ಭಾವನೆಯನ್ನು ಭಾವಿಸುವಂಥ ವೀತರಾಗೀ ಯೋಗೀಶ್ವರರು ಯಾರದೇ ವಚನರೂಪದ ಬಾಣವನ್ನು ತಮ್ಮ ಸಮತೆಯರೂಪದ ಗುರಾಣಿಯಿಂದ ತಮಗೆ ತಗಲದ ಹಾಗೆ ತಡೆಯುತ್ತಾರೆ ಮತ್ತು ಪರಿಣಾಮದಲ್ಲಿ ನಿರ್ದೋಷತೆಯನ್ನು ಕಾಯ್ದುಕೊಳ್ಳುತ್ತಾರೆ, ಅವರು **ದುರ್ವಚನ ಪರೀಷಹ ವಿಜಯೀ ಸಾಧು ಇದ್ದಾರೆ.**

೧೩. ಯಾವನೋ ಪಾಪಿ ಮನುಷ್ಯನು ನಿರ್ದೋಷ ಮುನಿರಾಜರನ್ನು ಹೊಡೆಯುತ್ತಾನೆ, ಬಂಧಿಸುತ್ತಾನೆ, ಅಗ್ನಿಯಿಂದ ಸುಡುತ್ತಾನೆ ಇತ್ಯಾದಿ ಅನೇಕ ಉಪದ್ರವಗಳನ್ನು ಮಾಡಿದರೂ ಕರುಣೆಯ ಸಾಗರರಾದಂಥ ಮುನಿರಾಜರು ಜಗತ್ತಿನ ಪೀಡೆಯನ್ನು ಹರಣ ಮಾಡುವಂಥ ಯತಿಗಳು ಯಾರೊಂದಿಗೂ ದ್ವೇಷ ಭಾವ ಮಾಡುವುದಿಲ್ಲ. ಒಂದು ವೇಳೆ ಯಾವನೋನಿರ್ದಯಿ ಪುರುಷನು ಮುನಿಗಳಿಗೆ ಕಾಲುಗಳಿಂದ ಒದೆಯುತ್ತಾನೆ, ಮುಷ್ಠಿಯಿಂದ ಪ್ರಹಾರ ಮಾಡುತ್ತಾನೆ, ಆದಾಗ್ಯೂ ಯತೀಶ್ವರರು ವಿಚಾರ ಮಾಡುವುದೇನೆಂದರೆ ನನ್ನಿಂದ ಇವನಿಗೆ ಯಾವುದೋ ಅಪರಾಧವಾಗಿದೆ ಆದುದರಿಂದ ಹೊಡೆಯುತ್ತಿದ್ದಾನೆ ಇವನು ಯಾವನೋ ದಯಾವಂತನಿದ್ದಾನೆ, ಅಂತೆಯೇ ನನಗೆ ಕೋಲಿನಿಂದ ಹೊಡೆಯುತ್ತಿಲ್ಲ ಕೇವಲ ಶರೀರದಿಂದ ಆಘಾತ ಮಾಡುತ್ತಿದ್ದಾನೆ. ಯಾವನೋ ಕಠೋರ ಮನಸ್ಸುಳ್ಳವನು ಮುನಿಗೆ ಕೋಲು, ಕಟ್ಟಿಗೆಗಳಿಂದ ಹೊಡೆಯುತ್ತಿದ್ದರೆ ಆಗ ಮುನಿಗಳು ವಿಚಾರ ಮಾಡುವುದೇನೆಂದರೆ ಇವನು ಯಾವುದೇ ಶಸ್ತ್ರದಿಂದಂತೂ ಹೊಡೆಯುತ್ತಿಲ್ಲ. ಬೇರೆ ಇನ್ನಾವನೋ ಪಾಪಾತ್ಮನು ಒಂದು ವೇಳೆ ಶಸ್ತ್ರದಿಂದಲೇ ಹೊಡೆಯುತ್ತಿದ್ದರೆ ಆಗ ಯತಿಗಳು ವಿಚಾರ ಮಾಡುವುದೇನೆಂದರೆ ನಾನಂತೂ ಚೇತನ ಅಮೂರ್ತಿಕನಿದ್ದೇನೆ ನನ್ನ ಘಾತವಂತೂ ಆಗುವುದಿಲ್ಲ ನಾನು ಈ ಶರೀರದ ಬಂಧನರೂಪ ಕಾರಾಗೃಹದಲ್ಲಿ ಉಳಿದುಕೊಂಡಿದ್ದೇನೆ ಈ ಉಪಕಾರ ಮೂರ್ತಿಯಂತೂ ನನ್ನ ಮೇಲೆ ಕರುಣೆ ಮಾಡಿ ನನ್ನನ್ನು ಈ ಶರೀರರೂಪದ ಕಾರಾಗೃಹದಿಂದ ಬಿಡಿಸುತ್ತಿದ್ದಾನೆ. ಸಮತೆಯ ರಸದ ಧಾರಕರಾದ ಮುನಿರಾಜರು ತಮ್ಮ ಕರ್ಮಜನಿತ ದೋಷಗಳನ್ನು ತಿಳಿದುಕೊಂಡು ಇತರರೊಂದಿಗೆ ದ್ವೇಷ ಭಾವ ಮಾಡುವುದಿಲ್ಲ, ಅವರು **ವಧೆ-ಬಂಧನ ಪರೀಷಹ ವಿಜಯೀ ಸಾಧು ಇದ್ದಾರೆ.**

೧೪. ತಪದ ಭಂಡಾರರಾದ ಮುನೀಶ್ವರರು ಅನೇಕ ಉಪವಾಸಗಳ ನಂತರ ಪಾರಣೆಯ ಸಲುವಾಗಿ ನಗರದಲ್ಲಿ ಭೋಜನಕ್ಕೆ ಹೋಗುತ್ತಿರುವಾಗ ಒಂದು ವೇಳೆ ಅಲ್ಲಿ ಅಂತರಾಯವಾಗಿ ಹೋದರೆ ಪುನಃ ವನದೊಳಗೆ ಬಂದು ಧ್ಯಾನ ಅಧ್ಯಯನದಲ್ಲಿ ತೊಡಗುತ್ತಾರೆ. ಮರುದಿವಸ ಪುನಃ ಹೋಗುತ್ತಾರೆ, ಆಗಲೂ ಕೂಡ ಅಂತರಾಯವಾಗಿ ಹೋದರೆ - ಈಪ್ರಕಾರ ಅನೇಕ ಉಪವಾಸಗಳ ಪಾರಣೆಯಲ್ಲಿಯೂ ಒಂದು ವೇಳೆ ಮುನಿಗಳಿಗೆ ಅದೆಷ್ಟೋ ಬಾರಿ ಅಂತರಾಯವಾಗಿ ಹೋದರೂ ಜ್ಞಾನಾಮೃತದ ಪ್ರಾಶನದಿಂದ ಪುಷ್ಟರೂ ಮತ್ತು ಶರೀರದಿಂದ ನಿಸ್ಪೃಹರಾದ ಯತಿಗಳು ಕ್ಷುಧೆಯ ಯೋಗದಿಂದ ಯಾಚನೆ ಮಾಡುವುದಿಲ್ಲ. ಧ್ಯಾನಮೂರ್ತಿ, ಚಾರಿತ್ರಭಂಡಾರಿ, ತಮ್ಮ ಸಂಯಮ ಪ್ರತಿಜ್ಞೆಯ ಲೋಭಿಗಳು ತಮ್ಮ ಅಯಾಚಕ ವೃತ್ತಿಯನ್ನು ಮಲಿನಗೊಳಿಸುವುದಿಲ್ಲ. ಅವರು **ಯಾಚನಾ ಪರೀಷಹ ವಿಜಯೀ ಸಾಧು ಇದ್ದಾರೆ.**

೧೫. ಮುನೀಶ್ವರರಿಗೆ ಭೋಜನದ ಸಲುವಾಗಿ ನಗರದಲ್ಲಿ ವಿಹರಿಸುತ್ತಿರುವಾಗ ಅಂತರಾಯವಾದರೆ ಅಥವಾ ಯಾರೂ ಬಲಗೊಳ್ಳದಿದ್ದರೆ ಈ ಪ್ರಕಾರ ಬಹಳಷ್ಟುದಿನಗಳವರೆಗೆ ಭೋಜನದ ಲಾಭವಾಗದಿದ್ದರೂ ಕೂಡ ಪರಮ ಯೋಗಿಗಳೂ

ಶರೀರ ಮಮತ್ವದ ತ್ಯಾಗಿಗಳೂ ಆದ, ಸನ್ಯಾಸೀ ಗುರುಗಳಿಗೆ ಖೇದವಾಗುವುದಿಲ್ಲ, ಅವರು **ಅಲಾಭ ಪರೀಷಹ ವಿಜಯೀ** ಸಾಧು ಇದ್ದಾರೆ.

೧೬. ಒಂದು ವೇಳೆ ಯತಿಗಳ ಶರೀರದಲ್ಲಿ ಕರ್ಮೋದಯದಿಂದ ವಾತ, ಪಿತ್ತ, ಕಫ, ಕೆಮ್ಮು, ಕುಷ್ಠಾದಿ ಅನೇಕ ರೋಗಗಳಾಗಿ ಹೋದರೂ ಯತೀಶ್ವರರು ಪೌದ್ಗಲಿಕ ಶರೀರವನ್ನು ತಮ್ಮಿಂದ ಭಿನ್ನವೆಂದು ತಿಳಿದುಕೊಂಡು ಉಪಚಾರ ಮಾಡುವುದಿಲ್ಲ, ಅವರು **ರೋಗ ಪರೀಷಹ** ವಿಜಯೀ ಸಾಧು ಇದ್ದಾರೆ.

೧೭. ಯಾರು ರಾಜ್ಯಾವಸ್ಥೆಯಲ್ಲಿ ಮೆತ್ತನೆಯ ಹಾಸಿಗೆ ಮೊದಲಾದವುಗಳ ಮೇಲೆಯೇ ಪಾದವನ್ನಿರಿಸುತ್ತಿದ್ದರು ಅವರೇ ಈಗ ಜಗತ್ತಿನವೈಭವವನ್ನು ನಶ್ವರವೆಂದು ತಿಳಿದುಕೊಂಡು-ಸಮಸ್ತ ವಿಷಯ ಸಾಮಗ್ರಿಗಳನ್ನು ವಿಷಸಮವೆಂದು ತಿಳಿದುಕೊಂಡು ಈಗ ಯಾವ ಜಗತ್ಪೂಜ್ಯ ಯತಿಪದವಿದೆ ಅದನ್ನು ಧಾರಣ ಮಾಡಿದ್ದಾರೆ, ಅವರು ಏಕಾಕಿ ಕಠೋರ ಭೂಮಿಯ ಮೇಲೆ ನಡೆಯುತ್ತಾರೆ ಆಗ ಅವರ ಕೋಮಲವಾದ ಪಾದಗಳಲ್ಲಿ ತೀಕ್ಷ್ಣವಾದ ಮುಳ್ಳು, ಕಲ್ಲು ಚೂರುಗಳು,ಗಾಜಿನ ತುಂಡುಗಳು, ಒಣಹುಲ್ಲು ಕಡ್ಡಿ ಮೊದಲಾದವುಗಳು ತಾಗುವುದರಿಂದ ಪಾದಗಳು ಹರಿದು ಹೋಗುತ್ತವೆ ಅವುಗಳಿಂದ ರಕ್ತದಧಾರೆಯು ಒಸರಲಾರಂಭಿಸುತ್ತದೆ. ಆದಾಗ್ಯೂ ಈರ್ಯಾ ಸಮಿತಿಯ ಧಾರಕರಾದ ಯತಿಗಳು ತಮ್ಮ ಮನಸ್ಸಿನಲ್ಲಿ ಹೇಡಿತನವನ್ನು ತಂದುಕೊಳ್ಳುವುದಿಲ್ಲ, ಅವರು **ತೃಣಸ್ಪರ್ಶ ಪರೀಷಹ** ವಿಜಯೀ ಸಾಧು ಇದ್ದಾರೆ.

೧೮. ಯಾರು ರಾಜ್ಯಾವಸ್ಥೆಯಲ್ಲಿ ಅನೇಕ ಪ್ರಕಾರದ ಸುಗಂಧಮಯ ಚಂದನ, ಅಗರು, ಸುಗಂಧದೆಣ್ಣೆ, ಕೇಸರ, ಕಸ್ತೂರಿ ಮೊದಲಾದ ಅನೇಕ ಸುಗಂಧ ದ್ರವ್ಯಗಳ ಲೇಪನ ಮಾಡಿಕೊಂಡಿರುತ್ತಿದ್ದರು ಅವರೇ ಈಗ ಸಂಸಾರದ ದಶೆಗಳನ್ನೆಲ್ಲ ವಿನಶ್ವರವೆಂದು ತಿಳಿದುಕೊಂಡು ಶರೀರದಿಂದ ಮಮತೆಯ ತ್ಯಾಗ ಮಾಡಿ ಶರೀರದ ಶೋಭೆಯಿಂದ ರಹಿತರಾಗಿದ್ದಾರೆ. ಸಂಪೂರ್ಣ ಶರೀರದ ಮಾಂಸವು ಒಣಗಿ ಹೋಗುವುದರಿಂದ ಕೇವಲ ನರ ಮಂಡಲವೇ ಶೇಷ ಉಳಿದುಕೊಂಡಿದೆ, ಯಾವಜ್ಜೀವನ ಸ್ನಾನದ ತ್ಯಾಗವಿರುವುದರಿಂದ ತಪಸ್ಸು ಮಾಡುವಾಗ ಶರೀರದ ಮೇಲೆ ಧೂಳು ಮೊದಲಾದ ಮಲವು ಅಂಟಿಕೊಳ್ಳುವ ಕಾರಣ ಅವರ ಶರೀರದಿಂದ ದುರ್ಗಂಧವು ಹೊರಡುತ್ತಿದ್ದರೂ ಘ್ರಾಣೇಂದ್ರಿಯವನ್ನು ವಶದಲ್ಲಿಟ್ಟುಕೊಂಡಿರುವಂಥ ಅವರು ಸ್ನಾನ ತ್ಯಾಗಿ ಮುನಿಗಳು ಮನಸ್ಸಿನಲ್ಲಿ ಗ್ಲಾನಿಯನ್ನು ತರುವುದಿಲ್ಲ.

ಇಲ್ಲಿ ದ್ರವ್ಯಮಲ ಮತ್ತು ಭಾವಮಲವೆಂದು ಮಲದ ಎರಡು ಭೇದಗಳನ್ನು ಹೇಳಿದ್ದಾರೆ. - ದ್ರವ್ಯಮಲದಲ್ಲಿಯೂ ಕೂಡ ಬಾಹ್ಯ ದ್ರವ್ಯಮಲ ಮತ್ತು ಅಂತರಂಗ ದ್ರವ್ಯಮಲವೆಂದು ಎರಡು ಭೇದಗಳಿವೆ. ಕೆಸರು, ಧೂಳು, ಬೆವರಿನಿಂದ ರಜಕಣಗಳು ಅಂಟಿಕೊಳ್ಳುವುದು ಅದು ಬಾಹ್ಯದ್ರವ್ಯಮಲವಿದೆ, ಜ್ಞಾನಾವರಣಾದಿ ದ್ರವ್ಯಕರ್ಮಗಳ ಲೇಪವು ಆತ್ಮನಿಗೆ ಆಗುವುದು ಅದು ಅಂತರಂಗ ದ್ರವ್ಯಮಲವಿದೆ. ರಾಗ-ದ್ವೇಷಭಾವ, ಪಾಪಪರಿಣತಿಯು ಭಾವಮಲವಿದೆ. ಮೇಲೆ ಹೇಳಲಾದ ಮಲಗಳೊಳಗಿಂದ ಭಾವಮಲದ ತ್ಯಾಗಿ ಆಗಿರುವ ಕಾರಣ ಅಂತರಂಗದಲ್ಲಿ ಆತ್ಮನು ಪವಿತ್ರನಾಗಿ ಹೋಗಿರುವುದರಿಂದ ಆ ಯತಿಗಳು ಮಹಾನ್ ನಿರ್ಮಲರಿದ್ದಾರೆ ಮತ್ತು ಅನ್ಯ ದ್ರವ್ಯಮಲದಲ್ಲಿ ಸಮಭಾವಿ ಇದ್ದಾರೆ, ಅದರಿಂದ ಅವರು **ಮಲಪರೀಷಹ** ವಿಜಯೀ ಸಾಧು ಇದ್ದಾರೆ.

೧೯. ರಾಜ್ಯಾವಸ್ಥೆಯಲ್ಲಿ ಯಾರು ಸ್ವಯಂ ಚಕ್ರವರ್ತಿ ಇದ್ದರು ಅಥವಾ ಕಾಮದೇವ, ವಿದ್ಯಾಧರ, ಮಂಡಲೇಶ್ವರ, ಮಹಾಮಂಡಲೇಶ್ವರ ಇತ್ಯಾದಿ ಉಚ್ಚ ವಂಶದ ದೊರೆಗಳಿದ್ದರು. ತಮ್ಮ ಮಾನ ಪ್ರತಿಷ್ಠೆಯ ಸಲುವಾಗಿ ಅನೇಕ ಯುದ್ಧಗಳನ್ನು ಮಾಡುತ್ತಿದ್ದರು, ಅನಾದರ ಮಾಡುವಂಥವರಿಗೆ ದಂಡನೆ ನೀಡುತ್ತಿದ್ದರು, ತಮ್ಮ ಆಜ್ಞೆಯನ್ನು ಎಲ್ಲ ಜನರ ಮೇಲೆ ನಡೆಸುತ್ತಿದ್ದರು. ಅವರೇ ಈಗ ಸಂಸಾರದ ದಶೆಯನ್ನು ಚಂಚಲವೆಂದು ತಿಳಿದು ರಾಜ್ಯಭಾರವನ್ನು ತ್ಯಜಿಸಿ ನಗ್ನ ದಿಗಂಬರರಾಗಿ ವನದೊಳಗೆ ವಾಸ ಮಾಡುತ್ತಿದ್ದಾರೆ. ವೈರಾಗ್ಯದ ಬಲದಿಂದ ಕಷಾಯಗಳನ್ನು ಜಯಿಸಿದ್ದಾರೆ. ಆ ಜಗದ್ಗುರು ವೀತರಾಗಿಗಳನ್ನು ಕಂಡು ಯಾವನೋ ಭಾಗ್ಯಹೀನನು, ಅಜ್ಞಾನಿಯು ಬಂದು ಆದರ ಮಾಡದಿದ್ದರೆ ನಮಸ್ಕಾರ, ವಂದನಾದಿಗಳನ್ನು

ಸಲ್ಲಿಸದಿದ್ದರೆ, ವಿನಯಾದಿಗಳನ್ನು ಮಾಡದಿದ್ದರೆ, ಆಗ ಕೂಡ ಸರ್ವಜೀವರುಗಳ ಹಿತೈಷಿಗಳಾದ ಅವರು ಯಾರ ಕುರಿತಾಗಿಯೂ ದ್ವೇಷ ಮಾಡುವುದಿಲ್ಲ, ಅವರು **ಸತ್ಕಾರ ಪುರಸ್ಕಾರ ಪರೀಷಹ** ವಿಜಯೀ ಸಾಧು ಇದ್ದಾರೆ.

೨೦. ಯತಿಗಳಿಗೆ ತಪಸ್ಸು ಮಾಡುವಾಗ ಚಾರಿತ್ರದ ಪಾಲನೆ ಮಾಡುವಾಗ, ಅಂಗ ಪ್ರಕೀರ್ಣಕ ಮೊದಲಾದವುಗಳ ಜ್ಞಾನ ಅಥವಾ ಕರ್ಮಯೋಗದಿಂದ ಅವಧಿ, ಮನಃಪರ್ಯಯ ಜ್ಞಾನಗಳು ಪ್ರಕಟವಾಗಿ ಹೋಗುತ್ತವೆ. ಆಗ ಅವರು ಅವುಗಳ ಕುರಿತು ಅಭಿಮಾನ ಪಡುವುದಿಲ್ಲ. ಈ ಜ್ಞಾನಗಳಿಂದ ರಹಿತ ಅನ್ಯ ಮುನಿರಾಜರನ್ನು ಹೀನರೆಂದು ಮನ್ನಿಸುವುದಿಲ್ಲ. ಯಾವಾಗಲೂ ಚಾರಿತ್ರದ ವೃದ್ಧಿಯಲ್ಲಿ ಪ್ರಯತ್ನಶೀಲರಾಗಿರುತ್ತಾರೆ, ಆ ಸಾಧುಗಳು **ಪ್ರಜ್ಞಾಪರೀಷಹ** ವಿಜಯೀ ಇದ್ದಾರೆ.

೨೧. ಅನೇಕ ಪ್ರಕಾರದ ತಪಸ್ಸಿನ ಭಂಡಾರರು ಅನೇಕ ಚಾರಿತ್ರಗಳ ಧಾರಕರು, ವೀತರಾಗಿಗಳು, ಜಗದ್ಗುರುಗಳಿಗೆ ಒಂದು ವೇಳೆ ಯಾವುದೋ ಜ್ಞಾನಾವರಣ ಕರ್ಮದ ಉದಯದಿಂದ ಜ್ಞಾನದ ವೃದ್ಧಿ ಆಗದಿದ್ದರೆ ಆಗ ಯತಿನಾಥರು ಅನ್ಯ ಮುನೀಶ್ವರರನ್ನು ಅನೇಕ ಶಾಸ್ತ್ರಗಳ ಪಾಠಕರು, ವಿಶೇಷ ಜ್ಞಾನಿಗಳಿರುವುದನ್ನು ಕಂಡು ನಾನು ಮಹಾತಪಸ್ವಿ ಇದ್ದೇನೆ, ವಯಸ್ಸಿನಿಂದ ದೊಡ್ಡವನಿದ್ದೇನೆ, ಸತ್ಯ ಪದವಿಯ ಧಾರಕನಿದ್ದೇನೆ, ಆದರೆ ವಿಶೇಷ ಬುದ್ಧಿ ಇಲ್ಲ, ನನಗೆ ಯಾರು ತಾನೆ ಏನು ಹೇಳುವ ಸಾಧ್ಯತೆಯಿದೆಯೆಂದು ಯೋಚಿಸುವುದಿಲ್ಲ. ಅವರು **ಅಜ್ಞಾನ ಪರೀಷಹ** ವಿಜಯೀ ಸಾಧು ಇದ್ದಾರೆ.

೨೨. ಮುನಿಗಳಿಗೆ ತಪಸ್ಸು ಮಾಡುತ್ತ ಚಾರಿತ್ರದ ಪಾಲನೆ ಮಾಡುತ್ತ, ಬಹುದಿವಸಗಳು ಕಳೆದು ಹೋಗಿದ್ದರೂ ತಪಸ್ಸಿನ ಬಲದಿಂದ ಯಾವುದೇ ಋದ್ಧಿಯು ಉತ್ಪನ್ನವಾಗಿರದಿದ್ದರೆ ಅಥವಾ ಯಾವುದೋ ನಿಮಿತ್ತದಿಂದ ಜ್ಞಾನಾದಿಗಳ ಅತಿಶಯವು ಕಂಡು ಬರದಿದ್ದರೆ ಆಗ ಅವರು ವಿರುದ್ಧ ವಿಚಾರ ಮಾಡುವುದಿಲ್ಲ; ತಪಸ್ಸಿನ ಬಲದಿಂದ ಅನೇಕ ಋದ್ಧಿಗಳು ಉತ್ಪನ್ನವಾಗುತ್ತವೆಯೆಂದು ನಾವು ಮೊದಲು ಶಾಸ್ತ್ರದಲ್ಲಿ ಕೇಳಿದ್ದೆವು. ನಮಗಂತೂ ಯಾವ ಋದ್ಧಿಯು ಪ್ರಗಟವಾಗಿಲ್ಲ ಆದುದರಿಂದ ಶಾಸ್ತ್ರ ಭಾಷಿತವು ಸತ್ಯವಿದೆಯೋ ಅಥವಾ ಅಸತ್ಯವಿದೆಯೋ ಯಾರಿಗೆ ಗೊತ್ತು - ಇಂಥ ಸಂದೇಹರೂಪ ಮಿಥ್ಯಾಮಯ ವಿಕಲ್ಪಗಳನ್ನು ಮಾಡುವುದಿಲ್ಲ. ಅವರು **ಅದರ್ಶನ ಪರೀಷಹ** ವಿಜಯೀ ಸಾಧು ಇದ್ದಾರೆ.

ಹೀಗೆ ಇಪ್ಪತ್ತೆರಡು ಪರೀಷಹ ಸಹನೆ (ಜಯಿಸುವಿಕೆ)ಯಲ್ಲಿ ಧೀರರಾದ ಜಗತ್ತಿನ ಗುರುಗಳೇ ಸಮ್ಯಗ್ದೃಷ್ಟಿಗಳಿಂದ ಪೂಜ್ಯರಿದ್ದಾರೆಂದು ತಿಳಿಯುವುದು.

ಇಂಥ ಮುನೀಶ್ವರರುಗಳ ಹತ್ತು ಭೇದ ಹೇಳುತ್ತಾರೆ.

**ಸುರೋ ಉವಜ್ಝಾಯ ತಪಸೀ, ಸಿಸಿ ಗಲಾಣ ಗಣ ಕುಲ ಯ ಸಂಘಾತೀ ।**

**ಸಾಹೂ ಮಣೋಗ ಯ ದಹದಾ, ಜೋಈ ಭೇಯಾಣ ಜಿಣಸುತ್ತೇ ಭಾಸಈ ।।೨೮।।**

**ಗಾಥಾರ್ಥ** - ಆಚಾರ್ಯ, ಉಪಾಧ್ಯಾಯ, ತಪಸ್ವೀ, ಶೈಕ್ಷ್ಯ, ಗ್ಲಾನ, ಗಣ, ಕುಲ, ಸಂಘ, ಸಾಧು, ಮನೋಜ್ಞ - ಇವು ಮುನಿ ಜಾತಿಯ ಹತ್ತು ಭೇದಗಳಿವೆ.

೧. ಪ್ರಥಮದಲ್ಲಿ ಆಚಾರ್ಯರ ಸ್ವರೂಪ ಹೇಳುತ್ತಾರೆ -

**ದಹ ಧಮ್ಮೋ ತಪ ಬಾರಹ, ಆವಸಿ ಸಡ ಪಣ್ಣಾಚಾರ ತಿ ಗುತ್ತಿ ।**

**ಇಯ ಛತ್ತೀಸ ಗುಣ ಜುತ್ತೋ, ಸೂರೋ ಜಗಪೂಜ್ಜ ಹೋಈ ಮುಣಣಾಹೋ ।।೨೯।।**

**ಗಾಥಾರ್ಥ** - ದಶಧರ್ಮ, ಹನ್ನೆರಡು ತಪಸ್ಸು, ಆರು ಆವಶ್ಯಕ, ಐದು ಆಚಾರ, ಮೂರು ಗುಪ್ತಿ -ಇವು ಮೂವತ್ತಾರು ಗುಣಗಳು ಆಚಾರ್ಯವರ್ಯರುಗಳಿವೆ.

ಇಲ್ಲಿ ಪ್ರಥಮದಲ್ಲಿಯೇ ಧರ್ಮದ ಹತ್ತು ಭೇದ ಹೇಳುತ್ತಾರೆ.

**ಸಾರ ಖಮಾ ಮಾದಬ್ಬೋ, ಆಜ್ಜವ ಸಚ್ಚ ಸೌಚ ಧಮ್ಮ ಸಂಜ್ಜಾವಿ ।**

**ತಪ ತಾಗೋ ಅಹಕಂಚೋ, ಬಂಭಚಜ್ಜಾ ಯ ಧಮ್ಮ ದಹ ಭೇವೋ ।।೩೦।।**

**ಗಾಥಾರ್ಥ -** ಉತ್ತಮ ಕ್ಷಮೆ, ಮಾರ್ದವ, ಆರ್ಜವ, ಸತ್ಯ, ಶೌಚ, ಸಂಯಮ, ತಪ, ತ್ಯಾಗ, ಆಕಿಂಚನ್ಯ, ಬ್ರಹ್ಮಚರ್ಯ -ಇವು ಧರ್ಮದ ಹತ್ತು ಪ್ರಕಾರಗಳಿವೆ.

**೧. ಉತ್ತಮ ಕ್ಷಮೆ -** ತಮ್ಮ ಸಮಾನಪದದ ಧಾರಕ ಜೀವರುಗಳ ಶುಭಾಶುಭ ಚಾರಿತ್ರವನ್ನು ಕಂಡು ಅವರನ್ನು ಕ್ಷಮಿಸುವುದು ಅದು ಕ್ಷಮೆ ಇದೆ. ತಮ್ಮ ಪದದಿಂದ ಹೀನಶಕ್ತಿಯ ಧಾರಕ ಹಾಗೂ ಚತುರಿಂದ್ರಿಯ, ತ್ರೀಂದ್ರಿಯ, ದ್ವೀಂದ್ರಿಯ, ಏಕೇಂದ್ರಿಯ ಮೊದಲಾದ ಮಹಾಹೀನ ಶಕ್ತಿಯ ಧಾರಕ ಜೀವಗಳಲ್ಲಿ ಸಮತೆಯ ಭಾವನೆಯನ್ನು ಧಾರಣಮಾಡಿ ಕ್ರೋಧ ಮಾಡದಿರುವುದು ಉತ್ತಮ ಕ್ಷಮೆ ಇದೆ.

**ಸಂದೇಹ -** ಪಂಚೇಂದ್ರಿಯ ಮೊದಲಾದ ತಮ್ಮ ಸಮಾನ ಪದದಧಾರಕರು ಯಾವುದಾದರು ಕ್ರೋಧಾದಿ ಕಷಾಯಗಳನ್ನು ಮಾಡಿದರೂ ಕೂಡ ಅವರಲ್ಲಿ ದ್ವೇಷ ಭಾವ ಮಾಡದಿರುವುದು ಇದಂತೂ ಕ್ಷಮೆಯಿದೆ, ಎಂಬುದು ಸರಿ ಇದೆ; ಆದರೆ ಏಕೇಂದ್ರಿಯದಿಂದ ಚತುರಿಂದ್ರಿಯದವರೆಗಿನ ಜೀವಗಳಿಗಂತೂ ಅನ್ಯ ಜೀವಗಳ ಮೇಲೆ ಕ್ರೋಧ ಮಾಡುವ ಶಕ್ತಿಯೇ ಇರುವುದಿಲ್ಲ; ಹಾಗಿದ್ದ ಮೇಲೆ ಅವುಗಳ ಮೇಲೆ ಕ್ಷಮೆಯನ್ನು ಹೇಗೆ ಮಾಡುತ್ತಾರೆ ? ಅವುಗಳ ಮೇಲೆ ಕ್ಷಮೆ ಮಾಡುವುದನ್ನು ಉತ್ತಮ ಕ್ಷಮೆ ಎಂದು ತಾವು ಹೇಳುತ್ತಿರುವಿರಲ್ಲ ?

**ಸಮಾಧಾನ -** ಎಲೈ ಭವ್ಯನೇ ! ಗಮನವಿಟ್ಟು ಆಲಿಸು ! ತಮ್ಮ ಸಮಾನ ಪದದ ಧಾರಕ ಜೀವಗಳ ಕುರಿತು ಕ್ರೋಧದ ಕಾರಣ ಹಾಗೂ ಅವರುಗಳ ಹಿಂಸೆಯ ನಿಮಿತ್ತವಂತೂ ಎಂದಾದರೊಮ್ಮೆ ಸಂಭವಿಸುತ್ತದೆ ಆದರೆ ಏಕೇಂದ್ರಿಯ ವಿಕಲೇಂದ್ರಿಯ ಜೀವಗಳ ಹಿಂಸೆಯ ನಿಮಿತ್ತವಂತೂ ಪುನಃ ಪುನಃ ಬಹಳಷ್ಟು ಬಾರಿ ಸಂಭವಿಸುತ್ತದೆ ಅಂತೆಯೇ ಶ್ರಾವಕರಿಗೆ ಸ್ಥಾವರ ಹಿಂಸೆಯಿಂದ ತಪ್ಪಿಸಿಕೊಳ್ಳಲಾಗುವುದಿಲ್ಲ ಅವುಗಳ ಹಿಂಸೆಯಿಂದಂತೂ ಮಹಾವ್ರತಿ ಯತಿಗಳೇ ತಪ್ಪಿಸಿಕೊಳ್ಳುವ ಸಾಧ್ಯತೆಯಿದೆ ಅದನ್ನು ನೀನು ಆಲಿಸು -

ವನಸ್ಪತಿಗಳನ್ನು ತುಂಡರಿಸುವುದು, ತುಂಡರಿಸಹಚ್ಚುವುದು, ಭಕ್ಷಣೆ ಮಾಡುವುದು, ಹೊಸೆದುಹಾಕುವುದು, ಗಮನ ಮಾಡುತ್ತಿರುವಾಗ ತುಳಿಯುವುದು,ಒಣಗಿಸುವುದು, ಸುಲಿಯುವುದು, ಸುಲಿಸುವುದು, ವಾಸನೆ ನೋಡುವುದು ಇತ್ಯಾದಿ ಕಾರ್ಯಗಳು ಬಿಟ್ಟು ಹೋದಾಗಲೇ ವನಸ್ಪತಿ ಏಕೇಂದ್ರಿಯಗಳ ಹಿಂಸೆಯು ತಾಗುವುದಿಲ್ಲ.

ಕಾಯಿಸದೇ ಇರುವಂಥ ಜಲವನ್ನು ಸ್ಪರ್ಶಿಸುವುದು, ಕಾಯಿಸುವುದು, ಸ್ನಾನ ಮಾಡುವುದು, ತೊಳೆಯುವುದು, ತೊಳೆಸುವುದು, ಕುಡಿಯುವುದು ಹಾಗೂ ಇತರರಿಗೆ ಕುಡಿಸುವುದು ಇತ್ಯಾದಿ ಜಲ ಸಂಬಂಧದ ಕಾರ್ಯಗಳು ನಿಂತುಹೋದ ಮೇಲೆ ಜಲಕಾಯಿಕ ಸ್ಥಾವರಗಳ ಹಿಂಸೆಯು ಬಿಟ್ಟುಹೋಗಬಹುದಾಗಿದೆ.

ಅಗ್ನಿಯನ್ನು ಉರಿಸುವುದು, ಇತರರಿಗೆ ಹೇಳಿ ಉರಿಯಿಸುವುದು, ಹರಡುವುದು, ಆರಿಸಿಬಿಡುವುದು, ಪ್ರಜ್ವಲಿಸುವುದು, ದೀವಿಗೆಯನ್ನು ಉರಿಸುವುದು, ಇತರರಿಂದ ಉರಿಯಿಸುವುದು, ಅದರ ಪ್ರಕಾಶದಲ್ಲಿ ಕುಳಿತುಕೊಳ್ಳುವುದು ಇತ್ಯಾದಿ ಅಗ್ನಿಯ ಆರಂಭವು ಬಿಟ್ಟು ಹೋದ ಮೇಲೆಯೇ ಅಗ್ನಿಕಾಯಿಕ ಜೀವಗಳ ಹಿಂಸೆಯ ಪಾಪವು ಬಿಟ್ಟು ಹೋಗುತ್ತದೆ.

ಗಾಳಿಯಂತ್ರದಿಂದ ಗಾಳಿಯನ್ನು ತೆಗೆದುಕೊಳ್ಳುವುದು, ಬಟ್ಟೆಯನ್ನು ಅಲ್ಲಾಡಿಸುವುದು, ಜಿಗಿಯುವುದು, ಕೈಯಿಂದ ಚಪ್ಪಾಳೆ ತಟ್ಟುವುದು, ಊದುವುದು, ವಸ್ತುವನ್ನು ಅಪ್ಪಳಿಸುವುದು, ಎಸೆಯುವುದು ಇತ್ಯಾದಿ ವಾಯುಘಾತದ ಕಾರ್ಯಗಳು ಬಿಟ್ಟುಹೋದ ಮೇಲೆ ವಾಯುಕಾಯಿಕ ಜೀವಗಳ ಹಿಂಸೆಯು ಬಿಟ್ಟು ಹೋಗುತ್ತದೆ.

ಭೂಮಿಯನ್ನು ಅಗಿಯುವುದು, ಅಗೆಯಿಸುವುದು, ಗುಡಿಸುವುದು, ಕತ್ತರಿಸುವುದು, ಬಾವಿ ತೋಡುವುದು, ತೋಡಿಸುವುದು ಇತ್ಯಾದಿ ಪೃಥ್ವಿಕಾಯಿಕದ ಕಾರ್ಯಗಳು ಬಿಟ್ಟು ಹೋದಮೇಲೆಯೇ ಪೃಥ್ವಿ ಏಕೇಂದ್ರಿಯದ ಹಿಂಸೆಯು ಬಿಟ್ಟು ಹೋಗುತ್ತದೆ.

ಈ ಪ್ರಕಾರ ಪಂಚ ಸ್ಥಾವರಗಳ ಹಿಂಸೆಯನ್ನು ಹೇಳಲಾಯಿತು.

ವಿಕಲೇಂದ್ರಿಯದ ಹಿಂಸೆಯು ಅದಂತೂ ಯಾವಾಗ ಯತ್ನಪೂರ್ವಕ ನಡೆಯುವುದು, ಯತ್ನಪೂರ್ವಕ ಕುಳಿತುಕೊಳ್ಳುವುದು, ಯತ್ನಪೂರ್ವಕ ಮಲಗಿಕೊಳ್ಳುವುದು, ಯತ್ನಪೂರ್ವಕ ಮಾತನಾಡುವುದು, ಯತ್ನಪೂರ್ವಕ ಭೋಜನಮಾಡುವುದು, ಯತ್ನಪೂರ್ವಕ ವಸ್ತುವನ್ನು ಭೂಮಿಯ ಮೇಲೆ ಇರಿಸುವುದು, ಯತ್ನಪೂರ್ವಕ ಎತ್ತಿಕೊಳ್ಳುವುದು, ತುರಿಕೆಯುಂಟಾದ ಮೇಲೆಯೂ ತುರಿಸಿಕೊಳ್ಳದಿರುವುದು, ಅನ್ನ, ಮಿಠಾಯಿ ಮೊದಲಾದ ತಿನ್ನಲು ಯೋಗ್ಯವಾದ ತಿನಿಸುಗಳನ್ನು ತಿನ್ನುವುದು, ಅಯೋಗ್ಯವಿರುವ ವಸ್ತುಗಳನ್ನು ತಿನ್ನದಿರುವುದು, ಅನ್ನ, ಎಣ್ಣೆ, ತುಪ್ಪ, ಮಿಠಾಯಿ, ದಿನಸಿ ವಸ್ತುಗಳನ್ನು ಮಾರಾಟ ಮಾಡದಿರುವುದು, ಕೊಳ್ಳದಿರುವುದು, ಹೀಗಾದ ಮೇಲೆಯೇ ಹಿಂಸೆಯು ದೂರವಾಗುವ ಸಾಧ್ಯತೆಯಿದೆ. ಇತ್ಯಾದಿ ಯಾವ ಕಾರ್ಯಗಳು ಏಕೇಂದ್ರಿಯ ಮೊದಲಾದವುಗಳ ಆರಂಭ ಘಾತದ ಬಹಳಷ್ಟು ನಿಮಿತ್ತವಿವೆ ಆ ಕಾರ್ಯಗಳಲ್ಲಿ ಇವುಗಳ ರಕ್ಷಣೆಯ ರೂಪವಾಗಿ ವರ್ತಿಸುವುದನ್ನು ಉತ್ತಮ ಕ್ಷಮೆಯೆಂದು ತಿಳಿಯುವುದು.

ಮೇಲೆ ಹೇಳಲಾದ ಎಲ್ಲ ಕಾರ್ಯಗಳನ್ನು ಸರ್ವ ಪ್ರಕಾರದಿಂದ ಯತಿ ಮಹಾವ್ರತಿಗಳೇ ಪಾಲಿಸುತ್ತಾರೆ ಇವುಗಳನ್ನು ಗೃಹಸ್ಥರಿಂದ ಪಾಲಿಸಲಾಗುವುದಿಲ್ಲ. ಅಂತೆಯೇ ಇದರ ಹೆಸರು ಉತ್ತಮ ಕ್ಷಮೆ ಇದೆ.

೨. ಎಂಟು ಪ್ರಕಾರದ ಗರ್ವ (ಕುಲ, ಜಾತಿ, ರೂಪ, ಜ್ಞಾನ, ಧನ, ಬಲ, ತಪಸ್ಸು, ಪ್ರಭುತೆ)ಗಳ ತ್ಯಾಗವು ಮಾರ್ದವ ಧರ್ಮವಿದೆ.

೩. ಭಾವಗಳಲ್ಲಿ ಕಪಟ(ವಂಚನೆ, ಧೂರ್ತತೆ)ಗಳ ತ್ಯಾಗ ಮತ್ತು ಬಾಹ್ಯ ಅಭ್ಯಂತರ ಒಂದೇ ರೀತಿಯ ಮನ-ವಚನ - ಕಾಯಗಳ ಕ್ರಿಯೆ, ಸರಳ ಭಾವವಿರುವುದು, ಕುಟಿಲತೆಯಿಂದ ರಹಿತವಾದ ಪರಿಣಾಮವಿರುವುದು ಆರ್ಜವ ಧರ್ಮವಿದೆ.

೪. ಮನ-ವಚನ-ಕಾಯದಿಂದ ಅಸತ್ಯದ ತ್ಯಾಗಪೂರ್ವಕ ಜಿನಾಜ್ಞೆಯ ಅನುಸಾರ ಹಿತ-ಮಿತ, ಪ್ರಿಯ ವಚನಗಳನ್ನಾಡುವುದು ಸತ್ಯಧರ್ಮವಿದೆ. ಸತ್ಯವಚನದ ಹತ್ತು ಭೇದಗಳಿವೆ. ಅವುಗಳನ್ನು ಈಗ ಹೇಳುತ್ತಾರೆ -

**ಜಣವದ ಸಂವದಿ ಠವಣಾ,ಣಾಮ ಸತ್ತೋ ಯ ರೂಪೀ ಪತ್ತೀತೋ ।**
**ವವಹಾರೇಣ ಸಂಭಾವಣ, ಭಾವ ಉಪಮಾಏ ಸತ್ಯದಹ ಭೇವೋ ॥೩೧॥**

**ಅರ್ಥ** - ಜನಪದಸತ್ಯ, ಸಂವೃತ್ತಿ(ಸಮ್ಮತಿ)ಸತ್ಯ, ಸ್ಥಾಪನಾಸತ್ಯ, ನಾಮಸತ್ಯ, ರೂಪಸತ್ಯ, ಪ್ರತೀತ್ಯಸತ್ಯ, ವ್ಯವಹಾರಸತ್ಯ, ಸಂಭಾವನಾಸತ್ಯ, ಭಾವಸತ್ಯ, ಉಪಮಾಸತ್ಯ - ಇವು ಸತ್ಯದ ಹತ್ತು ಭೇದಗಳಿವೆ.

೧. ಯಾವ ದೇಶದಲ್ಲಿ ಯಾವ ವಸ್ತುವಿನದು ಯಾವ ಹೆಸರು ಇರುತ್ತದೆ ಅದನ್ನು ಹಾಗೆಯೇ ಹೇಳುವುದು ಯಾವ ರೀತಿ - ಕರ್ನಾಟಕ ದೇಶದಲ್ಲಿ ಉದ್ದಿಗೆ ಭೂತಿಯಾ ಅನ್ನುತ್ತಾರೆ. ಇದು ದೇಶಪ್ರಮಾಣವಿದೆ, ಇದರ ಹೆಸರು ಜನಪದ ಸತ್ಯವಿದೆ.

೨. ಯಾವುದನ್ನು ಬಹಳಷ್ಟು ಜೀವರುಗಳು ಮನ್ನಿಸುತ್ತಾರೆ ಅದನ್ನು ಹಾಗೆಯೇ ಹೇಳುವುದು, ಹೇಗೆಂದರೆ ಯಾವನೋ ನಿರ್ಧನ ಪುರುಷನ ಹೆಸರು ''ಲಕ್ಷ್ಮೀಧರ' ಇದೆ. ಅವನನ್ನು ನಗರದ ಜನರೆಲ್ಲರೂ ಲಕ್ಷ್ಮೀಧರನೆಂದೇ ಕರೆಯುತ್ತಾರೆ,ಇದರ ಹೆಸರು ಸಂವೃತಿ (ಸಮ್ಮತಿ) ಸತ್ಯವಿದೆ.

೩. ಹೇಗೆ ಯಾವನೋ ದೊರೆಯ ಆಕಾರವನ್ನು ಯಾವನೋ ಚಿತ್ರಕಾರನು ಕಾಷ್ಠ, ಪಾಷಾಣ ಅಥವಾ ಚಿತ್ರದಲ್ಲಿ ನಿರ್ಮಿಸುತ್ತಾನೆ, ಅಲ್ಲಿ ಆ ನಿರ್ಮಿಸಲಾದ ಆಕಾರವನ್ನು ದೊರೆಯೆಂದು ಹೇಳುವುದು ಸ್ಥಾಪನಾ ಸತ್ಯವಿದೆ.

೪. ಯಾರದು ಯಾವ ನಾಮವು ಲೋಕದಲ್ಲಿ ಪ್ರಸಿದ್ಧವಿದೆ, ಆ ವಸ್ತುವಿನ ಅದೇ ನಾಮವನ್ನು ಹೇಳಿದ ಮೇಲೆ ಎಲ್ಲರೂ ತಿಳಿಯುತ್ತಾರೆ. ಹೇಗೆಂದರೆ ದೇಶದ ಯಾವನೋ ಪುರುಷನ ಹೆಸರು ''ಬಾಬಾ''ಇದೆ ಅವನನ್ನು ಸರ್ವದೇಶ, ನಗರವು ''ಬಾಬಾ'' ಎಂದೇ ಹೇಳುತ್ತದೆ. ಆ ಹೆಸರಿನಿಂದ ಕೇಳಿದರೇನೆ ಅವನು ದೊರಕಬಹುದಾಗಿದೆ, ಹೀಗೆ ಅವನನ್ನು ಬಾಬಾ ಎನ್ನುವುದು ನಾಮಸತ್ಯವಿದೆ.

೫. ಪುದ್ಗಲದಲ್ಲಿ ಅನೇಕ ಗುಣಗಳಿರುತ್ತಿದ್ದರೂ ಶರೀರದ ವರ್ಣಗಳ ಅಪೇಕ್ಷೆಯಿಂದ ಇವನು ಕಪ್ಪನಿದ್ದಾನೆ,ಇವನು ಕೆಂಪಗಿದ್ದಾನೆ ಇತ್ಯಾದಿ ಪ್ರಕಾರದಿಂದ ಹೇಳುವುದು ರೂಪಸತ್ಯವಿದೆ.

೬. ಯಾವದೋ ವಸ್ತುವನ್ನು ಇನ್ನೊಂದರ ಅಪೇಕ್ಷೆಯನ್ನಿಟ್ಟುಕೊಂಡು ಹೇಳುವುದು, ಹೇಗೆಂದರೆ ದೊಡ್ಡದರ ಅಪೇಕ್ಷೆಯಿಂದ ಇದು ಚಿಕ್ಕದಿದೆ, ಚಿಕ್ಕದರ ಅಪೇಕ್ಷೆಯಿಂದ ಈ ವಸ್ತುವು ದೊಡ್ಡದಿದೆ - ಹೀಗೆ ಹೇಳುವುದು ಪ್ರತೀತ್ಯ ಅಥವಾ ಆಪೇಕ್ಷಿಕ ಸತ್ಯವಿದೆ.

೭. ನೈಗಮಾದಿ ನಯಗಳ ಮೂಲಕ ವಚನಗಳನ್ನಾಡುವುದು ವ್ಯವಹಾರ ಸತ್ಯವಿದೆ. ಹೇಗೆಂದರೆ ಯಾವನೋ ಟೊಂಕಕಟ್ಟಿ (ಸಾಮಗ್ರಿಗಳನ್ನು ತೆಗೆದುಕೊಂಡು) ಮನೆಯಿಂದ ಪ್ರಸ್ಥಾನ ಮಾಡಿ ಪರದೇಶಕ್ಕೆ ಹೋಗುತ್ತಾನೆ. ಅವನ ಮನೆಯವರಿಗೆ ಅದೇ ಸಮಯದಲ್ಲಿ ಯಾರೋ ಈ ವ್ಯಕ್ತಿಯು ಎಲ್ಲಿ ಹೋದನು ಎಂದು ಕೇಳಿದಾಗ ಆತನ ಮನೆಯವರು ಅವನಂತೂ ಇಂಥ ದೇಶಕ್ಕೆ ಹೋದನು ಎಂದು ಹೇಳುತ್ತಾರೆ. ಒಂದು ವೇಳೆ ಅವನು ಇನ್ನೂ ಗ್ರಾಮದಿಂದ ಹೊರಗೆ ಬಂದಿರುವುದೂ ಸಾಧ್ಯವಾಗಿರುವುದಿಲ್ಲ; ಆದಾಗ್ಯೂ ಮನೆಯವರ ಕಡೆಯಿಂದ ಇಂಥ ದೇಶಕ್ಕೆ ಹೋದನೆಂದೇ ಹೇಳಲಾಗುತ್ತದೆ - ಇದು ವ್ಯವಹಾರ ಸತ್ಯವಿದೆ.

೮. ಇಂದ್ರನಲ್ಲಿ ಎಂಥ ಬಲವಿದೆಯೆಂದರೆ ಅವನ ಇಚ್ಛೆ ಮಾಡಿದರೆ ಇಡೀ ಪೃಥ್ವಿಯನ್ನು ಎತ್ತಬಹುದಾಗಿದೆ. ಪೃಥ್ವಿಯು ಅನಾದಿಯಿಂದ ಧ್ರುವವಿದ್ದರೂ ಮತ್ತು ಯಾರೂ ಎತ್ತಿರದಿದ್ದರೂ ಇಂದ್ರನಲ್ಲಿ ಅಂಥ ಶಕ್ತಿ ಇರುವುದನ್ನು ತಿಳಿದುಕೊಂಡು ಕಥನ ಮಾಡುವುದು ಅದು ಶಕ್ತಿಯ ಅಪೇಕ್ಷೆಯಿಂದ ಕಥನವಿದೆ - ಇದು ಸಂಭಾವನಾ ಸತ್ಯವಿದೆ.

೯. ಸಿದ್ಧಾಂತ ಶಾಸ್ತ್ರಗಳ ಅನುಸಾರ ಅಮೂರ್ತಿಕ ಪದಾರ್ಥಗಳ ಶ್ರದ್ಧೆ ಮಾಡುವುದು. ಹೇಗೆಂದರೆ ಧರ್ಮ, ಅಧರ್ಮ ದ್ರವ್ಯಗಳು ಲೋಕಪ್ರಮಾಣವಿವೆ, ಜಲದ ಒಂದು ಬಿಂದುವಿನಲ್ಲಿ ಅಸಂಖ್ಯ ಜೀವಗಳಿವೆ ಇತ್ಯಾದಿ. ಇವು ನಮಗೆ ಪ್ರತ್ಯಕ್ಷವಿಲ್ಲದಿದ್ದರೂ ಜಿನಆಜ್ಞಾಪ್ರಮಾಣವಿವೆ ಮತ್ತು ಸತ್ಯವಿವೆ - ಇದು ಭಾವಸತ್ಯವಿದೆ.

೧೦. ಯಾವುದೇ ವಸ್ತುವಿಗೆ ಬೇರೆ ಯಾವುದೋ ವಸ್ತುವಿನ ಉಪಮೆ ನೀಡುವುದು. ಹೇಗೆಂದರೆ - ಈ ದೊರೆಯು ಕಲ್ಪವೃಕ್ಷನಿದ್ದಾನೆ. ಅವನು ವೃಕ್ಷವಿಲ್ಲ, ಅವನು ಮನುಷ್ಯನೇ ಇದ್ದರೂ ಕೂಡ ಐಚ್ಛಿಕ ದಾನ ಕೊಡುವಂಥವನಿದ್ದಾನೆ ಎಂಬ ಅಪೇಕ್ಷೆಯಿಂದ ಅವನನ್ನು ಕಲ್ಪವೃಕ್ಷವೆನ್ನಲಾಗಿದೆ - ಇದು ಉಪಮಾ ಸತ್ಯವಿದೆ.

ಈ ಪ್ರಕಾರ ಸತ್ಯದ ಭೇದಗಳು ಹತ್ತು ಇದ್ದು ನಯ ಪ್ರಮಾಣಗಳಿಂದ ಇವು ಹತ್ತೂ ಸತ್ಯ ಇವೆ; ಆದುದರಿಂದ ಈ ಹತ್ತು ಭೇದರೂಪದ ವಚನಗಳನ್ನಾಡುವುದು ಸತ್ಯವೇ ಇದೆ.

೫. ನಿಜಶುದ್ಧಾತ್ಮನ ಆಶ್ರಯಪೂರ್ವಕ ಸಮಸ್ತ ಪರಿಗ್ರಹರೂಪದ ಪರವಸ್ತುಗಳ ಸರ್ವಪ್ರಕಾರದಿಂದ ತ್ಯಾಗವು ಶೌಚ ಧರ್ಮವಿದೆ.

೬. ಪಂಚೇಂದ್ರಿಯ ಮತ್ತು ಮನಸ್ಸನ್ನು ವಶದಲ್ಲಿಟ್ಟುಕೊಳ್ಳುವುದು ಇಂದ್ರಿಯ ಸಂಯಮವಿದೆ ಹಾಗೂ ಷಟ್‌ಕಾಯ ಜೀವಗಳ ದಯೆಯ ರೂಪವಾಗಿ ಪ್ರವರ್ತಿಸುವುದು ಪ್ರಾಣಿ ಸಂಯಮವಿದೆ - ಸಂಯಮ ಧರ್ಮವು ಹೀಗೆ ಎರಡು ಭೇದರೂಪವಿದೆ.

೭. ಬಾಹ್ಯ-ಅಭ್ಯಂತರದ ಅಪೇಕ್ಷೆಯಿಂದ ತಪಸ್ಸು ೧೨ ಪ್ರಕಾರದ್ದಿವೆ. ಆ ತಪಸ್ಸು ಮಾಡುವುದು ತಪ ಧರ್ಮವಿದೆ.

೮. ಮನ-ವಚನ-ಕಾಯದಿಂದ ಶರೀರ ಮೊದಲಾದ (ಅಂತರಂಗ-ಬಹಿರಂಗ ೨೪ ಪರಿಗ್ರಹರೂಪದ ಸಮಸ್ತ) ಪರವಸ್ತುಗಳ ಕುರಿತಾಗಿರುವ ಮಮತ್ವದ ತ್ಯಾಗ ಹಾಗೂ ಧನ-ಕುಟುಂಬಾದಿಗಳ ತ್ಯಾಗವು ತ್ಯಾಗ ಧರ್ಮವಿದೆ.

೯. ಬಾಹ್ಯ-ಅಭ್ಯಂತರ ಎರಡೂ ಪ್ರಕಾರದ ಪರಿಗ್ರಹಗಳ ತ್ಯಾಗವು ಆಕಿಂಚನ್ಯ ಧರ್ಮವಿದೆ.

೧೦. ಚೇತನ-ಅಚೇತನ ಸ್ತ್ರೀಯ (ಮತ್ತು ಸ್ಪರ್ಶನ ಇಂದ್ರಿಯದ) ಕುರಿತಾಗಿರುವ ಭೋಗಾಭಿಲಾಷೆಯ ತ್ಯಾಗವು ಬ್ರಹ್ಮಚರ್ಯ ಧರ್ಮವಿದೆ.

ಈಗ ಈ ಬ್ರಹ್ಮಚರ್ಯ ವ್ರತದ ೧೦ ಅತಿಚಾರಗಳನ್ನು ಹೇಳುತ್ತಾರೆ.

೧. ಶೀಲವ್ರತದ ಧಾರಕರು ಶರೀರದ ಶೃಂಗಾರ, ಸುಗಂಧ ದ್ರವ್ಯಗಳ ಲೇಪನ ಹಾಗೂ ತೊಳೆಯುವುದು, ಉಜ್ಜುವುದು, ಸ್ನಾನಾದಿಗಳ ರೂಪದಲ್ಲಿ ಶರೀರದ ಶುಶ್ರೂಷೆ ಮಾಡುವುದು, ಈ ಕಾರ್ಯಗಳನ್ನು ಮಾಡುವುದರಿಂದ ಶೀಲ ವ್ರತದಲ್ಲಿ ದೋಷವು ತಗಲುತ್ತದೆ.

೨. ಉದರಪೂರ್ತಿ ಭೋಜನ ಮಾಡುವುದು, ಗರಿಷ್ಠ ಭೋಜನ ಮಾಡುವುದು.

೩. ವೇಶ್ಯಾದಿಗಳ ಗೀತೆ, ಸಂಗೀತ, ನೃತ್ಯ ಮೊದಲಾದವುಗಳನ್ನು ಕೇಳುವುದು, ನೋಡುವುದು.

೪. ಶೀಲವಂತ ಪುರುಷರ ಮೂಲಕ ಸ್ತ್ರೀಯ ನಿಮಿತ್ತ (ಸಾನಿಧ್ಯ) ಮಾಡುವುದು ಅಥವಾ ಶೀಲವಂತ ಸ್ತ್ರೀಯರ ಮೂಲಕ ಪುರುಷರ ನಿಮಿತ್ತ (ಸಾನಿಧ್ಯ) ಹೊಂದಿಸುವುದು.

೫. ಗೃಹಸ್ಥ ಅವಸ್ಥೆಯ ಇಂದ್ರಿಯಜನಿತ ಭೋಗಗಳನ್ನು ಸುಖರೂಪವೆಂದು ತಿಳಿದುಕೊಂಡು ಅವುಗಳ ವಿಚಾರ ಮಾಡುವುದು.

೬. ತಮ್ಮ ಹಾಗೂ ಸ್ತ್ರೀಯರ ಅಂಗೋಪಾಂಗಗಳನ್ನು ನೋಡಿ ರಾಗ-ದ್ವೇಷ ಮಾಡುವುದು.

೭. ಸ್ತ್ರೀಯರ ಆದರ, ಶುಶ್ರೂಷೆ, ಸತ್ಕಾರ ಮೊದಲಾದವುಗಳನ್ನು ಅಧಿಕವಾಗಿ ಮಾಡುವುದು.

೮. ಪೂರ್ವದೊಳಗೆ ಭೋಗಿಸಲಾದ ಇಂದ್ರಿಯ ಜನಿತ ಸುಖಗಳ ವಿಚಾರವನ್ನು ಪುನಃ ಪುನಃ ಮಾಡುವುದು.

೯. ಸ್ತ್ರೀಯ ಸಂಯೋಗದ ಇಚ್ಛೆಯನ್ನು ಪುನಃ ಪುನಃ ಇಟ್ಟುಕೊಳ್ಳುವುದು. ಅವರ ಗುಣಸ್ತುತಿ ಮಾಡುವುದು.

೧೦. ವೀರ್ಯ-ರಜಗಳ ನಿಷ್ಕಾಸಣದ ಉಪಾಯವನ್ನು ಯಾವ ಯಾವುದೋ ರೀತಿಯಿಂದ ಮಾಡುವುದು.

ಶೀಲದ ಈ ಹತ್ತು ಅತಿಚಾರಗಳು ಶೀಲಧರ್ಮವನ್ನು ಮಲಿನ ಮಾಡುತ್ತವೆ; ಆದುದರಿಂದ ಬ್ರಹ್ಮಚರ್ಯ ವ್ರತದ ಧಾರಕರು ಈ ಹತ್ತು ದೋಷಗಳನ್ನು ತಗಲಿಸಲಾರದೆ ತಮ್ಮ ಬ್ರಹ್ಮಚರ್ಯ ವ್ರತವನ್ನು ನಿರ್ದೋಷವಾಗಿ ಇಟ್ಟುಕೊಳ್ಳುತ್ತಾರೆ, ಇದರ ಹೆಸರು ಬ್ರಹ್ಮಚರ್ಯ ಧರ್ಮವಿದೆ.

ಹನ್ನೆರಡು ತಪಗಳ ಸ್ವರೂಪವನ್ನು ಮುಂದೆ ಹೇಳಲಾಗುವುದು. ಆರು ಆವಶ್ಯಕ ಮತ್ತು ಮೂರು ಗುಪ್ತಿಗಳ ಸ್ವರೂಪವನ್ನು ಮೊದಲೇ ಹೇಳಿ ಬಂದಿದ್ದೇವೆ, ಪಂಚಾಚಾರಗಳ ಸ್ವರೂಪವನ್ನು ಆಚಾರ ಗ್ರಂಥಗಳಿಂದ ತಿಳಿಯುವುದು. - ಈ ಪ್ರಕಾರ ಹತ್ತು ಧರ್ಮ, ಹನ್ನೆರಡು ತಪ, ಆರು ಆವಶ್ಯಕ, ಐದು ಆಚಾರ, ಮೂರು ಗುಪ್ತಿ - ಇವು ಮೂವತ್ತಾರು ಗುಣಸಹಿತರಾದ ಮುನಿರಾಜರು ಆಚಾರ್ಯರಿರುತ್ತಾರೆ.

ಈ ಪ್ರಕಾರ ಶ್ರೀ ಸುದೃಷ್ಟಿತರಂಗಿಣಿ ಎಂಬ ಗ್ರಂಥದಲ್ಲಿ ಇಪ್ಪತ್ತೆಂಟು ಮೂಲ ಗುಣಗಳ ರೂಪ ಯತಿಯ ಧರ್ಮ,
ಹದಿಮೂರು ಪ್ರಕಾರದ ಚಾರಿತ್ರ , ರತ್ನತ್ರಯ, ಇಪ್ಪತ್ತೆರಡು ಪರೀಷಹ, ಸತ್ಯದ ಹತ್ತು ಭೇದಗಳು,
ಶೀಲದ ಹತ್ತು ಅತಿಚಾರಗಳು, ಆಚಾರ್ಯರ ಮೂವತ್ತಾರು ಗುಣಗಳ ವರ್ಣನೆ ಎಂಬ
ಹೆಸರಿನ ಒಂಭತ್ತನೆಯ ಪರ್ವವು ಪೂರ್ಣವಾಯಿತು.

★★★★★

## ೧೦ : ಹತ್ತನೆಯ ಪರ್ವ
## ಉಪಾಧ್ಯಾಯ, ಶ್ರುತ, ಧರ್ಮದ ವರ್ಣನೆ

೨. ಈಗ ಇಪ್ಪತ್ತೈದು ಗುಣಸಹಿತರಿರುವ ಉಪಾಧ್ಯಾಯರ ಸ್ವರೂಪ ಹೇಳುತ್ತಾರೆ.

**ಅಂಗ ಏಕಾದಹ ಜುತ್ತೋ, ಚಉದಹ ಪುವ್ವೋ ಯ ಣಾಣ ಸಂಜುತ್ತೋ ।**
**ಸೋ ಉವಝಾಓ ಅಪ್ಪಾ, ಗುಣ ವೀಸಾ ಯ ಪಣ ಸಹಿಓ ॥೩೨॥**

**ಗಾಥಾರ್ಥ** - ಹನ್ನೊಂದು ಅಂಗ, ಹದಿನಾಲ್ಕು ಪೂರ್ವಗಳ ಜ್ಞಾನಮಯ ಇಪ್ಪತ್ತೈದು ಗುಣಗಳು ಉಪಾಧ್ಯಾಯರುಗಳ ವಿರುತ್ತವೆ.

**ಭಾವಾರ್ಥ** - ಅವುಗಳನ್ನು ಸಂಕ್ಷೇಪದಿಂದ ಹೇಳುತ್ತಾರೆ - ಆಚಾರಾಂಗ, ಸೂತ್ರಕೃತಾಂಗ, ಸ್ಥಾನಾಂಗ, ಸಮವಾಯಾಂಗ, ವ್ಯಾಖ್ಯಾಪ್ರಜ್ಞಪ್ತ್ಯಂಗ, ಜ್ಞಾತೃಕಥಾಂಗ,ಉಪಾಸಕಾಧ್ಯಯನಾಂಗ, ಅಂತಕೃತದಶಾಂಗ, ಅನುತ್ತರೋಪಪಾದಿಕದಶಾಂಗ, ಪ್ರಶ್ನವ್ಯಾಕರಣಾಂಗ, ವಿಪಾಕಸೂತ್ರಾಂಗ -ಇವು ಹನ್ನೊಂದು ಅಂಗಗಳಿವೆ. ಯಾವ ಯಾವಅಂಗದಲ್ಲಿ ಯಾವುದರ ಕಥನವಿದೆ, ಅದರದೇ ಮುಖ್ಯತೆಯಿಂದ ಸಾಮಾನ್ಯಭಾವ ರೂಪವನ್ನು ಇಲ್ಲಿ ಹೇಳುತ್ತಾರೆ-

೧. ಪ್ರಥಮದಲ್ಲಿಯೇ ಗಣಧರ ದೇವರು ಪ್ರಶ್ನೆ ಮಾಡುತ್ತಾರೆ - ಓ ಪ್ರಭು ! ಹೇಗೆ ತಿನ್ನಬೇಕಾಗುವುದು? ಹೇಗೆ ಮಾತನಾಡಬೇಕಾಗುವುದು ? ಹೇಗೆ ಗಮನಮಾಡಬೇಕಾಗುವುದು ? ಹೇಗೆ ಕುಳಿತುಕೊಳ್ಳಬೇಕಾಗುವುದು? ಇತ್ಯಾದಿ ಕ್ರಿಯೆಗಳನ್ನು ಮಾಡಿದ ಮೇಲೆಯೂ ಯಾವುದರಿಂದ ಪಾಪವಾಗುವುದಿಲ್ಲ ಎಂದರೆ ಜೀವರುಗಳ ಕಲ್ಯಾಣವಾಗುವಂಥ ಮಾರ್ಗವನ್ನು ಕೃಪೆಮಾಡಿ ತಿಳಿಸಿಕೊಡಿರಿ.

ಉತ್ತರದಲ್ಲಿ ಜಿನದೇವರು ಹೇಳುತ್ತಾರೆ - ಯತ್ನಪೂರ್ವಕ (ಸಾವಧಾನತೆಯಿಂದ) ತಿನ್ನಬೇಕಾಗುವುದು, ಯತ್ನಪೂರ್ವಕ ಗಮನಮಾಡಬೇಕಾಗುವುದು, ಯತ್ನಪೂರ್ವಕ ಮಾತನಾಡಬೇಕಾಗುವುದು, ಯತ್ನಪೂರ್ವಕ ಕುಳಿತುಕೊಳ್ಳಬೇಕಾಗುವುದು, ಇತ್ಯಾದಿ ಯಾವುದೇ ಕ್ರಿಯೆ ಮಾಡಿದರೂ ಅದು ಯತ್ನಪೂರ್ವಕವಾಗಿದ್ದರೆ ಪಾಪವಾಗುವುದಿಲ್ಲವೆಂಬುದಾಗಿ ಯತಿಗಳ ಆಚಾರದ ಕಥನವು ಯಾವುದರಲ್ಲಿ ಇರುತ್ತದೆ ಅದು ಆಚಾರಾಂಗವಿದೆ ಅದರಲ್ಲಿ ಹದಿನೆಂಟು ಸಾವಿರ ಪದಗಳಿವೆ.

೨. ಯಾವುದರಲ್ಲಿ ದೇವ, ಧರ್ಮ, ಗುರುಗಳ ವಿನಯವನ್ನು ಈ ಪ್ರಕಾರ ಮಾಡಬೇಕಾಗುವುದು. ಈ ಪ್ರಕಾರ ವಿನಯದಿಂದ ಭಗವಂತರ ಪೂಜೆ ಮಾಡುವುದು, ವಿನಯದಿಂದ ಶಾಸ್ತ್ರಗಳನ್ನು ಓದುವುದು, ಆಲಿಸುವುದು, ಎತ್ತಿಕೊಳ್ಳುವುದು, ರಕ್ಷಣೆ ಮಾಡುವುದು, ಗುರುಗಳ ವಂದನೆ ಪೂಜೆ, ವಿನಯಪೂರ್ವಕವಾಗಿ ಮಾಡುವುದು - ಈ ಪ್ರಕಾರ ವಿನಯದ ಕಥನ ಹಾಗೂ ತನ್ನ ಮತ ಪರರ ಮತದ ಕ್ರಿಯೆ, ಸ್ವಭಾವ, ಪ್ರವೃತ್ತಿ ಮೊದಲಾದವುಗಳ ಕಥನವಿರುವಂಥದು ಅದು ಸೂತ್ರಕೃತ್ರಾಂಗವಿದೆ. ಅದರಲ್ಲಿ ಮೂವತ್ತಾರು ಸಾವಿರ ಪದಗಳಿವೆ.

೩. ಜೀವಸ್ಥಾನದ ಒಂದು ಭೇದದಿಂದ ಪ್ರಾರಂಭ ಮಾಡಿ ಒಂದೊಂದು ಜೀವ ಸಮಾಸವನ್ನು ಹೆಚ್ಚಿಸುತ್ತ ಹೆಚ್ಚಿಸುತ್ತ ನಾಲ್ಕುನೂರಾ ಆರು ಸ್ಥಾನ ಮೊದಲಾದ ಜೀವದ ಸ್ಥಾನಗಳ ಕಥನವು ಯಾವುದರಲ್ಲಿ ಇರುತ್ತದೆ ಅದು ಸ್ಥಾನಾಂಗವಿದೆ. ಇದರಲ್ಲಿ ನಲವತ್ತೆರಡು ಸಾವಿರ ಪದಗಳಿವೆ.

೪. ಯಾವುದರಲ್ಲಿ ದ್ರವ್ಯ , ಕ್ಷೇತ್ರ , ಕಾಲ, ಭಾವಗಳ ಅಪೇಕ್ಷೆಯಿಂದ ಸಮಾನತೆಯ ಕಥನವಿದೆ, ಹೇಗೆಂದರೆ - ಧರ್ಮದ್ರವ್ಯ , ಅಧರ್ಮದ್ರವ್ಯ , ಲೋಕಾಕಾಶಗಳು ಸಮಾನವಿವೆ; ಸಂಪೂರ್ಣ ಸಿದ್ಧರಾಶಿಯು ಸಮಾನವಿದೆ ಇತ್ಯಾದಿ ದ್ರವ್ಯಸಮ (ದ್ರವ್ಯದ ಅಪೇಕ್ಷೆಯಿಂದ ಸಮಾನತೆ) ಇರುವುದು.

ಕ್ಷೇತ್ರದಿಂದ ಪ್ರಥಮ ನರಕದ ಮೊದಲನೆಯ ಪಟಲದ ಮೊದಲನೆಯದ ಇಂದ್ರಕ ಬಿಲವು ನಲವತ್ತೈದು ಲಕ್ಷ

ಯೋಜನ ಪ್ರಮಾಣವಿದೆ, ಎರಡೂವರೆ ದ್ವೀಪವು ನಲವತ್ತೈದು ಲಕ್ಷ ಯೋಜನದ್ದಿದೆ, ಪ್ರಥಮ ಸ್ವರ್ಗದ ಪ್ರಥಮ ರುಚಿಕ ಇಂದ್ರಕ ವಿಮಾನವು ನಲವತ್ತೈದು ಲಕ್ಷಯೋಜನದ್ದಿದೆ ಹಾಗೂ ಮೋಕ್ಷ ಶಿಲೆಯು ಕೂಡ ನಲವತ್ತೈದು ಲಕ್ಷ ಯೋಜನದ್ದಿದೆ, ಸಿದ್ಧರುಗಳ ವಿರಾಜಿಸುವಂಥ ಸಿದ್ಧಕ್ಷೇತ್ರವೂ ಕೂಡ ನಲವತ್ತೈದು ಲಕ್ಷ ಯೋಜನದ್ದಿದೆ ಇವು ಐದು ಸ್ಥಾನಗಳು ಕ್ಷೇತ್ರ ಸಮ (ಕ್ಷೇತ್ರದ ಅಪೇಕ್ಷೆಯಿಂದ ಸಮಾನ) ಇವೆ. ಜಂಬೂದ್ವೀಪ ಸರ್ವಾರ್ಥಸಿದ್ಧಿಗಳ ವಿಮಾನ, ಏಳನೇ ನರಕದ ಇಂದ್ರಕ ಬಿಲ, ನಂದೀಶ್ವರ ದ್ವೀಪದ ವಾಪಿ - ಇವು ನಾಲ್ಕರದು ಕ್ಷೇತ್ರವು ಒಂದೇ ಸಮಾನ ಒಂದು ಲಕ್ಷ ಯೋಜನ ಪ್ರಮಾಣವಿದೆ;ಇತ್ಯಾದಿ ಕ್ಷೇತ್ರ ಸಮಾನತೆ ತಿಳಿಯುವುದು.

ಸಮಯದ ಅಪೇಕ್ಷೆಯಿಂದ ಸಮಾನತೆಯು ಸಮಯ ಸಮವಿದೆ. ಉತ್ಸರ್ಪಿಣಿ, ಅವಸರ್ಪಿಣಿ ಎರಡರದೂ ಹತ್ತು-ಹತ್ತು ಕೋಟಾಕೋಟಿ ಸಾಗರ ಕಾಲವಿದೆ, ಎಂದರೆ ಸಮವಿದೆ - ಇತ್ಯಾದಿ ಕಾಲಸಮ (ಕಾಲದ ಅಪೇಕ್ಷೆಯಿಂದ ಸಮಾನತೆ)ದ ಭೇದಗಳಿವೆ.

ಕೇವಲಜ್ಞಾನ, ಕೇವಲದರ್ಶನ - ಇವೆರಡೂ ಭಾವಸಮವಿವೆ; ಸಂಪೂರ್ಣ ಸೂಕ್ಷ್ಮ ನಿಗೋದಿಲಬ್ಧ್ಯ ಪರ್ಯಾಪ್ತಗಳ ಜ್ಞಾನವು ಅಕ್ಷರದ ಅನಂತದ ಒಂದು ಭಾಗವಿರುವುದರಿಂದ ಸಮವಿದೆ, ಇತ್ಯಾದಿ ಭಾವಸಮ (ಭಾವದ ಅಪೇಕ್ಷೆಯಿಂದ ಸಮಾನತೆ) ಇದೆ - ಈ ಪ್ರಕಾರ ಯಾವುದರಲ್ಲಿ ಸಮವೇ ಸಮದ ವ್ಯಾಖ್ಯಾನವಿದೆ, ಅದು ಸಮವಾಯಾಂಗವಿದೆ. ಇದರಲ್ಲಿ ಒಂದು ಲಕ್ಷ ಅರವತ್ತಾ ಲ್ಕು ಸಾವಿರ ಪದಗಳಿವೆ.

೫. ಗಣಧರ ದೇವರು ಪ್ರಶ್ನೆ ಮಾಡುತ್ತಾರೆ, ಓ ಭಗವಾನ ! ವಸ್ತುಗಳು ಅಸ್ತಿರೂಪವಿವೆಯೋ ಅಥವಾ ನಾಸ್ತಿರೂಪವಿವೆ? ಜೀವವು ಏಕವಿದೆಯೋ ಅಥವಾ ಅನೇಕವಿವೆ ? ಜೀವನು ಸಾದಿ ಇದ್ದಾನೋ ಅಥವಾ ಅನಾದಿ ಇದ್ದಾನೆ ? - ಇತ್ಯಾದಿ ಅರವತ್ತುಸಾವಿರ ಪ್ರಶ್ನೆ ಮಾಡುತ್ತಾರೆ. ಅವುಗಳ ಉತ್ತರ - ವಸ್ತುವು ದ್ರವ್ಯದ ಅಪೇಕ್ಷೆಯಿಂದ ಸದೈವ ಅಸ್ತಿರೂಪವಿದೆ, ದ್ರವ್ಯ ವಸ್ತುವಿನ ನಾಶವು ಎಂದೂ ಆಗುವುದಿಲ್ಲ. ವಸ್ತುವು ಪರ್ಯಾಯದ ಅಪೇಕ್ಷೆಯಿಂದ ನಾಸ್ತಿರೂಪವಿದೆ; ಎಷ್ಟು ಪರ್ಯಾಯಗಳು ಉತ್ಪನ್ನವಾಗುತ್ತವೆ, ಅವು ನಿಯಮದಿಂದ ನಷ್ಟವಾಗುತ್ತವೆ. ಜೀವಗಳು ಅನಂತವಿವೆ, ಆದರೆ ನಾಮಸಾಪೇಕ್ಷ ಏಕಜೀವದ್ರವ್ಯವಿದೆ. ಹೇಗೆ ಬಹಳಷ್ಟು ರತ್ನಗಳ ರಾಶಿ ಇದೆ ಆದರೆ ನಾಮದ ಅಪೇಕ್ಷೆಯಿಂದ ರತ್ನರಾಶಿಯು ಒಂದು (ಏಕ)ವಿದೆ. ಆದಾಗ್ಯೂ ಪರ್ಯಾಯ, ಗುಣ ಸತ್ತಾದ ಅಪೇಕ್ಷೆಯಿಂದ ರತ್ನಗಳು ಭಿನ್ನ-ಭಿನ್ನವಾಗಿದ್ದು ತಮ್ಮ ತಮ್ಮ ಮೌಲ್ಯ ಸಹಿತವಿವೆ. ಕೆಲವು ರತ್ನಗಳು ಉತ್ಕೃಷ್ಟವಿರುತ್ತವೆ, ಕೆಲವು ಮಧ್ಯಮವಿರುತ್ತದೆ, ಕೆಲವು ಹೀನವಿರುತ್ತವೆ, ಕೆಲವು ಅಸತ್ಯವಿರುತ್ತವೆ; ಅದೇ ಪ್ರಕಾರ ಜೀವಗಳು ಕೂಡ ಪರ್ಯಾಯ ಸತ್ ಗುಣದಿಂದ ಪೃಥಕ್ ಭಿನ್ನ-ಭಿನ್ನವಾಗಿವೆ. ಕೆಲವು ಸಿದ್ಧವಿವೆ, ಕೆಲವು ಸಂಸಾರಿ ಇವೆ, ಸಂಸಾರಿಗಳಲ್ಲಿಯೂ ಕೂಡ ಕೆಲವು ಭವ್ಯವಿವೆ, ಕೆಲವು ಅಭವ್ಯವಿವೆ - ಈ ಪ್ರಕಾರ ತಮ್ಮ ಉಪಾರ್ಜಿತ ಕರ್ಮಾನುಸಾರ ಫಲರೂಪವಿವೆ. ಜೀವವು ದ್ರವ್ಯದ ಅಪೇಕ್ಷೆಯಿಂದ ಅನಾದಿಯಿದೆ, ಪರ್ಯಾಯದ ಅಪೇಕ್ಷೆಯಿಂದ ಸಾದಿ ಇದೆ-ಇತ್ಯಾದಿ ಅನೇಕ ಉತ್ತರ ನೀಡಿದ್ದಾರೆ. ಈ ಪ್ರಕಾರದ ಕಥನವು ಯಾವುದರಲ್ಲಿ ಇದೆ, ಅದು ವ್ಯಾಖ್ಯಾ ಪ್ರಜ್ಞಪ್ತಿ ಅಂಗವಿದೆ. ಇದರಲ್ಲಿ ಎರಡು ಲಕ್ಷ ಇಪ್ಪತ್ತೆಂಟು ಸಾವಿರ ಪದಗಳಿವೆ.

೬. ಸಮವಸರಣದ, ದಿವ್ಯಧ್ವನಿ ಹೊರಡುವುದರ ಹಾಗೂ ತೀರ್ಥಂಕರರ ಅತಿಶಯ ಮೊದಲಾದವುಗಳ ವರ್ಣನೆಯು ಯಾವುದರಲ್ಲಿ ಇರುತ್ತದೆ ಅದು ಜ್ಞಾತೃಕಥಾಂಗವಿದೆ. ಇದರಲ್ಲಿ ಐದು ಲಕ್ಷ ಐವತ್ತಾರು ಸಾವಿರ ಪದಗಳಿವೆ.

೭. ಶ್ರಾವಕರ ಆಚಾರ, ಹನ್ನೊಂದು ನೆಲೆಗಳು ಹಾಗೂ ಶ್ರಾವಕನಿಗೆ ಧರ್ಮ-ಕರ್ಮ ರೂಪವಾಗಿ ಹೇಗೆ ಪ್ರವರ್ತಿಸ ಬೇಕಾಗುವುದು ? ಇತ್ಯಾದಿಗಳ ಕಥನವು ಯಾವುದರಲ್ಲಿ ಇರುತ್ತದೆ ಅದು ಉಪಾಸಕಾಧ್ಯಯನಾಂಗವಿದೆ. ಇದರಲ್ಲಿ ಹನ್ನೊಂದು ಲಕ್ಷ ಎಪ್ಪತ್ತುಸಾವಿರ ಪದಗಳಿವೆ.

೮. ಪ್ರತಿಯೊಬ್ಬ ತೀರ್ಥಂಕರರ ಸಮಯದಲ್ಲಿ ಹತ್ತು-ಹತ್ತು ಮುನೀಶ್ವರರುಗಳು ಆಯುವಿನ ಅಂತಿಮ ಸಮಯದಲ್ಲಿ ಕೇವಲಜ್ಞಾನ ಪಡೆದರು ಅವರನ್ನು ಅಂತಕೃತ ಕೇವಲಿ ಎಂದು ಹೇಳುತ್ತಾರೆ. ಅವರ ಕಥನವು ಯಾವುದರಲ್ಲಿ ಇರುತ್ತದೆ ಅದು ಅಂತಕೃತದಶಾಂಗವಿದೆ ಇದರಲ್ಲಿ ಇಪ್ಪತ್ತಮೂರು ಲಕ್ಷ ಇಪ್ಪತ್ತೆಂಟು ಸಾವಿರ ಪದಗಳಿವೆ.

೯. ಪ್ರತಿಯೊಬ್ಬ ತೀರ್ಥಂಕರರ ಸಮಯದಲ್ಲಿ ಹತ್ತು-ಹತ್ತು ಮುನೀಶ್ವರರು ಬಹಳಷ್ಟು ಉಪಸರ್ಗ ಸಹನೆ ಮಾಡಿ ಅಹಮಿಂದ್ರರಾಗುತ್ತಾರೆ ಅವರುಗಳ ಕಥನವು ಯಾವುದರಲ್ಲಿ ಇರುತ್ತದೆ ಅದು ಅನುತ್ತರೋಪಪಾದಿಕ ದಶಾಂಗವಿದೆ. ಇದರಲ್ಲಿ ತೊಂಭತ್ತೆರಡು ಲಕ್ಷ ನಲವತ್ತಾಲ್ಕು ಸಾವಿರ ಪದಗಳಿವೆ.

೧೦. ಯಾವುದರಲ್ಲಿ ಮೂರು ಕಾಲ ಸಂಬಂಧದ ಆಗು-ಹೋಗುಗಳನ್ನು ತಿಳಿಸಿಕೊಡಲಾಗಿದೆ. ಮುಷ್ಠಿಯಲ್ಲಿ ಇಟ್ಟುಕೊಂಡಿರುವ ವಸ್ತುವಿನ ಸಂಬಂಧದಲ್ಲಿ ವಿಚಾರಿಸಿದ ಮೇಲೆ ಅದನ್ನು ತಿಳಿಸಿಕೊಡಲಾಗಿದೆ, ಇತ್ಯಾದಿ ಯಾವ ಬೇಕಾದ ಪ್ರಶ್ನೆ ಮಾಡಿದರೂ ಅದರ ಉತ್ತರ ನೀಡಲಾಗಿದೆ ಅದರ ಹೆಸರು ಪ್ರಶ್ನವ್ಯಾಕರಣಾಂಗವಿದೆ. ಇದರಲ್ಲಿ ತೊಂಭತ್ತಮೂರು ಲಕ್ಷ ಹದಿನಾರು ಸಾವಿರ ಪದಗಳಿವೆ.

೧೧. ಯಾವುದರಲ್ಲಿ ಕರ್ಮಗಳ ಉದಯವಾದಮೇಲೆ ಯಾವ ಯಾವ ಪ್ರಕಾರದಿಂದ ಜೀವನು ಶುಭಾಶುಭ ರಸವನ್ನು ಕಟ್ಟಿಕೊಳ್ಳುತ್ತಾನೆ ಹಾಗೂ ಆ ಕರ್ಮಗಳು ಯಾವ ಯಾವ ಪ್ರಕಾರದಿಂದ ಉದಯದಲ್ಲಿ ಬರುತ್ತವೆ -ಇದೆಲ್ಲದರ ಕಥನವಿದೆ ಅದು ವಿಪಾಕಸೂತ್ರಾಂಗವಿದೆ. ಇದರಲ್ಲಿ ಒಂದು ಕೋಟಿ ಎಂಭತ್ತಾಲ್ಕು ಲಕ್ಷ ಪದಗಳಿವೆ.

- ಈ ಹನ್ನೊಂದು ಅಂಗಗಳ ಜ್ಞಾನವು ಉಪಾಧ್ಯಾಯರಿಗೆ ಇರುತ್ತದೆ.

ಈಗ ಹದಿನಾಲ್ಕು ಪೂರ್ವಗಳ ಹೆಸರು ಹಾಗೂ ಸ್ವರೂಪವನ್ನು ಹೇಳುತ್ತಾರೆ - ಉತ್ಪಾದಪೂರ್ವ, ಅಗ್ರಾಯಣಿಪೂರ್ವ, ವೀರ್ಯಾಣುವಾದಪೂರ್ವ, ಅಸ್ತಿ-ನಾಸ್ತಿಪ್ರವಾದಪೂರ್ವ, ಜ್ಞಾನಪ್ರವಾದಪೂರ್ವ, ಸತ್ಯಪ್ರವಾದಪೂರ್ವ, ಆತ್ಮಪ್ರವಾದಪೂರ್ವ, ಕರ್ಮಪ್ರವಾದಪೂರ್ವ, ಪ್ರತ್ಯಾಖ್ಯಾನಪೂರ್ವ, ವಿದ್ಯಾನುವಾದಪೂರ್ವ, ಕಲ್ಯಾಣವಾದಪೂರ್ವ, ಪ್ರಾಣವಾದಪೂರ್ವ, ಕ್ರಿಯಾವಿಶಾಲಪೂರ್ವ, ತ್ರಿಲೋಕಬಿಂದುಪೂರ್ವ - ಇವು ಹದಿನಾಲ್ಕುಪೂರ್ವಗಳಿವೆ.

೧. ಉತ್ಪಾದ-ವ್ಯಯ-ಧ್ರುವಗಳ ಲಕ್ಷಣಸಹಿತ ಆರು ದ್ರವ್ಯಾದಿ ವಸ್ತುಗಳ ಪರಿಣಮನವಾಗುತ್ತದೆ. ಯಾವುದರಲ್ಲಿ ಈ ಉತ್ಪಾದ-ವ್ಯಯ-ಧ್ರುವಗಳ ಲಕ್ಷಣವು ವರ್ಣಿತವಿದೆ ಅದು ಉತ್ಪಾದಪೂರ್ವವಿದೆ. ಇದರಲ್ಲಿ ಒಂದು ಕೋಟಿ ಪದಗಳಿವೆ.

೨. ಯಾವುದರಲ್ಲಿ ವಸ್ತುವು ಏನಿದೆ ? ಪದಾರ್ಥವು ಏನಿದೆ ? ದ್ರವ್ಯವು ಏನಿದೆ, ಸುನಯವು ಏನಿದೆ ? ಕುನಯವು ಏನಿದೆ ? ಇತ್ಯಾದಿ ವ್ಯಾಖ್ಯಾನವಿದೆ ಅದು ಅಗ್ರಾಯಣಿಪೂರ್ವವಿದೆ. ಇದರಲ್ಲಿ ತೊಂಭತ್ತಾರು ಲಕ್ಷ ಪದಗಳಿವೆ.

೩. ಯಾವುದರಲ್ಲಿ ಆತ್ಮವೀರ್ಯ, ಕಾಲವೀರ್ಯ, ಕ್ಷೇತ್ರವೀರ್ಯ, ಭಾವವೀರ್ಯ ಇತ್ಯಾದಿ ವೀರ್ಯಗಳ ಕಥನವಿದೆ. ಅವುಗಳೊಳಗಿಂದ ಸಾಮಾನ್ಯ ಭಾವರೂಪ ಚೇತನಾಶಕ್ತಿ ಸಹಿತ ಅನಂತಪದಾರ್ಥಗಳಲ್ಲಿ ಪ್ರವರ್ತನವಾದ ಮೇಲೆಯೂ ಖೇದವಾಗದಿರುವುದು, ಅದುವೇ ಅನಂತವೀರ್ಯ ರೂಪ ಆತ್ಮನ ಪರಿಣಮನವು ಆತ್ಮವೀರ್ಯವಿದೆ. ಭೂತ-ಭವಿಷ್ಯಕಾಲರೂಪದ ಅನಂತ-ಅನಂತ ಪರಾವರ್ತನರೂಪ ಪರಿಣಮನವು ಕಾಲವೀರ್ಯವಿದೆ. ಜೀವ-ಅಜೀವರೂಪ ಅನಂತ ಪದಾರ್ಥಗಳಿಗೆ ಅವಗಾಹನ ನೀಡುವ ಶಕ್ತಿಯು ಕ್ಷೇತ್ರವೀರ್ಯವಿದೆ. ಈ ಲೋಕದಲ್ಲಿ ವಿರಾಜಿಸುತ್ತಿರುವ ಜೀವ-ಅಜೀವ ರೂಪದ ಆರು ದ್ರವ್ಯಗಳ ಮೂರು ಕಾಲ ಸಂಬಂಧದ ಶುಭಾಶುಭದ ಪರಿಣಮನವನ್ನು ತಿಳಿಯುವ ರೂಪದ ಕೇವಲಜ್ಞಾನವು ಭಾವವೀರ್ಯವಿದೆ. ಇತ್ಯಾದಿ ವೀರ್ಯಗಳ ವ್ಯಾಖ್ಯಾನವು ಯಾವುದರಲ್ಲಿ ಇದೆ ಅದು ವೀರ್ಯಾನುವಾದಪೂರ್ವವಿದೆ. ಇದರಲ್ಲಿ ಎಪ್ಪತ್ತು ಲಕ್ಷ ಪದಗಳಿವೆ.

೪. ಜೀವ-ಅಜೀವ ಮೊದಲಾದ ದ್ರವ್ಯಗಳ ಸ್ವಭಾವ, ಅಸ್ತಿ-ನಾಸ್ತಿರೂಪದ ಕಾಲ, ಕ್ಷಣ ಮೊದಲಾದವುಗಳ ಕಥನವು ಯಾವುದರಲ್ಲಿ ಇರುತ್ತದೆ ಅದು ಅಸ್ತಿ-ನಾಸ್ತಿಪ್ರವಾದಪೂರ್ವವಿದೆ. ಇದರಲ್ಲಿ ಅರವತ್ತು ಲಕ್ಷ ಪದಗಳಿವೆ.

೫. ಯಾವುದರಲ್ಲಿ ಜ್ಞಾನದ ಎಂಟು ಭೇದಗಳು ಲಕ್ಷಣ, ಫಲ, ವಿಷಯ ಇತ್ಯಾದಿಗಳ ಕಥನವಿದೆ ಅದು ಜ್ಞಾನಪ್ರವಾದಪೂರ್ವವಿದೆ. ಇದರಲ್ಲಿ ಒಂದು ಕಡಿಮೆ ಒಂದು ಕೋಟಿ ಪದಗಳಿವೆ.

೬. ಯಾವುದರಲ್ಲಿ ವಚನಗಳನ್ನಾಡುವ ಅನೇಕ ಭೇದಗಳ ''ಇದು ಸತ್ಯವಚನವಿದೆ, ಇದು ಅಸತ್ಯವಚನವಿದೆ'' - ಇಂಥ ನಿರ್ಣಯ ಮಾಡುತ್ತ ನಯ ಪ್ರಮಾಣಗಳ ಮೂಲಕ ಕಥನವಿರುತ್ತದೆ ಅದು ಸತ್ಯಪ್ರವಾದಪೂರ್ವವಿದೆ. ಇದರಲ್ಲಿ ಒಂದು ಕೋಟಿ ಆರು ಪದಗಳಿವೆ.

೭. ಯಾವುದರಲ್ಲಿ ಆತ್ಮನ ಸ್ತುತಿ ಮಾಡುವ ಹಾಗೂ ನಿಶ್ಚಯ ವ್ಯವಹಾರರೂಪ ನಯಗಳ ಮೂಲಕ ಆತ್ಮಸ್ವಭಾವದ ಸಾಧನೆಯ ವರ್ಣನೆಯಿದೆ ಅದು ಆತ್ಮಪ್ರವಾದಪೂರ್ವವಿದೆ. ಇದರಲ್ಲಿ ಇಪ್ಪತ್ತಾರು ಕೋಟಿ ಪದಗಳಿವೆ.

೮. ಎಂಟು ಮೂಲ ಕರ್ಮಗಳ ಉತ್ತರ ಭೇದಗಳು ಒಂದು ನೂರಾ ನಲವತ್ತೆಂಟು ಇವೆ. ಅವುಗಳ ಸ್ವರೂಪವು ಬಂಧರೂಪವಿದೆ, ಅಮೂರ್ತಿಕ ಆತ್ಮನಿಗೆ ಈ ಕರ್ಮಗಳು ಹೇಗೆ ಕಟ್ಟುತ್ತವೆ ? ಬಂಧದ ನಂತರ ಎಲ್ಲಿಯವರೆಗೆ ಆಬಾಧಾಕಾಲವು ಪೂರ್ಣವಾಗುವುದಿಲ್ಲ, ಉದಯದಲ್ಲಿ ಬರುವುದಿಲ್ಲ, ಅಲ್ಲಿಯವರೆಗೆ ಅವುಗಳ ಸತ್ವವಿದೆ. ಆಬಾಧಾಕಾಲವು ಪೂರ್ಣವಾಗುತ್ತಿದ್ದಂತೆಯೇ ಉದಯವಾದ ಮೇಲೆ ಕರ್ಮಗಳ ಅನುಭಾಗರೂಪ ತಮ್ಮ ರಸವನ್ನು ಪ್ರಕಟಮಾಡಿ ಜೀವವನ್ನು ಸುಖಿ-ದುಃಖಿಯನ್ನಾಗಿಸುತ್ತವೆ, ಅದು ಉದಯವಿದೆ - ಈ ಪ್ರಕಾರ ಬಂಧ, ಉದಯ, ಸತ್ತಾರೂಪ ಕರ್ಮಗಳ ಪರಿಣಮನ ವಾಗುವುದರ ವರ್ಣನೆಯು ಯಾವುದರಲ್ಲಿ ಇದೆ ಅದು ಕರ್ಮಪ್ರವಾದಪೂರ್ವವಿದೆ. ಇದರಲ್ಲಿ ಒಂದು ಕೋಟಿ ಎಂಭತ್ತು ಲಕ್ಷ ಪದಗಳಿವೆ.

೯. ಯಾವುದರಲ್ಲಿ ವ್ರತ-ತಪದ ವಿಧಿ ಮತ್ತು ವ್ರತ-ತಪಗಳ ಫಲ, ನಾಲ್ಕು ನಿಕ್ಷೇಪಗಳ ವಿಸ್ತಾರ ಇತ್ಯಾದಿಗಳ ಕಥನವಿದೆ ಅದು ಪ್ರತ್ಯಾಖ್ಯಾನಪೂರ್ವವಿದೆ. ಇದರಲ್ಲಿ ಎಂಭತ್ನಾಲ್ಕು ಲಕ್ಷ ಪದಗಳಿವೆ.

೧೦. ಅನೇಕ ವಿದ್ಯೆಗಳ ಸಾಧನೆಯ ವಿಧಾನ, ಸಾಧನೆಯ ಉಪಾಯ, ವಿಧಾನದ ಸಿದ್ಧಿಯಾಗಲು ಯೋಗ್ಯವಾದ ಜಪ-ತಪಗಳು - ಯಾವುದರಿಂದ ವಿದ್ಯೆಯು ಸಿದ್ಧವಾಗುತ್ತದೆ, ಅಂಥ ಈ ಮಂತ್ರಗಳಿಂದ ವರ್ಣಿತ ವಿದ್ಯೆಯು ಸಿದ್ಧವಾಯಿತು, ಇಂಥ ಫಲದ ಪ್ರಾಪ್ತಿಯಾಯಿತು, ಈ ವಿದ್ಯೆಗಳ ಸಾಮರ್ಥ್ಯವು ಇಂಥದ್ದಿದೆ, ಅಷ್ಟಪ್ರಕಾರದ ನಿಮಿತ್ತಜ್ಞಾನದ ಭೇದ ಇತ್ಯಾದಿಗಳ ಕಥನವು ವಿದ್ಯಾನುವಾದಪೂರ್ವದಲ್ಲಿ ಇದೆ.

ನಿಮಿತ್ತ ಜ್ಞಾನದ ಎಂಟು ಭೇದಗಳು ಈ ಪ್ರಕಾರವಿವೆ.

**ಅಂತರಿಕ್ಖಂ ಭೌಮಾಏ, ಅಂಗ ಸುರ ಣಿಮಿತ್ತ ಣಾಣ ವಿಜಣಾಯೋ ।**

**ಲಕ್ಖಣ ಸುಪಣಯ ಛಿಣ್ಣ ವಸು ಣಿಮಿತ್ತ ಣಾಣ ಭೇದಹು ॥೩೩॥**

**ಅರ್ಥ :-** ಅಂತರಿಕ್ಷನಿಮಿತ್ತ, ಭೌಮನಿಮಿತ್ತ, ಅಂಗನಿಮಿತ್ತ, ಸ್ವರನಿಮಿತ್ತ, ವ್ಯಂಜನನಿಮಿತ್ತ, ಲಕ್ಷಣನಿಮಿತ್ತ, ಸ್ವಪ್ನನಿಮಿತ್ತ, ಛಿನ್ನನಿಮಿತ್ತ - ಇವು ಎಂಟು ನಿಮಿತ್ತಜ್ಞಾನದ ಭೇದಗಳಿವೆ.

೧. ಸೂರ್ಯಚಿಹ್ನೆ, ಚಂದ್ರಚಿಹ್ನೆ, ತಾರೆ-ನಕ್ಷತ್ರಚಿಹ್ನೆ, ಮೋಡಚಿಹ್ನೆ, ಸಂಧ್ಯಾಸಮಯದ ಆಕಾಶದ ವರ್ಣಾದಿಚಿಹ್ನೆ, ಇತ್ಯಾದಿ ಆಕಾಶದಲ್ಲಿ ಚಿಹ್ನೆಗಳನ್ನು ನೋಡಿ ಹಾಗೂ ವಿದ್ಯುತ್ ಉರುಳುವುದನ್ನು ಕಂಡು ಶುಭಾಶುಭವೆಂದು ತಿಳಿಯುವುದು ಅಂತರಿಕ್ಷ ನಿಮಿತ್ತ ಜ್ಞಾನವಿದೆ.

೨. ಭೂಮಿಯಲ್ಲಿ ರತ್ನ, ಸುವರ್ಣ, ಬೆಳ್ಳಿ, ಪಾಷಾಣಾದಿಗಳ ಮೂಲಕ ಭೂಮಿಯ ಚಿಹ್ನೆಯನ್ನು ತಿಳಿದುಕೊಂಡು ಶುಭಾಶುಭ ತಿಳಿಯುವುದು ಭೂಮಿನಿಮಿತ್ತ ಜ್ಞಾನವಿದೆ.

೩. ಮನುಷ್ಯ-ತಿರ್ಯಂಚಗಳ ಶರೀರದ ರಸ, ರುಧಿರ, ಪ್ರಕೃತಿ ಇತ್ಯಾದಿ ಚಿಹ್ನೆಗಳನ್ನು ನೋಡಿ ಶುಭಾಶುಭ ತಿಳಿಯುವುದು ಅಂಗನಿಮಿತ್ತ ಜ್ಞಾನವಿದೆ.

೪. ಮನುಷ್ಯ, ತಿರ್ಯಂಚಗಳ ಶಬ್ದವನ್ನು ಆಲಿಸಿ ಶುಭಾಶುಭ ಭವಿತವ್ಯ ತಿಳಿಯುವುದು ಸ್ವರ ನಿಮಿತ್ತಜ್ಞಾನವಿದೆ.

೫. ಶರೀರದಲ್ಲಿ ಮಚ್ಚೆ ಅರ್ಥಾತ್ ಕೈಯಲ್ಲಿ, ಕಾಲುಗಳಲ್ಲಿ, ಹೃದಯದಲ್ಲಿ, ಮುಖದಮೇಲೆ, ಅಂಗ ಉಪಾಂಗಗಳಲ್ಲಿ ಮಚ್ಚೆ ಇರುವುದನ್ನು ಕಂಡು ಶುಭಾಶುಭ ಭವಿತವ್ಯ ತಿಳಿಯುವುದು ವ್ಯಂಜನನಿಮಿತ್ತ ಜ್ಞಾನವಿದೆ.

೬. ಶರೀರದಲ್ಲಿ ಶ್ರೀವತ್ಸಲಕ್ಷಣ, ಸ್ವಸ್ತಿಕ, ಭೃಂಗಾರ, ಕಲಶ, ವಜ್ರ, ಮತ್ಸ್ಯಾದಿ ಚಿಹ್ನೆಗಳನ್ನು ನೋಡಿ ಶುಭಾಶುಭ ತಿಳಿಯುವುದು ಲಕ್ಷಣ ನಿಮಿತ್ತ ಜ್ಞಾನವಿದೆ.

೭. ಯಾವುದೋ ವಸ್ತುವನ್ನು, ವಸ್ತ್ರಾದಿಗಳನ್ನು ಇಲಿ ಮೊದಲಾದ ಪಶುಗಳಿಂದ ಕತ್ತರಿಸಲಾಗಿದ್ದರೆ ಅದನ್ನು ಕಂಡು ಶುಭಾಶುಭ ಚಿಹ್ನೆಯನ್ನು ತಿಳಿಯುವುದು ಛಿನ್ನನಿಮಿತ್ತ ಜ್ಞಾನವಿದೆ.

೮. ಅನೇಕ ಪ್ರಕಾರದ ಸ್ವಪ್ನಗಳನ್ನು ತಿಳಿದುಕೊಂಡು ಅವುಗಳ ಶುಭಾಶುಭ ಲಕ್ಷಣ ತಿಳಿಯುವುದು ಸ್ವಪ್ನನಿಮಿತ್ತ ಜ್ಞಾನವಿದೆ.

ಹೀಗೆ ಎಂಟು ಪ್ರಕಾರದ ನಿಮಿತ್ತ ಜ್ಞಾನ ಮೊದಲಾದವುಗಳ ಶುಭಾಶುಭವನ್ನು ಯಾವುದರಲ್ಲಿ ಹೇಳಲಾಗಿದೆ ಅದು ವಿದ್ಯಾನುವಾದಪೂರ್ವವಿದೆ. ಇದರಲ್ಲಿ ಒಂದು ಕೋಟಿ ಹತ್ತುಲಕ್ಷ ಪದಗಳಿವೆ.

೧೧. ಯಾವುದರಲ್ಲಿ ತೀರ್ಥಂಕರರ ಪಂಚಕಲ್ಯಾಣಕ ಹಾಗೂ ಅನ್ಯ ಚರಮ ಶರೀರಿಗಳ ಒಂದು - ಎರಡು ಕಲ್ಯಾಣಕಗಳ ಕಥನ ಮತ್ತು ಜ್ಯೋತಿಷ್ಕ ದೇವಗಳ ಗಮನದ ವಿಶೇಷ ಕಥನ-ವರ್ಣನೆಯಿದೆ ಅದು ಕಲ್ಯಾಣವಾದ ಪೂರ್ವವಿದೆ. ಇದರಲ್ಲಿ ಇಪ್ಪತ್ತಾರು ಕೋಟಿ ಪದಗಳಿವೆ.

೧೨. ಯಾವುದರಲ್ಲಿ ಜ್ಯೋತಿಷ-ವೈದ್ಯಕೀಯಗಳ ಕಥನ, ವ್ಯಂತರಾದಿಗಳನ್ನು ವಶೀಭೂತ ಮಾಡಿಕೊಳ್ಳುವ ವಿಧಾನ, ವಿಷ ಇಳಿಸುವ ಮಂತ್ರ ಇತ್ಯಾದಿ ವಿಧಾನಗಳ ವರ್ಣನೆಯಿದೆ ಅದು ಪ್ರಾಣವಾದಪೂರ್ವವಿದೆ. ಇದರಲ್ಲಿ ಹದಿಮೂರು ಕೋಟಿ ಪದಗಳಿವೆ.

೧೩. ಯಾವುದರಲ್ಲಿ ಸಂಗೀತ ಕಲೆ, ಛಂದಸ್ಸು, ಅಲಂಕಾರ ಕಲೆ, ಚಿತ್ರಕಲೆ, ಶಿಲ್ಪಕಲೆ, ಗರ್ಭಾಧಾನ ಅಥವಾ ಗರ್ಭಶೋಧನೆ ಕಲೆ ಹಾಗೂ ಸ್ತ್ರೀಯರ ಚತುರತೆ ಹಾವ-ಭಾವರೂಪ ಅರವತ್ನಾಲ್ಕು ಕಲೆ ಇತ್ಯಾದಿಗಳ ಕಥನವಿದೆ ಅದು ಕ್ರಿಯಾವಿಶಾಲಪೂರ್ವವಿದೆ. ಇದರಲ್ಲಿ ಒಂಭತ್ತು ಕೋಟಿ ಪದಗಳಿವೆ.

೧೪. ತ್ರಿಲೋಕಬಿಂದುವಿನಲ್ಲಿ ಮೂರು ಲೋಕ - ಊರ್ಧ್ವ, ಮಧ್ಯ, ಪಾತಾಳ ಲೋಕದ ಕಥನವಿದೆ. ಪಾತಾಳ ಲೋಕದಲ್ಲಿ ಪ್ರಥಮ ಪೃಥ್ವಿ, ರತ್ನಪ್ರಭಾದ ಖರಭಾಗ, ಪಂಕಭಾಗ, ಅಬ್ಬಹುಲಭಾಗ ಇವು ಮೂರು ಭೇದಗಳಿವೆ -

೧. ಖರಭಾಗ - ಹದಿನಾರು ಸಾವಿರ ಯೋಜನ ದಪ್ಪವಿದೆ, ಅದರ ಒಂದೊಂದು ಸಾವಿರ ಯೋಜನ ದಪ್ಪದ ಹದಿನಾರು ಭೇದಗಳಿವೆ. ಅವುಗಳ ಹೆಸರುಗಳು - ಚಿತ್ರಾಪೃಥ್ವಿ, ವಜ್ರಾಪೃಥ್ವಿ, ವೈಡೂರ್ಯಾ, ಲೋಹಿತಾ, ಮಸಾರಕಲ್ಯಾ, ಗೋಮೇಧಾ, ಪ್ರವಾಲಾ, ಜ್ಯೋತಿರಸಾ, ಅಂಜನಾ, ಅಂಜನಮಾಲಾ, ಅಂಕಾಪೃಥ್ವೀ, ಸ್ಫಾಟಿಕಾ, ಚಂದನಾ, ಸರ್ವಾರ್ಥಕಾ, ಬಕುಲಾ, ಶೈಲಾ ಎಂಬುದಾಗಿವೆ.

೨. ಪಂಕಭಾಗ - ಎಂಭತ್ನಾಲ್ಕು ಸಾವಿರ ಯೋಜನವಿದೆ ಈ ಎರಡೂ ಭಾಗಗಳಲ್ಲಿ ವ್ಯಂತರ ಹಾಗೂ ಭವನವಾಸಿ ದೇವಗಳು ವಾಸಮಾಡಿಕೊಂಡಿರುತ್ತಾರೆ.

೩. ಎಂಭತ್ತು ಸಾವಿರ ಯೋಜನದ ದಪ್ಪದಲ್ಲಿ ಅಬ್ಬಹುಲ ಭಾಗ ಮೊದಲನೇ ನರಕವಿದೆ. ಇದರಲ್ಲಿ ಹದಿಮೂರು ಪಟಲಗಳಿವೆ. ಒಟ್ಟು ಮೂವತ್ತು ಲಕ್ಷ ಬಿಲಗಳಿವೆ. ಇಲ್ಲಿಯ ಉತ್ಕೃಷ್ಟ ಆಯು ಒಂದು ಸಾಗರವಿದೆ, ದೇಹದ ಎತ್ತರವು ಇಪ್ಪತ್ತೊಂದೂ ಕಾಲು (೨೧$\frac{೧}{೪}$) ಮೊಳವಿದೆ - ಹೀಗೆ ಪ್ರಥಮ ನರಕವಿದೆ.

೨. ಎರಡನೆಯದು ಶರ್ಕರಾವೆಂಬ ಹೆಸರಿನ ನರಕವಿದೆ. ಇದರಲ್ಲಿ ಹನ್ನೊಂದು ಪಟಲಗಳಿವೆ. ಶರೀರವು ಅರವತ್ತೆರಡೂವರೆ ಮೊಳ, ಉತ್ಕೃಷ್ಟ ಆಯುವು ಮೂರು ಸಾಗರ ಹಾಗೂ ಒಟ್ಟು ಬಿಲಗಳು ಇಪ್ಪತ್ತೈದು ಲಕ್ಷ ಇವೆ. ಪೃಥ್ವಿಯ ದಪ್ಪವು ಮೂವತ್ತೆರಡು ಸಾವಿರ ಯೋಜನವಿದೆ.

೩. ಮೂರನೆಯ ವಾಲುಕಾಪ್ರಭಾ ನರಕದಲ್ಲಿ ಒಂಬತ್ತು ಪಟಲಗಳು, ಹದಿನೈದು ಲಕ್ಷ ಬಿಲಗಳು, ಉತ್ಕೃಷ್ಟ ಆಯುವು ಏಳು ಸಾಗರ, ಪೃಥ್ವಿಯ ದಪ್ಪವು ಇಪ್ಪತ್ತೆಂಟು ಸಾವಿರ ಯೋಜನ ಹಾಗೂ ದೇಹದ ಎತ್ತರವು ಒಂದುನೂರಾ ಇಪ್ಪತ್ತೈದು ಮೊಳವಿದೆ.

೪. ನಾಲ್ಕನೆಯ ಪಂಕಪ್ರಭಾ ನರಕದಲ್ಲಿ ಏಳು ಪಟಲಗಳು, ಹತ್ತು ಸಾಗರ ಉತ್ಕೃಷ್ಟ ಆಯು, ಕಾಯದ ಎತ್ತರ ಎರಡುನೂರಾ ಐವತ್ತು ಮೊಳ, ಭೂಮಿಯ ದಪ್ಪ ಇಪ್ಪತ್ತಾ ನ್ಲುಕ್ಕ ಸಾವಿರ ಯೋಜನ ಹಾಗೂ ಬಿಲಗಳ ಸಂಖ್ಯೆಯು ಹತ್ತು ಲಕ್ಷವಿದೆ.

೫. ಐದನೆಯ ಧೂಮಪ್ರಭಾ ನರಕದಲ್ಲಿ ಐದು ಪಟಲಗಳು, ಐನೂರು ಮೊಳ ಶರೀರದ ಎತ್ತರ, ಉತ್ಕೃಷ್ಟ ಆಯು ಹದಿನೇಳು ಸಾಗರ, ಬಿಲಗಳ ಸಂಖ್ಯೆ ಮೂರು ಲಕ್ಷ, ಪೃಥ್ವಿಯ ದಪ್ಪವು ಇಪ್ಪತ್ತು ಸಾವಿರ ಯೋಜನವಿದೆ.

೬. ಆರನೆಯ ತಮಪ್ರಭಾ ನರಕದಲ್ಲಿ ಮೂರು ಪಟಲಗಳು, ಶರೀರವು ಒಂದು ಸಾವಿರ ಮೊಳ, ಉತ್ಕೃಷ್ಟ ಆಯುವು ಇಪ್ಪತ್ತೆರಡು ಸಾಗರ, ಬಿಲಗಳ ಸಂಖ್ಯೆಯು ಐದು ಕಡಿಮೆ ಒಂದು ಲಕ್ಷ, ಭೂಮಿಯ ದಪ್ಪವು ಹದಿನಾರು ಸಾವಿರ ಯೋಜನವಿದೆ.

೭. ಏಳನೆಯ ಮಹಾತಮಪ್ರಭಾ ನರಕದಲ್ಲಿ ಒಂದು ಪಟಲ, ಐದು ಬಿಲಗಳು, ಎರಡು ಸಾವಿರ ಮೊಳ (ಐನೂರು ಧನುಷ್ಯ) ಶರೀರದ ಎತ್ತರ, ಉತ್ಕೃಷ್ಟ ಆಯುವು ಮೂವತ್ಮೂರು ಸಾಗರ, ಭೂಮಿಯ ದಪ್ಪವು ಎಂಟುಸಾವಿರ ಯೋಜನವಿದೆ.

ಮೊದಲನೆಯ ನರಕದಲ್ಲಿ ಜಘನ್ಯ ಆಯುವು ಹತ್ತುಸಾವಿರ ವರ್ಷದ್ದಿದೆ - ಈ ಪ್ರಕಾರ ಅಧೋಲೋಕಗಳ ಸಾಮಾನ್ಯ ಕಥನ ಮಾಡಲಾಯಿತು.

ಮಧ್ಯಲೋಕವು ಒಂದು ರಾಜು ವಿಸ್ತಾರ ಸಹಿತವಿದೆ. ಇಲ್ಲಿ ಅಸಂಖ್ಯಾತ ದ್ವೀಪ ಮತ್ತು ಅಸಂಖ್ಯಾತ ಸಮುದ್ರಗಳಿವೆ.ಆ ಅಸಂಖ್ಯಾತ ದ್ವೀಪಗಳು ತಿರ್ಯಕ್ ಲೋಕದಲ್ಲಿವೆ. ಅದರ ಮಧ್ಯದಲ್ಲಿ ನಲವತ್ತೈದು ಲಕ್ಷ ಯೋಜನ ಕ್ಷೇತ್ರದ ಎರಡೂವರೆ ದ್ವೀಪದಲ್ಲಿ ಮನುಷ್ಯಲೋಕವಿದೆ. ಇದರ ಮುಂದೆ ಮನುಷ್ಯರ ಗಮನವಾಗುವುದಿಲ್ಲ. ಅದರಲ್ಲಿ ಎಲ್ಲಕ್ಕಿಂತ ಮೊದಲು ಒಂದು ಲಕ್ಷ ಯೋಜನ ವಿಸ್ತಾರ ಸಹಿತ ಜಂಬೂದ್ವೀಪವಿದೆ ಇದರಲ್ಲಿ ಇಬ್ಬರು ಚಂದಿರರು, ಇಬ್ಬರು ಸೂರ್ಯರಿದ್ದಾರೆ. ಲವಣ ಸಮುದ್ರದಲ್ಲಿ ನಾಲ್ವರು ಚಂದಿರರು, ನಾಲ್ವರು ಸೂರ್ಯರಿದ್ದಾರೆ. ಈ ಸಾಗರದ ವಿಸ್ತಾರವು ಎರಡು ಲಕ್ಷ ಯೋಜನ ಅರ್ಥಾತ್ ಜಂಬೂದ್ವೀಪದಿಂದ ದ್ವಿಗುಣಿತವಿದೆ ಎಂದು ತಿಳಿಯುವುದು.

ಇದರ ಮುಂದೆ ನಾಲ್ಕು ಲಕ್ಷ ಯೋಜನ ವಿಸ್ತಾರ ಸಹಿತ ಲವಣೋದಧಿಯಿಂದ ದ್ವಿಗುಣಿತ ದೊಡ್ಡದಾದ ಧಾತಕೀಖಂಡ ದ್ವೀಪವಿದೆ. ಇಲ್ಲಿ ಹನ್ನೆರಡು ಸೂರ್ಯರು ಮತ್ತು ಹನ್ನೆರಡು ಚಂದಿರರಿದ್ದಾರೆ. ಧಾತಕೀಖಂಡದಿಂದ ದ್ವಿಗುಣ ವಿಸ್ತಾರ ಸಹಿತ, ಎಂಟು ಲಕ್ಷ ಯೋಜನ ವಿಸ್ತಾರವುಳ್ಳ, ಕಾಲೋಲಧಿ ಸಮುದ್ರವಿದೆ ಇಲ್ಲಿ ನಲವತ್ತೆರಡು ಚಂದಿರರು, ನಲವತ್ತೆರಡು ಸೂರ್ಯರಿದ್ದಾರೆ.

ಇದರಿಂದ ಮುಂದೆ ಇದರಿಂದ ದ್ವಿಗುಣ ವಿಸ್ತಾರ ಸಹಿತ ಪುಷ್ಕರ ದ್ವೀಪವಿದೆ, ಅದರ ಅರ್ಧಭಾಗದಲ್ಲಿ ಮಾನುಷೋತ್ತರ ಪರ್ವತವಿದೆ. ಇದರ ಪೂರ್ವದಲ್ಲಿ ಅರ್ಧಪುಷ್ಕರ ದ್ವೀಪದಲ್ಲಿ ಎಪ್ಪತ್ತೆರಡು ಚಂದಿರರು ಮತ್ತು ಎಪ್ಪತ್ತೆರಡು ಸೂರ್ಯರಿದ್ದಾರೆ- ಈ ಪ್ರಕಾರ ಎರಡೂವರೆ ದ್ವೀಪದಲ್ಲಿ ಒಟ್ಟು ಒಂದುನೂರಾ ಮೂವತ್ತೆರಡು ಚಂದಿರರು ಮತ್ತು ಒಂದುನೂರಾ ಮೂವತ್ತೆರಡು ಸೂರ್ಯರಿದ್ದಾರೆಂದು ತಿಳಿಯುವುದು.

ಇವರುಗಳೊಳಗಿಂದ ಒಬ್ಬ ಚಂದಿರನ ಪರಿವಾರ ಹೇಳುತ್ತಾರೆ - ಒಬ್ಬ ಚಂದಿರ, ಒಬ್ಬ ಸೂರ್ಯ, ಎಂಭತ್ತೆಂಟು ಗ್ರಹ, ಇಪ್ಪತ್ತೆಂಟು ನಕ್ಷತ್ರ , ಅರವತ್ತಾರು ಸಾವಿರ ಒಂಭೈನೂರಾ ಎಪ್ಪತ್ತೈದು ಕೋಟಾಕೋಟಿ ತಾರಕರಿದ್ದಾರೆ. ಇದು ಜ್ಯೋತಿಷ್ಕ ದೇವಗಳ ಇಂದ್ರ ಚಂದಿರನ ಸಂಪೂರ್ಣ ಪರಿವಾರವೆಂದು ತಿಳಿಯುವುದು. ಈ ಜಂಬೂ ದ್ವೀಪದಲ್ಲಿ ಇಬ್ಬರು ಚಂದಿರರು, ಇಬ್ಬರು ಸೂರ್ಯರು, ಒಂದುನೂರಾ ಎಪ್ಪತ್ತಾರು ಗ್ರಹಗಳು, ಐವತ್ತಾರು ನಕ್ಷತ್ರಗಳು, ಹಾಗೂ ಒಂದು ಲಕ್ಷ ಮೂವತ್ಮೂರು ಸಾವಿರದ ಒಂಭೈನೂರಾ ಐವತ್ತು ಕೋಟಾಕೋಟಿ ತಾರೆಗಳಿವೆ. ಭರತಕ್ಷೇತ್ರದ ಸಮಾನ ಈ ಜಂಬೂ ದ್ವೀಪದ ಭಾಗ ಮಾಡಿದ ಮೇಲೆ ಒಂದುನೂರಾ ತೊಂಭತ್ತು ಭಾಗಗಳಾಗುತ್ತವೆ. ಭರತ ಕ್ಷೇತ್ರದಿಂದ ಹಿಡಿದು ವಿದೇಹ ಕ್ಷೇತ್ರದ ವರೆಗೆ ದ್ವಿಗುಣ-ದ್ವಿಗುಣ ವಿಸ್ತಾರವುಳ್ಳ ಕ್ಷೇತ್ರ ಮತ್ತು ಪರ್ವತಗಳಿವೆ, ವಿದೇಹ ಕ್ಷೇತ್ರದಿಂದ ಉತ್ತರ ದಿಕ್ಕಿನ ಕಡೆಗೆ ಪರ್ವತ ಮತ್ತು ಕ್ಷೇತ್ರಗಳು, ಐರಾವತ ಕ್ಷೇತ್ರದವರೆಗೆ ಅರ್ಧ-ಅರ್ಧವಿವೆ. ಈ ಪ್ರಕಾರ ಜಂಬೂದ್ವೀಪದ ಶಲಾಕಾಭರತಕ್ಷೇತ್ರದ ಸಮಾನ ಒಂದುನೂರಾ ತೊಂಭತ್ತು ಹೇಳಲಾಗಿದೆ. ಅದು ಈ ಪ್ರಕಾರ - ೧, ೨, ೪, ೮, ೧೬, ೩೨, ೬೪, ೩೨, ೧೬, ೮, ೪, ೨, ೧ - ಇವೆಲ್ಲವೂ (೧೯೦) ಒಂದುನೂರಾ ತೊಂಭತ್ತು ಇವೆ ಎಂದು ತಿಳಿಯುವುದು.

ಒಂದೊಂದು ಶಲಾಕಾದ ಮೇಲೆ ಎಷ್ಟೆಷ್ಟು ತಾರೆಗಳಿವೆ ? ಅವುಗಳನ್ನು ಹೇಳುತ್ತಾರೆ - ಭರತಕ್ಷೇತ್ರದ ಮೇಲೆ ಏಳುನೂರಾ ಐದು ಕೋಟಾಕೋಟಿ ತಾರೆಗಳಿವೆ. ಹಿಮವತ ಪರ್ವತದ ಮೇಲೆ ಹದಿನಾಲ್ಕುನೂರಾ ಹತ್ತು ಕೋಟಾಕೋಟಿ ತಾರೆಗಳಿವೆ. ಹೈಮವತ ಕ್ಷೇತ್ರದ ಮೇಲೆ ಇಪ್ಪತ್ತೆಂಟು ನೂರಾ ಇಪ್ಪತ್ತು ಕೋಟಾಕೋಟಿ ತಾರೆಗಳಿವೆ. ಮಹಾಹಿಮವತ ಪರ್ವತದ ಮೇಲೆ ಐವತ್ತಾರು ನೂರಾ ನಲವತ್ತು ಕೋಟಾಕೋಟಿ ತಾರೆಗಳಿವೆ. ಹರಿಕ್ಷೇತ್ರದ ಮೇಲೆ ಹನ್ನೊಂದು ಸಾವಿರದ ಎರಡುನೂರಾ ಎಂಭತ್ತು ಕೋಟಾಕೋಟಿ ತಾರೆಗಳಿವೆ. ನಿಷಧ ಪರ್ವತದ ಮೇಲೆ ಇಪ್ಪತ್ತೆರಡು ಸಾವಿರದ ಐದುನೂರಾ ಐವತ್ತು ಕೋಟಾಕೋಟಿ ತಾರೆಗಳಿವೆ. ವಿದೇಹ ಕ್ಷೇತ್ರದ ಮೇಲೆ ನಲವತ್ತೈದು ಸಾವಿರದಾ ಒಂದು ನೂರಾ ಇಪ್ಪತ್ತು ಕೋಟಾಕೋಟಿ ತಾರೆಗಳಿವೆ. ನೀಲಪರ್ವತದ ಮೇಲೆ ಇಪ್ಪತ್ತೆರಡು ಸಾವಿರದ ಐದುನೂರಾ ಅರವತ್ತು ಕೋಟಾಕೋಟಿ ತಾರೆಗಳಿವೆ. ರಮ್ಯಕಕ್ಷೇತ್ರದ ಮೇಲೆ ಹನ್ನೊಂದು ಸಾವಿರದಾ ಎರಡುನೂರಾ ಎಂಭತ್ತು ಕೋಟಾಕೋಟಿ ತಾರೆಗಳಿವೆ. ರುಕ್ಮಿ ಪರ್ವತದ ಮೇಲೆ ಐವತ್ತಾರು ನೂರಾ ನಲವತ್ತು ಕೋಟಾಕೋಟಿ ತಾರೆಗಳಿವೆ. ಹೈರಣ್ಯವತ ಕ್ಷೇತ್ರದ ಮೇಲೆ ಇಪ್ಪತ್ತೆಂಟು ನೂರಾ ಇಪ್ಪತ್ತು ಕೋಟಾಕೋಟಿ ತಾರೆಗಳಿವೆ. ಶಿಖರೀ ಪರ್ವತದ ಮೇಲೆ ಹದಿನಾಲ್ಕು ನೂರಾ ಹತ್ತು ಕೋಟಾಕೋಟಿ ತಾರೆಗಳಿವೆ. ಐರಾವತ ಕ್ಷೇತ್ರದ ಮೇಲೆ ಏಳುನೂರಾ ಐದು ಕೋಟಾಕೋಟಿ ತಾರೆಗಳಿವೆ. ಈ ಪ್ರಕಾರ ಜಂಬೂದ್ವೀಪದ ಒಂದುನೂರಾ ತೊಂಭತ್ತು ಭಾಗಗಳ ಮೇಲೆ ತಾರೆಗಳ ಪ್ರಮಾಣ ಹೇಳಲಾಯಿತು -

ಈ ಪ್ರಕಾರ ಎರಡೂವರೆ ದ್ವೀಪ ಸಂಬಂಧದ ಚಂದಿರ, ಸೂರ್ಯರುಗಳ ಪ್ರಮಾಣವನ್ನು ಪರಿವಾರ ಸಹಿತವಾಗಿ ಹೇಳಲಾಯಿತು.

ಮಧ್ಯಲೋಕದಲ್ಲಿ ಅಸಂಖ್ಯಾತ ದ್ವೀಪಗಳಿವೆ. ಅವುಗಳೊಳಗಿಂದ ಪ್ರಾರಂಭದ ಹದಿನಾರು ದ್ವೀಪಗಳ ಹೆಸರು - ಜಂಬೂದ್ವೀಪ, ಘಾತಕೀಖಂಡ, ಪುಷ್ಕರದ್ವೀಪ, ವಾರುಣಿ ದ್ವೀಪ, ಕ್ಷೀರವರ ದ್ವೀಪ (ಇಕ್ಷುವರದ್ವೀಪ), ಘೃತವರ ದ್ವೀಪ, ಕ್ಷುದ್ರವರ ದ್ವೀಪ, ನಂದೀಶ್ವರ ದ್ವೀಪ, ಅರುಣವರ ದ್ವೀಪ, ಅರುಣಭಾಸವರ ದ್ವೀಪ, ಕುಂಡಲವರ ದ್ವೀಪ, ಶಂಖವರ ದ್ವೀಪ, ರುಚಿಕರ ದ್ವೀಪ, ಭುಜಂಗವರ ದ್ವೀಪ, ಕುಸಂಗವರ ದ್ವೀಪ, ಕ್ರೌಂಚವರ ದ್ವೀಪಗಳೆಂದು ಹೇಳಲಾಗಿದೆ.

ಅಸಂಖ್ಯಾತ ದ್ವೀಪಗಳೊಳಗಿಂದ ಕೊನೆಯ ಹದಿನಾರು ದ್ವೀಪಗಳ ಹೆಸರು ಹೇಳುತ್ತಾರೆ - ಮಣಿಶಿಲಾ ದ್ವೀಪ, ಹರತಾಲ ದ್ವೀಪ, ಸಿಂದೂರವರ ದ್ವೀಪ, ಶ್ಯಾಮವರ ದ್ವೀಪ, ಅಂಜನವರ ದ್ವೀಪ, ಹಿಂಗುಲವರದ್ವೀಪ, ರೂಪವರ ದ್ವೀಪ, ಸುವರ್ಣವರ ದ್ವೀಪ, ವಜ್ರವರ ದ್ವೀಪ, ವೈಢೂರ್ಯವರ ದ್ವೀಪ, ನಾಗವರ ದ್ವೀಪ, ಭೂತವರ ದ್ವೀಪ, ಯಕ್ಷವರ ದ್ವೀಪ, ದೇವವರ ದ್ವೀಪ, ಅಹಮಿಂದ್ರವರ ದ್ವೀಪ ಮತ್ತು ಸ್ವಯಂಭೂರಮಣ ದ್ವೀಪಗಳಿವೆ. ವಿಶೇಷವೆಂದರೆ

ಪ್ರಾರಂಭದ ಎರಡು ಸಮುದ್ರ - ದ್ವೀಪಗಳ ಹೆಸರುಗಳಂತೂ ಭಿನ್ನ-ಭಿನ್ನವಿವೆ, ಉಳಿದ ಅಸಂಖ್ಯಾತ ದ್ವೀಪ ಸಮುದ್ರಗಳಲ್ಲಿ ಯಾವುದು ಸಮುದ್ರದ ಹೆಸರು ಇದೆ ಅದುವೇ ಹೆಸರು ದ್ವೀಪದ್ದಿದೆಯೆಂದು ತಿಳಿಯುವುದು. ಈ ಪ್ರಕಾರ ಸಾಮಾನ್ಯ ರೂಪದಿಂದ ಮಧ್ಯಲೋಕದ ಕಥನ ಮಾಡಲಾಯಿತು. ಮಧ್ಯಲೋಕವು ಒಂದು ರಾಜು ವಿಸ್ತಾರವುಳ್ಳದ್ದಿದೆ. ಒಂದು ಲಕ್ಷ ನಲವತ್ತು ಯೋಜನ ಮೇರು ಪ್ರಮಾಣ ಇದರ ಎತ್ತರವಿದೆ. ಇದರಲ್ಲಿಯೇ ಜ್ಯೋತಿಷ್ಕ ಲೋಕವಿದೆಯೆಂದು ತಿಳಿಯುವುದು.

ಎರಡೂವರೆ ದ್ವೀಪ ಸಂಬಂಧದ ಜ್ಯೋತಿಷ್ಕ ದೇವಗಳಲ್ಲಿ ಧ್ರುವತಾರೆಗಳ ಪ್ರಮಾಣ ಹೇಳುತ್ತಾರೆ -

ಜಂಬೂದ್ವೀಪದಲ್ಲಿ ಮೂವತ್ತಾರು ಧ್ರುವತಾರೆಗಳಿವೆ. ಲವಣ ಸಮುದ್ರದಲ್ಲಿ ಒಂದುನೂರಾ ಮೂವತ್ತೊಂಭತ್ತು , ಧಾತಕೀ ಖಂಡದಲ್ಲಿ ಒಂದು ಸಾವಿರದ ಹತ್ತು , ಕಾಲೋದಧಿ ಸಮುದ್ರದಲ್ಲಿ ನಲವತ್ತೊಂದು ಸಾವಿರದ ಒಂದುನೂರಾ ಇಪ್ಪತ್ತು, ಅರ್ಧಪುಷ್ಕರ ದ್ವೀಪದಲ್ಲಿ ಮನುಷ್ಯಲೋಕದ ಕಡೆಗೆ ಐವತ್ಮೂರು ಸಾವಿರದಾ ಎರಡುನೂರಾ ಮೂವತ್ತು ಧ್ರುವ ತಾರೆಗಳಿವೆ - ಈ ಪ್ರಕಾರ ಎರಡೂವರೆ ದ್ವೀಪದಲ್ಲಿ ಒಟ್ಟು ತೊಂಭತ್ತೈದು ಸಾವಿರದಾ ಐದೂನೂರಾ ಮೂವತ್ತೈದು ಧ್ರುವತಾರೆಗಳಿವೆ.

ಮಧ್ಯಲೋಕ ಸಂಬಂಧದ ಅಕೃತ್ರಿಮ ಜಿನಚೈತ್ಯಾಲಯಗಳು - ಒಂದು ಮೇರು ಸಂಬಂಧದ ನಾಲ್ಕು ವನಗಳಿವೆ ಪ್ರತಿಯೊಂದು ವನದಲ್ಲಿ ನಾಲ್ಕು-ನಾಲ್ಕು ಜಿನಮಂದಿರಗಳಿವೆ - ಈ ಪ್ರಕಾರ ನಾಲ್ಕು ವನಗಳಲ್ಲಿ ಹದಿನಾರು ಜಿನಮಂದಿರಗಳಾದವು. ಒಂದು ಮೇರು ಸಂಬಂಧದಲ್ಲಿ ನಾಲ್ಕು ಗಜದಂತದ ನಾಲ್ಕು ಮಂದಿರಗಳು, ಆರು ಕುಲಾಚಲಗಳ ಆರು ಮಂದಿರಗಳು, ಜಂಬೂ-ಶಾಲ್ಮಲಿ - ಎರಡು ವೃಕ್ಷಗಳ ಎರಡು ಮಂದಿರಗಳು, ಮೂವತ್ತಾ ್ನಲ್ಕು ವಿಜಯಾರ್ಧಗಳ ಮೂವತ್ತಾ ್ನಲ್ಕು ಜಿನಮಂದಿರಗಳು, ಹದಿನಾರು ವಕ್ಷಾರಗಳ ಹದಿನಾರು ಜಿನಮಂದಿರಗಳು - ಈ ಪ್ರಕಾರ ಒಂದು ಮೇರು ಸಂಬಂಧದಲ್ಲಿ ಎಪ್ಪತ್ತೆಂಟು ಹಾಗೂ ಐದನ್ನೂ ಸೇರಿಸಿದ ಮೇಲೆ ಮೂರುನೂರಾ ತೊಂಭತ್ತು ಜಿನಮಂದಿರಗಳಾದವು. ನಾಲ್ಕು ಇಷ್ವಾಕಾರಗಳ ನಾಲ್ಕು ಜಿನಮಂದಿರಗಳು, ಮಾನುಷೋತ್ತರದ ನಾಲ್ಕೂ ದಿಕ್ಕಿಗೆ ಸಂಬಂಧಿಸಿದ ನಾಲ್ಕು ಜಿನಗೃಹಗಳು, ನಂದೀಶ್ವರದ ನಾಲ್ಕೂ ದಿಕ್ಕುಗಳಿಗೆ ಸಂಬಂಧಿಸಿದಂತೆ ಐವತ್ತೆರಡು ಜಿನಮಂದಿರಗಳು, ಹನ್ನೊಂದನೆಯ ಕುಂಡಲಗಿರಿ ದ್ವೀಪದ ಮಧ್ಯಭಾಗದಲ್ಲಿ ಕುಂಡಲಗಿರಿಯ ನಾಲ್ಕೂ ದಿಕ್ಕುಗಳ ನಾಲ್ಕು ಜಿನಮಂದಿರಗಳು, ಹದಿಮೂರನೇ ರುಚಕಗಿರಿ ದ್ವೀಪದ ಮಧ್ಯಭಾಗದಲ್ಲಿ ರುಚಕಗುರಿ ಪರ್ವತದ ನಾಲ್ಕೂ ದಿಕ್ಕುಗಳಲ್ಲಿ ನಾಲ್ಕು ಜಿನಮಂದಿರಗಳಿವೆ - ಈ ಪ್ರಕಾರ ಒಟ್ಟು ನಾಲ್ಕು ನೂರಾ ಐವತ್ತೆಂಟು ಜಿನಮಂದಿರಗಳಿವೆ. (ಹಾಗೂ ವ್ಯಂತರ-ಜ್ಯೋತಿಷ್ಕ ದೇವಗಳ ಸ್ಥಾನಗಳಲ್ಲಿ ಅಸಂಖ್ಯಾತ ಅಕೃತ್ರಿಮ ಜಿನಮಂದಿರಗಳಿವೆ) - ಅವೆಲ್ಲವುಗಳಿಗೆ ಪುನಃ ಪುನಃ ನಮ್ಮ ನಮಸ್ಕಾರವಿರಲಿ......

ಈ ಪ್ರಕಾರ ಇಲ್ಲಿ ಸಾಮಾನ್ಯ ರೂಪದಿಂದ ಮಧ್ಯಲೋಕದ ಕಥನವನ್ನು ಪೂರ್ಣ ಮಾಡಲಾಯಿತು.

ಈಗ ಊರ್ಧ್ವಲೋಕದ ಸಾಮಾನ್ಯ ರಚನೆ ಹೇಳುತ್ತಾರೆ -

ಸ್ವರ್ಗ ಲೋಕದ - ೧) ಕಲ್ಪವಾಸಿ, ೨) ಕಲ್ಪಾತೀತವೆಂದು ಎರಡು ಭೇದಗಳಿವೆ. ಕಲ್ಪವಾಸಿಗಳ ಸ್ವರ್ಗಗಳು ಹದಿನಾರು ಇವೆ. ಅವುಗಳ ಹೆಸರು - ಸೌಧರ್ಮ, ಐಶಾಣ, ಸಾನತ್ಕುಮಾರ, ಮಾಹೇಂದ್ರ , ಬ್ರಹ್ಮ, ಬ್ರಹ್ಮೋತ್ತರ, ಲಾಂತವ, ಕಾಪಿಷ್ಠ, ಶುಕ್ರ , ಮಹಾಶುಕ್ರ , ಶತಾರ, ಸಹಸ್ರಾರ, ಆನತ, ಪ್ರಾಣತ, ಆರಣ, ಅಚ್ಯುತ. - ಇವು ಎಂಟು ಯುಗಲಗಳೆಂದು ತಿಳಿಯುವುದು.

ಪ್ರತಿಯೊಂದು ಯುಗಲದಲ್ಲಿ ಉತ್ಕೃಷ್ಟ ಆಯು - ಪ್ರಥಮ ಯುಗಲದಲ್ಲಿ ಉತ್ಕೃಷ್ಟ ಆಯುವು ಎರಡು ಸಾಗರಕ್ಕಿಂತ ಸ್ವಲ್ಪ ಅಧಿಕವಿದೆ, ಎರಡನೆಯ ಯುಗಲದಲ್ಲಿ ಸಾಧಿಕ ಏಳು ಸಾಗರ, ಮೂರನೆಯ ಯುಗಲದಲ್ಲಿ

ಸಾಧಿಕ ಹತ್ತು ಸಾಗರ, ನಾಲ್ಕನೆಯ ಯುಗಲದಲ್ಲಿ ಸಾಧಿಕ ಹದಿನಾಲ್ಕು ಸಾಗರ, ಐದನೆಯ ಯುಗಲದಲ್ಲಿ ಸಾಧಿಕ ಹದಿನಾರು ಸಾಗರ, ಆರನೆಯ ಯುಗಲದಲ್ಲಿಸಾಧಿಕ ಹದಿನೆಂಟು ಸಾಗರ, ಏಳನೆಯ ಯುಗಲದಲ್ಲಿ ಇಪ್ಪತ್ತು ಸಾಗರ, ಎಂಟನೆಯ ಯುಗಲದಲ್ಲಿ ಇಪ್ಪತ್ತೆರಡು ಸಾಗರವಿದೆ. ಇದರ ಮೇಲೆ ಒಂಭತ್ತು ಗ್ರೈವೇಯಕಗಳಿವೆ - ಅಲ್ಲಿ ಪ್ರಥಮ ಗ್ರೈವೇಯಕದಲ್ಲಿನ ಉತ್ಕೃಷ್ಟ ಆಯುವು ಇಪ್ಪತ್ತ್ಮೂರು ಸಾಗರ, ಎರಡನೆಯ ಗ್ರೈವೇಯಕದಲ್ಲಿ ಇಪ್ಪತ್ತ್ನಾಲ್ಕು ಸಾಗರ, ಮೂರನೆಯದರಲ್ಲಿ ಇಪ್ಪತ್ತೈದು ಸಾಗರ, ನಾಲ್ಕನೆಯದರಲ್ಲಿ ಇಪ್ಪತ್ತಾರು ಸಾಗರ, ಐದನೆಯದರಲ್ಲಿ ಇಪ್ಪತ್ತೇಳು ಸಾಗರ, ಆರನೆಯದರಲ್ಲಿ ಇಪ್ಪತ್ತೆಂಟು ಸಾಗರ, ಏಳನೆಯದರಲ್ಲಿ ಇಪ್ಪತ್ತೊಂಭತ್ತು ಸಾಗರ, ಎಂಟನೆಯದರಲ್ಲಿ ಮೂವತ್ತು ಸಾಗರ, ಒಂಭತ್ತನೆಯ ಗ್ರೈವೇಯಕದಲ್ಲಿ ಮೂವತ್ತೊಂದು ಸಾಗರವಿದೆ. ಈ ಪ್ರಕಾರ ಅಚ್ಯುತ ಸ್ವರ್ಗದಿಂದ ಹಿಡಿದು ಒಂಭತ್ತನೆಯ ಗ್ರೈವೇಯಕದವರೆಗೆ ಒಂದೊಂದು ಸಾಗರ ಅಧಿಕವೆಂದು ತಿಳಿಯುವುದು.

ಒಂಭತ್ತು ಅನುದಿಶೆಗಳಲ್ಲಿ ಮೂವತ್ತೆರಡು ಸಾಗರ ಹಾಗೂ ಪಂಚಾನುತ್ತರಗಳಲ್ಲಿ ಮೂವತ್ಮೂರು ಸಾಗರ ಆಯುವಿದೆ.

ಯುಗಲಗಳಲ್ಲಿ ಕಾಯದ ಪ್ರಮಾಣ - ಪ್ರಥಮ ಯುಗಲದಲ್ಲಿ ದೇವಗಳ ಕಾಯವು ಏಳು ಮೊಳ, ಎರಡನೆಯ ಯುಗಲದಲ್ಲಿ ದೇವಗಳ ಕಾಯವು ಆರು ಮೊಳ, ಮೂರನೆಯ ಯುಗಲದ ದೇವಗಳ ಕಾಯವು ಐದು ಮೊಳ, ನಾಲ್ಕನೆಯ ಯುಗಲದ ದೇವಗಳ ಕಾಯವು ಐದು ಮೊಳ, ಐದನೆಯ ಯುಗಲದ ದೇವಗಳ ಕಾಯವು ನಾಲ್ಕು ಮೊಳ, ಆರನೆಯ ಯುಗಲದ ದೇವಗಳ ಕಾಯವು ನಾಲ್ಕು ಮೊಳ, ಏಳನೆಯ ಯುಗಲದ ದೇವಗಳ ಕಾಯವು ಮೂರೂವರೆ ಮೊಳ, ಎಂಟನೆಯ ಯುಗಲದ ದೇವಗಳ ಕಾಯವು ಮೂರು ಮೊಳವಿದೆ. ಒಂಭತ್ತು ಗ್ರೈವೇಯಕಗಳೊಳಗೆ ಪ್ರಥಮತ್ರಿಕದಲ್ಲಿನ ದೇವಗಳ ಕಾಯವು ಎರಡೂವರೆ ಮೊಳ, ಎರಡನೇತ್ರಿಕದ ದೇವಗಳ ಕಾಯವು ಎರಡು ಮೊಳ, ಮೂರನೆಯತ್ರಿಕದ ದೇವಗಳದ್ದು ಮತ್ತು ಅನುದಿಶೆ ದೇವಗಳ ಕಾಯವು ಒಂದೂವರೆ ಮೊಳ ಇದೆ. ಮುಂದೆ ಪಂಚಾನುತ್ತರ ದೇವಗಳ ಕಾಯವು ಒಂದು ಮೊಳ ಎತ್ತರವಿದೆ.

ಸ್ವರ್ಗಗಳ ಪಟಲಗಳು - ಪ್ರಥಮ ಯುಗಲದ ಪಟಲಗಳು ಮೂವತ್ತೊಂದು ಇವೆ, ಎರಡನೆಯ ಯುಗಲದ ಪಟಲಗಳು ಏಳು, ಮೂರನೆಯ ಯುಗಲದ ಪಟಲಗಳು ನಾಲ್ಕು, ನಾಲ್ಕನೆಯ ಯುಗಲದ ಪಟಲಗಳು ಎರಡು, ಐದನೆಯ ಯುಗಲದ ಪಟಲವು ಒಂದು, ಆರನೆಯ ಯುಗಲದ ಪಟಲವು ಒಂದು, ಏಳನೆಯ ಯುಗಲದ ಪಟಲಗಳು ಮೂರು, ಎಂಟನೆಯ ಯುಗಲದ ಪಟಲಗಳು ಮೂರು, ಒಂಭತ್ತು ಗ್ರೈವೇಯಕಗಳ ಪಟಲಗಳು ಒಂಭತ್ತು , ಒಂಭತ್ತು ಅನುದಿಶೆಗಳ ಪಟಲವು ಒಂದು ಇದೆ. ಪಂಚ ಅನುತ್ತರಗಳ ಪಟಲವು ಒಂದು - ಈ ಪ್ರಕಾರ ಒಟ್ಟು ಸ್ವರ್ಗಗಳಲ್ಲಿ ಅರವತ್ಮೂರು ಪಟಲಗಳಿವೆ.

ಸ್ವರ್ಗಗಳಲ್ಲಿ ಇಂದ್ರರು - ಪ್ರಥಮ ಯುಗಲದ ಇಂದ್ರರು ಇಬ್ಬರಿದ್ದಾರೆ. ಎರಡನೆಯ ಯುಗಲದಲ್ಲಿ ಇಬ್ಬರು ಇಂದ್ರರು, ಮೂರನೆಯ ಯುಗಲದಲ್ಲಿ ಒಬ್ಬ ಇಂದ್ರ, ನಾಲ್ಕನೆಯ ಯುಗಲದಲ್ಲಿ ಒಬ್ಬ ಇಂದ್ರ, ಐದನೆಯ ಯುಗಲದಲ್ಲಿ ಒಬ್ಬ ಇಂದ್ರ , ಆರನೆಯ ಯುಗಲದಲ್ಲಿ ಒಬ್ಬನು ಇಂದ್ರ , ಏಳನೆಯ ಯುಗಲದಲ್ಲಿ ಇಬ್ಬರು ಇಂದ್ರರಿದ್ದಾರೆ, ಎಂಟನೆಯ ಯುಗಲದಲ್ಲಿ ಇಬ್ಬರು ಇಂದ್ರರಿದ್ದಾರೆ. ಇದರಿಂದ ಮುಂದೆ ಗ್ರೈವೇಯಕ ಮೊದಲಾದವುಗಳಲ್ಲಿ ಇಂದ್ರರುಗಳಿರುವುದಿಲ್ಲ, ಅವರೆಲ್ಲರೂ ತಮ್ಮಲ್ಲಿ ತಾವು ಎಲ್ಲರೂ ಇಂದ್ರ ಸಮಾನರಿದ್ದಾರೆ, ಅಹಮಿಂದ್ರರಿದ್ದಾರೆ.

ಸ್ವರ್ಗಗಳಲ್ಲಿ ವಿಮಾನಗಳ ಸಂಖ್ಯೆ - ಪ್ರಥಮ ಸ್ವರ್ಗದಲ್ಲಿ ಮೂವತ್ತೆರಡು ಲಕ್ಷ ಹಾಗೂ ಎರಡನೆಯ ಸ್ವರ್ಗದಲ್ಲಿ ಇಪ್ಪತ್ತೆಂಟು ಲಕ್ಷ ಈ ಪ್ರಕಾರ ಪ್ರಥಮ ಯುಗಲದಲ್ಲಿ ಒಟ್ಟು ಅರವತ್ತು ಲಕ್ಷ ವಿಮಾನಗಳಿವೆ. ಮೂರನೆಯ ಸಾನತ್ಕುಮಾರ ಸ್ವರ್ಗದ ವಿಮಾನಗಳು ಹನ್ನೆರಡು ಲಕ್ಷ ಹಾಗೂ ನಾಲ್ಕನೆಯ ಮಾಹೇಂದ್ರ ಸ್ವರ್ಗದ ವಿಮಾನಗಳು ಎಂಟು ಲಕ್ಷ - ಈ ಪ್ರಕಾರ ಎರಡನೆಯ ಯುಗಲದಲ್ಲಿ ಒಟ್ಟು ಇಪ್ಪತ್ತು ಲಕ್ಷ ವಿಮಾನಗಳಿವೆ. ಬ್ರಹ್ಮ ಹಾಗೂ ಬ್ರಹ್ಮೋತ್ತರಗಳು

ಸೇರಿ ನಾಲ್ಕು ಲಕ್ಷ ವಿಮಾನಗಳಿವೆ ಹಾಗೂ ನಾಲ್ಕನೆಯ ಯುಗಲದಲ್ಲಿ ಐವತ್ತು ಸಾವಿರ ವಿಮಾನಗಳು, ಐದನೆಯ ಯುಗಲದ ನಲವತ್ತು ಸಾವಿರ ವಿಮಾನಗಳು, ಆರನೆಯ ಯುಗಲದ ಆರು ಸಾವಿರ ವಿಮಾನಗಳು, ಏಳನೆಯ ಹಾಗೂ ಎಂಟನೇ ಯುಗಲದ ವಿಮಾನಗಳು ಸೇರಿ ಏಳುನೂರು ಇವೆ.

ಒಂಭತ್ತು ಗ್ರೈವೇಯಕದ ಮೂರು ತ್ರಿಕಗಳಿವೆ. ಅವುಗಳಲ್ಲಿ ಮೊದಲನೆಯ ತ್ರಿಕದ ಒಂದುನೂರಾ ಹನ್ನೊಂದು ವಿಮಾನಗಳಿವೆ. ಎರಡನೆಯ ತ್ರಿಕದ ವಿಮಾನಗಳು ಒಂದುನೂರಾ ಏಳು ಇವೆ, ಮೂರನೆಯ ತ್ರಿಕದ ವಿಮಾನಗಳು ತೊಂಭತ್ತೊಂದು ಇವೆ – ಈ ಪ್ರಕಾರ ಎಲ್ಲ ಸೇರಿ ಒಂಭತ್ತು ಗ್ರೈವೇಯಕಗಳ ವಿಮಾನಗಳು ಮೂರು ನೂರಾ ಒಂಭತ್ತು ಇವೆ. ಒಂಭತ್ತು ಅನುದಿಶೆಗಳಲ್ಲಿ ಒಂಭತ್ತು ವಿಮಾನಗಳು ಇವೆ. ಪಂಚ ಅನುತ್ತರಗಳ ಐದು ವಿಮಾನಗಳಿವೆ – ಈ ಪ್ರಕಾರ ಸರ್ವ ಕಲ್ಪಾತೀತರುಗಳ ವಿಮಾನಗಳು ಮೂರುನೂರಾ ಮೂವತ್ಮೂರು ಇವೆ. ಇವುಗಳಲ್ಲಿ ಊರ್ಧ್ವಲೋಕದ ಸ್ವರ್ಗವಾಸಿ ದೇವಗಳ ವಿಮಾನಗಳನ್ನು ಸೇರಿಸಿದ ಮೇಲೆ ಎಂಭತ್ತಾನ್ಲು ಲಕ್ಷ ತೊಂಭತ್ತೇಳು ಸಾವಿರದ ಇಪ್ಪತ್ಮೂರು ವಿಮಾನಗಳಾಗುತ್ತವೆ. ಈ ಎಲ್ಲ ವಿಮಾನಗಳಲ್ಲಿ ಒಂದೊಂದು ಜಿನಮಂದಿರಗಳಿವೆ, ಅವುಗಳಿಗೆ ಪುನಃ ಪುನಃ ನಮ್ಮ ನಮಸ್ಕಾರವಿರಲಿ.

ಪೃಥ್ವಿಯಿಂದ ಸ್ವರ್ಗದ ಎತ್ತರ – ಪೃಥ್ವಿಯಿಂದ ಒಂದು ಲಕ್ಷ ನಲವತ್ತು ಯೋಜನ ಎತ್ತರದ ಮೇಲೆ ಪ್ರಥಮ ಯುಗಲದ ಪ್ರಥಮ ಇಂದ್ರಕ ಪಟಲವಿದೆ. ಪೃಥ್ವಿಯಿಂದ ಒಂದೂವರೆ ರಾಜು ಎತ್ತರದಲ್ಲಿ ಪ್ರಥಮ ಯುಗಲದ ಅಂತಿಮ ಮೂವತ್ತೊಂದನೆಯ ಇಂದ್ರಕ ಪಟಲವಿದೆ. ಪೃಥ್ವಿಯಿಂದ ಮೂರು ರಾಜು ಹಾಗೂ ಪ್ರಥಮ ಯುಗಲದ ಅಂತಿಮ ಪಟಲದಿಂದ ಒಂದೂವರೆ ರಾಜು ಎತ್ತರದಲ್ಲಿ ಎರಡನೆಯ ಯುಗಲದ ಪಟಲವಿದೆ. ಎರಡನೆಯ ಯುಗಲದಿಂದ ಅರ್ಧ ರಾಜು ಎತ್ತರದ ಮೇಲೆ ಮೂರನೆಯ ಯುಗಲದ ಪಟಲವಿದೆ. ಮೂರನೆಯ ಯುಗಲದಿಂದ ಅರ್ಧ ರಾಜು ಎತ್ತರದಲ್ಲಿ ನಾಲ್ಕನೆಯ ಯುಗಲದ ಪಟಲವಿದೆ. ನಾಲ್ಕನೆಯ ಯುಗಲದಿಂದ ಅರ್ಧ ರಾಜು ಎತ್ತರದಲ್ಲಿ ಐದನೆಯ ಯುಗಲದ ಪಟಲಗಳಿವೆ. ಐದನೆಯ ಯುಗಲದಿಂದ ಅರ್ಧ ರಾಜು ಎತ್ತರದಲ್ಲಿ ಆರನೆಯ ಯುಗಲದ ಪಟಲವಿದೆ. ಆರನೆಯ ಯುಗಲದಿಂದ ಏಳನೆಯ ಯುಗಲವು ಅರ್ಧ ರಾಜು ಎತ್ತರದಲ್ಲಿದೆ. ಏಳನೆಯ ಯುಗಲದಿಂದ ಎಂಟನೆಯ ಯುಗಲವು ಅರ್ಧ ರಾಜು ಎತ್ತರದಲ್ಲಿದೆ. ಈ ಪ್ರಕಾರ ಆರು ರಾಜುದಲ್ಲಿ ಹದಿನಾರು ಸ್ವರ್ಗಗಳ ಎಂಟು ಯುಗಲಗಳಿವೆ.

ಅದರಿಂದ ಮೇಲೆ ಒಂದು ರಾಜುವಿನ ಪ್ರಾರಂಭದ ಕ್ಷೇತ್ರದಲ್ಲಿ ಒಂಭತ್ತು ಗ್ರೈವೇಯಕಗಳಿವೆ. ರಾಜುವಿನ ಮಧ್ಯ ಭಾಗದಲ್ಲಿ ಒಂಭತ್ತು ಅನುದಿಶೆಗಳಿವೆ ರಾಜುವಿನ ಅಂತ್ಯದಲ್ಲಿ ಸರ್ವಾರ್ಥಸಿದ್ಧಿಯಿದೆ.

೮. ಅದರ ಮೇಲೆ ಸಂಖ್ಯಾತ ಯೋಜನದ (ಅಷ್ಟಮ ಪೃಥ್ವಿಯಲ್ಲಿ) ಸಿದ್ಧಶಿಲೆಯಿದೆ. ಅದರ ಮೇಲೆ ತನುವಾತ ವಲಯದಲ್ಲಿ ಸಿದ್ಧಚಕ್ರ , ಚೈತನ್ಯ , ಅಮೂರ್ತಿಕ ಸಿದ್ಧಭಗವಂತರು ವಿರಾಜಮಾನರಿದ್ದಾರೆ; ಅವರಿಗೆ ಪುನಃ ಪುನಃ ನಮ್ಮ ನಮಸ್ಕಾರವಿರಲಿ. ಯಾವ ಕ್ಷೇತ್ರದಲ್ಲಿ ಸಿದ್ಧಭಗವಂತರು ವಿರಾಜಮಾನರಿದ್ದಾರೆ ಅದು ನಲವತ್ತೈದು ಲಕ್ಷ ಯೋಜನ ಸಿದ್ಧಕ್ಷೇತ್ರವಿದೆ ಆ ಉತ್ಕೃಷ್ಟ (ಸರ್ವೋತ್ತಮ) ತೀರ್ಥಕ್ಷೇತ್ರಕ್ಕೆ ನಮ್ಮ ನಮನವಿರಲಿ. ಈ ಪ್ರಕಾರ ಒಟ್ಟು ಎಂಟು ಪೃಥ್ವಿಗಳಿವೆ.

ವಿಮಾನಗಳ ವರ್ಣ – ಪ್ರಥಮ ಯುಗಲದ ವಿಮಾನಗಳು ಐದೂ ವರ್ಣದವಿವೆ. ಎರಡನೆಯ ಯುಗಲದ ವಿಮಾನಗಳು ಕೃಷ್ಣವನ್ನು ಹೊರತು ಪಡಿಸಿ ನಾಲ್ಕು ವರ್ಣದವಿವೆ. ಮೂರನೆಯ ಯುಗಲದ ವಿಮಾನಗಳು ಕೃಷ್ಣ, ನೀಲವನ್ನು ಹೊರತು ಪಡಿಸಿ ಮೂರು ವರ್ಣದವಿವೆ. ನಾಲ್ಕನೇ ಯುಗಲದ ವಿಮಾನಗಳು ಕೃಷ್ಣ, ನೀಲವನ್ನು ಹೊರತು ಪಡಿಸಿ ಮೂರು ವರ್ಣದವಿವೆ. ಐದನೆಯ ಯುಗಲದ ವಿಮಾನಗಳು ಪೀತ ಮತ್ತು ಶ್ವೇತ ಎರಡು ವರ್ಣದವಿವೆ. ಆರನೆಯ ಯುಗಲದ ವಿಮಾನಗಳು ಪೀತ, ಶ್ವೇತ ಎರಡು ವರ್ಣದವಿವೆ ಮತ್ತು ಏಳನೇ ಯುಗಲ, ಎಂಟನೇ ಯುಗಲ ಹಾಗೂ ಅಹಮಿಂದ್ರರುಗಳ ವಿಮಾನಗಳು ಒಂದು ಶುಕ್ಲವರ್ಣದವಿವೆ.

ಸ್ವರ್ಗಗಳ ಆಧಾರ - ಪ್ರಥಮ ಯುಗಲವು ಜಲದ ಆಧಾರದ ಮೇಲೆ ಇದೆ. ಎರಡನೆಯ ಯುಗಲವು ಪವನದ ಆಧಾರದ ಮೇಲೆ ಇದೆ. ಮೂರನೆಯ ಯುಗಲವು ಪವನದ ಆಧಾರದ ಮೇಲೆ ಇದೆ. ನಾಲ್ಕನೆಯ, ಐದನೆಯ, ಆರನೆಯ ಇವು ಮೂರು ಯುಗಲಗಳು ಜಲ-ಪವನದ ಆಧಾರದ ಮೇಲೆ ಇವೆ. ಏಳನೆಯ, ಎಂಟನೆಯ ಯುಗಲ ಹಾಗೂ ಅಹಮಿಂದ್ರರುಗಳ ವಿಮಾನಗಳೆಲ್ಲವೂ ಆಕಾಶದ ಆಧಾರದಿಂದಿವೆ.

ಸ್ವರ್ಗದಲ್ಲಿ ದೇವಗಳ ಕಾಮ ಸೇವನೆ - ಪ್ರಥಮ ಯುಗಲದಲ್ಲಿ ದೇವಗಳ ಕಾಮಸೇವನೆಯು ಮನುಷ್ಯ -ಪಶುವತ್. ಎರಡನೆಯ ಯುಗಲದಲ್ಲಿ ಶರೀರಕ್ಕೆ ಶರೀರದ ಸ್ಪರ್ಶವಾದರೆ ತೃಪ್ತಿಯಾಗಿ ಹೋಗುತ್ತದೆ. ಮೂರನೆಯ ಯುಗಲದಲ್ಲಿ ದೇವ-ದೇವಿಯರಿಗೆ ಪರಸ್ಪರ ರಾಗ ದೃಷ್ಟಿಯಿಂದ ರೂಪ ನೋಡುತ್ತಿದ್ದಂತೆಯೇ ಭೋಗಗಳ ತೃಪ್ತಿಯಾಗುತ್ತದೆ. ನಾಲ್ಕನೆಯ ಯುಗಲದಲ್ಲಿಯೂ ರೂಪವನ್ನು ನೋಡಿ ತೃಪ್ತಿಯಾಗುತ್ತದೆ. ಐದನೆಯ, ಆರನೆಯ ಯುಗಲದಲ್ಲಿ ದೇವ-ದೇವಿಯರುಗಳ ಪರಸ್ಪರ ರಾಗ ತುಂಬಿದ ಶಬ್ದಗಳನ್ನು ಆಲಿಸಿ ಭೋಗವಾಂಛೆಯ ತೃಪ್ತಿಯಾಗಿ ಹೋಗುತ್ತದೆ ಮತ್ತು ಏಳನೆಯ, ಎಂಟನೆಯ ಯುಗಲದಲ್ಲಿ ದೇವ-ದೇವಿಯರ ಮನಸ್ಸಿನಲ್ಲಿ ಭೋಗದ ಅಭಿಲಾಷೆ ಉಂಟಾಗುತ್ತದೆ ಮತ್ತು ತೃಪ್ತಿಯಾಗಿ ಬಿಡುತ್ತದೆ. ಮೇಲಿನ ಅಹಮಿಂದ್ರರುಗಳಿಗೆ ಕಾಮಸೇವನೆಯ ಇಚ್ಛೆಯೇ ಆಗುವುದಿಲ್ಲ.

ದೇವಗಳ ಅವಧಿಯ ಕ್ಷೇತ್ರ - ಪ್ರಥಮ ಯುಗಲದ ದೇವಗಳ ಅವಧಿಯ ವಿಷಯವು ಪ್ರಥಮ ನರಕದವರೆಗೇ ಇದೆ, ಇಷ್ಟೇ ವಿಕ್ರಿಯೆಯಾಗುತ್ತದೆ, ಅಧಿಕವಾಗುವುದಿಲ್ಲ. ಎರಡನೆಯ ಯುಗಲದ ದೇವಗಳ ಅವಧಿ, ವಿಕ್ರಿಯೆ ಎರಡನೆಯ ನರಕದವರೆಗೆ ಇದೆ, ಮೂರನೆಯ ಯುಗಲದ ದೇವಗಳ ಅವಧಿ, ವಿಕ್ರಿಯೆ ಮೂರನೆಯ ನರಕದವರೆಗೆ ಇದೆ. ನಾಲ್ಕನೆಯ ಯುಗಲದ ದೇವಗಳ ಅವಧಿಯು ಮೂರನೆಯ ನರಕದವರೆಗಿನ ಶುಭಾಶುಭವನ್ನು ತಿಳಿಯುವಷ್ಟಿರುತ್ತದೆ ಮತ್ತು ಇಷ್ಟೇ ವಿಕ್ರಿಯೆಯಾಗುತ್ತದೆ. ಐದನೆಯ, ಆರನೆಯ ಯುಗಲಗಳ ದೇವಗಳ ಅವಧಿ, ವಿಕ್ರಿಯೆ ನಾಲ್ಕನೆಯ ನರಕದವರೆಗೆ ಇರುತ್ತದೆ. ಏಳನೆಯ, ಎಂಟನೇ ಯುಗಲದ ದೇವಗಳ ಅವಧಿ, ವಿಕ್ರಿಯೆ ಐದನೆಯ ನರಕದ ವರೆಗೆ ಆಗುತ್ತದೆ. ಒಂಭತ್ತು ಗ್ರೈವೇಯಕದ ದೇವಗಳ ಅವಧಿ, ವಿಕ್ರಿಯೆ ಆರನೆಯ ನರಕದವರೆಗೆ ಇರುತ್ತದೆ. ಒಂಭತ್ತು ಅನುದಿಶೆಗಳು ಮತ್ತು ಐದು ಅನುತ್ತರದ ದೇವಗಳ ಅವಧಿ, ವಿಕ್ರಿಯೆಗಳು ಏಳನೆಯ ನರಕದವರೆಗೆ ಇರುತ್ತದೆ. ವಿಶೇಷವೆಂದರೆ ಮೇಲಿನ ದೇವಗಳ ವಿಕ್ರಿಯೆಯು ವ್ಯಕ್ತರೂಪದಂದಂತೂ ಮೂರನೆಯ ನರಕದವರೆಗೇನೇ ಇರುತ್ತದೆ, ಮುಂದೆ ಇರುವುದಿಲ್ಲ ಹಾಗೂ ಶಕ್ತಿರೂಪದಿಂದ ಏಳನೆಯ ನರಕದವರೆಗೆ ಹೇಳಲಾಗಿದೆ. ಅವಧಿಜ್ಞಾನವು ತಮ್ಮ ತಮ್ಮ ವಿಷಯ ಯೋಗ್ಯ ಕ್ಷೇತ್ರದ ಎಲ್ಲ ಶುಭಾ-ಶುಭ ಭಾವಗಳನ್ನು ತಿಳಿಯುತ್ತದೆ.

ದೇವಗಳ ಮೃತ್ಯುವಾದ ಮೇಲೆ ಎಷ್ಟು ಕಾಲದನಂತರ ಇನ್ನೊಬ್ಬ ದೇವನು ಅಲ್ಲಿ ಉತ್ಪನ್ನವಾಗುತ್ತಾನೆಂಬುದನ್ನು ಅರ್ಥಾತ್ ಸ್ವರ್ಗದಲ್ಲಿ ಉತ್ಪತ್ತಿಯ ಅಂತರ ಹೇಳುತ್ತಾರೆ - ಪ್ರಥಮ ಯುಗಲದಲ್ಲಿ ಉತ್ಕೃಷ್ಟ ಅಂತರವು ಏಳು ದಿವಸದ್ದಿದೆ, ನಂತರ ಇನ್ನೊಬ್ಬನು ಉತ್ಪನ್ನನಾಗಿಯೇ ಆಗುತ್ತಾನೆ. ಎರಡನೆಯ ಯುಗಲದಲ್ಲಿ ಹದಿನೈದು ದಿವಸಗಳ ಅಂತರವಿದೆ. ಮೂರನೆಯ ಯುಗಲದಲ್ಲಿ ಒಂದು ತಿಂಗಳಿನ ಅಂತರವಿದೆ. ನಾಲ್ಕನೆಯ ಯುಗಲದಲ್ಲಿ ಉತ್ಕೃಷ್ಟ ಅಂತರವು ಒಂದು ತಿಂಗಳದಿದೆ. ಐದನೇ, ಆರನೇ ಯುಗಲದಲ್ಲಿ ಉತ್ಕೃಷ್ಟ ಅಂತರವು ಎರಡು ತಿಂಗಳದ್ದಿದೆ. ಏಳನೇ, ಎಂಟನೇ ಯುಗಲದಲ್ಲಿ ನಾಲ್ಕು ತಿಂಗಳದ್ದಿದೆ. ಮೇಲಿನ ಅಹಮಿಂದ್ರರುಗಳಲ್ಲಿ ಉತ್ಕೃಷ್ಟ ಅಂತರವು ಆರು ತಿಂಗಳದ್ದಿದೆ - ಈ ಪ್ರಕಾರ ಉತ್ಕೃಷ್ಟ ಅಂತರವು ಆರು ತಿಂಗಳದ್ದಿದೆ. ತನ್ನ ಅಂತರದ ನಂತರ ಯಾವನೋ ಪುಣ್ಯಾಧಿಕಾರಿ ಜೀವನು ಉತ್ಪನ್ನನಾಗಿಯೇ ಆಗುತ್ತಾನೆ, ಸ್ಥಾನವು ಬರಿದಾಗಿ ಉಳಿದರೆ ಇಷ್ಟು ಉಳಿಯುತ್ತದೆ, ಮಧ್ಯದ ಭೇದಗಳು ಅನೇಕವಿವೆ.

ದೇವಗಳ ಮಾನಸಿಕ ಭೋಜನದ ಕಾಲ-ದೇವಗಳ ಆಯುವು ಎಷ್ಟು ಸಾಗರದ್ದಿರುತ್ತದೆ, ಅಷ್ಟು ಸಾವಿರ ವರ್ಷಗಳ ನಂತರ ಮನಸ್ಸಿನಲ್ಲಿ ಆಹಾರದ ಇಚ್ಛೆಯಾಗುತ್ತದೆ. ಅದರ ನಂತರ ಅಲ್ಲಿಯೇ ತೃಪ್ತಿಯಾಗುತ್ತದೆ. ಇದೇ ಪ್ರಕಾರ ಎಷ್ಟು ಸಾಗರದ ಆಯುವಿದೆ, ಅಷ್ಟು ಪಕ್ಷಗಳ ನಂತರ ಶ್ವಾಸೋಚ್ಛ್ವಾಸವಾಗುತ್ತದೆ.

ಸ್ವರ್ಗಗಳಲ್ಲಿ ದೇವಗಳ ಮುಕುಟ ಚಿಹ್ನೆಗಳು - ಸೂಕರ, ಜಿಂಕೆ, ಮಹಿಷ (ಕೋಣ), ಮೀನು, ಆಮೆ, ಕಪ್ಪೆ, ಕುದುರೆ, ಆನೆ, ಚಂದಿರ, ಸೂರ್ಯ, ಗೇಂಡಾಮೃಗ, ಮೇಕೆ, ಎತ್ತು, ಕಲ್ಪವೃಕ್ಷ ಇತ್ಯಾದಿ ಚಿಹ್ನೆಗಳು ದೇವಗಳ ಮುಕುಟದಲ್ಲಿರುತ್ತವೆ.

ದೇವ ವಿಮಾನಗಳ ದಪ್ಪಳತೆ - ಪ್ರಥಮ ಯುಗಲದ ವಿಮಾನಗಳ ದಪ್ಪಳತೆ ಹನ್ನೊಂದುನೂರಾ ಇಪ್ಪತ್ತೊಂದು ಯೋಜನವಿದೆ. ಎರಡನೇ ಯುಗಲದ ವಿಮಾನಗಳ ದಪ್ಪಳತೆ ಒಂದು ಸಾವಿರದಾ ಇಪ್ಪತ್ತೆರಡು ಯೋಜನ, ಮೂರನೇ ಯುಗಲದ ವಿಮಾನಗಳ ದಪ್ಪಳತೆ ಒಂಭೈನೂರಾ ಇಪ್ಪತ್ತ್ಮೂರು ಯೋಜನ, ನಾಲ್ಕನೇ ಯುಗಲದ ವಿಮಾನಗಳ ದಪ್ಪಳತೆ ಎಂಟುನೂರಾ ಇಪ್ಪತ್ತೆಂಟು ಯೋಜನ, ಐದನೇ ಯುಗಲದ ವಿಮಾನಗಳ ದಪ್ಪಳತೆ ಏಳು ನೂರಾ ಇಪ್ಪತ್ತೈದು ಯೋಜನ, ಆರನೇ ಯುಗಲದ ವಿಮಾನಗಳ ದಪ್ಪಳತೆ ಆರುನೂರಾ ಇಪ್ಪತ್ತಾರು ಯೋಜನ, ಏಳನೇ ಯುಗಲದ ವಿಮಾನಗಳ ದಪ್ಪಳತೆ ಐನೂರಾ ಇಪ್ಪತ್ತೇಳು ಯೋಜನ, ಎಂಟನೇ ಯುಗಲದ ವಿಮಾನಗಳ ದಪ್ಪಳತೆ ನಾಲ್ಕುನೂರಾ ಇಪ್ಪತ್ತೆಂಟು ಯೋಜನ, ಒಂಭತ್ತು ಗ್ರೈವೇಯಕ ವಿಮಾನಗಳ ದಪ್ಪಳತೆ ಮೂರುನೂರಾ ಇಪ್ಪತ್ತೊಂಭತ್ತು ಯೋಜನ, ಒಂಭತ್ತು ಅನುದಿಶೆ ವಿಮಾನಗಳ ದಪ್ಪಳತೆ ಇನ್ನೂರಾ ಮೂವತ್ತು ಯೋಜನ. ಐದು ಅನುತ್ತರ ವಿಮಾನಗಳ ದಪ್ಪಳತೆ ಒಂದುನೂರಾ ಮೂವತ್ತೊಂದು ಯೋಜನವಿದೆ.

ಸ್ವರ್ಗದ ದೇವಗಳ ಲೇಶ್ಯೆ - ಪ್ರಥಮ ಯುಗಲದಲ್ಲಿ ಪೀತ ಲೇಶ್ಯೆಯಿದೆ. ಎರಡನೇ ಯುಗಲದಲ್ಲಿ ಪೀತ-ಪದ್ಮ ಎರಡು ಲೇಶ್ಯೆಗಳಿವೆ, ಮೂರನೇ ಯುಗಲದಲ್ಲಿ ಪದ್ಮಲೇಶ್ಯೆ , ನಾಲ್ಕನೇ ಯುಗಲದಲ್ಲಿ ಪದ್ಮಲೇಶ್ಯೆ , ಐದನೇ ಯುಗಲದಲ್ಲಿ ಪದ್ಮ-ಶುಕ್ಲಲೇಶ್ಯೆ , ಆರನೇ ಯುಗಲದಲ್ಲಿ ಪದ್ಮ-ಶುಕ್ಲ ಎರಡುಲೇಶ್ಯೆ, ಏಳನೇ-ಎಂಟನೇ ಯುಗಲ ಹಾಗೂ ಮೇಲಿನ ಅಹಮಿಂದ್ರರುಗಳಲ್ಲಿ ಒಂದು ಶುಕ್ಲ ಲೇಶ್ಯೆ ಇರುತ್ತದೆ.

ಸ್ವರ್ಗದಲ್ಲಿ ದೇವಾಂಗನೆಯರ ಉತ್ಕೃಷ್ಟ ಆಯು - ಮೊದಲನೇ ಸೌಧರ್ಮ ಸ್ವರ್ಗದ ದೇವಿಯರ ಆಯುವು ಐದು ಪಲ್ಯವಿದೆ. ಎರಡನೇ ಐಶಾನ ಸ್ವರ್ಗದ ದೇವಿಯರ ಆಯು ಏಳು ಪಲ್ಯವಿದೆ. ಮುಂದೆ ಮೂರನೆಯ ಸ್ವರ್ಗದಿಂದ ಹಿಡಿದು ಹನ್ನೆರಡನೆಯ ಸ್ವರ್ಗದವರೆಗೆ ಎರಡೆರಡು ಪಲ್ಯ ಅಧಿಕ-ಅಧಿಕ ಆಯುವಿದೆ. ಈ ಪ್ರಕಾರ ೫, ೭, ೯, ೧೧, ೧೩, ೧೫, ೧೭, ೧೯, ೨೧, ೨೩, ೨೫, ೨೭ ಪಲ್ಯ ಅನುಕ್ರಮದಿಂದ ತಿಳಿಯುವುದು. ಹದಿಮೂರನೇ ಸ್ವರ್ಗದ ದೇವಿಯರ ಆಯು ಮೂವತ್ನಾಲ್ಕು ಪಲ್ಯವಿದೆ. ಹದಿನಾಲ್ಕನೇ ಸ್ವರ್ಗದ ದೇವಿಯರ ಆಯು ನಲವತ್ತೊಂದು ಪಲ್ಯವಿದೆ ಮತ್ತು ಹದಿನೈದನೇ ಸ್ವರ್ಗದ ದೇವಿಯರ ಆಯು ನಲವತ್ತೆಂಟು ಪಲ್ಯವಿದೆ. ಹದಿನಾರನೇ ಸ್ವರ್ಗದ ದೇವಿಯರ ಆಯುವು ಐವತ್ತೈದು ಪಲ್ಯವಿದೆ - ಈ ಪ್ರಕಾರ ಸಾಮಾನ್ಯದಿಂದ ದೇವಲೋಕದ ಕಥನ ಮಾಡಲಾಯಿತು.

ಈ ಪ್ರಕಾರ ಅಧೋಲೋಕ, ಮಧ್ಯಲೋಕ ಮತ್ತು ಊರ್ಧ್ವಲೋಕಮಯ ಮೂರುಲೋಕಗಳ ವ್ಯಾಖ್ಯಾನವು ಯಾವುದರಲ್ಲಿ ಇದೆ, ಅದು ತ್ರಿಲೋಕಬಿಂದುವೆಂಬ ಹೆಸರಿನ ಹದಿನಾಲ್ಕನೆಯ ಪೂರ್ವವಿದೆ.

ಈ ಹನ್ನೊಂದು ಅಂಗ ಮತ್ತು ಹದಿನಾಲ್ಕು ಪೂರ್ವಗಳ ಜ್ಞಾನದ ಧಾರಕರು ಅವರು ಉಪಾಧ್ಯಾಯ ಮುನಿಯಿದ್ದಾರೆ. ಅವರು ವೀತರಾಗೀ ನಗ್ನ ಗುರುಗಳು ಪೂಜಿಸಲು ಯೋಗ್ಯರಿದ್ದಾರೆ.

೩. ತಪಸ್ಸು ಮಾಡುವ ಶಕ್ತಿಯು ಯಾರಿಗೆ ಅಧಿಕವಿದೆ. ಅನೇಕ ಪ್ರಕಾರದ ತಪ ಮಾಡುತ್ತಿದ್ದರೂ ಕೂಡ ಶರೀರ, ಮನಸ್ಸು, ವಚನಗಳು ಶಿಥಿಲವಾಗುವುದಿಲ್ಲ, ಅವರು ತಪಸ್ವೀ ಜಾತಿಯ ಮುನಿಗಳಿದ್ದಾರೆ. ಈ ತಪಸ್ವಿ ಮುನಿಗಳು ಎಂಥ ದುರ್ಧರ ತಪಗಳನ್ನು ಮಾಡುತ್ತಾರೆ, ಅವುಗಳ ಸಂಕ್ಷೇಪ ಕಥನವನ್ನು ಈಗ ಮಾಡಲಾಗುವುದು.

**ಜಿನೇಂದ್ರ ಗುಣ ಸಂಪತ್ತಿ ತಪ** - ಈ ತಪಸ್ಸಿನ ಉಪವಾಸಗಳು ಅರವತ್ಮೂರು ಇರುತ್ತವೆ. ಅವುಗಳ ವಿಧಿಯು ಷೋಡಷಕಾರಣ ಭಾವನೆಯ ಪ್ರತೀಕದ ರೂಪದಲ್ಲಿ ಹದಿನಾರು ಪ್ರತಿಪದೆ ಮತ್ತು ಐದು ಕಲ್ಯಾಣಿಕಗಳ ಪ್ರತೀಕದ ರೂಪದಲ್ಲಿ ಐದು ಪಂಚಮಿ, ಅಷ್ಟಪ್ರಾತಿಹಾರ್ಯದ ರೂಪದಲ್ಲಿ ಎಂಟು ಅಷ್ಟಮಿ, ಮೂವತ್ನಾಲ್ಕು ಅತಿಶಯಗಳ

ರೂಪದಲ್ಲಿ ಇಪ್ಪತ್ತು ದಶಮಿ ಮತ್ತು ಹದಿನಾಲ್ಕು ಚತುರ್ದಶಿ - ಈ ಪ್ರಕಾರ ಒಂದೊಂದು ತಿಥಿಯ ಒಂದೊಂದು ಉಪವಾಸ - ಒಟ್ಟು ಅರವತ್ತೂರು ಉಪವಾಸ ಮಾಡಬೇಕಾಗುವುದು. ದೇಹದಿಂದ ನಿರ್ಮಮತ್ವ ಯತೀಶ್ವರರು ಈ ತಪ ಮಾಡುತ್ತಾರೆ.

**ಶ್ರುತಜ್ಞಾನ ತಪ** - ಒಂದು ನೂರಾ ಐವತ್ತೆಂಟು ಇದರ ಉಪವಾಸಗಳಿವೆ. ಅವುಗಳ ವಿಧಿ - ಮತಿಜ್ಞಾನದ ಭೇದಗಳ ಪ್ರತೀಕರೂಪ ಇಪ್ಪತ್ತೆಂಟು ಉಪವಾಸ, ಹನ್ನೊಂದು ಅಂಗದ ಹನ್ನೊಂದು ಉಪವಾಸ, ಉಪಕ್ರಮ (ಪರಿಕ್ರಮ)ದ ಎರಡು ಉಪವಾಸ, ಎಂಭತ್ತೆಂಟು ಲಕ್ಷ ಸೂತ್ರ ಪದಗಳ ಎಂಭತ್ತೆಂಟು ಉಪವಾಸ, ಪ್ರಥಮಾನುಯೋಗದ ಒಂದು ಉಪವಾಸ, ಹದಿನಾಲ್ಕು ಪೂರ್ವದ ಹದಿನಾಲ್ಕು ಉಪವಾಸ, ಐದು ಚೂಲಿಕೆಗಳ ಐದು ಉಪವಾಸ, ಅವಧಿ ಜ್ಞಾನದ ಆರು ಉಪವಾಸ, ಮನಃಪರ್ಯಯಜ್ಞಾನದ ಎರಡು ಉಪವಾಸ, ಕೇವಲಜ್ಞಾನದ ಒಂದು ಉಪವಾಸ - ಈ ಪ್ರಕಾರ ಒಂದು ನೂರಾ ಐವತ್ತೆಂಟು ಉಪವಾಸಗಳನ್ನು ದೇಹದ ಕುರಿತಾಗಿ ನಿಸ್ಪೃಹೀ ಯತಿಗಳು ಮಾಡುತ್ತಾರೆ.

**ಕರ್ಮಕ್ಷಯ ತಪ** - ಅಷ್ಟಕರ್ಮಗಳನ್ನು ನಷ್ಟ ಮಾಡುವ ಸಲುವಾಗಿ ತಪಸ್ವೀ ಜಾತಿಯ ಮುನಿಗಳು ಕರ್ಮಕ್ಷಯ ತಪ ಮಾಡುತ್ತಾರೆ. ಇದರ ಉಪವಾಸಗಳು ಒಂದು ನೂರಾ ನಲವತ್ತೆಂಟು ಇವೆ. ಅವುಗಳ ವಿಧಿ - ಚತುರ್ಥಿಯ ಏಳು ಉಪವಾಸ, ಸಪ್ತಮಿಯ ಮೂರು ಉಪವಾಸ, ನವಮಿಯ ಮೂವತ್ತಾರು ಉಪವಾಸ, ದಶಮಿಯ ಒಂದು ಉಪವಾಸ, ದ್ವಾದಶಿಯ ಹದಿನಾರು ಉಪವಾಸ, ಚತುರ್ದಶಿಯ ಎಂಭತ್ತೈದು ಉಪವಾಸ - ಈ ಪ್ರಕಾರ ಒಂದು ನೂರಾ ನಲವತ್ತೆಂಟು ಉಪವಾಸ ಸಹಿತ ತಪ ಮಾಡುತ್ತಾರೆ.

ಪ್ರತಿಯೊಂದು ತಪದಲ್ಲಿ ಕ್ರಮದಿಂದ ಉಪವಾಸದ ದಿನ ಹೇಳಲಾಗುತ್ತದೆ ಹಾಗೂ ❋ದ ಚಿಹ್ನೆಯನ್ನು ಪಾರಣೆಯ ರೂಪದಿಂದ ಕೊಡಲಾಗುವುದು.

**ಸಿಂಹನಿಷ್ಕ್ರೀಡಿತ ತಪ** - ಈ ತಪವು ಒಂದು ನೂರಾ ಎಪ್ಪತ್ತೇಳು ದಿವಸಗಳದ್ದಿದೆ - ಇದರಲ್ಲಿ ಒಂದು ನೂರಾ ನಲವತ್ತೈದು ಉಪವಾಸ ಮತ್ತು ಮೂವತ್ತೆರಡು ಪಾರಣೆಗಳಿರುತ್ತವೆ. ಅವುಗಳ ವಿಧಿ - ೧ ❋ ೨ ❋ ೧ ❋ ೩ ❋ ೨ ❋ ೪ ❋ ೩ ❋ ೫ ❋ ೪ ❋ ೬ ❋ ೫ ❋ ೭ ❋ ೬ ❋ ೮ ❋ ೭ ❋ ೯ ❋ ೮ ❋ ೭ ❋ ೮ ❋ ೬ ❋ ೭ ❋ ೫ ❋ ೬ ❋ ೪ ❋ ೫ ❋ ೩ ❋ ೪ ❋ ೨ ❋ ೩ ❋ ೧ ❋ ೨ ❋ ೧ ❋ = ಉಪವಾಸಗಳು ೧೪೫ ಪಾರಣೆಗಳು ❋ ೩೨ = ೧೭೭ ದಿನ. ಈ ಪ್ರಕಾರ ಒಂದು ನೂರಾ ನಲವತ್ತೈದು ಉಪವಾಸ ಮತ್ತು ಮೂವತ್ತೆರಡು ಪಾರಣೆ ಮಾಡಿ ವ್ರತ ಮಾಡುತ್ತಾರೆ.

**ಸರ್ವತೋಭದ್ರ ತಪ** - ಇದು ಎಪ್ಪತ್ತೈದು ಉಪವಾಸ ಮತ್ತು ಇಪ್ಪತ್ತೈದು ಪಾರಣೆ ❋ಗಳಿಂದ ಕೂಡಿದ ನೂರು ದಿನಗಳ ತಪವಿದೆ. ಇದರ ವಿಧಿ - ೧ ❋ ೨ ❋ ೩ ❋ ೪ ❋ ೫ ❋ ೩ ❋ ೨ ❋ ೧ ❋ ೫ ❋ ೪ ❋ ೩ ❋ ೨ ❋ ೩ ❋ ೪ ❋ ೫ ❋ ೧ ❋ ೪ ❋ ೩ ❋ ೨ ❋ ೧ ❋ ೫ ❋ ೪ ❋ ೫ ❋ ೧ ❋ ೨ ❋ = ೭೫ ಉಪವಾಸ ಮತ್ತು ೨೫ ❋ ಪಾರಣೆ - ಈ ಪ್ರಕಾರ ಗುರುನಾಥರು ನಿಃಶಂಕರಾಗಿ ಈ ವ್ರತ ಮಾಡುತ್ತಾರೆ.

**ಮಹಾಸರ್ವತೋಭದ್ರ ತಪ** - ಇದರಲ್ಲಿ ಒಂದು ನೂರಾ ತೊಂಭತ್ತಾರು ಉಪವಾಸ ಮತ್ತು ನಲವತ್ತೊಂಭತ್ತು ಪಾರಣೆಗಳಿರುತ್ತವೆ. ಇವುಗಳ ವಿಧಿ - ೧ ❋ ೨ ❋ ೩ ❋ ೪ ❋ ೫ ❋ ೬ ❋ ೭ ❋ ೧ ❋ ೨ ❋ ೩ ❋ ೪ ❋ ೫ ❋ ೬ ❋ ೭ ❋ ೧ ❋ ೨ ❋ ೩ ❋ ೪ ❋ ೫ ❋ ೬ ❋ ೭ ❋ ೧ ❋ ೨ ❋ ೩ ❋ ೪ ❋ ೫ ❋ ೬ ❋ ೭ ❋ ೧ ❋ ೨ ❋ ೩ ❋ ೪ ❋ ೫ ❋ ೬ ❋ ೭ ❋ ೧ ❋ ೨ ❋ ೩ ❋ ೪ ❋ ೫ ❋ ೬ ❋ ೭ ❋ ೧ ❋ ೨ ❋ ೩ ❋ ೪ ❋ ೫ ❋ ೬ ❋ ೭ ❋ = ೧೯೬ ಉಪವಾಸ ಮತ್ತು ೪೯ ಪಾರಣೆ = ೨೪೫ ದಿನ. ಈ ಪ್ರಕಾರ ಒಟ್ಟು ಇನ್ನೂರಾ ನಲವತ್ತೈದು ದಿನಗಳ ತಪವಿದೆ. ಈ ತಪವನ್ನು ತಪಸ್ವೀ ಜಾತಿಯ ಗುರುಗಳು ಮಾಡುತ್ತಾರೆ.

**ಲಘು ಸಿಂಹ ನಿಷ್ಕ್ರೀಡಿತ ತಪ** - ಈ ತಪವನ್ನು ಯತಿಗಳು ಮಾಡುತ್ತಾರೆ. ಅದರ ವಿಧಿ - ೧ ❋ ೨ ❋ ೧ ❋ ೩ ❋ ೨ ❋ ೪ ❋ ೩ ❋ ೫ ❋ ೪ ❋ ೫ ❋ ೫ ❋ ೪ ❋ ೫ ❋ ೩ ❋ ೪ ❋ ೨ ❋ ೩ ❋ ೧ ❋ ೨ ❋ ೧ ❋ = ೬೦ ಉಪವಾಸ ಮತ್ತು ೨೦ ❋ ಪಾರಣೆ. ಈ ಪ್ರಕಾರ ಇದು ಲಘುನಿಷ್ಕ್ರೀಡಿತ ತಪವು ಅರವತ್ತು ಉಪವಾಸ ಮತ್ತು ಇಪ್ಪತ್ತು ಪಾರಣೆ - ಒಟ್ಟು ೮೦ ದಿನಗಳ ತಪವಿದೆ. ಇದನ್ನು ತಪಸ್ವೀ ಗುರುಗಳು ಮಾಡುತ್ತಾರೆ.

**ಮುಕ್ತಾವಳೀ ತಪ** - ಈ ತಪವನ್ನು ಯತಿಗಳು ಮಾಡುತ್ತಾರೆ. ಇದರ ವಿಧಿ - ೧ ❋ ೨ ❋ ೩ ❋ ೪ ❋ ೫ ❋ ೫ ❋ ೪ ❋ ೩ ❋ ೨ ❋ ೧ ❋ = ೨೫ ಉಪವಾಸ ೯ ❋ ಪಾರಣೆ. ಈ ಪ್ರಕಾರ ಈ ತಪವು ಇಪ್ಪತ್ತೈದು ಉಪವಾಸ ಮತ್ತು ಒಂಭತ್ತು ಪಾರಣೆ - ಒಟ್ಟು ಮೂವತ್ನಾಲ್ಕು ದಿನದ ತಪವಿದೆ.

**ರತ್ನಾವಳಿ ತಪ** - ಈ ತಪವನ್ನು ಯತಿಗಳು ಮಾಡುತ್ತಾರೆ. ಇದರ ವಿಧಿ - ೧ ❋ ೨ ❋ ೩ ❋ ೪ ❋ ೫ ❋ ೫ ❋ ೪ ❋ ೩ ❋ ೨ ❋ ೧ ❋ = ೩೦ ಉಪವಾಸ ೧೦ ❋ ಪಾರಣೆ - ಈ ಪ್ರಕಾರ ಈ ರತ್ನಾವಳೀ ತಪವು ಮೂವತ್ತು ಉಪವಾಸ ಮತ್ತು ಹತ್ತು ಪಾರಣೆ - ಒಟ್ಟು ನಲವತ್ತು ದಿನದ ತಪವಿದೆ. ತಪಸ್ವೀ ಗುರುಗಳು ಈತಪ ಮಾಡುತ್ತಾರೆ.

**ಕನಕಾವಳೀ ತಪ** - ಇದರ ವಿಧಿ - ಶುಕ್ಲ ಪಕ್ಷದ ಪ್ರತಿಪದೆ, ಪಂಚಮಿ ಹಾಗೂ ದಶಮಿ ಮತ್ತು ಕೃಷ್ಣಪಕ್ಷದ ದ್ವಿತಿಯಾ, ಷಷ್ಠೀ ಮತ್ತು ದ್ವಾದಶೀ. ಈ ಪ್ರಕಾರ ಇದರಲ್ಲಿ ಒಂದು ತಿಂಗಳಿನ ಆರು ಉಪವಾಸ, ಒಂದು ವರ್ಷದ ಎಪ್ಪತ್ತೆರಡು ಉಪವಾಸಗಳಾಗುತ್ತವೆ. ಇಂಥ ಕನಕಾವಳೀ ತಪವನ್ನು ತಪಸ್ವಿಗಳು ಮಾಡುತ್ತಾರೆ.

**ಆಚಾರ್ಯವರ್ಧನ ತಪ** - (ಆಚಾರವರ್ಧನ, ಆಚಾಂವಲವರ್ಧನ) - ಇದರ ವಿಧಿ - ೧ ❋ ೨ ❋ ೩ ❋ ೪ ❋ ೫ ❋ ೬ ❋ ೭ ❋ ೮ ❋ ೯ ❋ ೧೦ ❋ ೯ ❋ ೮ ❋ ೭ ❋ ೬ ❋ ೫ ❋ ೪ ❋ ೩ ❋ ೨ ❋ ೧ ❋ = ೧೦೦ ಉಪವಾಸ ೧೯ ❋ ಪಾರಣೆ. ಈ ಪ್ರಕಾರ ಇದು ನೂರು ಉಪವಾಸ ಮತ್ತು ಹತ್ತೊಂಭತ್ತು ಪಾರಣೆ - ಒಟ್ಟು ಒಂದು ನೂರಾ ಹತ್ತೊಂಭತ್ತು ದಿನದ ತಪವಿದೆ. ಇದನ್ನು ವೀತರಾಗೀ ತಪಸ್ವಿಗಳು ಮಾಡುತ್ತಾರೆ.

**ಸುದರ್ಶನ ತಪ** - ಇದರ ವಿಧಿ - ಔಪಶಮಿಕ ಸಮ್ಯಕ್ತ್ವ ಕ್ಷಾಯೋಪಶಮಿಕ ಸಮ್ಯಕ್ತ್ವ ಮತ್ತು ಕ್ಷಾಯಿಕ ಸಮ್ಯಕ್ತ್ವ - ಇವು ಮೂರು ಸಮ್ಯಕ್ತ್ವಗಳಿವೆ. ಇವು ಪ್ರತಿಯೊಂದು ಸಮ್ಯಕ್ತ್ವದ ಶಂಕೆ, ಕಾಂಕ್ಷಾದಿ ಎಂಟೆಂಟು ದೋಷಗಳಿವೆ. ಎಂದರೆ ಮೂರೂ ಸಮ್ಯಕ್ತ್ವದ ಇಪ್ಪತ್ನಾಲ್ಕು ಮಲದೋಷಗಳಾದವು. ಇವು ಇಪ್ಪತ್ನಾಲ್ಕು ದೋಷಗಳಿಗೆ ಸಂಬಂಧಿಸಿದ ಉಪವಾಸಗಳು ಏಕಾಂತರ (ಒಂದು ಉಪವಾಸ, ಒಂದು ಪಾರಣೆ) ಪೂರ್ವಕ - ಈ ಪ್ರಕಾರ ಈ ತಪವು ಒಟ್ಟು ನಲವತ್ತೆಂಟು ದಿವಸಗಳದ್ದಿರುತ್ತದೆ.

೩. ಇತ್ಯಾದಿ ತಪಗಳನ್ನು ತಪಸ್ವೀ ಗುರುಗಳು ಮಾಡುತ್ತಾರೆ. ಇವುಗಳನ್ನು ಹಾಗೂ ಇದೇ ಪ್ರಕಾರ ಇನ್ನೂ ಅನೇಕ ಮೂರು ಕಾಲ ಸಂಬಂಧದ ದುರ್ಧರ ತಪ ಮಾಡುತ್ತಾರೆ. ತಮ್ಮ ಪರಿಣತಿಯನ್ನು ಮಹಾಧರ್ಮ್ಯ-ಶುಕ್ಲಧ್ಯಾನಮಯವನ್ನಾಗಿಟ್ಟುಕೊಳ್ಳುತ್ತ ಸಮತೆಯ ವೃದ್ಧಿ ಮಾಡುತ್ತಾರೆ. ಅವರು ತಪಸ್ವೀ ಜಾತಿಯ ಮುನಿಗಳಿದ್ದಾರೆ.

೪. ಯಾವ ಯತಿಗಳು ಆಚಾರ್ಯರ ಹತ್ತಿರ ಶಾಸ್ತ್ರಾಭ್ಯಾಸ ಮಾಡುತ್ತಾರೆ ಅವರನ್ನು ಶಿಷ್ಯ ಜಾತಿಯ ಮುನಿಶೈಕ್ಷ್ಯರೆಂದು ಹೇಳುತ್ತಾರೆ. ಹೇಗೆ ಲೋಕದಲ್ಲಿ ತಂದೆಯು ಜೀವಂತವಾಗಿ ಇರುವವರೆಗೆ ಪುತ್ರನನ್ನು ಕುಮಾರನೆಂದು ಹೇಳುತ್ತಾರೆ; ಹಾಗೆಯೇ ಎಲ್ಲಿಯವರೆಗೆ ಆಚಾರ್ಯ ಗುರುಗಳಿದ್ದಾರೆ, ಅಲ್ಲಿಯವರೆಗೆ ಆ ಗುರುಗಳಿಂದ ಶಾಸ್ತ್ರಾಭ್ಯಾಸ ಮಾಡುವಂಥ ಮುನಿಗಳನ್ನು ಶಿಷ್ಯಜಾತಿಯ ಮುನಿ ಶೈಕ್ಷ್ಯರೆಂದು ಹೇಳಲಾಗುತ್ತದೆ.

೫. ವೀತರಾಗೀ, ಶರೀರ-ಭೋಗಗಳಿಂದ ಉದಾಸ, ಆತ್ಮರಸದಲ್ಲಿ ರತ, ಶಾಂತ ಚಿತ್ತದ ಧಾರಕ, ಅನೇಕ ರೋಗಗಳಿಂದ ಕೂಡಿದ ಶರೀರದ ಧಾರಕ ಮುನೀಶ್ವರರು ಗ್ಲಾನ ಜಾತಿಯ ಮುನಿಗಳಿದ್ದಾರೆ.

೬. ದೊಡ್ಡ-ದೊಡ್ಡ ಯತಿಗಳ ಸಂಘದಲ್ಲಿ ಗಣ ಜಾತಿಯ ಮುನಿಗಳಿರುತ್ತಾರೆ. ಇವರಲ್ಲಿ - ವಯಸ್ಸಿನಲ್ಲಿ ದೊಡ್ಡವರು, ಜ್ಞಾನದಲ್ಲಿ ದೊಡ್ಡವರು, ದೀಕ್ಷೆಯಲ್ಲಿ ದೊಡ್ಡವರೆಂದು ಮೂರು ಭೇದಗಳಿವೆ. ಇಂಥ ದೊಡ್ಡ-ದೊಡ್ಡ ಯತಿಗಳ ಸಮೂಹವನ್ನು ಗಣಜಾತಿಯ ಮುನಿಗಳೆಂದು ಹೇಳುತ್ತಾರೆ.

೭. ಋಷಿ ಮೊದಲಾದ ನಾಲ್ಕು ಪ್ರಕಾರದ ಶ್ರಮಣ ಸಮುದಾಯ, ಸಂಘ ಜಾತಿಯ ಮುನೀಶ್ವರರಿದ್ದಾರೆ. ಶ್ರಾವಕ, ಶ್ರಾವಿಕೆ, ಮುನಿ, ಆರ್ಯಿಕೆ - ಈ ನಾಲ್ಕೂ ಪ್ರಕಾರದ ಸಂಘದಲ್ಲಿ ಇರುವಂಥವರು ಸಂಘ ಜಾತಿಯ ಮುನೀಶ್ವರರಿದ್ದಾರೆ.

೮. ಯಾವ ಮುನಿಗಳು ಶಿಷ್ಯರುಗಳ ಆಮ್ನಾಯ ತಿಳಿಯುತ್ತಾರೆ, ದೀಕ್ಷೆ ಕೊಡುವ ವಿಧಿ ತಿಳಿಯುತ್ತಾರೆ ಇತ್ಯಾದಿ ಮುನಿಧರ್ಮದ ಕ್ರಿಯೆಯಲ್ಲಿ ಪ್ರವೀಣರಿದ್ದಾರೆ, ಅವರು ಕುಲ ಜಾತಿಯ ಮುನೀಶ್ವರರಿದ್ದಾರೆ.

೯. ಯಾರು ಬಹಳಷ್ಟು ಕಾಲದಿಂದ ದೀಕ್ಷಿತರಿದ್ದಾರೆ, ಅವರು ಸಾಧು ಜಾತಿಯ ಮುನೀಶ್ವರರಿದ್ದಾರೆ.

೧೦. ಲೋಕಸಮ್ಮತ ಸಾಧುಗಳು ಮನೋಜ್ಞ ಜಾತಿಯ ಮುನೀಶ್ವರರಿದ್ದಾರೆ. ಯಾರು ಬಾಹ್ಯ ಪರಿಗ್ರಹಗಳ ತ್ಯಾಗ ಮಾಡಿ, ನಗ್ನರಾಗಿ, ಗುರುಗಳ ಚರಣಕಮಲ ಸನ್ನಿಧಿಯಲ್ಲಿ ಮುನಿಪದ ಧಾರಣ ಮಾಡುವ ಸಲುವಾಗಿ ಸನ್ಮುಖರಿರುವವರಿಗೆ ಮುನಿಯಾಗುವ ಕ್ರಿಯೆ(ವಿಧಿ)ಪ್ರಕ್ರಿಯೆ ಮಾಡಿಸುತ್ತಿದ್ದಾರೆ, ಅವರು ಮನೋಜ್ಞ ಜಾತಿಯ ಮುನಿಗಳಿದ್ದಾರೆ.

- ಈ ಪ್ರಕಾರ ಹತ್ತು ಜಾತಿಯ ಮುನಿಗಳು ಪೂಜ್ಯರಿದ್ದಾರೆ-ಮುನಿ ಪದಗಳು ಪೂಜ್ಯವಿವೆ.

ಈ ಗುರುಗಳಿಗೆ ವಿಚಾರ ಮಾಡಲು ಯೋಗ್ಯ ಹತ್ತು ಸಮಾಚಾರಗಳಿವೆ. ಅವುಗಳ ವಿಚಾರವನ್ನು ಮಹಾಮುನಿಗಳು ಹೇಗೆ ಮಾಡುತ್ತಾರೆ ? ಎಲ್ಲಿ ಮಾಡುತ್ತಾರೆ ? ಎಂಬುದನ್ನು ಹೇಳುತ್ತಾರೆ - ಆಚಾರಸಾರ ಗ್ರಂಥದ ಅನುಸಾರ ನಾಮಗಳು - ಇಚ್ಛಾಕಾರ, ಮಿಥ್ಯಾಕಾರ, ತಥಾಕಾರ, ಇಚ್ಛಾವ್ರತ, ಆಶೀಷ, ನಿಷಧಿಕೆ, ಅಪ್ರಚ್ಛಿನ್ನ, ಪ್ರತಿಪ್ರಚ್ಛಿನ್ನ, ಆನ ಮಂತ್ರ , ಸಂಶ್ರಯ - ಸಮಾಚಾರ.

೧. ಪುಸ್ತಕ, ಆತಾಪನ, ಯೋಗ ಮೊದಲಾದ ಅನೇಕ ಶುಭಕ್ರಿಯೆಗಳು, ತಮ್ಮ ಹಿತದ ಸಲುವಾಗಿ ಕಲಿತುಕೊಳ್ಳುವಂಥವಿವೆ, ಅವುಗಳ ಯಾಚನೆಯನ್ನು ವಿನಯ ಸಹಿತರಾಗಿ ಆಚಾರ್ಯರಲ್ಲಿ ಮಾಡುವುದು ಇಚ್ಛಾಕಾರವಿದೆ, ಅಥವಾ ಉಪದೇಶವಿಲ್ಲದೆಯೇ ಸ್ವಯಂ ತಮ್ಮ ಇಚ್ಛೆಯಿಂದ ತಮ್ಮ ಹಿತ ಮಾಡುವಂಥ, ಪರಭವದಲ್ಲಿ ಸುಖ ಮಾಡುವಂಥ, ಪುಣ್ಯಕಾರಿ ವಸ್ತುಗಳ ವಿಚಾರ ಮಾಡಿ ಗುರುಗಳಲ್ಲಿ ಯಾಚನೆ ಮಾಡುವುದು ಇಚ್ಛಾಕಾರ ಸಮಾಚಾರವಿದೆ.

೨. ಮಹಾಧರ್ಮಮೂರ್ತಿ, ಉದಾಸ ವೃತ್ತಿಯ ಧಾರಕ, ನಾಲ್ಕು ಗತಿಗಳ ಜನ್ಮ-ಮರಣದಿಂದ ಭಯಭೀತರಾದ ಯತಿಗಳು ವಿಚಾರ ಮಾಡುವುದೇನೆಂದರೆ ನಾನು ನನ್ನ ಅಜ್ಞಾನ ಅವಸ್ಥೆಯಲ್ಲಿ ಅನೇಕ ಪಾಪ ಮಾಡಿದ್ದೇನೆ, ಅವುಗಳ ಫಲವನ್ನು ಈಗ ತಿಳಿದಿದ್ದೇನೆ. ಆ ಪಾಪದ ಅನಿಷ್ಟ ಫಲ ತಿಳಿದು ಭಯಭೀತರಾದ ಅವರು - 'ಪೂರ್ವದಲ್ಲಿ ಮಾಡಲಾದ ನನ್ನ ಪಾಪಗಳು ಮಿಥ್ಯೆಯಾಗಲಿ, ಈಗ ನಾನು ಪಾಪ ಮಾಡುವುದಿಲ್ಲ'ವೆಂದು ಹೇಳುತ್ತಾರೆ - ಈ ಪ್ರಕಾರ ಪಾಪದಿಂದ ಭಯಗೊಂಡು ನಿಃಶಲ್ಯರಾಗುವುದು ಮಿಥ್ಯಾಚಾರ ಸಮಾಚಾರವಿದೆ.

೩. ಎಲ್ಲಿ ತತ್ತ್ವ-ಪದಾರ್ಥಗಳ ಶ್ರದ್ಧೆ-ಕಥನವು ಸತ್ಯ , ಜಿನಾಜ್ಞೆಯ ಅನುಸಾರವಿರುತ್ತದೆ ಆ ಅಂಗಪೂರ್ವ ಶಾಸ್ತ್ರಗಳ ಶ್ರವಣವನ್ನು ಗುರುಮುಖದಿಂದ ವಿನಯಪೂರ್ವಕ ಮಾಡುವುದು ಮತ್ತು ಸ್ವಯಂ ತಾವು ಕೂಡ ಇತರ-ಸಭಾಜನರಿಗೆ ಹಿತಕಾರಕ ಉಪದೇಶವನ್ನು ಜಿನಾಜ್ಞೆಯ ಅನುಸಾರ ಮಾಡುವುದು; ಹಾಗೇನಾದರೂ ಒಂದುವೇಳೆ ತಮ್ಮ ಇಚ್ಛೆಯಿಂದ ಮನಸ್ಸಿಗೆ ಬಂದಂತೆ ಉಪದೇಶ ಮಾಡಿದರೆ ಅವನು ಮಹಾಪಾಪಿಯಿದ್ದಾನೆ, ಆದುದರಿಂದ ಜೀವರುಗಳಿಗೆ ದಯಾಪೂರ್ವಕ ಹೇಳಬೇಕು, ಜಿನಾಜ್ಞೆಯೊಂದಿಗೆ ಸತ್ಯ ಹೇಳಬೇಕು. ತಮ್ಮ ಬುದ್ಧಿಯಿಂದ ಕಾಲ್ಪನಿಕವಾಗಿ

ಹೇಳಬಾರದು. ಸ್ವಯಂ ತಾವು ಕೂಡ ಜಿನಾಜ್ಞೆಯ ಅನುಸಾರ ಶ್ರದ್ಧೆ ಮಾಡಬೇಕು. ಬೇರೆಯವರಿಗೂ ಜಿನಾಜ್ಞೆಯ ಅನುಸಾರವೇ ಧರ್ಮಮಾರ್ಗವನ್ನು ತಿಳಿಸಿಕೊಡಬೇಕು. ಇದೆಲ್ಲವೂ ತಥಾಕಾರ ಸಮಾಚಾರವಿದೆ.

೪. ಪೂರ್ವದಲ್ಲಿ ಹೇಳಲಾದ ಗುರುಗಳ ಹತ್ತಿರ ಆತಾಪನ ಯೋಗ, ಉಪವಾಸಾದಿ ತಪ, ಧರ್ಮೋಪಕರಣ ಪಿಂಛಿ, ಕಮಂಡಲು, ಪುಸ್ತಕಾದಿ ಹಾಗೂ ಮಹಾವ್ರತಾದಿರೂಪ ಮೋಕ್ಷಮಾರ್ಗದ ಸಾಧಕವಿರುವ ಕ್ರಿಯೆಗಳಲ್ಲಿ ಸ್ವೇಚ್ಛೆಯ ರೂಪದಿಂದ ಪ್ರವರ್ತಿಸದಿರುವುದು; ಸಂಪೂರ್ಣ ಮುನಿಧರ್ಮದ ಸಾಧಕ ಪ್ರವೃತ್ತಿಯಲ್ಲಿ ಪ್ರಮಾದವನ್ನು ತೊರೆದು ಸಾಹಸಿಯಾಗಿ, ಪಾಪದಿಂದ ಭಯಭೀತನಾಗಿರುವುದು, ವ್ರತದ ಲೋಭಿ ಧರ್ಮಾತ್ಮಾ ಶಿಷ್ಯನು ಗುರುಗಳ ಆಜ್ಞೆಯ ಅನುಸಾರ ಪ್ರವರ್ತನೆ ಮಾಡುತ್ತಾನೆ. ಅದನ್ನು ಇಚ್ಛಾವ್ರತ ಸಮಾಚಾರವೆಂದು ಹೇಳುತ್ತಾರೆ.

೫. ಶಿಷ್ಯನು ಗುರುಗಳಲ್ಲಿ ತೀರ್ಥಾದಿಗಳ ಕಡೆಗೆ ಗಮನದ ಆಜ್ಞೆಯನ್ನು ವಿನಯಪೂರ್ವಕ ಹೀಗೆ ಕೇಳಬೇಕು - ಓ ಪ್ರಭು ! ಇದುವರೆಗೆ ತಮ್ಮ ಪದಕಮಲಗಳ ಆಶ್ರಯದಲ್ಲಿದ್ದುಕೊಂಡು ಸಂಯಮ ನಿಧಿಯನ್ನು ಪ್ರಾಪ್ತ ಮಾಡಿಕೊಂಡಿದ್ದೇನೆ. ಈಗ ನನ್ನ ಮನೋರಥವು ಸಿದ್ಧಕ್ಷೇತ್ರಗಳ ಯಾತ್ರೆಯದಿದೆ; ಅದಕ್ಕಾಗಿ ನನ್ನ ಮೇಲೆ ದಯೆ ಮಾಡಿ ನನಗೆ ಆಜ್ಞೆ ನೀಡಿರಿ - ಈ ಪ್ರಕಾರ ಭಕ್ತಿಸಹಿತ ವಿನಯಪೂರ್ವಕ ಪ್ರಾರ್ಥಿಸಿ ಮೌನರಾಗಬೇಕು, ಗುರುಗಳ ಹತ್ತಿರ ಕೈಮುಗಿದು ನಿಂತುಕೊಳ್ಳಬೇಕು ಅಥವಾ ಯಥಾಯೋಗ್ಯ ಅಂತರದಲ್ಲಿ ಕುಳಿತುಕೊಳ್ಳಬೇಕು. ಆಚಾರ್ಯರು ಶಿಷ್ಯನ ಇಂಥ ವಚನಗಳನ್ನಾಲಿಸಿ, ಶಿಷ್ಯನ ಕುರಿತು ದಯೆಯ ಭಾವಧಾರಣ ಮಾಡಿ, ಅವನ ಚಾರಿತ್ರದ ವೃದ್ಧಿಯ ಇಚ್ಛೆಯಿಂದ ಮಾಂಗಲಿಕ ವಚನ ಹೇಳುತ್ತಾರೆ - 'ಎಲೈ ವತ್ಸನೇ ! ಎಲೈ ಆರ್ಯನೇ !! ವ್ಯಂತರಾದಿ ಉಪಸರ್ಗದಿಂದ ರಹಿತವಾಗಿ ನಿನ್ನ ಸಂಯಮದ ಪ್ರತಿಪಾಲನೆಯಾಗಲಿ,'-ಈ ಪ್ರಕಾರ ಆಚಾರ್ಯರು ಶಿಷ್ಯನಿಗೆ ಮೋಕ್ಷರೂಪೀ ಲಕ್ಷ್ಮಿಯ ಪ್ರಾಪ್ತಿಯನ್ನೇ ಬಯಸುತ್ತ ಹರಿಸುತ್ತಾರೆ. ಅದು ಆಶೀಷ ಸಮಾಚಾರವಿದೆ.

೬. ಮುನೀಶ್ವರರು ಎಲ್ಲೆಲ್ಲಿ ಹೋಗಿ ವಿರಾಜಿಸುತ್ತಾರೆ ಆ ಸ್ಥಾನಗಳ ಋಷಿ, ದೇವ, ಮನುಷ್ಯ ಮೊದಲಾದವರ ಕುರಿತು ಈ ವಚನಗಳಿಂದ ಹೇಳುತ್ತಾರೆ - 'ನಾವು ಇಲ್ಲಿ ತಮ್ಮ ಆಜ್ಞೆ ಪಡೆದು ಉಳಿಯುತ್ತಿದ್ದೇವೆ'-ಎಂದು ಹೇಳಿ ವಿಶ್ರಾಮ ಮಾಡುತ್ತಾರೆ. ಇದು ನಿಷಧಿಕೆ ಸಮಾಚಾರವಿದೆ. ಈ ನಿಷಧಿಕೆಯ ಮೂಲಕ ಮುನಿಗಳು ಗುಹೆ, ಸ್ಮಶಾನ, ವೃಕ್ಷದ ಪೊಟರೆ, ಮಂಟಪ, ವಸತಿಕೆ ಇತ್ಯಾದಿ ಸ್ಥಾನಗಳಲ್ಲಿ ದೇವ-ಮನುಷ್ಯಾದಿಕರ ಆಜ್ಞೆಯೊಂದಿಗೆ ಉಳಿಯುತ್ತಾರೆ.

ಮೇಲೆ ಹೇಳಲಾದ ಆಶೀಷ ಸಮಾಚಾರ ಮತ್ತೆ ಎಲ್ಲಿ ಮಾಡುವುದು ? ಎಂಬುದನ್ನು ಹೇಳುತ್ತಾರೆ -

ಮುನೀಶ್ವರರು ಎಲ್ಲಿ ಉಳಿದುಕೊಂಡಿದ್ದರು, ಆ ಸ್ಥಾನಗಳಿಂದ ಯಾವಾಗ ಬೇರೆ ಸ್ಥಾನಗಳಿಗೆ ಹೋಗುತ್ತಾರೆ, ಆಗ ಹೋಗುವಾಗ ಯತೀಶ್ವರರು ಅಲ್ಲಿಯ ರಕ್ಷಕ ದೇವ ಮೊದಲಾದವರಿಗೆ 'ನಾವು ತಮ್ಮ ಸ್ಥಾನದಲ್ಲಿ ಉಳಿದೆವು ಈಗ ನಾವು ಇಲ್ಲಿಂದ ಹೋಗುತ್ತಿದ್ದೇವೆ' ಎಂದು ಹಿತ-ಮಿತ-ಪ್ರಿಯ ವಚನಗಳನ್ನು ಹೇಳಿ ಗಮನ ಮಾಡುತ್ತಾರೆ. ಅದನ್ನು ಆಶೀಷವೆಂದು ಹೇಳುತ್ತಾರೆ.

೭. ಯಾವಾಗ ಯೋರೋ ಮುನಿಗಳಿಗೆ ತಮ್ಮ ಕಾರ್ಯ ಮಾಡುವ ಪ್ರಯೋಜನವಿದ್ದರೆ ಅದರ ಆರಂಭದಲ್ಲಿ ಅರ್ಥಾತ್ ಪಠನ, ಗಮನ ಅಥವಾ ಯೋಗಗ್ರಹಣ ಮೊದಲಾದ ಕಾರ್ಯಗಳಲ್ಲಿ ಆಚಾರ್ಯ, ಗುರು ಮೊದಲಾದವರಿಗೆ ವಂದನೆ ಮಾಡಿ ಅವರನ್ನು ಕೇಳುವುದು, ಅದು ಅಪ್ರಚ್ಛಿನ್ನ(ಆಪೃಚ್ಛಾ) ಸಮಾಚಾರವಿದೆ.

೮. ಯತಿಗಳಿಗೆ ತಮ್ಮ ಕೇಶಲೋಂಚ ಮಾಡಿಕೊಳ್ಳುವುದಿದ್ದರೆ ಅಥವಾ ನವೀನ ಗ್ರಂಥ ಬರೆಯುವುದಿದ್ದರೆ ಅಥವಾ ಯಾವುದಾದರೂ ಅಪೂರ್ವಗ್ರಂಥ ಓದುವುದಿದ್ದರೆ ಅಥವ ಆಹಾರದ ಸಲುವಾಗಿ ನಗರದೊಳಗೆ ಹೋಗುವುದಿದ್ದರೆ ಇತ್ಯಾದಿ ಯಾವುದಾದರೂ ಮಹಾಕಾರ್ಯ ಮಾಡುವುದಿದ್ದರೆ, ಆಚಾರ್ಯರ ಹತ್ತಿರ ಹೋಗಿ, ವಿನಯ ಸಹಿತ ಕೈಮುಗಿದು ಮಸ್ತಕ ಮಣಿಸಿ, ಅವರಲ್ಲಿ ಆಜ್ಞೆ ಕೇಳುತ್ತಾರೆ. ನಂತರ ಗುರುಗಳ ಆಜ್ಞೆಯು ಹೇಗಿರುತ್ತದೆ ಹಾಗೆಯೇ - ಅದೇ ಪ್ರಕಾರ ಮಾಡುತ್ತಾರೆ, ಇದು ಪ್ರತಿಪ್ರಚ್ಛಿನ್ನ ಸಮಾಚಾರವಿದೆ.

೯. ಒಂದುವೇಳೆ ಯಾರೋ ಮುನಿಗಳಿಗೆ ಯಾವುದೋ ಶಾಸ್ತ್ರದ ಅವಶ್ಯಕತೆಯಿದ್ದರೆ ಮತ್ತು ಅದು ತಮ್ಮ ಗುರುಗಳ ಹತ್ತಿರ ಇದ್ದರೆ, ಅವರ ಆಜ್ಞೆ ಪಡೆದು ಅದನ್ನು ತಗೆದುಕೊಳ್ಳಬೇಕು. ಒಂದುವೇಳೆ ತಮ್ಮ ಗುರುಗಳ ಹತ್ತಿರ ಇಲ್ಲದಿದ್ದರೆ, ಸಂಘದಲ್ಲಿ ಆಚಾರ್ಯರ ಹತ್ತಿರ ಇದ್ದರೆ ಶಿಷ್ಯನು ಗುರುಗಳ ಆಜ್ಞೆ ಪಡೆದೇ ಅವರ ಹತ್ತಿರದಿಂದ ತಗೆದುಕೊಳ್ಳಬೇಕು. ಕೇವಲ ತನ್ನ ಇಚ್ಛೆಯಿಂದಲೇ ಅವರಲ್ಲಿ ಬೇಡಿಕೆ ಸಲ್ಲಿಸದಿರುವುದು ಅನಮಂತ್ರ ಸಮಾಚಾರವಿದೆ.

೧೦. ಸಂಶ್ರಯ ಸಮಾಚಾರವು - ೧. ವಿನಯ ಸಂಶ್ರಯ, ೨. ಕ್ಷೇತ್ರ ಸಂಶ್ರಯ, ೩. ಮಾರ್ಗಸಂಶ್ರಯ, ೪. ಸೂತ್ರ ಸಂಶ್ರಯ, ೫. ಸುಖ-ದುಃಖ ಸಂಶ್ರಯವೆಂದು ಐದು ಪ್ರಕಾರದ್ದಿವೆ.

೧. ವಿನಯ ಸಂಶ್ರಯ -ಒಂದವೇಳೆ ಯಾರೋ ಮುನೀಶ್ವರರು ಅನ್ಯದೇಶದಿಂದ ಬರುತ್ತಿದ್ದರೆ, ಯಾವ ಸಂಘದಲ್ಲಿ ಬರುತ್ತಿದ್ದಾರೆ, ಆ ಸಂಘದ ಯತಿ, ಆಚಾರ್ಯರು ಮಹಾ ಹರ್ಷದಿಂದ ಪ್ರಮಾದರಹಿತರಾಗಿ ಬರುತ್ತಿರುವ ಮುನಿಯ ಸ್ವಾಗತ-ಸತ್ಕಾರದ ಸಲುವಾಗಿ ಏಳು ಹೆಜ್ಜೆ ಮುಂದೆ ಹೋಗಿ ಯಥಾಯೋಗ್ಯ ನಮಸ್ಕಾರ ಮಾಡಬೇಕು. ಬಂದಿರುವ ಮುನಿರಾಜರ ಮಾರ್ಗಾಯಾಸದ ನಿವಾರಣೆಯ ಉದ್ದೇಶವಾಗಿ ಯಥಾಯೋಗ್ಯ ಕುಳಿತುಕೊಳ್ಳುವ ಸ್ಥಾನ ನೀಡಬೇಕು. ನಂತರ ಬಂದಿರುವ ಮುನಿಯ ಚಾರಿತ್ರದ ಕುಶಲತೆ ವಿಚಾರಿಸುತ್ತ 'ಓ ಪ್ರಭು ! ತಮ್ಮ ರತ್ನತ್ರಯವು ಕುಶಲವಿದೆಯಲ್ಲವೇನು ? - ಎಂದು ಕೇಳಬೇಕು.

ತಾತ್ಪರ್ಯವೆಂದರೆ - 'ತಮ್ಮ ಮೋಕ್ಷಮಾರ್ಗವು ನಿರತಿಚಾರವಾಗಿ ಸಾಗುತ್ತಿರಬಹುದು' - ಈ ಪ್ರಕಾರ ಬಂದಿರುವ ಮುನಿರಾಜರೊಂದಿಗೆ ಮಹಾವಿನಯದೊಂದಿಗೆ ಮಾತನಾಡುತ್ತ ತಮ್ಮ ಧರ್ಮಾನುರಾಗವನ್ನು ಪ್ರಕಟಪಡಿಸುತ್ತ ಮನ, ವಚನ, ಕಾಯದ ಕ್ರಿಯೆಯಿಂದ ಅವರಿಗೆ ಅನುಕೂಲ ಪ್ರವೃತ್ತಿ ಮಾಡುತ್ತಾರೆ. ಅದು ವಿನಯ ಸಂಶ್ರಯವಿದೆ.

೨. ಕ್ಷೇತ್ರಸಂಶ್ರಯ - ಯಾವ ದೇಶ, ಕ್ಷೇತ್ರದ ದೊರೆಯು ಪಾಪಿಯಿದ್ದಾನೆ, ಅನ್ಯಾಯಿ-ಅನಾಚಾರಿಯಾಗಿದ್ದಾನೆ, ಆ ಕ್ಷೇತ್ರದಲ್ಲಿ ಯತಿಗಳು ಇರುವುದಿಲ್ಲ. ಯಾವ ದೇಶದ ರಕ್ಷಕರು ಯಾರೂ ಇರುವುದಿಲ್ಲ-ರಾಜರಹಿತ ಕ್ಷೇತ್ರವಿದ್ದರೆ ಆ ದೇಶದಲ್ಲಿಯೂ ಮುನಿಗಳು ವಾಸಿಸುವುದಿಲ್ಲ. ಯಾವ ದೇಶ-ನಗರದಲ್ಲಿ ಜೀವಹಿಂಸೆಯು ವಿಶೇಷವಿದ್ದರೆ ಅಥವಾ ಯಾವ ದೇಶದಲ್ಲಿ ನಿರ್ದಯಿ, ಪಾಪೀ ಜೀವಗಳ ವೃದ್ಧಿಯಾಗುತ್ತಿದೆ, ಎಲ್ಲಿ ಧರ್ಮರಹಿತ ವಿಪರೀತ ಜೀವಗಳ ಅಧಿ ಕಾರವಿರುತ್ತದೆ - ಅಂಥ ಕ್ಷೇತ್ರಗಳಲ್ಲಿಯೂ ಯತೀಶ್ವರರು ವಾಸ ಮಾಡುವುದಿಲ್ಲ. ಯಾವ ದೇಶದಲ್ಲಿ ದೀಕ್ಷೆ ತಗೆದುಕೊಳ್ಳಲು ಯೋಗ್ಯ ಮನುಷ್ಯರಿರುವುದಿಲ್ಲ ಎಂದರೆ ಅಲ್ಲಿಯ ಜನರು ತೀವ್ರ ಕಷಾಯಿಗಳಿದ್ದರೆ, ಭೋಗರತರಿದ್ದರೆ, ಅನಾಚಾರಿಗಳಾಗಿದ್ದರೆ, ಶುಭ ಆಚಾರ ರಹಿತರಾಗಿದ್ದರೆ, ದೀಕ್ಷಾ ಯೋಗ್ಯರಿಲ್ಲದಿದ್ದರೆ ಆ ಕ್ಷೇತ್ರದಲ್ಲಿ ಜಗತ್ ಗುರುಗಳು ಇರುವುದಿಲ್ಲ. ಬರಗಾಲ ಬಿದ್ದಿದ್ದರೆ, ಆಹಾರ-ಧಾನ್ಯಾದಿಗಳ ಕೊರತೆಯಿದ್ದು ಅನೇಕ ಜೀವರುಗಳು ದುಃಖಿಯಾಗಿರುತ್ತಿದ್ದರೆ - ಇತ್ಯಾದಿ ಉಪದ್ರವ ಸಹಿತ ಕ್ಷೇತ್ರದಲ್ಲಿ ಮುನಿಗಳ ಧರ್ಮಧ್ಯಾನವು ಸಾಧಿಸುವುದಿಲ್ಲ. ಅದರಿಂದ ದಯೆಯ ಭಂಡಾರರೂ, ಸಂಯಮದ ಲೋಭಿಗಳೂ ಆದ ಮುನೀಶ್ವರರು ಅಂಥ ಕ್ಷೇತ್ರಗಳಲ್ಲಿ ಇರುವುದಿಲ್ಲ. ಒಂದುವೇಳೆ ಎಂದಾದರೂ ಉಳಿದುಕೊಂಡರೆ ಅವರ ಸಂಯಮವು ನಷ್ಟವಾಗುವುದು. ಅದಕ್ಕಾಗಿ ಅಂಥ ಕುಕ್ಷೇತ್ರಗಳಲ್ಲಿ ಯೋಗೀಶ್ವರರು ಉಳಿಯುವುದಿಲ್ಲ. ಎಲ್ಲಿ ಯಾವುದೇ ಪ್ರಕಾರದ ಉಪದ್ರವವಿರುವುದಿಲ್ಲ, ಯಾವ ಕ್ಷೇತ್ರದ ದೊರೆಯು ಧರ್ಮಾತ್ಮನಿದ್ದಾನೆ, ದೇಶದ ಪ್ರಜೆಗಳು ಧರ್ಮಾತ್ಮರಿದ್ದಾರೆ, ದಯೆಯುಳ್ಳವರಿದ್ದಾರೆ, ದೀಕ್ಷೆಗೆ ಯೋಗ್ಯರಿದ್ದಾರೆ, ಸಂಯಮಿ ಜೀವರುಗಳ ಪ್ರವೃತ್ತಿಯಿದೆ, ಶುಭ ಆಚರಣೆಯುಳ್ಳವರಿದ್ದಾರೆ - ಇತ್ಯಾದಿ ಶುಭ ಕ್ಷೇತ್ರದ ವಿಚಾರ ಮಾಡಿ - ತಮ್ಮ ಸಂಯಮದ ರಕ್ಷಣೆಗೆ ಯೋಗ್ಯವಿರುವ ಕ್ಷೇತ್ರದಲ್ಲಿ ಮುನೀಶ್ವರರು ಇರುತ್ತಾರೆ, ಇದು ಕ್ಷೇತ್ರ ಸಂಶ್ರಯವಿದೆ.

೩. ಮಾರ್ಗಸಂಶ್ರಯ - ಯಾವಾಗ ಯಾರಾದರೂ ಮುನಿಗಳು ದೇಶಾಂತರ ತೀರ್ಥವಿಹಾರ ಮಾಡುತ್ತ ಬಹು ದಿನಗಳ ನಂತರ ದೊರೆತರೆ ಅಥವಾ ಅಪೂರ್ವ(ನವೀನ) ಮಿಲನವಾದರೆ, ಆಗ ಯತೀಶ್ವರರು ಪರಸ್ಪರ ಸುಖ-ದುಃಖ ಪರೀಷಹಾದಿಗಳಲ್ಲಿ ಚಾರಿತ್ರದ ಕುಶಲತೆ ವಿಚಾರಿಸುತ್ತಾರೆ. ಇದು ಮಾರ್ಗಸಂಶ್ರಯವಿದೆ.

೪. ಸುಖ-ದುಃಖ ಸಂಶ್ರಯ - ಒಂದುವೇಳೆ ಯಾರೋ ಮಹಾಮುನಿಗಳ ಮೇಲೆ ದೇವ, ಮನುಷ್ಯ, ಪಶುಕೃತ ಘೋರ ಉಪಸರ್ಗವಾಗಿದ್ದರೆ, ಅದರಿಂದ ಪೀಡಿತವಾಗಿರುವ ಅವರನ್ನು ಕಂಡು ಅವರ ಪರಿಣಾಮಗಳ ಸ್ಥಿತಿಕರಣದ ಉದ್ದೇಶದಿಂದ ಔಷಧ, ಆಹಾರ, ಉಳಿದುಕೊಳ್ಳುವ ಸ್ಥಾನ ಮೊದಲಾದವುಗಳ ವ್ಯವಸ್ಥೆ ಮಾಡಿ ಅನುಕೂಲತೆಯನ್ನುಂಟು ಮಾಡುವುದು, ಸ್ಥಿತಿಕರಣದ ಉದ್ದೇಶದಿಂದ ವಿನಯಸಹಿತ ಧರ್ಮಾಮೃತದ ಧಾರೆಯನ್ನು ಸುರಿಸುತ್ತ ಓ ಯತಿನಾಥರೆ! ನಾವು ದುಃಖ-ಸುಖದಲ್ಲಿ ತಮ್ಮೊಂದಿಗೆ ಇದ್ದೇವೆ, ಇತ್ಯಾದಿ ಹಿತ-ಮಿತ ವಚನಗಳನ್ನಾಡುವುದು ಅದು ಸುಖ-ದುಃಖ ಸಂಶ್ರಯವಿದೆ.

೫. ಸೂತ್ರ ಸಂಶ್ರಯ - ಯಾವನೋ ಶಿಷ್ಯನು ಯಾರೋ ಆಚಾರ್ಯರ ಹತ್ತಿರ ಅನೇಕ ಶಾಸ್ತ್ರಗಳ ಅಭ್ಯಾಸ ಮಾಡಿದ್ದಾನೆ, ಶ್ರುತ ಸಮುದ್ರದ ಪಾರಂಗತನಿದ್ದಾನೆ, ಬಹು ಸಮಯದವರೆಗೆ ಪಠನ-ಪಾಠನ ಮಾಡಿದ್ದಾನೆ ಹಾಗೂ ಅನೇಕ ಶಾಸ್ತ್ರಗಳನ್ನು ಗುರುಮುಖದಿಂದ ಆಲಿಸಿ ಅವುಗಳ ರಹಸ್ಯ ಪಡೆದು ಸುಖಿಯಾಗಿದ್ದಾನೆ. ನಂತರ ಯಾರೋ ಅನ್ಯ ಆಚಾರ್ಯರ ಜ್ಞಾನದ ಮಹಿಮೆಯನ್ನಾಲಿಸಿ ಅವರಿಂದ ಶಾಸ್ತ್ರವನ್ನು ಆಲಿಸುವ ಇಚ್ಛೆ ಅಥವಾ ಅನ್ಯ ಮತದ ಷಟ್‌ದರ್ಶನದ ಅನೇಕ ಶಾಸ್ತ್ರಗಳ ರಹಸ್ಯ ತಿಳಿಯುವ ಇಚ್ಛೆ ಅಥವಾ ತೀರ್ಥವಿಹಾರದ ಇಚ್ಛೆಯಾಗುವುದರಿಂದ - ಇತ್ಯಾದಿ ಪ್ರಕಾರದ ತನ್ನ ಮನಸ್ಸಿನ ರಹಸ್ಯವನ್ನು ಗುರುಗಳಿಗೆ ಹೇಳುತ್ತಾನೆ. ನಂತರ ಆಚಾರ್ಯರ ಆಜ್ಞೆಯೊಂದಿಗೆ ಓರ್ವ ಮುನಿ, ಈರ್ವರು ಮುನಿಗಳು ಅಥವಾ ಅನೇಕ ಮುನಿಗಳೊಂದಿಗೆ ವಿಹಾರ ಮಾಡುತ್ತಾನೆ. ಇದು ಸೂತ್ರಸಂಶ್ರಯವಿದೆ.

ಈ ಪ್ರಕಾರ ಹತ್ತು ಸಮಾಚಾರಗಳು ಮುನೀಶ್ವರರಿಗೆ ವಿಚಾರ ಮಾಡಲು ಯೋಗ್ಯವಿವೆ. ಉಪರೋಕ್ತ ಹತ್ತು ಭೇದಗಳು ಗುರುಗಳಿಂದ ಹೇಳಿರುವಂಥವಿವೆ. ಈ ಗುರುಗಳು ಯಾವಾಗ ಭಗವಂತರ ದರ್ಶನಾರ್ಥವಾಗಿ ಮಂದಿರದೊಳಗೆ ಪ್ರವೇಶ ಮಾಡುತ್ತಾರೆ ಆಗ ಹೇಗೆ ಮಾಡುತ್ತಾರೆಂಬುದನ್ನು 'ಆಚಾರಸಾರ'ದ ಮಾಧ್ಯಮದಿಂದ ಹೇಳುತ್ತಾರೆ-

**ಸರ್ವವ್ಯಾಸಂಗನಿರ್ಮುಕ್ತಃ ಸಶುದ್ಧಕರಣತ್ರಯಂ ।**
**ಧೌತಹಸ್ತಪದದ್ವಂದಃ ಪರಮಾನಂದಮಂದಿಮ್ ॥೧॥**
**ಚೈತ್ಯಚೈತ್ಯಾಲಯಾದೀನಾಂ ಸ್ತವನಾದೌ ಕೃತೋದ್ಯಮಃ ।**
**ಭವೇದನಂತ ಸಂಸಾರ ಸಂತಾನೋಚ್ಛಿತ್ತಯೇ ಯತಿಃ ॥೨॥**

**ಅರ್ಥ** - ಸರ್ವಸಂಗದಿಂದ ರಹಿತರಾಗಿ ಮನ-ವಚನ-ಕಾಯ ಶುದ್ಧ ಮಾಡಿಕೊಂಡು; ಎರಡೂ ಕೈ-ಕಾಲುಗಳನ್ನು ತೊಳೆದುಕೊಂಡು ಮಹಾಹರ್ಷಸಹಿತರಾಗಿ ಚೈತ್ಯಾಲಯದೊಳಗೆ ಹೋಗಿ ಜಿನಬಿಂಬದ ಸ್ತುತಿ ಮಾಡಬೇಕು- ಹೀಗೆ ಯತಿಗಳು ಅನಂತ-ಸಂಸಾರ ಪರಂಪರೆಯ ಭೇದನೆ ಮಾಡುತ್ತಾರೆ.

ಭಾವಾರ್ಥ :- ಯಾವಾಗ ಮಹಾಮುನಿಗಳು ಜಿನೇಂದ್ರ ಭಗವಂತರ ದರ್ಶನದ ಉದ್ದೇಶದಿಂದ ಚೈತ್ಯಾಲಯದಲ್ಲಿ ಪ್ರವೇಶ ಮಾಡುತ್ತಾರೆ, ಆಗ ಕಮಂಡಲು, ಪುಸ್ತಕಾದಿ ಯಾವ ಪರಿಗ್ರಹವಿದೆ ಅದನ್ನು ಬಾಹ್ಯಸ್ಥಾನ, ಏಕಾಂತ ಉಚ್ಚಸ್ಥಾನದ ಮೇಲಿಟ್ಟು ಸ್ವಯಂ ನಿಷ್ಪರಿಗ್ರಹಿಯಾಗಿ; ಮನ-ವಚನ-ಕಾಯ ಶುದ್ಧ ಮಾಡಿಕೊಂಡು, ತಮ್ಮ ಎರಡೂ ಕೈ-ಕಾಲುಗಳನ್ನು ಪ್ರಾಸುಕ ಜಲದಿಂದ ತೊಳೆದುಕೊಂಡು, ಹರ್ಷ ಸಹಿತರಾಗಿ ಪರಮಾನಂದಿತರಾಗುತ್ತ ಈರ್ಯಾ ಸಮಿತಿಪೂರ್ವಕ ಜಿನಮಂದಿರದಲ್ಲಿ ಪ್ರವೇಶ ಮಾಡಬೇಕು. ನಂತರ ಭಗವಂತರ ಸ್ತುತಿ ಮಾಡುವ ಕಾರ್ಯ ಮಾಡಬೇಕು. ಈ ಭಗವಂತರ ಸ್ತುತಿಯು ಅನಂತ ಸಂಸಾರದ - ಭವಗಳ ಜನ್ಮ-ಮರಣರೂಪದ ಸಂಕಲೆಯನ್ನು ಭೇದಿಸುವಂಥದ್ದಿದೆ.

ಹೇಗೆ ಸ್ತುತಿ ಮಾಡಬೇಕೆಂಬುದನ್ನು ಹೇಳುತ್ತಾರೆ -

**ತಥಾರ್ಹ ದಾದಣಶ್ಚಾಸ್ತರಾಗದ್ವೇಷ ಪ್ರವೃತ್ತಯಃ ।**
**ಭಕ್ತಿಃ ಭತ್ತಯನುಸಾರೇಣ, ಸ್ವರ್ಗಮೋಕ್ಷಫಲಪ್ರದಾ ॥೩॥**

**ಅರ್ಥ :-** ಸ್ವಯಂ ಭಕ್ತಿರಸದಿಂದ ತುಂಬಿಕೊಂಡ ಮುನೀಶ್ವರರು, ಭಗವಂತರ ಸ್ತುತಿ ಮಾಡಬೇಕು. ಓ ಭಗವಾನ! ತಾವು ಅಷ್ಟಕರ್ಮರಹಿತ ವೀತರಾಗೀ ಇರುವಿರಿ, ತಮ್ಮ ರಾಗ-ದ್ವೇಷ ಭಾವಗಳು ನಷ್ಟವಾಗಿ ಹೋಗಿವೆ. ಅದಕ್ಕಾಗಿ ಓ ಭಗವಾನ ! ತಾವಂತೂ ಭಕ್ತರಿಗೆ ಸ್ವರ್ಗ-ಮೋಕ್ಷಗಳನ್ನು ಮಾಡುವುದಿಲ್ಲ; ಆದರೆ ನಮ್ಮಂಥ ಭಕ್ತಜನರ ಭಾವಗಳ ಪ್ರವೃತ್ತಿಯು ತಮ್ಮ ಚರಣ ಕಮಲಗಳಲ್ಲಿ ಭಕ್ತಿರೂಪವಾಯಿತು. ಆ ಭಾವಭಕ್ತಿಯೇ ಭಕ್ತರಿಗೆ ಸ್ವರ್ಗ-ಮೋಕ್ಷಗಳ ದಾತೃವಿದೆ. ತಾವಂತೂ ವೀತರಾಗಿಗಳೇ ಇರುವಿರಿ; ಆದರೆ ಭಕ್ತಿಯ ಮಹಿಮೆಯು ಅಪಾರವಿದೆ.

**ಘೋರ ಸಂಸಾರಗಂಭೀರೇ ವಾರಿರಾಶೌ ನಿಮಜ್ಜತಾಮ್ ।**
**ದತ್ತಹಸ್ತಾವಲಂಬಸ್ಯ ಜಿನಸ್ಯೈಕ್ಷಣಾರ್ಥಮಾಗಮೇತ್ ॥೪॥**

**ಅರ್ಥ :-** ಓ ಭಗವಾನ್ ! ಸಂಸಾರ ಸಾಗರವು ದುಃಖರೂಪದ ಜಲದಿಂದ ತುಂಬಿಕೊಂಡಿದೆ. ಇದರಲ್ಲಿ ನಮ್ಮಂಥ ಮುಳುಗುತ್ತಿರುವ ಸಂಸಾರೀ ಜೀವಗಳಿಗೆ ಹಸ್ತಾವಲಂಬನ ನೀಡಿ ತಾವು ಹೊರಗೆ ತಗೆಯುವಿರಿ; ಅದಕ್ಕಾಗಿ ತಮ್ಮ ದರ್ಶನದ ಸಲುವಾಗಿ ಭಕ್ತ ಜನರು ಬರುತ್ತಾರೆ.

**ಭಾವಾರ್ಥ :-** ಜಿನದೇವರ ಸ್ತುತಿ ಮಾಡುವ ಮುನಿರಾಜರು ಹೇಳುವುದೇನೆಂದರೆ - ಓ ಸ್ವಾಮೀ ! ಈ ಸಂಸಾರ ಸಾಗರವು ಮಹಾಗಂಭೀರವಿದೆ, ಇದರ ಕೊನೆಯಿಲ್ಲ, ಇದರಲ್ಲಿ ಬಿದ್ದಿರುವ ನಮ್ಮಂಥ ಸಂಸಾರೀ ಜೀವಗಳನ್ನು ತಾವು ತಮ್ಮ ವಾಣಿರೂಪದ ಹಸ್ತಾವಲಂಬನದ ಸಹಾಯ ನೀಡಿ, ಭವ ಜಲದಲ್ಲಿ ಮುಳುಗುವುದನ್ನು ತಪ್ಪಿಸುತ್ತೀರಿ. ಅದರಿಂದ ಓ ಪ್ರಭು ! ತಮ್ಮನ್ನು ಪರಮ ಉಪಕಾರಿಯೆಂದು ತಿಳಿದು ತಮ್ಮ ದರ್ಶನದ ಸಲುವಾಗಿ ನಾವು ಬಂದಿದ್ದೇವೆ. ಸಂಸಾರ ಜಲದಲ್ಲಿ ಮುಳುಗುತ್ತಿರುವ ಭವ್ಯ ಜೀವರುಗಳ ಮೇಲೆ ದಯೆಯ ಭಾವ ಮಾಡಿ ತಾವು ಅನೇಕ ಜೀವರುಗಳ ರಕ್ಷಣೆ ಮಾಡಿರುವಿರಿ - ಎಂಬುದಾಗಿ ಜಗತ್ತಿನಲ್ಲಿ ತಮ್ಮ ಕೀರ್ತಿಯನ್ನು ಆಲಿಸಿ ಭವ್ಯ ಜೀವರುಗಳು ದರ್ಶನಕ್ಕೆ ಬರುತ್ತಾರೆ. ನನ್ನದೂ ಇದೇ ಮನೋಕಾಮನೆಯಿದೆ. ಓ ಭಗವಾನ ! ಸಂಸಾರ ಸಮುದ್ರದಲ್ಲಿ ಮುಳುಗುತ್ತಿರುವ ನಮ್ಮನ್ನೂ ರಕ್ಷಿಸಿರೆಂಬ ಪ್ರಾರ್ಥನೆಯಿದೆ.

ಇತ್ಯಾದಿ ಪ್ರಕಾರದಿಂದ ವೀತರಾಗೀ ಮುನಿಗಳು ಕೂಡ ಜಿನದೇವರ ಸ್ತುತಿ ಮಾಡುತ್ತಾರೆ. ವಿನಯದಿಂದ ಕೈ-ಕಾಲುಗಳನ್ನು ತೊಳೆದುಕೊಂಡು, ಹರ್ಷ-ಆನಂದದೊಂದಿಗೆ, ನೆಲ ನೋಡುತ್ತ-ಈರ್ಯಾ ಸಮಿತಿಪೂರ್ವಕ ಜಿನದೇವರ ಮಂದಿರದೊಳಗೆ ಹೋಗುತ್ತಾರೆ. ಆದುದರಿಂದ ಈಗ ಕೂಡ ಯಾವ ಭವ್ಯ ಜೀವರುಗಳಿಗೆ ಭಕ್ತಿಯ ಫಲವನ್ನು ಪಡೆಯುವುದಿದೆ ಅವರು (ಆ ಧರ್ಮಾತ್ಮರು) ಮನ-ವಚನ-ಕಾಯದ ಕ್ರಿಯೆ ಶುದ್ಧ ಮಾಡಿಕೊಂಡು, ಹರ್ಷ ಸಹಿತ ಜಿನದರ್ಶನವನ್ನು ಮಾಡಬೇಕು. ಅದನ್ನು ಈರ್ಯಾಸಮಿತಿಪೂರ್ವಕವಾಗಿಯೇ ಮಾಡುವುದು ಯೋಗ್ಯವಿದೆ. ನಂತರ ಈ ಮುನಿಗಳು ತಮ್ಮ ಪ್ರಮಾದ ಅವಸ್ಥೆಯ ಕಾರಣ ಮನ-ವಚನ-ಕಾಯದಿಂದ ಯಾವುದಾದರೂ ಕ್ರಿಯೆಯಲ್ಲಿ ಸೂಕ್ಷ್ಮ ಅತಿಚಾರವು ತಗಲಿದರೆ ಅದರ ನಿವಾರಣೆಯ ಉದ್ದೇಶದಿಂದ ಕಾಯೋತ್ಸರ್ಗ ಮಾಡಬೇಕು. ಯಾವುದರಲ್ಲಿ ತಮ್ಮ ದೋಷದ ಆಲೋಚನೆ, ನಿಂದೆ, ಗರ್ಹೆ ಮಾಡಲಾಗುತ್ತದೆ, ಅದನ್ನು ಕಾಯೋತ್ಸರ್ಗವೆನ್ನುತ್ತಾರೆ. ಅದನ್ನು ಎಷ್ಟು ಸಮಯವರೆಗೆ ಮಾಡಬೇಕು. ಎಂಬುದಾಗಿ ಕಾಲಪ್ರಮಾಣ ತಿಳಿಸಿಕೊಡುತ್ತಾರೆ. ಅಲ್ಲದೆ ಯಾವ-ಯಾವ ಪ್ರಮಾದ ಕಾರ್ಯಗಳಾದ ಮೇಲೆ ಕಾಯೋತ್ಸರ್ಗ ಮಾಡಬೇಕು ? - ಅವನ್ನು ಈಗ ಹೇಳುತ್ತಾರೆ.

**ಗ್ರಂಥಾರಂಭೇ ಸಮಾಪ್ತೇ ಚ ಸ್ವಾಧ್ಯಾಯೇ ಸ್ತವನಾದಿಷು ।**
**ಸಪ್ತವಿಂಶತಿರುಚ್ಛ್ವಾಸ ಕಾಯೋತ್ಸರ್ಗಾ ಮತಾ ಇಹ ॥೫॥**

**ಅರ್ಥ :-** ಯಾವುದಾದರೂ ನವೀನ ಗ್ರಂಥ ಪ್ರಾರಂಭ ಮಾಡುವ ಸಮಯದಲ್ಲಿ ಹಾಗೂ ಶಾಸ್ತ್ರದ ಪೂರ್ಣತೆಯಾದ ಸಮಯದಲ್ಲಿಯೂ ಕಾಯೋತ್ಸರ್ಗ ಮಾಡಬೇಕು. ಶಾಸ್ತ್ರದ ಸ್ವಾಧ್ಯಾಯ ಮಾಡುವ ಸಮಯದಲ್ಲಿ

ಕಾಯೋತ್ಸರ್ಗ ಮಾಡಬೇಕು. ಅರಹಂತ ಸಿದ್ಧರ ಗುಣಗಳ ಸ್ತುತಿ ಮಾಡುವಾಗ ಕಾಯೋತ್ಸರ್ಗ ಮಾಡಬೇಕು. ಕಾಯೋತ್ಸರ್ಗ ಕಾಲದ ಪ್ರಮಾಣವು ಇಪ್ಪತ್ತೇಳು ಶ್ವಾಸೋಚ್ಛ್ವಾಸವಿದೆ.

**ಭಾವಾರ್ಥ :-** ಈ ಧರ್ಮಕ್ರಿಯೆಗಳಲ್ಲಿ ಪ್ರಮಾದವಶ ಅತಿಚಾರ ತಗಲಿದ ಮೇಲೆ ಅದನ್ನು ನಷ್ಟ ಮಾಡುವ ಉದ್ದೇಶದಿಂದ ಯತಿಗಳು ಕಾಯೋತ್ಸರ್ಗ ಮಾಡುತ್ತಾರೆ. ಪ್ರತಿಯೊಂದು ಕಾಯೋತ್ಸರ್ಗದ ಕಾಲವು ಇಪ್ಪತ್ತೇಳು ಶ್ವಾಸೋಚ್ಛ್ವಾಸವಿರುತ್ತದೆ.

**ಅಷ್ಟವಿಂಶತಿ ಮೂಲೇಷು ದಿನಸ್ಯ ಮಲ ಶುದ್ಧಯೇ ।**
**ಅಷ್ಟಾಗ್ರಶತಮುಚ್ಛ್ವಾಸಾಃ ನಿಶಾಯಾಮಪಿ ತದ್ದಲಮ್ ॥೬॥**

**ಅರ್ಥ :-** ತಮ್ಮ ಇಪ್ಪತ್ತೆಂಟು ಮೂಲಗುಣಗಳಲ್ಲಿ ಹಾಗೂ ಅನ್ಯ ವ್ರತಗಳಲ್ಲಿ ಪ್ರಮಾದವಶ ಯಾವುದಾದರೂ, ಅತಿಚಾರ ತಗಲಿದ್ದು ತಿಳಿದುಬಂದ ಮೇಲೆ ಯತೀಶ್ವರರು ಅದರ ಶುದ್ಧಿಯ ಸಲುವಾಗಿ ಕಾಯೋತ್ಸರ್ಗ ಮಾಡುತ್ತಾರೆ. ಒಂದುವೇಳೆ ನಾಲ್ಕು ಪ್ರಹರ (ಹನ್ನೆರಡು ಗಂಟೆ) ದಿನದಲ್ಲಿ ಯಾವುದಾದರೂ ಅತಿಚಾರ ತಗಲಿದರೆ ಅದನ್ನು ಸ್ಮರಣೆಯಲ್ಲಿಟ್ಟುಕೊಂಡು ಅದನ್ನು ನಷ್ಟ ಮಾಡುವ ಉದ್ದೇಶದಿಂದ ಕಾಯೋತ್ಸರ್ಗ ಮಾಡುತ್ತಾರೆ. ಇದರ ಕಾಲವು ಒಂದು ನೂರಾ ಎಂಟು ಶ್ವಾಸೋಚ್ಛ್ವಾಸವಿದೆ ಮತ್ತು ಒಂದುವೇಳೆ ನಾಲ್ಕು ಪ್ರಹರ ರಾತ್ರಿಯಲ್ಲಿ ದೋಷವು ತಗಲಿದ್ದರೆ ಅದನ್ನು ನಷ್ಟ ಮಾಡುವ ಉದ್ದೇಶದಿಂದ ಐವತ್ನಾಲ್ಕು ಶ್ವಾಸೋಚ್ಛ್ವಾಸ ಕಾಲದವರೆಗೆ ಕಾಯೋತ್ಸರ್ಗ ಮಾಡುತ್ತಾರೆ.

**ಪಾಕ್ಷಿಕೇ ತ್ರಿಶತಂ ಜ್ಞೇಯಂ ಚಾತುರ್ಮಾಸಸಮುದ್ಭವೇ ।**
**ಚತುಃ ಶತಂ ಶತಂ ಪಂಚ ಸಾಂವತ್ಸರೇ ಯಥಾಗಮಮ್ ॥೭॥**

**ಅರ್ಥ :-** ತಮ್ಮ ವ್ರತಗಳಲ್ಲಿ ಹದಿನೈದು ದಿನಗಳೊಳಗೆ ತಗಲಿದ ಅತಿಚಾರವನ್ನು ನಷ್ಟ ಮಾಡುವ ಉದ್ದೇಶದಿಂದ ಯತೀಶ್ವರರು ಮೂರು ನೂರು ಶ್ವಾಸೋಚ್ಛ್ವಾಸ ಕಾಲದವರೆಗೆ ಕಾಯೋತ್ಸರ್ಗ ಮಾಡುತ್ತಾರೆ. ನಾಲ್ಕು ತಿಂಗಳಲ್ಲಿ ತಗಲಿದ ತಮ್ಮ ಸಂಯಮದ ದೋಷಗಳನ್ನು ದೂರ ಮಾಡುವ ಉದ್ದೇಶದಿಂದ ನಾಲ್ಕು ನೂರು ಶ್ವಾಸೋಚ್ಛ್ವಾಸ ಕಾಲದವರೆಗೆ ಕಾಯೋತ್ಸರ್ಗ ಮಾಡುತ್ತಾರೆ. ಒಂದು ವರ್ಷದಲ್ಲಿ ತಗಲಿದ ದೋಷಗಳನ್ನು ದೂರ ಮಾಡುವ ಸಲುವಾಗಿ ಐನೂರು ಶ್ವಾಸೋಚ್ಛ್ವಾಸ ಕಾಲದವರೆಗೆ ಕಾಯೋತ್ಸರ್ಗ ಮಾಡುತ್ತಾರೆ.

**ಪಂಚವಿಂಶತಿರುಚ್ಛ್ವಾಸಾ, ಗೋಚರೇ ಜಿನ ವಂದನಾ ।**
**ಗತೇ ಮಲೇ ನಿಷದ್ಯಾಯಾಂ ಪುರೀಷಾದಿ ವಿಸರ್ಜನ ॥೮॥**

**ಅರ್ಥ :-** ಗೋಚರೀ ವೃತ್ತಿಯಿಂದ ನಗರದೊಳಗೆ ಆಹಾರಕ್ಕೆ ಬಂದು ಹೋಗುವಾಗ ದಾರಿಯಲ್ಲಿ ಪ್ರಮಾದ ವಶದಿಂದ ತಗಲಿದ ದೋಷಗಳನ್ನು ದೂರ ಮಾಡುವ ಸಲುವಾಗಿ ಯತೀಶ್ವರರು ಇಪ್ಪತ್ತೈದು ಶ್ವಾಸೋಚ್ಛ್ವಾಸ ಕಾಲದವರೆಗೆ ಕಾಯೋತ್ಸರ್ಗ ಮಾಡುತ್ತಾರೆ. ಎಲ್ಲಿಯಾದರೂ ಜಿನೇಂದ್ರ ವಂದನೆಗೆ ಹೋಗುವಾಗ ದಾರಿಯಲ್ಲಿ ಪ್ರಮಾದ ವಶದಿಂದ ಆಗಿರುವ ಹಿಂಸಾದಿ ದೋಷಗಳನ್ನು ನಷ್ಟ ಮಾಡುವ ಉದ್ದೇಶದಿಂದ ಇಪ್ಪತ್ತೈದು ಶ್ವಾಸೋಚ್ಛ್ವಾಸ ಕಾಲದವರೆಗೆ ಕಾಯೋತ್ಸರ್ಗ ಮಾಡುತ್ತಾರೆ. ತಮಗಿಂತ ಗುಣಗಳಲ್ಲಿ ಅಧಿಕರಾದ ಆಚಾರ್ಯಾದಿ ಮುನೀಶ್ವರರುಗಳ ವಂದನೆಯ ಸಲುವಾಗಿ ಗಮನ ಮಾಡುತ್ತಿರುವಾಗ ತಗಲಿದ ದೋಷಗಳನ್ನು ದೂರ ಮಾಡುವ ಉದ್ದೇಶದಿಂದ ಇಪ್ಪತ್ತೈದು ಶ್ವಾಸೋಚ್ಛ್ವಾಸ ಕಾಲದವರೆಗೆ ಕಾಯೋತ್ಸರ್ಗ ಮಾಡುತ್ತಾರೆ. ಒಂದು ಸ್ಥಾನವನ್ನು ಬಿಟ್ಟು ಅನ್ಯ ಸ್ಥಾನಕ್ಕೆ ಹೋಗಿ ಕುಳಿತ ಮೇಲೆ ಯತಿಗಳು ಇಪ್ಪತ್ತೈದು ಶ್ವಾಸೋಚ್ಛ್ವಾಸ ಕಾಲದವರೆಗೆ ಕಾಯೋತ್ಸರ್ಗ ಮಾಡುತ್ತಾರೆ. ಶರೀರದ ಮಲ-ಮೂತ್ರಗಳ ತ್ಯಾಗ ಮಾಡಿದ ಮೇಲೆಯೂ ಕಾಯೋತ್ಸರ್ಗ ಮಾಡುತ್ತಾರೆ. ಇದೇ ರೀತಿ ಮೂಗಿನ ಮಲ, ಶ್ಲೇಷ್ಮ ಮೊದಲಾದವುಗಳ

ತ್ಯಾಗ ಮಾಡಿದ ಮೇಲೆಯೂ ಕಾಯೋತ್ಸರ್ಗ ಮಾಡುತ್ತಾರೆ-ಇವೆಲ್ಲವೂ ಇಪ್ಪತ್ತೈದು-ಇಪ್ಪತ್ತೈದು ಶ್ವಾಸೋಚ್ಛ್ವಾಸ ಕಾಲದವಿರುತ್ತವೆ. ಈ ಪ್ರಕಾರ ಮೇಲೆ ಹೇಳಲಾದ ಸಂಯಮದ ಅತಿಚಾರಗಳನ್ನು ದೂರ ಮಾಡುವ ಸಲುವಾಗಿ ಯಥಾಯೋಗ್ಯ ಕಾಲದವರೆಗೆ ಕಾಯೋತ್ಸರ್ಗ ಮಾಡಿ ಯಾರು ಶುದ್ಧರಾಗುತ್ತಾರೆ , ಆ ಗುರುಗಳು ವಂದನೆಯೋಗ್ಯರಿದ್ದಾರೆ.

ಸಂಸಾರ ದಶೆಯಿಂದ ಉದಾಸರೂ, ದೇಹದಿಂದ ನಿಸ್ಪೃಹರೂ, ಪಂಚೇಂದ್ರಿಯ ಭೋಗಗಳಿಂದ ವಿಮುಖರೂ, ಆತ್ಮಿಕ ರಸದಲ್ಲಿ ಲೀನರೂ; ಧರ್ಮಮೂರ್ತಿ, ಜಗತ್‌ವಲ್ಲಭ, ಜಗತ್ಪೂಜ್ಯ, ಪಾಪಕರ್ಮದಿಂದ ಭಯಭೀತರೂ; ದಯಾನಿಧಾನರೂ ಆದ ಆ ಮುನಿಗಳು ತಮ್ಮ ದೋಷ ದೂರ ಮಾಡುವ ಉದ್ದೇಶದಿಂದ ಈ ಪ್ರಕಾರ ಕಾಯೋತ್ಸರ್ಗ ಮಾಡಿ ಶುದ್ಧರಾಗುತ್ತಾರೆ.

ಉಪರ್ಯುಕ್ತ ಭೇದಸಹಿತ ಅನೇಕ ಗುಣಗಳ ಸಾಗರ ಯತೀಶ್ವರರು ಪೂಜಿಸಲು ಯೋಗ್ಯರಿದ್ದಾರೆ. ಇವರೇ ಗುರುಗಳು ಉಪಾದೇಯರಿದ್ದಾರೆ. ಮೊದಲು ಹೇಳಲಾದ ಕುಗುರುಗಳ ಲಕ್ಷಣದಿಂದ ಕೂಡಿದ ಕುಗುರುಗಳು ಹೇಯರಿದ್ದಾರೆ. ಯಾವ ಗುರುಗಳು ಶಿಷ್ಯರನ್ನು ವಂಚಿಸಿ ಅವರ ಧನ ಹರಣ ಮಾಡುತ್ತಾರೆ, ಅವರನ್ನು ತಮ್ಮ ಕಾಲುಗಳಿಗೆ ಬೀಳಿಸಿಕೊಂಡು ಮಾನ ಮಾಡುತ್ತಾರೆ, ಅವರು ಪಾಷಾಣದ ನೌಕೆಯಂತಿದ್ದಾರೆ. ಶಿಷ್ಯನ ಪರಭವ ಕೆಡುವ ವಿಚಾರದಿಂದ ರಹಿತ, ಕಪಟಿ ಲೋಭೀ ಗುರುಗಳು ಸ್ವಯಂ ಸಂಸಾರ ಸಾಗರದಲ್ಲಿ ಮುಳುಗುತ್ತಾರೆ ಮತ್ತು ತಮ್ಮ ಶಿಷ್ಯರನ್ನೂ ಮುಳುಗಿಸುತ್ತಾರೆ. ಅಂಥ ಗುರುಗಳು ವಿವೇಕಿಗಳಿಂದ ತ್ಯಾಗ ಯೋಗ್ಯರಿದ್ದಾರೆ. - ಈ ಪ್ರಕಾರ ಗುರುವಿನ ಪರೀಕ್ಷೆಯಲ್ಲಿ ಹೇಯ-ಉಪಾದೇಯ ಹೇಳಲಾಯಿತು.

ಈ ಪ್ರಕಾರ ಸುದೃಷ್ಟಿತರಂಗಿಣಿಯೆಂಬ ಹೆಸರಿನ ಗ್ರಂಥದಲ್ಲಿ ಗುರು ಪರೀಕ್ಷೆಯಲ್ಲಿ ಆಚಾರ್ಯಾದಿಕರ
ಹತ್ತು ಭೇದ, ಮುನಿ ಹಾಗೂ ಮುನಿಯೋಗ್ಯ ಹತ್ತು ಸಮಾಚಾರ 'ಆಚಾರಸಾರ'
ಗ್ರಂಥದ ಅನುಸಾರ ಕಾಯೋತ್ಸರ್ಗ ಮಾಡುವ ಸ್ಥಾನ ಹಾಗೂ
ಕಾಯೋತ್ಸರ್ಗದ ಕಾಲ ವರ್ಣನೆಯೆಂಬ ಹೆಸರಿನ
ಹತ್ತನೆಯ ಪರ್ವವು ಪೂರ್ಣವಾಯಿತು.

★★★★★

ಯಾವ ಭವ್ಯ ಪ್ರಾಣಿಗಳು ಭಕ್ತಿಯಿಂದ ಜಿನೇಂದ್ರ ಭಗವಂತರ ಪೂಜೆ, ದರ್ಶನ ಮತ್ತು ಸ್ತುತಿ ಮಾಡುತ್ತಾರೆ, ಅವರು ಮೂರೂ ಲೋಕಗಳಲ್ಲಿ ಸ್ವಯಂದರ್ಶನ, ಪೂಜೆ ಮತ್ತು ಸ್ತುತಿಯೋಗ್ಯರಾಗುತ್ತಾರೆ. ಅರ್ಥಾತ್ ಅವರು ಸ್ವಯಂ ಪರಮಾತ್ಮರಾಗಿ ಹೋಗುತ್ತಾರೆ.

ಕೆಲವರು ಅಜ್ಞಾನಿಗಳು ಬಾಹ್ಯದಲ್ಲಂತೂ ಜಿನದೇವ, ಶಾಸ್ತ್ರ, ಗುರುಗಳ ಭಕ್ತಿ ಪೂಜೆಯನ್ನಂತೂ ಬಹಳಷ್ಟು ಮಾಡುತ್ತಾರೆ, ಆದರೆ ಅವರ ವಚನಗಳನ್ನು ಮನ್ನಿಸುವುದಿಲ್ಲ; ಅದರಿಂದ ಅವರುಗಳು ಭಕ್ತಿ ಪೂಜಾದಿಗಳನ್ನು ಮಾಡುವುದು ಕಾರ್ಯಕಾರಿಯಾಗುವುದಿಲ್ಲ.

## ೧೧ : ಹನ್ನೊಂದನೆಯ ಪರ್ವ
## ಧರ್ಮ-ಕುಧರ್ಮದಲ್ಲಿ ಹೇಯ-ಜ್ಞೇಯ-ಉಪಾದೇಯ

ಈಗ ಧರ್ಮದಲ್ಲಿ ಹೇಯ-ಉಪಾದೇಯಗಳನ್ನು ಹೇಳುತ್ತ ಅದರಲ್ಲಿ ಎಲ್ಲಕ್ಕಿಂತ ಮೊದಲು ಕುಧರ್ಮದ ಲಕ್ಷಣ ಹೇಳುತ್ತಾರೆ-

**ಕೇವಲಣಾಣ ಯ ರಹಿಯೋ ಕಲ್ಲಾಣ ಜೀವ ಪರಘಾದೋ ।**
**ಮಾಣ ಣಾಣ ಧಣ ಹರ್ಯೋ ಏವಂ ಕುಧಮ್ಮಭಾಸಿಯೋ ದೇವಂ ॥೩೪॥**

**ಗಾಥಾರ್ಥ :-** ಯಾವ ಧರ್ಮವು ಕೇವಲಜ್ಞಾನರಹಿತವಿದೆ, ದಯಾಭಾವ ರಹಿತವಿದೆ, ಪರಜೀವಘಾತವಿದೆ ಮಾನ-ಜ್ಞಾನ-ಧನಗಳ ಹರಣ ಮಾಡುವಂಥದ್ದಿದೆ - ಅದು ಕುಧರ್ಮವಿದೆಯೆಂದು ಜಿನದೇವರು ಹೇಳಿದ್ದಾರೆ.

**ಭಾವಾರ್ಥ :-** ಯಾವ ಧರ್ಮವು ಕೇವಲಜ್ಞಾನಿಗಳ ವಚನರಹಿತವಿದೆ, ಹೀನಜ್ಞಾನಿ(ಮಿಥ್ಯಾದೃಷ್ಟಿ)ಗಳ ವಚನಗಳಿಂದ ಪ್ರರೂಪಿತವಿದೆ, ದಯಾರಹಿತವಿದೆ, ಯಾವುದರಲ್ಲಿ ಹಿಂಸೆ ಮಾಡುವ ಉಪದೇಶವಿದೆ, ಜೀವ ಹಿಂಸೆಯಲ್ಲಿ ಮಹಾಪುಣ್ಯದ ಬಂಧವಾಗುವುದೆಂದು ಹೇಳುತ್ತದೆ, ಇತರರ ಮಾನ ಹರಣದ, ಛಲ-ಬಲಗಳಿಂದ ಇತರರನ್ನು ತಮ್ಮ ಕಾಲಿಗೆರಗಿಸಿಕೊಳ್ಳುವ ಕಥನವು ಯಾವುದರಲ್ಲಿದೆ ಅದು ಕುಶಾಸ್ತ್ರವಿದೆ.

ಯಾವುದನ್ನು ಆಲಿಸಿ ಮುಗ್ಧ ಜೀವಗಳು ತಮ್ಮ ಜ್ಞಾನವನ್ನು ಹೆಚ್ಚಿಸಿಕೊಳ್ಳುವ ಇಚ್ಛೆಯ ತ್ಯಾಗ ಮಾಡುತ್ತಾರೆ, ಅಂಥ ಇತರರ ಜ್ಞಾನ ಹರಣ ಮಾಡುವ ಶಾಸ್ತ್ರಗಳು ಕುಶಾಸ್ತ್ರವಿದೆ. ಇತರರ ಧನವು ಪಾಪಕಾರ್ಯಗಳಲ್ಲಿ ವಿನಿಯೋಗವಾಗುವಂಥ ಉಪದೇಶವು ಯಾವುದರಲ್ಲಿದೆ ಆ ಶಾಸ್ತ್ರವು ಕುಶಾಸ್ತ್ರವಿದೆ.

ಮುಗ್ಧ ಜೀವಗಳನ್ನು ಮರುಳುಮಾಡಿ, ಪಾಪಮಾರ್ಗದಲ್ಲಿ ತೊಡಗಿಸಿ, ನರಕಮಂದಿರದ ದ್ವಾರದಂತಿರುವ ಹಿಂಸೆಯಲ್ಲಿ ನೂಕಿ, ಯಾವುದು ನರಕಮಂದಿರದವರೆಗೆ ತಲುಪಿಸುತ್ತದೆ, ಅದು ಕುಧರ್ಮವಿದೆ.

ಯಾವುದರಲ್ಲಿ ಅನೇಕ ಮಾಯಾಚಾರಯುಕ್ತ ಪಾಖಂಡಿಗಳಿಂದ ಮುಗ್ಧ ಜೀವಗಳನ್ನು ಮೋಸ ಮಾಡುವಂಥ ಕಥನವಿದೆ ಅದು ಕುಶಾಸ್ತ್ರವಿದೆ-ಕುಧರ್ಮವಿದೆ. ಯಾವುದರಲ್ಲಿ ಅನೇಕ ಪ್ರಕಾರದಿಂದ ವಿಷಯ-ಕಷಾಯ ಪೋಷಕ ಕಥನವಿದೆ ಅದು ಕುಶಾಸ್ತ್ರವಿದೆ-ಕುಧರ್ಮವಿದೆ. ಯಾವುದರ ಉಪದೇಶ ಕೇಳಿದ ಮೇಲೆ ಸ್ತ್ರೀಯರ ಭೋಗದ ಇಚ್ಛೆಯಾಗುತ್ತದೆ, ಧನವೃದ್ಧಿಯ ಇಚ್ಛೆಯಾಗುತ್ತದೆ, ರಾಜ್ಯದ ಇಚ್ಛೆಯಾಗುತ್ತದೆ, ಯುದ್ಧದ ಇಚ್ಛೆಯಾಗುತ್ತದೆ ಅವೆಲ್ಲ ಕುಶಾಸ್ತ್ರಗಳಿವೆ.

ತಮ್ಮ ದೊಡ್ಡಸ್ತಿಕೆಯನ್ನು ಪ್ರಕಟಪಡಿಸುವ ಸಲುವಾಗಿ ಯಾವನೋ ವ್ಯಂತರದೇವನ ಸಹಾಯದಿಂದ ಯಾವ ಶಾಸ್ತ್ರಗಳನ್ನು ರಚಿಸಲಾಗಿದೆ, ಅವು ಕುಶಾಸ್ತ್ರಗಳಿವೆ. ಯಾವುದರಲ್ಲಿ ಅನೇಕ ಅಭಕ್ಷ್ಯ ವಸ್ತುಗಳನ್ನು ಭಕ್ಷ್ಯವೆನ್ನಲಾಗಿದೆ ಹಾಗೂ ಯಾವುದರಲ್ಲಿ ಆಚರಿಸಲು ಯೋಗ್ಯವಿರುವ ಒಳ್ಳೆಯ ಕ್ರಿಯೆಗಳ ನಿಷೇಧ ಮಾಡಿ ಎಲ್ಲವನ್ನೂ ಭಕ್ಷ್ಯವೆನ್ನಲಾಗಿದೆ - ಇಂಥ ಅನಾಚಾರ ಸಹಿತ ಶಾಸ್ತ್ರವು ಕುಶಾಸ್ತ್ರವಿದೆ. ಮದ್ಯ-ಮಾಂಸಗಳ ಭಕ್ಷಣೆಯಲ್ಲಿ ಪಾಪವೆಂದು ಹೇಳದಿರುವಂಥ ಶಾಸ್ತ್ರಗಳು ಕುಶಾಸ್ತ್ರಗಳಿವೆ. ಯಾವುದರಲ್ಲಿ ಬಿಲ್ಲು-ಬಾಣ, ಬಂದೂಕು, ಗುಂಡು, ಪಂಜರ, ಪಾಶ, ತೋಪು, ಭಲ್ಲೆ, ಬರ್ಚಿ, ಚಾಕು, ಚೂರಿ ಇತ್ಯಾದಿ ಹಿಂಸೆಯ ಕಾರಣಭೂತ ಶಸ್ತ್ರಗಳನ್ನು ನಿರ್ಮಿಸುವ ಕಲೆ ಚತುರತೆಯನ್ನು ಹೇಳಿರುವಂಥ ಶಾಸ್ತ್ರಗಳು ಕುಶಾಸ್ತ್ರಗಳಿವೆ. ಅನೇಕ ಪ್ರಕಾರದ ಚಿತ್ರಕಲೆ, ಶಿಲ್ಪಕಲೆ ಮೊದಲಾದವುಗಳ ಜಾಣ್ಮೆಯನ್ನು ಹೇಳಿರುವಂಥವು ಕುಶಾಸ್ತ್ರಗಳಿವೆ. ವಿಷಯಾಸಕ್ತ ಜೀವರುಗಳ ಮೂಲಕ ಪ್ರರೂಪಿಸಲ್ಪಟ್ಟ ಪರಸ್ತ್ರೀಯರ ಭೋಗದ ಇಚ್ಛೆಯುಳ್ಳ ಪಂಡಿತರುಗಳ ಅನುಸಾರ ಸ್ತ್ರೀದಾನ, ರತಿದಾನ, ದಾಸ-ದಾಸೀದಾನ ಮೊದಲಾದ ಕುದಾನಗಳ

ಕಥನವಿರುವಂಥವು ಕುಶಾಸ್ತ್ರಗಳಿವೆ. ಕುತಪ, ಹಿಂಸಾಕರ ಕುತೀರ್ಥಗಳ ಮಹಿಮೆಯ ಕಥನವಿರುವಂಥವು ಕುಶಾಸ್ತ್ರಗಳಿವೆ ಮತ್ತು ವಿಷಯ ಪೋಷಕ ರಾಸಲೀಲೆ, ನೃತ್ಯ-ಗಾಯನದ ಕಲೆಯ ವರ್ಣನೆ ಮಾಡುವಂಥವು ಕುಶಾಸ್ತ್ರಗಳಿವೆ.

ಮಂತ್ರ-ತಂತ್ರ, ದಾರ, ತಾಯಿತ ಇತ್ಯಾದಿ ಪರರ ವಶೀಕರಣದ ಕಥನವಿರುವಂಥವು ಕುಶಾಸ್ತ್ರಗಳಿವೆ. ಯಾವುದರ ಶ್ರವಣ ಮಾಡುವುದರಿಂದ ಹಿಂಸೆ, ಮೋಹ, ಕ್ರೋಧ, ಮಾನ, ಮಾಯೆ, ಲೋಭಗಳ ವೃದ್ಧಿಯಾಗುತ್ತದೆ ಅವು ಕುಶಾಸ್ತ್ರಗಳಿವೆ. ಕಾಮೋತ್ಪತ್ತಿಯಲ್ಲಿ ನಿಮಿತ್ತವಾಗುವಂಥ, ಚೋರಕಲೆಯ ವ್ಯಾಖ್ಯಾನವಿರುವಂಥ, ಕಂದಮೂಲ ಸಹಿತ ಭೋಜನ ಹಾಗೂ ಉದುಂಬರ ಫಲ ಇತ್ಯಾದಿಗಳ ಭಕ್ಷಣೆಯಲ್ಲಿ ಪಾಪವಿರುವುದನ್ನು ಹೇಳಿಲ್ಲವೋ ಅವು ಕುಶಾಸ್ತ್ರಗಳಿವೆ. ಭೂತ-ಪ್ರೇತಾದಿ ವ್ಯಂತರದೇವ ಹಾಗೂ ತಮ್ಮ ಮತಿ ಕಲ್ಪನೆಯಿಂದ ಮನ್ನಿಸಲಾದ ಯಾವುದೋ ದೇವ-ದೇವಿಯರ ಚಮತ್ಕಾರ, ಅವರನ್ನು ಪೂಜಿಸುವ ವಿಧಿ, ಅವರು ಪ್ರಸನ್ನರಾಗಿ ಪ್ರತ್ಯಕ್ಷರಾಗುವ, ಪುತ್ರಾದಿಗಳ ಪ್ರಾಪ್ತಿ ಮೊದಲಾದ ಲಾಭದ ಕಥನವಿರುವಂಥವು ಕುಶಾಸ್ತ್ರಗಳಿವೆ.

ಅಂಥ ಅನೇಕ ಶಾಸ್ತ್ರಗಳು ಅವು ಪರಮಾರ್ಥ ಕಥೆಯಿಂದ ರಹಿತವಾಗಿವೆ. ಪಾಪಬಂಧಮಾಡಿಸುವಂಥ-ಹೀನಜ್ಞಾನಿ, ಕುಕವಿಗಳಿಂದ ಪ್ರರೂಪಿತ, ಸ್ವೇಚ್ಛೆಯಿಂದ ರಚಿತ, ರಸಿಕ ಪ್ರಿಯ, ಸುಂದರ ಶೃಂಗಾರಾದಿ ವಿಷಯಗಳಿಂದ ತುಂಬಿರುವಂಥವು ಕುಶಾಸ್ತ್ರಗಳಿವೆ. ಏಕೆಂದರೆ ಅವು ಮೋಕ್ಷ ಮಾರ್ಗದಿಂದ ರಹಿತವಾದ ಸಂಸಾರದಶೆಯನ್ನು ವೃದ್ಧಿಸುವಂಥವೇ ಇವೆಯೆಂಬುದನ್ನು ತಿಳಿದುಕೊಂಡು ತ್ಯಾಗ ಯೋಗ್ಯವೇ ಇವೆ. ಅಂಥ ಶಾಸ್ತ್ರಗಳ ಅನುಸಾರ ಜೀವದ ಶ್ರದ್ಧೆಯಾಗುವುದು ಕುಧರ್ಮವಿದೆ. ಇವುಗಳ ಫಲವು ಅನಿಷ್ಟವಿರುವುದನ್ನು ತಿಳಿದ ಸಮ್ಯಗ್ದೃಷ್ಟಿಗಳ ದೃಷ್ಟಿಯಲ್ಲಿ ಇವು ಸಹಜವಾಗಿ ಹೇಯವೆಂದು ಪ್ರತೀತವಾಗುತ್ತವೆ.

ಈಗ ಸುಧರ್ಮದ ಕಥನವನ್ನು ಸಂಕ್ಷೇಪದಲ್ಲಿ ಮಾಡುತ್ತಾರೆ-

**ಅಪರಾಪರ ಅವಿರುದ್ಧೋ ಣವಣಯ ಭಂಗಾಯ ಸತ್ತಸ್ಯಾಜ್ಜುತ್ತೋ ।**

**ಪಣ ಪಮಾಣ ಅಖಂಡೋ ಸ ಧಮ್ಮೋ ಜಿಣಭಾಸಯೋ ಸುದ್ಧಂ ॥೩೫॥**

**ಗಾಥಾರ್ಥ :-** ಯಾವುದು ಅಪರಾಪರ ಅರ್ಥಾತ್ ಮುಂದೆ-ಹಿಂದೆ ಕೊನೆಯವರೆಗೆ ಶುದ್ಧ ಕಥನ ಸಹಿತವಿದೆ, ಯಾವುದು ನವನಯ-ಸಪ್ತಭಂಗ-ಸ್ಯಾತ್ ಪದಸಹಿತವಿದೆ, ಪಂಚ ಪ್ರಮಾಣಗಳಿಂದ ಅಖಂಡಿತವಿದೆ, ಅದುವೇ ಜಿನಭಾಷಿತ ಶುದ್ಧ ಧರ್ಮವಿದೆ.

**ಭಾವಾರ್ಥ :-** ಭಗವಂತರ ವಾಣಿಯಲ್ಲಿ ಯಾವ ವಸ್ತುವಿನ ನಿಷೇಧ ಮಾಡಲಾಗಿದೆ, ಅದರ ಗ್ರಹಣವು ಯಾವುದೇ ಜಿನಶಾಸ್ತ್ರದಲ್ಲಿ ಇರುವುದಿಲ್ಲ. ಎಂದರೆ ಯಾವ ಶಾಸ್ತ್ರಗಳಲ್ಲಿ ಮೊದಲೇ ಸಪ್ತ ವ್ಯಸನಗಳ ನಿಷೇಧ ಮಾಡಲಾಗಿದೆ, ಅದರ ಗ್ರಹಣವಾಗಲಿ, ಪೋಷಣೆಯಾಗಲಿ ಕೊನೆಯವರೆಗೆ ಎಲ್ಲಿಯೂ ಇರುವುದಿಲ್ಲ ಹಾಗೂ ಇತರ ಕ್ರೋಧಾದಿ ಕಷಾಯ ಪಾಪದ ಕಾರಣವಿರುವಂಥ ಅಭಕ್ಷ್ಯಾದಿ, ಅನಾಚಾರ, ಹಿಂಸಾದಿ ಪಾಪಗಳ ನಿಷೇಧ ಮಾಡಲಾಗಿದ್ದರೆ ಅವುಗಳ ಗ್ರಹಣವು ಯಾವುದೇ ಶಾಸ್ತ್ರದಲ್ಲಿ ಇರುವುದಿಲ್ಲ. ಇದರ ಹೆಸರೇ ಆದಿ-ಅಂತ ಅವಿರುದ್ಧ ಕಥನವಿದೆ. ಯಾವುದರಲ್ಲಿ ಯಾವುದೋ ವಸ್ತುವಿನ ನಿಷೇಧವನ್ನು ಒಂದು ಕಡೆಗೆ ಮಾಡಿದ್ದರೆ ಮತ್ತು ಇನ್ನೊಂದು ಕಡೆಗೆ ಗ್ರಹಣ ಮಾಡಲಾಗಿದ್ದರೆ ಆ ಕಥನವು ವಿರುದ್ಧರೂಪವಿದೆ; ಸತ್ಯಧರ್ಮವು ಆದಿಯಿಂದ ಅಂತ್ಯದವರೆಗೆ ಶುದ್ಧವಿದೆ.

ಣವಣಯ-ನೈಗಮ, ಸಂಗ್ರಹ, ವ್ಯವಹಾರ, ಋಜುಸೂತ್ರ , ಶಬ್ದ, ಸಮಭಿರೂಢ, ಏವಂಭೂತ, ದ್ರವ್ಯಾರ್ಥಿಕ ಮತ್ತು ಪರ್ಯಾಯಾರ್ಥಿಕ - ಇವು ಒಂಭತ್ತು ನಯಗಳಿವೆ.

೧) **ನೈಗಮನಯ -** ಯಾವುದೋ ಕಾರ್ಯವನ್ನು ಪ್ರಾರಂಭ ಮಾಡುತ್ತಿದ್ದಂತೆಯೇ ಅದು ಆಯಿತೆಂದು ಹೇಳುವುದು ನೈಗಮನಯವಿದೆ. ಹೇಗೆಂದರೆ ಯಾವನೋ ವ್ಯಕ್ತಿಯು ಮನೆಯನ್ನು ಬಿಟ್ಟು ಬೇರೆ ದೇಶಕ್ಕೆ ಹೋಗುತ್ತಾನೆ.

ಅವನು ಹತ್ತಾರು-ದಿನಗಳ ನಂತರ ಅಲ್ಲಿ ತಲುಪುತ್ತಿದ್ದರೂ ಒಂದು ವೇಳೆ ಕೂಡಲೇ ಆತನ ಮನೆಯವರಿಗೆ ಆ ವ್ಯಕ್ತಿಯು ಎಲ್ಲಿದ್ದಾನೆಂದು ಕೇಳಲಾದರೆ ಆಗ ಆ ಮನೆಯವರು 'ವಿದೇಶಕ್ಕೆ ಹೋದ'ನೆಂದು ಹೇಳುತ್ತಾರೆ. ಅವನು ಬೇಕಾದರೆ ಇನ್ನೂ ತಮ್ಮ ನಗರದಿಂದ ಕೂಡ ಹೊರಗೆ ಹೋಗಿರದಿದ್ದರೂ ವಿದೇಶಕ್ಕೆ ಹೋದನೆಂದು ಹೇಗೆ ಹೇಳಬಹುದಾಗಿದೆ ? ಆದರೂ ಮನೆಯಿಂದ ಹೋದನು ಎಲ್ಲ ಜನರಿಂದ ಬೀಳ್ಕೊಂಡು ಹೋದನು; ಅದರಿಂದ ಇವರ ದೃಷ್ಟಿಯಿಂದಂತೂ ಹೋದನೆಂದು ಹೇಳಲಾಗುತ್ತದೆ. ಇದು ನೈಗಮ ನಯವಿದೆ. ಇದೇ ರೀತಿ ಅನ್ಯತ್ರವೂ ಕೂಡ ತಿಳಿಯುವುದು.

**೨) ಸಂಗ್ರಹನಯ** - ಒಂದು ಶಬ್ದ ಅಥವಾ ವಾಕ್ಯದಲ್ಲಿ ಬಹಳಷ್ಟರ ಗ್ರಹಣ ಮಾಡುವುದು ಸಂಗ್ರಹ ನಯವಿದೆ. ಹೇಗೆಂದರೆ - ಇದು ತೋಟವಿದೆ ಅಥವಾ ವನವಿದೆಯೆಂದು ಯಾರಾದರೂ ಹೇಳುತ್ತಾರೆ. ಅಲ್ಲಿ ವನವೆಂಬುದು ಯಾವುದೇ ಒಂದು ಪೃಥಕ್ ವಸ್ತುವಿಲ್ಲ ಮತ್ತು ಯಾವುದೋ ಒಂದು ವೃಕ್ಷದ ಹೆಸರು ಕೂಡ ವನವಲ್ಲ, ಬೇರೆ ಬೇರೆ ವೃಕ್ಷಗಳನ್ನು ನೋಡಿದರೂ ವನವು ಯಾವ ವಸ್ತುವಿರುವುದಿಲ್ಲ. ಬಹಳಷ್ಟು ವೃಕ್ಷಗಳ ಸಮೂಹವನ್ನು ವನವೆಂದು ಹೇಳುತ್ತಾರೆ - ಇದರ ಹೆಸರು ಸಂಗ್ರಹ ನಯವಿದೆ. ಅದೇ ರೀತಿ ಬಹಳಷ್ಟು ಮನುಷ್ಯರ ಸಮೂಹವನ್ನು ಜಾತ್ರೆಯೆನ್ನುತ್ತಾರೆ, ಸಂತೆಯೆನ್ನುತ್ತಾರೆ, ಗುಂಪುಯೆನ್ನುವುದು ಹಾಗೂ ದಿಬ್ಬಣವೆನ್ನುವುದು - ಇವೆಲ್ಲವೂ ಯಥಾಯೋಗ್ಯ ಕಾರಣ ಪಡೆದು ಸಂಗ್ರಹ ನಯದ ಶಬ್ದಗಳಿವೆ.

**೩) ವ್ಯವಹಾರ ನಯ** - ಸಂಗ್ರಹ ನಯದ ಮೂಲಕ ಏಕತ್ರಿತವಾದ ಪದಾರ್ಥಗಳಲ್ಲಿ ಭೇದ ಮಾಡುವುದು ವ್ಯವಹಾರ ನಯವಿದೆ. ಅಥವಾ ಯಾವುದರ ಆಧಾರದಿಂದ ಲೋಕವ್ಯವಹಾರ, ಲೌಕಿಕ ಕಾರ್ಯಗಳನ್ನು ನಡೆಸಲಾಗುತ್ತದೆ ಅದು ವ್ಯವಹಾರನಯವಿದೆ. ಹೇಗೆಂದರೆ - ಚೆಕ್ಕು ಬರೆದು ಕೊಡುವುದು ಅದರಲ್ಲಿ ಒಂದು ಲಕ್ಷ ರೂಪಾಯಿ ನೂರು ಯೋಜನ ದೂರದ ಕ್ಷೇತ್ರ ಅಥವಾ ದೂರದ ದೇಶದವರಿಗೆ ಬರೆದು ಕೊಡುವುದು. ಆ ಚಿಕ್ಕದಾದ ಕಾಗದವನ್ನು ಯಾರಿಗೋ ಕೊಡುವುದು. ಅವರು ಅದರ ಮೇಲೆ ವಿಶ್ವಾಸವಿಟ್ಟು ಅಷ್ಟು ರೂಪಾಯಿ ಕೊಡುವುದು ಹಾಗೂ ಅದನ್ನು ಸ್ವೀಕರಿಸುವುದು. ಅದರ ನಂತರ ಬೇರೆ ದೇಶದಲ್ಲಿ ಆ ಚೆಕ್ಕು ನೀಡಿ ಲಕ್ಷಾಂತರ ರೂಪಾಯಿ ಪಡೆಯುವುದು-ದೊರಕುವುದು. ಅದು ವ್ಯವಹಾರ ನಯವಿದೆ. ಅದೇ ರೀತಿ ಇವನು ನಮ್ಮ ಪುತ್ರನಿದ್ದಾನೆ, ಇವರು ನಮ್ಮ ತಂದೆಯಿದ್ದಾರೆ, ಇವರು ನಮ್ಮ ತಾಯಿಯಿದ್ದಾರೆ, ಇವಳು ಪತ್ನಿಯಿದ್ದಾಳೆ, ಇವನು ಮಿತ್ರನಿದ್ದಾನೆ, ಇವನು ಶತ್ರುವಿದ್ದಾನೆ ಇತ್ಯಾದಿ ಎಲ್ಲ ವಚನಗಳು ವ್ಯವಹಾರನಯದಿಂದ ಪ್ರಮಾಣವಿವೆ. ನಿಶ್ಚಯದಿಂದ ಆತ್ಮನು ಯಾರ ತಂದೆ ಅಥವಾ ಮಗನಿಲ್ಲ. ಸಂಸಾರದಲ್ಲಿ ಸುತ್ತುತ್ತಿರುವಾಗ ಈ ಜೀವನಿಗೆ ಇಂಥ ಸಂಬಂಧಗಳಾಗಿವೆ; ಆದರೆ ಲೌಕಿಕ ನಯದಿಂದ ಅವು ಸತ್ಯವೂ ಇವೆ. ಆದುದರಿಂದ ವ್ಯವಹಾರ ನಯವಿದೆ.

**೪) ಋಜುಸೂತ್ರನಯ** - 'ತಕ್ಕಾಲಂ ತಮ್ಮಯತ್ತಿ ಪಣ್ಣತ್ತಂ' ಅರ್ಥಾತ್ ಯಾವ ಕಾಲದಲ್ಲಿ ದ್ರವ್ಯವು ಯಾವ ರೂಪದಿಂದ ಪರಿಣಮಿತವಾಗುತ್ತದೆ ಅದನ್ನು ಹಾಗೆಯೇ ಹೇಳುವುದು. ಹೇಗೆಂದರೆ ಅಪಕ್ವ ಮಾವನ್ನು ಆ ಸಮಯದಲ್ಲಿ ಹುಳಿಯೆಂದೇ ಹೇಳುವುದು. ಅದೇ ಮಾವನ್ನು ಪಕ್ವವಾದ ಮೇಲೆ ಸಿಹಿಯಾದ ಮೇಲೆಯೇ ಅದನ್ನು ಸಿಹಿಯೆಂದು ಹೇಳುವುದು. ಯಾವಾಗ ಅಪಕ್ವ (ಹಸಿ)ವಿತ್ತು, ಆಗ ಹುಳಿಯಾಗಿಯೇ ಇತ್ತು ಮತ್ತು ಪಕ್ವವಾದಾಗ ಸಿಹಿಯೇ ಇದೆ. ಅದೇ ರೀತಿ ಯುದ್ಧ ಮಾಡುವ ಸಮಯದಲ್ಲಿ ಪುರುಷನನ್ನು ಕ್ರೋಧಿಯೆಂದು ಹೇಳುವುದು, ದಾನ-ಪೂಜೆ ಮಾಡುವ ಸಮಯದಲ್ಲಿ ಧಾರ್ಮಿಕನೆಂದು ಹೇಳುವುದು. ಹೀಗೆಯೇ ಎಂದರೆ ಯಾವ ಸಮಯದಲ್ಲಿ ಯಾವುದು ಹೇಗಿದೆ, ಆ ಸಮಯದಲ್ಲಿ ಅದನ್ನು ಹಾಗೆಯೇ ಹೇಳುವುದು ಋಜುಸೂತ್ರ ನಯವಿದೆ. ಪ್ರವಚನಸಾರದ ೮ನೇ ಗಾಥೆಯಲ್ಲಿಯೂ ಹೇಳಿದ್ದಾರೆ-

**ಯಾವ ಭಾವದಿಂ ದ್ರವ್ಯ ಪರಿಣಮಿಪುದಾಕಾಲ ತನ್ಮಯಮೆಂದದು ಹೇಳಿದೆ ।**
**ಜೀವಮದರಿಂ ಧರ್ಮದಲಿ ಪರಿಣಮಿಸಿದರದು ಧರ್ಮಮೆಂದರಿವುದು ॥**

೫) **ಶಬ್ದನಯ** - ಶುದ್ಧ ಶಬ್ದವನ್ನು ಮನ್ನಿಸುವುದು ಶಬ್ದನಯವಿದೆ. ಹೇಗೆಂದರೆ ದೊರೆಯೆಂದು ಯಾರೋ ಹೇಳುತ್ತಾರೆ, ಆಗ ಶಬ್ದನಯವು 'ದೊರೆಯೆಂದು ಹೇಳುವುದು ಅಶುದ್ಧ ಶಬ್ದವಿದೆ', 'ನರೇಂದ್ರ'ವು ಶುದ್ಧವಿದೆಯೆಂದು ಹೇಳುತ್ತದೆ. ಇತ್ಯಾದಿ ಪ್ರಕಾರದಿಂದ ಶಬ್ದಗಳ ಶುದ್ಧ-ಅಶುದ್ಧ ಭಾವದ ಅಪೇಕ್ಷೆಯಿಂದ ಮಾತನಾಡುವುದು ಶಬ್ದನಯವಿದೆ.

೬) **ಸಮಭಿರೂಢ ನಯ** - ಯಾವ ವಸ್ತುವಿನಲ್ಲಿ ಗುಣವಂತೂ ಬೇರೆಯಿದೆ ಮತ್ತು ಹೆಸರು ಬೇರೆಯಿದೆ ಆಗ ಅದನ್ನು ಹೆಸರಿನ ಆಧಾರದ ಮೇಲಿಂದ ಹೇಳುವುದು ಸಮಭಿರೂಢ ನಯವಿದೆ. ಹೇಗೆಂದರೆ ನಡೆಯುತ್ತಿರುವುದನ್ನು ಗಾಡಿ (ಚಕ್ಕಡಿ) ಯೆನ್ನುವುದು, ಒಳ ಹೋಗಿರುವುದನ್ನು ಒರಳೆನ್ನುವುದು. ಬಲಹೀನನ ಹೆಸರು ಮಹಾಬಲನೆಂದು ಇಡುವುದು, ಧನಹೀನನ ಹೆಸರು ಲಕ್ಷ್ಮೀಧರನೆಂದು ಇಡುವುದು ಇವೆಲ್ಲ ವಚನಗಳು ಸಮಭಿರೂಢ ನಯದಿಂದ ಸತ್ಯವಿವೆ.

೭) **ಏವಂಭೂತನಯ** - ಯಾವ ವಸ್ತುವು ಹೇಗಿದೆಯೋ ಹಾಗೆಯೇ ಅದನ್ನು ಹೇಳುವುದು. ಹೇಗೆಂದರೆ - ರಾಜ್ಯವಾಳುತ್ತಿರುವವನನ್ನು ರಾಜನೆಂದು ಹೇಳುವುದು.

೮) **ದ್ರವ್ಯಾರ್ಥಿಕನಯ** - ವಸ್ತುವಿನ ಅಭಾವವೆಂದೂ ಆಗುವುದಿಲ್ಲ - ಇದು ದ್ರವ್ಯಾರ್ಥಿಕನಯವಿದೆ. ಹೇಗೆಂದರೆ -ಜೀವದ ಅಭಾವವೆಂದೂ ಆಗುವುದಿಲ್ಲ. ಜೀವವು ಚೇತನರೂಪ ಅವಿನಾಶಿಯಿದೆ, ಅಜರ-ಅಮರವಿದೆ, ಶುದ್ಧವಿದೆ, ಅಮೂರ್ತಿಕವಿದೆ, ಒಂದೇ ಜೀವವು ನಾಲ್ಕು ಗತಿಗಳಲ್ಲಿ ಭ್ರಮಣ ಮಾಡುತ್ತದೆ - ಇತ್ಯಾದಿ ಕಥನವು ದ್ರವ್ಯಾರ್ಥಿಕ ನಯದ್ದಿದೆ.

೯) **ಪರ್ಯಾಯಾರ್ಥಿಕ ನಯ** - ದೇವ ಜೀವ, ಮನುಷ್ಯ ಜೀವ, ಪಶು ಜೀವ, ನಾರಕೀ ಜೀವ - ಹೀಗೆ ತಿಳಿಯುವುದು ಪರ್ಯಾಯಾರ್ಥಿಕ ನಯವಿದೆ. ಈ ಜೀವನು ಅನಂತಕಾಲದಿಂದ ಜನ್ಮ-ಮರಣ ಮಾಡುತ್ತ ಬರುತ್ತಿದ್ದಾನೆ. ಎಂಬುದಾಗಿ ಹೇಳುವುದೆಲ್ಲವೂ ಪರ್ಯಾಯಾರ್ಥಿಕ ನಯದ ಕಥನವಿದೆ.

ಈ ಪ್ರಕಾರ ಇವುಗಳ ಸಾಮಾನ್ಯ ಭಾವ ಹೇಳಲಾಯಿತು. ವಿಶೇಷರೂಪದಿಂದ ಒಂಭತ್ತು ನಯಗಳನ್ನೇ ನಯಚಕ್ರ ಮೊದಲಾದ ಗ್ರಂಥಗಳಿಂದ ತಿಳಿಯುವುದು. ಇವೇ ಒಂಭತ್ತು ನಯಗಳಿಂದ ಅನೇಕ ವಸ್ತುಗಳ ಸ್ವಭಾವವು ಜ್ಞಾತವಾಗುತ್ತದೆ.

೧. ಸಪ್ತಭಂಗ - ಸಪ್ತಭಂಗವು ಕೂಡ ಇವೇ ಒಂಭತ್ತು ನಯಗಳಿಂದ ಸಿದ್ಧವಾಗುತ್ತದೆ. ಸ್ಯಾತ್ ಅಸ್ತಿ, ಸ್ಯಾತ್ ನಾಸ್ತಿ, ಸ್ಯಾತ್ ಅಸ್ತಿ ನಾಸ್ತಿ, ಸ್ಯಾತ್ ಅವಕ್ತವ್ಯ, ಸ್ಯಾತ್ ಅಸ್ತಿ ಅವಕ್ತವ್ಯ, ಸ್ಯಾತ್ ನಾಸ್ತಿ ಅವಕ್ತವ್ಯ, ಸ್ಯಾತ್ ಅಸ್ತಿ ನಾಸ್ತಿ ಅವಕ್ತವ್ಯ - ಇವು ಸಪ್ತ ಭಂಗಗಳಿವೆ. ಒಂದೇ ವಸ್ತುವಿನಲ್ಲಿ ನಯ-ಪ್ರಮಾಣಗಳ ಮೂಲಕ ಸಪ್ತಭಂಗವನ್ನು ಸಾಧಿಸಲಾಗುತ್ತದೆ. ಹೇಗೆಂದರೆ ಯಾರೋ ಹೇಳುತ್ತಾರೆ - ನಮ್ಮ ರತ್ನವು ಸ್ವದ್ರವ್ಯ, ಕ್ಷೇತ್ರ, ಕಾಲ, ಭಾವರೂಪದಿಂದ ಸಹಜ ಸ್ವಚತುಷ್ಟಯದ ಅಪೇಕ್ಷೆಯಿಂದ ಅಸ್ತಿ ಇದೆ. ಆಗ ಜೈನನು ಹೇಳುತ್ತಾನೆ - 'ಸ್ಯಾತ್ ಅಸ್ತಿ' ಯಾವುದೋ ನಯದಿಂದ ಅಸ್ತಿಯಿದೆ.

೨. ಆಗ ಯಾರೋ ರತ್ನದ ಮೇಲೆ ಚಿನ್ನದ ನಾಣ್ಯವನ್ನು ಇರಿಸಿ, ನನ್ನ ನಾಣ್ಯವು ತನ್ನ ದ್ರವ್ಯ, ಕ್ಷೇತ್ರ, ಕಾಲ, ಭಾವರೂಪದಿಂದ ಸಹಜವಾಗಿ ಸ್ವಚತುಷ್ಟಯದ ಅಪೇಕ್ಷೆಯಿಂದಂತೂ ಅಸ್ತಿರೂಪವಿದೆ ಮತ್ತು ಪರದ್ರವ್ಯರೂಪ ರತ್ನದ ಚತುಷ್ಟಯದ ಅಪೇಕ್ಷೆಯಿಂದ ನಾಸ್ತಿಯಿದೆಯೆಂದು ಹೇಳಿದಾಗ ಜೈನನು 'ಸ್ಯಾತ್ ನಾಸ್ತಿ' ಅರ್ಥಾತ್ ಯಾವುದೋ ನಯದಿಂದ ನಾಸ್ತಿಯಿದೆಯೆಂದು ಹೇಳುತ್ತಾನೆ.

೩. ತನ್ನ ಚತುಷ್ಟಯದ ಅಪೇಕ್ಷೆಯಿಂದ ರತ್ನದ ಅಸ್ತಿಯಿದೆ; ಆದರೆ ಚಿನ್ನದ ನಾಣ್ಯದ ಚತುಷ್ಟಯದ ಅಪೇಕ್ಷೆಯಿಂದ ರತ್ನದ ನಾಸ್ತಿಯಿದೆ ಹಾಗೂ ಚಿನ್ನದ ನಾಣ್ಯದ ಚತುಷ್ಟಯದ ಅಪೇಕ್ಷೆಯಿಂದ ಚಿನ್ನದ ನಾಣ್ಯದ ಅಸ್ತಿಯಿದೆ ಮತ್ತು ರತ್ನದ ಚತುಷ್ಟಯದ ಅಪೇಕ್ಷೆಯಿಂದ ಚಿನ್ನದ ನಾಣ್ಯದ ನಾಸ್ತಿಯಿದೆ. ಹೀಗೆ ಒಟ್ಟಿಗೆ ಒಂದು ವಸ್ತುವಿನಲ್ಲಿ ಅಸ್ತಿ-ನಾಸ್ತಿತನವೆರಡೂ ಸಿದ್ಧವಾಗುತ್ತವೆ. ಅದರಿಂದ ಅಸ್ತಿ-ನಾಸ್ತಿಯಿದೆ. ಆಗ ಜೈನನು 'ಸ್ಯಾತ್ ಅಸ್ತಿ ನಾಸ್ತಿ' ಯಾವುದೋ ನಯದಿಂದ ಅಸ್ತಿನಾಸ್ತಿ ಇದೆಯೆಂದು ಹೇಳುತ್ತಾನೆ.

೪. ಯಾವಾಗ ರತ್ನದ ಅಸ್ತಿಯನ್ನು ಹೇಳಲಾಗುತ್ತದೆ, ಅದೇ ಸಮಯದಲ್ಲಿ ಚಿನ್ನದ ನಾಣ್ಯವು ತನ್ನ ಚತುಷ್ಟಯದಿಂದ ವಿದ್ಯಮಾನವಿದ್ದರೂ ಮತ್ತು ಅದರ ಅಪೇಕ್ಷೆಯು ಇಲ್ಲದಿದ್ದರೂ ಕೂಡ ಅದರ ನಾಸ್ತಿಯನ್ನು ಹೇಳಲಾಗುವುದಿಲ್ಲ; ಅದೇ ರೀತಿ ರತ್ನದ ನಾಸ್ತಿ ಮಾಡಿ ಚಿನ್ನದ ನಾಣ್ಯದ ಅಸ್ತಿ ಹೇಳಿದರೂ ಕೂಡ ಅದೇ ಸಮಯದಲ್ಲಿ ತನ್ನ ಚತುಷ್ಟಯದಿಂದ ರತ್ನದ ನಾಸ್ತಿಯನ್ನು ಹೇಳಲಾಗುವುದಿಲ್ಲ. ಈ ಪ್ರಕಾರ ಒಟ್ಟಿಗೆ ಅಸ್ತಿ-ನಾಸ್ತಿಯನ್ನು ಹೇಳಲಾಗುವುದಿಲ್ಲ. ಆಗ ಜೈನನು 'ಸ್ಯಾತ್ ಅವಕ್ತವ್ಯ' ಅರ್ಥಾತ್ ಯಾವುದೋ ನಯದಿಂದ ಅವಕ್ತವ್ಯವಿದೆಯೆಂದು ಹೇಳುತ್ತಾನೆ.

೫. ಅಯ್ಯಾ ಸೋದರನೇ ! ತನ್ನ ಚತುಷ್ಟಯದಿಂದ ರತ್ನದ ಅಸ್ತಿಯಿದೆ, ರತ್ನದ ಚತುಷ್ಟಯದಲ್ಲಿ ಚಿನ್ನದ ನಾಣ್ಯದ್ದು ನಾಸ್ತಿಯು ಕೂಡ ಇದೆ; ಆದರೆ ಹೇಳಲಾಗುವುದಿಲ್ಲ. ಏಕೆಂದರೆ ತನ್ನ ಚತುಷ್ಟಯದಿಂದ ಚಿನ್ನದ ನಾಣ್ಯದ ಅಸ್ತಿಯು ಕೂಡ ಇದೆ; ಅದರಿಂದ 'ಸ್ಯಾತ್ ಅಸ್ತಿ ಅವಕ್ತವ್ಯ'ವಿದೆ.

೬. ಚಿನ್ನದ ನಾಣ್ಯದ್ದು ರತ್ನದಲ್ಲಿ ನಾಸ್ತಿಯಿದೆ, ಆದರೆ ಹೇಳುವುದಾಗುವುದಿಲ್ಲ; ಏಕೆಂದರೆ ರತ್ನವು ಪ್ರತ್ಯಕ್ಷ ವಿದ್ಯಮಾನವಿದೆ. ಅದರಿಂದ 'ಸ್ಯಾತ್ ನಾಸ್ತಿ ಅವಕ್ತವ್ಯ'ವಿದೆ.

೭. ರತ್ನವು ತನ್ನ ಚತುಷ್ಟಯದ ಅಪೇಕ್ಷೆಯಿಂದ ಅಸ್ತಿಯಿದೆ, ಪರ ಚತುಷ್ಟಯದ ಅಪೇಕ್ಷೆಯಿಂದ ನಾಸ್ತಿಯಿದೆ ಆದರೆ ಹೇಳುವುದು ಆಗುವುದಿಲ್ಲ. ಅದರಿಂದ 'ಸ್ಯಾತ್ ಅಸ್ತಿ ನಾಸ್ತಿ ಅವಕ್ತವ್ಯ'ವಿದೆ ಎನ್ನಲಾಗಿದೆ.

ಸಪ್ತಭಂಗವನ್ನು ಅನೇಕ ಪದಾರ್ಥಗಳ ಮೇಲೆ ಪ್ರಯೋಗ ಮಾಡಿ ದ್ರವ್ಯ, ಕ್ಷೇತ್ರ, ಕಾಲ, ಭಾವಗಳಿಂದ ಸಿದ್ಧ ಮಾಡಬೇಕಾಗುವುದು. ಜಿನವಾಣಿಯಲ್ಲಿ ಈ ಸಪ್ತಭಂಗಗಳಿಂದ ಸಹಿತವಾದ ಕಥನವಿದೆ.

ಪಂಚಪ್ರಮಾಣ - ಈಗ ಜೈನ ಧರ್ಮವು ಯಾವ ಪಂಚ ಪ್ರಮಾಣಗಳಿಂದ ಖಂಡಿತವಾಗುವುದಿಲ್ಲ ಎಂದರೆ ತುಂಡಾಗುವುದಿಲ್ಲವೆಂಬುದನ್ನು ಹೇಳುತ್ತಾರೆ - ಲೌಕಿಕ ಪ್ರಮಾಣ, ಪರಂಪರಾಪ್ರಮಾಣ, ಅನುಮಾನ ಪ್ರಮಾಣ, ಶಾಸ್ತ್ರ ಪ್ರಮಾಣ ಮತ್ತು ಪ್ರತ್ಯಕ್ಷ ಪ್ರಮಾಣವೆಂಬ ಐದು ಪ್ರಮಾಣಗಳಿವೆ. ಈ ಪ್ರಮಾಣಗಳಿಂದ ಯಾವ ಧರ್ಮವು ಖಂಡಿತವಾಗುತ್ತದೆ, ಆ ಧರ್ಮವು ಅಸತ್ಯವಿದೆ.

೧. **ಲೌಕಿಕ ಪ್ರಮಾಣ** - ಯಾವ ಕ್ರಿಯೆಗಳು ಲೋಕದಲ್ಲಿ ನಿಷಿದ್ಧವಿವೆ, ಎಲ್ಲರಿಂದ ನಿಂದನೀಯವಿವೆ; ಯಾವವುಗಳನ್ನು ಮಾಡುವುದರಿಂದ ರಾಜದಂಡನೆ, ಪಂಚರಿಂದ ದಂಡನೆ ಪ್ರಾಪ್ತವಾಗುತ್ತದೆ - ಅಂಥ ಕ್ರಿಯೆಗಳನ್ನು ಕೂಡ ಯಾರ ದೇವ-ಗುರುಗಳು ಇಲ್ಲಿ ಮಾಡುತ್ತಾರೆ, ಆ ಧರ್ಮ ಹಾಗೂ ಆ ದೇವ-ಗುರುಗಳು ಅಸತ್ಯರಿದ್ದಾರೆ. ಯಾವ ಶಾಸ್ತ್ರಗಳಲ್ಲಿ ಅವುಗಳನ್ನು ಮಾಡುವ ನಿರೂಪಣೆಯಿದೆ, ಆ ಶಾಸ್ತ್ರಗಳು ಅಸತ್ಯವಿವೆ-ಅಯೋಗ್ಯವಿವೆ, ತ್ಯಾಗ ಯೋಗ್ಯವಿವೆ. ಆ ಕ್ರಿಯೆಗಳು ಇವಾಗಿವೆ - ಲೋಕದಲ್ಲಿ ಸಪ್ತ ವ್ಯಸನಗಳು ನಿಂದ್ಯವಿವೆ; ಯಾರ ದೇವ-ಗುರುಗಳು ಜೂಜು ಮೊದಲಾದ ವ್ಯಸನಗಳಲ್ಲಿ ರಮಿಸುತ್ತಾರೆ, ಅವರು ಹೀನರಿದ್ದಾರೆ. ಜೂಜಿನಲ್ಲಿ ರಮಿಸುವಂಥವರನ್ನು ಲೋಕದಲ್ಲಿ ನೀಚ(ಪುಂಡ)ರೆನ್ನಲಾಗುತ್ತದೆ, ಆ ಜೂಜುಗಾರನ ಮೇಲೆ ಯಾರೂ ವಿಶ್ವಾಸ ಮಾಡುವುದಿಲ್ಲ. ಅಂಥ ಜೂಜಿನಲ್ಲಿ ಯಾರ ದೇವ-ಗುರುಗಳು ರಮಿಸುತ್ತಾರೆ ಆ ಧರ್ಮವು ತ್ಯಾಗ ಮಾಡಲು ಯೋಗ್ಯವಿದೆ.

ಪರಜೀವಗಳ ಮಾಂಸ-ಕಲೇವರವನ್ನು ಯಾರೂ ಸ್ಪರ್ಶಿಸುವುದೂ ಇಲ್ಲ, ಒಂದು ವೇಳೆ ಸ್ಪರ್ಶವಾಗಿ ಹೋದರೆ ಮಹಾಗ್ಲಾನಿಯಾಗುತ್ತದೆ, ಸ್ನಾನ ಮಾಡಿ ಬಟ್ಟೆ ಬದಲಾಯಿಸಿದ ಮೇಲೆಯೇ ಶುದ್ಧಿಯಾಗುತ್ತದೆ. ಯಾವುದನ್ನು ನೋಡುತ್ತಿದ್ದಂತೆಯೇ ಹೇಸಿಕೆಯುಂಟಾಗುತ್ತದೆ ಅಂಥ ಮಹಾ ಅಶುಭ, ಮಹಾ ದುರ್ಗಂಧವಿದೆ, ಯಾವುದನ್ನು ನಾಯಿ ಮೊದಲಾದವು ಕೂಡ ಗ್ರಹಣ ಮಾಡುವುದಿಲ್ಲವೋ ಆ ಅಶುಚಿಯ ಸಮೂಹವಿರುವ ಆಮಿಷ (ಮಾಂಸ)ವನ್ನು ಯಾರ ದೇವ-ಗುರುಗಳು ತಿನ್ನುತ್ತಾರೆ ಹಾಗೂ ಯಾವ ಶಾಸ್ತ್ರಗಳಲ್ಲಿ ಮನುಷ್ಯರಿಗೆ ಮಾಂಸದ ಭೋಜನವು ಗ್ರಹಣಯೋಗ್ಯವೆನ್ನಲಾಗಿದೆ ಅಂಥ ಪಾಪಾಚಾರೀ ಧರ್ಮ, ಶಾಸ್ತ್ರಗಳು ತ್ಯಾಗ ಯೋಗ್ಯವಿವೆ. ಆ ಧರ್ಮವು ಲೋಕದಲ್ಲಿಯೂ ನಿಷೇಧ ಯೋಗ್ಯವಿದೆ.

ಮದ್ಯದ ಸೇವನೆಯಿಂದ ಬುದ್ಧಿಯು ನಷ್ಟವಾಗುತ್ತದೆ; ಮದ್ಯ ಕುಡಿದ ಮನುಷ್ಯನಿಗೆ ತಾಯಿ, ಸೋದರಿ, ಪತ್ನಿ, ಪುತ್ರಿಯ ಭೇದವು ಕಂಡು ಬರುವುದಿಲ್ಲ; ಅವರೆಲ್ಲರನ್ನೂ ಒಂದೇ ರೀತಿ ತಿಳಿಯುತ್ತಾನೆ, ಹೆಜ್ಜೆ-ಹೆಜ್ಜೆಗೆ ತೂರಾಡುತ್ತ ಮೂರ್ಚ್ಛಿತನಾಗಿ ಹೊರಳಿ ಬೀಳುತ್ತಾನೆ. ಜನರ ಹಾಸ್ಯಕ್ಕೆ ಗುರಿಯಾಗುತ್ತಾನೆ. ಅನೇಕ ಜನರು ಆತನ ಅಜ್ಞಾನ ಕ್ರಿಯೆಗಳನ್ನು ಕಂಡು ಕುತೂಹಲದಿಂದ ಏನೇನು ಮಾಡುತ್ತಾನೆಂಬುದನ್ನು ನೋಡುವ ಸಲುವಾಗಿ ಏಕತ್ರಿತರಾಗುತ್ತಾರೆ. ಹಾಗೂ ಎಲ್ಲರೂ ಅವನ ನಿಂದೆ ಮಾಡುತ್ತಾರೆ - ಇಂಥ ಮದ್ಯದ ಸೇವನೆಯು ಜಗನ್ನಿಂದ್ಯವಿದೆ, ಹೀನ, ತ್ಯಾಗ ಯೋಗ್ಯವಿದೆ. ಇದು ಕೂಡ ಲೋಕದಲ್ಲಿ ನಿಂದನೀಯವಿದೆ.

ಯಾವ ವೇಶ್ಯೆಯ ಶರೀರವು ಯಾವಾಗಲೂ ಸೂತಕದಂತಿದೆ, ಯಾರ ಜಾತಿ-ಕುಲಗಳೂ ಅಜ್ಞಾತವಿವೆ, ಉಚ್ಚ-ನೀಚ ಕುಲದ ಎಲ್ಲ ಮನುಷ್ಯರನ್ನು ಭೋಗಿಸುವಂಥವಳಿದ್ದಾಳೆ, ನಿರ್ಲಜ್ಜಳಿದ್ದಾಳೆ, ಯಾವ ಮನೆಯ ಮಾರ್ಗದತ್ತ ವಿವೇಕವಂತರು ತಪ್ಪಿಯೂ ಕೂಡ ಹೋಗುವುದಿಲ್ಲ, ಕುಶೀಲದ ಮಂದಿರದಂತೆ ಇರುವಂಥ ಯಾರ ಮನೆಗೆ ಹೋಗುವುದರಿಂದ ಲೋಕ ನಿಂದೆಯು ಪ್ರಾಪ್ತವಾಗುತ್ತದೆ, ಆಲಿಸಿದ ಮೇಲೆ ಪಂಚರು ಕೂಡ ಸಮಾಜದಿಂದ ವ್ಯಕ್ತಿಯನ್ನು ಬೇರ್ಪಡಿಸುತ್ತಾರೆ ಅಂಥ ವೇಶ್ಯೆಯ ಸೇವನೆಯನ್ನು ಯಾರ ದೇವ-ಗುರುಗಳು, ಭಕ್ತರು ಮಾಡುತ್ತಾರೆ ಅವರು ಕೂಡ ಅಸತ್ಯರಿದ್ದಾರೆ. ಆ ಧರ್ಮವು ಪಾಪಮಯವಿದೆ, ಅಸತ್ಯವಿದೆ ಮತ್ತು ಲೋಕದಲ್ಲಿ ನಿಂದ್ಯವಿದೆ.

ಒಂದುವೇಳೆ ಯಾವನೋ ಮನುಷ್ಯನು ಯಾವುದೋ ಜೀವದ ಘಾತ ಮಾಡಿದರೆ, ಇವನು ಪಂಚೇಂದ್ರಿಯ ಮನುಷ್ಯ ಅಥವಾ ಪಶುವನ್ನು ಸಾಯಿಸಿದ್ದಾನೆ, ಅದನ್ನು ಎಲ್ಲರೂ ಕಣ್ಣಾರೆ ಕಂಡಿದ್ದಾರೆ - ಇವನು ಮಹಾಪಾಪಿ ಕೊಲೆಗಡುಕನಿದ್ದಾನೆಂದು ಜನರು ಮಾತನಾಡುತ್ತಾರೆ. ಅದರಿಂದ ಪಂಚರು ಅವನನ್ನು ಕೊಲೆಗಾರನೆಂದು ತಿಳಿದು ಜಾತಿಯಿಂದ ಹೊರಗೆ ಹಾಕುತ್ತಾರೆ. ದೊರೆಯು ಕೂಡ ಪಾಪಿಯೆಂದು ತಿಳಿದು, ಪ್ರಯೋಜನವಿಲ್ಲದೆ ದೀನ ಪಶುವಿನ ಕೊಲೆ ಮಾಡಿದ್ದಾನೆಂದು ಘೋಷಿಸಿ, ಅವನ ಸಂಪತ್ತನ್ನು ಲೂಟಿ ಮಾಡುತ್ತಾನೆ ಮತ್ತು ಕೈಗಳನ್ನು-ಮೂಗನ್ನು ಕತ್ತರಿಸಿ ಬಿಡುತ್ತಾನೆ. ಇಂಥ ದಂಡನೆಯು ಪ್ರತ್ಯಕ್ಷವಾಗಿ ಲೋಕದಲ್ಲಿ ಜೀವ ಘಾತದಿಂದ ಆಗುತ್ತದೆ. ಅಂಥ ಜೀವ ಘಾತವನ್ನು ಯಾವ ಶಾಸ್ತ್ರದಲ್ಲಿ ಪುಣ್ಯವೆನ್ನಲಾಗಿದೆ ಮತ್ತು ಯಾರ ದೇವ, ಗುರು, ಭಕ್ತರು ಜೀವಘಾತದಲ್ಲಿ ಮಗ್ನರಿದ್ದಾರೆ - ಜೀವಘಾತ ಮಾಡುತ್ತಾರೆ, ಆ ಜೀವ-ಘಾತಕ ಧರ್ಮವು ತ್ಯಾಗ ಯೋಗ್ಯವಿದೆ, ಲೋಕದಲ್ಲಿ ನಿಂದ್ಯವಿದೆ; ಏಕೆಂದರೆ ಲೋಕದಲ್ಲಿಯಂತೂ ದಯಾಪೂರ್ವಕ ಜೀವಗಳ ರಕ್ಷಣೆಯ ಸಲುವಾಗಿ ಧನಾದಿಗಳ ಸಂಗ್ರಹ ಮತ್ತು ಖರ್ಚು ಮಾಡಲಾಗುತ್ತದೆ. ಪಶುಗಳಿಗೆ ಹುಲ್ಲು ಹಂಚಲಾಗುತ್ತದೆ. ಬಾಯಾರಿಕೆಯನ್ನು ದೂರ ಮಾಡುವ ಸಲುವಾಗಿ ನೀರಿನ ವ್ಯವಸ್ಥೆ, ವಸ್ತ್ರಹೀನರಿಗೆ ವಸ್ತ್ರಗಳ ವಿತರಣೆ, ರೋಗಿಗಳಿಗೆ ಔಷಧದ ವ್ಯವಸ್ಥೆ ಇತ್ಯಾದಿರೂಪದಿಂದ ಎಲ್ಲ ಪ್ರಕಾರದ ಕಾಳಜಿಯೊಂದಿಗೆ ಜೀವಗಳ ರಕ್ಷಣೆ ಮಾಡಲಾಗುತ್ತದೆ. ಹೀಗಿರುವಾಗ ಯಾವ ಧರ್ಮದಲ್ಲಿ ಜೀವಘಾತದಿಂದ ಪುಣ್ಯವೆಂದು ಹೇಳಲಾಗಿದೆ - ಜೀವಗಳ ಹಿಂಸೆ (ಬಲಿ) ಕೊಡುವ ಉಪದೇಶವಿದೆ, ಆ ದಯಾರಹಿತ ಧರ್ಮವು ಅಸತ್ಯವಿದೆ - ಅದು ಲೌಕಿಕ ಜನರಿಂದಲೂ ಖಂಡಿತವಾಗುವಂಥ ಧರ್ಮವಿದೆ.

ಯಾರು ಬೇರೆಯವರ ಚೇತನ-ಅಚೇತನ ಪರಿಗ್ರಹವನ್ನು ಛಲ-ಬಲದಿಂದ ಹರಣ ಮಾಡುತ್ತಾರೆ ಅವರನ್ನು ಚೋರನೆಂದು ಹೇಳುತ್ತಾರೆ. ಅಂಥ ಜೀವನು ದೊರೆ ಅಥವಾ ಪಂಚರಿಂದ ದಂಡನೆ ಯೋಗ್ಯನಿದ್ದಾನೆ. ಲೋಕನಿಂದ್ಯನಿದ್ದಾನೆ. ಅಂಥ ಕಳವನ್ನು ಯಾರ ದೇವ-ಗುರುಗಳು ಮಾಡುತ್ತಾರೆ, ತಮ್ಮ ಭಕ್ತರನ್ನು ಛಲದಿಂದ ಮರಳು ಮಾಡಿ ಅವರ ಧನವನ್ನು ಅಪಹರಿಸುತ್ತಾರೆ, ಬೇರೆಯವರ ಸುಂದರ ಪತ್ನಿ ಪುತ್ರಿಯರನ್ನು ಕಂಡು ಅಪಹರಿಸಿಕೊಂಡು ಹೋಗುತ್ತಾರೆಂಬ ಕಥನವು ಯಾವ ಧರ್ಮದಲ್ಲಿದೆ, ಅದು ಅಸತ್ಯಧರ್ಮವಿದೆ. ಈ ಚೋರ ಧರ್ಮವು ಕೂಡ ಲೌಕಿಕ ಜನರಿಂದ ನಿಂದ್ಯವಿದೆ, ಹೇಯವಿದೆ.

ಪರಸ್ತ್ರೀಯ ಸೇವನೆ ಮಾಡುವಂಥವನನ್ನು ಪಂಚರಂತೂ ಜಾತಿಯಿಂದ ಹೊರಗೆ ಹಾಕುತ್ತಾರೆ. ದೊರೆಯು ಆ ಕುಶೀಲ ಪುರುಷನ ಮನೆಯನ್ನು ಲೂಟಿ ಮಾಡುತ್ತಾನೆ. ಅಂಗ-ಉಪಾಂಗಗಳ ಛೇದ ಮಾಡಿಸುತ್ತಾನೆ, ಮರಣದಂಡನೆ ನೀಡುತ್ತಾನೆ, ಕತ್ತೆಯ ಮೇಲೆ ಕೂಡ್ರಿಸಿ ಅಪಮಾನಿತ ಮಾಡುತ್ತಾನೆ. ಇಂಥ ದುಃಖಗಳನ್ನು ಈಗಲೂ ಲೋಕದಲ್ಲಿ ಪ್ರತ್ಯಕ್ಷ ನೋಡಬಹುದಾಗಿದೆ. ಯಾವ ಪರಸ್ತ್ರೀಯ ಪತಿಯು ಜೀವಂತನಿದ್ದಾನೆ ಅಥವಾ ಪತಿರಹಿತ ವಿಧವೆಯಿದ್ದಾಳೆ ಅಥವಾ ಮದುವೆಯಾಗದ ಕುಮಾರಿಯಿದ್ದಾಳೆ, ದಾಸಿಯಿದ್ದಾಳೆ - ಹೀಗೆ ಎಲ್ಲ ಪ್ರಕಾರದ ಪರಸ್ತ್ರೀಯ ಸೇವನೆಯನ್ನು ಯಾರ ಧರ್ಮದಲ್ಲಿ ದೋಷವೆಂದು ಹೇಳಿಲ್ಲ; ಯಾರ ದೇವ-ಗುರುಗಳು ಪರಸ್ತ್ರೀಯರ ಹರಣ ಮಾಡುತ್ತಾರೆ ಮತ್ತು ಅವರ ಸೇವನೆಯಲ್ಲಿ ದೋಷವೆಂದು ಹೇಳುವುದಿಲ್ಲ, ಯಾರ ದೇವ-ಗುರುಗಳು ಪರಸ್ತ್ರೀಯರೊಂದಿಗೆ ಹಾಸ್ಯಪೂರ್ಣ ವಿನೋದ-ಆಟವಾಡುತ್ತಾರೆ, ಪರಸ್ತ್ರೀ ಸೇವನೆ ಮಾಡುತ್ತಾರೆ, ಆ ಧರ್ಮವು ಕೂಡ ಕಾಮೀ ದೇವ-ಗುರುಗಳಿಂದ ನಿರೂಪಿತವಿದ್ದು ಅಸತ್ಯವಿದೆ, ಲೌಕಿಕ ಜನರಿಂದ ಖಂಡಿತವಿದೆ. ಕುಶೀಲವನ್ನಂತೂ ಲೋಕದಲ್ಲಿಯೂ ಮಹಾಪಾಪವೆಂದು ಮನ್ನಿಸಲಾಗಿದೆ ಹಾಗೂ ಶೀಲವನ್ನು ಉತ್ತಮ ಧರ್ಮವೆಂದು ಪರಿಗಣಿಸಲಾಗಿದೆ. ಅದರಿಂದ ಲೋಕೋಪವಾದ ಸಹಿತ ಕುಶೀಲ ಪೋಷಕ ಧರ್ಮವೂ ತ್ಯಾಗಯೋಗ್ಯವೇ ಇದೆ.

ಈ ಪ್ರಕಾರ ಏಳು ವ್ಯಸನಗಳು ಲೋಕದಲ್ಲಿ ದಂಡನೀಯವೆನ್ನಲಾಗಿದೆ; ಅದರಿಂದ ಈ ವ್ಯಸನಗಳ ಪ್ರವೇಶವು ಯಾವ ಧರ್ಮದಲ್ಲಿದೆ ಮತ್ತು ಯಾವ ಧರ್ಮವು ಲೌಕಿಕ ನಯ-ಪ್ರಮಾಣದಿಂದ ಖಂಡಿತವಿದೆ ಅದು ಅಸತ್ಯಧರ್ಮವಿದೆ.

ಕ್ರೋಧೀ ಜೀವನನ್ನು ಜನರು ಮಹಾಕ್ರೋಧಿಯೆನ್ನುತ್ತಾರೆ, ಆ ಪಾಪಿಯು ಮಾತು ಮಾತಿಗೆ ಜಗಳ ಮಾಡುತ್ತಾನೆ, ಹೊಡೆಯುತ್ತಾನೆ. ಅವನ ಸ್ವಭಾವವು ಸಹಜವಾಗಿಯೇ ಸರ್ಪದ ಸಮಾನವಾಗಿ ಬಿಡುತ್ತದೆ. ಮಾನೀ ಜೀವನನ್ನು ಜನರು ಮಹಾಮಾನಿಯೆನ್ನುತ್ತಾರೆ, ಒಮ್ಮೊಮ್ಮೆ ಹೊಡೆಸಿಕೊಳ್ಳಬಹುದಾಗಿದೆ, ಆದುದರಿಂದ ಅಧಿಕ ಮಾನವು ಯೋಗ್ಯವಿಲ್ಲ. ಮಾಯಾಚಾರಿಯನ್ನು ಲೋಕದಲ್ಲಿ ಮಹಾಮೋಸಗಾರನೆನ್ನುತ್ತಾರೆ, ಅವನ ಮನಸ್ಸನ್ನು ಯಾರೂ ತಿಳಿಯಲಾಗುವುದಿಲ್ಲ ಅವನು ಮಹಾಪಾಪಿಯಿದ್ದಾನೆ. ಲೋಭಿಯನ್ನು ಲೋಕದಲ್ಲಿ ಮಹಾಲೋಭಿಯೆನ್ನುತ್ತಾರೆ. ಅವನ ಹತ್ತಿರ ಬಹಳಷ್ಟು ಧನವಿದ್ದರೂ ಅವನು ಆ ಧನವನ್ನು ತಾನೂ ಭೋಗಿಸುವುದಿಲ್ಲ ಮತ್ತು ಇತರರಿಗೂ ಭೋಗಿಸಗೊಡುವುದಿಲ್ಲ, ಅದನ್ನು ಧರ್ಮಕಾರ್ಯದಲ್ಲಿಯೂ ಖರ್ಚು ಮಾಡುವುದಿಲ್ಲ; ಪ್ರತಿಯಾಗಿ ಇನ್ನಷ್ಟು ಧನವನ್ನು ಹೊಂದಿಸುವ ಉಪಾಯ ಮಾಡುತ್ತಿರುತ್ತಾನೆ.

ಇದೇ ಪ್ರಕಾರ ಕ್ರೋಧ-ಮಾನ-ಮಾಯೆ-ಲೋಭ ಸಹಿತ ಜೀವಗಳಿಗೆ ಇತರರನ್ನು ಸಾಯಿಸುವ ಸಲುವಾಗಿ ಶಸ್ತ್ರಧಾರಣ ಮಾಡುವಂಥ ತೀವ್ರ ಕಷಾಯಭಾವದ ಉಪದೇಶವನ್ನು ಕೂಡ ಯಾವ ಧರ್ಮದಲ್ಲಿ ಮಾಡಲಾಗಿದೆ ಆ ಧರ್ಮದ ದೇವ-ಗುರು ಹಾಗೂ ಭಕ್ತರು ಮಹಾಕಷಾಯಿಗಳಿದ್ದಾರೆ. ಇಂಥ ಭಯಾನಕ ಧರ್ಮವು ತ್ಯಾಗಯೋಗ್ಯವಿದೆ. ವಾಸ್ತವಿಕ ಧರ್ಮವಂತೂ ಕಷಾಯ ರಹಿತವೇ ಇರುತ್ತದೆ.

ಲೋಕದಲ್ಲಿ ಬಹಳಷ್ಟು ಆರಂಭ-ಪರಿಗ್ರಹವುಳ್ಳವರನ್ನು ದೊಡ್ಡ ಗೃಹಸ್ಥರೆನ್ನಲಾಗುತ್ತದೆ. ಯಾರಿಗೆ ಪತ್ನಿ-ಪುತ್ರ ಮೊದಲಾದ ಕುಟುಂಬವಿದೆ, ಕೆಲವರ ಕುರಿತಾಗಿ ಸ್ನೇಹವಿದೆ, ಕೆಲವರ ಕುರಿತಾಗಿ ದ್ವೇಷವಿದೆ - ಅಂಥ ರಾಗ-ದ್ವೇಷವುಳ್ಳವರನ್ನು ಗೃಹಸ್ಥರೆಂದು ಹೇಳುತ್ತಾರೆ. ಯಾವ ಧರ್ಮದಲ್ಲಿ ಆರಂಭ-ಪರಿಗ್ರಹವುಳ್ಳವರನ್ನು, ಕುಟುಂಬ ಸಹಿತರಾಗಿರುವ ರಾಗಿ-ದ್ವೇಷಿಗಳನ್ನು ದೇವ-ಗುರುವೆನ್ನಲಾಗಿದೆ, ಆ ಧರ್ಮವು ಸಂಸಾರದಲ್ಲಿ ಪರಿಭ್ರಮಣ ಮಾಡಿಸುವಂಥದ್ದಿದೆ. ನೋಡಿರಿ, ಲೋಕದಲ್ಲಿಯಂತೂ ತ್ಯಾಗವೇ ಪೂಜ್ಯವಿದೆ. ಈಗಲೂ ಕೂಡ ಯಾರು ಮನೆ ಬಿಟ್ಟು ವನದಲ್ಲಿ ನಗ್ನರಾಗಿರುತ್ತಾರೆ ಅಥವಾ ಕೇವಲ ಲಂಗೋಟಿ ಧರಿಸಿರುತ್ತಾರೆ, ಅವರಿಗೆ ಪರಿಗ್ರಹಧಾರಿಗಳಾದ ದೊಡ್ಡ ದೊಡ್ಡ ದೊರೆಗಳೂ ನಮಸ್ಕಾರ ಮಾಡುತ್ತಾರೆ ಅವರನ್ನು ಪೂಜಿಸುವ ಗೌರವಿಸುವ ಸತ್ಪರಂಪರೆಯು ಕಂಡು ಬರುತ್ತದೆ. ಆದುದರಿಂದ ಪರಿಗ್ರಹ ಸಹಿತ ದೇವ-ಗುರುಗಳು ಲೋಕದಲ್ಲಿಯೂ ನಿಷಿದ್ಧ್ಯರಿದ್ದಾರೆ. ಯಾರ ದೇವ-ಗುರುಗಳು ರಾಗ-ದ್ವೇಷ ಮೊದಲಾಗಿ ಸರ್ವ ಆರಂಭ ಪರಿಗ್ರಹದಿಂದ ರಹಿತರಿದ್ದಾರೆ ಅದೇ ಧರ್ಮವು ಸತ್ಯವಿದೆ.

ಯಾವ ಧರ್ಮವು ಲೌಕಿಕ ಪ್ರಮಾಣದಿಂದಲೂ ಖಂಡಿತವಾಗುತ್ತದೆ, ಅದು ಅನ್ಯ ಪ್ರಮಾಣಗಳಿಂದಂತೂ ಖಂಡಿತವೇ ಇದೆ. ಆದುದರಿಂದ ಯಾವ ದೋಷಗಳು ಲೋಕದಲ್ಲಿ ನಿಂದ್ಯವಿವೆ, ಅವುಗಳ ಪೋಷಕವಾದ ಯಾವುದೇ ಧರ್ಮವು ಸತ್ಯವಿಲ್ಲ.

ಯಾರು ಲೋಕದಲ್ಲಿ ಭಗವಂತರ ಪೂಜೆ ಮಾಡುತ್ತಾರೆ, ದಾನ ಕೊಡುತ್ತಾರೆ, ಸಂಯಮ-ತಪ ಮಾಡುತ್ತ ಸಮತೆಯ ಭಾವಪೂರ್ವಕ ಜೀವಿಸುತ್ತಾರೆ, ಶೀಲವಂತರಿರುತ್ತಾರೆ, ಯಾರಿಗೆ ಕ್ರೋಧ-ಮಾನ-ಮಾಯೆ-ಲೋಭಗಳು ಅಧಿಕವಿರುವುದಿಲ್ಲ, ಅಂಥವರನ್ನು ಎಲ್ಲ ಜನರು ಪೂಜಿಸುತ್ತಾರೆ - ಒಳ್ಳೆಯವರೆಂದು ತಿಳಿದು ಪ್ರಶಂಸೆ ಮಾಡುತ್ತಾರೆ. ಯಾವನು ಪ್ರಭುವಿನ ಪೂಜೆ-ಸ್ತುತಿ ಮಾಡುತ್ತಾನೆ ಅವನನ್ನು ಕಂಡು ಜನರು 'ಇವನು ಧನ್ಯನಿದ್ದಾನೆ ! ನಿಜವಾದ ಭಕ್ತನಿದ್ದಾನೆ, ಇವನ ಮನಸ್ಸಿನಲ್ಲಿ ಯಾವಾಗಲೂ ಭಗವಂತರ ಭಕ್ತಿ-ಪೂಜೆಯ ಮಹಿಮೆಯಿದೆ' ಎಂದು ಹೇಳುತ್ತ ಆತನ ಗುಣಸ್ತುತಿ ಮಾಡುತ್ತಾರೆ. ಯಾವನೋ ಧರ್ಮಾತ್ಮನಿಗೆ ದಾನ ಕೊಡುವುದನ್ನು ನೋಡಿ ಜನರು 'ಇವನು ಧನ್ಯನಿದ್ದಾನೆ, ದಯಾಗುಣ ಸಂಪನ್ನನಿದ್ದಾನೆ, ದೀನ ಜನರಿಗೆ ಬಹಳಷ್ಟು ದಾನ ಕೊಡುತ್ತಾನೆ ಎಲ್ಲರ ರಕ್ಷಣೆಯ ಭಾವವು ಇವನದಿದೆ' ಎನ್ನುತ್ತಾರೆ.

ಉಪವಾಸ ಮೊದಲಾಗಿ ಅನೇಕ ಪ್ರಕಾರದ ತಪ-ಸಂಯಮದ ಆಚರಣೆ ಮಾಡುತ್ತಿರುವ ತಪಸ್ವಿಯನ್ನು ಕಂಡು ಹರುಷದಿಂದ 'ಇವನು ತಪಸ್ವಿಯಿದ್ದಾನೆ - ಮಹಾಸಂಯಮಿಯಿದ್ದಾನೆ, ಪೂಜ್ಯನಿದ್ದಾನೆ'ಂದು ಹೇಳುತ್ತ ಎಲ್ಲರೂ ಅವನನ್ನು ಶ್ರೇಷ್ಠನೆಂದು ತಿಳಿದು ಪೂಜಿಸುತ್ತಾರೆ. ಸಮತೆಯ ಭಾವವುಳ್ಳವನಿಗೆ ಯಾವನೋ ದುಷ್ಟನು ದುರ್ವಚನಗಳನ್ನಾಡಿದರೆ, ಹೊಡೆದರೆ, ಕಟ್ಟಿಹಾಕಿದರೆ ಅಂಥ ಪ್ರಸಂಗದಲ್ಲಿಯೂ ಅವನು ಯಾರಿಗೂ ಯಾವುದೇ ರೀತಿಯ ದ್ವೇಷಪೂರ್ಣ ಪ್ರತಿಕ್ರಿಯೆ ಮಾಡದಿದ್ದರೆ ಅವನ ಕುರಿತಾಗಿ ಜನರು 'ಇವನು ಧನ್ಯನಿದ್ದಾನೆ, ಮಹಾ ಧೀರನಿದ್ದಾನೆ - ಸಮತಾ ಪರಿಣಾಮವುಳ್ಳವನಿದ್ದಾನೆ'ಂದು ತಿಳಿದು ಅವನನ್ನು ಪೂಜಿಸುತ್ತಾರೆ.

ಅಭಿಮಾನ ಮಾಡದಂಥವನ ಕುರಿತಾಗಿ ಜನರು 'ಇವನು ಮಹಾಮಾನವನಿದ್ದಾನೆ, ಇವನಿಗೆ ಸ್ವಲ್ಪ ಮಾತ್ರವೂ ಗರ್ವವಿಲ್ಲ'ವೆಂದು ಕೊಂಡಾಡುತ್ತಾರೆ. ಛಲ-ಕಪಟ ಮಾಡದಂಥವನ ಕುರಿತು 'ಇವನು ಪರಿಶುದ್ಧ ಮನಸ್ಸಿನ ಮನುಷ್ಯನಿದ್ದಾನೆ, ಸರಳ ಪರಿಣಾಮಿಯಿದ್ದಾನೆ. ಕುಟಿಲತೆಯು ಇಲ್ಲದ ಇವನು ಧನ್ಯನಿದ್ದಾನೆ'ಂದು ತಿಳಿದು ಜನರು ಅವನ ಸ್ತುತಿ ಮಾಡುತ್ತಾರೆ. ಯಾರು ಪರಿಗ್ರಹ, ಪತ್ನಿ, ಪುತ್ರ, ಧನ, ಮನೆಯ ತ್ಯಾಗ ಮಾಡಿ ಸಮತೆಯ ಭಾವದಿಂದ ಯೋಗ ಧಾರಣ ಮಾಡಿ ಆತ್ಮಸಾಧನೆ ಮಾಡುತ್ತ ವನದಲ್ಲಿರುತ್ತಾರೆ ಅಂಥವರನ್ನು ಜನರು ಪೂಜಿಸುತ್ತಾರೆ. ಯಾರು ನಗ್ನರಾಗಿರುತ್ತಾರೆ, ಸಹಜ ರೂಪದಿಂದ ದೊರಕಿದರೆ ಮಾತ್ರ ಭೋಜನ ಮಾಡುತ್ತಾರೆ,

ಇಲ್ಲದಿದ್ದರೆ ಬರಿಹೊಟ್ಟೆಯಿಂದ ಇರುತ್ತಾರೆ - ಯಾರ ಹತ್ತಿರವೂ ಯಾಚನೆ ಮಾಡುವುದಿಲ್ಲ ಅಂಥವರ ಪೂಜೆಯನ್ನು ಜನರು ಮಾಡುತ್ತಾರೆ.

ಈ ಪ್ರಕಾರ ಲೌಕಿಕ ಜನರಿಂದ ಪೂಜನೀಯವಾದ ಉಪರ್ಯುಕ್ತ ಜಗತಗುಣಗಳ ಕಥನವು ಯಾವ ಧರ್ಮದಲ್ಲಿದೆ, ಆ ಧರ್ಮವು ಪೂಜಿಸಲು ಯೋಗ್ಯವಿದೆ, ಸತ್ಯಧರ್ಮವಿದೆ.

ಈ ಪ್ರಕಾರ ಲೌಕಿಕ ಪ್ರಮಾಣಗಳಿಂದ ಧರ್ಮದ ಪರೀಕ್ಷೆ ಮಾಡಿದ ಮೇಲೆ ಈ ಜಿನಧರ್ಮವು ಲೋಕದಿಂದ ಪೂಜ್ಯವಿದೆ. ಉಪರ್ಯುಕ್ತ ಗುಣಗಳಿಂದ ಸಹಿತವಾಗಿರುವ ಕಾರಣ ಲೌಕಿಕ ಪ್ರಮಾಣಗಳ ಮೂಲಕ ಇದನ್ನು ಖಂಡಿತಗೊಳಿಸಲಾಗುವುದಿಲ್ಲ; ಆದುದರಿಂದ ಜಿನಧರ್ಮವು ಲೌಕಿಕ ಪ್ರಮಾಣಗಳಿಂದ ಅಖಂಡವಿದೆಯೆಂದು ತಿಳಿಯುವುದು.

**೨. ಪರಂಪರಾ ಪ್ರಮಾಣ -** ಯಾವ ಕ್ರಿಯೆಗಳು ಮೊದಲಿನಿಂದಲೂ ನಡೆಯುತ್ತ ಬರುತ್ತಿವೆ, ಬೇಕಾದರೆ ಕಾಲ ದೋಷದಿಂದ ವರ್ತಮಾನದಲ್ಲಿ ಆಗುತ್ತಿಲ್ಲವಾದರೂ ಪರಂಪರೆಯಿಂದ ತಿಳಿದುಕೊಳ್ಳಬಹುದಾಗಿದೆ. ಅವುಗಳನ್ನು ಪರಂಪರೆಯೆಂದು ಹೇಳುತ್ತಾರೆ. ನಮ್ಮ ತಾತ ಮೊದಲಾದವರು ಮೊದಲು ಕುಲದಲ್ಲಿ ದೊಡ್ಡವರಿದ್ದರು. ವರ್ತಮಾನದಲ್ಲಿ ಇಲ್ಲ, ಎಲ್ಲರೂ ಪರಲೋಕಕ್ಕೆ ಹೊರಟು ಹೋದರು; ಆದಾಗ್ಯೂ ಅವರ ದೊಡ್ಡಸ್ತಿಕೆ, ಧನದ ಪ್ರಚುರತೆ, ಆಜ್ಞೆಯು ನಡೆಯುವುದು, ಶುಭ ಕ್ರಿಯೆ ಮೊದಲಾದುವನ್ನು ಬೇರೆಯವರ ಬಾಯಿಂದ ಆಲಿಸಿ - ನಮ್ಮ ಹಿರಿಯರು ಹೀಗಿದ್ದರು, ಈ ಪ್ರಕಾರದಿಂದ ಅವರುಗಳ ಧರ್ಮ-ಕರ್ಮರೂಪ ವ್ಯವಹಾರ ಕ್ರಿಯೆಗಳು ಪ್ರಚಲಿತವಿದ್ದವು - ಎಂಬುದನ್ನು ತಿಳಿದುಕೊಳ್ಳುತ್ತೇವೆ, ಪ್ರತೀತಿಯುಂಟಾಗುತ್ತದೆ ಅಲ್ಲದೆ ನಮ್ಮ ಹಿರಿಯರಿಂದ ಕೊಡಲ್ಪಟ್ಟ ಲಕ್ಷಾಂತರ ಹಣವು ಬೇರೆಯವರಿಂದ ಬರಬೇಕಾಗಿದೆ ಮತ್ತು ಅದೆಷ್ಟೋ ಧನರಾಶಿಯು ಹಿರಿಯರ ಮೂಲಕ ಮಾಡಲಾದ ಋಣವಿದೆ ಎಂಬುದನ್ನೆಲ್ಲ ವಿಶಿಷ್ಟ ಕಾಗದ ಪತ್ರಗಳಿಂದ ಅದರಲ್ಲಿ ರುಜು ಹಾಕಿರುವುದರ ಆಧಾರದಿಂದ ತಿಳಿಯುತ್ತೇವೆ, ಆ ಕಾಗದ-ಪತ್ರಗಳನ್ನು ಪರಂಪರೆಯಿಂದ ಪ್ರಮಾಣವೆಂದು ಮನ್ನಿಸಿ ಬರಬೇಕಾದವರಿಂದ ಪಡೆಯುತ್ತೇವೆ ಮತ್ತು ಕೊಡಬೇಕಾಗಿರುವವರಿಗೆ ಕೊಡುತ್ತೇವೆ. ಈ ಪ್ರಕಾರ ಈ ಸಮಯದಲ್ಲಿ ಸ್ವಯಂ ಆ ಕೊಡ-ಕೊಳ್ಳುವುದರ ತಿಳಿವಳಿಕೆ ಇಲ್ಲದಿದ್ದರೂ ಆ ಕಾಗದ-ಪತ್ರಗಳ ಆಧಾರದಿಂದ ಕೊಡ-ಕೊಳ್ಳುವ ಕಾರ್ಯವನ್ನು ಯಥಾರ್ಥರೂಪದಿಂದ ಮಾಡುತ್ತೇವೆ - ಇದನ್ನು ಪರಂಪರೆಯಿಂದ ಪ್ರಮಾಣವೆಂದು ಹೇಳುತ್ತಾರೆ.

ಇದೇ ಪ್ರಕಾರ ತೀರ್ಥಂಕರ, ಚಕ್ರವರ್ತಿ, ಬಲಭದ್ರ, ನಾರಾಯಣ, ಪ್ರತಿನಾರಾಯಣ, ಕಾಮದೇವ, ನಾರದ, ರುದ್ರ, ಮಹಾಮಂಡಲೇಶ್ವರ, ಅರ್ಧಮಂಡಲೇಶ್ವರ, ಮಂಡಲೇಶ್ವರ ಇತ್ಯಾದಿ ಪದಗಳ ಧಾರಕ ಪುರುಷರು ಮೊದಲು ಆಗಿದ್ದರು. ಈಗ ಕಾಲದೋಷದಿಂದ ಅವರುಗಳು ಇಲ್ಲ. ಆದಾಗ್ಯೂ ಅವರುಗಳ ಹೆಸರು ಲೋಕದಲ್ಲಿ ಕೇಳಿ ಬರುತ್ತವೆ. ಆ ಪದವಿಗಳ ಧಾರಕ ಪುರುಷರ ಕುಲ, ಮಾತಾಪಿತ ಮೊದಲಾದವರ ಪರಂಪರೆಯ ಕಥೆ, ಅವರುಗಳ ಉತ್ಪತ್ತಿ, ನಾಮ, ರಾಜ್ಯಸಂಪದ, ಭೋಗ, ಸುಖ, ಪುರುಷಾರ್ಥ, ಶೌರ್ಯ ಪರಾಕ್ರಮ, ಸೈನ್ಯದಳ ಇತ್ಯಾದಿಗಳ ವಾರ್ತೆಯು ಪರಂಪರೆಯಿಂದ ಪ್ರಮಾಣವಿದೆ. ಈ ಪರಂಪರೆಯನ್ನು ಶಾಸ್ತ್ರಗಳಿಂದ ಅಥವಾ ಲೌಕಿಕ ವಾರ್ತೆಗಳಿಂದ ತಿಳಿದು ಹಾಗೆಯೇ ಶ್ರದ್ಧೆ ಮಾಡುತ್ತೇವೆ.

ಯಾವ ಧರ್ಮ ಶಾಸ್ತ್ರಗಳಲ್ಲಿ ಇಂಥ ಪುರುಷರ ಉತ್ಪತ್ತಿ, ಕುಲ, ರಾಜ್ಯಸಂಪದ, ಭೋಗ, ಸುಖ, ವೈರಾಗ್ಯವಾದ ಮೇಲೆ ದೀಕ್ಷೆಯ ಗ್ರಹಣ, ಮುನಿಪದದ ಪಾಲನೆ ಮಾಡುವುದು, ಮುನಿ-ಶ್ರಾವಕರ ಆಚಾರ, ಪ್ರವೃತ್ತಿ ಇತ್ಯಾದಿಗಳ ಕಥನವು ಪ್ರಾಪ್ತವಾಗುತ್ತದೆ, ಅವು ಸತ್ಯವಿವೆ, ಇಂಥ ಪರಂಪರೆಯೊಂದಿಗೆ ದೊರಕುವ ಆ ಧರ್ಮವು ಸತ್ಯವಿದೆ. ನಿರ್ದೋಷ ಭೋಜಿಗಳು, ಆರಂಭ-ಪರಿಗ್ರಹರಹಿತ ವೀತರಾಗರು, ಅನೇಕ ಗುಣಸಂಪದ ಸಹಿತರು,

ದೇವ-ಇಂದ್ರರುಗಳಿಂದ ವಂದನೀಯರು, ನಗ್ನಗುರು-ಮುನೀಶ್ವರರು ಮೊದಲು ಇದ್ದರು; ಕಾಲದೋಷದಿಂದ ಈಗ ಇಲ್ಲ. ಆದರೆ ಶಾಸ್ತ್ರಗಳಲ್ಲಿ ಮೊದಲು ಆಗಿ ಹೋಗಿರುವ ಇಂಥ ಗುರುಗಳ ವರ್ಣನೆಯು ದೊರಕುತ್ತದೆ. ಇಂಥ ಗುರುಗಳ ಕಥನವು ಯಾವ ಧರ್ಮದಲ್ಲಿ ಇದೆ ಆ ಧರ್ಮವು ಪರಂಪರೆಯಿಂದ ಪ್ರಮಾಣವಿದೆ.

ಒಂಭತ್ತು ನಿಧಿ, ಹದಿನಾಲ್ಕು ರತ್ನ, ಕಲ್ಪವೃಕ್ಷ, ಪರುಷಮಣಿ, ಚಿಂತಾಮಣಿ - ಇವು ಉತ್ತಮ ವಸ್ತುಗಳಿವೆ. ಇವುಗಳ ಹೆಸರನ್ನಂತೂ ಕೇಳುತ್ತೇವೆ; ಆದರೆ ಕಾಲದೋಷದಿಂದ ಈಗ ಇವು ಕಂಡು ಬರುವುದಿಲ್ಲ. ಮೊದಲು ಇದ್ದವು. ಇವುಗಳ ಹೆಸರು, ಗುಣ, ಆಕಾರ ಮತ್ತು ಇವು ಯಾರ ಯಾರವಿರುತ್ತವೆ-ಎಂಬುದರ ಕಥನವು ಯಾವ ಧರ್ಮದಲ್ಲಿದೆ ಆ ಧರ್ಮವು ಪರಂಪರಾ-ಪ್ರಮಾಣದಿಂದ ಶುದ್ಧ ಸತ್ಯವಿದೆ, ನಯದಿಂದಲೂ ಅಖಂಡಿತವಿದೆ. - ಈ ಪ್ರಕಾರ ಜಿನಧರ್ಮವನ್ನು ಅಖಂಡವೆಂದು ತಿಳಿಯುವುದು.

**೩. ಅನುಮಾನ ಪ್ರಮಾಣ :-** ತಮ್ಮ ಬುದ್ಧಿಯ ಮಾಧ್ಯಮದಿಂದ ವಸ್ತುವಿನ ಯಥಾವತ್ ವಿಚಾರ ಮಾಡಿ ಶ್ರದ್ಧೆ ಮಾಡುವುದು ಅನುಮಾನವಿದೆ. ಹೇಗೆ ಲೋಕದಲ್ಲಿ ಹಾಗೂ ಪರಂಪರೆಯಿಂದ ಧರ್ಮವನ್ನು ದಯಾಸಹಿತವೆಂದು ಹೇಳುತ್ತಾರೆ ಹಾಗೆ. ಒಂದುವೇಳೆ ಯಾವನೋ ಅಲ್ಪಜ್ಞಾನಿಯು, ಬೇಟೆಗಾರನು ಅಥವಾ ವ್ಯಸನರಂಜಿತ ಜನರು ಹಿಂಸೆಯಲ್ಲಿ ಧರ್ಮವನ್ನು ಹೇಳುತ್ತಿದ್ದರೆ ವಿವೇಕವಂತನು ಅನುಮಾನದಿಂದ ಹೀಗೆ ವಿಚಾರ ಮಾಡುತ್ತಾನೆ - ಒಂದು ವೇಳೆ ಹಿಂಸೆಯಲ್ಲಿ ಧರ್ಮವಿರುತ್ತಿದ್ದರೆ ದೀನ ಜೀವಗಳನ್ನಂತೂ ಎಲ್ಲರೂ ಸಾಯಿಸುತ್ತಿದ್ದರು ಹಾಗೂ ದರಿದ್ರ-ಭಿಕ್ಷುಕರಿಗೆ ಯಾರೂ ದಾನ ಕೊಡುತ್ತಿರಲಿಲ್ಲ. ದರಿದ್ರನು ಎಲ್ಲಿಂದಾದರೂ ಹಾಯ್ದು ಹೋಗುತ್ತಿದ್ದರೆ ಧರ್ಮ ಮಾಡುವ ಸಲುವಾಗಿ ಅವನನ್ನು ಪ್ರತಿಯೊಬ್ಬ ಮನುಷ್ಯನು ಹೊಡೆಯುತ್ತಿದ್ದನು. ಎಲ್ಲ ಜೀವಗಳು ಧರ್ಮ ಮಾಡುವ ಸಲುವಾಗಿ ಪರಸ್ಪರ ಸೇರಿಕೊಂಡು ಒಬ್ಬರು ಇನ್ನೊಬ್ಬರನ್ನು ಸಾಯಿಸುತ್ತಿದ್ದರು, ಹೊಡೆಯುತ್ತಿದ್ದರು. ಈ ಪ್ರಕಾರ ಧರ್ಮದ ಸಲುವಾಗಿ ಎಲ್ಲರೂ ಪರಸ್ಪರ ಯುದ್ಧ ಮಾಡಿ ಸತ್ತು ಹೋಗುತ್ತಿದ್ದರು; ಆದರೆ ಇದಂತೂ ಅನುಮಾನದಿಂದ ಸರಿಯೆನಿಸುವುದಿಲ್ಲ. ಲೋಕದಲ್ಲಿಯೂ ಹೀಗೆ ಕಂಡುಬರುವುದಿಲ್ಲ.

ಲೋಕದಲ್ಲಿಯೂ ಕೂಡ ಧರ್ಮದ ಉದ್ದೇಶದಿಂದ ಭಂಡಾರ ಗೃಹಗಳನ್ನು ನಡೆಸುತ್ತಿರುವುದು ಕಂಡು ಬರುತ್ತದೆ. ಕೆಲವರು ಬಾಯಾರಿದ ಮನುಷ್ಯರಿಗೆ - ಪಶು ಪಕ್ಷಿಗಳಿಗೆ ನೀರು ಕುಡಿಸುತ್ತಾರೆ, ಕೆಲವರು ದಯೆಯ ಭಾವದಿಂದ ಚಳಿಗಾಲದಲ್ಲಿ ಬಡವರಿಗೆ ವಸ್ತ್ರ ನೀಡುತ್ತಾರೆ ಇಂಥ ಕ್ರಿಯೆಗಳನ್ನು ಜನರು ಮಾಡುತ್ತಾರೆ. ಇದರಿಂದ ಧರ್ಮವು ದಯಾಮಯವೇ ಇದೆಯೆಂಬ ಪ್ರತೀತಿಯಾಗುತ್ತದೆ. ಹಿಂಸೆಯಲ್ಲಿ ಧರ್ಮದ ಸಂಭಾವನೆಯಿಲ್ಲ - ಹೀಗೆ ವಿಚಾರ ಮಾಡಿ ಬುದ್ಧಿಯಿಂದಲೇ ಅನುಮಾನ ಮಾಡಿ ದಯಾಮಯ ಧರ್ಮದ ಶ್ರದ್ಧೆ ಮಾಡುತ್ತಾರೆ. ಇದೇ ಪ್ರಕಾರ ನಯಗಳ ಮಾಧ್ಯಮದಿಂದ ವಸ್ತುವಿನ ವಿಚಾರವನ್ನು ಅನುಮಾನಪೂರ್ವಕ ಮಾಡುವುದು ಅನುಮಾನ ಪ್ರಮಾಣದಿಂದ ಸತ್ಯವಿದೆ - ಎಂದು ಹೇಳುತ್ತಾರೆ. ಯಾವ ಧರ್ಮದಲ್ಲಿ ಈ ಪ್ರಕಾರದ ಅನುಮಾನದ ಕಥನವಿದೆ, ಅದನ್ನು ಸತ್ಯಧರ್ಮವೆಂದು ತಿಳಿಯುವುದು. ಜಿನಧರ್ಮವಂತೂ ಅನೇಕ ನಯ, ಯುಕ್ತಿ ಮತ್ತು ಅನುಮಾನಗಳ ಸಮುದ್ರವಿದೆ, ಇದನ್ನು ಅನುಮಾನ ನಯದಿಂದ ಅಖಂಡಿತವೆಂದು ತಿಳಿಯುವುದು.

**೪. ಶಾಸ್ತ್ರ ಪ್ರಮಾಣ :-** ಎಷ್ಟೋ ವಸ್ತುಗಳನ್ನು, ಪದಾರ್ಥಗಳನ್ನು ಶಾಸ್ತ್ರಗಳಿಂದ ಪ್ರಮಾಣ ಮಾಡಲಾಗುತ್ತದೆ. ದ್ರವ್ಯ ಪದಾರ್ಥಗಳಂತೂ ತಮ್ಮ ಶ್ರದ್ಧೆಯಪೂರ್ವಕ ಪ್ರತ್ಯಕ್ಷ ಪ್ರತೀತಿಯಲ್ಲಿ ಬರುತ್ತವೆ. ಅದರಿಂದ ಅವಂತೂ ನಿಃಸಂದೇಹವಾಗಿ ಇದ್ದೇ ಇವೆ. ಆದರೆ ಅದೆಷ್ಟೋ ಪದಾರ್ಥಗಳು ಎಂಥವಿವೆಯೆಂದರೆ ಅವುಗಳ ನಿರ್ಣಯ ಮಾಡುವಲ್ಲಿ ಬುದ್ಧಿಯು ಸಮರ್ಥವಿಲ್ಲ. ಅಂತೆಯೇ ಆ ವಸ್ತುಗಳ ನಿರ್ಣಯವನ್ನು ಶಾಸ್ತ್ರಗಳಿಂದ ಮಾಡುತ್ತಾರೆ. ಹೇಗೆ ಲೋಕದಲ್ಲಿ ಯಾರದಾದರೂ ಕೊಡ-ಕೊಳ್ಳುವ ವಿಷಯವಾಗಿ ಸಂದೇಹವಿದ್ದರೆ ಪಂಚರು 'ನೀವು ನಿಮ್ಮ ನಿಮ್ಮ

ಕಾಗದ-ವಹೀ ಖಾತೆಗಳನ್ನು ತಗೆದುಕೊಂಡು ಬನ್ನಿ, ಅದರಲ್ಲಿ ಯಾವ ರೀತಿ ಇದೆಯೋ ಅದುವೇ ಸತ್ಯವಿದೆ'ಯೆಂದು ಹೇಳುತ್ತಾರೆ. ಹಾಗೆಯೇ ಅದೆಷ್ಟೋ ವಸ್ತುಗಳು ಮತಿ-ಶ್ರುತಜ್ಞಾನದಿಂದ ಪ್ರತ್ಯಕ್ಷಗೋಚರವಿಲ್ಲ; ಎಂದರೆ ಸ್ವರ್ಗ-ನರಕಗಳ ರಚನೆಯು ಹೇಗಿದೆ ? ಮೂರು ಲೋಕದ ರಚನೆಯು ಹೇಗಿದೆ? ಜೀವನು ಮನುಷ್ಯ, ದೇವ, ಪಶು, ನರಕ ಗತಿಗಳಲ್ಲಿ ಹೇಗೆ ಸುತ್ತುತ್ತಾನೆ ? ಸಿದ್ಧಲೋಕವು ಹೇಗಿದೆ ? - ಇತ್ಯಾದಿ ಹಾಗೂ ಮೇರು ಪರ್ವತ, ಕುಲಾಚಲ, ಮಹಾನದಿ, ಅಸಂಖ್ಯಾತ ದ್ವೀಪ-ಸಮುದ್ರ ಇತ್ಯಾದಿಗಳ ಹೆಸರನ್ನಂತೂ ಆಲಿಸುತ್ತೇವೆ ಆದರೆ ಪ್ರತ್ಯಕ್ಷವಿಲ್ಲ; ಅದರಿಂದ ಅವುಗಳನ್ನು ಶಾಸ್ತ್ರಗಳಿಂದ ತಿಳಿಯುತ್ತೇವೆ. ಯಾವ ಶಾಸ್ತ್ರಗಳಲ್ಲಿ ಈ ಸ್ವರ್ಗ-ನರಕಗಳ ರಚನೆ, ಆಯು, ಕಾಯ, ದುಃಖ-ಸುಖಗಳ ಕಥನವಿದೆ, ಮೇರು-ಕುಲಾಚಲ ಮೊದಲಾದ ಅಗೋಚರ ವಸ್ತುಗಳ ಕಥನವಿದೆ, ಆ ಧರ್ಮಶಾಸ್ತ್ರಗಳು ಸತ್ಯವಿವೆ. ಅನೇಕ ಶಾಸ್ತ್ರಗಳಲ್ಲಿ ಪ್ರಮಾಣಗೊಳಿಸಿ ಈ ಜಿನಧರ್ಮವೇ ಅಖಂಡಿತವಿದೆಯೆಂಬುದನ್ನು ತಿಳಿಯುವುದು.

**೫. ಪ್ರತ್ಯಕ್ಷ ಪ್ರಮಾಣ :-** ಯಾವ ವಸ್ತುವು ಪ್ರತ್ಯಕ್ಷ ಹಾಗೂ ಶ್ರದ್ಧೆ(ಅನುಭವ)ಗೋಚರವಿದೆ, ಅದನ್ನು ತಿಳಿದುಕೊಂಡು ಸಂದೇಹ ರಹಿತವಾಗುವುದು ಪ್ರತ್ಯಕ್ಷ ಪ್ರಮಾಣವಿದೆ. ಹೇಗೆ ಯಾವನೋ ಪುರುಷನು ತನ್ನ ಕೊರಳಲ್ಲಿ ಅತಿಶಯ ಉತ್ತಮವಿರುವ ಮಣಿಗಳ ಮಾಲೆಯನ್ನು ಧರಿಸಿ, ಅದರ ಶೋಭೆಯನ್ನು ನೋಡಿ-ನೋಡಿ ಆನಂದಿತ-ನಾಗುತ್ತಿದ್ದಾನೆ, ಅವನಿಗೆ ಆ ಮಾಲೆಯು ಪ್ರತ್ಯಕ್ಷವಿದೆ. ಒಂದುವೇಳೆ ಯಾರೋ ಬಂದು ಇದು ಮಣಿ ಮಾಲೆಯಲ್ಲ ಬೇರೆ ಏನೋ ಇದೆಯೆಂದು ಅವನಿಗೆ ಹೇಳಿದರೆ ಆ ಪುರುಷನು ಹೇಗೆ ನಂಬುವ ಸಾಧ್ಯತೆಯಿದೆ ? ಪ್ರತಿಯಾಗಿ ಹಾಗೆ ಹೇಳುವಂಥವನನ್ನು ಮಂದ ಬುದ್ಧಿಯೆಂದು ತಿಳಿಯುವನು. ಏಕೆಂದರೆ ಮಾಲೆಯಂತೂ ಪ್ರತ್ಯಕ್ಷವಿದೆ, ಅವನು ಅದರ ಸುಖವನ್ನು ಭೋಗಿಸುತ್ತಿದ್ದಾನೆ. ಅದೇ ಪ್ರಕಾರ ಸಮ್ಯಗ್ದರ್ಶನಾದಿ ಗುಣಮಯ ಮಣಿಗಳರೂಪದ ಮಾಲೆಯನ್ನು ಧಾರಣ ಮಾಡಿರುವಂಥ ಭವ್ಯ ಜೀವರುಗಳಿಗೆ ಸ್ವಯಂ ನೋಡುವ-ತಿಳಿಯುವಂಥ ಆತ್ಮನು ಪ್ರತ್ಯಕ್ಷನಿದ್ದಾನೆ.

**ಸಂದೇಹ -** ಆತ್ಮನಂತೂ ಅಮೂರ್ತಿಕನಿದ್ದಾನೆ. ಅಮೂರ್ತಿಕ ದ್ರವ್ಯವು ಅವ್ರತ ಸಮ್ಯಗ್ದೃಷ್ಟಿಗೆ ಪ್ರತ್ಯಕ್ಷ ಹೇಗೆ ಇರುವುದು ?

**ಸಮಾಧಾನ -** ಪ್ರದೇಶಗಳ ಅಪೇಕ್ಷೆಯಿಂದಂತೂ ಆತ್ಮನು ಪ್ರತ್ಯಕ್ಷವಿಲ್ಲ; ಆದರೆ ಗುಣಗಳ ಅಪೇಕ್ಷೆಯಿಂದ ಪ್ರತ್ಯಕ್ಷನಿದ್ದಾನೆ. ಚೈತನ್ಯಗುಣವು ಸಮ್ಯಗ್ದೃಷ್ಟಿಗೆ ಪ್ರತ್ಯಕ್ಷ ಅನುಭವದಲ್ಲಿ ಬರುತ್ತದೆ, ಅದರಿಂದ ಪ್ರತ್ಯಕ್ಷದಂತೆ ಪ್ರತೀತಿಯಿದೆ. ಹೇಗೆ ನೆಲಮಾಳಿಗೆಯಲ್ಲಿ ಕುಳಿತಿರುವ ಯಾವನೋ ಪುರುಷನು ಗಾಯನ ಮಾಡುತ್ತಿದ್ದರೆ ಆ ಪುರುಷನಂತೂ ಯಾರಿಗೂ ಕಂಡು ಬರುವುದಿಲ್ಲ ಆದರೆ ಗಾಯನವು (ಸಂಗೀತದ ರಾಗವು) ಕೇಳಿ ಬರುವುದರಿಂದ ಆ ರಾಗವನ್ನು ಯಾವನೋ ಪುರುಷನು ಹಾಡುತ್ತಿದ್ದಾನೆಂಬ ದೃಢ ವಿಶ್ವಾಸವಾಗಿ ಬಿಡುತ್ತದೆ, ಅದರಲ್ಲಿ ಯಾವ ಸಂದೇಹವು ಇರುವುದಿಲ್ಲ. ಹಾಗೆಯೇ ಈ ಜಡ ಶರೀರದಲ್ಲಿ ನೋಡುವ ತಿಳಿಯುವರೂಪದ ಕ್ರಿಯೆ ಹಾಗೂ ಅನೇಕ ಚೇಷ್ಟೆಗಳನ್ನು ಮಾಡುವಂಥ ಯಾವ ಆತ್ಮನಿದ್ದಾನೆ ಅವನು ನಾನೇ ಇದ್ದೇನೆ, ನಾನೇ ನೋಡುತ್ತೇನೆ-ತಿಳಿಯುತ್ತೇನೆ, ಸುಖ-ದುಃಖಗಳ ಅನುಭವವನ್ನು ನಾನೇ ಮಾಡುತ್ತೇನೆ, ಬೇರೆ ಯಾರೂ ಅಲ್ಲ.

ಹೀಗೆ ಪ್ರತ್ಯಕ್ಷವಾದ ಮೇಲೆ ಬೇಕಾದರೆ ಯಾವನೋ ದೇವನು ಕೂಡ ಬಂದು 'ನೀನು ಆತ್ಮನಲ್ಲ, ನೋಡುವ ತಿಳಿಯುವಂಥವನು ಬೇರೆ ಯಾರೋ ಇದ್ದಾನೆ'ಂದು ಹೇಳಿದರೆ, ಸಮ್ಯಗ್ದೃಷ್ಟಿಗಳಿಗೆ ಆ ದೇವನ ಬುದ್ಧಿಯೇ ಮಿಥ್ಯಾರೂಪ ಭಾಸಿತವಾಗುತ್ತದೆ. ತಾನು ಸ್ವಯಂ ಆತ್ಮನಿದ್ದೇನೆ, ಇದರಲ್ಲಿ ಯಾವ ಸಂದೇಹವಿಲ್ಲ. ಹೀಗೆ ದೃಢ ಪ್ರತೀತಿ ಸಹಿತ ಪ್ರತ್ಯಕ್ಷ ಭಾವ ಭಾಸಿತವಾಗುತ್ತದೆ. ಈಗ ಪ್ರತ್ಯಕ್ಷ ನೋಡುವ-ತಿಳಿಯುವಂಥ ಆತ್ಮನಂತೂ ನಾನೇ ಇದ್ದೇನೆ. ನಾನು ಇಲ್ಲವೆಂದು ಹೇಳುವುದು ಹೇಗೆ ಸಾಧ್ಯವಿದೆ ? ಒಂದುವೇಳೆ ವಸ್ತು ಸಂದೇಹ ಸಹಿತವಿದ್ದರೆ ಆಗಂತೂ ಅದರಲ್ಲಿ 'ಅಹುದು', 'ಇಲ್ಲ'ವೆಂದು ಹೇಳಲೂಬಹುದಾಗಿದೆ; ಆದರೆ ನಿಃಸಂದೇಹದಲ್ಲಿ ಪರೋಕ್ಷದ ಹಾಗೆ ಸಂದೇಹವನ್ನಾದರೂ ಹೇಗೆ

ಮಾಡಬಹುದಾಗಿದೆ ? - ಹೀಗೆ ದೃಢವಾಗಿ ತಿಳಿದುಕೊಂಡು ಸಮ್ಯಗ್ದೃಷ್ಟಿಗಳಿಗೆ ಆತ್ಮಸ್ವಭಾವದ ಪ್ರತ್ಯಕ್ಷತೆಯನ್ನು ಹೇಳಿದ್ದಾರೆ. ಇದೇ ಪ್ರಕಾರ ಯಾವುದರಿಂದ ಅನೇಕ ವಸ್ತುಗಳು ನಿಃಸಂದೇಹವಾಗಿ ತಿಳಿದುಬರುತ್ತವೆ, ಅದು ಪ್ರತ್ಯಕ್ಷ ಪ್ರಮಾಣವಿದೆ.

ಈ ಪ್ರಕಾರದ ಪ್ರತ್ಯಕ್ಷ ಪ್ರಮಾಣದಿಂದ ವಸ್ತುವಿನ ಸ್ವರೂಪವು ಜಿನಧರ್ಮದಲ್ಲಿ ಬಹಳಷ್ಟು ಇದೆ; ಅದರಿಂದ ಈ ಧರ್ಮವು ಅನ್ಯರ ಮೂಲಕ ಪ್ರತ್ಯಕ್ಷ ಪ್ರಮಾಣದಿಂದ ಅಖಂಡಿತವಿದೆ.

ಈ ಪ್ರಕಾರ ಲೋಕದಲ್ಲಿಯೂ ಧರ್ಮವು ದಯಾಮಯವಿದೆ, ಪರಂಪರೆಯಿಂದಲೂ ಧರ್ಮವು ದಯಾಮಯವಿದೆ, ಅನುಮಾನದಿಂದಲೂ ಧರ್ಮವು ದಯಾಮಯವಿದೆ, ಶಾಸ್ತ್ರಗಳಲ್ಲಿಯೂ ಧರ್ಮವು ದಯಾಮಯವಿದೆ ಮತ್ತು ಪ್ರತ್ಯಕ್ಷದಲ್ಲಿಯೂ ಧರ್ಮವು ದಯಾಮಯವಿದೆ. - ಇವು ಐದು ಪ್ರಮಾಣಗಳು ಜಿನಧರ್ಮದಲ್ಲಿ ದೊರಕುತ್ತವೆ. ಯಾರ ಪಂಚಪ್ರಮಾಣಗಳಿಂದಲೂ ಜಿನಧರ್ಮವು ಖಂಡಿತವಾಗುವುದಿಲ್ಲ; ಅದರಿಂದ ಇದುವೇ ಸತ್ಯವಿದೆ.

ಈ ಪ್ರಕಾರ ಅನೇಕ ನಯ(ದೃಷ್ಟಿ)ಗಳಿಂದ ಧರ್ಮದ ಪರೀಕ್ಷೆ ಮಾಡಿದ ಮೇಲೆ ಜಿನಧರ್ಮವು ಪೂಜ್ಯವಿದೆ-ಯೆಂಬುದು ಸಿದ್ಧವಾಗುತ್ತದೆ.

ಈ ಪ್ರಕಾರ ಸುದೃಷ್ಟಿತರಂಗಿಣಿಯೆಂಬ ಹೆಸರಿನ ಗ್ರಂಥದಲ್ಲಿ ಶುದ್ಧಧರ್ಮಪರೀಕ್ಷೆ, ಸಪ್ತಭಂಗಗಳು,
ಒಂಭತ್ತು ನಯಗಳು, ಪಂಚ ಪ್ರಮಾಣಗಳು ಮೊದಲಾದವುಗಳ ಕಥನ ಹಾಗೂ
ಸುಧರ್ಮ-ಕುಧರ್ಮಗಳಲ್ಲಿ ಜ್ಞೇಯ-ಹೇಯ - ಉಪಾದೇಯರೂಪ ಧರ್ಮದ
ವರ್ಣನೆ ಮಾಡುವಂಥ ಹನ್ನೊಂದನೆಯ ಪರ್ವವು ಪೂರ್ಣವಾಯಿತು.

★★★★★

ಭಗವಾನ ಮಹಾವೀರರ ಜೀವವು ಮರೀಚಿಯ ಭವದಲ್ಲಿ 'ಜಿನಸೂತ್ರ'ದ ವಚನಗಳ ಉಲ್ಲಂಘನೆಮಾಡಿ, ಸ್ವಲ್ಪ ಮಾತ್ರವೇ ಕಲ್ಪಿತ ಉಪದೇಶ ಕೊಡುವುದರ ಕಾರಣ ಅತಿ ಭಯಾನಕ ಭವ ದುಃಖವೆಂಬ ಕಾನನದಲ್ಲಿ ಕೋಟಾಕೋಟಿ ಸಾಗರದವರೆಗೆ ಭ್ರಮಿಸುತ್ತ ಉಳಿದನು ! ಶಾಸ್ತ್ರಗಳಲ್ಲಿ ಇಂಥ ಉದಾಹರಣೆಗಳನ್ನು ಆಲಿಸಿದರೂ..... ದೋಷಗಳನ್ನು ಗಣಿಸದೇ ಯಾವನು ಮಿಥ್ಯಾಸೂತ್ರರೂಪ ವಚನಗಳ ಉಪದೇಶ ಕೊಡುತ್ತಾನೆ - ದೇಹ, ಧನ, ಭೋಗಗಳಿಗೆ ಸಂಬಂಧಿಸಿದ ಅನುಭವಸಿದ್ಧ ಮಾತು ಹೇಳುತ್ತಾನೆ. ಅವನಿಗೆ ವಿರಾಗೀ ಜಿನಧರ್ಮದ ಪ್ರಾಪ್ತಿ ಎಂದರೆ ಸಮ್ಯಗ್ದರ್ಶನ ಮತ್ತು ಸಮ್ಯಗ್ಜ್ಞಾನದ ಪ್ರಾಪ್ತಿಯು ಹೇಗೆ ಆಗುವ ಸಾಧ್ಯತೆಯಿದೆ ? - ಉತ್ತಮ ವೈರಾಗ್ಯವು ಹೇಗೆ ಆಗಬಹುದಾಗಿದೆ ?

ಅದಕ್ಕಾಗಿ ಎಲೈ ಜೀವನೇ ! ಈ ಜ್ಞಾನರೂಪದ ಧನವು ಮಹಾವಿಲಕ್ಷಣವಿದೆ. ಇದನ್ನು ಕಳ್ಳನು ಕದ್ದುಕೊಳ್ಳುವ ಸಾಧ್ಯತೆಯಿಲ್ಲ, ಬಂಧುಗಳು - ಒಡಹುಟ್ಟಿದವರು ಪಾಲು ಕೇಳುವ ಸಾಧ್ಯತೆಯಿಲ್ಲ, ಮರಣದ ನಂತರ ಪುತ್ರಾದಿಕರಿಗೆ ದೊರಕುವುದಿಲ್ಲ, ದೊರೆಯು ಕಸಿದುಕೊಳ್ಳಲಾಗುವುದಿಲ್ಲ, ಅನ್ಯರು ಕಣ್ಣುಗಳಿಂದ ನೋಡುವ ಸಾಧ್ಯತೆಯಿಲ್ಲ. ಈ ಜ್ಞಾನವು ಮೂರು ಲೋಕದಲ್ಲಿ ಪೂಜ್ಯವಿದೆ. ಇಂಥ ಜ್ಞಾನಧನವುಳ್ಳವರು ಧನ್ಯರಿದ್ದಾರೆ.

## ೧೨ : ಹನ್ನೆರಡನೆಯ ಪರ್ವ
## ಸಂಗತಿಯಲ್ಲಿ ಜ್ಞೇಯ-ಹೇಯ-ಉಪಾದೇಯ

ಮಾಡಲು ಯೋಗ್ಯವಿರುವ ಸಂಗತಿಯ ಮುಖ್ಯತೆಯಿಂದ ಸಂಗತಿಯ ಕುರಿತಾಗಿ ಜ್ಞೇಯ-ಹೇಯ-ಉಪಾದೇಯಗಳ ಕಥನ ಮಾಡುತ್ತಾರೆ -

**ಸುಹ ದುಹ ದಾಣದಿ ಜಹಿಯೋ, ಸೋ ಉವಾದೇಯೋ ಸಂಗ ಹಿದ ಕರದೋ ।**
**ಹೇಯಾಹೇಯ ವಿಭಾವೋ, ಸುದಿಟ್ಠೀ ಸೋ ಹೋಯ ಆದಾಯೋ ॥೩೬॥**

**ಅರ್ಥ** :- ಸುಖ-ದುಃಖದಾಯಕ, ಜಗತ್ ನಿಂದ್ಯ ಸಂಗತಿಯು ಬಿಟ್ಟುಕೊಡಲು ಯೋಗ್ಯವಿದೆ ಮತ್ತು ಹಿತಕಾರೀ ಸಂಗವೇ ಉಪಾದೇಯವಿದೆ. ಈ ರೀತಿ ಯೋಗ್ಯ-ಅಯೋಗ್ಯದ ವಿಚಾರ ಮಾಡಿ ಯಾವನು ಸಂಗ ಮಾಡುತ್ತಾನೆ ಆ ಆತ್ಮನನ್ನು ಸಮ್ಯಗ್ದೃಷ್ಟಿಯೆಂದು ತಿಳಿಯುವುದು.

ಸಮ್ಯಗ್ದೃಷ್ಟಿಗಳ ವಿಚಾರವು ಸಹಜವಾಗಿಯೇ ವಿವೇಕವಂತರ ಸಂಗತಿ ಮಾಡುವುದಿರುತ್ತದೆ. ಇದರಲ್ಲಿ ಮೂರು ಭಾವಗಳಿರುತ್ತವೆ - ಶುಭಾಶುಭ ಭಾವರೂಪ ಸಂಗತಿಯ ಸಂಪೂರ್ಣ ವಿಚಾರ ಮಾಡುವುದು ಜ್ಞೇಯ ಸಂಗವಿದೆ. ಆ ಜ್ಞೇಯದ ಭೇದಗಳು ಎರಡು ಇವೆ. - ೧. ತ್ಯಾಗ ಮಾಡಲು ಯೋಗ್ಯ, ೨. ಗ್ರಹಣ ಮಾಡಲು ಯೋಗ್ಯ. ಅದರಲ್ಲಿ ಯಾವ ಸಂಗತಿಯಿಂದ ತನಗೆ ದೋಷ ತಗಲುವುದು, ಅಪಯಶವಾಗುವುದು, ತನ್ನ ನಿಂದೆಯಾಗುವುದು, ಪಾಪದ ಬಂಧವಾಗುವುದು ಅಂಥವನ್ನು ಮಾಡಬಾರದು. ಯಾವ ಸಂಗತಿಯಿಂದ ತನ್ನ ಯಶಸ್ಸು ಸಂಭವಿಸುವುದು, ಜನರಲ್ಲಿ ಸನ್ಮಾನವಾಗುವುದು, ಇಷ್ಟ ವಸ್ತುವಿನ ಲಾಭವಾಗುವುದು, ಶುಭಕರ್ಮದ ಬಂಧವಾಗುವುದು, ಸುಬುದ್ಧಿಯು ಪ್ರಕಟವಾಗುವುದು, ಕುಬುದ್ಧಿಯ ನಾಶವಾಗುವುದು ಇತ್ಯಾದಿರೂಪದಿಂದ ತನ್ನ ಸಲುವಾಗಿ ಯಾವುದು ಹಿತಕರವಿದೆ ಅಂಥ ಸಂಗತಿಯನ್ನೇ ಮಾಡುವುದು.

ಇನ್ನು ಮುಂದೆ ವರ್ಣಿಸಲಾದುವೆಲ್ಲವೂ ಕುಸಂಗವೇ ಇವೆಯೆಂಬ ವಿಚಾರ ಮಾಡುವುದು. ಕಳವು ಮಾಡುವಂಥವರು, ಹಗಲಿರುಳೂ ಕಳವಿನ ಚತುರತೆಯ ಕುರಿತಾಗಿ ಅನೇಕ ಕಲೆಗಳನ್ನು ಮಾಡುವಂಥ ಕಳ್ಳರು, ಇತರರ ಧನವನ್ನು ಕದಿಯುವ ಉದ್ದೇಶದಿಂದ ಛಲ-ಕಪಟ ಮಾಡುತ್ತಾರೆ; ಅದರದೇ ವಿಚಾರ ಮಾಡುತ್ತಾರೆ. ಕಪಟದಿಂದ ಅನೇಕ ಪ್ರಕಾರದ ವೇಷಧಾರಣ ಮಾಡಿ ವಂಚಿಸುವಂಥವರು ಕಳ್ಳರಿದ್ದಾರೆ. ಇತರರನ್ನು ವಂಚಿಸುವ ಸಲುವಾಗಿ ಅನೇಕ ಅಸತ್ಯ ವಚನಗಳನ್ನಾಡುವ ಇತ್ಯಾದಿ ಲಕ್ಷಣಗಳಿಂದ ಕೂಡಿದವರು ಕಳ್ಳರಿದ್ದಾರೆ, ಅವರ ಸಂಗತಿಯು ಹೇಯವಿದೆ.

ಕರುಳು ಮಾಲೆ, ಹಗ್ಗ, ವಸ್ತ್ರದ ಪಾಶದ ಮೂಲಕ ಅನ್ಯ ಜೀವಗಳ ಘಾತ ಮಾಡಿ ಬೇರೆಯವರ ಧನವನ್ನು ಅಪಹರಿಸುವಂಥವರು ಪಾಶಚೋರರಿದ್ದಾರೆ.

ಸ್ತ್ರೀಯ ಸೋಗು, ಭಿಕ್ಷುಕ, ವೈರಾಗಿ, ಸನ್ಯಾಸಿ, ವ್ಯಾಪಾರಿ ಮೊದಲಾದ ಅನೇಕ ವೇಷ ತೊಟ್ಟು ಇತರರನ್ನು ಛಲದಿಂದ ಸಾಯಿಸಿ ಧನ ಅಪಹರಿಸುವಂಥವರು ಠಕ್ಕ ಜಾತಿಯ ಚೋರರಿದ್ದಾರೆ.

ಪಥಿಕರನ್ನು ಲೂಟಿ ಮಾಡುವಂಥ, ಒತ್ತಾಯದಿಂದ ಧನವನ್ನು ಕಸಿದುಕೊಂಡ ಮೇಲೆಯೂ ಕೊಡದಂಥವರನ್ನು ಸಾಯಿಸುವಂಥ-ಹೀಗೆ ದರೋಡೆ, ಲೂಟಿ ಮಾಡುವಂಥ ಭಿಲ್ಲರು, ಬಂಗಾರ-ಬೆಳ್ಳಿಯಲ್ಲಿ ಕುಸುರಿ ಕೆಲಸ ಮಾಡುವಂಥವರು, ಬೆತ್ತದ ಕೆಲಸ ಮಾಡುವಂಥವರು ಇತ್ಯಾದಿಕರಲ್ಲಿ ಬಹಳಷ್ಟು ಚೋರರಿರುತ್ತಾರೆ. ಯಾರು ಇತರರ ಮನೆ ಮುರಿಯುತ್ತಾರೆ, ಛಲ-ಕಪಟದಿಂದ ಅವರ ಧನ ಅಪಹರಿಸುತ್ತಾರೆ ಅವರನ್ನು ಚೋರರೆಂದು ಹೇಳುತ್ತಾರೆ.

ಯಾರು ಬಲಪೂರ್ವಕ ಬೇರೆಯವರ ಆಸ್ತಿಯನ್ನು ಕಸಿದುಕೊಳ್ಳುತ್ತಾರೆ, ತಮ್ಮನ್ನು ಬಲಶಾಲಿಗಳೆಂದು ಮನ್ನಿಸುತ್ತಾರೆ, ದೀನ ಜನರನ್ನು ಭಯಭೀತಗೊಳಿಸುವಂಥ ಮತ್ತು ಬಹಳಷ್ಟು ಧನಸಂಪನ್ನರಾಗಿದ್ದು ಇತರರಿಗೆ ಪೀಡೆ ಕೊಡುವಂಥವರು ಮೊದಲಾಗಿ ಅನೇಕ ಜಾತಿಯ ಚೋರರಿರುತ್ತಾರೆ.

ಇವರನ್ನು ಹೊರತು ಪಡಿಸಿ ಕಟ್ಟಿಗೆ-ಹುಲ್ಲು-ತರಕಾರಿ ಮೊದಲಾದುವನ್ನು ಕದಿಯುವಂಥವರು, ಕಳ್ಳರ ಮಿತ್ರರು, ಸಾಮಾಜಿಕ, ಸರಕಾರೀ ಕಳ್ಳರ ವಿನಯ ಮಾಡುವಂಥವರು ಮತ್ತು ಕಳ್ಳರ ಹತ್ತಿರ ಕುಳಿತುಕೊಳ್ಳುವಂಥವರು - ಇವರೆಲ್ಲರನ್ನು ಕಳ್ಳರ ಸಮಾನವೆಂದು ತಿಳಿದು ವಿವೇಕವಂತರು ಇವರ ಸಂಗತಿಯನ್ನು ಬಿಟ್ಟುಕೊಡುತ್ತಾರೆ.

ಜೂಜುಗಾರ, ಪಗಡೆಯಾಡುವಂಥವ, ಬೋಳು ತಲೆಯ ಮನುಷ್ಯ, ನಪುಂಸಕ, ಮೂಢ, ಧೂರ್ತ, ಜೂಜುಗಾರರಲ್ಲಿ ಪ್ರಸಿದ್ಧರಿರುವವರು - ಇಂಥವರ ಸಂಗತಿಯನ್ನು ಬಿಟ್ಟು ಬಿಡುವುದೇ ಯೋಗ್ಯವಿದೆ.

ಅಭಕ್ಷ್ಯ ಭಕ್ಷಕರು, ದುಷ್ಟಪ್ರಾಣಿಗಳು, ಮಾಂಸಾಹಾರಿಗಳು, ಅಶುಚಿ ಪದಾರ್ಥಗಳನ್ನು ಭೋಗಿಸುವಂಥವರ ಸಂಗತಿಯನ್ನು ಬಿಟ್ಟುಕೊಡುವುದು ಯೋಗ್ಯವಿದೆ.

ಮದ್ಯದ ಸೇವನೆ ಮಾಡುವಂಥವರು, ಮರುಳ (ಹುಚ್ಚ), ಉನ್ಮತ್ತರಂತೆ ಎಚ್ಚರಗೇಡಿ, ಯಾರ ವಚನಗಳ ವಿಶ್ವಾಸವಿಲ್ಲವೋ ಅಂಥ ಅಮಲೇರಿಸುವ ಪದಾರ್ಥಗಳ ಸೇವನೆ ಮಾಡುವಂಥ ಜೀವಗಳ ಸಂಗತಿಯು ತ್ಯಾಗ ಯೋಗ್ಯವಿದೆ.

ವೇಶ್ಯಾವ್ಯಸನೀ, ನಿರ್ಲಜ್ಜ, ವಿನಯರಹಿತ, ವೇಶ್ಯೆಯರೊಂದಿಗೆ ಹಾಡುವ ಹಾಗೂ ಕುಣಿಯುವ ಲೋಭಿ, ವರ್ತಮಾನದಲ್ಲಿ ಕ್ಲಬ್ಬುಗಳ ಕೌತುಕವುಳ್ಳವರ ಸಂಗತಿಯನ್ನು ತೊರೆಯುವುದೇ ಯೋಗ್ಯವಿದೆ.

ಮಹಾಹಿಂಸಕ-ಜೀವಗಳನ್ನು ಸಾಯಿಸುವಂಥವ, ಮಹಾಪಾಪಿ, ಚಾಂಡಾಲ, ಭಿಲ್ಲ, ಕಟುಕ ಇತ್ಯಾದಿ ಕರುಣೆಯಿಲ್ಲದ, ಬೇಟೆಗಾರ, ಜ್ಞಾನಾಂಧ, ದುರಾಚಾರಿ ಇತ್ಯಾದಿ ಜೀವಗಳ ಸಂಗತಿಯು ತ್ಯಾಗಯೋಗ್ಯವಿದೆ.

ಸುಂದರ ಪರಸ್ತ್ರೀಯರ ಭೋಗದ ಅಭಿಲಾಷೆಯುಳ್ಳವ, ಕುಶೀಲ ಪ್ರಿಯ, ದುರ್ಬುದ್ಧಿಗಳ ಸಂಗತಿಯು ತ್ಯಾಗಯೋಗ್ಯವಿದೆ.

ಈ ಪ್ರಕಾರ ಹೇಳಲಾಗಿರುವ ಸಪ್ತ ವ್ಯಸನಿಗಳು, ಪಾಪಿ, ಪಾಖಂಡಿ, ತೀವ್ರಕ್ರೋಧಿ, ಮಹಾಮಾನಿ, ಅತಿ ಮಾಯಾವಿ, ಲೋಭಿ (ಕೃಪಣ), ಹಾಸ್ಯ, ಕುತೂಹಲ, ಮದ, ಮಾತ್ಸರ್ಯಧಾರೀ ಜೀವಗಳ ಸಂಗತಿಯು ತ್ಯಾಗ ಯೋಗ್ಯವೇ ಇದೆ. ಇಂಥ ಕುಸಂಗಗಳ ತ್ಯಾಗವಿರುವಲ್ಲಿಯೇ ಸಮ್ಯಗ್ಜ್ಞಾನವಿರುವ-ಸಮ್ಯಗ್ಜ್ಞಾನವಾಗುವ ಸಾಧ್ಯತೆಯಿದೆ.

ಉಪಾದೇಯ ಸುಖಕಾರಿ ಸಂಗತಿ - ತೀರ್ಥಂಕರ, ಕೇವಲಿ, ಮುನೀಶ್ವರ, ವ್ರತಿ, ಶ್ರಾವಕ, ಸಮ್ಯಗ್ದೃಷ್ಟಿ, ಶಾಂತಸ್ವಭಾವಿ, ದಾನಿ, ತಪಸ್ವಿ, ಸಂಯಮಿ, ಧರ್ಮಧ್ಯಾನಿ, ಧರ್ಮಚರ್ಚೆ ಮಾಡುವಂಥವರು, ಉಚ್ಚ ಕುಲದವರು, ದಯಾಮಯಿಗಳು, ವಿದ್ಯಾವಂತರು ಇತ್ಯಾದಿ ಗುಣವಂತರ ಸಂಗತಿಯು ಜಗತ್ಪೂಜ್ಯವಿದೆ, ಇಂಥ ಪುರುಷರು ಪ್ರಗಟರೂಪದಿಂದ ಜಗತ್ತಿನಲ್ಲಿ ಪೂಜ್ಯಪದದ ಧಾರಕರಿದ್ದಾರೆ. ಇವರ ಯಶಸ್ಸನ್ನು ಎಲ್ಲರೂ ಹಾಡುತ್ತಾರೆ. ಸಮ್ಯಗ್ದೃಷ್ಟಿಗಳ ಬುದ್ಧಿಯು ಸಹಜವಾಗಿಯೇ ಶುಭಸಂಗವನ್ನು ಬಯಸುತ್ತದೆ ಮತ್ತು ಅಶುಭ ಸಂಗದಿಂದ ಉದಾಸೀನವಾಗಿರುತ್ತದೆ.

ವಿಚಾರದಲ್ಲಿ ಹೇಯ-ಜ್ಞೇಯ-ಉಪಾದೇಯ-

**ಅಸುಹೋ ವಿಚಾರೋ ಹೇಯೋ, ಚದುಧೋ ಧಮ್ಮ ಝಾಣ ಚಿಂತಾಯೇ ।**
**ಸಮ್ಮಂತಂ ಸಹಲ ಸುಹಾವೋ, ಗೇಹೇ ಆದೇಯ ಹೇಯ ಣೇಮಾಏ ॥೩೭॥**

**ಗಾಥಾರ್ಥ :-** ಅಶುಭ ವಿಚಾರಗಳು ಹೇಯವಿವೆ, ನಾಲ್ಕು ಪ್ರಕಾರದ ಧರ್ಮಧ್ಯಾನ ಹಾಗೂ ಚಿಂತನವು ಉಪಾದೇಯವಿದೆ. ಸಮ್ಯಗ್ದೃಷ್ಟಿಯು ತನ್ನಿಂದ ತಾನೇ ಸಹಜ ಭಾವದಿಂದ ಉಪಾದೇಯವನ್ನು ಗ್ರಹಣ ಮಾಡುತ್ತಾನೆ ಮತ್ತು ಹೇಯವನ್ನು ಬಿಟ್ಟುಕೊಡುತ್ತಾನೆ.

**ಭಾವಾರ್ಥ ಃ-** ಸಮ್ಯಗ್ದೃಷ್ಟಿಯು ಯಾವುದನ್ನೆಲ್ಲ ವಿಚಾರ ಮಾಡುತ್ತಾನೆ, ಅದರಲ್ಲಿ ಜ್ಞೇಯ-ಹೇಯ-ಉಪಾದೇಯವೆಂಬ ಮೂರು ಪ್ರಕಾರದ ಭೇದಗಳು ಸಹಜವಾಗಿಯೇ ಆಗಿಹೋಗುತ್ತವೆ. ಅದರಲ್ಲಿ ಒಳಿತು-ಕೆಡಕು ವಿಚಾರಗಳ ನಿಜವಾದ ವಿಚಾರ ಮಾಡುವುದು ಜ್ಞೇಯವಿದೆ. ಅದರದೇ ಎರಡು ಭೇದಗಳು ಒಂದು ಹೇಯವಿಚಾರ ಮತ್ತು ಇನ್ನೊಂದು ಉಪಾದೇಯವಿಚಾರವಿದೆ. ತ್ಯಾಗಯೋಗ್ಯ ಹೇಯವಿಚಾರ - ವಿಚಾರವೆಂದರೆ ಧ್ಯಾನವಿದೆ, ಇದರಲ್ಲಿ ಅಶುಭ ಧ್ಯಾನದ ಎರಡು ಭೇದಗಳಿವೆ.

೧. ಆರ್ತವಿಚಾರ (ಧ್ಯಾನ) ಯಾವುದರಲ್ಲಿ ಪರವಸ್ತುವಿನ ಇಚ್ಛೆಯಿರುತ್ತದೆ, ಅದು ಆರ್ತಧ್ಯಾನವಿದೆ.

೨. ರೌದ್ರವಿಚಾರ (ಧ್ಯಾನ) ಯಾವುದರಲ್ಲಿ ಪರಜೀವಗಳ ಕುರಿತಾಗಿ ಕೇಡಾಗುವ ಚಿಂತನವಿದೆ, ಅದು ರೌದ್ರಧ್ಯಾನವಿದೆ.

**೧. ಇಷ್ಟವಿಯೋಗಜ ಆರ್ತಧ್ಯಾನ -** ಒಳ್ಳೆಯ ವಸ್ತುವಿನ ವಿಯೋಗವಾಗಿ ಹೋದಮೇಲೆ, ಆ ವಸ್ತುವು ಒಳ್ಳೆಯದಿತ್ತು ನನಗೆ ಇಷ್ಟವಿತ್ತು , ಅದರ ಕಾರಣದಿಂದ ನನಗೆ ವಿಶೇಷ ಸುಖವಿತ್ತು . ಈಗ ನನ್ನ ಸುಖವು ಹೊರಟು ಹೋಯಿತೆಂದು ವಿಚಾರ ಮಾಡುವುದು - ಈ ಪ್ರಕಾರ ಪತ್ನಿ , ಪುತ್ರ , ಸಹೋದರ, ತಾಯಿ, ತಂದೆ, ಧನ, ಆನೆ, ಕುದುರೆ, ರಾಜ್ಯ , ಮಿತ್ರ , ಸೇವಕ ಮೊದಲಾದವರ ವಿಯೋಗವಾಗಿ ಹೋದ ಮೇಲೆ ಮೋಹದ ವಶೀಭೂತನಾಗಿ ಶೋಕ ಮಾಡುವುದು ಇಷ್ಟವಿಯೋಗಜನ್ಯ ಆರ್ತವಿಚಾರ(ಧ್ಯಾನ)ವಿದೆ. ಈ ವಿಚಾರವು ವಿವೇಕವಂತರಿಗೆ ತ್ಯಾಗ ಯೋಗ್ಯವಿದೆ.

**೨. ಅನಿಷ್ಟಸಂಯೋಗಜ ಆರ್ತಧ್ಯಾನ -** ತನಗೆ ಹಿತವೆನಿಸದಂಥ ಅನಿಷ್ಟ ನಿಮಿತ್ತಗಳ ಸಂಯೋಗವಾದ ಮೇಲೆ, ಅವುಗಳ ಕುರಿತಾಗಿ - ಇದು ಯಾವುದು ನನಗೆ ದೊರಕಿದೆ, ಅದು ನನಗೆ ಖೇದದಾಯಕವಿದೆ, ನಾನು ಇದನ್ನು ಬಯಸುತ್ತಿರಲಿಲ್ಲ, ಇದರ ಸಲುವಾಗಿ ನನ್ನಲ್ಲಿ ಅರತಿಯು ಉತ್ಪನ್ನವಾಗುತ್ತದೆಯೆಂಬ ವಿಚಾರ ಮಾಡುವುದು - ಈ ಪ್ರಕಾರ ಶತ್ರು ಅಥವಾ ಬಹಳಷ್ಟು ಧನ ಕೊಡಬೇಕಾಗಿರುವಂಥವನ ಅಥವಾ ದಾರಿಯಲ್ಲಿ ದೊರಕಿದ ಕಳ್ಳನ, ಸಿಂಹ-ಸರ್ಪಾದಿಗಳ ಸಂಯೋಗವಾದ ಮೇಲೆ ಅವರಿಂದ ಭಯಭೀತನಾಗುವುದು, ಅವುಗಳನ್ನು ದೂರಮಾಡುವ ಖೇದರೂಪ ಪರಿಣತಿ ಎಂದರೆ ವಿಚಾರವು ಅನಿಷ್ಟ ಸಂಯೋಗಜನ್ಯ ಆರ್ತವಿಚಾರ - ಧ್ಯಾನವಿದೆ.

**೩. ಪೀಡಾಚಿಂತನ ಆರ್ತಧ್ಯಾನ -** ತನ್ನ ಶರೀರದಲ್ಲಿ ಪಾಪಕರ್ಮದ ಉದಯದಿಂದ ಆಗುವಂಥ ಅನೇಕ ರೋಗಗಳ ಉತ್ಪತ್ತಿಯಲ್ಲಿ ಪ್ರಗಟವಾದ ತೀವ್ರ ದುಃಖಗಳನ್ನು ಕಂಡು - ಈ ರೋಗವು ತೀವ್ರವಿದೆ, ಯಾವ ಉಪಾಯದಿಂದ ನಷ್ಟವಾಗುವುದು ? ಯಾವಾಗ ನಷ್ಟವಾಗುವುದು ? ಅದನ್ನು ನಾಶಮಾಡುವ ಸಲುವಾಗಿ ಅನೇಕ ವಿಚಾರ, ಚಿಂತೆ, ಮಂತ್ರ , ತಂತ್ರ , ಔಷಧ ಮೊದಲಾದುವನ್ನು ಮಾಡುವುದು ಮತ್ತು ಬೇರೆಯವರ ತೀವ್ರ ರೋಗವನ್ನು ಕಂಡು ಸ್ವಯಂ ಗಾಬರಿಯಾಗುವುದು, ನನಗೆ ಹೀಗಾಗದಿದ್ದರೆ ಸಾಕು-ಎಂಬುದಾಗಿ ಅರತಿಯ ಭಾವ ಮಾಡುವುದು, ಈ ಪ್ರಕಾರ ರೋಗ, ಪೀಡೆಯ ನಿಮಿತ್ತ ಪಡೆದು ಪುನಃ ಪುನಃ ವಿಚಾರ ಮಾಡುವುದು ಪೀಡಾಚಿಂತನ-ವಿಚಾರ ಆರ್ತಧ್ಯಾನವಿದೆ.

**೪. ನಿದಾನಬಂಧ ಆರ್ತಧ್ಯಾನ -** ಯಾವುದೋ ಧರ್ಮ-ಕರ್ಮಗಳ ಕಾರ್ಯ ಮಾಡುವ ಮೊದಲೇ ತನಗೆ ಇದರ ಫಲವು ಇಂಥದೊಂದು ದೊರಕಲೆಂಬ ವಿಚಾರ ಮಾಡುವುದು ಅದು ನಿದಾನಬಂಧ ಆರ್ತವಿಚಾರ-ಧ್ಯಾನವಿದೆ.

**ಅಂತರಂಗದಲ್ಲಿ ಆರ್ತವು ಪ್ರಗಟವಾಗುವ ಚಿಹ್ನೆಗಳು -**

೧. ಅಂತರಂಗದಲ್ಲಿ ತಾನು ಬಹಳಷ್ಟು ಧನವನ್ನು ಹೇಗೆ ಪ್ರಾಪ್ತಮಾಡಿಕೊಳ್ಳಬಹುದಾಗಿದೆ ? ಎಂಬುದಾಗಿ ಪರಿಗ್ರಹದ ತೀವ್ರ ಇಚ್ಛೆಯಾಗುವುದು.

೨. ತನಗೆ ಸ್ತ್ರೀಯ ನಿಮಿತ್ತವು ಯಾವಾಗ ದೊರಕುವುದು ? ಎಂಬುದಾಗಿ ಕುಶೀಲದ ತೀವ್ರ ಇಚ್ಛೆಯಾಗುವುದು.

೩. ಮಾಯಾಚಾರ - ಕುಟಿಲತೆಯರೂಪ ಪರಿಣತಿ, ತನ್ನ ಮನಸ್ಸಿನ ಕುಟಿಲತೆಯನ್ನು ಬೇರೆಯವರಿಗೆ ತಿಳಿಯಗೊಡದಿರುವುದು.

೩. ಅಂತರಂಗದಲ್ಲಿ ಎಂಥ ದಾಹ, ಮಾತ್ಸರ್ಯ ಅಥವಾ ಈರ್ಷೆಯ ಭಾವವಿಟ್ಟುಕೊಂಡಿರುವುದೆಂದರೆ ಅದರಿಂದ ಯಾರ ಸುಖವನ್ನೂ ನೋಡುವುದಾಗುವುದಿಲ್ಲ. ಬೇರೆಯವರನ್ನು ನೋಡಿ ಅವರನ್ನು ದುಃಖಿಯನ್ನಾಗಿ ಮಾಡುವ ಉಪಾಯದ ವಿಚಾರ ಮಾಡುತ್ತಿರುವುದು.

೪. ಅತಿಯಾದ ಲೋಭದ ಕಾರಣದಿಂದ ರಾಜ್ಯ ಅಥವಾ ಲಕ್ಷಗಟ್ಟಲೇ ಧನವಿರುತ್ತಿದ್ದರೂ ತೃಪ್ತಿ ಇಲ್ಲದಿರುವುದು.

೬. ತನ್ನ ಭಾವಗಳಲ್ಲಿ ಎಂಥ ಕೃತಘ್ನತೆಯನ್ನಿಟ್ಟುಕೊಂಡಿರುವುದು ಎಂದರೆ ಅದರಿಂದ ಇತರರ ಮೂಲಕ ತನ್ನ ಮೇಲೆ ಮಾಡಲ್ಪಟ್ಟ ಉಪಕಾರವನ್ನು ಮರೆತು ಅವರ ಕುರಿತಾಗಿ ಮತ್ತೆ ದ್ವೇಷಭಾವವಿರುವುದು.

೭. ಚಿತ್ತವು ಮಹಾಚಂಚಲವಿರುವುದು.

೮. ತಿರುತಿರುಗಿ ಪಂಚೇಂದ್ರಿಯ ವಿಷಯಗಳ ಇಚ್ಛೆ ಮಾಡುವುದು.

೯. ಯಾವಾಗಲೂ ಶೋಕರೂಪದ ಪರಿಣತಿಯನ್ನಿಟ್ಟುಕೊಳ್ಳುವುದು.

**ಆರ್ತವಿಚಾರದ ಬಾಹ್ಯ ಚಿಹ್ನೆಗಳು -**

೧) ದಿನ ದಿನಕ್ಕೆ ಭೋಜನ-ಪಾನೀಯಗಳು ಕಡಿಮೆಯಾಗುತ್ತ ಹೋಗುವುದು ಶರೀರವು ಕ್ಷೀಣವಾಗುವುದು ದೇಹ ಶೋಷಣವಿದೆ.

೨) ಶರೀರದ ವರ್ಣವು ಚಿಂತೆಯ ಕಾರಣದಿಂದ ಬದಲಾಗುವುದು ವಿವರ್ಣಚಿಹ್ನೆಯಿದೆ.

೩) ಕೆನ್ನೆಯ ಮೇಲೆ ಕೈಯಿಟ್ಟು ಕುಳಿತುಕೊಳ್ಳುವುದು ಆರ್ತಚಿಹ್ನೆಯಿದೆ.

೪) ತೀವ್ರ ಚಿಂತೆಯ ಕಾರಣದಿಂದ ಪುನಃ ಪುನಃ ಕಣ್ಣುಗಳಿಂದ ಅಶ್ರುಪಾತವಾಗುವುದು.

ಉಪರ್ಯುಕ್ತ ಆರ್ತಧ್ಯಾನರೂಪದ ವಿಚಾರಗಳು ತಿರ್ಯಂಚಗತಿಯನ್ನು ಕೊಡುವಂಥವಿವೆ. ಸಮ್ಯಕ್ತ್ವವಾದ ಮೇಲೆ ಈ ಆರ್ತಭಾವಗಳು ಸಹಜವಾಗಿಯೇ ಹೇಯವಾಗುತ್ತವೆ. ಸಮ್ಯಗ್ದೃಷ್ಟಿಯದು ಇವುಗಳ ಕುರಿತಾಗಿ ತ್ಯಾಗ ಭಾವವೇ ಇರುತ್ತದೆ.

**ರೌದ್ರ ವಿಚಾರ ಅಥವಾ ಧ್ಯಾನದ ನಾಲ್ಕು ಭೇದಗಳು -**

**೧. ಹಿಂಸಾನಂದ ರೌದ್ರವಿಚಾರ -** ಪರ ಜೀವಗಳನ್ನು ಸ್ವಯಂ ಸಾಯಿಸಿ ಹರ್ಷ ಮನ್ನಿಸುವುದು. ಆಜ್ಞೆ ನೀಡಿ ಬೇರೆಯವರ ಮೂಲಕ ಜೀವಘಾತ ಮಾಡಿಸಿ ಹರ್ಷ ಮನ್ನಿಸುವುದು. ಅಥವಾ ಬೇರೆಯವರ ಮೂಲಕ ಯಾವುದೋ ಜೀವವನ್ನು ಸಾಯಿಸುತ್ತಿರುವುದನ್ನು ಕಂಡು ಸ್ವಯಂ ಹರ್ಷ ಮನ್ನಿಸುವುದು. ಯಾರೋ ಯುದ್ಧ ಮಾಡುತ್ತಿರುವುದನ್ನು ಕಂಡು ಹರ್ಷ ಮನ್ನಿಸುವುದು, ತನ್ನ ಚತುರತೆಯಿಂದ ಬೇರೆಯವರ ಮಧ್ಯದಲ್ಲಿ ಪರಸ್ಪರ ಯುದ್ಧ ಮಾಡಿಸಿ ಹರ್ಷ ಮನ್ನಿಸುವುದು; ಯಾವುದೋ ಅನ್ಯ ಜೀವದ ಹಸ್ತ, ಕರ್ಣ, ನಾಸಿಕಾದಿ ಅಂಗ-ಉಪಾಂಗಗಳನ್ನು ಕತ್ತರಿಸಿ ಆನಂದ ಪಡುವುದು ಅಥವಾ ಯಾರೋ ಬೇರೆಯವರ ಅಂಗ ಉಪಾಂಗಗಳು ಕತ್ತರಿಸಿ ಹೋಗಿರುವುದನ್ನು ಕಂಡು ಸ್ವಯಂ ಹರ್ಷ ಮನ್ನಿಸುವುದು; ಬೇರೆಯವರ ಮನೆ, ಧನ ಲೂಟಿಯಾಗಿ ಹೋಗಿರುವುದನ್ನು ಕಂಡು ತಾನು ಆನಂದ ಮನ್ನಿಸುವುದು ಇತ್ಯಾದಿಯಾಗಿ ಜೀವಗಳು ದುಃಖಿಯಾಗಿರುವುದನ್ನು ಕಂಡು ಸ್ವಯಂ ಹರ್ಷ ಮನ್ನಿಸುವುದು ಹಿಂಸಾನಂದ ರೌದ್ರವಿಚಾರವಿದೆ.

**೨. ಮೃಷಾನಂದ ರೌದ್ರವಿಚಾರ -** ತನ್ನ ಚತುರತೆಯಿಂದ ಅಸತ್ಯ ಮಾತನಾಡಿ ಹರ್ಷ ಮನ್ನಿಸುವುದು, ಬೇರೆಯವರು ಅಸತ್ಯ ಮಾತನಾಡುತ್ತಿರುವುದನ್ನು ಕಂಡು ಹರ್ಷ ಮನ್ನಿಸುವುದು, ಅಸತ್ಯವು ಪ್ರಿಯವೆನಿಸುವುದು ಇತ್ಯಾದಿಯಾಗಿ ಅಸತ್ಯದಲ್ಲಿ ಆನಂದ ಮನ್ನಿಸುವುದು ಮೃಷಾನಂದ ರೌದ್ರಧ್ಯಾನವಿದೆ.

**೩. ಚೌರ್ಯಾನಂದ ರೌದ್ರಧ್ಯಾನ ವಿಚಾರ -** ಸ್ವಯಂ ಕಳವು ಮಾಡಿ ಆನಂದ ಮನ್ನಿಸುವುದು. ಇತರರಿಗೆ ಆದೇಶವಿತ್ತು ಕಳವು ಮಾಡಿಸಿ ಆನಂದ ಮನ್ನಿಸುವುದು, ಯಾರದೋ ಕಳವಾಗಿ ಹೋಗಿರುವ ವಾರ್ತೆಯನ್ನಾಲಿಸಿ ಆನಂದ

ಮನ್ನಿಸುವುದು, ಕಳವು ಅತ್ಯಂತ ಪ್ರಿಯವೆನಿಸುವುದು ಇತ್ಯಾದಿಗಳ ರೂಪದಲ್ಲಿ ಕಳವಿನ ಕಾರ್ಯ ಕಾರಣಗಳನ್ನು ಕಂಡು ಆನಂದ ಮನ್ನಿಸುವುದು ಚೌರ್ಯಾನಂದ ರೌದ್ರಧ್ಯಾನ ವಿಚಾರವಿದೆ.

**೪. ಪರಿಗ್ರಹಾನಂದ ರೌದ್ರಧ್ಯಾನ** - ಬಹಳಷ್ಟು ಪರಿಗ್ರಹವನ್ನು ಸಂಗ್ರಹಿಸಿ ಆನಂದ ಮನ್ನಿಸುವುದು; ಹಸು, ಎಮ್ಮೆ, ಎತ್ತು , ಕುದುರೆ, ಆನೆ, ಗಾಡಿ, ರಥ, ಸೈನ್ಯ ಮೊದಲಾದ ಪರಿಗ್ರಹ ಹಾಗೂ ಮನೆ, ಉದ್ಯಾನ, ಬಾವಿ, ಕೆರೆ ಇತ್ಯಾದಿ ಬಹಳಷ್ಟು ಪರಿಗ್ರಹ - ಬಹಳಷ್ಟು ಆರಂಭದಲ್ಲಿ ಆನಂದ ಮನ್ನಿಸುವುದು ಪರಿಗ್ರಹಾನಂದ ರೌದ್ರಧ್ಯಾನವಿದೆ.

ರೌದ್ರಧ್ಯಾನದ ಈ ನಾಲ್ಕು ಭೇದಗಳು ನರಕಗತಿಯನ್ನು ಕೊಡುವಂಥವಿವೆ. ಅಶುಭ ಫಲವನ್ನು ನೀಡುವಂಥ ಈ ಆರ್ತ-ರೌದ್ರ ಎರಡೂ ವಿಚಾರಗಳು ಸಮ್ಯಗ್ದೃಷ್ಟಿಗೆ ಸಹಜವಾಗಿಯೇ ಹೇಯವಿವೆಯೆಂಬುದನ್ನು ತಿಳಿದುಕೊಂಡು ಈ ಹೇಯವಿರುವ ಕುವಿಚಾರಗಳನ್ನು ಬಿಟ್ಟು ಬಿಡಬೇಕು.

**ಧರ್ಮಧ್ಯಾನದ ನಾಲ್ಕು ಭೇದಗಳು ಃ-**

**೧. ಆಜ್ಞಾವಿಚಯ ಧರ್ಮಧ್ಯಾನ** - ಸುವಿಚಾರರೂಪ ಧರ್ಮಧ್ಯಾನ - ಧರ್ಮಾತ್ಮಾ ಜೀವರುಗಳಿಗೆ ಸಹಜವಾಗಿಯೇ ಎಂಥ ವಿಚಾರಗಳಿರುತ್ತವೆಯೆಂದರೆ, ಜೀವ-ಅಜೀವ ಪದಾರ್ಥಗಳು ಕೆಲವಂತೂ ಪ್ರಗಟವಿವೆ, ಕೆಲವು ಅಪ್ರಗಟವಿವೆ, ಕೆಲವು ಭಾಸಿತವಿವೆ, ಕೆಲವು ಜ್ಞಾನದ ಮಂದತೆಯಿಂದ ಭಾಸಿತವಾಗುವುದಿಲ್ಲ; ಆದರೆ ಕೇವಲಜ್ಞಾನಿಗಳಾದ ಜಿನದೇವರು ಹೇಗೆ ಹೇಳಿದ್ದಾರೆ ಹಾಗೆ - ಅದುವೇ ಪ್ರಮಾಣವಿದೆ. ನನ್ನ ಮಂದ ಬುದ್ಧಿಯಿಂದ ನನಗೆ ತಿಳಿದು ಬರದಿದ್ದರೆ ಇರಲಿ, ಆದರೆ ಕೇವಲಿ ಭಗವಂತರ ಕಥನದಲ್ಲಿ ನನಗೆ ಸಂದೇಹವಿಲ್ಲ. ಜಿನದೇವರುಗಳಿಂದ ಹೇಳಲ್ಪಟ್ಟಿರುವುದು ಪ್ರಮಾಣವಿದೆ - ಹೀಗೆ ದೃಢ ಪ್ರತೀತಿ ರೂಪದ ವಿಚಾರವು ಆಜ್ಞಾವಿಚಯ ಧರ್ಮಧ್ಯಾನವಿದೆ.

**೨. ಅಪಾಯವಿಚಯ ಧರ್ಮಧ್ಯಾನ** - ನಿರಂತರ ಇಂಥ ವಿಚಾರಗಳಿರುವುದು - ನನ್ನ ಧರ್ಮವು ಯಾವ ರೀತಿ ನಿರ್ದೋಷವಾಗಿ ಉಳಿಯಬಹುದಾಗಿದೆ ? ನನ್ನ ಆಯುವಿನ ಕೊನೆಯವರೆಗೆ ಧರ್ಮದ ಸಾಧನವು ಹೇಗೆ ಉಳಿಯಬಲ್ಲದು ? ನನ್ನ ತತ್ತ್ವಜ್ಞಾನವು ಹೇಗೆ ಹೆಚ್ಚಬಹುದಾಗಿದೆ ? ಧರ್ಮಧ್ಯಾನದಲ್ಲಿ ಚಿತ್ತದ ಏಕಾಗ್ರತೆಯು ಹೇಗೆ ಆಗಬಲ್ಲದು ? ನನ್ನ ಕ್ರೋಧ, ಮಾನ, ಮಾಯೆ, ಲೋಭ ಕಷಾಯಗಳು ಯಾವ ರೀತಿಯಿಂದ ಕಡಿಮೆಯಾಗಬಹುದಾಗಿದೆ? ನನ್ನಲ್ಲಿ ಸಮತೆಯ ವೃದ್ಧಿಯು ಹೇಗೆ ಆಗಬಹುದಾಗಿದೆ ? ಶಾಂತರಸರೂಪದ ಅಮೃತ ಪಾನವನ್ನು ಯಾವಾಗ ಮಾಡುವೆನು ? ನನ್ನ ಸಂಯಮ ಭಾವವು ಯಾವಾಗ ಪ್ರಗಟವಾಗುವುದು ? ಇತ್ಯಾದಿ ಸಮತಾ ಸಹಿತ ಧರ್ಮಧ್ಯಾನವನ್ನು ಹೆಚ್ಚಿಸುವ ರೂಪ, ಧರ್ಮರಕ್ಷಣೆಯ ರೂಪದ ವಿಚಾರಗಳು ಪುನಃ ಪುನಃ ಬರುತ್ತಿರುವುದು ಅಪಾಯ-ವಿಚಯ ಧರ್ಮಧ್ಯಾನವಿದೆ.

**೩. ವಿಪಾಕವಿಚಯಧರ್ಮಧ್ಯಾನ** - ಪೂರ್ವ ಪುಣ್ಯದ ಉದಯದಿಂದ ಪ್ರಾಪ್ತವಾದ ಅನೇಕ ಪ್ರಕಾರದ ಸಂಪತ್ತು , ವಿಧ-ವಿಧದ ಪಂಚೇಂದ್ರಿಯ ಭೋಗ ಸುಖವನ್ನು ಪಡೆದು ಧರ್ಮಾತ್ಮನು ಹರ್ಷ ಮಾಡುವುದಿಲ್ಲ, ಅವುಗಳಲ್ಲಿ ಮಗ್ನನಾಗುವುದಿಲ್ಲ ಪ್ರತಿಯಾಗಿ ಅವನು ವಿಚಾರ ಮಾಡುವುದೇನೆಂದರೆ - ನಾನು ಈ ಸಂಸಾರದಲ್ಲಿ ಭ್ರಮಣ ಮಾಡುತ್ತ ಅನೇಕ ಬಾರಿ ನರಕಾದಿಗಳಲ್ಲಿ; ತಿರ್ಯಂಚದಲ್ಲಿ ಏಕೇಂದ್ರಿಯ, ವಿಕಲೇಂದ್ರಿಯ ಮೊದಲಾದವುಗಳ ಮಹಾದುಃಖಗಳನ್ನು ಅನೇಕ ಬಾರಿ ಭೋಗಿಸಿದ್ದೇನೆ. ಅನೇಕ ಬಾರಿ ನಾನು ಪಶುವಾಗಿದ್ದೇನೆ, ಮನುಷ್ಯನಾಗಿ ಮನೆ-ಮನೆಗಳಲ್ಲಿ ಮಾರಾಟವಾಗಿದ್ದೇನೆ, ಭಯಂಕರ ಹಸಿವೆಯನ್ನು ಸಹಿಸಿದ್ದೇನೆ. ಅನೇಕ ಬಾರಿ ವನಸ್ಪತಿಯಲ್ಲಿ ಉತ್ಪನ್ನನಾಗಿ ಅನಂತ-ಅನಂತ ಬಾರಿ ವಿನಾಮೂಲ್ಯವಾಗಿಯೇ ಮಾರಲ್ಪಟ್ಟಿದ್ದೇನೆ ಇತ್ಯಾದಿ ಅನೇಕ ಕಷ್ಟ ಭೋಗಿಸಿರುವ ನನ್ನಂಥ ಸಂಸಾರಿ ಜೀವನಿಗೆ ಯಾವುದೋ ಕಿಂಚಿತ್ ಪುಣ್ಯದ ಉದಯದಿಂದ ದೇವ, ಇಂದ್ರ , ಚಕ್ರವರ್ತಿ, ವಿದ್ಯಾಧರ, ಮಂಡಲೇಶ್ವರ ಇತ್ಯಾದಿಯ ವಿಭೂತಿಯು, ಪಂಚೇಂದ್ರಿಯಗಳ ಸುಖವು ಈಗ ದೊರಕಿದೆ; ಆದರೆ ಈ ಸುಖ ಸಂಪದವು ಕರ್ಮದ ಮೂಲಕ ಪ್ರಾಪ್ತವಿದೆ, ಅದರಿಂದ ಎಲ್ಲವೂ ಕ್ಷಣಭಂಗುರವಿದೆ. ಅಲ್ಪಕಾಲ ಉದಯದಲ್ಲಿದ್ದು ನಷ್ಟವಾಗಿ ಹೋಗುವಂಥದ್ದಿದೆ -

ಎಂದು ತಿಳಿದುಕೊಂಡ ಸಮ್ಯಕ್ ಧನಧಾರೀ ಜೀವನು ಮನಸ್ಸನ್ನು ಭೋಗರಕ್ತಮಾಡುವುದಿಲ್ಲ ಎಂದರೆ ಭೋಗದಲ್ಲಿ ಮಗ್ನನಾಗುವುದಿಲ್ಲ. ಇದು ವಿಪಾಕ ವಿಚಯ ಧರ್ಮಧ್ಯಾನವಿದೆ.

ಇದೇ ಪ್ರಕಾರ ತನ್ನ ಯಾವುದೋ ಪಾಪದ ಉದಯದಿಂದ ಅನೇಕ ದುಃಖ, ಸಂಕಟ, ವಿಪತ್ತು, ವೇದನೆಯು ಶರೀರದಲ್ಲಿ ಬಂದು ಬಿಟ್ಟರೆ ಜ್ಞಾತಾ ಪುರುಷನು ಅಸಾತಾ ಮಾಡುವುದಿಲ್ಲ, ದುಃಖ ಮನ್ನಿಸುವುದಿಲ್ಲ ಪ್ರತಿಯಾಗಿ ಅವನು ವಿಚಾರ ಮಾಡುವುದೇನೆಂದರೆ - ನಾನು ಪೂರ್ವದ ಭವಗಳಲ್ಲಿ ದೇವ-ದೊರೆಯೋಗ್ಯ ಅನೇಕ ವಿಧದ ಪಂಚೇಂದ್ರಿಯ ಸುಖ ಭೋಗಿಸಿದ್ದೇನೆ, ಕಾಮದೇವನಂಥ ಶರೀರ ಸಂಪದವನ್ನು ಭೋಗಿಸಿದ್ದೇನೆ. ಈಗ ಯಾವುದೋ ಕಿಂಚಿತ್ ಪಾಪ ಕರ್ಮದ ಉದಯದಿಂದ ನನಗೆ ಶರೀರದಲ್ಲಿ ಪೀಡೆ - ವೇದನೆಯಾಗಿದೆ. ಅದು ತಾನಾಗಿಯೇ ತನ್ನ ಫಲವಿತ್ತು ಉದುರಿ ಹೋಗುತ್ತದೆ - ಇತ್ಯಾದಿ ಶುಭ ವಿಚಾರ ಮಾಡಿ ಖೇದ-ಖಿನ್ನನಾಗುವುದಿಲ್ಲ. ಸಾತಾದ ಉದಯದಲ್ಲಿ ಸುಖ ಮನ್ನಿಸುವುದಿಲ್ಲ ಮತ್ತು ಅಸಾತಾದ ಉದಯದಲ್ಲಿ ದುಃಖಿಯಾಗುವುದಿಲ್ಲ. ಇಂಥ ವಿಚಾರದ ಹೆಸರು ವಿಪಾಕ ವಿಚಯ ಧರ್ಮಧ್ಯಾನವಿದೆ.

**೪. ಸಂಸ್ಥಾನ ವಿಚಯ ಧರ್ಮಧ್ಯಾನ -** ಸ್ಥಾನ ಅರ್ಥಾತ್ ಮೂರು ಲೋಕ. ಅದರಲ್ಲಿ ಮೂರು ಲೋಕಗಳ ಆಕಾರದ ವಿಚಾರವಾಗುತ್ತದೆ. ಎಂದರೆ ಈ ಮೂರು ಲೋಕವು ಪುರುಷಾಕಾರದಂತಿದೆ, ಅನಾದಿನಿಧನವಿದೆ, ಆರು ದ್ರವ್ಯಗಳಿಂದ ತುಂಬಿಕೊಂಡಿದೆ, ನಾಲ್ಕು ಗತಿಯ ಜೀವಗಳು ವಾಸ ಮಾಡುವ ಸ್ಥಾನವಿದೆ. ಇಲ್ಲಿ ಸಂಸಾರೀ ಪ್ರಾಣಿಯು ಶುಭಾಶುಭ ಭಾವಗಳ ಫಲವನ್ನು ಭೋಗಿಸುತ್ತ ದೇಹ ಧಾರಣ ಮಾಡುತ್ತ ಮತ್ತು ಬಿಟ್ಟುಕೊಡುತ್ತ ಅನಂತ ಕಾಲದಿಂದ ಭ್ರಮಣ ಮಾಡುತ್ತಲಿದೆ. ಸುಖ-ದುಃಖಗಳ ಭಾವ ಮಾಡುತ್ತಲಿದೆ, ಇದರದೇ ಫಲಸ್ವರೂಪವಾಗಿ ಪುನಃ ಜನ್ಮ-ಮರಣಗಳ ವೃದ್ಧಿ ಮಾಡುತ್ತಿದೆ. ರಾಗ-ದ್ವೇಷಭಾವಗಳ ನಾಶಮಾಡಿದ ಮೇಲೆ ಕರ್ಮನಾಶವಾಗಿ ಮೋಕ್ಷವನ್ನು ಪ್ರಾಪ್ತ ಮಾಡಿಕೊಳ್ಳುತ್ತದೆ, ಲೋಕ ಶಿಖರದ ಮೇಲೆ ಸಿದ್ಧನಾಗಿ ವಿರಾಜಮಾನವಾಗಿ ಬಿಡುತ್ತದೆ.

ಆ ಸಿದ್ಧ ಭಗವಂತರು ಜಗತ್ತಿನ ದುಃಖಗಳಿಂದ ರಹಿತರಿದ್ದಾರೆ, ಜನ್ಮ-ಮರಣ, ಸಂಸಾರ ಪರಿಭ್ರಮಣ-ಈ ಸರ್ವ ದೋಷಗಳನ್ನು ಬಿಟ್ಟು ಸುಖಿಯಾಗಿದ್ದಾರೆ. ಅವರ ಹಾಗೆಯೇ ಆಗುವ ಉದ್ದೇಶದಿಂದ ಅವರಿಗೆ ನಮಸ್ಕಾರವಿರಲಿ...

ಪರಮಾತ್ಮಾ-ಭಗವಂತರು ಎರಡು ಪ್ರಕಾರದವರಿದ್ದಾರೆ - ನಾಲ್ಕು ಘಾತಿಕರ್ಮರಹಿತ, ಕೇವಲಜ್ಞಾನ ಸಹಿತ, ಅನಂತ ಸುಖಿ, ಸಮವಸರಣಸಹಿತ, ಅನೇಕ ಲಕ್ಷಣಗಳಿಂದ ಮಂಡಿತ, ಪರಮ ಔದಾರಿಕ ಶರೀರದ ಧಾರಕರಾದ ಅರಹಂತ ಭಗವಂತರು ಸಕಲ ಪರಮಾತ್ಮರಿದ್ದಾರೆ ಮತ್ತು ಜ್ಞಾನಾವರಣಾದಿ ಅಷ್ಟಕರ್ಮರಹಿತ, ಅಮೂರ್ತಿಕ ವಿತನು ಅರ್ಥಾತ್ ವಿದೇಹಿ ತನುರಹಿತ ಶುದ್ಧಾತ್ಮರು ನಿಕಲ ಸಿದ್ಧ ಪರಮಾತ್ಮರಿದ್ದಾರೆ. ಔದಾರಿಕಾದಿ ಶರೀರದ ಹೆಸರು 'ಕಲ'ವಿದೆ. ಈ ಶರೀರ ರಹಿತ ಅಕಲ (ನಿಕಲ)ರಿದ್ದಾರೆ. ಸರ್ವಲೋಕಗಳ ಮಸ್ತಕ-ಮುಕುಟದ ಸಮಾನ ವಿರಾಜಮಾನರಿದ್ದಾರೆ. ಈ ಪ್ರಕಾರ ಲೋಕಾಲೋಕದ ವಿಶೇಷ ವಿಚಾರ, ಚಿಂತನ, ಧ್ಯಾನ ಮಾಡುವುದು ಸಂಸ್ಥಾನವಿಚಯ ಧರ್ಮಧ್ಯಾನವಿದೆ.

ಉಪರ್ಯುಕ್ತ ನಾಲ್ಕೂ ಧರ್ಮಧ್ಯಾನಗಳು ಧರ್ಮಾತ್ಮಾ ಜೀವರುಗಳಿಗೆ ಸಹಜವಾಗಿಯೇ ಆಗುತ್ತವೆ. ಈ ವಿಚಾರದ ಫಲವು ಸ್ವರ್ಗ ಮೊದಲಾದ ಉತ್ತಮಗತಿಯಿದೆ ಮತ್ತು ಪರಂಪರೆಯಿಂದ ಮೋಕ್ಷವಿದೆ; ಅದರಿಂದ ಈ ತರದ ವಿಚಾರಗಳು ಧರ್ಮಾತ್ಮಾ ಜೀವರುಗಳ ಮೂಲಕ ಉಪಾದೇಯ, ಮಾಡಲು ಯೋಗ್ಯವಿವೆ.

**ಶುಕ್ಲಧ್ಯಾನದ ನಾಲ್ಕು ಭೇದಗಳು :-**

**೧. ಪೃಥಕ್ತ್ವವಿತರ್ಕವೀಚಾರ -** ಯಾವುದರಲ್ಲಿ ಆತ್ಮಸ್ವಭಾವದ ಹಾಗೂ ಪುದ್ಗಲ ಸ್ವಭಾವದ ಭಿನ್ನ-ಭಿನ್ನ ವಿಚಾರವಿರುವುದು, ಅದು ಪೃಥಕ್ತ್ವವಿತರ್ಕವೀಚಾರ ಶುಕ್ಲಧ್ಯಾನವಿದೆ.

**೨. ಏಕತ್ವವಿತರ್ಕವೀಚಾರ -** ಮನಸ್ಸಿನ ಏಕಾಗ್ರತೆಯ ಕಾರಣ ಒಂದೇ ಅರ್ಥದಲ್ಲಿ (ಅರ್ಥಾತ್ ಅಭೇದ ನಿರ್ವಿಕಲ್ಪ) ಲೀನತೆಯಿಂದ ಕೇವಲಜ್ಞಾನವಾಗುತ್ತದೆ. ಅದು ಏಕತ್ವವಿತರ್ಕವೀಚಾರ ಶುಕ್ಲಧ್ಯಾನವಿದೆ.

**೩. ಸೂಕ್ಷ್ಮಕ್ರಿಯಾಪ್ರತಿಪಾತಿ** - ಮನ-ವಚನ-ಕಾಯ ಯೋಗಗಳ ಅಂಶವನ್ನು ಸೂಕ್ಷ್ಮಗೊಳಿಸುವರೂಪ ಆತ್ಮ ಪರಿಣಾಮವು ಸೂಕ್ಷ್ಮ ಕ್ರಿಯಾಪ್ರತಿಪಾತಿಯೆಂಬ ಹೆಸರಿನ ಶುಕ್ಲಧ್ಯಾನವಿದೆ. ಇದರಲ್ಲಿ ಮನಪ್ರಾಣದ ಅಭಾವವಾಗಿ ಹೋಗುವುದರಿಂದ ವಿಚಾರವು ಕೂಡ ಇರುವುದಿಲ್ಲ. ಒಂದು ಆತ್ಮಭಾವವೇ ಶುದ್ಧರೂಪವಿರುತ್ತದೆ.

**೪. ವ್ಯುಪರತಕ್ರಿಯಾನಿವರ್ತಿ** - ಪೌದ್ಗಲಿಕ ತನುಕ್ರಿಯೆಯ ಸಂಬಂಧವು ಬಿಟ್ಟುಹೋಗಿ ನಿರ್ಬಂಧ ಭಾವವಾಗುವುದು ವ್ಯುಪರತಕ್ರಿಯಾನಿವರ್ತಿ ಶುಕ್ಲಧ್ಯಾನವಿದೆ.

ಇತ್ಯಾದಿ ಶುದ್ಧ ವಿಚಾರಗಳು ಉಪಾದೇಯವಿವೆ. ಇಂಥ ವಿಚಾರಗಳು ನಿಕಟಭವ್ಯ ಸಂಸಾರಿ ಜೀವಗಳಿಗೆ ಅಥವಾ ಕಿಂಚಿತ್ ಕರ್ಮರಹಿತ ಜೀವಗಳಿಗೆ ಬರುತ್ತವೆ. ಸಂಸಾರೀ, ಧರ್ಮರಹಿತ, ಮುಗ್ಧ, ಪರಭವದಲ್ಲಿ ವಿಪರೀತವಾದ ದುಃಖಫಲದ ಉತ್ಪಾದಕ ಜೀವಗಳಿಗೆ ಇಂಥ ವಿಚಾರಗಳು ಮಹಾದುರ್ಲಭವಿವೆ. ದೀರ್ಘ ಸಂಸಾರಿ, ಭವ ಭ್ರಮಣವುಳ್ಳ, ಅಶುಭ ಭಾವನೆಯ ಧಾರಕ ಜೀವಗಳಿಗಂತೂ ಶುಭವಿಚಾರಗಳಾಗುವುದು ಮಹಾಕಠಿಣವಿದೆ.

ಈ ಪ್ರಕಾರ ಶುಭಾಶುಭ ವಿಚಾರಗಳಲ್ಲಿ ಸಮ್ಯಗ್ದೃಷ್ಟಿ ಜೀವರುಗಳು ಹೇಯ-ಉಪಾದೇಯ ಮಾಡುವುದು ಮಹಾ ಉತ್ತಮವಿದೆ, ಯೋಗ್ಯವಿದೆ. ಶುದ್ಧ ದೃಷ್ಟಿಯಾದ ಮೇಲೆ ಹೇಯ-ಉಪಾದೇಯ ಭಾವವು ಸಹಜವಾಗಿಯೇ ಪ್ರಗಟವಾಗುತ್ತದೆ.

ಆಚಾರ (ಕ್ರಿಯೆ)ದಲ್ಲಿ ಜ್ಞೇಯ-ಹೇಯ-ಉಪಾದೇಯ-ಸಂಪೂರ್ಣ ಶುಭಾಶುಭ ಕ್ರಿಯೆಗಳ ವಿಚಾರವು ಜ್ಞೇಯವಿದೆ. ಅದರಲ್ಲಿ ೧. ಉಪಾದೇಯರೂಪ ಶುಭಾಚಾರ, ೨. ಹೇಯರೂಪ ಅಶುಭಾಚಾರವೆಂದು ಎರಡು ಭೇದಗಳಿವೆ.

**೧. ಶುಭಾಚಾರ** - ದಯೆಯೊಂದಿಗೆ ಭೂಮಿಯ ಮೇಲೆ ಜೀವಗಳನ್ನು ನೋಡುತ್ತ, ಅವುಗಳ ರಕ್ಷಣೆಯಾಗುವಂತೆ ನಡೆಯುವುದು ಶುಭಾಚಾರವಿದೆ. ಎಲ್ಲರಿಗೂ ಸುಖಕರವಾದ, ದಯೆಯಿಂದ ಕೂಡಿದ ಹಿತ-ಮಿತ-ಸತ್ಯ ಪುಣ್ಯಕಾರೀ ವಚನಗಳನ್ನಾಡುವುದು ಶುಭಕ್ರಿಯೆಯಿದೆ. ಶೋಧಿಸಿದ ಜಲದಿಂದ ಸ್ನಾನ ಮಾಡುವುದು; ನದಿ-ಸರೋವರ- ಬಾವಿಯಲ್ಲಿ ಪ್ರವೇಶಮಾಡಿ ಸ್ನಾನ ಮಾಡಬಾರದು, ತಮ್ಮ ಶರೀರದ ಉಷ್ಣತೆಯಿಂದ ಜಲದಲ್ಲಿರುವ ಬಹಳಷ್ಟು ಜೀವಗಳ ಘಾತವಾಗುತ್ತದೆ, ಅದರಿಂದ ಈ ಕಾರ್ಯವು ತ್ಯಾಗ ಯೋಗ್ಯವಿದೆ. ಒಂದುವೇಳೆ ಅಂಥ ಪ್ರಸಂಗವು ಒದಗಿ ಬಂದರೆ ಜಲಾಶಯದಿಂದ ಜಲವನ್ನು ತಗೆದುಕೊಂಡು ಶೋಧಿಸಿ ದೂರ ಹೋಗಿ ಸ್ನಾನ ಮಾಡಬೇಕು. ಭೂಮಿಯನ್ನು ನೋಡಿ ಶುದ್ಧಗೊಳಿಸಿ ಹಾಸಿಗೆ ಹಾಸುವುದು, ಸಾವಧಾನತೆಯಿಂದ ಗುಡಿಸುವುದು, ಇಂಧನವನ್ನು ನೋಡಿ ಶುದ್ಧಗೊಳಿಸಿ ಅಗ್ನಿ ಉರಿಸುವುದು ಶುಭಾಚಾರವಿದೆ. ಧಾನ್ಯ, ಗಿರಣೆಯನ್ನು ಶೋಧಿಸಿ ಹಗಲು ಹೊತ್ತಿನಲ್ಲಿ ಬೆಳಕಿರುವ ಜಾಗದಲ್ಲಿ ಚೆನ್ನಾಗಿ ನೋಡಿ ಬೀಸುವುದು, ಹಗಲು ಹೊತ್ತಿನಲ್ಲಿ ಬೆಳಕಿರುವ ಕಡೆ ಶೋಧಿಸಿದ ನೀರಿನಿಂದ ಬಟ್ಟೆ ಒಗೆಯುವುದು, ಉಜ್ಜುವುದು, ಒಣಗಿಸುವುದು, ಅಡಿಗೆ ಮಾಡುವುದು, ಸರಿಯಾಗಿ ನೋಡಿಕೊಂಡು ಹಗಲು ಹೊತ್ತಿನಲ್ಲಿಯೇ ಊಟ ಮಾಡುವುದು ಶುಭಾಚಾರವಿದೆ. ತಮ್ಮ ಎಲ್ಲ ಕ್ರಿಯೆಗಳನ್ನು ವಿಚಾರಪೂರ್ವಕ, ದಯೆಯ ಭಾವದೊಂದಿಗೆ ಸಾವಧಾನತೆಯಿಂದ ಮಾಡುವುದು ಶುಭಾಚಾರವಿದೆ. ತಮ್ಮ ಆಯುವಿನ ಅನುಸಾರ ಲೋಕನಿಂದೆಯಿಂದ ರಹಿತವಾದ ಉಡಿಗೆ-ತೊಡಿಗೆ, ಆಭೂಷಣಗಳನ್ನು ಧರಿಸುವುದು ಶುಭಾಚಾರವಿದೆ. ಉಚ್ಚ ಕುಲದಲ್ಲಿ ಯಾವ ರೀತಿಯ ವಸ್ತ್ರ-ಆಭೂಷಣ ಧಾರಣ ಮಾಡುತ್ತ ಬಂದಿದೆ ಅದೇ ರೀತಿ ಧಾರಣ ಮಾಡಬೇಕು. ದೊರೆಗಳು, ಶೆಟ್ಟಿ-ಶ್ರೀಮಂತರು, ವ್ಯಾಪಾರಿಗಳು, ಧನಿಕ-ನಿರ್ಧನರೆಲ್ಲರೂ ತಮ್ಮ ತಮ್ಮ ಪದವಿ ಹಾಗೂ ಸ್ಥಾನಕ್ಕೆ ಯೋಗ್ಯವಿರುವಂತೆ ಪ್ರವರ್ತಿಸುವುದು ಶುಭಕ್ರಿಯೆಯಿದೆ - ಈ ಕ್ರಿಯೆಗಳು ವಿವೇಕವಂತರಿಗೆ ಉಪಾದೇಯವಿದೆ.

**೨. ಅಶುಭಾಚಾರ** - ಕೆಳಗೆ ನೋಡದೆ, ಬೇಗ-ಬೇಗನೆ ನಡೆಯುವುದು, ವಿಚಾರವಿಲ್ಲದೆ, ಮಿತಿಯಿಲ್ಲದೆ ರಾಜ್ಯವಿರುದ್ಧ ಲೋಕವಿರುದ್ಧ ವಚನಗಳನ್ನಾಡುವುದು, ಕುಕ್ರಿಯೆಯಿದೆ. ಮೇಲೆ ಹೇಳಿದ ಶುಭ ಆಚಾರದಿಂದ

ವಿಪರೀತವಾದ ಆಚರಣೆ, ಇತರರಿಗೆ ಪೀಡೆಯನ್ನುಂಟು ಮಾಡುವಂಥ ನಿರ್ದಯಪೂರ್ಣ ವಚನಗಳನ್ನಾಡುವುದು, ನದಿ-ಸರೋವರಗಳಲ್ಲಿ ಧುಮುಕುವುದು, ದೊಡ್ಡದಾದ ಕೆರೆಯಲ್ಲಿ ಪ್ರವೇಶ ಮಾಡುವುದು, ಈಜುವುದು, ಕೌತುಕದೊಂದಿಗೆ ಸ್ನಾನ ಮಾಡುವುದು, ಬಟ್ಟೆ ಒಗೆಯುವುದು ಇವೆಲ್ಲ ಕುಕ್ರಿಯೆಗಳಿವೆ. ಕುಲದ ನಿಂದೆಯಾಗುವಂಥ ಇತ್ಯಾದಿ ಮರ್ಯಾದೆರಹಿತ ವಸ್ತ್ರ-ಆಭೂಷಣಗಳನ್ನು ಧರಿಸುವುದು ಕುಆಚಾರವಿದೆ - ಇವೆಲ್ಲ ಕ್ರಿಯೆಗಳು ತ್ಯಾಗ ಮಾಡಲು ಯೋಗ್ಯವಿವೆ.

ಸ್ತ್ರೀ-ಮನೆ ಹಾಗೂ ಮನೆತನಕ್ಕೆ ಸಂಬಂಧಿಸಿದ ಎಷ್ಟೋ ಕ್ರಿಯೆಗಳು ಸ್ತ್ರೀಯರ ಆಧೀನವಿವೆ. ಸ್ತ್ರೀಯರು ಎರಡು ಪ್ರಕಾರದವರಿದ್ದಾರೆ.

೧. **ಅಶುಭ ಸ್ತ್ರೀ -** ಆಚಾರ ಕ್ರಿಯೆಗಳಿಂದ ರಹಿತ, ಧರ್ಮಭಾವನೆಯಿಂದ ವಿಮುಖ, ವಿಷಯ-ಕಷಾಯಗಳಲ್ಲಿ ರಂಜಿಸುವಂಥ; ಕ್ರೋಧ, ಮಾನ, ಮಾಯೆ, ಲೋಭಸಹಿತ ಕ್ರೂರ ಸ್ವಭಾವಿ, ಕುಟಿಲ ಚಿತ್ತವುಳ್ಳ, ತಮ್ಮ ಶೀಲಗುಣದ ರಕ್ಷಣೆಯ ಲೋಭದಿಂದ ರಹಿತ, ಅಶುಭಭಾವನಾಮಯ, ಹೀನ ಆಚರಣೆ ಇತ್ಯಾದಿ ಕುಲಕ್ಷಣ ಸಹಿತ ಸ್ತ್ರೀಯು ಅಶುಭ ಸ್ತ್ರೀಯಿದ್ದಾಳೆ.

೨. **ಶುಭ ಸ್ತ್ರೀ -** ಶುಭಾಚರಣೆ ಮಾಡುವಂಥ, ಧರ್ಮ ಪರಿಣತಿಯ ಧಾರಕಿ, ಪವಿತ್ರ ಚಿತ್ತವುಳ್ಳ, ಶೀಲಗುಣಸಹಿತ, ಗುರು ಜನರ, ಅತ್ತೆ, ಮಾವ, ತಾಯಿ, ತಂದೆಯ ಆಮ್ನಾಯದ (ಪರಂಪರೆಯ) ಅನುಸಾರ ವಿನಯಸಹಿತ ಪ್ರವರ್ತನೆ ಮಾಡುವಂಥ, ಸೌಭಾಗ್ಯ ಗುಣಯುಕ್ತ, ಯಶವಂತೆ ಇತ್ಯಾದಿ ಒಳ್ಳೆಯ ಗುಣಸಹಿತ ಸ್ತ್ರೀಯು ಶುಭಸ್ತ್ರೀಯಿದ್ದಾಳೆ.

ಈ ಪ್ರಕಾರ ಶುಭಾಶುಭವೆಂಬ ಎರಡು ಪ್ರಕಾರದ ಸ್ತ್ರೀಯರಿರುತ್ತಾರೆ. ಶುಭ ಸ್ತ್ರೀಯ ಗರ್ಭದಿಂದ ಶುಭ ಸಂತಾನ, ಅಶುಭ ಸ್ತ್ರೀಯ ಗರ್ಭದಿಂದ ಅಶುಭ ಸಂತಾನದ ಜನ್ಮವಾಗುತ್ತದೆ. ಯಾವ ಪ್ರಕಾರ ಪೃಥ್ವಿಯೊಳಗಿಂದ ಎರಡು ಗಣಿಗಳು ದೊರಕುತ್ತವೆ, ಎಂದರೆ ಒಂದು ಗಣಿಯಿಂದ ಉತ್ತಮ ರತ್ನಾದಿಗಳು ದೊರಕಿದರೆ ಮತ್ತೊಂದು ಗಣಿಯಿಂದ ಲೋಹವು ದೊರಕುತ್ತದೆ ಅದೇ ಪ್ರಕಾರ ಸ್ತ್ರೀಯರ ಶುಭ-ಅಶುಭ ಗರ್ಭ ತಿಳಿಯುವುದು.

ಶುಭ ಅಶುಭ ಸಂತಾನವಾಗುವ ಕಾರಣ -

**ಪುಚ್ಛವತಿ ಜುಗ ವಾಸರ ಸೇವತ ಸಂತಾನ ಹೋಯ ವಿಣ ಸೀಲೋ ।**
**ವಿಸಣಾಣಿ ಅಪಲಚ್ಛೋ ಧಮ್ಮ ರಹೀಯೋ ಅಣ್ಣಿ ವಿಣಚಾರೋ ।।೩೮।।**

**ಗಾಥಾರ್ಥ :-** ಪುಷ್ಪವತಿ - ಸ್ತ್ರೀ ಧರ್ಮಸಹಿತ ನಾರಿಯ ಜತೆ ಒಂದು ವೇಳೆ ಯಾವನೋ ಕುಬುದ್ಧಿಯ ಪುರುಷನು ಮೊದಲನೇ ದಿವಸ ಅಥವಾ ಎರಡನೇ ದಿವಸ ಸಂಗಮ (ಸಮಾಗಮ) ಮಾಡಿದರೆ ಮತ್ತು ಅದರಿಂದ ಸಂತಾನದ ಉತ್ಪತ್ತಿಯಾದರೆ ಅದು (ಅವನು-ಅವಳು) ಶೀಲರಹಿತ, ಪರಸ್ತ್ರೀ-ವೇಶ್ಯಾದಿ ಲಂಪಟ, ಮಹಾ ಕಾಮುಕ, ಸಪ್ತವ್ಯಸನಿ, ಧರ್ಮ ರಹಿತ ಅಜ್ಞಾನಿ, ಅನಾಚಾರಿಯಾಗಿರುತ್ತದೆ.

**ಭಾವಾರ್ಥ :-** ಸ್ತ್ರೀಯ ಸ್ತ್ರೀಧರ್ಮ (ಋತುಮತಿ)ದ ಸಮಯದಲ್ಲಿ ಮಾಡಲು ಯೋಗ್ಯ ಕ್ರಿಯೆಗಳನ್ನು ಹೇಳುತ್ತಾರೆ, - ಅಶುಭ ಸ್ತ್ರೀಯಂತೂ ಸ್ತ್ರೀಧರ್ಮದ ಸಮಯದಲ್ಲಿಯೂ ಎಲ್ಲ-ಸ್ತ್ರೀ ಪುರುಷ, ಬಾಲಕರನ್ನು ಮುಟ್ಟುತ್ತಾಳೆ, ಮನೆಯ ಕೆಲಸಗಳನ್ನೆಲ್ಲ ಮಾಡುತ್ತಾಳೆ. ಮನೆಯ ಘಟ-ಪಟಾದಿಗಳನ್ನು ಮುಟ್ಟುತ್ತಾಳೆ, ಶರೀರ ಶೃಂಗಾರ ಮಾಡಿಕೊಳ್ಳುತ್ತಾಳೆ, ಹೊಟ್ಟೆ ತುಂಬ ಗರಿಷ್ಠ ಭೋಜನ ಮಾಡುತ್ತಾಳೆ, ಗೀತ-ನೃತ್ಯಾದಿ ರತಿಕ್ರಿಯೆ ಮಾಡುತ್ತಾಳೆ, ಹಾಸ್ಯ ಕೌತುಕಾದಿಗಳಲ್ಲಿ ಕ್ರೀಡಿಸುತ್ತಾಳೆ, ತನ್ನ ಶರೀರವನ್ನು ಅನ್ಯ ಜೀವಗಳ ಶರೀರದೊಂದಿಗೆ ಸ್ಪರ್ಶ ಮಾಡುತ್ತಾಳೆ - ಇತ್ಯಾದಿ ಕ್ರಿಯೆಗಳೆಲ್ಲ ಅನಾಚಾರರೂಪದಕ್ರಿಯೆಗಳಿವೆ. ಇಂಥ ಕ್ರಿಯೆಗಳನ್ನು ಮಾಡುವಂಥ ಸ್ತ್ರೀಯು ಅಶುಭ ಸ್ತ್ರೀಯಿದ್ದಾಳೆ.

ಎಲೈ ಭವ್ಯರೆ ! ಈ ಋತುಮತಿ ಸ್ತ್ರೀಯು ಅಸ್ಪರ್ಶ-ಶೂದ್ರ ಸಮಾನಳಿದ್ದಾಳೆ, ಮುಟ್ಟಲು ಯೋಗ್ಯವಿಲ್ಲ. ಇವಳ ಭೋಜನ-ಪಾನದ ಪಾತ್ರೆಗಳು ಅಸ್ಪೃಶ್ಯ ಶೂದ್ರರ ಪಾತ್ರೆಯ ಸಮಾನವಿರುತ್ತವೆ. ಅದರಿಂದ ಯಾವ ಸ್ತ್ರೀಯು ಸ್ತ್ರೀಧರ್ಮ ಕ್ರಿಯೆಗಳಲ್ಲಿ ಶಿಥಿಲಳಿದ್ದಾಳೆ ಅವಳು ಮಹಾ ಅಶುಭ ಪಾಪಕ್ರಿಯೆಗಳ ರೂಪದ ಕರ್ಮವನ್ನು ಉತ್ಪನ್ನ ಮಾಡಿ ಪ್ರಮಾದ ಯೋಗದಿಂದ ತನಗೆ ಪ್ರಾಪವಾದ ಮನುಷ್ಯ ಭವವನ್ನು ಕೆಡಿಸಿಕೊಂಡು ಪರಭವಗಳ ಸಲುವಾಗಿ ದುಃಖರಾಶಿಯನ್ನು ಗಳಿಸುತ್ತಾಳೆ. ಆದುದರಿಂದ ಋತುಮತಿಯಾದಾಗ ಉಪರ್ಯುಕ್ತ ಅಶುಭ ಕ್ರಿಯೆಗಳು ಮಾಡಲು ಯೋಗ್ಯವಿಲ್ಲ - ಅಶುಭ ಸ್ತ್ರೀಯರೇ ಈ ಕ್ರಿಯೆಗಳನ್ನು ಮಾಡುತ್ತಾರೆ.

**ಶುಭ ಸ್ತ್ರೀಯರ ಕ್ರಿಯೆಗಳು :-** ಶೀಲವತಿಯರು ಋತುಮತಿಯರಾದ ಮೇಲೆ ತಮ್ಮ ಮಲಿನ ವಸ್ತ್ರಗಳನ್ನು ಯಾರೂ ನೋಡದಂತೆ ಗುಪ್ತವಾದ ಸ್ಥಾನದಲ್ಲಿ ಬಿಚ್ಚಿ ಶುಚಿಗೊಳಿಸುತ್ತಾರೆ. ಸ್ವಯಂ ಸ್ನಾನ ಮಾಡಿ ಬೇರೆ ಉಜ್ವಲ ವಸ್ತ್ರಗಳನ್ನು ಧರಿಸಿ, ಏಕಾಂತ ಸ್ಥಾನದಲ್ಲಿ ತೃಣ, ಹುಲ್ಲು ಅಥವಾ ಒಣಗಿದ ಪರ್ಣಗಳ ಹಾಸಿಗೆ - ಆಸನವನ್ನು ಹರಡಿ ಕುಳಿತುಕೊಳ್ಳುತ್ತಾರೆ. ಯಾರ ಕಣ್ಣಿಗೂ ಬೀಳುವುದಿಲ್ಲ ಎಂದರೆ ತಮ್ಮ ಮುಖವನ್ನು ಯಾರಿಗೂ ತೋರಿಸುವುದಿಲ್ಲ ಮತ್ತು ಯಾರ ಮುಖವನ್ನೂ ಅವರು ನೋಡುವುದಿಲ್ಲ. ರಸರಹಿತ ನೀರಸ ಭೋಜನವನ್ನು ಊನೋದರ ಸೇವಿಸುತ್ತಾರೆ. ಹಗಲು ಹೊತ್ತಿನಲ್ಲಿ ಮಲಗಿಕೊಳ್ಳುವುದಿಲ್ಲ ಮತ್ತು ಶರೀರ ಶೃಂಗಾರ ಮಾಡಿಕೊಳ್ಳುವುದಿಲ್ಲ. ತಾಂಬೂಲಾದಿಗಳ ಸೇವನೆ ಮಾಡುವುದಿಲ್ಲ, ಗೀತೆ, ನೃತ್ಯ, ಹಾಸ್ಯ, ಕೌತುಕಾದಿಗಳನ್ನು ಮಾಡುವುದಿಲ್ಲ. ಸುಗಂಧ ದ್ರವ್ಯಗಳ ಲೇಪ ಮಾಡಿಕೊಳ್ಳುವುದಿಲ್ಲ. ಕಣ್ಣುಗಳಿಗೆ ಅಂಜನ ಹಾಕಿಕೊಳ್ಳುವುದಿಲ್ಲ, ಕೈ-ಕಾಲುಗಳ ಉಗುರುಗಳನ್ನು ಸರಿಪಡಿಸುವುದಿಲ್ಲ. ತಮ್ಮ ಮೈ-ಕೈಗಳನ್ನು ಮುಚ್ಚಿಕೊಂಡು ಮೂರು ದಿವಸ ಮರೆಯಾಗಿಯೇ ವಾಸಮಾಡಿಕೊಂಡಿರುತ್ತಾರೆ.

ರಾತ್ರಿಯಲ್ಲಿ ಋತುಮತಿಯರಾದರೆ ಅದನ್ನು ಒಂದು ದಿವಸವೆಂದು ಗಣಿಸದೇ ಸೂರ್ಯೋದಯದ ನಂತರ ಋತುಮತಿಯರಾದರೆ ಅದನ್ನು ದಿವಸವೆಂದು ಗಣಿಸಿ ಮೂರು ದಿವಸ ಏಕಾಂತದಲ್ಲಿರುತ್ತಾರೆ. ಊಟದೆಲೆ (ಪತ್ರಾವಳಿ)ಯಲ್ಲಿ ಅಥವಾ ಮಣ್ಣಿನ ತಟ್ಟೆಯಲ್ಲಿ ಊಟ ಮಾಡುತ್ತಾರೆ. ಮಣ್ಣಿನ ಪಾತ್ರೆಯಲ್ಲಿಯೇ ನೀರು ಕುಡಿಯುತ್ತಾರೆ. ಮೂರು ದಿವಸಗಳ ನಂತರ ಆ ಮಣ್ಣಿನ ಪಾತ್ರೆಗಳನ್ನು ಒಡೆದು ಬಿಸಾಕಿ ಬಿಡುತ್ತಾರೆ. ನಾಲ್ಕನೆಯ ದಿವಸ ಶುದ್ಧವಾದ ಮೇಲೆ ಸ್ನಾನ ಮಾಡಿ ಪತಿಯ ಮುಖ ನೋಡುತ್ತಾರೆ. ಐದನೆಯ ದಿವಸ ಪತಿಯ ಮುಖ ನೋಡಿದ ನಂತರ ಅತ್ತೆ, ನಾದಿನಿಯರ ಮುಖ ನೋಡುತ್ತಾರೆ - ಇಂಥ ಉತ್ತಮ ಸ್ತ್ರೀಯರಿಗೆ ಪತಿಯ ಸಂಗಮವಾದ ಮೇಲೆ ಯಾವ ಸಂತಾನವಾಗುತ್ತದೆ ಅದು ಪವಿತ್ರಬುದ್ಧಿಯಧಾರಕ, ಪಿತನ ಸಮಾನ ರೂಪ, ಗುಣ, ಲಕ್ಷಣ, ಕಾಯದ ಧಾರಕ ಪುತ್ರನಾಗುತ್ತಾನೆ. ಶುಭಾಚಾರಿ - ಶೀಲ, ಧರ್ಮ, ದಯೆ ಮೊದಲಾದ ಗುಣಸಹಿತ ಶುಭಪುತ್ರನಾಗುತ್ತಾನೆ.

**ಕುಸ್ತ್ರೀಯ ಸ್ವರೂಪ -** ಕುಸ್ತ್ರೀಯು ಋತುಮತಿಯಾದ ಮೇಲೆ ಮೊದಲನೇ ಅಥವಾ ಎರಡನೆಯ ದಿನವೇ ಕುಶೀಲದ ಸೇವನೆ ಮಾಡುತ್ತಾಳೆ. ಇಂಥ ಮಹಾಭಾಗ್ಯಹೀನ, ಮುಗ್ಧ, ಕಾಮಲಂಪಟೀ, ದುರ್ಬುದ್ಧಿ ಜೀವರುಗಳ ವೀರ್ಯದಿಂದ ಯಾವ ಪುತ್ರ-ಪುತ್ರಿಯರ ಜನ್ಮವಾಗುತ್ತದೆ ಅವರು ಕೂಡ ಕುಶೀಲ, ಸಪ್ತವ್ಯಸನಿ, ಮದ್ಯಗುಡುಕ, ವೇಶ್ಯಾಗಮನ ಮಾಡುವಂಥ, ನಿರ್ದಯಿ - ಜೀವಘಾತ ಮಾಡುವಂಥ, ಚೋರಕಲೆಯಲ್ಲಿ ಪ್ರವೀಣ, ಅಭಕ್ಷ ಭಕ್ಷಣ ಮಾಡುವಂಥ, ಶುಭ-ಅಶುಭ ವಿಚಾರದಿಂದ ರಹಿತ, ಮಹಾಮೂರ್ಖ, ಅಜ್ಞಾನಿ, ಅಂಧಸಮಾನ, ಖಾದ್ಯ-ಅಖಾದ್ಯದ ವಿಚಾರದಲ್ಲಿ ಪಶುಸಮಾನ, ಅನಾಚಾರೀ, ಮಹಾಕ್ರೋಧಿ, ಮಾನಿ, ಮೋಸಗಾರ, ಲೋಭಿ, ಅವಿನಯಿ ಅನೇಕಾನೇಕ ಅಪಲಕ್ಷಣಗಳಿಂದ ಸಹಿತರಾಗುತ್ತಾರೆ. ಇಹಭವ, ಪರಭವದಲ್ಲಿ ಸುಖದ ಕಾರಣಭೂತವಿರುವ ಧರ್ಮದಿಂದ ರಹಿತ ಅಧರ್ಮಿಗಳಾಗುತ್ತಾರೆ, ಮಾತಾ-ಪಿತರಿಗೆ ದುಃಖದಾಯಕ ಅವಿನಯಿಗಳಾಗುತ್ತಾರೆ. ವಿಶೇಷ ಜ್ಞಾನಕಲೆ ಚಾತುರ್ಯ ಮೊದಲಾದ ಲೌಕಿಕ ಕಲೆಗಳಿಂದ ರಹಿತ ಮೂಢರಾಗುತ್ತಾರೆ. ಕುರೂಪ, ದೀನ, ದರಿದ್ರರಾಗುತ್ತಾರೆ.

ಬಾಲ್ಯಾವಸ್ಥೆಯಲ್ಲಿಯೇ ಮಹಾಕ್ರೋಧಿ, ವಿಪರೀತ ಮಾನೀ, ಕ್ರೂರದೃಷ್ಟಿ, ತಮ್ಮ ಮಾನಭಂಗವಾದ ಮೇಲೆ ಆತ್ಮಘಾತದ ಭಾವವಿಟ್ಟುಕೊಳ್ಳುವಂಥ, ದೇಶಾಂತರಕ್ಕೆ ಪಲಾಯಣ ಮಾಡುವ ವಿಚಾರವುಳ್ಳ, ಮಹಾಮೂಢ, ಕಪಟ ಚಿತ್ತದ ಧಾರಕ, ತಮ್ಮ ಮನಸ್ಸಿನ ಅಭಿಪ್ರಾಯವನ್ನು ಯಾರಿಗೂ ಹೇಳದಂಥ, ಅತ್ಯಂತ ಜಿಪುಣ-ಮಹಾಲೋಭೀ, ಹಸಿವೆಯನ್ನು ಸಹಿಸಿಕೊಂಡು ಮತ್ತು ಅಪಕೀರ್ತಿಯ ಚಿಂತೆಯನ್ನೂ ಮಾಡದೇ ಹೇಗೆ ಸಾಧ್ಯವೋ ಹಾಗೆ ಧನ ಹೊಂದಿಸುವಂಥ ಆಸೆಯುಳ್ಳವರು - ಇತ್ಯಾದಿ ಅನೇಕ ಅವಗುಣಗಳಿಂದ ಯುಕ್ತರಾಗುತ್ತಾರೆ. ಇಂಥ ಮಕ್ಕಳಿಂದ ಕುಲವು ಕಲಂಕಿತವಾಗಿ ಹೋಗುತ್ತದೆ. ಆದುದರಿಂದ ಉತ್ತಮ ಕುಲದ ಸ್ತ್ರೀ-ಪುರುಷರು ಋತುಮಯ ಕ್ರಿಯೆಯಲ್ಲಿ ಪ್ರಮಾದವನ್ನು ತ್ಯಜಿಸಿ ಶುಭರೂಪ ಪ್ರವರ್ತನೆ ಮಾಡುವುದು ಯೋಗ್ಯವಿದೆ. ಉತ್ತಮ ಸ್ತ್ರೀಯರು ಉಪರ್ಯುಕ್ತ ಶುಭಸ್ತ್ರೀಯರ ಶುಭ ಲಕ್ಷಣರೂಪದ ಸ್ತ್ರೀ ಧರ್ಮವನ್ನು ಮರ್ಯಾದೆಯ ಅನುಸಾರ ಅಪ್ರಮಾದಿಗಳಾಗಿ ಪರಿಪಾಲನೆ ಮಾಡುತ್ತಾರೆ.

ಯಾರ ಭೋಗಾಭಿಲಾಷೆಯು ಮಂದವಿದೆ, ಅಂಥ ಉತ್ತಮ ಧರ್ಮಾತ್ಮಾ ಮಹಾಸತಿ ಶುಭ ಸ್ತ್ರೀಯರು ನಾಲ್ಕನೆಯ ದಿವಸ ಸ್ನಾನ ಮಾಡಿ ಪತಿಸಂಗದಿಂದ ಗರ್ಭಧಾರಣ ಮಾಡುತ್ತಾರೆ, ಐದನೇ, ಆರನೇ, ಏಳನೆಯ ದಿವಸ ಪತಿ ಸಂಗದಿಂದ ಗರ್ಭಧಾರಣ ಮಾಡುತ್ತಾರೆ, ಆ ಗರ್ಭದಿಂದ ಶುದ್ಧಾತ್ಮಾ, ಪುಣ್ಯಬಂಧ ಮಾಡಿಕೊಳ್ಳುವಂಥವನು ಅನ್ಯಗತಿಯಿಂದ ಚ್ಯುತನಾಗಿ ಅವರ ಗರ್ಭದಲ್ಲಿ ಅವತರಿಸುತ್ತಾನೆ.

ನಾಲ್ಕನೆಯ ದಿವಸದ ಗರ್ಭದಲ್ಲಿ ಬಂದು ನೆಲೆಸಿದ ಜೀವನು ಮಂದಕಷಾಯಿ, ಧರ್ಮದ ಅಭಿರುಚಿಯುಳ್ಳ, ಸಂಯಮ ಸಂಪದದಿಂದ ಸಹಿತ, ಸಮ್ಯಗ್ದರ್ಶನ ರತ್ನದ ಧಾರಕನಿರುತ್ತಾನೆ. ಐದನೆಯ ದಿವಸ ಧಾರಣವಾದ ಗರ್ಭದಲ್ಲಿ ಮಹಾ ಉತ್ತಮ ಜೀವನು ಬಂದು ಅವತರಿಸುತ್ತಾನೆ, ಆ ಪುಣ್ಯಾಧಿಕಾರಿಯು ಅನೇಕ ರಾಜಭೋಗಗಳನ್ನು ಭೋಗಿಸಿ ನಂತರ ಅಣುವ್ರತ ಹಾಗೂ ಮಹಾವ್ರತಗಳ ಧಾರಕನಾಗುತ್ತಾನೆ. ಆರನೇ ದಿನ ಧಾರಣವಾದ ಗರ್ಭದಿಂದ ಜನಿಸುವ ಜೀವನು ದಯಾರಸದ ಧಾರಕ, ದೇಶವ್ರತಧಾರಿಯಾಗಿ ಶುಭಗತಿಯನ್ನು ಪಡೆದು ಮಹಾವ್ರತಿಯಾಗುತ್ತಾನೆ. ಏಳನೆಯ ದಿನದ ಗರ್ಭಧಾರಣದಲ್ಲಿ ಬರುವ ಜೀವನು ನಿಕಟ ಸಂಸಾರಿ, ಭವ್ಯಾತ್ಮನು ಅವತರಿಸುತ್ತಾನೆ. ಅವನು ಅನೇಕ ಭೋಗ ಸುಖಗಳನ್ನು ಭೋಗಿಸಿ ತೀರ್ಥಂಕರ, ಚಕ್ರವರ್ತಿ, ಕಾಮದೇವ ಮೊದಲಾದ ರಾಜ್ಯ ಸಂಪದವನ್ನು ಭೋಗಿಸಿ ನಂತರ ಸಂಯಮ ಧಾರಣ ಮಾಡಿ ಸಿದ್ಧ ಪದವಿಯನ್ನು ಪ್ರಾಪ್ತ ಮಾಡಿಕೊಳ್ಳುತ್ತಾನೆ. ಈ ಪ್ರಕಾರ ಶುಭಸ್ತ್ರೀಯರ ಶುಭಕ್ರಿಯೆಗಳನ್ನು ಹೇಳಿದ್ದಾರೆ.

ವಿವೇಕವಂತರ ಸಲುವಾಗಿಯಂತೂ ಶುಭಾಶುಭ ಕ್ರಿಯಾಚಾರಗಳನ್ನು ತಿಳಿದುಕೊಳ್ಳುವುದು ಮತ್ತು ತಮ್ಮ ಒಳಿತಿನ ಉದ್ದೇಶದಿಂದ ತಮ್ಮ ಯೋಗ್ಯತೆಯ ಅನುಸಾರ ತಮ್ಮ ಜೀವನದಲ್ಲಿ ಬದಲಾವಣೆ ತಂದುಕೊಳ್ಳುವುದು ಯೋಗ್ಯವಿದೆ.

ಆಭೂಷಣ-ಉತ್ತಮ ಶ್ರಾವಕರ ಆಭೂಷಣಗಳು - ೧) ಧರ್ಮಾಭೂಷಣ, ೨) ಕರ್ಮಾಭೂಷಣ- ವೆಂದು ಎರಡು ಪ್ರಕಾರದವಿರುತ್ತವೆ. ಅವೆರಡೂ ಆಭೂಷಣ ಸಹಿತರಾದ ಅವರೇ ಮಹಾಸುಂದರರಿದ್ದಾರೆ, ಮಹಾಭಾಗ್ಯವಂತರಿದ್ದಾರೆ ಮತ್ತು ಪ್ರಶಂಸಾ ಯೋಗ್ಯರಿದ್ದಾರೆ.

ಅವೆರಡೂ ಆಭೂಷಣಗಳ ವಿಶೇಷ ಕಥನ-ಕರ್ಮ ಅಪೇಕ್ಷೆಯಿಂದ ಹಸ್ತಾಭೂಷಣ - ಬಳೆ (ಕಡಗ), ಉಂಗುರ ಮೊದಲಾದವುಗಳಿದ್ದು ಅವುಗಳಿಂದ ಕೈಗಳ ಶೋಭೆಯಿದೆ. ದೇವ-ಗುರು-ಧರ್ಮದ ಪೂಜೆ ಮಾಡುವ ಸಮಯದಲ್ಲಿ ನಮಸ್ಕಾರ ಮಾಡುವ ಸಮಯದಲ್ಲಿ ಧರ್ಮಾತ್ಮರ ಎರಡೂ ಕೈಗಳು ಕಮಲಾಕಾರವಾಗುತ್ತವೆ. ಅಂಥ ಕೈಗಳನ್ನು ಹೊಂದಿರುವುದೇ ಸಫಲತೆಯಿದೆ. ಯಾವ ಕೈಗಳಿಂದ ದೇವ ಪೂಜಾದಿ ಶುಭಕಾರ್ಯಗಳನ್ನು ಮಾಡುವುದಿದೆ, ಅದುವೇ ಹಸ್ತಾಭೂಷಣವಿದೆ.

ಭುಜಬಂದ (ತೋಳುಬಂದಿ) ಮೊದಲಾದ ಯಾವವುಗಳಿಂದ ಕೈಗಳ ಶೋಭೆಯಿದೆ, ಅವು ಭುಜಾಭೂಷಣಗಳಿವೆ. ಅವುಗಳನ್ನಂತೂ ಕರ್ಮಸಂಬಂಧದ ಭುಜಾಭೂಷಣವೆಂದು ತಿಳಿಯುವುದು ಮತ್ತು ಧರ್ಮಾತ್ಮಾ ಜೀವನು ಯಾವ ಕೈಗಳಿಂದ ಪರಜೀವಗಳ ರಕ್ಷಣೆ ಮಾಡುತ್ತಾನೆ, ಯಾರನ್ನು ನೋಡುತ್ತಿದ್ದಂತೆಯೇ ಯಾವನೋ ದುಷ್ಟ

ಜೀವನು ದೀನ ಜೀವಗಳನ್ನು ಪೀಡಿತಗೊಳಿಸುವ ಸಾಧ್ಯತೆಯಾಗುವುದಿಲ್ಲ ಎಂದರೆ ದುಷ್ಟ ಜೀವಗಳಿಗೆ ದಂಡನೆ ನೀಡುವ ಶಕ್ತಿಯಿಂದ, ದೀನ ಜೀವಗಳ ರಕ್ಷಣೆಯ ಸಲುವಾಗಿ ಯೋಧನ ಸಮಾನ, ಸಾಧುಗಳ ರಕ್ಷಕ, ಶರಣಾಗತರ ರಕ್ಷಕನಾಗುವ ಪುರುಷಾರ್ಥವು ಇರುವುದರಿಂದ ಯಾರ ಭುಜಗಳು ಶೋಭಿಸುತ್ತವೆ ಅವುವೇ ಭುಜಗಳ ಆಭೂಷಣವಿವೆ. ಇಂಥ ಕಾರ್ಯಗಳಿಂದ ಧರ್ಮಾತ್ಮಾ ಪುರುಷರ ಭುಜಗಳು (ಬಾಹುಗಳು) ಶೋಭೆ ಪಡೆಯುತ್ತವೆ.

ಕಂಠಮಾಲೆ ಇತ್ಯಾದಿ ಆಭೂಷಣಗಳಿಂದ ಉರ (ಹೃದಯ)ವು ಶೋಭೆ ಪಡೆಯುತ್ತದೆ, ಅವು ಉರಾಭೂಷಣಗಳಿವೆ. ಅವು ಕರ್ಮ ಸಂಬಂಧಿತವಿವೆ. ಯಾರ ಹೃದಯದಲ್ಲಿ ಯಾವಾಗಲೂ ಅರಹಂತ ಮೊದಲಾಗಿ ಪಂಚ ಪರಮೇಷ್ಠಿಗಳ ಗುಣಗಳ ಸ್ಮರಣೆ, ವೈರಾಗ್ಯ ಚಿಂತನೆ, ದ್ವಾದಶ ಅನುಪ್ರೇಕ್ಷೆ, ಷೋಡಶಕಾರಣ ಭಾವನೆಯ ಚಿಂತನೆಯು ಇರುತ್ತದೆ. ಅದು ಧರ್ಮಾತ್ಮಾ ಜೀವರುಗಳ ಉರಾಭೂಷಣವಿದೆ.

ಯಾವ ಆಭೂಷಣಗಳಿಂದ ಕಾಲುಗಳು ಶೋಭೆಗೆ ಪ್ರಾಪ್ತವಾಗುತ್ತವೆ. ಅವು ಕರ್ಮ ಸಂಬಂಧದ ಪದಾಭೂಷಣಗಳಿವೆ. ಧರ್ಮಾತ್ಮಾ ಜೀವರುಗಳ ಯಾವ ಕಾಲುಗಳಿಂದ ಸಿದ್ಧಕ್ಷೇತ್ರಾದಿಗಳ ಯಾತ್ರೆಯಾಗುತ್ತದೆ, ಅಂಥ ಕಾಲುಗಳನ್ನು ಪಡೆಯುವುದೇ ಸಫಲವಿದೆ - ಅದುವೇ ಪದಾಭೂಷಣವಿದೆ.

ಮುಕುಟ, ತುರಾಯಿ, ಮುಂಡಾಸು ಮೊದಲಾದವು, ಯಾವವುಗಳಿಂದ ಮಸ್ತಕದ ಶೋಭೆಯಾಗುತ್ತದೆ, ಅವು ಕರ್ಮ ಸಂಬಂಧದ ಶಿರಾಭೂಷಣಗಳಿವೆ ಮತ್ತು ಯಾವ ಮಸ್ತಕದಿಂದ ದೇವ, ಗುರು, ಧರ್ಮಕ್ಕೆ ನಮಸ್ಕಾರ ಮಾಡಲಾಗುತ್ತದೆ, ಅದೇ ಮಸ್ತಕ ಪಡೆಯುವುದರ ಸಫಲತೆಯಿದೆ. ಇದುವೇ ಧರ್ಮಾತ್ಮಾ ಜೀವರುಗಳ ಶಿರಾಭೂಷಣವಿದೆ. ಮುಖಮಂಡಲದ ತಿಲಕಾದಿ ಹಾಗೂ ತಾಂಬೂಲಾದಿಗಳ ಸೇವನೆಯು ಇವೆಲ್ಲ ಕರ್ಮದ ಅಪೇಕ್ಷೆಯಿಂದ ಮುಖದ ಆಭೂಷಣಗಳಿವೆ. ಇವುಗಳಿಂದ ಮುಖವು ಶೋಭೆಗೆ ಪ್ರಾಪ್ತವಾಗುತ್ತದೆ. ಧರ್ಮಾತ್ಮಾ ಜೀವರುಗಳ ಮುಖದಿಂದ ಎಲ್ಲರಿಗೂ ಹಿತವಾಗುವಂಥ ಹಿತ, ಮಿತ ಹಾಗೂ ಪ್ರಿಯವಚನಗಳನ್ನಾಡುವುದು ಮುಖದ ಆಭೂಷಣವಿದೆ. ಅನ್ಯಜೀವಗಳ ರಕ್ಷಣೆಯಾಗುವಂಥ ದಯಾಮಯ ವಚನಗಳನ್ನು ಮುಖದಿಂದ ಆಡುವುದು ಮತ್ತು ಸಮ್ಯಕ್ ಪ್ರಕಾರದಿಂದ ಸತ್ಯವೂ ಮನ-ವಚನಗಳ ಏಕತೆಯಿಂದ ಸಹಿತವೂ ಆಗಿ ಪಂಚಪರಮೇಷ್ಠಿಗಳ ಸ್ತುತಿ ಮಾಡುವುದು; ಇಂದ್ರ, ಚಕ್ರವರ್ತಿ, ನಾರಾಯಣ, ಕಾಮದೇವ ಮೊದಲಾದ ಮಹಾಪುರುಷರ ಕಥೆ ಹೇಳುವುದು ಅದರಿಂದ ಮುಖದ ಶೃಂಗಾರವಿದೆಯೆಂದು ತಿಳಿಯುವುದು. ಮುನಿ ಗಣಧರಾದಿಗಳ ವಚನವನ್ನಾಲಿಸಿ ತಮ್ಮ ಮುಖದಿಂದ ಪುನಃ ಅದೇ ವಚನಗಳನ್ನು ಬೇರೆಯವರಿಗೆ ಹೇಳುವಂಥ ಮುಖವೇ ಸಫಲವಿದೆ. ಯಥಾಯೋಗ್ಯ ವಿನಯದೊಂದಿಗೆ ಇತರರಿಗೆ ಹಿತವಾಗುವಂಥ ವಚನಗಳನ್ನಾಡುವುದೇ ಧರ್ಮಾತ್ಮಾ ಜೀವರುಗಳ ಮುಖದ ಆಭೂಷಣವಿದೆ.

ಕರ್ಮದ ಅಪೇಕ್ಷೆಯಿಂದ ನೇತ್ರಗಳಿಗೆ ಅಂಜನ-ಯಾವುದರಿಂದ ನೇತ್ರಗಳು ಒಳ್ಳೆಯವೆನಿಸುತ್ತವೆ, ಅಂಥ ಅಂಜನಾದಿಗಳು ನೇತ್ರದ ಆಭೂಷಣಗಳಿವೆ. ಧರ್ಮಾತ್ಮಾ ಜೀವರುಗಳಿಗೆ ಯಾವ ನೇತ್ರಗಳಿಂದ ಜಿನದೇವರ ದರ್ಶನ ಮಾಡಿ ಹರ್ಷವಾಗುತ್ತದೆ ಅವೇ ನೇತ್ರಗಳು ಆಭೂಷಣಗಳಿವೆ. ಯಾವ ನೇತ್ರಗಳಿಂದ ಜಿನಶಾಸನದ ಅನೇಕ ಶಾಸ್ತ್ರಗಳನ್ನು ಪರಮಾರ್ಥ ದೃಷ್ಟಿಯಿಂದ ನೋಡಲಾಗುತ್ತದೆ ಅವೇ ನೇತ್ರಗಳು ಸಫಲವಿವೆ. ಅನ್ಯ ವಸ್ತುಗಳು ಹಾಗೂ ಸುಂದರ ಸ್ತ್ರೀ, ದೇವಾಂಗನೆಯರ ರೂಪ ಮೊದಲಾದ ಪರಪದಾರ್ಥಗಳನ್ನು ನಿರ್ವಿಕಾರವಾಗಿ ನೋಡುವಂಥ ನೇತ್ರಗಳೇ ಆಭೂಷಣವಿವೆ ಎಂದರೆ ಇಂಥ ಕಾರ್ಯ ಮಾಡುವಂಥ ನೇತ್ರಗಳೇ ಸಫಲವಿವೆ.

ಕುಂಡಲಾದಿಗಳು-ಯಾವವುಗಳಿಂದ ಕರ್ಣಗಳು ಸುಂದರವೆನಿಸುತ್ತವೆ, ಅವು ಕರ್ಮದ ಅಪೇಕ್ಷೆಯಿಂದ ಕರ್ಣ ಆಭೂಷಣಗಳಿವೆ. ಧರ್ಮಾತ್ಮಾ ಜೀವರುಗಳ ಜಿನಗುಣ ಶ್ರವಣ, ತೀರ್ಥಂಕರ ಕೇವಲಿ ಗಣಧರಾದಿ ಮಹಾಮುನಿಗಳ ಗುಣಶ್ರವಣ ಮಾಡುವ ಹಾಗೂ ಜಿನೇಂದ್ರಭಾಷಿತ ದಯಾಮಯ ಧರ್ಮವನ್ನು ಆಲಿಸುವಂಥ ಆ ಕರ್ಣಗಳೇ ಆಭೂಷಣವಿವೆ ಮತ್ತು ಅವುಗಳನ್ನು ಪಡೆದಿರುವುದು ಸಫಲವಿದೆ.

ವಸ್ತ್ರಾದಿಗಳು ಕರ್ಮಕ್ಕೆ ಸಂಬಂಧಿಸಿದ ಅನೇಕ ತನು ಆಭೂಷಣವಿವೆ, ಅವುಗಳಿಂದ ಶರೀರವು ಶೋಭೆಗೆ ಪ್ರಾಪ್ತವಾಗುತ್ತದೆ. ಮಹಾವ್ರತ, ಅಣುವ್ರತಗಳ ಪಾಲನೆ, ಪಂಚಸಮಿತಿ ಮೂರುಗುಪ್ತಿ ಇವೇ ಮೊದಲಾದ ಗುಣರತ್ನಗಳಿಂದ ಶರೀರವನ್ನು ಶೋಭಾಯಮಾನಗೊಳಿಸುವುದು, ಧರ್ಮಕ್ಕೆ ಸಂಬಂಧಿಸಿದಂತೆ ಶರೀರ ಪಡೆದಿರುವುದರ ಶೋಭೆಯಿದೆ. ಈ ಶರೀರದಿಂದ ಯಾವುದೇ ಜೀವಕ್ಕೆ ಪೀಡೆ ತಗಲಿಸದಿರುವುದು, ಅನ್ಯರ ರಕ್ಷಣೆ ಮಾಡುವುದು, ಶರೀರದ ಆಕಾರವನ್ನು ಭಯಾನಕವನ್ನಾಗಿ ಮಾಡಿಕೊಂಡು ಮುಗ್ಧ ಜೀವರುಗಳಿಗೆ ಭಯವನ್ನುತ್ಪನ್ನ ಮಾಡದಿರುವುದು, ಈ ಶರೀರದಿಂದ ಶುಭ ಆಚರಣೆಯ ಮೂಲಕ ಶಾಂತ ಮುದ್ರೆಯೊಂದಿಗೆ ಇರುವುದು ತನ್ನ ಮೂರ್ತೀ ರೂಪದ ರೂಪವನ್ನು ನೋಡುವಂಥ ಇತರ ಜನರಿಗೆ ವಿಶ್ವಾಸವನ್ನುತ್ಪನ್ನ ಮಾಡುವುದು, ಅದು ತನುವಿನ ಆಭೂಷಣವಿದೆ - ಹೀಗೆ ತನುವು ಸಫಲವಿದೆ.

ಧನದ ವೃದ್ಧಿಯಾಗುತ್ತಿರುವುದು, ಸತ್ಪುತ್ರನಿರುವುದು, ಆಜ್ಞಾಕಾರಿ, ಸುಲಕ್ಷಣೆ, ಶೀಲವತಿ, ವಿನಯಸಂಪನ್ನ ರೂಪಗುಣಗಳಿಂದ ಕೂಡಿದ ಒಳ್ಳೆಯ ಪತ್ನಿಯಿರುವುದು, ತಾಯಿ, ತಂದೆ, ಸೋದರ ಮೊದಲಾಗಿ ಸಕಲ ಕುಟುಂಬದಲ್ಲಿ ಪರಸ್ಪರ ಸ್ನೇಹಾದಿಗಳ ನಿಮಿತ್ತವು ದೊರಕುವುದು, ಅದರಿಂದ ಮನೆಯು ಶೋಭಿಸುವುದು - ಇವೆಲ್ಲ ಕರ್ಮದ ಅಪೇಕ್ಷೆಯಿಂದ ಗೃಹ ಆಭೂಷಣಗಳಿವೆ ಮತ್ತು ಯಾವ ಮನೆಯಲ್ಲಿ ಶುಭಾಚರಣೆ ಮಾಡುವ ದಯಾವಂತ ಧರ್ಮಾತ್ಮ ಜೀವರುಗಳಿರುತ್ತಾರೆ, ಯಾವ ಮನೆಯಲ್ಲಿ ಮುನಿ ಶ್ರಾವಕ ಮೊದಲಾದ ಧರ್ಮಾತ್ಮಾ ಜೀವರುಗಳು ಬರುತ್ತಿರುತ್ತಾರೆ ಆ ಮನೆಯು ಧರ್ಮದ ಅಪೇಕ್ಷೆಯಿಂದ ಶೋಭೆಗೆ ಪ್ರಾಪ್ತವಾಗುತ್ತದೆ ಅದುವೇ ಗೃಹ ಆಭೂಷಣವಿದೆ.

ಚಿತ್ತದ ಉದಾರತೆಯೊಂದಿಗೆ ತಮ್ಮ ಕುಟುಂಬ ಮೊದಲಾದವರಲ್ಲಿ ಹಂಚಿಕೊಂಡು ತಿನ್ನುವುದು, ಸಂಪದವನ್ನು ಪಂಚೇಂದ್ರಿಯ ಸುಖದಲ್ಲಿ ತೊಡಗಿಸುವುದು, ರತ್ನದ-ಚಿನ್ನದ ಅನೇಕ ರೀತಿಯ ಮನೋಜ್ಞ ಮನೆಗಳ ನಿರ್ಮಾಣ ಮಾಡಿ ಅದರಲ್ಲಿ ಚಿತ್ರಾದಿಗಳಿಂದ ಶೋಭೆ ಹೆಚ್ಚಿಸಿ ವಾಸಮಾಡುವುದು, ಯಾಚಕರಿಗೆ ದಾನ ಕೊಡುವುದು, ಪುತ್ರ-ಪುತ್ರಿಯರ ವಿವಾಹಾದಿಗಳಲ್ಲಿ-ಪುತ್ರಾದಿಕರ ಉತ್ಪತ್ತಿಯ ಉತ್ಸವಗಳಲ್ಲಿ ಧನ ಖರ್ಚು ಮಾಡುವುದು, ಸೋದರ, ಬಂಧು ಸ್ನೇಹಿತರಿಗೆ ಉಡುಗೊರೆಗಳನ್ನು ಕೊಡುವುದು, ಸಹೋದರಿ, ಸೋದರ ಸೊಸೆ ಮೊದಲಾದವರಿಗೆ ಉದಾರತೆಯಿಂದ ಕಾಣಿಕೆ ಕೊಡುವುದು - ಸಹಾಯ ಮಾಡುವುದು ಇತ್ಯಾದಿ ಕಾರ್ಯಗಳಲ್ಲಿ ಉದಾರ ಮನಸ್ಸಿನ ಹಿತ-ಮಿತ ಪ್ರಕಾರ ತಮ್ಮ ಧನದ ಉಪಯೋಗ ಮಾಡುವುದು ಅದು ಕರ್ಮದ ಅಪೇಕ್ಷೆಯಿಂದ ಧನದ ಆಭೂಷಣವಿದೆ - ಇದರಿಂದಲೇ ಧನವು ಶೋಭೆಗೆ ಪ್ರಾಪ್ತವಾಗುತ್ತದೆ. ತಮ್ಮ ಧನದಿಂದ ಉದಾರತೆಯೊಂದಿಗೆ ಧರ್ಮಾನುರಾಗಪೂರ್ವಕ ಮುನಿರಾಜರಿಗೆ ನವಧಾಭಕ್ತಿಸಹಿತ ಆಹಾರದಾನ ಕೊಡುವುದು, ಧರ್ಮಪ್ರಭಾವನೆಯಲ್ಲಿ ಹಣ ಖರ್ಚು ಮಾಡುವುದು ಧರ್ಮದ ಅಪೇಕ್ಷೆಯಿಂದ ಧನದ ಶೋಭೆಯಿದೆ.

ಚಿನ್ನ-ಬೆಳ್ಳಿಯ ಪತ್ರಗಳ ಮೇಲೆ ಸುಂದರವಾದ ಅಕ್ಷರಗಳಿಂದ ಶಾಸ್ತ್ರ ಬರೆಸುವುದು, ಅವುಗಳನ್ನು ಬಹುಮೂಲ್ಯವಾದ ಮನೋಜ್ಞ ವಸ್ತ್ರಗಳಿಂದ ಸುರಕ್ಷಿತವಾಗಿ ಇರಿಸುವುದು. ಜಿನೇಂದ್ರ ಭಗವಂತರ ಪೂಜೆಯಲ್ಲಿ ಮುತ್ತಿನ ಅಕ್ಷತೆ, ಚಿನ್ನ-ಬೆಳ್ಳಿಯ ಪುಷ್ಪಗಳು, ರತ್ನಗಳ ದೀವಿಗೆ ಮೊದಲಾಗಿ ಉತ್ತಮ ಅಷ್ಟ ದ್ರವ್ಯಗಳನ್ನು ಸಿದ್ಧಪಡಿಸಿ ಪ್ರಭುವಿನ ಪೂಜೆ ಮಾಡುವುದು. ಬೃಹತ್ ಪೂಜೆ, ವಿಧಾನ, ಮೂರು ಲೋಕದ ಜಿನಮಂದಿರಗಳ ಪೂಜೆ, ಹದಿಮೂರು ದ್ವೀಪಗಳ ಪೂಜೆ, ನಂದೀಶ್ವರ ವಿಧಾನಪೂಜೆ, ಎರಡೂವರೆ ದ್ವೀಪ ವಿಧಾನ, ಜಂಬೂದ್ವೀಪ ವಿಧಾನ, ಕರ್ಮದಹನ ಆರಾಧನೆ, ಪಂಚಪರಮೇಷ್ಠಿ ಆರಾಧನೆ, ಪಂಚಕಲ್ಯಾಣಿಕ ಮೊದಲಾದ ಅನೇಕ ಪ್ರಕಾರದ ಜಿನಪೂಜೆಯಲ್ಲಿ ಧನ ತೊಡಗಿಸುವುದು.

ದೀರ್ಘ, ಉತ್ತುಂಗ ವಿಸ್ತಾರವುಳ್ಳ ಜಿನಮಂದಿರಗಳ ನಿರ್ಮಾಣ ಮಾಡಿಸುವುದು, ಅವುಗಳ ಗೋಡೆಗಳಲ್ಲಿ ಚಿನ್ನ-ಬೆಳ್ಳಿಯ ಚಿತ್ರಗಳು ಹಾಗೂ ಮನೋಜ್ಞ ವರ್ಣಮಯ ಚಿತ್ರಗಳಿಂದ ಜೀವರುಗಳ ಚಿತ್ತವನ್ನು ಸೆಳೆಯುವಂಥ ಮತ್ತು ಧರ್ಮದ ಮಹಿಮೆ, ಸಂಸಾರದ ಸ್ವರೂಪವನ್ನು ತಿಳಿಯುವಂಥ ಸೂಕ್ತಿ , ಸೂತ್ರಗಳನ್ನು ರಚಿಸುವುದರಲ್ಲಿ ಧನ ತೊಡಗಿಸುವುದು. ಗಂಟೆ, ಚಾಮರ, ಸಿಂಹಾಸನ, ಮುಕ್ಕೊಡೆ ಧ್ವಜಾದಿಗಳನ್ನು ಮಾಡಿಸುವುದು. ಪೂಜೆಯ ಉಪಕರಣ,

ತಟ್ಟೆ, ಗಿಂಡಿ ಮೊದಲಾದುವನ್ನು ಚಿನ್ನ-ಬೆಳ್ಳಿಗಳಿಂದ ಮಾಡಿಸಿ ಜಿನಮಂದಿರದ ಶೋಭೆ ಹೆಚ್ಚಿಸುವಲ್ಲಿ ತಮ್ಮ ಧನದ ವಿನಿಯೋಗ ಮಾಡುವುದು ಮತ್ತು ವಿಧಿಪೂರ್ವಕ ಜಿನಬಿಂಬ ಮಾಡಿಸುವುದು, ಸಂಕ್ಷೇಪದಲ್ಲಿ ಇದರ ವಿಧಾನ ಹೇಳುತ್ತಾರೆ,-

ಜಿನಬಿಂಬ ನಿರ್ಮಾಣ ಮಾಡಿಸುವ ಸಲುವಾಗಿ ಮೊದಲು ಉತ್ತಮ ರತ್ನದ ಸಮಾನ ಪಾಷಾಣದ ಗಣಿಯನ್ನು ನೋಡಿಕೊಂಡು ಮೊದಲನೆಯ ದಿನವಂತೂ ಗಣಿಯ ಶೋಧನಕ್ರಿಯೆ ಮಾಡುವುದು. ನಂತರ ಶಿಲ್ಪಶಾಸ್ತ್ರದ ವಿಶೇಷಜ್ಞ ಶಿಲ್ಪಿಯು ತನ್ನ ಶರೀರದ ಶುದ್ಧಿ(ಸ್ನಾನ)ಮಾಡಿ ಶುಚಿ ಬಟ್ಟೆಯನ್ನು ಧರಿಸಿ ಅನೇಕ ವಾದ್ಯಗಳೊಂದಿಗೆ ಆ ಗಣಿಯ ಪೂಜೆಯನ್ನು ಶಾಸ್ತ್ರೋಕ್ತವಾಗಿ ಮಾಡುವುದು ಅದರ ನಂತರ ಶುದ್ಧ ಪಾಷಾಣವನ್ನು ತೆಗೆದು ತರುವುದು - ಪಾಷಾಣದಲ್ಲಿ ರೇಖೆಗಳಿರದಂಥ, ಬಿರುಕುಗಳಿರದಂಥ, ಶಿಥಿಲ-ನಿಃಸತ್ವವಾಗಿರದಂಥ ಶುದ್ಧತೆಗಳಿಂದ ಕೂಡಿದ ಪಾಷಾಣವಿರಬೇಕು. ಅದನ್ನು ಏಕಾಂತವಾದ ಸ್ಥಾನಕ್ಕೆ ಕೊಂಡೊಯ್ದು ಜಿನೇಂದ್ರ ಪ್ರಭುವಿನ ಪ್ರತಿಬಿಂಬವನ್ನು ಶಾಸ್ತ್ರೋಕ್ತವಾಗಿ ನಿರ್ಮಾಣ ಮಾಡಬೇಕು. ಆ ಸಮಯದಲ್ಲಿ ಶಿಲ್ಪಿ ಹಾಗೂ ಮಾಡಿಸುವಂಥ ಧರ್ಮಾತ್ಮಾ ಶ್ರಾವಕ-ಇಬ್ಬರೂ ಶೀಲ ಸಹಿತರಾಗಿರಬೇಕು. ಎಷ್ಟು ಸಮಯ ಕಾರ್ಯ ಮಾಡುತ್ತಾನೋ ಅಷ್ಟು ಸಮಯ ಶಿಲ್ಪಿಯು ಪ್ರಮಾದ ರಹಿತನಾಗಿರಬೇಕು. ಪ್ರಮಾದವು ಬಂದುಬಿಟ್ಟರೆ ವಿನಯಪೂರ್ವಕ ಕಾರ್ಯವನ್ನು ನಿಲ್ಲಿಸಬೇಕು, ಹೀಗೆ ಎಷ್ಟು ದಿವಸಗಳವರೆಗೆ ಪ್ರತಿಬಿಂಬ ನಿರ್ಮಾಣದ ಕಾರ್ಯವು ನಡೆಯುತ್ತದೆ ಅಷ್ಟು ದಿವಸ ಬ್ರಹ್ಮಚರ್ಯದಿಂದ ಇರಬೇಕು. ದೀನ-ದುಃಖಿಗಳಿಗೆ ಯಾವಾಗಲೂ ದಾನ ಕೊಡುತ್ತಿರಬೇಕು. ಶಿಲ್ಪಿಯು ಒಂದು ಬಾರಿ ಭೋಜನ ಮಾಡಬೇಕು. ಶರೀರದಲ್ಲಿ ವಿಕಾರವಾಗಬಾರದು-ಇತ್ಯಾದಿ ಅನೇಕ ಶುದ್ಧತೆಯೊಂದಿಗೆ ಜಿನಬಿಂಬ ನಿರ್ಮಾಣ ಮಾಡಿಸುವುದರಲ್ಲಿ ಧನ ತೊಡಗಿಸುವುದು ಅದುವೇ ಧನದ ಸಾರ್ಥಕತೆಯಿದೆ.

ಅದರ ನಂತರ ಜಿನಬಿಂಬಗಳ ಪ್ರತಿಷ್ಠೆ ಮಾಡುವ ಸಮಯದಲ್ಲಿ ದೇಶ-ವಿದೇಶಗಳ ಧರ್ಮಾತ್ಮಾ ಶ್ರಾವಕರಿಗೆ ವಿನಯಪೂರ್ವಕ ಪತ್ರಗಳ ಮೂಲಕ ಆಮಂತ್ರಣವಿತ್ತು ಕರೆಸುವುದು, ನಂತರ ಬಂದಿರುವ ಧರ್ಮಾತ್ಮರ ಸೇವೆ-ವ್ಯವಸ್ಥೆ ನೋಡಿಕೊಳ್ಳುವುದು; ದೀನ, ದುಃಖೀ ಜೀವಗಳಿಗೆ ಅನ್ನ-ವಸ್ತ್ರಾದಿಗಳನ್ನು ಕೊಡುವುದು ಹಾಗೂ ಯಾಚಕರಿಗೆ ಧರ್ಮಪ್ರಭಾವನೆಯ ಉದ್ದೇಶದಿಂದ ಅವರು ಬಯಸುವ ವಸ್ತ್ರ-ಆಭೂಷಣ-ವಾಹನಾದಿಗಳ ದಾನ ನೀಡಿ ಉತ್ಸವದಲ್ಲಿ ಧನ ಖರ್ಚು ಮಾಡುವುದೂ ಧನದ ಸಫಲತೆಯಿದೆ. ಸಿದ್ಧಕ್ಷೇತ್ರಗಳ ಯಾತ್ರೆಯ ನಿಮಿತ್ತವಾಗಿ ತಮ್ಮ ಸಮಾನ ಅಭಿರುಚಿಯುಳ್ಳ ಅನೇಕ ಸಾಧರ್ಮಿ ಧರ್ಮಾತ್ಮರನ್ನು ಜತೆಯಲ್ಲಿ ಕರೆದುಕೊಂಡು ಸಂಘಸಹಿತ ಯಾತ್ರೆ ಮಾಡುವುದು. ಮುನಿ, ಶ್ರಾವಕ ಹಾಗೂ ವ್ರತಿಗಳ ಆಚರಣೆಗೆ ಬಾಧೆ ಬರದಂತೆ ಮಂದಗತಿಯಿಂದ ಸಾಗುವುದು. ಮಾರ್ಗದಲ್ಲಿ, ವನದಲ್ಲಿ, ನಗರದಲ್ಲಿ ಯಾವ ಯಾವ ಜಿನಮಂದಿರಗಳಿವೆ ಅಲ್ಲೆಲ್ಲ ಭಗವಂತರ ಪೂಜೆ-ಸ್ತವನಾದಿಗಳನ್ನು ಮಾಡುತ್ತ ಉತ್ಸವದೊಂದಿಗೆ ಸಾಗಬೇಕು. ದೀನ-ದುಃಖಿ, ರೋಗಾದಿಗಳಿಂದ ಬಳಲುತ್ತಿರುವ ಜೀವಗಳಿಗೆ ಧನ-ಆಹಾರಾದಿಗಳನ್ನು ದಾನವಾಗಿ ನೀಡಿಬೇಕು. ಸಂಘದವರ ಸಮಾಧಾನವನ್ನು ಕಾಯ್ದುಕೊಂಡು ನಿರಾಕುಲ ಭಾವದೊಂದಿಗೆ ಯಾತ್ರೆ ಮಾಡುವಲ್ಲಿ ಧನ ತೊಡಗಿಸುವುದು ಧನ ಪಡೆದುದರ ಸಫಲತೆಯಿದೆ.

ಮುನಿರಾಜರಿಗೆ ದಾನ, ಶಾಸ್ತ್ರಬರೆಸುವ, ಜಿನೇಂದ್ರ ಪೂಜೆ, ಜಿನಬಿಂಬ ನಿರ್ಮಾಣ, ಜಿನಮಂದಿರ ನಿರ್ಮಾಣ, ಜಿನಪ್ರತಿಷ್ಠೆ ಮಾಡಿಸುವ ಮತ್ತು ಸಿದ್ಧಕ್ಷೇತ್ರಗಳ ಯಾತ್ರೆ- ಈ ಏಳು ಕ್ಷೇತ್ರಗಳಲ್ಲಿ ಧನ ತೊಡಗಿಸುವುದೇ ಸಾರ್ಥಕವಿದೆ - ಅದುವೇ ಧನದ ಆಭೂಷಣವಿದೆ.

ಕರ್ಮದ ಅಪೇಕ್ಷೆಯಿಂದ ಗುರುಜನರ, ಮಾತಾ-ಪಿತಾದಿ ಹಿರಿಯರಿಗೆ ಸುಖದಾಯಕನಿದ್ದು ಯಥಾಯೋಗ್ಯ ಎಲ್ಲರ ಕುರಿತಾಗಿ ವಿನಯ ಸಾಧನೆಯಲ್ಲಿ ಪ್ರವೀಣನಿರುವಂಥವನೇ ಸುಪುತ್ರನೆಂದು ಕರೆಸಿಕೊಳ್ಳುತ್ತಾನೆ. ತನ್ನ ಗುಣಗಳ ಮೂಲಕ ಮಾತಾ-ಪಿತಾದಿಕರಿಗೆ ಸುಖವನ್ನು ಉತ್ಪನ್ನ ಮಾಡುವನು, ಜನರಲ್ಲಿ ತನ್ನ ಸಜ್ಜನತೆ, ವಿನಯಗುಣ,

ಉದಾರತೆಗಳನ್ನು ಪ್ರಗಟಪಡಿಸಿ ಎಲ್ಲ ಜನರಿಂದ ಸುಪುತ್ರನೆನಿಸಿಕೊಳ್ಳುವುದೇ ಪುತ್ರನ ಆಭೂಷಣವಿದೆ. ಧರ್ಮದ ಅಪೇಕ್ಷೆಯಿಂದ ಅನಾದಿ ಕಾಲದಿಂದ ನಡೆಯುತ್ತ ಬಂದಿರುವ ಶ್ರಾವಕರ ಧರ್ಮ, ಇದನ್ನೇ ಉತ್ತಮವೆಂದು ತಿಳಿದುಕೊಂಡು ಉಪಾಸನೆ ಮಾಡುತ್ತ ಬಂದಿರುವ ತೀರ್ಥಂಕರರನ್ನು ಮೊದಲು ಮಾಡಿಕೊಂಡು ಉತ್ತಮ ಶ್ರಾವಕ, ಅವರ ಪರಂಪರೆಯನ್ನು ಸುರಕ್ಷಿತವಾಗಿ ಇರಿಸುವ ಸಲುವಾಗಿ ದೇವ, ಧರ್ಮ, ಗುರುಗಳ ವಿನಯಸಹಿತ ನಾಲ್ಕು ಪ್ರಕಾರದ ಸಂಘದ ಸೇವೆ ಮಾಡುತ್ತ ಶುಭಾಚರಣೆಯರೂಪ, ದೇವ-ಧರ್ಮ-ಗುರುಗಳ ಶ್ರದ್ಧೆಯೊಂದಿಗೆ ಧರ್ಮವನ್ನು ದೃಢಪಡಿಸಿಕೊಂಡು ಅಶುದ್ಧ ಆಚರಣೆಯನ್ನು ದೂರ ಮಾಡಿ, ತನ್ನ ಕುಲದ ಮರ್ಯಾದೆ ಅರ್ಥಾತ್ ಮಹಾನ ಪೂರ್ವಜರಿಂದ ನಡೆಯುತ್ತ ಬಂದಿರುವ ಶ್ರಾವಕ ಧರ್ಮದ ಪರಂಪರೆಯ ಅನುಸಾರ, ತಂದೆ-ತಾಯಂದಿರರ ಧರ್ಮದ ಅನುಸಾರ ಸ್ವಯಂ ನಡೆಯುವಂಥವನು ಕುಲಧರ್ಮಕ್ಕೆ ಕಲಂಕ ತಗಲಿಸದೇ ಸ್ವಯಂ ಮಾತಾ-ಪಿತರ ಧರ್ಮ ಮರ್ಯಾದೆಯ ತ್ಯಾಗ ಮಾಡದಿರುವುದೇ ಪುತ್ರನ ಆಭೂಷಣವಿದೆ.

ಎರಡೂ ಪಕ್ಷಗಳ ಮರ್ಯಾದೆಯನ್ನು ಪವಿತ್ರ ಮಾಡುವಂಥ - ಅತ್ತೆ, ಮಾವ, ಪತಿ ಮೊದಲಾದವರು ಮತ್ತು ತಾಯಿ, ತಂದೆ, ಗುರು ಹಿರಿಯರು - ಹೀಗೆ ಎರಡೂ ಪಕ್ಷಗಳಲ್ಲಿ ವಿನಯಸಹಿತ ಪ್ರವರ್ತನೆ ಮಾಡುವುದು ಸ್ತ್ರೀಯ ಆಭೂಷಣವಿದೆ. ಅದರಿಂದ ಜನರಲ್ಲಿ ಪ್ರಶಂಸೆ ಪಡೆದು ಒಳ್ಳೆಯವಳಾಗಿ ಕಂಡು ಬರುತ್ತಾಳೆ. ಧರ್ಮದ ಆಭೂಷಣವು ಶುಭಾಚರಣ ಸಹಿತವಿರುವುದಿದೆ; ಯಾರ ಹೃದಯದಲ್ಲಿ ಶೀಲರೂಪದ ಶೃಂಗಾರವಿದೆ, ಪತಿಯ ಆಜ್ಞೆಯಲ್ಲಿ ತತ್ಪರಳಿದ್ದಾಳೆ, ದೇವ-ಧರ್ಮ-ಗುರುಗಳ ಪರಂಪರೆಯನ್ನು ತಿಳಿಯುವಂಥವಳು, ದೃಢ ಶ್ರದ್ಧೆಯುಳ್ಳವಳು ಆದ ಧರ್ಮಾತ್ಮಾ ಸ್ತ್ರೀಯು ಲಜ್ಜೆಯ ಭಾರದಿಂದ ನಮ್ರೀಭೂತವಾದ ದೃಷ್ಟಿಯನ್ನು ಧಾರಣಮಾಡಿ, ಸಂಸಾರ ಭೋಗಗಳಿಂದ ಉದಾಸಳಿದ್ದರೂ ಪತಿಯ ಆಜ್ಞೆಯ ಭಂಗ ಮಾಡಲಾಗದೆ ಭೋಗಗಳನ್ನು ಭೋಗಿಸುತ್ತಾಳೆ - ಈ ಗುಣಗಳಿಂದ ಸಹಿತವಿರುವ ಸ್ತ್ರೀಯು ಮಹಾಸುಂದರಳಿದ್ದಾಳೆ. ಉಪರ್ಯುಕ್ತ ಗುಣಗಳು ಶುಭಸ್ತ್ರೀಯರ ಆಭೂಷಣಗಳಿವೆ.

ಈ ಪ್ರಕಾರ ಹೇಳಲಾದ ಯಾವ ಕರ್ಮಮಂಡನ ಆಭೂಷಣ ಮತ್ತು ಧರ್ಮಮಂಡನ ಆಭೂಷಣ- ಇವೆರಡೂ ಪ್ರಕಾರದ ಆಭೂಷಣಗಳು ಉಚ್ಚ ಕುಲವಂತರು, ಧರ್ಮಾತ್ಮರು ಹಾಗೂ ವಿವೇಕ ಸಂಪನ್ನ ಜನರಿಂದ ಧರಿಸಲು ಯೋಗ್ಯವಾಗಿವೆ. ಕರ್ಮಮಂಡನ ಆಭೂಷಣಗಳಿಂದ ಶರೀರವು ಸುಂದರವಾಗಿ ಕಂಡುಬರುತ್ತದೆ. ಇಲ್ಲಿ ಶೋಭೆಗೆ ಪ್ರಾಪ್ತರಾಗುತ್ತಾರೆ ಮತ್ತು ಧರ್ಮಮಂಡನ ಆಭೂಷಣದಿಂದ ಇಹಭವ, ಪರಭವ-ಎರಡೂ ಭವಗಳಲ್ಲಿ ಶೋಭೆಯಾಗುತ್ತದೆ. ಆದುದರಿಂದ ಎಲ್ಲವನ್ನು ಸರಿಯಾಗಿ ತಿಳಿದುಕೊಂಡು ಎರಡೂ ಭವಗಳಲ್ಲಿ ಕೀರ್ತಿ ಹಾಗೂ ಸುಖದ ಸಲುವಾಗಿ ಎರಡೂ ಆಭೂಷಣಗಳನ್ನು ಹೃದಯದಲ್ಲಿ ಧಾರಣ ಮಾಡುವುದು ಯೋಗ್ಯವಿದೆ. ಹೀಗೆ ಎರಡೂ ಭವಸುಧಾರಣೆಯಲ್ಲಿ ನಿಮಿತ್ತವಿರುವ ಯೋಗ್ಯ ಕಾರ್ಯಗಳು ಯಾವುದೋ ಮಹಾನ ಪುಣ್ಯದಿಂದ ಪ್ರಾಪ್ತವಾಗುತ್ತವೆ. ಅದಕ್ಕಾಗಿ ಭವ-ಭವದಲ್ಲಿ ಸುಖ ಹಾಗೂ ಕೀರ್ತಿಯ ಅಪೇಕ್ಷೆಯಿರುವಂಥ ಭವ್ಯಾತ್ಮರು ಧರ್ಮದ ಆಶ್ರಯ ತಗೆದುಕೊಳ್ಳಬೇಕು.

ಈ ಪ್ರಕಾರ ಉಪರ್ಯುಕ್ತ ಸ್ತ್ರೀ ಧರ್ಮದ ಭೇದ ಹಾಗೂ ಧರ್ಮ-ಕರ್ಮ ಆಭೂಷಣ ಇತ್ಯಾದಿಗಳಲ್ಲಿ ವಿವೇಕವಂತರು ಜ್ಞೇಯ-ಹೇಯ-ಉಪಾದೇಯ ಮಾಡುವುದು ಯೋಗ್ಯವಿದೆ ಅಶುಭ ಆಚರಣೆಯ ತ್ಯಾಗ ಮತ್ತು ಶುಭ ಆಚರಣೆಯ ಗ್ರಹಣವು ಕಾರ್ಯಕಾರಿಯಿದೆ.

ಈ ಪ್ರಕಾರ ಶ್ರೀ ಸುದೃಷ್ಟಿತರಂಗಿಣಿಯೆಂಬ ಹೆಸರಿನ ಗ್ರಂಥದಲ್ಲಿ ಶುಭಾಶುಭ ಆಚಾರ, ಸ್ತ್ರೀಧರ್ಮ ಮಂಡನೆ, ಧರ್ಮ-ಕರ್ಮ ಆಭೂಷಣ ಕಥನದ ವರ್ಣನೆಯೆಂಬ ಹನ್ನೆರಡನೇ ಪರ್ವವು ಪೂರ್ಣವಾಯಿತು.

★★★★★

## ೧೩ : ಹದಿಮೂರನೆಯ ಪರ್ವ

# ತಪಾದಿಗಳಲ್ಲಿ ಹೇಯ-ಜ್ಞೇಯ-ಉಪಾದೇಯ

ಆಹಾರ ಪಾನೀಯಗಳಲ್ಲಿ ಜ್ಞೇಯ-ಹೇಯ-ಉಪಾದೇಯ-ಆಹಾರ ಪೇಯಗಳ ಸೇವನೆಯನ್ನು ದ್ರವ್ಯ , ಕ್ಷೇತ್ರ , ಕಾಲ, ಭಾವದಿಂದ ನೋಡಿ ವಿಚಾರ ಮಾಡುವುದನ್ನು ಯೋಗ್ಯವೆಂದು ಹೇಳಿದ್ದಾರೆ. ದ್ರವ್ಯದಲ್ಲಿಯಂತೂ ಶುಭಾಶುಭ ಜೀವಗಳ ವಿಚಾರ ಮಾಡುವುದು, ಕ್ಷೇತ್ರದಲ್ಲಿ ಶುಭಾಶುಭ ಕ್ಷೇತ್ರಗಳ ವಿಚಾರ ಮಾಡುವುದು, ಕಾಲದಲ್ಲಿ ಶುಭಾಶುಭ ಕಾಲದ ವಿಚಾರ ಮಾಡುವುದು ಮತ್ತು ಭಾವದಲ್ಲಿ ಶುಭಾಶುಭ ಭಾವದ ವಿಚಾರ ಮಾಡುವುದು ಎಂದರೆ ಈ ಆಹಾರ ಪಾನೀಯವನ್ನು ಯಾವ ಜೀವನು ತಯಾರಿಸಿದ್ದಾನೆ ? ಇದನ್ನು ಮಾಡುವಂಥವನ ಆಚರಣೆಯು ಧರ್ಮಮಯವಿದೆಯೋ ಅಥವಾ ಮೂರ್ಖ ಅಥವಾ ಪಾಪಾಚಾರ ಮಲಿನವಿದೆ, ಎಂಬುದು ದ್ರವ್ಯವಿಚಾರವಿದೆ. ಈ ಆಹಾರ ಪಾನೀಯಗಳನ್ನು ಯಾವ ಕ್ಷೇತ್ರದಲ್ಲಿ ತಯಾರಿಸಲಾಗಿದೆ ? ಆ ಕ್ಷೇತ್ರವು ಯೋಗ್ಯವಿದೆಯೋ ಅಥವಾ ಅಯೋಗ್ಯವಿದೆ? ಎಂಬುದು ಕ್ಷೇತ್ರವಿಚಾರವಿದೆ. ಈ ಆಹಾರ ಪಾನೀಯಗಳನ್ನು ಯಾವ ಕಾಲದಲ್ಲಿ ತಯಾರಿಸಿದ್ದಾರೆ? ಆಕಾಲವು ಯೋಗ್ಯವಿದೆಯೋ ಅಥವಾ ಅಯೋಗ್ಯವಿದೆಯೋ ? ಎಂಬುದು ಕಾಲ ವಿಚಾರವಿದೆ. ಈ ಆಹಾರ ಪಾನೀಯಗಳನ್ನು ಎಂಥ ಭಾವಗಳಿಂದ ತಯಾರಿಸಲಾಗಿದೆ ? ಅವರ ಭಾವಗಳು ಶುಭವಿದ್ದವೋ ಅಥವಾ ಅಶುಭವಿದ್ದವು? ಈ ಪ್ರಕಾರ ಭಾವಗಳ ವಿಚಾರ ಮಾಡುವುದು - ಇಂಥ ವಿಚಾರಪೂರ್ವಕ ವಿವೇಕವಂತರು ಆಹಾರ ಪಾನೀಯಗಳಲ್ಲಿ ಜ್ಞೇಯ-ಉಪಾದೇಯ-ಹೇಯ ಮಾಡಬೇಕು. ಯಾವ ಪ್ರಕಾರ ಮಾಡಬೇಕೆಂಬುದನ್ನು ಈಗ ಹೇಳುತ್ತಾರೆ,-

೧) **ದ್ರವ್ಯಶುದ್ಧತೆ ಃ-** ಆಹಾರ ಸಿದ್ಧಪಡಿಸುವಂಥವನು (ಅಡಿಗೆ ಮಾಡುವಂಥವನು) ಒಂದು ವೇಳೆ ಸಮ್ಯಕ್ ಕ್ರಿಯಾವಂತನಿದ್ದರೆ ಅವನ ಶರೀರವು ಶುದ್ಧವಿರಬೇಕು, ಅವನು ದಯಾವಂತನಿರಬೇಕು, ಪಾಪದಿಂದ ಭಯಪಡುವಂಥ-ವನಿರಬೇಕು. ಶೀತ, ಕೆಮ್ಮು , ಶ್ವಾಸರೋಗವಿರಬಾರದು, ಕಫದ ಅಧಿಕತೆಯಿರಬಾರದು, ವಾಂತಿ-ಭೇದಿಗಳ ಬಾಧೆಯಿರಬಾರದು. ಶರೀರದಲ್ಲಿ ಗೆಡ್ಡೆ ಮೊದಲಾದವುಗಳ ಪೀಡೆಯಿರಬಾರದು, ಕುಷ್ಟ-ಕಜ್ಜಿಗಳಿರಬಾರದು-ಇತ್ಯಾದಿ ರೋಗ-ದುಃಖಗಳಿಂದ ರಹಿತ ಹಾಗೂ ವ್ಯಾಕುಲತೆಯಿಂದ ರಹಿತ ಅಡಿಗೆ ಮಾಡುವಂಥವನು ಶುದ್ಧನಿದ್ದಾನೆ, ಅದುವೇ ದ್ರವ್ಯ ಶುದ್ಧಿಯಿದೆ.

ಆಹಾರದ ಧಾನ್ಯ , ನೀರು, ಹಾಲು, ತುಪ್ಪ ಮೊದಲಾದವು ಅಕ್ಕಿ , ಗೋಧಿ, ಬೇಳೆ ಮೊದಲಾದವು ಹುಳುಕು, ನಿಃಸತ್ವ ಜೀವಸಹಿತವಿರಬಾರದು. ತುಪ್ಪ ಮೊದಲಾದವು ಚರ್ಮ ಮೊದಲಾದ (ಜೀವಗಳ ಉತ್ಪತ್ತಿ ಸ್ಥಾನ) ಅಶುದ್ಧ ವಸ್ತುವಿನಲ್ಲಿ ಇರಿಸಿಲ್ಲವೆಂಬುದನ್ನು ಕೂಡ ಖಚಿತ ಪಡಿಸಿಕೊಳ್ಳುವುದು ದ್ರವ್ಯ ಶುದ್ಧಿಯಿದೆ.

೨) **ಕ್ಷೇತ್ರಶುದ್ಧತೆ ಃ-** ಎಲ್ಲಿ ಮೂಳೆ, ಮಾಂಸ, ರಕ್ತ , ಮದ್ಯ ಮೊದಲಾದವು ಕಾಣಿಸುವುದಿಲ್ಲ ಅಂಥ ಕ್ಷೇತ್ರವಿರಬೇಕು. ವಿಸರ್ಜಿತ ವಸ್ತುಗಳು ಅಥವಾ ವಾಸನೆಯು ಬಾರದ, ತಮ್ಮ ಆಹಾರದಲ್ಲಿ ಜೀವಗಳು (ಕ್ರಿಮಿಗಳು) ಬಂದು ಬೀಳಬಾರದು. ಪಂಚೇಂದ್ರಿಯಗಳ ಮಲವು ಕಂಡು ಬರಬಾರದು. ಈ ಏಳು ಕಾರಣಗಳಿಂದ ರಹಿತ ಹಾಗೂ ಅಂಧಕಾರವಿರದಂಥ, ಬಹಳಷ್ಟು ಮನುಷ್ಯ-ಪಶುಗಳ ಗಮನವಾಗದಂಥ ಏಕಾಂತ ಕ್ಷೇತ್ರವು ಅದು ಆಹಾರ ಪಾನೀಯಗಳ ಕ್ಷೇತ್ರ ಶುದ್ಧಿಯಿದೆ.

೩) **ಕಾಲ ಶುದ್ಧತೆ ಃ-** ಆಹಾರ ಸಿದ್ಧಪಡಿಸುವಲ್ಲಿ ಯಾವುದೇ ಕಾರ್ಯವನ್ನು ರಾತ್ರಿ ಮಾಡಿರಬಾರದು, ಆಹಾರದ ಮರ್ಯಾದೆ-ಕಾಲವು ಮೀರಿರಬಾರದು ಮತ್ತು ರಾತ್ರಿ ಕಳೆದು ಆಹಾರವು ತಂಗುಳವಾಗುವುದು ಇತ್ಯಾದಿ ಕಾಲಶುದ್ಧಿಯ ಕಡೆಗೆ ಸಾವಧಾನತೆಯಿರುವುದು ಕಾಲಶುದ್ಧಿಯೆಂದು ತಿಳಿಯುವುದು.

೪) **ಭಾವ ಶುದ್ಧತೆ ಃ-** ಅಡಿಗೆ ಮಾಡುವಂಥ ವ್ಯಕ್ತಿಯು ವ್ಯಾಕುಲ ಪರಿಣಾಮಿಯಾಗಿರಬಾರದು. ಆಹಾರ ಸ್ವಾದದ ಲಂಪಟನಾಗಿರಬಾರದು. ತೀವ್ರ ಕ್ಷುಧೆಯಿಂದ ಸಹಿತನಾಗಿರಬಾರದು. ಯೋಗ್ಯ-ಅಯೋಗ್ಯ ಆಹಾರವನ್ನು ತಿಳಿಯುವಂಥ

ಸ್ವಭಾವದವನು, ವಿವೇಕಸಹಿತ ಭಾವನೆಯುಳ್ಳವನಿರುವುದು ಭಾವಶುದ್ಧಿಯೆಂದು ತಿಳಿಯುವುದು. ಅಡುಗೆ ಮಾಡುವ ಸಮಯದಲ್ಲಿ ಕಲಹ ಮಾಡುವಂಥವ; ಕ್ರೋಧದ ವಚನಗಳನ್ನು ಆಡುವಂಥ ಕ್ರೋಧಿಯಾಗಿರಬಾರದು ಇತ್ಯಾದಿ ರೀತಿಯಿಂದ ಶುದ್ಧವಾಗಿರುವುದು ಭಾವಶುದ್ಧತೆಯಿದೆ.

ಹೀಗೆ ದ್ರವ್ಯ, ಕ್ಷೇತ್ರ , ಕಾಲ, ಭಾವದಿಂದ ಶುದ್ಧವಿರುವಂಥ ಆಹಾರ-ಪಾನೀಯಗಳು ಧರ್ಮಾತ್ಮಾ ಜೀವರುಗಳಿಗೆ ಉಪಾದೇಯವಿವೆ.

**ಅಶುದ್ಧ ಆಹಾರ ಪೇಯಗಳು -** ದ್ರವ್ಯ ಅಶುದ್ಧ - ಆಹಾರ ಪಾನೀಯಗಳನ್ನು ಮಾಡುವಂಥ ವ್ಯಕ್ತಿಯ ಶರೀರವು ರೋಗಗ್ರಸ್ತವಾಗಿರುವುದು, ಕೆಮ್ಮು, ಶೀತ, ಕಜ್ಜಿ, ಹುರುಕು, ತುರಿಕೆ, ಉಸಿರಾಟದಲ್ಲಿ ತೊಂದರೆ ಮೊದಲಾದ ರೋಗ ಸಹಿತವಿರುವುದು, ಅಧಿಕ ನಿದ್ರೆಯು ಬರುತ್ತಿರುವ ಇತ್ಯಾದಿ ದೋಷ ಸಹಿತನಾಗಿದ್ದರೆ ಅದು ದ್ರವ್ಯ ಅಶುದ್ಧತೆಯಿದೆ ಅಲ್ಲದೆ ಹುಳುಹತ್ತಿದ ಧಾನ್ಯ , ಶೋಧಿಸದ ನೀರು, ರಾತ್ರಿಯಲ್ಲಿ ಬೀಸಿದ ಹಿಟ್ಟು- ಇತ್ಯಾದಿ ಅಶುದ್ಧ ದ್ರವ್ಯವಿದೆ.

**ಕ್ಷೇತ್ರ ಅಶುದ್ಧ -** ಅಂಧಕಾರದಲ್ಲಿ ತಯಾರಿಸಲಾದ, ಬಹಳಷ್ಟು ಸೂಕ್ಷ್ಮ , ಸ್ಥೂಲ ಕ್ರಿಮಿ(ಜೀವ)ಗಳು ಹಾರಿ ಬಂದು ಬೀಳು(ಬರು-ಹೋಗು)ವಂಥ ಮತ್ತು ಬಹಳಷ್ಟು ಜೀವಗಳು ಹಾಯ್ದು ಹೋಗುತ್ತಿರುವಂಥ, ಮೇಲ್ಛಾವಣಿಯಿಲ್ಲದ ಸ್ಥಾನ, ಸೊಳ್ಳೆ, ಇರುವೆ, ನೊಣಗಳು ಬಹಳಷ್ಟು ಇರುವಂಥ ಅಥವಾ ಉತ್ಪನ್ನವಾಗುವಂಥ ಸ್ಥಾನದಲ್ಲಿ ಅಡಿಗೆ ಮಾಡುವುದು ಕ್ಷೇತ್ರ ಅಶುದ್ಧವಿದೆ.

**ಕಾಲ ಅಶುದ್ಧ :-** ರಾತ್ರಿಯೊಳಗೆ ಬೀಸಿದ ಹಿಟ್ಟು ಅಥವಾ ರಾತ್ರಿಯಲ್ಲಿ ಆರಂಭಾದಿಗಳನ್ನು ಮಾಡಿ ಬೇಯಿಸಿದ, ಹುರಿದ, ಪುಡಿ ಮಾಡಿದ ಮತ್ತು ಮಾಡಿ ಬಹಳಷ್ಟು ಸಮಯವಾಗಿದ್ದರೆ, ಅದರ ಮರ್ಯಾದೆಯು ಮುಗಿದು ಹೋಗಿದ್ದರೆ, ರಾತ್ರಿ ಕಳೆದು ತಂಗುಳಾಗಿ ಬಿಟ್ಟಿದ್ದರೆ ಅದು ಕಾಲ ಅಶುದ್ಧ ಆಹಾರವೆಂದು ತಿಳಿಯುವುದು.

**ಭಾವ ಅಶುದ್ಧ -** ಆಹಾರ ಸಿದ್ಧ ಮಾಡುವಂಥವನು, ಅಡಿಗೆ ಮಾಡುವ ವ್ಯಕ್ತಿಯು ಕ್ರೋಧಿಯಾಗಿರುವುದು, ಅಡಿಗೆ ಮಾಡುವಾಗ ಬೇರೆಯವರ ಜೊತೆ ಜಗಳವಾಡುತ್ತಿರುವುದು, ಮರ್ಯಾದೆ ಮೀರಿ ಮಾತನಾಡುತ್ತಿರುವುದು - ಇಂಥ ವ್ಯಕ್ತಿಯಿಂದ ಮಾಡಲಾಗುವ ಆಹಾರ-ಪಾನೀಯಗಳು ಅಶುದ್ಧವಿವೆ. ವ್ಯಾಕುಲ ಪರಿಣಾಮಿಯಾಗಿರುವುದು, ಭೋಜನದ ಇಚ್ಛೆ-ಲುಬ್ಧತೆಯಿರುವುದು, ಅಡುಗೆ ಮಾಡುವಾಗ ಪದೇ ಪದೇ ಬಾಯಿಗೆ ಹಾಕಿಕೊಂಡು ತಿನ್ನುತ್ತಿರುವುದು ಇವೆಲ್ಲ ಪ್ರಕಾರಗಳು ಭಾವ ಅಶುದ್ಧವಿರುವಂಥ ಆಹಾರದಲ್ಲಿ ಬರುತ್ತವೆ.

ಈ ಪ್ರಕಾರ ದ್ರವ್ಯ , ಕ್ಷೇತ್ರ , ಕಾಲ, ಭಾವದಿಂದ ಅಶುದ್ಧ ಆಹಾರ ಪಾನೀಯಗಳಿವೆ. ಅಂಥವು ಧರ್ಮಾತ್ಮಾ ಜೀವರುಗಳಿಂದ ಹೇಯ(ತ್ಯಾಜ್ಯ)ವಿವೆ. ದಾರಿಯಿಂದ ಸಾಗುವಾಗ ತಿನ್ನುತ್ತ-ಕುಡಿಯುತ್ತ ಹೋಗುವುದು, ಅಂಗಳಲ್ಲಿ ಕುಳಿತು ತಿನ್ನುವುದು, ವಿಚಾರದ ಸಾಮ್ಯತೆ ಇಲ್ಲದ ವಿರೋಧಿಗಳೊಂದಿಗೆ ಕುಳಿತು ಪಂಕ್ತಿ ಭೋಜನ ಮಾಡುವುದು, ಆಟ, ವಿನೋದ, ಹಾಸ್ಯ ಮಾಡುತ್ತ ತಿನ್ನುವುದು, ಪೇಟೆಯಲ್ಲಿ ಮಾರಾಟಕ್ಕೆ ಇಟ್ಟಿರುವ ಪದಾರ್ಥಗಳನ್ನು ಕೊಂಡು ತಿನ್ನುವುದು-ಇತ್ಯಾದಿ ಆಹಾರ ಪಾನೀಯಗಳು ಅಶುದ್ಧವಿವೆ, ಹೇಯವಿವೆಯೆಂಬುದನ್ನು ತಿಳಿದುಕೊಂಡು ವಿವೇಕವಂತರು ಶುಭ(ಶುದ್ಧ) ಆಹಾರ ಗ್ರಹಣ ಮಾಡಬೇಕು ಮತ್ತು ಅಶುಭ(ಅಶುದ್ಧ) ಆಹಾರದ ತ್ಯಾಗ ಮಾಡುವುದು ಯೋಗ್ಯವಿದೆ.

**ವಚನಗಳಲ್ಲಿ ಜ್ಞೇಯ-ಹೇಯ-ಉಪಾದೇಯ :-** ಸಮಸ್ತ ಪ್ರಕಾರದ ವಚನಗಳನ್ನು ತಿಳಿಯುವುದು ಜ್ಞೇಯವಿದೆ. ಆ ಜ್ಞೇಯದಲ್ಲಿ ೧. ಉಪಾದೇಯ ವಚನ, ೨. ಹೇಯ (ತ್ಯಾಗಯೋಗ್ಯ) ವಚನವೆಂದು ಎರಡು ಭೇದಗಳಿವೆ.

**೧. ಉಪಾದೇಯ ವಚನ :-** ಅನ್ಯ ಜೀವಗಳಿಗೆ ಸುಖದಾಯಕವಿರುವ, ದಯೆಯಿಂದ ಕೂಡಿದ; ಕ್ರೋಧ, ಮಾನ, ಮಾಯೆ, ಲೋಭವೆಂದು ನಾಲ್ಕು ಕಷಾಯಗಳಿಂದ ರಹಿತವಿರುವ, ಧರ್ಮಬುದ್ಧಿಯಿಂದ ಸಹಿತವಿರುವ; ದಾನ, ಪೂಜೆ, ಶೀಲ, ಸಂಯಮ, ತಪ, ವ್ರತ, ಮೊದಲಾದ ಮಹಾಪುರುಷರ ಚರ್ಚೆಯಿಂದ ಸಹಿತವಿರುವಂಥ, ಧರ್ಮದ

ಉತ್ಸವವಚನ, ವಿನಯವಚನ, ಶಾಂತಿಯ ಭಾವದಿಂದ ಕೂಡಿರುವ, ಹಿತವಚನ, ಸೌಮ್ಯತೆಯಿಂದ ಕೂಡಿದ, ಪ್ರಿಯ ವಚನ ಇತ್ಯಾದಿ ಜಿನ ಆಜ್ಞೆಯುಕ್ತ ಸತ್ಯ , ಹಿತ, ಮಿತ, ಪ್ರಿಯ ವಚನಗಳು ಉಪಾದೇಯ ವಚನಗಳಿವೆ.

**೨. ಹೇಯವಚನ ೞ-** ಕ್ರೋಧ ವಚನ, ಮಾನ, ಮಾಯೆ, ಲೋಭದ ವಚನ, ಸಪ್ತ ವ್ಯಸನರೂಪ ವಚನ, ಪಾಪಪೋಷಣೆ ಮಾಡುವ ರೂಪ ಅಸತ್ಯ ವಚನ - ಈ ಅಸತ್ಯದಲ್ಲಿ ನಾಲ್ಕು ಭೇದಗಳಿವೆ - ಯಾರದೋ ಉಪಸ್ಥಿತ ವಸ್ತುವನ್ನು ಅನುಪಸ್ಥಿತವೆಂದು ಹೇಳುವುದು, ಯಾವ ವಸ್ತುವಿಲ್ಲ ಅದನ್ನು ಉಪಸ್ಥಿತವೆಂದು (ಇದೆಯೆಂದು) ಹೇಳುವುದು ಕೂಡ ಅಸತ್ಯವಚನವಿದೆ. ಯಾವ ವಸ್ತುವಿದೆ ಅದನ್ನು ಬೇರೇನೊ ಮತ್ತು ಯಾವುದು ಇತ್ತು ಅದನ್ನು ಬೇರೆ ರೀತಿಯಿಂದ ಹೇಳುವುದೂ ಅಸತ್ಯವಿದೆ. ಜಿನಾಜ್ಞೆಯಿಂದ ರಹಿತ, ಪರಮಾರ್ಥತೆಯಿಂದ ರಹಿತವಾದ ವಚನಗಳು ಕೂಡ ಅಸತ್ಯವಿವೆ.

ಯೋಗ್ಯ ಅಯೋಗ್ಯ ವಚನಗಳ ಭೇದ -

**ವಯಣೋ ಹೇಯಾದೇಯೋ, ಸತ್ತೋಪಾದೇಯ ವಯಣ ಜಿಣ ಧುಣಿ ಸೋ ।**
**ಹೇಯೋ ವಯಣ ಅತತ್ತೋ , ಣಿಂದೋ ಕುಗಇದೇಯ ಸುತ ರಹಿಯೋ ॥೩೯॥**

**ಗಾಥಾರ್ಥ ೞ-** ವಚನಗಳು ಹೇಯ, ಉಪಾದೇಯರೂಪವಿವೆ, ಅವುಗಳಲ್ಲಿ ಸತ್ಯ ವಚನಗಳಂತೂ ಉಪಾದೇಯವಿವೆ. ಯಾವ ವಚನಗಳು ಜಿನಆಜ್ಞಾ ಪ್ರಮಾಣವಿವೆ ಅವಂತೂ ಗ್ರಹಣಯೋಗ್ಯವಿವೆ ಮತ್ತು ಯಾವವು ಅತತ್ತ್ವವಚನಗಳಿವೆ ಅವು ಹೇಯವಿವೆ, ನಿಂದ್ಯವಿವೆ, ಕುಗತಿಯನ್ನು ಕೊಡುವಂಥವಿವೆ ಹಾಗೂ ಜಿನಾಜ್ಞೆಯಿಂದ ವಿರುದ್ಧವಿವೆ.

**ಭಾವಾರ್ಥ ೞ-** ಸತ್ಯ ಜಿನವಚನ (ಪ್ರಮಾಣಿತ ವಚನ)ಗಳಂತೂ ಉಪಾದೇಯವಿವೆ ಮತ್ತು ಅತತ್ತ್ವ-ಅಸತ್ಯ ವಚನಗಳು ಹೇಯವಿವೆ. ಅಸತ್ಯ ವಚನದ ಭೇದಗಳು ಹನ್ನೊಂದು ಇವೆ - ಅಭ್ಯಾಖ್ಯಾನವಚನ, ಕಲಹವಚನ, ಪೈಶೂನ್ಯವಚನ, ಅಸಂಬದ್ಧ ಪ್ರಲಾಪವಚನ, ರತಿವಚನ, ಅರತಿವಚನ, ಉಪಧಿವಚನ, ನಿಕೃಷ್ಟವಚನ, ಅಪರಿಣತಿವಚನ, ಮೌಖರ್ಯವಚನ ಮತ್ತು ಮಿಥ್ಯಾವಚನ.

ಯಾವುದರಲ್ಲಿ ನೋಡಿರಿ, ಇವನು ಕೆಡಕು ಮಾಡಿದನು - ಇವನು ಬಹಳ ಕೆಟ್ಟ ಮಾತುಗಳನ್ನಾಡಿದನು - ಇದರ ಹೆಸರು ಅಭ್ಯಾಖ್ಯಾನ ವಚನವಿದೆ. ಪರಸ್ಪರರಲ್ಲಿ ಯುದ್ಧವಾಗಲು ಕಾರಣವಾಗುವಂಥ ವಚನವನ್ನಾಡುವುದು, ಅದು ಕಲಹ ವಚನವಿದೆ. ಯಾವುದರ ಕಾರಣದಿಂದ ಇತರರ ಮುಚ್ಚಿಹೋದ ದೋಷವು ಪ್ರಗಟವಾಗುತ್ತದೆ, ಅಂಥ ವಚನವನ್ನಾಡುವುದು ಅದು ಪೈಶೂನ್ಯ ವಚನವಿದೆ. ಧರ್ಮ, ಅರ್ಥ, ಕಾಮ, ಮೋಕ್ಷದ ಸಂಬಂಧದಿಂದ ರಹಿತವಾದ ವಚನವನ್ನಾಡುವುದು ಅದು ಅಸಂಬದ್ಧ ಪ್ರಲಾಪ ವಚನವಿದೆ. ಯಾವುದನ್ನು ಆಲಿಸುವುದರಿಂದ ಇಂದ್ರಿಯಗಳಿಗೆ ಸುಖದಾಯಕವಾದ ರತಿಯುಂಟಾಗುವುದು, ಅಂಥ ವಚನಗಳನ್ನಾಡುವುದು ರತಿವಚನವಿದೆ. ಯಾವುದನ್ನು ಆಲಿಸುವುದರಿಂದ ಇಂದ್ರಿಯ, ಮನಸ್ಸಿಗೆ ಅರತಿಯು ಉತ್ಪನ್ನವಾಗುವುದು, ಅರ್ಥಾತ್ ಅನಿಷ್ಟವೆನಿಸುವುದು ಅದು ಅರತಿ ವಚನವಿದೆ. ಅತಿ ಪರಿಗ್ರಹದ ಅಭಿಲಾಷೆಯ ರೂಪದ ಲೋಭ ವೃದ್ಧಿ ಸಹಿತವಾದ ವಚನವನ್ನಾಡುವುದು, ಉಪಧಿ ವಚನವಿದೆ. ವ್ಯವಹಾರದಲ್ಲಿ ಬೇರೆಯವರನ್ನು ವಂಚಿಸುವಂಥ ಯುಕ್ತಿರೂಪದ ವಚನವು ನಿಕೃಷ್ಟ ವಚನವಿದೆ. ದೇವ, ಗುರು, ಧರ್ಮ, ವ್ರತಾದಿ ಪೂಜ್ಯ ಸ್ಥಾನದ ಸಲುವಾಗಿ ಅವಿನಯರೂಪ ವಚನವನ್ನಾಡುವುದು ಅಪರಿಣತಿ ವಚನವಿದೆ. ಕಳ್ಳರ ಚತುರತೆ, ಕಲೆಯ ಶುಶ್ರೂಷೆಯರೂಪ ಮಾತನಾಡುವುದು ಮೌಖರ್ಯ ವಚನವಿದೆ. ಧರ್ಮಘಾತಕ, ದಯಾರಹಿತ, ಅವ್ರತ ಪೋಷಕವಾಗಿ ಮಾತನಾಡುವುದು ಮಿಥ್ಯಾವಚನವಿದೆ. ಇಂಥ ಅಶುಭ ವಚನಗಳು ಸಮ್ಯಗ್ದೃಷ್ಟಿಗೆ ಸಹಜವಾಗಿಯೇ ಹೇಯವಿರುತ್ತವೆ.

ಪ್ರಯೋಜನವಿಲ್ಲದೆ ಪರಸ್ಪರ ಮಾತನಾಡುವುದು ವಿಕಥಾ ವಚನವಿದೆ. ಆ ವಿಕಥೆಯ ಭೇದಗಳು ಇಪ್ಪತ್ತೈದು ಇವೆ. ಸ್ತ್ರೀ ವಿಕಥೆ, ಧನಕಥೆ, ಭೋಜನಕಥೆ, ರಾಜಕಥೆ, ಚೋರಕಥೆ, ವೈರಕಥೆ, ಪರಪಾಖಂಡಕಥೆ, ದೇಶಕಥೆ, ಭಾಷಾಕಥೆ, ಗುಣಬಂಧಕಥೆ, ದೇವಕಥೆ, ನಿಷ್ಠುರವಚನಕಥೆ, ಪರಪೈಶೂನ್ಯಕಥೆ, ಶೃಂಗಾರಕಥೆ, ದೇಶಕಾಲಾನುಚಿತಕಥೆ, ಭಂಡಕಥೆ, ಮೂರ್ಖಕಥೆ, ಆತ್ಮಪ್ರಶಂಸಾಕಥೆ, ಪರಪರಿವಾದಕಥೆ, ಪರಜುಗುಪ್ಸಾಕಥೆ, ಪರಪೀಡಾಕಥೆ, ಕಲಹಕಥೆ, ಪರಿಗ್ರಹಕಥೆ, ಕೃಷ್ಯಾರಂಭಕಥೆ, ಸಂಗೀತಕಥೆ - ಇವು ಇಪ್ಪತ್ತೈದು ವಿಕಥೆಗಳಿವೆ.

ನಾಲ್ಕು ಜನ ಸೇರಿ ಎಲ್ಲಿ ಪರಸ್ಪರ ಮಾತನಾಡುತ್ತಾರೆ ಅದರ ಹೆಸರು ಕಥೆಯಿದೆ. ಶುಭಕಾರಿ ವಚನಗಳನ್ನಾಡುವುದಂತೂ ಶುಭಕಥೆಯಿದೆ. ಯಾವುದೇ ಪ್ರಯೋಜನವಿಲ್ಲದೆ ವೃಥಾ ಪಾಪಬಂಧ ಮಾಡಿಕೊಂಡು ಕಾಲ ಕಳೆಯುವುದು ವಿಕಥೆಯಿದೆ.

ಎಲ್ಲಿ ಸ್ತ್ರೀಯರ ಸ್ವರೂಪದ, ನೀತಿ ನಡವಳಿಕೆಯ, ಯೌವನ ಇತ್ಯಾದಿ ಸ್ತ್ರೀಯರ ಕುರಿತಾಗಿ ಪರಸ್ಪರರಲ್ಲಿ ಚರ್ಚೆ ಮಾಡುತ್ತ ಕಾಲ ಕಳೆಯುವುದು, ಪಾಪಬಂಧ ಮಾಡಿಕೊಂಡು ಪರಭವವನ್ನು ಕೆಡಿಸಿಕೊಳ್ಳುವುದು ಅದು ಸ್ತ್ರೀ ವಿಕಥೆಯಿದೆ.

ಪರಸ್ಪರರೊಳಗೆ ಧನದ ಮಾತು ಮಾತನಾಡುವುದು ಎಂದರೆ ಧನಿಕರು ಧನ್ಯರಿದ್ದಾರೆ, ಧನವಿಲ್ಲದೆ ಜೀವನವಾದರೂ ಎಲ್ಲಿದೆ ? ಎಲ್ಲರು ಧನಿಕರ ಸೇವೆ ಮಾಡುತ್ತಾರೆ. ಜಗತ್ತಿನಲ್ಲಿ ಧನವೇ ದೊಡ್ಡದಿದೆ. ಈ ಧನವನ್ನು ಹೇಗೆ ಗಳಿಸುವುದು ? ಪರುಷಮಣಿಯಿಂದ ಧನ ದೊರಕುವುದು, ರಸಾಯನದಿಂದ ಧನವಾಗುವುದು, ಚಿಂತಾಮಣಿಯು ದೊರಕಿದ ಮೇಲೆ ಬಹಳಷ್ಟು ಧನವಾಗಬಹುದು. ದಾರಿಯಲ್ಲಿ ಹೋಗುವಾಗ ಯಾರದಾದರೂ ಬಿದ್ದುಹೋದ ಧನವು ದೊರಕಬೇಕು, ನೆಲದಲ್ಲಿ ಹೂಳಿಟ್ಟ ಧನವು ದೊರಕಬೇಕು, ಅಂಥ ಯಾವನೋ ದೇವನು ದೊರಕಿದರೆ ಅವನಿಂದ ಧನವನ್ನು ಕೇಳಿ ಪಡೆಯಬಹುದಾಗಿದೆ, ಇಂಥ ಓರ್ವ ದೊರೆಯು ಬಹಳಷ್ಟು ಧನವನ್ನಿಟ್ಟುಕೊಂಡಿದ್ದಾನೆ, ಓರ್ವ ಶೆಟ್ಟಿಯ ಹತ್ತಿರ ಅಧಿಕ ಧನವಿದೆ - ಇತ್ಯಾದಿ ಪ್ರಕಾರ ಪರಸ್ಪರರಲ್ಲಿ ಧನದ ಚರ್ಚೆ ಮಾಡುವುದು ಧನವಿಕಥೆಯಿದೆ.

ಪರಸ್ಪರರಲ್ಲಿ ಭೋಜನದ ಚರ್ಚೆ ಮಾಡುವುದು; ಈ ಭೋಜನವು ಒಳ್ಳೆಯದಿದೆ, ಆ ಭೋಜನವು ಒಳ್ಳೆಯದಿತ್ತು, ಈ ವ್ಯಂಜನವು ಒಳ್ಳೆಯದಿದೆ, ಆ ವ್ಯಂಜನವು ಒಳ್ಳೆಯದಿದೆ-ಇತ್ಯಾದಿಯು ಭೋಜನ ವಿಕಥೆಯಿದೆ.

ರಾಜರಲ್ಲಿ ಯಾವನೋ ಓರ್ವ ರಾಜನ ಹಿರಿಮೆಯನ್ನು ಹೇಳುವುದು ಯಾವನೋ ಓರ್ವನ ನಿಂದೆ ಮಾಡುವುದು, ದೊರೆಗಳ ನ್ಯಾಯ-ಅನ್ಯಾಯದ ಮಾತು, ಸೈನ್ಯದ ವಿಶಾಲತೆ ಹಾಗೂ ಲಘುತೆಯ ಚರ್ಚೆ - ಈ ಪ್ರಕಾರ ಯಾವನೋ ರಾಜನ ನಿಂದೆ, ಯಾವನೋ ರಾಜನ ಸ್ತುತಿ ಮಾಡಿ ಪರಸ್ಪರರಲ್ಲಿ ಹರಟುತ್ತ (ಚರ್ಚಿಸುತ್ತ) ಕಾಲ ಕಳೆಯುವುದು ರಾಜವಿಕಥೆಯಿದೆ.

ಅನೇಕ ಚೋರರ ಚತುರತೆ ಹಾಗೂ ಚೋರರ ಪುರುಷಾರ್ಥದ ಕಥೆ, ಚೋರರಿಗೆ ಇಂಥ ದಂಡನೆಯಾಗಬೇಕು, ಅಂಥ ಶಿಕ್ಷೆಯಾಗಬೇಕು ಆ ಚೋರನು ಬಲಿಷ್ಠನಿದ್ದಾನೆ - ಇತ್ಯಾದಿಯಾಗಿ ಪರಸ್ಪರರಲ್ಲಿ ಚೋರರ ಕುರಿತಾಗಿ ಮಾತನಾಡುವುದು ಚೋರಕಥೆಯಿದೆ.

ನನ್ನದು ಅವನ ಕುರಿತಾಗಿ ವೈರಭಾವವಿದೆಯೆಂದು ಹೇಳುವುದು ಅಥವಾ ಅವನದು ಇವನ ಬಗ್ಗೆ ವೈರವಿದೆ ಅಥವಾ ದ್ವೇಷವಿದೆ ಅವನಿಗೆ ಬಹಳಷ್ಟು ವೈರಿಗಳಿದ್ದಾರೆ. ನಾವೇನು ಅವನಿಗೆ ಆಶ್ರಯ ಕೊಡುವುದು? ಇತ್ಯಾದಿ ಪ್ರಕಾರದಿಂದ ಪರಸ್ಪರರಲ್ಲಿ ಮಾತನಾಡುವುದು ಅದು ವೈರಕಥೆಯಿದೆ.

ಬೇರೆಯವರ ಅಪ್ರಗಟ ದೋಷಗಳನ್ನು ಪ್ರಗಟ ಪಡಿಸುವುದು 'ನೀನು ಮಹಾ ಪಾಖಂಡಿಯಿರುವೆ, ನಿನ್ನ ಸಮಸ್ತ ದೋಷಗಳ ಪರಿಚಯವು ನನಗಿದೆ, ನಿನ್ನಂಥ ದುರಾಚಾರಿಯು ಬೇರೆ ಯಾರೂ ಇಲ್ಲ'-ಇತ್ಯಾದಿರೂಪದ ಮಾತುಗಳನ್ನಾಡುವುದು ಪರಪಾಖಂಡವಿಕಥೆಯಿದೆ.

ದೇಶ-ದೇಶಾಂತರಗಳ ನಿಂದೆ-ಸ್ತುತಿ ಮಾಡುವುದು - ಆ ದೇಶವು ಒಳ್ಳೆಯದಿದೆ, ಸುಂದರವಿದೆ ಈ ದೇಶವು ಸರಿಯಿಲ್ಲ, ಆ ದೇಶದಲ್ಲಿ ಶೀತ-ಉಷ್ಣಗಳು ಅತಿಯಾಗಿವೆ, ಆ ದೇಶದಲ್ಲಿ ಆಹಾರವು ದೊರಕುವುದಿಲ್ಲ ಅಥವಾ ಆ ದೇಶದಲ್ಲಿ ನೀರಿನ ಅಭಾವವಿದೆ ಇತ್ಯಾದಿ ಪ್ರಕಾರದಿಂದ ದೇಶಗಳ ಕುರಿತು ಮಾತನಾಡುವುದು ದೇಶವಿಕಥೆಯಿದೆ.

ಕುಕವಿಗಳಿಂದ ಬರೆಯಲ್ಪಟ್ಟ ಅನೇಕ ಕವಿತೆ, ಪದ್ಯ , ಗೀತೆ, ದೋಹೆ, ಕಥೆ-ಒಗಟು, ಸಂವಾದ ಮೊದಲಾದ ಪರಮಾರ್ಥರಹಿತ ಅನೇಕ ವಚನ-ರಚನೆಗಳ ಚರ್ಚೆ ಮಾಡುವುದು ಎಂದರೆ ಅವರು ತುಂಬ ಒಳ್ಳೆಯ ಕವಿತೆ ಬರೆದಿದ್ದಾರೆ, ಇವರು ಆ ದೊರೆಯ ಕೀರ್ತಿಯ ಕಾವ್ಯವನ್ನು ಸೊಗಸಾಗಿ ಬರೆದಿದ್ದಾರೆ, ಅವರು ಬಹಳಷ್ಟು ಕಥೆ-ಘಟನೆಗಳನ್ನು ಅರಿತುಕೊಂಡಿದ್ದಾರೆ - ಇತ್ಯಾದಿಗಳ ಚರ್ಚೆ ಮಾಡುವುದು ಭಾಷಾವಿಕಥೆಯಿದೆ. ಪಶುಗಳ ಕುರಿತಾಗಿ ಆ ಗಿಳಿಯು ಎಷ್ಟು ಚೆನ್ನಾಗಿ ಮಾತನಾಡುತ್ತದೆ, ಆ ನಾಯಿಯು ಹೇಗೆ ಯಜಮಾನನ ಆಜ್ಞೆ ಪಾಲಿಸುತ್ತದೆ, ಕೋಗಿಲೆಯ ಕಂಠವು ಅದೆಷ್ಟು ಮಧುರವಾಗಿದೆ- ಎಂಬಿತ್ಯಾದಿಯಾಗಿ ಕಾಗೆ, ಕೋಗಿಲೆ, ಪಾರಿವಾಳ, ನಾಯಿ, ಕತ್ತೆ ಮೊದಲಾದ ಪಶು-ಪಕ್ಷಿಗಳ ಭಾಷೆಯ ಕುರಿತಾಗಿ ಶುಭಾಶುಭ ಚರ್ಚೆ ಮಾಡುವುದು ಭಾಷಾ ವಿಕಥೆಯಿದೆ.

ಇತರರ ಗುಣಗಳನ್ನು ಮುಚ್ಚಿ ಹಾಕುವ ಸಲುವಾಗಿ ಉಪಾಯ ಮಾಡುವುದು; ಎಂದರೆ ರಾಜಸಭೆ ಅಥವಾ ಪಂಚ ಸಭೆಯಲ್ಲಿ ಮಾತನಾಡುತ್ತ ಅವನಲ್ಲಿ ಯಾವ ಗುಣವಿದೆ ? ಬಹಳಷ್ಟು ಜನರು ಅಂಥ ಗುಣಗಳಿಂದ ಯುಕ್ತರಿದ್ದಾರೆ, ಅವನಿಗಿಂತಲೂ ಅಧಿಕ ಗುಣವಂತರನ್ನು ನಾವು ನೋಡಿದ್ದೇವೆ. ಇವನಲ್ಲಿ ಅಂಥ ವಿಶೇಷತೆಯಾದರೂ ಏನಿದೆ? ಈ ಪ್ರಕಾರ ಪರಸ್ಪರರಲ್ಲಿ ಮಾತನಾಡುವುದು ಗುಣಬಂಧ ವಿಕಥೆಯಿದೆ.

ಕುದೇವಗಳ ಅತಿಶಯ, ಚಮತ್ಕಾರಗಳ ಚರ್ಚೆ ಮಾಡುವುದು; ಕೆಲವರು ಹೇಳುತ್ತಾರೆ- ಶೀತಲಾಮಾತೆಯು ಜೀವಂತ ಜ್ಯೋತಿಯಿದ್ದಾಳೆ. ಮತ್ತೆ ಕಲವರು ಆ ಭೈರವನು ಪ್ರತ್ಯಕ್ಷನಿದ್ದಾನೆ, ಆ ದೇವಿಯು ಧನ, ಸಂತಾನವನ್ನು ಪ್ರದಾನ ಮಾಡುತ್ತಾಳೆ. ಎಂಬುದಾಗಿ ಪರಸ್ಪರರಲ್ಲಿ ಮಾತನಾಡುವುದು ದೇವವಿಕಥೆಯಿದೆ.

ಕೆಲವರು ನೀನು ಮಹಾದುಷ್ಟನಿರುವೆಯೆನ್ನುತ್ತಾರೆ, ಇವನು ಮಹಾಪಾಪಿಯಿದ್ದಾನೆ, ಇವನ ಮೂರ್ಖತೆಯನ್ನು ಎಲ್ಲರೂ ತಿಳಿಯುತ್ತಾರೆ - ಈ ಪ್ರಕಾರ ಪರಸ್ಪರ ಕಠೋರ ವಚನಗಳನ್ನಾಡುವುದು ನಿಷ್ಠುರ ವಚನ ವಿಕಥೆಯಿದೆ.

ಬೇರೆಯವರಿಗೆ ಕೇಡು ಮಾಡುವ ಮಾತು, ಇತರರ ನಿಂದೆಯ ಮಾತು, ಇತರರಿಗೆ ಪೀಡೆಯನ್ನುಂಟು ಮಾಡುವ ಮಾತು - ಇತ್ಯಾದಿ ಪರಸ್ಪರರಲ್ಲಿ ಚರ್ಚಿಸುವುದು ಪರಪೈಶೂನ್ಯವಿಕಥೆಯಿದೆ.

ಅನೇಕ ಪ್ರಕಾರದ ಶೃಂಗಾರ ಕಥೆ - ಯಾವುದನ್ನು ಆಲಿಸುವುದರಿಂದ ಮನಸ್ಸು ವಿಕಾರರೂಪವಾಗಿ ಹೋಗುತ್ತದೆ ಅಂಥವುಗಳನ್ನು ಪರಸ್ಪರರಲ್ಲಿ ಮಾತನಾಡುವುದು ಶೃಂಗಾರ ವಿಕಥೆಯಿದೆ.

ಈ ದೇಶದಲ್ಲಿ ಈ ರೀತಿಯು ಒಳ್ಳೆಯದಿದೆ, ಈ ರೀತಿಯು ಒಳ್ಳೆಯದಿಲ್ಲ, ಆ ದೇಶದಲ್ಲಿ ಇಂಥದೊಂದು ವಸ್ತುವು ತುಂಬ ಒಳ್ಳೆಯದಿದೆ, ಇಂಥದೊಂದು ವಸ್ತುವು ಸರಿಯಿಲ್ಲ - ಇತ್ಯಾದಿ ರೂಪದ ಮಾತುಗಳನ್ನು ಪರಸ್ಪರರಲ್ಲಿ ಮಾತನಾಡುವುದು ದೇಶಕಾಲಾನುಚಿತ ವಿಕಥೆಯಿದೆ.

ಕುತೂಹಲ-ಹಾಸ್ಯರೂಪ, ಪರಸ್ಪರರಲ್ಲಿ ನಗೆಯೊಂದಿಗೆ ಬೈಗುಳದ ಪ್ರಯೋಗ ಮಾಡುವುದು, ವಿಪರೀತ ವಚನವಾಡುವುದು ಭಂಡ ವಿಕಥೆಯಿದೆ. ಅವಿವೇಕಪೂರ್ವಕ ಮಾತನಾಡುವುದು ಮೂರ್ಖ ವಿಕಥೆಯಿದೆ.

ತಮ್ಮ ಗುಣಗಳ ಅಧಿಕತೆಯನ್ನು ಪರಸ್ಪರರಲ್ಲಿ ಚರ್ಚಿಸುವುದು ಎಂದರೆ ಅಯ್ಯಾ ! ನಮ್ಮಲ್ಲಿ ಇಂಥ ಗುಣಗಳಿವೆ, ಅನೇಕ ಪರೋಪಕಾರದ ಕಾರ್ಯಗಳನ್ನು ಮಾಡಿದ್ದೇವೆ, ನಾವು ದೊಡ್ಡವರಿದ್ದೇವೆ, ನಮ್ಮ ದೊಡ್ಡಸ್ತಿಕೆಯನ್ನು ಎಲ್ಲರೂ ಮನ್ನಿಸುತ್ತ ಬಂದಿದ್ದಾರೆ - ಇತ್ಯಾದಿಯಾಗಿ ತಮ್ಮ-ತಮ್ಮ ಗುಣಗಳ ಕಥನವನ್ನು ಸರ್ವಪ್ರಕಾರದಿಂದ ಮಾಡುವುದು ಆತ್ಮ ಪ್ರಶಂಸಾವಿಕಥೆಯಿದೆ.

ಪರಸ್ಪರರಲ್ಲಿ ಬೇರೆಯವರ ನಿಂದೆಯ ಮಾತುಗಳನ್ನಾಡುವುದು ಪರಪರಿವಾದವಿಕಥೆಯಿದೆ.

ಇತರರ ಶರೀರ ಹಾಗೂ ವಸ್ತ್ರಗಳ ಮಲಿನತೆಯನ್ನು ಕಂಡು, ರೋಗದಿಂದ ಮಲಿನವಾಗಿರುವುದನ್ನು ಕಂಡು ಗ್ಲಾನಿರೂಪದ ಮಾತುಗಳನ್ನಾಡುವುದು ಪರಜುಗುಪ್ಸಾವಿಕಥೆ, ದುರ್ಗಂಧವಿಕಥೆಯಿದೆ.

ಪರಸ್ಪರರಲ್ಲಿ ಯುದ್ಧದ, ಜಗಳ-ತಂಟೆಯ ಮಾತನಾಡುವುದು ಕಲಹವಿಕಥೆಯಿದೆ.

ಪರಿಗ್ರಹ ಹೆಚ್ಚಿಸುವ ಮಾತುಗಳನ್ನು ಪರಸ್ಪರರಲ್ಲಿ ಆಡುವುದು ಪರಿಗ್ರಹ ವಿಕಥೆಯಿದೆ.

ಅನೇಕ ಪ್ರಕಾರದ ರಾಗ, ನೃತ್ಯ, ಗೀತೆ ಮೊದಲಾದವುಗಳ ಕುರಿತಾಗಿ ಮಾತನಾಡುವುದು ಸಂಗೀತ ವಿಕಥೆಯಿದೆ.

ಹೀಗೆ ಇವು ಇಪ್ಪತ್ತೈದು ವಿಕಥೆಯರೂಪ ವಚನಗಳು ಎಲ್ಲವು ಪಾಪಕಾರಕವಿದ್ದು ತ್ಯಾಗಮಾಡಲು ಯೋಗ್ಯವಿವೆ. ಎಂದು ತಿಳಿಯುವುದು. ಈ ಪ್ರಕಾರ ಶುಭಾಶುಭ ವಚನಗಳಲ್ಲಿ ಜ್ಞೇಯ-ಹೇಯ-ಉಪಾದೇಯ ಹೇಳಲಾಯಿತು. ಈಗ ದ್ರವ್ಯ, ಕ್ಷೇತ್ರ, ಕಾಲ, ಭಾವಗಳ ಸ್ವರೂಪ ಹೇಳುತ್ತಾರೆ-

**ದವ್ವೋ ಖೇತ್ತೋ ಕಾಲೇ ಯ, ಭಾವೋ ಚತ್ತಾರಿ ಭೇಯ ಜಿಣ ಉತ್ತಂ ।**
**ಜ್ಞೇಯೋಪಾದೇಯ ಹೇಓ, ಸಮ್ಮಾದಿಟ್ಠೀ ಸೋ ವಿ ಣಾದವ್ವೋ ॥೪೦॥**

**ಗಾಥಾರ್ಥ :-** ದ್ರವ್ಯ, ಕ್ಷೇತ್ರ, ಕಾಲ, ಭಾವ - ಇವು ನಾಲ್ಕು ಭೇದಗಳನ್ನು ಜಿನದೇವರು ಹೇಳಿದ್ದಾರೆ. ಇವುಗಳಲ್ಲಿ ಜ್ಞೇಯ, ಹೇಯ, ಉಪಾದೇಯ ಮಾಡುವಂಥ ಆತ್ಮನನ್ನು ಸಮ್ಯಗ್ದೃಷ್ಟಿಯೆಂದು ತಿಳಿಯುವುದು. ದ್ರವ್ಯ, ಕ್ಷೇತ್ರ, ಕಾಲ, ಭಾವಗಳಿಂದ ವಸ್ತುಗಳ ನಿರ್ಧಾರವಾಗುತ್ತದೆ.

**ಭಾವಾರ್ಥ :-** ದ್ರವ್ಯದಲ್ಲಿ ಜ್ಞೇಯ-ಹೇಯ-ಉಪಾದೇಯ :- ಸಮಸ್ತ ಜೀವ, ಅಜೀವಗಳನ್ನು ತಿಳಿಯುವುದಂತೂ ಜ್ಞೇಯವಿದೆ. ಅದರಲ್ಲಿ ಹೇಯ ಮತ್ತು ಉಪಾದೇಯವೆಂದು ಎರಡು ಭೇದಗಳಿವೆ. ಅದರಲ್ಲಿ ಯಾವುದರಿಂದ ಪರದ್ರವ್ಯಗಳನ್ನು ಎಂದರೆ ಪುದ್ಗಲ, ಧರ್ಮ, ಅಧರ್ಮ, ಆಕಾಶ, ಕಾಲವನ್ನು ತಿಳಿಯುವುದು ಅದಂತೂ ಜ್ಞೇಯವಿದೆ. ಸ್ವಯಂ ಆತ್ಮತತ್ತ್ವನಿದ್ದು ಭೇದಜ್ಞಾನದ ಚಿಂತನೆ ಮಾಡುವಂಥ ಅನುಭವಿ - ಜ್ಞೇಯ, ಹೇಯ, ಉಪಾದೇಯಗಳ ನಿರ್ಣಯ ಮಾಡುವಂಥ ಆತ್ಮದ್ರವ್ಯವು ಉಪಾದೇಯವಿದೆ. ಆ ಓರ್ವ ಆತ್ಮನನ್ನು ಹೊರತುಪಡಿಸಿ ಅನಂತ ಜೀವದ್ರವ್ಯಗಳು ಮತ್ತು ಹಾಗೆಯೇ ಆರು ದ್ರವ್ಯಗಳಿವೆ, ಅವೆಲ್ಲವೂ ಪರಜ್ಞೇಯವೆಂದು ತಿಳಿದುಕೊಂಡು ತ್ಯಾಗ ಮಾಡಲು ಯೋಗ್ಯ ಎಂದರೆ ಹೇಯವಿವೆ. ಅವೆಲ್ಲವು ತನ್ನ ಆತ್ಮಸ್ವರೂಪದಿಂದ ಭಿನ್ನವಿವೆ; ಅದರಿಂದ ತ್ಯಾಗ ಯೋಗ್ಯವಿವೆ. ಅವುಗಳ ಗುಣ-ಪರ್ಯಾಯಗಳು ಕೂಡ ಜಡವಿವೆ, ಅಜ್ಞಾನಮಯವಿವೆ, ಮೂರ್ತಿಕವಿವೆ, ಅಮೂರ್ತಿಕವಿವೆ, ಹೇಯವಿವೆ.

**ಸಂದೇಹ :-** ಮೂರ್ತಿಕವಂತೂ ತ್ಯಾಗಯೋಗ್ಯವಿವೆ, ಅದನ್ನಂತೂ ನಾವು ಕೂಡ ತಿಳಿದಿದ್ದೇವೆ; ಆದರೆ ಅಮೂರ್ತಿಕವಿರುವ ಯಾವ ಅನ್ಯ ದ್ರವ್ಯಗಳು ಚೇತನಾಗುಣಸಹಿತವಿವೆ ಅವುಗಳನ್ನು ಹೇಯವೆಂದೇಕೆ ಹೇಳುತ್ತಿರುವಿರಿ?

**ಸಮಾಧಾನ :-** ಎಲೈ ಭವ್ಯನೇ ! ಪುದ್ಗಲ ದ್ರವ್ಯಗಳು ಪರವಿವೆಯೆಂಬುದು ನಿನ್ನ ಮನಸ್ಸಿಗೆ ತಿಳಿದು ಬಂದಿದೆಯೆಂದ ಮೇಲೆ ಇದೂ ಕೂಡ ತಿಳಿದು ಬರುತ್ತದೆ. ನೀನು ಗಮನವಿಟ್ಟು ಆಲಿಸು ! ಪುದ್ಗಲವಂತೂ ಮೂರ್ತಿಕವಿರುವುದರಿಂದ ಪರವೇ ಇದೆ, ಅದನ್ನು ನೀನು ತಿಳಿದೇ ತಿಳಿಯುವೆ. ಧರ್ಮ, ಅಧರ್ಮ ಮೊದಲಾದ ನಾಲ್ಕು ದ್ರವ್ಯಗಳು ಅಮೂರ್ತಿಕವಿವೆ; ಆದರೆ ಚೇತನಾರಹಿತ ಜಡವಿರುವುದರಿಂದ ತ್ಯಾಗ ಯೋಗ್ಯವಿವೆ, ಹೇಯವಿವೆ. ತನ್ನಿಂದ ಭಿನ್ನವಾದ ಜೀವರುಗಳ ಪ್ರದೇಶ, ತತ್ತ್ವ, ಗುಣ, ಪರ್ಯಾಯಗಳು ಭಿನ್ನವಿವೆ. ಅವುಗಳ ರಾಗ-ದ್ವೇಷ ಭಾವಗಳ ಫಲವು ತನಗೆ ಬರುವುದಿಲ್ಲ ಮತ್ತು ತನ್ನಿಂದ ಮಾಡಲಾದ ರಾಗ-ದ್ವೇಷಗಳ ಫಲವು ಆ ಪರಜೀವಗಳಿಗೆ

ಹೋಗುವುದಿಲ್ಲ. ಬೇರೆಯವರಿಗೆ ಸುಖವಾದ ಮೇಲೆ ತನಗೆ ಸುಖವಾಗುವುದಿಲ್ಲ. ಬೇರೆಯವರಿಗೆ ದುಃಖವಾದ ಮೇಲೆ ತನಗೆ ದುಃಖವಾಗುವುದಿಲ್ಲ. ಅನ್ಯ ಜೀವರುಗಳಿಗೆ ಮೋಕ್ಷವಾದ ಮೇಲೆ ತನಗೆ ಮೋಕ್ಷವಾಗುವುದಿಲ್ಲ - ಈ ಪ್ರಕಾರ ವಿಶ್ವದಲ್ಲಿ ಅನಂತ ಜೀವಗಳಿವೆ. ಅವೆಲ್ಲವೂ ಭಿನ್ನ-ಭಿನ್ನವಿವೆ. ತಮ್ಮ-ತಮ್ಮ ಪರಿಣಾಮಗಳ ಭೋಕ್ತೃವಿವೆ. ಸಂಸಾರೀ ಮುಗ್ಧ ಜೀವರುಗಳು ಕೂಡ 'ಯಾರು ಮಾಡುತ್ತಾರೆ ಅವರು ಭೋಗಿಸುತ್ತಾರೆ'ಂದು ಹೇಳುತ್ತಾರೆ, ಹೀಗೆಯೇ ಜಗತ್ತಿನಲ್ಲಿ ಪ್ರಸಿದ್ಧ ಮಾತು ಇದೆ. ಆದುದರಿಂದ ಅನೇಕ ನಯಗಳ ಮೂಲಕ ವಿಚಾರ ಮಾಡಿ ನೋಡಿದರೆ ತನ್ನಿಂದ ಭಿನ್ನವಾದ ಅನ್ಯ ಅನಂತ ಜೀವಗಳಿವೆ (ನಿಗೋದದಿಂದ ಸಿದ್ಧರವರೆಗೆ) ಅವುಗಳನ್ನು ಕೂಡ ಪರದ್ರವ್ಯವೆಂದು ತಿಳಿದು ಬಿಟ್ಟುಕೊಡಲು ಯೋಗ್ಯವಿವೆ - ಹೇಯವೆಂದು ಹೇಳಲಾಗಿದೆ.

ಸಮ್ಯಗ್ದೃಷ್ಟಿಯು ಕೂಡ ಸಮತೆಯ ರಸವು ಪ್ರಗಟವಾದ ಮೇಲೆ ವೈರಾಗ್ಯವನ್ನು ಹೆಚ್ಚಿಸುವ ಸಲುವಾಗಿ ಜಗತ್ತಿನ ಸ್ವರೂಪದ ವಿಚಾರ ಮಾಡುತ್ತಾನೆ. ಆ ದ್ರವ್ಯಗಳಲ್ಲಿ ಸ್ವಲ್ಪ ಚಿಂತನವನ್ನು ಹೀಗೆ ಮಾಡುತ್ತಾನೆ - ಜೀವದ್ರವ್ಯಗಳಲ್ಲಿ ಮೂರು ಗತಿಯ ಜೀವಗಳಂತೂ ಬಹಳಷ್ಟು ಇವೆ, ಮನುಷ್ಯ ಗತಿಯ ಜೀವ ದ್ರವ್ಯಗಳು ತುಂಬಾ ಕಡಿಮೆಯಿವೆ. ನಾಲ್ಕು ಪ್ರಕಾರದ ದೇವಗಳಿದ್ದು ಅವರು ಕೂಡ ಪೃಥಕ್-ಪೃಥಕ್ ಅಸಂಖ್ಯಾತರಿದ್ದಾರೆ. ಏಳು ಪ್ರಕಾರದ ನರಕ ಪೃಥ್ವಿಗಳಿವೆ, ಅಲ್ಲಿಯೂ ಪ್ರತಿಯೊಂದರಲ್ಲಿ ಅಸಂಖ್ಯಾತ ಜೀವರುಗಳಿದ್ದಾರೆ. ತಿರ್ಯಂಚ ಗತಿಯ ಜೀವಗಳಲ್ಲಿ ಪೃಥ್ವಿಕಾಯಿಕ, ಜಲಕಾಯಿಕ, ಅಗ್ನಿಕಾಯಿಕ, ವಾಯುಕಾಯಿಕ - ಇವೆಲ್ಲವುಗಳಲ್ಲಿ ಅಸಂಖ್ಯಾತ-ಅಸಂಖ್ಯಾತ ಜೀವಗಳಿವೆ. ಅವೆಲ್ಲವುಗಳಲ್ಲಿ ಅಗ್ನಿಕಾಯಿಕ ಜೀವರಾಶಿ ಎಲ್ಲಕ್ಕಿಂತ ಕಡಿಮೆಯಿವೆ. ಅವು ಕೂಡ ಅಸಂಖ್ಯಾತ ಲೋಕದ ಪ್ರದೇಶಗಳಷ್ಟೆಂದು ತಿಳಿಯುವುದು. ಅವುಗಳನ್ನು ತಿಳಿಸಿಕೊಡುತ್ತಾರೆ - ಒಂದು ಸೂಚ್ಯಂಗುಲ ಕ್ಷೇತ್ರದಷ್ಟು ಒಂದು ಪ್ರದೇಶ ಸೂಚಿಯಲ್ಲಿ ಎಷ್ಟು ಪ್ರದೇಶಗಳಿವೆ, ಅದನ್ನು ಆಲಿಸಿರಿ !-

ಅಸಂಖ್ಯಾತ ಸಾಗರದ ಸಮಯಗಳು ಎಷ್ಟಿರುತ್ತವೆ, ಅಷ್ಟು ಪ್ರದೇಶಗಳೆಂದು ತಿಳಿಯುವುದು. ಒಂದು ಅಂಗುಲ ಕ್ಷೇತ್ರದ ಪ್ರದೇಶಗಳು ಇಷ್ಟು ಇರುತ್ತಿದ್ದರೆ ಇಡೀ ಕೈಯಲ್ಲಿ ಎಷ್ಟು ಪ್ರದೇಶಗಳಿರಬಹುದು ? ಅದೇ ರೀತಿ ಒಂದು ಹರದಾರಿಯ ಪ್ರದೇಶಗಳೆಷ್ಟು, ಲೋಕದ ಪ್ರದೇಶಗಳು ಎಷ್ಟಿರಬಹುದು ? ಈ ಪ್ರಕಾರ ಅಸಂಖ್ಯಾತ-ಲೋಕದ ಪ್ರದೇಶಗಳು ಎಷ್ಟಿವೆಯೋ ಅಷ್ಟು ಪ್ರತ್ಯೇಕ ವನಸ್ಪತಿಕಾಯಿಕ ಜೀವಗಳಿವೆ. ಅವುಗಳಿಗಿಂತ ಅಧಿಕ ತೇಜಕಾಯಿಕ ಜೀವಗಳೆಂದು ತಿಳಿಯುವುದು. ತೇಜಕಾಯಿಕದಿಂದ ಅಸಂಖ್ಯಾತ ಅಧಿಕ ಪೃಥ್ವಿಕಾಯಿಕಗಳಿವೆ. ಪೃಥ್ವಿಕಾಯಿಕಕ್ಕಿಂತ ಅಸಂಖ್ಯಾತ ಅಧಿಕ ಜಲಕಾಯಿಕಗಳಿವೆ ಮತ್ತು ಜಲಕಾಯಿಕದಿಂದ ಅಸಂಖ್ಯಾತ ಅಧಿಕ ವಾಯುಕಾಯಿಕಗಳಿವೆ. ವಾಯುಕಾಯಿಕ ಹಾಗೂ ಉಳಿದ ಎಲ್ಲ ಜೀವರಾಶಿಯಿಂದ ಅನಂತಗುಣಿತ ಸಾಧಾರಣ ಅರ್ಥಾತ್ ನಿಗೋದೀ ವನಸ್ಪತಿಯ ಜೀವಗಳಿವೆ.

ಇವೇ ಪಂಚಸ್ಥಾವರಗಳಲ್ಲಿ ಸೂಕ್ಷ್ಮ ಮತ್ತು ಬಾದರವೆಂಬ ಎರಡು ಭೇದಗಳಿವೆ. ಆಶ್ರಯವಿಲ್ಲದೆ ಯಾವವು ಉತ್ಪನ್ನವಾಗುತ್ತವೆ, ಆಯುವಿನ ಕೊನೆಯಲ್ಲದೆ ಯಾವವುಗಳ ಮರಣವಾಗುವುದಿಲ್ಲ, ಯಾರೋ ತಡೆಯುವುದರಿಂದ ತಡೆಯಲ್ಪಡುವ ಸಾಧ್ಯತೆಯಿಲ್ಲ. ಅವು ಸೂಕ್ಷ್ಮ ಜೀವಗಳಿವೆ. ಬೇರೆಯವರನ್ನು ತಡೆಯುವ ಮತ್ತು ಬೇರೆಯವರಿಂದ ತಡೆಯಲ್ಪಡುವ ಸಾಧ್ಯತೆಯಿರುವಂಥ, ಶಸ್ತ್ರಾದಿಗಳಿಂದ ಘಾತಕ್ಕೊಳಗಾಗುವಂಥ, ಸಹಾಯತೆಯಿಂದ ಉತ್ಪನ್ನವಾಗುವಂಥವು ಅವು ಬಾದರವಿವೆ. ನಾಲ್ಕು ಸ್ಥಾವರಗಳಲ್ಲಿ ಅಸಂಖ್ಯಾತ ಬಾದರ ಜೀವಗಳಿವೆ. ಬಾದರದಿಂದ ಅಸಂಖ್ಯಾತ ಗುಣಿತ ಸೂಕ್ಷ್ಮ ಜೀವಗಳಿವೆ. ಸಾಧಾರಣ (ನಿಗೋದ)ದಲ್ಲಿ ಅನಂತ ಬಾದರ ಜೀವಗಳಿವೆ. ಅವುಗಳಿಂದ ಅಸಂಖ್ಯಾತ ಗುಣಿತ ಅನಂತ ಸೂಕ್ಷ್ಮ ಸಾಧಾರಣ ನಿಗೋದೀ ಜೀವಗಳಿವೆ. ದ್ವೀಂದ್ರಿಯದಿಂದ ತ್ರೀಂದ್ರಿಯ, ಚತುರಿಂದ್ರಿಯ, ಪಂಚೇಂದ್ರಿಯ ಹಾಗೂ ತಿರ್ಯಂಚ ರಾಶಿಯು ಅಸಂಖ್ಯಾತ - ಅಸಂಖ್ಯಾತವಿವೆ. ಕರ್ಮಭೂಮಿಯ ಮನುಷ್ಯರೆಲ್ಲರು ಸಂಖ್ಯಾತರಿದ್ದಾರೆ. ಈ ಪ್ರಕಾರ ಜೀವದ್ರವ್ಯದ ಅಪೇಕ್ಷೆಯಿಂದ ಕಥನ ಮಾಡಲಾಯಿತು.

ಷಟ್‌ಕಾಯ ಜೀವಗಳ ಶರೀರದ ಕುರಿತಾಗಿ ಆಕಾರ-ಪೃಥ್ವಿಕಾಯಿಕಗಳ ಆಕಾರವು ಚನ್ನಂಗಿಯ ಸಮಾನವಿದೆ. ಜಲಕಾಯಿಕಗಳ ಆಕಾರವು ಜಲಬಿಂದುವಿನ ಸಮಾನವಿದೆ. ಅಗ್ನಿ(ತೇಜ) ಕಾಯಿಕಗಳ ಆಕಾರವು ಬಹಳಷ್ಟು ಸೂಜಿಗಳ ಸಮೂಹದ ಸಮಾನವಿದೆ. ಪವನಕಾಯಿಕ ಶರೀರಗಳ ಆಕಾರವು ಧ್ವಜದ ಸಮಾನವಿದೆ. ವನಸ್ಪತಿಕಾಯಿಕಗಳ ಶರೀರದ ಆಕಾರವು ಅನೇಕ ಪ್ರಕಾರವಿವೆ. ದ್ವೀಂದ್ರಿಯ, ತ್ರೀಂದ್ರಿಯ, ಚತುರಿಂದ್ರಿಯ, ಪಂಚೇಂದ್ರಿಯ ಜೀವಗಳ ಶರೀರದ ಆಕಾರಗಳು ಅನೇಕ ಪ್ರಕಾರದವಿರುತ್ತವೆ.

ಆರು ಕಾಯಿಕಗಳ ಆಯುಕರ್ಮ - ಮೃದು ಮತ್ತು ಕಠೋರವೆಂದು ಪೃಥ್ವಿಕಾಯಿಕದ ಎರಡು ಭೇದಗಳಿವೆ. ಹಳದಿ ಮಣ್ಣು, ಖಡುವಿನ ಮಣ್ಣು, ಕಾವಿ ಮಣ್ಣು ಇವೇ ಮೊದಲಾದವು ಮೃದು ಪೃಥ್ವಿಕಾಯಿಕವಿವೆ. ಇವುಗಳ ಉತ್ಕೃಷ್ಟ ಆಯುವು ಹನ್ನೆರಡು ಸಾವಿರ ವರ್ಷ ಪ್ರಮಾಣವಿದೆ. ವಜ್ರ, ರತ್ನ, ಪಾಷಾಣ ಮೊದಲಾದವು ಕಠೋರ ಪೃಥ್ವಿಕಾಯಿಕವಿದ್ದು ಇವುಗಳ ಉತ್ಕೃಷ್ಟ ಆಯುವು ಇಪ್ಪತ್ತೆರಡು ಸಾವಿರ ವರ್ಷವಿದೆ.

ಜಲಕಾಯಿಕದ ಉತ್ಕೃಷ್ಟ ಆಯುವು ಏಳು ಸಾವಿರ ವರ್ಷವಿದೆ. ಅಗ್ನಿಕಾಯಿಕದ ಉತ್ಕೃಷ್ಟ ಆಯುವು ಮೂರು ದಿವಸವಿದೆ. ಪವನಕಾಯಿಕದ ಉತ್ಕೃಷ್ಟ ಆಯುವು ಮೂರು ಸಾವಿರ ವರ್ಷವಿದೆ. ವನಸ್ಪತಿಕಾಯಿಕದ ಉತ್ಕೃಷ್ಟ ಆಯುವು ಹತ್ತು ಸಾವಿರ ವರ್ಷದ್ದಿದೆ.

ಜಲ ಜಿರಳೆ, ಹೇಣು ಮೊದಲಾದ ಎರಡು ಇಂದ್ರಿಯ ಜೀವಗಳ ಉತ್ಕೃಷ್ಟ ಆಯುವು ಹನ್ನೆರಡು ವರ್ಷವಿದೆ.

ಇರುವೆ, ತಿಗಣೆ, ಮೊದಲಾದ ಮೂರು ಇಂದ್ರಿಯಗಳ ಉತ್ಕೃಷ್ಟ ಆಯುವು ನಲವತ್ತೊಂಭತ್ತು ದಿನವಿದೆ. ನಾಲ್ಕು ಇಂದ್ರಿಯದ ಜೀವಗಳಾದ ನೊಣ, ದುಂಬಿ, ಚಿಟ್ಟೆಗಳ ಉತ್ಕೃಷ್ಟ ಆಯುವು ಆರು ತಿಂಗಳದ್ದಿದೆ. ಅಸಂಜ್ಞೀ ಪಂಚೇಂದ್ರಿಯದ ಉತ್ಕೃಷ್ಟ ಆಯುವು ಕೋಟಿ ಪೂರ್ವ ವರ್ಷ ಪ್ರಮಾಣವಿದೆ. ಸಂಜ್ಞೀ ಪಂಚೇಂದ್ರಿಯದಲ್ಲಿ ದೇವ-ನಾರಕಿಗಳ ಉತ್ಕೃಷ್ಟ ಆಯುವು ಮೂವತ್ತ್ಮೂರು ಸಾಗರದ್ದಿದೆ. ಉತ್ಕೃಷ್ಟ ಭೋಗಭೂಮಿಜ ಮನುಷ್ಯ ತಿರ್ಯಂಚಗಳದು ಮೂರು ಪಲ್ಯವಿದೆ. ಕರ್ಮಭೂಮಿಜ ಮನುಷ್ಯ, ತಿರ್ಯಂಚ(ಪಶು)ಗಳ ಉತ್ಕೃಷ್ಟ ಆಯುವು ಕೋಟಿ ಪೂರ್ವ ವರ್ಷ ಪ್ರಮಾಣವಿದೆ. ದೇವ, ನಾರಕಿಗಳ ಜಘನ್ಯ ಆಯುವು ಹತ್ತು ಸಾವಿರ ವರ್ಷದ್ದಿದ್ದರೆ ಮನುಷ್ಯ, ತಿರ್ಯಂಚಗಳ ಜಘನ್ಯ ಆಯುವು ಅಂತರ್ಮುಹೂರ್ತವಿದೆ.

ಆರು ಕಾಯಿಕ ಜೀವಗಳ ಉತ್ಕೃಷ್ಟ ಕರ್ಮಸ್ಥಿತಿ-ಎಂಟು ಕರ್ಮಗಳಲ್ಲೆಲ್ಲ ಉತ್ಕೃಷ್ಟ ಸ್ಥಿತಿಯು ದರ್ಶನ ಮೋಹನೀಯದ್ದಿದೆ. ಐದು ಸ್ಥಾವರ ಏಕೇಂದ್ರಿಯಗಳಲ್ಲಿ ಈ ಕರ್ಮದ ಉತ್ಕೃಷ್ಟ ಸ್ಥಿತಿಯು ಒಂದು ಸಾಗರದ್ದೆಂದು ತಿಳಿಯುವುದು. ಎರಡು ಇಂದ್ರಿಯದ ಜೀವಗಳಿಗೆ ಈ ಕರ್ಮದ ಉತ್ಕೃಷ್ಟ ಸ್ಥಿತಿಯು ಇಪ್ಪತ್ತೈದು ಸಾಗರದ್ದೆಂದು ತಿಳಿಯುವುದು. ಮೂರು ಇಂದ್ರಿಯ ಜೀವಗಳ ಉತ್ಕೃಷ್ಟ ಕರ್ಮಸ್ಥಿತಿಯು ಐವತ್ತು ಸಾಗರವೆಂದು ತಿಳಿಯುವುದು. ನಾಲ್ಕು ಇಂದ್ರಿಯ ಜೀವಗಳಲ್ಲಿ ಈ ಕರ್ಮದ ಉತ್ಕೃಷ್ಟ ಸ್ಥಿತಿಯು ನೂರು ಸಾಗರವೆಂದು ತಿಳಿಯುವುದು. ಅಸಂಜ್ಞೀ ಪಂಚೇಂದ್ರಿಯದಲ್ಲಿ ಇದರ ಉತ್ಕೃಷ್ಟ ಸ್ಥಿತಿಯು ಒಂದು ಸಾವಿರ ಸಾಗರದ್ದಿರುತ್ತದೆ. ಸಂಜ್ಞೀ ಪಂಚೇಂದ್ರಿಯದಲ್ಲಿ ಈ ಕರ್ಮದ ಉತ್ಕೃಷ್ಟ ಸ್ಥಿತಿಯು ಎಪ್ಪತ್ತು ಕೋಟಾಕೋಟಿಸಾಗರ ಬಂಧಿಸುತ್ತದೆ.

ಆರು ಕಾಯಗಳಲ್ಲಿ ಪಂಚೇಂದ್ರಿಯಗಳ ಆಕಾರ-ಸ್ಪರ್ಶನೇಂದ್ರಿಯ ಶರೀರದ ಆಕಾರ-ಪ್ರಕಾರಗಳು ಅನೇಕವಿವೆ. ಅದೇ ಪ್ರಕಾರ ಸ್ಪರ್ಶನೇಂದ್ರಿಯಗಳ ಆಕಾರವನ್ನೂ ತಿಳಿಯುವುದು. ರಸನೇಂದ್ರಿಯದ ಆಕಾರವು ಹಸುವಿನ ಖುರದ ಸಮಾನವಿದೆ. ಘ್ರಾಣೇಂದ್ರಿಯದ ಆಕಾರವು ಎಳ್ಳಿನ ಪುಷ್ಪದ ಸಮಾನವಿದೆ. ನೇತ್ರೇಂದ್ರಿಯದ ಆಕಾರವು ಚನ್ನಂಗಿ ಬೇಳೆಯ ಸಮಾನವಿದೆ. ಕರ್ಣೇಂದ್ರಿಯದ ಆಕಾರವು ಜವೆಗೋದಿಯ ಮಧ್ಯದ ನಲಿಕೆಯ ಸಮಾನವಿರುತ್ತದೆ.

ಪಂಚೇಂದ್ರಿಯಗಳಲ್ಲಿ ಮನುಷ್ಯರ ಉತ್ಕೃಷ್ಟ ವಿಷಯ ಮರ್ಯಾದೆ-ಸಂಜ್ಞೀ ಪಂಚೇಂದ್ರಿಯ ಸ್ಪರ್ಶನ, ರಸನಾ, ಘ್ರಾಣ-ಇವು ಮೂರು ಇಂದ್ರಿಯಗಳ ಮೂಲಕ ಒಂಭತ್ತು-ಒಂಭತ್ತು ಯೋಜನದ ವಿಷಯಗಳನ್ನು

ತಿಳಿಯುತ್ತಾರೆ. ನೇತ್ರೇಂದ್ರಿಯದಿಂದ ಉತ್ಕೃಷ್ಟ ನಲವತ್ತೇಳು ಸಾವಿರದ ಎರಡು ನೂರಾ ಅರವತ್ಮೂರು ಪೂರ್ಣಾಂಕ ಏಳು ಇಪ್ಪತ್ತಾಂಶ (೪೭೨೬೩ ೭/೨೦) ಯೋಜನ ತಿಳಿಯುತ್ತಾರೆ. ಶ್ರೋತ್ರೇಂದ್ರಿಯದಿಂದ ಉತ್ಕೃಷ್ಟ ಹನ್ನೆರಡು ಯೋಜನದ ವಿಷಯ ತಿಳಿಯುತ್ತಾರೆ.

ಪಂಚೇಂದ್ರಿಯ ಅಸಂಜ್ಞೀ - ಅಸಂಜ್ಞೀ ಪಂಚೇಂದ್ರಿಯವು ಸ್ಪರ್ಶನೇಂದ್ರಿಯದಿಂದ ಉತ್ಕೃಷ್ಟವೆಂದರೆ ೬೪೦೦ ಧನುಷ್ಯದವರೆಗಿನ ವಿಷಯವನ್ನು ತಿಳಿಯುತ್ತದೆ. ರಸನೇಂದ್ರಿಯದಿಂದ ಉತ್ಕೃಷ್ಟವೆಂದರೆ ೫೧೨ ಧನುಷ್ಯದವರೆಗಿನ ಘ್ರಾಣೇಂದ್ರಿಯದಿಂದ ೪೦೦ ಧನುಷ್ಯದವರೆಗಿನ, ಚಕ್ಷು ಇಂದ್ರಿಯದಿಂದ ೫೯೦೮ ಯೋಜನದ ಮತ್ತು ಶ್ರೋತ್ರೇಂದ್ರಿಯದಿಂದ ಎಂಟು ಸಾವಿರ ಧನುಷ್ಯದ ವಿಷಯವನ್ನು ತಿಳಿಯಬಹುದಾಗಿದೆ.

ನಾಲ್ಕು ಇಂದ್ರಿಯ ಜೀವದ ವಿಷಯ-ಚತುರಿಂದ್ರಿಯವು ಸ್ಪರ್ಶನೇಂದ್ರಿಯದಿಂದ ೩೨೦೦ ಧನುಷ್ಯದ, ರಸನೇಂದ್ರಿಯದಿಂದ ೨೫೬ ಧನುಷ್ಯದ, ಘ್ರಾಣೇಂದ್ರಿಯದಿಂದ ೨೦೦ ಧನುಷ್ಯದ ಹಾಗೂ ಚಕ್ಷು ಇಂದ್ರಿಯದಿಂದ ಉತ್ಕೃಷ್ಟತಮವೆಂದರೆ ೨೯೫೪ ಯೋಜನದವರೆಗಿನ ವಿಷಯವನ್ನು ತಿಳಿಯುತ್ತದೆ.

ತ್ರೀಂದ್ರಿಯ ಜೀವದ ವಿಷಯ-ತ್ರೀಂದ್ರಿಯವು ಸ್ಪರ್ಶನೇಂದ್ರಿಯದಿಂದ ಉತ್ಕೃಷ್ಟತಮವೆಂದರೆ ೧೬೦೦ ಧನುಷ್ಯದ, ರಸನೇಂದ್ರಿಯದಿಂದ ೧೨೮ ಧನುಷ್ಯದ, ಘ್ರಾಣೇಂದ್ರಿಯದಿಂದ ೧೦೦ ಧನುಷ್ಯದವರೆಗಿನ ವಿಷಯವನ್ನು ತಿಳಿಯುತ್ತದೆ.

ದ್ವೀಂದ್ರಿಯ ಜೀವದ ವಿಷಯ-ದ್ವೀಂದ್ರಿಯವು ಸ್ಪರ್ಶನೇಂದ್ರಿಯದಿಂದ ಉತ್ಕೃಷ್ಟತಮವೆಂದರೆ ೮೦೦ ಧನುಷ್ಯದ, ರಸನೇಂದ್ರಿಯದಿಂದ ೬೪ ಧನುಷ್ಯದ ವಿಷಯವನ್ನು ತಿಳಿಯುತ್ತದೆ.

ಏಕೇಂದ್ರಿಯ ಜೀವದ ವಿಷಯ-ಏಕೇಂದ್ರಿಯವು ಸ್ಪರ್ಶನೇಂದ್ರಿಯದಿಂದ ಉತ್ಕೃಷ್ಟತಮವೆಂದರೆ ೪೦೦ ಧನುಷ್ಯದವರೆಗಿನ ವಿಷಯವನ್ನು ತಿಳಿಯುತ್ತದೆ - ಈ ಪ್ರಕಾರ ಪಂಚೇಂದ್ರಿಯಗಳ ವಿಷಯವನ್ನು ಹೇಳಲಾಯಿತು.

ಏಕೇಂದ್ರಿಯದ ಭೇದಗಳಲ್ಲಿ ನಿಗೋದವಿದೆ. ಆ ನಿಗೋದದ ಪಂಚಸ್ಥಾನಗಳಿವೆ. ಅವನ್ನು ಮುಗ್ಧ ಜೀವಗಳು ಪಂಚಗೋಲಕವೆಂದು ಹೇಳುತ್ತಾರೆ. ಉಕ್ತಂ ಚ ಸಿದ್ಧಾಂತ ಗೊಮ್ಮಟಸಾರೇ -

**ಜಂಬೂದೀವಂ ಭರಹೋ ಕೋಸಲ ಸಾಗೇದತಗ್ಘರಾಇಂ ವಾ ।**
**ಖಂದಂಡರಆವಾಸಾ ಪುಲವಿ ಸರೀರಾಣಿ ದಿಟ್ಠಂತಾ ॥**

**ಅರ್ಥ :-** ಯಾವ ಪ್ರಕಾರ ಜಂಬೂ ದ್ವೀಪದಲ್ಲಿ ಭರತಕ್ಷೇತ್ರ, ಭರತಕ್ಷೇತ್ರದಲ್ಲಿ ಕೌಸಲದೇಶ, ದೇಶದಲ್ಲಿ ಸಾಕೇತನಗರ, ನಗರದಲ್ಲಿ ಮನೆಗಳಿವೆ; ಅದೇ ಪ್ರಕಾರ ನಿಗೋದದಲ್ಲಿ ಪಂಚಗೋಲಕಗಳಿವೆ - ಸ್ಕಂಧ, ಅಂಡರ, ಆವಾಸ, ಪುಲವಿ ಮತ್ತು ಶರೀರ. ಇವುಗಳ ಸಾಮಾನ್ಯ ಸ್ವರೂಪ ಹೇಳುತ್ತಾರೆ -

ಒಂದು ಸೂಜಿಯ ತುದಿಯ ಮೇಲೆ ಸಾಧಾರಣ ವನಸ್ಪತಿಯ ಎಷ್ಟು ಸ್ಕಂಧಗಳು ಬರುತ್ತವೆ, ಆ ಸ್ಕಂಧಗಳನ್ನು ತಗೆದುಕೊಂಡು ಒಂದುವೇಳೆ ಸರ್ವಜ್ಞ ಭಗವಂತರ ಹತ್ತಿರ ಹೋಗಿ ಓ ಪ್ರಭು ! ಇವುಗಳಲ್ಲಿ ಇರುವ ಜೀವಗಳ ಸಂಖ್ಯೆಯನ್ನು ತಿಳಿಸಿಕೊಡಿರಿ, ಎಂದು ಕೇಳಿದರೆ ಆಗ ಜ್ಞಾನಿಗಳು ಹೇಳುತ್ತಾರೆ - ಈ ಸೂಜಿಯ ಮೇಲೆ ನಿಗೋದವಿದೆ ಅದರಲ್ಲಿ ಅಸಂಖ್ಯಾತ ಲೋಕ ಪ್ರಮಾಣ ಸ್ಕಂಧಗಳಿವೆ, ಆ ಒಂದೊಂದು ಸ್ಕಂಧದಲ್ಲಿ ಅಸಂಖ್ಯಾತ - ಅಸಂಖ್ಯಾತ ಲೋಕ ಪ್ರಮಾಣ ಅಂಡರಗಳಿವೆ. ಒಂದೊಂದು ಅಂಡರದಲ್ಲಿ ಅಸಂಖ್ಯಾತ - ಅಸಂಖ್ಯಾತ ಲೋಕಪ್ರಮಾಣ ಆವಾಸಗಳಿವೆ. ಒಂದೊಂದು ಆವಾಸದಲ್ಲಿ ಅಸಂಖ್ಯಾತ -ಅಸಂಖ್ಯಾತ ಲೋಕ ಪ್ರಮಾಣ ಪುಲವಿಗಳಿವೆ. ಒಂದೊಂದು ಪುಲವಿಯಲ್ಲಿ ಅಸಂಖ್ಯಾತ-ಅಸಂಖ್ಯಾತ ಲೋಕಪ್ರಮಾಣ ಶರೀರಗಳಿವೆ. ಒಂದೊಂದು ಶರೀರದಲ್ಲಿ ಅಕ್ಷಯ ಅನಂತ ಜೀವಗಳಿವೆ. ಒಂದು ಶರೀರದಿಂದ ಪ್ರತಿಸಮಯ ಹೊರಗೆ ಬಂದು ಅನಂತ ಜೀವಗಳು ಅನಂತ ಕಾಲದವರೆಗೆ ಮೋಕ್ಷಕ್ಕೆ ಹೋಗತೊಡಗಿದರೂ ಕೂಡ ಒಂದು ಶರೀರವು ಬರಿದಾಗುವುದಿಲ್ಲ; ಇದರ ಹೆಸರು ಅಕ್ಷಯ ಅನಂತವಿದೆ.

ಈ ಪ್ರಕಾರ ಸೂಜಿಯ ತುದಿಯಷ್ಟು ಸಾಧಾರಣ ನಿಗೋದಿ ಜೀವಗಳ ದೀರ್ಘತೆಯಿದೆ. ಇಂಥ ಸೂಕ್ಷ್ಮ ನಿಗೋದದಿಂದ ಮೂರು ಲೋಕವು ತುಂಬಿಕೊಂಡಿದೆ.

ಕೆಲವು ಮುಗ್ಧ ಜೀವಗಳು ಮನ್ನಿಸುವುದೇನೆಂದರೆ - ಏಳನೆಯ ನರಕದ ಕೆಳಗೆ ಯಾವ ಪಂಚಗೋಲಕಗಳಿವೆ ಅಲ್ಲಿ ನಿಗೋದಿಗಳ ವಾಸಸ್ಥಾನವಿದೆ; ಆದರೆ ಎಲೈ ಭವ್ಯರೇ ! ಹೀಗೆ ಹೇಳುವುದು (ಮನ್ನಿಸುವುದು) ಭ್ರಮೆಯಿದೆ. ನಿಜವಾಗಿ ಪಂಚಗೋಲಕಗಳಂತೂ ಮೇಲೆ ಹೇಳಿರುವಂತೆ ಇವೆ.

ಈ ಸಂಪೂರ್ಣ ಲೋಕದಲ್ಲಿ ನಿಗೋದರಾಶಿಯು ಕೊಡದಲ್ಲಿ ಜಲದ ಸಮಾನ ತುಂಬಿಕೊಂಡಿದೆ. ಇದರಲ್ಲಿ ನಿತ್ಯ ನಿಗೋದ ಮತ್ತು ಇತರ ನಿಗೋದವೆಂದು ಎರಡು ಭೇದಗಳಿವೆ. ಅದರಲ್ಲಿನ ಯಾವ ಜೀವಗಳು ಅನಂತ ಕಾಲದಿಂದ ವ್ಯವಹಾರ ರಾಶಿಯ ಸ್ಪರ್ಶವನ್ನೇ ಮಾಡಿಲ್ಲ, ಅದಂತೂ ನಿತ್ಯ ನಿಗೋದರಾಶಿ ಎನಿಸಿಕೊಳ್ಳುತ್ತದೆ ಮತ್ತು ಯಾವ ಜೀವಗಳು ನಿಗೋದದಿಂದ ಹೊರಗೆ ಬಂದು ವ್ಯವಹಾರ ರಾಶಿಯ ನಾಲ್ಕು ಗತಿಗಳನ್ನು ಪ್ರಾಪ್ತ ಮಾಡಿಕೊಂಡು ಪುನಃ ಮಿಥ್ಯಾತ್ವಾದಿ ಕರ್ಮದಿಂದ ನಿಗೋದದಲ್ಲಿ ಹೊರಟು ಹೋಗುತ್ತವೆ, ಅದು ಇತರ ನಿಗೋದವಿದೆ. ಹೀಗೆ ನಿಗೋದ ಮೊದಲಾಗಿ ಪಂಚೇಂದ್ರಿಯದವರೆಗಿನ ಯಾವ ಜೀವಗಳಿವೆ, ಆ ಷಟ್‌ಕಾಯಿಕಗಳ ಉತ್ಕೃಷ್ಟ ಆಯುವನ್ನಂತೂ ಮೇಲೆ ಹೇಳಿ ಬಂದಿದ್ದೇವೆ. ಜಘನ್ಯದಲ್ಲಿ ಇರುವಂಥ ವಿಶೇಷತೆಯೆಂದರೆ ಒಂದು ವೇಳೆ ತೀರ ಅಲ್ಪ ಆಯುಕರ್ಮವು ಷಟ್‌ಕಾಯಗಳದ್ದಿದ್ದರೆ ಒಂದು ಶ್ವಾಸದ ಹದಿನೆಂಟನೆಯ ಒಂದು ಭಾಗವಿರುತ್ತದೆ. ಒಂದು ಅಂತರ್ಮುಹೂರ್ತದಲ್ಲಿ ಅತಿಹೆಚ್ಚು ಭವಧಾರಣ ಮಾಡಿದರೆ ಅರವತ್ತಾರು ಸಾವಿರದಾ ಮೂರು ನೂರಾ ಮೂವತ್ತಾರು ಬಾರಿ ಜನ್ಮ ಮತ್ತು ಅಷ್ಟೇ ಬಾರಿ ಮರಣಕ್ಕೆ ಪ್ರಾಪ್ತವಾಗುತ್ತದೆ. ಅದನ್ನೇ ಹೇಳುತ್ತಾರೆ.

ಪೃಥ್ವಿಕಾಯಿಕ, ಜಲಕಾಯಿಕ, ಅಗ್ನಿಕಾಯಿಕ, ವಾಯುಕಾಯಿಕ ಮತ್ತು ವನಸ್ಪತಿಕಾಯಿಕಗಳಲ್ಲಿನ ನಿಗೋದವು ಈ ಐದು ಸ್ಥಾವರಗಳ ಸೂಕ್ಷ್ಮ ಮತ್ತು ಬಾದರದಿಂದ ಹತ್ತು ಭೇದಗಳಿವೆ ಹಾಗೂ ವನಸ್ಪತಿಕಾಯಿಕದ ಸಾಧಾರಣ ಮತ್ತು ಪ್ರತ್ಯೇಕದ ಭೇದದಿಂದ ಪ್ರತಿಯೊಂದರ ಎರಡು ಭೇದಗಳಿವೆ. ಯಾವವುಗಳಲ್ಲಿ ಒಂದು ಶರೀರದ ಸ್ವಾಮಿಯು ಒಂದು ಜೀವವಿರುತ್ತದೆ, ಅದು ಪ್ರತ್ಯೇಕ ವನಸ್ಪತಿಯಿದೆ. ಯಾವವುಗಳಲ್ಲಿ ಒಂದು ಶರೀರದ ಸ್ವಾಮಿ ಅನಂತ ಜೀವಗಳಿರುತ್ತವೆ ಅವು ಸಾಧಾರಣ ವನಸ್ಪತಿಗಳಿವೆ. ಅವುಗಳಲ್ಲಿ ಪ್ರತ್ಯೇಕ ವನಸ್ಪತಿಯ ಒಂದು ಶರೀರವು ನಷ್ಟವಾಗಿ ಹೋದ ಮೇಲೆ ಒಂದು ಜೀವದ್ದೇ ಘಾತವಾಗುತ್ತದೆ ಮತ್ತು ಸಾಧಾರಣ ವನಸ್ಪತಿಯ ಒಂದು ಶರೀರವು ನಷ್ಟವಾಗಿ ಹೋದ ಮೇಲೆ ಅನಂತ ಜೀವಗಳ ಘಾತವಾಗುತ್ತದೆ; ಅದರಿಂದ ಧರ್ಮಾತ್ಮಾ ಜೀವರುಗಳು ಸಾಧಾರಣ ವನಸ್ಪತಿಗಳ ರಕ್ಷಣೆಯ ವಿಶೇಷ ಯತ್ನ ಮಾಡುವುದು ಯೋಗ್ಯವಿದೆ. ಸಾಧಾರಣ, ಪ್ರತ್ಯೇಕ ವನಸ್ಪತಿಗಳೊಳಗಿಂದ ಪ್ರತ್ಯೇಕ ವನಸ್ಪತಿಯನ್ನು ತಗೆದುಕೊಳ್ಳಬೇಕು. ಈ ಪ್ರಕಾರ ಪಂಚಸ್ಥಾವರಗಳಲ್ಲಿ ಸೂಕ್ಷ್ಮ ಬಾದರದಿಂದ ಹತ್ತು ಭೇದಗಳಿವೆ ಹಾಗೂ ಒಂದು ಪ್ರತ್ಯೇಕ ವನಸ್ಪತಿಯಿದೆ. - ಹೀಗೆ ಏಕೇಂದ್ರಿಯದ ಒಟ್ಟು ಹನ್ನೊಂದು ಭೇದಗಳಿವೆ. ಇವುಗಳ ಪೃಥಕ್ ಪೃಥಕ್ ಆರು ಸಾವಿರದಾ ಹನ್ನೆರಡು, ಆರು ಸಾವಿರದಾ ಹನ್ನೆರಡು ಜನ್ಮ ಮರಣ ಮಾಡಿದಾಗ ಹನ್ನೊಂದು ಸ್ಥಾನಗಳದ್ದು ಸೇರಿ ಅರವತ್ತಾರು ಸಾವಿರದಾ ಒಂದು ನೂರಾ ಮೂವತ್ತೆರಡು ಜನ್ಮ-ಮರಣಗಳಾದವು - ಇದಂತೂ ಏಕೇಂದ್ರಿಯದ್ದೆಂದು ತಿಳಿಯುವುದು.

ದ್ವೀಂದ್ರಿಯಗಳದು ಎಂಭತ್ತು , ತ್ರೀಂದ್ರಿಯದ್ದು ಅರವತ್ತು , ಚತುರಿಂದ್ರಿಯದ್ದು ನಲವತ್ತು , ಪಂಚೇಂದ್ರಿಯದ್ದು ಇಪ್ಪತ್ನಾಲ್ಕು-ಇವುಗಳಲ್ಲಿ ಎಂಟು ಭವ ಸಂಜ್ಞಿ, ಎಂಟು ಭವ ಅಸಂಜ್ಞಿಯದು ಮತ್ತು ಎಂಟು ಭವ ಮನುಷ್ಯನದು, ಇವು ಇಪ್ಪತ್ನಾಲ್ಕು ಪಂಚೇಂದ್ರಿಯದವು - ಹೀಗೆ ಎಲ್ಲ ಸೇರಿ ಅರವತ್ತಾರು ಸಾವಿರದಾ ಮೂರು ನೂರಾ ಮೂವತ್ತಾರು ಜನ್ಮ-ಮರಣಗಳು ಷಟ್‌ಕಾಯಿಕ ಜೀವಗಳದಾಗುತ್ತವೆ. ಇವೆಲ್ಲ ಜೀವಗಳಲ್ಲಿ ಮನುಷ್ಯರಾಶಿಯು ಅಲ್ಪವಿದೆ.

ಕ್ಷೇತ್ರದಲ್ಲಿ ದೇವ, ನಾರಕಿಗಳ ಕ್ಷೇತ್ರವು ಅಸಂಖ್ಯಾತ ಯೋಜನದ್ದಿದೆ ಮತ್ತು ತಿರ್ಯಂಚಗಳದ್ದು ಏಕೇಂದ್ರಿಯದ

ಅಪೇಕ್ಷೆಯಿಂದ ಸಂಪೂರ್ಣ ಲೋಕವಿದೆ. ತ್ರಸದ ಅಪೇಕ್ಷೆಯಿಂದಲೂ ಅಸಂಖ್ಯಾತ ಯೋಜನ ಕ್ಷೇತ್ರವಿದೆ. ಎಲ್ಲಕ್ಕಿಂತ ಕಡಿಮೆ ಕ್ಷೇತ್ರವು ಮನುಷ್ಯರದಿದ್ದು ಅದು ಕೇವಲ ನಲವತ್ತೈದು ಲಕ್ಷ ಯೋಜನ ಪ್ರಮಾಣವಿದೆ.

ಕಾಲದ ಅಪೇಕ್ಷೆಯಿಂದಲೂ ದೇವ, ನಾರಕಿಗಳ ಆಯು ಕಾಲವಂತೂ ಅಸಂಖ್ಯಾತ ವರ್ಷ ಪ್ರಮಾಣವಿದೆ. ಮನುಷ್ಯನ ಕಾಲವು ಅಲ್ಪವಿದೆ. ಅದರಲ್ಲಿ ಜೀವನವು ಅಲ್ಪವಿದೆ.

ಭಾವದ ಅಪೇಕ್ಷೆಯಿಂದ ದೇವ, ನಾರಕಿ, ಪಶುಗಳಲ್ಲಿ ಉತ್ಪನ್ನವಾಗುವ ಭಾವಗಳು ಬಹಳಷ್ಟು ಇವೆ. ಪುಣ್ಯರೂಪಭಾವಗಳಾಗುವುದರಿಂದ ದೇವನಾಗುತ್ತಾನೆ. ಪಾಪಗಳಿಂದ ನರಕದಲ್ಲಿ ದುಃಖಗಳ ಭೋಕ್ತೃವಾಗುತ್ತಾನೆ ಹಾಗೂ ಆರ್ತ ಭಾವದಿಂದ ತಿರ್ಯಂಚನಾಗುತ್ತಾನೆ; ಇಂಥ ಆರ್ತಪರಿಣಾಮಗಳು ಜೀವನಿಗೆ ಯಾವಾಗಲೂ ನಡೆದೇ ಇರುತ್ತವೆ, ಆದರೆ ಮನುಷ್ಯನಾಗುವ ಭಾವಗಳು ಮಹಾಕಠಿಣವಿವೆ. ಯಾವುದೇ ಬಹಳಷ್ಟು ಪುಣ್ಯಭಾವವಿಲ್ಲ, ಯಾವ ಪಾಪಭಾವವಿಲ್ಲ, ಮಧ್ಯಮ ಭಾವ, ಸರಳಭಾವ, ಮಂದಕಷಾಯ ಭಾವ, ವ್ರತ- ಸಮ್ಯಕ್‌ರಹಿತ, ಮುಗ್ಧ, ಕೋಮಲ, ಸರಳಭಾವ - ಇಂಥ ಮಹಾಕಠಿಣ ಭಾವಗಳಿಂದ ಮನುಷ್ಯನಾಗುತ್ತಾನೆ. ಹೀಗೆ ಮನುಷ್ಯನಾಗುವ ಭಾವಗಳನ್ನು ಅಲ್ಪಕಾಲ ಮಾಡಿ ಮನುಷ್ಯನು ಅಲ್ಪಕಾಲ ಜೀವಿಸುತ್ತಾನೆ.

ಈ ಪ್ರಕಾರ ದ್ರವ್ಯ, ಕ್ಷೇತ್ರ, ಕಾಲ, ಭಾವದ ಅಪೇಕ್ಷೆಯಿಂದ ಮನುಷ್ಯರು ಕಡಿಮೆಯಿದ್ದಾರೆ. ಇವುಗಳ ನಿಮಿತ್ತವು ದೊರಕುವುದು ಕಠಿಣವಿದೆ. ಅದರಿಂದ ಇಂಥ ಮನುಷ್ಯ ಪರ್ಯಾಯದಲ್ಲಿ ಜ್ಞಾನಪೂರ್ವಕವಾಗಿ ಜ್ಞೇಯ, ಹೇಯ, ಉಪಾದೇಯಗಳ ನಿರ್ಣಯ ಮಾಡುವುದು ಯೋಗ್ಯವಿದೆ.

ಈಗ ಕ್ಷೇತ್ರದಲ್ಲಿ ಜ್ಞೇಯ, ಹೇಯ, ಉಪಾದೇಯ ಹೇಳುತ್ತಾರೆ - ಶುಭಾಶುಭ ಕ್ಷೇತ್ರವನ್ನು ತಿಳಿಯುವುದು ಜ್ಞೇಯವಿದೆ. ಅದರಲ್ಲಿ ಹೇಯ ಮತ್ತು ಉಪಾದೇಯವೆಂದು ಎರಡು ಭೇದಗಳಿವೆ. ಯಾವ ಕ್ಷೇತ್ರಗಳಲ್ಲಿ ಕಳ್ಳರು ವಾಸಿಸುತ್ತಾರೆ, ಹಿಂಸಾಧಾರಿಗಳು, ಮದ್ಯಗುಡುಕರು ವಾಸಿಸುತ್ತಾರೆ ಆ ಕ್ಷೇತ್ರಗಳಂತೂ ತ್ಯಾಗಯೋಗ್ಯವಿವೆ. ಎಲ್ಲಿ ಮಹಾಕ್ರೋಧಿಗಳು, ಮಾನೀ, ಮಾಯಾವಿಗಳು ವಾಸಮಾಡುತ್ತಾರೆ ಆ ಕ್ಷೇತ್ರಗಳು ಹೇಯವಿವೆ. ಎಲ್ಲಿ ಧರ್ಮರಹಿತರು - ಪಾಪೀ ಜೀವಗಳಿರುತ್ತಾರೆ ಆ ಕ್ಷೇತ್ರಗಳು ತ್ಯಾಗ ಯೋಗ್ಯವಿವೆ. ಎಲ್ಲಿ ಕಾಮಾತುರರು ಪ್ರಗಟರೂಪದಿಂದ ಕ್ರೀಡಿಸುತ್ತಾರೆ ಆ ಕ್ಷೇತ್ರಗಳು ತ್ಯಾಗಯೋಗ್ಯವಿವೆ. ಎಲ್ಲಿ ನಾನಾ ಪ್ರಕಾರದ ವೇಷ ಧಾರಣ ಮಾಡುವಂಥ ಜನರು, ನಿರ್ಲಜ್ಜ ಪುರುಷರು, ಬಾಲಕರು ಕೌತುಕದ ಆಟಗಳನ್ನು ಆಡುವಂಥ - ಇತ್ಯಾದಿ ಎಂದರೆ ತಮಗೆ ಪಾಪವಾಗುವಂಥ - ತಮ್ಮ ನಿಂದೆಯಾಗುವಂಥ ಕ್ಷೇತ್ರಗಳು ತ್ಯಾಗ ಯೋಗ್ಯವಿವೆ.

ಎಲ್ಲಿ ಧರ್ಮಾತ್ಮರು ವಾಸ ಮಾಡುತ್ತಾರೆ, ಧರ್ಮದ ಚರ್ಚೆಯಾಗುತ್ತಿರುತ್ತದೆ, ಶುಭಾಚಾರೀ ಜೀವರುಗಳ ಬರ ಹೋಗುವಿಕೆಯಿರುತ್ತದೆ, ಎಲ್ಲಿ ದಾನ-ಪೂಜೆಗಳ ಅಧಿಕಾರವಿರುತ್ತದೆ, ಧರ್ಮ-ಶಾಸ್ತ್ರಗಳ ಸ್ವಾಧ್ಯಾಯವಿರುತ್ತದೆ, ಜಿನಮಂದಿರವಿರುತ್ತದೆ ಮತ್ತು ಯಾವ ವನ-ಉಪವನ, ಗಿರಿ-ಗುಹೆಗಳಲ್ಲಿ ವೀತರಾಗೀ ಮುನಿರಾಜರು ವಿರಾಜಿಸುತ್ತಾರೆ, ಅಂಥ ಕ್ಷೇತ್ರಗಳು ತೀರ್ಥದ ಸಮಾನ ಉಪಾದೇಯವಿವೆ- ಆ ಶುಭಕ್ಷೇತ್ರಗಳನ್ನು ವ್ಯವಹಾರ ನಯದಿಂದ ಉಪಾದೇಯವೆನ್ನಲಾಗಿದೆ.

ನಿಶ್ಚಯ ನಯದಿಂದ ಪರದ್ರವ್ಯ-ಕ್ಷೇತ್ರಗಳು ಹೇಯವಿವೆ. ಜ್ಞಾನಮಯನಾದ ಅಮೂರ್ತಿಕ ಪುರುಷಾಕಾರ ಆತ್ಮನಿಂದ ವ್ಯಾಪ್ತವಿರುವ ಅಸಂಖ್ಯಾತ ಪ್ರದೇಶರೂಪ ಆತ್ಮಾಕಾರಮಯ (ಚಿತ್ಪಿಂಡಮಯ) ಸ್ವದ್ರವ್ಯದ ಕ್ಷೇತ್ರವು ಉಪಾದೇಯವಿದೆ.

ಕಾಲದಲ್ಲಿ ಜ್ಞೇಯ-ಹೇಯ-ಉಪಾದೇಯ :- ಅದರಲ್ಲಿ ಶುಭ ಅಶುಭರೂಪ ಎಲ್ಲ ಕಾಲಗಳನ್ನು ತಿಳಿಯುವುದು ಜ್ಞೇಯವಿದೆ. ಅದರಲ್ಲಿ ಹೇಯ ಮತ್ತು ಉಪಾದೇಯವೆಂದು ಎರಡು ಭೇದಗಳಿವೆ. ತೀರ್ಥಂಕರರ ಗರ್ಭ, ಜನ್ಮ, ತಪ, ಜ್ಞಾನ ಮತ್ತು ನಿರ್ವಾಣ - ಇವು ಐದು ಕಲ್ಯಾಣಕಗಳ ಕಾಲವು ಉಪಾದೇಯವಿದೆ. ಇವು

ಶುಭ ಕಾಲಗಳಿವೆ. ಅಷ್ಟಾಹ್ನಿಕ ಮೊದಲಾದ ಬಹಳಷ್ಟು ಪ್ರಭಾವನೆ, ಉತ್ಸವದ ಕಾಲ, ಭಾದ್ರಪದ ಮಾಸದ ವ್ರತಾದಿ ಸಂಯಮದ ದಿನಗಳು, ಸಂವರ ಸಹಿತವಾಗಿ ಉಳಿಯುವಂಥ ದಿನಗಳು, ಅಷ್ಟಮಿ-ಚತುರ್ದಶಿ ಪರ್ವದ ದಿನಗಳು ಹಾಗೂ ಉಪವಾಸ, ಏಕಾಸನದ ದಿನಗಳು - ಇವೆಲ್ಲ ಕಾಲಗಳು ಉಪಾದೇಯವಿವೆ.

ಯಾವ ಸಮಯದಲ್ಲಿ ತಮ್ಮ ಪರಿಣತಿಯು ಶುಭವಾಗಿರುತ್ತದೆ, ಶುಭಧರ್ಮಧ್ಯಾನರೂಪ, ಶಾಸ್ತ್ರಾಭ್ಯಾಸ ರೂಪ, ತಪರೂಪ, ಸಂಯಮ ಶೀಲರೂಪ, ಸಮತೆಯ ಭಾವರೂಪ ಇತ್ಯಾದಿಗಳಮಯವಿರುವ ತಮ್ಮ ಭಾವಗಳ ವಿಶುದ್ಧತೆಯರೂಪ ಕಾಲಗಳು ಶುಭಕಾಲವಿವೆ, ಉಪಾದೇಯವಿವೆ.

ತ್ಯಾಗ ಮಾಡಲು ಯೋಗ್ಯವಿರುವಂಥ ಯಾವ ಅಸತ್ಯ ಪರ್ವಗಳಿವೆ, ಹಿಂಸೆಯ ಕಾಲ ಅಥವಾ ಯಾವ ಸಮಯದಲ್ಲಿ ಕ್ರೋಧ, ಮಾನ, ಮಾಯೆ, ಲೋಭಗಳ ತೀವ್ರತೆಯಿರುವುದು, ಮೂರು ವೇದಗಳೊಳಗಿಂದ ಯಾವುದೋ ವೇದದ ಉದಯವು ತೀವ್ರವಿರುವಂಥ ಕಾಲಗಳು ಹೇಯವಿವೆ. ಕಲಹಕರವಿರುವಂಥ ಪರ್ವಗಳು ಅಥವಾ ಯಾವ ಪರ್ವದ ನಿಮಿತ್ತ ಪಡೆದು ಒಳ್ಳೆಯ ಬುದ್ಧಿಯ ಜೀವಗಳೂ ವಿಪರೀತ ಬುದ್ಧಿಯವರಾಗುತ್ತಾರೆ, ಅವರು ಕೂಡ 'ಈ ಹೊತ್ತು ವರ್ಷದ ಇಂಥದೊಂದು ಹಬ್ಬದ ದಿನವಿದೆ, ಇದರಲ್ಲಿ ಇಂಥ ಅಸತ್ಯ (ಕೆಟ್ಟ) ಕಾರ್ಯಗಳಾಗುತ್ತವೆ' ಎಂದು ಮನ್ನಿಸುತ್ತಾರೆ - ಅಂಥ ಹಬ್ಬದ ದಿನಗಳು ಹೇಯವಿವೆ. ಯಾವ ಕಾಲದಲ್ಲಿ ಯಾವನೋ ನಿರ್ದಯಿ, ಕಠೋರ ಪರಿಣಾಮದ ಜೀವನು 'ಈ ಹೊತ್ತು ತುಂಬ ಒಳ್ಳೆಯ ದಿನವಿದೆ, ಇದರಲ್ಲಿ ಜೀವಘಾತ ಮಾಡುವುದರಿಂದ ಬಹಳಷ್ಟು ಪುಣ್ಯದ ಲಾಭವಾಗುತ್ತದೆ, ಮೊದಲಿನಿಂದಲೂ ಹಿರಿಯರು ಇದನ್ನು ಮಾಡುತ್ತ ಬಂದಿದ್ದಾರೆ' ಎಂದು ವಿಚಾರ ಮಾಡಿ ಆ ದಿನ ಪಾಪರೂಪವಾಗಿ ಪರಿಣಮಿತನಾಗುತ್ತಾನೆ, ಆ ಕಾಲವು ಹೇಯವಿದೆ. ಜ್ಞಾನರೂಪ ಧನದಿಂದ ರಹಿತರಾದ ಅದೆಷ್ಟೋ ಅಜ್ಞಾನಿಗಳು, ಮುಗ್ಧ ಜೀವಗಳು 'ಈ ಹೊತ್ತಿನ ದಿವಸ ಈ ತಿಂಗಳು ಒಳ್ಳೆಯದಿದೆ, ನದಿ-ಸರೋವರ-ವಾಪಿಗಳಲ್ಲಿ ಸ್ನಾನ ಮಾಡುವುದರಿಂದ ಮಹಾಪುಣ್ಯವಾಗುತ್ತದೆ, ವೃಕ್ಷಾದಿಗಳಿಗೆ ನೀರೆರೆಯುವುದರಿಂದ ಪುಣ್ಯವಾಗುತ್ತದೆ'ಯೆಂದು ಮನ್ನಿಸುತ್ತಾರೆ ಮತ್ತು ಅಂಥ ಕ್ರಿಯೆಗಳನ್ನು ಯಾವ ವಿಶಿಷ್ಟ ದಿವಸಗಳಂದು ಮಾಡಲಾಗುತ್ತದೆ, ಆ ಹಬ್ಬದ ದಿವಸಗಳು ಹೇಯವಿವೆ. ಮಿಥ್ಯಾತ್ವರಸದಲ್ಲಿ ನಿಮಗ್ನವಿರುವ ಅದೆಷ್ಟೋ ಜೀವಗಳು ' ಈ ಹಬ್ಬದಲ್ಲಿ ವನಸ್ಪತಿಯನ್ನು ಕತ್ತರಿಸುವುದರಿಂದ, ಛೇದಿಸುವುದರಿಂದ, ಅದರ ಪರ್ಣ, ಪುಷ್ಪಗಳನ್ನು ಕಿತ್ತು ತಂದು ದೇವಾದಿಕರಿಗೆ ಅರ್ಪಿಸುವುದರಿಂದ ಬಹಳಷ್ಟು ಪುಣ್ಯವಾಗುತ್ತದೆ'ಯೆಂದು ಮನ್ನಿಸುತ್ತಾರೆ - ಅಂಥ ಹಬ್ಬದ ಕಾಲಗಳೂ ಹೇಯವಿವೆ.

ಅದೆಷ್ಟೋ ಅಜ್ಞಾನಿ ಜನರು ಮನ್ನಿಸುವುದೇನೆಂದರೆ ಈ ಹೊತ್ತಿನ ದಿವಸ ಅಥವಾ ಈ ಹಬ್ಬದಲ್ಲಿ ಮನೆಯ ಭೋಜನ ಮಾಡುವುದಿಲ್ಲ, ಮನೆಯಲ್ಲಿರುವ ವಸ್ತ್ರ ಧರಿಸುವುದಿಲ್ಲ; ಒಂದುವೇಳೆ ಇನ್ನೊಬ್ಬರಲ್ಲಿ ಭಿಕ್ಷೆ ಬೇಡಿ ತಿನ್ನುವುದರಿಂದ ಹಾಗೂ ಬೇರೆಯವರ ವಸ್ತ್ರಗಳನ್ನು ಧರಿಸುವುದರಿಂದ ಒಳ್ಳೆಯ ಫಲವು ದೊರಕುತ್ತದೆ. - ಎಂದು ಹೇಳುವಂಥ ಹಬ್ಬ ಹರಿದಿನದ ಕಾಲಗಳು ಹೇಯವಿವೆ. ಅಜ್ಞಾನ, ದುಃಖದಿಂದ ತುಂಬಿಕೊಂಡಿರುವ ಜಗತ್ತಿನ ಜೀವಗಳೇ ಹೀಗೆ ಮನ್ನಿಸುತ್ತಾರೆ. ಯಾವನೋ ವ್ಯಂತರದೇವ ಅಥವಾ ಕುಗುರು ಮೊದಲಾದವರು ಚಮತ್ಕಾರದ ದಿನವೆಂದು ತಿಳಿದು 'ಈ ಹೊತ್ತು ಇಂಥದೊಂದು ತೀರ್ಥಯಾತ್ರೆಯ ಕಾಲವಿದೆ'ಯೆಂದು ಹೇಳುವುದು; ಇತ್ಯಾದಿ ಪ್ರಕಾರದ ಎಲ್ಲ ಕಾಲಗಳು ಸಮ್ಯಗ್ದೃಷ್ಟಿಗೆ ಸಹಜವಾಗಿಯೇ ಹೇಯವಿವೆ. ಇದೇ ರೀತಿ ಐದನೇ, ಆರನೇ ಕಾಲದ ಪ್ರವೃತ್ತಿಯೂ ಹೇಯವಿದೆ. ಇತ್ಯಾದಿ ರೂಪದಿಂದ ಎಷ್ಟೆಲ್ಲ ಪಾಪಕಾರೀ, ಧರ್ಮರಹಿತ ದಿನಗಳು, ಪರ್ವ, ಕಾಲಗಳಿವೆ ಅವು ಹೇಯವಿವೆ, ತ್ಯಾಗಯೋಗ್ಯವಿವೆ.

**ಭಾವದ ಅಪೇಕ್ಷೆಯಿಂದ ಜ್ಞೇಯ-ಹೇಯ-ಉಪಾದೇಯ :-** ಶುಭಾಶುಭ ಸಮಸ್ತ ಭಾವಗಳನ್ನು ತಿಳಿಯುವುದು ಜ್ಞೇಯಭಾವವಿದೆ. ಆ ಜ್ಞೇಯ ಭಾವದಲ್ಲಿ ಶುಭಭಾವ ಮತ್ತು ಅಶುಭಭಾವವೆಂದು ಎರಡು ಪ್ರಕಾರಗಳಿವೆ.

ಅವುಗಳಲ್ಲಿ ಕ್ರೋಧ, ಮಾನ, ಮಾಯೆ, ಲೋಭದ ಭಾವ, ಸಪ್ತವ್ಯಸನಗಳಭಾವ, ಜೂಜಿನಭಾವ, ಅಭಕ್ಷ್ಯ ಭಕ್ಷಣೆಯಭಾವ, ಮದ್ಯ ಸೇವನೆಯಭಾವ, ವೇಶ್ಯಾಗಮನದಭಾವ, ಪಾಪಾರ್ಥವಾಗಿ ಜೀವ ಹಿಂಸೆಯ ಭಾವ, ಪರದ್ರವ್ಯಾದಿಗಳ ಹರಣರೂಪದ ಚೌರ್ಯಭಾವ, ಪರಸ್ತ್ರೀಯೊಂದಿಗೆ ಕುಶೀಲದ ಭಾವ, ಧರ್ಮಘಾತಕಭಾವ ಇತ್ಯಾದಿ ಪ್ರಕಾರದ ಕುಭಾವಗಳು ತ್ಯಾಗ ಮಾಡಲು ಯೋಗ್ಯವಿವೆ. ವ್ರತಭಂಗದ ಭಾವ, ತಪ, ಶೀಲ, ಸಂಯಮ, ದಯಾಮಾರ್ಗದ ಭಂಜನೆಯಭಾವ, ಪಾಖಂಡಭಾವ ಮೊದಲಾದವು ದುರಾಚಾರದ ಭಾವಗಳಿದ್ದು ಅವೆಲ್ಲವೂ ವಿವೇಕವಂತ ಜೀವರುಗಳಿಂದ ತ್ಯಾಗಮಾಡಲು ಯೋಗ್ಯವಿವೆ.

ಉಪಾದೇಯ ಭಾವಗಳು - ಮೇಲೆ ಹೇಳಲಾದ ಕುಭಾವಗಳಿಂದ ವಿಪರೀತ ಭಾವಗಳು - ತಪಭಾವ, ದಾನಭಾವ, ಶೀಲಭಾವ, ಪೂಜೆಯಭಾವ, ಪರವಸ್ತುಗಳ ತ್ಯಾಗರೂಪ ಸಂತೋಷಭಾವ, ವೀತರಾಗ ಭಾವ, ಶುದ್ಧೋಪಯೋಗ ಭಾವ, ತೀರ್ಥವಂದನೆಯ ಭಾವ, ಕರುಣೆಯಭಾವ, ಸರ್ವಹಿತಭಾವ, ಸರ್ವಜೀವಗಳಲ್ಲಿ ಮೈತ್ರಿಯಭಾವ, ಗುಣೀಜನರ ಕುರಿತಾಗಿ ಪ್ರಮೋದಭಾವ, ದುಷ್ಟರ ಕುರಿತಾಗಿ ಮಾಧ್ಯಸ್ಥಭಾವ, ದುಃಖೀ, ದೀನ, ದರಿದ್ರ , ರೋಗಿ ಮೊದಲಾದ ಜೀವಗಳನ್ನು ಕಂಡು ಅವರ ಸಲುವಾಗಿ ಕೋಮಲಭಾವರೂಪದ ಕರುಣೆಯಭಾವ, ಸಮಸ್ತ ಜೀವಗಳನ್ನು ತಮ್ಮ ಸಮಾನವೆಂದು ತಿಳಿದುಕೊಂಡು ಎಲ್ಲರ ರಕ್ಷಣೆಯರೂಪದ ಮೈತ್ರಿಭಾವ, ತಮಗಿಂತ ಗುಣಗಳಲ್ಲಿ ಅಧಿಕರಿರುವವರನ್ನು ಕಂಡು ಹರುಷಿತರಾಗುವ ರೂಪದ ಪ್ರಮೋದಭಾವ, ಪಾಪೀ-ಪಾಖಂಡೀ-ದುರಾಚಾರಿ-ಧರ್ಮದ್ರೋಹಿ, ಅನ್ಯಾಯೀ, ಕೃತಘ್ನೀ, ಸ್ವಾಮಿದ್ರೋಹಿ, ಮಿತ್ರದ್ರೋಹಿ, ವಿಶ್ವಾಸಘಾತಕಿ-ಇತ್ಯಾದಿ ದುಷ್ಟ ಜೀವಗಳನ್ನು ಕಂಡು ರಾಗ-ದ್ವೇಷಗಳನ್ನು ಮಾಡದಿರುವ ರೂಪದ ಮಾಧ್ಯಸ್ಥಭಾವ, ವಿನಯಭಾವ, ಪ್ರಭಾವನೆಯನ್ನು ಕಂಡು ಪ್ರಭಾವನೆ ಮಾಡುವರೂಪದಭಾವ ಇತ್ಯಾದಿ ಪ್ರಕಾರದ ಶುಭಭಾವಗಳು ವಿವೇಕೀ ಪುರುಷರಿಂದ ಉಪಾದೇಯವಿವೆ ಮತ್ತು ಸಮ್ಯಗ್ದೃಷ್ಟಿಗಳಿಗೆ ಸಹಜವಾಗಿಯೇ ಉಪಾದೇಯವಿವೆ.

ತಪದಲ್ಲಿ ಜ್ಞೇಯ-ಹೇಯ-ಉಪಾದೇಯ-

**ಪಣಅಗ್ಗಿ ಆದಿ ಕುತವ, ದ್ವಾದಸ ತವೋ ಯ ಕಮ್ಮಣಗ ವಜ್ಜೋ ।**
**ಚಲು ಗಈ ಹೇಲು ಕುತವೋ, ಸುಹ ತವ ಜೀವರಕ್ಖುಪಾದೇಓ ॥೪೧॥**

**ಗಾಥಾರ್ಥ :-** ಸಂಸಾರದ ಕಾರಣಭೂತವಿರುವ ಪಂಚಾಗ್ನಿ ಮೊದಲಾದ ತಪಗಳು ಕುತಪವಿವೆ ಮತ್ತು ಅನಶನ ಮೊದಲಾದ ಹನ್ನೆರಡು ತಪಗಳು ಸುತಪಗಳಿದ್ದು ಅವು ಕರ್ಮ ಪರ್ವತಗಳ ಸಲುವಾಗಿ ವಜ್ರದ ಸಮಾನವಿವೆ. ಅದರಿಂದ ಹಿಂಸಾ ಸಹಿತ ಜೀವಘಾತ ಮಾಡುವಂಥ ತಪಗಳು ತ್ಯಾಗ ಯೋಗ್ಯವಿವೆ, ದಯೆಯಿಂದ ಕೂಡಿದ ಜೀವರಕ್ಷಕ ಸುತಪಗಳು ಉಪಾದೇಯವಿವೆ.

**ಭಾವಾರ್ಥ :-** ತಪದ ಸಮಸ್ತ ಭೇದಗಳನ್ನು ತಿಳಿಯುವುದು ಜ್ಞೇಯವಿದೆ. ಅದರಲ್ಲಿ ಹೇಯತಪ ಮತ್ತು ಉಪಾದೇಯ ತಪವೆಂದು ಎರಡು ಭೇದಗಳಿವೆ. ಅವುಗಳಲ್ಲಿನ ಪಂಚಾಗ್ನಿ ತಪ ಮತ್ತು ಶರೀರದ ಉಗುರು-ಕೂದಲನ್ನು ಬೆಳೆಸುವರೂಪದ ಕುತಪಗಳು ಹೇಯವಿವೆ. ಊರ್ಧ್ವಮುಖ ತಪ, ಭೂಮಿಯಲ್ಲಿ ಹೂತು ಹೋಗುವ ತಪ, ವೃಕ್ಷಕ್ಕೆ ನೇತಾಡುವ ತಪ, ಭೋಜನ ಸಹಿತ ಉಪವಾಸ ಮನ್ನಿಸುವ ತಪ, ಹಗಲು ಹೊತ್ತಿನಲ್ಲಿ ಭೋಜನದ ತ್ಯಾಗ ಮಾಡಿ ರಾತ್ರಿ ಭೋಜನ ಮಾಡುವರೂಪ ತಪ ಇವು ಕುತಪಗಳಿದ್ದು ಹೇಯವಿವೆ. ಕುದೇವಗಳ ಸಾಧನೆ ಮಾಡುವುದು ಕೂಡ ಕುತಪವಿರುವುದರಿಂದ ಹೇಯವಿದೆ. ಪತ್ನಿ , ಪುತ್ರ , ಧನಾದಿಗಳ ಅಭಿಲಾಷೆಯಿಂದ ಕೂಡಿದ ಹಾಗೂ ಶತ್ರುವಿನ ನಾಶದ ಉದ್ದೇಶದಿಂದ ತಪ ಮಾಡುವುದೂ ಕುತಪವಿರುವುದರಿಂದ ಹೇಯವಿದೆ. ಜೀವಂತವಾಗಿಯೇ ಅಗ್ನಿಯೊಳಗೆ ಪ್ರವೇಶ ಮಾಡಿ ಸುಟ್ಟುಸತ್ತುಹೋಗುವರೂಪದ ತಪ, ಅನ್ನಾಹಾರದ ತ್ಯಾಗಮಾಡಿ ಫಲ, ಪುಷ್ಪ, ಎಲೆ, ಹುಲ್ಲು, ಹಾಲು,

ಮೊಸರು ಮೊದಲಾದವುಗಳ ಭಕ್ಷಣೆ ಮಾಡುವರೂಪದ ತಪ, ಇಂದ್ರಿಯಗಳ ಛೇದನ ಮಾಡಿ ಅದರಲ್ಲಿ ಲೋಹದ ಬಳೆ, ಸರ ಹಾಕುವ ರೂಪ ತಪ, ತಲೆಕೆಳಗೆ ಮಾಡಿ ಕಾಲು ಮೇಲೆ ಮಾಡುವ ರೂಪದ ತಪ, ತಲೆಯ ಮೇಲೆ ಅಗ್ನಿಯನ್ನು ಧಾರಣ ಮಾಡುವ ರೂಪದ ತಪ, ತಲೆಯ ಮೇಲೆ ಪಾಷಾಣವನ್ನು ಧಾರಣ ಮಾಡುವರೂಪದ ತಪ - ಇವೆಲ್ಲವೂ ಕುತಪಗಳಿವೆ. ಶಸ್ತ್ರದ ಧಾರೆಯಿಂದ ಸತ್ತು ಹೋಗುವುದು, ಜಲಧಾರೆಯಲ್ಲಿ ಪ್ರವೇಶ ಮಾಡಿ ಸತ್ತು ಹೋಗುವುದು ಹಾಗೂ ಚರ್ಮ, ಹುಲ್ಲು, ಕೂದಲು, ನಾರಿನ ಬಟ್ಟೆಯನ್ನಿಟ್ಟುಕೊಂಡು ರಾಕ್ಷಸ ತಪ ಮಾಡುವುದು ಇತ್ಯಾದಿ ಪ್ರಕಾರದ ಎಲ್ಲ ತಪಗಳು ಕುತಪವಿವೆ; ಹೇಯವಿವೆ.

**ಸುತಪ** - ಯಾವ ತಪದ ಕಾರಣದಿಂದ ಸ್ವರ್ಗ-ಮೋಕ್ಷಗಳಾಗುತ್ತವೆ ಅದು ಶುಭತಪವಿದೆ. ಅದರಲ್ಲಿ ಹನ್ನೆರಡು ಭೇದಗಳಿದ್ದು ಆರು ಬಾಹ್ಯತಪಗಳಿದ್ದರೆ ಆರು ಅಭ್ಯಂತರ ತಪವಿವೆ. ಅನಶನ, ಅವಮೌದರ್ಯ, ವೃತ್ತಿಪರಿಸಂಖ್ಯಾನ, ರಸಪರಿತ್ಯಾಗ, ವಿವಿಕ್ತ ಶಯ್ಯಾಸನ, ಕಾಯಕ್ಲೇಶ - ಇವು ಆರು ಬಾಹ್ಯತಪಗಳಿವೆ. ಪ್ರಾಯಶ್ಚಿತ್ತ, ವಿನಯ, ವೈಯಾವೃತ್ಯ, ಸ್ವಾಧ್ಯಾಯ, ವ್ಯುತ್ಸರ್ಗ ಮತ್ತು ಧ್ಯಾನ - ಇವು ಆರು ಅಂತರಂಗ ತಪಗಳಿವೆ.

**ಬಾಹ್ಯತಪ** -

೧) ವರ್ಷ, ಆರು ತಿಂಗಳು, ನಾಲ್ಕು ತಿಂಗಳು, ಹದಿನೈದು ದಿವಸ, ಐದು ದಿವಸ, ಎರಡು ದಿವಸ, ಒಂದು ದಿವಸ ಇತ್ಯಾದಿರೂಪದಿಂದ ಉಪವಾಸ ಮಾಡುವುದು - ಅನಶನ ತಪವಿದೆ.

೨) ಹಸಿವೆಗಿಂತ ಅರ್ಧ, ನಾಲ್ಕರ ಒಂದು ಭಾಗದಷ್ಟು ಮತ್ತು ಸ್ವಲ್ಪ ಕಡಿಮೆ ತಿನ್ನುವುದು - ಅವಮೌದರ್ಯ ತಪವಿದೆ.

೩) ದಿನಾಲೂ ಆರು ರಸಗಳೊಳಗಿಂದ ಯಾವುದಾದರೂ ಒಂದು, ಎರಡು, ನಾಲ್ಕು ರಸಗಳ ತ್ಯಾಗವು - ರಸಪರಿತ್ಯಾಗ ತಪವಿದೆ.

೪) ದಿನನಿತ್ಯವೂ ಭೋಜನ-ಪಾನೀಯಗಳ ಪ್ರಮಾಣ ಹಾಗೂ ಭೋಗ-ಉಪಭೋಗಯೋಗ್ಯ ಸಮಸ್ತ ವಸ್ತುಗಳ ಪ್ರಮಾಣ ಮಾಡುವುದು-ವೃತ್ತಿ ಪರಿಸಂಖ್ಯಾನ ತಪವಿದೆ.

೫) ಕುಳಿತುಕೊಳ್ಳುವ ಸ್ಥಾನವನ್ನು ಶುದ್ಧ ಮಾಡಿ (ನಿರ್ಜಂತುಕಗೊಳಿಸಿ) ಕುಳಿತುಕೊಳ್ಳುವುದು, ಸಂಯಮದ ವಿರಾಧನೆಯಾಗದಂಥ ಶೂನ್ಯವಾದ ಏಕಾಂತ ಸ್ಥಾನವನ್ನು ನೋಡಿ ಕುಳಿತುಕೊಳ್ಳುವುದು. ನಂತರ ಯಾವನೋ ದೇವನು ಬೇಕಾದರೆ ಆ ಸ್ಥಾನದಿಂದ ಓಡಿಸುವ ಪ್ರಯತ್ನ ಮಾಡಿದರೂ ಅಲ್ಲಿಂದ ಏಳದಿರುವುದು, ವಿವಿಕ್ತ ಶಯ್ಯಾಸನ ತಪವಿದೆ.

೬) ಅಂತರಂಗದ ವಿಶುದ್ಧಿಯನ್ನು ಹೆಚ್ಚಿಸುವ ಉದ್ದೇಶದಿಂದ ಬಾಹ್ಯ ಶರೀರಕ್ಕೆ ಕಷ್ಟದ ಕಾರಣಭೂತ ನಿಮಿತ್ತಗಳನ್ನು ಒದಗಿಸುವುದು-ಕಾಯಕ್ಲೇಶ ತಪವಿದೆ. ಇವು ಆರು ತಪಗಳನ್ನು ಬಾಹ್ಯ ತಪವೆಂದು ಹೇಳಿದ್ದಾರೆ. ಇವುಗಳನ್ನು ಮಾಡುವುದರಿಂದ ಇತರರಿಗೂ ಇವುಗಳ ಪರಿಚಯವಾಗುತ್ತದೆ; ಅದರಿಂದ ಇವುಗಳನ್ನು ಬಾಹ್ಯ ತಪವೆಂದು ಹೇಳಿದ್ದಾರೆ.

**ಅಂತರಂಗ ತಪ ಃ-**

೧) ಧರ್ಮದ ಲೋಭಿಯು ತನ್ನ ತಪಸ್ಸು ಅಥವಾ ಚಾರಿತ್ರದಲ್ಲಿ ಮತ್ತು ಆರು ಆವಶ್ಯಕಗಳಲ್ಲಿ ಅಥವಾ ಮೂಲಗುಣ ಇತ್ಯಾದಿಯಾಗಿ ತನ್ನ ಮುನಿಧರ್ಮದಲ್ಲಿ ಯಾವುದಾದರೂ ಅತಿಚಾರವು ತಗಲಿದ ಮೇಲೆ, ಗುರುವಿನ ಹತ್ತಿರ ಹೋಗಿ ಯಾವುದನ್ನು ಬೇರೆ ಯಾರೂ ತಿಳಿಯುವ ಸಾಧ್ಯತೆಯಿಲ್ಲವೋ ಅಂಥ ತನ್ನ ಅಂತರಂಗದಲ್ಲಿರುವ ಗುಪ್ತ ದೋಷಗಳನ್ನು ಕೂಡ ಗುರುಗಳಿಗೆ ಹೇಳುತ್ತಾನೆ. ನಂತರ ಗುರುಗಳಿಂದ ಕೊಡಲ್ಪಡುವ ದಂಡನೆಯನ್ನು ಸ್ವಯಂ ಸ್ವೀಕಾರ ಮಾಡಿ ತಗಲಿರುವ ದೋಷವನ್ನು ಶುದ್ಧ ಮಾಡುವುದು ಅದು-ಪ್ರಾಯಶ್ಚಿತ್ತ ತಪವಿದೆ. ಪ್ರಾಯಶ್ಚಿತ್ತದಲ್ಲಿ

- ಆಲೋಚನೆ, ಪ್ರತಿಕ್ರಮಣ, ತದುಭಯ, ವಿವೇಕ, ವ್ಯುತ್ಸರ್ಗ, ತಪ, ಛೇದ, ಮೂಲ, ಪರಿಹಾರ ಮತ್ತು ಉಪಸ್ಥಾಪನೆಯೆಂದು ಹತ್ತು ಭೇದಗಳಿವೆ. ಈಗ ಅವುಗಳ ವಿಶೇಷತೆ ಹೇಳುತ್ತಾರೆ -

ತಮ್ಮ ಮುನಿಪದದಲ್ಲಿ ಪ್ರಮಾದವಶ ತಗಲಿರುವ ದೋಷಗಳನ್ನು ತಿಳಿದುಕೊಂಡು ಅವುಗಳ ಆಲೋಚನೆಯನ್ನು ಮನಸ್ಸಿನಲ್ಲಿ ಮಾಡುವುದು. ಗುರುಗಳ ಹತ್ತಿರ ಹೋಗಿ ನಿವೇದನೆ ಮಾಡುವುದು, ಪಾಪದಿಂದ ಭಯಭೀತವಾಗಿ, ತನಗೆ ಹೇಗೆ ದೋಷ ತಗಲಿದೆ ಹಾಗೆ ಮನ-ವಚನ-ಕಾಯದ ಸರಳತೆಯಿಂದ ಅದೇ ಪ್ರಕಾರವಾಗಿ ಹೇಳುವುದು. ಆಗ ತಗಲಿದ ಪಾಪವು ಸಹಜವಾಗಿಯೇ ನಷ್ಟವಾಗಿ ಹೋಗುತ್ತದೆ. ಪರಿಣಾಮಗಳ ಸರಳತೆಯಿಂದ ಸಂಯಮವು ನಿರ್ದೋಷವಾಗುತ್ತದೆ - ಇದು ಆಲೋಚನಾ ಪ್ರಾಯಶ್ಚಿತ್ತವಿದೆ.

ಅದೆಷ್ಟೋ ಪಾಪಗಳು ಎಂಥವಿರುತ್ತವೆಯೆಂದರೆ, ಆಲೋಚನೆಯೇ ಅವುಗಳ ದಂಡನೆಯಿದೆ. ಕೇವಲ ಆಲೋಚನೆ ಮಾಡುವುದರಿಂದ ದೋಷದ ನಾಶವಾಗಿ ಹೋಗುತ್ತದೆ. ಹೇಗೆಂದರೆ - ಲೋಕದಲ್ಲಿ ಯಾರಿಂದಲೋ ಯಾರದೋ ಕೆಡಕಾಗಿ ಹೋಗುತ್ತದೆ, ಆಗ ಒಂದುವೇಳೆ ಅದರ ಸ್ವಾಮಿಯ ಹತ್ತಿರ ಹೋಗಿ 'ನನ್ನ ಅಪರಾಧದಿಂದ ಪ್ರಮಾದವಶ ನನ್ನಿಂದ ತಮ್ಮದು ಕೆಡಕಾಯಿತು; ಈಗ ತಮ್ಮ ಇಚ್ಛೆಯಿದ್ದಂತೆ ತಾವು ನನಗೆ ದಂಡನೆ ನೀಡಬಹುದಾಗಿದೆ, ನನ್ನಿಂದ ಅಪರಾಧವಾಗಿದೆ, ತಾವು ದೊಡ್ಡವರಿರುವಿರಿ ತಮಗೆ ಯೋಗ್ಯವೆನಿಸುವಂತೆ ತಾವು ಮಾಡಿರಿ' ಎಂದು ಹೇಳಿದರೆ, ಅವನ ಯಜಮಾನನು ರಾಗ-ದ್ವೇಷ ಮಾಡುವುದಿಲ್ಲ ಪ್ರತಿಯಾಗಿ ಅವನಿಗೆ ಧೈರ್ಯ ನೀಡುತ್ತ ದೋಷವಾಗದಂತೆ ತಿಳಿಸಿ ಹೇಳುತ್ತಾನೆ. ಆಗ ದೋಷವು ದೂರವಾಗುತ್ತದೆ. ಈ ಪ್ರಕಾರ ಶುದ್ಧ ಭಾವದಿಂದ ಆಲೋಚನೆ ಮಾಡಿದ ಮೇಲೆ ದೋಷ ದೂರವಾಗುತ್ತದೆ.

ತಮ್ಮ ಚಾರಿತ್ರದಲ್ಲಿ ಯಾವುದಾದರೂ ದೋಷ ತಗಲಿರುವುದನ್ನು ತಿಳಿದುಕೊಂಡು, ತಮ್ಮ ಮನಸ್ಸಿನಲ್ಲಿ ಬಹಳಷ್ಟು ಪಶ್ಚಾತ್ತಾಪ ಪಡುವುದು, ತಮ್ಮ ನಿಂದೆ-ಗರ್ಹೆ ಮಾಡಿಕೊಂಡು ದೋಷ ದೂರ ಮಾಡಿಕೊಳ್ಳುವುದು ಹೇಗೆಂದರೆ -ಲೋಕದಲ್ಲಿ ಯಾರಿಂದಲೋ ಪಂಚರ ಅವಜ್ಞೆಯಾಗಿ ಹೋಗಿದ್ದರೆ ಅವರು ಒಂದುವೇಳೆ ಪಂಚರ ಹತ್ತಿರ ಹೋಗಿ ಸರಳ ಹಾಗೂ ದೀನತೆಯಿಂದ 'ನನ್ನಿಂದ ತಪ್ಪಾಯಿತು, ಇನ್ನೆಂದೂ ಈ ರೀತಿಯ ತಪ್ಪು ಮಾಡುವುದಿಲ್ಲ; ಈಗ ತಾವು ಯಾವ ರೀತಿಯ ಆಜ್ಞೆ ನೀಡಿದರೂ ನನಗೆ ಒಪ್ಪಿಗೆಯಿದೆ'ಯೆಂದು ಹೇಳಿದರೆ, ಪಂಚರು ಅವನನ್ನು ಸರಳನಿದ್ದಾನೆಂದು ತಿಳಿದು ಕ್ಷಮಿಸಿಬಿಡುತ್ತಾರೆ. ಇದೇ ಪ್ರಕಾರ ಅದೆಷ್ಟೋ ದೋಷಗಳು ನಿಂದೆ-ಗರ್ಹೆ ಮಾಡುವುದರಿಂದ ನಷ್ಟವಾಗಿ ಹೋಗುತ್ತವೆ - ಇದು ಪ್ರತಿಕ್ರಮಣ ಪ್ರಾಯಶ್ಚಿತ್ತವಿದೆ.

ಯಾವಾಗ ತಮ್ಮ ಚಾರಿತ್ರದಲ್ಲಿ ಯಾವುದಾದರೂ ದೋಷ ತಗಲಿರುವುದನ್ನು ತಿಳಿಯುತ್ತಾರೆ ಆಗ ಗುರುಗಳ ಹತ್ತಿರ ಹೇಳಿಕೊಳ್ಳುತ್ತಾರೆ ಮತ್ತು ಪುನಃ ಪುನಃ ತಮ್ಮ ಆಲೋಚನೆ, ನಿಂದೆ-ಗರ್ಹೆಯನ್ನೂ ಮಾಡುತ್ತಾರೆ ಆಗ ದೋಷದ ನಾಶವಾಗುತ್ತದೆ. ಅದೆಷ್ಟೋ ದೋಷಗಳು ಲೋಕದಲ್ಲಿಯೂ ಕೂಡ ಯಾರಿಂದಲೋ ಯಾರದೋ ಹಾನಿ ಅಥವಾ ಕೇಡಾಗಿ ಹೋದರೆ ಅವರ ಹತ್ತಿರ ಹೋಗಿ 'ನಾನು ತಮ್ಮ ಹತ್ತಿರ ಬಂದಿದ್ದೇನೆ, ತಮ್ಮ ಕಾರ್ಯವು ನನ್ನಿಂದ ಕೆಟ್ಟು ಹೋಗಿದೆ ನಾನು ಮಹಾಮೂರ್ಖನಿದ್ದೇನೆ, ತಾವು ಮಹಾನರಿರುವಿರಿ, ನನ್ನಿಂದ ಆಗಿರುವ ಕಾರ್ಯ-ಅಪರಾಧವನ್ನು ತಿಳಿದು ತಮಗೆ ಸರಿಯೆನಿಸಿದಂತೆ ನನಗೆ ದಂಡನೆ ನೀಡಬಹುದಾಗಿದೆ, ಅಪರಾಧವಂತೂ ನನ್ನಿಂದ ಸಂಭವಿಸಿದೆ'ಯೆಂದು ಹೇಳಿದ ಮೇಲೆ ಆ ಯಜಮಾನನು ಇವನನ್ನು ನಿಃಶಲ್ಯ, ನಿಷ್ಕಪಟ, ಒಳ್ಳೆಯ ಮನುಷ್ಯನೆಂದು ತಿಳಿದು ಅವನ ದೋಷವನ್ನು ಕ್ಷಮಿಸಿ ಬಿಡುತ್ತಾನೆ. ಇದೇ ಪ್ರಕಾರ ಅದೆಷ್ಟೋ (ಚಾರಿತ್ರದಲ್ಲಿ ತಗಲಿದ) ದೋಷಗಳು ಗುರುಗಳ ಹತ್ತಿರವೂ ತಮ್ಮ ದೋಷ ಪ್ರಗಟಪಡಿಸುವ ಮತ್ತು ತಮ್ಮ ನಿಂದೆ-ಗರ್ಹೆಯನ್ನೂ ಮಾಡುವುದರಿಂದ ನಾಶವಾಗಿ ಹೋಗುತ್ತವೆ ಇದರ ಹೆಸರು -ತದುಭಯ ಪ್ರಾಯಶ್ಚಿತ್ತವಿದೆ.

ತಮಗೆ ಯಾವುದೋ ವಸ್ತುವಿನ ಮೂಲಕ ದೋಷವು ತಗಲಿದ್ದರೆ ಸ್ಮರಣೆಯಾಗುತ್ತಿದ್ದಂತೆಯೇ ಅದನ್ನು ದೂರ ಮಾಡುವ ಸಲುವಾಗಿ ಒಂದುವೇಳೆ ಯಾವ ಉಪಾಯವೂ ಹೊಳೆಯದಿದ್ದರೆ ಯಾವ ವಸ್ತುವಿನ ಮೂಲಕ ದೋಷ ತಗಲಿತ್ತು, ಆ ವಸ್ತುವಿನದೇ ತ್ಯಾಗ ಮಾಡಿದರೆ ದೋಷವು ದೂರವಾಗಿ ಹೋಗುತ್ತದೆ. ಹೇಗೆಂದರೆ - ಲೋಕದಲ್ಲಿ ತಪ್ಪಿ ಯಾವನೋ, ಯಾವುದೋ ಮಾರ್ಗದಿಂದ ನಡೆಯುತ್ತ ಅರಮನೆಗೆ ಬಂದು ತಲುಪಿದನು ಮತ್ತು ಅಲ್ಲಿ ಬಂದಿಯಾದನು ಆಗ ಯಾರೋ 'ಇವನು ಕಳ್ಳನಿದ್ದಾನೆ, ಹೊಡೆಯಿರಿ' ಎಂದಾಗ, ಇವನು 'ನಾನು ದಾರಿತಪ್ಪಿ ಈ ಮಾರ್ಗದಲ್ಲಿ ಬಂದಿದ್ದೇನೆ, ಕಳ್ಳನಲ್ಲ; ಇನ್ನೆಂದೂ ಈ ಮಾರ್ಗದಿಂದ ಬರುವುದಿಲ್ಲ, ನನ್ನನ್ನು ಬಿಟ್ಟುಬಿಡಿರಿ' ಎನ್ನುತ್ತಾನೆ. ಆಗ ದೊರೆಯ ಸೇವಕರು ಇವನ ಮಾತನ್ನು ಸತ್ಯವೆಂದು ಮನ್ನಿಸಿ 'ಈ ಸಲ ಬಿಡುತ್ತೇವೆ ಆದರೆ ಮತ್ತೆ ಎಂದಾದರೂ ಈ ದಾರಿಯಿಂದ ಬಂದುದು ಕಾಣಿಸಿದರೆ ನಿನಗೆ ಉಳಿಗಾಲವಿಲ್ಲ' ಎಂದು ಹೇಳಿ ಅವನನ್ನು ಬಿಟ್ಟುಬಿಡುತ್ತಾರೆ - ಹೀಗೆ ದೋಷದ ನಾಶವಾಯಿತು.

ಯಾವನೋ ರೋಗಿಯ ಸಲುವಾಗಿ ತುಪ್ಪದ ನಿಷೇಧ ಮಾಡಲಾಗಿತ್ತು. ಅವನು ಲೋಭವಶನಾಗಿ ತುಪ್ಪದ ಸೇವನೆ ಮಾಡುತ್ತಾನೆ, ಅದರಿಂದ ರೋಗವು ಅಧಿಕವಾಗುತ್ತದೆ. ಆಗ ವೈದ್ಯನು 'ನೀನು ತುಪ್ಪದ ಸೇವನೆ ಮಾಡಿರುವೆ ಅಂತೆಯೇ ರೋಗವು ಅಧಿಕವಾಗಿದೆ, ನಿನಗೆ ತುಪ್ಪದ ಸೇವನೆಯ ರಾಗವು ತುಂಬಾ ಇರುವುದರಿಂದ ನಿನ್ನ ರೋಗದ ನಾಶವಾಗುವುದಿಲ್ಲ'ವೆಂದು ಹೇಳುತ್ತಾನೆ. ರೋಗಿಯು ತುಪ್ಪದಿಂದ ತನಗೆ ಮಹಾದುಃಖವಾಗಿರುವುದನ್ನು ತಿಳಿದುಕೊಂಡು ಜೀವನ ಪರ್ಯಂತ ತುಪ್ಪದ ತ್ಯಾಗ ಮಾಡಿಬಿಟ್ಟನು. ಆಗ ವೈದ್ಯನು ಅವನನ್ನು ಸುಖಿಯನ್ನಾಗಿಸಿದನು. ಇದೇ ಪ್ರಕಾರ ಅದೆಷ್ಟೋ ದೋಷಗಳು ಯಾವ ವಸ್ತುವಿನ ಕುರಿತಾಗಿ ಇರುವಂಥ ಮೋಹದಿಂದ ತಗಲುತ್ತವೆ, ಆ ವಸ್ತುವಿನ ತ್ಯಾಗ ಮಾಡುವುದರಿಂದಲೇ ಆ ದೋಷಗಳು ದೂರವಾಗುತ್ತವೆ - ಇದು ವಿವೇಕ ಪ್ರಾಯಶ್ಚಿತ್ತವಿದೆ.

ಮುನಿರಾಜರು ಒಂದುವೇಳೆ ತಮ್ಮ ಚಾರಿತ್ರದಲ್ಲಿ ದೋಷ ತಗಲಿರುವುದನ್ನು ತಿಳಿಯುತ್ತಾರೆ, ಆಗ ಅದನ್ನು ದೂರ ಮಾಡುವ ಸಲುವಾಗಿ ಅವರು ಕಾಯೋತ್ಸರ್ಗ ಮಾಡುತ್ತಾರೆ. ಅದರಲ್ಲಿ ಪಂಚ ಪರಮೇಷ್ಠಿಗಳ ಸ್ತುತಿ ಹಾಗೂ ಆಲೋಚನಾದಿಗಳನ್ನು ಮಾಡುತ್ತಾರೆ. ಆಗ ದೋಷವು ನಷ್ಟವಾಗಿ ಹೋಗುತ್ತದೆ. ಹೇಗೆಂದರೆ - ಲೋಕದಲ್ಲಿ ತಮಗೆ ಒಂದುವೇಳೆ ದೋಷ ತಗಲಿದ್ದರೆ ಅದನ್ನು ಸ್ವೀಕಾರ ಮಾಡಿ, ಪಂಚರ ಎದುರಿಗೆ ನಿಂತು ಕೈಮುಗಿದು 'ನನ್ನಿಂದ ತಪ್ಪು ಸಂಭವಿಸಿದೆ, ತಾವು ದೊಡ್ಡವರಿದ್ದೀರಿ'ಯೆಂದು ಹೇಳುತ್ತಾನೆ. ಎಂದರೆ ಈ ರೀತಿ ಪಂಚರ ಸ್ತುತಿ ಮಾಡುತ್ತಾನೆ ಹಾಗೂ ತನ್ನ ದೀನತೆಯನ್ನು ಮಾಡುತ್ತಾನೆ, ಆಗ ಪಂಚರು ಅವನನ್ನು ಸರಳನೆಂದು ತಿಳಿದುಕೊಂಡು ಅವನ ತಪ್ಪನ್ನು ಮನ್ನಿಸಿ ಶುದ್ಧಗೊಳಿಸುತ್ತಾರೆ. ಅದೇ ಪ್ರಕಾರ ಅದೆಷ್ಟೋ ದೋಷಗಳು ಕಾಯೋತ್ಸರ್ಗ ಪೂರ್ವಕ ಆಲೋಚನೆ ಮಾಡುವುದರಿಂದ ದೂರವಾಗುತ್ತವೆ - ಇದನ್ನು ವ್ಯುತ್ಸರ್ಗ ಪ್ರಾಯಶ್ಚಿತ್ತವೆಂದು ಹೇಳುತ್ತಾರೆ.

ವೀತರಾಗತೆಯ ಪೋಷಕವಾದ ಅನೇಕ ಉಪವಾಸ, ದುರ್ಧರ (ಉತ್ಕೃಷ್ಟ) ತಪಸ್ಸು ಮಾಡುತ್ತಿರುವಾಗ ಯತಿಗೆ ಪ್ರಮಾದವಶದಿಂದ ತನ್ನ ತಪಸ್ಸಿನಲ್ಲಿ ದೋಷ ತಗಲಿರುವುದು ತಿಳಿದು ಬಂದರೆ ಅದನ್ನು ಸ್ಮರಣೆಯಲ್ಲಿಟ್ಟುಕೊಂಡು ಆಚಾರ್ಯರ ಎದುರಿಗೆ ನಿವೇದನೆ ಮಾಡಬೇಕು. ಗುರುಗಳು ಅದಕ್ಕೆ ಯೋಗ್ಯವಾದ ಯಾವ ಪ್ರಾಯಶ್ಚಿತ್ತ ಕೊಡುತ್ತಾರೆ ಅದನ್ನು ಇವರು ಮುನೀಶ್ವರರಿಂದ ಕೊಡಲಾದ ಪ್ರಾಯಶ್ಚಿತ್ತವಿದೆಯೆಂದು ತಿಳಿದುಕೊಂಡು ಅತಿ ವಿನಯದಿಂದ ಗ್ರಹಣ ಮಾಡಬೇಕು. ಆಗ ದೋಷವು ದೂರವಾಗುತ್ತದೆ. ಹೇಗೆಂದರೆ - ಲೋಕದಲ್ಲಿ ಯಾರಿಂದಾದರೂ, ಯಾವುದೋ ಅಪರಾಧವಾಗಿ ಹೋದರೆ ಸ್ವಲ್ಪ ದಂಡದ ರೂಪದಲ್ಲಿ ದ್ರವ್ಯ(ಧನ)ವನ್ನು ತಗೆದುಕೊಂಡು ಅವನನ್ನು ಸಾವಧಾನಗೊಳಿಸಿ ಶುದ್ಧ ಮಾಡುತ್ತಾರೆ; ಅದೇ ಪ್ರಕಾರ ಅದೆಷ್ಟೋ ದೋಷಗಳು ಆಚಾರ್ಯರು ಹೇಳಿದ ಅನುಸಾರ ಪ್ರಾಯಶ್ಚಿತ್ತದಲ್ಲಿ ತಪ ಧಾರಣ ಮಾಡುವುದರಿಂದ ಅವು ಶುದ್ಧವಾಗುತ್ತವೆ - ಇದರ ಹೆಸರು ತಪಪ್ರಾಯಶ್ಚಿತ್ತವಿದೆ.

ಯಾವಾಗ ಯಾರೋ ಬಹುದಿನಗಳಿಂದ ದೀಕ್ಷಿತ ಮಹಾತಪಸ್ವಿಗೆ ಪ್ರಮಾದವಶ ಯಾವುದೋ ದೋಷ ತಗಲಿದರೆ, ಆಗ ಯತಿಯು ಸ್ಮರಿಸಿಕೊಂಡು ಅದನ್ನು ಆಚಾರ್ಯರಿಗೆ ಹೇಳುತ್ತಾನೆ; ಆಗ ಗುರುಗಳು ಇವರ ದೀಕ್ಷೆಯ ಅದೆಷ್ಟೋ ದಿನಗಳನ್ನು ಛೇದಿಸಿ ಬಿಡುತ್ತಾರೆ. ದೀಕ್ಷೆಯ ದಿನಗಳನ್ನು ಕಡಿಮೆ ಮಾಡಿ ಅವರನ್ನು ಶುದ್ಧಗೊಳಿಸುತ್ತಾರೆ. ಹೇಗೆಂದರೆ - ಲೋಕದಲ್ಲಿ ಯಾರಿಂದಾದರೂ ಯಾವುದಾದರೂ ಅಪರಾಧವು ಸಂಭವಿಸಿದ್ದರೆ ಆಗ ಪಂಚರು ಆತನ ಅದೆಷ್ಟೋ ದಿನಗಳ ಸಂಪಾದನೆಯನ್ನು ಖರ್ಚು ಮಾಡಿಸಿ ಅವನ ಮನೆಗೆ ಲಭಿಸಬೇಕಾದ ಧನವನ್ನು ಕಡಿಮೆ ಮಾಡಿ ಅವನನ್ನು ಕೆಲವಂಶದಿಂದ ನಿರ್ಧನನನ್ನಾಗಿಸುತ್ತಾರೆ, ಅದರಿಂದ ಅವನು ಪುನಃ ಅಂಥ ಕಾರ್ಯ ಮಾಡುವುದಿಲ್ಲ; ಅದೇ ಪ್ರಕಾರ ಅದೆಷ್ಟೋ ದೋಷಗಳು ಎಂಥವಿರುತ್ತವೆಯೆಂದರೆ ಅವುಗಳ ಪ್ರಾಯಶ್ಚಿತ್ತದಲ್ಲಿ ದೀಕ್ಷೆಯ ಕೆಲದಿನಗಳನ್ನು ಗುರುಗಳು ಕಡಿಮೆ ಮಾಡಿ ಬಿಡುತ್ತಾರೆ. ಎಂದರೆ ಐನೂರು ವರ್ಷಗಳವರೆಗೆ ತಪಸ್ಸು ಮಾಡಿದ್ದರೆ ಯಥಾಯೋಗ್ಯ ಎರಡು ನೂರಾಐವತ್ತು ವರ್ಷಗಳನ್ನು ಕಡಿಮೆ ಮಾಡಿ ಬಿಡುತ್ತಾರೆ, ಆಗ ಶುದ್ಧವಾಗುತ್ತದೆ - ಇದರ ಹೆಸರು ಛೇದ ಪ್ರಾಯಶ್ಚಿತ್ತವಿದೆ.

ಯಾವನೋ ಮುನಿಗೆ ಅಭಿಮಾನದ ಕಾರಣದಿಂದ ದೋಷವು ತಗಲಿದ್ದರೆ ಅಥವಾ ಯಾವನೋ ಮುನಿಯು ಧರ್ಮದ ತ್ಯಾಗ ಮಾಡಿ ಅಯೋಗ್ಯ ಮಾರ್ಗದ ಸೇವನೆ ಮಾಡುವ ಇತ್ಯಾದಿ ಮಹಾಪಾಪ ಮಾಡಿದ್ದರೆ, ನಂತರ ಒಂದುವೇಳೆ ಅದನ್ನು ಗುರುಗಳಿಗೆ ಹೇಳಿದರೆ, ಆಚಾರ್ಯರು ಅವನ ದೀಕ್ಷೆಯನ್ನು ಛೇದಿಸಿ ಬಿಡುತ್ತಾರೆ, ಪುನಃ ನವೀನವಾಗಿ ದೀಕ್ಷೆ ನೀಡುತ್ತಾರೆ ಆಗ ದೋಷದ ಶುದ್ಧಿಯಾಗುತ್ತದೆ. ಹೇಗೆಂದರೆ - ಲೋಕದಲ್ಲಿ ಯಾವುದಾದರೂ ಬಹಳಷ್ಟು ದೊಡ್ಡ ದೋಷವಾಗಿದ್ದರೆ ಸಮಸ್ತ ಆಸ್ತಿ, ಮನೆ, ಧನವನ್ನು ಲೂಟಿಮಾಡಿ ಭಿಕಾರಿಯಂತೆ ಮಾಡಿ ಬಿಡುತ್ತಾರೆ, ಆಗ ಆ ದೋಷದಿಂದ ಶುದ್ಧಿಯಾಗುತ್ತದೆ. ಇನ್ನು ನವೀನವಾಗಿ ಸಂಪಾದನೆ ಮಾಡಿ ಜೀವನ ಸಾಗಿಸಬೇಕು, ಸಂಗ್ರಹಣೆ ಮಾಡಬೇಕು, ಅದೇ ಪ್ರಕಾರ ಅದೆಷ್ಟೋ ದೋಷಗಳ ಕಾರಣದಿಂದ ಆಚಾರ್ಯರು ಮುನಿಯ ದೀಕ್ಷೆಯ ರೂಪದ ಧನವನ್ನೆಲ್ಲ ಛೇದಿಸಿ ಗೃಹಸ್ಥನ ಸಮಾನ ಅಸಂಯಮಿಯನ್ನಾಗಿಸುತ್ತಾರೆ. ನಂತರ ಹೊಸದಾಗಿ ದೀಕ್ಷೆ ನೀಡುತ್ತಾರೆ, ಆಗ ನಿರ್ದೋಷ ಅರ್ಥಾತ್ ಶುದ್ಧವಾಗುತ್ತದೆ - ಇದರ ಹೆಸರು ಮೂಲಪ್ರಾಯಶ್ಚಿತ್ತವಿದೆ.

ಪರಿಹಾರ ಪ್ರಾಯಶ್ಚಿತ್ತ - ೧. ಅನುಪಸ್ಥಾಪನ ಮತ್ತು ೨. ಪಾರಂಚಿಕವೆಂದು ಎರಡು ಭೇದಗಳಿವೆ. ಅದರಲ್ಲಿಯೂ ಅನುಪಸ್ಥಾಪನದ ಎರಡು ಭೇದಗಳಿದ್ದು ಅವು ಹೀಗಿವೆ,-

ಅ) ನಿಜಗಣ ಅನುಪಸ್ಥಾಪನ - ಯಾವುದರಲ್ಲಿ ಶಿಷ್ಯನ ಪ್ರಾಯಶ್ಚಿತ್ತದ ಸಮಯದಲ್ಲಿ ಆಚಾರ್ಯರು ಶಿಷ್ಯನನ್ನು ತಮ್ಮ ಸಂಘದಲ್ಲಿಯೇ ಇಟ್ಟುಕೊಳ್ಳುವರು, ಅದು ನಿಜಗಣಅನುಪಸ್ಥಾಪನ ಪ್ರಾಯಶ್ಚಿತ್ತವಿದೆ.

ಬ) ಪರಗಣ ಅನುಪಸ್ಥಾಪನ - ಶಿಷ್ಯನಿಂದ ದೋಷ(ಅಪರಾಧ)ವಾಗಿ ಹೋದಮೇಲೆ ಸಂಘದಿಂದ ಹೊರಗೆ ಹಾಕಿ ಅವನನ್ನು ಬೇರೆ ಸಂಘದಲ್ಲಿಡುತ್ತಾರೆ. ಹೇಗೆಂದರೆ - ಲೋಕದಲ್ಲಿ ಯಾರಿಂದಾದರೂ ಯಾವುದೋ ಮಹಾಪರಾಧವಾಗಿ ಹೋದರೆ ದೊರೆ ಅಥವಾ ಪಂಚರು ಅವನನ್ನು ನಗರದಿಂದ ಹೊರಗೆ ಹಾಕಿ ಬೇರೆ ದೇಶದಲ್ಲಿರಿಸುತ್ತಾರೆ ಮತ್ತು ಶುದ್ಧನಾದಮೇಲೆ ಕರೆಸಿಕೊಳ್ಳುತ್ತಾರೆ; ಅದೇ ಪ್ರಕಾರ ಸಂಘದಿಂದ ಹೊರಗೆ ಹಾಕಿ, ಪರಗಣದಲ್ಲಿಟ್ಟು ಶುದ್ಧ ಮಾಡುತ್ತಾರೆ. ಇಂಥ ಅದೆಷ್ಟೋ ದೋಷಗಳಿವೆ. ಅವುಗಳ ಸಲುವಾಗಿ ಆಚಾರ್ಯರು ಈ ದಂಡನೆಯಿಂದ ಶುದ್ಧಗೊಳಿಸುತ್ತಾರೆ - ಇದು ಪರಗಣಸ್ಥಾಪನ ಅಥವಾ ಅನುಪಸ್ಥಾಪನ ಪ್ರಾಯಶ್ಚಿತ್ತವಿದೆ.

ಇದರಲ್ಲಿ ನಿಜಗಣ ಅನುಪಸ್ಥಾಪನವು ಸ್ವಲ್ಪ ಉತ್ತಮವಿದೆ; ಆದರೆ ಪರಗಣ ಅನುಪಸ್ಥಾಪನವು ಅತ್ಯಂತ ಮಾನಭಂಗದ ಕಾರಣವಿದೆ, ಅದರಿಂದ ಮಹಾಕಠಿಣವಿದೆ.

ಉತ್ಕೃಷ್ಟ ದಂಡನೆಗಳು ಯಾವ ಯಾವವಿವೆ ಮತ್ತು ಯಾವ-ಯಾವ ಅಪರಾಧಗಳಲ್ಲಿ ಯಾವ-ಯಾವ ಮುನಿಗಳಿಗೆ ಆಗುತ್ತವೆ, ಅದನ್ನು ಆಚಾರಸಾರ ಗ್ರಂಥದ ಆಧಾರದಿಂದ ಹೇಳುತ್ತಾರೆ,-

**ದ್ವಾದಶಾಬ್ದೇ ಷಣ್ಮಾಸ, ಷಣ್ಮಾಸಾನಸನಂ ಮತಮ್ ।**
**ಜಘನ್ಯೇ ಪಂಚ ಪಂಚೋಪವಾಸಂ, ಮಧ್ಯಾತ್ತು ಮಧ್ಯಮಮ್ ॥**

**ಅರ್ಥ** :- ಒಂದುವೇಳೆ ಯಾವನೋ ಶಿಷ್ಯನಿಂದ ಮಹಾಪರಾಧವಾಗಿದ್ದರೆ ಉತ್ಕೃಷ್ಟ ದಂಡನೆ ನೀಡುತ್ತ ಅವನಿಂದ ಆರು-ಆರು ತಿಂಗಳ ಉಪವಾಸವನ್ನು ಹನ್ನೆರಡು ವರ್ಷಗಳವರೆಗೆ ಮಾಡಿಸುತ್ತಾರೆ ಮತ್ತು ಜಘನ್ಯ ದಂಡನೆ ನೀಡಿದರೆ ಐದು-ಐದು ಉಪವಾಸ ಹನ್ನೆರಡು ವರ್ಷಗಳವರೆಗೆ ಮಾಡಿಸುತ್ತಾರೆ. ಮಧ್ಯಮ ದಂಡನೆ ನೀಡಿದರೆ ಉತ್ಕೃಷ್ಟ ಮತ್ತು ಜಘನ್ಯದ ಮಧ್ಯದಲ್ಲಿ ಯಥಾಯೋಗ್ಯ ಉಪವಾಸ ಮಾಡಿಸುತ್ತಾರೆ.

ಯಾರಿಗೆ ಇಂಥ ಕಠೋರ ದಂಡನೆ ನೀಡಲಾಗಿದೆ, ಆ ಶಿಷ್ಯರಿಗೆ ಆಚಾರ್ಯರು ಹೀಗೆ ಆಜ್ಞೆ ಮಾಡುತ್ತಾರೆ - ನೀವು ಸಂಘದಿಂದ ಯಾವಾಗಲೂ ಮೂವತ್ತೆರಡು ಧನುಷ್ಯ ಅಂತರದಲ್ಲಿರಬೇಕು, ಸಂಪೂರ್ಣ ಸಂಘಕ್ಕೆ ನಮಸ್ಕಾರ ಮಾಡಬೇಕು, ಸಂಘದ ಮುನಿಗಳು ನಿಮಗೆ ಪ್ರತಿನಮಸ್ಕಾರ ಮಾಡಲಾರರು. ಅವರ ದೋಷವನ್ನು ಜಗತ್ತಿನಲ್ಲಿ ಪ್ರಗಟ ಪಡಿಸುವ ಸಲುವಾಗಿ ಪಿಂಛಿಯನ್ನು ತಲೆಕೆಳಗೆ ಮಾಡಿ ಇರಿಸುವಂತೆ ಆಜ್ಞೆಯಿದೆ. ಮೌನದಿಂದ ಇರುವುದು, ಯಾವ ಮುನಿ ಅಥವಾ ಶ್ರಾವಕರೊಂದಿಗೆ ಮಾತನಾಡದಿರುವುದು ಎಂದಾದರೂ ಮಾತನಾಡುವುದಿದ್ದರೆ ಸಂಘದ ನಾಯಕ ಆಚಾರ್ಯ - ತಮ್ಮ ಗುರುಗಳೊಂದಿಗೇ ಮಾತನಾಡಬೇಕು. ಅನ್ಯಥಾ ಮೌನದಿಂದ ಇರಬೇಕು. ಇಂಥ ದಂಡನೆಯು ನಿಮ್ನ ಲಿಖಿತ ಅಪರಾಧವಾದಮೇಲೆ ಇರುತ್ತದೆ.

ಒಂದುವೇಳೆ ಯಾವನೋ ಮುನಿಯು ಯಾರೋ ಮುನಿಗಳ ಶಿಷ್ಯನನ್ನು ಪುಸಲಾಯಿಸಿ (ಮಾತಿನಿಂದ ಮರುಳು ಮಾಡಿ) ಬೇರೆ ಮಾಡಿದ್ದರೆ ಅಥವಾ ಬೇರೆ ಮುನಿಯ ಪಿಂಛಿ, ಕಮಂಡಲು, ಪುಸ್ತಕಾದಿಗಳ ಕಳವು ಮಾಡಿದ್ದರೆ, ಯಾವನೋ ಶ್ರಾವಕನ ಪುತ್ರ, ಪತ್ನಿ, ರತ್ನ, ಸುವರ್ಣಾದಿಗಳನ್ನು ಹರಣ ಮಾಡಿದ್ದರೆ ಅಥವಾ ಯಾವನೋ ಮುನಿ-ಶ್ರಾವಕನ ಚೇತನ-ಅಚೇತನ ಪರಿಗ್ರಹಗಳನ್ನು ಕದ್ದಿದ್ದರೆ ಅಥವಾ ಇವುಗಳನ್ನು ಹೊರತುಪಡಿಸಿ ಬೇರೆ ಏನಾದರೂ ಅನ್ಯಾಯ ಕಾರ್ಯ, ಮುನಿಧರ್ಮವನ್ನು ನಷ್ಟಮಾಡುವಂಥ ಅಸಂಯಮದ ಸೇವನೆ ಮಾಡಿದ್ದರೆ ಆ ಮುನಿಗೆ ಉಪರ್ಯುಕ್ತ ದಂಡನೆ ನೀಡಲಾಗುತ್ತದೆ.

ಇಂಥ ದಂಡನೆಯನ್ನು ಯಾವ ಪ್ರಕಾರದ ಶಿಷ್ಯರಿಗೆ ಕೊಡುತ್ತಾರೆ, ಎಂಬುದನ್ನು ಹೇಳುತ್ತಾರೆ - ಯಾವ ಮುನಿಗಳು ಮಹಾಜ್ಞಾನಿ, ದಶಪೂರ್ವಗಳ ಪಾಠಕರಿರುತ್ತಾರೆ; ಏಕೆಂದರೆ ಹೀನ ಜ್ಞಾನಿಗಳಿಂದ ಕಠೋರ ದಂಡನೆಯನ್ನು ನಿರ್ವಹಿಸುವುದಾಗುವುದಿಲ್ಲ. ಹೇಗೆ ಅತ್ಯಂತ ಕಹಿಯಾದ ಔಷಧಿಯನ್ನು ತಿಳಿವಳಿಕೆಯುಳ್ಳ ಪುರುಷರೇ ಕುಡಿಯುತ್ತಾರೆ, ಅನ್ಯ ಬಾಲಕ ಮೊದಲಾದವರು ಅಜ್ಞಾನದ ಕಾರಣದಿಂದ ಕಹಿ ಔಷಧಿಯ ಗುಣವನ್ನು ತಿಳಿಯುವುದಿಲ್ಲ, ಅವರು ಆ ಔಷಧಿಯನ್ನು ಕುಡಿಯುವ ಸಾಧ್ಯತೆಯಿಲ್ಲ; ಹಾಗೆಯೇ ಅಜ್ಞಾನಿ ಶಿಷ್ಯನಿಗೆ ಗುರುಗಳಿಂದ ಕೊಡಲ್ಪಡುವ ಕಠೋರ ದಂಡನೆಯ ಮರ್ಮದ ಜ್ಞಾನವಿರುವುದಿಲ್ಲ. ಅದರಿಂದ ಮಹಾಜ್ಞಾನಿಗೇನೆ ಈ ದಂಡನೆ ನೀಡಲಾಗುತ್ತದೆ. ವಜ್ರವೃಷಭನಾರಾಚ ಮೊದಲಾದ ಮೂರು ಸಂಹನನ ಧಾರಕರಿಗೆ ಈ ದಂಡನೆಯಿದೆ. ಹೀನಶಕ್ತಿಯುಳ್ಳವರಿಗೆ ಇಂಥ ದಂಡನೆ ನೀಡಲಾಗುವುದಿಲ್ಲ. ಏಕೆಂದರೆ ಆಚಾರ್ಯರು ಮಹಾದಯಾಳುವಿರುತ್ತಾರೆ, ಜಗತ್ಪ್ರಿಯರಿರುತ್ತಾರೆ, ಎಲ್ಲರಿಗೂ ಮಾತಾ-ಪಿತರ ಸಮಾನರಿರುತ್ತಾರೆ, ಎಲ್ಲರ ಹಿತವಾಂಛಕರಿರುತ್ತಾರೆ; ಯಾವರೀತಿಯಿಂದ ಶಿಷ್ಯನ ಹಿತವಾಗುತ್ತದೆಯೆಂಬುದನ್ನು ತಿಳಿದಿರುತ್ತಾರೆ ಮತ್ತು ಅದೇ ರೀತಿಯ ಪ್ರಾಯಶ್ಚಿತ್ತ ಕೊಡುತ್ತಾರೆ. ಯಾವ ಶಿಷ್ಯನೊಂದಿಗೆಯೂ ದ್ವೇಷಭಾವವಿರುವುದಿಲ್ಲ. ಸ್ವಯಂ ಮಾನ ಅಥವಾ ಗರ್ವವನ್ನಿಟ್ಟುಕೊಳ್ಳುವುದಿಲ್ಲ. ಯಾವ ಪ್ರಕಾರ ಶಿಷ್ಯರುಗಳ ಪಾಪದ ನಾಶವಾಗುವುದೋ, ನಿರತಿಚಾರ ಸಂಯಮದಿಂದ ಸ್ವರ್ಗ ಮೋಕ್ಷದ ಪ್ರಾಪ್ತಿಯಾಗುವುದೋ ಅದನ್ನೇ ಮಾಡುತ್ತಾರೆ.

ಹೇಗೆ ಯಾವನೋ ಪರೋಪಕಾರಿ ವೈದ್ಯನು ಅನೇಕ ರೋಗಿಗಳಿಗೆ ಯಾವುದೋ ಕಾರಣದಿಂದ ಭೋಜನ-ಪಾನ ಮಾಡಗೊಡುವುದಿಲ್ಲ. ಕೆಲವರಿಂದ ಲಂಘನ ಮಾಡಿಸುತ್ತಾನೆ, ಕೆಲವರಿಗೆ ಕಹಿ ಔಷಧಿ ಕೊಡುತ್ತಾನೆ; ಆದಾಗ್ಯೂ ಯಾವ ರೋಗಿಯೊಂದಿಗೆ ಅವನದು ದ್ವೇಷವಿರುವುದಿಲ್ಲ. ರೋಗಿಗಳ ಸುಖದ ಸಲುವಾಗಿಯೇ ಹಾಗೆ ಹೇಳುತ್ತಾನೆ; ಹಾಗೆಯೇ ಆಚಾರ್ಯರುಗಳ ಮೂಲಕ ಕೊಡಲಾಗುವ ದಂಡನೆಯನ್ನು ತಿಳಿಯುವುದು.

ಯಾವ ಧರ್ಮಾತ್ಮನಾದ ಶಿಷ್ಯನು ಗುರುಗಳಿಂದ ಕೊಡಲಾದ ದಂಡನೆಯನ್ನು ಮಹಾವಿನಯ ಹಾಗೂ ಆದರದಿಂದ ಗ್ರಹಣ ಮಾಡುತ್ತಾನೆ, ಅದು ನಿಜಗುಣ ಅನುಪಸ್ಥಾಪನ ಪ್ರಾಯಶ್ಚಿತ್ತವಿದೆ.

ಯಾವನು ಆಚಾರ್ಯರಿಂದ ಕೊಡಲ್ಪಟ್ಟ ದಂಡನೆಯನ್ನು ಮಹಾಮದಸಹಿತ ಅಂಗೀಕಾರ ಮಾಡುತ್ತಾನೆ ಆ ಶಿಷ್ಯನನ್ನು ಆಚಾರ್ಯರು ಸಂಘದಿಂದ ಹೊರಗೆ ಹಾಕುತ್ತಾರೆ. ಅವನಿಗೆ ಪರಗಣ ಅನುಪಸ್ಥಾಪನವಾಗುತ್ತದೆ. ಯಾವ ಪ್ರಕಾರ ಲೋಕದಲ್ಲಿ ಯಾವ ಜನರು ರಾಜಾಜ್ಞೆಯನ್ನು ಮನ್ನಿಸುವುದಿಲ್ಲ, ಅವರನ್ನು ದೊರೆಯು ತನ್ನದೇಶ, ನಗರದಿಂದ ಹೊರಗೆ ಹಾಕುತ್ತಾನೆ; ಅದೇ ಪ್ರಕಾರ ಆಜ್ಞೆಯ ವಿರುದ್ಧ ವರ್ತಿಸುವಂಥ ಶಿಷ್ಯನನ್ನು ಸಂಘದಿಂದ ಹೊರಗೆ ಹಾಕುತ್ತಾರೆ. ಅಭಿಮಾನಿ ಶಿಷ್ಯನನ್ನು ಅನ್ಯ ಸಂಘದಲ್ಲಿ ಕಳುಹಿಸಿ ಶುದ್ಧಗೊಳಿಸುತ್ತಾರೆ. ಹೇಗೆ ಲೋಕದಲ್ಲಿ ತಮ್ಮ ಮಗನು ಒಂದುವೇಳೆ ಮನೆಯ ಅಂಗಡಿಯಲ್ಲಿ ಕೆಲಸ ಮಾಡಲು ಕಲಿತುಕೊಳ್ಳದಿದ್ದರೆ ಅವನನ್ನು ಬೇರೆಯವರ ಅಂಗಡಿಯಲ್ಲಿಟ್ಟು ಗುಣವಂತನನ್ನಾಗಿ ಮಾಡಲಾಗುತ್ತದೆ; ಹಾಗೆಯೇ ಶಿಷ್ಯನ ಒಳಿತು ಹೇಗೆ ಆಗಬಹುದಾಗಿದೆಯೆಂಬುದನ್ನು ತಿಳಿದ ಆಚಾರ್ಯರು ಹಾಗೆಯೇ ಅವನ ಹಿತ ಮಾಡುತ್ತಾರೆ. ಇದನ್ನು ಪರಗಣ ಅನುಪಸ್ಥಾಪನ ಪ್ರಾಯಶ್ಚಿತ್ತವೆಂದು ಹೇಳುತ್ತಾರೆ.

ಒಂದುವೇಳೆ ಯಾವನೋ ಶಿಷ್ಯನು ಗರ್ವ(ಅಭಿಮಾನ)ದೊಂದಿಗೆ ಗುರುಗಳಲ್ಲಿ ಪ್ರಾಯಶ್ಚಿತ್ತ ಕೇಳುತ್ತಿದ್ದರೆ ಆಚಾರ್ಯರು ಗರ್ವಪೂರ್ವಕ ಪ್ರಾಯಶ್ಚಿತ್ತ ಕೇಳುತ್ತಿರುವ ಶಿಷ್ಯನನ್ನು ಕಂಡು 'ನೀನು ಇಂಥ ಓರ್ವ ಆಚಾರ್ಯರ ಹತ್ತಿರ ಹೋಗು ಅವರು ನಿನಗೆ ಪ್ರಾಯಶ್ಚಿತ್ತ ಕೊಡುತ್ತಾರೆ' ಎಂದು ಹೇಳುತ್ತಾರೆ. ಆಗ ಶಿಷ್ಯನು ಗುರುಗಳ ಆಜ್ಞೆಯಿಂದ ಅನ್ಯ ಆಚಾರ್ಯರ ಹತ್ತಿರ ಹೋಗಿ ಪ್ರಾಯಶ್ಚಿತ್ತ ಕೇಳುತ್ತಾನೆ. ಆ ಆಚಾರ್ಯರು ಕೂಡ ಆ ಶಿಷ್ಯನನ್ನು ಮದದೋಷ ಸಹಿತನೆಂದು ತಿಳಿದು 'ನೀನು ನಿಮ್ಮ ಗುರುಗಳಿಂದಲೇ ಪ್ರಾಯಶ್ಚಿತ್ತ ಕೇಳು' ಎಂದು ಹೇಳುತ್ತಾರೆ. ಆಗ ಶಿಷ್ಯನು ಅನಾದರವನ್ನು ತಿಳಿದು ಪುನಃ ತಮ್ಮ ಗುರುಗಳ ಹತ್ತಿರ ಬಂದು ಪ್ರಾಯಶ್ಚಿತ್ತ ಕೇಳುತ್ತಾನೆ. ಆಗ ಗುರುಗಳು ಬೇರೆ ಆಚಾರ್ಯರ ಹತ್ತಿರ ಕಳಿಸುತ್ತಾರೆ. ಅವರೂ ಕೂಡ ಅವನಿಗೆ ದಂಡನೆ ನೀಡುವುದಿಲ್ಲ, ಆಗ ಪುನಃ ಅವನು ತನ್ನ ಗುರುವಿನ ಹತ್ತಿರವೇ ಬರುತ್ತಾನೆ - ಈ ಪ್ರಕಾರ ಏಳು ಸಂಘಗಳ ಆಚಾರ್ಯರ ಹತ್ತಿರ ಕಳಿಸಿದ ಮೇಲೆಯೂ ಯಾವ ಆಚಾರ್ಯರೂ ಅಭಿಮಾನೀ ಶಿಷ್ಯನಿಗೆ ದಂಡನೆ ನೀಡುವುದಿಲ್ಲ ಆಗ ತಾನಾಗಿಯೇ ತನ್ನ ಗುರುವಿನ ಹತ್ತಿರ ಬಂದು ಅಭಿಮಾನದ ತ್ಯಾಗ ಮಾಡಿ, ಸರಳ ಭಾವದಿಂದ 'ನನಗೆ ಕೃಪೆಮಾಡಿ ಪ್ರಾಯಶ್ಚಿತ್ತ ಕೊಡಿರಿ' ಎಂದು ಹೇಳುತ್ತಾನೆ. ಆಗ ಗುರುಗಳು ವಿನಯವಂತನಾದ ಅವನನ್ನು ಕಂಡು, ನಿಃಶಲ್ಯ ಪ್ರಾಯಶ್ಚಿತ್ತ ಕೇಳುತ್ತಿದ್ದಾನೆಂಬುದನ್ನು ತಿಳಿದು, ಪ್ರಾಯಶ್ಚಿತ್ತ ನೀಡಿ ಶುದ್ಧ ಮಾಡುತ್ತಾರೆ - ಇತ್ಯಾದಿ ಪ್ರಕಾರದ ಅನುಪಸ್ಥಾನದ ಭೇದ ತಿಳಿಯುವುದು.

ಪಾರಂಚಿಕ ಪ್ರಾಯಶ್ಚಿತ್ತ - ಯಾವನು ಮುನಿ, ಆರ್ಯಿಕೆ, ಶ್ರಾವಕ, ಶ್ರಾವಿಕೆ - ಈ ನಾಲ್ಕು ಸಂಘಗಳಲ್ಲಿ ಉಪದ್ರವ ಮಾಡಿದ್ದಾನೆ ಅಥವಾ ಯಾವನೋ ಭೂಮಿಯ ದೊರೆಯೊಂದಿಗೆ ದ್ವೇಷಭಾವವಿಟ್ಟುಕೊಂಡಿದ್ದಾನೆ ಅಥವಾ ಯಾವಳೋ ಮಹಿಳೆಯೊಂದಿಗೆ ಕುಶೀಲ ಸೇವನಾದಿ ಅನ್ಯಾಯ ಮಾರ್ಗದ ದೋಷ ಮಾಡಿದ್ದಾನೆ, ಆ ಮುನಿಗೆ ಮಹಾದಂಡನೆ ನೀಡಲಾಗುತ್ತದೆ. ಹೇಗೆ ಮೊದಲು ಉತ್ಕೃಷ್ಟ ದಂಡನೆ ಹೇಳಲಾಗಿತ್ತು ಅದನ್ನು ನೀಡಿ, ನಂತರ ಧರ್ಮರಹಿತ ಕ್ಷೇತ್ರಗಳಲ್ಲಿ ಇರಿಸುತ್ತಾರೆ ಮತ್ತು ಈ ಮುನಿಯು ಮಹಾಪಾಪ ಮಾಡುವಂಥವನಿದ್ದಾನೆ, ಪಾಪಿಯಿರುವುದರಿಂದ ಆಚಾರ್ಯರು ಇವನನ್ನು ಸಂಘದಿಂದ ಹೊರಗೆ ಹಾಕಿದ್ದಾರೆ-ಎಂದು ಎಲ್ಲ ಜನರಿಗೆ

ಹೇಳುತ್ತಾರೆ - ಈ ಪ್ರಕಾರದ ಮಹಾದಂಡನೆಯು ಅವಮಾನದ ಕಾರಣವಿದೆ ಅಲ್ಲದೇ ಲೋಕನಿಂದ್ಯವಿದೆ. ಇಂಥ ದಂಡನೆಯನ್ನು ಪಡೆದ ಆ ಧರ್ಮಾತ್ಮಾ ಶಿಷ್ಯನು ಹರ್ಷ ಸಹಿತ ಪರಿಣತಿಯನ್ನಿಟ್ಟುಕೊಂಡು ಗುರುಗಳ ಆಜ್ಞೆಯ ಅನುಸಾರ ಪ್ರವರ್ತಿಸುತ್ತಾನೆ.

ಮಹಾವೈರಾಗ್ಯದಿಂದ ಸರ್ವಾಂಗಗಳು ಪರಿಪೂರ್ಣವಿರುವಂಥವರೂ, ಬಹಳಷ್ಟು ಶಕ್ತಿಯ ಧಾರಕರೂ, ಜ್ಞಾನದ ಭಂಡಾರರೂ ಆಗಿರುವ ಗುರುಗಳಿಂದ ಕೊಡಲ್ಪಟ್ಟ ಪ್ರಾಯಶ್ಚಿತ್ತವನ್ನು ಪಡೆದು ಯಾರ ಹರ್ಷವು ಬಹಳಷ್ಟು ವೃದ್ಧಿಂಗತವಾಗಿರುವಂಥ ಶಿಷ್ಯನು ಆಚಾರ್ಯರಿಂದ ಪ್ರಾಪ್ತ ದಂಡನೆಯ ಕುರಿತಾಗಿ 'ಈ ಹೊತ್ತಿನ ದಿವಸವು ಧನ್ಯವಿದೆ ಅಂತೆಯೇ ಆಚಾರ್ಯರು ನಮಗೆ ಪ್ರಾಯಶ್ಚಿತ್ತ ನೀಡಿ ಶುದ್ಧಗೊಳಿಸುತ್ತಿದ್ದಾರೆ. ಅವರು ನಮಗೆ ಪಾಪ ದೂರ ಮಾಡುವ ಉಪಾಯ ತಿಳಿಸಿಕೊಟ್ಟಿದ್ದಾರೆ. ಅದರಿಂದ ಈಗ ನಾವು ಗುರುಗಳ ಕೃಪೆಯಿಂದ ಪಾಪವನ್ನು ನಾಶಮಾಡಿ ಮೋಕ್ಷದ ಪ್ರಾಪ್ತಿ ಮಾಡಿಕೊಳ್ಳುವುದಿದೆ. ಈ ಗುರುಗಳು ಧನ್ಯರಿದ್ದಾರೆ' - ಎಂದು ವಿಚಾರ ಮಾಡಿ, ಹರ್ಷದಿಂದ ಪ್ರಾಯಶ್ಚಿತ್ತ ತಗೆದುಕೊಳ್ಳುತ್ತಾರೆ. ಈ ಪ್ರಕಾರದ ಶಿಷ್ಯರಿಗೆ ಇಂಥ ದಂಡನೆ ನೀಡುತ್ತಾರೆ. ಇದನ್ನು ಪಾರಂಚಿಕ ಪ್ರಾಯಶ್ಚಿತ್ತವೆಂದು ತಿಳಿಯುವುದು.

ಹೇಗೆ ಲೋಕದಲ್ಲಿ ದೊರೆಯು ಮಹಾ ಅಪರಾಧಿಯನ್ನು ಜನರು ತಿಳಿಯಲೆಂಬ ಉದ್ದೇಶದಿಂದ ನಗರದಲ್ಲೆಲ್ಲ ಸುತ್ತಾಡಿಸಿ 'ಇವನು ದೊರೆಯ ಅಪರಾಧಿಯಿದ್ದಾನೆ, ಇವನು ಇಂಥ ನಿಂದ್ಯಕಾರ್ಯ ಮಾಡಿದ್ದಾನೆ; ಅದರಿಂದ ಇವನಿಗೆ ದಂಡನೆ ನೀಡಲಾಗಿದೆ' ಎಂದು ಹೇಳಲಾಗುತ್ತದೆ. ಇದೇ ಪ್ರಕಾರ ಎಷ್ಟೋ ಪಾಪಗಳು ಇಂಥ ದಂಡನೆಯಾದ ಮೇಲೆಯೇ ಶುದ್ಧವಾಗುತ್ತವೆ - ಇದನ್ನು ಪರಿಹಾರ ಪ್ರಾಯಶ್ಚಿತ್ತವೆಂದು ಹೇಳುತ್ತಾರೆ.

ಯಾವನೋ ಶಿಷ್ಯನು ಜಿನಾಜ್ಞೆಯನ್ನು ಭಂಗಮಾಡಿ ಮಿಥ್ಯಾಮಾರ್ಗದ ಸೇವನೆ ಮಾಡಿದ್ದರೆ, ಗುರುಗಳು ಆ ಶಿಷ್ಯನ ಸಂಪೂರ್ಣ ದೀಕ್ಷೆಯನ್ನು ಛೇದಮಾಡಿ, ನವೀನ ದೀಕ್ಷೆ ಕೊಡುತ್ತಾರೆ ಆಗ ಅವನ ಶುದ್ಧಿಯಾಗುತ್ತದೆ. ಹೇಗೆ ಲೋಕದಲ್ಲಿ ಯಾವನೋ ತನ್ನ ಕುಲಕರ್ಮವನ್ನು ತ್ಯಾಗಮಾಡಿ ಯಾವುದಾದರೂ ನೀಚಕರ್ಮವನ್ನು ಮಾಡಿದ್ದರೆ ದೊರೆ ಅಥವಾ ಪಂಚರು ಅವನ ಮನೆಯನ್ನು ಲೂಟಿ ಮಾಡುತ್ತಾರೆ. ಇದೇ ಪ್ರಕಾರ ಅದೆಷ್ಟೋ ದೋಷಗಳು ಸಂಪೂರ್ಣ ದೀಕ್ಷೆಯ ಛೇದ ಮಾಡಿ ನವೀನ ದೀಕ್ಷೆ ಕೊಟ್ಟು ಛೇದೋಪಸ್ಥಾಪನೆ ಮಾಡಿಸುವುದರಿಂದಲೇ ಶುದ್ಧವಾಗುತ್ತದೆ - ಇದನ್ನು ಛೇದ ಉಪಸ್ಥಾಪನ ಪ್ರಾಯಶ್ಚಿತ್ತವೆಂದು ಹೇಳುತ್ತಾರೆ.

ಈ ಪ್ರಕಾರ ಪ್ರಾಯಶ್ಚಿತ್ತದ ಹತ್ತು ಭೇದಗಳನ್ನು ಹೇಳಲಾಯಿತು. ತಮಗೆ ತಗಲಿದ ದೋಷವನ್ನು ಸ್ಮರಿಸಿಕೊಂಡು ಪ್ರಾಯಶ್ಚಿತ್ತ ತಗೆದುಕೊಂಡು ಶುದ್ಧವಾಗುವುದು ಪ್ರಾಯಶ್ಚಿತ್ತ ತಪವಿದೆ.

೨. ತನಗಿಂತ ಗುಣಗಳಲ್ಲಿ ಅಧಿಕರಿರುವಂಥವರ ವಿನಯದ ಭೇದಗಳು - ೧. ಜ್ಞಾನವಿನಯ, ೨. ದರ್ಶನವಿನಯ, ೩. ಚಾರಿತ್ರವಿನಯ, ೪. ಉಪಚಾರ ವಿನಯವೆಂದು ನಾಲ್ಕು ಇವೆ.

೧) ಇವುಗಳಲ್ಲಿ ವಿನಯದಿಂದ ಶಾಸ್ತ್ರ ಓದುವುದು, ವಿನಯದಿಂದ ಶಾಸ್ತ್ರ ಆಲಿಸುವುದು ಹಾಗೂ ವಿನಯಪೂರ್ವಕ ಪದ, ವಾಕ್ಯ, ಪಾಠ, ಸ್ತುತಿ ಹೇಳುವುದು, ವಿನಯದಿಂದ ಶಾಸ್ತ್ರ ಬರೆಯುವುದು, ಬರೆಸುವುದು; ವಿನಯದಿಂದ ಶಾಸ್ತ್ರದ ಮನೋಜ್ಞಪೂಜೆ, ವಂದನೆ ಮಾಡಿ ಹರ್ಷ ಮನ್ನಿಸುವುದು ಇತ್ಯಾದಿ ಜ್ಞಾನವಿನಯವಿದೆ.

೨) ತಮ್ಮ ದೃಢ ಶ್ರದ್ಧೆಯ ಪಾಲನೆಯನ್ನು ಒಳ್ಳೆಯ ರೀತಿಯಿಂದ ಮಾಡುತ್ತ ಸಮ್ಯಕ್ತ್ವದ ಇಪ್ಪತ್ತೈದು ದೋಷಗಳನ್ನು ತಗಲಿಸದೇ ಇರುವುದು; ದೊರೆ, ಪಂಚರು, ಕುಟುಂಬವರ್ಗದವರು, ವ್ಯಂತರಾದಿ ದೇವಗಳ ಶಂಕೆಯನ್ನು ಬಿಟ್ಟು ನಿಃಶಂಕರಾಗಿ ಜಿನೇಂದ್ರಕಥಿತ ತತ್ತ್ವಗಳ ದೃಢ ಶ್ರದ್ಧೆಯನ್ನು ತಮ್ಮಲ್ಲಿ ಉಳಿಸಿಕೊಳ್ಳುವುದು ದರ್ಶನವಿನಯವಿದೆ.

೩) ಪಂಚಮಹಾವ್ರತ, ಪಂಚಸಮಿತಿ, ಮೂರುಗುಪ್ತಿ - ಈ ಹದಿಮೂರು ಪ್ರಕಾರದ ಚಾರಿತ್ರವನ್ನು ವಿನಯಸಹಿತ ಪಾಲನೆ ಮಾಡುವುದು ಹಾಗೂ ಈ ಚಾರಿತ್ರದ ಧಾರಕ ಮುನಿಗಳ ವಿನಯ ಮಾಡುವುದು ಚಾರಿತ್ರ ವಿನಯವಿದೆ. ಈ ಪ್ರಕಾರದ ಚಾರಿತ್ರ ಮತ್ತು ಚಾರಿತ್ರಧಾರಕರ ಪ್ರಶಂಸೆ - ಸ್ತುತಿಯನ್ನು ಪುನಃ ಪುನಃ ಮಾಡುವುದು ಕೂಡ ಚಾರಿತ್ರವಿನಯವಿದೆ.

೪) ಯಥಾಯೋಗ್ಯ ದ್ರವ್ಯ, ಕ್ಷೇತ್ರ, ಕಾಲ, ಭಾವ ನೋಡಿಕೊಂಡು ಎಲ್ಲರ ವಿನಯ ಮಾಡುವುದು ಉಪಚಾರ ವಿನಯವಿದೆ. ಇದರಲ್ಲಿ ೧. ಧರ್ಮಸಂಬಂಧದ ವಿನಯ, ೨. ಕರ್ಮಸಂಬಂಧದ ವಿನಯವೆಂದು ಎರಡು ಭೇದಗಳಿವೆ.

ಅ) ದೇವ, ಗುರು, ಧರ್ಮ, ತೀರ್ಥ, ಚಾರಿತ್ರ, ತಪ ಮತ್ತು ವ್ರತದ ಪೂಜೆ, ಸ್ತುತಿ, ಪ್ರಶಂಸೆ ಮಾಡುವುದು ಧರ್ಮ-ಉಪಚಾರವಿನಯವಿದೆ. ಪಂಚಪರಮೇಷ್ಠಿ ಮೊದಲಾದ ಶುಭ ದ್ರವ್ಯ, ಸಮ್ಮೇದ ಶಿಖರ ಮೊದಲಾದ ಸಿದ್ಧಕ್ಷೇತ್ರ ರೂಪ ಶುಭಕ್ಷೇತ್ರ, ಅಷ್ಟಾಹ್ನಿಕಾ ಮೊದಲಾದ ಶುಭಕಾಲ, ಸಮಸ್ತ ಜೀವರುಗಳ ಹಿತದ ಭಾವ, ಧರ್ಮ್ಯ-ಶುಕ್ಲಧ್ಯಾನ ಮೊದಲಾದ ಶುಭಭಾವ ಇತ್ಯಾದಿ ಸಮಸ್ತ ದ್ರವ್ಯ ಸಂಬಂಧದ ದ್ರವ್ಯ, ಕ್ಷೇತ್ರ, ಕಾಲ, ಭಾವಗಳ ಸ್ತುತಿ ಮಾಡುವುದು ಅಷ್ಟದ್ರವ್ಯಗಳಿಂದ ಪೂಜೆ ಮಾಡುವುದು ಧರ್ಮಸಂಬಂಧದ ಉಪಚಾರ ವಿನಯವಿದೆ.

ಬ) ದೊರೆ, ಹಿರಿಯರು, ಮಾತಾ-ಪಿತರು, ವ್ಯವಹಾರಗುರು (ವಿದ್ಯಾಗುರು) ಯಾರಿಂದ ತಮಗೆ ಜ್ಞಾನದ ಲಾಭವಾಗಿದೆ ಅಥವಾ ವಯಸ್ಸಿನಲ್ಲಿ ದೊಡ್ಡವರಿದ್ದಾರೆ ಅವರ ಯಥಾಯೋಗ್ಯ ವಿನಯ ಮಾಡುವುದು ಕರ್ಮಸಂಬಂಧದ ಉಪಚಾರ ವಿನಯವಿದೆ.

೩. ಮುನಿ, ಆರ್ಯಿಕೆ, ಶ್ರಾವಕ, ಶ್ರಾವಿಕೆ - ಈ ಚತುರ್ವಿಧ ಸಂಘ ಸಂಬಂಧದ ಧರ್ಮಾತ್ಮಾ ಜೀವರುಗಳಿಗೆ ಆಗುತ್ತಿರುವ ಶಾರೀರಿಕ ಕಷ್ಟವನ್ನು ಕಂಡು ಅವರುಗಳ ಸೇವೆ ಶುಶ್ರೂಷೆ ಮಾಡುವುದು ವೈಯಾವೃತ್ಯ ತಪವಿದೆ.

೪. ಸ್ವಹಿತ ಭಾವದಿಂದ ಶಾಸ್ತ್ರ ಓದುವುದು (ಸ್ವಾಧ್ಯಾಯ ಮಾಡುವುದು) ಪ್ರಶ್ನೆ ಮಾಡುವುದು. ಬೇರೆಯವರ ಸಲುವಾಗಿ ಜಿನಧರ್ಮದ ಉಪದೇಶ ಕೊಡುವುದು. ಗುರುಗಳ ಶ್ರೀಮುಖದಿಂದ ಆಲಿಸಿದ ಉಪದೇಶದ, ತತ್ತ್ವಗಳ ಚಿಂತನೆಯನ್ನು ಪುನಃ ಪುನಃ ಮಾಡುವುದು ಹಾಗೂ ಜಿನ ಆಜ್ಞೆಯ ಅನುಸಾರ ಶ್ರದ್ಧೆಯರೂಪ ಭಾವಗಳ ಪ್ರವೃತ್ತಿ - ಇವು ಐದು ಭೇದಗಳು ಸ್ವಾಧ್ಯಾಯ ತಪದವಿವೆ.

ಆತ್ಮಹಿತದ ಸಲುವಾಗಿ, ನಿರಾಕುಲ ಚಿಂತನೆಯ ಸಲುವಾಗಿ, ತತ್ತ್ವಗಳ ಜ್ಞಾನವನ್ನು ಹೆಚ್ಚಿಸಿಕೊಳ್ಳುವ ಸಲುವಾಗಿ, ಕಷಾಯಗಳ ಶಕ್ತಿಯನ್ನು ಕ್ಷೀಣಗೊಳಿಸುವ ಸಲುವಾಗಿ, ಶಾಂತರಸ ಕುಡಿಯುವ ಸಲುವಾಗಿ, ಭೇದಜ್ಞಾನದ ವಿಚಾರ ಮಾಡುವ ಸಲುವಾಗಿ, ಸ್ವಸ್ವಭಾವದಲ್ಲಿ ಲೀನವಾಗುವ ಸಲುವಾಗಿ - ಶಾಸ್ತ್ರಾಭ್ಯಾಸ ಮಾಡುವುದು, ಓದುವುದು ವಾಚನಾ ಸ್ವಾಧ್ಯಾಯವಿದೆ.

ಒಂದು ವೇಳೆ ತತ್ತ್ವಗಳಲ್ಲಿ ಯಾವುದೇ ಪ್ರಕಾರದ ಸಂದೇಹವಿದ್ದರೆ ಅದನ್ನು ದೂರ ಮಾಡುವ ಸಲುವಾಗಿ ಪ್ರಶ್ನೆ ಮಾಡುವುದು ಅನೇಕ ಪ್ರಕಾರದ ನಯಗಳ ಜ್ಞಾನವನ್ನು ಹೆಚ್ಚಿಸುವ ಸಲುವಾಗಿ, ಅನೇಕ ಯುಕ್ತಿ ಸಹಿತ ತತ್ತ್ವದ ಮರ್ಮ ತಿಳಿಯುವ ಸಲುವಾಗಿ ವಿಶೇಷ ಜ್ಞಾನಿಗಳೊಂದಿಗೆ ಪ್ರಶ್ನೆ ಮಾಡುವುದು ಪೃಚ್ಛನಾ ಸ್ವಾಧ್ಯಾಯವಿದೆ.

ಜಿನೇಂದ್ರ ಭಾಷಿತ ತತ್ತ್ವಗಳ ಪ್ರತೀತಿ ಮಾಡುವುದು ಎಂದರೆ ಯಾವುದನ್ನು ಜಿನೇಂದ್ರದೇವರು ಹೇಳಿದ್ದಾರೆ ಅದು ಪ್ರಮಾಣ(ಸತ್ಯ)ವಿದೆ, ಆ ಜಿನಾಜ್ಞಾನುಸಾರ ಸತ್ಯಶ್ರದ್ಧೆ ಮಾಡುವುದು, ಅದೇ ಆಮ್ನಾಯದ ಅನುಸಾರ ಇರುವುದು ಆಮ್ನಾಯ ಸ್ವಾಧ್ಯಾಯವಿದೆ.

ಭವ್ಯ ಜೀವರುಗಳಿಗೆ ಮೋಕ್ಷಮಾರ್ಗದ ಪ್ರಗಟತೆಯ ಸಲುವಾಗಿ, ಪರಭವ ಸುಧಾರಣೆಯ ಸಲುವಾಗಿ, ಸಂಸಾರ ದುಃಖನಾಶದ ಸಲುವಾಗಿ, ತತ್ತ್ವಜ್ಞಾನದ ವೃದ್ಧಿಯ ಸಲುವಾಗಿ, ಆತ್ಮಿಕ ಜ್ಞಾನದ ಪ್ರಾಪ್ತಿಯ ಸಲುವಾಗಿ,

ಪರೋಪಕಾರದ ಭಾವನೆಯಿಂದ ಅನ್ಯ ಜೀವರುಗಳಿಗೆ ಧರ್ಮದ ಉಪದೇಶ ನೀಡುವುದು ಧರ್ಮೋಪದೇಶ ಸ್ವಾಧ್ಯಾಯವಿದೆ.

ಅಂಗೀಕಾರ ಮಾಡಲಾದ ಉಪದೇಶದ ಚಿಂತನೆಯನ್ನು ಕುಳಿತಾಗ, ನಿಂತಾಗ, ಗಮನ ಮಾಡುವಾಗ, ಮಲಗಿರುವಾಗ ಯಾವಾಗಲೂ ಮಾಡುತ್ತ ಸಾಂಸಾರಿಕ ಪದಾರ್ಥಗಳ ಯಥಾವತ್ ಚಿಂತನೆ ಮಾಡುವುದು, ಸಂಸಾರ ದಶೆಯ ಅಸ್ಥಿರತೆ (ಅನಿತ್ಯತೆ)ಯ ವಿಚಾರ ಮಾಡುವುದು. ಈ ಜೀವನಿಗೆ ಮರಣದ ಸಮಯದಲ್ಲಿ ಯಾರೂ ಶರಣಿಲ್ಲ. ತಾಯಿ-ತಂದೆ, ಮಂತ್ರ-ತಂತ್ರ , ದೇವ, ಇಂದ್ರ , ವ್ಯಂತರಾದಿಕರು ಯಾರೂ ಇವನಿಗೆ ಆಶ್ರಯದಾತೃಗಳಿಲ್ಲ - ಸಹಾಯಕರಿಲ್ಲ. ಇತ್ಯಾದಿ ಅನೇಕ ನಯಗಳಿಂದ ವಸ್ತುವನ್ನು ಅಶರಣ ತಿಳಿದುಕೊಂಡು ಚಿಂತನೆ ಮಾಡುವುದು ಅಶರಣ ಭಾವನೆಯಿದೆ.

ಈ ವಿಶ್ವವು ಆರು ದ್ರವ್ಯಗಳಿಂದ ಪರಿಪೂರ್ಣವಿದೆ ಇದರಲ್ಲಿ ಜೀವನು ಪರವಸ್ತುವನ್ನು ಮೋಹಭಾವದಿಂದ ತನ್ನದೆಂದು ಮನ್ನಿಸಿ ರತಿಭಾವ ಮಾಡುತ್ತಾನೆ - ಹೀಗೆ ಚಿಂತನೆ ಮಾಡುವುದು ಸಂಸಾರ ಭಾವಗಳ ಚಿಂತನೆಯಿದೆ.

ಸಂಸಾರದಲ್ಲಿ ಈ ಜೀವನು ಅನಾದಿ ಕಾಲದಿಂದ ನಾಲ್ಕು ಗತಿಗಳಲ್ಲಿ ಪರಿಭ್ರಮಣ ಮಾಡುತ್ತ ಸುಖ-ದುಃಖಗಳನ್ನು ಭೋಗಿಸುತ್ತಿದ್ದಾನೆ. ಇದರಲ್ಲಿ 'ಜೀವಾತ್ಮನು ಏಕಾಕಿಯೇ ಇದ್ದಾನೆ' ಬೇರೆ ಯಾರೂ ಜತೆಗಾರರಿಲ್ಲ. ಯಾವಾಗ ಜೀವನು ಶುಭಭಾವದಿಂದ ದೇವನಾಗುತ್ತಾನೆ, ಆಗ ಅನೇಕ ಭೌತಿಕ ಸುಖಗಳ ಭೋಕ್ತøವು ಏಕಾಕಿಯೇ ಇದ್ದಾನೆ. ಯಾವಾಗ ತನ್ನ ಪಾಪ ಭಾವಗಳಿಂದ ಜೀವನು ನರಕದಲ್ಲಿ ಹೋಗುತ್ತಾನೆ ಆಗ ದುಃಖವನ್ನು ಕೂಡ ಏಕಾಕಿಯೇ ಭೋಗಿಸುತ್ತಾನೆ. ಆ ದುಃಖವು ತಿರ್ಯಂಚ-ಮನುಷ್ಯರಲ್ಲಿಯಂತೂ ಪ್ರತ್ಯಕ್ಷವಾಗಿಯೇ ಕಂಡು ಬರುತ್ತದೆ. ಯಾವಾಗ ಈ ಜೀವನಿಗೆ ಪಾಪದ ಉದಯದಿಂದ ತೀವ್ರ ದುಃಖವಾಗುತ್ತದೆ ಆಗ ಕುಟುಂಬವರ್ಗದವರೆಲ್ಲರೂ ಕೇವಲ ನೋಡುತ್ತ ಉಳಿಯುತ್ತಾರೆ, ಇವನು ಬಿದ್ದಲ್ಲಿ ಬಿದ್ದುಕೊಂಡು ಸ್ವಯಂ ವಿಲಾಪ ಮಾಡುತ್ತಿರುತ್ತಾನೆ. ಯಾರೂ ಇವನ ದುಃಖವನ್ನು ಹಂಚಿಕೊಳ್ಳುವುದಿಲ್ಲ. ನಾಲ್ಕು ಗತಿಯ ದುಃಖ-ಸುಖವನ್ನು ಜೀವನು ಏಕಾಕಿಯಾಗಿಯೇ ಭೋಗಿಸುತ್ತಾನೆ - ಹೀಗೆ ಮನಸ್ಸಿನಲ್ಲಿ ವಿಚಾರ ಮಾಡುವುದು ಏಕತ್ವಭಾವ ಚಿಂತನೆಯಿದೆ.

ಜಗತ್ತಿನಲ್ಲಿ ಎಷ್ಟು ಪದಾರ್ಥಗಳಿವೆ, ಅವು ಯಾವವೂ ಯಾವುದರ ಜತೆಯಲ್ಲಿ ಬೆರೆಯುವುದಿಲ್ಲ. ಎಲ್ಲವೂ ತಮ್ಮ ತಮ್ಮ ಸ್ವಭಾವದಿಂದ ಪೃಥಕ್ ಪೃಥಕ್ ಇವೆ - ಹೀಗೆ ವಿಚಾರವು ನಡೆಯುವುದು ಅನ್ಯತ್ವಭಾವ ಚಿಂತನೆಯಿದೆ.

ಶರೀರವು ಅಶುಚಿ, ಪುದ್ಗಲ ಪಿಂಡಮಯ, ಅಪವಿತ್ರ , ಸಪ್ತಧಾತುಗಳ ನಿಲಯ, ಗ್ಲಾನಿಯ ಸ್ಥಾನವಿದೆ ಇದರಲ್ಲಿ ನಿರ್ಮಲ ಆತ್ಮನು ಅಮೂರ್ತಿಕ, ಜ್ಞಾನಮಯ ಆತ್ಮನು ಕರ್ಮಗಳ ಜತೆ ಒಂದಾಗಿ ಹೋಗಿರುವಂತೆ ಕಂಡು ಬರುತ್ತಾನೆ; ಆದರೆ ಅವನು ತನ್ನ ಚೈತನ್ಯ ಭಾವವನ್ನು ಬಿಡುವುದಿಲ್ಲ.

**ಸಂದೇಹ -** ಶರೀರವನ್ನು ಹೀಗೆ ಗ್ಲಾನಿಯ ಸ್ಥಾನವೆಂದು ತಿಳಿಸಿಕೊಡುವ ಕಥನ ಮಾಡಲಾಗಿದೆ. ಇದರಲ್ಲಿ ಜ್ಞಾನದ ಮಹಿಮೆಯೇನಿದೆ ? ಮತ್ತು ಶರೀರವನ್ನು ಹೀಗೆ ಗ್ಲಾನಿರೂಪವೆಂಬ ಶ್ರದ್ಧೆ ಮಾಡಿದರೆ ಶ್ರೋತೃಗಳ ಕಷಾಯಗಳಲ್ಲಿ ಸಮತೆಯು ಹೇಗೆ ಬರುವುದು ? ಇದರಲ್ಲಿಯಂತೂ ದುರಗಂಛವೆಂಬ ನಾಮಕರ್ಮದ ಬಂಧವಾಯಿತು. ದುರಗಂಛವಾಗುವುದರಿಂದ ಸಮ್ಯಗ್ದರ್ಶನವು ಮಲಿನವಾಗುವುದು ಎಂದರೆ ಶರೀರದ ಗ್ಲಾನಿಯಲ್ಲಿಯಂತೂ ಯಾವುದೇ ಲಾಭವು ಕಂಡು ಬರುವುದಿಲ್ಲ.

**ಸಮಾಧಾನ :-** ಎಲೈ ಭವ್ಯನೇ ! ಹೇಗೆ ಯಾವನೋ ಮನುಷ್ಯನು ಶೀತಜ್ವರದಿಂದ ವ್ಯಾಕುಲನಾಗುತ್ತಿದ್ದಾನೆ ಅವನಿಗೆ ಯಾವುದೇ ಔಷಧವು ಕಾರ್ಯಕಾರಿಯಾಗುತ್ತಿಲ್ಲವೆಂಬುದನ್ನು ತಿಳಿದು, ಒಂದುವೇಳೆ ಒಳ್ಳೆಯ ವೈದ್ಯನಿದ್ದರೆ ಆ ರೋಗಿಯ ಜ್ವರದ ಉಷ್ಣತೆಯನ್ನು ಹೆಚ್ಚಿಸುವ ಉಪಾಯ ಮಾಡುತ್ತಾನೆ. ಅವನು ಯೋಚಿಸುವುದೇನೆಂದರೆ ಈ

ರೋಗಿಯ ಆಯುಕರ್ಮವು ಶೇಷವಿದ್ದರೆ, ರೋಗದ ನಾಶವಾಗುವುದಿದ್ದರೆ ಉಷ್ಣತೆಯು ಹೆಚ್ಚಾಗಬಹುದಾಗಿದೆ, ಒಂದುವೇಳೆ ಮರಣವಾಗುವುದಿದ್ದರೆ ಆಗ ಶೀತಜ್ವರ ನಾಶವಾಗುವುದಿಲ್ಲ; ನನ್ನ ಔಷಧವು ನಿರುಪಯೋಗಿಯಾಗುವುದು.'

ಇದೇ ಪ್ರಕಾರ ಈ ಸಂಸಾರೀ ಜೀವನು ಅನಾದಿ ಕಾಲದಿಂದ ಮಿಥ್ಯಾತ್ವರೂಪದ ಶೀತಾಂಗ (ಶೀತಜ್ವರ) ದಲ್ಲಿ ಮುಳುಗಿಕೊಂಡಿದ್ದಾನೆ, ಇದರಿಂದ ತಪ್ಪಿಸಿಕೊಳ್ಳುವ ಬೇರೆ ಯಾವ ಉಪಾಯವಿಲ್ಲ; ಅದರಿಂದ ದುರಗಂಛಾ(ಘೃಣಾ-ಜುಗುಪ್ಸೆ) ರೂಪದ ಜ್ವರದ ಉಷ್ಣತೆಯನ್ನು ಹೆಚ್ಚಿಸುವ ಉದ್ದೇಶದಿಂದ ಈ ಉಪಾಯ ಮಾಡಿದ್ದಾರೆ. ಎಲೈ ಭವ್ಯನೇ ! ಅನಾದಿಯಿಂದಲೇ ಶರೀರದಲ್ಲಿ ಏಕತೆಯ ಮೋಹದಿಂದ ತನ್ನತನವನ್ನು ಮನ್ನಿಸಿ ನಿನ್ನದು ಶರೀರದಲ್ಲಿ ಮಗ್ನತೆಯಾಗಿದೆ ಮತ್ತು ಅದರ ಪೋಷಣೆಯ ಸಲುವಾಗಿ  ನೀನು ಅನೇಕ ಮಿಥ್ಯಾಕಾರ್ಯ ಮಾಡುತ್ತಿರುವೆ.

ಈಗ ಒಂದುವೇಳೆ ಈ ಶರೀರದಿಂದ ಮೋಹಬುದ್ಧಿಯು ತುಂಡರಿಸಿ ನಿನಗೆ ಇದು ಸಪ್ತಧಾತುಮಯವೆನಿಸತೊಡಗಿದರೆ ಚೇತನಭಾವದಲ್ಲಿ ಪ್ರೀತಿ(ಶ್ರದ್ಧೆ)ಯುಂಟಾಗಿ ಸಮ್ಯಕ್ತ್ವವಾಗುವುದು; ಅಂತೆಯೇ ನಾವು ಶರೀರದಲ್ಲಿ ಗ್ಲಾನಿಯನ್ನು ಉತ್ಪನ್ನ ಮಾಡುವುದಕ್ಕಾಗಿ ಅಶುಚಿ ಭಾವನೆಯ ಕಥನ ಮಾಡಿದ್ದೇವೆ. ಇದರಿಂದ ಶರೀರದ ಕುರಿತಾಗಿ ದುರಗಂಛೆ-ಗ್ಲಾನಿಯಾದರೆ ನಮ್ಮ ಉಪಾಯವು ಸಿದ್ಧಿಸುವುದು ಶರೀರದಿಂದ ಭಿನ್ನವಾದ ತನ್ನ ಜ್ಞಾನಸ್ವರೂಪದ ಸ್ವೀಕಾರದಿಂದ ಅನಾದಿ ಕಾಲದ ಮಿಥ್ಯಾತ್ವರೂಪದ ಶೀತಾಂಗವು ನಾಶವಾಗುವುದು ಆಗ ಮೋಕ್ಷ(ಸುಖ)ವಾಗುವ ಆಶೆಯು ಹೆಚ್ಚಾಗುವುದು. ಅದಕ್ಕಾಗಿ ಕಥನವಿದೆಯೆಂದು ತಿಳಿಯುವುದು. ಹೀಗೆ ಅಶುಚಿ ಭಾವನೆಯ  ಚಿಂತನವಿದೆ.

ಈ ಜೀವನು ಮೋಹ-ರಾಗ-ದ್ವೇಷ ಭಾವಗಳ ಕಾರಣ ಮಿಥ್ಯಾತ್ವ, ಅವಿರತಿ, ಪ್ರಮಾದ, ಕಷಾಯ, ಯೋಗಗಳ ನಿಮಿತ್ತದಿಂದ ಪಾಪಕರ್ಮದ ಆಸ್ರವ ಮಾಡಿಕೊಳ್ಳುತ್ತಾನೆ. ಎಂದು ವಿಚಾರ ಮಾಡುವುದು ಆಸ್ರವಾನುಚಿಂತನವಿದೆ.

ಯಾವುದರಿಂದ ಆಸ್ರವ ಭಾವವು ತಡೆಯಲ್ಪಡುತ್ತದೆ, ಅದು ಸಂವರವಿದೆ. ಮಿಥ್ಯಾತ್ವರೂಪದ ಆಸ್ರವವು ತಡೆಯಲ್ಪಡುವುದರಿಂದ ಸಮ್ಯಕ್ತ್ವವಾಗುತ್ತದೆ. ಅವಿರತ ಭಾವವು ತಡೆಯಲ್ಪಡುವುದರಿಂದ ವ್ರತದ ಭಾವವಾಗುತ್ತದೆ. ಮನ, ವಚನ, ಕಾಯದ ಅಶುಭತೆಯು ದೂರವಾದ ಮೇಲೆ ಶುಭರೂಪವಾಗುತ್ತದೆ. ಕಷಾಯದ ನಾಶವಾದ ಮೇಲೆ ವೀತರಾಗ ಭಾವವಾಗುತ್ತದೆ. ಈ ಪ್ರಕಾರ ಮೋಹವನ್ನು ಮಂದಗೊಳಿಸಿ ರಾಗ-ದ್ವೇಷ ಭಾವದ ನಾಶ ಮಾಡುವುದು, ಆಸ್ರವವನ್ನು ತಡೆದು ಸಂವರ ಮಾಡುವುದು - ಸಂವರಾನುಚಿಂತನವಿದೆ.

ವಿಶುದ್ಧ ಭಾವಗಳಿಂದ ಸತ್ತಾಸ್ಥಿತ ಕರ್ಮಗಳನ್ನು ನಿರ್ಜರಿತ ಮಾಡಿ ಅಸತ್ವರೂಪ ಮಾಡುವುದು ನಿರ್ಜರೆಯಿದೆ. ಇದರಲ್ಲಿ ೧. ಸವಿಪಾಕ, ೨. ಅವಿಪಾಕವೆಂದು ಎರಡು ಭೇದಗಳಿವೆ. ಯಾವುದರಲ್ಲಿ ಕರ್ಮಗಳ ಸ್ಥಿತಿಯು ಪೂರ್ಣವಾಗಿ ಕರ್ಮವು ಉದುರಿ ಹೋಗುವುದು ಅದು ಸವಿಪಾಕ ನಿರ್ಜರೆಯಿದೆ ಮತ್ತು ಸಂಯಮ, ತಪಗಳ ಯೋಗದಿಂದ ಮತ್ತು ಪರಿಣಾಮಗಳ ವಿಶುದ್ಧತೆಯಿಂದ ಕರ್ಮಗಳು ಉದುರಿ ಹೋಗುವುದು ಅವಿಪಾಕ ನಿರ್ಜರೆಯಿದೆ-ಹೀಗೆ ವಿಚಾರವಾಗುವುದರ ಹೆಸರು ನಿರ್ಜರಾನುಚಿಂತನವಿದೆ.

ಮೂರು ಲೋಕದ ಸಂಸ್ಥಾನಾದಿ ಭೇದಗಳ ಸಹಿತ ವಿಚಾರ ಮಾಡುವುದು ಲೋಕಾನುಚಿಂತನವಿದೆ.

ಜೀವ-ಅಜೀವ ಮೊದಲಾದ ವಸ್ತುಗಳು ತಮ್ಮ-ತಮ್ಮ ಸ್ವಭಾವವನ್ನು ಬಿಟ್ಟುಕೊಡುವುದಿಲ್ಲ. ಸ್ವಭಾವರೂಪವಾಗಿರುತ್ತವೆ, ಪರಭಾವರೂಪವಾಗುವುದಿಲ್ಲ; ಇಂಥ ವಿಚಾರಗಳನ್ನು ಧರ್ಮಾನುಚಿಂತನವೆಂದು ಹೇಳುತ್ತಾರೆ.

ತಮ್ಮ ಸ್ವಭಾವರೂಪ ಉಳಿಯುವುದಂತೂ ಸರಳವಿದೆ-ಸುಲಭವಿದೆ, ಪರಸ್ವಭಾವರೂಪವಾಗುವುದೇ ಕಠಿಣವಿದೆ, ದುರ್ಲಭವಿದೆ. ಹೇಗೆಂದರೆ ಜೀವನಿಗೆ ಚೈತನ್ಯಭಾವರೂಪವಾಗಿರುವುದು, ಜ್ಞಾನಮಯವಾಗಿರುವುದು, ಧರ್ಮಭಾವನೆಯ ರೂಪವಾಗುವುದು ಇತ್ಯಾದಿ ಪ್ರಕಾರದಿಂದ ಜೀವನಿಗೆ ತನ್ನ ಗುಣಮಯವಾಗಿರುವುದಂತೂ ಸುಲಭವಿದೆ. ಇವುಗಳಮಯವಾಗಿ ಇರುವ ಸಲುವಾಗಿಯಂತೂ ಯಾವುದೇ ಉಪಾಯ ಮಾಡುವ ಅಥವಾ ಖೇದಪಡಬೇಕಾಗುವುದಿಲ್ಲ, ಸಹಜವೇ ಇದೆ. ಜೀವನು ಜಡವಾಗುವುದು, ಮೂರ್ತಿಕವಾಗುವುದು ಮಹಾದುರ್ಲಭವಿದೆ; ಅನೇಕ ಕಷ್ಟಗಳನ್ನು ಭೋಗಿಸಿದ ಮೇಲೆಯೂ ಕೂಡ ಜಡತ್ವ, ಮೂರ್ತಿಕತ್ವವಾಗುವುದಿಲ್ಲ. ಇತ್ಯಾದಿ ಪ್ರಕಾರದ ಚಿಂತನವು ಬೋಧಿದುರ್ಲಭ ಚಿಂತನವಿದೆ. ಇತ್ಯಾದಿ ಅನೇಕ ಪ್ರಕಾರದಿಂದ ಜಿನೇಂದ್ರ ಪ್ರಣೀತ ತತ್ತ್ವಗಳ ಚಿಂತನೆಯು ಅನುಪ್ರೇಕ್ಷೆಯೆಂಬ ಹೆಸರಿನ ಸ್ವಾಧ್ಯಾಯವಿದೆ. ಉಪರ್ಯುಕ್ತ ಐದು ಭೇದಗಳು ಸ್ವಾಧ್ಯಾಯ ತಪದ ಭೇದಗಳಿವೆ.

೫. ಶರೀರದ ಮಮತೆಯ ಭಾವದಿಂದ ರಹಿತವಾಗಿ ಏಕಾಸನ, ಎದ್ದುನಿಂತುಕೊಂಡು ಧ್ಯಾನಮಾಡುವುದು ಕಾಯೋತ್ಸರ್ಗ ತಪವಿದೆ.

೬. ಮನ, ವಚನ, ಕಾಯದ ಏಕತೆಯರೂಪ, ಧರ್ಮಧ್ಯಾನರೂಪ ಭಾವನೆಯ ಸ್ಥಿರತೆ ಹಾಗೂ ಕಷಾಯಗಳ ಮಂದತೆಸಹಿತ ಸ್ವ-ಪರದ ನಿರ್ಧಾರರೂಪ ಧ್ಯಾನ ಮಾಡುವುದು ಧ್ಯಾನತಪವಿದೆ.

ಇವು ಹನ್ನೆರಡು ಪ್ರಕಾರದ ತಪಗಳಿದ್ದು ಈ ಸುತಪಗಳು ಉಪಾದೇಯವಿವೆ. ಈ ಪ್ರಕಾರ ತಪದಲ್ಲಿ ಜ್ಞೇಯ-ಹೇಯ-ಉಪಾದೇಯತೆಯು ಪೂರ್ಣವಾಯಿತು.

ಈ ಪ್ರಕಾರ ಸುದೃಷ್ಟಿ ತರಂಗಿಣಿಯೆಂಬ ಹೆಸರಿನ ಗ್ರಂಥದಲ್ಲಿ ಅಶನ-ಪಾನ, ವಚನ, ದ್ರವ್ಯ, ಕ್ಷೇತ್ರ, ಕಾಲ, ಭಾವ, ಷಟ್ಕಾಯ ಜೀವಗಳ ಶರೀರ, ನಿಗೋದದ ಐದು ಸ್ಥಾನ ಮತ್ತು ತಪದಲ್ಲಿ ಜ್ಞೇಯ-ಹೇಯ-ಉಪಾದೇಯಗಳ ಕಥನ ಮಾಡುವಂಥ ಹದಿಮೂರನೆಯ ಪರ್ವವು ಪೂರ್ಣವಾಯಿತು.

★★★★★

ಹೇಗೆ ಕೆಸರಿನಲ್ಲಿ ಸಿಲುಕಿಕೊಂಡ ಬಂಡಿಯನ್ನು ಬಲಶಾಲಿ ವೃಷಭಗಳೇ ಹೊರಗೆ ತಗೆಯುವ ಸಾಧ್ಯತೆಯಿದೆ, ಹಾಗೆಯೇ ಲೋಕದಲ್ಲಿ ಮಿಥ್ಯಾತ್ವರೂಪದ ಕೆಸರಿನಲ್ಲಿ ಸಿಲುಕಿಕೊಂಡಿರುವ ತಮ್ಮ ಕುಟುಂಬ ವರ್ಗದವರನ್ನು ಅದರೊಳಗಿಂದ ಯಾವನೋ ಉತ್ತಮ-ವಿರಳ-ಪುರುಷನೇ ಹೊರಗೆ ತಗೆಯುವ ಸಾಧ್ಯತೆಯಿದೆ.

ನೋಡಿರಿ, ಸೋದರರೇ ! ಎಂದೂ ತಪ್ಪಿಯೂ ಕೂಡ ಜಿನವಾಣಿ ಮಾತೆಯ ಮಾಧ್ಯಮದಿಂದ ತಮ್ಮ ವ್ಯವಸಾಯ ನಡೆಸಬಾರದು ! ಏಕೆಂದರೆ ಯಾವುದರ ಮಾಧ್ಯಮದಿಂದ ರತ್ನತ್ರಯದ ಲಾಭವಾಗುತ್ತದೆ, ಅದನ್ನು ತಾವು ಕ್ಷಣಿಕ ವ್ಯವಸಾಯದ ಹೇತುನ್ನಾಗಿಸಿಕೊಳ್ಳುತ್ತಿರುವಿರಿ. ಜಿನವಾಣಿ ಮಾತೆಯ ಮಾಧ್ಯಮದಿಂದಂತೂ ರತ್ನತ್ರಯವನ್ನು ಪ್ರಾಪ್ತಮಾಡಿಕೊಳ್ಳುವ ವ್ಯವಸಾಯ ಮಾಡಿರಿ ! ಇದರ ಹೆಸರೇ ಸಮ್ಯಗ್ಜ್ಞಾನವಿದೆ. ಕ್ಷಣಿಕ ಸುಖದಾಸೆಯಿಂದ ಅನಂತಕಾಲದ ಅನಂತ ದುಃಖದ ಉದ್ಯಮ ಮಾಡುತ್ತಿರುವುದೇ ಮಿಥ್ಯಾಜ್ಞಾನವಿದೆ, ಅದನ್ನು ಜಿನವಾಣಿ ಮಾತೆಯ ಆಶ್ರಯದಿಂದ ತೊರೆಯಲೇಬೇಕಾಗಿದೆ. ಸಂಯೋಗವಂತೂ ಚದುರಿ ಹೋಗುವುದು ಮತ್ತು ಸ್ವಭಾವದ ಪ್ರಾಪ್ತಿಯು ದುರ್ಲಭವಾಗುವುದು. ಹಾಗಾಗದಂತೆ ಸಮಯವಿರುವಾಗ ಸಾವಧಾನರಾಗುವುದು ಕರ್ತವ್ಯವಿದೆ.

# ೧೪ : ಹದಿನಾಲ್ಕನೆಯ ಪರ್ವ
# ಧರ್ಮದ ಅಂಗಗಳಲ್ಲಿ ಜ್ಞೇಯ-ಹೇಯ-ಉಪಾದೇಯ

ವ್ರತಗಳಲ್ಲಿ ಜ್ಞೇಯ-ಹೇಯ-ಉಪಾದೇಯವನ್ನು ಹೇಳುತ್ತಾರೆ -

ಸುವ್ರತ - ಕುವ್ರತಗಳ ಸಂಪೂರ್ಣ ತಿಳಿವಳಿಕೆಯು ಜ್ಞೇಯವಿದೆ. ಇದರಲ್ಲಿ ೧. ಸುವ್ರತ, ೨. ಕುವ್ರತವೆಂದು ಎರಡು ಭೇದಗಳಿವೆ.

**ಕುವ್ರತ** - ಅಜ್ಞಾನಿ, ಮುಗ್ಧ ಜೀವರುಗಳ ಮೂಲಕ ಪ್ರರೂಪಿತ, ಪರಮಾರ್ಥದಿಂದ ಶೂನ್ಯ, ತಮ್ಮ ಅಜ್ಞಾನ ಚೇಷ್ಟೆಯಿಂದ ಯಾವ ವ್ರತಗಳನ್ನು ಮಾಡಲಾಗುತ್ತದೆ ಅವು ಕುವ್ರತಗಳಿವೆ. ಅವುಗಳಲ್ಲಿ ಅದೆಷ್ಟೋ ವ್ರತಗಳು ಕ್ರೋಧ ಪೋಷಣೆಯರೂಪವಿವೆ, ಅದೆಷ್ಟೋ ಮಾನ ಪೋಷಣೆಯರೂಪವಿವೆ, ಅದೆಷ್ಟೋ ಮಾಯಾ ಕಷಾಯದ ಪೋಷಕವಿದೆ ಮತ್ತು ಅದೆಷ್ಟೋ ಲೋಭ ಪೋಷಣೆಯ ರೂಪವಿವೆ. ಹೀಗೆ ಕ್ರೋಧ, ಮಾನ, ಮಾಯೆ, ಲೋಭ ಪೋಷಣೆಯರೂಪ ವ್ರತಗಳು ಸಮ್ಯಗ್ದೃಷ್ಟಿಗೆ ಹೇಯವಿವೆ.

ಪರಜೀವಗಳನ್ನು ಸಾಯಿಸುವ ಉದ್ದೇಶದಿಂದ, ಶತ್ರು ಮೊದಲಾದವರಿಗೆ ದುಃಖ ಕೊಡುವ ಉದ್ದೇಶದಿಂದ ಇತ್ಯಾದಿ ವಿಚಾರ ಸಹಿತ ವ್ರತ ಮಾಡುವುದು, ಎಂದರೆ 'ನನ್ನ ಆ ಶತ್ರುವಿನ ನಾಶವಾಗಲಿ' ಅದರ ಸಲುವಾಗಿ ಒಂದೇ ಸಲ ಊಟ ಮಾಡುವುದು, ಬಹಳಷ್ಟು ಧನದ ದಾನ ಮಾಡುವುದು, ಪೂಜೆ-ಉಪವಾಸ ಮಾಡುವುದು, ರಸರಹಿತ ಭೋಜನ ಮಾಡುವುದು, ಭೂಮಿಯ ಮೇಲೆ ಮಲಗುವುದು, ಒಂದೇ ಧಾನ್ಯದ ಸೇವನೆ, ಒಂದೇ ರಸದ ಸೇವನೆ-ಇತ್ಯಾದಿ ವಿಧಿಪೂರ್ವಕ ಉಪವಾಸ ವ್ರತ ಮಾಡುವುದನ್ನು ಕ್ರೋಧಸಹಿತ ವ್ರತವೆಂದು ಹೇಳಿದ್ದಾರೆ.

ಒಂದುವೇಳೆ ಯಾರಾದರೂ ತಮ್ಮ ಆಜ್ಞೆಯನ್ನು ಮನ್ನಿಸದಿದ್ದರೆ, ವಶದಲ್ಲಿ ಉಳಿಯದಿದ್ದರೆ ಮತ್ತು ಅವರನ್ನು ವಶದಲ್ಲಿ ಇಟ್ಟುಕೊಳ್ಳುವ ಸಲುವಾಗಿ ತಮ್ಮ ಬಲದ ಅಸಮರ್ಥತೆಯಿದ್ದರೆ ಹಾಗೂ ಅಭಿಮಾನದ ಪೋಷಣೆ ಮಾಡಬಯಸುತ್ತಿದ್ದರೆ ಆಗ ಅದರ ಸಲುವಾಗಿ ಯಾವನೋ ದೇವ-ವ್ಯಂತರರ ಸಾಧನೆಯ ಉದ್ದೇಶದಿಂದ ವ್ರತ ಮಾಡುವುದು, ಬೇರೆಯವರ ಮಾನವನ್ನು ಖಂಡಿತಗೊಳಿಸುವ ಸಲುವಾಗಿ ವ್ರತ ಮಾಡುವುದು ಮಾನಪೋಷಣ ವ್ರತವಿದೆ.

ಯಾವ ವ್ರತವನ್ನು ಸ್ವಯಂ ತಾನು ಕಪಟದಿಂದ ಮಾಡುವುದು ಎಂದರೆ ಪರಿಣಾಮವಂತೂ ದುರಾಚಾರ ರೂಪವಿರುವುದು ಮತ್ತು ಜನರಿಗೆ ತೋರಿಸುವ ಸಲುವಾಗಿ ಅಥವಾ ಧರ್ಮಾತ್ಮನೆನಿಸಿಕೊಳ್ಳುವ ಉದ್ದೇಶದಿಂದ ವ್ರತ ಮಾಡುವುದು ಮಾಯಾಪೋಷಣೆಯ ವ್ರತವಿದೆ.

ಇತರರ ಧನ ಹರಣದ ಸಲುವಾಗಿ, ಆನೆ-ಕುದುರೆಗಳ ಹರಣದ ಸಲುವಾಗಿ, ಮಂದಿರ ಹರಣದ ಸಲುವಾಗಿ ಬಹಳಷ್ಟು ಪ್ರಕಾರದ ವ್ರತ ಮಾಡುವುದು ಹಾಗೂ ತನಗೆ ರಾಜ್ಯದ ಪ್ರಾಪ್ತಿಯಾಗಲಿ, ಪುತ್ರ ಪ್ರಾಪ್ತಿಯಾಗಲಿ, ಕುಟುಂಬದ ವೃದ್ಧಿಯಾಗಲಿ, ವ್ರತದಿಂದ ಧನದ ಲಾಭವಾಗಲಿ - ಇತ್ಯಾದಿ ಇಚ್ಛೆಗಳಿಂದ ಕೂಡಿದ ವ್ರತವು ಲೋಭಪೋಷಣ ವ್ರತವಿದೆ.

ಯಾವ ವ್ರತಗಳ ಕುರಿತಾಗಿ ಲೋಕದಲ್ಲಿ ಮುಗ್ಧ, ಅಜ್ಞಾನಿ ಜೀವರುಗಳಲ್ಲಿ - 'ಇಂಥ ವ್ರತಗಳನ್ನು ಮಾಡುವುದರಿಂದ ಶತ್ರುವಿನ ನಾಶವಾಗುತ್ತದೆ' ಎಂಬುದು ಪ್ರಸಿದ್ಧವಿದೆ, ಕೆಲವು ವ್ರತಗಳ ಫಲವು 'ಇವುಗಳನ್ನು ಮಾಡುವುದರಿಂದ ವೈರಿಯು ತಾನಾಗಿಯೇ ಬಂದು ವಶನಾಗಿ ನಮ್ರೀಭೂತನಾಗುತ್ತಾನೆ'ಂದು ಹೇಳುತ್ತಾರೆ. ಅದೆಷ್ಟೋ ವ್ರತಗಳ ಫಲ ಹೇಳುವಾಗ ಇವನ್ನು ಮಾಡುವುದರಿಂದ ರಾಜಸಭೆಯಲ್ಲಿ ಆದರವಾಗುತ್ತದೆ, ಇಡೀ ಸಭೆಯು ವಶೀಭೂತವಾಗಿಬಿಡುತ್ತದೆಯೆನ್ನುತ್ತಾರೆ; ಈ ವ್ರತಗಳನ್ನು ಮಾಡಿದರೆ ಧನದ ಲಾಭವಾಗುತ್ತದೆ, ಇಂಥ ವ್ರತಗಳನ್ನು

ಸ್ತ್ರೀಯರು ಮಾಡಿದರೆ ಬಹುದಿನಗಳವರೆಗೆ ಅವರ ಮುತ್ತೈದೆತನವು ಉಳಿಯುತ್ತದೆ, ಪತಿಯ ಮರಣವಾಗುವುದೇ ಇಲ್ಲ, ಪುತ್ರ ಪ್ರಾಪ್ತಿಯಾಗುತ್ತದೆ, ಅತ್ತೆ-ಮಾವಂದಿರರು ಮೊದಲಾಗಿ ಎಲ್ಲರೂ ಅವಳ ಆಜ್ಞೆಯನ್ನು ಮನ್ನಿಸುತ್ತಾರೆ, ಕೀರ್ತಿಯಾಗುತ್ತದೆ, ಪತಿಯು ವಶದಲ್ಲಿರುತ್ತಾನೆ ಇತ್ಯಾದಿ ಫಲ ದೊರಕುವಂಥ ವ್ರತಗಳಿವೆ ಅವು ಕ್ರೋಧಿ, ಮಾನಿ, ಮಾಯಾವಿ, ವಂಚಕ, ಲೋಭಿ, ಪಾಖಂಡಿ ಜೀವಗಳಿಂದ ಪ್ರರೂಪಿತವಿವೆ. ಅವುಗಳಲ್ಲಿ ಮುಗ್ಧ ಜೀವಗಳಿಗೆ ಅಲ್ಪ ಕುಟಿಲತೆಯ ಲೋಭ ತಿಳಿಸಿಕೊಟ್ಟು ತಮ್ಮ ಮಹಾನತೆ ಧರ್ಮಾತ್ಮತೆಯನ್ನು ತಿಳಿಸುತ್ತ ಜನರ ಧನವನ್ನು ವಂಚನೆಯಿಂದ ಕಿತ್ತುಕೊಳ್ಳಲಾಗುತ್ತದೆ. ಇಂಥ ದುರಾತ್ಮರು ಮೇಲಂತೂ ಶಾಂತಮುದ್ರೆಯ ವೇಶಧಾರಣ ಮಾಡಿ ಮುಗ್ಧ ಜೀವಗಳನ್ನು ವಿಶ್ವಾಸದಲ್ಲಿ ತಗೆದುಕೊಂಡು ಸುಲಿಗೆ ಮಾಡುತ್ತಾರೆ. ಈ ಪ್ರಕಾರ ಯಾವ ಜೀವರುಗಳು ಧರ್ಮ ಭಾವನೆಯಿಂದ ರಹಿತರಿದ್ದಾರೆ ಅವರು ಈ ಕುವ್ರತಗಳ ಪ್ರರೂಪಣೆ ಮಾಡಿದ್ದಾರೆ; ಅದರಿಂದ ಇವು ಸಹಜವಾಗಿಯೇ ಸಮ್ಯಗ್ದೃಷ್ಟಿಗಳಿಗೆ ಹೇಯವಿವೆ.

ಯಾವ ವ್ರತಗಳು ಹಿಂಸೆಯಿಂದ ಕೂಡಿವೆ, ಯಾವುದರಲ್ಲಿ ಶೋಧಿಸದ ಜಲದಲ್ಲಿ ಸ್ನಾನ ಮಾಡಲು ಹೇಳಿದೆ ಯಾವುದರಲ್ಲಿ ಬಹಳಷ್ಟು ಧಾನ್ಯ ಮೊದಲಾದವನ್ನು ಮೊಳೆಸಿ ಉತ್ಪನ್ನ ಮಾಡುವುದಿದೆ; ಆ ವ್ರತಗಳು ತ್ಯಾಜ್ಯವಿದೆ. ಯಾವ ವ್ರತಗಳಲ್ಲಿ ಪಶುಗಳಿಗೆ ಭೋಜನ ಕೊಡುವುದರಿಂದ ತಮ್ಮ ದೇವಾದಿಕರು ತೃಪ್ತರಾಗುತ್ತಾರೆಂದು ಹೇಳಿದ್ದಾರೆ; ಅಂಥ ವ್ರತಗಳೂ ತ್ಯಾಜ್ಯವಿವೆ. ಯಾವ ವ್ರತಗಳಲ್ಲಿ ಹಗಲು ಹೊತ್ತಿನಲ್ಲಿ ಭೋಜನದ ತ್ಯಾಗ ಮಾಡಿ ರಾತ್ರಿ ಭೋಜನ ಹೇಳಿದ್ದಾರೆ, ಆ ವ್ರತಗಳೂ ಕೂಡ ತ್ಯಾಜ್ಯವಿವೆ. ಕೆಲವು ವ್ರತಗಳಲ್ಲಿ ಧಾನ್ಯಾದಿಗಳ ತ್ಯಾಗ ಮಾಡಿ ಗೆಣಸು ಮೊದಲಾದುವನ್ನು ಅಥವಾ ಉಂಡೆ ಮೊದಲಾದುವನ್ನು ತಿನ್ನಲು ಹೇಳುತ್ತಾರೆ ಆ ವ್ರತಗಳೂ ತ್ಯಾಗ ಯೋಗ್ಯವಿವೆ.

ಯಾವ ವ್ರತಗಳಲ್ಲಿ ಪಶುಗಳ ಪೂಜೆ, ವೃಕ್ಷಗಳ ಪೂಜೆ ಹೇಳಲಾಗಿದೆ ಅಂಥ ವ್ರತಗಳು ತ್ಯಾಜ್ಯವಿವೆ. ಲೋಭಿ ಜೀವರುಗಳ ಮೂಲಕ ಹೇಳಲಾದ ಶರೀರವನ್ನು ಪುಷ್ಟಗೊಳಿಸುವ ವ್ರತಗಳು ಹಾಗೂ ಜ್ಞಾನ ಧನರಹಿತ ಜೀವರುಗಳಿಂದ ಪ್ರರೂಪಿತ ವ್ರತಗಳು ಮೋಕ್ಷಮಾರ್ಗದ ಜ್ಞಾತಾರರಾದ ಸಮ್ಯಗ್ದರ್ಶನ ಧಾರಕ ಜೀವರುಗಳಿಂದ ಸಹಜವಾಗಿಯೇ ಹೇಯವಿವೆ.

**ಸುವ್ರತ**-ಎಲೈ ಭವ್ಯನೇ ! ಯಾವವುಗಳನ್ನು ಮಾಡುವುದರಿಂದ ತಮ್ಮ ಪೂರ್ವಕೃತ ಪಾಪಗಳ ನಾಶವಾಗುತ್ತದೆ ಹಾಗೂ ಯಾವ ವ್ರತಗಳ ಹೆಸರು ಹೇಳುವುದರಿಂದಲೇ ಪುಣ್ಯಬಂಧವಾಗುತ್ತದೆ, ಯಾವ ವ್ರತಗಳ ಮುಂದೆ ಪ್ರಗಟರೂಪದಿಂದ ದಯೆಯ ಚಿಹ್ನೆಯಿರುತ್ತದೆ ಅರ್ಥಾತ್ ಯಾವವುಗಳಲ್ಲಿ ದಯೆಯ ಮುಖ್ಯತೆಯೇ ಇರುತ್ತದೆ ಅಂಥ ದಯೆಯ ಭಂಡಾರವಾದ ವ್ರತಗಳು ಶುಭವ್ರತಗಳಿವೆ. ಪಾಪಾರಂಭದ ತ್ಯಾಗವಿರುವಂಥ, ಶುಭಾಚರಣೆಯಿಂದ ಸಹಿತವಾದ ಕ್ರಿಯೆಗಳನ್ನು ಹೇಳಲಾಗಿರುವ, ಸಪ್ತವ್ಯಸನಾದಿ ಪಾಪಗಳ ಪ್ರವೃತ್ತಿಯು ಇಲ್ಲದಿರುವ, ಮದ್ಯದ ಸೇವನೆ, ಜೂಜು, ಮಾಂಸಭಕ್ಷಣೆ ಹೇಳಿರದಂಥ ವ್ರತಗಳು ಶುಭವ್ರತಗಳಿವೆ. ದೀನ ಜೀವಗಳ ಹಿಂಸೆಯ ತ್ಯಾಗರೂಪ ದಯೆಯನ್ನು ಹೇಳಲಾಗಿರುವ, ನರಬಲಿ, ಮೇಕೆಯ ಬಲಿ, ಕೋಣದಬಲಿ ಮೊದಲಾದುವುಗಳ ಹಾಗೂ ಬೇಟೆಯ ಕ್ರಿಯೆಯ ಪ್ರಸ್ತಾಪವಿಲ್ಲದಂಥ ವ್ರತಗಳು ಶುಭವ್ರತಗಳಿವೆ. ಪರಸ್ತ್ರೀ ಸೇವನೆ, ಪರಸ್ತ್ರೀಯರಿಗೆ ರತಿದಾನ ಮೊದಲಾದ ಕುಶೀಲ ಕ್ರಿಯೆಯಿಲ್ಲದಂಥವು ಸುವ್ರತಗಳಿವೆ. ಶರೀರವನ್ನು ತೊಳೆಯುವ, ಅಭಕ್ಷ ಸೇವನೆ ಹೇಳಿರದಂಥವು ಶುಭ ವ್ರತಗಳಿವೆ.

ಯಾವ ವ್ರತಗಳಲ್ಲಿ ಶಸ್ತ್ರ ಪ್ರಯೋಗವಿಲ್ಲ. ಮಣ್ಣು, ಪಾಷಾಣ, ಬೂದಿಗಳನ್ನು ಎರಚುವುದರ ನಿಷೇಧವಿದೆ ಅವು ಸುವ್ರತಗಳಿವೆ. ಪಾಖಂಡರಹಿತ ಹಾಗೂ ಕ್ರೋಧ-ಮಾನ-ಮಾಯೆ-ಲೋಭ ಇತ್ಯಾದಿ ದೋಷರಹಿತವಿರುವ ವ್ರತಗಳು ಶುದ್ಧವ್ರತಗಳಿವೆ. ಯಾವ ವ್ರತಗಳನ್ನು ಮಾಡುವುದರಿಂದ ಪರಿಣಾಮವು ಸಮತೆಯಿಂದ ಕೂಡಿಕೊಂಡಿರುತ್ತದೆ ಅವು ಸುವ್ರತಗಳಿವೆ. ತ್ರಸ-ಸ್ಥಾವರ ಜೀವಗಳ ದಯೆಯರೂಪ ಕ್ರಿಯೆಯಿರುವಂಥವು ಶುಭವ್ರತಗಳಿವೆ. ದಾನ, ಪೂಜೆ, ಶೀಲ, ಸಂಯಮ, ತಪಸಹಿತವಿರುವಂಥವು ಸುವ್ರತಗಳಿವೆ.

**ವ್ರತದ ಹನ್ನೆರಡು ಭೇದಗಳು - ಅ) ಪಂಚ ಅಣುವ್ರತಗಳು -** ಅಹಿಂಸಾಣುವ್ರತ, ಸತ್ಯಾಣುವ್ರತ, ಅಚೌರ್ಯಾಣುವ್ರತ, ಬ್ರಹ್ಮಚರ್ಯಾಣುವ್ರತ ಮತ್ತು ಪರಿಗ್ರಹ ಪರಿಮಾಣ ಅಣುವ್ರತ. ಯಾವುದರಲ್ಲಿ ಏಕದೇಶರೂಪ ಹಿಂಸೆಯ ತ್ಯಾಗವಿರುತ್ತದೆ ಅರ್ಥಾತ್ ಎಲ್ಲಿ ತ್ರಸಹಿಂಸೆಯದಂತೂ ಸರ್ವಪ್ರಕಾರದಿಂದ ತ್ಯಾಗವಿದೆ ಮತ್ತು ಸ್ಥಾವರಹಿಂಸೆಯ ಆರಂಭದಲ್ಲಿ ದಯಾಭಾವಸಹಿತ ಪ್ರವರ್ತನೆಯಿದೆ, ಅದು ಅಹಿಂಸಾಣುವ್ರತವಿದೆ.

ಯಾವ ಅಸತ್ಯ ವಚನವನ್ನಾಡುವುದರಿಂದ ರಾಜದಂಡನೆಯಾಗುತ್ತದೆ, ಪಂಚರು ಬೈಯುತ್ತಾರೆ- ಗದರಿಸುತ್ತಾರೆ - ಅಂಥ ಅಸತ್ಯದ ತ್ಯಾಗವು ಸತ್ಯಾಣುವ್ರತವಿದೆ. ದೊರೆಯ ದಂಡನೆಗೆ ಗುರಿಯಾಗುವಂಥ, ಪಂಚರು ಶಿಕ್ಷಿಸುವಂಥ ಸ್ಥೂಲ ಕಳವಿನ ತ್ಯಾಗವು ಅಚೌರ್ಯಾಣುವ್ರತವಿದೆ. ಪರಸ್ತ್ರೀಯರಲ್ಲಿ ದೊಡ್ಡವರನ್ನು ತಾಯಿಯ ಸಮಾನವೆಂದು, ಸಮವಯಸ್ಕರನ್ನು ಸೋದರಿಯ ಸಮಾನವೆಂದು, ಕಿರಿಯರನ್ನು ಮಗಳ ಸಮಾನವೆಂದು ತಿಳಿದು ಅವರ ತ್ಯಾಗ ಎಂದರೆ ಅವರಲ್ಲಿ ವಿಕಾರಭಾವದ ತ್ಯಾಗ ಮಾಡುವುದು ಮತ್ತು ವಿವಾಹಿತ ಸ್ವಸ್ತ್ರೀಯ ಸಂಭೋಗದಲ್ಲಿಯೂ ತೀವ್ರ ತೃಷ್ಣೆಯ ತ್ಯಾಗವು ಬ್ರಹ್ಮಚರ್ಯಾಣುವ್ರತವಿದೆ. ವರ್ತಮಾನ ಸಮಯದಲ್ಲಿ ವರ್ತಿಸುವ ತಮ್ಮ ಪುಣ್ಯೋದಯದ ಅನುಸಾರ ಪ್ರಾಪ್ತವಾಗಿರುವ ಪರಿಗ್ರಹದೊಳಗಿಂದ ಸ್ವಲ್ಪ ಕಡಿಮೆಮಾಡಿ ಅದರ ತ್ಯಾಗ ಮಾಡುವುದು ಪರಿಗ್ರಹ ಪರಿಮಾಣ ಅಣುವ್ರತವಿದೆ.

**ಬ) ನಾಲ್ಕು ಶಿಕ್ಷಾವ್ರತ :-** ಸಾಮಾಯಿಕ, ಪ್ರೋಷಧೋಪವಾಸ, ಭೋಗೋಪಭೋಗ ಪರಿಮಾಣ ಮತ್ತು ಅತಿಥಿ ಸಂವಿಭಾಗ - ಇವು ವ್ರತಗಳ ಸಾಧನರೂಪ ಕ್ರಿಯೆಗಳಿವೆ; ಅದರಿಂದ ಇವುಗಳ ಹೆಸರು ಶಿಕ್ಷಾವ್ರತವಿದೆ. ತ್ರಿಕಾಲವರ್ತಿ ಸಾಮಾಯಿಕ ಸಂಬಂಧದ ವಿಧಿಯ ಸಾಧನೆ ಇರುವಂಥದನ್ನು ಸಾಮಾಯಿಕ ಶಿಕ್ಷಾವ್ರತವೆಂದು ಹೇಳಿದ್ದಾರೆ. ಅಷ್ಟಮಿ, ಚತುರ್ದಶಿಯ ದಿವಸ ಹದಿನಾರು ಪ್ರಹರ (೪೮ ಗಂಟೆ)ದ ವರೆಗೆ ಪಾಪಾರಂಭದ ತ್ಯಾಗ ಮಾಡಿ ಒಂದು ಸ್ಥಾನದಲ್ಲಿದ್ದು ಧರ್ಮಧ್ಯಾನಸಹಿತ ಪ್ರತಿಜ್ಞೆಯ ಸಾಧಕವಾಗುವುದು ಪ್ರೋಷಧೋಪವಾಸ ಶಿಕ್ಷಾವ್ರತವಿದೆ. ತಮ್ಮ ಪುಣ್ಯೋದಯದ ಅನುಸಾರ ಸಿದ್ಧಪಡಿಸಲಾದ ಭೋಜನದೊಳಗಿಂದ ಮುನಿ, ತ್ಯಾಗಿ, ಶ್ರಾವಕ ಮೊದಲಾದವರಿಗೆ ದಾನ ಕೊಡುವುದು ಅತಿಥಿ ಸಂವಿಭಾಗ ಶಿಕ್ಷಾವ್ರತವಿದೆ.

**ಕ) ಮೂರು ಗುಣವ್ರತ :-** ದಿಗ್ವ್ರತ, ದೇಶವ್ರತ ಮತ್ತು ಅನರ್ಥದಂಡವ್ರತ. ಪಾಪಾರಂಭದ ಹೇತುಭೂತವಾದ ಗಮನಾಗಮನದ ತ್ಯಾಗರೂಪ ಹತ್ತೂ ದಿಶೆಗಳಲ್ಲಿ ಪ್ರಮಾಣವಿರುವುದು ದಿಗ್ವ್ರತವಿದೆ. ದಿಗ್ವ್ರತದೊಳಗಿಂದ ಕಡಿಮೆ - ಕಡಿಮೆ ಮಾಡುತ್ತ ದಿನಾಲು ನಿಯಮ ಮಾಡುವುದು ದೇಶವ್ರತವಿದೆ. ಯಾವುದೇ ಪ್ರಯೋಜನವಿಲ್ಲದೆ ಅನರ್ಥದಂಡರೂಪ ಪಾಪಾರಂಭದ ತ್ಯಾಗವು ಯಾವುದರಲ್ಲಿದೆ ಅದು ಅನರ್ಥದಂಡವೆಂಬ ಹೆಸರಿನ ಗುಣವ್ರತವಿದೆ.

ಈ ಐದು ಅಣುವ್ರತ, ನಾಲ್ಕು ಶಿಕ್ಷಾವ್ರತ, ಮೂರು ಗುಣವ್ರತ - ಇವು ಎಲ್ಲವೂ ಸೇರಿ ಹನ್ನೆರಡು ವ್ರತಗಳಿವೆ. ಇವು ಪಾಪನಾಶಕವಿವೆ, ಪುಣ್ಯದ ವೃದ್ಧಿ ಮಾಡುವಂಥ ಸುವ್ರತಗಳಿವೆಯೆಂದು ತಿಳಿಯುವುದು.

ಈ ವ್ರತಗಳನ್ನು ಮಾಡುವುದರಿಂದ ಜಗತ್ತಿನಲ್ಲಿ ಕೀರ್ತಿಯು ಹರಡುತ್ತದೆ, ಪಾಪಗಳು ನಷ್ಟವಾಗುತ್ತವೆ, ಸಮತೆಯ ಭಾವವು ಪ್ರಕಟವಾಗುತ್ತದೆ, ಬುದ್ಧಿಯು ಉಜ್ವಲವಾಗುತ್ತದೆ, ದಯಾಮಯ ಭಾವಗಳಾಗುತ್ತವೆ, ಕುಬುದ್ಧಿಯ ವಿನಾಶವಾಗಿ ಸುಬುದ್ಧಿಯ ಪ್ರಕಾಶವಾಗುತ್ತದೆ - ಇತ್ಯಾದಿ ಅನೇಕ ಪಾಪ, ದುಃಖಗಳ ನಾಶವಾಗಿ ಅನೇಕ ಗುಣಗಳು ಪ್ರಗಟವಾಗುತ್ತವೆ.

ಹೇಗೆ ಯಾವನೋ ಮನುಷ್ಯನಿಗೆ ತೀವ್ರ ಹಸಿವೆಯಾಗಿತ್ತು , ಆಹಾರವಿಲ್ಲದೇ ಶಿಥಿಲನಾಗುತ್ತಿದ್ದನು, ಕಣ್ಣುಗಳಿಗೆ ಕತ್ತಲು ಕವಿಯುತ್ತಿತ್ತು , ಒಂದು ಹೆಜ್ಜೆಯೂ ನಡೆಯಲಿಕ್ಕೆ ಆಗುತ್ತಿಲ್ಲ, ಮಾತನಾಡಲಾಗುತ್ತಿಲ್ಲ, ಬುದ್ಧಿಯಲ್ಲಿ ಯಾವ ಯುಕ್ತಿಯೂ ಉತ್ಪನ್ನವಾಗುತ್ತಿಲ್ಲ, ಪುರುಷಾರ್ಥವು ನಷ್ಟವಾಗಿ, ದೀನ-ಪರಾಧೀನನಾಗುತ್ತಿದ್ದನು - ಹೀಗೆ

ಅನೇಕ ರೋಗ ಹಾಗೂ ದುಃಖವಾಗುತ್ತಿತ್ತು; ಆದರೆ ಯಾವಾಗ ಹೊಟ್ಟೆ ತುಂಬ ಆಹಾರ ದೊರಕಿತು ಆಗ ಎಲ್ಲ ರೋಗ, ದುಃಖಗಳು ನಾಶವಾಗಿ ಹೋಗುತ್ತವೆ, ಅದೇ ಪ್ರಕಾರ ವಿವೇಕವಂತರಿಗೆ ಉತ್ತಮ (ಸಮ್ಯಕ್) ಜ್ಞಾನವಾಗುವುದರಿಂದ, ಸುವ್ರತರೂಪದ ಆಹಾರವು ದೊರಕುತ್ತಿದ್ದಂತೆಯೇ ಕುಭಾವರೂಪದ ಅನೇಕ ದುಃಖ, ಅಸತ್ಯ ವ್ರತರೂಪದ ವೇದನೆ ಮೊದಲಾದುವೆಲ್ಲವು ನಷ್ಟವಾಗಿ ಹೋಗುತ್ತವೆ; ಅದರಿಂದ ಅನೇಕ ಶುಭದಾಯಕ ಭಾವಗಳಾಗುತ್ತವೆ. ಅನೇಕ ಯುಕ್ತಿಗಳು ಹೊಳೆಯಲಾರಂಭಿಸುತ್ತವೆ, ಅದರಿಂದ ತತ್ತ್ವಗಳ ಭೇದಾಭೇದರೂಪ ವಿಚಾರ ಮಾಡಿ ತನ್ನ ಕಲ್ಯಾಣ ಮಾಡಿಕೊಳ್ಳುತ್ತಾನೆ - ಎಂಬುದನ್ನು ತಿಳಿದುಕೊಂಡು ವಿವೇಕವಂತರು ಅನೇಕ ಪ್ರಕಾರದಿಂದ ವಿಚಾರ ಮಾಡಿ ಸುಖದ ಲೋಭಿಗಳಾದ ಧರ್ಮದ ಇಚ್ಛುಕರು ಅನೇಕ ಮತಗಳ ರಹಸ್ಯವನ್ನು ಕಂಡುಕೊಂಡು ಯಾವುದರಲ್ಲಿ ಶುಭ-ದಯಾಭಾವಸಹಿತ ಉಜ್ವಲ ಆಚರಣೆಯಿಂದ ಕೂಡಿದ ವ್ರತಗಳಿವೆ ಅವುಗಳನ್ನು ಮಾಡುವುದು ಯೋಗ್ಯವಿದೆ. ಯಾವ ವ್ರತಗಳನ್ನು ಮಾಡುವುದರಿಂದ ಪಾಪಗಳ ನಾಶವಾಗುತ್ತದೆ. ಆ ವ್ರತಗಳು ಉತ್ತಮವಿವೆ ಮತ್ತು ಯಾವ ವ್ರತಗಳನ್ನು ಮಾಡುವುದರಿಂದ ಪಾಪವಾಗುತ್ತದೆ ಅವುಗಳ ತ್ಯಾಗ ಮಾಡುವುದು ಯೋಗ್ಯವಿದೆ.

ವಿವೇಕವಂತರು ತಮ್ಮ ವಿವೇಕದಿಂದ ಸತ್ಯ-ಅಸತ್ಯ ವ್ರತಗಳ ಪರೀಕ್ಷೆ ಮಾಡಿ ಗ್ರಹಣ ಮಾಡಬೇಕು. ಯಾರೋ ಹೇಳಿದ ಮಾತ್ರಕ್ಕೆ ವ್ರತಗಳ ಗ್ರಹಣ ಮಾಡಬಾರದು. ಎಲ್ಲರೂ ತಮ್ಮ ತಮ್ಮದನ್ನು ಒಳ್ಳೆಯದೆಂದೇ ಹೇಳುತ್ತಾರೆ. ಅದು ಜಗತ್ತಿನ ರೀತಿಯಿದೆ. ಆದರೆ ವಿವೇಕವಂತರು ವಿವೇಕದಿಂದ ಪರೀಕ್ಷೆ ಮಾಡಿ ಗ್ರಹಣ ಮಾಡುವುದು ಅದುವೇ ಸತ್ಯವ್ರತವಿದೆ.

ಯಾವ ಪ್ರಕಾರ ಸಂತೆಯಲ್ಲಿ (ಮಂಡಿಯಲ್ಲಿ) ಅನೇಕ ಪ್ರಕಾರದ ರತ್ನಗಳು ಮಾರಾಟವಾಗುತ್ತವೆ. ಅಲ್ಲಿ ಕೆಲವರಂತೂ ನಿಜವಾದ ರತ್ನಗಳನ್ನು ಮಾರಾಟಕ್ಕಿಟ್ಟಿರುತ್ತಾರೆ, ಕೆಲವರು ನಕಲಿ ರತ್ನಗಳನ್ನು ಮಾರಬಯಸುತ್ತಾರೆ. ಅವರೆಲ್ಲರೂ ಗ್ರಾಹಕರಿಗೆ ತಮ್ಮ-ತಮ್ಮ ರತ್ನಗಳು ನಿಜವಾದ ರತ್ನಗಳೆಂದೇ ಹೇಳುತ್ತಾರೆ, ಏಕೆಂದರೆ ಮಾರಾಟ ಮಾಡುವವರಂತೂ ಹಾಗೇಯೇ ಹೇಳುತ್ತಾರೆ; ಆದರೆ ಕೊಳ್ಳುವವರು ಸ್ವಯಂ ಸಾವಧಾನತೆಯಿಂದ ಪರೀಕ್ಷೆ ಮಾಡಿಯೇ ತಗೆದುಕೊಳ್ಳುವುದಿರುತ್ತದೆ. ಯಾರದೋ ಹೇಳಿಕೆಯ ಮೇರೆಗೆ ಕೊಳ್ಳುವುದಿರುವುದಿಲ್ಲ - ಕೊಳ್ಳಬಾರದು. ಅದೇ ಪ್ರಕಾರ ಧರ್ಮದ ಅಂಗಡಿಗಳೂ ಅನೇಕವಿವೆ. ತಮ್ಮ-ತಮ್ಮ ವ್ರತಗಳನ್ನು ಎಲ್ಲರೂ ಉತ್ತಮವೆಂದು ಮನ್ನಿಸುತ್ತಾರೆ. ಆದರೆ ಧರ್ಮಾತ್ಮರು ತಮ್ಮ ಬುದ್ಧಿಯಿಂದ ಪರೀಕ್ಷೆ ಮಾಡುತ್ತಾರೆ. ಯಾವ ವ್ರತಗಳು ಶುದ್ಧವಿವೆ ದಯೆಯಿಂದ ಯುಕ್ತವಿವೆ ಅವುಗಳ ಧಾರಣ ಮಾಡಬೇಕು. ಅನೇಕ ಶುಭ ವ್ರತಗಳಿವೆ, ಅನೇಕ ಅಶುಭ ವ್ರತಗಳಿವೆ- ಅವುಗಳ ಸ್ವರೂಪವನ್ನು ಮೇಲೆ ಹೇಳಲಾಗಿದೆ ಮತ್ತು ಪರೀಕ್ಷೆಯ ಉದ್ದೇಶದಿಂದ ಲಕ್ಷಣವನ್ನೂ ತಿಳಿಸಲಾಗಿದೆ. ಅವುಗಳ ವಿಶೇಷತೆಯನ್ನು ಮುಂದೆ ವ್ರತಪ್ರತಿಮೆಯಲ್ಲಿ ಹೇಳಲಾಗುವುದು ಅಲ್ಲಿಂದ ತಿಳಿಯುವುದು.

ದಾನದಲ್ಲಿ ಜ್ಞೇಯ-ಹೇಯ-ಉಪಾದೇಯ-ಸಂಪೂರ್ಣ ಶುಭಾಶುಭ ದಾನಗಳ ಸ್ವರೂಪವನ್ನು ತಿಳಿಯುವುದು ಜ್ಞೇಯವಿದೆ. ಇದರಲ್ಲಿ ಸುದಾನವು ಜ್ಞೇಯ, ಉಪಾದೇಯವಿದೆ ಮತ್ತು ಕುದಾನವು ಜ್ಞೇಯ, ಹೇಯವಿದೆ.

ದಾನದ ಲಕ್ಷಣ-ಯಾವುದನ್ನು ಕೊಡುವುದರಿಂದ ಮನಸ್ಸು ಮಹಾಭಕ್ತಿರೂಪವಾಗುತ್ತದೆ. ಅದು ದಾನವಿದೆ. ಯಾವುದನ್ನು ಕೊಡುವುದರಿಂದ ಚಿತ್ತವು ದಯಾಮಯವಾಗುತ್ತದೆ ಅದುವೇ ದಾನವಿದೆ. ಮನಸ್ಸಿನಲ್ಲಿ ಭಕ್ತಿಯ ಭಾವವೂ ಇಲ್ಲ ಮತ್ತು ದಯೆಯ ಭಾವವೂ ಇಲ್ಲದೆ ದಾನ ಕೊಡುವುದಂತೂ ದೊರೆಗೆ ದಂಡನೆ ನೀಡಿದ ಹಾಗಿದೆ. ಯಾವ ದಾನವು ದಂಡನೆಗೆ ಸಮಾನವಿದೆ ಅದನ್ನು ಕುದಾನವೆಂದು ಹೇಳುತ್ತಾರೆ. ಹೇಗೆ ಯಾವನೋ ವ್ಯಕ್ತಿಯ ಶರೀರದಲ್ಲಿ ಪೀಡೆಯಾಗುತ್ತಿದ್ದರೆ, ಆಗ ಯಾವನೋ ಲೋಭೀ ಪುರುಷನು ರೋಗಿಯನ್ನು ಮುಗ್ದನೆಂದು ತಿಳಿದು - ನೀನು ನಮಗೆ ಆನೆಯ ದಾನಕೊಡು, ಕುದುರೆಯ ದಾನಕೊಡು, ವಾಹನ, ಪಲ್ಲಕ್ಕಿ, ರಥದ ದಾನ ಕೊಡು; ಇದೇ ರೀತಿ ವಿಷಯ ಸೇವನೆಯ ಸ್ಥಾನವಿರುವ ಮನೆಯ ದಾನಕೊಡು, ಚಿನ್ನ-ಬೆಳ್ಳಿದಾನ, ವಿಷಯ ಸೇವನೆಯ

ಹೇತುಭೂತವಿರುವ ದಾಸ-ದಾಸಿಯ ದಾನ, ಸ್ತ್ರೀಯದಾನ, ಕನ್ಯಾದಾನ, ಭೂಮಿಯದಾನ, ಎಳ್ಳಿನ ದಾನ, ಕಪ್ಪುಬಟ್ಟೆಯದಾನ, ತೈಲದಾನ ಕೊಡೆಂದು ಹೇಳುತ್ತಾನೆ. ಇತ್ಯಾದಿ ದಾನಗಳು ಲೋಭಿ ಜೀವರುಗಳಿಂದ ಪ್ರರೂಪಿತವಿವೆ ಮತ್ತು ಮುಗ್ಧ ಜೀವರುಗಳನ್ನು ಅಜ್ಞಾನಿಯೆಂದು ತಿಳಿದು ಹೇಳಲಾಗಿರುವಂಥವಿವೆ ಅವೆಲ್ಲವು ಕುದಾನಗಳಿದ್ದು ವಿವೇಕವಂತರಿಂದ ತ್ಯಾಗ ಮಾಡಲು ಯೋಗ್ಯವಿವೆ.

**ಸುದಾನ** - ಸುದಾನದಲ್ಲಿ ಆಹಾರದಾನ, ಔಷಧದಾನ, ಶಾಸ್ತ್ರದಾನ ಮತ್ತು ಅಭಯದಾನವೆಂದು ನಾಲ್ಕು ಭೇದಗಳಿವೆ.

ತನ್ನ ಸಲುವಾಗಿ ತಯಾರಿಸಲಾದ ಭೋಜನದೊಳಗಿಂದ ಮೊದಲು ಮುನಿಗೆ, ತ್ಯಾಗಿ ಶ್ರಾವಕನಿಗೆ, ಆರ್ಯಿಕೆಗೆ ಯಥಾಯೋಗ್ಯ ವಿನಯಪೂರ್ವಕ ಮಹಾಹರ್ಷದೊಂದಿಗೆ ದಾನ ಕೊಡುವುದು ಆಹಾರದಾನವಿದೆ. ಅನೇಕರಿಗೆ ಅನ್ನಾದಿಗಳನ್ನು ನೀಡಿ ನಂತರ ತಾನು ಭೋಜನ ಮಾಡುವಂಥವನು ಅದರ ಫಲದಿಂದ ಯಾವಾಗಲೂ ಸುಖಿಯಾಗಿರುತ್ತಾನೆ ಅನ್ನ-ಧನಾದಿಗಳ ಅಧಿಕತೆಯುಕ್ತ ಉದಾರ ಚಿತ್ತದ ಧಾರಕನಾಗುತ್ತಾನೆ. ಒಂದುವೇಳೆ ಯಾರೂ ಯತಿ, ಶ್ರಾವಕಾದಿಗಳ ನಿಮಿತ್ತವು ದೊರಕದಿದ್ದರೆ ದೀನ, ವೃದ್ಧ, ಬಾಲಕ, ಭಿಕ್ಷುಕ, ಹಸಿದಿರುವ, ಕುರುಡ, ಕುಂಟ, ಹೆಳವ ಇತ್ಯಾದಿ ಅಸಹಾಯಕರನ್ನು ನೋಡಿ ಅವರ ಶರೀರದ ರಕ್ಷಣೆಯ ಸಲುವಾಗಿ ಕರುಣೆಯ ಭಾವದಿಂದ ಅನ್ನದಾನ ಮಾಡುವುದು ಕರುಣಾದತ್ತಿ(ದಯಾದತ್ತಿ)ಯಿದೆ.

ಮುನಿ, ಆರ್ಯಿಕೆ, ಶ್ರಾವಕ, ತ್ಯಾಗಿಗಳ ಶರೀರದಲ್ಲಿ ಬಾಧೆಯಾಗುತ್ತಿರುವುದನ್ನು ಕಂಡು, ಯೋಗ್ಯ ಹಾಗೂ ಪ್ರಾಸುಕ ಔಷಧಿ ಕೊಡುವುದು ಔಷಧ ದಾನವಿದೆ ಹಾಗೂ ಯಾರೋ ದರಿದ್ರ ದುಃಖೀ, ಬಾಲಕ, ವೃದ್ಧ ಮೊದಲಾಗಿ ಅಸಹಾಯ ನಿರ್ಧನ ಜೀವರುಗಳ ರೋಗದ ವೇದನೆಯನ್ನು ಕಂಡು ಧರ್ಮಾತ್ಮಾ ಪುರುಷರು ತಮ್ಮ ಮನಸ್ಸು ದಯೆಯಿಂದ ನೆನೆದು ಹೋಗಿ ಅವರಿಗೆ ಔಷಧವನ್ನು ತಯಾರಿಸಿಕೊಡುತ್ತಾರೆ, ಅವರ ಸೇವೆ ಶುಶ್ರೂಷೆ ಮಾಡುತ್ತಾರೆ. ಅದರ ಫಲದಲ್ಲಿ ಅವರ ಶರೀರವು ನಿರೋಗವಾಗುತ್ತದೆ.

ಮುನಿ, ಆರ್ಯಿಕೆ, ಶ್ರಾವಕ ಮೊದಲಾದ ಧರ್ಮಾತ್ಮ ಪುರುಷರಿಗೆ ಪಠನ-ಪಾಠನದ ಉದ್ದೇಶದಿಂದ ಶಾಸ್ತ್ರ ಕೊಡುವುದು ಶಾಸ್ತ್ರದಾನವಿದೆ. ಬೇರೆಯವರಿಂದ ಬರೆಯಿಸಿ ಕೊಡುವುದು, ಸ್ವಯಂ ಬರೆದು ಕೊಡುವುದು ಕೂಡ ಶಾಸ್ತ್ರದಾನವಿದೆ ಹಾಗೂ ಇತರ ಭವ್ಯ ಜೀವರುಗಳಿಗೆ ಧರ್ಮೋಪದೇಶವಿತ್ತು ಧರ್ಮದ ಸನ್ಮುಖ ಮಾಡುವುದು, ಓದಿಸುವುದು, ತನ್ನ ಸ್ವರೂಪವನ್ನು ಮರೆತು ಸಂಸಾರದಲ್ಲಿ ಸುತ್ತುತ್ತಿರುವ ಪ್ರಾಣಿಗಳಿಗೆ ಸತ್ಯಮಾರ್ಗ ತಿಳಿಸಿಕೊಡುವುದು ಕೂಡ ಶಾಸ್ತ್ರದಾನವಿದೆ. ಇದರ ಫಲಸ್ವರೂಪವಾಗಿ ಜೀವನು ಅತಿಶಯ ಜ್ಞಾನದ ಧಾರಕನಾಗುತ್ತಾನೆ.

ಅನ್ಯ ಜೀವಗಳ ದುಃಖವನ್ನು ನಷ್ಟಮಾಡಿ ಅವರನ್ನು ಸುಖಿಗಳನ್ನಾಗಿ ಮಾಡುವುದು; ಒಂದುವೇಳೆ ಯಾವನೋ ದುಷ್ಟನು ದೀನ-ಹೀನ ಜೀವಗಳನ್ನು, ಪಶುಗಳನ್ನು, ಮನುಷ್ಯರನ್ನು ಸಾಯಿಸುತ್ತಿದ್ದರೆ ತಮ್ಮ ಶಕ್ತಿಯ ಅನುಸಾರ ಜ್ಞಾನ, ಧನ, ಬಲ, ಆದೇಶ ಮೊದಲಾದವುಗಳಿಂದ ಅವರನ್ನು ರಕ್ಷಿಸುವುದು, ಸ್ವಯಂ ತಾನು ಯಾವುದೇ ಜೀವಕ್ಕೆ ತೊಂದರೆ ಕೊಡದಿರುವುದು, ಎಲ್ಲರನ್ನು ಸುಖಿಯಾಗಿಸುವುದು. ಎಲ್ಲ ಜೀವಗಳ ಕುರಿತಾಗಿ ಮೈತ್ರಿಯಭಾವ ಧಾರಣ ಮಾಡಿ ಎಲ್ಲರ ಸುಖವನ್ನೇ ಬಯಸುವುದು ಅಭಯದಾನವಿದೆ. ಇದರ ಫಲದಲ್ಲಿ ಸ್ವಯಂ ಅಭಯ ಪದರೂಪ ಮೋಕ್ಷಪದಕ್ಕೆ ಪ್ರಾಪ್ತನಾಗುತ್ತಾನೆ. ಒಂದುವೇಳೆ ಯಾವುದಾದರೂ ಭವಧಾರಣ ಮಾಡಬೇಕಾಗಿ ಬಂದರೆ ದೇವ, ಇಂದ್ರಾದಿ ಪದವನ್ನು ಪ್ರಾಪ್ತಮಾಡಿಕೊಳ್ಳುತ್ತಾನೆ. ಮನುಷ್ಯನಾದರೆ ಚಕ್ರವರ್ತಿ, ತ್ರಿಖಂಡಾಧಿಪತಿ (ನಾರಾಯಣ, ಪ್ರತಿನಾರಾಯಣ) ಸುಭಟ, ಮಹಾಯೋಧ, ದೀರ್ಘಾಯುವಿನ ಧಾರಕನಾಗುತ್ತಾನೆ. ಹೀಗೆ ಅಭಯದಾನದ ಫಲವನ್ನು ತಿಳಿಯುವುದು.

ಇವು ನಾಲ್ಕು ಪ್ರಕಾರದ ದಾನಗಳು ಶುಭದಾನವಿವೆ. ಇವು ಸಮ್ಯಗ್ದೃಷ್ಟಿಗಳಿಗೆ ಉಪಾದೇಯವಿವೆ.

ಪಾತ್ರದಲ್ಲಿ ಜ್ಞೇಯ, ಹೇಯ, ಉಪಾದೇಯ - ಎಲ್ಲ ಪ್ರಕಾರದಿಂದ ಕುಪಾತ್ರ, ಸುಪಾತ್ರಗಳ ಭೇದಗಳನ್ನು ತಿಳಿಯುವುದು ಜ್ಞೇಯವಿದೆ. ಇದರಲ್ಲಿ ಎರಡು ಭೇದಗಳಿವೆ -

೧) ಅಶುಭ ಪಾತ್ರ, ೨) ಸುಪಾತ್ರ. ಅಶುಭ ಪಾತ್ರದಲ್ಲಿ ಅ) ಕುಪಾತ್ರ, ಬ) ಅಪಾತ್ರವೆಂದು ಎರಡು ಭೇದಗಳಿವೆ. ಕುಪಾತ್ರದಲ್ಲಿ ಕ) ಉತ್ಕೃಷ್ಟ, ಖ) ಮಧ್ಯಮ, ಗ) ಜಘನ್ಯವೆಂದು ಮೂರು ಭೇದಗಳಿವೆ.

ಕ) ಬಾಹ್ಯದಲ್ಲಿ ಇಪ್ಪತ್ತೆಂಟು ಮೂಲಗುಣಗಳ ಧಾರಕನಿದ್ದು ಅಂತರಂಗದಲ್ಲಿ ಸಮ್ಯಕ್ತ್ವರಹಿತನಿರುವ ಜೀವನು ಉತ್ಕೃಷ್ಟ ಕುಪಾತ್ರನಿದ್ದಾನೆ.

ಖ) ಬಾಹ್ಯದಲ್ಲಿ ಶ್ರಾವಕ ವ್ರತಗಳ ಧಾರಕನಿದ್ದಾನೆ. ಹನ್ನೊಂದು ನೆಲೆಗಳಲ್ಲಿ ಪ್ರವರ್ತಿಸುವಂಥ ಶುಭಾಚಾರ ಸಂಪನ್ನ ಧರ್ಮಧ್ಯಾನಿ, ಜಿನಆಜ್ಞೆಯ ಅನುಸಾರ ಶ್ರಾವಕ ಕ್ರಿಯಾಸಹಿತನಿದ್ದಾನೆ; ಆದರೆ ಸಮ್ಯಕ್ತ್ವರಹಿತ ಜೀವನು ಮಧ್ಯಮ ಕುಪಾತ್ರನಿದ್ದಾನೆ.

ಗ) ದೇವ, ಗುರು, ಧರ್ಮದ ದೃಢ ಪ್ರತೀತಿರೂಪ ವ್ಯವಹಾರ ಸಮ್ಯಕ್ತ್ವ ಸಹಿತನಿದ್ದಾನೆ; ಆದರೆ ಭೇದಜ್ಞಾನರಹಿತ ಅನಂತಾನುಬಂಧಿಯ ನಾಲ್ಕು ಮತ್ತು ದರ್ಶನ ಮೋಹದ ಮೂರು-ಹೀಗೆ ಏಳು ಪ್ರಕೃತಿಗಳ ಉಪಶಮ, ಕ್ಷಯೋಪಶಮ ಅಥವಾ ಕ್ಷಯರಹಿತ, ನಿಶ್ಚಯ ಸಮ್ಯಕ್ತ್ವವಿಲ್ಲದವನು ಅವನು ಜಘನ್ಯ ಕುಪಾತ್ರನಿದ್ದಾನೆ.

ಯಾವನು ಸ್ವಯಂ ಆರುದ್ರವ್ಯ, ಏಳು ತತ್ತ್ವ, ಒಂಭತ್ತು ಪದಾರ್ಥ, ಐದು ಅಸ್ತಿಕಾಯಗಳ ಹೆಸರನ್ನು ಅನ್ಯರಿಗೆ ಹೇಳುತ್ತಾನೆ - ಹೀಗೆ ಧರ್ಮವಾಂಛೆಯಿಂದ ಸಹಿತ, ಪಾಪಕ್ರಿಯೆಯಿಂದ ವಿಮುಖ, ನಿಶ್ಚಯ ಭಾವ-ಭೇದಜ್ಞಾನದಿಂದ ನಿಜ-ಪರಗಳ ಗುಣಭೇದದಿಂದ ರಹಿತ ಅರ್ಥಾತ್ ಸಮ್ಯಕ್ತ್ವರಹಿತ ಅವಿರತ ಗೃಹಸ್ಥನು ಜಘನ್ಯ ಕುಪಾತ್ರನಿದ್ದಾನೆ.

ಈ ಪ್ರಕಾರ ಇವರು ಮೂರು ತರದ ಕುಪಾತ್ರರಿದ್ದಾರೆ. ಇವರು ಅನ್ಯರಿಗಂತೂ ಮೋಕ್ಷಮಾರ್ಗವನ್ನು ತಿಳಿಸಿಕೊಡುತ್ತಾರೆ; ಆದರೆ ಸ್ವಯಂ ಮೋಕ್ಷಮಾರ್ಗದಲ್ಲಿ ತೊಡಗುವುದಿಲ್ಲ, ಅದರಿಂದ ಇವರಿಗೆ ಮೋಕ್ಷಮಾರ್ಗದ ಸುಖವಿಲ್ಲ.

ಯಾವ ಪ್ರಕಾರ ದೊರೆಯ ಅಡುಗೆಯವನು ಅನೇಕ ಪ್ರಕಾರದ ಸುಂದರ-ಸ್ವಾದಿಷ್ಟ ವ್ಯಂಜನಗಳನ್ನು ಸಿದ್ಧಪಡಿಸಿ ದೊರೆಗೆ ತಿನ್ನಿಸುತ್ತಾನೆ-ದೊರೆಯನ್ನು ಸಂತುಷ್ಟಪಡಿಸುತ್ತಾನೆ; ಆದರೆ ತಾನು ಸ್ವಯಂ ಅದರ ರುಚಿ ನೋಡುವುದಿಲ್ಲ ಅಥವಾ ಹೇಗೆ ಅನೇಕ ಸ್ವಾದಿಷ್ಟ ಮಹಾಮಿಷ್ಟ ರಸಮಯ ಪದಾರ್ಥದ ಪಾತ್ರೆಯಲ್ಲಿ ಧಾತುವಿನ ಸೌಟು (ಚಮಚ) ಸುತ್ತುತ್ತದೆ; ಆದರೆ ಅದು ಆ ಭೋಜನ ಪದಾರ್ಥದ ಸ್ವಾದವನ್ನು ಪ್ರಾಪ್ತಮಾಡಿಕೊಳ್ಳುವ ಸಾಧ್ಯತೆಯಿಲ್ಲ. ಅದೇ ಪ್ರಕಾರ ಅನೇಕ ತತ್ತ್ವಗಳ ರಹಸ್ಯವನ್ನು ತಿಳಿಸಿಕೊಡುತ್ತಾನೆ, ಮೋಕ್ಷವಾಗುವ ಉಪಾಯವನ್ನು ತಿಳಿಸಿಕೊಟ್ಟು ಅನ್ಯರಿಗೆ ತತ್ತ್ವರಸದ ಆಸ್ವಾದ ಮಾಡಿಸಿ-ಮೋಕ್ಷಮಾರ್ಗವನ್ನು ತಿಳಿಸಿಕೊಟ್ಟು ಸುಖಿಗಳನ್ನಾಗಿಸುತ್ತಾನೆ; ಆದರೆ ಸ್ವಯಂ ತತ್ತ್ವರಸದ ಆಸ್ವಾದ ಪಡೆಯುವುದಿಲ್ಲ ಅಂಥ ಜೀವರುಗಳು ಕುಪಾತ್ರರಿದ್ದಾರೆ. ಕುಪಾತ್ರರು ತ್ಯಾಗಯೋಗ್ಯ -ಹೇಯರಿದ್ದಾರೆ.

**ಅಪಾತ್ರ** :- ಅಪಾತ್ರರಲ್ಲಿಯೂ ಮೂರು ಭೇದಗಳಿವೆ. ಯಾರು ಜಿನಾಜ್ಞೆಯಿಂದ ರಹಿತ ಜಿನಲಿಂಗದ ಧಾರಕರಿದ್ದಾರೆ ಪರಿಗ್ರಹ ಸಹಿತ ತಮ್ಮನ್ನು ಯತಿಪದ, ಗುರುನಾಮಧಾರಿಗಳೆಂದು ಮನ್ನಿಸುತ್ತಾರೆ; ಅನೇಕ ಪ್ರಕಾರದ ತಪಸ್ಸು, ಸಂಯಮ, ಧ್ಯಾನ ಮಾಡುತ್ತಾರೆ. ರಾಗ-ದ್ವೇಷದಿಂದ ದುಃಖಿಯಾದ ಹೃದಯದ ಧಾರಕರಿದ್ದಾರೆ, ಕ್ರೋಧ-ಮಾನ-ಮಾಯೆ-ಲೋಭಗಳಿಂದ ಮಂಡಿತರಿದ್ದಾರೆ, ಮಂತ್ರ-ತಂತ್ರ-ಯಂತ್ರ-ರಸಾಯನ-ಧಾತು

ಶೋಧಕ-ಜ್ಯೋತಿಷ-ವೈದ್ಯಕ ಇತ್ಯಾದಿ ಚೇಷ್ಟೆಗಳಿಂದ ಆಜೀವಿಕೆ ನಡೆಸುತ್ತಾರೆ - ಇಂಥ ಅನೇಕ ಸೋಗು-ವೇಷಗಳ ಧಾರಕರು ಉತ್ಕೃಷ್ಟ ಅಪಾತ್ರರಿದ್ದಾರೆ. ಇವರು ಬೇರೆಯವರಿಗಂತೂ ಕುಮಾರ್ಗದ ಉಪದೇಶವನ್ನೇ ಕೊಡುತ್ತಾರೆ, ತಾವು ಕೂಡ ಶುಭಮಾರ್ಗದಿಂದ ರಹಿತರಿದ್ದಾರೆ. ಹೇಗೆ ಯಾವನೋ ವಂಚಕನು ದೊರೆಯ ವೇಷಧಾರಣ ಮಾಡಿ ಜನರ ಮೇಲೆ ಅಧಿಕಾರ ನಡೆಸುತ್ತಾನೆ ಮತ್ತು 'ನಾನು ದೊರೆಯಿದ್ದೇನೆ, ಯಾರು ನನ್ನ ಸೇವೆ ಮಾಡುತ್ತಾರೆ ಅವರು ಅನೇಕ ಋದ್ಧಿಗಳ ಪ್ರಾಪ್ತಿ ಮಾಡಿಕೊಂಡು ಸುಖಿಯಾಗುತ್ತಾರೆ'ಂದು ಹೇಳುತ್ತಾನೆ. ಆಗ ಅವನನ್ನು ದೊರೆಯೆಂದು ತಿಳಿದು ಮುಗ್ಧ ಬಡ ಜೀವಗಳು ಆ ವಂಚಕನ ಸೇವೆ ಮಾಡಲಾರಂಭಿಸುತ್ತಾರೆ; ಆದರೆ ಆ ಮುಗ್ಧ ಜನರು ವಂಚನೆಗೇ ಗುರಿಯಾಗುತ್ತಾರೆ ಏಕೆಂದರೆ ಆ ಮೋಸಗಾರನು ಮೇಲು ನೋಟಕ್ಕೆ ದೊರೆರೂಪನಾಗಿದ್ದಾನೆ ಮತ್ತು ಒಳಗೆ ಎಂದರೆ ಅಂತರಂಗದಿಂದ ವೇಷಗಾರನಿದ್ದಾನೆ; ಅದರಿಂದ ಅವನು ಏನಾದರೂ ಭಿಕ್ಷೆಯನ್ನೇ ಬೇಡಬಹುದಾಗಿದೆ, ಏನನ್ನಾದರೂ ಕೊಡುವಲ್ಲಿ ಸಮರ್ಥನಿಲ್ಲ. ಅವನಲ್ಲಿ ದೊರೆಯ ಯಾವೊಂದು ಚಿಹ್ನೆಯೂ ಇಲ್ಲ. ಸ್ವಯಂ ಹಸಿವೆಯಿಂದ ಬಳಲಿ ಹೋಗಿದ್ದಾನೆ ಅಂಥವನು ಬೇರೆಯವರನ್ನು ಸುಖಿ ಮಾಡುವಲ್ಲಿ ಅಸಮರ್ಥನಿದ್ದಾನೆ. ಸರಿ, ಅದೇ ಪ್ರಕಾರ ಅಪಾತ್ರ ಜೀವನು ಸ್ವಯಂ ಧರ್ಮವಾಸನೆ, ಧರ್ಮಭಾವನೆಯಿಂದ ರಹಿತನಿದ್ದಾನೆ. ಅನ್ಯರಿಗೆ ಧರ್ಮಫಲ(ಸುಖ)ವನ್ನು ತಿಳಿಸಿಕೊಡುವಲ್ಲಿ ಅಸಮರ್ಥನಿದ್ದಾನೆ. ಈ ಪ್ರಕಾರದ ಜೀವರುಗಳು ಅಪಾತ್ರರಿದ್ದಾರೆ; ಎಂದರೆ ತ್ಯಾಗ ಮಾಡಲು ಯೋಗ್ಯರಿದ್ದಾರೆ, ಹೇಯರಿದ್ದಾರೆ.

ಗೃಹಸ್ಥ, ಕುಟುಂಬಾದಿ ಸಹಿತ, ಜಿನಾಜ್ಞೆಯಿಂದ ರಹಿತ, ಹಿಂಸಾಮಯ ತಪ-ಸಂಯಮಗಳ ಧಾರಕ, ಕಂದ ಮೂಲಗಳ ಭಕ್ಷಣೆಯಲ್ಲಿ ಪ್ರವೀಣ, ದಯಾಮಯ-ಸತ್ಯಧರ್ಮದಿಂದ ರಹಿತ, ಕುಧರ್ಮೀ, ಹಿಂಸಾಮಾರ್ಗಿ ತಮ್ಮನ್ನು ತಾವು ವ್ರತೀ-ತಪಸ್ವಿ-ಸಂಯಮೀ ಧರ್ಮಾತ್ಮರೆಂದು ಮನ್ನಿಸುವವರು ಮಧ್ಯಮ ಅಪಾತ್ರರಿದ್ದಾರೆ.

ಜಿನಆಜ್ಞೆಯಿಂದ ರಹಿತ, ಗೃಹಸ್ಥಾಚಾರದ ಧಾರಕ, ತಮ್ಮನ್ನು ತಾವು ನಾಮ, ಪೂಜೆ, ದಾನಾದಿ ಅಂಗಸಹಿತರೆಂದು ಮನ್ನಿಸುವಂಥವರು, ಅಭಕ್ಷ್ಯ ಭಕ್ಷಣೆ ಮಾಡುವಂಥವರು, ಹಿಂಸಾಧರ್ಮದ ಲೋಭಿಗಳು, ದಯಾರಹಿತರಾದ ಯಾವ ಗೃಹಸ್ಥರು ಸ್ವಯಂ ತಮ್ಮನ್ನು ತಾವು ಧರ್ಮಾತ್ಮರೆಂದು ತಿಳಿಯುವಂಥವರು ಜಘನ್ಯ ಅಪಾತ್ರರಿದ್ದಾರೆ.

೨. ಸುಪಾತ್ರ :- ಸುಪಾತ್ರರಲ್ಲಿ ಒಂಭತ್ತು ಭೇದಗಳಿವೆ. ಅವುಗಳಲ್ಲಿ ೧) ಉತ್ಕೃಷ್ಟ, ೨) ಮಧ್ಯಮ, ೩) ಜಘನ್ಯವೆಂದು ಸುಪಾತ್ರದ ಪ್ರಥಮ ಮೂರು ಭೇದಗಳಿವೆ.

ಉತ್ಕೃಷ್ಟ ಸುಪಾತ್ರರಲ್ಲಿ - ಅ) ಉತ್ಕೃಷ್ಟ ಉತ್ಕೃಷ್ಟ, ಬ) ಉತ್ಕೃಷ್ಟ ಮಧ್ಯಮ, ಕ) ಉತ್ಕೃಷ್ಟ ಜಘನ್ಯವೆಂದು ಮೂರು ಭೇದಗಳಿವೆ. ಯಾರು ಅದೇ ಭವದಲ್ಲಿ ತೀರ್ಥಂಕರರಾಗುವಂಥವರಿದ್ದಾರೆ, ಅವರು ರಾಜ್ಯಾವಸ್ಥೆಯನ್ನು ತ್ಯಾಗ ಮಾಡಿ ದಿಗಂಬರದಶೆಯ ಧಾರಣ ಮಾಡಿ, ಎಲ್ಲಿಯವರೆಗೆ ಕೇವಲಜ್ಞಾನಿಗಳಾಗುವುದಿಲ್ಲ ಅಲ್ಲಿಯವರೆಗೆ ಛದ್ಮಸ್ಥ ಅವಸ್ಥೆಯಲ್ಲಿರುತ್ತಾರೆ. ಆ ಅವಸ್ಥೆಯಲ್ಲಿ ಅವರಿಗೆ ಆಹಾರಾದಿಗಳನ್ನು ಕೊಡುವುದು; ಅವರು ಉತ್ಕೃಷ್ಟ ಉತ್ಕೃಷ್ಟ ಸುಪಾತ್ರರಿದ್ದಾರೆ. ಯಾರ ಚಾರಿತ್ರ(ತಪ)ದ ಫಲಸ್ವರೂಪವಾಗಿ ಅನೇಕ ಋದ್ಧಿಗಳು ಉತ್ಪನ್ನವಾಗುತ್ತವೆ, ಅವಧಿ -ಮನಃಪರ್ಯಯಜ್ಞಾನಾದಿ ಅನೇಕ ಉತ್ತಮ ಋದ್ಧಿಗಳ ಧಾರಕರಾದ ಯತೀಶ್ವರರು ಉತ್ಕೃಷ್ಟ ಮಧ್ಯಮ ಸುಪಾತ್ರರಿದ್ದಾರೆ. ಇಪ್ಪತ್ತೆಂಟು ಮೂಲಗುಣಗಳು-ಹದಿಮೂರು ಪ್ರಕಾರದ ಚಾರಿತ್ರದ ಪರಿಪಾಲನೆ ಮಾಡುವಂಥವರು, ವೀತರಾಗ ಸಮ್ಯಕ್ತ್ವಸೂರ್ಯಧಾರೀ ಯತೀಶ್ವರರು ಉತ್ಕೃಷ್ಟ ಜಘನ್ಯ ಸುಪಾತ್ರರಿದ್ದಾರೆ.

ಮಧ್ಯಮ ಸುಪಾತ್ರದಲ್ಲಿಯೂ ಮೂರು ಭೇದಗಳಿವೆ - ಹತ್ತನೆಯ, ಹನ್ನೊಂದನೆಯ ನೆಲೆಗಳ ಧಾರಕರಾದ ತ್ಯಾಗೀ ಶ್ರಾವಕರು ಮಧ್ಯಮ ಉತ್ಕೃಷ್ಟ ಸುಪಾತ್ರರಿದ್ದಾರೆ. ಐದನೇ, ಆರನೇ, ಏಳನೇ, ಎಂಟನೇ, ಒಂಭತ್ತನೇ ನೆಲೆಯ ಧಾರಕರಾದ ಶ್ರಾವಕರು ಮಧ್ಯಮ ಮಧ್ಯಮ ಸುಪಾತ್ರರಿದ್ದಾರೆ. ಮೊದಲನೇ ನೆಲೆಯಿಂದ ಹಿಡಿದು ನಾಲ್ಕನೇ ನೆಲೆಯವರೆಗಿನ ಸಮ್ಯಗ್ದೃಷ್ಟಿ ಶ್ರಾವಕರು ಮಧ್ಯಮ ಜಘನ್ಯ ಸುಪಾತ್ರರಿದ್ದಾರೆಂದು ತಿಳಿಯುವುದು.

ಜಘನ್ಯ ಸುಪಾತ್ರ-ಕ್ಷಾಯಿಕ ಸಮ್ಯಕ್ತ್ವಸಹಿತ ಅವ್ರತೀ ಗೃಹಸ್ಥರು ಜಘನ್ಯ ಉತ್ಕೃಷ್ಟ ಸುಪಾತ್ರರಿದ್ದಾರೆ. ಉಪಶಮ ಸಮ್ಯಗ್ದರ್ಶನದ ಧಾರಕ ವ್ರತರಹಿತ ಅಸಂಯಮೀ ಗೃಹಸ್ಥರು ಜಘನ್ಯ ಮಧ್ಯಮ ಸುಪಾತ್ರರಿದ್ದಾರೆ. ಕ್ಷಯೋಪಶಮ ಸಮ್ಯಕ್ತ್ವಸಹಿತ ಅವ್ರತೀ ಗೃಹಸ್ಥರು ಜಘನ್ಯ ಜಘನ್ಯ ಸುಪಾತ್ರರಿದ್ದಾರೆ - ಇವು ಮೂರು ಭೇದಗಳು ಜಘನ್ಯ ಸುಪಾತ್ರರವಿವೆ, ಹೀಗೆ ಇವು ಒಟ್ಟು ಒಂಭತ್ತು ಭೇದಗಳು ಸುಪಾತ್ರರವೆಂದು ಹೇಳಲಾಗಿದೆ.

ಮೊದಲು ಹೇಳಲಾದ ಯಾವ ಅಪಾತ್ರರ ಮೂರು ಭೇದಗಳಿವೆ, ಅವರನ್ನು ಉತ್ಕೃಷ್ಟ ಪಾತ್ರರೆಂದು ತಿಳಿದು ವಿನಯ, ಭಕ್ತಿಯೊಂದಿಗೆ ಗುರುವೆಂದು ತಿಳಿದು ದಾನಕೊಡುವುದು ಅಪಾತ್ರದಾನವಿದೆ. ಅದರ ಫಲವು ಹೇಗೆ ಜಲದಸ್ಥಾನದಲ್ಲಿ ನೆಡಲಾದ ಒಣ ಹಣ್ಣುಗಳ ವೃಕ್ಷಕ್ಕೆ ಅಥವಾ ಗುಲಾಬಿ ಕಂಟಿಗೆ ನೀರೆರೆಯುವುದರಿಂದ ಅವುಗಳ ನಾಶವಾಗುತ್ತದೆ, ಫಲ ಹಾಗೂ ಅವುಗಳ ಅಂದವು ಕೆಟ್ಟು ಹೋಗುತ್ತದೆ, ಹಾಕಿರುವ ನೀರು ಕೂಡ ವ್ಯರ್ಥವಾಗುತ್ತದೆ; ಏಕೆಂದರೆ ಮೊದಲಿನಿಂದಲೇ ಭೂಮಿಯು ಜಲದಿಂದ ವ್ಯಾಪ್ತವಿತ್ತು, ಅದರಲ್ಲಿ ಇನ್ನಷ್ಟು ನೀರು ಹಾಕುವುದರಿಂದ ಆ ಗಿಡವು ಮತ್ತಷ್ಟು ನಿಃಸತ್ವವಾಯಿತು. ಮಾಡಲಾದ ಪರಿಶ್ರಮವು ವ್ಯರ್ಥವೇ ಆಯಿತು. ಹಾಗೆಯೇ ಅಪಾತ್ರ ದಾನವಿದೆ. ಅವರಿಗೆ ಕೊಡಲಾದ ಧನದ್ದೂ ನಾಶವಾಯಿತು, ಫಲ ಹಾಗೂ ಸುಖದ್ದೂ ನಾಶವಾಯಿತು. ಅದರ ಯೋಗದಿಂದ ನಿಗೋದ-ನರಕಾದಿಗಳ ದುಃಖರೂಪ ಫಲವು ಪ್ರಗಟವಾಗುವುದನ್ನು ಕೇವಲೀ ಭಗವಂತರು ನೋಡಿದ್ದಾರೆ. ಅದರಿಂದ ಅಪಾತ್ರಕ್ಕೆ ದಾನ ಕೊಡುವುದು ಹೇಯವಿದೆ. ಕುಪಾತ್ರರನ್ನು ಗುರುವೆಂದು ತಿಳಿದು ಭಕ್ತಿಸಹಿತ ದಾನ ಕೊಡುವುದರ ಫಲದಲ್ಲಿ ಕುಭೋಗ ಭೂಮಿಯ ಮನುಷ್ಯರಾಗುತ್ತಾರೆ.

ಸಂದೇಹ - ಕುಪಾತ್ರದಾನದ ಫಲವನ್ನು ತಾವು ಹೀನ-ತುಚ್ಛವೆಂದು ಹೇಳಿದ್ದೀರಿ. ಆದರೆ ನಮಗೆ ಸುಪಾತ್ರರ ಭೇದವು ಹೇಗೆ ಪ್ರಾಪ್ತವಾಗುವುದು ? ಸುಪಾತ್ರರನ್ನು ಹೇಗೆ ಗುರುತಿಸುವ ಸಾಧ್ಯತೆಯಿದೆ ? ದಾತೃವಂತೂ ಬಾಹ್ಯ ಚಾರಿತ್ರ ಹಾಗೂ ಮೂಲಗುಣಗಳ ಶುದ್ಧತೆಯನ್ನು ಕಂಡು ದಾನ ಕೊಡಬಯಸುತ್ತಾನೆ. ಸಾವಿರಾರು ಲಕ್ಷಾಂತರ ಮುನಿಗಳಲ್ಲಿ ಸಮ್ಯಕ್ತ್ವಧಾರೀ ಯತಿನಾಥರು ಅಲ್ಪರಿದ್ದಾರೆ ಮತ್ತು ಸಮ್ಯಕ್ತ್ವರಹಿತ, ಶುದ್ಧ ಮೂಲ ಗುಣಧಾರೀ ಗುರುಗಳು ಬಹಳಷ್ಟು ಇರುತ್ತಾರೆ; ಅದರಿಂದ ದಾನ ಕೊಡುವಂಥವನು ಶುದ್ಧಮೂಲಗುಣಗಳನ್ನು ಕಂಡು ಇವರು ಕುಪಾತ್ರರಿದ್ದಾರೆಯೇ ಅಥವಾ ಸುಪಾತ್ರರಿದ್ದಾರೆ ? - ಎಂಬುದಾಗಿ ವಿಚಾರ ಮಾಡಿದರೆ ಅವಿನಯವಾಗುತ್ತದೆ, ಪಾಪದ ಬಂಧವೂ ಆಗುತ್ತದೆ. ಕೇವಲಿ ಭಗವಂತರು ತಿಳಿಯಲು ಯೋಗ್ಯವಿರುವ ಮಾತುಗಳನ್ನು ಶ್ರಾವಕರು ಹೇಗೆ ತಿಳಿಯುವರು ? ಸುಪಾತ್ರ-ಕುಪಾತ್ರರ ಮಾತಂತೂ ಕೇವಲಜ್ಞಾನಗಮ್ಯವಿದೆ ಮತ್ತು ದಾನ ಕೊಡುವಂಥವನಿಗೆ ಯಾವುದೇ ಫಲದ ಇಚ್ಛೆಯೂ ಕೂಡ ಕಂಡು ಬರುವುದಿಲ್ಲ. ಯಾರಿಂದಲೋ ದಾತೃವಿಗೆ ಯಾವುದೋ ಒಳ್ಳೆಯ ಫಲವು ದೊರಕಿದರೆ ದೊರಕಬಹುದಾಗಿದೆ. ಹೀಗೆ ಮನ್ನಿಸದೇ ಹೋದರೆ ದಾನದ ಅಭಾವವಾಗಬಹುದಾಗಿದೆ.

ಸಮಾಧಾನ - ಎಲೈ ಭವ್ಯನೇ ! ನೀನು ಹೇಳುತ್ತಿರುವ ಮಾತಂತೂ ಸತ್ಯವಿದೆ ಆದರೆ ಎಲೈ ಭವ್ಯಾತ್ಮನೇ!! ಹೇಗೆ ಯಾವನೋ ದೊರೆಯ ರಾಜ್ಯವು ಶತ್ರುವಿನಿಂದ ಕಸಿದುಕೊಳ್ಳಲಾಗಿದ್ದರೆ, ಅವನು ತನ್ನ ರಾಜ್ಯದಿಂದ ಹೊರಗಿದ್ದು ಸೈನ್ಯವನ್ನು ಕಟ್ಟುತ್ತಾನೆ ಪುನಃ ಯುದ್ಧ ಮಾಡುತ್ತಾನೆ. ರಾಜ್ಯದ ಅಧಿಕಾರವು ಈಗ ಅವನ ಕೈಯಲ್ಲಿ ಇಲ್ಲ; ಆದರೆ ರಾಜ್ಯಭ್ರಷ್ಟನೂ ರಾಜ-ದೊರೆಯೆಂದೇ ಕರೆಸಿಕೊಳ್ಳುತ್ತಾನೆ. ಹೋರಾಡುತ್ತಿದ್ದಾನೆ, ಅದರಿಂದ ಶತ್ರುವನ್ನು ಸೋಲಿಸಿ ಒಮ್ಮೆ ರಾಜ್ಯವನ್ನು ಪಡೆದೇ ತೀರುವನು; ಆದುದರಿಂದ ಅವನನ್ನು ದೊರೆಯೆಂದೇ ಹೇಳುತ್ತಾರೆ.

ಅದೇ ಪ್ರಕಾರ ಯಾವ ಮುನಿಗಳು ಸಮ್ಯಕ್ತ್ವಸಹಿತ ಚಾರಿತ್ರದ ಧಾರಕರಿದ್ದರು, ಅವರು ಯಾವುದೋ ಕರ್ಮದ ಉದೀರಣೆಯ ಸಮಯದಲ್ಲಿ ಮೋಹದ ಪ್ರಬಲತೆಯಾಗುವುದರಿಂದ ಸಮ್ಯಕ್ತ್ವರೂಪದ ರಾಜ್ಯಪದದಿಂದ ಭ್ರಷ್ಟರಾಗಿ ಹೋಗಿದ್ದಾರೆ; ಆದಾಗ್ಯೂ ಆ ಯತಿಗಳು ತಮ್ಮ ಚಾರಿತ್ರದ ಸೇನೆಯನ್ನು ಏಕತ್ರಿತಗೊಳಿಸಿ ಮೋಹರಾಜನೊಂದಿಗೆ

ಹೋರಾಡುತ್ತಿದ್ದಾರೆ. ಅದರಿಂದ ಒಂದಲ್ಲ ಒಂದುದಿನ ಮೋಹವನ್ನು ಜಯಿಸಿ ಸಮ್ಯಕ್ತ್ವ ರಾಜ್ಯವನ್ನು ಪಡೆದುಕೊಳ್ಳುವರು. ಎಂದರೆ ಅವರ ಸಮ್ಯಕ್ತ್ವವು ಕೆಲವೊಮ್ಮೆ ಇರುತ್ತದೆ, ಕೆಲವೊಮ್ಮೆ ನಷ್ಟವಾಗಿ ಹೋಗುತ್ತದೆ. ಇಂಥ ನಿಮಿತ್ತಗಳು ಯಾರಿಗೆ ಇರುತ್ತವೆ ಆ ಮುನಿಗಳು ಪಾತ್ರರೆಂದೇ ತಿಳಿಯುವುದು. ಇನ್ನು ಯಾವನೋ ಜೀವನು ಕರ್ಮಯೋಗದಿಂದ - ಚಾರಿತ್ರ ಮೋಹದ ಮಂದತೆಯಿಂದ ಚಾರಿತ್ರವನ್ನಂತೂ ಧಾರಣ ಮಾಡಿದ್ದಾನೆ; ಆದರೆ ಅವನು ಒಂದುವೇಳೆ ಅಭವ್ಯನಿದ್ದರೆ ಅಥವಾ ದೂರಾನುದೂರ ಭವ್ಯ ಇಲ್ಲವೇ ಅಭವ್ಯರಾಶಿಯ ಸಮಾನನಿದ್ದರೆ ಅಂಥ ಮಿಥ್ಯಾದೃಷ್ಟಿಯಧಾರಕ ಮುನಿಯನ್ನು ಕುಪಾತ್ರನೆಂದೇ ತಿಳಿಯುವುದು. ಆದರೆ ಅಂಥ ಮುನಿಗಳು ಕೋಟಿಗೆ ಒಬ್ಬರು ಅಥವಾ ಇಬ್ಬರು ಕೂಡ ಇರುವುದಿಲ್ಲ. ಅಂಥವರನ್ನು ಇಲ್ಲಿ ಕುಪಾತ್ರರೆನ್ನಲಾಗಿದೆ.

ಯಾವ ಮುನಿರಾಜರು ಚಾರಿತ್ರ, ಮೂಲಗುಣಗಳ ಧಾರಕರಿದ್ದಾರೆ; ಆದರೆ ಅಂತರಂಗದಲ್ಲಿ ಕಷಾಯಗಳ ಯೋಗದಿಂದ ಅವರ ಮೂಲಗುಣಗಳು ದೂಷಿತವಿವೆ, ಆ ಮುನಿಗಳು ತಮ್ಮ ಮಾಯಾಚಾರದಿಂದ ತಮ್ಮ ದೋಷಗಳನ್ನು ಪ್ರಗಟ ಪಡಿಸುವುದಿಲ್ಲ, ಬಾಹ್ಯದಲ್ಲಿ ಶುದ್ಧ ಮೂಲಗುಣದಿಂದ ಕಂಡುಬರುತ್ತಾರೆ. ಜ್ಞಾನಿಗಳ ಮೂಲಕ ಅಂತರಂಗವು ತಿಳಿದುಬಂದ ಮೇಲೆ ದೋಷಸಹಿತರಿದ್ದಾರೆ - ಹೀಗೆ ಕಷಾಯಭಾರದಿಂದ ಸಹಿತ ಮೂಲಗುಣಗಳಧಾರಕ ಮುನಿಗಳು ಕುಪಾತ್ರರೇ ಇದ್ದಾರೆ. ಇಂಥ ಮಾಯಾಚಾರೀ ಮುನೀಶ್ವರರು ತೀರ ಕಡಿಮೆ ಇರುತ್ತಾರೆ. ಯಾರೋ ಕೋಟ್ಯಂತರ ಶತಕೋಟ್ಯಂತರದಲ್ಲಿ ಯಾರೋ ಒಬ್ಬರು ಇದ್ದರೆ ಇರಬಹುದು ಇಲ್ಲದಿದ್ದರೆ ಇರಲಿಕ್ಕಿಲ್ಲ ಅಂಥ ಮುನಿಗಳು ಕುಪಾತ್ರರಿದ್ದಾರೆ. ಯಾವನೋ ದಾತೃವಿನ ಅಶುಭ ಕರ್ಮದಿಂದ ಅಂಥ ಮುನಿಗೆ ದಾನದ ನಿಮಿತ್ತವು ಸಂಭವಿಸಬಹುದಾಗಿದೆ ಮತ್ತು ಅದರ ಫಲವು ಕುಭೋಗಭೂಮಿಯಿದೆ. ವಾಸ್ತವಿಕ ಮುನಿಗೆ ದಾನ ಕೊಡುವ ಫಲವು ಮುಗ್ಧ ಮಿಥ್ಯಾದೃಷ್ಟಿ ಜೀವಗಳು ಮತ್ತು ಪಶುಗಳಿಗೆ ಸುಭೋಗಭೂಮಿಯಿದೆ. ಸಮ್ಯಗ್ದೃಷ್ಟಿಗಳಿಗೆ ಅಂಥ ಯಥಾರ್ಥ ಮುನಿಗೆ ದಾನಕೊಡುವುದರ ಫಲವು ಸ್ವರ್ಗ, ಮೋಕ್ಷಗಳ ಪ್ರಾಪ್ತಿಯೇ ಇದೆ. ಈ ಪ್ರಕಾರ ನಿಮ್ಮ ಸಂದೇಹದ ಸಮಾಧಾನವೆಂದು ತಿಳಿದುಕೊಂಡು 'ಯಾವಾಗಲೂ ಸುಪಾತ್ರರಿಗೆ ದಾನ ಕೊಡುವ ಬುದ್ಧಿಯನ್ನು ಇಟ್ಟುಕೊಳ್ಳುವುದು, ಅನುಮೋದನೆ ಕೊಡುವುದು - ಇವೆಲ್ಲವೂ ಉತ್ತಮ ಫಲಕೊಡುವಂಥವೆಂದು ತಿಳಿಯುವುದು. ಕುಪಾತ್ರದ ನಿಮಿತ್ತವಂತೂ ಎಂದಾದರೂ ತಪ್ಪಿ ಅಶುಭ ಕರ್ಮೋದಯದಿಂದ ಆದರೆ ಆಗಬಹುದಾಗಿದೆ ಇಲ್ಲದ್ದಿದರೆ ಯಾವಾಗಲೂ ಸುಪಾತ್ರಗಳ ನಿಮಿತ್ತವಿರುತ್ತದೆಯೆಂದು ತಿಳಿಯಬೇಕು.

ಹೇಗೆಂದರೆ - ದೇಶಾಂತರಗಳಲ್ಲಿ ಸುತ್ತಿ ವ್ಯಾಪಾರ ಮಾಡುವಂಥ ವ್ಯಾಪಾರಿಗಳೊಳಗಿಂದ ದ್ವೀಪಾಂತರಗಳಲ್ಲಿ ಹೋಗಿ ಅನೇಕ ಕಷ್ಟಗಳನ್ನು ಸಹಿಸಿ ಬಹಳಷ್ಟು ಧನ ಸಂಪಾದನೆ ಮಾಡಿ ಮನೆಗೆ ತಂದು ಸುಖಿಯಾಗಿರುವ ನಿಮಿತ್ತಗಳಂತೂ ಅನೇಕವಿವೆ, ಇದರ ಉದಾಹರಣೆಗಳು ಅನೇಕವಿವೆ. ಆದರೆ ದೇಶಾಂತರದಲ್ಲಿ ಕಳೆದುಕೊಂಡಿರುವ, ನೌಕೆಯು ಮುಳುಗಿ ಹೋಗುವ ನಿಮಿತ್ತವಂತೂ ಎಂದಾದರೂ ಕರ್ಮೋದಯದಿಂದ ಸಂಭವಿಸುತ್ತದೆ. ಗಳಿಸಿ ತರುವಂಥವರು ಬಹುಜನರಿದ್ದಾರೆ; ಅದೇ ಪ್ರಕಾರ ಕುಪಾತ್ರರ ನಿಮಿತ್ತವು ಅಲ್ಪವಿದೆ, ಸುಪಾತ್ರರ ನಿಮಿತ್ತವೇ ಅಧಿಕವಿವೆ. ದಾರಿಯಲ್ಲಿ ಸುಲಿಗೆಯಾಗುವಂಥವರ ಸಮಾನ ಎಂದಾದರೂ ತಪ್ಪಿ ಕುಪಾತ್ರದಾನದ ನಿಮಿತ್ತವು ದೊರಕಿದರೆ ಅದರ ಫಲವು ಕುಭೋಗ ಭೂಮಿಯ ಪ್ರಾಪ್ತಿಯೆಂದು ತಿಳಿಯುವುದು.

ಅಲ್ಲಿ ಕುಭೋಗ ಭೂಮಿಯಲ್ಲಿ ಶರೀರದ ಶೇಷ ಆಕಾರವಂತೂ ಮನುಷ್ಯನದಿರುತ್ತದೆ; ಆದರೆ ಮುಖವು ಪಶುಗಳದಿರುತ್ತದೆ. ಅದರಲ್ಲಿ ಕೆಲವರದು ಸಿಂಹದಂಥ ಮುಖ, ಕೆಲವರದು ಆನೆಯಂಥ ಮುಖ, ಕೆಲವರದು ಸೂಕರದಂಥ ಮುಖ, ಕೆಲವರದು ಕುದುರೆಯಂಥ ಮುಖ, ಕೆಲವರದು ಒಂಟೆಯಂಥ ಮುಖ, ಕೆಲವರದು ನವಿಲಿನಂಥ ಮುಖ, ಕೆಲವರ ಕಿವಿಗಳು ದೀರ್ಘವಾಗಿರುತ್ತವೆ ಇತ್ಯಾದಿ ಆಕಾರ ತಿಳಿಯುವುದು. ಅವರಲ್ಲಿ

ಕೆಲವರಂತೂ ಭೂಮಿಯ ಒಳಗೆ ಬಿಲದಲ್ಲಿ ವಾಸ ಮಾಡುತ್ತಾರೆ, ಕೆಲವರು ವೃಕ್ಷಗಳ ಪೊಟರೆಗಳಲ್ಲಿ ವಾಸಿಸುತ್ತಾರೆ. ಅಲ್ಲಿಯ ಭೂಮಿ ಮಣ್ಣಿನ ಸ್ವಾದವು ಅಮೃತದ ಸಮಾನವಿರುತ್ತದೆ, ಅದನ್ನು ಅವರು ತಿನ್ನುತ್ತಾರೆ. ಅವರ ಆಯುಷ್ಯವು ಒಂದು ಪಲ್ಯೋಪಮವಿರುತ್ತದೆ ಮತ್ತು ಶರೀರದ ಎತ್ತರವು ಒಂದು ಹರದಾರಿಯದಿರುತ್ತದೆ. - ಇದೆಲ್ಲವು ಕುಪಾತ್ರದಾನದ ಫಲವಿದೆ. ಸುಪಾತ್ರ ದಾನದ ಫಲವು ಸ್ವರ್ಗ-ಮೋಕ್ಷವಿದೆ ಅಥವಾ ಮೂರು ಪಲ್ಯ, ಎರಡು ಪಲ್ಯ, ಒಂದು ಪಲ್ಯೋಪಮ ಆಯುವಿರುವ ಸುಭೋಗ ಭೂಮಿಗಳಿವೆ.

ಈ ಪ್ರಕಾರ ಇಲ್ಲಿ ಹೇಳಲಾಗಿರುವ ಅಪಾತ್ರ-ಕುಪಾತ್ರಗಳಂತೂ ವಿವೇಕವಂತರಿಗೆ ಹೇಯವಿವೆ. ಉಳಿದ ಒಂಭತ್ತು ಪ್ರಕಾರದ ಸುಪಾತ್ರಗಳು ಉಪಾದೇಯವಿವೆ ಅವು ಯಥಾಯೋಗ್ಯ ಆದರಿಸಲು ಪ್ರಶಂಸೆ ಮಾಡಲು ಯೋಗ್ಯವಿವೆ.

**ಪೂಜೆಯಲ್ಲಿ ಜ್ಞೇಯ-ಹೇಯ-ಉಪಾದೇಯ ಃ-** ಸುಪೂಜೆ ಮತ್ತು ಕುಪೂಜೆಯೆಂದು ಇದರಲ್ಲಿ ಎರಡು ಭೇದಗಳಿವೆ. ಸುಪೂಜೆ-ಕುಪೂಜೆಗಳ ಸಂಪೂರ್ಣ ತಿಳಿವಳಿಕೆಯು ಜ್ಞೇಯವಿದೆ. ಇವನು ನನ್ನ ಭಕ್ತನಿದ್ದಾನೆ, ಹಗಲಿರುಳೂ ನನ್ನ ಆರಾಧನೆ ಮಾಡುತ್ತಾನೆ ಆದುದರಿಂದ ನಾನು ಇವನಿಂದ ಪ್ರಸನ್ನನಾಗಿ ಇವನನ್ನು ಸುಖಿಯನ್ನಾಗಿಸುವೆ - ಇಂಥ ವಿಚಾರದ ಹೆಸರು ರಾಗಭಾವವಿದೆ ಮತ್ತು ಯಾರು ತಮ್ಮನ್ನು ಪೂಜಿಸುವುದಿಲ್ಲ, ತಮ್ಮ ವಿನಯ ಮಾಡುವುದಿಲ್ಲ, ಪ್ರಶಂಸೆ ಮಾಡುವುದಿಲ್ಲ ಪ್ರತಿಯಾಗಿ ನಿಂದೆ ಮಾಡುತ್ತಾರೆ ಅವರ ಕುರಿತಾಗಿ ದ್ವೇಷಭಾವ ಮಾಡಿ ಅವರನ್ನು ಸಾಯಿಸುವ ಸಲುವಾಗಿ ರೋಗಿಗಳನ್ನಾಗಿಸುವುದು ಇತ್ಯಾದಿ ದುಃಖ ಕೊಡುವ ಉಪಾಯ ಮಾಡುತ್ತಾರೆ ಅದನ್ನು ದ್ವೇಷ ಭಾವವೆಂದು ತಿಳಿಯುವುದು - ಈ ಪ್ರಕಾರದ ರಾಗ-ದ್ವೇಷಗಳು ಯಾರಲ್ಲಿ ಇರುವುದಿಲ್ಲ ಅವರಿಗೆ ತಮ್ಮ ಉಪಾಸಕರ ಕುರಿತು ರಾಗವಿಲ್ಲ ಮತ್ತು ನಿಂದಕರ ಕುರಿತು ದ್ವೇಷವಿಲ್ಲ ಅವರು ವೀತರಾಗ, ಸಮತೆಯ ಸುಖಸಾಗರದಲ್ಲಿ ವಾಸಮಾಡುವಂಥ ಪರಮ ಪವಿತ್ರ ದೇವರಿದ್ದಾರೆ, ಅವರ ಸೇವೆ, ಪೂಜೆ, ವಂದನೆಯು ಸುಪೂಜೆಯಿದೆ.

ಲೋಕ-ಅಲೋಕಗಳನ್ನು ತಿಳಿಯುವಂಥವರೂ, ಈ ಮೂರು ಲೋಕದಲ್ಲಿ ಯಾವೆಲ್ಲ ಜೀವ-ಅಜೀವ ಪದಾರ್ಥಗಳಿವೆ, ಅವು ಪ್ರತಿಸಮಯ ಹೇಗೆ-ಹೇಗೆ ಪರಿಣಮಿಸುತ್ತಿವೆ, ಮುಂದೆ ಅನಂತ ಕಾಲದಲ್ಲಿ ಹೇಗೆ ಪರಿಣಮಿಸುವಂಥವಿವೆ, ಭೂತಕಾಲದಲ್ಲಿ ಹೇಗೆ ಪರಿಣಮಿಸಿದ್ದವು; ಹೀಗೆ ಮೂರು ಕಾಲ, ಮೂರುಕಾಲವರ್ತೀ, ಅನಂತ ಜೀವಗಳು ಯಾವ ಯಾವ ಭಾವ-ವಿಕಲ್ಪರೂಪದಿಂದ ಪರಿಣಮಿಸುತ್ತಲಿವೆ-ಎಂಬುದಾಗಿ ಎಲ್ಲವನ್ನೂ ಯಾರು ತಿಳಿಯುತ್ತಾರೆ - ಆ ಅಂತರ್ಯಾಮಿ, ಅನಂತಗುಣಭಂಡಾರಿ, ಸರ್ವಜ್ಞಭಗವಂತರ ಪೂಜೆಯೇ ಸುಪೂಜೆಯಿದೆ. ಇಂಥ ವೀತರಾಗ ಸರ್ವಜ್ಞ ಪ್ರಭುಗಳಿಗೆ ಪುನಃ ಪುನಃ ನಮನವಿರಲಿ.

ಸುಧರ್ಮಪೂಜೆ-ಸರ್ವಜ್ಞ, ವೀತರಾಗರ ವಚನವೇ ಶುಭಧರ್ಮ(ಸುಶಾಸ್ತ್ರ)ವಿದೆ. ಸರ್ವಜ್ಞತ್ವದಿಂದ ಯಾವುದೂ ಮರೆಯಾಗಿಲ್ಲ. ವೀತರಾಗಭಾವದಿಂದ ಯಾವುದು ಹೇಗೆ ಕಂಡುಬಂದಿದೆ, ತಿಳಿದುಬಂದಿದೆ ಅದನ್ನು ಹಾಗೆಯೇ ಹೇಳಿದ್ದಾರೆ, ಬೇರೆ ಪ್ರಕಾರದಿಂದ ಹೇಳಿಲ್ಲ-ಹೇಳುವುದಿಲ್ಲ; ಅದರಿಂದ ಈ ಭಗವಂತರ ವಚನಗಳೇ ಪ್ರಾಮಾಣಿಕವಿವೆ. ಇವರ ಮೂಲಕ ಪ್ರರೂಪಿಸಲ್ಪಟ್ಟ ವಚನಗಳ ಹೆಸರೇ ಶುದ್ಧ ಮಾರ್ಗರೂಪ ನಿಜವಾದ ಧರ್ಮವಿದೆ. ಇದೇ ಧರ್ಮವು ಯಥಾರ್ಥ ಸತ್ಯವಿದೆ. ಈ ಧರ್ಮದಲ್ಲಿ ಹೇಳಲಾಗಿರುವ ಪದಾರ್ಥಗಳೇ ಪ್ರಮಾಣವಿವೆ. ಈ ಧರ್ಮವೇ ಪೂಜಿಸಲು ಯೋಗ್ಯವಿದೆ ಉಪಾದೇಯವಿದೆ.

ಇದೇ ಜಿನಧರ್ಮದ ಅನುಸಾರ ದೀಕ್ಷೆಯ ಧಾರಕರಾದ ದಿಗಂಬರ, ವೀತರಾಗ, ಇಂದ್ರಿಯಗಳ ಸುಖದಿಂದ ವಿರಕ್ತ, ಆತ್ಮರಸದ ಆಸ್ವಾದಿಗಳು, ತಪಸ್ವೀ, ನಗ್ನದೇಹಧಾರಿ, ಷಟ್ಕಾಯ ಜೀವಗಳ ರಕ್ಷಕರು, ನಿಷ್ಕಾರಣ-ನಿಃಸ್ವಾರ್ಥಭಾವದಿಂದಲೇ ಜಗದ್ಬಂಧು, ಮೋಕ್ಷಾಭಿಲಾಷಿ, ಅನ್ಯರ ಹಿತವನ್ನು ಬಯಸುವಂಥ ಗುರುಗಳೇ

ಪೂಜ್ಯರಿದ್ದಾರೆ-ಉಪಾದೇಯರಿದ್ದಾರೆ ಈ ಪ್ರಕಾರ ಹೇಳಲಾದ ದೇವ-ಧರ್ಮ-ಗುರುಗಳ ಪೂಜೆಯು ಸುಪೂಜೆಯಿದೆ ಸಮ್ಯಗ್ದೃಷ್ಟಿಗಳಿಗೆ ಉಪಾದೇಯವಿದೆ.

ಕುಪೂಜೆ-ಮೇಲೆ ಹೇಳಲಾಗಿರುವ ದೇವ, ಧರ್ಮ, ಗುರುಗಳ ಸ್ವರೂಪದಿಂದ ವಿಪರೀತ, ಯಾರು ತಮ್ಮ ಸೇವೆ, ಪೂಜೆ, ಪ್ರಶಂಸೆ ಮಾಡುವಂಥವರಿಂದ ಸಂತುಷ್ಟರಾಗುತ್ತಾರೆ; ಅವರಿಗೆ ಧನದ ಲೋಭ ತೋರಿಸುತ್ತಾರೆ ಮತ್ತು ಯಾರು ತಮ್ಮ ಸೇವೆ, ಉಪಾಸನೆ, ಶುಶ್ರೂಷೆ ಮಾಡುವುದಿಲ್ಲ ಅವರನ್ನು ತಮ್ಮ ಭಕ್ತಿಯಿಂದ ವಿಮುಖ, ತಮ್ಮ ನಿಂದಕರೆಂದು ತಿಳಿದು ಹೆದರಿಸುವುದು ಹಾಗೂ ನಾನು ಇವನನ್ನು ರೋಗೀ ಮಾಡುವೆನು, ಇವನ ಪುತ್ರ-ಧನಗಳನ್ನು ನಾಶ ಮಾಡುವೆನು ಇವನಿಗೆ ಬಹಳಷ್ಟು ದುಃಖ ಕೊಡುವೆನು - ಈ ಪ್ರಕಾರ ಕೆಲವರಲ್ಲಿ ರಾಗ, ಕೆಲವರಲ್ಲಿ ದ್ವೇಷ ಮಾಡುವಂಥ ದೇವಗಳು ಸರಾಗಿ, ಸಂಸಾರಿಯಿದ್ದಾರೆ, ಹೇಯ(ತ್ಯಾಜ್ಯ)ರಿದ್ದಾರೆ. ಇವರ ಪೂಜೆಯೇ ಕುಪೂಜೆಯಿದೆ. ಯಾರು ಸ್ವಯಂ ತಮ್ಮನ್ನು ದೇವರೆಂದು ಕರೆಯಿಸಿಕೊಳ್ಳುತ್ತಾರೆ ಹಾಗೂ ಕಳೆದು ಹೋದ ಪದಾರ್ಥವನ್ನು ಹುಡುಕುತ್ತ ತಿರುಗುತ್ತಾರೆ, ದೊರಕದಿದ್ದರೆ ಶೋಕ ಮಾಡುತ್ತಾರೆ - ಅಂಥ ಅಜ್ಞಾನೀ ಮೋಹಿ ದೇವಗಳ ಪೂಜೆಯೇ ಕುಪೂಜೆಯಿದೆ. ಬೇರೆಯವರನ್ನು ಸಾಯಿಸುವ ಸಲುವಾಗಿ ಕೆಲಕಾಲ ವಿಕರಾಳ ರೂಪ ಧಾರಣ ಮಾಡಿ ಸುಭಟನಂತೆ ಕಂಡುಬರುತ್ತಾರೆ; ಅವರ ಆಕೃತಿಯನ್ನು ನೋಡಿ ಜೀವಗಳಿಗೆ ಭಯವಾಗುತ್ತದೆ. ಅಂಥ ಭಯಾನಕ ದೇವಗಳ ಪೂಜೆ ಮಾಡುವುದು ಕುಪೂಜೆಯಿದೆ. ಯಾವ ಸರಾಗೀ ದೇವಗಳ ಆಕೃತಿಯನ್ನು ನೋಡುವುದರಿಂದ ಅವರ ಭಕ್ತರಿಗೆ, ಜಗತ್ತಿನ ಜೀವರುಗಳಿಗೆ ಕಾಮವಿಕಾರವು ಉತ್ಪನ್ನವಾಗುತ್ತದೆ, ಸರಾಗತೆಯು ವೃದ್ಧಿಸುತ್ತದೆ, ಸ್ತ್ರೀ ಸಂಗಮ ಮೊದಲಾದ ಅನೇಕ ಇಂದ್ರಿಯ ಭೋಗಗಳು ಸ್ಮರಣೆಗೆ ಬರುತ್ತವೆ ಅಂಥ ವಿಕಾರೀ ದೇವಗಳ ಪೂಜೆಯೇ ಕುಪೂಜೆಯಿದೆ.

ಇವರೇ ಕುದೇವ ಸರಾಗಿಗಳ ಮೂಲಕ ಉಪದೇಶಿಸಲಾದ ಶಾಸ್ತ್ರಗಳು ಚಮತ್ಕಾರರೂಪ ಪಾಶದ ಧಾರಕವಿರುವ ಹಿಂಸೆ ಆರಂಭದ ಪ್ರರೂಪಕ ಶಾಸ್ತ್ರಗಳಿವೆ. ಅವನ್ನು ಆಲಿಸುವುದರಿಂದ ಇಂದ್ರಿಯ ಭೋಗಗಳ ಅಭಿಲಾಷೆಯರೂಪದ ಅಗ್ನಿಯು ಪ್ರಗಟವಾಗುತ್ತದೆ. ಶ್ರೋತೃಗಳ ಮನಸ್ಸು ಸ್ತ್ರೀಯರ ಭೋಗರೂಪವಾಗುತ್ತದೆ. ಇಂಥ ವಿಕಾರಭಾವವನ್ನು ಉತ್ಪನ್ನ ಮಾಡುವಂಥ ಕಥನವು ಯಾವ ಶಾಸ್ತ್ರಗಳಲ್ಲಿ ಇರುತ್ತದೆ; ಆ ಶಾಸ್ತ್ರಗಳ ಪೂಜೆಯು ಶಾಸ್ತ್ರ ಕುಪೂಜೆಯಿದೆ.

ಕ್ರೋಧ, ಮಾನ, ಮಾಯೆ, ಲೋಭಸಹಿತ ಪರಿಗ್ರಹೀ ಗೃಹಸ್ಥರ ಸಮಾನ, ಪಾಪಾರಂಭಿ, ಕುಶೀಲ, ಅಸಂಯಮಧಾರಕ, ತನ್ನ ಮಹಿಮೆ, ಪ್ರಶಂಸೆ, ಸತ್ಕಾರ ಪೂಜೆಯವಾಂಛಕ, ಅನೇಕ ವೇಷಧಾರಣ ಮಾಡುವಂಥ; ಮಂತ್ರ, ತಂತ್ರ, ಜಂತ್ರಗಳ ಚಮತ್ಕಾರ ತೋರಿಸಿ ಮುಗ್ಧ ಜೀವರುಗಳಿಂದ ತಮ್ಮ ಗುರುಪದ ಮನ್ನಿಸಹಚ್ಚುತ್ತಾರೆ. ಜ್ಯೋತಿಷ, ವೈದ್ಯಕೀಯ ಮೊದಲಾದ ವಿದ್ಯೆಗಳಿಂದ ದೊರೆಗಳನ್ನು ಪ್ರಸನ್ನಪಡಿಸುವ ಅಭಿಲಾಷೆಯನ್ನಿಟ್ಟು ಕೊಳ್ಳುವಂಥ, ಯಾಚನಾವ್ರತದೊಂದಿಗೆ ವಿಷಯಾಭಿಲಾಷಿ, ಮೋಹಿ, ಗೃಹತ್ಯಾಗ ಮಾಡಿದ ನಂತರವೂ ಲೌಕಿಕ ಗೃಹಸ್ಥರ ಹಾಗೆ ವಿವಾಹ-ಮದುವೆ ಮೊದಲಾದ ಸಂಬಂಧಗಳಲ್ಲಿ ಬುದ್ಧಿಯನ್ನಿಟ್ಟುಕೊಂಡಿರುತ್ತಾರೆ - ಇತ್ಯಾದಿ ಕುಚಾರಸಹಿತರಾಗಿದ್ದರೂ ತಮ್ಮನ್ನು ಗುರುವೆಂದು ಮನ್ನಿಸ ಹಚ್ಚುತ್ತಾರೆ-ಪೂಜಿಸಿಕೊಳ್ಳುತ್ತಾರೆ. ಇಂಥ ಗುರುಗಳ ಪೂಜೆ ಮಾಡುವುದು ಅದು ಗುರು ಕುಪೂಜೆಯಿದೆ. ಏಕೇಂದ್ರಿಯ ಹುಲ್ಲು-ವೃಕ್ಷಗಳ ಪೂಜೆ ಮಾಡುವುದು, ಭೂಮಿಪೂಜೆ, ಅಗ್ನಿಪೂಜೆ, ಜಲಪೂಜೆ, ಅನ್ನಪೂಜೆ ಇವೆಲ್ಲವೂ ಕುಪೂಜೆಗಳಿವೆಯೆಂದು ತಿಳಿಯುವುದು.

**ಸಂದೇಹ** - ಇವೆಲ್ಲವುಗಳಲ್ಲಂತೂ ದೇವತ್ವಭಾವವು ಪ್ರಗಟರೂಪದಿಂದ ಕಂಡುಬರುತ್ತದೆಯೆಂದ ಮೇಲೆ ತಾವು ಇವುಗಳ ಪೂಜೆಯ ನಿಷೇಧವನ್ನೇಕೆ ಮಾಡುತ್ತೀರಿ ? ನೋಡಿರಿ, ಅನ್ನ-ಜಲಗಳಂತೂ ಜಗತ್ತಿನ ಜೀವರುಗಳ ಆಧಾರವಿವೆ, ಇವು ಇಲ್ಲದೇ ಪ್ರಾಣವು ಉಳಿಯುವುದಿಲ್ಲ, ಅದರಿಂದ ಎಲ್ಲರ ರಕ್ಷಕ ದೇವವೆಂದು ತಿಳಿದು ಪೂಜಿಸುವುದು ಯೋಗ್ಯವಾಗಿಯೇ ಕಂಡು ಬರುತ್ತದೆ. ಇನ್ನು ಅಗ್ನಿಯಿಂದ ಅನೇಕ ಕಾರ್ಯಗಳ ಸಿದ್ಧಿಯಾಗುತ್ತವೆ.

ಅನ್ನಾದಿಗಳ ಬೇಯುವಿಕೆ ಇದರಿಂದಲೇ ಆಗುತ್ತದೆ ಹಾಗೂ ಇತರ ಅನ್ಯ ಅನೇಕ ಅಲೌಕಿಕ ಕಾರ್ಯಗಳೂ ಇದರಿಂದಲೇ ಆಗುತ್ತಿರುವುದು ಕಂಡು ಬರುತ್ತದೆ. ಅದರಿಂದ ಇದರಲ್ಲಿಯೂ ದೇವತ್ವತನವು ಭಾಸಿತವಾಗುತ್ತದೆ. ವನಸ್ಪತಿರೂಪದ ವೃಕ್ಷಾದಿಗಳಂತೂ ಎಲ್ಲ ಜೀವಗಳ ರಕ್ಷಣೆ, ಸುಖರೂಪವಿರುವ ಛಾಯೆ ನೀಡುತ್ತವೆ. ಭೂಮಿ(ಪೃಥ್ವಿ)ಯಂತೂ ಪ್ರತ್ಯಕ್ಷ ಧೀರತೆಯೊಂದಿಗೆ ಇಡೀ ಜಗತ್ತಿನ ಭಾರವನ್ನು ಸಹಿಸುತ್ತದೆ. ಕೆಲವರು ಭೂಮಿಯನ್ನು ಅಗೆಯುತ್ತಾರೆ, ಕೆಲವರು ಇದರ ಮೇಲೆ ಅಗ್ನಿ ಹೊತ್ತಿಸುತ್ತಾರೆ, ಕೆಲವರು ಕಸ-ಮುಸುರೆಗಳನ್ನು ಹಾಕುತ್ತಾರೆ, ಮಲ-ಮೂತ್ರಾದಿಗಳನ್ನು ಹಾಕುತ್ತಾರೆ - ಇತ್ಯಾದಿರೂಪದಿಂದ ಜಗತ್ತಿನ ಜೀವಗಳು ಇದರ ಕುರಿತಾಗಿ ಉಪದ್ರವವೆಸಗುತ್ತಾರೆ; ಆದರೆ ಭೂಮಿಯು ಯಾರೊಂದಿಗೂ ದ್ವೇಷ ಮಾಡುವುದಿಲ್ಲ. ಹೀಗೆ ವೀತರಾಗ ದಶೆಯ ಧಾರಕವಿರುವುದರಿಂದ ಪ್ರತ್ಯಕ್ಷ ದೇವವೆಂದು ತಿಳಿದುಕೊಂಡು ನಾವು ಪೂಜೆ ಮಾಡುತ್ತೇವೆ.

**ಸಮಾಧಾನ -** ಎಲೈ ಮುಗ್ಧನೇ ! ಸರಳ ಪರಿಣಾಮಿಯೇ ಆಲಿಸು ! ಎಲೈ ಭವ್ಯನೇ ! ಮನಸ್ಸನ್ನು ತೊಡಗಿಸಿ ಧಾರಣ ಮಾಡುವುದು - ಯಾವ ಪದಾರ್ಥಗಳು ಜಗತ್ತಿನಲ್ಲಿ ಪೂಜ್ಯವಿವೆ, ದೊಡ್ಡವಿವೆ, ಶ್ರೇಷ್ಠವಿವೆ ಅವುಗಳ ಅವಿನಯವನ್ನು ಯಾರಾದರೂ ಮಾಡಿದರೂ ಕೂಡ ಆಗುವುದಿಲ್ಲ. ಈ ಲೌಕಿಕ ಪ್ರವೃತ್ತಿಯು ಅನಾದಿಕಾಲದಿಂದ ಮೂರು ಲೋಕದಲ್ಲಿ ನಡೆಯುತ್ತ ಬರುತ್ತಲಿದೆ. ಯಾರು ಪೂಜ್ಯರಿದ್ದಾರೆ, ಅವರ ಅವಿನಯ ಮಾಡುವಂಥವರು ಪಾಪಿಗಳಿದ್ದಾರೆ. ಅದರಿಂದ ಎಲೈ ಸೋದರನೇ ! ಅನ್ನ ಹಾಗೂ ವನಸ್ಪತಿಗಳ ಭಕ್ಷಣೆಯನ್ನಂತೂ ಎಲ್ಲರೂ ಮಾಡುತ್ತಾರೆ, ಜಲವನ್ನು ಕುಡಿಯುತ್ತಾರೆ, ಎಸೆಯುತ್ತಾರೆ, ಕೈ-ಕಾಲುಗಳಿಂದ ಸರಿಸುತ್ತಾರೆ; ಕೆಲವರು ಧಾನ್ಯ ಬೀಸುತ್ತಾರೆ, ವನಸ್ಪತಿಗಳನ್ನು ಕತ್ತರಿಸುತ್ತಾರೆ. ಇತ್ಯಾದಿ ಕ್ರಿಯೆಗಳಾದ ಮೇಲೆ ವಿನಯವಿರುವುದಿಲ್ಲ ಹಾಗಿದ್ದ ಮೇಲೆ ಪೂಜ್ಯಪದವು ಹೇಗೆ ಸಂಭವಿಸುತ್ತದೆ. ಅಗ್ನಿಯನ್ನು ಉರಿಸುವ, ನಂದಿಸುವ, ದಬ್ಬುವ, ಕೈ-ಕಾಲುಗಳಿಂದ ಹೊಸೆದು ಹಾಕುವ-ಇತ್ಯಾದಿರೂಪದಿಂದ ಅವಿನಯವಾಗುತ್ತದೆ. ಎಲ್ಲಕ್ಕಿಂತ ಹೀನ ಮನುಷ್ಯನು ಕೂಡ ಇವುಗಳ ಅವಿನಯರೂಪ ಪರಿಣಮಿಸುತ್ತಾನೆ. ಎಂದರೆ ಇವುಗಳಲ್ಲಿ ದೇವತ್ವಭಾವವಿರುವುದಿಲ್ಲ; ಇವೆಲ್ಲ ಕರ್ಮ ಯೋಗದಿಂದ ಏಕೇಂದ್ರಿಯವಾಗಿವೆ, ಪೂರ್ವಕೃತ ಪಾಪದ ಫಲ ಭೋಗಿಸುತ್ತಿವೆ, ಮಹಾ ಅವಿನಯ, ಅನಾದರಕ್ಕೆ ಪಾತ್ರವಾಗಿವೆ. ಅದರಿಂದ ಎಲೈ ಭವ್ಯನೇ ! ಅವಿನಯದ ಸ್ಥಾನಭೂತ ವಸ್ತುಗಳು ಪೂಜ್ಯವಿರುವುದಿಲ್ಲವೆಂಬುದನ್ನು ತಿಳಿದುಕೊ. ಆದುದರಿಂದ ಇವುಗಳ ಪೂಜೆಯು ಕುಪೂಜೆಯಿದೆ. ಇತ್ಯಾದಿ ಪ್ರಕಾರದಿಂದ ಮೇಲೆ ಹೇಳಲಾದ ಸ್ಥಾನಗಳನ್ನು ಸಮ್ಯಕ್ತ್ವಭಾವದಿಂದ ಹೇಯವೆನ್ನಲಾಗಿದೆ.

ಈ ಪ್ರಕಾರ ಶ್ರೀ ಸುದೃಷ್ಟಿತರಂಗಿಣಿಯೆಂಬ ಹೆಸರಿನ ಗ್ರಂಥದಲ್ಲಿ ವ್ರತ, ದಾನ, ಪಾತ್ರ,
ಪೂಜೆಯರೂಪ ಧರ್ಮದ ಅಂಗಗಳಲ್ಲಿ ಜ್ಞೇಯ, ಹೇಯ, ಉಪಾದೇಯಗಳ
ವರ್ಣನೆ ಮಾಡುವಂಥ ಹದಿನಾಲ್ಕನೆಯ ಪರ್ವವು ಪೂರ್ಣವಾಯಿತು.

★★★★★

■ ಶರೀರದ ರೋಗಗಳನ್ನು ನಾಶ ಮಾಡುವುದು ಧರ್ಮದ ಕಾರ್ಯವಲ್ಲ. ಪೂರ್ವದ ಪುಣ್ಯವಿದ್ದರೆ ಶರೀರವು ನಿರೋಗಿ ಇರುತ್ತದೆ. ಧರ್ಮದ ಫಲದಿಂದ ಶರೀರದ ರೋಗವು ನಾಶವಾಗುತ್ತದೆ - ಎಂದು ಮನ್ನಿಸುವಂಥವನು ಧರ್ಮದ ಸ್ವರೂಪವನ್ನು ತಿಳಿದೇ ಇಲ್ಲ. ಪುಣ್ಯವು ಶುಭ ಪರಿಣಾಮಗಳಿಂದ ಆಗುತ್ತದೆ ಮತ್ತು ಧರ್ಮವು ಆತ್ಮನ ಶುದ್ಧ ಸ್ವಭಾವವು ಪ್ರಗಟವಾಗುವುದರಿಂದ ಆಗುತ್ತದೆ ?

## ೧೫ : ಹದಿನೈದನೆಯ ಪರ್ವ
## ತೀರ್ಥದಲ್ಲಿ ಜ್ಞೇಯ, ಹೇಯ, ಉಪಾದೇಯ

ತೀರ್ಥದಲ್ಲಿ ಜ್ಞೇಯ, ಹೇಯ, ಉಪಾದೇಯ - ಸುತೀರ್ಥ-ಕುತೀರ್ಥಗಳ ಸಂಬಂಧದಲ್ಲಿ ಸಂಪೂರ್ಣ ತಿಳಿವಳಿಕೆಯು ಜ್ಞೇಯವಿದೆ. ಇದರಲ್ಲಿ ೧) ಸುತೀರ್ಥ, ೨) ಕುತೀರ್ಥವೆಂದು ಎರಡು ಭೇದಗಳಿವೆ.

**೧) ಸುತೀರ್ಥ -** ಎರಡೂವರೆ ದ್ವೀಪ ಪ್ರಮಾಣ ನಲವತ್ತೈದು ಲಕ್ಷ ಯೋಜನ ವಿಸ್ತಾರವುಳ್ಳ ಲೋಕದ ಶಿಖರ ರೂಪ ಸಿದ್ಧಲೋಕವು ಶುದ್ಧತೀರ್ಥವಿದೆ. ಸಿದ್ಧಾತ್ಮರುಗಳ ಅಸಂಖ್ಯಾತ ಪ್ರದೇಶಗಳಿಂದ ವ್ಯಾಪ್ತವಾದ ಸಿದ್ಧಕ್ಷೇತ್ರವು ಪೂಜಿಸಲು ಯೋಗ್ಯವಿದೆ, ಇದುವೇ ಶುದ್ಧ ತೀರ್ಥವಿದೆ. ಎಲ್ಲಿಂದ ಯತೀಶ್ವರರು ಶುದ್ಧೋಪಯೋಗದಿಂದ ಅಷ್ಟಕರ್ಮಗಳ ಕ್ಷಯಮಾಡಿ ಸಿದ್ಧಪದ ಪ್ರಾಪ್ತ ಮಾಡಿಕೊಳ್ಳುತ್ತಾರೆ. ಅವು ಸುತೀರ್ಥಗಳಿವೆ. ಹೇಗೆ ವರ್ತಮಾನದಲ್ಲಿ ಸಮ್ಮೇದ ಶಿಖರದಿಂದ ಇಪ್ಪತ್ತು ತೀರ್ಥಂಕರರು ಮೊದಲಾಗಿ ಅನೇಕ ಮುನಿಗಳು ಸಿದ್ಧರಾಗಿದ್ದಾರೆ; ಅದರಿಂದ ಈ ಸಿದ್ಧಕ್ಷೇತ್ರವು ತೀರ್ಥವಿದೆ. ಗಿರನಾರದಿಂದ ನೇಮಿನಾಥ ತೀರ್ಥಂಕರ ಮೊದಲಾಗಿ ಎಪ್ಪತ್ತೆರಡು ಕೋಟಿ ಏಳು ನೂರು ಮುನಿಗಳು ಕರ್ಮನಾಶ ಮಾಡಿ ಸಿದ್ಧರಾಗಿದ್ದಾರೆ; ಅದರಿಂದ ಈ ಸಿದ್ಧಕ್ಷೇತ್ರವು ತೀರ್ಥವಿದೆ. ಶತ್ರುಂಜಯದಿಂದ ಮೂವರು ಪಾಂಡವರು ಮೊದಲಾಗಿ ಎಂಟು ಕೋಟಿ ಯತೀಶ್ವರರು ಮೋಕ್ಷಕ್ಕೆ ಹೋಗಿರುವುದರಿಂದ ಅದು ತೀರ್ಥವಿದೆ. ಅಷ್ಟಾಪದ(ಕೈಲಾಸಪರ್ವತ)ದಿಂದ ಆದಿದೇವ ಋಷಭನಾಥರು ಮೊದಲಾಗಿ ಅನೇಕ ಋಷಿನಾಥರು ನಿರ್ವಾಣ ಪಡೆದಿದ್ದಾರೆ; ಅದರಿಂದ ಇದು ತೀರ್ಥಸ್ಥಾನವಿದೆ. ಚಂಪಾಪುರದಿಂದ ಹನ್ನೆರಡನೆಯ ತೀರ್ಥಂಕರ ವಾಸುಪೂಜ್ಯ ಮೊದಲಾಗಿ ಅನೇಕ ತಪಸ್ವಿಗಳು ಕರ್ಮನಾಶ ಮಾಡಿ ಮೋಕ್ಷಕ್ಕೆ ಹೋಗಿದ್ದಾರೆ; ಅದರಿಂದ ಇದು ಉತ್ತಮ ತೀರ್ಥವಿದೆ. ಪಾವಾಪುರಿಯಿಂದ ಅಂತಿಮ ತೀರ್ಥಂಕರ ವರ್ಧಮಾನಸ್ವಾಮಿ ಮೊದಲಾಗಿ ಅನೇಕ ಯೋಗೀಶ್ವರರು ಮುಕ್ತಿಪುರ ತಲುಪಿದ್ದಾರೆ; ಅದರಿಂದ ಇದು ಶುಭ ತೀರ್ಥವಿದೆ.

ತಾರಂಗಾದಿಂದ ಮೂರೂವರೆ ಕೋಟಿ ಮುನಿಗಳು ಮೋಕ್ಷಕ್ಕೆ ಹೋಗಿದ್ದಾರೆ; ಅದರಿಂದ ಇದು ಒಳ್ಳೆಯ ತೀರ್ಥವಿದೆ. ಪಾವಾಗಿರಿಯಿಂದ ರಾಮಚಂದ್ರನ ಪುತ್ರ ಮೊದಲಾಗಿ ಐದು ಕೋಟಿ ತಪಸ್ವಿಗಳು ಜನ್ಮ-ಮರಣದಿಂದ ರಹಿತರಾಗಿದ್ದಾರೆ; ಅದರಿಂದ ಇದು ಶುದ್ಧ ತೀರ್ಥವಿದೆ. ಗಜಪಂಥದಿಂದ ಬಲಭದ್ರ ಮೊದಲಾಗಿ ಎಂಟು ಕೋಟಿ ಗುರುಗಳು ಅಮೂರ್ತಿಕ ಪದ ಪಡೆದಿದ್ದಾರೆ; ಅದರಿಂದ ಇದು ಉತ್ಕೃಷ್ಟ ತೀರ್ಥವಿದೆ. ತುಂಗಿ ಗಿರಿಯಿಂದ ರಾಮಚಂದ್ರ , ಹನುಮಂತ, ಸುಗ್ರೀವ ಮೊದಲಾಗಿ ತೊಂಭತ್ತೊಂಭತ್ತು ಕೋಟಿ ಋಷಿರಾಜರು ಭವಸಮುದ್ರದಿಂದ ಪಾರಾಗಿ ಹೋಗಿದ್ದಾರೆ. ಅದರಿಂದ ತುಂಗಿ ಗಿರಿಯು ಉತ್ತಮ ತೀರ್ಥವಿದೆ. ಸೋನಾಗಿರಿಯಿಂದ ಐದೂವರೆಕೋಟಿ ಗುರುಗಳು ಸಿದ್ಧರಾಗಿದ್ದಾರೆ ಅದರಿಂದ ಇದು ಪೂಜ್ಯತೀರ್ಥವಿದೆ.

ರೇವಾನದಿಯ ದಡದಿಂದ ರಾವಣನ ಪುತ್ರ ಮೊದಲಾಗಿ ಐದೂವರೆ ಕೋಟಿ ಯತಿಗಳು ನಿರ್ವಾಣ ಪಡೆದಿದ್ದಾರೆ ಅದರಿಂದ ಇದು ಜಗತ್ಪೂಜ್ಯ ತೀರ್ಥವಿದೆ. ರೇವಾನದಿ ದಡದ ಮೇಲೆ ಸ್ಥಿತವಿರುವ ಸಿದ್ಧವರ ಕೂಟವೆಂಬ ಹೆಸರಿನ ಪರ್ವತದ ಪಶ್ಚಿಮದಿಶೆಯಿಂದ ಇಬ್ಬರು ಚಕ್ರವರ್ತಿಗಳು ಹಾಗೂ ಹತ್ತು ಜನ ಕಾಮದೇವ ಮೊದಲಾಗಿ ಮೂರೂವರೆ ಕೋಟಿ ಮುನಿಗಳು ಸಿದ್ಧಲೋಕ ತಲುಪಿರುವುದರಿಂದ ಇದು ಉಜ್ವಲ ತೀರ್ಥವಿದೆ. ಬಡವಾನಿ ನಗರದ ದಕ್ಷಿಣ ದಿಕ್ಕಿನಲ್ಲಿ ಸ್ಥಿತವಿರುವ ಚೂಲಗಿರಿಯೆಂಬ ಹೆಸರಿನ ಪರ್ವತದಿಂದ ರಾವಣನ ಪುತ್ರ ಇಂದ್ರಜೀತ, ರಾವಣನ ಸಹೋದರ ಕುಂಭಕರ್ಣ ಇತ್ಯಾದಿ ಅನೇಕ ಋಷೀಶ್ವರರು ಮೋಕ್ಷಕ್ಕೆ ಹೋಗಿರುವುದರಿಂದ ಇದು ಸುತೀರ್ಥವಿದೆ. ಅಚಲಾಪುರದ ಈಶಾನ್ಯ ದಿಶೆಯಲ್ಲಿ ಸ್ಥಿತವಿರುವ ಮೇಢಗಿರಿಯೆಂಬ ಹೆಸರಿನ ಪರ್ವತದಿಂದ ಮೂರೂವರೆ ಕೋಟಿ ಮುನಿಗಳು ನಿರಂಜನರಾಗಿದ್ದಾರೆ; ಅದರಿಂದ ಇದು ಮಂಗಲ ತೀರ್ಥವಿದ್ದು ಪೂಜ್ಯವಿದೆ. ಕೋಟಿಶಿಲೆಯಿಂದ

ಕಲಿಂಗದೇಶದ ಐನೂರು ದೊರೆಗಳು ಹಾಗೂ ದಶರಥನ ಅದೆಷ್ಟೋ ಪುತ್ರರು ಮೊದಲಾಗಿ ಒಂದು ಕೋಟಿ ಮುನಿಗಳು ಸಿದ್ಧರಾಗಿರುವುದರಿಂದ ಇದು ಉತ್ತಮ ತೀರ್ಥವಿದೆ. ಪಂಚಮೇರುವಿನಿಂದ ಅನೇಕ ಚಾರಣ ಮುನಿಗಳು ಸಿದ್ಧರಾಗಿ ಹೋಗಿದ್ದಾರೆ; ಅದರಿಂದ ಇದು ಸುತೀರ್ಥವಿದೆ.

ಅಲ್ಲದೆ ಇದೇ ಎರಡೂವರೆ ದ್ವೀಪದಲ್ಲಿ ಅನೇಕ ಅತಿಶಯ ತೀರ್ಥಗಳಿವೆ ಹಾಗೂ ಮೂರು ಲೋಕದಲ್ಲಿ ನಂದೀಶ್ವರ ದ್ವೀಪ ಮೊದಲಾದ ಅನೇಕ ಕ್ಷೇತ್ರಗಳಲ್ಲಿ ಅಕೃತ್ರಿಮ ಜಿನಮಂದಿರಗಳಿವೆ, ಅವು ಕೂಡ ಸುತೀರ್ಥಗಳಿವೆ. ಇದೇ ಪ್ರಕಾರ ಅನ್ಯ ತಪ, ಜ್ಞಾನ, ನಿರ್ವಾಣ ಕಲ್ಯಾಣಕ ಮೊದಲಾದ ಅನೇಕ ಸ್ಥಾನಗಳಿವೆ, ಅವೆಲ್ಲವೂ ಪೂಜಿಸಲು ಯೋಗ್ಯವಿವೆ-ಶುದ್ಧ ತೀರ್ಥಗಳಿವೆ - ಈ ಪ್ರಕಾರ ಹೇಳಲಾದ ಸಕಲ ತೀರ್ಥಗಳು ಸಮ್ಯಗ್ದೃಷ್ಟಿಗಳ ಮೂಲಕ ಪೂಜಾಯೋಗ್ಯ ತೀರ್ಥಗಳಿವೆ. ರಾಗ-ದ್ವೇಷ, ಕ್ರೋಧಾದಿ ಕಷಾಯರಹಿತ, ಶುದ್ಧಪದ, ದಯಾಮಯಭಾವ, ನಿರ್ಮಲಭಾವಗಳು ಉತ್ಕೃಷ್ಟವಾದ ನಿಕಟ ತೀರ್ಥಗಳಿವೆ.

ವೀತರಾಗಿ ಮುನೀಶ್ವರರು ಕೂಡ ವಂದನೆಯ ಉದ್ದೇಶದಿಂದ ಈ ತೀರ್ಥಗಳ ಯಾತ್ರೆ ಮಾಡುತ್ತಾರೆಂದ ಮೇಲೆ ಸರಾಗಿ ಸಮ್ಯಗ್ದೃಷ್ಟೀ ಗೃಹಸ್ಥರಿಗಂತೂ ಇಂಥ ತೀರ್ಥಗಳ ವಂದನೆ ಮಾಡಿ ಅನಾದಿಯಿಂದ ತಗಲಿದ ಪಾಪಮಲವನ್ನು ತೀರ್ಥರೂಪ ಜಲದಿಂದ ತೊಳೆದು ಹಾಕಿ ಶುದ್ಧ-ಪವಿತ್ರವಾಗುವುದು ಯೋಗ್ಯವೇ ಇದೆ. ಈ ತೀರ್ಥಗಳ ವಂದನಾದಿಗಳನ್ನು ಮಾಡುವುದರಿಂದ ಪಾಪವು ನಷ್ಟವಾಗುತ್ತದೆ, ಕಷಾಯಗಳು ಮಂದವಾಗುತ್ತವೆ, ಸುಬುದ್ಧಿಯ ಪ್ರಕಾಶವಾಗುತ್ತದೆ; ಆದುದರಿಂದ ಇವು ಯತಿ-ಶ್ರಾವಕರಿಂದ ಪೂಜಿಸಲು ಯೋಗ್ಯವಿರುವುದರಿಂದ ಉಪಾದೇಯವಿವೆ.

**ಕುತೀರ್ಥ** - ಪುಣ್ಯೋದಯದಿಂದ ರಹಿತವಿರುವ ಮುಗ್ಧ ಪ್ರಾಣಿಗಳು ಬೇರೆಯವರನ್ನು ಅನೇಕ ರಾಜ್ಯಭೋಗ ಭೋಗಿಸುತ್ತಿರುವುದನ್ನು ಕಂಡು ಲೋಭಾಚಾರಿ, ವಿಷಯ ಪೋಷಣೆಯ ಉದ್ದೇಶದಿಂದ, ವಾಂಛಿತ ಸುಖವನ್ನು ಪ್ರಾಪ್ತ ಮಾಡಿಕೊಳ್ಳುವ ಸಲುವಾಗಿ ಯಾವನೋ ಅಜ್ಞಾನೀ ಗುರುವನ್ನು ಕೇಳಿದಾಗ ಆತನು ಇವನನ್ನು ಮೂರ್ಖನೆಂದು ತಿಳಿದು, ನೀನು ಮಹಾದೀರ್ಘ ಜಲಸಮೂಹದಲ್ಲಿ ಪ್ರವೇಶಮಾಡಿ ಜಲಸಮಾಧಿ(ಮರಣ) ಮಾಡು, ಅದು ಮಹಾತೀರ್ಥವಿದೆ, ಇದರ ಫಲಸ್ವರೂಪವಾಗಿ ನಿನಗೆ ವಾಂಛಿತ ಸುಖ ದೊರಕುವುದು-ಎಂದು ಪುಸಲಾಯಿಸುತ್ತಾನೆ. ಆದರೆ ಎಲೈ ಭವ್ಯನೇ ! ಈ ಜಲಪಾತನವು(ಜಲಸಮಾಧಿಯು)ಕುತೀರ್ಥವಿದೆ.

ಕೆಲವು ಮುಗ್ಧ ಪ್ರಾಣಿ(ಜೀವ)ಗಳು ಧನ, ರಾಜ್ಯ , ಸ್ತ್ರೀ , ಶರೀರ ಸಂಬಂಧದ ಅನೇಕ ವಾಂಛಿತ ಭೋಗಗಳ ಅಭಿಲಾಷೆಯಿಂದ ಯಾವನೋ ಕೌತೂಹಲಿ ಪುರುಷನ ಹತ್ತಿರ ಹೋಗಿ - ಈ ವಾಂಛಿತ ಸುಖಗಳು ನಮಗೆ ಹೇಗೆ ದೊರಕಬಹುದಾಗಿದೆ ? - ಎಂದು ಕೇಳಿದಾಗ, ಆ ನಿರ್ದಯಿ ಮನುಷ್ಯನು ಅವರನ್ನು ಮೂರ್ಖರೆಂದು ತಿಳಿದು ಕೌತುಕದ ಉದ್ದೇಶದಿಂದ 'ಉರಿಯುತ್ತಿರುವ ಅಗ್ನಿರೂಪದ ಉತ್ತಮ ತೀರ್ಥದಲ್ಲಿ ನಿಃಶಂಕತೆಯಿಂದ ಪ್ರವೇಶ ಮಾಡಿ ನಿಮ್ಮ ಶರೀರ ಭಸ್ಮಮಾಡುವುದರಿಂದ ನಿಮಗೆ ವಾಂಛಿತ ಭೋಗಗಳ ಲಾಭವಾಗುತ್ತದೆ, ಆದುದರಿಂದ ನೀವು ಅಗ್ನಿತೀರ್ಥವನ್ನು ಒಳ್ಳೆಯದೆಂದು ತಿಳಿಯಿರಿ' ಎಂದು ಹೇಳುತ್ತಾನೆ. ಇದನ್ನು ಆಲಿಸಿ ಬಾಲಬುದ್ಧಿಯ ಲೋಭೀ ಜೀವಗಳು ಅಗ್ನಿಯಲ್ಲಿಯೇ ಪ್ರವೇಶ ಮಾಡುವುದನ್ನು ತೀರ್ಥವೆಂದು ಮನ್ನಿಸತೊಡಗಿದರು. ಆದರೆ ಎಲೈ ಸುಬುದ್ಧಿಗಳೇ! ಅಗ್ನಿಪ್ರವೇಶ ತೀರ್ಥವು ಸುಬುದ್ಧಿಗಳು ಮಾಡಲು ಯೋಗ್ಯವಿಲ್ಲ. ಇಂಥ ಕುತೀರ್ಥವನ್ನು ಹೇಯವೆಂದು ತಿಳಿಯುವುದು.

ಜ್ಞಾನಧನದಿಂದ ರಹಿತ, ಸುಂದರ ಸ್ತ್ರೀಯರ ಭೋಗದ ಇಚ್ಛೆಯುಳ್ಳ ಯಾವನೋ ಮುಗ್ಧ ಜೀವನು 'ಸುಂದರ ಸ್ತ್ರೀಯರ ಭೋಗವು ಹೇಗೆ ದೊರಕುವುದು ?' ಎಂದು ಯಾರಿಗೋ ಕೇಳುತ್ತಾನೆ. ಆಗ ಇವನನ್ನು

ಜ್ಞಾನಹೀನನೆಂದು ತಿಳಿದು ಆ ನಿರ್ದಯಿ ಮನುಷ್ಯನು ಕುತೂಹಲ ಬುದ್ಧಿಯಿಂದ ಇವನನ್ನು ವಂಚಿಸುತ್ತ, ಎಲೈ ಸೋದರನೇ ! ಶಸ್ತ್ರಧಾರೆಯು ಮಹಾತೀರ್ಥವಿದೆ. ಒಂದುವೇಳೆ ನೀನು ನಿಃಶಂಕನಾಗಿ ಶಸ್ತ್ರದ ಮಾಧ್ಯಮದಿಂದ ಸತ್ತು ಹೋದರೆ ನಿನ್ನನ್ನು ಯೋಗಿನಿ ದೇವಿಯು ತನ್ನ ಪತಿಯ ರೂಪದಲ್ಲಿ ಸ್ವೀಕಾರ ಮಾಡುವಳು ಅಲ್ಲಿ ನೀನು ದೇವಾಂಗನೆಯ ಭೋಗ ಮಾಡು, ಮನುಷ್ಯರ ಮಾತೇನಿದೆ ? ಅದಕ್ಕಾಗಿ ನೀನು ಶಸ್ತ್ರಧಾರೆಯೆಂಬ ತೀರ್ಥದಿಂದ ಸಾಯು - ಎಂದು ಹೇಳುತ್ತಾನೆ. ಆಗ ಈ ಭೋಗಾರ್ಥಿ ಮುಗ್ಧ ಜೀವನು ಹಾಗೆಯೇ ಮನ್ನಿಸಿ ಶಸ್ತ್ರಧಾರಾ ತೀರ್ಥದ ಸ್ವೀಕಾರ ಮಾಡಿದನು; ಆದರೆ ಎಲೈ ಭವ್ಯನೇ ! ಈ ಧಾರಾತೀರ್ಥವು ಹಾಸ್ಯವಚನದಿಂದ ನಡೆಯುತ್ತಿದೆ, ಅದಕ್ಕಾಗಿ ಹೇಯವಿದೆ.

ಶಸ್ತ್ರದಿಂದ ಸ್ವಯಂ ಸಾಯುವಾಗ ಮಹಾಸಂಕ್ಲೇಶ ಭಾವಗಳಾಗುತ್ತವೆ; ಬೇರೆಯವರನ್ನು ಯುದ್ಧದಲ್ಲಿ ಸಾಯಿಸುವುದರಿಂದಲೂ ಮಹಾರೌದ್ರಭಾವಗಳಾಗುತ್ತವೆ, ಅದರಿಂದ ಪರಘಾತ ಮಾಡುವಂಥವರಿಗೆ ಪಾಪಭಾರದಿಂದ ದೇವಲೋಕವು ಹೇಗೆ ದೊರಕುವುದು ? ಆದರೆ ಹೇಗೆ ಅಜ್ಞಾನಿ ಪತಂಗವು (ದೀಪದಹುಳು) ದೀವಿಗೆಯನ್ನು ಮಹಾಸುಂದರವೆಂದು ತಿಳಿದು ವಿಷಯ-ಭೋಗದ ಲೋಭದಿಂದ ದೀವಿಗೆಯಲ್ಲಿ ಹಾರಿ ಭಸ್ಮವಾಗಿ ಹೋಗುತ್ತದೆ, ಈ ಕ್ರಿಮಿಯು ಜ್ಞಾನರಹಿತವಿರುವುದರಿಂದ ತನ್ನ ಪುಣ್ಯವನ್ನಂತೂ ತಿಳಿಯುವುದಿಲ್ಲ ಮತ್ತು ಭೋಗವನ್ನು ಅಧಿಕವಾಗಿ ಬಯಸುತ್ತದೆ. ಅದರಿಂದ ಮರಣಕ್ಕೆ ಪ್ರಾಪ್ತವಾಗಿ ಹೀನಗತಿಯಲ್ಲಿಯೇ ಉತ್ಪನ್ನವಾಗುತ್ತದೆ.

ಇದೇ ಪ್ರಕಾರ ಭೋಗಾಭಿಲಾಷಿಯು ಶಸ್ತ್ರಮರಣವನ್ನು ತೀರ್ಥವೆಂದು ಮನ್ನಿಸಿ ಶಸ್ತ್ರಧಾರೆಯರೂಪದ ದೀವಿಗೆಯಲ್ಲಿ ಆ ದೀಪದ ಹುಳುವಿನಂತೆ ಭಸ್ಮವಾಗಿ ಹೋಗುತ್ತಾನೆ ಹಾಗೂ ರೌದ್ರಭಾವದಿಂದ ಸತ್ತು ಅಶುಭಗತಿಯಲ್ಲಿ ಹೋಗುತ್ತಾನೆ. ದೇವಸುಖವಂತೂ ಶೀಲಪಾಲನೆಯ, ಜಪ-ತಪ-ಸಂಯಮ ಮಾಡುವ, ದಾನಕೊಡುವ, ಪ್ರಭುವಿನ ಸೇವೆ-ಪೂಜೆ ಮಾಡುವ, ದಯೆಯ ಭಾವನೆಯನ್ನಿಟ್ಟುಕೊಳ್ಳುವ, ಸಮತೆಯ ಪಾಲನೆ ಮಾಡುವ ಇತ್ಯಾದಿ ಪುಣ್ಯ ಪರಿಣಾಮಗಳಿಂದ ದೊರಕುತ್ತದೆ. ಅದಕ್ಕಾಗಿ ಎಲೈ ಸುಬುದ್ಧಿಯೇ ! ಶಸ್ತ್ರಧಾರಾ ತೀರ್ಥವು ತೀರ್ಥವಲ್ಲ, ಕುತೀರ್ಥವಿದೆ; ಆದುದರಿಂದ ವಿವೇಕಪೂರ್ವಕ ತ್ಯಾಗ ಮಾಡಲು ಯೋಗ್ಯವಿದೆ. ಎಲೈ ಸೋದರನೇ ! ಒಂದು ವೇಳೆ ಶಸ್ತ್ರಧಾರೆಯ ಮರಣವು ತೀರ್ಥವಿರುತ್ತಿದ್ದರೆ ಜಗತ್ತಿನ ಜೀವಗಳು ಶಸ್ತ್ರದಿಂದ ಭಯಪಡುತ್ತಿರಲಿಲ್ಲ. ಎಲ್ಲರೂ ಶಸ್ತ್ರದಿಂದಲೇ ಸಾಯುತ್ತಿದ್ದರು. ಇದಂತೂ ಮಹಾಸುಲಭವಿದೆ, ಅತ್ಯಂತ ಸಮೀಪವೂ ಇದೆ. ಇದರಲ್ಲಿ ಸ್ವಲ್ಪವು ಧನ ಬೇಕಾಗುವುದಿಲ್ಲ; ಆದರೆ ನೀನು ವಿಚಾರ ಮಾಡು, ಜನರು ಕಷ್ಟಸಹಿಸಿ, ಲಕ್ಷಾಂತರ ಹಣ ಖರ್ಚು ಮಾಡಿ ಸಾವಿರಾರು ಮೈಲಿ ದೂರದ ತೀರ್ಥಗಳಿಗೆ ಹೋಗುತ್ತಾರೆ; ಆದರೆ ಶಸ್ತ್ರದಿಂದ ಹೆದರುತ್ತಾರೆ. ಅದರಿಂದ ಇದನ್ನು ಕುತೀರ್ಥವೆಂದೇ ತಿಳಿಯುವುದು.

ಇದನ್ನು ಕೇಳಿ ಯಾವನೋ ಕುಬುದ್ಧಿಯು ಹೇಳುತ್ತಾನೆ - ಈ ಶಸ್ತ್ರಧಾರಾ ತೀರ್ಥವು ಪ್ರತಿಯೊಬ್ಬರಿಂದ ಸಾಧ್ಯವಾಗುವುದಿಲ್ಲ, ಮಹಾ ಶೂರವೀರನೇ ಇದನ್ನು ಮಾಡಬಹುದಾಗಿದೆಯಲ್ಲವೇನು ? - ಎಲೈ ಭವ್ಯನೇ! ದೊಡ್ಡ ದೊಡ್ಡ ಮಹಾನ ವಂಶದಲ್ಲಿ ಉತ್ಪನ್ನರಾದ ಶೂರ-ವೀರ ದೊರೆಗಳು ಕೂಡ ನಂತರದ ಕಾಲದಲ್ಲಿ ರಾಜಸಂಪದವನ್ನು ಬಿಟ್ಟುಕೊಟ್ಟು, ಯುದ್ಧ-ಶಸ್ತ್ರಘಾತವನ್ನು ತೊರೆದು, ಸಮತೆಯಭಾವ ಧಾರಣಮಾಡಿ, ತಪದ ಅಂಗೀಕಾರ ಮಾಡಿದರು ಮತ್ತು ಕಾನನ ಪ್ರದೇಶದಲ್ಲಿದ್ದುಕೊಂಡು ಅನೇಕ ಪ್ರಕಾರದ ತಪಸ್ಸು ಮಾಡುವುದನ್ನು ಶುಭವೆಂದು ಮನ್ನಿಸಿದರು ಅದರಿಂದ ದೇವಾದಿ ಒಳ್ಳೆಯ ಗತಿಯನ್ನು ಪ್ರಾಪ್ತ ಮಾಡಿಕೊಂಡು ಸುಖಿಯಾಗಿದ್ದಾರೆ. ಒಂದುವೇಳೆ ಶಸ್ತ್ರಧಾರೆಯಿಂದಲೇ ಒಳ್ಳೆಯದಾಗುತ್ತಿದ್ದರೆ ಮಹಾಸಾಮಂತ ಕುಲದವರು ತಪಸ್ಸನ್ನೇಕೆ ಧಾರಣ ಮಾಡುತ್ತಿದ್ದರು ? ಅದಕ್ಕಾಗಿ ಶಸ್ತ್ರಧಾರಾ ತೀರ್ಥವು ತ್ಯಾಗಮಾಡಲು ಯೋಗ್ಯವಿದೆ, ಹೇಯವೇ ಇದೆ.

ಕೆಲವು ಮುಗ್ಧ ಜನರು ನದಿಗಳ ಜಲದಿಂದ ಪಾಪವು ನಷ್ಟವಾಗುತ್ತದೆಯೆಂದು ಮನ್ನಿಸುತ್ತಾರೆ. ಎಂದರೆ ಆ ನದಿಯ ಜಲದಲ್ಲಿ ಸ್ನಾನ ಮಾಡುವುದರಿಂದ ಪಾಪಮಲವು ತೊಳೆದು ಹೋಗುತ್ತದೆಯೆಂಬುದು ಅವರ ಮನ್ನಣೆಯಿದೆ;

ಆದರೆ ಹೀಗೆ ಹೇಳುವಂಥವರೂ ಮುಗ್ಧರೇ ಇದ್ದಾರೆ, ಶಿಥಿಲ ಶ್ರದ್ಧೆಯುಳ್ಳವರಿದ್ದಾರೆ, ಧರ್ಮಗ್ರಂಥಿಯಿಂದ ರಹಿತರಿದ್ದಾರೆ. ಈ ಮಾತಿನ ಮೇಲೆಯೂ ಅವರದು ಅಚಲ ಶ್ರದ್ಧೆಯಿರುವುದಿಲ್ಲ. ಅಂಥವರಿಗೆ ಹೇಳುವುದೇನೆಂದರೆ, ಶೂದ್ರರಿಂದ ಮಣ್ಣಿನ ಕೊಡವನ್ನು ತಗೆದುಕೊಂಡು ಈ ನದಿಯ ಜಲದಲ್ಲಿ ನಾಲ್ಕಾರು ಬಾರಿ ಒಳ್ಳೆಯ ರೀತಿಯಿಂದ ತೊಳೆದರೆ ಆ ಶೂದ್ರರ ಮಣ್ಣಿನ ಕೊಡವು ಪವಿತ್ರವಾಗುವುದು; ನಂತರ ಆ ಕೊಡದಲ್ಲಿ ನೀರನ್ನಿಟ್ಟು ಕುಡಿಯಬಹುದಾಗಿದೆ, ಸ್ನಾನ ಮಾಡಬಹುದಾಗಿದೆ. ಆಗ ಅವನು ಹೇಳುತ್ತಾನೆ - ಈ ಮಣ್ಣಿನ ಕೊಡವು ಶೂದ್ರನದಿದೆ, ನಾವು ಇದರಲ್ಲಿ ನೀರನ್ನಿಟ್ಟು ಹೇಗೆ ಕುಡಿಯಬಹುದಾಗಿದೆ ? ಆ ನೀರಿನಿಂದ ಸ್ನಾನವನ್ನಾದರೂ ಹೇಗೆ ಮಾಡುವ ಸಾಧ್ಯತೆಯಿದೆ ? - ಅದಂತೂ ಮಲಿನವಿದೆ. ಈ ಪ್ರಕಾರ ಅನೇಕ ಬಾರಿ ನದಿಯ ಜಲದಲ್ಲಿ ತೊಳೆದರೂ ಕೂಡ ಆ ಭ್ರಮೆಯ ಬುದ್ಧಿಯ ಗ್ಲಾನಿಯು ಹೊರಟು ಹೋಗುವುದಿಲ್ಲ.

ಅದಕ್ಕಾಗಿ ಎಲೈ ವಿವೇಕಿಯೇ, ನೀನು ನೋಡು ! ಆ ಮಣ್ಣಿನ ಕೊಡವು ಅದನ್ನು ಅಗ್ನಿಯಲ್ಲಿ ಸುಟ್ಟು ಶುದ್ಧಗೊಳಿಸಲಾಗಿದೆ, ಅಂಥ ಶುದ್ಧ ಕೊಡವನ್ನು ನಾಲ್ಕಾರು ಬಾರಿ ತೊಳೆದು ಶುದ್ಧ ಮಾಡಲಾಗಿದೆ. ಆದಾಗ್ಯೂ ನೀನು ಅದನ್ನು ಪವಿತ್ರವೆಂದು ಮನ್ನಿಸುವುದಿಲ್ಲವೆಂದ ಮೇಲೆ ಎಲೈ ಸುಬುದ್ಧಿಯೇ ! ಈ ಶರೀರವಂತೂ ಮಹಾಮಲಿನವಿದೆ, ಸಪ್ತಧಾತುಗಳಿಂದ ಅಪವಿತ್ರವಿದೆ ಅಲ್ಲದೆ ಆತ್ಮನು ಪಾಪಮಲದಿಂದ ಮಲಿನನಿದ್ದಾನೆ; ಹೀಗಿರುವಾಗ ಯಾವುದೋ ನದಿಯ ಜಲದಲ್ಲಿ ಸ್ನಾನ ಮಾಡುವುದರಿಂದ ಪವಿತ್ರ ಹೇಗೆ ಆಗುವ ಸಾಧ್ಯತೆಯಿದೆ? ನೀನಂತೂ ಅದೇ ನದಿಯ ಜಲದಿಂದ ಕೊಡವನ್ನು ತೊಳೆದ ನಂತರವೂ ಗ್ಲಾನಿಯನ್ನು ಬಿಟ್ಟುಕೊಡುತ್ತಿಲ್ಲವೆಂದ ಮೇಲೆ ಅನ್ಯ ಯಾವನೋ ವಿವೇಕಿಯು, ಪರಭವ ಸುಖದ ಲೋಭಿಯು, ಇದರಿಂದ ಆತ್ಮನ ಶುದ್ಧಿಯನ್ನು ಹೇಗೆ ಮನ್ನಿಸುತ್ತಾನೆ ?

ಇದು ಏಕಾಂತ ಬುದ್ಧಿಯ ಹಟವಿದೆ. ಎಲೈ ಭವ್ಯನೇ ! ಯಾರ ಹೃದಯವು ಕಠೋರವಿದೆ, ದಯೆಯಿಂದ ರಹಿತರಿದ್ದಾರೆ, ಅವರೇ ಶೋಧಿಸದ ಜಲಸಮೂಹರೂಪ ನದಿಯಲ್ಲಿ ಸ್ನಾನ ಮಾಡುವುದನ್ನು ತೀರ್ಥವೆಂದು ಹೇಳುತ್ತಾರೆ. ನದಿಯಿಂದಂತೂ ಶರೀರದ ಮಲವು ದೂರವಾಗಬಹುದಾಗಿದೆ. ಆತ್ಮನಿಗೆ ತಗಲಿದ ಪಾಪಮಲವನ್ನು ನಷ್ಟಗೊಳಿಸಲು ಅದು ಸಮರ್ಥವಿಲ್ಲ. ಆದುದರಿಂದ ದಾನ, ಪೂಜೆ, ಭಗವಂತರ ಸ್ಮರಣೆ ಮೊದಲಾದ ಧರ್ಮದ ಅಂಗರೂಪ ಉತ್ತಮ ತೀರ್ಥವೇ ಸಮತೆಯ ಭಾವಗಳಿಗೆ ಕಾರಣವಿರುವುದರಿಂದ ಪಾಪಮಲವನ್ನು ದೂರ ಮಾಡಲು ಸಮರ್ಥವಿದೆ ನದಿ ತೀರ್ಥವು ಹೇಯವಿದೆ.

ಜ್ಞಾನಚಕ್ಷುರಹಿತ ಬೇರೆ ಜೀವಗಳು ಸಮುದ್ರವನ್ನು ತೀರ್ಥವೆಂದು ಹೇಳುತ್ತಾರೆ. ಅವರು ತಾವೂ ಶ್ರದ್ಧೆ ಮಾಡುತ್ತಾರೆ ಮತ್ತು ಇತರರಿಗೂ ಉಪದೇಶ ಮಾಡುತ್ತ-ತೀರ್ಥರೂಪ ಸಮಸ್ತ ನದಿಗಳು ಸಮುದ್ರದಲ್ಲಿ ಬಂದು ಸೇರುತ್ತವೆ ಹಾಗೂ ಜಲ ಸಮೂಹವು ಅಧಿಕವಿರುತ್ತದೆ ಅದರಿಂದ ಎಲ್ಲಕ್ಕಿಂತ ದೊಡ್ಡ ತೀರ್ಥವು ಸಮುದ್ರವಿದೆಯೆಂದು ಹೇಳುತ್ತಾರೆ. ಅವರು ಅದರಲ್ಲಿ ಸ್ನಾನ ಮಾಡುವುದರಿಂದ ಪಾಪವು ನಷ್ಟವಾಗುತ್ತದೆಯೆಂದು ಮನ್ನಿಸುತ್ತಾರೆ. ಅಂಥವರಿಗೆ ಆಚಾರ್ಯ ದೇವರು ಹೇಳುವುದೇನೆಂದರೆ - ಸಮುದ್ರದ ಜಲ ಸ್ಪರ್ಶದಿಂದ ಶರೀರವು ಬಿರುಕು ಬಿಡುತ್ತದೆ, ಅದಕ್ಕಾಗಿಯೆ ಅದೆಷ್ಟೋ ಜನರು ಆ ಜಲದಲ್ಲಿ ಪ್ರವೇಶ ಮಾಡುವ ಸಲುವಾಗಿ ಹೆದರುತ್ತಾರೆ, ಅದನ್ನೇ ಕೆಲವು ಮುಗ್ಧ ಜೀವಗಳು ಆತ್ಮಾರಾಮ ತೀರ್ಥವೆಂದು ಮನ್ನಿಸುತ್ತಿರುವುದು ಆಶ್ಚರ್ಯದ ಸಂಗತಿಯಿದೆ. ಸಮುದ್ರದ ಜಲವು ದೇಹಕ್ಕೆ ತಾಗುವುದರಿಂದ ಖೇದ(ದುಃಖ)ವಾಗುತ್ತದೆ, ಅದರಲ್ಲಿ ಸ್ನಾನ ಮಾಡುವುದರಿಂದ ಸುಖವು ಹೇಗೆ ಆಗುವ ಸಾಧ್ಯತೆಯಿದೆ ? ಅದಕ್ಕಾಗಿ ಇದು ಕೂಡ ಹೇಯವಿದೆ.

ಅದೆಷ್ಟೋ ಸಾಮಾನ್ಯ ಬುದ್ಧಿಪಾತ್ರರು ಸ್ವಯಂ ತಿಳಿಯುತ್ತಾರೆ ಮತ್ತು ಬೇರೆಯವರಿಗೂ ಉಪದೇಶಿಸುವುದೇನೆಂದರೆ - ಭೂಮಾತೆಯು ಅತ್ಯಂತ ಧೈರ್ಯಶಾಲಿಯಿದ್ದಾಳೆ ಭೂಮಿಯನ್ನು ಜಗತ್ತಿನ ಜೀವಗಳು

ಅನೇಕ ವಿಧದಿಂದ ಅಗೆಯುತ್ತಾರೆ, ತುಂಡರಿಸುತ್ತಾರೆ ಇದರ ಮೇಲೆ ಕೆಲವರು ಕಸ ಎಸೆಯುತ್ತಾರೆ ಆದರೂ ಭೂಮಾತೆಯು ಖೇದ ಮನ್ನಿಸುವುದಿಲ್ಲ. ಈ ಜೀವನು ಭೂಮಿಯಿಂದಲೇ ಉತ್ಪನ್ನನಾಗಿದ್ದಾನೆ ಮತ್ತು ಕೊನೆಗೆ ಭೂಮಿಯಲ್ಲಿಯೇ ಒಂದಾಗಿ ಹೋಗುವುದಿದೆ; ಅದರಿಂದ ಜೀವಂತವಾಗಿಯೇ ಭೂಮಿಯಲ್ಲಿ ಹೂತು ಹೋಗುವುದು ಶರೀರಸಹಿತ ಭೂಮಿಯಲ್ಲಿ ಪ್ರವೇಶ ಮಾಡುವುದೇ ಧರಾತೀರ್ಥವಿದೆ ಇದಕ್ಕೆ ಸಮನಾದ ಬೇರೆ ತೀರ್ಥವಿಲ್ಲ-ಹೀಗೆ ತಿಳಿದು ಜೀವಂತವಾಗಿಯೇ ಭೂಮಿಯಲ್ಲಿ ಹೂತುಹೋಗಿ (ಸಮಾಧಿ ತಗೆದುಕೊಂಡು) ಪ್ರಾಣಗಳ ನಾಶ ಮಾಡುತ್ತಾರೆ ಮತ್ತು ಇದನ್ನು ಧರಾತೀರ್ಥವೆಂದು ಮನ್ನಿಸುತ್ತಾರೆ. ಆದರೆ ಈ ಮುಗ್ಧ ಜೀವಗಳು ಒಂದುವೇಳೆ ಈ ಭೂಮಿಯು ತೀರ್ಥವಿದ್ದರೆ ಇದರ ಮೇಲೆ ಮಲ-ಮೂತ್ರಗಳನ್ನೇಕೆ ಮಾಡುತ್ತಾರೆ ? ಅಗೆಯುವ, ಸುಡುವ ಮೊದಲಾದ ಅವಿನಯವನ್ನೂ ಮಾಡಬಾರದು - ಎಂಬುದನ್ನು ತಿಳಿಯುವುದಿಲ್ಲ. ಅದಕ್ಕಾಗಿ ಎಲೈ ಭವ್ಯನೇ ! ಸಂಪೂರ್ಣ ಭೂಮಂಡಲವು ತೀರ್ಥವಿಲ್ಲ, ಸಿದ್ಧಕ್ಷೇತ್ರಗಳ ಭೂಮಿಯು ತೀರ್ಥವಿದೆ ಮತ್ತು ಅನ್ಯಭೂಮಿಯು ತೀರ್ಥವಿಲ್ಲವೆಂಬುದನ್ನು ಎಂದರೆ ಭೂತೀರ್ಥವು ಹೇಯವಿದೆಯೆಂಬುದನ್ನು ತಿಳಿಯಬೇಕು.

ಈ ಪ್ರಕಾರ ಶ್ರೀ ಸುದೃಷ್ಟಿತರಂಗಿಣಿಯೆಂಬ ಹೆಸರಿನ ಗ್ರಂಥದಲ್ಲಿ ತೀರ್ಥಪರೀಕ್ಷೆಯಲ್ಲಿನ
ಜ್ಞೇಯ-ಹೇಯ-ಉಪಾದೇಯಗಳ ವಿಚಾರ ಮಾಡುವಂಥ
ಹದಿನೈದನೆಯ ಪರ್ವವು ಪೂರ್ಣವಾಯಿತು.

★★★★★

ದಿವ್ಯಧ್ವನಿಯಲ್ಲಿ ಸ್ವಭಾವಗತ ಸ್ವತಂತ್ರತೆಯ ಜತೆ ಜತೆಯಾಗಿ ಪರ್ಯಾಯದಲ್ಲಿ ಪೂರ್ಣ ಸ್ವತಂತ್ರತೆಯ ಪ್ರಾಪ್ತಿಯ ಸಲುವಾಗಿ ಸ್ವಾವಲಂಬನದ ಮಾರ್ಗವನ್ನು ತಿಳಿಸಿಕೊಡಲಾಗಿದೆ. ವರ್ಣಾದಿಗಳು ಮತ್ತುರಾಗಾದಿಗಳು ಹಾಗೂ ಗುಣಭೇದದಿಂದ ಭಿನ್ನನಾದ ನಿಜ ಶುದ್ಧಾತ್ಮನ ಮೇಲೆ ದೃಷ್ಟಿಯನ್ನು ಕೇಂದ್ರಿತ ಮಾಡುವುದೇ ಸ್ವಾವಲಂಬನವಿದೆ. ಸ್ವತಂತ್ರತೆಯನ್ನು ತನ್ನ ಸಾಮರ್ಥ್ಯದಿಂದಲೇ ಪ್ರಾಪ್ತ ಮಾಡಿಕೊಳ್ಳಬಹುದಾಗಿದೆ. ಅನಂತ ಸುಖ ಮತ್ತು ಸ್ವತಂತ್ರತೆಯು ಭಿಕ್ಷೆಯಲ್ಲಿ ಪ್ರಾಪ್ತವಾಗುವಂಥ ವಸ್ತುಗಳಲ್ಲ ಹಾಗೂ ಅವನ್ನು ಬೇರೆಯವರ ಆಧಾರದಿಂದಲೂ ಪ್ರಾಪ್ತ ಮಾಡಿಕೊಳ್ಳಲಾಗುವುದಿಲ್ಲ.

ತನ್ನಲ್ಲಿಯೇ ತನ್ನತನವು ಆನಂದದ ಜನಕವಿದ್ದರೆ ಪರದಲ್ಲಿ ತನ್ನತನವು ವಿಪತ್ತುಗಳ ಆಲಯವಿದೆ. ತನ್ನಲ್ಲಿ ತನ್ನತನವಾಗುವುದೇ ಧರ್ಮವಿದೆ. ಪರದ್ರವ್ಯ-ಪರಭಾವಗಳಲ್ಲಿ ತನ್ನತನವನ್ನು ಮನ್ನಿಸುವುದು ಮಹಾ ಅಧರ್ಮವಿದೆ. ಅದಕ್ಕಾಗಿ ದೇಹದ ಕ್ರಿಯೆ ಮತ್ತು ಶುಭರಾಗದಲ್ಲಿನ ತನ್ನತನವನ್ನು ಬಿಟ್ಟುಕೊಡುವ ಅಪೂರ್ವಕಾರ್ಯದ ಸಲುವಾಗಿ ಪ್ರಾಪ್ತ ಸಮಯ ಮತ್ತು ಜ್ಞಾನ ಶಕ್ತಿಯ ವಿನಿಯೋಗವಾಗುವ ಪುರುಷಾರ್ಥವು ಈಗ ಆಗಬೇಕು. ತನ್ನೊಳಗಿನ ತನ್ನತನವು ಕಳೆದು ಹೋಗುವುದೇ ಅನಂತ ದುಃಖಗಳ ಏಕೈಕ ಕಾರಣವಿದೆ - ಎಂಬುದು ಗಮನಕ್ಕೆ ಬಂದಾಗ ಆ ಪುರುಷಾರ್ಥವಾಗುವುದಿದೆ.

## ೧೬ : ಹದಿನಾರನೆಯ ಪರ್ವ
## ಚರ್ಚೆ-ವಾರ್ತೆಯಲ್ಲಿ ಜ್ಞೇಯ, ಹೇಯ, ಉಪಾದೇಯ

ಪರಸ್ಪರರಲ್ಲಿ ಸಮಯ ಕಳೆಯುವ ಸಲುವಾಗಿ ಮಾಡುವರೂಪ ಚರ್ಚೆ-ವಾರ್ತೆಯಲ್ಲಿ ಜ್ಞೇಯ, ಹೇಯ, ಉಪಾದೇಯ ಹೇಳುತ್ತಾರೆ.

**ಪುಣ್ಣದಾ ಅಘಖಯ ಕಾರಿಯ, ಚರಚೋಪಾದೇಯ ಪರಮಫಲದಾಯೀ।**
**ಪಾವಮಯೀ ಶುಭಹಾರೀ ಸಾ ಚರಚಾ ತು ಹೇಯ ಜಿಣ ಮಗ್ಗೋ ॥೪೨॥**

**ಗಾಥಾರ್ಥ :-** ಯಾವ ಚರ್ಚೆಯಿಂದ ಪುಣ್ಯವಾಗುತ್ತದೆ, ಪಾಪದ ನಾಶವಾಗುತ್ತದೆ, ಆ ಚರ್ಚೆಯಂತೂ ಉಪಾದೇಯವಿದೆ ಮತ್ತು ಯಾವುದರಿಂದ ಪಾಪಕರ್ಮದ ಉತ್ಪತ್ತಿಯಾಗುತ್ತದೆ, ಪೂರ್ವಕೃತ ಪುಣ್ಯಕರ್ಮದ್ದೂ ಅಭಾವವಾಗುತ್ತದೆ, ಆ ಚರ್ಚೆಯು ಜಿನಮಾರ್ಗದಲ್ಲಿ ಹೇಯವಿದೆ.

**ಭಾವಾರ್ಥ :-** ಪರಸ್ಪರ ವಾರ್ತಾಲಾಪ (ಮಾತನಾಡುವುದನ್ನು) ಚರ್ಚೆಯೆಂದು ಹೇಳುತ್ತಾರೆ. ಮಾತನಾಡುವುದನ್ನು ಅಥವಾ ಹೇಳುವುದನ್ನು ವಿವೇಕವಂತರಿಗೆ ಜ್ಞೇಯ, ಹೇಯ, ಉಪಾದೇಯರೂಪದಿಂದ ತಿಳಿಸಿಕೊಡುವುದು ಯೋಗ್ಯವೇ ಇದೆ. ಅದನ್ನೇ ಹೇಳುತ್ತಾರೆ - ಶುಭಾಶುಭ ಚರ್ಚೆಯ ಸಂಪೂರ್ಣ ತಿಳಿವಳಿಕೆಯಂತೂ ಜ್ಞೇಯವಿದೆ. ಅದರದೇ ಎರಡು ಭೇದಗಳು - ೧) ಶುಭಚರ್ಚೆ, ೨) ಅಶುಭಚರ್ಚೆ ಎಂಬುದಾಗಿವೆ.

**ಶುಭಚರ್ಚೆ -** ಯಾವುದರಲ್ಲಿ ತೀರ್ಥಂಕರ, ಚಕ್ರವರ್ತಿ, ನಾರಾಯಣ, ಬಲಭದ್ರ, ಕಾಮದೇವ, ದೇವ, ಇಂದ್ರ ಇತ್ಯಾದಿ ಮಹಾಪುರುಷರ ಉತ್ಪತ್ತಿ, ರಾಜ್ಯ, ಸಂಪತ್ತು, ಭೋಗ, ಸುಖ, ಅವರುಗಳ ವೈರಾಗ್ಯ, ಅವರಿಗೆ ಸ್ವರ್ಗ-ಮೋಕ್ಷವಾಗುವ ಕಥನವಿದೆ ಅದು ಪ್ರಥಮಾನುಯೋಗವಿದೆ. ಇದರ ಚರ್ಚೆಯನ್ನು ಪರಸ್ಪರರಲ್ಲಿ ಮಾಡುವುದು ಅದು ಪಾಪದ ನಾಶ ಮಾಡುತ್ತದೆ ಮತ್ತು ಪುಣ್ಯಫಲ ನೀಡುತ್ತದೆ, ಅದರಿಂದ ಇಂಥ ಚರ್ಚೆಯು ಧರ್ಮಾತ್ಮಾ ಸಮ್ಯಗ್ದೃಷ್ಟಿಗಳಿಗೆ ಉಪಾದೇಯವಿದೆ.

ಮೂರು ಲೋಕದ ರಚನೆ; ಎಂದರೆ ಅಧೋಲೋಕವು ಏಳು ರಾಜೂವಿನದಿದ್ದು ಅಲ್ಲಿ ಭವನವಾಸಿ, ವ್ಯಂತರದೇವಗಳು ಪುಣ್ಯದ ಫಲಭೋಗಿಸುತ್ತ ಸುಖಸಾಗರದಲ್ಲಿ ಮಗ್ನರಾಗಿದ್ದುಕೊಂಡು ಕಾಲಕಳೆಯುತ್ತಾರೆ. ಅದರ ಕೆಳಗೆ ಏಳು ನರಕಗಳಿವೆ. ಅಲ್ಲಿ ಜೀವಗಳು ದೊಡ್ಡ-ದೊಡ್ಡ ಪಾಪಗಳ ಫಲಭೋಗಿಸುತ್ತ ಮಹಾದುಃಖಸಾಗರದಲ್ಲಿ ಮುಳುಗಿಕೊಂಡಿವೆ, ಅವು ವಿಲಾಪ ಮಾಡುತ್ತ ಕಾಲಕಳೆಯುತ್ತಲಿವೆ.

ಮಧ್ಯಲೋಕದಲ್ಲಿ ಅಸಂಖ್ಯಾತ ದ್ವೀಪ-ಸಮುದ್ರಗಳಿವೆ. ಅದರಲ್ಲಿ ನಲವತ್ತೈದು ಲಕ್ಷ ಯೋಜನದ್ದು ಮನುಷ್ಯ ಲೋಕವಿದೆ. ಉಳಿದ ಎಲ್ಲ ದ್ವೀಪ, ಸಮುದ್ರಗಳಲ್ಲಿ ತಿರ್ಯಕ್‌ಲೋಕವಿದೆ. ಎರಡೂವರೆ ದ್ವೀಪದಲ್ಲಿನ ಮೇರುಕುಲಾಚಲಾದಿಗಳ ಚರ್ಚೆ ಮಾಡುವುದು ಉಪಾದೇಯವಿದೆ.

ಊರ್ಧ್ವಲೋಕದಲ್ಲಿ ಹದಿನಾರು ಸ್ವರ್ಗಗಳಿವೆ. ಅಹಮಿಂದ್ರ, ಸರ್ವಾರ್ಥಸಿದ್ಧಿ ಮೊದಲಾದವುಗಳಲ್ಲಿರುವ ದೇವಗಳು ಪುಣ್ಯಫಲದ ಸುಖಭೋಗಿಸುತ್ತ ಸುಖಿಗಳಿದ್ದಾರೆ. ಅವುಗಳ ಮೇಲೆ ಸಿದ್ಧಲೋಕವಿದೆ. ಅಲ್ಲಿ ಅನಂತ ಸಿದ್ಧ ಭಗವಂತರು ವಿರಾಜಮಾನರಿದ್ದಾರೆ - ಇತ್ಯಾದಿ ಪ್ರಕಾರದಿಂದ ಮೂರು ಲೋಕಗಳ ಚರ್ಚೆಯನ್ನು ಪರಸ್ಪರರಲ್ಲಿ ಮಾಡುವುದು. ಹೀಗೆ ಕರಣಾನುಯೋಗದ ಚರ್ಚೆಯು ಸಮ್ಯಗ್ದೃಷ್ಟಿಗಳಿಂದ ಮಾಡಲು ಯೋಗ್ಯ ಉಪಾದೇಯವಿದೆ.

ಮುನಿ, ಶ್ರಾವಕರ ಸಮಿತಿ, ಗುಪ್ತಿ ಮೊದಲಾದ ಅಥವಾ ಹನ್ನೊಂದು ನೆಲೆ ಮೊದಲಾದ ರೂಪ ಆಚರಣೆ, ಆಚಾರಣಾದಿಗಳ ಚರ್ಚೆ ಮಾಡುವುದು, ಇಂಥ ಚರಣಾನುಯೋಗದ ಚರ್ಚೆಯು ಉಪಾದೇಯವಿದೆ.

ಜೀವ, ಪುದ್ಗಲ, ಧರ್ಮ, ಅಧರ್ಮ, ಆಕಾಶ, ಕಾಲ - ಇವು ಆರು ದ್ರವ್ಯಗಳಿವೆ. ಜೀವತತ್ತ್ವ, ಅಜೀವತತ್ತ್ವ, ಆಸ್ರವತತ್ತ್ವ, ಬಂಧತತ್ತ್ವ, ಸಂವರತತ್ತ್ವ, ನಿರ್ಜರಾತತ್ತ್ವ ಮತ್ತು ಮೋಕ್ಷತತ್ತ್ವ - ಇವುಗಳಲ್ಲಿ ಪುಣ್ಯ ಮತ್ತು ಪಾಪ ಸೇರಿಸಿ ಒಂಭತ್ತು ಪದಾರ್ಥ. ಹೀಗೆ ಆರುದ್ರವ್ಯ, ಏಳುತತ್ತ್ವ, ಒಂಭತ್ತು ಪದಾರ್ಥ ಮೊದಲಾದವುಗಳ ಚರ್ಚೆಯನ್ನು ಪರಸ್ಪರರಲ್ಲಿ ಮಾಡುವುದು ಉಪಾದೇಯವಿದೆ. ಇದರ ಹೆಸರು ದ್ರವ್ಯಾನುಯೋಗ ಚರ್ಚೆಯಿದೆ.

ಜೀವನು ಹೇಗೆ ಕರ್ಮದಿಂದ ಕಟ್ಟಿದ್ದಾನೆ ? ಹೇಗೆ ಬಿಡುಗಡೆಯಾಗುತ್ತಾನೆ ? ಇತ್ಯಾದಿಗಳ ಚರ್ಚೆಯು ಉಪಾದೇಯವಿದೆ. ಅನೇಕ ತೀರ್ಥಗಳ ಚರ್ಚೆ, ದಾನ, ಪೂಜೆ, ಶೀಲ, ಸಂಯಮ, ತಪ, ವ್ರತ, ದಯೆಯಭಾವ, ಜೀವಗಳ ರಕ್ಷಣೆ ಇತ್ಯಾದಿ ಕೇವಲಿಭಾಷಿತ ಚರ್ಚೆಯು ಉತ್ತಮ ಚರ್ಚೆಯಿದೆ. ಇದರಿಂದ ಪಾಪದ ನಾಶವಾಗುತ್ತದೆ ಮತ್ತು ಪುಣ್ಯಕರ್ಮದ ಸಂಚಯವಾಗುತ್ತದೆ; ಅದರಿಂದ ಇದು ಉಪಾದೇಯವಿದೆ.

**ಹೇಯರೂಪ ಕುಚರ್ಚೆ -** ಪರಸ್ಪರರಲ್ಲಿ ಯಾವ ಚರ್ಚೆ ಮಾಡುವುದರಿಂದ ಪಾಪದ ಬಂಧವಾಗುತ್ತದೆ, ಪೂರ್ವಕೃತ ಪುಣ್ಯವು ಕ್ಷೀಣವಾಗುತ್ತದೆ ಅಂಥ ಚರ್ಚೆಯು ಹೇಯವಿದೆ. ಕುದೇವ, ಕುಗುರು ಮತ್ತು ಕುಧರ್ಮದ ಪೂಜೆ-ಭಕ್ತಿಯ ಚರ್ಚೆ, ಈ ಕುದೇವಾದಿಕರ ಅತಿಶಯ, ಚಮತ್ಕಾರಗಳ ಚರ್ಚೆ, ಪ್ರಶಂಸೆಯ ಮಾತುಗಳು ಹೇಯವಿವೆ. ತಮ್ಮ ಹಾಗೂ ಅನ್ಯ ರಾಜರುಗಳ ಯುದ್ಧದ ಮಾತು, ಜಯಾಪಜಯಗಳ, ನಿಂದೆ-ಪ್ರಶಂಸೆಯ ಚರ್ಚೆ ಹಾಗೂ ಚೋರರ ಚತುರತೆಯ ಚರ್ಚೆ; ಮಂತ್ರ, ಜಂತ್ರ, ತಂತ್ರ, ಮಾಯೆ-ಮಾಟಗಳ, ಜ್ಯೋತಿಷ, ವೈದ್ಯಕೀಯ ಚಮತ್ಕಾರಗಳ ಚರ್ಚೆ, ಮಲ್ಲಯುದ್ಧ, ಆನೆ-ಕುದುರೆ ಮೊದಲಾದವುಗಳ ಹೋರಾಟದ ಚರ್ಚೆ - ಇತ್ಯಾದಿ ಕುಚರ್ಚೆಗಳು ಹೇಯವಿವೆ. ಸ್ತ್ರೀಯರ ರೂಪ-ಲಾವಣ್ಯದ ಮಾತುಗಳನ್ನಾಡುವುದು, ಸ್ತ್ರೀಯರ ಅನೇಕ ಶುಭ-ಅಶುಭ ಚರಿತ್ರ, ಕಲೆ, ಗೀತೆ, ಗಾಯನ, ನೃತ್ಯ, ಭೋಗ, ಅಪಶಬ್ದ, ಚೇಷ್ಟೆ ಮೊದಲಾದವುಗಳ ಚರ್ಚೆಯು ಹೇಯವಿದೆ.

ಅನೇಕ ಪ್ರಕಾರದ ಭೋಜನ, ವ್ಯಂಜನ(ಪದಾರ್ಥ) ರಸ-ಪೇಯ, ಭೋಗೋಪಭೋಗಗಳಲ್ಲಿ ಒಳಿತು-ಕೆಡಕುಗಳ ಚರ್ಚೆಯೂ ಹೇಯವಿದೆ. ಅನ್ಯರಿಗೆ ಪೀಡೆಯನ್ನು ಉತ್ಪನ್ನ ಮಾಡುವ, ಬೇರೆಯವರ ಧನ ನಷ್ಟ ಮಾಡುವ, ಇತರರ ಮಾನ ಖಂಡಿತಗೊಳಿಸುವ ಪಾರಸ್ಪರಿಕ ಚರ್ಚೆಯು ಹೇಯವಿದೆ. ಅನೇಕ ದೇಶಗಳಲ್ಲಿ ಯಾವುದನ್ನೋ ಒಳ್ಳೆಯದು ಇನ್ನಾವುದನ್ನೋ ಕೆಟ್ಟದೆಂದು ಹೇಳುವ ಚರ್ಚೆ, ಪರಸ್ಪರರಲ್ಲಿ ಯುದ್ಧ ಮಾಡಿಸುವಂಥ, ದ್ವೇಷವನ್ನು ಹೆಚ್ಚಿಸುವಂಥ ಹಾಗೂ ಸ್ವಚಕ್ರ-ಪರಚಕ್ರ ಮೊದಲಾದ ಸಪ್ತ ಈತಿ ಭೀತಿಗಳ ಚರ್ಚೆಯೂ ಕೂಡ ಹೇಯವಿದೆ. ಶರೀರದಲ್ಲಿ ರೋಗಾದಿಗಳು ಉತ್ಪನ್ನವಾಗುವ, ಅವುಗಳ ನಾಶವಾಗುವ ಇತ್ಯಾದಿ ಅಶುಭ ಬಂಧ ಮಾಡಿಸುವಂಥ ಅನೇಕ ವಿಕಥೆರೂಪದ ಚರ್ಚೆಯು ಹೇಯವಿದೆ.

ಈ ಪ್ರಕಾರ ಸುದೃಷ್ಟಿತರಂಗಿಣಿಯೆಂಬ ಹೆಸರಿನ ಗ್ರಂಥದಲ್ಲಿ ಚರ್ಚೆ, ವಾರ್ತೆಯಲ್ಲಿನ ಜ್ಞೇಯ, ಹೇಯ ಉಪಾದೇಯಗಳ ವರ್ಣನೆ ಮಾಡುವಂಥ ಹದಿನಾರನೆಯ ಪರ್ವವು ಪೂರ್ಣವಾಯಿತು.

★★★★★

## ೧೭ : ಹದಿನೇಳನೆಯ ಪರ್ವ
## ಅನುಮೋದನೆಯಲ್ಲಿ ಜ್ಞೇಯ, ಹೇಯ, ಉಪಾದೇಯ

**ಅನುಮೋದನೆಯಲ್ಲಿ ಜ್ಞೇಯ, ಹೇಯ, ಉಪಾದೇಯ –** ಶುಭ ಅಶುಭ ಕಾರ್ಯಗಳ ಅನುಮೋದನೆ ಸಂಬಂಧದ ಸಮುಚ್ಚಯ ಭಾವಗಳನ್ನು ತಿಳಿಯುವುದು ಜ್ಞೇಯವಿದೆ. ಈ ಜ್ಞೇಯದಲ್ಲಿ ೧) ಶುಭ ಅನುಮೋದನೆ, ೨) ಅಶುಭ ಅನುಮೋದನೆಯೆಂದು ಎರಡು ಭೇದಗಳಿವೆ.

**ಭಾವಾರ್ಥ :-** ಲೌಕಿಕ ಕಾರ್ಯಗಳಲ್ಲಿ, ಪುತ್ರ -ಪುತ್ರಿಯರ ವಿವಾಹದಲ್ಲಿ, ಮನೆ-ಮಹಲಾದಿಗಳ ನಿರ್ಮಾಣದಲ್ಲಿ, ಯುದ್ಧದಲ್ಲಿ ತಮ್ಮ ಮನಸ್ಸಿನಿಂದ ಅನುಮೋದನೆ ಮಾಡುವುದು ಹೇಯವಿದೆ. ಸುಂದರ ರೂಪು, ಒಳ್ಳೆಯ ಭೋಜನದಲ್ಲಿ, ಬಾವಿಯಿಂದ ನೀರೆತ್ತುವಲ್ಲಿ, ಬಾವಿ-ಕೆರೆಗಳನ್ನು ತೋಡುವಲ್ಲಿ ಇತ್ಯಾದಿ ರೂಪದಿಂದ ಭೂಮಿಯನ್ನು ಅಗೆಯುವ ಕಾರ್ಯಗಳಲ್ಲಿ ಅನುಮೋದನೆಯು ಪಾಪಬಂಧ ಮಾಡುತ್ತದೆ; ಅದರಿಂದ ಹೇಯವಿದೆ. ಯಾರೋ ಯಾರ ಮೇಲೆಯೋ ಶಸ್ತ್ರಪ್ರಹಾರ ಮಾಡಿದರೆ, ಕೋಲಿನಿಂದ ಹೊಡೆದರೆ ಅದನ್ನು ನೋಡಿ ಅನುಮೋದನೆ ಮಾಡುವುದು ಹೇಯವಿದೆ. ಯಾರದೋ ಧನವು ಲೂಟಿಯಾಗುತ್ತಿರುವುದನ್ನು ಕಂಡು-ಕೇಳಿ ಅಥವಾ ಶಾರೀರಿಕ ಪೀಡೆಯನ್ನು ಕಂಡು ಅಥವಾ ಯಾರದೋ ಕೈ , ಕಿವಿ, ಮೂಗು ಮೊದಲಾದ ಅಂಗ-ಉಪಾಂಗಗಳು ಕತ್ತರಿಸಿ ಹೋದುದನ್ನು ಕಂಡು ಅನುಮೋದಿಸುವುದು ಹೇಯವಿದೆ.

ಬೇರೆಯವರ ಕುತಪ ಹಾಗೂ ಕುಜ್ಞಾನದ ಅಧಿಕತೆಯನ್ನು ಕಂಡು ಅನುಮೋದನೆ ಮಾಡುವುದೂ ಹೇಯವಿದೆ. ಯಾರೋ ಕುದೇವ, ಕುಗುರುಗಳ ಬಹಳಷ್ಟು ಆರಂಭಮಯ, ಬಹಳಷ್ಟು ಧನವಿನಿಯೋಗದಿಂದ ನಿರ್ಮಿಸಿರುವ ಮಂದಿರ-ಮಠ ಸ್ಥಾನಗಳನ್ನು ಕಂಡು ಅನುಮೋದನೆ ನೀಡುವುದು ಅಶುಭ ಫಲದಾಯಕವಿರುವುದರಿಂದ ಹೇಯವಿದೆ. ಜೀವಘಾತದ ಕಾರಣಭೂತವಿರುವ ಬಿಲ್ಲು, ಬಾಣ, ಕತ್ತಿ , ಗುಂಡು, ಬಂದೂಕು, ತುಬಾಕಿ, ಭರ್ಚಿ, ಕಿರುಗತ್ತಿ , ನಾಲು ಇತ್ಯಾದಿ ವಿವಿಧ ಶಸ್ತ್ರಗಳನ್ನು ಕಂಡು ಅವುಗಳ ಅನುಮೋದನೆ ಮಾಡುವುದೂ ಹೇಯವಿದೆ. ಯಾವನೋ ಒಳ್ಳೆಯ ಧನುರ್ಧಾರಿ, ಅನೇಕ ಶಸ್ತ್ರಕಲೆಯಲ್ಲಿ ಪ್ರವೀಣ, ಬಾಣ, ಗುಂಡು, ಭರ್ಚಿಗಳ ಪ್ರಯೋಗ ಮಾಡುವಂಥ ಪುರುಷನ ಅನುಮೋದನೆಯೂ ಹೇಯವಿದೆ. ನದಿ-ಸರೋವರಗಳ ಪೂಲು(ಆಣೆಕಟ್ಟು) ಒಡೆದು ಹಾಕಿರುವ ಅಥವಾ ಒಡೆಯುತ್ತಿರುವುದನ್ನು ಕಂಡು, ನಗರ-ವನಗಳಲ್ಲಿ ಅಗ್ನಿಹೊತ್ತಿಕೊಂಡಿರುವುದನ್ನು ಕಂಡು ಅಥವಾ ನಗರ-ದೇಶವು ಲೂಟಿಯಾಗುತ್ತಿರುವುದನ್ನು ಕಂಡು, ಆಲಿಸಿ ಅನುಮೋದಿಸುವುದು ಅಶುಭ ಫಲದಾಯಕವಿರುವುದರಿಂದ ಹೇಯವಿದೆ. ಕುತೀರ್ಥಗಳ ಸ್ಥಾನ ಅಥವಾ ಅವುಗಳ ಸೇವಕರನ್ನು ಕಂಡು ಅವುಗಳ ಅನುಮೋದನೆ ಮಾಡುವುದೂ ಹೇಯವಿದೆ. ಕೃಷಿ, ಆರಂಭ, ಪಶುಸಂಗ್ರಹ, ಬೇಟೆ ಮೊದಲಾದ ಜೀವಘಾತದಲ್ಲಿ ಹರ್ಷಿತನಾಗುವುದೂ ಹೇಯವಿದೆ. ಬೇರೆಯೂ ಅನೇಕ ಮಿಥ್ಯಾತ್ವದ ಪೋಷಕವಾದ ಕಾರಣಗಳಲ್ಲಿ ಅಥವಾ ಬಹಳಷ್ಟು ಪಾಪಾರಂಭ-ಪರಿಗ್ರಹದ ವಿಕಲ್ಪಗಳಲ್ಲಿ ಹರ್ಷಿತನಾಗುವುದು ಅವುಗಳ ಅನುಮೋದನೆ ಮಾಡುವುದು ಕೂಡ ಹೇಯವಿದೆಯೆಂದು ತಿಳಿದುಕೊಂಡು ಅವುಗಳ ತ್ಯಾಗ ಮಾಡುವುದೇ ಗುಣಕಾರಿ-ಲಾಭದಾಯಕವಿದೆ.

**ಉಪಾದೇಯರೂಪ ಶುಭ ಅನುಮೋದನೆ –** ಯಾವ ಸ್ಥಾನಗಳಿಂದ ಮುನಿರಾಜರು ಧ್ಯಾನಾಗ್ನಿಯಿಂದ ಕರ್ಮನಾಶ ಮಾಡಿ ನಿರಂಜನರಾಗಿದ್ದಾರೆ, ಅವುಗಳ ವಂದನೆ ಮಾಡಿ ಹರ್ಷಿತನಾಗುವುದು ಉಪಾದೇಯವಿದೆ. ಯಾವನೋ ಭವ್ಯಾತ್ಮನು ಗುರುವಿನ ಉಪದೇಶ ಪಡೆದು ಸಂಸಾರದಶೆಯಿಂದ ವಿರಕ್ತನಾಗಿ ತಪ ಧಾರಣ ಮಾಡುತ್ತಿದ್ದರೆ ಅವನನ್ನು ಅನುಮೋದಿಸುವುದು ಉಪಾದೇಯವಿದೆ. ಯಾರೋ ಜಿನದೀಕ್ಷೆಯ ಧಾರಕ ಮುನಿರಾಜರು ಶುಕ್ಲಧ್ಯಾನದಿಂದ ನಾಲ್ಕು ಘಾತಿಕರ್ಮಗಳ ನಾಶಮಾಡಿ ಕೇವಲಜ್ಞಾನದ ಪ್ರಾಪ್ತಿ ಮಾಡಿಕೊಂಡಿದ್ದರೆ ಅವರ ದರ್ಶನದಲ್ಲಿ ಹರ್ಷ, ಅನುಮೋದನೆಯು ಉಪಾದೇಯವಿದೆ. ಯಾವ ಕಾಲ(ಸಮಯ)ಗಳಲ್ಲಿ ನಿರ್ವಾಣ, ಕೇವಲಜ್ಞಾನ, ತಪಕಲ್ಯಾಣಕಗಳಾಗಿವೆ, ಆ ಕಾಲಗಳ ಪೂಜೆ, ವಂದನೆಯಲ್ಲಿ ಅನುಮೋದನೆಯು ಉಪಾದೇಯವಿದೆ.

ಯಾರೋ ಧರ್ಮಾತ್ಮಾ ಜೀವರುಗಳು ಸಮ್ಯಕ್ ಪ್ರಕಾರದಿಂದ ಹನ್ನೆರಡು ಪ್ರಕಾರದ ತಪ ಮಾಡುತ್ತಿರುವುದನ್ನು ಕಂಡು ಅಥವಾ ಅನೇಕ ತೀರ್ಥ, ಸಿದ್ಧಕ್ಷೇತ್ರಗಳ ವಂದನೆ ಮಾಡುತ್ತಿರುವುದನ್ನು ಕಂಡು ಅಥವಾ ಅಕೃತ್ರಿಮ ಮತ್ತು ಕೃತ್ರಿಮ ಜಿನ ಚೈತ್ಯಾಲಯಗಳ ವಂದನೆ ಮಾಡುತ್ತಿರುವುದನ್ನು ಕಂಡು - ಈ ಕಾರ್ಯಗಳಲ್ಲಿ ಪ್ರವರ್ತಿಸುತ್ತಿರುವ ಭವ್ಯಾತ್ಮರನ್ನು ನೋಡಿದರೆ ಅವರ ಅನುಮೋದನೆ ಮಾಡುವುದು ಉಪಾದೇಯವಿದೆ. ತೀರ್ಥಂಕರರ ಐದೂ ಕಲ್ಯಾಣಕಗಳ ಸಮಯವನ್ನು ಕಂಡು - ಕೇಳಿ ಹರ್ಷಿತನಾಗುವುದು ಉಪಾದೇಯವಿದೆ.

ಅಷ್ಟಾಹ್ನಿಕಾಪರ್ವದ ದಿನಗಳಲ್ಲಿ ಇಂದ್ರಾದಿ ದೇವಗಳು ನಂದೀಶ್ವರ ದ್ವೀಪಕ್ಕೆ ಹೋಗಿ ಅಲ್ಲಿ ಪೂಜೆ, ಉತ್ಸವ ಮಾಡುತ್ತಾರೆ; ಆ ಸಮಯದಲ್ಲಿ ವಂದನೆ ಮಾಡುವುದು, ಹರ್ಷದಿಂದ ಆ ಕಾರ್ಯದ ಅನುಮೋದನೆ ಮಾಡುವುದು ಉಪಾದೇಯವಿದೆ. ದಶಲಕ್ಷಣ ಪರ್ವ ಮೊದಲಾದವುಗಳಲ್ಲಿ ಪೂಜೆ, ಸಂಯಮ, ತಪಗಳನ್ನು ಯಾವ ಭವ್ಯರು ಮಾಡುತ್ತಾರೆ, ಅವರ ಅನುಮೋದನೆಯೂ ಉಪಾದೇಯವಿದೆ. ಜಿನಮಂದಿರದ ನಿರ್ಮಾಣ ಮಾಡಿ ಅದರ ಪ್ರತಿಷ್ಠೆಯ ಉತ್ಸವ ಮಾಡಿ ಹರ್ಷ ಮನ್ನಿಸುವುದು ಅಥವಾ ಬೇರೆ ಭವ್ಯರು ಮಾಡುತ್ತಿದ್ದರೆ (ಹಿಂದೆ ಮಾಡಿದ್ದರೆ) ಅವರ ಉತ್ತಮ ಭಾವನೆಯನ್ನು ಹರುಷದೊಂದಿಗೆ ಅನುಮೋದಿಸುವುದೂ ಉಪಾದೇಯವಿದೆ. ತಮ್ಮ ಮನೆಯಲ್ಲಿ ಅಥವಾ ಬೇರೆಯವರ ಮನೆಯಲ್ಲಿ ಮುನಿರಾಜರ ನಿರಂತರಾಯ ಆಹಾರವಾದರೆ ಅದರ ಅನುಮೋದನೆ ಮಾಡುವುದು ಕೂಡ ಉಪಾದೇಯವಿದೆ.

ಯಾರೋ ಭವ್ಯಾತ್ಮರು ಜಿನವಾಣಿಯ ಅಭ್ಯಾಸ ಮಾಡುತ್ತಿರುವುದನ್ನು ಕಂಡು - ಆಲಿಸಿ ಹರ್ಷಿತನಾಗುವುದೂ ಉಪಾದೇಯವಿದೆ. ಯಾರೋ ಧರ್ಮಾತ್ಮರ ಮೂಲಕ ದೀನ ಜೀವರುಗಳಿಗೆ ದಯೆಯ ಭಾವದೊಂದಿಗೆ ದಾನಕೊಡುತ್ತಿರುವುದನ್ನು ಕಂಡು ಹರ್ಷಿತನಾಗುವುದೂ ಉಪಾದೇಯವಿದೆ. ಯಾವನೋ ಭವ್ಯಾತ್ಮಾ ಪುರುಷನ ಮೂಲಕ ನಿರ್ಮಿಸಲಾದ ಜಿನಮಂದಿರದ ಅನೇಕ ಪ್ರಕಾರದ ಶೋಭೆಯ ರಚನೆಯನ್ನು ಕಂಡು ಹರ್ಷದಿಂದ ಅನುಮೋದಿಸುವುದೂ ಉಪಾದೇಯವಿದೆ. ಜಿನಮಂದಿರದ ಉತ್ತಮ ಉಪಕರಣ, ಛತ್ರ (ಮುಕ್ಕೊಡೆ), ಚಾಮರ, ಸಿಂಹಾಸನ, ಭಾಮಂಡಲ, ಗಂಟೆ ಅಥವಾ ಪೂಜೆಯ ಉಪಕರಣ, ತಟ್ಟೆ, ಕಲಶ, ಗಿಂಡಿ ಮೊದಲಾದುವನ್ನು ಕಂಡು ಹರ್ಷಿತನಾಗುವುದೂ ಕೂಡ ಉಪಾದೇಯವಿದೆ.

ಉತ್ಕೃಷ್ಟ ಅಕ್ಷರ, ಕಾಗದ, ರಟ್ಟು, ಹೊದಿಗೆ ಸಹಿತ ಶಾಸ್ತ್ರವನ್ನು ನೋಡಿ ಅಥವಾ ಯಾರೋ ಧರ್ಮಾತ್ಮರಿಂದ ಶಾಸ್ತ್ರ ಬರೆದುದನ್ನು ಅಥವಾ ಬರೆಸಿದುದನ್ನು ನೋಡಿ ಅನುಮೋದನೆ ಮಾಡುವುದೂ ಉಪಾದೇಯವಿದೆ. ಯಾವನೋ ಭವ್ಯನ ಮಿಥ್ಯಾತ್ವವು ನಷ್ಟವಾಗಿ ಅವನಿಗೆ ಸಮ್ಯಕ್ತ್ವಭಾವವು ಉತ್ಪನ್ನವಾಗಿರುವುದನ್ನು ಕಂಡು ಅಥವಾ ಯಾವುದೋ ಜೀವವು ಧರ್ಮಸನ್ಮುಖವಾಗಿರುವುದನ್ನು ಕಂಡು ಹರ್ಷಿತನಾಗಿ ಅವನ ಅನುಮೋದನೆ ಮಾಡುವುದೂ ಉಪಾದೇಯವಿದೆ. ಪಂಚಪರಮೇಷ್ಠಿಗಳ ಭಕ್ತಿಯುಕ್ತ ಜೀವಗಳನ್ನು ನೋಡಿ ಅಥವಾ ತೀರ್ಥಂಕರರ ಸಮವಸರಣವನ್ನು ನೋಡಿ ಅಥವಾ ಸಮವಸರಣ ರಚನೆಯ ಕಥನವನ್ನಾಲಿಸಿ, ಮುನಿ-ಆರ್ಯಿಕೆ, ಶ್ರಾವಕ-ಶ್ರಾವಿಕೆ ಚತುಃಸಂಘವನ್ನು ನೋಡಿ ಹರುಷಭಾವ ಮಾಡುವುದು ಮತ್ತು ತನಗಿಂತ ಗುಣಗಳಲ್ಲಿ ಅಧಿಕರಿರುವ ಧರ್ಮಾತ್ಮಾ ಜೀವರುಗಳನ್ನು ನೋಡಿ ಅನುಮೋದಿಸುವುದು ಉಪಾದೇಯವಿದೆ.

ಯಾವನೋ ಧರ್ಮಾತ್ಮಾ ಜೀವನು ಉತ್ಸಾಹದೊಂದಿಗೆ ತೀರ್ಥಯಾತ್ರೆಗೆ ಹೋಗುತ್ತಿರುವುದನ್ನು ಕಂಡು ಅನುಮೋದನೆ ಮಾಡುವುದು ಅಥವಾ ಯಾರೋ ಧರ್ಮಾತ್ಮಾ ಜೀವರುಗಳಿಗೆ ಸಾತಾ(ಸುಖ) ಇರುವುದನ್ನು ಕಂಡು ಅಥವಾ ಧರ್ಮೀ ಜೀವರುಗಳ ಸಮೂಹದಲ್ಲಿ ಸಾತಾ ಇರುವುದನ್ನು ಆಲಿಸಿ ಅನುಮೋದನೆ ಮಾಡುವುದೂ ಉಪಾದೇಯವಿದೆ. ಈ ಪ್ರಕಾರ ಹೇಳಲಾದ ಪುಣ್ಯೋತ್ಪತ್ತಿಯ ಅನೇಕ ಪೂಜ್ಯ ಸ್ಥಾನಗಳಲ್ಲಿ ಸಮ್ಯಗ್ದೃಷ್ಟಿ ಜೀವರುಗಳು ಹರ್ಷಿತರಾಗಿರುವುದು, ಅನುಮೋದನೆ ಮಾಡುವುದು ಉಪಾದೇಯವಿದೆ.

ಈ ಪ್ರಕಾರ ಶ್ರೀ ಸುದೃಷ್ಟಿತರಂಗಿಣಿಯೆಂಬ ಹೆಸರಿನ ಗ್ರಂಥದಲ್ಲಿ ಅನುಮೋದನೆಯ ಭೇದಗಳ ಪರೀಕ್ಷೆಯಲ್ಲಿ ಜ್ಞೇಯ, ಹೇಯ, ಉಪಾದೇಯಗಳ ಕಥನ ಮಾಡುವಂಥ
ಹದಿನೇಳನೆಯ ಪರ್ವವು ಪೂರ್ಣವಾಯಿತು.

★ ★ ★ ★ ★

## ೧೮ : ಹದಿನೆಂಟನೆಯ ಪರ್ವ
## ಮೋಕ್ಷತತ್ತ್ವದಲ್ಲಿ ಜ್ಞೇಯ, ಹೇಯ, ಉಪಾದೇಯ

ಮೋಕ್ಷದಲ್ಲಿ ಜ್ಞೇಯ, ಹೇಯ, ಉಪಾದೇಯ -

**ಮೋಕ್ಖೇ ಹೇಯೋ ಪಾದೇ, ಆವಾಗಮಣೋ ಯ ಮೋಕ್ಖ ಹೇ ಭಣಿಯೋ ।**
**ಕಮ್ಮವಿಮುಕ್ಕೋ ಮೋಕ್ಖೋ , ಪಾದೇಯೋ ಸುಹಾದಿಟ್ಠೀವಿ ॥೪೩॥**

**ಗಾಥಾರ್ಥ :-** ಮೋಕ್ಷಸಂಬಂಧದ ಜ್ಞೇಯ, ಹೇಯ, ಉಪಾದೇಯದಲ್ಲಿ ಯಾವುದು ಆವಾಗಮನಸಹಿತ ಮೋಕ್ಷವಿದೆ ಅದಂತೂ ಹೇಯವಿದೆ ಮತ್ತು ಯಾವುದು ಕರ್ಮರಹಿತ ಮೋಕ್ಷವಿದೆ, ಅದು ಸಮ್ಯಗ್ದೃಷ್ಟಿ ಜೀವರುಗಳಿಗೆ ಉಪಾದೇಯವಿದೆ.

**ಭಾವಾರ್ಥ :-** ಮೋಕ್ಷದ ಸರ್ವಾಂಗಗಳನ್ನೊಳಗೊಂಡ ಸಂಪೂರ್ಣ ಸ್ವರೂಪವನ್ನು ತಿಳಿಯುವುದು ಜ್ಞೇಯವಿದೆ. ಜ್ಞೇಯದ ಭೇದಗಳು ಎರಡು ಇವೆ.

೧) ಮುಗ್ಧ ಜೀವರುಗಳ ಕಾಲ್ಪನಿಕ ಲೌಕಿಕ ಮೋಕ್ಷ - ಅವರು ಮೋಕ್ಷದ ಸಂಬಂಧದಲ್ಲಿ ಮನ್ನಿಸಿ ಕೊಂಡಿರುವುದೇನೆಂದರೆ ಯಾವ ಆತ್ಮನಿಗೆ ಮೋಕ್ಷವಾಗಿ ಹೋಗುತ್ತದೆ, ಅವನು ಅಲ್ಲಿ ಮಹಾಸುಖಿಯಾಗಿರುತ್ತಾನೆ; ನಂತರ ಆ ಮುಕ್ತ ಶುದ್ಧಾತ್ಮನಿಗೆ ಇಚ್ಛೆಯಾದರೆ ಪುನಃ ಸಂಸಾರದಲ್ಲಿ ಬಂದು ಬಿಡುತ್ತಾನೆ. ಆದರೆ ಇಂಥ ಮೋಕ್ಷವಂತೂ ಸಂಸಾರದ ಸಮಾನವಿದೆ. ಏಕೆಂದರೆ ಜನ್ಮ-ಮರಣವಂತೂ ಸಂಸಾರದ ಸ್ವಭಾವವಿದೆ. ಮೋಕ್ಷದಲ್ಲಿ ಜನ್ಮ-ಮರಣಗಳಿರುವುದಿಲ್ಲ; ಅದರಿಂದ ಅಲ್ಪಜ್ಞಾನಿಗಳ ಮೂಲಕ ಮನ್ನಿಸಲಾದ ಮುಕ್ತ ಜೀವರುಗಳ ಪುನಃ ಜನ್ಮರೂಪ ಮೋಕ್ಷವು ಹೇಯವಿದೆ.

ಯಾವುದು ಶುದ್ಧ(ವಾಸ್ತವಿಕ) ಮೋಕ್ಷವಿದೆ, ಅಲ್ಲಿಗೆ ಹೋದ ಜೀವನು ಪುನಃ ಅವತಾರವೆತ್ತುವುದಿಲ್ಲ. ಯಾವ ಪ್ರಕಾರ ಪೃಥ್ವಿಯ ಗಣಿಯೊಳಗಿಂದ ಅಗ್ನಿ ಮೊದಲಾದವುಗಳ ನಿಮಿತ್ತದಿಂದ ಯತ್ನಪೂರ್ವಕ ಹೊರಗೆ ತಗೆದ ಚಿನ್ನವು, ಮಣ್ಣಿನಿಂದ ಬೇರೆಯಾದ ನಂತರ ಪುನಃ ಮಣ್ಣಿನಲ್ಲಿ ಬೆರೆಸಿದರೂ ಕೂಡ ಬೆರೆತು ಹೋಗುವುದಿಲ್ಲ; ಅದೇ ಪ್ರಕಾರ ಕರ್ಮಮಲವನ್ನು ದೂರಮಾಡಿ ಮುಕ್ತವಾದ ಮೇಲೆ ಆ ಶುದ್ಧ ಜೀವಗಳು ಪುನಃ ಶರೀರರೂಪದ ಮಣ್ಣಿನಲ್ಲಿ ಬೆರೆತು ಹೋಗುವುದಿಲ್ಲ; ಎಂದರೆ ಮುಕ್ತವಾದ ಮೇಲೆ, ಯಾವ ಮುಕ್ತಿಯಲ್ಲಿ ಪುನಃ ಜನ್ಮವಿದೆ ಅಂಥ ಮುಕ್ತಿಯು ವಿವೇಕಿಗಳಿಂದ ತ್ಯಾಗಯೋಗ್ಯ-ಹೇಯವಿದೆ.

ಅದೆಷ್ಟೋ ಮುಗ್ಧ ಪಂಡಿತರು ಮುಕ್ತ ಜೀವರುಗಳನ್ನು ರಾಗ-ದ್ವೇಷ ಸಹಿತರೆಂದು ಮನ್ನಿಸುತ್ತಾರೆ. ಅವರು ಹೇಳುವುದೇನೆಂದರೆ ಮೋಕ್ಷದಲ್ಲಿ ಭಗವಂತರು ಸಮಸ್ತ ಸಂಸಾರಿ ಜೀವಗಳ ಲೆಕ್ಕವಿಡುತ್ತಾರೆ, ಅದರಲ್ಲಿ ಯಾರು ಅವರ ಭಕ್ತಿ ಮಾಡಿಲ್ಲ; ಅವರನ್ನಂತೂ ನರಕ ಕುಂಡದಲ್ಲಿ ಹಾಕಿ ಬಿಡುತ್ತಾರೆ ಹಾಗೂ ಯಾರನ್ನು ತಮ್ಮ ಭಕ್ತರೆಂದು ಮನ್ನಿಸುತ್ತಾರೆ, ಅವರಿಂದ ಪ್ರಸನ್ನರಾಗಿ ಅವರನ್ನು ತಮ್ಮ ಹತ್ತಿರ ಮೋಕ್ಷದಲ್ಲಿಟ್ಟುಕೊಳ್ಳುತ್ತಾರೆ. ಆದರೆ ಎಲೈ ಭವ್ಯನೇ! ಇಂಥ ರಾಗ ಭಾವ ಮತ್ತು ದ್ವೇಷ ಭಾವವು ಮೋಕ್ಷದಲ್ಲಿ ಇರುವುದಿಲ್ಲ. ಎಲ್ಲಿ ರಾಗ-ದ್ವೇಷಗಳಿರುತ್ತವೆ, ಅದನ್ನು ಸಂಸಾರಾವಸ್ಥೆಯೆಂದು ತಿಳಿಯುವುದು. ಅದರಿಂದ ರಾಗ-ದ್ವೇಷ ಸಹಿತ ಮುಕ್ತಿಯನ್ನು ಮನ್ನಿಸುವುದು ಹೇಯವಿದೆ.

ಅದೆಷ್ಟೋ ಸಂಸಾರಿಗಳಾದ ಚತುರ ಪುರುಷರು ಮೋಕ್ಷದಲ್ಲಿ ಪಂಚೇಂದ್ರಿಯಗಳ ಮಹಾಸುಖವಿದೆಯೆಂದು

ಮನ್ನಿಸುತ್ತಾರೆ. ಅವರು ಹೇಳುವುದೇನೆಂದರೆ - ಭಗವಂತರಿಗೆ ಮೋಕ್ಷದಲ್ಲಿ ಇಂದ್ರಿಯಜನಿತ ಬಹಳಷ್ಟು ಸುಖವಿದೆ, ಅಂಥ ಸುಖವು ಬೇರೆಲ್ಲಿಯೂ ಇಲ್ಲ. ಉತ್ಕೃಷ್ಟ ಭೋಜನ, ಭೋಗಯೋಗ್ಯ ಅಮೃತಮಯ ರಸವನ್ನು ಭೋಗಿಸುತ್ತಾರೆ. ಘ್ರಾಣೇಂದ್ರಿಯದ ಅನೇಕ ಸುಖದಾಯಕ ಪದಾರ್ಥಗಳನ್ನು ಆಘ್ರಾಣಿಸುತ್ತಾರೆ. ಅನೇಕ ಪ್ರಕಾರದ ನೃತ್ಯ, ಗೀತೆ, ವಾದ್ಯಗಳ ಜೊತೆ ಮುಕ್ತ ಭಗವಂತರ ಎದುರಿಗೆ ಅನೇಕ ಅಪ್ಸರೆಯರು ತಮ್ಮ ಹಾವ-ಭಾವಗಳನ್ನು ದರ್ಶಿಸುತ್ತಾರೆ. ಅವರನ್ನು ನೋಡಿ ಭಗವಂತರು ಮಹಾ ಸುಖ ಭೋಗಿಸುತ್ತಾರೆ. ಇತ್ಯಾದಿ ವಿವಿಧ ರೂಪಗಳಲ್ಲಿ ಅನೇಕ ಅಪ್ಸರೆಯರ ಭೋಗ ಸಹಿತ, ಅನೇಕ ಇಂದ್ರಿಯಜನಿತ ಸುಖವನ್ನು ಅವರು ಭೋಗಿಸುತ್ತಾರೆ.

ಅಂಥವರಿಗೆ ಇಲ್ಲಿ ಹೇಳುವುದೇನೆಂದರೆ - ಎಲೈ ಧರ್ಮಾತ್ಮಾ ಜೀವನೇ ! ನೀನು ಚಿತ್ತವನ್ನು ತೊಡಗಿಸಿ ಆಲಿಸು !! ಮನಸ್ಸಿನಲ್ಲಿ ಯೋಚನೆ ಮಾಡು - ಎಲ್ಲಿ ಇಂದ್ರಿಯ ಸುಖವಿದೆ, ಅಲ್ಲಿ ಮೋಕ್ಷವಿಲ್ಲ ಆದರೆ ಸಂಸಾರವೇ ಇದೆಯೆಂದು ತಿಳಿಯಬೇಕು. ಎಲ್ಲಿ ಮೋಕ್ಷವಿದೆ ಅಲ್ಲಿ ಇಂದ್ರಿಯಜನಿತ ಸುಖವಿರುವುದಿಲ್ಲ, ಮೋಕ್ಷ ಸುಖವಂತೂ ಇಂದ್ರಿಯಗಳಿಗೆ ಅಗೋಚರವಿದೆ. ಶುದ್ಧಾತ್ಮನು ಅತೀಂದ್ರಿಯ ಸುಖದ ಭೋಕ್ತೃವಿದ್ದಾನೆ. ಇಂದ್ರಿಯ ಸುಖವು ಆಕುಲತೆಯ ರೂಪವಿದೆ ಮತ್ತು ಮೋಕ್ಷವು ಆಕುಲತೆಯಿಂದ ರಹಿತವಿದೆ ಎಂದರೆ ಯಾವ ಮುಕ್ತಿಯಲ್ಲಿ ಇಂದ್ರಿಯ ಸುಖವಿದೆ, ಅದು ಹೇಯವಿದೆ.

ಅದೆಷ್ಟೋ ಜ್ಞಾನಚಕ್ಷುಹೀನರು ಹೇಳುವುದೇನೆಂದರೆ, 'ಮೋಕ್ಷದಲ್ಲಿ ಭಗವಂತರು ಯಾವಾಗಲೂ ಕುಳಿತುಕೊಂಡು ಪುಸ್ತಕದ ಪುಟಗಳನ್ನೇ ನೋಡುತ್ತಿರುತ್ತಾರೆ. ಅವುಗಳಲ್ಲಿ ಸಂಸಾರೀ ಜೀವಗಳ ಆಯುವಿನ ಪ್ರಮಾಣವು ಬರೆದಿರುತ್ತದೆ. ಯಾವಾಗ ಯಾರ ಆಯುವಿನ ದಿವಸಗಳು ಪೂರ್ಣವಾಗುತ್ತವೆ, ಆಗ ಭಗವಂತರು ತಮ್ಮ ಹತ್ತಿರ ಯಾವಾಗಲೂ ಇರುವಂಥ ಯಮ(ಸೇವಕ)ರನ್ನು ಕಳಿಸಿ ಆಯು ಪೂರ್ಣವಾದವರ ಜೀವವನ್ನು ತಮ್ಮ ಹತ್ತಿರ ತರಿಸಿಕೊಳ್ಳುತ್ತಾರೆ. ನಂತರ ಅವರಿಗೆ ಸುಖ-ದುಃಖಗಳನ್ನು ಕೊಡುವ ಉದ್ದೇಶದಿಂದ, ನೀನು ಸಂಸಾರದಲ್ಲಿ ಹೋಗಿ ಏನೇನು ಮಾಡಿದೆ ? ಅದರ ಅನುಸಾರವಾಗಿ ಸುಖ-ದುಃಖ ಕೊಡುತ್ತೇವೆ - ಎಂದು ಹೇಳುತ್ತಾರೆ. ಅವನು ಪಾಪ ಮಾಡಿದ್ದರೆ ಅಲ್ಲಿ ಭಗವಂತರ ಲೋಕದಲ್ಲಿ ನರಕ ಕುಂಡಗಳಿವೆ ಅಲ್ಲಿ ಎಸೆದು ದುಃಖ ಕೊಡುತ್ತಾರೆ ಮತ್ತು ಅವನು ಒಂದುವೇಳೆ ಪುಣ್ಯ ಮಾಡಿದ್ದರೆ ಅಲ್ಲಿ ಭಗವಂತರ ಲೋಕದಲ್ಲಿ ಅನೇಕ ಪ್ರಕಾರದ ಯಾವ ರತ್ನಮಯ ಮಹಲುಗಳಿವೆ, ಆ ಧನ-ಧಾನ್ಯದಿಂದ ತುಂಬಿಕೊಂಡಿರುವ ಮಹಲುಗಳನ್ನು ಕೊಟ್ಟು ಅವನನ್ನು ಸುಖಿ ಮಾಡಿಸುತ್ತಾರೆ; ಯಾವನು ಹೇಗೆ ಶುಭಾಶುಭ ಮಾಡಿದ್ದಾನೆ, ಹಾಗೆಯೇ ಸುಖ-ದುಃಖಗಳನ್ನು ಭಗವಂತರು ಕೊಡುತ್ತಾರೆ. ಈ ಪ್ರಕಾರ ಹಗಲಿರುಳೂ ನಿರಂತರವಾಗಿ ಭಗವಂತರು ಲೆಕ್ಕ-ಪತ್ರ ನೋಡುತ್ತಿರುತ್ತಾರೆ' - ಈ ರೀತಿಯ ವಿಕಲ್ಪವನ್ನು ಮೋಕ್ಷದಲ್ಲಿ ಭಗವಂತರಿಗೆ ಇದೆಯೆಂದು ಹೇಳುತ್ತಾರೆ.

ಅವರಿಗೆ ಇಲ್ಲಿ ಹೇಳುವುದೇನೆಂದರೆ, ಎಲೈ ಮೋಕ್ಷಾಭಿಲಾಷಿಯೇ ! ಮೋಕ್ಷದಲ್ಲಿ ಇಂಥ ವಿಕಲ್ಪಗಳಿರುವುದಿಲ್ಲ ಎಲ್ಲಿ ವಿಕಲ್ಪಗಳಿವೆ, ಅದು ಸಂಸಾರಿಗಳ ಸ್ಥಾನವೇ ಇದೆಯೆಂದು ತಿಳಿಯುವುದು. ಮೋಕ್ಷವಂತೂ ನಿರ್ವಿಕಲ್ಪವಿದೆ, ನಿರಾಕುಲವಿದೆ; ಆದುದರಿಂದ ಯಾರ ಮೋಕ್ಷದಲ್ಲಿ ಇಷ್ಟೊಂದು ವಿಕಲ್ಪಗಳಿವೆ, ಆ ಮೋಕ್ಷವು ಹೇಯವಿದೆ.

ಅದೆಷ್ಟೋ ಜೀವರುಗಳು ಶರೀರ ಸಹಿತ ಮೋಕ್ಷದಲ್ಲಿ ಹೋಗುವುದನ್ನು ಮನ್ನಿಸುತ್ತಾರೆ. ಅವರು ಹೀಗೆ ಹೇಳುತ್ತಾರೆ, -'ಯಾರ ಮೇಲೆ ಭಗವಂತರು ಕೃಪೆಮಾಡಿ ಪ್ರಸನ್ನರಾಗುತ್ತಾರೆ, ಆ ಮನುಷ್ಯನನ್ನು ತಮ್ಮ ಭಕ್ತನೆಂದು ತಿಳಿದು ಸಪ್ತಧಾತುವಿನಿಂದ ಕೂಡಿದ ಈ ಶರೀರ ಸಹಿತವಾಗಿಯೇ ತಮ್ಮ ಹತ್ತಿರ ಮೋಕ್ಷದಲ್ಲಿ ಕರೆಸಿಕೊಂಡು ಸುಖಿಯನ್ನಾಗಿಸುತ್ತಾರೆ. ಇದೇ ಪ್ರಕಾರ ಒಂದುವೇಳೆ ಯಾವುದೋ ನಗರದ ಸಂಪೂರ್ಣ ಜನರು ಭಗವಂತರ ಭಕ್ತಿ ಮಾಡುತ್ತಿದ್ದರೆ ಭಗವಂತರು ಸಂತುಷ್ಟರಾಗಿ ಸಂಪೂರ್ಣ ನಗರ ವಾಸಿಗಳನ್ನೇ ತಮ್ಮ ಹತ್ತಿರ ಮೋಕ್ಷದಲ್ಲಿ ಕರೆಸಿಕೊಳ್ಳುತ್ತಾರೆ.'

ಯಾರು ಹೀಗೆ ಮನ್ನಿಸುತ್ತಾರೆ; ಅವರಿಗೆ ಇಲ್ಲಿ ಹೇಳುವುದೇನೆಂದರೆ - ಎಲೈ ಸುಜ್ಞಾನೀ ಜೀವಗಳೇ ! ನೀವು ತಿಳಿದುಕೊಳ್ಳಿರಿ !! ಈ ಅಪವಿತ್ರ ಶರೀರವು ಮಹಾಮಲಿನವಿದೆ, ಸಪ್ತಧಾತು ಹಾಗೂ ಮಲ-ಮೂತ್ರಗಳಿಂದ ತುಂಬಿಕೊಂಡಿದೆ, ಮೂರ್ತಿಕ ಜಡವಾಗಿರುವುದರಿಂದ ಇದಂತೂ ಮೋಕ್ಷದಲ್ಲಿ ಹೋಗುವ ಸಾಧ್ಯತೆಯಿಲ್ಲ. ಎಲ್ಲಿ ಈ ಮೂರ್ತಿಕ ಶರೀರದ ಬರ-ಹೋಗುವಿಕೆಯಿದೆ, ಅದು ಸಂಸಾರ ಅವಸ್ಥೆಯೇ ಇದೆ. ಮೋಕ್ಷದಲ್ಲಿ ಮೂರ್ತಿಕ ಶರೀರವಿರುವುದಿಲ್ಲ. ಮೋಕ್ಷದಲ್ಲಿ ಅಮೂರ್ತಿಕ ಜ್ಞಾನಶರೀರವಿದೆ; ಅದಕ್ಕಾಗಿ ಯಾರ ಮೋಕ್ಷದಲ್ಲಿ ಈ ಮೂರ್ತಿಕ ಶರೀರವು ಹೋಗುತ್ತದೆ, ಆ ಮೋಕ್ಷವು ಹೇಯವಿದೆ.

ಅದೆಷ್ಟೋ ಜ್ಞಾನದರಿದ್ರರು, ಜ್ಞಾನಹೀನ ಜೀವರುಗಳು ಮೋಕ್ಷದಲ್ಲಿ ಶೂನ್ಯಭಾವ ಮನ್ನಿಸುತ್ತಾರೆ. ಅವರು ಹೀಗೆ ಹೇಳುತ್ತಾರೆ - 'ಯಾವೆಲ್ಲ ಸುಖಗಳಿವೆ, ಅವೆಲ್ಲವೂ ಸಂಸಾರದಲ್ಲಿಯೇ ಇವೆ. ಸ್ತ್ರೀ ಸಂಬಂಧದ ಭೋಗ ಸುಖ, ಅನೇಕ ಪ್ರಕಾರದ ಆರು ರಸ-ಮಿಠಾಯಿ - ಮೊದಕಾದಿ ಜಿಹ್ವೇಂದ್ರಿಯದ ಸುಖ, ಅನೇಕ ಪ್ರಕಾರದ ಸುಗಂಧ ರೂಪ ಘ್ರಾಣೇಂದ್ರಿಯದ ಸುಖ, ಅನೇಕ ಪ್ರಕಾರದ ಚಿನ್ನ-ರತ್ನಮಯ ಆಭೂಷಣ, ವಸ್ತ್ರ, ಸ್ತ್ರೀಯರ ರೂಪು, ನೃತ್ಯ ಶೋಭೆ ಮೊದಲಾದ ಅನೇಕ ಚಕ್ಷು ಇಂದ್ರಿಯದ ಸುಖ ಹಾಗೂ ಅನೇಕ ಪ್ರಕಾರದ ಮಧುರ ಸ್ವರದಿಂದ ಕೂಡಿದ ಅನೇಕ ಸಂಗೀತಾದಿ ರಾಗದ ವೀಣೆ, ಕೊಳಲು, ಸಂತೂರ, ಪೀಟಿಲು, ತಂಬೂರಿ ಮೊದಲಾಗಿ ಅನೇಕ ಸಚಿತ್ತ-ಅಚಿತ್ತ-ಮಿಶ್ರ ಸ್ವರಗಳಿಂದ ಮನೋಜ್ಞವಾದ ರಾಗಮಯ ಶಬ್ದರೂಪ ಕರ್ಣೇಂದ್ರಿಯದ ಸುಖ ಇತ್ಯಾದಿ ಐದೂ ಇಂದ್ರಿಯ ಸಂಬಂಧದ ಎಷ್ಟು ಸುಖಗಳಿವೆ, ಅವೆಲ್ಲವೂ ಸಂಸಾರದಲ್ಲಿಯೇ ಇದೆ. ಈ ಸುಖಗಳು ಮೋಕ್ಷದಲ್ಲಿ ಇಲ್ಲ. ಅಲ್ಲಿಯಂತೂ ಶೂನ್ಯವಿದೆ. ಯಾವ ಸುಖವೂ ಇಲ್ಲ ಮತ್ತು ಯಾವುದೇ ರೀತಿಯ ದುಃಖವೂ ಇಲ್ಲದ ಶೂನ್ಯವಿದೆ. ಯಾರೊಂದಿಗೆ ಮಾತನಾಡುವುದೂ ಇಲ್ಲ. ಎಲ್ಲಿ ಹೋಗುವುದೂ ಇಲ್ಲ, ತಿನ್ನುಣ್ಣುವುದೂ ಇಲ್ಲ, ಕೇವಲ ಶೂನ್ಯತೆಯಿದೆ.' - ಅದೆಷ್ಟೋ ಮೋಹಿ ಜೀವರುಗಳು ಇಂಥ ಮುಕ್ತಿಯನ್ನು ಮನ್ನಿಸುತ್ತಾರೆ.

ಇಲ್ಲಿ ಅಂಥವರಿಗೆ ಹೇಳುವುದೇನೆಂದರೆ - ಎಲೈ ಮೋಕ್ಷದ ವಾಂಛಕರೇ ಆಲಿಸಿರಿ ! ಮತ್ತು ವಿಚಾರ ಮಾಡಿ ನೋಡಿರಿ !! ಸುಖರಹಿತ ಶೂನ್ಯತೆಯಂತೂ ಮೂರ್ಖನಿಗೆ ಇರುತ್ತದೆ ಅಥವಾ ನಿದ್ರಾವಸ್ಥೆಯಲ್ಲಿ ಇರುತ್ತದೆ ಅಥವಾ ವಾಯು-ಸನ್ನಿಪಾತ ರೋಗವುಳ್ಳವನಿಗೆ ಇರುತ್ತದೆ ಅಥವಾ ಸುಖರಹಿತ ಶೂನ್ಯತೆಯು ದೀನ-ದರಿದ್ರನಿಗೆ ಇರುತ್ತದೆ ಅಥವಾ ಇಷ್ಟವಿಯೋಗದ ಕಾರಣ ಶೋಕಾಕುಲ ವ್ಯಕ್ತಿಗೆ ಇರುತ್ತದೆ, ಅಜ್ಞಾನ-ಮೋಹದಿಂದ ಜಡ ಸಮಾನನಾಗಿ ಹೋಗಿರುವಂಥ ಅಥವಾ ಚೇತನಾಭಾವರಹಿತ ಕಾಷ್ಟ-ಪಾಷಾಣದ ಮೂರ್ತಿಗೆ ಇರುತ್ತದೆ - ಇತ್ಯಾದಿ ಸ್ಥಾನಗಳಲ್ಲಿ ಶೂನ್ಯತೆಯಿರುತ್ತದೆ. ಶುದ್ಧ, ನಿರಾಕಾರ, ಚೇತನಮೂರ್ತಿ, ಜ್ಞಾನಭಂಡಾರರೂಪ ಪರಮಾತ್ಮರಿಗೆ ಮೋಕ್ಷದಲ್ಲಿ ಶೂನ್ಯತೆಯಿರುವುದಿಲ್ಲ. ಅವರು ಮಹಾಸುಖಸಾಗರದಲ್ಲಿ ಮಗ್ನರಿದ್ದಾರೆ. ಎಷ್ಟು ಸುಖಗಳು ಸಂಸಾರದಲ್ಲಿವೆ, ಅದರ ಅನಂತಗುಣಿತ ಸುಖಗಳು ಮೋಕ್ಷದಲ್ಲಿವೆ; ಅದಕ್ಕಾಗಿ ಯಾವ ಮೋಕ್ಷದಲ್ಲಿ ಶೂನ್ಯತೆಯ ಭಾವವಿದೆ, ಆ ಮೋಕ್ಷವು ಹೇಯವಿದೆ.

ಉಪಾದೇಯ ಮೋಕ್ಷ - ಎಲೈ ಸುಖಾರ್ಥಿ, ಸುಖದ ಇಚ್ಛೆಯುಳ್ಳವನೇ ! ನೀನು ಚಿತ್ತವನ್ನು ತೊಡಗಿಸಿ ಆಲಿಸು!! ಯಾವ ಆತ್ಮರು ಜನ್ಮ-ಮರಣದ ಮಹಾದುಃಖಗಳಿಂದ ಭಯಭೀತನಾಗಿ, ದಿಗಂಬರ ಪದಧಾರಣಮಾಡಿ ಅನೇಕ ಪ್ರಕಾರದ ತಪಗಳಿಂದ ಕರ್ಮಬಂಧನವನ್ನು ಭೇದಿಸಿ ಮೋಕ್ಷಪ್ರಾಪ್ತ ಮಾಡಿಕೊಳ್ಳುತ್ತಾರೆ; ಅವರು ಜನ್ಮ-ಮರಣಗಳಿಂದ ರಹಿತರಾಗುತ್ತಾರೆ ಅವರು ಭವಬಂಧನದಿಂದ ಬಿಡುಗಡೆಯಾಗಿ ಮೋಕ್ಷದ ಧ್ರುವಸ್ಥಾನದಲ್ಲಿ ವಿರಾಜಮಾನರಾಗಿದ್ದಾರೆ. ಅವರು ಆವಾಗಮನದ (ಬರ-ಹೋಗುವಿಕೆಯ) ಮಹಾದುಃಖವನ್ನು ನಷ್ಟಮಾಡಿ ಸುಖಿಗಳಾಗಿದ್ದಾರೆ. ಮೋಕ್ಷದಲ್ಲಿ ರಾಗ-ದ್ವೇಷಗಳ ಅಭಾವವಾಗಿರುವುದರಿಂದ ಅವರು ಮಹಾಸುಖಿಗಳಿದ್ದಾರೆ.

ರಾಗ-ದ್ವೇಷಗಳೇ ಮಹಾದುಃಖವಿದೆ, ಮೋಕ್ಷದಲ್ಲಿ ಈ ರಾಗ-ದ್ವೇಷಗಳಿಲ್ಲ. ಮುಕ್ತ ಜೀವರುಗಳು ಅನಂತಸುಖದ ಧಾರಕರಿದ್ದಾರೆ. ಎಲ್ಲ ಪ್ರಕಾರದ ಸಾಂಸಾರಿಕ ಇಂದ್ರಿಯಜನಿತ ಸುಖವಂತೂ ವಿನಾಶಿಕವಿದೆ. ಕ್ಷಣಭಂಗುರವಿದೆ ಮತ್ತು ಪರಾಧೀನವಿದೆ. ಇಂದ್ರ, ಚಕ್ರವರ್ತಿ, ನಾರಾಯಣ, ಕಾಮದೇವ, ಬಲಭದ್ರ ಮತ್ತು ಅಹಮಿಂದ್ರಾದಿ ಎಲ್ಲ ದೇವಗಳು ಹಾಗೂ ಮನುಷ್ಯರ ಅನಾದಿ-ಅನಂತಕಾಲದ ಸುಖಕ್ಕಿಂತಲೂ ಅನಂತಗುಣಿತ ಅತೀಂದ್ರಿಯ ಸುಖವು ಮೋಕ್ಷದ ಸುಖವಿದೆ; ಅಯ್ಯಾ! ಮೋಕ್ಷಸುಖವು ಇಂದ್ರಿಯ ರಹಿತವಿದೆ, ಅಂತೆಯೇ ಉಪಾದೇಯವಿದೆ.

ಮುಕ್ತ ಜೀವರುಗಳು ವಿಕಲ್ಪರಹಿತ, ಒಟ್ಟಿಗೇ ಒಂದು ಸಮಯದಲ್ಲಿ ಸಂಪೂರ್ಣ ಜಗತ್ತಿನ ಪದಾರ್ಥಗಳ ಸ್ವರೂಪವನ್ನು ಪ್ರತ್ಯಕ್ಷ ತಿಳಿಯುತ್ತಾರೆ. ಹೀನಜ್ಞಾನಿ ಮತ್ತು ಹೀನಶಕ್ತಿಯುಳ್ಳವರಿಗೇ ವಿಕಲ್ಪಗಳು ಉತ್ಪನ್ನವಾಗುತ್ತವೆ; ಅನಂತಜ್ಞಾನ ಶಕ್ತಿಧಾರಕ ಪರಮಾತ್ಮರಿಗೆ ವಿಕಲ್ಪಗಳಿರುವುದಿಲ್ಲ. ಸಮಸ್ತ ದ್ರವ್ಯಕರ್ಮರೂಪದ ಶತ್ರುಗಳ ನಾಶವಾಗಿ ಹೋಗುವುದರಿಂದ ಯಾರ ಔದಾರಿಕ ಮೊದಲಾದ ಪೌದ್ಗಲಿಕ ಸ್ಕಂಧಮಯ ಶರೀರಗಳು ನಷ್ಟವಾಗಿ ಹೋಗಿವೆ; ಅಂಥ ಸಿದ್ಧಪದದಧಾರಕ ಸಿದ್ಧ ಜೀವರುಗಳು ಅಮೂರ್ತಿಕರಿದ್ದಾರೆ. ನಿರಂಜನ ದಶೆಯಧಾರಕ ಸುಖದ ಪಿಂಡರಿದ್ದಾರೆ. ಕೇವಲಜ್ಞಾನ, ಕೇವಲದರ್ಶನದಿಂದ ಸಮಸ್ತ ಲೋಕಾಲೋಕದ ವೇತ್ತಾರರಿದ್ದಾರೆ. ಈ ಸರ್ವಜ್ಞ ವೀತರಾಗರು ಘಟ-ಘಟದ ಅಂತರ್ಯಾಮಿಗಳು ಭವಸಾಗರದ ತಾರಕರಿದ್ದಾರೆ. ಚೈತನ್ಯಮಯರಾದ ಅವರು ಯಾವಾಗಲೂ ಆನಂದ ಮೂರ್ತಿಗಳಿದ್ದು ಜಡತ್ವ ಭಾವಮಯ ಶೂನ್ಯತೆಯರೂಪ ದಶೆಯಿಂದ ರಹಿತರಿದ್ದಾರೆ - ಇಂಥ ಜನ್ಮ-ಮರಣ ರಹಿತ, ರಾಗ-ದ್ವೇಷ ವರ್ಜಿತ, ಅತೀಂದ್ರಿಯ ಸುಖದ ಭೋಗಿ, ವಿಕಲ್ಪರಹಿತ, ನಿರಾಕಾರ, ಪೌದ್ಗಲಿಕ ಶರೀರದಿಂದ ರಹಿತ, ಸರ್ವಜ್ಞ ಪದದ ಧಾರಕ, ಜ್ಞಾನಮೂರ್ತಿ ಚೈತನ್ಯ ಚಮತ್ಕಾರಮಯ ಇತ್ಯಾದಿ ಗುಣಗಳ ಧಾರಕರು ಮುಕ್ತ ಜೀವರಿದ್ದಾರೆ. ಇಂಥ ಮೋಕ್ಷವು ಉಪಾದೇಯವಿದೆ. ಇಂಥ ಮೋಕ್ಷದ ನಾಮ ಹೇಳುವುದರಿಂದ, ಸ್ಮರಣೆ ಮಾಡುವುದರಿಂದ, ಧ್ಯಾನ ಮಾಡುವುದರಿಂದ, ಪೂಜೆ ಮಾಡುವುದರಿಂದ ಶ್ರದ್ಧೆ ಮಾಡುವುದರಿಂದ, ಅಪೇಕ್ಷೆ ಮಾಡುವುದರಿಂದ ಮಹಾಪುಣ್ಯದ ಪ್ರಾಪ್ತಿಯಾಗುತ್ತದೆ; ಅದರಿಂದ ಮುಂದಿನ ಭವದಲ್ಲಿ ಉತ್ತಮ ಪದವಿಯನ್ನು ಪ್ರಾಪ್ತ ಮಾಡಿಕೊಂಡು ಪರಂಪರೆಯಿಂದ ಮುಕ್ತಿಪುರಿಯ ನಿವಾಸಿಯಾಗುತ್ತಾನೆ. ಆದ್ದರಿಂದ ಸಮ್ಯಗ್ಜ್ಞಾನ ಸಂಪದದ ಧಾರಕ ಭವ್ಯಾತ್ಮರಿಗೆ ಇಂಥ ಮೋಕ್ಷವೇ ಉಪಾದೇಯವಿದೆ.

ಈ ಪ್ರಕಾರ ಸುದೃಷ್ಟಿತರಂಗಿಣಿಯೆಂಬ ಹೆಸರಿನ ಗ್ರಂಥದಲ್ಲಿ ಮೋಕ್ಷತತ್ತ್ವದೊಳಗೆ ಜ್ಞೇಯ, ಹೇಯ, ಉಪಾದೇಯಗಳ ವರ್ಣನೆ ಮಾಡುವಂಥ ಹದಿನೆಂಟನೆಯ ಪರ್ವವು ಪೂರ್ಣವಾಯಿತು.

★★★★★

ಆತ್ಮಾನುಭೂತಿಯ ಪ್ರಾಪ್ತಿಯ ಸಲುವಾಗಿ ಸನ್ನದ್ಧ ಪುರುಷನು ಮೊದಲಂತೂ ಶ್ರುತಜ್ಞಾನದ ಅವಲಂಬನದಿಂದ ಆತ್ಮನ ವಿಕಲ್ಪಾತ್ಮಕ ಸಮ್ಯಕ್ ನಿರ್ಣಯ ಮಾಡುತ್ತಾನೆ. ಅದರ ನಂತರ ಆತ್ಮನ ಪ್ರಕಟ ಪ್ರಸಿದ್ಧಿಯ ಸಲುವಾಗಿ, ಪರ ಪ್ರಸಿದ್ಧಿಯ ಕಾರಣಭೂತವಿರುವ ಇಂದ್ರಿಯಗಳಿಂದ ಮತಿಜ್ಞಾನ ತತ್ತ್ವವನ್ನು ಸಂಕ್ಷೇಪಿಸಿ ಆತ್ಮಾಭಿಮುಖ ಮಾಡುತ್ತಾನೆ ಹಾಗೂ ಅನೇಕ ಪ್ರಕಾರದ ಪಕ್ಷಗಳ ಅವಲಂಬನೆ ಮಾಡುವಂಥ ವಿಕಲ್ಪಗಳಿಂದ ಆಕುಲತೆಯನ್ನು ಉತ್ಪನ್ನ ಮಾಡುವಂಥ ಶ್ರುತಜ್ಞಾನದ ಬುದ್ಧಿಯನ್ನೂ ಗೌಣಮಾಡಿ ಅದನ್ನೂ ಆತ್ಮಾಭಿಮುಖ ಮಾಡುತ್ತ ವಿಕಲ್ಪಾನುಭವಗಳನ್ನು ದಾಟಿ ಸ್ವಾನುಭವ ದಶೆಗೆ ಪ್ರಾಪ್ತನಾಗುತ್ತಾನೆ.

## ೧೯ ಃ ಹತ್ತೊಂಭತ್ತನೆಯ ಪರ್ವ
# ಜ್ಞಾನದಲ್ಲಿ ಜ್ಞೇಯ, ಹೇಯ, ಉಪಾದೇಯ

ಜ್ಞಾನದಲ್ಲಿ ಜ್ಞೇಯ, ಹೇಯ, ಉಪಾದೇಯ -

**ಜ್ಞೇಯ ಹೇಯಾದೇಯೋ, ಣಾಣಚ್ಚಯ ವಸು ಭೇಯ ಜಿಣಉತ್ತಂ ।**

**ಜಾಣ ಕುಣಾಣ ಯ ಹೇಯಂ, ಉವಾದೇಯಂ ಪಣ ಸುದ್ಧ ಣಾಣಂತು ॥೪೪॥**

**ಗಾಥಾರ್ಥ ಃ-** ಜ್ಞೇಯ, ಹೇಯ, ಉಪಾದೇಯರೂಪ ಜ್ಞಾನದ ಭೇದಗಳು ಎಂಟು ಇವೆ. ಇವುಗಳೊಳಗಿನ ಮೂರು ಕುಜ್ಞಾನಗಳಂತೂ ಹೇಯವಿವೆ ಹಾಗೂ ಐದು ಸುಜ್ಞಾನಗಳು ಉಪಾದೇಯವಿವೆಯೆಂದು ಜಿನದೇವರು ಹೇಳಿದ್ದಾರೆ.

**ಭಾವಾರ್ಥ ಃ-** ಸುಜ್ಞಾನ-ಕುಜ್ಞಾನಗಳ ಸಂಬಂಧದ ಸಂಪೂರ್ಣ ತಿಳಿವಳಿಕೆಯು ಜ್ಞೇಯವಿದೆ. ಇದರಲ್ಲಿ ೧) ಹೇಯ ಜ್ಞಾನ, ೨) ಉಪಾದೇಯ ಜ್ಞಾನವೆಂದು ಎರಡು ಭೇದಗಳಿವೆ. ಕುಮತಿಜ್ಞಾನ, ಕುಶ್ರುತಜ್ಞಾನ, ಕುಅವಧಿ ಜ್ಞಾನ - ಇವು ಹೇಯ ಜ್ಞಾನಗಳಿವೆ; ಅವುಗಳನ್ನೇ ಈಗ ಹೇಳುತ್ತಾರೆ-

ಹೇಯಜ್ಞಾನ - ೧) ಕುಮತಿಜ್ಞಾನ - ಹಿಂಸೆಯ ರೂಪ ಜ್ಞಾನದಲ್ಲಿ ಚತುರತೆ, ಜೀವಗಳನ್ನು ಹಿಡಿಯುವ ಸಲುವಾಗಿ ಜಾಲ ನಿರ್ಮಿಸುವಜ್ಞಾನ, ಪಾಶ ನಿರ್ಮಿಸುವ ಜ್ಞಾನ, ಪಾಶ, ಪಂಜರ, ಚೂರಿ, ಕಿರುಗತ್ತಿ , ಭಲ್ಲೆ, ಖಡ್ಗ, ಬಂದೂಕು, ಬಾಂಬ್ ಇತ್ಯಾದಿ ಹಿಂಸೆಯ ಕಾರಣಭೂತ ಅನೇಕ ಶಸ್ತ್ರಗಳನ್ನು ನಿರ್ಮಿಸುವುದು ಕುಜ್ಞಾನವಿದೆ. ಚಿತ್ರ ಶಿಲ್ಪಕಲೆ, ಹಾಸ್ಯಕಲೆ, ಯುದ್ಧಕಲೆ, ಚೋರಕಲೆ ಇತ್ಯಾದಿಗಳ ಮಾಧ್ಯಮದಿಂದ ಇತರರನ್ನು ವಂಚಿಸುವ ಉದ್ದೇಶದಿಂದ ಕೂಡಿದ ಚತುರತೆ, ಯುಕ್ತಿಗಳು ಉತ್ಪನ್ನವಾಗುವುದು ಕುಜ್ಞಾನವಿದೆ. ಅನ್ಯಜೀವಗಳಿಗೆ ಅನೇಕ ಪ್ರಕಾರದಿಂದ ದುಃಖವೀಯುವ ಕಲೆ, ಚೋರ, ಕುಮಾರ್ಗೀ ಜೀವರುಗಳಿಗೆ ದಂಡನೆ ನೀಡುವ ಕಲೆ, ಚತುರತೆ ಅರ್ಥಾತ್ ಈ ಪ್ರಕಾರದಿಂದ ಸಾಯಿಸಿದರೆ ಬಹಳಷ್ಟು ದುಃಖಿಯಾಗುವುದು ಎಂಬಿವೇ ಮೊದಲಾದವು ಕುಜ್ಞಾನವಿವೆ. ಕೌತುಕ, ಹಾಸ್ಯ , ಚೇಷ್ಟೆ ಮೊದಲಾದ ಅನೇಕ ಭಾವಗಳಿಂದ ಇತರರನ್ನು ಸಂತುಷ್ಟ ಪಡಿಸುವುದು ಹಾಗೂ ಅನೇಕ ಪ್ರಕಾರದ ಸೋಗು, ವೇಷ ಮಾಡಿಕೊಂಡು ಜನರನ್ನು ಅಚ್ಚರಿಗೊಳಿಸುವುದು, ಕಳವು ಹಾಗೂ ಪರಸ್ತ್ರೀ ಸೇವನೆಯಲ್ಲಿ ಪ್ರೀತಿಯ ಭಾವ-ಇತ್ಯಾದಿ ಪ್ರಕಾರದಿಂದ ಲೋಕದಲ್ಲಿ ಪ್ರವರ್ತಿಸುವಂಥ ಜ್ಞಾನದ ಚೇಷ್ಟೆಗಳೆಲ್ಲವೂ ಕುಜ್ಞಾನವಿವೆ.

೨) ಕುಶ್ರುತಜ್ಞಾನ - ಯುದ್ಧ ಶಾಸ್ತ್ರಗಳ ಜ್ಞಾನ, ಅನೇಕ ಪ್ರಕಾರದ ರಸಿಕಪ್ರಿಯತೆ, ಶೃಂಗಾರ ಶಾಸ್ತ್ರ ಮೊದಲಾದ ಕಾಮೋತ್ಪತ್ತಿಯ ಕಾರಣವಿರುವ ರಸಶಾಸ್ತ್ರ, ಸಂಗೀತ ಶಾಸ್ತ್ರಾದಿಗಳು ಕುಜ್ಞಾನವಿವೆ. ಬೇರೆ ಜೀವಗಳ ಘಾತದ ಉಪದೇಶಕ ಹಿಂಸೆಯ ಕಾರಣಭೂತ ಶಾಸ್ತ್ರಗಳು ಕುಜ್ಞಾನ ಶಾಸ್ತ್ರಗಳಿವೆ. ಕುದೇವ-ಕುಗುರುಗಳ ಪೋಷಣೆಯ ಹೇತು ಅನೇಕ ಪ್ರಕಾರದ ದ್ರವ್ಯಗಳನ್ನರ್ಪಿಸುವ ಕಥನ ಹಾಗೂ ಈ ದೇವಗಳು ಇಂಥದೊಂದು ವಿಶಿಷ್ಟ ಭೋಜನದಿಂದ ತೃಪ್ತರಾಗುತ್ತಾರೆ ಇತ್ಯಾದಿ ಪ್ರಕಾರದ ಕಥನವಿರುವ ಶಾಸ್ತ್ರಗಳು ಕುಶ್ರುತಗಳಿವೆ. ಕುಗುರುಗಳ ಪೋಷಣೆಯ ಉದ್ದೇಶದಿಂದ ಯಾವುದೇ ವಿಶಿಷ್ಟ ಭೋಜನ, ವಸ್ತ್ರ, ಧನ, ಮಂದಿರ, ದೇವ, ಗುರುವಿನ ಸೇವೆ ಮಾಡುವುದರಿಂದ ಹಾಗೂ ತಮ್ಮ ದಾಸಿ, ದಾಸ, ಸ್ತ್ರೀ ಮೊದಲಾದವರನ್ನು ಗುರುಗಳ ಸೇವೆಯ ಉದ್ದೇಶದಿಂದ ಕೊಡುವುದರಿಂದ ಅದರ ಫಲದಲ್ಲಿ ಅಪ್ಸರೆಯರ ಭೋಗದ ಪ್ರಾಪ್ತಿಯಾಗುತ್ತದೆ, ಆನೆ, ಕುದುರೆ, ರಥ, ಪಲ್ಲಕ್ಕಿಯನ್ನು ಗುರುಗಳಿಗೆ ಕೊಡುವುದರ ಫಲಸ್ವರೂಪವಾಗಿ ದೇವ ವಿಮಾನದ ಪ್ರಾಪ್ತಿಯಾಗುತ್ತದೆ- ಇತ್ಯಾದಿ ಪ್ರಕಾರದ ಕಥನವು ಯಾವ ಶಾಸ್ತ್ರಗಳಲ್ಲಿ ಇರುತ್ತದೆ, ಅವು ಕುಶ್ರುತಗಳಿವೆ. ಈ ಕುಶ್ರುತ ಶಾಸ್ತ್ರಗಳ ಜ್ಞಾನವು ಯಾರಿಗೆ ಇದೆ, ಅದು ಕುಶ್ರುತಜ್ಞಾನವಿದೆ. ಈ ಜ್ಞಾನವು ಸುದೃಷ್ಟಿಗಳಿಂದ ಹೇಯವಿದೆ.

೩) ವಿಭಂಗ ಜ್ಞಾನ - ಆತ್ಮ ಹಿತದ ಕಾರಣಭೂತವಿರುವ ಸಮ್ಯಗ್ದರ್ಶನವಿಲ್ಲದೆ ಮಿಥ್ಯಾಭಾವ ಸಹಿತ, ಈ ಭವ-ಪರಭವಗಳ ಮಾತನ್ನು ತಿಳಿಯುವುದು ಹಾಗೂ ದೂರವರ್ತಿ ಪದಾರ್ಥಗಳನ್ನು ಪ್ರತ್ಯಕ್ಷ ತಿಳಿಯುವುದು ವಿಭಂಗ ಜ್ಞಾನವಿದೆ. ಇದರ ಹೆಸರೇ ಕುಅವಧಿಯೂ ಇದೆ. ಈ ಪ್ರಕಾರ ಸಾಮಾನ್ಯ ಅರ್ಥ ಸಹಿತ ಹೇಳಲಾಗಿರುವ ಕುಮತಿ, ಕುಶ್ರುತ ಮತ್ತು ಕುಅವಧಿ ಇವು ಮೂರು ಕುಜ್ಞಾನಗಳು ಸಮ್ಯಗ್ದೃಷ್ಟಿಗಳಿಂದ ಹೇಯವಿವೆ.

೨) ಸುಜ್ಞಾನ(ಉಪಾದೇಯಜ್ಞಾನ) - ಮತಿಜ್ಞಾನ, ಶ್ರುತಜ್ಞಾನ, ಅವಧಿಜ್ಞಾನ, ಮನಃಪರ್ಯಯಜ್ಞಾನ ಮತ್ತು ಕೇವಲಜ್ಞಾನ - ಇವು ಐದು ಸುಜ್ಞಾನಗಳಿವೆ.

೧) ಮತಿಜ್ಞಾನ - ಮತಿಜ್ಞಾನದ ಭೇದಗಳು ಮೂರು ನೂರಾ ಮೂವತ್ತಾರು ಇವೆ. ಅವುಗಳನ್ನು ಈಗ ನೋಡೋಣ ! ಮೊದಲಿನ ನಾಲ್ಕು ಭೇದಗಳು - ಅವಗ್ರಹ, ಈಹಾ, ಅವಾಯ, ಧಾರಣಾ.

ಯಾವುದರಲ್ಲಿ ಪದಾರ್ಥದ ಸಾಮಾನ್ಯ ಅವಲೋಕನವು ದೂರದಿಂದಲೇ ಆಗುತ್ತದೆ. ಯಾರೋ ದೂರದಿಂದಲೇ ಒಂದು ಸ್ತಂಭವನ್ನು ನೋಡಿದರು. ಇದು ಏನೋ ಇದೆಯೆಂದು ಅದನ್ನು ಸಾಮಾನ್ಯ ಭಾವದಿಂದ ನೋಡಿದರು. ಇಂಥ ಭಾವವನ್ನು ತಿಳಿಯುವುದು ಅವಗ್ರಹ ಮತಿಜ್ಞಾನವಿದೆ; ಆದರೆ ಇದರಲ್ಲಿ ಭೇದಾಭೇದವನ್ನು ತಿಳಿಯಲಾಗುವುದಿಲ್ಲ.

ಆ ನೋಡಲಾಗಿರುವ ಸ್ತಂಭದಲ್ಲಿಯೇ ಇದು ಸ್ತಂಭವಿದೆಯೋ ಅಥವಾ ಮನುಷ್ಯನಿದ್ದಾನೆ - ಎಂಬ ಭೇದಾಭೇದದ ವಿಕಲ್ಪಾತ್ಮಕ ಜ್ಞಾನದ ಹೆಸರು ಈಹಾ ಮತಿಜ್ಞಾನವಿದೆ.

ನಂತರ ಅದೇ ಸ್ತಂಭದ ಕುರಿತಾಗಿ 'ಇವನು ಮನುಷ್ಯನಲ್ಲ, ಸ್ತಂಭವೇ ಇದೆ' - ಎಂಬ ನಿರ್ಣಯಾತ್ಮಕ ಜ್ಞಾನದ ಹೆಸರು ಅವಾಯ ಮತಿಜ್ಞಾನವಿದೆ.

ಅವಾಯದಲ್ಲಿ ನಿಶ್ಚಯ ಮಾಡಲಾದ ಪದಾರ್ಥವನ್ನು ಬಹಳಷ್ಟು ಸಮಯದ ನಂತರವೂ ಕೂಡ ಮರೆಯದಿರುವುದು ಕಾಲಾಂತರದಲ್ಲಿಯೂ ಅದರ ಜ್ಞಾನವು ಉಳಿದುಕೊಳ್ಳುವುದು ಮುಂದೆ ಅದರಿಂದ ಸ್ಮರಣೆಯು ಬರುವ ಸಾಧ್ಯತೆಯಿದೆ ಆ ಸಂಸ್ಕಾರಾತ್ಮಕ ಜ್ಞಾನವು ಧಾರಣಾ ಮತಿಜ್ಞಾನವಿದೆ.

ಈ ಪ್ರಕಾರ ಅವಗ್ರಹ, ಈಹಾ, ಅವಾಯ ಮತ್ತು ಧಾರಣಾ - ಈ ನಾಲ್ಕು ಭೇದಗಳಿಂದ ಪದಾರ್ಥವನ್ನು ತಿಳಿಯುವುದು ಮತಿಜ್ಞಾನವಿದೆ. ಇವೇ ನಾಲ್ಕು ಭೇದಗಳಿಂದ ಐದು ಇಂದ್ರಿಯ ಮತ್ತು ಮನಸ್ಸು ಇವು ಆರರಿಂದ ಪರಸ್ಪರ ಗುಣಿಸುವುದರಿಂದ ಇಪ್ಪತ್ನಾಲ್ಕು ಭೇದಗಳಾಗುತ್ತವೆ.

ಯಾವ ಪ್ರಕಾರ ಸ್ಪರ್ಶನ ಇಂದ್ರಿಯದಿಂದ ಯಾವುದೋ ವಸ್ತು-ಪದಾರ್ಥದ ಸ್ಪರ್ಶ ಮಾಡಿದನು, ಆಗ ಸಾಮಾನ್ಯ ಭಾವದಿಂದ ಕೇವಲ ಇಲ್ಲಿ ಏನೋ ಇದೆಯೆಂದಿಷ್ಟೇ ತಿಳಿಯುತ್ತಾನೆ. ವಿಶೇಷ ಭೇದ ಮಾಡುವುದಿಲ್ಲ; ಇದು ಸ್ಪರ್ಶನ ಇಂದ್ರಿಯದಿಂದ ಅವಗ್ರಹವಾಯಿತು. ಪುನಃ ವಿಚಾರ ಮಾಡುತ್ತ ಯಾವ ಪದಾರ್ಥವು ಕಾಲುಗಳಿಂದ ಸ್ಪರ್ಶಿತವಾಯಿತು, ಅದೇನಿದೆ ? - ಕಠೋರ-ಕಠೋರವಿದೆ, ದುಂಡಗೆ ಇದೆ; ಎಂದರೆ ಅದು ಬೇಕಾದರೆ ರತ್ನವಿರಬಹುದು ಅಥವಾ ಕಲ್ಲು (ಹರಳು) ಇರಬಹುದು- ಈ ಜ್ಞಾನದ ಹೆಸರು ಸ್ಪರ್ಶನ ಇಂದ್ರಿಯದ ಈಹಾ ಭೇದವಿದೆ.

ಪುನಃ ಇದರ ಕುರಿತಾಗಿಯೇ ವಿಚಾರ ಮಾಡುತ್ತ, ಅಹುದು ಸ್ಪಷ್ಟವಾಗಿಯೇ ದುಂಡಗಿದೆ, ಸ್ವಚ್ಛವಿದೆ; ಅದರಿಂದ ರತ್ನವಿದೆ. ಈ ಪ್ರಕಾರ ನಿಶ್ಚಯಾತ್ಮಕ ಜ್ಞಾನದ ಹೆಸರು ಸ್ಪರ್ಶನ ಇಂದ್ರಿಯದ ಅವಾಯ ಭೇದವಿದೆ. ಇದೇ ಪ್ರಕಾರ ಮುಂಬರುವ ಕಾಲದಲ್ಲಿ ಇದರ ಮರೆವು ಆಗದಿರುವರೂಪ ಸಂಸ್ಕಾರಾತ್ಮಕ ಜ್ಞಾನವು ಸ್ಪರ್ಶನ ಇಂದ್ರಿಯದ ಧಾರಣಾ ಇದೆ. ಹೀಗೆ ಸ್ಪರ್ಶನ ಇಂದ್ರಿಯ ಸಂಬಂಧದಲ್ಲಿ ಜ್ಞಾನದ ನಾಲ್ಕು ಭೇದ ಹೇಳಿದ್ದಾರೆ.

ಇದೇ ರೀತಿ ರಸನಾ, ಘ್ರಾಣ, ಚಕ್ಷು, ಶ್ರೋತ್ರ ಮತ್ತು ಮನಸ್ಸು - ಇವು ಐದರ ಮೇಲೆ ಘಟಿತಗೊಳಿಸಿದರೆ ಒಟ್ಟು ಇಪ್ಪತ್ನಾಲ್ಕು ಭೇದಗಳಾಗುತ್ತವೆ. ಈ ಇಪ್ಪತ್ನಾಲ್ಕರಲ್ಲಿ ವ್ಯಂಜನಾವಗ್ರಹ ಸಂಬಂಧದ ಸ್ಪರ್ಶನಾ, ರಸನಾ, ಘ್ರಾಣ ಮತ್ತು ಶ್ರೋತ್ರ ಇವು ನಾಲ್ಕು ಭೇದಗಳನ್ನು ಸೇರಿಸುವುದರಿಂದ ಇಪ್ಪತ್ತೆಂಟು ಆಗುತ್ತವೆ. ಈ ಇಪ್ಪತ್ತೆಂಟು ಭೇದಗಳನ್ನು ಬಹು, ಬಹುವಿಧ ಮೊದಲಾದ ಪದಾರ್ಥದ ಹನ್ನೆರಡು ಭೇದಗಳಿಂದ ಗುಣಿಸಿದ ಮೇಲೆ ಮುನ್ನೂರಾ ಮೂವತ್ತಾರು ಮತಿಜ್ಞಾನದ ಭೇದಗಳಾಗುತ್ತವೆ.

ಈ ಮತಿಜ್ಞಾನದ ಭೇದಗಳನ್ನು ಘಟಿತಗೊಳಿಸುವ ಇನ್ನೊಂದು ಅನ್ಯ ಪ್ರಕಾರವೂ ಇದೆ. ಅದನ್ನು ಹೇಳುತ್ತಾರೆ,-

ಅವಗ್ರಹಾದಿ ನಾಲ್ಕು ಭೇದಗಳನ್ನು ಪಂಚೇಂದ್ರಿಯ ಮತ್ತು ಮನಸ್ಸಿನಿಂದ ಗುಣಿಸಿದ ಮೇಲೆ ಇಪ್ಪತ್ನಾಲ್ಕು ಭೇದಗಳಾಗುತ್ತವೆ. ಈ ಇಪ್ಪತ್ನಾಲ್ಕನ್ನು ಬಹು, ಬಹುವಿಧ ಮೊದಲಾದ ಹನ್ನೆರಡು ಭೇದಗಳಿಂದ ಗುಣಿಸಿದ ಮೇಲೆ ಎರಡು ನೂರಾ ಎಂಭತ್ತೆಂಟು ಆಗುತ್ತವೆ. ಈ ಭೇದಗಳಂತೂ ಅರ್ಥಾವಗ್ರಹದ ಭೇದಗಳಿವೆ. ಸ್ಪರ್ಶನ, ರಸನಾ, ಘ್ರಾಣ ಮತ್ತು ಶ್ರೋತ್ರ - ಇವು ನಾಲ್ಕು ಇಂದ್ರಿಯಗಳಿಂದ ಬಹು ಮೊದಲಾದ ಹನ್ನೆರಡು ಭೇದಗಳ ಗುಣಾಕಾರ ಮಾಡಿದ ಮೇಲೆ ನಲವತ್ತೆಂಟು ಭೇದಗಳಾಗುತ್ತವೆ - ಇವು ವ್ಯಂಜನಾವಗ್ರಹದ ಭೇದಗಳಿವೆ. ಎರಡೂ ಸೇರಿ ಮೂರು ನೂರಾ ಮೂವತ್ತಾರು ಭೇದರೂಪ ಮತಿಜ್ಞಾನವಿದೆ. ಇಲ್ಲಿ ಸಾಮಾನ್ಯ ಭಾವ ಹೇಳಲಾಗಿದೆ. ಗೊಮ್ಮಟಸಾರದಿಂದ ವಿಶೇಷ ತಿಳಿಯುವುದು.

೨) ಶ್ರುತಜ್ಞಾನದ ಸಾಮಾನ್ಯಸ್ವರೂಪ-ಶ್ರುತಜ್ಞಾನದಲ್ಲಿ ಅನೇಕ ಭೇದಗಳಿವೆ. ಅದರಲ್ಲಿ ಮೂಲ ಎರಡು ಭೇದಗಳಿವೆ. ೧) ಹನ್ನೆರಡು ಅಂಗ, ೨) ಹದಿನಾಲ್ಕು ಪ್ರಕೀರ್ಣಕ. ದ್ವಾದಶಾಂಗದಲ್ಲಿ ಎರಡು ಭೇದಗಳಿವೆ. ೧) ಹನ್ನೊಂದು ಅಂಗ ಮತ್ತು ೨) ಹನ್ನೆರಡನೇ ಅಂಗದ ಐದು ಭೇದಗಳಿದ್ದು ಅವುಗಳಲ್ಲಿ ಹದಿನಾಲ್ಕು ಪೂರ್ವಗಳ ಕಥನವಿದೆ. ಇವುವೇ ಅಂಗಪೂರ್ವಗಳಲ್ಲಿ ಪ್ರಥಮಾನುಯೋಗ, ಕರಣಾನುಯೋಗ, ಚರಣಾನುಯೋಗ, ದ್ರವ್ಯಾನುಯೋಗ - ಇವು ನಾಲ್ಕು ಅನುಯೋಗಗಳು ಗರ್ಭಿತವಿವೆ.

ಯಾವುದರಲ್ಲಿ ತೀರ್ಥಂಕರ, ಚಕ್ರವರ್ತಿ, ಅರ್ಧಚಕ್ರೀ, ಇಂದ್ರ, ದೇವ ಇತ್ಯಾದಿ ಮಹಾಪುರುಷರ ಕಥೆಯಿದೆ ಅದು ಪ್ರಥಮಾನುಯೋಗವಿದೆ. ಮೂರುಲೋಕದ ರಚನೆಯ ಕಥನವು ಯಾವುದರಲ್ಲಿದೆ, ಅದು ಕರಣಾನುಯೋಗವಿದೆ. ಮುನಿ-ಶ್ರಾವಕರ ಆಚಾರದ ಕಥನವಿರುವಂಥದು ಚರಣಾನುಯೋಗವಿದೆ. ಆರುದ್ರವ್ಯ, ಏಳುತತ್ತ್ವ, ಒಂಭತ್ತು ಪದಾರ್ಥ, ಐದು ಅಸ್ತಿಕಾಯಗಳ ಕಥನವು ಯಾವುದರಲ್ಲಿದೆ ಅದು ದ್ರವ್ಯಾನುಯೋಗವಿದೆ. ಆರು ದ್ರವ್ಯಗಳ ಗುಣ, ಪರ್ಯಾಯದ ಕಥನ; ಇವೇ ದ್ರವ್ಯಗಳಿಂದ ಸಂಸಾರದ ರಚನೆಯ ರೂಪದ ನಾಲ್ಕು ಗತಿಗಳ ರಚನೆಯಾಗಿದೆ - ಇಂಥ ಕಥನ ಹಾಗೂ ದ್ರವ್ಯದಲ್ಲಿ ಷಡ್‌ಗುಣಹಾನಿ-ವೃದ್ಧಿರೂಪದ ಪರಿಣಮನ ಮತ್ತು ದ್ರವ್ಯದ ತಮ್ಮ ತಮ್ಮ ವ್ಯಯ, ಧ್ರೌವ್ಯ, ಉತ್ಪಾದ ಸಹಿತ ಮೂರು ಭೇದರೂಪ ಪ್ರವರ್ತನದ ಕಥನ - ಇವೆಲ್ಲವೂ ಶ್ರುತಜ್ಞಾನದ ಭೇದಗಳಿವೆ.

ಅಲ್ಲಿ ಉತ್ಪಾದ, ವ್ಯಯ, ಧ್ರೌವ್ಯದ ಸಾಮಾನ್ಯ ಕಥನ ಮಾಡುತ್ತ- ವಸ್ತುವಿನ ಯಾವ ಪರ್ಯಾಯವು ನಷ್ಟವಾಗುತ್ತದೆ ಅದು ವ್ಯಯವಿದೆ. ವಸ್ತುವಿನಲ್ಲಿ ನವೀನ ಪರ್ಯಾಯವು ಉತ್ಪನ್ನವಾಗುವುದು ಉತ್ಪಾದವಿದೆ ಮತ್ತು ವಸ್ತುವು ಯಾವಾಗಲೂ ಶಾಶ್ವತ ಉಳಿಯುವುದು ಅದು ಧ್ರುವವಿದೆ - ಎಂದು ಹೇಳಿದ್ದಾರೆ.

ಹೇಗೆ ಕೈ ಬಳೆಯನ್ನು ಮುರಿಸಿ ಕರ್ಣ ಕುಂಡಲ ಮಾಡಿಸಿದ ಮೇಲೆ ಇದರಲ್ಲಿ ಮೂರು ಭೇದಗಳಾದವು; ಅದನ್ನು ತಿಳಿಸಿಕೊಡುತ್ತಾರೆ - ಅದರಲ್ಲಿ ದ್ರವ್ಯವಂತೂ ಚಿನ್ನವಿದೆ, ಅದನ್ನು ಶಾಶ್ವತವಿರುವುದರಿಂದ ಧ್ರುವವೆಂದರು. ಬಳೆಯ ರೂಪದ ಪರ್ಯಾಯ ಮುರಿದು ಹೋಯಿತು; ಅದರಿಂದ ಅದರ ವ್ಯಯವೆಂದು ಹೇಳಿದರು,

ಕುಂಡಲವಾಯಿತು ಆ ರೂಪದ ನವೀನ ಪರ್ಯಾಯವು ಉತ್ಪನ್ನವಾಯಿತು; ಅದಕ್ಕಾಗಿ ಅದನ್ನು ಉತ್ಪಾದ-ವೆನ್ನಲಾಗಿದೆ-ಹೀಗೆ ಇವು ಮೂರು ಭೇದಗಳನ್ನು ತಿಳಿಯುವುದು.

ಇದೇ ಪ್ರಕಾರ ಆತ್ಮರೂಪ ದ್ರವ್ಯವು ಮನುಷ್ಯ ಪರ್ಯಾಯವನ್ನು ಬಿಟ್ಟು ದೇವವಾಯಿತು. ಆಗ ಮನುಷ್ಯ ಪರ್ಯಾಯದ್ದಂತೂ ವ್ಯಯವಾಯಿತು ಮತ್ತು ದೇವ ಪರ್ಯಾಯದ ಉತ್ಪಾದವಾಯಿತು; ಜೀವತ್ವಭಾವವು ಎರಡೂ ಅವಸ್ಥೆಗಳಲ್ಲಿ ಶಾಶ್ವತವಿರುವುದರಿಂದ ಅದು ಧ್ರುವವಿದೆ. ಇದೇ ರೀತಿ ನಯಭೇದದಿಂದ ವ್ಯಯ, ಧ್ರೌವ್ಯ , ಉತ್ಪಾದ ಅನೇಕ ಪದಾರ್ಥಗಳಿಗೆ ಅನ್ವಯಿಸಬೇಕಾಗುವುದು. ಆ ಅನೇಕ ನಯಗಳ ಸ್ವರೂಪವನ್ನು ಕೂಡ ಶ್ರುತಜ್ಞಾನದಿಂದ ತಿಳಿಯಲಾಗುತ್ತದೆ; ಅದರಿಂದ ಶ್ರುತಜ್ಞಾನವು ಉಪಾದೇಯವಿದೆ. ಶ್ರುತಜ್ಞಾನದಿಂದ ಬೇರೆ ಜ್ಞಾತಾ, ಜ್ಞಾನ ಮತ್ತು ಜ್ಞೇಯದ ಸ್ವರೂಪವನ್ನೂ ತಿಳಿಯುವುದಾಗುತ್ತದೆ. ಅವುಗಳಲ್ಲಿ ಜ್ಞಾತಾನಂತೂ ಆತ್ಮನಿದ್ದಾನೆ, ಜ್ಞಾತಾನ ಗುಣವು ಜ್ಞಾನವಿದೆ ಮತ್ತು ಜ್ಞಾನದಲ್ಲಿ ತಿಳಿದು ಬರುವಂಥವೆಲ್ಲವೂ ಜ್ಞೇಯವಿವೆ. ಜ್ಞಾನವು ಸಮಸ್ತ ಜ್ಞೇಯಗಳನ್ನು ತಿಳಿಯುವಂಥದ್ದಿದೆ. ಹೀಗೆ ಜ್ಞಾತಾ, ಜ್ಞಾನ ಮತ್ತು ಜ್ಞೇಯಗಳ ಸ್ವರೂಪವನ್ನು ಶ್ರುತಜ್ಞಾನದಿಂದ ತಿಳಿಯುತ್ತಾರೆ; ಅದರಿಂದ ಶ್ರುತಜ್ಞಾನವು ಉಪಾದೇಯವಿದೆ.

ಶ್ರುತಜ್ಞಾನದ ಸ್ವರೂಪದಲ್ಲಿ ಧ್ಯಾತಾ, ಧ್ಯೇಯ ಮತ್ತು ಧ್ಯಾನದ ಸ್ವರೂಪ ಹೇಳುತ್ತಾರೆ - ಅದರಲ್ಲಿ ಧ್ಯಾತಾನಂತೂ ಆತ್ಮನಿದ್ದಾನೆ. ಯಾವ ವಸ್ತುವನ್ನು ಧ್ಯಾನಿಸಲಾಗುತ್ತದೆ, ಅದು ಧ್ಯೇಯವಿದೆ. ಧ್ಯಾನಿಸುತ್ತಿರುವ ಧ್ಯಾತಾನ ಭಾವವು ಧ್ಯಾನವಿದೆ. ಹೇಗೆಂದರೆ ಧರ್ಮೀ ಆತ್ಮನಂತೂ ಧ್ಯಾತಾ ಇದ್ದಾನೆ. ಪಂಚಪರಮೇಷ್ಠಿಗಳು ಧ್ಯೇಯರಿದ್ದಾರೆ. ಧ್ಯಾತಾನು ಯಾರ ಧ್ಯಾನ ಮಾಡುತ್ತಿದ್ದಾನೆ ಹಾಗೂ ಪಂಚಪರಮೇಷ್ಠಿಗಳ ಗುಣಗಳ ಸ್ಮರಣೆಯಲ್ಲಿ ಉಪಯೋಗದ ಏಕಾಗ್ರತೆಯಿದೆ ಅದು ಧ್ಯಾನವಿದೆ. ಅಥವಾ ಯಾವನೋ ಪಾಪೀ ಆತ್ಮನು ಧ್ಯಾತಾನಿದ್ದಾನೆ, ಪರಸ್ತ್ರೀಯ ಸುಂದರ ರೂಪವನ್ನು ನೋಡಿ ಅವಳನ್ನು ಕೂಡುವ ಇಚ್ಛೆಯು ಧ್ಯೇಯವಿದೆ ಹಾಗೂ ಆ ಸ್ತ್ರೀಯ ರೂಪಾದಿ ಗುಣಗಳ ವಿಚಾರದಲ್ಲಿ ಏಕಾಗ್ರತೆಯು ಆರ್ತಧ್ಯಾನವಿದೆ. ಹೀಗೆ ಅನೇಕ ವಿಷಯಗಳಲ್ಲಿ ಧ್ಯಾತಾ, ಧ್ಯೇಯ ಮತ್ತು ಧ್ಯಾನದ ಸ್ವರೂಪವು ಘಟಿತವಾಗುತ್ತದೆ. ಈ ಭಾವಗಳನ್ನು ಶ್ರುತಜ್ಞಾನದಿಂದ ತಿಳಿಯಲಾಗುತ್ತದೆ; ಅದರಿಂದ ಶ್ರುತಜ್ಞಾನವು ಉಪಾದೇಯವಿದೆ.

ಕರ್ತಾ, ಕರ್ಮ, ಕ್ರಿಯೆಯ ಸ್ವರೂಪವನ್ನು ಶ್ರುತಜ್ಞಾನದಲ್ಲಿ ಹೇಳುತ್ತಾರೆ - ಕರ್ತೃವಂತೂ ಆತ್ಮನಿದ್ದಾನೆ. ಯಾವ ವಸ್ತುವನ್ನು ಇವನು ಮಾಡಿದ್ದಾನೆ, ಅದು ಕರ್ಮವಿದೆ ಹಾಗೂ ಆ ವಸ್ತುವನ್ನು ಮಾಡುವಲ್ಲಿ ಯಾವ ಮನ, ವಚನ, ಕಾಯಗಳ ಹಲನೆ-ಚಲನೆಯಾಗಿದೆ ಅದು ಕ್ರಿಯೆಯಿದೆ. ಹೇಗೆಂದರೆ - ಯಾವನೋ ಧರ್ಮಾತ್ಮಾ ಜೀವನು ಅಷ್ಟದ್ರವ್ಯದಿಂದ ಭಗವಂತರ ಪೂಜೆ ಮಾಡುತ್ತಾನೆ; ಅವನಂತೂ ಕರ್ತೃವಿದ್ದಾನೆ. ಅದರ ಫಲದಲ್ಲಿ ದೇವಗತಿ, ದೇವಾಯು, ಸುಭಗ, ಆದೇಯ, ಸೌಭಾಗ್ಯ , ಸಾತಾವೇದನೀಯ ಮೊದಲಾದ ಅನೇಕ ಪುಣ್ಯಬಂಧ ಮಾಡುವಂಥ ಶುಭಭಾವವು ಅದು ಕರ್ಮವಿದೆ ಮತ್ತು ಪೂಜೆಯಲ್ಲಿ ಒಳ್ಳೆಯ ಭಾವವಿಟ್ಟುಕೊಳ್ಳುವುದು, ವಿನಯದಿಂದ ಕಾಯವನ್ನಿಟ್ಟುಕೊಳ್ಳುವುದು, ವಿನಯದಿಂದ ವಚನಗಳನ್ನಾಡುವುದು, ವಿಧಿಯೊಂದಿಗೆ ಕೈ ಜೋಡಿಸುವುದು ಹರ್ಷದಿಂದ ನಿಂತುಕೊಳ್ಳುವುದು ಇತ್ಯಾದಿ ಪ್ರಕಾರದಿಂದ ಭಕ್ತಿ-ಭಾವರೂಪ ಪ್ರವೃತ್ತಿಯು ಕ್ರಿಯೆಯಿದೆ.

ಅಥವಾ ಯಾವನೋ ಅಕ್ಕಸಾಲಿಗನು ಕರ್ತೃವಿದ್ದಾನೆ. ಅನೇಕ ಪ್ರಕಾರದ ಆಭರಣಗಳನ್ನು ಮಾಡುತ್ತಾನೆ. ಆ ಸರ, ಬಳೆಗಳು ಕರ್ಮವಿವೆ ಹಾಗೂ ಅವುಗಳನ್ನು ಮಾಡುವಾಗ ತನು, ಮನದ ಯಾವ ಪ್ರವೃತ್ತಿಯಾಯಿತು ಅದು ಕ್ರಿಯೆಯಿದೆ. ಹೀಗೆಯೇ ಅನೇಕ ಪದಾರ್ಥಗಳಲ್ಲಿ ಘಟಿಸುವುದು. ಈ ವಿಧಾನಸಹಿತ ನಯ-ಪ್ರಮಾಣರೂಪ ಕಥನವು ಶ್ರುತಜ್ಞಾನದಿಂದ ಪ್ರಾಪ್ತವಾಗುತ್ತದೆ; ಅದರಿಂದ ಶ್ರುತಜ್ಞಾನವು ಉಪಾದೇಯವಿದೆ.

ಶ್ರುತಜ್ಞಾನದಲ್ಲಿ ಪಲ್ಯ, ಸಾಗರಗಳ ಕಥನ-ಜಘನ್ಯ, ಮಧ್ಯಮ ಹಾಗೂ ಉತ್ಕೃಷ್ಟವೆಂದು ಪಲ್ಯದಲ್ಲಿ ಮೂರು ಭೇದಗಳಿವೆ.

**ಜಘನ್ಯ ಪಲ್ಯ-** ಯಾವ ಪ್ರಕಾರ ಮಣ ★(೪೦ ಸೇರು ಎಂದರೆ ಒಂದು ಮಣ)ದ ಪ್ರಮಾಣವನ್ನು ತಿಳಿಸಿಕೊಡುವ ಸಲುವಾಗಿ ಗುಲಗುಂಜಿ ಗಾತ್ರದ ಗುಂಜಿಯಿಂದ ಪ್ರಾರಂಭ ಮಾಡುತ್ತಾರೆ. ಗುಂಜಿಯಿಂದ ಮಾಸಿ (ಎಂಟು ಗುಂಜಿ) ಮಾಸಿಯಿಂದ ರೂಪಾಯಿ (ತೊಲೆ), ರೂಪಾಯಿಯಿಂದ ಸೇರು (೯೦ ತೊಲೆ) ಮತ್ತು ಸೇರದಿಂದ ಮಣ ಮೊದಲಾಗಿ ಈ ಪ್ರಕಾರ ಗುಂಜಿಯಿಂದ ಮಣದ ಪ್ರಮಾಣ ಮಾಡಿದರು. ಯಾವ ಪ್ರಕಾರ ಗುಂಜಿಯಿಂದ ಮಣದವರೆಗಿನ ಪ್ರಮಾಣ ಮಾಡಿದರು, ಅದೇ ಪ್ರಕಾರ ಜಘನ್ಯ ಪಲ್ಯದಿಂದ ಸಾಗರದ ಉತ್ಪತ್ತಿಯಾಗುತ್ತದೆ. ಅದನ್ನೇ ಹೇಳುತ್ತಾರೆ-

ಒಂದು ದೊಡ್ಡ ಯೋಜನ ಪ್ರಮಾಣ ಸರಿಯಾಗಿ ಉದ್ದ, ಅಗಲ, ಆಳವಾದ ಹೊಂಡವನ್ನು ತೋಡಿ ಅದರಲ್ಲಿ ಭೋಗಭೂಮಿಯ ಮೇಕೆಯ ಸದ್ಯೋತ್ಪನ್ನ ಮರಿಯ ರೋಮಗಳ ಅಗ್ರಭಾಗದ ಚಿಕ್ಕ ತುಂಡುಗಳನ್ನಾಗಿಸಿ ಆ ಹೊಂಡದೊಳಗೆ ಹಾಕುತ್ತ ಅದನ್ನು ಪರಿಪೂರ್ಣವಾಗಿ ತುಂಬಬೇಕು. ಭೂಮಿಯ ಹಾಗೆ ಗಟ್ಟಿಯಾಗುವವರೆಗೆ ಹೊಂಡವನ್ನು ತುಂಬಬೇಕು, ಅದರ ನಂತರ ನೂರು ವರ್ಷಕ್ಕೊಂದರಂತೆ ರೋಮ (ಕೂದಲಿನ ತುಂಡ)ವನ್ನು ಹೊರಗೆ ತೆಗೆಯುತ್ತ ಎಷ್ಟು ಕಾಲ ಕಳೆದ ಮೇಲೆ ಸಂಪೂರ್ಣ ಹೊಂಡವು ಬರಿದಾಗಿ ಹೋಗುವುದು ಅಷ್ಟು ಕಾಲವನ್ನು ಜಘನ್ಯ ವ್ಯವಹಾರ ಪಲ್ಯವೆಂದು ಹೇಳಲಾಗುತ್ತದೆ.

ಮಧ್ಯಮ ಪಲ್ಯ-ಜಘನ್ಯ ಪಲ್ಯದಲ್ಲಿ ಎಷ್ಟು ರೋಮಗಳು ಬಂದಿದ್ದವು. ಅಷ್ಟೇ ಹೊಂಡಗಳನ್ನು ಮೊದಲು ಹೇಳಿದ ಪ್ರಮಾಣದ್ದೇ ಹೊಂಡಗಳನ್ನಾಗಿಸಿ ಅಂಥವೇ ರೋಮ ಖಂಡಗಳಿಂದ ಭೂಮಿಯ ಹಾಗೆ ಕಠೋರವಾಗುವಂತೆ ತುಂಬಿ ಅಸಂಖ್ಯಾತ ವರ್ಷಗಳು ವ್ಯತೀತವಾಗಿ ಹೋದಮೇಲೆ ಒಂದೊಂದರಂತೆ ರೋಮ ಖಂಡವನ್ನು ತೆಗೆಯುತ್ತ ಒಂದು ಹೊಂಡ, ಎರಡು ಹೊಂಡ - ಹೀಗೆ ಬರಿದು ಮಾಡುತ್ತ ಸಂಪೂರ್ಣ ಹೊಂಡಗಳನ್ನು ಬರಿದು ಮಾಡುವುದು ಆ ಸಂಪೂರ್ಣ ಹೊಂಡಗಳ ರೋಮ ಖಂಡಗಳು ತೀರಿ ಹೋಗಲು ಬೇಕಾಗುವ ಕಾಲವನ್ನು ಮಧ್ಯಮ ಪಲ್ಯವೆಂದು ಹೇಳಲಾಗಿದೆ.

ಉತ್ಕೃಷ್ಟ ಪಲ್ಯ - ಮೇಲೆ ಹೇಳಿದ ಪ್ರಕಾರದಿಂದಲೇ ಈ ಮಧ್ಯಮ ಪಲ್ಯದ ರೋಮಗಳು ಎಷ್ಟು ಆಗುತ್ತವೆ ಅಷ್ಟೇ ಹೊಂಡಗಳು, ಅಷ್ಟೇ ವಿಸ್ತಾರ ಪ್ರಮಾಣದಿಂದ ನಿರ್ಮಿಸಿ ಅಂಥವೇ ರೋಮಗಳಿಂದ ಸಮಸ್ತ ಹೊಂಡಗಳನ್ನು ತುಂಬಿ ಅಸಂಖ್ಯಾತ ಲಕ್ಷ ಕೋಟಿ ವರ್ಷಗಳ ನಂತರ ಒಂದು ರೋಮವನ್ನು ಹೊರಗೆ ತೆಗೆಯುವುದು, ಅದರ ನಂತರ ಅಷ್ಟೇ ಕಾಲವು ಕಳೆದು ಹೋದ ನಂತರ ಇನ್ನೊಂದು ರೋಮವನ್ನು ತೆಗೆಯುವುದು - ಇದೇ ಕ್ರಮದಿಂದ ಸಮಸ್ತ ಹೊಂಡಗಳು ಬರಿದಾಗಿ ಹೋಗುವಲ್ಲಿ ಎಷ್ಟು ಕಾಲವು ಬೇಕಾಗುತ್ತದೆ ಅದು ಉತ್ಕೃಷ್ಟ ಪಲ್ಯವಿದೆ.

ಈ ಉತ್ಕೃಷ್ಟ ಪಲ್ಯದಿಂದಲೇ ದೇವ, ನಾರಕಿ, ಭೋಗಭೂಮಿಜರ ಉತ್ಕೃಷ್ಟ ಆಯುವಿನ ಅಳತೆ ಇರುತ್ತದೆ. ಮಧ್ಯಮ ಪಲ್ಯದಿಂದ ದ್ವೀಪ-ಸಮುದ್ರಗಳ ಎಣಿಕೆ ಇರುತ್ತದೆ. ಇಪ್ಪತ್ತೈದು ಕೋಟಾಕೋಟಿ ಮಧ್ಯಮ ಪಲ್ಯ ಪ್ರಮಾಣ ದ್ವೀಪ-ಸಮುದ್ರಗಳಿವೆ. ಹತ್ತು ಕೋಟಾಕೋಟಿ ಪಲ್ಯಗಳದು ಒಂದು ಸಾಗರವಿರುತ್ತದೆ. ಈ ಪ್ರಕಾರ ಸಾಮಾನ್ಯ ರೂಪದಿಂದ ಪಲ್ಯ-ಸಾಗರಗಳ ಕಥನ ಮಾಡಲಾಯಿತು. ವಿಶೇಷ ತಿಳಿಯುವ ಇಚ್ಛೆಯುಳ್ಳವರು ತ್ರಿಲೋಕಸಾರ ಮೊದಲಾದ ಗ್ರಂಥಗಳನ್ನು ನೋಡುವುದು. ಹೀಗೆ ಪಲ್ಯ-ಸಾಗರಾದಿಗಳ ಅಳತೆಯು ಶ್ರುತಜ್ಞಾನದಿಂದ ತಿಳಿದು ಬರುತ್ತದೆ; ಅದರಿಂದ ಶ್ರುತಜ್ಞಾನವು ಉಪಾದೇಯವಿದೆ.

---

★ ಕನ್ನಡದ ಹಳೆಯ ಸಾಹಿತ್ಯದಲ್ಲಿ ಮಣ ಎಂದರೆ ೪೮ ಸೇರು ಎಂಬ ಮಾತು ಇದೆ.

ಶ್ರುತಜ್ಞಾನದ ಮೂಲಕ ಕೃತಘ್ನಿ-ವಿಶ್ವಾಸಘಾತಕಿಯ ಸ್ವರೂಪವನ್ನು ತಿಳಿಯಲಾಗುತ್ತದೆ, ಅದನ್ನು ಹೇಳುತ್ತಾರೆ,- ಯಾರು ಇತರರಿಂದ ಮಾಡಲಾಗಿರುವ ಉಪಕಾರವನ್ನು ಮರೆತು ಹೋಗುತ್ತಾರೆ ಅವರು ಕೃತಘ್ನಿಗಳಿದ್ದಾರೆ. ಕೃತಘ್ನಿಯಲ್ಲಿ ಮೂರು ಭೇದಗಳಿವೆ - ಮನೆ, ಪರ ಮತ್ತು ಧರ್ಮ - ಇವು ಮೂರರ ಉಪಕಾರವು ಅನ್ಯ ಜೀವಗಳ ಮೇಲೆ ಆಗುತ್ತದೆ. ಹೇಗೆಂದರೆ - ಮಾತಾ-ಪಿತರು ತಮ್ಮ ಕುರಿತಾಗಿ ತಮ್ಮ ಬಾಲ್ಯಾವಸ್ಥೆಯಲ್ಲಿ ಮಹಾಯತ್ನ ಮಾಡಿದ್ದಾರೆ. ಶೀತಕಾಲ ಹಾಗೂ ಉಷ್ಣಕಾಲದಲ್ಲಿ ಅನೇಕ ಪ್ರಕಾರದಿಂದ ಸಹಾಯ ನೀಡಿ, ಮೋಹದ ವಶೀಭೂತರಾಗಿ, ಅನೇಕ ಯತ್ನಗಳಿಂದ ಪಾಲನೆ ಮಾಡಿ ರಕ್ಷಣೆ ಮಾಡಿದರು. ತರುಣರನ್ನಾಗಿಸಿದರು ಮತ್ತು ಈಗ ದೊಡ್ಡವರಾಗಿ ಒಂದುವೇಳೆ ಮಾತಾ-ಪಿತರ ಉಪಕಾರವನ್ನು ಮರೆತು ಅವರೊಂದಿಗೆ ದ್ವೇಷ ಭಾವದಿಂದ ಬೇರೆಯಾಗುವುದು, ಅವಿನಯ ಮಾಡುವುದು, ಕಟುವಚನಗಳನ್ನಾಡುವುದು, ದುಃಖವೀಯುವುದು, ಮಾತಾ-ಪಿತರೊಂದಿಗೆ ಈರ್ಷೆಮಾಡುವುದು - ಇತ್ಯಾದಿರೂಪದ ಭಾವಗಳನ್ನು ಮಾಡುತ್ತಿದ್ದರೆ ಅಂಥವರು ಗೃಹಕೃತಘ್ನಿಗಳಿದ್ದಾರೆ.

ಓಣಿ ಅಥವಾ ಜಾತಿಯ ಯಾರೋ ಅನ್ಯ ದಯಾಳುಗಳಾದ ದೊಡ್ಡವರು ಯಾರೋ ಹಸಿದವರನ್ನು ನೋಡಿ ಆಹಾರ ಕೊಟ್ಟಿದ್ದರು, ನಿರ್ವಸ್ತ್ರರಿರುವುದನ್ನು ನೋಡಿ ವಸ್ತ್ರ ಕೊಟ್ಟಿದ್ದರು, ನಿರುದ್ಯೋಗಿಯಾಗಿರುವುದನ್ನು ತಿಳಿದು ಉದ್ಯೋಗದಲ್ಲಿ ತೊಡಗಿಸಿದ್ದರು, ನಿರ್ಧನವಿರುವುದನ್ನು ತಿಳಿದು ಧನಸಹಾಯ ಮಾಡಿದ್ದರು, ಸ್ಥಾನರಹಿತವೆಂದು ತಿಳಿದು ಇರುವ ಸಲುವಾಗಿ ಮನೆ ಮೊದಲಾಗಿ ವ್ಯವಸ್ಥೆ ಮಾಡಿದ್ದರು - ಇತ್ಯಾದಿ ದುಃಖಗಳಲ್ಲಿ ಸಹಾಯ ಮಾಡಿದ್ದರು. ರೋಗದಿಂದ ಬಳಲುತ್ತಿರುವುದನ್ನು ನೋಡಿ ಅನೇಕ ರೀತಿಯ ಔಷಧೋಪಚಾರದ ವ್ಯವಸ್ಥೆ ಮಾಡಿದ್ದರು - ಈ ಪ್ರಕಾರ ಅನೇಕ ದುಃಖಗಳಲ್ಲಿ ಸಹಾಯ ಮಾಡಿ ಸುಖಿಯನ್ನಾಗಿ ಮಾಡಿದ್ದರು; ಆದರೆ ನಂತರದ ಕಾಲದಲ್ಲಿ ಕರ್ಮಯೋಗದಿಂದ ಯಾವಾಗ ಸ್ವಯಂ ಶಕ್ತಿವಂತನಾಗುತ್ತಾನೆ, ಆಗ ಆ ಉಪಕಾರಿಗಳ ಉಪಕಾರವನ್ನು ಮರೆತು ಅವರ ಕುರಿತಾಗಿ ದ್ವೇಷ ಮಾಡುತ್ತಾನೆ - ಇದು ಪರಕೃತಘ್ನತೆಯಿದೆ.

ಯಾವನೋ ಧರ್ಮಾತ್ಮನು ಯಾರೋ ಬೇರೆಯವರನ್ನು ಮಹಾ ಅಜ್ಞಾನದಲ್ಲಿ ಪ್ರವರ್ತಿಸುತ್ತಿರುವುದನ್ನು ಕಂಡು, ಪಾಪ ಮಾಡುತ್ತಿರುವುದನ್ನು ಕಂಡು, ನರಕದಲ್ಲಿ ಬೀಳುತ್ತಿರುವುದನ್ನು ಕಂಡು ಅಜ್ಞಾನತೆಯಿಂದ ಬಿಡಿಸಿ ಜ್ಞಾನ ಮಾಡಿಸುತ್ತಾನೆ, ಪಾಪಮಾರ್ಗದಿಂದ ಬೇರೆ ಮಾಡಿ ಧರ್ಮಮಾರ್ಗವನ್ನು ತಿಳಿಸಿಕೊಡುತ್ತಾನೆ, ನರಕಾದಿ ದುರ್ಗತಿಗಳಿಂದ ಬಿಡಿಸಿ ಶುಭಗತಿಯ ಪರಿಚಯ ಮಾಡಿಸುತ್ತಾನೆ, ಲೋಕನಿಂದ್ಯವಿರುವ ಅನಾಚಾರದಿಂದ ಬಿಡಿಸಿ ಒಳ್ಳೆಯ ಆಚಾರವನ್ನು ತಿಳಿಸಿಕೊಡುತ್ತಾನೆ ' ಈ ಜೀವನು ಸುಖಿಯಾದರೆ ಒಳ್ಳೆಯದಿದೆ'ಯೆಂಬ ಭಾವನೆಯಿಂದ ಅವನನ್ನು ಶುಭಮಾರ್ಗದಲ್ಲಿ ತೊಡಗಿಸುತ್ತಾನೆ; ಆದರೆ ಅವನು ತನಗೆ ಸಾಮಾನ್ಯ ಭಾವಜ್ಞಾನವಾದ ಮೇಲೆ - ಶಾಸ್ತ್ರದ ರಹಸ್ಯವನ್ನು ಪ್ರಾಪ್ತ ಮಾಡಿಕೊಂಡಮೇಲೆ ಆ ಧರ್ಮಾತ್ಮನ ಉಪಕಾರವನ್ನು ಮರೆತು ಅವನೊಂದಿಗೆ ದ್ವೇಷಭಾವ ಮಾಡುತ್ತಾನೆ, ಇದು ಧರ್ಮಕೃತಘ್ನತೆಯಿದೆ.

ಈ ಪ್ರಕಾರ ಕೃತಘ್ನಿಯ ಮೂರು ಭೇದ ಹೇಳಿದ್ದಾರೆ, ಅವು ಮಹಾಪಾಪದ ಸ್ಥಾನವಿರುವುದರಿಂದ ಹೇಯವಿವೆ.

ವಿಶ್ವಾಸಘಾತಿಯ ಸ್ವರೂಪ-ಬೇರೆಯವರ ವಿಶ್ವಾಸಗಳಿಸುತ್ತ ಹೇಳುತ್ತಾನೆ - ನಾನು ನಿನಗೆ ಸಹಾಯ ಮಾಡುತ್ತೇನೆ, ಧನಾದಿಗಳಿಂದ ನಿನ್ನ ದುಃಖ-ದಾರಿದ್ರ್ಯವನ್ನು ನಾಶ ಮಾಡುತ್ತೇನೆ, ನೀನು ಯಾವ ಉಪಾಯ ಮಾಡುವ ಅವಶ್ಯಕತೆಯಿಲ್ಲ- ಇತ್ಯಾದಿ ಅನೇಕ ಮಧುರ ವಚನಗಳನ್ನಾಡಿ ತನ್ನ ಕುರಿತಾಗಿ ಬೇರೆಯವರಲ್ಲಿ ವಿಶ್ವಾಸ ಹುಟ್ಟಿಸುತ್ತಾನೆ, ನಂತರ ಪ್ರಸಂಗವು ಬಂದುಬಿಟ್ಟರೆ ಮುಖ ತಪ್ಪಿಸುವುದು, ಮೋಸ ಮಾಡುವುದು, ಈಗ ನನ್ನಿಂದ ಸಾಧ್ಯವಾಗುವುದಿಲ್ಲವೆಂದು ಹೇಳಿ ಆತನ ಕಾರ್ಯದ ಹಾನಿ ಮಾಡುವುದು ವಿಶ್ವಾಸಘಾತವಿದೆ.

ಈಗ ಇಲ್ಲಿ ಒಂದು ಕಾಲ್ಪನಿಕ ದೃಷ್ಟಾಂತದೊಂದಿಗೆ ವಿಶ್ವಾಸಘಾತದ ಲಕ್ಷಣ ಹೇಳುತ್ತಾರೆ. ಹೇಗೆ ಓರ್ವ ಕೃಷಿಕನು ಆಷಾಢ ತಿಂಗಳಿನಲ್ಲಿ ಅನೇಕ ಕಷ್ಟ ಸಹಿಸಿ ನೇಗಿಲು ಹೊಡೆದು ಹೊಲವನ್ನು ತಯಾರುಗೊಳಿಸಿದ್ದನು. ನಂತರ ಯಾವಾಗ ಚೆನ್ನಾಗಿ ಮಳೆ ಬರುತ್ತದೆ, ಆಗ ಎಲ್ಲ ಕೃಷಿಕರು ಮನೆಯಲ್ಲಿರುವ ಬೀಜದ ಗಂಟುಗಳನ್ನೆತ್ತಿಕೊಂಡು ತಮ್ಮ ತಮ್ಮ ಹೊಲಗಳತ್ತ ನಡೆಯುತ್ತಾರೆ. ಆಗ ಓರ್ವ ಕೃಷಿಕನನ್ನು ಕಂಡು ದಾರಿಯಲ್ಲಿ ಬಿದ್ದುಕೊಂಡಿರುವ ಓರ್ವ ದುಷ್ಟ ಮನುಷ್ಯನ ಬುರುಡೆಯು ನಗಲಾರಂಭಿಸುತ್ತದೆ. ಅದರಿಂದ ಕೃಷಿಕನಿಗೆ ಆಶ್ಚರ್ಯವಾಗುತ್ತದೆ, ಈ ಮೂಳೆಯ ನಿರ್ಜೀವ ಬುರುಡೆಯು ಏಕೆ ನಗುತ್ತಿದೆ ? ಅಚ್ಚರಿಯಿಂದಲೇ ಕೃಷಿಕನು ಎಲೈ ಬುರುಡೆಯೇ! ನೀನೇಕೆ ನಗುತ್ತಿರುವೆ? - ಎಂದಾಗ, ಆ ಬುರುಡೆಯು 'ನಿನ್ನನ್ನು ನೋಡಿ ನಗುತ್ತಿದ್ದೇನೆ, ನಾನು ದೇವತೆಯಿದ್ದೇನೆ, ನಿನ್ನ ಮೇಲೆ ಪ್ರಸನ್ನಳಾಗಿದ್ದೇನೆ, ಅದಕ್ಕಾಗಿ ಈಗ ನೀನು ಬೀಜ ಬಿತ್ತಲು ಹೊಲಕ್ಕೆ ಹೋಗಬೇಡ. ನಾನು ನಿನ್ನ ಹೊಲದಲ್ಲಿ 'ಬಿತ್ತಿಗೆ ಮಾಡದೆಯೇ ಬಹಳಷ್ಟು ಧಾನ್ಯ ಬೆಳೆಸಿ ಕೊಡುತ್ತೇನೆ' ಎಂದು ಹೇಳುತ್ತದೆ. ಕೃಷಿಕನು ಅದನ್ನು ದೇವಿಯೆಂದು ತಿಳಿದು, ಹಾಗೂ ತನ್ನ ಮೇಲೆ ಪ್ರಸನ್ನಳಾಗಿರುವುದನ್ನು ತಿಳಿದು, ಅದರ ವಚನಗಳ ವಿಶ್ವಾಸ ಮಾಡಿ, ಹೊಲದಲ್ಲಿ ಬಿತ್ತಿಗೆ ಮಾಡದೆಯೇ ಮನೆಗೆ ಹೊರಟು ಹೋದನು. ಉಳಿದ ಕೃಷಿಕರು ತಮ್ಮ ತಮ್ಮ ಹೊಲಗಳಲ್ಲಿ ಬಿತ್ತಿಗೆ ಮಾಡಿ ಮನೆಗೆ ಮರಳಿದರು.

ಹತ್ತು-ಹದಿನೈದು ದಿನಗಳು ಕಳೆದ ಮೇಲೆ ಕೃಷಿಕರೆಲ್ಲರೂ ತಮ್ಮ ತಮ್ಮ ಹೊಲಗಳನ್ನು ನೋಡಲು ಹೊರಟರು ಮತ್ತು ಧಾನ್ಯವು ನಾಟಿ ಬಂದುದನ್ನು ನೋಡಿ ಪ್ರಸನ್ನರಾದರು. ಈ ಕೃಷಿಕನೂ ತನ್ನ ಹೊಲದಲ್ಲಿಯೂ ಧಾನ್ಯವು ನಾಟಿರಬಹುದೆಂದು ಯೋಚನೆ ಮಾಡಿ, ನೋಡಿ ಬರಬೇಕೆಂದು ಹೊರಟನು. ದಾರಿಯಲ್ಲಿ ಬಿದ್ದಿರುವ ತಲೆ ಬುರುಡೆಯು ಪುನಃ ನಗಲಾರಂಭಿಸುತ್ತದೆ. ಕೃಷಿಕನು 'ನೀನೇಕೆ ನಗುತ್ತಿರುವೆ ?' ಎಂದು ಕೇಳುತ್ತಾನೆ. ಆಗ ಆ ಬುರುಡೆಯು 'ನಿನ್ನನ್ನು ನೋಡಿ ನಗುತ್ತಿದ್ದೇನೆ ? ನೀನೆಲ್ಲಿ ಹೊರಟಿರುವೆ ? ಎನ್ನುತ್ತದೆ. ಆಗ ಕೃಷಿಕನು 'ಬೇರೆಯವರ ಹೊಲಗಳು ಹಸಿರಾಗಿ ಶೋಭಿಸುತ್ತಿವೆ; ನಾನು ನನ್ನ ಹೊಲದ ಶೋಭೆ ನೋಡಲು ಹೊರಟಿದ್ದೇನೆ' ಎಂದಾಗ, ಆ ಬುರುಡೆಯು 'ಎಲೈ ಸೋದರನೇ ! ನಾನು ನಿನ್ನ ಮೇಲೆ ಪ್ರಸನ್ನಳಿದ್ದೇನೆ, ಬೇರೆಯವರ ಹೊಲಗಳಿಗಿಂತ ಅಧಿಕ ಧಾನ್ಯವನ್ನು ನಿನ್ನ ಹೊಲದಲ್ಲಿ ಬೆಳೆಯುವಂತೆ ನಾನು ಮಾಡುತ್ತೇನೆ, ನೀನು ಸಂತೋಷದಿಂದ ಇರು' ಎನ್ನುತ್ತದೆ. ಆಗ ಕೃಷಿಕನು ಆ ಬುರುಡೆಯ ವಚನಗಳ ಮೇಲೆ ವಿಶ್ವಾಸ ಮಾಡಿ ಮನೆಗೆ ಮರಳುತ್ತಾನೆ.

ಒಂದೆರಡು ತಿಂಗಳು ಕಳೆದ ಮೇಲೆ ಎಲ್ಲ ಕೃಷಿಕರು ತಮ್ಮ ತಮ್ಮ ಮಕ್ಕಳ ಸಲುವಾಗಿ ತಮ್ಮ-ತಮ್ಮ ಹೊಲಗಳಿಂದ ಹಣ್ಣು-ತರಕಾರಿಗಳನ್ನು ತಗೆದುಕೊಂಡು ಮನಗೆ ಬಂದರು. ಆಗ ಈ ಕೃಷಿಕನ ಬಾಲಕ ಪುತ್ರನು ಬೇರೆಯವರ ಕೈಯಲ್ಲಿ ಅನೇಕ ಫಲಾದಿಗಳನ್ನು ನೋಡಿ ತನಗೂ ಫಲ ಬೇಕೆಂದು ಅಳತೊಡಗಿದನು. ಈ ಕೃಷಿಕನು ಯೋಚಿಸುತ್ತ ಬೇರೆಯವರ ಹೊಲದಲ್ಲಿ ಫಲಗಳು ಬಂದಿವೆಯೆಂದ ಮೇಲೆ ನಮ್ಮ ಹೊಲದಲ್ಲಿಯೂ ಬಂದಿರಬೇಕೆಂದು ನಿರ್ಣಯ ಮಾಡಿ, ಫಲ ತರುವ ಸಲುವಾಗಿ ತನ್ನ ಹೊಲದ ಕಡೆಗೆ ಹೊರಟನು. ಆಗ ದಾರಿಯಲ್ಲಿ ಬಿದ್ದುಕೊಂಡಿರುವ ಆ ಬುರುಡೆಯು ಪುನಃ ನಗುತ್ತದೆ. ಕೃಷಿಕನು-ನೀನೇಕೆ ನಗುತ್ತಿರುವೆ ? ಬೇರೆಯವರ ಹೊಲಗಳಲ್ಲಿ ಫಲಗಳು ಬಂದುಬಿಟ್ಟಿವೆ, ಎಲ್ಲರ ಮಕ್ಕಳೂ ಸಂತೋಷದಿಂದ ತಿನ್ನುತ್ತಿದ್ದಾರೆ, ಅದರಿಂದ ನಮ್ಮ ಬಾಲಕನು ತನಗೆ ಬೇಕೆಂದು ಅಳುತ್ತಿದ್ದಾನೆ,' ಎಂದು ಹೇಳುತ್ತಾನೆ. ಕೃಷಿಕನ ವಚನಗಳನ್ನಾಲಿಸಿ ಬುರುಡೆಯು ನಗುತ್ತ - 'ಎಲೈ ಸುಬುದ್ಧೀ ! ಧೈರ್ಯದಿಂದಿರು, ಚಿಂತೆ ಮಾಡಬೇಡ ನನ್ನ ಮಾತಿನ ಮೇಲೆ ಸ್ವಲ್ಪವಾದರೂ ವಿಶ್ವಾಸವಿಡು. ನಿನ್ನ ಹೊಲದಲ್ಲಿ ಗಾಡಿಗಳಲ್ಲಿ ಹಿಡಿಯಲಾರದಷ್ಟು ಫಲ-ಧಾನ್ಯಗಳು ಬರುವವು ಆದರೆ ನೀನು ವಿಶ್ವಾಸಮಾಡು ಚಿಂತಿಸಬೇಡ' - ಎಂದು ಹೇಳುತ್ತದೆ. ಅದನ್ನು ಕೇಳಿ ಇವೆಲ್ಲ ದೇವಿಯ ಮಾತುಗಳಿವೆ, ಅನ್ಯಥಾ ಆಗುವ ಸಾಧ್ಯತೆಯಿಲ್ಲವೆಂದು ವಿಶ್ವಾಸದೊಂದಿಗೆ ಪುನಃ ಮನೆಗೆ ಮರಳುತ್ತಾನೆ.

ಮತ್ತೆ ಎರಡು ತಿಂಗಳು ಕಳೆದ ಮೇಲೆ ಗ್ರಾಮದ ಕೃಷಿಕರೆಲ್ಲರೂ ಧಾನ್ಯದ ರಾಶಿ ಮಾಡಿ ಚಕ್ಕಡಿಗಳಲ್ಲಿ

ತುಂಬಿ-ತುಂಬಿ ಬೋರಿಗಳನ್ನು ಮನೆಗಳಿಗೆ ತರುತ್ತಾರೆ. ಆಗ ಈ ಕೃಷಿಕನು ತನ್ನ ಹೊಲವನ್ನು ನೋಡಿಯಾದರೂ ನೋಡಬೇಕೆಂಬ ವಿಚಾರದಿಂದ ಇನ್ನೊಂದು ದಾರಿಯಲ್ಲಿ ನಡೆದು ತನ್ನ ಹೊಲಕ್ಕೆ ಬಂದು ನೋಡುತ್ತಾನೆ, ಬರಿದಾದ ಹೊಲದಲ್ಲಿ ಹುಲ್ಲು ಬೆಳೆದು ಕಸದಿಂದ ತುಂಬಿಕೊಂಡಿದೆ - ಇಂಥ ಹೊಲವನ್ನು ನೋಡಿ ಆ ಕೃಷಿಕನ ಎದೆಯೊಡೆದು ಹೋಗುತ್ತದೆ, ಅವನು ಮಹಾದುಃಖಿಯಾಗುತ್ತಾನೆ. ಇಡೀ ವರ್ಷದವರೆಗೆ ಇನ್ನು ಹೇಗೆ ಜೀವನ ನಡೆಸುವುದು, ಅಯ್ಯೋ ಏನು ಮಾಡಲಿ ! ಎಂದು ಪ್ರತ್ಯಕ್ಷ ಅಳಲಾರಂಭಿಸುತ್ತಾನೆ.

ಬುರುಡೆಯು ಈ ಅಳುತ್ತಿರುವ ಕೃಷಿಕನನ್ನು ಕಂಡು ಮತ್ತೆ ನಗಲಾರಂಭಿಸುತ್ತದೆ. ಆಗ ಕೃಷಿಕನು 'ಏತಕ್ಕಾಗಿ ನಗುತ್ತಿರುವೆ ? ನಾನು ನಿನ್ನ ಮಾತಿನ ಮೇಲೆ ವಿಶ್ವಾಸವಿಟ್ಟು ಹೊಲದಲ್ಲಿ ಬೀಜ ಬಿತ್ತಲಿಲ್ಲ. ಈಗ ಗ್ರಾಮದ ಕೃಷಿಕರೆಲ್ಲರು ಬಹಳಷ್ಟು ಧಾನ್ಯವನ್ನು ತಮ್ಮ ತಮ್ಮ ಮನೆಗಳಿಗೆ ತಗೆದುಕೊಂಡು ಬಂದಿದ್ದಾರೆ. ನನ್ನ ಹೊಲದಲ್ಲಿ ಏನೂ ಇಲ್ಲ. ನೀನು ನನ್ನನ್ನು ವಿಶ್ವಾಸದಲ್ಲಿ ತಗೆದುಕೊಂಡು ಕೆಡಕು ಮಾಡಿರುವೆ' ಎಂದಾಗ, ಆ ದುಷ್ಟನ ಬುರುಡೆಯು ಇನ್ನಷ್ಟು ಜೋರಾಗಿ ನಗುತ್ತ, 'ಎಲೈ ಕೃಷಿಕನೇ ! ನೀನು ಚೆನ್ನಾಗಿ ಆಲಿಸು ! ನಾನು ಜೀವಂತವಾಗಿರುವಾಗ ಬಹಳಷ್ಟು ಜೀವಗಳಿಗೆ ಎಷ್ಟೋ ಪ್ರಕಾರದಿಂದ ವಿಶ್ವಾಸ ನೀಡಿ ಬಹಳಷ್ಟು ಕೆಡಕು ಮಾಡಿದ್ದೆನು. ಮರಣದ ನಂತರ ಕೇವಲ ನಿನ್ನೊರ್ವನಿಗೇ ಕೆಡಕು ಮಾಡಿದ್ದೇನೆ' ಎಂದು ಹೇಳುತ್ತದೆ.

ಈ ದುಷ್ಟ ಬುರುಡೆಯ ಹಾಗೆ ವಿಶ್ವಾಸಘಾತಿಯಿದ್ದಾನೆ. ಮಹಾಪಾಪಮೂರ್ತಿ ಜೀವಗಳು ವಿಶ್ವಾಸಘಾತಕರಿರುತ್ತಾರೆ. ಎಂದರೆ ಕೃತಘ್ನಿ ಮತ್ತು ವಿಶ್ವಾಸಘಾತಕ ಜೀವಗಳು ಮಹಾಪಾಪಿಯಿರುತ್ತಾರೆಂದು ಹೇಳಲಾಗಿದೆ. ಇವರ ಸ್ವರೂಪವು ಶ್ರುತಜ್ಞಾನದಿಂದ ತಿಳಿದು ಬರುತ್ತದೆ - ಇಂಥ ಶ್ರುತಜ್ಞಾನವು ಉಪಾದೇಯವಿದೆ.

ನಾಲ್ಕೂ ಗತಿಗಳ ಜೀವರುಗಳ ಆಗತಿ-ಜಾಗತಿ(ಆವಾಗಮನ) - ಯಾವ ಸ್ಥಾನವನ್ನು ತ್ಯಾಗಮಾಡಿ ಅನ್ಯತ್ರ ಉತ್ಪನ್ನವಾಗುತ್ತದೆ ಅದನ್ನು ಜಾಗತಿಯೆಂದು ಹೇಳುತ್ತಾರೆ ಮತ್ತು ಅನ್ಯ ಸ್ಥಾನದಿಂದ ಎಲ್ಲಿ ಜನ್ಮಪಡೆಯುತ್ತದೆ ಅದನ್ನು ಆಗತಿಯೆಂದು ಹೇಳುತ್ತಾರೆ.

ದೇವಗತಿಯಲ್ಲಿ ಆಗತಿ-ಮುಂದೆ ಹೇಳಲಾಗಿರುವ ಸ್ಥಾನಗಳಿಂದ ಬಂದು ದೇವಗತಿಯಲ್ಲಿ ಉತ್ಪನ್ನ ರಾಗುತ್ತಾರೆ. ಮಿಥ್ಯಾದೃಷ್ಟಿ ಭೋಗಭೂಮಿಜ ಮನುಷ್ಯ-ತಿರ್ಯಂಚ, ಕರ್ಮಭೂಮಿಜ ಮನುಷ್ಯ-ತಿರ್ಯಂಚ, ಸಂಜ್ಞೀ ಹಾಗೂ ಅಸಂಜ್ಞಿ - ಇವರೆಲ್ಲರೂ ಶುಭಭಾವಗಳ ಫಲದಿಂದ ಭವನತ್ರಿಕದಲ್ಲಿ ಉತ್ಪನ್ನರಾಗುತ್ತಾರೆ. ಸಮ್ಯಗ್ದೃಷ್ಟಿ ಭೋಗಭೂಮಿಜ ಮನುಷ್ಯ-ತಿರ್ಯಂಚ ಜೀವರುಗಳು ಮೊದಲನೇ ಎರಡನೇ ಸ್ವರ್ಗದವರೆಗೆ ಉತ್ಪನ್ನರಾಗುತ್ತಾರೆ. ಕರ್ಮಭೂಮಿಯ ತಿರ್ಯಂಚಗಳು ಹನ್ನೆರಡನೆಯ ಸ್ವರ್ಗದವರೆಗೆ ಹಾಗೂ ಶ್ರಾವಕ ಮನುಷ್ಯರು ಹದಿನಾರನೆಯ ಸ್ವರ್ಗದವರೆಗೆ ಉತ್ಪನ್ನರಾಗುತ್ತಾರೆ. ಸಮ್ಯಗ್ದೃಷ್ಟಿ ಹಾಗೂ ಮಿಥ್ಯಾದೃಷ್ಟಿ ಮುನಿಲಿಂಗಧಾರಕರು ಒಂಭತ್ತು ಗ್ರೈವೇಯಕಗಳವರೆಗೆ ಹೋಗುತ್ತಾರೆ. ಒಂಭತ್ತು ಅನುದಿಶೆ ಹಾಗೂ ಪಂಚಾನುತ್ತರ - ಇವು ಹದಿನಾಲ್ಕು ವಿಮಾನಗಳಲ್ಲಿ ಸಮ್ಯಗ್ದೃಷ್ಟಿ ಮುನಿಗಳೇ ಹೋಗುತ್ತಾರೆ.

ದೇವಗತಿಯ ಜಾಗತಿ(ಗಮನ) - ನಾಲ್ಕು ಪ್ರಕಾರದ ದೇವಗಳು ಸತ್ತು ಎಲ್ಲೆಲ್ಲಿ ಹೋಗಿ ಹುಟ್ಟುತ್ತಾರೆ, ಅದು ಜಾಗತಿಯಿದೆ. ಭವನವಾಸಿ, ವ್ಯಂತರ, ಜ್ಯೋತಿಷ್ಕದೇವ ಮತ್ತು ಮೊದಲನೆ-ಎರಡನೆ ಸ್ವರ್ಗದ ದೇವಗಳು ಸತ್ತು ಪೃಥ್ವಿಕಾಯಿಕ, ಜಲಕಾಯಿಕ, ವನಸ್ಪತಿಕಾಯಿಕ, ಸಂಜ್ಞೀ ಪಂಚೇಂದ್ರಿಯ ತಿರ್ಯಂಚ ಮತ್ತು ಮನುಷ್ಯ- ಈ ಐದು ಸ್ಥಾನಗಳಲ್ಲಿ ಹೋಗಿ ಉತ್ಪನ್ನರಾಗುವ ಸಾಧ್ಯತೆಯಿದೆ. ಮೂರನೆಯ ಸ್ವರ್ಗದಿಂದ ಹನ್ನೆರಡನೆಯ ಸ್ವರ್ಗದವರೆಗಿನ ದೇವಗಳು ಸತ್ತು ಮನುಷ್ಯ ತಿರ್ಯಂಚ ಸಂಜ್ಞೀ ಪಂಚೇಂದ್ರಿಯದಲ್ಲಿಯೇ ಹುಟ್ಟುವ ಸಾಧ್ಯತೆಯಿದೆ. ಹದಿಮೂರನೆಯ ಸ್ವರ್ಗದಿಂದ ಒಂಭತ್ತು ಗ್ರೈವೇಯಕದವರೆಗಿನ ದೇವಗಳು ಸತ್ತು ಸಮ್ಯಗ್ದೃಷ್ಟಿ ಹಾಗೂ ಮಿಥ್ಯಾದೃಷ್ಟಿಗಳು ಕೂಡ

ಮನುಷ್ಯ ರೂಪದಲ್ಲಿಯೇ ಜನಿಸುತ್ತಾರೆ. ಒಂಭತ್ತು ಗ್ರೈವೇಯಕದಿಂದ ಮೇಲಿನ ದೇವಗಳು ಸತ್ತು ಸಮ್ಯಗ್ದೃಷ್ಟೀ ಮನುಷ್ಯ ರೂಪದಲ್ಲಿಯೇ ಜನ್ಮ ಪಡೆಯುತ್ತಾರೆ.

ನರಕಗತಿಯ ಆಗತಿ-ಜಾಗತಿ(ಆವಾಗಮನ) - ನಾರಕೀ ಜೀವಗಳು ಸತ್ತು ನಿಮ್ನಲಿಖಿತ ಸ್ಥಾನಗಳಲ್ಲಿ ಉತ್ಪನ್ನರಾಗಬಹುದಾಗಿದೆ. ಮೊದಲನೆಯದಿಂದ ಆರನೆಯ ನರಕದವರೆಗಿನ ಜೀವಗಳು ಅಲ್ಲಿಂದ ಹೊರಟು ಕರ್ಮಭೂಮಿಯ ಮನುಷ್ಯ, ತಿರ್ಯಂಚಗಳಾಗುತ್ತಾರೆ. ಏಳನೆಯ ನರಕದಿಂದ ಹೊರಟ ಜೀವಗಳು ಸಂಜ್ಞೀ ಪಂಚೇಂದ್ರಿಯ ತಿರ್ಯಂಚಗಳೇ ಆಗುತ್ತಾರೆ. ವಿಶೇಷವೆಂದರೆ ಮೊದಲನೇ, ಎರಡನೇ, ಮೂರನೇ ನರಕದಿಂದ ಹೊರಗೆ ಬರುವ ಯಾವುದೋ ಜೀವವು ಸಮ್ಯಗ್ದೃಷ್ಟಿ ತೀರ್ಥಂಕರವೂ ಆಗಬಹುದಾಗಿದೆ. ನಾಲ್ಕನೆಯ ನರಕದಿಂದ ಹೊರಟ ಜೀವವು ತೀರ್ಥಂಕರವಾಗುವುದಿಲ್ಲ; ಆದರೆ ಚರಮ ಶರೀರಿಯಾಗಬಹುದಾಗಿದೆ, ಐದನೆಯ ನರಕದಿಂದ ಹೊರಟ ಜೀವವು ಚರಮ ಶರೀರಿಯಾಗುವುದಿಲ್ಲ, ಮಹಾವ್ರತ ಧಾರಣ ಮಾಡಬಹುದಾಗಿದೆ. ಆರನೆಯ ನರಕದಿಂದ ಹೊರಟ ಜೀವವು ಸಂಯಮಿಯಾಗುವುದಿಲ್ಲ. ಅಲ್ಲದೆ ನಾರಕೀ ಜೀವವು ಅಸಂಜ್ಞಿಯಲ್ಲಿ ಉತ್ಪನ್ನವಾಗುವುದಿಲ್ಲ, - ಎಂಬುದು ಮಾತ್ರ ವಿಶೇಷತೆಯಿದೆ.

ನರಕದಲ್ಲಿ ಆಗತಿ (ಆಗಮನ) - ನಿಮ್ನ ಲಿಖಿತ ಸ್ಥಾನಗಳಿಂದ ಜೀವಗಳು ನರಕದಲ್ಲಿ ಬರುತ್ತವೆ - ಮೊದಲನೆಯ ನರಕದಲ್ಲಿಯಂತೂ ಸಮ್ಯಗ್ದೃಷ್ಟಿ -ಮಿಥ್ಯಾದೃಷ್ಟಿ ಮನುಷ್ಯ, ಪಂಚೇಂದ್ರಿಯ ತಿರ್ಯಂಚಗಳು ಹೋಗುತ್ತವೆ. ಮನುಷ್ಯ, ಪಂಚೇಂದ್ರಿಯ ಸಂಜ್ಞೀ ತಿರ್ಯಂಚ ಹಾಗೂ ಜಲದಲ್ಲಿ ಉತ್ಪನ್ನವಾಗಿರುವ ಸರ್ಪ(ಸರೀಸೃಪ)ಗಳು ಎರಡನೆಯ ನರಕದವರೆಗೆ ಹೋಗುತ್ತವೆ. ಮನುಷ್ಯ, ತಿರ್ಯಂಚ, ಅಜಗರ(ಹೆಬ್ಬಾವು) ಕಪ್ಪು ಹೆಡೆಯುಳ್ಳ ಸರ್ಪಗಳು ನಾಲ್ಕನೆಯ ನರಕದವರೆಗೆ ಹೋಗಿ ಹುಟ್ಟುತ್ತವೆ. ಮನುಷ್ಯ, ತಿರ್ಯಂಚ, ಸಿಂಹಗಳು ಐದನೆಯ ನರಕದವರೆಗೆ ಜನ್ಮಪಡೆಯುತ್ತವೆ, ಮನುಷ್ಯ, ತಿರ್ಯಂಚ, ಸ್ತ್ರೀ ಆರನೆಯ ನರಕದವರೆಗೆ ಹುಟ್ಟುತ್ತಾರೆ. ಮನುಷ್ಯ ಹಾಗೂ ತಿರ್ಯಂಚಗಳು ಏಳನೆಯ ನರಕದವರೆಗೆ ಜನ್ಮ ಪಡೆಯುತ್ತಾರೆ - ಹೀಗೆ ನರಕದಲ್ಲಿ ಆಗತಿ(ಆಗಮನ) ತಿಳಿಯುವುದು.

ಮನುಷ್ಯಗತಿಯಲ್ಲಿ ಆಗತಿ - ಮನುಷ್ಯಗತಿಯಲ್ಲಿ ನಿಮ್ನ ಲಿಖಿತ ಸ್ಥಾನಗಳಿಂದ ಬರಬಹುದಾಗಿದೆ - ಏಳನೆಯ ನರಕದಿಂದ ಹೊರಟ ಜೀವ ಹಾಗೂ ಅಗ್ನಿಕಾಯಿಕ, ವಾಯುಕಾಯಿಕ, ಭೋಗಭೂಮಿಯ ಮನುಷ್ಯ, ತಿರ್ಯಂಚ ಇವರನ್ನು ಬಿಟ್ಟು ಉಳಿದ ಎಲ್ಲ ಕಡೆಗಿನ ಜೀವಗಳು ಬಂದು ಮನುಷ್ಯ ಗತಿಯಲ್ಲಿ ಉತ್ಪನ್ನರಾಗುತ್ತಾರೆ.

ಮನುಷ್ಯ ಗತಿಯಿಂದ ಜಾಗತಿ - ಮನುಷ್ಯರು ಸತ್ತು ಭವನವಾಸಿ, ವ್ಯಂತರ, ಜ್ಯೋತಿಷ್ಕ, ಹದಿನಾರು ಸ್ವರ್ಗಗಳಲ್ಲಿ, ಎಲ್ಲ ಅಹಮಿಂದ್ರ ದೇವಗಳಲ್ಲಿ ಉತ್ಪನ್ನರಾಗುತ್ತಾರೆ. ಏಳೂ ನರಕಗಳಲ್ಲಿ ಉತ್ಪನ್ನರಾಗುತ್ತಾರೆ ಹಾಗೂ ಪೃಥ್ವಿ, ಜಲ, ಅಗ್ನಿ, ವಾಯು, ವನಸ್ಪತಿ, ಎರಡು ಇಂದ್ರಿಯ, ಮೂರು ಇಂದ್ರಿಯ, ನಾಲ್ಕು ಇಂದ್ರಿಯ, ಪಂಚೇಂದ್ರಿಯ ಸಂಜ್ಞಿ - ಅಸಂಜ್ಞಿ - ಇವೆಲ್ಲ ಸ್ಥಾನಗಳಲ್ಲಿ ಉತ್ಪನ್ನರಾಗುತ್ತಾರೆ. ಭೋಗಭೂಮಿಯ ಮನುಷ್ಯ-ತಿರ್ಯಂಚಗಳಲ್ಲಿ, ಕರ್ಮಭೂಮಿಜರಲ್ಲಿ - ಈ ಪ್ರಕಾರ ಎಲ್ಲ ಸ್ಥಾನಗಳಲ್ಲಿ ಮನುಷ್ಯನು ಉತ್ಪನ್ನನಾಗುತ್ತಾನೆ. ಮನುಷ್ಯನು ಉತ್ಪನ್ನನಾಗದಂಥ ಯಾವುದೇ ಶುಭ-ಅಶುಭ ಸ್ಥಾನವು ಮೂರುಲೋಕ ಮತ್ತು ನಾಲ್ಕುಗತಿಗಳಲ್ಲಿ ಯಾವುದೂ ಇಲ್ಲ. ಅದರಿಂದ ಎಲ್ಲ ಸ್ಥಾನವು ಮನುಷ್ಯನ ಮನೆಯಿದೆ. ಇದೇ ರೀತಿ ಮೋಕ್ಷದಶೆಯನ್ನು ಕೂಡ ಮನುಷ್ಯನೇ ಪ್ರಾಪ್ತಮಾಡಿಕೊಳ್ಳುತ್ತಾನೆ. ಅರ್ಥಾತ್ ಪೂರ್ಣ ಶುದ್ಧತೆಯ ಸ್ಥಾನದ ಮೇಲೆಯೂ ಕೂಡ ಮನುಷ್ಯನೇ ಹತ್ತಿ ಹೋಗುತ್ತಾನೆ.

ತಿರ್ಯಂಚದಿಂದ ಜಾಗತಿ - ಏಕೇಂದ್ರಿಯ ಪಂಚಸ್ಥಾವರ ಮತ್ತು ವಿಕಲತ್ರಯಗಳು ಸತ್ತು ದೇವ, ನಾರಕಿ, ಭೋಗ ಭೂಮಿಯ ಮನುಷ್ಯ, ತಿರ್ಯಂಚಗಳಲ್ಲಿ ಜನಿಸುವುದಿಲ್ಲ. ಇವುಗಳನ್ನು ಹೊರತು ಪಡಿಸಿ ಕರ್ಮಭೂಮಿಯ

ಮನುಷ್ಯ, ತಿರ್ಯಂಚಗಳಿಗೆ ಸಂಬಂಧಿಸಿದ ಎಲ್ಲ ಸ್ಥಾನಗಳಲ್ಲಿ ಇವು ಜನ್ಮ ಪಡೆಯುತ್ತವೆ. ವಿಶೇಷವೆಂದರೆ ಪಂಚಸ್ಥಾವರಗಳೊಳಗಿನ ಅಗ್ನಿಕಾಯಿಕ, ವಾಯುಕಾಯಿಕ ಜೀವಗಳು ಮನುಷ್ಯರಾಗುವುದಿಲ್ಲ - ಪಂಚೇಂದ್ರಿಯ ಅಸಂಜ್ಞಿ ತಿರ್ಯಂಚಗಳು ಸತ್ತು ಮನ-ವಿಕಲ್ಪವಿಲ್ಲದೆ ಶುಭಭಾವಗಳಿಂದ ಭವನತ್ರಿಕ ದೇವಗಳಲ್ಲಿ ಜನ್ಮ ಪಡೆಯುತ್ತವೆ, ವಿಕಲ್ಪವಿಲ್ಲದೆ ಅಶುಭ ಭಾವಗಳಿಂದ ಸತ್ತು ಮೊದಲಿನ ನರಕದವರೆಗೆ ಜನ್ಮ ಧರಿಸುತ್ತವೆ, ಸಂಜ್ಞಿ ಪಂಚೇಂದ್ರಿಯ ತಿರ್ಯಂಚಗಳು ಭವನತ್ರಿಕದಿಂದ ಹಿಡಿದು ಹನ್ನೆರಡನೆಯ ಸ್ವರ್ಗದವರೆಗಿನ ದೇವಗಳಲ್ಲಿ ಹಾಗೂ ಏಳೂ ನರಕಗಳಲ್ಲಿ ಜನ್ಮ ಪಡೆಯುತ್ತವೆ. ಕರ್ಮಭೂಮಿಯ ಮನುಷ್ಯ, ತಿರ್ಯಂಚ, ಏಕೇಂದ್ರಿಯ ಮೊದಲಾದ ಐದು ಸ್ಥಾವರಗಳಲ್ಲಿ, ವಿಕಲತ್ರಯದಲ್ಲಿ, ಸಂಜ್ಞೀ-ಅಸಂಜ್ಞಿಯಲ್ಲಿ ಜನ್ಮ ಪಡೆಯುತ್ತವೆ ಮತ್ತು ಭೋಗಭೂಮಿಯ ಮನುಷ್ಯ ತಿರ್ಯಂಚಗಳಲ್ಲಿ ಜನ್ಮ ಪಡೆಯುತ್ತವೆ - ಈ ಪ್ರಕಾರ ತಿರ್ಯಂಚಗಳಲ್ಲಿ ಗಮನ ಹೇಳಿದ್ದಾರೆ.

ತಿರ್ಯಂಚ ಗತಿಯಲ್ಲಿ ಆಗತಿ (ಆಗಮನ) - ಪಂಚಸ್ಥಾವರ, ವಿಕಲತ್ರಯ ಹಾಗೂ ಪಂಚೇಂದ್ರಿಯ ತಿರ್ಯಂಚಗಳಲ್ಲಿ ಎಲ್ಲ ದೇವಗಳು ಹಾಗೂ ಏಳೂ ನರಕದ ನಾರಕಿಗಳು; ಭೋಗಭೂಮಿಗಳನ್ನು ಬಿಟ್ಟು-ಕರ್ಮಭೂಮಿಯ ಎಲ್ಲ ಮನುಷ್ಯ-ತಿರ್ಯಂಚಗಳು ಬಂದು ಜನ್ಮ ಪಡೆಯುತ್ತವೆ. ಇಲ್ಲಿ ವಿಶೇಷವೆಂದರೆ ಅಗ್ನಿಕಾಯ, ವಾಯುಕಾಯವನ್ನು ಬಿಟ್ಟು ಮೂರು ಸ್ಥಾವರಗಳಲ್ಲಿ ಭವನತ್ರಿಕದ ದೇವಗಳು ಹಾಗೂ ಮೊದಲನೇ ಎರಡನೇ ಸ್ವರ್ಗದ ದೇವಗಳು ಬಂದು ಜನಿಸುತ್ತಾರೆ. ಸಂಜ್ಞೀ ಪಂಚೇಂದ್ರಿಯ ತಿರ್ಯಂಚದಲ್ಲಿ ಭವನತ್ರಿಕದಿಂದ ಹಿಡಿದು ಹನ್ನೆರಡನೆಯ ಸ್ವರ್ಗದವರೆಗಿನ ದೇವಗಳು, ಭೋಗಭೂಮಿಯನ್ನು ಬಿಟ್ಟು ಉಳಿದ ಕರ್ಮಭೂಮಿಯ ಮನುಷ್ಯರು, ಏಳೂ ನರಕದ ಜೀವಗಳು ಬಂದು ಜನ್ಮ ಪಡೆಯುತ್ತಾರೆ. ಕರ್ಮಭೂಮಿಯ ಏಕೇಂದ್ರಿಯಾದಿ, ವಿಕಲತ್ರಯ ಹಾಗೂ ಪಂಚೇಂದ್ರಿಯದವರೆಗಿನ ಎಲ್ಲ ಜೀವಗಳು ಏಕೇಂದ್ರಿಯ ಮೊದಲಾದ ಪಂಚೇಂದ್ರಿಯ ತಿರ್ಯಂಚಗಳಲ್ಲಿ ಬಂದು ಜನ್ಮ ಪಡೆಯುತ್ತವೆ.

ಇವು ನಾಲ್ಕೂ ಗತಿಯ ದಂಡಕಗಳ ಕಥನವನ್ನು ಶ್ರುತಜ್ಞಾನದಿಂದ ತಿಳಿಯುತ್ತಾರೆ; ಅದರಿಂದ ಶ್ರುತಜ್ಞಾನವು ಉಪಾದೇಯವಿದೆ.

ಈ ಶ್ರುತಜ್ಞಾನದಿಂದಲೇ ನಿಮಿತ್ತ-ಉಪಾದಾನಗಳ ಸ್ವರೂಪವನ್ನು ತಿಳಿಯುತ್ತಾರೆ, ಅದನ್ನೇ ಹೇಳುತ್ತಾರೆ-

ಉಪಾದಾನ-'ದ್ರವ್ಯದ ಯಾವ ಶಕ್ತಿಯು ದ್ರವ್ಯದಿಂದಲೇ ಉತ್ಪನ್ನವಾಗುತ್ತದೆ' ಅದನ್ನು ಉಪಾದಾನವೆಂದು ಹೇಳುತ್ತಾರೆ. ಪದಾರ್ಥ ಮಿಲನ(ಸಮಾಗಮ)ದಿಂದ ಯಾವ ಶಕ್ತಿಯು ಪ್ರಗಟವಾಗುತ್ತದೆ, ಅದನ್ನು ನಿಮಿತ್ತವೆಂದು ಹೇಳುತ್ತಾರೆ. ಹೇಗೆಂದರೆ ಜೀವದಲ್ಲಿ ಶುಭಾಶುಭರೂಪವಾಗಿ ರಾಗ-ದ್ವೇಷರೂಪ ಪರಿಣಮನದ ಶಕ್ತಿಯಂತೂ ಜೀವದ ಉಪಾದಾನವಿದೆ ಹಾಗೂ ಯಾವ ಪದಾರ್ಥಗಳ ನಿಮಿತ್ತ ಪಡೆದು ರಾಗ-ದ್ವೇಷರೂಪವಾಯಿತು, ಆ ಪರಪದಾರ್ಥವು ನಿಮಿತ್ತವಿದೆ. ಹೀಗೆ ಈ ನಿಮಿತ್ತ-ಉಪಾದಾನದಿಂದಲೇ ಶುಭಾಶುಭ ಕರ್ಮದ ಬಂಧವು ಆತ್ಮನಿಗೆ ಆಗುತ್ತದೆ, ಅದನ್ನೇ ಹೇಳುತ್ತಾರೆ -

ಯಾವ ಪ್ರಕಾರ ಜೀವದ ಉಪಾದಾನವೂ ಒಳ್ಳೆಯದಿದ್ದು ಪೂಜೆ, ದಾನ, ಶೀಲ, ಸಂಯಮ, ತಪ, ಜಿನಶಾಸ್ತ್ರಗಳ ಸ್ವಾಧ್ಯಾಯ ಹಾಗೂ ಶ್ರವಣ, ಮುನಿ-ಶ್ರಾವಕ ಮೊದಲಾದ ಧರ್ಮಾತ್ಮಾ ಜೀವರುಗಳ ಸಂಗತಿ ಇತ್ಯಾದಿ ಶುಭ ನಿಮಿತ್ತಗಳೇ ಇದ್ದರೆ ದೀರ್ಘಸ್ಥಿತಿಯುಕ್ತ ಶುಭ ಭಾವಕರ್ಮವಾಗುತ್ತದೆ. ಅದರ ಫಲದಲ್ಲಿ ಆತ್ಮನು ಭವ-ಭವದಲ್ಲಿ ಸುಖಿಯಾಗುತ್ತಾನೆ.

ಆದರೆ ಒಂದು ವೇಳೆ ಆತ್ಮನ ಉಪಾದಾನವು ಒಳ್ಳೆಯದಿರದಿದ್ದರೆ ಮತ್ತು ಕ್ರೋಧ, ಮಾನ, ಮಾಯೆ, ಲೋಭ, ಕಳವು, ಜೂಜು, ಪರಸ್ತ್ರೀ ಸಂಸರ್ಗ, ಹಾಸ್ಯ, ಕೌತುಕ, ದುರಾಚಾರಿ, ಮದ್ಯಕುಡುಕ ಜೀವಗಳ ಸಂಬಂಧ

ಮೊದಲಾದ ಪಾಪಕಾರಿ ನಿಮಿತ್ತಗಳಿದ್ದರೆ ಆತ್ಮನಿಗೆ ಬಹಳಷ್ಟು ಪಾಪಭಾವಗಳಾಗುತ್ತವೆ, ಕರ್ಮಬಂಧವು ಅಧಿಕ ಸ್ಥಿತಿವುಳ್ಳದ್ದಾಗುತ್ತದೆ. ಅದರಿಂದ ಜೀವನು ಭವ-ಭವದಲ್ಲಿ ದುಃಖಿಯಾಗುತ್ತಾನೆ.

ಎಲ್ಲಿ ಆತ್ಮನ ಉಪಾದಾನವಂತೂ ಶುಭವಿರುತ್ತದೆ ಮತ್ತು ನಿಮಿತ್ತವು ಅಶುಭವಿದ್ದರೆ ಪಾಪ ಬಂಧವಾಗುವುದಿಲ್ಲ. ಶುಭ ಉಪಾದಾನದಿಂದಂತೂ ಪುಣ್ಯದ್ದೇ ಬಂಧವಾಗುತ್ತದೆ. ಹೇಗೆಂದರೆ ಮಹಾಧರ್ಮಾತ್ಮನು ಧರ್ಮಧ್ಯಾನ ಸಹಿತ ವನಾದಿ ಸ್ಥಾನಗಳಲ್ಲಿ ವಿರಾಜಮಾನವಿರುವ ಯಾವನೋ ಮುನಿ ಅಥವಾ ಶ್ರಾವಕನ ಮೇಲೆ ಪಾಪಿಯು ಬಂದು ಉಪಸರ್ಗ ಮಾಡುವನು. ಪಾಂಡವರು, ವಾರಿಷೇಣ, ಸುದರ್ಶನ ಶ್ರೇಷ್ಠಿಯ ಹಾಗೆಂದು ತಿಳಿಯುವುದು. ಅಲ್ಲಿ ನಿಮಿತ್ತವಂತೂ ಒಳ್ಳೆಯದಿಲ್ಲ; ಆದರೆ ಫಲವಂತೂ ಒಳ್ಳೆಯದೇ ಆಯಿತು.

ಯಾವುದರಲ್ಲಿ ಉಪಾದಾನವಂತೂ ಒಳ್ಳೆಯದಿಲ್ಲ, ಅಶುಭ, ವಂಚನೆಯರೂಪವಿದ್ದರೆ, ಕ್ರೋಧ, ಮಾನಾದಿ ಕಷಾಯರೂಪವಿದ್ದರೆ ಮತ್ತು ನಿಮಿತ್ತವು ಒಳ್ಳೆಯದಿದ್ದರೆ; ಪೂಜೆ, ದಾನ, ಶಾಸ್ತ್ರ ಕೇಳುವುದು- ಓದುವುದು, ತಪ-ಸಂಯಮಾದಿರೂಪ ಅನೇಕ ಒಳ್ಳೆಯ ನಿಮಿತ್ತಗಳಿರುವುದು ಆದಾಗ್ಯೂ ಉಪಾದಾನವು ಅಶುಭವಿರುವ ಕಾರಣ ಪಾಪಬಂಧವೇ ಆಗುತ್ತದೆ. ಹೇಗೆಂದರೆ ಯಾವನೋ ಕಳ್ಳನು ಇತರರ ಧನಹರಣ ಮಾಡುವ ಸಲುವಾಗಿ ಧರ್ಮಾತ್ಮನ ಸೋಗು ಹಾಕಿಕೊಂಡು ಅನೇಕ ಪ್ರಕಾರ ಧರ್ಮ ಸೇವನೆ, ಪೂಜೆ, ಸ್ತುತಿ, ತಪಾದಿಗಳನ್ನು ಮಾಡುತ್ತಾನೆ; ಆದರೆ ಅಶುಭ ಉಪಾದಾನದ ಕಾರಣ ಅವನು ಪಾಪದ್ದೇ ಬಂಧ ಮಾಡುತ್ತಾನೆ. ಅದೇ ರೀತಿ ಈ ಜೀವದ ಪ್ರವೃತ್ತಿಯು ಅನೇಕ ಭಾವಗಳದ್ದಿರುತ್ತದೆ.

ಕೆಲವೊಮ್ಮೆ ಎಂಥ ನಿಮಿತ್ತವಿರುತ್ತದೆ, ಅಂಥದೇ ಉಪಾದಾನ ಭಾವವಾಗುತ್ತದೆ ಆ ಸ್ಥಿತಿಯಲ್ಲಿ ಉತ್ಕೃಷ್ಟ ಶುಭ ಅಶುಭದ ಬಂಧವಾಗುತ್ತದೆ. ಕೆಲವೊಮ್ಮೆ ನಿಮಿತ್ತವಂತೂ ಅನ್ಯಪ್ರಕಾರದ್ದಿರುತ್ತದೆ ಮತ್ತು ಉಪಾದಾನವೂ ಅನ್ಯ ಪ್ರಕಾರದ್ದೇ ಇರುತ್ತದೆ ಅಲ್ಲಿ ಫಲವು ಉಪಾದಾನದ ಅನುಸಾರವೇ ಆಗುತ್ತದೆ. ಅದರಿಂದ ಯಾರು ವಿವೇಕವಂತರಿದ್ದಾರೆ ಅವರು ಪರಭವ ಸುಖದ ಸಲುವಾಗಿ ಒಳ್ಳೆಯ ನಿಮಿತ್ತಗಳನ್ನು ಹೊಂದಿಸಿಕೊಳ್ಳುವುದು ಮತ್ತು ಉಪಾದಾನವನ್ನು ಯಾವಾಗಲೂ ಒಳ್ಳೆಯದಾಗಿ ಇಟ್ಟುಕೊಳ್ಳುವುದೇ ಯೋಗ್ಯವಿದೆ. ಒಳ್ಳೆಯ ನಿಮಿತ್ತದಿಂದ ಶುಭ ಉಪಾದಾನವುಳ್ಳ ಜೀವರುಗಳಿಗೆ ಬಹಳಷ್ಟು ಶುಭಫಲದ ಪ್ರಾಪ್ತಿಯಾಗುತ್ತದೆ ಅಲ್ಲದೆ ಒಳ್ಳೆಯ ನಿಮಿತ್ತದಿಂದ ಉಪಾದಾನವೂ ಪರಂಪರೆಯಿಂದ ಶುಭವಾಗಿ ಹೋಗುತ್ತದೆ. ಅಶುಭ ನಿಮಿತ್ತಗಳಿಂದ ಉಪಾದಾನವು ಅಶುಭವಾಗಿ ಹೋಗುತ್ತದೆಯೆಂಬುದನ್ನು ಜಗತ್ತಿನಲ್ಲಿ ಪ್ರಗಟರೂಪದಿಂದ ಕಾಣುತ್ತೇವೆ. ಒಳ್ಳೆಯ ಕುಲದ ಜೀವನು ಅಶುಭ ನಿಮಿತ್ತಗಳಿಂದ ಕಳ್ಳ, ಜೂಜುಗಾರ, ಕುಆಚಾರ ಮೊದಲಾದ ಕುಲಕ್ಷಣಗಳಿಂದ ಕೆಟ್ಟು ಹೋಗುತ್ತಿರುವುದು ಕಂಡು ಬರುತ್ತದೆ. ಹೀನ ಕುಲದಲ್ಲಿ ಉತ್ಪನ್ನವಾದ ಜೀವನು ಒಳ್ಳೆಯ ಸಂಗತಿಯಿಂದ ಉನ್ನತನಾಗಿ ಸುಖಿಯಾಗಿರುವುದು ಕಂಡು ಬರುತ್ತದೆ. ಆದುದರಿಂದ ವಿವೇಕವುಳ್ಳ ಜೀವನಿಗೆ ಒಳ್ಳೆಯ ನಿಮಿತ್ತಗಳನ್ನು ಇಟ್ಟುಕೊಳ್ಳುವ ಉಪಾಯವನ್ನೇ ಯಾವಾಗಲೂ ಮಾಡುವುದು ಯೋಗ್ಯವಿದೆ.

ನಿಮಿತ್ತದಿಂದ ಉಪಾದಾನದ ಶುದ್ಧತೆಯಾಗುತ್ತದೆ. ಹೇಗೆ ಅಗ್ನಿಯ ನಿಮಿತ್ತದಿಂದ ಸುವರ್ಣದ ಉಪಾದಾನದ ಶುದ್ಧತೆಯಾಗುತ್ತದೆ, ತಾಮ್ರ ಮೊದಲಾದ ಕುಧಾತುಗಳ ನಿಮಿತ್ತದಿಂದ ಸುವರ್ಣದ ಉಪಾದಾನದ ಮಲಿನತೆಯಾಗುತ್ತದೆ - ಇದನ್ನು ತಿಳಿದುಕೊಂಡು ಒಳ್ಳೆಯ ನಿಮಿತ್ತಗಳನ್ನೇ ಹೊಂದಿಸಿಕೊಳ್ಳುವುದು ಯೋಗ್ಯವಿದೆ. ಎಲ್ಲೆಲ್ಲಿಯೂ ನಿಮಿತ್ತದ್ದೇ ಮುಖ್ಯತೆಯಿದೆ. ಅದನ್ನೇ ತೋರಿಸಿಕೊಡುತ್ತಾರೆ.

ನೋಡಿರಿ ! ಉತ್ಕೃಷ್ಟ ಒಳ್ಳೆಯ ಉಪಾದಾನದ ಧಾರಕ ಮೊದಲನೆಯ ತೀರ್ಥಂಕರ ದೇವರದೂ ಅಶುಭ ನಿಮಿತ್ತದಿಂದ ಎಂಭತ್ಮೂರು ಲಕ್ಷ ಪೂರ್ವದ ಜೀವನವು ವಿಷಯ-ಕಷಾಯಗಳಲ್ಲಿಯೇ ಹೊರಟು ಹೋಯಿತು. ಅವರಿಗೆ ದೀಕ್ಷೆಯ ರೂಪದ ಭಾವವಾಗಲಿಲ್ಲ; ಆಗ ಇಂದ್ರನು ತೀರ್ಥಂಕರರಾಗುವಂಥವರದೂ ಸಂಪೂರ್ಣ ಆಯು

ಕರ್ಮವು ಪಂಚೇಂದ್ರಿಯ ಭೋಗಗಳಲ್ಲಿ ವ್ಯತೀತವಾಗುತ್ತಿದೆ - ಇವರಿಗೆ ವಿರಕ್ತಿಯಾಗುತ್ತಿಲ್ಲ ಎಂಬುದನ್ನು ಅವಧಿ ಜ್ಞಾನದಿಂದ ತಿಳಿದನು ಅದರಿಂದ ಯಾವುದಾದರೂ ನಿಮಿತ್ತ ಹೊಂದಿಸಬೇಕೆಂದು ಯೋಚಿಸಿ ಇಂದ್ರನು ಅತ್ಯಂತ ಅಲ್ಪ ಆಯುಕರ್ಮವಿರುವ ನೀಲಾಂಜನೆಯೆಂಬ ಹೆಸರಿನ ಓರ್ವ ಅಪ್ಸರೆಗೆ ಆಜ್ಞೆ ಮಾಡುತ್ತಾನೆ. ಇಂದ್ರನ ಆಜ್ಞೆಯಿಂದ ಆ ದೇವಿಯು ಋಷಭದೇವ ದೊರೆಯ ಆಸ್ಥಾನದಲ್ಲಿ ಅದ್ಭುತ ನೃತ್ಯ-ಗಾನ ಮಾಡತೊಡಗಿದಳು. ಅವಳ ನೃತ್ಯವನ್ನು ನೋಡಿ ಸಂಪೂರ್ಣ ಸಭೆಯಲ್ಲಿದ್ದ ದೇವ-ಮನುಷ್ಯರು ಆಶ್ಚರ್ಯ ಚಕಿತರಾದರು. ಇಂದ್ರನಿಗೂ ದುರ್ಲಭವಿರುವಂಥ ನೃತ್ಯ ಮಾಡುತ್ತ - ಮಾಡುತ್ತ ಆ ದೇವಿಯ ಆಯುವು ಪೂರ್ಣವಾಗಿ ಹೋಯಿತು. ಅದರಿಂದ ಅಪ್ಸರೆಯ ಆತ್ಮವಂತೂ ಪರಗತಿಗೆ ಹೋಯಿತು ಹಾಗೂ ಶರೀರವು ಕನ್ನಡಿಯ ಛಾಯೆಯ ಪ್ರತಿಬಿಂಬದ ಹಾಗೆ ಅದೃಶ್ಯವಾಗಿ ಹೋಯಿತು. ನೃತ್ಯದ ಉತ್ಸವವು ಭಂಗವಾಗದಿರಲೆಂದು ಇಂದ್ರನು ತಕ್ಷಣ ಅದೇ ಪ್ರಕಾರದ ಅನ್ಯ ದೇವಾಂಗನೆಯನ್ನು ಉಪಸ್ಥಿತಗೊಳಿಸುತ್ತಾನೆ. ಅದರಿಂದ ನೃತ್ಯದ ರಾಗ, ತಾಲ-ಧಾಟಿಯು ಭಂಗವಾಗಲಿಲ್ಲ. ಈ ಘಟನೆ(ನಾಟಕ)ಯನ್ನು ಸಭೆಯ ಯಾವ ಮನುಷ್ಯಾದಿ ಜೀವರು ತಿಳಿಯಲು ಸಾಧ್ಯವಾಗಲಿಲ್ಲ. ಅದೇ ದೇವಿಯು ನರ್ತಿಸುತ್ತಿದ್ದಾಳೆಂದು ಅವರೆಲ್ಲರೂ ತಿಳಿದಿದ್ದರು. ಆದರೆ ದೊರೆ ಋಷಭದೇವರು ಅವಧಿ ಜ್ಞಾನದಿಂದ- ಯಾವ ದೇವಿಯು ನರ್ತಿಸುತ್ತಿದ್ದಳು, ಅವಳು ಶರೀರ ತ್ಯಾಗ ಮಾಡಿ ಅನ್ಯ ಗತಿಗೆ ಹೊರಟು ಹೋಗಿದ್ದಾಳೆ. ಇವಳಂತೂ ಇಂದ್ರನಿಂದ ಕಳುಹಿಸಲ್ಪಟ್ಟಿರುವ ಇನ್ನೋರ್ವ ದೇವಾಂಗನೆಯಿದ್ದಾಳೆಂದು ತಿಳಿಯುತ್ತಾರೆ. ಅಯ್ಯಾ! ಸಂಸಾರವು ಚಪಲ, ವಿನಾಶಿಕ ಮತ್ತು ಸ್ವಾರ್ಥದಿಂದ ತುಂಬಿಕೊಂಡಿದೆ ಎಂಬಿತ್ಯಾದಿ ಭಾವಗಳು ಮೂಡಿ ಬಂದು ವೈರಾಗ್ಯವು ಪ್ರಗಟವಾಗುತ್ತದೆ. ಅವರು ದೀಕ್ಷೆ ಧಾರಣ ಮಾಡಿ ಧ್ಯಾನಾಗ್ನಿಯಿಂದ ಕರ್ಮಗಳ ನಾಶಮಾಡಿ ಸಿದ್ಧರಾದರು. ಇಲ್ಲಿ ನಿಮಿತ್ತದ ಮಹಿಮೆಯು ಕಂಡು ಬರುತ್ತದೆ. ಅದರಿಂದ ಸತ್ಪುರುಷರು ತಮ್ಮ ಕಲ್ಯಾಣದ ಸಲುವಾಗಿ ಕುಸಂಗದ ತ್ಯಾಗ ಮಾಡಿ ಶುಭ ನಿಮಿತ್ತಗಳಲ್ಲಿ ಉಳಿಯುವುದು ಸುಖಕಾರಿಯಿದೆ. ಹೇಗೆ ಸಾಧ್ಯವಿದೆಯೊ ಹಾಗೆಯೇ ಒಳ್ಳೆಯ ನಿಮಿತ್ತಗಳ ಸಂಪರ್ಕವು ಗುಣಕಾರಿಯಿದೆ. ಇದಂತೂ ಜೀವನಿಗೆ ಜೀವದ ನಿಮಿತ್ತ ಸಂಬಂಧದ ಕಥನವಾಯಿತು.

ಈಗ ಪುದ್ಗಲದಿಂದ ಪುದ್ಗಲದ ನಿಮಿತ್ತ-ಉಪಾದಾನ ಹೇಳುತ್ತಾರೆ. ಹೇಗೆ ಅರಿಷಿಣವಂತೂ ಸ್ವಭಾವದಿಂದಲೇ ಹಳದಿಯಿದೆ. ಅದನ್ನು ತೇಯ್ದು ನೀರಿನಲ್ಲಿ ಕರಗಿಸಿದರೆ ನೀರು ಹಳದಿಯಾಗುತ್ತದೆ. ಆದರೆ ಅದೇ ಹಳದಿ ನೀರಿನಲ್ಲಿ ಸುಣ್ಣ ಅಥವಾ ಸೋಡಾ ಹಾಕಿದ ಮೇಲೆ ಸುಣ್ಣದ ನಿಮಿತ್ತದಿಂದ ಆ ನೀರೆಲ್ಲವೂ ಕೆಂಪಾಗಿ ಹೋಗುತ್ತದೆ. ಇದರಲ್ಲಿ ಕೆಂಪಾಗುವ ಉಪಾದನ ಶಕ್ತಿಯಂತೂ ಅರಿಷಿಣದ್ದೇ ಇದೆ; ಆದರೆ ಸುಣ್ಣದ ನಿಮಿತ್ತವು ದೊರೆತ ಮೇಲೆಯೇ ಕೆಂಪಾಗುತ್ತದೆ.

ಅದೇ ಪ್ರಕಾರ ಸ್ಫಟಿಕ ಮಣಿಯಂತೂ ನಿರ್ಮಲವೇ ಇದೆ; ಆದರೆ ಅದರ ಕೆಳಗೆ ಎಂಥ ಡಾಂಕ-ತಗಡು (ಸಂಯೋಗ) ನೀಡುತ್ತೇವೆ ಅಂಥದೇ ಆ ಮಣಿಯು ಕಂಡುಬರುತ್ತದೆ. ಕೆಂಪು ತಗಡು ನೀಡಿದರೆ ಮಣಿ ಕೆಂಪಾಗಿ ಕಂಡುಬರುತ್ತದೆ. ಹಳದಿ ತಗಡು ಕೊಟ್ಟರೆ ಹಳದಿಯಾಗಿ ಹೋಗುತ್ತದೆ, ಕಪ್ಪು ತಗಡಿನಿಂದ ಮಣಿಯು ಕಪ್ಪಾಗಿ ಹೋಗುತ್ತದೆ. ಸ್ವಭಾವದಿಂದ ಮಣಿಯು ನಿರ್ಮಲವಾಗಿದ್ದರೂ ತಗಡಿನ ನಿಮಿತ್ತದ ಅನುಸಾರ ಹಾಗೆಯೇ ಕಂಡು ಬರಲಾರಂಭಿಸುತ್ತದೆ. ಕೆಂಪು, ಹಳದಿ, ಕಪ್ಪು ಆಗುವ ಉಪಾದಾನ ಶಕ್ತಿಯಂತೂ ಸ್ವಯಂ ಆ ಸ್ಫಟಿಕ ಮಣಿಯದಿದೆ, ಆದರೆ ಕೆಳಗಿನ ತಗಡು ನಿಮಿತ್ತವಿದೆ. ಎಂದರೆ ಇಲ್ಲಿಯೂ ನಿಮಿತ್ತವು ಪ್ರಧಾನವಾಯಿತು.

ಅದೇ ರೀತಿ ಲೋಹ ಧಾತುವು ಕೆಳದರ್ಜೆಯ ಧಾತುವಿದೆ; ಆದರೆ ಅದು ಯಾವಾಗ ಉಚ್ಚವಿರುವ ಪರುಷ ಮಣಿಯ ಸಂಪರ್ಕ ಮಾಡುತ್ತದೆ, ಆಗ ಬಂಗಾರ(ಚಿನ್ನ)ವಾಗಿ ಹೋಗುತ್ತದೆ. ಚಿನ್ನವಾಗುವ ರೂಪದ ಉಪಾದಾನಶಕ್ತಿಯಂತೂ ಲೋಹದಲ್ಲಿಯೇ ಇದೆ. ಇತರ ಧಾತುಗಳಲ್ಲಿ ಇಲ್ಲ. ಆದರೆ ಅದಕ್ಕೆ ಚಿನ್ನವಾಗುವಲ್ಲಿ ಪರುಷಮಣಿಯ ನಿಮಿತ್ತ ಬೇಕಾಗುವುದು. ಆದುದರಿಂದ ಎಲೈ ಭವ್ಯನೇ ! ಜೀವದಿಂದ ಜೀವನಿಗೆ, ಪುದ್ಗಲದಿಂದ

ಪುದ್ಗಲಕ್ಕೆ ಸರ್ವತ್ರ ನಿಮಿತ್ತದ್ದೇ ಮುಖ್ಯತೆಯಿದೆ. ಅದಕ್ಕಾಗಿ ವಿವೇಕವಂತರು ಒಳ್ಳೆಯ ನಿಮಿತ್ತಗಳನ್ನು ಹೊಂದಿಸಿಕೊಳ್ಳುವುದೇ ಯೋಗ್ಯವಿದೆ. ಅದರಲ್ಲಿ ವಿಶೇಷವೆಂದರೆ - ತಮ್ಮ ಪರಿಣಾಮಗಳ ವಿಶುದ್ಧತೆಗಿಂತ ಅಧಿಕ ವಿಶುದ್ಧತೆಯ ನಿಮಿತ್ತವಿದ್ದರೆ ತಮ್ಮ ಉಪಾದಾನವನ್ನು ನಿಮಿತ್ತದ ಅನುಸಾರ ಮಾಡುವುದು ಮತ್ತು ಒಂದುವೇಳೆ ತಮ್ಮ ಭಾವಗಳ ವಿಶುದ್ಧತೆಗಿಂತ ನಿಮಿತ್ತವು ಸಾಮಾನ್ಯವಿದ್ದರೆ ತಮ್ಮ ಉಪಾದಾನವನ್ನು ನಿಮಿತ್ತದ ಅನುಸಾರ ಮಾಡಬಾರದು. ಇತ್ಯಾದಿ ವಿಚಾರಗಳು ಸಮ್ಯಗ್ದೃಷ್ಟಿಗಳಿಗೆ ತಮ್ಮ ಬುದ್ಧಿಯ ಮೂಲಕ ವಿಚಾರ ಮಾಡಲು ಯೋಗ್ಯವಿವೆ.

ಈ ಪ್ರಕಾರ ಶ್ರುತಜ್ಞಾನದಿಂದ ನಿಮಿತ್ತ ಉಪಾದಾನಗಳ ಸ್ವರೂಪ ತಿಳಿಯುತ್ತೇವೆ; ಅದಕ್ಕಾಗಿ ಶ್ರುತಜ್ಞಾನವು ಉಪಾದೇಯವಿದೆ.

ಸುವಾಣಿಜ್ಯ- ಕುವಾಣಿಜ್ಯಗಳ ಸ್ವರೂಪವನ್ನು ಕೂಡ ಶ್ರುತಜ್ಞಾನದಿಂದ ತಿಳಿಯುತ್ತೇವೆ. ಅದನ್ನೇ ಹೇಳುತ್ತಾರೆ-

**ಹಿಂಸಾ ವಾಣಿಜ್ಜ ಹೇಯಂ, ತಿಲ ಧಾತು ಆದಿ ಭೂಮಿಜಲಖಂಡೋ ।**
**ಅಪ್ಪಾರಂಭೋ ಸುಹ ಕಜ್ಜೋ, ವಿಣಹಿಂಸಾ ಣಿತ್ತಮಾದೇಓ ॥೪೫॥**

**ಗಾಥಾರ್ಥ :-** ಹಿಂಸಾಕಾರೀ ವ್ಯಾಪಾರಗಳು ತ್ಯಾಗಯೋಗ್ಯವಿವೆ; ಎಳ್ಳು, ಲೋಹ ಮೊದಲಾದ ಧಾತುಗಳ ವ್ಯಾಪಾರಗಳು ತ್ಯಾಗಯೋಗ್ಯವಿವೆ. ಭೂಮಿ, ಜಲ ಸಂಬಂಧದ ವ್ಯಾಪಾರಗಳು ತ್ಯಾಗಯೋಗ್ಯವಿವೆ. ಅಲ್ಪ ಆರಂಭವಿರುವ ಮತ್ತು ಹಿಂಸೆಯಿಲ್ಲದಿರುವಂಥ ಶುಭ ವ್ಯಾಪಾರಗಳೇ ಉಪಾದೇಯವಿವೆ.

**ಭಾವಾರ್ಥ :-** ಸಮ್ಯಗ್ದೃಷ್ಟಿ ಧರ್ಮಾತ್ಮರು ವ್ಯಾಪಾರ ಮಾಡುವಲ್ಲಿಯೂ ಜ್ಞೇಯ, ಹೇಯ, ಉಪಾದೇಯಗಳ ವಿಚಾರ ಮಾಡುತ್ತಾರೆ. ಎಂದರೆ ಶುಭ, ಅಶುಭ ವ್ಯಾಪಾರಗಳನ್ನು ಸಮುಚ್ಚಯ ಸಮಗ್ರರೂಪದಿಂದ ತಿಳಿಯುವುದು ಜ್ಞೇಯವಿದೆ. ಅದರಲ್ಲಿ ೧) ಶುಭ ವ್ಯಾಪಾರ, ೨) ಅಶುಭ ವ್ಯಾಪಾರವೆಂದು ಎರಡು ಭೇದಗಳಿವೆ.

ಹಿಂಸೆ, ಅಸತ್ಯ, ಕಳವು ಮೊದಲಾದ ದೋಷರಹಿತ ವ್ಯಾಪಾರಗಳು ಶುಭವ್ಯಾಪಾರಗಳಿವೆ. ಮುತ್ತು, ರತ್ನ, ಮಾಣಿಕ್ಯ ಮೊದಲಾದುವನ್ನು ನೇರವಾಗಿ ಖರೀದಿಸುವುದು ಮತ್ತು ನೇರವಾಗಿ ಕ್ರಯಿಸುವುದು, ಸಂಚಿತಗೊಳಿಸಿ ಬಹುದಿನಗಳವರೆಗೆ ಇಟ್ಟುಕೊಳ್ಳದಿರುವುದು; ಇವು ನಿರ್ದೋಷ ವ್ಯಾಪಾರಗಳಿದ್ದು ಉಪಾದೇಯವಿವೆ. ಬೆಳ್ಳಿ, ಬಂಗಾರದ ನಾಣ್ಯಗಳು, ರೂಪಾಯಿಗಳನ್ನು ತಗೆದುಕೊಳ್ಳುವುದು ಹಾಗೆಯೇ ನೇರವಾಗಿ ಕೊಟ್ಟು ಬಿಡುವುದು ಜರೀ, ಬಟ್ಟೆ, ಕಾಗದ, ರಟ್ಟು ಮೊದಲಾದುವನ್ನು ನೇರವಾಗಿ ತಗೆದುಕೊಳ್ಳುವುದು, ಹಾಗೆಯೇ ಕೊಡುವುದು - ಇವು ನಿರ್ದೋಷ ವ್ಯಾಪಾರವಿದ್ದು ಉಪಾದೇಯವಿವೆ. ಇತರರ ಆಭರಣಗಳನ್ನು ಬಡ್ಡಿ ತಗೆದುಕೊಂಡು ಇಟ್ಟುಕೊಳ್ಳುವ ವ್ಯಾಪಾರವು ಕೂಡ ಶುಭ ವ್ಯಾಪಾರವಿದೆ. ಮೇಲೆ ಹೇಳಿದ ವ್ಯಾಪಾರಗಳು ಅಗ್ನಿ-ಜಲದ ಆರಂಭದಿಂದ ರಹಿತವಾಗಿರುವ ಕಾರಣ ಶುಭ ವ್ಯಾಪಾರವಿವೆ. ಯಾವವುಗಳಲ್ಲಿ ಜಲ ಅಥವಾ ಅಗ್ನಿಯ ಆರಂಭವಿರುತ್ತದೆ ಅಂಥ ಆರಂಭ ಹಿಂಸೆಯಿಂದ ಕೂಡಿದ ವ್ಯಾಪಾರಗಳು ಹೇಯವಿವೆ. ಸೂಜಿಯ ಆಜೀವಿಕೆ, ವಚನ ಆಜೀವಿಕೆ, ದೃಷ್ಟಿ ಆಜೀವಿಕೆ ಮತ್ತು ಕಷ್ಟೀ ಆಜೀವಿಕೆ - ಇವು ನಾಲ್ಕು ಆಜೀವಿಕೆಯ ಭೇದಗಳಿವೆ. ಕಸೂತಿ ತಗೆಯುವುದು, ಹೆಣೆಯುವುದು, ಬಟ್ಟೆ ಹೊಲಿಯುವುದು ಮೊದಲಾದ ಸಿಂಪಿ(ದರ್ಜಿ)ಯ ಕೆಲಸದಲ್ಲಿ ಸೂಜಿಯ ಬಲದಿಂದ ಸಂಪಾದನೆಯಾಗುತ್ತದೆ, ಅದು ಸೂಜಿಯ ಆಜೀವಿಕೆಯಿದ್ದು ನಿರ್ದೋಷವಿದೆ - ಉಪಾದೇಯವಿದೆ.

ಕೊಡ-ಕೊಳ್ಳುವಂಥವರ ಮಧ್ಯದಲ್ಲಿ ದೂತ(ದಲಾಲ)ನಾಗಿ ವ್ಯಾಪಾರ ಮಾಡಿಸುವುದು ಅದು ತನ್ನ ವಚನ-ಜ್ಞಾನದ ಬಲದಿಂದ ಆಜೀವಿಕೆಯನ್ನು ನಡೆಸುವುದು ಎಂದರೆ ಲೋಕದಲ್ಲಿ ದಲಾಲಿ ಮಾಡುವಂಥವರು. ಇಂಥ ಹಿಂಸೆ ಮೊದಲಾದ ದೋಷರಹಿತ ಶುಭ ವಾಣಿಜ್ಯಗಳು ಉಪಾದೇಯವಿವೆ. ವಿಭಿನ್ನ ಪ್ರಕಾರದ ರತ್ನಗಳು,

ನಾಣ್ಯಗಳು, ರೂಪಾಯಿಗಳನ್ನು ಪರೀಕ್ಷಿಸಿ ಕೊಡುವುದು. ಪರಿಶೀಲನೆ ಮಾಡುವ ಅಥವಾ ವಿಮರ್ಶಿಸುವ ಆಜೀವಿಕೆ ಮಾಡುವುದು ಅದು ದೃಷ್ಟಿ ಆಜೀವಿಕೆಯಿದೆ. ತಮ್ಮ ಶರೀರದಿಂದ ಕಷ್ಟ ಮಾಡಿ ಇತರರ ಕಾರ್ಯ ಮಾಡಿಕೊಡುವುದು ಎಂದರೆ ಲೋಕದಲ್ಲಿ ಹಮಾಲ, ಪಾಳ್ಯದಾರ, ದಿನಗೂಲಿ ಮೊದಲಾಗಿ ತಲೆಯ ಮೇಲೆ ಭಾರ ಹೊರುವ ಆಜೀವಿಕೆ ಮಾಡುವುದು ಅದು ಕಷ್ಟೀ ಆಜೀವಿಕೆಯಿದೆ.

ಮೇಲೆ ಹೇಳಿದ ನಾಲ್ಕು ಪ್ರಕಾರದ ಆಜೀವಿಕೆಯಂತೂ ಸಾಮಾನ್ಯ ಪುಣ್ಯದಿಂದ ವಿಶೇಷ ಪುಣ್ಯದವರೆಗೆ ನೀಚಕುಲದವರಿಂದ ಉಚ್ಚ ಕುಲಸಂಪನ್ನರವರೆಗೆ, ಸಾಮಾನ್ಯ ಜ್ಞಾನಿಯಿಂದ ವಿಶೇಷ ಜ್ಞಾನಿಯವರೆಗೆ; ಕಳವು, ಹಿಂಸೆ, ಅಸತ್ಯ, ಆರಂಭದಿಂದ ಭಯಭೀತರಿರುವ ಧರ್ಮಾತ್ಮಾ ಜೀವ-ಸಂತೋಷೀ ಗೃಹಸ್ಥರು ಮಾಡುತ್ತಾರೆ, ಅವು ಉಪಾದೇಯವಿವೆ. ಇವೆಲ್ಲ ವ್ಯಾಪಾರಗಳು ಜಲ, ಅಗ್ನಿ ಮೊದಲಾದ ದೊಡ್ಡ ಆರಂಭದಿಂದ ರಹಿತವಿವೆ. ಕಳವು, ಅಸತ್ಯ, ಹಿಂಸೆಯಿಂದ ರಹಿತವಿವೆ. ಅದಕ್ಕಾಗಿ ನಿರ್ದೋಷವಿವೆ. ಇವುವೇ ಅಸತ್ಯ, ಕಳವು ಮೊದಲಾದವುಗಳಿಂದ ಸಹಿತವಾಗಿದ್ದರೆ ಪಾಪಕಾರಿಯಿದ್ದು ಹೇಯವಿವೆ. ಹೇಗೆಂದರೆ-ಮುತ್ತು, ಮಾಣಿಕ್ಯ, ರತ್ನಗಳ ವ್ಯಾಪಾರ ಮಾಡುವಂಥವರು ದ್ರವ್ಯ(ಧನ) ತೊಡಗಿಸಿ ಲೋಭವಶದಿಂದ ಭೂಮಿಯನ್ನು ಅಗೆಯಿಸಿ ಇವನ್ನು ತೆಗೆಯಲಾದರೆ ಪಾಪಬಂಧ ಮಾಡಿಸುವಂಥ ಆರಂಭೀ ವ್ಯಾಪಾರಗಳಿವೆ. ಬಹುಆರಂಭರೂಪ ಅಗ್ನಿಯಿಂದ ಕಾಯಿಸುವುದು, ಸುಡುವುದು, ಊದುವುದು, ತಿದಿಯೊತ್ತುವುದು ಮೊದಲಾದ ಆರಂಭ ಸಹಿತವಾದ ಚಿನ್ನ, ಬೆಳ್ಳಿಗಳ ವ್ಯಾಪಾರವು ಕೂಡ ಅಯೋಗ್ಯವಿದೆ, ಹೇಯವಿದೆ.

ಬೇರೆಯವರ ವಸ್ತ್ರಾದಿಗಳ ಕಳವು ಮಾಡಿದ ಮೇಲೆ ಸೂಜಿಯ ಆಜೀವಿಕೆಯೂ ಸದೋಷವಿದೆ. ದಲಾಲನು ಬಹಳಷ್ಟು ಸುಳ್ಳು ಹೇಳಿ ಕೊಡ-ಕೊಳ್ಳುವವರ ಬಹಳಷ್ಟು ವಸ್ತು-ಧನ ವಂಚನೆ ಮಾಡುತ್ತಿದ್ದರೆ ದಲಾಲಿ ಮೊದಲಾದ ವಚನ ಆಜೀವಿಕೆಯೂ ಸದೋಷವಿದೆ. ಪಾಪಮಯವಿದೆ. ದೃಷ್ಟಿ ಆಜೀವಿಕೆಯುಳ್ಳವನೂ ತನ್ನ ಲೋಭದ ವಶೀಭೂತನಾಗಿ ಒಳ್ಳೆಯ ಅಥವಾ ಕೆಡಕು ಪರಿಶೀಲಿಸಿದರೆ ಅದು ಕಳವಿನ ದೋಷ ಸಹಿತವಿದೆ.

ಕಷ್ಟೀ ಆಜೀವಿಕೆ ಮಾಡುವಂಥವನೂ ಲೋಭಾಚಾರಿಯಾಗಿ ಇತರರ ಗಂಟು, ಸರಕುಗಳನ್ನು ತಗೆದು ಕೊಂಡರೆ ಕಳವಿನ ದೋಷ ಸಹಿತನಿದ್ದಾನೆ ಮತ್ತು ದೋಷ ಸಹಿತವಾಗಿರುವವುಗಳಂತೂ ಹೇಯವೇ ಇವೆ. ಅಧಿಕ ತೃಷ್ಣೆಯಿಂದ ರಹಿತ, ಪಾಪದಿಂದ ಭಯ ಪಡುವಂಥ ಭವ್ಯನಿಗೆ ಚಿನ್ನ ರತ್ನಾದಿಗಳ, ಸೂಜಿಯ ಆಜೀವಿಕೆ, ವಚನ ಆಜೀವಿಕೆ, ದೃಷ್ಟಿಯ ಆಜೀವಿಕೆ ಮತ್ತು ಕಷ್ಟದ ಆಜೀವಿಕೆ ಮೊದಲಾದ ಮೇಲೆ ಹೇಳಿರುವ ವ್ಯಾಪಾರಗಳೆಲ್ಲವೂ ಸುಖಕಾರಿಯಿದೆ. ತನಗೆ ಹಾಗೂ ಇತರರಿಗೆ ಹಿತಕರವಿವೆ, ಧರ್ಮಾತ್ಮಾ ಜೀವರುಗಳಿಗೆ ಉಪಾದೇಯವಿವೆ. ಇವು ಲೌಕಿಕ ವ್ಯಾಪಾರಗಳನ್ನು ಹೇಳಲಾಯಿತು.

**ನಿಶ್ಚಯ ಶುಭಾಶುಭ ವ್ಯಾಪಾರ -** ರಾಗ, ದ್ವೇಷ, ಕ್ರೋಧ, ಮಾನ, ಮಾಯೆ, ಲೋಭಾದಿ ಕಷಾಯಭಾವ, ಮಿಥ್ಯಾತ್ವಭಾವ, ಹಗಲಿರುಳೂ ಆರ್ತ-ರೌದ್ರರೂಪ ಪರಿಣತಿಯಿರುವುದು, ಭಯ, ಶೋಕ, ಚಿಂತೆ ಮೊದಲಾದ ಭಾವಗಳ ರೂಪದ ವ್ಯಾಪಾರವೂ ಹೇಯವಿದೆ. ಸಮ್ಯಕ್ತ್ವಸಹಿತ ಆತ್ಮಿಕಭಾವ, ಪರವಸ್ತುಗಳ ತ್ಯಾಗರೂಪದ ಭಾವ, ತಪ, ಸಂಯಮ ಮೊದಲಾದ ಭಾವಗಳರೂಪದ ಸದೈವ ಪರಿಣತಿಮಯ ಶುಭ ವ್ಯಾಪಾರವು ಉಪಾದೇಯವಿದೆ. ಈ ಪ್ರಕಾರ ಅನೇಕ ನಯಗಳಿಂದ ವಿವೇಕವಂತರು ವ್ಯಾಪಾರ ಭೇದ ತಿಳಿಯುವುದು ಯೋಗ್ಯವಿದೆ.

**ಅಶುಭ ವ್ಯಾಪಾರ -** ಈಗ ಯಾವುದರಲ್ಲಿ ಅಗ್ನಿ, ಜಲಗಳ ಆರಂಭವು ಬಹಳಷ್ಟು ಆಗುತ್ತದೆ, ಬಹಳಷ್ಟು ಅಗ್ನಿ ಹೊತ್ತಿಸುವುದು(ಉರಿಸುವುದು) ಆರಿಸುವುದು ನಡೆಯುತ್ತದೆ. ಅಧಿಕ ಜಲಮಥನವಾಗುತ್ತದೆ, ನೀರು ಚೆಲ್ಲುವುದಾಗುತ್ತದೆ. ಸೋಸಿದ-ಸೋಸದೇ ಇರುವುದರ ವಿಚಾರವಿರುವುದಿಲ್ಲ; ಯಾವವುಗಳಲ್ಲಿ ಅಸತ್ಯ, ಕಳವು ಅತ್ಯಧಿಕ ಛಲ-ಕಪಟ ಮಾಡುವುದು - ಇತ್ಯಾದಿ ಅಯೋಗ್ಯ ವೃತ್ತಿಯ ವಾಣಿಜ್ಯಗಳೆಲ್ಲವೂ ಹೇಯವಿವೆ,

ಬಿಟ್ಟುಕೊಡಲು ಯೋಗ್ಯವಿವೆ. ಯಾವ ವ್ಯಾಪಾರದಲ್ಲಿ ಅನೇಕಾನೇಕ ಜೀವಗಳ ಜನ್ಮ-ಮರಣದ ಆರಂಭವಾಗುತ್ತದೆ ಅದು ಅಶುಭವಿದೆ, ಹೇಯವಿದೆ. ಯಾವುದರಲ್ಲಿ ಉಗ್ರಾಣದ ನಿರ್ಮಾಣ ಮಾಡಿ ಅನೇಕ ದಿವಸಗಳವರೆಗೆ ಅಧಿಕ ಧಾನ್ಯದ ಸಂಗ್ರಹ ಮಾಡಬೇಕಾಗುತ್ತದೆ. ನಾರು, ಚರ್ಮ, ಕೂದಲು, ಎಲಬು ಮೊದಲಾದವುಗಳಲ್ಲಿ ಜೀವಗಳ ಉತ್ಪತ್ತಿಯು ಬಹಳಷ್ಟು ಆಗುತ್ತದೆ. ಶೀತ-ಉಷ್ಣಗಳ ನಿಮಿತ್ತ ಪಡೆದು ಹಿಂಸೆಯು ಹೆಚ್ಚುವುದರಿಂದ ನಿರ್ದಯ ಪರಿಣಾಮಗಳಾಗುತ್ತವೆ ಆದ್ದರಿಂದ ಅವು ಹೇಯವಿವೆ. ಜೇನುತುಪ್ಪ, ವಿಷ, ಪಾಶದಹಗ್ಗ, ಚೂರಿ, ಕಿರುಗತ್ತಿ ಮೊದಲಾದ ಶಸ್ತ್ರ, ಗುದ್ದಲಿ, ಸಲಿಕೆ, ಕೊಡಲಿ ಇತ್ಯಾದಿಗಳ ವಾಣಿಜ್ಯವು ಹಿಂಸೆಯ ಕಾರಣವಿರುವುದರಿಂದ ಹೇಯವಿದೆ.

ಲೋಹ, ತಾಮ್ರ , ಸತುವು, ಚಿನ್ನ, ಬೆಳ್ಳಿ, ರತ್ನ ಮೊದಲಾದವುಗಳ ಗಣಿಗಳನ್ನು ಅಗೆಸುವುದು; ಭೂಮಿಯನ್ನು ಅಗೆಯುವ, ಅಗೆಯಿಸುವ ಸಂಬಂಧದ ವ್ಯಾಪಾರಗಳು ಅಶುಭವಿವೆ. ಭೂಮಿಯನ್ನು ಉಳುವುದು, ಹರಗಿಸುವುದು ಇವು ಹಿಂಸೆಯಿಂದ ಕೂಡಿರುವುದರಿಂದ ತ್ಯಾಗ ಯೋಗ್ಯವಿವೆ. ಕ್ಷಾರ, ಪಟಕ, ಕಂದ, ಮೂಲ, ಹೂವು ಇತ್ಯಾದಿಗಳಿಗೆ ಸಂಬಂಧಿಸಿದ ವ್ಯಾಪಾರವು ಹಿಂಸೆಯ ಕಾರಣವಿರುವುದರಿಂದ ಅಯೋಗ್ಯವಿದೆ. ಇವುಗಳ ಹಾಗೆ ಬೇರೆಯೂ ಯಾವೆಲ್ಲ ವ್ಯಾಪಾರಗಳು ಪಾಪಕಾರಕವಿವೆ ಅವೆಲ್ಲವೂ ಹೇಯವಿವೆ. ಯಾರು ಧರ್ಮಾತ್ಮರಿದ್ದಾರೆ ಅವರು ದಯೆಯ ಭಾವನೆಯಿಂದ ಈ ಮೇಲೆ ಹೇಳಿದ ವ್ಯಾಪಾರಗಳನ್ನು ಮಾಡುವುದಿಲ್ಲ. ಅವರು ತಮ್ಮ ಧರ್ಮವನ್ನು ನಿರ್ದೋಷವಾಗಿ ಇಟ್ಟುಕೊಳ್ಳುವ ಸಲುವಾಗಿ ಸಮಸ್ತ ದೋಷಗಳ ತ್ಯಾಗ ಮಾಡುತ್ತಾರೆ.

ಈಗ ಯಾವ ವ್ಯಾಪಾರ ಮಾಡುವಂಥವರ ಜೊತೆಗೆ ವ್ಯಾಪಾರ ಮಾಡದಿದ್ದರೆ ದಯಾಮಯ ಧರ್ಮವು ನಿರ್ದೋಷವಾಗಿ ಉಳಿಯುತ್ತದೆ, ಅವನ್ನು ಹೇಳುತ್ತಾರೆ - ಚಾಂಡಾಲ, ಕಟುಕ, ಚರ್ಮಕಾರ, ವಂಚಕ, ದಾರಿಕಾರರನ್ನು ಹೊಡೆಯುವ - ಲೂಟಿ ಮಾಡುವಂಥ ಭಿಲ್ಲ ಮೊದಲಾದವರು, ಕಳ್ಳರು ಇತ್ಯಾದಿಕರಿಗೆ ಸಾಲ ಕೊಡಬಾರದು. ಒಂದುವೇಳೆ ಯಾರಾದರೂ ಇಂಥವರಿಗೆ ಸಾಲ ಕೊಟ್ಟರೆ ಇವರುಗಳ ಸ್ಪರ್ಶದಿಂದ ಮತ್ತು ಇವರುಗಳ ವಿಶ್ವಾಸದಿಂದ ಅಲ್ಪಕಾಲದಲ್ಲಿ ಪುಣ್ಯವು ಕ್ಷೀಣವಾಗಿ ಹೋಗುತ್ತದೆ; ದೇಹ, ಧನಾದಿಗಳು ನಷ್ಟವಾಗಿ ಹೋಗುತ್ತವೆ, ಪರಭವದ ಸಲುವಾಗಿ ಪಾಪದ ಬಂಧವಾಗುತ್ತದೆ. ಅದಕ್ಕಾಗಿ ಇವರೊಂದಿಗೆ ವ್ಯಾಪಾರವು ಹೇಯವಿದೆ. ಮಡಿವಾಳ, ಕುಂಭಾರ, ಕಮ್ಮಾರ, ಬಟ್ಟೆಗೆ ಅಚ್ಚು ಹಾಕುವವ, ಬಂದೂಕು, ಬಾಣ ಮೊದಲಾದ ಶಸ್ತ್ರಗಳ ನಿರ್ಮಾಣ ಮಾಡುವಂಥವ ಇತ್ಯಾದಿ - ಇವರೆಲ್ಲರೂ ಹಿಂಸೆಯ ಅನುಮೋದಕರಿದ್ದಾರೆ ಅದಕ್ಕಾಗಿ ಇವರೊಂದಿಗೆ ವಾಣಿಜ್ಯವು ಹೇಯವೆನ್ನಲಾಗಿದೆ.

ಇತ್ಯಾದಿಗಳ ರೂಪದಲ್ಲಿ ಹೇಳಲಾಗಿರುವ ಇವೆಲ್ಲ ವ್ಯಾಪಾರಗಳಲ್ಲಿ ಅಧಿಕ (ನಾಲ್ಕು ಪಟ್ಟು) ಲಾಭವಾಗುತ್ತಿದ್ದರೂ ಇವುಗಳನ್ನು ಸಮ್ಯಗ್ದೃಷ್ಟಿ ಧರ್ಮಾತ್ಮರು, ದಯಾಧರ್ಮದ ಪಾಲಕರು, ಜಿನಾಜ್ಞೆಯ ಪ್ರತಿಪಾಲಕರು, ಕರುಣೆಯ ನಿಧಾನರು, ಉಜ್ವಲ ಧರ್ಮದ ದಾಸರು ಎಂದೂ ಮಾಡುವುದಿಲ್ಲ. ಸ್ವಯಂ ಧರ್ಮಾತ್ಮರಿರುವುದರಿಂದ ಪರಭವ ಸುಖದ ಲೋಭಿಗಳು ಈ ಲೋಕದ ನಿಂದೆಯಿಂದ ದೂರವಿದ್ದು ಯಶಸ್ಸಿನ ಇಚ್ಚೆಯ ಲೋಭಕ್ಕೆ ವಶೀಭೂತರಾಗಿ ಕುವಾಣಿಜ್ಯ ಅರ್ಥಾತ್ ಅಶುಭ ವ್ಯಾಪಾರಗಳ ಕುರಿತಾದ ವಿಶ್ವಾಸವನ್ನು ತಮ್ಮ ಮನೆಯೊಳಗೆ ಬರಗೊಡುವುದಿಲ್ಲ.

ಈ ಪ್ರಕಾರ ವಾಣಿಜ್ಯಕ್ಕೆ ಸಂಬಂಧಿಸಿದ ಜ್ಞೇಯ, ಹೇಯ, ಉಪಾದೇಯ ಹೇಳಲಾಯಿತು.

ಇವೆಲ್ಲ ವಾಣಿಜ್ಯದ ಭೇದಗಳು ಶ್ರುತಜ್ಞಾನದಿಂದ ಜ್ಞಾತವಾಗುತ್ತವೆ; ಆದುದರಿಂದ ಶ್ರುತಜ್ಞಾನವು ಉಪಾದೇಯವಿದೆ.

ಈ ಶ್ರುತಜ್ಞಾನದ ಸ್ವರೂಪವನ್ನು ಜಘನ್ಯ, ಮಧ್ಯಮ, ಉತ್ಕೃಷ್ಟದ ಅಪೇಕ್ಷೆಯಿಂದ ಮೂರು ಪ್ರಕಾರ ಹೇಳುತ್ತಾರೆ. ಯಾವುದು ಎಲ್ಲ ಜ್ಞಾನಗಳಲ್ಲಿ ಚಿಕ್ಕದಿದೆ ಅದನ್ನು ಜಘನ್ಯವೆಂದು ತಿಳಿಯುವುದು. ಸಮಸ್ತ ದ್ವಾದಶಾಂಗ,

ಪ್ರಕೀರ್ಣಕಾದಿಯ ಶ್ರುತಜ್ಞಾನವು ಉತ್ಕೃಷ್ಟವಿದೆ ಮತ್ತು ಮಧ್ಯದ ಭೇದಗಳು ಅನೇಕವಿವೆ - ಹೀಗೆ ಶ್ರುತಜ್ಞಾನವು ಮೂರು ಭೇದರೂಪವಿದೆ. ಇವುಗಳ ಸ್ವರೂಪವನ್ನು ಮುಂದೆ ಹೇಳಲಾಗುವುದು.

ಮೂಲ ಶ್ರುತಜ್ಞಾನದಲ್ಲಿ ಅಕ್ಷರಾತ್ಮಕ ಮತ್ತು ಅನಕ್ಷರಾತ್ಮಕವೆಂದು ಎರಡು ಭೇದಗಳಿವೆ. ಅವುಗಳಲ್ಲಿ ಅಕ್ಷರ, ಪದ, ಪದ್ಯ, ಕಾವ್ಯ, ಗಾಥೆ, ವಾಕ್ಯ ಮೊದಲಾದ ಶಬ್ದಗಳ ನಿಮಿತ್ತದಿಂದ ಉತ್ಪನ್ನವಾಗಿರುವ ಜ್ಞಾನವು ಅಕ್ಷರಾತ್ಮಕ ಶ್ರುತಜ್ಞಾನವಿದೆ ಮತ್ತು ಯಾವುದು ಭಾವದಿಂದಲೇ ಉತ್ಪನ್ನವಾಗುತ್ತದೆ - ಅಕ್ಷರರೂಪವಿರುವುದಿಲ್ಲ, ಅದು ಅನಕ್ಷರಾತ್ಮಕ ಶ್ರುತಜ್ಞಾನವಿದೆ. ಇದು ಏಕೇಂದ್ರಿಯದಿಂದ ಹಿಡಿದು ಪಂಚೇಂದ್ರಿಯದವರೆಗಿನ ಎಲ್ಲ ಜೀವರುಗಳಿಗೆ ಇರುತ್ತದೆ; ಆದರೆ ಈ ಅನಕ್ಷರಾತ್ಮಕ ಶ್ರುತಜ್ಞಾನದಿಂದ ಯಾವ ವ್ಯವಹಾರ, ಪ್ರವೃತ್ತಿಯಾಗುವ ಸಾಧ್ಯತೆಯಿಲ್ಲ. ಜೀವದ ಭಾವ-ವಿಚಾರವನ್ನು ಬೇಕಾದರೆ ಅದೇ ಜೀವನು ತಿಳಿಯುತ್ತಾನೆ ಅಥವಾ ಕೇವಲಿಗಳು ತಿಳಿಯುತ್ತಾರೆ ಅದಕ್ಕಾಗಿ ಇಲ್ಲಿ ಅದರ ಮುಖ್ಯತೆಯಿಲ್ಲ.

ಎರಡನೆಯ ಅಕ್ಷರಾತ್ಮಕ ಶ್ರುತಜ್ಞಾನದಿಂದ ಧರ್ಮ-ಕರ್ಮದ ಕಾರ್ಯಗಳ ಪ್ರವೃತ್ತಿಯಾಗುತ್ತದೆ. ಇದರಿಂದ ಲೋಕದಲ್ಲಿ ಕೊಡ-ಕೊಳ್ಳುವ ಖಾತೆ, ದಿನನಿತ್ಯದ ಲೆಕ್ಕ ಮೊದಲಾದ ಸಮಸ್ತ ವ್ಯವಹಾರ ಕಾರ್ಯಗಳಾಗುತ್ತವೆ. ಧರ್ಮಶಾಸ್ತ್ರಗಳ ಪಠನ-ಪಾಠನದ ಪ್ರವೃತ್ತಿಯು ಕೂಡ ಇದೇ ಅಕ್ಷರಾತ್ಮಕ ಜ್ಞಾನದಿಂದ ಆಗುತ್ತದೆ. ಈ ಶ್ರುತಜ್ಞಾನದ ಇಪ್ಪತ್ತು ಭೇದಗಳನ್ನು ಸಿದ್ಧಾಂತಗ್ರಂಥ ಗೊಮ್ಮಟಸಾರ ಜೀವಕಾಂಡದ ಗಾಥೆ ೩೧೭ರಲ್ಲಿ ಈ ಕೆಳಗಿನಂತೆ ಹೇಳಿದ್ದಾರೆ.

**ಪಜ್ಜಾಯಕ್ಖರಪದಸಂಘಾದಂ ಪಡಿವತ್ತಿ ಯಾಣಿ ಜೋಗಂ ಚ ।**
**ದುಗವಾರ ಪಾಹುಡಂ ಚ ಯ ಪಾಹುಡಯಂ ವತ್ಥು ಪುವ್ವಂ ಚ ॥**

**ಗಾಥಾರ್ಥ** :- ಪರ್ಯಾಯಜ್ಞಾನ, ಅಕ್ಷರಜ್ಞಾನ, ಪದಜ್ಞಾನ, ಸಂಘಾತಜ್ಞಾನ, ಪ್ರತಿಪತ್ತಿಕಜ್ಞಾನ, ಅನುಯೋಗಜ್ಞಾನ, ಪ್ರಾಭೃತಕ ಪ್ರಾಭೃತಕಜ್ಞಾನ, ಪ್ರಾಭೃತಕಜ್ಞಾನ, ವಸ್ತುಜ್ಞಾನ ಮತ್ತು ಪೂರ್ವಜ್ಞಾನ - ಇವು ಹತ್ತು ಜ್ಞಾನಗಳಿವೆ. ಇವು ಹತ್ತರ ಜತೆ 'ಸಮಾಸ' ಶಬ್ದವನ್ನು ಹಚ್ಚಬೇಕು. ಹೇಗೆಂದರೆ - ಪರ್ಯಾಯ, ಪರ್ಯಾಯಸಮಾಸ; ಈ ಪ್ರಕಾರ ಪ್ರತಿಯೊಂದರ ಜೊತೆಗೆ ಸಮಾಸವನ್ನು ಜೋಡಿಸುವುದರಿಂದ ಇಪ್ಪತ್ತು ಭೇದಗಳಾಗುತ್ತವೆ. ಈ ಇಪ್ಪತ್ತು ಭೇದಗಳು ಮೂಲದಲ್ಲಿ ಅಕ್ಷರಾತ್ಮಕ ಶ್ರುತಜ್ಞಾನದ ಭೇದಗಳೆಂದು ತಿಳಿಯುವುದು.

ಈಗ ಶ್ರುತಜ್ಞಾನದ ಸ್ವರೂಪ ಹೇಳುತ್ತಾರೆ - ಯಾವ ಅಕ್ಷರದಲ್ಲಿ ಯಾವ ಅರ್ಥವಿದೆ (ಯಾವ ಅಕ್ಷರವು ಯಾವ ಪದಾರ್ಥವನ್ನು ಹೇಳುತ್ತದೆ) ಅದನ್ನು ತಿಳಿಯುವರೂಪದ ಜ್ಞಾನಭಾವವು ಶ್ರುತಜ್ಞಾನವಿದೆ. ಈ ಜ್ಞಾನದ ಭೇದಗಳು ಇಪ್ಪತ್ತು ಇರುವುದರಿಂದ ಈ ಜ್ಞಾನದ ಘಾತ ಮಾಡುವಂಥ ಆವರಣವು ಕೂಡ ಇಪ್ಪತ್ತು ಭೇದರೂಪವಾಗಿ ಪರಿಣಮಿಸಿ, ಇಪ್ಪತ್ತು ಭೇದರೂಪದ ಶ್ರುತಜ್ಞಾನದ ಘಾತ ಮಾಡುತ್ತದೆ. ಅದರಿಂದ ಶ್ರುತಜ್ಞಾನಾವರಣದ ಭೇದಗಳು ಕೂಡ ಇಪ್ಪತ್ತು ಇವೆ. ಈಗ ಆ ಇಪ್ಪತ್ತರ ಸಾಮಾನ್ಯ ಸ್ವರೂಪ ಹೇಳುತ್ತಾರೆ.

ಪರ್ಯಾಯಜ್ಞಾನ - ಇದು ಮೊದಲನೆಯ ಜಘನ್ಯ ಭೇದವಿದೆ. ಇದು ಅಕ್ಷರದ ಅನಂತದ ಒಂದು ಭಾಗ ಜ್ಞಾನವಿದೆ. ಈ ಜ್ಞಾನದ ಆವರಣ ಮಾಡುವಂಥದು ಯಾವುದೇ ಕರ್ಮವಿಲ್ಲ. ಎಂದರೆ ಯಾವುದೇ ಕರ್ಮವು ಈ ಜ್ಞಾನದ ಘಾತ ಮಾಡುವ ಸಾಧ್ಯತೆಯಿಲ್ಲ. ಇಂಥದೇ ಅನಾದಿ ಸ್ವಭಾವವು ಕೇವಲಜ್ಞಾನದಲ್ಲಿ ತಿಳಿದು ಬಂದಿದೆ. ಹಾಗೇನಾದರೂ ಈ ಜ್ಞಾನದ ಆವರಣ ಘಾತವನ್ನು ಯಾವುದಾದರೂ ಕರ್ಮವು ಮಾಡುತ್ತಿದ್ದರೆ ಜ್ಞಾನದ್ದೇ ಅಭಾವವಾಗಿ ಹೋಗುತ್ತದೆ. ಜ್ಞಾನಗುಣದ ಅಭಾವವಾದ ಮೇಲೆ ಗುಣೀ ಆತ್ಮನದೂ ಅಭಾವವಾಗಿ ಹೋಗುತ್ತದೆ ಮತ್ತು ಆತ್ಮನ ಅಭಾವವಾಗುವುದರಿಂದ ಸಂಸಾರ, ನಾಲ್ಕು ಗತಿಗಳ ಅಭಾವವಾಗಿ ಹೋಗುತ್ತದೆ; ಆದರೆ ಸಂಸಾರದ್ದಂತೂ ಎಂದೂ ಅಭಾವವಾಗುವುದೇ ಇಲ್ಲ. ಅದರಿಂದ ಆತ್ಮನ ಸದ್ಭಾವದಿಂದ ಜ್ಞಾನದ ಸದ್ಭಾವವಿದೆ. ಈ ಪ್ರಕಾರ ಅನ್ಯ ಎಲ್ಲ ಶ್ರುತಜ್ಞಾನ, ಕೇವಲಜ್ಞಾನಾದಿ ಎಲ್ಲ ಜ್ಞಾನಗಳನ್ನು ಆವರಣವು ಘಾತಮಾಡುತ್ತದೆ. ಆದರೆ ಈ ಅಕ್ಷರದ ಅನಂತದ

ಒಂದು ಭಾಗ ಜ್ಞಾನವನ್ನು ಘಾತ ಮಾಡುವುದಿಲ್ಲ; ಅದರಿಂದ ಈ ಜ್ಞಾನವು ಸದೈವ ನಿರಾವರಣವಿರುತ್ತದೆ.

ಈ ಜಘನ್ಯ ಜ್ಞಾನವು ಯಾವ ಸಮಯ ಯಾವಾಗ ಆಗುತ್ತದೆ ? - ಎಂಬುದನ್ನು ಹೇಳುತ್ತಾರೆ. ಸೂಕ್ಷ್ಮ ನಿಗೋದಿ ಲಬ್ಧ್ಯಪರ್ಯಾಪ್ತಕದ ಉತ್ಪತ್ತಿಯಾಗುವ ಮೊದಲನೆಯ ಸಮಯದಲ್ಲಿ 'ಪರ್ಯಾಯ'ವೆಂಬ ಹೆಸರಿನ ಜಘನ್ಯ ಜ್ಞಾನವಾಗುತ್ತದೆ. ಆ ಸೂಕ್ಷ್ಮ ನಿಗೋದಿಯ ಅದರ ಯೋಗ್ಯ ಒಂದು ಅಂತರ್ಮುಹೂರ್ತದ ವಿಭಾಜನೆಯಲ್ಲಿ ಆರು ಸಾವಿರದ ಹನ್ನೆರಡು ಕ್ಷುದ್ರ ಭವಗಳಲ್ಲಿ ಜನ್ಮ-ಮರಣ ಮಾಡುತ್ತ ಅತ್ಯಂತ ಸಂಕ್ಲೇಶರೂಪ ಪರಿಣಾಮಗಳಿಂದ ಭ್ರಮಣ ಮಾಡುತ್ತಿರುವಾಗ ಕೊನೆಯ ಕ್ಷುದ್ರಭವದ ಸಮಯ ವಕ್ರತೆಯುಳ್ಳ (ಮೂರು ತಿರುವುಗಳುಳ್ಳ ಗೋಮೂತ್ರದ ಗತಿಯುಕ್ತ) ವಿಗ್ರಹ ಗತಿಪೂರ್ವಕ ಜನ್ಮಧಾರಣ ಮಾಡುವ ಮೊದಲಿನ ಸಮಯದಲ್ಲಿ ಈ ಜಘನ್ಯ ಜ್ಞಾನವಾಗುತ್ತದೆ.

ಇದೇ ಜೀವದ್ದು ಇದೇ ಸಮಯ ಸ್ಪರ್ಶನ ಇಂದ್ರಿಯ ಸಂಬಂಧದ ಜಘನ್ಯ ಮತಿಜ್ಞಾನವಾಗುತ್ತದೆ. ಇದೇ ಜೀವನಿಗೆ ಇದೇ ಸಮಯ ಅಚಕ್ಷು ದರ್ಶನವಾಗುತ್ತದೆ. ಇಲ್ಲಿ ಅನೇಕ ಕ್ಷುದ್ರ ಭವಗಳನ್ನು ಪುನಃ ಪುನಃ ಧಾರಣ ಮಾಡುವುದರಿಂದ ಹೆಚ್ಚಾಗುತ್ತಿರುವ ಸಂಕ್ಲೇಶಮಯ ದುಃಖರೂಪ ಪರಿಣಾಮಗಳ ನಿಮಿತ್ತ ಪಡೆದು ತೀವ್ರ ಅನುಭಾಗಯುಕ್ತ ಜ್ಞಾನಾವರಣಾದಿ ಕರ್ಮಗಳ ಉದಯವಾಗುವುದರಿಂದ ಮಹಾದುಃಖರೂಪವಿರುವ ಕ್ಷುದ್ರಭವಗಳೊಳಗಿನ ಅಂತಿಮ ಕ್ಷುದ್ರಭವದ ಪ್ರಥಮ ಸಮಯದಲ್ಲಿ ಪರ್ಯಾಯಜ್ಞಾನದ ಅನಂತದ ಒಂದು ಭಾಗವನ್ನು ಜಘನ್ಯ ಜ್ಞಾನವೆಂದಿದ್ದಾರೆ. ಈ ಜ್ಞಾನವು ಅವಿನಾಶಿಯಿದೆ, ಇದರ ನಾಶವೆಂದೂ ಆಗುವುದಿಲ್ಲವೆಂಬ ನಿಯಮ ತಿಳಿಯುವುದು.

ಅದರ ನಂತರ ದ್ವಿತೀಯಾದಿ ಸಮಯಗಳಲ್ಲಿ ಜ್ಞಾನವು ಹೆಚ್ಚುತ್ತದೆ. ಅಲ್ಲಿ ಈ ಜಘನ್ಯ ಜ್ಞಾನದಲ್ಲಿ ಅನಂತ ಅವಿಭಾಗ ಪ್ರತಿಚ್ಛೇದರೂಪ ಅಂಶವಿರುವ ಕಾರಣ ಅನಂತಭಾಗವೃದ್ಧಿ, ಅಸಂಖ್ಯಾತಭಾಗವೃದ್ಧಿ, ಸಂಖ್ಯಾತಭಾಗ ವೃದ್ಧಿ, ಸಂಖ್ಯಾತಗುಣವೃದ್ಧಿ, ಅಸಂಖ್ಯಾತಗುಣವೃದ್ಧಿ, ಅನಂತಗುಣವೃದ್ಧಿಮಯ ಷಟ್‌ಸ್ಥಾನರೂಪ ಮಹಾನ ವೃದ್ಧಿಯಾಗುತ್ತದೆ. ಅದು ಅನಂತ ಅವಿಭಾಗ ಪ್ರತಿಚ್ಛೇದದ ಅಂಶವಿದೆ.

**ಸಂದೇಹ** - ಜಘನ್ಯ ಜ್ಞಾನದಲ್ಲಿ ಅನಂತಭಾಗಗಳಾಗುವುದು ಹೇಗೆ ಸಂಭವವಿದೆ ?

**ಸಮಾಧಾನ** - ಅನಂತ ಭೇದಗಳು ಕೂಡ ಅನಂತವಿರುತ್ತವೆ. ಅಲ್ಲಿ ಹದಿನಾಲ್ಕು ಧಾರೆಯ ಕಥನದಲ್ಲಿ ದ್ವಿರೂಪವರ್ಗಧಾರೆಯ ಅಂತರ್ಗತ ಇದರ ಕಥನ ಮಾಡಲಾಗಿದೆ. ಅನಂತಾನಂತ ವರ್ಗಸ್ಥಾನಗಳು ಹೊರಟು ಹೋದ ಮೇಲೆ ಸಂಪೂರ್ಣ ಜೀವರಾಶಿಯ ಪ್ರಮಾಣವು ಬರುತ್ತದೆ. ಈ ಜೀವರಾಶಿಯ ಅನಂತಗುಣಿತ ಪುದ್ಗಲ ರಾಶಿಯಿದೆ. ಪುದ್ಗಲ ರಾಶಿಯಿಂದ ಅನಂತಗುಣಿತ ಮೂರು ಕಾಲದ ಸಮಯರಾಶಿಯಿದೆ, ಸರ್ವಕಾಲ ಸಮಯರಾಶಿಯಿಂದ ಸರ್ವ ಆಕಾಶಪ್ರದೇಶರಾಶಿಯು ಅನಂತಗುಣಿತವಿದೆ. ಸರ್ವ ಆಕಾಶ ಪ್ರದೇಶ ರಾಶಿಯಿಂದ ಅನಂತಾನಂತ ವರ್ಗರಾಶಿಯು ಪೂರ್ಣವಾದ ಮೇಲೆ ಸೂಕ್ಷ್ಮ ನಿಗೋದಿ ಜೀವದ ಜಘನ್ಯ ಜ್ಞಾನದ ಅವಿಭಾಗ ಪ್ರತಿಚ್ಛೇದಗಳ ಪ್ರಮಾಣವಾಗುತ್ತದೆ. ಹೀಗೆ ಆಗಮದಲ್ಲಿ ಹೇಳಿದ್ದಾರೆ; ಅದರಿಂದ ಇದರಲ್ಲಿ ಅನಂತಭಾಗ ವೃದ್ಧಿಯು ಸಂಭವವಿದೆ. ಈ ಪ್ರಕಾರ ಪರ್ಯಾಯಜ್ಞಾನವೆಂಬ ಹೆಸರಿನ ಪ್ರಥಮ ಜ್ಞಾನ ತಿಳಿಯುವುದು.

ಇದರಲ್ಲಿ ಅನಂತಾನಂತ ಅವಿಭಾಗ ಪ್ರತಿಚ್ಛೇದಗಳ ವೃದ್ಧಿಯಾದ ಮೇಲೆ ಪರ್ಯಾಯ ಸಮಾಸವೆಂಬ ಹೆಸರಿನ ಮೊದಲನೆಯ ಭೇದವಾಗುತ್ತದೆ. ಅದರಿಂದ ಅನಂತಾನಂತ ಅವಿಭಾಗ ಪ್ರತಿಚ್ಛೇದ ವೃದ್ಧಿಯಾದ ಮೇಲೆ ಪರ್ಯಾಯ ಸಮಾಸದ ಎರಡನೆಯ ಭೇದವಾಗುತ್ತದೆ. ಈ ಪ್ರಕಾರ ಅನಂತಾನಂತ ಅವಿಭಾಗ ಪ್ರತಿಚ್ಛೇದದ ವೃದ್ಧಿಪೂರ್ವಕ ಒಂದೊಂದು ಸ್ಥಾನವು ಹೆಚ್ಚುತ್ತ ಮೂರು, ನಾಲ್ಕು, ಐದು ಸ್ಥಾನ ಮೊದಲಾದ ಅಸಂಖ್ಯಾತ ಲೋಕ ಪ್ರಮಾಣ ಷಟ್‌ಸ್ಥಾನ ಪತಿತ ವೃದ್ಧಿಯಾಗುವವರೆಗೆ ಪರ್ಯಾಯ ಸಮಾಸದ ಭೇದಗಳಾಗುತ್ತವೆ.

**ವೃದ್ಧಿಯ ಅನುಕ್ರಮವು ಈ ಪ್ರಕಾರವಿದೆ** - ಅನಂತದ ಪ್ರಮಾಣದಲ್ಲಂತೂ ಜೀವರಾಶಿಯನ್ನು ತಿಳಿಯುವುದು ಅಸಂಖ್ಯಾತದ ಪ್ರಮಾಣದಲ್ಲಿ ಅಸಂಖ್ಯಾತ ಲೋಕಪ್ರಮಾಣ ತಿಳಿಯುವುದು. ಸಂಖ್ಯಾತ ವೃದ್ಧಿಯಲ್ಲಿ ಉತ್ಕೃಷ್ಟ ಸಂಖ್ಯಾತವಿದೆ-ಈ ಪ್ರಕಾರ ಅಧಿಕತೆ-ಹೀನತೆಯೊಂದಿಗೆ ಷಟ್‌ಗುಣ ಹಾನಿ-ವೃದ್ಧಿ ತಿಳಿಯುವುದು. ಹೀಗೆ ಕ್ರಮದಿಂದ ಷಟ್‌ಸ್ಥಾನ ಪತಿತ ಹಾನಿ-ವೃದ್ಧಿಯಾಗುತ್ತ ಅಸಂಖ್ಯಾತ ಲೋಕದ ಕೊನೆಯ ಹಾನಿ-ವೃದ್ಧಿಯು ಪೂರ್ಣವಾಗುವಲ್ಲಿ ಒಂದು ಭೇದ ಕಡಿಮೆಯವರೆಗಿನ ಎಲ್ಲ ಭೇದಗಳನ್ನು ಪರ್ಯಾಯಸಮಾಸಜ್ಞಾನದ ಭೇದಗಳೆಂದು ತಿಳಿಯುವುದು.

ಈಗ ಅಕ್ಷರಜ್ಞಾನ ಹೇಳುತ್ತಾರೆ - ಪರ್ಯಾಯ ಸಮಾಸದ ಕೊನೆಯ ಭೇದದಲ್ಲಿ ಒಂದು ಭೇದವನ್ನು ಮತ್ತೆ ಸೇರಿಸಿದ ಮೇಲೆ ಅಕ್ಷರ ಜ್ಞಾನವಾಗುತ್ತದೆ. ಇದು ಅರ್ಥಾಕ್ಷರವೆಂಬ ಹೆಸರಿನ ಅಕ್ಷರ ಜ್ಞಾನವಿದ್ದು ಸಮಸ್ತ ಶ್ರುತಜ್ಞಾನದ ಸಂಖ್ಯಾತದ ಒಂದು ಭಾಗವಿದೆ. ಇದರಿಂದ ಮುಂದೆ ಒಂದೊಂದು ಅಕ್ಷರ ಜ್ಞಾನದ ವೃದ್ಧಿಯಾಗುತ್ತ - ಆಗುತ್ತ ಒಂದು ಅಕ್ಷರ ಕಡಿಮೆ ಪದಅಕ್ಷರದವರೆಗೆ ವೃದ್ಧಿಯಾಗಿರುವ ಜ್ಞಾನವು ಅಕ್ಷರಸಮಾಸ ಜ್ಞಾನವೆನಿಸಿಕೊಳ್ಳುತ್ತದೆ.

ಇದರಿಂದ ಮುಂದೆ ಅಕ್ಷರ ಸಮಾಸ ಜ್ಞಾನದ ಅಂತಿಮ ಭೇದದಲ್ಲಿ ಒಂದು ಅಕ್ಷರವನ್ನು ಪುನಃ ಸೇರಿಸಿದ ಮೇಲೆ ಪದಜ್ಞಾನವಾಗುತ್ತದೆ. ಪದಜ್ಞಾನದ ಪ್ರಮಾಣವು ಮೂರು ಪ್ರಕಾರದ್ದಿದೆ - ೧) ಅರ್ಥಪದ, ೨) ಪ್ರಮಾಣಪದ, ೩) ಮಧ್ಯಮಪದ. 'ಅಗ್ನಿಮಾನಯ' ಎಂಬ ವಾಕ್ಯಹೇಳಿದ ಮೇಲೆ ಇದರಲ್ಲಿ ಅಗ್ನಿಮ್ ಮತ್ತು ಆನಯವೆಂದು ಎರಡು ಪದಗಳಿವೆ. ಇದರ ಅರ್ಥವು 'ಅಗ್ನಿಯನ್ನು ತಗೆದುಕೊಂಡು ಬಾ' ಎಂಬುದಾಗಿದೆ. ಇತ್ಯಾದಿ ಪ್ರಕಾರದಿಂದ ಅರ್ಥವು ಯಾವ ಅಕ್ಷರಗಳಿಂದ ಉತ್ಪನ್ನವಾಗುತ್ತದೆ, ಅವು ಅರ್ಥ ಪದಗಳಿವೆ.

'ನಮಃಶ್ರೀವರ್ಧಮಾನಾಯ' - ಇದರ ಅರ್ಥವು 'ಶ್ರೀ ವರ್ಧಮಾನಸ್ವಾಮಿಗೆ ನಮಸ್ಕಾರವಿರಲಿ' ಎಂಬುದಾಗಿದೆ. ಇದು ಎಂಟು ಅಕ್ಷರಗಳ ಪದವಿದೆ. ಇದರ ಹೆಸರು ಪ್ರಮಾಣ ಪದವಿದೆ ಮತ್ತು ಹದಿನಾರು ನೂರಾ ಮೂವತ್ನಾಲ್ಕು ಕೋಟಿ ಎಂಭತ್ಮೂರು ಲಕ್ಷ ಏಳು ಸಾವಿರದಾ ಎಂಟುನೂರಾ ಎಂಭತ್ತೆಂಟು ಅಪುನರುಕ್ತ ಅಕ್ಷರಗಳ ಯಾವ ಒಂದು ಪದವಿರುತ್ತದೆ, ಅದು ಮಧ್ಯಮ ಪದವಿದೆ.

ಈ ಪದದಿಂದ ಮುಂದೆ ಒಂದೊಂದು ಅಕ್ಷರಜ್ಞಾನವು ಹೆಚ್ಚುತ್ತ-ಹೆಚ್ಚುತ್ತ ಒಂದು ಪದದಷ್ಟು ಅಕ್ಷರ ಹೆಚ್ಚಾದ ಮೇಲೆ ಪದಜ್ಞಾನವು ದ್ವಿಗುಣ - ಎರಡು ಪಟ್ಟಾಗುತ್ತದೆ. ಇದರಿಂದ ಮುಂದೆ ಒಂದೊಂದು ಅಕ್ಷರ ಹೆಚ್ಚುತ್ತ-ಹೆಚ್ಚುತ್ತ ಪುನಃ ಒಂದು ಪದ ಪ್ರಮಾಣ ಅಕ್ಷರ ಹೆಚ್ಚಾದ ಮೇಲೆ ಆ ಜ್ಞಾನವು ಮೂರು ಪಟ್ಟಾಗುತ್ತದೆ. ಇದೇ ಪ್ರಕಾರ ಅನುಕ್ರಮದಿಂದ ಒಂದೊಂದು ಅಕ್ಷರ ಹೆಚ್ಚುತ್ತ-ಹೆಚ್ಚುತ್ತ ಪೂರ್ಣ ಪದ ಪ್ರಮಾಣವಾದ ಮೇಲೆ ನಾಲ್ಕು ಪಟ್ಟು, ಇದೇ ಪ್ರಕಾರ ಐದುಪಟ್ಟು, ಆರುಪಟ್ಟು ಇತ್ಯಾದಿ ರೂಪದಲ್ಲಿ ಹೆಚ್ಚುತ್ತ-ಹೆಚ್ಚುತ್ತ ಒಂದು ಅಕ್ಷರ ಜ್ಞಾನ ಕಡಿಮೆ ಸಂಖ್ಯಾತ ಸಾವಿರ ಪದ ಜ್ಞಾನಪ್ರಮಾಣ ಅಕ್ಷರಗಳವರೆಗೆ ಪದ ಸಮಾಸದ ಭೇದ ತಿಳಿಯುವುದು.

ಈ ರಾಶಿಯಲ್ಲಿ ಒಂದು ಅಕ್ಷರವನ್ನು ಮತ್ತೆ ಸೇರಿಸಿದ ಮೇಲೆ ಸಂಘಾತ ಜ್ಞಾನವಾಗುತ್ತದೆ. ಈ ಜ್ಞಾನದಿಂದ ನಾಲ್ಕು ಗತಿಗಳೊಳಗಿನ ಯಾವುದೋ ಒಂದು ಗತಿಯ ನಿರೂಪಣೆಯನ್ನು ಸಂಪೂರ್ಣವಾಗಿ ಮಾಡುವಂಥ ಸಂಘಾತವೆಂಬ ಹೆಸರಿನ ಶ್ರುತಜ್ಞಾನವಿದೆ. ಈ ಸಂಘಾತ ಜ್ಞಾನದಿಂದ ಮುಂದೆ ಕ್ರಮವಾಗಿ ಒಂದೊಂದು ಅಕ್ಷರ ಹೆಚ್ಚುತ್ತ-ಹೆಚ್ಚುತ್ತ ಪದವಾಗುತ್ತದೆ. ಅನೇಕ ಪದಗಳ ಸಮೂಹವು ಸಂಘಾತ; ಇದೇ ಅನುಕ್ರಮದಿಂದ ಒಂದು ಸಂಘಾತ, ಎರಡು ಸಂಘಾತ, ಮೂರು, ನಾಲ್ಕು ಮೊದಲಾದ ಸಂಘಾತ, ಸಾವಿರ ಸಂಘಾತಗಳಾಗುತ್ತವೆ. ಕೊನೆಯ ಸಂಘಾತದಲ್ಲಿ ಒಂದು ಅಕ್ಷರಜ್ಞಾನ ಕಡಿಮೆ ಉಳಿಯುವವರೆಗೆ ಎಲ್ಲವೂ ಸಂಘಾತ ಸಮಾಸದ ಭೇದಗಳಿವೆ. ಈ ಪ್ರಕಾರ ಸಂಘಾತ ಸಮಾಸ ತಿಳಿಯುವುದು.

ಈ ಉತ್ಕೃಷ್ಟ ಸಂಘಾತ ಸಮಾಸದಲ್ಲಿ ಒಂದು ಅಕ್ಷರಜ್ಞಾನವು ಮತ್ತೆ ಹೆಚ್ಚಾದ ಮೇಲೆ ಪ್ರತಿಪತ್ತಿಕವೆಂಬ

ಹೆಸರಿನ ಶ್ರುತಜ್ಞಾನವಾಗುತ್ತದೆ. ಈ ಪ್ರತಿಪತ್ತಿಕ ಶ್ರುತಜ್ಞಾನದ ಧಾರಕನು ನಾಲ್ಕು ಗತಿಗಳ ಸ್ವರೂಪ ವ್ಯಾಖ್ಯಾನವನ್ನು ಯಥಾವತ್ತಾಗಿ ಮಾಡುತ್ತಾನೆ. ಈ ಪ್ರತಿಪತ್ತಿಕ ಶ್ರುತಜ್ಞಾನದಲ್ಲಿ ಒಂದೊಂದು ಅಕ್ಷರ ಹೆಚ್ಚುತ್ತ-ಹೆಚ್ಚುತ್ತ ಪದವಾಗುತ್ತದೆ. ಪದದಿಂದ ಹೆಚ್ಚುತ್ತ-ಹೆಚ್ಚುತ್ತ ಸಂಖ್ಯಾತ ಸಾವಿರ ಪದಗಳು ವೃದ್ಧಿಸಿದ ಮೇಲೆ ಒಂದು ಸಂಘಾತವಾಗುತ್ತದೆ. ಸಂಖ್ಯಾತ ಸಾವಿರ ಸಂಘಾತಗಳು ಹೆಚ್ಚಿದ ಮೇಲೆ ಒಂದು ಪ್ರತಿಪತ್ತಿಕ ಶ್ರುತಜ್ಞಾನವಾಗುತ್ತದೆ ಮತ್ತು ಸಂಖ್ಯಾತ ಸಾವಿರ ಪ್ರತಿಪತ್ತಿಕದ ಶ್ರುತಜ್ಞಾನದ ಒಂದು ಅಕ್ಷರ ಕಡಿಮೆ ಅಂತಿಮಭೇದದವರೆಗೆ ಪ್ರತಿಪತ್ತಿಕ ಸಮಾಸವೆಂಬ ಹೆಸರಿನ ಶ್ರುತಜ್ಞಾನವಾಗುತ್ತದೆ.

ಈ ಪ್ರತಿಪತ್ತಿಕ ಸಮಾಸದ ಕೊನೆಯ ಭೇದದಲ್ಲಿ ಒಂದು ಅಕ್ಷರವನ್ನು ಮತ್ತೆ ಸೇರಿಸಿದ ಮೇಲೆ ಅನುಯೋಗವೆಂಬ ಹೆಸರಿನ ಶ್ರುತಜ್ಞಾನವಾಗುತ್ತದೆ. ಯಾವುದರಿಂದ ಹದಿನಾಲ್ಕು ಮಾರ್ಗಣೆಗಳ ಸ್ವರೂಪವನ್ನು ಚೆನ್ನಾಗಿ ಹೇಳಲಾಗುತ್ತದೆ, ಅದು ಅನುಯೋಗವೆಂಬ ಹೆಸರಿನ ಶ್ರುತಜ್ಞಾನವಿದೆ. ಈ ಅನುಯೋಗದಲ್ಲಿ ಒಂದೊಂದು ಅಕ್ಷರ ಜ್ಞಾನವು ಹೆಚ್ಚುತ್ತ-ಹೆಚ್ಚುತ್ತ ಪೂರ್ವವತ್ ಅನುಕ್ರಮದಿಂದ ಪದಜ್ಞಾನ, ಪದದಿಂದ ಸಂಘಾತ, ಪ್ರತಿಪತ್ತಿಕ, ಅನುಯೋಗ - ಈ ಪ್ರಕಾರ ನಾಲ್ಕು ಅನುಯೋಗಗಳವರೆಗಿನ ಭೇದಗಳೊಳಗಿಂದ ಒಂದು ಅಕ್ಷರ ಕಡಿಮೆ ಅಂತಿಮ ಭೇದದವರೆಗೆ ಅನುಯೋಗ ಸಮಾಸ ಶ್ರುತಜ್ಞಾನವಾಗುತ್ತದೆ.

ಈ ಅನುಯೋಗದ ಕೊನೆಯ ಭೇದದಲ್ಲಿ ಒಂದು ಅಕ್ಷರವನ್ನು ಮತ್ತೆ ಸೇರಿಸಿದ ಮೇಲೆ ಪ್ರಾಭೃತಕ-ಪ್ರಾಭೃತಕ ಜ್ಞಾನವಾಗುತ್ತದೆ. ಈ ಪ್ರಾಭೃತಕ-ಪ್ರಾಭೃತಕದಿಂದ ಮುಂದೆ ಒಂದೊಂದು ಅಕ್ಷರ ಹೆಚ್ಚುತ್ತ-ಹೆಚ್ಚುತ್ತ ಪೂರ್ವವತ್ ಅನುಕ್ರಮದಿಂದ ಪದ, ಸಂಘಾತ, ಪ್ರತಿಪತ್ತಿಕ, ಅನುಯೋಗ, ಪ್ರಾಭೃತಕ - ಪ್ರಾಭೃತಕ ಈ ಅನುಕ್ರಮದಿಂದ ಇಪ್ಪತ್ನಾಲ್ಕು ಪ್ರಾಭೃತಕ-ಪ್ರಾಭೃತಕಗಳಾಗುತ್ತವೆ. ಅವುಗಳೊಳಗಿನ ಕೊನೆಯ ಭೇದದಲ್ಲಿ ಒಂದು ಅಕ್ಷರ ಕಡಿಮೆ ಉಳಿಯುವವರೆಗೆ ಪ್ರಾಭೃತಕ-ಪ್ರಾಭೃತಕ ಸಮಾಸ ಜ್ಞಾನವಾಗುತ್ತದೆ.

ಈ ಪ್ರಾಭೃತಕ-ಪ್ರಾಭೃತಕ ಸಮಾಸದಲ್ಲಿ ಒಂದು ಅಕ್ಷರವನ್ನು ಮತ್ತೆ ಸೇರಿಸಿದ ಮೇಲೆ ಪ್ರಾಭೃತಕ ಜ್ಞಾನವಾಗುತ್ತದೆ. ಒಂದು ಪ್ರಾಭೃತಕದಲ್ಲಿ ಇಪ್ಪತ್ನಾಲ್ಕು ಪ್ರಾಭೃತಕ-ಪ್ರಾಭೃತಕ ಅಧಿಕಾರಗಳಿರುತ್ತವೆ. ಈ ಪ್ರಾಭೃತಕದಿಂದ ಮುಂದೆ ಒಂದೊಂದು ವೃದ್ಧಿಯಾಗುತ್ತ-ಆಗುತ್ತ ಕ್ರಮದಿಂದ ಪದ, ಸಂಘಾತಾದಿಗಳು ಹೆಚ್ಚುತ್ತ-ಹೆಚ್ಚುತ್ತ ಇಪ್ಪತ್ನಾಲ್ಕು ಪ್ರಾಭೃತಕಗಳಾಗುತ್ತವೆ. ಅವುಗಳೊಳಗಿನ ಕೊನೆಯ ಭೇದದಲ್ಲಿ ಒಂದು ಅಕ್ಷರ ಕಡಿಮೆ ಉಳಿಯುವವರೆಗೆ ಪ್ರಾಭೃತಕ ಸಮಾಸದ ಭೇದ ತಿಳಿಯುವುದು.

ಈ ಪ್ರಾಭೃತಕ ಸಮಾಸದಲ್ಲಿ ಒಂದು ಅಕ್ಷರದ ಜ್ಞಾನವನ್ನು ಮತ್ತೆ ಸೇರಿಸಿದ ಮೇಲೆ ವಸ್ತುವೆಂಬ ಹೆಸರಿನ ಶ್ರುತಜ್ಞಾನವಾಗುತ್ತದೆ. ಈ ವಸ್ತುಜ್ಞಾನದಿಂದ ಮುಂದೆ ಒಂದೊಂದು ಅಕ್ಷರ ಹೆಚ್ಚುತ್ತ-ಹೆಚ್ಚುತ್ತ ಪದ, ಸಂಘಾತಾದಿ ಪೂರ್ವವತ್ ಅನುಕ್ರಮದಿಂದ ಹೆಚ್ಚುತ್ತ-ಹೆಚ್ಚುತ್ತ ಹತ್ತರವರೆಗೆ ವೃದ್ಧಿಯಾದ ಮೇಲೆ ಕೊನೆಯ ಭೇದದಲ್ಲಿ ಒಂದು ಅಕ್ಷರ ಕಡಿಮೆಯವರೆಗೆ ವಸ್ತುಸಮಾಸ ಶ್ರುತಜ್ಞಾನವಿದೆ.

ಈ ವಸ್ತು ಸಮಾಸದಲ್ಲಿ ಒಂದು ಅಕ್ಷರವನ್ನು ಮತ್ತೆ ಸೇರಿಸಿದ ಮೇಲೆ ಪೂರ್ವವೆಂಬ ಹೆಸರಿನ ಶ್ರುತಜ್ಞಾನವಾಗುತ್ತದೆ. ಈ ಪೂರ್ವದಲ್ಲಿ ಹದಿನಾಲ್ಕು ಭೇದಗಳಿವೆ. ಅವುಗಳ ಸ್ವರೂಪವನ್ನು ಮೊದಲು ಹೇಳಿಬಂದಿದ್ದೇವೆ; ಅದರಿಂದ ಇಲ್ಲಿ ಹೇಳಿಲ್ಲ. ಪೂರ್ವಜ್ಞಾನದ ಮೇಲೆ ಒಂದೊಂದು ಅಕ್ಷರ ಜ್ಞಾನವು ಹೆಚ್ಚುತ್ತ-ಹೆಚ್ಚುತ್ತ ಪೂರ್ವ ಕ್ರಮಾನುಸಾರ ಪದ, ಸಂಘಾತಾದಿ ಅನುಕ್ರಮದಿಂದ ಹೆಚ್ಚುತ್ತ-ಹೆಚ್ಚುತ್ತ ಕೊನೆಯ ಹದಿನಾಲ್ಕನೆಯ ಪೂರ್ವದಲ್ಲಿ ಒಂದು ಅಕ್ಷರ ಕಡಿಮೆ ಶ್ರುತಜ್ಞಾನದವರೆಗೆ ಪೂರ್ವಸಮಾಸವಿದೆ.

ಈ ಪ್ರಕಾರ ಶ್ರುತಜ್ಞಾನದ ಇಪ್ಪತ್ತು ಭೇದಗಳನ್ನು ಹೇಳಿದ್ದಾರೆ. ಇವುಗಳ ವಿಶೇಷವನ್ನು ಗೊಮ್ಮಟಸಾರ (ಜೀವಕಾಂಡ)ದ ಶ್ರುತಜ್ಞಾನಾಧಿಕಾರದಿಂದ ತಿಳಿಯುವುದು. ಈ ಶ್ರುತಜ್ಞಾನವು ಕೇವಲಜ್ಞಾನದ ಸಮಾನ ಮಹಿಮಾ ಸಂಪನ್ನವಿದೆ. ಕೇವಲ ಜ್ಞಾನವು ಪ್ರತ್ಯಕ್ಷವಿದೆ ಮತ್ತು ಶ್ರುತಜ್ಞಾನವು ಪರೋಕ್ಷವಿದೆ; ಆದಾಗ್ಯೂ ಇದು ಕೇವಲಜ್ಞಾನದ ಸಮಾನ ಮೂರುಕಾಲ ಸಂಬಂಧದ ಲೋಕಾಲೋಕವರ್ತಿ ಸಕಲ ತತ್ತ್ವಗಳ ಪ್ರಕಾಶಕವಿದೆ.

**ಸಂದೇಹ -** ಕೇವಲಜ್ಞಾನವಂತೂ ಅನಂತವಿರುವುದರಿಂದ ಅನಂತ ಪದಾರ್ಥಗಳಲ್ಲಿ ಅರ್ಥರೂಪವಾಗಿ ಪ್ರವೃತ್ತವಾಗುತ್ತದೆ. ಆದರೆ ಶ್ರುತಜ್ಞಾನವಂತೂ ಸಂಖ್ಯಾತ ಅಕ್ಷರಮಯವಿದೆ. ಅದರಿಂದ ಅದು ಕೇವಲಜ್ಞಾನದ ಸಮಾನ ಹೇಗೆ ಆಗುವ ಸಾಧ್ಯತೆಯಿದೆ ?

**ಸಮಾಧಾನ -** ಸೋದರರನೇ ! ನಿನ್ನ ಮಾತು ಪ್ರಮಾಣ(ಮಾನ್ಯ)ವಿದೆ; ಆದರೆ ನೀನು ಮನಸ್ಸನ್ನು ಸ್ಥಿರಗೊಳಿಸಿ ಆಲಿಸು. ಈ ಪ್ರಶ್ನೆಯ ಉತ್ತರವನ್ನು ತಿಳಿಯುವುದರಿಂದ ಸಮ್ಯಕ್ತ್ವವಾಗಿ ಹೋಗುತ್ತದೆ.

ಎಲೈ ಭವ್ಯನೇ ! ಕೇವಲಜ್ಞಾನದಿಂದ ಯಾವುದೂ ಮರೆಯಾಗಿಲ್ಲ. ಅದರಲ್ಲಿ ಮೂರ್ತಿಕ-ಅಮೂರ್ತಿಕ ಎಲ್ಲ ಪದಾರ್ಥಗಳು ಪ್ರಕಾಶಿತವಾಗುತ್ತವೆ. ಆ ಕೇವಲಜ್ಞಾನವು ತ್ರಿಕಾಲವರ್ತಿ ಲೋಕಾಲೋಕದ ಪ್ರಕಾಶಕವಿದೆ. ಯಾವ ಯಾವ ಪದಾರ್ಥಗಳು ಕೇವಲಜ್ಞಾನದಲ್ಲಿ ಭಾಸಿತವಾಗಿವೆ, ಅವೆಲ್ಲವುಗಳ ರಹಸ್ಯವು ಕೇವಲಿಯ ಮುಖ(ಸರ್ವಾಂಗ)ದಿಂದ ಪ್ರಸಾರಿತವಾಗಿದೆ. ಗಣಧರರು ಅವುಗಳನ್ನೇ ತಿಳಿದುಕೊಂಡು ಉಪದೇಶ ನೀಡಿದ್ದಾರೆ. ಮೂರ್ತಿಕ-ಅಮೂರ್ತಿಕ ದ್ರವ್ಯಗಳ ಸ್ವರೂಪ, ಮೂರುಲೋಕ-ಮೂರುಕಾಲ ಸಂಬಂಧದ ರಚನೆಯನ್ನು ಆ ಶ್ರುತಜ್ಞಾನದ ಮೂಲಕ ಎಲ್ಲವನ್ನೂ ಹೇಳಲಾಗಿದೆ. ಭವ್ಯರು ಅದನ್ನು ಆಲಿಸಿ-ಆಲಿಸಿ ರಹಸ್ಯವನ್ನು ತಿಳಿದುಕೊಂಡು ಮೋಕ್ಷಮಾರ್ಗ ಪಡೆಯುತ್ತಾರೆ; ಅದರಿಂದ ಶ್ರುತಜ್ಞಾನವನ್ನು ಕೇವಲಜ್ಞಾನದ ಸಮಾನವೆಂದು ಹೇಳಿದ್ದಾರೆ. ಎಲೈ ಭವ್ಯನೇ ! ಇನ್ನೊಂದು ಮಾತನ್ನು ಆಲಿಸು !! ಯಾರಿಗೆ ಕೇವಲಜ್ಞಾನವಾಗುತ್ತದೆ ಅವರು ಕೇವಲಿಗಳೆನಿಸಿಕೊಳ್ಳುತ್ತಾರೆ ಮತ್ತು ಯಾರಿಗೆ ಸಂಪೂರ್ಣ ಶ್ರುತಜ್ಞಾನವಿರುತ್ತದೆ ಆ ಯತಿನಾಥರು ಶ್ರುತಕೇವಲಿಗಳೆನಿಸಿಕೊಳ್ಳುತ್ತಾರೆ. ಈ ಕಾರಣದಿಂದಲೂ ಕೂಡ ಅದನ್ನು ಕೇವಲಜ್ಞಾನದ ಸಮಾನವೆಂದು ಹೇಳಿದ್ದಾರೆಂದು ತಿಳಿಯುವುದು.

ಈ ಪ್ರಕಾರ ಸುದೃಷ್ಟಿತರಂಗಿಣಿಯೆಂಬ ಹೆಸರಿನ ಗ್ರಂಥದಲ್ಲಿ ಸಾಮಾನ್ಯ ಶ್ರುತಜ್ಞಾನದ
ವರ್ಣನೆ ಮಾಡುವಂಥ ಹತ್ತೊಂಭತ್ತನೇ ಪರ್ವವು ಪೂರ್ಣವಾಯಿತು.

★★★★★

■ ಈ ಪಂಚಮ ಕಾಲದಲ್ಲಿ ಮೊದಲಂತೂ ಶಾಸ್ತ್ರಗಳನ್ನು ಓದುವಂಥವರೇ ಇಲ್ಲ ! ಒಂದುವೇಳೆ ಓದುವಂಥವರು ದೊರಕಿದರೂ ಶಾಸ್ತ್ರಗಳಲ್ಲಿರುವ ಗೂಢ ರಹಸ್ಯವನ್ನು ತಿಳಿಸಿಕೊಡುವಂಥವರು ಇಲ್ಲ. ಅವರೂ ದೊರಕಿದರೆ ಆ ಶಾಸ್ತ್ರ ಓದುವಂಥವರು ಮತ್ತು ಪ್ರವಚನ ಮಾಡುವಂಥವರ ರಕ್ಷಣೆ ಮಾಡಿ ಅವರಿಂದ ಅಭ್ಯಾಸ ಮಾಡುವಂಥವರಿಲ್ಲ. ಒಂದುವೇಳೆ ಇವರೆಲ್ಲರ ಪ್ರಾಪ್ತಿಯಾಗಿ ಹೋದರೆ ಆ ಶಾಸ್ತ್ರಗಳನ್ನು ಓದಿಸುವಂಥ, ಓದುವಂಥ, ಉಪದೇಶ ಕೊಡುವಂಥ ಮತ್ತು ಅವರ ರಕ್ಷಣೆ ಮಾಡುವಂಥ ಸಜ್ಜನರಿಗೆ ಕಷ್ಟವಿತ್ತು ನಾಶ ಮಾಡುವಂಥ ಮೂಢ ಜನರು ಬಹಳಷ್ಟು ಇದ್ದಾರೆ !

ಎಲೈ ಜೀವನೇ ! ಆತ್ಮನ ಏಕತ್ವ ಸ್ವಭಾವದ ಆಶ್ರಯದಿಂದಲೇ ಶಾಂತಿ ಮತ್ತು ಸುಖವಾಗುತ್ತದೆ.

## ೨೦ : ಇಪ್ಪತ್ತನೆಯ ಪರ್ವ
## ಅವಧಿ, ಮನಃಪರ್ಯಾಯ, ಕೇವಲಜ್ಞಾನದ ವರ್ಣನೆ

ಈಗ ಅವಧಿಜ್ಞಾನದ ಸ್ವರೂಪ ವರ್ಣನೆ ಮಾಡುತ್ತಾರೆ,-

**ದೇಸಾ ಪಮ್ಮಂ ಸವ್ವಾ ತ್ತಿ ಯ ಭೇಯಾವಧಿಣಾಣ ಜಿಣ ಭಣಿಯಂ ।**
**ಜಾಣಯ ಮುತ್ತೀ ದವ್ವಂ ತೀತಾಣಾಗತ ವತ್ತಮಾಣಾ ಯ ॥೪೬॥**

**ಗಾಥಾರ್ಥ :-** ಅವಧಿಜ್ಞಾನದ ದೇಶಾವಧಿ, ಪರಮಾವಧಿ ಮತ್ತು ಸರ್ವಾವಧಿ-ಹೀಗೆ ಮೂರುಭೇದಗಳನ್ನು ಜಿನದೇವರು ಹೇಳಿದ್ದಾರೆ. ಈ ಜ್ಞಾನವು ಅತೀತ, ಅನಾಗತ ಮತ್ತು ವರ್ತಮಾನ ಮೂರು ಕಾಲಸಂಬಂಧದ ಮೂರ್ತಿಕ ದ್ರವ್ಯಗಳನ್ನು ತಿಳಿಯುತ್ತದೆ.

**ಭಾವಾರ್ಥ :-** ಅವಧಿಜ್ಞಾನವು ಮೂರ್ತಿಕ ಪದಾರ್ಥಗಳನ್ನು ತಿಳಿಯುತ್ತದೆ. ಅತೀತಕಾಲದಲ್ಲಿ ಮೂರ್ತಿಕ ಪದಾರ್ಥವು ಯಾವ-ಯಾವ ರೂಪಗಳಲ್ಲಿ ಪರಿಣಮಿತವಾಯಿತು. ಸ್ಪರ್ಶನದ ವಿಷಯರೂಪ, ರಸನಾದ ವಿಷಯರೂಪ, ನಾಸಿಕಾದ ವಿಷಯರೂಪ, ನೇತ್ರದ ವಿಷಯರೂಪ, ಕರ್ಣದ ವಿಷಯರೂಪ, ಸ್ಥೂಲ-ಸೂಕ್ಷ್ಮ ಯಾವ-ಯಾವ ಪುದ್ಗಲ ಸ್ಕಂಧಗಳು ಪರಿಣಮಿತವಾಗಿವೆ; ತಮ್ಮ ತಮ್ಮ ವಿಷಯ ಪ್ರಮಾಣ ಅವೆಲ್ಲವನ್ನೂ ಅವಧಿ ಜ್ಞಾನವು ತಿಳಿಯುತ್ತದೆ. ಆಗಾಮಿ (ಮುಂಬರುವ) ಕಾಲದಲ್ಲಿ ಮೂರ್ತಿಕ ಪದಾರ್ಥಗಳು ಯಾವ-ಯಾವ ರೂಪದಿಂದ ಪರಿಣಮಿತವಾಗುವವು; ಅವೆಲ್ಲವನ್ನೂ ಅವಧಿಜ್ಞಾನವು ತಿಳಿಯುತ್ತದೆ. ವರ್ತಮಾನ ಕಾಲ ಸಂಬಂಧವಾಗಿ ಯಾವ-ಯಾವ ಪದಾರ್ಥಗಳು ಮೂರು ಲೋಕದಲ್ಲಿ ಯಾವ-ಯಾವ ರೂಪಗಳಾಗಿ ಪರಿಣಮಿತವಾಗುತ್ತಿವೆ; ತಮ್ಮ ತಮ್ಮ ವಿಷಯ ಪ್ರಮಾಣ ಕ್ಷೇತ್ರ-ಕಾಲಯುಕ್ತವಾಗಿ ಅವೆಲ್ಲವನ್ನೂ ಅವಧಿ ಜ್ಞಾನಿಗಳು ತಿಳಿಯುತ್ತಾರೆ. ಈ ಪ್ರಕಾರ ಅತೀತ, ಅನಾಗತ, ವರ್ತಮಾನ ಕಾಲ ಸಂಬಂಧದ ದ್ರವ್ಯ, ಕ್ಷೇತ್ರ, ಕಾಲ, ಭಾವದ ಸೀಮೆಯಿಂದ ಯುಕ್ತವಾಗಿ ತಮ್ಮ ವಿಷಯಯೋಗ್ಯ ದೂರವರ್ತಿ-ಸಮೀಪವರ್ತಿ ಎಲ್ಲ ಪದಾರ್ಥಗಳನ್ನು ಅವಧಿಜ್ಞಾನಿಗಳು ತಿಳಿಯುತ್ತಾರೆ.

**ಅವಧಿಜ್ಞಾನದ ಭೇದಗಳು -** ದೇಶಾವಧಿ, ಪರಮಾವಧಿ ಮತ್ತು ಸರ್ವಾವಧಿಯೆಂದು ಮೂರು ಇವೆ. ಅವುಗಳಲ್ಲಿನ ದೇಶಾವಧಿಯಲ್ಲಿ ಅನುಗಾಮಿ, ಅನನುಗಾಮಿ, ವರ್ಧಮಾನ, ಹೀಯಮಾನ, ಅವಸ್ಥಿತ ಮತ್ತು ಅನವಸ್ಥಿತವೆಂದು ಆರು ಭೇದಗಳಿವೆ. ಅವುಗಳ ಸಾಮಾನ್ಯ ಲಕ್ಷಣವು ಈ ಪ್ರಕಾರವಿದೆ.

**೧) ಅನುಗಾಮಿ -** ಯಾವ ಅವಧಿಜ್ಞಾನವು ಯಾವ ಪರ್ಯಾಯದಲ್ಲಿ ಪ್ರಗಟವಾಗಿದೆ ಅದರಲ್ಲಿ ಆಯುವಿರುವವರೆಗೆ ಉಳಿಯುತ್ತದೆ ಮತ್ತು ಆ ಜೀವನು ಪರಗತಿಗೆ ಹೋದಮೇಲೆ ಅಲ್ಲಿಯೂ ಅವನ ಜತೆಗೆ ಹೋಗುತ್ತದೆ, ಅದು ಅನುಗಾಮಿಯಿದೆ.

**೨) ಅನನುಗಾಮಿ -** ಯಾವ ಅವಧಿಜ್ಞಾನವು ಶುಭ ನಿಮಿತ್ತ ಪಡೆದು ಯಾವ ಪರ್ಯಾಯ ಮತ್ತು ಯಾವ ಸ್ಥಾನದಲ್ಲಿ ಪ್ರಗಟವಾಗಿದೆ, ಅದೇ ಪರ್ಯಾಯ ಮತ್ತು ಅದೇ ಸ್ಥಾನದವರೆಗೆ ಉಳಿಯುತ್ತದೆ; ಅನ್ಯಗತಿ ಹಾಗೂ ಅನ್ಯಸ್ಥಾನದಲ್ಲಿ ಅವನ ಜೊತೆಗೆ ಹೋಗುವುದಿಲ್ಲ, ಅದು ಅನನುಗಾಮಿಯಿದೆ.

**೩) ವರ್ಧಮಾನ -** ಯಾವ ಅವಧಿಜ್ಞಾನದಲ್ಲಿ ಶುಭ ನಿಮಿತ್ತವು ದೊರೆತ ಮೇಲೆ ಪ್ರಗಟತೆಯಿಂದ ಹಿಡಿದು ಪರ್ಯಾಯದವರೆಗೆ ತನ್ನ ಸ್ಥಿತಿಪ್ರಮಾಣ ಕಾಲದವರೆಗೆ ಪ್ರತಿಸಮಯ ವಿಶುದ್ಧತೆಯೊಂದಿಗೆ ಜ್ಞಾನದ ಅಂಶಗಳು ಹೆಚ್ಚುತ್ತಲೇ ಇರುತ್ತವೆ, ಅದು ವರ್ಧಮಾನ ಅವಧಿಜ್ಞಾನವಿದೆ.

**೪) ಹೀಯಮಾನ -** ಮಹಾವಿಶುದ್ಧತೆಯ ಪ್ರಭಾವದಿಂದ ಶುಭ ನಿಮಿತ್ತ ಪಡೆದು ಯಾವನೋ ಜೀವನಿಗೆ ಪ್ರಗಟವಾಗಿರುವ ಅವಧಿಜ್ಞಾನವು ಪ್ರಗಟತೆಯ ಸಮಯದಿಂದ ಹಿಡಿದು, ತನ್ನ ಪರ್ಯಾಯದವರೆಗೆ, ತನ್ನ ಕಾಲ-ಸ್ಥಿತಿಯ ಮರ್ಯಾದೆಯಲ್ಲಿ ಕಡಿಮೆಯಾಗುತ್ತಿರುತ್ತದೆ, ಅದು ಹೀಯಮಾನ ಅವಧಿಜ್ಞಾನವಿದೆ.

**೫) ಅವಸ್ಥಿತ -** ಯಾವ ಅವಧಿಜ್ಞಾನವು ಯಾವಾಗಿನಿಂದ ಯಾವ ರೂಪದಲ್ಲಿ ಪ್ರಗಟವಾಗಿದೆ, ಆವಾಗಿನಿಂದ ಅದೇ ರೂಪದಲ್ಲಿ ಸ್ಥಿರವುಳಿಯುತ್ತದೆ. ತನ್ನ ಕಾಲ ಪ್ರಮಾಣ ಎಷ್ಟು ಸ್ಥಿತಿಯಿದೆ ಅಷ್ಟು ಸ್ಥಿತಿ ಉಳಿಯುತ್ತದೆ; ಎಷ್ಟು ಅಂಶಗಳಲ್ಲಿ ಪ್ರಗಟವಾಗಿದೆ, ಅಷ್ಟು ಅಂಶಗಳಲ್ಲಿಯೇ ಇರುತ್ತದೆ; ಹೀನಾಧಿಕವಾಗುವುದಿಲ್ಲ, ಅದು ಅವಸ್ಥಿತ ಅವಧಿಜ್ಞಾನವಿದೆ.

**೬) ಅನವಸ್ಥಿತ -** ಯಾವ ಅವಧಿಜ್ಞಾನವು ಪ್ರಗಟವಾದ ಮೇಲೆ ಕೆಲವೊಮ್ಮೆ ಕಡಿಮೆಯಾಗುತ್ತದೆ, ಕೆಲವೊಮ್ಮೆ ಹೆಚ್ಚಾಗುತ್ತದೆ - ಈ ಪ್ರಕಾರ ಚಂಚಲವಾಗಿರುತ್ತದೆ; ಅದು ಅನವಸ್ಥಿತ ಅವಧಿಜ್ಞಾನವಿದೆ.

ಇವುಗಳಲ್ಲಿನ ಅನುಗಾಮಿಯಲ್ಲಿ - ಸ್ವಸ್ಥಾನ ಅನುಗಾಮಿ, ಪರಸ್ಥಾನ ಅನುಗಾಮಿ, ಉಭಯ ಅನುಗಾಮಿ - ಎಂದು ಮೂರು ಭೇದಗಳಿವೆ. ಯಾವುದು ತನ್ನ ಕ್ಷೇತ್ರದಲ್ಲಿಯೇ ಯಾವಜ್ಜೀವನ ತಮ್ಮ ಜತೆಯಲ್ಲಿರುತ್ತದೆ, ಭವಾಂತರದಲ್ಲಿಯೂ ಜೊತೆಗೆ ಹೋಗುತ್ತದೆ, ಅದು ಸ್ವಕ್ಷೇತ್ರ ಅನುಗಾಮಿಯಿದೆ. ಯಾವುದು ಪರಕ್ಷೇತ್ರದಲ್ಲಿ ಯಾವಜ್ಜೀವನ ಮತ್ತು ಭವಾಂತರದಲ್ಲಿಯೂ ಜತೆಯಲ್ಲಿರುತ್ತದೆ ಅದು ಪರಕ್ಷೇತ್ರ ಅನುಗಾಮಿಯಿದೆ ಮತ್ತು ಯಾವುದು ಸ್ವಕ್ಷೇತ್ರ-ಪರಕ್ಷೇತ್ರ ಎರಡರಲ್ಲಿಯೂ ಯಾವಜ್ಜೀವನ ಮತ್ತು ಭವಾಂತರದಲ್ಲಿಯೂ ಜತೆಯಲ್ಲಿರುತ್ತದೆ, ಅದನ್ನು ಉಭಯಾನುಗಾಮಿಯೆಂದು ಹೇಳುತ್ತಾರೆ.

ಅನನುಗಾಮಿಯು ಕೂಡ - ಸ್ವಕ್ಷೇತ್ರಾನನುಗಾಮಿ, ಪರಕ್ಷೇತ್ರಾನನುಗಾಮಿ, ಉಭಯಾನನುಗಾಮಿ- ಯೆಂದು ಮೂರು ಪ್ರಕಾರದ್ದಿದೆ. ಅವುಗಳಲ್ಲಿನ ಯಾವುದು ಸ್ವಕ್ಷೇತ್ರದಲ್ಲಿಯೂ ಆಯುವಿನವರೆಗೆ ಅಥವಾ ಭವಾಂತರದಲ್ಲಿಯೂ ಜೊತೆಗೆ ಹೋಗುವುದಿಲ್ಲ ಅದನ್ನು ಸ್ವಕ್ಷೇತ್ರಾನನುಗಾಮಿಯೆಂದು ಹೇಳುತ್ತಾರೆ. ಯಾವುದು ಪರಕ್ಷೇತ್ರದಲ್ಲಿ ತಮ್ಮ ಆಯುವಿರುವವರೆಗೆ ಅಥವಾ ಭವಾಂತರದಲ್ಲಿ ಜೊತೆಗೆ ಹೋಗುವುದಿಲ್ಲ, ಅದನ್ನು ಪರಕ್ಷೇತ್ರಾನನುಗಾಮಿಯೆನ್ನುತ್ತಾರೆ ಮತ್ತು ಯಾವುದು ಸ್ವಕ್ಷೇತ್ರ-ಪರಕ್ಷೇತ್ರ ಎರಡರಲ್ಲಿಯೂ ಆಯುವಿರುವವರೆಗೆ ಅಥವಾ ಭವಾಂತರದಲ್ಲಿ ಜೊತೆಗೆ ಹೋಗುವುದಿಲ್ಲ. ಅದು ಉಭಯಾನನುಗಾಮಿ ಇದೆ. ಹೀಗೆ ಅನನುಗಾಮಿಯ ಮೂರು ಭೇದಗಳಿವೆ.

ಇನ್ನು ಮುಂದೆ ಕ್ಷೇತ್ರ-ಕಾಲಗಳ ಅಪೇಕ್ಷೆಯಿಂದ ಅವಧಿಜ್ಞಾನದ ಹೀನಾಧಿಕತೆರೂಪ ಕಥನ ಮಾಡುತ್ತಾರೆ. ಯಾವ ಜೀವನು ಅವಧಿಯ ಕ್ಷೇತ್ರದ ಅಪೇಕ್ಷೆಯಿಂದ ಎಷ್ಟು ಕ್ಷೇತ್ರದವರೆಗೆ ತಿಳಿಯುತ್ತಾನೆ ಅವನು ಕಾಲದ ಅಪೇಕ್ಷೆಯಿಂದ ಅಲ್ಪಕಾಲದವರೆಗೆ ತಿಳಿಯುತ್ತಾನೆ. ಇದೇ ಪ್ರಕಾರ ಮತ್ತೆಯೂ ಭೇದ ಹೇಳುತ್ತಾರೆ ಜಘನ್ಯ ಅವಧಿಯ ಧಾರಕ ಯಾವ ಜೀವನು ಕ್ಷೇತ್ರದ ಅಪೇಕ್ಷೆಯಿಂದ ಅಂಗುಲದ ಅಸಂಖ್ಯಾತದ ಒಂದು ಭಾಗ ಕ್ಷೇತ್ರದ ವಿಷಯ ತಿಳಿಯುತ್ತಾನೆ, ಅದೇ ಜೀವನು ಕಾಲದ ಅಪೇಕ್ಷೆಯಿಂದ ಆವಲಿಯ ಅಸಂಖ್ಯಾತದ ಭಾಗ ಕಾಲದ ವಿಷಯ ತಿಳಿಯುತ್ತಾನೆ; ಆದರೆ ಇದರಲ್ಲಿಯೂ ಅಸಂಖ್ಯಾತ ಸಮಯವೆಂದು ತಿಳಿಯುವುದು. ಯಾವ ಜೀವನು ಅಂಗುಲದ ಸಂಖ್ಯಾತದ ಒಂದು ಭಾಗ ಕ್ಷೇತ್ರದ ವಿಷಯ ತಿಳಿಯುತ್ತಾನೆ ಅದೇ ಜೀವನು ಕಾಲದ ಅಪೇಕ್ಷೆಯಿಂದ ಆವಲಿಯ ಸಂಖ್ಯಾತದ ಒಂದು ಭಾಗ ಕಾಲದ ವಿಷಯ ತಿಳಿಯುತ್ತಾನೆ. - ಇದು ಮೊದಲನೆಯ ಭೇದವಿದೆ.

ಎರಡನೆಯ ಭೇದದಲ್ಲಿ ಯಾವ ಜೀವನು ಅಂಗುಲ ಮಾತ್ರ ಕ್ಷೇತ್ರದ ವಿಷಯ ತಿಳಿಯುತ್ತಾನೆ, ಅದೇ ಜೀವನು ಕಾಲದ ಅಪೇಕ್ಷೆಯಿಂದ ಕಿಂಚಿತ್ ನ್ಯೂನ ಆವಲಿ ಮಾತ್ರ ಕಾಲದ ವಿಷಯ ತಿಳಿಯುತ್ತಾನೆ. ಮೂರನೆಯ ಭೇದದಲ್ಲಿ ಕ್ಷೇತ್ರದ ಅಪೇಕ್ಷೆಯಿಂದ ಯಾವ ಜೀವನು ಏಳು-ಎಂಟು ಅಂಗುಲದ ಕ್ಷೇತ್ರದ ವಿಷಯ ತಿಳಿಯುತ್ತಾನೆ ಅದೇ ಜೀವನು ಕಾಲದ ಅಪೇಕ್ಷೆಯಿಂದ ಆವಲಿ ಪೃಥಕ್ತ್ವ ಕಾಲದ ವಿಷಯ ತಿಳಿಯುತ್ತಾನೆ.

ನಾಲ್ಕನೆಯ ಭೇದದಲ್ಲಿ ಕ್ಷೇತ್ರ ಅಪೇಕ್ಷೆಯಿಂದ ಯಾವ ಜೀವನು ಒಂದು ಮೊಳ ಕ್ಷೇತ್ರದ ವಿಷಯ ತಿಳಿಯುತ್ತಾನೆ, ಅದೇ ಜೀವನು ಕಾಲದ ಅಪೇಕ್ಷೆಯಿಂದ ಆವಲಿ ಪೃಥಕ್ತ್ವ ಕಾಲದ ವಿಷಯ ತಿಳಿಯುತ್ತಾನೆ. ಐದನೆಯ ಭೇದದಲ್ಲಿ ಕ್ಷೇತ್ರದ ಅಪೇಕ್ಷೆಯಿಂದ ಯಾವ ಜೀವನು ಒಂದು ಹರದಾರಿ ಕ್ಷೇತ್ರದ ವಿಷಯ ತಿಳಿಯುತ್ತಾನೆ, ಅದೇ ಜೀವನು ಕಾಲದ ಅಪೇಕ್ಷೆಯಿಂದ ಅಂತರ್ಮುಹೂರ್ತಕಾಲದ ವಿಷಯ ತಿಳಿಯುತ್ತಾನೆ. ಆರನೆಯ ಭೇದದಲ್ಲಿ ಕ್ಷೇತ್ರದ ಅಪೇಕ್ಷೆಯಿಂದ ಯಾವ ಜೀವನು ಒಂದು ಯೋಜನ ಕ್ಷೇತ್ರದ ವಿಷಯ ತಿಳಿಯುತ್ತಾನೆ ಅದೇ ಜೀವನು ಕಾಲದ ಅಪೇಕ್ಷೆಯಿಂದ ಕಿಂಚಿತ ನ್ಯೂನ ಮುಹೂರ್ತ (ಭಿನ್ನ ಮುಹೂರ್ತ) ಕಾಲದ ವಿಷಯ ತಿಳಿಯುತ್ತಾನೆ.

ಏಳನೆಯ ಭೇದದಲ್ಲಿ ಕ್ಷೇತ್ರ ಅಪೇಕ್ಷೆಯಿಂದ ಯಾವ ಜೀವನು ಇಪ್ಪತ್ತೈದು ಯೋಜನದದ್ದನ್ನು ತಿಳಿಯುತ್ತಾನೆ ಅದೇ ಜೀವನು ಕಾಲದ ಅಪೇಕ್ಷೆಯಿಂದ ಕಿಂಚಿತ್ ನ್ಯೂನ ಒಂದು ದಿವಸ ಕಾಲದ್ದನ್ನು ತಿಳಿಯುತ್ತಾನೆ. ಎಂಟನೆಯ ಭೇದದಲ್ಲಿ ಕ್ಷೇತ್ರ ಅಪೇಕ್ಷೆಯಿಂದ ಯಾವ ಜೀವನು ಭರತಕ್ಷೇತ್ರ ಪ್ರಮಾಣ ಕ್ಷೇತ್ರದ್ದನ್ನು ತಿಳಿಯುತ್ತಾನೆ, ಅದೇ ಜೀವನು ಕಾಲದ ಅಪೇಕ್ಷೆಯಿಂದ ಹದಿನೈದು ದಿನ - ಒಂದು ಪಕ್ಷಕಾಲ ಸಂಬಂಧವಾಗಿ ಮುಂದೆ-ಹಿಂದೆ ತಿಳಿಯುತ್ತಾನೆ. ಒಂಭತ್ತನೆಯ ಭೇದದಲ್ಲಿ ಯಾವ ಜೀವನು ಕ್ಷೇತ್ರ ಅಪೇಕ್ಷೆಯಿಂದ ಜಂಬೂದ್ವೀಪ ಪ್ರಮಾಣದ್ದನ್ನು ತಿಳಿಯುತ್ತಾನೆ, ಅವನೇ ಕಾಲದ ಅಪೇಕ್ಷೆಯಿಂದ ಸ್ವಲ್ಪ ಅಧಿಕ ಒಂದು ಮಾಸ(ತಿಂಗಳು)ದ ವಿಷಯ ತಿಳಿಯುತ್ತಾನೆ.

ಹತ್ತನೆಯ ಭೇದದಲ್ಲಿ ಕ್ಷೇತ್ರ ಅಪೇಕ್ಷೆಯಿಂದ ಯಾವ ಜೀವನು ಎರಡೂವರೆ ದ್ವೀಪ ಕ್ಷೇತ್ರದ್ದನ್ನು ತಿಳಿಯುತ್ತಾನೆ ಅದೇ ಜೀವನು ಕಾಲದ ಅಪೇಕ್ಷೆಯಿಂದ ಒಂದು ವರ್ಷ ಕಾಲದ್ದನ್ನು ತಿಳಿಯುತ್ತಾನೆ. ಹನ್ನೊಂದನೆಯ ಭೇದದಲ್ಲಿ ಕ್ಷೇತ್ರದ ಅಪೇಕ್ಷೆಯಿಂದ ಯಾವ ಜೀವನು ಕುಂಡಲಗಿರಿ - ರುಚಕ ದ್ವೀಪವೆಂಬ ಹೆಸರಿನ ಹನ್ನೊಂದನೆಯ ದ್ವೀಪದ ವರೆಗಿನ ಕ್ಷೇತ್ರದ್ದನ್ನು ತಿಳಿಯುತ್ತಾನೆ, ಅದೇ ಜೀವನು ಕಾಲದ ಅಪೇಕ್ಷೆಯಿಂದ ಸ್ವಲ್ಪ ಕಡಿಮೆ ಏಳು-ಎಂಟು ವರ್ಷದ್ದನ್ನು ತಿಳಿಯುತ್ತಾನೆ. ಹನ್ನೆರಡನೆಯ ಭೇದದಲ್ಲಿ ಕ್ಷೇತ್ರ ಅಪೇಕ್ಷೆಯಿಂದ ಯಾವ ಜೀವನು ಸಂಖ್ಯಾತ ದ್ವೀಪ-ಸಮುದ್ರ ಕ್ಷೇತ್ರದ್ದನ್ನು ತಿಳಿಯುತ್ತಾನೆ, ಅದೇ ಜೀವನು ಕಾಲದ ಅಪೇಕ್ಷೆಯಿಂದ ಸಂಖ್ಯಾತ ವರ್ಷಕಾಲದ್ದನ್ನು ತಿಳಿಯುತ್ತಾನೆ.

ಹದಿಮೂರನೆಯ ಭೇದದಲ್ಲಿ ಯಾವ ಜೀವನು ಕ್ಷೇತ್ರ ಅಪೇಕ್ಷೆಯಿಂದ ಅಸಂಖ್ಯಾತ ಯೋಜನದದ್ದನ್ನು ತಿಳಿಯುತ್ತಾನೆ, ಅದೇ ಜೀವನು ಅಸಂಖ್ಯಾತ ವರ್ಷಕಾಲ ಸಂಬಂಧವಾಗಿ ಹಿಂದೆ-ಮುಂದೆ ತಿಳಿಯುತ್ತಾನೆ. ಹದಿನಾಲ್ಕನೆಯ ಭೇದದಲ್ಲಿ ಯಾವ ಜೀವನು ಹದಿಮೂರನೆಯದಕ್ಕಿಂತ ಅಸಂಖ್ಯಾತ ಗುಣಿತ ಕ್ಷೇತ್ರದ್ದನ್ನು ತಿಳಿಯುತ್ತಾನೆ, ಅದೇ ಜೀವನು ಕಾಲದ ಅಪೇಕ್ಷೆಯಿಂದ ಹದಿಮೂರನೆಯವನಿಗಿಂತ ಅಸಂಖ್ಯಾತ ಗುಣಿತ ಕಾಲ ಸಂಬಂಧವಾಗಿ ಮುಂದೆ-ಹಿಂದಿನದನ್ನು ತಿಳಿಯುತ್ತಾನೆ. ಇದೇ ಪ್ರಕಾರ ಹದಿನಾಲ್ಕನೆಯದಕ್ಕಿಂತ ಹದಿನೈದನೆಯ, ಹದಿನೈದನೆಯದಕ್ಕಿಂತ ಹದಿನಾರನೆಯ, ಹದಿನಾರನೆಯದಕ್ಕಿಂತ ಹದಿನೇಳನೆಯ, ಹದಿನೇಳನೆಯದಕ್ಕಿಂತ ಹದಿನೆಂಟನೆಯ, ಹದಿನೆಂಟನೆಯದಕ್ಕಿಂತ ಹತ್ತೊಂಭತ್ತನೆಯ - ಹೀಗೆ ಇದು ಪರಸ್ಪರ ಕ್ಷೇತ್ರ-ಕಾಲದ ಅಪೇಕ್ಷೆಯಿಂದ ಅಸಂಖ್ಯಾತ-ಅಸಂಖ್ಯಾತ ಗುಣಿತ ಹೆಚ್ಚುತ್ತದೆಯೆಂದು ತಿಳಿಯುವುದು. ಈ ಪ್ರಕಾರ ಹೆಚ್ಚುತ್ತ ದೇಶಾವಧಿಯ ಅಂತಿಮ ಭೇದದಲ್ಲಿ ಉತ್ಕೃಷ್ಟ ಕ್ಷೇತ್ರವು ಲೋಕಪ್ರಮಾಣವಿದೆ ಮತ್ತು ಕಾಲದ ಅಪೇಕ್ಷೆಯಿಂದ ಒಂದು ಸಮಯ ಕಡಿಮೆ ಒಂದು ಪಲ್ಯಕಾಲ ಸಂಬಂಧವಾಗಿ ಮುಂದೆ-ಹಿಂದೆ ತಿಳಿಯುತ್ತದೆ.

ಈ ಪ್ರಕಾರ ಜಘನ್ಯದಿಂದ ಹಿಡಿದು ಉತ್ಕೃಷ್ಟದವರೆಗೆ ದೇಶಾವಧಿಯ ವಿಷಯವನ್ನು ತ್ರಿಕಾಲ ಸಂಬಂಧವಾಗಿ ಕ್ಷೇತ್ರ-ಕಾಲದ ವಿಷಯ ಪ್ರಮಾಣ ಹೇಳಿದ್ದಾರೆ. ಅದು ತನ್ನ ವಿಷಯಯೋಗ್ಯ ಕ್ಷೇತ್ರ-ಕಾಲದಲ್ಲಿ ಪ್ರವರ್ತಿಸುವ ಪುದ್ಗಲ ಸ್ಕಂಧಗಳ, ಸಂಸಾರೀ ಜೀವಗಳ ಪರ್ಯಾಯ ಬದಲಾಗುವ ರೂಪ ಕ್ರಿಯೆಯನ್ನು ತಿಳಿಯುತ್ತದೆ. ಈ ಮುನ್ನೂರಾ ಮೂವತ್ಮೂರು ಘನ ರಾಜೂ ಲೋಕ ಕ್ಷೇತ್ರದಲ್ಲಿ ಜೀವ-ಅಜೀವದ ಪರ್ಯಾಯಗಳು ಹೇಗೆ-ಹೇಗೆ ಆಗಿವೆ,

ಭವಿಷ್ಯದಲ್ಲಿ ಆಗುವವಿವೆ ಮತ್ತು ಈಗ ಆಗುತ್ತಿವೆ; ಆ ಮೂರು ಕಾಲಸಂಬಂಧವಾಗಿ ತನ್ನ ವಿಷಯ ಪ್ರಮಾಣ ಕ್ಷೇತ್ರ-ಕಾಲವನ್ನು ಯಾವುದು ತಿಳಿಯುತ್ತದೆ, ಅದನ್ನು ದೇಶಾವಧಿಯೆಂದು ಹೇಳುತ್ತಾರೆ.

ಈಗ ಪರಮಾವಧಿಯ ಸಂಕ್ಷಿಪ್ತ ವರ್ಣನೆ ಮಾಡುತ್ತಾರೆ - ಪರಮಾವಧಿಯುಳ್ಳ ಯತಿಗಳು ದೇಶಾವಧಿ ಗಿಂತ ಅಸಂಖ್ಯಾತಗುಣಿತ ದೇಶ-ಕಾಲದ್ದನ್ನು ತಿಳಿಯುತ್ತಾರೆ. ಕ್ಷೇತ್ರ ಅಪೇಕ್ಷೆಯಿಂದ ಅವರು ಇಂಥ ಅಸಂಖ್ಯಾತ ಲೋಕ ಕ್ಷೇತ್ರವನ್ನು ತಿಳಿಯುತ್ತಾರೆ ಮತ್ತು ಕಾಲದ ಅಪೇಕ್ಷೆಯಿಂದ ಅಸಂಖ್ಯಾತ, ಸಾಗರ ಸಂಬಂಧವಾಗಿ ಹಿಂದೆ-ಮುಂದಿನದನ್ನು ತಿಳಿಯುತ್ತಾರೆ.

ಈಗ ಸರ್ವಾವಧಿಯ ಸಂಕ್ಷಿಪ್ತ ವರ್ಣನೆ ಮಾಡುತ್ತಾರೆ-ಸರ್ವಾವಧಿ ಧಾರಕ ಯತಿಗಳು ಪರಮಾವಧಿ ಯಿಂದ ಅಸಂಖ್ಯಾತ ಗುಣಿತ ಕ್ಷೇತ್ರ-ಕಾಲಗಳ ವಿಷಯವನ್ನು ತಿಳಿಯುತ್ತಾರೆ.

ಈ ಪ್ರಕಾರ ಅವಧಿಜ್ಞಾನದ ಮೂರು ಭೇದಗಳನ್ನು ಹೇಳಲಾಗಿದೆ. ಈ ಅವಧಿಯು ಭವಪ್ರತ್ಯಯ ಮತ್ತು ಗುಣಪ್ರತ್ಯಯವೆಂದು ಎರಡು ಪ್ರಕಾರದ್ದಿದೆ. ಯಾವುದು ಗತಿ ಸ್ವಭಾವದಿಂದ ಜನ್ಮಧಾರಣ ಮಾಡುತ್ತಿದ್ದಂತೆಯೇ ಯಾವ ಅವಧಿಜ್ಞಾನವಾಗುತ್ತದೆ ಅದು ಭವಪ್ರತ್ಯಯವಿದೆ. ಅದು ದೇವ-ನಾರಕಿ ಹಾಗೂ ತೀರ್ಥಂಕರರಿಗೆ ಇರುತ್ತದೆ ಮತ್ತು ಯಾವ ಅವಧಿಜ್ಞಾನವು ಬೇಕಾದಲ್ಲಿ ತಪ-ಸಂಯಮದಿಂದ, ಭಗವಂತರ ದರ್ಶನದಿಂದ, ಪರಿಣಾಮಗಳ ವಿಶುದ್ಧಿಯಿಂದ ಪ್ರಗಟವಾಗುತ್ತದೆ ಅದು ಗುಣಪ್ರತ್ಯಯವಿದೆ.

- ಈ ಪ್ರಕಾರ ಅವಧಿಜ್ಞಾನದ ಸಾಮಾನ್ಯ ಸ್ವರೂಪ ತಿಳಿಯುವುದು.

೪ ಈಗ ಮನಃಪರ್ಯಯಜ್ಞಾನದ ಸಾಮಾನ್ಯ ಸ್ವರೂಪ ಹೇಳುತ್ತಾರೆ-

**ಮಣಪಜ್ಜಯಣಾಣಾವಣ್ಣೇ ಖಯೋಪಸಮಜ್ಜಸ್ಸ ಹೋಇ ಸೋ ಜೀವೋ ।**
**ಸೋಮಣಪಜ್ಜಯಕ್ಖು ಪಾವಈ ದೋ ಭೇಯೊ ಹೋಇ ಉಜ್ಜು ವಿಉಲಯಯಿ ॥೪೭॥**

**ಗಾಥಾರ್ಥ :-** ಯಾವ ಜೀವದ ಮನಃಪರ್ಯಯ ಜ್ಞಾನಾವರಣದ ಕ್ಷಯೋಪಶಮವಾಗುತ್ತದೆ ಅವನು ಮನಃಪರ್ಯಾಯ ಜ್ಞಾನವನ್ನು ಪ್ರಾಪ್ತ ಮಾಡಿಕೊಳ್ಳುತ್ತಾನೆ. ಆ ಜ್ಞಾನವು ಋಜುಮತಿ ಮತ್ತು ವಿಪುಲಮತಿಯ ಭೇದದಿಂದ ಎರಡು ಪ್ರಕಾರದ್ದಿದೆ.

**ಭಾವಾರ್ಥ :-** ಯಾವ ಜೀವದ ಮನಃಪರ್ಯಯ ಜ್ಞಾನಾವರಣದ ಕ್ಷಯೋಪಶಮವಾಗುತ್ತದೆ ಅವನಿಗೆ ಪ್ರಗಟವಾಗುವಂಥ ಮನಃಪರ್ಯಾಯ ಜ್ಞಾನವು ಋಜುಮತಿ ಮತ್ತು ವಿಪುಲಮತಿಯೆಂದು ಎರಡು ಪ್ರಕಾರದ್ದಿರುತ್ತದೆ. ಅವುಗಳಲ್ಲಿ ಯಾವುದು ಕುಟಿಲತೆಯಿಂದ ರಹಿತ, ಸರಳ ಮನ, ಸರಳ ವಚನ ಮತ್ತು ಸರಳ ಕಾಯದಿಂದ ಮಾಡಲಾದ ಕಾರ್ಯ, ಮೂರು ಕಾಲಸಂಬಂಧದ ವಿವಿಧ ವಿಕಲ್ಪಗಳನ್ನು ತಿಳಿಯುತ್ತದೆ, ಅದು ಋಜುಮತಿ ಮನಃಪರ್ಯಯ ಜ್ಞಾನವಿದೆ.

ವಿಪುಲಮತಿ ಮನಃಪರ್ಯಯವನ್ನು ಸಂಕ್ಷೇಪದಲ್ಲಿ ಹೇಳುತ್ತಾರೆ - ಯಾವುದು ಸಂಜ್ಞಿಯ ಸರಳ ಮನಸ್ಸು, ಸರಳ ವಚನ, ಸರಳ ಕಾಯದ ಮೂಲಕ ಮಾಡಲಾದ ಸಮಸ್ತ ವಿಕಲ್ಪಗಳನ್ನು ತಿಳಿಯುತ್ತದೆ ಮತ್ತು ಕುಟಿಲ ಮನಸ್ಸು, ಕುಟಿಲ ವಚನ, ಕುಟಿಲ ಕಾಯದ ಮೂಲಕ ಎಲ್ಲ ವಿಕಲ್ಪರೂಪ ಕಾರ್ಯಗಳನ್ನು ತಿಳಿಯುತ್ತದೆ, ಅದು ವಿಪುಲಮತಿ ಮನಃಪರ್ಯಯ ಜ್ಞಾನವಿದೆ.

ಇನ್ನು ಇವುಗಳಲ್ಲಿನ ಋಜುಮತಿಯಂತೂ ಪ್ರತಿಪಾತಿಯಿದೆ, ಉತ್ಪನ್ನವಾಗಿ ನಷ್ಟವೂ ಆಗುತ್ತದೆ. ಯಾವುದು ಉತ್ಪನ್ನವಾದ ಮೇಲೆ ನಷ್ಟವಾಗುತ್ತದೆ ಅದನ್ನು ಪ್ರತಿಪಾತಿಯೆಂದು ಹೇಳುತ್ತಾರೆ. ಭಾವಾರ್ಥವು ಹೀಗಿದೆ,- ಯಾವ

ಯತೀಶ್ವರರಿಗೆ ಋಜುಮತಿಜ್ಞಾನವಾಗುತ್ತದೆ, ಆ ಮುನೀಶ್ವರರು ಒಂದುವೇಳೆ ಪರ್ಯಾಯವನ್ನು ತೊರೆದು ಅಸಂಯಮಿ ದೇವಲೋಕದಲ್ಲಿ ಉತ್ಪನ್ನರಾದರೆ ಈ ಜ್ಞಾನವು ಆ ಎರಡನೆಯ ಪರ್ಯಾಯದಲ್ಲಿ ಹೋಗುವುದಿಲ್ಲ; ಆ ಮುನಿ ಪರ್ಯಾಯದಲ್ಲಿಯೇ ಇರುತ್ತದೆ, ದೇವನಾದ ಮೇಲೆ ನಷ್ಟವಾಗಿ ಹೋಗುತ್ತದೆ ಅದರಿಂದ ಋಜುಮತಿಯು ಪ್ರತಿಪಾತಿಯಿದೆ. ಯಾವ ಯತೀಶ್ವರರಿಗೆ ವಿಪುಲಮತಿ ಜ್ಞಾನವಾಗುತ್ತದೆ, ಅದು ನಷ್ಟವಾಗುವುದಿಲ್ಲ. ಈ ಜ್ಞಾನ ಸಹಿತ ಕೇವಲಜ್ಞಾನವಾಗುತ್ತದೆ ಎಂದರೆ ಕೇವಲಜ್ಞಾನವಾದ ಮೇಲೆ ಅದು ಕೇವಲಜ್ಞಾನದಲ್ಲಿ ಒಂದಾಗಿ ಹೋಗುತ್ತದೆ. ಅದರಿಂದ ಈ ವಿಪುಲಮತಿ ಜ್ಞಾನವು ವಿಶುದ್ಧವಿದೆ. ಚರಮ ಶರೀರಿಗಳಿಗೆ ಆಗುತ್ತದೆ. ಈ ಜ್ಞಾನವಾದ ನಂತರ ಸಂಸಾರ ಪರಿಭ್ರಮಣವಾಗುವುದಿಲ್ಲವೆಂದು ತಿಳಿಯುವುದು.

ಮನಃಪರ್ಯಯಜ್ಞಾನದ ವಿಷಯ-ಈ ಜ್ಞಾನಿಗಳು ಕಾಲದ ಅಪೇಕ್ಷೆಯಿಂದ ಉತ್ಕೃಷ್ಟ ಅಸಂಖ್ಯಾತ ಕಾಲ ಸಮಯದ ವಿಷಯವನ್ನು ತಿಳಿಯುತ್ತಾರೆ ಮತ್ತು ಕ್ಷೇತ್ರದ ಅಪೇಕ್ಷೆಯಿಂದ ನಲವತ್ತೈದು ಲಕ್ಷ ಯೋಜನ ಪ್ರಮಾಣ ಎರಡೂವರೆ ದ್ವೀಪ ಕ್ಷೇತ್ರದ ವಿಷಯ ತಿಳಿಯುತ್ತಾರೆ. ವಿಶೇಷವೆಂದರೆ ಮನುಷ್ಯ ಲೋಕವಂತೂ ದುಂಡಗೆ ಇದೆ ಮತ್ತು ಮನಃಪರ್ಯಯ ಜ್ಞಾನದ ವಿಷಯವು ಚೌಕಾಕಾರವಿರುತ್ತದೆ; ಅದರಿಂದ ಮನುಷ್ಯಲೋಕದ ನಾಲ್ಕೂ ಮೂಲೆಗಳಲ್ಲಿ ಸ್ಥಿತವಿರುವ ದೇವ ಹಾಗೂ ತಿರ್ಯಂಚಗಳ ಮಾನಸಿಕ ವಿಕಲ್ಪಗಳನ್ನೂ ತಿಳಿದುಕೊಳ್ಳುತ್ತಾರೆ. ಈ ಪ್ರಕಾರ ಮನಃಪರ್ಯಯಜ್ಞಾನದ ಉತ್ಕೃಷ್ಟ ವಿಷಯ ತಿಳಿಯುವುದು.

ಈಗ ಕೇವಲಜ್ಞಾನದ ಸಂಕ್ಷಿಪ್ತ ವರ್ಣನೆ ಮಾಡುತ್ತಾರೆ-

**ತಿಕ್ಕಾಲೇ ತಿಯಲೋಯೇ ಸವ್ವಂ ದವ್ವಂ ಜಹಾ ಯ ಪಣ್ಣತ್ತೀ ।**
**ಜಾಣಯ ಕೇವಲಣಾಣಯ ಜುಗಪದ್ದೇಕಂ ಕಾಲಮ್ಹಿಬಿಣ ಖೇದೋ ॥೪೮॥**

**ಗಾಥಾರ್ಥ ః-** ಮೂರುಕಾಲ ಸಂಬಂಧದ ಮೂರು ಲೋಕದಲ್ಲಿ ವರ್ತಿಸುವ ದ್ರವ್ಯಗಳು ಯಾವ ಯಾವ ರೂಪದಿಂದ ಪರಿಣಮಿತವಾಗುತ್ತಲಿವೆ ಅವೆಲ್ಲವನ್ನು ಕೇವಲಜ್ಞಾನಿಗಳು ಆಯಾಸವಿಲ್ಲದೆ ಪ್ರತಿಸಮಯ ಯುಗಪತ್ ತಿಳಿಯುತ್ತಾರೆ.

**ಭಾವಾರ್ಥ ః-** ಸಮಸ್ತ ಜ್ಞಾನಾವರಣ ಕರ್ಮದ ಕ್ಷಯದಿಂದ ಉತ್ಪನ್ನವಾದ ಕೇವಲಜ್ಞಾನವು ಕ್ಷಾಯಿಕ ಜ್ಞಾನವಿದೆ. ಇದು ಪ್ರಗಟವಾದ ಮೇಲೆ ಅನಂತ ಅಲೋಕಾಕಾಶದ ಮಧ್ಯಭಾಗದಲ್ಲಿ ಸ್ಥಿತವಿರುವ ಅಸಂಖ್ಯಾತ ಪ್ರದೇಶರೂಪದ ಲೋಕಾಕಾಶದಲ್ಲಿ ಷಟ್‌ದ್ರವ್ಯಗಳಿಂದ ಮೂರು ಲೋಕದ ರಚನೆಯಾಗಿದೆ, ಅದರಲ್ಲಿ ತ್ರಸನಾಡಿಯಿದೆ. ಅದರಲ್ಲಿ ದೇವ ಮೊದಲಾದ ನಾಲ್ಕು ಗತಿಗಳು ಅನಂತ ಕಾಲದಿಂದ ಧ್ರುವವಿದೆ. ಅವುಗಳಲ್ಲಿ ಅಸ್ಥಿರ ಪರ್ಯಾಯಧಾರಕ ಸಂಸಾರೀ ಜೀವಗಳು ಉತ್ಪನ್ನವಾಗುತ್ತವೆ; ಈ ಲೋಕವು ಆರು ದ್ರವ್ಯಗಳಿಂದ ತುಂಬಿಕೊಂಡಿದೆ. ಅವೆಲ್ಲ ಆರು ದ್ರವ್ಯಗಳು ಯಾವ-ಯಾವ ಪ್ರಕಾರದಿಂದ ಪರಿಣಮಿತವಾಗುತ್ತವೆ, ಅವೆಲ್ಲವನ್ನೂ ಕೇವಲಜ್ಞಾನಿಗಳು ತಿಳಿಯುತ್ತಾರೆ. ಅದನ್ನೇ ವಿಸ್ತಾರದಿಂದ ಇಲ್ಲಿ ಹೇಳುತ್ತಾರೆ.

ಜೀವದ್ರವ್ಯಗಳು ಅನಂತವಿವೆ. ಆ ಅನಂತ ಜೀವಗಳು ಪ್ರತಿಸಮಯ ಯಾವ-ಯಾವ ಪ್ರಕಾರದಿಂದ ರಾಗ-ದ್ವೇಷಭಾವ, ಕ್ರೋಧ, ಮಾನ, ಮಾಯೆ, ಲೋಭಭಾವ, ಹಾಸ್ಯ , ಭಯ, ಶೋಕಾದಿ ಕಷಾಯಗಳ ಅಂಶ ಸಹಿತ ಯಾವ-ಯಾವಾಗ ಪರಿಣಮಿತವಾಗುತ್ತವೆ, ಅವೆಲ್ಲವನ್ನು ಕೇವಲಜ್ಞಾನಿಗಳು ಯುಗಪತ್ ತಿಳಿಯುತ್ತಾರೆ. ಪ್ರತಿಯೊಬ್ಬ ಜೀವನು ಅನಂತಕಾಲದಿಂದ ಸಂಸಾರ-ಭ್ರಮಣ ಮಾಡುತ್ತ ನಾಲ್ಕು ಗತಿಗಳಿಗೆ ಸಂಬಂಧಿಸಿದ ಪ್ರತಿಯೊಂದು ಪರ್ಯಾಯವನ್ನು ಅನಂತ-ಅನಂತಬಾರಿ ಧಾರಣ ಮಾಡಿದ್ದಾನೆ; ಅವುಗಳನ್ನು ಕೇವಲಜ್ಞಾನಿಗಳು ತಿಳಿಯುತ್ತಾರೆ. ಈ

ಜೀವನು ದೇವ ಪರ್ಯಾಯವನ್ನು ಅನಂತಬಾರಿ ಪ್ರಾಪ್ತ ಮಾಡಿಕೊಂಡಿದ್ದಾನೆ; ಆ ದೇವಗತಿಯಲ್ಲಿ ಅನೇಕಾನೇಕ ಭೋಗ ಭೋಗಿಸುತ್ತ ಯಾವ ಶುಭಾಶುಭ ಭಾವಗಳ ರೂಪವಾಗಿ ಪರಿಣಮಿತನಾಗಿದ್ದಾನೆ ಅದನ್ನು ಕೇವಲಿಗಳು ತಿಳಿಯುತ್ತಾರೆ. ಅನಂತಬಾರಿ ಈ ಜೀವನು ಪಾಪಭಾವಗಳಿಂದ ನರಕ ಪರ್ಯಾಯದ ದುಃಖ ಭೋಗಿಸಿದ್ದಾನೆ, ಅಲ್ಲಿ ಯಾವ ಸಂಕ್ಲೇಶ ಭಾವಗಳಾದವು ಅವನ್ನು ಕೇವಲಜ್ಞಾನವು ತಿಳಿಯುತ್ತದೆ. ಏಕೇಂದ್ರಿಯಾದಿಯಿಂದ ಹಿಡಿದು ಪಂಚೇಂದ್ರಿಯದವರೆಗಿನ ಪಶು ಪರ್ಯಾಯವನ್ನು ಅನಂತಬಾರಿ ಪ್ರಾಪ್ತ ಮಾಡಿಕೊಂಡನು ಅವುಗಳಲ್ಲಿ ಆಗಿರುವಂಥ ರಾಗ-ದ್ವೇಷದ ಭಾವಗಳನ್ನು ಕೇವಲಜ್ಞಾನವು ತಿಳಿಯುತ್ತದೆ. ಸಂಸಾರ ಭ್ರಮಣದ ಕಾಲದಲ್ಲಿ ಅನಂತಬಾರಿ ಯಾವ ಮನುಷ್ಯ ಪರ್ಯಾಯವಾಗಿದೆ, ಅದರಲ್ಲಿ ಉತ್ಪನ್ನವಾಗಿರುವ ಎಲ್ಲ ಶುಭಾಶುಭ ಭಾವಗಳನ್ನು ಕೇವಲಜ್ಞಾನಿಗಳು ತಿಳಿಯುತ್ತಾರೆ.

ನಾಲ್ಕು ಗತಿಗಳಲ್ಲಿ ಸುತ್ತುವ ಸಮಯದಲ್ಲಿ ಅನೇಕ-ಅನೇಕ ಪರ್ಯಾಯರೂಪದಿಂದ ಯಾವ ಪುದ್ಗಲ ಸ್ಕಂಧಗಳು ಪರಿಣಮಿತವಾಗಿವೆ, ಅವೆಲ್ಲವನ್ನೂ ಕೇವಲಜ್ಞಾನವು ತಿಳಿಯುತ್ತದೆ. ಈಗ ವರ್ತಮಾನ ಕಾಲದಲ್ಲಿಯೂ ನಾಲ್ಕು ಪ್ರಕಾರದ ದೇವ, ಎಲ್ಲ ಮನುಷ್ಯ, ಪಶು, ನಾರಕಿರೂಪ ನಾಲ್ಕು ಗತಿಯ ಜೀವಗಳು ಸುಖ-ದುಃಖರೂಪ ಪ್ರವರ್ತಿಸುತ್ತಿವೆ. ಅದೆಲ್ಲವನ್ನು ಕೇವಲಿಗಳು ತಿಳಿಯುತ್ತಾರೆ. ಪುದ್ಗಲ ಸ್ಕಂಧಗಳು ಕೂಡ ಯಾವ-ಯಾವ ಸ್ಪರ್ಶ, ರಸ, ಗಂಧ, ವರ್ಣರೂಪವಾಗಿ ಪರಿಣಮಿತವಾಗುತ್ತಿವೆ; ಅವನ್ನು ಕೇವಲಿಗಳು ತಿಳಿಯುತ್ತಾರೆ.

ಭವಿಷ್ಯದ ಅನಂತಕಾಲದಲ್ಲಿ ಒಂದೊಂದು ಜೀವವು ಮತ್ತೆಯೂ ಅನಂತದೇವ ಪರ್ಯಾಯ ಧಾರಣ ಮಾಡುವುದು. ಈ ಪ್ರಕಾರ ಅನಂತ ಜೀವಗಳ ಕುರಿತಾಗಿ ಅನಾಗತ ಅನಂತ ಪರ್ಯಾಯಗಳಲ್ಲಿ ಪ್ರತಿಸಮಯ ಆಗುವಂಥ ಕ್ರೋಧ-ಮಾನಾದಿ ಕಷಾಯಗಳು ಹಾಗೂ ಅನಂತ ಜೀವಗಳು ಯಾವ-ಯಾವ ಪ್ರಕಾರದಿಂದ ರಾಗ-ದ್ವೇಷ ಭಾವರೂಪ ಪರಿಣಮಿತವಾಗುವವು; ಅವೆಲ್ಲವನ್ನು ಕೇವಲಜ್ಞಾನವು ಮೊದಲಿನಿಂದಲೇ ತಿಳಿಯುತ್ತದೆ. ಅನಾಗತ ಅನಂತ ಪರ್ಯಾಯಗಳಲ್ಲಿ ಅನಂತಕಾಲ ಸಂಬಂಧದ ದೇವಗಳ ಪರ್ಯಾಯರೂಪ ಪರಿಣಮಿತವಾಗುವಂಥ ಪುದ್ಗಲ ಸ್ಕಂಧಗಳನ್ನು ಕೇವಲಜ್ಞಾನವು ಮೊದಲಿನಿಂದಲೇ ತಿಳಿಯುತ್ತದೆ. ಇದೇ ಪ್ರಕಾರ ಅತೀತ, ಅನಾಗತ ಮತ್ತು ವರ್ತಮಾನ ಇವು ಮೂರುಕಾಲ ಸಂಬಂಧದ ದೇವಗಳ ಭಾವ-ವಿಕಲ್ಪಗಳನ್ನು ಮತ್ತು ಆ ದೇವ ಪರ್ಯಾಯರೂಪ ಪರಿಣಮಿತವಾಗುವ ಪ್ರತಿಯೊಂದು ಸಮಯವರ್ತಿ ಅನಂತ ಪುದ್ಗಲ ಪರಮಾಣುಗಳನ್ನು ಇವೆಲ್ಲವನ್ನೂ ಕೇವಲಜ್ಞಾನಿಗಳು ಯುಗಪತ್ ಪ್ರತಿಸಮಯ ತಿಳಿಯುತ್ತಾರೆ.

ಇದೇ ರೀತಿ ಪ್ರತಿಯೊಂದು ಜೀವದ ಅತೀತ-ಅನಾಗತ ಕಾಲದಲ್ಲಿ ಆಗಿರುವ ಮತ್ತು ಆಗಲಿರುವ ಅನಂತಾನಂತ ಮನುಷ್ಯ ಪರ್ಯಾಯ, ಅವುಗಳಲ್ಲಿ ನೀಚ-ಉಚ್ಚಕುಲ; ಅವುಗಳಲ್ಲಿ ಭಿಲ್ಲ ಮೊದಲಾದ ನೀಚ ಕುಲಗಳ ಹಾಗೂ ಕ್ಷತ್ರಿಯ-ವೈಶ್ಯ ಮೊದಲಾದ ಉಚ್ಚಕುಲಗಳ ಅನಂತ ಪರ್ಯಾಯಗಳು; ಅವುಗಳಲ್ಲಿ ಆಗುವಂಥ ಪ್ರತಿಸಮಯವರ್ತಿ ಇಷ್ಟ ವಿಯೋಗ, ಅನಿಷ್ಟ ಸಂಯೋಗ, ಪೀಡೆಯ ಚಿಂತೆ, ನಿದಾನಬಂಧಾದಿ ಆರ್ತಭಾವ, ನಾಲ್ಕು ಭೇದಮಯ ರೌದ್ರಭಾವ, ಇವುಗಳ ನಿಮಿತ್ತ ಪಡೆದು ಉತ್ಪನ್ನವಾಗುವ ಕ್ರೋಧ-ಮಾನಾದಿ ರಾಗ-ದ್ವೇಷ ಭಾವಗಳ ರೂಪ ಪರಿಣಮನ-ಇವೆಲ್ಲವನ್ನು ಕೇವಲಜ್ಞಾನಿಗಳು ತಿಳಿಯುತ್ತಾರೆ. ಈ ಅನಂತ ಮನುಷ್ಯ ಪರ್ಯಾಯಗಳಲ್ಲಿ ಯಾವ-ಯಾವ ರೂಪ, ಸ್ಪರ್ಶ, ರಸ, ಗಂಧಾದಿ ಪರ್ಯಾಯರೂಪ ಪರಿಣಮಿತ ಸ್ಕಂಧರೂಪ ಪರಮಾಣುಗಳ ಪರಿಣಮನ-ಅವೆಲ್ಲವನ್ನು ಕೇವಲಿಗಳು ತಿಳಿಯುತ್ತಾರೆ.

ವರ್ತಮಾನದಲ್ಲಿ ಯಾವೆಲ್ಲ ಸಂಖ್ಯಾತ ಮನುಷ್ಯರ ಉಚ್ಚ-ನೀಚ ಕುಲ, ಅವುಗಳಲ್ಲಿ ಯಾವ-ಯಾವ ಪ್ರಕಾರದ ಪ್ರತಿ ಸಮಯ ವರ್ತಿಸುವ ಕ್ರೋಧಾದಿ ಕಷಾಯ, ರಾಗ-ದ್ವೇಷ ಭಾವಗಳ ಪರಿಣಮನ-ಅವೆಲ್ಲವನ್ನು ಕೇವಲ ಜ್ಞಾನಿಗಳು ತಿಳಿಯುತ್ತಾರೆ. ಇವೇ ವರ್ತಮಾನ ಮನುಷ್ಯ ಪರ್ಯಾಯರೂಪ ಪರಿಣಮಿತ ಎಲ್ಲ ಪುದ್ಗಲ ಸ್ಕಂಧಗಳನ್ನು ಕೇವಲಜ್ಞಾನಿಗಳು ತಿಳಿಯುತ್ತಾರೆ. ಅನಂತ ಅನಾಗತ ಕಾಲದಲ್ಲಿ ಒಂದೊಂದು ಜೀವವು ಅನಂತ-ಅನಂತ

ಮನುಷ್ಯ ಪರ್ಯಾಯಗಳನ್ನು ಧಾರಣ ಮಾಡುವುದು, ಅವುಗಳಲ್ಲಿ ಯಾವ-ಯಾವ ರಾಗಾದಿ ಭಾವ-ವಿಕಲ್ಪಗಳಾಗುವವು ಅವೆಲ್ಲವನ್ನು ಕೇವಲಜ್ಞಾನಿಗಳು ತಿಳಿಯುತ್ತಾರೆ. ಅನಾಗತ ಕಾಲದಲ್ಲಿ ಮನುಷ್ಯ ಪರ್ಯಾಯರೂಪದಿಂದ ಯಾವ ಪುದ್ಗಲ ಸ್ಕಂಧಗಳು ಪರಿಣಮಿತವಾಗುವವು; ಅವೆಲ್ಲವನ್ನು ಕೇವಲಜ್ಞಾನಿಗಳು ತಿಳಿಯುತ್ತಾರೆ - ಈ ಪ್ರಕಾರ ಹೇಳಲಾಗಿರುವ ಅತೀತ, ಅನಾಗತ, ವರ್ತಮಾನಕಾಲ ಸಂಬಂಧದ ಮನುಷ್ಯ ಪರ್ಯಾಯಗಳಲ್ಲಿ ಅನೇಕ ಭಾವರೂಪ ಪರಿಣಮನ ಎಲ್ಲವನ್ನು ಕೇವಲಜ್ಞಾನಿಗಳು ಯುಗಪತ್ ತಿಳಿಯುತ್ತಾರೆ.

ಈ ಪ್ರಕಾರ ಪ್ರತಿಯೊಂದು ಜೀವವು ಅನಂತ-ಅನಂತ ನಾರಕೀ ಪರ್ಯಾಯಗಳನ್ನು ಧಾರಣ ಮಾಡಿ ಬಂದಿದೆ, ವರ್ತಮಾನದಲ್ಲಿ ಧಾರಣ ಮಾಡುತ್ತಿದೆ ಮುಂದೆಯೂ ಧಾರಣ ಮಾಡುವುದು - ಈ ಪ್ರಕಾರ ಮೂರು ಕಾಲ ಸಂಬಂಧದ ನರಕ ಪರ್ಯಾಯಗಳಲ್ಲಿ ಯಾವ ಭಾವ-ವಿಕಲ್ಪಗಳಾದವು ಅವೆಲ್ಲವನ್ನು ಕೇವಲಜ್ಞಾನಿಗಳು ತಿಳಿಯುತ್ತಾರೆ.

ಇದೇ ಪ್ರಕಾರ ಅತೀತ, ಅನಾಗತ, ವರ್ತಮಾನ ಕಾಲದಲ್ಲಿ ಪ್ರತಿಯೊಂದು ಜೀವವು ಅನಂತ ತಿರ್ಯಂಚ ಪರ್ಯಾಯಗಳನ್ನು - ಅದರಲ್ಲಿ ಏಕೇಂದ್ರಿಯ, ದ್ವೀಂದ್ರಿಯ, ತ್ರೀಂದ್ರಿಯ, ಚತುರೇಂದ್ರಿಯ, ಪಂಚೇಂದ್ರಿಯ; ಪೃಥ್ವಿ, ಜಲ, ಅಗ್ನಿ, ವಾಯು, ವನಸ್ಪತಿ, ಇತರ ನಿಗೋದ, ನಿತ್ಯನಿಗೋದ - ಅವುಗಳ ಸೂಕ್ಷ್ಮ ಬಾದರರೂಪದ ಪರ್ಯಾಯಗಳು, ಪ್ರತ್ಯೇಕ ವನಸ್ಪತಿ-ಸಪ್ರತಿಷ್ಠಿತ - ಅಪ್ರತಿಷ್ಠಿತ ಇತ್ಯಾದಿ ಹಾಗೂ ಅನೇಕ ಭೇದಮಯವಾದ ಪಶುಪರ್ಯಾಯ ಮತ್ತು ಶ್ವಾಸದ ಹದಿನೆಂಟನೆಯ ಒಂದು ಭಾಗ ಆಯುವಿನ ಧಾರಕ ಸಂಜ್ಞೀ- ಅಸಂಜ್ಞೀ ಲಬ್ಧ ಪರ್ಯಾಪ್ತ ಜೀವದ ಒಂದು ಅಂತರ್ಮುಹೂರ್ತದಲ್ಲಿ ಅರವತ್ತಾರು ಸಾವಿರದ ಮೂರು ನೂರಾ ಮೂವತ್ತಾರು ಬಾರಿ ಜನ್ಮ-ಮರಣರೂಪ ಪರ್ಯಾಯಗಳು - ಈ ಪರ್ಯಾಯಗಳನ್ನು ಪ್ರತಿಯೊಂದು ಜೀವವು ಅನಂತ-ಅನಂತ ಬಾರಿ ಧಾರಣ ಮಾಡಿ ಬಂದಿದೆ. ಅವುಗಳಲ್ಲಿ ಆಗಿರುವಂಥ ಸಮಸ್ತ ಭಾವ-ವಿಕಲ್ಪಗಳನ್ನೆಲ್ಲ ಕೇವಲಜ್ಞಾನಿಗಳು ತಿಳಿಯುತ್ತಾರೆ.

ಅನಂತ ಕಾಲಸಂಬಂಧದ ಈ ಪರ್ಯಾಯಗಳರೂಪ ಪರಿಣಮಿತವಾಗಿರುವ ಪುದ್ಗಲಸ್ಕಂಧಗಳನ್ನು ಕೇವಲಿಗಳು ತಿಳಿಯುತ್ತಾರೆ.

ಈ ಪ್ರಕಾರ ನಾಲ್ಕು ಗತಿಗಳಿಗೆ ಸಂಬಂಧಿಸಿದ ಜೀವಗಳ ಪರಿಣಾಮ ಮತ್ತು ಆ ಅನಂತ ಜೀವಗಳ ಭಾವಗಳ ನಿಮಿತ್ತ ಪಡೆದು ಜ್ಞಾನಾವರಣಾದಿ ಪುದ್ಗಲಕರ್ಮರೂಪ ಪರಿಣಮಿತವಾದ ಪುದ್ಗಲ ಸ್ಕಂಧಗಳನ್ನು ಕೇವಲಿಗಳು ತಿಳಿಯುತ್ತಾರೆ. ಅನೇಕ ರೂಪವಾಗುತ್ತಿರುವ ಪುದ್ಗಲದ ಮುತ್ತು, ರತ್ನ, ಮಾಣಿಕ್ಯ ಪರುಷ, ಮಣ್ಣು ಬೂದಿ, ಪಾಷಾಣ, ಸಪ್ತಧಾತು ಮೊದಲಾದವುಗಳ ರೂಪದಿಂದ ಪರಿಣಮಿತ ಎಲ್ಲ ಪುದ್ಗಲ ಸ್ಕಂಧಗಳನ್ನು ಕೇವಲಜ್ಞಾನವು ತಿಳಿಯುತ್ತದೆ.

ತ್ರಿಕಾಲ ಸಂಬಂಧದ ಧರ್ಮದ್ರವ್ಯ, ಅಧರ್ಮದ್ರವ್ಯ, ಕಾಲದ್ರವ್ಯ, ಆಕಾಶದ್ರವ್ಯ - ಈ ಅಮೂರ್ತಿಕ ದ್ರವ್ಯಗಳ ಷಟ್‌ಗುಣ ಹಾನಿ-ವೃದ್ಧಿಮಯ ಪರಿಣಮನರೂಪದ ಅಂಶಗಳನ್ನು ಕೇವಲಜ್ಞಾನಿಗಳು ತಿಳಿಯುತ್ತಾರೆ. ಇದೇ ಪ್ರಕಾರ ತ್ರಿಕಾಲ ಸಂಬಂಧದ ಅಲೋಕಸ್ಥಿತ ಆಕಾಶದ ಮತ್ತು ಲೋಕಸ್ಥಿತ ಷಟ್‌ದ್ರವ್ಯಗಳ ಸಂಪೂರ್ಣ ಪರಿಣಮನವನ್ನು ಕೇವಲಜ್ಞಾನವು ತಿಳಿಯುತ್ತದೆ.

ಈ ಕೇವಲಜ್ಞಾನವಾಗುತ್ತಿದ್ದಂತೆಯೇ ಅನಂತಜ್ಞಾನ, ಅನಂತದರ್ಶನ, ಅನಂತಸುಖ ಮತ್ತು ಅನಂತವೀರ್ಯರೂಪದ ಅನಂತ ಚತುಷ್ಟಯವು ಒಟ್ಟಿಗೆ ಪ್ರಗಟವಾಗುತ್ತದೆ. ಅಲ್ಲಿ ಜ್ಞಾನಾವರಣ ಕರ್ಮದ ಕ್ಷಯದಿಂದ ಅನಂತ ಕೇವಲಜ್ಞಾನವಾಗುತ್ತದೆ. ಸರ್ವದರ್ಶನಾವರಣದ ನಾಶವಾದ ಮೇಲೆ ಕೇವಲದರ್ಶನವಾಗುತ್ತದೆ.

ಮೋಹಕರ್ಮದ ಕ್ಷಯವಾಗುವುದರಿಂದ ಕ್ಷಾಯಿಕ ಸಮ್ಯಕ್ತ್ವ ಹಾಗೂ ಯಥಾಖ್ಯಾತ ಚಾರಿತ್ರರೂಪ ನಿರಾಕುಲ ಭಾವಮಯ ಅನಂತಸುಖವಾಗುತ್ತದೆ. ಅಂತರಾಯ ಕರ್ಮದ ಪೂರ್ಣ ಅಭಾವದಿಂದ ಅನಂತವೀರ್ಯವಾಗುತ್ತದೆ.

ಕೇವಲಜ್ಞಾನ, ಕೇವಲದರ್ಶನವಾಗುವುದರಿಂದ ತ್ರಿಕಾಲ ಸಂಬಂಧದ ಪದಾರ್ಥಗಳನ್ನು ತಿಳಿಯುವುದು ಮತ್ತು ನೋಡುವುದಾಗುತ್ತದೆ. ಅನಂತ ವೀರ್ಯವಾಗುವುದರಿಂದ ಅನಂತ ಪದಾರ್ಥಗಳನ್ನು ತಿಳಿಯುವ-ನೋಡುವ ಅನಂತ ಶಕ್ತಿಯು ಪ್ರಗಟವಾಗುತ್ತದೆ. ಒಂದುವೇಳೆ ಅನಂತ ಶಕ್ತಿಯು ಇಲ್ಲದೇ ಹೋದರೆ ಅನಂತ ಪದಾರ್ಥಗಳನ್ನು ತಿಳಿಯುವ-ನೋಡುವಲ್ಲಿ ಖೇದವಾಗುತ್ತಿತ್ತು ಒಂದು ವೇಳೆ ಮೋಹ ಕರ್ಮದ ಕ್ಷಯವಾಗದೇ ಇರುತ್ತಿದ್ದರೆ ಪರಪದಾರ್ಥಗಳಲ್ಲಿ ರಾಗ-ದ್ವೇಷವಾಗುತ್ತಿತ್ತು, ಅದರಿಂದ ಪರಿಪೂರ್ಣ ಸುಖಿಯಾಗುವುದು ಸಾಧ್ಯವಿರಲಿಲ್ಲ - ಈ ಪ್ರಕಾರ ಕೇವಲಜ್ಞಾನ-ದರ್ಶನದಿಂದಂತೂ ಮೂರ್ತಿಕ-ಅಮೂರ್ತಿಕ ಪದಾರ್ಥಗಳನ್ನು ತಿಳಿಯುತ್ತಾರೆ- ನೋಡುತ್ತಾರೆ ಮತ್ತು ಅನಂತ ವೀರ್ಯವಿರುವುದರಿಂದ ಎಲ್ಲ ಪದಾರ್ಥಗಳನ್ನು ತಿಳಿಯುತ್ತ-ನೋಡುತ್ತಿದ್ದರೂ ಖೇದ-ಆಯಾಸವಾಗುವುದಿಲ್ಲ-ಈ ಪ್ರಕಾರ ಅನಂತ ಚತುಷ್ಟಯ ಸಹಿತ ಕೇವಲಜ್ಞಾನದಧಾರಕರಾದ ಸಯೋಗ ಕೇವಲಿಗಳು ಅತೀಂದ್ರಿಯ ಸುಖ ಭೋಗಿಸುತ್ತ ವಿರಾಜಮಾನರಿದ್ದಾರೆ.

ಸಂಸಾರದಶೆಯಲ್ಲಿ ತ್ರಿಕಾಲ ಸಂಬಂಧದ ಅನಂತ ಅಹಮಿಂದ್ರದೇವ, ಇಂದ್ರ, ಸಾಮಾನಿಕ, ನಾಲ್ಕು ಪ್ರಕಾರದ ದೇವ, ಅನಂತ ಷಟ್ಖಂಡಾಧಿಪತಿ ಚಕ್ರವರ್ತಿ, ಕಾಮದೇವ, ಅನಂತ ನಾರಾಯಣ-ಪ್ರತಿನಾರಾಯಣ, ಬಲಭದ್ರ ಅನಂತ ಮಂಡಲೇಶ್ವರ ದೊರೆ ಮೊದಲಾದವರು, ಬೇರೆಯೂ ಕೂಡ ಅನೇಕ ಅತಿಶಯ ಸಹಿತ ಪುಣ್ಯದ ಧಾರಕ ಪುರುಷ ವಿದ್ಯಾಧರರು - ಇತ್ಯಾದಿ ಇವರೆಲ್ಲರ ಮೂರುಕಾಲ ಸಂಬಂಧದ ಇಂದ್ರಿಯ ಸುಖವನ್ನು ಏಕತ್ರಗೊಳಿಸಿದರೂ ಕೂಡ ಅದು ಕೇವಲಜ್ಞಾನದ ಅನಂತದ ಒಂದು ಭಾಗವು ಕೂಡ ಆಗುವುದಿಲ್ಲ. ಅಂಥ ಸುಖವು ಕೇವಲಜ್ಞಾನವಾದ ಮೇಲೆ ಜೀವನಿಗೆ ಆಗುತ್ತದೆ.

ಸಾಂಸಾರಿಕ ಸುಖವಂತೂ ಹೇಗೆ ಯಾವುದೋ ನಗರದ ದೊರೆಯು ಯಾವನೋ ವೈರಿ ಅರ್ಥಾತ್ ಶತ್ರುವಿನ ಸೆರೆಮನೆಯಲ್ಲಿ ಬಿದ್ದುಕೊಂಡಿದ್ದಾನೆ. ಅವನು ಎಲ್ಲಿದ್ದಾನೆಯೋ ಅಲ್ಲಿ ಧನ, ಸಂಪತ್ತು ಬಹಳಷ್ಟು ಇದೆ; ಆಹಾರ-ಪಾನೀಯ, ವಸ್ತ್ರ, ಆಭೂಷಣಗಳನ್ನು ಕೂಡ ಮನೋವಾಂಛಿತ ಧರಿಸುತ್ತಾನೆ, ಸ್ವಾದಿಷ್ಟ ಭೋಜನ ಮಾಡುತ್ತಾನೆ, ಇಂದ್ರಿಯ ಸುಖದಲ್ಲಿ ಯಾವ ಕೊರತೆಯೂ ಇಲ್ಲ. ಆದಾಗ್ಯೂ ಸೆರೆಮನೆಯಲ್ಲಿ ಬಿದ್ದುಕೊಂಡಿರುವುದರಿಂದ ಮಹಾ ದುಃಖಿಯಾಗಿಯೇ ಇರುತ್ತಾನೆ. ಅವನು ಅಲ್ಲಿ ಇಲ್ಲದೇ ಹೋಗಿದ್ದರೆ ಸ್ವೇಚ್ಛಾಪೂರ್ವಕ ರಾಜ್ಯ ಮಾಡುತ್ತ ಸುಖಿಯಾಗಿರುತ್ತಿದ್ದನು.

ಇದೇ ಪ್ರಕಾರ ದೇವಾದಿ ಸಂಸಾರೀ ಜೀವಗಳು ಮೋಹರಾಜನ ಸೆರೆಯಲ್ಲಿವೆ. ಅಲ್ಲಿ ಶುಭ ಕರ್ಮೋದಯದಿಂದ ಇಂದ್ರಿಯ ಜನಿತ ಸುಖವಂತೂ ಇದೆ; ಆದರೆ ನಿರ್ಬಂಧ ಸುಖವಿಲ್ಲ. ಕೇವಲಜ್ಞಾನಿಯ ಸುಖವು ಸ್ವಚ್ಛಂದ ಆಚರಣೆ ಮಾಡುವಂಥ ದೊರೆಯ ಸಮಾನ ನಿರ್ಬಂಧ ಸುಖವಿದೆ. ಎಂದರೆ ಕೇವಲಿಗಳ ಸುಖವು ಅಪಾರ-ಅನಂತವಿದೆ. ಇಂಥ ಕೇವಲಜ್ಞಾನಸಹಿತ ಭಗವಂತರಿಗೆ ನಮ್ಮ ನಮಸ್ಕಾರವಿರಲಿ...

ಈ ಪ್ರಕಾರ ಶ್ರೀ ಸುದೃಷ್ಟಿತರಂಗಿಣಿಯೆಂಬ ಹೆಸರಿನ ಗ್ರಂಥದಲ್ಲಿ ಅವಧಿ, ಮನಃಪರ್ಯಯ, ಕೇವಲಜ್ಞಾನದ ವರ್ಣನೆ ಮಾಡುವಂಥ ಇಪ್ಪತ್ತನೆಯ ಪರ್ವವು ಪೂರ್ಣವಾಯಿತು.

★★★★★

## ೨೧ : ಇಪ್ಪತ್ತೊಂದನೆಯ ಪರ್ವ

## ಜೀವನೋಪಯೋಗಿ ಜ್ಞೇಯ, ಹೇಯ, ಉಪಾದೇಯ

ಈಗ ಮುತ್ತುಗಳ ಮಾಲೆಯ ಸಮಾನವಿರುವ ಈ ಮನುಷ್ಯ ಆಯುವಿನ ದಿನಗಳನ್ನು ಮುಗ್ಧ ಜೀವನು ವ್ಯರ್ಥವಾಗಿ ಕಳೆದು ಬಿಡುತ್ತಾನೆ. ನಷ್ಟ ಮಾಡಿ ಬಿಡುತ್ತಾನೆ; ಇದನ್ನು ದೃಷ್ಟಾಂತಪೂರ್ವಕ ತೋರಿಸಿಕೊಡುತ್ತಾರೆ-

**ಮುಕ್ತಾದಾಮಂ ತಗ ಕಜ್ಜಯ, ಭಂಜಯ ಮೂಢಾಣಾಣ ರಹಿಯಾ ಜೇ ।**

**ಇಮ ಅಖಿಫಲ ಸುಹ ಲುಹದೋ ಭಂಜಯ ನರೋ ಆಯುದಿಣಮುತ್ತಫಲಂ ॥೪೯॥**

**ಗಾಥಾರ್ಥ :-** ಯಾವ ಪ್ರಕಾರ ಯಾವನೋ ಮೂಢ ಅಜ್ಞಾನೀ ಮನುಷ್ಯನು ದಾರದ ಸಲುವಾಗಿ ಮುತ್ತುಗಳ ಮಾಲೆಯನ್ನು ಹರಿದು ಬಿಡುತ್ತಾನೆ ಅದೇ ಪ್ರಕಾರ ಇಂದ್ರಿಯ ಸುಖದ ಲೋಭಿಯು ಮನುಷ್ಯ ಆಯುರೂಪದ ಮುತ್ತುಗಳ ಮಾಲೆಯನ್ನು ನಷ್ಟಗೊಳಿಸುತ್ತಿದ್ದಾನೆ.

**ಭಾವಾರ್ಥ :-** ಹೇಗೆ ಯಾವನೋ ಮೂರ್ಖನು ಹಳೆಯದಾದ -ಕರಗಿ ಜೀರ್ಣವಾಗಿರುವ ವಸ್ತ್ರವು ಹರಿದು ಹೋಗಿರುವುದನ್ನು ಕಂಡು ಅದನ್ನು ಹೊಲೆಯುವ ಸಲುವಾಗಿ ದಾರವನ್ನು ಹುಡುಕುತ್ತಿದ್ದನು, ದಾರವು ದೊರಕದಿದ್ದಾಗ ತನ್ನ ಕೊರಳಲ್ಲಿ ಧರಿಸಿರುವ ಮಹಾಮನೋಹರ ಮುತ್ತುಗಳ ಮಾಲೆಯನ್ನು ಕಂಡು 'ಈ ವಸ್ತ್ರವನ್ನು ಹೊಲೆಯುವ ಸಲುವಾಗಿ ದಾರವಂತೂ ನನ್ನ ಮುತ್ತಿನ ಮಾಲೆಯಲ್ಲಿಯೇ ಇದೆ' ಎಂದು ವಿಚಾರ ಮಾಡುತ್ತಾನೆ. ಕೂಡಲೆ ದಾರದ ಸಲುವಾಗಿ ಆ ಮೂರ್ಖನು ಮುತ್ತಿನ ಮಾಲೆಯನ್ನು ಹರಿದು ದಾರವನ್ನು ತಗೆದು ಜೀರ್ಣವಸ್ತ್ರವನ್ನು ಹೊಲೆಯುತ್ತಾನೆ. ದಾರವಿಲ್ಲದೆ ಅವೆಲ್ಲ ಮುತ್ತುಗಳು ಹರಡಿ ಹೋದವು. ಇಲ್ಲಿ ಅವನ ಮೂರ್ಖತೆಯನ್ನಾದರೂ ನೋಡಿರಿ, ಜೀರ್ಣವಸ್ತ್ರದ ಸಲುವಾಗಿ ಮುತ್ತುಗಳ ಮಾಲೆಯನ್ನು ವ್ಯರ್ಥ ಮಾಡಿದನು - ಇಂಥ ಮನುಷ್ಯನನ್ನು ಮಹಾಮೂರ್ಖನೆಂದು ತಿಳಿಯುವುದು.

ಅದೇ ಪ್ರಕಾರ ಯಾವುದು ಅಲ್ಲಲ್ಲಿ ಹರಿಯುತ್ತಿದೆ, ಕೊಳೆತು-ಕರಗಿದೆ, ಯಾವುದನ್ನು ಇಟ್ಟುಕೊಳ್ಳುವಲ್ಲಿ ಲಜ್ಜೆಯಾಗುತ್ತಿದೆ, ಯಾವುದು ಎಸೆದು ಬಿಡಲು ಯೋಗ್ಯವಿದೆ, ತ್ಯಾಗ ಮಾಡಲು ಯೋಗ್ಯವಿದೆ; ಅಂಥ ವಿನಾಶ ಶೀಲವು ಆಕುಲತೆಯಿಂದ ಕೂಡಿರುವಂಥದು ಆಗಿರುವ ಇಂದ್ರಿಯ ಸುಖರೂಪದ ಹಳೆಯ ವಸ್ತ್ರವನ್ನು ಬಹಳಷ್ಟು ದಿವಸಗಳವರೆಗೆ ಸ್ಥಿರವಾಗಿಟ್ಟುಕೊಳ್ಳುವ ಸಲುವಾಗಿ ಮತ್ತು ಅದರಿಂದ ತನ್ನ ಶೋಭೆಯೆಂದು ತಿಳಿದು ಸ್ವಯಂ ಜ್ಞಾನದ ಮೂಢತೆಯಿಂದ ಇಂಥ ಗ್ಲಾನಿಕಾರಕ ಇಂದ್ರಿಯ ಸುಖರೂಪದ ಬಟ್ಟೆಯನ್ನು ಹೊಲೆಯುವ ಸಲುವಾಗಿ ತನ್ನ ಮನುಷ್ಯ ಆಯುರೂಪದ ಮಾಲೆಯನ್ನು ಹರಿದು, ಅದರ ದಿವಸ-ಗಳಿಗೆಯ ರೂಪದ ದಾರವನ್ನು ಕತ್ತರಿಸಿ, ವಿಷಯಸುಖ-ಕಷಾಯರೂಪದ ವಸ್ತ್ರವನ್ನು ಶಾಶ್ವತವಾಗಿಟ್ಟುಕೊಳ್ಳುವ ಸಲುವಾಗಿ ಹೊಲೆಯ ತೊಡಗಿದ್ದಾನೆ ಮತ್ತು ಮನುಷ್ಯರೂಪದ ಮುತ್ತುಗಳ ಮಾಲೆಯನ್ನು ಶೋಭೆಯೆಂದು ತಿಳಿಯಲಿಲ್ಲ; ಅದರಿಂದ ಅವನು ಆಯುವಿನ ಸಮಯರೂಪದ ಮುತ್ತುಗಳನ್ನು ವ್ಯರ್ಥವಾಗಿ ಕಳೆಯುತ್ತಿದ್ದಾನೆ. ಅವನ ಈ ಅಪರಾಧದ ಸಲುವಾಗಿ ಏನೆಂದು ಹೇಳುವುದು ? ಈ ಮನುಷ್ಯ ಆಯುವು ಪುನಃ ಪುನಃ ಎಲ್ಲಿ ಸಿಗುತ್ತದೆ ? ವಿಷಯ-ಭೋಗಗಳಂತೂ ಪ್ರತಿಯೊಂದು ಗತಿಯಲ್ಲಿ ಅನೇಕಾನೇಕ ಬಾರಿ ದೊರಕಿವೆ, ಮೊದಲು ಕೂಡ ಭೋಗಿಸಲಾಗಿದೆ. ಆದುದರಿಂದ ಯಾರು ಮನುಷ್ಯಾದಿರೂಪದ ಮುತ್ತುಗಳ ಮಾಲೆಯನ್ನು ಹರಿದು, ಅದರ ದಿನಗಳ ರೂಪದ ದಾರವನ್ನು ತಗೆದುಕೊಂಡು ವಿಷಯ-ಕಷಾಯರೂಪದ ವಸ್ತ್ರವನ್ನು ಹೊಲೆದು ಇಟ್ಟುಕೊಳ್ಳುವಲ್ಲಿ ಸುಖ ಮನ್ನಿಸುತ್ತಾರೆ, ಅವರ ಜ್ಞಾನದ ಹೀನತೆಯನ್ನು ಎಲ್ಲಿಯವರೆಗೆಂದು ಹೇಳುವುದು ?

ಇದಂತೂ ಹೇಗೆ ಯಾವನೋ ಸುಖದ ಸಲುವಾಗಿ ಸುತ್ತುತ್ತ ಸುತ್ತುತ್ತ ಜ್ಞಾನದರಿದ್ರ ಮುಗ್ಧ ಮನುಷ್ಯ ಜೀವನು ಮನೋವಾಂಛಿತ ಸುಖವನ್ನು ಕೊಡುವಂಥ ಮನುಷ್ಯ ಪರ್ಯಾಯರೂಪದ ಚಿಂತಾಮಣಿ ರತ್ನವನ್ನು

ಪ್ರಾಪ್ತ ಮಾಡಿಕೊಳ್ಳುತ್ತಾನೆ; ಅದನ್ನು ಅಲ್ಪಜ್ಞಾನಿ ಮುಗ್ಧ ಜೀವನು ವಿಷಯ-ಕಷಾಯ ರೂಪದ ಒಣಕಡಲೆಯ ಸಲುವಾಗಿ ಮಾರಿಬಿಡುತ್ತಾನೆ. ಹೇಗೆ ಸುಖದ ಸಲುವಾಗಿ ಅನೇಕ ದೇಶ-ದೇಶಾಂತರಗಳಲ್ಲಿ ಸುತ್ತುತ್ತಿರುವ ಯಾವನೋ ಜೀವನು ಕಲ್ಪವೃಕ್ಷವನ್ನು ಪ್ರಾಪ್ತ ಮಾಡಿಕೊಂಡನು ಮತ್ತು ಆ ಬಾಲಬುದ್ಧಿಯು ಅದರ ಹತ್ತಿರ ಹಾಲಾಹಲ ವಿಷದ ಯಾಚನೆ ಮಾಡುತ್ತಾನೆ.

ಅದೇ ಪ್ರಕಾರ ಶಿವಸುಖದ ದಾತೃವಾದ ಈ ಮನುಷ್ಯ ಪರ್ಯಾಯವನ್ನು ಪ್ರಾಪ್ತಮಾಡಿಕೊಂಡು ಹೀನಜ್ಞಾನದಿಂದ ವಿಷಯ-ಭೋಗರೂಪದ ಕಾಲಕೂಟ ವಿಷವನ್ನು ಯಾಚಿಸಿ ಹರ್ಷಿತನಾಗುತ್ತಾನೆ. ಅದೇ ಪ್ರಕಾರ ಮನುಷ್ಯ ಆಯು-ರೂಪದ ಮಾಲೆಯನ್ನು ತುಂಡರಿಸಿ ಅದರ ದಾರವನ್ನು ತಗೆದುಕೊಂಡು ವಿಷಯ ಕಷಾಯಮಯ ವಸ್ತ್ರವನ್ನು ಹೊಲೆಯುತ್ತಾನೆಂದು ತಿಳಿಯುವುದು.

ಈ ಜೀವನು ತನ್ನ ಅಪರಾಧದಿಂದ ತಾನು ಕಟ್ಟಲ್ಪಟ್ಟಿದ್ದಾನೆಂಬುದನ್ನೇ ಈಗ ದೃಷ್ಟಾಂತದ ಮೂಲಕ ತಿಳಿಸಿಕೊಡುತ್ತಾರೆ,-

**ಸುಕ ಸಾಲಣೀ ಕಪ ಮುಟ್ಠಈ ಮುಕರಮ್ಮಿಂ ಭಮಂ ಏತಿ ಜಹ ಸಾಣೋ ।**
**ಇಮ ಚೇದೇಣ ಭಮಭೂಲಇ ಅಪ್ಪಂ ಬಂಧಇ ರಾಯದೋ ಸಾದೋ ॥೫೦॥**

**ಗಾಥಾರ್ಥ :-** ಹೇಗೆ ನಳಿಕೆಯಗಿಳಿ, ಕೋತಿ(ಮಂಗ)ಯ ಮುಷ್ಟಿ, ಗಾಜಿನ ಮನೆಯಲ್ಲಿ ನಾಯಿ-ತಮ್ಮ ಭ್ರಮೆಯಿಂದಲೇ ದುಃಖಿಯಿವೆ. ಹಾಗೆಯೇ ಆತ್ಮನು ಭ್ರಮೆಯಿಂದ ಅಪರಾಧ ಮಾಡಿ ರಾಗ-ದ್ವೇಷಗಳಿಂದ ಸ್ವಯಂ ತಾನಾಗಿಯೇ ಬದ್ಧನಾಗಿದ್ದಾನೆ.

**ಭಾವಾರ್ಥ :-** ನಳಿಕೆಯ ಗಿಳಿಯು ನಳಿಕೆಯ ಮೇಲೆ ಕುಳಿತುಕೊಂಡು ತಾನೆ ತಲೆ ಕೆಳಗಾಗುವುದರಿಂದ ತನ್ನ ಕಾಲುಗಳಿಂದ ನಳಿಕೆಯನ್ನು ಗಟ್ಟಿಯಾಗಿ ಹಿಡಿದುಕೊಳ್ಳುತ್ತದೆ. ಅದರಿಂದ ಕಾಲು ಮೇಲೆ ಮತ್ತು ಶರೀರವು ಕೆಳಗಾಗಿ ನೇತಾಡುತ್ತಿರುತ್ತದೆ. ಅದನ್ನು ಯಾರೂ ಹಿಡಿದುಕೊಂಡಿಲ್ಲ, ಕಟ್ಟಿ ಹಾಕಿಲ್ಲ ಅದು ತಾನಾಗಿಯೇ ನಾನು ಈ ನಳಿಕೆಯನ್ನು ಬಿಟ್ಟರೆ ನನಗೆ ಏಟಾಗುವುದು - ಎಂದು ಮನ್ನಿಸಿಕೊಂಡಿದೆ. ನನ್ನನ್ನು ಯಾರೋ ಹಿಡಿದು ತಲೆ ಕೆಳಗೆ ಆಗುವಂತೆ ಕಟ್ಟಿಹಾಕಿದ್ದಾರೆಂದು ಅದಕ್ಕೆ ಭ್ರಮೆಯಾಗಿ ಹೋಗಿದೆ. ಆ ಭ್ರಮೆಯಿಂದ ಬಂಧಿಸಲ್ಪಟ್ಟ ಅದು ಮಹಾದುಃಖಿಯಾಗುತ್ತಲಿದೆ. ಒಂದು ವೇಳೆ ಭ್ರಮೆಯ ನಾಶವಾಗಿ ಹೋದರೆ ಎಂದರೆ ಯಾರೂ ನನ್ನನ್ನು ಹಿಡಿದುಕೊಂಡಿಲ್ಲವೆಂದು ಅದು ತಿಳಿದುಬಿಟ್ಟರೆ ಸಹಜವಾಗಿಯೇ ಅದು ನಳಿಕೆಯನ್ನು ಬಿಟ್ಟು ಆಕಾಶದಲ್ಲಿ ಹಾರಿ ಹೋಗಬಹುದಾಗಿದೆ, ಸುಖಿಯಾಗಬಹುದಾಗಿದೆ.

ಅದೇ ಪ್ರಕಾರ ಈ ಜೀವನು ತಾನೇ ತನ್ನನ್ನು ಮರೆತು ಪರವಸ್ತುಗಳಲ್ಲಿ ರಾಗ-ದ್ವೇಷ ಮಾಡಿ ಯಾರನ್ನೋ ಒಳ್ಳೆಯವರೆಂದು ಮನ್ನಿಸುತ್ತಾನೆ, ಇನ್ನಾರನ್ನೋ ಕೆಟ್ಟವರೆಂದು ಮನ್ನಿಸುತ್ತಾನೆ; ಇದು ನನ್ನದಿದೆ, ಇದು ನನ್ನದಿಲ್ಲವೆಂಬ ಭ್ರಮೆಯಿಂದ ತನ್ನನ್ನು ಬಂಧಕ್ಕೆ ಒಳಪಡಿಸುತ್ತಿದ್ದಾನೆ. ಭ್ರಮೆಯು ನಷ್ಟವಾದ ಮೇಲೆ ಸಹಜವಾಗಿಯೇ ಸುಖಿಯಾಗಿ ಹೋಗುತ್ತಾನೆ.

ಇನ್ನೂ ಹೇಳುತ್ತಾರೆ - ಹೇಗೆ ಯಾವನೋ ಕೋತಿಯನ್ನು ಹಿಡಿಯುವ ಸಲುವಾಗಿ ಒಂದು ಚಿಕ್ಕ ಮುಖವುಳ್ಳ ಕಲಶದಲ್ಲಿ ಕಡಲೆಯನ್ನು ಹಾಕಿ ಅದನ್ನು ವನದಲ್ಲಿ ಇಡುತ್ತಾನೆ. ಕೋತಿಯು ಲೋಭದ ಕಾರಣದಿಂದ ಎರಡೂ ಕೈಗಳನ್ನು ಕಡಲೆ ತಗೆದುಕೊಳ್ಳುವ ಸಲುವಾಗಿ ಆ ಚಿಕ್ಕ ಮುಖವುಳ್ಳ ಕಲಶದಲ್ಲಿ ಹಾಕುತ್ತದೆ ಮತ್ತು ಎರಡೂ ಮುಷ್ಟಿಗಳನ್ನು ತುಂಬಿಕೊಂಡು ತೆಗೆಯಲು ಯತ್ನಿಸುತ್ತದೆ. ಕಡಲೆಯಿಂದ ತುಂಬಿಕೊಂಡ ಎರಡು ಮುಷ್ಟಿಗಳು ಆ ಕಲಶದಿಂದ ಹೊರಗೆ ಬರುವುದಿಲ್ಲ; ಆಗ ಆ ಕೋತಿಯು ತನ್ನ ಕೈಗಳನ್ನು ಯಾರೋ ಹಿಡಿದು ಕೊಂಡಿದ್ದಾರೆಂದು

ತಿಳಿಯುತ್ತದೆ - ಇಂಥ ಭ್ರಮೆಯಿಂದ ಅದು ತಾನಾಗಿಯೇ ವನದಲ್ಲಿ ಘಟದಿಂದ ಬಂಧಿಸಿ ಬಿದ್ದುಕೊಂಡಿದೆ. ತನ್ನನ್ನು ಬಂಧಿತವೆಂದು ಮನ್ನಿಸುತ್ತಿದೆ; ಆದರೆ ಅದನ್ನು ಯಾರೂ ಹಿಡಿದಿಲ್ಲ. ತಾನೇ ಭ್ರಮೆಯ ಬುದ್ಧಿಯ ಪ್ರಸಾದದಿಂದ ಕಡಲೆಯ ಲೋಭಿಯಾಗಿ ಸ್ವಯಂ ತಾನೇ ಬಂಧಿಸುತ್ತಿದೆ. ತಾನೇ ಕಡಲೆಯ ಮಮತೆಯನ್ನು ಬಿಟ್ಟುಕೊಟ್ಟರೆ ಸಹಜವಾಗಿಯೇ ವನದಲ್ಲಿ ಸ್ವಚ್ಛಂದದಿಂದ ವಿಹರಿಸುತ್ತ ಸುಖಿಯಾಗಬಹುದಾಗಿದೆ.

ಅದೇ ಪ್ರಕಾರ ಆತ್ಮನು ಪರದ್ರವ್ಯಗಳ ಕುರಿತು ರಾಗ-ದ್ವೇಷ ಭಾವ ಮಾಡಿ ಮೋಹದ ವಶೀಭೂತನಾಗುತ್ತ ವಿಷಯ ಭೋಗರೂಪ ಕಡಲೆಯ ಲೋಭದಿಂದ ಸಂಸಾರ ವನದಲ್ಲಿ ಬಿದ್ದುಕೊಂಡಿದ್ದಾನೆ, ಕರ್ಮಬಂಧ ಮಾಡಿಕೊಳ್ಳುತ್ತ ಮಹಾದುಃಖ ಪಡೆಯುತ್ತಿದ್ದಾನೆ. ಅವನು ಒಂದುವೇಳೆ ವಿಷಯ ಭೋಗರೂಪ ಕಡಲೆಯ ಲೋಭವನ್ನು ಬಿಟ್ಟುಕೊಟ್ಟರೆ ಸಹಜವಾಗಿಯೇ ಸುಖ ಸಂತೋಷದ ಪ್ರಸಾದದಿಂದ ಸುಖಿಯಾಗಬಹುದಾಗಿದೆ.

ಹೇಗೆ ಗಾಜಿನ ಮನೆಯಲ್ಲಿ ನಾಯಿಯು ಪ್ರವೇಶ ಮಾಡಿದೆ. ಅಲ್ಲಿ ಅದು ನಾಲ್ಕೂ ನಿಟ್ಟಿಗೆ ನಾಯಿ-ನಾಯಿಗಳನ್ನು ನೋಡಿ ಈ ಅನೇಕ ಶ್ವಾನಗಳು ನನ್ನನ್ನು ಸಾಯಿಸಲಿಕ್ಕೆ ಬರುತ್ತಿವೆ - ಎಂದು ಭ್ರಮೆಯಿಂದ ತಿಳಿದು ತಾನಾಗಿಯೇ ಅವುಗಳೊಂದಿಗೆ ಹೋರಾಡಲಾರಂಭಿಸುತ್ತದೆ. ಅದರಲ್ಲಿ ಇದು ಹೇಗೆ ಬೊಗಳುತ್ತದೆ ಹಾಗೆಯೇ ಆ ಗಾಜಿನ ಶ್ವಾನಗಳು ಬೊಗಳುತ್ತವೆ. ಇದು ಅವುಗಳ ಮೇಲೇರಿ ಹೋದರೆ ಅವು ಇದರ ಮೇಲೇರಿ ಬರುತ್ತಿವೆ - ಇದನ್ನೆಲ್ಲ ಕಂಡು ಶ್ವಾನವು ಅತ್ಯಂತ ಭಯಭೀತವಾಗುತ್ತ ನಾನಂತೂ ಇಲ್ಲಿ ಒಬ್ಬನೇ ಇದ್ದೇನೆ ಮತ್ತು ಅವು ಅನೇಕವಿವೆ, ಅವು ನನ್ನನ್ನು ಸಾಯಿಸಿಬಿಡಬಹುದಲ್ಲ ? - ಎಂಬ ಭ್ರಮೆಯಿಂದ ಮಹಾದುಃಖಿಯಾಗಿದೆ. ಆದರೆ ಆ ಗಾಜಿನ ಮನೆಯಲ್ಲಿ ಬೇರೆ ಯಾವ ಶ್ವಾನವಂತೂ ಇಲ್ಲ. ಇದು ತನ್ನ ಪ್ರತಿಬಿಂಬವನ್ನೇ ಗಾಜಿನಲ್ಲಿ ನೋಡಿ ಭ್ರಮೆಯಿಂದ ದುಃಖಿಯಾಗುತ್ತಿದೆ.

ಅದೇ ಪ್ರಕಾರ ಈ ಆತ್ಮನು ಕೂಡ ಭ್ರಮೆಯಿಂದ ಪರವಸ್ತುಗಳನ್ನು ನೋಡಿ ರಾಗ-ದ್ವೇಷ ಭಾವದಿಂದ ಕರ್ಮಬಂಧ ಮಾಡಿಕೊಳ್ಳುತ್ತ ದುಃಖವನ್ನು ಉತ್ಪನ್ನ ಮಾಡುತ್ತಾನೆ.

ಹೇಗೆ ನಳಿಕೆಯ ಗಿಳಿ, ಘಟದಲ್ಲಿ ಮುಷ್ಟಿಯಿಂದ ಬಂಧಿಸಲ್ಪಟ್ಟ ಕಡಲೆಯ ಲೋಭಿ ಕೋತಿ(ಮಂಗ) ಮತ್ತು ಗಾಜಿನ ಮನೆಯಲ್ಲಿ ಹೋಗಿರುವ ಶ್ವಾನ-ಈ ಮೂಢ ಜೀವಗಳು ತಮ್ಮ ಅಪರಾಧದಿಂದ ದುಃಖಿಯಾಗುತ್ತಿವೆ; ಅದರಲ್ಲಿ ಬೇರೆ ಯಾರದೂ ದೋಷವಿಲ್ಲ - ಅದೇ ಪ್ರಕಾರ ಇವುಗಳ ಹಾಗೆಯೇ ಮಿಥ್ಯಾರಸದಲ್ಲಿ ನೆನೆದು ಹೋದ ಜೀವನು ಪರವಸ್ತುಗಳನ್ನು ತನ್ನವೆಂದು ಮನ್ನಿಸಿ ರಾಗಿ-ದ್ವೇಷಿಯಾಗುತ್ತ ಸಂಸಾರ ದುಃಖ ಭೋಗಿಸುತ್ತಿದ್ದಾನೆ.

ಯಾರು ಸತ್ಯದೃಷ್ಟಿಯುಳ್ಳ ಸಮ್ಯಗ್ದೃಷ್ಟಿಯಿದ್ದಾರೆ, ಅವರಿಗೆ ಭ್ರಮೆಯಿರುವುದಿಲ್ಲ. ಅವರು ತತ್ತ್ವಜ್ಞಾನಿಗಳಿದ್ದಾರೆ, ಸತ್ಯಶ್ರದ್ಧೆಯ ದೃಢಧಾರಕರಿದ್ದಾರೆ, ಅವರ ಶ್ರದ್ಧೆಯಲ್ಲಿ ಪರವಸ್ತುಗಳ ಕುರಿತು ಮಮತ್ವವಿರುವುದಿಲ್ಲ; ಅದರಿಂದ ತಮ್ಮ ಪದಸ್ಥ-ಯೋಗ್ಯ (ಗುಣಸ್ಥಾನದ ಅನುಸಾರ) ಕರ್ಮಬಂಧ ಮಾಡಿಕೊಳ್ಳುವುದಿಲ್ಲ. ಮಿಥ್ಯಾರಸದಲ್ಲಿ ನೆನೆದು ಹೋದ ಜೀವಗಳು ಕರ್ಮಬಂಧ ಮಾಡಿಕೊಂಡು ಜನ್ಮ-ಮರಣರೂಪದ ಬಳ್ಳಿಯನ್ನು ಬೆಳೆಸುತ್ತಾರೆ. ಅನೇಕ ಶರೀರಗಳನ್ನು ಧಾರಣ ಮಾಡುತ್ತ, ಬಿಟ್ಟುಕೊಡುತ್ತ ಅಶುದ್ಧ ಭಾವದ ಜೀವಗಳು ದುಃಖಿಯಾಗುತ್ತಾರೆ. ಇದರಿಂದ ವಿಪರೀತವಾಗಿ ಶುದ್ಧೋಪಯೋಗಿಗಳು ಭ್ರಮೆರಹಿತರಿದ್ದಾರೆ, ಅವರು ಕರ್ಮಬಂಧನದಿಂದ ರಹಿತರಿದ್ದಾರೆಂದು ತಿಳಿಯುವುದು.

ಈ ದೋಷಗಳು ಶುದ್ಧಾತ್ಮನವಿಲ್ಲವೆಂದು ಈಗ ಹೇಳುತ್ತಾರೆ,-

**ತಸಕರ ಪಯ ಣಿಪ ವಹಣೀ, ದುಭಖಿೋ ಲೋಯ ಪಾವ ಗದ ಪಂಚೋ ।**

**ದುಠ ಣರ ಪಸು ಯಮ ಣಿಂದೋ, ಏ ತೀಯದಹ ಭಯ ರಹಯ ಸುದ್ಧಾದಾ ।।೫೧।।**

**ಗಾಥಾರ್ಥ :-** ಶುದ್ಧಾತ್ಮನು ಕಳ್ಳ, ಜಲ, ದೊರೆ, ಅಗ್ನಿ, ದುರ್ಭಿಕ್ಷ, ಲೋಕ, ಪಾಪ, ರೋಗ, ಪಂಚರು, ದುಷ್ಟ ಮನುಷ್ಯ, ಪಶು, ಯಮ, ನಿಂದೆ - ಈ ಹದಿಮೂರು ಪ್ರಕಾರದ ಭಯಗಳಿಂದ ರಹಿತನಾಗಿರುತ್ತಾನೆ.

**ಭಾವಾರ್ಥ ಃ-** ಶುದ್ಧಾತ್ಮನಿಗೆ ಕಳ್ಳರ ಭಯವಿರುವುದಿಲ್ಲ. ಕಳ್ಳರ ಭೇದಗಳು ಅನೇಕವಿವೆ; ಹೇಗೆಂದರೆ -ಧರ್ಮಚೋರ, ಕರ್ಮಚೋರ. ಇವರದೇ ವಿಸ್ತಾರ ಮಾಡುತ್ತಾರೆ - ಧರ್ಮದ ಸ್ಥಾನಭೂತ ದೇವಾಲಯಗಳ ವಸ್ತುಗಳನ್ನು ಕದಿಯುವುದು; ಭಗವಂತರ ಮುಕ್ಕೊಡೆ, ಚಾಮರ, ಪ್ರತಿಬಿಂಬ, ಸಿಂಹಾಸನ, ಭಾಮಂಡಲ, ತಟ್ಟೆ, ಗಿಂಡಿ, ಪರಾತ, ಗಂಟೆ, ಪರದೆ, ರತ್ನಗಂಬಳಿ ಮೊದಲಾದ ಉಪಕರಣರೂಪ ವಸ್ತುಗಳನ್ನು ಕದಿಯುವಂಥವರು ಧರ್ಮಚೋರರೆಂದೆನಿಸಿಕೊಳ್ಳುತ್ತಾರೆ, ಶಾಸ್ತ್ರಗಳನ್ನು ಕದಿಯುವಂಥವರು ಶಾಸ್ತ್ರದ ಅಂದವಾದ ಹೊದಿಕೆ ಬಟ್ಟೆಗಳನ್ನು ಕದಿಯುವವರು ಧರ್ಮಚೋರರಿದ್ದಾರೆ ಕಪಟಪೂರ್ವಕ ಛಲದಿಂದ ಧರ್ಮಸೇವನೆ ಮಾಡುವಂಥವರು ಧರ್ಮಚೋರರಿದ್ದಾರೆ. ಧರ್ಮಸ್ಥಾನದಿಂದ ಯಾವನೋ ಗೃಹಸ್ಥನ ವಸ್ತು ಕದಿಯುವಂಥವನು ಧರ್ಮಚೋರನಿದ್ದಾನೆ.

ಕಷಾಯದ ವಶೀಭೂತನಾಗಿ ಪ್ರಮಾದಿಯಾಗುತ್ತ ತನ್ನ ಹೃದಯವನ್ನು ಧರ್ಮದ ಸಂಸ್ಕಾರದಿಂದ ರಹಿತಗೊಳಿಸಿ ಧರ್ಮದ ಕುರಿತಾಗಿ ರುಚಿರಹಿತನಾಗುವುದು, ಜನರಿಗೆ ತೋರಿಸುವ ಸಲುವಾಗಿ ಧರ್ಮದ ಯಾವುದೋ ಅಂಗವನ್ನು ಕಿಂಚಿತ್ ಸಾಧನೆ ಮಾಡುವಂಥವನು ಧರ್ಮ ಚೋರನಿದ್ದಾನೆ. ಧರ್ಮದ ಸೇವೆ ಮಾಡಿ, ಧರ್ಮದ ಸೇವಕನ ರೂಪದಲ್ಲಿ ಪೂಜ್ಯ-ಲೋಕಮಾನ್ಯನಾದ ಮೇಲೆಯೂ ಯಾವುದೋ ಪಾಪಕರ್ಮದ ಯೋಗದಿಂದ ಧರ್ಮರಹಿತನಾಗಿ ಹೋಗುವುದು, ಧರ್ಮದಿಂದ ವಿಪರೀತ ಅರ್ಥಾತ್ ಧರ್ಮದ ದ್ವೇಷಿಯಾಗುವಂಥವನು ಧರ್ಮಚೋರನಿದ್ದಾನೆ-ಹೀಗೆ ಧರ್ಮ ಚೋರನ ಭೇದ ಹೇಳಿದೆ.

ಕರ್ಮಚೋರನ ಭೇದಗಳೂ ಅನೇಕವಿವೆ. ಅವುಗಳಲ್ಲಿ ಮುಖ್ಯವಾದವು -ತನಚೋರ, ಧನಚೋರ ಮತ್ತು ವಚನಚೋರ. ಯಾರೋ ಇತರರ ಮಕ್ಕಳು, ಪರಸ್ತ್ರೀಯರ ಕಳವು ಮಾಡಿ ಅನ್ಯಸ್ಥಾನದೊಳಗೆ ಹೋಗಿ ಮಾರುವುದು. ಆನೆ, ಕುದುರೆ, ಹಸು, ಎಮ್ಮೆ ಮೊದಲಾದ ಪಶುಗಳನ್ನು ಕದಿಯುವಂಥವರು ತನಚೋರರಿದ್ದಾರೆ.

ಬೇರೆಯವರ ಮನೆಯಲ್ಲಿ ಕನ್ನಹಾಕಿ (ಗೋಡೆಯಲ್ಲಿ ಕಿಂಡಿಮಾಡಿ) ಕಳವು ಮಾಡುವುದು, ಛಲ-ಬಲದಿಂದ ಮಂದಿರ (ಮನೆ)ಗಳನ್ನು ಹತ್ತಿ ಕಳವು ಮಾಡುವುದು, ಸ್ವಯಂ ತಿಳಿದುಕೊಂಡು ಬೇರೆಯವರು ಇಟ್ಟಿರುವ ಧನವನ್ನು ತಗೆದುಕೊಂಡು ಬರುವುದು - ಇವೆಲ್ಲವು ಧನಚೋರನ ಭೇದಗಳಿವೆ. ಬೇರೆಯವರಿಂದ ಕೊಡಲಾದ (ಒತ್ತೆ ಇಡಲಾದ) ವಸ್ತುವನ್ನು ಇಟ್ಟುಕೊಳ್ಳುವುದು. ತಾನು ಎಲ್ಲವನ್ನು ತಿಳಿಯುತ್ತಿದ್ದರೂ ಬೇರೆಯವರನ್ನು ಅಜ್ಞಾನದಲ್ಲಿಡುವುದು - ಇತ್ಯಾದಿ ತನ್ನ ಛಲ-ಚತುರತೆಯಿಂದ ಇತರರ ಧನವನ್ನು ಕದಿಯುವಂಥವರು ಧನಚೋರರಿದ್ದಾರೆ.

ಬೇರೆಯವರ ಮುಚ್ಚಿಡಲಾದ ಗುಪ್ತ ವಚನಗಳನ್ನು ತಿಳಿದುಕೊಂಡು ಅವನ್ನು ಬಹಿರಂಗಪಡಿಸುವುದು, ಮುಖದಿಂದ ಅಸತ್ಯ ಮಾತನಾಡುವುದು ವಚನ ಚೋರಿಯಿದೆ - ಇವರೆಲ್ಲರೂ ಕರ್ಮಚೋರರಿದ್ದಾರೆ.

ಈ ಪ್ರಕಾರ ಹೇಳಲಾದ ಧರ್ಮಚೋರ ಮತ್ತು ಕರ್ಮಚೋರರಲ್ಲಿ ಕರ್ಮಚೋರರ ಅಪೇಕ್ಷೆಯಿಂದ ಅನಂತಗುಣಿತ ಪಾಪವು ಧರ್ಮಚೋರರಿಗೆ ಆಗುತ್ತದೆ.

ಇಂಥ ಅನೇಕ ಭೇದರೂಪ ಚೋರರ ಭಯವು ಸಂಸಾರೀ, ಪರಿಗ್ರಹಿಗೆ ಇರುತ್ತದೆ. ಆದರೆ ಅನಂತ ಗುಣಗಳಿಂದ ವೈಭವಶಾಲಿ, ಅತೀಂದ್ರಿಯ ಸುಖರೂಪ ಧನದ ಧಾರಕ ಶುದ್ಧಾತ್ಮನಿಗೆ ಚೋರ(ಕಳ್ಳನ) ಭಯವಿರುವುದಿಲ್ಲ.

ಹೀನಾಧಿಕ ಮೇಘವೃಷ್ಟಿಯ ಭಯವು ಎಂದರೆ ನದಿ, ಸರೋವರ, ಸಮುದ್ರ , ಬಾವಿ, ಕೂಪ ಮೊದಲಾದವುಗಳ ಜಲದ ಭಯವು ಸಾಂಸಾರಿಕ ತನಧಾರಿ (ದೇಹಧಾರಕ) ಜೀವಗಳಿಗೆ ಇರುತ್ತದೆ; ಅಮೂರ್ತಿಕ ಅನಂತಸುಖದ ಅಧಿ ಪತಿಯಾದ ಶುದ್ಧಾತ್ಮನಿಗೆ ಜಲದ ಭಯವೂ ಇರುವುದಿಲ್ಲ.

ಕಳ್ಳರಿಗೆ, ಪರಸ್ತ್ರಿ ಲಂಪಟರಿಗೆ ದೊರೆಯ ಭಯವಿರುತ್ತದೆ. ಅನ್ಯಾಯ ಮಾರ್ಗಿಗಳಿಗೆ, ಅಸತ್ಯ ಮಾತನಾಡುವಂಥವರಿಗೆ, ಪಾಖಂಡಿ ಮೊದಲಾದವರಿಗೆ ದೊರೆಯ ಭಯವಿರುತ್ತದೆ. ನಿರಂಜನ, ಕರ್ಮರಹಿತ, ಪರಮೇಶ್ವರ ಶುದ್ಧಾತ್ಮನಿಗೆ ದೊರೆಯ ಭಯವಿರುವುದಿಲ್ಲ.

ಕಾಷ್ಠ-ವಸ್ತ್ರ, ತೃಣ, ಚಿನ್ನ, ಬೆಳ್ಳಿ, ರತ್ನಾದಿಗಳು, ಮನುಷ್ಯ-ಪಶುಗಳ ಪೌದ್ಗಲಿಕ ಶರೀರ ಇತ್ಯಾದಿ ಧನ-ಧಾನ್ಯಾದಿ ವಸ್ತುಗಳೆಲ್ಲವೂ ಪುದ್ಗಲ ಸ್ಕಂಧಗಳಿವೆ; ಇವುಗಳಿಗೆ ಅಗ್ನಿಯ ಭಯವಿದೆ. ಯಾವ ಜೀವನಿಗೆ ಈ ಪುದ್ಗಲ ಸ್ಕಂಧಗಳಲ್ಲಿ ಮಮತೆಯಿರುತ್ತದೆ, ಆ ರಾಗೀ ಜೀವನಿಗೆ ಅಗ್ನಿಯ ಭಯವಿರುತ್ತದೆ. ಅಮೂರ್ತಿಕ, ಜ್ಞಾನಪಿಂಡನಾದ ಶುದ್ಧಾತ್ಮನಿಗೆ ಅಗ್ನಿಯ ಭಯವಿರುವುದಿಲ್ಲ.

ಆಹಾರವೇ ಸಹಕಾರೀ ಇರುವಂಥ ಪುದ್ಗಲ ಶರೀರದ ಧಾರಕ, ಪರಿಗ್ರಹೀ, ಬಹುಕುಟುಂಬೀ, ಮೋಹೀ ಸಂಸಾರಿ ಜೀವನಿಗೆ ಕುಟುಂಬದ ರಕ್ಷಣೆ, ತನ್ನ ಶರೀರದ ರಕ್ಷಣೆ ಮಾಡುವಂಥ ಜೀವನಿಗೆ ದುರ್ಭಿಕ್ಷದ ಭಯವಿರುತ್ತದೆ. ಪೌದ್ಗಲಿಕ ಶರೀರ ರಹಿತ, ಕುಟುಂಬಾದಿ ಜನರಹಿತ, ವೀತರಾಗಿ - ಮೋಹರಹಿತ ಶುದ್ಧಾತ್ಮನಿಗೆ ದುರ್ಭಿಕ್ಷದ ಭಯವಿರುವುದಿಲ್ಲ.

ಯಾರು ಕಳ್ಳರಿದ್ದಾರೆ, ಜೂಜಿನಲ್ಲಿ ರಮಿಸುವಂಥವರಿದ್ದಾರೆ, ಮಾಂಸ ಭಕ್ಷಿಯಿದ್ದಾರೆ, ಮದ್ಯ ಕುಡುಕರಿದ್ದಾರೆ ವೇಶ್ಯಾಗಮನ ಮಾಡುವಂಥವರಿದ್ದಾರೆ, ಅನ್ಯ ಜೀವಗಳ ಘಾತಕರಿದ್ದಾರೆ, ಪರಸ್ತ್ರೀ ಸೇವನೆ ಮಾಡುವಂಥವರಿದ್ದಾರೆ - ಆ ಸಪ್ತ ವ್ಯಸನಸಹಿತರು, ಪಾಪಾಚಾರಿಗಳು, ಅಯೋಗ್ಯ ಮಾರ್ಗದ ಮೇಲೆ ನಡೆಯುವಂಥ ಜೀವಗಳಿಗೆ ಲೋಕಭಯವಿರುತ್ತದೆ. ಕ್ರೋಧೀ, ಮಾನೀ, ಮೋಸಗಾರ, ಮಹಾಲೋಭೀ, ಪಾಖಂಡಿ, ಅನಾಚಾರಿ, ವಂಚಕ, ವಿಶ್ವಾಸಘಾತಕ, ಸ್ವಾಮಿದ್ರೋಹಿ, ಮಿತ್ರದ್ರೋಹಿ ಇತ್ಯಾದಿ ಅನೇಕ ಕುಮಾರ್ಗಿಗಳಿಗೆ ಲೋಕಭಯವಿರುತ್ತದೆ. ಜಗತ್ಪೂಜ್ಯ , ಸರ್ವವಲ್ಲಭ (ಎಲ್ಲರಿಗೂ ಪ್ರಿಯ) ಲೋಕಾಲೋಕದ ಜ್ಞಾತಾರ, ಸರ್ವಜ್ಞ, ವೀತರಾಗ ಅಮೂರ್ತಿಕ ದೇವನಿಗೆ ಲೋಕಭಯವಿರುವುದಿಲ್ಲ.

ಸರಾಗೀ, ಬಹುಕುಟುಂಬೀ, ಬಹು ಆರಂಭೀ, ಸಂಸಾರೀ, ರಾಗ-ದ್ವೇಷ ಸಹಿತ ಪಾಪಾಚಾರಿಗೆ ಪಾಪದ ಭಯವಿರುತ್ತದೆ; ಅವರಿಗೆ ಪಾಪವು ದುಃಖವೀಯುತ್ತದೆ. ವೀತರಾಗಿ, ಜಗತ್ತಿನ ದುಃಖವನ್ನು ನಾಶ ಮಾಡುವಂಥ, ಪಾಪ-ಪುಣ್ಯರೂಪ ಸಂಸಾರ ಮಾರ್ಗದಿಂದ ರಹಿತ, ಕರ್ಮಕಲಂಕ ವರ್ಜಿತ ಶುದ್ಧಾತ್ಮನಿಗೆ ಪಾಪದ ಭಯವಿರುವುದಿಲ್ಲ ಎಂದರೆ ಅವರಿಗೆ ಪಾಪವು ಭಯವನ್ನುತ್ಪನ್ನ ಮಾಡುವುದಿಲ್ಲ.

ಶರೀರದ ಆಶ್ರಯದಿಂದ ಇರುವಂಥ, ಸಂಸಾರೀ, ಮೋಹೀ, ಸದೈವ ಶರೀರದ ಸ್ಥಿತಿಯನ್ನು ಬಯಸುವಂಥ ಪುದ್ಗಲ ದೇಹಧಾರೀ ಜೀವಗಳಿಗೆ ರೋಗದ ಭಯವಿರುತ್ತದೆ. ಪೌದ್ಗಲಿಕ ಕಾಯರಹಿತ ಅಮೂರ್ತಿಕ ಶುದ್ಧ ಜೀವನಿಗೆ ರೋಗ ಭಯವಿರುವುದಿಲ್ಲ.

ಅನ್ಯಾಯ ಮಾರ್ಗವನ್ನು ಧಾರಣ ಮಾಡಿರುವಂಥವರು, ಪಂಚರ ಮರ್ಯಾದೆಯನ್ನು ಉಲ್ಲಂಘನೆ ಮಾಡುವಂಥವರಿಗೆ ಪಂಚರ ಭಯವಿರುತ್ತದೆ. ಜಗತ್ತಿನ ಅಧಿಪತಿ ಲೋಕಪೂಜ್ಯ ಪದವಿಯ ಧಾರಕರು, ಜಗತ್ತಿನ ಮರ್ಯಾದೆಯನ್ನು ತಿಳಿಸಿಕೊಡುವಂಥವರು ಹಾಗೂ ಲೋಕ ಮರ್ಯಾದೆಯನ್ನು ನಡೆಸುವಂಥ ಭಗವಂತರಿಗೆ ಪಂಚರ ಭಯವಿರುವುದಿಲ್ಲ.

ಅನ್ಯ ಜೀವಗಳ ಜೊತೆಗೆ ವೈರವನ್ನಿಟ್ಟುಕೊಳ್ಳುವಂಥವರಿಗೆ ದುಷ್ಟ ಮನುಷ್ಯರ ಭಯವಿರುತ್ತದೆ. ಜಗತ್ತಿನ ಅಧಿಪತಿ, ನಿರ್ದೋಷ, ವೀತರಾಗ, ಜಗತ್ಪೂಜ್ಯ ಶುದ್ಧಾತ್ಮನಿಗೆ ದುಷ್ಟ ಮನುಷ್ಯರ ಭಯವಿರುವುದಿಲ್ಲ.

ಆನೆ, ಸಿಂಹ, ಚಿರತೆ, ಶ್ವಾನ, ಸೂಕರ, ಮಾರ್ಜಾಲ, ಕೋತಿ, ಸರ್ಪ, ಚೇಳು ಮೊದಲಾದವು ದುಷ್ಟ ಜೀವಗಳಿವೆ. ಆನೆ ಮೊದಲಾದವಂತೂ ಮುಖ್ಯವಾಗಿ ದಂತಗಳ ಮಾಧ್ಯಮದಿಂದ ಕಷ್ಟವೀಯುತ್ತವೆ, ಸಿಂಹಾದಿಗಳು ಉಗುರು-ನಖಗಳಿಂದ ತೊಂದರೆ ಕೊಟ್ಟರೆ ಸರ್ಪಾದಿಗಳು ವಿಷದಿಂದ ಬಾಧೆಗೊಳಪಡಿಸುತ್ತವೆ. ಸಾಂಸಾರಿಕ ದುಃಖ ರಹಿತ, ಷಟ್ಕಾಯಗಳ ಕಷ್ಟವನ್ನು ನಷ್ಟಗೊಳಿಸುವಂಥ ಅಮೂರ್ತಿಕ ಭಗವಂತನಿಗೆ ದುಷ್ಟ ಪಶುಗಳ ಭಯವಿರುವುದಿಲ್ಲ. ಈ ಭಗವಂತರ ಹೆಸರು ಹೇಳುತ್ತಿದ್ದಂತೆಯೇ, ಸ್ಮರಣೆ ಮಾಡುತ್ತಿದ್ದಂತೆಯೇ ದುಷ್ಟ ಪಶು ಮೊದಲಾದವುಗಳ ಅನೇಕ ಪ್ರಕಾರದ ವಿಘ್ನಗಳ ನಾಶವಾಗುತ್ತದೆಯೆಂದು ತಿಳಿಯುವುದು.

ದೇವ, ಮನುಷ್ಯ, ನಾರಕ, ಪಶುರೂಪ ಪೌದ್ಗಲಿಕ ದೇಹಧಾರೀ, ಸಂಸಾರೀ, ಕರ್ಮಬಂಧ ಸಹಿತ ಜೀವಗಳಿಗೆ ಯಮ-ಮರಣದ ಭಯವಿರುತ್ತದೆ. ಅಷ್ಟಕರ್ಮ-ಶರೀರರಹಿತ, ಅಮೂರ್ತಿಕ, ಜನ್ಮ-ಮರಣರಹಿತ ಶುದ್ಧಾತ್ಮನಿಗೆ ಯಮನ ಭಯವಿರುವುದಿಲ್ಲ.

ಕುಮಾರ್ಗಿ, ನಿರ್ಲಜ್ಜ, ಅನೇಕ ದೋಷಯುಕ್ತ ಅಮಾರ್ಗೀ ಜೀವಗಳಿಗೆ ಲೋಕನಿಂದೆಯ ದುಃಖವಿರುತ್ತದೆ. ಜಗತ್ಪೂಜ್ಯ, ಸ್ತುತಿಯೋಗ್ಯ, ಯಾರ ಗುಣಕೀರ್ತನೆಯಿಂದ ಕಲ್ಯಾಣವಾಗುತ್ತದೆ ಅಂಥ ನಿರ್ದೋಷ ಶುದ್ಧ ಪರಮಾತ್ಮನಿಗೆ ನಿಂದೆಯ ಭಯವಿರುವುದಿಲ್ಲ.

ಈ ಪ್ರಕಾರ ಹೇಳಲಾದ ಹದಿಮೂರು ಪ್ರಕಾರದ ಭಯಗಳು ಸಂಸಾರದಲ್ಲಿಯೇ ಇರುತ್ತವೆ; ಶುದ್ಧಾತ್ಮನಲ್ಲಿ ಇರುವುದಿಲ್ಲ. ಅಂಥ ಭಯರಹಿತ ಭಗವಂತನಿಗೆ ಪುನಃ ಪುನಃ ನಮನವಿರಲಿ.

ಹೀಗೆ ಸಾಮಾನ್ಯ ಶುದ್ಧಾತ್ಮನ ಭಾವ ತಿಳಿಯುವುದು.

ಧರ್ಮದ ಪ್ರಸಾದದಿಂದ ಅಚೇತನ ಆಕಾಶದ್ರವ್ಯವೂ ಭಕ್ತಿ ಮಾಡುತ್ತದೆಯೆಂದ ಮೇಲೆ ಇಂದ್ರ, ಚಕ್ರವರ್ತಿ ಮೊದಲಾದ ಚೇತನರು ಭಕ್ತಿ ಮಾಡುವುದರಲ್ಲಿ ಅಚ್ಚರಿಯಾದರೂ ಏನಿದೆ ? - ಎಂಬುದರ ಕಥನ ಮಾಡುತ್ತಾರೆ,-

**ಆದಾ ಧಮ್ಮ ಪಸಾಯೋ, ನಭ ಅಚೇಯ ಣಗಧಾರ ಕಯ ಭತ್ತೀ ।**
**ತೋ ಸುರನರ ಖಗ ಪೂಜಯ, ಕೋ ವಿಸಮಯ ಧಮ್ಮ ಸೇಯ ಸಿವಕಜ್ಜೇ ॥೫೨॥**

**ಗಾಥಾರ್ಥ :-** ಎಲೈ ಆತ್ಮನೇ ! ಧರ್ಮದ ಪ್ರಸಾದದಿಂದ ಅಚೇತನವಿರುವ ಆಕಾಶವೂ ಕೂಡ ರತ್ನಗಳ ವೃಷ್ಟಿಯಿಂದ ಭಕ್ತಿ ಮಾಡುತ್ತದೆ. ಹೀಗಿರುವಾಗ ದೇವ, ಮನುಷ್ಯ, ವಿದ್ಯಾಧರರು ಪೂಜಿಸುತ್ತಾರೆಂದರೆ ಅದರಲ್ಲಿ ಆಶ್ಚರ್ಯವೇನಿದೆ ? ಆದುದರಿಂದ ಮೋಕ್ಷದ ಪ್ರಾಪ್ತಿಯ ಸಲುವಾಗಿ ನೀನು ಧರ್ಮದ ಸೇವನೆ ಮಾಡು.

**ಭಾವಾರ್ಥ :-** ಭಗವಂತರ ಭಕ್ತಿ ಮೊದಲಾದ ರೂಪ ಧರ್ಮದ ಫಲವಂತೂ ಹೇಗಿದೆಯೆಂದರೆ ಅದರ ಪ್ರಸಾದದಿಂದ ಅಚೇತನ ಆಕಾಶದಿಂದಲೂ ರತ್ನಗಳ ವೃಷ್ಟಿಯಾಗಿ ಅದೂ ಧರ್ಮಾತ್ಮಾ ಜೀವರುಗಳ ಮಹಿಮೆಯನ್ನು ಪ್ರಕಟಪಡಿಸುತ್ತದೆ. ಹೀಗೆ ಮಾಡಿ ಅದೇನು ಧರ್ಮಾತ್ಮಾ ಜೀವರುಗಳ ಸೇವೆಯನ್ನೇ ಮಾಡುತ್ತಿರುವಂತಿದೆ.

**ಸಂದೇಹ -** ಆಕಾಶವು ಜಡವಿರುವ ಕಾರಣ ಅದು ಹೇಗೆ ಭಕ್ತಿ ಮಾಡುವ ಸಾಧ್ಯತೆಯಿದೆ ? ರತ್ನವೃಷ್ಟಿಯನ್ನಂತೂ ದೇವಗಳು ಮಾಡುತ್ತಾರೆ;ಅದರಿಂದ ಆಕಾಶದ ಭಕ್ತಿ ಹೇಗಾಯಿತು ?

**ಸಮಾಧಾನ :-** ಆಕಾಶವು ಜಡವಿದೆ, ಅದರದು ಭಕ್ತಿ-ಭಾವವು ಹೇಗಿರುವ ಸಾಧ್ಯತೆಯಿದೆ? - ಎಂಬ ಮಾತಂತೂ ಪ್ರಮಾಣವಿದೆ. ಅದು ಚೇತನವಿಲ್ಲ ಎಂಬುದನ್ನು ಎಲ್ಲರೂ ತಿಳಿಯುತ್ತಾರೆ; ಆದರೆ ಧರ್ಮದ ಮಹಿಮೆಯು ಎಂಥದ್ದಿದೆಯೆಂದರೆ ಆಕಾಶದಲ್ಲಿ ಸ್ಥಿತವಿರುವ ಪುದ್ಗಲದ್ರವ್ಯ-ಸ್ಕಂಧಗಳ ಪರಿಣಮನವು ರತ್ನಾದಿಗಳ ರೂಪವಾಗಿ ಅವುಗಳ ವೃಷ್ಟಿಯಾಗಲಾರಂಭಿಸುತ್ತದೆ. ಆದುದರಿಂದ ಎಲೈ ಭವ್ಯನೇ ! ಜೀವರುಗಳಿಗೆ ಅತಿಶಯವನ್ನು ತಿಳಿಸಿಕೊಡುವ ಸಲುವಾಗಿ ಆಕಾಶವೂ ಧರ್ಮಪ್ರಸಾದದಿಂದ ರತ್ನದ ಮಳೆ ಸುರಿಸಿ ಧರ್ಮಾತ್ಮ ಜೀವರುಗಳ ಸೇವೆ ಮಾಡುತ್ತದೆಯೆಂದು ಹೇಳಿದ್ದಾರೆ. ಹೀಗಿರುವಾಗ ದೇವ, ಚಕ್ರವರ್ತಿ, ವಿದ್ಯಾಧರ, ನಾರಾಯಣ, ಪ್ರತಿನಾರಾಯಣ, ಬಲಭದ್ರ, ಕಾಮದೇವ, ಮಂಡಲೇಶ್ವರ ಮೊದಲಾದ ದೊರೆಗಳ ರೂಪ ಚೇತನದ್ರವ್ಯ ಹಾಗೂ ಭವನಪತಿ, ಜ್ಯೋತಿಷಪತಿ, ವ್ಯಂತರದೇವ, ಕಲ್ಪವಾಸೀ ಕಲ್ಪಾತೀತ ಮೊದಲಾದ ದೇವರೂಪ ಚೇತನ ಪದಾರ್ಥಗಳು ಧರ್ಮದ ಪ್ರಸಾದದಿಂದ ಧರ್ಮಾತ್ಮಾ ಜೀವರುಗಳ ಮತ್ತು ಧರ್ಮದ ಸೇವೆ ಮಾಡುತ್ತಾರೆಂದರೆ ಅದರಲ್ಲಿ ಯಾವ ಆಶ್ಚರ್ಯವಿದೆ? ಅವರಂತೂ ಮಾಡಿಯೇ ಮಾಡುತ್ತಾರೆಂದು ತಿಳಿದು, ಭವ್ಯರು ಧರ್ಮದ ಹಾಗೂ ಧರ್ಮೀ ಪುರುಷರ ಸೇವೆ-ಭಕ್ತಿ ಮಾಡುವುದು ಯೋಗ್ಯವಿದೆ.

ಈಗ ಎಂಥೆಂಥ ಪುಣ್ಯಾಧಿಕಾರೀ, ಪದವಿಧಾರಕರಾದ ಪುರುಷರ ಭೋಗ-ಇಂದ್ರಿಯ ಸುಖವೂ ವಿನಾಶಶೀಲವಿದೆಯೆಂಬುದನ್ನು ತೋರಿಸುತ್ತಾರೆ,-

**ರಾಯಧರಾ ಮಹರಾಯೋ, ಅಧ ಮಂಡಯ ಮಂಡೇಯ ಮಹಾಮಂಡೋ ।**
**ಅಧಚಕ್ಕೀ ಮಹಾಚಕ್ಕೀ, ಖಗಸುರ ದೇವಾಣ ಸಯಲ ಸುಹ ಅಥಿರೋ ।।೫೩।।**

**ಗಾಥಾರ್ಥ :-** ರಾಜ, ಮಹಾರಾಜ, ಅರ್ಧ ಮಂಡಲೇಶ್ವರ, ಮಂಡಲೇಶ್ವರ, ಮಹಾಮಂಡಲೇಶ್ವರ, ಅರ್ಧಚಕ್ರಿ, ಸಕಲ ಚಕ್ರೀ, ಖಗೇಶ್ವರ, ದೇವ-ಇಂದ್ರ ಇವರೆಲ್ಲರ ಸುಖವು ಅಸ್ಥಿರವಿದೆ.

**ಭಾವಾರ್ಥ :-** ಕೋಟಿ ಗ್ರಾಮಗಳು ಆಧೀನವಿರುವಂಥವರು ರಾಜರಿದ್ದಾರೆ ಅವರುಗಳ ಮನೋವಾಂಛಿತ ಭೋಗವು ನಶ್ವರವಿದೆ. ಇನ್ನು ಇಂಥ ಐನೂರು-ಐನೂರು ರಾಜರು ಯಾರ ಸೇವೆ ಮಾಡುತ್ತಾರೆ ಅವರು ಅಧಿ ರಾಜರಿದ್ದಾರೆ; ಅವರ ಸುಖವು ನೋಡು-ನೋಡುತ್ತಿರುವಂತೆ ನಷ್ಟವಾಗಿ ಹೋಗುತ್ತದೆ. ಇಂಥ ಸಾವಿರ ರಾಜರು ಯಾರ ಸೇವೆ ಮಾಡುತ್ತಾರೆ ಅವರು ಮಹಾರಾಜರಿದ್ದಾರೆ, ಅವರ ವಿಭೂತಿ; ಎರಡು ಸಾವಿರ ದೊರೆಗಳು ಯಾರ ಆಜ್ಞೆ ಮನ್ನಿಸುತ್ತಾರೆ ಅವರು ಅರ್ಧ ಮಂಡಲೇಶ್ವರರಿದ್ದಾರೆ, ಅವರ ಸಂಪದವು; ನಾಲ್ಕು ಸಾವಿರ ರಾಜರು ಯಾರ ಚರಣಕಮಲಗಳ ಸೇವೆ ಮಾಡುತ್ತಾರೆ, ಅವರು ಮಂಡಲೇಶ್ವರ ನಾಥರಿದ್ದಾರೆ, ಅವರುಗಳ ಭೋಗ; ಎಂಟು ಸಾವಿರ ರಾಜರು ಯಾರ ಆಜ್ಞೆಯನ್ನು ಶಿರಸಾ ವಹಿಸುತ್ತಾರೆ ಅವರು ಮಹಾಮಂಡಲೇಶ್ವರರಿದ್ದಾರೆ, ಅವರುಗಳ ಸಂಪದವು; ಯಾರ ಸೇವೆಯನ್ನು ಹದಿನಾರು ಸಾವಿರ ಆರ್ಯಖಂಡದ ರಾಜರು ಮಾಡುತ್ತಾರೆ, ಅವರು ಮೂರು ಖಂಡಗಳ ಅಧಿಪತಿಯಿದ್ದಾರೆ, ಅವರುಗಳ ಭೋಗ; ಆರ್ಯಖಂಡ ಸಂಬಂಧದ ಮೂವತ್ತೆರಡು ಸಾವಿರ ದೇಶಗಳ ಮೂವತ್ತೆರಡು ಸಾವಿರ ದೊರೆಗಳು ಯಾರ ಸೇವೆ ಮಾಡುತ್ತಾರೆ, ಅವರು ಚಕ್ರವರ್ತಿ-ಷಟ್ಖಂಡಾಧಿಪತಿಯಿದ್ದಾರೆ, ಅವರ ಪುಣ್ಯದ ಮಾಹಾತ್ಮ್ಯವನ್ನು ಹೇಳುವುದು ಸಾಧ್ಯವಿಲ್ಲ. ತೊಂಭತ್ತಾರು ಸಾವಿರವಂತೂ ದೇವಾಂಗನೆಯರಂಥ ಮಹಾಸುಂದರ ವಿನಯಶಾಲೀ ರಾಣಿಯರಿದ್ದಾರೆ, ಸಾವಿರಾರು ದೇವಗಳು ಅವರ ಆಜ್ಞೆ ಮನ್ನಿಸುತ್ತಾರೆ. ನವನಿಧಿ ಮತ್ತು ಹದಿನಾಲ್ಕು ರತ್ನಗಳಿಂದ ಕೊಡಲ್ಪಡುವಂಥ ಮನೋವಾಂಛಿತ ಭೋಗ; ಎಂಭತ್ನಾಲ್ಕು ಲಕ್ಷ ಆನೆ, ಎಂಭತ್ನಾಲ್ಕು ಲಕ್ಷ ರಥ ಇತ್ಯಾದಿ ಸಂಪದದ ಅಧಿಪತಿ, ಮನುಷ್ಯರ ಇಂದ್ರ, ಅವರುಗಳ ಋದ್ಧಿಗಳು; ಮಹಾಮಾನದ ಶಿಖರವನ್ನೇರಿದ ಮಹಾನ ಅತಿಶಯ ಸಹಿತ ಪುಣ್ಯಧಾರೀ ಇತ್ಯಾದಿ ಪದವಿಗಳ ಧಾರಕರು, ಪದಸ್ಥ ಪುರುಷರು ತಮ್ಮ ಸಂಪದವನ್ನು ಸ್ಥಿರವೆಂದು ತಿಳಿದು ಯಾವಾಗಲೂ ಸುಖ-ಸಾಗರದಲ್ಲಿ ಮಗ್ನವಾಗಿರಲು ಬಯಸುತ್ತಾರೆ; ಆದರೆ ಅವರುಗಳ ಸಂಪದವು ನೋಡು-ನೋಡುತ್ತಿರುವಂತೆ ನಾಶಕ್ಕೆ ಪ್ರಾಪ್ತವಾಗಿ ಹೋಯಿತು.

ಹೇಗೆ ಆಕಾಶದಲ್ಲಿ ಮೋಡಗಳಿಂದ ಉಂಟಾಗುವ ವಿದ್ಯುತ್ತವು ಅಲ್ಪ-ಉದ್ಯೋತವನ್ನುಂಟು ಮಾಡಿ ನಾಶಕ್ಕೆ ಪ್ರಾಪ್ತವಾಗಿ ಹೋಗುತ್ತದೆ, ಹಾಗೆಯೇ ಮಹಾಚಪಲ ಸಂಪದವು ವಿನಷ್ಟವಾಗಿ ಹೋಗುತ್ತದೆ. ಮಹಾ ಅತಿಶಯವಂತ, ಪುಣ್ಯಧಾರಕ, ದೇವಗಳ ಸಮಾನ ನಿವಾಸ ಮಾಡುವಂಥ, ವಾಂಛಿತ ಭೋಗಗಳ ಭೋಗೀ ವಿದ್ಯಾಧರ; ನಾಲ್ಕು ಪ್ರಕಾರದ ದೇವಗಳು, ಅದ್ಭುತ ರಸದ ಭೋಗಿ, ಮಹಾಪರಾಕ್ರಮಿ, ದೇವಗಳ ಅಧಿಪತಿ ಇಂದ್ರ, ಮನಸ್ಸಿಗೆ ಅಗೋಚರ ಲಕ್ಷ್ಮಿಯ ಅಧಿಪತಿ, ಅಸಂಖ್ಯಾತ ದೇವಿಯರ ಸರಾಗ ಚೇಷ್ಟೆಯಿಂದ ಮೋಹಿತ ಚಿತ್ತವುಳ್ಳ, ಮನ-ವಚನ-ಕಾಯ ಸಂಬಂಧದ ವಾಂಛಿತ ಸಮಸ್ತ ಇಂದ್ರಿಯಗಳ ಭೋಗ ಭೋಗಿಸುವಂಥ ದೇವೇಂದ್ರ - ಈ ಪ್ರಕಾರ ಹೇಳಲಾದ ಯಾವ ದೇವಗಳ, ಮನುಷ್ಯರ ಸರ್ವೋತ್ಕೃಷ್ಟ ಸುಖ-ಸಂಪದವು ವಿನಾಶ ಶೀಲವಿದೆ, ಸ್ವಪ್ನದ ಸಮಾನವಿದೆ, ಭ್ರಾಂತಿಯನ್ನು ಉತ್ಪನ್ನ ಮಾಡುವಂಥದ್ದಿದೆಯೆಂದು ತಿಳಿಯುವುದು.

ಎಲೈ ಭವ್ಯರೇ ! ನೋಡಿರಿ !! ಇಂಥ ಮಹಾನ ಸುಖ-ಸಂಪದವು ಕೂಡ ಸ್ಥಿರವಾಗಿ ಉಳಿಯಲಿಲ್ಲವೆಂದ ಮೇಲೆ ನಿಮ್ಮಗಳ ತುಚ್ಛ ಪುಣ್ಯದಿಂದ ಏಕತ್ರಿತವಾದ, ಪರಾಧೀನ ಅಲ್ಪ ಸಂಪದವು ಹೇಗೆ ಸ್ಥಿರವುಳಿಯುವುದು? ಅದಕ್ಕಾಗಿ ಇದನ್ನು ತಿಳಿದುಕೊಂಡು ತುಚ್ಛ ಸ್ಥಿತಿಯುಳ್ಳ - ಅತ್ಯಲ್ಪ ಸಮಯ ಉಳಿಯುವಂಥ, ಚಂಚಲ,

ವಿನಾಶವಂತವಿರುವ ಭೋಗ-ಸಂಪದದ ಮಮತೆಯನ್ನು ತೊರೆದು ಮೋಕ್ಷದ ಅವಿನಾಶಿ ಸುಖದ ಸಲುವಾಗಿ ಧರ್ಮದ ಸೇವನೆ ಮಾಡುವುದು ಯೋಗ್ಯವಿದೆ.

ಈಗ ಮಾತಾ-ಪಿತರು ಮೊದಲಾಗಿ ಎಲ್ಲರೂ ತಮ್ಮ-ತಮ್ಮ ಸ್ವಾರ್ಥದ ಬಂಧನದಿಂದ ಬಂಧಿತರಿರುವುದನ್ನು ಹೇಳುತ್ತಾರೆ,-

**ಜಣಕ ಪಿತಾಮಹ ಜಣಣಿ, ತಿಯ ಸುತ ಮಿತ್ತಾದಿ ಬಂಧು ಪತ್ತೀಏ ।**
**ಸಾಮೀ ಭಿಕ್ಖಿಕ ದಾಸೋ, ಏ ಸುಹಣೆಜ್ಜಕಾಜ ಬಂಧ ಬಂಧಾಣಿ ॥೫೪॥**

**ಗಾಥಾರ್ಥ :-** ತಂದೆ, ತಂದೆಯ ತಂದೆ, ತಾಯಿ, ಪತ್ನಿ, ಪುತ್ರ, ಮಿತ್ರ, ಸಹೋದರ, ಪುತ್ರಿ, ಸ್ವಾಮಿ-ಸೇವಕ, ಭಿಕ್ಷುಕ ಇವರೆಲ್ಲರೂ ತಮ್ಮ-ತಮ್ಮ ಕಾರ್ಯರೂಪ ಬಂಧನದಿಂದ ಬಂಧಿತರಿದ್ದಾರೆ.

**ಭಾವಾರ್ಥ :-** ತಾನು ಯಾರಿಂದ ಉತ್ಪನ್ನನಾದನು, ಅವನು ತನ್ನ ತಂದೆಯಿದ್ದಾನೆ. ಆ ತಂದೆಯು ಪುತ್ರನ ಬಾಲ್ಯಾವಸ್ಥೆಯಲ್ಲಿ ಸೇವೆ ಮಾಡುತ್ತಾನೆ. ಅನೇಕ ಪ್ರಕಾರದಿಂದ ಭೋಜನ ಪಾನೀಯಗಳನ್ನಿತ್ತು ಶೀತ-ಉಷ್ಣಗಳಿಂದ ರಕ್ಷಣೆ ಮಾಡುತ್ತಾನೆ. ಅವನು ವಿಚಾರ ಮಾಡುವುದೇನೆಂದರೆ , - ಇವನು ನನ್ನ ಪುತ್ರನಿದ್ದಾನೆ, ಇವನಿಂದ ನನ್ನ ಹೆಸರು ನಡೆಯುವುದು, ವೃದ್ಧಾವಸ್ಥೆಯಲ್ಲಿ ನನ್ನ ಸೇವೆ ಮಾಡುವನು ಇತ್ಯಾದಿ ಸ್ವಾರ್ಥದ ಬಂಧನದಲ್ಲಿ ಬಂಧಿಸಲ್ಪಟ್ಟು ಮೋಹವಶ ಸ್ನೇಹವನ್ನು ಉತ್ಪನ್ನ ಮಾಡಿಕೊಂಡು ಪುತ್ರನ ರಕ್ಷಣೆ ಮಾಡುತ್ತಾನೆ. ನಂತರ ಒಂದುವೇಳೆ ಪುತ್ರನು ಕುಪುತ್ರನಾಗಿ ಹೋದರೆ, ಅವಿನಯಿಯಾಗಿ ಹೋದರೆ ಅವನಿಂದ ಸ್ವಾರ್ಥ ಸಾಧಿಸದಿರುವುದನ್ನು ಕಂಡು ಮೋಹಬಿಟ್ಟು ಬಿಡುತ್ತಾನೆ; ಮನೆಯಿಂದ ಹೊರಗೆ ಹಾಕುತ್ತಾನೆ, ಹೊಡೆಯುತ್ತಾನೆ, ಬೇರೆಯಿಡುತ್ತಾನೆ-ಅವನೊಂದಿಗೆ ಇರುವುದೂ ಒಳ್ಳೆಯದೆನಿಸುವುದಿಲ್ಲ. ಈ ಪ್ರಕಾರ ಮೊದಲು ಯಾವ ತಂದೆಯು ಮಗನ ಸೇವೆ ಮಾಡುತ್ತಿದ್ದನು ಅದೆಲ್ಲವನ್ನು ಸ್ವಾರ್ಥದ ಬಂಧನಕ್ಕೆ ಬದ್ಧನಾಗಿಯೇ ಮಾಡುತ್ತಿದ್ದನು.

ತಂದೆಯ ತಂದೆಯು ಮೊಮ್ಮಗನಲ್ಲಿ ಮೋಹ ಮಾಡುತ್ತಾನೆ. ಇವನು ನನ್ನ ಮಗನ ಮಗನಿದ್ದಾನೆ, ನನ್ನ ಮೊಮ್ಮಗನಿದ್ದಾನೆ. ಇವನು ದೊಡ್ಡವನಾಗಿ ವೃದ್ಧಾವಸ್ಥೆಯಲ್ಲಿ ನನ್ನ ಸೇವೆ ಮಾಡುತ್ತಾನೆ-ಇಂಥ ಸ್ವಾರ್ಥದ ಬಂಧನದಲ್ಲಿ ಬದ್ಧನಾಗಿ ತಾತನು ಮೊಮ್ಮಗನ ರಕ್ಷಣೆ ಮಾಡುತ್ತಾನೆ.

ತಾಯಿಯು ಒಂಭತ್ತು ತಿಂಗಳವರೆಗೆ ಗರ್ಭದಲ್ಲಿಟ್ಟುಕೊಂಡು ರಕ್ಷಣೆ ಮಾಡಿದಳು. ಜನ್ಮವಾದ ನಂತರ ಮೋಹವಶದಿಂದ ಪುತ್ರನ ರಕ್ಷಣೆ ಮಾಡುತ್ತಾಳೆ. ಶೀತ ಕಾಲದಲ್ಲಿ ಮಧ್ಯರಾತ್ರಿಯಲ್ಲಿಯೂ ಮಲ-ಮೂತ್ರಗಳನ್ನು ತಗೆದುಹಾಕಿ ತಾನು ಬೇಕಾದರೆ ಒದ್ದೆ ಸ್ಥಾನದಲ್ಲಿ ಒರಗಿ ಮಗುವನ್ನು ಬೆಚ್ಚಗೆ ಇರಿಸುತ್ತಾಳೆ. ದೊಡ್ಡವನಾದ ಮೇಲೆ ಸಂಪಾದನೆ ಮಾಡಿ ತಂದು ನನ್ನನ್ನು ಸಾಕುತ್ತಾನೆ - ಸುಖಿಯನ್ನಾಗಿಸುತ್ತಾನೆ, ನನ್ನ ಆಜ್ಞೆ ಮನ್ನಿಸುತ್ತಾನೆಂಬ ಸ್ವಾರ್ಥದ ಬಂಧನದಲ್ಲಿ ಬಂಧಿಸಲ್ಪಟ್ಟ ಮಾತೆಯು ಪುತ್ರನ ರಕ್ಷಣೆ ಮಾಡುತ್ತಾಳೆ.

ಪತಿಯು ಅನೇಕ ಪ್ರಕಾರದ ಕಷ್ಟ ಸಹಿಸಿ ದ್ರವ್ಯ ಸಂಪಾದನೆ ಮಾಡಿ ತಂದು ಪತ್ನಿಗೆ ಕೊಡುತ್ತಾನೆ. ಅನೇಕ ಪ್ರಕಾರದ ಪಂಚೇಂದ್ರಿಯಜನಿತ ಭೋಗ ಸಾಮಗ್ರಿಗಳನ್ನು ಸಂಗ್ರಹಿಸಿ ಪತ್ನಿಯನ್ನು ಸುಖಿ ಮಾಡುತ್ತಾನೆ. ಪತ್ನಿಯೂ ಕೂಡ ನನ್ನ ಮನೋವಾಂಛಿತ ಭೋಗಗಳನ್ನು ಕೊಡುವಂಥ ಭರ್ತಾರ(ಪತಿ)ಯಿದ್ದಾನೆಂದು ತಿಳಿಯುತ್ತಾಳೆ. ಇಂಥ ಸ್ವಾರ್ಥದಿಂದ ಬಂಧಿತ ಪತ್ನಿಯು ಭರ್ತಾರನ ಸೇವೆ ಮಾಡುತ್ತಾಳೆ. ಒಂದುವೇಳೆ ಭರ್ತಾರನು ಕಡಿಮೆ ಸಂಪಾದನೆ ಮಾಡುವಂಥ, ಭಾಗ್ಯಹೀನ, ದರಿದ್ರನಾಗಿದ್ದರೆ - ತನ್ನ ಸಲುವಾಗಿ ಸುಖದ ಕಾರಣನಿಲ್ಲದಿದ್ದರೆ ತನ್ನ ಸ್ವಾರ್ಥರಹಿತ ಪತಿಯನ್ನು ಬಿಟ್ಟು ಬಿಡುತ್ತಾಳೆ.

ಪುತ್ರನೂ ಮಾತಾ-ಪಿತರನ್ನು ತನಗೆ ಯೋಗ್ಯ ಆಹಾರ, ಪಾನೀಯ, ವಸ್ತ್ರ-ವಾಹನಗಳನ್ನು ಕೊಡುವಂಥವರೆಂದು

ತಿಳಿದು ಮಾತಾ-ಪಿತರ ಸೇವೆ ಮಾಡುತ್ತಾನೆ. ಈ ಮಾತಾ-ಪಿತರು ನನ್ನ ಸಂರಕ್ಷಣೆ ಮಾಡುತ್ತಾರೆ ಎನ್ನುವ ಸ್ವಾರ್ಥದಿಂದ ಬಂಧಿತ ಪುತ್ರನು ಮಾತಾ-ಪಿತರ ಸೇವೆ ಮಾಡುತ್ತಾನೆ, ಅವರ ಆಜ್ಞೆ ಮನ್ನಿಸುತ್ತಾನೆ. ಒಂದುವೇಳೆ ತನ್ನ ಸ್ವಾರ್ಥದ ಸಿದ್ಧಿಯಾಗುವುದು ಕಂಡು ಬರದಿದ್ದರೆ ಮಾತಾ-ಪಿತರನ್ನು ಬಿಟ್ಟುಕೊಡುತ್ತಾನೆ.

ಮಿತ್ರನು ಕೂಡ ಸ್ನೇಹ ಮಾಡುವ ಸಮಯದಲ್ಲಿ ಇವನು ಧನಿಕನಿದ್ದಾನೆ, ಆಜ್ಞಾಸಂಪನ್ನನಿದ್ದಾನೆ, ರಾಜ-ಪಂಚರಲ್ಲಿ ಈತನ ಪ್ರತಿಷ್ಠೆಯಿದೆ; ಆದುದರಿಂದ ಪ್ರಸಂಗ ಬಂದ ಮೇಲೆ ಇವನಿಂದ ಧನಸಹಾಯವಾಗಬಹುದಾಗಿದೆ, ಕಷ್ಟದಲ್ಲಿ ಭೋಜನ-ವಸ್ತ್ರಾದಿ ಒಳ್ಳೆಯ ವಸ್ತುಗಳು ದೊರಕುವವೆಂದು ವಿಚಾರ ಮಾಡುತ್ತಾನೆ-ಇಂಥ ಸ್ವಾರ್ಥದ ಬಂಧನದಲ್ಲಿ ಬದ್ಧನಾಗಿ ಮಿತ್ರನು ಸ್ನೇಹ ಮಾಡುತ್ತಾನೆ. ಒಂದುವೇಳೆ ತಮ್ಮ ಪುಣ್ಯವು ಕ್ಷೀಣವಾಗಿ ಆಜ್ಞೆಯು ನಿಂತು ಹೋಗುತ್ತದೆ, ಧನಾದಿಗಳು ಕಡಿಮೆಯಾಗಿ ಹೋದರೆ ಆಗ ತನ್ನ ಪ್ರಯೋಜನದ ಸಿದ್ಧಯಾಗದಿರುವುದನ್ನು ಕಂಡು ಮಿತ್ರನು ಮಿತ್ರತ್ವವನ್ನು ಬಿಟ್ಟುಕೊಡುತ್ತಾನೆ ಎಂದರೆ ಮಿತ್ರನು ಕೂಡ ಸ್ವಾರ್ಥದ ಬಂಧನದಿಂದ ಬದ್ಧನಾಗಿಯೇ ಸ್ನೇಹ ಮಾಡುತ್ತಾನೆ.

ಬಂಧು-ಸೋದರನು ಕೂಡ ತನ್ನ ಮನೋರಥದ ಸಿದ್ಧಿಯಾಗುವವರೆಗೇ ಸ್ನೇಹರೂಪದಿಂದ ಇರುತ್ತಾನೆ. ಪ್ರಯೋಜನ ಸಿದ್ಧಿಯಾಗದಿರುವುದು ಕಂಡು ಬಂದರೆ ಬೇರೆಯಾಗಿ ಬಿಡುತ್ತಾನೆ. ಪುತ್ರಿಯು ಕೂಡ ಎಲ್ಲಿಯವರೆಗೆ ತನ್ನ ಪ್ರಯೋಜನವು ಸಿದ್ಧಿಸುತ್ತಿರುತ್ತದೆ ಅಲ್ಲಿಯವರೆಗೆ ಮಾತಾ-ಪಿತರ ಸೇವೆ ಮಾಡುತ್ತಾಳೆ, ಉಪಕಾರ ಮನ್ನಿಸುತ್ತಾಳೆ. ಒಡೆಯನ ಆಜ್ಞೆಯಲ್ಲಿ ಸೇವಕನು ವರ್ತಿಸುತ್ತಾನೆ. ಎಲ್ಲಿಯವರೆಗೆ ಮನೆಯ ಅನೇಕ ಕಾರ್ಯಗಳ ಸುಧಾರಣೆ-ಯಾಗುತ್ತಿರುವುದು ಕಂಡು ಬರುತ್ತದೆ ಅಲ್ಲಿಯವರೆಗೆ ಒಡೆಯನು ತನ್ನ ಸೇವಕನನ್ನು ಒಳ್ಳೆಯವನೆಂದು ತಿಳಿಯುತ್ತಾನೆ. ಯಾವಾಗ ಇವನ ಆಜ್ಞೆಯ ಪಾಲನೆ ಮಾಡುವುದಿಲ್ಲವೆಂಬುದನ್ನು ತಿಳಿಯುತ್ತಾನೆ ಆಗ ಅವನನ್ನು ಸೇವಕ ವೃತ್ತಿಯಿಂದ ತೆಗೆದುಹಾಕುತ್ತಾನೆ. ಎಂದರೆ ಒಡೆಯನೂ ತನ್ನ ಸ್ವಾರ್ಥದ ಬಂಧನದಿಂದ ಬದ್ಧನಿದ್ದಾನೆ.

ಭಿಕ್ಷುಕ-ಯಾಚಕನೂ ಎಲ್ಲಿಯವರೆಗೆ ತನ್ನ ಯಾಚನೆಯ ಭಂಗವಾಗುವುದಿಲ್ಲ; ಅನ್ನ, ವಸ್ತ್ರ, ಧನಾದಿಗಳನ್ನು ಪಡೆಯುತ್ತಾನೆ ಅಲ್ಲಿಯವರೆಗೆ ಯಶಕೀರ್ತನೆ ಮಾಡುತ್ತಾನೆ. ಯಾಚನೆಯು ಭಂಗವಾದ ಮೇಲೆ ಯಶೋಗಾನ ಮಾಡದೇ ನಿಂದೆ ಮಾಡುತ್ತಾನೆ. ಈ ಪ್ರಕಾರ ಯಾಚಕನು ಕೂಡ ಸ್ವಾರ್ಥದ ಬಂಧನದಿಂದ ಬದ್ಧನಿದ್ದಾನೆ. ಸೇವಕನು ಕೂಡ ಎಲ್ಲಿಯವರೆಗೆ ಒಡೆಯನ ಮನೆಯಿಂದ ಭೋಜನ, ಧನ, ಗ್ರಾಮ, ಆನೆ, ಕುದುರೆ ಮೊದಲಾದ ಸುಖಸಾಮಗ್ರಿಗಳನ್ನು ಪಡೆಯುತ್ತಾನೆ ಅಲ್ಲಿಯವರೆಗೆ ಮಾತ್ರ ಒಡೆಯನ ಸೇವೆಯನ್ನು ಒಳ್ಳೆಯ ರೀತಿಯಿಂದ ಮಾಡುತ್ತಾನೆ. ಯಾವಾಗ ತನ್ನ ಪ್ರಯೋಜನದ ಸಿದ್ಧಿಯಾಗುವುದಿಲ್ಲ ಆಗ ಸೇವೆ-ನೌಕರಿಯನ್ನು ಬಿಟ್ಟು ಬಿಡುತ್ತಾನೆ. ಈ ಪ್ರಕಾರ ಸೇವಕನೂ ತನ್ನ ಸ್ವಾರ್ಥದ ಬಂಧನದಿಂದ ಬದ್ಧನಿದ್ದಾನೆ.

ಇತ್ಯಾದಿರೂಪದಿಂದ ಹೇಳಲಾದ ಯಾವೆಲ್ಲ ಸಂಬಂಧಗಳಿವೆ, ಅವೆಲ್ಲವೂ ತಮ್ಮ-ತಮ್ಮ ಸ್ವಾರ್ಥಮಯ-ವಿವೆಯೆಂದು ತಿಳಿಯುವುದು. ಸಾಂಸಾರಿಕ ಪ್ರಯೋಜನವುಳ್ಳವರು ಸ್ವಾರ್ಥವಿಲ್ಲದೆ ಜೀವದ ಜೊತೆಗೆ ಸ್ನೇಹ ಮಾಡುವುದಿಲ್ಲ. ಜಗತ್ತಿನ ಸ್ವಭಾವವು ಅನಾದಿಯಿಂದ ಹೀಗೆಯೇ ಇರುವುದನ್ನು ತಿಳಿಯುವುದು.

ಧರ್ಮರಸವನ್ನು ಕುಡಿಯುವಂಥ ತತ್ತ್ವಜ್ಞಾನಿಗಳು, ಜಗತ್ತಿನಿಂದ ಉದಾಸೀನ, ಸಮತಾಭಾವವುಳ್ಳವರು, ದಯೆಯ ನಿಧಾನರು, ಪರಮಾರ್ಥಮಾರ್ಗದ ವೇತ್ತಾರರು, ಧರ್ಮಸ್ನೇಹೀ ಜೀವರುಗಳು ಯಾರ ಜತೆ ಸ್ನೇಹ ಮಾಡುತ್ತಾರೆ, ಯಾರ ರಕ್ಷಣೆ ಮಾಡುತ್ತಾರೆ ಅದೆಲ್ಲವು ಸ್ವಾರ್ಥರಹಿತವಿರುತ್ತದೆ. ಏಕೆಂದರೆ ಧರ್ಮಾತ್ಮಾ ಪುರುಷರಿಗೆ ಯಾವುದೇ ಇಂದ್ರಿಯ ಜನಿತ ಸ್ವಾರ್ಥವಿರುವುದಿಲ್ಲ. ಅವರ ಸ್ವಾರ್ಥವು ಪರಮಾರ್ಥ ನಿಮಿತ್ತಕವಿರುತ್ತದೆ.

ಈ ಪ್ರಕಾರ ಸಂಸಾರದ ಸ್ವಭಾವವೇ ಸ್ವಾರ್ಥಮಯವಿದೆಯೆಂದು ತಿಳಿದುಕೊಂಡು ವಿವೇಕಿಗಳು ತಮ್ಮ

ಸ್ವಾರ್ಥ ಸಾಧನೆಯ ಸಲುವಾಗಿ ಪರಮಾರ್ಥ ಮಾರ್ಗದ ಮೇಲೆ ನಡೆಯುವುದು ಯೋಗ್ಯವಿದೆ. ಅದರ ಮೂಲಕ ಪರಂಪರೆಯಿಂದ ಮೋಕ್ಷವಾಗುತ್ತದೆ.

ಈಗ ಯಾವ-ಯಾವ ಪದಾರ್ಥಗಳ ಸ್ವಭಾವವು ಸಹಜವಾಗಿಯೇ ಚಪಲವಿದೆ, ಅದರ ನಾಶವಾಗುವುದಿಲ್ಲ ವೆಂಬುದನ್ನು ತಿಳಿಸಿಕೊಡುತ್ತಾರೆ-

**ಸ್ವಾಣ ಪುಚ್ಛ ಅಹಿ ಗಮಣೋ, ದುಠಚಿತ್ತೋ ಸಹಲ ಬಕ ಣಹಪಾಯೋ ।**
**ಪೀಪಲ ದಲ ಕರಿ ಕಣ್ಣೋ, ಸಠಮಣ ಅಖಸುಹಣಾಹ ಧ್ರುವ ಭಾವೋ ।।೫೫।।**

**ಗಾಥಾರ್ಥ :-** ನಾಯಿಯ ಬಾಲ, ಸರ್ಪದ ನಡಿಗೆ, ದುಷ್ಟ ಜೀವದ ಚಿತ್ತ, ಸಹಜವಾಗಿಯೇ ಮಚ್ಚುಗತ್ತಿ, ಕುಟಿಲ ಡೊಂಕಾಗಿವೆ ಇವುಗಳನ್ನು ಸರಿಮಾಡುವ ಉಪಾಯವಿಲ್ಲ. ಆಲದ ಎಲೆ, ಆನೆಯ ಕಿವಿ, ಮೂರ್ಖನ ಮನಸ್ಸು ಇಂದ್ರಿಯಗಳ ಸುಖ - ಇವು ಧ್ರುವಸ್ವರೂಪವಿರುವುದಿಲ್ಲ.

**ಭಾವಾರ್ಥ :-** ನಾಯಿಯ ಬಾಲವು ಸಹಜವಾಗಿಯೇ ಡೊಂಕಾಗಿರುತ್ತದೆ. ಅದನ್ನು ಸರಿ-ನೀಟಾಗಿಸುವ ಉಪಾಯವು ಯಾವುದೂ ಇಲ್ಲ; ಅದರ ಸಹಜ ಸ್ವಭಾವವೇ ಹಾಗಿದೆ. ಹಾವಿನ ನಡಿಗೆಯು ಸ್ವಭಾವದಿಂದಲೇ ಡೊಂಕಾಗಿರುತ್ತದೆ, ಅದು ಯಾವುದೇ ಉಪಾಯದಿಂದ ಸರಳವಾಗುವುದಿಲ್ಲ. ಅದೇ ಪ್ರಕಾರ ದುಷ್ಟ ಜೀವಗಳ ಪಾಪಾಚರಣೆ ಮಾಡುವಂಥವರ ಚಿತ್ತವು ಕೂಡ ಸಹಜವಾಗಿಯೇ ಕುಟಿಲ, ವಂಚಿಸುವ, ಮೋಸಗೊಳಿಸುವ, ಮಾಯಾಚಾರದಿಂದ ತುಂಬಿರುತ್ತದೆ. ಅವರ ಸಹಜ (ವಿಭಾವ) ಸ್ವಭಾವವು ಅಂಥದೇ ಇದೆ. ಅಂಥ ದುಷ್ಟರ ಸೇವೆಯನ್ನು ಬಹಳಷ್ಟು ಮಾಡಿದರೂ, ವಿನಯ-ವಂದನೆ ಮಾಡಿದರೂ, ಬಹಳಷ್ಟು ಧನಾದಿಗಳನ್ನು ಕೊಟ್ಟರೂ, ಅನೇಕ ಉಪಾಯದಿಂದಲೂ ಆ ಅನಾಚಾರಿ ಕಪಟಿಗಳ ಚಿತ್ತವು ಸರಳವಾಗುವುದಿಲ್ಲ. ಆದುದರಿಂದ ಎಲೈ ಭವ್ಯನೇ! ನೀನು ಉಳಿದ ಎಲ್ಲ ಕಡೆಗೂ ಪ್ರಮಾದದಿಂದ ಇರುತ್ತಿದ್ದರೂ ಇರು. ಆದರೆ ದುಷ್ಟ ಜೀವದ ಸಂಯೋಗ ಬಂದ ಮೇಲೆ ಮೈಮರೆಯಬೇಡ, ಪ್ರಮಾದರೂಪನಾಗಬೇಡ.

ಎಲೈ ಭವ್ಯನೇ ! ಒಂದುವೇಳೆ ಕೃಷ್ಣ ಸರ್ಪದ ಜತೆ ಕ್ರೀಡೆ ಮಾಡುತ್ತಿರುವಾಗ ಪ್ರಮಾದರೂಪನಾಗುವುದರಿಂದ ಮರಣವಾಗಿ ಹೋದರೆ ಒಂದು ಭವದಲ್ಲಿಯೇ ದುಃಖ ಪಡೆಯುವೆ. ಆದರೆ ದುಷ್ಟರ ಸ್ನೇಹ, ಸಂಗತಿ ಪಡೆದು ಮೈಮರೆತರೆ, ಪ್ರಮಾದದ ವಶನಾಗಿ ಹೋದರೆ ಅನೇಕ ಭವಗಳು ಕೆಟ್ಟು ಹೋಗುವವು ಮಹಾದುರ್ಗತಿಗೆ ಬೀಳುವೆ.

**ಸಂದೇಹ :-** ದುಷ್ಟರ ಸ್ನೇಹದಿಂದ ಅನೇಕ ಭವಗಳವರೆಗೆ ದುಃಖ ಉತ್ಪನ್ನವಾಗುವುದೆಂದು ಹೇಳುತ್ತಿರುವಿರಿ; ಆದರೆ ಕೇವಲ ಸಂಗತಿ ಮಾಡಿದರೆ ದುಷ್ಟರು ನಮ್ಮ ಭವ ಹೇಗೆ ಕೆಡಿಸುತ್ತಾರೆ ? ಒಂದುವೇಳೆ ಕೆಡಿಸುತ್ತಾರೆಂದು ತಿಳಿದರೂ ಒಂದು ಭವ ಕೆಡಬಹುದು, ಅನೇಕ ಭವಗಳನ್ನು ಹೇಗೆ ಕೆಡಿಸುತ್ತಾರೆ ?

**ಸಮಾಧಾನ :-** ಎಲೈ ಭವ್ಯನೇ ! ನೀನು ಆಲಿಸು. ಇದರ ಉತ್ತರ ತಿಳಿದುಕೊಂಡು ಶ್ರದ್ಧೆ ಮಾಡುವುದರಿಂದ ನಿನ್ನದು ಒಳಿತಾಗುವುದು ಮತ್ತು ಜ್ಞಾನದಲ್ಲಿ ವೃದ್ಧಿಯೂ ಆಗುವುದು. ಸಜ್ಜನ-ದುರ್ಜನರ ಪರೀಕ್ಷೆ ಮಾಡುವಂಥ ಜ್ಞಾನವು ಪ್ರಗಟವಾಗುವುದು. ಎಲೈ ಧರ್ಮಾತ್ಮನೇ ! ನಾವು ಒಂದುವೇಳೆ ಯಾರೊಂದಿಗಾದರೂ ದ್ವೇಷ ಮಾಡುತ್ತಿದ್ದರೆ ಬೇರೆಯವರು ನಮ್ಮೊಂದಿಗೆ ದ್ವೇಷ ಮಾಡುತ್ತಾರೆ - ಇದು ಸಮಸ್ತ ಸಂಸಾರಿ ಜೀವಗಳ ರೀತಿಯಿದೆ. ಆದರೆ ಸೋದರನೇ ! ಯಾರು ದೋಷವಿಲ್ಲದೆ ನಿಷ್ಕಾರಣವಾಗಿ ಬೇರೆಯವರ ದ್ವೇಷ ಮಾಡುತ್ತಾರೆ ಅವರನ್ನು ದುಷ್ಟರೆನ್ನುತ್ತಾರೆ. ಈ ಪರೀಕ್ಷೆಯಿಂದ ನೀನು ದುಷ್ಟರನ್ನು ಗುರುತಿಸಬೇಕು. ತಾವಂತೂ ಯಾವುದೇ ರೀತಿಯಿಂದ ದ್ವೇಷಭಾವ ಮಾಡುವುದಿಲ್ಲ; ಆದರೆ ಯಾರು ದುಷ್ಟರಿದ್ದಾರೆ ಅವರು ಇತರರ ಧನ, ಆಜ್ಞೆ, ವಸ್ತ್ರ, ಆಭೂಷಣ, ಆನೆ, ಕುದುರೆ, ಪಲ್ಲಕ್ಕಿ ಮೊದಲಾದ ವಾಹನಗಳನ್ನು ನೋಡಿ ಪ್ರಯೋಜನವಿಲ್ಲದೆ ಸಹಜವಾಗಿಯೇ ದ್ವೇಷದ ಭಾವ ಮಾಡುತ್ತಾರೆ.

ಲೋಕದಲ್ಲಿ ಗುಣವಂತರ ಮುಖದಿಂದ ಯಾರದಾದರೂ ಬಹಳಷ್ಟು ಯಶಸ್ಸನ್ನು ಆಲಿಸಿ ಆ ಪಾಪಿಗಳು ವ್ಯರ್ಥವಾಗಿಯೇ ದ್ವೇಷಭಾವ ಮಾಡುತ್ತಾರೆ. ಯಾರಾದರೂ ಸುಮಾರ್ಗದಲ್ಲಿ ತೊಡಗಿರುವುದನ್ನು ನೋಡಿ, ಧರ್ಮದ ಸೇವನೆ ಮಾಡುತ್ತಿರುವುದನ್ನು ನೋಡಿ ದ್ವೇಷದಿಂದ ಇವನು ದೊಡ್ಡ ಧರ್ಮಾತ್ಮನಾಗಿ ಹೋಗಿದ್ದಾನೆ, ನಾವು ಸ್ವಯಂ ಇವನೇ ದೊಡ್ಡ-ದೊಡ್ಡ ಅನೇಕ ಪಾಪಗಳನ್ನು ಮಾಡುತ್ತಿರುವುದನ್ನು ನೋಡಿದ್ದೇವೆಯೆಂದೆಲ್ಲ ಹೇಳುತ್ತಾರೆ. ಆ ದುಷ್ಟರು ಬೇರೆಯವರ ಸುಖವನ್ನು ಸಹಿಸುವುದಿಲ್ಲ, ಸ್ವಯಂ ದುಃಖ ಮಾಡುತ್ತಿರುತ್ತಾರೆ. ಬೇರೆಯವರಿಗೆ ರೋಗ, ಶೋಕ, ಆಘಾತವಾಗಿರುವುದನ್ನು ಕಂಡು - ಬೇರೆಯವರನ್ನು ದುಃಖೀ - ದರಿದ್ರಿ ಯಾಗಿರುವುದನ್ನು ಕಂಡು ಪ್ರಸನ್ನರಾಗುತ್ತಿದ್ದರೆ ಅವರನ್ನು ದುಷ್ಟರೆಂದು ತಿಳಿಯುವುದು. ಅಂಥ ದುಷ್ಟ, ಜಗತ್ತಿನಿಂದ ನಿಂದ್ಯರಾದವರ ಸಂಗತಿಯಿಂದ ಒಳ್ಳೆಯ ಮನುಷ್ಯನೂ ನಿಂದಿತನಾಗುತ್ತಾನೆ, ಅಪಯಶ ಪಡೆಯುತ್ತಾನೆ, ಅನಾದರಕ್ಕೆ ಗುರಿಯಾಗುತ್ತಾನೆ; ಆ ಅನಾದರದಿಂದ ಆತ್ಮನು ದುಃಖಿಯಾಗುತ್ತಾನೆ. ಆದುದರಿಂದ ದುಷ್ಟರ ಸಂಗತಿಯ ನಿಷೇಧ ಮಾಡಲಾಗಿದೆ.

ಇನ್ನು ದುಷ್ಟರು ಪರಭವದಲ್ಲಿ ಹೇಗೆ ದುಃಖದಾಯಕರಾಗುತ್ತಾರೆಂಬ ಪ್ರಶ್ನೆಯ ಉತ್ತರವನ್ನು ಈಗ ಆಲಿಸು ! ಯಾವಾಗ ದುಷ್ಟ ಜನರೊಂದಿಗೆ ಪ್ರೀತಿಯಾಗುತ್ತದೆ ಆಗ ಆ ಪಾಪಾಚಾರಿಗಳು ಪಾಪಕಾರ್ಯಗಳಲ್ಲಿ ನಿನ್ನನ್ನು ರಂಜಾಯಮಾನಗೊಳಿಸುತ್ತಾರೆ. ಕಾರಣವಿಲ್ಲದೆ ಸಹಜವಾಗಿಯೇ ಧರ್ಮದೊಂದಿಗೆ ದ್ವೇಷ ಭಾವವುಳ್ಳ, ದುರಾಚಾರಿಯು ಧರ್ಮಭಾವನೆಯಿಂದ ರಹಿತ ಅಭಕ್ಷ್ಯ ಮೊದಲಾದವುಗಳ ಭೋಜನ ಮಾಡುವಂಥವನಿದ್ದಾನೆ. ಅಂಥವನಿಗೆ ಧರ್ಮವೆಂಬ ಹೆಸರು ಕೂಡ ಒಳ್ಳೆಯದೆನಿಸುವುದಿಲ್ಲ. ಅದರಿಂದ ಪುಣ್ಯದಿಂದ ನಿನ್ನನ್ನು ಬಿಡಿಸಿ ಪಾಪ ಪಂಥದಲ್ಲಿ ಪ್ರೇರಿತಗೊಳಿಸುತ್ತಾನೆ. ಹೇಗಾದರೂ ಮಾಡಿ ಅನೇಕ ಯುಕ್ತಿಗಳಿಂದ ಹಾಸ್ಯ, ಕುತೂಹಲ, ಇಂದ್ರಿಯ ಭೋಗಗಳಲ್ಲಿ ತೊಡಗಿಸಿ ಧರ್ಮದಿಂದ ಭ್ರಷ್ಟ ಮಾಡುತ್ತಾನೆ. ತನು, ಮನ, ಧನ, ವಚನ ಇತ್ಯಾದಿ ಅನೇಕ ಪ್ರಕಾರದಿಂದ ಪಾಪ ಕಾರ್ಯಗಳಲ್ಲಿ ಸಹಾಯಕನಾಗುತ್ತಾನೆ, ಪಾಪ ಮಾಡಿಸುತ್ತಾನೆ. ಸ್ನೇಹ ಮಾಡುವಂಥವನನ್ನು ದುರ್ಬುದ್ಧಿಯನ್ನಾಗಿಸಿ ಪಾಪಬಂಧ ಮಾಡಿಸುತ್ತಾನೆ. ಪರಭವವನ್ನು ಕೆಡಿಸುತ್ತಾನೆ - ಈ ಪ್ರಕಾರ ದುಷ್ಟನ ಸಂಗತಿಯಿಂದ ಈ ಜೀವನು ಅನೇಕ ಪ್ರಕಾರದಿಂದ ದುಃಖ ಪಡೆಯುತ್ತಾನೆ. ಆದುದರಿಂದ ಎಲೈ ಭವ್ಯನೇ ! ಅಂಥವರ ಸಂಗತಿ, ಸ್ನೇಹವು ನರಕ-ಪಶುಗತಿಗಳ ದುಃಖದಾಯಕವೆಂದೇ ತಿಳಿಯುವುದು. ಹೀಗೆ ದುಷ್ಟ ಜನರ ನಿಮಿತ್ತದಿಂದ ಎಲ್ಲ ಪ್ರಕಾರ ದುಃಖವೇ ಆಗುತ್ತಿರುವುದನ್ನು ತಿಳಿದು, ಅದರ ತ್ಯಾಗ ಮಾಡುವುದು ಸುಖದಾಯಕವಿದೆ.

ಎಲೈ ಧರ್ಮಾತ್ಮನೇ ! ನೀನು ಸರಳ ಬುದ್ಧಿಯವನಿರುವುದರಿಂದ - ನಾನು ಯಾವುದೋ ನಯದಿಂದ - ದೃಷ್ಟಾಂತದಿಂದ ಅವನನ್ನು ಧರ್ಮದಲ್ಲಿ ತೊಡಗಿಸಿ ಅವನಿಗೆ ಒಳಿತು ಮಾಡಬೇಕೆಂಬ ವಿಚಾರವನ್ನು ದಯೆಯ ಭಾವದಿಂದ ಮಾಡಬಹುದಾಗಿದೆ; ಆದರೆ ಎಲೈ ಪರೋಪಕಾರೀ ಭವ್ಯನೇ ! ನೀನು ಇಂಥ ಭ್ರಮೆಯ ತ್ಯಾಗ ಮಾಡು. ಅವನನ್ನು ಸುಧಾರಿಸುವುದು ಮಹಾ ಅಸಾಧ್ಯವಿದೆ. ಆಗದಿರುವ ಕಾರ್ಯವೆಂದು ತಿಳಿ. ನಾಯಿಯ ಬಾಲವು ಕುಟಿಲತೆಯನ್ನು ಬಿಟ್ಟು ಸರಳವಾದರೆ ಆ ದುಷ್ಟನೂ ದುಷ್ಟತೆಯನ್ನು ಬಿಟ್ಟು ಧರ್ಮರೂಪನಾಗಬಹುದಾಗಿದೆ. ಸರ್ಪದ ನಡಿಗೆಯು ವಕ್ರತೆಯನ್ನು ಬಿಟ್ಟು ಸರಳವಾಗಿ ಹೋದರೆ ಆ ಕುಬುದ್ಧಿಗೆ ಧರ್ಮದಲ್ಲಿ ಅಭಿರುಚಿಯಾಗಬಹುದಾಗಿದೆ. ಆದರೆ ಹೇಗೆ ಸರ್ಪದ ನಡಿಗೆ ಮತ್ತು ನಾಯಿಯ ಬಾಲವು ಅನಾದಿಯಿಂದ ವಕ್ರವಿರುವ ಕಾರಣ ಯಾವುದೇ ಉಪಾಯವು ಅದನ್ನು ನಾಶಗೊಳಿಸುವ ಸಾಧ್ಯತೆಯಿಲ್ಲ, ಹಾಗೆಯೇ ದುಷ್ಟರ ಸ್ವಭಾವವು ಸಹಜವಾಗಿಯೇ ಅನಾಚಾರರೂಪವಿರುವುದರಿಂದ ಅವರಿಗೆ ಧರ್ಮದ ಅಭಿರುಚಿಯು ಎಂದೂ ಆಗುವ ಸಾಧ್ಯತೆಯಿಲ್ಲ- ಎಂಬುದನ್ನು ತಿಳಿದು ದುಷ್ಟರ ಸಂಗತಿ-ಸ್ನೇಹದ ತ್ಯಾಗ ಮಾಡುವುದೇ ಯೋಗ್ಯವಿದೆ.

ತನು-ಧನ ಮೊದಲಾದ ಸಾಮಗ್ರಿಗಳು ವಿನಾಶಿಕವಿವೆ. ಆದ್ದರಿಂದ ಅವುಗಳ ಕುರಿತು ಮಮತ್ವ ಭಾವದ ತ್ಯಾಗ ಮಾಡುವುದು ಯೋಗ್ಯವಿದೆ. ಯಾವ ಪ್ರಕಾರ ಆಲದ ಎಲೆಗಳು ಚಂಚಲವಿವೆ, ಆನೆಯ ಕಿವಿಗಳು

ಚಂಚಲವಿವೆ, ಮೂರ್ಖನ ಮನಸ್ಸು ಚಪಲವಿದೆ, ಅದೇ ಪ್ರಕಾರ ಎಲೈ ಭವ್ಯನೇ ! ಈ ಜಗತ್ತಿನ ಇಂದ್ರಿಯ ಸುಖಗಳನ್ನು ಚಂಚಲವೆಂದು ತಿಳಿ. ಹೇಗೆ ಆಲದಎಲೆ, ಗಜಕರ್ಣ ಮತ್ತು ಮೂರ್ಖನ ಮನಸ್ಸು ಸಹಜವಾಗಿಯೇ ಚಪಲವಿದೆ, ಹಾಗೆಯೇ ಇಂದ್ರಿಯ ಜನಿತ ಸುಖಗಳು ಸಹಜವಾಗಿಯೇ ವಿನಾಶಶೀಲವೆಂದು ತಿಳಿದುಕೊಂಡು ಅವುಗಳ ಕುರಿತಾಗಿರುವಂಥ ಮಮತ್ವ ಭಾವವನ್ನು ಬಿಟ್ಟುಕೊಟ್ಟು ಧರ್ಮದಲ್ಲಿ ತೊಡಗುವುದು ಯೋಗ್ಯವಿದೆ. ನೀನು ಧರ್ಮಾರ್ಥಿಯಿರುವುದರಿಂದ ನಿನಗೆ ಧರ್ಮದ ಉಪದೇಶ ಕೊಡುತ್ತೇವೆ. ನೀನು ಅದನ್ನು ಆಲಿಸು ! ಯಾರು ಧರ್ಮಾರ್ಥಿಯಿದ್ದಾರೆ, ಅವರ ಚಿತ್ತವು ಧರ್ಮದ ಉಪದೇಶ ಆಲಿಸುವಲ್ಲಿ ತೊಡಗುತ್ತದೆ. ಮೂರ್ಖನಂತೂ ಧರ್ಮದ ವಾಸನೆಯಿಂದ ರಹಿತ ಪ್ರಾಣಿಯಿದ್ದಾನೆ; ಅದರಿಂದ ಅವನ ಚಿತ್ತವು ಧರ್ಮೋಪದೇಶದಿಂದ ಚಂಚಲವಾಗಿ ಹೋಗುತ್ತದೆ-ಸ್ಥಿರವಾಗುವುದಿಲ್ಲ.

ಈ ಅಜ್ಞಾನಿಯು ಧರ್ಮ ಸ್ವರೂಪದಲ್ಲಿ ಏನನ್ನೂ ತಿಳಿಯುವುದಿಲ್ಲ. ಈ ದುರಾತ್ಮನ ಉಪಯೋಗವು-ಈ ಕುಬುದ್ಧಿಯ ಚಿತ್ತವು ವಿಕಥೆ, ಯುದ್ಧ, ರಾಜಕಥೆ, ಧನಕಥೆ, ಪರರ ನಿಂದೆ ಮಾಡುವ ಇತ್ಯಾದಿ ಪಾಪಸ್ಥಾನಗಳಲ್ಲಂತೂ ನಿಃಪ್ರಮಾದಿಯಾಗಿ ಒಳ್ಳೆಯ ರೀತಿ ಮನ-ವಚನ-ಕಾಯದ ಏಕತೆಯೊಂದಿಗೆ ತೊಡಗುತ್ತದೆ ಮತ್ತು ಧರ್ಮ ಮಾರ್ಗವು ವಿಸ್ಮೃತವಾಗಿ ಹೋಗುತ್ತದೆ. ಇಂಥ ಜೀವನಿಗೆ ಧರ್ಮದ ಉಪದೇಶ ಕೊಟ್ಟ ಮೇಲೆ ಆ ಧರ್ಮದರಿದ್ರನು ಅನ್ಯ ವಿಕಲ್ಪ ಮಾಡುತ್ತಿರುತ್ತಾನೆ, ಧರ್ಮೋಪದೇಶವನ್ನು ಧಾರಣ ಮಾಡುವುದಿಲ್ಲ. ಧರ್ಮ ಕೇಳುತ್ತ-ಕೇಳುತ್ತ ನಿದ್ರೆಯು ಬಂದು ಬಿಟ್ಟರೆ ಮಲಗಿಕೊಳ್ಳುತ್ತಾನೆ, ತೂಕಡಿಸುತ್ತಾನೆ. ಒಂದುವೇಳೆ ಜಾಗೃತನಾಗಿದ್ದರೆ ಹತ್ತಿರದಲ್ಲಿರುವ ಬೇರೆ ಮನುಷ್ಯರ ಜತೆ ಮಾತನಾಡಲಾರಂಭಿಸುತ್ತಾನೆ. ಅವನು ತಾನಂತೂ ಪಾಪಿಯೇ ಇದ್ದಾನೆ, ತನ್ನ ಹತ್ತಿರ ಕುಳಿತಿರುವ ಜೀವನನ್ನೂ ಮಾತುಗಳಲ್ಲಿ ತೊಡಗಿಸಿ ಅವನ ಧರ್ಮದ ಘಾತ ಮಾಡಿ ಆತನ ಪರಭವ ಕೆಡಿಸುತ್ತಾನೆ. ಅಂಥ ಜೀವನು ಧರ್ಮಸನ್ಮುಖ ಹೇಗಾಗುವ ಸಾಧ್ಯತೆಯಿದೆ ? ಈ ಪ್ರಕಾರ ಕುಟಿಲ ಚಿತ್ತಧಾರಿ ಮಾಯಾಚಾರಿಗಳಿಗೆ ಧರ್ಮೋಪದೇಶವು ಫಲಪ್ರದವಾಗುವುದಿಲ್ಲ. ಆದುದರಿಂದ ವಿವೇಕವಂತರು ಪ್ರಮಾದದಿಂದ ಚಿತ್ತವನ್ನು ಚಂಚಲವಾಗಿರಿಸುವುದು ಯೋಗ್ಯವಿಲ್ಲ.

ಈಗ ಜಿನಆಜ್ಞೆಯಿಂದ ರಹಿತ, ಅತತ್ತ್ವಶ್ರದ್ಧಾನಿ, ಮಹಾಪಂಡಿತನ ಮುಖದಿಂದಲೂ ಉಪದೇಶ ಕೇಳುವುದು ಯೋಗ್ಯವಿಲ್ಲವೆಂದು ಹೇಳುತ್ತಾರೆ,-

**ಅಹಿಸರಣಗ ಉಕ್ಕಟ್ಠೋ, ಗಹಯೇ ಪಾಣಾಂತ ಹೋಯ ಣೇಮಾಯ ।**
**ಇವ ಮಿಛಿಮುಹ ಉವದೇಸೋ, ಸಧಾ ಕುಗಯ ದೇಯ ಭವಮಯಣಂ ।।೫೬।।**

**ಗಾಥಾರ್ಥ :-** ಸರ್ಪದ ಹೆಡೆಯಲ್ಲಿರುವ ಮಣಿರತ್ನವು ಉತ್ಕೃಷ್ಟವಿದೆ; ಆದರೆ ಆ ರತ್ನವನ್ನು ಗ್ರಹಣ ಮಾಡುವುದರಿಂದ ನಿಶ್ಚಿತವಾಗಿಯೇ ಮರಣವಾಗುತ್ತದೆ, ಅದೇ ಪ್ರಕಾರ ಮಿಥ್ಯಾದೃಷ್ಟಿ ಜೀವರುಗಳ ಮುಖದಿಂದ ಉಪದೇಶ ಕೇಳುವುದು, ಅದರ ಶ್ರದ್ಧೆ ಮಾಡುವುದರಿಂದ ಕುಗತಿಗಳಲ್ಲಿ ಅನೇಕ ಭವಗಳವರೆಗೆ ಜನ್ಮ-ಮರಣ ಮಾಡಬೇಕಾಗುತ್ತದೆ.

**ಭಾವಾರ್ಥ :-** ನಾಗ ಸರ್ಪದ ಮಸ್ತಕದಲ್ಲಿರುವ ಮಣಿರತ್ನವು ಮಹಾ ಉತ್ಕೃಷ್ಟವಿದ್ದರೂ ಅನೇಕ ಗುಣಗಳಿಂದ ಸಹಿತವಿದ್ದರೂ ಅದರ ಲೋಭದಿಂದ ಒಂದುವೇಳೆ ಯಾರಾದರೂ ಅದನ್ನು ಪಡೆಯಲಿಚ್ಛಿಸಿದರೆ, ಲೋಭವೂ ಸಾಧ್ಯವಾಗುವುದಿಲ್ಲ ಮತ್ತು ಮರಣದ ಪ್ರಾಪ್ತಿಯಾಗುವುದು. ಏಕೆಂದರೆ ರತ್ನವಂತೂ ಒಳ್ಳೆಯದಿದೆ; ಆದರೆ ಹಾಲಾಹಲ ಮಹಾವಿಷದಿಂದ ತುಂಬಿಕೊಂಡಿದೆ. ಚಪಲ ಬುದ್ಧಿ, ಮಹಾಕ್ರೋಧ ಕಷಾಯದ ಧಾರಕ ಕಾಲರೂಪ ಭುಜಂಗದ ಹತ್ತಿರವಿದೆ. ವಿಷದಿಂದ ತುಂಬಿದ ಸರ್ಪದ ಮಸ್ತಕದಿಂದ ಮಣಿರತ್ನವನ್ನು ತಗೆದುಕೊಳ್ಳುವುದೆಂದರೆ ಅದು ಮರಣದ್ದೇ ಕಾರಣವೆಂದು ತಿಳಿಯುವುದು.

ಅದೇ ಪ್ರಕಾರ ಎಲೈ ಭವ್ಯನೇ ! ಕುದೇವ, ಕುಗುರು, ಕುಧರ್ಮದ ಸೇವೆ ಮಾಡುವಂಥ ಜಿನಭಾಷಿತ ಧರ್ಮದಿಂದ ವಿಮುಖ, ಮಹಾನಕ್ರೋಧ-ಮಾನ ಮೊದಲಾದ ಕಷಾಯರೂಪ ವಿಷದಿಂದ ತುಂಬಿಕೊಂಡಿರುವ ಮಿಥ್ಯಾದೃಷ್ಟಿ ರೂಪದ ಸರ್ಪದ ಹತ್ತಿರದಿಂದ ಒಳ್ಳೆಯ ವಿದ್ಯೆರೂಪ ರತ್ನವಿದ್ದರೂ ಆತನ ಮುಖದಿಂದ ಉಪದೇಶ ರೂಪದ ರತ್ನವನ್ನು ಗ್ರಹಣ ಮಾಡುವ ಭಾವನೆಯಿಂದ ಅದನ್ನು ಒಳ್ಳೆಯದೆಂದು ತಿಳಿದು ಶ್ರದ್ಧೆ ಮಾಡಿದರೆ ಅವನು ನರಕ-ಪಶುಗತಿ ಮೊದಲಾದ ಕುಗತಿಗಳಲ್ಲಿ ಜನ್ಮ-ಮರಣದ ತೀವ್ರ ದುಃಖಕ್ಕೆ ಪ್ರಾಪ್ತವಾಗುತ್ತಾನೆ.

**ಸಂದೇಹ :-** ತಾವು ಹೇಳುತ್ತಿರುವುದಂತೂ ಸತ್ಯವಿದೆ. ಆತನ ಮಿಥ್ಯಾದೃಷ್ಟಿತನವನ್ನು ನಾವು ತಿಳಿಯುತ್ತೇವೆ; ನಮಗೆ ಶಾಸ್ತ್ರಗಳನ್ನು ಓದುವ ಜ್ಞಾನವಿಲ್ಲ ಮತ್ತು ಜಿನವಾಣಿಯನ್ನಾಲಿಸುವ ತೀವ್ರ ಅಭಿಲಾಷೆಯಿದೆ. ಅವನು ಮಿಥ್ಯಾದೃಷ್ಟಿಯಾಗಿದ್ದರೂ ಅವನಿಗೆ ಶಾಸ್ತ್ರಗಳ ವಿಶೇಷ ಜ್ಞಾನವಿದೆ. ಅನೇಕ ಸಂಸ್ಕೃತ, ಪ್ರಾಕೃತ, ಪದ್ಯ-ಶ್ಲೋಕ, ಗಾಥೆಗಳ ವಾಚನ ಕಲೆಯಿದೆ, ಮಧುರವಾಗಿ ಹಾಡುತ್ತಾನೆ, ಅರ್ಥಗಳ ಪ್ರಕಟತೆಯನ್ನೂ ಚೆನ್ನಾಗಿ ಮಾಡುತ್ತಾನೆ, ಕಂಠವು ಒಳ್ಳೆಯದಿದೆ. ಅದರಿಂದ ನಾವು ಅವನಿಂದ ಜಿನ ಆಮ್ನಾಯದ ಶಾಸ್ತ್ರಗಳನ್ನು ಓದಿಸಿ, ಅದರ ಅರ್ಥವನ್ನು ಗ್ರಹಣ ಮಾಡಿ ಧರ್ಮಧ್ಯಾನದಲ್ಲಿ ಸಮಯ ಕಳೆಯುತ್ತ ಪುಣ್ಯಾರ್ಜನೆ ಮಾಡುತ್ತೇವೆ; ಅದರಲ್ಲಿ ದೋಷವೇನಿದೆ?

**ಸಮಾಧಾನ :-** ಎಲೈ ಧರ್ಮಾನುರಾಗಿಯೇ ಆಲಿಸು ! ಆ ಮಿಥ್ಯಾತ್ವದ ಸಾಕಾರ ಮೂರ್ತಿ, ಕ್ರೋಧ-ಮಾನ-ಮಾಯೆ-ಲೋಭಗಳ ಪೋಷಣೆ ಮಾಡುವಂಥವನು ಒಂದುವೇಳೆ ಜಿನವಚನಗಳ ಅನುಸಾರ ಹತ್ತು ಮಾತುಗಳನ್ನು ಹೇಳುತ್ತಿದ್ದರೂ ಅವುಗಳಲ್ಲಿ ಕೂಡ ಎರಡು ಮಾತುಗಳು ಮಿಥ್ಯಾತ್ವದ ಪೋಷಕವಿರುವಂಥವನ್ನು ಹೇಳುವನು. ನಿನಗಂತೂ ಅವುಗಳ ನಿರ್ಣಯ ಮಾಡಬಹುದಾದಂಥ ವಿಶೇಷ ಜ್ಞಾನವಿಲ್ಲ. ಸಾಮಾನ್ಯ ಜ್ಞಾನದ ಯೋಗವಿರುವುದರಿಂದ ನೀನು ಮಿಥ್ಯಾತ್ವವನ್ನು ಒಳ್ಳೆಯದೆಂದು ತಿಳಿದು ಶ್ರದ್ಧೆ ಮಾಡಬಹುದಾಗಿದೆ. ಮಿಥ್ಯಾವಚನಗಳ ಶ್ರದ್ಧೆಯಾಗುವುದರಿಂದ ಧರ್ಮರತ್ನಮಯವಾದ ಸತ್ಯ ಶ್ರದ್ಧೆಯ ಅಭಾವವಾಗಿ ಹೋಗುವುದು. ಅದರಿಂದ ಸಂಸಾರ ಭ್ರಮಣವಾಗುವುದು. ಚತುರ್ಗತಿ ಸಂಬಂಧದ ಜನ್ಮ-ಮರಣಗಳ ದುಃಖ ಭೋಗಿಸುವೆ. ಆದುದರಿಂದ ಮಿಥ್ಯಾತ್ವಿಯ ಮುಖದಿಂದ ಉಪದೇಶ ಕೇಳುವುದು ಯೋಗ್ಯವಿಲ್ಲ.

ಯಾರು ಜಿನಭಾಷಿತ ತತ್ತ್ವಗಳ ವೇತ್ತಾರರಿದ್ದಾರೆ, ವೀತರಾಗಿ ಸುದೇವ, ನಗ್ನ ಗುರು, ದಯಾಮಯ ವೀತರಾಗಿ ಧರ್ಮ-ಇಂಥ ದೇವ, ಗುರು, ಧರ್ಮದ ದೃಢ ಶ್ರದ್ಧಾಳುವಿದ್ದಾರೆ, ಅವರ ಹತ್ತಿರ ಬೇಕಾದರೆ ವಚನ ಕಲೆಯು ಅಲ್ಪವಿರಲಿ, ಜ್ಞಾನವು ಸಾಮಾನ್ಯವಿದ್ದರೂ ಅವರ ಮುಖದಿಂದ ಧರ್ಮೋಪದೇಶವು ಅದು ಸುಖದಾಯಕವಿದೆ; ಆದರೆ ಅತತ್ತ್ವಶ್ರದ್ಧೆಯುಳ್ಳ ಮಿಥ್ಯಾದೃಷ್ಟಿಗಳ ಧರ್ಮೋಪದೇಶವು ಹಿತಕರವಿರುವುದಿಲ್ಲ.

ಈರ್ವರು ಪುರುಷರು ಪರದೇಶ, ಗ್ರಾಮಾಂತರಕ್ಕೆ ಹೋಗಿದ್ದರು. ಅವರಲ್ಲಿ ಒಬ್ಬನಂತೂ ಶುಭಾಚಾರಿಯಿದ್ದನು ಹಾಗೂ ಇನ್ನೊಬ್ಬನು ಮುಗ್ಧ ಕುಆಚಾರಿಯಿದ್ದನು. ಇಬ್ಬರಿಗೂ ಅಡುಗೆ ಮಾಡಲು ಬರುತ್ತಿರಲಿಲ್ಲ. ಯಾವಾಗ ಊಟದ ಹಸಿವೆಯಾಗುತ್ತದೆ ಆಗ ಪರಸ್ಪರರಲ್ಲಿ ಚರ್ಚೆ ಮಾಡುತ್ತ-ಸೋದರನೇ ! ಹಸಿವೆಯಾಗಿದೆ. ಈಗ ಏನು ಮಾಡುವುದು ? ನಮ್ಮ ಹತ್ತಿರ ಹಣವಂತೂ ಸಾಕಷ್ಟು ಇದೆ, ಆದರೆ ಅಡುಗೆ ಮಾಡಲು ಬರುವುದಿಲ್ಲವಲ್ಲ. ಆಗ ಸದಾಚಾರವನ್ನು ತಿಳಿಯದ ಮುಗ್ಧನು - ಹಸಿವೆಯಾಗಿದೆಯೆಂದ ಮೇಲೆ ಆ ಹೋಟೆಲಿಗೆ ಹೋದರೆ ಕೂಡಲೆ ನಮ್ಮ ಮನಸ್ಸಿಗೆ ಹಿಡಿಸುವಂಥ ಸ್ವಾದಿಷ್ಟ ಬಿಸಿ ಬಿಸಿಯಾದ ಭೋಜನ ಸಿಗುತ್ತದೆ ಚೆನ್ನಾದಿ ಭೋಜನ ಮಾಡೋಣ ಮತ್ತು ಅವನು ಕೇಳಿದಷ್ಟು ಹಣವನ್ನು ಕೊಡೋಣ-ಎನ್ನುತ್ತಾನೆ. ಆಗ ಸದಾಚಾರ ಸಂಪನ್ನನು - ಸೋದರನೇ ! ಹೋಟೆಲಲ್ಲಿ ಸಿಗುವ ಭೋಜನವು ಒಳ್ಳೆಯದಿದೆ, ಅನೇಕ ರಸಮಯ ಸ್ವಾದಿಷ್ಟವಿದ್ದರೂ ಏನಾಯಿತು? ಅದು ಆಚಾರರಹಿತವಿರುವುದರಿಂದ ಅಯೋಗ್ಯವಿದೆ. ನಮ್ಮ ಹಿರಿಯರಿಗೆ ಹಾಗೂ ಜಾತಿಯವರಿಗೆ ಈ ವಿಷಯವು ತಿಳಿಯಿತೆಂದರೆ ಜಾತಿಯಿಂದ ನಮ್ಮನ್ನು ಬಹಿಷ್ಕೃತ ಮಾಡುವರು, ಪಂಕ್ತಿಯಿಂದ ಎಬ್ಬಿಸಿ ಬಿಡುವರು ಅಲ್ಲದೆ ಅಭಕ್ಷ್ಯದ

ಯೋಗದಿಂದ ಪರಭವದಲ್ಲಿ ನರಕಾದಿಗಳ ದುಃಖ ಭೋಗಿಸಬೇಕಾಗುವುದು. ಅದಕ್ಕಾಗಿ ನಾವಂತೂ ನಮಗೆ ಏನು ಬರುತ್ತದೆಯೋ ಅದನ್ನು ಮಾಡಿ ತಿನ್ನೋಣ ಅಥವಾ ನಮ್ಮ ಜಾತಿಯವನಾದ ಯಾವನೋ ಸೋದರನು ಸಿಕ್ಕರೆ ಅವನ ಕೈಯಿಂದ ಮಾಡಲಾಗುವ ಪಕ್ವ-ಅಪಕ್ವ, ನೀರಸವಿದ್ದರೂ ಅಂಥ ಅಡುಗೆಯನ್ನುಂಡು ಪರದೇಶದ ನಾಲ್ಕಾರು ದಿನ ಕಳೆಯೋಣ. ನಮಗೆ ಮರಣವು ಸ್ವೀಕಾರವಿದೆ; ಆದರೆ ಹೋಟೆಲ್ ಊಟ ಮಾಡುವುದು ಸ್ವೀಕೃತವಿಲ್ಲ. ಈ ಪ್ರಕಾರ ಹೋಟೆಲಿನ ಒಳ್ಳೆಯ ಭೋಜನ ಬಿಟ್ಟು ತಮ್ಮ ಜಾತಿಯವ(ಸದಾಚಾರೀ ಸೋದರ)ನಿಂದ ಬೇಯಿಸಿ ಹಾಕಿದ ಪಕ್ವ-ಅಪಕ್ವ, ತುಪ್ಪ-ಮಿಠಾಯಿಗಳಿಲ್ಲದ ಅಡುಗೆಯನ್ನುಂಡು ತಮ್ಮ ಧರ್ಮವನ್ನು ಕಾಯ್ದುಕೊಂಡರು.

ಯಾರು ಆಚಾರರಹಿತ ಸ್ವಾದಲಂಪಟಿಗಳಾದ ಅಜ್ಞಾನಿಗಳಿದ್ದಾರೆ ಅವರು ಹೋಟೆಲ್ ಊಟ ಮಾಡುತ್ತಾರೆ; ಆದರೆ ನಂತರ ಮನೆಗೆ ಬಂದಮೇಲೆ ಅವರ ಅನಾಚಾರದ ವಾರ್ತೆಯು ಗೊತ್ತಾದ ಮೇಲೆ ಅವರನ್ನು ಜಾತಿಯಿಂದ ಹೊರಗೆ ಹಾಕಲಾಗುತ್ತದೆ ಹಾಗೂ ಪರಗತಿಯಲ್ಲಿ ದುರ್ಗತಿಯೊಳಗೆ ಬೀಳುತ್ತಾರೆ. ಅದೇ ಪ್ರಕಾರ ಮಿಥ್ಯಾತ್ವಿಯ ಉಪದೇಶವು ಹೋಟೆಲ ಊಟದ ಸಮಾನವೆಂದು ತಿಳಿದು ದೃಢ ಶ್ರದ್ಧೆಯ ಸಮ್ಯಗ್ದೃಷ್ಟಿಗಳಿಗೆ ತ್ಯಾಗ ಯೋಗ್ಯವಿದೆ.

ಶಾಸ್ತ್ರಗಳಂತೂ ಜಿನ ಆಮ್ನಾಯದವಿವೆ, ಅವುಗಳ ವಾಚನವನ್ನು ಯಾರು ಬೇಕಾದವರ ಮೂಲಕ ಮಾಡಿಸಿ ತಿಳಿದುಕೊಳ್ಳುವುದಿದೆಯೆಂದು ಮುಗ್ಧರು ಹೇಳುತ್ತಾರೆ ಆ ಮುಗ್ಧರು ಶ್ರದ್ಧೆಯಿಲ್ಲದ, ಶಿಥಿಲ ಪರಿಣಾಮಿ, ನಾಮಮಾತ್ರ ಧರ್ಮಾತ್ಮಾ, ಜಿನಧರ್ಮದ ಉಪಾಸನೆ ಮಾಡಿ ಪರಭವದಲ್ಲಿ ಸುಖ ಬಯಸುವಂಥವರು ಅನ್ಯ ಹೋಟಲೂಟ ಮಾಡಿ ಸುಖಿಯಾಗಬಯಸುತ್ತಾರೆ; ಆದರೆ ಪರಭವದಲ್ಲಂತೂ ಜಿನ ಆಜ್ಞೆಯ ಅನುಸಾರ ದೃಢ ಶ್ರದ್ಧೆಯ ಫಲವು ದೊರಕುತ್ತದೆ. ಅದರಿಂದ ಇವರಿಗಂತೂ ಕುಗತಿಯ ದುಃಖವೇ ದೊರೆವುದು. ಎಲೈ ಭವ್ಯನೇ! ನೀನು ಧರ್ಮಫಲದ ಲೋಭಿ ಮತ್ತು ಮೋಕ್ಷಮಾರ್ಗದ ಅಭಿಲಾಷೆಯುಳ್ಳವನಿದ್ದರೆ ಮಧುರ ಸ್ವರ ಮತ್ತು ಒಳ್ಳೆಯ ಕಂಠದ ಕಾರಣ ಕರ್ಣಗಳಿಗೆ ಹಿತವೆನಿಸಿದರೂ ಮಿಥ್ಯಾದೃಷ್ಟಿಯ ಮುಖೋಪದೇಶವು ಸರ್ಪದ ಮಣಿಯಂತೆ ಹಾಗೂ ಹೋಟೆಲಿನ ಭೋಜನದಂತೆ ಬಿಟ್ಟುಕೊಡುವುದು ಯೋಗ್ಯವಿದೆ.

**ಸಂದೇಹ :-** ಅದೇಷ್ಟೋ ಮುಗ್ಧ ಸಂಸಾರಚತುರ ಜೀವರುಗಳು ಇಂಥ ಶ್ರದ್ಧೆಯೊಂದಿಗೆ ಹೇಳುವುದೇನೆಂದರೆ - ಅವರು ಮಿಥ್ಯಾತ್ವಿಗಳಿದ್ದರೆ ನಮಗೇನು ? ನಮಗಂತೂ ಶಾಸ್ತ್ರ ಕೇಳುವುದಿದೆ. ಒಂದುವೇಳೆ ಮಿಥ್ಯಾತ್ವರೂಪದ ಒಂದೆರಡು ಅಸತ್ಯ ವಚನಗಳನ್ನು ಹೇಳುತ್ತಿದ್ದರೆ ಅದು ಅವರ ವಿಷಯವಿದೆಯಲ್ಲ ? ಅದನ್ನು ಭೋಗಿಸಲು ಅವರು ಸಮರ್ಥರಿದ್ದಾರೆ. ಜಿನಭಾಷಿತ ಅನೇಕ ವಚನಗಳಲ್ಲಿ ಯಾವುದೋ ಒಂದೆರಡು ವಚನಗಳ ಶ್ರದ್ಧೆಯು ವಿಪರೀತವಾಗಿ ಹೋದರೆ ಅದರಿಂದೇನಾಗುವುದು ?

**ಸಮಾಧಾನ :-** ಎಲೈ ಭವ್ಯನೇ ! ಇಂಥ ವಿಚಾರವಂತೂ ಮಹಾದುಃಖದಾಯಕವೆಂದು ತಿಳಿಯುವುದು. ಯಾವ ಪ್ರಕಾರ ಒಳ್ಳೆಯ ಷಟ್‌ರಸವೂ ಆರೋಗ್ಯಕರವೂ ಆದ ಉತ್ಕೃಷ್ಟ ಭೋಜನದಲ್ಲಿ ಅಲ್ಪವೇ ಹಾಲಾಹಲ ವಿಷ ಬೆರೆಸಲಾದರೆ ಆ ಒಳ್ಳೆಯ ಭೋಜನದ ಭಕ್ಷಣೆಯಿಂದ ಮರಣವೇ ಆಗುತ್ತದೆ. ಅದೇ ಪ್ರಕಾರ ಜಿನವಚನಗಳು ಸ್ವರ್ಗ-ಮೋಕ್ಷಫಲ ನೀಡುವಂಥವಿವೆ. ಅವುಗಳನ್ನು ಕೇಳುವುದರಿಂದ ಜೀವಗಳ ಕಲ್ಯಾಣವಾಗುತ್ತದೆ, ಸಮಭಾವದ ವೃದ್ಧಿಯಾಗುತ್ತದೆ - ಇಂಥ ವಚನಗಳ ಉಪದೇಶದಲ್ಲಿ ಯಾವನೋ ಪಾಪಿಯು ಕಷಾಯರೂಪದ ಹಾಲಾಹಲ ವಿಷವನ್ನು ಬೆರೆಸಿ ಕಥನ ಮಾಡಿದರೆ ಕೇಳುವಂಥರಿಗೆ ದುಃಖ ನೀಡುವಂಥವಾಗುತ್ತವೆಯೆಂದು ತಿಳಿದು, ತಾವು ಮುಗ್ಧರಿದ್ದರೆ ತಮ್ಮ ಮುಖದಿಂದ ಪಂಚಪರಮೇಷ್ಠಿಗಳ ನಾಮಸ್ಮರಣೆ - ಜಪ ಮಾಡುತ್ತ ಇರಬೇಕು; ಆದರೆ ಬಹಳಷ್ಟು ಜ್ಞಾನವುಳ್ಳ ಮಿಥ್ಯಾದೃಷ್ಟಿಯ ಮುಖದಿಂದ ಉಪದೇಶ ಗ್ರಹಣ ಮಾಡಬಾರದು.

ಈಗ ಮಿಥ್ಯಾದೃಷ್ಟಿ ಜೀವಗಳನ್ನು ಸರ್ಪಕ್ಕಿಂತಲೂ ವಿಶೇಷ(ಅಧಿಕ)ವೆಂದು ಹೇಳುತ್ತಾರೆ,-

**ಖಲ ಅಹಿ ಕೂರಸುಹಾವೋ, ತಿಣಮಹಿ ಖಲ ಅತಿ ಕೂರತಾ ಹೋಈ ।**
**ಅಹಿಮಂತರ ಉವಚಾರೋ, ದುತ ಉವಚಾರೋ ಯಲೋಯ ತಿಯ ದುಲಹೋ ॥೫೭॥**

**ಗಾಥಾರ್ಥ :-** ದುಷ್ಟ ಸರ್ಪದ ಸ್ವಭಾವವು ಕ್ರೂರವಿರುತ್ತದೆ. ಅದರಲ್ಲಿಯೂ ದುಷ್ಟರ ಕ್ರೂರತೆಯು ಅಧಿಕವಿದೆ. ಸರ್ಪದ ಉಪಚಾರವಂತೂ ಮಂತ್ರವಿದೆ ಆದರೆ ದುಷ್ಟನ ಉಪಚಾರವು ಮೂರು ಲೋಕದಲ್ಲಿ ದುರ್ಲಭವಿದೆ.

**ಭಾವಾರ್ಥ :-** ಇತರರು ಧರ್ಮ-ಕರ್ಮದ ಕಾರ್ಯಗಳಲ್ಲಿ ನಿರಾಕುಲ ಸುಖಿಯಿರುವುದನ್ನು ಕಂಡು ದುಷ್ಟ ಚಿತ್ತವುಳ್ಳವರು ನಿಷ್ಪ್ರಯೋಜನ ದುಃಖಿಯಾಗುತ್ತಾರೆ. ಆ ದುಷ್ಟರು ಇತರರನ್ನು ದುಃಖಿ ನೋಡಿ ಸ್ವಯಂ ಹರ್ಷ ಮನ್ನಿಸುತ್ತಾರೆ. ದುಷ್ಟರು ಮತ್ತು ಸರ್ಪ ಮಹಾಕ್ರೂರ ಸ್ವಭಾವಿಯಿದ್ದಾರೆ; ಆದರೆ ಅದರಲ್ಲೂ ದುಷ್ಟ ಜನರ ಕ್ರೂರತೆಯು ವಿಶೇಷ(ಅಧಿಕ)ವೆಂದು ತಿಳಿಯುವುದು. ಅವರ ಕ್ರೂರತೆಯು ಹೇಗೆ ಅಧಿಕವಿದೆ ? ಎಂಬ ಪ್ರಶ್ನೆಗೆ ಉತ್ತರವು ಹೀಗಿದೆ - ಮಹಾವಿಷದಿಂದ ತುಂಬಿಕೊಂಡಿರುವ ಕಾಲರೂಪ ಸರ್ಪ ದಂಶದಿಂದ ಬದುಕುವುದೇ ಇಲ್ಲ. ಕರ್ಮಯೋಗದಿಂದ ಬದುಕಿದರೆ ಬದುಕಬಹುದು ಇಲ್ಲದಿದ್ದರೆ ಸತ್ತೇ ಹೋಗುತ್ತಾರೆ - ಅಂಥ ಭಯಾನಕ ಸರ್ಪದ ಬಾಲಕ್ಕೆ ಕಾಲು ತಾಗಿದರೆ ಆ ಸರ್ಪವು ಕಚ್ಚುತ್ತದೆ; ಆದಾಗ್ಯೂ ಅದರ ವಿಷ ದೂರ ಮಾಡುವ ಸಲುವಾಗಿ ಮಂತ್ರಾದಿಗಳ ಉಪಾಯವಿದೆ ಆದರೆ ನಿಷ್ಕಾರಣ ದ್ವೇಷರೂಪ ವಿಷದಿಂದ ತುಂಬಿಕೊಂಡಿರುವ ದುಷ್ಟಾತ್ಮನ ಕ್ರೂರತೆಯನ್ನು ದೂರ ಮಾಡುವ ಸಲುವಾಗಿ ಮೂರು ಲೋಕದಲ್ಲಿ ಯಾವುದೇ ಉಪಾಯವು ಕಂಡು ಬರುವುದಿಲ್ಲ. ಈ ಪ್ರಕಾರ ಎಲೈ ಭವ್ಯನೇ ! ಸರ್ಪದ ಕ್ರೂರತೆಗಿಂತ ಈ ದುಷ್ಟರ ಕ್ರೂರತೆಯು ಅಧಿಕವೆಂದು ತಿಳಿದುಕೊಂಡು ತನ್ನ ವಿವೇಕದ ಬಲದಿಂದ ಅಂಥ ದುಷ್ಟರ ಪರೀಕ್ಷೆ ಮಾಡಿ ಅವರ ಸಂಗತಿಯಿಂದ ದೂರವಿರುವುದು ಬಹಳಷ್ಟು ಸುಖಕರವಿದೆ. ಒಂದುವೇಳೆ ಕುಸಂಗತಿಯಿಂದ ದೂರವಿದ್ದು ಸತ್ಸಂಗದೊಡನಿದ್ದು ತನ್ನ ಕಲ್ಯಾಣ ಮಾಡಿಕೊಳ್ಳುತ್ತಿದ್ದರೆ ಅದುವೇ ಮನುಷ್ಯ ಪರ್ಯಾಯದಲ್ಲಿರುವ ವಿವೇಕದ ಉತ್ತಮ ಫಲವಿದೆ.

ಈಗ ಸಜ್ಜನ-ದುರ್ಜನರ ಸ್ವಭಾವ ಹೇಳುತ್ತಾರೆ,-

**ಮಕ್ಖಕ ಜೌಂಕ ಪತಂಗಾ, ದುತಾದಿ ಚತುಕ ಹೋಯ ದುಃಖದಾಯೋ ।**
**ಈಖದಂಡ ಕಣಕ ಸುಅಗರಾ, ಸಯಣಾದಿ ಚತುಕ ಹೋಯ ಸುಹಗೇಯೋ ॥೫೮॥**

**ಗಾಥಾರ್ಥ :-** ನೊಣ, ಜಿಗಳೆ, ಸರ್ಪ, ದುಷ್ಟಜನರು ದುಃಖದಾಯಕರಿದ್ದಾರೆ. ಕಬ್ಬು, ಚಿನ್ನ, ಶುಭ ಅಗರು ಚಂದನ ಹಾಗೂ ಸಜ್ಜನರು ಸುಖದಾಯಕರೆಂದು ತಿಳಿಯುವುದು.

**ಭಾವಾರ್ಥ :-** ಮಕ್ಷಿಕ, ಜಿಗಳೆ, ಸರ್ಪ ಮತ್ತು ದುಷ್ಟ ಮನುಷ್ಯ- ಇವು ನಾಲ್ಕು ಅನ್ಯ ಜೀವರುಗಳಿಗೆ ದುಃಖದಾಯಕವೆನ್ನಲಾಗಿದೆ. ಅದನ್ನೇ ವಿಸ್ತಾರವಾಗಿ ಹೇಳುತ್ತಾರೆ - ಮಕ್ಷಿಕವು ಅನ್ಯರ ಭೋಜನ-ಜಲದಲ್ಲಿ ಬಿದ್ದು, ಸತ್ತುಹೋಗಿ ನಂತರ ಆ ಅನ್ನ-ಜಲಾದಿಗಳ ಸೇವನೆ ಮಾಡುವಂಥವರನ್ನು ದುಃಖಿಯನ್ನಾಗಿಸುತ್ತದೆ. ಇದು ಆ ನೊಣದ ದುಷ್ಟತೆಯಿದೆ. ಜಿಗಳೆಯ ಸಹಜ ಸ್ವಭಾವವು ಎಂಥದ್ದಿದೆಯೆಂದರೆ ಇದೆ. ಅದು ಹಾಲಿನಿಂದ ತುಂಬಿರುವ ಹಸುವಿನ ಕೆಚ್ಚಲಿನ ಮೇಲೆ ಇರುತ್ತಿದ್ದರೂ ಹಾಲನ್ನು ಬಿಟ್ಟು ರಕ್ತದ ಅಂಗೀಕಾರ ಮಾಡುತ್ತದೆ. ಇನ್ನು ಸರ್ಪವು ಅದಕ್ಕೆ ಹಾಲು ಕುಡಿಸುತ್ತಿದ್ದರೂ ಅದು ವಿಷವಾಗಿ ಹೋಗುತ್ತದೆ. ಹಾಲು ಕುಡಿಸುವಂಥವನು ತುಂಬಾ ದಿನಗಳವರೆಗೆ ಸರ್ಪಕ್ಕೆ ಹಾಲು ಕುಡಿಸಿ ಅದನ್ನು ಪುಷ್ಟಗೊಳಿಸುತ್ತಾನೆ; ಆದರೆ ಹಾಲು ಕುಡಿಸುವಂಥವನು ಸ್ವಲ್ಪ ಮೈಮರೆತರೆ ಅದು ಅವನನ್ನೇ ಸಾಯಿಸಿ ಬಿಡುತ್ತದೆ.

ಇದೇ ಪ್ರಕಾರ ದುಷ್ಟ ಪ್ರಾಣಿಗಳ ಮೇಲೆ ಅನೇಕ ಉಪಕಾರ ಮಾಡಿ ಅವರ ರಕ್ಷಣೆ ಮಾಡಿ ಪಾಲನೆ-ಪೋಷಣೆ

ಮಾಡಿದರೂ ಆ ದುಷ್ಟ ಜನರು ಎಲ್ಲ ಉಪಕಾರ ಮರೆತು ಅದರಿಂದ ವಿಪರೀತ ಉಪಕಾರ ಮಾಡುವಂಥವರ ಕುರಿತಾಗಿಯೇ ದ್ವೇಷ ಮಾಡತೊಡಗುತ್ತಾರೆ; ಅವರು ತಮ್ಮ ಸ್ವಭಾವವನ್ನು ಬಿಟ್ಟುಕೊಡುವುದಿಲ್ಲ.

ಹೇಗೆ ನೊಣವು ಸ್ವಯಂ ಸತ್ತುಹೋಗಿ, ಬೇರೆಯವರಿಗೆ ಖೇದವನ್ನುಂಟು ಮಾಡುತ್ತದೆ; ಅದೇ ಪ್ರಕಾರ ದುಷ್ಟ ಜನರು ಸ್ವಯಂ ಸತ್ತು ಹೋಗಿ ಅನ್ಯರಿಗೆ ದುಃಖವನ್ನು ಉತ್ಪನ್ನ ಮಾಡುತ್ತಾರೆ. ಅದನ್ನೇ ಹೇಳಲಾಗುವುದು ಹೇಗೆಂದರೆ ಯಾವನೋ ದುಷ್ಟ ಅಜ್ಞಾನಿಯು ಯಾರದೋ ಕುರಿತಾಗಿ ಕಷಾಯ ಭಾವದಿಂದ ವಿಚಾರ ಮಾಡುವುದೇನೆಂದರೆ, ಈತನ ಮನೆಯಲ್ಲಿ ಬಹಳಷ್ಟು ಧನವಿದೆ. ನಾನು ಈತನ ಬಾವಿಯಲ್ಲಿ ಬಿದ್ದು ಸತ್ತು ಹೋದರೆ, ವಿಷಭಕ್ಷಣೆ ಮಾಡಿ ಸತ್ತು ಹೋದರೆ, ಚೂರಿ-ಕಿರುಗತ್ತಿಯಿಂದ ಸತ್ತು ಹೋದರೆ ದೊರೆಯು ಈತನ ಸಮಸ್ತ ಧನವನ್ನು ಕಸಿದುಕೊಳ್ಳುವನು, ಲೂಟಿ ಮಾಡಿಕೊಂಡು ಹೋಗುವನು, ಪಂಚರು ಇವನನ್ನು ಜಾತಿಯಿಂದ ಹೊರಗೆ ಹಾಕುವರು ಆಗ ಜಗತ್ತಿನಲ್ಲಿ ಇವನ ಮಾನಭಂಗವಾಗಿರುವುದರಿಂದ ಮಹಾದುಃಖಿಯಾಗುವನು - ಹೀಗೆ ನೊಣದಂತೆ ದುಷ್ಟನ ಜ್ಞಾನವೆನ್ನಲಾಗಿದೆ. ಸ್ವಯಂ ಸತ್ತು ಹೋಗಿ ಅನ್ಯರನ್ನು ದುಃಖಿಮಾಡಬಯಸುತ್ತಾನೆ.

ಕೆಲವು ದುಷ್ಟರು ಜಿಗಳೆಯ ಸಮಾನ ಚಿತ್ತದ ಧಾರಕರಿರುತ್ತಾರೆ, ಹೇಗೆ ಜಿಗಳೆಯು ಗುಣಕಾರಿ ಹಾಲನ್ನು ಬಿಟ್ಟು ಅವಗುಣಮಯ ರಕ್ತವನ್ನು ಗ್ರಹಣಮಾಡುತ್ತದೆ. ಹಾಗೆಯೇ ಕೆಲವು ದುಷ್ಟರಿಗೆ ಬೇಕಾದಷ್ಟು ಉಪಕಾರ ಮಾಡಿದರೂ ಅವರು ಅದೆಲ್ಲವನ್ನು ಮರೆತು ಅವುಗಳನ್ನೂ ಅವಗುಣರೂಪದಿಂದಲೇ ಗ್ರಹಣಮಾಡಿ ದ್ವೇಷಭಾವದ್ದೇ ಸ್ವೀಕಾರ ಮಾಡುತ್ತಾರೆ.

ಹೇಗೆ ನಾಯಿಗೆ ಬೇಕಾದಂಥ ಉಪಕಾರ ಮಾಡಿರಿ - ಅದಕ್ಕೆ ಒಳ್ಳೆಯ ಆಹಾರ, ಅನೇಕ ಆಭೂಷಣ ತೊಡಿಸಿ ಪಲ್ಲಕ್ಕಿಯಲ್ಲಿ ಕೂಡ್ರಿಸಿ ಬಹಳಷ್ಟು ಪ್ರೀತಿ ಮಾಡಿರಿ; ಆದರೆ ಆ ಅಜ್ಞಾನೀ ಶ್ವಾನವು ಯಾವಾಗ ಕೈಬಿಟ್ಟು ಹೋಗುತ್ತದೆ ಆಗ ಅನ್ಯಶ್ವಾನಗಳೊಂದಿಗೆ ಸೇರಿಕೊಂಡು ಕಸದ ತಿಪ್ಪೆಗೆ ಹೋಗಿ ಕುಳಿತುಕೊಳ್ಳುತ್ತದೆ. ತನಗೆ ತೊಡಿಸಿದ ಆಭೂಷಣ ಹಾಗೂ ಪಲ್ಲಕ್ಕಿಯ ಗುಣಗಳ ವಿಚಾರ ಮಾಡುವುದಿಲ್ಲ. ಅದೇ ಪ್ರಕಾರ ದುಷ್ಟರು ಕೂಡ ಮಾಡಲಾದ ಸಮಸ್ತ ಉಪಕಾರಗಳ ಆಭೂಷಣವನ್ನು ಮರೆತು, ತಮ್ಮಂಥ ದುಷ್ಟ ನೀಚ ಪುರುಷರ ಜತೆ ಸೇರಿಕೊಂಡು ದುಃಖವನ್ನೇ ಉತ್ಪನ್ನ ಮಾಡುವರು.

ಸರ್ಪಕ್ಕೆ ಬಹುಕಾಲದವರೆಗೆ ಹಾಲು ಕುಡಿಸಿ ಪುಷ್ಟ ಮಾಡಿದರೂ, ಅನೇಕ ಪ್ರಕಾರದಿಂದ ಲಾಲನೆ-ಪಾಲನೆ ಮಾಡಿದರೂ ಆ ಸರ್ಪದ ರಕ್ಷಕನು ಒಂದುವೇಳೆ ತಪ್ಪಿ ಪ್ರಮಾದಸಹಿತನಾಗಿ ಸರ್ಪವನ್ನು ತಾನು ಸಾಕಿದುದೆಂದು ತಿಳಿದು ಅದರಿಂದ ಸಾವಧಾನತೆ ಕಾಯ್ದುಕೊಳ್ಳದೇ ಹೋದರೆ ಆ ವಿಷದಿಂದ ತುಂಬಿದ ಪಾಪೀ ಸರ್ಪವು ಅವನನ್ನೇ ಕಚ್ಚಿಬಿಡುವುದು-ಸಾಕಿದವನನ್ನೇ ಸಾಯಿಸಿ ಬಿಡುವಂಥದ್ದಾಗುವುದು. ಇವನು ನನಗೆ ಹಾಲು ಕುಡಿಸಿ ಬೆಳೆಸಿದ್ದಾನೆಂಬ ವಿಚಾರವನ್ನು ಅದು ಮಾಡುವುದಿಲ್ಲ - ಆ ಪಾಪಿಯು ತನ್ನ ಸ್ವಭಾವ ಬಿಡುವುದಿಲ್ಲ. ಅದೇ ಪ್ರಕಾರ ದುಷ್ಟರಿಗೆ ಅನೇಕ ಪ್ರಕಾರದ ಉಪಕಾರ ಮಾಡಿದರೂ ಯಾರ ಹೆಸರು ದುಷ್ಟವಿದೆ ಅವರು ತಮ್ಮ ಸ್ವಭಾವ ಬಿಡದೇ ಉಪಕಾರಿಯ ಕುರಿತು ದ್ವೇಷವನ್ನೇ ಮಾಡುವರು.

ಈ ಪ್ರಕಾರ ಮಕ್ಷಿಕ, ಜಿಗಳೆ, ನಾಯಿ ಮತ್ತು ದುಷ್ಟರು - ಎಲ್ಲರಿಗೂ ದುಃಖದಾಯಕರೇ ಇದ್ದಾರೆ. ಇದು ಅವರ ಅನಾದಿ ಸಹಜ ಸ್ವಭಾವವೆಂದೇ ತಿಳಿಯುವುದು.

ಕಬ್ಬನ್ನು ಎಷ್ಟೆಷ್ಟು ಅರೆಯಲಾಗುವುದು, ಅಷ್ಟಷ್ಟು ಅದು ಸಿಹಿಯನ್ನೇ ಕೊಡುವುದು. ಚಿನ್ನವನ್ನು ಅಗ್ನಿಯಲ್ಲಿ ಎಷ್ಟು ಕಾಯಿಸಲಾಗುವುದು ಅಷ್ಟಷ್ಟು ಅದು ಕೋಮಲವಾಗಿ ನಿರ್ಮಲ, ನಿರ್ದೋಷವಾಗುವುದು. ಅದೇ ಪ್ರಕಾರ ಒಳ್ಳೆಯ ಶಿಷ್ಯನು, ವಿದ್ಯಾರ್ಥಿಯು ವಿದ್ಯೆ ಕಲಿಸುವಂಥ ಲೌಕಿಕ ಗುರುಗಳ ಏಟು ತಿಂದು ಕೂಡ ಅವರ ಉಪಕಾರ ಮನ್ನಿಸುತ್ತಾನೆ. ಅವನು ವಿಚಾರ ಮಾಡುವುದೇನೆಂದರೆ - ಅಯ್ಯಾ ! ಈ ಶಿಕ್ಷಾದಾಯಕರು ನನ್ನ ಮೇಲೆ ಎಂಥ

ಉಪಕಾರ ಮಾಡುತ್ತಿದ್ದಾರೆ ಅವರು ತಮ್ಮ ಪರಿಣಾಮವನ್ನು ಸಂಕ್ಲೇಶ ಮಾಡಿಕೊಂಡು ಕೂಡ ನನಗೆ ವಿದ್ಯೆಯರೂಪ ಧನ ನೀಡುತ್ತಾರೆ ಅದರಿಂದ ಇವರು ಧನ್ಯರಿದ್ದಾರೆಂದು ತಿಳಿದು ಒಳ್ಳೆಯ ಶಿಷ್ಯನು ಲೌಕಿಕ ವಿದ್ಯಾಗುರುಗಳಿಂದ ಪ್ರಸನ್ನನೇ ಇರುತ್ತಾನೆ. ಹೀಗೆ ಶಿಷ್ಯನು ಚಿನ್ನದ ಹಾಗಿದ್ದಾನೆ.

ಅಗರುಚಂದನವನ್ನು ತುಂಡರಿಸಿದಷ್ಟು ಅದು ಸುಗಂಧವನ್ನೇ ಕೊಡುತ್ತದೆ. ಆ ಉತ್ತಮ ಚಂದನವನ್ನು ಎಷ್ಟೆಷ್ಟು ಉಜ್ಜಲಾಗುತ್ತದೆ, ತೇಯಲಾಗುತ್ತದೆ, ತುಂಡರಿಸಲಾಗುತ್ತದೆ, ಸುಡಲಾಗುತ್ತದೆ. ಅಷ್ಟಷ್ಟು ಅದು ಒಳ್ಳೆಯ ಸುಗಂಧವನ್ನೇ ಕೊಡುತ್ತದೆ. ಅದೇ ಪ್ರಕಾರ ಯಾವನೋ ಪಾಪಿಯು ಸಜ್ಜನ ಪುರುಷರ ಕುರಿತು ದುರ್ವಚನಾದಿಯಿಂದ ಉಪದ್ರವ ಮಾಡಿದರೂ ಅವರಿಗೆ ದುಃಖ ಕೊಟ್ಟರೂ ಆ ಧರ್ಮಾತ್ಮಾ ಪುರುಷರು ಅವನೊಂದಿಗೆ ದ್ವೇಷ ಭಾವ ಮಾಡುವುದಿಲ್ಲ.

ಯಾವ ಪ್ರಕಾರ ದೊರೆ ಶ್ರೇಣಿಕ ಪುತ್ರ, ಮಹಾಧರ್ಮಾತ್ಮಾ - ಸಜ್ಜನ ಸ್ವಭಾವೀ ವಾರಿಷೇಣನು ಪರ್ವದಿನದಂದು ಉಪವಾಸ ಮಾಡಿ ರಾತ್ರಿಯ ಹೊತ್ತು ಸ್ಮಶಾನ ಭೂಮಿಯಲ್ಲಿ ಸಮಸ್ತ ಜೀವರುಗಳ ಕುರಿತು ಕ್ಷಮೆಯ ಭಾವ ಧಾರಣ ಮಾಡಿ, ಕಾಯೋತ್ಸರ್ಗ ಮುದ್ರೆಯಲ್ಲಿ ಮೇರು ಸಮಾನ ಧೀರ ಚಿತ್ತದಿಂದ ಧರ್ಮಧ್ಯಾನ ರೂಪ ವಿರಾಜಮಾನನಿದ್ದನು. ಭಯದ ಕಾರಣ ಕಳ್ಳನು ಕದ್ದು ತಂದಿರುವ ರತ್ನಹಾರವನ್ನು ವಾರಿಷೇಣನ ಹತ್ತಿರದಲ್ಲಿ ಎಸೆದು ಓಡಿ ಹೋದನು. ನಂತರ ಕೋತವಾಲನು ಬಂದು ರತ್ನಹಾರ ಮತ್ತು ರಾಜಪುತ್ರನನ್ನು ಕಂಡು ವಿವೇಕವಿಲ್ಲದೆ ಅವನನ್ನೇ ಕಳ್ಳನೆಂದು ಮನ್ನಿಸಿ ಆ ಕೋತವಾಲನು ದೊರೆಯ ಹತ್ತಿರ ಬಂದು ಓ ಸ್ವಾಮೀ ! ವಾರಿಷೇಣನೇ ಕದ್ದಿದ್ದಾನೆಂದು ಹೇಳುತ್ತಾನೆ. ನ್ಯಾಯಮಾರ್ಗದ ವಶವರ್ತಿಯಾದ ದೊರೆ ಶ್ರೇಣಿಕನು ಕೂಡ ಪೂರ್ವಾಪರ ವಿಚಾರ ಮಾಡದೇ ಅವನನ್ನು ಸಾಯಿಸುವ ಆಜ್ಞೆಯಿತ್ತನು. ಕೋತವಾಲನು ಸ್ಮಶಾನಕ್ಕೆ ಹೋಗಿ, ವಾರಿಷೇಣನನ್ನು ಸಾಯಿಸುವ ಸಲುವಾಗಿ ಖಡ್ಗವನ್ನು ಎತ್ತುತ್ತಾನೆ; ಆದರೆ ಆ ಶಸ್ತ್ರವು ಕುಮಾರನ ಪುಣ್ಯಪ್ರಭಾವದಿಂದ ಪುಷ್ಪ ಮಾಲೆಯಾಗಿ ಹೋಯಿತು, ದೇವಗಳು ಬಂದು ಸಹಾಯ ಮಾಡಿದರು. ಇಂಥ ಅತಿಶಯವಾಗಿರುವುದನ್ನು ಆಲಿಸಿ ದೊರೆ ಶ್ರೇಣಿಕನು ಪುತ್ರನ ಹತ್ತಿರ ಬಂದು ಕ್ಷಮೆಯಾಚನೆ ಮಾಡುತ್ತಾನೆ ಮತ್ತು ಅರಮನೆಗೆ ಹೊರಡುವ ಮಾತು ಹೇಳುತ್ತಾನೆ, ಆಗ ವಾರಿಷೇಣನು ನಮ್ಮದಂತೂ ಎಲ್ಲರ ಕುರಿತಾಗಿ ಕ್ಷಮೆಯ ಭಾವವಿದೆ, ಉಪಸರ್ಗವು ದೂರವಾದ ಮೇಲೆ ದೀಕ್ಷೆಯ ಆಶ್ರಯವನ್ನೇ ಪಡೆಯುವ ಪ್ರತಿಜ್ಞೆಯು ನಮ್ಮದಾಗಿತ್ತೆಂದು ಹೇಳುತ್ತಾನೆ. ಈ ಪ್ರಕಾರ ಉಪಸರ್ಗವು ದೂರವಾದ ಅವರು ದೀಕ್ಷೆ ಧಾರಣ ಮಾಡಿದರು. ಆ ಸುಬುದ್ಧಿ ಕುಮಾರನು ದೊರೆ ಅಥವಾ ಕೋತವಾಲನ ಕುರಿತು ದ್ವೇಷಭಾವ ಮಾಡಲಿಲ್ಲ.

ಸಜ್ಜನ ಪುರುಷರ ಸ್ವಭಾವವೇ ಹಾಗಿರುತ್ತದೆ. ಅವರು ಅನ್ಯರ ಅಜ್ಞಾನಮಯ ಚೇಷ್ಟೆಗಳನ್ನು ಕೂಡ ಗಣನೆಗೆ ತಂದುಕೊಳ್ಳದೆ ತಮ್ಮ ಸಜ್ಜನ ಭಾವದ ರಕ್ಷಣೆಯನ್ನೇ ಮಾಡುತ್ತಾರೆ. ಎಂದರೆ ಕಬ್ಬು, ಕನಕ, ಚಂದನ ಮತ್ತು ಸಜ್ಜನ ಪುರುಷರು - ಈ ನಾಲ್ಕು ಪದಾರ್ಥಗಳು ಎಲ್ಲ ಜೀವಗಳಿಗೆ ಸುಖದಾಯಕರಿದ್ದಾರೆಂದು ತಿಳಿಯುವುದು. ಆದುದರಿಂದ ವಿವೇಕವಂತರು ಕ್ರೂರತೆಯನ್ನು ಬಿಟ್ಟುಕೊಟ್ಟು ಸಜ್ಜನತೆಯ ಅಂಗೀಕಾರ ಮಾಡಬೇಕು.

ಈ ಪ್ರಕಾರ ಶ್ರೀ ಸುದೃಷ್ಟಿತರಂಗಿಣಿಯೆಂಬ ಹೆಸರಿನ ಗ್ರಂಥದಲ್ಲಿ ಜೀವನೋಪಯೋಗಿ
ಜ್ಞೇಯ, ಹೇಯ, ಉಪಾದೇಯಸ್ವರೂಪ ವರ್ಣನೆ ಮಾಡುವಂಥ
ಇಪ್ಪತ್ತೊಂದನೆಯ ಪರ್ವವು ಪೂರ್ಣವಾಯಿತು.

★★★★★

## ೨೨ : ಇಪ್ಪತ್ತೆರಡನೆಯ ಪರ್ವ
## ಅಜ್ಞಾನಿ ಹಾಗೂ ಕವಿ ಪರೀಕ್ಷೆಯ ವರ್ಣನೆ

ಈಗ ಮೂರ್ಖನಿಗೆ ಧರ್ಮೋಪದೇಶವು ಕಾರ್ಯಕಾರಿಯಿಲ್ಲವೆಂದು ಹೇಳುತ್ತಾರೆ,-

**ಅಂಧ ಪೈ ದೀಪ ಣ ಕಜ್ಜೋ, ಬಧರೋರಾಗಸ್ಸ ಹೀಜ ತಿಯಸಂಗೋ ।**
**ಪತಿಗತ ನಾರಿ ಸಿಂಗಾರೋ, ಜೋ ಸಠಯಾ ಸೇಯ ಧಮ್ಮ ವಿಣ ಕಜ್ಜೋ ॥೫೫॥**

**ಗಾಥಾರ್ಥ :-** ಹೇಗೆ ಕುರುಡನ ಸಲುವಾಗಿ ದೀವಿಗೆಯು ಕಾರ್ಯಕಾರಿಯಾಗಿಲ್ಲ, ಕಿವುಡನ ಸಲುವಾಗಿ ರಾಗ(ಗಾಯನ)ವು ಕಾರ್ಯಕಾರಿಯಾಗಿಲ್ಲ, ನಪುಂಸಕನಿಗೆ ಸ್ತ್ರೀಯ ಸಂಗವು ವ್ಯರ್ಥವಿದೆ, ಪತಿರಹಿತ ಸ್ತ್ರೀಯ ಸಲುವಾಗಿ ಶೃಂಗಾರವು ಕಾರ್ಯಕಾರಿಯಾಗಿಲ್ಲ; ಹಾಗೆಯೇ ಮೂರ್ಖರಿಗೆ ಧರ್ಮದ ಕಥೆಯು ಕಾರ್ಯಕಾರಿಯಾಗಿಲ್ಲ.

**ಭಾವಾರ್ಥ :-** ಯಾವ ಪ್ರಕಾರ ಕುರುಡನ ಸಲುವಾಗಿ ಅನೇಕ ತರದ ಪಂಚವರ್ಣಮಯ ರತ್ನ- ಪ್ರಕಾಶವು ಕಾರ್ಯಕಾರಿಯಿಲ್ಲ ಅನೇಕ ಪ್ರಕಾರದ ಬಣ್ಣ-ಬಣ್ಣದ ಚಿನ್ನ ಹಾಗೂ ರತ್ನಮಯ ಶುಭಾಕಾರಯುಕ್ತ ಚಿತ್ರಗಳು ಕುರುಡನ ಸಲುವಾಗಿ ವ್ಯರ್ಥವಿವೆ. ಅನೇಕ ದೀವಿಗೆಗಳ ಮಾಲಾಮಯ ದೀಪ ಮಾಲೆಯ ಪ್ರಕಾಶವು ಕೂಡ ಕುರುಡನಿಗೆ ವ್ಯರ್ಥವಿದೆ; ಅದೇ ಪ್ರಕಾರ ಅಜ್ಞಾನೀ ಮೂರ್ಖನ ಸಲುವಾಗಿ ಧರ್ಮಕಥೆಗಳ ರೂಪದ ಧರ್ಮೋಪದೇಶವು ವ್ಯರ್ಥವಿದೆ.

ಹೇಗೆ ಕಿವುಡನ ಸಲುವಾಗಿ ಸುಸ್ವರ ಕಂಠದಿಂದ ಬರುವ ಮಧುರ ಸ್ವರಮಯ ವಿವಿಧ ರಾಗಗಳನ್ನು ಹಾಡುವುದು, ಸುಮಧುರ ವೀಣೆ, ಕೊಳಲುವಾದನ ಮೊದಲಾಗಿ ಗಾಯನ ವಾದನಗಳೆಲ್ಲವೂ ವ್ಯರ್ಥವಿವೆ; ಹಾಗೆಯೇ ಮೂರ್ಖನ ಹತ್ತಿರ ಧರ್ಮಕಥೆಯು-ವಾಚನ, ಚರ್ಚೆಗಳು ವ್ಯರ್ಥವಿವೆ.

ಹೇಗೆ ನಪುಂಸಕನಿಗೆ ಸುಂದರ ಸ್ತ್ರೀಯ ಮಿಲನವು ದೊರಕುವುದು ವ್ಯರ್ಥವಿದೆ; ಅದೇ ಪ್ರಕಾರ ಮೂರ್ಖನ ಎದುರಿಗೆ ಧರ್ಮಕಥೆ ಹೇಳುವುದು ವ್ಯರ್ಥವಿದೆ. ಪತಿಯ ಅಭಾವದಲ್ಲಿ ವಿಧವೆಯು ತನ್ನ ಅಲಂಕಾರವನ್ನು ಯಾರಿಗೆ ತೋರಿಸುವಳು ? ಪತಿಯಂತೂ ಇಲ್ಲ ಮತ್ತು ಪರಪುರುಷರಿಗೆ ತನ್ನ ಶೃಂಗಾರವನ್ನು ತೋರಿಸುವುದರಿಂದ ಕುಶೀಲದ ದೋಷವು ಬರುತ್ತದೆ; ಎಂದರೆ ಸ್ತ್ರೀಯ ಶೃಂಗಾರವು ಪತಿಯ ಆಶ್ರಯದಿಂದಲೇ ಶೋಭೆಗೆ ಪ್ರಾಪ್ತವಾಗುತ್ತದೆ. ಹೇಗೆ ಪತಿಯಿಲ್ಲದ ವಿಧವೆಯ ವಿವಿಧ ಶೃಂಗಾರವು ವ್ಯರ್ಥವಿದೆ ಹಾಗೆಯೇ ಮೂರ್ಖನಿಗೆ ಧರ್ಮಕಥೆಯು ವ್ಯರ್ಥವಿದೆ.

**ಪ್ರಶ್ನೆ :-** ಮೂರ್ಖನು ಎಂಥವನು ಅಥವಾ ಯಾವನಿದ್ದಾನೆ ?

**ಉತ್ತರ :-** ಮೂರ್ಖನು ಜ್ಞಾನನೇತ್ರರಹಿತ ಅಂಧನ ಸಮಾನನಿದ್ದಾನೆ. ಪರಭವದಲ್ಲಿ ಸುಖ ಕೊಡುವಂಥ (ಸರ್ವಜ್ಞ) ಜಿನವಚನಗಳನ್ನಾಲಿಸುವ ಸಲುವಾಗಿ ಕಿವುಡನ ಸಮಾನನಿದ್ದಾನೆ. ಕುಕಥೆಯ ಅಭಿಲಾಷೆಯುಳ್ಳವನಿದ್ದಾನೆ. ಕ್ರೋಧಾಗ್ನಿಯಿಂದ ಅವನ ಹೃದಯವು ಭಸ್ಮವಾಗಿ ಹೋಗಿದೆ ಮತ್ತು ಮಾನಕಷಾಯದ ಯೋಗದಿಂದ ತನಗಿಂತ ಯಾರೂ ಶ್ರೇಷ್ಠರಿಲ್ಲವೆಂದು ಗಣಿಸುತ್ತಾನೆ. ಎಲ್ಲರನ್ನೂ ತನಗಿಂತ ತುಚ್ಛರೆಂದು ಗಣಿಸುತ್ತಾನೆ. ಹೇಗೆ ಮಹಾ ಅಂಧನಂತೂ ಯಾವುದೇ ಪದಾರ್ಥವನ್ನು ನೋಡುವುದೇ ಇಲ್ಲ ಮತ್ತು ಅಲ್ಪ ಅಂಧನು ಬೇರೆಯವರ ದೊಡ್ಡ ಪದಾರ್ಥವನ್ನು ಚಿಕ್ಕದನ್ನಾಗಿ ನೋಡುತ್ತಾನೆ. ಹಾಗೆಯೇ ಮೂರ್ಖನನ್ನು ತಿಳಿಯುವುದು.

ಅವನು ಬಿದಿರಿನ ಮೂಲದ ಸಮಾನ ಮಹಾಮಾಯಾವಿ, ಗಂಟು(ತೊಡಕು)ಗಳ ಸಮಾನ ಪೂರ್ಣಗಂಟುಳ್ಳ ಕುಟಿಲ ಹೃದಯದವ, ಜಿಂಕೆಯ ಸಮಾನ ಚಂಚಲ ಚಿತ್ತದಧಾರಕ, ನಾಗದ ಸಮಾನ ವಕ್ರಹೃದಯಿ, ದುರಾಚಾರಿ, ಮೂರ್ಖತೆಯಿಂದ ಕೂಡಿದ ಮಾಯಾವಿಯು ಮೋಸಗಾರನಿದ್ದಾನೆ. ಬೆಕ್ಕಿನ ಹಾಗೆ ಮಹಾಲೋಭಿಯಿದ್ದಾನೆ, ವಿಷತುಂಬಿದ ಹಲ್ಲಿಯಂತೆ ಆಮಿಷಭಕ್ಷಿ, ಆಮಿಷಲೋಭಿ, ಜೇಣುನೊಣದ ಹಾಗೆ ಲೋಭಿಯಿದ್ದಾನೆ-ಇಂಥ ಕ್ರೋಧಿ, ಮಾನಿ, ಮಾಯಾವಿ, ಲೋಭಿ, ಶಾಂತರಸಭಾವರೂಪ ಸಮತೆಯ ಭಾವದಿಂದ ರಹಿತ, ಸಪ್ತವ್ಯಸನಿ, ಅನೇಕ ದೋಷಗಳ ನಿವಾಸಸ್ಥಾನ ಇತ್ಯಾದಿ ಅವಗುಣಗಳ ಧಾರಕ, ಸತ್ಪುರುಷರಿಂದ ನಿಂದಿತ, ಸತ್ಸಂಗದ ಸಭೆಯಲ್ಲಿ ಅನಾದರ

ಯೋಗ್ಯನಾದ ಮಹಾಮೂರ್ಖನ ಎದುರು ಧರ್ಮಕಥೆ ಹೇಳುವುದು ವ್ಯರ್ಥವಿದೆ. ಅದರಿಂದ ಮಹಾಪಂಡಿತರು, ವಿವೇಕವುಳ್ಳ ಸಮ್ಯಗ್ದೃಷ್ಟಿ ಜೀವರುಗಳು ಅಂಥ ಮೂರ್ಖರಿಗೆ ಉಪದೇಶ ಕೊಡುವುದಿಲ್ಲ.

**ಸಂದೇಹ ಃ-** ಮೂರ್ಖರಿಗೆ ಉಪದೇಶ ಕೊಡುವುದು ಯೋಗ್ಯವಿಲ್ಲವೆಂದು ಇಲ್ಲಿ ತಾವು ಹೇಳುತ್ತಿರುವಿರಿ; ಆದರೆ ಜಗತ್ತಿನಲ್ಲಿ ಪಂಡಿತರಂತೂ ಕಡಿಮೆಯಿರುವುದು ಕಂಡು ಬರುತ್ತದೆ, ಮುಗ್ಧ ಮೂರ್ಖ ಜೀವರುಗಳೇ ಅಧಿಕ ಕಂಡು ಬರುತ್ತಾರೆಂದ ಮೇಲೆ ಉಪದೇಶವಿಲ್ಲದೆ ಮೂರ್ಖರ ಒಳಿತು ಹೇಗೆ ಸಂಭವಿಸಬಹುದಾಗಿದೆ ? ಅಲ್ಲದೆ ತಿಳಿವಳಿಕೆಯುಳ್ಳವರಿಗೆ ಏತಕ್ಕಾಗಿ ಉಪದೇಶ ಕೊಡುವುದು - ಅವರಂತೂ ಎಲ್ಲವನ್ನೂ ತಿಳಿಯುತ್ತಾರೆ. ಉಪದೇಶವನ್ನಂತೂ ತಿಳುವಳಿಕೆಯಿಲ್ಲದ ಮೂರ್ಖರ ಸಲುವಾಗಿಯೇ ಯೋಗ್ಯವಿದೆ; ಆದರೆ ತಾವು ಅವರಿಗೆ ಉಪದೇಶ ಕೊಡುವುದರ ನಿಷೇಧ ಮಾಡುತ್ತಿರುವಿರಲ್ಲ ?

**ಸಮಾಧಾನ ಃ-** ಎಲೈ ಭವ್ಯನೇ ! ನಿನ್ನ ಪ್ರಶ್ನೆಯಂತೂ ಪ್ರಮಾಣವಿದೆ. ಉಪದೇಶವಂತೂ ಮುಗ್ಧರ ಸಲುವಾಗಿಯೇ ಇರುತ್ತದೆ. ಆದರೆ ಮೂರ್ಖ ಮುಗ್ಧರೂ ಎರಡು ಪ್ರಕಾರದವರಿದ್ದಾರೆ. ೧. ಹುಟ್ಟಿದಾಗಿನಿಂದ ಏನನ್ನೂ ತಿಳಿಯದವರು ಸ್ವಾಭಾವಿಕ ಮುಗ್ಧರಿದ್ದಾರೆ. ಅವರು ಪುಣ್ಯ-ಪಾಪವನ್ನು ತಿಳಿಯುವುದಿಲ್ಲ. ಅಂಥವರಿಗೆ ಯಾರದೇ ಧರ್ಮಭಾವನೆಯ ಕುರಿತಾಗಿ ದ್ವೇಷವಿರುವುದಿಲ್ಲ. ಮೊದಲೆಂದೂ ಧರ್ಮದ ಉಪದೇಶವು ದೊರಕಿರದಂಥ ಮುಗ್ಧ ಜೀವರುಗಳಿಗಂತೂ ಕ್ರೋಧ-ಮಾನಾದಿ ಕಷಾಯಗಳು ಕೂಡ ತೀವ್ರವಿರುವುದಿಲ್ಲ. ಅನಾದಿಯಿಂದಲೇ ಸಹಜ-ಸ್ವಾಭಾವಿಕ ಮೂರ್ಖತೆಯಿಂದ ಸಹಿತರಿದ್ದಾರೆ. ಅಂಥ ಸರಳ ಸ್ವಭಾವದ ಮುಗ್ಧ ಜೀವರಿಗಂತೂ ಜಿನ-ಆಜ್ಞೆಯಲ್ಲಿ ಧರ್ಮೋಪದೇಶ ನೀಡುವುದನ್ನು ಹೇಳಿದ್ದಾರೆ. ಆ ಮುಗ್ಧರು ಉಪದೇಶಕ್ಕೆ ಯೋಗ್ಯರಿದ್ದಾರೆ. ಅವರು ಧರ್ಮೋಪದೇಶವನ್ನು ಸ್ವೀಕಾರ ಮಾಡಿ ತಮ್ಮ ಒಳಿತನ್ನೂ ಮಾಡಿಕೊಳ್ಳುತ್ತಾರೆ, ಅದರಿಂದ ಅವರು ಉಪದೇಶ ಯೋಗ್ಯರಿದ್ದಾರೆ.

೨. ಆದರೆ ಎರಡನೇ ಪ್ರಕಾರದ ಮೂರ್ಖರು ಚೆನ್ನಾಗಿ ತಿಳಿಯುತ್ತಿದ್ದರೂ ಕ್ರೋಧ, ಮಾನ, ಮಾಯೆ, ಲೋಭದ ವಶೀಭೂತರಾಗಿ ಧರ್ಮದ ಒಳ್ಳೆಯ ಉಪದೇಶವನ್ನು ಅಂಗೀಕಾರ ಮಾಡುವುದಿಲ್ಲ; ಅಂಥ ಜೀವರಿಗೆ ಧರ್ಮೋಪದೇಶವಿರುವುದಿಲ್ಲ. ಅವರಿಗೆ ಏಕೆ ಇಲ್ಲವೆಂಬುದನ್ನೇ ಈಗ ಹೇಳುತ್ತಾರೆ- ಯಾವನಿಗೋ ಮೊದಲು ಯಾವನೋ ಧರ್ಮಾತ್ಮನಲ್ಲಿ ಸ್ನೇಹವಿತ್ತು. ಅವನ ನಿಮಿತ್ತ ಪಡೆದು ಇವನು ಧರ್ಮಸೇವನೆಯಲ್ಲಿ ತೊಡಗಿರುತ್ತಾನೆ, ಆದರೆ ಯಾವಾಗ ಆ ಧರ್ಮಾತ್ಮನಿಂದ ಕಾರಣವಶಾತ್ ಸ್ನೇಹವು ಮುರಿದು ಹೋಗುತ್ತದೆ. ಆಗ ಇವನು ಧರ್ಮಾತ್ಮನ ಕುರಿತು ದ್ವೇಷಭಾವದ ಕಾರಣ ವ್ಯಸನಾಸಕ್ತನಾಗಿ ಧರ್ಮಸೇವನೆಯನ್ನು ಬಿಟ್ಟುಕೊಡುತ್ತಾನೆ ಮತ್ತು ಮೂರ್ಖರ ಸಂಗತಿ ಮಾಡಿ ಕುಮಾರ್ಗಿಯಾಗಿ ಹೋಗುತ್ತಾನೆ.

ಹೀಗಾದ ಮೇಲೆ ಅವನಿಗೆ ಧರ್ಮೋಪದೇಶವು ಕಠಿಣವಾಗಿ ಹೋಯಿತು. ಅವನ ಕಠೋರ ಹೃದಯದಲ್ಲಿ ಕೋಮಲ ವಚನಗಳು ಪ್ರವೇಶ ಪಡೆಯುವುದಿಲ್ಲ. ಒಂದುವೇಳೆ ಯಾರೋ ಪಾಪೀ ಜನರು ಧರ್ಮಾತ್ಮರ ದ್ವೇಷ ಮಾಡುತ್ತಿದ್ದರೆ ಇವನು ಅವರ ಹತ್ತಿರ ಹೋಗಿ, ಅನೇಕ ಪ್ರಕಾರದಿಂದ ಅವರ ಸೇವೆ ಮಾಡಿ ಸಂತುಷ್ಟ ಪಡಿಸುತ್ತ ಅವರನ್ನು ಮಿತ್ರರೆಂದು ಮನ್ನಿಸಿ- ಆ ಧರ್ಮಾತ್ಮರು ನಮ್ಮನ್ನು ದ್ವೇಷಿಸುತ್ತಾರೆ; ನೀವು ನಮ್ಮ ಹಿತೈಷಿಯಿರುವಿರಿ, ಆದುದರಿಂದ ಕೃಪೆ ಮಾಡಿ ಆ ಧರ್ಮಾತ್ಮರ ಕುರಿತಾಗಿರುವ ಸ್ನೇಹ-ಸತ್ಕಾರಗಳನ್ನು ಬಿಟ್ಟು ಬಿಡಿರಿ, ನಾವಂತೂ ನಿಮ್ಮ ಸೇವಕರಿದ್ದೇವೆ - ಎಂಬಿತ್ಯಾದಿ ಕಪಟ ವಚನಗಳನ್ನಾಡುತ್ತಾನೆ.

ಆ ಮೂರ್ಖನೂ ಈ ಮೂರ್ಖನ ಮಾತು ಕೇಳಿ ಶುದ್ಧ ಧರ್ಮಾತ್ಮರೊಂದಿಗೆ ದ್ವೇಷಭಾವ ಧಾರಣ ಮಾಡಿ ಸ್ವಯಂ ಹಟದಿಂದ ಕುಮಾರ್ಗದ ಸೇವನೆ ಮಾಡಲಾರಂಭಿಸುತ್ತಾನೆ. ಆ ಧರ್ಮಾತ್ಮನನ್ನು ನೋಡುತ್ತಿದ್ದಂತೆಯೇ ದ್ವೇಷಭಾವರೂಪದಿಂದ ಪರಿಣಮಿಸತೊಡಗುತ್ತಾನೆ - ಈ ಪ್ರಕಾರ ಈತನ ಸತ್ಸಂಗವು ಬಿಟ್ಟು ಹೋಯಿತು. ಯಾವ

ಸಂಗತಿಯಲ್ಲಿ ಉಳಿದನು ಅದರಿಂದ ಹೃದಯವು ಕಠೋರವಾಗಿ ಹೋಯಿತು. ಅನಾಚಾರವು ಒಳ್ಳೆಯದೆನಿಸ-ಲಾರಂಭಿಸಿತು. ಒಳ್ಳೆಯ ರೀತಿಯಿಂದ ತಿಳಿಯುತ್ತಿದ್ದರೂ ಪಾಪೀ ಮೂರ್ಖನ ಹೇಳಿಕೆಯಿಂದ ಇವನೂ ಶುದ್ಧ ಧರ್ಮವನ್ನು ಬಿಟ್ಟು ಕುಮಾರ್ಗದಲ್ಲಿ ತೊಡಗಿದನು. ಧರ್ಮದಿಂದ ಹಾಗೂ ಧರ್ಮಾತ್ಮರಿಂದ ದ್ವೇಷ ಮಾಡುತ್ತ ಪಾಪರೂಪದ ಪ್ರವೃತ್ತಿಮಾಡುತ್ತ ನಮ್ಮದೇನಾಗುವುದಿದೆಯೋ ಆಗಲಿ-ಎನ್ನುತ್ತಾನೆ. ಈ ಪ್ರಕಾರ ತನ್ನ ಹಿತಾಹಿತವನ್ನು ತಿಳಿಯದ ತೀವ್ರಕಷಾಯೀ ಮುಗ್ಧ ಮೂರ್ಖನಿಗೆ ಧರ್ಮೋಪದೇಶವಿರುವುದಿಲ್ಲ. ಸ್ವಯಂ ಅವನದೇ ಯಾವಾಗ ಕಾಲವು ಪಕ್ವವಾಗುತ್ತದೆ, ಸಂಸಾರದ ಕೊನೆಯು ನಿಕಟವಾಗುತ್ತದೆ, ಸಹಜವಾಗಿಯೇ ಕಷಾಯಗಳು ಮಂದವಾಗಿ, ಸತ್ಸಂಗ ಪಡೆಯುತ್ತಾನೆ ಆಗ ತನ್ನ ದೋಷವನ್ನು ತಿಳಿದು ಸ್ವೀಕಾರ ಮಾಡುತ್ತಾನೆ ಮತ್ತು ತನ್ನ ಅಜ್ಞಾನದ ನಿಂದೆ ಮಾಡುತ್ತ ಪ್ರಾಯಶ್ಚಿತ್ತಪೂರ್ವಕ ಶುದ್ಧನಾಗಿ ಧರ್ಮದ ಸೇವನೆ ಮಾಡಬಹುದಾಗಿದೆ. ಅನ್ಯಥಾ ಅಂಥ ಮೂರ್ಖನು ಉಪದೇಶದಿಂದ ಸರಿಹೋಗುವುದಿಲ್ಲ. ಅದಕ್ಕಾಗಿ ಅಂಥ ಕ್ರೋಧಿಗೆ ಉಪದೇಶ ಕೊಡುವುದರ ನಿಷೇಧ ಮಾಡಲಾಗಿದೆ.

ಸ್ವಯಂ ಮಾನಿಯಿರುವುದರಿಂದ ಧರ್ಮಸ್ಥಾನದಲ್ಲಿ ಹೋಗಿ ದೇವ-ಗುರು-ಧರ್ಮಕ್ಕೆ ನಮಸ್ಕಾರ ಮಾಡುವುದರಿಂದ ಅವನ ಚಿತ್ತದಲ್ಲಿ ಲಜ್ಜೆಯು ಉತ್ಪನ್ನವಾಗುತ್ತದೆ; ಅಂತೆಯೇ ಸಮತೆಯ ಭಾವದಿಂದ ಸಹಿತರಾದ ಧರ್ಮಾತ್ಮರನ್ನು ಕಂಡು ಅವರನ್ನು ಸಾಮಾನ್ಯರೆಂದು ತಿಳಿದು ಅವರ ಸಲುವಾಗಿ ವಿನಯಭಾವ ಮಾಡುವುದಿಲ್ಲ. ತನ್ನನ್ನು ತಾನು ವಿಶೇಷ ಪುಣ್ಯಾತ್ಮನೆಂದು ತಿಳಿದು ಧರ್ಮಾತ್ಮಾ ಜೀವರುಗಳ ಕುರಿತು ಅವಿನಯದ ಪ್ರವೃತ್ತಿ ಮಾಡುತ್ತಾನೆ. - ಅಂಥ ದೀರ್ಘ ಮಾನೀ ಮೂರ್ಖರ ಸಲುವಾಗಿ ಧರ್ಮೋಪದೇಶವಿರುವುದಿಲ್ಲ.

ಇನ್ನು ಸ್ವಯಂ ತನಗಂತೂ ಯಾರೊಂದಿಗೂ ಮಾನಭಾವವಿಲ್ಲ, ತಾನಂತೂ ಸುಜೀವನಿದ್ದಾನೆ; ಆದರೆ ಯಾವನೋ ಮಹಾಪಾಪೀ ಮಾನಿಯ ನಿಮಿತ್ತ ಪಡೆದು, ಆತನ ಉಪದೇಶ ಹಾಗೂ ಧರ್ಮಾತ್ಮಾ ಜೀವರ ಕುರಿತು ದ್ವೇಷಭಾವ ಮಾಡುತ್ತಾನೆ. ಬೇರೆಯವರ ಹೇಳಿಕೆಯಿಂದ ಧರ್ಮ ಹಾಗೂ ಧರ್ಮಾತ್ಮರ ಅವಿನಯ ಮಾಡುತ್ತಾನೆ-ಅಂಥ ಮುಗ್ಧ ಮೂರ್ಖರ ಸಲುವಾಗಿ ಧರ್ಮೋಪದೇಶವಿರುವುದಿಲ್ಲ.

ಯಾವನೋ ಮಾಯಾವಿ ಮೋಸಗಾರ ವಂಚಕನು ತಿಳಿಯುತ್ತಿದ್ದರೂ ಮುಗ್ಧ ಜೀವರುಗಳನ್ನು ದಾರಿ ತಪ್ಪಿಸುವ ಸಲುವಾಗಿ, ವಂಚಿಸುವ ಸಲುವಾಗಿ ದೇವ-ಗುರು-ಧರ್ಮದ ಸ್ವರೂಪವನ್ನು ವಿಪರೀತವಾಗಿ ತಿಳಿಸಿಕೊಡುತ್ತಾನೆ. ನಯ-ಯುಕ್ತಿಗಳಿಂದ ಕುದೇವ, ಕುಗುರು, ಕುಧರ್ಮದ ಸಂಬಂಧವಾಗಿ ಅನೇಕ ಅತಿಶಯಗಳನ್ನು ತೋರಿಸಿ ಜನರನ್ನು ವಂಚಿಸುತ್ತಾನೆ. ಆ ಮಾಯಾವಿಯು ಅನೇಕ ಉಪಾಯಗಳಿಂದ ತನ್ನ ಮಹಂತತೆಯನ್ನು ತೋರಿಸಿಕೊಟ್ಟು ಮುಗ್ಧ ಜೀವರುಗಳನ್ನು ತನ್ನ ಚರಣಗಳಲ್ಲಿ ಮಣಿಯುವಂತೆ ಮಾಡುತ್ತಾನೆ. ಯಾವುದೋ ಯುಕ್ತಿಯಿಂದ ಅವರ ಮನೆ-ಧನ ತಗೆದುಕೊಳ್ಳಲಿಚ್ಚಿಸುತ್ತಾನೆ - ಅಂಥ ವಂಚಕರಿಗೆ ಧರ್ಮೋಪದೇಶವಿರುವುದಿಲ್ಲ.

ಕೆಲವು ಮಹಾಲೋಭೀ, ಮಾಯಾಚಾರೀ, ಮನೋವಾಂಛಿತ ಇಂದ್ರಿಯ ಸುಖದ ಇಚ್ಛೆಯುಳ್ಳವರು, ಆನೆ-ಕುದುರೆ-ಪಲ್ಲಕ್ಕಿ, ರಥಾದಿ ವಾಹನಗಳ ವಾಂಛಕರು, ಹೀನಪುಣ್ಯರಾಗಿದ್ದರೂ ಹಾಗೂ ಸಂಪಾದನೆ ಮಾಡುವ ಶಕ್ತಿಯಿಲ್ಲದಿದ್ದರೂ ಭೋಗೋಪಭೋಗ ಸಂಬಂಧದಲ್ಲಿ ತೀವ್ರ ತೃಷ್ಣೆಯ ಕಾರಣ ಜ್ಞಾನದ ಮಾಧ್ಯಮದಿಂದ ಮುಗ್ಧ ಜೀವರುಗಳಿಗೆ ತಮ್ಮ ದೊಡ್ಡಸ್ತನದ ಚಮತ್ಕಾರ ತೋರಿಸಿಕೊಟ್ಟು ಅವರಿಂದ ವಾಹನಾದಿಗಳನ್ನು ಗಿಟ್ಟಿಸಿಕೊಳ್ಳುವಂಥ ವಂಚಕ ಲೋಭಿಗಳು ಅನೇಕ ಯಂತ್ರ, ಮಂತ್ರ, ತಂತ್ರ, ಜ್ಯೋತಿಷ, ವೈದ್ಯಕ, ರಸಾಯನಗಳಿಂದ ಚಮತ್ಕಾರ ತೋರಿಸಿಕೊಟ್ಟು, ತಮ್ಮ ತ್ಯಾಗ ನಿಸ್ಪೃಹತೆಯನ್ನು ತಿಳಿಸಿಕೊಟ್ಟು ಅನ್ಯರ ಕುದುರೆ-ರಥಾದಿ ವಾಹನಗಳ ಲೋಭಿಗಳು, ಇತರರ ಧನವನ್ನು ಬಯಸುವಂಥವರ ಸಲುವಾಗಿ ಸುಧರ್ಮದ ಉಪದೇಶವಿರುವುದಿಲ್ಲ. ಏಕೆಂದರೆ ಇಂಥ ಭೋಗಿ, ಪಾಖಂಡಿಗಳು, ಮಾಯಾಚಾರದ ಬಲದಿಂದ ಇಂದ್ರಿಯಗಳ ಭೋಗ ಭೋಗಿಸುವಂಥ ಜೀವರುಗಳಿಗೆ ಧರ್ಮವು ರುಚಿಸುವುದಿಲ್ಲ. ಅಂಥವರಿಗೆ ಒಂದು ವೇಳೆ ಧರ್ಮವು ರುಚಿಸಲಾರಂಭಿಸಿದರೆ ನಿಶ್ಚಿತವಾಗಿಯೇ ಭೋಗದ ಭಾವ

ಮತ್ತು ಲೋಭವು ಬಿಟ್ಟು ಹೋಗುತ್ತದೆ. ಈ ಪ್ರಕಾರ ಚೆನ್ನಾಗಿ ತಿಳಿಯುತ್ತಿದ್ದರೂ ಮಹಾಕಷಾಯಿ, ಭೋಗಿ, ಇಂದ್ರಿಯ ಸುಖ ಭೋಗಿಸುವ ಇಚ್ಛೆಯುಳ್ಳ ಧರ್ಮರಹಿತ ಮೂರ್ಖರ ಸಲುವಾಗಿ ಧರ್ಮೋಪದೇಶ ಕೊಡುವುದರ ನಿಷೇಧವಿದೆ. ಮುಗ್ಧ, ಪ್ರಾಮಾಣಿಕ ಮೂರ್ಖರಿಗೆ ಧರ್ಮೋಪದೇಶವು ಒಪ್ಪಿಗೆಯಾಗುತ್ತದೆ-ಎಂದು ತಿಳಿಯುವುದು. ಈ ಪ್ರಕಾರ ಮೂರ್ಖರಲ್ಲಿ ಎರಡು ಭೇದಗಳಿವೆಯೆಂಬ ಉತ್ತರವಿದೆ.

ರೋಗಿ ಜೀವರುಗಳಲ್ಲಿ ೧. ಮಹಾರೋಗಿ, ೨. ಅಸಾಧ್ಯ ವೇದನಾಧಾರೀ ಮಹಾರೋಗಿಯೆಂದು ಎರಡು ಭೇದಗಳಿವೆ. ದೇಶಾಂತರದಿಂದ ಬಂದಿರುವ ಯಾವನೋ ವೈದ್ಯನು ಇಬ್ಬರೂ ರೋಗಿಗಳನ್ನು ನೋಡಿ, ಅವರ ನಾಡಿ ಪರೀಕ್ಷೆ ಮಾಡಿ, ಸಮಸ್ತ ಶುಭಾಶುಭ ತಿಳಿದು ಹೇಳುತ್ತಾನೆ - ಈ ರೋಗಿಯು ಉಪಚಾರ ಯೋಗ್ಯನಿದ್ದಾನೆ; ಆದರೆ ಈ ಅಸಾಧ್ಯ ರೋಗಿಯ ಉಪಚಾರವು ಸಾಧ್ಯವಿಲ್ಲ. ಎಂದಾಗ, ಈತನ ಉಪಚಾರವು ಅದೇಕೆ ಸಾಧ್ಯವಿಲ್ಲವೆಂದು ವಿಚಾರಿಸಿದರೆ ವೈದ್ಯನು ಇವನ ಆಯುವು ದೀರ್ಘವಿದೆ ಆದರೆ ಈತನ ಆಯುಕರ್ಮವು ಅಲ್ಪವಿರುವ ಕಾರಣ ಇವನು ಸಾಯುವನು, ಯಾವುದೇ ಉಪಾಯವಿಲ್ಲ - ಇವನ ಮೇಲೆ ಪ್ರಯೋಗಿಸಲ್ಪಡುವ ಉಪಾಯಗಳೆಲ್ಲವೂ ವ್ಯರ್ಥವಾಗುವವು, ಯಾವ ಉಪಾಯವೂ ಸಾರ್ಥಕವಾಗುವುದಿಲ್ಲ-ಎಂದು ಹೇಳುತ್ತಾನೆ.

ಅದೇ ಪ್ರಕಾರ ಯಾರ ಪರಭವವು ಒಳ್ಳೆಯದಿದೆ, ಅಂಥ ಸಹಜ ಮುಗ್ಧ ಜೀವಗಳಂತೂ ಉಪದೇಶಕ್ಕೆ ಯೋಗ್ಯವಿವೆ. ಅವರಿಗೆ ಧರ್ಮೋಪದೇಶವು ಹಿಡಿಸುತ್ತದೆ (ಅವರು ಅದನ್ನು ಅಂಗೀಕಾರ ಮಾಡುತ್ತಾರೆ); ಆದರೆ ಯಾರಿಗೆ ಪರಭವದಲ್ಲಿ ಅಶುಭ (ಹೀನ) ಗತಿಯಾಗುವುದಿದೆ, ಅವರು ತಿಳಿಯುತ್ತಿದ್ದರೂ ಕಷಾಯದ ಕಾರಣ ಸುಧರ್ಮದಿಂದ ವಿಮುಖರಾಗಿ ಉಳಿಯುತ್ತಾರೆ- ಅಂಥ ಜೀವಗಳಿಗೆ ಧರ್ಮದ ಉಪದೇಶವು ಒಳ್ಳೆಯದೆನಿಸುವುದಿಲ್ಲ. ಎಂದರೆ ಅವರಿಗೆ ಧರ್ಮೋಪದೇಶವು ಹಿಡಿಸುವುದೂ ಇಲ್ಲ ಮತ್ತು ಅದನ್ನು ಅವರು ಅಂಗೀಕಾರ ಮಾಡುವುದಾಗುವುದಿಲ್ಲ.

**ಸಂದೇಹ ಃ-** ಧರ್ಮದ ಉಪದೇಶವು ಕೆಲವರ ಸಲುವಾಗಿ ಇದೆ ಮತ್ತು ಕೆಲವರ ಸಲುವಾಗಿ ಇಲ್ಲವೆಂದು ತಾವು ಹೇಳುತ್ತಿರುವಿರಿ; ಆದರೆ ಭಗವಂತರ ಉಪದೇಶವಂತೂ ಎಲ್ಲರ ಸಲುವಾಗಿ ಇರಬೇಕಾಗುವುದು. ಕೆಲವರ ಸಲುವಾಗಿ ಇರುವುದು ಮತ್ತು ಕೆಲವರ ಸಲುವಾಗಿ ಇಲ್ಲವಾದರೆ ವೀತರಾಗತೆಯು ಹೇಗೆ ಉಳಿಯುವುದು ? ಸರಾಗತೆಯಾಗುವುದು !

**ಸಮಾಧಾನ -** ಎಲೈ ಭವ್ಯನೇ ! ನೀನು ಹೇಳುತ್ತಿರುವುದಂತೂ ಸತ್ಯವಿದೆ; ಆದರೆ ಈಗ ನೀನು ಸ್ಥಿರ-ಚಿತ್ತದಿಂದ ಆಲಿಸು ! ಜಗತ್ತಿನಲ್ಲಿ ಎರಡು ಪ್ರಕಾರದ ವೈದ್ಯರಿರುತ್ತಾರೆ - ೧. ಮುಗ್ಧ ಮತ್ತು ಮಾನೀ ವೈದ್ಯ ಮತ್ತು ೨. ಪರಮಾರ್ಥಿ ಸರಳ ಪರಿಣಾಮಿ ಮತ್ತು ವಿಶೇಷ ಜ್ಞಾನೀ - ಹೀಗೆ ಎರಡು ಜಾತಿಯ ವೈದ್ಯರಿರುತ್ತಾರೆ.

ಅವರೊಳಗಿನ ಯಾವನೋ ವೈದ್ಯನು ಶಾಸ್ತ್ರಜ್ಞಾನದಿಂದ ರಹಿತ; ನಾಡೀಪರೀಕ್ಷೆ, ದೃಷ್ಟಿ ಪರೀಕ್ಷೆ, ಮೂತ್ರ ಪರೀಕ್ಷೆ, ಬೆವರು ಪರೀಕ್ಷೆ, ಶಕುನ ಪರೀಕ್ಷೆ ಇತ್ಯಾದಿ ವೈದ್ಯನ ಗುಣಗಳಿಂದ ರಹಿತ ಮೂರ್ಖ ವೈದ್ಯನು ಲೋಭವಶದಿಂದ ದೊಡ್ಡಸ್ತನದ ಸಲುವಾಗಿ ಮುಗ್ಧ ಜೀವಗಳಿಗೆ ತನ್ನ ದೊಡ್ಡಸ್ತಿಕೆಯನ್ನು ತಿಳಿಸಿಕೊಟ್ಟು ವೈದ್ಯಕೀಯ ಅಜ್ಞಾನತೆಯಿಂದ ಕೂಡಿದ ಔಷಧ ಕೊಟ್ಟು ಉಪಚಾರ ಮಾಡುತ್ತಾನೆ. ಅಂಥದರಲ್ಲಿ ದೀರ್ಘಾಯುವಿನ ಧಾರಕ ಕೆಲವು ರೋಗಿಗಳು ತಮ್ಮ ಪುಣ್ಯದಿಂದ ಬದುಕಿ ಉಳಿಯುತ್ತಾರೆ, ರೋಗವು ಕೆಲವು ದಿವಸಗಳವರೆಗೆ ದುಃಖವಿತ್ತು ಕೊನೆಗೆ ನಷ್ಟವಾಗಿ ಹೋಗುತ್ತದೆ. ಅದರಿಂದ ವೈದ್ಯನು ನನ್ನನ್ನು ಗುಣಮುಖ ಮಾಡಿದನೆಂದು ತಿಳಿದು ಕೆಲವು ಮುಗ್ಧ ರೋಗಿಗಳಂತೂ ವೈದ್ಯನನ್ನು ಹೊಗಳುತ್ತಾರೆ. ಅವನಿಗೆ ಧನ ಕೊಡುತ್ತಾರೆ. ಅಲ್ಪಾಯುವಿನ ಧಾರಕ ರೋಗಿಗಳು ಉಪಚಾರ ಮಾಡುತ್ತ ಔಷಧ ಕೊಟ್ಟ ಮೇಲೆಯೂ ಸತ್ತು ಹೋಗುತ್ತಾರೆ; ಆಗ ಆ ರೋಗಿಯ ಮನೆಯವರು ಈ ವೈದ್ಯನ ನಿಂದೆ ಮಾಡುತ್ತಾರೆ. ಅವರು ಎಲ್ಲಿ ಹೋದಲ್ಲೆಲ್ಲ ವೈದ್ಯನನ್ನು ತೆಗಳುತ್ತಾರೆ. ಹಾಗಂತೂ ಪ್ರತಿಯೊಂದು ಜೀವದ

ಜೀವನ-ಮರಣವಂತೂ ಕರ್ಮಾಧೀನವಿದೆ. ವೈದ್ಯನ ಆಧೀನ ಏನೂ ಇಲ್ಲ. ಆದಾಗ್ಯೂ ವಿಚಾರವಿಲ್ಲದೆ ಪರೀಕ್ಷಾರಹಿತನಾಗಿ ಉಪಚಾರ ಮಾಡುವುದು ವೈದ್ಯನದೇ ಅಜ್ಞಾನತೆಯಿದೆ; ಅದರಿಂದ ವ್ಯರ್ಥವಾಗಿಯೇ ಜಗತ್ತಿನಲ್ಲಿ ನಿಂದೆಗೆ ಗುರಿಯಾಗುತ್ತಾನೆ - ಇಂಥ ವೈದ್ಯನು ಮೂರ್ಖ ವೈದ್ಯನೆನಿಸುತ್ತಾನೆ.

ವಿವೇಕೀ ವೈದ್ಯನಂತೂ ಅನೇಕ ವೈದ್ಯಕೀಯ ಶಾಸ್ತ್ರಗಳ ಜ್ಞಾನದಿಂದ ಸಹಿತ ಅರ್ಥಾತ್ ನಾಡೀ ಪರೀಕ್ಷೆ, ಮೂತ್ರಪರೀಕ್ಷೆ, ದೃಷ್ಟಿ ಪರೀಕ್ಷೆ, ಬೆವರು ಪರೀಕ್ಷೆ, ಶಕುನ ಪರೀಕ್ಷೆಗಳಿಗೆ ಸಂಬಂಧಿಸಿದ ಜ್ಞಾನಸಹಿತನಿರುತ್ತಾನೆ. ಕೈ, ಕಾಲು, ತಲೆ, ಎದೆಯ ಸ್ನಾಯುಗಳನ್ನು ನೋಡಿ ರೋಗದ ಶುಭಾಶುಭ ಹೇಳುವುದು ನಾಡೀ ಪರೀಕ್ಷೆಯಿದೆ. ಮೂತ್ರದ ವರ್ಣ, ಸ್ಪರ್ಶ, ಗಂಧ ಮೊದಲಾದ ಲಕ್ಷಣ ನೋಡಿ ಶರೀರದ ರೋಗಗಳ ಶುಭಾಶುಭ ತಿಳಿಯುವುದು ಅದು ಮೂತ್ರ ಪರೀಕ್ಷೆಯಿದೆ. ಶರೀರದ ದಶೆಯನ್ನು ನೋಡಿ, ಕೇವಲ ನೋಡುವುದರಿಂದಲೇ ರೋಗಿಯ ಶುಭಾಶುಭ ತಿಳಿಯುವುದು ದೃಷ್ಟಿ ಪರೀಕ್ಷೆಯಿದೆ. ರೋಗಿಯ ಶರೀರದ ಬೆವರನ ಗಂಧವನ್ನು ಆಘ್ರಾಣಿಸಿ ರೋಗವನ್ನು ತಿಳಿಯುವುದು ಬೆವರು ಪರೀಕ್ಷೆಯಿದೆ. ರೋಗಿಯ ಸಮಾಚಾರ ತಗೆದುಕೊಂಡು ವೈದ್ಯನ ಹತ್ತಿರ ಬರುವಂಥವನ ಮುಖದಿಂದ ಸಮಾಚಾರವನ್ನಾಲಿಸಿ, ಆತನ ಮುಖದ ಆಕೃತಿ ನೋಡಿ ರೋಗಿಯ ಶುಭಾಶುಭ ತಿಳಿಯುವುದು ಶಕುನ ಪರೀಕ್ಷೆ ಅಥವಾ ದೂತಪರೀಕ್ಷೆಯಿದೆ.

ಇಂಥ ವೈದ್ಯ ಗುಣಗಳಿಂದ ಸಹಿತನಾದ ಒಳ್ಳೆಯ ವೈದ್ಯನು, ಮೇಲೆ ಹೇಳಿದ ರೋಗಿಯ ಶುಭಾಶುಭವನ್ನು ತಿಳಿಯುವಂಥ ಸುವೈದ್ಯನು ರೋಗಿಯ ಬದುಕನ್ನು ತಿಳಿಯುತ್ತಾನೆ. ಅವನ ಆಯುಕರ್ಮವು ಅಧಿಕವಿರುವುದನ್ನು ತಿಳಿದರೆ ಉಪಚಾರ ಮಾಡುತ್ತಾನೆ. ಒಂದುವೇಳೆ ಅವನು ಗುಣವಾಗುವುದಿಲ್ಲ, ಅಲ್ಪ ಆಯುವನ್ನು ತಿಳಿದರೆ ಉಪಚಾರ ಮಾಡುವುದಿಲ್ಲ. ಅವನಿಗೆ ಮಾನ-ದೊಡ್ಡಸ್ತನದ ಇಚ್ಛೆಯಿರುವುದಿಲ್ಲ, ಯಾರಿಂದಲೂ ದುಡ್ಡು (ಧನ) ತಗೆದುಕೊಳ್ಳುವುದಿಲ್ಲ. ಪಾರಮಾರ್ಥಿಕ ಉಪಚಾರವನ್ನು ತಿಳಿಸಿಕೊಟ್ಟು ರೋಗ ನಷ್ಟಗೊಳಿಸುವಂಥವರ ಕೀರ್ತಿಯೇ ಆಗುತ್ತದೆ. ಎಲ್ಲ ಜನರು ಅವನ ಪ್ರಶಂಸೆ ಮಾಡುತ್ತಾರೆ - ಇಂಥ ಗುಣಗಳ ಧಾರಕನು ಎಲ್ಲರ ಉಪಚಾರ ಮಾಡುತ್ತಾನೆ. ಯಾರಿಂದಲೂ ಏನನ್ನೂ ಬಯಸುವುದಿಲ್ಲ; ಇಂಥ ವೈದ್ಯನು ಧನ್ಯನಿದ್ದಾನೆ ಆ ನಿಸ್ಪೃಹೀ ಗುಣವಂತನು ಪೂಜೆಗೆ ಪ್ರಾಪ್ತನಾಗುತ್ತಾನೆ.

ಅದೇ ಪ್ರಕಾರ ಮುಗ್ಧ, ತುಚ್ಛಜ್ಞಾನಿ, ಜ್ಞಾನರಹಿತ, ಸರಾಗಿ, ಆನೆ-ಕುದುರೆ ಮೊದಲಾದ ವಾಹನಗಳನ್ನು ಬಯಸುವಂಥವ, ತನ್ನ ದೊಡ್ಡಸ್ತನವನ್ನು ಪ್ರಕಟಪಡಿಸಲು ಇಚ್ಛಿಸುವಂಥ ರಾಗಿ-ದ್ವೇಷಿ, ದೇವ-ಗುರುಗಳು ಎಲ್ಲರಿಗೂ ಅಸತ್ಯ ಉಪದೇಶ ಅರ್ಥಾತ್ ಅತತ್ತ್ವದ ಉಪದೇಶ ನೀಡಿ ತಮ್ಮ ಪದವನ್ನು ಪೂಜ್ಯವನ್ನಾಗಿಯಂತೂ ಮಾಡಿಕೊಳ್ಳುತ್ತಾರೆ. ಕೇಳುವಂಥವರು ನರಕಕ್ಕೆ ಹೋಗಲಿ, ಬೇಕಾದರೆ ಸ್ವರ್ಗಕ್ಕೆ ಹೋಗಲಿ ಅದರಿಂದ ಇವರಿಗೆ ಯಾವ ಪ್ರಯೋಜನವಿರುವುದಿಲ್ಲ. ಆ ಜೀವನು ಉಪದೇಶ ಕೇಳಲು ಯೋಗ್ಯನಿದ್ದಾನೋ ಅಥವಾ ಇಲ್ಲವೆಂಬುದರ ವಿಚಾರವನ್ನೇ ಮಾಡದೆ ಎಲ್ಲರಿಗೂ ಸಮಾನ ಉಪದೇಶ ಕೊಡುತ್ತಾರೆ; ಶಿಷ್ಯನ ಒಳಿತು ಕೆಡಕುಗಳ ವಿಚಾರ ಮಾಡುವುದಿಲ್ಲ, ಅಂಥವರು ಮುಗ್ಧ ದೇವ-ಗುರುವೆನಿಸುತ್ತಾರೆ.

ಅಂತರ್ಯಾಮೀ ಸರ್ವಲೋಕದ ಜ್ಞಾತಾರರು, ಕೇವಲಜ್ಞಾನದ ಧಾರಕರು, ಪ್ರಭು ವೀತರಾಗಿ ಶುದ್ಧದೇವರ ಉಪದೇಶವಂತೂ - ಯಾರಿಗೆ ಉಪದೇಶವು ಇಷ್ಟವಾಗುತ್ತದೆ, ಯಾರು ಅದನ್ನು ಅಂಗೀಕಾರ ಮಾಡುತ್ತಾರೆ - ಅವರ ಸಲುವಾಗಿಯೇ ಇರುತ್ತದೆ. ಯಾರಿಗೆ ಉಪದೇಶವು ಇಷ್ಟವಾಗುವುದಿಲ್ಲ, ಅವರ ಸಲುವಾಗಿ ಉಪದೇಶದ ನಿಷೇಧವಿದೆ. ಅವರು ವ್ಯರ್ಥ ಉಪದೇಶ ನೀಡುವುದಿಲ್ಲ. ಕೊಡಲು ಯೋಗ್ಯವಿರುವಂಥವರಿಗೇ ಕೊಡುತ್ತಾರೆ.

ಹೇಗೆ ಪರುಷ ಪಾಷಾಣವು ಲೋಹದಂಥ ಕುಧಾತುವನ್ನು ತನ್ನ ಸ್ಪರ್ಶದಿಂದ ಚಿನ್ನವಾಗಿಸುತ್ತದೆ. ಕಂಚು, ಹಿತ್ತಾಳೆ, ತಾಮ್ರ ಮೊದಲಾದ ಅನೇಕ ಧಾತುಗಳು ಪರುಷದ ಸ್ಪರ್ಶದಿಂದ ಚಿನ್ನವಾಗುವುದಿಲ್ಲ. ಯಾವವು

ಚಿನ್ನವಾಗಲು ಯೋಗ್ಯವಿವೆ, ಅವುವೇ ಆಗುತ್ತವೆ. ಅದೇ ಪ್ರಕಾರ ಸರ್ವಜ್ಞ ಭಗವಂತರ ಉಪದೇಶವು ನಿಕಟ ಸಂಸಾರೀ ಭವ್ಯರ ಸಲುವಾಗಿಯೇ ಇರುತ್ತದೆ. ನಿಕಟ ಸಂಸಾರಿ, ಮುಗ್ಧ, ಮೂರ್ಖ ಭವ್ಯನಿಗೆ ಧರ್ಮವು ರುಚಿಸುತ್ತದೆ. ಅವನಿಗೆ ಅದರ ಲಾಭವೂ ಆಗುತ್ತದೆ. ಆದುದರಿಂದ ಅಂಥ ಮುಗ್ಧನಿಗೆ ಉಪದೇಶವಿದೆ. ಅಭವ್ಯ ಅಥವಾ ಅಭವ್ಯನ ಸಮಾನ ದೂರ, ದೂರಾನುದೂರ ಭವ್ಯ ಜೀವರುಗಳಿಗೆ ಎಂದೂ ಸುಧರ್ಮದ ಲಾಭವಾಗುವುದಿಲ್ಲ. ಅದರಿಂದ ಅವರಿಗೆ ಕೇವಲಿಗಳ ಉಪದೇಶವಿಲ್ಲ-ಈ ಪ್ರಕಾರ ತಮ್ಮ ಪ್ರಶ್ನೆಯ ಉತ್ತರವಾಯಿತು.

ವಿವೇಕವಂತ ಭವ್ಯ ಜೀವರುಗಳಂತೂ ಯಾವ ವಸ್ತುವು ಶುದ್ಧವಾಗುವುದನ್ನು ತಿಳಿಯುತ್ತಾರೆ. ಅದನ್ನೇ ಶುದ್ಧ ಮಾಡುವ ಉಪಚಾರ ಮಾಡುತ್ತಾರೆ. ಮತ್ತು ಯಾವ ವಸ್ತುವು ಶುದ್ಧವಾಗುವುದಿಲ್ಲ, ಅದರ ಸಲುವಾಗಿ ಉಪಾಯವೂ ವ್ಯರ್ಥವಿದೆ. ಅಂತೆಯೇ ಯಾರು ಹಟಾಗ್ರಹೀ, ಕ್ರೋಧಾದಿ ಕಷಾಯರೂಪ ಮಲದಿಂದ ಲಿಪ್ತ, ತಿಳಿಯುತ್ತಿದ್ದರೂ ಧರ್ಮದಿಂದ ವಿಮುಖ ಪ್ರವೃತ್ತಿ ಮಾಡುತ್ತಾರೆ ಅವರ ಸಲುವಾಗಿ ಉಪದೇಶದ ನಿಷೇಧವಿದೆ. ಯಾವಾಗ ಅವರ ಭವಿತವ್ಯತೆಯು ಒಳ್ಳೆಯದಾಗುವುದು, ಆಗ ಅವರೇ ಧರ್ಮದ ಸನ್ಮುಖರಾಗುವರೆಂದು ತಿಳಿಯುವುದು.

ಈಗ, ಇವೆಲ್ಲ ವ್ಯಾಪಾರ-ಕಾರ್ಯ ಮಾಡುವಂಥವರು ದಯಾರಹಿತರಿದ್ದಾರೆಂದು ಹೇಳುತ್ತಾರೆ,-

**ಪಸುರಕ್ಖೋ ಕಿಖ ಖೇಟಯ, ಣಿಪ ವೈದೋ ಛೀಯ ರಜಕ ರಥವಾಹೋ ।**
**ವಣರಕ್ಖೋ ಪಲಭಕ್ಖೋ, ಏಸಹು ಕಿಪ್ಪಾಯ ವಜ್ಜಯೋ ಆದಾ ॥೬೦॥**

**ಗಾಥಾರ್ಥ :-** ತಿರ್ಯಂಚ(ಪಶು)ಗಳನ್ನು ಸಾಕುವವ, ಒಕ್ಕಲುತನ ಮಾಡುವವ, ಬೇಟೆಯಾಡುವವ, ದೊರೆ, ವೈದ್ಯ, ಬಟ್ಟೆಗೆ ಬಣ್ಣ ಹಾಕುವವ, ಮಡಿವಾಳ, ರಥಾದಿಗಳನ್ನು ಓಡಿಸುವವ, ಮಾಳಿ, ಮಾಂಸ ತಿನ್ನುವಂಥವ - ಇವರೆಲ್ಲರೂ ದಯಾರಹಿತ ಆತ್ಮರೆಂದು ತಿಳಿಯುವುದು.

**ಭಾವಾರ್ಥ :-** ಸಿಂಹ, ಸೂಕರ, ಚಿರತೆ, ಕರಡಿ, ಮೊಲ, ನಾಯಿ, ಬೆಕ್ಕು, ಮೀನು, ಮೊಸಳೆ, ಗುಬ್ಬಿ, ಗಿಳಿ ಮೊದಲಾದವು ಮತ್ತು ಹಸು, ಎಮ್ಮೆ, ಎತ್ತು, ಕೋಣ, ಕುರಿ, ಮೇಕೆ, ಆನೆ, ಕುದುರೆ ಮೊದಲಾದ ಪಶುಗಳನ್ನು ಸಾಕುವಂಥ ಜೀವರುಗಳ ಹೃದಯವು ಸಹಜವಾಗಿಯೇ ದಯಾಶೂನ್ಯ ಕಠೋರವಿರುತ್ತದೆ. ಹಾವು, ಮುಂಗುಸಿ, ಮೂಶಕ ಮೊದಲಾದ ಜೀವಗಳ ರಕ್ಷಕರು ಕಠೋರರಿರುತ್ತಾರೆ. ಅವರು ಬೇರೆ ಜೀವಗಳನ್ನು ಕೋಲು, ಕಲ್ಲುಗಳಿಂದ ಹೊಡೆಯುತ್ತಾರೆ, ಒದೆಯುತ್ತಾರೆ, ಗುದ್ದುತ್ತಾರೆ, ಅವರಿಗೆ ಜೀವಗಳ ದಯೆ ಬರುವುದಿಲ್ಲ. ಈ ಪಶುಪಾಲಕರಿಗೆ ಸಹಜವಾಗಿಯೇ ದಯೆಯಿರುವುದಿಲ್ಲ. ಅದರಿಂದ ದಯಾಭಾವದ ಧಾರಕರಾದ ಷಟ್ಕಾಯ ಜೀವಗಳ ರಕ್ಷಕ ಜೈನರು ಪಶುಗಳ ಸಂಗ್ರಹ ಮಾಡುವುದಿಲ್ಲ.

**ಸಂದೇಹ -** ಪಶುಗಳನ್ನು ಸಾಕಬಾರದೆಂದು ತಾವು ಹೇಳುತ್ತಿರುವಿರಿ; ಆದರೆ ಅಲ್ಲಲ್ಲಿ ಜೈನ ಧರ್ಮಾತ್ಮರು ಪಶುಜೀವಗಳ ರಕ್ಷಣೆ ಮಾಡುತ್ತಿರುವುದು ಕಂಡು ಬರುತ್ತದೆ, ಕೆಲವರು ಧನ ಖರ್ಚು ಮಾಡಿ ಹುಲ್ಲು, ಧಾನ್ಯಗಳ ಖರೀದಿ ಮಾಡಿ ಪಶುಗಳಿಗೆ ತಿನ್ನಿಸುತ್ತಾರೆ. ಬಂದಿಗೃಹದಲ್ಲಿ ಬಿದ್ದುಕೊಂಡಿರುವ ಪಶುಗಳ ಮಹಾದುಃಖವನ್ನು ನೋಡಿ ಧರ್ಮಾತ್ಮರು ಧನಕೊಟ್ಟು ಅವುಗಳನ್ನು ಅಲ್ಲಿಂದ ಬಿಡಿಸಿ ಸುಖಿ ಮಾಡುತ್ತಾರೆ. ಕೆಲವರು ಹಸಿದಿರುವ ನಾಯಿಯನ್ನು ನೋಡಿ ಅದಕ್ಕೆ ರೊಟ್ಟಿ ಹಾಕುತ್ತಾರೆ - ಇತ್ಯಾದಿ ವಿಧದಿಂದ ಪಶುಗಳ ರಕ್ಷಣೆ ಮಾಡುತ್ತಾರೆ. ಯಾವ ಪಶುವಿಗೆ ನಡೆಯುವುದಾಗುವುದಿಲ್ಲ ಅದಕ್ಕೆ ಅಲ್ಲಿಯೇ ಹುಲ್ಲು-ನೀರು ಒದಗಿಸಿ ಅದರ ಪೋಷಣೆ ಮಾಡುತ್ತಾರೆ. ಯಾವುದೋ ಪಶುವಿನ ಕಾಲು ಮುರಿದು ಹೋದರೆ ಅದನ್ನು ಕಟ್ಟಿಸುತ್ತಾರೆ, ಅದರ ಉದರ ಪೋಷಣೆ ಮಾಡಿ ಅದನ್ನು ರಕ್ಷಿಸುತ್ತಾರೆ. ಹಾಗಾದರೆ ಈ ಕಾರ್ಯವು ಯೋಗ್ಯವಿಲ್ಲವೇನು ?

**ಸಮಾಧಾನ :-** ಜೀವಗಳನ್ನು ಸಾಕುವಿಕೆಯು ಎರಡು ಪ್ರಕಾರದ್ದಿದೆ. ೧. ಬೇಟೆ ಮೊದಲಾಗಿ ಪಾಪದ ಸಲುವಾಗಿ ಸಾಕುವುದು ಧರ್ಮಾತ್ಮರ ಸಲುವಾಗಿ ಯೋಗ್ಯವಾಗಿಲ್ಲ. ಅದರಿಂದ ಪಾಪದ ಉತ್ಪತ್ತಿಯಾಗುತ್ತದೆ. ೨. ದಯಾ ಸಹಿತರಾಗಿ ಜೀವಗಳ ಪಾಲನೆ ಮಾಡುವುದು.

ಕುಂಟ ಪಶು, ಕುರುಡ, ವೃದ್ಧ, ದುರ್ಬಲ, ರೋಗಿ ಇತ್ಯಾದಿ ಪಶುಗಳ ಕುರಿತಾಗಿ ನಿಷ್ಪ್ರಯೋಜನ ಕೇವಲ ಕರುಣೆಯ ಬುದ್ಧಿಯಿಂದ ಅವುಗಳ ರಕ್ಷಣೆಯ ಸಲುವಾಗಿ ಯಥಾಯೋಗ್ಯ ಪ್ರಾಸುಕ ಹುಲ್ಲು, ರೊಟ್ಟಿ, ಸೋಸಿದ ನೀರು ಕೊಟ್ಟು ಬಂಧನದಲ್ಲಿಡದೇ ಎಲ್ಲ ಜೀವಗಳಲ್ಲಿ ದಯೆಯ ಭಾವದಿಂದ ಅವುಗಳ ರಕ್ಷಣೆ ಮಾಡುವುದು ಯೋಗ್ಯವಿದೆ.

ಕಟುಕನು ತನ್ನ ಪ್ರಯೋಜನದ ಪುಷ್ಟಿಯ ಸಲುವಾಗಿ, ಕೆಲವರು ವಾಹನ-ಸವಾರಿಯ ಸಲುವಾಗಿ, ಕೆಲವರು ಹಾಲಿನ ಸಲುವಾಗಿ, ಕೆಲವರು ಭಾರ ಹೊರುವ ಸಲುವಾಗಿ, ಕೆಲವರು ಕಾದಾಟ ನೋಡುವ - ಇತ್ಯಾದಿ ತಮ್ಮ ವಿಷಯ ಪೋಷಣೆಯ ಸಲುವಾಗಿ ಸ್ವಾರ್ಥವಶ ಪಶುಗಳನ್ನು ಸಾಕುತ್ತಾರೆ ಅವುಗಳ ರಕ್ಷಣೆ ಮಾಡುತ್ತಾರೆ. ಬಂಧನದಲ್ಲಿಡುತ್ತಾರೆ; ಆದರೆ ಸಾಗಾಣಿಕೆಯಂತೂ ಪಾಪಕಾರಕವಿದೆ, ಯೋಗ್ಯವಿಲ್ಲ.

ದಯಾಭಾವ ಸಹಿತ ಪಶುಗಳನ್ನು ನಿರ್ಬಂಧವಿಟ್ಟು ಅವುಗಳ ಇಚ್ಛೆಯ ಅನುಸಾರ ಸ್ವಚ್ಛಂದವಾಗಿಡುವುದು. ಅವುಗಳನ್ನು ದೀನ, ಅಸಹಾಯ, ದುಃಖಿಯೆಂದು ತಿಳಿದು ರಕ್ಷಣೆ ಮಾಡುವುದು ಇತ್ಯಾದಿಗಳ ರೂಪದ ಪ್ರವರ್ತನೆಯಂತೂ ಧರ್ಮಾತ್ಮರ ಸಲುವಾಗಿ ಯೋಗ್ಯವೇ ಇದೆ. ಧರ್ಮದ ಅಂಗರೂಪ ದಯೆಯನ್ನು ಒಳ್ಳೆಯ ರೀತಿಯಿಂದ ಪಾಲನೆ ಮಾಡುವಂಥವನು ಓರ್ವ ಜೈನನೇ ಇದ್ದಾನೆ. ಇತರರಿಗೆ ದಯೆಯು ಉತ್ಪನ್ನವಾಗುವುದಿಲ್ಲ. ದಯೆಯ ಭಾವಪೂರ್ವಕ ಯಥಾಯೋಗ್ಯ ಎಲ್ಲ ಪಶುಗಳ ರಕ್ಷಣೆಯಿಂದ ಪುಣ್ಯವಾಗುತ್ತದೆ. ಇದರಲ್ಲಿ ದೋಷವಿಲ್ಲ.

ಕೃಷಿಯ ಸಲುವಾಗಿ ಭೂಮಿಯನ್ನು ಉಳುವಾಗ ಪಂಚೇಂದ್ರಿಯ ಮೊದಲಾದ ಜೀವಗಳ ಹಿಂಸೆಯಾಗುತ್ತಿರುವುದು ಪ್ರತ್ಯಕ್ಷ ತಮ್ಮ ಕಣ್ಣುಗಳಿಂದ ಕಂಡು ಬರುತ್ತದೆ. ಅವನು ಹೊಲ-ಗದ್ದೆಯನ್ನು ಕಾಲುಗಳಿಂದ ತುಳಿಯುತ್ತ ಹೋಗುತ್ತಾನೆ. ಅವನ ಮನಸ್ಸಿನಲ್ಲಿ ಕರುಣೆಯ ಭಾವವಿರುವುದಿಲ್ಲ; ಅದಕ್ಕಾಗಿ ದಯೆಯುಳ್ಳ ಜೈನರು ಒಕ್ಕಲುತನ ಮಾಡುವುದು ಯೋಗ್ಯವಿಲ್ಲ. ಒಕ್ಕಲುತನದಲ್ಲಿ ದಯೆಯಿರುವುದಿಲ್ಲ.

ಬೇಟೆಯಾಡುವ ಬೇಟೆಗಾರನಂತೂ ಪ್ರತ್ಯಕ್ಷ ನಿರ್ದಯಿಯಿರುತ್ತಾನೆ. ದೀನ ಪಶು ಯಾವಾಗಲೂ ಹೃದಯದಲ್ಲಿ ಮಹಾಭೀತಿಯುಳ್ಳ, ವನದಲ್ಲಿ ಯಾರದಾದರೂ ಹೆಜ್ಜೆಯ ಸದ್ದು ಕೇಳಿ ಗಾಬರಿಗೊಳ್ಳುತ್ತವೆ, ಅತ್ಯಂತ ಭಯದಿಂದ ಅತ್ತ-ಇತ್ತ ನೋಡಲಾರಂಭಿಸುತ್ತವೆ. ಯಾವುದೋ ಪ್ರಾಣಿಯು ಬರುತ್ತಿರುವುದನ್ನು ನೋಡಿ ಭಯದಿಂದ ವನದೊಳಗೆ ಓಡಿ ಹೋಗುತ್ತವೆ, ಭಯದ ಕಾರಣ ಊರೊಳಗೆ ಎಂದೂ ಬರುವುದಿಲ್ಲ. ಯಾವಾಗಲೂ ವನದಲ್ಲಿಯೇ ಇದ್ದು ಒಣಗಿದ ಹುಲ್ಲನ್ನು ತಿನ್ನುತ್ತ ತಮ್ಮ ಶರೀರದ ರಕ್ಷಣೆ ಮಾಡಿಕೊಳ್ಳುತ್ತವೆ. ಭಯದ ಕಾರಣ ಯಾರ ಹೊಲ-ಗದ್ದೆಗಳಲ್ಲಿ ಪ್ರವೇಶ ಮಾಡುವುದಿಲ್ಲ. ಹೊಲದಲ್ಲಿ ಬಟ್ಟೆ ಹಾಕಿ ನಿಲ್ಲಿಸಿದ ಆಕೃತಿಯನ್ನು (ಬೆಚ್ಚ) ನೋಡಿ ಅದನ್ನೇ ಮನುಷ್ಯನೆಂದು ಮನ್ನಿಸಿ ಓಡಿ ಹೋಗುತ್ತವೆ - ಇಷ್ಟು ಅಜ್ಞಾನಿ, ಮುಗ್ಧವಿರುತ್ತವೆ; ವನದಲ್ಲಿರುವ ಹುಲ್ಲನ್ನು ತಿಂದು ನದಿ-ಕೆರೆಯ ನೀರು ಕುಡಿಯುತ್ತವೆ. ಮಹಾಭಾಗ್ಯದಿಂದ ಮಹಾನ ಕಠಿಣತೆಯೊಂದಿಗೆ ಜೀವಂತವಿರುತ್ತವೆ. ಅವುಗಳದು ಯಾರ ಕುರಿತಾಗಿಯೂ ದ್ವೇಷವಿರುವುದಿಲ್ಲ. ಅವು ಯಾರಿಗೂ ಕೆಡಕನ್ನುಂಟು ಮಾಡುವುದಿಲ್ಲ. ಪಾಪ ಅಂಥ ಅಸಹಾಯ, ದೀನ ಪಶುಗಳನ್ನು ಸಾಯಿಸುವಂಥ ಪಾಪ ಮಾಡುವಾಗ ಅವರ ಹೃದಯವು ನಡುಗುವುದಿಲ್ಲವೆಂದರೆ ಆ ಪಾಪಾಚಾರಿ, ಮಹಾಕಠೋರ ವಜ್ರದಂಥ ಚಿತ್ತದ ಧಾರಕರು ನಿರ್ದಯಿಗಳಿದ್ದಾರೆ. ಆ ದಯೆಯಿಲ್ಲದ ಜೀವಗಳು ಯಾವ ಪ್ರಕಾರದ ದುಃಖ ಸಾಗರದಲ್ಲಿ ಮುಳುಗುವರೆಂಬುದನ್ನು ನಾವಂತೂ ತಿಳಿಯುವುದಿಲ್ಲ; ಅದನ್ನು ಸರ್ವಜ್ಞ ಭಗವಂತರೇ ತಿಳಿಯುವರು. ಆ ಬೇಟೆಯರೂಪದ ಪ್ರವೃತ್ತಿಯು ದಯೆಯಿಂದ ರಹಿತವಿದೆ ಅಂತೆಯೇ ದಯಾವಂತರ ಸಲುವಾಗಿ ತ್ಯಾಗ ಯೋಗ್ಯವಿದೆ.

ರಾಜರುಗಳ ಚಿತ್ತವು ಕೂಡ ತುಂಬ ಕಠೋರವಿರುತ್ತದೆ. ರಾಜ್ಯದ ನಿಮಿತ್ತ ಅನೇಕ ಯುದ್ಧಗಳನ್ನು ಮಾಡುತ್ತ ನರಹನನ, ಗ್ರಾಮದಾಹ ಮೊದಲಾದ ಪಾಪ ಮಾಡುವ ಅವರಿಗೆ ದಯೆಯಿರುವುದಿಲ್ಲ. ಎಂದರೆ ದೊರೆಗಳಿಂದಲೂ ದಯೆಯ ಪಾಲನೆಯಾಗುವುದಿಲ್ಲ.

ವೈದ್ಯನೂ ಔಷಧಗಳ ನಿಮಿತ್ತವಾಗಿ ಅನೇಕ ವನಸ್ಪತಿಗಳನ್ನು ಕತ್ತರಿಸುತ್ತಾನೆ, ಅನೇಕ ವೃಕ್ಷಗಳ ತೊಗಟೆಯನ್ನು ತಗೆಯುತ್ತಾನೆ, ಅನೇಕ ವನಸ್ಪತಿಗಳ ಬೇರನ್ನು ಅಗೆಯಿಸುತ್ತಾನೆ, ಅನೇಕ ಕಂದ ಮೂಲರೂಪ ಸಾಧಾರಣ ವನಸ್ಪತಿಗಳ ರಸವನ್ನು ಹಿಂಡಿಸುತ್ತಾನೆ, ಅಗೆಯುವಾಗ ಮಹಾಹಿಂಸೆಯಾಗುತ್ತಿದ್ದರೂ ಆತನ ಚಿತ್ತವು ದಯಾಭಾವರೂಪವಾಗುವುದಿಲ್ಲ. ಹಸಿರು ವನಸ್ಪತಿಯ ಕಟ್ಟಿಗೆ ಸುಡುತ್ತ ಬಹುದಿವಸಗಳವರೆಗೆ ಅಗ್ನಿಯ ಆರಂಭ ಮಾಡುತ್ತಿದ್ದರೂ ಚಿತ್ತದಲ್ಲಿ ದಯೆಯ ಭಾವವಾಗುವುದಿಲ್ಲ. ಅದಕ್ಕಾಗಿ ವೈದ್ಯಕೀಯ ವ್ಯಾಪಾರವನ್ನು ದಯಾವಂತರು ಮಾಡುವುದಿಲ್ಲ. ಬಟ್ಟೆಗೆ ಬಣ್ಣ ಹಾಕುವಂಥವನಲ್ಲಿಯೂ ಶೋಧಿಸದ ಜಲದಲ್ಲಿ ತೊಳೆಯುವ, ಮಥಿಸುವ, ಕುದಿಸುವ, ದೊಡ್ಡ ಅಗ್ನಿಯ ಆರಂಭ ಮಾಡುವ ಇತ್ಯಾದಿ ಆರಂಭಗಳಲ್ಲಿ ಅವರದು ದಯಾಭಾವವಿರುವುದಿಲ್ಲ; ಬಣ್ಣಗಾರನಿಂದಲೂ ದಯೆಯ ಪಾಲನೆಯಾಗುವುದಿಲ್ಲ. ಮಡಿವಾಳನ ಕಾರ್ಯವೂ ಅನೇಕ ಪ್ರಕಾರದಿಂದ ಶೋಧಿಸದ ಜಲದಲ್ಲಿ ಬಟ್ಟೆ ತೊಳೆಯುವ, ಬಟ್ಟೆಗಳನ್ನು ನೀರಿನಲ್ಲಿ ಅದ್ದಿ ಅದ್ದಿ ಪಾಷಾಣದ ಮೇಲೆ ಅಪ್ಪಳಿಸುವ ಇತ್ಯಾದಿ ದಿನವಿಡಿ ಶೋಧಿಸದ ಜಲವನ್ನು ಮಥಿಸುವುದರಿಂದ ಹಿಂಸೆಯ ಭಂಡಾರವಿದೆ, ಬಣ್ಣಗಾರನಂತೆಯೇ ಆರಂಭ ಕಾರ್ಯವಿರುವುದರಿಂದ ದಯಾರಹಿತವಿದೆ. ಅದರಿಂದ ಇಂಥ ಕಾರ್ಯ(ವ್ಯಾಪಾರ)ಗಳನ್ನು ದಯಾವಂತರು ಮಾಡುವುದಿಲ್ಲ. ಕುದುರೆ, ಎತ್ತುಗಳ ಗಾಡಿ, ರಥ ನಡೆಸುವಂಥವರಿಗೂ ಆ ಕುದುರೆ-ಎತ್ತುಗಳನ್ನು ಹೊಡೆಯುವಾಗ ದಯೆಬರುವುದಿಲ್ಲ ಎಂದರೆ ಇಂಥ ಉದ್ಯಮಗಳಲ್ಲಿ ದಯೆಯಿರುವುದಿಲ್ಲ.

ವನರಕ್ಷಕ, ಉದ್ಯಾನಗಳ ರಕ್ಷಣೆ ಮಾಡುವಂಥವರಿಗೂ ಕೃಷಿಕನ ಸಮಾನ ಯಾವಾಗಲೂ ಆರಂಭರೂಪ ಹಿಂಸೆಯಾಗುತ್ತದೆ ಎಂದರೆ ಅಂಥವರಿಂದಲೂ ದಯೆಯ ಪಾಲನೆಯಾಗುವುದಿಲ್ಲ. ಮಹಾಗ್ಲಾನಿ ಉತ್ಪನ್ನ ಮಾಡುವಂಥ ಆಮಿಷ ಭಕ್ಷಕ ಮಾಂಸಾಹಾರಿಯಿಂದ ದಯೆಯ ಪಾಲನೆಯಾಗುವುದಿಲ್ಲ. - ಈ ಪ್ರಕಾರ ಹೇಳಲಾದ ಎಲ್ಲ ವ್ಯಾಪಾರ ಕರ್ಮಗಳನ್ನು ಮಾಡುವಂಥವರಿಂದ ಕರುಣೆಯ ಪಾಲನೆಯಾಗುವುದಿಲ್ಲ; ಇವುಗಳಿಂದ ಜೀವನು ಸಹಜವಾಗಿಯೇ ಕಠೋರನಾಗಿ ಹೋಗುತ್ತಾನೆ. ಅದಕ್ಕಾಗಿ ದಯಾವಂತರು ದಯೆಯಿಂದ ರಹಿತವಾದ ಈ ಕಾರ್ಯಗಳಲ್ಲಿ ಸಿಲುಕುವುದು ಯೋಗ್ಯವಿಲ್ಲ. ಲೋಭದ ವಶೀಭೂತರಾಗಿ ವ್ಯಾಪಾರದ ಸಲುವಾಗಿಯೂ ಈ ಕಾರ್ಯಗಳಲ್ಲಿ ಹಾಗೂ ಈ ಕಾರ್ಯಗಳನ್ನು ಮಾಡುವಂಥವರ ಜೊತೆಗೆ ಮೋಸ ಹೋಗಬಾರದೆಂದು ತಿಳಿಯುವುದು.

ಈಗ ಕೃಪಣಾದಿಗಳ ಧನವನ್ನು ಸ್ವಯಂ ಕೃಪಣನು ಭೋಗಿಸುವುದಿಲ್ಲವೆಂಬುದನ್ನು ಹೇಳುತ್ತಾರೆ,-

**ಸಂಚಯ ಪಿಪೀಲ ಧಾಣೋ, ಮಾಖಿಕ ಸಂಚಯ ಮಧು ಮುಖ ಲಕ್ಷ್ಯೋ ।**

**ಕಿಪ್ಪಣ ಸಂಚಯ ಲಚ್ಛೀ, ಏಣ ಭುಂಜಯ ಅಣ್ಣ ಭುಂಜಯತಿ ॥೬೧॥**

**ಗಾಥಾರ್ಥ :-** ಇರುವೆಗಳ ಧಾನ್ಯ ಸಂಗ್ರಹ ಮಾಡುವುದು, ಜೇನ್ನೊಣಗಳ ತಮ್ಮ ಉಗುಳುರೂಪದ ಜೇನುತುಪ್ಪ ಸಂಚಯ ಮಾಡುವುದು, ಕೃಪಣ-ಜಿಪುಣನಿಂದ ಸಂಗ್ರಹ ಮಾಡಿದ ಧನ; ಇವುಗಳನ್ನು ಅವರು ಭೋಗಿಸುವುದಿಲ್ಲ. ಬೇರೆ ಯಾರೋ ಭೋಗಿಸುತ್ತಾರೆ.

**ಭಾವಾರ್ಥ :-** ವನದಲ್ಲಿ ವಾಸಮಾಡುವಂಥ ಇರುವೆಗಳ ಸಮೂಹವು ಅನೇಕ ಕಷ್ಟ ಸಹಿಸಿ ಧಾನ್ಯದ ಒಂದೊಂದು ಕಣವನ್ನು ಬಾಯಲ್ಲಿ ಹಿಡಿದುಕೊಂಡು ಬಂದು ತಮ್ಮ ವಾಸಸ್ಥಾನದಲ್ಲಿ ಸಂಗ್ರಹಿಸುತ್ತವೆ. ಸ್ವಯಂ ತಮ್ಮಲ್ಲಿ ಭೋಗಿಸುವ - ತಿನ್ನುವ ಶಕ್ತಿಯಿಲ್ಲದ ಕಾರಣ ಅವು ಆ ಧಾನ್ಯ ಭೋಗಿಸಲಾಗುವುದಿಲ್ಲ. ಮೋಹದ ಕಾರಣ ಲೋಭದಿಂದ ವ್ಯರ್ಥವಾಗಿಯೇ ಆಹಾರದ ಸಂಗ್ರಹ ಮಾಡುತ್ತವೆ. ಬಹುದಿನಗಳವರೆಗೆ ಸಂಗ್ರಹ ಮಾಡುತ್ತ-ಮಾಡುತ್ತ ನಾಲ್ಕಾರು ಸೇರು ಧಾನ್ಯ ಏಕತ್ರಿತವಾದ ಮೇಲೆ ಯಾವನೋ ಪಾಪಿ, ಅನ್ಯಾಯಿ, ನಿರ್ದಯಿ, ಲೋಭಿ, ನಿರ್ಧನ, ಭಿಲ್ಲಾದಿಕರು ಬಂದು ಇರುವೆಗಳ ಮನೆಯನ್ನು ತಿಳಿದು ಅವುಗಳ ಬಿಲದ ಭೂಮಿಯನ್ನು ಅಗೆದು ಧಾನ್ಯ ತಗೆದುಕೊಂಡು ಹೋಗುತ್ತಾರೆ.

ಎಲೈ ಭವ್ಯರೇ ! ನೋಡಿರಿ, ವಿಚಾರ ಮಾಡಿರಿ !! ಇರುವೆಗಳು ಧಾನ್ಯ ಸಂಗ್ರಹ ಮಾಡುತ್ತವೆಂಬ ಈ ಇರುವೆಗಳ ಲೋಭ ಸ್ವಭಾವವನ್ನು ಜಗತ್ತಿನಲ್ಲಿ ಎಲ್ಲರೂ ಪ್ರತ್ಯಕ್ಷ ತಿಳಿಯುತ್ತಾರೆ. ಆ ಸಂಗ್ರಹದ ಕಾರಣ ಯಾರೋ ಇತರರ ಧನವನ್ನು ಭೋಗಿಸುವಂಥ ದುಷ್ಟ ಪ್ರಾಣಿಗಳು ಆ ಇರುವೆಗಳ ಮನೆಯನ್ನು ಧ್ವಂಸ ಮಾಡಿ ಬಿಡುತ್ತಾರೆ; ಅದರಿಂದ ಅವುಗಳ ಮನೆಯದಂತೂ ನಾಶವೇ ಆಯಿತು, ಮನೆಯ ನಾಶದಿಂದ ಇರುವೆಗಳ ದೇಹದ ನಾಶವೂ ಆಯಿತು, ಆಹಾರ-ಧಾನ್ಯವೂ ಹೋಯಿತು. ಈ ಪ್ರಕಾರ ಅನ್ನ ಸಂಚಯದಿಂದಾಗುವ ಇಷ್ಟೊಂದು ದುಃಖವನ್ನಂತೂ ಪ್ರತ್ಯಕ್ಷ ನೋಡುತ್ತೇವೆ. ಒಂದುವೇಳೆ ಅವು ಸ್ವಯಂ ತಿಂದು ಬಿಡುತ್ತಿದ್ದರೆ ಇಂಥ ದುಃಖವಾಗುತ್ತಿರಲಿಲ್ಲ. ಆದುದರಿಂದ ವಿವೇಕವಂತರು ತಮ್ಮ ಮೂಲಕ ಸಂಪಾದಿಸಿದ ಧನವನ್ನು ತಮ್ಮ ಕೈಯ್ಯಾರೆ ಭೋಗಿಸುವುದು ಯೋಗ್ಯವಿದೆ.

ಜೇನು ನೊಣಗಳ ಸಮೂಹವು ತಮ್ಮ ಮುಖದಿಂದ ಅನೇಕ ವನಸ್ಪತಿಗಳ ರಸ ತಂದು ತಿನ್ನುತ್ತವೆ. ಕುಡಿಯುತ್ತವೆ. ನಂತರ ಅಜ್ಞಾನದ ಕಾರಣ ಮೋಹದಿಂದ ಲೋಭದ ವಶೀಭೂತವಾಗಿ ಮುಖದಿಂದ (ಬಾಯಿಯ ಮೂಲಕ) ತಿನ್ನಲಾದ ಹೊಟ್ಟೆಯೊಳಗಿನ ರಸವನ್ನು ವಮನ ಮಾಡಿ ಅದನ್ನು ಹೊರಗೆ ತಗೆದು ಸ್ವಯಂ ಹಸಿದುಕೊಂಡಿದ್ದು ಕೂಡ ಅದರ ಸಂಚಯ ಮಾಡುತ್ತವೆ. ಕಳ್ಳರ ಭಯದಿಂದ ಆಕಾಶದಲ್ಲಿ ಏಕಾಂತ ಸ್ಥಾನದೊಳಗೆ ಗೂಡು ಕಟ್ಟುತ್ತವೆ. ತಮ್ಮ ಬುದ್ಧಿಯ ಅನುಸಾರ ಬಹಳಷ್ಟು ಪ್ರಯತ್ನಪೂರ್ವಕ ಅನೇಕ ಪ್ರಕಾರದಿಂದ ವಿಷಮಸ್ಥಳ ನೋಡಿ, ಅಲ್ಲಿ ಗೂಡುಕಟ್ಟಿ ಅದರಲ್ಲಿ ಭಿನ್ನ-ಭಿನ್ನ ಮನೆ ಮಾಡಿಕೊಂಡು ಎಲ್ಲ ನೊಣಗಳು ತಮ್ಮ-ತಮ್ಮ ರಸವನ್ನು ಸಂಗ್ರಹ ಮಾಡುತ್ತವೆ.

ಅನೇಕ ದಿವಸಗಳಲ್ಲಿ ಬಹಳಷ್ಟು ರಸವು ಏಕತ್ರಿತವಾಗುವ ಕಾರಣ ಎಲ್ಲವುಗಳ ಮನೆಯು ರಸದಿಂದ ತುಂಬಿ ಹೋದ ಮೇಲೆ ಯಾವನೋ ಪಾಪೀ ಲೋಭೀ ವ್ಯಕ್ತಿಯ ದೃಷ್ಟಿಯು ಜೇನುಗೂಡಿನ ಮೇಲೆ ಬೀಳುತ್ತದೆ. ಅದರಲ್ಲಿ ಬಹಳಷ್ಟು ಜೇನುತುಪ್ಪವಿದೆಯೆಂದು ತಿಳಿದು ಅವನು ಅದನ್ನು ಪಡೆಯುವ ಉಪಾಯ ಮಾಡುತ್ತಾನೆ; ಆದರೆ ಸ್ಥಾನವು ಮಹಾವಿಷಮ, ಎತ್ತರವಿರುವುದರಿಂದ ಅವನು ಅದನ್ನು ಪ್ರಾಪ್ತ ಮಾಡಿಕೊಳ್ಳುವುದು ಸಾಧ್ಯವಾಗುವುದಿಲ್ಲ. ಆಗ ಆ ಲೋಭಿಯು ಕೆಳಗೆ ಅಗ್ನಿ ಹೊತ್ತಿಸಿ ಬಹಳಷ್ಟು ಹೊಗೆಯನ್ನುಂಟು ಮಾಡುತ್ತಾನೆ. ಹೊಗೆಯಿಂದ ದುಃಖಿಯಾಗಿ ನೊಣಗಳೆಲ್ಲವು ಹಾರಿ ಹೋಗುತ್ತವೆ. ಆಗ ಅವನು ಬಿದಿರಿನಿಂದ ಗೂಡನ್ನು ಬೀಳಿಸುತ್ತಾನೆ. ನೊಣಗಳು ಸ್ಥಾನ ಭ್ರಷ್ಟವಾಗಿ ದುಃಖಿಯಾಗುತ್ತ ಹತ್ತೂ ದಿಕ್ಕುಗಳಲ್ಲಿ ಸುತ್ತುತ್ತಿರುತ್ತವೆ.

ನೋಡಿರಿ, ಅವು ಸ್ವಯಂ ಹಸಿದುಕೊಂಡಿದ್ದು ಹೊಟ್ಟೆಯೊಳಗಿರುವುದನ್ನು ಹೊರ ತಗೆದು ಉಗುಳಿ ಸಂಗ್ರಹಿಸಿದ್ದವು ಅದರಿಂದ ದುಃಖಿಯಾದವು. ಸಂಗ್ರಹಿಸಿದ ರಸವೂ ಹೋಯಿತು. ಒಂದುವೇಳೆ ತಿಂದು ಬಿಡುತ್ತಿದ್ದರೆ ಇಷ್ಟೊಂದು ಖೇದವಾಗುತ್ತಿರಲಿಲ್ಲ. ಇಲ್ಲಿ ವಿಚಾರ ಮಾಡುವುದು ! ನೊಣಗಳಂತೂ ಲೋಭದ ಕಾರಣ ತಮ್ಮ ಉಗುಳಿನ ಸಂಚಯ ಮಾಡಿದವು ಆದರೆ ಜಗತ್ತಿನಲ್ಲಿ ಎಂಥೆಂಥ ಲೋಭೀ, ದರಿದ್ರರು ವಿದ್ಯಮಾನರಿದ್ದಾರೆಂದರೆ ಅವರಿಗೆ ಇದು ಆ ನೊಣಗಳ ಉಗುಳು ಕೂಡ ಕಾಣಿಸುವುದಿಲ್ಲ ಅಂತೆಯೇ ಅದನ್ನೂ ತಗೆದುಕೊಳ್ಳುತ್ತಾರೆ, ಅಂಥ ಲೋಭಿಗಳು ಮನುಷ್ಯರ ಎಂಜಲನ್ನು ಹೇಗೆ ಬಿಡುವರು ? ಇಂಥ ಲೋಭೀ ಬುದ್ಧಿಗೆ ಧಿಕ್ಕಾರವಿರಲಿ ! ಈ ಪ್ರಕಾರ ಯಾವ ಲೋಭಿಗಳು ಧನ ಪಡೆದು ಅದನ್ನು ಧರ್ಮದಲ್ಲಿ ತೊಡಗಿಸಿ ಭೋಗಿಸುವುದಿಲ್ಲ, ಅವರು ಆ ನೊಣಗಳ ಹಾಗೆ ದುಃಖ ಪಡೆಯುತ್ತಾರೆ.

ಕೃಪಣನು ಇರುವೆಗಳ ಹಾಗೂ ಜೇನ್ನೊಣಗಳ ಸಮಾನ ಕಷ್ಟಸಹಿಸಿ ಧನ ಹೊಂದಿಸಿ ಸಂಗ್ರಹಿಸುತ್ತಾನೆ, ಆದರೆ ಆ ಮೂರ್ಖನು ಅದನ್ನು ತಾನೂ ತಿನ್ನಲಿಲ್ಲ ಮತ್ತು ಇತರರಿಗೂ ಕೊಡಲಿಲ್ಲ, ಧರ್ಮದಲ್ಲಿಯೂ ತೊಡಗಿಸಲಿಲ್ಲ, ಕುಟುಂಬವರ್ಗದವರಿಗೆ ತಿನ್ನಿಸಲಿಲ್ಲ. ಸ್ವಯಂ ಹಸಿದುಕೊಂಡಿದ್ದು, ತುಚ್ಛ ತಿಂದು, ಕಮ್ಮೀ ಬೆಲೆಯ ಬಟ್ಟೆ ಧರಿಸಿ, ದೀನವೃತ್ತಿಯನ್ನು ಧಾರಣ ಮಾಡಿ ಆಸ್ತಿ ಮಾಡಿದನು. ಭಯವು ಹೆಚ್ಚಾಗುವುದರಿಂದ ಅದನ್ನು ಭೂಮಿಯಲ್ಲಿ

ಹೂಳಿಟ್ಟನು ಮತ್ತು ಒಂದುವೇಳೆ ಹಾಗೇ ಸತ್ತು ಹೋದರೆ ಭೂಮಿಯಲ್ಲಿಯದು ಭೂಮಿಯಲ್ಲಿಯೇ ಉಳಿಯಿತು. ಒಂದುವೇಳೆ ಜೀವಂತನಾಗಿ ಉಳಿದರೆ ಧನಿಕನೆಂದರಿತು ದೊರೆಯು ಆತನ ಮೇಲೆ ಯಾವುದೋ ದೋಷಾರೋಪಣೆ ಮಾಡಿ ಧನವನ್ನು ಲೂಟಿ ಮಾಡಿದನು ಆ ಲೋಭಿಯು ಅದನ್ನು ಪೂರ್ವ ಪುಣ್ಯದಿಂದ ಪ್ರಾಪ್ತ ಮಾಡಿಕೊಂಡಿದ್ದನು. ಆದರೆ ಇಲ್ಲಿ ಆ ಪುಣ್ಯದ ಯಾವುದೇ ಫಲವನ್ನು ಪ್ರಾಪ್ತಮಾಡಿಕೊಳ್ಳುವುದು ಸಾಧ್ಯವಾಗಲಿಲ್ಲ.

ಎಲೈ ಭವ್ಯನೇ ! ಪಾಪಿಯ ಧನವು ಧರ್ಮದೊಳಗೆ ತೊಡಗುವುದಿಲ್ಲ. ಅದು ವ್ಯರ್ಥವೇ ಆಗುತ್ತದೆ. ಇರುವೆ, ನೊಣ, ಕೃಪಣನಿಂದ ಉತ್ಪನ್ನ ಮಾಡಲಾದ ಧನವು ಅದನ್ನು ಸ್ವಯಂ ಭೋಗಿಸುವುದಿಲ್ಲ; ಯಾರೋ ಬೇರೆಯವರು ಭೋಗಿಸುತ್ತಾರೆ. ಆದುದರಿಂದ ವಿವೇಕವಂತರು ಪ್ರಾಪ್ತ ಮಾಡಿಕೊಳ್ಳಲಾದ ಧನದಿಂದ ಧರ್ಮದ ಉಪಾರ್ಜನೆ ಮಾಡುವುದು ಯೋಗ್ಯವಿದೆ.

ಈಗ ಯಾವ ಜೀವರುಗಳು ದಯಾರಹಿತರಿದ್ದಾರೆಂಬುದನ್ನು ಹೇಳುತ್ತಾರೆ,-

**ಸವರ ಖಟಿ ಚಿಂಯಾಲೋ, ಮದ ವೇಚಾ ಮದಪಾಣಕರ ದ್ಯೂತೋ ।**

**ತಸಯರ ಸಠ ಕುಲಹೀಣೋ, ದುಠಚಿತ್ತೋ ಯ ರಹಯ ಕರಣಾಯೇ ॥೬೨॥**

**ಗಾಥಾರ್ಥ ಃ-** ಭಿಲ್ಲ, ಕಟುಕ, ಚಾಂಡಾಲ, ಮದ್ಯಮಾರುವಂಥವ, ಮದ್ಯಕುಡಿಯುವಂಥವ, ಜೂಜುಗಾರ, ಕಳ್ಳ, ಅಜ್ಞಾನಿ, ಕುಲಹೀನ, ದುಷ್ಟಪರಿಣಾಮಿ - ಇವರೆಲ್ಲರೂ ದಯೆಯಿಂದ ರಹಿತರಿದ್ದಾರೆ.

**ಭಾವಾರ್ಥ ಃ-** ವನಚರನು, ವನದಲ್ಲಿರುವ ಪಶುಗಳ ಸಮಾನ ಅಜ್ಞಾನಿ, ಸಿಂಹದ ಸಮಾನ ಹಿಂಸಕ ಭಿಲ್ಲನ ಹೃದಯವು ಸಹಜವಾಗಿಯೇ ದಯಾರಹಿತ ಕಠೋರವಿರುತ್ತದೆ, ಅವನಿಂದ ದಯೆಯ ಪಾಲನೆ ಯಾಗುವುದಿಲ್ಲ. ಮೃತ ಪಶುಗಳ ಚರ್ಮ ಸುಲಿದು, ಮನೆಗೆ ತಂದು, ತೊಳೆದು, ಬೇಯಿಸಿ, ವರ್ಣಮಯ ಮಾಡಿ ಮಾರುವಂಥ ಕಟುಕನ ಮನಸ್ಸೂ ಮಹಾಅನಾಚಾರರೂಪ, ವಜ್ರ ಪರಿಣಾಮೀ ಇರುತ್ತದೆ. ಅಂತೆಯೇ ಅವನಿಂದಲೂ ದಯೆಯ ಪಾಲನೆಯಾಗುವುದಿಲ್ಲ. ಯಾವಾಗಲೂ ಜೀವಗಳ ಹಿಂಸೆ ಮಾಡಿ ಮಾಂಸಮಾರುವ ಸಂಬಂಧದ ವ್ಯಾಪಾರ ಮಾಡುವಂಥವನು ಚಾಂಡಾಲನಿಗಿಂತಲೂ ಮಹಾನಿರ್ದಯಿಯಾಗಿರುವ ಕಾರಣ ದಯೆಯ ಪಾಲನೆಯಾಗುವ ಸಾಧ್ಯತೆಯಿಲ್ಲ.

ಮದ್ಯ , ಶೆರೆ ಮೊದಲಾದುವನ್ನು ಮಾರುವಂಥವನು ಅನೇಕ ಜೀವಗಳ ಘಾತ ಮಾಡಿ ಮದ್ಯ ತಯಾರಿಸುತ್ತಾನೆ. ನೀರಿನಲ್ಲಿ ಅನೇಕ ಕ್ರಿಮಿಗಳು ವಿಲವಿಲ ಒದ್ದಾಡುತ್ತ ಮೇಲೆದ್ದು ಬರುತ್ತಿರುವುದನ್ನು ಕಂಡು ಆ ಜಲವನ್ನು ಯಂತ್ರದೊಳಗೆ ಹಾಕಿ ಮದ್ಯ ತಯಾರಿಸುತ್ತಿರುವಾಗ ಅವನಿಗೆ ದಯೆಯಿರುವುದಿಲ್ಲ. ಅಂತೆಯೇ ಅವನಿಂದಲೂ ದಯೆಯ ಪಾಲನೆಯಾಗುವುದಿಲ್ಲ. ಮದ್ಯ ಕುಡಿಯುವಂಥವನು ಪ್ರಜ್ಞಾಹೀನನಾಗಿ ದಯೆಯಿಂದ ರಹಿತನಾಗುತ್ತಾನೆ.

ಇತರರ ಧನವನ್ನು ಹರಣ ಮಾಡುವಂಥ ಮಹಾನಿರ್ದಯಿ ಚೋರ (ಕಳ್ಳ)ನಿಂದಲೂ ದಯೆಯ ಪಾಲನೆಯಾಗುವುದಿಲ್ಲ. ಶುಭಾಶುಭ ವಿಚಾರದಿಂದ ರಹಿತ, ಜನ್ಮದಿಂದಲೇ ಅಜ್ಞಾನಿ, ಖಾದ್ಯ-ಅಖಾದ್ಯ , ಭಕ್ಷ್ಯ-ಅಭಕ್ಷ್ಯಗಳ ಜ್ಞಾನದಿಂದ ರಹಿತ, ಪುಣ್ಯ-ಪಾಪದ ಭಾವನೆಯಿಂದ ರಹಿತ, ಮುಗ್ಧ ಜೀವರುಗಳಿಂದಲೂ ದಯೆಯ ಪಾಲನೆಯಾಗುವುದಿಲ್ಲ; ಏಕೆಂದರೆ ಪುಣ್ಯ-ಪಾಪಗಳನ್ನು ತಿಳಿಯುವಂಥ ಜ್ಞಾನವಂತನಿಂದಲೇ ದಯೆಯ ಪಾಲನೆಯಾಗುತ್ತದೆ. ಜ್ಞಾನರಹಿತವಾಗಿರುವ ಕಾರಣ ಇವರಿಂದ ದಯೆಯು ಸಂಭವಿಸುವುದಿಲ್ಲ.

ಕುಲಹೀನರಿಂದಲೂ ದಯೆಯ ಪಾಲನೆಯಾಗುವ ಸಾಧ್ಯತೆಯಿಲ್ಲ. ಬ್ರಾಹ್ಮಣ, ವೈಶ್ಯ , ಕ್ಷತ್ರಿಯ, ಸಂಸ್ಕಾರ ಸಂಪನ್ನ ಈ ಮೂರು ಉಚ್ಚ ಕುಲಗಳಲ್ಲಿ ಉತ್ಪನ್ನವಾಗುವಂಥವರಿಂದಲೇ ದಯೆಯು ಸಂಭವಿಸುತ್ತದೆ. ಮೊದಲು ಹೇಳಿದ ಭಿಲ್ಲ, ಚಾಂಡಾಲಾದಿ ನೀಚ ಕುಲದ ಸಂಸ್ಕಾರವುಳ್ಳ ಜೀವರುಗಳಲ್ಲಿ ದಯೆಯ ಭಾವವಿರುವುದಿಲ್ಲ. ಯಾರ ಚಿತ್ತವು ನಮ್ರವಿದೆ. ಯಾರು ಸಜ್ಜನಸ್ವಭಾವಿಯಿದ್ದಾರೆ, ಯಾರು ಎಲ್ಲರ ಹಿತ ಬಯಸುವಂಥವರಿದ್ದಾರೆ - ಹೀಗೆ

ಉತ್ತಮ ಗುಣಸಹಿತರೇ ದಯಾಭಾವದ ಪಾಲನೆ ಮಾಡುವ ಸಾಧ್ಯತೆಯಿದೆ. ದುಷ್ಟಪರಿಣಾಮಿಗಳೂ, ಬಹಳಷ್ಟು ಜನರ ಅಹಿತ ಬಯಸುವಂಥ ಜೀವರುಗಳಿಂದ ದಯೆಯ ಪಾಲನೆಯಾಗುವುದಿಲ್ಲ. ಅದರಿಂದ ಉಪರ್ಯುಕ್ತ ವ್ಯಾಪಾರ ಮಾಡುವಂಥವರಿಂದ ದಯಾಭಾವವು ಸಂಭವಿಸುವುದಿಲ್ಲ. ಆ ಮನುಷ್ಯರು ದಯೆಯಿಂದ ರಹಿತರಿದ್ದಾರೆ. ವಿವೇಕವಂತರು ಆ ನಿರ್ದಯಿ ಜೀವರುಗಳ ಸಂಗತಿ ಮಾಡುವುದು ಯೋಗ್ಯವಿಲ್ಲ. ಆ ದಯಾರಹಿತರೊಂದಿಗೆ ಕೊಡ-ಕೊಳ್ಳುವ ಹಾಗೂ ಅವರ ವಿಶ್ವಾಸವೂ ಯೋಗ್ಯವಿಲ್ಲ. ಅವರ ಸಂಗತಿಯಿಂದ, ಕೊಡ-ಕೊಳ್ಳುವ ವ್ಯಾಪಾರದಿಂದ, ವಿಶ್ವಾಸ ಮಾಡುವುದರಿಂದ ಕುಬುದ್ಧಿಯಾಗಿ, ತಮ್ಮ ಪರಿಣಾಮವು ನಿರ್ದಯವಾಗಿ, ಹಿಂಸೆಯ ಸಮಾನ ದೋಷ ತಗಲುವುದರಿಂದ ನರಕಾದಿಗಳ ದುಃಖವಾಗುತ್ತದೆ.

**ಸಂದೇಹ ಃ-** ಉಚ್ಚ ಕುಲವುಳ್ಳವರಿಂದ ದಯೆಯ ಪಾಲನೆಯಾಗುತ್ತದೆ, ನೀಚ ಕುಲದವರಿಂದ ದಯೆಯ ಪಾಲನೆಯಾಗುವ ಸಾಧ್ಯತೆಯಿಲ್ಲವೆಂದು ತಾವು ಹೇಳುತ್ತಿರುವಿರಿ; ಆದರೆ ಜಗತ್ತಿನಲ್ಲಿಯಂತೂ ಅದೆಷ್ಟು ಉಚ್ಚಕುಲದವರು ಹಿಂಸಕ, ಜೀವಘಾತಕ, ಅನಾಚಾರರೂಪ ಭಾವಗಳಿಂದ ನಿರ್ದಯಿಗಳಾಗಿರುವುದು ಕಂಡು ಬರುತ್ತದೆ ಮತ್ತು ಕೆಲವು ನೀಚಕುಲದವರೂ ತಮ್ಮ ಬುದ್ಧಿಯ ಅನುಸಾರ ಯಥಾಯೋಗ್ಯ ಸುಮಾರ್ಗಿ ದಯಾವಂತರಿರುತ್ತಾರೆ. ಎಂದರೆ ಅಂಥ ಯಾವ ನಿಯಮವಂತೂ ಉಳಿಯುವುದಿಲ್ಲವಲ್ಲ?

**ಸಮಾಧಾನ -** ಎಲೈ ಭವ್ಯನೇ ! ನೀನು ಹೇಳುತ್ತಿರುವುದು ಮಾನ್ಯವಿದೆ. ಆದರೆ ಹೇಗೆ ರತ್ನಗಳ ಗಣಿಯೊಳಗಿಂದ ರತ್ನಗಳು ಹೊರಡುತ್ತವೆ. ಕೆಲವೊಮ್ಮೆ ಅವುಗಳ ಜೊತೆ ಅಂಥ ಪಾಷಾಣಗಳೂ ಹೊರ ಬರುತ್ತವೆ; ಆದಾಗ್ಯೂ ಅದು ರತ್ನಗಳ ಗಣಿಯೆಂದೇ ಕರೆಸಿಕೊಳ್ಳುತ್ತದೆ. ಯಾವುದೋ ಹೀನ ಪುಣ್ಯದಿಂದ ಪಾಷಾಣಾದಿಗಳು ಬಂದರೂ ಬರಬಹುದಾಗಿದೆ. ಯಾವ ನಿಯಮವಿಲ್ಲ, ಅದೇ ಪ್ರಕಾರ ಉಚ್ಚ ಕುಲದಲ್ಲಿ ದಯಾವಂತರೇ ಉತ್ಪನ್ನರಾಗುತ್ತಾರೆ. ಯಾವುದೋ ಪಾಪಕರ್ಮದ ಯೋಗದಿಂದ ಅನಿಷ್ಟ ಭವಿತವ್ಯವುಳ್ಳ ಪಾಪಾಚಾರೀ ಹೀನ ಪುಣ್ಯವುಳ್ಳ ನಿರ್ದಯಿ ಜೀವಗಳೂ ಉಚ್ಚಕುಲದಲ್ಲಿ ಉತ್ಪನ್ನರಾಗುತ್ತಾರೆ. ಅದರದು ಯಾವ ನಿಯಮವಿಲ್ಲ. ಅವರು ರತ್ನಗಳ ಗಣಿಯಲ್ಲಿ ಪಾಷಾಣದ ಸಮಾನರೆಂದು ತಿಳಿಯುವುದು.

ಇನ್ನು ಪಾಷಾಣದ ಗಣಿ ಅಗಿಯುವಾಗ ಕೆಲವು ರತ್ನಗಳು ಹೊರಟರೆ ಹೊರಡಬಹುದಾಗಿದೆ; ಆದರೆ ಗಣಿಯಂತೂ ಮುಖ್ಯವಾಗಿ ಪಾಷಾಣದ್ದಿದೆ, ಅದೇ ಪ್ರಕಾರ ನೀಚ ಕುಲದಲ್ಲಿ ಯಾವುದೋ ಪೂರ್ವಪುಣ್ಯದ ಯೋಗದಿಂದ ಯಾವನೋ ಸುಮಾರ್ಗಿ ದಯಾವಂತನು ಇದ್ದರೆ ಇರಬಹುದಾಗಿದೆ; ನಿಯಮವಿಲ್ಲ. ಅವನು ಪಾಷಾಣದ ಗಣಿಯಿಂದ ರತ್ನವು ಉತ್ಪನ್ನವಾಗುವ ಸಮಾನ ತಿಳಿಯುವುದು. ಆದಾಗ್ಯೂ ಹೀನಕುಲಗಳಲ್ಲಿ ದಯಾರಹಿತ ಜೀವಗಳದ್ದೇ ಬಾಹುಳ್ಯತೆ ತಿಳಿಯುವುದು.

ಈ ಪ್ರಕಾರ ನೀಚ ಕುಲಗಳಲ್ಲಿ ದಯಾವಂತರೂ ಇರುತ್ತಾರೆ ಮತ್ತು ಉಚ್ಚ ಕುಲಗಳಲ್ಲಿ ಕೆಲವು ನಿರ್ದಯಿಗಳೂ ಇರುತ್ತಾರೆ; ಏಕಾಂತ ನಿಯಮವಿಲ್ಲ. ಸಂಸಾರದ ದಶೆಗಳು ಅನೇಕವಿವೆ. ಆದುದರಿಂದ ವಿವೇಕವಂತರು ದಯಾರಹಿತ ಜೀವಗಳ ನಿಮಿತ್ತವನ್ನು ಬಿಟ್ಟುಕೊಟ್ಟು ದಯಾಭಾವರೂಪದಿಂದಿರುವುದು ಯೋಗ್ಯವಿದೆ.

ಸಂತೋಷಿ ಆತ್ಮನು ತನ್ನ ನಿರ್ಧನತೆ, ದರಿದ್ರತೆಯಲ್ಲಿ ಎಂಥ ಭಾವನೆ ಮಾಡುತ್ತಾನೆಂಬುದನ್ನು ಹೇಳುತ್ತಾರೆ,-

**ದಾಲಯ ತವಯ ಪಸಾಯೋ, ಮಮ ಸಿದ್ಧೋ ಭವಯ ಅಮುತ್ತ ಸಹು ಲೋಯ ।**

**ಮಮ ಸಹು ಲೋಯ ಪಸಂತೀ, ಲೋಏ ಆದಾಯಣಾಹಿ ಮಮ ಜೋಈ ॥೬೩॥**

**ಗಾಥಾರ್ಥ ಃ-** ಎಲೈ ದಾರಿದ್ರ್ಯವೇ ! ನಿನ್ನ ಪ್ರಸಾದದಿಂದ ನಾನು ಸಮಸ್ತ ಲೋಕದಲ್ಲಿ ಸಿದ್ಧರ ಸಮಾನ ಅಮೂರ್ತಿಕದಂತೆ ಆಗಿದ್ದೇನೆ. ನಾನಂತೂ ಸಮಸ್ತ ಲೋಕವನ್ನು ನೋಡುತ್ತೇನೆ; ಆದರೆ ಲೋಕದ ಯಾವ ಆತ್ಮನೂ ನನ್ನನ್ನು ನೋಡುವುದಿಲ್ಲ.

ಭಾವಾರ್ಥ ః- ಸಮತಾರಸದ ಪಾನ ಮಾಡುವಂಥ ಧರ್ಮಾತ್ಮನು ದರಿದ್ರತೆಯು ಬಂದಮೇಲೆ ವಿಚಾರ ಮಾಡುವುದೇನೆಂದರೆ - ಎಲೈ ದರಿದ್ರತೆಯೇ ! ನೀನು ದೊಡ್ಡ ಉಪಕಾರವನ್ನೇ ಮಾಡಿರುವೆ. ನಿನ್ನ ಪ್ರಸಾದದಿಂದ ನಾನು ಸಿದ್ಧರ ಸಮಾನ ಅಮೂರ್ತಿಕನಾಗಿ ಸಂಸಾರದಲ್ಲಿ ಬಾಳುತ್ತಿದ್ದೇನೆ. ನಾನಂತೂ ಯಾವುದೇ ರೀತಿಯ ಖೇದವಿಲ್ಲದೆ ಶುಭಾಶುಭ ಚರಿತ್ರ ಮಾಡುತ್ತಿರುವ ಸಮಸ್ತ ಜಗತ್ತಿನ ಜೀವರುಗಳನ್ನು ನೋಡುತ್ತೇನೆ. ಆದರೆ ಜಗತ್ತಿನ (ಪರಿಗ್ರಹೀ-ಮಾನೀ) ಯಾವುದೇ ಜೀವಗಳು ನನ್ನನ್ನು ನೋಡುತ್ತಿಲ್ಲ. ಹೇಗೆ ಅಮೂರ್ತಿಕ ಸಿದ್ಧರಂತೂ ಲೋಕದ ಸಮಸ್ತ ಜೀವರುಗಳನ್ನು ನೋಡುತ್ತಾರೆ, ಆದರೆ ಲೋಕದ ಯಾವ ಜೀವನೂ ಸಿದ್ಧರನ್ನು ನೋಡುವುದಾಗುವುದಿಲ್ಲ. ನಿನ್ನ ಉಪಕಾರದಿಂದ ನಮ್ಮ ಅವಸ್ಥೆಯು ಸಿದ್ಧರಂಥದೇ ಆಗಿದೆ. ಈಗ ನಾನು ಸಂತೋಷದ ಮಾಧ್ಯಮದಿಂದ ನಿರಾಕುಲ ಸುಖದಲ್ಲಿರುತ್ತ ವಿದ್ಯಮಾನನಿದ್ದೇನೆ. ಹೀಗೆ ಖೇದವನ್ನು ದೂರ ಮಾಡಿ ಸುಖಿಯಾಗುತ್ತಾನೆ ಮತ್ತು ದರಿದ್ರತೆಯ ಕುರಿತಾಗಿ ಆಶೀರ್ವಚನ ಹೇಳುತ್ತಾನೆಂದು ತಿಳಿಯುವುದು.

ಧರ್ಮಸೇವನೆ ಮಾಡುತ್ತಿರುವ ಜೀವರುಗಳಿಗೆ ನಾಲ್ಕು ಪ್ರಕಾರದ ಅಭಿಲಾಷೆಗಳಿರುತ್ತವೆ. ಅವನ್ನೇ ಹೇಳುತ್ತಾರೆ,-

**ಧಮ್ಮೋ ಚತುಪಯಾರೋ ಚಾತುರತಾ ಲೋಯರಜ್ಜ ಲೋಭಾಯೇ ।**
**ಪಮ್ಮತ್ಥೋ ಸಿವಮಗ್ಗೋ, ಸೇಸಾ ಸಂಸಾರ ಸಾಯಣೋ ಮಗಣೋ ॥೬೪॥**

**ಗಾಥಾರ್ಥ ః-** ಧರ್ಮದ ಸೇವನೆಯು ನಾಲ್ಕು ಪ್ರಕಾರದಿಂದ ಆಗುತ್ತದೆ - ಚತುರತೆಯ ಸಲುವಾಗಿ, ಜಗತ್ತನ್ನು ಪ್ರಸನ್ನ ಪಡಿಸುವ ಸಲುವಾಗಿ, ಲೋಭದ ಸಲುವಾಗಿ ಮತ್ತು ಪರಮಾರ್ಥದ ಸಲುವಾಗಿ 'ಪಾರಮಾರ್ಥಿಕ ಧರ್ಮವು ಮೋಕ್ಷಮಾರ್ಗವಿದೆ', ಶೇಷ ಧರ್ಮಗಳು ಸಂಸಾರ-ಸಾಗರದಲ್ಲಿ ಮುಳುಗಿಸುವಂಥವಿವೆ.

**ಭಾವಾರ್ಥ ః-** ಧರ್ಮಸೇವನೆ ಮಾಡುವಂಥ ಜಗತ್ತಿನ ಜೀವರುಗಳ ಅಭಿಪ್ರಾಯವು ಭಿನ್ನ-ಭಿನ್ನವಾಗಿ ನಾಲ್ಕು ಪ್ರಕಾರದವಿರುತ್ತವೆ. ಕೆಲವು ಜೀವರುಗಳಂತೂ ಚತುರತೆಯ ಅಭಿಲಾಷೆಯುಳ್ಳವರಿರುತ್ತಾರೆ; ಇವರು ಒಳ್ಳೊಳ್ಳೆಯ ಕಾವ್ಯ , ಪದ್ಯ , ಗಾಥೆಗಳ ಪಾಠ, ಪದ, ಪ್ರಾರ್ಥನೆ ತಿಳಿಯುತ್ತಾರೆ, ಒಳ್ಳೆಯ ಚತುರರಿದ್ದಾರೆಂದು ಜನರು ನಮ್ಮ ಕುರಿತಾಗಿ ಹೇಳುತ್ತಾರೆ, ಇವರು ಸಭೆಯ ಅನುಸಾರ ಮಾತನಾಡಬಲ್ಲರು. ಧರ್ಮದ ಒಳ್ಳೆಯ ಮಾತುಗಳು ಕಥೆ, ಚರ್ಚೆ, ಪದ, ಮಂಗಲಾಚರಣೆಗಳನ್ನು ತಿಳಿಯುತ್ತಾರೆ. ಜನರು ನಮ್ಮನ್ನು ಚತುರ, ವಿವೇಕವಂತರೆಂದು ಹೇಳಲೆಂಬ ಅಭಿಲಾಷೆಯೊಂದಿಗೆ ಧರ್ಮದ ಸಾಧನೆ ಮಾಡುತ್ತಾರೆ, ಚತುರತೆಯ ಸಲುವಾಗಿ ಧರ್ಮದ ಸಾಧನೆ ಮಾಡುತ್ತಾರೆ, ಇವರಿಗೆ ಮೋಕ್ಷದ ಅಭಿಲಾಷೆಯಿರುವುದಿಲ್ಲ.

ಕೆಲವು ಜೀವರುಗಳು ಇತರರನ್ನು ಪ್ರಸನ್ನ ಪಡಿಸುವ ಸಲುವಾಗಿ ಧರ್ಮಾತ್ಮರೆಂದೆನಿಸಿಕೊಳ್ಳುವ ಸಲುವಾಗಿ ಧರ್ಮದ ಸಾಧನೆ ಮಾಡುತ್ತಾರೆ. ಅನ್ಯ ಜೀವರುಗಳು ಯಾವ ಪ್ರಕಾರ ಪ್ರಸನ್ನರಾಗುವರೋ ಅದೇ ರೀತಿ ಮಾಡುತ್ತಾರೆ. ಬೇರೆಯವರನ್ನು ಪ್ರಸನ್ನ ಪಡಿಸುವ ಸಲುವಾಗಿ ಒಳ್ಳೆಯ ಸ್ವರದಿಂದ, ಮಧುರ ಕಂಠದಿಂದ ಕಾವ್ಯ , ಗಾಥೆ, ಪದ್ಯ , ಕವಿತೆ, ಪ್ರಾರ್ಥನೆಗಳನ್ನು ರಾಗಪೂರ್ವಕ, ತಾಲಬದ್ಧವಾಗಿ ಹಾಡಿ ಅನ್ಯರನ್ನು ಪ್ರಸನ್ನ ಪಡಿಸುವ ಸಲುವಾಗಿ ವಿವಿಧ ಹಾಡು, ಭಾಷಣಾದಿಗಳನ್ನು ಮಾಡುತ್ತಾರೆ, ಅದರಿಂದ ಈ ಸಮಸ್ತ ಸಭಾಜನರು ಪ್ರಸನ್ನರಾಗಿ ನಮ್ಮನ್ನು ಒಳ್ಳೆಯವರೆನ್ನಲಿ-ಎನ್ನುವಂಥವರು ಜನರನ್ನು ಪ್ರಸನ್ನರನ್ನಾಗಿಸುವ ಅಭಿಪ್ರಾಯದವರಿದ್ದಾರೆ. ಇಂಥ ಜೀವರುಗಳು ತಪಸ್ಸು, ಸಂಯಮ, ಧ್ಯಾನ, ಪಠನಾದಿಗಳನ್ನೂ ಜನರ ಪ್ರಸನ್ನತೆಯ ಸಲುವಾಗಿಯೇ ಮಾಡುತ್ತಾರೆ. ಅದೆಷ್ಟೋ ಜೀವರುಗಳ ಅಭಿಪ್ರಾಯವು ಹೀಗೆಯೇ ಇರುತ್ತದೆ. ಅವರು ಆತ್ಮಕಲ್ಯಾಣದ ಸ್ಥಾನಭೂತ ಮೋಕ್ಷದ ಭಾವನೆಯಿಂದ ರಹಿತರಿದ್ದಾರೆ. ಸಂಸಾರದಲ್ಲಿ ಧರ್ಮ ಮಾಡುವಂಥ ಕೆಲವು ಮನುಷ್ಯರು ಇಂಥವರೂ ಇದ್ದಾರೆಂದು ತಿಳಿಯುವುದು.

ಕೆಲವರು ಲೋಭದ ಅಭಿಲಾಷೆಯುಳ್ಳವರು ಲೋಭದ ಸಲುವಾಗಿ ಧರ್ಮದ ಸಾಧನೆ ಮಾಡುತ್ತಾರೆ.

ಪಂಚೇಂದ್ರಿಯ ಸುಖದ ಸಾಮಗ್ರಿಗಳು ಧರ್ಮಸೇವನೆಯ ಯೋಗದಿಂದ ದೊರಕುತ್ತವೆ-ಎಂದು ತಿಳಿದು ಅವರು ಧರ್ಮ ಸೇವನೆ ಮಾಡುತ್ತಾರೆ. ಬೆಲೆ ಬಾಳುವ ತೆಳುವಾದ ವಸ್ತ್ರ, ರೇಷ್ಮೆ, ಉಣ್ಣೆಯ ಶಾಲು ಮೊದಲಾದ ಅನೇಕ ಬಹುಮೂಲ್ಯ ವಸ್ತುಗಳ ಸ್ಪರ್ಶದ ಇಚ್ಛೆಯುಳ್ಳ ಲೋಭೀ ಜೀವರುಗಳು ಸ್ಪರ್ಶನೇಂದ್ರಿಯ ಪುಷ್ಟಗೊಳಿಸುವ ಸಲುವಾಗಿ ಧರ್ಮದ ಸೇವನೆ ಮಾಡಿ, ಮುಗ್ಧ ಜನರಿಗೆ ತಮ್ಮ ಧಾರ್ಮಿಕತೆ ತೋರಿಸಿಕೊಟ್ಟು, ಅವರ ಧನ ಖರ್ಚು ಮಾಡಿಸಿ ಬೆಲೆಬಾಳುವ ವಸ್ತ್ರಗಳನ್ನು ತಮ್ಮ ಶರೀರದ ಮೇಲೆ ಧಾರಣ ಮಾಡುತ್ತಾರೆ. ಹತ್ತಾರು ದಿನ ತೊಟ್ಟುಕೊಂಡ ನಂತರ ತಮ್ಮ ಕೀರ್ತಿಯ ಸಲುವಾಗಿ ಯಾಚಕರಿಗೆ ಕೊಟ್ಟು ಬಿಡುತ್ತಾರೆ. ತಮ್ಮೆದುರಿಗೆ ತಮ್ಮ ಕೀರ್ತಿಯನ್ನು ತಮ್ಮ ಕಿವಿಗಳಿಂದ ಆಲಿಸಿ ಪ್ರಸನ್ನರಾಗುತ್ತಾರೆ. ಈ ಪ್ರಕಾರ ಬೇರೆಯವರ ಹಣ ಖರ್ಚು ಮಾಡಿಸಿ, ತಮ್ಮ ಕೀರ್ತಿಯ ಇಚ್ಛುಕರು ತಮ್ಮ ಚತುರತೆಯಿಂದ ಜನರ ಬಹಳಷ್ಟು ಹಣ ಖರ್ಚು ಮಾಡಿಸುತ್ತ ಬೆಲೆಬಾಳುವ ವಸ್ತ್ರಾದಿಗಳನ್ನು ಧರಿಸುವಂಥ ಮುಗ್ಧ ಜೀವರುಗಳು ಸ್ಪರ್ಶನ ಇಂದ್ರಿಯದ ಪುಷ್ಟಿಯ ಸಲುವಾಗಿ ಧರ್ಮದ ಸಾಧನೆ ಮಾಡುತ್ತಾರೆ.

ಅದೆಷ್ಟೋ ಜೀವರುಗಳು ರಸನೇಂದ್ರಿಯ ಪುಷ್ಟ ಮಾಡುವ ಸಲುವಾಗಿ ಧರ್ಮದ ಸೇವನೆ ಮಾಡುತ್ತಾರೆ. ಒಳ್ಳೆಯ ತಪ ಮಾಡಿದರೆ ಭಕ್ತ ಜನರು ನಮಗೆ ಒಳ್ಳೆಯ ಭೋಜನ ಕೊಡುವರೆಂದು ತಿಳಿಯುತ್ತಾರೆ; ಅದರಿಂದ ಅನ್ಯರಿಗೆ ತಮ್ಮ ಧರ್ಮಾತ್ಮತೆಯನ್ನು ತೋರಿಸಿಕೊಡುವ ಸಲುವಾಗಿ ಜಪ-ತಪಾದಿ ಧರ್ಮದ ಅಂಗಗಳನ್ನು ಪ್ರಕಟಮಾಡಿ, ಅನೇಕ ಪ್ರಕಾರದ ಷಟ್‌ರಸ ಭೋಜನ ಸಂಬಂಧದ ಲೋಭದ ಸಲುವಾಗಿ ಧರ್ಮದ ಸೇವನೆ ಮಾಡುತ್ತಾರೆ. ಈ ಪ್ರಕಾರ ಕೆಲವರು ರಸನಾ ಇಂದ್ರಿಯವನ್ನು ಪುಷ್ಟಪಡಿಸುವ ಸಲುವಾಗಿ ಧರ್ಮದ ಸೇವನೆ ಮಾಡುತ್ತಾರೆ.

ವಿವಿಧ ಸುಗಂಧದ ಇಚ್ಛೆಯ ಲೋಭಿಯಾದ ಕೆಲವು ಜೀವರುಗಳು, ಸುಗಂಧದೆಣ್ಣೆ-ಅತ್ತರು ಮೊದಲಾದ ಸುಗಂಧವನ್ನು ತರಿಸಿ-ತಲೆಯ ಕೂದಲುಗಳಿಗೆ, ಶರೀರದ ಮೇಲೆ, ವಸ್ತ್ರಗಳ ಮೇಲೆ ಪೂಸಿ ಹಚ್ಚಿಕೊಂಡು ಪ್ರಸನ್ನರಾಗುತ್ತಾರೆ-ಈ ಪ್ರಕಾರ ಕೆಲವರು ಸುಗಂಧ ಹಾಗೂ ಘ್ರಾಣೇಂದ್ರಿಯ ಪುಷ್ಟಿಯ ಸಲುವಾಗಿ ಧರ್ಮದ ಸೇವನೆ ಮಾಡುತ್ತಾರೆ.

ಚಕ್ಷು ಇಂದ್ರಿಯದ ಲೋಭಿಗಳಾದ ಕೆಲವರು ಚಕ್ಷುವಿನ ವಿಷಯದ ಪುಷ್ಟಿಯ ಸಲುವಾಗಿ ನೃತ್ಯ ಮಾಡುತ್ತಾರೆ, ಬೇರೆಯವರಿಂದ ನೃತ್ಯ ಮಾಡಿಸಿ ನೋಡುವ ಇಚ್ಛೆಯುಳ್ಳ ಈ ಜೀವಗಳು ಸುಂದರ ಪುರುಷ-ಸ್ತ್ರೀಯರ ರೂಪ ನೋಡುವ ಸಲುವಾಗಿ ಧರ್ಮದ ಸೇವನೆ ಮಾಡುತ್ತಾರೆ. ಬೇರೆ ಮುಗ್ಧ ಜೀವರುಗಳನ್ನು ವಂಚಿಸಿ, ಅವರ ಹಣದಿಂದ ಅನೇಕ ಚಿತ್ರಾಮಾದಿಗಳ ರಚನೆಯೊಂದಿಗೆ ಗಾಜಿನ ಮಂದಿರ ನಿರ್ಮಾಣ ಮಾಡಿಸಿ, ಅವುಗಳಲ್ಲಿ ವಾಸಮಾಡಿ ಅವನ್ನು ನೋಡಿ-ನೋಡಿ ಹರ್ಷಿತರಾಗುತ್ತಾರೆ, ಅವುಗಳಲ್ಲಿ ಉಳಿದುಕೊಳ್ಳಬಯಸುವ ಕೆಲವು ಜೀವರುಗಳು ಚಕ್ಷು ಇಂದ್ರಿಯ ಸಂಬಂಧದ ಭೋಗದ ಸಲುವಾಗಿ ಧರ್ಮದ ಸೇವನೆ ಮಾಡುತ್ತಾರೆ.

ಕೆಲವು ಶ್ರೋತ್ರ ಇಂದ್ರಿಯ ಭೋಗೀ ಜೀವಗಳು ಸ್ವಯಂ ಅನೇಕ ರಾಗಗಳನ್ನು ತಿಳಿಯುತ್ತಿದ್ದರೂ ಬೇರೆಯವರ ಮುಖದಿಂದ ಅನೇಕ ರಾಗ ವಾದ್ಯವಾದನಗಳನ್ನು ಆಲಿಸುವುದರ ವಶೀಭೂತವಾಗಿ ಕರ್ಣೇಂದ್ರಿಯ ಪೋಷಣೆಯ ಸಲುವಾಗಿ ಧರ್ಮದ ಸೇವನೆ ಮಾಡುತ್ತಾರೆ. ಈ ಪ್ರಕಾರ ಸ್ಪರ್ಶನ, ರಸನ, ಘ್ರಾಣ, ಚಕ್ಷು, ಶ್ರೋತ್ರ - ಇವು ಐದು ಇಂದ್ರಿಯಗಳನ್ನು ಪುಷ್ಟ ಮಾಡುವ ಸಲುವಾಗಿ ಅವರು ಧರ್ಮದ ಸೇವನೆ ಮಾಡುತ್ತಾರೆ.

ಅದೆಷ್ಟೋ ಧನದ ಲೋಭಿಗಳು ಧನ ಸಂಗ್ರಹ ಮಾಡುವ ಸಲುವಾಗಿ ಧರ್ಮದ ಸೇವನೆ ಮಾಡುತ್ತಾರೆ. ಹೇಗೆ ಸಾಧ್ಯವಿದೆಯೋ ಹಾಗೆ ಧನವನ್ನುತ್ಪನ್ನ ಮಾಡುವ ಸಲುವಾಗಿ ತಾವಂತೂ ಅನೇಕ ಉಪವಾಸ ಮಾಡುತ್ತಾರೆ ಹಾಗೂ ತಪಸ್ವಿಯ ರೂಪಧಾರಣ ಮಾಡಿ ಅನ್ಯರಿಗೆ ದ್ರವ್ಯದ ಸಲುವಾಗಿ ಆಜ್ಞೆಯನ್ನಿತ್ತು ಅವರ ಧನ ತಗೆದುಕೊಂಡು ತಾವು ಸಂಚಿತ ಮಾಡುತ್ತಾರೆ. ಅನೇಕ ಪ್ರಕಾರದಿಂದ ದೊಡ್ಡ ದೊಡ್ಡ ವಿಧಾನಾದಿಗಳ ಪೂಜೆ ಮಾಡುವುದು, ಮಾಡಿಸುವಂಥವರಿಂದ ಧನ ತಗೆದುಕೊಳ್ಳುವುದು, ಅಂಥದೇ ಉಪದೇಶ ಕೊಡುವುದು ಅದರಿಂದ ಮುಗ್ಧ

ಜೀವರುಗಳ ಮನೆಯ ಧನವು ತನ್ನ ಮನೆಗೆ ಬಂದು ಬಿಡುವುದು; ಲೋಭದ ಪೋಷಣೆ ಮಾಡುವ ಸಲುವಾಗಿ ಧನಿಕರನ್ನು ಆದರಿಸುವುದು ಮತ್ತು ನಿರ್ಧನ ಧರ್ಮಾತ್ಮಾ ಪುರುಷರ ನಿರಾದರ ಮಾಡುವುದು ಇತ್ಯಾದಿಯಾಗಿ ಲೋಭದ ಭೇದಗಳು ಅನೇಕವಿವೆ. ಇಂಥ ಅನೇಕ ರೂಪಗಳಿಂದ ಕೂಡಿದ ಅದೆಷ್ಟೋ ಜೀವರುಗಳು ಲೋಭದ ಸಲುವಾಗಿ ಧರ್ಮದ ಸೇವನೆ ಮಾಡುವಂಥವರಿದ್ದಾರೆ.

ಇನ್ನು ಜಗತ್ತಿನಲ್ಲಿ ಉದಾಸರಾದ ಅದೆಷ್ಟೋ ಸಮ್ಯಗ್ದೃಷ್ಟಿ ಧರ್ಮಾತ್ಮರು ಪರಮ ಅರ್ಥರೂಪ ಪರಮಾರ್ಥಮಯ ಮೋಕ್ಷದ ಸಲುವಾಗಿ ಧರ್ಮದ ಸೇವನೆ ಮಾಡುತ್ತಾರೆ. ಅವರು ವಿವಿಧ ದೃಷ್ಟಿಗಳಿಂದ ವಿಚಾರ ಮಾಡುತ್ತ ಸಮತೆಯನ್ನು ಹೆಚ್ಚಿಸಿಕೊಂಡು ಧರ್ಮಾತ್ಮಾ ಜೀವರುಗಳಲ್ಲಿ ಸ್ನೇಹವನ್ನಿಟ್ಟುಕೊಳ್ಳುವುದು, ವಾಂಛೆಯಿಂದ ರಹಿತವಾದ ತಪಸ್ಸು ಮಾಡುವುದು ಇತ್ಯಾದಿ ಕಾರ್ಯಗಳಲ್ಲಿ ತೊಡಗಿರುತ್ತಾರೆ.

**ಸಂದೇಹ ಃ-** ಇಲ್ಲಿ ತಾವು ವಾಂಛೆಯಿಂದ ರಹಿತವಾದ ತಪಸ್ಸು ಮಾಡುತ್ತಾರೆಂದು ಹೇಳಿದಿರಿ; ಆದರೆ ವಾಂಛೆಯಿಂದ ರಹಿತವಾದ ತಪಸ್ಸು ಹೇಗೆ ಇರುವ ಸಾಧ್ಯತೆಯಿದೆ ? ತಪವನ್ನಂತೂ ಸುಖದ ವಾಂಛೆಯಿಂದಲೇ ಮಾಡುವುದಿರುತ್ತದೆ; ವಾಂಛೆಯಿಲ್ಲದ ತಪವಂತೂ ಫಲರಹಿತವಾಯಿತು ಆಗ ಅದರ ಮಹಿಮೆಯೇನಿದೆ ?

**ಸಮಾಧಾನ ಃ-** ದೃಢ ಸಮ್ಯಕ್ತ್ವದ ಧಾರಕ ಧರ್ಮಾತ್ಮನು (ಸ್ವ-ಪರಗಳ ಯಥಾರ್ಥ ಶ್ರದ್ಧೆಯೊಂದಿಗೆ) ಇಂದ್ರಿಯಜನಿತ ಸುಖದ ಸಲುವಾಗಿ ತಪಸ್ಸು ಮಾಡುವುದಿಲ್ಲ. ಮೋಕ್ಷಾಭಿಲಾಷಿಗಳ ಮೋಕ್ಷದ (ಅತೀಂದ್ರಿಯ ಸಂಪೂರ್ಣಸುಖ) ಸಲುವಾಗಿ ಇರುತ್ತದೆ. ಅದರಿಂದ ಸ್ವರ್ಗಾದಿಗಳ ಇಂದ್ರಿಯಜನಿತ ಸುಖವಂತೂ ಸಹಜವಾಗಿಯೇ ದೊರಕುತ್ತದೆ. ಯಾವ ತಪಸ್ಸಿನಿಂದ ಮೋಕ್ಷ ದೊರಕುತ್ತದೆ, ಅದರಿಂದ ಸ್ವರ್ಗವಂತೂ ವಾಂಛೆಯಿಲ್ಲದೆಯೇ ಆಗುತ್ತದೆ. ಹೇಗೆ ಭೂಮಿಯಲ್ಲಿ ಬಿತ್ತಿಗೆ ಮಾಡುವ ಸಮಯದಲ್ಲಿ ಕೃಷಿಕನ ಅಭಿಪ್ರಾಯದಲ್ಲಿ ನನ್ನ ಹೊಲದಲ್ಲಿ ಹುಲ್ಲು ಬರಲೆಂದು ಇರುವುದಿಲ್ಲ. ಅವನ ಮನಸ್ಸಂತೂ ಧಾನ್ಯವನ್ನೇ ಬಯಸುತ್ತದೆ; ಆದರೆ ಯಾರು ಧಾನ್ಯ ಬಿತ್ತಿದ್ದಾರೆ, ಅವರ ಹೊಲದಲ್ಲಿ ಹುಲ್ಲಂತೂ ವಾಂಛೆಯಿಲ್ಲದೆಯೇ ಬರುತ್ತದೆ. ಹಾಗೆಯೇ ಮೋಕ್ಷದ ಅಭಿಲಾಷೆಯಿಂದ ಧರ್ಮರೂಪ ಭೂಮಿಯಲ್ಲಿ ತಪಸ್ಸುರೂಪದ ಬೀಜ ಬಿತ್ತುವಂಥವನ ಸಲುವಾಗಿ ಸ್ವರ್ಗಾದಿಗಳಂತೂ ಹುಲ್ಲಿನ ಹಾಗೆ ಸಹಜವಾಗಿಯೇ ಬಂದು ಬಿಡುತ್ತವೆ.

**ಸಂದೇಹ ಃ-** ಮೋಕ್ಷದ ಇಚ್ಛೆಯಿಂದ ಮಾಡಲಾದ ತಪದಲ್ಲಿಯೂ ವಾಂಛೆಯಂತೂ ಇದ್ದೇ ಇದೆ; ನಿರ್ವಾಂಛಕತೆಯೆಲ್ಲಿದೆ ?

**ಸಮಾಧಾನ ಃ-** ಧನ ಸಂಪಾದನೆ ಮಾಡುವಂಥ ಯಾವನೋ ಪುರುಷನು ಹೀಗೆ ವಿಚಾರ ಮಾಡುತ್ತಾನೆ. ಬಹಳಷ್ಟು ಧನ ಸಂಪಾದನೆ ಮಾಡುವುದರಿಂದ ವಿವಾಹ ಮಾಡಿಕೊಂಡಾಗ ಮನೆಯು ವೃದ್ಧಿಸುತ್ತದೆ, ಪುತ್ರ ಪುತ್ರಿಯರಾದ ಮೇಲೆ ಗೃಹಸ್ಥತನವು ಒಳ್ಳೆಯದೆನಿಸುತ್ತದೆ. ಪತ್ನಿಯಿಲ್ಲದೆ ಮನೆಯು ಬೆಳೆಯುವುದಿಲ್ಲ-ಹೀಗೆ ತಿಳಿದು ಧನಸಂಪಾದನೆ ಮಾಡುತ್ತಾನೆ. ಇನ್ನು ಬೇರೊಬ್ಬನು ಬಹಳಷ್ಟು ಧನ ಸಂಚಯವಾದ ಮೇಲೆ ವೇಶ್ಯೆಗೆ ಕೊಟ್ಟು ಮನೋವಾಂಛಿತ ಭೋಗ ಭೋಗಿಸಬಹುದೆಂದು ಯೋಚಿಸುತ್ತಾನೆ.

ಇದರಲ್ಲಿ ವಿವಾಹ ಮಾಡಿಕೊಳ್ಳಬಯಸುವಂಥವನು ಅವನಂತೂ ಗೃಹಸ್ಥತೆಯ ಮನೆ ಕಟ್ಟಿ ಸುಖಿಯಾಗಬಯಸುತ್ತಾನೆ.

ಇಲ್ಲಿ ಈ ವಿಚಾರವಂತೂ (ಲೌಕಿಕ ದೃಷ್ಟಿಯಿಂದ) ದೋಷ ರಹಿತವಿದೆ; ಏಕೆಂದರೆ ಯಾವುದರಲ್ಲಿ ಮನೆಕಟ್ಟಿ, ಕನ್ಯೆಯೊಂದಿಗೆ ಮದುವೆಯಾಗಿ, ಪುತ್ರ-ಪುತ್ರಿ ಮೊದಲಾದ ಕುಟುಂಬದೊಂದಿಗೆ ಯಾವಾಗಲೂ ಸುಖಿಯಾಗಿರುವುದನ್ನೇ ಗೃಹಸ್ಥತೆಯೆಂದು ಹೇಳಲಾಗುತ್ತದೆ. ಆದರೆ ಇನ್ನೊಂದು ವೇಶ್ಯೆಯ ಬಯಕೆಯನ್ನೊಳಗೊಂಡ ವಿಚಾರವು ಅಜ್ಞಾನ

ಸಹಿತವಿದೆ. ಏಕೆಂದರೆ ಅಲ್ಲಿ ಧನವನ್ನೂ ಕಳೆದುಕೊಳ್ಳುವುದು ಮತ್ತು ವೇಶ್ಯೆಯ ಕಿಂಚಿತ್ ಸುಖಭೋಗಿಸಿ ಪಾಪದ ಸಂಪಾದನೆ ಮಾಡುವುದು ಅದು ಮುಗ್ಧತೆ(ಮೂರ್ಖತೆ)ಯ ಚಿಹ್ನೆಯಿದೆ.

ಅದೇ ಪ್ರಕಾರ ತಪದಿಂದ ಮೋಕ್ಷವನಿಚ್ಛಿಸುವ ಜೀವನು ನಿತ್ಯ ಸುಖದ ಅಭಿಲಾಷಿಯಾಗಿ ಮೋಕ್ಷರೂಪ ಕನ್ಯೆಯೊಂದಿಗೆ ಪರಿಣಯಮಾಡಿ, ಸಿದ್ಧ ಪದದಲ್ಲಿ ಮನೆಕಟ್ಟಿಕೊಂಡು ಅನಂತಕಾಲದವರೆಗೆ ಸುಖದಿಂದ ಇರಬಯಸುತ್ತಾನೆ. ಮನೆ ಕಟ್ಟಿಕೊಂಡು ಸ್ಥಿರವಾಗಿರುವುದು ಯೋಗ್ಯವಿರುವುದರಿಂದ ಅದನ್ನು ವಾಂಛೆಯೆನ್ನುವುದಿಲ್ಲ; ಆದರೆ ಯಾರು ತಪಸ್ಸು ರೂಪದ ಧನದಿಂದ ವೇಶ್ಯೆಯ ಸಮಾನ ಚಂಚಲವಿರುವ ದೇವಾದಿಕರ ಸುಖ ಬಯಸುತ್ತಾರೆ ಅವರು ವಿವೇಕಿಗಳಲ್ಲ.

ಅದರಲ್ಲಿಯೂ ವಿಶೇಷವೆಂದರೆ ಯಾರು ಪರಭವಕ್ಕೆ ಸಂಬಂಧಿಸಿದ ಇಂದ್ರಿಯಜನಿತ ವಾಂಛಿತ ಸುಖದ ಸಲುವಾಗಿ ಧರ್ಮದ ಸೇವನೆ ಮಾಡುತ್ತಾರೆ, ಅವರು (ಕಥಂಚಿತ್) ಧರ್ಮಾತ್ಮರಿದ್ದಾರೆ ಮತ್ತು ಇದೇ ಭವಕ್ಕೆ ಸಂಬಂಧಿಸಿದ ಸುಖ, ಧನ, ಪುತ್ರ, ಪತ್ನಿ, ರೋಗ ನಾಶಾದಿಗಳ ಸಲುವಾಗಿ ಧರ್ಮದ ಸೇವನೆ ಮಾಡುವಂಥವರು ಅವರು ಪಾಪಿಗಳಿದ್ದಾರೆ-ಎಂದು ತಿಳಿಯುವುದು.

ಈ ಪ್ರಕಾರ ಸಮ್ಯಗ್ದೃಷ್ಟಿಯ ತಪಸ್ಸು ಇಂದ್ರಿಯ ಸುಖಾಪೇಕ್ಷೆಯಿಂದ ನಿರ್ವಾಂಛಿತವಿದೆ. ಜಿನಾಜ್ಞೆಯ ಅನುಸಾರ ದೇವ-ಧರ್ಮದ ಸೇವನೆ ಮಾಡುವುದು, ಮೋಕ್ಷ ಮಾರ್ಗದ ಸಲುವಾಗಿ ಧರ್ಮದ ಸೇವನೆ ಮಾಡುವುದು; ದಯಾಪೂರ್ವಕ ಯತ್ನದಿಂದ ತಪ ಮಾಡುವುದು, ಸಂಯಮ, ಪೂಜೆ, ದಾನಾದಿ ಧರ್ಮದ ಅಂಗಗಳ ಸೇವನೆ ಮಾಡುವುದು ಪಾರಮಾರ್ಥಿಕ ಧರ್ಮ ಸೇವನೆಯಿದೆ.

ಈ ಪ್ರಕಾರ ಧರ್ಮಸೇವನೆ ಮಾಡುವಂಥ ಜೀವರುಗಳ ಪೃಥಕ್ - ಪೃಥಕ್ ನಾಲ್ಕು ಪ್ರಕಾರದ ಅಭಿಪ್ರಾಯ ತಿಳಿಯುವುದು. ಅವುಗಳಲ್ಲಿನ ಪಾರಮಾರ್ಥಿಕ ಧರ್ಮಸೇವನೆಯಂತೂ ಮೋಕ್ಷಮಾರ್ಗಮಯವಿದೆ ಮತ್ತು ಉಳಿದ ಧರ್ಮ ಸೇವನೆಯ ಭಾವಗಳು ಅಲ್ಪ ಸುಖವಿತ್ತು ಸಂಸಾರ ಸಾಗರದಲ್ಲಿ ಮುಳುಗಿಸುವಂಥವಿವೆ. ಅದರಿಂದ ಈ ಪ್ರಕಾರ ಒಳಿತು-ಕೆಡಕು ರೂಪ ಧರ್ಮದ ಪರೀಕ್ಷೆ ಮಾಡಿ ಧರ್ಮದ ಸೇವನೆ ಮಾಡುವುದು. ಕಷಾಯ ಸಹಿತ ಇಂದ್ರಿಯ ಸುಖದ ವಾಂಛೆಯನ್ನುತ್ಪನ್ನ ಮಾಡುವಂಥ ಈ ಕುಗತಿದಾಯಕ ಕುಧರ್ಮರೂಪದ ಭಾವಗಳನ್ನು ಬಿಟ್ಟುಕೊಟ್ಟು ಪಾರಮಾರ್ಥಿಕ ಧರ್ಮದ ಸೇವನೆ ಮಾಡುವುದು ಯೋಗ್ಯವಿದೆ.

ಈಗ ಶಾಸ್ತ್ರ, ಛಂದಸ್ಸು, ಕಾವ್ಯ, ಗೀತೆಗಳನ್ನು ಜೋಡಿಸುವಂಥ ಕವಿಗಳ ಅಭಿಪ್ರಾಯ ಹೇಳುತ್ತಾರೆ,-

**ಧಮ್ಮೀ ಧಮ್ಮಫಲ ಹೇತವ, ಜಾಚಿಕ ಉದರಾಯ ಅಧಮ್ಮ ಲೋಭಾದಿ ।**
**ಪರಜಣಾಯ ಭಂಡಾಯ, ಣಿಲಜಯ ಹಾಸಿ ಜೋಡ ಬಕತಾಏ ।।೬೫।।**

**ಗಾಥಾರ್ಥ :-** ಧರ್ಮಾತ್ಮರು ಧರ್ಮಫಲದ ಸಲುವಾಗಿ, ಯಾಚನೆ ಮಾಡುವಂಥವರು ಹೊಟ್ಟೆ ತುಂಬಿಕೊಳ್ಳುವ ಸಲುವಾಗಿ, ಅಧರ್ಮಿಗಳು ಲೋಭದ ಸಲುವಾಗಿ, ಭಂಡರು ಬೇರೆಯವರನ್ನು ಪ್ರಸನ್ನಪಡಿಸುವ ಸಲುವಾಗಿ, ಆಕರ್ಷಿತ ಮಾಡುವ ಸಲುವಾಗಿ, ನಿರ್ಲಜ್ಜರು ಹಾಸ್ಯ, ಕೌತುಕದ ಸಲುವಾಗಿ ಜೊತೆಯ ವಕ್ತಾರರಾಗುತ್ತಾರೆ.

**ಭಾವಾರ್ಥ :-** ರಚಿಸುವ ಕಲೆಯ ಜ್ಞಾನವು ಅನೇಕ ಜೀವರುಗಳಿಗೆ ಇರುತ್ತದೆ. ಶ್ರುತಜ್ಞಾನಾವರಣದ ಕ್ಷಯೋಪಶಮದಿಂದ ಅನೇಕರು ಒಳ್ಳೊಳ್ಳೆಯ ಪಂಡಿತರುಗಳಿದ್ದಾರೆ. ಅವರು ಅನೇಕ ಶಾಸ್ತ್ರ ರಚನೆ ಮಾಡುತ್ತಾರೆ ಕೆಲವರು ಅನೇಕ ಪದ್ಯ, ಕಾವ್ಯ, ಗಾಥೆಗಳ ರಚನೆ ಮಾಡುತ್ತಾರೆ, ಕೆಲವರು ಪದ, ಪ್ರಾರ್ಥನೆ, ಕೆಲವರು ಕಥೆ, ಗೀತೆ, ಇತ್ಯಾದಿ ಅನೇಕ ರಚನೆಯ ಕಲೆಗೆ ಸಂಬಂಧಿಸಿದ ಜ್ಞಾನಸಹಿತ ಜೀವರುಗಳಿದ್ದಾರೆ, ಆದರೆ ಇವುಗಳ ರಚನೆ ಮಾಡುವಲ್ಲಿಯೂ ಪರಿಣತಿಯ ಅಪೇಕ್ಷೆಯಿಂದ ಭಾವಗಳ ಅಭಿಲಾಷೆಯು ಭಿನ್ನ-ಭಿನ್ನವಿರುತ್ತವೆ. ಬೇರೆ-ಬೇರೆ ಅಭಿಲಾಷೆಯಿರುವ ಕಾರಣ ಅವುಗಳ ರಚನೆಯ ಕಲೆಗಳ ಜ್ಞಾನದ ಫಲವೂ ಬೇರೆ-ಬೇರೆ ಪ್ರಾಪ್ತವಾಗುತ್ತದೆ. ರಚನೆ

ಮಾಡುವ ಸಮಯದಲ್ಲಿ ಅಂತರಂಗದೊಳಗೆ ಎಂಥ ಅಭಿಲಾಷೆಯಿರುತ್ತದೆ, ಅದರ ಅನುಸಾರ ಫಲದ ಪ್ರಾಪ್ತಿಯಾಗುತ್ತದೆ; ಅದನ್ನೇ ಹೇಳುತ್ತಾರೆ, -

ಧರ್ಮದ ಫಲದ ಇಚ್ಛೆಯನ್ನಿಟ್ಟುಕೊಳ್ಳುವಂಥ, ಪರಭವದಲ್ಲಿ ಸ್ವರ್ಗ, ಮೋಕ್ಷಾದಿಗಳ ಸುಖಗಳ ವಾಂಛೆಯಿಂದ ಸಹಿತ ಯಾರೋ ಧರ್ಮಾತ್ಮಾ ಜೀವರುಗಳಿಗೆ ವಿಶೇಷ ಶ್ರುತಜ್ಞಾನದ ಅಭಿಲಾಷೆಯಿರುವುದರಿಂದ ಅವರು ಅಂತರಂಗದ ಶ್ರದ್ಧೆಯ ಅನುಸಾರ ಶಾಸ್ತ್ರಗಳ ಗಾಥೆ, ಕಾವ್ಯ, ಪದ್ಯ, ಪದ, ಪ್ರಾರ್ಥನೆ ಮೊದಲಾದವುಗಳ ರೂಪ ರಚನೆ ಮಾಡುತ್ತಾರೆ. ಈ ಜ್ಞಾನದ ಫಲದಲ್ಲಿ ನನಗೆ ಧರ್ಮವು ಪ್ರಗಟವಾಗಲಿಯೆಂಬ ವಾಂಛೆಯೊಂದಿಗೆ ಅವರು ಶಾಸ್ತ್ರಾದಿಗಳ ರಚನೆ ಮಾಡುತ್ತಾರೆ - ಇಂಥ ಜೀವರುಗಳನ್ನು ಧರ್ಮಾತ್ಮರೆಂದು ತಿಳಿಯುವುದು.

ಕೆಲವು ಯಾಚಕ ಜೀವಗಳಿಗೆ ಶ್ರುತಜ್ಞಾನದ ವಿಶೇಷ ವೃದ್ಧಿಯಿದ್ದರೆ ಅವರು ತಮ್ಮ ಉದರ ಪೋಷಣೆರೂಪ ಅಂತರಂಗದ ಅಭಿಪ್ರಾಯದ ಅನುಸಾರ ಯಾಚನಾಪರ ಕಾವ್ಯ, ಗೀತೆಗಳ ರಚನೆ ಮಾಡುತ್ತಾರೆ. ಯಾವನೋ ದೊರೆ ಮೊದಲಾದ ದೊಡ್ಡ ಪುರುಷರ ಗುಣಕೀರ್ತನೆ ಮಾಡಿದರೆ ನಮಗೆ ಗ್ರಾಮ, ಗಜ, ಧನ, ಕುದುರೆ ಮೊದಲಾದವು ದೊರಕಬಹುದು; ಅದರಿಂದ ಇಡೀ ಕುಟುಂಬದ ಪಾಲನೆಯಾಗಬಹುದಾಗಿದೆ. ಯಶಸ್ಸಿನ ಲೋಭಿಯು ಇಂಥವನೊಬ್ಬ ರಾಜನು ತನ್ನ ಯಶೋಗಾನದ ಅಪೇಕ್ಷೆಯುಳ್ಳವನಿದ್ದಾನೆ, ಅವನು ಉದಾರಚಿತ್ತನೂ ಇದ್ದಾನೆ; ಅಂಥವನ ಯಶೋಗಾನ ಮಾಡಿದರೆ ನಮಗೆ ಅನೇಕ ದಿವಸಗಳ ಸಲುವಾಗಿ ಆಜೀವಿಕೆಯು ದೊರಕಬಹುದಾಗಿದೆ-ಹೀಗೆ ವಿಚಾರ ಮಾಡಿ, ಆ ಯಾಚಕನು ತನ್ನ ಬುದ್ಧಿಯ ಅನುಸಾರ ಆ ರಾಜನನ್ನು ಪ್ರಸನ್ನ ಪಡಿಸುವ ಸಲುವಾಗಿ ಅನೇಕ ಗೀತೆ, ಕವಿತೆ, ಶ್ಲೋಕಗಳ ರಚನೆ ಮಾಡುತ್ತಾನೆ. ತನ್ನ ಅಂತರಂಗದ ಅಭಿಪ್ರಾಯಾನುಸಾರ ಜ್ಞಾನಪೂರ್ವಕ ಅವನು ಅದರಲ್ಲಿ ದೀರ್ಘ, ಗಂಭೀರ ಅರ್ಥ, ಮಹಾಸರಳ ಅಕ್ಷರ, ಮಹಾಸುಂದರ ವ್ಯಂಜನಗಳನ್ನು ಸೇರಿಸಿ ಪದ್ಯಗಳ ರಚನೆ ಮಾಡುತ್ತಾನೆ, ಅವನನ್ನು ಯಾಚಕನೆಂದು ತಿಳಿಯುವುದು.

ಒಳ್ಳೆಯ ಜ್ಞಾನ ಪಡೆದು, ಬುದ್ಧಿಯ ಪ್ರಕಾಶವಾಗುವುದರಿಂದ ರಚನೆ ಮಾಡುತ್ತ-ಕವಿತೆ, ಗೀತೆ, ಪದ್ಯಗಳನ್ನು ರಚಿಸುತ್ತ ಅದೆಷ್ಟೋ ಜೀವಗಳದು ಅಂತರಂಗದ ಅಭಿಪ್ರಾಯವು ಹೇಗಿರುತ್ತದೆಯೆಂದರೆ, - ನಮಗೆ ಬಹಳಷ್ಟು ಜ್ಞಾನವಿದೆ ಅದರಿಂದ ನಮ್ಮ ಪಾಂಡಿತ್ಯವು ಪ್ರಕಟವಾಗುವಂಥ, ಕೀರ್ತಿಯು ಹರಡುವಂಥ ಕಾವ್ಯ, ಪದ್ಯ ಗ್ರಂಥಗಳ ರಚನೆ ಮಾಡಬೇಕು. ಈ ಪ್ರಕಾರ ಯಶಾದಿಗಳ ಲೋಭದಿಂದ ಕೃತಿಗಳ ರಚನೆ ಮಾಡುತ್ತಾರೆ. ಅದೆಷ್ಟೋ ಅಜ್ಞಾನಿಗಳು ಇಂದ್ರಿಯಸುಖ ಭೋಗಿಸುವ ಸಲುವಾಗಿ ಇಂಥ ರಚನೆ ಮಾಡುತ್ತಾರೆ, ಅವರನ್ನು ಪಾಪಿಗಳೆಂದು ತಿಳಿಯುವುದು.

ಭಂಡ-ವೇಶಧಾರಿಗಳಲ್ಲಿಯೂ ತೀಕ್ಷ್ಣ ಶ್ರುತಜ್ಞಾನಧಾರಿಗಳಿರುತ್ತಾರೆ ಅವರು ರಚನೆ ಮಾಡುತ್ತಾರೆ, ಆಶ್ಚರ್ಯಕಾರಕ ಅಭಿನಯಗಳ ರಚನೆ ಮಾಡುವಂಥ ಅವರ ಮಾತಿನ ವಿಲಕ್ಷಣತೆ ಅದ್ಭುತ ದೃಶ್ಯಗಳ ಉಪಸ್ಥಿತಿ ಮಾಡುವ ರಚನಾ ವಿಶೇಷವನ್ನು ಕಂಡು ಅನೇಕ ಜನರು ನಕ್ಕು ನಲಿಯುತ್ತಾರೆ, ಪ್ರಸನ್ನರಾಗಿ ಅವರ ಪ್ರಶಂಸೆ ಮಾಡುತ್ತಾರೆ. ಅವರು ಜ್ಞಾನದ ಬಲದಿಂದ ತಮ್ಮ ಬುದ್ಧಿಯಿಂದ ಅಭಿನಯಗಳ ರಚನೆ ಮಾಡಿ ಅನ್ಯರನ್ನು ಸಂತುಷ್ಟಗೊಳಿಸುತ್ತಾರೆ. ಆ ವೇಶಧಾರಿಗಳ ಅಭಿಪ್ರಾಯವು ತಮ್ಮ ರಚನೆಗಳಿಂದ ಬೇರೆಯವರನ್ನು ಪ್ರಸನ್ನ ಪಡಿಸುವರೂಪದ್ದಿರುತ್ತದೆ.

ಕೆಲವು ನಿರ್ಲಜ್ಜ ಜೀವರುಗಳಲ್ಲಿಯೂ ಜ್ಞಾನದ ವೃದ್ಧಿಯಾಗುವುದರಿಂದ (ಇಂದಿನ ನಾಟಕ, ಚಲನಚಿತ್ರ, ಹಾಸ್ಯ ಕಲೆಗಾರರು) ನಿರ್ಲಜ್ಜರೂ ರಚನೆ ಮಾಡುತ್ತಾರೆ. ಅವರ ರಚನೆಯು ಹಾಸ್ಯ-ಕುತೂಹಲ, ಮನೋರಂಜನೆಯ ಸಲುವಾಗಿ ಇರುತ್ತದೆ. ಎಂದರೆ ಕೆಲವರಿಂದ ರಚನೆಗೊಂಡ ಹೋಳಿಹಬ್ಬದ ಕಾಮೋತ್ತೇಜಕ ಗೀತೆ, ಜ್ಞಾನವು ದೊರಕಿರುವುದರಿಂದ ಯಾರೋ ನಿರ್ಲಜ್ಜ ಪಾಪೀ ಸ್ತ್ರೀಯರಿಂದ ಹಾಡಿಸುವ ಸಲುವಾಗಿ ನಿರ್ಮಿಸಲಾದ ಬೈಗುಳದ ಗೀತೆ ಹಾಡಿದ ಮೇಲೆ ಶ್ರೋತೃಗಳು ಅಂಥ ರಚನೆಗಳನ್ನಾಲಿಸಿ, ವಿಕಾರೀ ಜೀವಗಳು ಲಜ್ಜೆಯನ್ನು ತೊರೆದು

ಹಾಸ್ಯ-ಕೌತುಕರೂಪ ಪ್ರವೃತ್ತರಾಗುತ್ತಾರೆ. ಈ ಪ್ರಕಾರದ ರಚನಾ ಜ್ಞಾನಯುಕ್ತ ಜೀವಗಳು ನಿರ್ಲಜ್ಜರೆನಿಸಿಕೊಳ್ಳುತ್ತಾರೆ - ಇವರು ಐದು ಪ್ರಕಾರದ ರಚನೆಕಾರರು ಪ್ರಮುಖರಿದ್ದಾರೆ.

ಅವರೊಳಗಿನ ಸುಬುದ್ಧ ಪುರುಷರಂತೂ ಬುದ್ಧಿ ಪಡೆದು ಧರ್ಮಫಲದ ಇಚ್ಛುಕರಾಗುತ್ತ ಧರ್ಮಮಯ, ದಯೆಯಿಂದ ಕೂಡಿದ, ಪುಣ್ಯದಾಯಕ ರಚನೆಗಳನ್ನು ಮಾಡುತ್ತಾರೆ. ಆ ಧರ್ಮಮೂರ್ತಿಗಳು ಸತ್ಪುರುಷರಿಂದ ಪ್ರಶಂಸೆಗೆ ಪಾತ್ರರಿದ್ದಾರೆ. ಉಳಿದ ನಾಲ್ಕು ಜಾತಿಯ ರಚನೆಕಾರರು ಪಾಪಬಂಧ ಮಾಡುವಂಥವರಿದ್ದಾರೆ. ಶ್ರುತಜ್ಞಾನ ಸಹಿತರಾದ ಅಸತ್ಯ ಕವಿಗಳು ತ್ಯಾಗಯೋಗ್ಯರಿದ್ದಾರೆ.

ಆಚಾರ್ಯರು ಹೇಳುವುದೇನೆಂದರೆ - ಸಂಸಾರದಲ್ಲಿ ಸುತ್ತುತ್ತ ಅನಂತ ಭವಗಳು ಅಜ್ಞಾನತೆಯಲ್ಲಿ ಕಳೆದು ಹೋದ ಮೇಲೆ ಎಂದೋ ತಪ್ಪಿ ಒಂದು ಭವವು ವಿಶೇಷ ಜ್ಞಾನಸಹಿತ, ವಿವೇಕ-ಚತುರತೆಯಿಂದ ಕೂಡಿದ ಜ್ಞಾನಮಯವಿರುವುದು ದೊರಕುತ್ತದೆ. ಇಂಥ ಉತ್ತಮ ಜ್ಞಾನವನ್ನು ಪ್ರಾಪ್ತ ಮಾಡಿಕೊಂಡು ಜೀವನು ಅದನ್ನು ಕುಕಾವ್ಯಗಳ ರಚನೆ ಮಾಡಿ ವ್ಯರ್ಥ ಕಳೆಯುತ್ತಾನೆ. ಈ ಎಲ್ಲ ಜಾತಿಯ ರಚನೆಗಳು ಹೀನ ಜ್ಞಾನಿಗಳಿಂದ ಆಗುವುದಿಲ್ಲ. ಯಾವ ಜೀವಗಳು ವಿಶೇಷ ಜ್ಞಾನಿಗಳಿದ್ದಾರೆ, ಮಹಾಚತುರ, ಅನೇಕ ನಯ-ವಿವೇಕಗಳ ಜ್ಞಾತಾರರು ತೀಕ್ಷ್ಣ ಜ್ಞಾನಧಾರಿಗಳೇ ಇರುತ್ತಾರೆ; ಅವರಲ್ಲಿ ರಚನಾಕಲೆಯಿರುತ್ತದೆ. ಇಂಥ ತೀಕ್ಷ್ಣಜ್ಞಾನದ ಧಾರಕ, ಉತ್ತಮ ಬುದ್ಧಿಯವರೂ ಅಪರಾಧ ಮಾಡುತ್ತಾರೆಂದರೆ ಅದು ಮಹಾ ಆಶ್ಚರ್ಯವಿದೆ.

ಎಲೈ ಭವ್ಯನೇ ! ಈ ತುಚ್ಛ ಇಂದ್ರಿಯ ಸುಖ ಮತ್ತು ಅಜ್ಞಾನಿ ಜೀವಗಳ ಮುಖದಿಂದ ಪ್ರಶಂಸೆಯನ್ನಾಲಿಸುವ ಸಲುವಾಗಿ ಇಂಥ ಉತ್ಕೃಷ್ಟ ಜ್ಞಾನವನ್ನು ವ್ಯರ್ಥ ಮಾಡುತ್ತಿರುವೆ; ಇದರ ಸಲುವಾಗಿ ನಾವು ನಿಂದೆಯನ್ನೇನು ಮಾಡುವುದು ? ಇದಂತೂ ಹೇಗೆ ಯಾವುದೋ ಕೋತಿಗೆ ರತ್ನಜಡಿತ ಚಿನ್ನದ ಆಭೂಷಣಗಳನ್ನು ತೊಡಿಸಿ, ಅದರ ಕೊರಳಲ್ಲಿ ಮುತ್ತುಗಳ ಮಾಲೆಯನ್ನು ಹಾಕಿ, ಮಸ್ತಕದ ಮೇಲೆ ರತ್ನಜಡಿತ ಮುಕುಟವನ್ನಿಟ್ಟು ಅನೇಕ ಸುಂದರ ವಸ್ತ್ರ ತೊಡಿಸಿ ಶೋಭಾಯಮಾನ ಮಾಡಿ ಅದರ ಎದುರಿಗೆ ತಿನ್ನುವ ಸಲುವಾಗಿ ವಿಧ-ವಿಧದ ಮಿಠಾಯಿಯನ್ನು ಇಡುವಷ್ಟರಲ್ಲಿ ಯಾವುದೋ ಕಾನನದ ಕೋತಿಯು ಬಂದು ಬೇವಿನ ಗೊಂಚಲನ್ನು ತೋರಿಸಿ ಈ ವನದ ಭೋಜನವನ್ನು ತಗೆದುಕೊ, ಎಂದು ಹೇಳುತ್ತದೆ ಅಲ್ಲದೆ ಸಂಕೇತದಿಂದ ಎಲೈ ಮಿತ್ರನೇ ! ನೀನು ಇಲ್ಲಿ ಹೇಗೆ ಬಂಧನಕ್ಕೊಳಗಾಗಿರುವೆ ? ಎಂದು ಕೇಳುತ್ತದೆ. ಈ ಅಜ್ಞಾನಿ ಕೋತಿಯು ಕೂಡ ಆ ವನದ ಕೋತಿಯ ಕುರಿತಾಗಿರುವ ಸ್ನೇಹ ಹಾಗೂ ಬೇವಿನ ಹಣ್ಣುಗಳ ಲೋಭದ ಕಾರಣ, ತನ್ನ ತಲೆಯ ಮೇಲಿರುವ ಮುಕುಟವನ್ನು ಬಿಸಾಕಿ, ಮುತ್ತಿನ ಮಾಲೆ ಮತ್ತು ವಸ್ತ್ರಗಳನ್ನು ಬಿಚ್ಚಿಟ್ಟು, ಮಿಠಾಯಿ ಮೊದಲಾದವುಗಳ ಉತ್ತಮ ಭೋಜನವನ್ನು ಬಿಟ್ಟುಕೊಟ್ಟು ಒಂದುವೇಳೆ ಕಾನನದೊಳಗೆ ಹೊರಟು ಹೋದರೆ ಆ ಕೋತಿಯ ಅಪರಾಧವನ್ನು ಎಲ್ಲಿಯವರೆಗೆಂದು ಅಥವಾ ಎಷ್ಟೆಂದು ಹೇಳಬಹುದಾಗಿದೆ.

ಆ ಕೋತಿಯ ಹಾಗೆ ಪತಿತ ಪಂಡಿತರ ಸಲುವಾಗಿ ನಾವೇನು ಹೇಳುವುದು ? ವಿನಾಶಶೀಲ ಭೋಗದ ಸಲುವಾಗಿ ಹಾಗೂ ಲೋಕ ಪ್ರಶಂಸೆಯ ಸಲುವಾಗಿ ತಮ್ಮ ಜ್ಞಾನವನ್ನು ಮಲಿನ ಮಾಡಿಕೊಳ್ಳುತ್ತಾರಲ್ಲ ? ಕೃತಿ ರಚನೆ ಮಾಡುವಂಥ ಉತ್ತಮ ಜ್ಞಾನ ಪಡೆದು ಕೂಡ ಅದರ ರಹಸ್ಯವನ್ನು ತಿಳಿಯಲಾರದೆ ಪಾಪದ ಉಪಾರ್ಜನೆ ಮಾಡುತ್ತಾರೆ. ಇದಂತೂ ಮಹಾ ಆಶ್ಚರ್ಯದ ಸಂಗತಿಯಿದೆ. ಈ ಅಪರಾಧದ ಸಲುವಾಗಿ ಯಾರೇನು ಹೇಳಬಹುದಾಗಿದೆ ?

ಹೇಗೆ ಯಾವನೋ ಕಟ್ಟಿಗೆ ಕಡಿಯುವಂಥವನಿಗೆ ಕಾನನದಲ್ಲಿ ಮರದ ದಿಂಡನ್ನು ಕತ್ತರಿಸುತ್ತಿರುವಾಗ ಒಂದು ಚಿಂತಾಮಣಿ ರತ್ನವು ದೊರಕುತ್ತದೆ. ಅವನು ಅದನ್ನೆತ್ತಿಕೊಂಡು, ನೋಡಿ, ಇದೊಂದು ವರ್ಣಮಯವಾದ ಪಾಷಾಣದ ತುಂಡಿದೆ, ನೋಡಲು ಸುಂದರವಿದೆ, ಇದನ್ನು ಮನೆಗೆ ತಗೆದುಕೊಂಡು ಹೋದರೆ ನನ್ನ ಮಗನು ಚೆನ್ನಾಗಿ

ಆಟವಾಡಬಹುದಾಗಿದೆಯೆಂದು ವಿಚಾರ ಮಾಡಿ, ಆ ಮೂರ್ಖನು ಅದರ ಪರೀಕ್ಷೆ ಮಾಡದೇ, ಆ ಚಿಂತಾಮಣಿ ರತ್ನವನ್ನು ತನ್ನ ಮೈಮೇಲಿನ ಹರಕಲು ಬಟ್ಟೆಯಲ್ಲಿ ಗಂಟು ಕಟ್ಟಿ ಇಟ್ಟುಕೊಳ್ಳುತ್ತಾನೆ. ನಂತರ ವನದಲ್ಲಿ ಕಟ್ಟಿಗೆ ಕಡಿದು, ಕಟ್ಟಿಗೆಯ ಹೊರೆಯನ್ನು ತಲೆಯ ಮೇಲಿಟ್ಟುಕೊಂಡು ಕಾನನದಿಂದ ಹೊರಟು ಮನೆಯ ಕಡೆಗೆ ಬರುತ್ತಾನೆ. ತಲೆಯ ಮೇಲೆ ಭಾರವಿದೆ. ಇಂಥ ಅಜ್ಞಾನತೆಗೆ ಧಿಕ್ಕಾರವಿರಲಿ ! ತಾನುಟ್ಟ ತುಂಡು ಬಟ್ಟೆಯಲ್ಲಿ ಬಂಧಿತ ಚಿಂತಾಮಣಿಯು ತನ್ನ ಹತ್ತಿರವೇ ಇದೆ, ಆದರೂ ತಲೆಯ ಮೇಲೆ ಕಟ್ಟಿಗೆ ಹೊರೆಯ ಭಾರವಿದೆ. ವ್ಯರ್ಥವಾಗಿಯೇ ಭಾರವನ್ನು ಹೊತ್ತು ಕಷ್ಟಸಹಿಸುತ್ತ ಮನೆಗೆ ಬರುತ್ತಾನೆ.

ಸಾಯಂಕಾಲ ಕಟ್ಟಿಗೆಯನ್ನು ಮಾರಲೆಂದು ನಿರ್ದಿಷ್ಟ ಸ್ಥಾನದವರೆಗೆ ಪುನಃ ಭಾರ ಹೊತ್ತುಕೊಂಡು ಹೋದನು ಅಲ್ಲಿ ಆ ದರಿದ್ರನು ಹಸಿವೆಯಿಂದ ಬಳಲಿ ನಿಂತುಕೊಂಡಿದ್ದಾನೆ. ಚಿಂತಾಮಣಿಯು ತನ್ನ ಹತ್ತಿರವಿದ್ದರೂ ಅದರ ರಹಸ್ಯವನ್ನು ತಿಳಿಯದೇ ದುಃಖಿಯಾಗುತ್ತಿದ್ದಾನೆ. ಕೊನೆಗೆ ಎರಡು ದುಡ್ಡಿಗೆ ಭಾರವನ್ನು ಮಾರಿ ಮನೆಗೆ ಬಂದು ಆ ದುಡ್ಡನ್ನು ಪತ್ನಿಯ ಕೈಗೆ ಕೊಡುತ್ತ , ಹೋಗು ಇದರಿಂದ ಧಾನ್ಯ ಕೊಂಡು ಹಿಟ್ಟು ಮಾಡಿ, ಎರಡು ಕವಡೆಯಷ್ಟು ಎಣ್ಣೆ ತಂದು ದೀಪ ಹಚ್ಚಿ, ಅದರ ಬೆಳಕಿನಲ್ಲಿ ರೊಟ್ಟಿ ಮಾಡಿ ಊಟಕ್ಕೆ ಕೊಡೆಂದು ಹೇಳುತ್ತಾನೆ. ಕಟ್ಟಿಗೆ ಮಾರಿಬಂದು ಮೂರು ಗಂಟೆ ಕಳೆದ ಮೇಲೆಯೂ ಮನೆಯಲ್ಲಿ ಎಲ್ಲರೂ ಹಸಿದುಕೊಂಡೇ ಇದ್ದಾರೆ. ಚಿಂತಾಮಣಿಯು ಹತ್ತಿರದಲ್ಲಿದ್ದರೂ ಅದರ ರಹಸ್ಯವನ್ನು ತಿಳಿಯದ ಕಾರಣ ಸುಖ ಸಿಗಲಿಲ್ಲ. ಬೇಗನೆ ರೊಟ್ಟಿ ಮಾಡೆಂದು ಹೇಳಿ ಅವನು ತನ್ನ ಹರಕಲು ಬಟ್ಟೆಯಲ್ಲಿ ಕಟ್ಟಿಕೊಂಡಿದ್ದ ಚಿಂತಾಮಣಿಯನ್ನು ಬಿಚ್ಚಿ ಹೆಂಡತಿಯ ಕೈಗೆ ಕೊಡುತ್ತ ನೋಡಿಲ್ಲಿ ಈ ಕಲ್ಲು ಹೇಗೆ ಹೊಳೆಯುತ್ತಿದೆ ಇದನ್ನು ನಮ್ಮ ಮಗನಿಗೆ ಆಟ ಆಡಲು ಕೊಡು ಎಂದು ಹೇಳಿ ಚಿಂತಾಮಣಿಯನ್ನು ಹೊರ ತೆಗೆಯುತ್ತಿದ್ದಂತೆ ಕತ್ತಲು ಕವಿದ ಮನೆಯಲ್ಲಿ ಬೆಳಕಾಗಿ ಹೋಗುತ್ತದೆ.

ಆ ಬೆಳಕನ್ನು ನೋಡಿ ಭಾಗ್ಯಹೀನ ಅಜ್ಞಾನಿಯು ಈ ಕಲ್ಲು ಚೆನ್ನಾಗಿದೆಯಲ್ಲ, ಇದರ ಬೆಳಕಿನಲ್ಲಿ ರೊಟ್ಟಿ ಮಾಡು, ದೀಪದೆಣ್ಣೆಯ ಉಳಿತಾಯವಾಯಿತೆಂದು ಹೇಳಿ ಅದನ್ನು ಒಂದು ಮಾಡ (ಗೋಡೆಯಲ್ಲಿ ನಿರ್ಮಿಸಲಾದ ಗೂಡು)ದಲ್ಲಿ ಇಟ್ಟು ಬಿಡುತ್ತಾನೆ. ಅದರ ಬೆಳಕಿನಲ್ಲಿ ದಿನಾಲೂ ಅವನ ಹೆಂಡತಿಯು ರೊಟ್ಟಿ ಮಾಡತೊಡಗಿದಳು. ಕರ್ಮದ ವಿಚಿತ್ರತೆಯನ್ನಾದರೂ ನೋಡಿರಿ ! ಮನೆಯಲ್ಲಿ ಚಿಂತಾಮಣಿ ರತ್ನವಿದ್ದ ಮೇಲೆಯೂ ಅದರ ರಹಸ್ಯವನ್ನು ಅರಿಯದೇ ಇರುವ ಕಾರಣದಿಂದ ದುಃಖ ದರಿದ್ರತೆಗಳು ನಾಶವಾಗಲಿಲ್ಲ. ಅನೇಕ ದಿನಗಳವರೆಗೆ ಕಟ್ಟಿಗೆಯ ಹೊರೆಯ ಭಾರವನ್ನು ಹೊರುತ್ತ ದುಃಖ ಅನುಭವಿಸುತ್ತಿದ್ದಾನೆ. ದೀಪದ ಸಲುವಾಗಿ ಬೇಕಾಗುವ ಎಣ್ಣೆಯ ಖರ್ಚು ಉಳಿಯಿತು, ಇದರ ಬೆಳಕಿನ ಎದುರು ಈಗ ದೀಪದ ಅವಶ್ಯಕತೆಯೇ ಇಲ್ಲವೆಂಬ ವಿಚಾರದಲ್ಲಿ ಸುಖಮನ್ನಿಸುತ್ತಿದ್ದನು. ಅದೇ ಪ್ರಕಾರ ಕುಕವಿಗಳು ಚಿಂತಾಮಣಿ ರತ್ನದ ಸಮಾನ ಉತ್ತಮ ಕೃತಿ ರಚನೆಯ ಕುರಿತಾದ ಶ್ರುತಜ್ಞಾನವನ್ನು ಎರಡು ಕವಡೆಯ ಎಣ್ಣೆಯ ಬದಲಾಗಿ ರತ್ನದ ಉಪಯೋಗ ಮಾಡುವಂಥ ಆ ಕಟ್ಟಿಗೆ ಕಡಿಯುವವನ ಸಮಾನ ವಿಷಯ ಸುಖದ ಸಲುವಾಗಿ ಕಳೆದುಕೊಳ್ಳುತ್ತಾರೆ. ಎಂದರೆ ಈ ಕುಕವಿಗಳ ಜ್ಞಾನರೂಪದ ಚಿಂತಾಮಣಿ ರತ್ನವು, ರಹಸ್ಯವನ್ನು ತಿಳಿಯಲಾಗದ ಕಾರಣ ಕಲ್ಲಿನ ತುಂಡಿನ ಸಮಾನವೆಂದು ತಿಳಿಯುವುದು. ಈ ಕುಕವಿಗಳು ಜ್ಞಾನದ ಮಹತ್ವವನ್ನು ತಿಳಿಯಲಾಗಲಿಲ್ಲ. ಈ ಒಳ್ಳೆಯ ಜ್ಞಾನವಂತೂ ಮನೋವಾಂಛಿತ ಸುಖ ಕೊಡುವಂಥದ್ದಿದೆ. ಅದನ್ನು ಪ್ರಾಪ್ತ ಮಾಡಿಕೊಂಡು ಕೂಡ ಜ್ಞಾನದ ಮಂದತೆಯಿಂದ ಚಂಚಲ ವಿನಾಶಶೀಲವಾದ ಇಂದ್ರಿಯಜನಿತ ಸುಖದ ಸಲುವಾಗಿ ಮತ್ತು ಅಜ್ಞಾನೀ ಜೀವಗಳಿಂದ ಮಾಡಲಾದ ತುಚ್ಛ ಲೌಕಿಕ ಕೀರ್ತಿಯ ಸಲುವಾಗಿ ನಷ್ಟ ಮಾಡುತ್ತಾರೆ - ಇದು ಕುಕವೀಶ್ವರರ ಸ್ವರೂಪವಿದೆಯೆಂದು ತಿಳಿಯುವುದು.

ಈ ಪ್ರಕಾರ ಯಾವ ಜ್ಞಾನವನ್ನು ಪಡೆದು ಧರ್ಮಾತ್ಮರು ಧರ್ಮಸಂಬಂಧದ ಕೃತಿ-ಕಾವ್ಯಾದಿಗಳ ರಚನೆ ಮಾಡಿ ಪುಣ್ಯಬಂಧ ಮಾಡಿಕೊಳ್ಳುತ್ತಾರೆ, ಮೂರ್ಖ ಕವಿಗಳು ಅದೇ ಜ್ಞಾನ ಪಡೆದು ಅಸತ್ಯ ಕೃತಿಗಳ ರಚನೆ ಮಾಡಿ

ಪಾಪಬಂಧ ಮಾಡಿಕೊಳ್ಳುತ್ತಾರೆ. ಹೀಗೆ ಎಲ್ಲ ಪ್ರಕಾರದ ವಿಶೇಷ ಜ್ಞಾನವುಳ್ಳ ಜೀವಗಳ ಪೃಥಕ್-ಪೃಥಕ್ ಭಾವ ತಿಳಿಯುವುದು.

ಇನ್ನು ಯಾವ ಕಾಷ್ಠಾಂಗಾರನು ರತ್ನ ಪಡೆದಿದ್ದನು, ಅದು ಅವನ ಮನೆಯಲ್ಲಿದೆ, ಅವನ ಕಥೆ ಹೇಳುತ್ತಾರೆ - ಯಥಾ ಪ್ರಕಾರ ಅವನದು ಕಟ್ಟಿಗೆ ಕಡಿದು ಹೊರೆ ಹೊತ್ತು ತಂದು ಅದನ್ನು ಮಾರಿ ಜೀವನ ನಡೆಸುತ್ತ ಅನೇಕ ದಿವಸಗಳು ಕಳೆದು ಹೋಗುತ್ತವೆ. ಒಂದು ದಿವಸ ರಾತ್ರಿಯ ಸಮಯದಲ್ಲಿ ಅದೇ ಮಾರ್ಗದಿಂದ ಒಬ್ಬ ರತ್ನದ ವ್ಯಾಪಾರಿಯು ಹೊರಟಿದ್ದನು. ಈ ಕಾಷ್ಠಾಂಗಾರನ ಮನೆಯಲ್ಲಿ ಸೂರ್ಯಪ್ರಕಾಶದಂಥ ಬೆಳಕನ್ನು ನೋಡಿ ಇದು ದೀವಿಗೆಯ ಬೆಳಕಂತೂ ಅಲ್ಲವೆಂದು ವಿಚಾರ ಮಾಡುತ್ತಾನೆ ಮತ್ತು ಆ ಕಾಷ್ಠಾಂಗಾರನ ಮನೆಯ ಒಳಗೆ ಇಣಿಕಿ ನೋಡಿದ ಮೇಲೆ ಅಲ್ಲಿ ಚಿಂತಾಮಣಿ ರತ್ನವು ಕಂಡು ಬಂತು. ಆಗ ಆ ರತ್ನವ್ಯಾಪಾರಿಯು ಕಾಷ್ಠಾಂಗಾರನನ್ನು ಹೊರಗೆ ಕರೆದು ಚಿಂತಾಮಣಿ ರತ್ನದ ರಹಸ್ಯ ಮತ್ತು ಮಹತ್ವವನ್ನು ತಿಳಿಸಿ ಹೇಳುತ್ತ, ಎಲೈ ಮೂರ್ಖನೇ ! ನಿನ್ನ ಮನೆಯಲ್ಲಿ ಮನೋವಾಂಛಿತ ಸುಖಗಳನ್ನು ಕೊಡುವಂಥ ಚಿಂತಾಮಣಿ ರತ್ನವು ವಿದ್ಯಮಾನವಿದ್ದರೂ ನೀನು ಅಜ್ಞಾನತೆಯಿಂದ ಕಟ್ಟಿಗೆ ಹೊರೆಯ ಭಾರವನ್ನು ಹೊರುತ್ತಿರುವೆ, ದರಿದ್ರನಾಗಿ ಉಳಿದಿರುವೆ. ಈಗ ಇದರಲ್ಲಿ ಯಾಚನೆ ಮಾಡು, ಯಾವುದನ್ನು ಯಾಚನೆ ಮಾಡುವೆಯೋ ಅದು ನಿನಗೆ ದೊರಕುವುದು-ಎಂದು ಹೇಳುತ್ತಾನೆ. ಆಗ ಕಾಷ್ಠಾಂಗಾರನು ಎಲೈ ಚಿಂತಾಮಣಿ ರತ್ನವೇ ! ನನಗೆ ಪಾಯಸದ ಊಟವನ್ನು ಕೊಡು ಎಂದು ಕೇಳುತ್ತಾನೆ, ಕೂಡಲೇ ಪಾಯಸವು ದೊರಕುತ್ತದೆ. ನನಗೆ ಉತ್ತಮ ಪಂಚೆಯನ್ನು ಕೊಡು ಎಂದಾಗ, ಪಂಚೆಯು ದೊರಕುತ್ತದೆ. ಆ ಕಾಷ್ಠಾಂಗಾರನು ಮನೆ, ಧನ, ಆಭೂಷಣ, ವಸ್ತ್ರ ಮೊದಲಾಗಿ ಏನೇನು ಕೇಳುತ್ತಾನೆ, ಅದೆಲ್ಲವೂ ದೊರಕುತ್ತದೆ. ಆಗ ಕಾಷ್ಠಾಂಗಾರನು ತಾನಾಗಿಯೇ ಸೆಟ್ಟಿಯ ಚರಣಸ್ಪರ್ಶ ಮಾಡಿ ಉಪಕಾರ ಮನ್ನಿಸುತ್ತಾನೆ. ಅದರಿಂದ ಸೆಟ್ಟಿಯು ಕೂಡ ಪ್ರಸನ್ನನಾದನು.ಈ ಪ್ರಕಾರ ಆ ಸೆಟ್ಟಿಯು ಉಪಕಾರ ಮಾಡಿ ತನ್ನ ಮನೆಗೆ ಹೊರಟು ಹೋದನು.

ನಂತರ ಕಾಷ್ಟಾಂಗಾರನು ತನ್ನ ಅಜ್ಞಾನತೆಯು ತಿಳಿದು ಬಂದ ಮೇಲೆ ಪಶ್ಚಾತ್ತಾಪ ಪಡುತ್ತಾನೆ. ನನ್ನ ಮನೆಯಲ್ಲಿ ವಾಂಛಿತ ಸುಖ ಕೊಡುವಂಥ ರತ್ನವು ವಿದ್ಯಮಾನವಿತ್ತು ಮತ್ತು ನಾನು ದರಿದ್ರ ಜೀವನ ನಡೆಸುತ್ತಿದ್ದೆನು. ಈ ಶ್ರೀಮಂತ ಮಹಾಶಯರು ಧನ್ಯರಿದ್ದಾರೆ, ಅವರು ನನಗೆ ಈ ಚಿಂತಾಮಣಿಯ ರಹಸ್ಯ , ಮಹತ್ವ ತಿಳಿಸಿಕೊಟ್ಟರು. ಈಗ ನಾನು ಸುಖಿಯಾದೆನು. ದಾರಿದ್ರ್ಯದ ದುಃಖವು ನಾಶವಾಗಿ ಹೋಯಿತು. ಅದರ ನಂತರ ರಾತ್ರಿಯು ಕಳೆದು ಹೋದ ಮೇಲೆ ಪ್ರಭಾತ ಸಮಯದಲ್ಲಿ ಅವನು ದೊರೆಯ ಸಮಾನ ವೈಭವ ಪ್ರಕಟ ಮಾಡಿಕೊಂಡು ಲೋಕಪೂಜ್ಯನಾಗಿ ಹೋದನು. ಚಿಂತಾಮಣಿಯ ಪ್ರಭಾವದಿಂದ ಕಾಷ್ಠದ ಭಾರಹೊರುವುದರ ಸಮಾಪ್ತಿಯಾಗಿ ಪರಮಸುಖಿಯಾದನು.

ಇದೇ ಪ್ರಕಾರ ಆತ್ಮನು ಸ್ವಯಂ ಜ್ಞಾನಮಯನೇ ಇದ್ದಾನೆ; ಆದರೆ ರಹಸ್ಯ, ಮಹತ್ವವನ್ನು ತಿಳಿಯದೆ ಅಜ್ಞಾನಿಯಾಗುತ್ತ ಕಾಷ್ಠಾಂಗಾರನ ಹಾಗೆ ದರಿದ್ರನಾಗುತ್ತಿದ್ದಾನೆ. ಗುರುಗಳ ಪ್ರಸಾದದಿಂದ ಯಾವಾಗ ಜ್ಞಾನರೂಪದ ಚಿಂತಾಮಣಿಯ ರಹಸ್ಯ , ಮಹತ್ವವನ್ನು ತಿಳಿಯುತ್ತಾನೆ ಆಗ ಜಗತ್ತಿನ ದುಃಖವು ನಾಶವಾಗಿ ಸ್ವಯಂ ಸುಖಿಯಾಗುತ್ತಾನೆ. ಪೂಜ್ಯ ಪದವನ್ನು ಪ್ರಾಪ್ತ ಮಾಡಿಕೊಂಡ ಮೇಲೆ ಉಪಕಾರಿಯ ಸೇವೆ ಮಾಡುತ್ತಾನೆ. ಅದರಿಂದ ವಿವೇಕವಂತರಿಗಂತೂ ಒಳ್ಳೆಯ ಜ್ಞಾನ ಪಡೆದು ಅದನ್ನು ಧರ್ಮದಲ್ಲಿ ತೊಡಗಿಸಿ, ಧರ್ಮಸೇವನೆ, ಪೂಜೆ-ಭಕ್ತಿ , ಜೀವ-ಅಜೀವ ತತ್ತ್ವಗಳ ವಿಚಾರ ಮೊದಲಾದುವನ್ನು ಮಾಡುತ್ತ ಒಳ್ಳೆಯ ರಚನೆಗಳನ್ನು ಮಾಡಬೇಕಾಗುವುದು.

ಈ ಪ್ರಕಾರ ಸುದೃಷ್ಟಿತರಂಗಿಣಿಯೆಂಬ ಹೆಸರಿನ ಗ್ರಂಥದಲ್ಲಿ ಕಾವ್ಯ ಪರೀಕ್ಷೆಯ ವರ್ಣನೆ
ಮಾಡುವಂಥ ಇಪ್ಪತ್ತೆರಡನೆಯ ಪರ್ವವು ಪೂರ್ಣವಾಯಿತು.

★★★★★

## ೨೩ ಃ ಇಪ್ಪತ್ಮೂರನೆಯ ಪರ್ವ
## ಉಪದೇಶ - ಸಾಪೇಕ್ಷ ಕಥನ ವರ್ಣನೆ

ಈಗ ಪಂಚಮ ಕಾಲದ ಮಹಿಮೆ ಹೇಳುತ್ತಾರೆ-

**ಜಹಿ ಥತಿ ಅರಿ ಹಿತದೂರಲು, ತೀಥಥಾಣೇಯ ರಜಯ ವಿಣ ಖೇದೋ ।**

**ರಂಜಯ ತಹಾ ಣ ಸುಸಂಗೋ, ಏ ಕಲುಬಲ ಜ್ಞೇಯತಜ್ಞ ಸಮಭಾವೋ ॥೬೬॥**

**ಗಾಥಾರ್ಥ ಃ-** ಎಲ್ಲಿ ವಾಸ ಮಾಡುತ್ತೇವೆ ಅಲ್ಲಿಯೇ ವೈರಿಗಳು ದೊರಕುತ್ತಾರೆ, ಹಿತೈಷಿಗಳು ದೂರವಿದ್ದಾರೆ. ತೀರ್ಥಸ್ಥಾನಗಳು ಆಜೀವಿಕೆಯಿಂದ ರಹಿತ ಖೇದದ ಕಾರಣವಾಗಿ ಹೋಗುತ್ತವೆ. ಎಲ್ಲಿ ಆಜೀವಿಕೆಯಿದೆ ಅಲ್ಲಿ ಸುಸಂಗತಿಯಿರುವುದಿಲ್ಲ. ಇದು ಕಲಿಯುಗದ ಬಲವಿದೆ, ಮಾಹತ್ಮ್ಯವಿದೆ. ವಿದ್ವಾಂಸ-ಜ್ಞಾನೀ ಜನರಂತೂ ಇದೆಲ್ಲವನ್ನು ನೋಡಿ ಸಮತೆಯ ಭಾವವನ್ನಿಟ್ಟುಕೊಳ್ಳುತ್ತಾರೆ.

**ಭಾವಾರ್ಥ ಃ-** ತತ್ತ್ವಜ್ಞಾನಿಗಳಾದ ಧರ್ಮಾತ್ಮರು ಜಗತ್ತಿನ ವಿಡಂಬನೆಯನ್ನು ಕಂಡು, ಇದು ಪಂಚಮಕಾಲದ ಮಹಿಮೆಯಿದೆಯೆಂದು ವಿಚಾರ ಮಾಡುತ್ತಾರೆ. ಎಲ್ಲಿ ಯಾವಾಗಲೂ ಇರುತ್ತೇವೆ, ಯಾವ ಕ್ಷೇತ್ರದಲ್ಲಿ ಬಹುದಿನಗಳಿಂದ ವಾಸಿಸುತ್ತಿದ್ದೇವೆ, ಆ ಕ್ಷೇತ್ರದಲ್ಲಿ ನೋಡಲಾಗದಂಥ ಈರ್ಷಾ ಭಾವದ ಜನರು ಬಹಳಷ್ಟು ಇದ್ದಾರೆ. ಅವರು ನಮ್ಮ ಧರ್ಮ-ಕರ್ಮ, ಭೋಜನ ಪಾನಗಳನ್ನು ಸಹಿಸುವುದಿಲ್ಲ ಮತ್ತು ಎಲ್ಲ ಪ್ರಕಾರದಿಂದ ಸುಖದ ಕಾರಣಭೂತವಿರುವ ನಮ್ಮ ಸ್ನೇಹಿಗಳಲ್ಲಿ ತುಂಬ ಅಂತರವಿದೆ, ಆ ಸಜ್ಜನರು ತುಂಬಾದೂರದ ದೇಶದಲ್ಲಿರುತ್ತಾರೆ.

ಎಲ್ಲಿ ಇದ್ದುಕೊಂಡು ಸದಾ ಪುಣ್ಯದ ಬಂಧವಾಗುವುದು, ಸತ್ಸಂಗತಿ ಸಹಿತ ಜೀವರುಗಳ ಜೊತೆ ಪೂಜೆ, ಶಾಸ್ತ್ರಗಳ ಅಭ್ಯಾಸ, ಧ್ಯಾನ, ಚರ್ಚೆಗಳ ನಿಮಿತ್ತವು ಯಾವಾಗಲೂ ಉಳಿಯುವುದರಿಂದ ಅಲ್ಲಿ ಇರಬೇಕೆಂದು ಸದೈವ ಮನಸ್ಸು ಬಯಸುತ್ತದೆ; ಆದರೆ ಆ ತೀರ್ಥಸಮಾನ ಉಜ್ವಲ ಸ್ಥಾನಗಳಲ್ಲಿ ಆಜೀವಿಕೆಯ ಸಾಧನವು ಇಲ್ಲದಿರುವ ಕಾರಣ ಭೋಜನಾದಿಗಳ ಸ್ಥಿರತೆಯ ಹೊರತು ಇರುವುದಾಗುವುದಿಲ್ಲ. ಎಲ್ಲಿ ಆಜೀವಿಕೆಯು ಒಳ್ಳೆಯದಿರುವ ಕಾರಣ ಭೋಜನಾದಿಗಳ ಚಿಂತೆಯಿರುವುದಿಲ್ಲ; ಆ ಕ್ಷೇತ್ರದಲ್ಲಿ ಸತ್ಸಂಗತಿಯಿರುವುದಿಲ್ಲ, ತನ್ನ ಪರಭವ ಸುಧಾರಣೆಯ ಸಲುವಾಗಿ ಪುಣ್ಯದ ಕಾರಣಭೂತವಾದ ಧ್ಯಾನ, ಅಧ್ಯಯನ, ಪೂಜಾದಿಗಳ ನಿಮಿತ್ತವಿರುವುದಿಲ್ಲ. ಇದು ಪಂಚಮ ಕಾಲದ್ದೇ ಮಾಹಾತ್ಮ್ಯವಿದೆ.

ಈ ನಿಕೃಷ್ಟ ಕಾಲದಲ್ಲಿ ಒಳ್ಳೆಯ ವಸ್ತುಗಳ ಸಂಯೋಗವು ಕಡಿಮೆಯಿದೆ. ಪಾಪಕಾರಕ, ಕುಆಚಾರಿ, ಅಶುಭ ವಸ್ತುಗಳ ನಿಮಿತ್ತವು ಅಧಿಕವಿದೆ - ಹೀಗೆ ಇದರ ಸಹಜ ಸ್ವಭಾವವಿದೆ. ಶುಭ ನಿಮಿತ್ತಗಳ ಅಲ್ಪತೆ ಮತ್ತು ಅಶುಭ ನಿಮಿತ್ತಗಳ ಬಾಹುಳ್ಯತೆಮಯತೆಯು ಈ ಕಾಲದ ಸಹಜ ಪ್ರವೃತ್ತಿಯಿದೆ. ಇದನ್ನು ನಾಶ ಮಾಡುವ ಅಥವಾ ಬದಲಾವಣೆಯ ಯಾವ ಉಪಾಯವೂ ಇಲ್ಲ; ಭವಿತವ್ಯವನ್ನು ಯಾರೂ ಬದಲಿಸುವ ಸಾಧ್ಯತೆಯಿಲ್ಲ. ಯಾವ-ಯಾವ ಸಮಯದಲ್ಲಿ ಎಂಥೆಂಥ ಸುಖ-ದುಃಖಗಳಾಗುವವಿವೆ, ಅವು ಆಗಿಯೇ ಆಗುತ್ತವೆಯೆಂಬುದನ್ನು ತಿಳಿದುಕೊಂಡು ಧರ್ಮಾತ್ಮಾ ವಿವೇಕಿಗಳಿಗೆ ಸಮತೆಯಭಾವವನ್ನಿಟ್ಟುಕೊಂಡು ಧರ್ಮಧ್ಯಾನದ ಆಶ್ರಯ ತಗೆದುಕೊಳ್ಳುವುದು ಯೋಗ್ಯವಿದೆ.

ಈಗ ಶುದ್ಧಭಾವನೆಯಿಲ್ಲದೆ ಕ್ರಿಯೆಯ ಶುದ್ಧಫಲ ಸಿಗುವುದಿಲ್ಲವೆಂಬುದನ್ನು ದೃಷ್ಟಾಂತಕೊಟ್ಟು ಹೇಳುತ್ತಾರೆ,-

**ಸುಕಪಠತೀ ಬಕಝುಣಹೋ, ಖರಭಸಮೀ ಪಸುನಗಣ ತರುಕಟ್ಠೋ ।**

**ಉರಣ ಸಿರಕಚ ಮುಡಈ, ಭಾವೋ ಸುಧೀ ಬಿಣಾ ಣ ಸೀಝುಂತೀ ॥೬೭॥**

**ಗಾಥಾರ್ಥ ಃ-** ಗಿಳಿಯಪಾಠ, ಬಕಪಕ್ಷಿಯ ಧ್ಯಾನ, ಕತ್ತೆಯ ಬೂದಿ ಅಂಟಿಕೊಳ್ಳುವಿಕೆ, ಪಶುವಿನ ನಗ್ನವಿರುವಿಕೆ, ವೃಕ್ಷಗಳ ಕಷ್ಟಸಹಿಸುವಿಕೆ, ಕುರಿಯ ಕೂದಲ ಬೋಳಿಸುವಿಕೆ ಶುದ್ಧಭಾವವಿಲ್ಲದೆ ಇವೆಲ್ಲವುಗಳಿಂದ ಮೋಕ್ಷವಾಗುವುದಿಲ್ಲ.

**ಭಾವಾರ್ಥ :-** ಜೀವದ್ದು ಒಳಿತು ಅಥವಾ ಕೆಡಕು ಅದರದೇ ಪರಿಣಾಮಗಳಿಂದ ಆಗುತ್ತದೆ. ಎಂದರೆ ಬೇಕಾದಷ್ಟು ಶಾರೀರಿಕ ಕಷ್ಟ ಸಹಿಸಿದ ಮೇಲೆಯೂ ಶುದ್ಧಭಾವವಿಲ್ಲದೆ ಒಳ್ಳೆಯದಾಗುವುದಿಲ್ಲ. ಹೇಗೆಂದರೆ - ಹಗಲಿರುಳೂ 'ರಾಮ-ರಾಮ'ವೆಂದು ಹೇಳುತ್ತಿದ್ದರೂ ಗಿಳಿಗೆ ರಾಮನಾಮದೊಂದಿಗೆ ಸ್ವಲ್ಪವೂ ಪ್ರೀತಿಯಿರುವುದಿಲ್ಲ. ಅದಕ್ಕೆ ರಾಮನ ಹೆಸರು ಹೇಳುವುದರಿಂದ ತನ್ನ ಕಲ್ಯಾಣವಾಗುತ್ತದೆ; ಈ ರಾಮ ನಾಮವು ಉತ್ಕೃಷ್ಟವಿದೆ, ಇದನ್ನು ಹೇಳುವುದರಿಂದ, ಜಪಿಸುವುದರಿಂದ ಸುಖಿಯಾಗುತ್ತಾರೆ-ಎಂಬ ಯಾವ ತಿಳಿವಳಿಕೆಯಿಲ್ಲದ ಕಾರಣ ಅಂಥ ವಿಚಾರವು ಬರುವುದಿಲ್ಲ. ಹೇಗೆ ಕಲಿಸುವಂಥವನು ಕಲಿಸುತ್ತಾನೆ, ಹಾಗೆಯೇ ಅದು ಕಲಿತುಕೊಳ್ಳುತ್ತದೆ. ಅದರ ಭಾವಗಳಲ್ಲಿ ಶುದ್ಧತೆಯಿಲ್ಲ. ಭಾವಗಳ ಶುದ್ಧಿಯಿಲ್ಲದೆ ಫಲದಾಯಕವಾಗದಿರುವುದರಿಂದ ಗಿಳಿಯ ಕಲಿಯುವುದು -ಕಲಿಸುವುದು ವ್ಯರ್ಥವೇ ಇದೆ.

ಹೇಗೆ ಒಳ್ಳೆಯ ತಪಸ್ವಿಗಳು ಧ್ಯಾನ ಮಾಡುತ್ತಾರೆ; ಹಾಗೆಯೇ ನಾಸಾಗ್ರದೃಷ್ಟಿಯನ್ನಿಟ್ಟುಕೊಂಡು ಬಕಪಕ್ಷಿಯು ಕೂಡ ಜಲದಲ್ಲಿ ಮನಸ್ಸನ್ನು ಸ್ಥಿರಗೊಳಿಸಿ, ಶರೀರದ ಧ್ಯಾನಮುದ್ರೆಯನ್ನಾಗಿಸಿಕೊಂಡು ಧ್ಯಾನ ಮಾಡುತ್ತದೆ; ಆದರೆ ಪರಿಣಾಮವು ಮೀನುಗಳ ಘಾತದ್ದಿರುವುದರಿಂದ ಒಳ್ಳೆಯದಿಲ್ಲ. ಅದರಿಂದ ಪರಿಣಾಮಗಳ ಅನುಸಾರ ಅನಿಷ್ಟ ಫಲವೇ ದೊರಕುತ್ತದೆ. ಭಾವ ಶುದ್ಧಿಯಿಲ್ಲದೆ ಧ್ಯಾನದ ಆಕಾರದ್ದಾಗಲಿ, ಕಾಯದ ಒಳ್ಳೆಯ ಮುದ್ರೆಯನ್ನಿಡುವುದರಿಂದಾಗಲಿ ಒಳ್ಳೆಯ ಫಲವು ದೊರಕುವುದಿಲ್ಲ. ಎಂದರೆ ಶುದ್ಧಭಾವವಿಲ್ಲದ ಬಕಪಕ್ಷಿಯ ಧ್ಯಾನವು ವ್ಯರ್ಥವಿದೆ.

ಭಸ್ಮ, ಬೂದಿ ಹಚ್ಚಿಕೊಳ್ಳುವುದರಿಂದ ಒಳ್ಳೆಯದಾಗುತ್ತಿದ್ದರೆ ಗರ್ದಭ(ಕತ್ತೆ)ವು ಯಾವಾಗಲೂ ಬೂದಿಯಲ್ಲಿಯೇ ಹೊರಳಾಡುತ್ತಿರುತ್ತದೆ ಅದರದೂ ಒಳ್ಳೆಯದಾಗಬೇಕು. ಆದರೆ ಬೂದಿಹಚ್ಚಿಕೊಳ್ಳುವುದರಿಂದ ನನ್ನದು ಒಳ್ಳೆಯದಾಗುತ್ತದೆಯೆಂಬ ವಿಚಾರವು ಕತ್ತೆಗೆ ಇರುವುದಿಲ್ಲ. ಅದಂತೂ ಜ್ಞಾನವಿಲ್ಲದೆ, ಸಹಜವಾಗಿಯೇ ಮುಗ್ಧತೆಯ ಕಾರಣ ಬೂದಿಯಲ್ಲಿ ಹೊರಳಾಡಿ ತನ್ನ ಶರೀರದ ಶೋಭೆಯನ್ನು ನಾಶಮಾಡುತ್ತಿರುತ್ತದೆ. ಶರೀರದ ಮೇಲೆ ಬೂದಿ ಅಂಟಿಸಿಕೊಳ್ಳುವುದರಿಂದ ಪುಣ್ಯವಾಗುವುದಿಲ್ಲ. ಶುದ್ಧಭಾವವಿಲ್ಲದೆ ಬೂದಿ ಅಂಟಿಸಿಕೊಳ್ಳುವುದರಿಂದ ಮೋಕ್ಷವಾಗುವುದಿಲ್ಲ. ಒಂದುವೇಳೆ ಹಾಗೇನಾದರೂ ಭಾವಶುದ್ಧಿಯಿಲ್ಲದೆ ಮೋಕ್ಷವಾಗುತ್ತಿದ್ದರೆ ಕತ್ತೆಗೂ ಆಗಿ ಹೋಗುವುದು.

ಒಂದುವೇಳೆ ನಗ್ನ ಶರೀರದಿಂದ ಮೋಕ್ಷವಾಗುತ್ತಿದ್ದರೆ ಪಶುಗಳೆಲ್ಲವೂ ನಗ್ನವಿರುವ ಕಾರಣ ಮುಕ್ತವಾಗಿ ಹೋಗುತ್ತಿದ್ದವು. ಅದರಿಂದ ಶುದ್ಧಭಾವವಿಲ್ಲದೆ ನಗ್ನವಾಗಿರುವುದು, ಅದು ಪಶುವಿನ ಸಮಾನ ಕಷ್ಟ ಸಹಿಸುವುದಿದೆ. ಅತ್ಯಧಿಕ ಕಷ್ಟಗಳ ಸಹನೆ ಮಾಡುವುದರಿಂದ ಮೋಕ್ಷವಾಗುತ್ತಿದ್ದರೆ ವೃಕ್ಷಗಳಿಗೂ ಆಗಿ ಹೋಗುವುದು. ವೃಕ್ಷಗಳು ಶೀತಕಾಲದಲ್ಲಿ ನಾಲ್ಕು ತಿಂಗಳು ಶೀತವನ್ನು ಸಹಿಸುತ್ತವೆ, ಗ್ರೀಷ್ಮಕಾಲದ ನಾಲ್ಕು ತಿಂಗಳು ಸೂರ್ಯನ ಆತಾಪ(ಬೇಗೆ) ಸಹಿಸುತ್ತವೆ. ಮಳೆಗಾಲದ ನಾಲ್ಕು ತಿಂಗಳು ಶರೀರದ ಮೇಲೆ ಮಳೆಯ ನೀರನ್ನು ಸಹಿಸುತ್ತವೆ. -ಈ ಪ್ರಕಾರ ಮೂರು ಋತುಗಳ ಸಂಬಂಧದ ಮಹಾಕಷ್ಟವನ್ನು ಶುದ್ಧಭಾವವಿಲ್ಲದೆಯೇ ಸಹಿಸುತ್ತವೆ. ಶುದ್ಧ ಭಾವವಿಲ್ಲದೆ ಕೇವಲ ಕಷ್ಟ ಸಹಿಸುವುದರಿಂದಲೇ ಕಲ್ಯಾಣವಾಗಿ ಹೋಗುತ್ತಿದ್ದರೆ ವೃಕ್ಷಗಳದೂ ಆಗಿ ಹೋಗುತ್ತದೆಯೆಂದು ತಿಳಿಯುವುದು.

ಶುದ್ಧಭಾವವಿಲ್ಲದೆ ತಲೆ ಬೋಳಿಸಿಕೊಳ್ಳುವುದು, ಕೇವಲ ತಲೆಯ ಮೇಲಿನ ಕೂದಲನ್ನು ತಗೆಯುವುದರಿಂದ ಒಳ್ಳೆಯದಾಗುತ್ತಿದ್ದರೆ, ಕುರಿಗಳದೂ ಆಗುತ್ತಿತ್ತು . ಕುರಿಗಳ ಕೂದಲನ್ನು ಒಂದು ವರ್ಷದಲ್ಲಿ ಅನೇಕ ಬಾರಿ ತಗೆಯುತ್ತಾರೆ. ಭಾವ ಶುದ್ಧಿಯಿಲ್ಲದೆ ತಲೆ ಬೋಳಿಸಿಕೊಳ್ಳುವುದು - ಕೇಶಲೋಂಚ ಮಾಡುವುದು ಕುರಿಯ ಮುಂಡನದ ಸಮಾನವಿದೆ.

ಭಾವಗಳ ಶುದ್ಧತೆಯಿಲ್ಲದೆ ಶಾಸ್ತ್ರಾದಿಗಳ ವಾಚನವು, ಗಿಳಿಪಾಠದ ಹಾಗಿದೆ. ಶುದ್ಧಭಾವವಿಲ್ಲದೆ ಧ್ಯಾನವು ಬಕಪಕ್ಷಿಯ ಸಮಾನವಿದೆ. ಶುದ್ಧಭಾವವಿಲ್ಲದೆ ಬೂದಿ ಬಳಿದುಕೊಳ್ಳುವುದು ಗರ್ದಭದ ಸಮಾನವಿದೆ. ಶುದ್ಧಭಾವವಿಲ್ಲದೆ ನಗ್ನವಾಗಿರುವುದು, ಪಶು ಸಮಾನವಿದೆ. ಶುದ್ಧಭಾವವಿಲ್ಲದೆ ಶರೀರದಿಂದ ಮೂರು ಋತುಗಳ ಕಷ್ಟ ಸಹಿಸುವುದು, ವೃಕ್ಷದ ಸಮಾನವಿದೆ. ಶುದ್ಧಭಾವವಿಲ್ಲದೆ ತಲೆ ಬೋಳಿಸುವುದು ಕುರಿಯ ಸಮಾನವಿದೆ. ಎಲೈ ಭವ್ಯನೇ ! ಮೋಕ್ಷದ

ಕಾರಣವು ಒಂದು ಶುದ್ಧಭಾವವಿದೆ. ಆದುದರಿಂದ ವಿವೇಕವಂತರು ರಾಗ-ದ್ವೇಷಗಳನ್ನು ನಷ್ಟ ಮಾಡಿ ತಮ್ಮ ಹಿತದ ಸಲುವಾಗಿ ಪರಭವ ಸುಧಾರಣೆಯ ಸಲುವಾಗಿ ಭಾವಗಳ ಶುದ್ಧತೆ ಮಾಡಿಕೊಳ್ಳಬೇಕು.

**ಸಂದೇಹ :-** ಶುದ್ಧಭಾವವಿಲ್ಲದೆ ತಪ, ಸಂಯಮ, ಪಠನ, ಪಾಠನ ಮೊದಲಾದ ಧರ್ಮದ ಫಲವು ಅಲ್ಪವಿರುತ್ತದೆ ಅಥವಾ ಇರುವುದೇ ಇಲ್ಲವೆಂದು ತಾವು ಹೇಳುತ್ತಿರುವಿರಿ. ಶುದ್ಧಭಾವವಿಲ್ಲದೆ ಸ್ವಾಧ್ಯಾಯ, ಶಾಸ್ತ್ರೋಪದೇಶ ಮಾಡುವುದು, ಶಾಸ್ತ್ರಶ್ರವಣ ಮಾಡುವುದು, ಧ್ಯಾನ ಮಾಡುವುದು, ಸಾಮಾಯಿಕ ಮಾಡುವುದು ಇತ್ಯಾದಿ ಧರ್ಮದ ಅಂಗಗಳ ಸೇವನೆ ಮಾಡುವಂಥ ಜೀವರುಗಳಲ್ಲಿ ಧರ್ಮದ ಸೇವನೆ ಮಾಡುತ್ತ ಶುದ್ಧಭಾವ ಸಹಿತವಾಗಿರುವವರಂತೂ ಯಾರೂ ಕಂಡು ಬರುವುದಿಲ್ಲ. ಅನೇಕರಿಗೆ ಆರ್ತ-ರೌದ್ರಧ್ಯಾನವಾಗುತ್ತದೆ, ಶುಭಭಾವವುಳ್ಳವರು ಅಲ್ಪರಿದ್ದಾರೆ. ಧರ್ಮದ ಬೇರೆ ಅಂಗಗಳ ಸೇವನೆ ಮಾಡುವಂಥ ಜೀವರುಗಳಲ್ಲಿಯೂ ಶುಭಭಾವಗಳು ತೀರ ಕಡಿಮೆ ಕಂಡು ಬರುತ್ತವೆ; ಹಾಗಾದರೆ ಇವರಿಗೆ ಧರ್ಮ ಸೇವನೆಯ ಫಲವು ಶುಭ(ಭಾವ)ವು ಆಗುವುದೋ ಅಥವಾ ಆಗುವುದಿಲ್ಲ ?

**ಸಮಾಧಾನ :-** ಎಲೈ ಭವ್ಯನೇ ! ನೀನು ಮಹಾ ಮನೋಜ್ಞ ಪ್ರಶ್ನೆ ಮಾಡಿರುವೆ. ಸತ್ಪುರುಷರಿಗೆ ಸುಖವನ್ನುಂಟು ಮಾಡುವ ಅನೇಕ ಜೀವರುಗಳ ಸಂಶಯದ ನಿವಾರಣೆ ಮಾಡುವಂಥ ಭಾವದಿಂದ ಕೂಡಿದ ಪ್ರಶ್ನೆಯು ನಿನ್ನದಿದೆ. ಅದಕ್ಕಾಗಿ ಈಗ ಸ್ಥಿರಚಿತ್ತದಿಂದ ಉತ್ತರವನ್ನಾಲಿಸು !! ಈ ಉತ್ತರದಿಂದ ಅಸಾಧಾರಣ ಧರ್ಮದ ಅಂಗಗಳಲ್ಲಿ ವಿಶೇಷ ಪ್ರೀತಿಯು ಉತ್ಪನ್ನವಾಗುವುದು.

ಧರ್ಮದ ಸೇವನೆ ಮಾಡುವಂಥ ಜೀವರುಗಳ ಅಭಿಪ್ರಾಯವು - ೧. ಧರ್ಮಫಲದ ಸಲುವಾಗಿ ಸೇವನೆ ಮಾಡುವುದು, ೨. ಕಷಾಯ ಪೋಷಣೆಯ ಸಲುವಾಗಿ ಧರ್ಮದ ಸೇವನೆ ಮಾಡುವುದು - ಹೀಗೆ ಎರಡು ಪ್ರಕಾರದ್ದಿದೆ.

೧. ಯಾವ ಭವ್ಯಾತ್ಮನು ಪರಭವದ ಕಲ್ಯಾಣದ ಸಲುವಾಗಿ ಧರ್ಮವನ್ನು ಮಹಾನವೆಂದರಿತು ಧರ್ಮಫಲದ ಲೋಭಿಯಾಗಿ ಶುಭಭಾವಪೂರ್ವಕ ದಾನ, ಪೂಜೆ, ತಪ, ಧ್ಯಾನ, ಶೀಲಾದಿಗಳ ಪಾಲನೆಯನ್ನು ಮಾಡುತ್ತಾನೆ. ಕರ್ಮಾದಿಗಳ ಯೋಗವಶ ಯಾವುದೋ ಕಾರಣದಿಂದ ಭಾವ ಚಂಚಲವಾಗಿ ಹೋದರೂ, ಅರತಿಯು ಉತ್ಪನ್ನವಾಗಿ ಹೋದರೂ ಆತನ ಶುಭಫಲವು ನಷ್ಟವಾಗಿ ಹೋಗುವುದಿಲ್ಲ. ಹೇಗೆಂದರೆ - ಯಾವನೋ ಭವ್ಯಾತ್ಮನು ಸಾಮಾಯಿಕ ಮಾಡುವ ಸಲುವಾಗಿ ಪದ್ಮಾಸನ ಅಥವಾ ಕಾಯೋತ್ಸರ್ಗ (ಖಡ್ಗಾಸನ)ರೂಪ ಕಾಯದ ಅವಸ್ಥೆಯೊಂದಿಗೆ, ಚಿತ್ತವನ್ನು ಶುಚಿಗೊಳಿಸಿ ಸಾಮಾಯಿಕ ಮಾಡುತ್ತಿದ್ದನು. ಸಾಮಾಯಿಕದ ಸಲುವಾಗಿ ಕುಳಿತುಕೊಳ್ಳುವ ಸಮಯದಲ್ಲಂತೂ ಅವನ ಅಭಿಪ್ರಾಯವು ಒಳ್ಳೆಯದಿತ್ತು; ಮನ, ವಚನ, ಕಾಯದ ಪ್ರವೃತ್ತಿಯೂ ಒಳ್ಳೆಯದಿತ್ತು ನಂತರ ಕರ್ಮಯೋಗವಶ ರಾಗಭಾವಗಳ ಪ್ರಬಲತೆಯಿಂದ ಪರಿಣಾಮವು ಯಾವುದೋ ಅನ್ಯವಿಕಲ್ಪರೂಪ, ಕಷಾಯರೂಪವಾಗಲಾರಂಭಿಸಿತು; ಆದರೆ ಕಾಯವು ಸಾಮಾಯಿಕ ರೂಪವಿದೆ, ಕರ್ಮದ ತೀವ್ರ ಉದಯದಿಂದ ಪರಿಣತಿಯು ಅವನ ಕೈತಪ್ಪಿ ಹೋದರೂ ಅಭಿಪ್ರಾಯದಲ್ಲಿ ಇನ್ನೂ ಸಾಮಾಯಿಕ ಮಾಡುವುದೇ ಇದೆ. ಇಂಥ ಧರ್ಮಾತ್ಮನ ಸಾಮಾಯಿಕ ಸಂಬಂಧದ ಫಲವು ನಷ್ಟವಾಗುವುದಿಲ್ಲ.

ಹೇಗೆಂದರೆ - ಯಾವನೋ ಸಾಮಾಯಿಕ ಮಾಡುವಂಥ ಭವ್ಯಜೀವನು ಸಾಮಾಯಿಕದ ಸಮಯದಲ್ಲಿ ಮನೆಯ ವಿವಿಧ ಕಾರ್ಯಗಳನ್ನು ಬಿಟ್ಟುಕೊಟ್ಟು, ಧರ್ಮಬುದ್ಧಿಯಿಂದ ಪ್ರೇರಿತನಾಗಿ, ಮನೆಯಲ್ಲಿ - ಧರ್ಮಸ್ಥಾನದಲ್ಲಿ ಹೋಗಿ ಕುಳಿತು, ಶರೀರದ ಶುದ್ಧಿಯೊಂದಿಗೆ, ಅಲ್ಪ ಪರಿಗ್ರಹವನ್ನಿಟ್ಟುಕೊಂಡು, ಕಾಯೋತ್ಸರ್ಗ ಅಥವಾ ಪದ್ಮಾಸನ ಧ್ಯಾನ ಧರಿಸಿ, ಪಂಚ ಪರಮೇಷ್ಠೀ ಗುಣಗಳ ವಿಚಾರ ಮಾಡಿ, ತನ್ನಿಂದ ಮಾಡಲಾದ ಪಾಪಗಳ ಸ್ಮರಣೆ ಮಾಡುತ್ತ, ತನ್ನ ನಿಂದೆ-ಆಲೋಚನೆಯನ್ನು ಪುನಃ-ಪುನಃ ಮಾಡಿ, ಸಮಸ್ತ ಜೀವಗಳ ಕುರಿತಾಗಿ ಸಮತೆಯ ಭಾವ ಧಾರಣ ಮಾಡಿ, ವಿಚಾರ ಮಾಡುತ್ತಾನೆ - ಆ ಮುನಿರಾಜರು ಹಾಗೂ ಉತ್ತಮ ಶ್ರಾವಕರು ಧನ್ಯರಿದ್ದಾರೆ! ಅವರು ಸರ್ವ

ಆರಂಭರೂಪ ಪಾಪದಿಂದ ನಿವೃತ್ತರಾಗಿ ಸುಖ ಭೋಗಿಸುತ್ತಾರೆ. ನನ್ನ ಅವಸ್ಥೆಯು ಯಾವಾಗ ಹಾಗಾಗುವುದು ? - ಈ ಪ್ರಕಾರ ತಪದ ಭಾವನೆ ಭಾವಿಸುತ್ತ ಸಾಮಾಯಿಕ ಮಾಡುತ್ತಿದ್ದಾನೆ.

ಅಷ್ಟರಲ್ಲಿ ಒಂದು ಚಿಂತೆಯ ಮಾತು ಸ್ಮರಣೆಗೆ ಬರುತ್ತದೆ-ಒಂದು ಸಾವಿರ ವರಹಗಳ ಚೀಲವನ್ನು ಆ ಅಂಗಡಿಯವನ ಹತ್ತಿರ ಮರೆತು ಬಂದಿದ್ದೇನೆ; ಈ ಸ್ಮರಣೆಯಿಂದಲೇ ಮನಸ್ಸು ಚಂಚಲವಾಗಿ ಹೋಯಿತು. ಆರ್ತಭಾವದ ಜಾಲದಲ್ಲಿ ಸಿಲುಕಿಕೊಂಡನು. ಸಾಮಾಯಿಕದಲ್ಲಿ ಮನಸ್ಸು ತೊಡಗುತ್ತಿಲ್ಲ. ಆಗ ಆ ಧರ್ಮಾತ್ಮನು ಎರಡು ಗಳಿಗೆ (೪೮ ನಿಮಿಷ) ಮರ್ಯಾದೆ ಮಾಡಿಕೊಂಡು ಸಾಮಾಯಿಕಕ್ಕೆ ಕುಳಿತಿದ್ದೇನೆ. ಈಗ ಹೇಗೆ ಏಳುವುದು? ನನ್ನ ಭಾಗ್ಯದಲ್ಲಿ ಇದ್ದರೆ ಅದು ಎಲ್ಲಿ ಹೋಗುವುದು ? ಮತ್ತು ಒಂದುವೇಳೆ ನನ್ನ ಭಾಗ್ಯದಲ್ಲಿ ಇಲ್ಲದಿದ್ದರೆ ಪ್ರಗಟ ಸ್ಥಾನದೊಳಗೆ ಇಲ್ಲಿಯವರೆಗೆ ಹೇಗೆ ಉಳಿಯುವ ಸಾಧ್ಯತೆಯಿದೆ ? ನಾನು ಈಗ ಲೋಭವಶನಾಗಿ ಎದ್ದು ಬಿಟ್ಟರೆ ನನ್ನ ಪ್ರತಿಜ್ಞೆಯು ಭಂಗವಾಗುವುದು, ಪ್ರತಿಜ್ಞೆಯ ಭಂಗವಾಗಿ ಹೋದರೆ ನನ್ನ ಪರಭವವು ಕೆಟ್ಟುಹೋಗುವುದು, ಕಾಯದ ಧರ್ಮವು ನಷ್ಟವಾಗುವುದು. ಭವಿತವ್ಯವಂತೂ ಹೇಗಿದೆಯೋ ಹಾಗೇ ಇದೆ. ಅದರಿಂದ ನಾನು ಎರಡು ಗಳಿಗೆಯವರೆಗಂತೂ ಏಳುವುದಿಲ್ಲ. ಪ್ರತಿಜ್ಞೆಯು ಪೂರ್ಣವಾದ ಮೇಲೆ ಹೇಗೆ ಆಗುವುದಿದೆಯೋ, ಹಾಗೆ ಆಗುವುದು. - ಹೀಗೆ ವಿಚಾರ ಮಾಡಿ ಶರೀರವನ್ನು ಸ್ಥಿರಗೊಳಿಸಿ ಕುಳಿತಿದ್ದಾನೆ. ವಂದನೆ ಆಲೋಚನೆ, ಸಾಮಾಯಿಕ ಪಾಠ ಓದುವುದು ಇತ್ಯಾದಿ ಸಾಮಾಯಿಕದ ಸಂಪೂರ್ಣ ಕ್ರಿಯೆ ಮಾಡುತ್ತಾನೆ. ಆದರೆ ಮನಸ್ಸು ಚಂಚಲವಿರುವುದರಿಂದ ಸಾಮಾಯಿಕದಲ್ಲಿ ಅದು ತೊಡಗುವುದಿಲ್ಲ; ಆದಾಗ್ಯೂ ಆ ಧರ್ಮಾತ್ಮನ ಧರ್ಮ ಫಲವು ನಷ್ಟವಾಗುವುದಿಲ್ಲ.

ಒಂದುವೇಳೆ ಅವನೇನಾದರೂ ಚಿನ್ನದ ವರಹಗಳ ಲೋಭದಿಂದ ಸಾಮಾಯಿಕ ಬಿಟ್ಟು ಎದ್ದು ಹೋಗುತ್ತಿದ್ದರೆ ಪಾಪ ಬಂಧವಾಗುತ್ತಿತ್ತು, ಧರ್ಮಕ್ರಿಯೆ ನಷ್ಟವಾಗುತ್ತಿತ್ತು. ಆ ಧರ್ಮಾತ್ಮನು ತನ್ನ ಪ್ರತಿಜ್ಞೆಯನ್ನು ಬಿಟ್ಟು ಏಳಲಿಲ್ಲ. ಆದುದರಿಂದ ಪರಿಣತಿಯು ಬೇಕಾದರೆ ಚಂಚಲವಾದರೂ ಧರ್ಮಾತ್ಮನ ಅಭಿಪ್ರಾಯವು ಬದಲಾಗಲಿಲ್ಲ. ಅಭಿಪ್ರಾಯವು ಶುಭ ಮತ್ತು ಸ್ಥಿರವಿರದಿದ್ದರೆ ಅವನು ಸಾಮಾಯಿಕ ಬಿಟ್ಟು ಹೋಗುತ್ತಿದ್ದನು. ಅಭಿಪ್ರಾಯವು ಶುದ್ಧವಿರುವುದರಿಂದ ತತ್ತ್ವಶ್ರದ್ಧೆಯು ದೃಢತೆಯಿಂದ ಯುಕ್ತವಿದೆ. ಅದರಿಂದ ಇಂಥ ಧರ್ಮಾತ್ಮನೂ ಉತ್ತಮನೇ ಇದ್ದಾನೆ. ಶ್ರದ್ಧೆಯ ದೃಢತೆ ಮತ್ತು ಪರಿಣತಿಯ ಅರತಿ ಭಾವವನ್ನು ಇದೇ ಪ್ರಕಾರದಿಂದ ಧರ್ಮದ ಎಲ್ಲ ಅಂಗಗಳಲ್ಲಿ ಹೊಂದಿಸುವುದು. ಇಂಥ ಧರ್ಮಾತ್ಮನಿಗೆ ಇಂಥ ವಿಕಲ್ಪವಾದ ಮೇಲೆಯೂ ಧರ್ಮನಷ್ಟವಾಗುವುದಿಲ್ಲವೆಂದು ತಿಳಿಯುವುದು.

೨. ಇನ್ನೊಬ್ಬನು ಲೋಭದ ಕಾರಣ ಚೋರಿಯ ಅಭಿಪ್ರಾಯದಿಂದ ಧರ್ಮದ ಸೋಗು ಧಾರಣ ಮಾಡಿ ತಪ, ಸಂಯಮ, ಧ್ಯಾನ, ಜಿನವಾಣಿಯ ಪಠನಾದಿ ಧರ್ಮದ ಅಂಗಗಳನ್ನು ಪಾಲಿಸುತ್ತಾನೆ. ಹೇಗೆ ರುದ್ರದತ್ತ ಕಳ್ಳನು ಲೋಭದ ವಶೀಭೂತನಾಗಿ ಜಿನಮಂದಿರದ ವಸ್ತುಗಳನ್ನು ಕದಿಯುವ ಸಲುವಾಗಿ ಧರ್ಮಾತ್ಮಾ ಬ್ರಹ್ಮಚಾರಿಯ ವೇಷಧಾರಣ ಮಾಡಿ ವಿವಿಧ ತಪ, ಸಂಯಮ ಒಳ್ಳೊಳ್ಳೆಯ ಪಾಠಗಳ ಪಠಣ ಮಾಡುತ್ತ ಶ್ರೇಷ್ಠಿಯ ಮನೆಗೆ ಬಂದು ಧರ್ಮಾತ್ಮನಾಗಿ ಜಿನಮಂದಿರದಲ್ಲಿ ಇರತೊಡಗಿದನು. ನಂತರ ಸಮಯ ಸಾಧಿಸಿ ಜಿನಮಂದಿರದ ಚಾಮರ, ಮುಕ್ಕೊಡೆ, ಕಲಶ ಮೊದಲಾದುವನ್ನು ಕದ್ದುಕೊಂಡನು. ಕೆಟ್ಟ ಅಭಿಪ್ರಾಯದಿಂದ ಧರ್ಮಸೇವನೆ ಮಾಡಿರುವುದರಿಂದ ಅವನಿಗೆ ಧರ್ಮದ ಫಲವಂತೂ ದೊರಕಲಿಲ್ಲ; ಪ್ರತಿಯಾಗಿ ದುರಭಿಪ್ರಾಯದ ಕಾರಣ ಸತ್ತು ನರಕದೊಳಗೆ ಹೋದನು.

ಈ ಪ್ರಕಾರ ಇಲ್ಲಿ ಧರ್ಮಸೇವನೆ ಮಾಡುವಂಥವರ ಎರಡು ಭೇದ ಹೇಳಿದೆ, ಅವನ್ನು ತಿಳಿಯುವುದು. ಧರ್ಮದ ಸೇವನೆಯಲ್ಲಿ ಯಾರ ಅಭಿಪ್ರಾಯವು ಧರ್ಮರೂಪವಿರುತ್ತದೆ, ಅವರಿಗೆ ಪುಣ್ಯಫಲ ಸಿಗುತ್ತದೆ. ಧರ್ಮ ಸೇವನೆಯಲ್ಲಿ ಯಾರ ಅಭಿಪ್ರಾಯವು ಒಳ್ಳೆಯದಿರುವುದಿಲ್ಲ, ಅವರಿಗೆ ಪಾಪಬಂಧವಾಗುತ್ತದೆ. ಎಂದರೆ ಶುದ್ಧಭಾವದ ಅಭಿಪ್ರಾಯವಿಲ್ಲದೆ ಮಾಡಲಾದ ಧರ್ಮ ಸೇವನೆಯು ಗಿಳಿ-ಬಕಪಕ್ಷಿಯ ಸಮಾನವೆಂದು ತಿಳಿಯುವುದು.

ಯಾವ ಜೀವರುಗಳು ಶುದ್ಧಭಾವವಿಲ್ಲದೆ ಕೇವಲ ಲೋಕದಲ್ಲಿ ತೋರಿಕೆಯ ಸಲುವಾಗಿ ಧರ್ಮದ ಸಾಧನೆ

ಮಾಡುತ್ತಾರೆ ಅವರು ಧರ್ಮಫಲದ ಅಭಿಲಾಷಿಗಳಿಲ್ಲ. ಧರ್ಮಸೇವನೆ ಸಂಬಂಧದ ಅವರ ಕಷ್ಟಗಳು ವ್ಯರ್ಥವೇ ಇವೆಯೆಂದು ತಿಳಿಯುವುದು. ಹೇಗೆಂದರೆ ಯಾವನೋ ಶ್ರೀಮಂತನು ಮಂದಿರ ಕಟ್ಟಿಸುತ್ತಿದ್ದನು, ಅದರಲ್ಲಿ ಅನೇಕ ಕೂಲಿ ಕೆಲಸದವರು ಕೆಲಸ ಮಾಡುತ್ತಿದ್ದರು. ಅವರು ಕೆಲಸ ಮಾಡುತ್ತಿರುವುದನ್ನು ನೋಡಿ ಒಬ್ಬ ಅಜ್ಞಾನಿ ಹುಚ್ಚನು ಯಾರಿಗೂ ಕೇಳದೆ - ಹೇಳದೆ ತಾನೇ ತನ್ನ ಇಚ್ಛೆಯಿಂದ ಕೆಲಸ ಮಾಡತೊಡಗಿದನು ಆ ಹುಚ್ಚನು ಇತರರಿಗಿಂತ ಅಧಿಕ ಭಾರ ಹೊರುತ್ತಿದ್ದನು. ಕೂಲಿಯವರು ಅಲ್ಲಿ ಐದು ಕೆ.ಜಿ.ಯ ಭಾರ ಹೊತ್ತರೆ ಆ ಹುಚ್ಚನು ಐವತ್ತು ಕೆ.ಜಿ.ಯ ಪಾಷಾಣವನ್ನು ಎತ್ತಿ ತರುತ್ತಿದ್ದನು. ಕೂಲಿಯವರು ಒಂದು ಕಲ್ಲನ್ನು ತರುವಷ್ಟರಲ್ಲಿ ಅವನು ಹತ್ತು ಕಲ್ಲು (ಪಾಷಾಣ)ಗಳನ್ನು ತರುತ್ತಿದ್ದನು. ಆತನ ಕೆಲಸವನ್ನು ನೋಡಿ ಅಜ್ಞಾನಿಗಳು ವಿಚಾರ ಮಾಡುತ್ತಾರೆ - ಇವನು ಬಹಳ ಕೆಲಸ ಮಾಡುತ್ತಾನೆ ಇವನಿಗೆ ಹಣವು ಬಹಳಷ್ಟು ದೊರಕುತ್ತಿರಬಹುದು. ಈ ಪ್ರಕಾರ ದಿನವಿಡಿ ಕೆಲಸ ಮಾಡಿದನು. ಸಾಯಂಕಾಲ ಕೆಲಸಗಾರರು ಕೆಲಸವು ಮುಗಿದ ಮೇಲೆ, ಅಲ್ಲಿ ಯಾರು-ಯಾರರ ಹೆಸರು ಬರೆಯಲಾಗಿತ್ತು, ಅವರೆಲ್ಲರಿಗೆ ದಿನದ ಸಂಬಳ(ಹಣ)ವು ದೊರಕಿತು; ಎಲ್ಲರೂ ತಮ್ಮ ಮನೆಗಳಿಗೆ ತೆರಳಿ ಸುಖಿಯಾದರು. ಆದರೆ ಯಾವಾಗ ಆ ಹುಚ್ಚನು ತನ್ನ ಪಾಲಿನ ಹಣ ಕೇಳುತ್ತಾನೆ ಆಗ ಗುತ್ತಿಗೆದಾರನು ಹೆಸರು ನೊಂದಾಯಿಸಿದವರ ಚೀಟಿಯನ್ನು ತಗೆದು ನೋಡುತ್ತಾನೆ. ಅದರಲ್ಲಿ ಇವನ ಹೆಸರು ಇಲ್ಲದುದನ್ನು ಕಂಡು, ನೀನು ಯಾವಾಗ ಕೆಲಸಕ್ಕೆ ಬಂದಿದ್ದೆ ? - ಎಂದು ಕೇಳುತ್ತಾನೆ. ನನ್ನ ಮನಸ್ಸಿನಲ್ಲಿ ಈ ಕೆಲಸ ಮಾಡಬೇಕೆಂದು ಯಾವಾಗ ಅನ್ನಿಸಿತು ಆಗ ಬಂದೆನು - ಎಂದು ಹೇಳುತ್ತಾನೆ. ನಿನ್ನನ್ನು ಈ ಕೆಲಸಕ್ಕೆ ಯಾರು ಹಚ್ಚಿದರು ?-ಎಂದಾಗ, ನಾನು ಸ್ವಯಂ ನನ್ನ ಇಚ್ಛೆಯಿಂದ ಕೆಲಸ ಮಾಡಲಾರಂಭಿಸಿದೆನು-ಎನ್ನುತ್ತಾನೆ. ಆಗ ಇವನು ಕೂಲಿ ಕೆಲಸದವನಲ್ಲ; ಹುಚ್ಚನಿದ್ದಾನೆಂದು ಎಲ್ಲರೂ ತಿಳಿಯುತ್ತಾರೆ. ಅದರಿಂದ ಹೊಡೆದು ಹೊರಗೆ ಹಾಕುತ್ತಾರೆ. ಹಣವಂತೂ ಸಿಗಲಿಲ್ಲ. ಹೊಡೆತ ತಿರಸ್ಕಾರ ಸಿಕ್ಕಿತು. ಎಲ್ಲರೂ ಹುಚ್ಚನೆಂದು ತಿಳಿದರು, ಪರಿಶ್ರಮವೂ ವ್ಯರ್ಥವಾಯಿತು. ಏಕೆ ವ್ಯರ್ಥವಾಯಿತು ? ಅದನ್ನೇ ಹೇಳುತ್ತಾರೆ.

ಆ ಹುಚ್ಚನು ಯಾರ ಸೇವಕನಾಗದೆ, ಯಾರ ಆಧೀನವಾಗದೆ ತನ್ನ ಇಚ್ಛೆಯ ಅನುಸಾರ ಕೆಲಸ ಮಾಡುತ್ತ ಉಳಿದನು. ಆ ಮೂಢನಿಗೆ ತಾನು ಯಾರದೋ ಸೇವಕನಾಗಿ, ಅವರಿಗೆ ಹೇಳಿ ಕೆಲಸ ಮಾಡಬೇಕೆನ್ನುವ ವಿವೇಕವು ಕೂಡ ಇಲ್ಲ. ಒಡೆಯನ ಆಜ್ಞೆ ಮನ್ನಿಸದೇ ತನ್ನ ಇಚ್ಛೆಯ ಅನುಸಾರ ಪ್ರವೃತ್ತಿ ಮಾಡುತ್ತಾನೆ; ಅದರಿಂದ ಮಜೂರಿ ದೊರಕಲಿಲ್ಲ, ಪರಿಶ್ರಮವು ವ್ಯರ್ಥವಾಯಿತು.

ಅದೇ ಪ್ರಕಾರ ಈ ಜೀವನು ಒಂದು ಶುದ್ಧ ಧರ್ಮದ ಪರೀಕ್ಷೆ ಮಾಡಿ ಅದನ್ನು ಕಲ್ಯಾಣಕಾರಿಯೆಂದು ತಿಳಿದು ಒಂದುವೇಳೆ ಅದರ ಆಜ್ಞೆಯ ಅನುಸಾರ ಧರ್ಮದ ಸೇವನೆ ಮಾಡಿದರೆ - ಧರ್ಮದ ಅಂಗಗಳಾದ ದಾನ, ಪೂಜೆ, ತಪಸ್ಸಾದಿಗಳನ್ನು ಮಾಡಿದರೆ ಧರ್ಮದ ಫಲವು ದೊರಕುತ್ತದೆ; ಆದರೆ ಧರ್ಮದ ಅನೇಕ ಸೋಗುಗಳನ್ನು ಧಾರಣ ಮಾಡಿದ ಮೇಲೆಯೂ ಯಾವುದೇ ಆಜ್ಞೆಯರೂಪ ಪ್ರವೃತ್ತಿ ಮಾಡದೆ, ಸ್ವಚ್ಛಂದನಾಗಿ ಧರ್ಮದ ಅಂಗಗಳ ಸೇವನೆ ಮಾಡುತ್ತಿದ್ದರೆ ಅನೇಕ ಕಷ್ಟಗಳನ್ನು ಸಹಿಸಿದರೂ ವ್ಯರ್ಥವಾಗಿ ಹೋಗುತ್ತದೆ. ಯಾವ ಪ್ರಕಾರ ಹುಚ್ಚನ ಶ್ರಮವು ವ್ಯರ್ಥವಾಯಿತು; ಅದೇ ಪ್ರಕಾರವೆಂದು ತಿಳಿಯುವುದು.

ಈ ಪ್ರಕಾರ ಎಲೈ ಭವ್ಯನೇ ! ಧರ್ಮದ ಅಂಗಗಳ ಸೇವನೆ ಮಾಡುವಂಥ ಜೀವರುಗಳ ಉಪರ್ಯುಕ್ತ ಎರಡು ಭೇದ ತಿಳಿಯುವುದು. ಯಾವ ಭವ್ಯ ಜೀವರುಗಳು ಧರ್ಮದ ಆಜ್ಞೆಯ ಅನುಸಾರ ಧರ್ಮದ ಅಂಗಗಳ ಸೇವನೆ ಮಾಡುತ್ತಾರೆ, ಅವರ ಪರಿಣಾಮವು ಯಾವುದೋ ಕಾರಣವಶ ಚಂಚಲವಾಗಿ ಹೋದ ಮೇಲೆಯೂ ಅವರುಗಳ ಧರ್ಮ ಸಂಬಂಧದ ಫಲವು ನಷ್ಟವಾಗುವುದಿಲ್ಲ. ಸರ್ವಜ್ಞದೇವರ ಆಜ್ಞೆಯಿಂದ ರಹಿತ ಯಾರೋ ಒಂದುವೇಳೆ ಕ್ರೋಧ, ಮಾನ, ಮಾಯೆ ಮತ್ತು ಲೋಭದ ಕಾರಣ ಛಲದಿಂದ ಅಥವಾ ಬಲಪೂರ್ವಕ ಜನರಿಗೆ ತೋರಿಸುವ ಸಲುವಾಗಿ ಪಾಖಂಡ ಸಹಿತ ಧರ್ಮದ ಸೇವನೆ ಮಾಡುತ್ತಿದ್ದರೆ ಅದರ ಫಲವು ಕೂಡ ವ್ಯರ್ಥವೇ

ಆಗುತ್ತದೆಯೆಂದು ತಿಳಿಯುವುದು. ಇದು ನಿನ್ನ ಪ್ರಶ್ನೆಯ ಉತ್ತರವಿದೆ; ಅದರಿಂದ ಭಾವಗಳ ಶುದ್ಧಿಯೊಂದಿಗೆ ಮಾಡಲಾದ ಧರ್ಮಸೇವನೆಯೇ ಮೋಕ್ಷಮಾರ್ಗವೆಂದು ತಿಳಿಯುವುದು. ಶುದ್ಧಭಾವವಿಲ್ಲದೆ ಎಲ್ಲವೂ ಖೇದರೂಪವೇ ಆಗುವುದರಿಂದ ಅವನ್ನು ವ್ಯರ್ಥವೆಂದೇ ತಿಳಿಯುವುದು.

ಈಗ ಶುದ್ಧಭಾವವಿಲ್ಲದೆ ಧರ್ಮದ ಅಂಗಗಳು ವ್ಯರ್ಥವಿರುವುದನ್ನು ಇನ್ನಷ್ಟು ವಿಶೇಷರೂಪದಿಂದ ಸ್ಪಷ್ಟಪಡಿಸುತ್ತಾರೆ,-

**ಮಖಿ ಪತಂಗ ಬಹು ಕಾಯಾ, ತಸಯರ ಚಿತ್ತೋಯ ಣಮಣ ತಣಹೋಈ ।**

**ಸುರತರು ದೇವಹು ದಾಣೋ, ಭಾವೋ ಸುಧೀ ಬಿನಾ ಣ ಸೀಝುಂತೀ ॥೬೮॥**

**ಗಾಥಾರ್ಥ :-** ನೊಣ ಮತ್ತು ದೀಪದ ಹುಳು (ಪತಂಗ) ಶರೀರವನ್ನು ಸುಟ್ಟುಕೊಳ್ಳುತ್ತವೆ. ಕಳ್ಳ, ಚಿರತೆಯ ಶರೀರದಲ್ಲಿ ಅಧಿಕ ನಮನ, ನಮ್ರತೆಯಿರುತ್ತದೆ, ಕಲ್ಪವೃಕ್ಷವು ಮನವಾಂಛಿತ ದಾನ ಕೊಡುತ್ತದೆ; ಆದರೆ ಅವುಗಳಿಗೆ ಭಾವಶುದ್ಧಿಯಿಲ್ಲದೇ ಇರುವುದರಿಂದ ಮೋಕ್ಷಮಾರ್ಗವಿಲ್ಲ.

**ಭಾವಾರ್ಥ :-** ಭಾವಗಳ ಶುದ್ಧತೆಯಿಲ್ಲದೆ ಮೋಕ್ಷವಾಗದಿರುವ ಕಾರಣ ಅದುವೇ ಇಲ್ಲದ ವಿವಿಧ ತಪ, ಸಂಯಮ, ಮೊದಲಾದವುಗಳ ಕುರಿತಾಗಿರುವ ಸಮಸ್ತ ಖೇದವು ವ್ಯರ್ಥವೆಂದು ತಿಳಿಯುವುದು. ಅದೆಷ್ಟೋ ಮುಗ್ಧ ಜೀವಗಳು ಭಾವಶುದ್ಧಿಯಿಲ್ಲದೆಯೇ ಮೋಕ್ಷದ ಸಲುವಾಗಿ ತಮ್ಮ ಒಳ್ಳೆಯ ಶರೀರವನ್ನು ಅಗ್ನಿಯಲ್ಲಿ ಭಸ್ಮ ಮಾಡಿ ಬಿಡುತ್ತಾರೆ. ಆದರೆ ಈ ಪ್ರಕಾರ ಅಗ್ನಿಯಲ್ಲಿ ಸುಡುವ ಕಷ್ಟಮಾತ್ರದಿಂದಲೇ ಮೋಕ್ಷವಾಗುತ್ತಿದ್ದರೆ ಶುದ್ಧಭಾವವಿಲ್ಲದ ನೊಣ ಹಾಗೂ ದೀಪದ ಹುಳುಗಳಿಗೂ ಆಗಿ ಹೋಗುತ್ತಿತ್ತು. ನೊಣ ಹಾಗೂ ದೀಪದ ಹುಳುಗಳು ನಿಃಶಂಕವಾಗಿ ತಮ್ಮ ಶರೀರವನ್ನು ತಮ್ಮ ದೇಹವನ್ನು ದೀವಿಗೆಯಲ್ಲಿ ಸುಟ್ಟು ಬಿಡುತ್ತವೆ; ಆದರೆ ಇದರಿಂದ ಆ ಅಜ್ಞಾನಿಗಳು ಸಂಕ್ಲೇಶ ಭಾವದಿಂದ ಸತ್ತು ದುರ್ಗತಿಯಲ್ಲಿಯೇ ಹೋಗಿ ಹುಟ್ಟುತ್ತವೆ. ಅದರಿಂದ ಶುದ್ಧಭಾವವಿಲ್ಲದೆ ಕಾಯವನ್ನು ಸುಡುವುದು (ಒಣಗಿಸುವುದು) ವ್ಯರ್ಥವಿದೆ.

ಶುದ್ಧಭಾವವಿಲ್ಲದೆ ಕೇವಲ ಕಾಯದಿಂದ ಅತ್ಯಂತ ಬಾಗುವುದು, ನಮನ ಮಾಡುವುದು, ವಿನಯ ಮಾಡುವುದರಿಂದ ಮೋಕ್ಷವಾಗುತ್ತಿದ್ದರೆ ಮಾಯಾಚಾರಿ, ವಚಂಕ, ಮಹಾಮಲಿನ ಅಂತರಂಗದಧಾರಕ ಕಳ್ಳ, ಇನ್ನೊಬ್ಬರ ಮನೆಗೆ ಕಳ್ಳತನ ಮಾಡುವ ಸಲುವಾಗಿ ಹೋಗುತ್ತಿರುವಾಗ ತನ್ನ ಶರೀರ, ತಲೆಬಾಗಿಸಿಕೊಂಡೇ ಹೋಗುತ್ತಾನೆ. ಚಿರತೆಯೆಂಬ ಹೆಸರಿನ ಪಶುವು ಕೂಡ ಅನ್ಯ ಜೀವಗಳನ್ನು ಸಾಯಿಸುವ ಸಲುವಾಗಿ ತನ್ನ ಕಾಯವನ್ನು ಬಹಳಷ್ಟು ಬಾಗಿಸಿದ ನಂತರವೇ ಆಘಾತ ಮಾಡುತ್ತದೆ. ಒಂದು ವೇಳೆ ಶುದ್ಧಭಾವವಿಲ್ಲದೆಯೇ ಕೇವಲ ಕಾಯವನ್ನು ಮಣಿಸುವುದರಿಂದ, ವಿನಯ ಮಾಡುವುದರಿಂದ ಮೋಕ್ಷವಾಗುತ್ತಿದ್ದರೆ ಕಳ್ಳ, ಚಿರತೆಗಳಿಗೂ ಆಗಬೇಕು. ಅದರಿಂದ ಭಾವಗಳ ಶುದ್ಧಿ ಮಾಡಿಕೊಳ್ಳುವುದೇ ಧರ್ಮಾಭಿಲಾಷೀ ಜೀವಗಳಿಗೆ ಸ್ವರ್ಗ-ಮೋಕ್ಷಕಾರಕವಿದೆ.

ಶುದ್ಧ ಭಾವವಿಲ್ಲದೆ ಕೇವಲ ದಾನ ಕೊಡುವುದರಿಂದಲೇ ಮೋಕ್ಷವಾಗುತ್ತಿದ್ದರೆ ವಾಂಛಿತ ಫಲಕೊಡುವಂಥ ಕಲ್ಪವೃಕ್ಷಕ್ಕೆ ಕೂಡ ಆಗಬೇಕು. ಜ್ಞಾನರಹಿತ ಮಲಿನ ಭಾವಯುಕ್ತ ಕಳ್ಳ, ಚಿರತೆ, ನೊಣ, ದೀಪದ ಹುಳು, ಕಲ್ಪವೃಕ್ಷಗಳಿಗೆ ಪರಭವದಲ್ಲಿ ಸುಖವಾಗುವುದಿಲ್ಲ. ಪರಭವ ಹಿತದ ಕಾರಣವಂತೂ ಭಾವದ ಶುದ್ಧತೆಯೇ ಇದೆ. ಅದರಿಂದ ಧರ್ಮಾರ್ಥಿ ಜೀವರುಗಳಿಗೆ ತತ್ತ್ವಜ್ಞಾನಪೂರ್ವಕ ಭಾವಗಳ ಶುದ್ಧತೆ ಮಾಡಿಕೊಳ್ಳುವುದೇ ಕರ್ತವ್ಯವಿದೆ.

ಈಗ ಸುಸಂಗ-ಕುಸಂಗದ ಇಚ್ಛೆಯುಳ್ಳ ಜೀವರುಗಳ ವರ್ಣನೆ ಮಾಡುತ್ತಾರೆ,-

**ವಾಯಸ ಸ್ವಾಂಗ ಅಣಾಣೀ, ಹೀಣ ಸಂಗೋಯ ರಜ್ಜಈ ಮೂಢೋ ।**

**ಹಂಸ ಚತುರ ಣರ ಣಾಣೀ, ಊಂಚ ಸಂಗೋಯ ವಂಛಿಕಾ ಜ್ಞೇಯಂ ॥೬೯॥**

**ಗಾಥಾರ್ಥ ः-** ಕಾಗೆ, ನಾಯಿ, ಅಜ್ಞಾನೀ, ಮೂರ್ಖರು ನೀಚಸಂಗತಿಯಲ್ಲಿಯೇ ರಮಿಸುತ್ತಾರೆ. ಹಂಸ, ಚತುರ ಮತ್ತು ಜ್ಞಾನೀ ಸ್ತ್ರೀ-ಪುರುಷರಿಗೆ ಉಚ್ಚ ಸಂಗತಿಯೇ ಒಳ್ಳೆಯದೆನಿಸುತ್ತದೆ.

**ಭಾವಾರ್ಥ ः-** ಕಾಗೆಯ ಸಲುವಾಗಿ ಬೇಕಾದಷ್ಟು ರತ್ನಮಯ ಆಭೂಷಣ ಮಾಡಿ ತೊಡಿಸಿದರೂ, ಬೇಕಾದಂಥ ಭೋಜನ ನೀಡಿ ಪೋಷಿಸಿದರೂ, ಬೇಕಾದಂಥ ಕಷ್ಟ ಸಹಿಸಿ ಕಲಿಸಿದರೂ, ಸುವರ್ಣ ಪಂಜರದಲ್ಲಿಟ್ಟರೂ - ಅನೇಕ ರೂಪದಿಂದ ಬೇಕಾದಷ್ಟು ಪ್ರೀತಿ ಮಾಡಿದರೂ ಕಾಗೆಯು ಯಾವಾಗ ನಮ್ಮ ಕೈಯಿಂದ ಅಥವಾ ಪಂಜರದಿಂದ ಬಿಡುಗಡೆಯಾಗುತ್ತಿದ್ದಂತೆಯೇ ಆ ಅಜ್ಞಾನಿಯು ನೀಚ ಸ್ಥಾನದಲ್ಲಿಯೇ ಹೋಗಿ ಕುಳಿತುಕೊಳ್ಳುವುದು. ತನ್ನ ಸಮಾನ ಕಾಗೆಗಳ ಸಮೂಹದಲ್ಲಿ ಹೋಗಿಯೇ ಕುಳಿತುಕೊಳ್ಳುವುದು.

ನಾಯಿಗೆ ಬೇಕಾದಂಥ ಒಳ್ಳೆಯ ಆಹಾರ ತಿನ್ನಿಸಿದರೂ, ಅದರ ಶರೀರದ ಮೇಲೆ ಒಳ್ಳೆಯ ಆಭೂಷಣಗಳನ್ನು ತೊಡಿಸಿ ಸಿಂಗರಿಸಿದರೂ, ಪಲ್ಲಕ್ಕಿ-ರಥದಲ್ಲಿ ಕೂಡ್ರಿಸಿ ಸುತ್ತಾಡಿಸಿದರೂ, ವಿವಿಧ ಹಾಸಿಗೆ, ಜಮಖಾನ, ರತ್ನಗಂಬಳಿಯ ಮೇಲೆ ಇರಿಸಿದರೂ - ಅನೇಕ ಅನುಕೂಲ ಪರಿಸ್ಥಿತಿಗಳಲ್ಲಿ ಇರಿಸಿದರೂ ಯಾವಾಗ ದಾರ-ಶೃಂಖಲೆಯಿಂದ ಮುಕ್ತವಾಗುವುದು ಆಗ ಗ್ರಾಮದ ಅನ್ಯ ನಾಯಿಗಳ ಜತೆ ರಮಿಸಲಾರಂಭಿಸುವುದು ಹಾಗೂ ಕಸದಗುಂಡಿ (ತಿಪ್ಪೆ)ಯಲ್ಲಿಯೇ ಹೋಗಿ ಕುಳಿತುಕೊಳ್ಳುವುದು ಅಂಥದೇ ಅದರ ಸಹಜ ಸ್ವಭಾವವಿದೆ.

ಅಜ್ಞಾನಿಗೆ ಬೇಕಾದಷ್ಟು ತಿಳಿಸಿಕೊಟ್ಟರೂ, ಓದಿಸಿದರೂ ಅವನ ಅಜ್ಞಾನತೆಯು ನಷ್ಟವಾಗುವುದಿಲ್ಲ. ಅವನದು ಅಂಥದೇ ಸಹಜ ಸ್ವಭಾವವಿದೆಯೆಂದು ತಿಳಿಯುವುದು. ಅಜ್ಞಾನದ ಭೇದಗಳೂ ಅನೇಕವಿವೆ. ಅವುಗಳಲ್ಲಿ ಒಂದು ಅಜ್ಞಾನವಂತೂ ಧರ್ಮ-ಕರ್ಮದ ಅನ್ಯ ಕಲೆಗಳನ್ನೆಲ್ಲ ತಿಳಿಯುತ್ತದೆ, ಅನೇಕ ಭೇದ-ಭಾವಗಳನ್ನು ತಿಳಿಯುತ್ತದೆ; ಆದರೆ ಶಾಸ್ತ್ರ ಓದುವ ಜ್ಞಾನದಿಂದ ರಹಿತವಿರುವಂಥದ್ದಿದೆ. ಯಾವುದೋ ಪೂರ್ವಕರ್ಮದ ಯೋಗದಿಂದ ಶ್ರುತಜ್ಞಾನಾವರಣದ ಉದಯವಿರುವ ಕಾರಣ ಪ್ರಾಕೃತ, ಸಂಸ್ಕೃತ, ದೇಶಭಾಷೆಯಲ್ಲಿರುವ ಶಾಸ್ತ್ರಗಳನ್ನು ಓದುವ ಜ್ಞಾನವಿಲ್ಲ; ಅದರಿಂದ ಇದನ್ನು ಅಜ್ಞಾನವೆಂದು ಹೇಳುತ್ತಾರೆ.

ಒಂದು ಅಜ್ಞಾನವು ಎಂಥದ್ದಿದೆಯೆಂದರೆ, ಅವನಿಗೆ ಶಾಸ್ತ್ರ ಓದುವ ಜ್ಞಾನವಂತೂ ಇದೆ; ಆದರೆ ಯೋಗ್ಯ-ಅಯೋಗ್ಯ, ಒಳಿತು-ಕೆಡಕು, ಪಾಪ-ಪುಣ್ಯ, ಹಿತ-ಅಹಿತ ಇತ್ಯಾದಿ ಶುಭಾಶುಭ ವಿಚಾರದಿಂದ ಅವನ ಹೃದಯವು ರಹಿತವಿದೆ. ಹೇಗೆ ಗಿಳಿಗೆ ಪಾಠ ಕಲಿಸಿ ಪಂಡಿತ ಮಾಡಲಾಗುತ್ತದೆ - ಗಿಳಿಗೆ ಯಾವ ರೀತಿ ಕಾವ್ಯ-ಪದಗಳನ್ನು ಕಲಿಸಲಾಗುತ್ತದೆ ಹಾಗೆ ಕಲಿತುಕೊಳ್ಳುತ್ತದೆ. ಅದರ ಓದುವಿಕೆಯನ್ನು ನೋಡಿ ಜನರು ಪ್ರಸನ್ನರಾಗುವಂತೆ ಅದಕ್ಕೆ ಕಲಿಸಿ ತಯಾರು ಮಾಡಲಾಗಿದೆ ಆದರೆ ಅದರ ಬಾಯಿಯ ಹತ್ತಿರ ಬೆರಳು ಒಯ್ದರೆ ಅದು ಕಚ್ಚಿ ತಿಂದು ಬಿಡುತ್ತದೆ. ಪಂಜರವನ್ನು ತೆರೆದು ಬಿಟ್ಟ ಮೇಲೆ ಯಾವ ವಿಚಾರ ಮಾಡದೇ ಹಾರಿ ಹೋಗುತ್ತದೆ. ನಾನು ಈ ರತ್ನ ಪಂಜರದಲ್ಲಿ ಒಳ್ಳೊಳ್ಳೆಯ ಫಲಾದಿಗಳನ್ನು ತಿನ್ನುತ್ತ ಸುಖಿಯಾಗಿದ್ದೇನೆ, ಇವರು ನನಗೆ ಪಾಠ-ಕಾವ್ಯ ಕಲಿಸಿದ್ದಾರೆ ಇತ್ಯಾದಿ ಎಲ್ಲವನ್ನೂ ಮರೆತು ಆ ಅಜ್ಞಾನಿ ಗಿಳಿಯು ಪಂಜರವನ್ನು ಬಿಟ್ಟು ಹಾರಿ ಹೋಗುತ್ತದೆ.

ಕೆಲವು ಮೂರ್ಖರು ಸಂಸ್ಕೃತ, ಪ್ರಾಕೃತ ಮೊದಲಾಗಿ ಅನೇಕ ಶಾಸ್ತ್ರಗಳ ಓದುವಿಕೆಯನ್ನು ತಿಳಿಯುತ್ತಾರೆ. ಆದರೆ ಕಷಾಯ ಸಹಿತ, ಮಹಾಮಾನಿ, ಪಾಪದ ಭಯದಿಂದ ರಹಿತ, ಪುಣ್ಯಫಲದ ಬಯಕೆಯಿಲ್ಲದವರು ತಮ್ಮ ಹಿತ-ಅಹಿತದ ಭಾವಗಳನ್ನು ತಿಳಿಯುವುದಿಲ್ಲ. ಅವರ ಕಾಮ, ಕ್ರೋಧ, ಲೋಭಗಳು ಅಧಿಕವಿರುವುದರಿಂದ ಅವರನ್ನು ಓದಿದ ಅಜ್ಞಾನಿಯೆನ್ನುತ್ತಾರೆ. ಶುಭಾಶುಭ ವಿಚಾರದಿಂದ ರಹಿತ ಮತ್ತು ಅಕ್ಷರ ಜ್ಞಾನದಿಂದ ರಹಿತರನ್ನು ಕೂಡ ಅಜ್ಞಾನಿಯೆನ್ನುತ್ತಾರೆ. ಸುಖ-ದುಃಖದ ಸ್ಥಾನ ಭೇದವನ್ನು ತಿಳಿಯದಿರುವಂಥ ಮನುಷ್ಯರು ಬಾಲಕನ ಸಮಾನ, ಅಜ್ಞಾನಿಯಿರುತ್ತಾರೆ.

ಹೇಗೆ ಬಾಲಕನಿಗೆ ಮಾತಾ-ಪಿತರು ಹೇಳುತ್ತಾರೆ - ಮಗು ! ಊಟ ಮಾಡಿ ತೂಗು ಮಂಚದ ಮೇಲೆ ಆಟವಾಡು, ಮಲಗಿಕೊ, ಬಿಸಿಲಿನಲ್ಲಿ ಹೋಗಬೇಡ; ಇಲ್ಲಿ ತಂಪಾದ ನೀರು ಕುಡಿ, ಬೇರೆ ಮಕ್ಕಳ ಹತ್ತಿರ ಹೋಗಬೇಡ,

ಅವರು ನಿನಗೆ ಹೊಡೆಯುವರು - ಇತ್ಯಾದಿ ಹಿತಕರವಾದ ಸುಖದಾಯಕ ಶಿಕ್ಷಣ ಕೊಡುತ್ತಾರೆ. ಅವರ ಮಾತಿನ ರಹಸ್ಯವನ್ನರಿಯದ ಅಜ್ಞಾನೀ ಬಾಲಕನು ಮಾತಾ-ಪಿತರ ವಚನಗಳ ಉಲ್ಲಂಘನೆ ಮಾಡಿ, ಗುಪ್ತವಾಗಿ, ಉರಿಬಿಸಿಲಲ್ಲಿ ಓಡಿ ಹೋಗುತ್ತಾನೆ ಮತ್ತು ಬೇರೆ ಮಕ್ಕಳ ಜೊತೆ ಆಟವಾಡಲಾರಂಭಿಸುತ್ತಾನೆ. ಅಲ್ಲಿ ತಲೆಯ ಮೇಲೆ ಧೂಳು ತುಂಬಿಕೊಳ್ಳುತ್ತದೆ. ಶರೀರದಿಂದ ಬಿಸಿಲಿನ ದಾಹವನ್ನು ಸಹಿಸುತ್ತಾನೆ. ಬಾಯಾರಿಕೆಯಾಗುತ್ತದೆ ಅದನ್ನು ಸಹಿಸುತ್ತಾನೆ, ಹಸಿವೆಯಾಗುತ್ತದೆ ಅದನ್ನು ಸಹಿಸುತ್ತಾನೆ, ಇತರರ ಬಾಯಿಂದ ಬರುವ ಬೈಗುಳನ್ನು ಸಹಿಸುತ್ತಾನೆ, ಯಾರೋ ತಲೆಯ ಮೇಲೆ ಜೋರಾಗಿ ಹೊಡೆದರೆ ಅದನ್ನೂ ಸಹಿಸುತ್ತಾನೆ. ಹೀಗೆ ಕಷ್ಟದಾಯಕ ಸ್ಥಾನಗಳಲ್ಲಿ ಹೋಗುತ್ತಾನೆ; ಆದರೆ ಸುಖದ ಸ್ಥಾನಭೂತವಿರುವ ತನ್ನ ಮನೆಯಲ್ಲಿ ಉಳಿಯುವುದಿಲ್ಲ. ಹೀಗೆ ಆ ಬಾಲಕನು ಅಜ್ಞಾನಿಯಿದ್ದಾನೆ.

ಒಬ್ಬ ಗೊಲ್ಲ (ದನ ಕಾಯುವವ)ನು ಅಜ್ಞಾನಿಯಿದ್ದಾನೆ. ಅವನು ಯಾವಾಗಲೂ ದನಗಳನ್ನು ಮೇಯಿಸುತ್ತಾನೆ. ವನದಲ್ಲಿಯೇ ಇರುತ್ತಾನೆ, ಅವನಿಗೆ ಶುಭಾಶುಭದ ಜ್ಞಾನವಿಲ್ಲ ಅವನಿಗೆ ಒಂದುವೇಳೆ ಬೆಲೆಬಾಳುವ ಕಂಬಳಿ (ಶಾಲು) ಕೊಟ್ಟರೆ ಆ ಅಜ್ಞಾನಿಯು ಅದರ ಬೆಲೆ ಹಾಗೂ ಗುಣವನ್ನು ತಿಳಿಯದಿರುವುದರಿಂದ ಕೂಡ್ರುವಾಗ ಆ ಕಂಬಳಿಯನ್ನು ಕಾಲು ಕೆಳಗೆ ಹಾಸಿಕೊಂಡು ಕೂಡ್ರುತ್ತಾನೆ. ವನದಲ್ಲಿ ಬಾಯಾರಿಕೆಯಾದ ಮೇಲೆ ಆ ಅಜ್ಞಾನಿಯು ನದಿಯ ದಡಕ್ಕೆ ಬಂದು ಪಶುವಿನ ಹಾಗೆ ಬಾಯಿಂದಲೇ ನೀರು ಕುಡಿಯುತ್ತಾನೆ-ಬೊಗಸೆಯಲ್ಲಿ ತಗೆದುಕೊಂಡು ಕುಡಿಯುವುದಿಲ್ಲ. ಅವನಿಗೆ ಶುಭಾಶುಭ ಜ್ಞಾನವಿಲ್ಲದಿರುವುದರಿಂದ ಆ ಗೊಲ್ಲನೂ ಅಜ್ಞಾನಿಯಿದ್ದಾನೆ.

ಇತ್ಯಾದಿ ಉಪರೋಕ್ತ ಭೇದವುಳ್ಳ ಎಲ್ಲ ಮೂರ್ಖರಿಗೆ ನೀಚಸಂಗತಿಯೇ ಒಳ್ಳೆಯದೆನಿಸುತ್ತದೆ. ಉಚ್ಚ ಸಂಗತಿಯಲ್ಲಿ ಬರುವುದು, ಕೂಡ್ರುವುದು, ಮಾತನಾಡುವುದು ಅವರಿಗೆ ನಾಚಿಕೆಯನ್ನುಂಟು ಮಾಡುತ್ತದೆ. ಹೇಗೆ ಯಾವನೋ ಸಜ್ಜನ ವ್ಯಕ್ತಿಯ ಪುತ್ರನು ಹೋಳಿಹಬ್ಬದ ದಿನ ತನ್ನ ಮುಖಕ್ಕೆ ಕಪ್ಪು ಬಳಿದುಕೊಂಡು ನೀಚ ಸಂಗತಿಯ ಮನುಷ್ಯರೊಂದಿಗೆ ಪ್ರಸನ್ನನಾಗಿ ಆಟವಾಡುತ್ತ ರಮಿಸುತ್ತಿದ್ದನು. ಅಲ್ಲಿಂದ ಯಾವನೋ ಸಜ್ಜನ ಮನುಷ್ಯನು ಹಾಯ್ದು ಹೋಗುತ್ತಿರುವುದನ್ನು ಕಂಡು ನಾಚಿಕೆಯಿಂದ ಅವಿತುಕೊಳ್ಳುತ್ತಾನೆ. ಮುಖಕ್ಕೆ ಮಸಿ ಬಳಿದುಕೊಂಡಿರುವುದರಿಂದ ಒಳ್ಳೆಯವರ ಸಂಗತಿಯಲ್ಲಿ ಅವನಿಗೆ ಲಜ್ಜೆ ಬರುತ್ತದೆ. ಅದೇ ಪ್ರಕಾರ ಈ ಅಜ್ಞಾನಿಗೆ ಸುಸಂಗತಿಯಲ್ಲಿ ಬರುವುದಕ್ಕೆ ಲಜ್ಜೆ ಬರುತ್ತದೆ ಹಾಗೂ ತನ್ನ ಸಮಾನ ಅಜ್ಞಾನಮಯ ಚೇಷ್ಟೆ ಮಾಡುವಂಥ ಜೀವರುಗಳ ಜೊತೆ ಈ ಅಜ್ಞಾನಿಯು ಪ್ರಸನ್ನನಾಗಿರುತ್ತಾನೆ. ಈ ಪ್ರಕಾರ ಕಾಗೆ, ನಾಯಿ ಮತ್ತು ಅಜ್ಞಾನಿಗಳಿಗೆ ನೀಚಸ್ಥಾನವೇ ಪ್ರಿಯವಿದೆ - ಅವರದು ಇಂಥದೇ ಸಹಜ ಸ್ವಭಾವವಿದೆಯೆಂದು ತಿಳಿಯುವುದು.

ಈಗ ಉಚ್ಚ ಸಂಗತಿಯು ಹಿತವೆನಿಸುವಂಥವರ ವರ್ಣನೆ ಮಾಡುತ್ತಾರೆ - ಮಹಾಸಮುದ್ರ ನಿವಾಸಿ, ಮುತ್ತುಗಳನ್ನು ಆಯ್ದು ತಿನ್ನುವಂಥ, ಉಜ್ವಲಬುದ್ಧಿಯುಳ್ಳ, ನಿರ್ಮಲ ನೀರು ಕುಡಿಯುವಂಥ, ಒಳ್ಳೆಯ ಸ್ಥಾನದಲ್ಲಿ ಇರುವಂಥ, ಸುಬುದ್ಧಿ ಮಹಾಸುಂದರ ಶರೀರಧಾರಿ ಹಂಸಕ್ಕೆ ಉಚ್ಚ ಸ್ಥಾನವೇ ಒಳ್ಳೆಯದೆನಿಸುತ್ತದೆ. ದೊಡ್ಡ ಸಮುದ್ರವಿರುವಲ್ಲಿ, ನೀರಿನ ವಿಸ್ತಾರವು ತುಂಬ ಆಳವಿರುವಂಥ ಸ್ಥಾನಗಳಲ್ಲಿ ಹಂಸವಿರುತ್ತದೆ.

ಚತುರ ಮನುಷ್ಯರು ಕೂಡ ಎಲ್ಲಿ ಅನೇಕ ಕಲೆಗಳ ಧಾರಕರು, ವಿವೇಕವಂತರು, ಚತುರರಾಜ ಕುಮಾರಾದಿಕರು, ಉಜ್ವ್ವಲ ಬುದ್ಧಿ ಸಂಪನ್ನರು, ಧರ್ಮ-ಕರ್ಮದ ಕಲೆಗಳಲ್ಲಿ ತಮ್ಮ ಸಮಾನ ತಿಳಿವಳಿಕೆಯುಳ್ಳವರು ಇರುತ್ತಾರೋ ಅಲ್ಲಿಯೇ ಪ್ರಸನ್ನರಾಗಿರುತ್ತಾರೆ. ಅಲ್ಲಿ ಶುಭ ವಿವೇಕಪೂರ್ಣ ವಿವಿಧ ಚರ್ಚೆ-ವಾರ್ತೆಗಳಿರುತ್ತವೆ, ಅನೇಕ ನಯ-ಯುಕ್ತಿಗಳ ರಹಸ್ಯದಿಂದ ಕೂಡಿದ ಪ್ರಶ್ನೋತ್ತರಗಳು ನಡೆಯುತ್ತವೆ. ಶಾಸ್ತ್ರಾಭ್ಯಾಸಕ್ಕೆ ಪೂರಕವಾದ ಅನೇಕ ಧರ್ಮಕಥೆ, ತತ್ತ್ವಚರ್ಚೆ ಮೊದಲಾದವುಗಳಿರುವಲ್ಲಿ ಅವರಿಗೆ ಹಿತವೆನಿಸುತ್ತದೆ. ಕುಸಂಗದಲ್ಲಿ ಅರತಿಯಿರುವಂಥವರು ಅವರು ಚತುರರಿದ್ದಾರೆ.

ಧರ್ಮಾತ್ಮರಿಗೆ ಅವೇ ಧರ್ಮದ ಉಚ್ಚ ಸ್ಥಾನಗಳು ಪ್ರಿಯವೆನಿಸುತ್ತವೆ. ಅಲ್ಲಿ ಪಾಪನಾಶದ, ಪುಣ್ಯಕರ ಪ್ರಥಮಾನುಯೋಗ, ಕರಣಾನುಯೋಗ, ಚರಣಾನುಯೋಗ, ದ್ರವ್ಯಾನುಯೋಗದ ಕಥೆ -ವಾರ್ತೆಗಳಿರುತ್ತವೆ. ಎಲ್ಲಿ

ವಿವಿಧ ಮತಾಂತರಗಳ ರಹಸ್ಯ ಸಹಿತ ತತ್ತ್ವ ಭೇದಗಳ ನಿರ್ಣಯವಾಗುವುದರಿಂದ ಮೋಕ್ಷಮಾರ್ಗವು ತಿಳಿದು ಬರುತ್ತದೆ, ಸಂಸಾರ ಭ್ರಮಣವು ಬಿಟ್ಟು ಹೋಗುತ್ತದೆ - ಪರಭವದಲ್ಲಿ ಸುಖವಾಗುತ್ತದೆ, ಮೊದಲು ಕಟ್ಟಿದ ಪಾಪಗಳು ನಷ್ಟವಾಗುತ್ತವೆ, ಅಂಥ ಸ್ಥಾನಗಳೇ ಧರ್ಮಾತ್ಮರಿಗೆ ಒಳ್ಳೆಯವೆನಿಸುತ್ತವೆ. ಉಚ್ಚ ಸ್ಥಾನಗಳಲ್ಲಿ ಪ್ರಸನ್ನರಿರುವಂಥವರು ಅವರು ಜ್ಞಾನಿಗಳಿದ್ದಾರೆ.

ಈ ಪ್ರಕಾರ ಹೇಳಲಾದ ಸುಸಂಗತಿಯಲ್ಲಿ ರುಚಿಯುಳ್ಳ ಹಂಸ, ಚತುರ ಮನುಷ್ಯ ಮತ್ತು ಜ್ಞಾನೀ ಪುರುಷರಿಗೆ ಉಚ್ಚ ಸಂಗತಿಯೇ ಪ್ರಿಯವೆನಿಸುತ್ತದೆ, ಇಂಥದೇ ಅವರುಗಳ ಸಹಜ ಸ್ವಭಾವವಿದೆ. ಈ ಪ್ರಕಾರ ಎಲೈ ಭವ್ಯನೇ ! ನೀಚರಿಗೆ ನೀಚ ಸಂಗತಿಯು ಪ್ರಿಯವಿದೆ, ಉಚ್ಚರಿಗೆ ಉಚ್ಚ ಸಂಗತಿಯು ಪ್ರಿಯವಿದೆ. ಅದರ ಮೂಲಕ ಪರೀಕ್ಷೆ ಮಾಡಿ ನೀಚ-ಉಚ್ಚಗಳನ್ನು ಗುರುತಿಸುವುದು. ಮತ್ತು ತಮ್ಮದು ಯಾವುದರಿಂದ ಒಳ್ಳೆಯದಾಗುವುದು ಅಂಥ ಉಚ್ಚ ಸಂಗತಿಯಲ್ಲಿ ರಮಿಸುವುದು, ಮಗ್ನವಾಗುವುದು ಯೋಗ್ಯವಿದೆ.

ಈಗ ಹಿತೈಷಿಗಳ ಪರೀಕ್ಷೆಯ ಒಂಭತ್ತು ಸ್ಥಾನಗಳನ್ನು ದೃಷ್ಟಾಂತಪೂರ್ವಕ ಹೇಳುತ್ತಾರೆ -

**ಣಿಯಭಯ ಖೇದ ದರಿದಯೇ, ಭೋಯಣ ಸತಯಾರ ಅಜ್ಜಪಣ್ಣಾ ಮೋ ।**

**ಜರಾಸಕ್ತಿ ಅಖುಝುಹೀಯೋ ಇ ಥಲ ಹಿತ ಹೇಮ ಪಾಖ ಕಸಟೀಯೇ ॥೭೦॥**

**ಗಾಥಾರ್ಥ :-** ರಾಜನ ಭಯ, ರೋಗ, ದಾರಿದ್ರ್ಯ, ಭೋಜನ, ಸತ್ಕಾರ, ಆರ್ಜವ-ಸರಳ ಪರಿಣಾಮ, ವೃದ್ಧಾವಸ್ಥೆ, ಹೀನಶಕ್ತಿ , ಇಂದ್ರಿಯಗಳ ಬಲವು ಕಡಿಮೆಯಾಗುವುದು-ಈ ಸ್ಥಾನಗಳು ಹಿತರೂಪದ ಕನಕ, ಸುವರ್ಣವನ್ನು ಪರೀಕ್ಷಿಸುವಲ್ಲಿ ಒರೆಗಲ್ಲಿನಂತಿವೆ.

**ಭಾವಾರ್ಥ :-** ಇಲ್ಲಿ ಹೇಳಲಾದ ಸ್ಥಾನಗಳು ಸಂಸಾರದಲ್ಲಿ ತನ್ನ ಹಿತ ಮಾಡುವಂಥ ಜೀವರೂಪದ ಸುವರ್ಣವನ್ನು ಪರೀಕ್ಷೆ ಮಾಡುವ ಸಲುವಾಗಿ ಒರೆಗಲ್ಲಿನ ಸಮಾನವಿವೆ. ಅವನ್ನೇ ಹೇಳಿದ್ದಾರೆ -

೧. ಯಾವಾಗ ತಮ್ಮ ಮೇಲೆ ದೊರೆಯ ಕ್ರೋಧವಿರುತ್ತದೆ, ಆ ರಾಜಭಯದ ಸಮಯದಲ್ಲಿ ತನಗೆ ಸಹಾಯ ಮಾಡುವ ಸಲುವಾಗಿ ಯಾರು ತಮ್ಮ ಸೇವೆ ಮಾಡುತ್ತಾರೆ, ಅವರನ್ನು ಒಳ್ಳೆಯ ಸೇವಕರೆಂದು ತಿಳಿಯುವುದು. ಅಂಥ ಸಮಯದಲ್ಲಿ ಯಾರು ತಮ್ಮ ಹತ್ತಿರ ಇರುತ್ತಾರೆ, ವಿನಯ ಮಾಡುತ್ತಾರೆ, ಸೇವೆ ಮಾಡುತ್ತಾರೆ ಅವರು ನಿಜವಾದ ಸೇವಕರಿದ್ದಾರೆ. ರಾಜ್ಯಕೋಪದ ಸಮಯದಲ್ಲಿ ಯಾವ ಕುಟುಂಬ ಮಂತ್ರಿ ಮೊದಲಾದವರು ತಮಗೆ ಸಹಾಯ ಮಾಡುತ್ತಾರೆ ಅವರನ್ನು ನಿಜವಾದ ಹಿತೈಷಿಗಳೆಂದು ತಿಳಿಯುವುದು.

೨. ಶರೀರದಲ್ಲಿ ಅನೇಕ ಪ್ರಕಾರದ ಕುಷ್ಠಾದಿ ರೋಗಗಳ ಸಂಬಂಧದ ವೇದನೆಯಾದ ಮೇಲೆ ಆ ಸಮಯ ಮಲ-ಮೂತ್ರಾದಿಗಳನ್ನು ಸ್ವಚ್ಛ ಮಾಡುವಂಥವನೇ ಒಳ್ಳೆಯ ಸೇವಕ, ಕುಟುಂಬಿ, ಮಿತ್ರನೆಂದು ತಿಳಿಯುವುದು.

೩. ಪಾಪದ ಉದಯದಿಂದ ದರಿದ್ರತೆಯು ಬಂದ ಮೇಲೆ ಧನದ ಅಭಾವದಲ್ಲಿ ಹಸಿವೆ-ಬಾಯಾರಿಕೆಗಳನ್ನು ಸಹಿಸಿಯೂ ಸೇವೆ ಮಾಡುವಂಥವನು ಅವನೇ ಒಳ್ಳೆಯ ಸೇವಕನಿದ್ದಾನೆ. ಅಂಥ ದರಿದ್ರಾವಸ್ಥೆಯಲ್ಲಿಯೂ ಯಾರು ಮೊದಲಿನ ಹಾಗೆ ವಿನಯಪೂರ್ವಕ ಜತೆಯಲ್ಲಿರುತ್ತಾರೆ ಅವರನ್ನೇ ಕುಟುಂಬಿ, ಮಿತ್ರಾದಿಗಳೆಂದು ತಿಳಿಯುವುದು.

೪. ಭೋಜನ ನೀಡುವ ಸಮಯದಲ್ಲಿ ಯಥಾಯೋಗ್ಯ ಆದರ ಸಹಿತ ವಿನಯಪೂರ್ವಕ ಅಂತರಂಗದ ಸ್ನೇಹ ಸಂಪನ್ನತೆಯೊಂದಿಗೆ ಆಹಾರ ಕೊಡುವಂಥವನೇ ನಿಜವಾದ ಹಿತೈಷಿ, ಕುಟುಂಬಿ, ಮಿತ್ರ , ಒಳ್ಳೆಯ ಸೇವಕನೆಂದು ತಿಳಿಯುವುದು.

೫. ಬರ-ಹೋಗುವ ಮಾತನಾಡುವಾಗ ಯಥಾಯೋಗ್ಯ ಅಂತರಂಗ ಪ್ರೀತಿ ಸಹಿತ ಸತ್ಕಾರ ಮಾಡುವಂಥ ಮಾನ-ಸನ್ಮಾನ ನೀಡುವಂಥವನೇ ನಿಜವಾಗಿ ಸಜ್ಜನ, ಮಿತ್ರಾದಿಕರಿದ್ದಾರೆಂದು ತಿಳಿಯುವುದು.

೬. ಕುಟಿಲತೆಯನ್ನು ಬಿಟ್ಟುಕೊಟ್ಟು ಸರಳ ಭಾವದಿಂದ ವಿನಯಪೂರ್ವಕ ಸೇವೆ ಮಾಡುವಂಥವನು ಒಳ್ಳೆಯ ಸೇವಕನಿದ್ದಾನೆ; ಇದೇ ಪ್ರಕಾರ ಮಿತ್ರ-ಕುಟುಂಬ ವರ್ಗದವರನ್ನೂ ತಿಳಿಯುವುದು.

೭. ವೃದ್ಧಾವಸ್ಥೆಯು ಬಂದ ಮೇಲೆ ಶರೀರದಲ್ಲಿ ಸಂಪಾದನೆ ಮಾಡುವ ಶಕ್ತಿಯು ಕಡಿಮೆಯಾಗುವುದು, ಸಮಸ್ತ ಕುಟುಂಬದವರ ರಕ್ಷಣೆಯ ಸಂಬಂಧದ ಶಕ್ತಿಯು ಕಡಿಮೆಯಾಗುವುದು, ಶರೀರವು ಅತ್ಯಂತ ಪರಾಧೀನವಾಗುವುದು, ಮಾತನಾಡುವ ಸಮಯದಲ್ಲಿ ಬಾಯಿಂದ ಜೊಲ್ಲು ಸೋರುವುದು, ಅಂಗೋಪಾಂಗಗಳು ಕಂಪಿಸತೊಡಗುವುದು - ಇತ್ಯಾದಿ ಅವಸ್ಥೆಗಳಾಗುತ್ತವೆ. ತರುಣಾವಸ್ಥೆಯು ನಷ್ಟವಾಗಿ ಹೋದ ಮೇಲೆಯೂ ವಿನಯಸಹಿತವಾಗಿ ಸೇವೆ ಮಾಡುವಂಥವನೇ ಸೇವಕನಿದ್ದಾನೆ. ಅಂಥ ಅವಸ್ಥೆಯಲ್ಲಿಯೂ ಆದರದಿಂದ ಸೇವೆ-ಶುಶ್ರೂಷೆ ಮಾಡುವಂಥವರು, ಆಜ್ಞೆ ಮನ್ನಿಸುವಂಥವರೇ ಒಳ್ಳೆಯ ಪುತ್ರ, ಸಹೋದರ, ಪತ್ನಿ ಮೊದಲಾಗಿ ಕುಟುಂಬದವರು ಮತ್ತು ಮಿತ್ರರೆಂದು ತಿಳಿಯುವುದು.

೮. ಪಾಪದ ಉದಯದಿಂದ ಶರೀರದ ಶಕ್ತಿಯು ಕಡಿಮೆಯಾಗಿರುವ ಕಾರಣ ಏಳಲು, ಕೂಡ್ರಲು, ಮಲ-ಮೂತ್ರ ಕ್ಷೇಪಣ ಮಾಡುವಲ್ಲಿಯೂ ಅಶಕ್ತ, ಅಸಮರ್ಥನಾಗಿರುವ ಸಮಯದಲ್ಲಿಯೂ ಸೇವೆ ಶುಶ್ರೂಷೆ ಮಾಡುವಂಥವರನ್ನೇ ಸಜ್ಜನ ಸೇವಕ, ಮಿತ್ರ, ಕುಟುಂಬದವರೆಂದು ತಿಳಿಯುವುದು.

೯. ಯಾವಾಗ ಪಂಚೇಂದ್ರಿಯಗಳು ಶಿಥಿಲವಾಗಿ ಹೋಗುತ್ತವೆ. ಒಂದು-ಎರಡು ಇಂದ್ರಿಯಗಳ ಪ್ರವೃತ್ತಿ ಕಾರ್ಯಮಾಡುವ ಸಾಮರ್ಥ್ಯವೇ ನಷ್ಟವಾಗಿ ಹೋದರೆ ಅರ್ಥಾತ್ ಕಣ್ಣುಗಳಿಂದ ಕಾಣಿಸದಿದ್ದರೆ, ಕಿವಿಗಳಿಂದ ಕೇಳಿ ಬರದಿದ್ದರೆ ಅಂಥ ಸಮಯದಲ್ಲಿಯೂ ಯಾರು ವಿನಯಪೂರ್ವಕ ಆಜ್ಞೆಯ ಅನುಸಾರ ಸೇವೆ ಮಾಡುತ್ತ ಉಳಿಯುತ್ತಾರೆ, ಅವರೇ ನಿಜವಾದ ಮಿತ್ರ, ನಿಜವಾದ ಸೇವಕ, ನಿಜವಾದ ಪತ್ನಿ, ನಿಜವಾದ ಪುತ್ರಾದಿಕರೆಂದು ತಿಳಿಯುವುದು.

ಈ ಪ್ರಕಾರ ಹೇಳಲಾದ ಒಂಭತ್ತು ಸ್ಥಾನಗಳು ಸೇವಕ, ಪುತ್ರ, ಮಿತ್ರ, ಸಹೋದರ, ಪತ್ನಿ, ತಾಯಿ, ತಂದೆ ಮೊದಲಾದ ಸ್ನೇಹಿಗಳೆಂಬ ಕಂಚನವನ್ನು ಪರೀಕ್ಷಿಸಲು ಒರೆಗಲ್ಲಿನ ಸಮಾನವಿವೆ. ಹೇಗೆ ಒರೆಗಲ್ಲಿನ ಮೇಲೆ ಉಜ್ಜುವುದರಿಂದ ಚಿನ್ನದ ಹೀನತೆ-ಉತ್ತಮತೆಯ ಪರೀಕ್ಷೆಯಾಗುತ್ತದೆ, ಹಾಗೆಯೇ ಈ ಒಂಭತ್ತು ಸ್ಥಾನ ಎಂದರೆ ಪರಿಸ್ಥಿತಿಗಳಲ್ಲಿ ಮಿತ್ರ, ಸಜ್ಜನ, ಕುಟುಂಬದವರ ಪರೀಕ್ಷೆಯಾಗುತ್ತದೆ. ಬೇರೆ ಅನುಕೂಲ ಪರಿಸ್ಥಿತಿಗಳಲ್ಲಿಯಂತೂ ಈ ಜೀವನು ಎಲ್ಲರ ರಕ್ಷಕನಾಗಿರುವುದರಿಂದ ಅನೇಕ ರೀತಿಯ ಸೇವೆ ಮಾಡುತ್ತಾರೆ. ಕುಟುಂಬದವರು, ಪತ್ನಿ-ಪುತ್ರಾದಿಕರೂ ಆಜ್ಞೆ ಮನ್ನಿಸಿಯೇ ಮನ್ನಿಸುತ್ತಾರೆ; ಆದರೆ ಉಪರ್ಯುಕ್ತ ಸ್ಥಾನಗಳಲ್ಲಿ, ಪ್ರತಿಕೂಲ ಪರಿಸ್ಥಿತಿಗಳು ಬಂದ ಮೇಲೆ ಯಾರು ಸೇವೆ ಮಾಡುತ್ತಾರೆ. ಅವರೇ ನಿಜವಾದ ಸಂಬಂಧಿಕರೆಂದು ತಿಳಿಯುವುದು.

ಉಪರೋಕ್ತ ಒರೆಗಲ್ಲಿನ ಸಮಾನ ಯಾವ ಸ್ಥಾನಗಳಲ್ಲಿ ಯಾರನ್ನು ಪರೀಕ್ಷಿಸಬೇಕೆಂಬುದನ್ನೇ ಈಗ ಹೇಳುತ್ತಾರೆ-

**ಏ ಣವ ಠಾಣ ಕಸೌಟೀ, ತೀಯ ಮಿತ್ತಾದಿ ಪುತ್ತ ಸಜಣಾಣೇ ।**

**ಸಂಜಯ ತವ ಧಮ್ಮ ಕಣಕಾ, ಘುಸಿ ಪಖಿಣಾಯ ಪಮಾಣ ಸುದಿಟ್ಠೀ ॥೭೧॥**

**ಗಾಥಾರ್ಥ :-** ಉಕ್ತ ಒಂಭತ್ತು ಸ್ಥಾನಗಳು ಒರೆಗಲ್ಲಿನ ಸಮಾನವಿವೆ. ಪತಿ, ಪತ್ನಿ, ಪುತ್ರ-ಮಿತ್ರ, ಅನೇಕ ಸಜ್ಜನರು, ಸಂಯಮ, ತಪ, ಧರ್ಮ-ಮೊದಲಾದವೆಲ್ಲವೂ ಸುವರ್ಣದ ಸಮಾನವಿದೆ; ಇವೆಲ್ಲವನ್ನು ಶುದ್ಧದೃಷ್ಟಿಯ ಜೀವನು ನಯ-ಪ್ರಮಾಣಗಳ ಮಾಧ್ಯಮದಿಂದ ಉಜ್ಜಿ ಪರೀಕ್ಷಿಸುತ್ತಾನೆ.

**ಭಾವಾರ್ಥ :-** ಹಿಂದಿನ ೭೦ನೇ ಗಾಥೆಯ ರಾಜಭಯ, ರೋಗ, ದರಿದ್ರತೆ, ಭೋಜನದ ಅಭಾವ, ಅಸತ್ಕಾರ ಸರಳತೆ, ವೃದ್ಧತೆ, ಶರೀರದ ಅಶಕ್ತತೆ, ಇಂದ್ರಿಯಗಳ ಬಲಹೀನತೆ-ಇವು ಒಂಭತ್ತು ಸ್ಥಾನಗಳು ಒರೆಗಲ್ಲಿನ ಸಮಾನವಿವೆ. ಈ ಕಾರಣಗಳ, ಪರಿಸ್ಥಿತಿಗಳು ಉಪಸ್ಥಿತವಾದ ಮೇಲೆ ಧರ್ಮ-ಕರ್ಮ ಸಂಬಂಧದ ಪದಾರ್ಥಗಳ ರೂಪದ ಚಿನ್ನದ

ಪರೀಕ್ಷೆ ಮಾಡಬೇಕಾಗುವುದು. ಪತ್ನಿಯು ಇಂಥ ಪರಿಸ್ಥಿತಿಗಳಲ್ಲಿ ಪತಿಯನ್ನು ಪರೀಕ್ಷಿಸುವುದು; ಪತಿಯು ಪತ್ನಿಯನ್ನು ಇಂಥ ಪರಿಸ್ಥಿತಿಗಳಲ್ಲಿ ಪರೀಕ್ಷಿಸಬೇಕು. ಸ್ನೇಹಿತನು ಸ್ನೇಹಿತನ ಪರೀಕ್ಷೆಯನ್ನು ಇಂಥ ಪರಿಸ್ಥಿತಿಗಳಲ್ಲಿ ಮಾಡುವುದು. ಸಹೋದರರನ ಪರೀಕ್ಷೆಯನ್ನು ಸಹೋದರನು ಮಾಡುವುದು. ಪುತ್ರನು ಇಂಥ ಪರಿಸ್ಥಿತಿಗಳಲ್ಲಿ ಪಿತನ ಪರೀಕ್ಷೆ ಮಾಡುವುದು, ಪಿತನು ಇಂಥ ಪರಿಸ್ಥಿತಿಗಳಲ್ಲಿ ಪುತ್ರನ ಪರೀಕ್ಷೆ ಮಾಡುವುದು. ಸೇವಕನು ಒಡೆಯನ ಮತ್ತು ಒಡೆಯನು ಸೇವಕನ ಪರೀಕ್ಷೆಯನ್ನು ಇಂಥ ಪರಿಸ್ಥಿತಿಗಳಲ್ಲಿ ಮಾಡುವುದು. ಧರ್ಮಕಾರ್ಯಗಳಲ್ಲಿ ತಪಸ್ಸು ಮಾಡುವಾಗ, ಸಂಯಮದ ರಕ್ಷಣೆ ಮಾಡುತ್ತ ತಮ್ಮ ಚಿತ್ತದ ಧೀರತೆಯ ಪರೀಕ್ಷೆಯನ್ನು ಇಂಥ ಪರಿಸ್ಥಿತಿಗಳಲ್ಲಿ ಮಾಡುವುದು ಹೀಗೆ ಹೇಳಲಾದ ಧರ್ಮ-ಕರ್ಮ ಸಂಬಂಧದ ಸಮಸ್ತ ಅಂಗಗಳು ಮೇಲೆ ಹೇಳಿದ ಒಂಭತ್ತು ಪ್ರಸಂಗಗಳಲ್ಲಿ ಒಂದುವೇಳೆ ದೃಢ ಉಳಿದರೆ ಧರ್ಮ-ಕರ್ಮದ ಅಂಗಗಳು ಸತ್ಯವಿವೆಯೆಂದು ತಿಳಿಯುವುದು. ಉಳಿದ ಹಾಗೆ ಪುಣ್ಯದ ಉದಯದಲ್ಲಿಯಂತೂ ತಮ್ಮ ತಮ್ಮ ಸ್ವಾರ್ಥದ ಸಿದ್ಧಿಯ ಸಲುವಾಗಿ ಎಲ್ಲರೂ ಸಹಾಯ ಮಾಡುತ್ತಾರೆ ಮತ್ತು ಧರ್ಮದ ಸೇವನೆಯನ್ನೂ ಮಾಡುತ್ತಾರೆ; ಆದರೆ ಉಪರ್ಯುಕ್ತ ಅಸಹಾಯ ಸ್ಥಿತಿಯಲ್ಲೂ ಈ ಅಂಗಗಳಲ್ಲಿ ದೃಢವಾಗಿರುವಂಥವರು ಧನ್ಯರಿದ್ದಾರೆ.

ಒಂದು ದುಃಖವನ್ನು ಕೂಡ ನಷ್ಟ ಮಾಡುವ ಸಲುವಾಗಿ ತಮ್ಮ ತಮ್ಮ ಕಲ್ಪನೆಯ ಅನುಸಾರ ಯಾವ ಉಪಾಯ ಹೇಳಲಾಗುತ್ತದೆ, ಅವನ್ನು ಹೇಳುತ್ತಾರೆ,-

**ವೈದ್ಯೋ ಕಥಯತ ರೋಗೋ, ಭೂತೋ ಚಯಟಕ ಗಹಣ ಮಂತೀಏ ।**
**ಪೂರ್ವೋ ಪಾಜ್ಜಯ ಣಾಂಣಯ, ಏಕ ಗದ ಜಥಾ ದಿಟ್ಠಿ ಭಾಸಂತೀ ॥೭೨॥**

**ಗಾಥಾರ್ಥ :-** ಈ ಜೀವನಿಗೆ ಪಾಪದ ಉದಯದಿಂದ ಒಂದುವೇಳೆ ಯಾವುದೋ ರೋಗವಾಗಿ ಹೋದರೆ ಈ ಜಗತ್ತಿನ ಚತುರ ಜೀವಗಳು ತಮ್ಮ ದೃಷ್ಟಿಯ ಅನುಸಾರ ಆ ದುಃಖದ ಕಥನ ಮಾಡುತ್ತಾರೆ.

ನಾವು ದುಃಖಿಯಾಗಿರಲು ಕಾರಣವೇನು ? - ಎಂದು ಯಾವನೋ ವೈದ್ಯನನ್ನು ಕೇಳಿದರೆ, ಅವನು ಜ್ವರ, ಕೆಮ್ಮು, ವಾತ, ಶ್ವಾಸ ಮೊದಲಾದ ರೋಗವೆಂದು ಹೇಳುತ್ತಾನೆ.

ನಾವು ಏಕೆ ದುಃಖಿಯಾಗಿದ್ದೇವೆ ? - ಎಂದು ಯಾವನೋ ಮಂತ್ರವಾದಿಯನ್ನು ಕೇಳಿದರೆ, ಅವನು - ನಿನಗೆ ಯಾವುದೋ ಬೇರೆಯೇ ಗೊಂದಲವಿದೆ. ಬಲಶಾಲಿ ಭೂತ-ಪ್ರೇತದ ಜಾಲದಲ್ಲಿ ಬಂಧಿಸಿರುವೆ. ನಾವು ಮಂತ್ರ, ತಂತ್ರ, ತಾಯಿತ ಮಾಡಿ ಕೊಡುವೆವು ಅದರಿಂದ ಎಲ್ಲವೂ ಶಾಂತವಾಗಿ ನಿನಗೆ ಸುಖವಾಗುವುದೆಂದು ಹೇಳುತ್ತಾನೆ.

ನಾವು ದುಃಖಿಯಾಗಿರಲು ಕಾರಣವೇನು ? ಎಂದು ಯಾವನೋ ನಿಮಿತ್ತ ಜ್ಞಾನಿಯನ್ನು ವಿಚಾರಿಸಿದರೆ, ಅವನು ನಿನ್ನ ಮೇಲೆ ಶನಿ, ಮಂಗಳ ಮೊದಲಾದ ಗ್ರಹಗಳ ಕ್ರೂರ ದೃಷ್ಟಿಯಿದೆ, ಅದರಿಂದ ಮಾಡಲ್ಪಟ್ಟ ಖೇದವಿದೆ, ಅದಕ್ಕಾಗಿ ಅವರ ಪೂಜೆ ಮಾಡುವುದರಿಂದ, ದಾನ ಕೊಡುವುದರಿಂದ ವಿಶಿಷ್ಟ ನಕ್ಷತ್ರದಲ್ಲಿ ಅನುಕೂಲವಾಗುವುದೆಂದು ಹೇಳುತ್ತಾನೆ.

ಸಂಸಾರ ಭ್ರಮಣದ ಕಾರಣವನ್ನು ತಿಳಿಯುವಂಥ, ಪುಣ್ಯ-ಪಾಪದ ತಿಳಿವಳಿಕೆಯುಳ್ಳ ಯಾರೋ ತತ್ತ್ವಜ್ಞಾನೀ ಸಮ್ಯಗ್ದೃಷ್ಟಿ ಧರ್ಮಾತ್ಮರಲ್ಲಿ ತಮ್ಮ ದುಃಖದ ಕಾರಣ ವಿಚಾರಿಸಿದ ಮೇಲೆ, ಸಮತೆಯ ರಸದಲ್ಲಿ ಮುಳುಗಿ ಹೋದ ಅವರು, ಎಲೈ ಭವ್ಯನೇ ! ಯಾವುದೋ ಪೂರ್ವೋಪಾರ್ಜಿತ ಪಾಪದ ಅಶುಭಫಲರೂಪ ಉದಯದಿಂದ ನಿನಗೆ ಈ ಭವದಲ್ಲಿ ದುಃಖವಾಗುತ್ತಿದೆ; ಆದುದರಿಂದ ಎಲೈ ವಿವೇಕಿಯೇ ! ನೀನು ಪಾಪದ ಫಲವನ್ನು ಹೀಗೆ ದುಃಖದಾಯಕವೆಂದು ತಿಳಿದುಕೊಂಡು ಈಗ ಪಾಪ ಮಾಡಬೇಡ - ಪುನಃ ಪರಭವದಲ್ಲಿ ದುಃಖವಾಗುವಂಥ

ಪರಿಣಾಮ ಮಾಡಬೇಡ; ಸುಖಿಯಾಗುವ ಸಲುವಾಗಿ ಧರ್ಮದ ಸೇವನೆಮಾಡು, ಅದರಿಂದ ಮುಂದೆ ಸುಖಿಯಾಗುವೆಯೆಂದು ಧರ್ಮಾತ್ಮನು ಹೇಳುತ್ತಾನೆ.

ಈ ಪ್ರಕಾರ ವಿದ್ಯಮಾನ ದುಃಖವನ್ನು ದೂರ ಮಾಡುವ ಸಲುವಾಗಿ ಯಾರು ಬೇಕಾದವರನ್ನು ಕೇಳಿದರೂ ಅವರು ತಮ್ಮ-ತಮ್ಮ ದೃಷ್ಟಿಯ ಅನುಸಾರ ಯಾವ ವಸ್ತುವಿನ ಅತಿಶಯತೆಯಲ್ಲಿ ಯಾರ ಚಿತ್ತವು ರಂಜಾಯಮಾನವಾಗುತ್ತದೆ, ಅದುವೇ ಆ ಜೀವನಿಗೆ ಸಹಾಯಕಾರಕ ಭಾಸಿತವಾಗುತ್ತದೆ; ಅದೇ ಪ್ರಕಾರ ಯಾರ ಜ್ಞಾನವು ಎಂಥದಿತ್ತು ಅದರ ಅನುಸಾರವೇ ಅವರು ಉಪಚಾರ ಹೇಳಿದರು. ವಿವೇಕಿಗಳು ಅವರೆಲ್ಲರ ವಚನಗಳನ್ನಾಲಿಸಿ ಧರ್ಮಾತ್ಮನ ವಚನವನ್ನು ಸತ್ಯವೆಂದು ತಿಳಿದು, ಶ್ರದ್ಧೆಮಾಡಿ, ಪಾಪದ ಫಲವನ್ನು ದುಃಖವೆಂದು ತಿಳಿದುಕೊಂಡು ಪಾಪಗಳ ತ್ಯಾಗಮಾಡಿ, ಧರ್ಮದ ಸೇವನೆಯಲ್ಲಿ ಪ್ರಯತ್ನ ಮಾಡುತ್ತಾರೆ.

ಈಗ ಯಾರು ಮನೆ-ಕುಟುಂಬಗಳ ತ್ಯಾಗ ಮಾಡಿ, ವೇಷಧಾರಣ ಮಾಡಿದ ಮೇಲೆಯೂ ಮನೆ, ಮಿತ್ರಾದಿಕರನ್ನು ಬಯಸುತ್ತಾರೆ; ಅವರಿಗೆ ಏನು ಹೇಳಬೇಕೆಂಬುದನ್ನು ತಿಳಿಸುತ್ತಾರೆ,-

**ಮಿಂದಯ ತಜಿ ಕುಟ ಇಛಯೇ, ದಾಣೋ ತಜಿ ದೇಣ ಮೂಠ ಜಾಚಂತಿ ॥**

**ಬಂಧು ತಜಿ ಇಛ ಮಿತ್ತೋ, ತವ ಗಯ ಕೋ ಹೋಯ ಸಾಂಗಧರ ಆದಾ ॥೭೩॥**

**ಗಾಥಾರ್ಥ ಃ-** ಮಂದಿರ (ಮನೆ) ಬಿಟ್ಟುಕೊಟ್ಟು ಗುಡಿಸಲಿನ ಇಚ್ಛೆ ಮಾಡುವಂಥ, ದಾನ ಕೊಡುವುದನ್ನು ಬಿಟ್ಟುಕೊಟ್ಟು ಭಿಕ್ಷೆ ಬೇಡುವಂಥ, ಕುಟುಂಬದ ತ್ಯಾಗ ಮಾಡಿ ಮಿತ್ರರನ್ನು ಬಯಸುವಂಥ, ಎಲೈ ಸೋಗುಧಾರಕ ಆತ್ಮನೇ ! ನಿನ್ನ ಗತಿಯೇನಾಗುವುದು ?

**ಭಾವಾರ್ಥ ಃ-** ಶುಭ ವಿಚಾರದಿಂದ ರಹಿತ, ಇಂದ್ರಿಯ ಸುಖದ ಲೋಭಿ, ಪ್ರಮಾದಿಯಾದ ಯಾವನೋ ಮುಗ್ಧ ಜೀವನು ಮನೆಯಲ್ಲಿನ ಅನೇಕ ಕ್ಲೇಶಗಳನ್ನು ಕಂಡು, ಉದಾಸನಾಗಿ, ಮನೆಯನ್ನು ಬಿಟ್ಟುಕೊಟ್ಟು ವೇಷಧಾರಣ ಮಾಡುತ್ತಾನೆ. ನಂತರ ವೇಷದ ನಿರ್ವಹಣೆ ಮಾಡುವುದು ಕಠಿಣವೆಂದು ತಿಳಿದು ಯಾಚನೆ ಮಾಡತೊಡಗುತ್ತಾನೆ. ನಂತರ ಗುಡಿಸಲು, ಚಪ್ಪರ, ಮಂದಿರ ನಿರ್ಮಿಸುತ್ತಿರುವುದನ್ನು ಕಂಡು, ಇತರರೊಂದಿಗೆ ಸ್ನೇಹ ಮಾಡುತ್ತಿರುವುದನ್ನು ಕಂಡು ಎಂದರೆ ಈ ರೀತಿ ವಿಪರೀತ ವೇಷವನ್ನು ಕಂಡು ಗುರುಗಳು ದಯಾಪೂರ್ವಕ ಶಿಕ್ಷಣದೊಂದಿಗೆ ಹಿತೋಪದೇಶ ಮಾಡುತ್ತಾರೆ,-

ಎಲೈ ಭವ್ಯನೇ ! ನೀನು ನಿನ್ನ ಪುಣ್ಯದ ಅನುಸಾರ ಮಂದಿರ(ಮನೆ)ಯಲ್ಲಿ ಇರುತ್ತಿದ್ದೆ, ಅದನ್ನು ಬಿಟ್ಟುಕೊಟ್ಟು ಯೋಗ ಧಾರಣ ಮಾಡಿದೆ, ಈಗ ನೀನು ಮಂದಿರ ನಿರ್ಮಾಣ ಮಾಡಿಸಲು ಬಯಸುತ್ತಿರುವೆ, ಹುಲ್ಲಿನ ಗುಡಿಸಲು ಮತ್ತು ಹಂದರ (ಮೇಲ್ಹಾವಣಿ) ನಿರ್ಮಿಸುವ ಸಲುವಾಗಿ ಅನ್ಯರ ಆಶ್ರಯ ಹುಡುಕುತ್ತ ತಿರುಗುತ್ತಿರುವೆ. ಹೀಗಿದ್ದರೆ ಸೋದರನೇ ! ನಿನ್ನ ಮನೆಯನ್ನು ಬಿಟ್ಟಿರುವುದೇಕೆ ? ಎಲೈ ಭವ್ಯನೇ ! ಆಗ ನೀನು ನಿನ್ನ ಮನೆಯಲ್ಲಿ ಇತರರಿಗೆ ಸ್ಥಾನಕೊಟ್ಟು ಸಹಾಯ ಮಾಡುತ್ತಿದ್ದೆ, ಈಗ ಮನೆಯನ್ನು ಬಿಟ್ಟುಕೊಟ್ಟು ಗುಡಿಸಲು ಕಟ್ಟಿಕೊಳ್ಳುವ ಸಲುವಾಗಿ ದೀನನಾಗಿ ಸುತ್ತುತ್ತಿರುವೆ. ಮೊದಲಂತೂ ನೀನು ಮನೆ ಬಿಡುವುದು ಯೋಗ್ಯವಿರಲಿಲ್ಲ. ಆದಾಗ್ಯೂ ಈಗ ಬಿಟ್ಟೇ ಬಿಟ್ಟಿರುವೆಯೆಂದ ಮೇಲೆ ವನದಲ್ಲಿ ವಿಹಾರ ಮಾಡುವುದು ಯೋಗ್ಯವಿದೆ; ಗುಹೆ, ವೃಕ್ಷದ ಪೊಟರೆ, ಸ್ಮಶಾನದಲ್ಲಿ ಇರುವುದು, ಕುಳಿತುಕೊಳ್ಳುವುದು ಯೋಗ್ಯವಿದೆ. ನಿನ್ನಲ್ಲಿ ಅಂಥ ಶಕ್ತಿಯು ಇಲ್ಲದಿದ್ದರೆ ನೀನು ಮನೆಯ ತ್ಯಾಗ ಮಾಡುವುದು ಯೋಗ್ಯವಿರಲಿಲ್ಲ.

ಎಲೈ ಭವ್ಯನೇ ! ವಿಚಾರಮಾಡು !! ನಿನ್ನ ಮನೆಯಲ್ಲಿ ನೀನು ದಯೆಯ ಭಾವದೊಂದಿಗೆ ಯಥಾಶಕ್ತಿ ದೀನ-ದುಃಖಿಗಳಿಗೆ ದಾನ ಕೊಡುತ್ತ ಅವರ ಪೋಷಣೆ ಮಾಡುತ್ತಿದ್ದೆ. ಈಗ ನೀನು ಮನೆಯಲ್ಲಿ ದಾನ ಕೊಡುವುದನ್ನು

ಬಿಟ್ಟು, ಅದರಿಂದ ವಿಪರೀತ ಸ್ವಯಂ ದೀನವಾಗಿ ಭಿಕ್ಷೆ ಬೇಡುತ್ತ ಮನೆ-ಮನೆ ತಿರುಗುತ್ತಿರುವೆ - ಇದು ನಿನ್ನ ಸಲುವಾಗಿ ಉಚಿತವಿಲ್ಲ. ನೀನು ಅಯಾಚಕನಾಗಿರುವುದು ಯೋಗ್ಯವಿದೆ. ಸೋದರನೇ ! ಇನ್ನೂ ಹೇಳಬೇಕೆಂದರೆ - ಮೋಹ ಮಾಡುವಂಥ ಮನೆಯಲ್ಲಿರುವ ತಾಯಿ-ತಂದೆ, ಪತ್ನಿ-ಪುತ್ರ, ಸಹೋದರ, ಸಜ್ಜನ ಮಿತ್ರಾದಿಕರನ್ನು ಬಿಟ್ಟುಕೊಟ್ಟು ಈಗ ವೇಷಧಾರಣ ಮಾಡಿ ಅನ್ಯಗೃಹಸ್ಥರಿಗೆ ಸಂಬೋಧನೆ ನೀಡುತ್ತ, ಅವರ ಸೇವೆ ಮಾಡಿ-ವಿನಯ ಮಾಡಿ ಅವರೊಂದಿಗೆ ಸ್ನೇಹವನ್ನು ಹೆಚ್ಚಿಸುತ್ತ ಮೋಹದ ಬಂಧನದಲ್ಲಿ ಪುನಃ ಬಂಧಿಸ ಬಯಸುವೆಯೇನು ? ಅವರಂತೂ ನಿನ್ನೊಂದಿಗೆ ಮೋಹ ಮಾಡುವುದಿಲ್ಲ; ಎಂದರೆ ನಿನಗೆ ಒಂದುವೇಳೆ ಮೋಹವನ್ನೇ ಬೆಳೆಸುವುದಿದ್ದರೆ ನಿನಗೆ ಮನೆಯತ್ಯಾಗ ಮಾಡುವುದು ಯೋಗ್ಯವಿರಲಿಲ್ಲ. ಈಗ ಮನೆಯನ್ನು ತ್ಯಾಗ ಮಾಡಿರುವೆಯೆಂದ ಮೇಲೆ ನಿರ್ಮೋಹಿಯಾಗಿರುವುದು ಯೋಗ್ಯವಿದೆ.

ಈ ಪ್ರಕಾರ ಎಲೈ ಅಜ್ಞಾನಿಯೇ ! ಎಲೈ ಮುಗ್ಧನೇ ! ನೀನು ಮನೆಯನ್ನು ಬಿಟ್ಟುಕೊಟ್ಟು ಮಂದಿರ ನಿರ್ಮಾಣ ಮಾಡುತ್ತಿರುವೆ, ದಾನ ಕೊಡುವುದನ್ನು ಬಿಟ್ಟುಕೊಟ್ಟು ಅದರಿಂದ ವಿಪರೀತವಾಗಿ ಯಾಚನೆ ಮಾಡುತ್ತಿರುವೆ, ನಿನ್ನ ಮನೆಯ ಕುಟುಂಬದವರ ಮೋಹವನ್ನು ಬಿಟ್ಟುಕೊಟ್ಟು ಇತರರೊಂದಿಗೆ ಸ್ನೇಹ ಮಾಡುತ್ತ ತಿರುಗುತ್ತಿರುವೆ; ನಿನ್ನ ಈ ಬಹುರೂಪಿಗಳಂಥ ವಿವಿಧ ಸೋಗಗಳನ್ನು ನೋಡಿ ನಮಗೆ ಆಶ್ಚರ್ಯವಾಗುತ್ತಿದೆ. ಮುಂದೆ ನಿನ್ನ ಗತಿಯೇನಾಗುವುದೆಂಬುದನ್ನು ನಾವಂತೂ ತಿಳಿಯುವುದಿಲ್ಲ, ಅದನ್ನು ಅಂತರ್ಯಾಮಿಗಳು ತಿಳಿಯುತ್ತಾರೆ. ವಿವೇಕವಂತರು ತ್ಯಾಗ ಮಾಡಿದ ನಂತರ ಪುನಃ ಗ್ರಹಣ ಮಾಡುವುದು ಯೋಗ್ಯವಿಲ್ಲವೆಂಬ ಶಿಕ್ಷಣವನ್ನು ಗುರುಗಳು ಉತ್ತಮ ಜೀವರುಗಳಿಗೆ ಕೊಡುತ್ತಾರೆ. ಒಮ್ಮೆ ತ್ಯಾಗ ಮಾಡುವುದು, ಒಮ್ಮೆ ಅಂಗೀಕಾರ ಮಾಡುವುದು - ಇಂಥ ತಪವನ್ನಂತೂ ಮಕ್ಕಳ ಆಟದಂತೆ ಅಥವಾ ಅಭಿನಯಕಾರನು ಸೋಗು ಧಾರಣ ಮಾಡುವ ಸಮಾನವೆಂದು ತಿಳಿಯುವುದು. ಇದನ್ನು ಅರಿತುಕೊಂಡು ವಿವೇಕವುಳ್ಳ ಜೀವರುಗಳು ಧರ್ಮಕಾರ್ಯ ಮಾಡುವ ಮೊದಲೇ ಗಂಭೀರಪೂರ್ವಕ ವಿಚಾರ ಮಾಡಿ ಅದನ್ನು ಮಾಡುವುದು ಯೋಗ್ಯವಿದೆ.

ಈಗ ಯಾವ ವಸ್ತುವನ್ನು ಬಿಟ್ಟುಕೊಟ್ಟು ಯಾವ ವಸ್ತುವನ್ನು ಇಟ್ಟುಕೊಳ್ಳಬೇಕೆಂಬುದನ್ನು ಹೇಳುತ್ತಾರೆ-

**ಪುರ ತಜ್ಜೇ ಧಣ ಕಜ್ಜಯ, ಸಹಧಣ ತಜ್ಜೇಯ ಕಾಜಕುಲರಕ್ಖೋ ।**
**ಕುಲ ತಜ್ಜಯ ತಣ ಕಜ್ಜಯ ಪುರಧಣಕುಲಕಾಯ ತಜ್ಜ ಧಮ್ಮಕಜ್ಜಾಯ ॥೭೪॥**

**ಗಾಥಾರ್ಥ :-** ಧನದ ಸಲುವಾಗಿ ನಗರದ ತ್ಯಾಗ ಮಾಡಬೇಕಾಗುವುದು, ಕುಲದ ರಕ್ಷಣೆಯ ಸಲುವಾಗಿ ಆ ಧನವನ್ನು ಬಿಟ್ಟುಕೊಡಬೇಕಾಗುವುದು. ಶರೀರದ ರಕ್ಷಣೆಯ ಸಲುವಾಗಿ ಕುಲವನ್ನು ಬಿಟ್ಟುಕೊಡಬೇಕಾಗುವುದು. ಧರ್ಮದ ಸಲುವಾಗಿ ನಗರ, ಧನ, ಕುಲ ಮತ್ತು ಕಾಯದ ತ್ಯಾಗವನ್ನೂ ಮಾಡಬೇಕಾಗುವುದು.

**ಭಾವಾರ್ಥ :-** ಜಗತ್ತಿನ ಜೀವರುಗಳು ಕುಟುಂಬದ ಮೋಹದಲ್ಲಿ, ಮಾನಾದಿಗಳನ್ನು ಪುಷ್ಟ ಮಾಡುವ ಸಲುವಾಗಿ ಪರಂಪರಾರೂಪದಲ್ಲಿ ಮುಂದೆಯೂ ತನ್ನನ್ನು ಸುಖಿಯಾಗಿರಿಸುವ ಸಲುವಾಗಿ ಇತ್ಯಾದಿ ಕಾರ್ಯಗಳ ಸಲುವಾಗಿ ಧನವನ್ನು ಸಹಾಯಕಾರಕ, ಸುಖಕಾರಕವೆಂದು ತಿಳಿದು ಅದರ ಉತ್ಪತ್ತಿಯ ಎಂದರೆ ಹಣ ಸಂಪಾದನೆಯ(ಗಳಿಸುವ) ಸಲುವಾಗಿ ಈ ವಿವೇಕಿಯು ತನ್ನ ಬುದ್ಧಿಯ ಬಲದ ಮೇಲೆ ಪುಣ್ಯದ ಸಹಾಯತೆಯಿಂದ ಮನೆಬಿಟ್ಟು ದ್ವೀಪಾಂತರ, ಸಮುದ್ರ, ವನ ಇತ್ಯಾದಿ ವಿಷಮ ಸ್ಥಾನಗಳಲ್ಲಿ ಪ್ರವೇಶ ಮಾಡಿ, ಅನೇಕ ಕಷ್ಟಗಳ ಸಹನೆ ಮಾಡಿ, ಕ್ಷುಧೆ, ತೃಷೆ, ಶೀತ, ಉಷ್ಣ ಇತ್ಯಾದಿ ಅನೇಕ ಕಷ್ಟಗಳನ್ನು ಸಹಿಸಿ ಧನ ಸಂಪಾದನೆ ಮಾಡುತ್ತಾನೆ - ಈ ಪ್ರಕಾರ ಧನದ ಸಲುವಾಗಿ ಮನೆಯನ್ನು ಬಿಟ್ಟು ಕೊಡುವುದೆಂಬ ಉಕ್ತಿಯು ಪ್ರಸಿದ್ಧವಿದೆ.

ದೇಶಾಂತರಕ್ಕೆ ಹೋಗಿ ಧನ ಸಂಪಾದನೆ ಮಾಡಿ ತರುವುದರಿಂದ ಧನವಾಗುತ್ತದೆ. ಹೀಗೆ ಕಷ್ಟ ಸಹಿಸಿ

ಸಂಪಾದಿಸಲ್ಪಟ್ಟ ಧನವನ್ನು ಕೂಡ ಕುಲ-ಕುಟುಂಬದ ರಕ್ಷಣೆಯ ಸಲುವಾಗಿ ಖರ್ಚು ಮಾಡಲಾಗುತ್ತದೆ. ಯಾವುದಾದರೂ ಪ್ರಸಂಗವು ಬಂದೊದಗಿದ ಮೇಲೆ ಧನವನ್ನೆಲ್ಲ ಕೊಟ್ಟರೆ ಕುಲ-ಕುಟುಂಬದ ರಕ್ಷಣೆಯಾಗುತ್ತಿದ್ದರೆ ಧನವನ್ನು ಕೊಟ್ಟು ಕೂಡ ಕುಟುಂಬವನ್ನು ಉಳಿಸಿಕೊಳ್ಳಬೇಕು - ಕುಲ ಕುಟುಂಬದ ರಕ್ಷಣೆಯ ಸಲುವಾಗಿ ಧನದ ತ್ಯಾಗ ಮಾಡಬೇಕು. ಯಾವುದೋ ವಿಶಿಷ್ಟ ಪ್ರಸಂಗವು ಬಂದು ಬಿಟ್ಟರೆ ತನುವಿನ ರಕ್ಷಣೆಯ ಸಲುವಾಗಿ ಕುಲ-ಕುಟುಂಬವನ್ನು ಬಿಟ್ಟುಕೊಡಲಾಗುತ್ತದೆ ಮತ್ತು ಒಮ್ಮೊಮ್ಮೆ ಧರ್ಮದ ಪ್ರಯೋಜನವು ಬಂದು ಬಿಟ್ಟರೆ ಧರ್ಮ ರಕ್ಷಣೆಯ ಸಲುವಾಗಿ ಕುಲ, ನಗರ, ಧನ ಎಲ್ಲವನ್ನೂ ಬಿಟ್ಟು ಕೊಡಬೇಕಾಗುವುದು. ಒಂದುವೇಳೆ ಶರೀರಾದಿಗಳನ್ನು ಬಿಡುವುದರಿಂದ ಧರ್ಮವು ಉಳಿಯುತ್ತಿದ್ದರೆ ಶರೀರ ಮೊದಲಾದ ಎಲ್ಲವನ್ನೂ ಬಿಟ್ಟುಕೊಟ್ಟು ಕೂಡ ತಮ್ಮ ಧರ್ಮದ ರಕ್ಷಣೆ ಮಾಡಬೇಕಾಗುವುದು.

**ಸಂದೇಹ :-** ಕಾಯ ಮೊದಲಾಗಿ ಎಲ್ಲವನ್ನೂ ಬಿಟ್ಟುಕೊಟ್ಟು ಧರ್ಮವನ್ನು ಕಾಯ್ದುಕೊಳ್ಳಬೇಕೆಂದು ತಾವು ಹೇಳುತ್ತಿರುವಿರಿ; ಆದರೆ ಕಾಯವು ನಷ್ಟವಾಗಿ ಹೋದ ಮೇಲೆ ಧರ್ಮವು ಹೇಗೆ ಉಳಿಯುವುದು ? ಲೋಕದಲ್ಲಿಯೂ 'ಕಾಯವಿದ್ದರೆ ಧರ್ಮವಿರುವುದೆ'ಂಬ ಉಕ್ತಿಯಿದೆ. ಶರೀರವನ್ನು ಕಾಯ್ದುಕೊಂಡರೆ ಧರ್ಮವಿರುತ್ತದೆ ಎಂದಿರುವಾಗ ಕಾಯವು ನಷ್ಟವಾದ ಮೇಲೆ ಧರ್ಮವಿರುತ್ತದೆ - ಎಂದು ಹೇಗೆ ಹೇಳುತ್ತಿರುವಿರಿ ?

**ಸಮಾಧಾನ :-** ಎಲೈ ಭವ್ಯಾತ್ಮನೇ ! ನೀನು ಕೇಳುತ್ತಿರುವುದು ಸತ್ಯವಿದೆ. ನಿನ್ನ ಪ್ರಶ್ನೆಯು ನಮ್ಮ ಉಪದೇಶದೊಂದಿಗೆ ಹೊಂದಿಕೆಯಾಗುವಂಥದ್ದೇ ಇದೆ. ಜಗತ್ತಿನಲ್ಲಿ ಹೇಳುತ್ತಿರುವುದೂ ಪ್ರಮಾಣವಿದೆ, ಸತ್ಯವಿದೆ; ಆದರೆ ಮುಗ್ಧ ಜೀವರುಗಳು ಇದರ ರಹಸ್ಯವನ್ನು ತಿಳಿಯುವುದಿಲ್ಲ. 'ಕಾಯವಿದ್ದರೆ ಧರ್ಮ'ವೆಂದು ಹೇಳುವ ಲೌಕಿಕ ಸತ್ಯದ ಸ್ವರೂಪವನ್ನು ಮುಂದೆ ಹೇಳಲಾಗುವುದು. ಜಗತ್ತಿನ ಮುಗ್ಧರು 'ತಮ್ಮ ಶರೀರವನ್ನು ಕಾಯ್ದುಕೊಳ್ಳುವುದು ಧರ್ಮವಿದೆ' - ಎಂದು ಹೇಳುತ್ತಾರೆ, ಅದರ ಅರ್ಥವು ಹಾಗಿಲ್ಲ.

ತಮ್ಮ ಕಾಯವನ್ನು ಕಾಯ್ದುಕೊಂಡ ಮೇಲೆ ಧರ್ಮವು ಹೇಗೆ ಉಳಿಯುವುದು ? - ಎಂಬುದನ್ನೇ ಹೇಳುತ್ತೇವೆ. ಎಲೈ ಭವ್ಯನೇ ! ನೀನು ಚಿತ್ತದ ಸ್ಥಿರತೆಯಿಂದ ಆಲಿಸು ! ಅನೇಕ ಜೀವರುಗಳ ಸಂದೇಹವನ್ನು ನಾಶ ಮಾಡುವಂಥ ಮತ್ತು ನಿನ್ನ ಸಂದೇಹ ದೂರವಾಗುವಂಥ ಒಳ್ಳೆಯ ಪ್ರಶ್ನೆಯು ನಿನ್ನದಿದೆ. ನೀನು ಇದರ ಉತ್ತರವನ್ನು ಸಾವಧಾನತೆಯೊಂದಿಗೆ ಚಿತ್ತವನ್ನು ಸ್ಥಿರಗೊಳಿಸಿ ಆಲಿಸುವುದು.

ಒಬ್ಬ ಶೂರ-ವೀರನಿದ್ದನು, ಅವನನ್ನು ಯಾವನೋ ಮಹಾಯೋಧನು ಬಂದು ಆಹ್ವಾನಿಸುತ್ತ, ಆ ಶೂರವೀರನು ಎಲ್ಲಿದ್ದಾನೆ ? ಯಾವನ ಹೆಸರನ್ನು ನಾನು ಕೇಳಿದ್ದೇನೆ ಅವನು ಮಹಾಯೋಧನಿದ್ದರೆ ನಿಜವಾಗಿ ಶೂರವೀರನಿದ್ದರೆ ಬಂದು ನನ್ನೊಡನೆ ಯುದ್ಧ ಮಾಡಲಿ- ಎನ್ನುತ್ತಾನೆ. ಅವನ ಕೈಯಲ್ಲಿ ಶಸ್ತ್ರವಿದೆ, ಅವನು ಕಾಣುತ್ತಿದ್ದಂತೆಯೇ ಸಾಯಿಸಿ ಬಿಡುತ್ತಾನೆ. ಅಂಥ ಪರಿಸ್ಥಿತಿಯಲ್ಲಿ ಆ ಶೂರ-ವೀರನು ಏನು ಮಾಡಬೇಕು ? ಅವನ ಧರ್ಮವು ಹೇಗೆ ಉಳಿಯುವುದು ? ಈ ಶತ್ರುವಿನ ಎದುರಿಗೆ ಬಂದು ಯುದ್ಧದಲ್ಲಿ ತನ್ನ ಕಾಯವನ್ನು ಶಸ್ತ್ರಗಳಿಂದ ಛಿನ್ನ-ಭಿನ್ನಾಗಿಸಿಕೊಂಡು ಸಾಯುವುದರಿಂದ ಧರ್ಮ ಉಳಿಯುವುದೇನು ? ಅಥವಾ ಓಡಿ ಹೋಗಿ ಶರೀರವನ್ನು ರಕ್ಷಿಸಿಕೊಳ್ಳುವುದರಿಂದ ಧರ್ಮ ಉಳಿಯುವುದು ? - ಎಂಬುದನ್ನು ನೀನು ಹೇಳು ನೋಡೋಣ.

ಆಗ ಅವನು ಹೇಳುತ್ತಾನೆ - ಓಡಿಹೋಗುವುದರಿಂದಂತೂ ನಿಂದೆಯಾಗುವುದು. ಶೂರ-ವೀರನ ಧರ್ಮವಂತೂ ಸತ್ತು ಹೋಗುವುದರಲ್ಲಿಯೇ ಇದೆ. ಎಲೈ ಭವ್ಯನೇ ! ಇಲ್ಲಿ ತನ್ನ ಕಾಯದ ರಕ್ಷಣೆಯಿಂದ ಧರ್ಮವಾಗುತ್ತದೆಯೆಂದು ಹೇಳುವ ಮಾತು ಅಸತ್ಯವಾಯಿತು. ತನ್ನ ಕಾಯವನ್ನು ಕಾಯ್ದುಕೊಳ್ಳುವುದರಲ್ಲಿಯೇ ಧರ್ಮವಿದ್ದರೆ ಆ ಶೂರ-ವೀರನು ಸತ್ತು ಹೋಗುವುದಿಲ್ಲ. ಅದರಿಂದ ವಿವೇಕವಂತರು ಧರ್ಮದ ರಕ್ಷಣೆಯ

ಸಲುವಾಗಿ ಕಾಯದ ತ್ಯಾಗ ಮಾಡಿಯೂ ಧರ್ಮವನ್ನು ಕಾಯ್ದುಕೊಳ್ಳುತ್ತಾರೆಂದು ತಿಳಿಯುವುದು. ಈ ಪ್ರಕಾರ ಧರ್ಮದ ಸಲುವಾಗಿ ನಗರ, ಧನ, ಕುಲ, ಕಾಯ-ಎಲ್ಲವುಗಳ ತ್ಯಾಗ ಮಾಡಿಯೂ ಧರ್ಮವನ್ನು ಕಾಯ್ದುಕೊಳ್ಳಬೇಕು.

ಇನ್ನು 'ಕಾಯವನ್ನು ರಕ್ಷಿಸುವುದು ಧರ್ಮವಿದೆ' ಅದು ಶ್ರೇಷ್ಠ ಧರ್ಮವಿದೆಯೆಂದು ನೀನು ಹೇಳಿರುವೆ, ಅದರ ಕುರಿತಾಗಿ ಈಗ ಆಲಿಸು ! ಕಾಯದ ರಕ್ಷಣೆ ಮಾಡುವುದು ಧರ್ಮವಿದೆ - ಎನ್ನುವುದು ಕೂಡ ಜಿನೇಂದ್ರ ದೇವರ ಉಪದೇಶವಿದೆ; ಆದರೆ ಜ್ಞಾನಾಂಧ ಪ್ರಾಣಿಗಳು ಇದರ ರಹಸ್ಯವನ್ನು ತಿಳಿಯುವುದಾಗುವುದಿಲ್ಲ. ಧರ್ಮವಂತೂ ಕಾಯದ ರಕ್ಷಣೆಯಿಂದಲೇ ಆಗುತ್ತದೆ. ಇದರಲ್ಲಿ ಇರುವಂಥ ಭೇದಭಾವವನ್ನು, ಅಂತರ - ರಹಸ್ಯವನ್ನು ಈಗ ಹೇಳಲಾಗುವುದು - ಕಾಯದ ಭೇದಗಳು ಆರು ಇವೆ. ಈ ಷಟ್‌ಕಾಯಗಳ ರಕ್ಷಣೆಯೇ ಧರ್ಮವಿದೆ. ಪೃಥ್ವೀಕಾಯ, ಜಲಕಾಯ, ಅಗ್ನಿಕಾಯ, ವಾಯುಕಾಯ, ವನಸ್ಪತಿಕಾಯ, ತ್ರಸಕಾಯ - ಇವು ಷಟ್‌ಕಾಯಗಳಿವೆ; ಇವುಗಳ ರಕ್ಷಣೆ ಮಾಡುವುದು ಧರ್ಮವಿದೆ. ಅದನ್ನೇ ವಿಸ್ತಾರದಿಂದ ತಿಳಿಸುತ್ತಾರೆ.

ಭೂಮಿರೂಪದ ಪೃಥ್ವಿಯನ್ನು ಪ್ರಯೋಜನವಿಲ್ಲದೆ ಅಗೆಯಬಾರದು, ಸುಡಬಾರದು, ಕುಟ್ಟಬಾರದು ಇತ್ಯಾದಿಯಾಗಿ ದಯೆಯ ಭಾವದೊಂದಿಗೆ ಪೃಥ್ವಿಕಾಯದ ರಕ್ಷಣೆ ಮಾಡುವುದು, ಹಿಂಸೆ ಮಾಡದಿರುವುದು ಅದು ಪೃಥ್ವಿಕಾಯದ ರಕ್ಷಣೆಯಿದೆ. ಜಲರೂಪದ ಅಪ್‌ಕಾಯವನ್ನು ಪ್ರಯೋಜನವಿಲ್ಲದೆ ಬಳಸದಿರುವುದು-ಖರ್ಚು ಮಾಡದಿರುವುದು, ಎಸೆಯದಿರುವುದು, ಅವಶ್ಯಕತೆಯಿದ್ದ ಮೇಲೆ ತುಪ್ಪ-ಎಣ್ಣೆಯ ಹಾಗೆ ಪ್ರಯತ್ನ, ಸಾವಧಾನತೆಯೊಂದಿಗೆ ಜಲವನ್ನು ಕೆಲಸದಲ್ಲಿ ತಂದುಕೊಳ್ಳುವುದು, ಪ್ರಯೋಜನವಿಲ್ಲದೆ ನಷ್ಟ ಮಾಡದಿರುವುದು ಇತ್ಯಾದಿ ಪ್ರಕಾರದಿಂದ ಜಲಕಾಯದ ರಕ್ಷಣೆ ಮಾಡುವುದು, ಅಗ್ನಿಕಾಯದ ಮಾಧ್ಯಮದಿಂದ ನಿಷ್ಪ್ರಯೋಜನ ಆರಂಭ ಮಾಡದಿರುವುದು, ಆರಿಸದಿರುವುದು, ಉರಿಸದಿರುವುದು, ಅಗ್ನಿಯ ಪ್ರಯೋಜನವಿದ್ದ ಮೇಲೆ ಸಾವಧಾನತೆಯೊಂದಿಗೆ ಕಡಿಮೆಯಲ್ಲಿಯೇ ಕೆಲಸ ಮಾಡುವುದು ಇತ್ಯಾದಿ ಪ್ರಕಾರದಿಂದ ಅಗ್ನಿಕಾಯದ ರಕ್ಷಣೆ ಮಾಡಬೇಕು. ನಿಷ್ಪ್ರಯೋಜನ ಗಾಳಿಯಂತ್ರ (ಫ್ಯಾನ್) ಮೊದಲಾದವು-ವಸ್ತ್ರಾದಿಗಳನ್ನು ಅಲ್ಲಾಡಿಸುವುದು, ಝೂಡಿಸುವ ಮೊದಲಾದ ಕ್ರಿಯೆಗಳಿಂದ ಪವನಕಾಯವನ್ನು ಪೀಡಿಸದಿರುವುದು ಅದು ಪವನಕಾಯದ ರಕ್ಷಣೆಯಿದೆ. ಹುಲ್ಲು, ಎಲೆ, ಬಳ್ಳಿ, ಚಿಕ್ಕಮರ, ದೊಡ್ಡ ಮರ, ಮೊಗ್ಗೆ, ಕಂದ, ಮೂಲ ಇತ್ಯಾದಿ ಹಸಿರು, ಹಸಿ ಪ್ರತ್ಯೇಕ - ಸಾಧಾರಣ ವನಸ್ಪತಿಗಳಿಗೆ ಪ್ರಯೋಜನವಿಲ್ಲದೆ ಕಷ್ಟ ಕೊಡದಿರುವುದು, ತುಂಡರಿಸದಿರುವುದು, ಭೇದಿಸದಿರುವುದು, ಸುಲಿಯದಿರುವುದು, ಎಳೆಯದಿರುವುದು, ಕೈ-ಕಾಲುಗಳಿಂದ ಹೊಸೆದುಹಾಕದಿರುವುದು - ಇತ್ಯಾದಿ ವಿಧದಿಂದ ವನಸ್ಪತಿಕಾಯಗಳ ರಕ್ಷಣೆ ಮಾಡಬೇಕು.

ಹೇನು ಮೊದಲಾದ ದ್ವೀಂದ್ರಿಯ ಕಾಯದ ರಕ್ಷಣೆ ಎಂದರೆ ಜೀವಗಳ ರಕ್ಷಣೆ ಮಾಡುವುದು; ತಿಗಣೆ, ಇರುವೆ ಮೊದಲಾದ ತ್ರೀಂದ್ರಿಯ ಜೀವಗಳ ರಕ್ಷಣೆ ಮಾಡುವುದು; ನೊಣ, ಸೊಳ್ಳೆ, ದುಂಬಿ ಇತ್ಯಾದಿ ಚತುರಿಂದ್ರಿಯ ಜೀವಗಳ ರಕ್ಷಣೆ ಮಾಡುವುದು - ಇವುಗಳ ಘಾತ ಮಾಡದಿರುವುದು; ಆನೆ, ಕುದುರೆ, ನಾಯಿ, ಬೆಕ್ಕು, ಮನುಷ್ಯ, ದೇವ, ನಾರಕಿ ಇತ್ಯಾದಿ ಪಂಚೇಂದ್ರಿಯ ಜೀವಗಳ ಕುರಿತು ಸಮತೆಯ ಭಾವ ಧಾರಣ ಮಾಡಿ, ಅವುಗಳ ರಕ್ಷಣೆಯ ಭಾವವನ್ನಿಟ್ಟುಕೊಳ್ಳುವುದು. ಇವು ನಾಲ್ಕು ಪ್ರಕಾರದ ತ್ರಸ ಜೀವಗಳಿಗೆ ಪೀಡೆ ತಗಲಿಸದಿರುವುದು-ಸತಾಯಿಸದಿರುವುದು ತ್ರಸಕಾಯದ ರಕ್ಷಣೆಯಿದೆ.

ಈ ಪ್ರಕಾರ ಪೃಥ್ವಿ, ಅಪ್, ತೇಜ, ವಾಯು, ವನಸ್ಪತಿ, ತ್ರಸರೂಪ ಷಟ್‌ಕಾಯಿಕ ಜೀವಗಳ ಸಂಬಂಧವಾಗಿರುವ ಕಾಯದ ರಕ್ಷಣೆ ಮಾಡುವುದು, ಅವುಗಳಿಗೆ ತೊಂದರೆ ಕೊಡದಿರುವುದು, ಸಾಯಿಸದಿರುವುದು - ಮನ, ವಚನ, ಕಾಯದಿಂದ ಈ ಷಟ್‌ಕಾಯಿಕಗಳ ರಕ್ಷಣೆ ಮಾಡುವುದು ಧರ್ಮವಿದೆ. ಶ್ರಾವಕನು ಇವುಗಳ ಏಕದೇಶ ರಕ್ಷಣೆ ಮಾಡುತ್ತಾನೆ

ಮತ್ತು ಮುನಿರಾಜರು ಸರ್ವಪ್ರಕಾರದಿಂದ ರಕ್ಷಣೆ ಮಾಡುತ್ತಾರೆ. ಈ ಷಟ್‌ಕಾಯಗಳ ರಕ್ಷಣೆಯು ಮೋಕ್ಷಮಾರ್ಗವಿದೆ, ಧರ್ಮವಿದೆ. ಇದನ್ನೇ ಸಂಕ್ಷೇಪದಲ್ಲಿ 'ಕಾಯವನ್ನು ರಕ್ಷಿಸುವುದು ಧರ್ಮವಿದೆ' ಯೆಂಬುದಾಗಿ ತಿಳಿಯುವುದು.

ಎಲ್ಲಿ ಈ ವಸ್ತುಗಳಿರುವುದಿಲ್ಲ ಆ ದೇಶ-ನಗರವನ್ನು ಬಿಟ್ಟುಕೊಡಬೇಕೆಂದು ಹೇಳುತ್ತಾರೆ,-

**ಜಹಿ ಪುರ ಣಹ ಸತಕಾರೋ, ಣಹ ಬಂಧವ ಣಹ ಮಿತ್ತ ಜಿಣಗೇಹೋ ।**

**ವಿದ್ಯಾಧಮ್ಮ ಣ ಸುಸಂಗೋ, ಸಹ ಪುರ ದೇಸೋ ಯ ಹೇಯ ಬುಧ ಆದಾ ॥೭೫॥**

**ಗಾಥಾರ್ಥ :-** ಯಾವ ನಗರದಲ್ಲಿ ಸತ್ಕಾರವಿಲ್ಲ, ಎಲ್ಲಿ ಬಾಂಧವರಿಲ್ಲ, ಮಿತ್ರರಿರುವುದಿಲ್ಲ, ಜಿನಮಂದಿರವಿರುವುದಿಲ್ಲ, ವಿದ್ಯೆಯಿಲ್ಲ, ಧರ್ಮವಿರುವುದಿಲ್ಲ, ಸತ್ಸಂಗವಿರುವುದಿಲ್ಲ ಆ ನಗರ-ದೇಶವು ಬುದ್ಧಿವಂತರಿಂದ ಬಿಟ್ಟುಕೊಡಲು ಯೋಗ್ಯವಿದೆ.

**ಭಾವಾರ್ಥ :-** ಯಾವ ಅಶುಭ ದೇಶಾದಿಗಳಲ್ಲಿ ವಿವೇಕವಂತರು ಇರಬಾರದೆಂಬುದನ್ನು ಹೇಳುತ್ತಿದ್ದಾರೆ-ಯಾವ ನಗರ-ಸ್ಥಾನದಲ್ಲಿ ತಮ್ಮ ಆದರ-ಸತ್ಕಾರವಾಗುವುದಿಲ್ಲ, ಅಲ್ಲಿ ವಿವೇಕಿಗಳು ಇರಬಾರದು; ಒಂದುವೇಳೆ ಇರುತ್ತಿದ್ದರೆ ಅನಾದರ ಪಡೆಯುತ್ತಾರೆ; ಅನಾದರದಿಂದ ಪರಿಣತಿಯು ಸಂಕ್ಲೇಶರೂಪವಾಗಿ ಹೋಗುವುದರಿಂದ ಪಾಪಬಂಧವಾಗುತ್ತದೆ. ಅದಕ್ಕಾಗಿ ಅಂಥಲ್ಲಿ ವಾಸಿಸದಿರುವುದೇ ಒಳ್ಳೆಯದಿದೆ. ಎಲ್ಲಿ ತಮ್ಮ ಸಹೋದರ-ಬಂಧುವರ್ಗ, ಕುಟುಂಬದವರು, ಸಹಕಾರ ಮಾಡುವಂಥ ಸಜ್ಜನರು ಇರುವುದಿಲ್ಲ; ಅಂಥಲ್ಲಿ ತಾವು ಇರಬಾರದು. ಧರ್ಮದ ಲೋಭಿ ಧರ್ಮಾತ್ಮರಾದ ಸುಜೀವ, ಜಿನಮಂದಿರವಿರುವುದಿಲ್ಲ, ಧರ್ಮದ ಪ್ರವೃತ್ತಿಯಿರುವುದಿಲ್ಲ - ಅಂಥ ಧರ್ಮರಹಿತ ಕ್ಷೇತ್ರದಲ್ಲಿ ವಾಸಿಸಬಾರದು.

ಯಾವ ದೇಶ-ನಗರದಲ್ಲಿ ವಿದ್ಯಾವಂತ ಪಂಡಿತರಿರುವುದಿಲ್ಲ; ಆ ಕ್ಷೇತ್ರದಲ್ಲಿ ಇರಬಾರದು. ಒಂದುವೇಳೆ ಅಂಥಲ್ಲಿ ಇರುತ್ತಿದ್ದರೆ ತಮ್ಮ ಜ್ಞಾನವು ನಷ್ಟವಾಗಿ ಹೋಗುತ್ತದೆ. ಅಜ್ಞಾನೀ ಜೀವರುಗಳ ಸಂಗತಿಯಿಂದ ಸ್ವಯಂ ಅಜ್ಞಾನಿಯಾಗಿ ಹೋಗುತ್ತಾನೆ. ಹೇಗೆ ಗೊಲ್ಲ (ದನಕಾಯುವವ)ನು ಯಾವಾಗಲೂ ಪಶುಗಳ ಜತೆ ಇರುವುದರಿಂದ ಪಶುವಿನ ಸಮಾನ ಅಜ್ಞಾನಿಯಾಗಿರುತ್ತಾನೆ, ಹಾಗೆಂದು ತಿಳಿಯುವುದು.

ಜೀವನಿಗೆ ಒಳಿತನ್ನುಂಟು ಮಾಡುವಂಥ ಶುದ್ಧ ಧರ್ಮದ ಪ್ರವೃತ್ತಿ-ಕ್ರಿಯೆಗಳು ಎಲ್ಲಿ ಇರುವುದಿಲ್ಲ, ಆ ಕ್ಷೇತ್ರದಲ್ಲಿ ಇರಬಾರದು. ಕುಧರ್ಮಿಗಳೊಂದಿಗೆ ಇರುವುದರಿಂದ ಸುಧರ್ಮದ ಅಭಾವವಾಗಿ ಹೋಗುತ್ತದೆ. ಆದುದರಿಂದ ಧರ್ಮರಹಿತ ಕ್ಷೇತ್ರದಲ್ಲಿ ವಾಸ ಮಾಡಬಾರದು. ಎಲ್ಲಿ ಸಪ್ತವ್ಯಸನಿ, ಕಳ್ಳ, ಜೂಜುಗಾರ, ಅನಾಚಾರಿ ಮೊದಲಾದ ಹೀನ ಸಂಗತಿಯ ಮನುಷ್ಯರಿರುತ್ತಾರೆ, ಸತ್ಸಂಗತಿ ಯೋಗ್ಯ ಸದಾಚಾರಿಗಳಿರುವುದಿಲ್ಲ; ಅಂಥಲ್ಲಿ ಇರಬಾರದು.

ಉಪರ್ಯುಕ್ತ ಕಾರಣಗಳಿರುವಂಥ ಸ್ಥಾನಗಳ ಮೇಲೆ ಉಚ್ಚಸಂಗತಿಯ ವಾಂಛಕರು, ಬುದ್ಧಿಬಲದ ಧಾರಕಧರ್ಮಾತ್ಮರು ಇರಬಾರದು; ಒಂದುವೇಳೆ ಇರುತ್ತಿದ್ದರೆ ತಮ್ಮ ಒಳ್ಳೆಯ ಗುಣ-ಧರ್ಮಗಳ ಅಭಾವವಾಗಿ ಹೋಗುತ್ತದೆಯೆಂದು ತಿಳಿಯುವುದು.

ಈ ಸ್ಥಾನಗಳಲ್ಲಿ ಲಜ್ಜೆ ಪಡಬಾರದೆಂದು ಈಗ ಹೇಳುತ್ತಾರೆ,-

**ಆಹಾರ ವಿಹಾರೇ ಜೂಝೋ, ಣೆತ ಗೀತೇ ದ್ಯೂತ ವಾದಾಏ ।**

**ಭೋಗೋ ವಾಜಯ ಪಠತೀ, ಯಹ ದಹ ಥಲೇಯ ಲಜ್ಜ ನಹಿ ಬುದ್ಧಾ ॥೭೬॥**

**ಗಾಥಾರ್ಥ :-** ಭೋಜನದಲ್ಲಿ, ವ್ಯವಹಾರದಲ್ಲಿ, ಯುದ್ಧದಲ್ಲಿ, ನೃತ್ಯ ಮಾಡುವಲ್ಲಿ, ಗೀತೆ ಹಾಡುವಲ್ಲಿ,

ಜೂಜು ಆಡುವಲ್ಲಿ, ವಾದ-ವಿವಾದ (ಶಾಸ್ತ್ರಾರ್ಥ) ಮಾಡುವಲ್ಲಿ, ಪಂಚೇಂದ್ರಿಯ ಭೋಗಗಳಲ್ಲಿ, ವಾದ್ಯ ವಾದನದಲ್ಲಿ, ಓದುವಲ್ಲಿ - ಇವು ಹತ್ತು ಸ್ಥಾನಗಳಲ್ಲಿ ವಿವೇಕಿಗಳು ಲಜ್ಜೆ ಪಡುವುದು ಯೋಗ್ಯವಿಲ್ಲ.

**ಭಾವಾರ್ಥ** :- ಭೋಜನ ಗ್ರಹಣ ಮಾಡುವ ಸಮಯದಲ್ಲಿ ಲಜ್ಜೆ ಪಡುವುದರಿಂದ ಹಸಿದುಕೊಂಡು ಉಳಿಯುವುದು, ಕಷ್ಟಪಡುವುದು, ಜನರಿಂದ ಹಾಸ್ಯವಾಗುವುದು, ಮುಗ್ಧತೆಯು ಪ್ರಗಟವಾಗುವುದು - ಇತ್ಯಾದಿ ದೋಷಗಳಾಗುತ್ತವೆ. ಧರ್ಮ ಪರೀಕ್ಷೆಯಲ್ಲಿ ಓರ್ವ ಮೂರ್ಖನ ಕಥೆಯಿದೆ ಹಾಗಾಗುತ್ತದೆ. ಆ ಮೂರ್ಖನು ಅತ್ತೆ ಮನೆಗೆ ಹೋಗಿ, ಭೋಜನದಲ್ಲಿ ಲಜ್ಜೆ ಪಟ್ಟು, ರಾತ್ರಿಯ ಸಮಯ ಒಣ ಅಕ್ಕಿಯನ್ನು ತಿಂದು ಬಾಯಿಯಲ್ಲಿ ರಕ್ತವೊಡೆದು ಜನರ ಹಾಸ್ಯಕ್ಕೆ ಗುರಿಯಾದನು ಮತ್ತು ಅಜ್ಞಾನತೆಯೂ ಪ್ರಗಟವಾಯಿತು. ಭೋಜನದಲ್ಲಿ ಲಜ್ಜೆಪಟ್ಟರೆ ಆ ಮೂರ್ಖನಂತೆ ಖೇದ-ಹಾಸ್ಯವಾಗುತ್ತದೆ. ಆದುದರಿಂದ ಲಜ್ಜೆ ಮಾಡಬಾರದು.

ವ್ಯವಹಾರದಲ್ಲಿ ಲಜ್ಜೆ ಮಾಡಿದರೆ ವ್ಯವಹಾರವಾಗುವ ಸಾಧ್ಯತೆಯಿಲ್ಲ. ಅದಕ್ಕಾಗಿ ವ್ಯವಹಾರದಲ್ಲಿ ಲಜ್ಜೆಯು ಒಳ್ಳೆಯದಲ್ಲ. ಶತ್ರುವಿನೊಂದಿಗೆ ಯುದ್ಧ ಮಾಡುವ ಸಮಯದಲ್ಲಿ ಲಜ್ಜೆ ಪಟ್ಟರೆ ಯುದ್ಧದಲ್ಲಿ ಸೋಲಾಗುವುದು, ಮರಣವಾಗುವುದು. ನರ್ತನದಲ್ಲಿ ಲಜ್ಜೆಪಟ್ಟರೆ ನೃತ್ಯಕಲೆಯು ಯಥಾವತ್ ಸಂಭವಿಸಲಾರದು, ಸಮಯವು ವ್ಯರ್ಥವಾಗುವುದು; ಅದಕ್ಕಾಗಿ ಅಲ್ಲಿ ಲಜ್ಜೆ ಪಡಬಾರದು. ಜೂಜುಗಾರನಿಗೆ ಜೂಜು ಆಡುವಾಗ ಲಜ್ಜೆಯಿರುವುದಿಲ್ಲ, ಅಲ್ಲಿ ಲಜ್ಜೆ ಮಾಡಿದರೆ ಧನವನ್ನು ಕಳೆದುಕೊಳ್ಳಬೇಕಾಗುವುದು, ಅದಕ್ಕಾಗಿ ಜೂಜಾಟದಲ್ಲಿ ಲಜ್ಜೆಯು ಇರಬಾರದು. ವಾದ ಮಾಡುವಾಗ ಪ್ರತಿವಾದಿಯೊಂದಿಗೆ ಧರ್ಮ-ಕರ್ಮದ ಕುರಿತಾಗಿ ವಾದಿಸುವಾಗ ಲಜ್ಜೆಪಟ್ಟುಕೊಂಡರೆ ವಾದದಲ್ಲಿ ಸೋಲಾಗುತ್ತದೆ; ಅದಕ್ಕಾಗಿ ವಾದದ ಸಮಯದಲ್ಲಿ ಲಜ್ಜೆಯಿರಬಾರದು.

ಪಂಚೇಂದ್ರಿಯ ಭೋಗಗಳ ಸಮಯದಲ್ಲಿ ಲಜ್ಜೆಯುಂಟಾದರೆ ಇಂದ್ರಿಯ ಸುಖವಾಗುವುದಿಲ್ಲ. ಅದಕ್ಕಾಗಿ ಪಂಚೇಂದ್ರಿಯ ಭೋಗದ ಸಮಯದಲ್ಲಿ ಲಜ್ಜೆಪಡಬಾರದು. ವಾದ್ಯವಾದನದ ಸಮಯದಲ್ಲಿ ಲಜ್ಜೆಗೊಳಗಾದರೆ ಪರಿಪೂರ್ಣ ವಾದನದ ಕಲೆಯು ಸಂಭವಿಸುವುದಿಲ್ಲ; ಅದಕ್ಕಾಗಿ ಆಗ ಲಜ್ಜೆಪಡಬಾರದು. ಹಾಡುಗಾರಿಕೆಯಲ್ಲಿ ಲಜ್ಜೆಯುಂಟಾದರೆ ಹಾಡುವುದಾಗುವುದಿಲ್ಲ; ಅದರಿಂದ ಹಾಡುಗಾರಿಕೆಯಲ್ಲಿ ಲಜ್ಜೆಪಡಬಾರದು.

ಶುಭಗಾನವನ್ನು ಹೆಚ್ಚಿಸುವ ಸಲುವಾಗಿ, ಪರಭವದಲ್ಲಿ ಸುಖ ಪಡೆಯುವ ಸಲುವಾಗಿ ಶಾಸ್ತ್ರಾಭ್ಯಾಸ ಮಾಡುವ, ಓದುವ ಸಲುವಾಗಿ ಲಜ್ಜೆ ಬರಬಾರದು. ಓದುವಲ್ಲಿ ಲಜ್ಜೆ ಪಡುವುದರಿಂದ ಜ್ಞಾನದ ವೃದ್ಧಿಯಾಗಲಾರದು. ಅದಕ್ಕಾಗಿ ಶಾಸ್ತ್ರಾಭ್ಯಾಸ ಮಾಡುವಲ್ಲಿ ಓದುವಲ್ಲಿ ಲಜ್ಜೆಪಡಬಾರದು. ಚರ್ಚೆ ಮಾಡುವಲ್ಲಿ, ಪ್ರಶ್ನೆ ಮಾಡುವಲ್ಲಿ, ಉಪದೇಶ ಮಾಡುವಲ್ಲಿ ಮೊದಲಾಗಿ ವಿದ್ಯಾಭ್ಯಾಸದ ಸಮಯದಲ್ಲಿ ಹಾಗೂ ಧ್ಯಾನ, ಸ್ವಾಧ್ಯಾಯದಲ್ಲಿ ಲಜ್ಜೆಪಟ್ಟರೆ ಸ್ವಯಂ ತಾನೇ ಅಜ್ಞಾನಿಯಾಗಿ ಉಳಿಯುವನು ತನ್ನದು ಕೆಡಕಾಗುವುದು. ಅದಕ್ಕಾಗಿ ವಿದ್ಯಾಭ್ಯಾಸ ಸ್ವಾಧ್ಯಾಯಾದಿಗಳಲ್ಲಿ ಲಜ್ಜೆಪಡಬಾರದು.

ಈ ಪ್ರಕಾರ ಭೋಜನ, ವ್ಯಾಪಾರ, ಯುದ್ಧ, ನೃತ್ಯ, ಗೀತೆ, ಜೂಜು, ವಾದ, ಭೋಗ, ವಾದ್ಯವಾದನ, ಪಠನ ಇವು ಉಪರೋಕ್ತ ಹತ್ತು ಭೇದಗಳಲ್ಲಿ ಚತುರರು ಲಜ್ಜೆ ಪಡುವುದು ಯೋಗ್ಯವಿಲ್ಲ.

ಈ ಪ್ರಕಾರ ಸುದೃಷ್ಟಿತರಂಗಿಣಿಯೆಂಬ ಹೆಸರಿನ ಗ್ರಂಥದಲ್ಲಿ ಅನೇಕ ನಯಸೂಚಕ ಉಪದೇಶ ಕಥನದ ವರ್ಣನೆ ಮಾಡುವಂಥ ಇಪ್ಪತ್ಮೂರನೆಯ ಪರ್ವವು ಪೂರ್ಣವಾಯಿತು.

★★★★★

## ೨೪ ಃ ಇಪ್ಪತ್ನಾಲ್ಕನೆಯ ಪರ್ವ
## ಜಾತಿ ವ್ಯವಹಾರಾದಿಗಳ ವರ್ಣನೆ

ಪಕ್ಷವು ಸಬಲವಿದ್ದಮೇಲೆ ನಿರ್ಬಲರದೂ ಕಾರ್ಯ ಸಿದ್ಧಿಯಾಗುತ್ತದೆ - ಎಂದು ತಿಳಿಸುತ್ತಾರೆ,-

**ಗಿರಿಸಿರ ತರುಫಲ ಪಕಊ ಕಾಕೋ ಭಕ್ಷಂತಿ ಪಕ್ಷಬಲ ದೀಣೋ ।**
**ಣ ಭೂತವ್ವಂ ಸಿಂಹೋ ಪಕ್ಷೀಣೋ ಜಯ ಗಜಘಟಾ ಸೂರೋ ॥೭೭॥**

**ಗಾಥಾರ್ಥ ಃ-** ಪರ್ವತದ ಶಿಖರದ ಮೇಲೆ ಒಂದು ವೃಕ್ಷದ ಫಲಗಳು ಪಕ್ವವಾಗಿವೆ. ಕಾಗೆಯು ದೀನವಾಗಿದ್ದರೂ ರೆಕ್ಕೆಗಳ ಬಲದಿಂದ ಅವುಗಳನ್ನು ತಿನ್ನುತ್ತದೆ; ಆದರೆ ರೆಕ್ಕೆಗಳಿಲ್ಲದಿರುವುದರಿಂದ ಆನೆಗಳ ಸಮೂಹವನ್ನು ಗೆಲ್ಲುವ ಸಲುವಾಗಿ ಶೂರವಿದ್ದರೂ ಸಿಂಹವು ಅವುಗಳನ್ನು ಭೋಗಿಸಲಾಗುವುದಿಲ್ಲ.

**ಭಾವಾರ್ಥ ಃ-** ಪಕ್ಷಗಳ ಬಲವಿದ್ದ ಮೇಲೆ ಸಾಮಾನ್ಯ ಬಲಧಾರಕರದೂ ಕಾರ್ಯ ಸಿದ್ಧವಾಗಿ ಹೋಗುತ್ತದೆ ಮತ್ತು ಪಕ್ಷಗಳ ಬಲವಿಲ್ಲದಿದ್ದರೆ ಬಲವಂತರದೂ ಕಾರ್ಯ ಸಿದ್ಧವಾಗಲಾರದು. ಅದನ್ನೇ ಹೇಳುತ್ತಾರೆ-ಯಾವುದೋ ಒಂದು ಪರ್ವತದ ಉತ್ತುಂಗ ಶಿಖರದ ಮೇಲೆ ಒಂದು ವೃಕ್ಷವಿದ್ದು ಅದರ ಫಲಗಳು ತುಂಬ ಒಳ್ಳೆಯವಿವೆ, ಸಿಹಿಯಿವೆ; ಆದರೆ ಬಹಳ ಎತ್ತರದಲ್ಲಿ ಇರುವ ಕಾರಣ ಅವುಗಳನ್ನು ತಿನ್ನುವಲ್ಲಿ ಯಾರೂ ಸಮರ್ಥರಿಲ್ಲ ಕಾಗೆಯಂತೂ ತನ್ನ ರೆಕ್ಕೆಗಳ ಬಲದಿಂದ ಆ ಫಲಗಳನ್ನು ಭೋಗಿಸಬಹುದಾಗಿದೆ. ಆದರೆ ಆ ಫಲಗಳನ್ನು ಭೋಗಿಸುವ ಸಾಮರ್ಥ್ಯವು ಸಿಂಹದಲ್ಲಿ ಇರುವುದಿಲ್ಲ. ಏಕೆ ಇರುವುದಿಲ್ಲ ? ಸಿಂಹಕ್ಕೆ ರೆಕ್ಕೆಗಳ ಬಲವಿಲ್ಲದಿರುವುದರಿಂದ ಅದರಲ್ಲಿ ಅಂಥ ಸಾಮರ್ಥ್ಯವಿಲ್ಲ.

ಸಿಂಹವು ದೊಡ್ಡ-ದೊಡ್ಡ ಆನೆಗಳ ಸಮೂಹವನ್ನು ಜಯಿಸುವಷ್ಟು ಸಾಮರ್ಥ್ಯವುಳ್ಳದ್ದಿದ್ದರೂ ರೆಕ್ಕೆಗಳಿಲ್ಲದಿರುವುದರಿಂದ ಪರ್ವತದ ಉನ್ನತ ಶಿಖರದ ಮೇಲೆ ಸ್ಥಿತವಿರುವ ವೃಕ್ಷಗಳ ಫಲ ತಿನ್ನುವಲ್ಲಿ ಅದು ಸಮರ್ಥವಿಲ್ಲ. ಇಲ್ಲಿ ವಿಚಾರ ಮಾಡಬೇಕಾದ ಮಾತೆಂದರೆ ರೆಕ್ಕೆಗಳ ಬಲದಿಂದ ಕಾಗೆಯೂ ದೊಡ್ಡ-ಒಳ್ಳೆಯ ಫಲವನ್ನು ತಿನ್ನುತ್ತದೆ ಮತ್ತು ರೆಕ್ಕೆಗಳಿಲ್ಲದಿರುವುದರಿಂದ ಸಿಂಹದ ಕೈಗೆ ದೊಡ್ಡ-ಒಳ್ಳೆಯ ಫಲಗಳು ಬರುವುದಿಲ್ಲ. ಅದರಿಂದ ಎಲ್ಲಕ್ಕಿಂತ ದೊಡ್ಡ ಬಲವು ರೆಕ್ಕೆಗಳದ್ದೆಂದು ತಿಳಿಯುವುದು; ಆದುದರಿಂದ ವಿವೇಕಿಗಳು ಪಕ್ಷಬಲವನ್ನು ಮುರಿಯುವುದಿಲ್ಲ.

ಯಾವ ರೀತಿ ವಿಶಾಲ ಧನದ ಖಜಾನೆ(ಭಂಡಾರ)ಯಿಂದ ಸಂಪನ್ನ, ಮಹಾಬಲಶಾಲಿ, ವಿಶಾಲ ಕೋಟೆ ಮೊದಲಾದವುಗಳ ಅಧಿಪತಿ ದೊಡ್ಡ ರಾಜನಾಗಿದ್ದರೂ ತನ್ನ ಪಕ್ಷದ ಯೋಧರ ಅವಮಾನ ಮಾಡಿ ಆ ದೊಡ್ಡ ಸಾಮಂತರ ಸಹಾಯ ಪಕ್ಷವನ್ನು ಮುರಿದು ಹಾಕಿದರೆ ಅವನು ಸ್ವಯಂ ರಾಜ್ಯಭ್ರಷ್ಟನಾಗಿ ಹೋಗುತ್ತಾನೆ. ಮತ್ತು ಒಂದುವೇಳೆ ಯೋಧರ ಪಕ್ಷವಿದ್ದರೆ ಸಾವಿರಾರು ದೊರೆಗಳ ಪಕ್ಷವನ್ನೂ ಜಯಿಸಿ ಸುಖಿಯಾಗುತ್ತಾನೆ. ಅದರಿಂದ ವಿವೇಕವಂತರು ತನುವಿನಿಂದ, ಧನದಿಂದ, ರಾಜ್ಯದಿಂದ, ವಿನಯದಿಂದ ಹೇಗೆ ಸಾಧ್ಯವಿದೆ ಹಾಗೆ ತಮ್ಮ ಪಕ್ಷ ಬಲವನ್ನು ಕಾಯ್ದುಕೊಳ್ಳುವುದು ಯೋಗ್ಯವಿದೆ. ಪಕ್ಷಗಳಲ್ಲಿ ಸರ್ವೋತ್ಕೃಷ್ಟ ಪಕ್ಷವು ಧರ್ಮದ್ದಿದೆ; ಅದಕ್ಕಾಗಿ ಅದರದೇ ಸಹಾಯವಿಟ್ಟುಕೊಳ್ಳುವುದು ಯೋಗ್ಯವಿದೆ.

ಈಗ ಸ್ನೇಹವು ಎಲ್ಲಕ್ಕಿಂತ ದೊಡ್ಡ ಬಲವಿದೆಯೆಂಬುದನ್ನು ಹೇಳುತ್ತಾರೆ,-

**ಣೇಹುಬಲ ರಘು-ಹರಿ ದೋಊ, ದಹಮುಹ ಜಯ ಸೀಯ ಲೇಯ ಲಂಕಾಏ ।**
**ದಹಸಿರ ಬಂಧು ವಿರೋಧಯ, ತಣ ಕುಲ ಖಯ ರಾಯ ಖೋಯ ಅಪಸಾಏ ॥೭೮॥**

**ಗಾಥಾರ್ಥ ೩-** ಪರಸ್ಪರ ಸ್ನೇಹದ ಬಲದಿಂದ ರಾಮ-ಲಕ್ಷ್ಮಣರಿಬ್ಬರೂ ದಶಮುಖ (ರಾವಣ)ನನ್ನು ಜಯಿಸಿ ಲಂಕೆಯಿಂದ ಸೀತೆಯನ್ನು ತಗೆದುಕೊಂಡು ಬಂದರು. ದಶಾನನನು ಬಂಧುಗಳಿಂದ ವಿರೋಧದ ಕಾರಣ ತನು, ಕುಲ ಮತ್ತು ರಾಜ್ಯದ ನಾಶಮಾಡಿ ಅಪಯಶ ಹೊಂದಿದನು.

**ಭಾವಾರ್ಥ ೩-** ಸಹೋದರರ ಪರಸ್ಪರ ಸ್ನೇಹವೇ ದೊಡ್ಡ ಸೇನೆಯಿದೆ. ಸ್ನೇಹವೇ ದೊಡ್ಡ ಬಲವಿದೆ. ದೊಡ್ಡ ಖಜಾನೆಯಿದೆ, ದೊಡ್ಡ ಪುಣ್ಯದ ಉದಯವಿದೆ, ಮಹಾ ಯಶವಿದೆ ಮತ್ತು ಸಹೋದರರ (ಬಂಧುಗಳ)ಲ್ಲಿ ಪರಸ್ಪರ ವಿರೋಧವಿರುವುದೇ ಮಹಾಪಾಪದ ಉದಯವಿದೆ, ಅಪಯಶವಿದೆ, ಸೋಲು ಇದೆ. ಪರಸ್ಪರ ಸ್ನೇಹರೂಪದ ಸೇನೆಯಿಂದ ಸಂಯುಕ್ತ ರಾಮ-ಲಕ್ಷ್ಮಣರಿಬ್ಬರೂ ಸೋದರರು ತಮ್ಮ ಬಂಧು ಸ್ನೇಹದ ಬಲದಿಂದ ಮೂರು ಖಂಡದ ಅಧಿಪತಿ, ಮಹಾಮಾನಿ, ಮಹಾಯೋಧ, ನಾಲ್ಕು ಸಾವಿರ ಅಕ್ಷೌಹಿನಿ ದಳದ ಅಧಿಪತಿಯಾದ ರಾವಣನನ್ನು ಯುದ್ಧದಲ್ಲಿ ಜಯಿಸಿದರು. ಅವನನ್ನು ಸಾಯಿಸಿ ತನ್ನ ಮಹಾಸತಿ ಪತ್ನಿಯನ್ನು ಪಡೆದು ಇಂದ್ರನ ವಿಭೂತಿಯ ಸಮಾನ ಸಂಪದದಿಂದ ಪರಿಪೂರ್ಣ, ದೇವಲೋಕದ ಸಮಾನ ಶೋಭೆಯಿಂದ ಕೂಡಿದ ಲಂಕಾಪುರಿಯ ರಾಜ್ಯ ಪ್ರಾಪ್ತಮಾಡಿಕೊಂಡು ಲಂಕೆಯಲ್ಲಿ ಪ್ರವೇಶ ಮಾಡಿದರು. ಸೀತೆ ಸಹಿತ ಲಂಕೆಯ ರಾಜ್ಯ ಪಡೆದು ಸುಖಿಯಾದರು. ಇದೆಲ್ಲವೂ ಅವರಿಬ್ಬರ ಪರಸ್ಪರರಲ್ಲಿ ಇರುವಂಥ ಸ್ನೇಹರೂಪ ಸೈನ್ಯಬಲದ ಮಾಹಾತ್ಮ್ಯವೆಂದು ತಿಳಿಯುವುದು.

ಪರಸ್ಪರರಲ್ಲಿನ ಬಂಧು ವಿರೋಧದಿಂದ ರಾವಣನ ಕ್ಷಯವಾಯಿತು. ರಾವಣನು ಮುಗ್ಧತೆ-ಅಜ್ಞಾನದ ಕಾರಣದಿಂದ ಸೋದರ ವಿಭೀಷಣನೊಂದಿಗೆ ದ್ವೇಷ ಭಾವ ಮಾಡಿ ಅವನನ್ನು ದೇಶದಿಂದ ಹೊರಗೆ ಹಾಕಿದನು. ಸೋದರ ವಿರೋಧದ ಕಾರಣ ವಿಭೀಷಣನು ರಾಮಚಂದ್ರನ ಹತ್ತಿರ ಹೋದನು. ಶರಣಾಗತ ರಕ್ಷಕ, ಮಹಾಸಜ್ಜನ ರಾಮನು ವಿಭೀಷಣನನ್ನು ಸ್ನೇಹಪೂರ್ವಕ ಇಟ್ಟುಕೊಂಡನು. ವಿಭೀಷಣನು ಹೊರಟು ಹೋಗುವ ಕಾರಣ ರಾವಣನು ನಿಷ್ಪಕ್ಷನಾಗುವುದರಿಂದ ಯುದ್ಧದಲ್ಲಿ ಸಾಯಿಸಲ್ಪಟ್ಟನು. ತನುವಿನ ನಾಶವಾಗಿ ಹೋಯಿತು, ಕುಲದ ನಾಶವಾಯಿತು, ರಾಜ್ಯಭ್ರಷ್ಟನಾಗಿ, ಅಪಯಶಕ್ಕೆ ಪ್ರಾಪ್ತನಾಗಿ ಕುಗತಿಗೆ ಹೋದನು - ಇದು ಬಂಧು ವಿರೋಧರೂಪ ಅನ್ಯಾಯದ ಫಲವಿದೆ. ಆದುದರಿಂದ ವಿವೇಕವಂತರು ಯಶಸ್ಸು ಮತ್ತು ಸುಖದ ಸಲುವಾಗಿ ಸೋದರರ ಕುರಿತು ಸ್ನೇಹಭಾವವನ್ನು ಇರಿಸಿಕೊಳ್ಳುವ - ಕಾಯ್ದುಕೊಳ್ಳುವ ಪ್ರಯತ್ನ ಮಾಡಬೇಕು. ರಾವಣನ ಹಾಗೆ ತೀವ್ರ ಕಷಾಯದ ಉದಯವು ಬಂದ ಮೇಲೆ ಜೀವರುಗಳಿಗೆ ಬಂಧು ವಿರೋಧವಾಗುತ್ತದೆಯೆಂದು ತಿಳಿಯುವುದು.

ಈಗ ನ್ಯಾಯಮಾರ್ಗದ ಹಿರಿಮೆಯನ್ನು ತಿಳಿಸಿಕೊಡುತ್ತ ಅನ್ಯಾಯದ ಫಲ ಹೇಳುತ್ತಾರೆ,-

**ಜುಗಭಟ ರಘು ಹರಿ ನ್ಯಾಯೋ, ದಹಸಿರ ಜಯ ಸೈಣ ಸಹಿತ ಜಯ ಪಾಯೋ ।**
**ದಹಮುಖ ಠಾಣ ಅಣಾಯೋ, ಕುಲ ಬಲ ತಣ ಣಾಸ ಅಯಸ ದುಗತಾಈ ॥೭೯॥**

**ಗಾಥಾರ್ಥ ೩-** ರಘು ಮತ್ತು ಹರಿ ಇಬ್ಬರೂ ಯೋಧರು ನ್ಯಾಯದ ಪ್ರಸಾದದಿಂದ ದಶಾನನನನ್ನು ಸೇನೆ ಸಹಿತ ಗೆದ್ದು ಯಶಪ್ರಾಪ್ತ ಮಾಡಿಕೊಂಡರು ಮತ್ತು ದಶಾನನನು ಅನ್ಯಾಯದ ಕಾರಣ ಕುಲ, ಸೇನೆ, ನಿಜ ತನುವಿನ ನಾಶ ಮಾಡಿಕೊಂಡು ಅಪಯಶಕ್ಕೆ ಪ್ರಾಪ್ತನಾಗಿ ದುರ್ಗತಿಗೆ ಹೋದನು.

**ಭಾವಾರ್ಥ ೩-** ಮಹಾಸುಭಟರೂ, ರಾಜನೀತಿಯವೇತ್ತಾರರೂ ಆದಂಥ ರಾಮ-ಲಕ್ಷ್ಮಣರು ರಾವಣನನ್ನು ಗೆಲ್ಲುವ ಸಲುವಾಗಿ ಲಂಕೆಗೆ ಹೋಗಲು ಸಿದ್ಧತೆ ನಡೆಸಿದ್ದರು; ಆಗ ಸುಗ್ರೀವ ಮೊದಲಾದ ವಾನರ ವಂಶದ ದೊರೆಗಳೆಲ್ಲರೂ ಬಂದು ಹೇಳುತ್ತಾರೆ-ಸ್ವಾಮೀ ! ಅವನು ಮಹಾಯೋಧನಿದ್ದಾನೆ, ಅವನೊಬ್ಬನಲ್ಲಿಯೇ ಮೂರು ಖಂಡದ ಸಾಮಂತರನ್ನು ಜಯಿಸುವ ಬಲವಿದೆ. ಮಹಾಪರಾಕ್ರಮಿ, ಚಕ್ರದ ಧಾರಕ, ಮೂರು ಖಂಡದ ಅಧಿಪತಿ, ಅನೇಕ

ವಿದ್ಯಾಧರರ ಒಡೆಯರು ಅವನ ಜತೆಯಲ್ಲಿದ್ದಾರೆ; ಅನೇಕ ದೇವಗಳು ಅವನ ಆಜ್ಞೆಯ ಪಾಲಕರಿದ್ದಾರೆ ಹಾಗೂ ಸಾವಿರಾರು ದೇವಗಳು ಅವನ ಅಂಗ-ಶರೀರ ರಕ್ಷಕರಿದ್ದಾರೆ - ಇಂಥ ರಾವಣನನ್ನು ಜಯಿಸುವ ಸಲುವಾಗಿ ಇಂದ್ರನೂ ಸಮರ್ಥನಿಲ್ಲ. ಇಂಥ ತ್ರಿಖಂಡಾಧೀಶನನ್ನು ಜಯಿಸುವ ಉದ್ಯಮ ತಾವು ಮಾಡುತ್ತಿರುವಿರಿ; ಆದರೆ ತಮ್ಮ ಉದ್ಯಮವು ಹೇಗೆ ಪೂರ್ಣವಾಗುವುದು? ಈ ಮಾತು ತಪ್ಪಿಯಾದರೂ ಅವನ ಕಿವಿಗೆ ಬಿದ್ದರೆ ತಮ್ಮ ಶರೀರವು ಸಹಜವಾಗಿಯೇ ಸಂಕಟಕ್ಕೊಳಗಾಗುವುದು. ತಾವು ವಿವೇಕವಂತರಿರುವುದರಿಂದ ವಿಚಾರ ಮಾಡಿ ನೋಡಿರಿ ! ತಾವು ಕೇವಲ ಇಬ್ಬರು ಸಹೋದರರಿರುವಿರಿ ಮತ್ತು ರಾವಣನು ಪೃಥ್ವಿಯ ಅಧಿಪತಿಯಿದ್ದಾನೆ, ತಾವು ಅವನನ್ನು ಹೇಗೆ ಜಯಿಸಬಹುದಾಗಿದೆ? ಅದಕ್ಕಾಗಿ ವಿಚಾರ ಮಾಡಿ ಉದ್ಯಮ ಮಾಡುವುದು ಯೋಗ್ಯವಿದೆ, ಎಂಬಿತ್ಯಾದಿಯಾಗಿ ರಾವಣನ ಪರಾಕ್ರಮದ ಮಾತನ್ನು ಎಲ್ಲ ವಿದ್ಯಾಧರರು ಹೇಳುತ್ತಾರೆ.

ವಿದ್ಯಾಧರರ ಮಾತುಗಳನ್ನಾಲಿಸಿ ಇಬ್ಬರೂ ಸೋದರರು ನಿಃಶಂಕರಾಗಿ ಹೇಳುತ್ತಾರೆ - ವಿದ್ಯಾಧೀಶರೇ! ತಾವುಗಳು ರಾವಣನ ಬಲ, ಪರಾಕ್ರಮ ಮತ್ತು ಪುಣ್ಯದ ಮಹಿಮೆಯ ಪರಿಚಯ ಮಾಡಿಸಿದಿರಿ ! ನಿಮಗೆ ಈ ರಾವಣನು ಹೀಗೆಯೇ ಭಾಸಿತನಾಗುತ್ತಿದ್ದಾನೆ. ಹೇಗೆ ಕೊಂಬುಗಳಿಲ್ಲದ ಅನೇಕ ಕುರಿಗಳ ಸಮೂಹ-ಹಿಂಡಿನಲ್ಲಿ ಒಂದು ಕೊಂಬುಳ್ಳ ಟಗರು ಎಲ್ಲ ಕುರಿಗಳಿಗೆ ಬಲಶಾಲಿಯಾಗಿಯೇ ತಿಳಿದು ಬರುತ್ತದೆ. ಆ ಅಜ್ಞಾನೀ ಕುರಿಗಳ ಹಿಂಡು-ಈ ಒಂದು ವಿಶಿಷ್ಟ ಕುರಿಯ ಮರಿಯು ನಮ್ಮ ಸಮಾನವೇ ಇದೆ, ನಮ್ಮ ಸಮಾನವೇ ಇದರ ತಾಯಿ-ತಂದೆಯಿದ್ದಾರೆಂಬ ಚಿಕ್ಕ ವಿಷಯವನ್ನೂ ತಿಳಿಯುವುದಿಲ್ಲ. ಅದರ ಕೊಂಬುಗಳನ್ನು ನೋಡಿ ಎಲ್ಲ ಕುರಿಗಳು ಭಯಭೀತವಾಗುತ್ತವೆ. ಆ ಟಗರು ಕುರಿಗಳ ಸಮೂಹಕ್ಕೆಲ್ಲ ಬಲಶಾಲಿಯಾಗಿ ಕಂಡುಬರುತ್ತದೆ; ಅದರಿಂದ ಎಲ್ಲ ಕುರಿಗಳು-ಮೇಕೆಗಳು ಆ ಟಗರಿನ ದಾಸವಾಗಿ ಅದರ ಆಜ್ಞೆಯನ್ನು ಮನ್ನಿಸುತ್ತವೆ. ಆ ಟಗರು ಕೂಡ ಅವೆಲ್ಲ ಕುರಿ-ಮೇಕೆಗಳ ಅಧಿಪತಿಯಾಗಿ, ಅನೇಕ ಕುರಿಗಳನ್ನು ತನ್ನ ಆಜ್ಞಾನುಸಾರ ಕಂಡು ಅವುಗಳೊಂದಿಗೆ ಮಹಾ ಅಭಿಮಾನದಿಂದ ಇರುತ್ತದೆ. ಸ್ವಚ್ಛಂದವಾಗಿ ಮನಸ್ಸಿಗೆ ಬಂದಂತೆ ಮಾಡುತ್ತ ವನದಲ್ಲಿ ಸುತ್ತುತ್ತದೆ.

ಎಲ್ಲಿಯವರೆಗೆ ಕಾನನದಲ್ಲಿ ಸಿಂಹ ಗರ್ಜನೆಯಾಗುವುದಿಲ್ಲ ಅಲ್ಲಿಯವರೆಗೆ ಆ ಟಗರು ಕೊಬ್ಬಿನಿಂದ ಉಬ್ಬಿ ವನದಲ್ಲಿ ಸುತ್ತುತ್ತದೆ. ಸಿಂಹ ಗರ್ಜನೆಯ ಶಬ್ದವನ್ನು ಆಲಿಸುತ್ತಿದ್ದಂತೆಯೇ ಟಗರು ಮೊದಲಾಗಿ ಸಮಸ್ತ ಕುರಿ-ಮೇಕೆಗಳು ಭಯದಿಂದ ಕಂಪಿಸಲಾರಂಭಿಸುತ್ತವೆ. ಆಹಾರ-ಜಲಾದಿಗಳ ಪರಿವೆಯನ್ನು ಮರೆತು ಹೋಗುತ್ತವೆ. ಅವುಗಳಿಗೆ ತಮ್ಮ ಜೀವನದಲ್ಲಿಯೂ ಸಂದೇಹವು ತಲೆದೋರುತ್ತದೆ - ಹಾಗೆಯೇ ನೀವು ಇಲ್ಲಿ ತಿಳಿಯಬೇಕು. ಎಲ್ಲಿಯವರೆಗೆ ವೀರ ರಾಮನ ಧನುಷ್ಯದ ಟಂಕಾರವಾಗುವುದಿಲ್ಲ, ಅಲ್ಲಿಯವರೆಗೆ ರಾವಣ ರೂಪದ ಟಗರವು ನಭಚರ ರೂಪದ ಕುರಿಗಳ ಮಧ್ಯದಲ್ಲಿ ಕೊಬ್ಬಿನಿಂದ ಉಬ್ಬಿ ಹೋಗುತ್ತಿದ್ದಾನೆ; ಆದರೆ ಯಾವಾಗ ಸಿಂಹದ ಸಮಾನ ನಮ್ಮ ಗರ್ಜನೆಯಾಗುವುದು, ಆಗ ಸೇನೆಯ ರೂಪದ ಕುರಿಗಳೊಂದಿಗೆ ರಾವಣರೂಪದ ಟಗರು ಜೀವಂತವಾಗಿ ಉಳಿಯುವುದು ಕಠಿಣವಿದೆಯೆಂಬುದನ್ನು ತಿಳಿಯುವುದು.

ಅಯ್ಯಾ ಖಗಾಧೀಶರುಗಳೇ ! ಕಳ್ಳನ ಪರಾಕ್ರಮವೆಂಥದು ? ರಾವಣನು ಕಳ್ಳನಿದ್ದಾನೆ. ಅನ್ಯಾಯ ಮಾರ್ಗದ ಧಾರಕನಿದ್ದಾನೆ. ದೊರೆಯಾಗಿ ಅನ್ಯಾಯ ಮಾಡುವಂಥವನ ಪರಾಕ್ರಮವು ನಷ್ಟವಾಗುತ್ತದೆ. ನೀವುಗಳು ಹೆದರಬೇಡಿರಿ; ಭಯದಿಂದ ನಿಮ್ಮಗಳ ಚಿತ್ತವು ಆಕ್ರಾಂತವಾಗಿ ಹೋದರೆ ನೀವು ಹೋಗಿ ನಿಮ್ಮ ಮನೆ-ಕುಟುಂಬದಲ್ಲಿ ಉಳಿಯಿರಿ. ನಾವಂತೂ ನ್ಯಾಯದಿಂದ ಯುದ್ಧ ಮಾಡುವೆವು. ನಮ್ಮ ಪಕ್ಷವು ಸತ್ಯವಿದ್ದರೆ ನಾವಿಬ್ಬರೂ ಸೋದರರು ಗೆಲ್ಲುವೆವು-ಎಂದು ಹೇಳಿ ರಾವಣನೊಂದಿಗೆ ಯುದ್ಧ ಮಾಡಿದರು.

ತಮ್ಮ ನ್ಯಾಯರೂಪದ ಸೇನೆಯ ಬಲದಿಂದ ಇಬ್ಬರೂ ಸೋದರರು ರಾವಣನನ್ನು ಸಾಯಿಸಿ ಸಂಪೂರ್ಣಸೇನೆ

ಸಹಿತ ಅವನನ್ನು ಜಯಿಸಿದರು. ಹೀಗೆ ಪ್ರಕಟವಾದ ಯಶಸ್ಸು ಭೂಮಂಡಲದಲ್ಲಿ ಪವನದಂತೆ ಪಸರಿಸಿತು - ಈ ಪ್ರಕಾರ ಸತ್ಯನ್ಯಾಯಮಾರ್ಗದ ಮಹಿಮೆಯನ್ನು ತಿಳಿಯುವುದು. ರಾವಣನು ಅರ್ಧಚಕ್ರವರ್ತಿ, ಮಹಾಬಲಶಾಲಿ, ಮಹಾನ್ ಸೇನೆಯ ಅಧಿಪತಿಯಾಗಿದ್ದರೂ ಅನ್ಯಾಯದ ಕಾರಣದಿಂದ ಯುದ್ಧದಲ್ಲಿ ಸೋತನು. ಅನ್ಯಾಯದ ಅಪರಾಧದಿಂದ ಈರ್ವರು ಪುರುಷರ ಮೂಲಕ ಖಂಡಿತನಾಗಿ ಸತ್ತುಹೋದನು. ಇದೆಲ್ಲವೂ ಅನ್ಯಾಯದ ಫಲವಿದೆ. ನ್ಯಾಯದ ಫಲವು ರಾಮಚಂದ್ರನಿಗೆ ಮತ್ತು ಅನ್ಯಾಯದ ಫಲವು ರಾವಣನಿಗೆ ದೊರಕಿತೆಂಬುದನ್ನು ತಿಳಿದು ಅನ್ಯಾಯಮಾರ್ಗವನ್ನು ಬಿಟ್ಟುಕೊಟ್ಟು ನ್ಯಾಯಮಾರ್ಗರೂಪ ಪರಿಣಮನ ಮಾಡುವುದು ಯೋಗ್ಯವಿದೆ.

**ರಣ ವಣ ಅರಿ ಜಲ ಜ್ವಾಲಾ, ಸಾಯರ ಸಖರೇಯ ಸೈಣ ಪಮ್ಮತ್ತೇ ।**
**ಮಗ ಗಜ ಹಯ ಅಸವಾರೋ, ಏಕೋ ಸಂಣಾಯ ಪುವ್ವ ಪುಣ್ಣಾಯೇ ॥೮೦॥**

**ಗಾಥಾರ್ಥ :-** ಯುದ್ಧದಲ್ಲಿ, ವನದಲ್ಲಿ, ಶತ್ರುಗಳಮಧ್ಯದಲ್ಲಿ, ಜಲದಲ್ಲಿ, ಅಗ್ನಿಯಲ್ಲಿ, ಸಮುದ್ರದಲ್ಲಿ, ಪರ್ವತದ ಮೇಲೆ, ಮಲಗಿರುವಲ್ಲಿ, ಪ್ರಮಾದದಲ್ಲಿ, ಮಾರ್ಗದ ಮೇಲೆ ಗಮನ ಮಾಡುತ್ತಿರುವ ಸಮಯದಲ್ಲಿ, ಆನೆ-ಕುದುರೆಗಳ ಸಂಬಂಧದ ಸವಾರಿಯಲ್ಲಿ - ವಾಹನದಲ್ಲಿರುವಾಗ - ಇವೆಲ್ಲ ಸ್ಥಾನಗಳಲ್ಲಿ ಒಂದು ಪೂರ್ವಭವದಲ್ಲಿ ಮಾಡಿರುವ ಪುಣ್ಯವೇ ಸಹಾಯಕವಿದೆಯೆಂದು ತಿಳಿಯುವುದು.

**ಭಾವಾರ್ಥ :-** ಯುದ್ಧಕ್ಕೆ ಹೋಗುವ ಸಮಯದಲ್ಲಿ ಜೀವನು ತನ್ನ ಶರೀರದ ರಕ್ಷಣೆಯ ಸಲುವಾಗಿ ಕವಚ, ಶಿರ ರಕ್ಷಕ, ಟೊಪ್ಪಿಗೆ, ವಿಶಿಷ್ಟ ವಸ್ತ್ರ, ಗುರಾಣಿ, ಬತ್ತಳಿಕೆ ಮೊದಲಾದ ಅನೇಕ ವಸ್ತುಗಳನ್ನು ಶರೀರದ ಮೇಲೆ ಇಟ್ಟುಕೊಳ್ಳುತ್ತಾನೆ ಮತ್ತು ಬೇರೆಯವರ ಬಾಣ, ಗುಂಡು ತಾಗಿದರೆ ಕವಚಾದಿಗಳಿಂದ ರಕ್ಷಣೆಯಾಗುವುದೆಂದು ವಿಚಾರ ಮಾಡುತ್ತಾನೆ. ನನ್ನ ಹತ್ತಿರ ಸುಭಟ ಸೇನೆಯು ಬಹಳಷ್ಟು ಇರುವುದರಿಂದ ನಾನು ಗೆಲ್ಲುವೆನೆಂದೂ ವಿಚಾರ ಮಾಡುತ್ತಾನೆ; ಆದರೆ ಅವೆಲ್ಲ ವಿಚಾರಗಳು ನಿರರ್ಥಕವಿವೆ; ಏಕೆಂದರೆ ಯುದ್ಧದಲ್ಲಿ ಜೀವಂತವಾಗಿ ಹಿಂದಿರುಗುವುದು, ಗೆದ್ದುಬರುವುದು - ಇವೆಲ್ಲ ಕೇವಲ ಒಂದು ಪೂರ್ವಕೃತ ಪುಣ್ಯದ ಫಲವಿವೆ. ಪೂರ್ವ ಪುಣ್ಯವಿಲ್ಲದಿದ್ದರೆ ಮರಣವೇ ಆಗುತ್ತದೆ - ಎಂದು ತಿಳಿಯುವುದು.

ಯಾವುದೋ ಘೋರ ಕಾನನದಲ್ಲಿ ದಾರಿ ಸಿಗದೇ ಸಿಲುಕಿಕೊಂಡರೆ ಅಲ್ಲಿಯ ಸಿಂಹ, ಕರಡಿ, ಕಾಡಹಂದಿ ಮೊದಲಾದ ದುಷ್ಟ ಶ್ವಾಪದಗಳಿಂದ ತಪ್ಪಿಸಿಕೊಂಡು, ಭಯವನ್ನುಂಟು ಮಾಡುವ ಕಳ್ಳ-ದರೋಡೆಖೋರರಿಂದ ತಪ್ಪಿಸಿಕೊಂಡು ಸುಖದಿಂದ ಮನೆಗೆ ಮರಳುವುದೂ ಪೂರ್ವ ಪುಣ್ಯದ್ದೇ ಸಹಾಯವೆಂದು ತಿಳಿಯುವುದು. ಯಾವನೋ ದೀರ್ಘಕಾಲದ ಬಲಶಾಲಿ ಶತ್ರುವಿನ ಕೈಯಿಂದ ತಪ್ಪಿಸಿಕೊಳ್ಳುವ ಅಥವಾ ಬಿಡಿಸಿಕೊಳ್ಳುವಲ್ಲಿ ಪೂರ್ವ ಪುಣ್ಯವೇ ಸಹಾಯಕವಿದೆ. ನದಿ-ಸರೋವರದ-ಆಳವಾದ ಜಲರಾಶಿಯಲ್ಲಿ ಹೊರಳಿ ಬಿದ್ದ ಮೇಲೆ ಅಲ್ಲಿಯೂ ಪೂರ್ವ ಪುಣ್ಯವೇ ಸಹಾಯಕವಿದೆ. ವಿಶಾಲ ಅಗ್ನಿಯ ಮಧ್ಯದಲ್ಲಿ ಸಿಲುಕಿಕೊಂಡರೆ ಅಲ್ಲಿಯೂ ಪೂರ್ವದ ಪುಣ್ಯವೇ ಸಹಾಯಕವಿದೆ. ಸಮುದ್ರ ಮಾರ್ಗದಿಂದ ಯಾತ್ರೆ ಮಾಡುವಾಗ ತಪ್ಪಿ ಅದರಲ್ಲಿ ಬಿದ್ದುಬಿಟ್ಟರೆ ಅಲ್ಲಿಯೂ ಪೂರ್ವ ಪುಣ್ಯವೇ ಸಹಾಯಕವಿದೆ. ವಿವಿಧ ಭಯಗಳ ಸ್ಥಾನಭೂತವಾದ ಪರ್ವತಗಳ ಸಮೂಹದಲ್ಲಿ ಮೋಸ ಹೋದರೆ ಅಲ್ಲಿಯೂ ಪೂರ್ವದ ಪುಣ್ಯವೇ ಸಹಾಯಕವಿದೆ. ಉತ್ತುಂಗ ಶಿಖರಗಳನ್ನು ಧಾರಣ ಮಾಡುವಂಥ, ದೊಡ್ಡ-ದೊಡ್ಡ ಗವಿಗಳನ್ನೊಳಗೊಂಡಿರುವ, ಮಹಾಭಯವನ್ನುಂಟು ಮಾಡುವ ಸಿಂಹಾದಿ ಕ್ರೂರ ಮೃಗಗಳಿಂದ ತುಂಬಿಕೊಂಡಿರುವ ಪರ್ವತಗಳಲ್ಲಿ ರಕ್ಷಣೆ ಮಾಡುವಂಥದು ಒಂದು ಪುಣ್ಯವೇ ಇದೆ.

ಯಾವಾಗ ಜೀವನು ನಿದ್ರೆಯ ಉದಯದಿಂದ ನಿದ್ರೆಯ ವಶನಾಗಿ ಹೋಗುತ್ತಾನೆ ಆಗ ಮೃತನಂತೆ ಪ್ರಜ್ಞೆಯಿಲ್ಲದವನಾಗಿ-ಪರಾಕ್ರಮ ರಹಿತನಾಗಿ ಬಿದ್ದುಕೊಂಡಿರುವುದರಿಂದ ಜೀವಂತನಾಗಿ ಉಳಿಯುವುದರ ಕುರಿತಾಗಿ

ಆಶಂಕೆಯು ಉತ್ಪನ್ನವಾಗುತ್ತದೆ; ಇಂಥ ಅವಸ್ಥೆಯಲ್ಲಿ ಶತ್ರು, ಕಳ್ಳ, ಅಗ್ನಿ, ಸರ್ಪಾದಿಗಳಿಂದ ರಕ್ಷಿಸುವಂಥದು ಪುಣ್ಯವೇ ಇದೆ. ಪ್ರಮಾದ ದಶೆಯಲ್ಲಿ ಅನೇಕ ಕಾರ್ಯಗಳನ್ನು ಮಾಡುತ್ತೇವೆ. ಪ್ರಮಾದದಿಂದ ಅನೇಕ ಸ್ಥಾನಗಳಲ್ಲಿ ಹೋಗುವುದು, ಪ್ರಮಾದದಿಂದ ಮಾತನಾಡುವುದು, ಪ್ರಮಾದದಿಂದ ತಿನ್ನುವುದು, ಪ್ರಮಾದದಿಂದ ಓಡುವುದು ಇತ್ಯಾದಿ ಪ್ರಮಾದಮಯ ದಶೆಗಳಲ್ಲಿ ಪುಣ್ಯವು ಸಹಾಯ ಮಾಡುತ್ತದೆ. ಅನೇಕ ರೋಗಗಳ ಸಂಕಟದಲ್ಲಿ, ವೈರಿಗಳಿಂದಾದ ವಿಪತ್ತಿನಲ್ಲಿ ಸಿಂಹಾದಿ ಕ್ರೂರ ಜೀವಗಳ ಸಂಬಂಧದ ಸಂಕಟಗಳಲ್ಲಿ, ಅಗ್ನಿ-ಜಲಾದಿ ಅನೇಕ ಸಂಕಟಗಳಲ್ಲಿ ಪುಣ್ಯವು ಸಹಾಯ ಮಾಡುತ್ತದೆ.

ಆನೆಯನ್ನೇರಿ ವಿಹರಿಸುವಾಗ, ಕುದುರೆಯ ಸವಾರಿ ಮಾಡಿ ಧಾವಿಸುತ್ತಿರುವಾಗ ಆ ಸವಾರಿಗಳ ನಿಮಿತ್ತವು ಜೀವರುಗಳಿಗೆ ಕಾಲದ ಸಮಾನ ಭಯದಾಯಕವಿದೆ - ಇಂಥ ಆನೆ ಕುದುರೆಗಳ ಸವಾರಿಯ ಸಮಯದಲ್ಲಿ ಪುಣ್ಯವೇ ಸಹಾಯಕವಿದೆ. - ಇವೆಲ್ಲ ಸ್ಥಾನಗಳಲ್ಲಿ ಕಾಲದ ಪ್ರವೇಶವಿದೆ, ಇವೆಲ್ಲ ಸ್ಥಾನಗಳು ದುಃಖದ ಕಾರಣವಿವೆ, ಇವುಗಳಲ್ಲಿ ನಿರ್ವಿಘ್ನವಾಗಿರಿಸುವುದು ಪುಣ್ಯವೇ ಇದೆಯೆಂದು ತಿಳಿಯುವುದು. ಆದುದರಿಂದ ವಿವೇಕವಂತರು ಭವಭವದಲ್ಲಿ ಸುಖಿಯಾಗುವ ಸಲುವಾಗಿ (ಪಾಪದಿಂದ ದೂರವಿರುತ್ತ, ಸ್ವಭಾವದ ಅಭಿರುಚಿಯೊಂದಿಗೆ) ಪುಣ್ಯದ ಉಪಾರ್ಜನೆ ಮಾಡುವುದು ಯೋಗ್ಯವಿದೆ.

ಎಲೈ ಭವ್ಯಾತ್ಮನೇ ! ನೀನು ಮಹಾಸಂಕಟ ಸಹಿಸಿಯೂ ಧನಾರ್ಜನೆ ಮಾಡಬಯಸಿರುವೆ; ಆದರೆ ಮಹಾಸಂಕಟ ಸಹಿಸಿಯೂ ಧನ ಗಳಿಸುವುದು ದುರ್ಲಭವಿದೆ ಮತ್ತು ಒಂದುವೇಳೆ ಸಂಕಟ ಸಹಿಸಿ ಧರ್ಮದ ಸೇವನೆ ಮಾಡಿದರೆ, ಧರ್ಮದ ದಯೆಯಿಂದ (ಪ್ರಸಾದದಿಂದ) ಧನವು ಸುಲಭವಿದೆ. ನೋಡು ಸೋದರನೇ ! ಒಂದುವೇಳೆ ಕಷ್ಟದಿಂದ ಧನವಾಗುತ್ತಿದ್ದರೆ ನೀಚ ಕುಲದವರು, ಕೂಲಿಕಾರರು, ಭಾರಹೊರುವ ಹಮಾಲ ಮೊದಲಾದವರು ತಲೆಯ ಮೇಲೆ ಅಧಿಕ ಭಾರ ಹೊರುವ ಮೊದಲಾದ ಬಹಳಷ್ಟು ಕಾರ್ಯ ಮಾಡುತ್ತಾರೆ; ಆದರೆ ಅವರ ಉದರ ಪೋಷಣೆಯು ಕೂಡ ಕಠಿಣವಿದೆ. ಅದರಿಂದ ನೀನು ಧನವನ್ನು ಇಚ್ಛಿಸುತ್ತಿದ್ದರೆ (ಪಾಪದಿಂದ ದೂರವಿರುತ್ತ ಜಿನರಂಥ ನಿಜ ಸ್ವಭಾವದಲ್ಲಿದ್ದುಕೊಂಡು) ಧರ್ಮದ ಸೇವನೆ ಮಾಡುವುದೇ ನಿನ್ನ ಸಲುವಾಗಿ ಯೋಗ್ಯ ಕಾರ್ಯವಿದೆ.

ಇವಿಷ್ಟು ವಸ್ತುಗಳು ಯಾರಿಗೂ ಕಾರ್ಯಕಾರಿಯಾಗಿಲ್ಲವೆಂಬುದನ್ನು ಹೇಳುತ್ತಾರೆ,-

**ಸರ ಜಲಗತ ತರು ಛಾಯಾ, ಸುತ ಗುಣಗತ ಧನ ದಾಣಾ ಪುಸ್ಸ ಗಂಧಾಊ ।**
**ಕಣ್ಣಾ ತವಗತ ಸಾಧಊ ಇವ ಧಮ್ಮ ಗತ ಣರ ಣೇಣ ಗಯ ಕಾಯಾ ।।೮೧।।**

**ಗಾಥಾರ್ಥ :-** ಜಲರಹಿತ ಸರೋವರ, ಛಾಯಾರಹಿತ ವೃಕ್ಷ, ಗುಣರಹಿತ ಪುತ್ರ, ದಾನರಹಿತ ಧನ, ಪರಿಮಳ ವಿಹೀನ ಪುಷ್ಪ, ದಯೆಯಭಾವವಿಲ್ಲದ ಸಾಧು, ಧರ್ಮರಹಿತ ಮನುಷ್ಯ, ನೇತ್ರರಹಿತನ ಶರೀರ ಶೋಭೆ ಇವು ಕಾರ್ಯಕಾರಿಯಾಗಿಲ್ಲ.

**ಭಾವಾರ್ಥ :-** ಸರೋವರದ ಶೋಭೆಯು ಜಲದಿಂದ ಇದೆ. ಸರೋವರದ ವಿಸ್ತಾರವು ಅಧಿಕವಾಗಿದ್ದರೂ, ಅದರಲ್ಲಿ ಇಳಿದು ಹೋಗುವ ಸಲುವಾಗಿ ಗಟ್ಟಿಮುಟ್ಟಾದ-ಭದ್ರವಾದ ಮೆಟ್ಟಲುಗಳಿದ್ದರೂ ಕೂಡ ಅದರಲ್ಲಿ ನೀರು ಇಲ್ಲದಿದ್ದರೆ ಎಂದರೆ ಆ ಜಲರಹಿತ ಸರೋವರವು ವ್ಯರ್ಥವಿದೆ. ವೃಕ್ಷದ ಶೋಭೆಯು ಛಾಯೆ(ನೆರಳು)ಯಿಂದ ಇದೆ. ವೃಕ್ಷವು ದೊಡ್ಡದಾಗಿದ್ದರೂ, ದೂರದಿಂದ ಕಂಡು ಬರುತ್ತಿದ್ದರೂ ಅದು ಛಾಯಾರಹಿತವಾಗಿದ್ದರೆ ವ್ಯರ್ಥವಿದೆ. ಪುತ್ರನ ಶೋಭೆಯು ಸದ್ಗುಣಗಳಿಂದ ಇದೆ. ಸದ್ಗುಣಿ ಸುಪುತ್ರ ಪುತ್ರನು ಎಲ್ಲರಿಗೂ ಸುಖಕಾರಕನಿದ್ದಾನೆ. ಆ ಪುತ್ರನು ಒಂದು ವೇಳೆ ವಿವಿಧ ದೋಷಸಹಿತ, ಅವಿನಯಿ, ವ್ಯಸನಿಯಿದ್ದು ಅಪಯಶಕಾರಕ ಅವಗುಣಗಳಿಂದ ಸಹಿತನಾಗಿದ್ದರೆ ಆ

ಪುತ್ರನ ಪುತ್ರತ್ವವು ವ್ಯರ್ಥವಿದೆ. ಧನವು ದಾನ-ಪುಣ್ಯದಿಂದ ಸಫಲವಾಗುತ್ತದೆ. ಬಹಳಷ್ಟು ಧನವಿದ್ದರೂ ಅದು ದಾನ-ಪುಣ್ಯದಿಂದ ರಹಿತವಾಗಿದ್ದರೆ ಅಂಥ ಧನವು ವ್ಯರ್ಥವಿದೆ.

ಪುಷ್ಪವು ಪರಿಮಳವಿದ್ದರೇನೆ ಒಳ್ಳೆಯದೆನಿಸುತ್ತದೆ. ನೋಡಲಿಕ್ಕೆ ಸುಂದರವಾಗಿದ್ದರೂ ಅದು ಒಂದು ವೇಳೆ ಪರಿಮಳ-ಸುಗಂಧ ರಹಿತವಾಗಿದ್ದರೆ ಅದು ವ್ಯರ್ಥವಿದೆ. ದಯಾಭಾವ ಸಹಿತನಾದ ಮಹಾತಪಸ್ವಿ ಸಾಧುವೇ ಪೂಜ್ಯನಾಗುತ್ತಾನೆ, ದಯೆಯ ಭಾವದಿಂದ ರಹಿತ, ತಪಭಾವನೆಯಿಂದ ಶೂನ್ಯ, ದೀನ ಸಾಧುವಿನ ಸಾಧುತ್ವವು ವ್ಯರ್ಥವಿದೆ. ಶರೀರವು ನೇತ್ರಗಳಿಂದ ಸಫಲವಿದೆ. ನೇತ್ರ ರಹಿತವಾದ ಶರೀರವಾಗಿದ್ದರೆ ಅದು ವ್ಯರ್ಥವಿದೆ. ಇದೇ ಪ್ರಕಾರ ಮನುಷ್ಯ ಪರ್ಯಾಯವು ಧರ್ಮದಿಂದ ಸಫಲವಿದೆ. ಯಾವ ಪ್ರಕಾರ ಮೇಲೆ ಹೇಳಿರುವ ಜಲರಹಿತ ಸರೋವರ, ಛಾಯಾರಹಿತ ವೃಕ್ಷ ಇತ್ಯಾದಿ ವ್ಯರ್ಥಸ್ಥಾನಗಳಿವೆ; ಅದೇ ಪ್ರಕಾರ ಧರ್ಮವಿಲ್ಲದ ಮನುಷ್ಯ ಪರ್ಯಾಯವು ವ್ಯರ್ಥವಿದೆಯೆಂದು ತಿಳಿಯುವುದು. ಅದರಿಂದ ವಿವೇಕವಂತರು ಪ್ರಾಪ್ತವಾಗಿರುವ ಮನುಷ್ಯ ಪರ್ಯಾಯವನ್ನು ಧರ್ಮದಲ್ಲಿ ತೊಡಗಿಸಿ ಸಫಲಗೊಳಿಸುವುದು ಯೋಗ್ಯವಿದೆ.

ಈ ವಸ್ತುಗಳು ಪರೋಪಕಾರದ ಸಲುವಾಗಿ ಇವೆ-ನಿರ್ಮಾಣಗೊಂಡಿವೆಯೆಂಬುದನ್ನು ಹೇಳುತ್ತಾರೆ,-

**ಸರತಾ ಪಯ ಪುಖ ಗಂಧಲು, ತರು ಸಾಯಾ ಫಲ ಈಖ ಮಧುರಾಈ ।**
**ಸಜ್ಜನ ತಣ ಧಣ ವಾಚಲು ಇ ಪರಉವಕಾರ ಕಾರಣಂ ಸವ್ವೇ ॥೮೨॥**

**ಗಾಥಾರ್ಥ :-** ನದಿಯ ನೀರು, ಪುಷ್ಪದ ಪರಿಮಳ, ವೃಕ್ಷದ ಛಾಯೆ ಮತ್ತು ಫಲ, ಇಕ್ಷು-ಕಬ್ಬಿನ ಸಿಹಿತನ, ಸಜ್ಜನರ ತನು, ಧನ ಹಾಗೂ ವಚನ-ಇವೆಲ್ಲ ವಸ್ತುಗಳು ಪರೋಪಕಾರದ ಸಲುವಾಗಿಯೇ ನಿರ್ಮಿಸಲ್ಪಟ್ಟಿವೆ.

**ಭಾವಾರ್ಥ :-** ನದಿಯ ನೀರನ್ನು ಸ್ವಯಂ ನದಿಯು ಕುಡಿಯುವುದಿಲ್ಲ. ಪರೋಪಕಾರದ ಸಲುವಾಗಿ, ಅನ್ಯ ಜೀವಗಳನ್ನು ಪುಷ್ಟ ಮಾಡುವ ಸುಖಿ ಮಾಡುವ ಸಲುವಾಗಿ ನದಿಯ ಜಲದ ಪ್ರವಾಹವು ಸಹಜವಾಗಿಯೇ ಪ್ರವಹಿಸುತ್ತಿರುತ್ತದೆ. ಪುಷ್ಪದ ಪರಿಮಳವನ್ನು ಸ್ವಯಂ ಪುಷ್ಪವು ಆಘ್ರಾಣಿಸುವುದಿಲ್ಲ; ಆದರೆ ಅನ್ಯ ಜೀವರುಗಳನ್ನು ಸುಖಿಯನ್ನಾಗಿಸುವ ಸಲುವಾಗಿ ಪುಷ್ಪವು ಪರಿಮಳವನ್ನು ಧಾರಣ ಮಾಡುತ್ತದೆ. ವೃಕ್ಷಗಳ ಸಘನ ಶೀತಲ ಛಾಯೆಯಲ್ಲಿ ಸ್ವಯಂ ವೃಕ್ಷಗಳು ಕುಳಿತುಕೊಳ್ಳುವುದಿಲ್ಲ. ಜೀವರುಗಳನ್ನು ಸುಖಿ-ಸಂತುಷ್ಟಗೊಳಿಸುವ ಸಲುವಾಗಿ- ಪರೋಪಕಾರದ ಸಲುವಾಗಿ ವೃಕ್ಷಗಳು ಸಘನ ಛಾಯೆಯನ್ನು ಧಾರಣ ಮಾಡುತ್ತವೆ. ವೃಕ್ಷಗಳ ಮನೋಹರವಾದ ಮಿಷ್ಟ ಫಲಗಳನ್ನು ಸ್ವಯಂ ವೃಕ್ಷಗಳು ತಿನ್ನುವುದಿಲ್ಲ; ಆದರೆ ಪರೋಪಕಾರದ ಸಲುವಾಗಿ ಅನ್ಯ ಜೀವರುಗಳನ್ನು ಪೋಷಣೆ ಮಾಡುವ, ಸುಖಿಯನ್ನಾಗಿಸುವ ಸಲುವಾಗಿ ವೃಕ್ಷಗಳು ಫಲಧಾರಣ ಮಾಡುತ್ತವೆ. ಅವು ಬೇರೆಯವರ ಕಲ್ಲೇಟನ್ನು ಸಹಿಸಿಯೂ ಮಿಷ್ಟ ಮನೋಹರ ಫಲ-ಪುಷ್ಪಗಳನ್ನೀಯುತ್ತವೆ. ಹೀಗೆ ಉಪಕಾರಿಯಿವೆ. ಕಬ್ಬು ತನ್ನ ಸಿಹಿ-ಮಧುರ ರಸವನ್ನು ಸ್ವಯಂ ಸೇವಿಸುವುದಿಲ್ಲ. ಆದರೆ ಪರೋಪಕಾರದ ಸಲುವಾಗಿ, ಇತರರನ್ನು ಪುಷ್ಟ ಮಾಡುವ ಸಲುವಾಗಿ, ಸುಖಿ ಮಾಡುವ ಸಲುವಾಗಿ ರಸವನ್ನು ಧಾರಣ ಮಾಡುತ್ತದೆ.

ಯಾವ ಪ್ರಕಾರ ಮೇಲೆ ಹೇಳಿದ ವಸ್ತುಗಳ ಗುಣಗಳೆಲ್ಲವೂ ಪರೋಪಕಾರದ ಕಾರಣವಿವೆ, ಅದೇ ಪ್ರಕಾರ ಸಜ್ಜನ ಧರ್ಮಾತ್ಮಾ ದಯಾವಂತ ಪುರುಷರ ಶರೀರ, ಪುರುಷಾರ್ಥಗಳು ಅನ್ಯ ಜೀವರುಗಳ ರಕ್ಷಣೆಯ ಸಲುವಾಗಿ, ಪರೋಪಕಾರದ ಸಲುವಾಗಿ ರಚನೆಗೊಂಡಿವೆ. ಸಜ್ಜನರು ಅನ್ಯ ಜೀವರುಗಳನ್ನು ಪೀಡಿಸುವುದಿಲ್ಲ. ಸಜ್ಜನ ಪುರುಷರ ವಚನಗಳು ಕೂಡ ಪರೋಪಕಾರದ ಸಲುವಾಗಿಯೇ ಇರುತ್ತವೆ. ಯಾವ ಪ್ರಕಾರದಿಂದ ಅನ್ಯ ಜೀವರುಗಳ ಒಳಿತಾಗುವುದು-ಅಹಿತ ಮಾರ್ಗವು ಬಿಟ್ಟುಹೋಗಿ ಅನ್ಯ ಜೀವರುಗಳಿಗೆ ಒಳಿತಾಗುವಂಥ ವಚನಗಳನ್ನೇ ಆಡುತ್ತಾರೆ.

ಸಜ್ಜನರ ಧನವು ಹಿಂಸೆ ಮೊದಲಾದ ಪಾಪ ಕಾರ್ಯಗಳಲ್ಲಿ ವಿನಿಯೋಗವಾಗುವುದಿಲ್ಲ. ಅನೇಕ ಜೀವರುಗಳಿಗೆ ಪುಣ್ಯವುತ್ಪನ್ನವಾಗುವ ಮತ್ತು ಧರ್ಮಾತ್ಮಾ ಜೀವರುಗಳಿಗೆ ಅವರ ಅನುಮೋದನೆ ಮಾಡಿ ಪುಣ್ಯವು ಉತ್ಪನ್ನವಾಗುವ, ಅನೇಕ ಜೀವಗಳ ರಕ್ಷಣೆಯಾಗುವ ಇತ್ಯಾದಿ ಧರ್ಮಸ್ಥಾನಗಳಲ್ಲಿ ಅವರ ಧನದ ವಿನಿಯೋಗವಾಗುತ್ತದೆ. ಈ ಪ್ರಕಾರ ಮೇಲೆ ಹೇಳಿದ ಎಲ್ಲ ಸ್ಥಾನಗಳು ಪರೋಪಕಾರದ ಸಲುವಾಗಿ ಇವೆಯೆಂದು ತಿಳಿಯುವುದು.

ಇವು ಆರು ಸ್ಥಾನಗಳಲ್ಲಿ ಲಜ್ಜೆ ಪಡಬಾರದೆಂದು ಈಗ ಹೇಳುತ್ತಾರೆ,-

**ಜಿಣಪೂಜಾ ಮುಣಿದಾಣಉ ಪತ್ತಾಖಾಣಾಯ ಝಾಂನ ಆಲೋಯ ।**
**ಗುರುಯ ಣಿಜಅಘ ಜಂಪಯ ಇಹ ಷಡ ಥಾಣೇಯ ಲಜ್ಜ ನಹಿಂ ಬುದ್ಧಾ ॥೮೩॥**

**ಗಾಥಾರ್ಥ :-** ಜಿನಪೂಜೆ ಮತ್ತು ಮುನಿದಾನದಲ್ಲಿ, ತ್ಯಾಗದಲ್ಲಿ, ಧ್ಯಾನದಲ್ಲಿ ಮತ್ತು ಆಲೋಚನೆಯಲ್ಲಿ, ಗುರುಗಳ ಹತ್ತಿರ ತಮ್ಮ ದೋಷ ಹೇಳುವಲ್ಲಿ-ಇವು ಆರು ಸ್ಥಾನಗಳಲ್ಲಿ ಬುದ್ಧಿವಂತರಿಗೆ ಲಜ್ಜೆ ಪಟ್ಟುಕೊಳ್ಳುವ ಅವಶ್ಯಕತೆಯಿಲ್ಲ.

**ಭಾವಾರ್ಥ :-** ಜಿನಪೂಜೆಯಲ್ಲಿ ಲಜ್ಜೆಯನ್ನಿಟ್ಟುಕೊಳ್ಳುವುದರಿಂದ ಪೂಜೆಯ ಫಲದ ಪ್ರಾಪ್ತಿಯಾಗುವುದಿಲ್ಲ. ಅಂತರ್ಯಾಮಿ ಸರ್ವಜ್ಞ, ವೀತರಾಗ ಭಗವಂತರ ಪೂಜೆಯನ್ನು ನಿಃಶಂಕತೆಯೊಂದಿಗೆ ಅಷ್ಟ ದ್ರವ್ಯಗಳಿಂದ ಮಾಡಿದ ಮೇಲೆ ಅದರ ಉತ್ತಮ ಫಲವು ದೊರಕುತ್ತದೆ. ಯತೀಶ್ವರರಿಗೆ ದಾನ ಕೊಡುವಲ್ಲಿ ಲಜ್ಜೆ ಪಡುವುದರಿಂದ ದಾನದ ಫಲದ ಅಭಾವವಾಗುತ್ತದೆ. ಜಗತ್ತಿನ ಗುರು, ದಯೆಯ ಭಂಡಾರ, ನಗ್ನ ತನಧಾರಿ, ವೀತರಾಗಿ, ಸಮತೆ ಸಾಗರದಲ್ಲಿ ವಾಸಿಸುವಂಥ ಗುರುಗಳಿಗೆ ನಿಃಸಂದೇಹಪೂರ್ವಕ ಕೊಡುವ ದಾನದಿಂದ ಉತ್ಕೃಷ್ಟ ಪುಣ್ಯಫಲದ ಪ್ರಾಪ್ತಿಯಾಗುತ್ತದೆ. ಇಂಥ ಮುನೀಶ್ವರರಿಗೆ ಒಂದುವೇಳೆ ಯಾವನೋ ಮಿಥ್ಯಾದೃಷ್ಟಿಯು ಕೂಡ ಭಕ್ತಿಭಾವದೊಂದಿಗೆ ದಾನಕೊಟ್ಟರೆ ಅವನು ಉತ್ಕೃಷ್ಟ ಭೋಗ ಭೂಮಿಯಲ್ಲಿ ಮೂರು ಪಲ್ಯ ಆಯುವಿನೊಂದಿಗೆ ಮೂರು ಹರದಾರಿಯ ದೇಹಸಹಿತ ಉತ್ತಮ ಮನುಷ್ಯನಾಗುತ್ತಾನೆ ಮತ್ತು ಅಂಥ ಗುರುಗಳಿಗೆ ಸಮ್ಯಗ್ದೃಷ್ಟಿಯು ದಾನ ಕೊಟ್ಟರೆ ಅವನು ಕಲ್ಪವಾಸೀ ದೇವನಾಗುತ್ತಾನೆ. ಅದರಿಂದ ಮುನಿದಾನದಲ್ಲಿ ಲಜ್ಜೆಪಡಬಾರದು.

ಯಾವುದೋ ವಸ್ತುವಿನ ತ್ಯಾಗರೂಪ ಪ್ರತ್ಯಾಖ್ಯಾನ ಅಥವಾ ನಿಯಮವನ್ನು ನಿಃಶಂಕನಾಗಿ ತಗೆದುಕೊಳ್ಳಬೇಕು. ಅದನ್ನು ಎಲ್ಲರ ಎದುರಿಗೆ ವ್ಯಕ್ತ ಮಾಡುವಲ್ಲಿ ಲಜ್ಜೆ ಪಡಬಾರದು. ಲಜ್ಜೆಪಟ್ಟುಕೊಂಡರೆ ತ್ಯಾಗದ ಅಭಾವವಾಗುತ್ತದೆ ಮತ್ತು ಕಾರಣ ಪಡೆದು ನಿಯಮ ಭಯವೂ ಆಗುತ್ತದೆ. ಅದರಿಂದ ನಿಃಶಂಕತೆಯೊಂದಿಗೆ ತ್ಯಾಗವನ್ನು ಪ್ರಕಟ ಮಾಡುವಲ್ಲಿ ಲಜ್ಜೆಯನ್ನಿಟ್ಟುಕೊಳ್ಳಬಾರದು.

ಲಜ್ಜೆ ಸಹಿತ ಧ್ಯಾನ ಮಾಡಿದರೆ ಚಿತ್ತವು ಸ್ಥಿರವಾಗದಿರುವುದರಿಂದ ಅದು ಫಲಹೀನವಾಗಿ ಹೋಗುತ್ತದೆ. ನಿಃಶಂಕತೆಯೊಂದಿಗೆ ಧ್ಯಾನ ಮಾಡುವುದರಿಂದ ಉತ್ಕೃಷ್ಟ ಫಲದ ಪ್ರಾಪ್ತಿಯಾಗುತ್ತದೆ, ಅದರಿಂದ ಧ್ಯಾನದಲ್ಲಿ ಲಜ್ಜೆಯಿರಬಾರದು. ತಮ್ಮ ಪಾಪಗಳ ಸ್ಮರಣೆ ಮಾಡಿ ಅವುಗಳ ಆಲೋಚನೆ ಮಾಡುವ ಸಮಯದಲ್ಲಿ ಲಜ್ಜೆ ಪಡಬಾರದು. ನಾನು ಇಷ್ಟು ದೊಡ್ಡ ವ್ಯಕ್ತಿಯಿರುವ ಕಾರಣ ಈಗ ನಾನು ನನ್ನ ನಿಂದೆ ಹೇಗೆ ಮಾಡಿಕೊಳ್ಳುವುದು? - ಎಂಬ ವಿಚಾರ ಬಂದರೆ ಪಾಪದ ನಾಶವಾಗುವುದಿಲ್ಲ-ನಿಃಶಂಕತೆಯೊಂದಿಗೆ ತನ್ನ ಅಜ್ಞಾನ, ಪ್ರಮಾದ ಬುದ್ಧಿಯ ಆಲೋಚನೆಯನ್ನು ಪುನಃ ಪುನಃ ಮಾಡುವುದರಿಂದ ಪಾಪಗಳು ನಷ್ಟವಾಗುತ್ತವೆ - ಇದನ್ನು ತಿಳಿದು ಆಲೋಚನಾದಿಗಳ ಸಮಯದಲ್ಲಿ ಲಜ್ಜೆಯನ್ನಿಟ್ಟುಕೊಳ್ಳಬಾರದು.

ಗುರುಗಳ ಹತ್ತಿರ ಹೋಗಿ ತನ್ನ ದೋಷವನ್ನು ಪ್ರಕಾಶಿತಗೊಳಿಸಿದ ಮೇಲೆ ದೋಷಗಳು ನಷ್ಟವಾಗುತ್ತವೆ.

ಮತ್ತು ಗುರುಗಳ ಎದುರಿಗೆ ದೋಷ ಪ್ರಕಾಶಿತ ಮಾಡುವಲ್ಲಿ ಲಜ್ಜೆಯನ್ನಿಟ್ಟುಕೊಂಡರೆ ದೋಷಗಳು ನಷ್ಟವಾಗುವುದಿಲ್ಲ. ಹೇಗೆ ಸದ್ವೈದ್ಯನ ಹತ್ತಿರ ತನ್ನ ರೋಗವನ್ನು ಹೇಳುವಲ್ಲಿ ಒಂದುವೇಳೆ ರೋಗಿಯು ಲಜ್ಜೆ ಅಥವಾ ಭಯವನ್ನಿಟ್ಟುಕೊಂಡರೆ ರೋಗವು ದೂರವಾಗದ ಕಾರಣ ಸ್ವಯಂ ದುಃಖಿಯಾಗಿ ಉಳಿಯುವನು ಮತ್ತು ವೈದ್ಯನ ಎದುರಿಗೆ ರೋಗವನ್ನು ಪ್ರಗಟಪಡಿಸಿದರೆ ವೈದ್ಯನು ಔಷಧ ಕೊಟ್ಟು ಇವನನ್ನು ಸುಖಿ ಮಾಡುವನು. ಅದೇ ಪ್ರಕಾರ ಲಜ್ಜೆಯನ್ನಿಟ್ಟುಕೊಳ್ಳದೆ ನಿಃಶಂಕನಾಗಿ ಗುರುಗಳ ಎದುರಿಗೆ ತನ್ನ ದೋಷ ಹೇಳುವುದರಿಂದ ದೋಷದ ನಾಶವಾಗಿ ಹೋಗುತ್ತದೆ. ಈ ಪ್ರಕಾರ ಮೇಲೆ ಹೇಳಿದ ಆರು ಸ್ಥಾನಗಳಲ್ಲಿ ಲಜ್ಜೆಪಡಬಾರದೆಂದು ತಿಳಿಯುವುದು.

ಸಾಹಸದಿಂದ ಸಮಸ್ತ ಸಂಕಟಗಳು ನಾಶವಾಗಿ ಹೋಗುತ್ತವೆಯೆಂದು ಈಗ ಹೇಳುತ್ತಾರೆ,-

**ರೋಗೇ ರಣ ಸಂಣಾಸೇ, ಸಂಕಟ ಮರಣೇ ಯ ಝಾಂಣ ತವ ಧಮ್ಮೇ ।**
**ದಾಲದಯೇ ಜಲಗಹಣಂ, ಸಾಹಸೇ ಸಫಲಂ ಹೋಯ ಸಹು ಧಾರಾ ॥೮೪॥**

**ಗಾಥಾರ್ಥ ಃ-** ರೋಗದಲ್ಲಿ, ಯುದ್ಧದಲ್ಲಿ, ಸಂನ್ಯಾಸದ ಸಮಯದಲ್ಲಿ, ಅನೇಕ ಸಂಕಟಗಳಲ್ಲಿ, ಮರಣದ ಸಮಯದಲ್ಲಿ, ಧ್ಯಾನದ ಸಮಯದಲ್ಲಿ, ತಪದಲ್ಲಿ, ಧರ್ಮಸೇವನೆಯಲ್ಲಿ, ದಾರಿದ್ರ್ಯದಲ್ಲಿ, ವಿಶಾಲ ಹಾಗೂ ಆಳವಾದ ಜಲ ಮಾರ್ಗದಿಂದ ಸಾಗಿ ದಾಟುವಾಗ - ಇವೆಲ್ಲ ಪರಿಸ್ಥಿತಿಗಳಲ್ಲಿ ಸಾಹಸ-ಧೈರ್ಯವು ಸಫಲತೆ ನೀಡುತ್ತದೆ.

**ಭಾವಾರ್ಥ ಃ-** ಪಾಪಕರ್ಮದ ಉದಯದಲ್ಲಿ ಉತ್ಪನ್ನವಾಗಿರುವ ಅನೇಕ ಪ್ರಕಾರದ ವಾತ, ಪಿತ್ತ, ಜ್ವರ, ಕಫ, ಕೆಮ್ಮು, ಉಬ್ಬಸ ಮೊದಲಾದ ವಿವಿಧ ರೋಗಗಳಿಂದ ಹೆಚ್ಚುತ್ತಿರುವ ವೇದನೆಯು ಯಾವುದೇ ಪ್ರಕಾರದಿಂದ ನಷ್ಟವಾಗುವುದಿಲ್ಲ; ರೋದನ ಮಾಡುವುದರಿಂದ, ವಿಲಾಪ ಅಥವಾ ಚಿಂತೆ ಮಾಡುವುದರಿಂದ ಧರ್ಮವು ನಷ್ಟವಾಗಿ ಹೋಗುತ್ತದೆ, ಆದರೆ ದುಃಖದ ನಾಶವಾಗುವುದಿಲ್ಲ. ವಿವೇಕಿಯಂತೂ ತನ್ನಲ್ಲಿ ತಾನು ವಿಚಾರ ಮಾಡುವುದೇನೆಂದರೆ ನಾನು ಪೂರ್ವದಲ್ಲಿ ಯಾವ ಕರ್ಮಬಂಧ ಮಾಡಿಕೊಂಡಿದ್ದೇನೆ, ಅದರಲ್ಲಿ ಈಗ ವಿಲಾಪ ಮಾಡುವುದರಿಂದ ಯಾವ ಬದಲಾವಣೆಯಾಗುವುದಿದೆ, ಈ ವಿಲಾಪದಿಂದ ಅದು ಹೇಗೆ ಹೋಗಬಲ್ಲದು ? ಅದರಿಂದ ಈಗ ಅದನ್ನು ಸಹಜ ಸ್ವೀಕಾರ ಮಾಡುತ್ತ ನನಗೆ ಭೋಗಿಸುವುದಿದೆ - ಹೀಗೆ ಸಾಹಸ ತುಂಬಿದ ವಿಚಾರ ಮಾಡುವುದರಿಂದ ಸಮಸ್ತ ರೋಗಗಳು ಸಹಜವಾಗಿಯೇ ಹೊರಟು ಹೋಗುತ್ತವೆ, ವೇದನೆಯು ಮಂದವಾಗಿ ಬಿಡುತ್ತದೆ. ಅದರಿಂದ ರೋಗ ಸಂಬಂಧದ ದುಃಖದಲ್ಲಿ ಸಾಹಸವನ್ನಿಟ್ಟುಕೊಳ್ಳಬೇಕಾಗುವುದು.

ಯುದ್ಧದಲ್ಲಿ ಶತ್ರುವಿನ ಪ್ರಬಲತೆಯನ್ನು ತಿಳಿದುಕೊಂಡು, ಸಂಗ್ರಾಮದ ವಿಷಮತೆಯನ್ನರಿತು, ಹೇಡಿತನದಿಂದ ಕಂಪಿಸಿದರೆ, ಧೈರ್ಯವನ್ನು ತೊರೆದು ಅಲ್ಲಿಂದ ಒಂದುವೇಳೆ ಪಲಾಯಣ ಮಾಡಿದರೆ ಲಜ್ಜಿತನಾಗುತ್ತಾನೆ. ಯುದ್ಧವನ್ನು ಸೋತು ಬಿಡುತ್ತಾನೆ, ಕುಲವು ಕಲಂಕಿತವಾಗುತ್ತದೆ. ಆದುದರಿಂದ ಯುದ್ಧದಲ್ಲಿ ವಿಜಯಿಯಾಗುವಂಥ ಸಾಹಸವನ್ನಿಟ್ಟುಕೊಳ್ಳಬೇಕಾಗುವುದು.

ತಮ್ಮ ಆಯುಕರ್ಮದ ಸಮಾಪ್ತಿಯು ಸಮೀಪಿಸಿರುವುದನ್ನು ತಿಳಿದು ಯಾವನೋ ಧರ್ಮಾತ್ಮಾ ಧರ್ಮೀ ಜೀವನು ಪರಭವದ ಸುಧಾರಣೆಯ ಸಲುವಾಗಿ ಅನಶನ ವ್ರತ ಧಾರಣ ಮಾಡುತ್ತಾನೆ, ಆಹಾರ-ಜಲಾದಿಗಳನ್ನು ಬಿಟ್ಟುಕೊಟ್ಟು ಕುಟುಂಬ ಹಾಗೂ ಶರೀರದ ಮೋಹ ತೊರೆದು, ಸ್ವಯಂ ಅಲ್ಪ ಪರಿಗ್ರಹದೊಂದಿಗೆ ಧರ್ಮಧ್ಯಾನರೂಪ ಪರಿಣಮಿತನಾಗುತ್ತಿದ್ದಾನೆ; ಆದರೆ ದೇಹದಿಂದ ಆತ್ಮನು ಬಿಡುಗಡೆಯಾಗುವಲ್ಲಿ ಸಮಯವು ಬೇಕಾಗುತ್ತಲಿದೆ ಎಂದರೆ ವಿಲಂಬವಾಗುತ್ತಿದೆ. ಹೇಗೆ-ಹೇಗೆ ನಿಮಿಷ, ಗಂಟೆ, ದಿವಸಗಳು ವ್ಯತೀತವಾಗುತ್ತವೆ; ಹಾಗೆ ಈ ಸಂನ್ಯಾಸ ಧಾರಣ

ಮಾಡಿರುವಂಥವನು ಈಗ ಆತ್ಮನು ಈ ದೇಹದಿಂದ ಬೇಗ ಬಿಡುಗಡೆಯಾದರೆ ಒಳ್ಳೆಯದಿದೆ, ಈಗ ನನ್ನ ಸಾಹಸವು ಸ್ಥಿರವಾಗುತ್ತಿಲ್ಲ-ಇತ್ಯಾದಿ ಅಸ್ಥಿರತೆಗೆ ಪೋಷಕವಾದ ಭಾವಗಳ ವಿಚಾರ ಮಾಡುವ ಕಾರಣ ವ್ರತದಿಂದ ಚ್ಯುತನಾಗಿ ಹೋಗುತ್ತಾನೆ; ಅದಕ್ಕಾಗಿ ವ್ರತದ ರಕ್ಷಣೆಯ ಸಲುವಾಗಿ – 'ನಾನಂತೂ ಈ ಶರೀರದ ಮಮತೆಯನ್ನು ಬಿಟ್ಟುಕೊಟ್ಟಿದ್ದೇನೆ. ಧರ್ಮಧ್ಯಾನಮಯ ನಿರಾಕುಲನಾಗಿ ಉಳಿದಿದ್ದೇನೆ, ಇನ್ನು ಈ ಶರೀರವು ಯಾವಾಗ ಬಿಟ್ಟು ಹೋಗುವುದಿದೆ ಹೋಗಲಿ; ನನಗೆ ಯಾವುದೇ ಖೇದವಿಲ್ಲ'-ವೆಂಬಿತ್ಯಾದಿ ಸಾಹಸ ತುಂಬಿದ ವಿಚಾರಗಳು ಸಂನ್ಯಾಸದಲ್ಲಿ ಉತ್ತಮ ಫಲದಾಯಕವಿವೆ. ಅದರಿಂದ ಸಂನ್ಯಾಸದಲ್ಲಿ ಸಾಹಸವಿರಬೇಕಾಗುವುದು.

ಮರಣದ ಸಮಯದಲ್ಲಿ ಮಹಾವೇದನೆಯಾದ ಮೇಲೆ ಮೋಹದ ಕಾರಣ ಆಕುಲತೆ ಮಾಡುವುದರಿಂದ ಮರಣವಂತೂ ಬಿಡುವ ಸಾಧ್ಯತೆಯಿಲ್ಲ; ಆದರೆ ಹೇಡಿತನದಿಂದ ಮರಣವು ಕೆಟ್ಟು ಹೋದರೆ ಕುಗತಿಯಾಗುವುದು. ಒಂದುವೇಳೆ ಮರಣದ ಸಮಯದಲ್ಲಿ ಧೈರ್ಯಪೂರ್ವಕ ಮೋಹರಹಿತ ಪರಿಣಾಮಗಳಿಂದ ಮರಣಹೊಂದಿದರೆ ಪರಭವವು ಒಳ್ಳೆಯದಾಗುತ್ತದೆ; ಅದರಿಂದ ಮರಣದ ಸಮಯದಲ್ಲಿ ಸಾಹಸವನ್ನಿಟ್ಟುಕೊಳ್ಳಬೇಕು.

ಕರ್ಮದ ಉದಯದಿಂದ ಜೀವನಿಗೆ ಅನೇಕ ಪ್ರಕಾರದ ಸಂಕಟಗಳು ಎದುರಾಗುತ್ತವೆ. ಆ ಸಮಯದಲ್ಲಿ ಧೈರ್ಯವಿದ್ದರೆ ದೊಡ್ಡ-ದೊಡ್ಡ ಸಂಕಟಗಳೂ ಸುಗಮ ಭಾಸಿತವಾಗುತ್ತವೆ. ಧೈರ್ಯವಿಲ್ಲದೆ ದುಃಖದಲ್ಲಿ ಮಹಾಖೇದವಾಗುತ್ತದೆ; ಅದರಿಂದ ದುಃಖ - ಸಂಕಟದ ಸಮಯದಲ್ಲಿ ಸಾಹಸವಿರಬೇಕಾಗುವುದು.

ಧ್ಯಾನ ಮಾಡುವ ಸಮಯದಲ್ಲಿ ಚಿತ್ತದ ಏಕಾಗ್ರತೆಯೊಂದಿಗೆ ಧರ್ಮಧ್ಯಾನದ ವಿಚಾರ ಮಾಡುವುದರಿಂದ ಪುಣ್ಯದ ಸಂಚಯವಾಗುತ್ತದೆ. ಆ ಸಮಯದಲ್ಲಿ ಯಾರೋ ಪಾಪಿಗಳು ಬಂದು ಧರ್ಮಧ್ಯಾನದಿಂದ ವಿಚಲಿತಗೊಳಿಸುವ ಇಚ್ಛೆಯಿಂದ ಅನೇಕ ಕುಚೇಷ್ಟೆಗಳನ್ನು ಮಾಡುತ್ತಾರೆ. ಅವರ ಉಪಸರ್ಗದಿಂದ ಚಂಚಲ ಭಾವವಾದರೆ ಧರ್ಮದ ಫಲವು ಹೀನವಾಗುತ್ತದೆ ಮತ್ತು ಧೈರ್ಯಧಾರಣ ಮಾಡಿದರೆ ಪೂಜೆಯ ಪ್ರಾಪ್ತಿಯಾಗುತ್ತದೆ. ಹೇಗೆಂದರೆ ಚತುರ್ದಶಿಯ ದಿನದಂದು ಓರ್ವ ಶ್ರೇಷ್ಠಿಯು ಪ್ರೋಷಧಪೂರ್ವಕ ರಾತ್ರಿಯಲ್ಲಿ ಧ್ಯಾನಧಾರಣ ಮಾಡಿ ಸ್ಮಶಾನ ಭೂಮಿಯ ಮೇಲೆ ಕುಳಿತಿದ್ದನು. ಧರ್ಮದ ಪರೀಕ್ಷೆ ಮಾಡುವ ಸಲುವಾಗಿ ಇಬ್ಬರು ದೇವಗಳು ಬರುತ್ತಾರೆ. ಅವರೊಳಗಿನ ಸಮ್ಯಗ್ದೃಷ್ಟಿ ದೇವನು 'ಈ ಗೃಹಸ್ಥನು ಧರ್ಮಾತ್ಮನಿದ್ದಾನೆ, ಈ ಹೊತ್ತು ಚತುರ್ದಶಿಯ ಉಪವಾಸವು ಧ್ಯಾನರೂಪವಿದೆ, ಇವನನ್ನು ಧ್ಯಾನದಿಂದ ವಿಚಲಿತ ಮಾಡು ನೋಡೋಣ' ಎಂದು ಹೇಳುತ್ತಾನೆ. ಆಗ ಆ ಇನ್ನೊಬ್ಬ ಮಿಥ್ಯಾದೃಷ್ಟಿ ಜ್ಯೋತಿಷಿ ದೇವನು ಇಡೀ ರಾತ್ರಿ ಅನೇಕ ಪ್ರಕಾರದ ಉಪಸರ್ಗ ಮಾಡಿದನು; ಆದರೆ ಆ ಶ್ರೇಷ್ಠಿಯನ್ನು ವಿಚಲಿತಗೊಳಿಸಲಾಗಲಿಲ್ಲ. ಆತನ ಧೈರ್ಯವನ್ನು ಕಂಡು ದೇವನು ಆ ಶ್ರೇಷ್ಠಿಯ ಪೂಜೆ ಮಾಡಿದನು; ಅದಕ್ಕಾಗಿ ಧ್ಯಾನದಲ್ಲಿ ಸಾಹಸವಿರಬೇಕಾಗುವುದು.

ವಿವಿಧ ತಪಮಾಡುವಾಗ ಕೂಡ ಶರೀರದಲ್ಲಿ ಮೋಹವು ಉತ್ಪನ್ನವಾದ ಮೇಲೆ, ವಿಷಯ-ಕಷಾಯದ ಇಚ್ಛೆಯುಂಟಾದ ಮೇಲೆ, ತಪದಿಂದ ಮಹಾಕಷ್ಟವೆಂದು ತಿಳಿದು, ಅದರಿಂದ ಚಿತ್ತವನ್ನು ವಿಮುಖ ಮಾಡಿದರೆ ತಪದ ಫಲವು ನಷ್ಟವಾಗಿ ಹೋಗುತ್ತದೆ ಮತ್ತು ತಪದಲ್ಲಿ ಕಷ್ಟವಾದ ಮೇಲೆಯೂ ತಪದ ಲೋಭಿಯು ಸಾಹಸವನ್ನಿಟ್ಟುಕೊಂಡರೆ ತಪದ ಉತ್ಕೃಷ್ಟ ಫಲವು ದೊರಕುತ್ತದೆ.

ಸುಧರ್ಮದ ಘಾತ ಮಾಡುವಂಥ ಅನೇಕ ಪಾಪೀ ಜನರು ನಮ್ಮನ್ನು ಧರ್ಮದಿಂದ ಭ್ರಷ್ಟ ಮಾಡ ಬಯಸುತ್ತಾರೆ, ಆ ಪಾಪಿಗಳ ಮೂಲಕ ಉಪದ್ರವ ಮಾಡಿದ ಮೇಲೆಯೂ ಕೂಡ ತಮ್ಮ ಧರ್ಮ ರೂಪದ ರತ್ನವನ್ನು ಉಳಿಸಿಕೊಳ್ಳುವ ಸಲುವಾಗಿ ಸಾಹಸವನ್ನಿಟ್ಟುಕೊಳ್ಳುವುದು ಯೋಗ್ಯವಿದೆ. ಪುಣ್ಯದ ಉದಯದಲ್ಲಂತೂ ಧರ್ಮದೊಳಗೆ ಧೈರ್ಯಧಾರಣ ಮಾಡುತ್ತೇವೆ; ಆದರೆ ಪಾಪದ ಉದಯವು ಬಂದ ಮೇಲೆ ದರಿದ್ರತೆಯಲ್ಲಿ ಧೈರ್ಯ

ಪರಿಣಾಮವಿಟ್ಟುಕೊಳ್ಳಬೇಕು, ಅದು ಮಹಾ ವಿವೇಕಿಗಳ ಬಲವಿದೆ. ಅದರಿಂದ ದರಿದ್ರತೆಯಲ್ಲಿ ಧೈರ್ಯದಿಂದಿರುವುದು ಸಾಹಸದಿಂದ ವರ್ತಿಸುವುದು ಯೋಗ್ಯವಿದೆ.

ಯಾವುದೋ ಕರ್ಮದ ಯೋಗದಿಂದ ವಿಶಾಲವಿರುವ ಆಳ ಜಲರಾಶಿಯಲ್ಲಿ ಬಿದ್ದುಬಿಟ್ಟರೆ, ಯಾವುದೇ ಉಪಾಯವು ತಿಳಿದು ಬರದಿದ್ದರೆ-ಹೊಳೆಯದಿದ್ದರೆ ಒಂದು ಸಾಹಸವೇ ಸಹಾಯಕವೆಂದು ತಿಳಿಯುವುದು. ಈ ಪ್ರಕಾರ ಉಪರ್ಯುಕ್ತ ಅನೇಕ ಅಶುಭ ಕಾರಣಗಳಲ್ಲಿ ಒಂದು ಸಾಹಸವೇ ಯೋಗ್ಯವಿದೆಯೆಂದು ತಿಳಿಯುವುದು.

ವಿವೇಕವಂತರ ಸಲುವಾಗಿ ಮೂರು ಸ್ಥಾನಗಳು ಹಾಸ್ಯದ ಕಾರಣಗಳಿವೆಯೆಂದು ಈಗ ಹೇಳುತ್ತಾರೆ,-

**ಅಗಯ ಪಠತ ಆಯಾಣೋ, ವಿವಿಧಾ ಸಿಂಗಾರ ಕಾಯ ವಿಧವಾಯೋ ।**

**ಜಗ ಣಿಂದೋ ಖುಸಚಿತ್ತೋ, ಏ ತೀಏ ಥಾಣೆಯ ಹಾಸೀ ಮಗ ಜ್ಞೇಯೋ ॥೮೫॥**

**ಗಾಥಾರ್ಥ ಃ-** ಅಜ್ಞಾನಿಯಾಗಿದ್ದರೂ ಮಧ್ಯ-ಮಧ್ಯ ಮಾತನಾಡುವುದು, ವಿಧವೆಯಾದ ಸ್ತ್ರೀಯು ಶರೀರದ ಮೇಲೆ ವಿವಿಧ ಶೃಂಗಾರ ಮಾಡಿಕೊಳ್ಳುವುದು, ಜಗತ್ತಿನಲ್ಲಿ ನಿಂದೆಯಾದರೂ ಸದಾ ಪ್ರಸನ್ನನಿರುವುದು - ಇವು ಮೂರು ಸ್ಥಾನಗಳು ಹಾಸ್ಯದ ಕಾರಣವೆಂದು ತಿಳಿಯುವುದು.

**ಭಾವಾರ್ಥ ಃ-** ಬೇರೆ ಯಾರಾದರೂ ಯಾವುದಾದರೂ ಪಾಠ ಓದುತ್ತಿದ್ದರೆ ಅಥವಾ ಶ್ಲೋಕ- ಪದ್ಯಾದಿಗಳನ್ನು ಹೇಳುತ್ತಿರುವಾಗ, ಅದು ತನಗೆ ಬರದಿದ್ದರೂ ಅದನ್ನು ಎತ್ತರದ ಧ್ವನಿಯಿಂದ ಓದುವ ಅಥವಾ ಹೇಳುವಂಥವನು ಮುಗ್ಧ-ಅಜ್ಞಾನಿಯಿದ್ದು ಆ ಜೀವನು ವಿವೇಕವಂತರ ಮೂಲಕ ನಿಂದೆಗೆ ಪ್ರಾಪ್ತನಾಗುವುದರಿಂದ ಹಾಸ್ಯದ ಪಾತ್ರನಿದ್ದಾನೆ.

**ಸಂದೇಹ ಃ-** ಅಜ್ಞಾನೀ ಜೀವರುಗಳ ಮುಗ್ಧತೆಯನ್ನು ಕಂಡು ವಿವೇಕವಂತರು ಅವರಿಗೆ ತಿಳಿಸಿಕೊಡುವುದು ಯೋಗ್ಯವಿದೆ; ಹಾಸ್ಯ ಮಾಡುವುದಂತೂ ಯೋಗ್ಯವಾಗಿಲ್ಲ ಅಲ್ಲವೇನು ?

**ಸಮಾಧಾನ ಃ-** ಅಜ್ಞಾನಿಗಳು ಎರಡು ಪ್ರಕಾರದವರಿರುತ್ತಾರೆ - ೧) ಮುಗ್ಧ, ತಿಳುವಳಿಕೆಯಿಲ್ಲದವರು, ಸರಳ ಪರಿಣಾಮಿ ಅಜ್ಞಾನಿಗಳು ಅವರು 'ನಾನು ಏನನ್ನೂ ತಿಳಿಯುವುದಿಲ್ಲ'ವೆಂದು ಸ್ವಯಂ ಮನ್ನಿಸುತ್ತಾರೆ. ಒಂದುವೇಳೆ ಯಾರಾದರೂ ನನಗೆ ಧರ್ಮಮಾರ್ಗವನ್ನು ತಿಳಿಸಿಕೊಟ್ಟು ನನ್ನ ಪರಭವ ಸುಧಾರಣೆ ಮಾಡಿದರೆ ನಾನು ಆ ಪುರುಷರ ಉಪಕಾರವನ್ನು ಅನೇಕ ಭವಗಳವರೆಗೆ ಕೂಡ ಮರೆಯಲಾರೆನು - ಇಂಥ ಮುಗ್ಧ ಧರ್ಮಾರ್ಥಿಗಳಂತೂ ನಿಜವಾದ ಶಿಕ್ಷಣವನ್ನು ಮನ್ನಿಸುತ್ತಾರೆ, ರುಚಿಪೂರ್ವಕ ಅಂಗೀಕಾರ ಮಾಡುತ್ತಾರೆ. ಅದರಿಂದ ಇಂಥ ಮುಗ್ಧ ಅಜ್ಞಾನೀ ಜೀವಗಳ ಹಾಸ್ಯವನ್ನು ವಿವೇಕವಂತರು ಮಾಡುವುದಿಲ್ಲ. ಅಂಥವರಿಗಂತೂ ದೋಷ ಸಂಭವಿಸಿದ ಮೇಲೆ ತಿಳಿಸಿಕೊಟ್ಟು ಅವರನ್ನು ಸುಮಾರ್ಗದಲ್ಲಿ ತೊಡಗಿಸಿ ಅವರ ಒಳಿತು ಮಾಡುತ್ತಾರೆ.

೨) ಮಹಾಹಟದ ಸ್ವಭಾವದವರು, ಮಾನಿ, ಸ್ವಯಂ ತಮ್ಮನ್ನು ಮಹಾಪಂಡಿತರೆಂದು ಮನ್ನಿಸುವಂಥವರು ತಮ್ಮ ದೊಡ್ಡಸ್ತಿಕೆಯನ್ನು ಅನ್ಯರಿಗೆ ಹೇಳುವಂಥವರು ಅವರು ಎರಡನೇ ಅಜ್ಞಾನಿಗಳು, ಸ್ವಯಂ ತಮಗೆ ಏನೂ ಬರದಿದ್ದರೂ ಮಾನಬುದ್ಧಿಯಿಂದ ಯಾರಲ್ಲಿ ಏನನ್ನೂ ಕೇಳುವುದಿಲ್ಲ. ಪಠನದ ಸಮಯದಲ್ಲಿ ಮುಂದೆ ಮುಂದೆ ಮಾತನಾಡುತ್ತಾರೆ. ತಮ್ಮನ್ನು ತಾವು ಪಂಡಿತರೆಂದು ಮನ್ನಿಸುವಂಥ ಅಜ್ಞಾನಿಗಳು ಹಾಸ್ಯಕ್ಕೆ ಪಾತ್ರರಾಗುತ್ತಾರೆ.

ಪತಿಯು ಸತ್ತು ಹೋಗಿರುವಂಥ ವಿಧವೆಯು ಒಂದುವೇಳೆ ಅನೇಕ ಪ್ರಕಾರದಿಂದ ತನ್ನ ಶರೀರ ಶೃಂಗಾರ ಮಾಡಿಕೊಂಡರೆ, ತಾಂಬೂಲ ಸೇವನೆ ಮಾಡಿದರೆ (ತುಟಿಗೆ ಬಣ್ಣ ಹಚ್ಚಿಕೊಂಡರೆ) ಕನ್ನಡಿಯೊಳಗೆ ಮುಖದ ಶೋಭೆಯನ್ನು ನೋಡಿಕೊಂಡರೆ, ಶರೀರದ ಮೇಲೆ ಧರಿಸಿದ ವಸ್ತ್ರಗಳನ್ನು ರಾಗಭಾವದಿಂದ ನೋಡಿಕೊಂಡರೆ (ರಾಗ ಪೋಷಕ ವಸ್ತ್ರ ಧರಿಸಿದರೆ) ನೇತ್ರಗಳಿಗೆ ಅಂಜನ-ಕಾಡಿಗೆ ಹಚ್ಚಿಕೊಳ್ಳುತ್ತಿದ್ದರೆ ಆ ಸ್ತ್ರೀಯು ನಿಂದೆಗೆ ಪ್ರಾಪ್ತಳಾಗುತ್ತಾಳೆ.

ಸ್ತ್ರೀಯ ಶೋಭೆಯಂತೂ ಪತಿಯ ಜೊತೆಗೆ ಇರುತ್ತದೆ. ಪತಿಯು ತೀರಿಹೋದ ಮೇಲೆ ಸಿಂಗರಿಸಿಕೊಂಡು ತನ್ನ ತನುವಿನ ಶೋಭೆಯನ್ನು ಅನ್ಯರಿಗೆ ತೋರಿಸುವ ಇಚ್ಛೆಯುಳ್ಳ ಕುಶೀಲ ದೋಷಮಂಡಿತ ಸ್ತ್ರೀಯು ವಿವೇಕವಂತರಿಂದ ಹಾಸ್ಯಕ್ಕೆ ಪಾತ್ರಳಿದ್ದಾಳೆ.

ಯಾವ ಜೀವರುಗಳು ಜಗತ್ತಿನಲ್ಲಿ ನಿಂದೆಯಾದರೂ, ಜಗತ್ತಿನ ಜನರಿಗೆ ಅಪ್ರಿಯರಾಗಿದ್ದರೂ, ಜಗತ್ತಿನಿಂದ ನಿಂದ್ಯವಾದ ಕ್ರಿಯೆ-ಆಚರಣೆಯ ಧಾರಕರಾಗಿದ್ದರೂ, ಪ್ರತಿಯೊಂದು ಸ್ಥಾನದಲ್ಲಿ ಅನಾದರ ಪ್ರಾಪ್ತವಾಗುತ್ತಿದ್ದರೂ - ಅಪಕೀರ್ತಿಯ ಮೂರ್ತಿಗಳು, ಲೋಕನಿಂದ್ಯೆಯ ಭಯದಿಂದ ರಹಿತರಾಗಿ ಮಹಾನಿರ್ಲಜ್ಜರಾಗಿ ಯಾವಾಗಲೂ ಹರ್ಷದಿಂದ- ಪ್ರಸನ್ನಚಿತ್ತದಿಂದ ವಿಹರಿಸುತ್ತಾರೆ-ಸುತ್ತುತ್ತಾರೆ, ಅವರು ಪಾಪಪತಾಕೆ ಮೂರ್ಖರು ಜಗತ್ತಿನಲ್ಲಿ ಹಾಸ್ಯಕ್ಕೆ ಪಾತ್ರರಿದ್ದಾರೆ.

ಈ ಪ್ರಕಾರ ಉಪರ್ಯುಕ್ತ ಮೂರು ಜಾತಿಯ ಜೀವರುಗಳು ಹಾಸ್ಯದ ಪಾತ್ರರೆಂದು ತಿಳಿಯುವುದು. ಹೀಗೆ ತಿಳಿದು ವಿವೇಕವಂತರು ಜಗತ್‌ನಿಂದ್ಯ ಕಾರ್ಯಗಳ ತ್ಯಾಗ ಮಾಡುವುದು ಯೋಗ್ಯವಿದೆ. ಕಡಿಮೆ ಓದಿರುವ ವ್ಯಕ್ತಿಗಳು ವಿಶೇಷ ಜ್ಞಾನಿಗಳ ಹತ್ತಿರ ಓದುವುದು-ಕಲಿತುಕೊಳ್ಳುವುದು ಯೋಗ್ಯವಿದೆ, ವಿಧವೆಯರು ಶೃಂಗಾರ ಮಾಡಿಕೊಳ್ಳುವುದು ಯೋಗ್ಯವಾಗಿಲ್ಲ. ಜಗತ್ತಿನಲ್ಲಿ ನಿಂದ್ಯರಾದ ಜನರು ದೇಶ-ನಗರಗಳನ್ನು ತೊರೆದು ಲಜ್ಜೆಯೊಂದಿಗೆ ಇರುವುದೇ ಯೋಗ್ಯವಿದೆ - ಈ ಮಾತುಗಳು ಸುಖಕಾರಕವಿರುವುದರಿಂದ ಹೀಗೆಯೇ ಮಾಡುವುದು- ತಿದ್ದಿಕೊಳ್ಳುವುದು ಯೋಗ್ಯವಿದೆ.

ಈಗ ಅನಾದರವು ಯಾರ ಸಲುವಾಗಿ ಗುಣಕಾರಿಯಿದೆ ಮತ್ತು ಯಾರ ಸಲುವಾಗಿ ಆದರವು ಕೂಡ ದುಃಖದಾಯಕವಿದೆಯೆಂಬುದನ್ನು ಹೇಳುತ್ತಾರೆ,-

**ವರ ಸತಸಂಗ ಅಪಮಾಣೋ, ಹೇಯೋ ಕುಸಂಗ ಜಂತು ಸತಕಾರೋ ।**
**ಜಿಮ ಜುರಜುತ ಪಯ ಹೇಯೋ, ಲಂಘಣ ಪಾದೇಯ ಕಟುಕ ಭೇಷಜಯೇ ।।೮೬।।**

**ಗಾಥಾರ್ಥ :-** ಸತ್ಸಂಗದಲ್ಲಿ ಅಪಮಾನಿತವಾಗುವುದೂ ಯೋಗ್ಯವಿದೆ ಎಂದರೆ ಗುಣಕಾರಿಯಿದೆ. ಕುಸಂಗತಿಯುಕ್ತ ಜೀವರುಗಳಲ್ಲಿ ತಮ್ಮ ಸತ್ಕಾರವಾಗುವುದು ಕೂಡ ತ್ಯಾಗ ಯೋಗ್ಯವಿದೆ. ಜ್ವರಪೀಡಿತನ ಸಲುವಾಗಿ ಹಾಲಿನ ತ್ಯಾಗ ಮಾಡುವುದು ಯೋಗ್ಯವಿದೆ. ಲಂಘನ ಮತ್ತು ಕಹಿಯಾದ ಔಷಧಿಯು ಉಪಾದೇಯವಿದೆ.

**ಭಾವಾರ್ಥ :-** ಸಪ್ತವ್ಯಸನಧಾರೀ ಜೀವರುಗಳು ಸತ್ಸಂಗದಲ್ಲಿ ಅಪಮಾನ ಪಡೆಯುತ್ತಾರೆ.

**ಸಂದೇಹ :-** ಅವರು ಅಲ್ಲಿ ಅಪಮಾನವನ್ನೇಕೆ ಪಡೆಯುತ್ತಾರೆ ?

**ಸಮಾಧಾನ :-** ಅದನ್ನೇ ಹೇಳುತ್ತಾರೆ - ಸತ್ಸಂಗವು ಜಗತ್ತಿನ ಸಮಸ್ತ ಗುಣಗಳಿಂದ ಪರಿಪೂರ್ಣವಿದೆ; ಅದರಿಂದ ಜಗತ್‌ನಿಂದ್ಯ ಅವಗುಣಗಳು ಹಾಗೂ ಅವುಗಳ ಧಾರಕ ಅವಗುಣೀ ಜೀವಗಳು ಸತ್ಸಂಗದಲ್ಲಿ ಪ್ರವಿಷ್ಟರಾಗಲಾಗುವುದಿಲ್ಲ. ಸತ್ಸಂಗದಲ್ಲಿ ಅವಗುಣೀ ಜೀವಗಳು ಅನಾದರ ಪಡೆಯುತ್ತಾರೆ. ಸತ್ಸಂಗದಲ್ಲಿ ಆದರದ ಇಚ್ಛುಕರು ಕುಸಂಗದ ದೋಷಗಳನ್ನು ಬಿಟ್ಟುಕೊಟ್ಟು ಗುಣಗಳ ಧಾರಣ ಮಾಡಿದ ಮೇಲೆಯೇ ಸತ್ಸಂಗದಲ್ಲಿ ಆದರ ಪಡೆಯುತ್ತಾರೆ. ಅವಗುಣಿಗಳ ಆದರವು ಸತ್ಸಂಗದಲ್ಲಿ ಆಗುವುದಿಲ್ಲ.

ಅವಗುಣಗಳಿಗೆ ತನ್ನಲ್ಲಿ ಪ್ರವೇಶ ನೀಡದಂಥ ಸತ್ಸಂಗವು ಧನ್ಯವಿದೆ. ಎಲೈ ಭವ್ಯನೇ ! ಸತ್ಸಂಗವು ಯಾವ ಅನಾದರ ಮಾಡುತ್ತದೆ, ಅದು ಬೇರೆಯವರ ದೋಷಗಳ ನಾಶದ ಸಲುವಾಗಿ ಮಾಡುತ್ತದೆ. ಅದರಿಂದ ಸತ್ಸಂಗದ ಮೂಲಕ ಮಾಡಲಾದ ಅನಾದರವೂ ಒಳ್ಳೆಯದಿದೆ. ಸತ್ಸಂಗಿಗಳಿಗೆ ಯಾರ ಕುರಿತಾಗಿಯೂ ದ್ವೇಷವಿರುವುದಿಲ್ಲ,

ಕುಸಂಗೀ ಜೀವನು ತನ್ನ ಅವಗುಣಗಳನ್ನು ಬಿಟ್ಟುಕೊಟ್ಟರೆ ಅವರು ಅವನದೇ ಆದರ ಮಾಡತೊಡಗುತ್ತಾರೆ; ಆದ್ದರಿಂದ ಎಲೈ ಸುಬುದ್ಧಿಯೇ ! ನೀನು ಒಂದುವೇಳೆ ನಿನ್ನ ಒಳಿತನ್ನು ಬಯಸುತ್ತಿದ್ದರೆ ಸತ್ಸಂಗದಲ್ಲಿರು. ಸತ್ಸಂಗದ ಮೂಲಕ ಮಾಡಲಾದ ಅವಮಾನವು ನಿನ್ನ ದೋಷಗಳನ್ನು ಬಿಡಿಸುವ ಸಲುವಾಗಿ ಇದೆ; ಎಂದರೆ ಸತ್ಸಂಗಿಗಳಿಂದ ಮಾಡಲಾದ ನಿನ್ನ ಅಪಮಾನವು ನಿನ್ನ ಸಲುವಾಗಿ ಉತ್ಕೃಷ್ಟ ಸುಖದ ಕಾರಣವಿದೆ. ಹಾಗೇನಾದರೂ ಮಾನದ ವಶೀಭೂತನಾಗಿ ಸತ್ಸಂಗದ ಮೂಲಕ ಮಾಡಲಾದ ಅಪಮಾನವನ್ನು ಕೆಡಕೆಂದು ಮನ್ನಿಸಿದರೆ ನಿನ್ನ ಪರಭವವು ಕೆಟ್ಟು ಹೋಗುವುದು. ನಿನ್ನ ಅವಗುಣಗಳು ನಷ್ಟವಾಗಲಾರವು; ಅದರಿಂದ ನೀನು ಒಂದುವೇಳೆ ನಿನ್ನ ವಿವೇಕವನ್ನು ಪ್ರಕಟಪಡಿಸಿಕೊಂಡು ಯಶಸ್ಸನ್ನು ಬಯಸುತ್ತಿದ್ದರೆ ಸತ್ಸಂಗವುಳ್ಳ ಪುರುಷರಿಂದ ಮಾಡಲಾದ ನಿನ್ನ ಅಪಮಾನವನ್ನು ಪರಮಾರ್ಥದ ಅರ್ಥ (ಪ್ರಯೋಜಕ)ವೆಂದು ತಿಳಿಯುವುದು.

ಎಲೈ ಭವ್ಯಾತ್ಮನೇ ! ಎಲ್ಲಿಯವರೆಗೆ ನಿನಗೆ ಕುಸಂಗದ ಆದರವು ಪ್ರಿಯವೆನಿಸುತ್ತದೆ. ಅಲ್ಲಿಯವರೆಗೆ ನಿನ್ನ ದೋಷಗಳ ನಾಶವಾಗುವುದಿಲ್ಲ ಮತ್ತು ಸತ್ಸಂಗದ ಅಪಮಾನವು ಹಿತಕರವೆನಿಸುವ ಸಾಧ್ಯತೆಯಿಲ್ಲ; ಅದಕ್ಕಾಗಿ ನೀನು ಕುಸಂಗದ ಸತ್ಕಾರ ಸ್ನೇಹಭಾವವನ್ನು ಬಿಟ್ಟುಕೊಡುವುದು ಯೋಗ್ಯವಿದೆ. ಹೇಗೆ ಜ್ವರ ಸಹಿತ ರೋಗಿಗೆ ಹಾಲು ಒಳ್ಳೆಯದೆನಿಸುತ್ತದೆ ಆದಾಗ್ಯೂ ಜ್ವರದ ಕಾರಣ ಅದರ ತ್ಯಾಗ ಮಾಡುವುದೇ ಯೋಗ್ಯವಿದೆ ಹಾಗೂ ಕಹಿ ಔಷಧಿ ಮತ್ತು ಲಂಘನವು ಉಪಾದೇಯ-ಗುಣಕಾರಿಯಿದೆ, ಹಾಗೆಯೇ ಸತ್ಸಂಗದ ಪುರುಷರು ನಿನ್ನಲ್ಲಿರುವ ಅವಗುಣಗಳನ್ನು ತಿಳಿದು ನಿನ್ನೊಂದಿಗೆ ಪ್ರೀತಿ ಮಾಡುವುದಿಲ್ಲ. ನಿನ್ನ ಅಪಮಾನ ಮಾಡುತ್ತಾರೆ ಮತ್ತು ವರ್ತಮಾನ ಕಾಲದಲ್ಲಿ ಮಾನಬುದ್ಧಿಯ ಕಾರಣದಿಂದ ಅದು ನಿನಗೆ ಒಳ್ಳೆಯದೆನಿಸುವುದಿಲ್ಲ; ಆದಾಗ್ಯೂ ವಿವೇಕಿಯಾದ ನೀನು ಅದನ್ನು ಕಹಿ ಔಷಧಿ ಹಾಗೂ ಲಂಘನದ ಸಮಾನ ಸುಖಕಾರಕ ತಿಳಿಯುವುದು.

ಎಲೈ ಭವ್ಯನೇ ! ಇನ್ನೂ ಆಲಿಸು !! ಕುಸಂಗದ ಸತ್ಕಾರವು, ಜ್ವರದ ಅವಸ್ಥೆಯಲ್ಲಿ ಕಿಂಚಿತ್ ಸುಖವಿತ್ತು ನಂತರ ದೀರ್ಘಕಾಲದವರೆಗೆ ದುಃಖ ಮಾಡುವಂಥ ದುಗ್ಧಪಾನದ ಸಮಾನವಿದೆ. ಕುಸಂಗದ ಅಜ್ಞಾನಿ, ವ್ಯಸನಿ, ಅಪರಾಧಿ ಜೀವಗಳ ಮೂಲಕ ಮಾಡಲಾದ ನಿನ್ನ ಸತ್ಕಾರದ ಸುಖವು ಕಿಂಚಿತ್ ಕೌತುಕ ಪರಿಣತಿಯ ಪ್ರಸನ್ನತೆಯ ಸಮಾನವಿದೆ, ನಂತರ ಅದರ ಫಲವು ಮಹಾವಿಷಮ ದುಃಖಕಾರಕವಿದೆ. ಅದರಿಂದ ಯಾರೂ ಸಹಾಯಕರಿಲ್ಲದಿರುವಂಥ ನರಕದ ದುಃಖಗಳನ್ನು ಭೋಗಿಸಬೇಕಾಗುವುದು-ಈ ಪ್ರಕಾರ ಕುಸಂಗದ ಫಲವು ನಂತರ-ಪರಭವದಲ್ಲಿ ದೊರಕುತ್ತದೆ; ಅದಕ್ಕಾಗಿ ಹೇಗೆ ಚತುರ ರೋಗಿಯು ಹಾಲಿನ ತ್ಯಾಗ ಮಾಡುತ್ತಾನೆ, ಹಾಗೆಯೇ ಕುಸಂಗದ ತ್ಯಾಗ ಮಾಡುವುದು ಯೋಗ್ಯವಿದೆ.

ಈಗ ಮ್ಲೇಚ್ಛತೆಯ ಆರು ಭೇದಗಳನ್ನು ತಿಳಿಸಿಕೊಡುತ್ತಾರೆ,-

**ಮಣ ತಣ ಘರ ಪುರ ದೇಸಾ, ಖಂಡಾದಿ ಖಂಡ ಮ್ಲೇಚ್ಛ ಭೇಯಾಏ ।**
**ನಹೀ ಸುಆಚರಣ ಧಮ್ಮೋ, ಸೋ ಅಣಾಜ್ಜಥಲ ಭಾಸಿಯೋ ಸುತ್ತ ।।೮೭।।**

**ಗಾಥಾರ್ಥ :-** ತನು, ಮನ, ಮನೆ, ನಗರ, ದೇಶ, ಖಂಡ ಇತ್ಯಾದಿ ಮ್ಲೇಚ್ಛತೆಯ ಆರು ಭೇದಗಳನ್ನು ತಿಳಿಯುವುದು. ಎಲ್ಲಿ ಶುಭ-ಆಚರಣೆ, ಶುಭ-ಧರ್ಮವಿಲ್ಲ ಅದನ್ನು ಸೂತ್ರದಲ್ಲಿ ಅನಾರ್ಯಕ್ಷೇತ್ರವೆನ್ನಲಾಗಿದೆ.

**ಭಾವಾರ್ಥ :-** ಎಲೈ ಭವ್ಯನೇ ! ಮ್ಲೇಚ್ಛತೆಯ ಆರು ಭೇದಗಳಿವೆ. ಈಗ ಅವುಗಳ ವರ್ಣನೆ ಮಾಡುತ್ತಾರೆ. ಎಲ್ಲಿ ಶುಭ ಆಚರಣೆಯಾಗುವುದಿಲ್ಲ, ಸುಧರ್ಮದ ಪ್ರವೃತ್ತಿಯಿರುವುದಿಲ್ಲವೋ ಆ ಸ್ಥಾನವನ್ನು ಮ್ಲೇಚ್ಛವೆಂದು ಹೇಳುತ್ತಾರೆ. ಅದರ ಭೇದಗಳು ಆರು ಇವೆ. ಮನಸ್ಸು ಮ್ಲೇಚ್ಛವಿದೆ, ಶರೀರವು ಮ್ಲೇಚ್ಛವಿದೆ, ಮನೆಯು ಮ್ಲೇಚ್ಛವಿದೆ, ನಗರವು ಮ್ಲೇಚ್ಛವಿದೆ, ದೇಶಮ್ಲೇಚ್ಛ ಮತ್ತು ಖಂಡ ಮ್ಲೇಚ್ಛವಿದೆ. ಈಗ ಅರ್ಥಸಹಿತ ಅವುಗಳ ವಿಸ್ತಾರ ಮಡುತ್ತಾರೆ.

ಯಾರ ಮನಸ್ಸಿನಲ್ಲಿ ಶುಭ ಆಚಾರವಿರುವುದಿಲ್ಲ, ಸುಧರ್ಮದ ಪ್ರವೃತ್ತಿಯಾಗುವುದಿಲ್ಲ ಆ ಮನಸ್ಸು ಮ್ಲೇಚ್ಛನ ಸಮಾನವಿರುವುದರಿಂದ ಅವರನ್ನು ಮನ ಮ್ಲೇಚ್ಛರೆಂದು ಹೇಳುತ್ತಾರೆ.

ಯಾವ ಶರೀರದಿಂದ ಒಳ್ಳೆಯ ಆಚಾರ ಮತ್ತು ಧರ್ಮದ ಸೇವನೆಯನ್ನು ಮಾಡಲಾಗುವುದಿಲ್ಲ. ಆ ಶರೀರವು ಮ್ಲೇಚ್ಛನ ಸಮಾನವಿರುವುದರಿಂದ ಅವರನ್ನು ತನುಮ್ಲೇಚ್ಛರೆಂದು ಹೇಳುತ್ತಾರೆ.

ಯಾರ ಮನೆಯಲ್ಲಿ ಸುಆಚಾರ ಸಹಿತ ಧರ್ಮವಿರುವುದಿಲ್ಲ. ಆ ಮನೆಯು ಮ್ಲೇಚ್ಛನ ಸಮಾನವಿರುವುದರಿಂದ ಅವರನ್ನು ಗೃಹ ಮ್ಲೇಚ್ಛರೆನ್ನುತ್ತಾರೆ.

ಯಾವ ಪುರ-ನಗರದಲ್ಲಿ ಸುಆಚಾರ ಮತ್ತು ಸುಆಚಾರ ಸಹಿತ ಧರ್ಮವಿರುವುದಿಲ್ಲ. ಆ ಪುರವು ಮ್ಲೇಚ್ಛರ ಪುರ-ನಗರದ ಸಮಾನವಿರುವುದರಿಂದ ಅದನ್ನು ಪುರಮ್ಲೇಚ್ಛವೆಂದು ಹೇಳುತ್ತಾರೆ.

ಯಾವ ದೇಶದಲ್ಲಿ ಶುಭ ಆಚಾರ ಸಹಿತ ಧರ್ಮಪ್ರವೃತ್ತಿಯಿರುವುದಿಲ್ಲ, ಆ ದೇಶವು ಮ್ಲೇಚ್ಛರ ದೇಶದ ಸಮಾನವಿರುವುದರಿಂದ ಅದನ್ನು ದೇಶ ಮ್ಲೇಚ್ಛವೆಂದು ಹೇಳುತ್ತಾರೆ.

ಯಾವ ಖಂಡದಲ್ಲಿ ಶುಭಾಚಾರ ಸಹಿತ ಧರ್ಮವಿರುವುದಿಲ್ಲ. ಆ ಖಂಡವು ಮ್ಲೇಚ್ಛವಿದೆ.

ಈ ಪ್ರಕಾರ ಮ್ಲೇಚ್ಛತೆಯ ಆರು ಭೇದ ಹೇಳಿದ್ದಾರೆ. ಇವುಗಳಲ್ಲಿ ಎಲ್ಲೆಲ್ಲಿ ಧರ್ಮದ ಪ್ರವೃತ್ತಿಯಾಗುವುದಿಲ್ಲ ಅವೆಲ್ಲವನ್ನು ಮ್ಲೇಚ್ಛವೆಂದು ತಿಳಿಯುವುದು. ಇವುಗಳಿಗೆ ಎಂದರೆ ಇವುಗಳ ಧಾರಕ ಜೀವರುಗಳಿಗೆ ಸುಧರ್ಮದ ಉಪದೇಶವು ಒಪ್ಪಿಗೆಯಾಗುವುದಿಲ್ಲ. ಇವರದು ಧರ್ಮದಲ್ಲಿ ಅಭಿರುಚಿಯಿರುವುದಿಲ್ಲ. ಇವರು ಕುಆಚಾರವುಳ್ಳವರು ಅಭಕ್ಷ್ಯ ಭಕ್ಷಣೆ ಮಾಡುವಂಥವರಿರುವುದರಿಂದ ಕುಗತಿಗಾಮಿಗಳೆಂದು ತಿಳಿಯುವುದು.

ಈಗ ಮೂಢತೆಯ ಏಳು ಭೇದಗಳನ್ನು ಹೇಳುತ್ತಾರೆ,-

**ಜಾಯ ಲೋಯ ಧಮ್ಮ ಮೂಢಯ, ಮೂಢೋ ಮಣಕಾಯ ವಯಣ ವಿವಹಾರೋ ।**
**ಜಥಾರಿಯ ವಿಪರೀಯೋ ಮಿಚ್ಛಾಇಟ್ಠೀ ಯ ಹೋಯ ಸಯ ಜೀವೋ ॥೮೮॥**

**ಗಾಥಾರ್ಥ :-** ಜಾತಿಮೂಢ, ಲೋಕಮೂಢ, ಮನಮೂಢ, ತನುಮೂಢ, ವ್ಯವಹಾರ ಮೂಢ ಇತ್ಯಾದಿ ಯಥಾಯೋಗ್ಯ ವಿಪರೀತ ಕ್ರಿಯೆಯ ಧಾರಕರು - ಇವರೆಲ್ಲರೂ ಮಿಥ್ಯಾದೃಷ್ಟಿಗಳೆಂದು ತಿಳಿಯುವುದು.

**ಭಾವಾರ್ಥ :-** ಮೂರ್ಖತೆಗೆ ಮೂಢತೆಯೆಂದು ಹೇಳುತ್ತಾರೆ. ಒಳಿತು-ಕೆಡಕುಗಳ ಭೇದ ತಿಳಿಯದವರು, ಯೋಗ್ಯ-ಅಯೋಗ್ಯ, ಖಾದ್ಯ-ಅಖಾದ್ಯಗಳ ಭೇದರಹಿತ ಹಟಗ್ರಾಹಿಗಳನ್ನು ಮೂಢರೆಂದು ಹೇಳುತ್ತಾರೆ. ಯಾವನೋ ಜೀವನು ದುಃಖ ಕೊಡುವಂಥ ಪಾಪಕ್ರಿಯೆ ಮಾಡುತ್ತಿದ್ದನು. ಅದನ್ನು ಕಂಡು ಯಾವನೋ ಧರ್ಮಾತ್ಮನು ದಯಾಭಾವದಿಂದ ಅದರ ನಿಷೇಧ ಮಾಡುತ್ತ ಎಲೈ ಭವ್ಯನೇ ! ಪರಭವದಲ್ಲಿ - ಮುಂದೆ ದುಃಖ ಕೊಡುವಂಥ ಈ ಕಾರ್ಯವನ್ನು ನೀನು ಮಾಡಬೇಡ, ಇದರಿಂದ ನೀನು ದುಃಖಿಯಾಗುವೆಯೆಂದು ಹೇಳುತ್ತಾನೆ. ಅದನ್ನು ಕೇಳಿ ಆ ಮೂಢ ಅಜ್ಞಾನಿಯು ಹೇಳುವುದೇನೆಂದರೆ - ಸೋದರನೇ ! ನಮ್ಮ ಜಾತಿಯಲ್ಲಂತೂ ಈ ಕಾರ್ಯ ಮಾಡುವುದನ್ನು ಯೋಗ್ಯವೆಂದು ಹೇಳಿದ್ದಾರೆ, ನಿಂದ್ಯವೆಂದು ಹೇಳಿಲ್ಲ. ಈ ಕಾರ್ಯವು ಒಳ್ಳೆಯದಿರದಿದ್ದರೆ ನಮ್ಮ ಜಾತಿಯಲ್ಲಿ ನಮ್ಮ ಹಿರಿಯರು ಇದನ್ನೇಕೆ ಮಾಡುತ್ತಿದ್ದರು ? ನಮ್ಮ ಜಾತಿಯ ಹಿರಿಯರು ಮೊದಲಿನಿಂದಲೂ ಯಾವ ಕಾರ್ಯವನ್ನು ಮಾಡುತ್ತ ಬಂದಿದ್ದಾರೆ, ಅದನ್ನು ಹೇಗೆ ಬಿಡುವುದು ? - ಇಂಥ ದುರಾಗ್ರಹಿ, ಮಹಾಧಿಟ್ಟ, ಕಠೋರ ಪರಿಣಾಮಿ, ಪಾಪ ಕ್ರಿಯೆಗಳ ತ್ಯಾಗ ಮಾಡದಂಥವನು ಜಾತಿಮೂಢನೆನಿಸಿಕೊಳ್ಳುತ್ತಾನೆ.

ಯಾವನೋ ಅಜ್ಞಾನೀ ಜೀವನು ಅಜ್ಞಾನರೂಪ, ಪಾಪರೂಪ, ಕ್ರೋಧ-ಮಾನ-ಮಾಯಾ-ಲೋಭರೂಪ ಲೌಕಿಕ ಅನೇಕ ಅಸತ್ಯಪದ್ಧತಿ, ಕಳವು, ಜೂಜು, ಪರಸ್ತ್ರೀಗಮನ ಇತ್ಯಾದಿ ಅನೇಕ ಪಾಪರೂಪ ಕ್ರಿಯೆಗಳನ್ನು ಮಾಡುತ್ತಿದ್ದನು. ಅಯೋಗ್ಯ ಕ್ರಿಯೆಗಳಲ್ಲಿ ಮುಳುಗಿ ಹೋದ ಅವನನ್ನು ಕಂಡು ಯಾವನೋ ಧರ್ಮಾತ್ಮನು ವಿನಯಪೂರ್ವಕ - ಎಲೈ ಸೋದರನೇ ! ಮಹಾದುಃಖದಾಯಕ, ಲೋಕನಿಂದ್ಯವಾದ ಈ ಕುಕಾರ್ಯ ಮಾಡಬೇಡ ಇವು ನಿನ್ನನ್ನು ಎರಡೂ ಭವಗಳಲ್ಲಿ ದುಃಖಿಯನ್ನಾಗಿಸುವವು - ಎಂದು ಹೇಳುತ್ತಾನೆ, ಇಂಥ ಹಿತಕಾರಕ ವಚನಗಳನ್ನಾಲಿಸಿ, ಆ ಜ್ಞಾನ ದರಿದ್ರ ಮೂರ್ಖನು ಹೇಳುತ್ತಾನೆ - ಅಯ್ಯಾ ಸೋದರನೇ ! ಕೇವಲ ನಾವಷ್ಟೇ ಈ ಕಾರ್ಯ ಮಾಡುವುದಿಲ್ಲ. ಇಲ್ಲಿ ಇಂಥ ಕ್ರಿಯೆಗಳನ್ನು ಅನೇಕ ಜನರು ಮಾಡುತ್ತಾರೆ. ನೀನು ಯಾರ-ಯಾರನ್ನು ತಡೆಯಬಹುದಾಗಿದೆ ? ಸಂಸಾರದಲ್ಲಿ ಎಲ್ಲ ಜನರು ಹೀಗೆ ಮಾಡುತ್ತಾರೆ; ಅದರಿಂದ ನಾವೂ ಹೀಗೆ ಮಾಡುತ್ತೇವೆ. - ಈ ಪ್ರಕಾರ ಜ್ಞಾನಾಂಧನು ಸ್ವಯಂ ಯಾವ ವಿಚಾರವನ್ನೂ ಮಾಡದೆ ಕೇವಲ ಅಜ್ಞಾನೀ ಜನರ ಅನುಕರಣೆ ಮಾಡುತ್ತ ಅಸತ್ಯಕಾರ್ಯ ಮಾಡುವಂಥವ, ಹಟಗ್ರಾಹಿ, ಪಾಪಕ್ರಿಯೆ ಮಾಡುವಂಥವನು ಲೋಕಮೂಢನೆನಿಸಿಕೊಳ್ಳುತ್ತಾನೆ.

ಈಗ ಧರ್ಮಮೂಢರ ಸ್ವರೂಪ ಹೇಳುತ್ತಾರೆ - ಕುಲದಲ್ಲಿ, ಲೋಕದಲ್ಲಿ ಅಜ್ಞಾನಪೂರ್ವಕ, ವಿಚಾರ ಮಾಡದೇ, ಪರೀಕ್ಷೆ ಮಾಡದೇ ಯಾರು ಮೊದಲಿನಿಂದಲೇ ಪ್ರತ್ಯಕ್ಷ ಜೀವಹಿಂಸೆ ಸಹಿತ ಅಸತ್ಯ ಧರ್ಮದ ಸೇವನೆ ಮಾಡುತ್ತಾರೆ. ಇಂಥ ಮಾರ್ಗದ ಉಪದೇಶ ಕೊಡುವಂಥವರಿಗೆ ಮಹಾಕ್ರೋಧ, ಮಾನ, ಮಾಯೆ, ಲೋಭದ ತೀವ್ರತೆಯಿರುತ್ತದೆ. ಅವರು ಪಂಚೇಂದ್ರಿಯ ಭೋಗಗಳನ್ನು ಪುಷ್ಟ ಮಾಡುವಂಥವರು ತಪ-ಸಂಯಮ ರಹಿತ ದೇವನನ್ನು ಭಗವಂತನೆಂದು ಮನ್ನಿಸುವಂಥವರು ಮುಗ್ಧ ಜೀವರುಗಳಿದ್ದು ಧರ್ಮ ಮೂಢರಿದ್ದಾರೆ. ಅವರ ದೇವನು ಎಂಥವನು ? ಅವನ ಮುಖ, ಆಕಾರವನ್ನು ನೋಡುತ್ತಿದ್ದಂತೆಯೇ ಮಹಾಭಯವು ಉತ್ಪನ್ನವಾಗುತ್ತದೆ. ಅಂಥ ವಿಕರಾಳ ಮುದ್ರೆಯ ಧಾರಕನಿದ್ದಾನೆ, ನಿರ್ದಯಿಯಿದ್ದಾನೆ, ಮಾಂಸಾಹಾರಿಯಿದ್ದಾನೆ - ಅಂಥ ದೇವನನ್ನು ಪ್ರಭುವೆಂದು ಮನ್ನಿಸಿ ಪೂಜಿಸುತ್ತಾರೆ.

ಮಹಾಕ್ರೋಧಿ, ಅನೇಕ ಶಸ್ತ್ರಗಳನ್ನು ಧಾರಣ ಮಾಡುವಂಥವರು, ಬಹುಪರಿಗ್ರಹಿ, ಭಯಾನಕ ಆಕಾರವುಳ್ಳವರು, ಕ್ರೂರವಚನಗಳನ್ನಾಡುವಂಥವರು, ಅವರ ವಿನಯ ಮಾಡದಿದ್ದರೆ ದಂಡಿಸುವಂಥವರು, ಮಹಾಮಾನಿ, ಮುಗ್ಧ-ದೀನ ಜನರಿಂದ ತಮ್ಮ ಸೇವೆ ಮಾಡಿಸಿಕೊಳ್ಳುವಂಥವರು, ನಯ-ಯುಕ್ತಿಯಿಂದ ಇತರರ ಧನ ಪಡೆದುಕೊಳ್ಳುವಂಥವರು, ಮಾಯಾವಿ, ಲೋಭಿ, ಅಭಕ್ಷ್ಯಭೋಜನ ಮಾಡುವಂಥವರನ್ನು ಗುರುವೆಂದು ಮನ್ನಿಸುತ್ತಾರೆ. ಹಿಂಸೆ ಮಾಡುವುದರಿಂದ ಧರ್ಮದ ಉತ್ತಮ ಫಲ ದೊರಕುತ್ತದೆ, ಭೋಗ ಭೋಗಿಸುವುದರಿಂದ ಪುಣ್ಯವಾಗುತ್ತದೆ - ಎಂದು ಕಥನ ಮಾಡುವಂಥ ಶಾಸ್ತ್ರಗಳಿಂದ ಧರ್ಮ ಮನ್ನಿಸುತ್ತಾರೆ. - ಇಂಥ ಕುದೇವ, ಕುಗುರು, ಕುಧರ್ಮಗಳ ಸೇವನೆ ಮಾಡುವಂಥ ಧರ್ಮಾರ್ಥಿ ಮುಗ್ಧ ಜೀವರುಗಳು ಹಿಂಸಾರೂಪ ಕುಆಚಾರಮಯ ಕುಮಾರ್ಗಿ ಪ್ರವೃತ್ತಿಯನ್ನು ಮೋಕ್ಷಮಾರ್ಗಮಯ, ಧರ್ಮವೆಂದು ತಿಳಿಯುತ್ತ ಧರ್ಮಫಲದ ಲೋಭಿಗಳು ಈ ಲೋಕಾರೂಢ ಧರ್ಮದ ಸೇವನೆ ಮಾಡುತ್ತಾರೆ. ಯಾವನೋ ಸತ್ಯದೃಷ್ಟಿಯುಳ್ಳ ಧರ್ಮಾತ್ಮನು ಇದನ್ನೆಲ್ಲ ನೋಡಿ ಕರುಣೆಯಿಂದ ಅವರಿಗೆ ಹೇಳುವುದೇನೆಂದರೆ, ಎಲೈ ಧರ್ಮಾರ್ಥಿಯೇ ! ನೀನು ಧರ್ಮದ ಸಲುವಾಗಿ ಪಾಪದ ಸೇವನೆ ಮಾಡಬೇಡ. ಜೀವಘಾತಕ, ಮಾಂಸಾಹಾರಿಗಳಾದ ಇವರು ದೇವರಲ್ಲ, ಇವು ಭಗವಂತರ ಚಿಹ್ನೆಗಳಲ್ಲ. ಪರಿಗ್ರಹದಧಾರಕ, ಶಸ್ತ್ರಧಾರಕ, ಕಷಾಯಿಗಳು ಗುರುಗಳಲ್ಲ - ಗುರುಗಳ ಸ್ವರೂಪವು ಹಾಗಿರುವುದಿಲ್ಲ. ಧರ್ಮವು ಹಿಂಸಾಮಯವಿರುವುದಿಲ್ಲ. ಎಲೈ ಭವ್ಯನೇ ! ನೀನು ವಿಚಾರ ಮಾಡಿ ನೋಡಿ ದೇವ-ಧರ್ಮ ಗುರುವಿನ ಸೇವನೆ ಮಾಡು; ಅದರಿಂದ ನಿನ್ನದು ಒಳಿತಾಗುವುದು.

ಧರ್ಮಾತ್ಮನ ಇಂಥ ವಚನಗಳನ್ನಾಲಿಸಿ ಆ ಜ್ಞಾನದರಿದ್ರ, ಶುಭಾಶುಭ ವಿಚಾರದಿಂದ ರಹಿತ, ಏನನ್ನೂ ತಿಳಿಯದೇ ಆ ಹಟಗ್ರಾಹಿ ಅಜ್ಞಾನಿಯು ಹೇಳುತ್ತಾನೆ-ಮೊದಲಿನಿಂದಲೇ ನಮ್ಮ ಪೂರ್ವಜರು-ಹಿರಿಯರು ಇದೇ ಧರ್ಮದ ಸೇವನೆ ಮಾಡುತ್ತ ಬಂದಿದ್ದಾರೆ. ನಮ್ಮ ಧರ್ಮದಲ್ಲಿಯಂತೂ ಇಂಥ ದೇವ, ಧರ್ಮ, ಗುರುಗಳೇ ಇರುತ್ತಾರೆ. ನಮ್ಮ ಕುಲದಲ್ಲಿಯಂತೂ ಮೊದಲಿನಿಂದಲೇ ಇಂಥ ಧರ್ಮದ ಸೇವನೆಯಾಗುತ್ತ ಬಂದಿದೆ; ಅದರಿಂದ ನಾವೂ ಸೇವನೆ ಮಾಡುತ್ತೇವೆ-ಎಂದು ಹೇಳಿ ಪಾಪಪಂಥರೂಪ ಕುಲಧರ್ಮವನ್ನು ಬಿಟ್ಟುಕೊಡದ ಹಟಗ್ರಾಹಿಯು ಧರ್ಮಮೂಢನೆನಿಸಿಕೊಳ್ಳುತ್ತಾನೆ.

ಮನಮೂಢತೆ - ಯಾರ ಮನಸ್ಸು ಯಾವಾಗಲೂ ಮಹಾಚಂಚಲವಿರುತ್ತದೆ, ಸ್ಥಿರವಾಗಿರುವುದಿಲ್ಲ. ಮಹಾಲೋಭದಿಂದ ಮೋಹಿತವಿರುತ್ತಾರೆ, ಯಾರ ಮನಸ್ಸು ನನಗೆ ಬಹಳಷ್ಟು ಧನವು ಹೇಗೆ ದೊರಕಬಹುದಾಗಿದೆ? - ಎಂದು ಸದೈವ ವಿಚಾರ ಮಾಡುತ್ತಿರುತ್ತದೆ. ಯಾವನೋ ದೇವನ ಸೇವೆ ಮಾಡಿದರೆ ಅವನು ನನಗೆ ನಾನು ಕೇಳಿದಷ್ಟು ಧನ ಕೊಡಬಹುದೇನು ? ವಿಶಿಷ್ಟ ಸಮಯದಲ್ಲಿ ಶೀತಲೆಯು ಪ್ರತ್ಯಕ್ಷಳಾಗುತ್ತಾಳೆ. ಅವಳ ಪೂಜೆ ಮಾಡಿದರೆ ಧನ ದೊರಕಬಹುದು - ಎಂದೆಲ್ಲ ವಿಚಾರ ಮಾಡುತ್ತ ಆ ಧನದ ಲೋಭಿಯು ಅನೇಕ ಕುದೇವಗಳನ್ನು ಪೂಜಿಸುತ್ತಾನೆ. ಅಲ್ಲದೇ ದಾರಿಯಲ್ಲಿ ಬಿದ್ದಿರುವ ಧನವು ದೊರಕಿದರೆ ಒಳ್ಳೆಯದಿದೆಯೆಂದು ಬಯಸುತ್ತಾನೆ. ಅದರ ಸಲುವಾಗಿ ಅವನು ಭೂಮಿಯಲ್ಲಿ ಹೂತುಹೋಗಿರುವ ಪಾಷಾಣಗಳನ್ನು ಅಗೆದು ತಗೆ ತಗೆದು ಧನವನ್ನರಿಸುತ್ತ ತಿರುಗುತ್ತಾನೆ - ಇಂಥ ಅವಸ್ಥೆಯುಳ್ಳ ಈ ಧರ್ಮ ಮಾರ್ಗವನ್ನು ಮರೆತುಹೋದ ಅಜ್ಞಾನಿ ಜೀವದ ಮನಸ್ಸಿನ ಮೂರ್ಖತೆಯು ಎಂದೂ ಬಿಟ್ಟುಹೋಗುವುದಿಲ್ಲ.

ಇಂಥ ಭ್ರಮೆಯುಳ್ಳವನಿಗೆ ಯಾವನೋ ಜ್ಞಾನಿಯು ತಿಳಿಸಿಕೊಡುತ್ತ - ನೀನು ಮನಸ್ಸನ್ನು ಸ್ಥಿರ ಮಾಡು. ಕುದೇವಾದಿಗಳನ್ನು ಪೂಜಿಸುವುದರಿಂದ ಪಾಪವಾಗುತ್ತದೆ, ಧನವು ದೊರಕುವುದಿಲ್ಲ; ಅದಕ್ಕಾಗಿ ಇವರನ್ನು ಪೂಜಿಸಬೇಡ - ಎಂದು ಹೇಳುತ್ತಾನೆ. ಅದಕ್ಕೆ ಆ ಅಜ್ಞಾನಿಯು - ಇದರಿಂದ ಹೇಗೆ ಪಾಪವಾಗುತ್ತದೆ ? ಇವರು ದೇವರಿದ್ದಾರೆ, ಪ್ರಸನ್ನರಾದರೆಂದರೆ ಇವರ ಸಲುವಾಗಿ ಭಕ್ತರಿಗೆ ಧನ ಕೊಡುವುದು ಸುಲಭವಿದೆ; ಅನೇಕರಿಗೆ ಮನವಾಂಛಿತ ಫಲ ಕೊಟ್ಟಿದ್ದಾರೆ - ಎಂದು ಹೇಳುತ್ತಾನೆ ಮತ್ತು ಹೀಗೆಯೇ ಮನ್ನಿಸಿ ಕುದೇವ, ಕುಗುರು, ಕುಧರ್ಮದ ಪೂಜೆಯ ಸಂಬಂಧದ ತನ್ನ ಮನಸ್ಸಿನ ಮೂರ್ಖತೆಯನ್ನು ಬಿಟ್ಟುಕೊಡುವುದಿಲ್ಲ. ಈ ಪ್ರಕಾರ ಸದೈವ ಮನಸ್ಸನ್ನು ಆರ್ತ-ರೌದ್ರರೂಪವಿಟ್ಟುಕೊಳ್ಳುವಂಥವನು ಮನಮೂಢನಿದ್ದಾನೆ.

ಯಾರ ಶರೀರದ ಮೂಲಕ ಶುದ್ಧ ದೇವ, ಧರ್ಮ, ಗುರುಗಳ ಸೇವೆಯು ಸಂಭವಿಸುವುದಿಲ್ಲ; ಅವರ ವಿನಯಭಕ್ತಿಯು ಸಂಭವಿಸುವುದಿಲ್ಲ; ದೀರ್ಘಕಾಲದಿಂದ ಕುದೇವಾದಿಗಳ ಕುರಿತು ನಮನತೆಯ ಕಾರಣ ಅವರ ಶರೀರವು ಮಹಾಭಯಾನಕ ಆಕಾರವುಳ್ಳದ್ದಾಗಿದೆ. ನೇತ್ರಗಳು ಕ್ರೂರತೆಯಿಂದ ಕೆಂಪಾಗಿ ಹೋಗಿವೆ. ಅವರ ಶರೀರದ ಮೇಲೆ ಭಸ್ಮ, ಹಣೆಯ ಮೇಲೆ ಚಂದ್ರಾದಿ ವಿವಿಧ ಆಕಾರದ ಕುಂಕುಮ, ಕಂಠ-ಭುಜದಲ್ಲಿ ಅನೇಕ ತಾಯಿತಗಳಿರುತ್ತವೆ; ಕೈಯಲ್ಲಿ ಲೋಹ, ತಾಮ್ರದ ಬಳೆಗಳಿರುತ್ತವೆ - ಈ ಪ್ರಕಾರ ಇವರುಗಳ ಮುದ್ರೆಯು ಧರ್ಮಧ್ಯಾನದಿಂದ ರಹಿತ, ಶಾಂತಿ ಹಾಗೂ ಸೌಮ್ಯಭಾವದಿಂದ ರಹಿತವಾಗಿರುತ್ತದೆ. ಮಹಾಭಯಾನಕ, ವಿಪರೀತ ತನಧಾರಿಗಳು ಈ ಕ್ರಿಯೆಗಳಲ್ಲಿ ಧರ್ಮ ಮನ್ನಿಸುತ್ತಾರೆ.

ಅಂಥವರಿಗೆ ಯಾರೋ ಜ್ಞಾನಿಗಳು - ಒಂದುವೇಳೆ ಧರ್ಮದ ಫಲವನ್ನು ಬಯಸುತ್ತಿದ್ದರೆ ಶಾಂತ ಮುದ್ರೆಯನ್ನಿಟ್ಟುಕೊಳ್ಳಿರಿ ಭಯಾನಕ ಆಕಾರರೂಪವಾಗಿರುವುದನ್ನು ಬಿಟ್ಟುಬಿಡಿ - ಎಂದು ಹೇಳುತ್ತಾರೆ - ಅದನ್ನು ಕೇಳಿ ಆ ಮೂಢಾತ್ಮರು 'ನಾವು ಅಂತರಂಗದಲ್ಲಿಯಂತೂ ಶಾಂತರೇ ಇದ್ದೇವೆ, ಆದರೆ ಬಾಹ್ಯದಲ್ಲಿ ತೋರಿಕೆಯ

ಸಲುವಾಗಿ ನಮ್ಮನ್ನು ನಾವು ಬಚ್ಚಿಡುವ ಸಲುವಾಗಿ ಬಾಹ್ಯದಲ್ಲಿ ಭಯಾನಕ ಸೋಗುಧರಿಸಿದ್ದೇವೆ'ಯೆಂದು ಹೇಳುತ್ತಾರೆ. ಈ ಪ್ರಕಾರ ನಯ-ಯುಕ್ತಿ ನೀಡುವಂಥ ಆದರೆ ಕಾಯದ ಕ್ರೂರತೆಯನ್ನು ಬಿಡದವರು ತನಮೂಢರೆನಿಸಿಕೊಳ್ಳುತ್ತಾರೆ.

ಈರ್ಯಾ ಸಮಿತಿಯಿಂದ ರಹಿತರಿರುವಂಥವರ ಮದೋನ್ಮತ್ತ ನಡಿಗೆಯನ್ನು ನೋಡಿ ಅನ್ಯ ಜೀವಗಳು ಭಯಭೀತರಾಗಿ ದುಃಖಿಯಾಗುತ್ತಾರೆ, ಪ್ರಯೋಜನವಿಲ್ಲದೆ ತಮ್ಮ ಕೈ ಕಾಲುಗಳಿಂದ ದೀನ ಜೀವಗಳಿಗೆ ದುಃಖ ಕೊಡುತ್ತ ವಿಕಟಕಾಯದ ಧಾರಕರು, ದಯಾರಹಿತ ಮುದ್ರಾಧಾರಿಗಳು, ಶರೀರವನ್ನು ಉದ್ದಟವಾಗಿಟ್ಟುಕೊಳ್ಳುವ ಜೀವರುಗಳು ಕಾಯಮೂಢ(ತನಮೂಢ)ರೆನಿಸಿಕೊಳ್ಳುತ್ತಾರೆ.

ಜಿನ ಆಜ್ಞೆಯಿಂದ ರಹಿತ, ಪಾಪಕಾರಿ, ಅನ್ಯ ಜೀವರುಗಳಿಗೆ ಭಯಕಾರಕ-ಶೋಕಕಾರಕ ವಚನಗಳನ್ನಾಡುವುದು, ತಮ್ಮ ಇಚ್ಛೆಯ ಅನುಸಾರ ಸ್ವೇಚ್ಛಾಚಾರಿ, ಪಾಪಕಾರಿ ವಚನಗಳನ್ನಾಡುವುದು ವಚನಮೂಢತೆಯಿದೆ. ಯಾರಾದರೂ ಅಂಥವರಿಗೆ ತಿಳಿಸಿಕೊಡುತ್ತ - ನೀವು ಇಂಥ ಕಷಾಯತುಂಬಿದ ವಚನಗಳನ್ನಾಡಬೇಡಿರಿ; ದೇವರಿಗೆ ಅಪಶಬ್ದ, ಗುರುಗಳಿಗೆ ಅಪಶಬ್ದ ಹಾಗೂ ಗೃಹಸ್ಥರಿಗೆ ಅಪಶಬ್ದ-ಬೈಯುವುದು ಇತ್ಯಾದಿ ಅಯೋಗ್ಯ ವಚನಗಳನ್ನಾಡಬೇಡಿರಿ - ಎಂದು ಹೇಳಿದರೆ, ಆಗ ಈ ಮೂರ್ಖನು ಹೇಳುವುದೇನೆಂದರೆ ನಾವಂತೂ ಇದೇ ಪ್ರಕಾರ ದೇವ ಗುರುಗಳ ಸ್ತುತಿ ಮಾಡುತ್ತೇವೆ, ಗೃಹಸ್ಥರನ್ನು ಇದೇ ಪ್ರಕಾರ ಒತ್ತಿ ಇಡುತ್ತೇವೆ. ಈ ಪ್ರಕಾರ ಕ್ರೋಧಾದಿ ಕಷಾಯ ಪೋಷಕ ಪಾಪಕಾರಿ ವಚನವನ್ನಾಡುವುದರ ತ್ಯಾಗ ಮಾಡದಿರುವುದು ವಚನ ಮೂಢತೆಯಿದೆ. ಯಾವ ವಚನಗಳಿಂದ ಅನ್ಯರ ತನುವಿನ ಕ್ಷಯವಾಗುವುದು, ಹಾಗೆ ಧನಕ್ಷಯಕಾರಿ, ಗೃಹಕ್ಷಯಕಾರಿ, ಮಾನಕ್ಷಯಕಾರಿ, ಯಾವವುಗಳನ್ನು ಆಲಿಸುವುದರಿಂದ ಸಭೆಯ ಜನರೆಲ್ಲ ದುಃಖಿಯಾಗುವರೋ ಅವು ರಾಜ್ಯ-ಸಭೆಯ ವಿರುದ್ಧ ಇತ್ಯಾದಿ ವಚನಗಳನ್ನಾಡುವುದು ವಚನ ಮೂಢತೆಯಿದೆ.

ಅನೇಕ ಪುರುಷರಿಂದ ತುಂಬಿದ ಸಭೆಯಲ್ಲಿ ಇಂಥ ವಚನಗಳನ್ನಾಡುವುದು ಎಂದರೆ ಯಾವವುಗಳಿಂದ ಪಂಚರು ದುಃಖಿಯಾಗುತ್ತಾರೆ, ಅವು ಪಂಚವಿರುದ್ಧ ವಚನಗಳಿವೆ. ಯಾವವನ್ನು ಕೇಳುವುದರಿಂದ ಕುಟುಂಬವು ದುಃಖಿಯಾಗುತ್ತದೆ, ಅವು ಕುಟುಂಬವಿರುದ್ಧ ವಚನಗಳಿವೆ; ಯಾವವನ್ನು ಕೇಳುವುದರಿಂದ ರಾಜಸಭೆಯು ದುಃಖಿಯಾಗುತ್ತದೆ, ಅವು ರಾಜ್ಯಸಭಾ ವಿರುದ್ಧ ವಚನ-ಇತ್ಯಾದಿ ವಚನಗಳನ್ನಾಡುವುದು ವಚನ ಮೂಢತೆಯಿದೆ.

ವ್ಯವಹಾರ ಮೂಢತೆ - ಎಲ್ಲಿ ಅಯೋಗ್ಯ ಹಿಂಸಾಕಾರಕ ವ್ಯಾಪಾರದ ಸಂಬಂಧದಲ್ಲಿ ಈ ವ್ಯಾಪಾರವು ನಮ್ಮಲ್ಲಿ ಮೊದಲಿನಿಂದಲೂ ನಡೆಯುತ್ತ ಬಂದಿದೆ. ನಮ್ಮ ಹಿರಿಯರು ಅನೇಕ ತಲೆಮಾರಿನಿಂದ ಇದೇ ವ್ಯಾಪಾರ ಮಾಡುತ್ತ ಬಂದಿದ್ದಾರೆ; ಅದರಿಂದ ಒಳ್ಳೆಯದಿಲ್ಲದಿದ್ದರೂ ಒಳ್ಳೆಯದಿದೆ ಮತ್ತು ಒಂದುವೇಳೆ ಒಳ್ಳೆಯದಿದ್ದರೆ ಒಳ್ಳೆಯದೇ ಇದೆ. ಕುಲದ ವ್ಯಾಪಾರವನ್ನು ಹೇಗೆ ಬಿಡುವುದು ? ಎಂದು ತಿಳಿಯುತ್ತ ಮಹಾಹಟಗ್ರಾಹಿ, ಪಾಪಕಾರಿ, ಹಿಂಸಾಮಯ ವ್ಯಾಪಾರವನ್ನು ಬಿಡದಿರುವುದು ವ್ಯವಹಾರ ಮೂಢತೆಯಿದೆ.

ಈ ಪ್ರಕಾರ ಉಪರ್ಯುಕ್ತ ಏಳು ಜಾತಿಯ ಮೂಢತೆಯನ್ನು ತಮ್ಮ-ತಮ್ಮ ಹಟಬುದ್ಧಿಯಿಂದ ಯಥಾಯೋಗ್ಯ ವಿಪರೀತ ಭಾವನೆಯೊಂದಿಗೆ ಧಾರಣ ಮಾಡುವ, ಅಂಗೀಕಾರ ಮಾಡುವ, ಶ್ರದ್ಧೆ ಮಾಡುವಂಥ ಜೀವರುಗಳನ್ನು ಮಿಥ್ಯಾದೃಷ್ಟಿಗಳೆಂದು ತಿಳಿಯುವುದು.

ಈ ಪ್ರಕಾರ ಶ್ರೀ ಸುದೃಷ್ಟಿತರಂಗಿಣಿಯೆಂಬ ಹೆಸರಿನ ಗ್ರಂಥದ ಮಧ್ಯದಲ್ಲಿ ಜಾತಿ ವ್ಯವಹಾರ
ಮೊದಲಾದವುಗಳ ಕಥನ ಮಾಡುವಂಥ ಇಪ್ಪತ್ನಾಲ್ಕನೆಯ
ಪರಿಚ್ಛೇದವು ಸಂಪೂರ್ಣವಾಯಿತು.

★★★★★

## ೨೫ : ಇಪ್ಪತ್ತೈದನೆಯ ಪರ್ವ
# ಯುಕ್ತಿಪೂರ್ಣ ಹಿತೋಪದೇಶ

ಈಗ ಹಿತೋಪದೇಶ ಕೊಡುತ್ತ ಮಿಥ್ಯಾಜ್ಞಾನ ಮತ್ತು ಸಮ್ಯಗ್ಜ್ಞಾನದ ಪ್ರಕಾಶವನ್ನು ದೃಷ್ಟಾಂತಪೂರ್ವಕ ತಿಳಿಸಿಕೊಡುತ್ತಾರೆ,-

**ಉಪಲ ವಹಣಿ ಮಿಥಿ ಣಾಣೋ, ಕಯ ಉದೋಯ ಪುಣ ಸ್ಯಾಮಉರ ಜಾಯೋ ।**
**ಹಾಟಕ ಸಮ ಸಮ್ಯಣಾಣೋ, ತಬವಹಣಿ ಜುಇ ವಿಮಲ ತಣ ಹೋಈ ॥೮೯॥**

**ಗಾಥಾರ್ಥ ಃ-** ಕಾಷ್ಠ, ತೌಡಿನ ಅಗ್ನಿಯ ಸಮಾನ ಮಿಥ್ಯಾಜ್ಞಾನವಿದೆ, ಉದ್ಯೋತ ಮಾಡಿ ಪುನಃ ಶ್ಯಾಮಶರೀರವನ್ನು ಧಾರಣ ಮಾಡುತ್ತದೆ. ಸಮ್ಯಗ್ಜ್ಞಾನವು ಸುವರ್ಣ ಸಮಾನವಿದೆ; ತಪರೂಪದ ಅಗ್ನಿಯಿಂದ ವಿಶೇಷ ಪ್ರಭೆಯನ್ನು ಧಾರಣ ಮಾಡುತ್ತದೆ.

**ಭಾವಾರ್ಥ ಃ-** ಅತತ್ತ್ವಶ್ರದ್ಧಾನಿ ಮಿಥ್ಯಾದೃಷ್ಟಿಯ ಜ್ಞಾನವು ಆತ್ಮಸ್ವಭಾವ ಮತ್ತು ಪರರೂಪ ಜಡಭಾವವನ್ನು ಪೃಥಕ್-ಪೃಥಕ್ಕಾಗಿ ತಿಳಿಯುವಲ್ಲಿ-ಅನುಭವ ಮಾಡುವಲ್ಲಿ ಅಸಮರ್ಥವಿದೆ. ಸರ್ವಪ್ರಥಮವಂತೂ ಈ ಜ್ಞಾನದ ಪ್ರಕಾಶವು ಅಲ್ಪ ಮಾತ್ರವೇ ಇರುತ್ತದೆ, ಅದರ ಫಲದಲ್ಲಿ ಒಂದು ಭವ-ದೇವಾದಿಗಳ ಸುಖ ಪ್ರಾಪ್ತ ಮಾಡಿಕೊಂಡ ನಂತರ ಆ ದೇವಾದಿ ಭವದಲ್ಲಿ ಚಿತ್ತವು ಭೋಗಾಭಿಲಾಷಿಯಾಗುವ ಕಾರಣ ಆರ್ತ-ರೌದ್ರರೂಪ ಪರಿಣಮಿಸಿ, ಸಂಕ್ಲೇಶತೆಯ ಫಲದಿಂದ ಜೀವವು ಏಕೇಂದ್ರಿಯ ಮೊದಲಾದವಾಗಿ ಸಂಸಾರದಲ್ಲಿ ಭ್ರಮಣ ಮಾಡುತ್ತದೆ.

ಮಿಥ್ಯಾತ್ವ ಕರ್ಮದ ಯೋಗದಿಂದ ತಪ್ಪಿಯೇನಾದರೂ ಒಂದುವೇಳೆ ಮನುಷ್ಯದಲ್ಲಿ ಉತ್ಪನ್ನವಾದರೆ ನೀಚಕುಲದಲ್ಲಿ ಧನವಂತ, ಆಜ್ಞಾವಂತ, ರಾಜ್ಯಸಂಪದದ ಧಾರಕ; ತೀವ್ರ ಕ್ರೋಧ, ಮಾನ, ಮಾಯೆ, ಲೋಭಮಯ; ಸಂಕ್ಲೇಶ ಪರಿಣಾಮಿ ಇತ್ಯಾದಿ ವಿಕಾರ ಸಂಪನ್ನನಾಗಿ ಸಾಮಾನ್ಯ ಸುಖದ ಧಾರಕನಾಗುತ್ತಾನೆ. ಇಲ್ಲಿ ನಂತರ ಅನೇಕ ಪಾಪ ಮಾಡಿ, ಅನೇಕ ಹಿಂಸಾದಿ ದೋಷಗಳನ್ನು ಉತ್ಪನ್ನ ಮಾಡಿ ನರಕಾದಿ ದುಃಖಕ್ಕೆ ಪ್ರಾಪ್ತನಾಗುತ್ತಾನೆ. ಹೀಗಾಗುವುದರಿಂದ ಮಿಥ್ಯಾ ಜ್ಞಾನದ ಪ್ರಕಾಶವು ಮಂದವಾಗಿ ಹೋಗುತ್ತದೆ; ಮಿಥ್ಯಾತ್ವದ ಕಾರಣ ಎಂದರೆ ಮಿಥ್ಯಾತ್ವದ ಜತೆಯಿರುವ ಪುಣ್ಯದ ಫಲವು ಅಧಿಕ ಕಾಲದವರೆಗೆ ಉಳಿಯುವುದಿಲ್ಲ.

ಹೇಗೆ ತೌಡಿನ ಅಗ್ನಿಯು ಮೊದಲಂತೂ ತೇಜ ಪ್ರಕಾಶ ಬೀರುತ್ತದೆ, ನಂತರ ಪ್ರಭಾರಹಿತವಾಗಿ, ಶ್ಯಾಮತೆಯನ್ನು ಧಾರಣಮಾಡಿ ಭಸ್ಮವಾಗಿ ಹೋಗುತ್ತದೆ; ಅದೇ ಪ್ರಕಾರ ಮಿಥ್ಯಾಜ್ಞಾನವೆಂದು ತಿಳಿಯುವುದು. ಈ ಮಿಥ್ಯಾಜ್ಞಾನವು ಕುರುಡನ ಜ್ಞಾನದಂತಿದೆ. ಹೇಗೆ ಕುರುಡನು ಅನುಮಾನದ ಬಲದಿಂದ ಗಮನ ಮಾಡುತ್ತಿದ್ದರೂ ಅವನಿಗೆ ಮಾರ್ಗದ ಯಥಾವತ್ ಶುಭ-ಅಶುಭತೆಯು ಭಾಸಿತವಾಗುವುದಿಲ್ಲ; ಅದೇ ಪ್ರಕಾರ ಮಿಥ್ಯಾಜ್ಞಾನದಿಂದ ಶುದ್ಧ ಯಥಾರ್ಥ ಮಾರ್ಗವು ಭಾಸಿತವಾಗುವುದಿಲ್ಲ.

**ಸಂದೇಹ ಃ-** ಮಿಥ್ಯಾಜ್ಞಾನೀ ಧರ್ಮಾತ್ಮನಿಗೆ ಯಥಾವತ್ ಪುಣ್ಯ-ಪಾಪದ ಮಾರ್ಗವು ಭಾಸಿತವಾಗದಿದ್ದರೆ ಅವನು ಒಂಭತ್ತನೆಯ ಗ್ರೈವೇಯಕದವರೆಗೆ ದೇವಗತಿಯಲ್ಲಿಯೂ ಹೇಗೆ ಹೋಗುತ್ತಾನೆ ? ಶುಭ ಅಶುಭ ಮಾರ್ಗ ತಿಳಿಯದ ವಿನಹ ಪಾಪದ ತ್ಯಾಗ ಮತ್ತು ಪುಣ್ಯದ ಗ್ರಹಣ; ತಪ, ಸಂಯಮ, ಚಾರಿತ್ರದ ಸೇವನೆಯು ಹೇಗೆ ಸಂಭವವಿದೆ ? ಅವನಿಗೆ ಪುಣ್ಯ-ಪಾಪದ ಮಾರ್ಗವಂತೂ ಒಳ್ಳೆಯ ರೀತಿಯಿಂದ ಭಾಸಿತವಾಗಿದೆ. ಅದರಿಂದ ತಾವು ಮಿಥ್ಯಾಜ್ಞಾನವನ್ನು ಕುರುಡನ ಜ್ಞಾನದ ಸಮಾನವೆಂದು ಹೇಗೆ ಹೇಳುವಿರಿ ?

**ಸಮಾಧಾನ ಃ-** ಪುಣ್ಯ ಪಾಪಗಳು ಸಂಸಾರ ಕಾನನದ ಮಾರ್ಗಗಳಿವೆ, ಯಥಾರ್ಥ ಶುದ್ಧ ಮೋಕ್ಷದ ಮಾರ್ಗವಲ್ಲ. ಮಿಥ್ಯಾಜ್ಞಾನದಿಂದ ಮೋಕ್ಷಮಾರ್ಗವು ಯಥಾರ್ಥವಾಗಿ ತಿಳಿದುಬರುವುದಿಲ್ಲ; ಅದರಿಂದ ಮೋಕ್ಷಮಾರ್ಗವನ್ನು ತಿಳಿಯುವ ಸಲುವಾಗಿ ಮಿಥ್ಯಾಜ್ಞಾನವು ಕುರುಡನ ಸಮಾನವಿದೆ.

ಸಮ್ಯಗ್ಜ್ಞಾನವು ಸುವರ್ಣದ ಸಮಾನವಿದೆ. ಹೇಗೆ ಸುವರ್ಣ(ಚಿನ್ನ)ವನ್ನು ಎಷ್ಟೆಷ್ಟು ಅಗ್ನಿಯಿಂದ ಕಾಯಿಸಲಾಗುತ್ತದೆ ಅಷ್ಟಷ್ಟು ಅದರ ಪ್ರಭೆ-ಹೊಳಪು ಹೆಚ್ಚುತ್ತ ಹೋಗುತ್ತದೆ; ಕಂಚನವು ಶುದ್ಧವಾಗುತ್ತ ಹೋಗುತ್ತದೆ. ಅದೇ ಪ್ರಕಾರ ಸಮ್ಯಗ್ಜ್ಞಾನ ರೂಪದ ಸುವರ್ಣವನ್ನು ಎಷ್ಟೆಷ್ಟು ತಪರೂಪದ ಅಗ್ನಿಯಲ್ಲಿ ತಪಿಸಲಾಗುತ್ತದೆ, ಅಷ್ಟಷ್ಟು ಪರಮ ವಿಶುದ್ಧತೆಗೆ ಪ್ರಾಪ್ತವಾಗುತ್ತದೆ. ಈ ಸಮ್ಯಗ್ಜ್ಞಾನವು ಎಷ್ಟೆಷ್ಟು ನಿರ್ಮಲವಾಗುತ್ತದೆ ಅಷ್ಟಷ್ಟು ಹೆಚ್ಚುತ್ತದೆ; ಹೆಚ್ಚುತ್ತ-ಹೆಚ್ಚುತ್ತ ಕೇವಲಜ್ಞಾನದವರೆಗೆ ವೃದ್ಧಿಸಿದ ನಂತರ ಸಮ್ಯಗ್ಜ್ಞಾನಾವಧಿಯು ಪೂರ್ಣವಾಗಿ ಹೋಗುತ್ತದೆ. ಕೇವಲಜ್ಞಾನದಲ್ಲಿ ಜ್ಞಾನದ ಮರ್ಯಾದೆಯು ಪೂರ್ಣವಾಗುತ್ತದೆ ಮತ್ತು ಅದರ ನಂತರ ಆ ಕೇವಲಜ್ಞಾನವು ಯಾವಾಗಲೂ ಉಳಿದು ಬಿಡುತ್ತದೆ. ಉತ್ಪನ್ನವಾದ ಮೇಲೆ ಈ ಸಮ್ಯಗ್ಜ್ಞಾನವು ಮಿಥ್ಯಾಜ್ಞಾನದ ಹಾಗೆ ನಷ್ಟವಾಗಿ ಹೋಗುವುದಿಲ್ಲ. ಅನಂತಕಾಲದವರೆಗೆ ಸದೈವ ಉಳಿಯುತ್ತದೆ. ಈ ಜ್ಞಾನವು ಮೋಕ್ಷವನ್ನೇ ಮಾಡುತ್ತದೆ. ಅಂಗ ಪೂರ್ವಗಳ ಪಾಠಿಯಾಗಿದ್ದರೂ ಮಿಥ್ಯಾಜ್ಞಾನವು ಸಂಸಾರದ್ದೇ ಕಾರಣವಿದೆ. ಸಮ್ಯಗ್ಜ್ಞಾನದ ಅಂಶವು ಕೂಡ ಪ್ರಗಟವಾದರೆ ಅದು ಹೆಚ್ಚುತ್ತ-ಹೆಚ್ಚುತ್ತ ಕೇವಲಜ್ಞಾನವನ್ನೇ ಮಾಡುತ್ತದೆ.

ಈ ಪ್ರಕಾರ ಮಿಥ್ಯಾಜ್ಞಾನವು ಹೇಯ ಮತ್ತು ಸಮ್ಯಗ್ಜ್ಞಾನವು ಉಪಾದೇಯವೆಂದು ಹೇಳಲಾಗಿದೆ. ಅದರಿಂದ ವಿವೇಕವಂತ ಪುರುಷರಿಗೆ ಮಿಥ್ಯಾಜ್ಞಾನವನ್ನು ಬಿಟ್ಟುಕೊಟ್ಟು, ಹೇಗೆ ಸಾಧ್ಯವಿದೆಯೋ ಹಾಗೆ ಮೋಕ್ಷವನ್ನು ಮಾಡುವಂಥ ಸಿದ್ಧಪದವನ್ನು ಪ್ರದಾನ ಮಾಡುವಂಥ, ಕರ್ಮಗಳ ನಾಶಮಾಡುವಂಥ ಸಮ್ಯಗ್ಜ್ಞಾನವನ್ನು ಭೇದಜ್ಞಾನಪೂರ್ವಕ ಪ್ರಕಟ ಮಾಡುವುದು ಯೋಗ್ಯವಿದೆ.

ಇಂದ್ರಿಯ ಸುಖದಿಂದ ಆತ್ಮನು ತೃಪ್ತನಾಗುವುದಿಲ್ಲವೆಂಬುದನ್ನು ಈಗ ತೋರಿಸಿ ಕೊಡುತ್ತಾರೆ,-

**ಹರಿ ಹಲ ಸುರ ಖಗ ಚಕ್ಕೀ, ಪುಣ್ಣ ಫಲ ಸುಹ ಭುಂಜೇಯ ಣ ಧಪೇ ।**

**ತಬ ಲವ ಸುಹಣರ ಆದಾ, ಧಪೋ ಕಿಂ ಧಮ್ಮ ಸೇಯ ಸಿವ ಕಜ್ಜೇ ॥೯೦॥**

**ಗಾಥಾರ್ಥ :-** ನಾರಾಯಣ, ಬಲಭದ್ರ, ವಿದ್ಯಾಧರ, ಷಟ್ಖಂಡ ಚಕ್ರವರ್ತಿ, ದೇವಗಳ ಪುಣ್ಯದ ಫಲರೂಪ ಸುಖಭೋಗಿಸುತ್ತಿದ್ದರೂ ತೃಪ್ತಿಯಾಗಲಿಲ್ಲವೆಂದಾಗ ಎಲೈ ಆತ್ಮನೇ ! ಮನುಷ್ಯರ ಈ ಅಲ್ಪಸುಖದಿಂದ ಹೇಗೆ ತೃಪ್ತಿಯಾಗುವುದು ? ಅದಕ್ಕಾಗಿ ಮೋಕ್ಷದ ಸಲುವಾಗಿ ನೀನು ಧರ್ಮದ ಸೇವನೆ ಮಾಡು.

**ಭಾವಾರ್ಥ :-** ಈ ಜೀವನು ಮೂರು ಖಂಡದ ಅಧಿಪತಿ, ಹದಿನಾರು ಸಾವಿರ ರಾಣಿಯರೊಂದಿಗೆ ಭೋಗ ಭೋಗಿಸುವಂಥ ನಾರಾಯಣನಾದನು; ಆದರೆ ಅಲ್ಲಿ ಭೋಗಗಳಿಂದ ತೃಪ್ತನಾಗಲಿಲ್ಲ. ದೇವಗಳ ಅಧಿಪತಿ ಇಂದ್ರನಾಗಿ ಅನೇಕ ದೇವಾಂಗನೆಯರೊಂದಿಗೆ ಅನೇಕ ಪ್ರಕಾರದ ಮನೋವಾಂಛಿತ ಭೋಗ ಭೋಗಿಸಿದ ಮೇಲೆಯೂ ತೃಪ್ತನಾಗಲಿಲ್ಲ. ಅನೇಕ ದೇವಿಯರೊಂದಿಗೆ ಸುಖ ಭೋಗಿಸುವಂಥ ದೇವಪದದ ಅನೇಕ ಸುಖ ಭೋಗಿಸಿದರೂ ತೃಪ್ತನಾಗಲಿಲ್ಲ. ಕೌತೂಹಲವಶ ಅನೇಕ ಗೀತೆ, ಸಂಗೀತ, ನೃತ್ಯ, ವಾದ್ಯ ಮೊದಲಾದವುಗಳ ರೂಪ ಅದ್ಭುತ ಲಕ್ಷ್ಮೀ ಸಹಿತ ಅನುಪಮ ಭೋಗಗಳಲ್ಲಿ ರಮಿಸಿದ ಮೇಲೆಯೂ ಈ ಆತ್ಮನು ತೃಪ್ತನಾಗಿಲ್ಲ. ದೇವಗಳ ಸಮಾನ ಸಂಪದದ ಧಾರಕ ವಿದ್ಯಾಧರರ ಸುಖ ಭೋಗಿಸುವಂಥ, ಸ್ವೇಚ್ಛಾನುಸಾರ ಎರಡೂವರೆ ದ್ವೀಪದಲ್ಲಿ ಅನೇಕ ಪ್ರಕಾರದಿಂದ ವಿಹಾರ ಮಾಡುತ್ತ, ಕ್ರೀಡಿಸುತ್ತ ದೀರ್ಘ ಸುಖ ಭೋಗಿಸುವಂಥ ಆತ್ಮನು ವಿದ್ಯಾಧರರ ಸುಖದಿಂದಲೂ ತೃಪ್ತನಾಗಲಿಲ್ಲ.

ಷಟ್ಖಂಡದ ಅಧಿಪತಿ, ದೇವಾಂಗನೆಯರ ಸಮಾನ ರೂಪು ಗುಣಸಂಪನ್ನ ತೊಂಭತ್ತಾರು ಸಾವಿರ ರಾಣಿಯರೊಂದಿಗೆ ದೇವೇಂದ್ರ ಸಮಾನ ಮನೋವಾಂಛಿತ ಸುಖ, ದೀರ್ಘಕಾಲದವರೆಗೆ ನವೀನ-ನವೀನವಾದ ಚಕ್ರವರ್ತಿಯ ಸುಖ ಭೋಗಿಸಿದ ಮೇಲೆಯೂ ಆತ್ಮನು ತೃಪ್ತನಾಗಲಿಲ್ಲ. ಬೇರೆಯೂ ಕೂಡ ಅನೇಕ ಮನಬಯಸಿದ, ಮನೋಜ್ಞ, ಅದ್ಭುತ ಸುಖ ಭೋಗಿಸಿದನು. ಈ ಆತ್ಮನು ಅನೇಕ ಬಾರಿ ಪುಣ್ಯದ ಉದಯದಿಂದ ಭೋಗಿಸದೇ

ಇರುವಂಥ ಯಾವುದೇ ಸುಖವು ಈ ಸಂಸಾರದಲ್ಲಿ ಉಳಿದಿಲ್ಲ, ಎಲ್ಲವನ್ನೂ ಭೋಗಿಸಿದ್ದಾನೆ; ಚಿರಕಾಲದವರೆಗೆ ಭೋಗಗಳಲ್ಲಿಯೇ ಲೀನನಾಗಿ ಉಳಿದಿದ್ದಾನೆ. ಆದರೂ ತೃಪ್ತನಾಗಿಲ್ಲ. ಹಾಗಾದರೆ ಎಲೈ ಭವ್ಯಾತ್ಮನೇ ! (ಮಿಥ್ಯಾತ್ವ ಅವಸ್ಥೆಯ) ತುಚ್ಛ ಪುಣ್ಯ, ತುಚ್ಛ ಪುರುಷಾರ್ಥ, ಅಲ್ಪಸ್ಥಿತಿಸಹಿತ ಮಹಾಚಪಲ ಮನುಷ್ಯ ಮೊದಲಾದ ಸುಖಗಳಿಂದ ನೀನು ಹೇಗೆ ತೃಪ್ತನಾಗಬಹುದಾಗಿದೆ ?

ಅದಕ್ಕಾಗಿ ಎಲೈ ನಿಕಟ ಸಂಸಾರಿಯೇ ! ಈಗ ಸಮತೆಯ ಭಾವ ಧಾರಣ ಮಾಡಿ ಭೋಗಗಳಿಂದ ಉದಾಸನಾಗು. ಈ ಮನುಷ್ಯ ಪರ್ಯಾಯದ ಅಲ್ಪ ಸ್ಥಿತಿಯೇ ಈಗ ಇನ್ನೂ ಶೇಷ ಉಳಿದಿದೆ. ಅದರಲ್ಲಿ ಈಗ ನಿನಗೆ ಮೋಕ್ಷವಾಗುವ ಸಲುವಾಗಿ ಧರ್ಮದ್ದೇ ಸಾಧನೆ ಮಾಡುವುದು ಯೋಗ್ಯವಿದೆ. ಪುನಃ ಇಂಥ ಅವಸರವು ದೊರಕುವುದು ಕಠಿಣವಿದೆ. ಎಲೈ ಸುಬುದ್ಧಿಯೇ ! ಇಂದ್ರಿಯಗಳ ಸುಖವನ್ನಂತೂ ನೀನು ಅನೇಕ ಬಾರಿ ಭೋಗಿಸಿರುವೆ. ಅವುಗಳನ್ನು ಮತ್ತೆ ಭೋಗಿಸುವಲ್ಲಿ ಈಗ ನೀನು ಪ್ರೀತಿಯನ್ನೇಕೆ ಮಾಡುತ್ತಿರುವೆ ? ಯಾವ ಅತೀಂದ್ರಿಯ ನವೀನ ಸುಖವನ್ನು ನೀನು ಇದುವರೆಗೆ ಎಂದೂ ಭೋಗಿಸಿಲ್ಲ, ಅದನ್ನು ಭೋಗಿಸುವುದರಿಂದ ಅತೀಂದ್ರಿಯ ನವೀನ ಸುಖವಾಗುವುದು. ಅತೀಂದ್ರಿಯ ಮೋಕ್ಷದ ಸುಖವನ್ನು ನೀನು ಎಂದೂ ಭೋಗಿಸಿಲ್ಲ; ಅದರಿಂದ ಇದನ್ನು ಭೋಗಿಸುವ ಸಲುವಾಗಿ ಧರ್ಮದ ಸಾಧನೆ ಮಾಡುವುದು ಯೋಗ್ಯವಿದೆ. ಇದುವೇ ವಿವೇಕದ ಫಲವಿದೆಯೆಂದು ತಿಳಿಯುವುದು.

ನೀನು ನರಕ-ಪಶುಗಳ ದೀರ್ಘ ದುಃಖಗಳಿಂದ ಹೆದರಲಿಲ್ಲವೆಂದ ಮೇಲೆ ಈಗ ತಪಸ್ಸಿನ ತುಚ್ಛ ಎಂದರೆ ಅಲ್ಪ ದುಃಖದಿಂದ ಏತಕ್ಕಾಗಿ ಹೆದರುತ್ತಿರುವೆ ? ಎಂಬುದನ್ನು ಈಗ ಹೇಳುತ್ತಾರೆ,-

**ಅಸುಹಂ ಫಲ ಣಕ ತಿರಿಯೋ, ಭುಂಜೇದುಹ ಅಣೇಯ ಮೂಢ ಆದಾಏ ।**

**ತೋ ತವ ಲವ ದುಹ ಆದಾ, ಕಂಪಯ ಕಿಂ ಸೇಯ ಧಮ್ಮಸಿವ ಕಜ್ಜೇ ॥೯೧॥**

**ಗಾಥಾರ್ಥ :-** ಅಶುಭದ ಫಲಸ್ವರೂಪವಾಗಿ ನರಕ, ತಿರ್ಯಂಚ ಗತಿಯಲ್ಲಿ ಈ ಮುಗ್ಧ ಆತ್ಮನು ಅನೇಕ ದುಃಖ ಭೋಗಿಸಿದ್ದಾನೆ; ಹೀಗಿರುವಾಗ ತಪದ ಅಲ್ಪ ದುಃಖಗಳಿಂದ ಎಲೈ ಆತ್ಮನೇ ! ಏಕೆ ಕಂಪಿತ, ಭಯಭೀತನಾಗುತ್ತಿರುವೆ ? ಮೋಕ್ಷದ ಸಲುವಾಗಿ ಧರ್ಮದ ಸೇವನೆ ಮಾಡು.....

**ಭಾವಾರ್ಥ :-** ಎಲೈ ಆತ್ಮಾರಾಮನೇ ! ನೀನು ಅಶುಭದ ಫಲದಲ್ಲಿ ಛೇದನೆ - ಭೇದನೆ ಮೊದಲಾದ ಪಂಚ ಪ್ರಕಾರದ ದುಃಖವನ್ನು ನರಕದಲ್ಲಿ ಅನೇಕ ಬಾರಿ ಭೋಗಿಸಿರುವೆ; ಅಲ್ಲಿ ನೀನು ಕರ್ಮಗಳ ವಶ ಪರಾಧೀನನಾಗಿ ಆ ಮಹಾದುಃಖಗಳನ್ನು ಸಹಜವಾಗಿಯೇ ಸಹಿಸಿದೆ. ತಿರ್ಯಂಚಗತಿ ಸಂಬಂಧದ ಅನೇಕ ಪ್ರಕಾರದ-ಹಸಿವು, ಬಾಯಾರಿಕೆ, ಶೀತ, ಉಷ್ಣ, ದಂಶಮಸಕಾದಿ ವಿವಿಧ ವೇದನೆಗಳನ್ನು ಪರಾಧೀನನಾಗಿ ಪಶುಕಾಯದಲ್ಲಿ ಸಹಜವಾಗಿಯೇ ಭೋಗಿಸಿದೆ. ನೀನು ಅಲ್ಲಿ ಆ ದುಃಖಗಳಿಂದ ಭಯಪಡಲಿಲ್ಲವೆಂದ ಮೇಲೆ ಎಲೈ ಮುಗ್ಧ ಪ್ರಾಣಿಯೇ ! ತಪದಲ್ಲಿ ಆ ನರಕ ಪಶುಗತಿಯ ದುಃಖಕ್ಕಿಂತ ಅಧಿಕ ದುಃಖವಿಲ್ಲ; ಅತ್ಯಂತ ಅಲ್ಪ ದುಃಖವಿದೆ. ಅದರಿಂದ ಎಲೈ ಭವ್ಯಾತ್ಮನೇ ! ನೀನು ತಪಸ್ಸಿನ ದುಃಖದಿಂದ ಭಯಪಡಬೇಡ !! ತಪದಲ್ಲಿ ಸ್ವಾಧೀನತಾ ಸಂಪನ್ನ ದುಃಖವು ಸುಖದ ಸಮಾನವೇ ಇದೆ.

ಪರಾಧೀನತೆಯೊಂದಿಗೆ ದುಃಖ ಭೋಗಿಸುವಲ್ಲಿಯಂತೂ ವಿವಿಧ ವಿಕಲ್ಪವಾಗುವುದರಿಂದ ಪಾಪ ಬಂಧವಾಗುವ ಕಾರಣ ಪರಂಪರೆಯಿಂದ ಮುಂಬರುವ ಕಾಲದಲ್ಲಿಯೂ ದುಃಖ ಫಲವೇ ಆಗುತ್ತದೆ. ಸ್ವಾಧೀನತೆಯೊಂದಿಗೆ ತಪಸ್ಸಿನ ಖೇದವನ್ನು ಸಹಿಸುತ್ತಿದ್ದರೂ ಸಂತೋಷೀ ಧರ್ಮಾತ್ಮನ ಪರಿಣಾಮಗಳಲ್ಲಿ ವಿಕಲ್ಪವಿಲ್ಲದಿರುವ ಕಾರಣ ಅದರಿಂದ ಪುಣ್ಯಬಂಧವಾಗುತ್ತದೆ. ಅದರಿಂದ ಮುಂಬರುವ ಕಾಲದಲ್ಲಿಯೂ ಸುಖಫಲವಾಗುತ್ತದೆ. ಪರಾಧೀನತೆಯೊಂದಿಗೆ ನರಕ, ಪಶುಗಳ ವಿವಿಧ ದುಃಖ ಸಹಿಸುತ್ತಿದ್ದರೂ ನೀನು ಭಯ

ಪಡಲಿಲ್ಲವೆಂದ ಮೇಲೆ ನೀನು ಅತ್ಯಲ್ಪವಾದ ತಪದ ಖೇದದಿಂದಲೂ ಭಯಪಡಬೇಡ. ಸಮತೆಯೊಂದಿಗೆ ತಪದ ಖೇದ ಸಹಿಸಿದ ಮೇಲೆ-ತಪದ ಅಂಗೀಕಾರ ಮಾಡಿದ ಮೇಲೆ ಸಮತಾಭಾವನೆಯಿಂದ ಮಾಡಲಾದ ಅನೇಕ ಪ್ರಕಾರದ ತಪಗಳ ಮೂಲಕ ಕರ್ಮಗಳ ನಾಶವಾಗಿ ಮೋಕ್ಷವಾಗುತ್ತದೆ; ಅದರಿಂದ ನಿನಗೆ ಧರ್ಮಸಾಧನೆಯೇ ಸುಖಕಾರಿಯಿದೆ-ಇದನ್ನು ತಿಳಿದುಕೊಂಡು ಸಮತೆಯೊಂದಿಗೆ ಪುನಃ ಪುನಃ ಜಿನಭಾಸಿತ ಧರ್ಮದ್ದೇ ಸೇವನೆ ಮಾಡುವುದು ಯೋಗ್ಯವಿದೆ.

ಈಗ ಅನ್ಯ ಕಷಾಯಗಳಿಂದಲೂ ಅಧಿಕ ಮಾಯಾಕಷಾಯದ ಫಲ ಹೇಳುತ್ತಾರೆ,-

**ಮಾಯಾಗಮ ಅಸುಹೋ, ನಿಗೋದಯಾ ಅಣಿ ಕಸಾಯ ಣಕ ದಾಯೋ ।**

**ಮಾಯಾಜುತ ಸಯಲ ಕಸಾಯೋ, ಇಕ ವೇ ತೇ ಚವಾಕ್ಷ ತಣ ದೇಈ ॥೯೨॥**

**ಗಾಥಾರ್ಥ ಃ-** ಮಾಯಾಗರ್ಭಿತ ಯಾವ ಪಾಪವಿದೆ ಅದು ನಿಗೋದದ ದಾತೃವಿದೆ. ಅನ್ಯ ಕಷಾಯಗಳು ನರಕದ ದಾತೃವಿವೆ. ಮಾಯಾಸಹಿತ ಸಮಸ್ತ ಕಷಾಯಗಳು ಏಕೇಂದ್ರಿಯ, ದ್ವೀಂದ್ರಿಯ, ತ್ರೀಂದ್ರಿಯ, ಚತುರಿಂದ್ರಿಯ ಶರೀರಗಳ ದಾತೃವಿವೆ.

**ಭಾವಾರ್ಥ ಃ-** ಮಾಯೆಯ ಫಲವು ಇತರ ಎಲ್ಲ ಕಷಾಯಗಳ ಅಪೇಕ್ಷೆಯಿಂದ ಅಧಿಕ ಪಾಪವನ್ನು ಉತ್ಪನ್ನ ಮಾಡುತ್ತದೆ. ಮಾಯಾ ಕಷಾಯದ ಫಲದಲ್ಲಿ ಈ ಜೀವವು ನಿಗೋದದಲ್ಲಿ ಉತ್ಪನ್ನವಾಗಿ ಮಹಾ ದುಃಖಿಯಾಗುತ್ತದೆ. ಕ್ರೋಧ, ಮಾನ, ಲೋಭ - ಈ ಉಳಿದ ಕಷಾಯಗಳಿಂದ ನರಕವಾಗುತ್ತದೆ, ನಿಗೋದವಾಗುವುದಿಲ್ಲ. ಒಂದುವೇಳೆ ಈ ಮೂರು ಕಷಾಯಗಳಲ್ಲಿ ಮಾಯಾ ಕಷಾಯವೂ ಬಂದು ಸೇರಿಕೊಂಡರೆ ಆ ಮಾಯೆಯ ಯೋಗದಿಂದ ಕ್ರೋಧ, ಮಾನ, ಲೋಭ-ಈ ಮೂರೂ ಕಷಾಯಗಳು ಏಕೇಂದ್ರಿಯ, ದ್ವೀಂದ್ರಿಯ, ತ್ರೀಂದ್ರಿಯ, ಚತುರೇಂದ್ರಿಯಗಳಲ್ಲಿ ಜನ್ಮವಾಗಲು ಯೋಗ್ಯ ಫಲವನ್ನು ಉತ್ಪನ್ನ ಮಾಡುತ್ತದೆ.

ಈ ಪ್ರಕಾರ ಎಲ್ಲ ಕಷಾಯಗಳಲ್ಲಿ ಮಾಯಾ ಕಷಾಯವು ದೀರ್ಘವಿದೆ, ನಿಷೇಧ್ಯವಿದೆ ಮತ್ತು ಪಾಪಕಾರಿಯಿದೆ; ಅದರಿಂದ ವಿವೇಕವಂತರಿಗೆ ಪರಭವ ಸಂಬಂಧದ ಸುಖದ ಸಲುವಾಗಿ ಶೀಘ್ರವೇ ಮಾಯೆಯ ತ್ಯಾಗ ಮಾಡುವುದು ಯೋಗ್ಯವಿದೆ.

**ಸಂದೇಹ ಃ-** ಕ್ರೋಧ, ಮಾನ, ಲೋಭದ ಫಲವನ್ನು ನರಕವೆಂದು ತಾವು ಹೇಳಿದಿರಿ ಮತ್ತು ಮಾಯೆಯ ಫಲವನ್ನು ವಿಕಲತ್ರಯ ಮೊದಲಾಗಿ ನಿಗೋದವೆಂದು ಹೇಳಿದಿರಿ; ಎಂದರೆ ಇದರಲ್ಲಿ ಅಂತರವೇನಿದೆ ? ಅಲ್ಲದೆ ಮಾಯೆಯನ್ನು ನಿಷೇಧ್ಯವೆಂದು ಹೇಳಿದಿರಿ. ಆದರೆ ದುಃಖವಂತೂ ನರಕದಲ್ಲಿ ಅಧಿಕವಿರುವುದು ಕಂಡು ಬರುತ್ತದೆ. ನಿಗೋದಿಗಳ ದುಃಖವಂತೂ ಭಾಸಿತವಾಗುವುದಿಲ್ಲ. ಯಾವುದರ ಫಲವು ಮಹಾದುಃಖಕಾರಿಯಿದೆ, ಅದರ ನಿಷೇಧ ಮಾಡಬೇಕಾಗುವುದು. ನಿಗೋದದಲ್ಲಿ ಅಲ್ಪ ದುಃಖವು ಭಾಸಿತವಾಗುತ್ತದೆ ಮತ್ತು ನರಕದಲ್ಲಿ ಬಹಳಷ್ಟು ದುಃಖವು ಭಾಸಿತವಾಗುತ್ತದೆ; ಆದರೆ ಇಲ್ಲಿಯಂತೂ ಮಾಯಾ ಕಷಾಯದ ನಿಷೇಧವನ್ನು ವಿಶೇಷ ರೂಪದಿಂದ ಮಾಡಿರುವ ಕಾರಣವೇನು ?

**ಸಮಾಧಾನ ಃ-** ಎಲೈ ಭವ್ಯಾತ್ಮನೇ ! ನೀನು ಒಳ್ಳೆಯ ಪ್ರಶ್ನೆ ಮಾಡಿರುವೆ. ಈಗ ಅದರ ಉತ್ತರವನ್ನೂ ಮನಸ್ಸಿನ ಸ್ಥಿರತೆಯೊಂದಿಗೆ ಆಲಿಸು ! ನರಕದ ದುಃಖವು ಬಾಹ್ಯದಲ್ಲಿ ವಿಕರಾಳವಾಗಿ ಭಾಸಿತವಾಗುತ್ತದೆ; ಆದರೆ ಅಲ್ಲಿ ಐದೂ ಇಂದ್ರಿಯಗಳು ಪರಿಪೂರ್ಣವಿವೆ ಮತ್ತು ಎಲ್ಲ ಇಂದ್ರಿಯಗಳಿಗೆ ಸಂಬಂಧಿಸಿದಂತೆ ಜ್ಞಾನವು ಕಾರ್ಯ ಮಾಡಲು ಸಕ್ಷಮವಿದೆ, ಅದರಿಂದ ದುಃಖವು ಅಲ್ಪವಿದೆ. ಯಾವಾಗ ಇವನನ್ನು ಯಾವನೋ ನಾರಕಿಯು ಹೊಡೆಯುತ್ತಾನೆ ಆಗಂತೂ ದುಃಖವಾಗುತ್ತದೆ; ಆದರೆ ಯಾವಾಗ ಇವನು ಯಾವನೋ ನಾರಕಿಯನ್ನು ಹೊಡೆಯುತ್ತಾನೆ

ಆಗ ಪ್ರಸನ್ನನಾಗುತ್ತಾನೆ. ತನ್ನ ಮೇಲೆ ದುಃಖ ಬಂದ ಮೇಲೆ ಅದನ್ನು ನಾಶಮಾಡುವ ಉಪಾಯ ಮಾಡುತ್ತಾನೆ. ವೈರಿಯನ್ನು ಮತ್ತು ಸ್ನೇಹಿಯನ್ನು ತಿಳಿಯುತ್ತಾನೆ. ಅವಧಿ ಮೊದಲಾಗಿ ಮತಿ-ಶ್ರುತಜ್ಞಾನದ ಪ್ರಬಲತೆಯಿದೆ; ಅದರಿಂದ ಈ ನರಕದಲ್ಲಿ ಸುಖದ ನಿಮಿತ್ತವಿದೆ. ಐದೂ ಇಂದ್ರಿಯಗಳ ಕುರಿತಾದ ಕ್ಷಯೋಪಶಮವಿದೆ, ಬೇರೆಯವರನ್ನು ಹೊಡೆಯುವ ಸಲುವಾಗಿ ಶರೀರದ ಪರಾಕ್ರಮವೂ ಇರುತ್ತದೆ, ಆಯುಕರ್ಮವೂ ದೀರ್ಘವಿದೆ. ಅದರಿಂದ ಇಲ್ಲಿ - ನರಕದಲ್ಲಿ ಜೀವನು ಅಲ್ಪದುಃಖಿಯಿದ್ದಾನೆ.

ಏಕೇಂದ್ರಿಯ ಜೀವನಿಗೆ ಉಳಿದ ನಾಲ್ಕು ಇಂದ್ರಿಯಗಳೇ ಇಲ್ಲ; ಕರ್ಮದ ಉದಯದಿಂದ ಪ್ರಾಪ್ತವಾದ ದುಃಖವನ್ನು ನಷ್ಟ ಮಾಡುವ ಶಕ್ತಿಯಿಲ್ಲ. ಮಹಾದೀನವಿದ್ದು ಅಲ್ಪ ಸಮಯದಲ್ಲಿ ಮರಣಕ್ಕೆ ಪ್ರಾಪ್ತವಾಗುತ್ತದೆ. ಅಲ್ಪ ಶೀತದ ದುಃಖದಿಂದ ಮರಣವಾಗಿ ಹೋಗುತ್ತದೆ. ಈ ಪ್ರಕಾರ ಮಹಾಅಶಕ್ತ ಜ್ಞಾನರಹಿತ ಏಕೇಂದ್ರಿಯವು ಮಹಾದುಃಖದ ಸ್ಥಾನವಿದೆ.

ಹೇಗೆ ಯಾವನೋ ಕಳ್ಳನ ಕಾಲುಗಳನ್ನು ಕಟ್ಟಿ ಅವನನ್ನು ತಲೆಕೆಳಗೆ ಮಾಡಿ ನೇತುಹಾಕಿ ನಂತರ ನಾಲ್ಕೂ ಕಡೆಯಿಂದ ಅನೇಕ ಕೋಲು-ಬಾರಕೋಲುಗಳಿಂದ ಹೊಡೆದರೆ ಅವನು ಮಹಾದುಃಖಿಯಾಗುತ್ತಾನೆ. ಇವನ ಸಮಾನ ದುಃಖವಂತೂ ನಾರಕಿಗಳಿಗೆ ಇದೆ ಮತ್ತು ಒಬ್ಬ ಕಳ್ಳನ ಬಾಯಲ್ಲಿ ಬಟ್ಟೆ ತುರಿಕಿ ಮೇಲಿನಿಂದ ಬಾಯನ್ನು ಸೂಜಿಯಿಂದ ಹೊಲಿದು ಬಿಡುವುದು. ಮಲ-ಮೂತ್ರದ ಎಲ್ಲ ದ್ವಾರಗಳನ್ನು ಕೂಡ ತಡೆದು-ಬಂದ್ ಮಾಡಿ ಬಿಡುವುದರಿಂದ ಅವನು ಮಹಾದುಃಖಿಯಿದ್ದಾನೆ. ನಂತರ ಕಿವಿಗಳಲ್ಲಿ ಬಟ್ಟೆ ತುಂಬಿ ಕಿವಿಗಳನ್ನೂ ದಾರ-ಸೂಜಿಯಿಂದ ಹೊಲೆಯಲಾಗಿದೆ, ಕಣ್ಣುಗಳನ್ನು ಹೊಲೆಯಲಾಗಿದೆ. ಅದರ ನಂತರ ಇಡೀ ಶರೀರವನ್ನು ಕಟ್ಟಿ ಮೂಟೆಯಂತೆ ಮಾಡಿ ಒಂದು ಚರ್ಮದ ಪಕಾಲಿಯೊಳಗೆ ಹಾಕಿ ಪಕಾಲಿಯನ್ನು ಮೇಲಿನಿಂದ ಹೊಲಿಗೆ ಹಾಕಿ ಬಿಡುತ್ತಾರೆ. ಅದರ ನಂತರ ದುಂಡಗೆ ಮಾಡಿ ಅದರ ಮೇಲೆ ಹತ್ತಿಪ್ಪತ್ತು ಮಣದ ಶಿಲೆಯನ್ನು ಇಡುತ್ತಾರೆ-ಹೀಗೆ ಈತನ ದುಃಖವನ್ನು ಕೇವಲಿಗಳೇ ತಿಳಿಯುತ್ತಾರೆ. ಬೇರೆಯವರಿಗಂತೂ ಬಾಹ್ಯ ದುಃಖವೇ ಕಂಡು ಬರುತ್ತದೆ. ಇವನ ಗೂಢ ದುಃಖವು ಬೇರೆಯವರಿಗೆ ಜ್ಞಾತವಾಗುವುದಿಲ್ಲ. ಈ ಪ್ರಕಾರ ನಾರಕಿಗಳ ದುಃಖದ ಅಸಂಖ್ಯಾತ ಗುಣಿತ ಮತ್ತು ಗೂಢ ದುಃಖವು ನಿಗೋದದ ಏಕೇಂದ್ರಿಯದ್ದೆಂದು ತಿಳಿಯುವುದು.

ಈ ಪ್ರಕಾರ ಎರಡು ಇಂದ್ರಿಯದ ಜೀವಕ್ಕೆ ಮೂರು ಇಂದ್ರಿಯಗಳು ಇಲ್ಲದಿರುವುದರಿಂದ, ಮೂರು ಇಂದ್ರಿಯದ ಜೀವಕ್ಕೆ ಎರಡು ಇಂದ್ರಿಯಗಳು ಇಲ್ಲದಿರುವುದರಿಂದ ಮತ್ತು ನಾಲ್ಕು ಇಂದ್ರಿಯದ ಜೀವಕ್ಕೆ ಒಂದು ಇಂದ್ರಿಯ ಇಲ್ಲದಿರುವುದರಿಂದ ಅವು ಮಹಾದುಃಖಿಯಿವೆ-ಈ ಪ್ರಕಾರ ವಿಕಲತ್ರಯದ ಮಹಾದುಃಖವು ನಾರಕಿಗಳ ದುಃಖಕ್ಕಿಂತ ಅಸಂಖ್ಯಾತ ಗುಣಿತವಿದೆ- ಮಹಾಪಾಪದ ಉದಯದಿಂದ ಜೀವಗಳು ಇಂಥ ಮಹಾದುಃಖರೂಪವಿರುವ ವಿಕಲತ್ರಯದಲ್ಲಿ ಜನ್ಮ ಪಡೆಯುತ್ತವೆ. ಈ ಜೀವನು ಮಾಯಾಕಷಾಯದ ವಶೀಭೂತನಾಗಿ ಈ ಭವಸಾಗರದಲ್ಲಿ ಸುತ್ತುತ್ತಾನೆ. ಅದರಿಂದ ಈ ಮಾಯೆಯಲ್ಲಿಯೇ ದೀರ್ಘಪಾಪ ತಿಳಿಯುವುದು. ಎಲೈ ಸೋದರನೇ ! ಅನ್ಯ ಮೂರು ಕಷಾಯಗಳ ರಸವಂತೂ ತಿಳಿದು ಬರುತ್ತದೆ. ಆದರೆ ಮಾಯಾ ಕಷಾಯವು ಜ್ಞಾತವಾಗುವುದಿಲ್ಲ. ತಿಳಿದು ಬಂದರೆ ಉಪಚಾರ ಮಾಡಬಹುದಾಗಿದೆ; ಆದರೆ ಯಾವುದು ಜ್ಞಾತವೇ ಆಗುವುದಿಲ್ಲ. ಅದರ ಉಪಚಾರ ಮಾಡುವುದು ಕೂಡ ಸಾಧ್ಯವಿಲ್ಲ.

ಕ್ರೋಧಾದಿಗಳು ತಿಳಿದು ಬರುತ್ತವೆ. ಯಾವನೋ ಕ್ರೋಧ ಮಾಡುತ್ತಿದ್ದರೆ ಅದರ ಉಪಚಾರವೆಂದರೆ - ಯಾವಾಗ ಯಾವನೋ ಕ್ರೋಧಿಯು ಹೊಡೆಯ ಬಯಸುತ್ತಿದ್ದರೆ ಆ ಸಮಯದಲ್ಲಿ ಅವನ ಹತ್ತಿರ ದೀನನಾಗಿ ಹೋಗುವುದರಿಂದ ಅವನು ಹೊಡೆಯುವುದಿಲ್ಲ. ಯಾವನೋ ಪಾಪಿಯು-ಮಾನಿಯು ಒಂದುವೇಳೆ ತಮ್ಮನ್ನು ಹೊಡೆಯಲು ಬಂದರೆ ಅವನ ಎದುರಿಗೆ ತಮ್ಮ ಮಾನವನ್ನು ಬಿಟ್ಟುಕೊಟ್ಟು ವಿನಯ ಮಾಡುವುದರಿಂದ, ಸ್ತುತಿ

ಮಾಡುವುದರಿಂದ ಆ ಮಾನಿಯು ಹೊಡೆಯುವುದಿಲ್ಲ. ಒಂದು ವೇಳೆ ಯಾವನೋ ಲೋಭಿಯು ತಮ್ಮನ್ನು ಹೊಡೆಯಲು ಬಂದರೆ ಅವನಿಗೆ ಬಹಳಷ್ಟು ಹಣವನ್ನು ಕೊಟ್ಟುಬಿಟ್ಟರೆ ಆ ಲೋಭಿಯು ತಮ್ಮನ್ನು ಹೊಡೆಯುವುದಿಲ್ಲ. ಈ ಪ್ರಕಾರ ಕ್ರೋಧ, ಮಾನ, ಲೋಭ - ಇವು ಮೂರು ಕಷಾಯಗಳ ಉಪಚಾರವಿವೆ. ಇವು ಜ್ಞಾತವಾದ ಮೇಲೆ ಇವುಗಳ ಉಪಚಾರ ಮಾಡಿ ಇವನ್ನು ಶಾಂತಗೊಳಿಸಬಹುದಾಗಿದೆ.

ಆದರೆ ಈ ಮೋಸಗಾರನಂತೂ ಮೇಲಿನಿಂದ ನಮನ ಮಾಡುತ್ತಾನೆ. ಮುಖದಿಂದ ದೀನ ವಚನವನ್ನಾಡುತ್ತಾನೆ, ಸೇವಕನಾಗಿ ಬಿಡುತ್ತಾನೆ, ಪುತ್ರನ ಸಮಾನವಾಗಿ ಬಿಡುತ್ತಾನೆ. ನಂತರದಲ್ಲಿ ಅವಸರ ನೋಡಿ (ಸಮಯಸಾಧಿಸಿ) ಮೋಸ ಮಾಡುತ್ತಾನೆ. ಇವನ ಉಪಚಾರವು ವಿವೇಕಿಗಳಿಂದಲೂ ಸಂಭವಿಸುವುದಿಲ್ಲ. ಮಹಾಮೂಢತೆಯಿಂದ ತುಂಬಿರುವ ಈ ಕಷಾಯದ ಫಲವು ದೀರ್ಘ ಪಾಪಕಾರಿಯಿದೆ. ಆ ಪಾಪದ ಫಲದಿಂದ ಜೀವನು ನರಕದ ದುಃಖಗಳಿಗಿಂತೂ ಮಹಾದುಃಖಮಯ ನಿಗೋದಾದಿಗಳಿಗೆ ಪ್ರಾಪ್ತನಾಗುತ್ತಾನೆ-ಇದನ್ನು ತಿಳಿದು ಆ ಮಾಯಾಕಷಾಯದ ತ್ಯಾಗ ಮಾಡುವುದು ಮತ್ತು ತಮ್ಮ ವಿವೇಕದ ಬಲದಿಂದ ಈ ಪಾಪಾಚಾರೀ ಮಾಯಾವಿ ಜೀವಗಳನ್ನು ಗುರುತಿಸಿ ಅವರ ಸಂಗತಿಯ ತ್ಯಾಗ ಮಾಡುವುದು ಒಳ್ಳೆಯದಿದೆ-ಎಂಬುದನ್ನು ತಿಳಿಯುವುದು.

ಧರ್ಮ (ವ್ಯವಹಾರ ಧರ್ಮ)ದ ಫಲವು ಇಂದ್ರಿಯಜನಿತ ಇಂದ್ರಿಯ ಸುಖವಿದೆ. ಅದರಿಂದ ನರಕಾದಿ ಅಶುಭ ಗತಿಗಳಾಗುವುದಿಲ್ಲ. ನರಕವನ್ನು ಕೊಡುವಂಥದು ಯಾವುದೋ ಒಂದು ಬೇರೆಯೇ ಕಾರ್ಯವಿದೆ ಅದನ್ನು ಈಗ ಹೇಳುತ್ತಾರೆ.

**ಧಮ್ಮ ತರುಫಲ ಅಖಸುಹಯೋ, ಸೋ ಫಲ ದುಗಯ ದೇಯ ಣಹ ಕಬಊ ।**
**ಧಮ್ಮ ಕಾಲಯ ಅಘ ಕರಊ, ಕುಗಯ ಫಲ ದೇಯ ಸೋಯ ಕೀಯಾಯ ॥೯೩॥**

**ಗಾಥಾರ್ಥ :-** ಧರ್ಮ ವೃಕ್ಷದ ಫಲವು ಇಂದ್ರಿಯಗಳ ಸುಖವಿದೆ; ಆ ಫಲವೆಂದೂ ದುರ್ಗತಿ ದಾತೃವಿಲ್ಲ. ಧರ್ಮದ ಸಮಯದಲ್ಲಿ ಯಾವ ಪಾಪ ಮಾಡುತ್ತಾನೆ, ಆ ಕ್ರಿಯೆಯು ಕುಗತಿಯ ಫಲವೀಯುತ್ತದೆ.

**ಭಾವಾರ್ಥ :-** ಇಂದ್ರಿಯಗಳ ಸುಖವು ಧರ್ಮದ ಘಾತಮಾಡಿ, ಜೀವರುಗಳಿಗೆ ದುರ್ಗತಿ ಮಾಡುತ್ತದೆಯೆಂದು ಯಾರಾದರೂ ತಿಳಿಯುತ್ತಿದ್ದರೆ, ಅವರ ಕುರಿತಾಗಿ ಹೇಳುತ್ತಾರೆ-ಎಲೈ ಸೋದರನೇ ! ನೀನು ಸ್ಥಿರಚಿತ್ತದಿಂದ ಆಲಿಸು !! ಇಂದ್ರಿಯಗಳ ಸುಖವಂತೂ ಪುಣ್ಯದ ಫಲವಿದೆ. ದೇವ, ಇಂದ್ರ, ಚಕ್ರವರ್ತಿ, ಕಾಮದೇವಾದಿಯ ಸುಖರೂಪ ಪುಣ್ಯದ ಫಲದಲ್ಲಿ ಅವರು ಸಾವಿರಾರು ಸ್ತ್ರೀಯರ ಜೊತೆ ಅನೇಕ ಪ್ರಕಾರದ ಮನೋವಾಂಛಿತ ಪಂಚೇಂದ್ರಿಯ ಸುಖಭೋಗ ಭೋಗಿಸುತ್ತಾರೆ. ಅನೇಕ ರಥ, ಆನೆ, ಕುದುರೆ, ಪದಾತಿ ಮೊದಲಾಗಿ ವಿವಿಧ ಸೇನೆ ಸಹಿತ, ಖೇದರಹಿತರಾಗಿ ಅವರು ತಮ್ಮ ಶುಭ ಪರಿಣತಿಯ ಫಲವನ್ನು ಭೋಗಿಸುತ್ತಾರೆ. ಇವೆಲ್ಲವೂ ಪುಣ್ಯದ ಫಲವಿವೆ. ಪುಣ್ಯದ ಫಲವು ಇಂದ್ರಿಯ ಸುಖವಿರುವ ಕಾರಣ ಅದು ಪುಣ್ಯದ ಘಾತವನ್ನು ಹೇಗೆ ಮಾಡುತ್ತದೆ ? ಫಲವು ತನ್ನ ವೃಕ್ಷದ ಘಾತಮಾಡುವುದಿಲ್ಲ; ಅದರಿಂದ ಇಂದ್ರಿಯ ಸುಖವೂ ಧರ್ಮದ ಘಾತ ಮಾಡುವುದಿಲ್ಲ. ಇಂದ್ರಿಯ ಸುಖಗಳಿಂದ ದುರ್ಗತಿಯಾಗುವುದಿಲ್ಲವೆಂದು ತಿಳಿಯುವುದು.

**ಸಂದೇಹ :-** ಶಾಸ್ತ್ರಗಳಲ್ಲಿ ಅಲ್ಲಲ್ಲಿ 'ಇಂಥಿಂಥ ದೊರೆ ಮೊದಲಾದ ಪುರುಷರು ಇಂದ್ರಿಯ ಸುಖದಲ್ಲಿ ಮಗ್ನರಾಗಿ ನರಕಾದಿಗಳಿಗೆ ಹೋದರು ಮತ್ತು ಮಹಾಬುದ್ಧಿಧಾರೀ ಚಕ್ರವರ್ತಿ ದೊರೆಯು ಜಗತ್ತಿನ ಭೋಗಗಳಿಂದ ಉದಾಸನಾಗಿ ಇಂದ್ರಿಯಜನಿತ ಸುಖವನ್ನು ದುರ್ಗತಿದಾಯಕವೆಂದು ತಿಳಿದು, ಸಮಸ್ತ ರಾಜ್ಯ-ಭೋಗ- ಸಂಪದವನ್ನು ತ್ಯಜಿಸಿ ದೀಕ್ಷೆ ಧಾರಣ ಮಾಡುತ್ತಾರೆ'ಂದು ಓದಿದ್ದೇವೆ-ಕೇಳಿದ್ದೇವೆ. ಒಂದುವೇಳೆ ಇಂದ್ರಿಯಜನಿತ ಸುಖವು ಪಾಪಕಾರಿ ಇಲ್ಲದಿರುತ್ತಿದ್ದರೆ ಅವರೇಕೆ ತ್ಯಜಿಸುತ್ತಿದ್ದರು ? ಮತ್ತು ಇಲ್ಲಿ ಇಂದ್ರಿಯ ಸುಖವು ಧರ್ಮದ ಘಾತ

ಮಾಡುವುದಿಲ್ಲ. ಇಂದ್ರಿಯ ಸುಖದಿಂದ ನರಕಾದಿ ಅಶುಭ ಗತಿಗಳೂ ಆಗುವುದಿಲ್ಲವೆಂದು ತಾವು ಹೇಳುತ್ತಿರುವಿರಿ; ಇದು ಹೇಗೆ ಸಂಭವವಿದೆ ?

**ಸಮಾಧಾನ ಃ-** ಎಲೈ ಭವ್ಯಾತ್ಮನೇ ! ನಿನ್ನ ಪ್ರಶ್ನೆಯೂ ಪ್ರಮಾಣವಿದೆ; ಆದರೆ ಈಗ ಚಿತ್ತದ ಏಕಾಗ್ರತೆಯಿಂದ ಆಲಿಸು ! ಯಾವ ವಸ್ತುವು ಯಾವುದರಿಂದ ಉತ್ಪನ್ನವಾಗುತ್ತದೆ, ಅದು ಅದರ ನಾಶ ಮಾಡುವುದಿಲ್ಲ. ಇಂದ್ರಪದ, ಚಕ್ರವರ್ತಿ ಪದಗಳು ಮನೋವಾಂಛಿತ ಇಂದ್ರಿಯ ಭೋಗಗಳ ರೂಪ ಸುಖದ ಸಾಗರವಿವೆ. ಒಂದುವೇಳೆ ಇಂದ್ರಿಯಜನಿತ ಸುಖದಿಂದ ದುರ್ಗತಿಯಾಗುತ್ತಿದ್ದರೆ, ದೇವಗಳಿಗೆ ಹಾಗೂ ಭೋಗಭೋಮಿಜರಿಗೆ ಪರಭವದಲ್ಲಿ ದುರ್ಗತಿಯಾಗುತ್ತಿತ್ತು ಆದರೆ ಅವರಿಗೆ ದುರ್ಗತಿಯಾಗುವುದಿಲ್ಲ; ಅದರಿಂದ ಅಶುಭ ಗತಿಯಾಗುವುದು ಅದು ಇಂದ್ರಿಯ ಸುಖದ ಫಲವಿಲ್ಲವೆಂದು ತಿಳಿಯುವುದು. ಯಾವ ಕಾರಣದಿಂದ ಈ ಜೀವನಿಗೆ ಅಶುಭಗತಿಯಾಗುತ್ತದೆ ಅದನ್ನು ಈಗ ತಿಳಿಸುತ್ತಾರೆ,-

ಯಾವ ಜೀವಗಳು ಧರ್ಮಕಾಲದಲ್ಲಿ ಧರ್ಮವನ್ನು ಮರೆತು, ವಿಷಯ-ಕಷಾಯದಲ್ಲಿ ಆಸಕ್ತರಾಗಿ ಧರ್ಮದ ಘಾತ ಮಾಡುತ್ತಾರೆ, ಅವರಿಗೆ ಆ ಧರ್ಮಘಾತದ ಪಾಪದಿಂದ ನರಕಾದಿ ಅಶುಭ ಗತಿಗಳಾಗುತ್ತವೆ; ಅದರಿಂದ ನರಕಾದಿಗಳ ದುಃಖವು ಧರ್ಮಘಾತದ ಫಲವೆಂದು ತಿಳಿಯುವುದು; ಆ ಕಾರಣವಾಗಿ ವಿವೇಕವಂತರಿಗೆ ಧರ್ಮಸೇವನೆಯ ಕಾಲದಲ್ಲಿ ಧರ್ಮದ ಘಾತಮಾಡಿ ಪಾಪದ ವಿಕಲ್ಪಗಳಲ್ಲಿ ಸಮಯ ವ್ಯತೀತ ಮಾಡುವುದು. ಯೋಗ್ಯವಾಗಿಲ್ಲ-ಈ ಪ್ರಕಾರ ಧರ್ಮಾತ್ಮಾ ಗೃಹಸ್ಥರಿಗೆ ಎಲ್ಲಕ್ಕಿಂತ ಮೊದಲು ಪ್ರಭಾತ ಧರ್ಮಕಾಲದಲ್ಲಿ ಒಳ್ಳೆಯ ರೀತಿಯಿಂದ ನಿರ್ಮಲ ಭಾವಸಹಿತ ಧರ್ಮಕಾರ್ಯ ಮಾಡುತ್ತ ಪುಣ್ಯದ ಸಂಚಯ ಮಾಡುವುದು ಯೋಗ್ಯವಿದೆ ಅದರ ನಂತರ ತಮ್ಮ ಪೂರ್ವಪುಣ್ಯದ ಫಲರೂಪ ಇಂದ್ರಿಯಜನಿತ ಸುಖವನ್ನು ಭೋಗಿಸುವುದು. ಯಾವಾಗಲೂ ಇದೇ ಪ್ರಕಾರ ಧರ್ಮಕಾಲದಲ್ಲಿ ಧರ್ಮದ ಸೇವನೆ ಮಾಡಿ, ಅನ್ಯಕಾಲದಲ್ಲಿ ಕರ್ಮಕಾರ್ಯ ಮಾಡಿ ಪುಣ್ಯದ ಸಂಗ್ರಹ ಮಾಡಬೇಕು. ಇದರ ಫಲದಲ್ಲಿ ಪರಭವದೊಳಗೆ ಪುನಃ ದೇವಾದಿಕರ ಇಂದ್ರಿಯಜನಿತ ಸುಖ ಭೋಗದ ಪ್ರಾಪ್ತಿ ಮಾಡಿಕೊಳ್ಳುತ್ತಾರೆ. ಜೀವನು ಧರ್ಮವನ್ನು ಮರೆತು, ಧರ್ಮಕಾಲದಲ್ಲಿ ಇಂದ್ರಿಯಜನಿತ ಭೋಗಗಳಲ್ಲಿ ಆಸಕ್ತರಾಗಿ ಸುಖ ಮನ್ನಿಸುತ್ತಿದ್ದರೆ ಮನ್ನಿಸಲಿ; ಆದರೆ ಪೂರ್ವ ಪುಣ್ಯದ ಭೋಗವನ್ನು ಪೂರ್ಣವಾಗಿ ಭೋಗಿಸಿದ ನಂತರ ಅವರಿಗೆ ಧರ್ಮ ಫಲವಿಲ್ಲದೆ ನರಕಾದಿ ಗತಿಗಳಲ್ಲಿ ಅವುಗಳ ದುಃಖದ ಫಲವನ್ನು ಭೋಗಿಸಬೇಕಾಗುವುದು.

ಹೇಗೆ ಯಾವನೋ ಒಳ್ಳೆಯ ವ್ಯಾಪಾರಿಯು ಅನೇಕ ವ್ಯಾಪಾರ ಮಾಡಿ ತನ್ನ ಬುದ್ಧಿಯ ಬಲದಿಂದ ಬಹಳಷ್ಟು ಧನಗಳಿಸಿ, ಅದನ್ನು ಬೇರೆ ದಿನಗಳಲ್ಲಿ ಸುಖದಿಂದ ಭೋಗಿಸುತ್ತಾನೆ; ಆದರೆ ಅಂಗಡಿಯಲ್ಲಿ ಸಂಪಾದನೆಯ ಸಮಯವು ಬಂದ ಮೇಲೆ ಅನೇಕ ಸುಖ-ಭೋಗಗಳನ್ನೂ ಬಿಟ್ಟುಕೊಟ್ಟು ಅಂಗಡಿಗೆ ಹೋಗಿ ಅನೇಕ ವ್ಯಾಪಾರ ಕಲೆಗಳ ಮೂಲಕ ಧನ ಸಂಪಾದನೆ ಮಾಡುತ್ತಾನೆ, ಅದನ್ನು ಅನ್ಯ ದಿವಸಗಳಲ್ಲಿ ಸುಖದಿಂದ ಭೋಗ ಮಾಡುತ್ತಾನೆ. ಈ ಪ್ರಕಾರ ಭೋಗದ ಕಾಲದಲ್ಲಿ ಭೋಗ ಸುಖ ಭೋಗಿಸುತ್ತಾನೆ; ಆದರೆ ಗಳಿಕೆಯ ಕಾಲವಿರುವಾಗ, ಅನೇಕ ಕಾರ್ಯಗಳನ್ನು ಬಿಟ್ಟು ಕೂಡ ಹೋಗುತ್ತಾನೆ - ಸಂಪಾದನೆ ಮಾಡುತ್ತಾನೆ, ಸಂಪಾದನೆಯ ಸಮಯವನ್ನು ತಪ್ಪುವುದಿಲ್ಲ. ಹೀಗೆ ವ್ಯಾಪಾರಿಯು ಸದೈವ ಸಂಪಾದನೆ ಮಾಡುತ್ತ ಭೋಗಿಸುತ್ತ ಸುಖದಿಂದ ಇರುತ್ತಾನೆ.

ಇನ್ನೊಬ್ಬ ಯಾವನೋ ಜೀವನು ಒಂದುಸಲ ವ್ಯಾಪಾರ ಮಾಡಿ ಧನವನ್ನು ಪಡೆದು ಅನೇಕ ಪ್ರಕಾರದ ಸುಖ-ಭೋಗ ಮಾಡುತ್ತಾನೆ. ಪುನಃ ಸಂಪಾದನೆಯ ಕಾಲವು ಬಂದ ಮೇಲೆಯೂ ನೃತ್ಯ-ಗಾಯನ, ಭೋಜನ-ಪಾನಾದಿ ಭೋಗಗಳಲ್ಲಿಯೇ ಲೀನನಾಗಿ ಧನ ಖರ್ಚು ಮಾಡುತ್ತಾನೆ. ಸಂಪಾದನೆಗೆ ಹೋಗಲಿಲ್ಲ. ಸಂಪಾದನೆಯ ಕಾಲವನ್ನು ವ್ಯರ್ಥವಾಗಿ ಕಳೆದು ಬಿಡುತ್ತಾನೆ. ಮೊದಲು ಸಂಪಾದನೆ ಮಾಡಿರುವುದನ್ನೆಲ್ಲ ತಿಂದುಬಿಟ್ಟನು-ಭೋಗಿಸಿ ಬಿಟ್ಟನು. ಈಗ ಅವನು ಸಂಪಾದನೆಯಿಲ್ಲದೆ ದರಿದ್ರನಾಗಿ ಭಿಕ್ಷೆ ಬೇಡುವನು - ದುಃಖಿಯಾಗುವನೆಂದು ತಿಳಿಯುವುದು.

ಯಾವನೋ ಪುರುಷನ ಹತ್ತಿರ ಒಂದು ಉದ್ಯಾನ ವನವಿದೆ. ಅದರಲ್ಲಿ ಅನೇಕ ಪ್ರಕಾರದ ಮಿಷ್ಟವೂ ಆರೋಗ್ಯಕರವೂ ಆದ ಒಣ ಫಲಗಳಾಗುತ್ತವೆ. ಮಹಾಸುಂದರವಾದ ಸಘನ ಛಾಯೆಯಿಂದ ಆ ಮಹಾಶೋಭಾಯಮಾನ ವನದಲ್ಲಿ ಪ್ರತಿವರ್ಷ ಐದು ಕೋಟಿ ರೂಪಾಯಿಯ ಫಲ (ಡ್ರಾಯ್ ಫ್ರುಟ್ಸ್)ಗಳಾಗುತ್ತವೆ; ಅವನ್ನು ಮಾರಾಟ ಮಾಡಿ, ಅದರಿಂದ ಅವನು ತನ್ನ ಕುಟುಂಬದ ಪಾಲನೆ ಮಾಡುತ್ತಾನೆ. ಈ ಪ್ರಕಾರ ಪ್ರತಿ ವರ್ಷ ಐದು ಕೋಟಿ ರೂಪಾಯಿಯ ಹಣ್ಣು ಮಾರಿ ಸುಖದಿಂದ ಇರುತ್ತಾನೆ. ಅನೇಕ ಹಣ್ಣುಗಳನ್ನು ತಾನೂ ಭೋಗಿಸುತ್ತಾನೆ. ವನದ ರಕ್ಷಣೆಯನ್ನು ಒಳ್ಳೆಯ ರೀತಿಯಿಂದ ಮಾಡುತ್ತಾನೆ. ಈ ಪ್ರಕಾರ ಬಹುದಿನಗಳು ಕಳೆದು ಹೋದವು. ಆ ವನದ ರಕ್ಷಣೆ ಮಾಡುತ್ತ ದುಷ್ಟ ಪಶುಗಳಿಂದ ಅದನ್ನು ಸಂರಕ್ಷಿಸುತ್ತಾನೆ, ವನವನ್ನು ನಿರ್ವಿಘ್ನವಾಗಿರಿಸುತ್ತಾನೆ. ಅದರ ಫಲಗಳಿಂದ ತನ್ನ ಕುಟುಂಬದ ಪಾಲನೆ ಮಾಡುತ್ತ ತಾನೂ ಸಂತೋಷದಿಂದ ಇರುತ್ತಾನೆ. ಆ ಉಪವನವನ್ನು ನೋಡಿಯೂ ಅವನು ಸುಖಿಯಾಗುತ್ತಾನೆ.

ಒಮ್ಮೆ ಕಾಷ್ಟ ಕಡಿದು ಜೀವನ ನಡೆಸುವಂಥವನು ಆ ವನದ ಮಾಲೀಕನ ಹತ್ತಿರ ಬಂದು - ನೀನು ನಿನ್ನ ಈ ಉಪವನವನ್ನು ನಮಗೆ ಮಾರಿ ಬಿಡು - ಎಂದು ಹೇಳುತ್ತಾನೆ, ಇವನು ಐದು ಕೋಟಿ ರೂಪಾಯಿಗೆ ಅದನ್ನು ಮಾರಿ ಬಿಟ್ಟನು. ಆ ಕಾಷ್ಟಾಂಗಾರನು ಉಪವನ ಕತ್ತರಿಸಿ ಕಟ್ಟಿಗೆಯನ್ನು ತಗೆದುಕೊಂಡು ಹೋದನು.

ಇವನ ಮೂರ್ಖತೆಯನ್ನಾದರೂ ನೋಡಿರಿ ! ಪ್ರತಿವರ್ಷ ಐದು ಕೋಟಿ ಕೊಡುವಂಥ ವನವನ್ನು ಕಾಷ್ಟಾಂಗಾರನಿಗೆ ಕೊಟ್ಟು ಬಿಟ್ಟನು. ಆ ರೂಪಾಯಿಗಳಂತೂ ಒಂದು ಬಾರಿಯೇ ಬಂದು ವರ್ಷದಲ್ಲಿ ಮುಗಿದವು. ನಂತರ ತಾನೂ ದುಃಖಿಯಾಗುತ್ತಾನೆ, ವನದ ಶೋಭೆಯೂ ಹೊರಟು ಹೋಯಿತು. ರುಚಿಕರವಾದ ಫಲಗಳು ಸಮಾಪ್ತವಾದವು. ವನದ ರಕ್ಷಣೆಯನ್ನು ಬಿಟ್ಟು ಯಾವುದೋ ವಿಷಯ-ಕಷಾಯ, ನೃತ್ಯ-ಗೀತೆಗಳಲ್ಲಿ ತೊಡಗಿದನು. ವನವು ನಷ್ಟವಾಗಿ ಹೋಗುವುದರಿಂದ ಮಹಾದುಃಖಿಯಾದನು. ನೃತ್ಯಾದಿಗಳ ಸುಖವೂ ಒಂದೇ ಬಾರಿ ಮುಗಿದು ಹೋಯಿತು. ಆ ಉಪವನದೊಂದಿಗೆ ಉಪಜೀವನ ನಡೆಯುತ್ತಿತ್ತು, ಯಾವ ಚಿಂತೆಯಿರಲಿಲ್ಲ. ನೃತ್ಯಾದಿಗಳು ಒಳ್ಳೆಯವೆನಿಸುತ್ತಿದ್ದವು; ಅವೆಲ್ಲವೂ ವನವನ್ನು ಮಾರುವುದರಿಂದ ಸಮಾಪ್ತವಾಗಿ ಹೋದವು. ಕುಟುಂಬದವರೆಲ್ಲರ ಜೊತೆಗೆ ದುಃಖಿಯಾಗುತ್ತಿದ್ದಾನೆ.

ಹೇಗೆ ಆ ಉಪವನವಿರುವಾಗ ಸುಖಿಯಾಗಿರುವನು; ಹಾಗೆಯೇ ಧರ್ಮರೂಪ ಉಪವನದ ಫಲಗಳಿಂದ ಯಾವಾಗಲೂ ಸುಖಿಯಾಗಿರುತ್ತಾನೆ. ಒಂದುವೇಳೆ ಧರ್ಮರೂಪ ಉಪವನದ ರಕ್ಷಣೆಯನ್ನು ಮರೆತು, ವಿಷಯ ಕಷಾಯದಲ್ಲಿ ಮಗ್ನನಾದರೆ ಧರ್ಮರೂಪ ಉಪವನದ ವಿನಾಶದಿಂದ ದುಃಖಿಯಾಗುವನು. ವಿಷಯ ಸುಖವು ಕೂಡ ಒಮ್ಮೆ ಮುಗಿದು ಹೋಗುವುದು ಮತ್ತು ಯಾವಾಗಲೂ ಮೊದಲು ಉಪವನದ ರಕ್ಷಣೆ ಮಾಡಿ ನಂತರ ವಿಷಯ ಸುಖವನ್ನು ಭೋಗಿಸಿದರೆ ಅದರ ಫಲದಿಂದ ಸುಖಿಯಾಗಿರುವನು. ಅದಕ್ಕಾಗಿ ಎಲೈ ಭವ್ಯನೇ ! ಆತ್ಮನಿಗೆ ಯಾವ ನರಕಾದಿ ಅಶುಭ ಗತಿಗಳಾಗುತ್ತವೆ ಅವನ್ನು ಧರ್ಮಘಾತದ ಫಲವೆಂದು ನೀನು ತಿಳಿಯುವುದು. ಯಾವ ಜೀವನು ಧರ್ಮಕಾಲದಲ್ಲಿ ಧರ್ಮದ ಘಾತಮಾಡಿ ಪಾಪದ ಸೇವನೆ ಮಾಡಿ, ವಿಷಯ-ಭೋಗಗಳಲ್ಲಿ ಆಸಕ್ತನಾಗುವನು, ಅವನು ನರಕಾದಿ ಕುಗತಿಗಳ ದುಃಖ ಭೋಗಿಸುವನು ಮತ್ತು ಯಾರು ಧರ್ಮಕಾಲದಲ್ಲಿ ಧರ್ಮದ ಸೇವನೆಯೊಂದಿಗೆ ಧರ್ಮದ ರಕ್ಷಣೆ ಮಾಡುತ್ತ ನಂತರ ತನ್ನ ವಿಷಯ ಭೋಗ ಭೋಗಿಸುತ್ತಾನೆ, ಅವನು ತನ್ನ ಪುಣ್ಯದ ಅನುಸಾರ ದೊರಕಿದ ಭೋಗ ಸಂಪದವನ್ನು ಸಂತೋಷ ಧಾರಣ ಮಾಡಿ ಭೋಗಿಸುವುದರಿಂದ ಅಶುಭ ಗತಿಯಾಗುವುದಿಲ್ಲವೆಂಬುದನ್ನು ತಿಳಿಯುವುದು.

ಇನ್ನು ದೊಡ್ಡ-ದೊಡ್ಡ ದೊರೆಗಳು ಇಂದ್ರಿಯಜನಿತ ಸುಖಗಳನ್ನು ಪಾಪರೂಪವೆಂದು ತಿಳಿದುಕೊಂಡು ಅವುಗಳ ತ್ಯಾಗಮಾಡಿ, ಉದಾಸೀನರಾಗಿ ದಿಗಂಬರರಾದರು-ದೀಕ್ಷೆ ಧಾರಣ ಮಾಡಿದರೆಂದು ನೀನು ಹೇಳಿರುವೆ. ಅದರ ಕುರಿತಾಗಿ

ಎಲೈ ಭವ್ಯನೇ ಈಗ ನೀನು ಆಲಿಸು ! ಆ ದೊರೆಗಳು ದೀಕ್ಷೆ ಧಾರಣ ಮಾಡಿದರು ಮತ್ತು ಇಂದ್ರಿಯಜನಿತ ಭೋಗಗಳ ತ್ಯಾಗ ಮಾಡಿದರು - ಅದನ್ನೆಲ್ಲ ನರಕಾದಿಗಳ ಭಯದಿಂದ ಮಾಡಲಿಲ್ಲ. ನರಕಾದಿಗಳ ದುಃಖದ ಅಭಾವವಂತೂ ಗೃಹಸ್ಥ ಅವಸ್ಥೆಯಲ್ಲಿ ಧರ್ಮದ ಸೇವನೆ ಮಾಡುವುದರಿಂದಲೇ ಆಗಿ ಹೋಗುತ್ತದೆ. ಮನೆಯಲ್ಲಿಯೇ ತಮ್ಮ ಕುಟುಂಬದ ಮಧ್ಯದಲ್ಲಿದ್ದುಕೊಂಡು ಧರ್ಮ ಮಾಡುವುದರಿಂದ, ಧರ್ಮದ ಸೇವನೆ ಮಾಡುತ್ತ ಸುಖದಿಂದ ಪರ್ಯಾಯ ಬಿಟ್ಟಮೇಲೆ ದೇವಾದಿ ಶುಭಗತಿಯ ಪ್ರಾಪ್ತಿಯಾಗುತ್ತದೆ; ಆದರೆ ಎಲೈ ಸೋದರರನೇ ! ಮನೆಯಲ್ಲಿ ಕರ್ಮಗಳ ನಾಶಮಾಡಿ ಮೋಕ್ಷಸ್ಥಾನವನ್ನು ಬಯಸುವಂಥವರಿಗೆ ಮನೆಯಲ್ಲಿ ಮೋಕ್ಷವಾಗುವುದಿಲ್ಲ. ಆದುದರಿಂದ ಎಲೈ ಭವ್ಯಾತ್ಮನೇ ! ನಿಕಟ ಸಂಸಾರೀ ಜೀವನು ಮೋಕ್ಷ ಪ್ರಾಪ್ತಿಯ ಸಲುವಾಗಿ, ಸಮಸ್ತ ಕರ್ಮಗಳ ನಾಶಮಾಡಿ ಶುದ್ಧಭಾವವಾಗುವ ಸಲುವಾಗಿ, ರಾಗ-ದ್ವೇಷಗಳ ತ್ಯಾಗ ಮಾಡಿ ಕೇವಲಜ್ಞಾನವನ್ನು ಪ್ರಕಟ ಪಡಿಸಿಕೊಳ್ಳುವ ಸಲುವಾಗಿ, ಜನ್ಮ-ಮರಣದ ದುಃಖ ದೂರ ಮಾಡುವ ಸಲುವಾಗಿ ಸಿದ್ಧ ಪದದ ಧ್ರುವ ಸುಖವನ್ನು ಪ್ರಾಪ್ತ ಮಾಡಿಕೊಳ್ಳುವ ಸಲುವಾಗಿ ದೀಕ್ಷೆಯ ಧಾರಣ ಮಾಡುತ್ತಾರೆಂದು ತಿಳಿಯುವುದು.

ಯಾರು ಧರ್ಮಕಾಲದಲ್ಲಿ ಧರ್ಮವನ್ನು ಬಿಟ್ಟು ಪಾಪದ ಸೇವನೆ ಮಾಡುತ್ತಾರೆ; ಅವರಿಗೆ ನರಕಾದಿ ಅಶುಭ ಗತಿಗಳಾಗುತ್ತವೆ, ಅದರಿಂದ ದುಃಖಿಯೇ ಆಗುತ್ತಾರೆ. ಧರ್ಮಾತ್ಮಾ ಗೃಹಸ್ಥರಿಗೆ ಇಂದ್ರಿಯ ಸುಖ ಭೋಗಿಸುವುದರಿಂದ ಪಾಪವಾಗುವುದಿಲ್ಲ ಹಾಗೂ ಅವಿನಾಶಿ ಅತೀಂದ್ರಿಯ ಭೋಗಸುಖರೂಪ ಮೋಕ್ಷಸುಖವು ಮುನಿಪದವಿಲ್ಲದೆ ಆಗುವುದಿಲ್ಲ ಅದಕ್ಕಾಗಿ ಮೋಕ್ಷಸುಖದ ಇಚ್ಛೆಯುಳ್ಳ ಜೀವರುಗಳು ದೀಕ್ಷೆಯ ಧಾರಣವನ್ನೇ ಮಾಡುತ್ತಾರೆ. ಯಾವ ಭವ್ಯರಿಗೆ ಮೋಕ್ಷದ ಇಚ್ಛೆಯಂತೂ ಇದೆ; ಆದರೆ ದೀಕ್ಷೆಯ ಧಾರಣ ಮಾಡುವ ಸಲುವಾಗಿ ಸಮರ್ಥರಿರುವುದಿಲ್ಲ, ಆ ಧರ್ಮಾತ್ಮಾ ಗೃಹಸ್ಥರು ಮನೆಯಲ್ಲಿಯೇ ಮುನಿಗಳಿಗೆ ದಾನ, ಜಿನದೇವರ ಪೂಜೆ, ಶಾಸ್ತ್ರಗಳ ಶ್ರವಣ-ಪಠನ, ಸಂಯಮ, ಯಥಾಶಕ್ತಿ ತಪ-ಇತ್ಯಾದಿಯಾಗಿ ಧರ್ಮದ ಸೇವನೆ ಮಾಡಿ ಅದರ ಫಲದಲ್ಲಿ ದೇವಪದ, ಭೋಗಭೂಮಿಪದ, ಚಕ್ರವರ್ತಿ ಪದದ ಪ್ರಾಪ್ತಿ ಮಾಡಿಕೊಂಡು ಆ ದೇವಾದಿ ಪದಗಳಲ್ಲಿ ಹಗಲಿರುಳೂ ಅದ್ಭುತ ಇಂದ್ರಿಯಜನಿತ ಸುಖ ಭೋಗವನ್ನು ಆಯುವಿರುವವರೆಗೆ ಭೋಗಿಸುತ್ತಾರೆ. ಎಲೈ ಭವ್ಯಾತ್ಮನೇ ! ಒಂದುವೇಳೆ ಇಂದ್ರಿಯಜನಿತ ಸುಖದಿಂದ ಪಾಪವಾಗುತ್ತಿದ್ದರೆ, ದುರ್ಗತಿಯಾಗುತ್ತಿದ್ದರೆ ಗೃಹಸ್ಥ ಧರ್ಮಾತ್ಮರ ಪರಭವವು ಹೇಗೆ ಸುಧಾರಿಸುತ್ತಿತ್ತು ? ಮತ್ತು ಧರ್ಮರಸದ ಆಸ್ವಾದಿಯಾದ ಧರ್ಮಾತ್ಮ ಶ್ರಾವಕನು ಗೃಹಸುಖವನ್ನು ಹೇಗೆ ಭೋಗಿಸುತ್ತಿದ್ದನು ? ಈ ಪ್ರಕಾರ ಅನೇಕ ನಯಗಳಿಂದ ವಿಚಾರ ಮಾಡಿದರೆ ಪಾಪವಂತೂ ಧರ್ಮಘಾತದ ಹೆಸರು ಇದೆ, ಭೋಗಗಳಲ್ಲಿ ಪಾಪವಿಲ್ಲ; ಅದರಿಂದ ವಿವೇಕವಂತರಾದ ಧರ್ಮಾತ್ಮರಿಗೆ ಧರ್ಮಕಾಲದಲ್ಲಿ ಕೇವಲ ಧರ್ಮ ಸೇವನೆಯೇ ಯೋಗ್ಯವಿದೆ.

ಮುನೀಶ್ವರರ ಮೋಕ್ಷದ ಕಾರಣವು ಶ್ರಾವಕರ ಮನೆಯಿದೆಯೆಂದು ಈಗ ಹೇಳುತ್ತಾರೆ,-

**ಜೀಯ ಸುಹ ಚಯ ಮೋಕ್ಖೋ, ಮೋಕ್ಖೋತ್ತಯಣ ರಯಣ ಮುಣ ಸಾಹೋ ।**
**ಮುಣಣರತಣ ಆಹಾರೋ, ಭೋಯಣ ಸಾವಯ ಗೇಹ ಕರ ಹೋಈ ॥೯೪॥**

**ಗಾಥಾರ್ಥ :-** ಜೀವನು ಸುಖವನ್ನು ಬಯಸುತ್ತಾನೆ, ಆ ಸುಖವು ಮೋಕ್ಷದಲ್ಲಿದೆ. ಆ ಮೋಕ್ಷವು ರತ್ನತ್ರಯದಿಂದ ಆಗುತ್ತದೆ ಮತ್ತು ರತ್ನತ್ರಯವು ಮುನಿಪದದಲ್ಲಿ ಆಗುತ್ತದೆ. ಮುನಿಪದವು ಮನುಷ್ಯ ಶರೀರದಿಂದ ಆಗುತ್ತದೆ ಮತ್ತು ಶರೀರವು ಭೋಜನದಿಂದ ಉಳಿಯುತ್ತದೆ. ಆ ಭೋಜನವು ಗೃಹಸ್ಥ ಶ್ರಾವಕನ ಮನೆಯಿಂದ ದೊರಕುತ್ತದೆ.

**ಭಾವಾರ್ಥ :-** ನಾಲ್ಕು ಗತಿ ಸಂಬಂಧದ ಸಮಸ್ತ ಸಂಸಾರೀ ಜೀವಗಳ ಆಸೆಯು ಒಂದು ಸುಖವೇ ಇದೆ. ಎಲ್ಲರೂ ಸುಖವನ್ನು ಬಯಸುತ್ತಾರೆ. ದೊರಕಿರುವ ಸುಖದ ವಿಯೋಗವಾಗಿ ಹೋದ ಮೇಲೆ ಜೀವನು ದುಃಖಿಯಾಗುತ್ತಾನೆ. ಎಂದರೆ ಜೀವನು ವಿನಾಶರಹಿತ ಅವಿನಾಶೀ ಸುಖವನ್ನು ಬಯಸುತ್ತಾನೆಂದು ತಿಳಿಯುವುದು; ಒಂದು ಕ್ಷಣವೂ ಕೂಡ ಸುಖದಿಂದ ದೂರವಿರಲು ಬಯಸುವುದಿಲ್ಲ-ಎಲ್ಲ ಜೀವರುಗಳ ಅಭಿಪ್ರಾಯವು ಹೀಗೆಯೇ ಇದೆ. ಅವುಗಳಲ್ಲಿನ ಎಲೈ

ಭವ್ಯ ಜೀವರುಗಳೇ ! ಸಂಸಾರದಲ್ಲಿ ಜೀವ-ಮನುಷ್ಯರ ಸುಖವಂತೂ ವಿನಾಶಿಕವಿದೆ ಯಾವುದೋ ಪುಣ್ಯದ ಯೋಗದಿಂದ ಇರುತ್ತದೆ. ತನ್ನ ಸ್ಥಿತಿಯು ಪೂರ್ಣವಾಗಿ ಹೋಗುವವರೆಗೆ ಇರುತ್ತದೆ, ಪೂರ್ಣವಾದ ಮೇಲೆ ಸುಖವು ನಷ್ಟವಾಗಿ ಹೋಗುತ್ತದೆ. ಜೀವನು ಆ ಸುಖವು ನಷ್ಟವಾಗಿ ಹೋದ ಮೇಲೆ ಮಹಾದುಃಖಿಯಾಗುತ್ತಾನೆ. ಹೀಗೆ ಮಿಥ್ಯಾತ್ವವು ಅಲ್ಪ ಉದ್ಯೋತದ ಚಮತ್ಕಾರ ಮಾಡಿದ ಮೇಲೆ ಅಂಧಕಾರವನ್ನುಂಟು ಮಾಡುತ್ತದೆ; ಅದೇ ಪ್ರಕಾರ ಇಂದ್ರಿಯ ಸುಖವು ತುಚ್ಛವಾದ ಚಮತ್ಕಾರ, ಇಂದ್ರಿಯ ಸುಖದ ಅತ್ಯಲ್ಪ ವಾಸನೆ ತೋರಿಸಿದ ಮೇಲೆ ದುಃಖವನ್ನೇ ಉತ್ಪನ್ನ ಮಾಡುತ್ತದೆ. ಎಂದರೆ ಇಂಥ ವಿನಾಶಿಕ ಸುಖವಾಗುವುದಕ್ಕಿಂತ ಆಗದಿರುವುದೇ ಒಳ್ಳೆಯದಿದೆ.

ಈ ಜೀವನಂತೂ ನಿರಂತರ ಅವಿನಾಶೀ ಸುಖವನ್ನು ಬಯಸುತ್ತಾನೆ. ಎಲೈ ಸುಖಾರ್ಥಿಜೀವರುಗಳೇ ! ನಿಮ್ಮ ಇಚ್ಛೆಯ ಪ್ರಮಾಣ ಸುಖದ ಸ್ಥಾನವಂತೂ ಸಿದ್ಧಪದವಿದೆ. ಅಲ್ಲಿ ಧ್ರುವ-ಅವಿನಾಶೀ ಸುಖವಿದೆ; ಆ ಸುಖವು ಸಮಸ್ತ ಕರ್ಮಗಳ ನಾಶದಿಂದ ಪ್ರಗಟವಾಗುತ್ತದೆ, ಆದ್ದರಿಂದ ನಿಮಗೆ ಒಂದುವೇಳೆ ಸದೈವ ಅವಿನಾಶೀ ಸುಖದ ಅಭಿಲಾಷೆಯಿದ್ದರೆ ಹೇಗೆ ಸಾಧ್ಯವಿದೆಯೋ ಹಾಗೆ ಸಮಸ್ತ ಕರ್ಮಗಳ ನಾಶ ಮಾಡಿರಿ. ಅದರಿಂದ ಮೋಕ್ಷವಾಗುತ್ತದೆ ಮತ್ತು ಸಂಪೂರ್ಣ ಸುಖದ ಸ್ಥಾನವು ಮೋಕ್ಷವಿದೆ.

ಸುಖದ ಆಶ್ರಯಭೂತವಿರುವ ಮೋಕ್ಷವು ರತ್ನತ್ರಯದ ಆಧೀನವಿದೆ. ಸಮ್ಯಗ್ದರ್ಶನ, ಸಮ್ಯಗ್ಜ್ಞಾನ, ಸಮ್ಯಕ್ಚಾರಿತ್ರ ಇವು ಮೂರು-ರತ್ನತ್ರಯಗಳು ಮೋಕ್ಷದ ಆಶ್ರಯವಿವೆ. ರತ್ನತ್ರಯವಿಲ್ಲದೆ ಮೋಕ್ಷವಾಗುವುದಿಲ್ಲ. ರತ್ನತ್ರಯವು ಮುನಿ ಪದದ ಆಶ್ರಿತವಿದೆ. ಮುನಿಪದವಿಲ್ಲದೆ ರತ್ನತ್ರಯವಾಗುವುದಿಲ್ಲ. ಮತ್ತು ಮುನಿಪದವು ನರತನವಿಲ್ಲದೆ ಆಗುವುದಿಲ್ಲ; ಅದರಿಂದ ಮುನಿಪದದ ಆಶ್ರಯವು ನರದೇಹವಿದೆ. ಮನುಷ್ಯನ ದೇಹದ ಸ್ಥಿರತೆಯು ಭೋಜನವಿಲ್ಲದೆ ಆಗುವುದಿಲ್ಲ; ಏಕೆಂದರೆ ಮನುಷ್ಯನ ಶರೀರದ ಆಶ್ರಯವು ಭೋಜನವಿದೆ. ಮುನೀಶ್ವರರ ಭೋಜನವು ಧರ್ಮಾತ್ಮಾ, ಆಚಾರವಂತ ಶ್ರಾವಕನಿಲ್ಲದೆ ಆಗುವುದಿಲ್ಲ. ಅದರಿಂದ ಉತ್ತಮ ಶ್ರಾವಕನ ಮಂದಿರವೇ (ಮನೆಯೇ) ಮುನಿತನದ ಆಶ್ರಯವೆಂದು ತಿಳಿಯುವುದು. ಎಂದರೆ ಮೋಕ್ಷ ಮಾರ್ಗವು ಶ್ರಾವಕನ ಮನೆಯ ಆಧೀನವಿದೆಯೆಂದು ತಿಳಿಯುವುದು. ಮುನಿಪದವಿಲ್ಲದೆ ಮೋಕ್ಷವಾಗುವುದಿಲ್ಲ ಮತ್ತು ಶ್ರಾವಕ ಧರ್ಮಾತ್ಮನ ಮನೆಯಿಲ್ಲದೆ ಮುನಿಯ ಶರೀರದ ಸಹಕಾರೀ ಭೋಜನವಿರುವುದಿಲ್ಲ; ಅದರಿಂದ ಭೋಜನ ಕೊಡುವ ಸಲುವಾಗಿ ಒಂದುವೇಳೆ ಶುಭಶ್ರಾವಕರ ಮನೆಯಿಲ್ಲದಿದ್ದರೆ ಮುನಿಧರ್ಮವೂ ಉಳಿಯುವ ಸಾಧ್ಯತೆಯಿಲ್ಲ. ಮುನಿಧರ್ಮವು ಇಲ್ಲವಾದ ಮೇಲೆ ಮೋಕ್ಷಮಾರ್ಗದ ಸಾಧನೆಯೂ ಸಾಧ್ಯವಿಲ್ಲ. ಆದುದರಿಂದ ಮೋಕ್ಷಮಾರ್ಗದ ಆಶ್ರಯವು ಶ್ರಾವಕನ ಮನೆಯೇ ಇದೆಯೆಂದು ತಿಳಿಯುವುದು. ಹೀಗಿರುವುದರಿಂದ ಧರ್ಮಾತ್ಮಾ ಶ್ರಾವಕರಿಗೆ (ಸುಖಮಾರ್ಗದ ನಿರಂತರತೆಯ ಉದ್ದೇಶದಿಂದ) ಶುಭ ಆಚರಣೆಯರೂಪ ಪ್ರವೃತ್ತಿ ಮಾಡುವುದೇ ಯೋಗ್ಯವಿದೆ.

ಈಗ ಬುದ್ಧಿ, ಧನ ಮತ್ತು ತನುವಿನ ಪ್ರಾಪ್ತಿಯ ಫಲ ಹೇಳುತ್ತಾರೆ,-

**ಬುಧಿ ಫಲ ತತ್ತ್ವ ವಿಚಾರಣ, ತಣ ಫಲ ತಬ ತೀಥ ಝಾಣ ಚಾರತ್ತೋ ।**

**ಧಣ ಫಲ ಪೂಜಾ ದಾಣಉ, ವಚಫಲ ಪರಪೀಯ ಜಂತು ರಖ ಸತ್ತೋ ॥೯೫॥**

**ಗಾಥಾರ್ಥ ಃ-** ಬುದ್ಧಿಯ ಫಲವು ತತ್ತ್ವಗಳ ವಿಚಾರ ಮಾಡುವುದಿದೆ, ತನುವಿನ ಫಲವು ತಪ, ತೀರ್ಥ, ಧ್ಯಾನ ಮತ್ತು ಚಾರಿತ್ರವಿದೆ. ಧನದ ಫಲವು ದಾನ-ಪೂಜೆಯಿದೆ. ವಚನದ ಫಲವು ಇತರರ ಕುರಿತಾಗಿ ಪ್ರಿಯ, ದಯಾಮಯ, ಸತ್ಯ ವಚನವನ್ನಾಡುವುದಿದೆ.

**ಭಾವಾರ್ಥ ಃ-** ಸುಬುದ್ಧಿಯನ್ನು ಪ್ರಾಪ್ತ ಮಾಡಿಕೊಂಡು ಒಂದುವೇಳೆ ಧರ್ಮಮಾರ್ಗವನ್ನು ಮರೆತು ವಿಷಯಗಳಲ್ಲಿ ಪ್ರವೃತ್ತಿ ಮಾಡಿ, ಪಾಪ ಮಾಡಿ, ಅಶುಭದ ಭಾರವನ್ನು ತಲೆಯ ಮೇಲೆ ಹೊತ್ತುಕೊಂಡರೆ ಬುದ್ಧಿಯೇ ನಿಷ್ಫಲವಾಗಿ ಹೋಯಿತು. ಯಾವ ಭವ್ಯ ಜೀವರುಗಳು ಬುದ್ಧಿ ಪ್ರಾಪ್ತಮಾಡಿಕೊಂಡು ತತ್ತ್ವಗಳ ವಿಚಾರಮಾಡಿ,

ಪಾಪ ಕರ್ಮದ ಕ್ಷಯ ಮತ್ತು ಪುಣ್ಯದ ಸಂಚಯಮಾಡಿ, ಮೋಕ್ಷವಾಗುವ ಉಪಾಯದ ಚಿಂತನೆ ಮಾಡಿದ್ದಾರೆ; ಅವರೇ ಬುದ್ಧಿ ಪ್ರಾಪ್ತಮಾಡಿಕೊಂಡಿರುವುದರ ಉತ್ಕೃಷ್ಟ ಫಲ ಪಡೆದಿದ್ದಾರೆ, ಭವಿಷ್ಯದಲ್ಲಿ ಪಡೆಯುವರು.

ಮನುಷ್ಯ ಶರೀರವನ್ನು ಪ್ರಾಪ್ತಮಾಡಿಕೊಂಡು ಒಂದುವೇಳೆ ಅನೇಕ ಪಾಪಕಾರೀ ಸ್ಥಾನಗಳಲ್ಲಿ ಪ್ರವರ್ತನೆ ಮಾಡಿ ಬೇರೆಯವರಿಗೆ ಕಷ್ಟಕೊಟ್ಟು, ಬೇರೆಯವರ ಧನ ಕದ್ದುಕೊಂಡು, ಪರಸ್ತ್ರೀರಮಣ ಮಾಡಿ, ತೀರ್ಥಸ್ಥಾನ ಮನ್ನಿಸಿ ಪಾಪದ ಸ್ಥಾನಗಳಲ್ಲಿ ಭ್ರಮಣ ಮಾಡಿ - ಇತ್ಯಾದಿ ಪಾಪಾಚಾರಮಯ ಕಾರ್ಯ ಮಾಡುತ್ತ ಅಶುಭ ಕರ್ಮದ ಬಂಧ ಮಾಡಿಕೊಂಡರೆ ಮನುಷ್ಯ ಶರೀರ ಪಡೆಯುವುದು ಪಡೆಯದಿರುವುದು ಸಮಾನವಾಯಿತು. ಪ್ರಾಪ್ತವಾದ ಶರೀರವು ವ್ಯರ್ಥವಾಗಿ ಹೋಯಿತು. ಶರೀರ ಪ್ರಾಪ್ತ ಮಾಡಿಕೊಂಡು ಅಹಿಂಸಕ, ಆರಂಭರಹಿತ, ದಯಾಭಾವ ಸಹಿತ, ಆರು ಅಂತರಂಗ ತಪ ಮತ್ತು ಆರು ಬಹಿರಂಗ ತಪ-ಇವು ಹನ್ನೆರಡು ತಪಗಳನ್ನು ಮಾಡಿದರೆ ಶರೀರವು ಸಫಲವಿದೆ.

ಎಲ್ಲಿಂದ ಯತೀಶ್ವರರು ಕರ್ಮನಾಶ ಮಾಡಿ ಮುಕ್ತರಾದರು, ಆ ಸ್ಥಾನಗಳು ಶುದ್ಧ-ತೀರ್ಥವಿವೆ. ಈ ಶರೀರದಿಂದ ಆ ಸ್ಥಾನಗಳ ವಂದನೆ-ಪೂಜೆ ಮಾಡುವುದರಲ್ಲಿಯೇ ಶರೀರದ ಸಫಲತೆಯಿದೆ. ಯಾವ ಶರೀರದಿಂದ ವಿಕರಾಳ ವೇಷಧಾರಣ ಮಾಡಿ, ಪಾಪ-ಪಾಖಂಡ ಧಾರಣ ಮಾಡಿ ಬೇರೆಯವರನ್ನು ಭಯಭೀತ ಮಾಡಲಾಗುತ್ತದೆ ಆ ಶರೀರ ವ್ಯರ್ಥವಿದೆ; ಆದರೆ ಶರೀರದಿಂದ ಕಾಯೋತ್ಸರ್ಗ ಮುದ್ರೆ ಹಾಗೂ ಪದ್ಮಾಸನ ಮುದ್ರೆ ಧಾರಣ ಮಾಡಿ, ಸಮತೆಯ ಭಾವದೊಂದಿಗೆ ಅನ್ಯ ಜೀವಗಳಿಗೆ ವಿಶ್ವಾಸವನ್ನು ಉತ್ಪನ್ನ ಮಾಡಿ ಸುಖಿ ಮಾಡಲಾಗುವುದು, ಧರ್ಮಧ್ಯಾನ-ಶುಕ್ಲಧ್ಯಾನರೂಪ ಭಾವಸಹಿತವಾಗಿ ಧ್ಯಾನ ಮಾಡಲಾಗುವುದು ಆ ಕಾಯವು ಸಫಲವಿದೆ. ಪಂಚ ಮಹಾವ್ರತ, ಪಂಚಸಮಿತಿ, ಮೂರುಗುಪ್ತಿ- ಇವು ಹದಿಮೂರು ಪ್ರಕಾರದ ಚಾರಿತ್ರ ಅಥವಾ ಹನ್ನೆರಡು ವ್ರತಗಳು ಯಾವ ಶರೀರದಿಂದ ಆಗುತ್ತವೆಯೋ ಆ ಶರೀರದ ಪ್ರಾಪ್ತಿಯು ಸಫಲವಿದೆ.

ಯಾವ ಧನದಿಂದ ಪಾಪಾರಂಭರೂಪ ಕ್ರಿಯೆ ಮಾಡಿ ಪರಭವದ ಸಲುವಾಗಿ ದುಃಖವನ್ನು ಉತ್ಪನ್ನ ಮಾಡಲಾಗುವುದು. ಆ ಧನವು ವ್ಯರ್ಥವಿದೆ. ಯಾವ ಧನದಿಂದ ಅನ್ಯ ಜೀವಗಳನ್ನು ಕೊಂಡು ಅವುಗಳನ್ನು ಸಾಯಿಸಲಾಗುತ್ತದೆ, ಯಾವ ಧನದಿಂದ ಅನ್ಯಜೀವಗಳನ್ನು ಬಂಧನದಲ್ಲಿ ಹಾಕಲಾಗುತ್ತದೆ, ಪರಸ್ತ್ರೀ ಸೇವನೆ ಮಾಡಲಾಗುತ್ತದೆ. ಯಾವ ಧನವನ್ನು ವೇಶ್ಯಾಗಮನದಲ್ಲಿ ಕೊಡಲಾಗುತ್ತದೆ, ನೃತ್ಯ-ಗಾಯನ ಇತ್ಯಾದಿ ವಿಕಾರರೂಪ ಭಾವಗಳಲ್ಲಿ ವಿನಿಯೋಗಿಸಲಾಗುತ್ತದೆ - ಆ ಧನವು ವ್ಯರ್ಥವಿದೆ. ಯಾವ ಧನವು ಜೂಜಿನಲ್ಲಿ ರಮಿಸುವ ಸಲುವಾಗಿ, ಜೂಜಿನ ಉಪಕರಣಗಳನ್ನು ಬಹಳಷ್ಟು ಬೆಲೆಕೊಟ್ಟು ಖರೀದಿಸಲಾಗುತ್ತದೆ, ಬಹಳಷ್ಟು ಧನ ಕೊಟ್ಟು ಚಿನ್ನ-ಬೆಳ್ಳಿಯ ಜೂಜಿನ ಸಾಮಗ್ರಿಗಳನ್ನು ನಿರ್ಮಿಸುವುದು, ಮಹಾ ಅನುರಾಗಿಯಾಗಿ ಜೂಜಾಟದ ಆಯೋಜನೆ ಮಾಡುವಲ್ಲಿ ಯಾವ ಧನ ತೊಡಗಿಸಲಾಗುತ್ತದೆ ಆ ಧನವು ವ್ಯರ್ಥವಿದೆ. ಯಾವ ಧನದಿಂದ ವೀತರಾಗಿ ಮುನಿಗಳಿಗೆ ಆಹಾರ, ಔಷಧಿ ಗ್ರಂಥವನ್ನು ಕೊಡಲಾಗುತ್ತದೆ, ಜಿನೇಂದ್ರ ಭಗವಂತರ ಪೂಜೆ ಪ್ರಭಾವನೆ ಮಾಡಲಾಗುತ್ತದೆ, ಆ ಧನದ ಪ್ರಾಪ್ತಿ ಮಾಡಿಕೊಂಡಿರುವುದು ಸಾರ್ಥಕವಿದೆ.

ಮುಖವನ್ನು (ವಚನಶಕ್ತಿಯನ್ನು) ಪಡೆದು ಆಡಲಾಗುವ ಎಂದರೆ ಯಾವ ಪ್ರಕಾರದ ವಚನಗಳಿಂದ ಅನೇಕ ಜೀವರುಗಳ ಮಾನ ಖಂಡನೆಯಾಗುವ, ಅನ್ಯ ಜೀವರುಗಳ ಕುರಿತು ಕಟುವಚನಗಳನ್ನಾಡಿ ಅವರನ್ನು ದುಃಖಿ ಮಾಡುವ, ನಿಷ್ಪ್ರಯೋಜನ ಅನರ್ಥ ದಂಡವನ್ನು ಉತ್ಪನ್ನ ಮಾಡುವಂಥ ವ್ಯರ್ಥ ವಚನ ಇತ್ಯಾದಿ ಪಾಪಬಂಧಕಾರಕ ವಚನವನ್ನಾಡುವುದು-ಇಂಥ ವಚನ ಶಕ್ತಿಯು ಪ್ರಾಪ್ತವಾದರೂ ಆಗದಿರುವ ಸಮಾನವಿದೆ - ವ್ಯರ್ಥವಿದೆ. ಯಾವ ವಚನಗಳನ್ನು ಆಲಿಸಿ ಅನ್ಯ ಜೀವರುಗಳು ಸಾತಾ ಪಡೆಯುತ್ತಾರೆ, ಯಾವ ವಚನಗಳ ಪ್ರತೀತಿ ಮಾಡಿ ಅನ್ಯ ಜೀವರುಗಳು ಸ್ಥಿರರಾಗುತ್ತಾರೆ, ಸುಖ ಪಡೆಯುತ್ತಾರೆ. ಅಂಥ ದಯೆಯಿಂದ ಕೂಡಿದ, ಹಿಂಸೆ-ಪಾಪದಿಂದ ರಹಿತ, ಸತ್ಯ ಮೊದಲಾದ ವಚನಗಳನ್ನು ಜಿನದೇವರ ಆಜ್ಞಾನುಸಾರ ಹಿತ-ಮಿತ ವಚನಗಳನ್ನಾಡುವುದು, ವಚನ ಪಡೆದಿರುವುದರ ಸಾರ್ಥಕತೆಯಿದೆ.

ಹೀಗೆ ವಿವೇಕವಂತರು ಬುದ್ಧಿ ಪ್ರಾಪ್ತಮಾಡಿಕೊಂಡಂತೂ ಜೀವಾಜೀವಾದಿ ತತ್ತ್ವಗಳ ವಿಚಾರಮಾಡಿ ಬುದ್ಧಿಯ ಸಫಲತೆ ಮಾಡಿಕೊಳ್ಳುವುದು ಯೋಗ್ಯವಿದೆ. ಮನುಷ್ಯ ದೇಹ ಪಡೆದು ತಪಸ್ಸು, ತೀರ್ಥವಂದನೆ, ಧ್ಯಾನ ಮಾಡಿ ದೇಹವನ್ನು ಸಫಲಗೊಳಿಸುವುದು ಒಳ್ಳೆಯದಿದೆ. ಧನ ಪ್ರಾಪ್ತ ಮಾಡಿಕೊಂಡು ದಾನ, ಪೂಜೆ, ಪ್ರಭಾವನೆ ಮೊದಲಾದವುಗಳಿಂದ ಪುಣ್ಯ ಸಂಚಯ ಮಾಡುವುದು ಒಳ್ಳೆಯದಿದೆ. ವಚನದ ಪ್ರಾಪ್ತಿ ಮಾಡಿಕೊಂಡು ಹಿತ, ಮಿತ, ಸತ್ಯವನ್ನಾಡುವುದು ಇತ್ಯಾದಿ ಇನ್ನೂ ವಿವಿಧ ಸತ್ಕಾರ್ಯಗಳಲ್ಲಿ ಶುಭರೂಪವಾಗಿದ್ದುಕೊಂಡು ಭವ ಸಫಲ ಮಾಡುವುದು ಯೋಗ್ಯವಿದೆ.

ಈಗ ಹೇಳುವ ನಿಮಿತ್ತಗಳನ್ನು ಕಾಲ-ಮರಣದ ಸಮಾನವೆಂದು ತಿಳಿದು ಅವುಗಳಿಂದ ಸಾವಧಾನವಿರಲು ಹೇಳುತ್ತಾರೆ,-

**ದುರಣಾರಿ ಸಠ ಮಿತ್ತಲೂ, ಗೂಢ ಜಾಣಂತ ಮಂತ ಜೇ ಭತ್ತೋ ।**
**ಅಹಥಿತ ಘರ ವಿಸಪಾಣೋ, ಏ ಸಹು ಣಮತ್ತಾಯ ದ್ವಾರ ಜಮ್ಮ ಜ್ಞೇಯೋ ॥೯೬॥**

**ಗಾಥಾರ್ಥ** :- ದುಷ್ಟಸ್ತ್ರೀ, ಮೂರ್ಖಮಿತ್ರ, ಗೂಢಮಾತನ್ನು ತಿಳಿಯುವಂಥ ಸೇವಕ, ಮನೆಯಲ್ಲಿ ಸರ್ಪದ ವಾಸ, ವಿಷಮಯ ಭೋಜನ-ಇವೆಲ್ಲ ನಿಮಿತ್ತಗಳನ್ನು ಮರಣದ ಸಮಾನವೆಂದು ತಿಳಿಯುವುದು.

**ಭಾವಾರ್ಥ** :- ಯಾವಾಗ ಈ ಜೀವದ್ದು ಪಾಪದ ಉದಯವು ಬರುತ್ತದೆ, ಆಗ ಇಂಥ ನಿಮಿತ್ತಗಳು ಸಿಗುತ್ತವೆ. ಮನೆಯಲ್ಲಿ ಮಹಾದುಷ್ಟ ಸ್ವಭಾವವುಳ್ಳ, ಕಲಹಪ್ರಿಯ, ವಿನಯ-ಲಜ್ಜೆಯಿಂದ ರಹಿತ, ತೀಕ್ಷ್ಣ-ಕಟುವಚನಗಳನ್ನಾಡುವ, ಕ್ರೋಧಾದಿ ಕಷಾಯಗಳಿಂದ ಸಹಿತ, ತೀವ್ರ ಕಾಮಾಗ್ನಿಯುಕ್ತ-ಇತ್ಯಾದಿ ಅನೇಕ ಅನಾಚಾರ, ಅವಗುಣಗಳಿಂದ ಪರಿಪೂರ್ಣ ಪತ್ನಿಯು ಸಿಗುತ್ತಾಳೆ, ಅವಳ ಕುರಿತಾದ ದುಃಖವು ಸದೈವ ಮರಣ ಸಮಾನವಿದೆಯೆಂದು ತಿಳಿಯುವುದು.

ಸ್ವಯಂ ಮಹಾವಿವೇಕವಂತ, ವಿವಿಧ ನಯ-ಯುಕ್ತಿಗಳನ್ನು ತಿಳಿದಿರುವಂಥವ, ಚತುರ, ಅನೇಕ ಕಲಾ ಸಂಪನ್ನ, ಧರ್ಮ-ಕರ್ಮದ ಕಾರ್ಯಗಳಲ್ಲಿ ಪ್ರವೀಣನಾಗಿದ್ದರೂ; ಯಾರ ಹತ್ತಿರ ಯಾವಾಗಲೂ ಇರುವುದಿದೆ. ಯಾರೊಂದಿಗೆ ಸದೈವ ತನಗೆ ಇರುವುದಿದೆ ಆ ಮಿತ್ರರು ಮೂರ್ಖರಿದ್ದರೆ; ತಾನಂತೂ ಯಾವುದೋ ಒಳ್ಳೆಯ ಕಾರ್ಯದ ವಿಚಾರ ಮಾಡುತ್ತಾನೆ ಮತ್ತು ಜ್ಞಾನಹೀನ ಮೂರ್ಖಮಿತ್ರರು ನಿಂದ್ಯಕಾರ್ಯದ ವಿಚಾರ ಮಾಡುತ್ತಾರೆ. ತಿಳಿಸಿಕೊಟ್ಟಮೇಲೆ ತಿಳಿಯುವುದೂ ಇಲ್ಲ. ಏನಾದರೂ ಹೇಳಿದರೆ ಆ ಮಂದಜ್ಞಾನಿಗಳು ಬೇರೆ ಏನನ್ನೋ ಮಾಡುತ್ತಾರೆ - ಇಂಥ ಮೂರ್ಖರ ನಿಮಿತ್ತವು ವಿವೇಕವಂತರ ಸಲುವಾಗಿ ಮರಣದ ಸಮಾನವೆಂದು ತಿಳಿಯುವುದು.

ಯಾರಿಗೂ ಹೇಳಲು ಯೋಗ್ಯವಿಲ್ಲದಂಥ, ಬೇರೆಯವರಿಗೆ ತಿಳಿದುಹೋದರೆ ಸ್ವಯಂ ತನಗೆ ದುಃಖವಾಗುವಂಥ, ದೊರೆ ಅಥವಾ ಪಂಚರಿಗೆ ಒಂದು ವೇಳೆ ತಿಳಿದುಬಿಟ್ಟರೆ ದಂಡನೆಯು ದೊರಕಬಹುದಾದಂಥ ಯಾವುದೋ ಗುಪ್ತ ಸಮಾಚಾರವನ್ನು - ಮಾತನ್ನು ಯಾವನೋ ಸೇವಕನು ಮಿತ್ರನೆಂದು ತಿಳಿದು ಹೇಳಿದ್ದರೆ ಅವನು ಸಮಯವು ಬಂದಮೇಲೆ ಪ್ರಯೋಜನದ ಸಿದ್ಧಿಯಾಗದಿದ್ದರೆ ದ್ವೇಷರೂಪದ ಪ್ರವೃತ್ತಿ ಮಾಡುವಂಥ ಆ ಸೇವಕ ಮಿತ್ರನು ಕಾಲದ ಸಮಾನವಾಗಿ ಹೋಗುತ್ತಾನೆ; ಆದುದರಿಂದ ವಿವೇಕವಂತರು ಸ್ನೇಹದ ವಶರಾಗಿ ಸೇವಕನಿಗೆ ಹಾಗೂ ಮಿತ್ರನಿಗೆ ಕೂಡ ತನ್ನ ಮನೆಯ ಗುಪ್ತಗೂಢ ಮಾತನ್ನು ಹೇಳುವುದಿಲ್ಲ. ಹೇಳಿದನಂತರ ಅವರು ಯಾವಾಗಲೂ ಮರಣದ ಸಮಾನ ದುಃಖದಾಯಕರೆಂದು ತಿಳಿಯುವುದು.

ಯಾವ ಮನೆಯಲ್ಲಿ ಹಗಲಿರುಳೂ ಇರಬೇಕಾಗುತ್ತದೆ, ಆ ಮನೆಯಲ್ಲಿ ಸರ್ಪವಿದ್ದರೆ ಒಂದಲ್ಲ ಒಂದು ದಿನ ಮರಣವಾಗುತ್ತದೆ. ಅದರಿಂದ ವಿವೇಕಿಗಳು ಸರ್ಪವಿರುವ ಮನೆಯಲ್ಲಿ ಇರುವುದಿಲ್ಲ. ಹಾಲಾಹಲ ವಿಷದ

ಸೇವನೆಯು ಮರಣದ ಕಾರಣವಿದೆ-ಹೀಗೆ ಉಕ್ತ ಅಶುಭ ನಿಮಿತ್ತಗಳು ಒಂದಲ್ಲ ಒಂದು ದಿನ ಮರಣಮಾಡಿಸುತ್ತವೆ. ಅದಕ್ಕಾಗಿ ವಿವೇಕವಂತರಿಂದ ಇಷ್ಟು ನಿಮಿತ್ತಗಳಲ್ಲಿ ಸಾವಧಾನತೆಯಿರುವುದೇ ಜೀವನವೆಂದು ತಿಳಿಯುವುದು.

ಈಗ ಹೇಳುವ ಪರಿಸ್ಥಿತಿಗಳಲ್ಲಿ ಮುನೀಶ್ವರರು ಇರುವುದಿಲ್ಲ, ಒಂದು ವೇಳೆ ಇದ್ದರೆ ಅವರ ಸಂಯಮವು ನಷ್ಟವಾಗುತ್ತದೆಯೆಂಬುದನ್ನು ಹೇಳುತ್ತಾರೆ,-

**ಜಹಿಂ ಮುಣಿಥತಿ ಣಹ ಭೂಪೋ, ಣೇರೋ ತಣ ಧಾಣ ಅಲಪ ತಂಹ ಹೋಈ ।**
**ಣಹ ಧಮ್ಮೀ ಜಣ ಧಮ್ಮೋ, ಸ ಪುರ ದೇಸೋ ಯ ತಜ್ಜಯೇ ಜೋಈ ॥೯೭॥**

**ಗಾಥಾರ್ಥ ಃ-** ಎಲ್ಲಿ ದೊರೆಯಿರುವುದಿಲ್ಲ, ಎಲ್ಲಿ ನೀರು, ಹುಲ್ಲು, ಅನ್ನಾದಿಗಳು ಅಲ್ಪವಿರುತ್ತವೆ. ಎಲ್ಲಿ ಧರ್ಮಾತ್ಮರು ಮತ್ತು ಧರ್ಮವಿರುವುದಿಲ್ಲ, ಅಲ್ಲಿ ಮುನಿಗಳ ಸ್ಥಿತಿಯಿರುವುದಿಲ್ಲ-ಆ ನಗರ ದೇಶವನ್ನು ಯೋಗೀಶ್ವರರು ಬಿಟ್ಟು ಕೊಡುತ್ತಾರೆ.

**ಭಾವಾರ್ಥ ಃ-** ಯಾವ ದೇಶ ಅಥವಾ ನಗರದಲ್ಲಿ ಮೊದಲು ಮುನಿಗಳು ವಾಸವಾಗಿರುವುದಿಲ್ಲ ಆ ಸ್ಥಾನಗಳಲ್ಲಿ ಮುನಿಗಳು ಇರುವುದಿಲ್ಲ. ಯಾವ ದೇಶ-ನಗರದ ವನದಲ್ಲಿ ಮುನಿಗಳು ವಾಸಿಸುತ್ತಾರೆ ಅಲ್ಲಿ ಇರಬೇಕು. ಯಾವ ಸ್ಥಾನವು ಮುನಿಗಳು ಇರಲಿಕ್ಕೆ ಯೋಗ್ಯವಿಲ್ಲ. ಆ ಕ್ಷೇತ್ರದಲ್ಲಿ ಯೋಗೀಶ್ವರರು ವಾಸಿಸುವುದಿಲ್ಲ, ಹಾಗೇನಾದರೂ ವಾಸಿಸುತ್ತಿದ್ದರೆ ಅವರ ಸಂಯಮವು ನಷ್ಟವಾಗಿ ಹೋಗುತ್ತದೆ.

ಯಾವ ದೇಶ-ನಗರದ ದೊರೆ ಯಾರೂ ಇರುವುದಿಲ್ಲ ಆ ಕ್ಷೇತ್ರದಲ್ಲಿ ಮುನೀಶ್ವರರು ಇರುವುದಿಲ್ಲ; ಏಕೆಂದರೆ ದೊರೆ ರಹಿತ ಕ್ಷೇತ್ರಗಳಲ್ಲಿ ಪ್ರಜೆಗಳು ದುಃಖಿಯಾಗಿರುತ್ತಾರೆ, ಜೀವರುಗಳ ಪ್ರವೃತ್ತಿಯು ಅನ್ಯಾಯ ರೂಪವಿರುತ್ತದೆ. ಅಲ್ಲಿಯ ಜೀವಗಳು ಅನಾಚಾರಿ, ನಿರ್ದಯಿಯಿರುತ್ತಾರೆ - ಹೀಗೆ ಅನೇಕ ವಿಪರೀತತೆಗಳಿರುತ್ತವೆ; ಇಂಥ ಸ್ಥಿತಿಯಲ್ಲಿ ಅಂಥಲ್ಲಿ ಯತಿಗಳ ಧರ್ಮದ ಸಾಧನೆಯು ಸಂಭವವಿಲ್ಲ. ನ್ಯಾಯವಂತ ದೊರೆಯ ಅಭಾವದಲ್ಲಿ ದುಷ್ಟ ಪ್ರಾಣಿಗಳು ದೀರ್ಘಶಕ್ತಿಧಾರಕರಾಗಿ ದೀನ ಜೀವರುಗಳನ್ನು ಪೀಡಿಸುತ್ತಾರೆ. ದೀನರಿಗೆ ದುಃಖವಾಗುತ್ತಿರುವುದನ್ನು ಕಂಡರೆ ದಯೆಯ ಭಂಡಾರರಾದ ಕೋಮಲ ಹೃದಯಸಂಪನ್ನ ಮುನೀಶ್ವರರಿಂದ ಅಶಕ್ತರ ದುಃಖವನ್ನು ನೋಡಲಾಗುವುದಿಲ್ಲ. ನ್ಯಾಯವಂತ ದೊರೆಯ ವಿದ್ಯಮಾನತೆಯಿದ್ದ ಮೇಲೆ ಹೀನ ಶಕ್ತಿಯಧಾರಕ ಜೀವರುಗಳಿಗೆ ಅಧಿಕ ಶಕ್ತಿಧಾರಿಗಳು ಪೀಡಿಸುವ ಸಾಧ್ಯತೆಯಿಲ್ಲ. ಒಂದುವೇಳೆ ತಪ್ಪಿಯೂ ದೀನರನ್ನು ಶಕ್ತಿವಂತರು ಸತಾಯಿಸಿದರೆ - ದುಃಖಕೊಟ್ಟರೆ ದೊರೆಯು ಅವರಿಗೆ ದಂಡನೆ ನೀಡುತ್ತಾನೆ. ದೊರೆಯ ನ್ಯಾಯದ ಅಭಾವದಲ್ಲಿ ಪ್ರಜೆಗಳು ದುಃಖಿಯಾಗುತ್ತಾರೆ. ಪ್ರಜೆಗಳ ದುಃಖ ಕಂಡು ದಯಾಸಾಗರರ ಚಿತ್ತವು ದುಃಖಿಯಾಗುತ್ತದೆ; ಅದರಿಂದ ದೊರೆ ರಹಿತ ಕ್ಷೇತ್ರದಲ್ಲಿ ಯತೀಶ್ವರರು ಇರುವುದಿಲ್ಲ.

ಯಾವ ದೇಶದಲ್ಲಿ ನದಿ, ಸರೋವರ, ಬಾವಿಗಳ ನೀರು ಕಷ್ಟದಿಂದ ದೊರೆಯುತ್ತದೆ, ಅಲ್ಲಿ ಯತೀಶ್ವರರ ಧರ್ಮದ ಪಾಲನೆಯಾಗುವುದಿಲ್ಲ. ಅದರಿಂದ ಅವರು ಅಂಥ ಕ್ಷೇತ್ರಗಳಲ್ಲಿ ಇರುವುದಿಲ್ಲ. ಎಲ್ಲಿ ತಿರ್ಯಂಚಗಳ ದೇಹದ ಆಧಾರಭೂತ ಹುಲ್ಲು-ತೃಣದ ಅಧಿಕತೆಯಿರುತ್ತದೆ, ಅಲ್ಲಿ ಪಶುಗಳು ಸಾತಾ ಪಡೆಯುತ್ತವೆ-ಸುಖದಿಂದ ಇರುತ್ತವೆ ಮತ್ತು ಎಲ್ಲಿ ಹುಲ್ಲಿನ ಉತ್ಪತ್ತಿಯು ಅಲ್ಪವಿರುತ್ತದೆ ಅಲ್ಲಿ ತಿರ್ಯಂಚಗಳು ಪೀಡೆ ಅನುಭವಿಸುತ್ತವೆ. ಅಂಥ ಕ್ಷೇತ್ರಗಳಲ್ಲಿ ಕರುಣಾಸಾಗರರು ಇರುವುದಿಲ್ಲ. ಯಾವ ಕ್ಷೇತ್ರದಲ್ಲಿ ಧಾನ್ಯದ ಉತ್ಪತ್ತಿಯು ಅಲ್ಪವಿರುತ್ತದೆ, ಅಲ್ಲಿಯ ಜೀವಗಳು ಸದೈವ ಅನ್ನದ ಚಿಂತೆಯಿಂದ ಸಹಿತರಾಗಿರುತ್ತಾರೆ; ಅಂಥ ಕ್ಷೇತ್ರಗಳಲ್ಲಿ ಮುನೀಶ್ವರರ ಧರ್ಮವು ನಿರಾಬಾಧವಾಗಿ ಸಾಧಿಸಲ್ಪಡದಿರುವ ಕಾರಣ ದಯೆಯ ನಿಧಾನರಾದ ಜಗದ್ಗುರು ಯತೀಶ್ವರರು ಇರುವುದಿಲ್ಲ.

ಯಾವ ದೇಶ-ನಗರಗಳಲ್ಲಿ ಆಚಾರವಂತರಾದ ಧರ್ಮಾತ್ಮಾ ಜೀವರುಗಳು ಇರುವುದಿಲ್ಲ. ಅದರಲ್ಲಿ ಯತಿಗಳ ಭೋಜನದ ಅಭಾವವಿರುತ್ತದೆ. ಪಾಪಾಚಾರಿಗಳು, ಅಭಕ್ಷ ಭಕ್ಷಕರು, ದಯಾರಹಿತ ಜೀವರುಗಳಿಂದ

ತುಂಬಿದ ಕುಕ್ಷೇತ್ರದಲ್ಲಿ ಯತಿಧರ್ಮದ ಸಾಧನೆಯಾಗುವುದಿಲ್ಲ; ಅದಕ್ಕಾಗಿ ಅವರು ಅಂಥ ಧರ್ಮೀ ಜೀವಗಳಿಂದ ರಹಿತವಾದ ಕ್ಷೇತ್ರದಲ್ಲಿ ಇರಬಾರದು. ಎಲ್ಲಿ ಜಿನಧರ್ಮದ ಪ್ರವೃತ್ತಿ ಇರುವುದಿಲ್ಲ, ಎಲ್ಲಿ ಜಿನಚೈತ್ಯಾಲಯಗಳಲ್ಲಿ ಜೈನ ಶಾಸ್ತ್ರಗಳ ಅಭ್ಯಾಸ ನಡೆಯುವುದಿಲ್ಲ; ಅಂಥ ಕುಕ್ಷೇತ್ರಗಳಲ್ಲಿ ಮುನೀಶ್ವರರು ಇರಬಾರದು. ಈ ಪ್ರಕಾರದ ಆಕುಲತೆಯ ಕಾರಣವಿರುವ ಅಶುಭ ಸ್ಥಾನಗಳಲ್ಲಿ ಜಗತ್ತಿನ ಕಲ್ಯಾಣಮೂರ್ತಿ ಯತಿಗಳು ಇರುವುದಿಲ್ಲ. ಒಂದುವೇಳೆ ಇರುತ್ತಿದ್ದರೆ ಅವರು ಸಂಯಮದಿಂದ ಭ್ರಷ್ಟರಾಗುತ್ತಾರೆಂದು ತಿಳಿಯುವುದು.

ಈಗ ಕೆಳಗೆ ಹೇಳುವ ಜೀವಗಳ ವಿಶ್ವಾಸ ಮಾಡಬಾರದೆಂದು ತಿಳಿಸುತ್ತಾರೆ,-

**ಣಖ ಸಂಗಾ ಪಸು ಣದಿಯೋ, ವಿಷದಂತಿ ಸಸ್ತ್ರಣಗ ತೀಯ ಮದಪಾಯೋ ।**

**ಕಿತಘಣ ಸ್ವಾಮೀ ದೋಹೋ, ಗಭಖಲ ಚಿತ್ತೋ ಯ ಣಾಹಿವಿಸಯಾಸೋ ॥೯೮॥**

**ಗಾಥಾರ್ಥ :-** ಖುರ-ಕೊಂಬುಳ್ಳ ಪಶು; ನದಿ, ವಿಷದಂತವುಳ್ಳ ತಿರ್ಯಂಚ, ಕೈಯಲ್ಲಿ ಬಿಚ್ಚುಗತ್ತಿ ಹಿಡಿದ ವ್ಯಕ್ತಿ, ಮನೆಯ ಮಹಿಳೆ (ಪತ್ನಿ), ಮದ್ಯದ ಅಮಲೇರಿದವ, ಕೃತಘ್ನೀ, ಸ್ವಾಮಿದ್ರೋಹಿ, ಗೂಢ ಮನಸ್ಸಿನಧಾರಕ, ದುಷ್ಟ ಪರಿಣಾಮಿಗಳ ವಿಶ್ವಾಸವನ್ನೆಂದೂ ಮಾಡಬಾರದು.

**ಭಾವಾರ್ಥ :-** ತಮ್ಮ ಖುರ(ಉಗುರು)ಗಳಿಂದ ಅನ್ಯ ಜೀವಗಳ ಘಾತ ಮಾಡುವಂಥ ಕರಡಿ, ಸಿಂಹ, ಬೆಕ್ಕು, ನಾಯಿ ಮೊದಲಾದ ದುಷ್ಟ ಖುರವುಳ್ಳ ಜೀವಗಳ ವಿಶ್ವಾಸ ಮಾಡುವುದು ಯೋಗ್ಯವಾಗಿಲ್ಲ. ಕೊಂಬುಗಳಿಂದ ಅನ್ಯ ಜೀವಗಳನ್ನು ಸಾಯಿಸುವಂಥ ಕೋಣ, ವೃಷಭ, ಟಗರು, ಮೃಗಾದಿ ತೀಕ್ಷ್ಣ ಶೃಂಗಧಾರೀ ತಿರ್ಯಂಚಗಳ ವಿಶ್ವಾಸ ಮಾಡುವುದು ಯೋಗ್ಯವಾಗಿಲ್ಲ. ಸ್ವಯಂ ಬಹಳಷ್ಟು ಬಲಶಾಲಿ ಈಜುಗಾರನಿದ್ದರೂ ಶ್ರಾವಣ-ಭಾದ್ರಪದ ಮಾಸದ ಮಳೆಯಿಂದ ತುಂಬಿಕೊಂಡಿರುವ ಅಮರ್ಯಾದ ಜಲ ಪ್ರವಾಹದಿಂದ ಪ್ರವಹಿತ ನದಿಯ ವಿಶ್ವಾಸ ಮಾಡುವುದು ಯೋಗ್ಯವಾಗಿಲ್ಲ. ಯಾವುದರ ಭಕ್ಷಣದಿಂದ ಮರಣವಾಗಿ ಹೋಗುವುದು ಅಂಥ ಹಾಲಾಹಲ ವಿಷವನ್ನು ಇಟ್ಟುಕೊಂಡಿರುವ ಕ್ರೂರ ಸರ್ಪ-ಚೇಳು ಮೊದಲಾದ ವಿಷವುಳ್ಳ ಜೀವಗಳ ವಿಶ್ವಾಸವನ್ನು ಕುತೂಹಲ ವಶವಾಗಿಯೂ ಕೂಡ ಮಾಡುವುದು ಯೋಗ್ಯವಾಗಿಲ್ಲ.

ಹಲ್ಲುಗಳಿಂದ ಅನ್ಯ ಜೀವಗಳ ಘಾತಮಾಡುವಂಥ ಕಚ್ಚುವ - ಸಾಯಿಸುವಂಥ ಮೊಸಳೆ, ಚಿರತೆ, ಹುಲಿ, ನರಿ, ಸಿಂಹ ಗರ್ಜನೆ ಮಾಡಿ ಸಾಯಿಸುವಂಥ ಸೂಕರ, ಆನೆ, ಗೇಂಡಾಮೃಗ, ಇತ್ಯಾದಿ ದಂತುಳ್ಳ ತಿರ್ಯಂಚಗಳ ವಿಶ್ವಾಸ ಮಾಡುವುದು ಯೋಗ್ಯವಾಗಿಲ್ಲ. ನಗ್ನ(ಒರೆಕಳಚಿದ) ಕತ್ತಿ ಮೊದಲಾದ ಶಸ್ತ್ರವನ್ನು ಕೈಯಲ್ಲಿ ಹಿಡಿದಿರುವ ವ್ಯಕ್ತಿಯ ವಿಶ್ವಾಸ ಮಾಡಬಾರದು. ಸ್ತ್ರೀಯ ಜ್ಞಾನವು ಮಹಾ ಶಿಥಿಲವಿರುತ್ತದೆ, ಅವಳ ಚಿತ್ತವು ಮಹಾ ಚಂಚಲವಿರುತ್ತದೆ, ಅವಳ ಹೃದಯದಲ್ಲಿ ಯಾವುದೇ ಮಾತು ನಿಲ್ಲುವುದಿಲ್ಲ. ವಿಷಯಗಳ ಅಭಿಲಾಷಿ, ಕಾರ್ಯ- ಅಕಾರ್ಯಗಳ ತಿಳಿವಳಿಕೆಯಿಲ್ಲದವಳು - ಇತ್ಯಾದಿ ಅಜ್ಞಾನ ಚೇಷ್ಟೆಗಳಿಂದ ಸಂಪನ್ನ ಮಹಾಲೋಭದ ಧಾರಕ ಸ್ತ್ರೀ-ಪರ್ಯಾಯ ರೂಪದಿಂದ ಪರಿಣಮಿತಳಾದ ತಮ್ಮ ಮನೆಯ ಸ್ತ್ರೀಯದು ಕೂಡ ವಿಶ್ವಾಸ ಮಾಡಬಾರದು.

ಮದ್ಯದ ಅಮಲಿನಲ್ಲಿ ಮೈಮರೆತ ಮದ್ಯಗುಡುಕನಿಗೆ ಒಳಿತು-ಕೆಡಕುಗಳ ಯಾವ ಭೇದವೂ ಇರುವುದಿಲ್ಲ. ಜ್ಞಾನವೆಲ್ಲವೂ ವಿಭ್ರಮಮಯವಾಗಿ ಹೋಗಿರುವುದರಿಂದ ಯಾರ ಪರಿಣತಿಯು ತಮ್ಮ ವಶದಲ್ಲಿ ಇಲ್ಲದಿರುವಂಥ ಪರಾಧೀನ ಅಜ್ಞಾನ ಚೇಷ್ಟೆಗಳಧಾರಕ ಮದೋನ್ಮತ್ತ ಸುಪ್ತ ಸಮಾನ ಮೈಮರೆತಿರುವ ಮದ್ಯ ಗುಡಕನ ವಿಶ್ವಾಸ ಮಾಡಬಾರದು.

ಅನ್ಯ ಜೀವರುಗಳಿಂದ ಮಾಡಲಾಗಿರುವ ಉಪಕಾರವನ್ನು ಮರೆಯುವಂಥವನು ಕೃತಘ್ನಿಯೆನಿಸಿಕೊಳ್ಳುತ್ತಾನೆ. ಯಾವನೋ ಹಸಿದವನಿಗೆ ಭೋಜನ ನೀಡಿದರೆ, ನಗ್ನ-ದರಿದ್ರನಿಗೆ ವಸ್ತ್ರವಿತ್ತರೆ, ರೋಗದಿಂದ ನರಳಿ ಸಾಯುತ್ತಿರುವವನಿಗೆ

ಯತ್ನಪೂರ್ವಕ ಔಷಧವಿತ್ತು ಬದುಕಿಸಿದರೆ, ಕೆಳಗಿನ ಪದದಿಂದ ಮೇಲಿನ ಪದದ ಮೇಲೆ ಸ್ಥಾಪಿತಗೊಳಿಸಿದರೆ, ಆದರ ರಹಿತನಿಗೆ ಆದರ ನೀಡಿದರೆ, ನಿರ್ಧನನನ್ನು ಧನಿಕನನ್ನಾಗಿ ಮಾಡಿದರೆ - ಹೀಗೆ ಯಾರ ಕುರಿತಾಗಿ ಉಪಕಾರ ಮಾಡಲಾಗಿದೆ ಆ ದುರ್ಬುದ್ಧಿಯು ಆ ಉಪಕಾರಗಳನ್ನು ಮರೆತು ಮರಳಿ ಅವರೊಂದಿಗೆ ದ್ವೇಷ ಮಾಡುತ್ತ 'ನೀನೇನು ಮಾಡಿರುವೆ, ನಮ್ಮ ಭಾಗ್ಯದಿಂದ ಆಗಿದೆ, ನಮ್ಮ ಬುದ್ಧಿಯ ಯೋಗದಿಂದ ನಾವು ಸುಖಿಯಾಗಿದ್ದೇವೆ ಮತ್ತು ಧನವನ್ನು ಪಡೆದಿದ್ದೇವೆ'-ಎಂದು ಹೇಳಿದರೆ - ಹಾಗೆ ಹೇಳುವಂಥವರು ಬೇರೆಯವರಿಂದ ಮಾಡಲಾದ ಉಪಕಾರವನ್ನು ವಮನ ಮಾಡುವಂಥ, ತ್ಯಾಗ ಮಾಡುವಂಥ - ಮರೆತು ಬಿಡುವಂಥ ಕೃತಘ್ನಿ ಪಾಪಾಚಾರಿಯ ವಿಶ್ವಾಸ ಮಾಡಬಾರದು; ಏಕೆಂದರೆ ಯಾವ ಕುಬುದ್ಧಿಯು ಅನೇಕ ಉಪಕಾರ ಮಾಡುವಂಥವರವನೂ ಆಗಲಿಲ್ಲವೆಂದ ಮೇಲೆ ಅನ್ಯರಿಂದ ಮಾಡಲಾದ ಅಲ್ಪ ಉಪಕಾರವನ್ನು ಹೇಗೆ ಮನ್ನಿಸುವನು ? ಎಂದು ತಿಳಿದು, ಅವನಿಂದ ಭಯಭೀತನಾಗಿ ಆ ಕೃತಘ್ನಿಯ ವಿಶ್ವಾಸ ಮಾಡಬಾರದು.

ಒಬ್ಬನು ಸ್ವಾಮಿದ್ರೋಹಿಯಿದ್ದಾನೆ. ಅವನು ಯಾವ ಒಡೆಯನ ಪ್ರಸಾದದಿಂದ ಅನೇಕ ಸುಖ ಪಡೆದಿದ್ದಾನೆ, ಧನ ಹೊಂದಿದ್ದಾನೆ, ಚಿಕ್ಕವನಿದ್ದವನು ದೊಡ್ಡವನಾಗಿದ್ದಾನೆ; ಅವನು ಸಮಯ ಪಡೆದು ಅದೇ ಒಡೆಯನ ಜೊತೆ ದ್ವೇಷ ಮಾಡಿ ಅವನ ಕೇಡು ಬಯಸುತ್ತಾನೆ. ಅವನಿಗೆ ದುಃಖದಾಯಕನಾಗುತ್ತಾನೆ - ಅಂಥ ಸ್ವಾಮಿ ದ್ರೋಹಿ- ಅಪಯಶದ ಸಾಕಾರ ಮೂರ್ತಿ, ಮೃತಕನಂತಿರುವ ಮಹಾಲೋಭಿಯ ವಿಶ್ವಾಸ ಮಾಡದಿರುವುದೇ ಒಳ್ಳೆಯದಿದೆ.

ಯಾವನು ತನ್ನ ಚಿತ್ತದ ವಾರ್ತೆಯನ್ನು ಬೇರೆಯವರಿಗೆ ಹೇಳುವುದಿಲ್ಲ. ಮಹಾಮೂಢ ಹೃದಯದ ಧಾರಕ, ಮನಸ್ಸಿನಲೊಂದು, ವಚನದಲ್ಲಿ ಇನ್ನೊಂದು ಮತ್ತು ಕಾಯದಲ್ಲಿ ಬೇರೊಂದು ರೂಪದ ಕುಟಿಲ-ಮಾಯಾ ಪರಿಣತಿಯ ಧಾರಕ - ಆ ತೀವ್ರ ಮಾಯಾ ಕಷಾಯದ ಉದಯವನ್ನು ಭೋಗಿಸುವಂಥ ಮೋಸಗಾರ-ವಂಚಕನ ವಿಶ್ವಾಸ ಮಾಡಬಾರದು. ಆ ಸ್ವಾಮಿದ್ರೋಹಿಯು ಯಾರ ಮಿತ್ರನೂ ಇಲ್ಲದಿರುವುದರಿಂದ ಅವರ ವಿಶ್ವಾಸ ಮಾಡಬಾರದು.

ಒಬ್ಬನು ದುಷ್ಟನಿದ್ದಾನೆ. ಅವನು ಇತರರ ಸುಖವನ್ನು ನೋಡಿ ಸ್ವಯಂ ದುಃಖಿಯಾಗುತ್ತಾನೆ. ಅನ್ಯ ಜೀವರುಗಳು ದುಃಖಿಯಾಗಿರುವುದನ್ನು ಕಂಡು ಸುಖಿಯಾಗುವಂಥ ರೌದ್ರ ಪರಿಣಾಮಿಯು ದುಷ್ಟನಿದ್ದಾನೆ. ಅಂಥ ದುಷ್ಟನ ವಿಶ್ವಾಸವನ್ನೂ ಮಾಡಬಾರದು.

ಈ ಪ್ರಕಾರ ಖುರ, ಕೊಂಬುಳ್ಳ, ದಂತಗಳುಳ್ಳ ಪಶು-ತಿರ್ಯಂಚ, ನದಿ, ವಿಷಜಂತು, ನಗ್ನ ಶಸ್ತ್ರಧಾರಕ, ಸ್ತ್ರೀ, ಮದೋನ್ಮತ್ತ, ಕೃತಘ್ನಿ, ಸ್ವಾಮಿದ್ರೋಹಿ, ದುಷ್ಟಸ್ವಭಾವಿ- ಈ ಹತ್ತು ಜಾತಿಯ ಜೀವಗಳ ವಿಶ್ವಾಸ ಮಾಡದಿರುವುದು ಸುಖಕಾರಕವಿದೆ.

ಈ ಪ್ರಕಾರ ಸುದೃಷ್ಟಿತರಂಗಿಣಿಯೆಂಬ ಹೆಸರಿನ ಗ್ರಂಥದಲ್ಲಿ ಅನೇಕ ಯುಕ್ತಿಪೂರ್ವಕ ಹಿತೋಪದೇಶದ ವರ್ಣನೆ ಮಾಡುವಂಥ ಇಪ್ಪತ್ತೈದನೆಯ ಪರಿಚ್ಛೇದವು ಪೂರ್ಣವಾಯಿತು.

★★★★★

◆ ಯಾರು ಮುಕ್ತಿಯ ಉತ್ಕೃಷ್ಟ ಸುಖದ ಅನಾದರ ಮಾಡಿ ಅಲ್ಪ ಸುಖದ ಸಲುವಾಗಿ ನಿದಾನ ಮಾಡುತ್ತಾರೆ, ಅವರು ಕೋಟ್ಯಂತರ ರೂಪಾಯಿ ಬೆಲೆಯುಳ್ಳ ಮಣಿರತ್ನವನ್ನು ಒಂದು ಕುರುಡು ಕವಡೆಗೆ ಪ್ರತಿಯಾಗಿ ಮಾರಿ ಬಿಡುತ್ತಾರೆ.

# ೨೬ : ಇಪ್ಪತ್ತಾರನೆಯ ಪರ್ವ
# ಹಿತೋಪದೇಶ ಕಥನ

ಎದುರಿಗೆ ಮಿಷ್ಟ ವಚನಗಳನ್ನಾಡುವ - ಸ್ನೇಹಿ; ಆದರೆ ಬೆನ್ನು ಹಿಂದೆ - ಪರೋಕ್ಷವಾಗಿ ದ್ವೇಷ ಮಾಡುವಂಥ ಮಿತ್ರನು ತ್ಯಾಗ ಮಾಡಲು ಯೋಗ್ಯನಿದ್ದಾನೆ. ಅದನ್ನು ಈಗ ದೃಷ್ಟಾಂತದೊಂದಿಗೆ ತಿಳಿಸುತ್ತಾರೆ,-

**ಪೂಠಯ ಕಾಜಯಹಂತಾ ಪತಖೋ ಪೀಯ ವಯಣ ಸಿರಣಾವೋ ।**

**ಸಯ ಸಠ ಮಾಯಾ ಪಿಂಡಊ ಜಯ ವಿಸಕುಂಭೋಯ ವದನಪಯ ಜೇಹೋ ॥೯೯॥**

**ಗಾಥಾರ್ಥ :-** ಯಾವನು ಹಿಂದಿನಿಂದ (ಪರೋಕ್ಷವಾಗಿ) ಕಾರ್ಯದ ಘಾತ ಮಾಡುತ್ತಾನೆ; ಪ್ರತ್ಯಕ್ಷದಲ್ಲಿ ಸಿಹಿ ಮಾತುಗಳನ್ನಾಡುತ್ತಾನೆ, ತಲೆ ಬಾಗಿಸುತ್ತಾನೆ; ಆ ಮೂರ್ಖನು ಹೇಗೆ ಮುಖ ಎಂದರೆ ಬಾಯಿಗೆ ಹಾಲು ಅಂಟಿದೆ ಆದರೆ ಒಳಗೆ ವಿಷದಿಂದ ತುಂಬಿಕೊಂಡಿರುವ ಕಲಶವಿದೆ ಹಾಗೆ ವಂಚನೆಯ ಪಿಂಡನಿದ್ದಾನೆಂದು ತಿಳಿಯುವುದು.

**ಭಾವಾರ್ಥ :-** ಯಾವನೋ ತಮ್ಮ ಮಿತ್ರನು ಒಂದುವೇಳೆ ಈ ಪ್ರಕಾರದ ದುರ್ಬುದ್ಧಿ-ಕುಟಿಲನಿದ್ದರೆ ಅದನ್ನು ತಿಳಿದು ಅವನ ತ್ಯಾಗ ಮಾಡುವುದು ಒಳ್ಳೆಯದಿದೆ. ಯಾವನು ಬೆನ್ನು ಹಿಂದೆ ತಮ್ಮ ನಿಂದೆ ಮಾಡುತ್ತಾನೆ, ಹಾಸ್ಯ ಮಾಡುತ್ತಾನೆ, ಯಾವಾಗಲೂ ಮಾನ ಖಂಡಿತಗೊಳಿಸುವ ಸಲುವಾಗಿ, ಧನ ನಷ್ಟಗೊಳಿಸುವ ಸಲುವಾಗಿ, ಸಾಯಿಸುವ ಸಲುವಾಗಿ, ದುಃಖಿಯನ್ನಾಗಿಸುವ ಸಲುವಾಗಿ ಹೊಂಚು ಹಾಕಿ ಕಾಯುತ್ತಿರುತ್ತಾನೆ - ಇತ್ಯಾದಿ ದುಷ್ಟತೆಯನ್ನಿಟ್ಟುಕೊಂಡಿರುತ್ತಾನೆ; ಆದರೆ ಎದುರಿಗೆ ಬಂದರೆ ಕೈಜೋಡಿಸಿ, ಬಹಳಷ್ಟು ತಲೆ ಬಾಗಿಸಿ ವಿನಯ ಮಾಡುತ್ತಾನೆ, ಮಿಷ್ಟ ವಚನಗಳನ್ನಾಡುತ್ತಾನೆ. ಪ್ರಸನ್ನ ವದನದಿಂದ ಮಾತನಾಡುತ್ತಾನೆ, ಸ್ನೇಹ ವ್ಯಕ್ತ ಮಾಡುತ್ತಾನೆ, ಸೇವಕನಾಗಿ ಇರುತ್ತಾನೆ ಪುತ್ರನಂತೆ ವರ್ತಿಸುತ್ತಾನೆ; ಆದರೆ ಅಂತರಂಗದ ದುಷ್ಟತೆಯನ್ನು ಬಿಡುವುದಿಲ್ಲ ಅವನೆಂಥ ಮಿತ್ರನಿದ್ದಾನೆ ? ಅಂಥ ದುಷ್ಟ ಚಿತ್ತದಧಾರಕ ಪಾಖಂಡಿ, ಮಾಯಾಚಾರೀ ಮಿತ್ರನ ತ್ಯಾಗ ಮಾಡಿ ಬಿಡುವುದೇ ಒಳ್ಳೆಯದಿದೆ, ಸುಖಕಾರಕವಿದೆ.

**ಪ್ರಶ್ನೆ :-** ಇಂಥ ಮಿತ್ರನು ಯಾವುದರ ಸಮಾನನಿದ್ದಾನೆ ?

ಹೇಗೆ ವಿಷದಿಂದ ತುಂಬಿರುವ ಕಲಶದ ಮೇಲೆ ಸ್ವಲ್ಪ ಹಾಲು ಹಾಕಿದ ಮೇಲೆ ಅದರಿಂದ ಅನಭಿಜ್ಞರಿರುವ ಎಲ್ಲ ಜೀವರುಗಳಿಗೆ ಸಂಪೂರ್ಣ ಕಲಶವು ಹಾಲಿನಿಂದ ತುಂಬಿಕೊಂಡಿರುವಂತೆ ಪ್ರತಿಭಾಸಿತವಾಗುತ್ತದೆ. ಯಾರೋ ಅದನ್ನು ಹಾಲಿನಿಂದ ತುಂಬಿದೆಯೆಂದು ತಿಳಿದು ಮೇಲಿನ ಹಾಲನಷ್ಟೇ ಕುಡಿದರೂ ಮರಣಕ್ಕೀನೆ ಪ್ರಾಪ್ತರಾಗುವರು; ಈ ಪ್ರಕಾರ ಆ ಹಾಲೂ ವಿಷದ ಸಮಾನವೇ ಇದೆ. ಅದರಿಂದ ಸಂಪೂರ್ಣ ಕಲಶವೇ ವಿಷದಿಂದ ತುಂಬಿಕೊಂಡಿದೆಯೆಂದು ತಿಳಿದುಕೊಂಡು ಅದರ ತ್ಯಾಗ ಮಾಡುವುದೇ ಹಿತಕರವಿದೆ. ಅದೇ ಪ್ರಕಾರ ಅಂತರಂಗದಲ್ಲಿ ದೋಷಗಳಿಂದ ತುಂಬಿಕೊಂಡಿರುವ ಮೇಲಿನಿಂದ ಒಳ್ಳೆಯವನಾಗಿ ತೋರುವ ಮಿತ್ರನನ್ನು ವಿಷದ ಕಲಶದಂತೆ ತಿಳಿದುಕೊಂಡು ತ್ಯಾಗ ಮಾಡುವುದೇ ಯೋಗ್ಯವಿದೆ.

ಯಾವ ಸಭೆಗಳಲ್ಲಿ ವಿರೋಧಿ ವಚನವನ್ನಾಡಬಾರದೆಂಬುದನ್ನು ಈಗ ಹೇಳುತ್ತಾರೆ,-

**ಧಮ್ಮಸಭಾ ಣಿಪ ಪಂಚಯ ಜಾಯ ಲೋಯಾ ಪ ಬಂಧುವಗ್ಗಾಣೀ ।**

**ಇಣ ವಿರುದ್ಧ ಬಚ ಕರಈ ಸಚರ ಸಠ ಲೋಪ ಣಿಂದ ದುಹಲೇಹೀ ॥೧೦೦॥**

**ಗಾಥಾರ್ಥ :-** ಧರ್ಮಸಭೆ, ರಾಜಸಭೆ, ಪಂಚಸಭೆ, ಜಾತಿಸಭೆ, ಲೋಕಸಭೆ, ಬಂಧುವರ್ಗದಲ್ಲಿ ಅವರಿಂದ ವಿರುದ್ಧ ವಚನವನ್ನಾಡುವ ಮೂರ್ಖ ಜೀವನು ಲೋಕನಿಂದೆ ಮತ್ತು ದುಃಖಕ್ಕೆ ಗುರಿಯಾಗುತ್ತಾನೆ.

**ಭಾವಾರ್ಥ :-** ವಿವೇಕವಂತರು ಮೇಲೆ ಹೇಳಿದ ಸ್ಥಾನಗಳಲ್ಲಿ ಸಭೆಯ ವಿರುದ್ಧ ವಚನವನ್ನಾಡುವುದಿಲ್ಲ.

ಯಾರು ಈ ಸ್ಥಾನಗಳಲ್ಲಿ ಸಭೆಯ ವಿರುದ್ಧವಾಗಿ ಮಾತನಾಡುತ್ತಾರೆ, ಅವರನ್ನು ಮೂರ್ಖರೆಂದು ಹೇಳುತ್ತಾರೆ, ಆ ಸ್ಥಾನಗಳ ಕುರಿತು ಚರ್ಚೆ.

೧) ಮೋಕ್ಷಮಾರ್ಗಸೂಚಕ ಧರ್ಮ ಹಾಗೂ ಧರ್ಮದ ಕಾರಣ ಜಿನಧರ್ಮದ ಸೇವನೆ ಮಾಡುವಂಥ ಧರ್ಮಾತ್ಮಾ ಜೀವರುಗಳ ಸಭೆಯಲ್ಲಿ ಎಲ್ಲ ಧರ್ಮಾತ್ಮರು ಧರ್ಮದ ವೃದ್ಧಿಯ ಸಲುವಾಗಿ, ಪ್ರಭಾವನೆಯ ಸಲುವಾಗಿ, ಪುಣ್ಯದ ವೃದ್ಧಿಯ ಸಲುವಾಗಿ ವಿಧ-ವಿಧದ ಚರ್ಚೆ ಮಾಡುತ್ತಾರೆ. ಅಂಥದರಲ್ಲಿ ಎಲ್ಲ ಧರ್ಮಾತ್ಮಾ ಪುರುಷರು ಹೇಳುತ್ತಾರೆ- ''ಇಲ್ಲಿ ಸ್ವಲ್ಪ ಹಣ ತೊಡಗಿಸುವುದಿದೆ ಎಂದರೆ ಖರ್ಚು ಮಾಡುವುದಿದೆ ಮತ್ತು ಇಲ್ಲಿ ಕೆಲವು ಎಂದರೆ ಸ್ವಲ್ಪ ಶಾರೀರಿಕ ಶ್ರಮವನ್ನೂ ಮಾಡುವುದಿದೆ. ಅದರಿಂದ ಪುಣ್ಯವಾಗುವುದು. ಈ ಪ್ರಕಾರ ಪ್ರಬಂಧ(ಆಯೋಜನೆ) ಮಾಡುವ ವಿಚಾರ ಮಾಡಲಾಗಿದೆ. ಅವರೆಲ್ಲರೂ ಪರಸ್ಪರರಲ್ಲಿ ಒಬ್ಬರು ಇನ್ನೊಬ್ಬರನ್ನು ಕೇಳುತ್ತಾರೆ, ಧರ್ಮದ ವೃದ್ಧಿಯ ಸಲುವಾಗಿ ಈ ವಿಚಾರ ಮಾಡಲಾಗಿದೆ; ಅದಕ್ಕಾಗಿ ಈ ಪ್ರಬಂಧದಲ್ಲಿ ಎಲ್ಲರ ಸಹಯೋಗವಿರುವುದು ಯೋಗ್ಯವಿದೆ.''

ಇದನ್ನು ಕೇಳಿ ಯಾವನೋ ''ನಾವು ಯಾವುದೇ ಪ್ರಬಂಧದಲ್ಲಿ ಇರುವುದಿಲ್ಲ. ನಮ್ಮ ಇಚ್ಛೆಯ ಅನುಸಾರ ಧರ್ಮದ ಸಾಧನೆ ಮಾಡುವೆವು. ಯಾರಿಗೆ ಪ್ರಬಂಧದಲ್ಲಿರುವುದಿದೆ ಅವರು ಇರಲಿ, ನಾವು ಅದರಲ್ಲಿ ಇಲ್ಲ''ವೆಂದು ಹೇಳುತ್ತಾನೆ. ಹೀಗೆ ಧರ್ಮಾತ್ಮರ ಧರ್ಮಸಭೆಯ ಖಂಡನೆ ಮಾಡುವ ಸಲುವಾಗಿ ಮದಸಹಿತ ಮಾತನ್ನಾಡುತ್ತಾನೆ, ಅವನು ಮಹಾ ಮೂರ್ಖನಿದ್ದಾನೆ. ಧರ್ಮಸಭೆಯ ವಿರೋಧ ಮಾಡುವಂಥ ಈ ವಚನವು ಮಹಾ ಪಾಪ ಫಲದಾಯಕವಿದೆ, ಧರ್ಮಘಾತಕ ವಚನವಿದೆ; ಇಂಥ ವಚನಗಳನ್ನು ಧರ್ಮಾತ್ಮರು-ವಿವೇಕವಂತರು ಆಡುವುದಿಲ್ಲ.

ಧರ್ಮಾತ್ಮರಂತೂ ಧರ್ಮಪ್ರಬಂಧರೂಪ ವಚನಗಳನ್ನಾಲಿಸಿ ಹರುಷದಿಂದ ಎಲ್ಲರಿಗೆ ಹೇಳುವುದೇನೆಂದರೆ - ''ತಾವು ಧನ್ಯರಿರುವಿರಿ, ಒಳ್ಳೆಯ ವಿಚಾರ ಮಾಡಿರುವಿರಿ. ನಾವು ಆಜ್ಞಾಪ್ರಮಾಣ ಎಲ್ಲರ ವಚನ ಪ್ರಬಂಧದಲ್ಲಿ ಸಮ್ಮಿಲಿತರಿದ್ದೇವೆ. ಎಲ್ಲರ ನಿರ್ಣಯವು ನಮಗೆ ಪ್ರಮಾಣ-ಸ್ವೀಕಾರವಿದೆ.'' ಸಭೆಯಲ್ಲಿ ಇಂಥ ವಚನಗಳನ್ನಾಡುವುದು ಉತ್ತಮ ಧರ್ಮಫಲದಾಯಕವಿದೆ. ಧರ್ಮಸಭೆಗೆ ಶೋಭಿಸುವಂಥದ್ದಿದೆ. ಹೀಗೆ ಮಾತನಾಡುವಂಥ ಪುರುಷನು ಪ್ರಶಂಸೆಗೆ ಪ್ರಾಪ್ತನಿದ್ದಾನೆ; ಆದರೆ ಪಾಪಾತ್ಮನಂತೂ ಧರ್ಮಸಭೆಯ ವಿರೋಧ ವಚನಗಳನ್ನಾಡುತ್ತಾನೆ, ಅವು ಪಾಪಬಂಧದ ಕಾರಣವಿವೆ; ಅದಕ್ಕಾಗಿ ಪಾಪದಿಂದ ಭಯಭೀತರಾದ ಧರ್ಮಾತ್ಮರು ಧರ್ಮಸಭೆಯ ವಿರೋಧವಾಗಿ ಮಾತನಾಡುವುದಿಲ್ಲ.

ದೊರೆಯ ಸಭೆಯಲ್ಲಿ ಮಾತನಾಡುವುದಿದ್ದರೆ ಸತ್ಯ ಹಾಗೂ ವಿನಯಸಹಿತ ತನ್ನ ಹಾಗೂ ಇತರರ ಪದದ ಅನುಸಾರ ರಾಜ ಮೊದಲಾಗಿ ಸಮಸ್ತ ಸಭಿಕರಿಗೆ ರುಚಿಸುವಂಥ ಮಾತನ್ನಾಡುವುದು ವಿವೇಕಿಗಳ ಧರ್ಮವಿದೆ. ಒಂದುವೇಳೆ ತಪ್ಪಿ ದೊರೆಯೇ ಅವಿನಯಕಾರಕ ಹಾಗೂ ಸಭಿಕರಿಗೆ ಅಪ್ರಿಯ, ಸಭೆಯ ವಿರುದ್ಧ ವಚನಗಳನ್ನಾಡುತ್ತಿದ್ದರೆ ಅವನು ಮರಣಾದಿಗಳ ದುಃಖಕ್ಕೆ ಪ್ರಾಪ್ತನಾಗುತ್ತಾನೆ; ಅದಕ್ಕಾಗಿ ರಾಜಸಭೆಯ ವಿರುದ್ಧ ವಚನವನ್ನಾಡಬಾರದು.

ಪಂಚರಲ್ಲಿ ಎಂದರೆ ಎಲ್ಲಿ ಪಂಚರು ಒಳ್ಳೆಯ ಮನುಷ್ಯರು ಸ್ವಜಾತಿಯವರು ಮತ್ತು ಅನ್ಯಜಾತಿಯವರು ಕೂಡಿ ನಿರ್ಣಯ-ನ್ಯಾಯ ಮಾಡುತ್ತಿದ್ದರೆ ಮತ್ತು ಯಾವುದೋ ಪ್ರಬಂಧ ಮಾಡುತ್ತಿದ್ದರೆ; ಅಲ್ಲಿ ಪರಸ್ಪರರಲ್ಲಿ ವಿಚಾರಿಸುತ್ತಾರೆ - ''ಸೋದರರೇ ! ಸಮಸ್ತ ಪಂಚರ ಪ್ರಬಂಧವು ಹೀಗಿದೆ. ಈ ನಿರ್ಣಯವು ಒಪ್ಪಿಗೆ ಇದೆಯೋ ಅಥವಾ ಇಲ್ಲ. ಓರ್ವ ಇಂಥ ಸೋದರನೇ (ಯಾವನೋ ವ್ಯಕ್ತಿ ವಿಶೇಷನು) ! ಪಂಚರು ನಿನ್ನ ಮೇಲೆ ಇಂಥ ದೋಷದ ಆರೋಪ ನಿರ್ಣಯಿಸಿ, ಅದರ ಸಲುವಾಗಿ ಇಂಥ ದಂಡನೆಯನ್ನು ನಿಶ್ಚಿತ ಮಾಡಿದ್ದಾರೆ; ಅದು ನಿನಗೆ ಸ್ವೀಕಾರವಿದೆಯೋ ಅಥವಾ ಇಲ್ಲ ?'' ಆಗ ವಿವೇಕವಂತ ಪುರುಷರು ಹೇಳುವುದೇನೆಂದರೆ - ರಾಯರೇ ! ನಾವು ದೊಡ್ಡವರಿದ್ದೇವೆ, ಧನಿಕರಿದ್ದೇವೆ ಹಾಗೂ ರಾಜ ಪಂಚರಲ್ಲಿ ನಮ್ಮ ಪದವಿಯು ದೊಡ್ಡದಿದೆ; ಆದರೆ

ಅದರಿಂದೇನಾಗುವುದು ?ನಮ್ಮಲ್ಲಿ ಈ ದೋಷವಿದೆ; ಅದರಿಂದ ಎಲ್ಲ ಪಂಚರು ಸೇರಿ ಏನು ನಿಶ್ಚಿತ ಮಾಡಿರುವಿರೋ ಅದು ನಮಗೆ ಸ್ವೀಕಾರವಿದೆ. ಪಂಚರ ಆಜ್ಞೆಯು ಶಿರೋಧಾರ್ಯವಿದೆ - ಇತ್ಯಾದಿ ಪಂಚರ ದೊಡ್ಡಸ್ತಿಕೆ ಮತ್ತು ತಮ್ಮ ಲಘುತೆಯ ರೂಪ ವಚನಗಳನ್ನಾಡುವವರು ಅವರು ವಿವೇಕಿಗಳಿದ್ದಾರೆ. ಇಂಥ ವಚನಗಳು ಪಂಚರಿಂದ ಪ್ರಶಂಸಾಪಾತ್ರವಿವೆ, ಯಶದಾಯಕವಿವೆ.

ಆದರೆ ಯಾವನೋ ಮುಗ್ಧನು ಮಂದಜ್ಞಾನದ ಕಾರಣ ಅಪಯಶ ಕರ್ಮದ ಉದಯದಿಂದ ಹೇಳುವುದೇನೆಂದರೆ ''ನಮಗೆ ದೋಷ ತಗಲಿಸುವಿರಿ, ಪಂಚರಲ್ಲಿಯಂತೂ ಅನೇಕರು ಇಂಥ ಮತ್ತು ಇದಕ್ಕಿಂತಲೂ ಅಧಿಕ ದೋಷವುಳ್ಳವರಿರುವುದನ್ನು ನಾವು ತೋರಿಸುತ್ತೇವೆ. ಒಂದುವೇಳೆ ನಮ್ಮ ಮೇಲೆ ದೋಷ ಹೊರೆಸಿದರೆ ನಾವೂ ಕೂಡ ಪಂಚರ ಹಾಗೂ ಹೇಳುವವರನ್ನು ಪ್ರಶ್ನಿಸಬಹುದಾಗಿದೆ . ಎಲ್ಲ ಪಂಚರ ಮೇಲೆ ಮನೆ-ಧನಗಳನ್ನು ಕಳೆದುಕೊಳ್ಳುವಂಥ ವಿಪತ್ತು ಬರಬಹುದಾಗಿದೆ. ಒಬ್ಬಿಬ್ಬರ ಮರ್ಯಾದೆಯನ್ನಾದರೂ ಹರಾಜು ಹಾಕಿ ಸಾಯುವೆನು. ನನ್ನ ಮೇಲೆ ದೋಷಾರೋಪನೆ ಮಾಡುವಂಥವರು ಮತ್ತು ನನಗೆ ದಂಡನೆ ನೀಡುವಂಥವರು ಯಾರಿದ್ದಾರೆ. ಹೆಚ್ಚು ಹೆಚ್ಚೆಂದರೆ ಪಂಚರು ನನ್ನ ಪಂಚತನವನ್ನು ಕಸಿದುಕೊಳ್ಳಬಹುದಾಗಿದೆ, ಅದರಿಂದ ನನ್ನ ಕಾರ್ಯವೇನೂ ತಡೆದು ನಿಲ್ಲುವುದಿಲ್ಲ.'' ಇತ್ಯಾದಿ ಸಭೆಯ ವಿರೋಧ ವಚನಗಳನ್ನು ಆಡುತ್ತಾನೆ; ಅಪಕೀರ್ತಿಯ ಮೂರ್ತಿಯಾದ ಆ ಜೀವನು ಪಂಚರುಗಳಿಂದ ನಿಂದೆಗೆ ಪ್ರಾಪ್ತನಾಗುತ್ತಾನೆ. ಅವನನ್ನು ಮಹಾಮೂರ್ಖನೆನ್ನುತ್ತಾರೆ. ಅದರಿಂದ ಪಂಚರಲ್ಲಿ ಸಭೆಯ ವಿರುದ್ಧ ವಚನವನ್ನಾಡುವುದು ಯೋಗ್ಯವಿಲ್ಲ.

ತಮ್ಮ ಜಾತಿಯವರು ಏಕತ್ರಿತವಾಗಿರುವಾಗ, ಜಾತಿಯದಾವುದಾದರೂ ಕಾರ್ಯಕ್ರಮವು ನಡೆಯುತ್ತಿದ್ದರೆ; ಅಲ್ಲಿ ಯಾವುದೋ ತರದ ಪ್ರವೃತ್ತಿಯಾಗಬಾರದು, ಯಾವುದೋ ಪ್ರಕಾರದ ಭೋಜನ-ಪಾನಗಳು ನಿಷಿದ್ಧವಿದ್ದರೆ, ಯಾವುದೋ ಪಾಪಕರ ಅಭಕ್ಷ್ಯ ಭೋಜನ-ಪಾನಗಳು ನಿಷಿದ್ಧವಿದ್ದರೆ, ಯಾವುದೋ ರೀತಿಯ ವಸ್ತ್ರಾಭೂಷಣಗಳನ್ನು ಧಾರಣ ಮಾಡುವುದು ನಿಷಿದ್ಧವಿದ್ದರೆ, ಯಾವುದೋ ವ್ಯಾಪಾರ-ವಾಣಿಜ್ಯ , ಎಂಥದೋ ಟೊಪ್ಪಿಗೆ, ರುಮಾಲು(ಪಗಡಿ) ಅಥವಾ ಶಸ್ತ್ರವನ್ನಿಟ್ಟುಕೊಳ್ಳುವ ಮಲಿನ ಕ್ರಿಯೆಗಳ-ಅಶುಭ ರೀತಿಯು ನಿಷಿದ್ಧವಿದ್ದರೆ, ಅದರಲ್ಲಿ ಯಾರಿಂದಲೋ ಯಾವುದೋ ಒಂದು ಮಾತು ಅಯೋಗ್ಯ-ಅನುಚಿತವಾಗಿ ಸಂಭವಿಸಿದ್ದರೆ, ಅವನನ್ನು ಕರೆಯಿಸಿ ಪಂಚರು ಹೇಳುತ್ತಾರೆ - ''ನೋಡು ಸೋದರನೇ ! ನೀನು ಅಜ್ಞಾನಪೂರ್ವಕ ಈ ಜಾತಿವಿರೋಧಿ ಕಾರ್ಯ ಮಾಡಿರುವೆ; ಅದರಿಂದ ಜಾತಿಯವರೆಲ್ಲರೂ ನಿನ್ನಿಂದ ದಂಡ ಕೇಳಿದ್ದಾರೆ. ನೀನು ಪಂಚರ ಮರ್ಯಾದೆಯ ವಿರೋಧ ಮಾಡಿರುವೆ, ಅದಕ್ಕಾಗಿ ನೀನು ದಂಡ ಭರಿಸಬೇಕಾಗುವುದು.''

ಆಗ ಜಾತಿಯ ಮರ್ಯಾದೆಯನ್ನು ತಿಳಿಯುವಂಥ ವಿವೇಕಿಯಂತೂ ಆ ವಚನವನ್ನಾಲಿಸಿ ಕೈಮುಗಿದು ಸ್ವಯಂ ವಿನಯಪೂರ್ವಕ ''ನನ್ನಿಂದ ಅಯೋಗ್ಯ ಆಚರಣೆಯಾಗಿ ಹೋಗಿದೆ - ಇದು ಸತ್ಯವಿದೆ, ಈಗ ಸಮಸ್ತ ಜಾತಿ ಬಂಧುಗಳ ಆಜ್ಞೆಯು ನನಗೆ ಸ್ವೀಕೃತವಿದೆ. ಭವಿಷ್ಯದಲ್ಲಿ ಇಂಥ ಆಚರಣೆ - ಕ್ರಿಯೆ ಮಾಡಲಾರೆನು'' - ಈ ಪ್ರಕಾರ ಸಮಸ್ತ ಜಾತಿಗೆ ಸುಖದಾಯಕ ವಚನವನ್ನಾಡುವುದಂತೂ ಯಶ ಪ್ರಾಪ್ತಿಯ ಕಾರ್ಯವಿದೆ.

ಆದರೆ ಮೂರ್ಖನಂತೂ ''ನಾವು ಯಾರದೇ ವಸ್ತುವಿನ ಅಪಹರಣವನ್ನಂತೂ ಮಾಡಿಲ್ಲ. ಜಾತಿಯವರು ನಮಗೇಕೆ ದಂಡ ವಿಧಿಸುತ್ತಾರೆ ? ಮತ್ತು ದಂಡ ವಿಧಿಸಲು ಜಾತಿಯವರೆಂದರೆ ದೊರೆಯಲ್ಲ. ಇಂಥ ದಂಡದ ಮಾತನ್ನು ಬೇರೆ ಯಾರಾದರೂ ಕೇಳುತ್ತಿದ್ದರೆ ಕೇಳಲಿ. ನಾವಂತೂ ನಮ್ಮ ಇಚ್ಛೆಯಂತೆ ಭೋಜನ-ಪಾನ- ವಸ್ತ್ರಾಭರಣಗಳ ಪ್ರಯೋಗ ಮಾಡುವೆವು. ನಮ್ಮ ನಿಷೇಧವನ್ನೇಕೆ ಯಾರಾದರೂ ಮಾಡುತ್ತಾರೆ''ಂದು ಕೇಳುತ್ತಾನೆ. ಇಂಥ ಜಾತಿ ವಿರೋಧಿ ವಚನವನ್ನಾಡುವುದು ಮೂರ್ಖತೆಯಿದೆ. ಇದರಿಂದ ನಿಂದೆಯಾಗುತ್ತದೆ; ಅದಕ್ಕಾಗಿ ಜಾತಿ ಸಭೆಯಲ್ಲಿ ಸಭೆಯ ವಿರೋಧರೂಪ ವಚನಗಳನ್ನಾಡಬಾರದು.

ಲೌಕಿಕ ದೃಷ್ಟಿಯಿಂದ ಯಾವುದಾದರೂ ಒಳ್ಳೆಯ ಕಾರ್ಯವು ಪ್ರಗಟವಾದರೆ ಅದರ ನಿಂದೆ ಮಾಡದವನು ಮತ್ತು ಲೌಕಿಕ ದೃಷ್ಟಿಯಿಂದ ಯಾವುದಾದರೂ ಕಾರ್ಯವು ನಿಂದನೀಯವಿದ್ದರೆ ಅದರ ಅಂಗೀಕಾರ ಮಾಡದವನು ವಿವೇಕವಂತನಿದ್ದಾನೆ. ಹೇಗೆಂದರೆ ಕಳವು, ಜೂಜು, ಪರಸ್ತ್ರೀವ್ಯಭಿಚಾರ, ವೇಶ್ಯಾಗಮನ, ಪರಜೀವಘಾತ, ಮದ್ಯ-ಮಾಂಸಾದಿಗಳ ಭಕ್ಷಣೆ ಇತ್ಯಾದಿ ಸಪ್ತ ವ್ಯಸನರೂಪ ಕಾರ್ಯಗಳು ಲೌಕಿಕ ದೃಷ್ಟಿಯಿಂದಲೂ ನಿಂದ್ಯವಿವೆ. ಅವನ್ನು ಮಾಡುತ್ತಿರುವಾಗಲೂ ಯಾರು-ನಮ್ಮ ಇಚ್ಛೆಯು ಹೇಗಿದೆಯೋ ಹಾಗೆ ನಾವು ಮಾಡುತ್ತೇವೆ, ನಮಗೆ ಯಾರೇನು ಮಾಡುತ್ತಾರೆ ? - ಎಂದು ಆಡುತ್ತಾರೆ, ಅವರು ಮೂರ್ಖರೆನಿಸಿಕೊಳ್ಳುತ್ತಾರೆ, ನಿಂದೆ ಪಡೆಯುತ್ತಾರೆ; ಅದಕ್ಕಾಗಿ ಲೋಕನಿಂದ್ಯಕಾರ್ಯಮಾಡಬಾರದು.

ತಮ್ಮ ಕುಟುಂಬ ಮಾತಾ-ಪಿತರು, ಪುತ್ರ, ಸೋದರ, ಪತ್ನಿ ಇತ್ಯಾದಿ ಸಜ್ಜನ ಸ್ನೇಹಿ ಬಂಧುಗಳ ಸಮೂಹಕ್ಕೆ ಸುಖವನ್ನು ಉತ್ಪನ್ನ ಮಾಡುವಂಥ ಮಾತುಗಳನ್ನಾಡುವಂಥವನು ವಿವೇಕಿಯಿದ್ದಾನೆ; ಮತ್ತು ಬಂಧು ವಿರೋಧಿ ವಚನ - 'ಇವರೆಲ್ಲರೂ ನನ್ನನ್ನು ಸಾಯಿಸಬಯಸುತ್ತಾರೆ, ಇವರು ನನ್ನ ದ್ವೇಷ ಮಾಡುತ್ತಾರೆ. ಇವರಿಗೆ ನನ್ನನ್ನು ಕಂಡರೆ ಆಗುವುದಿಲ್ಲವೆಂಬುದನ್ನು ನಾನು ಬಲ್ಲಿದ್ದೇನೆ. ಅದರಿಂದ ನನ್ನ ಸಮಯ ಬಂದ ಮೇಲೆ ನಾನು ಒಬ್ಬೊಬ್ಬರನ್ನು ನೋಡುವವನಿದ್ದೇನೆ ನಾನು ಕೂಡ ಎಲ್ಲರ ಘಾತ ಮಾಡಬಹುದಾಗಿದೆ ಅಲ್ಲದೆ ಇವರಿಂದ ನನ್ನ ಯಾವ ಕಾರ್ಯ ನಿಲ್ಲುವುದಿದೆ ? ನನ್ನ ಹತ್ತಿರ ಧನವಿದ್ದರೆ ಎಲ್ಲರೂ ತಾವಾಗಿಯೇ ಬಂದು ನನ್ನ ಕಾಲಿಗೆ ಎರಗುವರು' - ಇತ್ಯಾದಿ ವಚನಗಳು; ಅವುಗಳನ್ನು ಕೇಳಿ ಸಮಸ್ತ ಕುಟುಂಬಕ್ಕೆ ದುಃಖವಾಗುವುದು, ಸಂಪೂರ್ಣ ಕುಟುಂಬದ ಮಾನವು ಖಂಡಿತವಾಗಿ ಹೋಗುವುದು- ಕುಟುಂಬದ ಸಲುವಾಗಿ ಇಂಥ ದುಃಖದಾಯಕ ವಚನಗಳನ್ನಾಡುವುದು ಮೂರ್ಖತೆಯಿದೆ; ಅದಕ್ಕಾಗಿ ಕುಟುಂಬ ವಿರೋಧಿ ವಚನಗಳನ್ನಾಡಬಾರದು.

ಈ ಪ್ರಕಾರ ಧರ್ಮಸಭೆ, ಪಂಚಸಭೆ, ಜಾತಿಸಭೆ, ಲೌಕಿಕಸಭೆ, ಬಂಧುಸಭೆ - ಈ ಸ್ಥಾನಗಳಲ್ಲಿ ದುಃಖದಾಯಕ ಸಭೆಯ ವಿರುದ್ಧ ವಚನಗಳನ್ನಾಡಿದರೆ ಈ ಭವದಲ್ಲಿ ಪಂಚರಿಂದ ನಿಂದೆಯಾಗುತ್ತದೆ, ಲೋಕನಿಂದೆಯಾಗುತ್ತದೆ, ಬಂಧುವರ್ಗದಿಂದ ನಿಂದ್ಯನಾಗುತ್ತಾನೆ-ಇವು ಮೂರು ನಿಂದೆಗಳ ಪ್ರಾಪ್ತಿಯಾದ ಮೇಲೆ ಜೀವನವು ವ್ಯರ್ಥವಿದೆ. ಇಂಥ ಪುರುಷನು ಜೀವಂತವಾಗಿದ್ದರೂ ಮೃತಕನಂತೆ ಭಾಸಿತನಾಗುತ್ತಾನೆ. ಅದರಿಂದ ಈ ಭವವು ಕೆಟ್ಟು ಹೋಗುತ್ತದೆ ಮತ್ತು ರಾಜಸಭೆಯ ವಿರುದ್ಧತೆಯಿಂದ ದೇಹಘಾತ, ಧನಘಾತವಾಗುತ್ತದೆ, ಅಂಗೋಪಾಂಗಗಳ ಛೇದನಾದಿ ದುಃಖಗಳನ್ನು ಸಹಿಸಬೇಕಾಗುತ್ತದೆ.

ಧರ್ಮಸಭೆಯ ವಿರೋಧ ವಚನಗಳಿಂದ ಪಾಪಬಂಧವಾಗುತ್ತದೆ, ನರಕಾದಿ ದುರ್ಗತಿ ದುಃಖಗಳಿಗೆ ಜೀವನು ಪ್ರಾಪ್ತನಾಗಿ ಹೋಗುತ್ತಾನೆ. ಅದಕ್ಕಾಗಿ ಧರ್ಮಾತ್ಮನು, ವಿವೇಕಿಗಳು ಎರಡು ಭವಸಂಬಂಧದ ಸುಖ, ಯಶಸ್ಸಿನ ಅಭಿಲಾಷೆಯುಳ್ಳವರು ಹಿತ, ಮಿತ, ಸತ್ಯ, ಸರ್ವರಿಗೆ ಸುಖದಾಯಕವಿರುವ ವಚನಗಳನ್ನಾಡಬೇಕು. ತಿಳಿದುಕೊಂಡು ವಿರುದ್ಧ ವಚನಗಳ ತ್ಯಾಗ ಮಾಡುವುದು ಯೋಗ್ಯವಿದೆ.

ಶಾಸ್ತ್ರಾಭ್ಯಾಸ ಮಾಡಿಯೂ ಕೂಡ ಒಂದುವೇಳೆ ಇಲ್ಲಿ ಹೇಳುವ ಗುಣಗಳಿಲ್ಲದಿದ್ದರೆ ಆ ಶಾಸ್ತ್ರಾಭ್ಯಾಸದ ಶಬ್ದಗಳು ಕಾಗೆಯ ಸಮಾನವಿವೆಯೆಂದು ಈಗ ಹೇಳುತ್ತಾರೆ,-

**ಸುತ ಸುಣಿ ಪಢಣ ಣ ಯೋಗಾ ಣ ಧಮ್ಮೋ ಣಯ ಸಾಂತರಸಪಾಣೋ ।**

**ತಊ ಪಢಣ ಕಿಂಹಕಾಜಉ ವಾಯಸ ಇವ ಧುಣಿ ಥಾಂಣಿ ಉಯಲಾಯೋ ॥೧೦೧॥**

**ಗಾಥಾರ್ಥ :-** ಶಾಸ್ತ್ರವನ್ನಾಲಿಸಿ, ಪಠನ ಮಾಡಿ ಒಂದುವೇಳೆ ವೈರಾಗ್ಯವಾಗದಿದ್ದರೆ, ಶಾಂತರಸದ ಪಾನ ಮಾಡದಿದ್ದರೆ ಆ ವಾಚನವು ಯಾವ ಕೆಲಸಕ್ಕೆ ಬಂದಂತಾಯಿತು ? ಕಾಗೆಯ ಸಮಾನ ಧ್ವನಿಹೊರಡಿಸುತ್ತ ಕೂಗುತ್ತ ಇರುತ್ತಾನೆ.

**ಭಾವಾರ್ಥ ಃ-** ಜಿನೇಂದ್ರ ದೇವರಿಂದ ಪ್ರತಿಪಾದಿತ ದಯಾಮಯ ಧರ್ಮಸಹಿತ ಜಿನಶಾಸ್ತ್ರಗಳ ಕಥನದ ರಹಸ್ಯ ತಿಳಿದುಕೊಂಡು ಅನೇಕ ಧರ್ಮಧಾರೀ ಜೀವರುಗಳು ತಮ್ಮ ಕಲ್ಯಾಣ ಮಾಡಿಕೊಂಡಿದ್ದಾರೆ. ಆ ಶಾಸ್ತ್ರಗಳ ಅಭ್ಯಾಸ ಮಾಡಿ ಮತ್ತು ಅವುಗಳ ಶ್ರವಣ ಮಾಡಿಯೂ ಕೂಡ ಯಾರ ಹೃದಯವು ವೈರಾಗ್ಯಕ್ಕೆ ಪ್ರಾಪ್ತವಾಗಲಿಲ್ಲ, ಅವರ ಶಾಸ್ತ್ರಾಭ್ಯಾಸದಿಂದ ಯಾವ ಕಾರ್ಯದ ಸಿದ್ಧಿಯಾಯಿತು ? ಯಾವ ಜೀವರುಗಳು ದಯಾಮಯ ರಸದಿಂದ ತುಂಬಿಕೊಂಡಿರುವ ಈ ಶಾಸ್ತ್ರಗಳ ಅಭ್ಯಾಸ ಮಾಡಿಯೂ ಕೂಡ ಪಾಪಕಾರ್ಯಗಳಿಂದ ಭಯಭೀತರಾಗಿ ಧರ್ಮದ ಆಚರಣೆ ಮಾಡಲಿಲ್ಲ. ಪರಿಣತಿಯಲ್ಲಿ ಧರ್ಮದ ಅಭಿಲಾಷೆಯೂ ಮಾಡಿಬರದಿದ್ದರೆ ಅವರ ಇಂಥ ಆಗಮಗಳ ಅಭ್ಯಾಸವು ವ್ಯರ್ಥವಿದೆ - ಆಗಮಾಭ್ಯಾಸದ ಶ್ರಮವು ವ್ಯರ್ಥವಿದೆ.

ತಮ್ಮ ಸಮಾನ ಸಮಸ್ತ ಷಟ್ಕಾಯಿಕ ಜೀವಗಳಿವೆ-ಎಂಬ ಭೇದ(ರಹಸ್ಯ)ವನ್ನು ತಿಳಿಸುವಂಥ ಶಾಸ್ತ್ರಗಳ ಅಭ್ಯಾಸ ಮಾಡಿ, ಅವುಗಳ ಶ್ರವಣ ಮಾಡಿಯೂ ಮತ್ತು ಸಮಸ್ತ ಆಕುಲತೆಯಿಂದ ರಹಿತ ಶಾಂತರಸದಿಂದ ತುಂಬಿರುವ ಸಮತೆಯ ಸಮುದ್ರರೂಪ ಶಾಸ್ತ್ರಗಳ ಅರ್ಥರೂಪದ ಅಮೃತವನ್ನು ಕುಡಿದರೂ ಸಂತೋಷವನ್ನು ಪ್ರಾಪ್ತಮಾಡಿಕೊಳ್ಳದಿದ್ದರೆ ಶಾಸ್ತ್ರಗಳ ಅಭ್ಯಾಸ ಮಾಡುವಲ್ಲಿ ಉತ್ಪನ್ನವಾದ ಶ್ರಮವು ವ್ಯರ್ಥವಾಗಿಯೇ ಹೋಯಿತು.

ಕರ್ಮಗಳ ನಾಶಮಾಡಿ ಮೋಕ್ಷದಲ್ಲಿ ಸ್ಥಾಪನೆ ಮಾಡುವಂಥ, ಪರವಸ್ತುಗಳ ಕುರಿತಾದ ಪ್ರೀತಿಯ ಖೇದವನ್ನು ನಷ್ಟಗೊಳಿಸಿ ನಿರ್ಬಂಧ ಮಾಡುವಂಥ ಶಾಸ್ತ್ರಗಳ ಅಭ್ಯಾಸ ಮಾಡಿಯೂ ಕೂಡ ಆತ್ಮಿಕ ರಸವನ್ನು ಪ್ರಕಟ ಮಾಡಿಕೊಂಡು ನಿರಾಕುಲ ದಶೆಗೆ ಪ್ರಾಪ್ತವಾಗದಿದ್ದರೆ ಶಾಸ್ತ್ರಾಭ್ಯಾಸದ ಶ್ರಮದಿಂದ ಯಾವುದೂ ಸಿದ್ಧವಾಗಲಿಲ್ಲ.

ಎಲೈ ಭವ್ಯನೇ ಶಾಸ್ತ್ರಗಳ ಅಭ್ಯಾಸ ಮಾಡುವುದರಿಂದ, ವಿವಿಧ ಪಠನ-ಪಾಠನ ಮಾಡುವುದರಿಂದ, ಗುರುಗಳ ಮುಖದಿಂದ ಅನೇಕ ಶಾಸ್ತ್ರಗಳನ್ನಾಲಿಸುವುದರಿಂದ ಅಕ್ಷರ ಜ್ಞಾನವಂತೂ ಬಹಳಷ್ಟು ಆಯಿತು. ವಾಚನ ಕಲೆಯನ್ನೂ ಒಳ್ಳೆಯ ರೀತಿಯಿಂದ ಕಲಿತುಕೊಂಡಾಯಿತು. ಅನೇಕ ಪದ್ಯಗಳು, ಗಾಥೆ, ಕಾವ್ಯ , ಶ್ಲೋಕ ಮೊದಲಾಗಿ ಸಂಸ್ಕೃತ ಪಾಕೃತರೂಪ ಹಾಗೂ ದೇಶಭಾಷೆಯಲ್ಲಿ ಉಪದೇಶ ಕೊಡುವುದನ್ನೂ ಕಲಿತಾಯಿತು - ಇತ್ಯಾದಿ ಚತುರತೆಯನ್ನಂತೂ ನೀನು ಕಲಿತುಕೊಂಡಿರುವೆ; ಆದರೆ ವೈರಾಗ್ಯ ಭಾವವನ್ನು ಹೆಚ್ಚಿಸಿಕೊಳ್ಳಲಿಲ್ಲ, ಪಾಪವನ್ನು ಬಿಟ್ಟು ದಯಾಮಯ ಧರ್ಮವು ರುಚಿಕರವೆನಿಸಲಿಲ್ಲ ಮತ್ತು ಕ್ರೋಧ-ಮಾನಾದಿ ಕಷಾಯಗಳನ್ನು ನಂದಿಸಿ ಶಾಂತರೂಪದ ಸುಧಾರಸದ ಪಾನ ಮಾಡಲಿಲ್ಲವೆಂದ ಮೇಲೆ ಶಾಸ್ತ್ರಗಳ ಪಠನ-ಪಾಠನವು ವ್ಯರ್ಥವೇ ಆಯಿತು.

ಸಮ್ಯಗ್ದೃಷ್ಟಿಯ ಅನುಭವದ ಮೂಲ ಫಲವು ಸ್ವಭಾವ-ಪರಭಾವಗಳ ನಿರ್ಣಯತೆಯೇ ಇದೆ. ಇವೆಲ್ಲ ಆತ್ಮ ಕಲ್ಯಾಣದ ಕಾರಣಭೂತವಿರುವ ಉಪರ್ಯುಕ್ತ ಗುಣಗಳು ಶಾಸ್ತ್ರಾಭ್ಯಾಸದಿಂದ ಆಗುತ್ತವೆ.

ಶಾಸ್ತ್ರಗಳ ಅಭ್ಯಾಸ ಮಾಡಿ ಅನೇಕ ಜೀವರುಗಳು ಮೋಕ್ಷಮಾರ್ಗವನ್ನು ತಿಳಿದುಕೊಂಡು, ಸಮತೆಯ ಭಾವ ಧಾರಣ ಮಾಡಿ ಮುಕ್ತರಾಗಿದ್ದಾರೆ. ಇಂಥ ಶಾಸ್ತ್ರಗಳ ಅಭ್ಯಾಸ ಮಾಡಿ - ಅನೇಕ ಕಷ್ಟಗಳನ್ನು ಸಹಿಸಿ ಪಠನ ಮಾಡಿಯೂ ಕೂಡ ಒಂದುವೇಳೆ ಉಪರ್ಯುಕ್ತ ಗುಣಗಳು ಪ್ರಾಪ್ತವಾಗದಿದ್ದರೆ ಸಂಪೂರ್ಣ ಕಷ್ಟವು ವ್ಯರ್ಥವೇ ಆಯಿತು. ಶಾಸ್ತ್ರಾಭ್ಯಾಸದಿಂದ ವೈರಾಗ್ಯವಾಗದಿದ್ದರೆ, ಧರ್ಮವು ಒಳ್ಳೆಯದೆನಿಸದಿದ್ದರೆ, ಶಾಂತ ಭಾವಗಳಾಗದಿದ್ದರೆ ನಿನ್ನ ಶಾಸ್ತ್ರಾಭ್ಯಾಸದ ಶಬ್ದಗಳು ತೀವ್ರ ಶಬ್ದ ಮಾಡುತ್ತ ಕಾಗೆಯು ಕೂಗಿದಂತಿದೆ - ಎಂದರೆ ಪೂರ್ವೋಕ್ತ ಗುಣಗಳ ಅಭಾವದಲ್ಲಿ ಶಾಸ್ತ್ರಗಳನ್ನೋದುವ ಗದ್ದಲ-ಕೋಲಾಹಲವು ಕಾಕ ಶಬ್ದದಂತೆಯೆಂದು ತಿಳಿಯುವುದು.

ಈಗ ನಿದ್ರೆಯನ್ನು ಮರಣಕ್ಕಿಂತಲೂ ಅಧಿಕವೆಂದು ಹೇಳುತ್ತಾರೆ,-

**ಣಿಂದಾ ಮೀಚ ಸಮಾಣೋ ಮೀಚೋ ಯ ಭವಾಂತ ಹೋಈ ಇಕ ಬಾರಊ ।**

**ಣಿಂದೋ ಛಿಣ ಛಿಣ ಧಾದಯ ಣಾಣ ಆದಾಏ ದೇಯಗಯ ಅಸುಹೋ ॥೧೦೨॥**

**ಗಾಥಾರ್ಥ :-** ನಿದ್ರೆಯಂತೂ ಮರಣದ ಸಮಾನವಿದೆ. ಮರಣವು ಒಂದು ಭವದಲ್ಲಿ ಒಂದು ಬಾರಿ ಆಗುತ್ತದೆ, ನಿದ್ರೆಯು ಪ್ರತಿಕ್ಷಣ ಘಾತ ಮಾಡುತ್ತದೆ. ಆತ್ಮನ ಜ್ಞಾನದ ಘಾತಮಾಡಿ ಅಶುಭಗತಿಯನ್ನು ಕೊಡುತ್ತದೆ.

**ಭಾವಾರ್ಥ :-** ಮೋಹದ ವಶೀಭೂತವಾಗಿರುವ ಈ ಸಂಸಾರೀ ಜೀವಗಳು ಆತ್ಮನ ಜ್ಞಾನ-ದರ್ಶನಗಳ ಘಾತಮಾಡಿ ಆ ಆತ್ಮನನ್ನು ಜಡ ಸಮಾನ ಮಾಡುವಲ್ಲಿ ನಿಮಿತ್ತಭೂತವಿರುವ ನಿದ್ರಾಕರ್ಮದ ಉದಯವಾದ ಮೇಲೆ ನಿದ್ರೆಗೆ ಪ್ರಾಪ್ತವಾಗಿರುವ ಮುಗ್ಧ ಜೀವಗಳು ಅದನ್ನು ಸುಖ, ಸಾತಾ, ಆನಂದವಾಯಿತೆಂದು ಮನ್ನಿಸುತ್ತಾರೆ; ಆದರೆ ಎಲೈ ಭವ್ಯನೇ ಈ ನಿದ್ರೆಯು ಮೃತಕ ಸಮಾನ ಚೇಷ್ಟೆಯುಳ್ಳದ್ದೆಂದು ತಿಳಿಯುವುದು. ಇದನ್ನು ಮರಣಕ್ಕಿಂತಲೂ ಅಧಿಕ ದುಃಖದಾಯಕವೆಂದು ತಿಳಿಯುವುದು.

ಒಂದು ಶರೀರದ ಉದಯದಲ್ಲಿ ಮರಣವಂತೂ ಕೇವಲ ಒಂದು ಬಾರಿ ಆಯುವಿನ ಅಂತ್ಯದಲ್ಲಿ ಪ್ರಕಟವಾಗಿ ಆತ್ಮನ ದರ್ಶನ ಜ್ಞಾನಗಳ ಘಾತಮಾಡುತ್ತದೆ; ಆದರೆ ನಿದ್ರೆಯು ಆತ್ಮನ ಜ್ಞಾನ-ದರ್ಶನರೂಪ ಮುಖ್ಯ ಗುಣಗಳ ಘಾತವನ್ನು ಪ್ರತಿ ಕ್ಷಣ ಮಾಡುತ್ತದೆ. ಮತ್ತು ಈ ನಿದ್ರೆಯು ಒಳ್ಳೆಯ ಗುಣಗಳ ಘಾತ ಮಾಡಿ, ಅಶುಭ ಕರ್ಮಗಳ ಬಂಧ ಮಾಡಿಸಿ ಅಶುಭ ಗತಿಯನ್ನು ದೊರಕಿಸಿಕೊಡುತ್ತದೆ, ಅದರಿಂದ ನಿದ್ರೆಯನ್ನು ಮರಣಕ್ಕಿಂತಲೂ ದೀರ್ಘ ದುಃಖದಾಯಕವೆಂದು ತಿಳಿಯುವುದು; ಇದೇ ಕಾರಣದಿಂದ ಯೋಗೀಶ್ವರರು ತಮ್ಮ ಸ್ವಭಾವದಲ್ಲಿ ನಿದ್ರೆಯ ಪ್ರವೇಶವಾಗಗೊಡುವುದಿಲ್ಲ.

ಈಗ ದೃಷ್ಟಾಂತವನ್ನಿತ್ತು ದುಷ್ಟ ಜೀವರುಗಳ ಸ್ವಭಾವ ತಿಳಿಸುತ್ತಾರೆ,-

**ದುಜ್ಜಣ ಜೋಂಕ ಸಮಭಾವೋ ಇಗ ಓಯಣ ಇಗ ರುಥರ ಗಹ ಲೇಈ ।**
**ಸಥಣ ಲಗೋ ವಾ ಪೋಸಲು ಣಿಜಣಿಜಪಕತ್ಯ ಣಾಹಿಕೋ ಜಹಈ ॥೧೦೩॥**

**ಗಾಥಾರ್ಥ :-** ದುರ್ಜನ, ಜಿಗಳೆ - ಇವೆರಡೂ ಸಮಾನವಿವೆ. ಒಂದು ಅವಗುಣವನ್ನು ಗ್ರಹಣ ಮಾಡಿದರೆ ಇನ್ನೊಂದು ರಕ್ತವನ್ನು ಗ್ರಹಣ ಮಾಡುತ್ತದೆ. ಸ್ತನಕ್ಕೆ ಅಂಟಿಕೊಂಡು ಮತ್ತು ಪುಷ್ಟ ಮಾಡಿದ ಮೇಲೆ ತಮ್ಮ-ತಮ್ಮ ಪ್ರಕೃತಿಯನ್ನು ಯಾವುದೂ ಬಿಟ್ಟುಕೊಡುವುದಿಲ್ಲ.

**ಭಾವಾರ್ಥ :-** ಸಂಸಾರೀ ಜೀವರುಗಳ ಸ್ವಭಾವವು ವಿವಿಧ ಪ್ರಕಾರದ್ದಿದೆ. ಅದರಲ್ಲಿ ಅದೆಷ್ಟೋ ಜೀವರುಗಳಂತೂ ಇತರರಿಗೆ ದುಃಖದಾಯಕ, ದುಷ್ಟಸ್ವಭಾವಿ, ಬೇರೆಯವರ ದುಃಖವನ್ನು ನೋಡಿ ಸುಖಿ ಮತ್ತು ಬೇರೆಯವರ ಸುಖವನ್ನು ನೋಡಿ ದುಃಖಿ, ಅನ್ಯ ಜೀವಗಳನ್ನು ದುಃಖೀ, ದರಿದ್ರಿ, ರೋಗಿ, ಶೋಕಿ, ಭಯವಂತ, ಮಾನಭಂಗೀ ಇತ್ಯಾದಿ ಅಸಾತಾ ಸಹಿತವಾಗಿ ಕಂಡು ಮಹಾಸುಖಿಗಳಾಗುತ್ತಾರೆ. ಯಾವನೋ ಸುಖಿಯನ್ನು ಒಳ್ಳೊಳ್ಳೆಯ ಆಹಾರ, ವಸ್ತ್ರಾಭರಣ, ಇತ್ಯಾದಿ ಭೋಗ ಭೋಗಿಸುತ್ತಿರುವ, ನೃತ್ಯ-ಗಾಯನಾದಿಗಳೊಂದಿಗೆ ನಗುವ, ರೋಗರಹಿತನಾಗಿರುವ, ಶ್ರೀಮಂತನಾಗಿರುವ ಇತ್ಯಾದಿ ಪ್ರಕಾರದಿಂದ ಸುಖಿಯಿರುವುದನ್ನು ನೋಡಿ ದುಃಖಿಯಾಗುತ್ತಾರೆ. ಇಂಥ ಪಾಪಾಚರಣೆ ಮಾಡುತ್ತಿರುವ, ದುಷ್ಟ ಅಂಗಧಾರೀ ರೌದ್ರ ಸ್ವಭಾವಿಗಳನ್ನು ದುರ್ಜನರೆಂದು ಮನ್ನಿಸಬೇಕು. ಈ ಪ್ರಕಾರ ದುರ್ಜನ ಸ್ವಭಾವಿಯು ಅನೇಕ ದೋಷಗಳಿಂದ ತುಂಬಿಕೊಂಡಿರುತ್ತಾನೆ. ಅವನ ಸಹಜ ಸ್ವಭಾವವೇ ದುರಾಚಾರ ರೂಪವಿದೆ. ಅವನನ್ನು ಶುಭಗೊಳಿಸುವ ಸಲುವಾಗಿ ಯಾವುದೇ ಉಪಾಯವಿಲ್ಲ. ಅವನಿಗೆ ಒಳ್ಳೆಯದನ್ನೇ ಮಾಡಿದರೂ ದೋಷವನ್ನೇ ಗ್ರಹಿಸುತ್ತಾನೆ. ಆ ದುಷ್ಟನ ಸ್ವಭಾವವು ಜಿಗಳೆಯ ಹಾಗೆಂದು ತಿಳಿಯುವುದು.

ಜಿಗಣೆ ಮತ್ತು ದುರ್ಜನ-ಇಬ್ಬರ ಸ್ವಭಾವವು ಸಮಾನವಿದೆ. ದುರ್ಜನನು ಅವಗುಣವನ್ನೇ ಗ್ರಹಣ ಮಾಡುತ್ತಾನೆ. ಅದು ಅವನ ಸಹಜ ಸ್ವಭಾವವೇ ಇದೆ. ಜಿಗಣೆಯು ರಕ್ತದ ಗ್ರಹಣವನ್ನೇ ಮಾಡುತ್ತದೆ. ಆ ಜಿಗಣೆಯದೂ ಅಂಥದೇ ಸ್ವಭಾವವಿದೆ. ನೋಡಿರಿ ! ಜಿಗಣೆಯನ್ನು ಮಧುರ ಹಾಲು ತುಂಬಿದ ಕೆಚ್ಚಲಿಗೆ ಹಚ್ಚಿದರೂ

ಅದು ಹಾಲನ್ನು ಬಿಟ್ಟು ಸ್ತನದ ರಕ್ತವನ್ನೇ ಕುಡಿಯುತ್ತದೆ. ದುರ್ಜನನನ್ನು ಬೇಕಾದಷ್ಟು ಪುಷ್ಟಗೊಳಿಸಿದರೂ, ಅವನ ಮೇಲೆ ಬೇಕಾದಷ್ಟು ಉಪಕಾರ ಮಾಡಿದರೂ ಅವನ ಪ್ರಯೋಜನ ಯಾವಾಗ ಸಾಧಿಸುವುದಿಲ್ಲ ಆಗ ಸಮಸ್ತ ಗುಣಗಳನ್ನು ಮರೆತು ಅವಗುಣವನ್ನೇ ಅಂಗೀಕಾರ ಮಾಡುತ್ತಾನೆ. ಈ ಅವಗುಣಗ್ರಾಹೀತನವು ಆತನ ಅನಾದಿ ಸ್ವಭಾವವೆಂದು ತಿಳಿಯುವುದು. ಈ ಪ್ರಕಾರ ಜಿಗಣೆ ಮತ್ತು ದುರ್ಜನನ ಪ್ರಕೃತಿ-ಸ್ವಭಾವವಿದೆ. ಏಕೆಂದರೆ ತಮ್ಮ ಸ್ವಭಾವವನ್ನು ಯಾರೂ ಬಿಡುವುದಿಲ್ಲ. ಯಾವುದೇ ಪ್ರಯತ್ನದಿಂದ ಯಾರದೂ ಸ್ವಭಾವವು ಎಂದೂ ಬದಲಾಗುವುದಿಲ್ಲ-ವೆಂಬುದನ್ನು ತಿಳಿದು ದುರ್ಜನರ ಸಂಗತಿಯನ್ನು ಬಿಟ್ಟುಕೊಡುವುದು-ತ್ಯಾಗ ಮಾಡುವುದು ಸುಖಾಭಿಲಾಷಿಗಳ ಸಲುವಾಗಿ ಒಳ್ಳೆಯದಿದೆ.

ತಮ್ಮ-ತಮ್ಮ ಭಾವಗಳಿಂದ ಉಪಾರ್ಜಿತ ಕರ್ಮದಿಂದಲೇ ರೋಗದ ದೀರ್ಘತೆಯಿದೆಯೆಂಬುದನ್ನೇ ಈಗ ಹೇಳುತ್ತಾರೆ,-

**ಕಚ ಕಚ ಗದ ವಿಣ ಸಂಖೋ ಜೇ ಪುವ್ವೋ ಪಾಯ ಜಂತು ತಣ ಹೋಈ ।**
**ಉದಯ ಕಾಲ ಅಣತೋ ಭೋಗೇ ಠಯಣ ಣ ಔರ ಕೋ ಪಾಯೋ ।।೧೦೪।।**

**ಗಾಥಾರ್ಥ ፡-** ರೋಮ-ರೋಮದಲ್ಲಿ ಅಗಣಿತ ರೋಗಗಳಿವೆ. ಅವು ಪೂರ್ವೋಪಾರ್ಜಿತ ಕರ್ಮಾನುಸಾರ ಜೀವದ ಶರೀರದಲ್ಲಿ ಇರುತ್ತವೆ, ಅವು ಉದಯದಲ್ಲಿ ಬರುತ್ತಿದ್ದಂತೆ ಅನಿಷ್ಟವೆನಿಸುತ್ತವೆ; ಆದಾಗ್ಯೂ ಭೋಗಿಸಲೇ ಬೇಕಾಗುತ್ತದೆ, ಬೇರೆ ಯಾವ ಉಪಾಯವಿಲ್ಲ.

**ಭಾವಾರ್ಥ ፡-** ಈ ಸಂಸಾರೀ ಜೀವಗಳ ದೇಹದಲ್ಲಿ ಹಾಗೆ ನೋಡಿದರೆ ಒಂದೊಂದು ಕೂದಲಿನಲ್ಲಿ ಅನೇಕ-ಅನೇಕ ರೋಗಗಳ ಉತ್ಪತ್ತಿಯಾಗುತ್ತದೆ, ರೋಮ-ರೋಮಗಳು ರೋಗದಿಂದ ತುಂಬಿಕೊಂಡಿವೆ. ಈ ಜೀವನು ಪೂರ್ವದಲ್ಲಿ ಎಂಥ ಕರ್ಮಗಳ ಉಪಾರ್ಜನೆ ಮಾಡಿದ್ದಾನೆ, ಅದೇ ಪ್ರಕಾರದಿಂದ ಶರೀರದಲ್ಲಿ ರೋಗಗಳಿವೆ, ಅವು ವಿದ್ಯಮಾನವಿವೆ. ಸತ್ತಾದಲ್ಲಿ ಸ್ಥಿತವಿವೆ. ಸತ್ತಾದಲ್ಲಿ ವಿದ್ಯಮಾನತೆಯ ಸಮಯದಲ್ಲಂತೂ ಯಾವುದೇ ರೋಗವು ದುಃಖದಾಯಕವಿರುವುದಿಲ್ಲ; ಆದರೆ ಯಾವಾಗ ಆಬಾಧಾಕಾಲವು ಪೂರ್ಣವಾದ ಮೇಲೆ ಉದಯದಲ್ಲಿ ಬರುವವು, ಆಗ ಮಹಾಭಯಾನಕ ದುಃಖವೀಯುವವು, ಅನಿಷ್ಟವೆನಿಸುವವು, ದೀರ್ಘ ವೇದನೆಯು ಪ್ರಗಟವಾಗುವುದು. ಅವುಗಳ ಎದುರಿಗೆ ಜೀವನು ದುಃಖಭೋಗಿಸುತ್ತ-ಭೋಗಿಸುತ್ತ ಶಿಥಿಲನಾಗಿ ಹೋಗುವನು. ಅನೇಕ ಕಷ್ಟಗಳು ಉತ್ಪನ್ನವಾಗುವವು. ಅವುಗಳನ್ನು ನಷ್ಟಗೊಳಿಸುವ ಸಾಮರ್ಥ್ಯವು ಯಾರಲ್ಲಿಯೂ ಇಲ್ಲ-ಅವುಗಳ ಎದುರಿಗೆ ಮಂತ್ರ, ತಂತ್ರ ಜಂತ್ರ, ದೇವ, ಸಾಧನ, ಜ್ಯೋತಿಷ, ವೈದ್ಯಕೀಯ - ಇತ್ಯಾದಿ ಎಲ್ಲ ಉಪಾಯಗಳು ವ್ಯರ್ಥವಾಗಿ ಹೋಗುತ್ತವೆ. ಪೂರ್ವ ಪಾಪ ಪರಿಣಾಮಗಳ ನಿಕಾಚಿತ ಬಂಧವು ಭೋಗಿಸುವುದರಿಂದಲೇ ನಷ್ಟವಾಗುತ್ತದೆ. ಅದನ್ನು ಹೊರತು ಪಡಿಸಿ ಬೇರೆ ಯಾವ ಉಪಾಯದಿಂದಲೂ ನಷ್ಟವಾಗುವುದಿಲ್ಲ - ಇದನ್ನು ತಿಳಿದು ವಿವೇಕಿಗಳು, ಧೀರ, ಧರ್ಮಾತ್ಮಾ ಪುರುಷರಿಗೆ ಉದಯದಲ್ಲಿ ಬಂದಿರುವ ಅಸಾತಾದ ಸಮಯದಲ್ಲಿ ಸಮತೆಯ ಭಾವದೊಂದಿಗೆ ದೃಢವಿರುವುದು ಯೋಗ್ಯವಿದೆ.

ದುಃಖದ ನಾಶ ಮಾಡುವ ಹಾಗೂ ರೋಗಗಳ ನಾಶಮಾಡುವ ಉಪಾಯಗಳಂತೂ ಇವೆ, ಆದರೆ ಕಾಲದ ಉಪಾಯವಿಲ್ಲವೆಂಬುದನ್ನು ಈಗ ಹೇಳುತ್ತಾರೆ,-

**ಖುದಾ ಅಣ ತಿಷ ಣೇರೋ ಆಮಯ ಕುಠಾದಿ ಹೋಉ ಉವಚಾರೋ ।**
**ಅಂತಕ ಣಹ ಉವಚಾರೋ ಹರಿ ಸುರ ಕಂಪಯ ದೀಣ ಲಖ ಹೋಈ ।।೧೦೫।।**

**ಗಾಥಾರ್ಥ ፡-** ಕ್ಷುಧೆಯ ಉಪಚಾರವು ಅನ್ನ(ಆಹಾರ)ವಿದೆ, ತೃಷೆಯ ಉಪಚಾರವು ಜಲವಿದೆ, ಕುಷ್ಟ

ಮೊದಲಾಗಿ ಎಲ್ಲ ರೋಗಗಳ ಉಪಚಾರವಿದೆ ಆದರೆ ಕಾಲದ ಉಪಚಾರವಿಲ್ಲ. ಇಂದ್ರದೇವನೂ ಅದನ್ನು ಕಂಡು ದೀನನಾಗಿ ಕಂಪಾಯಮಾನನಾಗುತ್ತಾನೆ.

**ಭಾವಾರ್ಥ ಃ-** ಈ ಸಂಸಾರದಲ್ಲಿ ಅನೇಕ ವೇದನೆಗಳ-ದುಃಖಗಳ ಉಪಚಾರವಿದೆ; ಕಾಲದ ಸಲುವಾಗಿ ಯಾವ ಯತ್ನವಿಲ್ಲ. ಅದನ್ನೇ ಹೇಳುತ್ತಾರೆ-ಮಹಾರೋಗವು ಹಸಿವೆಯಿದೆ, ಅದರ ಉಪಚಾರವು ಭೋಜನವಿದೆ, ಅದರಿಂದ ಕ್ಷುಧೆಯ ರೋಗವು ಉಪಶಾಂತವಾಗುತ್ತದೆ, ತೃಷೆಯ ರೋಗದ ಔಷಧಿಯು ಜಲವಿದೆ, ತೃಷೆಯು ಜಲದಿಂದ ಉಪಶಾಂತವಾಗುತ್ತದೆ. ಕುಷ್ಟರೋಗ, ವಾಯು, ಪಿತ್ತ, ಜ್ವರ, ಕ್ಷಯ, ಕೆಮ್ಮು, ಉಬ್ಬಸ ಮೊದಲಾದ ರೋಗಗಳನ್ನು ನಾಶ ಮಾಡುವಂಥ ಅನೇಕ ಔಷಧಿಗಳನ್ನು ಹೇಳಲಾಗಿದೆ, ಅವುಗಳಿಂದ ರೋಗವು ಉಪಶಾಂತವಾಗುತ್ತದೆ; ಆದರೆ ಒಂದು ಕಾಲರೂಪ ರೋಗದ ಉಪಚಾರವಿಲ್ಲ, ಈ ಕಾಲವು (ಮರಣವು) ಯಾವುದೇ ಯತ್ನದಿಂದ ನಷ್ಟವಾಗುವುದಿಲ್ಲ.

ಇಂದ್ರ ದೇವಾದಿಗಳಂಥವರೂ ಕಾಲದ ಆಗಮನವನ್ನು ಕಂಡು ಕಂಪಾಯಮಾನರಾಗಿ ಬಿಡುತ್ತಾರೆ, ಕೇವಲ ಅದರ ಹೆಸರನ್ನು ಕೇಳುವುದರಿಂದಲೇ ದೊಡ್ಡ-ದೊಡ್ಡ ಯೋಧರು ದೀನತೆಯನ್ನು ಧಾರಣ ಮಾಡುತ್ತಾರೆ. ಎಲೈ ಭವ್ಯನೇ ! ಈ ಕಾಲದಿಂದ ದೊಡ್ಡವರೂ ಬದುಕಿ ಉಳಿಯಲಿಲ್ಲ. ಮೂರು ಲೋಕದಲ್ಲಿ ಕಾಲದಿಂದ ತಪ್ಪಿಸಿಕೊಳ್ಳಬಹುದಾದಂಥ ಯಾವ ಸ್ಥಾನವೂ ಇಲ್ಲ. ಸಮಸ್ತ ಸ್ಥಾನಗಳಿಂದ - ಎಲ್ಲಿ ಹೋದರೂ ಅಲ್ಲಿಯೇ ಇದು ಸಾಯಿಸುತ್ತದೆ; ಆದುದರಿಂದ ಎಲೈ ಧರ್ಮಾತ್ಮನೇ ! ಒಂದುವೇಳೆ ನೀನು ಕಾಲದಿಂದ ತಪ್ಪಿಸಿಕೊಳ್ಳ ಬಯಸುತ್ತಿದ್ದರೆ ಮೋಕ್ಷದೊಳಗೆ ತಲುಪುವ ಪ್ರಯತ್ನ ಮಾಡು. ಅದರಿಂದ ದೇಹಧಾರಣ ಮಾಡುವುದು-ಸಾಯುವುದು ಸಹಜವಾಗಿಯೇ ನಿಂತು ಹೋಗುತ್ತದೆ. ಕೇವಲ ಒಂದು ಮೋಕ್ಷದಲ್ಲಿಯೇ ಕಾಲವಿಲ್ಲ. ಮೋಕ್ಷವನ್ನು ಹೊರತು ಪಡಿಸಿ ಸರ್ವಸ್ಥಾನಗಳಲ್ಲಿ, ಸಮಸ್ತ ಸಂಸಾರೀ-ಶರೀರಧಾರೀ ಜೀವಗಳು ಕಾಲದ ಆಹಾರವಿವೆ.

ಇಷ್ಟ ವಿಯೋಗವು ಎಲ್ಲಿದೆ ಮತ್ತು ಎಲ್ಲಿ ಇಲ್ಲವೆಂಬುದನ್ನು ಈಗ ಹೇಳುತ್ತಾರೆ,-

**ಇಠ ವ್ಯೋಗಾ ಣಿಠ ಜೋಗಾ ಇಠ ಜೋಗಾ ಣಿಠ ವಯೋಗ ಕಬ ಹೋಈ ।**

**ಯೇ ಭವಚರ ವವಹಾರಊ ಸಿದ್ಧೋ ವಿವರೀಯ ರಹಇ ಇಣ ಸಂಗೋ ॥೧೦೬॥**

**ಗಾಥಾರ್ಥ ಃ-** ಇಷ್ಟವಿಯೋಗ, ಅನಿಷ್ಟಸಂಯೋಗ; ಕೆಲವೊಮ್ಮೆ ಇಷ್ಟದ ಸಂಯೋಗ, ಅನಿಷ್ಟದ ವಿಯೋಗ-ಇದು ಸಂಸಾರೀ ಜೀವಗಳ ವ್ಯವಹಾರವೇ ಇದೆ. ಸಿದ್ಧರು ಇವೆಲ್ಲವುಗಳಿಂದ ವಿಪರೀತರಿದ್ದಾರೆ ಎಂದರೆ ರಹಿತರಿದ್ದಾರೆ.

**ಭಾವಾರ್ಥ ಃ-** ಸಂಸಾರೀ-ಶರೀರಧಾರೀ ಜೀವಗಳಿಗೆ ಕೆಲವೊಮ್ಮೆ ಇಷ್ಟ ವಿಯೋಗವಾಗುತ್ತದೆ, ಕೆಲವೊಮ್ಮೆ ಅನಿಷ್ಟದ ಸಂಯೋಗವಾಗುತ್ತಿರುತ್ತದೆ. ಅವುಗಳಿಂದ ಆತ್ಮನು ದುಃಖಿಯಾಗುತ್ತಾನೆ, ಆರ್ತವಿಕಲ್ಪ ಮಾಡಿ ಪಾಪದ ಬಂಧವನ್ನೇ ಮಾಡಿಕೊಳ್ಳುತ್ತಾನೆ. ಕೆಲವೊಮ್ಮೆ ಇಷ್ಟದ ಸಂಯೋಗವಿರುತ್ತದೆ, ಅನಿಷ್ಟದ ವಿಯೋಗವಾಗುತ್ತದೆ; ಆಗ ಜೀವನು ಪುಣ್ಯದ ಉದಯದಲ್ಲಿ ಹರ್ಷ ಮನ್ನಿಸುತ್ತಾನೆ. ಈ ಪ್ರಕಾರದ ದುಃಖ-ಸುಖಗಳು ಸಂಸಾರೀ ಜೀವಗಳ ವ್ಯವಹಾರವೆಂದೇ ತಿಳಿಯುವುದು. ಈ ಹೇಳಲಾದ ಇಷ್ಟ ವಿಯೋಗ ಅನಿಷ್ಟ ಸಂಯೋಗಾದಿ ದುಃಖ-ಸುಖಗಳು ಸಿದ್ಧರಲ್ಲಿ ಇರುವುದಿಲ್ಲ. ಸಿದ್ಧರಲ್ಲಿ ಇಷ್ಟ ವಿಯೋಗ ಅನಿಷ್ಟ ಸಂಯೋಗಗಳ ಕಾರಣಗಳಿರುವುದಿಲ್ಲ ಮತ್ತು ಕಾರಣದ ಅಭಾವದಲ್ಲಿ ಸಾಂಸಾರಿಕ ಸುಖ-ದುಃಖಗಳೂ ಇರುವುದಿಲ್ಲ. ಆದುದರಿಂದ ಸಿದ್ಧ ಭಗವಂತರು ಸದಾ ಸುಖಿಗಳೆಂದು ತಿಳಿಯುವುದು.

**ಜಮ್ಮಣ ಮಣ ಜಗ ಲಗಊ ಸುರಣರಣಾರಯ ತಿರಿಯ ಕಿಂ ಹ ಭಾಜಯ ।**

**ಸಹು ಅಂತಕ ಮುಹ ಕವಲಯ ಏಕೋ ಸಂಣಾಯ ಧಮ್ಮ ಅಣೆಣಾಹೋ ॥೧೦೭॥**

**ಗಾಥಾರ್ಥ :-** ಜಗತ್ತಿನಲ್ಲಿ ಜನ್ಮ-ಮರಣಗಳು ಅಂಟಿಕೊಂಡಿವೆ. ದೇವ, ಮಾನವ, ನಾರಕಿ, ತಿರ್ಯಂಚಗಳು ಪಾಪ, ಎಲ್ಲಿ ಓಡಿ ಹೋಗುವವು ? ಕೊನೆಗೆ ಕಾಲದ ಮುಖಕ್ಕೆ ತುತ್ತಾಗುತ್ತವೆ. ಒಂದು ಧರ್ಮವೇ ಶರಣಿದೆ, ಬೇರೆ ಯಾವುದೂ ಶರಣಿಲ್ಲ.

**ಭಾವಾರ್ಥ :-** ಶರೀರ-ಇಂದ್ರಿಯ ನಾಮಕರ್ಮದ ಉದಯದಿಂದ ನವೀನ ಪರ್ಯಾಯ ಉತ್ಪನ್ನವಾಗುವುದು ಜನ್ಮವೆನಿಸಿಕೊಳ್ಳುತ್ತದೆ. ಉತ್ಪನ್ನವಾದ ಪರ್ಯಾಯದಿಂದ ಬಿಡುಗಡೆಯಾಗಿ ಅನ್ಯಗತಿಗೆ ಹೋಗುವುದು ಮರಣವೆನಿಸಿಕೊಳ್ಳುತ್ತದೆ. ಇದರ ಆಯು ಸ್ಥಿತಿಯ ಪ್ರಮಾಣವು ಸಮಯದಿಂದ ಹಿಡಿದು ಗಳಿಗೆ, ಪ್ರಹರ, ದಿವಸ, ವರ್ಷಗಳು, ಪಲ್ಯ ಮತ್ತು ಸಾಗರವಿದೆ. ಅದನ್ನೇ ಹೇಳುತ್ತಾರೆ - ಅಲ್ಲಿ ಜಘನ್ಯ ಯುಕ್ತಾಸಂಖ್ಯಾತ ಸಮಯಗಳು ವ್ಯತೀತವಾಗಿ ಹೋದ ಮೇಲೆ ಒಂದು ಆವಲಿಯಾಗುತ್ತದೆ. ಅಸಂಖ್ಯಾತ ಆವಲಿ ಕಾಲವು ವ್ಯತೀತವಾಗಿ ಹೋದ ಮೇಲೆ ಒಂದು ಶ್ವಾಸೋಚ್ಛ್ವಾಸ ಕಾಲವಾಗುತ್ತದೆ. ಈ ಶ್ವಾಸೋಚ್ಛ್ವಾಸಗಳಿಂದ ಸಂಸಾರೀ ಜೀವಗಳ ಸ್ಥಿತಿಯಿರುತ್ತದೆ. ಈ ಸಂಸಾರಿ ಜೀವನು ಈ ಶರೀರದಲ್ಲಿ ಇಷ್ಟು ಶ್ವಾಸೋಚ್ಛ್ವಾಸ ಉಳಿಯುವನು - ಇದನ್ನು ಶರೀರದ ಆಯು ಕರ್ಮವೆಂದು ತಿಳಿಯುವುದು. ಈ ಭವ ಪರ್ಯಾಯಧಾರೀ ಸಂಸಾರಿ ಜೀವನು ತನ್ನ ಸ್ಥಿತಿ ಪ್ರಮಾಣ ಶ್ವಾಸೋಚ್ಛ್ವಾಸ ಭೋಗಿಸಿದ ಮೇಲೆ, ಮರ್ಯಾದೆಯು ಪೂರ್ಣವಾಗುತ್ತಿದ್ದಂತೆಯೇ ಆತ್ಮನು ಪೌದ್ಗಲಿಕ ಶರೀರದ ಸಂಗತಿಯನ್ನು ಬಿಟ್ಟುಕೊಡುತ್ತಾನೆ; ಅದರ ಹೆಸರು ವ್ಯವಹಾರ ನಯದಿಂದ ಲೋಕದಲ್ಲಿ ಮರಣವೆಂದಾಗಿದೆ. ಈ ಪ್ರಕಾರ ಈ ಜನ್ಮ-ಮರಣಗಳು ಶರೀರಧಾರಕ ಜೀವರುಗಳಿಗೆ ಸದೈವ ಅಂಟಿಕೊಂಡಿದೆ.

ವಿವಿಧ ಭೋಗಗಳನ್ನು ಭೋಗಿಸುವಂಥವರೂ ಅನೇಕ ಋದ್ಧಿಗಳ ಧಾರಕರೂ, ಸಾಗರಗಳವರೆಗೆ ಜೀವನವುಳ್ಳವರು ದೇವಗಳಿದ್ದಾರೆ. ವಿವಿಧ ದುಃಖ-ಸುಖಗಳಿಂದ ಕೂಡಿದ ಜೀವನವುಳ್ಳವರು ಮನುಷ್ಯ ಪರ್ಯಾಯಧಾರಕರಿದ್ದಾರೆ. ಅನೇಕ ಮನ, ಅಗೋಚರ ದುಃಖಗಳ ಸಾಗರರೂಪವಾದ ನರಕಗತಿಯಿದೆ. ಅಲ್ಪಸುಖ-ದೀರ್ಘ ದುಃಖದ ಸ್ಥಾನವು ತಿರ್ಯಂಚ ಗತಿಯಿದೆ - ಈ ಪ್ರಕಾರ ನಾಲ್ಕು ಗತಿಗಳ ಒಟ್ಟು ಜೀವಗಳು ಅನಂತವಿವೆ. ಅವು ಜನ್ಮ-ಮರಣದ ದುಃಖಗಳಿಂದ ಪಲಾಯಣ ಮಾಡಿ ಎಲ್ಲಿಗೆ ತಾನೆ ಹೋಗುವವು ? ಎಲ್ಲ ಕಡೆಗೂ ಕಾಲವು ಹೊಡೆಯುತ್ತದೆ-ತಿನ್ನುತ್ತದೆ. ಎಂದರೆ ಈ ಎಲ್ಲ ನಾಲ್ಕು ಗತಿಯಲ್ಲಿ ವಾಸ ಮಾಡುವಂಥ ಜೀವಗಳ ಸಮಸ್ತ ದೇಹರೂಪ ಆಕಾರವು ಕಾಲದ ಮುಖದ ಗ್ರಾಸವಿದೆ.

ಯಾವುದೋ ಜೀವವನ್ನು ಈಗ, ಮತ್ತಾವುದೋ ಜೀವವನ್ನು ನಾಳೆ, ಇನ್ನಾವುದೋ ಜೀವವನ್ನು ನಾಲ್ಕು ದಿನಗಳ ನಂತರ ಕಾಲ ತಿನ್ನುವುದು, ಸಮಸ್ತ ಜೀವಗಳನ್ನು ಕಾಲ ತಿನ್ನುವುದು, ತಪ್ಪಿಸಿಕೊಳ್ಳುವ ಉಪಾಯವು ಯಾವುದೂ ಇಲ್ಲ. ಕೇವಲ ಒಂದು ಧರ್ಮವೇ ಶರಣಿದೆ, ಅನ್ಯ ಯಾವುದೂ ಇಲ್ಲ. ಅದಕ್ಕಾಗಿ ಜನ್ಮ-ಮರಣದ ದುಃಖಗಳಿಂದ ಭಯಭೀತವಿರುವ ಎಲೈ ಭವ್ಯಾತ್ಮಾ ವಿವೇಕಿ ಜನರೇ ! ಧರ್ಮದ ಸೇವನೆ ಮಾಡಿ ಸಿದ್ಧರಲ್ಲಿ ನಡೆಯಿರಿ. ಈ ಪೌದ್ಗಲಿಕ ತನುವನ್ನು ಬಿಟ್ಟುಕೊಟ್ಟು ಅಮೂರ್ತಿಕ ಪದಧಾರಣ ಮಾಡಿರಿ, ಅಲ್ಲಿಯೇ ಸದೈವ ಸುಖಿಯಾಗಿ ಉಳಿಯುವಿರಿ. ಅಲ್ಲಿ ಕಾಲದ ಆಗಮನವಿಲ್ಲ. ಅಲ್ಲಿ ಸ್ಥಿತ ಶುದ್ಧ ಅಮೂರ್ತಿಕ ಆತ್ಮನು ಕಾಲದ ಭಯದಿಂದ ರಹಿತನಿದ್ದಾನೆ. ಆದುದರಿಂದ ಯಾರು ನಾಲ್ಕು ಗತಿಗಳ ಮರಣದಿಂದ ಪಲಾಯಣ ಮಾಡಿ ಕಾಲದಿಂದ ತಪ್ಪಿಸಿಕೊಳ್ಳಲಿಚ್ಛಿಸುತ್ತಿದ್ದರೆ ಧರ್ಮದ ಆಶ್ರಯ ಪಡೆಯಿರಿ, ಬೇರೆ ಯಾರೂ ಮತ್ತು ಯಾವುದೂ ಆಶ್ರಯಭೂತವಿಲ್ಲ.

ಅಗ್ನಿಯ ಭೇದಗಳು ಮೂರಿದ್ದು ಅವು ಯಾರು-ಯಾರನ್ನು ಸುಡುತ್ತವೆಯೆಂಬುದನ್ನು ಈಗ ಹೇಳುತ್ತಾರೆ,-

**ಸೋಗಾಣಲ ಜೇ ದಝುಯ ದಝುಯ ಜೇ ಅತಿಝಾಣ ವಹಣೇಏ ।**
**ಉಪಲಾ ಅಗಣಿ ದಝುಯ ಇವ ತ್ರಯ ಜ್ವಾಲಾ ಯ ಕಾಯಮಣ ದಾಹೂ ॥೧೦೮॥**

**ಗಾಥಾರ್ಥ ಃ-** ಕೆಲವರು ಶೋಕಾಗ್ನಿಯಿಂದ ಸುಡುತ್ತಾರೆ, ಕೆಲವರು ಆರ್ತಧ್ಯಾನರೂಪದ ಅಗ್ನಿಯಿಂದ ಸುಡುತ್ತಾರೆ, ಕೆಲವರು ಕಾಷ್ಠ, ಬಿದಿರು, ಬೆರಣಿ ಮೊದಲಾದವುಗಳ ಅಗ್ನಿಯಿಂದ ಸುಡುತ್ತಾರೆ. ಇವು ಮೂರು ಅಗ್ನಿಗಳಿಂದ ಕಾಯ-ಮನಗಳು ಸುಡುತ್ತವೆ.

**ಭಾವಾರ್ಥ ಃ-** ಶೋಕಾಗ್ನಿಯ ಭೇದಗಳು ಅನೇಕವಿವೆ - ಅವುಗಳಲ್ಲಿನ ಅಸಾತಾ ಕರ್ಮದ ಉದಯದಿಂದ ಇಷ್ಟದ ವಿಯೋಗವಾಯಿತು. ಅದರ ನಿಮಿತ್ತ ಕರ್ಮದ ಉದಯದಿಂದ ಆಗಿರುವ, ಮನಸ್ಸನ್ನು ಭಸ್ಮ ಮಾಡುವಂಥ ಶೋಕರೂಪದ ಅಗ್ನಿಯಿಂದ ದಗ್ಧಾಯಮಾನ ಜೀವನು ಸದೈವ ಚಿಂತಿತನಾಗಿರುತ್ತಾನೆ. ಅಶುಭ ಕರ್ಮದ ಬಂಧ ಮಾಡಿಕೊಳ್ಳುತ್ತ ದುಃಖಿಯಾಗುತ್ತಾನೆ, ದೇಹವು ದುರ್ಬಲವಾಗುತ್ತದೆ; ಅದರಿಂದ ಈ ಶೋಕವನ್ನು ಅಗ್ನಿಯೆಂದು ಹೇಳುತ್ತಾರೆ.

ಹೇಗೆ ಅಗ್ನಿಯಿಂದ ದಗ್ಧನಾದ ಪುರುಷನಿಗೆ ದುಃಖದ ಎದುರಿಗೆ ಆಹಾರವು ರುಚಿಕರವೆನಿಸುವುದಿಲ್ಲ, ನಿದ್ರೆ ಬರುವುದಿಲ್ಲ ಸುಖದ ನಿಮಿತ್ತಭೂತ ನೃತ್ಯಾದಿಗಳು ದೊರಕಿದ ಮೇಲೆಯೂ ದಾಹ ದುಃಖದ ಕಾರಣ ಸುಖಿಯಾಗುವುದಿಲ್ಲ. ಹಾಗೆಯೇ ಶೋಕಾಗ್ನಿಯಿಂದ ಸುಟ್ಟುಹೋದ ಹೃದಯವುಳ್ಳ ಜೀವನಿಗೆ ಶೋಕದ ಕಾರಣ ಆಹಾರವು ರುಚಿಸುವುದಿಲ್ಲ, ನಿದ್ರೆ ಬರುವುದಿಲ್ಲ, ಅನೇಕ ಪ್ರಕಾರದ ಗೀತೆ, ನೃತ್ಯ, ವಾದ್ಯಗಳ ಸುಖದಿಂದ ಅರುಚಿಯಾಗಿ ಹೋಗುತ್ತದೆ, ಸುಖವಾಗುವುದಿಲ್ಲ. ಈ ಶೋಕದ ತೀವ್ರ ಉದಯದಲ್ಲಿ ಬುದ್ಧಿಯು ನಷ್ಟವಾಗಿ ಹೋಗುತ್ತದೆ. ಉಕ್ತಿ-ಯುಕ್ತಿಗಳು ಉತ್ಪನ್ನವಾಗುವುದಿಲ್ಲ. ಒಳ್ಳೆಯ ಜ್ಞಾನದ ಅಭಾವವಾಗುತ್ತದೆ, ಓದಿರುವ ವಿದ್ಯೆ ಮೊದಲಾದವು ನೆನಪಿಗೆ ಬರುವುದಿಲ್ಲ. ಅನೇಕ ರೋಗಗಳ ಉತ್ಪತ್ತಿಯಾಗುತ್ತದೆ, ಇತ್ಯಾದಿ ದುಃಖಗಳು ಶೋಕಾಗ್ನಿಯಿಂದ ಸುಡುತ್ತಿರುವ ವ್ಯಕ್ತಿಯಲ್ಲಿ ಪ್ರಗಟವಾಗುತ್ತವೆ.

ಯಾರ ಹೃದಯದಲ್ಲಿ ಶೋಕಾಗ್ನಿಯಿರುತ್ತದೆ ಅವರ ಬಾಹ್ಯ ಚಿಹ್ನೆಗಳನ್ನು ಹೇಳುತ್ತಾರೆ-ಅವನ ಚಿತ್ತವು ವಿಭ್ರಮರೂಪವಾಗಿ ಸುತ್ತುತ್ತಿರುತ್ತದೆ-ಚಂಚಲವಾಗಿರುತ್ತದೆ. ಕೆನ್ನೆಯ ಮೇಲೆ ಕೈಯನ್ನಿಟ್ಟು ಕುಳಿತಿರುವುದು, ಅಶ್ರುಪಾತವಾಗುವುದು, ದೀರ್ಘ ಶ್ವಾಸೋಚ್ಛ್ವಾಸ ತಗೆದುಕೊಳ್ಳುವುದು, ರೋದನೆ ಮಾಡುವುದು - ಇವೆಲ್ಲ ಕಾರಣಗಳು ದುಃಖವನ್ನು ಹೆಚ್ಚಿಸುವಂಥವಿವೆ. ಆದುದರಿಂದ ವಿವೇಕಿಗಳು, ಸಮತೆಯ ದೃಷ್ಟಿಧಾರಕ ಧರ್ಮಾತ್ಮರು ಇಷ್ಟ ವಿಯೋಗದಲ್ಲಿ ಶೋಕ ಮಾಡುವುದಿಲ್ಲ. ಇದಂತೂ ಶೋಕಾಗ್ನಿಯ ಸ್ವರೂಪವಿದೆ.

ಎರಡನೆಯದು ಆರ್ತಧ್ಯಾನರೂಪದ ಅಗ್ನಿಯಿದೆ. ಅದಕ್ಕೆ ಕಾರಣರೂಪದ ಪವನವು ತಾಗಿದರೆ ಅದು ಪ್ರಜ್ವಲಿತವಾಗಿ ದಾಹವನ್ನುತ್ಪನ್ನ ಮಾಡುತ್ತದೆ. ಅದನ್ನೇ ಹೇಳುತ್ತಾರೆ-ಹೊರಟು ಹೋದ ಒಳ್ಳೆಯ ವಸ್ತುವಿನ ವಿಚಾರದಿಂದ ಆರ್ತ ಅಗ್ನಿಯು ಹೆಚ್ಚುತ್ತದೆ. ಅಶುಭ ವಸ್ತುವು ದೊರಕುವುದರ ಚಿಂತೆಯ ನಿಮಿತ್ತದಿಂದ ಆರ್ತ ಅಗ್ನಿಯು ಹೆಚ್ಚುತ್ತದೆ. ಯಾರದೋ ರೋಗದ ಪೀಡೆಯನ್ನು ನೋಡಿ 'ನನಗೆ ರೋಗವಾಗದಿದ್ದರೆ ಒಳ್ಳೆಯದಿದೆ, ನನ್ನ ರೋಗವು ಹೇಗೆ ನಾಶವಾಗುವುದು ? - ಇತ್ಯಾದಿ ವಿಚಾರದಿಂದ ಆರ್ತಾಗ್ನಿಯು ಪ್ರಜ್ವಲಿತವಾಗುತ್ತದೆ. ಕಾರ್ಯ ಮಾಡುವ ಮೊದಲೇ ಆಗಾಮಿ ಫಲದ ಆರ್ತತೆ ಇತ್ಯಾದಿ ಅನೇಕ ಪ್ರಕಾರದ ಅಗ್ನಿಯಿಂದ ಸುಟ್ಟಿರುವ - ಸುಡುತ್ತಿರುವ ಪುರುಷನಿಗೆ ಬಹಳಷ್ಟು ದುಃಖವಾಗುತ್ತದೆ.

ಈ ಆರ್ತವನ್ನು ಗುರುತಿಸುವ ಚಿಹ್ನೆಗಳನ್ನು ಹೇಳುತ್ತಾರೆ - ಏಕಾಂತದಲ್ಲಿ ಕುಳಿತುಕೊಂಡಿರುವುದು. ಆರ್ತ ಪರಿಣಾಮದ ಮನುಷ್ಯರಿಗೆ ಸಮೂಹವು ಒಳ್ಳೆಯದೆನಿಸುವುದಿಲ್ಲ; ಅದರಿಂದ ಒಬ್ಬನೇ ಏಕಾಂತ ಸ್ಥಾನದಲ್ಲಿ ಕುಳಿತಿರುತ್ತಾನೆ. ಬೇರೆಯವರ ಮಾತು ಅವನಿಗೆ ಒಳ್ಳೆಯವೆನಿಸುವುದಿಲ್ಲ. ಕೋಲಾಹಲ, ಬಹುಜನರಿಂದ ಮಾತುಕತೆ ಮಾಡುತ್ತಿರುವುದು ಅವನಿಗೆ ಒಳ್ಳೆಯದೆನಿಸುವುದಿಲ್ಲ. ಚಿತ್ತವು ಉದಾಸವಾಗಿರುತ್ತದೆ. ಆಹಾರ- ಪಾನೀಯಗಳ ಅಭಿಲಾಷೆಯಿರುವುದಿಲ್ಲ. ಭೋಗಗಳಲ್ಲಿ ಆಸಕ್ತಿಯ-ಅನುರಾಗದ ಭಾವವಿರುವುದಿಲ್ಲ. ಪುರುಷಾರ್ಥವು ಅತ್ಯಂತ ಮಂದವಾಗುತ್ತದೆ. ಆಲಸ್ಯದ

ಭಾವ-ಶರೀರದಲ್ಲಿ ಪ್ರಮಾದವಿರುತ್ತದೆ - ಇತ್ಯಾದಿ ಆರ್ತಭಾವಗಳೆಲ್ಲವೂ ಪಾಪಬಂಧದ ಕಾರಣವಿವೆ; ಎಂದರೆ ಇವನಿಗೆ ಆರ್ತಾಗ್ನಿಯ ದುಃಖವು ವಿಶೇಷವಿದೆ. ಇದು ಎರಡನೆಯ ಆರ್ತಾಗ್ನಿಯಿದೆ.

ಮೂರನೆಯದು ಕಾಷ್ಟ-ಸೌದೆಯ ಅಗ್ನಿಯಿದೆ. ಈ ಅಗ್ನಿಯನ್ನು ಸಮಸ್ತ ಸಂಸಾರಿಗಳು ತಿಳಿಯುತ್ತಾರೆ. ಇದರಿಂದ ಸುಟ್ಟು ಹೋಗುವುದರ ಕುರಿತಾಗಿ ಎಲ್ಲ ಜೀವಗಳು ಭಯಭೀತರಿರುತ್ತಾರೆ.

ಈ ಪ್ರಕಾರ ಇವು ಮೂರು ಅಗ್ನಿಗಳಿವೆ. ಇವುಗಳೊಳಗಿನ ಶೋಕಾಗ್ನಿ ಮತ್ತು ಆರ್ತಾಗ್ನಿಯನ್ನು ಜ್ಞಾನದ ಮಂದತೆಯ ಕಾರಣ ಮೋಹೀ ಜೀವರುಗಳು ತಿಳಿಯಲಾರರು ಮತ್ತು ಈ ಎರಡು ಅಗ್ನಿಗಳಿಂದ ಉತ್ಪನ್ನವಾಗುವ ದಾಹವನ್ನೂ ಅಜ್ಞಾನದ ವಿಶೇಷತೆಯ ಕಾರಣ ಅವರು ತಿಳಿಯುವ ಸಾಧ್ಯತೆಯಿಲ್ಲ. ಜಿನದೇವರ ಆಜ್ಞೆಯ ಅನುಸಾರ ನಡೆಯುವ ತತ್ತ್ವಶ್ರದ್ಧಾನಿಗಳು, ಶುಭಾಶುಭಭಾವರೂಪ ವಿಕಲ್ಪಗಳ ರಹಸ್ಯವನ್ನು ತಿಳಿಯುವಂಥ ಸಮ್ಯಗ್ದೃಷ್ಟಿ-ಜ್ಞಾನಿಗಳು ಆತ್ಮಾ ಮತ್ತು ಕಾಯಗಳನ್ನು ಭಿನ್ನ-ಭಿನ್ನವೆಂದು ತಿಳಿಯುವಂಥವರು, ಮಿಥ್ಯಾ ಪರಿಣತಿಯನ್ನು ನಷ್ಟ ಮಾಡುವಂಥವರು, ಸದೈವ ಅನುಪ್ರೇಕ್ಷೆಗಳ ಚಿಂತನೆ ಮಾಡುವಂಥವರು, ಜಗತ್ತಿನ ದಶೆಯಿಂದ ಉದಾಸೀನರು, ಅಲ್ಪಕಾಲದಲ್ಲಿ ಮೋಕ್ಷಕ್ಕೆ ಹೋಗುವಂಥವರು, ಅನುಭವ ರಸವನ್ನು ಭೋಗಿಸುವಂಥ ಜೀವರುಗಳು ಇವೆರಡೂ ಅಗ್ನಿಗಳ ಭೇದಭಾವವನ್ನು ತಿಳಿಯುತ್ತಾರೆ.

ಕಾಷ್ಠ ಸೌದೆ, ಬೆರಣಿರೂಪದ ಅಗ್ನಿಯಂತೂ ಮೇಲಿನಿಂದ ಕೇವಲ ಕಾಯವನ್ನು ಸುಡುತ್ತದೆ; ಆದರೆ ಶೋಕ ಮತ್ತು ಆರ್ತರೂಪದ ಎರಡೂ ಅಗ್ನಿಗಳು ಅಂತರಂಗದಲ್ಲಿ ಆತ್ಮನ ಪ್ರದೇಶಗಳಲ್ಲಿ ದಾಹವನ್ನು ಉತ್ಪನ್ನ ಮಾಡಿ ಮನಸ್ಸನ್ನು ಸದೈವ ದಹನ ಮಾಡುತ್ತವೆ. ಕಾಷ್ಠ ಮೊದಲಾದವುಗಳ ಅಗ್ನಿಯಿಂದ ಸುಟ್ಟುಕೊಂಡಿರುವವನಂತೂ ಕೇವಲ ಒಂದು ಭವದಲ್ಲಿ ದುಃಖ ಪಡೆಯುತ್ತಾನೆ; ಆದರೆ ಶೋಕ ಮತ್ತು ಆರ್ತ ಅಗ್ನಿಯಿಂದ ಸುಟ್ಟು ಹೋಗಿರುವವನು ಭವ-ಭವದಲ್ಲಿ ದುಃಖ ಪಡೆಯುತ್ತಾನೆ; ಅದರಿಂದ ವಿವೇಕಿಗಳು ಸಮತೆಯರೂಪದ ಶೀತಲಜಲವನ್ನು ಗ್ರಹಣ ಮಾಡಿ ಶೋಕಾದಿ ಅಗ್ನಿಯನ್ನು ಆರಿಸಿಬಿಡುವುದು ಯೋಗ್ಯವಿದೆ. ಇವೆರಡೂ ಅಗ್ನಿಗಳಿಂದ ಸುಟ್ಟಿರುವವರು ಭವಾಂತರಗಳಲ್ಲಿ ದುಃಖ ಪಡೆಯುತ್ತಾರೆಂದು ತಿಳಿದು ಶೋಕ, ಆರ್ತದ ತ್ಯಾಗ ಮಾಡುವುದು ಸುಖಕಾರಿಯಿದೆಯೆಂದು ತಿಳಿಯುವುದು.

ವಿದ್ಯಾದಿ ಅನೇಕ ಒಳ್ಳೆಯ ಗುಣಗಳನ್ನು ಇಂದ್ರಿಯ ಸುಖರೂಪದ ವಂಚಕರು ವಂಚನೆಯಿಂದ ಹಾಳು ಮಾಡುತ್ತಾರೆಂಬುದನ್ನು ಈಗ ಹೇಳುತ್ತಾರೆ,-

**ಬೋಧ ಯ ತವ ಚಾರತ್ತೋ ಸಂಜಮ ಝಾಣೋ ಯ ಸಾಮ್ಯ ಪಣ್ಣೋ ।**
**ಏ ಸಹುಗುಣ ಜಗ ಪೂಜ್ಯೋ ಅಖ ಸುಹವಂಚಯ ತಸಪರಾ ಬುಧೇ ॥೧೦೯॥**

**ಗಾಥಾರ್ಥ :-** ಜ್ಞಾನ, ತಪ, ಚಾರಿತ್ರ, ಸಂಯಮ, ಧ್ಯಾನ, ಶಾಂತ ಪರಿಣಾಮ - ಇವೆಲ್ಲ ಗುಣಗಳು ಜಗತ್ಪೂಜ್ಯವಿವೆ. ಇವುಗಳನ್ನು ವಂಚಿಸುವ ಸಲುವಾಗಿ ಇಂದ್ರಿಯ ಸುಖವನ್ನು ಚೋರ ಸಮಾನವೆಂದು ತಿಳಿದು ಎಲೈ ಪಂಡಿತ ಜನರೇ ಎಚ್ಚತ್ತುಕೊಳ್ಳಿರಿ !

**ಭಾವಾರ್ಥ :-** ನಾನಾ ಪ್ರಕಾರದ ಶಾಸ್ತ್ರಗಳ ಅಭ್ಯಾಸರೂಪ ಚಿಂತಾಮಣಿರತ್ನ, ವಾಂಛಿತ ಸುಖ ನೀಡುವಂಥ ದಾತೃ, ಮೋಕ್ಷಮಾರ್ಗವನ್ನು ತೋರಿಸುವ ಸಲುವಾಗಿ ದೀವಿಗೆಯ ಸಮಾನ, ಸಹಜವಾಗಿಯೇ ಸ್ವರ್ಗಾದಿ ಸುಖಗಳನ್ನು ಕೊಡುವಂಥ ವಿದ್ಯಾಭ್ಯಾಸರೂಪ ಜಗತ್ಪೂಜ್ಯ ಗುಣವನ್ನು ಕಳೆದುಕೊಳ್ಳುವ ಸಲುವಾಗಿ ಇಂದ್ರಿಯ ಸುಖದ ಅಭಿಲಾಷೆಯು ಕಳ್ಳನ ಸಮಾನವಿದೆ. ತಾತ್ಪರ್ಯವೆಂದರೆ ಜ್ಞಾನಗುಣದ ಧಾರಕ ಜ್ಞಾನಿಯು ಕೂಡ ಒಂದುವೇಳೆ ತಪ್ಪಿಕೂಡ ಇಂದ್ರಿಯ ಸುಖಗಳ ಆಕಾಂಕ್ಷೆಯಲ್ಲಿ ಮೋಸ ಹೋದರೆ ಆ ಆಕಾಂಕ್ಷೆಯು ಧರ್ಮಶಾಸ್ತ್ರಗಳ ಜ್ಞಾನವನ್ನು

ಕದ್ದು ಬಿಡುತ್ತದೆ, ಲೂಟಿಮಾಡಿ ಬಿಡುತ್ತದೆ. ಆದುದರಿಂದ ಜಿನದೇವಭಾಷಿತ ವಿದ್ಯೆಯ ಅಭ್ಯಾಸಿಗಳು, ಶುಭಾಶುಭ ಪಂಥದ ವೇತ್ತಾರರು ಧರ್ಮದ ತ್ಯಾಗ ಮಾಡಿ ಇಂದ್ರಿಯ ಜನಿತ ಸುಖಗಳಲ್ಲಿ ಆಸಕ್ತರಾಗುವುದಿಲ್ಲ.

ವಿವಿಧ ದುರ್ಧರ ತಪಗಳ ಧಾರಕರು, ಅನೇಕ ಋದ್ಧಿ ಸಂಯುಕ್ತರು, ಅನ್ಯರಿಗೆ ಪುಣ್ಯ ಸಂಪದದ ದಾತೃಗಳು, ಜಗತ್ಪೂಜ್ಯ ಗುಣಗಳ ಭಂಡಾರರಾದ ತಪಸ್ವಿಗಳು ಕೂಡ ಯಾವಾಗಲಾದರೂ ಇಂದ್ರಿಯ ಸುಖಗಳ ಲಾಲಸೆಗೆ ವಶರಾಗಿ ಭೋಗಗಳ ಅಭಿಲಾಷೆ ಮಾಡಿದರೆ ಅವರ ತಪಾದಿ ಅನೇಕ ಗುಣಗಳನ್ನು ಕೂಡ ಆ ಇಂದ್ರಿಯರೂಪದ ಕಳ್ಳರು ಕೊಳ್ಳೆ ಹೊಡೆಯುತ್ತಾರೆ; ಆದುದರಿಂದ ವೀತರಾಗ ದಶೆಯ ಧಾರಕರಾದ ನಿಜವಾದ ತಪಸ್ವಿಗಳು ಇಂದ್ರಿಯಜನಿತ ಭೋಗಗಳಲ್ಲಿ ರಾಗಭಾವ ಮಾಡುವುದಿಲ್ಲ ಮತ್ತು ತಮ್ಮ ತಪರೂಪ ಧನದ ರಕ್ಷಣೆ ಮಾಡುತ್ತಾರೆ.

ಪಂಚಮಹಾವ್ರತ, ಪಂಚಸಮಿತಿ, ಮೂರು ಗುಪ್ತಿರೂಪ ಹದಿಮೂರು ಜಾತಿಯ ಚಾರಿತ್ರವು ಮೋಕ್ಷವೆಂಬ ದ್ವೀಪದಲ್ಲಿ ಹೋಗಿ ತಲುಪುವ ಸಲುವಾಗಿ ಜಹಜದ ಸಮಾನವಿದೆ. ತ್ರಿಭುವನದ ಜೀವರುಗಳಿಂದ ವಂದನೀಯವಿರುವಂಥ ಚಾರಿತ್ರರೂಪದ ರತ್ನವನ್ನು ಕೊಳ್ಳೆ ಹೊಡೆಯುವ ಸಲುವಾಗಿ ಇಂದ್ರಿಯ ಸುಖಗಳ ಭಾವನೆಯು ದರೋಡೆಖೋರನ ಹಾಗಿದೆ. ಇಂಥ ಚಾರಿತ್ರಧಾರಕ ಯತೀಶ್ವರರು ಕೂಡ ಒಂದುವೇಳೆ ತಪ್ಪಿ ಧರ್ಮದಿಂದ ಚ್ಯುತರಾಗಿ ಭೋಗಗಳಲ್ಲಿ ಬಂದುಬಿಟ್ಟರೆ ಅವರ ಚಾರಿತ್ರರೂಪದ ರತ್ನವೂ ಕಳವಾಗಿ ಹೋಗುತ್ತದೆ. ಆದುದರಿಂದ ಚಾರಿತ್ರದ ಧಾರಕರಾದ ತಪೋಧನರು ಇಂದ್ರಿಯ ಭೋಗಗಳ ಕುರಿತಾಗಿರುವ ರಾಗಭಾವವನ್ನು ತ್ಯಜಿಸುತ್ತಾರೆ.

ಪಂಚೇಂದ್ರಿಯ ಹಾಗೂ ಮನಸ್ಸನ್ನು ಜಯಿಸುವಂಥವರು, ಷಟ್ಕಾಯ ಜೀವಗಳ ರಕ್ಷಕರಾದ ಸಂಯಮಿಗಳು- ಇಂದ್ರಿಯ ಸಂಯಮ, ಪ್ರಾಣಿ ಸಂಯಮಗಳ ಧಾರಕರು, ಜಗದ್ವಂದ್ಯ ಯೋಗಿಗಳು ಕೂಡ ಒಂದುವೇಳೆ ಭೋಗಗಳ ಅಭಿಲಾಷೆ ಮಾಡಿದರೆ ತಮ್ಮ ಸಂಯಮರೂಪದ ರತ್ನವನ್ನು ಕಳೆದುಕೊಳ್ಳುತ್ತಾರೆ; ಅದರಿಂದ ಸಂಯಮದ ಲೋಭಿಗಳು ತಮ್ಮ ಸಂಯಮಗುಣದ ರಕ್ಷಣೆಯ ಸಲುವಾಗಿ ಭೋಗಗಳ ಇಚ್ಛೆಮಾಡಬಾರದು.

ಸ್ವರ್ಗಾದಿಗಳ ದಾತೃ ಧರ್ಮಧ್ಯಾನ ಮತ್ತು ಶುಕ್ಲಧ್ಯಾನದಿಂದ ಮೋಕ್ಷದ ಅವಿನಾಶೀ ಸುಖವು ಪ್ರಾಪ್ತವಾಗುತ್ತದೆ. ಇಂಥ ಧರ್ಮ್ಯ ಮತ್ತು ಶುಕ್ಲಧ್ಯಾನಗಳ ಧಾರಕರಾದ ಯತೀಶ್ವರರು ಕೂಡ ಎಂದಾದರೂ ಇಂದ್ರಿಯಜನಿತ ಸುಖದ ಪ್ರೀತಿಯಲ್ಲಿ ಪತನ ಹೊಂದಿದರೆ ತಮ್ಮ ಧರ್ಮರೂಪದ ಧನವನ್ನು ಕಳೆದುಕೊಂಡು ಬಿಡುತ್ತಾರೆ; ಅದರಿಂದ ಧ್ಯಾನಿಗಳು ಸಮತೆಯ ರಸದ ಭೋಗಿಗಳು ಇಂದ್ರಿಯ ಸುಖದ ಇಚ್ಛೆ ಮಾಡಬಾರದು.

ಸಹಜ ಸುಧಾರಸದ ಆಸ್ವಾದಕರು, ವಿವಿಧ ತತ್ತ್ವವಿಚಾರದ ಬಲದಿಂದ ಕಷಾಯಗಳ ಮದವನ್ನು ಮುರಿದು ಹಾಕಿ, ಮೋಹವನ್ನು ನಿರ್ಬಲಗೊಳಿಸಿ, ಸ್ವಯಂ ಸಮತೆಯ ಸಾಗರದಲ್ಲಿ ಪ್ರವೇಶಮಾಡಿ ನಿರಾಕುಲರಾಗಿರುವಂಥ ಮುನೀಶ್ವರರು ಕೂಡ ಒಂದುವೇಳೆ ತಪ್ಪಿ ಇಂದ್ರಿಯ ಸುಖದ ಮೂಲಕ ಚಿತ್ತವನ್ನು ಸರಾಗಿಯನ್ನಾಗಿಸಿಕೊಂಡರೆ ಇಂದ್ರಿಯರೂಪದ ಕಳ್ಳನು ಅವರ ಸಮತೆಯ ರೂಪದ ಧನವನ್ನು ಕಸಿದುಕೊಂಡು ಅವರನ್ನು ಭಿಕ್ಷುಕನ ಸಮಾನ ಮಾಡಿಬಿಡುತ್ತಾನೆ; ಅದರಿಂದ ಸಮತಾರಸದ ಆಸ್ವಾದಕರು, ನಿರಾಕುಲ ಭೋಗದ ವಾಂಛಕ ಜೀವರುಗಳು ಇಂದ್ರಿಯ ಭೋಗಗಳ ಮಾರ್ಗದಲ್ಲಿ ಚಿತ್ತವನ್ನು ಚಂಚಲ ಮಾಡುವುದಿಲ್ಲ- ಹೋಗಗೊಡುವುದಿಲ್ಲ.

ಈ ಪ್ರಕಾರ ಹೇಳಲಾದ ಜ್ಞಾನ, ತಪ, ಚಾರಿತ್ರ, ಸಂಯಮ, ಶುಭಧ್ಯಾನ, ಸಮಭಾವ - ಇವೆಲ್ಲ ಗುಣಗಳು ಜಗತ್ಪೂಜ್ಯವಿವೆ. ಈ ಗುಣರೂಪದ ರತ್ನಗಳನ್ನು ಕೊಳ್ಳೆ ಹೊಡೆಯುವ ಸಲುವಾಗಿ ಇಂದ್ರಿಯ ಸುಖಗಳು ಕಳ್ಳರಂತಿವೆ. ಅದಕ್ಕಾಗಿ ಒಂದುವೇಳೆ ತಮ್ಮ ಧರ್ಮರೂಪದ ಗುಣವನ್ನು ರಕ್ಷಿಸಲಿಚ್ಛಿಸುತ್ತಿದ್ದರೆ ಧರ್ಮದ ಕಾಲದಲ್ಲಿ ಇಂದ್ರಿಯ ಭೋಗಗಳ ಸೇವನೆ ಮಾಡುವುದು ಯೋಗ್ಯವಾಗಿಲ್ಲ.

ಈಗ ಇಷ್ಟವಿಯೋಗದ ಎರಡು ಭೇದಗಳನ್ನು ಹೇಳುತ್ತಾರೆ,-

**ಜುಗ ಭೇಯಂತ ವಿಯೋಗೋ, ಏಕಾಸೋ ಇಗ ಹೋಯ ಣಯ ಆಸೋ ।**

**ಥಿತಿ ಖಯ ವಿಣಾಸಉ, ಆಸಯ ಜೇ ಭಿಣ ಗಮಣ ಉ ಅಣ ಠಾಣಯ ॥೧೧೦॥**

**ಗಾಥಾರ್ಥ ಃ-** ಇಷ್ಟ ವಿಯೋಗದಲ್ಲಿ - ೧. ಆಶಾ ಸಹಿತ ಮತ್ತು ೨. ಆಶಾರಹಿತವೆಂದು ಎರಡು ಭೇದಗಳಿವೆ, ಸ್ಥಿತಿಯು ಕ್ಷಯವಾದ ಮೇಲೆ ಆಗುವ ವಿಯೋಗವು ಆಶಾರಹಿತವಿದೆ ಮತ್ತು ಯಾವುದು ಆಶಾಸಹಿತವಿದೆ ಅದು ಅನ್ಯಸ್ಥಾನಕ್ಕೆ ಹೋಗುವ ಸಲುವಾಗಿ ಪೃಥಕ್ಕಾಗಿ ಗಮನ ಮಾಡುತ್ತದೆ.

**ಭಾವಾರ್ಥ ಃ-** ಸಂಸಾರದಲ್ಲಿ ಚೇತನ ಅಚೇತನರೂಪ ಇಷ್ಟ ವಸ್ತುಗಳ ಕುರಿತಾಗಿ ಆಗುವಂಥ ವಿಯೋಗದ ಭೇದಗಳು ಎರಡು ಇವೆ. ಅವನ್ನೇ ಹೇಳುತ್ತಾರೆ - ಮಾತಾ-ಪಿತರು, ಸೋದರ, ಪುತ್ರ, ಪತ್ನಿ, ಆನೆ, ಕುದುರೆ ಮೊದಲಾದ ಇಷ್ಟ ಚೇತನ ಪದಾರ್ಥಗಳ ಸಂಬಂಧವಾಗಿರುವ ವಿಯೋಗದಲ್ಲಿ - ಆಶಾಸಹಿತವಿಯೋಗ ಮತ್ತು ಆಶಾರಹಿತ ವಿಯೋಗವೆಂದು ಎರಡು ಭೇದಗಳಿವೆ.

ಅವುಗಳಲ್ಲಿನ ಯಾವುದೋ ಚೇತನ ಪದಾರ್ಥದ ಆಯು ಕರ್ಮದ ಸ್ಥಿತಿಯು ಪೂರ್ಣವಾಗಿ ಹೋದ ಮೇಲೆ ಪರ್ಯಾಯವನ್ನು ಬಿಟ್ಟುಕೊಟ್ಟು ಪರಲೋಕಕ್ಕೆ ಹೊರಟು ಹೋದ ಮೇಲೆ ಆ ಆತ್ಮನ ವಿಯೋಗದಲ್ಲಿ ಪುನಃ ದೊರಕುವ ಆಸೆಯಿಲ್ಲದಿರುವುದು, ಅದು ಆಶಾರಹಿತ ವಿಯೋಗವಿದೆ ಮತ್ತು ಯಾರೋ ತಮ್ಮ ಇಷ್ಟರು ಬೀಳ್ಕೊಂಡು ಒಂದು ಸ್ಥಾನದಿಂದ ಭಿನ್ನರಾಗಿ ಪರದೇಶಕ್ಕೆ ಗಮನಮಾಡುತ್ತಾರೆ. ಇದರಲ್ಲಿ ಪುನಃ ದೊರಕುವ ಆಸೆಯಿರುವುದರಿಂದ ಇದು ಆಶಾಸಹಿತ ವಿಯೋಗವಿದೆ. ಈ ಪ್ರಕಾರ ವಿಯೋಗದ ಎರಡು ಭೇದಗಳಿವೆ. ಮೋಹಸಹಿತರಿರುವ ಜೀವರುಗಳಿಗೆ ಆಶಾಸಹಿತ ವಿಯೋಗದಲ್ಲಿ ಅಲ್ಪದುಃಖವಾಗುತ್ತದೆ ಮತ್ತು ಆಶಾರಹಿತ ವಿಯೋಗದಲ್ಲಿ ಮಹಾದುಃಖವಾಗುತ್ತದೆ.

ರತ್ನ, ಒಡವೆ, ವಸ್ತ್ರ, ಮನೆ ಮೊದಲಾದ ಅಚೇತನ ಪದಾರ್ಥಗಳ ವಿಯೋಗವಾಗುವುದು - ಯಾರಿಗಾದರೂ ಕೇಳಿದ ಮೇಲೆ ಕೊಡುವುದು ಅಥವಾ ಸಾಲದ ಸಲುವಾಗಿ ಯಾರಿಗಾದರೂ ಹಣವನ್ನು ಕೊಡುವುದು ಇತ್ಯಾದಿ ಕಾರಣಗಳಿಂದ ಧನದ ವಿಯೋಗವಾಗುವುದು ಅದು ಆಶಾಸಹಿತ ವಿಯೋಗವಿದೆ. ಈ ಧನವು ಮರಳಿ ಬರುವ ಅಭಿಲಾಷೆಯಿದ್ದರೂ ಅಲ್ಪ ಚಿಂತೆಯಿದೆ. ಆದರೆ ಯಾವ ಧನಾದಿ ಅಚೇತನ ವಸ್ತುಗಳ ಕಳವಾಗಿ ಹೋಗಿದ್ದರೆ, ಅಗ್ನಿಯಲ್ಲಿ ಸುಟ್ಟು ಹೋಗಿದ್ದರೆ ಅಥವಾ ಯಾರೋ ಬಲವಂತದಿಂದ ಕಸಿದುಕೊಂಡಿದ್ದರೆ - ಇತ್ಯಾದಿ ಪ್ರಕಾರದಿಂದ ಹೊರಟು ಹೋಗಿರುವ ವಸ್ತುಗಳು ಮರಳಿ ಬರುವ ಆಶೆ ಇಲ್ಲದಿರುವುದರಿಂದ ಅದು ಆಶಾರಹಿತ ವಿಯೋಗವಿದೆ. ಇದರ ದುಃಖ ವಿಶೇಷವಾಗಿ ಆಗುತ್ತದೆ-ಹೀಗೆ ಜಗತ್ತಿನ ಜೀವರುಗಳ ರೀತಿಯಿದೆ.

ಪುಣ್ಯ-ಪಾಪಗಳ ದಶೆಯನ್ನು ತಿಳಿಯುವಂಥ, ವಿವೇಕಿ ಸಮ್ಯಗ್ದೃಷ್ಟಿಗಳಿಗೆ ಎರಡೂ ದಶೆಯ ವಿಯೋಗದಲ್ಲಿ ದುಃಖವಾಗುವುದಿಲ್ಲ. ಸದೈವ ಸಮತಾರಸವನ್ನು ಭೋಗಿಸುವಂಥ ಧರ್ಮಾತ್ಮರು ಇಷ್ಟ ಮತ್ತು ಅನಿಷ್ಟ ಎರಡೂ ವಸ್ತುಗಳು ವಿನಾಶಿಕವಿವೆ ಕರ್ಮಾಧೀನವಿದೆ ಹಾಗೂ ತಮ್ಮ ಸ್ಥಿತಿ ಪ್ರಮಾಣ ಉಳಿಯುತ್ತವೆಯೆಂಬುದನ್ನು ಚೆನ್ನಾಗಿ ತಿಳಿದುಕೊಂಡಿರುತ್ತಾರೆ. ಪುಣ್ಯದ ಉದಯದಿಂದ ದೊರಕಿದ ಒಳ್ಳೆಯ ವಸ್ತುವೂ ಕೂಡ ತನ್ನ ಸ್ಥಿತಿ ಪ್ರಮಾಣ ಇದ್ದು-ರಸವಿತ್ತು ವಿನಷ್ಟವಾಗಿ ಹೋಗುತ್ತದೆ. ಸ್ಥಿತಿಯು ಪೂರ್ಣವಾದ ಮೇಲೆ ದೇವ-ಇಂದ್ರರುಗಳಿಂದ ಇರಿಸಲಾದರೂ ಉಳಿಯುವುದಿಲ್ಲ. ಅನಿಷ್ಟ ವಸ್ತುವಿನ ಸಂಯೋಗವು ಪಾಪದ ಉದಯದಿಂದ ಆಗುತ್ತದೆ. ಅದು ಯಾರ ಭೋಗಿಸುವುದರಿಂದಲೂ ಹೋಗುವುದಿಲ್ಲ, ತನ್ನ ಸ್ಥಿತಿಯನ್ನು ಪೂರ್ಣ ಮಾಡಿಯೇ ಹೋಗುತ್ತದೆ. ಮುಗ್ಧ, ಮೋಹಿಯು ಪರವಸ್ತುವನ್ನು ತನ್ನದೆಂದು ಮನ್ನಿಸಿ ದೃಢವಾಗಿ ಇಟ್ಟುಕೊಳ್ಳುವಂಥ ಜೀವನಂತೂ ಇಷ್ಟ ವಿಯೋಗದಲ್ಲಿ ಮಹಾದುಃಖಿಯಾಗುತ್ತಾನೆ ಮತ್ತು ಯಥಾರ್ಥ ದೃಷ್ಟಿಯಧಾರಕ-ಪರವನ್ನು ಪರವೆಂದು ತಿಳಿಯುವಂಥ ಜೀವರುಗಳಿಗೆ ಖೇದಭಾವವಾಗುವುದಿಲ್ಲ.

ಯಾವ ಪ್ರಕಾರ ವಿಷಯ-ಕಷಾಯದಲ್ಲಿ ಪರಿಣತಿಯು ತನ್ಮಯತೆಯೊಂದಿಗೆ ತೊಡಗುತ್ತದೆ, ಅದೇ ಪ್ರಕಾರ ಒಂದುವೇಳೆ ಧರ್ಮ-ವಿಷಯದಲ್ಲಿ ತೊಡಗಿದರೆ ಅದರ ಫಲವು ಏನಾಗುತ್ತದೆಯೆಂಬುದನ್ನು ಈಗ ಹೇಳುತ್ತಾರೆ,-

**ಜೇ ಮಣ ವಿಸಯ ಕಸಾಯೋ, ಜೇಹೋ ಲಗಾಯ ಧಮ್ಮ ಕಜ್ಜಾವಿ ।**

**ತಉ ಲವ ಕಾಲ ಣಿರಂಜಣ, ಇಂದೋ ಅಹಮಿಂದ ಸಯಲಮಗಲಾಹೋ ॥೧೧೧॥**

**ಗಾಥಾರ್ಥ :-** ವಿಷಯ-ಕಷಾಯದಲ್ಲಿ ತೊಡಗಿರುವ ಮನಸ್ಸನ್ನು ಒಂದುವೇಳೆ ಅದೇ ಪ್ರಕಾರ ಧರ್ಮ ಕಾರ್ಯದಲ್ಲಿ ತೊಡಗಿಸಿದರೆ ಜೀವನು ಅಲ್ಪಕಾಲದಲ್ಲಿಯೇ ನಿರಂಜನನಾಗಿ ಹೋಗುತ್ತಾನೆ. ಮಾರ್ಗದಲ್ಲಿ (ಮಧ್ಯದಲ್ಲಿ) ಇಂದ್ರ ಮತ್ತು ಅಹಮಿಂದ್ರರೆಲ್ಲರ ಸುಖವು ಸಹಜವಾಗಿಯೇ ಪ್ರಾಪ್ತವಾಗುತ್ತದೆ.

**ಭಾವಾರ್ಥ :-** ಜೀವಗಳ ಪರಿಣತಿಯು ಸಂಸಾರದಲ್ಲಿ ಅನೇಕ ಪ್ರಕಾರದ್ದಿದೆ. ಅನಾದಿ ಕಾಲದಿಂದ ಮರೆತು ಹೋದ ಈ ಜೀವನು ಧರ್ಮದ ಸ್ವಾದವನ್ನು ತಿಳಿಯುವುದಿಲ್ಲ. ಅನಾದಿಕಾಲದ ಅನಂತಕಾಲದಲ್ಲಿ ವಿಷಯ-ಕಷಾಯಗಳಲ್ಲಿ ಮೋಹಿತವಿರುವ ಈ ಜೀವನು-ಪ್ರತಿಯೊಂದು ಗತಿಯಲ್ಲಿ ಭ್ರಮಣ ಮಾಡುವಂಥ ಪ್ರಾಣಿಯು ಇಂದ್ರಿಯ ಸುಖವನ್ನು ಬಹಳಷ್ಟು ಬಯಸುತ್ತದೆ; ಆದರೆ ಜಗವಾಸೀ ಜೀವಗಳ ಚಿತ್ತವು ಹೇಗೆ ವಿಷಯ-ಕಷಾಯಗಳಲ್ಲಿ ರಂಜಿಸುತ್ತ ಏಕಾಗ್ರಪೂರ್ವಕ ತೊಡಗುತ್ತದೆ, ಹಾಗೆಯೇ ಒಂದುವೇಳೆ ಧರ್ಮದಲ್ಲಿ ಏಕಾಗ್ರತೆಯೊಂದಿಗೆ ತೊಡಗಿದರೆ ಅಲ್ಪಕಾಲದಲ್ಲಿಯೇ ಸಿದ್ಧ-ನಿರಂಜನ ಪದವನ್ನು ಪ್ರಾಪ್ತ ಮಾಡಿಕೊಳ್ಳುತ್ತದೆ. ಅಲ್ಲಿ ಜೀವನು ಅನಂತಕಾಲದವರೆಗೆ ಸುಖಿಯಾಗಿರುತ್ತಾನೆ ಹಾಗೂ ಇಂದ್ರಪದವಿ, ಅಹಮಿಂದ್ರ ಪದವಿ, ಒಂಭತ್ತು ಗ್ರೈವೇಯಕ, ಒಂಭತ್ತು ಅನುದಿಶೆ, ಪಂಚ ಅನುತ್ತರ-ಈ ಕಲ್ಪಾತೀತ ದೇವಗಳ ಸುಖವಂತೂ ಸಹಜವಾಗಿಯೇ ಮಾರ್ಗದಲ್ಲಿ ಬಂದು ಪ್ರಾಪ್ತವಾಗುತ್ತವೆ. ಅದರಿಂದ ವಿವೇಕ ಸಂಪನ್ನ ಜೀವರುಗಳಿಗೆ ವಿಷಯ ಕಷಾಯಗಳನ್ನು ಬಿಟ್ಟುಕೊಟ್ಟು ಧರ್ಮದಲ್ಲಿ ತೊಡಗುವುದೇ ಯೋಗ್ಯವಿದೆ.

ಕೃಪಣನು ತನ್ನ ದೇಹವನ್ನು ವಂಚಿಸುತ್ತಾನೆಂದು ಈಗ ಹೇಳುತ್ತಾರೆ,-

**ಕಿಪ್ಪಣ ಣಿಜ ತಣ ವಂಚಯ, ವಂಚಯ ಸುಯ ಪಣಣ ಜಣಕ ತೀಏ ಮಿತ್ತೋಯ ।**

**ತಣ ದೇ ತಣ ಣಹ ದಾಣೋ, ಧಮ್ಮ ರಹೀಯೋ ಮಿತ್ಯ ಕಾಯ ಸಮಜೀವೋ**

**॥೧೧೨॥**

**ಗಾಥಾರ್ಥ :-** ಕೃಪಣ(ಜಿಪುಣ)ನು ತನ್ನ ಶರೀರ, ತನ್ನ ತಾಯಿ, ತನ್ನ ತಂದೆ, ಪತ್ನಿ, ಮಿತ್ರರನ್ನು ವಂಚಿಸುತ್ತಾನೆ. ಅವನು ತನುವನ್ನು ಕೊಟ್ಟು ಬಿಡುತ್ತಾನೆ ಆದರೆ ತೃಣದ್ದೂ ದಾನ ಕೊಡುವುದಿಲ್ಲ. ಧರ್ಮದಿಂದ ರಹಿತ ಜೀವನು ಮೃತಕ ಶರೀರದ ಸಮಾನನಿದ್ದಾನೆ.

**ಭಾವಾರ್ಥ :-** ಮಹಾಕೃಪಣ ಮನಸ್ಸುಳ್ಳವನು ತನ್ನ ಶರೀರವನ್ನು ಮೊದಲು ಮಾಡಿ ಸಂಪೂರ್ಣ ಕುಟುಂಬದವರವರೆಗೆ ಎಲ್ಲರನ್ನೂ ವಂಚಿಸುತ್ತಾನೆ, ಅದನ್ನೇ ಹೇಳುತ್ತಾರೆ. ತನ್ನ ಶರೀರದ ಸಲುವಾಗಿಯೂ ರಸರಹಿತ, ಅಲ್ಪಭೋಜನವಿತ್ತು ಅರ್ಧ ಹೊಟ್ಟೆಯಿಂದ ಇರುತ್ತಾನೆ - ಲೋಭಿಯು ಹೊಟ್ಟೆತುಂಬ ಊಟ ಮಾಡುವುದಿಲ್ಲ. ಹಸಿವೆಯನ್ನು ಸಹಿಸುತ್ತಾನೆ. ಶೀತಕಾಲದಲ್ಲಿ ಶರೀರವು ಸಂಪೂರ್ಣವಾಗಿ ಮುಚ್ಚದಂಥ ಅಲ್ಪ ಹಾಗೂ ಅಗ್ಗದ ಬಟ್ಟೆಯನ್ನು ಧರಿಸಿ ಶೀತದ ವೇದನೆಯನ್ನು ಸಹಿಸುತ್ತಾನೆ. ಒಣಹುಲ್ಲು-ಕಾಷ್ಠದ ತುಂಡುಗಳನ್ನು ಸುಟ್ಟು ಅದರ ಅಗ್ನಿಯಿಂದ ಚಳಿಯನ್ನು ದೂರ ಮಾಡುತ್ತ ಶೀತಕಾಲ ಕಳೆಯುತ್ತಾನೆ. ಬಹಳಷ್ಟು ಕಷ್ಟ ಸಹಿಸುತ್ತ ದಿವಸಗಳನ್ನು ವ್ಯತೀತ ಮಾಡುತ್ತಾನೆ. ಪೈ-ಪೈ ಕೂಡಿಸಿ (ಸ್ವಲ್ಪ-ಸ್ವಲ್ಪ ಧನ ಕೂಡಿಸಿ) ಸುಖ ಮನ್ನಿಸುತ್ತಾನೆ; ಇತ್ಯಾದಿ ಪ್ರಕಾರದಿಂದ ಶರೀರಕ್ಕೆ ಕಷ್ಟ ಕೊಡುತ್ತಾನೆ. ಯಾವ ಶರೀರದಿಂದ ಭಾರ ಹೊರುತ್ತ , ಕೂಲಿ ಮಾಡಿ ಧನ ಗಳಿಸಿದನು ಆ ಶರೀರದ್ದೂ ಪೋಷಣೆ ಮಾಡುವುದಿಲ್ಲ, ಅದಕ್ಕೆ ಹೊಟ್ಟೆ

ತುಂಬ ಆಹಾರ ಕೊಡುವುದಿಲ್ಲ-ಇಂಥ ಲೋಭಿಯು ತನ್ನ ಶರೀರವನ್ನು ವಂಚಿಸುವಂಥವನಿದ್ದಾನೆಂದು ಹೇಳಿದ್ದಾರೆ.

ಇವನ ಪುತ್ರನೂ ಹಸಿವೆಯಿಂದ ಪೀಡಿತನಾಗಿ ರೋದನ ಮಾಡುತ್ತಿರುತ್ತಾನೆ. ಇತರ ಮಕ್ಕಳು ಒಳ್ಳೆಯ ಆಹಾರ - ತಿನಿಸು ತಿನ್ನುತ್ತಿರುವುದನ್ನು ಒಳ್ಳೊಳ್ಳೆಯ ಬಟ್ಟೆ-ಒಡವೆ ಧರಿಸುತ್ತಿರುವುದನ್ನು ನೋಡಿ ಇವನ ಮಗನೂ ಒಳ್ಳೆಯ ಆಹಾರಾದಿಗಳನ್ನು ಬೇಡುತ್ತಾನೆ, ಅವುಗಳ ಸಲುವಾಗಿ ಹಾತೊರೆಯುತ್ತಾನೆ; ಆದರೆ ಈ ದಯೆಯಿಲ್ಲದ ಲೋಭಿಯು ಆಹಾರವನ್ನೇ ಮುಕ್ತ ಮನಸ್ಸಿನಿಂದ ಕೊಡುವುದಿಲ್ಲವೆಂದ ಮೇಲೆ ಆ ಪುತ್ರನು ವಸ್ತ್ರ ಆಭೂಷಣಗಳನ್ನು ಹೇಗೆ ಪಡೆಯುವ ಸಾಧ್ಯತೆಯಿದೆ ? ಈ ಪ್ರಕಾರ ಆ ಕೃಪಣನು ಪುತ್ರನನ್ನು ವಂಚಿಸುವಂಥವನಿದ್ದಾನೆಂದು ಹೇಳಿದ್ದಾರೆ.

ಆ ಕೃಪಣನನ್ನು ಒಂಭತ್ತು ತಿಂಗಳು ಗರ್ಭದಲ್ಲಿ ಧಾರಣ ಮಾಡಿದ ಮಾತೆಯು ಆ ಪುತ್ರನಿಂದ ಒಳ್ಳೆಯ ಭೋಜನ-ವಸ್ತ್ರವನ್ನು ಬೇಡುತ್ತ ಹೇಳುತ್ತಾಳೆ - ಎಲೈ ಮಗನೇ ! ನಮ್ಮ ಮನೆಯಲ್ಲಿ ಬೇಕಾದಷ್ಟು ಧನವಿದೆ ಖರ್ಚು ಮಾಡಿದರೂ ಸವೆಯದಷ್ಟು ಧನವಿದೆ; ಆದಾಗ್ಯೂ ನೀನು ನಮಗೆ ಹೊಟ್ಟೆತುಂಬ ಆಹಾರವನ್ನೂ ಕೊಡುತ್ತಿಲ್ಲ. ಎಲೈ ಕುಲದೀಪಕನೇ ! ಇದನ್ನು ನಾವು ಯಾರಿಗೆ ಹೇಳುವುದು ? ನಾವು ಹಸಿದುಕೊಂಡು ಇರುತ್ತೇವೆ, ಚಳಿಯ ವೇದನೆಯನ್ನು ಸಹಿಸುತ್ತೇವೆ, ಕಷ್ಟವೆಂಬ ಅಗ್ನಿಯಲ್ಲಿ ಸುಟ್ಟು ಹೋಗುತ್ತ-ಬೆಂದು ಹೋಗುತ್ತ ಹಗಲು-ಇರುಳುಗಳನ್ನು ಕಳೆಯುತ್ತಿದ್ದೇವೆ, ಆದರೂ ನಿನಗೆ ದಯೆ ಬರುವುದಿಲ್ಲ. ಮಾತೆಯ ಇಂಥ ವಚನಗಳನ್ನಾಲಿಸಿ ಲೋಭಿಯು ಅಲ್ಲಿಂದ ಹೊರಟು ಹೋಗುತ್ತಾನೆ. ಆಲಿಸಿಯೂ ಆಲಿಸದಂತೆ ಮಾಡುತ್ತಾನೆ; ಆದರೆ ಹಣವನ್ನು ಸ್ವಲ್ಪ ಮಾತ್ರವೂ ಕೊಡುವುದಿಲ್ಲ. ಅವನು ಮಾತೆಯನ್ನು ವಂಚಿಸುವಂಥವನೆನಿಸಿಕೊಳ್ಳುತ್ತಾನೆ.

ಈ ಕೃಪಣನ ತಂದೆಯು ದೊಡ್ಡ ದೊಡ್ಡ ಕಷ್ಟಗಳನ್ನು ಸಹಿಸಿ ದ್ವೀಪ, ಸಮುದ್ರ, ಉದ್ಯಾನ, ನಗರ, ದೇಶಗಳಲ್ಲಿ ಗಮನ ಮಾಡಿ, ಅನೇಕ ಹಸಿವು-ಬಾಯಾರಿಕೆಗಳನ್ನು ಸಹಿಸಿ, ಪಾಪಾರಂಭ ಮಾಡಿ ಬಹಳಷ್ಟು ದ್ರವ್ಯ ಉಪಾರ್ಜನೆ ಮಾಡಿದನು. ಯಾವಾಗ ತನಗೆ ಪುತ್ರನಿಲ್ಲವೆಂಬುದನ್ನು ತಿಳಿದನು, ಪುತ್ರನಿಲ್ಲದೆ ಮನೆ, ಧನಗಳ ಶೋಭೆಯಿಲ್ಲವೆಂಬುದರ ಅರಿವಾಯಿತು, ಆಗ ಪುತ್ರನಿಲ್ಲದ ಐಶ್ವರ್ಯವೆಲ್ಲ ವ್ಯರ್ಥವೆಂಬುದನ್ನು ಮನಗಂಡನು. ಪುತ್ರನ ಸಲುವಾಗಿ ಕುದೇವ-ಕುವೇಶಗಳನ್ನು ಪೂಜಿಸತೊಡಗಿದನು, ಅನೇಕ ಮಂತ್ರ, ತಂತ್ರ, ಯಂತ್ರಗಳನ್ನು ಮಾಡಿ ಮಾಡಿ ಪಾಪದ ಗಂಟನ್ನು ದೊಡ್ಡದಾಗಿಸಿಕೊಂಡನು; ಮತ್ತೆ ಮತ್ತೆ ಮದುವೆಯಾದನು - ಅನೇಕ ಸ್ತ್ರೀಯರೊಂದಿಗೆ ಪರಿಣಯ ಮಾಡಿದನು. ಆಗ ಯಾವುದೋ ಕರ್ಮೋದಯದಿಂದ ಪುತ್ರನು ಉತ್ಪನ್ನನಾದನು. ಅದರಿಂದ ತಂದೆಯು ಅತಿಶಯ ಸುಖ ಮನ್ನಿಸಿದನು. ಯಾಚಕರಿಗೆ ಮನೋವಾಂಛಿತ ದಾನ ಮಾಡಿ, ಪುತ್ರ ಜನ್ಮದ ದೊಡ್ಡ ಉತ್ಸವ ಮಾಡಿದನು.

ನಂತರ ವಿವಿಧ ತಿಂಡಿ-ತಿನಿಸು ಮಿಷ್ಟಾನ್ನಗಳ ಭೋಜನವನ್ನು ಪುತ್ರನಿಗೆ ತಂದು ಕೊಟ್ಟನು. ಅನೇಕ ವಸ್ತ್ರಾಭೂಷಣ ತೊಡಿಸಿ ಪ್ರೀತಿಯಿಂದ ನೋಡಿಕೊಂಡನು. ಪ್ರಯತ್ನಪೂರ್ವಕ ಬೆಳೆಸಿ ತರುಣನನ್ನಾಗಿಸಿದನು. ಸ್ವಯಂ ಇತ್ತ ದಿನ ಕಳೆದಂತೆ ವೃದ್ಧನಾಗಿ ಹೋದನು, ಶರೀರ ಶಕ್ತಿಯು ಕ್ಷೀಣವಾಯಿತು. ಪುತ್ರ ಬೆಳೆದು ತರುಣನಾಗುವುದರಿಂದ ಅವನ ವಿವಾಹಮಾಡಿ ಮನೆಯ ಮಾಲೀಕನನ್ನಾಗಿ ಮಾಡಿದನು. ಮನೆಯ ಸಮಸ್ತ ಧನ-ಧಾನ್ಯಗಳನ್ನು ಪುತ್ರನು ಪ್ರಾಪ್ತ ಮಾಡಿಕೊಂಡಿದ್ದಾನೆ. ಈಗ ತಂದೆಯ ದೇಹವು ದೀನವಾಗಿದೆ, ಇಂದ್ರಿಯಗಳ ಬಲವು ಕಡಿಮೆಯಾಗಿ ಹೋಗಿದೆ. ಆಗ ಅವನು ಪುತ್ರನಿಂದ ಒಳ್ಳೆಯ ಭೋಜನ ಬಯಸುತ್ತಾನೆ, ಬೇಡುತ್ತಾನೆ; ಆಗ ಇವನು ಕೊಡುವುದಿಲ್ಲ ಅವನು ವಸ್ತ್ರ ಬೇಡುತ್ತಾನೆ, ಆದರೆ ಇವನು ಕೊಡುವುದಿಲ್ಲ ಒಂದುವೇಳೆ ಕೊಟ್ಟರೂ ತುಚ್ಛ ಕೊಡುತ್ತಾನೆ ಅಥವಾ ಮಾತು ಹೇಳಿ ಮುಗಿಸಿಬಿಡುತ್ತಾನೆ. ಇಂಥ ಅಪಯಶದ ಮೂರ್ತಿ, ಲೋಭೀ ಪುತ್ರನು ತಂದೆಯನ್ನು ವಂಚಿಸುವಂಥವನಿದ್ದಾನೆ.

ತನ್ನ ಪತ್ನಿಯು ಒಳ್ಳೆಯ ಭೋಜನ, ವಸ್ತ್ರ, ಆಭೂಷಣಗಳನ್ನು ಬಯಸುತ್ತ ಹೇಳುತ್ತಾಳೆ-ನೋಡಿರಿ,

ಬೇರೆಯವರು ಹೇಗಿದ್ದಾರೆ ! ಒಳ್ಳೊಳ್ಳೆಯ ಆಹಾರ ಸೇವಿಸುತ್ತಾರೆ. ಬೆಲೆ ಬಾಳುವ ಬಟ್ಟೆ ಒಡವೆಗಳನ್ನು ಧರಿಸುತ್ತಾರೆ; ನಿಮ್ಮ ಮನೆಯಲ್ಲಿ ಅಧಿಕ ಧನವಿದ್ದರೂ ನಮ್ಮ ಅವಸ್ಥೆಯು ಹೀಗಿದೆ. ಏನೂ ಇಲ್ಲವೆಂದರೆ ಒಳ್ಳೆಯ ಆಹಾರದ ವ್ಯವಸ್ಥೆಯನ್ನಾದರೂ ಮಾಡಿರಿ-ಎಂದು ಪತ್ನಿಯು ದೀನ ವಚನವನ್ನು ನುಡಿಯುತ್ತಾಳೆ; ಆದರೆ ಈ ಲೋಭಿಯು ಪತ್ನಿಗೂ ಕೊಡುವುದಿಲ್ಲ. ಅದರಿಂದ ಇವನು ಪತ್ನಿಯನ್ನು ವಂಚಿಸುವಂಥವನು ಎನಿಸಿಕೊಳ್ಳುತ್ತಾನೆ.

ಯಾವನು ತನ್ನ ಮಿತ್ರರ ಜೊತೆಗೂಡಿ ಅವರ ಧನವನ್ನು ಭೋಗಿಸುತ್ತಾನೆ ಆದರೆ ತನ್ನ ಧನವನ್ನು ಅವರ ಸಲುವಾಗಿ ಎಂದೂ ಖರ್ಚು ಮಾಡುವುದಿಲ್ಲ; ಅವನು ಮಿತ್ರರನ್ನು ವಂಚಿಸುವಂಥವನಿದ್ದಾನೆ-ಇಂಥ ಅಶುಭ ಪರಿಣತಿಯಧಾರಕ ಕೃಪಣನು ದಯಾಭಾವರಹಿತನಿರುತ್ತಾನೆ. ಈ ಕಠೋರ ಹೃದಯದ ಕೃಪಣನು ಸಾಯಬಹುದಾಗಿದೆ, ತನ್ನ ತನುವಿನ ಘಾತ ಮಾಡಿಕೊಳ್ಳಬಹುದಾಗಿದೆ; ಆದರೆ ದಾನದ ನಿಮಿತ್ತದಿಂದ ಒಂದು ಹುಲ್ಲು ಕಡ್ಡಿಯನ್ನೂ ಕೊಡುವುದಿಲ್ಲ. ಇಂಥ ನಿರ್ಲಜ್ಜನು, ದುರ್ಭಾಗ್ಯಶಾಲಿಯು, ನಿಂದಾಪಾತ್ರನು, ಧರ್ಮಭಾವನೆಯಿಂದ ರಹಿತ ಕೃಪಣನು ಜೀವಂತನಾಗಿದ್ದರೂ ಮೃತಕನ ಸಮಾನ ತಿಳಿಯುವುದು.

ತಾತ್ಪರ್ಯವೆಂದರೆ ಈ ಜೀವದ ಜೀವನವು ವ್ಯರ್ಥವಿದೆ, ಕೃಪಣನ ಜೀವನ ಮತ್ತು ಮರಣವು ಸಮಾನವಿದೆ.

ಭಿಕ್ಷೆ ಬೇಡುವ ನೆಪದಿಂದ ಭಿಕ್ಷುಕನು ಮನೆ ಮನೆಗೆ ಬಂದು ಉಪದೇಶವನ್ನೇ ಕೊಡುತ್ತಾನೆಂದು ಈಗ ಹೇಳುತ್ತಾರೆ,-

**ಭಿಕ್ಖಕ ಘಯ ಘಯ ಬೋಧಯ, ಭೋ ಸತ ಪುಂಸಾಹ ದೇಹ ಧಣ ದಾಣಂ ।**
**ವಿಣ ದೀಏ ಮಮ ಜೋವೋ, ಲಹುವಣ ಬಾರ ಬಾರ ಜಾಚಂತೀ ।।೧೧೩।।**

**ಗಾಥಾರ್ಥ :-** ಭಿಕ್ಷುಕನು ಮನೆ-ಮನೆ ಬಾಗಿಲಿಗೆ ಬಂದು ಉಪದೇಶ ಕೊಡುತ್ತಾನೆ, ಎಲೈ ಸತ್ಪುರುಷರೇ ! ಧನವನ್ನು ದಾನ ಮಾಡಿರಿ. ದಾನ ಮಾಡದಿರುವ ನನ್ನನ್ನು ನೋಡಿರಿ. ಲಘುವಾಗಿ ಪುನಃ ಪುನಃ ಬೇಡುತ್ತಿದ್ದೇನೆ.

**ಭಾವಾರ್ಥ :-** ಭಿಕ್ಷೆ ಬೇಡುವಂಥ ದರಿದ್ರನು ಹಸಿವೆಯ ಕಾರಣದಿಂದ ಭಿಕ್ಷೆ ಬೇಡುತ್ತ ಮನೆ-ಮನೆಗೆ ಅಲೆಯುತ್ತಾನೆ. ಇಲ್ಲಿ ಆಚಾರ್ಯರು ಹೇಳುವುದೇನೆಂದರೆ, ಆ ದರಿದ್ರನು ಸ್ವಯಂ ಯಾಚನೆ ಮಾಡುತ್ತಿಲ್ಲ; ಆದರೆ ಕಠೋರ ಚಿತ್ತದ ಧಾರಕರಿಗೆ, ದಯಾರಹಿತ ಕೃಪಣರಿಗೆ ತನ್ನ ದಶೆಯನ್ನು ತೋರಿಸಿ ಉಪದೇಶವನ್ನೇ ಕೊಡುತ್ತಿರುವಂತಿದೆ. ಅವರ ಸಲುವಾಗಿ ಇವನು ಮನೆ-ಮನೆ ಅಲೆದು, ಓ ಧರ್ಮಾತ್ಮಾ ಪುರುಷರೇ ! ಒಂದುವೇಳೆ ತಮ್ಮ ಹತ್ತಿರ ಧನವಿದ್ದರೆ ಅದನ್ನು ದಾನದಲ್ಲಿ ತೊಡಗಿಸಿರಿ, ದಾನ ಮಾಡಿರಿ ಇಲ್ಲದಿದ್ದರೆ ನಂತರ ನಮ್ಮ ಹಾಗೆ ಪಶ್ಚಾತಾಪ ಪಡುವಿರಿ. ದಾನ ಕೊಡದೇ ಇರುವ ನಮ್ಮನ್ನು ನೋಡಿರಿ. ನಾವು ಪೂರ್ವ ಭವದಲ್ಲಿ ಧನ ಪಡೆದಿದ್ದೆವು; ಆದರೆ ದಾನ ಕೊಡಲಿಲ್ಲ, ಅದರಿಂದ ಈ ಭವದಲ್ಲಿ ಹೊಟ್ಟೆ ತುಂಬ ಆಹಾರವಿಲ್ಲ. ಶರೀರವನ್ನು ಮುಚ್ಚಿಕೊಳ್ಳುವ ಸಲುವಾಗಿ ಪರ್ಯಾಪ್ತ ಬಟ್ಟೆಯಿಲ್ಲ. ದರಿದ್ರತೆಯ ಕಾರಣದಿಂದ ಮಹಾ ಅಪಮಾನಿತರಾಗಿ, ದೀನರಾಗಿ, ದರಿದ್ರರಾಗಿ ಆಹಾರಕ್ಕೂ ಗತಿಯಿಲ್ಲದೆ ಮನೆ ಮನೆ ಭಿಕ್ಷೆ ಬೇಡುತ್ತ ತಿರುಗುತ್ತಿದ್ದೇವೆ, ಆದರೂ ಹೊಟ್ಟೆ ತುಂಬುವುದಿಲ್ಲ.

ಈ ಪ್ರಕಾರ ಎಲೈ ಸತ್ಪುರುಷರೇ ! ನಾವು ಈ ಸತ್ಯ ಮಾತಿನ ಸ್ವೀಕಾರ ಮಾಡಿದ್ದೇವೆ ಅಲ್ಲದೆ ಲೋಕದಲ್ಲಿಯೂ ಅದನ್ನೇ ಹೇಳಲಾಗುತ್ತದೆ 'ಯಾವನು ಕೊಡುವನು ಅವನು ಪಡೆವನು, ಕೊಡದವನ ಕೈಗೇನೂ ಬರದು' ಯಾವುದನ್ನು ಕೊಡಲಾಗಿದೆ ಅದುವೇ ಪ್ರಾಪ್ತವಾಗುತ್ತದೆ, ಕೊಡದೇ ಹೋದರೆ ಕೈಗೆ ಬರುವುದಾದರೂ ಎಲ್ಲಿಂದ ? ಈಗ ನಾವು ನಿಶ್ಚಿತವಾಗಿ ತಿಳಿದುಕೊಂಡಿದ್ದೇವೆ. ನಾವು ಪೂರ್ವ ಭವದಲ್ಲಿ ಕೊಡಲಿಲ್ಲ ಅಂತೆಯೇ ದೀನರಾಗಿ ಅಸಹಾಯಕರಾಗಿ ಮತ್ತೆ ಮತ್ತೆ ಬೇಡುತ್ತಿದ್ದೇವೆ ಮತ್ತೆ ಮತ್ತೆ ಅರ್ಥಾತ್ ಮನೆ ಮನೆಯ ಬಾಗಿಲಿಗೆ ಹೋಗಿ ಬೇಡುತ್ತಿದ್ದೇವೆ ಮತ್ತೆ ಮತ್ತೆ ಎಂದರೆ ನಮ್ಮ ರೋಮ-ರೋಮವು ಆಶೀರ್ವಾದ ನೀಡುತ್ತ ಭಿಕ್ಷೆ ಬೇಡುತ್ತದೆ. ಪುನಃ ಪುನಃ ಎಂದರೆ ಮನೆಯ

ಹೊರಗಿದ್ದು ಯಾಚಿಸುತ್ತೇವೆ. ಮತ್ತೆ ಮತ್ತೆ ದಯಾರ್ದ್ರರಾಗಿ ಕೂಗುತ್ತೇವೆ, ರೋದಿಸುತ್ತ ಯಾಚನೆ ಮಾಡುತ್ತೇವೆ; ಆದರೂ ಹೊಟ್ಟೆ ತುಂಬುವುದಿಲ್ಲ. ಪುನಃ ಪುನಃ ನೀರು ಕೇಳುತ್ತೇವೆ. ಬಾಯಾರಿಕೆಯಿಂದ ಜೀವ ಹೋಗುವಂತಾಗಿದೆ, ನೀರು ಕೊಡಿರಿ' ನೀರು ಕೊಡಿರಿ ಎಂದು ದೀನರಾಗಿ ಅಂಗಲಾಚುತ್ತೇವೆ; ಆದರೆ ಪಾಪದ ಉದಯದಿಂದ ನಮಗೆ ಯಾರೂ ನೀರನ್ನು ಕೂಡ ಕೊಡುವುದಿಲ್ಲ. ಈ ಪ್ರಕಾರ ನಾವು 'ಕೊಟ್ಟಿಲ್ಲವೆಂದ ಮೇಲೆ ಎಲ್ಲಿಂದ ಪಡೆಯುವುದು?' ಎಂಬ ನ್ಯಾಯದಿಂದ ಮಹಾದುಃಖಿಯಾಗಿ ಸುತ್ತುತ್ತಿದ್ದೇವೆ.

ಈ ಪ್ರಕಾರ ಎಲೈ ಭವ್ಯರೇ ! ದಾನ ಕೊಡದೇ ಇರುವುದರಿಂದ ನಮ್ಮ ಸ್ಥಿತಿಯು ಹೀಗಾಗಿದೆ ಎಂಬುದರ ಪ್ರತೀತಿ ಮಾಡಿರಿ. ನೀವುಗಳೂ ಈಗ ದಾನ ಕೊಡದಿದ್ದರೆ ನಮ್ಮ ಹಾಗೆ ದುಃಖ ಪಡೆಯುವಿರಿ ಮತ್ತು ನಮ್ಮ ಹಾಗೆ ನಂತರದ ಕಾಲದಲ್ಲಿ ಪಶ್ಚಾತಾಪ ಪಡಬೇಕಾಗುವುದು. ಅದರಿಂದ ಏನಾದರೂ ದಾನ ಕೊಡುವ ಶಕ್ತಿಯಿದ್ದರೆ ಅದನ್ನು ತಪ್ಪಿಸಿಕೊಳ್ಳಬೇಡಿರಿ-ಎಂಬುದಾಗಿ ಇವರು ದರಿದ್ರ ಭಿಕ್ಷುಕರ ವೇಷಧಾರಣ ಮಾಡಿ ಅದೇನು ಉಪದೇಶವನ್ನೇ ಕೊಡುತ್ತ ಅಲೆಯುತ್ತಿರುತ್ತಾರೆ.

ಈ ರೀತಿ ಭಿಕ್ಷುಕರ ದೃಷ್ಟಾಂತವಿತ್ತು ದಾನ ಕೊಡುವ ಮಾರ್ಗ ತಿಳಿಸಿದ್ದಾರೆ. ಆದುದರಿಂದ ವಿವೇಕವಂತರು ಅವಸರ ಪಡೆದು ದಾನ ಮಾಡುವುದು ಯೋಗ್ಯವಿದೆ.

ಈಗ ಸರ್ವಜ್ಞ-ಕೇವಲಿಗಳಿಂದ ಹಿಡಿದು ಸಮ್ಯಗ್ದೃಷ್ಟಿಯ ಮತ್ತು ಮಿಥ್ಯಾದೃಷ್ಟಿಯ ವಚನರೂಪ ಉಪದೇಶದಲ್ಲಿರುವ ಅಂತರವನ್ನು ಹೇಳುತ್ತಾರೆ,-

**ಜಿಣ ಗಣ ಮುಣ ವಚ ಸಾವಯ, ಅತಸಯ ಜುಯ ವಯಣ ಹೋಯ ಸಮದಿಟ್ಠೀ ।**
**ಮಿಚ್ಛೋ ವಚ ವಿಣ ಅತಸಯ, ಇಮ ಣಿಪ್ಪ ರಂಕೇಯ ವಯಣ ಭೇಯಾಯ ॥೧೧೪॥**

**ಗಾಥಾರ್ಥ :-** ಕೇವಲಿ, ಗಣಧರ, ಮುನೀಶ್ವರ, ಶ್ರಾವಕರ ವಚನಗಳು ಅತಿಶಯ ಸಹಿತವಿರುತ್ತವೆ; ಏಕೆಂದರೆ ಇವರು ಸಮ್ಯಗ್ದೃಷ್ಟಿಗಳಿದ್ದಾರೆ. ಆದರೆ ಮಿಥ್ಯಾದೃಷ್ಟಿಯ ವಚನಗಳು ಅತಿಶಯ ರಹಿತವಿರುತ್ತವೆ. ದೊರೆ ಮತ್ತು ದರಿದ್ರನ ವಚನಗಳಲ್ಲಿ ಹೇಗೆ ಭೇದವಿರುತ್ತದೆಯೋ ಹಾಗೆಂದು ತಿಳಿಯುವುದು.

**ಭಾವಾರ್ಥ :-** ಅತಿಶಯಸಹಿತ ವಚನಗಳು ಸತ್ಯತೆಯಿಂದ ಕೂಡಿರುತ್ತವೆ; ಅಂತೆಯೇ ಆ ವಚನಗಳನ್ನು ಧಾರಣ ಮಾಡುವುದರಿಂದ ಜೀವನು ತತ್ತ್ವಜ್ಞಾನಿಯಾಗುತ್ತಾನೆ ಮತ್ತು ಅತಿಶಯ ರಹಿತ ವಚನಗಳಿಂದ ತತ್ತ್ವಜ್ಞಾನವಾಗುವುದಿಲ್ಲ. ಅದನ್ನೇ ಹೇಳುತ್ತಾರೆ - ಕೇವಲಜ್ಞಾನಿಗಳಾದ ಸರ್ವಜ್ಞ ಭಗವಂತರ ವಚನ ಎಂದರೆ ಧ್ವನಿಯನ್ನಾಲಿಸುವುದರಿಂದಲೇ ಕಿವಿಗಳು ಪವಿತ್ರವಾಗುತ್ತವೆ. ಪಾಪದ ನಾಶವಾಗುತ್ತದೆ. ತತ್ತ್ವಜ್ಞಾನದ ಭೇದ(ರಹಸ್ಯ)ವನ್ನು ತೋರಿಸಿಕೊಡುವಂಥ ಅಂತರ್ಯಾಮಿ ಭಗವಂತರ ವಚನಗಳು ಅತಿಶಯ ಸಹಿತವಿರುತ್ತವೆ. ನಾಲ್ಕು ಜ್ಞಾನಗಳ ಧಾರಕ ಗಣಧರ ದೇವರ ವಚನಗಳು ಇದೇ ಭಗವಂತರ ವಚನಾನುಸಾರ ಅರ್ಥವನ್ನೊಳಗೊಂಡಿರುವುದರಿಂದ ಪ್ರಮಾಣವಿವೆ. ಈ ವಚನಗಳು ಅತಿಶಯ ಸಹಿತವಾಗಿರುವುದರಿಂದ ಸತ್ಯವಿವೆ.

ಇಂಥ ಗಣಧರ ದೇವರ ವಚನಪ್ರಮಾಣ ಅರ್ಥಸಹಿತ ಪ್ರರೂಪಣೆ ಮಾಡುವಂಥ ಆಚಾರ್ಯ ಉಪಾಧ್ಯಾಯ, ಸಾಧು ಮುನಿರಾಜರೂಪ ಯತೀಶ್ವರರ ವಚನಗಳು ಅತಿಶಯ ಸಹಿತವಾಗಿರುವುದರಿಂದ ಪ್ರಮಾಣವಿವೆ. ಇವರೇ ಆಚಾರ್ಯರ ಅರ್ಥಾನುಸಾರ, ಪ್ರಮಾಣಾನುಸಾರ ಹೇಳುವಂಥ ಪಂಚಮ ಗುಣಸ್ಥಾನಧಾರಕ ಶ್ರಾವಕರ ವಚನಗಳು ಅತಿಶಯ ಸಹಿತವಿರುವುದರಿಂದ ಪ್ರಮಾಣವಿವೆ. ಇಂಥ ಕೇವಲೀ ಗಣಧರ, ಆಚಾರ್ಯರ ಮೂಲಕ ಹೇಳಲಾಗಿರುವ ಅರ್ಥಾನುಸಾರ ಅರ್ಥವನ್ನು ಗ್ರಹಣ ಮಾಡುವಂಥ ಚತುರ್ಥಗುಣಸ್ಥಾನ ಧಾರಕ ಸಮ್ಯಗ್ದೃಷ್ಟಿ ಜೀವರುಗಳ ವಚನಗಳು ದೇವ-ಗುರುಗಳ ಮುಖಾಂತರ ಹೇಳಿರುವ ಅರ್ಥಾನುಸಾರವಿರುವುದರಿಂದ ಅತಿಶಯ

ಸಹಿತವಿವೆ - ಇವರೆಲ್ಲರೂ ಸಮ್ಯಗ್ದರ್ಶನ-ಜ್ಞಾನಧಾರಕರಿರುವುದರಿಂದ ಜಿನವಚನ, ಗಣಧರವಚನ, ಆಚಾರ್ಯ ಮುನಿಗಳ ವಚನ, ಶ್ರಾವಕ, ಸಮ್ಯಕ್‌ಧಾರಿಗಳ ವಚನ, ಅಸಂಯಮಿ, ಯತಿಯವಚನ-ಇವರೆಲ್ಲರ ವಚನಗಳು ಯಥಾಯೋಗ್ಯ ಅತಿಶಯ ಸಹಿತವಿವೆ. ಅದನ್ನೇ ಹೇಳುತ್ತಾರೆ.

ಕೇವಲೀ ತೀರ್ಥಂಕರರ ವಚನಗಳು ಮೇಘ ಧ್ವನಿಯ ಸಮಾನ ಓಂ ಓಂ..... ಅನಕ್ಷರವಿರುತ್ತವೆ. ಅವುಗಳ ಸಂಬಂಧದಿಂದ ದೇವ, ಮನುಷ್ಯ , ತಿರ್ಯಂಚ-ಇವು ಮೂರು ಗತಿಯ ಜೀವಗಳ ಕರ್ಣದ ನಿಕಟ ವಿದ್ಯಮಾನವಿರುವ ಪುದ್ಗಲ ಸ್ಕಂಧಗಳು ಸಹಜವಾಗಿಯೇ ಅಕ್ಷರರೂಪ ಪರಿಣಮಿತವಾಗುತ್ತವೆ; ಆ ಕಾರಣ ಅವರೆಲ್ಲರೂ ಅವನ್ನು ತಮ್ಮ-ತಮ್ಮ ಭಾಷೆಯ ರೂಪದಲ್ಲಿ ತಿಳಿಯುತ್ತಾರೆ - ಇಂಥ ಅತಿಶಯವು ಕೇವಲ ಭಗವಂತರ ವಚನಗಳಲ್ಲಿ ಇರುತ್ತದೆ.

ಗಣಧರ ದೇವರ ಅಕ್ಷರರೂಪ ವಚನಗಳ ವಿಶ್ವಾಸವು ಮೂರು ಲೋಕದ ಜೀವರುಗಳಿಗೆ ಆಗುತ್ತದೆ. ಆ ಗಣಧರದೇವರ ವಚನಗಳ ಸಹಜ ಸ್ವಭಾವವೇ ಎಂಥದ್ದಿದೆಯೆಂದರೆ ಅವನ್ನು ಆಲಿಸುವುದರಿಂದ ಪಾಪದ ನಾಶವಾಗುತ್ತದೆ. ಗಣಧರ ದೇವರ ವಚನಗಳ ಅತಿಶಯವು ಈ ಪ್ರಕಾರದ್ದಿದೆ.

ಮುನೀಶ್ವರರ ವಚನಗಳು ರಾಗ-ದ್ವೇಷ ರಹಿತವೂ ಸರಳವೂ, ಮಿಷ್ಟವೂ ಮತ್ತು ಎಲ್ಲ ಜೀವಗಳಿಗೆ ಸುಖಕಾರಕವಾಗಿರುತ್ತವೆ; ಅದರಿಂದ ಅವುಗಳ ಪ್ರತೀತಿ ಮಾಡಿ ಎಲ್ಲ ಜೀವರು ಧರ್ಮಸನ್ಮುಖರಾಗುತ್ತಾರೆ. ಇಂಥ ಅತಿಶಯವು ಮುನಿಗಳ ವಚನಗಳದ್ದಿದೆಯೆಂದು ತಿಳಿಯುವುದು.

ಶ್ರಾವಕ-ವ್ರತಿ ಮತ್ತು ಅಸಂಯತ ಸಮ್ಯಗ್ದೃಷ್ಟಿಗಳು ಕೂಡ ಕೇವಲಿಗಳ ವಚನಾನುಸಾರ ಅರ್ಥಸಹಿತ ಉಪದೇಶ ಮಾಡುತ್ತಾರೆ. ಅದರಿಂದ ಈ ತತ್ತ್ವಜ್ಞಾನಿಯ ವಚನಗಳೂ ಧರ್ಮೀ ಜೀವರುಗಳಿಗೆಲ್ಲ ಪ್ರತೀತಿಯನ್ನು ಉತ್ಪನ್ನ ಮಾಡುವಂಥವಿರುವುದರಿಂದ ಅತಿಶಯ ಸಹಿತವಿವೆ. ಮಿಥ್ಯಾದೃಷ್ಟಿಯ ವಚನಗಳು ಜಿನಭಾಷಿತ ಅರ್ಥದಿಂದ ರಹಿತವಿರುವ ಕಾರಣ ಅಸತ್ಯವಿವೆ. ಅತತ್ತ್ವದ ಪ್ರರೂಪಕ ಮತ್ತು ರಾಗ-ದ್ವೇಷದಿಂದ ಕೂಡಿರುವಂಥವಿರುವುದರಿಂದ ಅತಿಶಯರಹಿತವಿವೆ - ಅಪ್ರಮಾಣವಿವೆಯೆಂದು ತಿಳಿಯುವುದು.

ಹೇಗೆ ದೊರೆಯ ಬಾಯಿಂದ ಹೊರಟ ವಚನಗಳು ಎಲ್ಲರಿಗೂ ಪ್ರಮಾಣ ಮತ್ತು ಸತ್ಯವಿರುವುದರಿಂದ ಅವನ್ನು ಎಲ್ಲರೂ ಅಂಗೀಕಾರ ಮಾಡುತ್ತಾರೆ. ದೊರೆಯ ವಚನಗಳ ಉಲ್ಲಂಘನೆ ಮಾಡುವುದರಿಂದ ದಂಡನೆಗೆ ಗುರಿಯಾಗಿ ದುಃಖಿಯಾಗುತ್ತಾರೆ. ಭೂಪನ ಆಜ್ಞೆ ಮನ್ನಿಸುವುದರಿಂದ ಸುಖಿಯಾಗುತ್ತಾರೆ; ಅದೇ ಪ್ರಕಾರ ಇಡೀ ಜಗತ್ತಿನ ದೊರೆರೂಪವಿರುವ ಸರ್ವಜ್ಞ ಭಗವಂತರ ವಚನಾನುಸಾರ ವರ್ತಿಸುವುದರಿಂದ ಸುಖಿಗಳಾಗುತ್ತಾರೆ. ಜಿನ ವಚನಗಳ ಉಲ್ಲಂಘನೆ ಮಾಡುವುದರಿಂದ ಪಾಪದ ಬಂಧವಾಗಿ ದುಃಖ ಉತ್ಪನ್ನವಾಗುತ್ತದೆ ಎಂದರೆ ದೊರೆ ವಚನಗಳು ಅತಿಶಯಸಹಿತವಿವೆ.

ದರಿದ್ರನ ವಚನಗಳು ಅತಿಶಯರಹಿತವಾಗಿರುತ್ತವೆ. ದರಿದ್ರನ ಮೂಲಕ ಯಾರ ಮೇಲೆಯಾದರೂ ಕ್ರೋಧ ಮಾಡಿದ ಮೇಲೆಯೂ ಅವನಿಗೆ ಏನೂ ಆಗುವುದಿಲ್ಲ ಮತ್ತು ಯಾರ ಕುರಿತಾಗಿಯಾದರೂ ಪ್ರಸನ್ನನಾಗುವುದೂ ಕಾರ್ಯಕಾರಿಯಾಗಿಲ್ಲ. ದರಿದ್ರನು ಒಂದುವೇಳೆ 'ನಿನ್ನ ಮನೆ ಲೂಟಿ ಮಾಡುತ್ತೇನೆ'ಂದು ಹೇಳಿದರೆ ಅದರಿಂದ ಮನೆ ಲೂಟಿಯಾಗುವಂತಿಲ್ಲ ಮತ್ತು ಒಂದುವೇಳೆ ದರಿದ್ರನು 'ನಿನಗೆ ರಾಜ್ಯಪದಕೊಡುತ್ತೇನೆ'ಂದು ಹೇಳಿದರೆ ಅವನಿಂದ ರಾಜ್ಯಪದವು ದೊರಕುವುದಿಲ್ಲ. ಅದರಿಂದ ದರಿದ್ರನ ಶುಭಾಶುಭ ವಚನಗಳು ವ್ಯರ್ಥವಿವೆ ದರಿದ್ರನ ಮಾತುಗಳಲ್ಲಿ ಅತಿಶಯವಿರುವುದಿಲ್ಲ.

ಅದೇ ಪ್ರಕಾರ ಅತಿಶಯರಹಿತ ಮಿಥ್ಯಾದೃಷ್ಟಿಯ ವಚನಗಳು ಅಸತ್ಯ ಅಪ್ರಮಾಣವಿದ್ದು ದರಿದ್ರನ

ವಚನಗಳ ಹಾಗೆ ನಿರರ್ಥಕ, ಪಾಪಕಾರಿ, ಅತತ್ತ್ವಶ್ರದ್ಧೆಸಹಿತವಿವೆ. ಅದರಿಂದ ಮಿಥ್ಯಾದೃಷ್ಟಿ-ಮಿಥ್ಯಾಶ್ರದ್ಧೆಯುಳ್ಳವನ ವಚನಗಳು ಅಪ್ರಮಾಣ, ಪಾಪಕಾರಕವೆಂದು ತಿಳಿದು ಗ್ರಹಣ ಮಾಡಬಾರದು. ಅವು ಒಳ್ಳೆಯ ಫಲರಹಿತವಿರುವುದರಿಂದ ಸುಖಕಾರಕವಿರುವುದಿಲ್ಲ.

ಹೇಗೆ ಒಂದುವೇಳೆ ಯಾವನೋ ದೊರೆಯ ಸೇವೆ ಮಾಡಿ ಅವನನ್ನು ಪ್ರಸನ್ನ ಪಡಿಸಿದರೆ ಅವನು ಪ್ರಸನ್ನನಾಗಿ ಎಂದಾದರೂ ದರಿದ್ರತೆಯನ್ನು ನಷ್ಟ ಮಾಡಿ ಬಿಡುತ್ತಾನೆ, ಧನವನ್ನಿತ್ತು, ಗ್ರಾಮವನ್ನಿತ್ತು ಸುಖಿ ಮಾಡುತ್ತಾನೆ. ಅದರಿಂದ ದೊರೆಯ ಸೇವೆಯಂತೂ ಶುಭಫಲದಾಯಕವಿದೆ. ಆದರೆ ಯಾರೋ ಒಂದುವೇಳೆ ದರಿದ್ರನ ಸೇವೆಯನ್ನು ಅನೇಕ ಪ್ರಕಾರದಿಂದ ಮಾಡಿ ದರಿದ್ರನನ್ನು ಆಕರ್ಷಿತಗೊಳಿಸಿ ಅವನನ್ನು ಪ್ರಸನ್ನ ಪಡಿಸಿದರೆ ಅವನ ಸೇವೆಯ ಖೇದವನ್ನು ವ್ಯರ್ಥವೆಂದು ತಿಳಿಯುವುದು. ಅವನು ಸ್ವಯಂ ದರಿದ್ರನಿದ್ದಾನೆ, ಹಸಿದವನಿದ್ದಾನೆ, ದುಃಖಿಯಿದ್ದಾನೆಂದ ಮೇಲೆ ಅವನು ಅನ್ಯರನ್ನು ಹೇಗೆ ಸುಖಿ ಮಾಡುವನು ? ಅದೇ ಪ್ರಕಾರ ಇಂದ್ರ, ಚಕ್ರವರ್ತಿ, ಧರಣೇಂದ್ರ ರೂಪದ ಮೂರು ಲೋಕದ ದೊರೆಗಳ ದೊರೆಯಾದ ಭಗವಂತರ ಸೇವೆ ಮಾಡುವುದರಿಂದ ಸುಖಿಗಳಾಗುತ್ತಾರೆ. ಅವರ ವಚನಾನುಸಾರ ವರ್ತಿಸುವುದರಿಂದ ದೇವ ಸುಖ, ಇಂದ್ರಸುಖ, ಚಕ್ರವರ್ತಿಸುಖ, ವಿದ್ಯಾಧರರ ಸುಖ, ಮಂಡಲೇಶ್ವರ ದೊರೆ ಮೊದಲಾಗಿ ಅನೇಕ ಪದಗಳ ಸುಖವು ನಿಶ್ಚಿತವಾಗಿಯೇ ಪ್ರಾಪ್ತವಾಗುತ್ತದೆ.

ಮಿಥ್ಯಾದೃಷ್ಟಿಯ ವಚನಾನುಸಾರ ವರ್ತಿಸುವುದರಿಂದ ಸುಖ ಪ್ರಾಪ್ತವಾಗುವುದಿಲ್ಲ. ಇದನ್ನು ತಿಳಿದು ಶುಭ ಭಾವನೆಯಿಂದ ರಹಿತ ಮಿಥ್ಯಾವಚನಗಳ ವಿಶ್ವಾಸ ಮಾಡಬಾರದು. ಅವು ಅತಿಶಯರಹಿತವಿವೆ. ಸಮ್ಯಕ್ ಶ್ರದ್ಧೆಯುಳ್ಳವರ ವಚನಗಳು ಸುಖಕಾರಿಯಿವೆ. ಅವನ್ನು ಅತಿಶಯಸಹಿತ ವಚನವೆಂದು ತಿಳಿಯುವುದು.

ಈ ಪ್ರಕಾರ ಸುದೃಷ್ಟಿತರಂಗಿಣಿಯೆಂಬ ಹೆಸರಿನ ಗ್ರಂಥದಲ್ಲಿ ಹಿತೋಪದೇಶದ
ಕಥನ ಮಾಡುವಂಥ ಇಪ್ಪತ್ತಾರನೆಯ ಪರ್ವವು ಸಮಾಪ್ತವಾಯಿತು

★★★★★

- ಯಾವ ಮನುಷ್ಯನು ಪರಿಗ್ರಹರೂಪದ ಕೆಸರಿನಲ್ಲಿ ಮೋಸಹೋಗಿ ಮೋಕ್ಷದ ಸಲುವಾಗಿ ಪ್ರಯತ್ನ ಮಾಡುತ್ತಾನೆ, ಆ ಮೂರ್ಖನು ಪುಷ್ಪ ಬಾಣಗಳಿಂದ ಅದೇನು ಸುಮೇರು ಪರ್ವತವನ್ನು ಖಂಡಿತಗೊಳಿಸುತ್ತಿರುವಂತೆ ಕಂಡು ಬರುತ್ತದೆ. ಅಯ್ಯಾ ! ಯಾವನು ಬಾಹ್ಯದ ಧನ-ಧಾನ್ಯಾದಿರೂಪ ಪರಿಗ್ರಹವನ್ನೇ ಬಿಟ್ಟು ಕೊಡುವುದು ಸಾಧ್ಯವಾಗುತ್ತಿಲ್ಲ, ಆ ನಪುಂಸಕನು ಭವಿಷ್ಯದಲ್ಲಿ ಕರ್ಮದ ಸೇನೆಯನ್ನು ಹೇಗೆ ತಾನೆ ನಷ್ಟ ಮಾಡುವ ಸಾಧ್ಯತೆಯಿದೆ ?
- ಧನದ ಲೋಭದ ಅಪೇಕ್ಷೆಯಿಂದ ಕೀರ್ತಿಯ ಮೋಹ ಬಿಡುವುದು ಮಹಾಕಠಿಣವಿದೆ. ಕೀರ್ತಿಯ ಮೋಹವಂತೂ ಜ್ಞಾನಿಯನ್ನು ಕೂಡ ವಿಹ್ವಲಗೊಳಿಸುತ್ತದೆ ! ಯಾವ ರಾಜ್ಯ ಮತ್ತು ಧನಾದಿಗಳ ಕಾರಣಭೂತ ವ್ಯಾಪಾರಾದಿಗಳಿವೆ ಅವೆಲ್ಲವೂ ನಿಶ್ಚಯದಿಂದ ಪಾಪಾಯುಕ್ತವಿವೆ ! ಯಾವ ಜೀವರುಗಳು ಸಂಸಾರದಿಂದ ಭಯಭೀತರಾಗಿ - ಈ ಪಾಪಗಳ ತ್ಯಾಗ ಮಾಡಿ ಸ್ವಭಾವದ ಸಾಧನೆ ಮಾಡುತ್ತಾರೆ - ಆ ಜೀವರುಗಳು ಧನ್ಯರಿದ್ದಾರೆ.
- ಯಾವುದರಿಂದ ಬಾಹ್ಯ ವೃತ್ತಿಗಳು ನಿಂತು ಹೋಗುತ್ತವೆ; ಅಸಾರ ಸಂಸಾರದಿಂದ ನಿಜವಾಗಿಯೇ ಪ್ರೀತಿಯು ಕಡಿಮೆಯಾಗುತ್ತದೆ, ಅದು ಜ್ಞಾನವಿದೆ.

## ೨೭ : ಇಪ್ಪತ್ತೇಳನೆಯ ಪರ್ವ
## ಲೇಶ್ಯೆ, ಯೋನಿ, ನಿಮಿತ್ತ-ಜ್ಞಾನಾದಿಗಳ ವರ್ಣನೆ

ಈಗ ಷಟ್ ಲೇಶ್ಯೆಗಳ ಕಥನ ಮಾಡುತ್ತಾರೆ,-

**ಕಿಣ್ಹಾ ಣೀಲ ಕಪೋತ ಯ ಅಸುಹ ಲೇಸ್ಸಾಹ ಜೀಯ ಪಣ್ಣಾಮೋ ।**
**ಪೀತಾ ಪಮ್ಮಾ ಸುಕ್ಕಾ ಯೇ ಸುಹ ಲೇಸ್ಸಾಯ ಹೋಯ ಖಣ ಭೇಯಾ ॥೧೧೫॥**

**ಗಾಥಾರ್ಥ :-** ಕೃಷ್ಣ, ನೀಲ, ಕಾಪೋತ - ಇವು ಮೂರು ಅಶುಭ ಲೇಶ್ಯೆಗಳಿವೆ. ಪೀತ, ಪದ್ಮ, ಶುಕ್ಲ - ಇವು ಮೂರು ಶುಭ ಲೇಶ್ಯೆಗಳಿವೆ. ಈ ಪ್ರಕಾರ ಜೀವದ ಅಶುಭ-ಶುಭ ಪರಿಣಾಮ ಸೂಚಕ ಲೇಶ್ಯೆಯ ಆರು ಭೇದಗಳಿವೆ.

**ಭಾವಾರ್ಥ :-** ಯೋಗ ಮತ್ತು ಕಷಾಯದ ಸಂಯೋಗದಿಂದ ಜೀವದ ಶುಭಾಶುಭ ಪರಿಣತಿಯಾಗುವುದು ಲೇಶ್ಯೆಯಿದೆ. ಇದರ ಭೇದಗಳು ಆರು ಇದ್ದು, ಅವುಗಳ ಸ್ವರೂಪವನ್ನು ಈಗ ಹೇಳುತ್ತಾರೆ-

**ಕೃಷ್ಣ ಲೇಶ್ಯೆ -** ಯಾರು ಮಹಾಕ್ರೋಧಿಯಿದ್ದಾರೆ. ವೈರವನ್ನು ಬಿಡುವುದಿಲ್ಲ. ಬೇರೆಯವರಿಗೆ ಕೇಡು ಮಾಡುವ ಸಹಜ ಸ್ವಭಾವದವರಿದ್ದಾರೆ; ಯಾರಿಗೆ ಯುದ್ಧ ಮಾಡುವುದು - ನೋಡುವುದು ಒಳ್ಳೆಯದೆನಿಸುತ್ತದೆ, ಯಾರು ದಯೆ, ಧರ್ಮರಹಿತ ಸ್ವಭಾವವುಳ್ಳವರಿದ್ದಾರೆ, ಮಹಾದುಷ್ಟ ಪರಿಣಾಮಿ, ಸ್ವಾಮಿದ್ರೋಹಿಯಿದ್ದಾರೆ. ತಂದೆ-ತಾಯಿ ಮೊದಲಾದ ಗುರುಜನರ ಆಜ್ಞೆಯಿಂದ ರಹಿತರಿದ್ದಾರೆ, ಅವಿನಯಿದ್ದು, ದೇವ-ಗುರು-ಧರ್ಮದ ಆಜ್ಞೆಯಿಂದ ಪ್ರತಿಕೂಲರಿದ್ದಾರೆ ರಾಜ್ಯ ವಿರುದ್ಧ ಕ್ರಿಯೆ ಮಾಡುತ್ತಾರೆ, ಮದ್ಯ-ಮಾಂಸ-ಜೂಜು, ವೇಶ್ಯಾಗಮನ, ಜೀವಘಾತಕ, ಚೋರ, ಪರಸ್ತ್ರೀಲಂಪಟಿ ಇತ್ಯಾದಿ ಸಪ್ತ ವ್ಯಸನಗಳಲ್ಲಿ ಆಸಕ್ತ, ಪಾಪಾಚಾರಿ, ಅನೇಕ ದೋಷಗಳ ಸಾಕಾರ ಮೂರ್ತಿ ಇತ್ಯಾದಿ ಅಶುಭ ಭಾವರೂಪ ಲಕ್ಷಣಗಳಿಂದ ಯುಕ್ತ ಜೀವಗಳ ಭಾವವು ಕೃಷ್ಣ ಲೇಶ್ಯೆಯಿದೆ.

ಸ್ವೇಚ್ಛಾಚಾರಿ, ಸ್ವಚ್ಛಂದಿ, ಧರ್ಮಕ್ರಿಯೆಗಳಲ್ಲಿ ಪ್ರಮಾದಿ, ಮಂದಬುದ್ಧಿ ಸೋಮಾರಿ, ಶಿಥಿಲಶಬ್ದಿ, ಪರಕೃತ ಉಪಕಾರರೂಪದ ಗುಣವನ್ನು ಲೋಪ ಮಾಡುವಂಥ ಕೃತಘ್ನೀ; ವಿಶೇಷ ಜ್ಞಾನ ಕಲೆ, ಚತುರತೆಯಿಂದ ರಹಿತ; ಪಂಚೇಂದ್ರಿಯ ವಿಷಯ ಲೋಲುಪಿ, ಮಹಾಮಾನಿ, ಅತ್ಯಂತ ಗೂಢ ಚಿತ್ತದ ಧಾರಕ-ಮಾಯಾವಿ, ಯಾರ ಚಿತ್ತದ ಕೊನೆ ತಲುಪುವ ಸಾಧ್ಯತೆ ಇಲ್ಲ ಅಂಥ ಚಿಹ್ನೆಗಳು ಕೃಷ್ಣ ಲೇಶ್ಯೆಯವೆಂದು ತಿಳಿಯುವುದು.

**ನೀಲಲೇಶ್ಯೆ -** ಯಾರು ಬಹಳಷ್ಟು ನಿದ್ರಿಸುವಂಥವರಿದ್ದಾರೆ, ಬೇರೆಯವರನ್ನು ವಂಚಿಸುವ ಕಲೆ-ಚತುರತೆಯಲ್ಲಿ ಪ್ರವೀಣರಿದ್ದಾರೆ, ಅದನ್ನು ಇನ್ನೂ ಅಧಿಕ ಕಲಿಯುವ ಇಚ್ಛೆಯಿದೆ, ಅತ್ಯಂತ ಲೋಭೋದಯದ ವಶೀಭೂತರಾಗಿ ಧನ-ಧಾನ್ಯ ಮೊದಲಾದುವನ್ನು ಏಕತ್ರಿತಗೊಳಿಸುವ ಸಲುವಾಗಿ ಅನೇಕ ಆರಂಭ ಮಾಡುತ್ತಾರೆ, ಕಾಮಚೇಷ್ಟೆಯಿಂದ ಅತಿ ವಿಕಲರಾಗಿರುತ್ತಾರೆ - ಇಂಥವೆಲ್ಲ ಲಕ್ಷಣಗಳು ಯಾರವಿವೆ ಅವರದು ಅದು ನೀಲ ಲೇಶ್ಯೆಯಿದೆ.

**ಕಾಪೋತಲೇಶ್ಯೆ -** ಯಾರದು ಇನ್ನೊಬ್ಬರಿಗೆ ದೋಷ ತಗಲಿಸುವಂಥದು ಸಹಜ ಸ್ವಭಾವವಿದೆ, ಅನೇಕ ನಯ-ಯುಕ್ತಿಗಳನ್ನು ನೀಡಿ ಪರನಿಂದೆ ಮಾಡುವಂಥವರಿದ್ದಾರೆ, ನಗು-ನಗುತ್ತ ಬೇರೆಯವರ ಕೇಡು ಮಾಡುತ್ತಾರೆ, ಬೇರೆಯವರ ನಿಂದೆ ಮಾಡುತ್ತಾರೆ, ಚಾಡಿ ಹೇಳುತ್ತಾರೆ, ಮೇಲಂತೂ ವಿನಯದಿಂದಿರುತ್ತ ಅಂತರಂಗದಲ್ಲಿ ಕೇಡು ಬಯಸುತ್ತಾರೆ, ಕೆಟ್ಟದ್ದು ಮಾಡುವ ಉಪಾಯ ಮಾಡುತ್ತಾರೆ, ಬೇರೆಯವರ ಒಳ್ಳೆಯ ಊಟ, ಉಡುಗೆಗಳನ್ನು ಕಂಡು ಖೇದ ಪಡುತ್ತಾರೆ; ಎಂದರೆ ಯಾರಿಗೆ ಬೇರೆಯವರ ಸುಖವು ಒಳ್ಳೆಯದೆನಿಸುವುದಿಲ್ಲ, ಯಾರು ಅನ್ಯರನ್ನು ದುಃಖಿ ಮಾಡುವ ಅನೇಕ ಉಪಾಯ ಮಾಡುತ್ತಾರೆ, ಯಾರ ಚಿತ್ತವು ಯಾವಾಗಲೂ ಶೋಕರೂಪವಾಗಿರುತ್ತದೆ, ಸದಾಭಯಭೀತರಾಗಿರುತ್ತಾರೆ, ಅನ್ಯರ ಅವಮಾನ ಮಾಡಿ ಸುಖ ಮನ್ನಿಸುತ್ತಾರೆ, ತಮ್ಮ ಸುಖದಲ್ಲಿ ಬಹಳಷ್ಟು ತಮ್ಮ ಪ್ರಶಂಸೆ ಮಾಡುತ್ತಾರೆ, ತಮ್ಮ ಹಾಗೆಯೇ ಅನ್ಯರನ್ನು ಪಾಪಿ, ಚೋರ, ಅಸತ್ಮಾರ್ಗಿಗಳೆಂದು ತಿಳಿದು ಯಾರ

ವಿಶ್ವಾಸವನ್ನೂ ಮಾಡುವುದಿಲ್ಲ, ತಮ್ಮ ದೊಡ್ಡಸ್ತಿಕೆ ಹೇಳುವಂಥ, ಸೇವೆ ಮಾಡುವಂಥವರಿಂದ ಪ್ರಸನ್ನರಾಗಿ ಅವರಿಗೆ ಧನ ಕೊಡುವಂಥವರು ತಮ್ಮ ಹಾಗೂ ಇತರರ ಹಿತವನ್ನು ತಿಳಿಯದವರು, ಯುದ್ಧದಲ್ಲಿ ಸಾಯುವ ಇಚ್ಛೆಯನ್ನಿಟ್ಟುಕೊಂಡಿರುವುದು ಇತ್ಯಾದಿ ಚಿಹ್ನೆಗಳು ಅವು ಕಾಪೋತ ಲೇಶ್ಯೆಯವೆಂದು ತಿಳಿಯುವುದು.

**ಪೀತಲೇಶ್ಯೆ** - ಕಾರ್ಯ-ಅಕಾರ್ಯಗಳನ್ನು ತಿಳಿಯುವಂಥವರು, ಖಾದ್ಯ ಅಖಾದ್ಯಗಳನ್ನೂ ತಿಳಿಯುವಂಥವರು, ಭೋಗಿಸಲು ಯೋಗ್ಯ ಮತ್ತು ಭೋಗಿಸಲು ಯೋಗ್ಯವಲ್ಲದ ವಸ್ತುವನ್ನು ತಿಳಿಯುವವರು; ಷಟ್‌ದ್ರವ್ಯಗುಣ ಪರ್ಯಾಯವನ್ನು ತಿಳಿಯುವವರು, ಎಲ್ಲ ಪದಾರ್ಥಗಳ ಕುರಿತಾಗಿ ಸಮತೆಯಿರುವವರು, ಪೂಜೆ-ಜಪ-ತಪ ದಾನದಲ್ಲಿ ಪ್ರೀತಿಯುಳ್ಳವರು, ದಯೆ ಧರ್ಮಗಳನ್ನು ನಡೆಸುವ ಅಧಿಕಾರಿಯಿರುವವರು, ಮನ-ವಚನ-ಕಾಯದಿಂದ ಕೋಮಲವಿರುವ ಇತ್ಯಾದಿ ಲಕ್ಷಣ ಸಹಿತ ಜೀವಗಳು ಪೀತಲೇಶ್ಯೆಯುಳ್ಳವರಿದ್ದಾರೆ.

**ಪದ್ಮಲೇಶ್ಯೆ** - ಭದ್ರ ಪರಿಣಾಮಿಯಿರುವುದು, ತ್ಯಾಗಿ ಇರುವುದು, ಒಳ್ಳೆಯ ಕಾರ್ಯರೂಪ ಭಾವವಿರುವವರು ಮಹಾವ್ರತ-ಅಣುವ್ರತಗಳ ವಾಂಛಕರಿರುವುದು, ಸಿದ್ಧಕ್ಷೇತ್ರ-ತೀರ್ಥವಂದನೆಯ ಅಭಿಲಾಷೆಯಿರುವುದು ಪಂಚಪರಮೇಷ್ಠಿಗಳ ಪೂಜೆಯಲ್ಲಿ ಉತ್ಸಾಹವಂತನಿರುವುದು. ಕಷ್ಟ-ಉಪದ್ರವಗಳಲ್ಲಿ ಧೀರ ಬುದ್ಧಿಯುಳ್ಳವರು, ದೇವ ಗುರುಗಳ ಭಕ್ತರಿರುವುದು ಇತ್ಯಾದಿ ಶುಭ ಚೇಷ್ಟೆ ಸಹಿತವಾದ ಲಕ್ಷಣವು ಪದ್ಮಲೇಶ್ಯೆಯಿದೆ.

**ಶುಕ್ಲಲೇಶ್ಯೆ** - ಪಕ್ಷಪಾತವಶರಾಗಿ ಯಾರನ್ನೂ ಕೆಟ್ಟವರೆಂದು ಹೇಳುವುದಿಲ್ಲ-ಎಲ್ಲ ಜೀವರುಗಳ ಮೇಲೆ ದಯೆ ಮಾಡಿ ಮೈತ್ರಿಭಾವದಿಂದಿರುವುದು, ಇಷ್ಟ-ಅನಿಷ್ಟಗಳಲ್ಲಿ ಬಹಳಷ್ಟು ರಾಗ-ದ್ವೇಷ ಮಾಡದಿರುವುದು, ಕುಟುಂಬಾದಿಗಳಲ್ಲಿ ಅಲ್ಪರಾಗವಿರುವುದು, ಧರ್ಮಾತ್ಮಾ ಜೀವರುಗಳಲ್ಲಿ ಪ್ರೀತಿಯಿರುವುದು ಇತ್ಯಾದಿ ಲಕ್ಷಣ ಸಹಿತ ಶುಕ್ಲಲೇಶ್ಯೆಯಿದೆ.

ಲೇಶ್ಯೆಗಳ ಭಾವದ ಸ್ವರೂಪ ಹೇಳುತ್ತಾರೆ - ಲೇಶ್ಯೆಯು ದ್ರವ್ಯ ಮತ್ತು ಭಾವದ ಅಪೇಕ್ಷೆಯಿಂದ ಎರಡು ಪ್ರಕಾರದ್ದಿದೆ. ಅದರಲ್ಲಿ ಶರೀರದ ವರ್ಣವಂತೂ ದ್ರವ್ಯಲೇಶ್ಯೆಯಿದೆ ಮತ್ತು ಜೀವದ ಭಾವವು ಭಾವಲೇಶ್ಯೆಯಿದೆ. ಇಲ್ಲಿ ಭಾವಲೇಶ್ಯೆಯ ದೃಷ್ಟಾಂತಪೂರ್ವಕ ಭಾವಗಳ ಲೇಶ್ಯೆಯನ್ನು ಪ್ರಗಟ ಮಾಡುತ್ತಾರೆ - ಒಂದು ವನದಲ್ಲಿ ಮರಕಡಿಯುವಂಥ ಆರು ಪುರುಷರು ಬರುತ್ತಾರೆ. ಅವರೆಲ್ಲರ ಹತ್ತಿರ ಕೊಡಲಿ ಇದೆ. ಅವರು ಒಂದು ಮಾವಿನ ಮರದ ಕೆಳಗೆ ತಂಪಾದ ನೆರಳಿನಲ್ಲಿ ಕುಳಿತುಕೊಂಡರು. ಅವರೊಳಗಿನ ಒಬ್ಬನು ಹಸಿವೆಯಾಗಿದೆಯೆನ್ನುತ್ತಾನೆ. ಆಗ ಅವರೊಳಗಿನ ಕೃಷ್ಣ ಲೇಶ್ಯೆಯುಳ್ಳ ಜೀವನು ಹೇಳುವುದೇನೆಂದರೆ, ಸೋದರನೇ ! ನಮ್ಮ ಹತ್ತಿರ ಕೊಡಲಿಯಂತೂ ಇದ್ದೇ ಇದೆ, ಈ ಮಾಮರದಲ್ಲಿ ಹಣ್ಣುಗಳೂ ಇವೆ. ಅದಕ್ಕಾಗಿ ಕೊಡಲಿಯಿಂದ ಮಾಮರವನ್ನು ಮೂಲದಿಂದ ಕಡಿದು ಉರುಳಿಸಿದರೆ ಎಲ್ಲರೂ ಹೊಟ್ಟೆ ತುಂಬ ಹಣ್ಣುಗಳನ್ನು ತಿನ್ನಬಹುದಾಗಿದೆ - ಈ ಪ್ರಕಾರದ ಪರಿಣಾಮವುಳ್ಳವನು ಕೃಷ್ಣಲೇಶ್ಯಾಯುಕ್ತ ಜೀವನಿದ್ದಾನೆ.

ಎರಡನೆಯವನು ಹೇಳುತ್ತಾನೆ - ಮೂಲದಿಂದೇಕೆ ಕಡಿಯುವುದು ವ್ಯರ್ಥವಾಗಿ ವೃಕ್ಷವೆಲ್ಲ ನಷ್ಟವಾಗಿ ಹೋಗುವುದು; ಅದಕ್ಕಾಗಿ ಅರ್ಧ-ಒಂದು ಕಡೆಯಿಂದ ದೊಡ್ಡದಾದ ಟೊಂಗೆಯನ್ನು ಕತ್ತರಿಸಿದರೆ ಎಲ್ಲರೂ ತಿನ್ನಬಹುದಾಗಿದೆ. ನಮ್ಮ ಸಲುವಾಗಿ ಅವೇ ಬಹಳಷ್ಟು ಇವೆ - ಇವನು ನೀಲ ಲೇಶ್ಯೆಯುಳ್ಳವನಿದ್ದಾನೆ. ಅದರ ನಂತರ ಮೂರನೆಯವರು ಹೇಳುತ್ತಾನೆ - ಅರ್ಧ ಮರ ಕತ್ತರಿಸುವುದರಿಂದ ವ್ಯರ್ಥವಾಗಿಯೇ ವೃಕ್ಷದ ಶೋಭೆಯು ಹಾಳಾಗುವುದು; ಅದಕ್ಕಾಗಿ ಒಂದು ಚಿಕ್ಕ ರೆಂಬೆಯನ್ನು ಕತ್ತರಿಸಿದರೂ ನಮಗೆ ಸಾಕಾಗಿ ಉಳಿಯುತ್ತವೆ - ಇವನು ಕಾಪೋತ ಲೇಶ್ಯೆಯುಳ್ಳವನಿದ್ದಾನೆ.

ಆಗ ನಾಲ್ಕನೆಯವನು ಹೇಳುವುದೇನೆಂದರೆ - ಮಾವಿನ ಗೊಂಚಲು ಗೊಂಚಲುಗಳನ್ನು ಕತ್ತರಿಸಿಕೊಂಡು ತಿನ್ನೋಣ - ಇವನು ಪೀತ ಲೇಶ್ಯೆಯುಳ್ಳವನಿದ್ದಾನೆ. ಆಗ ಐದನೆಯವನು - ಗೊಂಚಲಿನಲ್ಲಂತೂ ಹಣ್ಣು-ಕಾಯಿ

ಎರಡೂ ಇರುತ್ತವೆ; ಅದಕ್ಕಾಗಿ ಕೇವಲ ಹಣ್ಣಾಗಿರುವ ಮಾವುಗಳನ್ನಷ್ಟೇ ಕಿತ್ತುಕೊಂಡು ನಮ್ಮ ಹಸಿವೆಯನ್ನು ನೀಗಿಸಿಕೊಳ್ಳಬಹುದಾಗಿದೆ - ಎನ್ನುತ್ತಾನೆ. ಇದು ಪದ್ಮಲೇಶ್ಯೆಯುಳ್ಳವನ ವಚನವಿದೆ. ಅದರ ನಂತರ ಆರನೆಯವನು - ಸೋದರರೇ ! ಈ ವೃಕ್ಷವನ್ನು ಏತಕ್ಕಾಗಿ ನೋಯಿಸುವುದು ? ಭೂಮಿಯ ಮೇಲೆ ನಮಗೆ ತಿನ್ನಲು ಯೋಗ್ಯವಾದ ಬಹಳಷ್ಟು ಹಣ್ಣುಗಳು ಬಿದ್ದಿವೆಯಲ್ಲ. ಅವುಗಳಲ್ಲಿಯ ಹಣ್ಣು ಹಣ್ಣು ಇರುವುದನ್ನು ತಿಂದು ಹಸಿವೆಯನ್ನು ಹಿಂಗಿಸಿಕೊಳ್ಳಬಹುದು - ಎಂದು ಹೇಳುತ್ತಾನೆ, ಇವನು ಶುಕ್ಲಲೇಶ್ಯೆಯುಳ್ಳವನಿದ್ದಾನೆ.

ಹೀಗೆ ಆರು ಪ್ರಕಾರದ ಭಾವಗಳ ಭೇದ ತಿಳಿಯುವುದು. ಈ ಪರಿಣಾಮಗಳಿಂದ ತಮ್ಮ ಹಾಗೂ ಇತರರ ಪರಿಣಾಮಗಳ ಪರೀಕ್ಷೆ ಮಾಡಿ ಲೇಶ್ಯೆಯ ಅಂತರಂಗ ಭಾವವನ್ನು ತಿಳಿಯುವುದು. ಅಶುಭ ಭಾವಗಳ ವೇಗವನ್ನು ತಡೆದು ಅವುಗಳನ್ನು ಬಿಟ್ಟುಕೊಡುವುದು ಯೋಗ್ಯವಿದೆ.

ಈ ಪ್ರಕಾರ ಭೇದಜ್ಞಾನಿಯು ಜಡಭಾವವನ್ನು ಬಿಟ್ಟುಕೊಟ್ಟು ಅಶುಭತೆಯನ್ನು ಚೈತನ್ಯದ ವಿಕಲ್ಪಮಯವೆಂದು ತಿಳಿಯುತ್ತ ಅದನ್ನು ಬಿಟ್ಟುಕೊಟ್ಟು, ಶುಭಭಾವರೂಪನಾಗಿರುವ ವಿಚಾರ ಮಾಡುತ್ತಾನೆ.

ಈಗ ಯೋನಿಯ ಒಂಭತ್ತು ಭೇದ ಹೇಳುತ್ತಾರೆ,-

**ಸಂವತ್ತಸೀತ ಸಚಿತ್ತೋ ಮಿಸ್ಸೋ ಸೇತಾಣ ಜೋಣಿಣವ ಭೇಯೋ ।**

**ಸಂಖಯ ಕುಂಭೋ ವಂಸಯ ತೀಏ ಗಮ್ಮೋ ಸಮುಚ್ಚ ಉವವಾದೋ ॥೧೧೬॥**

**ಗಾಥಾರ್ಥ :-** ಸಂವೃತ, ಶೀತ, ಸಚಿತ್ತ , ಮಿಶ್ರ ಹಾಗೂ ಇವು ಮೂರರ ಪ್ರತಿಪಕ್ಷೀ ಹೀಗೆ ಯೋನಿಯ ಒಂಭತ್ತು ಭೇದಗಳಿವೆ. ಶಂಖಾಯೋನಿ, ಕೂರ್ಮಯೋನಿ, ವಂಶಾಯೋನಿ - ಇವು ಮೂರು ಭೇದಗಳು ಗರ್ಭಜದವಿವೆ. ಸಮ್ಮೂರ್ಚ್ಛನ ಯೋನಿ ಮತ್ತು ಉಪಪಾದ ಯೋನಿ - ಈ ಪ್ರಕಾರ ಯೋನಿಯ ಭೇದಗಳನ್ನು ಹೇಳಲಾಗಿದೆ.

**ಭಾವಾರ್ಥ :-** ಎಲ್ಲಕ್ಕಿಂತ ಮೊದಲು ಗರ್ಭಜದ ಮೂರು ಭೇದ ಹೇಳುತ್ತಾರೆ - ೧. ಶಂಖಾಯೋನಿ, ೨. ವಂಶಾಯೋನಿ, ೩. ಕೂರ್ಮಯೋನಿ. ಇವನ್ನು ಹೊರತುಪಡಿಸಿ ಮೇಲೆ ಹೇಳಿರುವ ಒಂಭತ್ತು ಹಾಗೂ ಸಮ್ಮೂರ್ಚ್ಛನ ಮತ್ತು ಉಪಪಾದ ಜನ್ಮ. ಆ ಯೋನಿಗಳಲ್ಲಿ ಯಾವ ಯಾವ ಜೀವಗಳು ಉತ್ಪನ್ನವಾಗುತ್ತವೆ, ಅದನ್ನು ಹೇಳುತ್ತಾರೆ.

ಯಾವ ಸ್ತ್ರೀಯ ಯೋನಿಯು ಶಂಕಾವರ್ತ ಎಂದರೆ ಶಂಖದ ಆಕಾರದ್ದಿರುತ್ತದೆ, ಅದರಲ್ಲಿ ಪುರುಷನ ವೀರ್ಯವು ನಿಲ್ಲುವುದಿಲ್ಲ, ಆ ಸ್ತ್ರೀಯು ಜಗತ್ತಿನಲ್ಲಿ ಬಂಜೆಯೆನಿಸಿಕೊಳ್ಳುತ್ತಾಳೆ. ಯಾವ ಸ್ತ್ರೀಯದು ವಂಶಪತ್ರ ಯೋನಿಯಿರುತ್ತದೆ, ಅದರಲ್ಲಿ ಸಾಮಾನ್ಯ ಮನುಷ್ಯರು ಉತ್ಪನ್ನರಾಗುತ್ತಾರೆ; ಪದವಿಧಾರಕ-ತೀರ್ಥಂಕರರಾದಿ ಮಹಾಪುರುಷರು ಅದರಲ್ಲಿ ಉತ್ಪನ್ನರಾಗುವುದಿಲ್ಲ. ಯಾವ ಸ್ತ್ರೀಯ ಯೋನಿಯು ಕೂರ್ಮೋನ್ನತ ಎಂದರೆ ಆಮೆಯ ಆಕಾರದ್ದಿರುತ್ತದೆ, ಅದರಲ್ಲಿ ತೀರ್ಥಂಕರ ಮೊದಲಾದ ಮಹಾಪುರುಷರು ಉತ್ಪನ್ನರಾಗುತ್ತಾರೆ; ಸಾಮಾನ್ಯ ಪುರುಷರು ಈ ಯೋನಿಯಲ್ಲಿ ಉತ್ಪನ್ನರಾಗುವುದಿಲ್ಲ. ಇವು ಮೂರು ಭೇದಗಳು ಗರ್ಭಜರವಿವೆ. ಯಾವುದರಲ್ಲಿ ಮಾತೆಯ ಶ್ರೋಣಿತ ಮತ್ತು ಪಿತನ ವೀರ್ಯ-ಇವೆರಡೂ ಸೇರಿ ಗರ್ಭದಿಂದ ಉತ್ಪತ್ತಿಯಾಗುತ್ತದೆ ಅವರು ಗರ್ಭಜರೆನಿಸುತ್ತಾರೆ.

ಮಾತಾ-ಪಿತರ ನಿಮಿತ್ತವಿಲ್ಲದೆ ಉತ್ಪತ್ತಿಯಾಗುವಂಥವರು ಸಮ್ಮೂರ್ಚ್ಛನರೆಂದು ಕರೆಸಿಕೊಳ್ಳುತ್ತಾರೆ. ಇವುಗಳಲ್ಲಿನ ಬಾದರ ಸಮ್ಮೂರ್ಚ್ಛನ ಜೀವಗಳ ಉತ್ಪತ್ತಿಯಂತೂ ಪೃಥ್ವಿ ಮೊದಲಾದವುಗಳ ಆಶ್ರಯದಿಂದ ಆಗುತ್ತದೆ ಮತ್ತು ಸೂಕ್ಷ್ಮ ಜೀವಗಳ ಉತ್ಪತ್ತಿಯು ಆಶ್ರಯವಿಲ್ಲದೆ ಆಕಾಶದಲ್ಲಿ ಆಗುತ್ತದೆ; ಇದನ್ನು ಸಮ್ಮೂರ್ಚ್ಛನ ಜನ್ಮವೆಂದು ತಿಳಿಯುವುದು.

ದೇವಗಳ ರತ್ನಮಯ, ಕೋಮಲ, ಸುಗಂಧಿತ ಉಪಪಾದ ಶಯ್ಯೆಯ ಮೇಲೆ ದೇವಗಳ ಜನ್ಮವಾಗುತ್ತದೆ. ನಾರಕಿಗಳ ಮಹಾದುರ್ಗಂಧಿತ, ಘೃಣಾಸ್ಪದ, ಅನಿಷ್ಟ, ಒಂಟೆಯ ಮುಖಾಕಾರ, ನರಕಕ್ಷಿತಿಯ ಮೇಲೆ ನೇತಾಡುತ್ತಿರುವ

ಘಟಾಕಾರ, ಕರಗಸದ ಸಮಾನ ಉಪಪಾದ ಸ್ಥಾನಗಳಲ್ಲಿ ನಾರಕಿಗಳ ಜನ್ಮವಾಗುತ್ತದೆ. ಈ ಪ್ರಕಾರ ದೇವ-ನಾರಕಿಗಳದು ಉಪಪಾದ ಜನ್ಮವಿದೆ. ಗರ್ಭಜ, ಸಮ್ಮೂರ್ಚ್ಛನ ಮತ್ತು ಉಪಪಾದ-ಇವು ಮೂರು ಭೇದಗಳು ಜನ್ಮದವಿವೆಯೆಂದು ಹೇಳಲಾಗಿದೆ.

ಈಗ ಒಂಭತ್ತು ಭೇದವುಳ್ಳ ಯೋನಿಯ ಭಾವ ಹೇಳುತ್ತಾರೆ - ೧. ಅನ್ಯ ಜೀವಗಳ ಮೂಲಕ ಗ್ರಹಣ ಮಾಡಲಾದ ಯೋನಿ ಸ್ಥಾನವು ಸಚಿತ್ತ ಯೋನಿಯೆಂದು ಕರೆಸಿಕೊಳ್ಳುತ್ತದೆ. ಎಂದರೆ ಪಂಚೇಂದ್ರಿಯ ತಿರ್ಯಂಚಗಳು ಮತ್ತು ಮನುಷ್ಯರು ಉತ್ಪನ್ನವಾಗುವ ಯೋನಿಯು. ೨) ಅನ್ಯ ಜೀವಗಳ ಮೂಲಕ ಗ್ರಹಣ ಮಾಡದಿರುವಂಥ ಪುದ್ಗಲ ಸ್ಕಂಧಗಳ ಯೋನಿಯು ಅಚಿತ್ತ ಯೋನಿಯಿದೆ. ಎಂದರೆ ದೇವ - ನಾರಕಿಗಳ ಉತ್ಪತ್ತಿಯ ಸ್ಥಾನವು. ೩) ಸಚಿತ್ತ-ಅಚಿತ್ತರೂಪ ಮಿಶ್ರಸ್ಕಂಧಗಳ ಯೋನಿಯು ಮಿಶ್ರಯೋನಿ ಸ್ಥಾನವಿದೆ. ೪) ಆರನೆಯ ಮತ್ತು ಏಳನೆಯ ನರಕದ ನಾರಕಿಗಳ ಉತ್ಪತ್ತಿ ಸ್ಥಾನದ ಸಮಾನ, ಉತ್ಪನ್ನವಾಗುವ ಪುದ್ಗಲ ಸ್ಕಂಧವು ಶೀತವಾಗಿದ್ದರೆ, ಅವು ಶೀತಯೋನಿಯೆಂದು ಕರೆಸಿಕೊಳ್ಳುತ್ತವೆ. ೫) ಮೂರನೆಯ ಮತ್ತು ನಾಲ್ಕನೆಯ ನರಕದವರೆಗಿನ ನಾರಕಿಗಳ ಉತ್ಪತ್ತಿ ಸ್ಥಾನದ ಸಮಾನ, ಉತ್ಪನ್ನವಾಗುವ ಸಂಬಂಧದ ಯೋನಿ ಸ್ಥಾನರೂಪ ಪುದ್ಗಲ ಸ್ಕಂಧಗಳು ಉಷ್ಣವಾಗಿದ್ದರೆ, ಅವು ಉಷ್ಣಯೋನಿಯೆಂದು ಕರೆಯಲ್ಪಡುತ್ತವೆ. ೬) ಉತ್ಪತ್ತಿಯ ಸ್ಥಾನಗಳ ಶೀತ ಮತ್ತು ಉಷ್ಣ ಎರಡೂರೂಪ ಸ್ಕಂಧಮಯವಿರುವುದು ಮಿಶ್ರಯೋನಿ ಸ್ಥಾನವಿದೆ. ೭) ಜೀವಗಳ ಉತ್ಪತ್ತಿಯ ಯೋನಿಸ್ಥಾನ ಪ್ರಗಟ ಕಂಡು ಬರದಿರುವುದು ಸಂವೃತ ಯೋನಿ ಸ್ಥಾನವಿದೆ. ೮) ಉತ್ಪತ್ತಿಯ ಯೋನಿ ಸ್ಥಾನವು ಪ್ರಗಟ ಕಂಡು ಬರುವುದು, ವಿವೃತಯೋನಿ ಸ್ಥಾನವಿದೆ. ೯) ಜೀವದ ಉತ್ಪತ್ತಿಯ ಯೋನಿಸ್ಥಾನರೂಪ ಪುದ್ಗಲ ಸ್ಕಂಧಗಳು ಕೆಲವು ಪ್ರಗಟ ಮತ್ತು ಕೆಲವು ಅಪ್ರಗಟವಿರುವುದು ಮಿಶ್ರಯೋನಿಸ್ಥಾನವಿದೆ. ಈ ಪ್ರಕಾರ ಒಂಭತ್ತು ಸಾಮಾನ್ಯ ಭೇದ ಹೇಳಿದ್ದರೆ ವಿಶೇಷ ಭೇದಗಳು ಎಂಭತ್ನಾಲ್ಕು ಲಕ್ಷವಿವೆ.

ಈ ಯೋನಿಗಳಿಂದ ಉತ್ಪನ್ನವಾದ ಜೀವರುಗಳಲ್ಲಿನ ಯಾರ-ಯಾರ ಶರೀರದಲ್ಲಿ ನಿಗೋದವಿರುವುದಿಲ್ಲ, ಅವುಗಳನ್ನು ಈಗ ಹೇಳುತ್ತಾರೆ-

**ಕೇವಲಕಾಯಮಾಹಾರೋ ಸುರಣಾರಯತಣ ಭೋಮಿ ಜಲ ತೇಊ ।**
**ವಾಯ ವಸು ಇವ ಠಾಂಣಯ ರಹಿ ನಹಿ ಣಿಗೋಯ ಜಿಣ ಭಣಿಯಂ ॥೧೧೭॥**

**ಗಾಥಾರ್ಥ :-** ಕೇವಲಿಗಳ ಶರೀರದಲ್ಲಿ, ಆಹಾರಕ ಶರೀರದಲ್ಲಿ, ದೇವಗಳ ಶರೀರದಲ್ಲಿ, ನಾರಕಿಗಳ ಶರೀರದಲ್ಲಿ, ಪೃಥ್ವಿಕಾಯ, ಜಲಕಾಯ, ಅಗ್ನಿಕಾಯ, ವಾಯುಕಾಯ- ಈ ಎಂಟು ಸ್ಥಾನಗಳಲ್ಲಿ ನಿಗೋದವಿರುವುದಿಲ್ಲವೆಂದು ತಿಳಿಯುವುದು.

ಈ ಎಂಟು ಜೀವಗಳಿಂದ ಶೌಚವು(ಪವಿತ್ರತೆ) ಪಾಲಿಸಲ್ಪಡುವುದಿಲ್ಲವೆಂದು ಈಗ ಹೇಳುತ್ತಾರೆ -

**ರೋಗೀ ಲೋಲು ದಲಾದ್ದೋ, ಬುಧಹೀಣೋ ಕುಸಂಗ ಹೋಯ ಮದಪಾಣೋ ।**
**ಪರವಸ ಆಲಸ ಸಹಿ ತೋ, ಏ ವಸು ಆದಾಯ ಸೋಚ ಣಹ ಪಾಲಯ ॥೧೧೮॥**

**ಗಾಥಾರ್ಥ :-** ರೋಗಿ, ಇಂದ್ರಿಯಗಳ ಲೋಲುಪಿ, ದರಿದ್ರ, ಬುದ್ಧಿಹೀನ, ಕುಸಂಗೀ, ಮದ್ಯಪಾನ ಮಾಡುವಂಥವ, ಪರಾಧೀನ ಮತ್ತು ಆಲಸಿ - ಇವು ಎಂಟು ಪ್ರಕಾರದ ಜೀವರುಗಳಿಂದ ಶೌಚವು ಪಾಲಿಸಲ್ಪಡುವುದಿಲ್ಲ.

**ಭಾವಾರ್ಥ :-** ರೋಗಿಯಂತೂ ತೀವ್ರ ವೇದನೆಯ ಕಾರಣ ಖಾದ್ಯ-ಅಖಾದ್ಯ, ಯೋಗ್ಯ-ಅಯೋಗ್ಯ, ಪವಿತ್ರ-ಅಪವಿತ್ರಗಳ ವಿಚಾರ ಮಾಡುವ ಸಾಧ್ಯತೆಯಿಲ್ಲ. ವೇದನೆಯ ಕಾರಣದಿಂದ ಯಾವುದು ದೊರಕುತ್ತದೆ, ಅದನ್ನೇ ತಿಂದು ಬಿಡುತ್ತಾನೆ. ಮೂಢ ವೈದ್ಯನು ಯಾವುದೆಲ್ಲ-ಭಕ್ಷ್ಯ ಅಭಕ್ಷ್ಯ ಹೇಳುತ್ತಾನೆ, ಅವನು ಅದನ್ನು ತಿನ್ನುತ್ತಾನೆ. ಅದರಿಂದ ಅವನ ಮೂಲಕ ಶೌಚ ಎಂದರೆ ಪವಿತ್ರತೆಯು ಸಂಭವಿಸುವುದಿಲ್ಲ.

ಇಂದ್ರಿಯಗಳ ಲೋಲುಪಿಯೂ ಖಾದ್ಯ-ಅಖಾದ್ಯ, ಯೋಗ್ಯ-ಅಯೋಗ್ಯಗಳ ವಿಚಾರ ಮಾಡುವುದಿಲ್ಲ. ಹೇಗೆ ಸಂಭವಿಸುತ್ತದೆಯೋ ಹಾಗೆ ತನ್ನ ವಿಷಯ ಪೋಷಣೆ ಮಾಡುತ್ತಾನೆ. ತನ್ನ ಕುಲಯೋಗ್ಯ ಆಹಾರ-ಪೇಯಗಳ ವಿಚಾರವನ್ನೂ ಮಾಡುವುದಿಲ್ಲ; ಅದರಿಂದ ಆ ಲೋಲುಪಿಯಿಂದಲೂ ಪವಿತ್ರತೆಯನ್ನು ಪಾಲಿಸುವುದಾಗುವುದಿಲ್ಲ.

ಪೂರ್ವಪಾಪಕರ್ಮದ ಉದಯದಿಂದ ಆಗಿರುವ ದರಿದ್ರತೆಯ ಕಾರಣ ಅವನು ಕೇವಲ ಉದರ ಪೋಷಣೆಯನ್ನೇ ಬಯಸುತ್ತಾನೆ. ಯೋಗ್ಯ ಅಯೋಗ್ಯದ ವಿಚಾರ ಮಾಡದೇ ಹೇಗೆ ಸಾಧ್ಯವೋ ಹಾಗೆ ಹೊಟ್ಟೆ ತುಂಬಿಕೊಳ್ಳಲಿಚ್ಛಿಸುತ್ತಾನೆ. ಅವನ ತೃಷ್ಣೆಯು ಅಧಿಕವಿದೆ. ಆ ತೃಷ್ಣೆಯಂತೂ ಪುಣ್ಯದಿಂದ ಪೂರ್ಣವಾಗುತ್ತದೆ. ಅವನು ಪೂರ್ವದಲ್ಲಿ ಪುಣ್ಯದ ಉಪಾರ್ಜನೆ ಮಾಡಿಲ್ಲ. ಪುಣ್ಯರಹಿತ ಜೀವನು ಹೇಗೊ ಹೊಟ್ಟೆ ತುಂಬಿಕೊಳ್ಳುತ್ತಾನೆ. ಅದಕ್ಕಾಗಿ ಆ ದರಿದ್ರನಿಂದ ಶೌಚದ ಪರಿಪಾಲನೆಯಾಗುವುದಿಲ್ಲ.

ಬುದ್ಧಿಹೀನನಿಗೂ ಯೋಗ್ಯ-ಅಯೋಗ್ಯದ ಕುರಿತಾಗಿ ವಿಚಾರ ಮಾಡುವ ವಿವೇಕವಿರುವುದಿಲ್ಲ. ಜ್ಞಾನದ ಮಂದತೆಯ ಕಾರಣ ಪಶುವಿನ ಹಾಗೆ ಭೋಜನ ಪಾನಾದಿಗಳನ್ನು ಮಾಡುತ್ತಾನೆ. ಅವನಿಗೆ ಹಗಲು-ಇರುಳಿನ ಭೇದವಿರುವುದಿಲ್ಲ. ಭಕ್ಷ್ಯ-ಅಭಕ್ಷ್ಯದ ಜ್ಞಾನವಿರುವುದಿಲ್ಲ. ಅಂತೆಯೇ ಬುದ್ಧಿರೂಪ ಸಂಪದದಿಂದ ರಹಿತ ಹೀನಬುದ್ಧಿಯ ಜೀವನಿಂದ ಶೌಚದ ಪಾಲನೆಯಾಗಲಾರದು.

ಕುಸಂಗತಿಯಲ್ಲಿರುವಂಥವನು-ಸಪ್ತವ್ಯಸನೀ ಸ್ನೇಹಿಗಳ ಸಂಗತಿಯಿಂದ, ಸ್ನೇಹ ಬಂಧದ ವಶನಾಗಿ ಅವರಲ್ಲಿದ್ದು ಅವರ ಸಮಾನವೇ ಭೋಜನ-ಪಾನ ಮಾಡುತ್ತಾನೆ. ಹೀನ ಕುಲದವರು, ಹೀನ ಜ್ಞಾನವುಳ್ಳ ಸಪ್ತ ವ್ಯಸನಿಗಳು ಬೇಕಾದ ಹಾಗೆ ಅನಾಚಾರರೂಪ ಆಹಾರ-ಪಾನೀಯಗಳ ಸೇವನೆ ಮಾಡುತ್ತಾರೆ. ಅದೇ ಪ್ರಕಾರವಾಗಿ ಅವರ ಸಂಗತಿಯಲ್ಲಿ ತನಗೆ ಮಾಡಬೇಕಾಗುತ್ತದೆ. ಅದಕ್ಕಾಗಿ ಕುಸಂಗತಿಯುಳ್ಳವರಿಂದ ಶೌಚದ ಪಾಲನೆಯಾಗುವುದಿಲ್ಲ.

ಮದ್ಯದ ಸೇವನೆ ಮಾಡುವಂಥವರಿಗೆ ಎಚ್ಚರ -ಪ್ರಜ್ಞೆ ಇರುವುದಿಲ್ಲ. ಆಹಾರ-ಪಾನೀಯಗಳ ಕುರಿತಾಗಿ ಯೋಗ್ಯ-ಅಯೋಗ್ಯ, ಖಾದ್ಯ-ಅಖಾದ್ಯದ ಜ್ಞಾನವಿರುವುದಿಲ್ಲ. ಮದ್ಯ ಕುಡುಕರು ಕೂಡ ಸುಪ್ತನ ಸಮಾನವೇ ಎಚ್ಚರಹೀನರಿರುತ್ತಾರೆ. ಅಂತೆಯೇ ಮದ್ಯ ಕುಡುಕನಿಂದ ಶೌಚದ ಪಾಲನೆಯಾಗುವುದಿಲ್ಲ.

ಪರಾಧೀನನಾದ ಮೇಲೆ ಬೇರೆಯವರ ಇಚ್ಛೆಯ ಅನುಸಾರವೇ ವರ್ತಿಸಬೇಕಾಗುತ್ತದೆ. ಸ್ವಯಂ ದಯಾವಂತ ಸಂಯಮಿಯಾಗಿದ್ದರೂ ಒಂದುವೇಳೆ ಅಸಂಯಮಿಯ ಸೇವಕನಾಗಿದ್ದರೆ ಸ್ವಯಂ ತನ್ನದು ಸಂಯಮ ಪಾಲನೆಯ ಕಾಲವಿದ್ದಮೇಲೆಯೂ ಅಸಂಯಮಿ ಒಡೆಯನ ಕಡೆಯಿಂದ ಆರಂಭ ಮಾಡುವ ಆಜ್ಞೆಯಾಗುವ ಸಾಧ್ಯತೆಯಿದೆ. ಆ ಸಮಯದಲ್ಲಿ ಆಜ್ಞೆಯ ಅನುಸಾರ ಕಾರ್ಯ ಮಾಡದಿದ್ದರೆ ಆಜ್ಞೆಯ ಭಂಗ ಮಾಡುವುದರಿಂದ ಆಜೀವಿಕೆಯು ನಿಂತು ಹೋಗಬಹುದಾಗಿದೆ; ಅದಕ್ಕಾಗಿ ಅಸಂಯಮರೂಪ ಆರಂಭ ಕಾರ್ಯವನ್ನು ಸಂಯಮದ ಸಮಯದಲ್ಲಿ ಮಾಡಬೇಕಾಗುತ್ತದೆ-ಇತ್ಯಾದಿ ರೂಪದಲ್ಲಿ ಪರಾಧೀನತೆಯ ಕಾರಣ ಶೌಚದ ಪಾಲನೆಯಾಗುವುದಿಲ್ಲ.

ಆಲಸ್ಯವಂತ-ಪ್ರಮಾದಿಯೂ ಹೇಗೆ ಸಿಗುತ್ತದೆ, ಹಾಗೆ ತಿಂದುಬಿಡುತ್ತಾನೆ. ಪ್ರಮಾದದ ವಶೀಭೂತನಾಗಿ ಖಾದ್ಯ-ಅಖಾದ್ಯ, ಯೋಗ್ಯ-ಅಯೋಗ್ಯಗಳ ವಿಚಾರ ಮಾಡಲಾಗುವುದಿಲ್ಲ; ಎಂದರೇನೆ ಪ್ರಮಾದಿಯಿಂದಲೂ ಶೌಚದ ಪಾಲನೆಯಾಗುವುದಿಲ್ಲ.

ಈ ಪ್ರಕಾರ ಅನ್ಯ ಗ್ರಂಥಗಳ ಅನುಸಾರ ಹೇಳಲಾಗಿರುವ ಈ ಎಂಟು ಜಾತಿಯ ಜೀವರುಗಳಿಂದ ಶೌಚದ ಸಾಧನೆಯಾಗುವುದಿಲ್ಲ; ಅದರಿಂದ ಇವರಿಗೆ ಧರ್ಮಲಾಭವಾಗುವುದಿಲ್ಲ ಮತ್ತು ಶುಭಾಚಾರವು ಇವರ ಹೃದಯದಲ್ಲಿ ನಿಲ್ಲುವುದಿಲ್ಲ. ಇದನ್ನು ತಿಳಿದು ವಿವೇಕವಂತರು ಈ ಎಂಟು ಜಾತಿಯ ನಿಮಿತ್ತಗಳಿಂದ ರಹಿತರಾಗಿ ಸುಆಚಾರರೂಪರಾಗಿ ಇರುವುದು ಯೋಗ್ಯವಿದೆ.

ಈಗ ನಿಮಿತ್ತಜ್ಞಾನದ ಎಂಟು ಭೇದಗಳನ್ನು ಹೇಳುತ್ತಾರೆ,-

**ಅಂಗ ಭೋಮ ಅಂತರಖಿಊ ವಿಜಣ ಸುರ ಛಿಣ್ಣ ಲಕ್ಖಣೋ ಸುಪಣಊ ।**
**ಇವ ವಸು ಭೇಯವ ಭಣಿಯಂ ಣಿಮಿತ್ತ ಣಾಣಾಯ ದೇವ ಸರ್ವಜ್ಞೋ ॥೧೯೯॥**

**ಗಾಥಾರ್ಥ ಃ-** ಶರೀರ, ಪೃಥ್ವಿ, ಅಂತರಿಕ್ಷ, ವ್ಯಂಜನನಿಮಿತ್ತ, ಶಬ್ದ, ಛಿನ್ನ, ಲಕ್ಷಣ, ಸ್ವಪ್ನ - ಇವು ನಿಮಿತ್ತಜ್ಞಾನದ ಎಂಟು ಭೇದಗಳನ್ನು ಸರ್ವಜ್ಞದೇವರು ಹೇಳಿದ್ದಾರೆ.

**ಭಾವಾರ್ಥ ಃ-** ನಿಮಿತ್ತ ಜ್ಞಾನದ ಎಂಟು ಭೇದಗಳ ಸ್ವರೂಪ ಹೇಳುತ್ತಾರೆ - ೧. ಮನುಷ್ಯ, ಪಶುಗಳ ಕುರಿತಾಗಿ ಶರೀರದ ಅಂಗೋಪಾಂಗಗಳನ್ನು ನೋಡಿ ಅದರ ಶುಭಾಶುಭ ಹೇಳುವುದು. ಹೇಗೆಂದರೆ -ಒಂದು ಕಣ್ಣು ಇಲ್ಲದಿರುವ ಫಲವು ಇದಾಗಿದೆ, ಎರಡೂ ಕಣ್ಣುಗಳಿಲ್ಲದಿರುವ ಫಲವು ಇದಾಗಿದೆ, ಮೂಗ, ಹೆಳವ, ಡೂಗದ ಫಲವು ಇಂಥದ್ದಿದೆ. ಶರೀರದ ಹುಳಿ, ಸಿಹಿ, ಕಹಿ ಇತ್ಯಾದಿ ರಸದ ಅನುಸಾರ ಅದರ ಫಲ ಹೇಳುವುದು. ಶರೀರದ ರುದ್ರ, ಶ್ಯಾಮ, ಕೆಂಪು ವರ್ಣದ ಫಲ ಹೇಳುವುದು. ಇತ್ಯಾದಿ ಶರೀರದ ಲಕ್ಷಣ ನೋಡಿ ಶುಭ-ಅಶುಭಗಳ ಫಲ ಸುಖ-ದುಃಖಗಳ ಕಥನ ಮಾಡುವುದು ಅಂಗ ನಿಮಿತ್ತ ಜ್ಞಾನವಿದೆ.

೨) ಭೂಮಿಯಲ್ಲಿರುವ ವಸ್ತುಗಳನ್ನು ತಿಳಿದುಕೊಳ್ಳುವುದು. ಹೇಗೆಂದರೆ ಇಲ್ಲಿ ರತ್ನದ ರಾಶಿಯಿದೆ, ಇಲ್ಲಿ ಚಿನ್ನದ ಗಣಿಯಿದೆ, ಇಲ್ಲಿ ವಿಭೂತಿಯಿದೆ, ಇಲ್ಲಿ ಇಂತಿಷ್ಟು ಅಗೆದ ಮೇಲೆ ಅಸ್ತ್ರ ಸಮೂಹವಿದೆಯೆಂಬುದನ್ನು ತಿಳಿಯುತ್ತಾರೆ. ಇಲ್ಲಿ ನೀರು ಇದೆ, ಇಲ್ಲಿ ಪಾಷಾಣವಿದೆ, ಇಲ್ಲಿ ಧನವಿದೆ - ಇತ್ಯಾದಿ ಭೂಮಿಯಲ್ಲಿರುವ ಶುಭಾಶುಭ ಚಿಹ್ನೆಗಳಿಂದ ಅವನ್ನು ತಿಳಿದುಕೊಳ್ಳುವುದು, ಅದು ಭೂಮಿ(ಪೃಥ್ವಿ)ನಿಮಿತ್ತಜ್ಞಾನವಿದೆ.

೩) ಆಕಾಶದಲ್ಲಿರುವ ಮೋಡಗಳ ಪಟಲು, ಘನ, ಗರ್ಜನೆ, ಸಿಡಿಲು, ಚಂದ್ರ, ಸೂರ್ಯ, ನಕ್ಷತ್ರ ಇತ್ಯಾದಿಗಳಿಂದ ಆಕಾಶದ ಶುಭಾಶುಭ ಚಿಹ್ನೆ ನೋಡಿ ಸುಖ-ದುಃಖ ಹೇಳುವುದು ಅಂತರಿಕ್ಷ ನಿಮಿತ್ತಜ್ಞಾನವಿದೆ.

೪) ಮನುಷ್ಯ ಪಶುವಿನ ಶಬ್ದ(ಧ್ವನಿ)ಕೇಳಿ ಶುಭಾಶುಭ ಹೇಳುವಂಥ; ಎಂದರೆ ಚಾಂಡಾಲ, ನಾವಲಿಗ, ಕೃಷಿಕ, ವೈಶ್ಯ, ಬ್ರಾಹ್ಮಣ, ಕ್ಷತ್ರಿಯ ಇತ್ಯಾದಿ ಮನುಷ್ಯರ ಶಬ್ದವನ್ನಾಲಿಸಿ ಸುಖ-ದುಃಖ ಹೇಳುವಂಥ; ನವಿಲು, ಗೌಜಲ ಹಕ್ಕಿ, ಕಾಗೆ, ಗೃದ್ಧ, ಶ್ವಾನ, ನರಿ, ಮಾರ್ಜಾಲ, ವ್ಯಾಘ್ರ ಇತ್ಯಾದಿ ಪಶುಗಳ ಶಬ್ದವನ್ನಾಲಿಸಿ ಶುಭ-ಅಶುಭ ಫಲ ಹೇಳುವಂಥದು ಸ್ವರ ನಿಮಿತ್ತ ಜ್ಞಾನವಿದೆ.

೫) ದೇಹದ ಮೇಲೆ ಕಪ್ಪುಕಲೆ-ಮಚ್ಚೆರೂಪದ ವ್ಯಂಜನವನ್ನು ನೋಡಿ ಸುಖ-ದುಃಖ ಹೇಳುವುದು. ಮುಖದ ಮೇಲೆ ತಿಲ-ಕಪ್ಪುಚುಕ್ಕೆ, ಕೈಯಲ್ಲಿ, ವಕ್ಷಸ್ಥಲದ ಮೇಲೆ ಮತಿ, ಬೆನ್ನುಭಾಗದಲ್ಲಿ, ಮೂಗು-ಕಿವಿ-ಗಲ್ಲಿನ ಮೇಲೆ ಇತ್ಯಾದಿ ಕಾಲು-ಕೈ ಮೊದಲಾದ ಅಂಗಗಳಲ್ಲಿ ಕಲೆ-ಮಚ್ಚೆಯನ್ನು ನೋಡಿ ಶುಭ-ಅಶುಭ ಹೇಳುವುದು ವ್ಯಂಜನ ನಿಮಿತ್ತಜ್ಞಾನವಿದೆ.

೬) ಶ್ರೀವೃಷ, ಸ್ವಸ್ತಿಕ, ಶೃಂಗಾರ, ಕಲಶ, ವಜ್ರ, ಮೀನು ಇತ್ಯಾದಿ ಶುಭ ಲಕ್ಷಣರೂಪ ಶುಭ ಚಿಹ್ನೆಗಳು ಹಾಗೂ ಯಾವುದೋ ಅಶುಭ ಚಿಹ್ನೆ ಇತ್ಯಾದಿ ಶುಭ-ಅಶುಭ ಚಿಹ್ನೆಗಳನ್ನು ಶರೀರದಲ್ಲಿ ಕಂಡು ಸುಖ-ದುಃಖ ಹೇಳುವುದು ಅದು ಲಕ್ಷಣ ನಿಮಿತ್ತ ಜ್ಞಾನವಿದೆ.

೭) ಯಾವುದೇ ವಸ್ತ್ರಾದಿ ವಸ್ತುಗಳನ್ನು ಮೂಶಕ (ಇಲಿ) ಮೊದಲಾದ ಜೀವಗಳಿಂದ ಕತ್ತರಿಸಿರುವುದನ್ನು ನೋಡಿ ಅದರ ಶುಭಾಶುಭ ಫಲ ಹೇಳುವುದು ಅದು ಛಿನ್ನ ನಿಮಿತ್ತ ಜ್ಞಾನವಿದೆ.

೮) ಶುಭಾಶುಭ ಸ್ವಪ್ನವನ್ನು ತಿಳಿದುಕೊಂಡು ಅದರ ಸುಖ-ದುಃಖ ಹೇಳುವುದು ಸ್ವಪ್ನ ನಿಮಿತ್ತ ಜ್ಞಾನವಿದೆ.

ಈ ಪ್ರಕಾರ ಇಲ್ಲಿ ಸಾಮಾನ್ಯದಿಂದ ಎಂಟು ಪ್ರಕಾರದ ನಿಮಿತ್ತಜ್ಞಾನ ಹೇಳಿದೆ, ಅನ್ಯಗ್ರಂಥಗಳಿಂದ ವಿಶೇಷ ತಿಳಿಯುವುದು.

ಈಗ ಜ್ಞಾನದ ಎಂಟು ಅಂಗಗಳನ್ನು ಹೇಳುತ್ತಾರೆ-

**ವಿಂಜನ ಅರ್ಥ ಸಮಗ್ಗಹ ಸಬ್ದಾರ್ಥೋಭಯ ಕಾಲಧೇಣೋ ಯ ।**
**ಉಪಝಾಣ ವಿಣಯ ಸಮಧಯ ಬಹುಮಾಣ ಗುವಾದಿ ವಸು ಅಂಗಯ ॥೧೨೦॥**

**ಗಾಥಾರ್ಥ :-** ವ್ಯಂಜನೋರ್ಜಿತ, ಅರ್ಥಸಮಗ್ರಹ, ಶಬ್ದಾರ್ಥ ಉಭಯಪೂರ್ಣ, ಯಥಾಕಾಲ ಅಧ್ಯಯನ ಮಾಡುವುದು, ಉಪಧ್ಯಾನ ಸಮರ್ಥಿತ, ವಿನಯ ಸಮರ್ಥಿತ, ಬಹುಮಾನ ಸಮರ್ಥಿತ ಅಂಗ, ಗುರು ಮೊದಲಾದವರ ನಿಹ್ನವ ಅಂಗ - ಇವು ಎಂಟು ಜ್ಞಾನದ ಅಂಗಗಳಾಗಿವೆ.

**ಭಾವಾರ್ಥ :-** ಅರ್ಥದ ವಿಚಾರ ಮಾಡದೆಯೇ ಗಾಥೆ, ಶ್ಲೋಕ, ಕಾವ್ಯ , ಪದ್ಯ , ಪದ, ವಿನತಿ, ಸಾಮಾಯಿಕ ಮೊದಲಾದ ಪಾಠಗಳನ್ನು ಓದುವುದು ಅದು ವ್ಯಂಜನೋಪಾರ್ಜಿತ ಅಂಗವಿದೆ.

ಎದುರಿಗೆ ಶಾಸ್ತ್ರವಿಲ್ಲದಿದ್ದರೂ ಏಕಾಂತದಲ್ಲಿ ಕುಳಿತುಕೊಂಡು ಮನಸ್ಸಿನೊಳಗೆ ಶಾಸ್ತ್ರಗಳ ಅರ್ಥದ ವಿಚಾರ ಮಾಡುವುದು ಅದು ಜ್ಞಾನದ ಅರ್ಥಸಮಗ್ರಹವೆಂಬ ಹೆಸರಿನ ಅಂಗವಿದೆ.

ಶಾಸ್ತ್ರ, ಕಾವ್ಯ , ಗಾಥೆ, ಪದ್ಯಗಳನ್ನು ಅರ್ಥಸಹಿತ ಓದುವುದು ಪಾಠ ಓದುವಾಗ ಅರ್ಥದ ವಿಚಾರ ಮಾಡುವುದು ಅದು ಶಬ್ದಾರ್ಥೋಭಯಪೂರ್ಣವೆಂಬ ಹೆಸರಿನ ಜ್ಞಾನದ ಅಂಗವಿದೆ.

ಸಮಯಾನುಸಾರ ಶಾಸ್ತ್ರದ ಅರ್ಥ ಮಾಡುವುದು; ಎಂದರೆ ಪ್ರಭಾತ ಕಾಲದಲ್ಲಿ ಯಾವ ಶಾಸ್ತ್ರ ಓದುವುದು? ಮಧ್ಯಾಹ್ನದಲ್ಲಿ ಯಾವ ಶಾಸ್ತ್ರ ಓದುವುದು ? ಸಾಯಂಕಾಲ ಯಾವುದರ ಅಭ್ಯಾಸ ಮಾಡುವುದು? ರಾತ್ರಿಯಲ್ಲಿ ಯಾವುದರ ಅಭ್ಯಾಸ ಮಾಡುವುದು ? ಬಾಲ್ಯಾವಸ್ಥೆಯಲ್ಲಿ ಯಾವ ಶಾಸ್ತ್ರದ ಅಭ್ಯಾಸ ಮಾಡುವುದು? ತರುಣಾವಸ್ಥೆಯಲ್ಲಿ ಯಾವ ಶಾಸ್ತ್ರದ ಅಭ್ಯಾಸ ಮಾಡುವುದು ? ವೃದ್ಧಾವಸ್ಥೆಯಲ್ಲಿ ಯಾವ ಶಾಸ್ತ್ರದ ಅಭ್ಯಾಸ ಮಾಡುವುದು ? ಇತ್ಯಾದಿ ಕಾಲಗಳಲ್ಲಿ ಎಂಥ ಶಾಸ್ತ್ರ ಬೇಕಾಗುವುದು; ಅದರ ಅನುಸಾರ ವಿಚಾರ ಮಾಡಿ ಕಾಲದ ಯೋಗ್ಯ ಶಾಸ್ತ್ರದ ಅಭ್ಯಾಸ ಮಾಡುವುದು; ಹಾಗೆಯೇ ಉಪದೇಶ ಕೊಡುವುದು, ಅದು ಕಾಲಾಧ್ಯಯನ ಧ್ರುವ ಪ್ರಭಾವವೆಂಬ ಹೆಸರಿನ ಜ್ಞಾನದ ಅಂಗವಿದೆ.

ಶಾಸ್ತ್ರಾಭ್ಯಾಸವು ನಿಷ್ಪ್ರಮಾದವಾಗುವ ಸಲುವಾಗಿ ಉಪವಾಸ ಏಕಾಶನ ಮಾಡುವುದು, ರಸತ್ಯಾಗ ಮಾಡುವುದು, ಅಲ್ಪಭೋಜನ ಮಾಡುವುದು, ನನಗೆ ಶಾಸ್ತ್ರಾಭ್ಯಾಸದಲ್ಲಿ ಪ್ರಮಾದವಾಗದಿರಲೆಂದು ವಿಚಾರ ಮಾಡಿ ಅದರ ಸಲುವಾಗಿ ತಪಸ್ಸು ಮಾಡುವುದು ಅದು ಉಪಧ್ಯಾನ ಸಮರ್ಥಿತವೆಂಬ ಹೆಸರಿನ ಜ್ಞಾನದ ಅಂಗವಿದೆ.

ಶಾಸ್ತ್ರದ ವಿನಯ ಮಾಡುವುದು. ಓದುವ ಸಮಯದಲ್ಲಿ ವಿಶೇಷ ಉತ್ತಮ ವಿನಯಪೂರ್ವಕ ಓದುವುದು, ಆಲಿಸುವ ಸಮಯದಲ್ಲಿ ವಿನಯಪೂರ್ವಕ ಏಕಾಗ್ರಚಿತ್ತದಿಂದ ಆಲಿಸುವುದು, ಉಪದೇಶ ಕೊಡುವ ಸಮಯದಲ್ಲಿ ವಿನಯಪೂರ್ವಕ ಪರಜೀವಗಳ ಕಲ್ಯಾಣದ ಉದ್ದೇಶದಿಂದ ಉಪದೇಶಕೊಡುವುದು, ವಿನಯಪೂರ್ವಕ ಶಾಸ್ತ್ರ ಇಡುವುದು, ತೆಗೆದುಕೊಳ್ಳುವುದು. ಇತ್ಯಾದಿ ರೂಪದಲ್ಲಿ ಶಾಸ್ತ್ರದ ವಿನಯ ಮಾಡುವುದು ಅದು ವಿನಯಸಮರ್ಥಿತವೆಂಬ ಹೆಸರಿನ ಜ್ಞಾನದ ಅಂಗವಿದೆ.

ಯಾರ ಹತ್ತಿರ ಸ್ವಯಂ ಜ್ಞಾನಾಭ್ಯಾಸ ಮಾಡಲಾಗಿದೆ, ಯಾರಿಂದ ತಮಗೆ ಜ್ಞಾನದ ಪ್ರಾಪ್ತಿಯಾಗಿದೆ, ಅವರ ಸೇವೆ ಶುಷ್ರೂಷೆಯನ್ನು ಬಹಳಷ್ಟು ಮಾಡುವುದು, ಪುನಃ ಪುನಃ ಅವರ ಪ್ರಶಂಸೆ ಮಾಡುವುದು. ಪುನಃ ಪುನಃ ಅವರ ಉಪಕಾರ ಸ್ಮರಿಸುವುದು, ಅವರ ಉಪಕಾರವನ್ನು ಜನ್ಮಾಂತರದಲ್ಲಿಯೂ ಮರೆಯದಿರುವುದು, ಯಾವಾಗಲೂ ಅವರನ್ನು ಧರ್ಮಪಿತನ ರೂಪದಲ್ಲಿ ತಿಳಿಯುವುದು ಇತ್ಯಾದಿ ರೂಪದಿಂದ ಜ್ಞಾನದಾನ ನೀಡುವಂಥವನ ವಿನಯ ಮಾಡುವುದು ಅದು ಬಹುಮಾನ ಸಮರ್ಥಿತವೆಂಬ ಹೆಸರಿನ ಜ್ಞಾನದ ಅಂಗವಿದೆ.

ಯಾವ ಗುರುವಿನಿಂದ ತಾವು ಜ್ಞಾನಾಭ್ಯಾಸ ಮಾಡಲಾಗಿದೆ, ಆ ಗುರುವಿನ ಹೆಸರನ್ನು ಮರೆಮಾಚಬಾರದು. ತಾತ್ಪರ್ಯವೆಂದರೆ ಯಾವ ಗುರುವಿನ ಹತ್ತಿರದಿಂದ ಸ್ವಯಂ ಜ್ಞಾನರೂಪದ ಧನವನ್ನು ಪ್ರಾಪ್ತಮಾಡಿಕೊಳ್ಳಲಾಗಿದೆ ಆ ಗುರುವು ಒಂದುವೇಳೆ ಕರ್ಮಯೋಗದಿಂದ ಹಿಂದೆ ಉಳಿದಿದ್ದರೆ ಮತ್ತು ಸ್ವಯಂ ತಮಗೆ ವಿಶುದ್ಧಿಯ ಯೋಗದಿಂದ ಮತ್ತು ತಪ-ಧ್ಯಾನಗಳ ಮೂಲಕ ಅನೇಕ ಋದ್ಧಿಗಳು ಪ್ರಗಟವಾಗಿದ್ದರೆ; ಮತಿ, ಶ್ರುತ, ಅವಧಿ, ಮನಃಪರ್ಯಯ ಇತ್ಯಾದಿ ಅನೇಕ ಋದ್ಧಿಗಳು ಪ್ರಗಟವಾಗಿದ್ದರೆ; ತಮ್ಮ ಗುರುವಿಗೆ ಅವಧಿ, ಮನಃಪರ್ಯಯಗಳು ಪ್ರಗಟವಾಗಿರದಿದ್ದರೆ, ಆ ಗುರುವಿನ ಹೆಸರು ಪ್ರಸಿದ್ಧವಾಗಿರದಿದ್ದರೂ, ತಮಗೆ ಅಧಿಕ ಜ್ಞಾನವಾಗಿರುವುದರಿಂದ ತಮ್ಮ ಹೆಸರಿನ ಪ್ರಸಿದ್ಧಿಯು ಜಗತ್ತಿನಲ್ಲಿ ಆಗಿ ಹೋಗಿದ್ದರೂ ತಮ್ಮ ಜ್ಞಾನದಾತೃಗುರುವಿನ ಹೆಸರನ್ನು ಮರೆ ಮಾಡಬಾರದು-ಗೌಪ್ಯವಾಗಿಡಬಾರದು ಅದು ಗುರು ಆದಿ ನಿಹ್ನವವೆಂಬ ಹೆಸರಿನ ಜ್ಞಾನದ ಅಂಗವಿದೆ.

ಒಂದುವೇಳೆ ತಮಗೆ ಒಳ್ಳೆಯ ಸಮ್ಯಗ್ಜ್ಞಾನ, ಮೋಕ್ಷಮಾರ್ಗದ ಪಂಥವನ್ನು ತಿಳಿಸಿಕೊಡುವಂಥ, ಪರಜೀವಗಳಿಗೆ ಉಪಕಾರಿ, ಶುದ್ಧತತ್ತ್ವವು ಚೆನ್ನಾಗಿ ಜ್ಞಾತವಾಗಿದ್ದರೆ ಅದನ್ನು ಬಚ್ಚಿಡಬಾರದು, ದಯೆಯಸಾಗರ, ದಯೆಯ ಮಾರ್ಗವನ್ನು ಪ್ರಗಟಪಡಿಸುವಂಥ, ಅನೇಕ ಸಂದೇಹಗಳ ಪರಿಹಾರ ಮಾಡುವಂಥ ಉತ್ತಮ ಜ್ಞಾನವನ್ನು ನಾವು ತಿಳಿಯುತ್ತಿದ್ದರೆ ಅದನ್ನು ಗೌಪ್ಯವಾಗಿಡಬಾರದು. ಪರಮಕಲ್ಯಾಣಕಾರಕವೂ ತತ್ತ್ವಪ್ರಕಾಶಕ ಕಥನ ಸಹಿತ ಶಾಸ್ತ್ರವು ತಮ್ಮ ಹತ್ತಿರ ವಿದ್ಯಮಾನವಿದ್ದರೆ; ಸ್ವಯಂ ತಮ್ಮಲ್ಲಿ ತತ್ತ್ವಜ್ಞಾನ ಪ್ರಗಟ ಮಾಡಿಕೊಳ್ಳಬೇಕೆಂದು ಬಯಸುವ ಯಾವನೋ ಧರ್ಮಾತ್ಮಾ ಪುರುಷನು ಬಂದು-ಒಂದುವೇಳೆ ತಮ್ಮ ಹತ್ತಿರ ಇಂಥದೊಂದು ಶಾಸ್ತ್ರವಿದ್ದರೆ ಸ್ವಾಧ್ಯಾಯದ ಸಲುವಾಗಿ, ಪುಣ್ಯೋಪಾರ್ಜನೆಯ ಸಲುವಾಗಿ ಅದನ್ನು ನಮ್ಮ ಮಸ್ತಕದ ಮೇಲೆ ವಿರಾಜಮಾನ ಮಾಡಿರಿ-ಎಂದು ಕೇಳಿದರೆ, ಆಗ ತಮ್ಮ ಮಸ್ತಕದ ಮೇಲೆ ವಿರಾಜಮಾನವಿರುವಂಥ (ತಮ್ಮ ಮನೆಯಲ್ಲಿರುವ) ಶಾಸ್ತ್ರವನ್ನು ಮರೆ ಮಾಡದೇ ಇರುವುದೂ ಜ್ಞಾನದ ಅಂಗವಿದೆ - ಇವೆಲ್ಲವುಗಳ ಹೆಸರು ಗುರು ಮೊದಲಾದವರ ನಿಹ್ನವ ಅಂಗವಿದೆ.

ಈ ಪ್ರಕಾರ ಜ್ಞಾನದ ಎಂಟು ಅಂಗಗಳು ಧರ್ಮಾತ್ಮಾ ಜೀವರುಗಳಿಂದ ಧಾರಣ ಮಾಡಲು ಯೋಗ್ಯವಿವೆ. ಈ ಜ್ಞಾನದ ಎಂಟು ಅಂಗಗಳ ಪಾಲನೆಯನ್ನು ಯಾವ ಧರ್ಮಾತ್ಮನು ವಿನಯದಿಂದ ಮಾಡುತ್ತಾನೆ, ಅವನು ತತ್ತ್ವಜ್ಞಾನ ಸಂಪದದ ಧಾರಕನಾಗುತ್ತಾನೆಂಬುದನ್ನು ತಿಳಿದು ನಿಕಟ ಭವ್ಯರು ಜ್ಞಾನದ ಅಂಗಗಳ ರಕ್ಷಣೆ ಮಾಡುವುದು ಯೋಗ್ಯವಿದೆ.

ಮುನಿಜನರಿಗೆ ಧ್ಯಾನ ಮಾಡುವಲ್ಲಿ ಕಾರಣಭೂತ ಹತ್ತು ಸ್ಥಾನಗಳನ್ನು ಹೇಳಿದ್ದಾರೆ. ಆ ಸ್ಥಾನಗಳಲ್ಲಿ ಪರಿಣಾಮಗಳ ವಿಶುದ್ಧತೆಯು ವಿಶೇಷವಾಗಿ ಹೆಚ್ಚುತ್ತದೆ, ಧ್ಯಾನದ ಏಕಾಗ್ರತೆಯು ವಿಶೇಷವಾಗುತ್ತದೆ. ಅದನ್ನೇ ಈಗ ಹೇಳುತ್ತಾರೆ.

ಧ್ಯಾನದ ಸಲುವಾಗಿ ಒಂದುವೇಳೆ ಏಕಾಂತ ಸ್ಥಾನವು ಇಲ್ಲದಿದ್ದರೆ, ಅನೇಕ ಜೀವಗಳ ವಚನ-ಶಬ್ದಗಳ ಕೋಲಾಹಲವಿದ್ದರೆ, ಅನೇಕ ಜೀವಗಳ ಬರ-ಹೋಗುವಿಕೆಯಿದ್ದರೆ ಅಂಥ ಸ್ಥಾನಗಳಲ್ಲಿ ಪರಿಣತಿಯು ಚಂಚಲವಾಗುತ್ತದೆ; ಅದಕ್ಕಾಗಿ ಧ್ಯಾನದ ಸಲುವಾಗಿ ಏಕಾಂತ ಸ್ಥಾನವಿರಬೇಕಾಗುವುದು. ಏಕಾಂತವಿಲ್ಲದೆ ಧ್ಯಾನದ ಸಿದ್ಧಿಯಾಗುವುದಿಲ್ಲ. ಅಶುದ್ಧ ಸ್ಥಾನದಲ್ಲಿಯೂ ಧ್ಯಾನವಾಗುವುದಿಲ್ಲ; ಅದರಿಂದ ಧ್ಯಾನದ ಶುದ್ಧಿಯ ಸಲುವಾಗಿ ರಮಣೀಯ ಕ್ಷೇತ್ರವಿರಬೇಕಾಗುವುದು. ಅಲ್ಲಿ ಕಾಷ್ಠದ ಪುತ್ತಳಿ ಅಥವಾ ಚಿತ್ರಾದಿಗಳು ಇರಬಾರದು. ವರ್ಣಮಯ ಮಹಲು, ರಮಣೀಯತೆಯ ಕೃತ್ರಿಮ ವಿಸ್ತಾರವಿರುವಂಥ ಸರಾಗ ಕ್ಷೇತ್ರವಿರಬಾರದು. ಮಹಾ ಉದಾಸ, ವೈರಾಗ್ಯ ವೃದ್ಧಿಯ ಕಾರಣವಿರುವ ರಾಗರಹಿತ ಕ್ಷೇತ್ರದಲ್ಲಿ ಧ್ಯಾನದ ಸಿದ್ಧಿಯಾಗುತ್ತದೆ.

ಮಹಾಪರ್ವತಗಳ ಗುಹೆಗಳು, ಉತ್ತುಂಗ ಮನೋಹರ ಉದಾರ ಪರ್ವತಗಳ ಶಿಖರ, ನಿರ್ಮಲ ಜಲದಿಂದ ತುಂಬಿಕೊಂಡಿರುವ ವಿಶಾಲ ಸರೋವರ, ಹರಿಯುತ್ತಿರುವ ನದಿ ತಟಗಳು ಧ್ಯಾನ ಯೋಗ್ಯವಿವೆ. ಜೀರ್ಣ

ಉದ್ಯಾನ, ಮಹಾಭಯಾನಕ-ಮೋಹೀ ಜೀವರುಗಳಿಗೆ ಭಯವನ್ನುಂಟು ಮಾಡುವಂಥ ದುರ್ಗಮ ಪ್ರದೇಶ, ವೃಕ್ಷರಹಿತ ಕಾನನ-ಅಟವಿಯು ಧ್ಯಾನಯೋಗ್ಯ ಕ್ಷೇತ್ರವಿದೆ. ದೀರ್ಘ ನಿಬಿಡ-ವೃಕ್ಷಗಳಿಂದ ತುಂಬಿಕೊಂಡಿರುವ ಕಾಡು ಧ್ಯಾನಯೋಗ್ಯ ಕ್ಷೇತ್ರವಿದೆ. ಅತಿ ಶೀತವಿಹೀನ ಸ್ಥಾನಗಳು ಅತಿ ಉಷ್ಣರಹಿತ ಸ್ಥಾನಗಳು ಧ್ಯಾನಯೋಗ್ಯ ಕ್ಷೇತ್ರಗಳಿವೆ.

ಈ ಪ್ರಕಾರ ಉಕ್ತ ದಶಕ್ಷೇತ್ರಗಳಲ್ಲಿ ಜ್ಞಾನ-ವೈರಾಗ್ಯರೂಪ ಭಾವಗಳಾಗುತ್ತವೆ, ಧೀರತೆಯಾಗುತ್ತದೆ ಕ್ಷಮೆಯ ಭಾವಗಳಾಗುತ್ತವೆ - ಇತ್ಯಾದಿ ಭಾವಸಹಿತ ಸ್ಥಾನಗಳನ್ನು ಧ್ಯಾನ ಸಿದ್ಧಿಯ ಕ್ಷೇತ್ರಗಳೆಂದು ತಿಳಿಯುವುದು.

ಪರಿಣಾಮಗಳ ವಿಶುದ್ಧಿಯ ಸಲುವಾಗಿ ಆಲೋಚನಾರೂಪ ಭಾವವು ಕಾರಣಭೂತವಿದೆ. ಆ ಆಲೋಚನೆಗೆ ಸಂಬಂಧಿಸಿದ ಹತ್ತು ಅತಿಚಾರಗಳು - ಆಕಂಪಿತ, ಅನಮಾಪಿತ, ದಿಷ್ಟ, ಬಾದರ, ಸೂಕ್ಷ್ಮ, ಶಬ್ದಾಕುಲ, ಛಿನಿ, ಬಹು, ಅವಿಕ್ತ, ತತ್ ಸೇವತ.

ಯಾರೋ ಮುನೀಶ್ವರರಿಗೆ ಸಂಯಮದಲ್ಲಿ ದೋಷ ತಗಲುತ್ತಿರುವುದು ಕಂಡು ಬಂದರೆ ಆ ಮುನೀಶ್ವರರು ಪಾಪದಿಂದ ಭಯಭೀತರಾಗಿದ್ದರೆ, ಪಾಪ ದೂರ ಮಾಡುವ ಸಲುವಾಗಿ ದಂಡ, ಪ್ರಾಯಶ್ಚಿತ್ತ ತಗೆದುಕೊಳ್ಳುವ ಸಮಯದಲ್ಲಿ 'ಆಚಾರ್ಯರು ದೀರ್ಘ ದಂಡನೆ ಹೇಳದಿದ್ದರೆ ಒಳ್ಳೆಯದೆ'ಂಬ ವಿಚಾರದಿಂದ ಭಯಭೀತರಾಗುವುದು ಅದು **ಆಕಂಪಿತ** ದೋಷವಿದೆ.

ಯಾರೋ ಯತಿಗಳಿಗೆ ದೋಷ ತಗಲಿದ ಮೇಲೆ ತಮ್ಮ ಗುರುಗಳ ಹತ್ತಿರ ಹೋಗಿ ತಮ್ಮ ಪ್ರಮಾದದ ನಿಂದೆ ಮಾಡುತ್ತಾರೆ. ಆಲೋಚನಾಪೂರ್ವಕ ತಮಗೆ ತಗಲಿದ ದೋಷವನ್ನು ಪ್ರಗಟ ಮಾಡಿ ಗುರುಗಳಿಂದ ಶಿಕ್ಷೆ-ದಂಡನೆ ಕೇಳುವ ಸಮಯದಲ್ಲಿ ''ನನ್ನ ಶರೀರವು ದುರ್ಬಲವಿದೆ ಮತ್ತು ರೋಗ ಪೀಡಿತವಿರುವ ಕಾರಣ ದಂಡನೆಯನ್ನು ಸಹಿಸುವ ಶಕ್ತಿಯು ನನ್ನಲ್ಲಿ ಇಲ್ಲ; ಅದರಿಂದ ಆಚಾರ್ಯರು ನನಗೆ ಅಲ್ಪದಂಡನೆ ಹೇಳಿದರೆ ಒಳ್ಳೆಯದಿದೆ'' ಎಂಬ ವಿಚಾರದ ಹೆಸರು **ಅನುಮಾಪಿತ** ದೋಷವಿದೆ.

ತಮಗೆ ಯಾವುದಾದರೂ ದೋಷ ತಗಲಿರುವುದನ್ನು ತಿಳಿದು ಯತಿಗಳು - ''ಒಂದುವೇಳೆ ನನ್ನ ದೋಷವನ್ನು ಯಾರಾದರೂ ನೋಡಿದ್ದರೆ ತಮ್ಮ ದೋಷವನ್ನು ಗುರುಗಳಿಗೆ ಹೇಳಿ ತಮ್ಮ ನಿಂದೆ-ಆಲೋಚನೆ ಮಾಡಬೇಕು ಒಂದುವೇಳೆ ತಮ್ಮ ದೋಷವನ್ನು ಯಾರೂ ನೋಡಿರದಿದ್ದರೆ ಗುರುಗಳಿಗೆ ಹೇಳಬಾರದು'' ಎಂದು ವಿಚಾರ ಮಾಡುವುದು **ದಿಷ್ಟ** ದೋಷವಿದೆ.

ಯತೀಶ್ವರರಿಗೆ ಯಾವುದಾದರೂ ದೋಷ ತಗಲಿದ ಮೇಲೆ ಅದನ್ನು ಗುರುಗಳಿಗೆ ಹೇಳದಿರುವುದು; ಯಾವುದಾದರೂ ಬಾದರ-ದೊಡ್ಡ ದೋಷ ತಗಲಿದ ಮೇಲೆ ಮಾನದ ಕಾರಣದಿಂದ, ಇತರರಿಗೆ ತೋರಿಸುವ ಸಲುವಾಗಿ ಅದನ್ನು ಆಚಾರ್ಯರಲ್ಲಿ ಹೇಳಿಕೊಂಡು ಆಲೋಚನಾ ಮಾಡುವುದು **ಬಾದರ** ದೋಷವಿದೆ.

ಮುನೀಶ್ವರರಿಗೆ ಯಾವುದಾದರೂ ಬಾದರ ದೋಷವು ತಗಲಿದರೆ ಅದನ್ನಂತೂ ಆಚಾರ್ಯರ ಹತ್ತಿರ ಹೇಳದಿರುವುದು ಮತ್ತು ಸೂಕ್ಷ್ಮ ದೋಷ ತಗಲಿದ ಮೇಲೆ ಮಾನ-ದೊಡ್ಡಸ್ತಿಕೆ, ಲೋಕ ಪ್ರಶಂಸೆಯ ಸಲುವಾಗಿ ಗುರುಗಳ ಹತ್ತಿರ ಹೋಗಿ ಅದನ್ನು ಪ್ರಕಾಶಿತ ಮಾಡಿ ತಮ್ಮ ಆಲೋಚನ ಮಾಡುವುದು **ಸೂಕ್ಷ್ಮ** ದೋಷವೆನಿಸಿ ಕೊಳ್ಳುತ್ತದೆ.

ಯಾರೋ ಮುನಿಗಳು ದೋಷ ತಗಲಿದ ಮೇಲೆ ಗುರುಗಳಿಗಂತೂ ಹೇಳುತ್ತಾರೆ; ಆದರೆ ಮಾನ-ದೊಡ್ಡಸ್ತನದ ಸಲುವಾಗಿ ದೋಷವನ್ನು ಮರೆಮಾಡಿ ಹೇಳುತ್ತಾರೆ. ತಮ್ಮ ಹೆಸರು ಹೇಳದೆ ಗುರುಗಳಿಗೆ ಹೇಳುವುದೇನೆಂದರೆ - ಓ ಗುರುಗಳೇ ! ಒಂದುವೇಳೆ ಇಂಥ ದೋಷವು ಯಾರೋ ಮುನಿಗಳಿಗೆ ತಗಲಿದರೆ ಅದರ ದಂಡನೆ ಏನಿದೆಯೆಂಬುದನ್ನು ಹೇಳಿರಿ - ಈ ಪ್ರಕಾರ ಆಲೋಚನಾಪೂರ್ವಕ ಕೇಳುತ್ತಿದ್ದರೂ ನಿಂದೆಯ ಭಯದಿಂದ ತಮ್ಮ ಹೆಸರನ್ನು ಪ್ರಗಟ ಮಾಡದಿರುವುದು ಅದು **ಛಿನಿ**ಯೆಂಬ ಹೆಸರಿನ ದೋಷವಿದೆ.

ಯಾರೋ ಮುನಿಗಳಿಗೆ ದೋಷ ತಗಲಿದ ಮೇಲೆ ಅದನ್ನು ಗುರುಗಳಿಗೆ ಏಕಾಂತದಲ್ಲಿ ಹೇಳುವುದಿಲ್ಲ. ಯಾವಾಗ ಆಚಾರ್ಯರು ಅನೇಕ ಮುನಿಗಳು ಮತ್ತು ಶ್ರಾವಕರೊಂದಿಗೆ ಕುಳಿತಿರುತ್ತಾರೆ, ಆಗ ಮಾನದ ಲೋಭಿಯು ತಮ್ಮ ಪ್ರಶಂಸೆಯ ಅಭಿಲಾಷೆಯುಳ್ಳವರು ಗುರುಗಳಿಗೆ ಹೇಳುತ್ತಾರೆ. ಸ್ವಾಧ್ಯಾಯದ ಅನೇಕ ಶಬ್ದಗಳು ನಡೆಯುತ್ತಿರುವಾಗ, ಆಚಾರ್ಯರು ಉಪದೇಶ ಕೊಡುತ್ತಿರುವಾಗ, ಶಿಷ್ಯರು ಪ್ರಶ್ನೆ ಕೇಳುತ್ತಿರುವಾಗ - ಇತ್ಯಾದಿ ಸಮಯ ನೋಡಿಕೊಂಡು ತುಂಬಿದ ಸಭೆಯಲ್ಲಿ, ಪ್ರಶ್ನೋತ್ತರಗಳ ಗದ್ದಲವಿರುವಲ್ಲಿ ತಮ್ಮ ದೋಷವನ್ನು ಗುರುಗಳಿಗೆ ಹೇಳಿ ಆಲೋಚನ ಮಾಡುವುದು, ಅದನ್ನು ಗುರುಗಳು ಸ್ವಲ್ಪ ಆಲಿಸಿದರು ಅಥವಾ ಆಲಿಸಲಿಲ್ಲ - ಅಂಥ ಸಂದರ್ಭ ನೋಡಿಕೊಂಡು ಹೇಳುವುದು **ಶಬ್ದಾಕುಲ**ವೆಂಬ ಹೆಸರಿನ ದೋಷವಿದೆ.

ಯಾರೋ ಮುನಿಗಳಿಗೆ ದೋಷ ತಗಲಿದ ಮೇಲೆ ಅವರು ಗುರುಗಳ ಹತ್ತಿರ ಹೋಗಿ ತಮ್ಮ ದೋಷವನ್ನು ಹೇಳಿ ಆಲೋಚನೆ ಮಾಡುತ್ತಾರೆ; ಆಗ ಗುರುಗಳು ಅವರ ಪಾಪ ನಷ್ಟ ಮಾಡುವ ಸಲುವಾಗಿ ಅವರಿಗೆ ಪ್ರಾಯಶ್ಚಿತ್ತ ಕೊಡುತ್ತಾರೆ. ಗುರುಗಳಿಂದ ಕೊಡಲ್ಪಟ್ಟ ಪ್ರಾಯಶ್ಚಿತ್ತವನ್ನು ಆಲಿಸಿ, ಗುರುಗಳು ದೊಡ್ಡ ಪ್ರಾಯಶ್ಚಿತ್ತ ಕೊಟ್ಟಿದ್ದಾರೆಂದು ವಿಚಾರ ಮಾಡಿ, ಅನ್ಯ ಆಚಾರ್ಯರ ಹತ್ತಿರ ಹೋಗಿ ಆಲೋಚನಾ ಸಹಿತ ತಮ್ಮ ದೋಷ ಹೇಳುತ್ತಾರೆ. ಅವರ ಮೂಲಕ ಕೊಡಲ್ಪಟ್ಟ ದಂಡನೆಯನ್ನು ಭಾರಿ ದಂಡನೆಯೆಂದು ತಿಳಿದು ಅನ್ಯ ಆಚಾರ್ಯರ ಸಂಘದಲ್ಲಿ ಹೋಗಿ ಆಲೋಚನ ಮಾಡಿ ತಮ್ಮ ದೋಷ ಹೇಳುತ್ತಾರೆ - ಈ ಪ್ರಕಾರ ಎಲ್ಲಿಯವರೆಗೆ ಯಾರೋ ಆಚಾರ್ಯರು ಅಲ್ಪ ದಂಡನೆ ಹೇಳುವುದಿಲ್ಲ, ಅಲ್ಲಿಯವರೆಗೆ ಅನೇಕ ಆಚಾರ್ಯರ ಹತ್ತಿರಕ್ಕೆ ಹೋಗಿ ಹೋಗಿ ಆಲೋಚನ ಮಾಡಿ ತಮ್ಮ ದೋಷ ಹೇಳುತ್ತಾರೆ; ಇದರ ಹೆಸರು **ಬಹು** ದೋಷವಿದೆ.

ಯಾರೋ ಮುನಿಗಳಿಗೆ ದೋಷ ತಗಲಿದ ಮೇಲೆ ಅದನ್ನು ಪಾಪದ ಭಯದಿಂದ ಪ್ರಕಾಶಿತವಂತೂ ಮಾಡುತ್ತಾರೆ; ಆದರೆ ಮಾನ-ಹಿರಿಮೆ, ಲಜ್ಜೆಯ ಕಾರಣ ಆಚಾರ್ಯರಿಗೆ ಹೇಳುವುದಿಲ್ಲ. ನನ್ನ ಅಪಯಶ, ನಿಂದೆಯಾಗಬಹುದೆಂಬ ಭಯದಿಂದ ಗುರುಗಳಿಗೆಯಂತೂ ಹೇಳುವುದಿಲ್ಲ; ಆದರೆ ತಮಗಿಂತ ಚಿಕ್ಕ ಪದಧಾರಿ ಹಾಗೂ ತಮ್ಮ ಸಮಾನ ಮುನಿಗಳ ಹತ್ತಿರ ತಮ್ಮ ದೋಷವನ್ನು ಆಲೋಚನಸಹಿತ ಪ್ರಗಟ ಮಾಡುತ್ತಾರೆ. ಇದರ ಹೆಸರು **ಅವಿಕ್ತ** ದೋಷವಿದೆ.

ಯಾರೋ ಮುನಿಗಳಿಗೆ ದೋಷ ತಗಲಿದ ಮೇಲೆ ಮಾನ-ದೊಡ್ಡಸ್ತನ, ಅಪಯಶ, ನಿಂದೆಯ ಭಯದಿಂದ ಅವರು ಆ ಸಮಯ ಗುರುಗಳಿಗೆ ಹೇಳುವುದಿಲ್ಲ. ಆದರೆ ಯಾವಾಗ ಅನ್ಯ ಮುನಿಗೆ ತಮ್ಮ ಸಮಾನವೇ ದೋಷ ತಗಲಿದ ಮೇಲೆ ಆಚಾರ್ಯರ ಮೂಲಕ ಅವರಿಗೆ ಪ್ರಾಯಶ್ಚಿತ ಕೊಡುತ್ತಿರುವುದನ್ನು ಕಂಡು ಅವರು ಆಚಾರ್ಯರಿಗೆ ಹೇಳುವುದೇನೆಂದರೆ. ಓ ಸ್ವಾಮೀ ! ಈ ಮುನೀಶ್ವರರ ಸಮಾನ ದೋಷವು ನನ್ನಿಂದಲೂ ಸಂಭವಿಸಿದೆ; ಅದಕ್ಕಾಗಿ ಎಂಥ ದಂಡನೆಯನ್ನು ಇವರಿಗೆ ಕೊಟ್ಟಿರುವಿರಿ, ಅಂಥದೇ ನನಗೂ ಕೊಡಿರಿ - ಎಂದು ಆಲೋಚನಾಸಹಿತ ಹೇಳುವುದು ಅದು **ತತ್ಸೇವತ**ವೆಂಬ ಹೆಸರಿನ ದೋಷವಿದೆ.

ಈ ಪ್ರಕಾರ ಇವು ಆಲೋಚನೆಯ ಹತ್ತು ದೋಷಗಳಿವೆ. ಇವುಗಳಲ್ಲಿ ಯಾರು ಅಂತರಂಗದಿಂದ ಧರ್ಮಾತ್ಮರಿದ್ದಾರೆ (ವಾಸ್ತವಿಕ ಧರ್ಮಾತ್ಮರಿದ್ದಾರೆ) ಅವರು ತಮ್ಮ ಧರ್ಮವನ್ನು ಪರಿಶುದ್ಧವಾಗಿ ಇಟ್ಟುಕೊಳ್ಳುವುದು ಉತ್ಕೃಷ್ಟವಿದೆ.

ಈಗ ಆಚಾರ್ಯರು ಒಂದುವೇಳೆ ಯಾರೋ ಶಿಷ್ಯರ ಕಲ್ಯಾಣಾರ್ಥವಾಗಿ ದೀಕ್ಷೆ ಕೊಡುತ್ತಿದ್ದರೆ ಕೆಳಗೆ ಹೇಳುವ ಹತ್ತು ಕಾಲದೋಷಗಳನ್ನು ದೂರ ಮಾಡಿ ದೀಕ್ಷೆ ಕೊಡುತ್ತಾರೆ; ಈ ಹತ್ತು ಕಾಲಗಳಲ್ಲಿ ದೀಕ್ಷೆ ಕೊಡುವುದಿಲ್ಲವೆಂಬುದನ್ನು ಹೇಳುತ್ತಾರೆ-

೧) ಗ್ರಹೋಪರಾಗ - ಯಾರಿಗೆ ಯಾವುದಾದರೂ ಅಶುಭ ಗ್ರಹವಿದ್ದರೆ ದೀಕ್ಷೆ ಕೊಡುವುದಿಲ್ಲ . ೨) ಸೂರ್ಯಗ್ರಹಣವಿದ್ದರೆ, ೩) ಚಂದ್ರಗ್ರಹಣವಿದ್ದರೆ, ೪) ಇಂದ್ರಧನುಷ್ಯವು ಮೂಡಿದ್ದರೆ, ೫) ಯಾರಿಗೆ ವಿರುದ್ಧ ಗ್ರಹವು ಬಂದಿದ್ದರೆ, ೬) ಆಕಾಶವು ಮೋಡಗಳಿಂದ ಆಚ್ಛಾದಿತವಾಗುತ್ತಿದ್ದರೆ, ೭) ದೀಕ್ಷಾರ್ಥೀ ಯಾವ ಜೀವದ ಸಮಯವು ಒಳ್ಳೆಯದಿಲ್ಲದಿದ್ದರೆ, ೮) ಅಧಿಕ ಮಾಸವಿದ್ದರೆ, ೯) ಸಂಕ್ರಾತಿಯ ದಿನವಿದ್ದರೆ ಮತ್ತು ೧೦) ಕ್ಷಯತಿಥಿ ಇದ್ದರೆ ದೀಕ್ಷೆ ಕೊಡುವುದಿಲ್ಲ.

ಇವು ಹತ್ತು ಸಂದರ್ಭಗಳಲ್ಲಿ ಒಳ್ಳೆಯ ಜ್ಞಾತಾರರು, ನಿಮಿತ್ತಜ್ಞಾನದ ವೇತ್ತಾರರು ಶಿಷ್ಯರಿಗೆ ದೀಕ್ಷೆ ಕೊಡುವುದಿಲ್ಲ. ಒಂದುವೇಳೆ ಯಾರಾದರೂ ಜ್ಞಾನದ ಮಂದತೆಯ ಕಾರಣ ಈ ಹತ್ತು ಕಾಲಗಳಲ್ಲಿ ದೀಕ್ಷೆ ಕೊಟ್ಟರೆ ಆಚಾರ್ಯರ ಪರಂಪರೆಯ ಲೋಪವಾಗುತ್ತದೆ, ಅವರು ನಿಂದೆಗೆ ಪ್ರಾಪ್ತರಾಗುತ್ತಾರೆ. ಜಿನಾಜ್ಞೆಯ ಉಲ್ಲಂಘನೆ ಮಾಡುವಂಥವರೆಂದು ತಿಳಿದು ಎಲ್ಲ ಆಚಾರ್ಯರ ಸಂಘಗಳಿಂದ ಹೊರಗೆ ಉಳಿದು-ಸಂಘದಿಂದ ನಿಷ್ಕಾಶಿತರಾಗಿ ಅವಮಾನಕ್ಕೆ ಗುರಿಯಾಗುತ್ತಾರೆ; ಅದಕ್ಕಾಗಿ ಇವು ಹತ್ತು ಕಾಲಗಳನ್ನು ದೂರ ಮಾಡುತ್ತಾರೆ.

ದೀಕ್ಷೆ ಕೊಡಲು ಯೋಗ್ಯದಿವಸ ಹೇಳುತ್ತಾರೆ - ಶುಭದಿವಸ, ಶುಭನಕ್ಷತ್ರ , ಶುಭಯೋಗ, ಶುಭಮುಹೂರ್ತ, ಶುಭಗ್ರಹ ಇತ್ಯಾದಿ ಶುಭಕಾಲದಲ್ಲಿ ದೀಕ್ಷೆಯಾಗುತ್ತದೆ.

ಬುದ್ಧಿವಂತನಾಗಿರುವುದು, ವಿಶುದ್ಧಕುಲವಂತನಾಗಿರುವುದು, ಗೋತ್ರ ಶುದ್ಧವಿರುವುದು, ಶರೀರದ ಅಂಗೋಪಾಂಗಗಳು ಶುದ್ಧವಿರುವುದು, ಅಂಧ, ಕಿವುಡ, ಹೆಳವ, ಕುಳ್ಳ, ಡೂಗ, ರೋಗಿ ಇತ್ಯಾದಿ ದೋಷರಹಿತನಾಗಿರುವುದು. ಮೂರ್ತಿ(ಆಕಾರವು) ಸುಂದರವಾಗಿರುವುದು, ಮಂದಕಷಾಯಿ ಇರುವುದು, ಪಂಚೇಂದ್ರಿಯ ಭೋಗಗಳಲ್ಲಿ ಅರುಚಿಯಿರುವುದು, ಮೋಕ್ಷಾಭಿಲಾಷಿಯಿರುವುದು, ಪ್ರಕೃತಿಯು ಶುಭ ಚೇಷ್ಟೆಯುಕ್ತವಿರುವುದು, ಶುಭಾಚರಣೆಯಿರುವುದು, ಹಾಸ್ಯ-ಕುತೂಹಲರಹಿತ ನೇತ್ರಗಳಿಂದ ಕೂಡಿರುವುದು, ಮಹಾವೈರಾಗ್ಯದಶೆಯಿಂದ ತುಂಬಿಕೊಂಡಿರುವುದು ಇತ್ಯಾದಿ ಗುಣಸಹಿತ ಶಿಷ್ಯನು ದೀಕ್ಷೆಗೆ ಯೋಗ್ಯನಿದ್ದಾನೆ.

ಈ ಪ್ರಕಾರ ಇವು ಮುಖ್ಯ ಗುಣಗಳನ್ನು ಹೇಳಿದ್ದಾರೆ. ಉಳಿದಂತೆ ಇವುಗಳಲ್ಲಿ ಸಾಮಾನ್ಯ ವಿಶೇಷ, ಯೋಗ್ಯ-ಅಯೋಗ್ಯ ತಿಳಿದುಕೊಂಡು ವಿಚಾರಮಾಡಿ ಆಚಾರ್ಯರು ನಿರ್ಣಯ ಮಾಡುತ್ತಾರೆಂದು ತಿಳಿಯುವುದು.

ಈ ಪ್ರಕಾರ ಶ್ರೀ ಸುದೃಷ್ಟಿ ತರಂಗಿಣಿಯೆಂಬ ಹೆಸರಿನ ಗ್ರಂಥದಲ್ಲಿ ಷಟ್‌ಲೇಶ್ಯೆ,
ಯೋನಿಭೇದ, ನಿಗೋದರಹಿತ ಸ್ಥಾನ, ನಿಮಿತ್ತಜ್ಞಾನಾದಿ ಕಥನ ವರ್ಣನೆಯೆಂಬ
ಹೆಸರಿನ ಇಪ್ಪತ್ತೇಳನೆಯ ಪರ್ವವು ಸಂಪೂರ್ಣವಾಯಿತು.

★★★★★

■ ಆತ್ಮನು ಅನಂತಗುಣಗಳ ಚೈತನ್ಯ ಘನನಿದ್ದಾನೆ, ಅವನಲ್ಲಿ ಬಂಧ ಅವಸ್ಥೆಯು ಅದು ಮಲಿನ ತರಂಗವಿದೆ ಮತ್ತು ಮೋಕ್ಷ ಅವಸ್ಥೆಯು ಅದು ನಿರ್ಮಲ ತರಂಗವಿದೆ; ತ್ರಿಕಾಲೀ ಆತ್ಮನು ಆ ಬಂಧ ಮೋಕ್ಷ ಅವಸ್ಥೆಯಷ್ಟನಿಲ್ಲ ಆದರೆ ಬಂಧ-ಮೋಕ್ಷದ ಅಪೇಕ್ಷೆಯಿಂದ ರಹಿತ ತ್ರಿಕಾಲ ಏಕರೂಪನಿದ್ದಾನೆ; ಅದು ಪರಮ ಪಾರಿಣಾಮಿಕ ಭಾವವಿದೆ. ಮುನೀಶ್ವರರು ಮೋಕ್ಷದ ಸಲುವಾಗಿ ಇದರದೇ ಸ್ಮರಣೆ ಮಾಡುತ್ತಾರೆ. ಮೊದಲು ಪರಿಚಯವಾಗುತ್ತದೆ - ಶ್ರದ್ಧೆ ಮತ್ತು ಜ್ಞಾನವಾಗಬೇಕಾಗುತ್ತದೆ.

# ೨೮ : ಇಪ್ಪತ್ತೆಂಟನೆಯ ಪರ್ವ
# ದಶ ಕರಣಾದಿಗಳ ವರ್ಣನೆ

ಈಗ ದಶಕರಣದ ನಿಮಿತ್ತಪಡೆದು ಕರ್ಮಗಳ ಅವಸ್ಥೆಯನ್ನು ಹೇಳುತ್ತಾರೆ. ಅವುಗಳ ಹೆಸರು - ಬಂಧ, ಉದಯ, ಸತ್ತಾ , ಉತ್ಕರ್ಷಣ, ಅಪಕರ್ಷಣ, ಸಂಕ್ರಮಣ, ಉಪಶಾಂತ, ನಿಧತ್ತಿ , ನಿಕಾಚಿತ ಮತ್ತು ಉದೀರಣವೆಂಬ ಹೆಸರಿನ ಹತ್ತು ಅವಸ್ಥೆಗಳಿವೆ.

ಬಂಧಕರಣ-ಜೀವನು ತನ್ನ ಶುಭಾಶುಭ ಪರಿಣಾಮಗಳಿಂದ ಕರ್ಮಗಳ ಬಂಧ ಮಾಡಿಕೊಳ್ಳುತ್ತಾನೆ, ಆ ಬಂಧವು-ಪ್ರಕೃತಿಬಂಧ, ಪ್ರದೇಶಬಂಧ, ಸ್ಥಿತಿಬಂಧ ಮತ್ತು ಅನುಭಾಗಬಂಧವೆಂದು ನಾಲ್ಕು ಪ್ರಕಾರದ್ದಿದೆ.

ಪ್ರಕೃತಿಬಂಧದ ಸ್ವರೂಪ - ಭಿನ್ನ-ಭಿನ್ನ ಜೀವಗಳದು ಭಿನ್ನ-ಭಿನ್ನ ಕಾಲದ ಅಪೇಕ್ಷೆಯಿಂದ ಒಂದು ನೂರಾ ಇಪ್ಪತ್ತು ಪ್ರಕೃತಿಗಳು ಬಂಧ ಯೋಗ್ಯವಿವೆ. ಅವನ್ನು ಹೇಳುತ್ತಾರೆ-ಜ್ಞಾನಾವರಣದ ಐದು, ದರ್ಶನಾವರಣದ ಒಂಭತ್ತು, ವೇದನೀಯದ ಎರಡು, ಮೋಹನೀಯದ ಇಪ್ಪತ್ತಾರು, ಆಯುವಿನ ನಾಲ್ಕು, ಗೋತ್ರದ ಎರಡು, ಅಂತರಾಯದ ಐದು - ಈ ಪ್ರಕಾರ ಏಳು ಕರ್ಮಗಳ ಐವತ್ಮೂರು ಪ್ರಕೃತಿಗಳಿವೆ. ನಾಮಕರ್ಮದ ವರ್ಣಾದಿ ನಾಲ್ಕು, ಸಂಸ್ಥಾನ ಆರು, ಸಂಹನನ ಆರು, ಗತಿ ನಾಲ್ಕು, ಗತ್ಯಾನುಪೂರ್ವೀ ನಾಲ್ಕು, ಶರೀರ ಐದು, ಜಾತಿ ಐದು, ಅಂಗೋಪಾಂಗ ಮೂರು, ವಿಹಾಯೋಗತಿ ಎರಡು, ಅಗುರುಲಘು ಮೊದಲಾದ ಅಷ್ಟಕದ ಎಂಟು ತ್ರಸಾದಿ ದಶದ್ವಿಕದ ಇಪ್ಪತ್ತು - ಈ ಪ್ರಕಾರ ನಾಮಕರ್ಮದ ಅರವತ್ತೆಂಟು - ಎಲ್ಲ ಸೇರಿ ಎಂಟು ಕರ್ಮದ ಒಂದುನೂರಾ ಇಪ್ಪತ್ತು ಪ್ರಕೃತಿಗಳು ಬಂಧ ಯೋಗ್ಯವಿವೆ.

ಮನುಷ್ಯಗತಿಯಲ್ಲಿ ಎಲ್ಲವುಗಳ ಬಂಧವಾಗುವುದರಿಂದ ಮನುಷ್ಯನಿಗೆ ಒಂದುನೂರಾ ಇಪ್ಪತ್ತು ಪ್ರಕೃತಿಗಳು ಬಂಧ ಯೋಗ್ಯವಿವೆ. ತಿರ್ಯಂಚ ಗತಿಯಲ್ಲಿ ಪಂಚೇಂದ್ರಿಯದ ಆಹಾರಕದ್ವಿಕ ಮತ್ತು ತೀರ್ಥಂಕರ - ಈ ಪ್ರಕಾರ ಮೂರನ್ನು ಹೊರತುಪಡಿಸಿ ಬಂಧಯೋಗ್ಯ ಪ್ರಕೃತಿಗಳು ಒಂದುನೂರಾ ಹದಿನೇಳು ಇವೆ. ಎರಡು ಇಂದ್ರಿಯ, ಮೂರು ಇಂದ್ರಿಯ, ನಾಲ್ಕು ಇಂದ್ರಿಯ - ಈ ವಿಕಲೇಂದ್ರಿಯಗಳಲ್ಲಿ ವೈಕ್ರಿಯಿಕ ಅಷ್ಟಕದ ಎಂಟು, ಆಹಾರಕ ದ್ವಿಕದ ಎರಡು ಮತ್ತು ತೀರ್ಥಂಕರ - ಇವು ಹನ್ನೊಂದನ್ನು ಹೊರತು ಪಡಿಸಿ ಒಂದುನೂರಾ ಒಂಭತ್ತು ಪ್ರಕೃತಿಗಳ ಬಂಧವಾಗುತ್ತದೆ. ಪಂಚಸ್ಥಾವರಗಳಲ್ಲಿ ಬಂಧಯೋಗ್ಯ ವಿಕಲತ್ರಯವತ್ ಒಂದುನೂರಾ ಒಂಭತ್ತು ಪ್ರಕೃತಿಗಳಿವೆ. ಕೇವಲ ವಿಶೇಷವೆಂದರೆ ಅಗ್ನಿಕಾಯಿಕ ಮತ್ತು ವಾಯುಕಾಯಿಕ - ಇವೆರಡು ಸ್ಥಾವರಗಳಲ್ಲಿ ಉಚ್ಚಗೋತ್ರ ಮತ್ತು ಮನುಷ್ಯಾಯು ಇವೆರಡನ್ನು ಹೊರತುಪಡಿಸಿ ಒಂದುನೂರಾ ಏಳು ಪ್ರಕೃತಿಗಳ ಬಂಧವಿದೆ.

ದೇವಗಳಲ್ಲಿ ವೈಕ್ರಿಯಿಕ ಅಷ್ಟಕದ ಎಂಟು, ವಿಕಲತ್ರಯದ ಮೂರು, ಆಹಾರಕದ್ವಿಕದ ಎರಡು, ಸೂಕ್ಷ್ಮ, ಸಾಧಾರಣ ಮತ್ತು ಅಪರ್ಯಾಪ್ತ - ಇವು ಹದಿನಾರನ್ನು ಹೊರತುಪಡಿಸಿ ಸಮುಚ್ಚಯ ಒಂದುನೂರಾ ನಾಲ್ಕು ಪ್ರಕೃತಿಗಳ ಬಂಧವಿದೆ. ಅಲ್ಲಿ ಇರುವ ವಿಶೇಷವೆಂದರೆ ಎರಡರಿಂದ ಮೇಲೆ ಮೂರನೆಯ ಸ್ವರ್ಗದಿಂದ ಹಿಡಿದು ಹನ್ನೆರಡನೆಯ ಸ್ವರ್ಗದವರೆಗೆ ದೇವಗಳಲ್ಲಿ ಏಕೇಂದ್ರಿಯ ಜಾತಿ, ಸ್ಥಾವರ ನಾಮ ಮತ್ತು ಆತಪ-ಇವು ಮೂರನ್ನು ಹೊರತುಪಡಿಸಿ ಒಂದುನೂರಾ ಒಂದು ಪ್ರಕೃತಿಗಳ ಬಂಧವಿದೆ. ಹನ್ನೆರಡನೆಯ ಸ್ವರ್ಗದಿಂದ ಮೇಲಿನ ದೇವಗಳಲ್ಲಿ ವಿಕಲತ್ರಯದ ಮೂರು ಮತ್ತು ಉದ್ಯೋತ-ಇವು ಮೂರನ್ನು ಹೊರತುಪಡಿಸಿ ತೊಂಭತ್ತೇಳು ಪ್ರಕೃತಿಗಳ ಬಂಧವಿದೆ.

ನಾರಕಿಗಳಿಗೆ ಒಂದುನೂರಾ ಇಪ್ಪತ್ತರೊಳಗಿಂದ ವೈಕ್ರಿಯಿಕ ಅಷ್ಟಕದ ಎಂಟು, ವಿಕಲತ್ರಯದ ಮೂರು, ಸ್ಥಾವರ, ಏಕೇಂದ್ರಿಯ, ಸಾಧಾರಣ, ಅಪರ್ಯಾಪ್ತ , ಸೂಕ್ಷ್ಮ , ಆಹಾರಕದ್ವಿಕದ ಎರಡು, ಆತಪ-ಇವು ಹತ್ತೊಂಭತ್ತನ್ನು ಹೊರತುಪಡಿಸಿ ಸಮುಚ್ಚಯ ಒಂದುನೂರಾ ಒಂದು ಪ್ರಕೃತಿಗಳ ಬಂಧವಿದೆ. ವಿಶೇಷವೆಂದರೆ ತೀರ್ಥಂಕರ

ಪ್ರಕೃತಿಯ ಬಂಧವು ಮೂರನೆಯ ನರಕದವರೆಗೆ ಇರುತ್ತದೆ, ಅಲ್ಲಿಂದ ಮುಂದೆ ಇರುವುದಿಲ್ಲ. ಎಂದರೆ ಮೂರನೆಯ ನರಕದಿಂದ ಕೆಳಗೆ ನೂರು ಪ್ರಕೃತಿಗಳ ಬಂಧವಿದೆ. ಏಳನೆಯ ನರಕದಲ್ಲಿ ಮನುಷ್ಯಾಯುವನ್ನು ಹೊರತುಪಡಿಸಿ ತೊಂಭತ್ತೊಂಬತ್ತು ಪ್ರಕೃತಿಗಳ ಬಂಧವಿದೆ.

ಈ ಪ್ರಕಾರ ನಾಲ್ಕು ಗತಿಗಳಲ್ಲಿ ಯಥಾಯೋಗ್ಯ ಸಾಮಾನ್ಯಬಂಧ ಹೇಳಿದೆ. ವಿಶೇಷವೆಂದರೆ ಒಂದು ಜೀವಕ್ಕೆ ಒಂದು ಕಾಲದ ಅಪೇಕ್ಷೆಯಿಂದ ಮೂರು ಗತಿಗಳಲ್ಲಂತೂ ಐವತ್ತೊಂಭತ್ತು ಪ್ರಕೃತಿಗಳ ಬಂಧವಾಗುತ್ತದೆ. ಆದರೆ ತಿರ್ಯಂಚಗತಿಯಲ್ಲಿ ಒಂದು ಕಾಲದ ಅಪೇಕ್ಷೆಯಿಂದ ತೀರ್ಥಂಕರ ಪ್ರಕೃತಿಯನ್ನು ಹೊರತು ಪಡಿಸಿ ಐವತ್ತೆಂಟು ಪ್ರಕೃತಿಗಳ ಬಂಧವಾಗುತ್ತದೆ.

**ಪ್ರಶ್ನೆ :-** ತೀರ್ಥಂಕರ ಪ್ರಕೃತಿಯ ಬಂಧವಂತೂ ಮನುಷ್ಯಗತಿಯಲ್ಲಿಯೇ ಆಗುತ್ತದೆಯೆಂದು ಹೇಳಿದ್ದಾರೆ. ಆದಾಗ್ಯೂ ಇಲ್ಲಿ ದೇವ-ನಾರಕಿಗಳಲ್ಲಿ ಹೇಳಲಾಗಿದೆ, ಅದು ಹೇಗೆ ?

**ಉತ್ತರ :-** ಎಲೈ ಭವ್ಯನೇ ! ನಿನ್ನ ಪ್ರಶ್ನೆಯು ಪ್ರಮಾಣವಿದೆ. ಮೊದಲಂತೂ ತೀರ್ಥಂಕರ ಪ್ರಕೃತಿಯ ಬಂಧವು ಮನುಷ್ಯನಿಗೆ ಆಗುತ್ತದೆಯೆಂಬುದು ಸತ್ಯವಿದೆ; ಆದಾಗ್ಯೂ ಮನುಷ್ಯ ಗತಿಯಲ್ಲಿ ಮಾಡಲಾಗುವ ಬಂಧವು ದೇವ-ನಾರಕಿಗಳಲ್ಲೂ ಹೋಗುತ್ತದೆ; ಅದರಿಂದ ಅನ್ಯ ಗತಿಯಲ್ಲಿಯೂ ಆ ಬಂಧ ತಿಳಿಯುವುದು.

**ಪುನರ್ಪ್ರಶ್ನೆ -** ತೀರ್ಥಂಕರ ಪ್ರಕೃತಿಯ ಬಂಧ ಮಾಡಿಕೊಳ್ಳುವಂಥ ಸಮ್ಯಗ್ದೃಷ್ಟಿಯು ದೇವಗತಿಯಲ್ಲಿ ಹೋಗಿ ತೀರ್ಥಂಕರ ಪ್ರಕೃತಿಯ ಬಂಧ ಮಾಡಿಕೊಳ್ಳುವುದಂತೂ ಸಂಭವವಿದೆ; ಆದರೆ ತೀರ್ಥಂಕರ ಪ್ರಕೃತಿಯ ಬಂಧ ಮಾಡಿಕೊಳ್ಳುವಂಥ ಜೀವನು ನರಕದಲ್ಲಿ ಹೇಗೆ ಹೋಗುತ್ತಾನೆ ?

**ಸಮಾಧಾನ :-** ಯಾವನೋ ಜೀವನು ಮೊದಲು ಮಿಥ್ಯಾತ್ವ ದಶೆಯಲ್ಲಿ ನರಕಾಯುವಿನ ಬಂಧ ಮಾಡಿಕೊಂಡಿದ್ದನು. ನಂತರ ಆ ನಿಕಟ ಭವ್ಯಾತ್ಮಾ ಸಂಸಾರೀ ಜೀವನಿಗೆ ಸಮ್ಯಕ್ತ್ವವಾಯಿತು. ಅವನು ತೀರ್ಥಂಕರ ಮತ್ತು ಕೇವಲಿಗಳ ಸಾಮೀಪ್ಯದ ನಿಮಿತ್ತ ಪಡೆದು ಷೋಡಶಕಾರಣ ಭಾವನೆ ಭಾವಿಸಿ ಅಥವಾ ಅವುಗಳಲ್ಲಿನ ಒಂದು ಎರಡು ಯಾವುದೋ ಭಾವನೆ ಭಾವಿಸಿ, ಪರಿಣಾಮಗಳ ವಿಶುದ್ಧತೆಯಿಂದ ತೀರ್ಥಂಕರ ಪ್ರಕೃತಿಯ ಬಂಧ ಮಾಡಿಕೊಂಡು ನಂತರ ಆಯು ಬಂಧದ ಯೋಗದಿಂದ ನರಕದಲ್ಲಿ ಹೋಗಿ ಅಲ್ಲಿ ತೀರ್ಥಂಕರ ಪ್ರಕೃತಿಯ ಬಂಧ ಮಾಡಿಕೊಳ್ಳುತ್ತ ಇರುತ್ತಾನೆ - ಈ ಅಪೇಕ್ಷೆಯಿಂದ ಬಂಧ ಹೇಳಿದೆ. ಮೊದಲನೆಯ ನರಕದಲ್ಲಿ ಹೋಗುವಂಥ ಜೀವನಂತೂ ಸಮ್ಯಕ್ತ್ವ ಸಹಿತವಾಗಿಯೂ ಹೋಗುತ್ತಾನೆ; ಆದರೆ ಎರಡನೇ ಮೂರನೇ ನರಕದಲ್ಲಿ ಹೋಗುವಂಥ ಜೀವನು ಸಮ್ಯಕ್ತ್ವವನ್ನು ಬಿಟ್ಟುಕೊಟ್ಟು ಹೋಗುತ್ತಾನೆ, ಅಲ್ಲಿ ಅಂತರ್ಮುಹೂರ್ತಕಾಲದವರೆಗೆ ಮಿಥ್ಯಾತ್ವದಲ್ಲಿ ಇರುತ್ತಾನೆ. ಕಾರ್ಮಣದಿಂದ ಹೋಗಿ ಪರ್ಯಾಪ್ತಿಪೂರ್ಣ ಮಾಡುತ್ತಾನೆ. ಎಲ್ಲಿಯವರೆಗೆ ಪರ್ಯಾಪ್ತಿ ಪೂರ್ಣ ಮಾಡುವುದಿಲ್ಲ ಅಲ್ಲಿಯವರೆಗೆ ಮಿಥ್ಯಾತ್ವವಿರುತ್ತದೆ. ಪರ್ಯಾಪ್ತಿಯು ಪೂರ್ಣವಾದ ಮೇಲೆ ತೀರ್ಥಂಕರ ಬಂಧವುಳ್ಳವರಿಗೆ ಸಮ್ಯಕ್ತ್ವವಾಗುತ್ತದೆ. ಅದರ ನಂತರ ತೀರ್ಥಂಕರ ಬಂಧವನ್ನು ತಿಳಿಯುವುದು. ಈ ಪ್ರಕಾರ ನಾಲ್ಕೂ ಗತಿಗಳಲ್ಲಿ ಬಂಧವಾಗುವುದನ್ನು ಹೇಳಿದ್ದಾರೆ.

ಇವು ಒಂದೊಂದು ಪ್ರಕೃತಿಯೊಂದಿಗೆ ಅನಂತ ಪರಮಾಣುಗಳು ಸ್ಕಂಧರೂಪವಾಗುತ್ತವೆ. ಸಮಯ ಪ್ರಬದ್ಧ ಪ್ರಮಾಣ ಎಷ್ಟು ಪರಮಾಣುಗಳು ಬಂಧಿಸುತ್ತವೆಯೋ, ಅವುಗಳ ಸಂಖ್ಯೆಯು ಪ್ರದೇಶಬಂಧವಿದೆ.

ಕಟ್ಟಲ್ಪಟ್ಟಿರುವ ಕರ್ಮ ಪ್ರಕೃತಿಗಳಲ್ಲಿನ ಮೋಹ ಕರ್ಮದ ಉತ್ಕೃಷ್ಟ ಸ್ಥಿತಿಯು ಎಪ್ಪತ್ತು ಕೋಟಾಕೋಟಿ ಸಾಗರ ಪ್ರಮಾಣವಿದೆ. ನಾಮ ಮತ್ತು ಗೋತ್ರ ಕರ್ಮದ ಉತ್ಕೃಷ್ಟ ಸ್ಥಿತಿಯು ಇಪ್ಪತ್ತು ಕೋಟಾಕೋಟಿ ಸಾಗರವಿದೆ.

ಆಯುಕರ್ಮದ ಉತ್ಕೃಷ್ಟ ಸ್ಥಿತಿಯು ಮೂವತ್ಮೂರು ಸಾಗರವಿದೆ. ಜ್ಞಾನಾವರಣ, ದರ್ಶನಾವರಣ, ವೇದನೀಯ, ಅಂತರಾಯ-ಇವು ನಾಲ್ಕು ಕರ್ಮಗಳ ಉತ್ಕೃಷ್ಟ ಸ್ಥಿತಿಯು ಮೂವತ್ತು-ಮೂವತ್ತು ಕೋಟಾಕೋಟಿ ಸಾಗರದ್ದಿದೆ.

ವೇದನೀಯದ ಜಘನ್ಯ ಸ್ಥಿತಿಯು ಹನ್ನೆರಡು ಮುಹೂರ್ತದ್ದಿದೆ. ನಾಮ ಮತ್ತು ಗೋತ್ರ - ಇವೆರಡು ಕರ್ಮಗಳ ಜಘನ್ಯ ಸ್ಥಿತಿಯು ಎಂಟು-ಎಂಟು ಮುಹೂರ್ತದ್ದಿದೆ. ಶೇಷ ಅನ್ಯ ಕರ್ಮಗಳ ಜಘನ್ಯ ಸ್ಥಿತಿಯು ಒಂದು ಅಂತರ್ಮುಹೂರ್ತದ್ದಿದೆ. ಈ ಪ್ರಕಾರ ಯಥಾಯೋಗ್ಯ ಸ್ಥಿತಿಯ ಬಂಧವಾಗುವುದು ಅದು ಸ್ಥಿತಿಬಂಧವಿದೆ.

ಬಂಧವಾಗುವ ಕರ್ಮದಲ್ಲಿ, ಉದಯವಾದ ಮೇಲೆ ಯಾವ ಪ್ರಕಾರದ ರಸಕೊಡುವ ಶಕ್ತಿಯಿರುತ್ತದೆ. ಅರ್ಥಾತ್ ಈ ಕರ್ಮದ ಉದಯವಾದ ಮೇಲೆ ಇಂತಿಷ್ಟು ರಸ ಪ್ರಕಟ ಮಾಡುವುದು, ಅದು ಅನುಭಾಗಬಂಧವಿದೆ.

ಈ ಪ್ರಕಾರ ಹೇಳಲಾದ ನಾಲ್ಕು ಪ್ರಕಾರದ ಬಂಧವು ಬಂಧವಿದೆ. ಇವುಗಳಲ್ಲಿನ ಪ್ರಕೃತಿ ಮತ್ತು ಪ್ರದೇಶ ಬಂಧವಂತೂ ಯೋಗದಿಂದ ಆಗುತ್ತದೆ ಹಾಗೂ ಸ್ಥಿತಿ ಮತ್ತು ಅನುಭಾಗ ಬಂಧವು ಕಷಾಯದಿಂದ ಆಗುತ್ತದೆ.

ಉದಯಕರಣ - ಉದಯವು ಕೂಡ - ಪ್ರಕೃತಿ ಉದಯ, ಪ್ರದೇಶ ಉದಯ, ಸ್ಥಿತಿ ಉದಯ ಮತ್ತು ಅನುಭಾಗ ಉದಯವೆಂದು ನಾಲ್ಕು ಪ್ರಕಾರದ್ದಿದೆ.

ಪ್ರಥಮ ಪ್ರಕೃತಿ ಉದಯ - ಭಿನ್ನ-ಭಿನ್ನ ಜೀವಗಳು ಮತ್ತು ಭಿನ್ನ-ಭಿನ್ನ ಕಾಲದ ಅಪೇಕ್ಷೆಯಿಂದ ಉದಯ ಯೋಗ್ಯ ಪ್ರಕೃತಿಗಳು ಒಂದುನೂರಾ ಇಪ್ಪತ್ತೆರಡು ಇವೆ. ಅವು ಈ ಪ್ರಕಾರ - ಜ್ಞಾನಾವರಣದ ಐದು, ದರ್ಶನಾವರಣದ ಒಂಭತ್ತು, ವೇದನೀಯದ ಎರಡು, ಮೋಹನೀಯದ ಇಪ್ಪತ್ತೆಂಟು, ಆಯು ಕರ್ಮದ ನಾಲ್ಕು, ಗೋತ್ರ ಕರ್ಮದ ಎರಡು, ಅಂತರಾಯ ಕರ್ಮದ ಐದು - ಈ ಪ್ರಕಾರ ಇವು ಏಳು ಕರ್ಮದ ಐವತ್ತೈದು ಪ್ರಕೃತಿಗಳು ಮತ್ತು ನಾಮಕರ್ಮದ ವರ್ಣ ಚತುಷ್ಕದ ನಾಲ್ಕು, ಸಂಹನನ ಆರು, ಸಂಸ್ಥಾನ ಆರು, ಗತಿನಾಲ್ಕು, ಗತ್ಯಾನುಪೂರ್ವೀ ನಾಲ್ಕು, ಶರೀರ ಐದು, ಜಾತಿ ಐದು, ಅಂಗೋಪಾಂಗ ಮೂರು, ವಿಹಾಯೋಗತಿ ಎರಡು, ಅಗುರುಲಘು ಅಷ್ಟಕದ ಎಂಟು ಮತ್ತು ತ್ರಸಾದಿ ದಶದ್ವಿಕದ ಇಪ್ಪತ್ತು - ಈ ಪ್ರಕಾರ ನಾಮಕರ್ಮದ ಅರವತ್ತೇಳು ಎಲ್ಲ ಸೇರಿ ಒಂದು ನೂರಾ ಇಪ್ಪತ್ತೆರಡು ಉದಯ ಯೋಗ್ಯ ಪ್ರಕೃತಿಗಳೆಂದು ತಿಳಿಯುವುದು. ತಿರ್ಯಂಚ ಸಂಬಂಧದ ಹನ್ನೆರಡು-ತಿರ್ಯಂಚಗತಿ, ತಿರ್ಯಂಚ ಗತ್ಯಾನುಪೂರ್ವೀ, ತಿರ್ಯಂಚಾಯು, ಜಾತಿ ನಾಲ್ಕು, ಸ್ಥಾವರ, ಸೂಕ್ಷ್ಮ, ಸಾಧಾರಣ, ಆತಪ, ಉದ್ಯೋತ-ಈ ಪ್ರಕೃತಿಗಳು ತಿರ್ಯಂಚ ದ್ವಾದಶವೆನಿಸಿಕೊಳ್ಳುತ್ತವೆ; ಮತ್ತು ವೈಕ್ರಿಯಿಕ ಅಷ್ಟಕ - ಇವು ಇಪ್ಪತ್ತನ್ನು ಹೊರತುಪಡಿಸಿ ಮನುಷ್ಯ ಯೋಗ್ಯ ಒಂದುನೂರಾ ಎರಡು ಉದಯ ಯೋಗ್ಯ ಪ್ರಕೃತಿಗಳಿವೆ.

ದೇವಯೋಗ್ಯ ಉದಯದ ಪ್ರಕೃತಿಗಳು - ಜ್ಞಾನಾವರಣದ ಐದು, ದರ್ಶನಾವರಣದ ಆರು, ವೇದನೀಯದ ಎರಡು, ಮೋಹನೀಯದ ನಪುಂಸಕವನ್ನು ಹೊರತು ಪಡಿಸಿ ಇಪ್ಪತ್ತೇಳು, ಆಯು, ಉಚ್ಚಗೋತ್ರ, ಅಂತರಾಯದ ಐದು - ಈ ಪ್ರಕಾರ ಏಳು ಕರ್ಮಗಳ ನಲವತ್ತೇಳು, ವರ್ಣಚತುಷ್ಕದ ನಾಲ್ಕು, ಸಂಹನನವಿಲ್ಲ, ಸಂಸ್ಥಾನ ಒಂದು ಸಮಚತುರಸ್ರ, ಗತಿ, ಗತ್ಯಾನುಪೂರ್ವೀ, ಶರೀರದ ಮೂರು, ಅಂಗೋಪಾಂಗ, ವಿಹಾಯೋಗತಿ, ಜಾತಿ, ಅಗುರುಲಘು, ಉಚ್ಛ್ವಾಸ, ಉಪಘಾತ, ಪರಘಾತ, ನಿರ್ಮಾಣ, ತ್ರಸಾದಿದಶದ್ವಿಕದ ಹನ್ನೆರಡು - ಎಲ್ಲ ಸೇರಿ ನಾಮಕರ್ಮದ ಮೂವತ್ತು-ಈ ಪ್ರಕಾರ ದೇವಯೋಗ್ಯ ಉದಯದ ಪ್ರಕೃತಿಗಳು ಎಪ್ಪತ್ತೇಳು ಇವೆ. ನಾನಾ ಜೀವ, ನಾನಾ ಕಾಲದ ಅಪೇಕ್ಷೆಯಿಂದ ಇದು ಸಮುಚ್ಚಯರೂಪ ಕಥನವಿದೆಯೆಂದು ತಿಳಿಯುವುದು.

ನಾರಕಿಯ ಉದಯ ಯೋಗ್ಯ ಪ್ರಕೃತಿಗಳು - ಇದರಲ್ಲಿ ದೇವ ಉದಯಯೋಗ್ಯ ಪ್ರಕೃತಿಗಳೊಳಗಿನ ಎರಡು ವೇದಗಳನ್ನು ಕಡಿಮೆ ಮಾಡಿ, ನಪುಂಸಕ ವೇದವನ್ನು ಸೇರಿಸುವುದು; ಯಥಾಯೋಗ್ಯ ಪ್ರಕೃತಿಗಳನ್ನು

ಬದಲಾಯಿಸಿಬಿಡುವುದು, ಶುಭದ ಸ್ಥಾನದಲ್ಲಿ ಅಶುಭ ಪ್ರಕೃತಿಗಳ ಸ್ವೀಕಾರ ಮಾಡುವುದು, ಹೀಗೆ ನರಕದಲ್ಲಿ ಉದಯಯೋಗ್ಯ ಪ್ರಕೃತಿಗಳು ಎಪ್ಪತ್ತಾರು ಇವೆ.

ತಿರ್ಯಂಚದ ಉದಯ ಯೋಗ್ಯ ಪ್ರಕೃತಿಗಳು - ಒಂದು ನೂರಾ ಇಪ್ಪತ್ತೆರಡರೊಳಗಿಂದ ವೈಕ್ರಿಯಿಕ ಅಷ್ಟಕದ ಎಂಟು, ಮನುಷ್ಯಗತಿ ಮೊದಲಾದಮೂರು, ಆಹಾರಕದ್ವಿಕದ ಎರಡು, ತೀರ್ಥಂಕರ, ಉಚ್ಚಗೋತ್ರ - ಇವು ಹದಿನೈದನ್ನು ಹೊರತುಪಡಿಸಿ ಒಂದುನೂರಾ ಏಳು ಪ್ರಕೃತಿಗಳ ಉದಯವು ತಿರ್ಯಂಚಗಳಿಗೆ ಇರುತ್ತವೆ. ಕೇವಲ ವಿಶೇಷವೆಂದರೆ ಪಂಚೇಂದ್ರಿಯ ತಿರ್ಯಂಚದ ಉದಯ ಯೋಗ್ಯ ಪ್ರಕೃತಿಗಳು ತೊಂಭತ್ತೊಂಬತ್ತು ಇವೆ. ಅವು ಈ ಪ್ರಕಾರ-ಜ್ಞಾನಾವರಣದ ಐದು, ದರ್ಶನಾವರಣದ ಒಂಭತ್ತು, ವೇದನೀಯದ ಎರಡು ಮೋಹನೀಯದ ಇಪ್ಪತ್ತೆಂಟು, ಆಯು, ನೀಚಗೋತ್ರ, ಅಂತರಾಯದ ಐದು - ಇವು ಏಳು ಕರ್ಮಗಳ ಐವತ್ತೊಂದು; ವರ್ಣದ ನಾಲ್ಕು, ಸಂಹನನ ಆರು, ಸಂಸ್ಥಾನ ಆರು, ಗತಿ, ಗತ್ಯಾನುಪೂರ್ವೀ, ಶರೀರ ಮೂರು, ಜಾತಿ, ಅಂಗೋಪಾಂಗ, ವಿಹಾಯೋಗತಿ ಎರಡು, ಹಾಗೂ ತೀರ್ಥಂಕರ ಮತ್ತು ಆತಪ-ಇವೆರಡನ್ನು ಹೊರತುಪಡಿಸಿ ಅಗುರುಲಘು ಅಷ್ಟಕದ ಆರು ಮತ್ತು ತ್ರಸಾದಿ ದಶದ್ವಿಕಗಳಲ್ಲಿನ ಸೂಕ್ಷ್ಮ, ಸಾಧಾರಣ, ಸ್ಥಾವರ -ಇವು ಮೂರನ್ನು ಹೊರತುಪಡಿಸಿ ಹದಿನೇಳು - ಈ ಪ್ರಕಾರ ನಾಮಕರ್ಮದ ನಲವತ್ತೆಂಟು - ಎಲ್ಲ ಸೇರಿ ತೊಂಭತ್ತೊಂಬತ್ತು ಇವೆ.

ಏಕೇಂದ್ರಿಯದ ಉದಯಯೋಗ್ಯ ಪ್ರಕೃತಿಗಳು-ಜ್ಞಾನಾವರಣದ ಐದು, ದರ್ಶನಾವರಣದ ಒಂಭತ್ತು ವೇದನೀಯದ ಎರಡು, ಮೋಹನೀಯದ ಇಪ್ಪತ್ನಾಲ್ಕು, ಆಯು, ನೀಚಗೋತ್ರ, ಅಂತರಾಯದ ಐದು-ಹೀಗೆ ಇವು ಏಳು ಕರ್ಮಗಳ ನಲವತ್ತೇಳು ಹಾಗೂ ನಾಮಕರ್ಮದಲ್ಲಿನ ವರ್ಣದ ನಾಲ್ಕು, ಸಂಸ್ಥಾನ, ಗತಿ, ಗತ್ಯಾನುಪೂರ್ವೀ, ಮೂರು ಶರೀರ, ಏಕೇಂದ್ರಿಯಜಾತಿ, ತೀರ್ಥಂಕರವನ್ನುಳಿದು ಅಗುರುಲಘು ಅಷ್ಟಕದ ಏಳು ತ್ರಸಾದಿ ದಶದ್ವಿಕದ ಹದಿನೈದು - ಈ ಪ್ರಕಾರ ಮೂವತ್ಮೂರು-ಎಲ್ಲ ಸೇರಿ ಏಕೇಂದ್ರಿಯದ ಉದಯಯೋಗ್ಯ ಪ್ರಕೃತಿಗಳು ಎಂಭತ್ತು ಇವೆ.

ವಿಕಲತ್ರಯದ ಉದಯ ಯೋಗ್ಯ ಪ್ರಕೃತಿಗಳು-ಏಕೇಂದ್ರಿಯದ ಉದಯ ಯೋಗ್ಯ ಪ್ರಕೃತಿಗಳೊಳಗಿಂದ ಸೂಕ್ಷ್ಮ, ಸಾಧಾರಣ, ಸ್ಥಾವರ, ಆತಪ - ಇವು ನಾಲ್ಕನ್ನು ತಗೆದು ಸಂಹನನ, ಅಂಗೋಪಾಂಗ, ವಿಹಾಯೋಗತಿ, ಸ್ವರ, ತ್ರಸ-ಇವು ಐದನ್ನು ಸೇರಿಸಿದ ಮೇಲೆ ವಿಕಲತ್ರಯದ ಉದಯಯೋಗ್ಯ ಪ್ರಕೃತಿಗಳು ಎಂಭತ್ತೊಂದು ಇವೆ.

ಈ ಪ್ರಕಾರ ಸಾಮಾನ್ಯಭಾವದಿಂದ ಹೇಳಲಾದ ನಾಲ್ಕು ಗತಿ ಸಂಬಂಧದ ಉದಯ ಯೋಗ್ಯ ಪ್ರಕೃತಿಗಳಿವೆ.

ಪ್ರತಿಸಮಯ ಉದಯ ಪ್ರಾಪ್ತ ಈ ಪ್ರಕೃತಿಗಳ ಜೊತೆಗೆ ಎಷ್ಟೆಷ್ಟು ಪ್ರಮಾಣದಲ್ಲಿ ಕರ್ಮಗಳು ಉದಯದಲ್ಲಿ ಬಂದು ಉದುರಿ ಹೋಗುತ್ತವೆ ಅದನ್ನು ಪ್ರದೇಶ ಉದಯವೆನ್ನುತ್ತಾರೆ. ಅದನ್ನೇ ಸಂಕ್ಷೇಪದಲ್ಲಿ ತೋರಿಸಿಕೊಡುತ್ತಾರೆ - ಇಲ್ಲಿ ಕೇವಲ ಒಂದು ಅಣುವಿನ ಹೆಸರು ವರ್ಗವಿದೆ. ಅನಂತ ವರ್ಗಗಳ ಸಮೂಹವು ವರ್ಗಣಾ ಇದೆ. ಅಸಂಖ್ಯಾತ ಲೋಕ ಪ್ರಮಾಣ ವರ್ಗಣಾ ಸ್ಕಂಧಗಳು ಸೇರಿದ ಮೇಲೆ ಒಂದು ಸ್ಪರ್ಧಕವಾಗುತ್ತದೆ. ಅಸಂಖ್ಯಾತ ಲೋಕಪ್ರಮಾಣ ಸ್ಪರ್ಧಕಗಳು ಸೇರಿದ ಮೇಲೆ ಒಂದು ಗುಣಹಾನಿಯಾಗುತ್ತದೆ. ಅಸಂಖ್ಯಾತ ಲೋಕಪ್ರಮಾಣ ಗುಣ ಹಾನಿಗಳು ಸೇರಿದ ಮೇಲೆ ಒಂದು ನಾನಾ ಗುಣಹಾನಿಯಾಗುತ್ತದೆ, ಅಸಂಖ್ಯಾತ ಲೋಕಪ್ರಮಾಣ ನಾನಾ ಗುಣಹಾನಿಗಳು ಸೇರಿದ ಮೇಲೆ ಅನ್ಯೋನ್ಯಾಭ್ಯಸ್ತರಾಶಿಯಾಗುತ್ತದೆ. ಅಸಂಖ್ಯಾತ ಲೋಕಪ್ರಮಾಣ ಅನ್ಯೋನ್ಯಾಭ್ಯಸ್ತರಾಶಿ ಸ್ಕಂಧಗಳು ಸೇರಿದ ಮೇಲೆ ಒಂದು ಪ್ರಕೃತಿಯಾಗುತ್ತದೆ. ಈ ಉದಯಯೋಗ್ಯ ಪ್ರಕೃತಿಗಳ ಜತೆಗೆ ಎಷ್ಟು ಪ್ರದೇಶಗಳು ಉದಯದಲ್ಲಿ ಬಂದು ಉದುರಿ ಹೋಗುತ್ತವೆ, ಅದು ಪ್ರದೇಶ ಉದಯವಿದೆ.

ಯಾವ ಪ್ರಕೃತಿಯ ಸ್ಥಿತಿಯು ಎಷ್ಟು ಜಘನ್ಯ-ಉತ್ಕೃಷ್ಟವಿತ್ತು ಅವುಗಳೊಳಗಿಂದ ಯಾವ ಸಮಯವು ಕಡಿಮೆಯಾಗಿ ಉದಯಕ್ಕೆ ಬರುತ್ತದೆ, ಅದು ಸ್ಥಿತಿ ಉದಯವಿದೆ.

ಯಾವ ಪ್ರಕೃತಿಯ ಉದಯವಾದ ಮೇಲೆ ಯಾವ ಶುಭಾಶುಭ ರಸವು ಪ್ರಕಟವಾಗುತ್ತದೆ ಅದು ಅನುಭಾಗ ಉದಯವಿದೆ.

ಈ ಪ್ರಕಾರ ಸಾಮಾನ್ಯದಿಂದ ನಾಲ್ಕು ಪ್ರಕಾರದ ಉದಯ ಹೇಳಿದ್ದಾರೆ, ಇದು ಉದಯಕರಣವಿದೆ.

ಸತ್ತ್ವಕರಣ - ಮೇಲೆ ಹೇಳಲಾದ ಬಂಧದಲ್ಲಿ, ಬಂಧದ ನಂತರ ಎಷ್ಟು ಕಾಲದವರೆಗೆ ಕರ್ಮಗಳು ಉದಯದಲ್ಲಿ ಬಂದು ಉದುರಿ ಹೋಗುವುದಿಲ್ಲ, ಆ ಕರ್ಮಗಳು ಆತ್ಮನ ಪ್ರದೇಶಗಳೊಂದಿಗೆ ಏಕಕ್ಷೇತ್ರರೂಪವಿರುತ್ತವೆ. ಅದು ಸತ್ತ್ವಕರಣವಿದೆ. ಆ ಸತ್ತ್ವಕರಣವು ಕೂಡ-ಪ್ರಕೃತಿ, ಪ್ರದೇಶ, ಸ್ಥಿತಿ, ಅನುಭಾಗವೆಂದು ನಾಲ್ಕು ಪ್ರಕಾರದ್ದಿದೆ.

ಪ್ರಕೃತಿಸತ್ತ್ವ-ಸತ್ತ್ವಯೋಗ್ಯ ಪ್ರಕೃತಿಗಳು ನಾನಾಜೀವ, ನಾನಾ ಕಾಲದ ಅಪೇಕ್ಷೆಯಿಂದ ಒಂದುನೂರಾ ನಲವತ್ತೆಂಟು ಇವೆ. ಒಂದು ಜೀವಕ್ಕೆ ಒಂದು ಕಾಲದಲ್ಲಿ ಮೂರು ಆಯುಗಳನ್ನು ಹೊರತು ಪಡಿಸಿ ಭುಜ್ಯಮಾನ ಆಯು ಸಹಿತ ಒಂದುನೂರಾ ನಲವತ್ತೈದರ ಸತ್ತ್ವವಿದೆ ಹಾಗೂ ಭುಜ್ಯಮಾನವಂತರದು ತೀರ್ಥಂಕರ ಪ್ರಕೃತಿಯನ್ನು ಹೊರತುಪಡಿಸಿ ಒಂದುನೂರಾ ನಲವತ್ನಾಲ್ಕರ ಸತ್ತ್ವವಿದೆ. ಕೆಲವರದು ಮೂರು ಆಯು ಆಹಾರಕ ಚತುಷ್ಕ ಮತ್ತು ತೀರ್ಥಂಕರವನ್ನು ಹೊರತುಪಡಿಸಿ ಒಂದುನೂರಾ ನಲವತ್ತಾರರ ಸತ್ತ್ವವಿದೆ. ಒಂದುನೂರಾ ನಲವತ್ತೆಂಟರೊಳಗಿಂದ ಬದ್ಧಮಾನರದು ತೀರ್ಥಂಕರ ಮತ್ತು ಎರಡು ಆಯುವನ್ನು ಹೊರತುಪಡಿಸಿ ಒಂದುನೂರಾ ನಲವತ್ತೈದರ ಸತ್ತ್ವವಿದೆ. ಕೆಲವರದು ಆಹಾರಕ ಚತುಷ್ಕ ಮತ್ತು ಮೂರು ಆಯು ಇವು ಏಳನ್ನು ಹೊರತುಪಡಿಸಿ ಒಂದು ನೂರಾ ನಲವತ್ತೊಂದರ ಸತ್ತ್ವವಿದೆ. ಆಹಾರಕ ಚತುಷ್ಕ ಮತ್ತು ಎರಡು ಆಯು ಇವು ಆರನ್ನು ಹೊರತು ಪಡಿಸಿ ಯಾರೋ ಬದ್ಧಮಾನ ಆಯುವುಳ್ಳವರಿಗೆ ಒಂದು ನೂರಾ ನಲವತ್ತೆರಡರ ಸತ್ತ್ವವಿದೆ - ಈ ಪ್ರಕಾರ ಅನೇಕ ರೂಪಗಳಲ್ಲಿ ಒಂದು ಜೀವದ ಮತ್ತು ನಾನಾಜೀವಗಳ ಸತ್ತ್ವವು ಕಂಡುಬರುತ್ತದೆ. ಅವುಗಳ ಸಾಮಾನ್ಯ ಕಥನ ಮಾಡಲಾಯಿತು; ಇದರ ಹೆಸರು ಸತ್ತ್ವಕರಣವಿದೆ.

ಹೇಗೆ ಅಪಕ್ವ ಮಾವಿನಕಾಯಿಗಳನ್ನು ಎಲೆ-ಪತ್ರಗಳಲ್ಲಿಟ್ಟು ಬೇಗನೆ ಪಕ್ವ-ಹಣ್ಣಾಗಿ ಮಾಡಿಕೊಳ್ಳುತ್ತೇವೆ ಅದೇ ಪ್ರಕಾರ ಕರ್ಮದ ಸ್ಥಿತಿಯು ಅಧಿಕವಿದೆ, ಅದರ ಸ್ಥಿತಿಯನ್ನು ತಪ-ಸಂಯಮಾದಿಗಳಿಂದ ಕಡಿಮೆ ಮಾಡಿ ಉದಯಕಾಲಯೋಗ್ಯ ಮಾಡುವುದು ಉದೀರಣವಿದೆ. ಎಂದರೆ ಕರ್ಮಗಳ ಅಧಿಕ ಸ್ಥಿತಿಯನ್ನು ಕಡಿಮೆಮಾಡಿ, ಕಡಿಮೆ ಮಾಡಿ ಉದುರಿಸುವುದು ಉದೀರಣಾ ಕರಣವಿದೆ.

ಅಧಿಕ ಸ್ಥಿತಿಯುಳ್ಳ ಕರ್ಮಗಳ ನಿಷೇಕಗಳನ್ನು ಕೆಳಗಿನ ಅಲ್ಪ ಸ್ಥಿತಿಯುಳ್ಳವುಗಳಲ್ಲಿ ಕೂಡಿಸಿ ಉದಯದಲ್ಲಿ ತರುವುದು ಅಪಕರ್ಷಣವಿದೆ.

ಅಲ್ಪಸ್ಥಿತಿಯುಳ್ಳ ಕರ್ಮಗಳ ನಿಷೇಕಗಳನ್ನು ಕೆಳಗಿನಿಂದ ತಗೆದುಕೊಂಡು ಮೇಲಿನ ಅಧಿಕ ಸ್ಥಿತಿಯುಳ್ಳ ನಿಷೇಕಗಳಲ್ಲಿ ಕೂಡಿಸುವುದು, ಉತ್ಕರ್ಷಣವಿದೆ. ಎಂದರೆ ಕರ್ಮಗಳ ಅಲ್ಪ ಸ್ಥಿತಿಯನ್ನು ಅಧಿಕ ಮಾಡುವುದು ಉತ್ಕರ್ಷಣವಿದೆ.

ಮೊದಲು ಶುಭ ಭಾವಗಳಿಂದ ಕಟ್ಟಿದ ಪುಣ್ಯ ಪ್ರಕೃತಿಗಳ ನಿಷೇಕಗಳನ್ನು ಪಾಪ ಪರಿಣಾಮಗಳಿಂದ ಪಾಪ ಪ್ರಕೃತಿರೂಪ ಮಾಡುವುದು; ಹಾಗೂ ಮೊದಲು ಅಶುಭ ಭಾವಗಳಿಂದ ಕಟ್ಟಿದ ಪಾಪ ಪ್ರಕೃತಿಯನ್ನು ಶುಭ ಭಾವನೆಯ ಫಲದಿಂದ ಬದಲಿಸಿ ಪುಣ್ಯ ಪ್ರಕೃತಿರೂಪ ಮಾಡುವುದು ಸಂಕ್ರಮಣವಿದೆ.

ಇನ್ನೂ ಉದಯಾವಲಿಯಿಂದ ಹೊರಗಿರುವ ಕರ್ಮವನ್ನು ಯಾವುದೇ ಉಪಾಯದಿಂದ ಉದಯಾವಲಿಯಲ್ಲಿ ತಾರದಿರುವುದು ಅಥವಾ ಬಾರದಿರುವುದು ಅದು ಉಪಶಾಂತಕರಣವಿದೆ.

ಯಾವ ಕರ್ಮದ ಪರಮಾಣುಗಳು ಸಂಕ್ರಮಿತವೂ ಆಗುವುದಿಲ್ಲ ಮತ್ತು ಉದಯಾವಲಿಯಲ್ಲಿಯೂ ಬರುವುದಿಲ್ಲ ಅವುಗಳ ಹೆಸರು ನಿಧತ್ತಿಕರಣವಿದೆ.

ಯಾವ ಕರ್ಮ ಪರಮಾಣುಗಳಲ್ಲಿ ಕರ್ಮಗಳ ಸ್ಥಿತಿಯು ಹೆಚ್ಚುವರೂಪ ಉತ್ಕರ್ಷಣ, ಕರ್ಮಗಳ ಸ್ಥಿತಿಯು ಕಡಿಮೆಯಾಗುವರೂಪ ಅಪಕರ್ಷಣ, ಕರ್ಮಗಳ ಅನ್ಯಮಯವಾಗುವರೂಪ ಸಂಕ್ರಮಣ - ಇವು ಮೂರೂ ಆಗುವುದಿಲ್ಲ; ಉದಯಾವಲಿಯಲ್ಲಿ ಇರುವುದಿಲ್ಲ, ಯಾವ ಅಂಶಗಳಿಂದ ಕಟ್ಟಿವೆ ಅವೇ ಅಂಶಗಳಿಂದ ಉದಯದಲ್ಲಿ ಬರುತ್ತವೆ; ಅದು ನಿಕಾಚಿತವೆಂಬ ಹೆಸರಿನ ಕರಣವಿದೆ.

ಇವು ದಶಕರಣಗಳಿದ್ದು ಇವುಗಳನ್ನು ತಿಳಿಯುವುದರಿಂದ ಕರ್ಮದ ಅವಸ್ಥೆಯು ಒಳ್ಳೆಯ ರೀತಿಯಿಂದ ಜ್ಞಾತವಾಗುತ್ತದೆಯೆಂದು ತಿಳಿಯುವುದು. ಇವುಗಳ ವಿಶೇಷವನ್ನು ಗೊಮ್ಮಟಸಾರದಿಂದ ತಿಳಿಯುವುದು.

ಇಂಥ ಕರಣಗಳ ಸ್ವರೂಪವು ಮಿಥ್ಯಾತ್ವ ನಷ್ಟವಾದ ಮೇಲೆಯೇ ತಿಳಿದು ಬರುತ್ತದೆ; ಅದಕ್ಕಾಗಿ ಮಿಥ್ಯಾತ್ವದ ಸ್ವರೂಪ ಹೇಳುತ್ತಾರೆ. ಸಾದಿ ಮಿಥ್ಯಾತ್ವ ಮತ್ತು ಅನಾದಿ ಮಿಥ್ಯಾತ್ವವೆಂದು ಮಿಥ್ಯಾತ್ವದ ಎರಡು ಭೇದಗಳಿವೆ. ಅನಾದಿ ಕಾಲದಿಂದ ಸಂಸಾರ-ಭ್ರಮಣ ಮಾಡುತ್ತಿರುವ ಯಾವ ಜೀವನಿಗೆ ಇಂದಿನವರೆಗೆ ಎಂದೂ ಸಮ್ಯಕ್ತ್ವದ ಲಾಭವಾಗಿಲ್ಲ, ಅವನು ಅನಾದಿ ಮಿಥ್ಯಾದೃಷ್ಟಿಯಿದ್ದಾನೆ. ಯಾವ ಜೀವನು ಸಮ್ಯಕ್ತ್ವವನ್ನು ಪ್ರಾಪ್ತ ಮಾಡಿಕೊಂಡು, ನಂತರ ಪಾಪಭಾವರೂಪ ಅತತ್ತ್ವದ ವಾಂಛೆಯಿಂದ ಮಿಥ್ಯಾತ್ವದಲ್ಲಿ ಬಂದು ಬಿಡುತ್ತಾನೆ, ಅವನು ಸಾದಿಮಿಥ್ಯಾತ್ವಿಯೆನಿಸಿಕೊಳ್ಳುತ್ತಾನೆ. ಇವುಗಳ ವಿದ್ಯಮಾನತೆಯಲ್ಲಿ ಧರ್ಮದ ಸ್ವರೂಪ ಪ್ರಾಪ್ತವಾಗುವ ಸಾಧ್ಯತೆಯಿಲ್ಲ.

ಈಗ ಶುದ್ಧಭಾವ, ಶುಭಭಾವ ಮತ್ತು ಅಶುಭ ಭಾವರೂಪ ಭಾವದ ಮೂರು ಭೇದಗಳನ್ನು ತಿಳಿಸುತ್ತಾರೆ. ಯಾವುದರಲ್ಲಿ ರಾಗ-ದ್ವೇಷದ ಅಭಾವವಿದೆ; ಶತ್ರು-ಮಿತ್ರ, ಹೊಳೆಯುವ ಚಿನ್ನ-ಗಾಜು, ರತ್ನ-ಪಾಷಾಣ ಇತ್ಯಾದಿಗಳಲ್ಲಿ ರಾಗ-ದ್ವೇಷವಾಗುವುದಿಲ್ಲ (ಸಮಭಾವವಿದೆ) ಅದು ಶುದ್ಧಭಾವವಿದೆ.

ದಾನ, ಪೂಜೆ, ಶೀಲ, ಜಪ, ತಪ, ಸಂಯಮ, ಧ್ಯಾನ, ಶಾಸ್ತ್ರಾಭ್ಯಾಸ ಇತ್ಯಾದಿ ಕ್ರಿಯೆಗಳ ರೂಪ ಶುಭ ಭಾವಗಳ ಪ್ರವೃತ್ತಿಯು ಶುಭಭಾವವಿದೆ.

ಜೀವ ಹಿಂಸೆಯ ಭಾವ, ಅಸತ್ಯ ಭಾಷಣಭಾವ, ಪರದ್ರವ್ಯ ಹರಣಭಾವ, ಪರಸ್ತ್ರೀ ಲಂಪಟ ಭಾವ, ಪುಣ್ಯಕ್ಕಿಂತ ಅಧಿಕ ಪರಿಗ್ರಹವನ್ನು ಸಂಗ್ರಹಿಸುವ ಭಾವ, ಸಪ್ತವ್ಯಸನಭಾವ, ಪಾಖಂಡಭಾವ, ಹಾಸ್ಯ-ಕೌತುಕ ಮೊದಲಾದ ಭಂಡಭಾವ, ರೌದ್ರಭಾವ, ಆರತ ಭಾವ, ಕ್ರೋಧ-ಮಾನ-ಮಾಯೆ-ಲೋಭಭಾವ ಇತ್ಯಾದಿ ಪಾಪಬಂಧದ ಕಾರಣಭೂತ ಭಾವಗಳು ಅಶುಭ ಭಾವಗಳಿವೆ.

-ಇವು ಮೂರು ಭಾವದ ಭೇದಗಳಿವೆ. ಅವುಗಳೊಳಗಿನ ಶುದ್ಧ ಭಾವವಂತೂ ಭವ್ಯನಿಗೇನೆ ಆಗುತ್ತದೆ; ಆದರೆ ಶುಭ ಮತ್ತು ಅಶುಭ ಇವೆರಡೂ ಭಾವಗಳು ಭವ್ಯ-ಅಭವ್ಯ ಇಬ್ಬರಿಗೂ ಆಗುತ್ತವೆ.

ಭವ್ಯರಲ್ಲಿಯೂ ನಿಕಟ ಭವ್ಯ, ದೂರ ಭವ್ಯ ಮತ್ತು ದೂರಾನುದೂರಭವ್ಯವೆಂದು ಮೂರು ಭೇದಗಳಿವೆ. ಅವರಲ್ಲಿನ ಯಾವ ಜೀವರುಗಳು ಅಲ್ಪ ಕಾಲದಲ್ಲಿ ಮೋಕ್ಷಕ್ಕೆ ಹೋಗುತ್ತಾರೆ, ಅವರು ನಿಕಟ ಭವ್ಯರಿದ್ದಾರೆ. ಯಾವ ಜೀವರುಗಳು ದೀರ್ಘ ಕಾಲದಲ್ಲಿ ಮುಕ್ತರಾಗುತ್ತಾರೆ; ಒಮ್ಮೆ ಅಲ್ಲ ಒಮ್ಮೆ ಅನಂತ ಕಾಲದಲ್ಲಿ ಮುಕ್ತರಾಗುವುದು ಕೇವಲಜ್ಞಾನದಲ್ಲಿ ಭಾಸಿತವಾಗಿದೆ, ಅವರು ದೂರ ಭವ್ಯರಿದ್ದಾರೆ. ಮೋಕ್ಷವಾಗಲು ಯೋಗ್ಯರಿದ್ದಾರೆ; ಅದರಿಂದ ಇವರನ್ನು ದೂರ ಭವ್ಯರೆಂದು ತಿಳಿಯುವುದು.

ಯಾವ ಜೀವಗಳು ಭವ್ಯವಿವೆಯೆಂಬುದು ಕೇವಲಜ್ಞಾನದಲ್ಲಿ ಭಾಸಿತವಾಗಿದೆ, ಅವರ ಗಣನೆಯು ಭವ್ಯರಾಶಿಯಲ್ಲಿದೆ (ಅವು ನಿತ್ಯ ನಿಗೋದ ಹಾಗೂ ಇತರ ನಿಗೋದಗಳಲ್ಲಿ ತುಂಬಿಕೊಂಡಿವೆ) ಆದರೆ ಮುಕ್ತವಾಗುವ ಸಾಮಗ್ರಿರೂಪದ ಸಮ್ಯಗ್ದರ್ಶನಾದಿಗಳು ಅವುಗಳಿಗೆ ಎಂದೂ ಪ್ರಗಟವಾಗುವುದಿಲ್ಲ. ಅವು ಯಾವಾಗಲೂ ಸಂಸಾರವಾಸಿಯಿವೆ. ಅಭವ್ಯರ ಹಾಗೆ ಎಂದೂ ಮೋಕ್ಷಕ್ಕೆ ಹೋಗುವುದಿಲ್ಲ, ಅವು ದೂರಾನುದೂರ ಭವ್ಯವಿವೆ.

**ಪ್ರಶ್ನೆ :-** ಅವುಗಳನ್ನು ಭವ್ಯವೆಂದೂ ಹೇಳುವುದು ಮತ್ತು ಮೋಕ್ಷವೆಂದೂ ಆಗುವುದಿಲ್ಲವೆಂದೂ ಹೇಳುವುದು; ಇವೆರಡೂ ಮಾತುಗಳು ಒಟ್ಟಿಗೆ ಹೇಗೆ ಸಂಭವಿಸುವವು ?

**ಸಮಾಧಾನ :-** ಎಲೈ ಭವ್ಯನೇ! ನೀನು ಚಿತ್ತವನ್ನೂ ತೊಡಗಿಸಿ ಆಲಿಸು ! ಅಭವ್ಯರಾಶಿಯಂತೂ ತೀರ ಅಲ್ಪವಿದೆ. ಅದನ್ನೇ ನೋಡು ! ಸಂಪೂರ್ಣ ಜೀವರಾಶಿಯ ಅನಂತದ ಒಂದು ಭಾಗವಂತೂ ಸಿದ್ಧರಾಶಿಯ ಪ್ರಮಾಣವಿದೆ ಮತ್ತು ಸಿದ್ಧರಾಶಿಯ ಅನಂತದ ಒಂದು ಭಾಗ ಅಭವ್ಯರಾಶಿಯಿದೆ, ಅದು ಕೂಡ ಜಘನ್ಯ ಯುಕ್ತಾನಂತವಿದೆ. ಈ ಪ್ರಕಾರ ಅಭವ್ಯವಂತೂ ಯಾವಾಗ ಹೇಳಿದರೂ ತುಚ್ಛರಾಶಿಯಲ್ಲಿಯೇ ಇವೆಯೆಂದು ತಿಳಿಯುವುದು ಮತ್ತು ಭವ್ಯರಾಶಿಯು ಬಹಳಷ್ಟು ಇದೆ. ಅದನ್ನು ಆಲಿಸು ! ಅದರಿಂದ ನಿನ್ನ ಭ್ರಮೆಯು ದೂರವಾಗುವುದು.

ಒಂದು ಅತ್ಯಲ್ಪ ಗಸಗಸೆ ಕಾಳಿನಷ್ಟು ನಿಗೋದ ಸ್ಕಂಧದಲ್ಲಿ ಅಸಂಖ್ಯಾತ ಲೋಕ ಪ್ರಮಾಣ ನಿಗೋದ ಶರೀರಗಳಿವೆ. ಆ ಒಂದೊಂದು ಶರೀರದಲ್ಲಿ ಅಕ್ಷಯ-ಅನಂತ ಜೀವಗಳಿವೆ. ಇವುಗಳ ಕೊನೆಯಿಲ್ಲ. ಒಂದು ಶರೀರದೊಳಗಿಂದ ಹೊರಗೆ ಬಂದು ಅನಂತಕಾಲದವರೆಗೆ ಅನಂತ ಜೀವಗಳು ಮುಕ್ತವಾಗುವವು; ಆದಾಗ್ಯೂ ಕೇವಲಿಗಳಲ್ಲಿ ಕೇಳಿದರೆ ಜ್ಞಾತವಾಗುವುದೇನೆಂದರೆ ಆ ಶರೀರದೊಳಗಿಂದ ಹೊರಗೆ ಬಂದಿರುವ ಜೀವಗಳಿಗಿಂತಲೂ ಅನಂತ ಗುಣಿತ ಜೀವಗಳು, ಭವ್ಯರಾಶಿಯು ಇನ್ನೂ ಅದರಲ್ಲಿ ವಿದ್ಯಮಾನವಿದೆ. ಇದೇ ಪ್ರಕಾರ ಈ ಸಂಸಾರದಲ್ಲಿ ಅನಂತ ಕಾಲದವರೆಗೆ ಜೀವಗಳು ಮುಕ್ತರಾಗುತ್ತಲಿರುತ್ತಾರೆ, ಆದಾಗ್ಯೂ ಯಾವಾಗ ಕೇಳಿದರೂ ಕೇವಲೀ ಭಗವಂತರು ಅದರಲ್ಲಿ ಸಿದ್ಧರಾಶಿಯ ಅನಂತ ಭವ್ಯ ಜೀವಗಳಿವೆಯೆಂದೇ ಹೇಳುವರು - ಈ ಪ್ರಕಾರ ಯಾವಾಗಲೂ ಮೋಕ್ಷಕ್ಕೆ ಹೋಗುತ್ತಿದ್ದರೂ ಕೇವಲಿ ಭಗವಂತರ ಅನುಸಾರ ಅಭವ್ಯಗಳಿಂದ ಅನಂತ ಗುಣಿತ ಭವ್ಯರು ಒಂದು ಶರೀರದಲ್ಲಿ ವಿದ್ಯಮಾನರಿದ್ದಾರೆ.

ಮೋಕ್ಷಕ್ಕೆ ಹೋಗುತ್ತ-ಹೋಗುತ್ತ ಎಂದಾದರೊಮ್ಮೆ ಸಂಪೂರ್ಣ ಭವ್ಯರಾಶಿಯು ಮುಕ್ತವಾಗಿ ಹೋದ ಮೇಲೆ ಮೋಕ್ಷಮಾರ್ಗದ ಅಭಾವವಾಗಿ ಬಿಡಬಹುದು, ಮೋಕ್ಷವು ನಿಂತುಹೋಗಬಹುದು, ಮೋಕ್ಷಮಾರ್ಗವು ನಿಂತುಹೋಗಬಹುದಲ್ಲವೇ ? ಎಂಬ ಆಶಂಕೆಯು ಉಚಿತವಿಲ್ಲ; ಏಕೆಂದರೆ ಮೋಕ್ಷ, ಮೋಕ್ಷಮಾರ್ಗವೆಂದೂ ನಿಂತು ಬಿಡುವುದಿಲ್ಲ. ಅದು ಶಾಶ್ವತವಿದೆ. ಆರು ತಿಂಗಳು ಎಂಟು ಸಮಯದಲ್ಲಿ ಆರು ನೂರಾ ಎಂಟು ಜೀವಗಳು ನಿರಂತರವಾಗಿ ಮೋಕ್ಷಕ್ಕೆ ಹೋಗುತ್ತಿರುತ್ತವೆ - ಈ ಅನುಕ್ರಮವು ಎಂದೂ ನಿಲ್ಲುವುದಿಲ್ಲ, ಅದರಲ್ಲಿ ಎಂದೂ ಬದಲಾವಣೆಯಾಗುವುದಿಲ್ಲ. ಈ ಪ್ರಕಾರ ಭವ್ಯರಾಶಿಯಲ್ಲಿಯೂ ಅನಂತ ಜೀವಗಳು ಎಂದೂ (ನಿಗೋದದಿಂದಲೇ ಹೊರಗೆ ಬರುವುದಿಲ್ಲ ಮತ್ತು ಯಾವವು ಹೊರಗೆ ಬರುತ್ತವೆ ಅವು ಕೂಡ) ಮುಕ್ತವಾಗುವುದಿಲ್ಲ. ಕೇವಲೀ ಭಗವಂತರಿಗೆ ಯಾವಾಗ ಕೇಳಿದರೂ ಆಗ ಅವರು ಅಭವ್ಯರಾಶಿಯಿಂದ ಅನಂತಗುಣಿತ ಭವ್ಯರಾಶಿಯಿರುವುದನ್ನು ಹೇಳುತ್ತಾರೆ. ಅದರಲ್ಲಿಯೂ ದೂರಾನುದೂರ ಭವ್ಯರಾಶಿಯು ಅಭವ್ಯರಾಶಿಯಿಂದ ಅನಂತಗುಣಿತವೆಂದು ತಿಳಿಯುವುದು. ಈ ದೂರಾನುದೂರ ಭವ್ಯರು ಅಭವ್ಯರ ಸಮಾನರಿದ್ದಾರೆ.

ಉತ್ಸೇಧಾಂಗುಲ, ಆತ್ಮಾಂಗುಲ ಮತ್ತು ಪ್ರಮಾಣಾಂಗುಲವೆಂದು ಅಂಗುಲದ ಮೂರು ಭೇದಗಳಿವೆ.

೧) **ಉತ್ಸೇಧಾಂಗುಲ** - ಇದನ್ನು ತಿಳಿಸಿಕೊಡುವ ಸಲುವಾಗಿ ಹತ್ತೊಂಭತ್ತು ಭೇದವುಳ್ಳ ಎಣಿಕೆ ಹೇಳುತ್ತಾರೆ-ಅವಸನಾಸನ, ಸನಾಸನ, ತಟರೇಣು, ತ್ರಸರೇಣು, ಸ್ಥರೇಣು, ಉತ್ತಮ ಭೋಗಭೂಮಿಜರ ಕೇಶ (ಕೂದಲಿನ) ಅಗ್ರಭಾಗ ಮಧ್ಯಮ ಭೋಗಭೂಮಿಜರ ಕೇಶದ ಅಗ್ರಭಾಗ, ಜಘನ್ಯ ಭೋಗಭೂಮಿಜರ ಕೇಶದ ಅಗ್ರಭಾಗ, ಕರ್ಮಭೂಮಿಜರ ಕೂದಲಿನ ಅಗ್ರಭಾಗ, ಸೀರು, ಸಾಸಿವೆ, ಜವೆಗೋಧಿ, ಅಂಗುಲ-ಇವು ಹದಿಮೂರು ಸ್ಥಾನಗಳಿವೆ. ಅವಸನಾಸನ ಸ್ಕಂಧದಿಂದ ಹಿಡಿದು ಅಂಗುಲದವರೆಗೆ ಹದಿಮೂರು ಸ್ಥಾನಗಳು ಎಂಟೆಂಟು ಗುಣಿತ ಅಧಿಕವೆಂದು ತಿಳಿಯುವುದು. ಎಂದರೆ ಹೇಗೆ ಅವಸನಾಸನ ಸ್ಕಂಧವು ಅನಂತ ಪುದ್ಗಲ ಪರಮಾಣುಗಳ ಸ್ಕಂಧವಿರುತ್ತದೆ.

ಎಂಟು ಅವಸನಾಸನದ್ದು ಒಂದು ಸನಾಸನ ಸ್ಕಂಧವಿರುತ್ತದೆ. ಎಂಟು ಸನಾಸನ ಸೇರಿದ ಮೇಲೆ ಒಂದು ತಟರೇಣುವಾಗುತ್ತದೆ, ಎಂಟು ತಟರೇಣು ಸೇರಿದ ಮೇಲೆ ಒಂದು ತ್ರಸರೇಣುವಾಗುತ್ತದೆ- ಈ ಪ್ರಕಾರ ಅಂಗುಲದವರೆಗೆ ಎಂಟೆಂಟು ಗುಣಿತವೆಂದು ತಿಳಿಯುವುದು.

ಈ ಎಂಟು ಜವೆಗೋಧಿಪ್ರಮಾಣ ಉತ್ಸೇಧಾಂಗುಲದಿಂದ ಐನೂರು ಪಟ್ಟು ಪ್ರಮಾಣಾಂಗುಲವಿರುತ್ತದೆ. ಇಪ್ಪತ್ನಾಲ್ಕು ಅಂಗುಲದ್ದು ಒಂದು ಮೊಳವಾಗುತ್ತದೆ. ನಾಲ್ಕು ಮೊಳದ್ದು ಒಂದು ಧನುಷ್ಯವಾಗುತ್ತದೆ. ಎರಡು ಸಾವಿರ ಧನುಷ್ಯದ್ದು ಒಂದು ಹರದಾರಿಯಾಗುತ್ತದೆ. ನಾಲ್ಕು ಹರದಾರಿಯದ್ದು ಒಂದು ಯೋಜನವಾಗುತ್ತದೆ. ಅಸಂಖ್ಯಾತ ಯೋಜನದ್ದು ಒಂದು ರಾಜೂವಿರುತ್ತದೆ - ಈ ಹತ್ತೊಂಭತ್ತು ಭೇದಗಳೊಳಗಿಂದ ಹದಿಮೂರನೆಯ ಭೇದ ಎಂಟು ಜವೆ ಗೋಧಿಯಷ್ಟು ಒಂದು ಉತ್ಸೇಧಾಂಗುಲವಿರುತ್ತದೆ.

೨) **ಆತ್ಮಾಂಗುಲ -** ಯಾವ ಕಾಲದಲ್ಲಿ ಎಂಥ ಶರೀರವಿರುತ್ತದೆ ಅದರ ಅನುಸಾರ ಅಂಗುಲವನ್ನು ಆತ್ಮಾಂಗುಲವೆನ್ನುತ್ತಾರೆ.

೩) **ಪ್ರಮಾಣಾಂಗುಲ -** ಐನೂರು ಧನುಷ್ಯ ಎತ್ತರ ಶರೀರವುಳ್ಳ ಅವಸರ್ಪಿಣಿಯ ಪ್ರಥಮ ಚಕ್ರವರ್ತಿಯ ಅಂಗುಲವು ಪ್ರಮಾಣಾಂಗುಲವಿದೆ. ಉತ್ಸೇಧಾಂಗುಲದಿಂದ ಐನೂರು ಪಟ್ಟು ದೊಡ್ಡದು ಪ್ರಮಾಣಾಂಗುಲವೆಂದು ತಿಳಿಯುವುದು.

ನಿವೃತ್ತಿ ಅಕ್ಷರ, ಲಬ್ಧಿ ಅಕ್ಷರ ಮತ್ತು ಸ್ಥಾಪನಾ ಅಕ್ಷರವೆಂದು ಅಕ್ಷರದ ಮೂರು ಭೇದಗಳಿವೆ.

೧) **ನಿವೃತ್ತಿ ಅಕ್ಷರ -** ತಾಲ, ಓಷ್ಠ ಮೊದಲಾದ ಸ್ಥಾನಗಳಿಂದ ಉತ್ಪನ್ನವಾಗುವಂಥ ಶಬ್ದರೂಪ ಅಕ್ಷರಗಳು ನಿವೃತ್ತಿ ಅಕ್ಷರವಿವೆ.

೨) **ಲಬ್ಧಿ ಅಕ್ಷರ -** ಜ್ಞಾನಾವರಣ ಕರ್ಮದ ಕ್ಷಯೋಪಶಮದಿಂದ ಪ್ರಗಟವಾದ ಪದಾರ್ಥಗಳನ್ನು ತಿಳಿಯುವ ಸಂಬಂಧದ ಭಾವೇಂದ್ರಿಯ ಮೂಲಕ ಅಕ್ಷರ ಶಕ್ತಿಯು, ಲಬ್ಧಿ ಅಕ್ಷರವಿದೆ.

೩) **ಸ್ಥಾಪನಾ ಅಕ್ಷರ -** ತಮ್ಮ-ತಮ್ಮ ದೇಶಭಾಷೆಯರೂಪ ಅಕ್ಷರಗಳ ಆಕಾರ ನಿರ್ಮಿಸಿ ಅವುಗಳಿಂದ ಕರ್ಮ-ಧರ್ಮದ ಕಾರ್ಯಮಾಡುವುದು, ಶಾಸ್ತ್ರಗಳನ್ನು ಓದುವುದು ತಿಳಿಯುವುದು ಇತ್ಯಾದಿ ಸ್ಥಾಪನಾ ಅಕ್ಷರವಿದೆ.

ಈ ಪ್ರಕಾರ ಮೂರು ಭೇದರೂಪ ಅಕ್ಷರ ತಿಳಿಯುವುದು.

ಪರ್ಯಾಪ್ತಿಯಲ್ಲಿ - ಪರ್ಯಾಪ್ತಿ, ಅಪರ್ಯಾಪ್ತಿ ಅಥವಾ ಇದನ್ನೇ ನಿರ್ವೃತ್ಯಪರ್ಯಾಪ್ತಿಯೆಂದೂ ಹೇಳುತ್ತಾರೆ ಮತ್ತು ಲಬ್ಧ್ಯ ಪರ್ಯಾಪ್ತಿಯೆಂದು ಮೂರು ಭೇದಗಳಿವೆ.

ಎಲ್ಲಿ ಪರ್ಯಾಪ್ತಿ ನಾಮಕರ್ಮದ ಉದಯ ಸಹಿತ ಜೀವನು ಪರ್ಯಾಪ್ತಿಯನ್ನು ಪೂರ್ಣ ಮಾಡುತ್ತಾನೆ, ಅದು ಪರ್ಯಾಪ್ತಿಯಿದೆ. ಪರ್ಯಾಪ್ತಿ ಪ್ರಕೃತಿಯ ಉದಯ ಸಹಿತ ಜೀವನು ಎಷ್ಟುಕಾಲದವರೆಗೆ ಶರೀರ ಪರ್ಯಾಪ್ತಿಯನ್ನು ಪೂರ್ಣ ಮಾಡುವುದಿಲ್ಲ, ಅದು ನಿರ್ವೃತ್ಯಪರ್ಯಾಪ್ತಿಯಿದೆ. ಅಪರ್ಯಾಪ್ತಿಯ ಉದಯ ಸಹಿತ ಜೀವವು ಶರೀರ ಪೂರ್ಣವಾಗುವ ಮೊದಲೇ ಮರಣವಾಗಿ ಹೋಗುವುದು ಲಬ್ಧಿ ಅಪರ್ಯಾಪ್ತಿಯಿದೆ.

ಈ ಪ್ರಕಾರ ಪರ್ಯಾಪ್ತಿಯ ಮೂರು ಭೇದ ತಿಳಿಯುವುದು.

೧. ಶಕ್ತಿರೂಪ ಚಕ್ಷುದರ್ಶನ ಮತ್ತು ೨. ವ್ಯಕ್ತ ಚಕ್ಷುದರ್ಶನವೆಂದು ಚಕ್ಷುದರ್ಶನದ ಎರಡು ಭೇದಗಳಿವೆ. ಅಪರ್ಯಾಪ್ತಿ ಪ್ರಕೃತಿಯ ಉದಯಸಹಿತ ಲಬ್ಧಿ ಅಪರ್ಯಾಪ್ತ ಚತುರಿಂದ್ರಿಯ, ಪಂಚೇಂದ್ರಿಯಗಳದು ಶಕ್ತಿರೂಪ ಚಕ್ಷುದರ್ಶನವಿದೆ. ಇವುಗಳದು ಚಕ್ಷುದರ್ಶನದ ಕ್ಷಯೋಪಶಮವಂತೂ ಇದೆ; ಆದರೆ ಅಪರ್ಯಾಪ್ತಿ ಕರ್ಮದ ಉದಯದಿಂದ ಅಪರ್ಯಾಪ್ತ ದಶೆಯಲ್ಲಿಯೇ ಮರಣವಾಗಿ ಹೋಗುವ ಕಾರಣ ಅದು ಪ್ರಗಟವಾಗುವ ಅವಕಾಶವಿಲ್ಲ.

ಅದಕ್ಕಾಗಿ ಇದನ್ನು ಶಕ್ತಿರೂಪ ಚಕ್ಷುದರ್ಶನವೆಂದು ಹೇಳುತ್ತಾರೆ. ಪರ್ಯಾಪ್ತ ಚತುರಿಂದ್ರಿಯ ಮತ್ತು ಪರ್ಯಾಪ್ತ ಪಂಚೇಂದ್ರಿಯ ಜೀವಗಳು ವ್ಯಕ್ತ ಚಕ್ಷುದರ್ಶನಿ ಇವೆ.

ಉಪಶಮ ಸಮ್ಯಕ್ತ್ವದ ಭೇದಗಳು-ಪ್ರಥಮೋಪಶಮ ಸಮ್ಯಕ್ತ್ವ, ದ್ವಿತೀಯೋಪಶಮ ಸಮ್ಯಕ್ತ್ವವೆಂದು ಎರಡು ಇವೆ. ಅನಾದಿಕಾಲದಿಂದ ಸಂಸಾರ ಭ್ರಮಣ ಮಾಡುತ್ತ ಇರುವಾಗ ಎಂದೋ ಮಿಥ್ಯಾತ್ವವು ಬಿಟ್ಟುಹೋಗಿ ಸಮ್ಯಕ್ತ್ವವಾಗುವುದು; ಮೊದಲೆಂದು ಆಗಿರಲಿಲ್ಲ. ಈಗ ಅನಂತಕಾಲದ ನಂತರ ಯಾವ ಜೀವನಿಗೆ ಸಮ್ಯಕ್ತ್ವ ಭಾವವಾಗುತ್ತದೆ, ಅದು ಪ್ರಥಮೋಪಶಮ ಸಮ್ಯಕ್ತ್ವವಿದೆ. ಶ್ರೇಣಿ ಹತ್ತುವಾಗ ಅಪ್ರಮತ್ತ ಗುಣಸ್ಥಾನದಲ್ಲಿ ಕ್ಷಯೋಪಶಮ ಸಮ್ಯಕ್ತ್ವದಿಂದ ಪುನಃ ಉಪಶಮ ಸಮ್ಯಕ್ತ್ವವಾಗುವುದು ಅದು ದ್ವಿತೀಯೋಪಶಮ ಸಮ್ಯಕ್ತ್ವವಿದೆ.

ಯೋಗಸ್ಥಾನದ ಭೇದಗಳು - ೧. ಉತ್ಪಾದ ಯೋಗಸ್ಥಾನ, ೨. ಏಕಾಂತಾನುವೃದ್ಧಿ ಯೋಗಸ್ಥಾನ, ೩. ಪರಿಣಾಮ ಯೋಗಸ್ಥಾನವೆಂದು ಮೂರು ಇವೆ. ಉತ್ಪನ್ನವಾಗುವ ಪ್ರಥಮ ಸಮಯದಲ್ಲಿಯೇ ಯಾವ ಯೋಗಸ್ಥಾನವಿರುತ್ತದೆ ಅದು ಉತ್ಪಾದ ಯೋಗಸ್ಥಾನವಿದೆ. ಇದರ ಜಘನ್ಯ ಹಾಗೂ ಉತ್ಕೃಷ್ಟ ಕಾಲವು ಒಂದೇ ಸಮಯವಿದೆ. ಉತ್ಪನ್ನವಾದ ಎರಡನೆಯ ಸಮಯದಿಂದ ಹಿಡಿದು ಪರ್ಯಾಪ್ತಿಗಳು ಪೂರ್ಣವಾಗುವ ಒಂದು ಸಮಯ ಕಡಿಮೆಯವರೆಗೆ ಒಂದೊಂದು ಸಮಯ ಹೆಚ್ಚುತ್ತ-ಹೆಚ್ಚುತ್ತ ಹೋಗುವ ಯೋಗ ಸ್ಥಾನವು ಏಕಾಂತಾನುವೃದ್ಧಿ ಯೋಗಸ್ಥಾನವಿದೆ. ಇದರದೂ ಜಘನ್ಯ ಹಾಗೂ ಉತ್ಕೃಷ್ಟ ಕಾಲವು ಒಂದು ಸಮಯವಿದೆ. ಪರ್ಯಾಪ್ತಿಯು ಪೂರ್ಣವಾಗುವುದರಿಂದ ಹಿಡಿದು ಆಯುವಿನವರೆಗೆ ಆಗುವಂಥ ಯೋಗಸ್ಥಾನವು ಪರಿಣಾಮ ಯೋಗಸ್ಥಾನವಿದೆ.

**ಪ್ರಶ್ನೆ** ಃ- ಪರಿಣಾಮ ಯೋಗಸ್ಥಾನವು ಪರ್ಯಾಪ್ತ ಜೀವನಿಗೆ ಸಂಭವವಿದೆ, ಅಪರ್ಯಾಪ್ತಿ ಕರ್ಮದ ಉದಯವಂತನಿಗೆ ಅದು ಹೇಗೆ ಸಂಭವವಿದೆ ?

**ಸಮಾಧಾನ** ಃ- ಲಬ್ಧ್ಯಪರ್ಯಾಪ್ತ ಜೀವದ ಆಯುವು ಶ್ವಾಸದ ಹದಿನೆಂಟನೆಯ ಒಂದು ಭಾಗವಿದೆ. ಅದರಲ್ಲಿ ಮೂರು ಭಾಗ ಮಾಡುವುದು. ಎರಡು ಭಾಗ ಪೂರ್ಣವಾದ ಮೇಲೆ ಕೊನೆಯ ಒಂದು ಭಾಗದಲ್ಲಿ ಪರಿಣಾಮ ಯೋಗಸ್ಥಾನವಿರುವುದನ್ನು ತಿಳಿಯುವುದು.

ಈ ಪ್ರಕಾರ ಮೂರು ಯೋಗಸ್ಥಾನ ಹೇಳಿದ್ದಾರೆ. ಇವುಗಳ ವಿಶೇಷವನ್ನು ಗೊಮ್ಮಟಸಾರದಿಂದ ತಿಳಿಯುವುದು.

ಧರ್ಮದಲ್ಲಿ ಅರುಚಿಯಾಗುವ ಮೂರು ಕಾರಣಗಳು - ೨. ಜನ್ಮದಿಂದಲೇ ಅಜ್ಞಾನತೆಯ ಕಾರಣ ಈ ಜೀವದ್ದು ಧರ್ಮದಲ್ಲಿ ಅರುಚಿಯಿರುತ್ತದೆ. ೨. ಕೆಲವು ಜೀವರುಗಳಿಗೆ ಕಷಾಯದ ದೋಷದಿಂದ ಧರ್ಮದಲ್ಲಿ ಅರುಚಿಯಾಗುತ್ತದೆ. ೩. ಕೆಲವರಿಗೆ ಧರ್ಮಸೇವನೆ ಮಾಡುತ್ತಿರುವಾಗ ಕೂಡ ಪಾಪದ ಉದಯ ಬರುವುದರಿಂದ ಧರ್ಮದಲ್ಲಿ ಅರುಚಿಯಾಗುತ್ತದೆ. ಈಗ ಇವುಗಳನ್ನು ದೃಷ್ಟಾಂತದಿಂದ ದರ್ಶಿಸುತ್ತಾರೆ.

ಯಾರೋ ಜನ್ಮದಿಂದಲೇ ರೋಗಿ, ಜನ್ಮದಿಂದಲೇ ದರಿದ್ರ ಜೀವಗಳು ಎಂದೂ ತುಪ್ಪ ಸಕ್ಕರೆ ಮಿಶ್ರಿತ ಭೋಜನ ಮಾಡಲಿಲ್ಲ, ಅದರ ಸ್ವಾದವನ್ನು ಎಂದೂ ಪಡೆದಿಲ್ಲ-ಆಸ್ವಾದಿಸಿಲ್ಲ, ಅದೇ ಪ್ರಕಾರ ಅನಾದಿಯಿಂದಲೇ ಜ್ಞಾನದರಿದ್ರ , ಮಿಥ್ಯಾತ್ವ, ರೋಗದಿಂದ ಗ್ರಸಿತ ಯಾವನೋ ಪಾಪಾತ್ಮನಿಗೆ ಸಹಜವಾಗಿಯೇ ಅಜ್ಞಾನವಶ ಪಾಪ-ಪುಣ್ಯದ ಭೇದವು ತಿಳಿದುಬರುವುದಿಲ್ಲ; ಅದರಿಂದ ಧರ್ಮದ ಕುರಿತಾಗಿ ಅರುಚಿಯಿರುತ್ತದೆ.

ಬೇರೆ ಯಾವನೋ ಜೀವನು ಕಷಾಯದ ಕಾರಣ ಅಥವಾ ಯಾವುದೋ ಅಶುಭ ಆಯುವಿನ ಬಂಧವಾಗಿ ಹೋಗಿರುವ ಕಾರಣ, ಬೇರೆಯವರ ಜತೆ ತಂಟೆ-ಜಗಳ ಮಾಡಿ, ಅವರ ಮೇಲೆ ಅಪಘಾತದ ದೋಷ ತಗಲಿಸುವ ಸಲುವಾಗಿ ಕೆರೆ, ಬಾವಿ, ನದಿಗಳಲ್ಲಿ ಹಾರಿಬಿದ್ದು ಸತ್ತುಹೋಗುತ್ತಾನೆ; ಇನ್ನಾವುದೋ ಕಾರಣದಿಂದ ವಿಷಭಕ್ಷಣೆ ಮಾಡಿ

ಅಥವಾ ಚೂರಿ-ಕಿರುಗತ್ತಿಯಿಂದ ಇರಿದುಕೊಂಡು ಸತ್ತು ಹೋಗುತ್ತಾನೆ. ಅದೇ ಪ್ರಕಾರ ಪಾಪಕರ್ಮದ ಉದಯದಿಂದ ಧರ್ಮಸೇವನೆ ಮಾಡುತ್ತಿದ್ದರೂ ಯಾರದೋ ಜೊತೆಗೆ ದ್ವೇಷಭಾವ ಮಾಡಿ ಧರ್ಮದ ಕುರಿತಾಗಿ ಅರುಚಿ ಮಾಡುತ್ತಾನೆ.

ಚನ್ನಾಗಿ ಉಂಡು ತಿಂದು ಇರುವ ಯಾವನೋ ಜೀವನಿಗೆ ಪಾಪಕರ್ಮದ ಉದಯದಿಂದ ಹೊಟ್ಟೆಯಲ್ಲಿ ರಸವು ಹೆಚ್ಚಾಗುವುದರಿಂದ ಊಟ-ತಿಂಡಿಯ ಕುರಿತು ಅರುಚಿಯಾಗಿ ಬಿಡುತ್ತದೆ. ಹೇಗೆ-ಹೇಗೆ ಹೊಟ್ಟೆಯಲ್ಲಿ ರಸವು ಹೆಚ್ಚುತ್ತ ಹೋಗುತ್ತದೆ. ಹಾಗೆ-ಹಾಗೆ ರೋಗವು ಬೆಳೆಯುತ್ತ ಹೋಗುತ್ತದೆ. ಮತ್ತು ಅದರ ಅನುಸಾರ ಆಹಾರದ ಕುರಿತು ಅರುಚಿಯಾಗುತ್ತ ಹೋಗುತ್ತದೆ. ಅದೇ ಪ್ರಕಾರ ಚೆನ್ನಾಗಿ ಒಳ್ಳೆಯ ರೀತಿಯಿಂದ ಧರ್ಮದ ಸೇವನೆ ಮಾಡುತ್ತಿರುವಂಥ ಯಾವನೋ ಜೀವನಿಗೆ ಪಾಪದ ಉದಯದಿಂದ ಅಥವಾ ಯಾವುದೋ ಅಶುಭ ಗತಿಯ ಬಂಧವಾಗುವುದರಿಂದ ಆಯುಬಂಧದ ಯೋಗದಿಂದ ಕ್ರಮ-ಕ್ರಮದಿಂದ ಧರ್ಮದ ಕುರಿತಾಗಿ ಅರುಚಿಯಾಗಿ ಹೋಗುತ್ತದೆ. ದೀರ್ಘ ಅರತಿ ಅಥವಾ ಆರ್ತದ ಕಾರಣ ಭೋಗಾಸಕ್ತಿಯ ರೂಪ ದೋಷದಿಂದ ಧರ್ಮದ ಕುರಿತು ಅರುಚಿಯಾಗಿ ಬಿಡುತ್ತದೆ.

ಇವು ಮೂರು ಭೇದರೂಪದ ಭಾವಗಳಿಂದ ಧರ್ಮದಲ್ಲಿ ಅರುಚಿಯಾಗಿ ಹೋಗುವುದರಿಂದ ಪಾಪದ ಬಂಧ ಮಾಡಿಕೊಂಡು ಆತ್ಮನು ತನ್ನ ಪರಭವ ಕೆಡಿಸಿಕೊಳ್ಳುತ್ತಾನೆಂದು ತಿಳಿಯುವುದು.

ಶಲ್ಯದ ಮೂರು ಭೇದಗಳು ಮಾಯೆ, ಮಿಥ್ಯೆ ಮತ್ತು ಮುಂದಿನ ವಿಚಾರ(ನಿದಾನ)ವೆಂಬವಾಗಿದ್ದು ಯಾವುದರಲ್ಲಿ ಮಾಯೆರೂಪ ಪರಿಣತಿಯ ತ್ಯಾಗದ ಇಚ್ಛೆಯಿದ್ದರೂ, ಧರ್ಮದ ಸೇವನೆ ಮಾಡುತ್ತಿದ್ದರೂ ಕೂಡ ತನ್ನ ಹೃದಯದಿಂದ ಮಾಯೆಯು ಸಮಾಪ್ತವಾಗುವುದಿಲ್ಲ. ಒಮ್ಮೊಮ್ಮೆ ಮಾಯೆಯ ವಾಸನೆಯು ಪ್ರಕಟವಾಗಿಯೇ ಹೋಗುತ್ತದೆ ಅದು ಮಾಯಾಶಲ್ಯವಿದೆ.

ಯಾವುದರಲ್ಲಿ ಧರ್ಮದ ಸೇವನೆ ಮಾಡುತ್ತಿದ್ದರೂ, ಮಿಥ್ಯಾತ್ವದ ತ್ಯಾಗದ ಇಚ್ಛೆಯಿದ್ದರೂಕೂಡ, ಕುದೇವಾದಿಗಳ ಸೇವೆಯ ತ್ಯಾಗವಾದ ಮೇಲೆಯೂ ಕೂಡ ಕಾರಣ ಪಡೆದು ಎಂದಾದರೊಮ್ಮೆ ಅತತ್ತ್ವಭಾವವು ಉತ್ಪನ್ನವಾಗುತ್ತದೆ, ಮಿಥ್ಯಾಭಾವದಿಂದ ಅತತ್ತ್ವಶ್ರದ್ಧೆಯು ಉತ್ಪನ್ನವಾಗುತ್ತದೆ. ಜಿನಭಾಷಿತ ಕಥನದಲ್ಲಿ ಸಂಶಯ ಉಂಟಾಗುತ್ತದೆ ಅದು ಮಿಥ್ಯಾಶಲ್ಯವಿದೆ.

ಯಾವುದರಲ್ಲಿ ಧರ್ಮಸೇವನೆಯು ನಿರ್ವಾಂಛಿತವಾಗಿದ್ದರೂ ಅಂಥದರಲ್ಲಿ ಎಂದಾದರೊಮ್ಮೆ ಧರ್ಮ ಸೇವನೆಯ ಮೊದಲೇ ಫಲದ ವಾಂಛೆಯಾಗುತ್ತದೆ ಎಂದರೆ ನನಗೆ ಈ ಧರ್ಮದಿಂದ ಯಾವ ಫಲದೊರಕಬಹುದಾಗಿದೆ? ಯಾವುದು ದೊರಕಲಿಕ್ಕಿಲ್ಲ ? ಹಾಗೂ ಇಂಥ ಫಲದ ಪ್ರಾಪ್ತಿಯಾಗಲೆಂಬಭಾವ - ವಿಕಲ್ಪವು ನಿದಾನ ಶಲ್ಯವಿದೆ.

ನಿಕ್ಷೇಪದಲ್ಲಿ ನಾಮ, ಸ್ಥಾಪನೆ, ದ್ರವ್ಯ ಮತ್ತು ಭಾವವೆಂದು ನಾಲ್ಕು ಭೇದಗಳಿವೆ.

ಯಾವುದೇ ವಸ್ತುವಿಗೆ ಯಾವುದಾದರೂ ಹೆಸರು ಇರಿಸುವುದು ಅದು ನಾಮನಿಕ್ಷೇಪವಿದೆ. ಯಾವುದೋ ವಸ್ತುವಿನ ಆಕಾರ ಮಾಡುವುದು ಸ್ಥಾಪನಾ ನಿಕ್ಷೇಪವಿದೆ. ಯಾವುದೇ ವಸ್ತು-ಪದಾರ್ಥರೂಪವಾಗುವ ಸಲುವಾಗಿ ಯಾವುದೇ ವಸ್ತುವಿರುವುದು ದ್ರವ್ಯನಿಕ್ಷೇಪವಿದೆ. ವಸ್ತುವಿನ ಪ್ರತ್ಯಕ್ಷವಾಗುವಿಕೆಯು ಭಾವನಿಕ್ಷೇಪವಿದೆ.

ಇಲ್ಲಿ ದೃಷ್ಟಾಂತಪೂರ್ವಕ ಇವುಗಳ ಕಥನ ಮಾಡಲಾಗುತ್ತದೆ-ಋಷಭಾದಿ ತೀರ್ಥಂಕರರ ಹೆಸರನ್ನು ಹೇಳಿ ಸ್ಮರಣೆ ಮಾಡಿ ಪುಣ್ಯದ ಬಂಧ ಮಾಡಿಕೊಳ್ಳುವುದು ನಾಮನಿಕ್ಷೇಪವಿದೆ.

ಇಪ್ಪತ್ನಾಲ್ಕು ತೀರ್ಥಂಕರರ ಕುರಿತಾಗಿ ಶರೀರದ ಆಕಾರ, ವರ್ಣ, ಲಕ್ಷಣ, ರೂಪ ಸಹಿತ ರತ್ನದ, ಚಿನ್ನದ, ಬೆಳ್ಳಿಯ, ಧಾತುವಿನ, ಮನೋಜ್ಞವಾದ ಉತ್ತಮ ಪಾಷಾಣದ ಖಡ್ಗಾಸನ ಅಥವಾ ಪದ್ಮಾಸನರೂಪ ಪ್ರತಿಮೆ ಸ್ಥಾಪಿತ

ಮಾಡಿ ಪೂಜೆ-ಸ್ತುತಿ ಮಾಡುತ್ತ ಪುಣ್ಯದ ಉಪಾರ್ಜನೆ ಮಾಡುವುದು ಸ್ಥಾಪನಾ ನಿಕ್ಷೇಪವಿದೆ.

ಭಾವೀ ತೀರ್ಥಂಕರರ ಜೀವನು ಇನ್ನೂ ಅನ್ಯಗತಿಯಲ್ಲಿ ವಿರಾಜಮಾನನಾಗಿದ್ದರೂ ಇಲ್ಲಿ ಬರುವ ಆರು ತಿಂಗಳು ಮೊದಲೇ ನಗರದ ರತ್ನಮಯ ರಚನೆ, ಪಂಚಾಶ್ಚರ್ಯ ಮಾಡುವುದು; ತೀರ್ಥಂಕರರು ಗರ್ಭದೊಳಗೆ ಬಂದಮೇಲೆ ಅವರ ಗರ್ಭಕಲ್ಯಾಣಕ ಮೊದಲಾದ ಅತಿಶಯಪೂರ್ವಕ ಉತ್ಸವವನ್ನು ಆಚರಿಸುವುದು ಸ್ತುತಿ ಮಾಡಿ ಪುಣ್ಯ ಕಟ್ಟಿಕೊಳ್ಳುವುದು ಅದು ದ್ರವ್ಯನಿಕ್ಷೇಪವಿದೆ. ಅವರು ಇನ್ನೂ ತೀರ್ಥಂಕರರಾಗಿಲ್ಲ. ಆದರೂ ಆ ಗರ್ಭದಲ್ಲಿ ವಿರಾಜಮಾನ ಆತ್ಮನು ತೀರ್ಥಂಕರನಾಗಲು ಯೋಗ್ಯನಿದ್ದಾನೆ. ಕಾಲ ಪಡೆದು ತೀರ್ಥಂಕರ ಪದವನ್ನು ಪ್ರಾಪ್ತ ಮಾಡಿಕೊಳ್ಳುವುದರಿಂದ ಅವರು ದ್ರವ್ಯ ತೀರ್ಥಂಕರರಿದ್ದಾರೆ. ಅವರ ಸೇವೆ ಪೂಜೆ ಮಾಡುವುದರಿಂದ ಪುಣ್ಯ ಬಂಧವಾಗುತ್ತದೆ; ಅದು ದ್ರವ್ಯನಿಕ್ಷೇಪವಿದೆ.

ಸಮವಸರಣ ಸಹಿತ ಗಂಧಕುಟಿಯಲ್ಲಿ ಸಿಂಹಾಸನಯುಕ್ತ ಕಮಲದ ಮೇಲೆ ನಾಲ್ಕು ಅಂಗುಲ ಅಂತರಿಕ್ಷ ವಿರಾಜಮಾನರು, ಘಾತಿ ಕರ್ಮಗಳನ್ನು ನಷ್ಟಮಾಡಿ ಅನಂತ ಚತುಷ್ಟಯ ಸಹಿತ ವಿದ್ಯಮಾನರೂ, ದಿವ್ಯಧ್ವನಿಯ ಮೂಲಕ ಉಪದೇಶ ನೀಡುತ್ತ ಸುಶೋಭಿತ ಭಗವಂತರು ಭಾವನಿಕ್ಷೇಪರಿದ್ದಾರೆ. ಅವರ ಪೂಜೆ-ಸ್ತುತಿ ಮಾಡಿ ಪುಣ್ಯದ ಉಪಾರ್ಜನೆ ಮಾಡುವುದು ಭಾವನಿಕ್ಷೇಪವಿದೆ.

ಈ ಪ್ರಕಾರ ತೀರ್ಥಂಕರರ ಮೇಲೆ ನಾಲ್ಕು ನಿಕ್ಷೇಪಗಳನ್ನು ಘಟಿತಗೊಳಿಸಲಾಯಿತು. ಇಲ್ಲಿ ಈಗ ಇನ್ನೊಂದು ದೃಷ್ಟಾಂತವನ್ನೂ ಹೇಳುತ್ತಾರೆ-ಯಾರಿಗೋ ಸಿಂಹವೆಂದು ಹೆಸರನ್ನಿಡುವುದು ನಾಮಸಿಂಹವಿದೆ. ಕಾಷ್ಠ-ಪಾಷಾಣ, ಚಿತ್ರದಲ್ಲಿ ಸಿಂಹದ ಆಕಾರ ನಿರ್ಮಿಸುವುದು ಸ್ಥಾಪನಾ ಸಿಂಹವಿದೆ. ಸಿಂಹದ ಪರ್ಯಾಯದಲ್ಲಿ ಉತ್ಪನ್ನವಾಗುವಲ್ಲಿ ಸನ್ಮುಖವಿರುವ ಜೀವವನ್ನು ಈಗಲೇ ಅಂತರಾಲದಲ್ಲಿ ಸಿಂಹವೆಂದು ಕಾಣುವುದು ದ್ರವ್ಯನಿಕ್ಷೇಪವಿದೆ. ಪ್ರತ್ಯಕ್ಷ ಕುಪ್ಪಳಿಸುತ್ತ , ಹಾರುತ್ತ , ಗರ್ಜಿಸುತ್ತಿರುವ ಸಿಂಹವು ಭಾವ ಸಿಂಹವಿದೆ.

ಇತ್ಯಾದಿ ಪ್ರಕಾರದಿಂದ ಸರ್ವತ್ರ-ಚೇತನ ಅಚೇತನ ಪದಾರ್ಥಗಳ ಮೇಲೆ ಘಟಿತಗೊಳಿಸುವುದು. ಇವು ನಾಲ್ಕನ್ನೂ ಹೊಡೆಯುವುದರಿಂದ ಪಾಪವಾಗುತ್ತದೆ ಮತ್ತು ಇವುಗಳ ಮೇಲೆ ದಯೆಯ ಭಾವ ಮಾಡುವುದರಿಂದ ಪುಣ್ಯವಾಗುತ್ತದೆ. ಮಣ್ಣಿನಿಂದ ಮಾಡಿದ ಸ್ಥಾಪನಾರೂಪ ಸಿಂಹವನ್ನು ಒಡೆದುಹಾಕುವುದರಿಂದ ಸಿಂಹವನ್ನು ಸಾಯಿಸಿದ ದೋಷವು ಬರುತ್ತದೆ-ತಗಲುತ್ತದೆ.

ಇಲ್ಲಿ ನಿಕ್ಷೇಪಗಳ ಸಾಮಾನ್ಯ ಸ್ವರೂಪ ಹೇಳಲಾಯಿತು. ವಿಶೇಷರೂಪದಿಂದ ವಿವೇಕವಂತರು ಸಮ್ಯಗ್ದೃಷ್ಟಿಗಳು ತಮ್ಮ ಜ್ಞಾನದ ಮಾಹಾತ್ಮ್ಯದಿಂದ ಸರ್ವತ್ರ ಯಥಾಯೋಗ್ಯ ಘಟಿತ ಮಾಡಿಕೊಳ್ಳಬೇಕು.

ಅಲೌಕಿಕ ಮಾನದಲ್ಲಿ - ದ್ರವ್ಯಮಾನ, ಕ್ಷೇತ್ರಮಾನ, ಕಾಲಮಾನ ಮತ್ತು ಭಾವಮಾನವೆಂದು ನಾಲ್ಕು ಭೇದಗಳಿವೆ. ಇವು ನಾಲ್ಕೂ ಮಾನಗಳಲ್ಲಿ ಜಘನ್ಯ, ಮಧ್ಯಮ, ಉತ್ಕೃಷ್ಟವೆಂಬ ಮೂರು ಮೂರು ಭೇದಗಳಿವೆ. ಪ್ರಮಾಣ(ಅಳತೆಯ ಸಾಧನ)ವನ್ನು ಇಲ್ಲಿ ಮಾನವೆಂದು ಹೇಳುತ್ತಿದ್ದಾರೆ.

ಒಂದು ಪುದ್ಗಲ ಪರಮಾಣುವು ಜಘನ್ಯ ದ್ರವ್ಯಮಾನವಿದೆ, ಏಕೆಂದರೆ ಇದಕ್ಕಿಂತ ಚಿಕ್ಕದು ಅನ್ಯ ದ್ರವ್ಯವಿಲ್ಲ. ಮೂರು ಲೋಕ ಪ್ರಮಾಣ ಮಹಾಸ್ಕಂಧಕ್ಕಿಂತ ದೊಡ್ಡದು ಯಾವುದೇ ಅನ್ಯ ಪುದ್ಗಲ ಸ್ಕಂಧವಿಲ್ಲದಿರುವುದರಿಂದ ಮಹಾಸ್ಕಂಧವು ಉತ್ಕೃಷ್ಟ ದ್ರವ್ಯಮಾನವಿದೆ. ಪುದ್ಗಲ ಪರಮಾಣುವಿನಿಂದ ಮೇಲಿನ ಮತ್ತು ಮಹಾಸ್ಕಂಧಕ್ಕಿಂತ ಒಂದು ಪುದ್ಗಲ ಪರಮಾಣು ಕಡಿಮೆಯವರೆಗಿನ ಮಧ್ಯದ ಎಲ್ಲ ಭೇದಗಳು ಮಧ್ಯಮ ದ್ರವ್ಯಮಾನವಿವೆ.

ಆಕಾಶದ ಒಂದು ಪ್ರದೇಶರೂಪ ಕ್ಷೇತ್ರವು ಜಘನ್ಯ ಕ್ಷೇತ್ರಮಾನವಿದೆ. ಏಕೆಂದರೆ ಇದಕ್ಕಿಂತ ಚಿಕ್ಕದಾದ

ಯಾವುದೇ ಬೇರೆ ಕ್ಷೇತ್ರವಿಲ್ಲ. ಮೂರುಲೋಕ ಕ್ಷೇತ್ರ ಪ್ರಮಾಣ ಕ್ಷೇತ್ರವು ಲೋಕಾಕಾಶದ ಅಪೇಕ್ಷೆಯಿಂದ ಉತ್ಕೃಷ್ಟ ಕ್ಷೇತ್ರಮಾನವಿದೆ ಮತ್ತು ಅನಂತ ಅಲೋಕಾಕಾಶ ಕ್ಷೇತ್ರವು ಉತ್ಕೃಷ್ಟ ಕ್ಷೇತ್ರಮಾನವಿದೆ; ಏಕೆಂದರೆ ಅಲೋಕಾಕಾಶಕ್ಕಿಂತ ಉತ್ಕೃಷ್ಟ ಕ್ಷೇತ್ರವಿಲ್ಲ. ಒಂದು ಪ್ರದೇಶದ ಮುಂದೆ ಒಂದೊಂದು ಪ್ರದೇಶ ಹೆಚ್ಚುತ್ತ-ಹೆಚ್ಚುತ್ತ ಉತ್ಕೃಷ್ಟ ಕ್ಷೇತ್ರದೊಳಗಿಂದ ಒಂದು ಪ್ರದೇಶ ಕಡಿಮೆಯವರೆಗೆ ಮಧ್ಯಮ ಕ್ಷೇತ್ರಮಾನದ ಭೇದಗಳಿವೆ - ಈ ಪ್ರಕಾರ ಕ್ಷೇತ್ರಮಾನದ ಮೂರು ಭೇದಗಳೆಂದು ತಿಳಿಯುವುದು.

ಒಂದು ಸಮಯಕ್ಕಿಂತ ಚಿಕ್ಕದು ಅನ್ಯಕಾಲಭೇದವಿಲ್ಲದಿರುವುದರಿಂದ ಒಂದು ಸಮಯ ಮಾತ್ರವೇ ಜಘನ್ಯಕಾಲಮಾನವಿದೆ. ಅತೀತ, ಅನಾಗತ, ವರ್ತಮಾನ-ಇವು ಮೂರು ಕಾಲವರ್ತಿ ಸಮಸ್ತ ಸಮಯಗಳ ಪ್ರಮಾಣವು ಉತ್ಕೃಷ್ಟ ಕಾಲಮಾನವಿದೆ. ಎರಡನೆಯ ಸಮಯದಿಂದ ಒಂದೊಂದು ಸಮಯ ಕಾಲವು ಹೆಚ್ಚುತ್ತ-ಹೆಚ್ಚುತ್ತ ಉತ್ಕೃಷ್ಟಕ್ಕಿಂತ ಒಂದು ಸಮಯ ಕಡಿಮೆಯವರೆಗೆ ಮಧ್ಯಮ ಕಾಲಮಾನದ ಭೇದಗಳಿವೆ - ಈ ಪ್ರಕಾರ ಕಾಲಮಾನದ ಮೂರು ಭೇದಗಳಿವೆ.

ಸೂಕ್ಷ್ಮ ನಿಗೋದಿ ಲಬ್ಧ್ಯಪರ್ಯಾಪ್ತಕ ಜೀವವು ಒಂದು ಅಂತರ್ಮುಹೂರ್ತದಲ್ಲಿ ಅರವತ್ತಾರು ಸಾವಿರದಾ ಮೂರುನೂರಾ ಮೂವತ್ತಾರುಬಾರಿ ಜನ್ಮ-ಮರಣ ಮಾಡುತ್ತದೆ. ಅವುಗಳಲ್ಲಿ ನಿಗೋದಿ ಸಂಬಂಧದ ಆರು ಸಾವಿರದ ಹನ್ನೊಂದು ಬಾರಿ ಜನ್ಮ-ಮರಣವಾಗಿ ಹೋದ ಮೇಲೆ ಆರು ಸಾವಿರದಾ ಹನ್ನೆರಡನೇ ಜನ್ಮ ಧಾರಣ ಮಾಡುವ ಪ್ರಥಮ ಸಮಯದಲ್ಲಿ ವಿದ್ಯಮಾನವಿರುವ ಅಕ್ಷರದ ಅನಂತದ ಒಂದು ಭಾಗ ಜ್ಞಾನವು ಜಘನ್ಯ ಜ್ಞಾನವಿದೆ. ಇದನ್ನೇ ಜಘನ್ಯ ಭಾವಮಾನವೆಂದು ತಿಳಿಯುವುದು. ಇದಕ್ಕಿಂತ ಅಲ್ಪಭಾವ ಮಾನ ವಾಗುವುದಿಲ್ಲ ಈ ಜಘನ್ಯ ಭಾವಮಾನದಿಂದ ಜ್ಞಾನದ ಒಂದೊಂದು ಅಂಶವು ಹೆಚ್ಚುತ್ತ-ಹೆಚ್ಚುತ್ತ ಒಂದು ಅಂಶ ಕಡಿಮೆ ಕೇವಲಜ್ಞಾನದವರೆಗೆ ಮಧ್ಯಮಭಾವಮಾನದ ಭೇದಗಳಿವೆ. ಸಮಸ್ತ - ಮೂರು ಲೋಕಗಳನ್ನು ತಿಳಿಯುವಂಥ ಅಂತರ್ಯಾಮಿ, ಸರ್ವಜ್ಞರ ಕೇವಲಜ್ಞಾನವು ಉತ್ಕೃಷ್ಟ ಭಾವಮಾನವಿದೆ - ಇವು ಭಾವಮಾನದ ಮೂರು ಭೇದ ತಿಳಿಯುವುದು.

ಈ ಪ್ರಕಾರ ಸಾಮಾನ್ಯದಿಂದ ಮಾನದ ನಾಲ್ಕು ಭೇದ ತಿಳಿಯುವುದು.

ಲಜ್ಜೆ, ವಿನಯ, ವೈರಾಗ್ಯ ಮತ್ತು ಶುಭಾಚಾರವೆಂದು ಆರ್ಯಿಕೆಯ ನಾಲ್ಕು ಗುಣ ಹೇಳಲಾಗಿದೆ. ಇಲ್ಲಿ ಎಲ್ಲಕ್ಕಿಂತ ಮೊದಲು ಆರ್ಯಿಕೆಯ ವಾಸಯೋಗ್ಯ ಸ್ಥಾನ ಹೇಳುತ್ತಾರೆ - ಆರ್ಯಿಕೆಯರು ವಾಸ ಮಾಡುವ ಸ್ಥಾನವು ನಗರದಿಂದ ಅತಿ ದೂರವೂ ಇರುವುದಿಲ್ಲ ಮತ್ತು ಅಧಿಕ ಸಮೀಪವೂ ಇರುವುದಿಲ್ಲ. ಈ ಪ್ರಕಾರದ ಯಥಾಯೋಗ್ಯ ಯಾವುದೋ ಮಧ್ಯಮ ಸ್ಥಾನದಲ್ಲಿ ಅವರು ಇರುತ್ತಾರೆ. ನಗರದಲ್ಲಿ ಆಹಾರದ ಸಲುವಾಗಿ ಹೋಗುವಾಗ ಅವರು ಏಕಾಕಿಯಾಗಿ ಹೋಗುವುದಿಲ್ಲ. ಯಾರಾದರೂ ಹಿರಿಯ ಆರ್ಯಿಕೆಯ ಜೊತೆಗೆ ಮೌನಪೂರ್ವಕ, ವಿನಯಸಹಿತ, ಅಂಗಗಳನ್ನು ಸಂಕುಚಿತ ಮಾಡುತ್ತ, ದೃಷ್ಟಿಯನ್ನು ಕೆಳಗೆ ಹಾಕಿ ಈರ್ಯಾ ಸಮಿತಿಯೊಂದಿಗೆ ನಗರದೊಳಗೆ ಆಹಾರಕ್ಕೆ ಹೋಗುತ್ತಾರೆ. ಶರೀರವನ್ನು ಮುಚ್ಚಿಕೊಳ್ಳುತ್ತ, ಅಂಗೋಪಾಂಗಗಳನ್ನು ಪ್ರಗಟವಾಗಿ ತೋರಿಸಿಕೊಳ್ಳದೆ, ಒಂದು ವಸ್ತ್ರದಿಂದ ಸಂಪೂರ್ಣ ಶರೀರವನ್ನು ಆಚ್ಛಾದಿತವಾಗಿಟ್ಟುಕೊಂಡು ಲಜ್ಜೆಯೊಂದಿಗೆ ಪ್ರವೃತ್ತಿ ಮಾಡುತ್ತಾರೆ. ಇದು ಅವರ ಲಜ್ಜೆಯೆಂಬ ಹೆಸರಿನ ಗುಣವಿದೆ.

ಆಚಾರ್ಯರ ದರ್ಶನಕ್ಕೆ ಹೋಗುವ ಸಮಯದಲ್ಲಿ ಆರ್ಯಿಕೆಯರು ಐದುಮೊಳ ಅಂತರದಿಂದ ವಿನಯ ಸಹಿತವಾಗಿ ಅವರಿಗೆ ನಮಸ್ಕಾರ ಮಾಡುತ್ತಾರೆ. ಉಪಾಧ್ಯಾಯರ ದರ್ಶನಕ್ಕೆ ಹೋದಾಗ ಆರು ಮೊಳ ದೂರದಿಂದ ನಮಸ್ಕಾರ ಮಾಡುತ್ತಾರೆ. ಸಾಧುಗಳ ದರ್ಶನ ಮಾಡಬೇಕಾದರೆ ಏಳು ಮೊಳ ಅಂತರದಿಂದ ನಮಸ್ಕಾರ ಮಾಡುತ್ತಾರೆ. ಈ ಗುರುಗಳಿಗೆ ನಮಸ್ಕಾರ ಮಾಡುವಾಗ ಅವರು ಪಂಚಾಗ ನಮಸ್ಕಾರ ಮಾಡುತ್ತಾರೆ. ಆರ್ಯಿಕೆಯರು ಒಂದುವೇಳೆ

ಗುರುಗಳಲ್ಲಿ ಏನಾದರೂ ಪ್ರಶ್ನೆ ಕೇಳುವುದಿದ್ದರೆ ಒಬ್ಬರೇ ಹೋಗಿ ಕೇಳುವುದಿಲ್ಲ ಹಿರಿಯ ಆರ್ಯಿಕೆಯರಿಗೆ ತಮ್ಮ ಪ್ರಶ್ನೆಯನ್ನು ಹೇಳಿ 'ಈ ಪ್ರಶ್ನೆಯ ಉತ್ತರವನ್ನು ಗುರುಗಳ ಮುಖದಿಂದ ಆಲಿಸ ಬಯಸುತ್ತೇನೆ'-ಎಂದು ಹೇಳಿ ಹಿರಿಯ ಆರ್ಯಿಕೆಯನ್ನು ಮುಂದಿಟ್ಟುಕೊಂಡು ಅವರಿಂದ ಪ್ರಶ್ನೆ ಮಾಡಿಸುತ್ತಾರೆ. ಇತ್ಯಾದಿ ಪ್ರಕಾರದಿಂದ ದೇವ, ಗುರು, ಧರ್ಮದ ಸಂಬಂಧದಲ್ಲಿ ಬೇರೆಯೂ ಯಥಾಯೋಗ್ಯ ವಿನಯ ಸಹಿತವಾಗಿರುತ್ತಾರೆ. ಇದು ಅವರ ವಿನಯವೆಂಬ ಹೆಸರಿನ ಗುಣವಿದೆ.

ನಿರಂತರ ವೈರಾಗ್ಯವನ್ನು ಹೆಚ್ಚಿಸುವ ಸಲುವಾಗಿ ಅನೇಕ ತಪ ಮಾಡುವುದು, ಯತ್ನಪೂರ್ವಕ ಸಂಯಮ ಧ್ಯಾನಧಾರಣ ಮಾಡುವುದು, ಯಾವಾಗಲೂ ಸಂಸಾರದ ಅನಿತ್ಯತೆಯ ವಿಚಾರ ಮಾಡುವುದು, ಭೋಗಗಳನ್ನು ಭುಜಂಗದ ಸಮಾನ ತಿಳಿಯುವುದು, ಶರೀರವನ್ನು ಸಪ್ತಧಾತುಮಯ ತಿಳಿದು ಅದನ್ನು ಧಾರಣ ಮಾಡುವುದರ ಕುರಿತಾಗಿ ಮನಸ್ಸಿನಲ್ಲಿ ಉದಾಸೀನತೆಯನ್ನಿಟ್ಟುಕೊಳ್ಳುವುದು; ಇತ್ಯಾದಿ ಭಾವಸಹಿತ ವಿರಕ್ತಿಭಾವವಿಟ್ಟುಕೊಳ್ಳುವುದು ವೈರಾಗ್ಯವೆಂಬ ಹೆಸರಿನ ಗುಣವಿದೆ.

ಪರಂಪರೆಯ ಅನುಸಾರ ಜಿನರ ಆಜ್ಞೆಯಲ್ಲಿ ಹೇಳಿರುವ ಆರ್ಯಿಕೆಯ ಆಚಾರದ ಪ್ರವೃತ್ತಿಗೆ ಪ್ರಣಾಮ ಮಾಡಿ, ತದನುಸಾರ ಕ್ರಿಯೆ ಮಾಡುವುದು ಅವರ ಶುಭ ಆಚಾರವೆಂಬ ಹೆಸರಿನ ಗುಣವಿದೆ.

ಇವು ನಾಲ್ಕು ಗುಣಗಳಿಂದ ಸಹಿತರನ್ನು ಸತಿಗಳಲ್ಲಿ ಪರಮ ಶಿರೋಮಣಿ ಧರ್ಮಮೂರ್ತಿ ಆರ್ಯಿಕೆಯೆಂದು ತಿಳಿಯುವುದು.

ಪಾತ್ರದತ್ತಿ, ಸಮದತ್ತಿ, ಕರುಣಾದತ್ತಿ, ಮತ್ತು ಸರ್ವದತ್ತಿಯೆಂದು ದತ್ತಿಯ ನಾಲ್ಕು ಭೇದಗಳಿವೆ. ಮುನಿರಾಜರಿಗೆ ನವಧಾ ಭಕ್ತಿಪೂರ್ವಕ ದಾನ ಕೊಡುವುದು; ಆರ್ಯಿಕೆಯರಿಗೆ ಭಕ್ತಿಪೂರ್ವಕ ಭೋಜನ-ವಸ್ತ್ರಗಳ ದಾನ ಕೊಡುವುದು; ತ್ಯಾಗೀ, ಪ್ರತಿಮಾಧಾರಿಗಳಿಗೆ ಭೋಜನ-ವಸ್ತ್ರ ನೀಡುವುದು; ಸಂಘದಲ್ಲಿ ಮುನಿ-ಶ್ರಾವಕರಿಗೆ ಕಮಂಡಲು-ಪಿಂಛಿ ಕೊಡುವುದು ಇತ್ಯಾದಿ ನಾಲ್ಕು ಪ್ರಕಾರದ ಸಂಘದಲ್ಲಿ ಮಹಾವಿನಯ ಸಹಿತ ಭಕ್ತಿ-ಭಾವಪೂರ್ವಕ ದಾನ ಕೊಡುವುದು ಪಾತ್ರದತ್ತಿ ಇದೆ.

ತಮ್ಮ ಸಮಾನ ಧರ್ಮಶ್ರದ್ಧೆಯ ಧಾರಕ ಗೃಹಸ್ಥರಿಗೆ; ಧರ್ಮಾತ್ಮಾ, ಜ್ಞಾನಿ, ವೈರಾಗ್ಯವಂತ, ಸಂತೋಷಿ ಸಮ್ಯಗ್ದೃಷ್ಟಿ, ಶುದ್ಧದೇವ-ಗುರು-ಧರ್ಮದ ಶ್ರದ್ಧೆಯನ್ನು ತಿಳಿಯುವಂಥ, ಉತ್ತಮ ಶುಭಕರ್ಮಿಗೆ ಯಥಾಯೋಗ್ಯ ಭಕ್ತಿ-ಅನುರಾಗಸಹಿತ ವಿನಯಪೂರ್ವಕ ಭೋಜನ-ವಸ್ತ್ರಾದಿಗಳನ್ನು ಕೊಟ್ಟು ಸ್ಥಿರ-ಮಾಡುವುದು, ಸಾತಾರೂಪ ಮಾಡುವುದು ಸಮದತ್ತಿಯಿದೆ. ಪ್ರಯೋಜನದ ಅನುಸಾರ ಇವರಿಗೆ ದಾನ ಕೊಡುವುದು ಮತ್ತು ಇವರಿಂದ ಸ್ವಯಂ ತಗೆದುಕೊಳ್ಳುವುದು. ಈ ಪ್ರಕಾರ ಕೊಡ-ಕೊಳ್ಳುವುದು ಸಮದತ್ತಿಯಿದೆ.

ದೀನ, ದರಿದ್ರ, ಬಾಲಕ, ವೃದ್ಧ, ಅಶಕ್ತ, ರೋಗಿ, ಕುರುಡ, ಹಸಿದಂಥವ, ಅಸಹಾಯ - ಇತ್ಯಾದಿಕರನ್ನು ಕಂಡು ಅನುಕಂಪೆಯೊಂದಿಗೆ ದಯಾಭಾವ ಸಹಿತವಾಗಿ ದಾನಕೊಡುವುದು, ಕರುಣಾದತ್ತಿಯಿದೆ.

ಸಮಸ್ತ ಆರಂಭ ಪರಿಗ್ರಹಗಳ ತ್ಯಾಗ ಮಾಡಿ ಮುನೀಶ್ವರರ ಪದ ಧಾರಣ ಮಾಡುವುದು ಸರ್ವದತ್ತಿಯಿದೆ. ಇನ್ನು ಕೊಡುವ ಸಲುವಾಗಿ ಏನೂ ಉಳಿದಿಲ್ಲ. ಯಾವುದನ್ನು ಕೊಡಬೇಕಾಗಿತ್ತು ಅದೆಲ್ಲವನ್ನು ಕೊಟ್ಟು ಬಿಡಲಾಗಿದೆ. ಸಮಸ್ತ ಸಂಸಾರದಲ್ಲಿ ವಿದ್ಯಮಾನ ತ್ರಸ-ಸ್ಥಾವರ ಜೀವಗಳ ಕುರಿತಾಗಿ ಸಮತೆಯ ಭಾವ ಧಾರಣ ಮಾಡಿ, ಎಲ್ಲರಿಗೂ ಅಭಯದಾನ ಕೊಡುವುದನ್ನು ಸರ್ವದತ್ತಿಯೆಂದು ತಿಳಿಯುವುದು.

ಕುಲಂಕರರಿಂದ ಹಿಡಿದು ಭರತ ಚಕ್ರವರ್ತಿಯವರೆಗಿನ ಜೀವನದಲ್ಲಿ ಅಪರಾಧವಾದ ಮೇಲೆ ದೊರೆಯುವಂಥ ದಂಡನೆಯ ಭೇದ ಹೇಳುತ್ತಾರೆ. ತೃತೀಯ ಕಾಲವು ಕಳೆದು ಹೋಗುವಲ್ಲಿ ಪಲ್ಯದ ಎಂಟನೆಯ ಒಂದು ಭಾಗವು

ಶೇಷ ಉಳಿದಿರುವಾಗ ಜ್ಞಾನದಲ್ಲಿ ಸಾಮಾನ್ಯ ವಿಶೇಷದ ಭೇದವಾಯಿತು. ಕೆಲವು ಜೀವಗಳು ವಿಶೇಷ ಜ್ಞಾನಿ, ಕೆಲವು ಜೀವಗಳು ಸಾಮಾನ್ಯ ಜ್ಞಾನಿಯಾಗುವುದರಿಂದ ಕುಲಂಕರರಾದರು. ಅನ್ಯ ಜೀವಗಳಲ್ಲಿ ಜ್ಞಾನವು ಅಲ್ಪ ಮತ್ತು ಕುಲಂಕರರಲ್ಲಿ ವಿಶೇಷ ಜ್ಞಾನವಾಯಿತು.

ಮೊದಲನೆಯ ಕುಲಂಕರನಿಂದ ಹಿಡಿದು ಐದನೆಯ ಕುಲಂಕರನವರೆಗೆ ಜೀವಗಳಲ್ಲಿ ಯಾವುದಾದರೂ ಅಪರಾಧವಾಗಿ ಹೋದರೆ ಅವರಿಗೆ 'ಹಾ' ಎಂಬ ದಂಡವಿರುತ್ತಿತ್ತು. ಅದರ ಅರ್ಥವು ಅಯ್ಯಯ್ಯೋ ! ಎಂಬುದಾಗಿದೆ.

ಆರನೆಯ ಕುಲಂಕರನಿಂದ ಹತ್ತನೆಯ ಕುಲಂಕರನವರೆಗೆ 'ಹಾಮಾ' ಎಂಬ ದಂಡವಾಗಿರುತ್ತಿತ್ತು. ಅದರ ಅರ್ಥವು ಅಯ್ಯಯ್ಯೋ ಇಂಥ ಕಾರ್ಯ ಮಾಡಬೇಡ ! ಎಂಬುದಾಗಿದೆ.

ಋಷಭದೇವನವರೆಗೆ ಐವರು ಕುಲಂಕರರ ಸಮಯ ''ಹಾ, ಮಾ ಧಿಕ್'' ಎಂಬ ದಂಡನೆಯಾಗುತ್ತಿತ್ತು. ಅದರ ಅರ್ಥವು - ''ಅಯ್ಯಯ್ಯೋ ! ಇಂಥ ಕಾರ್ಯ ಮಾಡಬೇಡ; ಮಾಡಿದರೆ ನಿನಗೆ ಧಿಕ್ಕಾರವಿದೆ'' - ಎಂಬುದಾಗಿದೆ.

ಇದರ ನಂತರ ಕಾಲದೋಷದಿಂದ ಜೀವಗಳ ಕಷಾಯಗಳು ಹೆಚ್ಚಾಗ ತೊಡಗಿದವು; ಅದರಿಂದ ರಾಜದಂಡನೆಯು ದೀರ್ಘವಾಯಿತು. ಭರತ ಚಕ್ರವರ್ತಿಯ ಸಮಯದಲ್ಲಿ ಅಪರಾಧ ಮಾಡುವಂಥ ಜೀವಗಳು ವಕ್ರ, ಕಷಾಯಿಯಾಗುವ ಕಾರಣ ದೊಡ್ಡ ದೊಡ್ಡ ಅಪರಾಧ ಮಾಡತೊಡಗಿದರು; ಸಾಮಾನ್ಯ ದಂಡನೆಯ ಉಲ್ಲಂಘನೆ ಮಾಡತೊಡಗಿದರು; ಆಗ ಛೇದನೆ-ಭೇದನೆ, ವಧೆ-ಬಂಧನ ಮೊದಲಾದ ರೂಪ ದಂಡನೆ ನೀಡಲಾರಂಭಿಸಿದರು.

ಈ ಪ್ರಕಾರ ಜೀವರುಗಳ ಕಷಾಯದ ಅನುಸಾರ ದಂಡನೆಯ ವಿಧಾನವು ನಡೆಯುತ್ತಿರುವುದರಿಂದ ದಂಡನೆಯ ನಾಲ್ಕು ಭೇದ ಹೇಳಲಾಗಿದೆ. ಈಗಂತೂ ದೀರ್ಘ ಅಪರಾಧದಿಂದ ದೀರ್ಘ ದಂಡನೆ, ಅಲ್ಪ ಅಪರಾಧದಿಂದ ಅಲ್ಪ ದಂಡನೆಯಾಗುತ್ತಿರುವುದು ಕಂಡು ಬರುತ್ತದೆ ಮತ್ತು ನಿರಪರಾಧಿ ಗುಣಸಹಿತ ಜೀವರುಗಳ ಪೂಜೆಯಾಗುತ್ತಿರುವುದು ಕಂಡು ಬರುತ್ತದೆ. ಇದನ್ನು ತಿಳಿದು ವಿವೇಕವಂತರು ಅಪರಾಧ ಭಾವವನ್ನು ಬಿಟ್ಟುಕೊಟ್ಟು ಗುಣರೂಪ ಪ್ರವರ್ತನೆ ಮಾಡುವುದು ಯೋಗ್ಯವಿದೆ.

ಈ ಪ್ರಕಾರ ಶ್ರೀ ಸುದೃಷ್ಟಿ ತರಂಗಿಣಿಯೆಂಬ ಹೆಸರಿನ ಗ್ರಂಥದಲ್ಲಿ ದಶಕರಣಾದಿ ಭೇದಗಳ ವರ್ಣನೆ ಮಾಡುವಂಥ ಇಪ್ಪತ್ತೆಂಟನೆಯ ಪರ್ವವು ಸಮಾಪ್ತವಾಯಿತು.

★★★★★

■ ದರ್ಶನ-ಜ್ಞಾನ-ಚಾರಿತ್ರ-ತಪ ಮತ್ತು ವೀರ್ಯ ಇವು ಐದು ಆಚಾರಗಳ ವಿಕಲ್ಪಗಳನ್ನು ತ್ಯಾಗ ಮಾಡಿ ಆತ್ಮನ ಏಕರೂಪ ಪಾರಿಣಾಮಿಕ ಭಾವದ ಲಕ್ಷ್ಯದಿಂದ ಏಕಾಗ್ರವಾಗುವುದು ಅದು ಮೋಕ್ಷದ ಕಾರಣವಿದೆ. ನಾನು ಮೋಕ್ಷದ ಪ್ರಾಪ್ತಿ ಮಾಡಿಕೊಳ್ಳುವೆನೆಂಬ ವಿಕಲ್ಪವು ಕೂಡ ಬಂದರೆ ಅದು ಲೋಭದ ಪ್ರಪಂಚವಿದೆ. ಮುನಿವರರು ಅದರ ತ್ಯಾಗ ಮಾಡಿ ಆತ್ಮನಲ್ಲಿ ಲೀನತೆ ಮಾಡುತ್ತಾರೆ; ಪಾರಿಣಾಮಿಕ ಭಾವವು ಅದು ಆತ್ಮನ ತ್ರಿಕಾಲ ನಿರ್ಮಲ ಏಕರೂಪ ಸ್ವಭಾವವಿದೆ, ಅದರ ಭಾವನೆಯಿಂದಲೇ ಮೋಕ್ಷವಾಗುತ್ತದೆ. ಇದನ್ನು ಹೊರತುಪಡಿಸಿ ಬೇರೆ ಯಾವ ಭಾವನೆಯಿಂದ ಮೋಕ್ಷದ ಪ್ರಾಪ್ತಿಯಾಗುವುದಿಲ್ಲ.

## ೨೯ : ಇಪ್ಪತ್ತೊಂಭತ್ತನೆಯ ಪರ್ವ
## ಪ್ರಶ್ನಮಾಲೆ ಕರ್ಮವಿಪಾಕ

ಯಾವ-ಯಾವ ಭಾವಗಳಿಂದ ಜೀವನು ಕರ್ಮದ ಆಸ್ರವ ಮಾಡಿಕೊಳ್ಳುತ್ತಾನೆ, ಆ ಆಸ್ರವದ ಇಪ್ಪತ್ತೈದು ಕ್ರಿಯೆಗಳ ವರ್ಣನೆಯನ್ನು ಈಗ ಮಾಡುತ್ತಾರೆ,-

**೧. ಸಮ್ಯಕ್ತ್ವದ ಕ್ರಿಯೆ -** ಹದಿನೆಂಟು ದೋಷರಹಿತ ಶುದ್ಧ ದೇವರ ಪೂಜೆ, ಶುದ್ಧ ಗುರುಗಳ ಪೂಜೆ, ಶುದ್ಧ ಧರ್ಮದ ಪೂಜೆ, ಜಿನಬಿಂಬದ ಪೂಜೆ, ಸಿದ್ಧಕ್ಷೇತ್ರದ ಪೂಜೆ, ಧರ್ಮಾತ್ಮಾ ಪುರುಷರ ಗುಣಗಳಲ್ಲಿ ಅನುರಾಗ ಭಾವ, ವಾತ್ಸಲ್ಯಭಾವ; ದೀನ, ದುಃಖಿ, ರೋಗಿ, ದರಿದ್ರ ಇತ್ಯಾದಿ ಕ್ಲೇಶವಂತ ಜೀವಗಳನ್ನು ನೋಡಿ ದಯೆಯ ಭಾವ ಮಾಡುವುದು, ಸಮತೆಯ ಭಾವವನ್ನು ಹೆಚ್ಚಿಸಿಕೊಳ್ಳುವುದು - ಇತ್ಯಾದಿ ಸಮಭಾವಸಹಿತ ಜೀವಗಳು ಶುಭಕರ್ಮದ ಆಸ್ರವ ಮಾಡಿಕೊಳ್ಳುತ್ತಾರೆ. ಇವುಗಳ ಹೆಸರು ಸಮ್ಯಕ್ತ್ವ ಕ್ರಿಯೆಯಿದೆ. ಇದು ಶುಭ ಆಸ್ರವವಿದೆ.

**೨. ಮಿಥ್ಯಾತ್ವ ಪ್ರವರ್ಧಿನಿ ಕ್ರಿಯೆ -** ಕುದೇವನ ಪೂಜೆ, ಕುಗುರುವಿನ ಪೂಜೆ, ಕುತೀರ್ಥದ ಪೂಜೆ, ಹಿಂಸೆಯಿಂದ ಕೂಡಿದ ಕುತಪ ಮಾಡುವ ಭಾವನೆ, ಅನ್ಯರ ಹಿಂಸಾಮಯ ತಪದ ಪ್ರಶಂಸೆ, ಕುದಾನದ ಅಭಿಲಾಷೆ, ಕುವ್ರತಗಳಲ್ಲಿ ಕಾಯದ ಪ್ರವೃತ್ತಿ, ಎಲ್ಲರ ಕುರಿತಾಗಿ ವಿನಯ; ಸುದೇವ-ಸುಗುರು, ಕುದೇವ- ಕುಗುರುಗಳನ್ನು ಸಮಾನ ತಿಳಿಯುವುದು ಇತ್ಯಾದಿ ಭಾವಗಳಿಂದ ಅಶುಭ ಕರ್ಮದ ಆಸ್ರವವಾಗುತ್ತದೆ. ಇವುಗಳ ಹೆಸರು ಮಿಥ್ಯಾತ್ವ ಪ್ರವರ್ಧಿನಿ ಕ್ರಿಯೆಯಿದೆ. ಇವು ಅಶುಭ ಕರ್ಮವನ್ನು ಉತ್ಪನ್ನಮಾಡುತ್ತವೆ.

**೩. ಅಸಂಯಮ ಪ್ರವರ್ಧಿನಿ ಕ್ರಿಯೆ -** ಮನಸ್ಸಿನಲ್ಲಿ ಧನ-ಧಾನ್ಯದ ಇಚ್ಛೆಯರೂಪ ಅನೇಕ ವಿಕಲ್ಪಗಳನ್ನು ಮಾಡುವುದು. ಭೋಗೋಪಭೋಗಗಳಲ್ಲಿ ಅಭಿಲಾಷೆಯನ್ನಿಟ್ಟುಕೊಳ್ಳುವುದು. ಇಂದ್ರಿಯಗಳನ್ನು ಪುಷ್ಟ ಮಾಡುವ ವಾಂಛೆ ಇತ್ಯಾದಿ ಅಸಂಯಮದ ವಿಕಲ್ಪರೂಪ ಮನಸ್ಸಿನ ವೇಗವು ಮನ ಅಸಂಯಮವಿದೆ.

ಐದೂ ಇಂದ್ರಿಯಗಳು ತಮ್ಮ ತಮ್ಮ ವಿಷಯಗಳನ್ನು ಬಯಸುವುದು. ಸ್ಪರ್ಶನ ಇಂದ್ರಿಯವು ತನ್ನ ಇಷ್ಟ ವಿಷಯಗಳಲ್ಲಿ ಲುಬ್ಧವಿರುವುದು, ರಸನೇಂದ್ರಿಯವು ಷಟ್ ರಸದ ಭೋಗದಲ್ಲಿ ಲುಬ್ಧವಿರುವುದು, ಘ್ರಾಣೇಂದ್ರಿಯವು ಸುಗಂಧವನ್ನು ಬಯಸುವುದು, ನೇತ್ರೇಂದ್ರಿಯವು ಪಂಚ ವರ್ಣಗಳಲ್ಲಿ ಲುಬ್ಧವಿರುವುದು ಮತ್ತು ಶ್ರೋತ್ರೇಂದ್ರಿಯವು ಸುಸ್ವರ ಶಬ್ದ ವಾದ್ಯಗಳಲ್ಲಿ ಲುಬ್ಧವಿರುವುದು - ಇತ್ಯಾದಿರೂಪ ಇಂದ್ರಿಯ ಅಸಂಯಮವಿದೆ.

ಈ ಮನಸ್ಸು ಮತ್ತು ಇಂದ್ರಿಯಗಳು ಆತ್ಮನ ವಶದಲ್ಲಿ ಇಲ್ಲದಿರುವುದು ಹಾಗೂ ತ್ರಸ-ಸ್ಥಾವರರೂಪ ಷಟ್ಕಾಯಗಳ ದಯೆ ಪಾಲಿಸದಿರುವುದು - ಇವು ಹನ್ನೆರಡು ಅಸಂಯಮರೂಪ ಭಾವಗಳ ವಿಕಲ್ಪದಿಂದ ಜೀವನು ಅಶುಭ ಕರ್ಮದ ಆಸ್ರವ ಮಾಡಿಕೊಳ್ಳುತ್ತಾನೆ - ಇದರ ಹೆಸರು ಅಸಂಯಮ ಪ್ರವರ್ಧಿನಿ ಕ್ರಿಯೆಯಿದೆ.

**೪. ಪ್ರಮಾದಿನಿ ಕ್ರಿಯೆ -** ಯಾವನೋ ಜೀವನು ಮೊದಲಂತೂ ಸ್ವಯಂ ತಪದ ಫಲಗಳ ವಾಂಛಕನಾಗಿ ಸಂಯಮ ವ್ರತದ ಪ್ರತಿಜ್ಞೆಯನ್ನು ಧಾರಣ ಮಾಡಿ ತಪಸ್ವಿಯೆಂಬ ಹೆಸರು ಪಡೆಯುತ್ತಾನೆ; ಆದರೆ ನಂತರ ಸಮಯ ಪಡೆದು ತಪಸ್ಸಿನ ಕಷ್ಟದಿಂದ ಭಯಭೀತನಾಗಿ, ಜಲದ ಇಚ್ಛೆ-ಆಹಾರದ ಇಚ್ಛೆ-ಸ್ತ್ರೀಯ ಇಚ್ಛೆ ಮಾಡುತ್ತ, ಶೀತ-ಉಷ್ಣಗಳನ್ನು ಸಹಿಸುವಲ್ಲಿ ಅಸಮರ್ಥನಾಗುತ್ತಾನೆ ಹಾಗೂ ಇತರ ಅಸಂಯಮಿ ಜೀವಗಳು ತಿನ್ನುತ್ತಿರುವ ಕುಡಿಯುತ್ತಿರುವ, ಸ್ತ್ರೀಸಂಗ ಮಾಡುತ್ತಿರುವ, ಶೀತ-ಉಷ್ಣಗಳಲ್ಲಿ ಶರೀರದ ಕುರಿತಾಗಿ ವಿಧ-ವಿಧದ ಪ್ರಯತ್ನ ಮಾಡಿ ಸುಖಿಯಾಗುತ್ತಿರುವುದನ್ನು ನೋಡಿ 'ನಾನಂತೂ ಸಂಯಮದಿಂದ ದುಃಖಿಯಾಗುತ್ತಿದ್ದೇನೆ ಮತ್ತು ಈ ಅಸಂಯಮಿಗಳು ಚೆನ್ನಾಗಿ ತಿಂದುಂಡು ಸುಖಿಯಿದ್ದಾರೆ'- ಎಂದು ವಿಚಾರ ಮಾಡುವ ಭಾವಪೂರ್ವಕ ಸ್ವಯಂ ಸಂಯಮಿಯಾಗಿದ್ದರೂ ನಂತರದಲ್ಲಿ ಪ್ರಮಾದ ಯೋಗದಿಂದ ಪಾಪೋದಯದ ಕಾರಣ, ಅಸಂಯಮವನ್ನು ಒಳ್ಳೆಯದೆಂದು ತಿಳಿದುಕೊಂಡು

ಸಂಯಮದಿಂದ ವಿಚಲಿತನಾಗಲಿಚ್ಛಿಸುತ್ತಾನೆ; ಇದು ಪ್ರಮಾದಿನಿಯೆಂಬ ಹೆಸರಿನ ಕ್ರಿಯೆಯಿದೆ. ಇಂಥ ಭಾವಗಳಿಂದ ಅಶುಭ ಕರ್ಮದ ಆಸ್ರವವಾಗುತ್ತದೆ.

೫. **ಈರ್ಯಾಪಥ ಕ್ರಿಯೆ** - ಇದರ ಮೂಲಕ ಎರಡು ಪ್ರಕಾರದ ಆಸ್ರವವಾಗುತ್ತದೆ. ಅಂತರಂಗದಲ್ಲಿ ಸಮಸ್ತ ಜೀವಗಳ ಮೇಲೆ ದಯೆಯ ಭಾವವಿಟ್ಟುಕೊಂಡು, ಗಮನ ಮಾಡುವ ಸಮಯದಲ್ಲಿ ಕೆಳಗೆ ನೋಡುತ್ತ ಮಂದಗತಿಯಿಂದ ನಡೆಯುವಂಥವರು, ಮಾರ್ಗದಲ್ಲಿ ದೃಷ್ಟಿಗೋಚರವಾಗುವಂಥ ಚಿಕ್ಕ-ದೊಡ್ಡ ಜೀವಗಳನ್ನು ತಪ್ಪಿಸುತ್ತ ದಯೆಯ ಭಾವದೊಂದಿಗೆ ಯತ್ನಪೂರ್ವಕ ಭೂಮಿಯ ಶೋಧನೆ ಮಾಡುತ್ತ ಗಮನ ಮಾಡುವಂಥ ಜೀವನಿಗೇನೆ ಪುಣ್ಯದ ಆಸ್ರವವಾಗುತ್ತದೆ. ಗಮನ ಮಾಡುವ ಸಮಯದಲ್ಲಿ ಈರ್ಯೆಯನ್ನು ಬಿಟ್ಟುಕೊಟ್ಟು ಪ್ರಮಾದದಿಂದ ಆತುರ-ಆತುರವಾಗಿ ನಡೆಯುವಂಥವರು; ಮಾರ್ಗದಲ್ಲಿ ತಮ್ಮ ಸಮಾನವೇ ಇರುವ ಅನೇಕ ಚಿಕ್ಕ ಚಿಕ್ಕ ಕಾಯಧಾರಿ ಇರುವೆ-ಕ್ರಿಮಿ-ಪಕ್ಕದ(ರೆಕ್ಕೆ) ಇರುವೆ ಮೊದಲಾದ ಆತ್ಮಗಳ ರಕ್ಷಣೆಯಿಂದ ರಹಿತ, ಪ್ರಮಾದಪೂರ್ವಕ ಗಮನಮಾಡುವಂಥ ಆತ್ಮನಿಗೆ ಅಶುಭಕರ್ಮದ ಆಸ್ರವವಾಗುತ್ತದೆ. ಇದರ ಹೆಸರು ಈರ್ಯಾಪಥ ಕ್ರಿಯೆಯಿದೆ.

೬. **ಪ್ರಾದೋಷಿಕಿ ಕ್ರಿಯೆ** - ಈ ಜೀವನು ಯಾವಾಗ ಧರ್ಮಭಾವದ ತ್ಯಾಗ ಮಾಡಿ ಕ್ರೋಧದ ವಶೀಭೂತನಾಗುತ್ತಾನೆ ಆಗ ಅನೇಕ ಪಾಪ ಮಾಡುತ್ತಾನೆ. ಕ್ರೋಧದ ಉದಯವಾದ ಮೇಲೆ ಜೀವಘಾತ ಮಾಡುತ್ತಾನೆ, ದಯೆಯ ತ್ಯಾಗ ಮಾಡುತ್ತಾನೆ ಕ್ರೋಧೀ ಜೀವನು ದೇವ, ಗುರು, ಮಾತೆ ಮೊದಲಾದ ಗುರುಜನರ ಅವಿನಯ ಮಾಡುತ್ತಾನೆ. ಶಸ್ತ್ರದಿಂದ ತನ್ನ ಶರೀರದ ಘಾತ ಮಾಡಿಕೊಳ್ಳುತ್ತಾನೆ. ಕ್ರೋಧಿಯು ಅಗ್ನಿಯಿಂದ ಮನೆ, ವನ, ನಗರಗಳನ್ನು ಸುಟ್ಟು ಬಿಡುತ್ತಾನೆ. ಕ್ರೋಧಿ ಮನುಷ್ಯನು ಪತ್ನಿ, ಪುತ್ರ, ಸೋದರ ಮೊದಲಾದವರ ಘಾತ ಮಾಡುತ್ತಾನೆ - ಇತ್ಯಾದಿ ಪಾಪಗಳನ್ನು ಕ್ರೋಧ ಭಾವದಿಂದ ಮಾಡುತ್ತಾನೆ. ಅಂತೆಯೇ ಆ ಕ್ರೋಧಿಯೂ ಅಶುಭ ಕರ್ಮಗಳ ಆಸ್ರವ ಮಾಡಿಕೊಳ್ಳುತ್ತಾನೆ. ಇದರ ಹೆಸರು ಪ್ರಾದೋಷಿಕಿ ಕ್ರಿಯೆಯಿದೆ.

೭. **ಕಾಯಿಕಕ್ರಿಯೆ** - ಈ ಶರೀರವನ್ನು ಪಡೆದು ಯಾರು ಕಳವು ಮಾಡಿದ್ದಾರೆ, ಜೀವಘಾತ ಮಾಡಿದ್ದಾರೆ, ಪರಸ್ತ್ರೀ ಸೇವನೆ ಮಾಡಿದ್ದಾರೆ, ಮದ್ಯ-ಮಾಂಸಗಳ ಸೇವನೆ ಮಾಡಿದ್ದಾರೆ; ತಮ್ಮ ಕುಲವನ್ನು ಕಲಂಕಿತಗೊಳಿಸಿದ್ದಾರೆ, ತಮ್ಮ ಧರ್ಮವನ್ನು ನಿಂದ್ಯಗೊಳಿಸಿದ್ದಾರೆ, ಆಹಾರ-ಪಾನೀಯಗಳ ನಿಂದ್ಯರೂಪ ಕ್ರಿಯೆ ಮಾಡಿದ್ದಾರೆ, ಜೂಜು ಆಡಿದ್ದಾರೆ, ಯುದ್ಧ ಮಾಡಿದ್ದಾರೆ, ಅನ್ಯಜೀವಗಳನ್ನು ಭಯಭೀತಗೊಳಿಸಿದ್ದಾರೆ - ಇತ್ಯಾದಿಯಾಗಿ ಈ ಶರೀರದಿಂದ ಬಹಳಷ್ಟು ಅಪರಾಧ ಮಾಡಿದ್ದಾರೆ. ಅದರ ಫಲಸ್ವರೂಪವಾಗಿ ಶರೀರದ ಮೂಗು ಕತ್ತರಿಸಲಾಯಿತು, ಕಾಲು ಕತ್ತರಿಸಲಾಯಿತು - ಹೀಗೆ ಅಂಗೋಪಾಂಗಗಳ ಛೇದನಸಹಿತ ಉಳಿದರು; ಆದಾಗ್ಯೂ ಪರಘಾತದ ಉದ್ಯಮವನ್ನಂತೂ ಮಾಡುತ್ತಲೇ ಇರುತ್ತಾರೆ - ಈ ಪ್ರಕಾರ ಬಹಳಷ್ಟು ಪಾಪ, ಅಕಾರ್ಯ ಮಾಡಿ, ಭಾವ ಕೆಡಿಸಿಕೊಂಡು ಅಶುಭ ಕರ್ಮದ ಆಸ್ರವ ಮಾಡಿಕೊಂಡಿದ್ದಾರೆ. ಶರೀರವನ್ನು ಧಾರಣ ಮಾಡಿ ಎಂದೂ ಶುಭ ಕರ್ಮವನ್ನಂತೂ ಮಾಡಲಿಲ್ಲ, ಕೇವಲ ಅಪರಾಧಗಳನ್ನೇ ಮಾಡುವುದು ಅದು ಕಾಯಿಕಕ್ರಿಯೆಯಿದೆ.

೮. **ಅಧಿಕರಣಿಕ್ರಿಯೆ** - ಹಿಂಸೆಯ ಉಪಕರಣಗಳು ಅತ್ಯಧಿಕ ಪ್ರಿಯವೆನಿಸುವುದು; ಖಡ್ಗ, ಬಾಣ, ತೋಪು, ತುಪಾಕಿ, ಭಲ್ಲೆ, ಚೂರಿ, ಕಿರುಗತ್ತಿ ಇತ್ಯಾದಿಗಳು ಹಿಂಸೆಯ ಅಚೇತನ ಉಪಕರಣಗಳಿವೆ, ಇವುಗಳ ಕುರಿತಾಗಿ ಅತ್ಯಧಿಕ ಅನುರಾಗವಿಟ್ಟುಕೊಳ್ಳುವುದು. ಅವುಗಳನ್ನು ಅಲಂಕರಿಸುವ ಸಲುವಾಗಿ ವಿವಿಧ ದ್ರವ್ಯ ಆಭೂಷಣಗಳನ್ನು ಮಾಡಿಸುವುದು, ತೊಡಗಿಸುವುದು. ಚಿರತೆ, ನಾಯಿ, ಸಿಂಹ, ಸೂಕರ, ಮಾರ್ಜಾಲ, ಸೇಡು ತೀರಿಸಿಕೊಳ್ಳುವಂಥವರು, ಮನೆ ಮುರುಕರು, ಮೋಸಗಾರ, ಗಲ್ಲಿಗೇರಿಸುವಂಥವರು - ಇತ್ಯಾದಿ ಚೇತನ ಉಪಕರಣಗಳು ಪ್ರಿಯವೆನಿಸುವುದು; ಅಂಥವರಿಗೆ ಒಳ್ಳೆಯ ಭೋಜನ ಕೊಡುವುದು, ಬೆಲೆ ಬಾಳುವ ವಸ್ತ್ರ ಕೊಡುವುದು - ಇವೆಲ್ಲವೂ ಹಿಂಸೆ ಪಾಪದಲ್ಲಿ

ಸಹಾಯಕವಾಗುವ ಚೇತನ-ಅಚೇತನರೂಪ ಉಪಕರಣಗಳನ್ನು ನೋಡಿ ಹರ್ಷಿತರಾಗುವುದು, ಅಶುಭ ಆಸ್ರವ ಪಡೆಯುವಂಥ ಭಾವಗಳೆಂದು ತಿಳಿಯುವುದು. ಇದರ ಹೆಸರು ಅಘಕಾರಿಣೀ ಕ್ರಿಯೆಯಿದೆ.

**೯. ಪರಿತಾಪಿನೀ ಕ್ರಿಯೆ –** ತನ್ನ ಇಚ್ಛೆಯಪೂರ್ವಕ, ಚನ್ನಾಗಿ ತಿಳಿದು-ವಿಚಾರ ಮಾಡಿ ಅನ್ಯಜೀವಗಳಿಗೆ ಪೀಡೆ ತಗಲಿಸುವಂಥ ಕ್ರಿಯೆ ಮಾಡುವುದು. ಹೇಗೆಂದರೆ ಮನೋರಂಜನೆಯ ಸಲುವಾಗಿ ಆನೆಗಳ ಯುದ್ಧ ಮಾಡಿಸುವುದು, ಟಗರುಗಳನ್ನು ಕಾದಾಡಿಸುವುದು; ಕ್ರೂರ ಜೀವಗಳಾದ ಸಿಂಹ-ಸೂಕರಗಳ ಯುದ್ಧ ಕ್ರಿಯೆ, ಸರ್ಪ-ಮುಂಗುಸಿಗಳ ಯುದ್ಧಕ್ರಿಯೆ, ಕುದುರೆ ಯುದ್ಧ, ಕೋಣಗಳ ಯುದ್ಧ, ಒಂಟೆಗಳ ಯುದ್ಧ, ನರಯುದ್ಧದ ಕ್ರಿಯೆಗಳನ್ನು ಇತರರಿಂದ ಮಾಡಿಸುವುದು, ಅವುಗಳಿಂದ ಯಾರದೋ ತಲೆಗೆ ಬಲವಾದ ಪೆಟ್ಟಾಗುತ್ತದೆ, ಯಾರದೋ ಕಾಲು ಮುರಿಯುತ್ತದೆ ಇತ್ಯಾದಿ ರೂಪದಲ್ಲಿ ಅನ್ಯ ಜೀವಗಳನ್ನು ಒತ್ತಾಯಪೂರ್ವಕ ದುಃಖಿಯನ್ನಾಗಿಸಿ ಸ್ವಯಂ ಹರುಷಿತನಾಗುವುದು; ಇದು ಅಶುಭ ಆಸ್ರವ ಮಾಡುವಂಥ ಪರಿತಾಪಿನಿಯೆಂಬ ಹೆಸರಿನ ಕ್ರಿಯೆಯಿದೆ.

ತಮ್ಮ ಮನೋರಂಜನೆ, ಹರ್ಷದ ಸಲುವಾಗಿ ನದಿ, ವಾಪಿ, ಬಾವಿ, ಸರೋವರಗಳಲ್ಲಿ ಜಿಗಿದು ಅನೇಕ ದೀನ ಜಲಚರ ಜೀವಗಳ ಘಾತ ಮಾಡುವುದು, ಅವುಗಳನ್ನು ದುಃಖಿ ಮಾಡುವುದು ತಿಳಿದು-ವಿಚಾರ ಮಾಡಿ ಯಾರಿಗೊ ಕಾಲಿನಿಂದ ಒದೆಯುವುದು, ಗುದ್ದುವುದು, ಕೋಲಿನಿಂದ ಹೊಡೆಯುವುದು, ಸಲಾಕೆಯಿಂದ ತಿವಿಯುವುದು ದುಃಖಿಯನ್ನಾಗಿ ಮಾಡುವುದು ಇತ್ಯಾದಿ ಕ್ರಿಯೆಗಳು ಅಶುಭ ಕರ್ಮದ ಆಸ್ರವ ಮಾಡುವಂಥ ಪರಿತಾಪಿನಿ ಕ್ರಿಯೆಯಿದೆ.

**೧೦. ಪ್ರಾಣಾತಿಪಾತಿಕ್ರಿಯೆ –** ತನ್ನ ದೇಹದಿಂದ ಬೇರೆ ಜೀವಗಳ ದೇಹದ ನಾಶ ಮಾಡುವುದು ಎಂದರೆ ಬೇಟೆ ಮಾಡುವ ಕ್ರಿಯೆ, ದಯೆಯಿಲ್ಲದೆ ಅನ್ಯ ಜೀವಗಳ ಘಾತ ಮಾಡುವಂಥ ಚಾಂಡಾಲಾದಿಕರ ಕ್ರಿಯೆ, ತಮ್ಮ ಕೈಯಿಂದ ಅನ್ಯ ಜೀವಗಳ ಘಾತ ಮಾಡುವಂಥ ಕಳ್ಳರು ಮತ್ತು ಗಲ್ಲಿಗೇರಿಸುವ ಕ್ರಿಯೆ – ಇತ್ಯಾದಿ ಅನ್ಯ ಜೀವಗಳ ಘಾತ ಮಾಡುವಂಥ ಕ್ರಿಯೆಗಳೆಲ್ಲವೂ ಪಾಪದ ಆಸ್ರವ ಮಾಡುವಂಥ ಪ್ರಾಣಾತಿಪಾತಿ ಕ್ರಿಯೆಗಳಿವೆ.

**೧೧. ದರ್ಶನ ಕ್ರಿಯೆ –** ಅನ್ಯರ ಒಳ್ಳೆಯ ರೂಪ ನೋಡುವ ಇಚ್ಛೆ, ಯಾರೋ ಸ್ತ್ರೀ-ಪುರುಷರ ಒಳ್ಳೆಯ ರೂಪವನ್ನು ಆಲಿಸಿ ಅದನ್ನು ನೋಡುವ ಅಭಿಲಾಷೆಯ ರೂಪ ಕ್ರಿಯೆ, ಪುರುಷನಿಗೆ ಅನೇಕ ಪ್ರಕಾರದ ವಸ್ತ್ರಾಭೂಷಣಗಳನ್ನು ತೊಡಿಸಿ ಸ್ತ್ರೀಯ ರೂಪದ ಆಕಾರ ಮಾಡಿ ನೋಡುವ ಪರಿಣಾಮ; ಯಾವನೋ ದೇವ, ದೇವಿ, ಮನುಷ್ಯಿನಿ (ಮನುಷ್ಯಸ್ತ್ರೀ)ಯ ರೂಪದ ವರ್ಣನೆಯನ್ನಾಲಿಸಿ ಅದನ್ನು ಅಥವಾ ಅಂಥ ರೂಪವನ್ನು ನೋಡುವ ಸಲುವಾಗಿ ಚಿತ್ತವು ವಿಹ್ವಲವಾಗುವುದು; ಅನೇಕ ಪ್ರಕಾರದ ಷಟ್‌ರಸಗಳನ್ನು ಭೋಗಿಸುವ ಅಭಿಲಾಷೆ, ರಸನಾ-ನಾಲಿಗೆಗೆ ಒಳ್ಳೆಯದೆನಿಸುವಂಥ ಭೋಜನದಿಂದ ಸುಖಿ ಹಾಗೂ ನಾಲಿಗೆಗೆ ಅರತಿಯನ್ನು ಉತ್ಪನ್ನ ಮಾಡುವಂಥ ರಸ – ಭೋಜನವು ದೊರಕಿದ ಮೇಲೆ ದುಃಖಿಯಾಗುವಂಥ ಭಾವಗಳಿಂದ ಜೀವನು ಅಶುಭ ಕರ್ಮಗಳ ಆಸ್ರವ ಮಾಡುತ್ತಾನೆ; ಇದರ ಹೆಸರು ದರ್ಶನ ಕ್ರಿಯೆಯಿದೆ.

**೧೨. ಸ್ಪರ್ಶನ ಕ್ರಿಯೆ ಃ–** ತನ್ನ ಶರೀರದ ಸ್ಪರ್ಶನ ಉದ್ದೇಶದಿಂದ ಕೋಮಲ ಶಯ್ಯೆಯ ಸಲುವಾಗಿ ಸಚಿತ್ತ ಪುಷ್ಪ, ಮೊಗ್ಗೆಗಳನ್ನು ಕಿತ್ತುಕೊಂಡು ಅವುಗಳಿಂದ ಶಯ್ಯೆಯ ರಚನೆ ಮಾಡುವುದು; ಅದರ ಮೇಲೆ ಮಲಗಿಕೊಂಡು, ಹೊರಳಾಡುತ್ತ ಆನಂದ ಮನ್ನಿಸುವುದು. ಪಾಪದ ಭಯವನ್ನಿಟ್ಟುಕೊಳ್ಳದೆ, ದಯೆಯ ವಿಚಾರ ಮಾಡದೇ ಹಿಂಸೆಯ ವಿವೇಕವಿಲ್ಲದೆ ಕೇವಲ ತನ್ನ ಇಂದ್ರಿಯವನ್ನು ಪುಷ್ಟ ಮಾಡುವ ಸಲುವಾಗಿ ಕ್ರಿಯೆ ಮಾಡುವುದು; ಯೋಗ್ಯ – ಅಯೋಗ್ಯ ಕುಲದ ವಿಚಾರವನ್ನೂ ಮಾಡದಿರುವುದು, ಅದು ಬೇಕಾದರೆ ಸ್ಪರ್ಶ ಯೋಗ್ಯವಿರಲಿ, ಅಥವಾ ನೀಚ-ಸ್ಪರ್ಶಯೋಗ್ಯವಿಲ್ಲದಿರಲಿ ಆದಾಗ್ಯೂ ಅದರ ಸುಂದರ, ಕೋಮಲ ಶರೀರದ ಸ್ಪರ್ಶವನ್ನು ಸ್ಪರ್ಶನ ಇಂದ್ರಿಯ ಭೋಗವನ್ನು ಭೋಗಿಸುವಂಥವನು ಮಾಡುತ್ತಾನೆ; ನೀಚ-ಉಚ್ಚಗಳ ವಿಚಾರ ಮಾಡುವುದಿಲ್ಲ. ಅದು ಸ್ಪರ್ಶನ ಕ್ರಿಯೆಯಿದೆ.

೧೩. **ಪ್ರಾತ್ಯಯಿನೀಕ್ರಿಯೆ :-** ಪಾಪ ಮಾಡುವಲ್ಲಿ ಕಾರಣಭೂತವಿರುವ ಅನೇಕ ಪ್ರಕಾರದ ಶಸ್ತ್ರ, ಬಾಣ, ಗುಂಡು, ಚೂರಿ, ಕಿರುಗತ್ತಿ , ಖಡ್ಗ, ಜಾಲ, ಪಂಜರ, ಪಾಶ, ಕೂಪ, ಕೆರೆ ಇತ್ಯಾದಿ ಹಿಂಸೆಯಲ್ಲಿ ಕಾರಣಭೂತವಿರುವ ಶಸ್ತ್ರಗಳನ್ನು ಅತ್ಯಂತ ಚತುರತೆಯಿಂದ ನಿರ್ಮಿಸುವ ಕಲೆಗಳನ್ನು ತಿಳಿಯುವುದು. 'ನಾನು ಎಂಥ ಅದ್ಭುತ, ಉತ್ತಮ ಶಸ್ತ್ರಗಳನ್ನು ನಿರ್ಮಿಸುತ್ತೇನೆ, ಅಂಥವುಗಳನ್ನಂತೂ ಬೇರೆ ಯಾರೂ ನಿರ್ಮಿಸುವ ಸಾಧ್ಯತೆಯಿಲ್ಲ' ಇತ್ಯಾದಿ ಅಪೂರ್ವ ದುಃಖದ ಕಾರಣಭೂತ, ಮಹಾ ಅಶುಭ ಕರ್ಮದ ಆಸ್ರವ ಮಾಡಿಸುವಂಥ ಶಸ್ತ್ರಾದಿಗಳನ್ನು ನಿರ್ಮಿಸುವ ಕಲೆ-ಚತುರತೆಯು ಪ್ರಾತ್ಯಯಿನೀ ಕ್ರಿಯೆಯಿದೆ.

೧೪. **ಸಮಂತಾನುಪಾತಿನೀ ಕ್ರಿಯೆ :-** ಗೃಹಸ್ಥನ ಮನೆಯು ಪ್ರಸೂತಿಯ ಸ್ಥಾನಗಳ ಕುರಿತು ಸದೈವ ಸರಾಗ ಕ್ರೀಡೆಯು ನಡೆಯುತ್ತಿರುವ ಕಾರಣ ಭೋಗಿಗಳ ಸ್ಪರ್ಶ ಯೋಗ್ಯವಿದೆ, ಅದು ತ್ಯಾಗಿಗಳು ಇರುವಂಥ ಸ್ಥಾನವಲ್ಲ ಈ ಸರಾಗ ಸ್ಥಾನಗಳು ತ್ಯಾಗಿಗಳ ಸಲುವಾಗಿ ಯೋಗ್ಯವಿಲ್ಲ, ಅಯೋಗ್ಯವಿವೆ, ಭಯದ ಕಾರಣವಿವೆ; ಆದುದರಿಂದ ಯತಿ ಮೊದಲಾದ ಸಂಯಮಿಗಳು ಒಂದುವೇಳೆ ಗೃಹಸ್ಥನ ಮನೆಗೆ ಬರುತ್ತಾರೆಂದರೆ ಅದು ಕೇವಲ ಭೋಜನದ ಸಲುವಾಗಿ, ಅದು ಕೂಡ ಮಹಾಸಾವಧಾನತೆಯೊಂದಿಗೆ, ಪ್ರಮಾದರಹಿತ, ವೀತರಾಗ ದಶೆಯೊಂದಿಗೆ ಬರುತ್ತಾರೆ. ಒಂದುವೇಳೆ ತಪ್ಪಿ ಸಂಯಮಿಯು ತನ್ನ ಶರೀರದ ಮಲ, ಮೂತ್ರ , ಶ್ಲೇಷ್ಮ ಮೊದಲಾದುವನ್ನು ಪ್ರಮಾದದ ವಶೀಭೂತನಾಗಿ ಗೃಹಸ್ಥರ ಮನೆಯಲ್ಲಿ ಬಿಡುತ್ತಿದ್ದರೆ ಇಂಥ ಪ್ರಮಾದ ಭಾವಗಳಿಂದ ಅವರು ಅಶುಭ ಕರ್ಮದ ಆಸ್ರವ ಮಾಡಿಕೊಳ್ಳುತ್ತಾರೆ. ಇದರ ಹೆಸರು ಸಮಂತಾನುಪಾತಿನೀ ಕ್ರಿಯೆಯಿದೆ.

೧೫. **ಅನಾಭೋಗ ಕ್ರಿಯೆ :-** ನೋಡದೆಯೇ ನೆಲದ ಮೇಲೆ ವಸ್ತುವನ್ನಿಡುವುದು, ನೋಡದೆಯೇ ನೆಲದ ಮೇಲಿಂದ ಎತ್ತಿಕೊಳ್ಳುವುದು; ಯತಿಗಳು ಪಿಂಛಿ, ಕಮಂಡಲು, ತಮ್ಮ ಶರೀರ ಇತ್ಯಾದಿಗಳನ್ನು ಶೋಧಿಸದೇ ಭೂಮಿಯ ಮೇಲೆ ಇಡುತ್ತಿದ್ದರೆ - ಪಿಂಛಿಯಿಂದ ಪರಿಮಾರ್ಜನ ಮಾಡದೆಯೇ ಇರಿಸುತ್ತಿದ್ದರೆ ಅಶುಭದ ಆಸ್ರವ ಮಾಡುತ್ತಾರೆ. ಶ್ರಾವಕರೂ ಒಂದುವೇಳೆ ನೋಡದೆಯೇ ಪ್ರಮಾದದಿಂದ ಅನೇಕ ವಸ್ತುಗಳನ್ನು ಇರಿಸುವ, ಎತ್ತಿಕೊಳ್ಳುವುದನ್ನು ಮಾಡುತ್ತಿದ್ದರೆ ಅವರು ಅಶುಭದ ಆಸ್ರವ ಮಾಡುತ್ತಾರೆ. ಇದರ ಹೆಸರು ಅನಾಭೋಗ ಕ್ರಿಯೆಯಿದೆ.

೧೬. **ಸ್ವಹಸ್ತಕ್ರಿಯೆ :-** ದುರಾಚಾರಿ, ದುಷ್ಟ ಸ್ವಭಾವದ ಧಾರಕ, ಮಹಾಪಾಪಿಗಳು ತಮ್ಮ ಕೈಯಿಂದ ಎಂಥ ಪಾಪದ ಕಾರ್ಯಗಳನ್ನು ಮಾಡುತ್ತಾರೆಂದರೆ ಅಂಥ ನಿಷಿದ್ಧ ಅಶುಭ ಕಾರ್ಯಗಳನ್ನು ಬೇರೆ ಯಾರೂ ಮಾಡುವುದು ಸಾಧ್ಯವಾಗುವುದಿಲ್ಲ. ಅಂಥ ಪಾಪದ ಧಾರಕರು ಮಹಾಪಾಪದ ಆಸ್ರವ ಮಾಡುತ್ತಾರೆ. ಒಂದುವೇಳೆ ಆ ಪಾಪಿಗಳ ಹೇಳಿಕೆಯ ಅನುಸಾರ ಯಾರಾದರೂ ಪಾಪ ಕಾರ್ಯ ಮಾಡದಿದ್ದರೆ ಅಥವಾ ಪಾಪಕಾರ್ಯ ಮಾಡಲು ಭಯ ಪಡುತ್ತಿದ್ದರೆ ಆ ನಿರ್ದಯಿಯು ಅವನಿಗೆ ಪ್ರೇರಣೆ ನೀಡುತ್ತ - 'ಅಯ್ಯಾ ಸೋದರನೇ ! ಈ ಪಾಪವು ನಮ್ಮ ತಲೆಯ ಮೇಲಿದೆ ನೀನು ಭಯ ಪಡಬೇಡ, ಈ ಪಾಪ ಕಾರ್ಯವನ್ನು ನಿಃಶಂಕನಾಗಿ ಮಾಡು' - ಎಂದು ಹೇಳುತ್ತಾನೆ. ಇಂಥ ಭಾವಗಳ ಧಾರಕರು ಮಹಾ ಪಾಪದ ಆಸ್ರವ ಮಾಡಿಕೊಳ್ಳುತ್ತಾರೆ; ಇದರ ಹೆಸರು ಸ್ವಹಸ್ತಕ್ರಿಯೆಯಿದೆ.

೧೭. **ನಿಸರ್ಗಕ್ರಿಯೆ :-** ಯಾವ ದುರಾತ್ಮನಿಗೆ ಒಳ್ಳೆಯ ಕಾರ್ಯಗಳಂತೂ ಕಲಿಸಿಕೊಟ್ಟರೂ ಬರುವುದಿಲ್ಲ. ಶುಭಕಾರ್ಯಗಳಲ್ಲಿ ಮೂಢತೆ ಹೊಂದಿದ್ದಾನೆ. ಒಳ್ಳೆಯ ಮಾತನ್ನಾಡಲೂ ಬರುವುದಿಲ್ಲ; ಆದರೆ ಅನೇಕ ಕಾರ್ಯಗಳನ್ನು ಯಾರೂ ಕಲಿಸದೆ ಸ್ವಯಂ ತನ್ನ ಬುದ್ಧಿಯಿಂದಲೇ ಉತ್ಪನ್ನ ಮಾಡುತ್ತಾನೆ. ಪಾಪ ಕಾರ್ಯಮಾಡುವ ಅನೇಕ ಯುಕ್ತಿಗಳು ಹೊಳೆಯುತ್ತವೆ. ತಾನು ಮಾಡುತ್ತಾನೆ ಮತ್ತು ಬೇರೆಯವರಿಗೂ ಕುಕಾರ್ಯ ಮಾಡುವ ಉಪದೇಶ ಕೊಡುತ್ತಾನೆ. ಇಂಥ ಜೀವನು ತನ್ನ ಭಾವದಿಂದ ಪಾಪ ಕರ್ಮದ ಆಸ್ರವ ಮಾಡಿಕೊಳ್ಳುತ್ತಾನೆ - ಇದರ ಹೆಸರು ನಿಸರ್ಗ ಕ್ರಿಯೆಯಿದೆ.

೧೮. **ವಿದಾರಣ ಕ್ರಿಯೆ :-** ಯಾವ ಜೀವನು ತನ್ನ ಅವಗುಣಗಳನ್ನು ಜನರಲ್ಲಿ ಪ್ರಗಟ ಪಡಿಸುತ್ತ ಹೇಳುತ್ತಾನೆ

- ನಾನು ದೊಡ್ಡ ಕಳ್ಳನಿದ್ದೇನೆ; ನನ್ನಂಥ ಕಳ್ಳನು ಬೇರೆ ಯಾರೂ ಇಲ್ಲ. ಅನೇಕ ಸಂಕಟಗಳಲ್ಲಿ ಮಹಾಗೂಢ ಸ್ಥಾನದಲ್ಲಿ ಇಟ್ಟಿರುವ ಧನವನ್ನೂ ನಾನು ಕದ್ದು ತರುವ ಸಾಧ್ಯತೆಯಿದೆ. ನನ್ನ ಸಮಾನ ಜೂಜು ಆಡುವಂಥವರು ಬೇರೆ ಯಾರೂ ಇಲ್ಲ. ನಾನು ಪರಸ್ತ್ರೀಯರ ಸೇವನೆ ಮಾಡುವಂಥವನಿದ್ದೇನೆ. ನಾನು ಮಹಾ ಪಾಖಂಡಿಯಿದ್ದೇನೆ, ನನ್ನ ಸಮಾನ ಪಾಖಂಡಿಗಳು ಬೇರೆ ಯಾರೂ ಇಲ್ಲ. ನಾನು ಮಹಾ ಅಸತ್ಯಭಾಷಿಯಿದ್ದೇನೆ. ನಾನು ಮೋಸಗಾರನಿದ್ದೇನೆ ಇತ್ಯಾದಿ ರೂಪದಲ್ಲಿ ತನ್ನ ಮುಖದಿಂದ ತನ್ನ ಅವಗುಣಗಳ ಪ್ರಶಂಸೆ ಮಾಡುತ್ತಾನೆ. ಇಂಥ ಜೀವರುಗಳು ತಮ್ಮ ಭಾವಗಳ ವಕ್ರತೆಯಿಂದ ಅಶುಭಕರ್ಮದ ಆಸ್ರವ ಮಾಡಿಕೊಳ್ಳುತ್ತಾರೆ; ಇದರ ಹೆಸರು ವಿದಾರಣ ಕ್ರಿಯೆಯಿದೆ.

**೧೯. ಜಿನ ಆಜ್ಞೆಯ ಉಲ್ಲಂಘನ ಕ್ರಿಯೆ :-** ವಿಷಯ ಕಷಾಯಗಳಲ್ಲಿ ಉದ್ಯಮಿ - ಯಾವ ಜೀವರುಗಳು ಪಂಚೇಂದ್ರಿಯಗಳ ಪೋಷಣೆಯ ಸಲುವಾಗಿ ಅನೇಕ ಉದ್ಯಮ ಮಾಡುತ್ತಾರೆ. ಒಂದುವೇಳೆ ಶರೀರದ ಬಲದಿಂದ ಕಾರ್ಯವಾಗದಿದ್ದರೆ ಬುದ್ಧಿಯ ಬಲದಿಂದ ಮನಸ್ಸಿನಿಂದ ದೊಡ್ಡ-ದೊಡ್ಡ ಉಪಾಯ ಮಾಡುತ್ತಾರೆ. ಹೇಗೆ ಸಾಧ್ಯವೋ ಹಾಗೆ ವಿಷಯ ಪೋಷಣೆ ಮಾಡಿ ಸುಖ ಮನ್ನಿಸುತ್ತಾರೆ. ಕುದೇವಗಳ ಸೇವೆಯಿಂದ ಪುತ್ರ ಪ್ರಾಪ್ತಿ-ಧನ ಪ್ರಾಪ್ತಿಯಾಗುವ ಸಂಭಾವನೆಯಿದ್ದರೆ ಅದನ್ನು ಮಾಡುತ್ತಾನೆ. ರಸಾಯನ ಪ್ರಾಪ್ತಿಯ ಸಂಭಾವನೆ ಕಂಡು ಬಂದರೆ ವೈದ್ಯಾದಿ ಕಲೆಯ ಧಾರಕರ ಸೇವೆ ಮಾಡುತ್ತಾನೆ, ಮಂತ್ರ-ತಂತ್ರ ಮೊದಲಾದ ಚಮತ್ಕಾರ ಹೇಳುವಂಥ ಗುರುವಿನ ಸೇವೆಯಲ್ಲಿ ಸಾವಧಾನನಾಗುತ್ತಾನೆ. ಅವರ ಆಜ್ಞೆಯ ಅನುಸಾರ ಕಾರ್ಯ ಮಾಡುತ್ತಾನೆ.

ಜಿನಭಾಸಿತ ಧರ್ಮಸೇವನೆಯಲ್ಲಿ ಶಿಥಿಲ; ಸ್ವರ್ಗ-ಮೋಕ್ಷಗಳ ಪ್ರದಾತೃ ತಪ, ವ್ರತ, ಪೂಜಾದಿಗಳಲ್ಲಿ ಪ್ರಮಾದಿಯಾದ ಹೇಡಿಯು ಹೇಳುವುದೇನೆಂದರೆ - ನನ್ನ ಶರೀರದಲ್ಲಿ ಶಕ್ತಿಯಿಲ್ಲ; ಅಶಕ್ತಿಯನ್ನು ತಿಳಿದುಕೊಂಡು, ಆಲಸ್ಯಪೂರ್ವಕ ಶುದ್ಧ ಧರ್ಮದ ಕ್ರಿಯೆ ಮಾಡುತ್ತಿದ್ದರೂ ಅವುಗಳನ್ನು ತನ್ನ ಇಚ್ಛೆಯ ಅನುಸಾರ ಮಾಡುತ್ತಾನೆ. ಜಿನ ಆಜ್ಞೆಯ ಅನುಸಾರ ಮಾಡುವುದಿಲ್ಲ. ಇಂಥ (ಕ್ರಮಭಂಗ ಜೀವನಿಗೆ) ಭಾವಗಳ ಧಾರಕನಿಗೆ ಅಶುಭದ ಆಸ್ರವವಾಗುತ್ತದೆ. ಇದರ ಹೆಸರು ಜಿನ ಆಜ್ಞೆಯ ಉಲ್ಲಂಘನ ಕ್ರಿಯೆಯಿದೆ.

**೨೦. ಅನಾದರ ಕ್ರಿಯೆ :-** ಯಾವ ಜೀವನು ಶಾಸ್ತ್ರೋಕ್ತ ತಪ, ಸಂಯಮ, ದಾನ, ಪೂಜೆ, ಚಾರಿತ್ರ , ಧ್ಯಾನ, ಪಾಠ ಮೊದಲಾದ ಧರ್ಮಕ್ರಿಯೆ ಮಾಡುತ್ತಿದ್ದರೂ ಅವೆಲ್ಲವನ್ನು ಅನಾದರ ಸಹಿತ ಮಾಡುತ್ತಾನೆ; ಆ ಭಾಗ್ಯಹೀನನು ಧರ್ಮಭಾವನೆಯಿಂದರಹಿತ, ಪಾಪಾಚಾರಿ, ಆರ್ತ-ರೌದ್ರಗಳ ವಿಕಲ್ಪದಿಂದ ಪರಿಪೂರ್ಣ ಹೃದಯವುಳ್ಳ ಕಳ್ಳ-ವ್ಯಸನಿಗಳದಂತೂ ಆದರ ಮಾಡುತ್ತಾನೆ; ತನ್ನ ಸಮಾನ ಪಾಪಿ, ಪಾಖಂಡಿ, ಸಪ್ತವ್ಯಸನಿ, ಕಳ್ಳರ ಸಹಾಯಕರ ಆದರ ಮಾಡುತ್ತಾನೆ. ಮಹಾ ಲೋಭಿ, ಪರಸ್ತ್ರೀಯ ಇಚ್ಛೆಯುಳ್ಳವ, ಧನದ ಲೋಭಿ ಹಾಗೂ ಪರಸ್ತ್ರೀಯನ್ನು ವಶಪಡಿಸಿಕೊಳ್ಳುವ ಸಲುವಾಗಿ ಮಹಾ ಆದರಪೂರ್ವಕ ಅನೇಕ ಮಂತ್ರ-ತಂತ್ರಗಳ ಸಾಧನೆ ಮಾಡುತ್ತಾನೆ, ತಪ ಮಾಡುತ್ತಾನೆ, ಜಪ ಮಾಡುತ್ತಾನೆ; ಆದರೆ ಕಲ್ಯಾಣಕಾರಕವಾದ ಧರ್ಮಕ್ರಿಯೆಗಳನ್ನು ಅನಾದರದಿಂದ ಮಾಡುತ್ತಾನೆ. ಇಂಥ ಪರಿಣತಿಯ ಧಾರಕನು ಅಶುಭ ಕರ್ಮಗಳ ಆಸ್ರವ ಮಾಡಿಕೊಳ್ಳುತ್ತಾನೆ; ಇದರ ಹೆಸರು ಅನಾದರ ಕ್ರಿಯೆಯಿದೆ.

**೨೧. ಆರಂಭ ಕ್ರಿಯೆ -** ಆರಂಭ ಮಾಡುವ ಶಕ್ತಿಯು ತನ್ನದಿಲ್ಲದಿದ್ದರೂ ಬೇರೆಯವರ ಮೂಲಕ ಮಾಡಲಾದ ಪಾಪಾರಂಭವನ್ನು ನೋಡಿ ಹರ್ಷಿತನಾಗುವುದು. ಹೇಗೆಂದರೆ ಬೇರೆಯವರ ಮಂದಿರ, ಕೋಟೆ, ಪ್ರಾಕಾರ, ಕೂಪ, ಬಾವಿ, ಸರೋವರಗಳ ನಿರ್ಮಾಣವನ್ನು ಕಂಡು; ಮಹಾಆರಂಭವಾಗುತ್ತಿರುವುದನ್ನು ಕಂಡು ಸ್ವಯಂ ಅದರ ಅನುಮೋದನೆ ಮಾಡುವುದು, ಅನ್ಯರ ವಿವಾಹದಲ್ಲಿ ಅತಿಯಾದ ಆರಂಭವನ್ನು ನೋಡಿ ಅದರ ಪ್ರಶಂಸೆ ಮಾಡುವುದು - ಇತ್ಯಾದಿ ಭಾವಗಳಿಂದ ಅಶುಭ ಕರ್ಮದ ಆಸ್ರವವಾಗುತ್ತದೆ; ಇದರ ಹೆಸರು ಆರಂಭ ಕ್ರಿಯೆಯಿದೆ.

**೨೨. ಪರಗ್ರಾಹಣೆ ಕ್ರಿಯೆ -** ಲೋಭದ ವಶೀಭೂತನಾಗಿ ಯಾವ ಜೀವನು ಯೋಗ್ಯ-ಅಯೋಗ್ಯಗಳನ್ನು ಗಣಿಸುವುದಿಲ್ಲ; ತೀವ್ರ ಲೋಭದ ಉದಯದಿಂದ ಇದು ತಗೆದುಕೊಳ್ಳಲು ಯೋಗ್ಯವಿದೆ, ಇದು ತಗೆದುಕೊಳ್ಳಲು

ಯೋಗ್ಯವಿಲ್ಲವೆಂಬ ವಿಚಾರ ಮಾಡಲು ಅಸಮರ್ಥನಾಗುತ್ತಾನೆ. ತನ್ನ ಕೈಗೆ ಬರುವ ವಸ್ತುಗಳನ್ನೆಲ್ಲ ಗ್ರಹಣ ಮಾಡುತ್ತಾನೆ. ಧರ್ಮದ ನಿಮಿತ್ತದಿಂದ ಬಂದಿರುವ ದೇವ-ಧರ್ಮದ ಆಸ್ತಿಯನ್ನು ಹಾಗೂ ಸಹೋದರಿ, ಪುತ್ರಿ, ಸೋದರ ಸೊಸೆ ಇತ್ಯಾದಿಕರ ಆಸ್ತಿಯು ನಿಜವಾಗಿ ಲೌಕಿಕದೊಳಗೆ ನಿಂದ್ಯವಿದೆ-ಪರದ್ರವ್ಯವಿದೆ. ಆದರೆ ಮಹಾಲೋಭಸಹಿತ ಲೋಭೀ ಜೀವನು ಧರ್ಮಾರ್ಥದ ದ್ರವ್ಯವನ್ನೂ ವಿಷಯದಲ್ಲಿ ತೊಡಗಿಸುತ್ತಾನೆ. ಲೋಭಿಯು ತನ್ನ ಕೈಗೆ ಬಂದಿರುವ ಸೋದರಿ, ಸೋದರ ಸೊಸೆ ಇತ್ಯಾದಿಕರ ಧನವನ್ನೂ ಬಿಡುವುದಿಲ್ಲ - ಹೀಗೆ ಪರರ ಸಂಪತ್ತನ್ನು ಗ್ರಹಣ ಮಾಡುವ ಭಾವಗಳ ಧಾರಕನು ಅಶುಭ ಕರ್ಮದ ಆಸ್ರವ ಮಾಡಿಕೊಳ್ಳುತ್ತಾನೆ. ಇದರ ಹೆಸರು ಪರಗ್ರಾಹಣಿ ಕ್ರಿಯೆಯಿದೆ.

**೨೩. ಮಾಯಾಕ್ರಿಯೆ :-** ಯಾವ ಜೀವನು ಅನ್ಯರನ್ನು ವಂಚಿಸುವಲ್ಲಿ ಮಹಾಚತುರನಿದ್ದಾನೆ; ಅನೇಕ ಯುಕ್ತಿಗಳನ್ನು ನೀಡಿ, ಅನೇಕ ವಿದ್ಯೆಗಳ ಮೂಲಕ ಇತರರ ಧನವನ್ನು ಹರಣ ಮಾಡುತ್ತಾನೆ, ಅನೇಕ ಕಲೆಗಳಿಂದ ತನ್ನ ವಿಷಯ ಕಷಾಯಗಳ ಪೋಷಣೆ ಮಾಡುತ್ತಾನೆ - ಇತ್ಯಾದಿ ಪಾಪಕ್ರಿಯೆಗಳಲ್ಲಂತೂ ಪ್ರವೀಣನಿದ್ದಾನೆ; ಆದರೆ ಜಿನಭಾಷಿತ ಧರ್ಮದ ಶುದ್ಧ ಕ್ರಿಯೆಗಳಲ್ಲಿ ಮೂರ್ಖನ ಸಮಾನ ಮುಗ್ಧನಿದ್ದಾನೆ. ಜಿನರ ಪೂಜೆಯನ್ನು ಹೇಗೆ ಮಾಡುವುದು ? ಹೇಗೆ ಓದುವುದು ? ಎಂಬುದನ್ನೂ ತಿಳಿಯುವುದಿಲ್ಲ. ಭಗವಂತರ ಸ್ತುತಿ ಮಾಡುವುದನ್ನೂ ತಿಳಿಯುವುದಿಲ್ಲ. ಪ್ರಭುವಿನ ದರ್ಶನ ಮಾಡುವುದನ್ನು ತಿಳಿಯುವುದಿಲ್ಲ. ಯಾರ ಕುರಿತಾಗಿ ದಯೆ ಮಾಡುವುದರಿಂದ ಮಹಾಪುಣ್ಯವಾಗುತ್ತದೆಯೋ ಅಂಥ ಆ ಷಟ್ಕಾಯಿಕ ಜೀವಗಳ ನಾಮ-ಭೇದವನ್ನು ತಿಳಿಯುವುದಿಲ್ಲ. ಸಂಸಾರ ಪರಿಭ್ರಮಣೆಯ ಸ್ಥಾನಭೂತ ನಾಲ್ಕು ಗತಿಗಳ ಸ್ವರೂಪವನ್ನು ತಿಳಿಯುವುದಿಲ್ಲ. ಸ್ವಯಂ ಜೀವನಾಗಿದ್ದರೂ ತನ್ನ ಜೀವತ್ವ ಭಾವವನ್ನು ತಿಳಿಯುವುದಿಲ್ಲ - ಇತ್ಯಾದಿ ಕಲ್ಯಾಣಕಾರಿ ಧರ್ಮ ಸಂಬಂಧದ ಮಾತುಗಳು ಮತ್ತು ಕ್ರಿಯೆಗಳನ್ನು ತಿಳಿಯುವುದಿಲ್ಲ. ಪಾಪದಲ್ಲಿ ಚತುರ ಮತ್ತು ಧರ್ಮದಲ್ಲಿ ಮೂಢರೂಪದ ಈ ಭಾವಗಳ ಧಾರಕನು ಪಾಪದ ಆಸ್ರವ ಮಾಡಿಕೊಂಡು ಪರಭವವನ್ನು ಕೆಡಿಸಿಕೊಳ್ಳುತ್ತಾನೆ; ಇದರ ಹೆಸರು ಮಾಯಾಕ್ರಿಯೆಯಿದೆ.

**೨೪. ಮಿಥ್ಯಾದರ್ಶನ ಕ್ರಿಯೆ :-** ಯಾವ ಜೀವನು ಸ್ವಯಂ ಮಿಥ್ಯಾತ್ವರೂಪದ ಕ್ರಿಯೆಗಳನ್ನು ಮಾಡುತ್ತಾನೆ ಮತ್ತು ಇತರರಿಗೂ ಅದರದೇ ಉಪದೇಶ ಮಾಡುತ್ತಾನೆ. ಎಂದರೆ ಧನದ ಲೋಭಿಯು ತಾನಂತೂ ಮಾನದೊಡ್ಡಸ್ತನದ ಸಲುವಾಗಿ ಮಿಥ್ಯಾದೇವ-ಗುರುಗಳ ಸೇವೆ ಮಾಡುತ್ತಾನೆ. ನನಗೆ ಧನಕೊಡು, ಪುತ್ರನನ್ನು ಕೊಡು, ಆನೆ-ಕುದುರೆಗಳನ್ನು ಕೊಡು - ಇತ್ಯಾದಿ ವಸ್ತುಗಳ ಲೋಭವಶದಿಂದ ಮಿಥ್ಯಾ ಮಾರ್ಗದ ಸೇವನೆ ಮಾಡುತ್ತಾನೆ ಹಾಗೂ ಅನ್ಯ ಮುಗ್ಧ ಅಜ್ಞಾನಿ ಜೀವಗಳಿಗೆ ಉಪದೇಶವಿತ್ತು ಕುದೇವಾದಿಗಳ ಅತಿಶಯ ಹೇಳುತ್ತಾನೆ-ಈ ದೇವನು ಪ್ರತ್ಯಕ್ಷ ವಾಂಛಿತಗಳನ್ನು ಕೊಡುತ್ತಾನೆ. ನಾವು ಇವರ ಸೇವೆ ಮಾಡಿದ್ದೆವು, ಅದರಿಂದ ಇವರು ನಮಗೆ ಇಂಥಿಂಥ ವಾಂಛಿತ ವಸ್ತುಗಳನ್ನು ಕರುಣಿಸಿ ನಮ್ಮ ಇಚ್ಛೆಯನ್ನು ಈಡೇರಿಸಿದ್ದಾರೆ. ಇತ್ಯಾದಿ ಅತಿಶಯ ತಿಳಿದು ಸ್ವಯಂ ಕುದೇವಾದಿಗಳ ಸೇವನೆ ಮಾಡುವುದು ಮತ್ತು ಅನ್ಯರಿಗೆ ಉಪದೇಶ ಕೊಡುವುದು - ಇಂಥ ಭಾವಗಳಿಂದ ಈ ಜೀವನು ಸಂಸಾರದಲ್ಲಿ ದುಃಖ ಕೊಡುವಂಥ ಪಾಪಕರ್ಮದ ಆಸ್ರವ ಮಾಡಿಕೊಳ್ಳುತ್ತಾನೆ - ಇದರ ಹೆಸರು ಮಿಥ್ಯಾದರ್ಶನ ಕ್ರಿಯೆಯಿದೆ.

**೨೫. ಅಪ್ರತ್ಯಾಖ್ಯಾನ ಕ್ರಿಯೆ :-** ಯಾವ ಜೀವಗಳು ಅಜ್ಞಾನದ ವಶೀಭೂತರಾಗಿ ಪರಿಣಾಮಗಳ ಕ್ರೂರತೆಯಿಂದ ಎಲ್ಲ ಪಾಪಕ್ರಿಯೆಗಳನ್ನು ಮಾಡುತ್ತಾರೆ, ಯಾವುದೇ ಪಾಪದ ತ್ಯಾಗ ಮಾಡುವುದಿಲ್ಲ. ಅವರೊಳಗೆ ಕೆಲವು ಮೂರ್ಖರಂತೂ 'ನಾವಂತೂ ಮುಗ್ಧರಿದ್ದೇವೆ, ನಮಗೆ ಪಾಪ ಕಟ್ಟುವುದಿಲ್ಲ; ಯಾರು ತಿಳಿಯುತ್ತಾರೆ, ಅವರಿಗೆ ಪಾಪವು ಕಟ್ಟುತ್ತದೆ. ನಾವಂತೂ ಪಾಪವೆಂದರೇನು ? ಮತ್ತು ಪುಣ್ಯವೆಂದರೇನು ? ಅವುಗಳ ಕುರಿತಾಗಿ ಏನನ್ನೂ ತಿಳಿಯುವುದಿಲ್ಲ'ವೆಂದು ಹೇಳುತ್ತಾರೆ.

ಮತ್ತೆ ಕೆಲವರು 'ಪಾಪ ಪುಣ್ಯಗಳಂತೂ ಇಲ್ಲವೇ ಇಲ್ಲ; ಅದಕ್ಕಾಗಿ ಭಯ ಪಡುವುದೇಕೆ ? ನಿಃಶಂಕರಾಗಿ ಸುಖಗಳ ಭೋಗ ಭೋಗಿಸಬೇಕೆಂದು ಹೇಳಿದರೆ ಬೇರೆ ಕೆಲವರು ಯಾವಾಗ ಸಾಯುವುದಿದೆ, ಆಗ ನೋಡಿದರೆ

ಆಯಿತು, ಈಗಂತೂ ಇಚ್ಛೆಯ ಅನುಸಾರ ಜೀವಿಸೋಣ ಸಾಯುವ ಸಮಯದಲ್ಲಿ ಧರ್ಮ ಮಾಡುವುದಿದೆಯೆಂದು ಹೇಳುತ್ತಾರೆ.

ಮತ್ತೆ ಕೆಲವರು ಹೇಳುವುದೇನೆಂದರೆ - ನೀವು ಏನು ಬೇಕಾದರೂ ಹೇಳಿರಿ ! ಆದರೆ ಪಾಪವಾದರೆ ಅದರ ಫಲವು ನಮಗೆ ತಗಲುವುದು, ಈ ಕ್ರಿಯೆಗಳಿಂದ ನರಕವಾದರೆ ನಮಗೆ ಆಗುವುದು ? ಅಯ್ಯಾ ಸೋದರನೇ! ಇಲ್ಲಿ ಮನೋವಾಂಛಿತ ದೊರಕದಿರುವುದು ನರಕವಿದೆ ಮತ್ತು ಇಲ್ಲಿಯೇ ಸುಖ ಸಿಗುವುದು ಸ್ವರ್ಗವಿದೆ; ಅದಕ್ಕಾಗಿ ಸುಖದಿಂದ ಇರುವುದಿದೆ. ವರ್ತಮಾನದಲ್ಲಿ ವಿದ್ಯಮಾನವಿರುವ ಸುಖದ ತ್ಯಾಗವನ್ನೇಕೆ ಮಾಡುವಿರಿ ? ಇತ್ಯಾದಿ ಪ್ರಕಾರದಿಂದ ಸ್ವೇಚ್ಛಾಚಾರಿಗಳಾಗಿ ಸಮಸ್ತ ಪಾಪ ಮಾಡುತ್ತಿರುತ್ತಾರೆ. ಯೋಗ್ಯ-ಅಯೋಗ್ಯದ ಯಾವ ವಿಚಾರವನ್ನೇ ಮಾಡುವುದಿಲ್ಲ, ಯಾವುದೇ ಪಾಪದ ತ್ಯಾಗ ಮಾಡುವುದಿಲ್ಲ - ಇಂಥ ಭಾವದ ಧಾರಕರು ಅಶುಭ ಆಸ್ರವ ಮಾಡಿಕೊಳ್ಳುತ್ತಾರೆ, ಇದರ ಹೆಸರು ಅಪ್ರತ್ಯಾಖ್ಯಾನ ಕ್ರಿಯೆಯಿದೆ.

ಈ ಪ್ರಕಾರ ಆಸ್ರವದ ಕಾರಣಭೂತ ಇಪ್ಪತ್ತೈದು ಕ್ರಿಯೆಗಳ ವರ್ಣನೆಯು ಪೂರ್ಣವಾಯಿತು.

ಶ್ರೇಣಿಕ ದೊರೆಯು ಗೌತಮಸ್ವಾಮಿಯಲ್ಲಿ ಪ್ರಶ್ನೆ ಮಾಡಿದ್ದನು; ತೀರ್ಥಂಕರರ ಮಾತೆಗೆ ದೇವಾಂಗನೆಯರು ಪ್ರಶ್ನೆ ಮಾಡಿದ್ದರು ಹಾಗೂ ಅನೇಕ ಶಾಸ್ತ್ರಗಳಲ್ಲಿ ಧರ್ಮೀ ಜೀವರುಗಳು ಪ್ರಶ್ನೆ ಕೇಳಿರುವ ಹಾಗೆ ಇಲ್ಲಿಯೂ ಪುಣ್ಯ-ಪಾಪದ ಫಲವನ್ನು ಪ್ರಗಟರೂಪದಿಂದ ತಿಳಿಯುವ ಸಲುವಾಗಿ ಶಿಷ್ಯರುಗಳ ಪ್ರಶ್ನಮಾಲೆಯನ್ನು ಬರೆಯಲಾಗುವುದು. ಭವ್ಯ ಶಿಷ್ಯನು ಗುರುಗಳ ಹತ್ತಿರ ವಿನಯಪೂರ್ವಕವಾಗಿ ಪುಣ್ಯ-ಪಾಪದ ಫಲವನ್ನು ಪ್ರಗಟರೂಪದಿಂದ ತಿಳಿಯುವ ಸಲುವಾಗಿ ಪ್ರಶ್ನೆಗಳ ಸಮೂಹವನ್ನು ಕೇಳುತ್ತಾನೆ, ಅದು ಈ ಪ್ರಕಾರವಿದೆ.

**ಸಂದೇಹ-೧ ಃ-** ಓ ಗುರುದೇವಾ ! ಈ ಜೀವನು ಯಾವ ಪಾಪದಿಂದ ಕುರುಡನಾಗುತ್ತಾನೆ ?

**ಸಮಾಧಾನ ಃ-** ಯಾವ ಜೀವರುಗಳು ಅನ್ಯ ಭವದಲ್ಲಿ ಅನ್ಯ ಜೀವಗಳ ನೇತ್ರಗಳಿಗೆ ದುಃಖವೀಯುತ್ತಾರೆ, ಅನ್ಯರ ನೇತ್ರಗಳನ್ನು ಒಡೆದು ಹಾಕುತ್ತಾರೆ, ಅನ್ಯರ ಕಣ್ಣುಗಳು ನೋಯುತ್ತಿರುವುದನ್ನು ಕಂಡು ಯಾರು ಸುಖಿಯಾಗುತ್ತಾರೆ, ಅನ್ಯರು ಅಂಧರಿರುವುದನ್ನು ತಿಳಿದು ಅನುಮೋದಿಸುತ್ತಾರೆ, ಅಂಧರ ಹಾಸ್ಯ ಮಾಡಿ ಅವರನ್ನು ಗೋಳಿಟ್ಟುಕೊಳ್ಳುತ್ತಾರೆ, ಅಂಧರ ಧನ-ವಸ್ತ್ರ ಮೊದಲಾದುವನ್ನು ಛಲ-ಬಲದಿಂದ ಹರಣ ಮಾಡುತ್ತಾರೆ-ಇತ್ಯಾದಿ ಪಾಪಗಳಿಂದ ಜೀವನು ಅಂಧನಾಗುತ್ತಾನೆ. ನೇತ್ರರಹಿತ ತ್ರೀಂದ್ರಿಯಾದಿ ಅಂಧ ಜೀವದ ರೂಪದಲ್ಲಿ ಉತ್ಪನ್ನನಾಗುತ್ತಾನೆ.

**ಸಂದೇಹ-೨ ಃ-** ಓ ಪ್ರಭು ! ಈ ಜೀವನು ಯಾವ ಪಾಪದಿಂದ ಕಿವುಡನಾಗುತ್ತಾನೆಂಬುದನ್ನು ಕೃಪೆ ಮಾಡಿ ಹೇಳಿರಿ.

**ಸಮಾಧಾನ ಃ-** ಮುನಿಶ್ರೀಯವರು ಹೇಳುತ್ತಾರೆ-ಯಾವ ಜೀವನು ತನ್ನ ಕಿವಿಗಳಿಂದ ವಿಕಥೆಯನ್ನಾಲಿಸಿ ಹರ್ಷಿತನಾಗುತ್ತಾನೆ, ಸತ್ಯವಚನಗಳನ್ನಾಲಿಸಿ ಅವನ್ನು ಅಸತ್ಯವೆಂದು ಹೇಳುತ್ತಾನೆ; ಅಸತ್ಯ ವಚನವನ್ನಾಲಿಸಿ ತಿಳಿಯುತ್ತಿದ್ದರೂ ಅದನ್ನು ಸತ್ಯವೆಂದು ಮನ್ನಿಸುತ್ತಾನೆ. ಅಪರಾಧಿ ಚಾಡಿಖೋರರ ಮುಖದಿಂದ ಅಸತ್ಯ , ಪಾಪಕಾರಕ ವಚನಗಳನ್ನಾಲಿಸಿ ಅನ್ಯ ಜೀವಗಳಿಗೆ ದೋಷ ತಗಲಿಸಿ ಅವರ ಸಂಪತ್ತನ್ನು ಲೂಟಿ ಮಾಡುತ್ತಾನೆ, ದಂಡನೆ ನೀಡುತ್ತಾನೆ, ಮನೆ, ಆನೆ, ಕುದುರೆ, ಸ್ತ್ರೀ ಮೊದಲಾದವರನ್ನು ಕಸಿದುಕೊಳ್ಳುತ್ತಾನೆ. ದ್ವೇಷಭಾವದಿಂದ ಬೇರೆಯವರ ಕಿವಿಗಳನ್ನು ಛೇದಿಸುತ್ತಾನೆ, ಬೇರೆಯವರನ್ನು ಕಿವುಡರೆಂದು ತಿಳಿದು ಅವರ ಕುರಿತಾಗಿ ಕುವಚನಗಳನ್ನಾಡುತ್ತಾನೆ. ಬೇರೆಯವರು ಕಿವುಡರೆಂದು ತಿಳಿದು ಹಾಸ್ಯ-ನಿಂದೆ ಮಾಡಿ ಹರ್ಷ ಮನ್ನಿಸುತ್ತಾನೆ, ಬೇರೆಯವರ ನ್ಯಾಯರೂಪ ದೀನತೆಯ ವಚನವನ್ನು ಆಲಿಸಿಯೂ ಆಲಿಸದಂತೆ ಮಾಡುತ್ತಾನೆ. ಪುನಃ ಪುನಃ ಬಂದು ದೀನರ ಮುಖಾಂತರ ಹೇಳಲಾಗುವ ಯಾಚನಾರೂಪದ ವಚನಗಳನ್ನಾಲಿಸಿಯೂ ಕೂಡ ಮಾನದ ವಶೀಭೂತನಾಗಿ ಅವರಿಗೆ ಉತ್ತರಿಸುವುದಿಲ್ಲ. ತನ್ನನ್ನು ಒಳ್ಳೆಯ ಮನುಷ್ಯನೆಂದು

ಮನ್ನಿಸಿ ಅನ್ಯ ಜೀವರುಗಳ ಮುಖಾಂತರ ವಿನಯಪೂರ್ವಕ ವಚನವನ್ನಾಡಿದ ಮೇಲೆ, ನಮಸ್ಕಾರಾದಿಗಳನ್ನು ಮಾಡಿದ ಮೇಲೆಯೂ ಕೂಡ ಮಾನದ ವಶೀಭೂತನಾಗಿ ಪ್ರತ್ಯುತ್ತರ ನೀಡುವ ಅಥವಾ ನಮಸ್ಕಾರಾದಿಗಳನ್ನು ಮಾಡುವ ಕ್ರಿಯೆ ಮಾಡುವುದಿಲ್ಲ. ಆಲಿಸಿಯೂ ಆಲಿಸದಂತೆ ಮಾಡುತ್ತಾನೆ - ಇತ್ಯಾದಿ ಪಾಪಗಳಿಂದ ಅವನು ಕಿವುಡನಾಗುತ್ತಾನೆ ಅಥವಾ ಕಿವಿಗಳಿಲ್ಲದ ಚತುರಿಂದ್ರಿಯ ಮೊದಲಾದ ಹೀನ ಪರ್ಯಾಯ ಧರಿಸುತ್ತಾನೆ.

**ಸಂದೇಹ-೩ :-** ಓ ಯತಿನಾಥರೇ ! ಯಾವ ಪಾಪದಿಂದ ಜೀವನು ಕುಂಟ ಹೆಳವನಾಗುತ್ತಾನೆ ?

**ಸಮಾಧಾನ :-** ಯಾರು ತಮ್ಮ ಕೈಯಿಂದ ಪರಭವದಲ್ಲಿ ಅನ್ಯರ ಕಾಲು ಮುರಿದಿದ್ದಾರೆ, ದಯೆರಹಿತ ಮನಸ್ಸಿನಿಂದ ದೀನ ಪಶುಗಳಿಗೆ ಕೋಲು-ಕಟ್ಟಿಗೆಯಿಂದ ಹೊಡೆದು ಅವುಗಳ ಕಾಲು ಮುರಿದಿದ್ದಾರೆ, ಶಸ್ತ್ರದಿಂದ ದೀನ ಪಶುಗಳ ಕಾಲು ಕತ್ತರಿಸಿದ್ದಾರೆ. ಬೇರೆಯವರನ್ನು ಕೈ-ಕಾಲು ರಹಿತರೆಂದು ತಿಳಿದು ಅವರ ಧನ-ವಸ್ತ್ರ-ಪಾತ್ರೆಗಳನ್ನು ತಗೆದುಕೊಂಡು ಓಡಿ ಹೋಗಿದ್ದಾರೆ, ಬೇರೆಯವರ ಕಾಲು ಕತ್ತರಿಸಿ ಸ್ವಯಂ ಪ್ರಸನ್ನರಾಗಿದ್ದಾರೆ, ಕೌತುಕದಿಂದ ನೋಡುತ್ತ ಹರ್ಷಿತರಾಗಿದ್ದಾರೆ, ಕಾಲಿಲ್ಲದವರನ್ನು ನೋಡಿ ಪೀಡಿಸಿದ್ದಾರೆ-ಹಾಸ್ಯ ಮಾಡಿದ್ದಾರೆ - ಇತ್ಯಾದಿ ಪಾಪ ಮಾಡಿರುವಂಥವರು ಕುಂಟ-ಹೆಳವರಾಗುತ್ತಾರೆ; ಕೈ-ಕಾಲುಗಳಿಲ್ಲದ, ಹಲನ ಚಲನರಹಿತ ಏಕೇಂದ್ರಿಯವಾಗುತ್ತಾರೆ.

**ಸಂದೇಹ ೪ :-** ಯಾವ ಪಾಪದಿಂದ ಜೀವನು ಬಾಯಿಲ್ಲದ ಅಥವಾ ಬಾಯಿದ್ದರೂ ಮೂಗನಾಗುತ್ತಾನೆ?

**ಸಮಾಧಾನ :-** ಎಲೈ ಸುಬುದ್ಧೀ ವತ್ಸನೇ ! ಸ್ಥಿರ ಚಿತ್ತದಿಂದ ಆಲಿಸು ! ಯಾವ ಜೀವರುಗಳು ಅನ್ಯರ ಬಾಯಿಕಟ್ಟಿ ಅವರನ್ನು ಶಸ್ತ್ರಾದಿಗಳಿಂದ ಸಾಯಿಸಿದ್ದಾರೆ, ಬಾಯಲ್ಲಿ ಬಟ್ಟೆ ತುರುಕಿ ಮಾತನಾಡದಂತೆ ಮಾಡಿದ್ದಾರೆ. ದುಃಖಿಯನ್ನಾಗಿಸಿದ್ದಾರೆ; ಬೇರೆಯವರು ಒಳ್ಳೆಯ ವಚನಗಳನ್ನಾಡುತ್ತಿರುವುದನ್ನು ಕಂಡು ಅವರ ನಿಷೇಧ ಮಾಡಿದ್ದಾರೆ. ಬಾಯನ್ನು ಪಡೆದು ಅಸತ್ಯವನ್ನಾಡಿ ಬೇರೆಯವರಿಗೆ ಕೇಡು ಮಾಡಿದ್ದಾರೆ, ರಸನಾ ಇಂದ್ರಿಯದ ಅತ್ಯಧಿಕ ಲೋಲುಪತೆಯಿಂದ, ಅದರ ಸಲುವಾಗಿ ಅನೇಕ ಜೀವಗಳ ಹಿಂಸೆ ಮಾಡಿದ್ದಾರೆ. ನಾಲಿಗೆಗೆ ಅಭಕ್ಷ್ಯ ಪದಾರ್ಥಗಳು ತುಂಬ ಒಳ್ಳೆಯವೆನಿಸಿವೆ, ಅನ್ಯ ಜೀವಗಳ ಮೇಲೆ ಕ್ರೋಧ ಮಾಡಿ ಅವುಗಳ ನಾಲಿಗೆ ಕತ್ತರಿಸಿದ್ದಾರೆ, ಬೇರೆಯವರು ಮೂಗರಿರುವುದನ್ನು ತಿಳಿದು ಅವರ ಗೇಲಿ ಮಾಡಿದ್ದಾರೆ, ಅವರನ್ನು ರೇಗಿಸಿದ್ದಾರೆ, ಬೇರೆಯವರ ಕುರಿತಾಗಿ ತಿಳಿದು ಬರಬಾರದಂಥ ಪ್ರಚ್ಛನ್ನ ದುರ್ವಚನಗಳನ್ನಾಡಿ ಹರ್ಷ ಮನ್ನಿಸಿದ್ದಾರೆ - ಇತ್ಯಾದಿ ಪಾಪಗಳಿಂದ ಅವರು ಮೂಗರಾಗುತ್ತಾರೆ.

**ಸಂದೇಹ-೫ :-** ಸ್ವಾಮಿ ! ಈ ಜೀವನು ಯಾವ ಪಾಪದಿಂದ ನಿರ್ಧನನಾಗುತ್ತಾನೆ ?

**ಸಮಾಧಾನ :-** ಎಲೈ ವತ್ಸನೇ ಆಲಿಸು ! ಯಾರು ಪರಭವದಲ್ಲಿ ಅನ್ಯ ಜೀವರುಗಳ ಧನವನ್ನು ಕಳವು ಮಾಡಿ ಅವರನ್ನು ನಿರ್ಧನ ಮಾಡಿರುತ್ತಾರೆ, ಇತರರ ಮೇಲೆ ಸುಳ್ಳು ದೋಷ ತಗಲಿಸಿ, ಬಲವಂತತೆಯಿಂದ ಅವರ ಧನವನ್ನು ಲಪಟಾಯಿಸಿ ಅವರನ್ನು ನಿರ್ಧನ ಮಾಡಿದ್ದಾರೆ; ಬೇರೆಯವರಿಗೆ ಬೆದರಿಕೆ ಹಾಕಿ, ತೊಂದರೆ ಕೊಟ್ಟು ಅವರ ಧನವನ್ನು ಕಸಿದುಕೊಂಡಿದ್ದಾರೆ, ಧನ ಸಂಗ್ರಹ ಮಾಡುವ ಸಲುವಾಗಿ ಅನೇಕ ಸೋಗು ಧಾರಣ ಮಾಡಿ, ಅನ್ಯರ ಧನವನ್ನು ತಮ್ಮದಾಗಿಸಿಕೊಂಡಿದ್ದಾರೆ - ಅಂಥ ಅಪರಾಧೀ ಜೀವಗಳು ನಿರ್ಧನರಾಗುತ್ತಾರೆ.

ಅನ್ಯರನ್ನು ಧನಿಕ-ಶ್ರೀಮಂತ ರೂಪದಲ್ಲಿ ಯಾರಿಗೆ ನೋಡುವುದಾಗುವುದಿಲ್ಲ, ಅನ್ಯರ ಮನೆಯಲ್ಲಿ ಧನವಿರುವುದನ್ನು ಕಂಡು ಸ್ವಯಂ ದುಃಖಿಯಾಗುತ್ತಾರೆ, ಅವರ ಧನವನ್ನು ನಷ್ಟಮಾಡುವ ಸಲುವಾಗಿ ದೊರೆ-ಪಂಚ ಮೊದಲಾದವರಿಗೆ ಚಾಡಿ ಹೇಳಿ, ಅವರ ಧನವನ್ನು ನಷ್ಟಗೊಳಿಸಿ, ಅವರನ್ನು ನಿರ್ಧನ ಮಾಡಿದ್ದಾರೆ; ಅನ್ಯರ ಧನ ಸಂಪಾದನೆಯ ಯಾವುದೋ ವಿಶಿಷ್ಟ ಕಾರ್ಯ ರಹಸ್ಯವನ್ನು ತಿಳಿದು ಅವರ ಕಾರ್ಯದ ಘಾತ ಮಾಡಿದ್ದಾರೆ, ಇತ್ಯಾದಿ ಪಾಪ ಭಾವಗಳಿಂದ ಜೀವರು ಭವಾಂತರದಲ್ಲಿ ನಿರ್ಧನರಾಗಿ ಹೋಗುತ್ತಾರೆ.

ನಿರ್ಧನನಾಗುವ ಸಲುವಾಗಿ ಬೇರೆಯೂ ಅನೇಕ ಕಾರಣಗಳಿವೆ - ಯಾರು ಇತರರ ಧನ-ಆಸ್ತಿಯು ಅಗ್ನಿಯಲ್ಲಿ ಸುಟ್ಟು ಹೋಗುತ್ತಿರುವುದನ್ನು ಕಂಡು ಹರ್ಷ ಮನ್ನಿಸಿದ್ದಾರೆ, ತಾವು ಸ್ವಯಂ ಬೇರೆಯವರ ಧನವನ್ನು ಬೆಂಕಿ ಹಚ್ಚಿ ಸುಟ್ಟು ಅವರನ್ನು ನಿರ್ಧನರನ್ನಾಗಿಸಿದ್ದಾರೆ ಅಂಥವರು ಆ ಪಾಪದಿಂದ ತಮ್ಮ ಧನವು ಅಗ್ನಿಯಲ್ಲಿ ಸುಟ್ಟು ಹೋಗಿ ತಾವು ನಿರ್ಧನರಾಗುತ್ತಾರೆ. ಬೇರೆಯವರ ಧನವು ನೀರು ಪಾಲಾಗುತ್ತಿರುವುದನ್ನು ಕಂಡು, ಆಲಿಸಿ ಹರ್ಷಿತರಾಗುತ್ತಾರೆ; ಅವರು ಧೂರ್ತತೆಯಿಂದ ಬೇರೆಯವರ ಧನವನ್ನು ನದಿ, ಬಾವಿ, ಕೆರೆಗಳಲ್ಲಿ ಹಾಕಿ ಅವರನ್ನು ನಿರ್ಧನ ಮಾಡಿದ್ದಾರೆ ಅವರು ಆ ಪಾಪದಿಂದ ಭವಾಂತರದೊಳಗೆ ನದಿಯಲ್ಲಿ ದೋಣಿಯು ಮುಳುಗಿ ತಮ್ಮ ಧನವು ನಷ್ಟವಾಗಿ ನಿರ್ಧನರಾಗಿ ಹೋಗುತ್ತಾರೆ.

ಬೇರೆಯವರ ಮನೆ-ನಗರ ಲೂಟಿಯಾಗುತ್ತಿರುವುದನ್ನು ನೋಡಿ, ಕೇಳಿ ಸ್ವಯಂ ಸುಖಿಯಾಗುತ್ತಿದ್ದರೆ ತಾನು ಕೂಡ ಅದರ ಫಲದಲ್ಲಿ ದುಷ್ಟ ದರೋಡೆಖೋರ ಅಥವಾ ಸೈನಿಕರಿಂದ ಲೂಟಿ ಮಾಡಲಾಗಿ ದುಃಖಿ ನಿರ್ಧನನಾಗುತ್ತಾನೆ. ಅನ್ಯರ ಧನವನ್ನು ಸ್ವಯಂ ಬಲಪೂರ್ವಕ ಕಿತ್ತುಕೊಂಡಿದ್ದರೆ ಅಥವಾ ಅನ್ಯರ ಧನವು ಕಳ್ಳರಿಂದ ಕೊಳ್ಳೆ ಹೊಡೆಯುತ್ತಿರುವುದನ್ನು ನೋಡಿ, ಕೇಳಿ ಇಲ್ಲವೆ ಅವರು ತಾವಾಗಿಯೇ ನಿರ್ಧನರಾಗಿರುವುದನ್ನು ಕಂಡು ಹರ್ಷ ಮನ್ನಿಸುತ್ತಾರೆ. ಅವರು ಆ ಪಾಪದಿಂದ ಭವಾಂತರದಲ್ಲಿ ಸ್ವಯಂ ಅಂಥ ಘಟನೆಗಳಿಗೆ ಬಲಿಯಾಗಿ ನಿರ್ಧನರಾಗುತ್ತಾರೆ-ಹೀಗೆ ನಿರ್ಧನರಾಗುವಲ್ಲಿ ಅನೇಕ ಕಾರಣಗಳಿವೆ. ಯಾವ ಪರಿಣಾಮಗಳಿಂದ ಬೇರೆಯವರನ್ನು ನಿರ್ಧನ ಮಾಡಬಯಸುತ್ತಾನೆ ಹಾಗೂ ಯಾವ-ಯಾವ ರೂಪದಲ್ಲಿ ಅನ್ಯರು ನಿರ್ಧನರಾಗಿರುವುದನ್ನು ಕಂಡು ಸ್ವಯಂ ಪ್ರಸನ್ನನಾಗುತ್ತಾನೆ. ಅವೇ ನಿಮಿತ್ತ ಪಡೆದು ಈ ಜೀವನು ಸ್ವಯಂ ನಿರ್ಧನನಾಗಿ ಹೋಗುತ್ತಾನೆ. ಮಲಿನ ಪರಿಣಾಮವು ದೀರ್ಘಫಲದಾಯಕವಿರುತ್ತದೆ.

**ಸಂದೇಹ-೬ :-** ಪ್ರಭು ! ಈ ಜೀವನು ಯಾವ ಪುಣ್ಯದಿಂದ ಧನವಂತನಾಗುತ್ತಾನೆ ?

**ಸಮಾಧಾನ :-** ಎಲೈ ಭವ್ಯನೇ ಆಲಿಸು ! ಯಾವ ಜೀವರುಗಳು ನಿರ್ಧನ ಪುರುಷರ ಮೇಲೆ ದಯೆ ಮಾಡುತ್ತಾರೆ, ಅವರಿಗೆ ದಾನ ಕೊಟ್ಟು, ಧನಿಕರನ್ನಾಗಿಸಿ ಸುಖಿ ಮಾಡುತ್ತಾರೆ; ನಿರ್ಧನ ಜನರನ್ನು ನೋಡಿ, ಅವರ ಮೇಲೆ ದಯೆ ಮಾಡಿ ಅವರು ಅನುಕೂಲಸ್ಥರಾಗಲೆಂಬ ಇಚ್ಛೆ ಮಾಡುತ್ತಾರೆ, ಬೇರೆಯವರಿಗೆ ಧನದ ಪ್ರಾಪ್ತಿಯಾಗಿರುವುದನ್ನು ಕಂಡು, ಆಲಿಸಿ ಸ್ವಯಂ ಸುಖಿಯಾಗುತ್ತಾರೆ-ಇತ್ಯಾದಿ ಶುಭಭಾವಗಳಿಂದ ಜೀವನು ಅದರ ಫಲದಲ್ಲಿ ಧನವಂತನಾಗುತ್ತಾನೆ.

**ಸಂದೇಹ-೭ :-** ಈ ಜೀವನು ಯಾವ ಪಾಪದಿಂದ ಪುತ್ರರಹಿತನಾಗುತ್ತಾನೆ ?

**ಸಮಾಧಾನ :-** ಯಾವ ಜೀವನು ಪೂರ್ವಭವದಲ್ಲಿ ಅನ್ಯರ ಪುತ್ರರನ್ನು ನೋಡಲಾಗದೇ ಮರುಗುತ್ತಾನೆ; ಅನ್ಯರಿಗೆ ಪುತ್ರಪ್ರಾಪ್ತಿಯಾಗಿರುವುದನ್ನು ಆಲಿಸಿ ಸ್ವಯಂ ದುಃಖಿಯಾಗುತ್ತಾನೆ; ಅನ್ಯರ ಪುತ್ರನ ಮರಣವಾಗಿ ಹೋದ ಸಮಾಚಾರ ಕೇಳಿ ಸುಖಿಯಾಗುತ್ತಾನೆ; ಅನ್ಯರ ಪುತ್ರನ ಅಪಹರಣ ಮಾಡಬಯಸುತ್ತಾನೆ-ಇತ್ಯಾದಿ ಪಾಪಗಳಿಂದ ಈ ಜೀವನು ಪುತ್ರರಹಿತನಾಗುತ್ತಾನೆ.

**ಸಂದೇಹ-೮ :-** ಪ್ರಭು ! ಈ ಜೀವನು ಯಾವ ಪುಣ್ಯದಿಂದ ಪುತ್ರಸಹಿತನಾಗುತ್ತಾನೆ ?

**ಸಮಾಧಾನ :-** ಆಲಿಸು ವತ್ಸನೇ ! ಯಾವ ಜೀವರುಗಳು ಭವಾಂತರದಲ್ಲಿ ಅನ್ಯ ಜೀವರುಗಳು ಪುತ್ರಸಹಿತ-ರಿರುವುದನ್ನು ಕಂಡು ಸುಖ ಮನ್ನಿಸಿದ್ದಾರೆ. ಬೇರೆಯವರಿಗೆ ಪುತ್ರಪ್ರಾಪ್ತಿಯಾಗಿರುವುದನ್ನು ಕೇಳಿ ಹರ್ಷಿತರಾಗಿದ್ದಾರೆ. ಅನ್ಯ ಪುತ್ರರಹಿತರು ಆರ್ತಧ್ಯಾನೀ, ದುಃಖೀ, ಪುತ್ರನ ಅಭಿಲಾಷೆಯುಳ್ಳವರನ್ನು ಕಂಡು ಅವರ ಕುರಿತಾಗಿ ದಯೆಯ ಭಾವದೊಂದಿಗೆ ಪುತ್ರಪ್ರಾಪ್ತಿಯಾಗಲೆಂದು ಬಯಸಿದ್ದಾರೆ-ಇತ್ಯಾದಿ ಪುಣ್ಯದಿಂದ ಜೀವನು ಪುತ್ರ ಸಹಿತನಾಗುತ್ತಾನೆ.

**ಸಂದೇಹ-೯ :-** ಪ್ರಭು ! ಈ ಜೀವನಿಗೆ ಕುಪುತ್ರನ ಸಂಯೋಗವು ಯಾವ ಪಾಪದಿಂದ ಆಗುತ್ತದೆ?

**ಸಮಾಧಾನ :-** ಎಲೈ ವತ್ಸನೇ ! ಯಾರು ಬೇರೆಯವರ ಮಕ್ಕಳನ್ನು ದಾರಿತಪ್ಪಿಸುವಲ್ಲಿ-ಅವರನ್ನು ಪಾಪ ಕಾರ್ಯಗಳಲ್ಲಿ ತೊಡಗಿಸಿ, ಅನೇಕ ಕುಬುದ್ಧಿಯನ್ನು ಕಲಿಸಿ ಅವರ ತಾಯಿ-ತಂದೆಯರ ಜತೆ ಯುದ್ಧ-ಹೋರಾಟ ಮಾಡಿಸಿದ್ದಾರೆ ಮಕ್ಕಳ ಎದುರಿಗೆ ತಾಯಿ-ತಂದೆಯರ ನಿಂದೆ ಮಾಡಿದ್ದಾರೆ, ಬೇರೆಯವರ ಸತ್ಪುತ್ರರನ್ನು ಕಂಡು ಮಾತ್ಸರ್ಯಭಾವ ಮಾಡಿದ್ದಾರೆ, ಬೇರೆಯವರ ಮಕ್ಕಳು ಕಳವು, ಕುಶೀಲ, ವ್ಯಸನಾದಿಗಳಲ್ಲಿ ತೊಡಗಿರುವುದನ್ನು ನೋಡಿ ಹರ್ಷಿತರಾಗಿದ್ದಾರೆ, ಅನ್ಯರ ಅನಾಚಾರವನ್ನು ಕಂಡು ಸುಖಿಯಾಗಿದ್ದಾರೆ ಇತ್ಯಾದಿ ಅಶುಭ ಭಾವಗಳಿಂದ ಕುಪುತ್ರನ ಸಂಯೋಗವಾಗುತ್ತದೆ.

**ಸಂದೇಹ-೧೦ :-** ಓ ಯತಿರಾಜರೇ ! ಸತ್ಪುತ್ರನ ಲಾಭವು ಯಾವ ಪುಣ್ಯದಿಂದ ಆಗುತ್ತದೆ ?

**ಸಮಾಧಾನ :-** ಯಾರು ಅನ್ಯರ ಕುಪುತ್ರರನ್ನು -ಕುಮಾರ್ಗದಲ್ಲಿ ಹೊರಟಿರುವ ಮಕ್ಕಳನ್ನು ಅನೇಕ ವಿಧದಿಂದ ದಂಡಿಸಿ ಸುಮಾರ್ಗದಲ್ಲಿ ತೊಡಗಿಸಿದ್ದಾರೆ, ಅನೇಕ ಯುಕ್ತಿಗಳ ಪ್ರಯೋಗ ಮಾಡಿ ಅವರಲ್ಲಿ ಸದ್ಬುದ್ಧಿಯನ್ನು ಉತ್ಪನ್ನ ಮಾಡಿ ಮಾತಾ-ಪಿತರ ಆಜ್ಞೆಯಲ್ಲಿರುವಂತೆ ಮಾಡಿದ್ದಾರೆ; ಅನ್ಯರ ಗುಣವಂತ-ಬುದ್ಧಿವಂತ ಪುತ್ರರನ್ನು ನೋಡಿ ಸ್ವಯಂ ಸುಖ ಮನ್ನಿಸಿದ್ದಾರೆ, ಬೇರೆಯವರ ಸತ್ಪುತ್ರರುಗಳ ಶುಭ ಲಕ್ಷಣಗಳ ಪ್ರಶಂಸೆ ಮಾಡಿದ್ದಾರೆ, ಮಕ್ಕಳು ಮಾತಾ-ಪಿತರಲ್ಲಿ ವಿನಯದಿಂದಿರುವುದನ್ನು ಕಂಡು ಹರ್ಷಿತರಾಗಿದ್ದಾರೆ ಅವರಿಗೆ ಇಂಥ ಶುಭಭಾವಗಳಿಂದ ಸತ್ಪುತ್ರನ ಲಾಭವಾಗುತ್ತದೆ.

**ಸಂದೇಹ-೧೧ :-** ಓ ಸ್ವಾಮೀ ! ಯಾವ ಪಾಪದಿಂದ ಅಶುಭ (ಕಲಹಕಾರಿ) ಸ್ತ್ರೀಯ ಪ್ರಾಪ್ತಿಯಾಗುತ್ತದೆ?

**ಸಮಾಧಾನ :-** ಎಲೈ ಭವ್ಯನೇ ! ಯಾವ ಜೀವನು ಅನ್ಯರ ಮನೆಯಲ್ಲಿ ಕಲಹಕಾರಿಣೀ ಸ್ತ್ರೀಯನ್ನು ಕಂಡು ಸುಖಿಯಾಗುತ್ತಾನೆ, ಛಲದಿಂದ ಅನ್ಯಸ್ತ್ರೀ ಮತ್ತು ಅವಳ ಪತಿಯ ಮಧ್ಯ ಕಲಹ ಮಾಡಿಸುತ್ತಾನೆ, ಪರಸ್ಪರರಲ್ಲಿ ದ್ವೇಷ ಹುಟ್ಟಿಸಿ ಮತ್ತು ಹೆಚ್ಚಿಸಿ ಹರ್ಷಿತನಾಗುತ್ತಾನೆ; ಬೇರೆಯವರ ಮನೆಯಲ್ಲಿ ಸತಿ, ವಿನಯವತಿ, ಒಳ್ಳೆಯ ಸ್ತ್ರೀಯನ್ನು ಕಂಡು ಅಸಮಾಧಾನನಿರುತ್ತಾನೆ, ಬೇರೆಯವರ ಸತ್‌ಶೀಲ ಸಂಪನ್ನೇ ಸ್ತ್ರೀಯರನ್ನು ಕಂಡು ಅವರ ನಿಂದೆ ಮಾಡುತ್ತಾನೆ - ಇತ್ಯಾದಿ ಪಾಪಗಳಿಂದ ಅವನಿಗೆ ಪರಭವದಲ್ಲಿ ಅಶುಭ ಸ್ತ್ರೀಯ ಪ್ರಾಪ್ತಿಯಾಗುತ್ತದೆ.

**ಸಂದೇಹ-೧೨ :-** ಪ್ರಭು ! ಒಳ್ಳೆಯ ಸ್ತ್ರೀಯ ಪ್ರಾಪ್ತಿಯು ಯಾವ ಪುಣ್ಯದಿಂದ ಆಗುತ್ತದೆ ?

**ಸಮಾಧಾನ :-** ಎಲೈ ಜಿಜ್ಞಾಸು ಜೀವನೇ ! ಯಾರು ಬೇರೆಯವರ ಸ್ತ್ರೀಯರ ಅವಗುಣಗಳನ್ನು ಬಿಡಿಸಿ, ಅವರನ್ನು ಸದ್ಗುಣಿಗಳನ್ನಾಗಿ ಮಾಡುತ್ತಾರೆ, ಅನ್ಯ ಸ್ತ್ರೀಯರ ಶೀಲಾದಿ ಗುಣ ಹಾಗೂ ಪತಿಯ ಕುರಿತಾಗಿರುವ ವಿನಯರೂಪ ಪ್ರವೃತ್ತಿಯನ್ನು ಕಂಡು ಯಾರಿಗೆ ಪ್ರಸನ್ನತೆಯಾಗುತ್ತದೆ, ಅನ್ಯಸ್ತ್ರೀಯರ ಶೀಲರಕ್ಷಣೆ ಮಾಡುತ್ತಾರೆ, ಶೀಲವತಿಯರ ಪ್ರಶಂಸೆ ಮಾಡುತ್ತಾರೆ, ಇವೇ ಮೊದಲಾದ ಶುಭ ಭಾವಗಳಿಂದ ಶುಭ ಸ್ತ್ರೀಯ ಪ್ರಾಪ್ತಿಯಾಗುತ್ತದೆ.

**ಸಂದೇಹ-೧೩ :-** ಈ ಸಂಸಾರದಲ್ಲಿ ಜೀವನು ಯಾವ ಪಾಪದಿಂದ ಅಪಮಾನಿತನಾಗುತ್ತಾನೆ?

**ಸಮಾಧಾನ :-** ಎಲೈ ಭವ್ಯನೇ ! ಯಾರು ಪೂರ್ವಭವದಲ್ಲಿ ಅನೇಕ ಜೀವರುಗಳ ಮಾನ ಖಂಡಿತ ಮಾಡಿದ್ದಾರೆ; ಮಾತಾ-ಪಿತ ಮೊದಲಾದ ಗುರುಜನರ ಗೌರವ ವಿನಯ ಮಾಡಿಲ್ಲ, ದೇವ-ಗುರು-ಧರ್ಮದ ಅವಿನಯ ಮಾಡಿದ್ದಾರೆ; ಬೇರೆ ಜೀವಗಳನ್ನು ಅಲ್ಪ ಪುಣ್ಯವಂತರೆಂದು ತಿಳಿದು, ಅವರ ಅನಾದರ ಮಾಡಿ, ಅನ್ಯ ಜೀವರುಗಳನ್ನು ದುಃಖಿ ಮಾಡಿದ್ದಾರೆ, ತಮ್ಮ ಬಾಯಿಂದ ತಮ್ಮ ದೊಡ್ಡಸ್ತಿಕೆ ಹೇಳುತ್ತ ಅನ್ಯರ ನಿಂದೆ ಮಾಡಿದ್ದಾರೆ. ಸ್ವಯಂ ತಮ್ಮನ್ನು ಶ್ರೇಷ್ಠರೆಂದು ತಿಳಿದು, ದೀನ ಜೀವಗಳಿಗೆ ಕಷ್ಟ ಕೊಟ್ಟಿದ್ದಾರೆ-ಇಂಥ ಪಾಪಭಾವಗಳಿಂದ ಅವರು ಪರಭವದಲ್ಲಿ ಅಪಮಾನಿತರಾಗುತ್ತಾರೆ.

**ಸಂದೇಹ-೧೪ ಃ-** ಗುರುದೇವರೇ ! ಜಗತ್ತಿನಲ್ಲಿ ಜೀವನು ಯಾವ ಪುಣ್ಯದಿಂದ ಕೀರ್ತಿವಂತನಾಗುತ್ತಾನೆ?

**ಸಮಾಧಾನ ಃ-** ಯಾವ ಜೀವರುಗಳು ತಮ್ಮ ಪೂರ್ವ ಭವದಲ್ಲಿ ತಮ್ಮ ಮುಖದಿಂದ ತೀರ್ಥಂಕರ, ಚಕ್ರವರ್ತಿ, ಕಾಮದೇವ ಮೊದಲಾದ ಮಹಾಪುರುಷರ ಗುಣಕೀರ್ತನೆ ಮಾಡಿದ್ದಾರೆ, ಬೇರೆಯವರ ಕೀರ್ತಿಯನ್ನು ಆಲಿಸಿ ಸ್ವಯಂ ಸುಖಿಯಾಗಿದ್ದಾರೆ; ಇತರರ ದೋಷಗಳನ್ನು ಕಂಡು ಸ್ವಯಂ ಯಾರು ಅವನ್ನು ಮುಚ್ಚಿಬಿಟ್ಟಿದ್ದಾರೆ, ದೇವ-ಗುರು-ಧರ್ಮದ ಮಹಿಮೆ ಹಾಡಿದ್ದಾರೆ; ವಿನಯಪೂರ್ವಕ ಮಾತಾ-ಪಿತ ಮೊದಲಾದ ಗುರುಜನರ ಸೇವೆ ಮಾಡಿದ್ದಾರೆ - ಇತ್ಯಾದಿ ಪುಣ್ಯಭಾವಗಳಿಂದ ಕೀರ್ತಿವಂತರಾಗುತ್ತಾರೆ.

**ಸಂದೇಹ-೧೫ ಃ-** ಓ ತ್ರಯಜ್ಞಾನಿಗಳೇ ! ಈ ಜೀವನಿಗೆ ಯಾವ ಪಾಪದಿಂದ ಇಡೀ ಕುಟುಂಬವು ದುಃಖದಾಯಕವಾಗುತ್ತದೆ ?

**ಸಮಾಧಾನ ಃ-** ಯಾರು ಅನ್ಯಕುಟುಂಬಗಳಲ್ಲಿನ ಪರಸ್ಪರ ಸಾತಾವನ್ನು ಕಂಡು ಸ್ವಯಂ ದುಃಖ ಮನ್ನಿಸಿದ್ದಾರೆ, ಅನ್ಯ ಕುಟುಂಬಗಳಲ್ಲಿನ ಕಲಹವನ್ನು ಕಂಡು ಸುಖ ಪಡೆದಿದ್ದಾರೆ, ಅನ್ಯ ಮನೆಗಳಲ್ಲಿ ಪಾರಸ್ಪಾರಿಕ ಭ್ರಾತೃ ಸ್ನೇಹವನ್ನು ಕಂಡು ಸ್ವಯಂ ಮೋಸಗಾರಿಕೆಯಿಂದ ಅಸತ್ಯವಚನಗಳ ರಚನೆ ಮಾಡಿ ಒಬ್ಬರ ಕುರಿತಾಗಿ ಒಬ್ಬರಿಗೆ ಹೇಳುತ್ತ ಪರಸ್ಪರರಲ್ಲಿ ದ್ವೇಷವನ್ನುಂಟು ಮಾಡಿ ಹರ್ಷಿತರಾಗಿದ್ದಾರೆ - ಇಂಥ ಪಾಪ ಪ್ರವೃತ್ತಿಯಿಂದ ಜೀವನಿಗೆ ಇಡೀ ಕುಟುಂಬ ವರ್ಗದವರು ದುಃಖದಾಯಕರಾಗುತ್ತಾರೆ.

**ಸಂದೇಹ-೧೬ ಃ-** ಓ ಜಗತ್ಪೂಜ್ಯರೇ ! ಯಾವ ಪುಣ್ಯದಿಂದ ಈ ಜೀವನಿಗೆ ಕುಟುಂಬದವರೆಲ್ಲ ಸುಖದಾಯಕ-ರಾಗುತ್ತಾರೆ?

**ಸಮಾಧಾನ ಃ-** ಎಲೈ ಆರ್ಯನೇ ! ಯಾರು ಅನ್ಯ ಕುಟುಂಬಗಳಲ್ಲಿರುವ ಪಾರಸ್ಪರಿಕ ದ್ವೇಷವನ್ನು ಕಂಡು ತಮ್ಮ ಬುದ್ಧಿಯ ಬಲದಿಂದ ಅವರಲ್ಲಿ ಪರಸ್ಪರ ಸ್ನೇಹವನ್ನುಂಟು ಮಾಡಿಸಿ ಅವರನ್ನು ಸುಖಿಯನ್ನಾಗಿಸಿದ್ದಾರೆ, ಇತರ ಕುಟುಂಬದಲ್ಲಿ ಪರಸ್ಪರರಲ್ಲಿರುವ ಸ್ನೇಹ-ವಿಶ್ವಾಸಗಳನ್ನು ಕಂಡು ಎಲ್ಲರೂ ಸಾತಾಮಯರಾಗಿರುವುದನ್ನು ಕಂಡು ಸ್ವಯಂ ಹಿತ ಪಡೆದಿದ್ದಾರೆ - ಸ್ವಯಂ ಸುಖಿಯಾಗಿದ್ದಾರೆ. ಅನ್ಯ ಪರಿವಾರಗಳಲ್ಲಿ ಸುಖವನ್ನುಂಟು ಮಾಡುವ ಸಲುವಾಗಿ ಬಹಳಷ್ಟು ಧನ ಖರ್ಚು ಮಾಡಿದ್ದಾರೆ, ಶಾರೀರಿಕ ಕಷ್ಟ ಹಾಗೂ ಬುದ್ಧಿಯ ಪ್ರಕಾಶದಿಂದ ಕೆಲವು ಕುಟುಂಬಗಳಲ್ಲಿ ಆನಂದದ ಅಲೆಗಳು ಉಕ್ಕುವಂತೆ ಮಾಡಿದ್ದಾರೆ - ಇವೇ ಮೊದಲಾದ ಶುಭಭಾವಗಳಿಂದ ಜೀವನಿಗೆ ಸುಖದಾಯಕ ಕುಟುಂಬ ವರ್ಗದ ಪ್ರಾಪ್ತಿಯಾಗುತ್ತದೆ.

**ಸಂದೇಹ-೧೭ ಃ-** ಯಾವ ಪಾಪದಿಂದ ಶರೀರದಲ್ಲಿ ರೋಗಗಳ ಸಮೂಹವು ಬಂದು ನೆಲೆಯೂರುತ್ತದೆ?

**ಸಮಾಧಾನ ಃ-** ಗುರುಗಳು ಹೇಳುತ್ತಾರೆ-ಯಾರು ಪೂರ್ವದಲ್ಲಿ ಔಷಧ ದಾನದ ಸಮಯದಲ್ಲಿ ನಿಷೇಧ ಮಾಡಿದ್ದಾರೆ, ಇತರರ ಶರೀರದಲ್ಲಿ ರೋಗಗಳನ್ನು ಕಂಡು ಸುಖಿಯಾಗಿದ್ದಾರೆ, ಬೇರೆಯವರ ನಿರೋಗ ಶರೀರವನ್ನು ನೋಡಿ ಯಾರು ದುಃಖಿಯಾಗಿದ್ದಾರೆ, ಬೇರೆಯವರ ಸಲುವಾಗಿ ರೋಗದ ವಾಂಛೆ ಮಾಡಿದ್ದಾರೆ; ಬೇರೆಯವರ ಶರೀರದಲ್ಲಿನ ರೋಗವನ್ನು ಕಂಡು ಗ್ಲಾನಿ ಮಾಡಿದ್ದಾರೆ, ರೋಗಿಗಳ ಮೇಲೆ ದಯೆಯ ಭಾವ ಮಾಡಿಲ್ಲ, ಅನ್ಯರಿಗೆ ರೋಗದ ವೃದ್ಧಿಯಾಗುವಂಥ ಅನೇಕ ವಸ್ತುಗಳನ್ನು ಛಲದಿಂದ ತಿನ್ನಿಸಿದ್ದಾರೆ; ಔಷಧದ ದಾನವನ್ನೆಂದೂ ಮಾಡಿಲ್ಲ, ಇತರರ ರೋಗಮಯ ದೇಹ ಕಂಡು ಹಾಸ್ಯ ಮಾಡಿದ್ದಾರೆ ಅವರನ್ನು ನಿಂದಿಸಿದ್ದಾರೆ, ರೇಗಿಸಿದ್ದಾರೆ-ಇತ್ಯಾದಿ ಪಾಪ ಭಾವಗಳಿಂದ ಜೀವನಿಗೆ ಶರೀರದಲ್ಲಿ ರೋಗಗಳಾಗುತ್ತವೆ.

**ಸಂದೇಹ-೧೮ ಃ-** ಓ ಪ್ರಭು ! ಈ ಜೀವನು ಯಾವ ಪುಣ್ಯದಿಂದ ನಿರೋಗ ಶರೀರ ಪಡೆಯುತ್ತಾನೆ?

**ಸಮಾಧಾನ ಃ-** ಆಲಿಸು ಭವ್ಯನೇ ! ಯಾವ ಜೀವನು ಪೂರ್ವಭವದಲ್ಲಿ ಸುಪಾತ್ರರುಗಳ ಶರೀರದಲ್ಲಿ

ಆಗಿರುವ ರೋಗದ ಬಾಧೆಯನ್ನು ನೋಡಿ, ಅವರಿಗೆ ಆಹಾರದ ಸಮಯದಲ್ಲಿ ಪ್ರಾಸುಕ ಔಷಧಿಯನ್ನು ಕೊಟ್ಟು ಸಾತಾದ ಉತ್ಪತ್ತಿ ಮಾಡಿದ್ದಾನೆ; ದೀನ-ದುಃಖಿಗಳ ಶರೀರದ ರೋಗವನ್ನು ನೋಡಿ ಕರುಣೆಯ ಭಾವದಿಂದ ರೋಗ ನಾಶದ ಸಲುವಾಗಿ ಅವರಿಗೆ ಔಷಧದ ದಾನ ನೀಡಿದ್ದಾನೆ, ಅನ್ಯರ ಶರೀರದಲ್ಲಿನ ರೋಗವನ್ನು ಕಂಡು ಅವರ ಮೇಲೆ ಅನುಕಂಪೆ ಮಾಡಿದ್ದಾನೆ; ಇತರರ ನಿರೋಗಿ ಶರೀರವನ್ನು ನೋಡಿ ಸುಖಿಯಾಗಿದ್ದಾನೆ; ಬೇರೆಯವರ ರೋಗಮಯ ಶರೀರವನ್ನು ನೋಡಿ ಗ್ಲಾನಿ ಮಾಡಿಲ್ಲ, ಆದರೆ ಅವರ ಕುರಿತಾಗಿ ದಯೆಯೊಂದಿಗೆ ಸಾತಾ ಮಾಡಿದ್ದಾನೆ - ಇಂಥ ಶುಭಭಾವಗಳಿಂದ ಜೀವನಿಗೆ ರೋಗರಹಿತ ಶರೀರವಾಗುತ್ತದೆ.

**ಸಂದೇಹ-೧೯ :--** ಓ ಗುರುನಾಥರೇ ! ಜೀವರುಗಳಲ್ಲಿ ಕ್ರೂರ ಪರಿಣಾಮ-ದುರ್ಜನ ಸ್ವಭಾವವು ಯಾವ ಪಾಪದಿಂದ ಆಗುತ್ತದೆ ?

**ಸಮಾಧಾನ :-** ಎಲೈ ಭವ್ಯಾತ್ಮನೇ ! ದುರಾಚಾರೀ ನರಕಗಳ ನಿವಾಸದಲ್ಲಿ ಬಹಳಷ್ಟು ಕಾಲದವರೆಗೆ ದುಃಖ ಭೋಗಿಸುತ್ತ ನರಕದಿಂದ ಹೊರ ಬಂದಿರುವ ಜೀವನು ಪೂರ್ವಪಾಪದ ಕಾರಣ ಮಹಾಕ್ರೋಧೀ, ದುರಾಚಾರೀ, ಕ್ರೂರ ಪರಿಣಾಮಿಯಾಗುತ್ತಾನೆ. ಪೂರ್ವ ಭವದಲ್ಲಿ ಮನುಷ್ಯಾಯುವಿನ ಬಂಧವಾದ ಮೇಲೆ ಕುಸಂಗದ ನಿಮಿತ್ತ ಪಡೆದು ಮಹಾಕ್ರೂರ, ಹಿಂಸಾಮಯ ಪ್ರವರ್ತನೆ ಮಾಡುವಂಥ ಜೀವನು ಪೂರ್ವದ ವಾಸನಾ ಸಂಸ್ಕಾರದ ಕಾರಣ ದುರಾಚಾರೀ ಕ್ರೋಧಿಯಾಗುತ್ತಾನೆ. ಪರಭವವು ಒಳ್ಳೆಯದಿಲ್ಲದಿದ್ದರೂ ಕೂಡ ಕರ್ಮ ಚೇಷ್ಟೆಯಿಂದ ಕ್ರೂರ ಪರಿಣಾಮಿಯಾಗುತ್ತಾನೆ.

**ಸಂದೇಹ-೨೦ :-** ಓ ಪ್ರಭು ! ಈ ಜೀವನು ಯಾವ ಪುಣ್ಯದಿಂದ ಸಜ್ಜನ ಭಾವಸಹಿತನಾಗುತ್ತಾನೆ?

**ಸಮಾಧಾನ :-** ದೇವಗತಿ ಮೊದಲಾದ ಶುಭ ಗತಿಯಿಂದ ಬಂದಿರುವ ಜೀವನು ಪೂರ್ವಭವದ ಒಳ್ಳೆಯ ಪ್ರವೃತ್ತಿಯ ಕಾರಣ, ಅದರ ವಾಸನಾ ಸಂಸ್ಕಾರದಿಂದ ದಯಾಭಾವದ ಫಲದಲ್ಲಿ ಮಹಾಪುರುಷನ ಸಂಗತಿ ಪಡೆದು, ಅಲ್ಲಿ ಒಳ್ಳೆಯ ಉಪದೇಶವನ್ನು ಆಲಿಸಿ, ಸಜ್ಜನ ಸ್ವಭಾವದವನಾಗುತ್ತಾನೆ; ಬೇರೆಯವರ ಸಜ್ಜನತೆಯನ್ನು ಕಂಡು ಹರ್ಷಿತನಾಗುತ್ತಾನೆ; ಹಿರಿಯರ ಸೇವೆ, ಶುಶ್ರೂಷೆ, ವೈಯಾವೃತ್ತಿ ಮಾಡುತ್ತಾನೆ - ಇತ್ಯಾದಿ ಶುಭಭಾವಗಳಿಂದ ಸಜ್ಜನ ಸ್ವಭಾವಿಯಾಗುತ್ತಾನೆ.

**ಸಂದೇಹ-೨೧ :-** ಓ ಮಹಾಪ್ರಭು ! ಈ ಜೀವನು ಯಾವ ಪುಣ್ಯದಿಂದ ಸಮತೆಯ ಭಾವಧಾರಣ ಮಾಡುತ್ತಾನೆ ?

**ಸಮಾಧಾನ :-**ಎಲೈ ಧರ್ಮಾರ್ಥಿಯೇ ಆಲಿಸು ! ಯಾವ ಜೀವನು ಪೂರ್ವಭವದಲ್ಲಿ ಮುನಿ-ಶ್ರಾವಕರ ಶಾಂತ ಮುದ್ರೆಯನ್ನು ನೋಡಿ ಹರ್ಷಿತನಾಗಿದ್ದಾನೆ; ಜಿನೇಂದ್ರ ದೇವರ ಪದ್ಮಾಸನ ಅಥವಾ ಖಡ್ಗಾಸನದ ಶಾಂತ ಮುದ್ರೆಯನ್ನು ನೋಡಿ ಯಾರು ಅನುಮೋದನೆ ಮಾಡಿದ್ದಾರೆ, ಅನ್ಯ ಜೀವರುಗಳ ಕಠೋರ ವಚನಗಳನ್ನು ಆಲಿಸಿ, ಸಮತೆಯ ಭಾವ ಧಾರಣ ಮಾಡಿ, ಅವರ ಮೇಲೆ ಕ್ರೋಧ ಭಾವ ಮಾಡಿಲ್ಲ. ಬೇರೆಯವರ ಕ್ರೂರತೆಯನ್ನು ಕಂಡು ಸ್ವಯಂ ಅವರ ಮೇಲೆ ದಯೆ ಮಾಡುತ್ತಾನೆ; ಸಂಸಾರದ ವಿಚಿತ್ರತೆಯನ್ನು ನೋಡಿ ಸಂಸಾರದಿಂದ ಉದಾಸನಾಗಿರುತ್ತಾನೆ, ಧನ-ಶರೀರ ಮೊದಲಾದವುಗಳ ಸಂಪದ ಸಾಮಗ್ರಿಗಳನ್ನು ಚಂಚಲವೆಂದು ತಿಳಿದು, ರಾಗ-ದ್ವೇಷಾದಿ ಭಾವಗಳನ್ನು ನಿಶ್ಚಿತವಾಗಿ ದುಃಖ ಕೊಡುವಂಥವೆಂದು ತಿಳಿದು, ಕ್ರೋಧ-ಮಾನಾದಿಗಳ ತ್ಯಾಗ ಮಾಡಿ ಮಂದ ಕಷಾಯ-ರೂಪನಾಗಿರುತ್ತಾನೆ - ಇಂಥವೇ ಶುಭಭಾವಗಳಿಂದ ಸಮತೆಯ ಭಾವವು ಪ್ರಗಟವಾಗುತ್ತದೆ.

**ಸಂದೇಹ-೨೨ :-** ಓ ಜಗದ್ಗುರುಗಳೇ ! ಯಾವ ಪುಣ್ಯದಿಂದ ಈ ಜೀವನು ಧರ್ಮಾತ್ಮ(ವ್ಯವಹಾರ ಧರ್ಮಾತ್ಮ)ನಾಗುತ್ತಾನೆ ?

**ಸಮಾಧಾನ ಃ-** ಎಲೈ ಭದ್ರ ಪರಿಣಾಮಿಯೇ ! ಯಾವ ಜೀವರುಗಳು ಪೂರ್ವ ಭವದಲ್ಲಿ ಮಹಾ ಸಮತೆಯ ಭಾವ ಧಾರಣ ಮಾಡಿದ್ದಾರೆ; ಧರ್ಮಾತ್ಮಾ ಜೀವರುಗಳು ಧರ್ಮ ಸೇವನೆ ಮಾಡುತ್ತಿರುವುದನ್ನು ನೋಡಿ ಅನುಮೋದಿಸಿ ಪುಣ್ಯೋಪಾರ್ಜನೆ ಮಾಡಿದ್ದಾರೆ, ಅನೇಕ ಜೀವಗಳ ಮೇಲೆ ದಯೆ ಮಾಡಿದ್ದಾರೆ, ಧಾರ್ಮಿಕ ಉತ್ಸವಗಳನ್ನು ನೋಡಿ ಹರ್ಷಿತರಾಗಿದ್ದಾರೆ; ಧರ್ಮದ ಅಂಗಗಳು ಅನೇಕವಿದ್ದು ಅವುಗಳಲ್ಲಿ ಯಾವ ಜಾತಿಯ ಧರ್ಮದ ಅಂಗವನ್ನು ಕಂಡು ಜೀವನು ಅನುಮೋದನೆ ಮಾಡುತ್ತಾನೆ, ಆ ಜಾತಿಯ ಧರ್ಮದ ಅಂಗದ ಲಾಭವು ಪರಭವದಲ್ಲಿ ಅವನಿಗೆ ಆಗುತ್ತದೆ. ಈ ಪ್ರಕಾರ-

ಯಾವ ಜೀವನು ಪೂರ್ವ ಭವದಲ್ಲಿ ಅನ್ಯ ಧರ್ಮಾತ್ಮಾ ಜೀವರುಗಳು ತಪಸ್ಸು ಮಾಡುತ್ತಿರುವುದನ್ನು ಕಂಡು ಹರ್ಷ ಮಾಡಿದ್ದಾನೆ, ತಪಸ್ವೀ ಪುರುಷರ ಸೇವೆ ಶುಶ್ರೂಷೆ ಮಾಡಿದ್ದಾನೆ, ತಪಸ್ಸನ್ನು ಉತ್ಕೃಷ್ಟ ಸುಖ ಕೊಡುವಂಥದ್ದೆಂದು ತಿಳಿದು ಅದನ್ನು ಮಾಡುವ ಅಭಿಲಾಷೆಯನ್ನಿಟ್ಟುಕೊಂಡಿರುವ ತಪಸ್ಸಿನ ಅಂಗದ ಅನುಮೋದನೆಯ ಫಲಸ್ವರೂಪವಾಗಿ ಭವಾಂತರದಲ್ಲಿ ತಪ ಧರ್ಮದ ಲಾಭವು ಪ್ರಾಪ್ತವಾಗುತ್ತದೆ.

ಯಾರು ಬೇರೆಯವರು ಭಗವಂತರ ಪೂಜೆ-ಸ್ತುತಿ ಮಾಡುತ್ತಿರುವುದನ್ನು ಕಂಡು ಅವರ ಅನುಮೋದನೆ ಮಾಡಿದ್ದಾರೆ, ಭಗವಂತರ ಭಕ್ತ ಜನರನ್ನು ಕಂಡು ಅವರ ಕುರಿತಾಗಿ ಪ್ರೀತಿಭಾವಪೂರ್ವಕ ಅವರ ಸೇವೆ-ಶುಶ್ರೂಷೆ ಮಾಡಿದ್ದಾರೆ, ಸ್ವಯಂ ತಮಗೂ ಕೂಡ ಭಗವಂತರ ಪೂಜೆ ಮಾಡುವ ತೀವ್ರಭಾವವಿದೆ - ಇತ್ಯಾದಿರೂಪ ಪೂಜೆಯ ಅನುಮೋದನೆ ಹಾಗೂ ಬಯಕೆಯ ರೂಪ ಭಾವಗಳ ಫಲಸ್ವರೂಪವಾಗಿ ಭವಾಂತರದಲ್ಲಿ ಪ್ರಭುವಿನ ಪೂಜೆಯ ಭಾವಗಳಾಗುತ್ತವೆ. ಪೂಜೆಯರೂಪ ಧರ್ಮದ ಅಂಗವು ಪ್ರಾಪ್ತವಾಗುತ್ತದೆ.

ಯಾವ ಜೀವರುಗಳು ಪೂರ್ವ ಭವದಲ್ಲಿ ಅನ್ಯ ಜೀವರುಗಳು ನಿಯಮ, ಪ್ರತಿಜ್ಞೆ ತಗೆದುಕೊಳ್ಳುತ್ತಿರುವುದನ್ನು ಕಂಡು ಘೃತ, ದುಗ್ಧಾದಿ ರಸಗಳ ತ್ಯಾಗ ಮಾಡುತ್ತಿರುವುದನ್ನು ಕಂಡು; ವಸ್ತ್ರ, ತಾಂಬೂಲಾದಿ ಪರಿಗ್ರಹಗಳ ಪರಿಮಾಣ ಮಾಡುತ್ತಿರುವುದನ್ನು ಕಂಡು ಹಾಗೂ ದಯಾಭಾವಪೂರ್ವಕ ಪ್ರವೃತ್ತಿ ಮಾಡುತ್ತಿರುವುದನ್ನು ಕಂಡು ಅವರ ಪ್ರಶಂಸೆ ಮಾಡಿದ್ದಾರೆ. ಬೇರೆ ಸಂಯಮಿಗಳನ್ನು ಕಂಡು ಸಂಯಮದ ಅಭಿಲಾಷೆ ಮಾಡಿದ್ದಾರೆ-ಹೀಗೆಲ್ಲ ಸಂಯಮದ ಅನುಮೋದನೆಯ ಫಲದಲ್ಲಿ ಭವಾಂತರದೊಳಗೆ ಸಂಯಮರೂಪ ಸಂಪದದ ಪ್ರಾಪ್ತಿಯಾಗುತ್ತದೆ.

ಯಾರು ಪೂರ್ವಭವದಲ್ಲಿ ಅನ್ಯ ಜೀವಿಗಳು ಸಿದ್ಧಕ್ಷೇತ್ರದ ಯಾತ್ರೆಯ ಸಲುವಾಗಿ ಗಮನ ಮಾಡುತ್ತಿರುವುದನ್ನು ಕಂಡು ಹಾಗೂ ಸಿದ್ಧಕ್ಷೇತ್ರದ ವಂದನೆಯ ಸಲುವಾಗಿ ಸಂಘವು ಹೋಗುತ್ತಿರುವುದನ್ನು ಕಂಡು ಅವರ ಅನುಮೋದನೆ ಮಾಡಿದ್ದಾರೆ; ಸ್ವಯಂ ಸಿದ್ಧ ಕ್ಷೇತ್ರಗಳ ವಂದನೆ ಯಾತ್ರೆಯ ಅಭಿಲಾಷೆಯನ್ನಿಟ್ಟುಕೊಂಡಿದ್ದಾರೆ, ಸಿದ್ಧ ಕ್ಷೇತ್ರಗಳ ಯಾತ್ರೆ ಮಾಡುವಂಥವರಿಗೆ ಸಹಾಯ ಮಾಡಿ ಅನುಕೂಲತೆ ಮಾಡಿಕೊಟ್ಟಿದ್ದಾರೆ-ಅವರನ್ನು ಸುಖಿಯನ್ನಾಗಿಸಿದ್ದಾರೆ - ಇತ್ಯಾದಿ ಪುಣ್ಯ ಭಾವಗಳಿಂದ ಅವರಿಗೆ ಭವಾಂತರದಲ್ಲಿ ಸಿದ್ಧಕ್ಷೇತ್ರಗಳ ಯಾತ್ರೆಯ ಬಹಳಷ್ಟು ಲಾಭವಾಗುತ್ತದೆ.

ಯಾರು ಪೂರ್ವ ಭವದಲ್ಲಿ ಆಚಾರ್ಯದೇವರು ಉಪದೇಶ ಕೊಡುತ್ತಿರುವುದನ್ನು ಕಂಡು, ಆ ಧರ್ಮಾತ್ಮಾ ಪುರುಷರ ಉಪದೇಶವನ್ನು ಆಲಿಸಿ, ಅವರ ಜ್ಞಾನದ-ಶಾಂತಿಯ ಭಾವದ ಪ್ರಶಂಸೆ ಮಾಡಿದ್ದಾರೆ. ಧರ್ಮೋಪದೇಶ ಮಾಡುವಂಥವರ ಭಕ್ತಿ ಮಾಡಿ ಆನಂದ ಮನ್ನಿಸಿದ್ದಾರೆ- ಇತ್ಯಾದಿ ಭಾವಗಳಿಂದ ಧರ್ಮೋಪದೇಶ ಯೋಗ್ಯ ಜ್ಞಾನ ಪಡೆದು ತಮ್ಮ ಹಾಗೂ ಇತರ ಜೀವರುಗಳ ಕಲ್ಯಾಣ ಮಾಡುತ್ತಾರೆ.

ಈ ಪ್ರಕಾರ ಧರ್ಮದ ಅಂಗಗಳು ಅನೇಕ ಭೇದವುಳ್ಳವಿವೆ. ಧರ್ಮದ ಯಾವ-ಯಾವ ಅಂಗಗಳಿಗೆ ಸಹಾಯ ಮಾಡಿ ಸ್ವಯಂ ಅನುಮೋದನೆಯ ಭಾವರೂಪ ಪರಿಣಮಿಸಿದ್ದಾರೆ, ಅದೇ ಧರ್ಮದ ಅಂಗದ ಲಾಭವು ಅವರಿಗೆ ಆಗುವುದು. ಧರ್ಮದ ಫಲವು ಉತ್ಪನ್ನವಾಗುವುದು.

**ಸಂದೇಹ-೨೩ :-** ಓ ಪ್ರಭು ! ಯಾವ ಪುಣ್ಯದ ಫಲದಿಂದ ಈ ಜೀವನು ಬಲಶಾಲಿಯಾಗುತ್ತಾನೆ?

**ಸಮಾಧಾನ :-** ಎಲೈ ಭವ್ಯನೇ ! ಯಾವ ಜೀವರುಗಳು ಪೂರ್ವಭವದಲ್ಲಿ ದಯಾಭಾವದಿಂದ ದೀನ ಜೀವಗಳ ರಕ್ಷಣೆ ಮಾಡಿದ್ದಾರೆ, ಅಸಮರ್ಥ ಜೀವರುಗಳನ್ನು ಕಂಡು ಅವರ ಕುರಿತಾಗಿ ದಯೆಯ ಭಾವ ಉಕ್ಕಿ ಬಂದು ಅವರ ದುಃಖ ನಾಶ ಮಾಡುವ ಪ್ರಯತ್ನ ಮಾಡಿದ್ದಾರೆ - ಅನೇಕ ಉಪಾಯಗಳಿಂದ ಅವರನ್ನು ಸುಖಿ ಮಾಡಿದ್ದಾರೆ. ನಿರ್ಬಲ ಜೀವಗಳಿಗೆ ದಯೆಯ ಭಾವದೊಂದಿಗೆ ಒಳ್ಳೆಯ ಆಹಾರ-ಪೇಯಾದಿಗಳನ್ನಿತ್ತು ಸುಖಿ ಮಾಡಿದ್ದಾರೆ. ನಿರ್ವಸ್ತ್ರರಿಗೆ ವಸ್ತ್ರ, ರೋಗಿಗಳಿಗೆ ಔಷಧಗಳನ್ನು ನೀಡಿ ಅವರ ದುಃಖ ದೂರ ಮಾಡಿದ್ದಾರೆ. ಅನೇಕ ಪ್ರಕಾರದ ಸಾತಾವನ್ನುಂಟು ಮಾಡಿ ಅನ್ಯ ಜೀವಗಳ ರಕ್ಷಣೆ ಮಾಡಿದ್ದಾರೆ - ಇತ್ಯಾದಿ ಶುಭ ಭಾವಗಳಿಂದ ಜೀವನು ಭವಾಂತರದಲ್ಲಿ ಬಲಶಾಲಿಯಾಗುತ್ತಾನೆ.

**ಸಂದೇಹ-೨೪ :-** ಓ ಯತಿಪತಿಗಳೇ ! ಈ ಜೀವನು ಯಾವ ಪಾಪದಿಂದ ದುರ್ಬಲನಾಗುತ್ತಾನೆ?

**ಸಮಾಧಾನ :-**ಎಲೈ ವತ್ಸನೇ ! ಯಾರು ಅನ್ಯ ಜೀವರುಗಳ ಆಹಾರ-ಪಾನೀಯಗಳನ್ನು ತಡೆದು ಅವರನ್ನು ದುರ್ಬಲ ಮಾಡಿದ್ದಾರೆ. ಬಲಹೀನ-ದೀನ ಜೀವಗಳನ್ನು ಕಂಡು ಹಾಸ್ಯ ಮಾಡಿದ್ದಾರೆ - ಅವರನ್ನು ಲಜ್ಜಿತಗೊಳಿಸಿದ್ದಾರೆ, ಬಲರಹಿತ ಜೀವಗಳನ್ನು ಹೊಡೆದಿದ್ದಾರೆ, ಕಟ್ಟಿ ಹಾಕಿದ್ದಾರೆ, ನೇತು ಹಾಕಿದ್ದಾರೆ; ತಮ್ಮನ್ನು ತಾವು ಬಲಶಾಲಿಯೆಂದು ತಿಳಿದು ಬಲಮದದಿಂದ ಬೇರೆಯವರನ್ನು ಬಲರಹಿತರೆಂದು ತಿಳಿದು ಅನೇಕ ಪ್ರಕಾರದಿಂದ ಭಯಭೀತಗೊಳಿಸಿ ದುಃಖಿಯನ್ನಾಗಿಸಿದ್ದಾರೆ, ತಮ್ಮ ಬಲಮದದ ವಶೀಭೂತರಾಗಿ ಸಿಂಹ-ಆನೆಗಳ ಸಮಾನ ಮದೋನ್ಮತ್ತರಾಗಿ ವರ್ತಿಸಿದ್ದಾರೆ, ಬೇರೆ ಬಲಶಾಲಿಗಳನ್ನು ಕಂಡು ಸ್ವಯಂ ದ್ವೇಷ ಮಾಡಿದ್ದಾರೆ - ಇತ್ಯಾದಿ ಪಾಪ ಭಾವಗಳಿಂದ ಜೀವನು ಬಲರಹಿತ-ನಿರ್ಬಲನಾಗುತ್ತಾನೆ.

**ಸಂದೇಹ-೨೫ :-** ಓ ಸ್ವಾಮೀ ! ಈ ಜೀವನು ಯಾವ ಪಾಪದಿಂದ ಭಯವಂತ, ಹೇಡಿತನದ ಧಾರಕ ಚಿತ್ತದವನಾಗುತ್ತಾನೆ ?

**ಸಮಾಧಾನ :-** ಎಲೈ ಭವ್ಯಾತ್ಮನೇ ಆಲಿಸು ! ಯಾವ ಜೀವನು ಅನ್ಯರನ್ನು ನಾನಾ ವಿಧದಿಂದ ಭಯಭೀತಗೊಳಿಸಿದ್ದಾನೆ, ಪ್ರಾಣ ನಾಶದ ಭಯ ತೋರಿಸಿ ಕಂಪಿತ ಮಾಡಿದ್ದಾನೆ, ಧನನಾಶದ ಭಯ ತೋರಿಸಿದ್ದಾನೆ, ಮನೆಯನ್ನು ಲೂಟಿ ಮಾಡುವ ಭಯ ತೋರಿಸಿದ್ದಾನೆ, ಅವರ ಮರ್ಯಾದೆ ಕಳೆಯುವ ಬೆದರಿಕೆ ಹಾಕಿದ್ದಾನೆ, ಮನೆಯ ಸದಸ್ಯರನ್ನು ಹಿಡಿದು ಕಟ್ಟಿಹಾಕುವ ಭಯ ತೋರಿಸಿದ್ದಾನೆ. ದೊರೆಯ ಪಂಚರ ಭಯ ತೋರಿಸಿ ಹೆದರಿಸಿದ್ದಾನೆ, ಸಿಂಹ-ಆನೆಯ ಹಾಗೂ ಕಳ್ಳರ ಭಯ ತೋರಿಸಿ ದುಃಖೀ ಮಾಡಿದ್ದಾನೆ, ಯುದ್ಧದಿಂದ ಪಲಾಯಣ ಮಾಡುತ್ತಿರುವ ದೀನ-ಭಯಭೀತ ಜೀವರುಗಳ ಹಾಸ್ಯ ಮಾಡಿದ್ದಾನೆ, ಬೇರೆಯವರು ಹೇಡಿ, ಭಯಭೀತರಾಗಿರುವುದನ್ನು ಕಂಡು ಹರ್ಷಿತನಾಗಿದ್ದಾನೆ-ಇವೇ ಮೊದಲಾದ ದಯಾರಹಿತ ಭಾವಗಳಿಂದ ಜೀವನು ಭವಾಂತರದಲ್ಲಿ ಹೇಡಿಯಾಗುತ್ತಾನೆ- ಭಯ ತುಂಬಿದ ಚಿತ್ತವುಳ್ಳವನಾಗುತ್ತಾನೆ.

**ಸಂದೇಹ-೨೬ :-** ಓ ಗುರುಗಳೇ ! ಈ ಜೀವನು ಯಾವ ಪುಣ್ಯದ ಉದಯದಿಂದ ಶೂರ-ವೀರ ಮತ್ತು ನಿರ್ಭಯನಾಗುತ್ತಾನೆ ?

**ಸಮಾಧಾನ :-** ವತ್ಸನೇ ಆಲಿಸು ! ಯಾವ ಜೀವನು ಪೂರ್ವ ಭವದಲ್ಲಿ ದೀನ ಜೀವಗಳಿಗೆ ಅಭಯದಾನ ಕೊಟ್ಟಿದ್ದಾನೆ, ಕರುಣೆಯ ಭಾವದಿಂದ ಅನ್ಯ ಜೀವಗಳ ರಕ್ಷಣೆ ಮಾಡಿದ್ದಾನೆ, ಯಾವನೋ ವ್ಯಕ್ತಿಯು ದೀನ-ದುಃಖಿಯನ್ನು ಭಯತೋರಿಸಿ ಒಂದುವೇಳೆ ಪೀಡಿಸುತ್ತಿದ್ದರೆ ಅವನನ್ನು ದಯೆಯ ಭಾವದೊಂದಿಗೆ ತನ್ನ ಬಾಹುಬಲದಿಂದ ದುಷ್ಟನಿಂದ ಬಿಡಿಸಿ ಸುಖಿಯನ್ನಾಗಿಸುತ್ತಾನೆ-ಭಯರಹಿತನನ್ನಾಗಿಸುತ್ತಾನೆ; ತ್ರಸ-ಸ್ಥಾವರ ಜೀವಗಳ ಕುರಿತಾಗಿ ದಯೆಯ

ಭಾವವನ್ನಿಟ್ಟುಕೊಂಡಿರುತ್ತಾನೆ; ಅನೇಕ ಜೀವರುಗಳನ್ನು ದೊರೆ, ಪಂಚ, ದುಷ್ಟ, ಸಿಂಹಾದಿಗಳ ಉಪದ್ರವದಿಂದ ಬಿಡಿಸಿ ನಿರ್ಭಯ ಮಾಡಿದ್ದಾನೆ; ಭಯಗ್ರಸ್ತ ಜೀವರುಗಳ ಕುರಿತಾಗಿ ದಯೆಯ ಭಾವವನ್ನು ಹೊಂದಿ ಸ್ಥಿರ ಮಾಡಿದ್ದಾನೆ; ಭಯರಹಿತ ಸುಖೀ ಜೀವರುಗಳನ್ನು ನೋಡಿ ಸ್ವಯಂ ಸುಖಿಯಾಗಿದ್ದಾನೆ-ಇತ್ಯಾದಿ ಶುಭಭಾವಗಳ ಫಲದಲ್ಲಿ ಜೀವನು ನಿಃಶಂಕ ಚಿತ್ತದ ಧಾರಕ, ಶೂರ-ವೀರನಾಗುತ್ತಾನೆ.

**ಸಂದೇಹ-೨೭ :-** ಪ್ರಭು ! ಈ ಜೀವನು ಯಾವ ಪುಣ್ಯದಿಂದ ಚಿತ್ತದ ಉದಾರತೆಯಿಂದ ದಾತೃವಾಗುತ್ತಾನೆ?

**ಸಮಾಧಾನ :-** ಎಲೈ ಭವ್ಯಾತ್ಮನೇ ! ಯಾವ ಜೀವನು ಅನ್ಯ ಜೀವರುಗಳಿಂದ ಆಗುತ್ತಿರುವ ಸುಪಾತ್ರ ದಾನವನ್ನು ಕಂಡು ಅನುಮೋದನೆ ನೀಡಿದ್ದಾನೆ; ದೀನ, ದುಃಖಿ, ಹಸಿದಿರುವ ಜೀವಗಳನ್ನು ನೋಡಿ ಅವರುಗಳ ಕುರಿತಾಗಿ ದಯೆಯ ಭಾವ ಮಾಡಿದ್ದಾನೆ, ದಾನಕೊಡುವ ಅತ್ಯಧಿಕ ಅಭಿಲಾಷೆ ಮಾಡಿದ್ದಾನೆ, ಧರ್ಮದ ಸಲುವಾಗಿ ಧನ ಖರ್ಚು ಮಾಡುವಾಗ ಸುಖದ ಅನುಭವ ಮಾಡಿದ್ದಾನೆ-ಇತ್ಯಾದಿ ಶುಭಭಾವಗಳ ಫಲದಲ್ಲಿ ಜೀವನು ಉದಾರ ಮನಸ್ಸಿನಿಂದ ದಾನಕೊಡುವ ದಾತೃವಾಗುತ್ತಾನೆ.

**ಸಂದೇಹ-೨೮ :-** ಓ ಯತಿವರ್ಯರೇ ! ಈ ಜೀವನು ಯಾವ ಕರ್ಮದ ಉದಯದಲ್ಲಿ ಜಿಪುಣನಾಗುತ್ತಾನೆ?

**ಸಮಾಧಾನ :-** ಯಾವ ಜೀವನು ಪೂರ್ವಭವದಲ್ಲಿ ಯಾವನೋ ಜೀವನು ದಾನ ಕೊಡುವಾಗ ನಿಷೇಧ ಮಾಡಿದ್ದಾನೆ ? ಬೇರೆಯವರು ಧನ ಖರ್ಚು ಮಾಡುತ್ತಿರುವುದನ್ನು ಕಂಡು ಸ್ವಯಂ ದುಃಖಿಯಾಗಿದ್ದಾನೆ, ಪೂರ್ವ ಭವದಲ್ಲಿ ವಿವಿಧ ಪ್ರಕಾರ ಕಷ್ಟಗಳನ್ನು ಸಹಿಸಿ ಧನ ಹೊಂದಿಸಿಯೂ ಕೂಡ ಅದನ್ನು ತಾನು ಭೋಗಿಸಲಿಲ್ಲ, ಸರಿಯಾಗಿ ತಿನ್ನಲೂ ಇಲ್ಲ ಮತ್ತು ಬೇರೆಯವರಿಗೂ ತಿನ್ನಿಸಲಿಲ್ಲ, ಇನ್ನಷ್ಟು ಮತ್ತಷ್ಟು ಸಂಗ್ರಹದ ಅಭಿಲಾಷೆ ಮಾಡುತ್ತ ತೀವ್ರ ತೃಷ್ಣೆಯ ಭಾವಗಳಿಂದ ಸತ್ತು ಹೋಗಿದ್ದಾನೆ, ಬೇರೆಯವರ ದಾನದ ನಿಂದೆ ಮಾಡಿದ್ದಾನೆ-ಇತ್ಯಾದಿ ಪಾಪಭಾವಗಳಿಂದ ಕೃಪಣ-ಲೋಭಿಯಾಗುತ್ತಾನೆ.

**ಸಂದೇಹ-೨೯ :-** ಈ ಜೀವನು ಯಾವ ಕರ್ಮದಿಂದ ಪಂಡಿತ-ವಿದ್ವಾಂಸನಾಗುತ್ತಾನೆ ?

**ಸಮಾಧಾನ :-** ಯಾವ ಜೀವನು ಪೂರ್ವ ಭವದಲ್ಲಿ ವಿದ್ಯೆಯ ದಾನ ಮಾಡಿದ್ದಾನೆ, ಬೇರೆ ವಿದ್ಯಾವಂತ-ಪಂಡಿತ ಜೀವರುಗಳನ್ನು ನೋಡಿ ಅವರ ಸೇವೆ-ಶುಶ್ರೂಷೆ ಮಾಡಿದ್ದಾನೆ. ಯಾರಿಗೆ ಅಜ್ಞಾನೀ ಜೀವರುಗಳ ಸಂಗತಿಯ ಕುರಿತಾಗಿ ಅರುಚಿಯಿದೆ. ಧರ್ಮಶಾಸ್ತ್ರಗಳ ವೇತ್ತಾರರ ಸ್ತುತಿ ಮಾಡಿದ್ದಾನೆ, ಧರ್ಮಶಾಸ್ತ್ರಗಳನ್ನು ಸ್ವಯಂ ಬರೆದು, ಮನೆ-ಧನಗಳನ್ನು ತೊಡಗಿಸಿ ಖರ್ಚು ಮಾಡಿಯೂ ಬರೆಯಿಸಿ ಜೀವರುಗಳಿಗೆ ಪಠನ-ಪಾಠನದ ಸಲುವಾಗಿ ಒದಗಿಸಿದ್ದಾನೆ; ಶಾಸ್ತ್ರಗಳ ಮುಖಪುಟ, ಹೊದಿಕೆ ಮೊದಲಾದುವನ್ನು ಉತ್ತಮಗೊಳಿಸಿದ್ದಾನೆ, ಶಾಸ್ತ್ರಾಭ್ಯಾಸ ಮಾಡುವ-ಮಾಡಿಸುವ ಅಭಿಲಾಷೆಯನ್ನು ಉತ್ತರೋತ್ತರ ಬೆಳೆಸಿಕೊಂಡಿದ್ದಾನೆ, ಅನ್ಯ ವಿದ್ಯಾಭಿಲಾಷಿ ಭವ್ಯ ಜೀವರುಗಳಿಗೆ ಶಾಸ್ತ್ರದ ಜ್ಞಾನ ಮಾಡಿಸಿದ್ದಾನೆ-ಇತ್ಯಾದಿ ಪುಣ್ಯ ಭಾವಗಳಿಂದ ಭವಾಂತರದಲ್ಲಿ ಪಂಡಿತನಾಗುತ್ತಾನೆ.

**ಸಂದೇಹ-೩೦ :-** ಓ ಸ್ವಾಮೀ ! ಈ ಜೀವನು ಯಾವ ಪಾಪದಿಂದ ಮೂರ್ಖನಾಗುತ್ತಾನೆ ?

**ಸಮಾಧಾನ :-** ಯಾವ ಜೀವನು ವಿದ್ವಾಂಸರುಗಳ ಹಾಸ್ಯ ಮಾಡಿದ್ದಾನೆ, ಧರ್ಮ ಶಾಸ್ತ್ರಗಳನ್ನು ಆಲಿಸುವಲ್ಲಿ ಅರುಚಿಭಾವ ಮಾಡಿದ್ದಾನೆ, ಧರ್ಮಶಾಸ್ತ್ರಗಳ ಕಳವು ಮಾಡಿದ್ದಾನೆ-ಅವುಗಳ ಮುಖಪುಟ, ಬಂಧನ, ಹೊದಿಕೆಗಳನ್ನು ಕದ್ದಿದ್ದಾನೆ, ಧರ್ಮಾರ್ಥಿ ಪಂಡಿತರ ಕುರಿತಾಗಿ ದ್ವೇಷ ಮಾಡಿದ್ದಾನೆ, ಇತ್ಯಾದಿ ಪಾಪಗಳಿಂದ ಜೀವನು ಮೂರ್ಖನಾಗುತ್ತಾನೆ.

**ಸಂದೇಹ-೩೧ :-** ಓ ಗುರುಗಳೇ ! ಈ ಜೀವನು ಯಾವ ಪಾಪದಿಂದ ಪರಾಧೀನನಾಗುತ್ತಾನೆ ?

**ಸಮಾಧಾನ :-**ಎಲೈ ಭವ್ಯನೇ ! ಯಾವ ಜೀವನು ಅನ್ಯ ಜೀವಗಳನ್ನು ಬಂಧಿಗೃಹದಲ್ಲಿಟ್ಟಿದ್ದಾನೆ, ಅನ್ಯ

ಜೀವರುಗಳಿಗೆ ಅಲ್ಪ ಧನವಿತ್ತು ತನ್ನ ವಶದಲ್ಲಿಟ್ಟುಕೊಂಡಿದ್ದಾನೆ. ನಿರ್ಧನ ಜೀವಗಳಿಗೆ ಸಾಲ ಮೊದಲಾದ ಸಹಾಯ ಬೇರೆಯವರಿಗೂ ಮಾಡಗೊಡಲಿಲ್ಲ; ಅವರಿಗೆ ತುಚ್ಛ ಮತ್ತು ಅಲ್ಪ ಆಹಾರಾದಿಗಳನ್ನು ಕೊಟ್ಟು ತನ್ನ ವಶದಲ್ಲಿ ಇಟ್ಟುಕೊಂಡಿದ್ದಾನೆ. ಒತ್ತಾಯ-ಬಲಪೂರ್ವಕವಾಗಿ ಅನ್ಯ ಜೀವಗಳನ್ನು ತನ್ನ ಆಧೀನವಿಟ್ಟುಕೊಳ್ಳುತ್ತಾನೆ, ಪರಾಧೀನ ಜೀವಗಳ ಗೇಲಿ ಮಾಡುತ್ತಾನೆ. ಪಶುಗಳನ್ನು ಸಾಕಿ ಅವುಗಳಿಗೆ ಹುಲ್ಲು-ನೀರು ಕೊಡುವಲ್ಲಿ ಪ್ರಮಾದ ಮಾಡುತ್ತಾನೆ, ಅವನು ಇಂಥ ಪಾಪ ಭಾವಗಳಿಂದ ಭವಾಂತರದಲ್ಲಿ ಪರಾಧೀನನಾಗುತ್ತಾನೆ.

**ಸಂದೇಹ-೩೨ :-** ಓ ಪ್ರಭು ! ಈ ಜೀವನು ಯಾವ ಪುಣ್ಯದಿಂದ ಸ್ವಾಧೀನನಾಗುತ್ತಾನೆ ?

**ಸಮಾಧಾನ :-** ಯಾವ ಜೀವನು ಪೂರ್ವಭವದಲ್ಲಿ ಅನ್ಯರಿಗೆ ಆಹಾರ ಆವಾಸಗಳನ್ನಿತ್ತು ಅವರನ್ನು ಕುಟುಂಬ ಸಹಿತ ಸ್ಥಿರ ಮಾಡಿದ್ದಾನೆ, ಇತರ ಜೀವಗಳಿಗೆ ಅನ್ನ-ನೀರನ್ನು ಕೊಟ್ಟು ಸಾತೋತ್ಪಾದಕ ವಚನಗಳನ್ನಾಡಿ ಅವರನ್ನು ನಿರಾಕುಲ ಮಾಡಿದ್ದಾನೆ. ಪರಾಧೀನ ಜೀವರುಗಳನ್ನು ನೋಡಿ ಯಾರಿಗೆ ಅವುಗಳ ಕುರಿತಾಗಿ ಅನುಕಂಪೆಯು ಉತ್ಪನ್ನವಾಗಿದೆ; ಅನ್ಯ ಜೀವಗಳು ಸ್ವಾಧೀನ-ಸುಖಿಯಾಗಿರುವುದನ್ನು ನೋಡಿ ಸ್ವಯಂ ಸಂತಸ ಪಡೆದಿದ್ದಾನೆ-ಇತ್ಯಾದಿ ಪುಣ್ಯ ಭಾವಗಳ ಫಲಸ್ವರೂಪವಾಗಿ ಜೀವನು ಸ್ವಾಧೀನನಾಗುತ್ತಾನೆ.

**ಸಂದೇಹ-೩೩ :-** ಓ ಗುರುವರ್ಯರೇ ! ಈ ಜೀವನು ಯಾವ ಪಾಪದಿಂದ ಕುರೂಪನಾಗುತ್ತಾನೆ?

**ಸಮಾಧಾನ :-** ಎಲೈ ಭವ್ಯಾತ್ಮನೇ ! ಯಾವ ಜೀವನಿಗೆ ಪೂರ್ವಭವದಲ್ಲಿ ಅನ್ಯರ ರೂಪ ಮಹಿಮೆಯು ಒಳ್ಳೆಯದೆನಿಸಲಿಲ್ಲ, ಯಾವುದೋ ಪಾಪದ ಉದಯದಿಂದ ರೂಪರಹಿತರಾಗಿರುವ ಜೀವಗಳ ಶರೀರದ ಕುರಿತಾಗಿ ಗ್ಲಾನಿ ಮಾಡುವಂಥ ಜೀವನು ಕುರೂಪನಾಗುತ್ತಾನೆ. ಯಾವನು ಕುರೂಪ ಮನುಷ್ಯರನ್ನು ಕಂಡು ಅಪಹಾಸ್ಯ ಮಾಡಿದ್ದಾನೆ ಮತ್ತು ಬೇರೆಯವರ ಒಳ್ಳೆಯ ರೂಪ ನೋಡಿ ಅವರಿಗೆ ದೋಷ ತಗಲಿಸಿದ್ದಾನೆ. ಅನ್ಯರ ಒಳ್ಳೆಯ ರೂಪಕ್ಕೆ ಬೂದಿ-ವಿಭೂತಿ - ಧೂಳು - ಕೆಸರು ತಗಲಿಸಿ ವಿಪರೀತಗೊಳಿಸಿದ್ದಾನೆ - ಇಂಥ ಕುಭಾವಗಳಿಂದ ಜೀವನು ಕುರೂಪನಾಗುತ್ತಾನೆ.

**ಸಂದೇಹ-೩೪ :-** ಓ ಜ್ಞಾನಮೂರ್ತಿಯೇ ! ಈ ಜೀವನು ಯಾವ ಪುಣ್ಯದಿಂದ ಸುಂದರ ರೂಪದವನಾಗುತ್ತಾನೆ?

**ಸಮಾಧಾನ :-** ಎಲೈ ವತ್ಸನೇ ! ಯಾವ ಜೀವನು ಪೂರ್ವಭವದಲ್ಲಿ ಅನ್ಯ ಜೀವಗಳ ರೂಪ ಕಂಡು, ನಿರ್ವಿಕಾರ ಚಿತ್ತದಿಂದ ನೋಡುವ ಸುಖ ಮನ್ನಿಸಿದ್ದಾನೆ; ಅನ್ಯ ಜೀವರುಗಳ ಕುರೂಪತೆಯ ಕಾರಣ ಅನಾದರವಾಗುತ್ತಿರುವುದನ್ನು ಕಂಡು, ಅವರ ಕುರಿತಾಗಿ ದಯೆ ಮಾಡಿ ರೂಪವಂತರಾಗಲೆಂದುಬಯಸಿದ್ದಾನೆ - ಧರ್ಮದ ಸೇವನೆ ಮಾಡಿ ರೂಪವಂತನಾಗಬಯಸುತ್ತಾನೆ, ಅವನು ಇಂಥ ಶುಭ ಭಾವಗಳಿಂದ ಭವಾಂತರದಲ್ಲಿ ರೂಪವಂತನಾಗುತ್ತಾನೆ.

**ಸಂದೇಹ-೩೫ :-** ಓ ಧರ್ಮಮೂರ್ತಿ ! ಈ ಜೀವನಿಗೆ ಪುಣ್ಯದ ಉದಯದಿಂದ ಅನೇಕ ಭೋಗ್ಯವಸ್ತುಗಳು ದೊರಕಿದ ಮೇಲೆಯೂ ಯಾವ ಪಾಪದ ಫಲದಿಂದ ಅವುಗಳನ್ನು ಭೋಗಿಸಲಾಗುವುದಿಲ್ಲ?

**ಸಮಾಧಾನ :-** ಯಾವ ಜೀವನು ಪೂರ್ವ ಭವದಲ್ಲಿ ಅನ್ಯ ಜೀವರುಗಳಿಗೆ ಅನ್ನ, ನೀರು, ಮಿಠಾಯಿ, ಮೃಷ್ಟಾನ್ನ ಇತ್ಯಾದಿಗಳನ್ನು ತಿನ್ನುವಲ್ಲಿ ಅಂತರಾಯ ಮಾಡಿದ್ದಾನೆ; ದ್ವೇಷ ಭಾವದಿಂದ ಅವರಿಗೆ ಒಳ್ಳೆಯ ವಸ್ತುಗಳನ್ನು ತಿನ್ನಗೊಡಲಿಲ್ಲ, ಬೇರೆಯವರು ಒಣ ರೊಟ್ಟಿ, ರಸರಹಿತ ಆಹಾರ ತಿನ್ನುವುದನ್ನು ಕಂಡು ಪ್ರಸನ್ನನಾಗಿದ್ದಾನೆ, ಇತರರು ಸಂತೋಷದಿಂದ ಭೋಜನ ಮಾಡುವುದನ್ನು ಕಂಡು ಬೇಸರ ಪಟ್ಟಿದ್ದಾನೆ, ಬೇರೆಯವರು ಉಪವಾಸವಿದ್ದುದನ್ನು ಬಳಲಿರುವುದನ್ನು ಕಂಡು ಅವರ ಗೇಲಿ ಮಾಡಿದ್ದಾನೆ, ದುರ್ವಚನಗಳನ್ನಾಡಿ ದುಃಖೀ ಮಾಡಿದ್ದಾನೆ, ಸ್ವಯಂ ರಸನೇಂದ್ರಿಯದ ಲೋಲುಪಿಯಾಗಿ ವಿವಿಧ ಭೋಗ್ಯ ವಸ್ತುಗಳನ್ನು ಭೋಗಿಸಿದ್ದಾನೆ, ತನ್ನ ವಿಷಯ ಪೋಷಣೆಯ

ಸಲುವಾಗಿ ಅನೇಕ ಪ್ರಕಾರದಿಂದ ಕಪಟ-ವಂಚನೆ ಮಾಡಿ ರಸನಾದಿ ವಿಷಯಗಳನ್ನು ಭೋಗಿಸಿ ಸುಖ ಮನ್ನಿಸಿದ್ದಾನೆ. ನಾಯಿ-ಬೆಕ್ಕು ಮೊದಲಾದ ಪಶುಗಳು ಬೇರೆ ಜೀವಗಳ ಭೋಜನವನ್ನು ಕೊಂಡೊಯ್ಯುತ್ತಿರುವಾಗ ಸ್ವಯಂ ಸುಖಿಯಾಗಿದ್ದಾನೆ - ಇತ್ಯಾದಿ ಪಾಪಗಳಿಂದ ಜೀವನು ವಿದ್ಯಮಾನ ವಸ್ತುವನ್ನು ಭೋಗಿಸಲಾಗುವುದಿಲ್ಲ. ಹಾಗೇನಾದರೂ ಲೋಭ ವಶದಿಂದ ದುಗ್ಧಾದಿ ಒಳ್ಳೆಯ ವಸ್ತುಗಳನ್ನು ತಿಂದರೂ ಶರೀರದಲ್ಲಿ ರೋಗದ ವೃದ್ಧಿಯಾಗಿ ದುಃಖಿಯಾಗುತ್ತಾನೆ. ಅಂತರಾಯ ಕರ್ಮದ ಉದಯದಲ್ಲಿ ಒಳ್ಳೆಯ ವಸ್ತುಗಳು ಪಚನವಾಗುವುದಿಲ್ಲ.

**ಸಂದೇಹ-೩೬ :-** ಓ ಸುಖಮೂರ್ತಿ ! ಮನೆಯಲ್ಲಿ ಸುಂದರ ಸ್ತ್ರೀ, ವಸ್ತ್ರ, ಆಭೂಷಣ, ಆನೆ, ಕುದುರೆ, ರತ್ನ ಮೊದಲಾದ ಉಪಭೋಗ ಯೋಗ್ಯ ಒಳ್ಳೊಳ್ಳೆಯ ವಸ್ತುಗಳು ವಿದ್ಯಮಾನವಿದ್ದರೂ ಕೂಡ ಯಾವ ಪಾಪದ ಕಾರಣದಿಂದ ಭೋಗಿಸಲಾಗುವುದಿಲ್ಲ ?

**ಸಮಾಧಾನ :-** ಯಾವ ಜೀವನಿಗೆ ಪೂರ್ವಭವದಲ್ಲಿ ಅನ್ಯರ ಆನೆ-ಕುದುರೆ, ಸ್ತ್ರೀ, ವಾಹನಾದಿ ಉಪಭೋಗ ಯೋಗ್ಯ ಸುಂದರ ಪದಾರ್ಥಗಳನ್ನು ಕಂಡು ಅಸೂಯೆಯೆನಿಸಿದೆ; ಅವರ ಒಳ್ಳೆಯ ಪದಾರ್ಥಗಳನ್ನು ಕಂಡು ಯಾರು ಛಲ-ಬಲದಿಂದ ಅವನ್ನು ಲೂಟಿ ಮಾಡಿದ್ದಾರೆ, ಭಯ ತೋರಿಸಿ ಬಲಪೂರ್ವಕ ಕಿತ್ತುಕೊಂಡು ಅವನ್ನು ಸ್ವಯಂ ಭೋಗಿಸಿದ್ದಾರೆ. ಬೇರೆಯವರ ಉಪಭೋಗ ಯೋಗ್ಯ ಪದಾರ್ಥಗಳನ್ನು ಕಂಡು ಯಾರು ಪ್ರಸನ್ನರಾಗಿಲ್ಲ; ಬೇರೆಯವರ ಮನೆಯಲ್ಲಿ ರತ್ನ, ಆನೆ ಮೊದಲಾದ ಒಳ್ಳೆಯ ವಸ್ತುಗಳನ್ನು ನೋಡಿ ಅವರಿಗೆ ಭಯ ತೋರಿಸುತ್ತ ಇವೆಲ್ಲ ವಸ್ತುಗಳನ್ನು ದೊರೆಯ ಮೂಲಕ ಕಸಿದುಕೊಳ್ಳುವಂತೆ ಮಾಡುವೆನು. ಅಥವಾ ಈ ವಸ್ತುಗಳನ್ನು ದೊರೆಯು ನೋಡಿದರೆ ಕಸಿದುಕೊಂಡು ಬಿಡುತ್ತಾನೆ ಎಂದು ಹೇಳುವರು ಇಂಥ ಪಾಪಭಾವಗಳ ಕಾರಣ ಪ್ರಾಪ್ತವಾದಂಥ ಸುಂದರ ಒಳ್ಳೆಯ ವಸ್ತುಗಳನ್ನು ಕೂಡ ಅವನು ಭೋಗಿಸಲಾಗುವುದಿಲ್ಲ.

**ಸಂದೇಹ-೩೭ :-** ಓ ಗುರುಗಳೇ ! ಈ ಜೀವನು ಯಾವ ಪಾಪದಿಂದ ತೀವ್ರ ಕ್ರೋಧದ ಧಾರಕನಾಗುತ್ತಾನೆ?

**ಸಮಾಧಾನ :-** ಎಲೈ ವತ್ಸನೇ ! ಪೂರ್ವಭವದಲ್ಲಿ ಯಾವ ಜೀವನು ಕ್ರೋಧ ಮಾಡುತ್ತಿರುವ ಜೀವಗಳನ್ನು ಕಂಡು ಒಳ್ಳೆಯ ಕಾರ್ಯವೆಂದು ತಿಳಿದಿದ್ದಾನೆ; ಪೂರ್ವ ಭವದಲ್ಲಿ ಅನ್ಯ ಜೀವಗಳ ಜತೆ ಯುದ್ಧ-ಕಲಹ ಮಾಡುವ ಸ್ವಭಾವವು ಅತ್ಯಧಿಕವಾಗಿತ್ತು; ಬೇರೆಯವರು ಯುದ್ಧ ಮಾಡುತ್ತಿರುವುದನ್ನು ಕಂಡು ಸುಖ ಮನ್ನಿಸಿದ್ದನು; ಪೂರ್ವ ಭವದಲ್ಲಿ ಸ್ವಯಂ ಸಿಂಹ, ಸೂಕರ, ಶ್ವಾನ, ಸರ್ಪ, ಭಿಲ್ಲ ಮೊದಲಾದ ಪರ್ಯಾಯ ಧಾರಣ ಮಾಡಿ ಅನ್ಯ ಜೀವರುಗಳಿಗೆ ವಿವಿಧ ಪ್ರಕಾರದ ಪೀಡೆ ತಲುಪಿಸಿದ್ದಾನೆ; ಸಮತೆಯಭಾವ ಧಾರಕ ಧರ್ಮಾತ್ಮರನ್ನು ಕಂಡು ಅವರ ಸಮಭಾವದ ನಿಂದೆ ಮಾಡಿದ್ದಾನೆ. ಶಾಂತ ಪರಿಣಾಮಿಗಳ ಅಪಹಾಸ್ಯ ಮಾಡಿದ್ದಾನೆ - ಇಂಥವೆಲ್ಲ ಪಾಪಗಳಿಂದ ಜೀವನು ಮಹಾಕ್ರೋಧಿಯಾಗುತ್ತಾನೆ.

**ಸಂದೇಹ-೩೮ :-** ಪ್ರಭು ! ಸ್ವಯಂ ಮಾನವನ್ನು ಬಯಸುತ್ತಿದ್ದರೂ ಈ ಜೀವನಿಗೆ ಯಾವ ಪಾಪದ ಫಲದಲ್ಲಿ ಮಾನವು ದೊರಕುವುದಿಲ್ಲ ?

**ಸಮಾಧಾನ :-** ಎಲೈ ಭವ್ಯಾತ್ಮನೇ ! ಯಾವ ಜೀವನು ಅನ್ಯ ಜೀವರುಗಳ ಮಾನ ಕಾಯಲಿಲ್ಲ; ತನ್ನ ತನು, ಧನ, ಯೌವ್ವನ, ರಾಜ್ಯ, ಆಜ್ಞೆ, ಬಲ ಇತ್ಯಾದಿಗಳ ಗರ್ವದಿಂದ ಅನ್ಯ ಜೀವಗಳ ಅನಾದರ ಮಾಡಿದ್ದಾರೆ, ಯಾರು ಸ್ವಯಂ ತಮ್ಮನ್ನು ತಾವು ಒಳ್ಳೆಯ ಮನುಷ್ಯರೆಂದು ತಿಳಿದು ಅನ್ಯ ಜೀವರುಗಳ ತಲೆತಗ್ಗಿಸ ಹಚ್ಚಿದ್ದಾರೆ, ಅವರು ತಲೆ ತಗ್ಗಿಸಿರುವುದನ್ನು ಕಂಡು ತಮ್ಮ ಮಾನ ಭಾವದಿಂದ ಅವರನ್ನು ತುಚ್ಛರೆಂದು ತಿಳಿದು, ನಂತರ ಅವರಿಗೆ ನಮಸ್ಕಾರ ಮಾಡುವುದಿಲ್ಲ; ಗುರು ಜನರ ಆಜ್ಞೆಗೆ ಪ್ರತಿಕೂಲವಾಗುವಂತೆ ಸ್ವಚ್ಛಂದ ಪ್ರವರ್ತನೆ ಮಾಡುತ್ತಾರೆ, ಹಿರಿಯರ ಆಜ್ಞೆಯ ಉಲ್ಲಂಘನೆ ಮಾಡುತ್ತಾರೆ, ದೀನ ಜೀವರುಗಳಿಗೆ ಭಯ ತೋರಿಸಿ ಬಲವಂತತೆಯಿಂದ ತಮ್ಮ ಕಾಲಿಗೆ

ಎರಗಿಸಿಕೊಳ್ಳುತ್ತಾರೆ, ಅವರ ಮಾನದ ಖಂಡನೆ ಮಾಡುತ್ತಾರೆ ಮತ್ತು ಯಾರದೋ ಮಾನವು ಖಂಡಿತವಾಗಿ ಹೋದಮೇಲೆ ಅದನ್ನು ಕಂಡು ಅಥವಾ ಆಲಿಸಿ ಸ್ವಯಂ ಸುಖಿಗಳಾಗುತ್ತಾರೆ-ಇತ್ಯಾದಿ ಕ್ರೂರ ಭಾವಗಳಿಂದ ಅಪಮಾನಿತನಾಗುತ್ತಾನೆ; ಜೀವನು ಮಾನವನ್ನು ಬಯಸಿದರೂ ಮಾನ ಸಿಗುವುದಿಲ್ಲ.

**ಸಂದೇಹ-೩೯ :-** ಓ ದಯಾಸಾಗರರೇ ! ತಮ್ಮ ಮಾನಮಾಡಿಕೊಳ್ಳಲಪೇಕ್ಷಿಸದಿದ್ದರೂ, ಅನ್ಯ ಜೀವರುಗಳು ಬಂದು ಮಸ್ತಕ ಮಣಿಸುತ್ತಾರೆ, ಆಜ್ಞೆ ಮನ್ನಿಸುತ್ತಾರೆ, ಸೇವೆ ಮಾಡುತ್ತಾರೆ-ಇಂಥ ಮಹಿಮೆಯು ಜೀವನಿಗೆ ಯಾವ ಪುಣ್ಯದಿಂದ ಆಗುತ್ತದೆ.

**ಸಮಾಧಾನ :-** ಎಲೈ ಭವ್ಯನೇ ಆಲಿಸು ! ಯಾವ ಜೀವನು ಪೂರ್ವ ಭವದಲ್ಲಿ ಮಹಾಭಕ್ತಿಪೂರ್ವಕ ಶುಭಭಾವಗಳಿಂದ ದೇವ-ಧರ್ಮ-ಗುರುಗಳ ಸೇವೆ-ಪೂಜೆಯನ್ನು ವಿನಯಸಹಿತ ತಲೆಬಾಗಿಸಿ ಮಾಡಿದ್ದಾನೆ; ಅದರ ಫಲದಲ್ಲಿ ದೇವಗಳು ಸೇವೆ ಮಾಡುವಂಥ ಇಂದ್ರನಾಗುತ್ತಾನೆ, ಮನುಷ್ಯರ ಇಂದ್ರ ಚಕ್ರವರ್ತಿಯಾಗುತ್ತಾನೆ, ಅರ್ಧ ಚಕ್ರಿಯಾಗುತ್ತಾನೆ, ಅನೇಕ ದೊರೆಗಳಿಂದ ವಂದಿಸಲ್ಪಡುವ ಮಹಾಮಂಡಲೇಶ್ವರ ದೊರೆಯಾಗುತ್ತಾನೆ-ಇಂಥ ಪದಗಳ ಧಾರಕ ಪೃಥ್ವಿಪತಿಯಾಗುತ್ತಾನೆ. ಅವನಿಗೆ ದೊಡ್ಡ-ದೊಡ್ಡ ಮಹಂತ ದೊರೆಗಳು ತಾವಾಗಿಯೇ, ಭಕ್ತಿಪೂರ್ವಕ ತಲೆಬಾಗಿಸುತ್ತಾರೆ. ಯಾವ ಜೀವನು ಪೂರ್ವಭವದಲ್ಲಿ ಮಾತಾ-ಪಿತ ಮೊದಲಾಗಿ ಗುರುಜನರ ಸೇವೆ ಮಾಡುವ ಸಲುವಾಗಿ ಸದಾ ವಿನಯಪೂರ್ವಕ ಮಸ್ತಕ ಮಣಿಸಿ ಶುಶ್ರೂಷೆ ಮಾಡಿದ್ದಾನೆ; ಆ ಪುಣ್ಯದಿಂದ ಇಡೀ ಕುಟುಂಬವು ಆಜ್ಞಾಕಾರೀಯಾಗುತ್ತದೆ-ಅವನು ಎಲ್ಲರಿಂದ ಆದರ ಪಡೆಯುತ್ತಾನೆ.

ಯಾರು ಪೂರ್ವಭವದಲ್ಲಿ ಅನ್ಯ ಜನರ, ವಯಸ್ಸಿನಲ್ಲಿ ತನಗಿಂತ ದೊಡ್ಡವರ ಮಾನ ಕಾಯುತ್ತ ವಿನಯಪೂರ್ವಕ ಸಾತಾ ಒದಗಿಸಿದ್ದಾನೆ, ಆದರ ಮಾಡಿದ್ದಾನೆ; ಆ ಜೀವನು ತನಗಿಂತ ವಯಸ್ಸಿನಲ್ಲಿ ದೊಡ್ಡವರಿಂದ ವಂದನೀಯ-ಪ್ರಶಂಸನೀಯನಾಗುತ್ತಾನೆ. ತನಗಿಂತ ದೊಡ್ಡವರು ಬಂದು-ಬಂದು ತಲೆ ಬಾಗಿಸುತ್ತಾರೆ ಸನ್ಮಾನ ಮಾಡುತ್ತಾರೆ.

ವಿವೇಕವಂತನು, ಸಂಸಾರ ರಚನೆಯನ್ನು ತಿಳಿಯುವಂಥವನು, ಧರ್ಮಶಾಸ್ತ್ರದ ರಹಸ್ಯವನ್ನು ತಿಳಿಯುವಂಥವನು, ಯಥಾಯೋಗ್ಯ ವಿಧಿವೇತ್ತಾ ಜೀವನು ಬಲ, ಕುಲ, ಧನ, ಬುದ್ಧಿ, ವಯಸ್ಸು ಇತ್ಯಾದಿಗಳಲ್ಲಿ ಕಿರಿಯರ ಯಥಾಯೋಗ್ಯ ವಿನಯಮಾಡಿ, ಸತ್ಕಾರ ಮಾಡಿ ಅವರಿಗೆ ಸಾತಾವನ್ನುಂಟು ಮಾಡಿದ್ದಾನೆ, ಆ ಜೀವನು ಜಗತ್ತಿನಲ್ಲಿ ಪ್ರಶಂಸೆ ಪಡೆದು ಎಲ್ಲರಿಗೆ ಪೂಜ್ಯನಾಗುತ್ತಾನೆ. ಜಗತ್ತಿನ ಜನರು ತಾವಾಗಿಯೇ ಬಂದು ತಲೆಬಾಗಿಸುತ್ತಾರೆ, ಅವನ ಸನ್ಮಾನ ಮಾಡುತ್ತಾರೆ ಇತ್ಯಾದಿ ರೂಪ ಪದದ ಧಾರಕನಾಗುತ್ತಾನೆ.

ಯಾವನು ಯಾರ ಮಾನವನ್ನೂ ಖಂಡಿತಗೊಳಿಸಿಲ್ಲ, ಆದರಪೂರ್ವಕ ಅನ್ಯ ಜೀವರುಗಳನ್ನು ಸುಖಿ ಮಾಡಿದ್ದಾನೆ. ಅವನಿಗೆ ಇಂಥ ಶುಭಭಾವಗಳ ಫಲದಲ್ಲಿ ಎಂಥ ಪದದ ಪ್ರಾಪ್ತಿಯಾಗುತ್ತದೆಯೆಂದರೆ ಅಲ್ಲಿ ಅವನಿಗೆ ಮಾನದ ಅಭಿಲಾಷೆ ಇಲ್ಲದಿದ್ದರೂ, ಅನ್ಯ ಜೀವಗಳು ಸ್ವೇಚ್ಛೆಯಿಂದ, ಇವನ ಕುರಿತಾಗಿ ಸ್ನೇಹಪೂರ್ವಕ ಬಂದು ತಲೆ ಬಾಗಿಸುತ್ತಾರೆ, ಆದರ ಮಾಡುತ್ತಾರೆಂದು ತಿಳಿಯುವುದು.

**ಸಂದೇಹ-೪೦ :-** ಓ ಗುರುಗಳೇ ! ಈ ಜೀವನು ಯಾವ ಪಾಪದಿಂದ ಮಾಯಾಚಾರಿ- ವಂಚಕ ನಾಗುತ್ತಾನೆ?

**ಸಮಾಧಾನ :-** ಎಲೈ ವತ್ಸನೇ ! ವಂಚಕನ ಭೇದಗಳು ಅನೇಕವಿವೆ. ಅವುಗಳಲ್ಲಿನ - ಯಾವ ಜೀವನು ಪೂರ್ವ ಭವದಲ್ಲಿ ಅನ್ಯರ ಒಳ್ಳೆಯ ತಪಸ್ಸನ್ನು ಕಂಡು, ಅದರಲ್ಲಿ ದೋಷ ತಗಲಿಸಿ, ಅದರ ನಿಂದೆ ಮಾಡಿದ್ದಾನೆ-ಅವನು ಭವಾಂತರದಲ್ಲಿ ಯಾವಾಗಲೋ ಮನುಷ್ಯನಾಗಿ ತಪಸ್ಸನ್ನು ಧಾರಣ ಮಾಡಿದರೆ, ಆ ಪಾಪದ ಫಲದಲ್ಲಿ ಆ ತಪಸ್ಸನ್ನು ಮಾನ ಪೋಷಣೆಯ ಸಲುವಾಗಿ ಮಾಡುತ್ತಾನೆ. ಅಂತರಂಗದೊಳಗೆ ಧರ್ಮದ ಇಚ್ಛೆಯಿಲ್ಲದೆಯೇ ಜನರಲ್ಲಿ ಪೂಜ್ಯತೆ

ಪಡೆಯುವ ಸಲುವಾಗಿ ವಂಚನೆಯ ಭಾವದೊಂದಿಗೆ ತಪಸ್ವಿಯಾಗುತ್ತಾನೆ. ಅವನ ತಪಸ್ಸಿನಲ್ಲಿ ಕಪಟವಿರುತ್ತದೆ. ಅವನು ಪ್ರಚ್ಛನ್ನರೂಪದಿಂದ ಭೋಜನ ಸ್ವೀಕರಿಸಿ, ಬೇರೆಯವರಿಗೆ ಅನಶನ ತಪವೆಂದು ಹೇಳುತ್ತಾನೆ - ಇತ್ಯಾದಿ ರೂಪದಲ್ಲಿ ತಪಸ್ಸಿನ ಪರಿಪಾಲನೆ ಮಾಡುತ್ತ, ಛಲಸಹಿತ ತಪಸ್ವಿಯಾಗುತ್ತಾನೆ.

ಯಾವ ಜೀವನು ಅನ್ಯರ ಒಳ್ಳೆಯ ದಾನದಲ್ಲಿ ದೋಷ ತಗಲಿಸಿದ್ದಾನೆ, ಛಲದಿಂದ ನಿಂದೆ ಮಾಡಿದ್ದಾನೆ- ಆ ಜೀವನು ಎಂದಾದರೂ ಭವಾಂತರದಲ್ಲಿ ಮನುಷ್ಯನಾಗಿ ದಾನ ಕೊಡುತ್ತಿದ್ದರೆ, ಆ ಹಿಂದಿನ ಪಾಪದ ಕಾರಣ ಕಪಟಪೂರ್ವಕ ದಾನ ಕೊಡುವಂಥವನಾಗುತ್ತಾನೆ. ಸ್ವಯಂ ದಾನ ಕೊಟ್ಟು ಜನರಿಗಂತೂ ಅಧಿಕ ದ್ರವ್ಯ ಹೇಳುತ್ತಾನೆ ಮತ್ತು ತಾನು ಅಲ್ಪ ಧನವನ್ನೇ ದಾನದಲ್ಲಿ ಕೊಡುತ್ತಾನೆ. 'ಇವನ ದಾನವು ಕಪಟಪೂರ್ಣವಿರುತ್ತದೆ' - ಎಂಬುದು ಜನರಿಗೆ ತಿಳಿದು ಬಂದಮೇಲೆ ಅವನ ನಿಂದೆಯಾಗುತ್ತದೆ. ವಸ್ತ್ರವನ್ನು ಕೊಡುವಾಗ ಜೀರ್ಣ ವಸ್ತ್ರವನ್ನು ಕೊಟ್ಟು 'ಬೆಲೆಬಾಳುವ ಹೊಸ ಬಟ್ಟೆ ಕೊಟ್ಟಿದ್ದೇನೆ'ಂದು ಹೇಳುತ್ತಾನೆ - ಇತ್ಯಾದಿ ರೂಪದಿಂದ ಪಾಪಭಾವಗಳಿಂದ ದಾನದಲ್ಲಿ ಕಪಟ ಮಾಡುವಂಥವನಾಗುತ್ತಾನೆ.

ಯಾವ ಜೀವನು ಪೂರ್ವ ಭವದಲ್ಲಿ ಅನ್ಯರ ಒಳ್ಳೆಯ ಧರ್ಮ-ಪೂಜೆ, ಸಾಮಾಯಿಕ, ಧ್ಯಾನ, ಅಧ್ಯಯನ ಮೊದಲಾದ ಅನೇಕ ಧಾರ್ಮಿಕ ಅಂಗಗಳನ್ನು ಕಂಡು, ಶುದ್ಧ, ಧರ್ಮದ ಅಂಗಗಳಲ್ಲಿ ದೋಷ ತಗಲಿಸಿದ್ದಾನೆ; ಅವನಿಗೆ ಭವಾಂತರದಲ್ಲಿ ಎಂದೋ ಮನುಷ್ಯ ರೂಪದಲ್ಲಿ ಉತ್ಪನ್ನನಾದ ಮೇಲೆ ಧರ್ಮದ ಸೇವನೆ ಮಾಡುತ್ತಿರುವಾಗ ಕೂಡ, ಆ ಪಾಪದ ಫಲದಲ್ಲಿ ಅವನು ಭಾವರಹಿತನಾಗುತ್ತಾನೆ. ಪ್ರಭುವಿನ ಪೂಜೆಯನ್ನು ಕೂಡ ಭಾವರಹಿತನಾಗಿಯೇ ಮಾಡುತ್ತಾನೆ, ಅಲ್ಪ ಧನ ತೊಡಗಿಸಿ ಕೂಡ ನಾನು ಅಧಿಕ ಧನ ತೊಡಗಿಸಿದ್ದೇನೆಂದು ಜನರಿಗೆ ಹೇಳುತ್ತಾನೆ. ಮನೆಯಲ್ಲಿ ಧನವಿದ್ದರೂ ಕೂಡ ಧರ್ಮ ಕಾರ್ಯದಲ್ಲಿ ಧನದ ಅವಶ್ಯಕತೆ ಬಿದ್ದ ಮೇಲೆ, ತನ್ನ ಮೋಸಗಾರಿಕೆ ಹಾಗೂ ಚತುರತೆಯಿಂದ ತನ್ನ ನಿರ್ಧನತೆಯನ್ನು ದರ್ಶಿಸುತ್ತ ಮನೆಯ ಕಷ್ಟ ಹೇಳುತ್ತಾನೆ, ಧರ್ಮದಲ್ಲಿ ಧನ ಖರ್ಚು ಮಾಡುವುದಿಲ್ಲ; ಆ ಪಾಪದ ಫಲದಲ್ಲಿ ಧನ ರಹಿತನಾಗಿ ಧರ್ಮದಲ್ಲಿ ಛಲ-ಕಪಟ ಮಾಡುತ್ತಾನೆ.

ಯಾವನು ಪೂರ್ವ ಭವದಲ್ಲಿ ಅನ್ಯರ ಧ್ಯಾನದೊಳಗೆ ದೋಷ ತಗಲಿಸಿದ್ದಾನೆ, ಅವರ ಅಪಹಾಸ್ಯ ಮಾಡಿದ್ದಾನೆ; ಅವನು ಅದರ ಪಾಪದಿಂದ ಭವಾಂತರದಲ್ಲಿ ದೋಷಸಹಿತ ಧ್ಯಾನದ ಧಾರಕನಾಗುತ್ತಾನೆ, ಬಕಪಕ್ಷಿಯ ಹಾಗೆ ಕುಧ್ಯಾನದ ಧಾರಣೆ ಮಾಡುತ್ತಾನೆ. ಧಾರ್ಮಿಕ ಅಂಗದ ಸೇವನೆಯನ್ನು ಕಪಟಪೂರ್ವಕ ಮಾಡುತ್ತಾನೆ. ಪೂರ್ವಭವದಲ್ಲಿ ವಂಚನೆಯೊಂದಿಗೆ ಧರ್ಮದ ಸೇವನೆ ಮಾಡುವಂಥವರ ಪಾಖಂಡವನ್ನು ಕಂಡು ಅವರ ಪ್ರಶಂಸೆ ಮಾಡಿದ್ದಾನೆ - ಇತ್ಯಾದಿ ಪಾಪ ಭಾವಗಳಿಂದ ಜೀವನು ಕಪಟಪೂರ್ವಕ ಧರ್ಮ ಮಾಡುವಂಥವನಾಗುತ್ತಾನೆ.

ಯಾವ ಜೀವನು ಪೂರ್ವ ಭವದಲ್ಲಿ ಅನ್ಯ ಜೀವಗಳು ಕುಟುಂಬದೊಳಗೆ ಛಲ-ಕಪಟ ಮಾಡುತ್ತಿರುವುದನ್ನು ಕಂಡು ಸುಖಿಯಾಗಿದ್ದಾನೆ, ಆ ಜೀವನು ಭವಾಂತರದಲ್ಲಿ ತನ್ನ ಕುಟುಂಬದವರೊಂದಿಗೆ ಕಪಟ ಮಾಡುವಂಥವನಾಗುತ್ತಾನೆ. ಯಾವ ಜೀವನು ಪೂರ್ವ ಭವದಲ್ಲಿ ಅನ್ಯರನ್ನು ಕಪಟಪೂರ್ಣ ಆಜೀವಿಕೆ ಮಾಡುತ್ತಿರುವುದನ್ನು ಕಂಡು ಅವರ ಕಪಟದ ಪ್ರಶಂಸೆ ಮಾಡಿದ್ದಾನೆ - ಸುಖಿಯಾಗಿದ್ದಾನೆ - ಆ ಜೀವನು ಭವಾಂತರದಲ್ಲಿ ತನ್ನ ಆಜೀವಿಕೆಯನ್ನು ಕಪಟಪೂರ್ಣತೆಯಿಂದ ನಡೆಸುವಂಥವನಾಗುತ್ತಾನೆ.

ಮಾಯಾಚಾರಿಯ ಭೇದಗಳು ಇನ್ನೂ ಅನೇಕವಿವೆ. ಪೂರ್ವ ಭವದಲ್ಲಿ ಯಾವ ಮಾಯಾಚಾರವು ಒಳ್ಳೆಯದೆನಿಸಿದೆ ಅದೇ ಮಾಯಾಚಾರದ ರೂಪದಿಂದ ಅವನು ಉತ್ಪನ್ನನಾಗುತ್ತಾನೆ - ಇತ್ಯಾದಿಗಳ ರೂಪದಲ್ಲಿ ಒಳ್ಳೆಯ ಧಾರ್ಮಿಕ ಕಾರ್ಯಗಳನ್ನು ಕೂಡ ಎಂಥ ಮಾಯಾಚಾರ ರೂಪದಿಂದ ತಿಳಿದಿದ್ದಾನೆ, ಅದೇ ಜಾತಿಯ ಧಾರ್ಮಿಕ, ಮಾಯಾಚಾರಿಯ ರೂಪದಲ್ಲಿ ಉತ್ಪನ್ನನಾಗುತ್ತಾನೆ. ಎಂಥ ಕರ್ಮ, ಕಾರ್ಯಗಳಲ್ಲಿ ದೋಷ ತಗಲಿಸಿದ್ದಾನೆ, ಅಂಥದೇ ಜಾತಿಯ ಕರ್ಮ, ಕಾರ್ಯಗಳಲ್ಲಿ ಮಾಯಾಚಾರಿಯಾಗಿ ಉತ್ಪನ್ನನಾಗುತ್ತಾನೆ.

**ಸಂದೇಹ-೪೧ :-** ಓ ಸ್ವಾಮೀ ! ಈ ಜೀವನು ಯಾವ ಪಾಪದಿಂದ ಕಳ್ಳನಾಗುತ್ತಾನೆ ?

**ಸಮಾಧಾನ :-** ಯಾರು ಪೂರ್ವ ಭವದಲ್ಲಿ ಕಳ್ಳರನ್ನು ಒಳ್ಳೆಯವರೆಂದು ಮನ್ನಿಸಿದ್ದಾರೆ, ಕಳ್ಳರ ಜೊತೆ ವ್ಯಾಪಾರ ಮಾಡಿ ಅದರಿಂದ ಮಹಾಲಾಭ ಹೊಂದಿದ್ದಾರೆ, ಕಳ್ಳರ ಜೊತೆಗೆ ಸಂಬಂಧವನ್ನಿಟ್ಟುಕೊಂಡಿದ್ದಾರೆ, ಕಳ್ಳರ ಸಹಯೋಗ ಮಾಡಿ ಅನ್ಯರ ಧನಲೂಟಿ ಮಾಡಿಸಿದ್ದಾರೆ, ತಮ್ಮ ಮನಸ್ಸಿನಲ್ಲಿ ಅನ್ಯರ ಧನ ಕದಿಯುವ ಅಭಿಲಾಷೆಯನ್ನಿಟ್ಟುಕೊಂಡಿದ್ದಾರೆ - ಆ ಪಾಪಗಳಿಂದ ಕಳ್ಳರಾಗುತ್ತಾರೆ.

**ಸಂದೇಹ-೪೨ :-** ಓ ಗುರುಗಳೇ ! ಈ ಜೀವನು ಯಾವ ಕರ್ಮದಿಂದ ಹಿಂಸೆ ಮಾಡುವಂಥವನಾಗುತ್ತಾನೆ?

**ಸಮಾಧಾನ :-** ಯಾರು ಪೂರ್ವ ಭವದಲ್ಲಿ ಹಿಂಸೆಯನ್ನು ಒಳ್ಳೆಯದೆಂದು ತಿಳಿದಿದ್ದಾರೆ, ಹಿಂಸಕ ಜೀವಗಳು ಹಿಂಸೆ ಮಾಡುತ್ತಿರುವುದನ್ನು ಕಂಡು ಅವರ ಅನುಮೋದನೆ ಮಾಡಿದ್ದಾರೆ, ಪೂರ್ವ ಭವದಲ್ಲಿ ಹಿಂಸೆ ಮಾಡುವ ಅನೇಕ ಕಲೆಗಳು ಹಾಗೂ ಚತುರತೆಯನ್ನು ಕಲಿತುಕೊಂಡಿದ್ದಾರೆ, ಪೂರ್ವದಲ್ಲಿ ಹಿಂಸೆಯ ಅನೇಕ ಉಪಕರಣಗಳನ್ನು ಸ್ವಯಂ ತಯಾರಿಸಿದ್ದಾರೆ. ಬಿಲ್ಲು, ಭರ್ಚಿ, ಜಾಲ, ಪಾಶ, ದೊಣ್ಣೆ, ಅಂಟು, ಕವಣೆ ಮೊದಲಾದ ಅನೇಕ ಶಸ್ತ್ರಗಳನ್ನಿಟ್ಟುಕೊಂಡು ಸ್ವಯಂ ಸುಖಿಯಾಗಿದ್ದಾರೆ. ಶಸ್ತ್ರಗಳನ್ನು ಉಜ್ವಲ ಮಾಡುವ, ತೀಕ್ಷ್ಣ ಮಾಡುವ ಚತುರತೆಯನ್ನು ಪೂರ್ವಭವದಲ್ಲಿ ಮಾಡಿದ್ದಾರೆ. ಪೂರ್ವಭವದಲ್ಲಿ ಶಸ್ತ್ರಗಳ ಮಾರಾಟ ಮಾಡಿದ್ದಾರೆ, ನಿರ್ಮಿಸಿದ್ದಾರೆ - ಇತ್ಯಾದಿ ಪಾಪಗಳಿಂದ ಪರಭವದಲ್ಲಿ ಶಸ್ತ್ರದಿಂದ ಸಾಯುತ್ತಾರೆ ಮತ್ತು ಸ್ವಯಂ ಹಿಂಸಕರಾಗುತ್ತಾರೆ.

**ಸಂದೇಹ-೪೩ :-** ಓ ಜಗದ್ಗುರುಗಳೇ ! ಈ ಜೀವನು ಯಾವ ಪಾಪದಿಂದ ಕ್ರಿಯಾರಹಿತ, ಅನಾಚಾರಿಯಾಗುತ್ತಾನೆ ? ಆಹಾರ-ಪಾನೀಯಗಳ ಪರಿವೆಯಿಲ್ಲದೆ ಸದೈವ ವಿಕಲ್ಪ ಜಾಲದಲ್ಲಿ ಸಿಲುಕಿಕೊಂಡಿರುವುದು ಯಾವ ಪಾಪದ ಫಲವಿದೆ ?

**ಸಮಾಧಾನ :-** ಪೂರ್ವ ಭವದಲ್ಲಿ ಯಾರು ಶುಭಾಚರಣೆಯುಳ್ಳ ಜೀವರುಗಳ ನಿಂದೆ ಮಾಡಿದ್ದಾರೆ, ಒಳ್ಳೆಯ ಆಚರಣೆಯನ್ನು ನೋಡಿ ಯಾರಿಗೆ ಅಸಮಾಧಾನವಾಗಿದೆ, ಆಚರಣೆ ಮಾಡುವಲ್ಲಿ ಸ್ವಯಂ ಪ್ರಮಾದಿಯಾಗಿದ್ದಾರೆ, ಪೂರ್ವ ಭವದಲ್ಲಿ ಅನ್ಯರ ಎಂಜಲು ತಿಂದು ಸುಖ ಮನ್ನಿಸಿದ್ದಾರೆ. ಮೊದಲು ಪೂರ್ವ ಭವದಲ್ಲಿ ಶ್ವಾನಾದಿರೂಪ ಪಶುಪರ್ಯಾಯದಲ್ಲಿ ಅಶುಭ ಭಕ್ಷಣ ಮಾಡಿದ್ದಾರೆ. ಸಿಂಹ ಪರ್ಯಾಯದಲ್ಲಿ ಹಾಗೂ ಅನ್ಯ ಪಶುಗಳ ಪರ್ಯಾಯದಲ್ಲಿ ಖಾದ್ಯ-ಅಖಾದ್ಯದ ವಿವೇಕವಿಲ್ಲದೆ ವಿಚಾರರಹಿತ ಪ್ರವರ್ತನೆ ಮಾಡಿದ್ದಾರೆ, ಬೇರೆಯವರು ಅಭಕ್ಷ್ಯ ವಸ್ತುಗಳನ್ನು ತಿನ್ನುತ್ತಿರುವುದನ್ನು ಕಂಡು ಸ್ವಯಂ ಸುಖಿಯಾಗಿದ್ದಾರೆ. ವಿಶೇಷವಾಗಿ ಅನಾಚಾರೀ ಜೀವಗಳ ಜತೆ ವಾಸ ಮಾಡಿದ್ದಾರೆ, ಅವರ ಪ್ರಶಂಸೆ ಮಾಡಿದ್ದಾರೆ, ಬೇರೆಯವರ ಅನಾಚಾರ ಕಂಡು ತಾವು ಅನಾಚಾರಿಯಾಗುವ ಅಭಿಲಾಷೆಯಾಗಿದೆ, ಇತ್ಯಾದಿ ಪಾಪಗಳಿಂದ ಒಂದುವೇಳೆ ಪಶುವಾದರೆ ಶ್ವಾನ, ಗರ್ದಭ, ಕಾಗೆ ಮೊದಲಾದ ಅಶುಭ ಭಕ್ಷಕ ಪರ್ಯಾಯ ಧಾರಣ ಮಾಡುತ್ತಾರೆ ಮತ್ತು ಒಂದುವೇಳೆ ಮನುಷ್ಯನಾದರೆ ಭಿಲ್ಲ ಚಾಂಡಾಲದಂಥ ನೀಚ ಕುಲದಲ್ಲಿ ಜನಿಸುತ್ತಾರೆ. ಒಂದುವೇಳೆ ತಪ್ಪಿ ಉಚ್ಚ ಕುಲದಲ್ಲಿ ಜನಿಸಿದರೆ ಶೂದ್ರರ ಸಮಾನ ಅನಾಚಾರಿಗಳಾಗುತ್ತಾರೆ.

**ಸಂದೇಹ-೪೪ :-** ಓ ತಂದೇ ! ಈ ಜೀವನು ಯಾವ ಪುಣ್ಯದಿಂದ ಶುಭಾಚಾರಿಯಾಗುತ್ತಾನೆ ?

**ಸಮಾಧಾನ :-**ಯಾರಿಗೆ ಪೂರ್ವ ಭವದಲ್ಲಿ ಅನಾಚಾರಿಯ ಪ್ರಕ್ರಿಯೆಗಳನ್ನು ಕಂಡು ಗ್ಲಾನಿಯು ಉತ್ಪನ್ನ ವಾಗಿದೆ; ಒಳ್ಳೆಯ ಆಚರಣೆಯಿಂದ ಕೂಡಿದ ದಯಾಮಯ ಪ್ರವೃತ್ತಿಯನ್ನು ಕಂಡು ಪ್ರಸನ್ನರಾಗಿದ್ದಾರೆ. ಪೂರ್ವಭವದಲ್ಲಿ ಒಳ್ಳೆಯ ಆಚರಣೆಯುಳ್ಳ ಸಜ್ಜನ ಪುರುಷರ ಸಂಗತಿಯಲ್ಲಿದ್ದಾರೆ ಮತ್ತು ಅದು ಒಳ್ಳೆಯದೆನಿಸಿದೆ. ಅಭಕ್ಷ್ಯ ಭಕ್ಷಣದ ಕುರಿತಾಗಿ ಅರುಚಿಯಾಗಿತ್ತು. ಯಾರಿಗೆ ಕುಶಬ್ದಗಳು ಒಳ್ಳೆಯವೆನಿಸುತ್ತಿರಲಿಲ್ಲ. ಕುಫಲದಾಯಕವೆಂದು ತಿಳಿದು ಸಪ್ತ

ವ್ಯಸನಗಳ ತ್ಯಾಗ ಮಾಡಿದ್ದಾರೆ. ಇತರರ ದಾನ, ಪೂಜೆ, ಶೀಲ, ಸಂಯಮ, ತಪ, ವ್ರತ, ದಯಾಮಯ ಆಚರಣೆ ಕಂಡು ಅವುಗಳ ಅನುಮೋದನೆ ಮಾಡಿದ್ದಾರೆ. ಪೂರ್ವಭವದಲ್ಲಿ ಸ್ವಯಂ ಯಾರಿಗೆ ಶುಭಾಚರಣೆಯು ಹಿತವೆನಿಸಿದೆ, ತಮಗೆ ಶುಭಾಚರಣೆ ಮಾಡುವ ಇಚ್ಛೆಯಾಗಿದೆ-ಇತ್ಯಾದಿ ಶುಭ ಪರಿಣಾಮಗಳಿಂದ ಜೀವನು ಶುಭಾಚಾರಿಯಾಗುತ್ತಾನೆ.

**ಸಂದೇಹ-೪೫ :-** ಓ ಸ್ವಾಮೀ ! ಸಂಸಾರದಲ್ಲಿ ಸಹೋದರನ ಸಮಾನ ಪ್ರಿಯರು ಬೇರೆ ಯಾರೂ ಇಲ್ಲ. ಆದರೂ ಸಹೋದರ-ಸಹೋದರರಲ್ಲಿ ಪರಸ್ಪರ ದ್ವೇಷವು ಯಾವ ಪಾಪದಿಂದ ಆಗುತ್ತದೆ ?

**ಸಮಾಧಾನ :-** ಎಲೈ ಭವ್ಯನೇ ಆಲಿಸು ! ಯಾರು ಪೂರ್ವಭವದಲ್ಲಿ ಒಬ್ಬಳೇ ತಾಯಿಯ ಇಬ್ಬರು (ಯುಗಲ) ಮಕ್ಕಳನ್ನು ಹಾಗೂ ಆನೆ, ಕುದುರೆ, ಕೋಣ, ಶ್ವಾನ, ಟಗರು, ಗೌಜಲಹಕ್ಕಿ, ಹುಂಜ, ನವಿಲು ಹಾಗೂ ಕ್ರೋಧಿತ ಮನುಷ್ಯ ಇತ್ಯಾದಿ ದ್ವಿಪದ, ಚತುಷ್ಪದ, ಭೂಚರ, ನಭಚರ ಪಶು-ಮನುಷ್ಯರ ಯುಗಲರನ್ನು ಮನೋರಂಜನೆಯ ಸಲುವಾಗಿ ಅಥವಾ ದ್ವೇಷದಿಂದ ಪರಸ್ಪರರಲ್ಲಿ ಕಾದಾಡಿಸಿದ್ದಾರೆ. ಯಾರೋ ವ್ಯಕ್ತಿಗಳಿಗೆ ಅಸತ್ಯ ಸಲಹೆ ಕೊಟ್ಟು, ಪರಸ್ಪರ ಸಹೋದರರಲ್ಲಿ ದ್ವೇಷ ಉತ್ಪನ್ನ ಮಾಡಿಸಿದ್ದಾರೆ. ಯಾರೋ ಸಹೋದರರಲ್ಲಿ ದ್ವೇಷ ಹುಟ್ಟಿಸುವ ವಾಂಛೆಯೊಂದಿಗೆ ಪರ್ಯಾಯ ಬಿಟ್ಟು ಹೋಗಿದೆ-ಮರಣವಾಗಿದೆ, ಇತ್ಯಾದಿ ಪಾಪಭಾವಗಳಿಂದ ಸೋದರರು ಶತ್ರುವಿನಂತಾಗುತ್ತಾರೆ.

**ಸಂದೇಹ-೪೬ :-** ಸೋದರ-ಸೋದರರಲ್ಲಿ ಪರಸ್ಪರ ಸ್ನೇಹವು ಯಾವ ಪುಣ್ಯದಿಂದ ಆಗುತ್ತದೆ ?

**ಸಮಾಧಾನ :-** ಪೂರ್ವ ಭವದಲ್ಲಿ ಯಾರು ಅನ್ಯರ ಸೋದರ ಪ್ರೇಮವನ್ನು ಕಂಡು ಸುಖ ಮನ್ನಿಸಿದ್ದಾರೆ, ಪರಸ್ಪರರ ವಿರೋಧ-ವೈರವನ್ನು ಕಂಡು ಸ್ವಯಂ ಸಜ್ಜನಿಕೆಯಿಂದ ತಿಳಿಸಿಕೊಟ್ಟು, ಇಬ್ಬರಲ್ಲಿ ತಲೆದೋರಿರುವ ವಿರೋಧವನ್ನು ನಾಶ ಮಾಡಿದ್ದಾರೆ-ಪರಸ್ಪರರಲ್ಲಿ ಸ್ನೇಹವನ್ನುಂಟು ಮಾಡಿಸಿದ್ದಾರೆ-ಇತ್ಯಾದಿ ಒಳ್ಳೆಯ ಭಾವಗಳಿಂದ ಸಹೋದರರಲ್ಲಿ ಪರಸ್ಪರ ಸ್ನೇಹವು ಪ್ರಾಪ್ತವಾಗುತ್ತದೆ.

**ಸಂದೇಹ-೪೭ :-** ಓ ಜ್ಞಾನಮೂರ್ತೀ ! ತಾಯಿ-ಮಕ್ಕಳಲ್ಲಿ ಯಾವ ಪಾಪದಿಂದ ದ್ವೇಷವಾಗುತ್ತದೆ?

**ಸಮಾಧಾನ :-** ಯಾರು ಪೂರ್ವಭವದಲ್ಲಿ ತಾಯಿ-ಮಕ್ಕಳ ಸ್ನೇಹವನ್ನು ಕಂಡು ಬೇಸರಪಟ್ಟಿದ್ದಾರೆ, ಅನ್ಯರ ಮಾತಾ ಪುತ್ರರನ್ನು ವಿರೋಧಿಯನ್ನಾಗಿಸಿ ಆನಂದ ಮನ್ನಿಸಿದ್ದಾರೆ, ತಾಯಿ-ಮಕ್ಕಳು ಜಗಳವಾಡುತ್ತಿರುವುದನ್ನು ಕಂಡು ಪ್ರಸನ್ನರಾಗಿದ್ದಾರೆ-ಇತ್ಯಾದಿ ದ್ವೇಷ ಭಾವಗಳಿಂದ ಭವಾಂತರದಲ್ಲಿ ತಾಯಿ-ಮಕ್ಕಳಲ್ಲಿ ದ್ವೇಷವಾಗುತ್ತದೆ.

**ಸಂದೇಹ-೪೮ :-** ಓ ಕರುಣಾನಿಧಾನರೇ ! ಮಾತಾ-ಪಿತರಿಗೆ ಯಾವ ಪಾಪದಿಂದ ಪುತ್ರನ ವಿಯೋಗ-ವಾಗುತ್ತದೆ ?

**ಸಮಾಧಾನ :-** ಯಾರು ಪೂರ್ವ ಭವದಲ್ಲಿ ಪಶು-ಪಕ್ಷಿಗಳ ಮರಿಗಳನ್ನು ಹಿಡಿದು ತಾಯಿ-ತಂದೆಯರಿಂದ ಬೇರೆ ಮಾಡಿದ್ದಾರೆ, ಕಳ್ಳತನದಿಂದ ಅಥವಾ ಬಲವಂತತೆಯಿಂದ ಅನ್ಯರ ಮಕ್ಕಳನ್ನು ಹಿಡಿದು ಬಂಧಿಸಿದ್ದಾರೆ, ಬೇರೆಯವರ ಒಳ್ಳೆಯ ಮಕ್ಕಳನ್ನು ನೋಡಿ ಅವರನ್ನು ಶಸ್ತ್ರದಿಂದ ಅಥವಾ ವಿಷಾದಿಗಳಿಂದ ಸಾಯಿಸಿ ವಿಯೋಗ ಮಾಡಿಸಿದ್ದಾರೆ, ಯಾರಿಗೋ ಪುತ್ರವಿಯೋಗವಾಗಿರುವುದನ್ನು ನೋಡಿ ಪ್ರಸನ್ನರಾಗಿದ್ದಾರೆ, ಯಾರದೋ ಪುತ್ರ ವಿಯೋಗದ ವಾಂಛೆ ಮಾಡಿದ್ದಾರೆ - ಇತ್ಯಾದಿ ಪಾಪಗಳಿಂದ ಮಾತಾ-ಪಿತರಿಗೆ ಪುತ್ರನ ವಿಯೋಗವಾಗುತ್ತದೆ.

**ಸಂದೇಹ-೪೯ :-** ಓ ದಯಾಸಾಗರರೇ ! ಯಾವ ಪುಣ್ಯದಿಂದ ಪುತ್ರವಿಯೋಗವಾಗಲಾರದು ?

**ಸಮಾಧಾನ :-** ಯಾರು ಪೂರ್ವ ಭವದಲ್ಲಿ ಅನ್ಯರ ಪುತ್ರವಿಯೋಗವನ್ನಾಲಿಸಿ ದಯೆಯ ಭಾವದಿಂದ ಅವರಿಗೆ ಪುತ್ರನ ಮಿಲನವನ್ನು ಬಯಸಿದ್ದಾರೆ. ಯಾರ ಪುತ್ರನು ಬಹುದಿನಗಳಿಂದ ಅಗಲಿ ಹೋಗಿದ್ದನು ಅವನು ಬಂದು ತಾಯಿ-ತಂದೆಯರನ್ನು ಸೇರಿದನೆಂಬ ಮಾತನ್ನು ಆಲಿಸಿ, ಕಂಡು ಸ್ವಯಂ ಸುಖಿಯಾಗಿದ್ದಾರೆ. ಯಾರ

ಪುತ್ರನನ್ನು ಯಾವನೋ ದುಷ್ಟನು ಬಂಧಿಸಿ ತಗೆದುಕೊಂಡು ಹೋಗಿದ್ದಾನೆ-ಎಂಬುದನ್ನು ಆಲಿಸಿ, ಅವನಿಗೆ ಧನವಿತ್ತು ಅಥವಾ ಬಲ ಪ್ರಯೋಗದಿಂದ ಬಿಡಿಸಿಕೊಂಡು ಬಂದು ಅವರ ಪುತ್ರನನ್ನು ಅವರಿಗೇ ತಂದೊಪ್ಪಿಸಿದ್ದಾರೆ. ಯಾವುದೋ ಪಶುವಿನ ಸಂತಾನವು ಅಗಲಿರುವುದನ್ನು ಕಂಡು, ಅದರ ಕುರಿತಾಗಿ ದಯೆಮಾಡಿ, ಹುಡುಕಿ ಅದಕ್ಕೆ ಸಂತಾನ(ಮರಿಯ) ಸಂಯೋಗ ಮಾಡಿಸಿದ್ದಾರೆ; ಯಾರ ಕುರಿತಾಗಿಯೂ ಪುತ್ರವಿಯೋಗದ ವಾಂಛೆ ಮಾಡಿಲ್ಲ-ಇಂಥ ಪುಣ್ಯ ಭಾವಗಳಿಂದ ಪುತ್ರನು ಅಗಲಿ ಹೋಗದೇ ಇರುವಂಥ ಲಾಭವಾಗುತ್ತದೆ.

**ಸಂದೇಹ-೫೦ :-** ಓ ಪ್ರಭು ! ಪುತ್ರನ ಸಲುವಾಗಿ ಅನೇಕ ಕಷ್ಟ ಸಹಿಸಿ ಪುತ್ರನ ಉತ್ಪತ್ತಿಯನ್ನು ಬಯಸುವಂಥ ಪಿತನ ಜೊತೆ ಕೂಡ, ಪಿತಾ-ಪುತ್ರರಲ್ಲಿ ಪಾರಸ್ಪರಿಕ ದ್ವೇಷವು ಯಾವ ಪಾಪದಿಂದ ಆಗುತ್ತದೆ ?

**ಸಮಾಧಾನ :-** ಯಾವ ಜೀವನು ಪೂರ್ವ ಭವದಲ್ಲಿ ಅನ್ಯ ಪಿತಾ-ಪುತ್ರರಲ್ಲಿ ದ್ವೇಷ ಹುಟ್ಟಿಸಿದ್ದಾನೆ; ಅವರು ಜಗಳ ಮಾಡುತ್ತಿರುವುದನ್ನು ಅಥವಾ ಒಬ್ಬರನ್ನೊಬ್ಬರು ದೂಷಿಸುತ್ತಿರುವುದನ್ನು ಕಂಡು ಸ್ವಯಂ ಸುಖಿಯಾಗಿದ್ದಾನೆ; ಬೇರೆ ತಂದೆ-ಮಕ್ಕಳ ಸ್ನೇಹವನ್ನು ಕಂಡು ಸಂತಾಪ ಪಟ್ಟಿದ್ದಾನೆ; ಅನ್ಯರ ಪಿತಾ-ಪುತ್ರರಲ್ಲಿ ದ್ವೇಷವಾಗಲೆಂದು ಬಯಸಿದ್ದಾನೆ- ಇತ್ಯಾದಿ ಅಶುಭ ಭಾವಗಳಿಂದ ಭವಾಂತರದೊಳಗೆ ಪಿತಾ-ಪುತ್ರರಲ್ಲಿ ದ್ವೇಷವಾಗುತ್ತದೆ.

**ಸಂದೇಹ-೫೧ :-** ಓ ಸ್ವಾಮೀ ! ಯಾವ ಪುಣ್ಯದಿಂದ ಪಿತಾ-ಪುತ್ರರಲ್ಲಿ ಸ್ನೇಹವಾಗುತ್ತದೆ ?

**ಸಮಾಧಾನ :-** ಯಾರು ಪೂರ್ವ ಭವದಲ್ಲಿ ಪಿತಾ-ಪುತ್ರರ ಸ್ನೇಹ ಕಂಡು ಸುಖಿಯಾಗಿದ್ದಾರೆ. ಅನ್ಯರ ಪಿತಾ-ಪುತ್ರರಲ್ಲಿ ದ್ವೇಷಭಾವ ಕಂಡು ತಮ್ಮ ಬುದ್ಧಿಯ ಬಲದಿಂದ ಈರ್ವರಿಗೂ ತಿಳಿಸಿಹೇಳಿ ಸ್ನೇಹವನ್ನುಂಟು ಮಾಡಿದ್ದಾರೆ. ಅನ್ಯರ ಪಿತಾ-ಪುತ್ರರಲ್ಲಿ ಸ್ನೇಹ ಬಯಸಿದ್ದಾರೆ - ಇಂಥ ಶುಭ ಭಾವಗಳಿಂದ ಪಿತಾ-ಪುತ್ರರಲ್ಲಿ ಸ್ನೇಹವಾಗುತ್ತದೆ.

**ಸಂದೇಹ-೫೨ :-** ಓ ಗುರುವರ್ಯರೇ ! ಗರ್ಭದಲ್ಲಿ ಪುಣ್ಯಾಧಿಕಾರಿಯು ಅವತರಿತನಾಗಿರುವುದು ಹೇಗೆ ಜ್ಞಾತವಾಗುತ್ತದೆ ?

**ಸಮಾಧಾನ :-** ಯಾರು ಗರ್ಭದಲ್ಲಿ ಬರುವುದರಿಂದ ಮಾತಾ-ಪಿತರು ಪ್ರಸನ್ನ ಚಿತ್ತರಾಗುತ್ತಾರೆ. ಕುಟುಂಬದಲ್ಲಿ ಮಂಗಲವಾಗುತ್ತದೆ. ಮಾತೆಯ ಮನಸ್ಸು ಭಗವಂತರ ಪೂಜೆ ಮಾಡುವ ರೂಪ, ದಾನ ಕೊಡುವ ರೂಪ ಅಭಿಲಾಷೆ ಹೊಂದುತ್ತದೆ. ಉತ್ತರೋತ್ತರ ಕುಟುಂಬದ ಕುರಿತಾಗಿ ಪ್ರೀತಿಯು ಹೆಚ್ಚುತ್ತ ಹೋಗುತ್ತದೆ. ಮಾತಾ-ಪಿತರ ಚಿತ್ತವು ಉದಾರವಾಗುತ್ತದೆ. ಮಾತಾ-ಪಿತರು ಕುಟುಂಬ ವರ್ಗದವರ ಮತ್ತು ಪರಿವಾರದವರ ಸತ್ಕಾರರೂಪ ಭಾವದಿಂದ ಪರಿಣಮಿಸುತ್ತಾರೆ. ಉಜ್ವಲ ಆಚಾರಸಹಿತ ಉತ್ಪನ್ನವಾದ ಒಳ್ಳೆಯ ವಸ್ತುವನ್ನೇ ತಿನ್ನುವ ಅಭಿಲಾಷೆಯು ಮಾತೆಯ ಮನದಲ್ಲಿ ಮೂಡಿ ಬರುತ್ತದೆ. ಮಾತಾ-ಪಿತರಿಗೆ ವಿಶಾಲಧನದ ಲಾಭವಾಗುತ್ತದೆ. ಯಾರೋ ದೀನ, ದುಃಖಿ, ದರಿದ್ರರನ್ನು ಕಂಡು ಆ ಮಾತಾ-ಪಿತರ ಮನಸ್ಸು ದಯಾರೂಪವಾಗುತ್ತದೆ-ಇಂಥ ಶುಭ ಲಕ್ಷಣಗಳಾದ ಮೇಲೆ ಶುಭ ಜೀವದ ಅವತಾರವಾಗುತ್ತದೆಯೆಂದು ತಿಳಿಯುವುದು.

**ಸಂದೇಹ-೫೩ :-** ಪ್ರಭು ! ಪಾಪಾತ್ಮನ ಅವತಾರವಾಗುವುದನ್ನು ಹೇಗೆ ತಿಳಿಯುವುದು ?

**ಸಮಾಧಾನ :-** ಯಾರು ಗರ್ಭದೊಳಗೆ ಬರುತ್ತಿದ್ದಂತೆಯೇ ಮಾತಾ-ಪಿತರಿಗೆ ದುಃಖ ಸಂಕಟವಾಗುತ್ತದೆ. ಅಭಕ್ಷ್ಯ ಪದಾರ್ಥ ಭಕ್ಷಣ ಮಾಡುವ ಮನಸ್ಸಾಗುತ್ತದೆ. ಮಾತಾ-ಪಿತರ ಚಿತ್ತವು ಕ್ರೂರವಾಗುತ್ತದೆ. ಚಿತ್ತವು ಉದ್ವಿಗ್ನವಾಗಿರುತ್ತದೆ. ಕುಟುಂಬದಲ್ಲಿ ಕ್ಲೇಶವು ಹೆಚ್ಚುತ್ತದೆ. ಮಾತಾ-ಪಿತರ ಮನಸ್ಸಿನಲ್ಲಿ ಕೃಪಣತೆ ಬಂದು ಬಿಡುತ್ತದೆ. ಕ್ರೋಧ-ಮಾನ-ಮಾಯೆ-ಲೋಭಗಳ ತೀವ್ರತೆಯಾಗುತ್ತದೆ. ಮಾತಾ-ಪಿತರ ಚಿತ್ತವು ದುರಾಚಾರಮಯವಾಗುತ್ತದೆ. ಮನೆ-ಧನಗಳ ನಾಶವಾಗುತ್ತದೆ ಹಾಗೂ ಮಾತಾ-ಪಿತರ ಮರಣವಾಗುತ್ತದೆ. ಇಂಥ ಚಿಹ್ನೆಗಳು ಗರ್ಭದಲ್ಲಿ ಬರುವುದರಿಂದ ಪ್ರಕಟವಾದರೆ ಪಾಪಾಚಾರೀ ಜೀವದ ಅವತಾರವಾಗುತ್ತದೆಯೆಂದು ತಿಳಿಯುವುದು.

**ಸಂದೇಹ-೫೪ ಃ-** ಓ ಸ್ವಾಮೀ ! ಈ ಜೀವನು ಯಾವ ಪುಣ್ಯದಿಂದ ಅನೇಕ ಭೋಗ ಯೋಗ್ಯ ಆಹಾರ, ಮಿಠಾಯಿ ಮೊದಲಾದ ಷಟ್‌ರಸಯುಕ್ತ ವಸ್ತುಗಳ ಭೋಗಿ ಮತ್ತು ಸುಗಂಧಾದಿ ಒಳ್ಳೆಯ ವಸ್ತುಗಳನ್ನು ಭೋಗಿಸುವಂಥವನಾಗುತ್ತಾನೆ ?

**ಸಮಾಧಾನ ಃ-** ಯಾವ ಜೀವನು ಪೂರ್ವ ಭವದಲ್ಲಿ ದೀನ-ದುಃಖೀ ಜೀವಗಳನ್ನು ಕಂಡು ದಯೆಯ ಭಾವದಿಂದ ದಾನ ಕೊಟ್ಟಿದ್ದಾನೆ; ಪೂರ್ವಭವದಲ್ಲಿ ಮುನಿ-ಶ್ರಾವಕರಿಗೆ ಭಕ್ತಿಪೂರ್ವಕ ದಾನ ಕೊಟ್ಟಿದ್ದಾನೆ. ಬೇರೆಯವರು ದಾನ ಕೊಡುತ್ತಿರುವುದನ್ನು ಕಂಡು ಹಿತದ ಅನುಭವ ಮಾಡಿದ್ದಾನೆ. ಜೀವರುಗಳು ಒಳ್ಳೆಯ ಭೋಜನ-ಮಿಠಾಯಿ ತಿನ್ನುತ್ತಿರುವುದನ್ನು ಕಂಡು, ಅನೇಕ ಸುಗಂಧಾದಿ ದ್ರವ್ಯಗಳಿಂದ ಸುಖಿಯಿರುವುದನ್ನು ಕಂಡು ಸ್ವಯಂ ಪ್ರಸನ್ನನಾಗಿದ್ದಾನೆ-ಇತ್ಯಾದಿ ಶುಭಭಾವಗಳಿಂದ ಮನವಾಂಛಿತ ಭೋಗ ಯೋಗ್ಯ ಷಟ್‌ರಸ ಭೋಜನ ಮೊದಲಾಗಿ ಒಳ್ಳೆಯ ವಸ್ತುಗಳ ಭೋಗಿಯಾಗುತ್ತಾನೆ.

**ಸಂದೇಹ-೫೫ ಃ-** ಓ ತಂದೇ ! ಈ ಜೀವನು ಯಾವ ಪುಣ್ಯದಿಂದ ಅನೇಕ ಉಪಭೋಗ ಯೋಗ್ಯ ವಸ್ತುವಿಸ್ತಾರ-ಆಭೂಷಣ, ಮಂದಿರ, ಸ್ತ್ರೀ, ಆನೆ, ಕುದುರೆ, ರಥಾದಿ ವಾಹನ ಪಲ್ಲಕ್ಕಿ ಮೊದಲಾದ ಬಹಳಷ್ಟು ಪದಾರ್ಥಗಳ ಭೋಕ್ತೃವಾಗುತ್ತಾನೆ ?

**ಸಮಾಧಾನ ಃ-** ಯಾವ ಜೀವನು ಪೂರ್ವಭವದಲ್ಲಿ ಮುನಿಗಳಿಗೆ ವಸತಿಕೆಯ ದಾನ ಮಾಡಿದ್ದಾನೆ; ಶ್ರಾವಕರಿಗೆ ಹಾಗೂ ಆರ್ಯಿಕೆಯರಿಗೆ ವಸ್ತ್ರದಾನ ಮಾಡಿದ್ದಾನೆ. ಜಿನದೇವರ ಸಲುವಾಗಿ ಕೊಡೆ, ಚಾಮರ, ಸಿಂಹಾಸನ ಮೊದಲಾದ ಉಪಕರಣಗಳನ್ನು ಮಾಡಿಸಿ ಪುಣ್ಯದ ಉಪಾರ್ಜನೆ ಮಾಡಿದ್ದಾನೆ. ಅನ್ಯ ಜೀವರುಗಳು ವಸ್ತ್ರ ಆಭೂಷಣಗಳನ್ನು ಧರಿಸುವುದನ್ನು ಕಂಡು ಸ್ವಯಂ ಪ್ರಸನ್ನನಾಗಿದ್ದಾನೆ. ಯಾರು ಎಲ್ಲ ಜೀವರುಗಳಿಗೆ ಎಲ್ಲ ಪ್ರಕಾರದ ಸುಖದ ವಾಂಛೆ ಮಾಡಿದ್ದಾರೆ-ಇಂಥ ಶುಭಭಾವಸಹಿತ ಜೀವನು ಅನೇಕ ಉಪಭೋಗಗಳನ್ನು ಭೋಗಿಸುವಂಥವನಾಗುತ್ತಾನೆ.

**ಸಂದೇಹ-೫೬ ಃ-** ಓ ಸ್ವಾಮೀ ! ಈ ಜೀವನು ಯಾವ ಕರ್ಮದ ಕಾರಣ ಕುಳ್ಳ ಶರೀರದ ಧಾರಕನಾಗುತ್ತಾನೆ?

**ಸಮಾಧಾನ ಃ-** ಯಾರು ಪೂರ್ವ ಭವದಲ್ಲಿ ಅನ್ಯ ಚಿಕ್ಕ ಶರೀರಧಾರಕ ಮನುಷ್ಯರನ್ನು ನೋಡಿ ಅಪಹಾಸ್ಯ ಮಾಡಿದ್ದಾನೆ, ನಿಂದೆ ಮಾಡಿದ್ದಾನೆ. ದೊಡ್ಡ-ಎತ್ತರ ಶರೀರದ ಧಾರಕನಾದ ತನ್ನ ಅಭಿಮಾನ ಮಾಡಿದ್ದಾನೆ. ಬೇರೆಯವರ ಕುಳ್ಳ ಶರೀರ ನೋಡಿ ಸ್ವಯಂ ಪ್ರಸನ್ನನಾಗಿದ್ದಾನೆ. ಅದನ್ನು ಒಳ್ಳೆಯದೆಂದು ತಿಳಿದಿದ್ದಾನೆ. ತನ್ನ ದೊಡ್ಡ ದೇಹದಿಂದ ಚಿಕ್ಕ ದೇಹದವರಿಗೆ ಪೀಡೆ ತಲುಪಿಸಿದ್ದಾನೆ-ಇತ್ಯಾದಿ ಅಶುಭ ಭಾವಗಳಿಂದ ಚಿಕ್ಕ ಶರೀರದ ಧಾರಕ ಕುಳ್ಳನಾಗುತ್ತಾನೆ.

**ಸಂದೇಹ-೫೭ ಃ-** ಓ ಮುನಿನಾಥರೇ ! ಈ ಜೀವನಿಗೆ ಯಾವ ಪಾಪಭಾವದಿಂದ ಡೂಗ ಶರೀರ ಪ್ರಾಪ್ತವಾಗುತ್ತದೆ ?

**ಸಮಾಧಾನ ಃ-** ಓ ದಯಾಳು ಚಿತ್ತದ ಧಾರಕನೇ ಆಲಿಸು ! ಯಾವ ಜೀವರುಗಳು ಪೂರ್ವ ಭವದಲ್ಲಿ ಅನ್ಯ ಜೀವಗಳನ್ನು ಕೋಲು-ಕಟ್ಟಿಗೆಯಿಂದ ಹೊಡೆದಿದ್ದಾರೆ ಮುಷ್ಟಿಯಿಂದ ಗುದ್ದಿದ್ದಾರೆ, ಕಾಲಿನಿಂದ ಒದ್ದಿದ್ದಾರೆ, ಅವರ ಮೂಳೆ ಮುರಿದಿದ್ದಾರೆ ಮತ್ತು ಅವರು ದುಃಖಿಯಾಗಿರುವುದನ್ನು ಕಂಡು ಸ್ವಯಂ ಸುಖ ಪಡೆದಿದ್ದಾರೆ. ಅನ್ಯರ ಶರೀರದಲ್ಲಿ ಗಂಟುಗಳಾಗಿರುವುದನ್ನು, ರೋಗಿಯಾಗಿರುವುದನ್ನು ಕಂಡು ಸ್ವಯಂ ಸುಖಿಯಾಗಿದ್ದಾರೆ, ಬೇರೆಯವರ ಶರೀರವು ಕುರೂಪ, ವಿರೂಪವಿರುವುದನ್ನು ಕಂಡು ಅಪಹಾಸ್ಯ ಮಾಡಿದ್ದಾರೆ. ತಮ್ಮ ಅಚ್ಚುಕಟ್ಟಾದ ಶರೀರದ ಗರ್ವವನ್ನು ಅತಿಶಯವಾಗಿ ಮಾಡುತ್ತ ಬೇರೆಯವರನ್ನು ರೇಗಿಸಿದ್ದಾರೆ - ಇತ್ಯಾದಿ ಅಶುಭ ಭಾವಗಳಿಂದ ಜೀವನು ಡೂಗ ದೇಹ ಧರಿಸುತ್ತಾನೆ.

**ಸಂದೇಹ-೫೮ :-** ಪ್ರಭು ! ಈ ಜೀವನು ಯಾವ ಪುಣ್ಯದಿಂದ ದೇವನಾಗುತ್ತಾನೆ ?

**ಸಮಾಧಾನ :-** ಯಾವ ಜೀವನು ಪೂರ್ವ ಭವದಲ್ಲಿ ಸಮ್ಯಕ್ತ್ವಧಾರಣ ಮಾಡಿದ್ದಾನೆ. ಪಂಚ ಪರಮೇಷ್ಠಿಗಳ ಪೂಜೆ, ವಂದನೆ, ಸ್ತುತಿ ಮಾಡಿದ್ದಾನೆ, ತಪ, ಶೀಲ-ಸಂಯಮಗಳ ಪಾಲನೆ ಮಾಡಿದ್ದಾನೆ. ದೀನಜೀವಗಳ ರಕ್ಷಣೆಯ ಭಾವಪೂರ್ವಕ ಕರುಣಾಭಾವ ಧಾರಣ ಮಾಡಿದ್ದಾನೆ. ಮುನಿ, ಶ್ರಾವಕ ಮೊದಲಾದ ಚತುಃಸಂಘದ ವೈಯಾವೃತ್ತ ಮಾಡಿದ್ದಾನೆ. ಒಳ್ಳೆಯ ಭಾವದಿಂದ ಜಿನವಾಣಿಯ ವಾಚನ, ಶ್ರವಣ ಮಾಡಿದ್ದಾನೆ. ಇತ್ಯಾದಿರೂಪ ಧರ್ಮದ ಸೇವನೆ ಸ್ವಯಂ ಮಾಡಿದ್ದಾನೆ ಮತ್ತು ಬೇರೆಯವರು ಧರ್ಮದ ಸೇವನೆ ಮಾಡುತ್ತಿರುವುದನ್ನು ಕಂಡು ಅನುಮೋದಿಸಿದ್ದಾನೆ. ನಂದೀಶ್ವರದ್ವೀಪ, ಕುಂಡಲಗಿರಿ, ರುಚಕಗಿರಿ ಮೊದಲಾದ ಕ್ಷೇತ್ರಗಳ ಜಿನಮಂದಿರಗಳ ವಂದನೆಯ ಅಭಿಲಾಷೆಯನ್ನಿಟ್ಟುಕೊಂಡಿದ್ದಾನೆ ಅಂಥ ಜೀವನು ಇವೆಲ್ಲ ಧರ್ಮ ಭಾವನೆಗಳಿಂದ ದೇವನಾಗುತ್ತಾನೆ.

**ಸಂದೇಹ-೫೯ :-** ಓ ಸ್ವಾಮೀ ! ಈ ಜೀವನು ಯಾವ ಭಾವದಿಂದ ಮನುಷ್ಯನಾಗುತ್ತಾನೆ ?

**ಸಮಾಧಾನ :-** ಯಾವ ಜೀವನು ಸರಳ ಭಾವಗಳನ್ನಿಟ್ಟುಕೊಂಡಿದ್ದಾನೆ. ಯಾವುದೇ ಜೀವದ ಕುರಿತು ದ್ವೇಷ ಭಾವ ಮಾಡಿಲ್ಲ. ಮಂದ ಕಷಾಯ ಧಾರಣ ಮಾಡಿ, ಧರ್ಮ ಭಾವ ಸಹಿತ ಆರ್ಜವ ಪರಿಣಾಮ ರೂಪನಾಗಿರುತ್ತಾನೆ-ಇತ್ಯಾದಿ ಶುಭಭಾವಗಳಿಂದ ಜೀವನು ಮನುಷ್ಯನಾಗುತ್ತಾನೆ.

**ಸಂದೇಹ-೬೦ :-** ಓ ಕರುಣಾನಿಧಾನರೇ ! ಈ ಜೀವನು ಯಾವ ಪಾಪದಿಂದ ನರಕ ಪಡೆಯುತ್ತಾನೆ?

**ಸಮಾಧಾನ :-** ಯಾರು ಪೂರ್ವಭವದಲ್ಲಿ ಅನೇಕ ಅನ್ಯ ಜೀವಗಳನ್ನು ಸತಾಯಿಸಿದ್ದಾರೆ, ದೀರ್ಘ ಕ್ರೋಧ ಧಾರಣ ಮಾಡಿದ್ದಾರೆ. ಯಾರ ಹೃದಯವು ಮಹಾಮಾಯಾಚಾರದಿಂದ ತುಂಬಿಕೊಂಡಿದೆ. ಯಾರು ಮದ್ಯ-ಮಾಂಸಾದಿ ಅಭಕ್ಷ್ಯ ಭಕ್ಷಣ ಮಾಡಿದ್ದಾರೆ; ಧರ್ಮ ಭಾವರಹಿತ ಹಾಗೂ ಪಾಪಭಾವ ಸಹಿತ ಪ್ರವೃತ್ತಿ ಮಾಡಿದ್ದಾರೆ. ಧರ್ಮದ ಕುರಿತಾಗಿ ದ್ವೇಷ ಭಾವವಿಟ್ಟುಕೊಂಡು ಪಾಪ ಕಾರ್ಯಗಳನ್ನು ರಕ್ಷಿಸಿದ್ದಾರೆ. ಯಾರಿಗೆ ಅನ್ಯ ಜೀವಗಳನ್ನು ಸಾಯಿಸುವ ಮತ್ತು ಬಂಧಿಸುವ ವಿಶೇಷ ಇಚ್ಛೆಯು ವರ್ತಿಸಿದೆ-ಇತ್ಯಾದಿ ಭಾವಗಳಿಂದ ಜೀವನು ನರಕದಲ್ಲಿ ಉತ್ಪನ್ನನಾಗುತ್ತಾನೆ.

**ಸಂದೇಹ-೬೧ :-** ಓ ಗುರುದೇವಾ ! ಈ ಜೀವನು ಯಾವ ಪಾಪದಿಂದ ಪಶು ಪರ್ಯಾಯದಲ್ಲಿ ಉತ್ಪನ್ನನಾಗುತ್ತಾನೆ ?

**ಸಮಾಧಾನ :-** ಯಾರು ಪೂರ್ವಭವದಲ್ಲಿ ಪರ ವಸ್ತುಗಳ ಕುರಿತಾಗಿ ಆರ್ತತೆ ಮಾಡಿದ್ದಾರೆ. ಜೀವನು ಕರ್ಮದ ವಶೀಭೂತವಾಗಿ ವಿವಿಧ ಆಹಾರ-ಪಾನೀಯಗಳ ಕುರಿತಾಗಿ ಆರ್ತತೆ, ಧನ ಸಂಗ್ರಹದ ಕುರಿತಾಗಿ ಆರ್ತತೆ, ಶರೀರ ಪುಷ್ಟ ಮಾಡುವುದರ ಕುರಿತಾಗಿ ಆರ್ತತೆ ಮಾಡುತ್ತ ಅಶುಭ ಭಾವಗಳನ್ನಿಟ್ಟುಕೊಂಡಿದ್ದಾನೆ, ಅಕ್ರಿಯೆಯೊಂದಿಗೆ ಭೋಜನ-ಪಾನ ಮಾಡಿದ್ದಾನೆ. ಖಾದ್ಯ-ಅಖಾದ್ಯ ವಸ್ತುಗಳ ವಿಚಾರ ಮಾಡಿಲ್ಲ. ಪ್ರಮಾದಸಹಿತ ಮತ್ತು ಧರ್ಮಭಾವ ರಹಿತ ಪ್ರವೃತ್ತಿ ಮಾಡಿದ್ದಾನೆ-ಇತ್ಯಾದಿ ರೂಪದಲ್ಲಿ ಅಜ್ಞಾನಪೂರ್ವಕ ವಿವಿಧ ಆರ್ತಧ್ಯಾನದ ಫಲದಲ್ಲಿ ಜೀವನು ತಿರ್ಯಂಚ ಗತಿಗೆ ಪ್ರಾಪ್ತನಾಗುತ್ತಾನೆ.

**ಸಂದೇಹ-೬೨ :-** ಓ ಗುರುದೇವಾ ! ಯಾರದು ಇಡೀ ದೇಹವು ಮನುಷ್ಯರ ಸಮಾನ ಮಹಾಸುಂದರ ಸುದೃಢವಿದ್ದು ಮುಖವು ವಿವಿಧ ಪಶುಗಳ ಆಕಾರದ್ದಿರುವಂಥ ಕುಭೋಗಭೂಮಿಯ ಮನುಷ್ಯ ಶರೀರವು ಯಾವ ಕರ್ಮದ ಉದಯದಿಂದ ಪ್ರಾಪ್ತವಾಗುತ್ತದೆ ?

**ಸಮಾಧಾನ :-** ಯಾವ ಜೀವನು ಪೂರ್ವ ಭವದಲ್ಲಿ ಮಿಥ್ಯಾದೃಷ್ಟಿ ಮುನಿಗಳಿಗೆ ದಾನ ಕೊಟ್ಟಿದ್ದಾನೆ; ಕುಮುನಿಗಳಿಗೆ ಭಕ್ತಿಪೂರ್ವಕ ಆಹಾರಾದಿಗಳ ದಾನ ಮಾಡಿದ್ದಾನೆ ಮತ್ತು ಶುಭ ಮುನಿಗಳಿಗೆ ಕಪಟಪೂರ್ವಕ ದಾನ ಕೊಟ್ಟಿದ್ದಾನೆ. ಮುನೀಶ್ವರರಿಗೆ ದಾನ ಕೊಡುವ ಸಮಯದಲ್ಲಿ ಚಿತ್ತವು ಲೋಭರೂಪವಾಗಿ ಉಳಿದಿದೆ-ಮಾನರೂಪವಾಗಿ

ಉಳಿದಿದೆ, ಮಾನದ ಇಚ್ಛೆಯುಂಟಾಗಿದೆ ಮತ್ತು ಮುನೀಶ್ವರರಿಗೆ ದೋಷಸಹಿತವಾಗಿದ್ದು ಆಹಾರ ಕೊಟ್ಟಿದ್ದಾನೆ. ನವಧಾ ಭಕ್ತಿಯ ಸಮಯದಲ್ಲಿ ಅಭಿಮಾನ ಮಾಡಿದ್ದಾನೆ.

**ಭಕ್ತಿಕಂ ತೌಷ್ಟಿಕಂ ಶ್ರಾದ್ಧಂ ಸವಿಜ್ಞಾನಮಲೋಲುಪಂ ।**
**ಸಾತ್ವಿಕಂ ಕ್ಷಮಕಂ ಸಂತಃ ದಾತಾರಿ ಸಪ್ತಧಾ ವಿದುಃ ॥**

ಭಕ್ತಿ, ತುಷ್ಟಿ, ಶ್ರದ್ಧೆ, ಜ್ಞಾನ, ಅಲೋಲುಪತೆ(ಅಲೋಭತೆ) ಸತ್ವ, ಕ್ಷಮೆ-ಇವುಏಳು ದಾತಾರನ ಗುಣಗಳಿವೆ.

ದಾತೃವಿನ ಏಳು ಗುಣಗಳೊಳಗಿನ ಕೆಲವು ಹೀನಗುಣವುಳ್ಳವನಿದ್ದು ದಾನ ಕೊಡುವ ಇತ್ಯಾದಿ ಭಾವಗಳಿಂದ ಜೀವನು ಕುಭೋಗಭೂಮಿಯ ಮನುಷ್ಯನಾಗುತ್ತಾನೆ.

**ಸಂದೇಹ-೬೩ :-** ಪ್ರಭು ! ಜೀವನು ಯಾವ ಪುಣ್ಯದಿಂದ ಸುಭೋಗ ಭೂಮಿಯಲ್ಲಿ ಮೂರು ಪಲ್ಯ ಆಯು ಸಹಿತನಾಗಿ ಜನಿಸಿ, ದೇವಗಳ ಸಮಾನ ಹತ್ತು ಪ್ರಕಾರದ ಕಲ್ಪವೃಕ್ಷಗಳಿಂದ ಕೊಡಲ್ಪಡುವ ಸುಖವನ್ನು ಭೋಗಿಸುತ್ತಾನೆ ?

**ಸಮಾಧಾನ :-** ಯಾವ ಜೀವನು ಪೂರ್ವ ಭವದಲ್ಲಿ ಪ್ರತಿಗ್ರಹ, ಉಚ್ಚಸ್ಥಾನ, ಪಾದಪ್ರಕ್ಷಾಲನ, ಪೂಜೆ, ನಮಸ್ಕಾರ, ಮನಶುದ್ಧಿ, ವಚನಶುದ್ಧಿ, ಕಾಯಶುದ್ಧಿ, ಭೋಜನ ಶುದ್ಧಿರೂಪ ನವಧಾ ಭಕ್ತಿಪೂರ್ವಕ ದಾನ ಕೊಟ್ಟಿದ್ದಾನೆ. ಅನ್ಯ ಭವ್ಯ ಜೀವರುಗಳ ಮೂಲಕ ಕೊಡಲ್ಪಡುವ ಮುನಿದಾನವನ್ನು ಕಂಡು ಅನುಮೋದನೆ ಮಾಡಿದ್ದಾನೆ; ಮುನೀಶ್ವರರಿಗೆ ದಾನ ಕೊಡುವ ಅಭಿಲಾಷೆ ಮಾಡಿದ್ದಾನೆ. ಮುನಿದಾನದ ಸಮಯದಲ್ಲಿ ದೇವತೆಗಳಿಂದ ಮಾಡಲ್ಪಡುವ ಪಂಚಾಶ್ಚರ್ಯವನ್ನು ಕಂಡು ಹಾಗೂ ಕೇಳಿ ಮುನಿಗಳ ಸಲುವಾಗಿ ಕೊಡುವ ದಾನದ ಮಹಿಮೆ ಹಾಡಿದ್ದಾನೆ, ಮುನಿಗಳಿಗೆ ದಾನ ಕೊಡುವಂಥ ದಾತೃವಿನ ಸ್ತುತಿ ಮಾಡಿದ್ದಾನೆ-ಇತ್ಯಾದಿ ಶುಭಭಾವಗಳಿಂದ ಉತ್ಕೃಷ್ಟ ಭೋಗ ಭೂಮಿಜನಾಗುತ್ತಾನೆ.

**ಸಂದೇಹ-೬೪ :-** ಓ ಗುರುರಾಜರೇ ! ಯಾವ ಪಾಪ ಕರ್ಮದಿಂದ ಕುಕ್ಷೇತ್ರದಲ್ಲಿ ವಾಸ ಮಾಡಬೇಕಾಗುತ್ತದೆ?

**ಸಮಾಧಾನ :-**ಯಾವ ಜೀವನು ಪೂರ್ವ ಭವದಲ್ಲಿ ಅನ್ಯ ಜೀವರುಗಳ ಮೇಲೆ ಮಿಥ್ಯಾ ದೋಷಾರೋಪ ಮಾಡಿ ಅವರನ್ನು ಸುಕ್ಷೇತ್ರಗಳಿಂದ ಬಿಡಿಸಿ ಉಪವನಾದಿಗಳಲ್ಲಿ ಇರಿಸಿದ್ದಾನೆ. ಮ್ಲೇಚ್ಛರ ಭೋಗಗಳು ಒಳ್ಳೆಯವೆನಿಸಿವೆ; ಯಾರ ಮೇಲೆ ಕ್ರೋಧಿತನಾಗುತ್ತಾನೆ, ಅವರನ್ನು ಬಂಧಿಸಿ ನಿರ್ಜನವೂ ಭಯಾನಕವೂ ಆದ ಸ್ಥಾನಗಳಲ್ಲಿ ಇರಿಸಿದ್ದಾನೆ. ಕುಕ್ಷೇತ್ರಗಳಲ್ಲಿ ವಾಸಮಾಡುವಂಥ ಅನಾಚಾರೀ ಜೀವಗಳ ಪ್ರಶಂಸೆ ಮಾಡಿದ್ದಾನೆ. ಪಶುಪಾಲಕನಾಗಿ, ಉದ್ಯಾನವನದಲ್ಲಿದ್ದು ಹರ್ಷಿತನಾಗಿದ್ದಾನೆ - ಇತ್ಯಾದಿ ಕುಚೇಷ್ಟೆಗಳಿಂದ ಜೀವನು ಕುಕ್ಷೇತ್ರವಾಸ ಪಡೆಯುತ್ತಾನೆ.

**ಸಂದೇಹ-೬೫ :-** ಓ ಜ್ಞಾನನೇತ್ರರೇ ! ಈ ಜೀವನು ಯಾವ ಪುಣ್ಯದಿಂದ ಸುಕ್ಷೇತ್ರದ ನಿವಾಸಿಯಾಗುತ್ತಾನೆ?

**ಸಮಾಧಾನ :-** ಯಾರು ಪೂರ್ವಭವದಲ್ಲಿ ಕುಕ್ಷೇತ್ರವಾಸೀ ಜೀವಗಳನ್ನು ದಯೆಯ ಭಾವದಿಂದ ಸುಕ್ಷೇತ್ರದಲ್ಲಿ ವಾಸಿಸಲು ಅನುಕೂಲ ಮಾಡಿಕೊಟ್ಟಿದ್ದಾರೆ, ಯಾವನು ದೀನ-ದುಃಖಿಗಳನ್ನು ಉಪವನಾದಿಗಳಿಂದ ಬಿಡಿಸಿ ಸುಖದ ಸ್ಥಾನಗಳಲ್ಲಿ ಇರಿಸಿ ಅವರಿಗೆ ಸಾತಾ ತಲುಪಿಸಿದ್ದಾನೆ. ಸ್ವಯಂ ರಾಜ್ಯ-ಭೋಗ ಬಿಟ್ಟುಕೊಟ್ಟು ತಪದ-ಅಂಗೀಕಾರ ಮಾಡಿ ವನದಲ್ಲಿ ಉಳಿಯುವ ಉದ್ಯಮ ಮಾಡಿದ್ದಾನೆ. ವನದಲ್ಲಿ ವಾಸ ಮಾಡುವಂಥ ಮುನೀಶ್ವರರ ಧೈರ್ಯದ ಪ್ರಶಂಸೆ ಮಾಡಿದ್ದಾನೆ-ಇತ್ಯಾದಿ ಶುಭಭಾವಗಳಿಂದ ಜೀವನು ಸುಕ್ಷೇತ್ರದ ನಿವಾಸಿಯಾಗುತ್ತಾನೆ.

**ಸಂದೇಹ-೬೬ :-** ಓ ಸ್ವಾಮೀ ! ಈ ಜೀವನು ಯಾವ ಪುಣ್ಯದಿಂದ ಅಲ್ಪಾಹಾರದಲ್ಲಿ ಸಂತುಷ್ಟನಾಗಿರುತ್ತಾನೆ?

**ಸಮಾಧಾನ :-** ಯಾವ ಜೀವನು ಪೂರ್ವಭವದಲ್ಲಿ ಮುನೀಶ್ವರರಿಗೆ ಒಂದು-ಎರಡು ತುತ್ತುರೂಪ ಆಹಾರ ದಾನ ಮಾಡಿ ಕೂಡ ತನ್ನ ಭವವನ್ನು ಸಫಲ ಮನ್ನಿಸಿದ್ದಾನೆ. ದೀನ-ಹಸಿದಿರುವ ಜೀವಗಳಿಗೆ ವಾಂಛಿತ ಭೋಜನವಿತ್ತು

ತೃಪ್ತಗೊಳಿಸಿದ್ದಾನೆ. ಪೂರ್ವ ಭವದಲ್ಲಿ ಅನೇಕ ವಿದ್ಯಮಾನ ಭೋಗಗಳನ್ನು ತ್ಯಜಿಸಿ ಅವುಗಳಿಂದ ಉದಾಸನಾಗಿದ್ದಾನೆ. ಅಲ್ಪ ಭೋಜನ ಮಾಡಿದ್ದಾನೆ. ಅನೇಕ ಸುಭಗ ರಸಗಳ ತ್ಯಾಗ ಮಾಡಿದ್ದಾನೆ-ಇತ್ಯಾದಿ ಸಮತೆಯ ಭಾವಗಳ ಫಲದಲ್ಲಿ ಜೀವನು ಅಲ್ಪ ಭೋಜನದಲ್ಲಿ ತೃಪ್ತನಾಗಿ ಹೋಗುತ್ತಾನೆ.

**ಸಂದೇಹ-೬೭ :-** ಓ ಪೂಜ್ಯರೇ ! ಯಾವ ಕರ್ಮದ ಉದಯದಿಂದ ಈ ಜೀವನಿಗೆ ಬಹಳಷ್ಟು ಭೋಜನ ಮಾಡುವ ಇಚ್ಛೆಯಿದ್ದರೂ ಅದು ದೊರಕುವುದಿಲ್ಲ ?

**ಸಮಾಧಾನ :-** ಯಾವ ಜೀವನು ಪೂರ್ವ ಭವದಲ್ಲಿ ಅನ್ಯ ಜೀವರುಗಳಿಗೆ ವ್ಯಾಕುಲಿತಗೊಳಿಸಿ-ವ್ಯಾಕುಲಿತಗೊಳಿಸಿ ಭೋಜನ ಕೊಟ್ಟಿದ್ದಾನೆ; ಮೊದಲು ಮನುಷ್ಯ , ಶ್ವಾನ, ಮಾರ್ಜಾರ ಮೊದಲಾದ ಪರ್ಯಾಯದಲ್ಲಿ ಅನ್ಯರ ಭೋಜನವನ್ನು ತಗೆದುಕೊಂಡು ಓಡಿ ಹೋಗಿದ್ದಾನೆ. ಧರ್ಮಾತ್ಮಾ ಜೀವರುಗಳ ಅಲ್ಪ ಭೋಜನ ನೋಡಿ ಹಾಸ್ಯ ಮಾಡಿದ್ದಾನೆ. ಆನೆ, ಕುದುರೆ, ಎತ್ತು , ಎಮ್ಮೆ ಇತ್ಯಾದಿ ಅನೇಕ ಪಶುಗಳ ಅಧಿಕ ಭೋಜನ ನೋಡಿ ಸುಖ ಮನ್ನಿಸಿದ್ದಾನೆ. ಪೂರ್ವ ಭವದಲ್ಲಿ ಹಗಲಿರುಳು ಭೋಜನ ಮಾಡುತ್ತಿದ್ದರೂ ತೃಪ್ತನಾಗಿಲ್ಲ- ಇತ್ಯಾದಿ ಅಶುಭ ಭಾವಗಳಿಂದ ಬಹಳಷ್ಟು ಆಹಾರ ಸೇವಿಸಿದರೂ ತೃಪ್ತನಾಗುವುದಿಲ್ಲ.

**ಸಂದೇಹ-೬೮ :-** ಓ ಗುರುದೇವರೇ ! ಯಾವ ಪಾಪದಿಂದ ಈ ಜೀವನು ಕಲೆ-ಚತುರತೆ ರಹಿತ, ಮೂರ್ಖ, ಹೃದಯ ಶೂನ್ಯ ಹಾಗೂ ಲೌಕಿಕ ಜ್ಞಾನರಹಿತನಾಗುತ್ತಾನೆ ?

**ಸಮಾಧಾನ :-** ಯಾವನು ಪೂರ್ವ ಭವದಲ್ಲಿ ಅನ್ಯರ ಕಲೆ-ಚತುರತೆಗಳನ್ನು ನೋಡಿ ದ್ವೇಷ ಭಾವದಿಂದ ದೋಷ ತಗಲಿಸಿ ಅಪಹಾಸ್ಯ ಮಾಡಿದ್ದಾನೆ. ತನ್ನ ದೋಷ ಮುಚ್ಚಿಹಾಕುವ ಸಲುವಾಗಿ ಅನೇಕ ಮಾಯಾಚಾರ ಚತುರತೆಯೊಂದಿಗೆ ತನ್ನ ದೋಷ ಮರೆ ಮಾಡಿದ್ದಾನೆ. ಭಂಡಕಲೆ ಕಂಡು ಪ್ರಸನ್ನನಾಗಿದ್ದಾನೆ. ಅನ್ಯರ ಹಾಡುಗಾರಿಕೆ, ವಾದ್ಯ ನುಡಿಸುವಿಕೆ, ಹಾವ-ಭಾವ, ನೃತ್ಯಾದಿಗಳನ್ನು ನೋಡಿ ದ್ವೇಷ ಮಾಡಿದ್ದಾನೆ. ಅನ್ಯರ ಚತುರತೆಯು ಒಳ್ಳೆಯದೆನಿಸಲಿಲ್ಲ. ಪೂರ್ವ ಭವದಲ್ಲಿ ಇವನನ್ನು ಪ್ರಸನ್ನ ಪಡಿಸುವ ಸಲುವಾಗಿ ಯಾರೋ ಅನೇಕ ಕಲೆ-ಚತುರತೆಯಿಂದ ಇವನನ್ನು ಪ್ರಸನ್ನ ಪಡಿಸಿದ ಮೇಲೆಯೂ ಕೂಡ ಅವರ ಪುರಸ್ಕಾರವನ್ನು ಅರಗಿಸಿಕೊಂಡಿದ್ದಾನೆ-ಇತ್ಯಾದಿ ಪಾಪಗಳಿಂದ ಮೂಢ, ಲೌಕಿಕ ಜ್ಞಾನ ಹಾಗೂ ಚತುರತೆಯಿಂದ ರಹಿತನಾಗಿದ್ದಾನೆ.

**ಸಂದೇಹ-೬೯ :-** ಓ ಜ್ಞಾನಮೂರ್ತಿ ! ಯಾವ ಪುಣ್ಯದಿಂದ ಈ ಜೀವನು ಲೌಕಿಕ ಕಲೆ-ಚತುರತೆಯುಕ್ತ-ನಾಗುತ್ತಾನೆ ?

**ಸಮಾಧಾನ :-** ಯಾವ ಜೀವನು ಪೂರ್ವ ಭವದಲ್ಲಿ ಅನ್ಯರ ಹಾಡುಗಾರಿಕೆ, ನರ್ತನ, ಚಿತ್ರಕಲೆ, ಶಿಲ್ಪಕಲೆ ಮೊದಲಾಗಿ ಅನೇಕ ಪ್ರಕಾರದ ಚತುರತೆಯನ್ನು ಕಂಡು ಪ್ರಸನ್ನನಾಗಿದ್ದಾನೆ ಅವರ ಪ್ರಶಂಸೆ ಮಾಡಿದ್ದಾನೆ, ಉದಾರ ಚಿತ್ತದಿಂದ ವಿವಿಧ ಪುರಸ್ಕಾರ ಕೊಟ್ಟಿದ್ದಾನೆ. ಅನ್ಯರ ವಿವೇಕ, ಒಳ್ಳೆಯತನಾದಿಗಳನ್ನು ಕಂಡು ಹಿತವೆನಿಸಿದೆ- ಇವರ ಜ್ಞಾನ-ಕಲೆ ಶಾಸ್ತ್ರ ಸಮ್ಮತವಿದೆಯೆಂದು ಹೇಳಿದ್ದಾನೆ. ಗುಣಿಗಳ ಆದರ ಮಾಡಿದ್ದಾನೆ. ಇತ್ಯಾದಿ ರೂಪದಲ್ಲಿ ತನ್ನ ಸಜ್ಜನಿಕೆಯನ್ನು ವ್ಯಕ್ತಪಡಿಸಿ, ಅನ್ಯರನ್ನು ಸುಖಿ ಮಾಡುವ ಸಲುವಾಗಿ ಒಳ್ಳೆಯ ಜ್ಞಾನವನ್ನು ವ್ಯಯ ಮಾಡುವಂಥ ಜೀವನು ಲೌಕಿಕ ಕಲೆ ಮತ್ತು ಚತುರತೆಯಲ್ಲಿ ಪ್ರವೀಣನಾಗುತ್ತಾನೆ.

**ಸಂದೇಹ-೭೦ :-** ಓ ಗುರುವರ್ಯರೇ ! ಯಾವ ಪಾಪದಿಂದ ಈ ಜೀವನು ಬಹುಭಾರ ಹೊರುವಂಥ ಮನುಷ್ಯ ಮತ್ತು ಪಶುವಾಗುತ್ತಾನೆ ?

**ಸಮಾಧಾನ :-** ಯಾವ ಜೀವನು ಅನ್ಯ ಜೀವರುಗಳ ಮೇಲೆ ಬಹಳಷ್ಟು ಭಾರ ಹೊರಿಸಿದ್ದಾನೆ. ಹೇಳಿದ್ದನ್ನೆಲ್ಲ ಮಾಡುವಂಥ ಜೀವದ ಮೇಲೆ ಬಲವಂತತೆಯಿಂದ ಭಾರವಿಟ್ಟಿದ್ದಾನೆ. ತನ್ನ ಲೋಭದ ವಶವಾಗಿ ಅನ್ಯ ಜೀವಗಳ

ಮೇಲೆ ಭಾರ ಹೊರಿಸಿ ಕುಟುಂಬದ ರಕ್ಷಣೆ ಮಾಡಿದ್ದಾನೆ. ಅನ್ಯರ ಮೇಲೆ ದೀರ್ಘಭಾರ ಹೊರಿಸಿರುವುದನ್ನು ಕಂಡು ಪ್ರಸನ್ನನಾಗಿದ್ದಾನೆ. ಇತ್ಯಾದಿ ಭಾವಗಳ ಅಶುಭ ಫಲದಲ್ಲಿ ಬಹಳಷ್ಟು ಭಾರವನ್ನು ಹೊರುವಂಥವನಾಗುತ್ತಾನೆ. ತಿರ್ಯಂಚಗಳಲ್ಲಿ ಎತ್ತು , ಕೋಣ, ಒಂಟೆ, ಗರ್ದಭ ಮೊದಲಾದ ಬಹಳಷ್ಟು ಭಾರ ಹೊರುವಂಥ ಪಶುವಾಗುತ್ತಾನೆ. ಮನುಷ್ಯರಲ್ಲಿ ಹಮಾಲ, ಕೂಲಿಕಾರ ಮೊದಲಾಗಿ ಅತಿಭಾರ ಹೊರುವಂಥವನಾಗುತ್ತಾನೆ.

**ಸಂದೇಹ-೭೧ :-** ಓ ಸ್ವಾಮೀ ! ಯಾವ ಪಾಪದಿಂದ ಈ ಜೀವನು ದರಿದ್ರ , ಭಿಕ್ಷುಕನಾಗುತ್ತಾನೆ?

**ಸಮಾಧಾನ :-** ಯಾವನು ಪೂರ್ವ ಭವದಲ್ಲಿ ತನ್ನ ಅನ್ಯಾಯ ಬುದ್ಧಿಯಿಂದ, ಬಲಪ್ರಯೋಗ ಮಾಡುತ್ತ ಅನೇಕ ಜೀವರುಗಳನ್ನು ದುಃಖಿಯನ್ನಾಗಿಸಿ ಧನಕಿತ್ತುಕೊಂಡು ನಿರ್ಧನರನ್ನಾಗಿ ಮಾಡಿದ್ದಾನೆ. ಅನ್ಯ ಜೀವರುಗಳ ಧನಹಾನಿ ಮೊದಲಾದುವನ್ನು ಕಂಡು ಪ್ರಸನ್ನನಾಗಿದ್ದಾನೆ. ಯಾವನೋ ಭಿಕ್ಷುಕನು ಹೊಂದಿಸಿಟ್ಟ ಅಲ್ಪ ಧನವನ್ನು ಪೂರ್ವ ಭವದಲ್ಲಿ ಕಳವು ಮಾಡಿದ್ದಾನೆ. ದುಃಖಿ-ದೀನ ಜೀವಗಳಿಗೆ ದುರ್ವಚನಗಳನ್ನಾಡಿ ಪೀಡಿಸಿದ್ದಾನೆ. ದೀನ-ದರಿದ್ರ ಜೀವಗಳನ್ನು ಕಂಡು ಅವರ ಮೇಲೆ ಕಳವಿನ ಮಿಥ್ಯಾ ಆರೋಪ ಮಾಡಿದ್ದಾನೆ. ದೀನ-ದರಿದ್ರರ ಅಪಹಾಸ್ಯ ಮಾಡಿದ್ದಾನೆ. ಇತ್ಯಾದಿ ಪೂರ್ವಕೃತ ಪಾಪ ಭಾವಗಳಿಂದ ಈ ಜೀವನು ಭಿಕ್ಷುಕನಾಗುತ್ತಾನೆ- ದರಿದ್ರನಾಗುತ್ತಾನೆ.

**ಸಂದೇಹ-೭೨ :-** ಪ್ರಭು ! ಈ ಜೀವನು ಯಾವ ಕರ್ಮದಿಂದ ಕುಕಾವ್ಯಕಲೆಯ ಧಾರಕನಾಗುತ್ತಾನೆ?

**ಸಮಾಧಾನ :-** ಯಾವ ಜೀವನಿಗೆ ಕುಕಥೆಯು ಒಳ್ಳೆಯದೆನಿಸಿದೆ. ಕಥೆ ಕಾದಂಬರಿಗಳನ್ನು ಒಳ್ಳೆಯವೆಂದು ತಿಳಿದು ಆಲಿಸಿ ಪ್ರಸನ್ನನಾಗಿದ್ದಾನೆ. ಲೌಕಿಕ ಚತುರತೆಯ ಶಾಸ್ತ್ರಗಳನ್ನು ಧರ್ಮವೆಂದು ತಿಳಿದು ದಾನ ಮಾಡಿದ್ದಾನೆ. ಉದರ ಪೂರಣದ ಕಾರಣಭೂತ, ಜ್ಯೋತಿಷ, ವೈದ್ಯಕ, ಸುಭಾಷಿತ ಸಭೆಯ ಚತುರತೆಯ ಶಾಸ್ತ್ರಗಳನ್ನು; ಶಿಲ್ಪಕಲೆ ಮೊದಲಾದ ಚತುರತೆಯ ಶಾಸ್ತ್ರವನ್ನು ಧರ್ಮವೆಂದು ತಿಳಿದು ದಾನ ಕೊಟ್ಟಿದ್ದಾನೆ. ಧರ್ಮದ ಸಲುವಾಗಿ ಅನ್ಯರನ್ನು ಲೌಕಿಕ ವಿದ್ಯೆ, ಕಲೆ ಚತುರತೆ ಕಲಿಸಿಕೊಟ್ಟಿದ್ದಾನೆ; ಅಂಥ ಶಿಕ್ಷಣದಲ್ಲಿ ತೊಡಗಿಸಿದ್ದಾನೆ. ಅಪವಿತ್ರ ಶರೀರದಿಂದ ಧರ್ಮಶಾಸ್ತ್ರಗಳ ಅಭ್ಯಾಸ ಮಾಡಿದ್ದಾನೆ. ಅನೇಕ ಆರಂಭ, ಅನ್ಯಾಯರೂಪ ಪಾಪದಿಂದ ಧನಾರ್ಜನೆ ಮಾಡಿ ಆ ಧನವನ್ನು ಶಾಸ್ತ್ರ ಬರೆಸುವ, ಮುದ್ರಿಸುವ ಸಲುವಾಗಿ ಕೊಟ್ಟಿದ್ದಾನೆ. ಸ್ವಯಂ ಉತ್ತಮ ಧರ್ಮದ ಸೇವನೆ ಮಾಡುವಂಥವನಿದ್ದರೂ ಕುಕವಿಗಳ ಜ್ಞಾನದ ಪ್ರಶಂಸೆ ಮಾಡಿದ್ದಾನೆ. ಅದನ್ನು ಸ್ವಯಂ ಕಲಿತುಕೊಳ್ಳಲು ಬಯಸಿದ್ದಾನೆ. ಇತ್ಯಾದಿ ಭಾವಗಳಿಂದ ಜೀವನು ಭವಾಂತರದಲ್ಲಿ ಕುಕವಿಯಾಗುತ್ತಾನೆ.

**ಸಂದೇಹ-೭೩ :-** ಓ ಸ್ವಾಮೀ ! ಯಾವ ಪುಣ್ಯದಿಂದ ಧರ್ಮ ಶಾಸ್ತ್ರಗಳ ಛಂದಸ್ಸು ಅಲಂಕಾರಯುಕ್ತ ಕಾವ್ಯಗಳ ರಚನೆ ಮಾಡುವಂಥ ಸುಬುದ್ಧಿಯ ಧಾರಕ ಸುಕವಿಯಾಗುತ್ತಾನೆ ?

**ಸಮಾಧಾನ :-** ಯಾವ ಜೀವನು ಪೂರ್ವ ಭವದಲ್ಲಿ ಗಾಥೆ, ಶ್ಲೋಕ, ಕಾವ್ಯಗಳ ಕರ್ತೃ ಆಚಾರ್ಯದೇವ, ಗಣಧರ ಮೊದಲಾದ ಕವಿನಾಥರ ಕಾವ್ಯಕಲೆಯನ್ನು ಶಾಸ್ತ್ರಗಳಲ್ಲಿ ಕಂಡು ಆಲಿಸಿ, ಅವುಗಳ ರಹಸ್ಯವನ್ನರಿತು ಗಣಧರಾದಿ ಕವಿನಾಥರ ಮಹಿಮೆ ಮಾಡಿದ್ದಾನೆ. ಸುಕಾವ್ಯ ಧರ್ಮಶಾಸ್ತ್ರಗಳ ರಚನೆ ಮಾಡುವಂಥವರನ್ನು ಕಂಡು ಅಂತರಂಗದಲ್ಲಿ ಪ್ರಸನ್ನನಾಗಿದ್ದಾನೆ, ಅವರ ಕುರಿತಾಗಿ ವಾತ್ಸಲ್ಯಭಾವ ವ್ಯಕ್ತ ಮಾಡಿದ್ದಾನೆ. ಧರ್ಮದಮಹಿಮೆಯನ್ನು ಸಾರುವಂಥ ಕಾವ್ಯಗಳ ಹಾಗೂ ಆಚರಣೆಯನ್ನು ಕಲಿಸುವ ಕೃತಿ ರಚನೆ ಮಾಡುತ್ತಿರುವ ಸುಕವಿಗಳ ಸೇವೆ, ಸಹಾಯ ಮಾಡಿ ಅವರಿಗೆ ಅನುಕೂಲ ಮಾಡಿಕೊಟ್ಟಿದ್ದಾನೆ. ಸುಕವಿಗಳಿಂದ ರಚಿಸಲ್ಪಟ್ಟ ಪದ್ಯ-ಗಾಥೆ, ಶ್ಲೋಕಗಳನ್ನು ಓದಿ, ಧರ್ಮದ ರಹಸ್ಯ ತಿಳಿದು ಪ್ರಸನ್ನನಾಗಿ ಕವಿಗಳ ಪ್ರಶಂಸೆ ಮಾಡಿದ್ದಾನೆ. ಧರ್ಮ ಶಾಸ್ತ್ರಗಳ ವ್ಯವಸ್ಥೆ, ಸುರಕ್ಷತೆ ಮಾಡುವಂಥವರ ಹಾಗೂ ಅಭ್ಯಾಸ ಮಾಡುವವರಿಗೆ ಸಹಾಯ ಮಾಡಿದ್ದಾನೆ-ಇತ್ಯಾದಿ ಶುಭಭಾವಗಳಿಂದ ವಿಶೇಷ ಜ್ಞಾನಧಾರಕ ಸುಕವಿಯಾಗುತ್ತಾನೆ.

**ಸಂದೇಹ-೭೪ :-** ಓ ದೇವಾ ! ಯಾವ ಪುಣ್ಯದಿಂದ ಈ ಜೀವನು ದೀರ್ಘಾಯುವಿನ ಧಾರಕ, ಜೀವನ ಪರ್ಯಂತ ಸುಖಿಯಾಗುತ್ತಾನೆ ?

**ಸಮಾಧಾನ :-** ಯಾವ ಜೀವನು ಪೂರ್ವ ಭವದಲ್ಲಿ ಅನ್ಯ ಜೀವಗಳನ್ನು ಮರಣದಿಂದ ರಕ್ಷಿಸಿ, ಅವರಿಗೆ ವಿವಿಧ ಭೋಜನ, ವಸ್ತ್ರಾದಿಗಳನ್ನು ನೀಡಿ, ಮಧುರ ವಚನಗಳಿಂದ ಮನಸ್ಸಿಗೆ ಹಿತ ಮಾಡಿದ್ದಾನೆ. ಬಂಧನದಲ್ಲಿರುವ ಜೀವಗಳನ್ನು ಬಿಡಿಸಿ ಸುಖಿ ಮಾಡಿದ್ದಾನೆ. ಯಾವಾಗಲೂ ಅನ್ಯ ಜೀವರುಗಳ ಸುಖದ ಅಭಿಲಾಷೆ ಮಾಡಿದ್ದಾನೆ. ಅನ್ಯರು ಅಲ್ಪಾಯುವಿನಲ್ಲಿ ಮರಣ ಹೊಂದಿರುವುದನ್ನು ಕಂಡು ಯಾರ ಚಿತ್ತವು ಸಂಸಾರದಿಂದ ಉದಾಸವಾಗಿದೆ. ವಿಶೇಷರೂಪದಿಂದ ದೀನ ಜೀವಗಳ ಕುರಿತಾಗಿ ರಕ್ಷಣೆಯನ್ನು ಬಯಸಿದ್ದಾನೆ-ಇತ್ಯಾದಿ ಶುಭಭಾವಗಳಿಂದ ದೀರ್ಘ ಆಯುವಿನ ಧಾರಕನಾಗುತ್ತಾನೆ ಮತ್ತು ಜೀವನದ ತುಂಬೆಲ್ಲ ಸುಖಿಯಾಗಿರುತ್ತಾನೆ.

**ಸಂದೇಹ-೭೫ :-** ಪ್ರಭು ! ಯಾವ ಪಾಪದಿಂದ ಈ ಜೀವನು ದೀರ್ಘಾಯು ಪಡೆದರೂ ದುಃಖಿಯಾಗಿರುತ್ತಾನೆ?

**ಸಮಾಧಾನ :-** ಯಾವ ಜೀವನು ಪೂರ್ವ ಭವದಲ್ಲಿ ಅನ್ಯ ಜೀವಗಳ ಘಾತ ಮಾಡಿದ್ದಾನೆ. ವಿವಿಧ ಜಲಗಾಹನ, ವೃಕ್ಷಛೇದನ, ಭೂಮಿ ಅಗೆಯುವ, ಅಗ್ನಿ ಉರಿಸುವ ಇತ್ಯಾದಿ ಕ್ರಿಯೆಗಳ ರೂಪ ಆರಂಭದಿಂದ ತ್ರಸ-ಸ್ಥಾವರ ಜೀವಗಳ ಘಾತ ಮಾಡಿದ್ದಾನೆ. ಸೂಕ್ಷ್ಮಕಾಯಧಾರಕ ಅನೇಕ ದೀನ ಜೀವಗಳನ್ನು ನೋಯಿಸಿದ್ದಾನೆ. ಅನ್ಯರನ್ನು ದುಃಖಿ, ರೋಗಿ, ರೋದನ ಮಾಡುತ್ತಿರುವವರನ್ನು ಕಂಡು ಪ್ರಸನ್ನನಾಗಿದ್ದಾನೆ. ಅನ್ಯರು ಸುಖಿಯಾಗಿರುವುದನ್ನು ಕಂಡು ಅವರ ಕೇಡು ಬಯಸಿದ್ದಾನೆ - ಇತ್ಯಾದಿ ಪಾಪ ಭಾವಗಳಿಂದ ಜೀವನು ದೀರ್ಘಾಯು ಪಡೆದರೂ ದುಃಖಿಯಾಗಿಯೇ ಉಳಿಯುತ್ತಾನೆ.

**ಸಂದೇಹ-೭೬ :-** ಗುರುನಾಥರೇ ! ಯಾವ ಪಾಪದಿಂದ ಈ ಜೀವನು ಯಾವಾಗಲೂ ಶೋಕರೂಪ-ನಾಗಿರುತ್ತಾನೆ ?

**ಸಮಾಧಾನ :-** ಪೂರ್ವ ಭವದಲ್ಲಿ ಯಾವ ಜೀವನು ಅನ್ಯ ಜೀವಗಳು ಶೋಕ ಸಹಿತವಾಗಿರುವುದನ್ನು ಕಂಡು ಪ್ರಸನ್ನನಾಗಿದ್ದಾನೆ. ಅನ್ಯರಿಗೆ ಭಯ ತೋರಿಸಿ ಅಥವಾ ದ್ವೇಷಭಾವದಿಂದ ಶೋಕ ಉತ್ಪನ್ನ ಮಾಡಿದ್ದಾನೆ. ಅನ್ಯರ ಶೋಕದಲ್ಲಿ ಅವರ ಅಪಹಾಸ್ಯ ಮಾಡಿದ್ದಾನೆ. ಅಸತ್ಯ ವಚನಗಳನ್ನಾಡುತ್ತ ಹಾಸ್ಯ ಮಾಡುತ್ತ - 'ಇಂಥದೊಂದು ಸ್ಥಾನದ ಮಾರ್ಗದಲ್ಲಿ ನಿಮ್ಮ ಧನವು ಲೂಟಿಯಾಗಿದೆ' - ಎಂದು ಹೇಳಿ ಶೋಕ ಉತ್ಪನ್ನ ಮಾಡಿದ್ದಾನೆ. ಅನ್ಯರ ಮಂಗಲ ಆಚರಣೆಯಲ್ಲಿ ಉಪದ್ರವ-ವಿಘ್ನವೊಡ್ಡಿದ್ದಾನೆ ಇತ್ಯಾದಿ ಪಾಪಗಳಿಂದ ಸದೈವ ಶೋಕಗ್ರಸ್ತನಾಗಿರುತ್ತಾನೆ.

**ಸಂದೇಹ-೭೭ :-** ಜ್ಞಾನಮೂರ್ತಿಗಳೇ ! ಯಾವ ಪುಣ್ಯದಿಂದ ಈ ಜೀವನು ಸದಾ ಶೋಕರಹಿತ ಸುಖಿಯಾಗಿರುತ್ತಾನೆ ?

**ಸಮಾಧಾನ :-** ಯಾವ ಜೀವನು ಪೂರ್ವಭವದಲ್ಲಿ ತೀರ್ಥಂಕರರ ಪಂಚಕಲ್ಯಾಣಕಗಳ ಉತ್ಸವವನ್ನು ನೋಡಿ ಹರ್ಷ-ಅನುಮೋದನೆಯನ್ನು ವ್ಯಕ್ತಪಡಿಸಿದ್ದಾನೆ. ಜಿನಪೂಜೆ, ಜಿನಪ್ರತಿಷ್ಠೆ, ಸಿದ್ಧಕ್ಷೇತ್ರದ ಯಾತ್ರೆಯ ಸಲುವಾಗಿ ಹೊರಟಿರುವ ಸಂಘವನ್ನು ಕಂಡು ತುಂಬ ಹರ್ಷಿತನಾಗಿದ್ದಾನೆ. ಧರ್ಮೋತ್ಸವ ಮಾಡುವಂಥ ಜೀವದ ಪ್ರಶಂಸೆಯನ್ನು ಬಹಳಷ್ಟು ಮಾಡಿದ್ದಾನೆ. ಧನದಿಂದ, ಮನದಿಂದ, ತನದಿಂದ ವಿವಿಧ ಉಪಾಯ ಮಾಡಿ ಅನೇಕ ಜೀವಗಳ ಶೋಕನಷ್ಟಮಾಡಿ ಅವರನ್ನು ಸುಖಿ ಮಾಡಿದ್ದಾನೆ. ಅನ್ಯ ಜೀವರುಗಳು ಶೋಕದಲ್ಲಿ ಮುಳುಗಿರುವುದನ್ನು ಕಂಡು ಕರುಣಾಭಾವಪೂರ್ವಕ ಅವರ ಸಲುವಾಗಿ ಸುಖದ ಇಚ್ಛೆ ಮಾಡಿದ್ದಾನೆ. ಅನ್ಯರನ್ನು ಸುಖಿ, ಮಂಗಲ ಆಚರಣೆ ಮಾಡುತ್ತಿರುವುದನ್ನು ಕಂಡು ಸುಖ ಪಡೆದಿದ್ದಾನೆ. ಇತ್ಯಾದಿ ಶುಭಭಾವಗಳ ಕಾರಣ ಜೀವನು ಸದಾ ಸುಖರೂಪನಾಗಿರುತ್ತಾನೆ.

**ಸಂದೇಹ-೭೮ :-** ಓ ಗುರುದೇವಾ ! ಯಾವ ಪುಣ್ಯದಿಂದ ಈ ಜೀವನು ಅನೇಕ ಜೀವರುಗಳ ಮೂಲಕ ಪೂಜ್ಯ ಹಾಗೂ ಅನೇಕ ಜೀವರುಗಳ ಈಶ್ವರನಾಗುತ್ತಾನೆ ?

**ಸಮಾಧಾನ :-** ಯಾವನು ಪೂರ್ವ ಭವದಲ್ಲಿ ಧರ್ಮಾತ್ಮಾ ಜೀವರುಗಳ ವೈಯಾವೃತ್ತಿ ಮಾಡಿ ಅವರಿಗೆ ಸಾತಾ ತಲುಪಿಸಿದ್ದಾನೆ. ದೇವ, ಗುರು, ಧರ್ಮವನ್ನು ಉತ್ಕೃಷ್ಟವೆಂದು ತಿಳಿದು ಪೂಜಿಸಿದ್ದಾನೆ. ಅನ್ಯರು ಧರ್ಮಾತ್ಮರ ಸೇವೆ ಮಾಡುತ್ತಿರುವುದನ್ನು ಕಂಡು, ಅವರ ಅನುಮೋದನೆ ಮಾಡಿದ್ದಾನೆ-ಅವರನ್ನು ಒಳ್ಳೆಯವರೆಂದು ತಿಳಿದಿದ್ದಾನೆ. ಪೂರ್ವ ಭವದಲ್ಲಿ ಯಾವನು ಅನೇಕ ಅಸಹಾಯಿ, ದೀನ ಜೀವಗಳಿಗೆ ಆಹಾರ, ಧನ, ವಸ್ತ್ರಾದಿಗಳನ್ನು ನೀಡಿ ಸುಖಿ ಮಾಡಿದ್ದಾನೆ. ನಾಲ್ಕು ಪ್ರಕಾರದ ಸಂಘದ ಕುರಿತಾಗಿ ಸೇವೆ ಮಾಡುವ ಅಭಿಲಾಷೆ ಹೊಂದಿದ್ದನು-ಇತ್ಯಾದಿ ಶುಭಭಾವಗಳಿಂದ ಅನೇಕ ಜೀವರುಗಳ ಸ್ವಾಮಿಯಾಗುತ್ತಾನೆ.

**ಸಂದೇಹ-೭೯ :-** ಓ ಪ್ರಭು ! ಈ ಜೀವನು ಯಾವ ಪಾಪದಿಂದ ಅನೇಕ ಜೀವಗಳ ದಾಸನಾಗುತ್ತಾನೆ?

**ಸಮಾಧಾನ :-** ಯಾವ ಜೀವನು ಪೂರ್ವ ಭವದಲ್ಲಿ ಅನ್ಯ ಜೀವರುಗಳಿಗೆ ಭಯ ತೋರಿಸಿ ಅವರಿಂದ ಕೆಲಸ ಮಾಡಿಸಿದ್ದಾನೆ. ಸೇವಕರನ್ನಿಟ್ಟುಕೊಂಡು ಚಾಕರಿ-ಕೆಲಸ ಕಾರ್ಯ ಮಾಡಿಸಿಕೊಂಡು ಅವರಿಗೆ ಯಾವುದೇ ವೇತನ(ಮಜೂರಿ) ಕೊಟ್ಟಿಲ್ಲ. ದಿನಗೂಲಿಯ ಮೇಲೆ ಸೇವಕರನ್ನು ನಿಯಮಿಸಿಕೊಂಡಿದ್ದಾನೆ. ಅನ್ಯ ಜೀವಗಳ ಪರಾಧೀನತೆಯನ್ನು ಕಂಡು ಸುಖಿಯಾಗಿದ್ದಾನೆ-ಇತ್ಯಾದಿ ಪಾಪಭಾವಗಳಿಂದ ಜೀವನು ಅನೇಕರ ದಾಸನಾಗುತ್ತಾನೆ.

**ಸಂದೇಹ-೮೦ :-** ಓ ಗುರುಗಳೇ ! ಈ ಜೀವನು ಯಾವ ಕಾರಣದಿಂದ ನಪುಂಸಕ ಲಿಂಗಿಯಾಗುತ್ತಾನೆ?

**ಸಮಾಧಾನ :-** ಯಾವ ಜೀವನು ಪೂರ್ವ ಭವದಲ್ಲಿ ಪುರುಷನನ್ನು ನಾರಿಯ ಆಕಾರವಾಗಿ ಮಾಡಿ ಸುಖಿಯಾಗಿದ್ದಾನೆ. ಸ್ತ್ರೀಯರೂಪ ಮಾಡಿಕೊಂಡು ಜನರನ್ನು ಮೋಹಿತಗೊಳಿಸುವಂಥ ಯಾವನೋ ಪುರುಷನ ರೂಪ ನೋಡಿ ಸ್ವಯಂ ಹರ್ಷಿತನಾಗಿದ್ದಾನೆ. ನಪುಂಸಕ ಜೀವಗಳು ಕುಣಿಯುತ್ತಿರುವುದನ್ನು, ಹಾಡುತ್ತಿರುವುದನ್ನು, ಕೌತುಕ, ಹಾಸ್ಯ ಮಾಡುತ್ತಿರುವುದನ್ನು ನೋಡಿ ಅವರ ಚೇಷ್ಟೆಯು ತನಗೆ ಪ್ರಿಯವೆನಿಸಿದೆ. ತಾನು ಸ್ವಯಂ ಅನೇಕ ಜೀವಗಳನ್ನು ಬಲವಂತತೆಯಿಂದ ನಪುಂಸಕ ಮಾಡಿ ಬಿಟ್ಟಿದ್ದಾನೆ. ನಪುಂಸಕರ ಸಂಗತಿಯು ಹಿತವೆನಿಸಿದೆ. ನಪುಂಸಕ ಮನುಷ್ಯರ ಹಾಗೆ ಚೇಷ್ಟೆ ಮಾಡುವ ಅಭಿಲಾಷೆಯಾಗಿದೆ. ಪರಸ್ತ್ರೀ ಮತ್ತು ಪರಪುರುಷರ ನಡುವೆ ಸ್ವಯಂ ದೂತನಾಗಿ ಅವರ ಶೀಲ ಖಂಡಿತ ಮಾಡಿಸಿದ್ದಾನೆ. ಏಕೇಂದ್ರಿಯ, ದ್ವೀಂದ್ರಿಯ, ತ್ರೀಂದಿಯ, ಚತುರಿಂದ್ರಿಯರೂಪ ನಪುಂಸಕ ವೇದೀ ಜೀವಗಳ ಹಿಂಸೆ ಮಾಡುವ ಸಮಯದಲ್ಲಿ ಕರುಣೆಯು ಬರಲಿಲ್ಲ, ನಿರ್ದಯಿಯಾಗಿ ಉಳಿದನು-ಇತ್ಯಾದಿರೂಪ ಚೇಷ್ಟೆಗಳಿಂದ ಈ ಜೀವನು ನಪುಂಸಕನಾಗುತ್ತಾನೆ; ಸ್ಥಾವರ ಅಥವಾ ವಿಕಲೇಂದ್ರಿಯನಾಗುತ್ತಾನೆ.

**ಸಂದೇಹ-೮೧ :-** ಓ ಜ್ಞಾನ ಸರೋವರ ಗುರುಗಳೇ ! ಈ ಜೀವನು ಯಾವ ಕರ್ಮದಿಂದ ಸ್ತ್ರೀ ಪರ್ಯಾಯರೂಪನಾಗುತ್ತಾನೆ ?

**ಸಮಾಧಾನ :-** ಯಾವನು ಪೂರ್ವಭವದಲ್ಲಿ ಸ್ತ್ರೀಯರ ಸಂಗತಿಯನ್ನು ಹಿತರೂಪ ಮನ್ನಿಸಿ, ಅವರಲ್ಲಿ ಸ್ತ್ರೀಯರ ಸಮಾನ ಚೇಷ್ಟೆ ಮಾಡಿ ಸುಖಿಯಾಗಿದ್ದಾನೆ. ಅನ್ಯರ ಸಲುವಾಗಿ ತನ್ನ ಚೇಷ್ಟೆಯು ಸ್ತ್ರೀಯ ಸಮಾನವಿದೆಯೆಂಬುದನ್ನು ತಿಳಿಸಿಕೊಟ್ಟು, ಅನ್ಯರನ್ನು ವಶದಲ್ಲಿಟ್ಟುಕೊಂಡಿದ್ದಾನೆ. ಸ್ತ್ರೀಯರಲ್ಲಿ ಯಾರಿಗೆ ಬಹಳಷ್ಟು ಮೋಹವಿತ್ತು . ಪೂರ್ವ ಭವದಲ್ಲಿ ಸ್ವಯಂ ಪುರುಷನಾಗಿದ್ದರೂ ನಾರಿಯ ರೂಪ ಮಾಡಿಕೊಂಡು ಅನ್ಯರನ್ನು ಮೋಹಿತ ಮಾಡಿದ್ದಾನೆ - ಇತ್ಯಾದಿ ಕುಚೇಷ್ಟೆಗಳಿಂದ ಜೀವನಿಗೆ ಸ್ತ್ರೀ ಪರ್ಯಾಯವಾಗುತ್ತದೆ.

**ಸಂದೇಹ-೮೨ :-** ಓ ಮಹಾಪ್ರಭು ! ಈ ಜೀವನು ಯಾವ ಪಾಪದಿಂದ ಏಕೇಂದ್ರಿಯ, ಸ್ಥಾವರನಾಗುತ್ತಾನೆ?

**ಸಮಾಧಾನ :-** ಯಾರು ಪೂರ್ವಭವದಲ್ಲಿ ವೀತರಾಗ ದೇವ, ಧರ್ಮ, ಗುರುಗಳ ನಿಂದೆ ಮಾಡಿ,

ಅವರೊಂದಿಗೆ ದ್ವೇಷ ಭಾವ ಮಾಡಿ ಸುಖಿಯಾಗಿದ್ದಾರೆ. ದುರ್ಬುದ್ಧಿ ಜೀವಗಳ ಕುಸಂಗತಿಯ ನಿಮಿತ್ತ ಪಡೆದು ಯಾವನು ದೇವ-ಗುರು-ಧರ್ಮದ ಮತ್ತು ಧರ್ಮಾತ್ಮಾ ಜೀವರುಗಳ ನಿಂದೆ ಮಾಡಿದ್ದಾನೆ-ಇತ್ಯಾದಿ ಕಾರ್ಯ ಮಾಡುವಂಥ ಜೀವನು ಸಾಧಾರಣ ವನಸ್ಪತಿ ನಿಗೋದಿಯಾಗುತ್ತಾನೆ.

ಯಾರು ಪೂರ್ವ ಭವದಲ್ಲಿ ವೃಕ್ಷಗಳನ್ನು ಕತ್ತರಿಸಿದ್ದಾರೆ; ಅನೇಕ ವನಸ್ಪತಿಗಳನ್ನು ಕಿತ್ತು ಹಾಕಿದ್ದಾರೆ, ತುಂಡರಿಸಿದ್ದಾರೆ, ಸುಲಿದಿದ್ದಾರೆ. ಬಹಳಷ್ಟು ಭೂಮಿಯನ್ನು ಅಗೆದಿದ್ದಾರೆ, ನೀರು ಹರಿಸಿದ್ದಾರೆ, ಅಗ್ನಿ ಹೊತ್ತಿಸುವ-ಉರಿಸುವ, ಆರಿಸುವುದರಿಂದ ಪವನಕಾಯಗಳ ಘಾತ ಮಾಡಿದ್ದಾರೆ, ಇತ್ಯಾದಿ ಪಂಚ ಸ್ಥಾವರಗಳ ಕುರಿತಾಗಿ ದಯಾರಹಿತ ಪ್ರವೃತ್ತಿ ಮಾಡಿದ್ದಾರೆ. ಅನ್ಯರು ಪಂಚಸ್ಥಾವರಗಳ ಘಾತ ಮಾಡುತ್ತಿರುವುದನ್ನು ನೋಡಿ ಅವರ ಅನುಮೋದನೆ ಮಾಡಿದ್ದಾರೆ-ಇತ್ಯಾದಿ ಪಾಪದಿಂದ ಜೀವನು ಏಕೇಂದ್ರಿಯ ಸ್ಥಾವರ ಕಾಯನಾಗುತ್ತಾನೆ.

**ಸಂದೇಹ-೮೩ :-** ಗುರುಗಳೇ ! ಈ ಜೀವನು ಯಾವ ಪಾಪದಿಂದ ವಿಕಲತ್ರಯನಾಗುತ್ತಾನೆ ?

**ಸಮಾಧಾನ :-** ಯಾವ ಜೀವನು ನಿರ್ದಯ ರೂಪನಾಗಿರುತ್ತ ವಿಕಲತ್ರಯ ಮೊದಲಾದ ತ್ರಸ ಜೀವಗಳ ಘಾತ ಮಾಡುತ್ತಾನೆ. ಎಳ್ಳು, ಶೇಂಗಾ, ಗೋದಿ, ಅಕ್ಕಿ ಮೊದಲಾದ ಧಾನ್ಯಗಳನ್ನು ಉಗ್ರಾಣಗಳಲ್ಲಿ ಬಹಳಷ್ಟು ದಿವಸಗಳವರೆಗೆ ಸಂಗ್ರಹಿಸಿಟ್ಟು, ಅನೇಕ ತ್ರಸ ಜೀವಗಳು ಉತ್ಪನ್ನವಾದ ಮೇಲೆ ಅವುಗಳ ನಾಶ ಮಾಡುತ್ತಾನೆ; ಆ ಸಮಯದಲ್ಲಿ ಮನಸ್ಸಿನಲ್ಲಿ ದಯೆಯೂ ಉತ್ಪನ್ನವಾಗುವುದಿಲ್ಲ. ರಸನಾ ಇಂದ್ರಿಯದ ವಶೀಭೂತನಾಗಿ, ಮನಸ್ಸಿನಲ್ಲಿ ದಯೆಯುಂಟಾಗದೆಯೇ ತ್ರಸ ಜೀವಗಳಿಂದ ಯುಕ್ತವಾದ ಅನೇಕ ವಸ್ತುಗಳು-ಹಲ್ವಾ, ಮಿಠಾಯಿ, ಹಣ್ಣು, ಪಕ್ವಾನ್ನಗಳ ಭಕ್ಷಣೆ ಮಾಡಿದ್ದಾನೆ. ಮನುಷ್ಯ-ಪಶುಗಳ ಮೂತ್ರವನ್ನು ಸಂಗ್ರಹಿಸಿ ತ್ರಸ ಜೀವಗಳ ಉತ್ಪತ್ತಿ-ಕ್ಷಯವಾಗುವುದನ್ನು ಕಂಡು ಕೂಡ ದಯೆಯು ಉತ್ಪನ್ನವಾಗಿಲ್ಲ-ಇತ್ಯಾದಿರೂಪದಲ್ಲಿ ವಿಕಲತ್ರಯ ಜೀವಗಳ ಕುರಿತಾಗಿ ದಯಾರಹಿತ ಪ್ರವೃತ್ತಿ ಮಾಡುವಂಥ ಜೀವನು ವಿಕಲತ್ರಯವಾಗುತ್ತಾನೆ.

**ಸಂದೇಹ-೮೪ :-** ಓ ಪ್ರಭು ! ಈ ಜೀವನು ಯಾವ ಪಾಪದಿಂದ ವಿಕಲಾಂಗೀ, ಅಂಗೋಪಾಂಗ ರಹಿತನಾಗುತ್ತಾನೆ ?

**ಸಮಾಧಾನ :-** ಯಾವ ಜೀವನು ಪೂರ್ವ ಭವದಲ್ಲಿ ಅನ್ಯ ಜೀವಗಳ ಕೈ,ಕಾಲು, ತಲೆ, ಬೆರಳು ಮೊದಲಾಗಿ ಅಂಗ-ಉಪಾಂಗಗಳನ್ನು ಛೇದಿಸಿದ್ದಾನೆ. ಯಾರದೋ ಅಂಗ-ಉಪಾಂಗ ಕತ್ತರಿಸಿ ಹೋಗಿರುವುದನ್ನು ಕಂಡು ಹರ್ಷಿತನಾಗಿದ್ದಾನೆ. ದೀನ ಪಶುಗಳ ಅಂಗೋಪಾಂಗಗಳ ಛೇದನವನ್ನು ಶಸ್ತ್ರಗಳಿಂದ ಮಾಡಿದ್ದಾನೆ, ಆಗುತ್ತಿರುವುದನ್ನು ಕಂಡು ಅನುಮೋದಿಸಿದ್ದಾನೆ. ಕಲ್ಲು, ಕಟ್ಟಿಗೆಗಳಿಂದ, ಪಾದಪ್ರಹಾರದಿಂದ, ಮುಷ್ಟಿ ಪ್ರಹಾರದಿಂದ ಪರಾಧೀನ ಮನುಷ್ಯರ ಹಾಗೂ ಪಶುಗಳ ಅಂಗೋಪಾಂಗಗಳನ್ನು ಕತ್ತರಿಸಿ ಹಾಕಿದ್ದಾನೆ, ಅಂಗೋಪಾಂಗ ರಹಿತ ಜೀವಗಳನ್ನು ಕಂಡು ಅಪಹಾಸ್ಯ ಮಾಡಿದ್ದಾನೆ-ಪ್ರಸನ್ನನಾಗಿದ್ದಾನೆ. ಇತ್ಯಾದಿ ಪಾಪಗಳಿಂದ ಜೀವನು ವಿಕಲಾಂಗನಾಗುತ್ತಾನೆ, ಅಂಗೋಪಾಂಗ ರಹಿತನಾಗುತ್ತಾನೆ.

**ಸಂದೇಹ-೮೫ :-** ಓ ಗುರುಗಳೇ ! ಯಾವ ಪುಣ್ಯದಿಂದ ಜೀವನು ಸಂಪೂರ್ಣ ಅಷ್ಟ ಅಂಗಸಹಿತ-ನಾಗುತ್ತಾನೆ?

**ಸಮಾಧಾನ :-** ಯಾವ ಜೀವನು ಪೂರ್ವ ಭವದಲ್ಲಿ ಅನ್ಯ ಜೀವಗಳ ಅಂಗ-ಉಪಾಂಗಗಳ ರಕ್ಷಣೆ ಮಾಡಿದ್ದಾನೆ, ಯಾರದೋ ಅಂಗ-ಉಪಾಂಗಗಳು ಕತ್ತರಿಸಿ ಹೋಗುವುದನ್ನು ತಡೆದಿದ್ದಾನೆ, ದಯೆಯ ಭಾವದೊಂದಿಗೆ ಧನವಿತ್ತು ರಕ್ಷಿಸಿದ್ದಾನೆ. ಅನ್ಯರ ಅಂಗ-ಉಪಾಂಗಗಳಲ್ಲಿನ ದುಃಖ ನೋಡಿ ಸ್ವಯಂ ದಯಾಪೂರ್ವಕ ಔಷಧ ನೀಡಿ ಅವರಿಗೆ ಸಾತಾ ಮಾಡಿದ್ದಾನೆ. ಅಂಗೋಪಾಂಗ ರಹಿತರನ್ನು ಕಂಡು ಅನುಕಂಪೆ ಮಾಡಿದ್ದಾನೆ. ಅನ್ಯರ ಸುದೃಢ

ಅಂಗೋಪಾಂಗಗಳನ್ನು ನೋಡಿ ಸುಖ ಮನ್ನಿಸಿದ್ದಾನೆ-ಇತ್ಯಾದಿ ಪುಣ್ಯ ಭಾವಗಳಿಂದ ಪರಿಪೂರ್ಣ ಅಷ್ಟ ಅಂಗ ಪಡೆಯುತ್ತಾನೆ.

**ಸಂದೇಹ-೮೬ :-** ಸ್ವಾಮೀ ! ಯಾವ ಪಾಪದಿಂದ ಈ ಜೀವನು ನೀಚ ಕುಲವುಳ್ಳವನಾಗುತ್ತಾನೆ ?

**ಸಮಾಧಾನ :-** ಯಾವ ಜೀವನು ಪೂರ್ವ ಭವದಲ್ಲಿ ಉಚ್ಚ ಕುಲವುಳ್ಳ ಪುರುಷರ ನಿಂದೆ ಮಾಡಿದ್ದಾನೆ, ತನ್ನ ಮುಖದಿಂದ ತನ್ನ ಪ್ರಶಂಸೆ ಮಾಡಿದ್ದಾನೆ. ಅನ್ಯರ ಒಳ್ಳೆಯ ಗುಣಗಳ ಆಚ್ಛಾದನೆ ಮಾಡಿದ್ದಾನೆ; ತನ್ನ ಅವಗುಣಗಳನ್ನು ಆಚ್ಛಾದಿತ ಮಾಡಿದ್ದಾನೆ, ಅನ್ಯರ ದೋಷ ಪ್ರಗಟ ಮಾಡಿದ್ದಾನೆ. ನೀಚ ಕುಲದವರ ಭೋಜನಾದಿ ಕ್ರಿಯೆಗಳಲ್ಲಿ ರಂಜಾಯಮಾನನಾಗಿದ್ದಾನೆ, ಅನುಮೋದನೆ ಮಾಡಿದ್ದಾನೆ. ತನ್ನ ಅಭಿಮಾನದಿಂದ ಅನ್ಯರ ಅನಾದರ ಮಾಡಿದ್ದಾನೆ, ನೀಚ ಸಂಗತಿಯಲ್ಲಿ ಅಧಿಕ ಉಳಿದಿದ್ದಾನೆ - ಇತ್ಯಾದಿ ಅಶುಭ ಭಾವಗಳಿಂದ ಜೀವನು ನೀಚ ಕುಲದಲ್ಲಿ ಹುಟ್ಟುತ್ತಾನೆ.

**ಸಂದೇಹ-೮೭ :-** ಓ ಗುರುದೇವಾ ! ಯಾವ ಪುಣ್ಯದಿಂದ ಜೀವನು ಉಚ್ಚ ಕುಲವಂತನಾಗುತ್ತಾನೆ?

**ಸಮಾಧಾನ :-** ಯಾವನು ಸತ್ಪುರುಷರ ಗುಣಗಳ ಪ್ರಶಂಸೆ ಮಾಡಿದ್ದಾನೆ. ಗುರುಗಳ ಎದುರಿಗೆ ತಮ್ಮ ಅವಗುಣಗಳನ್ನು ಪ್ರಗಟ ಪ್ರಕಾಶಿತ ಮಾಡಿದ್ದಾನೆ. ಅನ್ಯರ ಅವಗುಣಗಳನ್ನು ಮುಚ್ಚಿ ಹಾಕಿದ್ದಾನೆ. ನಾಲ್ಕು ಪ್ರಕಾರದ ಸಂಘದ ಸೇವೆ ಮಾಡಿದ್ದಾನೆ. ದುರಾಚರಣೆಯಿಂದ ಭಯಭೀತನಾಗಿದ್ದಾನೆ. ಅನೇಕ ದೀನ ಜೀವಗಳಿಗೆ ವಿವಿಧ ಭೋಜನ, ವಸ್ತ್ರಾದಿಗಳನ್ನು ಕೊಟ್ಟು ಸುಖಿಮಾಡಿ ಮಿಷ್ಟ ವಚನಗಳಿಂದ ಸಾತಾ ತಲುಪಿಸಿದ್ದಾನೆ. ತನ್ನ ಭಾವಗಳಿಂದ ಯಾರದೂ ಅನಾದರ ಮಾಡಿಲ್ಲ. ಅನ್ಯದೀನರ ಸಮಾನ ಸ್ವಯಂ ತನ್ನನ್ನು ತಿಳಿದು ಅಭಿಮಾನರಹಿತ ಉಳಿದಿದ್ದಾನೆ-ಇತ್ಯಾದಿ ಶುಭಭಾವಗಳಿಂದ ಜೀವನು ಉಚ್ಚಕುಲದವನಾಗುತ್ತಾನೆ.

**ಸಂದೇಹ-೮೮ :-** ನೀಚ ಕುಲದಲ್ಲಿ ಉತ್ಪನ್ನನಾದರೂ ಈ ಜೀವನಿಗೆ ವಿಶಾಲ ಧನ, ಆಜ್ಞೆ, ಲೋಕಮನ್ನಣೆ, ಪ್ರತಿಷ್ಠೆಯು ಯಾವ ಪುಣ್ಯದಿಂದ ದೊರಕುತ್ತದೆ ?

**ಸಮಾಧಾನ :-** ಯಾವ ಜೀವನು ಪೂರ್ವ ಭವದಲ್ಲಿ ಅಜ್ಞಾನಪೂರ್ವಕ ವಿವಿಧ ತಪ ಮಾಡಿದ್ದಾನೆ. ಒಮ್ಮೆ ಧಾನ್ಯದ ತ್ಯಾಗ ಮಾಡಿದರೆ ಒಮ್ಮೆ ಕೇವಲ ವನದ ಫಲ ಪತ್ರಗಳ ಭೋಜನ ಮಾಡಿದ್ದಾನೆ, ಕೇವಲ ತರಕಾರಿ - ಸೊಪ್ಪನ್ನು ತಿಂದು ಉಳಿದಿದ್ದಾನೆ. ಒಮ್ಮೆ ಎಲ್ಲದರ ತ್ಯಾಗ ಮಾಡಿ ಹಾಲನ್ನು ಗ್ರಹಣ ಮಾಡಿದ್ದಾನೆ, ಮಜ್ಜಿಗೆಯನ್ನಷ್ಟೇ ಗ್ರಹಿಸಿದ್ದಾನೆ. ಹುಲ್ಲನ್ನು ಅರೆದು ಕುಡಿದಿದ್ದಾನೆ. ಅಗ್ನಿಯಲ್ಲಿ ಶರೀರವನ್ನು ಕಾಯಿಸಿದ್ದಾನೆ. ಮೇಲೆ ಕಾಲು ತಲೆ ಕೆಳಗೆ ಮಾಡಿ ತೂಗು ಹಾಕಿಕೊಂಡಿದ್ದಾನೆ. ಭೂಮಿಯಲ್ಲಿ ಹೂತು ಹಾಕಿಕೊಂಡಿದ್ದಾನೆ. ಪರ್ವತದಿಂದ ಉರುಳಿದ್ದಾನೆ, ನೀರಿನಲ್ಲಿ ಪತನ ಇತ್ಯಾದಿ ರೂಪದಿಂದ ಬಾಲ ತಪಸ್ವಿಯಾಗಿ, ಧರ್ಮದ ಸಲುವಾಗಿ ಅನೇಕ ಕಷ್ಟ ಸಹಿಸಿದ್ದಾನೆ. ಅಜ್ಞಾನಿ ತಪಸ್ವಿಗಳನ್ನು ಒಳ್ಳೆಯ ಧರ್ಮಾತ್ಮರೆಂದು ತಿಳಿದು ವಿನಯಪೂರ್ವಕ ಋಜು ಭಾವಗಳಿಂದ ಅವರ ಪೂಜೆ ಮಾಡಿದ್ದಾನೆ. ಧಾರ್ಮಿಕ ವೃತ್ತಿಯಿಂದ ಅನೇಕ ಯಾಚಕರಿಗೆ ದಾನ ಕೊಟ್ಟಿದ್ದಾನೆ. ಲೌಕಿಕ ಕಾರ್ಯಗಳಲ್ಲಿ ಧರ್ಮ ತಿಳಿದು ಧರ್ಮಫಲದ ಇಚ್ಛೆಯಿಂದ ಧನ ಖರ್ಚು ಮಾಡಿದ್ದಾನೆ. ತನ್ನ ಅಜ್ಞಾನತೆಯಿಂದ ಅನ್ಯ ಮುಗ್ಧ ಜೀವಗಳನ್ನು ಧರ್ಮಾತ್ಮರೆಂದು ತಿಳಿದು ಪೂಜಿಸಿದ್ದಾನೆ. ಸ್ವಯಂ ಜ್ಞಾನರಹಿತನಾಗಿದ್ದರೂ ಮಂದಕಷಾಯಿ ಉಳಿದಿದ್ದಾನೆ - ಇತ್ಯಾದಿ ಭಾವಗಳಿಂದ ನೀಚ ಕುಲದಲ್ಲಿ ಉತ್ಪನ್ನನಾದರೂ ಕೂಡ ಧನವಂತ, ಆಜ್ಞಾವಂತನಾಗುತ್ತಾನೆ.

ತಿರ್ಯಂಚ ಆಯುವಿನ ಬಂಧವಾಗಿ ಹೋದಮೇಲೆ ಒಂದುವೇಳೆ ಇಂಥ ಭಾವಗಳಾದರೆ ಆ ಶುಭ ಭಾವಗಳ ಫಲದಲ್ಲಿ ಯಾವನೋ ದೊರೆಯ ಆನೆ, ಕುದುರೆ ಮೊದಲಾದ ಪಶುವಾಗುತ್ತಾನೆ. ಆ ಜೀವದ ಬಲದಿಂದ ಅನೇಕ ಜೀವರುಗಳ ಜೀವನ ನಡೆಯುತ್ತದೆ; ಒಳ್ಳೆಯ ವಸ್ತ್ರಾಭೂಷಣ, ಒಳ್ಳೆಯ ಭೋಜನದ ಭೋಕ್ತೃವಾಗಿ

ಆಯುವಿರುವವರೆಗೆ ಸುಖಿಯಾಗಿರುತ್ತದೆ. ಮೊದಲು ಮನುಷ್ಯ ಆಯುವಿನ ಬಂಧವಾಗಿ ಹೋಗಿದ್ದರೆ, ನೀಚ ಕುಲದಲ್ಲಿ ಉತ್ಪನ್ನವಾದರೂ ಧನ, ಆಜ್ಞೆಯುಳ್ಳವನಾಗುತ್ತಾನೆ. ಮೊದಲು ದೇವಾಯುವಿನ ಬಂಧ ಮಾಡಿಕೊಂಡಿದ್ದರೆ ಭವನತ್ರಿಕದಲ್ಲಿ ಅಲ್ಪ ಋದ್ಧಿಯ ಧಾರಕ, ಹೀನ ದೇವನಾಗುತ್ತಾನೆ-ಇತ್ಯಾದಿ ಭಾವಗಳಿಂದ ಇಂಥ ಫಲವಾಗುತ್ತದೆ.

**ಸಂದೇಹ-೮೯ :-** ಓ ಗುರುಗಳೇ ! ಉಚ್ಚ ಕುಲದಲ್ಲಿ ಉತ್ಪನ್ನನಾದರೂ ಈ ಜೀವನು ಯಾವ ಪಾಪದ ಫಲದಿಂದ ದೀನ-ದಶೆಯಧಾರಕ, ಧನರಹಿತನಾಗುತ್ತಾನೆ ?

**ಸಮಾಧಾನ :-** ಯಾವ ಜೀವನು ಪೂರ್ವ ಭವದಲ್ಲಿ ಶುಭಭಾವಗಳಿಂದ ಉಚ್ಚ ಗೋತ್ರದ ಬಂಧವಾದ ಮೇಲೆ ವಿಪರೀತ ಕಷಾಯರೂಪ ಭಾವವಾಗಿ ಹೋಗುವುದರಿಂದ ಮಾನದ ವಶೀಭೂತನಾಗಿ, ಮೋಹದ ಬಲದಿಂದ ಮದೋನ್ಮತ್ತನಾಗಿ, ಅನ್ಯ ಜೀವಗಳ ಮಾನ ಖಂಡಿತಗೊಳಿಸಿ ಹರ್ಷ ಪಟ್ಟಿದ್ದಾನೆ. ಸ್ವಯಂ ಗುರುಜನರ ಆಜ್ಞೆಯಿಂದ ರಹಿತನಾಗಿ ಉಳಿದಿದ್ದಾನೆ. ದೀನ ಜೀವಗಳ ಕುರಿತಾಗಿ ದ್ವೇಷ ಭಾವ ಮಾಡಿ, ಕುವಚನಗಳನ್ನಾಡಿ ಪೀಡೆ ತಲುಪಿಸಿದ್ದಾನೆ. ಛಲ-ಬಲದಿಂದ ಅನ್ಯರ ಧನ ನಷ್ಟಮಾಡಿಸಿ ಸುಖ ಪಡೆದಿದ್ದಾನೆ-ಇತ್ಯಾದಿ ಪಾಪ ಭಾವಗಳಿಂದ ಜೀವನು ಉಚ್ಚ ಕುಲವಂತನಾಗಿದ್ದರೂ ಧನ-ಧಾನ್ಯಾದಿಗಳಿಂದ ರಹಿತ, ದೀನ ದಶೆಯ ಧಾರಕನಾಗುತ್ತಾನೆ.

**ಸಂದೇಹ-೯೦ :-** ಪ್ರಭು ! ಯಾವ ಕರ್ಮದಿಂದ ಈ ಜೀವನು ಅನೇಕ ದೇಶಾಂತರಗಳಲ್ಲಿ ಭ್ರಮಣ ಮಾಡಿ ಆಜೀವಿಕೆಯನ್ನು ಪಡೆಯುತ್ತಾನೆ ?

**ಸಮಾಧಾನ :-** ಯಾವ ಜೀವನು ಪೂರ್ವಭವದಲ್ಲಿ ಅನೇಕ ಸ್ಥಾನಗಳಲ್ಲಿ ಸುತ್ತುತ್ತ-ಸುತ್ತುತ್ತ ದೀನರಿಗೆ ದಾನ ಕೊಟ್ಟಿದ್ದಾನೆ. ದಾನದ ಗೃಹವು ಅನ್ಯ ಗ್ರಾಮದಲ್ಲಿಯೆಂದು ಹೇಳಿ, ಅನ್ಯರನ್ನು ಸುತ್ತಾಡಿಸಿ ದಾನ ಕೊಟ್ಟಿದ್ದಾನೆ. ದೀನರಿಂದ ವಿಧ-ವಿಧದ ಸೇವೆ ಶುಶ್ರೂಷೆ ಮಾಡಿಸಿಕೊಂಡು ಬಹುದಿನಗಳವರೆಗೆ ಅಲೆದಾಡಿದ ನಂತರ ದಯೆ ಮಾಡಿ ದಾನಕೊಟ್ಟಿದ್ದಾನೆ. ಅನೇಕ ಗ್ರಾಮ-ದೇಶಗಳಲ್ಲಿ ಅಲೆದಾಡಿಸಿ, ಸೇವೆ-ಶುಶ್ರೂಷೆ ಮಾಡಿದ ಮೇಲೆ, ಧರ್ಮವೆಂದು ತಿಳಿದು ದಾನ ಕೊಟ್ಟಿದ್ದಾನೆ. ದೂತರಿಗೆ ಅನೇಕ ದೇಶಗಳಲ್ಲಿ ಭ್ರಮಣೆ ಮಾಡಿಸಿದ ಮೇಲೆಯೂ ಅವರ ವೇತನವನ್ನು ಕೊಟ್ಟಿಲ್ಲ ಅಥವಾ ಕಡಿಮೆ ಕೊಟ್ಟಿದ್ದಾನೆ. ಅನ್ಯರಿಗೆ ಧರ್ಮದ ಹೆಸರಿನಲ್ಲಿ ಗ್ರಾಮ, ಧನ, ವಸ್ತ್ರ ನೀಡಿ-ಅವರಿಂದ ಅನೇಕ ಪ್ರಕಾರದ ಸೇವೆ ಮಾಡಿಸಿ, ಅವರನ್ನು ಅನೇಕ ದೇಶ-ನಗರಗಳಲ್ಲಿ ದೂತ-ಪತ್ರವಾಹಕನಂತೆ ಭ್ರಮಣೆ ಮಾಡಿಸಿ ಅವರಿಂದ ಕಷ್ಟ ಮಾಡಿಸಿದ್ದಾನೆ-ಖೇದ ತಲುಪಿಸಿದ್ದಾನೆ.

ಧರ್ಮಾತ್ಮಾ ಪುರುಷರನ್ನು ತಮ್ಮ ಆಧೀನದಲ್ಲಿಟ್ಟುಕೊಂಡು ಅನೇಕ ದೇಶ, ಗ್ರಾಮಗಳಲ್ಲಿ ಅವರನ್ನು ತಮ್ಮೊಂದಿಗೆ ಭ್ರಮಣ ಮಾಡಿಸಿಯೂ ಕೂಡ ಅವರ ಅಸ್ಥಿರತೆಯನ್ನು ಆಜೀವಿಕೆಯೆಂದು ಹೇಳಿದ್ದಾನೆ. ದೇಶಾಂತರದ ಆಜೀವಿಕೆ ಮಾಡುವಂಥ ಜೀವಗಳ ಅಪಹಾಸ್ಯ ಮಾಡಿದ್ದಾನೆ. ಸ್ವಯಂ ಮಾನದ ವಶನಾಗಿ, ಒಂದು ಸ್ಥಾನದಲ್ಲಿದ್ದುಕೊಂಡು ಧನದ ಉಪಾರ್ಜನೆ ಮಾಡುವಂಥ ಅನ್ಯರನ್ನು ಮಾತ್ಸರ್ಯ ಭಾವದಿಂದ ರೇಗಿಸಿದ್ದಾನೆ - ಇತ್ಯಾದಿ ಅಶುಭ ಭಾವ ಸಹಿತ ಜೀವನು ಭವಾಂತರದಲ್ಲಿ ಮನುಷ್ಯನಾದ ಮೇಲೆ, ದೇಶಾಂತರಭ್ರಮಣ ಮಾಡಿ ಆಜೀವಿಕೆ ಮಾಡುವಂಥವನಾಗುತ್ತಾನೆ.

**ಸಂದೇಹ-೯೧ :-** ಮಹಾಪ್ರಭು ! ಈ ಜೀವನು ಒಂದು ಸ್ಥಾನದಲ್ಲಿ ಕುಳಿತುಕೊಂಡು ಕೂಡ ಆಜೀವಿಕೆಯ ಸಲುವಾಗಿ ವಿಶಾಲ ಧನದ ಉಪಾರ್ಜನೆಯನ್ನು ಯಾವ ಪುಣ್ಯದಿಂದ ಮಾಡುತ್ತಾನೆ ?

**ಸಮಾಧಾನ :-** ಯಾವ ಜೀವನು ಪೂರ್ವ ಭವದಲ್ಲಿ ಅನೇಕ ಧರ್ಮಾತ್ಮಾ ಜೀವರುಗಳ ಸ್ಥಿರತೆಯ ಸಲುವಾಗಿ ಅವರಿಗೆ ಭೋಜನ, ಪಾನ, ಧನ, ದಾನಾದಿಗಳನ್ನು ಕೊಟ್ಟು ನಿರಾಕುಲತೆಯಪೂರ್ವಕ ಧರ್ಮ ಸೇವನೆ ಮಾಡಿಸಿದ್ದಾನೆ. ಅನೇಕ ಪಶು ಹಾಗೂ ದೀನ ಅಸಮರ್ಥ ಮನುಷ್ಯರನ್ನು ನೋಡಿ, ದುಃಖಿಯಾಗಿರುವುದನ್ನು ತಿಳಿದು,

ಅವರ ಕುರಿತಾಗಿ ಅನ್ನ-ಆಹಾರ ನೀರಿನ ವ್ಯವಸ್ಥೆ ಮಾಡಿ ಅವರಿಗೆ ಅನುಕೂಲ ಒದಗಿಸಿದ್ದಾನೆ. ನಿರ್ಧನ ಧರ್ಮಾತ್ಮಾ ಜೀವರುಗಳು ನಿರಾಕುಲತೆಯೊಂದಿಗೆ ಧರ್ಮಸೇವನೆ ಮಾಡುತ್ತಿರುವುದನ್ನು ಕಂಡು-ಸಮತೆಯ ಭಾವದಿಂದಿರುವುದನ್ನು ಕಂಡು ಅವರ ಪ್ರಶಂಸೆ ಮಾಡಿದ್ದಾನೆ. ಅನ್ಯರು ಸುಖದಿಂದ ಧನ ಸಂಪಾದನೆ ಮಾಡುತ್ತಿರುವುದನ್ನು ಕಂಡು ಪ್ರಸನ್ನನಾಗಿದ್ದಾನೆ - ಇತ್ಯಾದಿ ಶುಭಭಾವಗಳಿಂದ ಜೀವನು ಒಂದು ಸ್ಥಾನದಲ್ಲಿಯೇ ಇದ್ದು ಧನದ ಉಪಾರ್ಜನೆ ಮಾಡಿ ಸುಖಿಯಾಗುತ್ತಾನೆ.

**ಸಂದೇಹ-೯೨ :-** ಓ ಗುರುವರ್ಯರೇ ! ಈ ಜೀವನು ಯಾವ ಪಾಪದಿಂದ ಛಲ-ಕಪಟಪೂರ್ವಕ ಆಜೀವಿಕೆಯನ್ನು ಉತ್ಪನ್ನ ಮಾಡುವಂಥವನಾಗುತ್ತಾನೆ ?

**ಸಮಾಧಾನ :-** ಯಾವ ಜೀವನು ಪೂರ್ವ ಭವದಲ್ಲಿ ದಾನದಲ್ಲಿ ಕಪಟತೆ ಮಾಡಿದ್ದಾನೆ, ದೀನ ಜೀವಗಳಿಗೆ ಕಪಟಪೂರ್ವಕ ದಾನ ಕೊಟ್ಟಿದ್ದಾನೆ. ಮುನಿ ಮೊದಲಾಗಿ ಗುರುಜನರಿಗೆ ಭಕ್ತಿಭಾವರಹಿತ ದಾನ ಕೊಟ್ಟಿದ್ದಾನೆ. ಕ್ಷುಧೆಯಿಂದ ಪೀಡಿತರಿರುವಂಥವರಿಗೆ ದಯಾರಹಿತ ದಾನ ಮಾಡಿದ್ದಾನೆ. ಮಾಯಾಚಾರದಿಂದ ಹೊಟ್ಟೆ ತುಂಬಿಕೊಳ್ಳುವಂಥ ಕಳ್ಳ, ಚಾಂಡಾಲ, ಠಕ್ಕರ ಕಲೆ, ಜಾಣ್ಮೆಯನ್ನು ಕಂಡು ಅವರ ಜ್ಞಾನದ ಪ್ರಶಂಸೆ ಮಾಡಿದ್ದಾನೆ. ಅನ್ಯರು ಧನವನ್ನು ತನ್ನ ಹತ್ತಿರ ಇಟ್ಟಿರುವುದನ್ನು ತಿಳಿಯುತ್ತಿದ್ದರೂ ನಿರಾಕರಿಸಿದ್ದಾನೆ. ಅನ್ಯರ ಒಳ್ಳೆಯ ವ್ಯಾಪಾರಕ್ಕೆ ದೋಷ ತಗಲಿಸಿದ್ದಾನೆ-ಇತ್ಯಾದಿ ಪಾಪ ಭಾವಗಳಿಂದ ಜೀವನು ಕಪಟಪೂರ್ವಕ ಆಜೀವಿಕೆ ಮಾಡುವಂಥವನಾಗುತ್ತಾನೆ.

**ಸಂದೇಹ-೯೩ :-** ಓ ದಯಾನಿಧಿಯೇ ! ಯಾವ ಪುಣ್ಯದಿಂದ ಜೀವನು ಸರಳ ಭಾವಸಹಿತ ಸತ್ಯವಾದಿಯಾಗಿದ್ದು ಆಜೀವಿಕೆಯನ್ನು ನಡೆಸುತ್ತಾನೆ ?

**ಸಮಾಧಾನ :-** ಯಾವ ಜೀವನು ಪೂರ್ವ ಭವದಲ್ಲಿ ಸರಳಭಾವದಿಂದ ಧರ್ಮಾನುರಾಗವಶನಾಗಿ ಧರ್ಮಾತ್ಮಾ ಜೀವರುಗಳಿಗೆ ವಿನಯಪೂರ್ವಕ ಆಹಾರ-ಜಲಾದಿಗಳನ್ನಿತ್ತು ಸಾತಾ ಉಂಟು ಮಾಡಿದ್ದಾನೆ. ಕಪಟರಹಿತ ದಯಾಸಹಿತ ಆಹಾರ ಜಲಗಳನ್ನಿಟ್ಟು ದೀನ ಜೀವಗಳ ರಕ್ಷಣೆ ಮಾಡಿದ್ದಾನೆ. ನಿರ್ದೋಷ ಆಜೀವಿಕೆ ಉತ್ಪನ್ನ ಮಾಡುವಂಥವರನ್ನು ಕಂಡು ಅವರ ಪ್ರಶಂಸೆ ಮಾಡಿದ್ದಾನೆ. ಪೂರ್ವ ಭವದಲ್ಲಿ ಸತ್ಯವಚನ ಹಾಗೂ ಸರಳ ಭಾವಸಹಿತ ಆಜೀವಿಕೆ ದೊರಕದಿದ್ದಾಗ ಅನೇಕ ಕ್ಷುಧಾದಿ ಸಂಕಟಗಳನ್ನು ಸಹಿಸಿದರೂ ಕೂಡ ಕಪಟಪೂರ್ವಕ ಉದರ ಪೋಷಣೆ ಮಾಡಿಲ್ಲ-ಇತ್ಯಾದಿ ಶುಭಭಾವಗಳಿಂದ ನ್ಯಾಯಪೂರ್ವಕ ಸರಳತೆಯಿಂದ ಆಜೀವಿಕೆಯು ಉತ್ಪನ್ನವಾಗುತ್ತದೆ.

**ಸಂದೇಹ-೯೪ :-** ಈ ಜೀವನು ಯಾವ ಪಾಪದ ಫಲದಲ್ಲಿ ಮನುಷ್ಯ ಅಥವಾ ಪಶುವಾಗಿ ಮಾರಲ್ಪಡುತ್ತ ತಿರುಗುತ್ತಾನೆ ?

**ಸಮಾಧಾನ :-** ಪೂರ್ವ ಭವದಲ್ಲಿ ಯಾವ ಜೀವನು ಬಲದಿಂದ ಮೋಸದಿಂದ ಅನ್ಯರ ಪುತ್ರ-ಪುತ್ರಿಯರ ಮಾರಾಟ ಮಾಡಿದ್ದಾನೆ. ಅನ್ಯರ ಪಶುಗಳನ್ನು ಛಲ-ಬಲದಿಂದ ಹರಣ ಮಾಡಿ ಮನೆ-ಮನೆಗೆ ಮಾರಿದ್ದಾನೆ. ಯಾವನೋ ಪ್ರಬಲ ಶತ್ರುವಿನ ಮೂಲಕ ಅನ್ಯಾಯ ಭಾವದಿಂದ ಅನ್ಯರ ಪುತ್ರಾದಿ ಮನುಷ್ಯ ಹಾಗೂ ಆನೆ, ಕುದುರೆ, ಎಮ್ಮೆ, ಎತ್ತು ಮೊದಲಾದ ಜೀವಗಳನ್ನು ಕಳವು ಮಾಡಿ, ಕಟ್ಟಿತಂದು ಮನೆ-ಮನೆಗೆ ಮಾರುತ್ತಿರುವುದನ್ನು ಕಂಡು ಸುಖಿಯಾಗಿದ್ದಾನೆ. ಮಧ್ಯದಲ್ಲಿ ದಲಾಲನಾಗಿ ಅನ್ಯರ ಮನುಷ್ಯ-ಪಶುಗಳ ವಿಕ್ರಯ ಮಾಡಿಸಿದ್ದಾನೆ-ಇತ್ಯಾದಿ ಭಾವಗಳಿಂದ ಸ್ವಯಂ ಮಾರಲ್ಪಡುತ್ತ ಮನೆ-ಮನೆ ಅಲೆಯುತ್ತಾನೆ.

**ಸಂದೇಹ-೯೫ :-** ಗುರುವರ್ಯರೇ ! ಯಾವ ಕರ್ಮದ ಉದಯದಿಂದ ಒಟ್ಟಿಗೆ ಅನೇಕ ಜೀವಗಳ ಸಮೂಹವು ಮರಣಕ್ಕೆ ಪ್ರಾಪ್ತವಾಗುತ್ತದೆ ?

**ಸಮಾಧಾನ :-** ಯಾವ ಅನೇಕ ಜೀವಗಳು ಪೂರ್ವ ಭವದಲ್ಲಿ ಒಟ್ಟಿಗೆ ಕೂಡಿಕೊಂಡು ಪಾಪದ ಉಪಾರ್ಜನೆ

ಮಾಡಿದ್ದಾರೆ ಎಂದರೆ ಯಾರೋ ಮನುಷ್ಯ ಅಥವಾ ತಿರ್ಯಂಚವನ್ನು ಹೊಡೆಯುತ್ತಿರುವುದನ್ನು ಕುತೂಹಲ ವಶದಿಂದ ನೋಡಿ ಸುಖಿಯಾಗಿ ಅನೇಕ ಜೀವಗಳು ಪಾಪಭಾರದ ಉಪಾರ್ಜನೆ ಮಾಡಿದ್ದಾರೆ. ಯಾರೋ ನರ-ನಾರಿಯರು ಅಗ್ನಿಯಲ್ಲಿ ಸುಟ್ಟು ಹೋಗುತ್ತಿರುವುದನ್ನು ಅನೇಕ ಜೀವಗಳು ನೋಡಿ ಸಂತೋಷ ಪಡುತ್ತ ಅನುಮೋದಿಸಿದ್ದಾರೆ. ಯುದ್ಧದಲ್ಲಿ ಅನೇಕ ಜೀವಗಳ ಮರಣದ ಸಮಾಚಾರವನ್ನು ಆಲಿಸಿ ಅಥವಾ ಪ್ರತ್ಯಕ್ಷ ನೋಡಿ ಅನೇಕ ಜೀವಗಳು ಸಂತುಷ್ಟರಾಗಿದ್ದಾರೆ. ಅನೇಕ ಜೀವರುಗಳು ಸೇರಿ ವೀತರಾಗೀ ದೇವ-ಗುರು-ಧರ್ಮದ ನಿಂದೆ ಮಾಡಿದ್ದಾರೆ, ಅಪಹಾಸ್ಯ ಮಾಡಿದ್ದಾರೆ-ಇತ್ಯಾದಿ ಪಾಪಭಾವಗಳಿಂದ ಅನೇಕ ಜೀವರುಗಳು ಸಮೂಹರೂಪದಲ್ಲಿ ಮರಣಕ್ಕೆ ಪ್ರಾಪ್ತರಾಗುತ್ತಾರೆ.

**ಸಂದೇಹ-೯೬ :-** ಓ ಪ್ರಭು ! ಜೀವರುಗಳಿಗೆ ಯಾವ ಪುಣ್ಯದಿಂದ ಸಮೂಹರೂಪದಲ್ಲಿ ಸುಖದ ಪ್ರಾಪ್ತಿಯಾಗುತ್ತದೆ ?

**ಸಮಾಧಾನ :-** ಅನೇಕ ದೇವಗಳೊಂದಿಗೆ ಇಂದ್ರ-ಶಚಿಯರ ಮೂಲಕ ತೀರ್ಥಂಕರರ ಗರ್ಭೋತ್ಸವ, ಜನ್ಮೋತ್ಸವ, ತಪೋತ್ಸವ, ಜ್ಞಾನೋತ್ಸವ, ನಿರ್ವಾಣೋತ್ಸವ-ಇವು ಐದು ಕಲ್ಯಾಣಕಗಳ ವಿಶಾಲ ಉತ್ಸವ ಮಾಡುತ್ತಿರುವುದನ್ನು ಕಂಡು ಆಲಿಸಿ ಯಾವ ಜೀವರುಗಳು ಏಕತ್ರಿತರಾಗಿ ಅನುಮೋದಿಸಿದ್ದಾರೆ. ಅನೇಕ ದೇವಗಳನ್ನು ಕರೆದುಕೊಂಡು ಇಂದ್ರಾಣಿ ಸಹಿತ ಇಂದ್ರನು ನಂದೀಶ್ವರ ದ್ವೀಪದಲ್ಲಿರುವ ಮಂದಿರಗಳಿಗೆ ಹೋಗುತ್ತಿರುವುದನ್ನು ಕಂಡು ಅಥವಾ ಗುರು ಮುಖದಿಂದ ಆಲಿಸಿ ಪರಮ ಸುಖಕ್ಕೆ ಪ್ರಾಪ್ತರಾದ ಅನೇಕ ಜೀವರುಗಳ ಸಮೂಹವು ಅನುಮೋದನೆ ಮಾಡಿ ಪುಣ್ಯ ಕಟ್ಟಿಕೊಂಡಿದೆ. ಸಿದ್ಧಕ್ಷೇತ್ರದ ಯಾತ್ರೆಗೆ ಹೊರಟಿರುವ ವಿಶಾಲ ಸಂಘವನ್ನು ನೋಡಿ, ಜಯ-ಜಯಕಾರದ ಉತ್ಸವ ಕಂಡು ಅನೇಕ ಜೀವರುಗಳು ಅನುಮೋದನೆ ಮಾಡಿ ಪುಣ್ಯ ಬಂಧ ಮಾಡಿಕೊಂಡಿದ್ದಾರೆ. ಚತುರ್ವಿಧ ಸಂಘದ ವೀತರಾಗತೆಯನ್ನು ನೋಡಿ ಅನೇಕ ಜೀವರುಗಳು ಸುಖ ಪಡೆದಿದ್ದಾರೆ. ಸಮವಸರಣದ ಮಹಿಮೆ ನೋಡಿ, ವಿಶಾಲ ಪೂಜೆ, ವಿಧಾನ, ಪ್ರತಿಷ್ಠೆಯ ಉತ್ಸವ ನೋಡಿ ಹಾಗೂ ಶಾಸ್ತ್ರಗಳಲ್ಲಿ ಆಲಿಸಿ ಅನೇಕ ಜೀವರುಗಳಿಗೆ ಅನುಮೋದನೆಯ ಭಾವವು ಉತ್ಪನ್ನವಾಗಿದೆ-ಇತ್ಯಾದಿ ಶುಭಕಾರ್ಯಗಳ ಸಾಮೂಹಿಕ ಅನುಮೋದನೆಯ ಫಲದಲ್ಲಿ ಸಾಮೂಹಿಕ ಪುಣ್ಯಬಂಧವಾಗಿರುವುದರಿಂದ ಸಾಮೂಹಿಕ ಸುಖವಾಗುತ್ತದೆ.

**ಸಂದೇಹ-೯೭ :-** ಓ ಪ್ರಭು ! ಯಾವ ಪುಣ್ಯದ ಉದಯದಿಂದ ಅನೇಕ ಜೀವರುಗಳು ಒಟ್ಟಿಗೆ ಜತೆಯಲ್ಲಿ ತಪಧಾರಣ ಮಾಡಿ, ಸ್ವರ್ಗ-ಮೋಕ್ಷಗಳಿಗೆ ತಲುಪುತ್ತಾರೆ ?

**ಸಮಾಧಾನ :-** ಪೂರ್ವ ಭವದಲ್ಲಿ ಯಾವ ಜೀವರುಗಳು ತೀರ್ಥಂಕರರನ್ನು ದೇವೋಪುನೀತ ರಾಜ್ಯ-ಸಂಪದದ ತ್ಯಾಗ ಮಾಡಿ ತಪದ ಅಂಗೀಕಾರ ಮಾಡಿರುವುದನ್ನು ನೋಡಿದ್ದಾರೆ. ಷಟ್ಖಂಡ ವಿಭೂತಿಯನ್ನು ತೃಣ ಸಮಾನ ತಿಳಿದು ಬಿಟ್ಟುಕೊಟ್ಟು ದೀಕ್ಷೆ ತಗೆದುಕೊಳ್ಳುವಂಥ ಚಕ್ರವರ್ತಿಯ ಆ ಉತ್ಸವವನ್ನು ನೋಡಿ, ಬಲಭದ್ರ-ಕಾಮದೇವ-ಮಹಾಮಂಡಲೇಶ್ವರಾದಿ ಮಹಾರಾಜರು ದೀಕ್ಷೆ ಕೈಕೊಳ್ಳುತ್ತಿರುವುದನ್ನು ನೋಡಿ ಪ್ರಸನ್ನತೆಯಿಂದ ಅನುಮೋದಿಸಿದ್ದಾರೆ. ಒಬ್ಬೊಬ್ಬ ದೊರೆಯ ಸಂಗತಿಯಿಂದ ಅನೇಕ ರಾಜರು ತಮ್ಮ ರಾಣಿಯರೊಂದಿಗೆ ರಾಜ್ಯ ಸಂಪದ ತೊರೆದು ದೀಕ್ಷೆ ಧಾರಣ ಮಾಡುತ್ತಾರೆ- ಈ ಪ್ರಕಾರ ಸಾವಿರಾರು ಜೀವರುಗಳ ದೀಕ್ಷೆ ಕಂಡು, ಶಾಸ್ತ್ರಗಳಲ್ಲಿ ಆಲಿಸಿ, ಅನೇಕ ಭವ್ಯ ಜೀವರುಗಳು ಒಟ್ಟಿಗೆ ಜತೆಯಲ್ಲಿ ತಪದ ಅಭಿಲಾಷೆ ಸಹಿತ ಅನುಮೋದನೆ ಮಾಡಿ ಸಮುದಾಯರೂಪದಿಂದ ಪುಣ್ಯದ ಬಂಧ ಮಾಡಿಕೊಂಡು ವೈರಾಗ್ಯ ಭಾವ ಮಾಡಿದ್ದಾರೆ - ಇತ್ಯಾದಿ ರೂಪದಲ್ಲಿ ಸಾಮುದಾಯಿಕ ಪುಣ್ಯದಿಂದ ಸಾಮುದಾಯಿಕ ತಪದ ಅಂಗೀಕಾರ ಮಾಡಿ ಸ್ವರ್ಗ-ಮೋಕ್ಷಗಳಿಗೆ ಪ್ರಾಪ್ತರಾಗುತ್ತಾರೆ.

**ಸಂದೇಹ-೯೮ :-** ಸ್ವಾಮೀ! ಅನೇಕ ಜೀವಗಳಿಗೆ ಯಾವ ಕರ್ಮದಿಂದ ಒಟ್ಟಿಗೆ ಸಾಮೂಹಿಕ ರೋಗವಾಗುತ್ತದೆ?

**ಸಮಾಧಾನ ಃ-** ಪೂರ್ವಭವದಲ್ಲಿ, ತಮ್ಮ ಶರೀರದಿಂದ ಕೂಡ ಪ್ರಯೋಜನವನ್ನಿಟ್ಟುಕೊಳ್ಳದಂಥ ವೀತರಾಗಿ ಯತೀಶ್ವರರ ಮಲಿನ ಶರೀರವನ್ನು ಕಂಡು, ತಪಸ್ಸಿನಿಂದ ಕ್ಷೀಣವಾಗಿರುವುದನ್ನು ಕಂಡು, ಮುನೀಶ್ವರರ ಶರೀರದಲ್ಲಿನ ದೀರ್ಘ ರೋಗವನ್ನು ಕಂಡು ಯಾವ ಅನೇಕ ಜೀವಗಳು ಒಟ್ಟಿಗೇ ಗ್ಲಾನಿ ಮಾಡಿದ್ದಾರೆ; ನಿಂದೆ ಮಾಡಿ, ಅನಾದರ ಮಾಡಿದ್ದಾರೆ-ಅದರಿಂದ ಆ ಅನೇಕ ಜೀವರುಗಳಿಗೆ ಒಟ್ಟಿಗೆ ಜತೆಯಲ್ಲಿಯೇ ರೋಗವಾಗುತ್ತದೆ. ಯಾರೋ ಆರ್ಯಿಕೆಯ ದೇಹದ ರೋಗವನ್ನು ನೋಡಿ; ಧರ್ಮಾತ್ಮಾ ಶ್ರಾವಕ, ಶ್ರಾವಿಕೆ, ಅವಿರತ ಸಮ್ಯಗ್ದೃಷ್ಟಿಯ ಶರೀರವು ರೋಗದಿಂದ ಕ್ಷೀಣ ಮತ್ತು ಅಶುಚಿಯಾಗಿರುವುದನ್ನು ಕಂಡು ಅನೇಕ ಜೀವರುಗಳು ಒಟ್ಟಿಗೆ ಜತೆಯಲ್ಲಿ ಗ್ಲಾನಿ ಮಾಡಿದ್ದಾರೆ-ಇತ್ಯಾದಿ ಅಶುಭಭಾವಗಳಿಂದ ಅನೇಕ ಜೀವಗಳಿಗೆ ಒಟ್ಟಿಗೆ ಸಾಮುದಾಯಿಕ ರೋಗವಾಗುತ್ತದೆ.

**ಸಂದೇಹ-೯೯ ಃ-** ಗುರುಗಳೇ ! ಯಾವ ಕರ್ಮದ ಫಲದಲ್ಲಿ ಈ ಜೀವನಿಗೆ ಪರಸ್ತ್ರೀ ಹಾಗೂ ಪರಪುರುಷನನ್ನು ಕಂಡು, ಕಾಮವಿಕಾರವಾಗಿ, ಮೋಹವು ಉತ್ಪನ್ನವಾಗುತ್ತದೆ ?

**ಸಮಾಧಾನ ಃ-** ಯಾವ ಜೀವನು ಪೂರ್ವ ಭವದಲ್ಲಿ ಸ್ತ್ರೀಯಾಗಿದ್ದಳು, ಪೂರ್ವ ಭವದಲ್ಲಿ ಅವಳ ಜತೆ ಪಾರಸ್ಪಾರಿಕ ವ್ಯಭಿಚಾರದ ಸಂಬಂಧವಾಗಿದೆ. ಪೂರ್ವ ಭವದಲ್ಲಿ ಹಾಸ್ಯ, ಆಟ, ನೃತ್ಯ, ಗಾನದಲ್ಲಿ ಆಸಕ್ತ ಸಂಗತಿಯುಳ್ಳ ಜೀವನಿದ್ದನು - ಇತ್ಯಾದಿ ಪೂರ್ವಭವದ ವಿಕಾರ ಸಂಬಂಧದಿಂದ ಭವಾಂತರದಲ್ಲಿ ಅವನನ್ನು ನೋಡಿ ಕಾಮವಿಕಾರವಾಗುತ್ತದೆ.

**ಸಂದೇಹ-೧೦೦ ಃ-** ಪ್ರಭು ! ಅನ್ಯ ಜೀವವನ್ನು ನೋಡಿ, ಕಾರಣವಿಲ್ಲದೆ ದ್ವೇಷ ಭಾವವು ಯಾವ ಕಾರಣದಿಂದ ಆಗುತ್ತದೆ ?

**ಸಮಾಧಾನ ಃ-** ಯಾರನ್ನು ನೋಡಿ ದ್ವೇಷ ಭಾವವಾಗುತ್ತದೆ, ಅವನು ಪೂರ್ವಭವದ ವೈರಿಯಿರುತ್ತಾನೆ. ಸ್ವಯಂ ಇವನು ಅವನನ್ನು ಪೂರ್ವ ಭವದಲ್ಲಿ ದುಃಖಿ ಮಾಡಿದ್ದನು. ಅವನು ಯಾರದೋ ಜೊತೆಗೆ ತಮ್ಮ ಯುದ್ಧ ಮಾಡಿಸಿ ಹರ್ಷ ಮನ್ನಿಸಿದ್ದಾನೆ. ಇವನು ಅವನನ್ನು ಹೊಡೆದಾಡಿಸಿ ಸುಖ ಮನ್ನಿಸಿದ್ದಾನೆ-ಇತ್ಯಾದಿ ಪ್ರಕಾರದಿಂದ ಪೂರ್ವ ಭವದಲ್ಲಿ ಯಾವನ ಕುರಿತಾಗಿ ದ್ವೇಷವಿತ್ತು, ಅವನನ್ನು ನೋಡಿ ಭವಾಂತರದಲ್ಲಿ ದ್ವೇಷಭಾವವಾಗುತ್ತದೆ.

**ಸಂದೇಹ-೧೦೧ ಃ-** ಓ ಮಹಾಪ್ರಭು ! ದೇವ, ಮನುಷ್ಯ, ಪಶುರೂಪ ಅನ್ಯ ಜೀವವನ್ನು ನೋಡಿ ಯಾವ ಸಂಬಂಧದಿಂದ ಹರ್ಷವಾಗುತ್ತದೆ ?

**ಸಮಾಧಾನ ಃ-** ಪೂರ್ವಭವದ ಪುತ್ರನ ಜೀವ, ಸಹೋದರನ ಜೀವ, ಮಾತೆಯ ಜೀವ, ಸಹೋದರಿಯ ಜೀವ, ತಂದೆಯ ಜೀವ ಇತ್ಯಾದಿ ಪೂರ್ವಭವದ ಯಾವುದೋ ಕುಟುಂಬೀ ಜೀವದ, ಪೂರ್ವ ಭವದ ಯಾವನೋ ಮಿತ್ರನ, ಪೂರ್ವಭವದಲ್ಲಿ ತನಗೆ ಉಪಕಾರ ಮಾಡಿರುವಂಥವನ - ಇತ್ಯಾದಿ ಪೂರ್ವಭವದ ಸಂಬಂಧೀ ಜೀವದ ಆಕೃತಿಯನ್ನು ನೋಡಿ ಮೋಹವು ಉತ್ಪನ್ನವಾಗುತ್ತದೆ, ಹರ್ಷವಾಗುತ್ತದೆ.

**ಸಂದೇಹ-೧೦೨ ಃ-** ಓ ಗುರುದೇವಾ ! ಯಾವ ಸಂಬಂಧದಿಂದ ಯಾರೋ ಬಂದು ಯಾವ ಪ್ರಯೋಜನವಿಲ್ಲದೆ ದುಃಖದಲ್ಲಿ ನಮಗೆ ಸಹಾಯ ಮಾಡುತ್ತಾರೆ ?

**ಸಮಾಧಾನ ಃ-** ಪೂರ್ವಭವದಲ್ಲಿ ತಾನು ಅವನ ಕುರಿತಾಗಿ ಯಾವುದೋ ಉಪಕಾರ ಮಾಡಿದ್ದಾನೆ. ಹಸಿವೆಯಿಂದ ಬಳಲುತ್ತಿರುವವನಿಗೆ ಆಹಾರ ನೀಡಿದ್ದಾನೆ; ಅದರಿಂದ ಅವನು ಮಹಾಸಂಕಟದಲ್ಲಿಯೂ ಬಂದು ಭೋಜನ ಸಹಾಯ ಮಾಡುತ್ತಾನೆ. ಯಾರು ಬಾಯಾರಿಕೆಯಿಂದ ಬಳಲಿದವನಿಗೆ ಜಲಪಾನ ಮಾಡಿಸಿ ಸಾತಾ ಉಂಟು ಮಾಡಿದ್ದಾನೆ. ಅವನು ಈತನಿಗೆ ಜಲದ ಅಭಾವವಿರುವಂಥ ವಿಶಾಲ ಪರ್ವತ, ವನ, ಉದ್ಯಾನವನದಲ್ಲಿ, ಯುದ್ಧದಲ್ಲಿ ತೃಷೆಯ ಸಂಕಟದಿಂದ ಪ್ರಾಣ ಹೋಗುವ ಸ್ಥಿತಿಯಂಥ ದುಃಖಗಳಲ್ಲಿ ನೀರು ಕುಡಿಸಿ ಸುಖಿ ಮಾಡುತ್ತಾನೆ. ಯಾವನು

ನಿರ್ವಸ್ತ್ರನಿಗೆ ವಸ್ತ್ರವಿತ್ತು ಅನುಕೂಲ ಮಾಡಿದ್ದಾನೆ. ಅವನು ಆತನಿಗೆ ಭವಾಂತರದಲ್ಲಿ ಅನೇಕ ವಸ್ತ್ರಗಳನ್ನು ತಂದು ಕೊಡುತ್ತಾನೆ. ಒಂದುವೇಳೆ ತಾನು ಯಾರಿಗಾದರೂ ಅಭಯದಾನ ನೀಡಿ ದುಃಖದಿಂದ, ಮರಣದಿಂದ ರಕ್ಷಿಸಿದ್ದರೆ ಅವನು ಆನೆ, ಸರ್ಪಾದಿ ದುಷ್ಟ ಜೀವಗಳಿಂದ ಪ್ರಾಣ ಹೋಗುವ ಪ್ರಸಂಗದಲ್ಲಿ ಬಂದು ಸಹಾಯ ಮಾಡುತ್ತಾನೆ, ಮರಣದಿಂದ ಉಳಿಸುತ್ತಾನೆ. ಮಹಾಸಂಗ್ರಾಮದಲ್ಲಿ ಬಂದು ಸಹಾಯ ಮಾಡುತ್ತಾನೆ. ಇತ್ಯಾದಿ ರೂಪದಿಂದ ಯಾವನು ಯಾವನ ಜತೆ ಎಂಥ ಉಪಕಾರ ಮಾಡಿದ್ದಾನೆ, ಅದೇ ರೂಪದಿಂದ ಅವನೂ ಬಂದು ಸಹಾಯ ಮಾಡುತ್ತಾನೆ. ನವೀನ ರೂಪದಿಂದಲೂ ಉಪಕಾರ ಮಾಡುವ ಅಭಿಲಾಷೆಯು ಇರುತ್ತದೆ.

**ಸಂದೇಹ-೧೦೩ :-** ಓ ಗುರುನಾಥರೇ ! ಯಾವ ಪಾಪದ ಫಲದಲ್ಲಿ ರೋಗದ ನಿಮಿತ್ತವಾಗಿ ಬಹಳಷ್ಟು ಧನವು ಖರ್ಚಾಗಿ ಹೋದ ಮೇಲೆಯೂ ಸುಖವಾಗುವುದಿಲ್ಲ ?

**ಸಮಾಧಾನ :-** ಯಾವನು ಪೂರ್ವ ಭವದಲ್ಲಿ ಅನೇಕ ಮುಗ್ಧ ಜೀವಗಳನ್ನು ವಂಚಿಸಿದ್ದಾನೆ; ರೋಗ ನಷ್ಟ ಮಾಡಿ ಪುಷ್ಟಗೊಳಿಸುವ ಆಸೆ ತೋರಿಸಿ ಅವರ ಧನವನ್ನು ಛಲ-ಬಲದಿಂದ ಸ್ವಯಂ ಗ್ರಹಣ ಮಾಡಿದ್ದಾನೆ, ರೋಗ ನಾಶದ ಲೋಭ ನೀಡಿ ಅವರ ಬಹಳಷ್ಟು ಧನ ವ್ಯರ್ಥ ಮಾಡಿದ್ದಾನೆ; ಅಲ್ಪ ಮೌಲ್ಯದ ಔಷಧ ಕೊಟ್ಟು ಮೋಸದಿಂದ ಬಹಳಷ್ಟು  ಹಣ ತಗೆದುಕೊಂಡಿದ್ದಾನೆ. ಬೇರೆಯವರು ದುಃಖಿ-ರೋಗಿಯಾಗಿರುವುದನ್ನು ಕಂಡು, ಅವರ ಧನವು ವ್ಯರ್ಥವಾಗಿಯೇ ಔಷಧದ ಸಲುವಾಗಿ ವ್ಯಯವಾಗುತ್ತಿರುವುದನ್ನು ಕಂಡು ಸ್ವಯಂ ಪ್ರಸನ್ನನಾಗಿದ್ದಾನೆ, ಅನ್ಯರಿಗೆ ರೋಗ ನಷ್ಟ ಮಾಡುವ ಸಲುವಾಗಿ ಕುದೇವಾದಿಗಳ ಪೂಜೆಯನ್ನು ತಿಳಿಸಿಕೊಟ್ಟು ಅವರ ಧನ ನಷ್ಟ ಮಾಡಿದ್ದಾನೆ, ಯಾವನೋ ರೋಗಿಗೆ ಗೃಹ-ನಕ್ಷತ್ರಗಳ ಭಯ ತೋರಿಸಿ, ಅವರ ಧನವನ್ನು ಗ್ರಹದಾನದಲ್ಲಿ ನಷ್ಟ ಮಾಡಿಸಿದ್ದಾನೆ-ಇತ್ಯಾದಿ ಕುಭಾವಗಳಿಂದ ಭವಾಂತರದಲ್ಲಿ ಮನುಷ್ಯನಾದ ಮೇಲೆ ಅವನ ಧನವು ರೋಗದ ನಿಮಿತ್ತದಿಂದಲೇ ನಷ್ಟವಾಗುತ್ತದೆ.

**ಸಂದೇಹ-೧೦೪ :-** ಓ ತಂದೇ ! ಯಾವ ಪಾಪದ ಫಲದಲ್ಲಿ ಈ ಜೀವದ ಒಳ್ಳೆಯ ಧನವು ಕುವ್ಯಸನಗಳಲ್ಲಿ ಖರ್ಚಾಗುತ್ತದೆ  ?

**ಸಮಾಧಾನ :-** ಯಾವನು ಪೂರ್ವ ಭವದಲ್ಲಿ ಶಿಕ್ಷಣವಿತ್ತು ಅನ್ಯರ ಧನವನ್ನು ಕುವ್ಯಸನಗಳಲ್ಲಿ ತೊಡಗಿಸ ಹಚ್ಚಿದ್ದಾನೆ. ಅನ್ಯರ ಧನವು ಕುವ್ಯಸನಗಳಲ್ಲಿ ನಷ್ಟವಾಗುತ್ತಿರುವುದನ್ನು ಕಂಡು ಸ್ವಯಂ ಪ್ರಸನ್ನನಾಗಿದ್ದಾನೆ. ಜೂಜು ಆಡಿ ಅನ್ಯರ ಧನವನ್ನು ಹರಣ ಮಾಡಿದ್ದಾನೆ. ಅಭಕ್ಷ್ಯ ಭಕ್ಷಣ ಮಾಡಿಸಿ ಇತರರ ಧನ ನಾಶ ಮಾಡಿದ್ದಾನೆ. ಸ್ವಯಂ ಕಳವು ಮಾಡಿ ಅನ್ಯರ ಧನದ ಹರಣ ಮಾಡಿದ್ದಾನೆ, ಮದ್ಯಕುಡಿಸಿ ವಂಚನೆಯಿಂದ ಧನ ಪಡೆದಿದ್ದಾನೆ. ವೇಶ್ಯೆಯ ನೃತ್ಯಗಾಯನ ಮತ್ತು ಪರಸ್ತ್ರೀಯ ಭೋಗಾದಿಗಳಲ್ಲಿ ಅನ್ಯರ ಧನ ನಾಶವಾಗುತ್ತಿರುವುದನ್ನು ನೋಡಿ ಸಂತುಷ್ಟನಾಗಿದ್ದಾನೆ-ಇತ್ಯಾದಿ ಪಾಪಗಳಿಂದ ಭವಾಂತರದಲ್ಲಿ ಅವನ ಧನವು ಕುವ್ಯಸನಗಳಲ್ಲಿ ನಷ್ಟವಾಗುತ್ತದೆ.

**ಸಂದೇಹ-೧೦೫ :-** ಪ್ರಭು ! ಈ ಜೀವನು ಯಾವ ಪಾಪದಿಂದ ಗರ್ಭದಲ್ಲಿಯೇ ಸತ್ತು ಹೋಗುತ್ತಾನೆ?

**ಸಮಾಧಾನ :-** ಪೂರ್ವಭವದಲ್ಲಿ ಯಾವನು ಅನ್ಯ ಜೀವಗಳನ್ನು ಗರ್ಭದಲ್ಲಿಯೇ ಸಾಯಿಸಿದ್ದಾನೆ; ಅನೇಕ ವನವಾಸೀ ಪಶುಗಳನ್ನು ಸ್ವಯಂ ನಿರ್ದಯನಾಗಿ ಗರ್ಭದಲ್ಲಿಯೇ ಸಾಯಿಸಿದ್ದಾನೆ. ದಾದಿಯ ಸೋಗು ಧಾರಣ ಮಾಡಿ ಸ್ವಯಂ ಅನೇಕ ಮಹಿಳೆಯರ ಬಾಲಕರನ್ನು ಗರ್ಭದಲ್ಲಿಯೇ ಸಾಯಿಸಿಬಿಟ್ಟಿದ್ದಾನೆ. ಔಷಧ ಕೊಟ್ಟು ಅಥವಾ ಮಂತ್ರ-ತಂತ್ರಗಳಿಂದ ಗರ್ಭದ ನಿಪಾತ ಮಾಡಿದ್ದಾನೆ. ಬೇರೆಯವರ ಶಿಶು ಗರ್ಭದಲ್ಲಿ ಸತ್ತು ಹೋಗಿರುವುದನ್ನು ಆಲಿಸಿ ಸ್ವಯಂ ಸುಖಿಯಾಗಿದ್ದಾನೆ ಯಾರ ಕುರಿತಾಗಿಯೋ ದ್ವೇಷಭಾವವಿರುವ ಕಾರಣ ಯಾರಿಗೋ ಹೇಳಿ ಅವರ ಮಗುವನ್ನು ಗರ್ಭದಲ್ಲಿಯೇ ಸಾಯಿಸಿಬಿಟ್ಟಿದ್ದಾನೆ-ಇತ್ಯಾದಿ ಪಾಪಗಳಿಂದ ಜೀವನು ಭವಾಂತರದಲ್ಲಿ ಗರ್ಭದೊಳಗೇ ಮರಣಕ್ಕೆ ಪ್ರಾಪ್ತನಾಗುತ್ತಾನೆ.

**ಸಂದೇಹ-೧೦೬ :-** ಓ ಗುರುವರ್ಯರೇ ! ಈ ಜೀವನಿಗೆ ಒಳ್ಳೆಯ ಶಿಕ್ಷಣವು ಕೆಡಕೆನಿಸಲು ಕಾರಣವೇನು?

**ಸಮಾಧಾನ :-** ಯಾರು ಅನ್ಯರಿಗೆ ಅನೇಕ ಅಯೋಗ್ಯ ಶಿಕ್ಷಣ ನೀಡಿ, ಅನ್ಯರ ಕೇಡು ಮಾಡಿ ಸ್ವಯಂ ಸುಖ ಪಡೆದಿದ್ದಾರೆ, ಅಯೋಗ್ಯ ಮಾತು ಕಲಿಸಿಕೊಟ್ಟು ಅನ್ಯರನ್ನು ಕುಮಾರ್ಗದಲ್ಲಿ ತಳ್ಳಿದ್ದಾರೆ. ಮಾತಾ-ಪಿತ ಮೊದಲಾದ ಗುರುಜನರ ಹಿತಕರ ವಚನಗಳು ಯಾರಿಗೆ ಒಳ್ಳೆಯವೆನಿಸುವುದಿಲ್ಲ, ಯಾರು ಗುರುಜನರಿಗೆ ಅವಿನಯ ಪೂರ್ಣ ಎದುರುತ್ತರ ರೂಪ ವಚನಗಳನ್ನಾಡಿದ್ದಾರೆ, ಅನ್ಯರ ಕಠೋರ-ಅವಿನಯರೂಪ ಪ್ರವೃತ್ತಿ ಕಂಡು ಸ್ವಯಂ ಪ್ರಸನ್ನರಾಗಿದ್ದಾರೆ. ಶಿಕ್ಷಣ ಕಲಿಸುವಂಥ ಗುರುಗಳ ಅಪಹಾಸ್ಯ ಮಾಡಿದ್ದಾರೆ, ಸ್ವೇಚ್ಛಾಚಾರೀ ಪಶು ಪರ್ಯಾಯದಿಂದ ಬಂದು ಮನುಷ್ಯರಾಗಿದ್ದಾರೆ. ಪಾಪಾಚಾರೀ, ಅವಿನಯೀ, ಕುಸಂಗತಿಯ ಜೀವಗಳ ವಚನಗಳು ಹಿತವೆನಿಸುತ್ತವೆ-ಇತ್ಯಾದಿ ಪಾಪಭಾವಗಳಿಂದ ಒಳ್ಳೆಯ ಶಿಕ್ಷಣರೂಪದ ವಚನಗಳು ಕೂಡ ಒಳ್ಳೆಯವೆನಿಸುವುದಿಲ್ಲ.

**ಸಂದೇಹ-೧೦೭ :-** ಪ್ರಭು ! ಈ ಜೀವನಿಗೆ ಅವಧಿ, ಮನಃಪರ್ಯಯ ಹಾಗೂ ಕೇವಲಜ್ಞಾನದ ಪ್ರಾಪ್ತಿಯು ಯಾವ ಶುದ್ಧ ಪರಿಣತಿಯಿಂದ ಆಗುತ್ತದೆ ?

**ಸಮಾಧಾನ :-** ಎಲೈ ಭವ್ಯಾತ್ಮನೇ ಆಲಿಸು ! ಯಾವ ಜೀವನು ಪೂರ್ವ ಭವದಲ್ಲಿ ಅವಧಿ, ಮನಃಪರ್ಯಯಜ್ಞಾನಧಾರಕ ತಪಸ್ವೀ ಮುನಿಗಳ ಜ್ಞಾನದ ಮಾಹಾತ್ಮ್ಯ ಕಂಡು ಹರ್ಷಿತನಾಗಿದ್ದಾನೆ, ಆ ವಿಶಾಲ ಜ್ಞಾನಧಾರಕ ತಪಸ್ವಿಗಳ ಸೇವೆ-ಶುಶ್ರೂಷೆ ಮಾಡಿ ಯಾರು ತಮ್ಮ ಭವ ಸಫಲವಾಯಿತೆಂದು ಮನ್ನಿಸಿದ್ದಾರೆ. ಅವಧಿ, ಮನಃಪರ್ಯಾಯ ಮೊದಲಾದ ಜ್ಞಾನದ ಅತಿಶಯವನ್ನು ಕಂಡು ಬಹಳಷ್ಟು ಮಹಿಮೆ ಮಾಡಿದ್ದಾರೆ, ಮತ್ತೆ ಮತ್ತೆ ಸ್ತುತಿ ಮಾಡಿದ್ದಾರೆ. ಆ ತಪಸ್ವೀ ಜ್ಞಾನ ಭಂಡಾರರಾದ ಯತಿಗಳ ವೈಯ್ಯಾವೃತ್ಯ ಮಾಡುವ ಅಭಿಲಾಷೆಯನ್ನಿಟ್ಟುಕೊಂಡಿದ್ದರು. ಮುನಿಪದ ಧಾರಣ ಮಾಡಿ ಅವಧಿ ಮನಃಪರ್ಯಯಜ್ಞಾನ ಉತ್ಪನ್ನ ಮಾಡಿಕೊಳ್ಳುವ ವಾಂಛೆ ಹೊಂದಿದ್ದರು. ಕೇವಲಿಗಳ ವಚನ-ವಾಣಿಯನ್ನಾಲಿಸಿ ಅವುಗಳ ಸತ್ಯತೆಯನ್ನು ತಿಳಿದು ಹರ್ಷಿತರಾಗಿದ್ದಾರೆ. ದೇವ-ಇಂದ್ರಾದಿಕರಿಂದ ವಂದನೀಯವಿರುವ ಕೇವಲಜ್ಞಾನಿಯ ಅತಿಶಯ ತಿಳಿದು ಸ್ವಯಂ ಕೇವಲಿಯ ಗುಣಗಳ ಕುರಿತಾಗಿ ಬಹಳಷ್ಟು ಅನುರಾಗವಾಗಿದೆ. ಕೇವಲಜ್ಞಾನಿಯ ವಚನಾನುಸಾರ ಮೂರು ಲೋಕ, ಮೂರು ಕಾಲ, ಜೀವ-ಅಜೀವಾದಿ ದ್ರವ್ಯ , ಅವುಗಳ ಪ್ರಮಾಣಾದಿಯ ಸ್ವರೂಪವನ್ನು ಪರೋಕ್ಷರೂಪದಿಂದಂತೂ ತಿಳಿದುಕೊಂಡಿದ್ದಾರೆ ಮತ್ತು ಅವುಗಳನ್ನು ಪ್ರತ್ಯಕ್ಷ ತಿಳಿಯುವ ಪರಮ ಅಭಿಲಾಷಿಯಾಗುತ್ತ ವೀತರಾಗ ಭಾವಗಳ ಇಚ್ಛೆ ಸಹಿತ ಪ್ರವೃತ್ತಿ ಮಾಡಿದ್ದಾರೆ-ಇತ್ಯಾದಿ ಶುಭ ಭಾವನೆಗಳಿಂದ ಭಕ್ತಿಯ ಭಾವದೊಂದಿಗೆ ಅವಧಿ, ಮನಃ ಪರ್ಯಾಯ, ಕೇವಲಜ್ಞಾನದ ಮಹಿಮೆ-ಪ್ರಶಂಸೆ ಮಾಡಿ ಆ ಉತ್ತಮ ಜ್ಞಾನದ ಪ್ರಾಪ್ತಿಯ ಸಲುವಾಗಿ ದೀಕ್ಷೆಯ ಉದ್ಯಮಿಯಾಗಿದ್ದಾರೆ - ಇತ್ಯಾದಿ ಶುಭಭಾವನೆಯಿಂದ ಕೂಡಿದ ಜೀವರುಗಳಿಗೆ ಭವಾಂತರದಲ್ಲಿ ಅವಧಿ, ಮನಃಪರ್ಯಯ, ಕೇವಲ - ಇವು ಮೂರು ಉತ್ಕೃಷ್ಟ ಜ್ಞಾನಗಳ ಪ್ರಾಪ್ತಿಯಾಗುತ್ತದೆ.

**ಸಂದೇಹ-೧೦೮ :-** ಓ ಪ್ರಭು ! ಯಾವ ಪುಣ್ಯದ ಫಲದಲ್ಲಿ ಈ ಜೀವದ ಧನವು ಧರ್ಮಕಾರ್ಯಗಳಲ್ಲಿ ವಿನಿಯೋಗವಾಗುತ್ತದೆ ?

**ಸಮಾಧಾನ :-** ಯಾವ ಜೀವನು ಪೂರ್ವ ಭವದಲ್ಲಿ ಬೇರೆಯವರು ಧರ್ಮದಲ್ಲಿ ಧನ ಖರ್ಚು ಮಾಡುತ್ತಿರುವುದನ್ನು ಕಂಡು, ಅನುಮೋದನೆ ಮಾಡಿ, ಹರ್ಷ ಮನ್ನಿಸಿದ್ದಾನೆ. ಸ್ವಯಂ ತಾನು ಕಳವು, ಕಪಟರಹಿತ ನ್ಯಾಯ ಮಾರ್ಗದಿಂದ ಧನ ಸಂಪಾದನೆ ಮಾಡಿದ್ದಾನೆ. ಅನ್ಯರು ತೀರ್ಥಸ್ಥಾನದಲ್ಲಿ ಧನ ತೊಡಗಿಸುತ್ತಿರುವುದನ್ನು ಕಂಡು ಸ್ವಯಂ ವಿಶೇಷ ಅನುಮೋದನೆ ಮಾಡಿದ್ದಾನೆ, ಸ್ವಯಂ ಪೂರ್ವ ಭವದಲ್ಲಿ ಪ್ರಭಾವನೆಯ ಅನೇಕ ಅಂಗಗಳಲ್ಲಿ ದ್ರವ್ಯ ತೊಡಗಿಸಿದ್ದಾನೆ. ಅನೇಕ ದೀನ-ದುಃಖಿಗಳಿಗೆ ದಯಾಭಾವಪೂರ್ವಕ ದಾನಕೊಟ್ಟು ಪೋಷಿಸಿದ್ದಾನೆ - ಇತ್ಯಾದಿ

ಶುಭ ಸ್ಥಾನಗಳಲ್ಲಿ ತನ್ನ ಧನ ತೊಡಗಿಸಿದ್ದಾನೆ. ಇಂಥ ಸ್ಥಾನಗಳಲ್ಲಿ ಧನ ತೊಡಗಿಸುತ್ತಿರುವ ಅನ್ಯರನ್ನು ಕಂಡು ಸುಖದ ಅನುಭವ ಮಾಡಿದ್ದಾನೆ-ಇತ್ಯಾದಿ ಪುಣ್ಯ ಪರಿಣಾಮಗಳಿಂದ ಈ ಜೀವದ ಧನವು ಶುಭಕಾರ್ಯಗಳಲ್ಲಿ ವಿನಿಯೋಗವಾಗುತ್ತದೆ.

**ಸಂದೇಹ-೧೦೯ ಃ-** ಗುರುಗಳೇ ! ಈ ಜೀವನು ಯಾವ ಕರ್ಮದ ಫಲದಲ್ಲಿ ವ್ರತ ತಗೆದುಕೊಂಡು ಭಂಗ ಮಾಡುತ್ತಾನೆ ?

**ಸಮಾಧಾನ ಃ-** ಯಾವನು ಪೂರ್ವ ಭವದಲ್ಲಿ ಅನ್ಯ ಜೀವರುಗಳ ವ್ರತ ಭಂಗ ಮಾಡಿದ್ದಾನೆ. ಅನ್ಯರ ಶುದ್ಧ ವ್ರತಗಳಿಗೆ ದೋಷ ತಗಲಿಸಿದ್ದಾನೆ, ಅನ್ಯ ಅಜ್ಞಾನೀ ಜೀವಗಳು ವ್ರತಸ್ವೀಕರಿಸಿ ಭಂಗ ಮಾಡುತ್ತಿರುವುದನ್ನು ಕಂಡು ಅನುಮೋದನೆ ಮಾಡಿದ್ದಾನೆ. ಯಾವನೋ ದುಷ್ಟಾತ್ಮನ ಮೂಲಕ ಯಾರೋ ಧರ್ಮಾತ್ಮರ ವ್ರತ ಭಂಗ ಮಾಡುವಲ್ಲಿ ಸಹಾಯ ನೀಡಿದ್ದಾನೆ. ಅನ್ಯರ ವ್ರತ ಭಂಗ ಮಾಡಿಸಿದ್ದಾನೆ. ಬಾಲ್ಯಾವಸ್ಥೆಯಲ್ಲಿ ಅನೇಕ ಸ್ಥಾನಗಳಲ್ಲಿ ಅನೇಕ ಬಾರಿ ಕೇವಲ ಕೌತುಕದಿಂದ ಪ್ರತಿಜ್ಞೆ ಸ್ವೀಕರಿಸಿ - ಸ್ವೀಕರಿಸಿ ಭಂಗ ಮಾಡಿದ್ದಾನೆ - ಇತ್ಯಾದಿ ಅಶುಭ ಕರ್ಮಗಳಿಂದ ಭವಾಂತರದಲ್ಲಿ ವ್ರತದ ಪಾಲನೆಯಲ್ಲಿ ಶಿಥಿಲಾಂಗಿಯಾಗುತ್ತಾನೆ.

**ಸಂದೇಹ-೧೧೦ ಃ-** ಪ್ರಭು ! ಈ ಜೀವನು ಪಶು ಪರ್ಯಾಯದಲ್ಲಿ ಉತ್ಪನ್ನನಾಗಿ ಯಾವ ಪಾಪದ ಫಲದಲ್ಲಿ ಕಟುಕನ ಕೈಯಿಂದ ಸಾಯುತ್ತಾನೆ ?

**ಸಮಾಧಾನ ಃ-** ಯಾವನು ಪೂರ್ವ ಭವದಲ್ಲಿ ಕಟುಕನ ವ್ಯಾಪಾರ ಮಾಡಿದ್ದಾನೆ; ಯಾವನು ಪೂರ್ವ ಭವದಲ್ಲಿ ಅನ್ಯ ಜೀವರುಗಳನ್ನು ವಿಶ್ವಾಸದಲ್ಲಿ ತಗೆದುಕೊಂಡು, ಅನೇಕ ಆಹಾರ-ಪಾನೀಯಗಳಿಂದ ಅವರ ಪೋಷಣೆ ಮಾಡಿ, ನಂತರ ಅವರ ಘಾತ ಮಾಡಿದ್ದಾನೆ. ಅನ್ಯ ಜೀವಗಳನ್ನು ಛಲ-ಬಲದಿಂದ ಸಾಯಿಸಿದ್ದಾನೆ, ಅನ್ಯ ಜೀವಗಳನ್ನು ಬೆಲೆ ಕೊಟ್ಟು ಕೊಂಡು ಸಾಯಿಸಿದ್ದಾನೆ. ಅನ್ಯ ಜೀವಗಳ ಮೊಟ್ಟೆಗಳನ್ನು ಖರೀದಿ ಮಾಡಿ ಸಾಯಿಸಿದ್ದಾನೆ. ಬಲವಂತತೆಯಿಂದ ಅಥವಾ ಮೊಟ್ಟೆಗಳನ್ನು ಕದ್ದು ತಂದು ನಾಶ ಮಾಡಿದ್ದಾನೆ ಅಥವಾ ಮಾರಿದ್ದಾನೆ, ಅನ್ಯ ಜೀವಗಳನ್ನು ಸಾಕಿ, ನಂತರ ಲೋಭದ ಸಲುವಾಗಿ ಕಟುಕರಿಗೆ ಮಾರಿದ್ದಾನೆ. ನಿರಪರಾಧಿ ವನ್ಯ ಪ್ರಾಣಿಗಳನ್ನು ತಾನೇ ಕೈಯಾರೆ ಸಾಯಿಸಿದ್ದಾನೆ. ಕಟುಕರ ಮನೆಯ ಆಮಿಷ(ಮಾಂಸ)ವನ್ನು ಖರೀದಿ ಮಾಡಿ ಭಕ್ಷಿಸಿದ್ದಾನೆ. ಕಟುಕರ ಮೂಲಕ ಅನ್ಯ ಜೀವಗಳು ಸಾಯುತ್ತಿರುವುದನ್ನು ಕಂಡು ಸುಖ ಮನ್ನಿಸಿದ್ದಾನೆ. ಅನ್ಯ ಜೀವಗಳ ಮಾಂಸವನ್ನು ಬಹಳಷ್ಟು ತಿಂದಿದ್ದಾನೆ-ಇತ್ಯಾದಿ ಪಾಪಗಳಿಂದ ಜೀವದ ಮರಣವು ಕಟುಕನ ಕೈಯಿಂದ ಆಗುತ್ತದೆ.

**ಸಂದೇಹ-೧೧೧ ಃ-** ಓ ಪ್ರಭು ! ಈ ಜೀವನು ಯಾವ ಪಾಪದಿಂದ ಪಾಪಪರಿಣಾಮಿ ಮತ್ತು ಪಾಪ ಕ್ರಿಯೆಯುಳ್ಳವನಾಗುತ್ತಾನೆ ?

**ಸಮಾಧಾನ ಃ-** ಯಾವನು ಪೂರ್ವಭವದಲ್ಲಿ ಪಾಪೀ, ವ್ಯಭಿಚಾರೀ, ಜೂಜುಗಾರರ ಸಂಗತಿ ಬಹಳಷ್ಟು ಮಾಡಿದ್ದಾನೆ, ಅನ್ಯ ಜೀವಗಳ ಘಾತ ಮಾಡಿದ್ದಾನೆ. ಪಾಪಿಗಳು ಕುಬುದ್ಧಿಯಿಂದ ಪಾಪಕ್ರಿಯೆ ಮಾಡುತ್ತಿರುವುದರ ಅನುಮೋದನೆ ಮಾಡಿದ್ದಾನೆ - ಕುಬುದ್ಧಿಗಳ ಹಿಂಸಾಸಹಿತ ಪಾಪಕ್ರಿಯೆಗಳನ್ನು ಕಂಡು ಅನುಮೋದಿಸಿದ್ದಾನೆ. ಹಿಂಸಾಸಹಿತ ಪಾಖಂಡಿ ಜೀವಗಳಿಂದ ಕಲ್ಪಿತ, ಮಾಂಸ ಭಕ್ಷಿ ದೇವ-ಗುರುಗಳ ಸೇವೆ-ಪೂಜೆ ಮಾಡಿದ್ದಾನೆ. ಧರ್ಮಾತ್ಮಾ ಜೀವರುಗಳ ನಿಂದೆ ಮಾಡಿ, ಅವಿನಯ ಮಾಡಿ ಸುಖ ಮನ್ನಿಸಿದ್ದಾನೆ; ನಿಜವಾದ ದೇವ-ಗುರು-ಧರ್ಮದ ನಿಂದೆ ಮಾಡುತ್ತ ವೈರ-ವಿಪರೀತ ಭಾವವಿಟ್ಟುಕೊಂಡಿದ್ದಾನೆ-ಇತ್ಯಾದಿ ಅಶುಭ ಭಾವಗಳಿಂದ ಪಾಪ ಪರಿಣಾಮಿ, ಪಾಪಕ್ರಿಯೆ ಮಾಡುವಂಥವನಾಗುತ್ತಾನೆ.

**ಸಂದೇಹ-೧೧೨ ಃ-** ಗುರುವರ್ಯರೇ ! ಈ ಜೀವನು ಒಳ್ಳೆಯದಾದ ಉತ್ತಮ ಮನುಷ್ಯ ಪರ್ಯಾಯ ಪಡೆದರೂ ಕೂಡ ಯಾವ ಪಾಪದಿಂದ ಅದನ್ನು ಹಾಳು ಮಾಡುವಂಥವ(ಮದ್ಯಕುಡುಕ)ನಾಗುತ್ತಾನೆ?

**ಸಮಾಧಾನ ಃ-** ಯಾವನು ಪೂರ್ವಭವದಲ್ಲಿ ಅನ್ಯ ಜೀವಗಳನ್ನು ಮಂತ್ರ-ಯಂತ್ರದ ಮೂಲಕ ಮತ್ತೇರುವಂತೆ ಮಾಡಿದ್ದಾನೆ. ಅನೇಕ ಪ್ರಕಾರದ ವನೌಷಧಿಗಳನ್ನು ತಿನ್ನಿಸಿ ಮದವೇರಿಸಿದ್ದಾನೆ, ಪಾಪದ ಉದಯದಿಂದ ಮದವೇರಿದ ಜೀವಗಳನ್ನು ಕಂಡು ಅವರ ಮೇಲೆ ಕಳವು ಮೊದಲಾದ ಸುಳ್ಳು ದೋಷ ತಗಲಿಸಿದ್ದಾನೆ. ಯಾವನೋ ಮದೋನ್ಮತ್ತನ ಸ್ವಚ್ಛಂದ ಪ್ರವರ್ತನೆ ಕಂಡು ಅವನನ್ನು ಸಾಯಿಸಿದ್ದಾನೆ. ಮದ್ಯ ಮೊದಲಾದ ಮಾದಕ ವಸ್ತುಗಳನ್ನು ಸೇವಿಸಿ ಸ್ವಯಂ ಅಜ್ಞಾನಪೂರ್ಣ ಚೇಷ್ಟೆ ಮಾಡಿ ಸುಖ ಮನ್ನಿಸಿದ್ದಾನೆ, ಯಾವನೋ ಮದ್ಯಕುಡುಕನ ಅಜ್ಞಾನಮಯ ಚೇಷ್ಟೆಗಳನ್ನು ಕಂಡು ಆನಂದ ಮನ್ನಿಸಿದ್ದಾನೆ-ಇತ್ಯಾದಿ ಪಾಪಮಯ ಚೇಷ್ಟೆಗಳಿಂದ ಜೀವನು ಭವಾಂತರದಲ್ಲಿ ಮದ್ಯಕುಡುಕನಾಗುತ್ತಾನೆ.

**ಸಂದೇಹ-೧೧೩ ಃ-** ಓ ಪ್ರಭು ! ಈ ಜೀವನು ಯಾವ ಪಾಪದಿಂದ ಕುಶೀಲವಂತನಾಗುತ್ತಾನೆ ?

**ಸಮಾಧಾನ ಃ-** ಯಾವನು ಪೂರ್ವಭವದಲ್ಲಿ ವೇಶ್ಯೆಯ ಸಂಗತಿಯನ್ನು ಬಹಳಷ್ಟು ಮಾಡಿದ್ದಾನೆ, ವೇಶ್ಯೆಯ ನೃತ್ಯಕಾರಿಣಿ, ಕುಶೀಲಸ್ತ್ರೀ, ನಪುಂಸಕ, ಪುರುಷಾಕಾರದ ಸಂಗದಿಂದ ಆಗುವ ವಿವಿಧ ಅಜ್ಞಾನ ಚೇಷ್ಟೆಗಳನ್ನು ನೋಡಿ ಹಾಗೂ ಅವರ ಹಾಗೆ ಸ್ವಯಂ ಕುಚೇಷ್ಟೆಗಳನ್ನು ಮಾಡಿ ಹರ್ಷ ಮನ್ನಿಸಿದ್ದಾನೆ. ಅವರಲ್ಲಿ ಮಾತುಕತೆ ಮಾಡಿ ರಮಿಸಿದ್ದಾನೆ. ಅನ್ಯ ಜೀವರುಗಳು ಕುಶೀಲ ಮಾಡುತ್ತಿರುವುದನ್ನು ಕಂಡು ಅನುಮೋದನೆ ಮಾಡಿದ್ದಾನೆ, ಶ್ವಾನಾದಿ ಪಶು ಪರ್ಯಾಯದಲ್ಲಿ ಕುಶೀಲರೂಪ ಪ್ರವೃತ್ತಿ ಮಾಡಿದ್ದಾನೆ. ಅನ್ಯರ ಮಧ್ಯದಲ್ಲಿ ದೂತನಾಗಿ ಕುಶೀಲದಲ್ಲಿ ಸಹಾಯ ನೀಡಿದ್ದಾನೆ. ಹಗಲಿನಲ್ಲಿ ಕುಶೀಲದ ಸೇವನೆಯ ವೀರ್ಯದಿಂದ ಉತ್ಪನ್ನನಾಗಿದ್ದಾನೆ, ಇತ್ಯಾದಿ ಪಾಪಭಾವಗಳಿಂದ ಜೀವನು ಭವಾಂತರದೊಳಗೆ ಕುಶೀಲವಂತನೇ ಆಗುತ್ತಾನೆ.

**ಸಂದೇಹ-೧೧೪ ಃ-** ಓ ಪ್ರಭು ! ಈ ಜೀವನು ಯಾವ ಪುಣ್ಯದಿಂದ ಶೀಲವಂತನಾಗುತ್ತಾನೆ ?

**ಸಮಾಧಾನ ಃ-** ಯಾವನು ಪೂರ್ವಭವದಲ್ಲಿ ಶೀಲವಂತ ಪುರುಷರ-ಸ್ತ್ರೀಯರುಗಳ ಪ್ರಶಂಸೆ, ಸೇವೆ ಮಾಡಿದ್ದಾನೆ. ಶೀಲವಂತ ಪುರುಷರ ಶೀಲಸಂರಕ್ಷಣೆಯಲ್ಲಿ ಸಹಾಯ ಮಾಡಿದ್ದಾನೆ. ಮೊದಲು ಸಂಯಮೀ ಪುರುಷರ ಸಂಗತಿ ಮಾಡಿದ್ದಾನೆ. ಕುಶೀಲರ ಸಂಗತಿಯ ಕುರಿತಾಗಿ ಮನಸ್ಸು ಉದಾಸವಿತ್ತು-ಇತ್ಯಾದಿ ಶುಭಭಾವಗಳಿಂದ ಜೀವನು ಭವಾಂತರದಲ್ಲಿ ಶೀಲವಂತನಾಗುತ್ತಾನೆ.

**ಸಂದೇಹ-೧೧೫ ಃ-** ಓ ಗುರುವೇ ! ಈ ಜೀವನು ಯಾವ ಪಾಪದಿಂದ ಹುಟ್ಟುತ್ತಿದ್ದಂತೆಯೇ ಸತ್ತು ಹೋಗುತ್ತಾನೆ ?

**ಸಮಾಧಾನ ಃ-** ಯಾವನು ಅನ್ಯರನ್ನು ಹುಟ್ಟುತ್ತಿರುವಂತೆ ಸಾಯಿಸಿದ್ದಾನೆ. ಅಲ್ಪಾಯುವಿನ ಧಾರಕ ಜೀವವು ಹುಟ್ಟುತ್ತಿರುವಂತೆ ಸತ್ತು ಹೋಗಿರುವುದನ್ನು ಕಂಡು ಹರ್ಷಿತನಾಗಿದ್ದಾನೆ. ಯಾವನೋ ಹುಟ್ಟಿ ಬಂದಿರುವುದನ್ನು ತಿಳಿದು ದ್ವೇಷಭಾವವಶನಾಗಿ ತನ್ನ ಕೈಯಿಂದ ಸಾಯಿಸಿದ್ದಾನೆ. ಸಮ್ಮೂರ್ಛನ ಏಕೇಂದ್ರಿಯ ಹಾಗೂ ತ್ರಸ ಜೀವಗಳ ಘಾತದ ಉಪಾಯ ಮಾಡಿ ಅವುಗಳ ಹಿಂಸೆ ಮಾಡಿದ್ದಾನೆ - ಇತ್ಯಾದಿ ಪಾಪ ಭಾವಗಳಿಂದ ಜೀವನು ಜನಿಸುತ್ತಿರುವಂತೆ ಸತ್ತು ಹೋಗುತ್ತಾನೆ.

**ಸಂದೇಹ-೧೧೬ ಃ-** ಓ ಸ್ವಾಮೀ ! ಈ ಜೀವನು ಯಾವ ಪಾಪದ ಫಲದಲ್ಲಿ ಬಂದೀಯಾಗಿ ಪರಾಧೀನತೆಯಿಂದ ಪರಕೃತ ದುಃಖಗಳನ್ನು ಸಹಿಸುತ್ತಾನೆ ?

**ಸಮಾಧಾನ ಃ-** ಯಾವನು ಧನದ ಲೋಭದಿಂದ ನಿರಪರಾಧೀ ಜೀವಗಳನ್ನು ಬಲವಂತತೆಯಿಂದ ಬಂಧಿಸಿ ಬಂದೀಗೃಹದಲ್ಲಿಟ್ಟಿದ್ದಾನೆ; ಪೂರ್ವ ಭವದಲ್ಲಿ ದ್ವಿಪದ, ಚತುಷ್ಪದ, ನಭಚರ, ಜಲಚರ, ಉರಪದ ಇತ್ಯಾದಿ ಪಶುಗಳನ್ನು ಬಲಪೂರ್ವಕ ಪಂಜರ, ಪಾಶ ಮೊದಲಾದ ಬಂಧನದಲ್ಲಿಟ್ಟಿದ್ದಾನೆ; ದ್ವೇಷ ಭಾವದಿಂದ ಚಾಡಿ ಹೇಳಿ ಅನ್ಯರ ಮಾನ ಖಂಡಿಸುವ ಸಲುವಾಗಿ, ಧನ ನಷ್ಟ ಮಾಡುವ ಸಲುವಾಗಿ ಅನ್ಯ ಜೀವಗಳ ಮೇಲೆ ಅಸತ್ಯ ಆರೋಪ

ಮಾಡಿ ಬಂದಿಯನ್ನಾಗಿ ಮಾಡಿದ್ದಾನೆ, ಅನ್ಯರನ್ನು ಬಂದೀಗೃಹದಲ್ಲಿ ಕಂಡು ಅನುಮೋದಿಸುತ್ತ ಪ್ರಸನ್ನನಾಗಿದ್ದಾನೆ- ಇತ್ಯಾದಿ ಪಾಪದಿಂದ ಈ ಜೀವನು ದೊರೆ ಮೊದಲಾದವರಿಂದ ಬಂಧಿಸಿ ಬಂದೀಗೃಹದಲ್ಲಿ ಇರುವಂತಾಗುತ್ತದೆ.

**ಸಂದೇಹ-೧೧೭ :-** ಓ ಗುರುವರ್ಯರೇ ! ಈ ಜೀವನು ಯಾವ ಪಾಪದ ಫಲದಲ್ಲಿ ಆಕಸ್ಮಿಕವಾಗಿ ಶಸ್ತ್ರದಿಂದ, ಪಾಶದಿಂದ, ಗುಂಡು ತಾಗಿ, ಸಿಂಹಾದಿ ದುಷ್ಟ ಪಶುಗಳಿಂದ, ಅಗ್ನಿಯಿಂದ, ನೀರಿನಿಂದ, ವಿಷ ಇತ್ಯಾದಿ ಕಾರಣಗಳಿಂದ ಮರಣ ಹೊಂದುತ್ತಾನೆ ?

**ಸಮಾಧಾನ :-** ಯಾವನು ಪೂರ್ವ ಭವದಲ್ಲಿ ಅನ್ಯರಿಗೆ ದೋಷ ತಗಲಿಸಿ, ವಿಷಕೊಟ್ಟು ಸಾಯಿಸಿದ್ದಾನೆ, ವಿಷದಿಂದ ಸತ್ತು ಹೋಗಿರುವುದನ್ನು ಕಂಡು ಹರ್ಷಿತನಾಗಿದ್ದಾನೆ; ಆ ಜೀವನು ಈ ಪಾಪದಿಂದ ಆಕಸ್ಮಿಕ ಸಾವನ್ನಪ್ಪುತ್ತಾನೆ. ಯಾವನು ಅನ್ಯರನ್ನು ಪಾಶದಿಂದ ಸಾಯಿಸಿದ್ದಾನೆ. ನೇಣು ಹಾಕಿಕೊಂಡು ಸತ್ತಿರುವುದನ್ನು ಕಂಡು - ಕೇಳಿ ಅನುಮೋದಿಸುತ್ತ ಹರ್ಷಿತನಾಗಿದ್ದಾನೆ; ಆ ಜೀವನು ಕಳ್ಳರ ನಿಮಿತ್ತ ಪಡೆದು ಕತ್ತು ಹಿಸುಕುವುದರಿಂದ ಸತ್ತು ಹೋಗುತ್ತಾನೆ. ಯಾವನು ಅನ್ಯ ಜೀವರುಗಳನ್ನು ಬಾಣ, ಗುಂಡು, ಭಲ್ಲೆ, ಕಿರುಗತ್ತಿ , ಖಡ್ಗ ಮೊದಲಾದ ಶಸ್ತ್ರಗಳಿಂದ ಕೊಂದಿದ್ದಾನೆ, ಸಾಯುತ್ತಿರುವುದನ್ನು ಕೇಳಿ ಅನುಮೋದನೆ ಮಾಡಿದ್ದಾನೆ; ಆ ಜೀವನು ಆಕಸ್ಮಿಕವಾಗಿ ಶಸ್ತ್ರಘಾತದಿಂದ ಮರಣ ಹೊಂದುತ್ತಾನೆ. ಯಾವ ಜೀವಗಳು ಪೂರ್ವ ಭವದಲ್ಲಿ ಸಿಂಹಾದಿ ಜೀವಗಳನ್ನು ಶಸ್ತ್ರದಿಂದ ಸಾಯಿಸಿದ್ದಾರೆ, ಅನ್ಯರ ಮೂಲಕ ಸತ್ತು ಹೋಗಿರುವುದನ್ನು ಆಲಿಸಿ ಸುಖಿಯಾಗಿದ್ದಾರೆ; ಆ ಜೀವಗಳು ಸಿಂಹಾದಿ ದುಷ್ಟ ಜೀವಗಳಿಂದ ಅಕಸ್ಮಾತ್ತಾಗಿ ಸಾಯಿಸಲ್ಪಡುತ್ತಾರೆ. ಯಾರು ಅನ್ಯ ಜೀವಗಳನ್ನು ಅಗ್ನಿಯಲ್ಲಿ ಸುಟ್ಟಿದ್ದಾರೆ, ಅಗ್ನಿಯಲ್ಲಿ ಸುಟ್ಟು ಹೋಗಿರುವುದನ್ನು ಆಲಿಸಿ ಹರುಷ ಪಡೆದಿದ್ದಾರೆ; ಆ ಜೀವಗಳು ಅಕಸ್ಮಾತ್ತಾಗಿ ಅಗ್ನಿಯಲ್ಲಿ ಸುಟ್ಟು ಹೋಗುತ್ತಾರೆ. ಯಾರು ಅನ್ಯರನ್ನು ನೀರಿನಲ್ಲಿ ಮುಳುಗಿಸಿ ಕೊಂದಿದ್ದಾರೆ, ನೀರಿನಲ್ಲಿ ಮುಳುಗಿ ಹೋಗಿರುವುದನ್ನು ಕೇಳಿ ಸುಖಿಯಾಗಿದ್ದಾರೆ, ಆ ಜೀವಗಳು ಅಕಸ್ಮಾತ್ತಾಗಿ ನೀರಿನಲ್ಲಿ ಮುಳುಗಿ ಸಾಯುತ್ತಾರೆ. ಇತ್ಯಾದಿ ಪಾಪಕ್ರಿಯೆಗಳ ನಿಮಿತ್ತ ಪಡೆದು ಅಂಥವರದು ಅಕಸ್ಮಾತ್ ಮರಣವಾಗಿ ಹೋಗುತ್ತದೆ.

**ಸಂದೇಹ-೧೧೮ :-** ಓ ಗುರುವೇ ! ಈ ಜೀವನು ಯಾವ ಪಾಪದಿಂದ ಖರೀದಿಸಲ್ಪಟ್ಟು ಅನ್ಯರ ಗುಲಾಮನಾಗುತ್ತಾನೆ ?

**ಸಮಾಧಾನ :-** ಯಾವ ಜೀವನು ಪೂರ್ವಭವದಲ್ಲಿ ಒತ್ತಾಯದಿಂದ ಅನ್ಯಜೀವಗಳನ್ನು ಗುಲಾಮರನ್ನಾಗಿ ಮಾಡಿಕೊಂಡಿದ್ದಾನೆ, ಧನದ ಲೋಭ ತೋರಿಸಿ, ಹಸಿದವನಿಗೆ ಆಹಾರ ನೀರುಗಳ ಲೋಭ ತೋರಿಸಿ ಮತ್ತು ಅನ್ಯ ಮನುಷ್ಯರ ಮಾರಾಟವಾಗುತ್ತಿರುವುದನ್ನು ನೋಡಿ, ಬೆಲೆಕೊಟ್ಟು ಇತ್ಯಾದಿ ಕಾರಣಗಳಿಂದ ಅನ್ಯ ಜೀವಗಳನ್ನು ಗುಲಾಮರನ್ನಾಗಿಸಿಕೊಂಡಿದ್ದಾನೆ; ಅನ್ಯ ಜೀವಗಳು ಯಾರದೋ ಗುಲಾಮರಾಗಿರುವುದನ್ನು ಆಲಿಸಿ ಹರ್ಷಿತನಾಗಿದ್ದಾನೆ. ಸ್ವಯಂ ಮಧ್ಯಸ್ತಿಕೆ ವಹಿಸಿ ದೂತನಾಗಿ ಯಾರನ್ನೋ ಯಾರದೋ ಗುಲಾಮ ಮಾಡಿದ್ದಾನೆ. ದಲಾಲಿಯಿಂದ ಲಾಭ ಪಡೆದು ಆನಂದಿತನಾಗಿದ್ದಾನೆ - ಇತ್ಯಾದಿ ಪಾಪಗಳಿಂದ ಜೀವನು ಭವಾಂತರದಲ್ಲಿ ಮಾರಲ್ಪಟ್ಟು ಬೇರೆಯವರ ಗುಲಾಮನಾಗುತ್ತಾನೆ.

**ಸಂದೇಹ-೧೧೯ :-** ಓ ಸ್ವಾಮೀ ! ಈ ಜೀವನು ಯಾವ ಪಾಪದಿಂದ ಲೋಕನಿಂದ್ಯನಾಗುತ್ತಾನೆ?

**ಸಮಾಧಾನ :-** ಯಾರು ಜಗತ್ಪೂಜ್ಯ ವೀತರಾಗೀ ದೇವ-ಧರ್ಮ-ಗುರುವಿನ ನಿಂದೆ ಮಾಡಿದ್ದಾರೆ, ಬೇರೆ ಯಾರೋ ದೇವ-ಧರ್ಮ-ಗುರುವಿನ ನಿಂದಕರೆಂದು ತಿಳಿದು ಅವರಲ್ಲಿ ಪ್ರೀತಿಯ ಭಾವ ಮಾಡಿದ್ದಾರೆ. ಜಗತ್ಪೂಜ್ಯ ಪ್ರಶಂಸಾಯೋಗ್ಯವಿರುವ ವೀತರಾಗ ಮೊದಲಾದ ಉತ್ತಮ ಗುಣಗಳ ನಿಂದೆ ಮಾಡಿದ್ದಾರೆ, ಧರ್ಮಾತ್ಮಾ ಪುರುಷರ ನಿಂದೆ ಮಾಡಿದ್ದಾರೆ, ಲೋಕ ನಿಂದ್ಯ ಪುರುಷರ ಸಂಗತಿ ಮಾಡಿದ್ದಾರೆ ಹಾಗೂ ಅನೇಕ ನಿಂದ್ಯ ಕಾರ್ಯ ಮಾಡಿದ್ದಾರೆ. ಅಯೋಗ್ಯ ಭೋಜನ-ಪಾನ ಮಾಡಿದ್ದಾರೆ - ಇತ್ಯಾದಿ ಪಾಪಗಳಿಂದ ಜೀವನು ಲೋಕನಿಂದ್ಯ ಪದಕ್ಕೆ ಪ್ರಾಪ್ತನಾಗುತ್ತಾನೆ.

**ಸಂದೇಹ-೧೨೦ ಃ-** ಓ ಗುರುದೇವಾ ! ಈ ಜೀವನಿಗೆ ಯಾವ ಪಾಪದಿಂದ ಪತ್ನಿ, ಪುತ್ರ , ಮಾತಾ-ಪಿತ, ಪತಿ ಮೊದಲಾದ ಇಷ್ಟ ವಸ್ತುವಿನ ವಿಯೋಗವಾಗುತ್ತದೆ ?

**ಸಮಾಧಾನ ಃ-** ಯಾವನು ಅನ್ಯರ ಪುತ್ರನನ್ನು ಅಪಹರಿಸಿದ್ದಾನೆ; ಅನ್ಯರ ಪುತ್ರ ಹರಣವಾಗಿರುವುದನ್ನು ತಿಳಿದು ಯಾವನು ಅನುಮೋದನೆ ಮಾಡಿದ್ದಾನೆ, ಅನ್ಯ ಸ್ತ್ರೀಯನ್ನು ಅವಳ ಪತಿಯಿಂದ ಅಗಲಿಸಿದ್ದಾನೆ, ಅನ್ಯ ಸ್ತ್ರೀ-ಪುರುಷರ ವಿಯೋಗದ ವಾರ್ತೆಯನ್ನಾಲಿಸಿ ಹರ್ಷ ಪಡೆದಿದ್ದಾನೆ, ಯಾವನು ಮಾತಾ-ಪಿತ ಮೊದಲಾಗಿ ಕುಟುಂಬ ವರ್ಗದಿಂದ ಅನ್ಯರನ್ನು ಬೇರೆ ಮಾಡಿದ್ದಾನೆ. ಅನ್ಯರ ಕುಟುಂಬ ವಿಯೋಗವಾಗಿರುವುದನ್ನು ಆಲಿಸಿ ಸುಖಿಯಾಗಿದ್ದಾನೆ-ಇತ್ಯಾದಿ ಪಾಪ ಭಾವಗಳಿಂದ ಭವಾಂತರದಲ್ಲಿ ಜೀವನಿಗೆ ಕುಟುಂಬಾದಿಯ ವಿಯೋಗವಾಗುತ್ತದೆ.

**ಸಂದೇಹ-೧೨೧ ಃ-** ಓ ದೇವಾ ! ಈ ಜೀವನಿಗೆ ಯಾವ ಪಾಪದಿಂದ ಧನದ ವಿಯೋಗವಾಗುತ್ತದೆ?

**ಸಮಾಧಾನ ಃ-** ಯಾವನು ಪೂರ್ವ ಭವದಲ್ಲಿ ಅನ್ಯರ ಧನಹರಣ ಮಾಡಿದ್ದಾನೆ; ಕಳ್ಳರಿಂದ ಜಲ, ಅಗ್ನಿ, ರಾಜ್ಯ , ಸೈನಿಕ ಇತ್ಯಾದಿ ಕರ ನಿಮಿತ್ತದಿಂದ ಅನ್ಯರ ಧನವು ನಷ್ಟವಾಗಿರುವುದನ್ನು ಆಲಿಸಿ, ಅದರ ಅನುಮೋದನೆ ಮಾಡಿದ್ದಾನೆ- ಇತ್ಯಾದಿ ಅಶುಭ ಭಾವಗಳಿಂದ ಭವಾಂತರದಲ್ಲಿ ತನಗೆ ಧನದ ವಿಯೋಗವಾಗುತ್ತದೆ.

**ಸಂದೇಹ-೧೨೨ ಃ-** ಓ ಗುರುದೇವಾ ! ಯಾವ ಪಾಪದಿಂದ ಈ ಜೀವನು ವಾಸ ಮಾಡುತ್ತಿರುವ ಮನೆಗೆ ಬೆಂಕಿ ಬೀಳುತ್ತದೆ ?

**ಸಮಾಧಾನ ಃ-** ಯಾವನು ಬೇರೆಯವರ ಮನೆಗೆ ಬೆಂಕಿಯಿಟ್ಟಿದ್ದಾನೆ, ಬೇರೆಯವರ ಮನೆಯು ಸುಟ್ಟ ಹೋಗುತ್ತಿರುವುದನ್ನು ಕಂಡು ಹರ್ಷ ಮನ್ನಿಸಿದ್ದಾನೆ-ಇತ್ಯಾದಿ ಪಾಪಗಳಿಂದ ಮನೆಗೆ ಬೆಂಕಿ ಬೀಳುತ್ತದೆ.

**ಸಂದೇಹ-೧೨೩ ಃ-** ಓ ಸ್ವಾಮೀ ! ಈ ಜೀವನಿಗೆ ಯಾವ ಪಾಪದಿಂದ ಕಂಠದಲ್ಲಿ ತೆಂಗಿನಕಾಯಿಯ ಹಾಗೆ ಕೊಬ್ಬು ಬರುತ್ತದೆ?

**ಸಮಾಧಾನ ಃ-** ಪೂರ್ವ ಭವದಲ್ಲಿ ಯಾವನು ಅನ್ಯ ಜೀವಗಳಿಗೆ ಕೋಲು, ಬಾರಕೋಲು, ಅಥವಾ ಮುಷ್ಟಿಯಿಂದ ಗುದ್ದಿ ಅವರ ಕಂಠವು ಉಬ್ಬಿಹೋಗುವಂತೆ ಮಾಡಿದ್ದಾನೆ, ಯಾವನು ಅನ್ಯರ ಮುಖದ ಮುಂದೆ ಭಾರವನ್ನು ಕಟ್ಟಿ ದುಃಖಿ ಮಾಡಿದ್ದಾನೆ. ಅನ್ಯರ ಕಂಠದಲ್ಲಿ ಬೆಳೆದುಕೊಂಡಿರುವ ಕೊಬ್ಬನ್ನು ಕಂಡು ಹಾಸ್ಯ ಮಾಡಿದ್ದಾನೆ, ಅವರನ್ನು ರೇಗಿಸಿ ಹರ್ಷ ಮನ್ನಿಸಿದ್ದಾನೆ-ಇತ್ಯಾದಿ ಪಾಪ ಭಾವಗಳಿಂದ ಭವಾಂತರದಲ್ಲಿ ಸ್ವಯಂ ತನಗೆ ಕಂಠದಲ್ಲಿ ತೆಂಗಿನಕಾಯಿಯಂಥ ದೀರ್ಘ ಕೊಬ್ಬು ಬರುತ್ತದೆ.

**ಸಂದೇಹ-೧೨೪ ಃ-** ಪ್ರಭು ! ಈ ಜೀವನು ಯಾವ ಪುಣ್ಯದಿಂದ ಎಲ್ಲರಿಗೂ ಪ್ರಿಯನಾಗುತ್ತಾನೆ ?

**ಸಮಾಧಾನ ಃ-** ಯಾವನಿಗೆ ಪೂರ್ವ ಭವದಲ್ಲಿ ಸಮಸ್ತ ಸಂಸಾರೀ ಜೀವಗಳ ಕುರಿತಾಗಿ ಸ್ನೇಹ ಭಾವವಿತ್ತು. ಯಾವನಿಗೆ ದೇವ, ಧರ್ಮಗುರುಗಳು ಸರ್ವಾಧಿಕ ಪ್ರಿಯವೆನಿಸಿದ್ದಾರೆ, ಯಾರಿಗೆ ಪೂರ್ವ ಭವದಲ್ಲಿ ಚತುರ್ವಿಧ ಸಂಘದ ಧರ್ಮಾತ್ಮಾ ಜೀವರುಗಳು ಅತ್ಯಂತ ಪ್ರಿಯರೆನಿಸಿದ್ದಾರೆ, ಯಾರು ಗುಣೀ ಜನರ ಕುರಿತಾಗಿ ಸ್ನೇಹ ವ್ಯಕ್ತ ಪಡಿಸಿದ್ದಾರೆ. ದೀನ, ದರಿದ್ರ , ದುಃಖಿ, ಹಸಿದಿರುವ, ಚಿಂತೆಯ ಸಾಗರದಲ್ಲಿ ಮುಳುಗಿರುವ ಮಹಾದುಃಖಿ ಜೀವಗಳನ್ನು ಕಂಡು, ದಯೆಯ ಭಾವದಿಂದ ಮಾತನಾಡಿ ಸ್ನೇಹದಿಂದ ಅವರಲ್ಲಿ ವಿಶ್ವಾಸ ಹುಟ್ಟಿಸಿ ಸುಖಿಗಳನ್ನಾಗಿ ಮಾಡಿದ್ದಾರೆ-ಇತ್ಯಾದಿ ಶುಭಭಾವಗಳಿಂದ ಜೀವನು ಭವಾಂತರದಲ್ಲಿ ಎಲ್ಲರಿಗೂ ಸುಖದಾಯಕ ಪರಮಪ್ರಿಯನಾಗುತ್ತಾನೆ.

**ಸಂದೇಹ ೧೨೫ ಃ-** ಗುರುದೇವಾ ! ಈ ಜೀವದ ಮನೆಯಲ್ಲಿ ಯಾವ ಪುಣ್ಯದಿಂದ ಸದೈವ ಮಂಗಲವಾಗುತ್ತದೆ ?

**ಸಮಾಧಾನ ಃ-** ಯಾರು ಪೂರ್ವಭವದಲ್ಲಿ ತೀರ್ಥಂಕರರ ಪಂಚಕಲ್ಯಾಣಕಗಳನ್ನು ನೋಡಿ ಹಾಗೂ ಆಲಿಸಿ ಹರ್ಷಿತರಾಗಿದ್ದಾರೆ. ಜಿನಪೂಜೆ, ಜಿನಪ್ರತಿಷ್ಠೆ ಮೊದಲಾದ ಮಂಗಲಾಚಾರಮಯ ಉತ್ಸವಗಳನ್ನು ನೋಡಿ ಅನುಮೋದನೆ ಮಾಡಿದ್ದಾರೆ. ಪುಣ್ಯೋದಯದಿಂದ ಯಾರ ಮನೆಯಲ್ಲಿಯಾದರೂ ಮಂಗಲಾಚಾರದ ಗೀತೆ-ವಾದ್ಯಗಳ ನುಡಿಸುವಿಕೆ ನಡೆದಿದ್ದರೆ ಅದನ್ನು ಕಂಡು ಹರ್ಷಿತರಾಗಿದ್ದಾರೆ. ಯಾರದೋ ಮನೆಯಲ್ಲಿ ಶೋಕ, ಚಿಂತೆ, ಭಯ ಆವರಿಸಿರುವುದನ್ನು ಕಂಡು ಅವರ ಕುರಿತಾಗಿ ದಯೆ ಮಾಡಿದ್ದಾರೆ - ಇತ್ಯಾದಿ ಪುಣ್ಯ ಭಾವಗಳಿಂದ ಮನೆಯಲ್ಲಿ ಸದೈವ ಮಂಗಲಗಳಾಗುತ್ತವೆ.

ಇವು ಒಂದುನೂರ ಇಪ್ಪತ್ತೈದು ಪ್ರಶ್ನೆಗಳನ್ನು ಶಿಷ್ಯನು ಸ್ವ-ಪರ ಕಲ್ಯಾಣದ ಸಲುವಾಗಿ ಗುರುಗಳ ಹತ್ತಿರ ಕೇಳಿದ್ದನು. ಇವುಗಳಲ್ಲಿನ ಅದೆಷ್ಟೋ ಪ್ರಶ್ನೆಗಳಂತೂ ತ್ರೈಲೋಕ್ಯನಾಥರ ಮಾತೆಗೆ ದೇವಾಂಗನೆಯರು ಕೇಳಿದ್ದರು; ಅವುಗಳ ಉತ್ತರವನ್ನು ತೀರ್ಥಂಕರರ ಮಾತೆಯು ನೀಡಿದ್ದಳು. ಅದೆಷ್ಟೋ ಪ್ರಶ್ನೆಗಳನ್ನು ಮಹಾಧರ್ಮಮೂರ್ತಿ ಬುದ್ಧಿವಂತನಾದ ದೊರೆ ಶ್ರೇಣಿಕನು ಗಣಧರ ಶ್ರೀ ಗೌತಮ ಸ್ವಾಮಿಗೆ ಕೇಳಿದ್ದನು. ಗೌತಮಸ್ವಾಮಿಯವರು ಅವುಗಳ ಉತ್ತರ ನೀಡಿದ್ದರು. ಅವೆಲ್ಲವುಗಳನ್ನು ಏಕತ್ರಿತ ಮಾಡಿ, ಭವ್ಯ ಜೀವರುಗಳ ಕಲ್ಯಾಣಾರ್ಥವಾಗಿ ಇಲ್ಲಿ ಸಮುಚ್ಚಯರೂಪ ವ್ಯಾಖ್ಯಾನ ಮಾಡಲಾಗಿದೆ. ಇವುಗಳ ರಹಸ್ಯ ತಿಳಿದುಕೊಂಡು, ಪಾಪ ಪಂಥದ ತ್ಯಾಗ ಮಾಡಿ, ಸುಪಂಥದಲ್ಲಿ ತೊಡಗಿ ಅನೇಕ ಜೀವರುಗಳು ಪುಣ್ಯಬಂಧ ಮಾಡಿಕೊಂಡಿದ್ದಾರೆ. ಮುಂದೆಯೂ ಕೂಡ ಇವುಗಳನ್ನು ಆಲಿಸಿ, ಅನೇಕ ಭವ್ಯ ಜೀವಗಳು ಪುಣ್ಯದ ಉಪಾರ್ಜನೆ ಮಾಡುವರು. ಆದುದರಿಂದ ವಿವೇಕವಂತರು ಈ ಪ್ರಶ್ನಮಾಲೆಯನ್ನು ಪಠಿಸಿ, ನಿಕಟ ಸಂಸಾರಿಗಳು ಇವುಗಳ ಮರ್ಮವನ್ನರಿತು ತಮ್ಮ ಕಲ್ಯಾಣ ಮಾಡಿಕೊಳ್ಳುವುದು.

ಈ ಪ್ರಶ್ನ ಮಾಲೆಯನ್ನು ಧಾರಣ ಮಾಡಿ ಭವ್ಯ ಜೀವರುಗಳು ಭವ-ಭವದಲ್ಲಿ ಸುಖಿಯಾಗುತ್ತಾರೆ. ಈ ಪ್ರಶ್ನ ಮಾಲೆಯು ಎಂಥದ್ದಿದೆ ? - ಗುರುಗಳ ವಚನರೂಪದ ಮಹಾಶುಭ ಸುಗಂಧಿತ ಪುಷ್ಪಗಳ ಮಾಲೆ ಇದೆ. ಜಿನ ಆಜ್ಞೆಯ ರೂಪದ ಸೂತ್ರ(ದಾರ)ದಲ್ಲಿ ಸುಕವಿಯ ಬುದ್ಧಿರೂಪದ ಸೂಜಿಯಿಂದ ಸುಗುರುವಿನ ವಚನರೂಪದ ಪುಷ್ಪಗಳನ್ನು ಪವಣಿಸಿ ಈ ಮಾಲೆಯನ್ನು ನಿರ್ಮಿಸಲಾಗಿದೆ. ಈ ಮಾಲೆಯನ್ನು ಮುಕ್ತಿರಮಣಿಯ ವರನ ಹಾಗಿರುವ ನಿಕಟ ಭವ್ಯನು ಪ್ರಸನ್ನತೆಯಿಂದ ತನ್ನ ಹೃದಯದಲ್ಲಿ ಧಾರಣ ಮಾಡಿ ಸುಖಿಯಾಗಲಿ. ಈ ಮಾಲೆಯನ್ನು ತಮ್ಮ ಹೃದಯದಲ್ಲಿ ಧಾರಣ ಮಾಡಿ, ತಮ್ಮ ಭವವನ್ನು ಸಫಲವೆಂದು ತಿಳಿದು ನಾನು ಕೃತಕೃತ್ಯನಾಗಿದ್ದೇನೆಂದು ಕವೀಶ್ವರರು ಹೇಳುತ್ತಿದ್ದಾರೆ. ಅನ್ಯರೂ ಎಂದರೆ ಅಮರ ಪದದ ಲೋಭಿಗಳಾದ ಜೀವರುಗಳು ಈ ಪ್ರಶ್ನಮಾಲೆಯನ್ನು ತಮ್ಮ ಕಂಠದಲ್ಲಿ ಧಾರಣ ಮಾಡುವರು, ಆ ಕಲ್ಯಾಣದ ಇಚ್ಛೆಯುಳ್ಳ ಸುಬುದ್ಧಿ ಭವ್ಯಾತ್ಮರು ಈ ಭವದಲ್ಲಿ ಹಾಗೂ ಭವ-ಭವದಲ್ಲಿ ಶೋಭೆ ಪಡೆಯುವರು - ಹೀಗೆ ತಿಳಿದು ಈ ಪ್ರಶ್ನ ಮಾಲೆಯ ಧಾರಣ ಮಾಡುವುದು.

ಈ ಪ್ರಕಾರ ಸುದೃಷ್ಟಿತರಂಗಿಣಿಯೆಂಬ ಹೆಸರಿನ ಗ್ರಂಥದಲ್ಲಿ ಅನೇಕ ಗ್ರಂಥಗಳ ಅನುಸಾರ
'ಪ್ರಶ್ನಮಾಲೆ ಕರ್ಮವಿಪಾಕ'ದ ವರ್ಣನೆ ಮಾಡುವಂಥ
ಇಪ್ಪತ್ತೊಂಭತ್ತನೇ ಪರ್ವವು ಪೂರ್ಣವಾಯಿತು.

★★★★★

ಹೇಗೆ ಹೇಗೆ ಉತ್ತಮ ತತ್ತ್ವವು ನಿಜಾನುಭವದೊಳಗೆ ಬರುವುದು ।
ಹಾಗೆ ಹಾಗೆ ಸುಲಭ ರಮ್ಯ ವಿಷಯಗಳು ಕೂಡ ರುಚಿಸುವುದಿಲ್ಲ ॥
ಹೇಗೆ ಹೇಗೆ ಸಹಜ ಪ್ರಾಪ್ತ ವಿಷಯಗಳು ಕೂಡ ರುಚಿಸುವುದಿಲ್ಲ ।
ಹಾಗೆ ಹಾಗೆ ಆತ್ಮತತ್ತ್ವದಲಿ ಅನುಭವದ ವೃದ್ಧಿಯಾಗುವುದು ॥

## ೩೦ : ಮೂವತ್ತನೆಯ ಪರ್ವ
## ಹಿಂಸೆಯ ನಿಷೇಧ ಮತ್ತು ದಯೆಯ ಮಾಹಾತ್ಮ್ಯ

ಈಗ ಹಿಂಸೆಯಲ್ಲಿ ಪುಣ್ಯಭಾವದ ಅಭಾವವನ್ನು ತಿಳಿಸಿಕೊಡುತ್ತಾರೆ,-

**ಪಯ ವಹಣೀ ಥಲ ಪದಮೋ, ಜಲಮಥ ಘೀಧಾಣ ಹೋಯತುಖ ಖಂಡಯ ।**

**ರವಿ ಹಿಮ ಸಸಿ ತಯ ಕರೀ, ತಬ ಹಿಂಸಾ ಪುಣ್ಯ ದೇ ಭೋ ಆದಾ ॥೧೨೧॥**

**ಗಾಥಾರ್ಥ :-** ಎಲೈ ಆತ್ಮನೇ ! ಜಲದಲ್ಲಿ ಅಗ್ನಿ, ಪೃಥ್ವಿಯ ಮೇಲೆ ಕಮಲ, ಜಲ ಮಥನದಿಂದ ತುಪ್ಪ, ಹೊಟ್ಟನ್ನು ಕುಟ್ಟಿ ಧಾನ್ಯ, ಸೂರ್ಯೋದಯದಿಂದ ಶೀತ ಮತ್ತು ಚಂದಿರನು ತಾಪವನ್ನುಂಟು ಮಾಡತೊಡಗಿದರೆ ಆಗ ಹಿಂಸೆಯು ಪುಣ್ಯವನ್ನು ಕೊಡುವ ಸಾಧ್ಯತೆಯಿದೆ.

**ಭಾವಾರ್ಥ :-** ನೀರಿನಲ್ಲಿ ಅಗ್ನಿಯು ಎಂದೂ ಇರುವುದಿಲ್ಲ; ಅದೇ ಪ್ರಕಾರ ಜೀವ ಹಿಂಸೆಯಿಂದ ಪುಣ್ಯದ ಫಲವೆಂದೂ ಆಗುವುದಿಲ್ಲ. ಕಠೋರ ಭೂಮಿಯಲ್ಲಿ ಕಮಲಗಳೆಂದೂ ದೊರಕುವುದಿಲ್ಲ; ಅದೇ ಪ್ರಕಾರ ಹಿಂಸೆಯಿಂದ ಧರ್ಮ ಫಲವೆಂದೂ ಸಿಗುವುದಿಲ್ಲ. ಜಲವನ್ನು ಮಥಿಸುವುದರಿಂದ ತುಪ್ಪದ ಪ್ರಾಪ್ತಿಯೆಂದೂ ಆಗುವುದಿಲ್ಲ; ಅದೇ ಪ್ರಕಾರ ಪ್ರಾಣಿಘಾತದಿಂದ ಪುಣ್ಯವೆಂದೂ ಆಗುವುದಿಲ್ಲ. ಕೇವಲ ಹೊಟ್ಟು ಕುಟ್ಟುವುದರಿಂದ ಧಾನ್ಯವೆಂದೂ ಪ್ರಾಪ್ತವಾಗುವುದಿಲ್ಲ; ಅದೇ ಪ್ರಕಾರ ಜೀವ ಘಾತದಿಂದ ಪುಣ್ಯವೆಂದೂ ಆಗುವುದಿಲ್ಲ. ಸೂರ್ಯೋದಯವಾದ ಮೇಲೆ ಶೀತವಿರುವುದಿಲ್ಲ; ಅದೇ ಪ್ರಕಾರ ಜೀವಘಾತ ಮಾಡುವುದರಿಂದ ಧರ್ಮವೆಂದೂ ಆಗುವುದಿಲ್ಲ. ಚಂದ್ರೋದಯವಾದ ಮೇಲೆ ಆತಾಪವೆಂದೂ ಇರುವುದಿಲ್ಲ; ಅದೇ ಪ್ರಕಾರ ಹಿಂಸೆಯಲ್ಲಿ ಪುಣ್ಯವೆಂದೂ ಇರುವುದಿಲ್ಲ-ಹಿಂಸೆಯಿಂದ ಪುಣ್ಯವಾಗುವುದಿಲ್ಲ.

ಈ ಪ್ರಕಾರ ಇವು ಹೇಗೆ ಆಗದಿರುವ ಪ್ರಸಂಗಗಳಿವೆ; ಅದೇ ಪ್ರಕಾರ ಜೀವಘಾತದಲ್ಲಿ ಹಿಂಸೆಯೇ ಆಗುತ್ತದೆ. ಧರ್ಮವೆಂದೂ ಆಗುವುದಿಲ್ಲ. ಆದುದರಿಂದ ಎಲೈ ಭವ್ಯಾತ್ಮನೇ ! ನೀನು ಕೂಡ ಪರಭವ ಸುಧಾರಣೆಯ ಸಲುವಾಗಿ 'ಜೀವಘಾತದಿಂದ ಯಾವುದೇ ರೀತಿಯಿಂದ ಪುಣ್ಯವಾಗುವುದಿಲ್ಲ'ವೆಂಬ ದೃಢವಾದ ಶ್ರದ್ಧೆಮಾಡು ಇಂಥ ಶ್ರದ್ಧೆಯು ನಿನಗೆ ಭವ-ಭವದಲ್ಲಿ ಸುಖಕಾರಿಯಾಗುವುದೆಂದು ತಿಳಿದುಕೊಂಡು ಎಲ್ಲ ಜೀವಗಳನ್ನು ತನ್ನ ಸಮಾನ ತಿಳಿದು ಅವುಗಳ ಕುರಿತಾಗಿ ದಯಾಭಾವದಿಂದಿರುವುದು ಯೋಗ್ಯವಿದೆ.

ಈಗ ಮತ್ತೆ ಹಿಂಸೆಯಲ್ಲಿ ಪುಣ್ಯದ ಅಭಾವ ತಿಳಿಸುತ್ತಾರೆ-

**ಅಹ ಮುಹ ಅಮಿ ಸುತ ಬಂಝುಯ ಗಣಕಾಸುತ ಜನಕಸಿಧ ಅವತಾರೋ ।**

**ಸಠ ಸುಚಿ ಸೂಮ ಉದಾರಊ ತವ ಜೀವ ಹಿಂಸೋಯ ದೇಯ ಪುಣ ಆದಾ ॥೧೨೨॥**

**ಗಾಥಾರ್ಥ :-** ಸರ್ಪದ ಮುಖದಲ್ಲಿ ಅಮೃತ, ಬಂಜೆಯ ಪುತ್ರ, ವೇಶ್ಯೆಯ ಪುತ್ರನ ಪಿತ, ಮುಕ್ತಿಯಾದ ಮೇಲೆ ಜೀವದ ಅವತಾರ, ಮೂರ್ಖನ ಶೌಚ, ಜಿಪುಣ ಎಂದರೆ ಕೃಪಣನ ಮನಸ್ಸು ಉದಾರ (ಇವೆಲ್ಲ ಅಸಂಭವಗಳು ಒಂದುವೇಳೆ ಸಂಭವಿಸಿದರೆ) ಆಗ ಎಲೈ ಆತ್ಮನೇ ! ಜೀವ ಹಿಂಸೆಯಿಂದ ಪುಣ್ಯವಾಗುವುದು.

**ಭಾವಾರ್ಥ :-** ಮಹಾಭಯಾನಕ ಕಾಲರೂಪಿ ಸರ್ಪದ ಮುಖದಲ್ಲಿ ಅಮೃತವಿದ್ದರೆ ಜೀವಹಿಂಸೆಯಿಂದ ಪುಣ್ಯದ ಫಲ ಬರುವುದು. ಬಂಜೆಗೆ ಪುತ್ರನಿರುವುದಿಲ್ಲ; ಒಂದುವೇಳೆ ಬಂಜೆಯ ಪುತ್ರನಿದ್ದರೆ ಪ್ರಾಣಿ ವಧೆಯಲ್ಲಿ ಪುಣ್ಯವಿರುವುದು. ವೇಶ್ಯೆಯ ಪುತ್ರನ ಪಿತನು ಯಾರೆಂಬುದು ತಿಳಿದುಬರುವ ಸಾಧ್ಯತೆಯಿಲ್ಲ; ಅದೇ ಪ್ರಕಾರ ಜೀವವಧೆಯಲ್ಲಿ ಹಿಂಸೆಯಿದೆ, ಅದರಲ್ಲಿ ಧರ್ಮವಿರುವುದಿಲ್ಲ. ಕರ್ಮನಾಶಮಾಡಿ ಶುದ್ಧವಾಗಿರುವ ಜೀವರುಗಳು ಸಿದ್ಧರಾಗುತ್ತಾರೆ, ಆ ಸಿದ್ಧ ಜೀವರುಗಳ ಅವತಾರವು ಸಂಸಾರದಲ್ಲಿ ಆಗುವುದಿಲ್ಲ. ಅದೇ ಪ್ರಕಾರ ಹಿಂಸೆಯಲ್ಲಿ

ಪುಣ್ಯವಿರುವುದಿಲ್ಲ. ಮೂರ್ಖನ ಶೌಚ(ಪವಿತ್ರತೆ) ಇರುವುದಿಲ್ಲ; ಅದೇ ಪ್ರಕಾರ ಹಿಂಸೆಯಿಂದ ಪುಣ್ಯದ ಫಲವು ಬರುವುದಿಲ್ಲ. ಕೃಪಣನು ಬೇಕಾದರೆ ಶರೀರ ಬಿಡಬಹುದಾಗಿದೆ; ಆದರೆ ದಾನದ ಸಲುವಾಗಿ ಧನ ಬಿಡುವ ಎಂದರೆ ಕೊಡುವ ಸಾಧ್ಯತೆಯಿಲ್ಲ. ಆ ಕೃಪಣನ ಚಿತ್ತವು ಉದಾರವಾಗಿ ಹೋದರೆ ಹಿಂಸೆಯಿಂದ ಪುಣ್ಯಫಲವಾಗಬಹುದಾಗಿದೆ.

ಯಾವ ಪ್ರಕಾರ ಉಪರ್ಯುಕ್ತ ಕಾರ್ಯಗಳೆಂದೂ ಆಗುವುದಿಲ್ಲ; ಅದೇ ಪ್ರಕಾರ ಎಲೈ ಧರ್ಮಾತ್ಮನೇ! ಎಲ್ಲಿ ಜೀವಘಾತವಿದೆ, ಅಲ್ಲಿ ಪುಣ್ಯಫಲವಿಲ್ಲವೆಂಬುದನ್ನು ನೀನು ತಿಳಿದುಕೋ ಮತ್ತು ಜೀವಘಾತದ ತ್ಯಾಗ ಮಾಡಿ ದಯಾಸಹಿತನಾಗಿರುವುದು ಯೋಗ್ಯವಿದೆ.

ಈಗ ಮತ್ತೆಯೂ ಹಿಂಸೆಯ ನಿಷೇಧ ಹೇಳುತ್ತಾರೆ-

**ಪಚ್ಛಿಮ ರವಿ ಸಿಲ ತರಈ, ಭೂ ಪಲಟಯ ವಹಣ ಸೀತ ತಣಧರಊ ।**
**ಮೇರು ಚಲಯ ಅಂಧ ದೇಖಯ, ತಬ ಹಿಂಸಾ ದೇಯ ಪುಣ ಆದಾ ॥೧೨೩॥**

**ಗಾಥಾರ್ಥ :-** ಸೂರ್ಯನು ಪಶ್ಚಿಮ ದಿಕ್ಕಿನಿಂದ ಉದಿಸಿದರೆ, ಶಿಲೆಯು ತೇಲತೊಡಗಿದರೆ, ಪೃಥ್ವಿಯು ತಲೆ ಕೆಳಗಾಗಿ ಹೋದರೆ, ಅಗ್ನಿಯು ಶೀತಲತೆಯನ್ನು ಧಾರಣ ಮಾಡಿದರೆ, ಮೇರು ಪರ್ವತವು ಚಲಾಯಮಾನವಾಗಿ ಹೋದರೆ, ನೇತ್ರರಹಿತನು ನೋಡತೊಡಗಿದರೆ, ಆತ್ಮನಿಗೆ ಹಿಂಸೆಯ ಫಲದಲ್ಲಿ ಪುಣ್ಯವಾಗುವ ಸಾಧ್ಯತೆಯಿದೆ.

**ಭಾವಾರ್ಥ :-** ಪಶ್ಚಿಮ ದಿಕ್ಕಿನಲ್ಲಿ ಸೂರ್ಯನೆಂದೂ ಉದಿಸುವ ಸಾಧ್ಯತೆಯಿಲ್ಲ; ಅದೇ ಪ್ರಕಾರ ಹಿಂಸೆಯಲ್ಲಿ ಧರ್ಮದ ಫಲವೆಂದೂ ಬರಲಾರದು. ಪಾಷಾಣ-ಶಿಲೆಯು ನೀರಿನಲ್ಲಿ ತೇಲತೊಡಗಿದರೆ ಹಿಂಸೆಯಲ್ಲಿ ಧರ್ಮವಾಗುವುದು. ಪೃಥ್ವಿಯು ತಲೆ ಕೆಳಗಾಗಿ ಹೋದರೆ ಹಿಂಸೆಯಲ್ಲಿ ಧರ್ಮವಿರುವುದು; ಆದರೆ ಶಿಲೆಯೆಂದೂ ನೀರಿನಲ್ಲಿ ತೇಲುವುದಿಲ್ಲ ಮತ್ತು ಪೃಥ್ವಿಯೆಂದೂ ತಲೆಕೆಳಗಾಗುವುದಿಲ್ಲ ಅದು ಅನಾದಿ ಧ್ರುವವಿದೆ. ಅದೇ ಪ್ರಕಾರ ಹಿಂಸೆಯಿಂದ ಪುಣ್ಯದ ಫಲವಾಗುವುದಿಲ್ಲ. ಅಗ್ನಿಯು ಶೀತಅಂಗಧಾರಣ ಮಾಡುವುದು - ಶೀತಲವಾಗಿ ಹೋದರೆ ಹಿಂಸೆಯಲ್ಲಿ ಧರ್ಮ ಫಲವಾಗುವುದು. ಸುಮೇರು ಪರ್ವತವು ಅನಾದಿ ಅಚಲವಿದೆ, ಅದು ಚಲಿತವಾದರೆ ಹಿಂಸೆಯಲ್ಲಿ ಧರ್ಮಫಲವಾಗಬಹುದಾಗಿದೆ. ಜನ್ಮಾಂಧನಿಗೆ ಹೇಗೆ ಏನೂ ಕಾಣುವುದಿಲ್ಲ; ಹಾಗೆ ಜೀವಘಾತದಿಂದ ಪುಣ್ಯದ ಫಲವೆಂದೂ ಬರುವುದಿಲ್ಲ. ಈ ಪ್ರಕಾರ ಇಲ್ಲಿ ಹೇಳಲಾದುವು ಆಗದೇ ಇರುವಂಥ ಸ್ಥಾನವಿವೆ, ಅದೇ ಪ್ರಕಾರ ಹಿಂಸೆಯಲ್ಲಿ ಧರ್ಮವೆಂದೂ ಆಗುವುದಿಲ್ಲವೆಂಬುದನ್ನು ತಿಳಿದು ಹಿಂಸೆಯಿಂದ ಕೂಡಿದ ಧರ್ಮವನ್ನು ಬಿಟ್ಟುಕೊಟ್ಟು, ದಯೆಯುಕ್ತ ಧರ್ಮದ ಅಂಗೀಕಾರ ಮಾಡುವುದು ಯೋಗ್ಯವಿದೆ.

ಈಗ ಪುನಃ ಹಿಂಸೆಯ ನಿಷೇಧ ಮಾಡುತ್ತಾರೆ-

**ಪಂಗ ಚಢಯ ಗಿರಿ ಸಿಹರೇ, ಬಧರೋ ರಂಜಾಯ ರಾಗ ಸುಹ ಪಾಈ ।**
**ಕಾತರ ರಣ ಜಯ ಪಾವಯ, ತಬ ಹಿಂಸ ಫಲ ಹೋಯ ಪುಣ್ಯ ಆದಾ ॥೧೨೪॥**

**ಗಾಥಾರ್ಥ :-** ಕಾಲಿಲ್ಲದ ಪುರುಷನು ಪರ್ವತ ಶಿಖರದ ಮೇಲೆ ಹತ್ತಿ ಹೋಗುವುದು, ಕಿವುಡನು ರಾಗದ ಸುಖವನ್ನು ಪಡೆದು ಪ್ರಸನ್ನನಾಗುವುದು, ಹೇಡಿಯು ಯುದ್ಧದಲ್ಲಿ ಜಯಶಾಲಿಯಾಗುವುದು ಸಾಧ್ಯವಾದರೆ ಎಲೈ ಆತ್ಮನೇ ! ಹಿಂಸೆಯಲ್ಲಿ ಪುಣ್ಯದ ಫಲವಾಗುವುದು.

**ಭಾವಾರ್ಥ :-** ಕಾಲಿಲ್ಲದ ಪುರುಷನು ಸಹಾಯವಿಲ್ಲದೆ ಸ್ವಲ್ಪ ಕೂಡ ನಡೆಯುವ ಸಾಧ್ಯತೆಯಿಲ್ಲ. ಅಂಥ ಪುರುಷನು ಓಡಿ ಹೋಗಿ ಪರ್ವತದ ಶಿಖರವನ್ನು ಹತ್ತಿ ನಿಂತರೆ, ಜೀವಘಾತದಲ್ಲಿ ಪುಣ್ಯವಾಗುವುದು. ಕಿವುಡ ಮನುಷ್ಯನು ಕರ್ಣಗಳಿಂದ ಏನನ್ನೂ ಆಲಿಸುವ ಸಾಧ್ಯತೆಯಿಲ್ಲ, ಆ ಕಿವುಡನು ಸಂಗೀತದ ರಾಗಮಯ ಮಧುರ-ಇಂಪಾದ ಶಬ್ದಗಳನ್ನಾಲಿಸಿ ಪ್ರಸನ್ನನಾದರೆ ಹಿಂಸೆಯಲ್ಲಿ ಪುಣ್ಯವಾಗುವುದು. ಹೇಡಿ ಮನುಷ್ಯನು ಯುದ್ಧದಿಂದ

ಭಯಪಡುತ್ತಾನೆ. ಅಂಥ ಹೇಡಿ ಮನುಷ್ಯನು ಶತ್ರು ಸೇನೆಯನ್ನು ಹೊಡೆದೋಡಿಸಿ ವಿಜಯ ಪ್ರಾಪ್ತ ಮಾಡಿಕೊಂಡರೆ ಹಿಂಸೆಯಲ್ಲಿ ಧರ್ಮದ ಫಲ ದೊರಕುವುದು.

ಉಪರ್ಯುಕ್ತ ಕಾರ್ಯಗಳೆಂದೂ ಆಗುವ ಸಾಧ್ಯತೆಯಿಲ್ಲ. ಒಂದುವೇಳೆ ಆಗಿ ಹೋದರೆ ಹಿಂಸೆಯಲ್ಲಿ ಧರ್ಮದ ಫಲವಾಗಿ ಹೋಗುವುದು. ಆದುದರಿಂದ ಧರ್ಮಫಲದ ಲೋಭಿಗಳಾದ ಸಮಸ್ತ ಜೀವರುಗಳೇ ! ಸಮಸ್ತ ಜೀವಗಳನ್ನು ತಮ್ಮ ಸಮಾನ ತಿಳಿದು ಅವುಗಳ ರಕ್ಷಣೆಯ ಉಪಾಯ ಮಾಡುವುದು ಭವ-ಭವದಲ್ಲಿ ಸುಖಕಾರಕವಿದೆ.

ಈಗ ಪುನಃ ಹಿಂಸೆಯ ನಿಷೇಧ ಮಾಡುತ್ತಾರೆ -

**ಜಮ ಉರ ಕರುಣಾ ಧಾರಯ, ಕಾಕೋ ಮುಹ ಸೌಚ ಮಿತ್ಯತಣ ಜೀವೋ ।**

**ದುಠಜನ ಪರ ಸುಹ ಇಚ್ಛಯ, ತಬ ಹಿಂಸಾ ಫಲ ಹೋಯ ಪುಣ ಆದಾ ।।೧೨೫।।**

**ಗಾಥಾರ್ಥ :-** ಕಾಲದ ಹೃದಯದಲ್ಲಿ ಕರುಣೆಯಿರುವುದು, ಕಾಗೆಯ ಮುಖವು ಪವಿತ್ರವಿರುವುದು, ಸತ್ತು ಹೋದವನು ಜೀವಂತನಾಗುವುದು, ದುಷ್ಟ ಪುರುಷನು ಅನ್ಯರ ಸುಖ ಬಯಸುವುದು ಸಾಧ್ಯವಿದ್ದರೆ ಎಲೈ ಆತ್ಮನೇ! ಹಿಂಸೆಯಲ್ಲಿ ಪುಣ್ಯವಾಗುವುದು.

**ಭಾವಾರ್ಥ :-** ಕಾಲರೂಪದ ಜಡ ಯಮನು ದಯಾರಹಿತನಿದ್ದಾನೆ, ಆ ಕಾಲಕ್ಕೆ ಒಂದು ವೇಳೆ ದಯೆಯು ಬಂದರೆ ಅದರಿಂದ ಅವನು ಸಂಸಾರೀ ಜೀವಗಳನ್ನು ಸಾಯಿಸದಿದ್ದರೆ, ಆಗ ಹಿಂಸೆಯಲ್ಲಿ ಪುಣ್ಯಫಲವಿರುವುದು. ಕಾಗೆಯ ಮುಖವು ಸದಾ ಅಪವಿತ್ರವೇ ಇದೆ; ಒಂದುವೇಳೆ ಎಂದಾದರೂ ಕಾಕ ಮುಖವು ಶೌಚರೂಪವಾದರೆ ಆಗ ಹಿಂಸೆಯಲ್ಲಿ ಪುಣ್ಯಫಲವಿರುವುದು. ಆಯುಕರ್ಮವು ಪೂರ್ಣವಾದ ಮೇಲೆ ಯಾವ ಆತ್ಮನು ಆ ಪರ್ಯಾಯವನ್ನು ಬಿಟ್ಟುಕೊಟ್ಟು ಸಾಯುತ್ತಾನೆ, ಅವನೆಂದೂ ಜೀವಂತನಾಗುವುದಿಲ್ಲ; ಆ ಮೃತಕನು ಜೀವಂತನಾದರೆ ಹಿಂಸೆಯಲ್ಲಿ ಪುಣ್ಯವಾಗುವುದು. ದುಷ್ಟಸ್ವಭಾವಿ-ಬೇರೆಯವರ ದುಃಖವನ್ನು ನೋಡಿ ಪ್ರಸನ್ನನಾಗುವಂಥವನು, ಅನ್ಯರನ್ನು ಸುಖಿ ಕಂಡು ಮಹಾದುಃಖಿಯಾಗುವಂಥವನು, ಕ್ರೂರ ಸ್ವಭಾವಿ ದುರ್ಜನ ಪ್ರಾಣಿಯು ಒಂದುವೇಳೆ ಅನ್ಯ ಜೀವರುಗಳು ಸಾತಾದಲ್ಲಿರುವುದನ್ನು ಕಂಡು ಸುಖಿಯಾದರೆ ಆಗ ಹಿಂಸೆಯಲ್ಲಿ ಪುಣ್ಯವಾಗುವುದು.

ಇವು ಮೇಲೆ ಹೇಳಿದ ಕಾರ್ಯಗಳು ಎಂದೂ ಆಗುವುದಿಲ್ಲ. ಒಂದುವೇಳೆ ಇವು ಆಗತೊಡಗಿದರೆ ಜೀವಘಾತದಲ್ಲಿ ಧರ್ಮವಾಗುವುದು. ಅದಕ್ಕಾಗಿ ಓ ಧರ್ಮಲೋಭಿಗಳೇ ! ಧರ್ಮದ ಸಲುವಾಗಿ ದಯೆಯ ಭಾವವಿರುವುದು ಯೋಗ್ಯವಿದೆ.

ಪುನಃ ಹಿಂಸೆಯ ನಿಷೇಧ ಮಾಡುತ್ತಾರೆ-

**ವಿಸ ಪಯ ಜೀವಯ ಜೀವೋ, ಣಾಗೋ ಗಮಣಾಯ ಸರಲ ತಣ ಹೋಈ ।**

**ಸ್ವಾಣ ಪೂಂಚ್ಛ ಸುಧ ಹೋವಯ, ತಬ ಹಿಂಸಾ ಫಲ ಹೋಯ ಪುಣ ಆದಾ ।।೧೨೬।।**

**ಗಾಥಾರ್ಥ :-** ವಿಷದ ಸೇವನೆ ಮಾಡಿ ಜೀವನು ಜೀವಿಸತೊಡಗಿದರೆ, ಸರ್ಪವು ಸರಳವಾಗಿ ಚಲಿಸತೊಡಗಿದರೆ, ನಾಯಿಯ ಬಾಲವು ಸರಳವಾಗಿ ಹೋದರೆ; ಆಗ ಎಲೈ ಆತ್ಮನೇ ! ಹಿಂಸೆಯಲ್ಲಿ ಧರ್ಮವಾಗುವುದು.

**ಭಾವಾರ್ಥ :-** ಹಾಲಾಹಲ ವಿಷತಿಂದು ಯಾರೂ ಜೀವಂತವಾಗಿ ಉಳಿಯುವುದಿಲ್ಲ; ಅಂಥ ವಿಕಟ ವಿಷ ತಿಂದು ಜೀವನು ಜೀವಂತನಾಗಿ ಉಳಿದರೆ, ಆಗ ಹಿಂಸೆಯಿಂದ ಧರ್ಮಫಲವಾಗುವುದು. ಕೃಷ್ಣ ಸರ್ಪವು ಸಹಜವಾಗಿಯೇ ವಕ್ರ ಚಲನೆಯಿಂದ ಚಲಿಸುವುದು; ಒಂದುವೇಳೆ ಅದು ಎಂದಾದರೂ ನೇರವಾಗಿ ಗಮನ ಮಾಡತೊಡಗಿದರೆ, ಆಗ ಹಿಂಸೆಯಲ್ಲಿ ಶುಭ ಫಲವಾಗುವುದು. ಶ್ವಾನದ (ನಾಯಿ) ಬಾಲವು ಸಹಜವಾಗಿಯೇ ಡೊಂಕಾಗಿರುತ್ತದೆ; ಒಂದುವೇಳೆ ನಾಯಿಯ ಬಾಲವು ನೆಟ್ಟಗೆ ಆಗಿ ಹೋದರೆ ಆಗ ಹಿಂಸೆಯಲ್ಲಿ ಧರ್ಮವಾಗುವುದು.

ಈ ಉಪರ್ಯುಕ್ತ ಕಾರ್ಯಗಳು ಆಗುವಂಥವಲ್ಲ; ಒಂದುವೇಳೆ ಇವು ಆಗಲಾರಂಭಿಸಿದರೆ ಹಿಂಸೆಯಲ್ಲಿ ಧರ್ಮವಾಗುವುದು. ಆದುದರಿಂದ ಹಿಂಸೆಯ ತ್ಯಾಗ ಮಾಡಿ, ದಯೆಯ ಮಾರ್ಗವನ್ನು ತಿಳಿಯುವುದರಲ್ಲಿ ತಮ್ಮ ರಕ್ಷಣೆಯಿದೆ.

ಜೀವಘಾತದಲ್ಲಿ ಪುಣ್ಯವಿಲ್ಲ; ಇದರ ಕುರಿತಾಗಿ ಇನ್ನೂ ಹೇಳುತ್ತಾರೆ,-

**ರಜ ಪೀಲಯ ಣೇಹ ಪಾವಈ ರಜನೀ ರವಿ ವಿಹೋಂತಿ ಣಭ ಣಪಾಯೇ ।**

**ಕಾಯ ಧರೀ ಣಹ ಖಿಪಈ, ತಬ ಹಿಂಸಾ ಸುಖದೇಯ ಣೇಮಾವಿ ॥೧೨೭॥**

**ಗಾಥಾರ್ಥ :-** ಮಳಲನ್ನು ಅರೆಯುವುದರಿಂದ ಎಣ್ಣೆಯಾದರೆ, ರಾತ್ರಿಯಲ್ಲಿ ಸೂರ್ಯನಿದ್ದರೆ, ಗೇಣಿನಿಂದ ಆಕಾಶವನ್ನು ಅಳೆಯಲಾದರೆ, ಶರೀರಧಾರಿಯು ಸಾಯದಿದ್ದರೆ; ನಿಶ್ಚಯದಿಂದ ಹಿಂಸೆಯಲ್ಲಿ ಪುಣ್ಯವಾಗುವುದು.

**ಭಾವಾರ್ಥ :-** ರಜರೂಪದ ಮಳಲನ್ನು ಗಾಣದಲ್ಲಿ ಅರೆಯುವುದರಿಂದ ಒಂದುವೇಳೆ ಎಣ್ಣೆಯು ದೊರೆತರೆ ಹಿಂಸೆಯಲ್ಲಿ ಧರ್ಮಫಲ ದೊರೆಯುವುದು. ರಾತ್ರಿಯಲ್ಲಿ ಸೂರ್ಯನ ಪ್ರಕಾಶವಾದರೆ, ಹಿಂಸೆಯಲ್ಲಿ ಪುಣ್ಯವಾಗುವುದು ಗೇಣು (ಒಂಭತ್ತು ಇಂಚಿನ ಅಳತೆ) ಹಾಕುತ್ತ ಆಕಾಶದ ಅಳತೆ ಮಾಡಲಾದರೆ, ಹಿಂಸೆಯಲ್ಲಿ ಧರ್ಮಫಲವಾಗುವುದು. ದೇಹಧಾರಿಯು ಸದೈವ ಶಾಶ್ವತ ಉಳಿದರೆ ಹಿಂಸೆಯಲ್ಲಿ ಪುಣ್ಯಫಲವಾಗುವುದು.

ಮೇಲೆ ಹೇಳಿದ ಅಸಂಭವ ಕಾರ್ಯಗಳು ಒಂದುವೇಳೆ ಸಂಭವಿಸಿದರೆ ಹಿಂಸೆಯಿಂದ ಪುಣ್ಯವಾಗುವುದು. ಇದನ್ನು ತಿಳಿದು ಧರ್ಮದ ಇಚ್ಛೆಯುಳ್ಳ ಧರ್ಮಾತ್ಮರುಗಳು ದಯಾಭಾವದ ಮಾರ್ಗವನ್ನು ತಿಳಿಯುವುದು ಯೋಗ್ಯವಿದೆ.

ಹಿಂಸೆಯಲ್ಲಿ ಧರ್ಮವಿಲ್ಲವೆಂಬುದನ್ನು ಇನ್ನಷ್ಟು ತಿಳಿಸಿಕೊಡುತ್ತಾರೆ -

**ಜಲ ಪೀಲಯ ಸನೇಹೋ, ಸಾಯರ ಲಂಘಾಯ ಪಾಲ ಮಜ್ಜಾದೋ ।**

**ಣಖಿ ಮುಹತ್ತೈ ಸುರ ಅಘ ದಯ, ತಬ ಹಿಂಸಾ ಫಲ ಸುಹ ಆದಾ ॥೧೨೮॥**

**ಗಾಥಾರ್ಥ :-** ಹಿಂಡಿಯನ್ನು ಅರೆಯುವುದರಿಂದ ಎಣ್ಣೆಯು ಬಂದರೆ, ಸಮುದ್ರವು ತನ್ನ ಸೀಮೆಯ ಉಲ್ಲಂಘನೆ ಮಾಡಿದರೆ, ಶುಭಕಾರ್ಯ ಮಾಡುವುದರಿಂದ ನರಕವಾದರೆ, ಪಾಪದ ಫಲದಲ್ಲಿ ಸ್ವರ್ಗವಾದರೆ ಆಗ ಎಲೈ ಆತ್ಮನೇ ! ಹಿಂಸೆಯ ಫಲವು ಶುಭವಾಗುವುದು.

**ಭಾವಾರ್ಥ :-** ಹೇಗೆ ಮೂರ್ಖನ ಮೂಲಕ ಹಿಂಡಿಯನ್ನು ಅರೆದು ಎಣ್ಣೆ ತಗೆಯ ಬಯಸಿದರೂ, ಅದು ಎಂದೂ ಬರುವುದಿಲ್ಲ. ಒಂದುವೇಳೆ ಹಿಂಡಿಯನ್ನು ಅರೆಯುವುದರಿಂದ ಎಣ್ಣೆಯು ಹೊರಟರೆ ಆಗ ಹಿಂಸೆಯಲ್ಲಿ ಪುಣ್ಯವಾಗುವುದು. ಸಮುದ್ರವು ತನ್ನ ಮರ್ಯಾದೆಯ ಉಲ್ಲಂಘನೆ ಮಾಡಿದರೆ ಹಿಂಸೆಯಲ್ಲಿ ಧರ್ಮದ ಫಲವಾಗುವುದು. ಪಾಪ ಮಾಡುವಂಥವರಿಗೆ ಸುಗತಿಯ ಪ್ರಾಪ್ತಿಯಾದರೆ; ಒಂದುವೇಳೆ ಎಂದಾದರೂ ಪಾಪಿಯು ದೇವನಾದರೆ, ಹಿಂಸೆಯಲ್ಲಿ ಪುಣ್ಯವಾಗುವುದು. ಧರ್ಮಮಾಡುವಂಥವರು ಸ್ವರ್ಗ-ಮೋಕ್ಷಕ್ಕೆ ಪ್ರಾಪ್ತರಾಗುತ್ತಾರೆ; ಒಂದುವೇಳೆ ಧರ್ಮ ಮಾಡುವುದರಿಂದ ನರಕವಾದರೆ ಆಗ ಹಿಂಸೆಯಿಂದ ಧರ್ಮಲಾಭವಾಗುವುದು.

ಹೇಗೆ ಮೇಲೆ ಹೇಳಿದ ಕಾರ್ಯಗಳು ಆಗುವುದು ಸಾಧ್ಯವಿಲ್ಲ, ಅದೇ ಪ್ರಕಾರ ಹಿಂಸೆಯಲ್ಲಿ ಶುಭಫಲವಿರುವುದಿಲ್ಲ. ಅದಕ್ಕಾಗಿ ತಾವು ತಮ್ಮ ಕಲ್ಯಾಣ ಬಯಸುತ್ತಿದ್ದರೆ ಸಮತೆಯ ಭಾವಧಾರಣ ಮಾಡಿರಿ, ಅದರಿಂದಲೇ ಸುಖಿಯಾಗುವಿರಿ.

ಪುನಃ ಹಿಂಸೆಯಿಂದ ಧರ್ಮದ ಅಭಾವ ತಿಳಿಸುತ್ತಾರೆ-

**ಜಡ ದವ್ವೋ ಜುವಣಾಣಊ, ಚೇದಣ ದವ್ವೋಯ ಹೋಯ ವಿಣ ಣಾಣೋ ।**

**ಕಲಹೋ ಕಯ ಜಸ ಹೋಈ, ತಬ ಹಿಂಸಾ ಪುಣ್ಯ ದೇಯ ಣೇಮಾಯ ॥೧೨೯॥**

**ಗಾಥಾರ್ಥ ::-** ಅಚೇತನ ದ್ರವ್ಯವು ಜ್ಞಾನ ಸಹಿತವಾಗಿ ಹೋದರೆ, ಚೇತನ ದ್ರವ್ಯವು ಜ್ಞಾನರಹಿತವಾಗಿ ಹೋದರೆ, ಕಲಹದಿಂದ ಕೀರ್ತಿಯಾದರೆ, ಆಗ ನಿಯಮದಿಂದ ಹಿಂಸೆಯು ಪುಣ್ಯದ ಫಲ ಕೊಡುವುದು.

**ಭಾವಾರ್ಥ ::-** ಜೀವವನ್ನು ಹೊರತು ಪಡಿಸಿ ಪುದ್ಗಲ, ಧರ್ಮ, ಅಧರ್ಮ, ಆಕಾಶ ಮತ್ತು ಕಾಲ-ಇವು ಐದು ದ್ರವ್ಯಗಳು ಅನಾದಿಯಿಂದ ಜಡತ್ವ ಭಾವಸಹಿತವಿವೆ. ಇವುಗಳ ಗುಣ ಹಾಗೂ ಪರ್ಯಾಯಗಳು ಕೂಡ ಜಡವಿವೆ. ಈ ಅಜೀವ ದ್ರವ್ಯಗಳಲ್ಲಿ ಜ್ಞಾನದ ಅಭಾವವಿದೆ. ಒಂದುವೇಳೆ ಇವುಗಳಲ್ಲಿ ಜ್ಞಾನವಾದರೆ ಹಿಂಸೆಯಲ್ಲಿ ಧರ್ಮ ಫಲವಾಗುವುದು. ಜೀವನು ಚೇತನಗುಣಸಹಿತ, ನೋಡುವ-ತಿಳಿಯುವಂಥವನಿದ್ದಾನೆ - ಜ್ಞಾನದರ್ಶನದ ಪುಂಜನಿದ್ದಾನೆ. ಕರ್ಮಯೋಗದಿಂದ ಇವನ ಜ್ಞಾನವು ಕುಂದುತ್ತ-ಕುಂದುತ್ತ ಅಕ್ಷರದ ಅನಂತದ ಒಂದು ಭಾಗ ಉಳಿಯುತ್ತದೆ; ಆದರೆ ಜ್ಞಾನದ ಅಭಾವವೆಂದೂ ಆಗುವುದಿಲ್ಲ. ಒಂದುವೇಳೆ ಎಂದಾದರೂ ಜೀವನು ಜ್ಞಾನರಹಿತನಾಗಿ ಹೋದರೆ ಆಗ ಹಿಂಸೆಯಲ್ಲಿ ಧರ್ಮದ ಫಲ ದೊರೆಯುವುದು. ಕಲಹವು ಅಪಕೀರ್ತಿಯ ಕಾರಣವಿದೆ. ಒಂದುವೇಳೆ ಕಲಹ-ಯುದ್ಧ ಮಾಡುವುದರಿಂದ ಜಗತ್ತಿನಲ್ಲಿ ಕೀರ್ತಿಯಾಗತೊಡಗಿದರೆ ಆಗ ಹಿಂಸೆ ಮಾಡುವುದರಿಂದ ಪುಣ್ಯದ ಫಲ ಅರ್ಥಾತ್ ಸುಖವಾಗುವುದು.

ಈ ಉಪರ್ಯುಕ್ತ ಕಾರ್ಯಗಳು ಆಗಿ ಹೋದರೆ ಹಿಂಸೆಯಲ್ಲಿ ಧರ್ಮದ ಫಲ ನಿರಾಕುಲ ಸುಖವಾಗುವುದು; ಅದಕ್ಕಾಗಿ ಎಲೈ ಧರ್ಮಾಭಿಲಾಷಿಗಳೇ ! ಧರ್ಮದ ಸಲುವಾಗಿ ದಯಾಧರ್ಮದ ಸೇವನೆ ಮಾಡಿರಿ.

ಈಗ ಕರುಣೆಯ ಸ್ವರೂಪ ಮತ್ತು ದಯೆಯ ಫಲವನ್ನು ಹೇಳುತ್ತಾರೆ -

**ದೀರಘು ಥಿತಿ ಭೂ ಜಸಯೋ, ಗದ ರಹ ತಣ ಭೋಯ ಇಚ್ಛ ಸುಹ ಹೋಈ ।**
**ಸುರ ಚಕ್ಕಿ ಸುಹ ಸಹ ಲಯ, ಯೇ ಕರುಣಾ ಫಲ ಹೋಯ ಣೇಮಾಏ ॥೧೩೦॥**

**ಗಾಥಾರ್ಥ ::-** ದೀರ್ಘ ಆಯು, ಭೂಮಿಯ ಮೇಲೆ ಕೀರ್ತಿ, ರೋಗರಹಿತ ಶರೀರ, ಮನೋವಾಂಛಿತ ಭೋಗ, ದೇವ, ಚಕ್ರವರ್ತಿಯ ಸುಖಗಳು ಸಹಜವಾಗಿಯೇ ದೊರಕುವುದು - ಇದು ನಿಯಮದಿಂದ ದಯೆಯ ಫಲವೆಂದು ತಿಳಿಯುವುದು.

**ಭಾವಾರ್ಥ ::-** ಪ್ರತಿಯೊಂದು ಭವದಲ್ಲಿ ಈ ಜೀವದ ರಕ್ಷಣೆ ಮಾಡುವಂಥದು ದಯೆಯಿದೆ. ಆ ದಯೆಯ ಭಾವವು ಯಾವಾಗಲೂ ಯಾರಲ್ಲಿ ಇರುತ್ತದೆ, ಅವರ ಆಯುವು ಸಾಗರಗಳವರೆಗೆ ದೀರ್ಘವಿರುತ್ತದೆ. ದಯಾ ಭಾವರಹಿತ ಜೀವಗಳು ಅಲ್ಪಾಯು ಪಡೆದು ಮರಣ ಹೊಂದುತ್ತವೆ. ದಯೆಯ ಫಲದಲ್ಲಿ ಜಗತ್ತಿನಲ್ಲಿ ಸಹಜವಾಗಿಯೇ ಕೀರ್ತಿಯಾಗುತ್ತದೆ. ಯಾವ ಜೀವರುಗಳು ಪರಭವದಲ್ಲಿ ಅನ್ಯರ ಕೀರ್ತಿಯನ್ನು ಕಂಡು ಬೇಸರಪಟ್ಟಿದ್ದಾರೆ. ಯಾರು ಮಹಾ ನಿರ್ದಯ ಭಾವದಿಂದ ಅನ್ಯರ ಕೀರ್ತಿಯನ್ನು ನಷ್ಟ ಮಾಡಿದ್ದಾರೆ; ಆ ಜೀವರುಗಳು ದಯಾರಹಿತ ಭಾವಗಳ ಫಲದಲ್ಲಿ ದಯೆಯಿಂದ ಪ್ರಗಟವಾಗುವಂಥ ಕೀರ್ತಿಯನ್ನು ಲಕ್ಷಾಂತರ ಧನ ವ್ಯಯ ಮಾಡಿಯೂ ಪ್ರಾಪ್ತ ಮಾಡಿಕೊಳ್ಳಲಾಗುವುದಿಲ್ಲ. ಯಶಸ್ಸಿನ ಸಲುವಾಗಿ ಪ್ರಾಣ ಕೊಟ್ಟರೂ-ಸತ್ತು ಹೋದರೂ ಕೂಡ ದಯೆಯಿಲ್ಲದೆ ಯಶಸ್ಸು ದೊರಕುವುದಿಲ್ಲ. ದೀನನಾಗಿ ಮಾತನಾಡಿದರೂ, ಎಲ್ಲರ ಕುರಿತಾಗಿ ನಮ್ರೀಭೂತನಾಗಿ ಮಸ್ತಕ ಮಣಿಸಿದರೂ ಯಶಸ್ಸು ಸಿಗುವುದಿಲ್ಲ. ಯಾರು ಪರಭವದಲ್ಲಿ ಅನ್ಯರ ಮಾನ-ಪ್ರಾಣದ ರಕ್ಷಣೆ ಮಾಡಿದ್ದಾರೆ, ಮನ-ವಚನ-ಕಾಯದಿಂದ ಎಲ್ಲರಿಗೆ ಸಾತಾ ಒದಗಿಸಿದ್ದಾರೆ. ಆ ಜೀವರುಗಳು ಸಹಜವಾಗಿಯೇ ಜಗತ್ತಿನಲ್ಲಿ ಯಶಸ್ಸು ಪಡೆಯುತ್ತಾರೆ-ಹೀಗೆ ಯಶಸ್ಸು ದಯೆಯ ಫಲವಿದೆ.

ನಿರೋಗ ಶರೀರ ಪಡೆಯುವುದು, ಜೀವನ ತುಂಬೆಲ್ಲ ಸುಖಿಯಾಗಿರುವುದು, ದಯಾಭಾವದ ಫಲವಿದೆ. ಮನೋವಾಂಛಿತ ಸುಖ ದೊರೆವುದು ದಯಾಭಾವದ ಫಲವಿದೆ. ದಯೆಯ ಅಭಾವದಲ್ಲಿ ತೃಣರೂಪದ ಹುಲ್ಲನ್ನು

ಕೂಡ ಈ ಜೀವನು ಹೊಟ್ಟೆತುಂಬ ತಿನ್ನುವ ಸಾಧ್ಯತೆಯಿಲ್ಲ. ಆಹಾರ ಹಾಗೂ ಶರೀರದಿಂದ ಸದೈವ ಅತ್ಯಧಿಕ ದುಃಖಿಯಾಗಿರುತ್ತಾನೆ, ಅದು ದಯಾರಹಿತ ಭಾವದ್ದೇ ಮಾಹಾತ್ಮ್ಯವಿದೆ. ದೇವಗಳ ವಿವಿಧ ಭೋಗ, ಅಸಂಖ್ಯಾತ ದ್ವೀಪ ಸಮುದ್ರಗಳಲ್ಲಿ ಗಮನ, ನಂದೀಶ್ವರ, ಕುಂಡಲಗಿರಿ, ರುಚಕಗಿರಿ ದ್ವೀಪಗಳಲ್ಲಿ ಸ್ಥಿತವಿರುವ ಭಗವಂತರ ಮಂದಿರಗಳ ಯಾತ್ರೆ ಮಾಡುವುದು ಇತ್ಯಾದಿ ಶುಭ ಫಲ ಪಡೆಯುವುದು, ಅಸಂಖ್ಯಾತ ದೇವ-ದೇವಿಯರು ಆಜ್ಞೆ ಪಾಲಿಸುವುದು, ಅನೇಕ ದೇವಾಂಗನೆಯರ ಸಮೂಹದ ಸುಖವು ಆಯುವಿರುವವರೆಗೆ ದೊರಕುವುದು ಇದೆಲ್ಲ ದಯೆಯ ಭಾವದ ಫಲವಿದೆ. ಚಕ್ರವರ್ತಿಯ ಹದಿನಾಲ್ಕು ರತ್ನ, ಒಂಭತ್ತು ನಿಧಿ, ತೊಂಭತ್ತಾರು ಸಾವಿರ ರಾಣಿಯರು, ಷಟ್ಖಂಡ ರಾಜ್ಯ ಇತ್ಯಾದಿ ಸುಖವೂ ದಯಾಭಾವದ ಫಲವಿದೆ.

ಈ ಪ್ರಕಾರ ಉಪರ್ಯುಕ್ತ ಒಳ್ಳೆಯ ಫಲ - ದೀರ್ಘಾಯು, ಯಶಸ್ಸು, ನಿರೋಗ ತನು, ವಾಂಛಿತಭೋಗ, ದೇವಸುಖ, ಚಕ್ರವರ್ತಿಯ ಸುಖ - ಇವೆಲ್ಲವೂ ದಯಾಭಾವದ ಫಲವೆಂದು ತಿಳಿಯುವುದು.

ಈಗ ಮತ್ತೆ ದಯಾಭಾವದ ಫಲವನ್ನು ಹೇಳುತ್ತಾರೆ -

**ಸುರತರು ಚಿಂತಾರಯಣೋ, ಕಾಮಧೇಯೋ ಯ ಪಾಸ ಪಾಸಾಣಉ ।**

**ಚಿಂತಾಲತಾ ಸುಸಂಗೋ, ಯೇ ಸಹು ಕಿಪ್ಪಾಯ ಭಾವ ಫಲ ಆಯಾ ।।೧೩೧।।**

**ಗಾಥಾರ್ಥ :-** ಕಲ್ಪವೃಕ್ಷ, ಚಿಂತಾಮಣಿರತ್ನ, ಕಾಮಧೇನು, ಪಾರಸಪಾಷಾಣ (ಪರುಷಮಣಿ), ಚಿತ್ರಾಬೇಲಿ, ಸತ್ಸಂಗ - ಎಲೈ ಆತ್ಮನೇ ! ಇವೆಲ್ಲವೂ ದಯಾಭಾವದ ಫಲವಿವೆ.

**ಭಾವಾರ್ಥ :-** ಹತ್ತು ಪ್ರಕಾರದ ಕಲ್ಪವೃಕ್ಷಗಳಿಂದ ಕೊಡಲ್ಪಡುವ ಉತ್ತಮ ಭೋಗಗಳು ದಯಾಭಾವದ ಫಲವಿವೆ. ಮನೋವಾಂಛಿತ ಭೋಗಸುಖವನ್ನು ಕೊಡುವಂಥ ಚಿಂತಾಮಣಿ ರತ್ನ ದೊರಕುವುದು ಕೃಪಾಭಾವದ ಫಲವಿದೆ. ಐಚ್ಛಿಕ ಸುಖವನ್ನು ಕೊಡುವಂಥ ಕಾಮಧೇನು ದೊರಕುವುದೂ ದಯಾಭಾವದ ಮಾಹಾತ್ಮ್ಯವಿದೆ. ಕುಧಾತುವನ್ನು ಚಿನ್ನವನ್ನಾಗಿಸುವ, ಸಂಪದದ ಸಾಗರರೂಪ ಪಾರಸ ಮಣಿಯ ಪ್ರಾಪ್ತಿಯೂ ದಯಾಭಾವದ ಫಲವಿದೆ. ಅಲ್ಪವಸ್ತುವನ್ನು ಅಪರಿಮಿತ ಮಾಡುವಂಥ ಚಿತ್ರಾಬೇಲಿಯೆಂಬ ಹೆಸರಿನ ವನಸ್ಪತಿಯನ್ನು ಪ್ರಾಪ್ತಮಾಡಿಕೊಳ್ಳುವುದು ಕೂಡ ದಯಾಭಾವದ ಫಲವಿದೆ. ಪಾಪದ ಉದಯದಲ್ಲಿ ನಿರ್ದಯ ಭಾವಗಳ ಫಲದಿಂದ ಅನಂತಕಾಲ ಕುಸಂಗದಲ್ಲಿ ನಡೆಯುತ್ತ ಬಂದಿದೆ. ಅದರ ಸಂಬಂಧದಲ್ಲಿ ಅನೇಕ ತ್ರಸ-ಸ್ಥಾವರಗಳ ಪರ್ಯಾಯಗಳ ಧಾರಣ ಮಾಡಿ ದುಃಖದಲ್ಲಿ ಮುಳುಗುವುದು ಅದಯೆಯ ಫಲವಿದೆ. ಜೀವದ ಸಂಸಾರ ದಡವು ಸಮೀಪಿಸಿದ ಮೇಲೆ ಅವನಿಗೆ ಸತ್ಸಂಗವು ಪ್ರಾಪ್ತವಾಗುತ್ತದೆ; ಈ ಸತ್ಸಂಗದ ಪ್ರಾಪ್ತಿಯು ಕೂಡ ದಯಾಭಾವದ ಫಲವಿದೆ.

ಉಪರ್ಯುಕ್ತ ಸುರತರು, ಚಿಂತಾಮಣಿ, ಕಾಮಧೇನು, ಪಾರಸಮಣಿ, ಚಿತ್ರಾಬೇಲಿ, ಸತ್ಸಂಗ - ಇವು ಮೂರು ಲೋಕದಲ್ಲಿ ಉತ್ಕೃಷ್ಟ ವಸ್ತುಗಳಿವೆ ಮತ್ತು ಇವೆಲ್ಲವು ದಯಾಭಾವದ ಫಲದಿಂದ ದೊರಕುತ್ತವೆ. ಎಂಬುದನ್ನು ತಿಳಿದು ವಿವೇಕಿಗಳಾದ ಪುರುಷರು ಅನ್ಯಜೀವಗಳ ರಕ್ಷಣೆಯರೂಪ ಭಾವವಿಡುವುದು ಯೋಗ್ಯವಿದೆ.

ದಯಾಭಾವದ ಫಲವನ್ನು ಇನ್ನಷ್ಟು ಹೇಳುತ್ತಾರೆ -

**ಸಹು ಹಿತ ಕಾಯ ಪಜ್ಜಾಓ, ಆದೇ ಸಹು ಥಾನ ಸುಂದ ತಣ ಹೋಈ ।**

**ಇಂದ ಅಹಮಿಂದ ಣಗಂದಲು, ಕಿಪ್ಪಾ ಭಾವೋಯ ಹೋಯ ಫಲ ಯೇ ಹೋ ।।೧೩೨।।**

**ಗಾಥಾರ್ಥ :-** ಎಲ್ಲರ ಸಲುವಾಗಿ ಹಿತಕಾರೀ ಪರ್ಯಾಯ, ಎಲ್ಲ ಸ್ಥಾನಗಳಲ್ಲಿ ಆದರ, ಸುಂದರ ಶರೀರವಿರುವುದು, ಇಂದ್ರಪದ, ಅಹಮಿಂದ್ರಪದ, ನಾಗೇಂದ್ರಪದ-ಇವು ದಯಾಭಾವದ ಫಲವಿವೆ.

**ಭಾವಾರ್ಥ :-** ಯಾರ ಮುಖ ನೋಡುವುದರಿಂದಲೇ ಸಮಸ್ತ ಜೀವರುಗಳಿಗೆ ಸುಖ ಉತ್ಪನ್ನವಾಗುವುದು,

ವಿಶ್ವಾಸ ಉತ್ಪನ್ನವಾಗುವುದು, ಮೋಹವುತ್ಪುನ್ನವಾಗುವುದು-ಅಂಥ ಸುಂದರ ಶರೀರ ಪ್ರಾಪ್ತವಾಗುವುದು, ದಯಾಭಾವದ ಫಲವಿದೆ. ದಯಾಭಾವದ ಅಭಾವದಲ್ಲಿ ಮಹಾಕುರೂಪ, ಭಯಾನಕ, ರೌದ್ರ ಆಕಾರಮಯ, ಎಲ್ಲರಿಗೆ ಅರತಿಯನ್ನು ಉತ್ಪನ್ನ ಮಾಡುವಂಥ ಶರೀರವು ಪ್ರಾಪ್ತವಾಗುತ್ತದೆ. ಆದೇಯ ಕರ್ಮದ ಉದಯವುಳ್ಳವನಾಗುವುದರಿಂದ ಎಲ್ಲರಿಗೂ ಪ್ರಿಯವೆನಿಸುವ, ಎಲ್ಲ ಕಡೆಗೂ ಮಾನ-ಸನ್ಮಾನದ ಪ್ರಾಪ್ತಿ ಮಾಡಿಕೊಳ್ಳುವಂಥವನಾಗುವುದು, ನೋಡುತ್ತಿರುವಂತೆಯೇ ಎಲ್ಲರೂ ಪ್ರೀತಿಯ ಭಾವವನ್ನಿಟ್ಟುಕೊಳ್ಳುವಂಥವರು ದೊರಕುವುದು, ದಯಾಭಾವದ್ದೇ ಫಲವಿದೆ. ಕಾಮದೇವನ ಶರೀರದ ಶೋಭೆಯನ್ನು ಜಯಿಸುವಂಥ, ದೇವಗಳ ಮನಸ್ಸನ್ನು ಮೋಹಿಸುವಂಥ, ಅದ್ಭುತ ಶೋಭೆಯುಳ್ಳ ಮಹಾಸುಂದರ ಶರೀರದ ಪ್ರಾಪ್ತಿಯಾಗುವುದು ದಯಾಭಾವದ ಫಲವಿದೆ. ಅಶುಭ ಕರ್ಮದ ಉದಯದಿಂದ ದಯಾರಹಿತ, ಗ್ಲಾನಿಯನ್ನುತ್ಪನ್ನ ಮಾಡುವಂಥ, ವಿಕಟ, ಇಷ್ಟವಾಗದ ಕುರೂಪ ಶರೀರದ ಪ್ರಾಪ್ತಿಯಾಗುವುದು ನಿರ್ದಯೀ ಪರಿಣಾಮಗಳ ಫಲವಿದೆ.

ದೇವಗಳ ಅಧಿಪತಿ, ಅಸಂಖ್ಯಾತ ದೇವ-ದೇವಿಯರು ಆಜ್ಞೆ ಮನ್ನಿಸುವಂಥವರಿರುವುದು, ಅವರೆಲ್ಲ ಬಂದು-ಬಂದು ಭಕ್ತಿಪೂರ್ವಕ ತಮ್ಮ ಮಸ್ತಕ ಮಣಿಸುತ್ತಾರೆ. ಎಲ್ಲ ದೇವಗಳು ಸ್ತುತಿ ಮಾಡುವಂಥ ಇಂದ್ರಪದದ ಪ್ರಾಪ್ತಿಯೂ ದಯಾಭಾವದ ಫಲವಿದೆ. ಕಲ್ಪಾತೀತ ದೇವಗಳ ಮಹಿಮೆಯು ವಚನಾತೀತವಿದೆ. ಹದಿನಾರು ಕಲ್ಪವಾಸೀ ಸ್ವರ್ಗಗಳ ಇಂದ್ರ ದೇವಗಳ ಸುಖವು ಎಷ್ಟಿದೆ, ಅದಕ್ಕಿಂತಲೂ ಅಧಿಕ ಸುಖವು ಕಲ್ಪಾತೀತ ಅಹಮಿಂದ್ರರುಗಳದ್ದಿದೆ.

**ಪ್ರಶ್ನೆ :-** ಅಹಮಿಂದ್ರರಿಗೆ ಕಲ್ಪವಾಸೀ ದೇವ ಇಂದ್ರರುಗಳಿಗಿಂತ ಅಧಿಕ ಸುಖವಿದೆಯೆಂದು ತಾವು ಹೇಳುವಿರಿ. ಕಲ್ಪವಾಸೀ ದೇವ ಇಂದ್ರರಿಗಂತೂ ಅನೇಕ ದೇವಾಂಗನೆಯರಿದ್ದಾರೆ, ಅವರೊಂದಿಗೆ ಸುಖ ಭೋಗಿಸುತ್ತಾರೆ, ಅನೇಕ ದೇವಗಳು ಬಂದು ಬಂದು ಮಸ್ತಕ ಮಣಿಸುತ್ತಾರೆ. ಅವರು ಅಸಂಖ್ಯಾತ ದೇವಗಳ ಅಧಿಪತಿ ಇದ್ದಾರೆ. ಪಂಚೇಂದ್ರಿಯ ಸಂಬಂಧದ ಸುಖ, ಮಾನ ಪೋಷಣೆಯ ಸುಖಗಳೆಲ್ಲವೂ ಪ್ರತ್ಯಕ್ಷ ಇಂದ್ರರಿಗೆ ಕಂಡು ಬರುತ್ತವೆ. ಆದರೆ ಅಹಮಿಂದ್ರರಿಗೆ ದೇವಾಂಗನೆಯರಿಲ್ಲ, ಆಜ್ಞಾಕಾರಿ ಸೇವಕ-ದೇವಗಳಾರೂ ಇಲ್ಲವೆಂದ ಮೇಲೆ ಕಲ್ಪವಾಸೀ ಇಂದ್ರರಿಗಿಂತ ಅವರಿಗೆ ಅಧಿಕ ಸುಖವು ಹೇಗೆ ಸಂಭವವಿದೆ ?

**ಉತ್ತರ :-** ಎಲೈ ಭವ್ಯನೇ ನೀನು ಚಿತ್ತದ ಏಕಾಗ್ರತೆಯಿಂದ ಆಲಿಸು! ಸುಖದ ಭೇದಗಳು ೧. ಸಂಕ್ಲೇಶತೆಯಿಂದ ಕೂಡಿದ ಸುಖ. ೨. ನಿರಾಕುಲತೆಯಿಂದ ಕೂಡಿದ ಸುಖವೆಂದು ಎರಡು ಇವೆ. ನಿರಾಕುಲ ಸುಖವು ಸಂಕ್ಲೇಶ ಸುಖಕ್ಕಿಂತ ಮಹಾನವಿದೆ. ಹೇಗೆ ಯಾವನೋ ಓರ್ವ ಮನುಷ್ಯನು ರತ್ನಗಳ ಗಂಟನ್ನು ತಲೆಯ ಮೇಲಿಟ್ಟುಕೊಂಡು ಉತ್ತಮ ಮಿಠಾಯಿಯನ್ನು ತಿನ್ನುತ್ತ ತನ್ನ ಮನೆಯ ಕಡೆಗೆ ಹೊರಟಿದ್ದಾನೆ, ಅದರಿಂದ ಸುಖಿಯಿದ್ದಾನೆ. ಮತ್ತೊಬ್ಬನು ತನ್ನ ಮನೆಯಲ್ಲಿ ಕುಳಿತುಕೊಂಡು ಶೀತಲ ಜಲವನ್ನು ಕುಡಿಯುತ್ತ, ಉತ್ತಮ ಮಿಠಾಯಿಯನ್ನು ತಿನ್ನುತ್ತ ಸುಖಿಯಿದ್ದಾನೆ. ಅವರಿಬ್ಬರಲ್ಲಿ ಯಾರು ವಿಶೇಷ ಸುಖಿಯಿದ್ದಾರೆಂಬುದರ ವಿಚಾರ ಮಾಡಿರಿ. ತಲೆಯ ಮೇಲೆ ಗಂಟನ್ನಿಟ್ಟುಕೊಂಡು ಮಿಠಾಯಿ ತಿನ್ನುತ್ತ, ದಾರಿ ನಡೆಯುವಂಥವನಿಗಂತೂ ಆಕುಲತೆಯಿಂದ ಕೂಡಿದ ಸುಖವಿದೆ ಮತ್ತು ತಲೆಯ ಮೇಲೆ ಭಾರವಿಲ್ಲದೆ, ಒಂದೇ ಸ್ಥಾನದಲ್ಲಿ ಕುಳಿತುಕೊಂಡು ಮಿಠಾಯಿ ತಿನ್ನುವಂಥವನಿಗೆ ನಿರಾಕುಲ ಸುಖವಿದೆ. ಕಲ್ಪವಾಸಿಗಳ ಸುಖವಂತೂ ತಲೆಯ ಮೇಲೆ ಗಂಟನ್ನು ಇಟ್ಟುಕೊಂಡಿರುವವನ ಸಮಾನವಿದೆ ಮತ್ತು ಅಹಮಿಂದ್ರರ ಸುಖವು ಒಂದು ಸ್ಥಾನದಲ್ಲಿ ಕುಳಿತಿರುವವನ ಸಮಾನವಿದೆ.

ಅಲ್ಲದೇ ವ್ರತೀ ಪುರುಷರಂತೂ ಕಷಾಯಗಳ ಮಂದತೆಯ ಕಾರಣ ಸುಖಿಯಿದ್ದಾರೆ ಮತ್ತು ದೇವ, ಇಂದ್ರ, ಚಕ್ರವರ್ತಿಗಳು ಸಂಕ್ಲೇಶ ಸಹಿತ ಸುಖಿಯಿದ್ದಾರೆ. ಆದುದರಿಂದ ದೊಡ್ಡ-ದೊಡ್ಡ ಪದಗಳ ಧಾರಕ ದೇವ, ಇಂದ್ರ, ಚಕ್ರವರ್ತಿ ಮೊದಲಾದವರು ವ್ರತೀ ಪುರುಷರ ಪೂಜೆ ಮಾಡುತ್ತಾರೆ, ಶುಶ್ರೂಷೆ ಮಾಡುತ್ತಾರೆ ಮತ್ತು 'ಓ

ಗುರುಗಳೇ ! ತಮ್ಮ ಭಕ್ತಿಯ ಫಲದಲ್ಲಿ ನಮಗೂ ತಮ್ಮ ಸಮಾನ ನಿರಾಕುಲ, ಸ್ವಾಧೀನ ಸುಖವಾಗಲಿ ನಮ್ಮೊಳಗೆ ಕೂಡ ಶಾಂತಿಮಯ ಭಾವವು ಪ್ರಕಟವಾಗಲೆ'ಂದು ಬಯಸುತ್ತಾರೆ-ಯಾಚಿಸುತ್ತಾರೆ. ಅದರಲ್ಲಿಯೂ ನಿರಾಕುಲ ಸುಖದ್ದೇ ಮಹಿಮೆಯು ಪ್ರಕಟವಾಗುತ್ತದೆ. ಅದೇ ಪ್ರಕಾರ ಇಂದ್ರ-ದೇವಗಳ ಸುಖವಂತೂ ಆಕುಲತೆಯಿಂದ ಕೂಡಿರುವಂಥದ್ದಿದೆ ಮತ್ತು ಕಲ್ಪಾತೀತರ ಸುಖವು ನಿರಾಕುಲ, ಮಂದ ಕಷಾಯರೂಪವಿದೆ - ಈ ಪ್ರಕಾರ ಕಲ್ಪವಾಸಿಗಳ ಸುಖಕ್ಕಿಂತ ಕಲ್ಪಾತೀತರ ಸುಖವು ಅಧಿಕವಿದೆಯೆಂದು ತಿಳಿಯುವುದು.

ಯಾವ ಪ್ರಕಾರ ತುರಿಕೆ ರೋಗಿಗೆ ಒಂದು ಕಾಷ್ಟದ ತುಂಡು ದೊರಕಿದೆ. ಅವನು ಆ ಕಾಷ್ಟದ ತುಂಡಿನಿಂದ ತನ್ನ ಶರೀರವನ್ನು ತುರಿಸಿಕೊಂಡು ಸುಖಿಯಾಗುತ್ತಾನೆ. ವಾಸ್ತವದಿಂದ ನೋಡಿದರೆ ಆ ಕಾಷ್ಟದಲ್ಲಿ ಸುಖವೆಲ್ಲಿದೆ ? ಆದರೆ ಇವನ ಶರೀರದಲ್ಲಿ ತುರಿಕೆಯ ರೋಗವಿದೆ, ಅದನ್ನು ಕಾಷ್ಟದಿಂದ ತುರಿಸಿಕೊಳ್ಳುವುದರಿಂದ ತುರಿಕೆಯ ದುಃಖವು ಸ್ವಲ್ಪ ಕಡಿಮೆಯಾಗುವುದರಿಂದ ಸುಖಿಯಾದೆನೆಂದು ಮನ್ನಿಸುತ್ತಾನೆ. ಬೇರೊಬ್ಬ ಪುರುಷನು ತುರಿಕೆ ರೋಗ ರಹಿತನಿರುವುದರಿಂದ ಸುಖಿಯಿದ್ದಾನೆ. ಅವರಿಬ್ಬರಲ್ಲಿ ತುರಿಕೆ ರೋಗಿಯ ಅಪೇಕ್ಷೆಯಿಂದ ನಿರೋಗಿಯು ಸುಖಿಯಿದ್ದಾನೆ.

ಈ ಪ್ರಕಾರ ಎಲೈ ಭವ್ಯನೇ ! ದೇವಾಂಗನೆಯರ ಸುಖದ ವಾಂಛಾರೂಪ ತುರಿಕೆಯ ರೋಗದಲ್ಲಿ ದೇವಾಂಗನೆಯರ ನಿಮಿತ್ತವು ದೊರೆತ ಮೇಲೆ ಸ್ವಲ್ಪ ಸುಖಿಯಾಗುತ್ತಾನೆ, ಆದರೆ ಈ ಸುಖವಂತೂ ತುರಿಕೆ ರೋಗಿಯ ಸುಖದ ಸಮಾನವಿದೆ. ಕಾಮರೂಪದ ತುರಿಕೆಯುಂಟಾದ ಮೇಲೆ ದೇವಾಂಗನೆಯರರೂಪದ ಕಾಷ್ಟದಿಂದ ತುರಿಸಿಕೊಂಡು ಸುಖಿಯಾಗುತ್ತಾನೆ. ಕಲ್ಪವಾಸೀ ದೇವ-ಇಂದ್ರರುಗಳ ದೇವಾಂಗನೆಯರಿಗೆ ಸಂಬಂಧಿತ ಸುಖವಂತೂ ಹೀಗಿದೆ ಮತ್ತು ಅಹಮಿಂದ್ರರ ಸುಖವು ತುರಿಕೆ ರಹಿತವಿದೆ-ನಿರೋಗಿ ಪುರುಷನ ಸಮಾನವಿದೆ. ಆ ಕಲ್ಪಾತೀತರಿಗೆ ಕಾಮರೂಪ ತುರಿಕೆ ರೋಗವಿಲ್ಲದಿರುವುದರಿಂದ ಅವರು ಪರಮ ಸುಖಿಯಿದ್ದಾರೆ. ಕಲ್ಪವಾಸಿಗಳಿಗೆ ಕಾಮರೋಗವಿದೆ ಮತ್ತು ಕಲ್ಪಾತೀತರಿಗೆ ರೋಗ ರಹಿತ ಸುಖವಿದೆ - ಎಂಬುದು ನಿನ್ನ ಪ್ರಶ್ನೆಯ ಉತ್ತರವಿದೆ.

ಹೀಗೆ ಅಹಮಿಂದ್ರರ ಪದವು ಕೂಡ ಉತ್ತಮ ದಯೆಯ ಫಲವಿದೆ. ಭವನವಾಸೀ ದೇವಗಳ ಅಧಿಪತಿ ನಾಗೇಂದ್ರ ಪದವು ಕೂಡ ಕರುಣೆಯ ಫಲವಿದೆ. ಈ ಪ್ರಕಾರ ಎಲೈ ಭವ್ಯೋತ್ತಮನೇ ! ಉಪರ್ಯುಕ್ತ ಉತ್ಕೃಷ್ಟ ಪದಗಳ ಸಂಬಂಧದ ಸರ್ವ ಸುಖವು ದಯಾಭಾವದ ಫಲವಿದೆಯೆಂಬುದನ್ನು ತಿಳಿದು ವಿವೇಕವಂತರು ಸರ್ವಹಿತಕಾರಿ ದಯೆಯನ್ನು ಧಾರಣ ಮಾಡುವುದು ಯೋಗ್ಯವಿದೆ.

ಈಗ ದಯಾಭಾವದ ಮಹಿಮೆಯನ್ನು ಮತ್ತಷ್ಟು ಹೇಳುತ್ತಾರೆ -

**ತಣ ವೀಜಯ ಬಹು ದಾಸಊ, ಭಯ ರಹಿಯೋ ಸೋಕತೀತ ಚತುಯಾಯೋ ।**
**ತಣಾಂತ ಲವ ಚಿರ ಸುಹಿಯೋ, ಏ ಕಿಪ್ಪಾ ಫಲ ಹೋಯ ಸುಹ ಆದಾ ॥೧೩೩॥**

**ಗಾಥಾರ್ಥ** :- ತನುವಿನ ವೀರ್ಯ, ಬಹಳಷ್ಟು ದಾಸರು, ಭಯರಹಿತತೆ, ಶೋಕ ರಹಿತತೆ, ಚತುರತೆ, ತನುವಿನ ಅಂತ್ಯದವರೆಗೆ - ಬಹುಕಾಲದವರೆಗೆ ಸುಖಿಯಿರುವುದು, ಎಲೈ ಭವ್ಯನೇ ! ಇವೆಲ್ಲವೂ ದಯಾಭಾವದ ಫಲವಿವೆ.

**ಭಾವಾರ್ಥ** :- ಶರೀರದ ಸರ್ವೋತ್ಕೃಷ್ಟ ವೀರ್ಯ-ಬಲವಿರುವುದು. ಹೇಗೆ ಚಕ್ರವರ್ತಿಯಲ್ಲಿ ಆರು ಖಂಡದ ಮನುಷ್ಯರಿಗಿಂತ ಅಧಿಕ ಪರಾಕ್ರಮವಿರುತ್ತದೆ - ಅಂಥ ಬಲವು ಪ್ರಾಪ್ತವಾಗುವುದು; ಮೂರು ಖಂಡದ ಮನುಷ್ಯರಲ್ಲಿ ಎಷ್ಟು ಪರಾಕ್ರಮವಿರುತ್ತದೆ, ಅಷ್ಟು ಪರಾಕ್ರಮವು ಒಬ್ಬ ವಾಸುದೇವ ಎಂದರೆ ಅರ್ಧಚಕ್ರವರ್ತಿಯಲ್ಲಿ ಇರುತ್ತದೆ - ಅಂಥ ಬಲವಿರುವುದು; ಕೋಟಿ ಯೋಧರ ಬಲವು ಓರ್ವ ಪುರುಷನಲ್ಲಿ ಇರುವಂಥ ಕೋಟಿಭಟನ

ಬಲ ಪ್ರಾಪ್ತವಾಗುವುದು. ಸಾವಿರ ಯೋಧರನ್ನು ಜಯಿಸುವಂಥ ಸಹಸ್ರ ಭಟನ ಬಲ ಪ್ರಾಪ್ತವಾಗುವುದು; ಶತಭಟರನ್ನು ಜಯಿಸುವಂಥ ಶತಭಟನಾಗುವುದು - ಇಂಥ ಎಲ್ಲ ಪರಾಕ್ರಮಗಳು ಒಂದು ದಯೆಯ ಫಲವಿವೆ.

ಯಾವ ಜೀವರು ಹಿಂಸೆಯ ಮೂಲಕ ಅನ್ಯ ಜೀವಗಳ ಘಾತ ಮಾಡಿದ್ದಾರೆ, ಆ ಜೀವಗಳು ಭವಾಂತರದಲ್ಲಿ ಹೀನ ಶಕ್ತಿಯಧಾರಕ-ಏಕೇಂದ್ರಿಯ, ವಿಕಲೇಂದ್ರಿಯಗಳಲ್ಲಿ ಉತ್ಪನ್ನರಾಗುತ್ತಾರೆ. ಒಂದುವೇಳೆ ಎಂದಾದರೂ ಪಂಚೇಂದ್ರಿಯ ತಿರ್ಯಂಚ ಅಥವಾ ಮನುಷ್ಯರಲ್ಲಿ ಉತ್ಪನ್ನರಾದರೆ ಅವರು ದೀನ, ರೋಗಿ, ಶಕ್ತಿರಹಿತ, ದರಿದ್ರಿ, ಹೀನ ಭಾಗ್ಯರಾಗುತ್ತಾರೆ. ಇದು ಅನ್ಯ ಜೀವರುಗಳನ್ನೆಲ್ಲ ದೀನ ತಿಳಿದು, ಅವುಗಳ ಘಾತ ಮಾಡಿರುವುದರ ಫಲವಿದೆ.

ಅನೇಕ ಸೇವಕರು, ದೊಡ್ಡ-ದೊಡ್ಡ ಸಾಮಂತರು, ಮಹಾಬಲಶಾಲಿ ಯೋಧರು, ಪರಾಕ್ರಮಧಾರಿಯ ಎದುರಿಗೆ ಬಂದು-ಬಂದು ಕೈಮುಗಿದು ನಮಸ್ಕಾರ ಮಾಡುತ್ತಾರೆ-ಅಂಥ ಬಲಶಾಲಿ, ಸಾವಿರಾರು ದೊರೆಗಳು ಯಾರ ಸೇವೆ ಮಾಡುತ್ತಾರೆ, ಆಜ್ಞೆ ಕೇಳುತ್ತಾರೆ, ವಿನಯ ಮಾಡುತ್ತಾರೆ - ಅಂಥ ಪದದ ಪ್ರಾಪ್ತಿಯಾಗುವುದು ಕೂಡ ದಯಾಭಾವದ ಫಲವಿದೆ. ಸ್ವಯಂ ಅನ್ಯ ಜೀವಗಳ ಸೇವೆ ಮಾಡುವುದು, ಕರಬದ್ಧನಾಗಿ ಆಜ್ಞೆ ಬೇಡುವುದು ಅದು ಹಿಂಸಾಭಾವದ ಫಲವಿದೆ. ಯಾರು ಪೂರ್ವಭವದಲ್ಲಿ ಬಾಣ, ಗುಂಡು, ಕೋಲು, ಖಡ್ಗ, ಮುಷ್ಠಿಯಿಂದ ಗುದ್ದುವುದು, ಶಸ್ತ್ರಾದಿಗಳಿಂದ ಅನ್ಯರನ್ನು ಭಯಭೀತಗೊಳಿಸುವುದನ್ನು ಮಾಡಿದ್ದಾರೆ; ಆ ಪಾಪದ ಫಲದಲ್ಲಿ ಭವಾಂತರದೊಳಗೆ ಮನುಷ್ಯ-ಪಶುಗಳಾಗಿ ಉತ್ಪನ್ನರಾಗಿ ಭಯಾಕ್ರಾಂತರಾಗಿರುತ್ತಾರೆ. ಅವರ ಹೃದಯವು ಸದಾಭಯದಿಂದ ಕಂಪಿಸುತ್ತಿರುತ್ತದೆ.

**ಭಯದ ಭೇದಗಳು**-ಈ ಭವದ ಭಯ, ಪರಭವದ ಭಯ, ಮರಣದ ಭಯ, ರೋಗದ ಭಯ, ಅರಕ್ಷೆಯ ಭಯ, ಅಗುಪ್ತಿಯ ಭಯ ಮತ್ತು ಆಕಸ್ಮಿಕ ಭಯವೆಂದು ಏಳು ಇವೆ. ಅವುಗಳ ಸಾಮಾನ್ಯ ಸ್ವರೂಪ ಹೇಳಲಾಗುವುದು.

೧. ಈ ಪರ್ಯಾಯದಲ್ಲಿ ನನಗೆ ಯಾವುದೇ ದುಃಖವಾಗದಿರಲಿ - ಎಂದು ವಿಚಾರ ಮಾಡುವುದು ಈ ಭವದ ಭಯವಿದೆ.

೨. ಪರಭವದಲ್ಲಿ ನನಗೆ ತಿರ್ಯಂಚ ಗತಿಯ ದುಃಖವಾಗದಿರಲಿ, ನರಕಗತಿಯ ದುಃಖವಾಗದಿದ್ದರೆ ಒಳ್ಳೆಯದು - ಇಂಥ ವಿಚಾರದ ಹೆಸರು ಪರಲೋಕಭಯವಿದೆ.

೩. ಮರಣದ ಸಮಯದಲ್ಲಿ ಮಹಾವೇದನೆಯಾಗುತ್ತದೆಯೆಂದು ಕೇಳಿದ್ದೇನೆ, ಅದಕ್ಕಾಗಿ ಮರಣವಾಗದಿದ್ದರೆ ಒಳ್ಳೆಯದಿದೆ ಅಥವಾ ಮರಣದ ಸಮಯದಲ್ಲಿ ನನಗೆ ವೇದನೆಯಾಗದಿದ್ದರೆ ಒಳ್ಳೆಯದಿದೆಯೆಂಬ ವಿಚಾರದ ಹೆಸರು ಮರಣ ಭಯವಿದೆ.

೪. ಬೇರೆಯವರ ವಿವಿಧ ರೋಗ ವೇದನೆಯನ್ನು ಕಂಡು ಭಯಭೀತನಾಗುವುದು, ದೊಡ್ಡ ದೊಡ್ಡ ರೋಗಗಳ ದುಃಖವು ಮಹಾನವಿರುತ್ತದೆ, ನನಗೆ ಯಾವ ದೊಡ್ಡ ರೋಗವಾಗದಿರಲಿ, ಅಂಥ ಯಾವ ರೋಗವಾಗದಿದ್ದರೆ ಒಳ್ಳೆಯದು - ಈ ಪ್ರಕಾರ ಭಯಭೀತನಾಗಿರುವುದು ರೋಗಭಯವಿದೆ.

೫. ನನಗೆ ಯಾರೂ ಸಹಾಯಕರಿಲ್ಲ, ಸಹಾಯವಿಲ್ಲದೇ ಸುಖವು ಹೇಗಾಗುವುದು ? ನಾನು ಅಶಕ್ತನಿದ್ದೇನೆ - ಎಂದು ಭಯರೂಪನಾಗಿ ವಿಚಾರ ಮಾಡುವುದು ಅದು ಅರಕ್ಷಾ ಭಯವಿದೆ.

೬. ನನಗೆ ಇಲ್ಲಿ ಮತ್ತು ಅಲ್ಲಿ ಯಾವ ಭಯವಾಗದಿರಲಿ; ನಾನು ಯಾವ ಮನೆಯಲ್ಲಿದ್ದೇನೆ ಆ ಮನೆಯು ಬಿದ್ದು ಹೋಗದಿರಲಿ, ಈ ಮನೆಯಲ್ಲಿ ಯಾವುದಾದರೂ ಸರ್ಪ ಮೊದಲಾದ ವಿಷಜಂತು ಪ್ರವೇಶಿಸಿ ನನ್ನ ಹಾನಿ ಮಾಡದಿರಲಿ, ಯಾವನೋ ವೈರಿಯು ಬಂದು ನನ್ನನ್ನು ಸಾಯಿಸಿದರೆ ಹೇಗೆ - ಇತ್ಯಾದಿ ಭಯರೂಪದ ಭಾವವಿರುವುದು ಅಗುಪ್ತಿ ಭಯವಿದೆ.

೭. ನನಗೆ ಇದ್ದಕ್ಕಿದ್ದಂತೆ ಯಾವುದಾದರೂ ಆಕಸ್ಮಿಕ ಭಯವಾಗದಿದ್ದರೆ ಒಳ್ಳೆಯದಿದೆ; ಈ ಪ್ರಕಾರ ಭಾವಗಳಲ್ಲಿ ಭಯವಿರುವುದು ಅದು ಆಕಸ್ಮಿಕ ಭಯವಿದೆ.

ಉಕ್ತ ಏಳು ಭಯಗಳು ಜೀವರುಗಳಿಗೆ ದುಃಖವುತ್ಪನ್ನ ಮಾಡುತ್ತವೆ. ಇಂಥ ಭಾವಗಳಾಗುವುದು ಅದು ನಿರ್ದಯ ಭಾವಗಳಿಂದ ಅನ್ಯರಿಗೆ ಭಯವನ್ನುತ್ಪನ್ನ ಮಾಡುವರೂಪ ಪಾಪದ ಫಲವಿದೆ, ಈ ಏಳು ಭಯಗಳಿಂದ ರಹಿತ, ನಿರ್ಭಯ ಭಾವರೂಪ ನಿಃಶಂಕನಾಗಿರುವುದು ಅದು ದಯಾಭಾವದ ಫಲವಿದೆ.

ಯಾವನು ಪೂರ್ವ ಭವದಲ್ಲಿ ಮನ, ವಚನ, ಕಾಯದಿಂದ ಅನ್ಯ ಜೀವಗಳನ್ನು ಶೋಕಿತಗೊಳಿಸಿದ್ದಾನೆ, ಅವನು ಆ ಪಾಪದ ಫಲದಲ್ಲಿ ಭವಾಂತರದೊಳಗೆ ಸದಾ ಶೋಕರೂಪನಾಗಿರುತ್ತಾನೆ. ಯಾವಾಗಲೂ ಶೋಕರಹಿತ, ಸದಾಸುಖಿ, ಮಂಗಲಾಚರಣರೂಪವಾಗಿರುವುದು ಅದು ದಯಾಭಾವದ ಫಲವಿದೆ.

ಯಾರು ಬೇರೆಯವರಿಗೆ ವಿದ್ಯೆ ಕಲಿಯುವಲ್ಲಿ, ಜ್ಞಾನಾಭ್ಯಾಸ ಮಾಡುವಲ್ಲಿ ಬಾಧೆಯನ್ನೊಡ್ಡಿದ್ದಾರೆ; ದ್ವೇಷ ಭಾವದಿಂದ ಅನ್ಯರ ಬುದ್ಧಿಯ ಘಾತ ಮಾಡಿದ್ದಾರೆ; ಅವರು ಬುದ್ಧಿಹೀನ ಮುರ್ಖರೂಪದಲ್ಲಿ ಉತ್ಪನ್ನರಾಗುತ್ತಾರೆ. ವಿವಿಧ ಬುದ್ಧಿಯ ಪ್ರಕಾಶ ಪಡೆಯುವುದು, ಅನೇಕ ಕಲೆಗಳಿಂದ ಕೂಡಿರುವುದು, ಧರ್ಮ-ಕರ್ಮಗಳ ಸಂಬಂಧದ ಅನೇಕ ಚತುರತೆ ಪ್ರಾಪ್ತ ಮಾಡಿಕೊಳ್ಳುವುದು - ಇತ್ಯಾದಿ ಗುಣಗಳಿರುವುದು, ಬೇರೆ ಜೀವಗಳ ಮೇಲೆ ದಯೆ ಮಾಡಿರುವ ಫಲವಿದೆ.

ಕೆಲವು ಜೀವಗಳು ಮಾತೆಯ ಗರ್ಭದಲ್ಲಿ ಬಂದು, ಒಂಭತ್ತು ತಿಂಗಳವರೆಗೆಯಂತೂ ದುಃಖಿಯಾಗಿಯೇ ಇರುತ್ತವೆ. ಅದರ ನಂತರ ಜನ್ಮಧಾರಣ ಮಾಡುತ್ತಿರುವಂತೆ ಮಾತಾ-ಪಿತರ ಮರಣವಾಗಿ ಹೋದಾಗ ಅಸಹಾಯವಾಗಿ ಮಹಾ ದುಃಖದಿಂದ ಆಯುವಿನ ವಶವಾಗಿ ಜೀವಂತವಾಗಿರುತ್ತ ತಾರುಣ್ಯ ಪಡೆಯುತ್ತವೆ. ಅದರಲ್ಲಿಯೂ ಆಹಾರವಿಲ್ಲದೆ, ವಸ್ತ್ರ-ಧನಾದಿಗಳಿಲ್ಲದೆ, ಮಾನರಹಿತವಾಗಿ ಮಹಾದುಃಖಪೂರ್ವಕ ಪರ್ಯಾಯವನ್ನು ಪೂರ್ಣ ಮಾಡಿ ಪರಭವದಲ್ಲಿ ಹೋಗುತ್ತವೆ - ಇದೆಲ್ಲವೂ ಒಂದು ನಿರ್ದಯಭಾವದ ಫಲವಿದೆ.

ಕೆಲವು ಜೀವಗಳು ಮಾತೆಯ ಗರ್ಭದೊಳಗೆ ಬರುತ್ತಿರುವಂತೆಯೇ ಮನೆಯಲ್ಲಿ ಮತ್ತು ನಗರದಲ್ಲಿ ಮಂಗಲಾಚಾರವಾಗುತ್ತದೆ. ಜನ್ಮ ಪಡೆಯುತ್ತಿರುವಂತೆ ದಾನ,ಪೂಜೆ, ನೃತ್ಯ-ಗೀತೆಗಳು ನಡೆಯುವುದು; ವಿವಿಧ ಸುಖಪೂರ್ವಕ ತಾರುಣ್ಯಾವಸ್ಥೆಗೆ ಪ್ರಾಪ್ತವಾಗುವುದು, ಮಹಾಸಂಪದದ ಅಧಿಪತಿಯಾಗುವುದು - ಇವೆಲ್ಲವೂ ದಯಾಭಾವದ ಫಲವಿವೆಯೆಂಬುದನ್ನು ತಿಳಿದುಕೊಂಡು ತಮ್ಮ ಸುಖದ ಸಲುವಾಗಿ ಅನ್ಯ ಜೀವಗಳ ರಕ್ಷಣೆ ಮಾಡುವುದು ಯೋಗ್ಯವಿದೆ.

ದಯಾಭಾವದ ಮಹಿಮೆಯನ್ನು ಇನ್ನಷ್ಟು ಹೇಳುತ್ತಾರೆ-

**ಝುಹಿಯೋ ಅರಯ ಝೂಂಣಲು ತಣಾಂಗೋಪಾಂಗಾಯ ಸಹುಣೇಕೋ ।**

**ಸಲು ಬಂಧವ ಣೇಹ ಕರಯೋ, ಕೋಮಲ ಚಿತ್ತೋಯ ಹೋಯ ಕಿಪ್ಪಾವಿ ॥೧೩೪॥**

**ಗಾಥಾರ್ಥ** :- ಆರ್ತಧ್ಯಾನದಿಂದ ರಹಿತ, ಶರೀರದ ಸಮಸ್ತ ಅಂಗೋಪಾಂಗ ಶುದ್ಧ (ವ್ಯವಸ್ಥಿತ ಪರಿಪೂರ್ಣ), ಸಮಸ್ತ ಬಾಂಧವರಲ್ಲಿ ಪ್ರೀತಿ ಮಾಡುವಂಥವ ಕೋಮಲಚಿತ್ತದವನಾಗಿರುವುದು - ಇವೆಲ್ಲ ದಯೆಯ ಭಾವದಿಂದ ಆಗುತ್ತವೆ.

**ಭಾವಾರ್ಥ** :- ಜೀವನಿಗೆ ಒಳ್ಳೆಯವೆನಿಸದಂಥ ವಸ್ತುಗಳು ದೊರಕುವುದರಿಂದ ಆಗುವಂಥ ಆರ್ತ, ಒಳ್ಳೆಯ ವಸ್ತುಗಳ ವಿಯೋಗದಿಂದ ಆಗುವಂಥ ಆರ್ತ, ಅನಿಷ್ಟ ವಸ್ತುಗಳ ಸಂಯೋಗದ ಆರ್ತ, ರೋಗವಾಗುವುದರ ಹಾಗೂ ಭಯವನ್ನು ನಷ್ಟಗೊಳಿಸುವ ಆರ್ತ, 'ಮುಂದೆ ನಾನು ಹಾಗೆ ಮಾಡುವೆನು'-ಇತ್ಯಾದಿ ಭಾವಗಳ ವಿಚಾರ ಮಾಡಿ

ಹೃದಯದಲ್ಲಿ ಖೇದ ಪಡುವುದು ಅದು ನಿರ್ದಯ ಭಾವದ ಫಲವಿದೆ. ಈ ನಾಲ್ಕು ಭೇದವುಳ್ಳ ಆರ್ತ ಭಾವದಿಂದ ರಹಿತ ನಿರಾಕುಲ ಸುಖರೂಪ ಭಾವವಿರುವುದು ಅದು ದಯೆಯ ಫಲವಿದೆ.

ಅಂಗೋಪಾಂಗ ಸಹಿತ ಸುಘಟಿತ ಶರೀರದ ಪ್ರಾಪ್ತಿಯಾಗುವುದು ಅದು ದಯೆಯ ಫಲವಿದೆ. ಎರಡು ಕೈಗಳು, ಎರಡು ಕಾಲುಗಳು, ಎದೆ, ಬೆನ್ನು, ಮಸ್ತಕ ಮತ್ತು ನಿತಂಬ-ಇವು ಎಂಟು ಅಂಗಗಳಿವೆ. ಇವುಗಳ ಶುಭ-ಶಾಸ್ತ್ರಾನುಸಾರ ಆಕಾರವು ಪ್ರಾಪ್ತವಾಗುವುದು ಕರುಣಾಭಾವದ ಫಲವಿದೆ. ನೇತ್ರರಹಿತ, ಜಿಹ್ವಾರಹಿತ, ಶ್ರೋತ್ರರಹಿತ ಇತ್ಯಾದಿ ಉಪಾಂಗರಹಿತನಾಗುವುದು; ಕಾಲಿಲ್ಲದ, ಕೈಯಿಲ್ಲದವನಾಗುವುದು; ಬೆರಳು, ನಾಸಿಕ ಮೊದಲಾದ ಅಂಗೋಪಾಂಗಗಳಿಂದ ಹೀನನಾಗುವುದು. ಶರೀರದ ಆಕಾರವು ವಿಕೃತವಿರುವುದು, ಭಯಾನಕ ಕಾಲುಗಳಿರುವುದು, ಕುರೂಪನಿರುವುದು-ಮಹಾಅವ್ಯವಸ್ಥಿತ ಶರೀರವಿರುವುದು ಇವೆಲ್ಲ ನಿರ್ದಯ ಪರಿಣಾಮದ ಫಲವಿವೆ.

ತಾಯಿ-ತಂದೆ, ಸಹೋದರ, ಪುತ್ರ, ಪತ್ನಿ ಇತ್ಯಾದಿ ಸಂಪೂರ್ಣ ಕುಟುಂಬ, ಸುಖಕಾರಕ ಬಾಂಧವರು ದೊರಕುವುದು ದಯಾಭಾವದ ಫಲವಿದೆ. ಒಳ್ಳೆಯ ಪುತ್ರನಿಗೆ ಕೆಟ್ಟಪಿತ, ಒಳ್ಳೆಯ ಪಿತನಿಗೆ ಕೆಟ್ಟ ಪುತ್ರ, ಒಳ್ಳೆಯ ಮಾತೆಗೆ ಪುತ್ರ-ಪುತ್ರಿ ಇಬ್ಬರೂ ಕೆಟ್ಟವರು, ಪುತ್ರ-ಪುತ್ರಿಯರಿಗೆ ಕೆಟ್ಟ ಮಾತೆ, ಪರಸ್ಪರ ಕೆಟ್ಟ ಸೋದರ, ಒಳ್ಳೆಯ ಸ್ತ್ರೀಗೆ ಕೆಟ್ಟ ಪತಿ, ಒಳ್ಳೆಯ ಪುರುಷನಿಗೆ ಕೆಟ್ಟ ಪತ್ನಿ ದೊರಕುವುದು - ಇತ್ಯಾದಿ ಕುಟುಂಬದಲ್ಲಿ ಪರಸ್ಪರ ವಿರೋಧಭಾವವಿರುವುದು, ಕೆಲವರು ಮಹಾಕ್ರೋಧಿ, ಕೆಲವರು ಮಹಾಮಾನೀ, ಕೆಲವರು ಛಲ-ಕಪಟಿ, ಕೆಲವರು ಲೋಭಿ, ಕೆಲವರು ವ್ಯಸನೀ, ಕೆಲವರು ಕಳ್ಳರು, ಕೆಲವರು ಜೂಜುಗಾರ, ಕೆಲವರು ಪಾಖಂಡಿ ಮತ್ತು ಕೆಲವರು ಪರಸ್ಪರ ದ್ವೇಷದಿಂದ ಕೂಡಿದ ಬಾಂಧವರು-ಹೀಗೆ ವಿರೋಧಿ ಕುಟುಂಬಿಗಳು ದೊರಕುವುದು ಪೂರ್ವಕೃತ ಹಿಂಸೆಯ ಭಾವಗಳ ಫಲವಿದೆ.

ಯಾವ ಜೀವದ ದೀರ್ಘ ಪುಣ್ಯದ ಫಲವು ಉದಯದಲ್ಲಿರುತ್ತದೆ ಅವನು ಕೋಮಲ ಚಿತ್ತ ಪಡೆದಿರುತ್ತಾನೆ. ಅವನದು ಯಾರ ಕುರಿತಾಗಿಯೂ ದ್ವೇಷ ಭಾವವಿರುವುದಿಲ್ಲ, ಅವನು ಯಾರ ಸಲುವಾಗಿಯೂ ದುಃಖವನ್ನು ಬಯಸುವುದಿಲ್ಲ. ಎಲ್ಲರ ಸಲುವಾಗಿ ಹಿತವನ್ನೇ ಬಯಸುವ ಕೋಮಲ ಚಿತ್ತದ ಪ್ರಾಪ್ತಿಯಾಗುವುದು ಅದು ದಯಾಭಾವದ ಫಲವಿದೆ. ಬೇರೆ ಜೀವಗಳು ತೀವ್ರ ದುಃಖದಲ್ಲಿರುವುದನ್ನು ಕಂಡರೂ ದಯೆಯು ಉತ್ಪನ್ನವಾಗದಿರುವಂಥ ಕಠೋರ ಚಿತ್ತದ ಪ್ರಾಪ್ತಿಯಾಗುವುದು ಅದು ನಿರ್ದಯಭಾವದ ಫಲವಿದೆ.

ಮೇಲೆ ಹೇಳಿದ ಶುಭಲಕ್ಷಣ, ಆರ್ತರಹಿತ ಶುಭಭಾವ, ಶುದ್ಧ (ಪರಿಪೂರ್ಣ ಸುಘಟಿತ) ಅಂಗೋಪಾಂಗ, ಮೋಹಿಕುಟುಂಬ, ಕೋಮಲ ಚಿತ್ತ ಇತ್ಯಾದಿ (ಶುದ್ಧ ಅನುಕೂಲ) ಸಾಮಗ್ರಿಗಳ ಪ್ರಾಪ್ತಿಯಾಗುವುದು ದಯಾಭಾವದ ಫಲವಿದೆ.

ಕರುಣಾಭಾವದ ಮಹಿಮೆಯನ್ನು ಮತ್ತೆಯೂ ಹೇಳುತ್ತಾರೆ -

**ಕಂಪಹಣೀ ಶಿವಕಣ್ಣೀ, ತಣೀ ಭವ ಣೀರ ವೀರ ಷಡಕಾಯೋ ।**
**ಜಣಣೀ ಇವ ಜೀವ ರಖಯ, ಕಿಪ್ಪಾ ಇವ ಜೋಯ ಹೋಯ ಶಿವ ಆದಾ ॥೧೩೪॥**

**ಗಾಥಾರ್ಥ :-** ಕರ್ಮನಾಶ ಮಾಡುವಂಥ, ಮೋಕ್ಷದ ಕಾರಣವಿರುವಂಥ, ಸಂಸಾರ ಸಮುದ್ರದ ಸಲುವಾಗಿ ಜಹಜದ ಸಮಾನವಿರುವ; ಷಟ್ಕಾಯಗಳ ಸಲುವಾಗಿ ಸೋದರನ ಸಮಾನ, ಮಾತೆಯ ಸಮಾನ ಜೀವಗಳ ರಕ್ಷಣೆ ಮಾಡುವಂಥ ದಯಾಭಾವವನ್ನು ಯಾರು ಈ ರೂಪದಲ್ಲಿ ತಿಳಿಯುತ್ತಾರೆ. ಆ ಆತ್ಮರುಗಳು ಮುಕ್ತಿಯನ್ನು ಪ್ರಾಪ್ತ ಮಾಡಿಕೊಳ್ಳುತ್ತಾರೆ.

**ಭಾವಾರ್ಥ :-** ಧರ್ಮದ ಅಂಗಗಳು ಅನೇಕವಿವೆ - ಜಪ, ತಪ, ಸಂಯಮ, ವ್ರತ, ಧ್ಯಾನ, ನಗ್ನವಿರುವುದು, ದೊಡ್ಡ-ದೊಡ್ಡ ತಪಸ್ಸು ಮಾಡುವುದು, ಪಕ್ಷ-ಮಾಸ-ವರ್ಷದ ಅನಶನ ಮಾಡುವುದು, ಮಹಾವ್ರತ, ಸಮಿತಿ,

ಗುಪ್ತಿಗಳ ಪರಿಪಾಲನೆ ಮಾಡುವುದು, ಇಂದ್ರಿಯಗಳನ್ನು ಜಯಿಸುವುದು, ಹಸಿವೆ - ಬಾಯಾರಿಕೆಗಳನ್ನು ಸಹಿಸುವುದು, ಪಂಚಾಗ್ನಿ ಹೊತ್ತಿಸಿಕೊಳ್ಳುವುದು, ತಲೆಯ ಮೇಲಿನ ಕೂದಲುಗಳನ್ನು ಬೆಳೆಸುವುದು, ಚರ್ಮಾದಿಗಳಿಂದ ಶರೀರ ಮುಚ್ಚಿಕೊಳ್ಳುವುದು, ವಸ್ತ್ರಗಳ ತ್ಯಾಗ ಮಾಡುವುದು, ತಲೆಕೆಳಗೆ ಮಾಡಿ ನೇತಾಡುವುದು, ಭೂಮಿಯಲ್ಲಿ ಹೂತು ಸತ್ತು ಹೋಗುವುದು, ಜೀವಂತವಾಗಿಯೇ ಅಗ್ನಿಯಲ್ಲಿ ಸುಟ್ಟುಹೋಗುವುದು, ಪರ್ವತದಿಂದ ಉರುಳುವುದು, ಜಲಸಮಾಧಿ ಮಾಡುವುದು, ಕಂದ-ಮೂಲ-ವನಸ್ಪತಿಗಳ ಭಕ್ಷಣೆ ಮಾಡುವುದು, ಅನ್ನದ ತ್ಯಾಗ ಮಾಡಿ ಹಾಲು-ಮಜ್ಜಿಗೆ ಕುಡಿಯುವುದು ಇತ್ಯಾದಿ ಕಷ್ಟದ ಅನೇಕ ಮಾರ್ಗಗಳಿವೆ. ಈ ಜೀವನು ಧರ್ಮದ ಸಲುವಾಗಿ ಅನೇಕ ಕಷ್ಟ ಸಹಿಸುತ್ತಾನೆ. ದಯೆಯ ಭಾವವಿಲ್ಲದೆ ಮೇಲೆ ಹೇಳಿದ ಸಮಸ್ತ ಕಷ್ಟಗಳು ಮೋಕ್ಷಮಾರ್ಗವನ್ನು ನಿರ್ಮಿಸುವುದಿಲ್ಲ ಎಂದರೆ ಅವೆಲ್ಲವೂ ವ್ಯರ್ಥವೇ ಆಗಿ ಹೋಗುತ್ತವೆ.

ಧರ್ಮದ ಸಮಸ್ತ ಅಂಗಗಳಲ್ಲಿ ಈ ಜೀವದಯೆಯು ಸಂಪೂರ್ಣ ಧರ್ಮದ ಮೂಲವಿದೆ. ಈ ದಯೆಯು ಸಮಸ್ತ ಕರ್ಮಗಳನ್ನು ನಷ್ಟ ಮಾಡುವಂಥದ್ದಿದೆ. ದಯಾ ಭಾವವಿಲ್ಲದೇ ಹಿಂಸಕ, ನಿರ್ದಯೀ ಜೀವಗಳ ಕರ್ಮಗಳು ನಷ್ಟವಾಗುವುದಿಲ್ಲ. ಈ ದಯಾಭಾವವಿಲ್ಲದೆ ಜನ್ಮ-ಮರಣ ರಹಿತ, ನಿರಾಕಾರ ನಿರಂಜನ-ಕರ್ಮ ಅಂಜನ ರಹಿತ; ದೇವ, ಇಂದ್ರ, ಚಕ್ರವರ್ತಿ, ಧರಣೇಂದ್ರ ಮೊದಲಾದ ಮಹಾಪುರುಷರುಗಳಿಂದ ಪೂಜಿಸಲು ಯೋಗ್ಯವಾದ ಸಿದ್ಧಪದದ ಪ್ರಾಪ್ತಿಯಾಗುವುದಿಲ್ಲ. ದಯೆಯಿಂದ ರಹಿತ ಪ್ರಾಣಿಗಳಿಗೆ ಸಿದ್ಧಪದವು ದೊರಕುವುದಿಲ್ಲ. ಈ ದಯೆಯು ಸಂಸಾರರೂಪ ಸಮುದ್ರದ ದುಃಖರೂಪದ ಜಲವನ್ನು ದಾಟಿ ಹೋಗುವ ಸಲುವಾಗಿ ನೌಕೆಯ ಸಮಾನವಿದೆ. ದಯಾರೂಪದ ನೌಕೆಯಿಲ್ಲದೆ ಸಂಸಾರ ಸಾಗರವನ್ನು ದಾಟುವ ಸಾಧ್ಯತೆಯಿಲ್ಲ. ಹಿಂಸಾಯುಕ್ತ ಧರ್ಮ ಎಂದರೆ ಹಿಂಸೆಯಲ್ಲಿ ಧರ್ಮ ಮನ್ನಿಸುವುದಂತೂ ಸ್ವಯಂ ಮುಳುಗುವಂಥ ಮತ್ತು ತನ್ನ ಆಶ್ರಯ ಮಾಡುವಂಥವರನ್ನು ಕೂಡ ಮುಳುಗಿಸುವಂಥ ಕಲ್ಲಿನ ನೌಕೆಯ ಸಮಾನವಿದೆ, ಆದುದರಿಂದ ಹಿಂಸೆಯ ತ್ಯಾಗ ಮಾಡಿ, ದಯಾಭಾವ ಧಾರಣ ಮಾಡುವುದು ಒಳ್ಳೆಯದಿದೆ.

ಈ ದಯಾಭಾವನೆಯು ಷಟ್ಕಾಯಿಕ ಜೀವಗಳ ರಕ್ಷಣೆ ಮಾಡುವ ಸಲುವಾಗಿ ಸೋದರನ ಸಮಾನವಿದೆ. ಮಣ್ಣು ಪಾಷಾಣಾದಿ ಪೃಥ್ವಿಕಾಯಿಕ ಜೀವ, ಜಲಶರೀರಯುಕ್ತ ಜಲಕಾಯಿಕ ಜೀವ, ಅಗ್ನಿ ಶರೀರಯುಕ್ತ ಅಗ್ನಿಕಾಯಿಕ ಜೀವ, ಪವನ ಶರೀರಯುಕ್ತ ವಾಯುಕಾಯಿಕ ಜೀವ; ಹಸಿರು, ಹಳದಿ ಬಳ್ಳಿಗಳು, ಹುಲ್ಲು, ವೃಕ್ಷ ಇತ್ಯಾದಿ ದೇಹಧಾರಕವನಸ್ಪತಿಕಾಯಿಕ-ಇವು ಐದು ಸ್ಥಾವರವಿವೆ. ತ್ರಸದಲ್ಲಿ- ಹೇನು ಮೊದಲಾದ ಎರಡು ಇಂದ್ರಿಯ; ಇರುವೆ, ತಿಗಣೆ ಮೊದಲಾದ ಮೂರು ಇಂದ್ರಿಯ, ದುಂಬಿ, ನೊಣ, ಸೊಳ್ಳೆ ಮೊದಲಾದ ನಾಲ್ಕು ಇಂದ್ರಿಯ; ದೇವ, ಮನುಷ್ಯ, ತಿರ್ಯಂಚ, ನಾರಕಿ ಮೊದಲಾದ ಪಂಚೇಂದ್ರಿಯ- ಇವೆಲ್ಲವೂ ತ್ರಸವಿವೆ. ಹೀಗೆ ತ್ರಸ-ಸ್ಥಾವರರೂಪ ಷಟ್ಕಾಯಿಕ ಜೀವಗಳ ರಕ್ಷಣೆ ಮಾಡುವ ಸಲುವಾಗಿ ಆಗುವಂಥ ದಯೆಯ ಭಾವವು ಸೋದರನ ಸಮಾನವಿದೆ.

ಉಪರ್ಯುಕ್ತ ಷಟ್ಕಾಯಿಕ ಜೀವಗಳ ರಕ್ಷಣೆಯ ಸಲುವಾಗಿ ದಯೆಯು ಮಾತೆಯ ಸಮಾನವಿದೆ. ಹೇಗೆ ಮಾತೆಯು ಪುತ್ರನ ರಕ್ಷಣೆ ಮಾಡುತ್ತಾಳೆ, ಹಾಗೆಯೇ ದಯೆಯು ಎಲ್ಲ ಜೀವಗಳ ರಕ್ಷಣೆ ಮಾಡುತ್ತದೆ. ಈ ಪ್ರಕಾರ ಎಲೈ ಭವ್ಯಾತ್ಮನೇ ! ಸಮಸ್ತ ಗುಣಗಳ ಭಂಡಾರವೆಂದು ತಿಳಿದು ಈ ದಯೆಯ ಸೇವನೆ ಮಾಡು, ಇದರ ಸೇವನೆಯನ್ನು ಉತ್ಕೃಷ್ಟವೆಂದು ತಿಳಿಯುವುದರಿಂದ ಮೋಕ್ಷವಾಗುವುದು.

ಪ್ರಶ್ನೆ :- ದಯೆಯನ್ನು ಉತ್ಕೃಷ್ಟವೆಂದು ತಿಳಿಯುವುದರಿಂದಲೇ ಹೇಗೆ ಮೋಕ್ಷವಾಗುವುದು ? ದಯೆಯ ಪಾಲನೆ ಮಾಡಿದರೆ ಮೋಕ್ಷವಾಗುವುದು ಅಲ್ಲವೇನು ?

ಉತ್ತರ :- ಎಲೈ ಭವ್ಯನೇ ! ನೀನು ಹೇಳುತ್ತಿರುವುದಂತೂ ಸತ್ಯವಿದೆ; ಆದರೆ ಯಾವುದನ್ನು ಉತ್ಕೃಷ್ಟವೆಂದು

ತಿಳಿಯುತ್ತಾನೆ ಅದರ ಸೇವನೆಯನ್ನೂ ಮಾಡುತ್ತಾನೆ; ಅದಕ್ಕಾಗಿ ಸರ್ವ ಪ್ರಥಮ ದೃಢ ಶ್ರದ್ಧೆ ಮಾಡುವ ಸಲುವಾಗಿ 'ದಯೆಯಿಂದ ಮೋಕ್ಷವಾಗುತ್ತದೆ' ಎಂದು ಹೇಳಲಾಗಿದೆ. ಲೋಕದಲ್ಲಿಯೂ ಕೂಡ ಯಾರು ಯಾರನ್ನು ದೊಡ್ಡವರೆಂದು ಮನ್ನಿಸುತ್ತಾರೆ ಅವರು ಅವರ ವಚನಗಳ ಪ್ರತೀತಿ ಮಾಡುವಂಥ ಪ್ರವೃತ್ತಿಯು ಕಂಡು ಬರುತ್ತದೆ. ಇಂಥ ಓರ್ವ ವ್ಯಕ್ತಿಯು ಮಹಾಪುರುಷನಿದ್ದಾನೆ, ಉದಾರನಿದ್ದಾನೆ; ಅವನ ಸೇವೆ ಮಾಡುವುದರಿಂದ ಅನೇಕ ಜೀವರುಗಳು ಶ್ರೀಮಂತರಾಗಿದ್ದಾರೆ, ಸುಖಿಯಾಗಿದ್ದಾರೆ. ಒಂದುವೇಳೆ ನನಗೂ ಅವರ ಸೇವೆಯ ಅವಸರ ದೊರಕಿದರೆ ನನಗೆ ಕೂಡ ಧನ ದೊರೆತು ನಾನೂ ಸುಖಿಯಾಗಬಹುದಾಗಿದೆ. ಅಂಥ ಪುರುಷನ ಸೇವೆ, ಶುಶ್ರೂಷೆ ಮಾಡದ ವಿನಹ ದರಿದ್ರತೆಯು ದೂರವಾಗಲಾರದೆಂಬ ದೃಢ ಶ್ರದ್ಧೆಯಾದ ಮೇಲೆ ಈ ಧನದ ಅಭಿಲಾಷೆಯಿರುವಂಥವನು ಸುಖಿಯಾಗುವ ಸಲುವಾಗಿ ಆ ಮಹಾಪುರುಷನ ಸೇವೆ ಮಾಡುವ ಸಲುವಾಗಿ ಅವನ ಹತ್ತಿರ ಹೋಗಿ, ಮಾನವನ್ನು ತೊರೆದು, ನಮಸ್ಕಾರ ಮಾಡಿ, ಪುನಃ ಪುನಃ ತಲೆ ಬಾಗಿಸುತ್ತಾನೆ, ವಿನಯ ಮಾಡುತ್ತಾನೆ. ಅವನ ಆಜ್ಞೆಯ ಅನುಸಾರ ಪ್ರವೃತ್ತಿ ಮಾಡುತ್ತಾನೆ. ಹಗಲಿರುಳೂ ಸೇವೆಯಲ್ಲಿ ಸಾವಧಾನನಿರುತ್ತಾನೆ. ಹಸಿವೆ-ಬಾಯಾರಿಕೆಗಳ ಕಷ್ಟ ಸಹಿಸಿಯೂ ಇರುತ್ತಾನೆ. ಕಷ್ಟ ಸಹಿಸುತ್ತಾನೆ; ಆದರೆ ಆತನ ಆಜ್ಞೆಯ ಭಂಗ ಮಾಡುವುದಿಲ್ಲ. ಇವನ ಮೂಲಕ ಪ್ರೀತಿಪೂರ್ವಕ ಮಾಡಲಾಗಿರುವ ವಿವಿಧ ಸೇವೆಯನ್ನು ಯಾವಾಗ ಆ ಮಹಾಪುರುಷನು ತಿಳಿಯುತ್ತಾನೆ ಆಗ ಆ ಉತ್ಕೃಷ್ಟ ಪುರುಷನು ಇವನಿಗೆ ಧನವಿತ್ತು ಸುಖೀ ಮಾಡುತ್ತಾನೆ.

ಸೇವೆ ಮಾಡುವಂಥವನಿಗೆ ಒಂದುವೇಳೆ ಆ ಮಹಾಪುರುಷನ ಉತ್ಕೃಷ್ಟತೆಯು ಭಾಸಿತವೇ ಆಗದಿದ್ದರೆ, ಇವನು ಆತನನ್ನು ದೊಡ್ಡವನೆಂದೇ ತಿಳಿಯದಿದ್ದರೆ, ಸೇವೆ ಹೇಗೆ ಮಾಡುವನು ? ಮತ್ತು ಸೇವೆ ಮಾಡದಿದ್ದರೆ ಇವನ ದುಃಖ-ದಾರಿದ್ರ್ಯಗಳು ಹೇಗೆ ದೂರವಾಗುವವು ? ಅದರಿಂದ ಮೊದಲು ಅವನ ಮಹಾನತೆಯು ತಿಳಿದು ಬಂದರೆ ನಂತರ ಇವನು ಮಹಾಪುರುಷನಿದ್ದಾನೆ, ಇವನ ಸೇವೆ ಮಾಡುವುದರಿಂದ ಸುಖಿಯಾಗುವೆನೆಂದು ಶ್ರದ್ಧೆಯಾಗುತ್ತದೆ ಅದರ ನಂತರ ಸೇವೆ ಮಾಡುತ್ತಾನೆ - ಮೊದಲು ತಿಳಿಯುವುದಾಗುತ್ತದೆ ಅದರ ನಂತರ ಶ್ರದ್ಧೆಯಾಗುತ್ತದೆ, ಆಮೇಲೆ ಸೇವೆ ಮಾಡುವುದಾಗುತ್ತದೆ; ಇಂಥ ಪ್ರತೀತಿಯು ಲೋಕದಲ್ಲಿಯೂ ಕಂಡುಬರುತ್ತದೆ.

ಅದೇ ಪ್ರಕಾರ ಇಲ್ಲಿ ಎಲ್ಲಕ್ಕಿಂತ ಮೊದಲು ದಯಾಭಾವದ ಉತ್ಕೃಷ್ಟತೆಯು ತಿಳಿದು ಬಂದರೆ ನಂತರ ಅದರ ದೃಢ ಶ್ರದ್ಧೆ ಮಾಡಲಾಗುವುದು. ಅದರ ನಂತರ ದಯೆಯನ್ನು ಉತ್ಕೃಷ್ಟವೆಂದರಿತು ಅದರ ರಕ್ಷಣೆ ಮಾಡುತ್ತಾನೆ, ಸೇವೆ ಮಾಡುತ್ತಾನೆ. ದಯಾಧರ್ಮದ ಪೂಜೆ-ವಿನಯ ಮಾಡುವುದರಿಂದ ಯಾವಾಗ ಅದರ ಕುರಿತು ಅಂಥ ಶ್ರದ್ಧೆಯಾಗುವುದು, ಆಗ ಈ ನಿಕಟ ಸಂಸಾರೀ ಭವ್ಯನ ಪರಿಣಾಮಗಳು ಹೀಗಾಗುತ್ತವೆ-'ಸುಖದ ಸಮೂಹವಂತೂ ಮೋಕ್ಷಸ್ಥಾನವಿದೆ ಮತ್ತು ಮೋಕ್ಷವು ದಯಾಭಾವದಿಂದ ಪ್ರಕಟವಾಗುತ್ತದೆ ನಾನು ಮಹಾಗೃಹಾರಂಭದಲ್ಲಿ ಬಿದ್ದುಕೊಂಡಿದ್ದೇನೆ, ಅದರಲ್ಲಿ ಅನ್ಯ ಜೀವಗಳ ರಕ್ಷಣೆಯು ಆಗುತ್ತಿಲ್ಲ ನನಗೆ ಮೋಕ್ಷದ ಸುಖವು ಹೇಗೆ ಆಗುವುದು? ದಯೆಯ ಸಂಪೂರ್ಣ ಮಾರ್ಗವನ್ನು ಸದ್ಗುರುಗಳು ತಿಳಿಯುತ್ತಾರೆ. ಅವರು ದಯೆಯ ಪರಿಪೂರ್ಣ ಭಂಡಾರರಿದ್ದಾರೆ. ನಾನು ಗುರುಗಳ ಹತ್ತಿರ ಹೋಗಿ ವಿನಂತಿ ಮಾಡಿಕೊಂಡರೆ, ದಯಾನಿಧಿಗಳಾದ ಅವರು ನನ್ನ ಮೇಲೆ ಕೃಪೆಮಾಡಿ ನನ್ನ ಮನೋರಥವನ್ನು ಪೂರ್ಣ ಮಾಡುವರು' - ಎಂದು ವಿಚಾರ ಮಾಡಿ, ಈ ಮೋಕ್ಷಾಭಿಲಾಷೀ ಭವ್ಯಾತ್ಮನು ಶ್ರೀಗುರುಗಳ ಸಮೀಪ ಹೋಗಿ, ನಮಸ್ಕಾರ ಮಾಡಿ, ಮೂರು ಪ್ರದಕ್ಷಿಣೆ ಹಾಕಿ, ಮಹಾವಿನಯಪೂರ್ವಕ ಕೈಮುಗಿದು ನಿಂತುಕೊಂಡು ತನ್ನ ಅಂತರಂಗದ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾನೆ - ಓ ಸ್ವಾಮೀ ! ಓ ದೀನ ದಯಾಳುವೇ !! ನಾನು ಸಾಂಸಾರಿಕ ಸುಖವನ್ನು ಬಹಳಷ್ಟು ಭೋಗಿಸಿದ್ದೇನೆ; ಆದರೆ ಓ ಸ್ವಾಮಿ ! ನನ್ನ ವಾಂಛೆಯು ಪೂರ್ಣವಾಗಿಲ್ಲ.

ಹೇಗೆ ಸದೈವ ಕ್ಷೀಣ ಶರೀರಿಯು, ಅಂತರಂಗ ಜ್ವರವುಳ್ಳ ರೋಗಿಯು, ತನುವನ್ನು ಪುಷ್ಟ ಮಾಡುವ ಯಾವನೋ ತೀವ್ರ ಇಚ್ಛೆಯಿರುವುದರಿಂದ ಶರೀರವನ್ನು ಸ್ಥೂಲ ಮಾಡುವ ಸಲುವಾಗಿ ಅನೇಕ ಪೌಷ್ಟಿಕ, ಗರಿಷ್ಟ ಭೋಜನ ಮಾಡುತ್ತಾನೆ. ಆದರೆ ಪುಷ್ಟನಾಗುವುದಿಲ್ಲ. ದಿನದಿನವೂ ಕ್ಷೀಣನಾಗುತ್ತ ಹೋಗುತ್ತಾನೆ. ಇಚ್ಛೆಯು ಈಡೇರದಿರುವುದರಿಂದ ದುಃಖವೇ ಹೆಚ್ಚುತ್ತ ಹೋಗುತ್ತದೆ, ಅದೇ ಪ್ರಕಾರ ಓ ಸ್ವಾಮೀ ! ನಾನು ಸುಖಿಯಾಗುವ ಸಲುವಾಗಿ ಅನೇಕ ಭೋಗ ಸಾಮಗ್ರಿಗಳನ್ನು ಪಡೆ-ಪಡೆದು ಭೋಗಿಸಿದೆನು. ಆದರೆ ಸಂಪೂರ್ಣ ಸುಖಿಯಾಗಲಿಲ್ಲ. ಅದಕ್ಕಾಗಿ ಓ ಜಗದ್ಗುರುಗಳೇ ! ಯಾವುದರಿಂದ ನನಗೆ ಸಂಪೂರ್ಣ ಸುಖವಾಗುವುದು, ಅದೇ ಉಪದೇಶ ಕೊಡಿರಿ; ಅದನ್ನು ಧಾರಣ ಮಾಡಿ ನಾನು ಸುಖಿಯಾಗಿ ಹೋಗುವೆನು. ಈಗ ನನಗೆ ಇಂದ್ರಿಯಜನಿತ ಸುಖವು ಮಹಾಭಯವನ್ನು ಉತ್ಪನ್ನ ಮಾಡುತ್ತಿದೆ, ಪ್ರಿಯವೆನಿಸುತ್ತಿಲ್ಲ. ಈಗ ನಾನು ತಮ್ಮ ಆಜ್ಞೆಯ ಅನುಸಾರವೇ ಮಾಡುವೆನು.

ಇದನ್ನು ಆಲಿಸಿ ಯೋಗೀಶ್ವರರು ಈ ಜೀವನು ಮೋಕ್ಷ ಸುಖವನ್ನು ದೊಡ್ಡದೆಂದು ಸರ್ವೋತ್ಕೃಷ್ಟವೆಂದು ತಿಳಿದಿದ್ದಾನೆ, ಅದರ ಯೋಗದಿಂದಲೇ ಇವನಿಗೆ ದೃಢ ಶ್ರದ್ಧೆಯು ಪ್ರಗಟವಾಗಿದೆ - ಎಂದು ತಿಳಿದು ವಿಚಾರ ಮಾಡಿ ದಯಾಭಾವಪೂರ್ವಕ ಹೇಳುತ್ತಾರೆ - 'ಎಲೈ ಭವ್ಯನೇ ! ನೀನು ತುಂಬ ಒಳ್ಳೆಯ ವಿಚಾರ ಮಾಡಿರುವೆ. ಈ ಸಾಂಸಾರಿಕ ಭೋಗವು ಅಜ್ಞಾನೀ ಜೀವರುಗಳಿಗೆ ತನ್ನಲ್ಲಿ ಸುಖದ ಆಭಾಸ ತೋರಿಸಿ ಮೋಹ ಹುಟ್ಟಿಸುತ್ತದೆ; ಆದರೆ ವಾಸ್ತವದಲ್ಲಿ ಸಮಸ್ತ ಇಂದ್ರಿಯ ಭೋಗಗಳು ರೋಗದಿಂದ ತುಂಬಿಕೊಂಡಿವೆ ಮತ್ತು ಗುಣರಹಿತವಿವೆ. ಹೇಗೆ ಈ ಶರೀರವು ಬಾಹ್ಯದೊಳಗೆ ಮೋಹೀ ಜೀವಗಳಿಗೆ ಸುಖದ ಆಭಾಸ ಮಾಡಿಸಿ ಮೋಹಿತ ಮಾಡುತ್ತದೆ; ಆದರೆ ಅದಂತೂ ಸ್ವಯಂ ಕಣ-ಕಣಗಳ ರೂಪವಿದ್ದು ಮೇಲೆ ಚರ್ಮದಿಂದ ಪರಿಪೂರ್ಣ ಆಚ್ಛಾದಿತವಿದೆ, ವಿನಶ್ವರವಿದೆ-ಹೀಗೆ ಅನೇಕ ಅವಗುಣಗಳಿಂದ ತುಂಬಿಕೊಂಡಿದೆ.

ಆದುದರಿಂದ ಎಲೈ ಭವ್ಯನೇ ! ಈ ವಿನಶ್ವರ ಶರೀರದ ಆಶ್ರಯದಿಂದ ಪ್ರಗಟವಾಗುವಂಥ ಇಂದ್ರಿಯಜನಿತ ಸುಖವು ಹೇಗೆ ಸ್ಥಿರ ಉಳಿಯಬಹುದಾಗಿದೆ ?-ಎಂಬುದರ ವಿಚಾರ ಮಾಡು. ಎಲೈ ಭವ್ಯನೇ ! ನೋಡು !! ಇಂಥ ಈ ಶರೀರದಲ್ಲಿ ನೀನು ಇರುತ್ತಿರುವೆ, ಅನಾದಿಕಾಲದಿಂದ ಈ ಶರೀರದ ಮೋಹದಲ್ಲಿ ಬಂಧಿಸಲ್ಪಟ್ಟಿರುವೆ; ಈಗ ಹೇಗೆ ವಿಷಯಗಳಿಂದ ಉದಾಸನಾಗಿರುವೆ ಹಾಗೆಯೇ ಎಲೈ ಭವ್ಯನೇ ! ನೀನು ಈ ಶರೀರದಿಂದಲೂ ಉದಾಸನಾಗು; ಎಂದರೇನೆ ನಿನ್ನ ಅಭಿಲಾಷೆಯು ಪೂರ್ಣವಾಗುವುದು. ಈ ಶರೀರವು ವಿನಾಶವಾಗುವಂಥದ್ದಿದೆ; ಆದುದರಿಂದ ಈಗ ಇದರ ಸ್ಥಿತಿಯು ಎಷ್ಟು ಶೇಷವಿದೆ, ಅಷ್ಟರಲ್ಲಿ ದೀಕ್ಷೆಯ ಅಂಗೀಕಾರ ಮಾಡು, ಉತ್ಕೃಷ್ಟ ದಯಾಧರ್ಮದ ಪಾಲನೆ ಮಾಡಿ ಮೋಕ್ಷ ಹೊಂದು.

ಪರಿಗ್ರಹದ ಸಂಯೋಗವಿರುವ ಕಾರಣ ಗೃಹಸ್ಥಾವಸ್ಥೆಯಲ್ಲಿ ಎಲ್ಲ ಪ್ರಕಾರದಿಂದ ತ್ರಸ-ಸ್ಥಾವರ ಜೀವಗಳ ದಯೆ ಪಾಲಿಸಲಾಗುವುದಿಲ್ಲ. ಕೇವಲ ಒಂದು ಕೌಪೀನದ ಪರಿಗ್ರಹವಿದ್ದ ಮೇಲೆ ಕೂಡ ಸಂಪೂರ್ಣ ದಯೆಯ ಪಾಲನೆಯಾಗುವುದಿಲ್ಲವೆಂದ ಮೇಲೆ ಬಹಳಷ್ಟು ಪರಿಗ್ರಹದಲ್ಲಿಯಂತೂ ಹೇಗೆ ಪಾಲನೆಯಾಗುವುದು ? ಎಲೈ ಭವ್ಯಾತ್ಮನೇ ! ತ್ರಸ-ಸ್ಥಾವರ ಜೀವಗಳ ದಯೆಯ ಪಾಲನೆಯು ಸರ್ವ ಪ್ರಕಾರದಿಂದ ಮಹಾವ್ರತವಾದ ಮೇಲೆ ಆಗುತ್ತದೆ. ಅದಕ್ಕಾಗಿ ಈಗ ನೀನು ಒಳ್ಳೆಯ ರೀತಿಯಿಂದ ಮಹಾವ್ರತಗಳ ಅಂಗೀಕಾರ ಮಾಡು. ಸಮತೆಯ ಭಾವ ಧಾರಣ ಮಾಡಿ; ಶುಭಭಾವಧಾರಣ ಮಾಡಿ, ತ್ರಸ-ಸ್ಥಾವರ ಜೀವಗಳ ರಕ್ಷಣೆಯ ಸಲುವಾಗಿ ಎಲ್ಲ ಜೀವಗಳ ಕುರಿತಾಗಿ ಕ್ಷಮೆಯ ಭಾವ ಮಾಡಿ ಎಲ್ಲ ಜೀವಗಳಿಗೆ ಅಭಯದಾನ ಮಾಡು, ಆಗ ನೀನು ಸಂಪೂರ್ಣ ದಯೆಯ ಧಾರಕನಾಗುವೆ, ಅದರಿಂದ ನಿನಗೆ ಕರ್ಮಗಳ ನವೀನ ಬಂಧವಾಗುವುದಿಲ್ಲ. ಮೊದಲು ಅಜ್ಞಾನಾವಸ್ಥೆಯಲ್ಲಿ ಇಂದ್ರಿಯ ಮತ್ತು ಶರೀರವನ್ನು ಪುಷ್ಟ ಮಾಡುವ ಸಲುವಾಗಿ ನೀನು ಹಿಂಸೆ ಮಾಡಿ ಪಾಪ ಕಟ್ಟಿಕೊಂಡಿರುವೆ; ಈಗ ಈ ಶರೀರದಿಂದ ವಿವಿಧ ತಪ ಮಾಡಿ ಪೂರ್ವಬದ್ಧ ಕರ್ಮಗಳ ನಾಶ ಮಾಡು. ಎಲ್ಲ ಕರ್ಮಗಳ ನಾಶವಾದ ಮೇಲೆ

ಅವಿನಾಶಿ, ಅಖಂಡ, ಅನಂತ ಮೋಕ್ಷ ಸುಖವನ್ನು ಪ್ರಾಪ್ತಮಾಡಿಕೊಳ್ಳುವೆ. ಆ ಸುಖವು ಉತ್ಪನ್ನವಾದ ಮೇಲೆ ನಷ್ಟವಾಗುವುದಿಲ್ಲ. ಅದರಿಂದ ಎಲೈ ಭವ್ಯನೇ ! ನಿನ್ನ ಅಭಿಲಾಷೆಯು ಪೂರ್ಣವಾಗುವುದು, ಎಂದು ಆಚಾರ್ಯದೇವರು ಹೇಳಿದರು.

ಗುರುಗಳ ಆಜ್ಞೆಯನ್ನು ಆಲಿಸಿ ಶಿಷ್ಯನು ಕೂಡ ಮಹಾವಿನಯದಿಂದ, ಉಲ್ಲಾಸಪೂರ್ವಕ ವಿಚಾರ ಮಾಡುತ್ತಾನೆ-ಈ ಹೊತ್ತಿನ ದಿನವು ಧನ್ಯವಿದೆ. ಈ ಹೊತ್ತು ಗುರುಗಳು ನನಗೆ ಯಾವುದರಿಂದ ನನ್ನ ಪೂರ್ವಕೃತ ಪಾಪಗಳು ನಾಶವಾಗಿ ಹೋಗುವವು ಮತ್ತು ಸರ್ವಕರ್ಮರಹಿತ, ನಿರಂಜನ ಪದ, ಕೇವಲಜ್ಞಾನಸಹಿತ ಅವ್ಯಾಬಾಧ ಸುಖದ ಸ್ಥಾನಭೂತ ಸಿದ್ಧಪದದ ಪ್ರಾಪ್ತಿಯಾಗಿ ಹೋಗುವುದು ಅಂಥ ಉಪಾಯವನ್ನು ತಿಳಿಸಿಕೊಟ್ಟಿದ್ದಾರೆ. ಇನ್ನಂತೂ ಶ್ರೀಗುರುಗಳ ಪ್ರಸಾದದಿಂದ ನಾನು ಮೋಕ್ಷವನ್ನು ಪಡೆಯುವೆನು. ಇದು ಗುರುಗಳ ಉಪಕಾರವಿದೆ. ಈ ಗುರುಗಳು ವಾಂಛಿತ ಫಲ ಪ್ರದಾನ ಮಾಡುವ ಸಲುವಾಗಿ ಕಲ್ಪವೃಕ್ಷದ ಸಮಾನ ಮಹಾನರಿದ್ದಾರೆ; ಏಕೆಂದರೆ ಕಲ್ಪವೃಕ್ಷವು ಒಂದೇ ಸ್ಥಾನದಲ್ಲಿ ಸ್ಥಿರೀಭೂತವಿರುವುದರಿಂದ ಅದರ ಹತ್ತಿರ ಬರುವಂಥವರೇ ಫಲದ ಪ್ರಾಪ್ತಿ ಮಾಡಿಕೊಳ್ಳುತ್ತಾರೆ. ಅದು ಮನೆಯಲ್ಲಿ ಕುಳಿತಿರುವಂಥವರಿಗೆ ಕೊಡಲು ಹೋಗುವುದಿಲ್ಲ ಅಲ್ಲದೇ ಅದು ಕೇವಲ ಭೋಜನ-ಭೂಷಣಾದಿ ಇಂದ್ರಿಯಜನಿತ ಸುಖವೀಯುತ್ತದೆ, ಅದು ಕೂಡ ಶಾಶ್ವತವಿರುವುದಿಲ್ಲ, ಸ್ವಲ್ಪಕಾಲ ಸುಖದಂತೆ ಕಂಡುಬಂದು ವಿನಷ್ಟವಾಗಿ ಹೋಗುತ್ತದೆ. ಶ್ರೀಗುರು ರೂಪದ ಕಲ್ಪವೃಕ್ಷವು ಭವ್ಯ ಜೀವರುಗಳಿಗೆ ಮನೆಯಲ್ಲಿ ಕುಳಿತುಕೊಂಡೇ ವಾಂಛಿತ ಸುಖಕೊಡುವ ಸಲುವಾಗಿ ಸ್ವಯಂ ದೇಶ-ವಿದೇಶಗಳಲ್ಲಿ ವಿಹಾರ ಮಾಡಿ, ಎಲ್ಲರ ಆಶೆಗಳನ್ನು ಪೂರ್ಣ ಮಾಡುತ್ತಾರೆ. ಈ ಪ್ರಕಾರ ಯಾರ ಕ್ರಿಯೆಗಳಿಂದ ಸಂಸಾರೀ ಜೀವರುಗಳು ಮೋಕ್ಷ ಪಡೆಯುತ್ತಾರೆ, ಆ ಶ್ರೀಗುರುಗಳು ಧನ್ಯರಿದ್ದಾರೆ.

ಈ ಪ್ರಕಾರ ವಿವಿಧ ರೂಪದಿಂದ ಗುರುಗಳ ಮಹಿಮೆ ಮಾಡಿ ಶಿಷ್ಯನು ಗುರುಗಳಿಂದ ತಿಳಿಸಿಕೊಡಲಾದ ಅನೇಕ ತಪ ತಪಿಸುತ್ತ ಸಮಸ್ತ ಕರ್ಮಗಳ ನಾಶಮಾಡಿ ಮುಕ್ತಿರಾಣಿಯ ಪತಿಯಾಗುತ್ತಾನೆ. ಹೀಗೆ ದಯೆಯು ಸುಖಕಾರಕ'ವಿದೆಯೆಂಬ ವಿಚಾರದಿಂದ ಶ್ರದ್ಧೆಯು ದೃಢವಾಗುತ್ತದೆ. ಎಂದರೆ ಎಲ್ಲಕ್ಕಿಂತ ಮೊದಲು ತಿಳಿಯುವುದಾಗುತ್ತದೆ. ನಂತರ ತಿಳಿಯಲಾದ ವಸ್ತುವಿನ ದೃಢ ಶ್ರದ್ಧೆಯಾಗುತ್ತದೆ. ಶ್ರದ್ಧೆಯಾದ ಮೇಲೆ ಕಷ್ಟ ಸಹಿಸಿಯೂ ಕೂಡ ತನ್ನ ಹಿತದ ಕಾರ್ಯ ಮಾಡಿಯೇ ಮಾಡುತ್ತಾನೆ - ಈ ಪ್ರಕಾರ ನಿನ್ನ ಪ್ರಶ್ನೆಯ ಉತ್ತರ ತಿಳಿಯುವುದು. ಎಲೈ ಭವ್ಯನೇ ! ಮೊದಲಂತೂ ಒಳಿತು ಕೆಡಕು ವಸ್ತುವನ್ನು ತಿಳಿಯುವುದಾಗುತ್ತದೆ. ಒಳ್ಳೆಯ ರೀತಿಯಿಂದ ತಿಳಿದ ನಂತರ ಅದರ ದೃಢವಾದ ಶ್ರದ್ಧೆಯಾಗುತ್ತದೆ ಮತ್ತು ತನ್ನ ಒಳಿತು-ಕೆಡಕುಗಳ ನಿರ್ಣಯ ಮಾಡುತ್ತಾನೆ.

ಯಾರೋ ಬಾಲಬುದ್ಧಿಗಳು ಪದಾರ್ಥವನ್ನು ತಿಳಿಯುತ್ತಿದ್ದರೂ ಅದರಲ್ಲಿ ಅವುಗಳ ಗ್ರಹಣ-ತ್ಯಾಗ ಮಾಡುವುದನ್ನು ತಿಳಿಯುವುದಿಲ್ಲ. ಅಂಥ ಮಿಥ್ಯಾದೃಷ್ಟಿಯಿಂದ ಮೋಹಿತರಾದ ಜೀವಗಳು ಸಂಸಾರದಲ್ಲಿ ಅನೇಕವಿವೆ, ಅವರಿಗೆ ಅವರ ಜ್ಞಾನದ ಜ್ಞಾನತನದ ಲಾಭವೇನೂ ಆಗುವುದಿಲ್ಲ. ಆ ಮಿಥ್ಯಾಜ್ಞಾನಿಗಳ ಜ್ಞಾನತನವು ಸ್ವ-ಪರ ಜೀವಗಳನ್ನು ವಂಚಿಸುವ ಸಲುವಾಗಿ ಪ್ರಗಟವಾಗುತ್ತದೆ. ಸಮ್ಯಕ್ತ್ವ ಸಹಿತವಾದ ಜ್ಞಾನತನದಲ್ಲಿ ಶ್ರದ್ಧೆ ಮಾಡಿದ ನಂತರ ಅವುಗಳ ತ್ಯಾಗ-ಗ್ರಹಣವಾಗುತ್ತದೆ. ಅದು ತನ್ನ ಒಳಿತಾಗಲು ಯೋಗ್ಯ, ಹಿತಕಾರಿ, ಪರಭವದಲ್ಲಿ ಸುಖಕಾರಿ ಪದಾರ್ಥವನ್ನು ಗ್ರಹಣ ಮಾಡುತ್ತದೆ ಮತ್ತು ಈ ಭವ-ಪರ ಭವಗಳಲ್ಲಿ ದುಃಖಕಾರಕ, ಪಾಪಬಂಧ ಮಾಡುವಂಥ, ಪರಂಪರೆಯಿಂದ ದುಃಖಮಯ ಪದಾರ್ಥಗಳ ತ್ಯಾಗ ಮಾಡುತ್ತದೆ.

ಹೀಗೆ ಗ್ರಹಣ, ತ್ಯಾಗ ಮಾಡಿ ಸಮ್ಯಗ್ದೃಷ್ಟಿ ಜೀವನು ಈ ಪ್ರಕಾರ ವಿಚಾರ ಮಾಡುತ್ತಾನೆ - ಧರ್ಮದ

ಎಲ್ಲ ಅಂಗಗಳಲ್ಲಿ ಒಂದು ದಯಾ ಭಾವವೇ ಮುಖ್ಯ ಧರ್ಮವಿದೆ. ತಪ, ಸಂಯಮ, ದಾನ, ಪೂಜಾದಿಗಳಂತೂ ಧರ್ಮದ ಅಂಗಗಳಿವೆ ಮತ್ತು ಜೀವದಯೆಯು ಮೂಲ ಧರ್ಮವಿದೆ. ಈ ಜೀವದಯೆಯ ಪಾಲನೆಯ ಸಲುವಾಗಿ ಅನ್ಯಧರ್ಮಗಳಿವೆ. ಯಾರು ಹಿಂಸೆಯ ಕಾರಣಭೂತವಾದ ರಾಜ್ಯ, ಗೃಹಾರಂಭವನ್ನು ಬಿಟ್ಟುಕೊಟ್ಟು, ತನ್ನ ದೇಹ ಸಂಬಂಧದ ಭೋಗಗಳ ಕುರಿತಾಗಿರುವ ಮಮತ್ವವನ್ನು ಬಿಟ್ಟುಕೊಟ್ಟು, ಮೋಹದ ತ್ಯಾಗ ಮಾಡಿ, ಶರೀರದಿಂದ ನಗ್ನರಾಗಿ ಸಮಸ್ತ ಷಟ್ಕಾಯಿಕ ಜೀವಗಳಿಗೆ ಸುಖವೀಯುವ ಸಲುವಾಗಿ ಯತಿಯ ಪದ ಧಾರಣ ಮಾಡಿದ್ದಾರೆ; ಅವರು ಸಂಪೂರ್ಣ ಜೀವಗಳ ರಕ್ಷಣೆ ಮಾಡಿ, ಜಗತ್ಪೂಜ್ಯ ಸಿದ್ಧಪದವನ್ನು ಪ್ರಾಪ್ತಮಾಡಿಕೊಂಡು ಮೋಕ್ಷಸ್ಥಾನದಲ್ಲಿ ಅಖಂಡ ಸುಖಿಗಳಾಗುತ್ತಾರೆ-ಈ ಪ್ರಕಾರ ದಯೆಯೇ ಧರ್ಮವಿದೆಯೆಂಬ ಮಾತು ಸಿದ್ಧವಾಯಿತು, ದಯೆಯಿಲ್ಲದೆ ಧರ್ಮವೆನ್ನುವುದು ವ್ಯರ್ಥವಿದೆ.

ಲೋಕದಲ್ಲಿಯೂ ಬಾಲ-ಗೋಪಾಲರು ದಯೆಯನ್ನೇ ಧರ್ಮವೆಂದು ಹೇಳುತ್ತಾರೆ. ಈ ದಯೆಯ ಪ್ರಸಿದ್ಧಿಯು ಆರೂ ಮತಗಳಲ್ಲಿ ಪ್ರಸಿದ್ಧವಿದೆ. ಎಲ್ಲ ಜೀವರುಗಳು ಇದರ ಕೀರ್ತಿಯನ್ನು ಹಾಡುತ್ತಾರೆ. ಅಜ್ಞಾನಿಯಾದ ದರಿದ್ರ ಭಿಕ್ಷುಕನು ಕೂಡ 'ನಾನು ಹಸಿದಿದ್ದೇನೆ, ಯಾರಾದರೂ ದಯಾಧರ್ಮದ ಧಾರಕರಿದ್ದರೆ ನಮ್ಮ ಮೇಲೆ ದಯೆ ಮಾಡಿ ನನ್ನ ದುಃಖ ದೂರ ಮಾಡಿರಿ' ಎಂದು ಹೇಳುತ್ತಾನೆ. ಇಲ್ಲಿ ಗಮನ ಹರಿಸಬೇಕಾದ ಮಾತೆಂದರೆ ದರಿದ್ರನೂ ಕೂಡ ದಯೆಯನ್ನೇ ಧರ್ಮವೆಂದು ಹೇಳುತ್ತಾನೆಂದ ಮೇಲೆ ವಿವೇಕವಂತರಂತೂ ದಯೆಯಲ್ಲಿ ಧರ್ಮವೆಂದು ಹೇಳಿಯೇ ಹೇಳುತ್ತಾರೆ. ಈ ಪ್ರಕಾರ ದಯೆಯೇ ಧರ್ಮವಿದೆಯೆಂಬುದನ್ನು ತಿಳಿಯುವುದು. ಜಿನೇಶ್ವರ ದೇವರು ಕೂಡ ಅಲ್ಲಲ್ಲಿ ದಯೆಯನ್ನೇ ಧರ್ಮವೆಂದು ಹೇಳಿದ್ದಾರೆ. ಹೀಗೆ ವಿಚಾರ ಮಾಡಿ ಒಂದು ದಯೆಯೇ ಧರ್ಮವಿದೆಯೆಂದು ತಿಳಿಯುವುದು.

ಇಷ್ಟೊಂದು ವಿಶ್ಲೇಷಣೆಯ ನಂತರವೂ ಕೂಡ ಒಂದುವೇಳೆ ಯಾವುದೋ ಪ್ರಾಣಿಯು-ಜೀವನು ಜೀವ-ಘಾತದಲ್ಲಿಯೇ ಧರ್ಮ ಮನ್ನಿಸುತ್ತಿದ್ದರೆ ಆತನ ಚಿತ್ತವೇ ಮಹಾಕಠೋರವಿದೆ. ಅವನ ಪರಭವವು ಕೆಟ್ಟು ಹೋಗುವುದಿದೆ, ಅವನಿಗೆ ದುಃಖಿಯಾಗಿ ಉಳಿಯುವುದಿದೆ. ಅವನದು ಪರಭವದಲ್ಲಿ ದುಃಖದಾಯಕ ಪರ್ಯಾಯವಾಗುವುದು. ದೀನ, ದರಿದ್ರ , ಅಂಧ, ಅಸಹಾಯನಾಗುವುದಿದೆ ಅಥವಾ ನಾರಕಿ ಮತ್ತು ತಿರ್ಯಂಚನಾಗುವುದಿದೆ. ಅಲ್ಲಿ ಅವನು ಮಹಾದುಃಖಿಯಾಗುವನು. ತಾನು ಮಾಡಿರುವುದನ್ನು ಸ್ವಯಂ ತಾನೇ ಭೋಗಿಸುವನು. ಅವನ ಶ್ರದ್ಧೆಯನ್ನು ಅವನೇ ತಿಳಿಯಬೇಕು. ಆದರೆ ನಾವಂತೂ ಒಂದು ದಯಾಭಾವವು ಧರ್ಮವೆಂಬ ಉಚಿತವಾದ ಮಾತನ್ನೇ ಹೇಳಿದ್ದೇವೆ. ಅದಕ್ಕಾಗಿ ಯಾರಿಗೆ ಪರಮಸುಖದ ಇಚ್ಛೆಯಿದೆ ಆ ಧರ್ಮಾತ್ಮರು ಎಲ್ಲ ಜೀವಗಳ ಮೇಲೆ ಕ್ಷಮೆಯ ಭಾವ ಧಾರಣಮಾಡಿ, ಷಟ್ಕಾಯಿಕ ಜೀವಗಳಿಗೆ ಅಭಯದಾನ ಕೊಡಬೇಕು. ಅಧಿಕ ಹೇಳುವುದರಿಂದ ಲಾಭವೇನಿದೆ ? ಇಂಥ ಅವಸರವು ಪುನಃ ದೊರಕುವುದು ಕಠಿಣವಿದೆ.

ಈ ಪ್ರಕಾರ ಸುದೃಷ್ಟಿ ತರಂಗಿಣಿಯೆಂಬ ಹೆಸರಿನ ಗ್ರಂಥದಲ್ಲಿ ಹಿಂಸೆಯ ನಿಷೇಧ ಮತ್ತು ದಯೆಯ ಮಾಹಾತ್ಮ್ಯದ ವರ್ಣನೆ ಮಾಡುವಂಥ ಮೂವತ್ತನೆಯ ಪರ್ವವು ಸಂಪೂರ್ಣವಾಯಿತು.

★★★★★

- ಅನೇಕ ಪ್ರಕಾರದ ಬಾಹ್ಯ ಕ್ರಿಯೆಗಳ ಕ್ಲೇಶದಿಂದ ಯಾರೂ ಮೋಕ್ಷವನ್ನು ಪಡೆಯಲಾಗಿಲ್ಲ ಮತ್ತು ಸಮ್ಯಗ್ಜ್ಞಾನವು ಪ್ರಕಾಶಿತವಾದ ಮೇಲೆ ಯಾವ ಕ್ಲೇಶವಿಲ್ಲದೆಯೇ ಮೋಕ್ಷಪದದ ಪ್ರಾಪ್ತಿಯಾಗುತ್ತದೆ. ಜ್ಞಾನಜ್ಯೋತಿಯು ಪ್ರತಿಯೊಂದು ಜೀವದ ಅಂತರಂಗದಲ್ಲಿ ಇರುತ್ತದೆ.

# ೩೧ : ಮೂವತ್ತೊಂದನೆಯ ಪರ್ವ
# ದೊರೆಯ ಗುಣ, ವಿದ್ಯೆಗಳು ಹಾಗೂ ಹದಿನಾರು ಸ್ವಪ್ನ

ಈಗ ಯಾವುದರಿಂದ ಪ್ರಜೆಗಳು ಸುಖಿಯಾಗುವರು, ದೊರೆಯ ತೇಜ-ಪ್ರತಾಪಗಳು ಹೆಚ್ಚುತ್ತವೆ, ಕೀರ್ತಿಯಾಗುತ್ತದೆ, ಸುಖಿಯಾಗಿರುತ್ತಾರೆ, ಪರಭವದ ಸುಧಾರಣೆಯಾಗುವುದು-ಅಂಥ ರಾಜಲಕ್ಷಣದ ಸ್ವರೂಪವನ್ನು ಶ್ರೀ ಆದಿಪುರಾಣದ ಅನುಸಾರ ಹೇಳುತ್ತಾರೆ -

**ಷಟ್‌ಗುಣ ಚವ ವಿದ್ಯಾಏ, ಪಣ ಬಲ ಅಣೆ ಹೋಯ ಸುಭಗಗುಣಸೇಸಾ ।**

**ಸಲು ಣೆಯ ಜಸ ಲಛಿ ಪಾವಇ, ಕುಣ ತವ ಲೇಯ ಹೋಯ ಸಿವಣಾಹೋ ॥೧೩೬॥**

**ಗಾಥಾರ್ಥ :-** ಆರು ಗುಣ ಮತ್ತು ನಾಲ್ಕು ವಿದ್ಯೆ, ಪಂಚಬಲ ಮತ್ತು ಅನೇಕ ಸುಭಗ ಗುಣಗಳಿಂದ ಸಂಪನ್ನ ದೊರೆಯು ಕೀರ್ತಿ-ಸಂಪದ ಪಡೆಯುತ್ತಾನೆ. ಅದರ ನಂತರ ತಪದ ಅಂಗೀಕಾರ ಮಾಡಿ ಮೋಕ್ಷಲಕ್ಷ್ಮಿಯ ಪತಿಯಾಗುತ್ತಾನೆ.

**ಭಾವಾರ್ಥ :-** ಆರು ಗುಣ, ನಾಲ್ಕು ವಿದ್ಯೆ ಮತ್ತು ಐದು ಬಲ-ಇವು ದೊರೆಗಳ ಗುಣವಿವೆ. ಯಾರಲ್ಲಿ ಈ ಗುಣಗಳಿರುತ್ತವೆ, ಅವರು ಯೋಗ್ಯ ದೊರೆಯಿದ್ದಾರೆ. ಸಂಧಿ, ವಿಗ್ರಹ, ಯಾನ, ಆಸನ, ಸಂಸ್ಥಾನ ಮತ್ತು ಆಶ್ರಯ-ಇವು ಆರು ಗುಣಗಳಿವೆ. ಈಗ ಇವುಗಳ ವಿಶೇಷತೆ ಹೇಳುತ್ತಾರೆ.

**೧. ಸಂಧಿಗುಣ -** ಯಾವನೋ ತನಗಿಂತ ಅಧಿಕ ಬಲಶಾಲಿ, ವಿಶಾಲ ಸೇನೆಯ ಧಾರಕ, ಮುಂದೆ ಹೇಳಲಾಗುವ ದೊರೆಗಳ ಐದು ಗುಣಗಳಲ್ಲಿ ತನಗಿಂತ ಅಧಿಕ ಗುಣವುಳ್ಳವನು, ಪಂಚ ಬಲಗಳ ಅಪೇಕ್ಷೆಯಿಂದ ಕೂಡ ಅಧಿಕ ಬಲಶಾಲಿ, ಯುದ್ಧದಲ್ಲಿ ಜಯಿಸುವುದು ಅಶಕ್ಯವಿರುವಂಥ ಬಲಶಾಲಿಯಾದ ಶತ್ರುದೊರೆಗೆ ಗ್ರಾಮ, ದೇಶ, ಭೂಮಿಯನ್ನಿತ್ತು ಪ್ರಸನ್ನಗೊಳಿಸುವುದು; ಆನೆ-ಕುದುರೆಗಳನ್ನು ಕೊಡುವುದು. ತನ್ನ ಮನೆಯ ಉತ್ತಮ ರತ್ನ, ಧನ ಕೊಡುವುದು, ಅವನ ವಿನಯ ಮಾಡುವುದು, ಸೇವೆ-ಶುಶ್ರೂಷೆ ಮಾಡುವುದು-ಇತ್ಯಾದಿ ಮಾಧ್ಯಮಗಳಿಂದ ಹೇಗೆ ಸಾಧ್ಯವೋ ಹಾಗೆ ಆ ಪ್ರಬಲ ಶತ್ರುವನ್ನು ಪ್ರಸನ್ನ ಮಾಡುವುದು. ಅವನೊಂದಿಗೆ ಸ್ನೇಹ ಕಾಯ್ದುಕೊಳ್ಳುವ ಸಲುವಾಗಿ ಯಥಾ ಸಂಭವ ಪ್ರಯತ್ನ ಮಾಡುವುದು ಅದು ದೊರೆಯ ಸಂಧಿನಾಮದ ಗುಣವಿದೆ.

ಒಳ್ಳೆಯ ಬುದ್ಧಿಯಧಾರಕ, ವಿವೇಕವಂತ ದೊರೆ - ಮಂತ್ರಿಯು ಸಮಯ ಬಂದ ಮೇಲೆ ಈ ಸಂಧಿ ನಾಮದ ಗುಣವನ್ನು ಪ್ರಕಟಪಡಿಸಿ ತಮ್ಮ ರಾಜ್ಯವನ್ನು ಸುರಕ್ಷಿತವಾಗಿಟ್ಟುಕೊಂಡು ಸುಖಿಯಾಗುತ್ತಾರೆ. ಈ ಸಂಧಿಯೆಂಬ ಹೆಸರಿನ ಗುಣವಿಲ್ಲದವರು ತಮಗಿಂತ ವಿಶೇಷ ಬಲಶಾಲಿ ದೊರೆಯೊಂದಿಗೆ ಕೂಡ ಯುದ್ಧಮಾಡಿ, ರಾವಣನ ಹಾಗೆ ಸತ್ತು ಹೋಗುತ್ತಾರೆ. ಕುಲದ, ತನುವಿನ, ಧನದ ನಾಶವಾಗಿ ರಾಜ್ಯ ನಷ್ಟಮಾಡಿ ದುಃಖಿಯಾಗುತ್ತಾರೆ. ಅದರಿಂದ ವಿವೇಕ ಸಂಪನ್ನ ದೊರೆಯಂತೂ ಯಥಾಯೋಗ್ಯ ದ್ರವ್ಯ, ಕ್ಷೇತ್ರ, ಕಾಲ, ಭಾವಗಳನ್ನು ತಿಳಿದು ಈ ಸಂಧಿ ಗುಣದ ಬಲದಿಂದ ಶತ್ರುವನ್ನು ಉಪಶಾಂತ ಮಾಡುತ್ತಾನೆ. ತನಗಿಂತ ಬಲಶಾಲಿಯಾದ ದೊರೆಗೆ ಮಸ್ತಕ ಮಣಿಸಿ, ಆತನ ಸೇವೆ ಮಾಡಿ, ತನ್ನ ಮಾನವು ಖಂಡಿತವಾಯಿತೆಂದು ಮನ್ನಿಸುವುದಿಲ್ಲ. ಬಲಶಾಲಿಯ ಸೇವೆಯನ್ನು ತನ್ನ ರಕ್ಷಣೆಯ ಕಾರಣವೆಂದು ತಿಳಿದು ಅವನೊಂದಿಗೆ ಸಂಧಿ ಮಾಡಿಕೊಳ್ಳುತ್ತಾನೆ; ಇದುವೇ ವಿವೇಕೀ ದೊರೆಯ ಧರ್ಮವಿದೆ.

**೨. ವಿಗ್ರಹ ಗುಣ :-** ಒಂದುವೇಳೆ ಯಾವನೋ ಪ್ರಬಲ ಶತ್ರು, ಧಿಟ್ಟ ಬುದ್ಧಿಯುಳ್ಳ ದೊರೆಯಿದ್ದು; ಅವನಿಗೆ ಧನವಿತ್ತು, ದೇಶವಿತ್ತು, ಸೇವೆ ಸ್ವೀಕರಿಸಿ, ಆನೆ-ಕುದುರೆಗಳನ್ನು ಕೊಡುವ - ಇತ್ಯಾದಿ ರೂಪದಿಂದ ವಿನಯ ಮಾಡುತ್ತಿದ್ದರೂ ಅವನು ಉಪಶಾಂತನಾಗದಿದ್ದರೆ ಕೊನೆಯಲ್ಲಿ ಯುದ್ಧ ಮಾಡುತ್ತಾನೆ, ಆಗ ಯುದ್ಧದಲ್ಲಿ ಸಂದೇಹ ಮಾಡದೇ ನಿಃಶಂಕನಾಗಿ ವೈರಿಯೊಂದಿಗೆ ಯುದ್ಧ ಮಾಡುತ್ತಾನೆ. ಅದರಲ್ಲಿ ತನ್ನ ಪುರುಷಾರ್ಥ, ಪರಾಕ್ರಮವನ್ನು ಪ್ರಕಟ ಮಾಡುವುದು ಅದು ವಿಗ್ರಹನಾಮದ ಗುಣವಿದೆ.

**೩. ಯಾನ ಗುಣ -** ಮಹಾನ ವಂಶದಲ್ಲಿ ಉತ್ಪನ್ನರಾಗಿರುವ ರಾಜಕುಮಾರರು ಯಾನ ಗುಣದಲ್ಲಿ ಪ್ರವೀಣರಾಗಿರಬೇಕಾಗುವುದು ಅದನ್ನೇ ಹೇಳುತ್ತಾರೆ - ಆನೆಯ ಸವಾರಿ, ಆನೆಯನ್ನು ಗೆಲ್ಲುವುದು, ಗಜಕ್ರೀಡೆ ಮೊದಲಾದುವಲ್ಲಿ ಆನೆಯನ್ನು ನಡೆಸುವುದು, ಅದನ್ನು ತನ್ನ ವಶದಲ್ಲಿಟ್ಟುಕೊಳ್ಳುವುದು - ಇತ್ಯಾದಿ ಗಜಸವಾರಿಯಲ್ಲಿ ಸಾವಧಾನನಿರುವುದು. ಕುದುರೆಯನ್ನೇರುವುದು, ಅದನ್ನು ಓಡಿಸುವುದು ದುಷ್ಟ ಅಶ್ವವನ್ನು ವಶೀಭೂತ ಮಾಡಿಕೊಳ್ಳುವುದು - ಇತ್ಯಾದಿ ಕುದುರೆ ಸವಾರಿಯಲ್ಲಿ ಸಾವಧಾನನಿರುವುದು, ರಥ ನಡೆಸುವುದರಲ್ಲಿ ಸಾವಧಾನನಾಗಿರುವುದು, ನಿತ್ಯದ ಸವಾರಿ ತಿಳಿಯುವುದು, ಸಿಂಹದ ಸವಾರಿ ತಿಳಿಯುವುದು, ಒಂಟೆ, ಗೂಳಿಯ ಸವಾರಿ ಮಾಡುವುದು-ತಿಳಿಯುವುದು. ಎಮ್ಮೆ, ಎತ್ತುಗಳ ಸವಾರಿ, ಗೇಂಡಾಮೃಗದ ಸವಾರಿ ಇತ್ಯಾದಿ ಸವಾರಿಗಳಲ್ಲಿ ಪ್ರವೀಣತೆಯು ಯಾನ ನಾಮದ ಗುಣವಿದೆ. ಈ ಗುಣವು ರಾಜ ಪುತ್ರರಲ್ಲಿ ಅವಶ್ಯವಾಗಿ ಇರಬೇಕಾಗುವುದು. ಈ ಗುಣವಿಲ್ಲದಿದ್ದರೆ ಯುದ್ಧದಲ್ಲಿ ಸೋತು ಹೋಗುತ್ತಾನೆ ಮತ್ತು ಅನ್ಯ ರಾಜಕುಮಾರರೊಳಗೆ ಲಜ್ಜಿತನಾಗಬೇಕಾಗುತ್ತದೆ. ಅದರಿಂದ ದೊರೆ ಕುಮಾರರಿಗೆ ಯಾನಗುಣವಿರಬೇಕಾಗುವುದು.

**೪. ಆಸನ ಗುಣ -** ದೊರೆಗಳಲ್ಲಿ ಆಸನಗುಣವಿರಬೇಕಾಗುವುದು. ಕುಳಿತುಕೊಳ್ಳುವ ಆಸನವು ದೃಢವಾಗಿರಬೇಕು. ಎಲ್ಲಿ ಕುಳಿತರೂ ಅಲ್ಲಿ ದೃಢ ಏಕಾಸನದಲ್ಲಿ ಕುಳಿತಿರಬೇಕು. ಚಪಲ ಆಸನವಿಟ್ಟುಕೊಳ್ಳಬಾರದು. ಒಮ್ಮೆ ಒಂದು ಕಡೆ ಮತ್ತೊಮ್ಮೆ ಬೇರೊಂದು ಕಡೆಯಾದ ಚಂಚಲಭಾವವಿರಬಾರದು. ಒಂದು ಸ್ಥಾನದಲ್ಲಿ ದೃಢವಾಗಿ ಕುಳಿತುಕೊಳ್ಳಬೇಕು. ದೇಶಾಂತರದಲ್ಲಿ ಗಮನ ಮಾಡುವ ಸಮಯದಲ್ಲಿ ಎಲ್ಲಿ ಇರುವುದಾಗುತ್ತದೆ ಅಲ್ಲಿ ತಮ್ಮ ಶರೀರದ ಸಾವಧಾನತೆಯನ್ನು ಇಟ್ಟುಕೊಳ್ಳಬೇಕು. ನೀರು, ಹುಲ್ಲು, ಆಹಾರದ ಪ್ರಚುರತೆಯುಳ್ಳ ಸ್ಥಾನದಲ್ಲಿ ಉಳಿದುಕೊಳ್ಳಬೇಕು. ಸೇನೆಯ ಜನರ ರಕ್ಷಣೆ ಮಾಡಬೇಕು. ತಮ್ಮ ವಿಶ್ರಾಂತಿ ಸ್ಥಳದ ನಾಲ್ಕೂ ನಿಟ್ಟಿಗೆ ತಮ್ಮ ದೇಹದ ಮೋಹವನ್ನಿಟ್ಟುಕೊಳ್ಳುವಂಥ ಸೇವಕ-ಸುಭಟರ ವಿಶ್ರಾಂತಿಯ ಸ್ಥಳ ನಿರ್ಮಿಸಿಕೊಟ್ಟು, ಅವರು ತಮ್ಮ ಶರೀರದ ರಕ್ಷಣೆ ಮಾಡುತ್ತಿರುವುದನ್ನು ಕಂಡು ವಿಶ್ರಮಿಸಬೇಕು-ಇತ್ಯಾದಿ ಸಾವಧಾನತೆಯನ್ನಿಟ್ಟುಕೊಳ್ಳುವುದು ಆಸನ ಗುಣವಿದೆ.

**೫. ಸಂಸ್ಥಾಗುಣ -** ತಮ್ಮ ಮುಖದಿಂದ ಆಡಲಾದ ವಚನವನ್ನು ನಂತರ ಅನ್ಯಥಾ ಮಾಡದಿರುವುದು ಸಂಸ್ಥಾಗುಣವಿದೆ. ವಚನದ ದೃಢತೆಯನ್ನಿಟ್ಟುಕೊಳ್ಳುವುದು ವಚನದ ಮರ್ಯಾದೆಯ ನಿರ್ವಹಣೆ ಮಾಡುವುದು. ಶರೀರವು ಹೊರಟು ಹೋದರೂ ಹೇಳಲಾದ ವಚನದ ಉಲ್ಲಂಘನೆ ಮಾಡದಿರುವುದು ಹೇಗೆಂದರೆ ದಶರಥ ದೊರೆಯು ತನ್ನ ಅರಸಿ ಕೈಕೇಈಗೆ ವರ ಕೊಟ್ಟಿದ್ದನು; ಸಮಯ ಪಡೆದು ಅವಳು ತನ್ನ ಪುತ್ರ ಭರತನ ಸಲುವಾಗಿ ರಾಜ್ಯ ಕೇಳಿದಳು; ಆಗ ದೊರೆಯು ಭರತನಿಗೆ ಅಯೋಧ್ಯೆಯ ರಾಜ್ಯವನ್ನಿತ್ತು ವಚನದ ಪಾಲನೆ ಮಾಡಿದನು. - ಈ ಪ್ರಕಾರ ದೊರೆಗಳಿಗೆ ತಮ್ಮ ವಚನದ ದೃಢತೆಯನ್ನಿಟ್ಟುಕೊಳ್ಳುವ ಸಂಸ್ಥಾನಾಮದ ಗುಣವಿರುತ್ತದೆ. ದೊರೆಯಲ್ಲಿ ವಚನ ದೃಢತೆಯ ಗುಣವಿಲ್ಲದಿದ್ದರೆ ಅವನ ಪ್ರಜೆಗಳು ದುಃಖ ಪಡೆಯುವರು, ಅನ್ಯಾಯವು ಹರಡುವುದು, ದೊರೆಯ ವಚನವು ಪ್ರತೀತಿ ರಹಿತವಾದಮೇಲೆ ಅಪಯಶಾದಿ ದೋಷಗಳು ಪ್ರಗಟವಾಗುವವು ಅದರಿಂದ ಸತ್ಯ ವಚನವನ್ನೇ ಆಡುವುದು ಅದು ಸಂಸ್ಥಾನಾಮದ ಗುಣವಿದೆ.

**೬. ಆಶ್ರಯಗುಣ -** ದೊರೆಗಳಲ್ಲಿ ಆಶ್ರಯ ನಾಮದ ಗುಣವಿರಬೇಕಾಗುವುದು. ಯಾರೋ ಬಲವಂತರಿಂದ ಪೀಡಿಸಲ್ಪಟ್ಟಿರುವ ಭಯವಂತನು ತನ್ನ ಆಶ್ರಯಕ್ಕೆ ಬಂದರೆ, ಅವನನ್ನು ತನ್ನ ಆಶ್ರಯದಲ್ಲಿಟ್ಟುಕೊಂಡು ಸಂತುಷ್ಟನನ್ನಾಗಿ ಮಾಡುವುದು. ಸ್ವಯಂ ಭಯಭೀತನಾದ ಮೇಲೆ ತನಗಿಂತ ಪ್ರಬಲರ ಆಶ್ರಯ ಪಡೆದು ಸುಖಿಯಾಗುವುದು; ತನಗಿಂತ ದೊಡ್ಡವರ ಆಶ್ರಯದಲ್ಲಿರುವುದು ಅದರಿಂದ ತನ್ನ ಮಾನಕ್ಕೆ ಕುಂದು ಬಂತೆಂದು ಮನ್ನಿಸದಿರುವುದು ಮತ್ತು ಅನ್ಯರನ್ನು ತನ್ನ ಆಶ್ರಯದಲ್ಲಿಟ್ಟುಕೊಳ್ಳುವಲ್ಲಿ ಯಾರಿಂದಲೂ ಭಯಪಡದಿರುವುದು ಅದು ಆಶ್ರಯವೆಂಬ ಹೆಸರಿನ ಗುಣವಿದೆ. ಈ ಗುಣವು ಇಲ್ಲದೇ ಹೋದರೆ ಮಹಿಮೆಯು ಪ್ರಾಪ್ತವಾಗುವುದಿಲ್ಲ. ಅದರಿಂದ ದೊರೆಗಳಲ್ಲಿ ಆಶ್ರಯ ಗುಣವಿರಬೇಕಾಗುವುದು.

ಆನೀಷವಿದ್ಯೆ, ತ್ರಯೀವಿದ್ಯೆ, ವಾರ್ತಾವಿದ್ಯೆ ಮತ್ತು ದಂಡನೀವಿದ್ಯೆ -ಇವು ದೊರೆಗಳು ಕಲಿತುಕೊಳ್ಳಲು ಯೋಗ್ಯವಾದ ನಾಲ್ಕು ವಿದ್ಯೆಗಳಿವೆ. ಈಗ ಅವುಗಳ ಸಾಮಾನ್ಯ ಸ್ವರೂಪ ಹೇಳುತ್ತಾರೆ -

೧. ಆನೀಷ ವಿದ್ಯೆ - ಹೇಗೆ ರತ್ನ ಪರೀಕ್ಷಕನು ತನ್ನ ಬುದ್ಧಿಯ ಯೋಗದಿಂದ ರತ್ನಗಳ ಒಳ್ಳೆಯ ಹಾಗೂ ಸಾಮಾನ್ಯತೆ ತಿಳಿಯುತ್ತಾನೆ, ಹಾಗೆಯೇ ವಿವೇಕವಂತನಾದ ದೊರೆಯು ಮೊದಲಂತೂ ತನ್ನ ಹಾಗೂ ಅನ್ಯರ ಬಲ-ಪರಾಕ್ರಮವನ್ನು ತಿಳಿದುಕೊಂಡು ವಿಚಾರ ಮಾಡುವುದೇನೆಂದರೆ, ಇಂಥ ದೊರೆಯೋರ್ವನ ಪರಾಕ್ರಮವು ಇಂಥದ್ದಿದೆ, ಆ ದೊರೆಯ ಸೇನೆಯು ಇಷ್ಟಿದೆ, ಭುಜಬಲವು ಇಂಥದ್ದಿದೆ, ಅವನ ದೇಶಗಳು ಇಂತಿಷ್ಟು ಇವೆ, ಬೊಕ್ಕಸವು ಹೀಗಿದೆ, ಇಂಥಿಂಥ ಸಾಮಂತ ದೊರೆಗಳು ಆತನ ಸೇವಕರಿದ್ದಾರೆ. ಇಂಥ ಬುದ್ಧಿಶಾಲಿ ಮಂತ್ರಿಗಳಿದ್ದಾರೆ, ನನ್ನ ದೇಹ ಬಲವು ಇಂಥದ್ದಿದೆ, ನನ್ನ ದೇಶಗಳು ಇಷ್ಟಿವೆ, ಬೊಕ್ಕಸವು ಇಷ್ಟಿದೆ, ಇಷ್ಟು ಸಾಮಂತ ಸೇವಕರಿದ್ದಾರೆ, ಇಂಥ ಮಂತ್ರಿಗಳಿದ್ದಾರೆ - ಇತ್ಯಾದಿ ಭೇದ-ವ್ಯತ್ಯಾಸ ತಿಳಿಯುವಂಥವನು ವಿವೇಕವಂತ ದೊರೆಯಿದ್ದಾನೆ. ಒಂದುವೇಳೆ ತನ್ನ ಹಾಗೂ ಅನ್ಯ ದೊರೆಗಳ ಪರಾಕ್ರಮವನ್ನು ತಿಳಿದುಕೊಂಡಿರದಿದ್ದರೆ, ತನಗಿಂತ ಅಧಿಕ ಬಲಶಾಲಿ ದೊರೆಯೊಂದಿಗೆ ದ್ವೇಷ ಮಾಡಿ, ತನ್ನ ರಾಜ್ಯವನ್ನೇ ಕಳೆದುಕೊಂಡು ದುಃಖಿಯಾಗುವನು.

ತನ್ನ ಸೇವಕ, ಸ್ನೇಹಿತ, ಪ್ರಜೆಗಳ ಸ್ವಭಾವ ಎಂದರೆ ಇವನು ಒಳ್ಳೆಯವನಿದ್ದಾನೆ, ಇವನು ಕೆಟ್ಟವನಿದ್ದಾನೆ, ಇವನು ದುಷ್ಟಾಂಗನಿದ್ದಾನೆ, ಇವನು ಸಜ್ಜನಾಂಗನಿದ್ದಾನೆ, ಇವನು ಗುಣಗ್ರಾಹಕನಿದ್ದಾನೆ, ಇವನು ಸತ್ಯವಾದಿಯಿದ್ದಾನೆ, ಇವನು ಸುಳ್ಳುಗಾರನಿದ್ದಾನೆ, ಇವನು ಇಂಥ ಸ್ವಭಾವದ ಧಾರಕ ಲೋಭಿಯಿದ್ದಾನೆ, ಇವನು ಧನದ ಲೋಭಿಯಿದ್ದಾನೆ, ಇವನು ಕಳ್ಳ ಸ್ವಭಾವಿಯಿದ್ದಾನೆ, ಇವನು ಕ್ರೋಧಿಯಿದ್ದಾನೆ, ಇವನು ಮಹಾಮಾನಿಯಿದ್ದಾನೆ, ಇವನು ವಂಚಕನಿದ್ದಾನೆ, ಇವನು ಸರಳ ಸ್ವಭಾವಿಯಿದ್ದಾನೆ, ಇವನು ಉದಾರಚಿತ್ತನಿದ್ದಾನೆ, ಇವನು ಕೃಪಣನಿದ್ದಾನೆ, ಇವನಿಂದ ನನಗೆ ಸುಖವಿದೆ, ಇವನಿಂದ ನನ್ನ ನಿಂದೆಯಾಗುತ್ತದೆ, ಇವನಿಂದ ನನ್ನ ಕೀರ್ತಿಯಾಗುತ್ತದೆ, ಇವನು ಪರಪೀಡಕನಿದ್ದಾನೆ, ಇವನು ಪರರಕ್ಷಕನಿದ್ದಾನೆ - ಇತ್ಯಾದಿ ವಿವೇಕ ವಿದ್ಯೆಯನ್ನು ರಾಜಪುತ್ರರು ಕಲಿತುಕೊಳ್ಳುವುದು ಸುಖಕಾರಕವಿದೆ - ಇದು ಆನೀಷವಿದ್ಯೆಯಿದೆ. ಈ ವಿದ್ಯೆಯ ಜ್ಞಾನವಿದ್ದರೆ ಆ ದೊರೆಯು ತನ್ನ ಜ್ಞಾನ ಬಲದಿಂದ ಕಠೋರ ಚಿತ್ತವನ್ನು ಕೋಮಲ ಮಾಡಿ ಬಿಡುತ್ತಾನೆ.

ಸಂದೇಹ :- ಕಠೋರ ಸ್ವಭಾವಿಯನ್ನು ಹೇಗೆ ಕೋಮಲ ಸ್ವಭಾವಿಯನ್ನಾಗಿಸುವ ಸಾಧ್ಯತೆಯಿದೆ ? ಅವನದಂತೂ ಸ್ವಭಾವವೇ ಕಠೋರವಿದೆ. ವಸ್ತುವಿನ ಸ್ವಭಾವವು ಹೇಗೆ ತಾನೆ ನಾಶವಾಗುವುದು ?

ಸಮಾಧಾನ :- ಹೇಗೆ ಪೃಥ್ವಿಕಾಯರೂಪ ಚಿನ್ನ, ಬೆಳ್ಳಿ, ತಾಮ್ರ, ಹಿತ್ತಾಳೆ, ಲೋಹ ಮೊದಲಾದ ಅನೇಕ ಧಾತುಗಳಿಂದ ಅನೇಕ ಪಾತ್ರೆಗಳನ್ನು ಮಾಡುತ್ತಾರೆ. ಇವೆಲ್ಲ ಧಾತುಗಳು ಕಠೋರವಿವೆ. ಚತುರ ಕಾರ್ಮಿಕರು - ಕಲೆಗಾರರು ಈ ಧಾತುಗಳ ಕಠೋರತೆಯನ್ನು ತಿಳಿದುಕೊಂಡು ಮೊದಲಂತೂ ಅದನ್ನು ಅಗ್ನಿಯಿಂದ ಕಾಯಿಸುತ್ತಾರೆ. ನಂತರ ಘನದಿಂದ-ಸುತ್ತಿಗೆಯಿಂದ ಕುಟ್ಟುತ್ತಾರೆ. ಪುನಃ ಕಾಯಿಸುತ್ತಾರೆ ಹೀಗೆ ಮಾಡುವುದರಿಂದ ಅದು ಸ್ವಲ್ಪ ಮೃದುವಾಗುತ್ತದೆ; ಆಗ ಚಿಕ್ಕ ಸುತ್ತಿಗೆಯಿಂದ ಸಾವಕಾಶವಾಗಿ ಕುಟ್ಟುತ್ತಾರೆ - ಹೀಗೆ ಮಾಡುವುದರಿಂದ ವಿವೇಕಿಗಳ ಕೈಗೆ ಸಿಲುಕಿ ಮಹಾಕಠೋರವಾದ ಧಾತುವು ಕೂಡ ಮೃದುವಾಗಿ ಹೋಗುತ್ತದೆ.

ಇದೇ ರೀತಿ ದುಷ್ಟ ಮನುಷ್ಯನು ಮಹಾಕಠೋರನಿದ್ದಾನೆ. ಅವನನ್ನು ತನ್ನ ನ್ಯಾಯಬುದ್ಧಿಯಿಂದ ವಿವೇಕೀ ದೊರೆಯು, ಅವನ ಯೋಗ್ಯ ಕಠೋರ ದಂಡನೆಯನ್ನೇ ನೀಡುತ್ತಾನೆ. ಆಗ ದೊರೆಯ ಮಹಾಭಯದಿಂದ ದುಷ್ಟ ಪ್ರಾಣಿಯೂ ತನ್ನ ಕಠೋರತೆಯನ್ನು ಬಿಟ್ಟುಕೊಟ್ಟು ಕೋಮಲತೆಯ ರೂಪನಾಗುತ್ತಾನೆ. ನಂತರ ಅವನಿಗೆ ಒಳ್ಳೆಯ ನಿಮಿತ್ತವು ದೊರಕಿದ ಮೇಲೆ ಅವನೂ ತನ್ನ ಒಳಿತು ಮಾಡಿಕೊಳ್ಳುತ್ತಾನೆ. ಇದು ಆನೀಷ ವಿದ್ಯೆಯಿದೆ. ಮಹಾವಂಶದಲ್ಲಿ ಉತ್ಪನ್ನನಾದ ವಿವೇಕವಂತ ದೊರೆಗೆ ಈ ವಿದ್ಯೆಯು ಕಲಿತುಕೊಳ್ಳಲು ಯೋಗ್ಯವಿದೆ.

**೨. ತ್ರಯೀ ವಿದ್ಯೆ -** ಶಾಸ್ತ್ರಗಳ ವೇತ್ತಾ, ಈ ಭವ-ಪರಭವ ಸುಧಾರಣೆಯ ರಹಸ್ಯ ತಿಳಿದಿರುವಂಥವ, ಮಹಾನ ಬುದ್ಧಿಶಾಲಿ, ಧರ್ಮಶಾಸ್ತ್ರಗಳನ್ನು ತಿಳಿದಿರುವವ, ಪಾಪ-ಪುಣ್ಯಗಳ ಫಲವನ್ನು ತಿಳಿದುಕೊಂಡು ಸ್ವಯಂ ಪಾಪದ ತ್ಯಾಗ ಮಾಡಿ ದಾನ, ಪೂಜೆ ಮೊದಲಾದ ಧರ್ಮದ ವಿವಿಧ ಅಂಗಗಳರೂಪ ಪರಿಣಮನ ಮಾಡುವಂಥ ವಿವೇಕೀ ದೊರೆಯು ಹಿಂಸಾಮಯ, ದುರಾಚಾರಯುಕ್ತ ಪಾಪವರ್ಧಕ ಕ್ರಿಯೆಗಳನ್ನು ತನ್ನ ದೇಶದಲ್ಲಿ ಆಗಗೊಡುವುದಿಲ್ಲ. ಹಿಂಸೆ ಮಾಡಿ ಮುಗ್ಧ ಜೀವರುಗಳು ತಮ್ಮ ಭವ ಕೆಡೆಸಿಕೊಳ್ಳುತ್ತಾರೆ. ಅಂಥ ಅಜ್ಞಾನೀ ಜೀವಗಳ ಮೂಲಕ ಮಾಡಲಾಗುವಂಥ ಕುಕ್ರಿಯೆಗಳು, ಜೀವ ಹಿಂಸಾಮಯ ಪಾಪ ಪ್ರವೃತ್ತಿಗಳನ್ನು - ಪಾಪಕ್ರಿಯೆಗಳೆಂದು ತಿಳಿದುಕೊಂಡು ವಿವೇಕ ಸಂಪನ್ನ ದೊರೆಯು ಸ್ವಯಂ ಬಿಟ್ಟುಕೊಡುತ್ತಾನೆ ಮತ್ತು ಅನ್ಯರ ಕಲ್ಯಾಣಾರ್ಥವಾಗಿ ಪಾಪ ಮಾಡುತ್ತಿರುವವರನ್ನು ತಡೆಯುತ್ತಾನೆ.

ಪಾಪರೂಪ ಪ್ರವೃತ್ತಿ ಮಾಡುವಂಥ ತನ್ನ ಪ್ರಜೆಗಳನ್ನು ದಂಡಿಸಿ ಧರ್ಮದಲ್ಲಿ ತೊಡಗಿಸುತ್ತಾನೆ. ಧರ್ಮಾತ್ಮನು ದಯಾಭಾವಪೂರ್ವಕ ಶುದ್ಧಪ್ರವೃತ್ತಿ ಮಾಡುವಂಥ ಪ್ರಜೆಗಳ ರಕ್ಷಣೆ ಮಾಡುತ್ತ ಶುಶ್ರೂಷೆ ಮಾಡುತ್ತಾನೆ. ಪ್ರಜೆಗಳಲ್ಲಿ ಧರ್ಮರೂಪದ ಪ್ರವೃತ್ತಿಯು ಹೇಗೆ ಆಗುವುದೋ, ಹಾಗೆಯೇ ಕಾರ್ಯ ಮಾಡುತ್ತಾನೆ. ಭೂಮಿಯ ಮೇಲೆ ಶುಭಾಚರಣದ ವೃದ್ಧಿ ಮಾಡುತ್ತಾನೆ. ಧರ್ಮಕ್ರಿಯೆ, ಶುಭ ಆಚರಣೆಯನ್ನು ಸ್ವಯಂ ಮಾಡುತ್ತಾನೆ ಹಾಗೂ ಅನ್ಯರಿಗೆ ಉಪದೇಶವಿತ್ತು ಪೂಜೆ, ದಾನ, ಶೀಲ, ಸಂಯಮ, ತಪ, ವ್ರತ ಇತ್ಯಾದಿಯಾಗಿ ಧರ್ಮವನ್ನು ಹೆಚ್ಚಿಸುತ್ತಾನೆ. ಪಾಪದ ನಾಶಮಾಡಿ ಸತತ ಧರ್ಮಸೇವನೆಯ ವಿಚಾರ ಮಾಡುತ್ತಾನೆ. ಸಂಸಾರ-ಭೋಗಗಳನ್ನು ವಿನಶ್ವರವೆಂದು ತಿಳಿದು ವಿಷಯಾದಿಗಳಲ್ಲಿ ಆಸಕ್ತನಾಗುವುದಿಲ್ಲ. ಮೊದಲು ಭರತ ಚಕ್ರಿ ಮೊದಲಾದ ಮಹಾನ ರಾಜರು, ದೊಡ್ಡ-ದೊಡ್ಡ ಪುರುಷರು ರಾಜ್ಯ-ಸಂಪದವನ್ನು ಬಿಟ್ಟುಕೊಟ್ಟು, ಜೈನೇಶ್ವರೀ ದೀಕ್ಷೆ ಧಾರಣ ಮಾಡಿ ತಪಸ್ಸು ಮಾಡಿ ಮೋಕ್ಷಕ್ಕೆ ಹೋಗಿದ್ದಾರೆ. ಅವರುಗಳ ಗುಣಕೀರ್ತನೆ ಮಾಡುತ್ತ, ವೈರಾಗ್ಯ ಭಾವನೆಯ ಅಭಿಲಾಷಿಯು, ಪ್ರಜೆಗಳ ರಕ್ಷಣೆ ಮಾಡುವ ಇತ್ಯಾದಿ ಭಾವಸಹಿತ ರಾಜ್ಯ ಮಾಡುತ್ತಾನೆ-ಇದು ತ್ರಯಿ ನಾಮದ ವಿದ್ಯೆಯಿದೆ.

**೩. ವಾರ್ತಾವಿದ್ಯೆ -** ನೀತಿ ಶಾಸ್ತ್ರಗಳಿಂದ ದೊರೆಗಳ ಪರಂಪರೆಯನ್ನು ತಿಳಿದು, ಕೀರ್ತಿಯ ಬಯಕೆಯುಳ್ಳ ದೊರೆಯು ತನ್ನ ಪ್ರಜೆಗಳ ಪಾಲನೆ ಮಾಡುವ ಅವರನ್ನು ಸುಖಿಯನ್ನಾಗಿರಿಸುವ ಇಚ್ಛೆಯುಳ್ಳ ಸುಬುದ್ಧೀ ದೊರೆಯು ಪ್ರಜೆಗಳ ನ್ಯಾಯ-ಅನ್ಯಾಯ, ಸುಖ-ದುಃಖಗಳನ್ನು ತಿಳಿಯುವ ಸಲುವಾಗಿ ದೇಶ-ನಗರಗಳಲ್ಲಿ ಗುಪ್ತಚರರೂಪದ ನೇತ್ರ ಹರಡುತ್ತಾನೆ. ಹೇಗೆ ನೇತ್ರಗಳಿಂದ ಎಲ್ಲವನ್ನು ನೋಡಲಾಗುತ್ತದೆ, ಹಾಗೆಯೇ ದೊಡ್ಡ-ದೊಡ್ಡ ದೊರೆಗಳು ಗುಪ್ತಚರರೂಪದ ನೇತ್ರಗಳಿಂದ ದೂರ-ದೂರದ ಮಾತನ್ನು ತಿಳಿಯುತ್ತಿರುತ್ತಾರೆ. ವಿವೇಕವಂತ ದೊರೆಯು ಹತ್ತೂ ದಿಕ್ಕುಗಳಲ್ಲಿ ಗುಪ್ತಚರರನ್ನು ರವಾನಿಸಿ ಪೃಥ್ವಿಯ ಸಮಾಚಾರ ತಿಳಿಯುತ್ತಾನೆ. ಸ್ವಚಕ್ರ-ಪರಚಕ್ರ(ತನ್ನ ಸೇನೆ-ಅನ್ಯರ ಸೇನೆ)ಗಳ ಹೀನತೆ-ಅಧಿಕತೆಗಳನ್ನು ತಿಳಿಯುತ್ತಾನೆ. ಆ ಗುಪ್ತಚರರಿಂದ ಯೋಗ್ಯ-ಅಯೋಗ್ಯ ಎಲ್ಲವನ್ನೂ ತಿಳಿಯುತ್ತಾನೆ.

ತನ್ನ ಪ್ರಜೆಗಳಿಗೆ ದುಃಖವೀಯುವಂಥ ಕಳ್ಳರು, ವಂಚಕರು, ಪಾಖಂಡಿಗಳು, ಕಣ್ಣಿಗೆ ಬೀಳದ ದುರಾಚಾರಿಗಳು ದೀನ ಜೀವರುಗಳನ್ನು ಪೀಡಿಸುವಂಥವರು - ಇತ್ಯಾದಿ ದುಷ್ಟ ಜೀವಗಳನ್ನು ತಿಳಿದು ತನ್ನ ದೇಶದಿಂದ ಹೊರಗೆ ಹಾಕುತ್ತಾನೆ. ಧರ್ಮಾತ್ಮಾ, ಸಜ್ಜನ, ದಯಾವಂತ, ಸಂತೋಷೀ, ಸಂಯಮೀ, ನ್ಯಾಯಮಾರ್ಗಿಗಳಾದ ಗುಣೀ ಸಾಧು ಜನರ ಸೇವೆ-ಶುಶ್ರೂಷೆ ಮಾಡುತ್ತ ರಕ್ಷಿಸುತ್ತಾನೆ. ಹೀಗೆ ಗುಪ್ತಚರರ ಮೂಲಕ ಪ್ರಜೆಗಳ ಕಥೆಗಳನ್ನು ತಿಳಿಯುತ್ತಾನೆ. ಈ ಪ್ರಕಾರ ವಿವೇಕದ ವೃದ್ಧಿ ಮಾಡುವಂಥ ಈ ವಿದ್ಯೆಯು ಯಾವ ದೊರೆಯ ಹೃದಯದಲ್ಲಿ ಇರುತ್ತದೆ, ಅವನ ಕೀರ್ತಿಯಾಗುತ್ತದೆ. ಪ್ರಜೆಗಳು ಸದಾ ಸುಖಿಯಾಗಿರುತ್ತಾರೆ - ಇದು ವಾರ್ತಾ ವಿದ್ಯೆಯಿದೆ.

**೪. ದಂಡನೀ ವಿದ್ಯೆ :-** ವಿವೇಕೀ ದೊರೆಯು ತನ್ನ ನ್ಯಾಯಬುದ್ಧಿಯಿಂದ ತನ್ನ ರಾಜ್ಯದಲ್ಲಿ ಕಳ್ಳ, ವಚಂಕ, ತನ್ನ ಆಜ್ಞೆಯ ವಿರುದ್ಧ ನಡೆಯುವಂಥ, ಸಪ್ತವ್ಯಸನಗಳ ಉಪದೇಶಕರಿಗೆ ಶಿಕ್ಷೆ ವಿಧಿಸಿ ದುಃಖಿಯನ್ನಾಗಿಸುತ್ತಾನೆ.

ಯಾರಾದರೂ ನ್ಯಾಯಮಾರ್ಗ ಬಿಟ್ಟು ಅನ್ಯಾಯದ ಆಚರಣೆ ಮಾಡಿದರೆ ಇವನ ಹಾಗೆ ದುಃಖಿಯಾಗಿ ಶಿಕ್ಷೆ ಅನುಭವಿಸಬೇಕಾಗುವುದೆಂದು ಜನರಿಗೆ ಎಚ್ಚರಿಕೆ ನೀಡುತ್ತಾನೆ. ನ್ಯಾಯ ನೀತಿಗಳ ಅನುಸಾರ ನಡೆಯುವಂಥ ರಾಜ್ಯದ ಹಿತೈಷಿ, ನ್ಯಾಯವಂತರ ರಕ್ಷಣೆ ಮಾಡುತ್ತಾನೆ - ಇದು ದಂಡನೀ ವಿದ್ಯೆಯಿದೆ.

ಈ ಪ್ರಕಾರ ಇವು ನಾಲ್ಕು ವಿದ್ಯೆಗಳಿವೆ. ಮಹಾನ ಕುಲದಲ್ಲಿ ಉತ್ಪನ್ನ - ಎರಡೂ ಪಕ್ಷಗಳಿಂದ ಪವಿತ್ರ ರಾಜಕುಮಾರರು ಇವನ್ನು ಕಲಿಯುವುದು ಮಂಗಲಕಾರಿಯಿದೆ ಇವೆಲ್ಲ ವಿದ್ಯೆಗಳು ಯಾವ ಭೂಪತಿಯ ಹೃದಯದಲ್ಲಿ ಇರುತ್ತವೆ ಆ ದೊರೆ ಯಶಸ್ಸನ್ನು ಪಡೆಯುತ್ತಾನೆ ಮತ್ತು ಪರಂಪರೆಯಿಂದ ಎಂದರೆ ಶುಭಗತಿಗಳನ್ನು ಭೋಗಿಸಿ ಮೋಕ್ಷ ಪ್ರಾಪ್ತ ಮಾಡಿಕೊಳ್ಳುತ್ತಾನೆ.

ಭಾಗ್ಯಬಲ, ದೈವಬಲ, ಮಂತ್ರಬಲ, ಶರೀರ ಬಲ ಮತ್ತು ಸಾಮಂತ ಬಲ - ಇವು ಐದು ದೊರೆಯ ಬಲಗಳಿದ್ದು ಈಗ ಅವುಗಳ ಸಾಮಾನ್ಯ ಅರ್ಥ ಹೇಳುತ್ತಾರೆ -

೧. **ಭಾಗ್ಯಬಲ** - ಪೂರ್ವ ಭವದಲ್ಲಿ ವಿಶೇಷ ಪುಣ್ಯ ಮಾಡಿರುವಂಥ ಜೀವನು ಒಂದುವೇಳೆ ಪುಣ್ಯದ ಉದಯದಲ್ಲಿ ರಾಜ್ಯ ಪ್ರಾಪ್ತ ಮಾಡಿಕೊಂಡರೆ ಅವನ ಪುಣ್ಯದ ಎದುರಿಗೆ ದೊರೆಗಳು ಸಹಜವಾಗಿಯೇ ಭಯಭೀತರಾಗಿ ಬಂದು-ಬಂದು ತಲೆ ಬಾಗುತ್ತಾರೆ, ಸೇವೆ ಮಾಡುತ್ತಾರೆ. ಆಜ್ಞೆ ಮನ್ನಿಸುತ್ತಾರೆ. ತಮ್ಮ ಮಕುಟ ಮಣಿಸುತ್ತಾರೆ, ಅವನನ್ನು ತಮ್ಮ ಸ್ವಾಮಿಯೆಂದು ಮನ್ನಿಸುತ್ತಾರೆ ಹೇಗೆ ಮೂರು ಖಂಡದ ದೊರೆ ವಾಸುದೇವ ಆರು ಖಂಡದ ಅರಸು ಚಕ್ರವರ್ತಿಯ ರಾಜ್ಯ - ಇವು ಪುಣ್ಯದ ಫಲವಿವೆ. ಏಕೆಂದರೆ ಇವರುಗಳ ದೃಷ್ಟಿಯು ಮಹಾಸೌಮ್ಯ, ವಚನಗಳು ಮಹಾಮಿಷ್ಟ ಮತ್ತು ಮೂರ್ತಿಯು ಮಹಾವಿಶ್ವಾಸವನ್ನು ಉತ್ಪನ್ನ ಮಾಡುವಂಥದ್ದಿರುತ್ತದೆ. ಸುಂದರ ಹಾಗೂ ಮನಸ್ಸನ್ನು ಮೋಹಿತಗೊಳಿಸುವಂಥದ್ದಿರುತ್ತದೆ. ಕೇವಲ ಅವರ ವಚನಗಳನ್ನು ಆಲಿಸುವುದರಿಂದಲೇ ಅನ್ಯ ಜೀವರುಗಳಲ್ಲಿ ಸಮತೆಯ ಭಾವವಾಗುತ್ತವೆ. ಸ್ಥಿರತೆಯು ಹೆಚ್ಚುತ್ತದೆ. ಸ್ವಯಂ ಇಂಥವರಿದ್ದರೂ ಇವರುಗಳ ಬಾಹ್ಯ ಪ್ರತಾಪದ ಭಯದಿಂದ ದೇವ, ವಿದ್ಯಾಧರರು ಕಂಪಿತರಾಗುತ್ತಾರೆ. ಯಾರೂ ಆಜ್ಞೆಯ ಭಂಗ ಮಾಡುವ ಸಾಧ್ಯತೆಯಿಲ್ಲ. ಯಾರಿಗೂ ಭಯ ತೋರಿಸದೇ ಅವರ ಪುಣ್ಯದ ಪ್ರತಾಪದಿಂದ ದೊಡ್ಡ-ದೊಡ್ಡ ದೊರೆಗಳು ಬಂದು ಬಂದು ಮಕುಟ ಮಣಿಸುತ್ತಾರೆ. ಯಾವ ಪ್ರಕಾರ ಸೂರ್ಯನು ಮೂಲದಲ್ಲಿ ಶೀತಲನಾಗಿದ್ದರೂ ಅವನ ಪ್ರಭೆಯು ಅನ್ಯರ ಸಲುವಾಗಿ ತೇಜಕಾರಕವಿದೆ, ಅದೇ ಪ್ರಕಾರ ಇವರೂ ತೇಜ-ಕಾಂತಿಯ ಧಾರಕರಿದ್ದಾರೆ-ಇದು ದೊರೆಯ ಭಾಗ್ಯಬಲವಿದೆ.

೨. **ದೈವಬಲ** - ಕರ್ಮವು ಯಾರ ಒಳಿತು ಮಾಡುತ್ತದೆ. ಅವರ ಕೆಡಕನ್ನು ಯಾರು ಮಾಡುವ ಸಾಧ್ಯತೆಯಿದೆ ? ಯಾರಿಗೆ ಕರ್ಮವು ಒಳ್ಳೆಯದನ್ನು ತೋರಿಸುತ್ತದೆ, ಅವರ ಕೇಡು ಯಾರಿಂದಲೂ ಆಗುವುದಿಲ್ಲ. ಹೇಗೆ ಸ್ವಯಂ ಮೂರು ಖಂಡದ ಅಧಿಪತಿ, ಸಮಸ್ತ ವಿದ್ಯಾಧರರ ಒಡೆಯ, ಮಹಾನ್ಯಾಯವಂತ, ಮಹಾಬಲಶಾಲಿ, ವಿಭೀಷಣ-ಕುಂಭಕರಣರಂಥ ಸೋದರರು ಮತ್ತು ಇಂದ್ರಜಿತ-ಮೇಘನಾಥರಂಥ ಪುತ್ರವಂತನು, ಇಂದ್ರ-ವಿದ್ಯಾಧರರನ್ನು ಜಯಿಸುವಂಥವ - ಜೀವಂತವಾಗಿಯೇ ಬಂಧಿಸಿ ತರುವಂಥವನು, ರಾಕ್ಷಸ ಕುಲರಕ್ಷಕ ತ್ರಿಖಂಡಾಧಿಪತಿ ರಾವಣನನ್ನು ಯುದ್ಧದಲ್ಲಿ ರಾಮ-ಲಕ್ಷ್ಮಣ ಸೋದರರು ಗೆದ್ದು ಬಿಟ್ಟರು. - ಇದು ಕರ್ಮದ ಬಲವಿದೆ. ಕರ್ಮವು ಯಾರ ಒಳಿತು ಮಾಡುತ್ತದೆ, ಕರ್ಮವು ಯಾರನ್ನು ಗೆಲ್ಲಿಸುತ್ತದೆ ಅವರು ಗೆಲ್ಲುತ್ತಾರೆ ಈ ಕರ್ಮವು ಯಾರ ಒಳಿತು ಮಾಡುತ್ತದೆ, ಅವರದು ಒಳಿತಾಗುತ್ತದೆ - ಇದು ದೈವಬಲವಿದೆ. ಹೇಗೆ - ಮೈನಾಸುಂದರಿಯು 'ಸುಖ-ದುಃಖಗಳು ಕರ್ಮಾನುಸಾರ ಆಗುತ್ತವೆ' ಎಂದು ಹೇಳಿದಳು, ಆಗ ಅವಳ ತಂದೆಯು ದ್ವೇಷ ಭಾವದಿಂದ ಕರ್ಮದ ಪರೀಕ್ಷೆ ಮಾಡುವ ಸಲುವಾಗಿ ಕುಷ್ಟರೋಗಿಯಾದ ಶ್ರೀಪಾಲನೊಂದಿಗೆ ತನ್ನ ಪುತ್ರಿಯ ವಿವಾಹ ಮಾಡಿಕೊಡುತ್ತಾನೆ. ನಂತರ ಶುಭಕರ್ಮದಿಂದ ಶ್ರೀಪಾಲನ ಕುಷ್ಟರೋಗವು ನಾಶವಾಯಿತು. ಅವನಿಗೆ ರಾಜ್ಯ ದೊರಕಿತು. ಮೈನಾಸುಂದರಿಯು ಕೂಡ ಎಂಟು ಸಾವಿರ ರಾಣಿಯರಲ್ಲಿ ಪಟ್ಟಮಹಿಷಿಯಾಗಿ ಸುಖಿಯಾದಳು, ಅದನ್ನೆಲ್ಲ ಕಂಡು ಅವಳ ತಂದೆಯು ಕರ್ಮ-ಕರ್ತವ್ಯವನ್ನು ಸತ್ಯವೆಂದು ಮನ್ನಿಸಿದನು. - ಇದು ದೈವಬಲವಿದೆ.

**೩. ಮಂತ್ರಬಲ -** ವಿವಿಧ ವಿದ್ಯೆಗಳ ಸಾಧನೆ ಮಾಡಿ, ಅನೇಕ ವಿದ್ಯೆಗಳನ್ನು ತಮ್ಮ ಆಧೀನ ಮಾಡಿಕೊಂಡು ಆ ವಿದ್ಯೆಗಳ ಪ್ರಸಾದದಿಂದ ಅನೇಕ ಮಾನೀ ದೊರೆಗಳನ್ನು ಗೆದ್ದು ಅವರಿಂದ ತಮ್ಮ ಆಜ್ಞೆ ಮನ್ನಿಸ ಹಚ್ಚುವುದು ಮಂತ್ರಬಲವಿದೆ.

**೪. ಶರೀರ ಬಲ -** ತಮ್ಮ ಶರೀರದ ಭುಜಬಲವು ಅಧಿಕವಿರುವುದು; ಕೋಟಿಭಟ, ಲಕ್ಷಭಟ, ಸಹಸ್ರಭಟ, ಇತ್ಯಾದಿರೂಪದಲ್ಲಿ ಅನೇಕ ಆನೆ-ಸಿಂಹಗಳನ್ನು ಗೆಲ್ಲುವ ಪರಾಕ್ರಮವಿರುವುದು, ಅನೇಕ ಸೇನೆಗಳನ್ನು ಸ್ವಯಂ ಏಕಾಕಿಯೇ ಗೆಲ್ಲುವಂಥ ಶಾರೀರಿಕ ಬಲವು ಪ್ರಾಪ್ತವಾಗುವುದು - ಶರೀರ ಬಲವಿದೆ.

**೫. ಸಾಮಂತಬಲ -** ಅನೇಕ ದೊಡ್ಡ-ದೊಡ್ಡ ಸಾಮಂತ ದೊರೆಗಳು ಆಜ್ಞೆಯಲ್ಲಿರುವುದು. ಸಂಪೂರ್ಣ ಸೇನೆಯ ಸಮಸ್ತ ಸುಭಟರು ತಮ್ಮ ಆಜ್ಞಾನುಸಾರಿಯಾಗಿರುವುದು - ಅನೇಕ ಸಾಮಂತರ ಒಡೆಯನಾಗುವುದು ಸಾಮಂತ ಬಲವಿದೆ.

ಈ ಪ್ರಕಾರ ದೊರೆಯ ಆರು ಗುಣ, ನಾಲ್ಕು ರಾಜ್ಯವಿದ್ಯೆ ಮತ್ತು ಐದು ಬಲಗಳು - ಇವು ಎಲ್ಲ ದೊರೆಗಳ ಸಂಪದವಿವೆ. ಇಂಥ ಸಂಪದ ಸಂಪನ್ನ ದೊರೆಗಳು ಸದೈವ ಸುಖ ಭೋಗಿಸುತ್ತ ಕೀರ್ತಿ ಪಡೆಯುತ್ತಾರೆ. ತಪದ ಅಂಗೀಕಾರ ಮಾಡಿ ದೇವ, ಇಂದ್ರ , ಅಹಮಿಂದ್ರ , ನಿರ್ವಾಣ ಪದದ ಪ್ರಾಪ್ತಿ ಮಾಡಿಕೊಳ್ಳುತ್ತಾರೆ. ಇವು ದೊರೆಗಳ ಶುಭ ಲಕ್ಷಣವಿವೆ.

ಪುಣ್ಯಾಧಿಕಾರೀ ಪುರುಷರ ಸಲುವಾಗಿ ಪ್ರಥಮಾನುಯೋಗ, ಕರಣಾನುಯೋಗ, ಚರಣಾನುಯೋಗ, ದ್ರವ್ಯಾನುಯೋಗ, ಶಿಕ್ಷಾಕಲ್ಪ, ವ್ಯಾಕರಣ, ಛಂದಸ್ಸು ಅಲಂಕಾರ, ಜ್ಯೋತಿಷ ನಿರುಕ್ತ, ಅತಿಹಾಸಿ, ಪುರಾಣ, ಮೀಮಾಂಸೆ ಮತ್ತು ನ್ಯಾಯ - ಇವು ಹದಿನಾಲ್ಕು ವಿದ್ಯೆಗಳು ಕಲಿಯುವಂಥವಿವೆ. ಇಲ್ಲಿ ಅವುಗಳ ವಿಶೇಷ ಹೇಳಲಾಗುವುದು.

**೧. ಪ್ರಥಮಾನುಯೋಗ ವಿದ್ಯೆ -** ಸಾಮಾನ್ಯ ಬುದ್ಧಿಯವರನ್ನು ಧರ್ಮದಲ್ಲಿ ತೊಡಗಿಸುವ ಸಲುವಾಗಿ ಅನೇಕ ಮಹಾಪುರುಷ-ತೀರ್ಥಂಕರ, ಚಕ್ರವರ್ತೀ, ನಾರಾಯಣ, ಕಾಮದೇವ ಮೊದಲಾದ ಪುರುಷರ ಕಥೆ; ಪುಣ್ಯ-ಪಾಪದ ಫಲ, ಸ್ವರ್ಗ-ನರಕಗಳ ಸುಖ-ದುಃಖದ ಕಥನ ಇತ್ಯಾದಿ ಹಿತೋಪದೇಶ ನೀಡುವ ಕಲೆಯು ಪ್ರಥಮಾನುಯೋಗ ವಿದ್ಯೆಯಿದೆ.

**೨. ಕರಣಾನುಯೋಗ ವಿದ್ಯೆ -** ಅಧೋಲೋಕ, ಮಧ್ಯಲೋಕ, ಊರ್ಧ್ವಲೋಕರೂಪ ಮೂರು ಲೋಕಗಳ ಸಮಸ್ತ ರಚನೆ, ಸಂಸ್ಥಾನರೂಪ ಲೋಕದ ಆಕಾರ, ಅದರಲ್ಲಿ ನಾಲ್ಕು ಗತಿಗಳ ರಚನೆಯ ಕಥನ ಇತ್ಯಾದಿ ಮೂರು ಲೋಕಗಳ ಕಥನದ ಉಪದೇಶ ಮಾಡುವ ಕಲೆಯು ಕರಣಾನುಯೋಗ ವಿದ್ಯೆಯಿದೆ.

**೩. ಚರಣಾನುಯೋಗ ವಿದ್ಯೆ -** ಮುನಿ,ಶ್ರಾವಕರ ಆಚಾರದಲ್ಲಿ ಪ್ರವೀಣತೆ, ಅವರುಗಳ ಆಹಾರ-ಪಾನೀಯದ ವಿಧಿ ತಿಳಿಯುವುದು, ಮುನಿರಾಜರನ್ನು ಬಲಗೊಳ್ಳುವವಿಧಿ, ನವಧಾ ಭಕ್ತಿಯ ವಿಧಿ ತಿಳಿಯುವುದು, ತ್ಯಾಗೀ-ಪ್ರತಿಮಾಧಾರೀ ಶ್ರಾವಕರನ್ನು ಆಹಾರದ ಸಲುವಾಗಿ ಕರೆತರುವವಿಧಿ, ಅವರಿಗೆ ಆಹಾರ ಕೊಡುವ ವಿಧಿ - ಇತ್ಯಾದಿ ಯತಿ-ಶ್ರಾವಕರ ಆಚಾರದ ಉಪದೇಶ ಮಾಡುವ ಕಲೆಯನ್ನು ಚರಣಾನುಯೋಗ ವಿದ್ಯೆಯೆಂದು ಹೇಳುತ್ತಾರೆ.

**೪. ದ್ರವ್ಯಾನುಯೋಗ ವಿದ್ಯೆ :** ಷಟ್‌ದ್ರವ್ಯ ಮತ್ತು ಅವುಗಳ ಗುಣ-ಪರ್ಯಾಯಗಳನ್ನು ತಿಳಿಯುವುದು. ಜೀವದಲ್ಲಿ ರಾಗ-ದ್ವೇಷ ಭಾವಗಳ ಉತ್ಪತ್ತಿಯ ಕಾರಣ ತಿಳಿಯುವುದು, ಪುದ್ಗಲದ ಸ್ಕಂಧಗಳು ಜ್ಞಾನಾವರಣಾದಿ ಕರ್ಮರೂಪ ಹೇಗಾಗುತ್ತವೆ, ಜೀವನು ಕರ್ಮಗಳಿಂದ ಹೇಗೆ ಕಟ್ಟಲ್ಪಡುತ್ತಾನೆ ? ಹೇಗೆ ಬಿಡುಗಡೆಯಾಗುತ್ತಾನೆ? ಇತ್ಯಾದಿ ರೂಪದಿಂದ ಕರ್ಮ ಬಂಧವಾಗುವ, ಉದಯವಾಗುವ, ಸತ್ತ್ವರೂಪದಿಂದ ಇರುವ ಇತ್ಯಾದಿ ದ್ರವ್ಯಾನುಯೋಗದ ಉಪದೇಶ ನೀಡುವ ಕಲೆಯು ದ್ರವ್ಯಾನುಯೋಗ ವಿದ್ಯೆಯಿದೆ.

**೫. ಶಿಕ್ಷಾಕಲ್ಪ -** ಶಿಷ್ಯರ ಕಲ್ಯಾಣದ ಸಲುವಾಗಿ ಯಥಾಯೋಗ್ಯ ಉಪದೇಶ ಕೊಡುವ ಜ್ಞಾನ; ಹೇಗೆಂದರೆ - ಬಾಲಕರಿಗೆ ಈ ಪ್ರಕಾರದ ಉಪದೇಶ ಕೊಡುವುದು, ತರುಣರ ಸಲುವಾಗಿ ಈ ಪ್ರಕಾರದ ಉಪದೇಶ ಕೊಡುವುದು, ವೃದ್ಧರ ಸಲುವಾಗಿ ಇಂಥ ಉಪದೇಶ, ವಿಶೇಷ ಜ್ಞಾನಿಗಳ ಸಲುವಾಗಿ ಈ ಪ್ರಕಾರ, ಸಾಮಾನ್ಯ ಜ್ಞಾನಿಗಳ ಸಲುವಾಗಿ ಈ ಪ್ರಕಾರ, ಉಚ್ಚ ಕುಲದವರ ಸಲುವಾಗಿ ಉಪದೇಶ, ನೀಚ ಕುಲದವರ ಸಲುವಾಗಿ ಉಪದೇಶ, ಚಂಚಲ ಬುದ್ಧಿಯವರ ಸಲುವಾಗಿ ಈ ಪ್ರಕಾರ, ಬಾಲ, ತರುಣ ಸ್ತ್ರೀಯರ ಸಲುವಾಗಿ, ವೃದ್ಧೆಯರ ಸಲುವಾಗಿ, ಪತಿ ಸಹಿತ ಸ್ತ್ರೀಯ ಸಲುವಾಗಿ, ವಿಧವೆ ಸ್ತ್ರೀಯ ಸಲುವಾಗಿ ಈ ಪ್ರಕಾರ ಯಥಾಯೋಗ್ಯ ಉಪದೇಶ ಕೊಡುವ ಕಲೆ, ಶಿಷ್ಯ ಜನರ ಕಲ್ಯಾಣವು ಹೇಗೆ ಸಾಧ್ಯವೋ ಹಾಗೆ ಅವರುಗಳ ಪರಭವ ಸುಧಾರಿಸುವ ಸಲುವಾಗಿ ಉಪದೇಶ ಕೊಡುವುದು ಶಿಕ್ಷಾಕಲ್ಪ ವಿದ್ಯೆಯಿದೆ.

**೬. ವ್ಯಾಕರಣ ವಿದ್ಯೆ -** ಅನೇಕ ಪ್ರಕಾರದ ಶಬ್ದಗಳ ಸ್ಪಷ್ಟತೆ, ವಿಭಕ್ತಿಸಹಿತ, ಪದಸಹಿತ, ಲಿಂಗದ ಸಾಧನ, ಧಾತುಗಳ ಸಾಧನ ಸಹಿತ, ಶುದ್ಧ ಶಬ್ದದ ಉಚ್ಚರಣೆ, ಅನೇಕ ಗದ್ಯ, ಕಾವ್ಯ, ಛಂದಸ್ಸುಗಳ ವಿಭಕ್ತಿ ಸಹಿತ ಅರ್ಥ, ಪದಚ್ಛೇದಗಳಿಂದ ಸಹಿತ ಚೆನ್ನಾಗಿ ಅರ್ಥ ಮಾಡುವ ಇತ್ಯಾದಿಗಳ ರೂಪದಲ್ಲಿ ಸಂಸ್ಕೃತದ ವಿಶೇಷ ಜ್ಞಾನವಿರುವುದು ವ್ಯಾಕರಣ ವಿದ್ಯೆಯಿದೆ.

**೮. ಅಲಂಕಾರ ವಿದ್ಯೆ -** ವಿವಿಧ ಅಲಂಕಾರ; ಎಂದರೆ ಸ್ತ್ರೀಯ ಮುಖವು ಚಂದಿರನ ಹಾಗಿದೆ, ಈ ದೊರೆಯು ತನ್ನ ಪ್ರತಾಪದಿಂದ ಸೂರ್ಯನನ್ನು ಸೋಲಿಸಿದ್ದಾನೆ ಇತ್ಯಾದಿ ಪ್ರಕಾರದ ಅಲಂಕಾರ ಕಲೆಯನ್ನು ಕಲಿಯುವುದು, ತಿಳಿಯುವುದು, ಅದರ ಉಪದೇಶ ಕೊಡುವುದು ಅಲಂಕಾರ ವಿದ್ಯೆಯಿದೆ.

**೯. ಜ್ಯೋತಿಷ ವಿದ್ಯೆ -** ಚಂದ್ರ, ಸೂರ್ಯ, ಗೃಹ, ನಕ್ಷತ್ರ, ತಾರೆ ಇತ್ಯಾದಿಗಳ ಗಮನಾಗಮನ ಕ್ರಿಯೆಯಿಂದ ಶುಭಾ-ಶುಭ ಫಲವನ್ನು ಕಲಿತುಕೊಳ್ಳುವುದು, ತಿಳಿಯುವುದು, ಅದರ ಉಪದೇಶ ಕೊಡುವುದು ಜ್ಯೋತಿಷ ವಿದ್ಯೆಯಿದೆ.

**೧೦. ನಿರುಕ್ತ ವಿದ್ಯೆ -** ವಿವಿಧ ಯುಕ್ತಿಗಳ ಜ್ಞಾನ, ಅನೇಕ ಯುಕ್ತಿಗಳನ್ನು ಉತ್ಪನ್ನ ಮಾಡುವುದು, ವಿವಿಧ ದೃಷ್ಟಾಂತಾದಿ ಕಲೆಗಳನ್ನು ಕಲಿತುಕೊಳ್ಳುವುದು, ಅದರ ಉಪದೇಶ ಕೊಡುವುದು ನಿರುಕ್ತ ವಿದ್ಯೆಯಿದೆ.

**೧೧. ಅತಿಹಾಸಿ ವಿದ್ಯೆ -** ಅನೇಕ ಚತುರತೆಯಿಂದ ಕೂಡಿದ, ಸಭೆಯನ್ನು ಮುಗ್ಧ ಮಾಡುವಂಥ ಮಾತಿನ ಕಲೆ, ಸಮಯಕ್ಕೆ ಸರಿಯಾಗಿ ಶಬ್ದಗಳನ್ನಾಡುವ ಕಲೆ, ಮನುಷ್ಯರ ಅನುಸಾರ ಮಾತನಾಡುವ ಜ್ಞಾನದ ಕಲೆ - ಇತ್ಯಾದಿ ಪ್ರಕಾರದಿಂದ ಸಭೆ ಹಾಗೂ ಸಮಯ ತಿಳಿದು, ತನ್ನ ಹಾಗೂ ಅನ್ಯರ ಪದವಿಯ ಪರಿಚಯದೊಂದಿಗೆ ಮಾತನಾಡುವ ಇತ್ಯಾದಿ ಚತುರತೆ ಸಹಿತ ಸಮಸ್ತ ಸಭೆಯನ್ನು ರಂಜಿಸುವ, ಮಿಷ್ಟ, ವಿನಯಕಾರೀ, ಆನಂದಕಾರೀ, ವಚನಗಳನ್ನಾಡುವ ಕಲೆಯು ಅದು ಅತಿಹಾಸಿ ಕಲೆಯೆಂಬ ಹೆಸರಿನ ವಿದ್ಯೆಯಿದೆ.

**೧೨. ಪುರಾಣ ವಿದ್ಯೆ -** ಧರ್ಮಕಥೆಯ ಅನೇಕ ಪುರಾಣಗಳನ್ನು ಓದುವುದು, ಕಂಠಪಾಠ ತಿಳಿಯುವುದು, ಅಭ್ಯಸಿಸುವುದು, ಉಪದೇಶ ಕೊಡುವುದು ಪುರಾಣ ವಿದ್ಯೆಯಿದೆ.

**೧೩. ಮೀಮಾಂಸಾ ವಿದ್ಯೆ -** ಮೀಮಾಂಸೆ ಮೊದಲಾದ ಅನೇಕ ಮತಾಂತರಗಳಿಗೆ ಸಂಬಂಧಿಸಿದ ಶಾಸ್ತ್ರಗಳನ್ನು ಓದುವುದು, ರಹಸ್ಯ ತಿಳಿಯುವುದು, ಅನೇಕ ಮತಾಂತರಗಳಿದ್ದರೂ ಗೆಲ್ಲುವ ಕಲೆ, ನಾಸ್ತಿಕಮತಿ, ಏಕಾಂತಮತಿ, ವಿನಯವಾದೀ ಇತ್ಯಾದಿ ಅನೇಕ ಮತಗಳ ರಹಸ್ಯ ತಿಳಿಯುವುದು, ಕಲಿತುಕೊಳ್ಳುವುದು, ಅನ್ಯರಿಗೆ ಉಪದೇಶ ಕೊಡುವುದು ಮೀಮಾಂಸಾ ವಿದ್ಯೆಯಿದೆ.

**೧೪. ನ್ಯಾಯವಿದ್ಯೆ -** ಅನೇಕ ಪ್ರಕಾರದಿಂದ ತರ್ಕ ಯುಕ್ತಿಗಳನ್ನು ಉತ್ಪನ್ನ ಮಾಡಿ ಪ್ರಶ್ನೆ ಮಾಡುವುದು, ನ್ಯಾಯಪೂರ್ವಕ ಪರವಾದಿಗಳ ಅಸತ್ಯ ಯುಕ್ತಿಯ ಖಂಡನೆ ಮಾಡುವುದು, ತಮ್ಮ ನ್ಯಾಯವಚನದ ಮಂಡನೆ -

ಸ್ಥಾಪನೆ ಮಾಡುವುದು, ಪರವಾದಿಗಳ ಸಂಬಂಧವಾಗಿ ಅನೇಕ ಅಸತ್ಯಯುಕ್ತಿ ನೀಡಿ, ಅದರ ರಹಸ್ಯ ತಿಳಿದುಕೊಂಡು ಅದರ ಖಂಡನೆ ಮಾಡುವುದು ಇತ್ಯಾದಿ ನ್ಯಾಯಪೂರ್ವಕ ಯುಕ್ತಿಗಳನ್ನು ಕಲಿಯುವುದು, ಅನ್ಯರಿಗೆ ಉಪದೇಶಕೊಡುವುದು ನ್ಯಾಯವಿದ್ಯೆಯಿದೆ.

ಈ ಪ್ರಕಾರ ಶಾಸ್ತ್ರೋಕ್ತ ಇವು ಹದಿನಾಲ್ಕು ವಿದ್ಯೆಗಳ ವರ್ಣನೆ ಮಾಡಲಾಯಿತು. ಜ್ಞಾನ ವೃದ್ಧಿಯ ಸಲುವಾಗಿ ಪಾತ್ರ ಪುರುಷರು ಯಾವಾಗಲೂ ಇವುಗಳ ಅಭ್ಯಾಸ ಮಾಡುವುದು ಯೋಗ್ಯವಿದೆ.

ಬ್ರಹ್ಮ, ಚಾತುರೀ, ಬಾಲ, ವಾಹನ, ದೇಶನಾ, ಬಾಹು, ಜಲ, ರಸಾಯನ, ಗಾನ, ಸಂಗೀತ, ವ್ಯಾಕರಣ, ವೇದ, ಜ್ಯೋತಿಷ ಮತ್ತು ವೈದ್ಯಕವೆಂಬ ಹದಿನಾಲ್ಕು ಲೌಕಿಕ ವಿದ್ಯೆಗಳ ಸಾಮಾನ್ಯ ಸ್ವರೂಪವನ್ನು ಈಗ ಹೇಳುತ್ತಾರೆ-

೧. **ಬ್ರಹ್ಮವಿದ್ಯೆ** - ಆತ್ಮನು ಚೈತನ್ಯನಿದ್ದಾನೆ, ಜ್ಞಾನರೂಪನಿದ್ದಾನೆ, ಶುದ್ಧನಿದ್ದಾನೆ, ಅಶುದ್ಧನಿದ್ದಾನೆ ಇತ್ಯಾದಿ ರೂಪದಿಂದ ಆತ್ಮನ ಸ್ವರೂಪ ತಿಳಿಯುವುದು ಆತ್ಮವಿದ್ಯಾಮಯ ಬ್ರಹ್ಮವಿದ್ಯೆಯಿದೆ.

೨. **ಚಾತುರೀ ವಿದ್ಯೆ** - ವಿವಿಧ ಮಾತುಗಳನ್ನಾಡುವುದು; ರಾಜ್ಯಸಭೆ, ಪಂಚ ಸಭೆಯ ರೂಪ ಸಭೆಗಳ ಅನುಸಾರ ಮಾತನಾಡುವುದು, ಅನ್ಯರ ಮನೋರಂಜನೆ ಮಾಡುವುದು, ಚಿತ್ರಕಲೆ, ಶಿಲ್ಪಕಲೆ ಮೊದಲಾಗಿ ಅನೇಕ ಲೌಕಿಕ ಚತುರತೆಯನ್ನು ಕಲಿತುಕೊಳ್ಳುವುದು ಚಾತುರೀ ವಿದ್ಯೆಯಿದೆ.

೩. **ಬಾಲವಿದ್ಯೆ** - ಬಾಲ್ಯಾವಸ್ಥೆಯಿಂದಲೇ ವಿವಿಧ ವಿದ್ಯೆಗಳನ್ನು ಕಲಿತುಕೊಳ್ಳುವುದು ಬಾಲವಿದ್ಯೆಯಿದೆ.

೪. **ವಾಹನವಿದ್ಯೆ** - ಆನೆ, ಕುದುರೆ, ರಥಾದಿಗಳ ಸವಾರಿಯನ್ನು ತಿಳಿಯುವುದು, ಕಲಿಯುವುದು ವಾಹನ ವಿದ್ಯೆಯಿದೆ.

೫. **ದೇಶನಾವಿದ್ಯೆ** - ಧರ್ಮೋಪದೇಶ ಕೊಡುವ ಕಲೆಯು ದೇಶನಾವಿದ್ಯೆಯಿದೆ.

೬. **ಬಾಹುವಿದ್ಯೆ** - ದಂಡ ಪೇಲನಾದಿ ಅನ್ಯ ಜಟ್ಟಿಯನ್ನು ಜಯಿಸುವ ಚತುರತೆ, ವಿವಿಧ ಕಲೆಯುಕ್ತವಾಗಿ ಜಿಗಿಯುವುದು, ಹಾರುವುದು, ದುಂಡಗೆ ಸುತ್ತುವುದು ಇತ್ಯಾದಿ ಕಲೆಗಳನ್ನು ಕಲಿಯುವುದು ಬಾಹುವಿದ್ಯೆಯಿದೆ.

೭. **ಜಲವಿದ್ಯೆ** - ನೀರಿನಲ್ಲಿ ನೌಕೆ ನಡೆಸುವುದು, ಹಡಗು ನಡೆಸುವುದು, ಭುಜಬಲದಿಂದ ಈಜುವ ಕಲೆ ಕಲಿತುಕೊಳ್ಳುವುದು ಜಲವಿದ್ಯೆಯಿದೆ.

೮. **ರಸಾಯನ ವಿದ್ಯೆ** - ಕುಧಾತುವನ್ನು ಸುಧಾತುವನ್ನಾಗಿಸುವುದು. ಎಂದರೆ ತಾಮ್ರವನ್ನು ಚಿನ್ನ ಮಾಡುವುದು, ತವರನ್ನು ಬೆಳ್ಳಿ ಮಾಡುವುದು, ಪಾದರಸ, ಹರತಾಳ (ಖನಿಜ ಪದಾರ್ಥ) ಮೊದಲಾದುವನ್ನು ಶುದ್ಧ ಮಾಡಿ ರಸಾಯನ ಉತ್ಪನ್ನ ಮಾಡುವುದು. ಇತ್ಯಾದಿ ಕಲೆಗಳನ್ನು ಕಲಿತುಕೊಳ್ಳುವುದು ರಸಾಯನ ವಿದ್ಯೆಯಿದೆ.

೯. **ಗಾನ ವಿದ್ಯೆ** - ಅನೇಕ ಸ್ವರಗಳೊಂದಿಗೆ ಕಾಲಮರ್ಯಾದೆಯ ರೂಪ, ಮಧುರ ಸ್ವರಗಳಿಂದ ತಾಳದ ಜತೆ ಹಾಡುವುದು ಅದು ಗಾನ(ಗಾಯನ)ವಿದ್ಯೆಯಿದೆ.

೧೦. **ಸಂಗೀತ ವಿದ್ಯೆ** - ವಿವಿಧ ವಾದ್ಯಗಳನ್ನು ನುಡಿಸುವ ಕಲೆ, ನೃತ್ಯ ಕಲೆಯ ಹಾವ-ಭಾವ, ಗತಿ, ಲಾಲಿತ್ಯ , ನಡಿಗೆ, ತಾಳ ಇತ್ಯಾದಿಗಳ ವಿಷಯದಲ್ಲಿ ಶಾಸ್ತ್ರೋಕ್ತ ತಿಳಿವಳಿಕೆಯಿರುವುದು ಸಂಗೀತ ವಿದ್ಯೆಯಿದೆ.

೧೧. **ವ್ಯಾಕರಣ ವಿದ್ಯೆ** - ಸುಸ್ಪಷ್ಟ ಸ್ವರ, ವ್ಯಂಜನ, ವಿಭಕ್ತಿ ಸಹಿತ ಅಕ್ಷರಗಳನ್ನು ತಿಳಿಯುವುದು ವ್ಯಾಕರಣ ವಿದ್ಯೆಯಿದೆ.

೧೨. **ವೇದ ವಿದ್ಯೆ** - ಅನೇಕ ಶಾಸ್ತ್ರಗಳನ್ನು ಕಲಿತುಕೊಳ್ಳುವುದು ವೇದವಿದ್ಯೆಯಿದೆ.

೧೩. **ಜ್ಯೋತಿಷ ವಿದ್ಯೆ** - ಐದು ಪ್ರಕಾರದ ಜ್ಯೋತಿಷೀ ದೇವಗಳ ಗಮನದಿಂದ ಶುಭಾಶುಭ ತಿಳಿಯುವುದು ಜ್ಯೋತಿಷ ವಿದ್ಯೆಯಿದೆ.

**೧೪. ವೈದ್ಯಕ ವಿದ್ಯೆ** - ಶಾರೀರಿಕ ವಿವಿಧ ರೋಗಗಳನ್ನು ತಿಳಿಯುವ ಸಲುವಾಗಿ ಅನೇಕ ಪರೀಕ್ಷೆಗಳನ್ನು ಮಾಡುವುದು ಎಂದರೆ ಕೈಯ ನಾಡಿ, (ಸ್ನಾಯು), ಮಸ್ತಕದ ನರ, ಕಾಲುಗಳ ನರ, ಹೃದಯದ ನರಗಳನ್ನು ಪರೀಕ್ಷಿಸುವುದು. ಈ ನರಗಳ ಪರೀಕ್ಷೆಯ ಹೆಸರು ನಾಡಿ ಪರೀಕ್ಷೆಯಿದೆ. ಆ ನಾಡಿ ಪರೀಕ್ಷೆಯನ್ನು ತಿಳಿಯುವುದು, ಮೂತ್ರವನ್ನು ನೋಡಿ ರೋಗವನ್ನು ತಿಳಿಯುವುದು ಮೂತ್ರ ಪರೀಕ್ಷೆಯಿದೆ. ದೃಷ್ಟಿಯನ್ನು ನೋಡಿ ರೋಗವನ್ನು ತಿಳಿಯುವುದು ದೃಷ್ಟಿ ಪರೀಕ್ಷೆಯಿದೆ. ಬೆವರನ್ನು ನೋಡಿ, ಮೂಸಿ ನೋಡಿ ರೋಗವನ್ನು ತಿಳಿಯುವುದು ಸ್ವೇದ ಪರೀಕ್ಷೆಯಿದೆ. ಇತ್ಯಾದಿ ಚಿಹ್ನೆಗಳಿಂದ ರೋಗ ತಿಳಿದುಕೊಂಡು ಔಷಧಿಯ ಮೂಲಕ ರೋಗ ನಷ್ಟ ಮಾಡುವ ಕಲೆಯು ವೈದ್ಯಕ ಕಲೆಯಿದೆ.

ಇವು ಹದಿನಾಲ್ಕು ಲೈಕಿಕ ವಿದ್ಯೆಗಳಿವೆ ಹಾಗೂ ಮೊದಲು ಹೇಳಿದ ಹದಿನಾಲ್ಕು ಧರ್ಮವಿದ್ಯೆಗಳಿವೆ. ಇವೆಲ್ಲವುಗಳ ಸ್ವರೂಪವನ್ನು ವಿವೇಕೀ ರಾಜಪುತ್ರರು ಮೊದಲಾಗಿ ಸಮಸ್ತ ಕುಲೀನರು ಕಲಿಯುವುದು ಯೋಗ್ಯವಿದೆ. ಯಾವ ರಾಜಕುಮಾರನಿಗೆ ಈ ವಿದ್ಯೆಗಳ ಜ್ಞಾನವಿರುತ್ತದೆ, ಅವನು ಪ್ರಜೆಗಳನ್ನು ಸುಖಿಯನ್ನಾಗಿಸಿ ಸ್ವಯಂ ಕೀರ್ತಿ ಪಡೆಯುತ್ತಾನೆ - ಎಂಬುದನ್ನು ತಿಳಿದು ಈ ವಿದ್ಯೆಯ ರೂಪದ ಗುಣಗಳ ಸಂಗ್ರಹ ಮಾಡುವುದು ಯೋಗ್ಯವಿದೆ.

ದೊರೆಗಳ ಇಂದ್ರನಾದ ಷಟ್ಖಂಡಾಧಿಪತಿ ಚಕ್ರವರ್ತಿಗೆ ಪುಣ್ಯದ ಮಾಹಾತ್ಮ್ಯದಿಂದ ಪ್ರಾಪ್ತವಾಗುವಂಥ ಹದಿನಾಲ್ಕು ರತ್ನ ಮತ್ತು ನವನಿಧಿಗಳ ವರ್ಣನೆ- ೧. ಸುದರ್ಶನ ಚಕ್ರ, ೨. ಚಂಡವೇಗದಂಡ, ೩. ಚರ್ಮರತ್ನ, ೪. ಚೂಡಾಮಣಿ, ೫. ಕಾಕಿಣೆ, ೬. ಛತ್ರ, ೭. ಅಸಿ, ೮. ಸೇನಾಪತಿ, ೯. ಬುದ್ಧಿಸಾಗರ ಪುರೋಹಿತ, ೧೦. ಶಿಲ್ಪಿ, ೧೧. ಗೃಹಪತಿ, ೧೨. ವಿಜಯ ಗಿರಿ ಆನೆ, ೧೩. ಕುದುರೆ, ೧೪. ಸ್ತ್ರೀ ಇವು ಹದಿನಾಲ್ಕು ರತ್ನಗಳಿದ್ದು ಏಳು ನಿರ್ಜೀವ ರತ್ನ ಮತ್ತು ಏಳು ಸಜೀವ ರತ್ನಗಳಿವೆ. ಇವು ಪ್ರತಿಯೊಂದರ ರಕ್ಷಣೆ ಹಾಗೂ ಸೇವೆಯನ್ನು ಸಾವಿರ-ಸಾವಿರ ಯಕ್ಷದೇವರು ಮಾಡುತ್ತಾರೆ. ಈ ರತ್ನಗಳ ಕಾರ್ಯವು ಈ ಕೆಳಗಿನಂತಿದೆ-

೧. ಚಕ್ರವರ್ತಿಯು ಯಾರ ಮೇಲೆ ಆಜ್ಞೆ ನಡೆಸಬಯಸುತ್ತಾನೆ, ಅವರ ಹತ್ತಿರ ಚಕ್ರದ ರಕ್ಷಕ ದೇವಗಳು ಹೋಗಿ ಚಕ್ರವರ್ತಿಯ ಆಜ್ಞೆಯನ್ನು ಹೇಳುತ್ತಾರೆ. ಇದು ಚಕ್ರರತ್ನದ ಕಾರ್ಯವಿದೆ.

೨. ವಿಜಯಾರ್ಧ ಪರ್ವತದ ಗುಹೆಯ ವಜ್ರ ಕವಾಟವನ್ನು ಸೇನಾಪತಿಯು ಯಾವ ಗದೆಯಿಂದ ಒಡೆದು ಹಾಕುತ್ತಾನೆ, ಆ ಒಡೆಯುವ ಕಾರ್ಯವು ಈ ಚಂಡವೇಗ ರತ್ನದಿಂದ ಆಗುತ್ತದೆ.

೩. ನದಿ, ಸರೋವರಗಳ ವಿಶಾಲ ಮತ್ತು ಗಹನ ಜಲವು ಮಾರ್ಗದಲ್ಲಿ ಬಂದ ಮೇಲೆ ಆ ಜಲರಾಶಿಯಲ್ಲಿ ಚರ್ಮ ರತ್ನವನ್ನು ಹಾಸಿ ಬಿಡುವುದರಿಂದ, ಅದರ ಪ್ರಸಾದದಿಂದ ಸಮಸ್ತ ಜಲವು ಪೃಥ್ವಿಯ ಸಮಾನವಾಗಿ ಬಿಡುತ್ತದೆ ಅದರ ಮೇಲೆ ಚಕ್ರವರ್ತಿಯ ಕಟಕವೆಲ್ಲ ನಡೆದು ಹೋಗುತ್ತದೆ - ಇದು ಚರ್ಮರತ್ನದ ಗುಣವಿದೆ

೪. ಐವತ್ತು ಯೋಜನ ಉದ್ದವಾದ, ಮಹಾಅಂಧಕಾರಮಯವಿರುವ ವಿಜಯಾರ್ಧದ ತಮಿಶ್ರ ಗುಹೆಯಲ್ಲಿ ಉದ್ಯೋತಮಯ ಚೂಡಾರತ್ನದಿಂದ ಸೂರ್ಯನ ಪ್ರಕಾಶದ ಸಮಾನ ಪ್ರಕಾಶವನ್ನುಂಟು ಮಾಡಿ ಗುಹೆಯನ್ನು ದಾಟಿ ಹೋಗಲಾಗುತ್ತದೆ ಇದು ಚೂಡಾಮಣಿ ರತ್ನದ ಗುಣವಿದೆ.

೫. ವೃಷಭಾಚಲ ಪರ್ವತದ ತನ್ನ ಹೆಸರನ್ನು ಬರೆಯಿಸಲು ಹೋದ ಚಕ್ರಿಗೆ ತನ್ನ ಹೆಸರು ಬರೆಯಿಸಲು ಸ್ಥಾನವಿಲ್ಲದಿರುವಾಗ ಆ ಕಾಕಿಣೆ ರತ್ನದಿಂದ ಅನ್ಯ ಚಕ್ರಿಯ ಹೆಸರನ್ನು ಅಳಿಸಿ ಹಾಕಿ ತನ್ನ ಹೆಸರನ್ನು ಬರೆಯಿಸುತ್ತಾನೆ. ಇದರ ಪ್ರಕಾಶದಿಂದಲೂ ಹನ್ನೆರಡು ಯೋಜನ ಗುಹೆಯ ಮಾರ್ಗವು ಪ್ರಕಾಶಿತವಾಗುತ್ತದೆ. ಇದು ಕಾಕಿಣೆ ರತ್ನದ ಗುಣವಿದೆ.

೬. ಚಕ್ರವರ್ತಿಯ ಸೇನೆಯ ಮೇಲೆ ಮೇಘವೃಷ್ಟಿಯ ಸಮಯದಲ್ಲಿ ಛತ್ರರತ್ನದ ವಿಸ್ತಾರಮಾಡಿ ಸಂಪೂರ್ಣ ಸೇನೆಯನ್ನು ಅದರ ಛಾಯೆಯಲ್ಲಿ ತಂದು ಜಲದ ಬಾಧೆಯನ್ನು ನಾಶ ಮಾಡಲಾಗುತ್ತದೆ. ಇದು ಛತ್ರರತ್ನದ ಗುಣವಿದೆ.

೭. ತನ್ನ ತೇಜ-ಕಾಂತಿಯಿಂದ ಶತ್ರುಗಳನ್ನು ಭಯಭೀತಗೊಳಿಸುವುದು. ಸಮಸ್ತ ಶತ್ರುಗಳನ್ನು ಗೆದ್ದುಕೊಳ್ಳುವುದು. ಅಸಿರತ್ನದ ಗುಣವಿದೆ - ಇವು ಏಳು ರತ್ನಗಳು ಅಚೇತನವಿವೆ.

೮. ಆರ್ಯ-ಮ್ಲೇಚ್ಛ ಖಂಡದ ಸಮಸ್ತ ದೊರೆಗಳನ್ನು ಜಯಿಸಿ, ಎಲ್ಲರನ್ನು ತಂದು ಚಕ್ರವರ್ತಿಯ ಚರಣಗಳಲ್ಲಿ ಮಣಿಯುವಂತೆ ಮಾಡಿ, ಸೇವೆ ಮಾಡಿಸುವುದು ಸೇನಾಪತಿರತ್ನದ ಗುಣವಿದೆ.

೯. ಪ್ರಜೆಗಳನ್ನು ಸುಖಿಯನ್ನಾಗಿಸುವ, ದೊರೆಯ ಕೀರ್ತಿಯನ್ನು ಹರಡುವಂಥ, ವೈರಿಯನ್ನು ವಶಪಡಿಸಿಕೊಳ್ಳುವ ಸಲಹೆ ನೀಡುವಂಥ ಗುಣವು ಪುರೋಹಿತ ರತ್ನದ್ದಿರುತ್ತದೆ.

೧೦. ಚಕ್ರವರ್ತಿಯ ಆಜ್ಞೆಯಿಂದ ತಕ್ಷಣ, ಮನೋವಾಂಛಿತ, ಅನೇಕ ಶೋಭೆಗಳಿಂದ ಕೂಡಿದ, ಅನೇಕ ಅಂತಸ್ತುಳ್ಳ ಸುಂದರ ಮಹಲನ್ನು ನಿರ್ಮಿಸುವಂಥ ಗುಣವು ಶಿಲ್ಪಿರತ್ನದ್ದಿದೆ.

೧೧. ಚಕ್ರವರ್ತಿಯ ಮನೆಗೆ ಸಂಬಂಧಿಸಿದ ಸಂಪೂರ್ಣ ಕಾರ್ಯಗಳ ಭಾರ, ಆರಂಭ-ಕಾರ್ಯಗಳ ಸಾವಧಾನತೆಯನ್ನಿಟ್ಟುಕೊಳ್ಳುವ ಕಾರ್ಯವು ಗೃಹಪತಿರತ್ನದ್ದಿದೆ.

೧೨. ಚಕ್ರವರ್ತಿಯ ಮನಸ್ಸಿಗೆ ಮುದ ನೀಡುವಂಥ ಸವಾರಿಯನ್ನೊದಗಿಸುವ, ಇಂದ್ರನ ಐರಾವತ ಆನೆಯ ಹಾಗೆ ಸುಂದರ ವಿಜಯಗಿರಿಯೆಂಬ ಹೆಸರಿನ ಗಜರತ್ನವಿರುತ್ತದೆ.

೧೩. ವಾಂಛಿತ ಸವಾರಿ ನೀಡುವಂಥ ಪವನದ ಸಮಾನ ವೇಗವಾಗಿ ಚಲಿಸುವಂಥ ಚಂಚಲಸುಂದರ ಅಶ್ವರತ್ನವಿರುತ್ತದೆ.

೧೪. ಮಹಾಸತಿ, ಶಚಿಯ ಸಮಾನ ರೂಪವನ್ನು ಧಾರಣ ಮಾಡಿರುವಂಥ ಮಹಾಸುಂದರಿ - ಚಕ್ರವರ್ತಿಯ ಮನಸ್ಸನ್ನು ಹರಣ ಮಾಡುವಂಥ, ಆಜ್ಞೆ ಪಾಲಿಸುವಂಥ ಮಹಾಬಲವತಿ -ರತ್ನವನ್ನು ಚೂರ್ಣ ಮಾಡಿ ಬಿಡುವಲ್ಲಿ ಸಕ್ಷಮಳಾದ ಪಟ್ಟದರಸಿ ಸ್ತ್ರೀ ರತ್ನವಿದೆ.

ಇವು ಏಳು ಸಜೀವ (ಚೇತನ)ರತ್ನಗಳಿವೆ. ಎಲ್ಲ ಸೇರಿ ಹದಿನಾಲ್ಕು ರತ್ನಗಳಿವೆ.

ಈಗ ಇವು ಉತ್ಪನ್ನವಾಗುವ ಸ್ಥಾನ ಹೇಳುತ್ತಾರೆ - ಚಕ್ರ , ಛತ್ರ , ಅಸಿ, ದಂಡ - ಇವು ನಾಲ್ಕು ರತ್ನಗಳಂತೂ ಆಯುಧ ಶಾಲೆಯಲ್ಲಿ ಉತ್ಪನ್ನವಾಗುತ್ತವೆ. ಚರ್ಮ, ಕಾಕಿಣಿ, ಚೂಡಾಮಣಿ - ಇವು ಮೂರು ರತ್ನಗಳು ಶ್ರೀಗೃಹದಲ್ಲಿ ಉತ್ಪನ್ನವಾಗುತ್ತವೆ. ಆನೆ, ಕುದುರೆ, ಸ್ತ್ರೀ - ಇವು ಮೂರು ರತ್ನಗಳು ವಿಜಯಾರ್ಧ ಪರ್ವತದ ಮೇಲೆ ಉತ್ಪನ್ನವಾಗುತ್ತವೆ. ಶಿಲ್ಪಿ, ಪುರೋಹಿತ, ಸೇನಾಪತಿ, ಗೃಹಪತಿ - ಇವು ನಾಲ್ಕು ರತ್ನಗಳು ತಮ್ಮ-ತಮ್ಮ ನಗರದಲ್ಲಿ ಉತ್ಪನ್ನವಾಗುತ್ತವೆ.

ಕಾಲ, ಮಹಾಕಾಲ, ನೈಸರ್ಪ್ಯ, ಪಾಂಡುಕ, ಪದಮ, ಮಾಣವ, ಪಿಂಗಲ, ಶಂಖ ಮತ್ತು ಸರ್ವರತ್ನ - ಇವು ಒಂಭತ್ತು ನಿಧಿಗಳಿವೆ. ಈಗ ಅವುಗಳ ಕಾರ್ಯ ಹೇಳಲಾಗುವುದು.

೧. ಕಾಲನಿಧಿಯು ವಾಂಛಿತ ಪುಸ್ತಕ ಕೊಡುತ್ತದೆ.

೨. ಮಹಾಕಾಲವು ವಾಂಛಿತ ಅಸಿ ಕೊಡುತ್ತದೆ.

೩. ನೈಸರ್ಪ್ಯ ನಿಧಿಯು ವಾಂಛಿತ ಭೋಜನವೀಯುತ್ತದೆ.

೪. ಪಾಂಡುಕ ನಿಧಿಯು ವಾಂಛಿತ ಷಟ್‌ರಸಗಳನ್ನು ಪ್ರದಾನ ಮಾಡುತ್ತದೆ.

೫. ಪದಮ ನಿಧಿಯು ವಾಂಛಿತ ವಸ್ತುಗಳನ್ನು ಪ್ರದಾನ ಮಾಡುತ್ತದೆ.

೬. ಮಾಣವ ನಿಧಿಯು ವಾಂಛಿತ ನೀತಿ-ಶಾಸ್ತ್ರ ಹಾಗೂ ಶಸ್ತ್ರ ನೀಡುತ್ತದೆ.

೭. ಪಿಂಗಲ ನಿಧಿಯು ವಾಂಛಿತ ಆಭೂಷಣ ನೀಡುತ್ತದೆ.

೮. ಶಂಖ ನಿಧಿಯು ವಾಂಛಿತ ಅನೇಕ ವಾದ್ಯಗಳನ್ನು ಕೊಡುತ್ತದೆ.

೯. ಸರ್ವರತ್ನ ನಿಧಿಯು ವಾಂಛಿತ ಸರ್ವರತ್ನಗಳನ್ನು ಪ್ರದಾನ ಮಾಡುತ್ತದೆ.

ಈ ನಿಧಿಗಳ ಆಕಾರ ಹಾಗೂ ಪ್ರಮಾಣ ಹೇಳುತ್ತಾರೆ - ಇವೆಲ್ಲ ನಿಧಿಗಳು ಉದ್ದ, ಚೌಕೋಣ, ಎಂಟು ಗಾಲಿ(ಚಕ್ರ)ಗಳಿಂದ ಯುಕ್ತ ಗಾಡಿಯ ಆಕಾರದವಿರುತ್ತವೆ. ಪ್ರತಿಯೊಂದು ನಿಧಿಯು ಹನ್ನೆರಡು ಯೋಜನ ಉದ್ದ, ಒಂಭತ್ತು ಯೋಜನ ಅಗಲ ಮತ್ತು ಎಂಟು ಯೋಜನ ಎತ್ತರವಿರುತ್ತವೆ. ಪ್ರತಿಯೊಂದು ನಿಧಿಗೆ ಸಾವಿರ-ಸಾವಿರ ಯಕ್ಷದೇವಗಳು ರಕ್ಷಕರಿರುತ್ತಾರೆ. ಈ ನಿಧಿಗಳ ಮೇಲೆ ಚಕ್ರವರ್ತಿಯ ಆಜ್ಞೆ ನಡೆಯುತ್ತದೆ. ಈ ನಿಧಿಗಳು ಚಕ್ರಿಯ ಪುಣ್ಯದ ಪ್ರಮಾಣವಿರುತ್ತವೆ.

ಈ ಪ್ರಕಾರ ಹದಿನಾಲ್ಕು ರತ್ನ, ಒಂಭತ್ತು ನಿಧಿಗಳು ಪುಣ್ಯದ ಫಲವಿವೆ. ಪುಣ್ಯವಿಲ್ಲದೆ ಇವುಗಳ ಪ್ರಾಪ್ತಿಯಾಗುವುದಿಲ್ಲ.

ಚಕ್ರವರ್ತಿಯ ಸೇನೆಯು ಆರು ಪ್ರಕಾರದ್ದಿರುತ್ತದೆ - ಎಂಭತ್ನಾಲ್ಕು ಲಕ್ಷ ಆನೆ, ಎಂಭತ್ನಾಲ್ಕು ಲಕ್ಷ ರಥ, ಹದಿನೆಂಟು ಕೋಟಿ ಕುದುರೆ, ಎರಡೂ ಶ್ರೇಣಿಗಳ ಸಮಸ್ತ ವಿದ್ಯಾಧರರ ಸೇನೆ, ಭರತ ಕ್ಷೇತ್ರ ಸಂಬಂಧದ ದೇವಗಳ ಸೇನೆ, ಪದಾತಿಗಳ ಸೇನೆ - ಇದು ಷಟ್ ಪ್ರಕಾರದ ಸೇನೆಯಿದೆ. ಸಾಮಾನ್ಯ ದೊರೆಗಳಿಗೆ ನಾಲ್ಕು ಪ್ರಕಾರದ ಸೇನೆಯಿರುತ್ತದೆ; ದೇವ ವಿದ್ಯಾಧರರ ಸೇನೆಯಿರುವುದಿಲ್ಲ. ಹೀಗೆ ಚಕ್ರವರ್ತಿಯ ಸೈನ್ಯವು ಆರು ಪ್ರಕಾರದ್ದಿರುತ್ತದೆಯೆಂದು ತಿಳಿಯುವುದು.

ಇಂಥ ವಿಭೂತಿಯಿಂದ ಸಹಿತನೂ, ಹದಿನಾರನೆಯ ಮನು, ಪ್ರಥಮ ಚಕ್ರಿ, ಮಹಾವಿವೇಕದ ಸಾಗರನಾದ ಶ್ರೀ ಆದಿನಾಥರ ಪುತ್ರ ಭರತ ಚಕ್ರವರ್ತಿಯಾಗಿದ್ದಾನೆ. ಇವನ ಸಮಯದಲ್ಲಿ ಭೋಗಭೂಮಿಯಿಂದ ಬಿಡುಗಡೆಯಾದ ಪ್ರಜೆಗಳು - ಮುಗ್ಧ ಜೀವರುಗಳು ಕರ್ಮಭೂಮಿಯ ರಚನೆಯನ್ನು ಅರಿತಿರಲಿಲ್ಲ. ಕಲ್ಪವೃಕ್ಷಗಳ ಅಭಾವವಾಗುವುದರಿಂದ, ಜೀವರುಗಳ ಕ್ಷುಧೆಯು ವೃದ್ಧಿಸುವುದರಿಂದ, ಮುಗ್ಧ ಜೀವರುಗಳು ಉದರ ಪೋಷಣೆಯ ವಿಧಿಯನ್ನು ಕಾಣದೇ ದುಃಖಿಯಾಗತೊಡಗಿದರು. ಅವರು ವಿಶೇಷ ಜ್ಞಾನ, ಚತುರತೆ, ಕರ್ಮಭೂಮಿಗೆ ಸಂಬಂಧಿಸಿದ ಆರಂಭವನ್ನು ತಿಳಿಯುತ್ತಿರಲಿಲ್ಲ. ಅವರ ದುಃಖದ ನಾಶ ಮಾಡುವ ಸಲುವಾಗಿ-ಪ್ರಜೆಗಳಿಗೆ ಕರ್ಮಭೂಮಿಯ ರಚನೆಯ ಜ್ಞಾನ ಮಾಡಿಸುವ ಸಲುವಾಗಿ, ಪ್ರಜೆಗಳಿಗೆ ಸುಖಿಯಾಗುವ ಕಾರಣಭೂತ-ಇಜ್ಯಾ, ವಾರ್ತಾ, ದಾನ, ಸ್ವಾಧ್ಯಾಯ, ತಪ, ಸಂಯಮರೂಪ ಷಟ್ಕರ್ಮದ ಉಪದೇಶವನ್ನು ಭರತ ಚಕ್ರವರ್ತಿಯು ನೀಡಿದನು. ಈಗ ಅವುಗಳ ಪ್ರವೃತ್ತಿಯನ್ನು ಹೇಳುತ್ತಾರೆ.

ಭಗವಾನ, ಸರ್ವಜ್ಞ, ಜಗತ್ಸ್ವಾಮಿಯನ್ನು ತರಣ-ತಾರಣರೆಂದು ತಿಳಿದು, ಪಾಪಹಾರಕ, ಮೋಕ್ಷಕಾರಕರೆಂದು ತಿಳಿದು, ವಿವೇಕಿಗಳ ಮೂಲಕ ಭಕ್ತಿಯ ವಶೀಭೂತರಾಗಿ, ಸ್ವಯಂ ತನ್ನನ್ನು ಪಾಪಸಹಿತನೆಂದು ತಿಳಿದುಕೊಂಡು, ಕರ್ಮಸಹಿತ ಜನ್ಮ-ಮರಣದ ಕಾರಣ ದುಃಖಿಯೆಂದು ತಿಳಿದುಕೊಂಡು, ಸ್ವಯಂದೀನನಾಗಿ, ತನ್ನ ಪಾಪನಾಶ ಮಾಡುವ ಸಲುವಾಗಿ, ವಿನಯಪೂರ್ವಕ ಭಗವಂತರ ಪೂಜೆ ಮಾಡುವುದು; ಅವರ ಸನ್ಮುಖ ಎದ್ದು ನಿಂತುಕೊಂಡು, ತನ್ನ ಕಾಯದ ಪವಿತ್ರತೆಯೊಂದಿಗೆ, ಮಂತ್ರಪೂರ್ವಕ ಅಷ್ಟ ದ್ರವ್ಯಗಳನ್ನು ಪ್ರಭುವಿನ ಚರಣಗಳ ಎದುರಿಗೆ ಇರಿಸುವುದು ಇಜ್ಜೆಯೆಂಬ ಹೆಸರಿನ ಕ್ರಿಯೆಯಿದೆ. ಹೇಗೆ ಲೋಕದಲ್ಲಿ ತನ್ನ ಉತ್ಕೃಷ್ಟ ವಸ್ತು ತಗೆದುಕೊಂಡು, ದೊರೆಗಳ ಎದುರಿಗೆ ಹೋಗಿ, ಅವರ ಚರಣ ಸಮೀಪ ಇರಿಸಿದ ಮೇಲೆ ದೊರೆಯ ಸ್ತುತಿ ಮಾಡಲಾಗುತ್ತದೆ, ಹಾಗೆಯೇ ಭಗವಂತರ ಪೂಜೆ-ಸ್ತುತಿ ಮಾಡುವುದರಿಂದ ಪಾಪ ಕ್ಷಯವಾಗುತ್ತದೆ.

ಆ ಪೂಜೆಯ ಭೇದಗಳು ನಾಲ್ಕು ಇವೆ -

೧. ನಿತ್ಯಮಹ-ಪ್ರತಿದಿನ ಅಷ್ಟದ್ರವ್ಯಗಳಿಂದ ಭಗವಂತರ ಪೂಜೆ ಮಾಡುವುದು ನಿತ್ಯಮಹವಿದೆ.

೨. **ಚತುರಮುಖಪೂಜೆ** - ಈ ಮಹಾಪೂಜೆಯ ವಿಧಾನವನ್ನು ಮಂಡಲೇಶ್ವರ, ಮಹಾಮಂಡಲೇಶ್ವರ ಮೊದಲಾದ ದೊಡ್ಡ ದೊರೆಗಳಿಂದ ಮಾಡಲಾಗುತ್ತದೆ.

೩. **ಕಲ್ಪವೃಕ್ಷ ಪೂಜೆ** - ಉತ್ತಮ ನೈವೇದ್ಯ , ನೇತ್ರಗಳಿಗೆ ಸುಖಕಾರಕ, ಕೇವಲ ನೋಡುವುದರಿಂದ ದೇವಗಳ ಮೂಲಕ ಅನುಮೋದನೀಯ, ಉತ್ತಮ ದ್ರವ್ಯಗಳಿಂದ ಪೂಜೆ ಮಾಡುವುದು ಮತ್ತು ಪೂಜೆಯ ಸಮಯದಲ್ಲಿ ಎಷ್ಟು ದಿನಗಳವರೆಗೆ ಪೂಜೆ-ವಿಧಾನವು ನಡೆಯುತ್ತಿರುತ್ತದೆ, ಅಷ್ಟು ದಿನಗಳವರೆಗೆ ಕಿಮಿಚ್ಛಿಕರೂಪ ಮನೋವಾಂಛಿತ ದಾನ, ಕಲ್ಪವೃಕ್ಷದ ಸಮಾನ ಯಾಚಕರಿಗೆ ಇಚ್ಛೆಯ ಅನುಸಾರ ದಾನ ಕೊಡುವುದು ಕಲ್ಪವೃಕ್ಷ ಪೂಜೆಯಿದೆ. ಈ ಪೂಜೆಯು ಚಕ್ರವರ್ತಿಯಿಂದಲೇ ಸಂಭವಿಸುತ್ತದೆ.

೪. **ಅಷ್ಟಾಹ್ನಿಕ ಪೂಜೆ** - ಇದನ್ನು ಇಂದ್ರಪೂಜೆಯೆಂದೂ ಹೇಳುತ್ತಾರೆ. ಏಕೆಂದರೆ ಇದು ಇಂದ್ರರಿಂದಲೇ ಸಂಭವಿಸುತ್ತದೆ.

ಇವು ನಾಲ್ಕು ಪ್ರಕಾರದ ಪೂಜೆಯ ಉಪದೇಶವನ್ನು ಭರತೇಶ್ವರನು ತನ್ನ ನಿಕಟವರ್ತೀ ದೊರೆಗಳಿಗೆ ಹಾಗೂ ಪ್ರಜೆಗಳಿಗೆ ಕೊಟ್ಟಿದ್ದನು. ಇದರ ಹೆಸರು ಇಜ್ಯಾಕ್ರಿಯೆಯಿದೆ.

೨. **ವಾರ್ತಾ ಕ್ರಿಯೆ** - ಛಲ ಕಪಟಪೂರ್ವಕ ಆಜೀವಿಕೆಯ ವಿಚಾರವನ್ನು ಬಿಟ್ಟುಕೊಟ್ಟು ನ್ಯಾಯಸಹಿತ ಆಜೀವಿಕೆ ನಡೆಸುವುದು ವಾರ್ತಾಕ್ರಿಯೆಯಿದೆ. ಅದರ ಭೇದಗಳು ಅನೇಕವಿದ್ದು ಅವುಗಳಲ್ಲಿ ಆರು ಮುಖ್ಯವಿವೆ - ಅಸಿ, ಮಸಿ, ಕೃಷಿ, ವಾಣಿಜ್ಯ , ಶಿಲ್ಪ ಮತ್ತು ಪಶುಪಾಲನೆ.

ಅಸಿ ಎಂದರೆ ಖಡ್ಗ. ಶಸ್ತ್ರಧಾರಣ ಮಾಡಿ, ನ್ಯಾಯಪೂರ್ವಕ, ದಯಾಸಹಿತ, ದೀನ ಜೀವಗಳ ರಕ್ಷಣೆ ಮಾಡುತ್ತ , ದುಷ್ಟ ಜೀವಗಳನ್ನು ದಂಡಿಸುತ್ತ , ಪ್ರಜೆಗಳ ಪಾಲನೆ ಮಾಡುವುದು - ಶಸ್ತ್ರಸಹಿತ ಆಜೀವಿಕೆ ಮಾಡುವುದು ಅಸಿ ವಾರ್ತೆಯಿದೆ.

ಮಸಿ ಅರ್ಥಾತ್ ಶಾಯಿ. ಅದರಿಂದ ಧರ್ಮ-ಕರ್ಮದ ಅಕ್ಷರ ಬರೆಯುವ ವ್ಯವಹಾರ ಮಾಡುವುದು. ಪಾಪರಹಿತ ನ್ಯಾಯಸಹಿತ ಬರೆಯುತ್ತ ಆಜೀವಿಕೆ ನಡೆಸುವುದು ಮಸಿ ವಾರ್ತೆಯಿದೆ.

ಕೃಷಿ ಅರ್ಥಾತ್ ಒಕ್ಕಲುತನ ಮಾಡುವುದು. ತನ್ನ ಬುದ್ಧಿಯ ಬಲದಿಂದ ಭೂಮಿಯಲ್ಲಿ ಅನೇಕ ಪ್ರಕಾರದ ಬೀಜಗಳನ್ನು ಬಿತ್ತಿ ವಿವಿಧ ಧಾನ್ಯ , ಹಣ್ಣುಗಳನ್ನು ಉತ್ಪನ್ನ ಮಾಡಿ ಹಣ ಗಳಿಸುವುದು ಕೃಷಿ ವಾರ್ತೆಯಿದೆ.

ಅನೇಕ ರೀತಿಯಿಂದ ನ್ಯಾಯ ಸಹಿತ ವಾಣಿಜ್ಯ , ಹಿಂಸೆಯ ಪಾಪರಹಿತ ವ್ಯಾಪಾರ ಮಾಡುವುದು. ಅದರಲ್ಲಿ ಕೂಡ ಅಧಿಕ ಆರಂಭ, ಅಧಿಕ ಹಿಂಸೆ, ಅಸತ್ಯ , ಕಳವು ಇತ್ಯಾದಿ ದೋಷರಹಿತ, ಒಳ್ಳೆಯ ಕೀರ್ತಿಯೊಂದಿಗೆ ಧನವನ್ನು ಉತ್ಪನ್ನ ಮಾಡುವ ಸಲುವಾಗಿ ವ್ಯಾಪಾರ ಮಾಡುವುದು ವಾಣಿಜ್ಯ ವಾರ್ತೆಯಿದೆ.

ಅನೇಕ ಅರಮನೆ, ಮಂದಿರ ನಿರ್ಮಾಣದ ಕಲೆಯನ್ನು ಪ್ರಕಟಪಡಿಸಿ ಆಜೀವಿಕೆ ಮಾಡುವುದು ಶಿಲ್ಪವಾರ್ತೆಯಿದೆ.

ಪಶುಪಾಲನೆ ಅರ್ಥಾತ್ ಪಶುಗಳ ರಕ್ಷಣೆ ಮಾಡುತ್ತ ಅವುಗಳ ಪಾಲನೆಯ ವಿದ್ಯೆ , ಪಶುಗಳ ಪೀಡೆಯನ್ನು ಗುರುತಿಸುವುದು, ಪಶು ಪರೀಕ್ಷಣೆ ಮಾಡುವುದು; ಅವುಗಳ ಶುಭಾಶುಭ ಚಿಹ್ನೆ, ವಯಸ್ಸನ್ನು ತಿಳಿಯುವುದು, ಅವುಗಳ ಆಹಾರ ನೀರುಗಳನ್ನು ತಿಳಿಯುವುದು, ಅವುಗಳ ರೋಗ ಮೊದಲಾದುವನ್ನು ತಿಳಿದುಕೊಂಡು ಯೋಗ್ಯ ಔಷಧವನ್ನು ತಿಳಿಯುವುದು ಪಶುಪಾಲನೆ ವಾರ್ತೆಯಿದೆ.

ಇವು ಆರು ವಾರ್ತೆ, ಆಜೀವಿಕೆಯ ವಿಧಿಗಳನ್ನು ಭೋಗಭೂಮಿಯಿಂದ ಬಿಡುಗಡೆಯಾದ ಮುಗ್ಧ ಜೀವಗಳು, ಪ್ರಜೆಗಳ ಸಲುವಾಗಿ ಆದಿ ಚಕ್ರಿಯು ತಿಳಿಸಿಕೊಟ್ಟಿದ್ದನು. ಅದರ ಅನುಸಾರ ಸಮಸ್ತ ಪ್ರಜೆಗಳು ತಮ್ಮ ದೇಹದ ಮತ್ತು ಕುಟುಂಬದ ರಕ್ಷಣೆ ಮಾಡತೊಡಗಿದರು - ಇವು ವಾರ್ತಾಕರ್ಮದ ಷಟ್ ಭೇದಗಳಿವೆ.

ಇವು ಎರಡು ಕರ್ಮಗಳ ಉಪದೇಶವನ್ನಂತೂ ಈ ಭವಕ್ಕೆ ಸಂಬಂಧಿಸಿದ ಕೀರ್ತಿ ಮತ್ತು ಸುಖದ ಸಲುವಾಗಿ

ಕೊಟ್ಟಿದ್ದನು ಉಳಿದ ನಾಲ್ಕು ಕರ್ಮಗಳ ಉಪದೇಶವನ್ನು ಪರಭವದಲ್ಲಿ ಕಲ್ಯಾಣವಾಗುವ ಸಲುವಾಗಿ ಸ್ವರ್ಗ-ಮೋಕ್ಷಗಳ ಮಾರ್ಗವನ್ನು ತಿಳಿಸುವ ಸಲುವಾಗಿ ಕೊಟ್ಟಿದ್ದನು ಈಗ ಅವುಗಳನ್ನೇ ಹೇಳುತ್ತಾರೆ-

**೩. ದಾನಕರ್ಮ -** ದಾನವು ಆಹಾರ, ಔಷಧ, ಅಭಯ ಮತ್ತು ಶಾಸ್ತ್ರದಾನವೆಂದು ನಾಲ್ಕು ಪ್ರಕಾರದ್ದಿದೆ. ಆಹಾರದಾನದಿಂದ ಪರಭವದಲ್ಲಿ ಆಹಾರ-ಭೋಜನ ಮಾಡಿ ಸುಖಿಯಾಗಿರುತ್ತಾನೆ. ಔಷಧ ದಾನದಿಂದ ಪರಭವದಲ್ಲಿ ನಿರೋಗ ಶರೀರವು ಪ್ರಾಪ್ತವಾಗುತ್ತದೆ. ಅನ್ಯರ ಪಾಲನೆ ಮಾಡುವಂಥವನಾಗುತ್ತಾನೆ. ತನ್ನ ಆಯುವಿರುವವರೆಗೆ ಸುಖಿಯಾಗಿರುತ್ತಾನೆ. ಅಭಯ ದಾನದಿಂದ ದೀರ್ಘ ಆಯುವಿನ ಧಾರಕ ಇಂದ್ರ-ಅಹಮಿಂದ್ರನಾಗುತ್ತಾನೆ ಮತ್ತು ನಿರ್ಭಯವಾದ ಮೋಕ್ಷಸ್ಥಾನವನ್ನು ಪ್ರಾಪ್ತ ಮಾಡಿಕೊಳ್ಳುತ್ತಾನೆ. ಶಾಸ್ತ್ರದಾನದಿಂದ ಭವಾಂತರದಲ್ಲಿ ಜ್ಞಾನವಂತ ಮಹಾಪಂಡಿತನಾಗುತ್ತಾನೆ. ಕೇವಲಜ್ಞಾನದ ಕಡೆಗೆ ಸಾಗುತ್ತಾನೆ. ಅದರಿಂದ ನಾಲ್ಕೂ ಪ್ರಕಾರದ ದಾನ ಮಾಡಬೇಕು. ದುಃಖಿತ, ಹಸಿದವನಿಗೆ ಕರುಣೆಯ ಭಾವದೊಂದಿಗೆ ಒಲುಮೆಯಿಂದ ಸಂತೋಷಪೂರ್ವಕ ಕೊಡುವುದು; ಪಾತ್ರರಿಗೆ ಭಕ್ತಿಪೂರ್ವಕ ಕೊಡುವುದು. ಈ ದಾನದಿಂದ ಜೀವನು ಪರಭವದಲ್ಲಿ ಬಹಳಷ್ಟು ಸುಖಿಯಾಗುತ್ತಾನೆಂದು ದಾನಕರ್ಮದ ಉಪದೇಶ ಕೊಟ್ಟನು.

**೪. ಸ್ವಾಧ್ಯಾಯ -** ಜಿನವಾಣಿಯ ಪಠನ-ಪಾಠನ, ಅನೇಕ ಧರ್ಮಶಾಸ್ತ್ರಗಳ ಅಧ್ಯಯನ ಮಾಡುವ ರೂಪದಲ್ಲಿ ಸ್ವಾಧ್ಯಾಯವೆಂಬ ಹೆಸರಿನ ಕರ್ಮದ ಉಪದೇಶ ಕೊಟ್ಟನು.

**೫. ತಪಕರ್ಮ -** ಅಂತರಂಗ - ಬಹಿರಂಗ ದಯಾಭಾವಸಹಿತ, ಸಮತೆಯಭಾವರೂಪ ವಿಧಿಪೂರ್ವಕ ಹನ್ನೆರಡು ಪ್ರಕಾರದ ತಪ ಮಾಡುವುದು ತಪಕರ್ಮವಿದೆ.

**೬. ಸಂಯಮಕರ್ಮ -** ಐದೂ ಇಂದ್ರಿಯಗಳು ಮತ್ತು ಮನಸ್ಸನ್ನು ವಶದಲ್ಲಿಟ್ಟುಕೊಳ್ಳುವ ಮತ್ತು ಷಟ್ಕಾಯಗಳ ದಯೆ ಮಾಡುವರೂಪ ಹನ್ನೆರಡು ಪ್ರಕಾರದ ದ್ವಿವಿಧ ಸಂಯಮದ ಉಪದೇಶ ಕೊಟ್ಟನು.

ಈ ಪ್ರಕಾರ ಪ್ರಜೆಗಳ ಹಿತ, ಎಲ್ಲರಿಗೂ ಭವ-ಭವದಲ್ಲಿ ಸುಖದ ಅಭಿಲಾಷಿ, ಕರ್ಮ-ಧರ್ಮದ ಮಾರ್ಗವನ್ನು ದೀವಿಗೆಯಂತೆ ಪ್ರಕಾಶಿತ ಮಾಡುವಂಥ ಭರತ ಚಕ್ರಿಯು ಷಟ್ಕರ್ಮರೂಪದ ಉಪದೇಶ ನೀಡಿ ಜನರ ಕಲ್ಯಾಣ ಮಾಡಿದನು.

ಭರತ ಚಕ್ರವರ್ತಿಯು ಹದಿನಾರು ಸ್ವಪ್ನ ಕಂಡನು ಅವುಗಳ ಫಲವನ್ನು ಶ್ರೀ ಆದಿನಾಥ ಭಗವಂತರ ಹತ್ತಿರ ಬಂದು ಚಕ್ರಿಯು ಕೇಳಿದನು. ಆಗ ಭಗವಂತರು - ಎಲೈ ರಾಜನ್ ! ಇವುಗಳ ಫಲವು ಚತುರ್ಥ ಕಾಲದಲ್ಲಿ ಪ್ರಕಟವಾಗುವುದಿಲ್ಲ; ಮುಂದೆ ಪಂಚಮ ಕಾಲದಲ್ಲಿ ಈ ಸ್ವಪ್ನಗಳ ಫಲವು ಪ್ರಗಟವಾಗುವುದು- ಎಂದು ಹೇಳುತ್ತಾರೆ ಆ ಸ್ವಪ್ನಗಳು ಹೀಗಿವೆ.

೧. ಸ್ವಪ್ನದಲ್ಲಿ ಹದಿಮೂರು ಸಿಂಹಗಳನ್ನು ಕಂಡನು.
೨. ಒಂದು ಏಕಾಕಿ ಸಿಂಹದ ಹಿಂದೆ ಮೃಗಗಳ ಸಮೂಹವು ಗಮನ ಮಾಡುತ್ತಿರುವುದನ್ನು ನೋಡಿದನು.
೩. ಆನೆಯ ಭಾರ ಹೊತ್ತಿರುವ ಕುದುರೆಯನ್ನು ನೋಡಿದನು.
೪. ಕಾಗೆಗಳಿಂದ ಹಂಸವು ಪೀಡಿತವಾಗಿರುವುದನ್ನು ಕಂಡನು.
೫. ಮೇಕೆಯು ಒಣಗಿದ ಎಲೆಗಳನ್ನು ಮೆಲ್ಲುತ್ತಿರುವುದನ್ನು ನೋಡಿದನು.
೬. ಆನೆಯ ಹೆಗಲೇರಿ ಕೋತಿಯು ಕುಳಿತಿರುವುದನ್ನು ಕಂಡನು.
೭. ಭೂತಗಳು ಕುಣಿಯುತ್ತಿರುವುದನ್ನು ಕಂಡನು.
೮. ಮಧ್ಯದಲ್ಲಿ ಒಣಗಿದ ಮತ್ತು ದಂಡೆಗಳಲ್ಲಿ ಅಗಾಧ ಜಲದಿಂದ ತುಂಬಿಕೊಂಡಿರುವ ಸರೋವರವನ್ನು ಕಂಡನು.
೯. ರಜದಿಂದ ಮಂಡಿತ, ಕಾಂತಿರಹಿತ ರತ್ನರಾಶಿಯನ್ನು ನೋಡಿದನು.

೧೦. ನಾಯಿಯು ಪೂಜಾ ದ್ರವ್ಯ ತಿನ್ನುತ್ತಿರುವುದನ್ನು ನೋಡಿದನು.

೧೧. ತರುಣ ವೃಷಭವು ಶಬ್ದ ಮಾಡುತ್ತಿರುವುದನ್ನು ನೋಡಿದನು.

೧೨. ಶಾಖೆಗಳಿಂದ ಯುಕ್ತನಾದ ಚಂದಿರನನ್ನು ನೋಡಿದನು.

೧೩. ಎರಡು ಎತ್ತುಗಳು ಒಟ್ಟಿಗೆ ಜೊತೆಯಲ್ಲಿ ಗಮನ ಮಾಡುತ್ತಿರುವುದನ್ನು ಕಂಡನು.

೧೪. ಮೇಘ ಪಟಲದಿಂದ ಆಚ್ಛಾದಿತ ಸೂರ್ಯ ವಿಮಾನವನ್ನು ಕಂಡನು.

೧೫. ಛಾಯಾರಹಿತ ಒಂದು ಒಣಗಿದ ವೃಕ್ಷವನ್ನು ಕಂಡನು.

೧೬. ಜೀರ್ಣ-ತರಗೆಲೆಗಳ ಸಮೂಹವನ್ನು ಕಂಡನು.

**ಸ್ವಪ್ನಗಳ ಫಲ -**

೧. ಇಪತ್ಮೂರು ಸಿಂಹಗಳನ್ನು ನೋಡಿರುವುದರ ಫಲವು ಮೊದಲನೆಯ ಇಪ್ಪತ್ಮೂರು ತೀರ್ಥಂಕರರ ಸಮಯದಲ್ಲಿ ಜಿನಧರ್ಮದೊಳಗೆ ದುರ್ನಯಗಳ ಉತ್ಪತ್ತಿಯಾಗುವುದಿಲ್ಲ; ಅಸತ್ಯ ಆಚರಣೆ ಮಾಡುವಂಥ - ಪರಿಗ್ರಹ ಸಹಿತ ಮುನಿಗಳಾಗುವುದಿಲ್ಲ; ಮಹಾವೀರಸ್ವಾಮಿಯ ಸಮಯದಲ್ಲಿ ಅಂಥ ಮುನಿಗಳಾಗುವರು.

೨. ತರುಣ ಏಕಾಕಿ ಸಿಂಹದ ಹಿಂದೆ ಗಮನ ಮಾಡುತ್ತಿರುವ ಮೃಗಗಳ ಸಮೂಹವನ್ನು ನೋಡಿರುವುದರ ಫಲವು - ಅಂತಿಮ ಇಪ್ಪತ್ನಾಲ್ಕನೆಯ ತೀರ್ಥಂಕರ ಭಗವಾನ ಮಹಾವೀರರ ನಿರ್ವಾಣದ ನಂತರ ಯತಿಗಳು ಮೃಗದ ಸಮಾನ ದೀನ, ನಗ್ನ ಪರೀಷಹ ಸಹಿಸುವಲ್ಲಿ ಅಸಮರ್ಥ ಹಾಗೂ ಪರಿಗ್ರಹ ಧಾರಣ ಮಾಡಿ ವಿಹರಿಸುವರು; ಜಿನಲಿಂಗದ ತ್ಯಾಗ ಮಾಡಿ ಕುಲಿಂಗ ಧಾರಣ ಮಾಡುವರು.

೩. ಆನೆಯ ಭಾರ ಹೊತ್ತುಕೊಂಡಿರುವ ಅಶ್ವವನ್ನು ಕಂಡಿರುವುದರ ಫಲವು - ಪಂಚಮ ಕಾಲದಲ್ಲಿ ಸಾಧುಗಳು ತಪದ ಭಾರದಿಂದ ದುಃಖಿಯಾಗುವರು. ತಪಸ್ಸು ಧಾರಣ ಮಾಡುವಲ್ಲಿ ಅಸಮರ್ಥರಾಗುವರು.

೪. ಕಾಗೆಗಳ ಸಮೂಹದಿಂದ ಪೀಡಿತ ಹಂಸವನ್ನು ಕಂಡಿರುವುದರ ಫಲವು - ಪಂಚಮ ಕಾಲದಲ್ಲಿ ಅಜ್ಞಾನಿ ಮುಗ್ಧ ಜೀವಗಳು ಧರ್ಮದ ವೇಷವನ್ನು ಗ್ರಹಣ ಮಾಡಿ, ಮುನಿಧರ್ಮವನ್ನು ಬಿಟ್ಟುಕೊಟ್ಟು, ಅನಾಚಾರೀ ಹಿಂಸಕ ಜೀವಗಳ ಸೇವೆ ಮಾಡುವರು. ಅಸಂಯಮೀ ಕಷಾಯೀ ಜೀವರುಗಳ ಮೂಲಕ ಧರ್ಮಾತ್ಮರು ದುಃಖಿಯಾಗುವರು. ಪಾಪೀ ಜೀವರುಗಳಿಂದ ಧರ್ಮಾತ್ಮರ ಅವಮಾನವಾಗುವುದು.

೫. ತರಗೆಲೆಗಳನ್ನು ಮೆಲ್ಲುತ್ತಿರುವ ಮೇಕೆಗಳನ್ನು ನೋಡಿರುವುದರ ಫಲವು - ಉಚ್ಚಕುಲದ ಮನುಷ್ಯರು ಶುಭಾಚರಣೆಯಿಂದ ಭ್ರಷ್ಟರಾಗಿ, ಅಸತ್ಯ-ಹೀನ ಆಚರಣೆಯ ಆದರ ಮಾಡುವರು.

೬. ಆನೆಯ ಹೆಗಲ ಮೇಲೆ ಕೋತಿಯು ಹತ್ತಿ ಕುಳಿತಿರುವುದನ್ನು ನೋಡಿರುವುದರ ಫಲವು - ಪ್ರಾರಂಭದಿಂದ ನಡೆದು ಬರುತ್ತಿರುವ ಕ್ಷತ್ರಿಯರ ರಾಜವಂಶಗಳ ವ್ಯುಚ್ಛಿತ್ತಿಯಾಗುವುದು; ಹೀನಕುಲದ ಧಾರಕರು, ಅಕುಲೀನರು ಪೃಥ್ವಿಯ ಮೇಲೆ ರಾಜ್ಯ ನಡೆಸುವರು.

೭. ಭೂತಗಳು ಕುಣಿಯುತ್ತಿರುವುದನ್ನು ಕಂಡಿರುವುದರ ಫಲವು - ಪಂಚಮಕಾಲದ ಅಜ್ಞಾನೀ ಜನರು ಧರ್ಮದ ಸಲುವಾಗಿ ವ್ಯಂತರ ದೇವಗಳನ್ನು ಭಗವಂತರೆಂದು ಮನ್ನಿಸಿ ಪೂಜೆ ಮಾಡುವರು.

೮. ಮಧ್ಯದಲ್ಲಿ ಒಣಗಿ ಹೋಗಿ ಸುತ್ತಲೂ ನೀರಿನಿಂದ ತುಂಬಿಕೊಂಡಿರುವ ಸರೋವರವನ್ನು ನೋಡಿರುವುದರ ಫಲವು - ಉತ್ತಮ ತೀರ್ಥಸ್ಥಾನಗಳಲ್ಲಿ ಧರ್ಮದ ಅಭಾವವಾಗುವುದು; ಹೀನ ಸ್ಥಾನಗಳಲ್ಲಿ ಧರ್ಮವಿರುವುದು.

೯. ಧೂಳಿನಲ್ಲಿ ಲಿಪ್ತ ರತ್ನ ರಾಶಿಯನ್ನು ಕಂಡಿರುವುದರ ಫಲವು - ಪಂಚಮ ಕಾಲದಲ್ಲಿ ಶುಕ್ಲಧ್ಯಾನಿಗಳಾಗುವುದಿಲ್ಲ; ಕೆಲವರು ಧರ್ಮಧ್ಯಾನಿಯಾಗುವರು.

೧೦. ಶ್ವಾನವು ಜಿನಪೂಜೆಯ ದ್ರವ್ಯಗಳನ್ನು ತಿನ್ನುತ್ತಿರುವುದನ್ನು ಕಂಡಿರುವುದರ ಫಲವು - ಪಂಚಮ ಕಾಲದಲ್ಲಿ ಅವ್ರತಿ, ಅಪಾತ್ರ ಮತ್ತು ಕುಪಾತ್ರರು ಪಾತ್ರರ ಸಮಾನ ಆದರ ಪಡೆಯುವರು.

೧೧. ಶಬ್ದ ಮಾಡುತ್ತಿರುವ ತರುಣ ವೃಷಭವನ್ನು ಕಂಡಿರುವುದರ ಫಲವು - ಪಂಚಮ ಕಾಲದ ಜೀವರುಗಳು ತರುಣ ಅವಸ್ಥೆಯಲ್ಲಂತೂ ಧರ್ಮಧ್ಯಾನವನ್ನು ಆದರಪೂರ್ವಕ ಮಾಡುವರು; ಆದರೆ ವೃದ್ಧರಾದ ಮೇಲೆ ಧರ್ಮದಲ್ಲಿ ಶಿಥಿಲರಾಗುವರು, ಅರುಚಿ ಮಾಡುವರು.

೧೨. ಚಂದಿರನಲ್ಲಿ ಶಾಖೆಯನ್ನು ನೋಡಿರುವುದರ ಫಲವು - ಪಂಚಮ ಕಾಲದಲ್ಲಿ ಅವಧಿ-ಮನಃಪರ್ಯಾಯಜ್ಞಾನದ ಧಾರಕ ಮುನಿಗಳಾಗುವುದಿಲ್ಲ.

೧೩. ಒಟ್ಟಿಗೆ ಜತೆಯಲ್ಲಿ ಗಮನ ಮಾಡುತ್ತಿರುವ ಎರಡು ವೃಷಭಗಳನ್ನು ಕಂಡಿರುವುದರ ಫಲವು - ಪಂಚಮ ಕಾಲದ ಮುನಿಗಳು ಸಂಘದಲ್ಲಿ ಇರುವರು; ಏಕಾಂಗ ವಿಹಾರಿಯಾಗಲಾರರು.

೧೪. ಮೇಘ ಪಟಲದಿಂದ ಆಚ್ಛಾದಿತ ಸೂರ್ಯನನ್ನು ಕಂಡಿರುವುದರ ಫಲವು - ಪಂಚಮ ಕಾಲದ ಮುನಿಗಳಿಗೆ ಕೇವಲಜ್ಞಾನವಾಗುವುದಿಲ್ಲ.

೧೫. ಛಾಯಾರಹಿತ ಒಣಗಿ ಹೋದ ವೃಕ್ಷವನ್ನು ಕಂಡಿರುವುದರ ಫಲವು - ಪಂಚಮ ಕಾಲದ ಸ್ತ್ರೀ, ಪುರುಷರು ಶೀಲವ್ರತ ಧಾರಣ ಮಾಡಿಯೂ ಕೂಡ ಕುಶೀಲದ ಸೇವನೆ ಮಾಡುವರು.

೧೬. ತರಗೆಲೆಗಳ ಸಮೂಹವನ್ನು ನೋಡಿರುವುದರ ಫಲವು - ಆಹಾರ ಮೊದಲಾದ ಔಷಧಿಗಳ ರಸವು ನಷ್ಟವಾಗಿ ಹೋಗುವುದು. ಎಲ್ಲ ಔಷಧಿಗಳು ನೀರಸವಾಗಿ ಹೋಗುವವು.

-ಈ ಪ್ರಕಾರ ಭಗವಾನ ಋಷಭದೇವರು - ಎಲೈ ಚಕ್ರೇಶ್ವರನೇ ! ಇವುಗಳ ಫಲವು ಈಗ ಪ್ರಗಟವಾಗುವುದಿಲ್ಲ ಆದರೆ ಪಂಚಮಕಾಲದಲ್ಲಿ ಕಂಡು ಬರುವವು - ಎಂದು ಹೇಳಿದರು.

ಪಂಚಮಕಾಲದ ಮುಗ್ಧ ಜನರು ತಮ್ಮ ಮತಿ ಕಲ್ಪನೆಯಿಂದ ಅನೇಕ ಪ್ರಕಾರವಾಗಿ ಭಗವಂತರ ಸ್ಥಾಪನೆ ಮಾಡಿ ಅವರನ್ನು ಪೂಜಿಸುವರು. ಭಗವಂತರ ವಿವಿಧ ಭೇದ ಹೇಳುವರು. ಅದಕ್ಕಾಗಿ ಶುದ್ಧ (ವಾಸ್ತವಿಕ) ಭಗವಂತರನ್ನು ತಿಳಿಯುವ ಸಲುವಾಗಿ ಈಗ ಭಗವಂತರ ಗುಣಗಳನ್ನು ಹೇಳುತ್ತಾರೆ. ಯಾರಲ್ಲಿ ಈ ಗುಣಗಳಿವೆ, ಅವರು ಶುದ್ಧ ಭಗವಂತರಿದ್ದಾರೆ. ಈ ಗುಣಗಳಿಲ್ಲದವರು ಶುದ್ಧ ಭಗವಂತರಿಲ್ಲ. ಈ ಅತಿಶಯಗಳು ಯಾರಲ್ಲಿ ಇವೆ, ಅವರು ಶುದ್ಧ ತರಣ-ತಾರಣರಿದ್ದಾರೆಂದು ತಿಳಿಯುವುದು.

ಅತಿಶಯಗಳು- ವಚನಅತಿಶಯ, ಆತ್ಮಅತಿಶಯ, ಭಾಗ್ಯಅತಿಶಯವೆಂದು ಮೂರು ಪ್ರಕಾರದವಿರುತ್ತವೆ.

೧. **ವಚನ ಅತಿಶಯ** - ಮೇಘ ಗರ್ಜನೆಯ ಹಾಗೆ ಅನಕ್ಷರ ರೂಪ, ಅನುಕ್ರಮರಹಿತ ಓಂ ಧ್ವನಿಮಯ ಹೊರಡುವಂಥ ಜಿನರ ವಾಣಿಯನ್ನು ತಮ್ಮ ತಮ್ಮ ಭಾಷೆಯಲ್ಲಿ ಹನ್ನೆರಡು ಸಭೆಗಳ ಜೀವರುಗಳೆಲ್ಲರೂ ತಿಳಿಯುತ್ತಾರೆ. ಅದರಿಂದ ಎಲ್ಲರ ಸಂದೇಹವು ನಷ್ಟವಾಗಿ ಹೋಗುತ್ತದೆ, ಯಾರಿಗೂ ಸಂಶಯವುಳಿಯುವುದಿಲ್ಲ. ಅದನ್ನು ಕೇಳಿ ಭವ್ಯರ ಕಲ್ಯಾಣವಾಗುತ್ತದೆ. ಪಾಪ ನಾಶವಾಗಿ ಪುಣ್ಯ ಫಲವು ಉತ್ಪನ್ನವಾಗುತ್ತದೆ. ಅದು ವಚನ ಅತಿಶಯವಿದೆ.

೨. **ಆತ್ಮ ಅತಿಶಯ** - ಕರ್ಮಗಳ ಕ್ಷಯದಿಂದ ಪ್ರಗಟವಾಗುವಂಥ ಅನಂತಜ್ಞಾನ, ಅನಂತದರ್ಶನ, ಅನಂತಸುಖ ಮತ್ತು ಅನಂತವೀರ್ಯರೂಪ ಅನಂತ ಚತುಷ್ಟಯವು ಅದು ಆತ್ಮ ಅತಿಶಯವಿದೆ.

೩. **ಭಾಗ್ಯ ಅತಿಶಯ** - ಗರ್ಭದೊಳಗೆ ಬರುವ ಮೊದಲು ರತ್ನಗಳ ವೃಷ್ಟಿಯಾಗುವುದು, ಸಂಪೂರ್ಣ ನಗರವು ರತ್ನಮಯವಾಗುವುದು, ಇಂದ್ರಾದಿ ದೇವಗಳಿಂದ ಸೇವೆ ಮಾಡಲ್ಪಡುವುದು. ಕೇವಲಜ್ಞಾನ ಸ್ವಭಾವವು ಪ್ರಗಟವಾದ ಮೇಲೆ ಸಮವಸರಣದ ವಿಭೂತಿಯು ಪ್ರಗಟವಾಗುವುದು - ಇತ್ಯಾದಿ ಮಹಿಮೆಯು ಭಾಗ್ಯ ಅತಿಶಯವಿದೆ.

ಇವು ಮೂರು ಅತಿಶಯಗಳು ಯಾರಲ್ಲಿ ಇರುತ್ತವೆ, ಅವರು ಭಗವಂತರಿದ್ದಾರೆ. ಗರ್ಭದೊಳಗೆ ಬರುವ ಮುನ್ನ ಭಗವಂತರ ಮಾತೆಯು ಹದಿನಾರು ಸ್ವಪ್ನ ಕಾಣುತ್ತಾಳೆ. ೧. ಐರಾವತ ಆನೆ, ೨. ಶ್ವೇತ ವೃಷಭ, ೩. ಸಿಂಹ, ೪. ಪುಷ್ಪಮಾಲೆ, ೫. ಗಜಗಳಿಂದ ಸ್ನಾನ ಮಾಡುತ್ತಿರುವ ಲಕ್ಷ್ಮೀ, ೬. ಪೂರ್ಣಚಂದಿರ, ೭. ಸೂರ್ಯ, ೮. ಕನಕ ಕಲಶ, ೯. ಮತ್ಸ್ಯಯುಗಲ, ೧೦. ಸರೋವರ, ೧೧. ಸಾಗರ, ೧೨. ಸಿಂಹಾಸನ, ೧೩. ಸ್ವರ್ಗವಿಮಾನ, ೧೪. ಧರಣೇಂದ್ರ ವಿಮಾನ, ೧೫. ರತ್ನರಾಶಿ, ೧೬. ನಿರ್ಧೂಮ ಅಗ್ನಿ. ಈಗ ಇವುಗಳ ಸಾಮಾನ್ಯ ಫಲ ದರ್ಶಿಸುತ್ತಾರೆ.

೧. ಐರಾವತ ಆನೆಯನ್ನು ಕಾಣುವುದರ ಫಲವು-ಪುತ್ರನು ಮಹಾನ ಪುಣ್ಯಶಾಲಿ ಸರ್ವೋತ್ತಮನಾಗುವನು.
೨. ಶ್ವೇತ ವೃಷಭವನ್ನು ಕಂಡಿರುವುದರ ಫಲವು-ಪುತ್ರನು ಧರ್ಮಧಾರಕ ಜಗತ್ಪೂಜ್ಯನಾಗುವನು.
೩. ಸಿಂಹವನ್ನು ನೋಡಿರುವುದರ ಫಲವು-ಪುತ್ರನು ಅನಂತ ಬಲದ ಧಾರಕನಾಗುವನು.
೪. ಪುಷ್ಪಮಾಲೆಯನ್ನು ಕಂಡಿರುವುದರ ಫಲವು-ಪುತ್ರನು ಧರ್ಮವನ್ನು ಪ್ರಕಟಪಡಿಸುವಂಥವನಾಗುವನು.
೫. ಗಜರಾಜಗಳು ಸ್ನಾನ ಮಾಡಿಸುತ್ತಿರುವ ಲಕ್ಷ್ಮಿಯನ್ನು ನೋಡಿರುವುದರ ಫಲವು-ಸುಮೇರು ಪರ್ವತದ ಮೇಲೆ ಪುತ್ರನ ಸ್ನಾನವಾಗುವುದು.
೬. ಪೂರ್ಣಚಂದ್ರನನ್ನು ಕಂಡಿರುವ ಫಲವು-ಪುತ್ರನು ಮೂರುಲೋಕದ ಜೀವರುಗಳಿಗೆ ಆನಂದಕಾರಕನಾಗುವನು.
೭. ಸೂರ್ಯನನ್ನು ಕಂಡಿರುವ ಫಲವು-ಪುತ್ರನು ಮಹಾಪ್ರತಾಪಿಯಾಗುವನು.
೮. ಕನಕ ಕಲಶವನ್ನು ನೋಡಿರುವ ಫಲವು-ಪುತ್ರನು ಅನೇಕ ನಿಧಿಗಳ ಭೋಕ್ತೃವಾಗುವನು.
೯. ಮತ್ಸ್ಯಯುಗಲವನ್ನು ನೋಡಿರುವುದರ ಫಲವು-ಪುತ್ರನು ಅನೇಕ ಸುಖಗಳನ್ನು ಭೋಗಿಸುವಂಥವನಾಗುವನು.
೧೦. ಸರೋವರವನ್ನು ನೋಡಿರುವುದರ ಫಲವು-ಪುತ್ರನು ೧೦೦೮ ಲಕ್ಷಣಗಳ ಧಾರಕನಾಗುವನು.
೧೧. ಕಲ್ಲೋಲ ಮಾಡುತ್ತಿರುವ ಸಮುದ್ರವನ್ನು ಕಂಡಿರುವ ಫಲವು-ಪುತ್ರನು ಕೇವಲಜ್ಞಾನದ ಧಾರಕನಾಗುವನು.
೧೨. ಸಿಂಹಾಸನವನ್ನು ಕಂಡಿರುವುದರ ಫಲವು-ಪುತ್ರನು ದೊಡ್ಡ ರಾಜ್ಯದ ಭೋಕ್ತೃವಾಗುವನು.
೧೩. ಸ್ವರ್ಗ ವಿಮಾನವನ್ನು ಕಂಡಿರುವುದರ ಫಲವು-ಪುತ್ರನ ಜೀವನು ಸ್ವರ್ಗದಿಂದ ಚ್ಯುತನಾಗಿ ಅವತರಿಸುವನು.
೧೪. ಪಾತಾಳದಿಂದ ಮೇಲೇಳುತ್ತಿರುವ ಧರಣೇಂದ್ರ ವಿಮಾನವನ್ನು ಕಂಡಿರುವುದರ ಫಲವು-ಪುತ್ರನು ಜನ್ಮದಿಂದಲೇ ಅವಧಿಜ್ಞಾನ ಸಂಪನ್ನನಿರುತ್ತಾನೆ.
೧೫. ರತ್ನರಾಶಿಯನ್ನು ಕಂಡಿರುವುದರ ಫಲವು-ಪುತ್ರನು ಗುಣಗಳ ನಿಧಾನನಾಗಿರುವನು.
೧೬. ನಿರ್ಧೂಮ ಅಗ್ನಿಯನ್ನು ಕಂಡಿರುವುದರ ಫಲವು - ಪುತ್ರನು ಅಷ್ಟಕರ್ಮಗಳನ್ನು ನಷ್ಟಮಾಡುವಂಥವನಾಗುವನು.

ಈ ಪ್ರಕಾರ ಭಗವಂತರ ಅವತಾರವಾಗುವ ಮೊದಲು ಮಾತೆಯು ಕಂಡಿರುವ ಹದಿನಾರು ಸ್ವಪ್ನಗಳ ಫಲವಿದೆ.

ಈ ಪ್ರಕಾರ ಸುದೃಷ್ಟಿ ತರಂಗಿಣಿಯೆಂಬ ಹೆಸರಿನ ಗ್ರಂಥದಲ್ಲಿ ದೊರೆಗಳ ಗುಣ ಹದಿನಾಲ್ಕು ವಿದ್ಯೆ,
ತೀರ್ಥಂಕರರ ಮಾತೆಯ ಹದಿನಾರು ಸ್ವಪ್ನ ಇತ್ಯಾದಿಗಳ ಕಥನ ಮಾಡುವಂಥ
ಮೂವತ್ತೊಂದನೆಯ ಪರ್ವವು ಸಂಪೂರ್ಣವಾಯಿತು.

★★★★★

ಧ್ಯಾತ ಜನ ಧ್ಯಾನಿಸುವ ನಮಿತ ಜನ ನಮಿಸುವರು ಯಾರನು ನಿರಂತರ ।
ಸ್ತುತಿ ಪ್ರಾಪ್ತ ಜನ ಸ್ತುತಿಸುವ ಆ ದೇಹಸ್ಥಿತ ತತ್ತ್ವವನು ಅರಿತುಕೋ ನೀನು ! ॥

## ೩೨ : ಮೂವತ್ತೆರಡನೆಯ ಪರ್ವ
## 'ಸಾಗಾರ ಧರ್ಮ' - ಹನ್ನೊಂದು ನೆಲೆಗಳ ವರ್ಣನೆ

ಭಗವಾನ ಋಷಭದೇವರು ಜನ್ಮದ ನಂತರ ಎಂಭತ್ಮೂರು ಲಕ್ಷಪೂರ್ವದವರೆಗೆ ರಾಜ್ಯ ನಡೆಸಿದರು. ಅದರಲ್ಲಿ ಅವರು ದೀರ್ಘ ಪುಣ್ಯದ ಫಲದೊಳಗೆ ಹತ್ತು ಪ್ರಕಾರದ ಭೋಗ ಭೋಗಿಸಿ ಸುಖಿಯಾದರು. ಅವು ಹೀಗಿವೆ-

೧. ಜ್ಯೋತಿಷಿ ದೇವಗಳ ಪ್ರಭೆಯನ್ನು ಗೆಲ್ಲುವಂಥ ವಿವಿಧ ವರ್ಣದ ಮನೋವಾಂಛಿತ ರತ್ನಗಳ ಸುಖದ ಭೋಗ.

೨. ನವನಿಧಿ ಇತ್ಯಾದಿ ಪರಮ ಸಂಪದದ ಭೋಗ.

೩. ಮಹಾಸತಿ, ಶುಚಿಯ ರೂಪವನ್ನು ಜಯಿಸುವಂಥ, ಆಜ್ಞಾನುಸಾರಿ ವಿನಯ ಸಹಿತ ಅನೇಕ ಮನಮೋಹಕ ಪ್ರವೃತ್ತಿ ಮಾಡುವಂಥ ಅರಸಿಯ ಭೋಗ.

೪. ಅನೇಕ ಸಂಪದಗಳಿಂದ ತುಂಬಿಕೊಂಡಿರುವ ನಗರ, ದೇಶ ಸಂಬಂಧದ ರಾಜ್ಯಭೋಗ.

೫. ಅನೇಕ ಮಹಾಪುರುಷರುಗಳಿಂದ ವಂದನೀಯ ದೇವ, ವಿದ್ಯಾಧರ, ಭೂಮಿಗೋಚರ ದೊರೆಗಳೊಂದಿಗೆ ಆನೆ, ಕುದುರೆ ಪದಾತಿರೂಪ ಆರು ಪ್ರಕಾರದ ಸೇನೆ, ಈಶ್ವರನ ಭೋಗ.

೬. ಅತಿಶಯ ಸುಗಂಧದಿಂದ ಕೂಡಿದ ಅನೇಕ ರತ್ನಮಯ ಶಯ್ಯೆಯ ಭೋಗ.

೭. ರತ್ನಮಯ ಸಿಂಹಾಸನ, ಗದ್ದುಗೆ, ವಿರಾಜಮಾನರಾಗುವ ಸ್ಥಾನ, ಸಭಾಮಂಟಪ, ವಿಶಾಲವಾದ ಉತ್ತಮ ಮಹಲುಗಳ ಭೋಗ.

೮. ವಿಧ-ವಿಧದ ಆಕಾರವುಳ್ಳ, ಅನೇಕ ರತ್ನಮಯ, ಚಿನ್ನ-ಬೆಳ್ಳಿ ಮೊದಲಾದ ಅನೇಕ ಮನೋಹರ ಧಾತುಮಯ ಪಾತ್ರೆಗಳ ಭೋಗ.

೯. ವಿವಿಧ ಷಟ್‌ರಸಮಯ, ಜಿಹ್ವಾ ರಂಜಿತ, ಅನೇಕ ಭೋಜನ ವ್ಯಂಜನರೂಪ ವಸ್ತುಗಳ ಭಕ್ಷಣಮಯ ಭೋಗ.

೧೦. ದೇವ, ದೇವಿ, ಮನುಷ್ಯ, ಸ್ತ್ರೀಯರುಗಳಿಂದ ಹಾಡುಗಾರಿಕೆ ಸುಂದರಮಧುರ ಸ್ವರಸಹಿತ ಸಂಗೀತ, ಗಾಯನ, ನೃತ್ಯ ಮೊದಲಾದ ರಾಗ-ರಂಗಗಳ ಭೋಗ.

ಇವು ಹತ್ತು ಪ್ರಕಾರದ ಭೋಗಗಳನ್ನು ದೇವಾಧಿದೇವ ವೃಷಭ ಜಿನರು ಅತಿಶಯ ಪುಣ್ಯದ ಫಲರೂಪವಾಗಿ ರಾಜ್ಯಾವಸ್ಥೆಯಲ್ಲಿ ಭೋಗಿಸಿದರು.

ಈಗ ಪುಣ್ಯವಂತರನ್ನು ಪರೀಕ್ಷಿಸುವ ಸಲುವಾಗಿ ಸಹಜ ಷಟ್‌ಗುಣಗಳನ್ನು ಹೇಳುತ್ತಾರೆ -

೧. ಸ್ವಯಂ ಜಗತ್ತಿನ ಸಮಸ್ತ ದೇವ-ಮಾನವರಿಂದ ಪೂಜನೀಯ ಪದದ ಧಾರಕರೂ ಎಲ್ಲರಿಗಿಂತ ಮಹಾನರಿದ್ದರೂ ತಮ್ಮ ದೊಡ್ಡಸ್ತನದ ಗರ್ವ(ಮಾನ) ಮಾಡದಿರುವುದು ಅದು ಮಹಾಪುಣ್ಯದ ಫಲವಿದೆ. ಹೀನ ಪುಣ್ಯವಂತನು ಲೋಕದಲ್ಲಿ ಅಲ್ಪವಾದ ಆದರ ಸತ್ಕಾರವು ಪ್ರಾಪ್ತವಾದ ಮೇಲೆಯೇ ಗರ್ವ ಪಡಲಾರಂಭಿಸುತ್ತಾನೆ; ಆದರೆ ಮಹಾಪುಣ್ಯವಂತನು ಬಹಳಷ್ಟು ಸತ್ಕಾರವು ಪ್ರಾಪ್ತವಾದ ಮೇಲೆಯೂ ಕೂಡ ಗರ್ವ ಮಾಡುವುದಿಲ್ಲ.

೨. ಹೀನ ಪುಣ್ಯಶಾಲಿಯು ಅತಿ ಅಲ್ಪವಾದ ಸತ್ಯವನ್ನಾಡಿಯೂ ಅಭಿಮಾನ ಪಡುತ್ತಾನೆ. ನಮ್ಮಂಥ ಸತ್ಯವಾದಿಗಳು ಬೇರೆ ಯಾರೂ ಇಲ್ಲವೆಂದು ಹೇಳುತ್ತಾನೆ. ಪುಣ್ಯವಂತನ ಸಹಜ ಸ್ವಭಾವವೇ ಸತ್ಯವನ್ನಾಡುವುದು ಇರುವುದರಿಂದ ಆ ಪುಣ್ಯಶಾಲಿಯು ಸತ್ಯವನ್ನಾಡಿಯೂ ಕೂಡ ಅಭಿಮಾನ ಮಾಡುವುದಿಲ್ಲ.

೩. ಹೀನ ಕುಲೋತ್ಪನ್ನನು, ತುಚ್ಛಪುಣ್ಯವಂತನು, ಅತ್ಯಲ್ಪ ಪುರುಷಾರ್ಥ ಪಡೆದು ಅಭಿಮಾನ ಮಾಡುತ್ತಾನೆ. ದೀನ ಜೀವಗಳಿಗೆ ಪೀಡೆ ಕೊಡುತ್ತಾನೆ, ಭಯತೋರಿಸುತ್ತಾನೆ. ನಮ್ಮ ಸಮಾನ ಬಲಶಾಲಿ, ಪುರುಷಾರ್ಥಿಗಳು ಬೇರೆ ಯಾರೂ ಇಲ್ಲವೆಂದು ಹೇಳಿ ಗರ್ವ ಪಡುತ್ತಾನೆ; ಆದರೆ ಮಹಾ ಪುಣ್ಯಾತ್ಮನು ಮಹಾನ ಬಲ-ಪರಾಕ್ರಮ ಧಾರಕನಾಗಿದ್ದರೂ ಅಭಿಮಾನ ಮಾಡುವುದಿಲ್ಲ ದೀನ ಜೀವರುಗಳ ರಕ್ಷಣೆ ಮಾಡುತ್ತಾನೆ.

೪. ಹೀನ ಪುಣ್ಯನು ಮಹಾರೌದ್ರ ಪರಿಣಾಮಿ, ಅಂತರಂಗದಲ್ಲಿ ಮಹಾನಿರ್ದಯಭಾವಯುಕ್ತನಾಗಿದ್ದರೂ ಬಾಹ್ಯದಲ್ಲಿ ಜನರಿಗೆ ತೋರಿಸುವ ಸಲುವಾಗಿ ದಾನವಿತ್ತು, ದಯೆ ಮಾಡಿ ಅಭಿಮಾನ ಪಡುತ್ತಾನೆ. ನಾವು ದಯಾವಂತರಿದ್ದೇವೆಂದು ಹೇಳುತ್ತಾನೆ. ಇದಕ್ಕೆ ವಿಪರೀತವಾಗಿ ದೀರ್ಘ ಪುಣ್ಯದ ಧಾರಕನು ಸಹಜವಾಗಿಯೇ ಕೋಮಲ ಚಿತ್ತದ ಧಾರಕನಾಗಿದ್ದು ಮಹಾನ ದಯಾರೂಪವಾಗಿ ವರ್ತಿಸಿದರೂ ಅಭಿಮಾನ ಪಡುವುದಿಲ್ಲ.

೫. ಅಲ್ಪ ಪುಣ್ಯದಧಾರಕನು ಅಲ್ಪದಾನ ಮಾಡಿದರೂ ಕೂಡ 'ನಮ್ಮ ಸಮಾನ ದಾತಾರರು ಬೇರೆ ಯಾರೂ ಇಲ್ಲ'ವೆಂದು ಹೇಳುತ್ತ ಅಭಿಮಾನ ಮಾಡುತ್ತಾನೆ. ಸಹಜವಾಗಿಯೇ ಉದಾರ ಚಿತ್ತವುಳ್ಳವನು ದಯೆಯ ಸಾಕಾರ ಮೂರ್ತಿಯಾದ ಮಹಾ ಪುಣ್ಯಾತ್ಮನು ವಿಶಾಲದಾನ ಮಾಡಿಯೂ ಕೂಡ ಅಭಿಮಾನ ಪಡುವುದಿಲ್ಲ.

೬. ಹೀನ ಪುಣ್ಯವಂತನು ಅಲ್ಪ ವಿರಕ್ತನಾಗಿಯೂ ಅಭಿಮಾನ ಮಾಡುತ್ತಾನೆ 'ನಾವು ತ್ಯಾಗಿಯಿದ್ದೇವೆ, ನಮಗೆ ಯಾವುದರದೂ ವಾಂಛೆಯಿಲ್ಲ'ವೆಂದು ಹೇಳುತ್ತಾನೆ. ಮಹಾಭಾಗ್ಯಶಾಲಿ ಪುಣ್ಯಾತ್ಮನು ಅನೇಕ ಭೋಗ-ಸಂಪದದ ಪ್ರಾಪ್ತಿ ಮಾಡಿಕೊಂಡು ಅದರಿಂದ ಉದಾಸನಾಗಿರುತ್ತಿದ್ದರೂ ಅಭಿಮಾನ ಪಡುವುದಿಲ್ಲ.

ಇವು ಆರು ರೀತಿಯ ಸಂದರ್ಭಗಳಲ್ಲಿ ಗರ್ವ ಮಾಡದಿರುವುದು ಪುಣ್ಯದ ಫಲವಿದೆ. ಇವು ಆರು ಗುಣಗಳು ಭಗವಂತರಲ್ಲಿ ಇರುತ್ತವೆ.

ರಾಜ್ಯಾವಸ್ಥೆಯಲ್ಲಿ ಭಗವಂತರು ಇಂದ್ರರುಗಳ ಮೂಲಕ ತರಲಾದ ವಿವಿಧ ರತ್ನಮಯ ಆಭೂಷಣಗಳಿಂದ ಅಲಂಕಾರ ಮಾಡಿಕೊಂಡು ಆಭೂಷಣಗಳಿಗೆ ಶೋಭೆ ನೀಡಿದ್ದರು - ಈ ಸಂದರ್ಭದಲ್ಲಿ ಆಚಾರ್ಯದೇವರು ಹೇಳುತ್ತಾರೆ- ತಮ್ಮ ಆಶ್ರಯದಲ್ಲಿ ಬರುವಂಥವರನ್ನು ಕೀರ್ತಿವಂತರನ್ನಾಗಿ ಮಾಡಿ ಒಳ್ಳೆಯವರಂತೆ ತೋರಿಸುವುದು, ಅದು ಮಹಾಪುರುಷರ ಗುಣವಿದೆ. ಆಭೂಷಣಗಳು ಭಗವಂತರ ಶರೀರದ ಆಶ್ರಯ ಮಾಡಿದವು; ಅದರಿಂದ ಆಭೂಷಣಗಳು ಕೂಡ ಒಳ್ಳೆಯ ರೀತಿಯಿಂದ ಸುಶೋಭಿತವಾಗತೊಡಗಿದವು.

ಅವೆಲ್ಲ ಆಭೂಷಣಗಳಲ್ಲಿ ಕಂಠ ಮಾಲೆಗಳು ಮುಖ್ಯವಿವೆ. ಆ ಮಾಲೆಗಳ ಅನೇಕ ಭೇದಗಳಿದ್ದು ಮೂರು ಮುಖ್ಯವಿವೆ.

೧. ಏಕಾವಲೀಜಿಷ್ಟೀ ಮಾಲೆ, ೨. ರತ್ನಾವಲೀಜಿಷ್ಟೀಮಾಲೆ, ೩. ಅಲ್ಪವೃತ್ತಕ.

೧. ಎಳೆ(ಪದರು)ಗಳನ್ನು ಜಿಷ್ಟೀಯೆಂದು ಹೇಳುತ್ತಾರೆ. ಮಾಲೆಯಲ್ಲಿ ಎಷ್ಟು ಎಳೆಗಳಿರುತ್ತವೆ ಅವನ್ನು ಜಿಷ್ಟೀಯೆಂದು ಹೇಳುತ್ತಾರೆ. ಅದರ ಭೇದಗಳು - ಸೀರಖ, ಉಪಸೀರಖ, ಅವಘಾತ, ಪ್ರಕಾಂಡಕ ಮತ್ತು ತರಲಪ್ರಬಂಧ-ವೆಂದು ಐದು ಇವೆ.

೧. ಯಾವ ಮಾಲೆಯಲ್ಲಿ ಕೇವಲ ಮುತ್ತುಗಳ ಎಳೆಗಳೇ ಇರುತ್ತವೆ ಅದು ಏಕಾವಲೀ ಜಿಷ್ಟೀ ಮಾಲೆಯಿದೆ.

೨. ಯಾವುದರ ಮಧ್ಯದಲ್ಲಿ ಮಾಣಿಕರತ್ನವಿದ್ದು ಎರಡೂ ಕಡೆಗೆ ಮುತ್ತುಗಳಿರುತ್ತವೆ, ಅದು ರತ್ನಾವಲೀ ಜಿಷ್ಟೀ ಮಾಲೆಯಿದೆ.

೩. ಯಾವುದರಲ್ಲಿ ಎರಡು ಮುತ್ತು ಒಂದು ಮಣಿರತ್ನ ಅಥವಾ ಮೂರು ಮುತ್ತು ಒಂದು ಮಣಿರತ್ನ ಅಥವಾ ನಾಲ್ಕು ಮುತ್ತು ಒಂದು ರತ್ನ, ಅಥವಾ ಐದು ಮುತ್ತು ಒಂದು ಮಣಿರತ್ನ - ಹೀಗೆ ಎಳೆ-ಸರವನ್ನು ಹೆಣೆಯಲಾಗಿರುತ್ತದೆ - ಪವಣಿಸಲಾಗಿರುತ್ತದೆ ಅದು ಅಲ್ಪವೃತ್ತಕ ಮಾಲೆಯಿದೆ.

ಇನ್ನು ಮಣಿರತ್ನದಲ್ಲಿ ೧. ಮಣಿರತ್ನ ಮತ್ತು ೨. ಮಾಣಿಕ್ಯವೆಂದು ಎರಡು ಭೇದಗಳಿವೆ. ಛಿದ್ರವಿರುವ ಕಾರಣ ಯಾವುದನ್ನು ದಾರದಲ್ಲಿ ಪವಣಿಸಲಾಗುತ್ತದೆ ಅದು ಮಣಿರತ್ನವಿದೆ ಮತ್ತು ಛಿದ್ರರಹಿತವಿರುವ ಕಾರಣ ಯಾವುದನ್ನು ಚಿನ್ನದಲ್ಲಿ ಜಡಿಸಲಾಗುತ್ತದೆ (ಕೂಡ್ರಿಸಲಾಗುತ್ತದೆ) ಅದು ಮಾಣಿಕ್ಯವಿದೆ.

ಯಾವ ಸರದಲ್ಲಿ ಒಂದು ಮುತ್ತು ಒಂದು ಮಣಿರತ್ನ ಮತ್ತು ಒಂದು ಮಾಣಿಕ್ಯವಿರುತ್ತದೆ. ಅದು ಕೂಡ ಅಲ್ಪವೃತ್ತಕವೆಂಬ ಹೆಸರಿನ ಮಾಲೆಯಿದೆ.

ಯಾವುದರಲ್ಲಿ ಸರದ ಎಲ್ಲ ಮುತ್ತುಗಳು ಸಮಾನವಿದ್ದರೂ ಮಧ್ಯದಲ್ಲಿ ಒಂದು ದೊಡ್ಡ ಮುತ್ತು ಇರುತ್ತದೆ ಅದನ್ನು ಸೀರಖವೆಂಬ ಹೆಸರಿನ ಎಳೆಯ ಮಾಲೆಯೆನ್ನುತ್ತಾರೆ.

ಇನ್ನು ಮಧ್ಯದಲ್ಲಿ ಮೂರು ದೊಡ್ಡ ಮುತ್ತುಗಳು ಹಾಗೂ ಉಳಿದವೆಲ್ಲವೂ ಒಂದೇ ಆಕಾರದ ಚಿಕ್ಕ ಮುತ್ತುಗಳಿರುವಂಥ ಮಾಲೆಯನ್ನು **ಉಪಸೀರಖವೆಂದು** ಹೇಳುತ್ತಾರೆ. ಯಾವುದರ ಮಧ್ಯದಲ್ಲಿ ಐದು ದೊಡ್ಡ ಮುತ್ತುಗಳಿರುತ್ತವೆ ಅದು **ಪ್ರಕಾಂಡಕವೆಂಬ** ಹೆಸರಿನ ಜಿಷ್ಟೀ ಮಾಲೆಯಿದೆ. ಮಧ್ಯದಲ್ಲಿ ಒಂದು ದೊಡ್ಡ ಮುತ್ತು ಇರುತ್ತದೆ ಮತ್ತು ಅದರ ಎರಡೂ ಕಡೆಯ ಮುತ್ತುಗಳು ಕ್ರಮದಿಂದ ಚಿಕ್ಕ-ಚಿಕ್ಕವಿರುತ್ತವೆ, ಅದು **ಅವಘಾಟಕವೆಂಬ** ಹೆಸರಿನ ಜಿಷ್ಟೀಯಿದೆ. ಎಲ್ಲ ಮುತ್ತುಗಳು ಸಮಾನವಿರುವಂಥದು ಅದು **ತರಲಪ್ರಬಂಧವೆಂಬ** ಹೆಸರಿನ ಜಿಷ್ಟೀ ಇದೆ.

ಈ ಐದು ಜಾತಿಯ ಎಳೆಗಳ ಮಾಲೆಗಳಲ್ಲಿ ಮುತ್ತುಗಳೇ ಇರುತ್ತವೆ. ಆ ಮಾಲೆಗಳ ಭೇದಗಳು-ಅರ್ಧ ಮಾನವ, ಮಾನವ, ಅರ್ಧಗುಚ್ಛ, ನಿಷತ್ರಮಾಲಿಕೆ, ಗುಚ್ಛ, ರಮ್ಯಕಲಾಪ, ಅರ್ಧ, ದೇವಛಂಧ, ಮಾಲೆ, ವಿಜಯಛಂದ ಮತ್ತು ಇಂದ್ರಛಂದವೆಂದು-ಹನ್ನೊಂದು ಇವೆ. ಇಲ್ಲಿ ಅವುಗಳ ಸಾಮಾನ್ಯಸ್ವರೂಪ ಮತ್ತು ಅವುಗಳನ್ನು ಧರಿಸುವಂಥವರ ಹೆಸರು ಹೇಳುತ್ತಾರೆ.

ಹತ್ತು ಎಳೆಗಳ ಮಾಲೆಯು **ಅರ್ಧಮಾನವ** ಮಾಲೆಯಿದೆ. ಇಪ್ಪತ್ತು ಎಳೆಗಳ ಮಾಲೆಯು **ಮಾನವವೆಂಬ** ಹೆಸರಿನ ಮಾಲೆಯಿದೆ. ಇಪ್ಪತ್ನಾಲ್ಕು ಎಳೆಗಳ ಮಾಲೆಯು **ಅರ್ಧಗುಚ್ಛಮಾಲೆಯಿದೆ.** ಇಪ್ಪತ್ತೇಳು ಎಳೆಗಳ ಮಾಲೆಯು **ನಿಷತ್ರಮಾಲಿಕೆ** ಮಾಲೆಯಿದೆ. ಮೂವತ್ತೆರಡು ಎಳೆಗಳ ಮಾಲೆಯು **ಗುಚ್ಛವೆಂಬ** ಹೆಸರಿನ ಮಾಲೆಯಿದೆ. ಐವತ್ನಾಲ್ಕು ಎಳೆಗಳ ಮಾಲೆಯು **ರಮ್ಯಕಲಾಪವೆಂಬ** ಹೆಸರಿನ ಮಾಲೆಯಿದೆ. ಅರವತ್ನಾಲ್ಕು ಎಳೆಗಳ ಮಾಲೆಯು **ಅರ್ಧಮಾಲೆಯಿದೆ.** ಎಂಭತ್ತೊಂದು ಎಳೆಗಳ ಮಾಲೆಯು **ದೇವಛಂದವೆಂಬ** ಹೆಸರಿನ ಮಾಲೆಯಿದೆ. ಒಂದುನೂರಾ ಎಂಟು ಎಳೆಗಳ ಮಾಲೆಯು **ಮಾಲೆಯೆಂಬ** ಹೆಸರಿನ ಮಾಲೆಯಿದೆ. ಐನೂರಾನಾಲ್ಕು ಎಳೆಗಳ ಮಾಲೆಯು **ವಿಜಯಛಂದವೆಂಬ** ಹೆಸರಿನ ಮಾಲೆಯಿದೆ. ಒಂದು ಸಾವಿರದೆಂಟು ಎಳೆಗಳ ಮಾಲೆಯು **ಇಂದ್ರಛಂದವೆಂಬ** ಹೆಸರಿನ ಮಾಲೆಯಿದೆ.

ಇವುಗಳೊಳಗಿನ ಪ್ರಾರಂಭದ ಒಂಭತ್ತು ಕಂಠ ಮಾಲೆಗಳನ್ನು ಮಹಾಮಂಡಲೇಶ್ವರ ದೊರೆಯವರೆಗಿನ ಪದವಿಯವರು ಧರಿಸುತ್ತಾರೆ. ಹತ್ತನೆಯ ವಿಜಯಛಂದ ಮಾಲೆಯನ್ನು ನಾರಾಯಣ-ಪ್ರತಿನಾರಾಯಣ ಪದವಿಯಧಾರಕರು ಧರಿಸುತ್ತಾರೆ. ಇಂದ್ರಛಂದವೆಂಬ ಹೆಸರಿನ ಮಾಲೆಯನ್ನು ಭಗವಂತರ ನಿಕಟವರ್ತಿ ಸೇವಕದೇವ ಇಂದ್ರ, ಚಕ್ರವರ್ತಿಗಳು ಧರಿಸುತ್ತಾರೆ ಹಾಗೂ ಈ ದೇವ-ಇಂದ್ರರುಗಳ ಅಧಿಪತಿ ತೀರ್ಥಂಕರರು ಧರಿಸುತ್ತಾರೆ.

ದೇವಪುನೀತ ಒಂದು ಸಾವಿರದೆಂಟು ಎಳೆಗಳ ಮಾಲೆಯನ್ನು ಧರಿಸಿ ಜಿನದೇವರು ಯಾವ ರೀತಿ ಶೋಭಿಸುತ್ತಾರೆಂದರೆ ಅದೇನು ಸಮಸ್ತ ಜ್ಯೋತಿಷಿ ದೇವಗಳು ಸೇರಿ ಭಗವಂತರ ಭಕ್ತಿ ಮಾಡುವ ಸಲುವಾಗಿ ಅವರ ಹತ್ತಿರವೇ ಬಂದು ಬಿಟ್ಟಿರುವಂತೆ ಕಂಡು ಬರುತ್ತದೆ.

ಈ ಪ್ರಕಾರದಿಂದ ಭಗವಂತರು ಬಹಳಷ್ಟು ಕಾಲದವರೆಗೆ ರಾಜ್ಯ ಮಾಡಿ ನಂತರ ತಪದ ಅಂಗೀಕಾರ ಮಾಡಿ ಕೇವಲಜ್ಞಾನವನ್ನು ಪ್ರಾಪ್ತ ಮಾಡಿಕೊಂಡು ಸಮವಸರಣ ಸಹಿತ ವಿಹಾರ ಮಾಡುತ್ತ ಧರ್ಮೋಪದೇಶ ಕೊಡುತ್ತಾರೆ ಅದನ್ನು ಆಲಿಸಿ ಹನ್ನೆರಡು ಸಭೆಯ ಧರ್ಮಾರ್ಥಿ ಜೀವರುಗಳು ಧರ್ಮ ಮಾರ್ಗದಲ್ಲಿ ತೊಡಗುತ್ತಾರೆ. ಆ ಹನ್ನೆರಡು ಸಭೆಗಳು ಈ ಪ್ರಕಾರವಿವೆ,

ಮೊದಲನೆಯ ಸಭೆಯಲ್ಲಿ ಕಲ್ಪವಾಸೀ ದೇವಗಳು, ಎರಡನೆಯದರಲ್ಲಿ ಜ್ಯೋತಿಷೀ ದೇವಗಳು, ಮೂರನೆಯದರಲ್ಲಿ ವ್ಯಂತರ ದೇವಗಳು, ನಾಲ್ಕನೆಯದರಲ್ಲಿ ಭವನವಾಸೀ ದೇವಗಳು, ಐದನೆಯದರಲ್ಲಿ ಕಲ್ಪವಾಸೀ

ದೇವಿಯರು, ಆರನೆಯದರಲ್ಲಿ ಜ್ಯೋತಿಷೀ ದೇವಾಂಗನೆಯರು, ಏಳನೆಯದರಲ್ಲಿ ವ್ಯಂತರ ದೇವಗಳ ದೇವಿಯರು, ಎಂಟನೆಯದರಲ್ಲಿ ಭವನವಾಸೀ ದೇವಿಯರು, ಒಂಭತ್ತನೆಯ ಸಭೆಯಲ್ಲಿ ಮುನಿಗಳು, ಹತ್ತನೆಯ ಸಭೆಯಲ್ಲಿ ಆರ್ಯಿಕೆಯರು ಮತ್ತು ಸಮಸ್ತ ಸ್ತ್ರೀಯರು, ಹನ್ನೊಂದನೆಯದರಲ್ಲಿ ಸರ್ವ ಪುರುಷರು, ಹನ್ನೆರಡನೆಯ ಸಭೆಯಲ್ಲಿ ಸರ್ವ ಜಾತಿಯ ಸಂಜ್ಞೀ ಪಂಚೇಂದ್ರಿಯ ತಿರ್ಯಂಚಗಳಿರುತ್ತವೆ.

ಇವು ಹನ್ನೆರಡು ಸಭೆಗಳಿಂದ ಸಹಿತರಾಗಿ ಭಗವಂತರು ಮೋಕ್ಷ ಮಾರ್ಗವನ್ನು ಪ್ರಕಟ ಪಡಿಸುತ್ತ ಜಗತ್ತಿನ ಜೀವರುಗಳ ಪುಣ್ಯೋದಯದಿಂದ ಅವರುಗಳ ಕಲ್ಯಾಣಾರ್ಥವಾಗಿ ಸರ್ವತ್ರ ವಿಹಾರ ಮಾಡುತ್ತ-ಮಾಡುತ್ತ ಅನುಕ್ರಮದಿಂದ ಕೈಲಾಸಗಿರಿ ಮೇಲೆ ಬರುತ್ತಾರೆ. ಭಗವಂತರ ನಿರ್ವಾಣವಾಗುವಲ್ಲಿ ಹದಿನಾಲ್ಕು ದಿವಸ ಶೇಷವಿರುವಾಗ ಭರತ ಚಕ್ರವರ್ತಿ ಮೊದಲಾಗಿ ಎಂಟು ಮಹಾನ ದೊರೆಗಳಿಗೆ ಶುಭ ಸ್ವಪ್ನಗಳು ಬರುತ್ತವೆ. ಅವು ಈ ಪ್ರಕಾರವಿವೆ-

೧. ಯಾವ ದಿವಸ ಭಗವಂತರ ಯೋಗ ನಿರೋಧವಾಯಿತು. ಆ ದಿವಸ ರಾತ್ರಿ ಭರತೇಶ್ವರನಿಗೆ ಸುಮೇರು ಪರ್ವತವು ಎತ್ತರವಾಗಿ ಸಿದ್ಧಕ್ಷೇತ್ರಕ್ಕೆ ಹೋಗಿ ತಾಗಿದಂತೆ ಸ್ವಪ್ನವು ಬಂತು.

೨. ಭರತ ಚಕ್ರವರ್ತಿಯ ಪುತ್ರ ಅರ್ಕಕೀರ್ತಿಗೆ ಸ್ವರ್ಗಲೋಕದ ಶಿಖರದಿಂದ ಬಂದಿರುವ ಒಂದು ಮಹಾನ ಔಷಧಿಯ ವೃಕ್ಷವು ಜಗತ್ತಿನ ಜೀವರುಗಳ ಜನ್ಮ-ಮರಣದ ದುಃಖ ನಾಶಮಾಡಿ, ಈಗ ಲೋಕದ ಶಿಖರದ ಮೇಲೇರಿ ಹೋಗುವ ಸಲುವಾಗಿ ಉದ್ಯಮಶೀಲವಾಗಿರುವಂತೆ ಸ್ವಪ್ನ ಬಂತು.

೩. ಭರತ ಚಕ್ರವರ್ತಿಯ ಗೃಹಪತಿ ರತ್ನನಿಗೆ ಊರ್ಧ್ವಲೋಕದಿಂದ ಬಂದಿರುವ ಒಂದು ಕಲ್ಪವೃಕ್ಷವು ಜೀವರುಗಳಿಗೆ ಮನೋವಾಂಛಿತ ಫಲನೀಡಿ ನಂತರ ಸ್ವರ್ಗಲೋಕದ ಶಿಖರದ ಮೇಲೆ ಹೋಗುವಂಥ ಸ್ವಪ್ನ ಬಂತು.

೪. ಚಕ್ರವರ್ತಿಯ ಮಹಾಮಂತ್ರಿಗೆ ಜನರ ಭಾಗ್ಯದಿಂದ ಬಂದಿರುವ ರತ್ನದ್ವೀಪವೊಂದು ರತ್ನಗಳನ್ನು ತಗೆದುಕೊಳ್ಳುವ ಇಚ್ಛೆಯುಳ್ಳ ಜೀವರುಗಳಿಗೆ ಅನೇಕ ರತ್ನಗಳನ್ನು ನೀಡಿ ನಂತರ ಊರ್ಧ್ವಲೋಕಕ್ಕೆ ಗಮನ ಮಾಡುವಂಥ ಸ್ವಪ್ನವು ಕಂಡು ಬರುತ್ತದೆ.

೫. ಭರತೇಶ್ವರನ ಸೇನಾಪತಿಗೆ-ಅನಂತ ವೀರ್ಯದಧಾರಕ ಅದ್ಭುತ ಪರಾಕ್ರಮೀ ಮೃಗರಾಜವೊಂದು ಕೈಲಾಸ ಪರ್ವತರೂಪದ ವಜ್ರಪಂಜರವನ್ನು ಭೇದಿಸಿ ಮೇಲಕ್ಕೆ ಹಾರುವ ಸಲುವಾಗಿ ಉದ್ಯಮ ಮಾಡುತ್ತಿರುವ ಸ್ವಪ್ನವು ಬರುತ್ತದೆ.

೬. ಜಯಕುಮಾರನ ಪುತ್ರ ಅನಂತವೀರ್ಯನಿಗೆ-ಅನಂತ ಕಲೆಯ ಧಾರಕನಾದ ಅದ್ಭುತ ಚಂದಿರನು ಜಗತ್ತಿನಲ್ಲಿ ಉದ್ಯೋತವನ್ನುಂಟು ಮಾಡಿ ತಾರಾಮಂಡಲ ಸಹಿತ ಊರ್ಧ್ವಲೋಕಕ್ಕೆ ಹೋಗುವ ಸಲುವಾಗಿ ಉದ್ಯಮಿಯಾಗಿರುವಂತೆ ಸ್ವಪ್ನವು ಬರುತ್ತದೆ.

೭. ಭರತಚಕ್ರಿಯ ಪಟ್ಟದರಸಿ ಸುಭದ್ರೆಗೆ - ವೃಷಭದೇವರ ಅರಸಿಯರಾದ ಯಶಸ್ವತಿ ಮತ್ತು ಸುನಂದೆ ಹಾಗೂ ಇಂದ್ರನ ಪಟ್ಟರಾಣಿ ಶಚಿದೇವಿ - ಇವರು ಮೂವರು ಕುಳಿತುಕೊಂಡು ಶೋಕ ಮಾಡುತ್ತಿರುವಂತೆ ಸ್ವಪ್ನವು ಕಂಡು ಬರುತ್ತದೆ.

೮. ಕಾಶೀ ದೇಶದ ದೊರೆ ಚಿತ್ರಾಂಗದತ್ತನಿಗೆ - ಅದ್ಭುತ ತೇಜಸ್ಸನ್ನು ಧಾರಣ ಮಾಡಿರುವ ಸೂರ್ಯನು ಪೃಥ್ವಿಯನ್ನು ಬೆಳಗಿ ಊರ್ಧ್ವಲೋಕಕ್ಕೆ ಹೋಗಲು ಬಯಸುತ್ತಿರುವಂತೆ ಸ್ವಪ್ನವು ಕಂಡು ಬರುತ್ತದೆ.

ಈ ಪ್ರಕಾರ ಆದಿನಾಥ ಸ್ವಾಮಿಯ ನಿರ್ವಾಣ ಸೂಚಕವಾದ ಇವು ಎಂಟು ಸ್ವಪ್ನಗಳು ಎಂಟು ಪುರುಷರಿಗೆ ಬಂದವು. ಈ ಸ್ವಪ್ನಗಳ ಸ್ಮರಣೆ-ಪಠನೆ ಮಾಡುವುದರಿಂದ ಭವ್ಯ ಜೀವರುಗಳ ಕಲ್ಯಾಣವಾಗುತ್ತದೆ. ಶ್ರೀ ಆದಿದೇವರು ಪೃಥ್ವಿಯ ಆದಿನಾಯಕರಾಗಿದ್ದಾರೆ. ಇವರಿಂದ ಧರ್ಮದ ಮರ್ಯಾದೆಯು ಪುನರಾರಂಭವಾಯಿತು ಅದರಿಂದ ಈ ಭಗವಂತರು ಸಂಪೂರ್ಣ ಜಗತ್ತಿನ ನಾಯಕರಿದ್ದಾರೆ.

ನಾಯಕರು-ದೇಶನಾಯಕ, ಮನೆನಾಯಕ ಮತ್ತು ಮನನಾಯಕರೆಂದು ಮೂರು ಪ್ರಕಾರದವರಿರುತ್ತಾರೆ.

೧. **ದೇಶನಾಯಕ -** ದೇಶದ ನಾಯಕರು ದೊರೆಗಳಿರುತ್ತಾರೆ. ದೇಶದ ನಾಯಕರು ಧರ್ಮಾತ್ಮರಾಗಿದ್ದರೆ ದೇಶದ ಜೀವರುಗಳನ್ನು ಧರ್ಮಮಾರ್ಗದಲ್ಲಿ ತೊಡಗಿಸಿ ಧರ್ಮಾತ್ಮರನ್ನಾಗಿ ಮಾಡುತ್ತಾರೆ. ದೇಶದಲ್ಲಿರುವ ದಾನ, ಪೂಜೆ, ಶೀಲ, ಸಂಯಮ, ತಪಸ್ಸನ್ನು ಧಾರಣ ಮಾಡುವಂಥ ಧರ್ಮಾತ್ಮರ ರಕ್ಷಣೆ ಮಾಡುತ್ತಾನೆ. ತನ್ನ ದೇಶದಲ್ಲಿರುವ ಪಾಪೀ, ಅನ್ಯಾಯಿ, ಕಳ್ಳ, ದುರಾಚಾರೀ ಜೀವರುಗಳಿಗೆ ದಂಡನೆ ನೀಡುವಂಥ ದೇಶನಾಯಕನು ಧರ್ಮಾತ್ಮನೆನಿಸುತ್ತಾನೆ.

ಪಾಪೀ ದೇಶನಾಯಕನು ತನ್ನ ದೇಶದಲ್ಲಿ ಪಾಪದ ವಿಸ್ತಾರ ಮಾಡುತ್ತಾನೆ. ಚೋರ, ಚಾಡಿಖೋರ, ಅನ್ಯಾಯ ಮಾರ್ಗದಲ್ಲಿ ನಡೆಯುವಂಥವರ ರಕ್ಷಣೆ ಮಾಡುತ್ತಾನೆ. ಆ ದೇಶದಲ್ಲಿರುವ ಒಳ್ಳೆಯ ಮಾರ್ಗವಲಂಬೀ ಸಾಧು ಪುರುಷರಿಗೆ ಕಷ್ಟವಾಗುತ್ತದೆ.

ಈ ಪ್ರಕಾರ ದೇಶನಾಯಕನು ಎಂಥವನಿರುತ್ತಾನೆ, ಅದೇ ಪ್ರಕಾರದ ಪದ್ಧತಿಯು ಆ ದೇಶದಲ್ಲಿ ಪ್ರಗಟವಾಗುತ್ತದೆ. ಒಂದುವೇಳೆ ದೇಶನಾಯಕನು ಪಾಪೀಯಾಗಿ ಪಾಪದ ಬಂಧ ಮಾಡಿಕೊಳ್ಳುತ್ತಿದ್ದರೆ ಅವನದಂತೂ ಅವನಿಗೆ ಬಿಟ್ಟಿದ್ದು ಆದರೆ ದೇಶದಲ್ಲಿ ಅವನು ಬಹಳಷ್ಟು ಧಿಕ್ಕರಿಸಲ್ಪಡುತ್ತಾನೆ.

೨. ಮನೆಯಲ್ಲಿ ಸಂಪೂರ್ಣ ಕುಟುಂಬದ ರಕ್ಷಕ, ಎಲ್ಲರಿಗೂ ಆಹಾರ, ವಸ್ತ್ರಗಳನ್ನಿತ್ತು ಎಲ್ಲರ ರಕ್ಷಣೆ ಮಾಡುವಂಥವನು ಮನೆಯ ನಾಯಕನೆನಿಸುತ್ತಾನೆ. ಧರ್ಮಾತ್ಮಾ ಗೃಹನಾಯಕನು ಸಮಸ್ತ ಗೃಹವನ್ನು ಧರ್ಮ ಮಾರ್ಗದಲ್ಲಿ ತೊಡಗಿಸಿ, ಎಲ್ಲರ ಒಳಿತು ಮಾಡುತ್ತಾನೆ. ಮನೆಯ ನಾಯಕನು ಪಾಪಿಯಾದ ಮೇಲೆ ಮನೆಯ ಅನ್ಯ ಸದಸ್ಯರೂ ಪಾಪರೂಪದ ಪ್ರವೃತ್ತಿ ಮಾಡತೊಡಗುತ್ತಾರೆ.

೩. ಮನೆಯ ಯಜಮಾನನು ಪಾಪಿಯಾಗಿದ್ದರೆ ಅದರ ಫಲವನ್ನಂತೂ ಅವನೇ ಭೋಗಿಸುತ್ತಾನೆ. ಆದರೆ ಮನದ ನಾಯಕನು ಪ್ರತಿಯೊಬ್ಬ ಆತ್ಮನಿದ್ದಾನೆ. ಆತ್ಮನು ಒಳ್ಳೆಯ ಗತಿಗೆ ಹೋಗುವಂಥವನಿದ್ದರೆ ಅವನು ಯಾವಾಗಲೂ ತನ್ನ ಮನಸ್ಸನ್ನು ಧರ್ಮರೂಪವನ್ನಾಗಿ ಇಟ್ಟುಕೊಳ್ಳುತ್ತಾನೆ ಮತ್ತು ಯಾವ ಆತ್ಮನು ಪಾಪಿಯಾಗಿರುತ್ತಾನೆ ಅವನು ತನ್ನ ಮನಸ್ಸನ್ನು ಆರ್ತ-ರೌದ್ರರೂಪವಾಗಿಟ್ಟುಕೊಂಡು, ಪಾಪದ ಬಂಧ ಮಾಡಿಕೊಂಡು ಪರಭವ ಕೆಡಿಸಿಕೊಳ್ಳುತ್ತಾನೆ.

ಈ ಪ್ರಕಾರ ನಾಯಕನ ಮೂರು ಭೇದಗಳಿವೆ. ದೇಶನಾಯಕ ಮತ್ತು ಗೃಹನಾಯಕನಂತೂ ತಮ್ಮ-ತಮ್ಮ ಪುಣ್ಯದ ಅನುಸಾರ ಆಗುತ್ತಾರೆ. ಆದರೆ ಈ ಜೀವನು ಯಾವಾಗಲೂ ಮನನಾಯಕನಿದ್ದಾನೆ. ತಮ್ಮ ಮನಸ್ಸನ್ನು ಸದಾಧರ್ಮರೂಪವಾಗಿಟ್ಟುಕೊಳ್ಳುವುದು ಯೋಗ್ಯವಿದೆ.

ಅಣುವ್ರತಿ ಶ್ರಾವಕನ ಭೇದಗಳು ೧. ಪಾಕ್ಷಿಕ, ೨. ಸಾಧಕ ಮತ್ತು ೩. ನೈಷ್ಠಿಕವೆಂದು ಮೂರು ಇವೆ.

೧. **ಪಾಕ್ಷಿಕ ಶ್ರಾವಕ -** ಧರ್ಮಾತ್ಮಾ, ಮಹಾಬಲಶಾಲಿ, ಧರ್ಮದ ಹಾಗೂ ಧರ್ಮಾತ್ಮರ ರಕ್ಷಣೆ ಮಾಡುವಂಥ ಯಾವ ದೊರೆ ಮೊದಲಾದವರಿದ್ದಾರೆ, ಅವರ ರಾಜ್ಯದಲ್ಲಿ ಧರ್ಮಾತ್ಮಾ ಜೀವರುಗಳನ್ನು ಯಾರೂ ಪೀಡಿಸುವ ಸಾಧ್ಯತೆಯಿಲ್ಲ; ಆ ಧರ್ಮಾತ್ಮನು, ಧರ್ಮದ ಪಕ್ಷವಹಿಸುವಂಥವನಿದ್ದಾನೆ ಅವನನ್ನು ಪಾಕ್ಷಿಕ ಶ್ರಾವಕನೆನ್ನುತ್ತಾರೆ. ಎಂದರೆ - ತೀರ್ಥಂಕರ, ಚಕ್ರವರ್ತಿ, ಅರ್ಧಚಕ್ರಿ, ಕಾಮದೇವ, ಪ್ರತಿಚಕ್ರಿ, ಬಲಭದ್ರ, ಮಹಾಮಂಡಲೇಶ್ವರ, ಮಂಡಲೇಶ್ವರ ಇತ್ಯಾದಿ ಪೃಥ್ವಿಯ ಅಧಿಪತಿ, ದಯೆಯ ಸಾಕಾರಮೂರ್ತಿ, ನ್ಯಾಯಮಾರ್ಗಿ, ಮಹಾನ ದೊರೆಗಳ ಭಯದಿಂದ ಯಾವ ಕ್ರೂರ ಜೀವನೂ ಧರ್ಮದ ಸಲುವಾಗಿ ಸಮರ್ಪಿತ ಧರ್ಮಾತ್ಮಾ ಜೀವರುಗಳನ್ನು ಪೀಡಿಸುವ ಸಾಧ್ಯತೆಯಿಲ್ಲ-ಮುನಿ-ಶ್ರಾವಕರನ್ನು ಯಾವ ದುಷ್ಟನೂ ಪೀಡಿಸುವ ಸಾಧ್ಯತೆಯಿಲ್ಲ. ವನದಲ್ಲಿರುವ ಚೈತ್ಯಾಲಯಗಳ ಅವಿನಯವನ್ನು ಕೂಡ ಯಾರೂ ಮಾಡುವ ಸಾಧ್ಯತೆಯಿಲ್ಲ, ಅಂಥದು ಅವರುಗಳ ಪ್ರಭಾವವಿರುತ್ತದೆ. ಒಂದುವೇಳೆ ಯಾವನೋ ಕುವಾದಿಯು, ಅಸತ್ಯಭಾಷಿಯು ನಯ-ದೃಷ್ಟಾಂತವನ್ನಿತ್ತು ಸತ್ಯಧರ್ಮದಿಂದ ವಿಪರೀತವಾದ ಮಿಥ್ಯಾಧರ್ಮದ ಪ್ರವೃತ್ತಿ ಮಾಡಬಯಸುತ್ತಿದ್ದರೆ ಯಾವನು ತಮ್ಮ ಜ್ಞಾನದ

ಪ್ರಕಾಶದಿಂದ, ಬುದ್ಧಿಯ ಬಲದಿಂದ ನ್ಯಾಯಮಾರ್ಗಪೂರ್ವಕ, ಜಗತ್ತಿನ ಸಮಸ್ತ ಜೀವಗಳ ಕಲ್ಯಾಣದ ಸಲುವಾಗಿ ಕುಧರ್ಮವನ್ನು ಮೂಲದಿಂದ ಕಿತ್ತು ಎಸೆದು ಸುಧರ್ಮದ ಪ್ರವೃತ್ತಿ ನಡೆಸುತ್ತಾನೆ, ಅವನು ಪಾಕ್ಷಿಕ ಶ್ರಾವಕನಿದ್ದಾನೆ, ಅವನ ರಾಜ್ಯದಲ್ಲಿ ಪಾಪಗಳು ಬೆಳೆದು ಬರುವುದಿಲ್ಲ.

**೨. ಸಾಧಕ ಶ್ರಾವಕ -** ದೀರ್ಘಕಾಲದಿಂದ ಧರ್ಮಸಾಧನೆಯಲ್ಲಿ ರತನೂ, ಇಂದ್ರಿಯ ಭೋಗಗಳಿಂದ ವಿರಕ್ತನೂ, ಜೀವನದಿಂದ ನಿಸ್ಪೃಹನಾದ ಯಾವ ಧರ್ಮಾತ್ಮಾ ಶ್ರಾವಕನಿದ್ದಾನೆ ಅವನು ಆಯುಕರ್ಮದ ಕೊನೆ ಸಮೀಪಿಸಿರುವುದನ್ನು ತಿಳಿದು, ಮೋಕ್ಷದ ಅಭಿಲಾಷೆಯಿಂದ ಪರಭವದ ಸುಧಾರಣೆಯ ಸಲುವಾಗಿ ಎಲ್ಲ ಜೀವಗಳ ಕುರಿತು ಕ್ಷಮಾಭಾವಧಾರಣ ಮಾಡಿ ಮನೆ, ಧನ, ಧಾನ್ಯ, ಕುಟುಂಬಾದಿ ಸ್ವಜನ ಪರಜನರ ಕುರಿತಾಗಿ ಇರುವಂಥ ಮೋಹ-ಮಮತೆಯ ಭಾವವನ್ನು ಬಿಟ್ಟುಕೊಟ್ಟು, ತನ್ನ ದೇಹದ ಮಮತೆಯನ್ನೂ ತ್ಯಜಿಸಿ, ನಾಲ್ಕು ಪ್ರಕಾರದ ಆಹಾರಗಳ ತ್ಯಾಗ ಮಾಡಿ ಪಂಚಪರಮೇಷ್ಠಿಗಳ ಸ್ಮರಣೆ ಮಾಡುತ್ತ, ತತ್ತ್ವಗಳ ವಿಚಾರಪೂರ್ವಕ ಧರ್ಮಧ್ಯಾನಸಹಿತ ಸಂನ್ಯಾಸ ತಗೆದುಕೊಂಡು ಯತಿ-ಋಷಿಯ ಸಮಾನ ಸಾಧನೆ ಮಾಡುತ್ತಾನೆ ಅವನು ಸಾಧಕ ಜಾತಿಯ ಶ್ರಾವಕನಿದ್ದಾನೆ.

**೩. ನೈಷ್ಠಿಕ ಶ್ರಾವಕ -** ಅವನ ನಿಮ್ನಲಿಖಿತ-ಹನ್ನೊಂದು ಭೇದಗಳಿವೆ-

**ದಂಸಣ ವಯ ಸಾಮಾಯೋ ಪೋಸಯ, ಸಚಿತ್ತ ರಯಣ ಭಖ ತ್ಯಾಗೋ ।**
**ಬಂಭಾರಂಭ ಹೇಯ ಪರಿಗ್ಗಹ ಅಣಮತ್ತ ಉದ್ದಿಟ್ಠ ತ್ಯಾಜ ಸಾಗಾರೋ ॥೧೩೭॥**

**ಗಾಥಾರ್ಥ :-** ದರ್ಶನ, ವ್ರತ, ಸಾಮಾಯಿಕ, ಪ್ರೋಷಧ, ಸಚಿತ್ತ ಮತ್ತು ರಾತ್ರಿ ಭೋಜನ ತ್ಯಾಗ; ಬ್ರಹ್ಮಚರ್ಯ, ಆರಂಭತ್ಯಾಗ, ಪರಿಗ್ರಹ ತ್ಯಾಗ, ಅನುಮತಿತ್ಯಾಗ, ಉದ್ದಿಷ್ಟ ತ್ಯಾಗ - ಇವು ಹನ್ನೊಂದು ಭೇದಗಳು ನೈಷ್ಠಿಕ ಶ್ರಾವಕನವಿವೆ.

**ಭಾವಾರ್ಥ :-** ಇವು ಹನ್ನೊಂದು ಪ್ರಕಾರದ ಪ್ರತಿಜ್ಞೆ (ಪ್ರತಿಮೆ-ನೆಲೆ)ಗಳು ಪಂಚಮ ಗುಣಸ್ಥಾನವರ್ತಿ ನೈಷ್ಠಿಕ ಶ್ರಾವಕನವಿವೆ. ಯಾರಿಗೆ ಸಮ್ಯಕ್ತ್ವದ ಇಪ್ಪತ್ತೈದು ದೋಷ ತಗಲುವುದಿಲ್ಲ ಹಾಗೂ ಸಪ್ತ ವ್ಯಸನಗಳ ತ್ಯಾಗ, ಪಂಚ ಉದುಂಬರ ಮತ್ತು ಮೂರು ಮಕಾರ - ಹೀಗೆ ಎಂಟರ ತ್ಯಾಗರೂಪ ಅಷ್ಟಮೂಲಗುಣ ಸಂಬಂಧದ ಅತಿಚಾರ ರಹಿತ ಶುದ್ಧವ್ರತ ಸಂಪನ್ನತೆಯಿದೆ ಅವನು ಪ್ರಥಮ ದರ್ಶನ ಪ್ರತಿಮಾಧಾರಕ ಎಂದರೆ ದರ್ಶನ ನೆಲೆಯ ಧಾರಕನಿದ್ದಾನೆ. ಅದರ ಕುರಿತಾದ ಅತಿಚಾರಗಳು ಹೀಗಿವೆ-

ಸಮ್ಯಕ್ತ್ವದಲ್ಲಿ ತಗಲುವಂಥ ಎಂಟು ದೋಷ, ಎಂಟು ಮದರೂಪ ದೋಷ ಆರು ಅನಾಯತನ ಮತ್ತು ಮೂರು ಮೂಢತೆ - ಇವು ಇಪ್ಪತ್ತೈದರ ವಿದ್ಯಮಾನತೆಯಲ್ಲಿ ಸಮ್ಯಕ್ತ್ವವು ಮಲಿನವಾಗುತ್ತದೆ. ಇವುಗಳ ಸ್ವರೂಪವನ್ನು ಮೊದಲು ಹೇಳಿ ಬಂದಿದ್ದೇವೆ.

ಆತ್ಮನ ಪರಿಣಾಮಗಳು ಯಾವುದರಲ್ಲಿ ಅತ್ಯಧಿಕ ಏಕಾಗ್ರವಾಗಿ ಮಗ್ನವಾಗುತ್ತವೆ ಅದು ವ್ಯಸನವಿದೆ. ಜೂಜು, ಮಾಂಸಭಕ್ಷಣೆ, ಮದ್ಯಪಾನ, ವೇಶ್ಯಾಗಮನ, ಬೇಟೆ, ಕಳವು ಮತ್ತು ಪರಸ್ತ್ರೀ ಸೇವನೆ - ಇವು ಏಳು ವ್ಯಸನಗಳಿವೆ. ಇವುಗಳೊಳಗಿನ ಜೂಜು, ಮಾಂಸಭಕ್ಷಣೆ, ಮದ್ಯಪಾನ, ಕಳವು ಮತ್ತು ಬೇಟೆ - ಇವು ಐದು ವ್ಯಸನಗಳ ಪಾಪವಂತೂ ಲೋಭ ಕಷಾಯದ ಕಾರಣ ಆಗುತ್ತದೆ ಮತ್ತು ವೇಶ್ಯಾಗಮನ ಹಾಗೂ ಪರಸ್ತ್ರೀ ಸೇವನೆ - ಇವೆರಡು ವ್ಯಸನಗಳ ಪಾಪವು ಕಾಮ ಕಷಾಯದ ಕಾರಣ ಆಗುತ್ತದೆ. ಈ ವ್ಯಸನಗಳು ಕಷಾಯಗಳ ಕಾರಣದಿಂದ ಆಗುತ್ತವೆ; ಅದಕ್ಕಾಗಿ ಕಷಾಯಗಳ ವರ್ಣನೆ ಮಾಡುತ್ತಾರೆ.

ಎಲೈ ಭವ್ಯನೇ ! ಲೋಭ ಮತ್ತು ಕಾಮ - ಇವೆರಡು ಕಷಾಯಗಳನ್ನು ಪಾಪಗಳ ಬೀಜವೆಂದು ತಿಳಿಯುವುದು. ಜಗತ್ತಿನಲ್ಲಿ ಎಷ್ಟು ಪಾಪಗಳಿವೆ, ಅವು ಈ ಎರಡು ಕಷಾಯಗಳ ಕಾರಣದಿಂದ ಆಗುತ್ತವೆಯೆಂದು

ತಿಳಿಯಬೇಕು. ಈ ಲೋಭ ಮತ್ತು ಕಾಮದ ವಶೀಭೂತವಾಗಿ ಜೀವಗಳು-ತಂದೆ ಮಗನನ್ನು ಸಾಯಿಸುತ್ತಾನೆ ಮಗನು ತಂದೆಯನ್ನು ಸಾಯಿಸುತ್ತಾನೆ, ಸೋದರನು ಸೋದರನನ್ನು ಸಾಯಿಸುತ್ತಾನೆ - ಈ ಪ್ರಕಾರ ಸಮಸ್ತ ದುಃಖ, ಸಂಕಟ ಮತ್ತು ಅಪಯಶದ ಮೂಲ ಈ ಕಷಾಯಗಳೇ ಇವೆ.

ನೋಡಿರಿ, ಕಾಮದ ಮಾಹಾತ್ಮ್ಯದಿಂದ ರಾವಣನು ಮರಣಕ್ಕೀಡಾದನು. ಲೋಭದ ಕಾರಣದಿಂದ ಭರತ ಚಕ್ರವರ್ತಿಯ ಮಾನಭಂಗವಾಯಿತು-ಇತ್ಯಾದಿ ಅನೇಕ ಉದಾಹರಣೆಗಳಿಂದ ಇವುಗಳ ಸ್ವರೂಪ ತಿಳಿಯುವುದು ಸಮಸ್ತ ಪಾಪಗಳು ಕಾಮ ಮತ್ತು ಲೋಭದ ಕಾರಣದಿಂದಲೇ ಆಗುತ್ತವೆ. ಹೀಗೆ ಈ ಕಾಮ ಮತ್ತು ಲೋಭದ ಕಾರಣ ಉತ್ಪನ್ನವಾಗುವ ಸಪ್ತ ವ್ಯಸನಗಳನ್ನು ಕೂಡ ಮಹಾಪಾಪದ ಮೂಲವೆಂದು ತಿಳಿಯುವುದು.

ಅತ್ತಿ , ಆಲ, ಬಸರಿ, ಗೋರಿ ಮತ್ತು ಅರಳೆ - ಇವು ಐದು ಉದುಂಬರ ಫಲವಿವೆ. ಮಧು-ಮಾಂಸ-ಮದ್ಯ ಇವು ಮೂರು ಮಕಾರವಿವೆ, ಇವು ಎಂಟರ ಅತಿಚಾರವು ಸಪ್ತವ್ಯಸನಗಳಲ್ಲಿ ಗರ್ಭಿತವಿದ್ದು ಅವುಗಳ ಕಥನವನ್ನು ಮುಂದೆ ಮಾಡಲಾಗುವುದು.

೧. ಜೂಜು ವ್ಯಸನದ ಅತಿಚಾರ - ಚದುರಂಗದಾಟವು ಅಸತ್ಯದ ಮಂದಿರವಿದೆ, ಲಜ್ಜಾರಹಿತ ವಚನವನ್ನಾಡುವಂಥದು ದ್ಯೂತ ಕ್ರೀಡೆಯಿದೆ. ಚದುರಂಗದ ಆಟದಲ್ಲಿ ''ದೊರೆಯನ್ನು ಹೊಡೆ, ಆನೆಯನ್ನು ಸಾಯಿಸು, ಕುದುರೆಯನ್ನು ಸಾಯಿಸು, ಒಂಟೆಯನ್ನು ಸಾಯಿಸು, ಸೇವಕನನ್ನು ಸಾಯಿಸು'' ಇತ್ಯಾದಿ ರೂಪದಲ್ಲಿ ಪಾಪಮಯ ವಚನ, ಮನಸ್ಸಿನ ವಿಕಲ್ಪಗಳಿರುತ್ತವೆ. ಹೀಗೆ ಮನ-ವಚನ-ಕಾಯದಿಂದ ಪಂಚೇಂದ್ರಿಯಗಳ ಘಾತರೂಪ ಭಾವಚೇಷ್ಟೆ ಮಾಡುವಂಥ ಚದುರಂಗವು ಜೂಜು ಇದೆ. ಇಸ್ಪೀಟು ಆಟವು ದೀರ್ಘ ದ್ಯೂತದ ಕಾರಣವಿದೆ. ಜೂಜಾಟವು ರಾಜ್ಯವನ್ನೇ ಕಳೆದುಕೊಳ್ಳುವಂಥ ಪ್ರಸಂಗ ತರುವಂಥದ್ದಿದೆ. ಮಹಾಮೋಸದಿಂದ ಕೂಡಿದ ಈ ಆಟದಲ್ಲಿ ಕುಭಾವನೆಯಿರುತ್ತದೆ.

ಸ್ವಯಂ ತಾನೇ ಜಿದ್ದು ಕಟ್ಟಿ ಆಡುವಂಥ ಹಾಗೂ ಪ್ರತ್ಯಕ್ಷ ನಿಂದೆಯ ಕಾರಣಭೂತ ಗುದ್ದುವ ಆಟವೂ ಜೂಜು ಇದೆ. ಪರಸ್ಪರರಲ್ಲಿ ಸ್ಪರ್ಧೆ ಹಚ್ಚಿ ಆನಂದಿಸುವುದೂ ಜೂಜು ಇದೆ. ಪಣತೊಟ್ಟು ಆಡುವ ಆಟದಲ್ಲಿನ ಸೋಲು ಗೆಲವು, ನ್ಯೂನತೆ - ಅಧಿಕತೆಯ ಅನುಭವವೂ ಜೂಜು ಇದೆ. ಕವಡೆ ಅಥವಾ ನಾಣ್ಯವನ್ನು ಆಕಾಶಕ್ಕೆ ಹಾರಿಸಿ ಚಿತ್ತ-ಪಟ್ಟು ಎನ್ನುವ ಸೋಲು-ಗೆಲುವಿನ ನಿರ್ಣಯ ಮಾಡುವುದು ಕೂಡು ಜೂಜು ಇದೆ. ಚಿಕ್ಕ ಚಿಕ್ಕ, ಹರಳುಗಳನ್ನು ಹಾರಿಸಿ ಆಡುವುದು, ಹದಿನಾರು ಹರಳು (ಕಲ್ಲು ತುಂಡು)ಗಳಿಂದ ರಾಜ-ರಾಣಿಯ ಆಟವಾಡುವುದೂ ಜೂಜು ಇದೆ.

ಪಣ ತೊಟ್ಟು ಮುಷ್ಠಿಯಿಂದ ತೆಂಗಿನಕಾಯಿ ಒಡೆಯುವುದು, ಕೋಲು-ಕಟ್ಟಿಗೆಯನ್ನು ಕೈಯಿಂದ ಮುರಿಯುವುದು, ಸ್ಪರ್ಧೆಗಿಳಿದು ಪಾಷಾಣಾದಿಗಳ ಭಾರ ಎತ್ತುವುದು, ಚಕ್ರ ಮೊದಲಾದುವನ್ನು ಎತ್ತಿ ಮೇಲೆ ಹಿಡಿಯುವುದು ಬಾವಿ, ವಾಪಿ, ಗೋಡೆ ಮೊದಲಾದವನ್ನು ದಾಟುವುದು, ಬಾವಿಯಲ್ಲಿ ಎತ್ತರದಿಂದ ಜಿಗಿಯುವುದು, ಗೋಡೆಯ ಮೇಲೆ ಹತ್ತಿ ಕೆಳಗೆ ಜಿಗಿಯುವುದು. ಸ್ಪರ್ಧೆಯಲ್ಲಿ ನಡೆಯುವ, ಓಡುವ ಮೊದಲಾದ ಎಲ್ಲವೂ ಸೋಲು-ಗೆಲುವಿನ ಭಾವದಿಂದ ಕೂಡಿರುವಂಥವು ಜೂಜು ಇವೆ. ಇನ್ನೊಬ್ಬರು ಆಡುತ್ತಿರುವುದನ್ನು ನೋಡುವುದೂ ಜೂಜು ಇದೆ.

ದ್ಯೂತ ಕಾರ್ಯಗಳಿಂದ ವ್ಯಾಪಾರ ಮಾಡುವುದು, ಜೂಜಿನ ಸಮಾನವೇ ಪಾಪವಿದೆ. ಅಲ್ಪ ಬೆಲೆಯಿಂದ ದೊರಕುತ್ತಿರುವುದನ್ನು ನೋಡಿ ವಸ್ತುಗಳನ್ನು ಜೂಜಿನ ವ್ಯಸನಿಯಿಂದ ಕೊಂಡುಕೊಳ್ಳುವುದು ಇತ್ಯಾದಿ ಕ್ರಿಯೆಗಳಿಂದ ಜೂಜಿನಂಥ ಪಾಪವೇ ಉತ್ಪನ್ನವಾಗುತ್ತದೆ. ಜೂಜು ಆಡುವಂಥವನ ವಸ್ತುಗಳನ್ನು ಅಡವು ಇಟ್ಟುಕೊಂಡು ಅಧಿಕ ಬಡ್ಡಿ ಗಳಿಸುವುದು ಇತ್ಯಾದಿ ಇನ್ನೂ ಬೇರೆ ಜೂಜಿನ ಪಾಪದ ಉತ್ಪತ್ತಿ ಮಾಡುವಂಥ ಕ್ರಿಯೆಗಳನ್ನು ವಿವೇಕವಂತರು ಬಿಟ್ಟುಬಿಡುವುದು ಯೋಗ್ಯವಿದೆ.

ಜೂಜು ಆಡುವಂಥವರ ಸಂಗತಿಯು ಎಲ್ಲ ಪ್ರಕಾರದಿಂದ ಪಾಪಕಾರಕವಿದೆ. ವಿಷದಿಂದ ಅಥವಾ ಶಸ್ತ್ರದಿಂದ ಘಾತ ಮಾಡಿಕೊಳ್ಳುವುದು ಒಳ್ಳೆಯದಿದೆ, ಸರ್ಪದ ಬಾಯಲ್ಲಿ ಕೈಹಾಕುವುದು ಒಳ್ಳೆಯದಿದೆ; ಆದರೆ ಜೂಜಿನ ಸಂಗತಿಯು ಒಳ್ಳೆಯದಿಲ್ಲ. ಜೂಜಿನ ಸಂಗತಿಯಿಂದ ವಿಶ್ವಾಸವು ನಷ್ಟವಾಗಿ ಹೋಗುತ್ತದೆ. ಧನವು ನಷ್ಟವಾಗಿ ಹೋಗುತ್ತದೆ, ಲೋಕದಲ್ಲಿ ಅನಾದರವಾಗುತ್ತದೆ. ದೊಡ್ಡಸ್ತನ, ಪೂರ್ವಕೃತ ಪುಣ್ಯವು ನಷ್ಟವಾಗಿ ಹೋಗುತ್ತದೆ. ಆದುದರಿಂದ ಎಲೈ ಭವ್ಯನೇ ! ಈ ಜೂಜಿನ ಸಂಗತಿಯು ಒಳ್ಳೆಯದಿಲ್ಲ. ತ್ಯಾಗ ಯೋಗ್ಯವೇ ಇದೆ. ಇದರಲ್ಲಿ ರಮಿಸುವುದರಿಂದ ಜನರು ಕಳ್ಳ-ಜೂಜುಗಾರನೆಂದು ಹೇಳುತ್ತಾರೆ. ಅದಕ್ಕಾಗಿ ಈ ಜೂಜನ್ನು ಪೂರ್ಣತಃ ಅಪಕೀರ್ತಿಯ ಮೂರ್ತಿಯೆಂದು ತಿಳಿದು ಇದರ ನಿವಾರಣೆ ಮಾಡುವುದು ಒಳ್ಳೆಯದಿದೆ. ಹೆಚ್ಚೇನು ಹೇಳುವುದು ? ಸಮಸ್ತ ಪಾಪಗಳ ಗುರುವಾದ ಈ ಜೂಜಿನ ಫಲದಲ್ಲಿ ಆತ್ಮನು ನರಕದ ದುಃಖವನ್ನು ಪಡೆಯುತ್ತಾನೆ.

ವಿವೇಕೀ ಜೂಜಾಗಾರನ **ಸಂದೇಹ –** ಅನ್ಯ ಜೂಜಿನ ಕಾರ್ಯಗಳನ್ನಂತೂ ನಾವು ಕೂಡ ಒಳ್ಳೆಯವಲ್ಲವೆಂದು ಮನ್ನಿಸುತ್ತೇವೆ; ಆದರೆ ಪಗಡೆಯಾಟದಲ್ಲೇನು ಪಾಪವಿದೆ ? ಅದನ್ನೇಕೆ ತಾವು ಜೂಜೆಂದು ಹೇಳಿದಿರಿ ?

**ಸಮಾಧಾನ –** ಎಲೈ ಭವ್ಯನೇ ! ಪಗಡೆಯಾಟವು ಅಸತ್ಯ ವಚನಗಳ ಗಣಿಯಿದೆ. ಅದರಲ್ಲಿ ಲಜ್ಜಾರಹಿತ ವಚನಗಳು ಬಹಳಷ್ಟು ಇರುತ್ತವೆ. ಹೊಡೆ, ಹೊಡೆಯೆಂಬ ಶಬ್ದಗಳೇ ಬಾಯಿಂದ ಬರುತ್ತವೆ. ಚಿತ್ತವು ಕಪಟರೂಪವಿರುತ್ತದೆ. ಪ್ರವೃತ್ತಿಯು ಕಳ್ಳನ ಹಾಗಿರುತ್ತದೆ. ಇತ್ಯಾದಿ ದೊಡ್ಡ ಪಾಪಗಳು ಪಗಡೆಯಾಟದಲ್ಲಿ ಇರುವುದರಿಂದ ಅದು ತ್ಯಾಗಯೋಗ್ಯವಿದೆಯೆಂದು ಹೇಳಿದ್ದಾರೆ.

ಜೂಜುಗಾರನಿಂದ ಪುನಃ **ಸಂದೇಹ –** ಪಗಡೆಯಾಟವನ್ನು ನಾವು ಕೆಡಕೆಂದು ತಿಳಿದೆವು; ಆದರೆ ಚದುರಂಗದಲ್ಲಿ ಯಾವ ಪಾಪವಿದೆ ? ಏಕೆಂದರೆ ಅದರಲ್ಲಿಯಂತೂ ಮೌನಪೂರ್ವಕ, ವಚನವಿಲ್ಲದೇ ಕೇವಲ ನೇತ್ರಗಳಿಂದ ನೋಡುವುದೇ ಇರುತ್ತದೆ. ಅದು ಹೇಗೆ ಪಾಪವಿದೆ ?

**ಸಮಾಧಾನ –** ಚದುರಂಗದಲ್ಲಿ ಪಗಡೆಯಾಟಕ್ಕಿಂತ ಅಧಿಕ ಪಾಪವಿದೆ, ಅದನ್ನು ಆಲಿಸು ! ಅದರಲ್ಲಿ ಪರಿಣತಿ ಮತ್ತು ವಚನಗಳು ಯಾವಾಗಲೂ ರೌದ್ರರೂಪವಿರುತ್ತವೆ. ದೊರೆಯಿಂದ ಮಂತ್ರಿಯು ಸೋತನು, ಆನೆಯಿಂದ ಕುದುರೆ ಸತ್ತು ಹೋಯಿತು - ಇತ್ಯಾದಿ ರೂಪದಲ್ಲಿ ಪಂಚೇಂದ್ರಿಯ ಘಾತಕ ಭಾವಗಳಿರುತ್ತವೆ. ಅವುಗಳನ್ನೇ ಹೊಡೆಯುವ ವಿಕಲ್ಪವಿರುತ್ತದೆ. ಅಂಥ ಭಾವಗಳಿಂದಂತೂ ನರಕದ ಪ್ರಾಪ್ತಿಯಾಗುತ್ತದೆ. ಆದುದರಿಂದ ವಿವೇಕಿಗಳು ಚದುರಂಗದ ತ್ಯಾಗ ಮಾಡುವುದೇ ಯೋಗ್ಯವಿದೆ.

ಯಾವುದೇ ರೀತಿಯ ಜೂಜು ಮನುಷ್ಯನನ್ನು ಚಿಂತೆಗೀಡು ಮಾಡುತ್ತದೆ; ಸೋತರೆ ಜನರು ನಿಂದೆ ಮಾಡುತ್ತಾರೆ. ಜಗತ್ತಿನಲ್ಲಿ ಅಪಕೀರ್ತಿಯಾಗುತ್ತದೆ. ಜೂಜಿನಲ್ಲಿ ಇಡೀ ರಾಜ್ಯವನ್ನೇ ಕಳೆದುಕೊಳ್ಳುವ ಪ್ರಸಂಗ ಬರುತ್ತದೆ. ಆಗ ಅವನ ಚಿಂತೆ ಹಾಗೂ ಪಾಪದ ಮಾತನ್ನಾದರೂ ಎಷ್ಟೆಂದು ಹೇಳಬಹುದಾಗಿದೆ ? ಯಾವನು ಅದರಲ್ಲಿ ಧನವನ್ನು ಕಳೆದುಕೊಳ್ಳುತ್ತಾನೆ. ತನ್ನ ಖಡ್ಗವನ್ನು, ವನ-ತೋಟವನ್ನು ಕಳೆದುಕೊಳ್ಳುತ್ತಾನೆ, ತಂಗಿ, ಪತ್ನಿ, ಸೇವಕ, ಮಸ್ತಕದ ಮೇಲಿರುವ ಮುಕುಟ, ಕೊರಳ ಮಾಲೆ, ವಜ್ರದುಂಗುರ ಇತ್ಯಾದಿ ಮನೆಯ ಸಮಸ್ತ ವ್ಯವಸ್ಥೆಯನ್ನು ಕಳೆದುಕೊಳ್ಳುವಂಥವನ ದುಃಖದ, ಪಾಪದ ಕಥೆಯನ್ನು ಎಲ್ಲಿಯವರೆಗೆ ಹೇಳುವುದು ? ಆದುದರಿಂದ ಕುಗತಿಯ ದುಃಖಗಳಿಂದ ಭಯಗೊಂಡು ಜೂಜಿನ ತ್ಯಾಗ ಮಾಡುವುದೇ ಉಚಿತವಿದೆ.

**ಸಂದೇಹ-**ಅತ್ಯಲ್ಪ ಧನದಿಂದ ಮುಷ್ಠಿ ಗುದ್ದುವ ಆಟವನ್ನು ಆಡಬಹುದಾಗಿದೆ, ಅದರಲ್ಲೇನು ಪಾಪವಿದೆ?

**ಸಮಾಧಾನ -** ಎಲೈ ಭವ್ಯನೇ ! ಮುಷ್ಠಿಯಿಂದ ಗುದ್ದುವ ಆಟವು ಲೌಕಿಕದಲ್ಲಿ ಪುಂಡರ ಆಟವಿದೆ. ಮೊದಲಂತೂ ಯಾರು ಅದನ್ನು ನೋಡುತ್ತಾರೆ ಅವರು ಅವನನ್ನು ಪುಂಡ (ಉಡಾಳ)ನೆಂದು ಹೇಳುತ್ತಾರೆ. ಸೋತ ಮೇಲೆ ಕಳವು ಮಾಡುವ ಉಪಾಯ ಯೋಚಿಸುತ್ತಾನೆ. ಎಲೈ ಭವ್ಯನೇ ! ಇಂಥ ಭಾವಗಳಿಂದ ಮಹಾ

ಪಾಪವಾಗುತ್ತದೆ. ಅಷ್ಟೊಂದು ಪಾಪದ ಹೊರೆ ಹೊತ್ತುಕೊಂಡು ಅಪಕೀರ್ತಿಗೆ ಗುರಿಯಾಗಿ ಆಡುವುದರಲ್ಲಿ ಯಾವ ಹಿರಿಮೆಯಿದೆ ? ವಿಚಾರ ಮಾಡಿ ನೋಡಿದರೆ ಈ ಭವದಲ್ಲಿ ನಿಂದೆ ಮತ್ತು ಪರ ಭವದಲ್ಲಿ ದುರ್ಗತಿಯಾಗುತ್ತದೆ. ಅದಕ್ಕಾಗಿ ಇವುಗಳ ತ್ಯಾಗವೇ ಉಚಿತವಿದೆ.

**ಸಂದೇಹ -** ಜೂಜನ್ನು ಪಾಪಮಯವೆಂದು ತಿಳಿದು ತ್ಯಾಗ ಮಾಡುವೆನು; ಆದರೆ ಬಡ್ಡಿಯ ಸಲುವಾಗಿ ಜೂಜು ಆಡುವಂಥವನಿಗೆ ಸಾಲ ಕೊಡುವುದರಲ್ಲಿ ಯಾವ ಪಾಪವಿದೆ ?

**ಸಮಾಧಾನ -** ಎಲೈ ಭವ್ಯಾತ್ಮನೇ ! ಜೂಜಿನ ಧನವೇ ಮಹಾಪಾಪಕಾರಕವಿದೆ. ಎಂಥ ಪಾಪವು ಜೂಜು ಆಡುವುದರಲ್ಲಿ ಆಗುತ್ತದೆ, ಅಂಥದೇ ಪಾಪವು ಅವನ ಧನ ತಗೆದುಕೊಳ್ಳುವುದರಲ್ಲಿ ಆಗುತ್ತದೆ. ಆದುದರಿಂದ ಮನ-ವಚನ-ಕಾಯದಿಂದ ಅದರ ತ್ಯಾಗ ಮಾಡುವುದೇ ಯೋಗ್ಯವಿದೆ. ಇದನ್ನು ಆಲಿಸಿ ಸಂದೇಹಕಾರನ ಚಿತ್ತವು ಜೂಜನ್ನು ಪಾಪಮಯವೆಂದು ತಿಳಿದು ಸಂದೇಹದಿಂದ ಸುತ್ತುವರೆದು ಭಯಭೀತವಾಯಿತು.

ಪುನಃ **ಸಂದೇಹ -** ಜೂಜನ್ನಂತೂ ಪಾಪವೆಂದು ತಿಳಿದು ಬಿಟ್ಟುಕೊಟ್ಟೆವು. ಆದರೆ ಗೆಲ್ಲುವಂಥವನಿಂದ ಹಣ ತಗೆದುಕೊಳ್ಳುವುದರಲ್ಲಿಯಂತೂ ಪಾಪವಿಲ್ಲ ಅಲ್ಲವೇನು ?

**ಸಮಾಧಾನ -** ಅಯ್ಯಾ ಸೋದರನೇ ! ಇದರಿಂದ ಸ್ವಯಂ ತನಗೆ ಧನ ಕೊಡುವಂಥವರ ವಿಜಯವನ್ನೇ ಅಪೇಕ್ಷಿಸುವುದು ಮತ್ತು ತನಗೆ ಧನ ಕೊಡದಿರುವಂಥವರ ಪರಾಜಯವನ್ನು ಅಪೇಕ್ಷಿಸುವುದಾಗುತ್ತದೆ. ಈ ರೂಪದಿಂದ ಅನ್ಯರ ಜಯಾಪಜಯಗಳ ಪರಿಣಾಮವನ್ನು ಇಟ್ಟುಕೊಳ್ಳುವಂತಾಗುತ್ತದೆ. ಅಲ್ಪ ಲೋಭದ ವಶೀಭೂತನಾಗಿ ಅನ್ಯರ ಕೇಡು ಬಯಸುವಂಥವನನ್ನು ಪಾಪಿಯೆಂದೇ ತಿಳಿಯುವುದು. ಅದಕ್ಕಾಗಿ ಗೆಲ್ಲುವಂಥವನಿಂದ ದ್ರವ್ಯ ತಗೆದುಕೊಳ್ಳುವುದು ಯೋಗ್ಯವಾಗಿಲ್ಲ.

**ಸಂದೇಹ -** ಜೂಜುಗಾರನಿಂದ ಗೆದ್ದ ಧನವನ್ನು ಕೂಡ ತಗೆದುಕೊಳ್ಳದಿರುವುದು ಸರಿಯಿದೆ. ಆದರೆ ನಮ್ಮ ಮನೆಯು ವಿಶಾಲವಾಗಿದೆ ಅದಕ್ಕಾಗಿ ರಾತ್ರಿಯಲ್ಲಿ ಜೂಜುಗಾರರಿಗೆ ಜೂಜು ಆಡುವ ಸಲುವಾಗಿ ಸ್ಥಾನ ಕೊಡುವುದು ಮತ್ತು ಗೆದ್ದ ಮೇಲೆ ಬಾಡಿಗೆಯ ಅನುಸಾರ ಹಣ ತಗೆದುಕೊಳ್ಳುವುದರಲ್ಲಿ ಯಾವ ದೋಷವಿದೆ?

**ಸಮಾಧಾನ -** ಸೋದರನೇ ! ಜೂಜುಗಾರನನ್ನು ತನ್ನ ಮನೆಗೆ ಕರೆಯಿಸಿ ಜೂಜು ಆಡಲು ಅವಕಾಶ ಮಾಡಿಕೊಡುವುದರಲ್ಲಿಯಂತೂ ಪ್ರತ್ಯಕ್ಷ ಪಾಪವಿದೆ. ಅವನ ಸಹಾಯಕನಾಗಿ ಜೂಜು ಆಡಿಸುವವನಂತೂ ಜೂಜಿನ ಸಮಾನ ಪಾಪಕ್ಕೆ ಪ್ರಾಪ್ತನಾಗುತ್ತಾನೆ. ಎಲೈ ಭವ್ಯನೇ ! ಕೇವಲ ಯಾರ ಸಂಗತಿ ಮಾಡುವುದರಿಂದಲೇ ಪಾಪವಾಗುತ್ತದೆ, ಅವರನ್ನು ಮನೆಗೆ ಕರೆತಂದರೆ ಮಂಗಲವೆಲ್ಲಿಂದ ಆಗುವುದು ? ಅದರಿಂದ ಮನೆಗೆ ಕರೆತರುವುದು, ಸಹಾಯ ಮಾಡುವುದು, ಜೂಜು ಆಡಿಸುವುದು ಇದಾವುದೂ ಯೋಗ್ಯವಾಗಿಲ್ಲ.

**ಸಂದೇಹ -** ಸರಿ, ಎಲ್ಲದರಲ್ಲಿಯೂ ಪಾಪವಿದೆಯೆಂಬುದು ತಿಳಿದುಬಂತು; ಆದರೆ ನಮಗೆ ಅದನ್ನು ನೋಡುವ ಅಭಿಲಾಷೆಯಿರುತ್ತದೆ. ಹಾಗಾದರೆ ನೋಡುವುದರಲ್ಲಿಯೂ ಪಾಪವಿದೆಯೇನು ?

**ಸಮಾಧಾನ -** ಸೋದರನೇ ! ನೋಡುವುದರಲ್ಲಿಯೂ ಬಹಳಷ್ಟು ಪಾಪವಿದೆ. ಜೂಜು ಆಡುವವನದಂತೂ ಧನ, ಮನೆ ಎಲ್ಲವೂ ತೊಡಗಿದೆ ಅವನಂತೂ ವ್ಯಸನಿಯಾಗಿ, ಲಜ್ಜೆಯನ್ನು ತೊರೆದು, ಜಗತ್ತಿನ ನಿಂದೆಯ ಗ್ರಹಣ ಮಾಡಿ ಜೂಜು ಆರಂಭಿಸಿದ್ದಾನೆ. ಅವನಿಗಂತೂ ಲೋಭದ ಕಾರಣ ಅದರ ಪಾಪವು ಬಂದೇ ಬರುವುದು. ಆದರೆ ನೋಡುವಂಥವರಿಗೆ ಯಾವ ಲಾಭ-ಹಾನಿಯೂ ಇಲ್ಲ, ಅವರಂತೂ ವ್ಯರ್ಥವಾಗಿಯೇ ನಿಷ್ಪ್ರಯೋಜನ ತಮ್ಮ ಸಮಯವನ್ನು ಪಾಪದಲ್ಲಿ ಕಳೆಯುತ್ತಾರೆ; ಅದರಿಂದ ಅವರಿಗೆ ಅನರ್ಥದಂಡವೆಂಬ ಹೆಸರಿನ ಪಾಪವಾಗುತ್ತದೆ. ಅರ್ಥ ಪಾಪ (ಪ್ರಯೋಜನಭೂತ ಪಾಪ)ಕ್ಕಿಂತ ಅನರ್ಥಪಾಪ (ಅನರ್ಥದಂಡ ನಿಷ್ಪ್ರಯೋಜಕವಾದ ಪಾಪ)ದ

ಫಲವು ವಿಶೇಷ ದುಃಖದಾಯಕವೆಂದು ತಿಳಿಯುವುದು - ಹೀಗೆ ತಿಳಿದು ಜೂಜಾಟವನ್ನು ನೋಡುವುದರದೂ ತ್ಯಾಗ ಮಾಡುವುದು ಉಚಿತವಿದೆ.

ಈ ಪ್ರಕಾರ ಜೂಜು ಆಡುವುದು, ಅದರಲ್ಲಿ ತೊಡಗಿಸುವ ಹಣಕ್ಕೆ ಬಡ್ಡಿ ತಗೆದುಕೊಳ್ಳುವುದು, ಜೂಜು ನೋಡುವುದು ಇತ್ಯಾದಿ ಜೂಜಿಗೆ ಸಂಬಂಧಿಸಿದ ಸಮಸ್ತ ಕಾರ್ಯಗಳು ಮಹಾಪಾಪದ ದಾತೃವಿವೆ. ಎಲೈ ಭವ್ಯನೇ ! ಈ ಜೂಜು ಎಲ್ಲ ಪಾಪಗಳ ದೊರೆಯಿದೆ. ನಿಂದೆ ಅಪಕೀರ್ತಿಯ ಆಗರವಿದೆ. ಇದರಿಂದ ನಿರಾದರವಾಗುತ್ತದೆ. ಯಾವುದೇ ರೂಪದಲ್ಲಿ ದ್ಯೂತಕ್ರೀಡೆಯು ಒಳ್ಳೆಯದಿಲ್ಲ. ಯುಧಿಷ್ಠಿರನೆಂಬ ಪಾಂಡವನು ಈ ಜೂಜು-ದ್ಯೂತಕ್ರೀಡೆಯ ಫಲದಲ್ಲಿ ರಾಜ್ಯವನ್ನು ಕಳೆದುಕೊಂಡನು, ವನವಾಸ ಪಡೆದನು, ಅಪಕೀರ್ತಿಯಾಗುವುದರಿಂದ ದುಃಖಿಯಾದನು. ಜಗತ್ತಿನಲ್ಲಿ ಕೂಡ ಯಾರೂ ಜೂಜುಗಾರನ ಪ್ರಶಂಸೆ ಮಾಡದಿರುವುದನ್ನು ಅಷ್ಟೇ ಏಕೆ ? ನಿಂದೆ ಮಾಡುವುದನ್ನೇ ಪ್ರತ್ಯಕ್ಷ ಕಾಣುತ್ತೇವೆ. ಆದುದರಿಂದ ಎಲೈ ಭವ್ಯನೇ! ನೀನು ನಿನ್ನ ವಿವೇಕದಿಂದ ವಿಚಾರ ಮಾಡಿ ನೋಡು !! ಒಂದುವೇಳೆ ದ್ಯೂತ ಕ್ರೀಡೆಯಿಂದ ಜಗತ್ತಿನಲ್ಲಿ ಕೀರ್ತಿಯಾಗುತ್ತಿದ್ದರೆ, ಪುಣ್ಯವಾಗುತ್ತಿದ್ದರೆ ಮಾಡು, ಅಧಿಕ ಹೇಳುವುದರಿಂದ ಯಾವ ಲಾಭವಿದೆ ? - ಅದನ್ನು ತಕ್ಷಣವೇ ಬಿಟ್ಟುಕೊಡುವುದು ಯೋಗ್ಯವಿದೆಯೆಂದು ತಿಳಿದು ಧರ್ಮಾತ್ಮಾ ಸಮ್ಯಗ್ದೃಷ್ಟಿ ಶ್ರಾವಕರಿಗೆ ಈ ಜೂಜಿನ ವ್ಯಸನವನ್ನು ಅತಿಚಾರಸಹಿತ ತ್ಯಾಗಮಾಡಲು ಯೋಗ್ಯವಿದೆ.

**ಆಮಿಷ ವ್ಯಸನ -** ಎಲೈ ಭವ್ಯನೇ ! ಈ ಆಮಿಷ (ಮಾಂಸ)ವು ಜೀವ ಹಿಂಸೆಯಿಂದ ಉತ್ಪನ್ನವಾಗುತ್ತದೆ ಮತ್ತು ಸತ್ತುಹೋದ ಜೀವಗಳ ಕಲೇವರವಿದೆ. ಮಹಾಗ್ಲಾನಿಯ ಪಿಂಡವಿರುವುದರಿಂದ ಅದನ್ನು ನೋಡುತ್ತಿರುವಂತೆ ಚಿತ್ತವು ಉದಾಸೀನವಾಗುತ್ತದೆ. ಸಪ್ತಧಾತುಗಳ ನಿಷಿದ್ಧ ಮಲವಿದೆ. ತಿನ್ನುವಂಥವನು ಹೇಗೆ ತಿನ್ನುತ್ತಾನೆ ?-ಎಂಬುದರ ಆಶ್ಚರ್ಯವಿದೆ ! ನೋಡು ಭವ್ಯನೇ ! ಕರ್ಣಮಲ, ಮೂಗು-ಬಾಯಿಯ ಮಲವು ತಾಗಿದರೆ ನೀರಿನಿಂದ ಉಜ್ಜಿ ತೊಳೆದು ಶುದ್ಧ ಮಾಡುತ್ತೇವೆ. ಆದಾಗ್ಯೂ ಅದರ ಕುರಿತಾಗಿ ಗ್ಲಾನಿಯು ನಷ್ಟವಾಗುವುದಿಲ್ಲ. ಆದರೆ ಮೃತಕ ಪಶುಗಳ ಮಲ ಆಮಿಷ ತಿನ್ನುತ್ತಾರೆ. ಇಂಥ ಮಲಿನ ವಸ್ತುವನ್ನು ಉತ್ತಮ ಬುದ್ಧಿಯ ಮನುಷ್ಯರು ಸ್ಪರ್ಶಿಸುವುದಿಲ್ಲ. ಸಿಂಹ, ಸೂಕರ, ನರಿ, ಚಿರತೆ, ಬೆಕ್ಕು, ನಾಯಿ, ಕಾಗೆ, ಗಿಡಗ, ವಿಷ ತುಂಬಿದ ಸರ್ಪಾದಿ ದುಷ್ಟ ಜೀವಗಳೇ ಮಾಂಸ ತಿನ್ನುತ್ತವೆ. ಮನುಷ್ಯರಾಗಿಯಂತೂ ಈ ವಸ್ತುವಿನ ಸ್ಪರ್ಶವು ಕೂಡ ಯೋಗ್ಯವಿಲ್ಲವೆಂದ ಮೇಲೆ ಅದನ್ನು ಹೇಗೆ ತಿನ್ನುತ್ತಾರೆ ? ಮನುಷ್ಯರಾಗಿ ಮಾಂಸ ತಿನ್ನುವವರಲ್ಲಿಯಂತೂ ಭಿಲ್ಲ, ಚಾಂಡಾಲ, ಕಟುಕ, ಕಾಡುಜನರು, ಚರ್ಮಕಾರ ಇತ್ಯಾದಿ ನೀಚ ಕುಲದಲ್ಲಿ ಉತ್ಪನ್ನರಾದ ಅಸ್ಪೃಶ್ಯ ಶೂದ್ರರೇ ಮಾಂಸ ತಿನ್ನುತ್ತಾರೆ. ಅವರಲ್ಲಿಯೂ ಕೂಡ ಉಜ್ವಲ ಬುದ್ಧಿ-ಪಾಪದಿಂದ ಭಯಪಡುವಂಥ, ಕೋಮಲ ಪರಿಣಾಮಿಗಳು, ಪ್ರಭುವನ್ನು ಭಜಿಸುವಂಥವರು ಮೊದಲಾಗಿ ಅದೆಷ್ಟೋ ಶೂದ್ರರು ಕೂಡ ಮಾಂಸದ ಭಕ್ಷಣೆ ಮಾಡುವುದಿಲ್ಲ. ಕೆಲವರು ಅಶುಚಿ ಬುದ್ಧಿಯ ನಿರ್ದಯರೇ ಮಾಂಸ ತಿನ್ನುತ್ತಾರೆ. ಅವರು ಕೂಡ ದುರ್ಗಂಧಿತ ವಸ್ತು (ಮಾಂಸ)ವನ್ನು ಹೇಗೆ ತಿನ್ನುತ್ತಾರೋ ಯಾರಿಗೆ ಗೊತ್ತು ?

ಗ್ಲಾನಿಕಾರಕ, ವಾಸನೆಯ ಮಾತಿರಲಿ ಆದರೆ ಕೇವಲ ನೋಡುತ್ತಿರುವಂತೆ ಚಿತ್ತವನ್ನು ದುಃಖಿಯನ್ನಾಗಿಸುವ ಮಾಂಸ ಪಿಂಡವನ್ನು ಹೇಗೆ ತಿನ್ನುತ್ತಾರೆ ? ಅದು ತಿನ್ನುವಂಥವರಿಗೇ ಗೊತ್ತು ; ಆದರೆ ಇಷ್ಟೊಂದು ಅಶುಚಿಯಾದ ಮಾಂಸಪಿಂಡದ ಭಕ್ಷಣೆಯು ನೀಚ ಕುಲದ ಪ್ರಗಟ ಚಿಹ್ನೆಯಿದೆ. ಉಚ್ಚ ಕುಲದಲ್ಲಿ ಉತ್ಪನ್ನ, ಉಚ್ಚ ವಂಶದಲ್ಲಿ ಉತ್ಪನ್ನ ಕ್ಷತ್ರಿಯ, ಬ್ರಾಹ್ಮಣ, ವೈಶ್ಯರೂಪ ಉತ್ತಮ ವಂಶದ ಭವ್ಯಾತ್ಮರು, ಉಜ್ವಲ ಆಚರಣೆಯುಳ್ಳವರು ಮಾಂಸದ ಸ್ಪರ್ಶವನ್ನೂ ಮಾಡುವುದಿಲ್ಲ. ದಯಾವಂತ ಪುರುಷರು ಅಂಥ ವಸ್ತುವನ್ನು ನೋಡುತ್ತಿದ್ದಂತೆ ಅಲ್ಲಿಂದ ಪಲಾಯನ ಮಾಡುತ್ತಾರೆ, ಪುನಃ ಆ ಕಡೆ ದೃಷ್ಟಿ ಹರಿಸುವುದಿಲ್ಲ.

ಆಮಿಷತ್ಯಾಗೀ ಭವ್ಯಾತ್ಮರು ತಮ್ಮ ವ್ರತದ ರಕ್ಷಣೆಯ ಸಲುವಾಗಿ ಯಾವುದನ್ನು ತಿನ್ನುವುದರಿಂದ ಮಾಂಸದ ದೋಷ ತಗಲುತ್ತದೆ ಆ ವಸ್ತುಗಳನ್ನು ತಿನ್ನುವುದಿಲ್ಲ. ತ್ರಸ ಜೀವಗಳ ಕಲೇವರವು ಮಾಂಸವಿದೆ. ಅದಕ್ಕಾಗಿ ಯಾವ

ವಸ್ತುವಿನಲ್ಲಿ ತ್ರಸ ಜೀವಗಳು ಉತ್ಪನ್ನವಾಗುತ್ತವೆ, ಅದು ತ್ರಸ ವಸ್ತುಗಳ ಕಲೇವರವಿರುವುದರಿಂದ ಆಮಿಷ ತ್ಯಾಗಿಯು ಆ ವಸ್ತುವನ್ನು ತಿನ್ನುವುದಿಲ್ಲ. ತ್ರಸ ಜೀವಗಳ ಉತ್ಪತ್ತಿಯ ಸ್ಥಾನ ಹಾಗೂ ತ್ರಸದ ಕಲೇವರ ರೂಪ ಸ್ಥಾನಗಳು ಹೀಗಿವೆ-

ಶೋಧಿಸದೇ ಇರುವ ನೀರು, ಹಾಲು ಕರೆದ ನಂತರ ಎರಡು ಗಳಿಗೆ ಕಳೆದ ಮೇಲೆ ಕಾಯಿಸದಿರುವ ಹಾಲು, ಮರ್ಯಾದೆಯು ಮುಗಿದು ಹೋದ ಹಿಟ್ಟು - ಇವುಗಳಲ್ಲಿ ತ್ರಸ ಜೀವಗಳ ಉತ್ಪತ್ತಿಯಾಗುವುದರಿಂದ ಆಮಿಷ ತ್ಯಾಗಿಯು ಈ ಮೂರು ವಸ್ತುಗಳನ್ನು ತಿನ್ನುವುದಿಲ್ಲ. ಚರ್ಮದ ಚೀಲದಲ್ಲಿರುವ ಎಣ್ಣೆ, ತುಪ್ಪ, ನೀರು ಇತ್ಯಾದಿ ಹಾಗೂ ರಸ ಜಾತಿಯ ವಸ್ತುಗಳು ತ್ರಸ ಜೀವಗಳ ಉತ್ಪತ್ತಿಯ ಸ್ಥಾನವಿವೆ. ರಾತ್ರಿಯಲ್ಲಿ ಬೀಸಿದ ಹಿಟ್ಟು, ತಂಗುಳ ಅನ್ನ, ಬೂಸು ಬಂದಿರುವ ವಸ್ತುಗಳು, ರಾತ್ರಿಯಲ್ಲಿ ತಯಾರಿಸಿದ-ಮಿಠಾಯಿ, ಅಂಗಡಿಯ ವಸ್ತುಗಳು, ಅಂಗಡಿಯಲ್ಲಿ ಮಾರುವ ಹಿಟ್ಟು, ಹಿಂಗು, ಜೇನುತುಪ್ಪ ಮೊದಲಾದ ವಸ್ತುಗಳನ್ನು ಮಾಂಸ ತ್ಯಾಗಿಯು ತಿನ್ನುವುದಿಲ್ಲ. ಓಲಾ-ಮಂಜುಗಡ್ಡೆ, ಮೊಸರು ವಡೆ-ದ್ವಿದಳ, ರಾತ್ರಿಭೋಜನ, ಅತ್ತಿ-ಆಲ-ಅರಳೆ-ಬಸರಿ-ಗೋರಿ (ಐದು ಉದುಂಬರ ಫಲ), ಆಮಿಷ (ಮಾಂಸ), ಮಧು (ಜೇನುತುಪ್ಪ), ಮದಿರಾಪಾನ, ಬಹುಬೀಜಗಳು, ಬದನೆಕಾಯಿ, ಸಂಧಾನ (ಉಪ್ಪಿನಕಾಯಿ), ಬೆಣ್ಣೆ, ಅಪರಿಚಿತ ಫಲ, ಕಂದಮೂಲ, ಮಣ್ಣು, ವಿಷ, ಮರ್ಯಾದೆ ಮಿರಿ ಕಾಯಿಸಲಾದ ಬೆಣ್ಣೆ, ತುಚ್ಛ ಫಲ, ಚಲಿತರಸ-ಇವು ಇಪ್ಪತ್ತೆರಡು ಅಭಕ್ಷ ಮೊದಲಾದ ವಸ್ತುಗಳನ್ನು ಆಮಿಷ ತ್ಯಾಗಿಯು ತಿನ್ನುವುದಿಲ್ಲ.

ರಾತ್ರಿ ಕಳೆದ ಮೇಲೆ ಹುಳಿಯಾಗುವ ಪದಾರ್ಥ, ಬೆಲ್ಲ-ಮೊಸರು ಬೆರೆಸಿ ಹಾಗೂ ದ್ವಿದಳ ಧಾನ್ಯಗಳನ್ನು ಮೊಸರು-ಮಜ್ಜಿಗೆಗಳಲ್ಲಿ ಬೆರೆಸಿ ತಿನ್ನುವುದಿಲ್ಲ. ಸಾಧಾರಣ ಫಲ, ಮಿಡಿಗಾಯಿ, ಮೊಗ್ಗೆ ಇತ್ಯಾದಿ ವಸ್ತುಗಳನ್ನು ಆಮಿಷ ತ್ಯಾಗಿಯು ತಿನ್ನುವುದಿಲ್ಲ. ಈ ವಿವೇಕಿಯ ಜ್ಞಾನದಲ್ಲಿ ಬರುವಂಥ ಪ್ರತಿಯೊಂದು ಅಭಕ್ಷ್ಯವನ್ನು ಮಾಂಸತ್ಯಾಗದ ಅತಿಚಾರವೆಂದು ತಿಳಿದು ತನ್ನ ವ್ರತದ ರಕ್ಷಣೆಯ ಸಲುವಾಗಿ ತಿನ್ನುವುದಿಲ್ಲ. ಈ ಆಮಿಷ ವ್ಯಸನವನ್ನು ಮಹಾಪಾಪದ ಸ್ಥಾನವೆಂದು ತಿಳಿಯುವುದು.

ಅಲ್ಲದೇ ಸಂಸಾರದಲ್ಲಿ ಮಾಂಸಭಕ್ಷಿಯ ನಿಂದೆಯಾಗುತ್ತದೆ. ತನ್ನ ಕುಲದಲ್ಲಿ ಮಾಂಸವು ನಿಷಿದ್ಧವಾಗಿದ್ದರೂ ಅದೆಷ್ಟೋ ಜಿಹ್ವಾಲೋಲುಪಿಗಳು ಮಾಂಸದ ಸಮಾನ ಆಕಾರವುಳ್ಳ ಅನ್ಯ ತರಕಾರಿಗಳನ್ನು ತಯಾರಿಸಿ ತಿನ್ನುವಂಥವರಿಗೂ ಮಾಂಸಭಕ್ಷಣೆಯ ಸಮಾನವೇ ದೋಷ ತಗಲುತ್ತದೆ. ನರಕದೊಳಗೆ ಮಾಂಸ ಭಕ್ಷಕರಿಗೆ ಅವರದೇ ಶರೀರವನ್ನು ಕತ್ತರಿಸಿ ಅವರಿಗೇ ತಿನ್ನಿಸುತ್ತಾರೆ. ಆದುದರಿಂದ ವಿವೇಕವಂತರು ತಮ್ಮ ವ್ರತದಲ್ಲಿಯೂ ಭಂಗ ತರುವುದಿಲ್ಲ. ಯಾರೋ ತಿನ್ನುತ್ತಿದ್ದರೆ ಅದನ್ನು ಕಂಡು ಅನುಮೋದಿಸುವುದಿಲ್ಲ ಮತ್ತು ತಮ್ಮ ವ್ರತದಲ್ಲಿ ಅತಿಚಾರ ತಗಲಿಸುವುದೂ ಇಲ್ಲ - ಇದನ್ನು ಆಮಿಷ ತ್ಯಾಗ ವ್ರತವೆಂದು ತಿಳಿಯುವುದು.

**ಮದ್ಯಪಾನ ವ್ಯಸನ**-ಮನ, ವಚನ, ಕಾಯದಿಂದ ಸುರಾಪಾನದಲ್ಲಿ ಆಸಕ್ತನಾಗುವುದು ಮದ್ಯವ್ಯಸನವಿದೆ. ವಿವೇಕದ ಧಾರಕರು ಕೀರ್ತಿಯ ಲೋಭಿಗಳು ಈ ವ್ಯಸನದ ತ್ಯಾಗ ಮಾಡುತ್ತಾರೆ. ಅಜ್ಞಾನಿಗಳು, ಲಜ್ಜಾರಹಿತರು ಹೀನಕುಲದ ಪುರುಷರು ಮದ್ಯಪಾನ ಮಾಡುತ್ತಾರೆ. ಆ ಮಹಾಮೂರ್ಖರು ಧನದ ನಾಶಮಾಡಿ ನಿಂದೆಯ ಉಪಾರ್ಜನೆ ಮಾಡುತ್ತಾರೆ. ಮದ್ಯಪಾನ ಮಾಡುವಂಥ ಜೀವಗಳು ಮಹಾಕಠೋರ ಪರಿಣಾಮಿಯಿರುತ್ತಾರೆ.

ಅನೇಕ ವಸ್ತುಗಳನ್ನು ಕೂಡಿಸಿ, ಅವೆಲ್ಲವನ್ನು ಕುಟ್ಟಿ, ಒಂದು ಜಲಕುಂಡದೊಳಗೆ ಹಾಕಿ ಕೊಳೆಸುತ್ತಾರೆ. ಅದರಲ್ಲಿ ಕೆಲವು ದಿನಗಳ ನಂತರ ಕ್ರಿಮಿಗಳು ಉತ್ಪನ್ನವಾಗುತ್ತವೆ, ಜಲವು ದುರ್ಗಂಧಿತವಾಗಿ ಹೋಗುತ್ತದೆ. ಆ ಜಲವನ್ನು ಎಲ್ಲ ಜೀವಗಳೊಂದಿಗೆ ಯಂತ್ರದೊಳಗೆ ಹಾಕಿ ಅಗ್ನಿಯಿಂದ ಕುದಿಸಿ ಅದರ ಅರ್ಕ ತಗೆಯುತ್ತಾರೆ. ಈ ಪ್ರಕಾರದಿಂದ ಮಾಡಲಾದ ಮದ್ಯವನ್ನು ವಿವೇಕಿ, ಉತ್ತಮ ಆಚರಣೆ ಮಾಡುವಂಥ ಶುಭ ಕುಲೋತ್ಪನ್ನರು ಕುಡಿಯುವುದಿಲ್ಲ. ಅದನ್ನು ಕುಡಿಯುವುದರಿಂದ ಬುದ್ಧಿಯು ನಷ್ಟವಾಗುತ್ತದೆ, ವಚನ ಸಂಬಂಧದ ವಿಶ್ವಾಸವು ಉಳಿಯುವುದಿಲ್ಲ. ನೋಡುವಂಥ ಜನರು ಧಿಕ್ಕಾರ ಮಾಡುತ್ತಾರೆ - ಇದನ್ನೆಲ್ಲ ತಿಳಿದು ಕೂಡ ಯಾರು ಮದ್ಯದ

ತಾಗ ಮಾಡುವುದಿಲ್ಲ ಅವರ ತಿಳಿವಳಿಕೆಯು ನಿಂದಾ ಯೋಗ್ಯವಿದೆ. ಮದ್ಯಪಾನ ಮಾಡುವ ಪಾಪದ ಕಾರಣದಿಂದ ಜೀವನು ನರಕಕ್ಕೆ ಹೋಗುತ್ತಾನೆ; ಅಲ್ಲಿ ಅವನ ಬಾಯಿಗೆ ಕುದಿಯುತ್ತಿರುವ ಲೋಹದ ರಸ ಸುರಿಯುತ್ತಾರೆ.

**ಸಂದೇಹ -** ನರಕದಲ್ಲಿ ಧಾತುವೆಲ್ಲಿರುತ್ತದೆ ?

**ಸಮಾಧಾನ -** ಅಲ್ಲಿ ಧಾತುವಂತೂ ಇರುವುದಿಲ್ಲ; ಆದರೆ ಜೀವರುಗಳ ಪಾಪದಿಂದ ಅಲ್ಲಿ ಪರಮಾಣುಗಳು ಕರಗಿ ಧಾತುವಿಗಿಂತ ಅಸಂಖ್ಯಗುಣಿತ ಉಷ್ಣತೆಯರೂಪ ಧಾತುವಿನ ಆಕಾರಮಯವಾಗುತ್ತವೆ. ಆ ಧಾತು ಕುಡಿಸಿ ಮದ್ಯಪಾನ ಮಾಡುವಂಥವನಿಗೆ ನಾರಕಿಗಳು ಮದ್ಯಪಾನದ ಪಾಪವನ್ನು ನೆನಪಿಗೆ ತಂದು ಕೊಡುತ್ತಾರೆ - ಪೂರ್ವಭವದಲ್ಲಿ ನೀನು ಸುರಾಪಾನ ಮಾಡಿದ್ದೆ, ಅದರ ಫಲವು ಈ ಲೋಕದಲ್ಲಿ ಹೀಗಿರುತ್ತದೆಯೆಂದು ಹೇಳುತ್ತಾರೆ.

ಮದ್ಯಕುಡುಕನ ಬುದ್ಧಿಯ ಅಭಾವವಾಗುತ್ತದೆ, ಅವನ ವಚನಗಳ ಪ್ರತೀತಿಯಾಗುವುದಿಲ್ಲ. ಮದ್ಯಕುಡುಕನಲ್ಲಿ ಪುರುಷಾರ್ಥದ ಅಭಾವವಾಗುತ್ತದೆ, ಅವನು ಹೆಜ್ಜೆ-ಹೆಜ್ಜೆಗೆ ಮೂರ್ಛಿತನಾಗಿ ಬೀಳುತ್ತಾನೆ. ಅವನಿಂದ ಮಾಡಲಾಗುವ ಧರ್ಮವು ವಿಫಲವಾಗುತ್ತದೆ. ತಲೆಯ ಮೇಲಿನ ರುಮಾಲು ಜಾರಿ ಬೀಳುತ್ತದೆ. ಮೈಮೇಲಿನ ವಸ್ತ್ರಗಳು ಹರಿದು ಹೋಗುತ್ತವೆ. ಮರ್ಯಾದೆಯನ್ನು ಬಿಟ್ಟುಕೊಟ್ಟು ಅವನು ಬಾಯಿಗೆ ಬಂದಂತೆ ಹರಟುತ್ತಾನೆ. ತಾಯಿ, ಪತ್ನಿ, ಸಹೋದರಿ, ಪುತ್ರಿಯ ಜ್ಞಾನವು ಅವನಿಗೆ ಉಳಿಯುವುದಿಲ್ಲ. ಎಲ್ಲರನ್ನು ಒಂದೇ ಸಮವಾಗಿ ನೋಡುತ್ತಾನೆ. ಖಾದ್ಯ-ಅಖಾದ್ಯಗಳ ಜ್ಞಾನದಿಂದ ರಹಿತನಾಗುತ್ತಾನೆ. ಇತ್ಯಾದಿ ಪಾಪಮಯ ಹಾಗೂ ನಿಂದೆಯ ಸ್ಥಾನಭೂತವಾದ ಮದ್ಯದ ತ್ಯಾಗ ಮಾಡುವುದು ಯೋಗ್ಯವಿದೆ ಮತ್ತು ಯಾವವುಗಳಿಂದ ತಮ್ಮ ವ್ರತದಲ್ಲಿ ಅತಿಚಾರ ಬರುತ್ತದೆ ಅವುಗಳದೂ ತ್ಯಾಗ ಮಾಡುವುದು ಉಚಿತವಿದೆ.

**ಮದ್ಯ ತ್ಯಾಗದ ಅತಿಚಾರಗಳು -** ವಿಷಯ ಪೋಷಣೆಯ ಸಲುವಾಗಿ ಗುಡಗಡಿ ಸೇದುವುದು, ತುಂಬಾಕು, ಗಾಂಜಾ, ಮಾದಕ ವಸ್ತುಗಳ ಭಕ್ಷಣೆ ಮಾಡುವುದರಲ್ಲಿ ಮದ್ಯದ ಸಮಾನ ದೋಷವಿದೆ. ಹುಳಿ ಬಂದಿರುವ ವಸ್ತು-ಜಿಲೇಬಿ (ಜಹಂಗೀರ) ಮೊದಲಾದವು, ಶೋಧಿಸದೇ ಇರುವ ನೀರಿನ ಮಜ್ಜಿಗೆ ಹಾಗೂ ಬಹು ದಿನಗಳ ಹಿಂದಿನ ರಸಯುಕ್ತ ವಸ್ತುಗಳ ಸೇವನೆಯಿಂದ ಮದ್ಯದ ಸಮಾನ ದೋಷವು ಉತ್ಪನ್ನವಾಗುತ್ತದೆ. ಅರ್ಕ, ಗುಲಾಬಜಲ ಮೊದಲಾದವು ಮದ್ಯದ ಸಮಾನ ಹಿಂಸೆ ಉತ್ಪನ್ನ ಮಾಡುತ್ತವೆ.

ಯಾರಿಗಾದರೂ ಮದ್ಯ ಕುಡಿಯುವ ಇಚ್ಛೆಯಾದರೆ ಮದ್ಯದ ದೋಷಗಳ ವಿಚಾರ ಮಾಡಿ ನಂತರ ಪ್ರಶಂಸಾಮಯವೆನಿಸಿದರೆ ಕುಡಿಯುವುದು. ಎಲೈ ಭವ್ಯನೇ ! ನೇತ್ರಹೀನನಂತೂ ಅಂಧನೇ ಇದ್ದಾನೆ; ಆದರೆ ಮದ್ಯ ಕುಡುಕನು ನೇತ್ರಯುಕ್ತನಾಗಿದ್ದರೂ ಅಂಧನೇ ಇದ್ದಾನೆ. ಮದ್ಯಗುಡುಕನನ್ನು ಎಲ್ಲರೂ ಪ್ರಜ್ಞೆಯಿಲ್ಲದವ, ವಾಚಾಳನೆಂದು ಕರೆಯುತ್ತಾರೆ. ಅವನು ಮಾಡುವ ಧರ್ಮ ಕ್ರಿಯೆಗಳು ನಿಷ್ಫಲವಾಗುತ್ತವೆ. ಒಂದಂತೂ ಮದ್ಯ ಕುಡುಕನು ಉನ್ಮತ್ತನೆನಿಸುತ್ತಾನೆ ಅಥವಾ ವಾಯು-ಸನ್ನಿಪಾತ ರೋಗಿಯು ಮಾತಾಡಿದರೆ ಉನ್ಮತ್ತನೆನಿಸುತ್ತಾನೆ ಅಥವಾ ದುರ್ಬಲ ಹೃದಯದವನೂ ಉನ್ಮತ್ತನೆನಿಸುತ್ತಾನೆ; ಮೂವರು ಸಮಾನರಿದ್ದಾರೆ. ಇವರನ್ನು ಮರುಳ ಅಥವಾ ಎಚ್ಚರಗೇಡಿಯೆನ್ನುತ್ತಾರೆ.

ಮದ್ಯ ಕುಡಿಯುವುದರಿಂದ ಜಗತ್ತಿನಲ್ಲಿ ನಿಂದೆಯಾಗುತ್ತದೆ, ಮನೆ-ಧನಗಳು ನಷ್ಟವಾಗಿ ಹೋಗುತ್ತವೆಯೆಂಬುದು ಜಗತ್ಪ್ರಸಿದ್ಧವಿದೆ. ವಿಚಾರ ಮಾಡುವುದು ! ಶೆರೆ ಕುಡಿದು ಯಾರಾದರೂ ಕೀರ್ತಿವಂತರಾಗಿದ್ದಾರೇನು ? ಯಾದವ ಸುತರು ಪರಿಚಯವಿಲ್ಲದೇ ಮದ್ಯ ಕುಡಿದರು ಅದರಿಂದ ಸರ್ವ ಕುಲಸಹಿತ ದ್ವಾರಿಕೆಯು ನಷ್ಟವಾಗಿ ಹೋಯಿತು. ಅದಕ್ಕಾಗಿ ಎಲೈ ಸೋದರನೇ ! ಒಂದುವೇಳೆ ನಿನ್ನ ಮನೆಯಲ್ಲಿ ಧನ-ಐಶ್ವರ್ಯವು ಅಧಿಕವಾಗಿ ಹೋಗಿದ್ದರೆ ಅದನ್ನು ನೀರಿಗೆ ಹಾಕಿ ಬಿಡು; ಆದರೆ ವ್ಯಸನಗಳಲ್ಲಿ ತೊಡಗಿಸಬೇಡ. ಎಲೈ ಭವ್ಯನೇ ! ದಾರು(ಮದ್ಯ)ಗಿಂತ ದಾವಾನಲವು ಒಳ್ಳೆಯದಿದೆ, ಅಗ್ನಿ ಪ್ರವೇಶವು ಒಳ್ಳೆಯದಿದೆ, ಶರೀರದಲ್ಲಿ ಪೀಡೆಯಾಗುವುದೂ

ಒಳ್ಳೆಯದಿದೆ; ಏಕೆಂದರೆ ಈ ದುಃಖಗಳಿಂದ ಒಂದು ಭವದಲ್ಲಿಯೇ ದುಃಖವಾಗುತ್ತದೆ. ಆದರೆ ದಾರುವಿನಿಂದ ಅನೇಕ ಭವಗಳಲ್ಲಿ ದುಃಖವಾಗುತ್ತದೆ. ಹೆಂಡವು ಹಾಲಾಹಲ ವಿಷಕ್ಕಿಂತಲೂ ಕಡೆಯಿದೆ - ಅನಿಷ್ಟವಿದೆ. ಅನೇಕ ಪ್ರಕಾರದಿಂದ ಪಾಪಕಾರಕವಿರುವ ಮದ್ಯದ ವ್ಯಸನವನ್ನು ಧರ್ಮಾರ್ಥಿ ಶ್ರಾವಕರು ತಮ್ಮ ವ್ರತದ ರಕ್ಷಣೆಯ ಸಲುವಾಗಿ ಅತಿಚಾರ ಸಹಿತ ತ್ಯಾಗ ಮಾಡುವುದು ಉಚಿತವಿದೆ.

ವೇಶ್ಯಾವ್ಯಸನ-ಯಾರ ಚಿತ್ತದ ಮೂಲಕ ಕಾಮುಕ ಪುರುಷರ ಮನಸ್ಸನ್ನು ಮೋಹಿತಗೊಳಿಸಲಾಗುತ್ತದೆ, ಯಾರಿಗೆ ಯಾವಾಗಲೂ ಧರ್ಮದ ಅಭಾವವಿದೆ, ಯಾರು ಅನ್ಯರ ಧನ ಪಡೆದು ವ್ಯಭಿಚಾರ ಕ್ರಿಯೆಯರೂಪ ಪ್ರವರ್ತನೆ ಮಾಡುತ್ತಾರೆ ಅವರನ್ನು ವೇಶ್ಯೆಯೆಂದು ಹೇಳುತ್ತಾರೆ. ಅವರ ಸಂಗತಿಯಿಂದ ಚಿತ್ತವು ವಿಕಲವಾಗಿರುತ್ತದೆ. ವೇಶ್ಯೆಯ ಪ್ರೀತಿಯು ಕೇವಲ ಒಂದು ಧನದ ಮೇಲೆ ಇರುತ್ತದೆ. ಬೇರೆ ಯಾರೊಂದಿಗೂ ಅವಳ ಸ್ನೇಹವಿರುವುದಿಲ್ಲ. ಮಹಾ ನೀಚಕುಲದವನಾಗಿದ್ದರೂ ವೇಶ್ಯೆಯು ಧನದ ಕಾರಣದಿಂದ ಅವನ ಸಮಾಗಮ ಮಾಡುತ್ತಾಳೆ - ಗ್ಲಾನಿ ಮಾಡುವುದಿಲ್ಲ. ದೇಹವಿರೂಪಿ, ಬುದ್ಧಿಹೀನ, ರೂಪಹೀನನಾಗಿದ್ದರೂ ಧನವಂತನಿದ್ದರೆ ವೇಶ್ಯೆಯು ಅವನ ಆದರ ಮಾಡುತ್ತಾಳೆ. ಅವನೊಂದಿಗೆ ಸ್ನೇಹವಿಟ್ಟುಕೊಳ್ಳುತ್ತಾಳೆ. ಮಹಾಬುದ್ಧಿಶಾಲಿ, ಕಾಮದೇವನಂಥ ರೂಪಧಾರಕ, ಅನ್ಯರ ಮನಸ್ಸನ್ನು ಮೋಹಿತಗೊಳಿಸುವಂಥವ, ಉಚ್ಚ ಕುಲವಂತ, ಮಹಾವಂಶಜ - ಇತ್ಯಾದಿ ಗುಣಸಹಿತ ಶುಭಲಕ್ಷಣವುಳ್ಳವನಿದ್ದರೂ ಧನದಿಂದ ರಹಿತನಾಗಿರುವ ಕಾರಣ ಅವನು ವೇಶ್ಯೆಯ ಮನೆಗೆ ಹೋದರೆ ಆದರ ಪಡೆಯುವುದಿಲ್ಲ. ಧನರಹಿತ ಪುರುಷನೊಂದಿಗೆ ವೇಶ್ಯೆಯ ಸ್ನೇಹವಿರುವುದಿಲ್ಲ. ಅವಳ ಮಿತ್ರವಂತೂ ಕೇವಲ ಧನವಿದೆ. ಬೇರೆಯಾರೂ ಇಲ್ಲ. ಆದುದರಿಂದ ವೇಶ್ಯೆಯನ್ನು ಧನಮಿತ್ರೆಯೆಂದೂ ಹೇಳುತ್ತಾರೆ.

ಹೇಗಿದ್ದಾಳೆ ವೇಶ್ಯೆಯು ? ವೇಶ್ಯೆಯ ತನವು ಭೂಮಿಯ ಮಾರ್ಗದಂತಿರುತ್ತದೆ. ಹೇಗೆ ಮಾರ್ಗದ ಮೇಲೆ ಉಚ್ಚ-ನೀಚರೆಲ್ಲರೂ ಗಮನ ಮಾಡುತ್ತಾರೆ, ಹಾಗೆಯೇ ವೇಶ್ಯೆಯ ತನುವಿನ ಮೇಲೆಯೂ ಉಚ್ಚ-ನೀಚರೆಲ್ಲರೂ ಹೋಗುತ್ತಾರೆ. ವೇಶ್ಯೆಯು ಮಹಾಲೋಭದ ಗಣಿಯಿದ್ದಾಳೆ. ಧನದ ಸಲುವಾಗಿ ತನ್ನ ತನುವನ್ನು ಮಾರುತ್ತಾಳೆ, ಮಹಾನಿರ್ಲಜ್ಜಳಿದ್ದಾಳೆ. ನಿರ್ಲಜ್ಜ ಪುರುಷರ ಭೋಗಸ್ಥಾನದಲ್ಲಿದ್ದಾಳೆ. ಎಂಜಲೆಲೆಯ ಸಮಾನಳಿದ್ದಾಳೆ. ಹೇಗೆ ಯಾರದೋ ಎಂಜಲೆಲೆಯನ್ನು ಬೀಸಾಕಿದ ಮೇಲೆ ಅದನ್ನು ನೆಕ್ಕುವ ಸಲುವಾಗಿ ಅನೇಕ ಶ್ವಾನಗಳು ಅದರ ಮೇಲೆ ಬರುತ್ತವೆ, ಅದೇ ಪ್ರಕಾರ ಯಾರ ಮೂಲಕವೋ ಭೋಗಿಸಿ ಬಿಟ್ಟಿರುವ ವೇಶ್ಯೆಯರೂಪದ ಎಂಜಲೆಲೆಯ ಮೇಲೆ ಅನೇಕ ವ್ಯಸನೀ ಪುರುಷ ರೂಪದ ಶ್ವಾನಗಳು ಬರುತ್ತವೆ. ಅವಳು ಜಗತ್ ನಿಂದ್ಯಳಿದ್ದಾಳೆ. ಈ ಪ್ರಕಾರ ವೇಶ್ಯೆಯ ಎಲ್ಲ ಚಿಹ್ನೆಗಳು ಪಾಪಕಾರಕವೆಂದು ತಿಳಿದು ಬುದ್ಧಿವಂತರು ಅವಳ ತ್ಯಾಗ ಮಾಡುವುದು ಉಚಿತವಿದೆ.

ಆ ವೇಶ್ಯೆಯು ಶೀಲರೂಪದ ವೃಕ್ಷವನ್ನು ಛೇದಿಸುವ ಸಲುವಾಗಿ ಕುಠಾರದ ಸಮಾನಳಿದ್ದಾಳೆ. ಅವಳ ಸಂಗತಿಯಿಂದ ಮಾಡಲಾದ ಧರ್ಮಸಾಧನೆಯ ಫಲವು ನಾಶವಾಗಿ ಹೋಗುತ್ತದೆ ಆದುದರಿಂದ ಧರ್ಮಾತ್ಮಾ ಪುರುಷರು ವೇಶ್ಯೆಯ ಸಂಗತಿಯ ತ್ಯಾಗ ಮಾಡುವುದು ಉಚಿತವಿದೆ. ಯಾವ-ಯಾವ ಕಾರ್ಯಗಳಲ್ಲಿ ವೇಶ್ಯೆಯ ಸಂಗತಿಯ ಸಮಾನ ದೋಷಗಳಾಗುತ್ತವೆ. ಆ ಕಾರ್ಯಗಳನ್ನು ಕೂಡ ವ್ರತದ ರಕ್ಷಕರಾದ ಧರ್ಮಾತ್ಮಾ ಪುರುಷರು ಬಿಟ್ಟುಕೊಡುತ್ತಾರೆ. ವೇಶ್ಯೆಯ ವ್ಯಸನದ ತ್ಯಾಗ ಮಾಡುವಂಥ ವ್ಯಕ್ತಿಯು ಈ ಮುಂದೆ ಹೇಳುವ ಸ್ಥಾನಗಳಿಗೆ ಹೋಗುವುದಿಲ್ಲ; ಅಲ್ಲಿಗೆ ಹೋದರೆ ತನ್ನ ವ್ರತದಲ್ಲಿ ಅತಿಚಾರ ತಗಲುತ್ತದೆ. ಅವು ಹೀಗಿವೆ-

ವೇಶ್ಯೆಯ ಸ್ಥಾನಕ್ಕೆ ಹೋಗುವುದಿಲ್ಲ, ವೇಶ್ಯೆಯಾಗಿರುವ ನರ್ತಕಿಯ ನೃತ್ಯ, ಗಾಯನ, ವಾದ್ಯ ನುಡಿಸುವಿಕೆಯ ಸ್ಥಾನಗಳನ್ನು ಸಂದರ್ಶಿಸುವುದಿಲ್ಲ. ವೇಶ್ಯೆಯ ವಾಣಿಜ್ಯ ಮಾಡುವುದಿಲ್ಲ, ವೇಶ್ಯಾವಾಟಿಕೆಯ ಹತ್ತಿರ ವಾಸ ಮಾಡುವುದಿಲ್ಲ. ವೇಶ್ಯೆಯೊಂದಿಗೆ ಮಾತುಕತೆ, ಹಾಸ್ಯ, ಅಥವಾ ಅವಳ ಕೌತುಕ ಮಾಡುವುದಿಲ್ಲ - ಈ ಕಾರ್ಯಗಳು ವ್ಯಸನದ ಸಮಾನ ಪಾಪೋತ್ಪನ್ನ ಮಾಡುತ್ತವೆ.

ಅವನು ವೇಶ್ಯೆಯ ತನುವನ್ನು ನೋಡುವುದಿಲ್ಲ - ಅವಳ ಹಾವ-ಭಾವಗಳನ್ನು ನೋಡುವುದಿಲ್ಲ. ಅವಳ ಹಾಡುಗಾರಿಕೆ, ರೂಪ, ವಾದ್ಯ ನುಡಿಸುವಿಕೆ, ನೃತ್ಯಾದಿಗಳನ್ನು ಆಲಿಸುವುದಿಲ್ಲ-ನೋಡುವುದಿಲ್ಲ. ಅವುಗಳ ಪ್ರಶಂಸೆ - ಅನುಮೋದನೆ ಮಾಡುವುದಿಲ್ಲ. ಮತ್ತೆ ಮತ್ತೆ ವೇಶ್ಯೆಯ ಗುಣಕಥನ ಮಾಡುವುದಿಲ್ಲ. ಅನ್ಯರಿಂದ ಅವಳ ಕಥೆಯನ್ನಾಲಿಸಿ ಹರ್ಷಿತನಾಗುವುದಿಲ್ಲ. ವೇಶ್ಯೆಯ ಸತ್ಕಾರ ಮಾಡುವುದಿಲ್ಲ. ಅವಳ ಮಿತ್ರರು ಹಾಗೂ ಸಂಬಂಧಿ ಕರೊಡನೆ ಹಿತದ ಭಾವವಿಟ್ಟುಕೊಳ್ಳುವುದಿಲ್ಲ. ಇತ್ಯಾದಿ ವೇಶ್ಯೆಯ ಕುರಿತಾದ ಸಮಸ್ತ ದೋಷಗಳ ತ್ಯಾಗ ಮಾಡಿದ ಮೇಲೆಯೇ ತನ್ನ ವ್ರತದ ರಕ್ಷಣೆಯಾಗುತ್ತದೆ. ಎಲೈ ಭವ್ಯನೇ ! ವೇಶ್ಯೆಯ ಸಂಗತಿಯಲ್ಲಿ ಯಾವುದೇ ಗುಣವಿಲ್ಲ; ಅವಳ ಸಂಗತಿಯಿಂದ ಜನರಲ್ಲಿ ಅಪಕೀರ್ತಿ, ನಿಂದೆಯಾಗುತ್ತದೆ. ವೇಶ್ಯೆಯ ಸಂಗತಿಯನ್ನು ಕಳ್ಳರು, ಬೇರೆಯವರ ಧನ ಹರಣ ಮಾಡುವಂಥವರು ಮಾಡುತ್ತಾರೆ. ಪುಂಡರು, ಜೂಜು ಆಡುವಂಥವರು ಮೊದಲಾದ ನಿರ್ಲಜ್ಜ ಪುರುಷರು ವೇಶ್ಯೆಯ ಮನೆಗೆ ಹೋಗುತ್ತಾರೆ. ಕುಲಹೀನ ಪುರುಷರೇ ವೇಶ್ಯೆಯ ಸಂಗತಿ ಮಾಡುತ್ತಾರೆ. ಹಿಂದೆ-ಮುಂದೆ ಯಾರೂ ಕುಟುಂಬ ವರ್ಗದವರು ಯಾರಿಗಿಲ್ಲ, ಅಂಥವರೇ ವೇಶ್ಯಾಗಮನ ಮಾಡುತ್ತಾರೆ.

ನೋಡಿರಿ, ಶ್ರೇಷ್ಠಿ ಪುತ್ರ ಚಾರುದತ್ತನು ವೇಶ್ಯೆಯ ಸಂಗತಿ ಮಾಡಿದ್ದನು ನಂತರ ಆ ವೇಶ್ಯೆಯು ಅವನ ಸಮಸ್ತ ಧನ-ಸಂಪತ್ತು-ಮನೆಯನ್ನು ತಗೆದುಕೊಂಡು ಅವನನ್ನು ಅತ್ಯಂತ ದುರ್ಗಂಧಯುಕ್ತ ಸ್ಥಾನದಲ್ಲಿ ಹಾಕಿ ಬಿಡುತ್ತಾಳೆ. ಅವನು ಅಲ್ಲಿಯೇ ನರಕದ ಸಮಾನ ದುಃಖ ಭೋಗಿಸುತ್ತ ಉಳಿದನು. ವೇಶ್ಯೆಯನ್ನು ಜಗತ್ತಿನ ಹಾಸಿಗೆಯ ಸಮಾನ ತಿಳಿಯುವುದು. ಅವಳ ತನುವಿನ ಸ್ಪರ್ಶವನ್ನು ಉಚ್ಚ-ನೀಚ ಜನರೆಲ್ಲರೂ ಮಾಡುತ್ತಾರೆ. ವೇಶ್ಯೆಯ ಸಂಗತಿಯಿಂದ ಶೀಲವು ನಷ್ಟವಾಗಿ ಹೋಗುತ್ತದೆ, ಅದರ ಫಲವು ದುರ್ಗತಿಯಿದೆ. ವೇಶ್ಯೆಯು ಮಹಾ ಮೋಸದ ಮೂರ್ತಿಯಿದ್ದಾಳೆ. ಅವಳ ಸಮಾನವೇ ಮಹಾನಿರ್ಲಜ್ಜ, ಮೋಸದ ಗಣಿಯಂತಿರುವ ದುರ್ಬುದ್ಧಿಯ ಪುರುಷರು ಅವಳ ಸಂಗತಿ ಮಾಡುತ್ತಾರೆ.

ಎಲೈ ಭವ್ಯನೇ ! ಸಿಂಹದ ಗುಹೆಯಲ್ಲಿ ಪ್ರವೇಶ ಮಾಡುವುದು ಒಳ್ಳೆಯದಿದೆ ಆದರೆ ವೇಶ್ಯೆಯ ಸಂಗತಿಯು ಒಳ್ಳೆಯದಲ್ಲ. ಅಧಿಕ ಚರ್ಚೆಯಿಂದ ಲಾಭವೇನಿದೆ ? ವೇಶ್ಯೆಯ ಸಂಗತಿಯ ತ್ಯಾಗವೇ ಹಿತಕರವಿದೆ. ವೇಶ್ಯಾವ್ಯಸನವನ್ನು ಕಳ್ಳರು, ಪುಂಡರು, ವೇಶ್ಯಾಗಮನ ಮಾಡುವಂಥವರೇ ಒಳ್ಳೆಯದೆಂದು ಹೇಳುತ್ತಾರೆ. ಈ ವ್ಯಸನೀ ಮೂರ್ಖನು ಅವರಿಂದ ತನ್ನ ಪ್ರಶಂಸೆಯನ್ನಾಲಿಸಿ ಪ್ರಫುಲ್ಲಿತನಾಗುತ್ತಾನೆ. ಆದರೆ ವಿವೇಕವಂತರು, ಉಚ್ಚಕುಲದ ಪಂಡಿತರುಗಳ ಮಧ್ಯದಲ್ಲಿ ಇವನು ಅಧೋಮುಖನಾಗಬೇಕಾಗುತ್ತದೆ. ಅವನಂತೂ ಉತ್ತಮ ಕುಲವನ್ನು ಕಲಂಕಿತ ಮಾಡುತ್ತಾನೆ. ವೇಶ್ಯೆಯ ಸಂಗತಿಯ ಕಾರಣ ಎಲ್ಲ ಪ್ರಕಾರದಿಂದ ಕುಕೀರ್ತಿರೂಪದ ಬಳ್ಳಿಯು ಜಗತ್ತಿನಲ್ಲಿ ಹರಡುತ್ತದೆ.

ವೇಶ್ಯೆಯ ಸಂಗತಿ ಮಾಡುವಂಥ ಪ್ರಾಣಿಯು (ಜೀವಗಳು) ಪ್ರಾಪ್ತ ಭವವನ್ನು ಸೋತು ಹೋಗುತ್ತಾರೆ. ವೇಶ್ಯೆಯ ಸಂಗತಿಯಿಂದ ಖಾದ್ಯ-ಅಖಾದ್ಯದ ವಿವೇಕವು ಉಳಿಯುವುದಿಲ್ಲ. ಅಭಕ್ಷ್ಯ ಭೋಜನ ಮಾಡುತ್ತಾನೆ, ಲಜ್ಜಾಹೀನ ವಚನಗಳನ್ನಾಡುತ್ತಾನೆ. ಹೇಗೆ ಮದೋನ್ಮತ್ತ ಆನೆಯು ಅಂಕುಶದ ಲೋಪ ಮಾಡುತ್ತದೆ ಹಾಗೆಯೇ ವೇಶ್ಯೆಯ ಸಂಗತಿ ಮಾಡುವಂಥ ಜೀವನು ದೇವ-ಗುರು-ಧರ್ಮದ ಆಜ್ಞೆಯ ಉಲ್ಲಂಘನೆ ಮಾಡುತ್ತಾನೆ. ವೇಶ್ಯಾ ವ್ಯಸನಿಯು ಮಾತಾ-ಪಿತಾದಿ ಗುರು ಜನರ ಆಜ್ಞೆಯಿಂದ ಪ್ರತಿಕೂಲನಾಗಿರುತ್ತಾನೆ. ನೇತ್ರಗಳಿಂದ ರಹಿತನಂತೂ ಅಂಧನೇ ಇದ್ದಾನೆ ಆದರೆ ವೇಶ್ಯಾವ್ಯಸನಿಯು ನೇತ್ರಯುಕ್ತನಾಗಿದ್ದರೂ ಅಂಧನೇ ಇದ್ದಾನೆ. ಈ ಪ್ರಕಾರ ವೇಶ್ಯಾವ್ಯಸನವು ಅನೇಕ ದೋಷಸಹಿತವಿದೆ. ಅದಕ್ಕಾಗಿ ವಿವೇಕವಂತ ಧರ್ಮಾತ್ಮರು ತಮ್ಮ ವ್ರತದ ರಕ್ಷಣೆಯ ಸಲುವಾಗಿ ಅತಿಚಾರ ಸಹಿತ ವೇಶ್ಯಾವ್ಯಸನದ ತ್ಯಾಗ ಮಾಡುವುದು ಉಚಿತವಿದೆ.

**ಬೇಟೆಯವ್ಯಸನ-** ಇದು ನಿರ್ದಯ ಚಿತ್ತದ ಧಾರಕ ಜೀವಗಳ ವ್ಯಸನವಿದೆ. ನೀಚ ಕುಲದಲ್ಲಿ ಉತ್ಪನ್ನವಾದ ಜೀವರುಗಳಿಂದಲೇ ಇಂಥ ಅನ್ಯಾಯವಾಗುತ್ತದೆ. ಉಚ್ಚ ಕುಲದವರಲ್ಲಿ, ದಯಾವಂತರಲ್ಲಿ, ಶುಭಾಚರಣವಂತ

ಸತ್ಪುರುಷರಲ್ಲಿ ಅನ್ಯ ಜೀವಗಳ ಘಾತ ಮಾಡುವಂಥ ಪರಿಣಾಮವಾಗುವುದಿಲ್ಲ. ಲೋಕದಲ್ಲಿಯಂತೂ ಅನ್ಯರನ್ನು ಸಂತುಷ್ಟಗೊಳಿಸುವ ಸಲುವಾಗಿ ಒಳ್ಳೆಯ ಆಹಾರ-ಪಾನೀಯಗಳನ್ನು ಕೊಡುತ್ತಾರೆ. ಹಸಿದಿರುವ ಪಶುಗಳಿಗೆ ಹುಲ್ಲು ಹಾಕಿ ಸುಖಿ ಮಾಡುತ್ತಾರೆ. ಅತಿಥಿ ಸತ್ಕಾರ ಮಾಡುತ್ತಾರೆ. ಮನೆಯ ಬಾಗಿಲಿಗೆ ಬಂದಿರುವ ಭಿಕ್ಷುಕ, ದರಿದ್ರರ ಮೇಲೆ ದಯೆ ಮಾಡಿ ದೀನರಿಗೆ ಭೋಜನದಾನ ಮಾಡುತ್ತಾರೆ, ಅನ್ಯರೊಂದಿಗೆ ಮಿಷ್ಟ ವಚನಗಳನ್ನಾಡಿ ಯಥಾಯೋಗ್ಯ ಅವರ ವಿನಯ ಮಾಡಿ ಸುಖ ನೀಡುತ್ತಾರೆ. ಇತ್ಯಾದಿ ಕ್ರಿಯೆಗಳಿಂದ ಹೇಗೆ ಸಾಧ್ಯವಿದೆಯೋ ಹಾಗೆ ಕೀರ್ತಿಯ ಸಲುವಾಗಿ ಮತ್ತು ಪುಣ್ಯದ ಸಲುವಾಗಿ ಒಳ್ಳೆಯ ಕಾರ್ಯಗಳಿಂದ ಅನ್ಯ ಜೀವಗಳನ್ನು ಸುಖಿ ಮಾಡುತ್ತಾರೆ. ಆದರೆ ಲೋಕದಲ್ಲಿ ದಯಾಪೂರ್ವಕ ಇಂಥ ಉಜ್ವಲ ಪ್ರವೃತ್ತಿ ಮಾಡುವಂಥ ಬುದ್ಧಿವಂತ ಜೀವರುಗಳು ಕೂಡ ಚೆನ್ನಾಗಿ ತಿಳಿಯುತ್ತಿದ್ದರೂ ದೀನ ಜೀವಗಳಾದ - ಪಶುಗಳ ದೇಹವನ್ನು ಶಸ್ತ್ರದಿಂದ ಗಾಯಗೊಳಿಸಿ, ಅವುಗಳ ಘಾತ ಮಾಡುತ್ತಾರೆ - ಇದು ಮಹದಾಶ್ಚರ್ಯವಿದೆ.

ಈ ಸುಜ್ಞಾನೀ ಜೀವರುಗಳ ಭಾವವು ಇಷ್ಟೊಂದು ಕಠೋರ ಹೇಗಾಗುತ್ತದೆ. ಆ ಪಶುಗಳದೇ ಪಾಪದ ಉದಯವಿರಬೇಕೆನಿಸುತ್ತದೆ; ಅಂತೆಯೇ ಸಜ್ಜನರು ಸದಾ ದೀನರಿಗೆ ಅನ್ನಾದಿಗಳನ್ನು ಕೊಡುವಂಥವರು, ಶೀತದಲ್ಲಿ ವಸ್ತ್ರನೀಡಿ ದೀನರ ರಕ್ಷಣೆ ಮಾಡುವಂಥ ಪುರುಷರಿಗೂ ಕೂಡ ಶಸ್ತ್ರ, ಬಾಣ, ಗುಂಡುಗಳಿಂದ ಪಶುಗಳನ್ನು ಕೊಲ್ಲುವಲ್ಲಿ ದಯೆ ಬರುವುದಿಲ್ಲ. ಆ ಸಮಯದಲ್ಲಿ ಅವರ ಭಾವವು ಇಷ್ಟು ಕಠೋರ ಪಾಪರೂಪ ಹೇಗಾಗುತ್ತದೆ? ಇದು ಮಹಾ ಅಚ್ಚರಿಯ ಮಾತಿದೆ. ಬುದ್ಧಿವಂತರು, ದಯಾವಂತರು, ಧರ್ಮದ ಸಲುವಾಗಿ ಧನ ತೊಡಗಿಸುವಂಥ ಮಹಾಪುರುಷರು ಅನ್ಯರ ಪ್ರಾಣಗಳ ಘಾತವನ್ನು ಹೇಗೆ ತಾನೆ ಮಾಡಬಹುದಾಗಿದೆ ? ಇದು ಸಖೇದ ಆಶ್ಚರ್ಯವಿದೆ.

ಯಾರಿಗೆ ಅನ್ಯರ ಪ್ರಾಣಪೀಡಿತಗೊಳಿಸುವಲ್ಲಿ ದಯೆ ಬರುವುದಿಲ್ಲ ಅವರು ದಯಾರಹಿತ ಭಾವಗಳ ಧಾರಕ ಬೇಟೆಗಾರರಿದ್ದಾರೆಂದು ತಿಳಿಯುವುದು ತಮ್ಮ ಪುತ್ರನ ಪಾಲನೆ ಮಾಡುವ ಸಲುವಾಗಿ ಅನ್ಯರ ಪುತ್ರನ ಘಾತ ಮಾಡುವಂಥವನು ಬೇಟೆಗಾರನಿದ್ದಾನೆ. ಆ ಜೀವನು ಪಾಪದ ಅಧಿಕಾರಿಯಾಗಿ ನರಕದ ಪಾತ್ರನಾಗುತ್ತಾನೆ.

ಮಹಾದೀನ, ಮಹಾಭೀರು, ಯಾರ ಕುರಿತಾಗಿಯೂ ದ್ವೇಷವನ್ನಿಟ್ಟುಕೊಳ್ಳದ, ಕಾನನದ ತೃಣ-ಹುಲ್ಲು ತಿಂದು ತನ್ನ ದೇಹದ ರಕ್ಷಣೆ ಮಾಡಿಕೊಳ್ಳುವಂಥ, ದೀನನಿರ್ದೋಷ ವನ್ಯಪಶುಗಳನ್ನು ಶಸ್ತ್ರದಿಂದ ಸಾಯಿಸುವಂಥವನು ನಿರ್ದಯಿಯಿದ್ದಾನೆ-ಮಹಾಕಠೋರ ಚಿತ್ತದ ಧಾರಕನಿದ್ದಾನೆ. ಮುಗ್ಧ, ಅಜ್ಞಾನಿ, ಅಸಹಾಯ ವನ್ಯ ಪಶುಗಳನ್ನು ಛಲ-ಬಲದಿಂದ ಸಾಯಿಸುವಂಥ ಪಾಪಾಚಾರಿಗಳು ಪಾಪದ ಮಹಾನ ಭಾರ ಕಟ್ಟಿಕೊಳ್ಳುತ್ತಾರೆ. ಅವರ ಈ ಪಾಪವು ಹೇಗೆ ಕಳೆಯುವುದು ಯಾರಿಗೆ ಗೊತ್ತು ! ಜ್ಞಾನರಹಿತ, ದಯಾರಹಿತ ಕೆಲವು ನೀಚ ಕುಲದವರು ಇದು ನಮ್ಮ ಧರ್ಮವಿದೆಯೆಂದು ಹೇಳುತ್ತಾರೆ. ಕೆಲವರು ಇದು ನಮ್ಮ ವ್ಯಾಪಾರವಿದೆಯೆನ್ನುತ್ತಾರೆ - ಇವರೆಲ್ಲರೂ ಕಟುಕರಿದ್ದಾರೆ. ಜೀವಗಳನ್ನು ಸಾಯಿಸುವಂಥ ಚಾಂಡಾಲರಿದ್ದಾರೆ ಅವರ ಮನೆಯಲ್ಲಿ ಧರ್ಮದ ಅಭಾವವಿದೆ. ಜೀವಘಾತ ಮಾಡುವಂಥ ಪ್ರಾಣಿಗಳು ಕಟುಕನ ಹಾಗಿವೆ. ಆ ಜೀವಘಾತಕ ಜೀವಗಳ ಮುಖ ನೋಡುವುದರಿಂದಲೂ ಪಾಪವಾಗುತ್ತದೆ. ಉತ್ತಮ ಕುಲದಲ್ಲಿ ಉತ್ಪನ್ನ ಜೀವಗಳು ಅನ್ಯ ಜೀವಗಳ ಘಾತ ಮಾಡುವುದಿಲ್ಲ. ಅನ್ಯ ಜೀವಗಳ ಘಾತ ಮಾಡುವಂಥವರನ್ನು ಹೀನ ಕುಲದವರೆಂದು ತಿಳಿಯುವುದು. ಅನ್ಯ ಜೀವಗಳ ಪ್ರಾಣ ರಕ್ಷಣೆ ಮಾಡುವಂಥವರೇ ಉಚ್ಚಕುಲೀನರಿದ್ದಾರೆ. ಇದು ಹೀನ ಹಾಗೂ ಉಚ್ಚಕುಲ ಗುರುತಿಸುವ ಸಾಧನವಿದೆ. ಭಿಲ್ಲ ಮೊದಲಾದ ಕಾಡು ಮನುಷ್ಯರು ಕಾಡು ಪ್ರಾಣಿಗಳನ್ನು ಸಾಯಿಸುತ್ತಾರೆ.

ದಯಾವಂತನಂತೂ 'ಅಯ್ಯೋ ! ಯಾವುದೇ ಅಪರಾಧವಿಲ್ಲದೇ ಅನ್ಯ ಜೀವಗಳ ಘಾತವನ್ನು ಹೇಗೆ ಮಾಡುವುದು ?'- ಎಂದು ಯೋಚಿಸುತ್ತಾನೆ. ಪಾಪ ಆ ದೀನ ವನ್ಯ ಪ್ರಾಣಿಗಳು ಯಾರ ಮನೆಗೆ ಹೋಗಿ ಪೀಡಿಸುವುದಿಲ್ಲ; ಏನನ್ನೂ ಕೇಳುವುದಿಲ್ಲ. ಯಾರ ಹೊಲ-ಗದ್ದೆಯನ್ನು ನಷ್ಟಗೊಳಿಸುವುದಿಲ್ಲ, ಯಾರ ವನ-ಬಳ್ಳಿಗಳ

ಹಣ್ಣು ಕಾಯಿಗಳನ್ನು ತಿನ್ನುವುದಿಲ್ಲ. ವನದ ಹುಲ್ಲು, ವನದ ಹಣ್ಣು, ಎಲೆಗಳನ್ನು ತಿಂದು ಹರಿಯುವ ನದಿ-ಕೆರೆಗಳಲ್ಲಿರುವ ನೀರನ್ನು ಕುಡಿಯುತ್ತವೆ. ದೊರಕದಿದ್ದರೆ ಹಾಗೇ ಹಸಿದುಕೊಂಡೇ ಇರುತ್ತವೆ. ಯಾರೊಂದಿಗೂ ಜಗಳ-ಕಾದಾಟ ಮಾಡುವುದಿಲ್ಲ, ಯಾರ ಮೇಲೆಯೂ ಕ್ರೋಧ ಮಾಡುವುದಿಲ್ಲ. - ಇಂಥ ದೀನ ಪಶುಗಳನ್ನು ಸಾಯಿಸುವಂಥ ಕಟುಕರು ತಮ್ಮ ಪರಭವ ಕೆಡಿಸಿಕೊಳ್ಳುತ್ತಾರೆ.

ಎಲ್ಲ ಜೀವಗಳಲ್ಲಿ ಅಧಿಕ ಪಾಪಿಯು ಸಿಂಹವಿದೆ, ಆ ಪಾಪೀ ಸಿಂಹವನ್ನು ಸಾಯಿಸುವುದರಲ್ಲಿ ಶೂರತೆ ಮನ್ನಿಸುವಂಥವರು ಅದಕ್ಕಿಂತಲೂ ಅಧಿಕ ಪಾಪಿಯಿದ್ದಾರೆ.

ಕಾನನದಲ್ಲಿ ಸೂಕರಗಳನ್ನು ಸಾಯಿಸಿ ಸ್ವಯಂ ತಮ್ಮನ್ನು ಶೂರರೆಂದು ಮನ್ನಿಸುವಂಥವರು ಶೂರರಲ್ಲ, ಬೇಟೆಗಾರರಿದ್ದಾರೆ. ಜಿಂಕೆ, ಮೊಲ, ನರಿಗಳನ್ನು ಸಾಯಿಸುವಂಥವರು ಶ್ವಾನರಿದ್ದಾರೆ; ಅವರು ಭವಾಂತರದಲ್ಲಿ ಶ್ವಾನರೂಪದಲ್ಲಿಯೇ ಉತ್ಪನ್ನರಾಗುತ್ತಾರೆ. ಗುಬ್ಬಚ್ಚಿ, ಪಾರಿವಾಳ, ನವಿಲು, ಗೌಜಲಹಕ್ಕಿ, ಗಿಡಗ, ಮೊಸಳೆ ಮೊದಲಾದ ಪಕ್ಷಿ ಹಾಗೂ ಜಲಚರಗಳನ್ನು ಕೊಲ್ಲುವಂಥವರು ಬೇಟೆಗಾರರಿದ್ದಾರೆ - ಅನ್ಯ ಜೀವಗಳನ್ನು ಸಾಯಿಸುವಂಥ ನಿರ್ದಯ ಪರಿಣಾಮಿಗಳು ನಿಶ್ಚಯದಿಂದ ನರಕಾದಿ ಗತಿಗಳ ಪಾತ್ರರೆಂದು ತಿಳಿಯುವುದು. ವಿವೇಕವಂತರು, ದಯಾಮಯಿಗಳು ಜೀವಗಳ ಘಾತಮಾಡುವುದಿಲ್ಲ. ಉತ್ತಮ ಪರಿಣಾಮಧಾರಕ ಭವ್ಯರು ಯಾವ ಕಾರ್ಯ ಮಾಡುವುದಿಲ್ಲವೆಂಬುದನ್ನು ಈಗ ಹೇಳುತ್ತಾರೆ.

ದಯಾಮಯಿಗಳು ಬಾಣ, ಗುಂಡು, ಕವಣೆ, ಖಡ್ಗ, ಚಾಕು, ಕಿರುಗತ್ತಿ ಇತ್ಯಾದಿ ಶಸ್ತ್ರಗಳನ್ನು ಇಟ್ಟುಕೊಳ್ಳುವುದಿಲ್ಲ. ಶಸ್ತ್ರದಿಂದ ಸಾಯಿಸುವೆನು- ಎಂಬ ವಚನವನ್ನಾಡುವುದಿಲ್ಲ ಮತ್ತು ಪಂಜರ, ಪಾಶಗಳನ್ನು ನಿರ್ಮಿಸುವುದಿಲ್ಲ, ಅವನ್ನು ಇಟ್ಟುಕೊಳ್ಳುವುದೂ ಇಲ್ಲ. ಆಲ, ಕಳ್ಳಿ, ಎಕ್ಕೆಯ ಹಾಲಿನಿಂದ ಅಂಟು ನಿರ್ಮಿಸಿ ಪಕ್ಷಿಗಳನ್ನು ಹಿಡಿಯುವುದಿಲ್ಲ. ಕೋಲು ಅಥವಾ ಮುಷ್ಠಿಯಿಂದ ಹೊಡೆಯುವ, ಗುದ್ದುವ, ಕಾಲಿನಿಂದ ಒದೆಯುವ ಕಾರ್ಯ ಮಾಡುವುದಿಲ್ಲ. ಜಾಲ ನಿರ್ಮಿಸುವುದಿಲ್ಲ, ಇಟ್ಟುಕೊಳ್ಳುವುದಿಲ್ಲ ಮತ್ತು ಮಾರುವುದಿಲ್ಲ - ಹಿಂಸಾಕಾರಕ ವಸ್ತುಗಳ ವ್ಯಾಪಾರ ಮಾಡುವುದಿಲ್ಲ. ಬಾಣ, ಬಂದೂಕು, ಭರ್ಚಿ, ಚೂರಿ ಮೊದಲಾದ ಅನ್ಯ ಜೀವಘಾತಕ ಶಸ್ತ್ರಗಳ ನಿರ್ಮಾಣ ಮಾಡುವಂಥವರ ಜತೆ ದಯಾವಂತರು ಕೊಡ-ಕೊಳ್ಳುವ ವ್ಯವಹಾರ ಮಾಡುವುದಿಲ್ಲ. ಕೊಡಲಿ, ಕುಡಗೋಲು, ಗುದ್ದಲಿ, ನೇಗಿಲು ಮೊದಲಾದುವನ್ನು ತಯಾರು ಮಾಡುವಂಥವರೊಂದಿಗೆ ಕೂಡ ಯಾವುದೇ ಕೊಡ-ಕೊಳ್ಳುವ ವ್ಯವಹಾರವಿಟ್ಟುಕೊಳ್ಳುವುದಿಲ್ಲ. ಭೂಮಿಯನ್ನು ಅಗೆಯುವಂಥವರು; ನದಿ, ಕೆರೆ, ಬಾವಿಯಿಂದ ನೀರು ತಗೆಯುವಂಥ ಹಾಗೂ ಬಾವಿ ಮೊದಲಾದವನ್ನು ಒಡೆಯುವಂಥವರೊಂದಿಗೆ ಕೊಡ-ಕೊಳ್ಳುವುದನ್ನು ಮಾಡುವುದಿಲ್ಲ. ಬಹಳಷ್ಟು ನೀರು ಮಥಿಸುವಂಥವರು, ಅಧಿಕ ನೀರು ಚೆಲ್ಲುವಂಥವರು, ಅಧಿಕ ಅಗ್ನಿ ಉರಿಸುವಂಥವರು, ಸೂಜಿ-ಸರಪಳಿಯ ಕೆಲಸ ಮಾಡುವಂಥವರ ಜತೆಯೂ ಕೊಡ-ಕೊಳ್ಳುವ ವ್ಯವಹಾರ ಮಾಡುವುದಿಲ್ಲ - ಇವೆಲ್ಲವೂ ಬೇಟೆ-ಹಿಂಸೆಯ ದೋಷಗಳಿವೆ. ಅಂಥವರ ಧನವು ಮನೆಗೆ ಬಂದರೂ ಬೇಟೆಯ ಸಮಾನ ದೋಷಗಳು ಉತ್ಪನ್ನವಾಗುತ್ತವೆ.

ಧಾನ್ಯ, ಜೀರಿಗೆ, ಎಳ್ಳು, ಕೊತ್ತಂಬರಿ ಬೀಜ, ಶುಂಠಿ, ಅರಷಿಣ ಇತ್ಯಾದಿ ಕಾಷ್ಠ ಕಿರಾಣಿ ಮತ್ತು ರೇಷ್ಮೆ, ಚರ್ಮ, ನಾರು, ಕೇಶ, ಕೊಂಬು, ಮೂಳೆ ಇತ್ಯಾದಿಗಳ ಅಂಗಡಿ ಇಡುವುದಿಲ್ಲ. ಕನ್ನಡಿ, ಸೋರುಪ್ಪು ಇತ್ಯಾದಿಗಳ ಹಿಂಸಕ ವ್ಯಾಪಾರ ಮಾಡುವುದಿಲ್ಲ - ಇವೆಲ್ಲವುಗಳಲ್ಲಿ ಬೇಟೆಯ ಸಮಾನ ದೋಷವಿರುವುದನ್ನು ತಿಳಿದು ದಯಾಮಯಿಗಳು ಇವುಗಳ ವ್ಯಾಪಾರ ಮಾಡುವುದಿಲ್ಲ.

ಕಾಷ್ಠ, ಪಾಷಾಣ, ಚಿತ್ರದ ಪುತ್ಥಳಿ ಹಾಗೂ ದೇವ, ಮನುಷ್ಯ, ಪಶುವಿನ ಸ್ಥಾಪನೆಯ ಆಕಾರಗಳನ್ನು ಕೆಡಿಸುವುದರಲ್ಲಿ ಬೇಟೆಯ ಸಮಾನ ದೋಷ ತಗಲುತ್ತದೆ. ಚದುರಂಗದಲ್ಲಿ ಸ್ಥಾಪನಾ ನಿಕ್ಷೇಪದಿಂದ ನಿಕ್ಷೇಪಿತ ಆನೆ,

ಕುದುರೆ, ಮನುಷ್ಯ, ರಾಜಾದಿರೂಪ ಜೀವಗಳ ಸೋಲು-ಗೆಲುವಿನಲ್ಲಿ ಬೇಟೆಯ ಸಮಾನ ದೋಷ ಬರುತ್ತದೆ. ಅದರಿಂದ ಧರ್ಮಾತ್ಮರು ಚದುರಂಗ ಆಡುವುದಿಲ್ಲ. ವನದಲ್ಲಿ, ಮನೆಯಲ್ಲಿ ಬೆಂಕಿ ಹಚ್ಚುವುದರಿಂದ ಬೇಟೆಯ ಸಮಾನ ದೋಷ ತಗಲುತ್ತದೆ. ಅನ್ಯ ಜೀವಗಳಿಗೆ ಭಯವನ್ನುಂಟು ಮಾಡುವ ಹೊಡೆ-ಹೊಡೆ(ಕೊಲ್ಲು-ಕೊಲ್ಲು) ಎಂಬ ಶಬ್ದವನ್ನಾಡಬಾರದು. ವೃಕ್ಷ, ಬಳ್ಳಿ, ಮೊಗ್ಗೆ, ಹುಲ್ಲು, ಗಿಡಗಳನ್ನು ಕೀಳಬಾರದು-ಕತ್ತರಿಸಬಾರದು. ತುಚ್ಛ ಜೀವಜಂತುಯುಕ್ತ ಬಟ್ಟೆಗಳನ್ನು ಬಿಸಿಲಿನಲ್ಲಿ ಹಾಕಬಾರದು. ತಿಗಣೆ ಇರುವ ಮಂಚ, ಹಾಸಿಗೆಗಳನ್ನು ಮಾರ್ಗದಲ್ಲಿ ಕೊಡಹಬಾರದು, ಅನ್ಯ ಜೀವಗಳಿಗೆ ಶೋಕ ಮಾಡಿಸಬಾರದು. ಜೀವಗಳ ಮೇಲೆ ಮರ್ಯಾದೆ ಮೀರಿ ಭಾರ ಹೊರಿಸಬಾರದು, ಬಾಡಿಗೆಗೆ ಗೊತ್ತು ಮಾಡಿದ ವಾಹನದಲ್ಲಿ ತಿಳಿಯದಂತೆ ಅಧಿಕ ಭಾರವಿಡಬಾರದು. ಇವೆಲ್ಲ ಕಾರ್ಯಗಳ ಕುರಿತಾಗಿ ತಮ್ಮ ವ್ರತದ ರಕ್ಷಣೆಯ ಸಲುವಾಗಿ ದಯಾವಂತರು ಸಾವಧಾನರಿರುತ್ತಾರೆ; ವಿರುದ್ಧ ಪಾಪ ಮಾಡುವುದಿಲ್ಲ.

ದಯಾಮಯಿಗಳು ಹೇನು, ಸೀರುಗಳನ್ನು ಕೊಲ್ಲುವುದಿಲ್ಲ. ಎಲ್ಲ ಜೀವಗಳನ್ನು ತಮ್ಮ ಸಮಾನ ತಿಳಿದು, ಎಲ್ಲವುಗಳ ರಕ್ಷಣೆ ಮಾಡುತ್ತಾರೆ. ದಯಾರಹಿತ, ದುರ್ಗತಿಗಾಮಿ, ಅಜ್ಞಾನೀ ಜೀವನು ಅನ್ಯರಿಗೆ ಶಸ್ತ್ರದಿಂದ ಹೊಡೆಯುವ ಸಮಯದಲ್ಲಿ ದಯೆ ಮಾಡುವುದಿಲ್ಲ. ಆದರೆ ತನ್ನ ದೇಹಕ್ಕೆ ಅತ್ಯಲ್ಪ ಬಾಧೆಯಾದರೂ ಚಿಕ್ಕ ಮುಳ್ಳು ತಾಗಿದರೂ ಹೇಡಿಯಾಗಿ ದುಃಖಿಯಾಗುತ್ತಾನೆಂದ ಮೇಲೆ ಕಠೋರ ಬುದ್ಧಿಯು ಅನ್ಯ ಜೀವಗಳನ್ನು ಶಸ್ತ್ರದಿಂದ ಹೇಗೆ ಕೊಲ್ಲುತ್ತಾನೆ ? ತನಗೆ ಅತ್ಯಲ್ಪ ಭಯವನ್ನಾಲಿಸಿಯೂ ಅವಿತುಕೊಳ್ಳುತ್ತಾನೆ - ಭಯದಿಂದ ಕಂಪಿಸುತ್ತಾನೆ ಆದರೆ ಆ ಪಾಪಿಯು ದೀನ ಪಶುಗಳ ಮೇಲೆ ಶಸ್ತ್ರ ಪ್ರಯೋಗ ಮಾಡುವಾಗ ಕಂಪಿಸುವುದಿಲ್ಲ - ಇದೆಲ್ಲವೂ ಬೇಟೆಯ ವ್ಯಸನವಿದೆ.

ನೋಡಿರಿ, ತಾನು ಯುದ್ಧಕ್ಕೆ ಹೋಗುವಾಗ ತನ್ನ ಶರೀರದ ರಕ್ಷಣೆಯ ಸಲುವಾಗಿ ಕವಚ (ಚಿಲಕತ್ತು) ಧರಿಸಿದರೂ, ತಲೆಯ ಮೇಲೆ ಶಿರಸ್ತ್ರಾಣ ಹಾಕಿಕೊಂಡರೂ ಮುಂದೆ ಹೃದಯಸ್ಥಳಕ್ಕೆ ಅಡ್ಡಲಾಗಿ ಗುರಾಣಿ ಹಿಡಿದುಕೊಂಡಿದ್ದರೂ ಹೇಡಿಯಾದ ಪಾಪಿಯು ಹೆದರುತ್ತ-ಹೆದರುತ್ತ ಹೋಗುತ್ತಾನೆ. ಆದರೆ ದೀನ ಪಶುಗಳ ಶರೀರದ ಮೇಲೆ ನಿಃಶಂಕನಾಗಿ ಬಾಣ, ಗುಂಡು, ಖಡ್ಗ ಪ್ರಯೋಗ ಮಾಡಿ ಸಾಯಿಸುವಾಗ ದಯೆ ಮಾಡುವುದಿಲ್ಲ. ವನದಲ್ಲಿ ವಿಹರಿಸುವ ದೀನ ಜೀವಗಳನ್ನು ಕಪಟದಿಂದ ಜಾಲದಲ್ಲಿ ಹಿಡಿದು ಶಸ್ತ್ರಪ್ರಯೋಗ ಮಾಡುವಾಗ ದಯೆ ಬರುವುದಿಲ್ಲ. ಅಂಥ ಜೀವಗಳು ದುರ್ಗತಿಗಾಮಿ ಬೇಟೆಗಾರರಿದ್ದಾರೆ. ಅಂಥವರಿಗೆ ಮೂರು ಲೋಕದಲ್ಲಿ ಎಲ್ಲಿಯೂ ಸುಖವಿರುವುದಿಲ್ಲ. ಈ ಬೇಟೆಯ ವ್ಯಸನವು ಮಹಾಪಾಪಮಯವಿದೆ. ಆ ಪಾಪವು ಭವ-ಭವಗಳಲ್ಲಿ ಮಹಾದುಃಖವನ್ನು ಉತ್ಪನ್ನ ಮಾಡುತ್ತದೆ. ಅಂತೆಯೇ ವಿವೇಕಿ ಧರ್ಮಾತ್ಮರು ಎಲ್ಲ ಜೀವಗಳನ್ನು ತಮ್ಮ ಸಮಾನ ತಿಳಿದು, ಎಲ್ಲ ಜೀವಗಳ ರಕ್ಷಣೆಯ ಸಲುವಾಗಿ ಬೇಟೆಯ ವ್ಯಸನವನ್ನು ತ್ಯಾಗ ಮಾಡುತ್ತಾರೆ.

**ಕಳವಿನ ವ್ಯಸನ -** ಕೊಡದಿರುವ ಬೇರೆಯವರ ಪದಾರ್ಥವನ್ನು ತಗೆದುಕೊಳ್ಳದಿರುವ ಜೀವನು ಕಳವು - ಚೋರೀ ವ್ಯಸನದ ತ್ಯಾಗಿಯಿದ್ದಾನೆ. ಕಳವು ಮಹಾಮೋಸದ ಸಮೂಹವಿದೆ. ಬೇರೆಯವರ ಧನವನ್ನು ತಗೆದುಕೊಳ್ಳುವುದು ಕಳವು ಇದೆ; ಇದನ್ನು ಅದತ್ತಾದಾನವೆಂದೂ ಹೇಳುತ್ತಾರೆ. ಈ ಅದತ್ತಾದಾನವನ್ನು ತಗೆದುಕೊಳ್ಳುವಂಥವನು ಕಳ್ಳನೆನಿಸುತ್ತಾನೆ. ಕಳ್ಳನು ಬೇರೆಯವರ ಧನ ಹರಣ ಮಾಡುವ ಸಲುವಾಗಿ ವಿವಿಧ ಚತುರತೆಯೊಂದಿಗೆ ಅನ್ಯರ ಮನೆಯೊಡೆಯುತ್ತಾನೆ. ಅನ್ಯರ ಜೇಬಿನೊಳಗಿನ ಧನವನ್ನು ತಗೆದುಕೊಳ್ಳುತ್ತಾನೆ. ಅನ್ಯರು ಇಟ್ಟಿರುವ ಧನವನ್ನು ಗೊತ್ತಾಗದಂತೆ ಎತ್ತಿ ಬಿಡುತ್ತಾನೆ. ಅನ್ಯರ ಧನವನ್ನೆತ್ತಿ ಬೇರೆ ಕಡೆಗೆ ಇರಿಸುತ್ತಾನೆ- ಇತ್ಯಾದಿ ಕಾರ್ಯಗಳೆಲ್ಲವೂ ಕಳವು ವ್ಯಸನವಿದೆ.

ಕಳವು ಮಾಡುವಂಥವನ ಪರಿಣಾಮವು ಮಹಾಕಠೋರ, ನಿರ್ದಯವಿರುತ್ತದೆ. ಅನ್ಯರ ಧನವನ್ನು

ಕದಿಯುವಂಥವನು ಮಹಾಪಾಪಿಯಿದ್ದಾನೆ. ಸಂಸಾರದಲ್ಲಿ ಜೀವರುಗಳಿಗೆ ಈ ಧನವು ಪ್ರಾಣಕ್ಕಿಂತ ಪ್ರಿಯವೆನಿಸುತ್ತದೆ. ಹೇಗೆ ಈ ಜೀವನು ದಶ(ಹತ್ತು) ಪ್ರಾಣಗಳನ್ನು ಧಾರಣ ಮಾಡಿ ಸುಖಿಯಿರುತ್ತಾನೆ; ಹಾಗೆಯೇ ಈ ಜೀವನು ಧನದಿಂದ ಸುಖಿಯಾಗಿರುತ್ತಾನೆ. ಅದರಿಂದ ಈ ಧನವು ಜೀವದ ಹನ್ನೊಂದನೇ ಪ್ರಾಣವಿದೆ. ಅಂತೆಯೇ ಈ ಧನವನ್ನು ಕದಿಯುವಂಥವನು ಮಹಾಪಾಪಿಯಿದ್ದಾನೆ.

ಬೇರೆಯವರ ಧನ ಹರಣ ಮಾಡುವ ಸಲುವಾಗಿ ಛಲ-ಬಲಗಳ ಪ್ರಯೋಗ ಮಾಡುತ್ತಾನೆ. ಅನ್ಯರ ಧನ ಹರಣ ಮಾಡುವ ಸಲುವಾಗಿ ಕೆಲವರು ದಾರಿಯಲ್ಲಿ ಹೋಗುತ್ತಿರುವ ಜನರನ್ನು ಭಯಭೀತಗೊಳಿಸಿ ಧನ ಹರಣ ಮಾಡುತ್ತಾರೆ. ಕೆಲವರು ಬಲವಂತತೆಯಿಂದ ನಗರ-ಮನೆಗಳ ಮೇಲೆ ದಾಳಿ ಮಾಡಿ, ಮನೆಗಳಲ್ಲಿರುವ ಧನ ಲೂಟಿ ಮಾಡಿಕೊಂಡು ಹೋಗುತ್ತಾರೆ - ಇವರನ್ನು ದರೋಡೆಖೋರರೆನ್ನುತ್ತಾರೆ, ಕೆಲವರು ಕಪಟ- ವಂಚನೆಯೊಂದಿಗೆ ಅನೇಕ ವೇಷ ಬದಲಿಸಿ ಮನೆಯವರ ಕುತ್ತಿಗೆ ಒತ್ತಿ , ಧನ ಹರಣ ಮಾಡುವಂಥ ಕಳ್ಳರಿದ್ದಾರೆ. ಕೆಲವರು ಬರೆದಿರುವ ಕಾಗದದಲ್ಲಿ ತಪ್ಪು ಮಾಡಿ ಅನ್ಯರ ಧನವಿಟ್ಟುಕೊಳ್ಳುವಂಥ ಕಳ್ಳರಿದ್ದಾರೆ. ಕೆಲವರು ಬೇರೆಯವರು ಇಟ್ಟಿರುವ ಧನವನ್ನು ತಿಳಿಯುತ್ತಿದ್ದರೂ, ಸ್ಮರಣೆಯಿದ್ದರೂ ಇಲ್ಲವೆಂದು ಹಾರಿಸಿ ಬಿಡುವಂಥ ಕಳ್ಳರಿದ್ದಾರೆ. ಸಾಲದ ರೂಪದಲ್ಲಿ ಅನ್ಯರ ಧನ ತಗೆದುಕೊಂಡು ಮರಳಿ ಕೊಡದಿರುವಂಥ ಕಳ್ಳರಿದ್ದಾರೆ - ಇವೆಲ್ಲವೂ ಕಳ್ಳರ ಚಿಹ್ನೆಗಳಿವೆ.

ಮತ್ತೆ ಕೆಲವರು ಸ್ವಯಂ ತಾವು ಕಳವು ಮಾಡದಿದ್ದರೂ ಕಳ್ಳರಿಗೆ ಕಳವು ಮಾಡುವಲ್ಲಿ ಸಹಾಯಕರಾಗುತ್ತ ಕಳವು ಮಾಡುವ ಸಲುವಾಗಿ ಅವರಿಗೆ ಅನುಕೂಲ ಉಪಕರಣಗಳನ್ನು ನೀಡಿ, ಮಾರ್ಗ ತಿಳಿಸಿಕೊಡುತ್ತಾರೆ; ಅವರು ಕೂಡ ಕಳ್ಳರ ಸಮಾನರೇ ಇದ್ದಾರೆ. ಕಳ್ಳರ ಪಕ್ಷವಹಿಸಿ, ಕಳ್ಳರಿಂದ ಲಂಚ ಪಡೆದು, ಕಳ್ಳರಿಗೆ ಕೆಲಸ-ನೌಕರಿ ಕೊಟ್ಟು, ಕಳವು ಮಾಡಿಸಿ ಧನ ಹಂಚಿಕೊಳ್ಳುವಂಥವರೂ ಕಳವಿನ ಸಮಾನ ಫಲದ ಧಾರಕರಿದ್ದಾರೆ. ಕಳ್ಳರಿಗೆ ಕಳವಿನ ಮೇಲೆ ಸಾಲ ನೀಡಿ, ಕಳ್ಳರ ಜೊತೆಗೆ ವಾಣಿಜ್ಯ-ವ್ಯಾಪಾರವನ್ನಿಟ್ಟುಕೊಳ್ಳುವುದೂ ಕೂಡ ಕಳವಿನ ಸಮಾನ ಫಲವೀಯುತ್ತದೆ. ಅದರಿಂದ ವಿವೇಕವಂತರು ತಮ್ಮ ವ್ರತವನ್ನು ನಿರ್ದೋಷವಾಗಿಟ್ಟುಕೊಳ್ಳುವ ಸಲುವಾಗಿ ಉಪರ್ಯುಕ್ತ ಕಾರ್ಯ ಮಾಡುವುದಿಲ್ಲ. ಅವರು ಈ ಅದತ್ತಾದಾನ ತ್ಯಾಗದ ಅತಿಚಾರಗಳನ್ನೂ ತಗಲಗೊಡುವುದಿಲ್ಲ. ಈಗ ಅವುಗಳನ್ನು ಹೇಳುತ್ತಾರೆ -

ಯಾವನೋ ಒಳ್ಳೆಯ ಕಳವಿನ ಕಲೆಯ ಧಾರಕನನ್ನು ಅನುಮೋದಿಸುವುದಿಲ್ಲ. ತಕ್ಕಡಿಯಿಂದ ತೂಗುವ ಕ್ವಿಂಟಲ, ಕೀಲೋಗ್ರಾಮ, ಮಿಲಿಗ್ರಾಮ ಮೊದಲಾದ ಅಳತೆಗಳನ್ನು ಹೆಚ್ಚು-ಕಡಿಮೆ ಮಾಡುವುದಿಲ್ಲ. ಎಂದರೆ ತಗೆದುಕೊಳ್ಳುವ ಕ್ವಿಂಟಲ, ಕಿಲೋಗ್ರಾಮ, ಮಿಲಿಗ್ರಾಮಗಳನ್ನು ಹೆಚ್ಚು (ದೊಡ್ಡವು) ಮತ್ತು ಕೊಡುವ ಸಲುವಾಗಿ ಇವೆಲ್ಲ ಕಡಿಮೆ (ಚಿಕ್ಕವು) ಇಡುವುದು ಕೂಡ ಕಳವು ಇದೆ. ಒಳ್ಳೆಯ ವಸ್ತುವಿನಲ್ಲಿ ಅಗ್ಗದ ವಸ್ತುವನ್ನು ಸೇರಿಸುವುದು ಕಳವಿನ ಸಮಾನವಿದೆ. ವಿವೇಕವಂತರು ಉಚ್ಚಕುಲದವರು ಇಂಥ ಕಳವು ಮಾಡುವುದಿಲ್ಲ. ಭಿಲ್ಲ ಮೊದಲಾದ ಹೀನ ಕುಲದ ಮನುಷ್ಯರು ಇಂಥ ಕಳವು ಮಾಡುತ್ತಾರೆ. ಜೂಜಿನಲ್ಲಿ ಧನ ಕಳೆದುಕೊಂಡವರು, ಜಿಹ್ವಾ ಲೋಲುಪಿಗಳು, ಸಂಪಾದನೆ ಮಾಡುವ ಜ್ಞಾನವಿಲ್ಲದಿದ್ದರೂ ಒಳ್ಳೊಳ್ಳೆಯ ಆಹಾರ-ಪಾನೀಯ, ವಸ್ತ್ರ-ಆಭೂಷಣಗಳನ್ನು ಬಯಸುವಂಥ ಕಾಪುರುಷನೂ ಕಳವು ಮಾಡುತ್ತಾನೆ. ವೇಶ್ಯಾವ್ಯಸನೀ, ಮಾಂಸಾಹಾರೀ, ಪರಸ್ತ್ರೀ ಲಂಪಟ ಇತ್ಯಾದಿ ಕುಬುದ್ಧಿಯಧಾರಕ ಜೀವರುಗಳು ಕಳವು ಮಾಡುವುದರಿಂದ ತಮ್ಮ ಪ್ರಾಪ್ತ ಭವ ವ್ಯರ್ಥ ಮಾಡಿಕೊಂಡು, ತಾವು ಮಾಡಿದ ಧರ್ಮವನ್ನೂ ನಷ್ಟಗೊಳಿಸುತ್ತಾರೆ. ತನ್ನ ಒಡೆಯನ ಕೇಡು ಬಯಸುವಂಥ ಸ್ವಾಮಿ ದ್ರೋಹಿಯು ಕಳವು ಮಾಡುತ್ತಾನೆ. ಮಿತ್ರನೊಂದಿಗೆ ಮೋಸ ಮಾಡುವ ಮಿತ್ರದ್ರೋಹಿ, ಅನ್ಯರಿಂದ ಮಾಡಲಾದ ಉಪಕಾರವನ್ನು ಮರೆಯುವಂಥ ಕೃತಘ್ನಿ, ಧರ್ಮ ಭಾವನೆಯಿಂದ ರಹಿತ ಪುರುಷ - ಇತ್ಯಾದಿ ಜೀವರುಗಳು ಕಳವು ಮಾಡುತ್ತಾರೆ.

ಧರ್ಮಕಳ್ಳ, ಮನೆಗಳ್ಳ ಮೊದಲಾದ ಅನೇಕ ರೂಪಗಳಿವೆ. ಧರ್ಮಸ್ಥಾನದಲ್ಲಿ ಕಳವು ಮಾಡುವಂಥ ಪಾಪೀ

ಜೀವಗಳು ಧರ್ಮಕಳ್ಳರಿದ್ದಾರೆ. ತಂದೆ, ತಾಯಿ, ಸಹೋದರ, ಪತ್ನಿ, ಪುತ್ರ ಮೊದಲಾದವರ ಧನ ಕಳವು ಮಾಡಿ ಇಟ್ಟುಕೊಳ್ಳುವಂಥವರು ಮನೆಗಳ್ಳರಿದ್ದಾರೆ. ಅನ್ಯರ ಮನೆಗಳಲ್ಲಿರುವ ಧನ ಕದಿಯುವಂಥವರು ಮನೆಗಳ್ಳರಿದ್ದಾರೆ. ಅದರಿಂದ ಅವರು ರಾಜದಂಡನೆ ಅಥವಾ ಪಂಚರಿಂದ ಕೊಡಲಾದ ದಂಡನೆಯನ್ನು ಭೋಗಿಸುತ್ತಾರೆ. ಬಾಲಕ, ಪತ್ನಿ, ಪುತ್ರ ಮೊದಲಾದವರಿಂದ ಕದ್ದು ತಿನ್ನುವಂಥವರು; ಒಳ್ಳೆಯ ವಸ್ತುವನ್ನು ಕದ್ದು ತಿನ್ನುವ ಪುತ್ರ-ಪತ್ನಿಯೂ ಕಳ್ಳರಿದ್ದಾರೆ. ಇವರೆಲ್ಲರೂ ಕಳ್ಳನ ಸಮಾನ ದೋಷ ಮಾಡುತ್ತಾರೆ.

ಮರೆಯಲ್ಲಿದ್ದು ಮೋಸದಿಂದ ಅನ್ಯರ ಧನ ಹರಣ ಮಾಡುವುದು ಕಳವಿದೆ ಮತ್ತು ಬಂಧಿಸಿ ಬಡೆ-ಹೊಡೆ ಮೊದಲಾದವುಗಳಿಂದ ಬೆದರಿಸಿ ಪ್ರಗಟರೂಪದಲ್ಲಿ ಅನ್ಯರ ಧನಹರಣ ಮಾಡುವುದು ದರೋಡೆ ಅಥವಾ ಸುಲಿಗೆಯಿದೆ. ಈ ಕಳವು ಮತ್ತು ಸುಲಿಗೆಯ ಭೇದವನ್ನು ಪಾಪಮಯವೆಂದು ತಿಳಿದು ಬಿಟ್ಟು ಬಿಡುವುದು ಯೋಗ್ಯವಿದೆ.

**'ಯೇ ಚೋರೋಂಕಿ ಚತುರಾಈ, ಸೋ ಸಬ ಹೀ ಹೈ ದುಃಖದಾಈ ತಜನಾ;**
**ಜಿನಜೀ ಸೋ ಗಾಯೀ (ಮೈಭೀ) ಹಿತ, ಧರ್ಮ ಭವ್ಯ ಜೀವ ಸು ಸುನಾಯೀ ।**
**ಸೋ ತಜೋ ಸಮಝು ಸಬ ಭಾಈ ! ಯೋ ಕಿಯೇ ಇಂಹಾ ನಿಂದಾಈ, ಜಿಸ ಹಾನಿ ಗುರು ಸುನಾಯೀ ॥**
**ಪರ ಭವ ದುರ್ಗತಿ ಹೋಯ, ಸಕಲ ಪಾಪ ಥಾನ ಜೋಯ ।**
**ಐಸೋ ಲಕ್ಷ್ಯ ತಜೋ ಸೋಯ, ಮಾನೇ ಸೀಖ ಭವ್ಯ ಹೋಯ ॥'**

ಅನೇಕ ರೂಪದಲ್ಲಿ ಕಳವನ್ನು ಪಾಪಗಳ ಮುಕುಟವೆಂದು ತಿಳಿದು ಬಿಟ್ಟುಕೊಡುವುದು ಯೋಗ್ಯವಿದೆ. ಕಳವಿನ ಚಿಂತನದಿಂದ ಪಾಪಬಂಧವಾಗುತ್ತದೆ. ಆದುದರಿಂದ ತಮ್ಮ ಪರಭವ ಸುಧಾರಣೆಯ ಸಲುವಾಗಿ ಸಂತೋಷಭಾವ ಧಾರಣಮಾಡಿ, ಅತಿ ತೃಷ್ಣೆಯ ಕಾರಣಭೂತ ಕಳವಿನ ನಿವಾರಣೆ ಮಾಡಿರಿ. ಈ ಶಿಕ್ಷಣವನ್ನು ಹೇಳುವಂಥವರ ಉಪಕಾರ ಮನ್ನಿಸುವಂಥ ಸುಪುತ್ರರ ಸಲುವಾಗಿ ನೀಡಲಾಗಿದೆ. ಯಾರಿಗೆ ಕಳವು ಒಳ್ಳೆಯದೆನಿಸುತ್ತದೆ, ಅವರಂತೂ ಹಿತಕರ ಉಪದೇಶವನ್ನಾಲಿಸಿ ದ್ವೇಷ ಮಾಡುತ್ತಾರೆ. ಕಳವಿನ ತ್ಯಾಗದ ಮಾತನ್ನಾಲಿಸಿ, ಕಳ್ಳರು ಧರ್ಮಸಭೆಯ ತ್ಯಾಗ ಮಾಡುತ್ತಾರೆ; ಆದರೆ ಕಳವಿನ ತ್ಯಾಗ ಮಾಡುವುದಿಲ್ಲ. ಅಂಥ ಜೀವರುಗಳು ಧರ್ಮದ ಶಿಕ್ಷಣವನ್ನು ಹೇಗೆ ಮನ್ನಿಸುವರು ? ಅದಕ್ಕಾಗಿ ಈ ಶಿಕ್ಷಣವು ಸುಪುತ್ರರ ಸಲುವಾಗಿ ಇದೆ.

ಈ ಪ್ರಕಾರ ಶ್ರಾವಕರಿಗೆ ಅತಿಚಾರಸಹಿತ ಕಳವಿನ ವ್ಯಸನದ ತ್ಯಾಗ ಮಾಡಬೇಕಾಗುವುದು.

**ಪರದಾರ ವ್ಯಸನ** - ಅನ್ಯ ಸ್ತ್ರೀಯರ ರೂಪ, ಹಾವ-ಭಾವಗಳನ್ನು ನೋಡಿ, ಅವರನ್ನು ಭೋಗಿಸುವ ಇಚ್ಛೆಯಾಗುವುದು ಪರಸ್ತ್ರೀ-ವ್ಯಸನವಿದೆ. ಈ ವ್ಯಸನಿಯ ದೃಷ್ಟಿಯು ಸಹೋದರಿ, ಮಗಳು, ಮಾತೆಯರೂ ರೂಪವತಿಯಾಗಿರುವುದನ್ನು ಕಂಡು ವಿಕಾರರೂಪವಾಗಿಯೇ ಪ್ರವರ್ತಿಸುತ್ತದೆ. ಧರ್ಮಾತ್ಮಾ ಜೀವರುಗಳಂತೂ ಅನ್ಯ ಸ್ತ್ರೀಯರನ್ನು ಸೋದರಿ, ಮಾತೆ, ಪುತ್ರಿಯ ಸಮಾನವೇ ನೋಡುತ್ತಾರೆ. ಹೀಗೆ ಪೃಥಕ್-ಪೃಥಕ್ಕಾದ ಭೇದವು ಇವರ ದೃಷ್ಟಿಯಲ್ಲಿದೆಯೆಂದು ತಿಳಿಯುವುದು. ಈ ಜೀವನು ಅದೇ ದೃಷ್ಟಿಯಿಂದ ಸೋದರಿ, ಪುತ್ರಿಯನ್ನು ನೋಡುತ್ತಾನೆ; ಅದೇ ದೃಷ್ಟಿಯಿಂದ ತನ್ನ ಪತ್ನಿಯನ್ನು ನೋಡುತ್ತಾನೆ; ಆದರೆ ಧರ್ಮಾತ್ಮನಂತೂ ಯಥಾರ್ಥ ತಿಳಿಯುತ್ತಾನೆ ಮತ್ತು ವ್ಯಸನಿಯು ವಿಕಾರದೃಷ್ಟಿಪೂರ್ವಕ ತಿಳಿಯುತ್ತಾನೆ - ಇದು ಜೀವರುಗಳ ದೃಷ್ಟಿಯದೇ ಮಾಹಾತ್ಮ್ಯವಿದೆ.

ವ್ಯಸನಿಯ ದೃಷ್ಟಿಯು ಎರಡೂ ಭವಗಳಲ್ಲಿ ದುಃಖ ಮತ್ತು ಅಪಕೀರ್ತಿ ಮಾಡುವಂಥದ್ದಿದೆ. ಈ ವ್ಯಸನಿಯನ್ನು ಪರಸ್ತ್ರೀ ಗಮನ ಮಾಡುವಾಗ ಹಿಡಿದರೆ ಜಾತಿಯಿಂದ ಬಹಿಷ್ಕೃತ ಮಾಡಲಾಗುತ್ತದೆ. ದೊರೆಯು ಅವನ ಅಂಗಚ್ಛೇದ ಮಾಡಿ, ಮನೆಯನ್ನು ಲೂಟಿ ಮಾಡಿ ತಲೆಬೋಳಿಸಿ, ಮುಖಕ್ಕೆ ಮಸಿ ಬಳಿದು ಕತ್ತೆಯ ಮೇಲೆ ಕೂಡ್ರಿಸಿ ದೇಶದಿಂದ ಹೊರಗೆ ಹಾಕುತ್ತಾನೆ. ಸೋದರನೇ ! ಪರಭವದಲ್ಲಿ ನರಕರೂಪ ಫಲವು ಯಾವಾಗ ಸಿಗುವುದೋ ? ಯಾರಿಗೆ ಗೊತ್ತಿದೆ? ಆದರೆ ವರ್ತಮಾನದಲ್ಲಿಯೇ ಈ ಜೀವನಿಗೆ ನರಕದ ಸಮಾನ ದುಃಖಗಳನ್ನು

ನೋಡಬೇಕಾಗುತ್ತದೆ. ಲೋಕದಲ್ಲಿ ನಿಂದೆಯಾಗುತ್ತದೆ. ಮೂಗು, ಕಿವಿ, ಕೈ, ಕಾಲು ಮೊದಲಾದ ಅಂಗಗಳನ್ನು ಕತ್ತರಿಸುತ್ತಾರೆ. ಈ ಫಲವಂತೂ ಆ ಪಾಪಿಗೆ ಇಲ್ಲಿಯೇ ಪ್ರತ್ಯಕ್ಷವಿದೆ. ಆದುದರಿಂದ ಧರ್ಮಾತ್ಮಾ ಜೀವಗಳು ತಮ್ಮ ಹಿತದ ಸಲುವಾಗಿ ಪರಸ್ತ್ರೀಯ ತ್ಯಾಗ ಮಾಡುತ್ತಾರೆ.

ಪರಸ್ತ್ರೀಯು ಧರ್ಮರೂಪದ ಕಲ್ಪವೃಕ್ಷವನ್ನು ಕತ್ತರಿಸುವ ಸಲುವಾಗಿ ಕರಗಸದಂತಿದ್ದಾಳೆ, ಕೀರ್ತಿ ರೂಪದ ಪರ್ವತವನ್ನು ನಷ್ಟ ಮಾಡುವ ಸಲುವಾಗಿ ವಜ್ರದ ಸಮಾನಳಿದ್ದಾಳೆ. ನೋಡಿರಿ ! ಮಹಾ ಬಲಶಾಲಿ, ಮೂರು ಖಂಡದ ಅಧಿಪತಿ, ಕೀರ್ತಿಯ ತಿಲಕ, ಯಶಸ್ಸು ಮತ್ತು ಸೌಭಾಗ್ಯದ ಕುರಿತಾಗಿ ದೇವಗಳಿಂದ ಪ್ರಶಂಸೆ ಪ್ರಾಪ್ತ, ವಿಶಾಲ ಪುಣ್ಯಶಾಲಿ ರಾವಣನು ಕೂಡ ಪರಸ್ತ್ರೀಯ ದೋಷದಿಂದ ಅಪಕೀರ್ತಿಗೆ ಪ್ರಾಪ್ತನಾಗಿ, ಹೀನಗತಿಯ ನಿವಾಸಿಯಾದನು. ರಾಜ್ಯ ಹೋಯಿತು, ಕುಲದ ಕ್ಷಯವಾಯಿತು ಮತ್ತು ಪರಗತಿಯೂ ಕೆಟ್ಟು ಹೋಯಿತು. ಅದರಿಂದ ಎಲೈ ಸೋದರರನೇ ! ಸರ್ಪದ ಬಾಯಲ್ಲಿ ಕೈಹಾಕುವುದು, ವಿಷದ ಸೇವನೆ ಮಾಡುವುದಂತೂ ಒಳ್ಳೆಯದಿದೆ, ಆದರೆ ಪರಸ್ತ್ರೀಯ ಸಂಗವು ಒಳ್ಳೆಯದಿಲ್ಲ. ತೀಕ್ಷ್ಣವಾದ ಚೂರಿ, ಚಾಕು, ಭಲ್ಲೆಯ ಮೇಲೆ ಕುಣಿಯುವುದು ಒಳ್ಳೆಯದಿದೆ ಏಕೆಂದರೆ ಇವುಗಳಿಂದ ಒಂದೇ ಭವದಲ್ಲಿ ದುಃಖವಾಗುತ್ತದೆ; ಆದರೆ ಪರಸ್ತ್ರೀಯ ಸಂಗತಿಯಿಂದ ಭವ-ಭವದಲ್ಲಿ ದುಃಖವಾಗುತ್ತದೆ. ಆದುದರಿಂದ ವಿವೇಕವಂತರು ಪರಸ್ತ್ರೀಯ ತ್ಯಾಗ ಮಾಡುವುದು ಒಳ್ಳೆಯದಿದೆ. ಯಾವ ವಾರ್ತಾರೂಪ ಪ್ರವೃತ್ತಿಗಳಿಂದಲೂ ಪರಸ್ತ್ರೀ ಸಂಗದ ದೋಷ ತಗಲುತ್ತದೆ ಆ ಅತಿಚಾರಗಳನ್ನೂ ಬಿಡುವುದು ಉಚಿತವಿದೆ. ಈಗ ಆ ಅತಿಚಾರಗಳನ್ನು ಹೇಳುತ್ತಾರೆ -

ಪರಸ್ತ್ರೀಯರೊಂದಿಗೆ ಸರಾಗಪೂರ್ವಕ ನಗುತ್ತ ಮಾತನಾಡುವುದು, ಕೌತುಕದೊಂದಿಗೆ ಅವರ ಶರೀರವನ್ನು ಬಳಸುವುದು, ಪರಸ್ತ್ರೀಯರ ವಸ್ತ್ರಾಭೂಷಣಗಳನ್ನು ಕಂಡು ಇವು ನಿಮಗೆ ಚನ್ನಾಗಿ ಕಾಣುತ್ತವೆ, ಇದು ನಿಮಗೆ ಶೋಭಿಸುವುದಿಲ್ಲವೆಂದು ಹೇಳುವುದು. ಪರಸ್ತ್ರೀಯರ ಅಂಗ, ಉಪಾಂಗ, ನಡಿಗೆ, ವರ್ತನೆಗಳನ್ನು ಹೊಗಳುವುದು - ಇವೆಲ್ಲವೂ ಪರಸ್ತ್ರೀ ವ್ಯಸನದ ಸಮಾನ ದೋಷ ಉತ್ಪನ್ನ ಮಾಡುತ್ತವೆ. ಚಿತ್ತದ ವಿಕೃತಿಯೊಂದಿಗೆ ಪರಸ್ತ್ರೀಯರ ಕಾರ್ಯ ಮಾಡುವುದು, ಅವರಿಗೆ ಒಳ್ಳೊಳ್ಳೆಯ ವಸ್ತ್ರ-ಆಭೂಷಣಗಳನ್ನು ತಂದು ಕೊಡುವುದು, ರಾಗಪೂರ್ವಕ ವಚನಗಳನ್ನಾಡುವುದು ಪರಸ್ತ್ರೀ ವ್ಯಸನವಿದೆ. ಸ್ವತಂತ್ರತೆಯೊಂದಿಗೆ ಕೌತುಕ ಮಾಡುತ್ತ, ಸಮೂಹ ಗೀತೆಗಳನ್ನು ಹಾಡುತ್ತಿರುವ ನಾರಿಯರ ಸ್ಥಾನಕ್ಕೆ ಸ್ವಯಂ ಹೋಗಿ ಅವನ್ನು ಆಲಿಸಿ ಹರ್ಷಿತನಾಗುವುದು. ಲಕ್ಷ್ಯವಿಟ್ಟು ಆಲಿಸುವುದು, ಅವುಗಳ ಪ್ರಶಂಸೆ ಮಾಡುವಂಥವನು ಪರಸ್ತ್ರೀಯ ವ್ಯಸನಿಯಿದ್ದಾನೆ. ಪರಸ್ತ್ರೀಯರ ಸಮೂಹದಲ್ಲಿ ಹೋಗಿ, ಅಲ್ಲಿ ಕುಳಿತುಕೊಂಡು ಆ ಸ್ತ್ರೀಯರಿಗೆ ಹಿತವೆನಿಸುವ ಮಾತುಗಳನ್ನಾಡುವಂಥವನು, ಅನೇಕ ಕೌತುಕದ ಕಥೆ ಹೇಳಿ ನಗಿಸುತ್ತ ಅವರನ್ನು ಸುಖಿಯನ್ನಾಗಿಸುವಂಥವನು ಪರಸ್ತ್ರೀಯ ವ್ಯಸನಿಯಿದ್ದಾನೆ.

ಅನೇಕ ಸ್ತ್ರೀಯರ ಸಮೂಹವು ನೀರು ತರುವ ಸಲುವಾಗಿ ತಲೆಯಮೇಲೆ ಕೊಡ ಹೊತ್ತು ಬಾವಿಯ ಕಡೆಗೆ ಬರುತ್ತಾರೆ ಅಂಥ ಬಾವಿ ಮೊದಲಾದವುಗಳ ಹತ್ತಿರ ಹೋಗಿ ಕುಳಿತುಕೊಳ್ಳುವಂಥವನು ಪರಸ್ತ್ರೀ ವ್ಯಸನಿಯಿದ್ದಾನೆ. ಪರಸ್ತ್ರೀಯರ ನಡವಳಿಕೆ-ಕಾಯಾದಿಗಳ ಪ್ರಶಂಸೆ ಮಾಡುವಂಥವನು, ಅವರುಗಳ ವಸ್ತ್ರ-ಆಭೂಷಣ-ರೂಪ ಕಂಡು ಹರ್ಷಿತನಾಗುವಂಥವನು ಪರಸ್ತ್ರೀ ವ್ಯಸನಿಯಿದ್ದಾನೆ. ತನ್ನ ಮನೆಯಲ್ಲಿ ದಾಸಿಯನ್ನಿಟ್ಟುಕೊಳ್ಳುವವ, ಮೋಹದ ವಶೀಭೂತನಾಗಿ ವಿಧವೆ ಸ್ತ್ರೀಯನ್ನು ಮನೆಯಲ್ಲಿಟ್ಟುಕೊಳ್ಳುವಂಥವ, ಅವಳಿಂದ ಭೋಗಗಳ ಅಭಿಲಾಷೆಯನ್ನು ಪೂರ್ಣವಾಗಿಸಿಕೊಳ್ಳುವಂಥವ ಪರಸ್ತ್ರೀ ವ್ಯಸನಿಯಿದ್ದಾನೆ. ಬಾಲಕ ನರನನ್ನು ನಾರಿಯನ್ನಾಗಿಸಿ ನೋಡುವಂಥವ ಹಾಗೂ ಸುಂದರ ಸ್ತ್ರೀಯರನ್ನು ನರನ ವೇಷದಲ್ಲಿರಿಸಿ ನೋಡಿ ಸುಖಿಯಾಗುವಂಥವ, ಸ್ಪರ್ಶಿಸಿ ಸುಖಿಯಾಗುವಂಥವ ಪರಸ್ತ್ರೀಯ ವ್ಯಸನಿಯಿದ್ದಾನೆ.

ವಿಧವೆ ಹಾಗೂ ಸುಮಂಗಲೆ ಪರಸ್ತ್ರೀಯೊಂದಿಗೆ ಏಕಾಂತದಲ್ಲಿ ಮಾತುಕತೆ ಮಾಡುವಂಥವ 'ಇತ್ತೀಚಿಗೆಯಂತೂ ತಾವು ನಮ್ಮೊಂದಿಗೆ ಮಾತಾಡುವುದಿಲ್ಲ, ಸಿಟ್ಟಾಗಿರುವಂತಿದೆ; ನಮ್ಮಿಂದ ಅಂಥ ಯಾವ ಅಪರಾಧವಾಗಿದೆ ? ಅದನ್ನಾದರೂ ಹೇಳಿ, ನಾವು ತಮ್ಮ ಆಜ್ಞಾಕಾರಿಯಿದ್ದೇವೆ' - ಇತ್ಯಾದಿ ರೂಪದಲ್ಲಿ ಅವರೊಂದಿಗೆ ವಚನಗಳನ್ನಾಡುವಂಥವ ವ್ಯಸನದ ಲೋಭಿಯಿದ್ದಾನೆ. ಪರಸ್ತ್ರೀಯರೊಂದಿಗೆ ಮಾತನಾಡದೇ ಮುನಿಸಿಕೊಳ್ಳುವ, ಮತ್ತೆ ಅವರೊಂದಿಗೆ ಮಾತನಾಡುವ ಸಲುವಾಗಿ ಬೇರೆಯವರಲ್ಲಿ 'ಅವರೊಂದಿಗೆ ನಮ್ಮ ಮಾತುಕತೆ ಮಾಡಿಸಿ'ರೆಂದು ಪ್ರಾರ್ಥನೆ ಮಾಡುವ - ಇತ್ಯಾದಿ ಭಾವಗಳ ಧಾರಕನು ವ್ಯಸನಿಯಿದ್ದಾನೆ.

ತನ್ನ ಶರೀರದ ಮೇಲೆ ವಿವಿಧ ವಸ್ತ್ರಾಭೂಷಣಗಳನ್ನು ಧರಿಸಿ ಅನ್ಯಸ್ತ್ರೀಯರಿಗೆ ತೋರಿಸಬಯಸುತ್ತಾನೆ; ತನ್ನ ಒಳ್ಳೆಯ ರೂಪ, ಯೌವನ, ಶರೀರ ಕಾಂತಿ, ಪುಷ್ಟತೆಯನ್ನು ದರ್ಶಿಸಬಯಸುತ್ತಾನೆ, ಅವನು ಪರಸ್ತ್ರೀ ವ್ಯಸನೀ ಮೋಹಿಯಿದ್ದಾನೆ- ಇತ್ಯಾದಿ ಮೇಲೆ ಹೇಳಿದ ದೋಷ ಸಹಿತ ಪರಸ್ತ್ರೀ ವ್ಯಸನದ ತ್ಯಾಗ ಮಾಡಿ, ತನ್ನ ವ್ರತವನ್ನು ನಿರ್ದೋಷವಾಗಿಟ್ಟುಕೊಳ್ಳುವಂಥವನು ಪರಸ್ತ್ರೀಯ ವ್ಯಸನದ ತ್ಯಾಗಿಯೆನಿಸಿಕೊಳ್ಳುತ್ತಾನೆ.

- ಹೇಳಲಾದ ಈ ಏಳು ವ್ಯಸನಗಳು ಸಮಸ್ತ ಪಾಪದ ಮೂಲವಿವೆ. ಜಗತ್ತಿನ ಪಾಪಗಳೆಲ್ಲವೂ ಈ ವ್ಯಸನಗಳಲ್ಲಿ ಗರ್ಭಿತವಿವೆ. ಈ ವ್ಯಸನಗಳ ವಾಸನೆಯು ಅಂತರಂಗದಲ್ಲಿ ಇರುವಂಥವನು ತನ್ನ ಭವವನ್ನು ಕೆಡಿಸಿಕೊಳ್ಳುತ್ತಾನೆ. ಎಲೈ ಭವ್ಯನೇ ! ಈ ಏಳು ವ್ಯಸನಗಳು ಏಳು ನರಕಗಳ ದೂತವಿವೆ. ಈ ವ್ಯಸನಗಳು ಜೀವನಿಗೆ ಸುಖದ ಛಾಯೆಯೆಂತೆನಿಸಿ ಲೋಭವನ್ನುಂಟು ಮಾಡಿ ನರಕದಲ್ಲಿ ಕೆಡವುತ್ತವೆ. ಈ ವ್ಯಸನಗಳಲ್ಲಿ ಮೋಸ ಹೋದ ಪ್ರಾಣಿಗಳು ತಮ್ಮ ಭವ ಕೆಡಿಸಿಕೊಂಡು ಧರ್ಮದ ತ್ಯಾಗ ಮಾಡುತ್ತವೆ.

ಯಾರು ಇವುಗಳನ್ನು ಪರೀಕ್ಷಿಸಿ, ವ್ಯಸನವೆಂದು ತಿಳಿದು, ಇವುಗಳಲ್ಲಿ ರಂಜಿಸುತ್ತ ಪ್ರವರ್ತಿಸುತ್ತಾರೆ - ಇವುಗಳ ಸೇವನೆ ಮಾಡುತ್ತಾರೆ ಅವರು ಪಾಪದ ಚಿಹ್ನೆಯಿದ್ದಾರೆ. ಆ ವ್ಯಸನಿಗಳ ಪ್ರವರ್ತನೆಯು ಅಶುಭವಿದೆ, ಧರ್ಮಕ್ರಿಯಾಹೀನವಿರುತ್ತದೆ. ಪರಿಣತಿಯು ಅಸತ್ಯ, ಜಿನ ಆಜ್ಞೆಯಿಂದ ರಹಿತ, ಅಭಿಮಾನಿ, ಬುದ್ಧಿವಂತರಿಂದ ನಿಂದ್ಯವಿರುತ್ತದೆ. ಆ ದರಿದ್ರರು ಆಹಾರದ ಸಲುವಾಗಿಯೂ ದುಃಖಿಯಾಗುತ್ತಾರೆ-ಅನೇಕ ಭವಗಳವರೆಗೆ ದುಃಖ ಸಹಿಸುತ್ತ ಇರಬೇಕಾಗುತ್ತದೆ. ಅಂಥ ವ್ಯಸನಿಗಳ ಸಂಗತಿಯು ಹಿತಕರವಿಲ್ಲದಿರುವುದರಿಂದ ವಿವೇಕವಂತರು ತ್ಯಾಗ ಮಾಡುವುದು ಯೋಗ್ಯವಿದೆ. ಎಲೈ ಭವ್ಯನೇ ! ಸಮತೆಯ ಸಾಧನೆ ಮಾಡುತ್ತ, ಅನ್ಯ ಜೀವಗಳಿಗೆ ಕಷ್ಟಕೊಡದೆ ದೀನನಾಗಿ ಉಳಿಯುವುದು ಒಳ್ಳೆಯದಿದೆ; ಆದರೆ ವ್ಯಸನಗಳ ಸೇವನೆಯು ಒಳ್ಳೆಯದಿಲ್ಲ.

ಈ ಉಪದೇಶವನ್ನು ಕೇಳಿ, ವ್ಯಸನಗಳ ಸೇವನೆ ಮಾಡುವಂಥ ಅಂಜನ ಚೋರನ ಸಮಾನ ನಿಕಟ ಸಂಸಾರಿ ನಿಕಟ ಭವ್ಯ ಜೀವರುಗಳಂತೂ ವ್ಯಸನಗಳನ್ನು ಕೆಡಕೆಂದು ತಿಳಿದು, ತಮ್ಮ ನಿಂದೆಪೂರ್ವಕ ಅತ್ಯಂತ ಆಲೋಚನೆ ಮಾಡಿಕೊಳ್ಳುತ್ತ, ಉಪದೇಶ ಕೊಡುವಂಥವರ ಉಪಕಾರ ಮನ್ನಿಸಿ, ಸ್ತುತಿ ಮಾಡುತ್ತ ವ್ಯಸನರೂಪದ ಭಾವವನ್ನು ಬಿಟ್ಟುಕೊಟ್ಟು ತಮ್ಮ ಭವ ಸಫಲವೆಂದು ತಿಳಿದು ಧರ್ಮದಲ್ಲಿ ತೊಡಗುತ್ತಾರೆ. ಸತ್ಸಂಗದ ಮಹಿಮೆ ಮಾಡುತ್ತ 'ನನಗೆ ವ್ಯಸನಗಳ ಪಾಪದ ಭೇದ(ರಹಸ್ಯ) ತಿಳಿಸಿಕೊಟ್ಟು ಸಂಬೋಧನೆ ಮಾಡುವಂಥ ಸತ್ಸಂಗವು ಧನ್ಯವಿದೆ. ಬಾವಿಯಲ್ಲಿ ಬೀಳುವುದನ್ನು ತಪ್ಪಿಸುವಂಥವರ ಸಮಾನ ಸತ್ಸಂಗವು ನರಕದಲ್ಲಿ ಬೀಳುತ್ತಿರುವ ನನ್ನನ್ನು ರಕ್ಷಿಸಿದೆ'ಯೆಂದು ಹೇಳುತ್ತಾರೆ.

ಹೇಗೆ ಪರುಷವು ಕುಧಾತು ಲೋಹವನ್ನು ತಾಗಿ ಅದನ್ನು ಚಿನ್ನವನ್ನಾಗಿ ಮಾಡುತ್ತದೆ, ಅದೇ ಪ್ರಕಾರ ನನ್ನಂಥ ಪಾಪಿ, ವ್ಯಸನೀ ಲೋಹವನ್ನು ಆ ಸತ್ಸಂಗವು ಪಾಪದಿಂದ ತಪ್ಪಿಸಿ ಧರ್ಮಾತ್ಮನನ್ನಾಗಿ ಮಾಡಿದೆ - ಇತ್ಯಾದಿ ರೂಪದಿಂದ ಭವ್ಯ ವ್ಯಸನಿಯಂತೂ ತನ್ನ ಒಳಿತನ್ನು ತಿಳಿದು ಸತ್ಸಂಗದ ಸ್ತುತಿ ಮಾಡುತ್ತಾನೆ; ಆದರೆ ಪಾಪೀ, ದೀರ್ಘ ಸಂಸಾರೀ ವ್ಯಸನಿಯು ವ್ಯಸನಗಳ ನಿಂದೆಯನ್ನಾಲಿಸಿ ಅದನ್ನು ಕೆಟ್ಟದ್ದೆಂದು ಮನ್ನಿಸಿ ಸತ್ಸಂಗವನ್ನು ಬಿಟ್ಟು ಕೊಡುತ್ತಾರೆ.

ಆದರೆ ಸಪ್ತ ವ್ಯಸನಗಳ ತ್ಯಾಗ ಮಾಡುವುದಿಲ್ಲ. ಅಂಥ ಪಾಪೀ ವ್ಯಸನಿಗಳ ಸಲುವಾಗಿ ಧರ್ಮೋಪದೇಶವು ಉಪಯೋಗಿಯಾಗುವುದಿಲ್ಲ. ಈ ಏಳೂ ವ್ಯಸನಗಳನ್ನು ಧರ್ಮದ ಘಾತಕವೆಂದು ತಿಳಿದುಕೊಂಡು, ಜಿನಾಜ್ಞೆಯ ಅನುಸಾರ ವ್ರತಗಳನ್ನು ಧಾರಣ ಮಾಡುವಂಥ ಉತ್ತಮ ಶ್ರಾವಕನು ತನ್ನ ವ್ರತಗಳ ರಕ್ಷಣೆಯ ಸಲುವಾಗಿ ಅತಿಚಾರ ಸಹಿತ ಈ ಏಳೂ ವ್ಯಸನಗಳ ತ್ಯಾಗ ಮಾಡುವುದು ಉಚಿತವಿದೆ.

ಇವು ಏಳೂ ವ್ಯಸನಗಳ ಅತಿಚಾರದಲ್ಲಿಯೇ ಎಂಟು ಮೂಲಗುಣಗಳ ಅತಿಚಾರ, ಇಪ್ಪತ್ತೆರಡು ಅಭಕ್ಷ್ಯ ಮೊದಲಾದವು ಬಂದು ಬಿಡುತ್ತವೆ. ಈ ಪ್ರಕಾರ ಸಂಪೂರ್ಣ ದೋಷರಹಿತ ಸಮ್ಯಗ್ದರ್ಶನ ಮತ್ತು ಅಷ್ಟ ಮೂಲಗುಣಸಹಿತ; ಸಪ್ತ ವ್ಯಸನ ಹಾಗೂ ಇಪ್ಪತ್ತೆರಡು ಅಭಕ್ಷ್ಯಗಳ ತ್ಯಾಗಮಯ ಮೊದಲನೆಯ ದರ್ಶನ ನೆಲೆ ತಿಳಿಯುವುದು.

ಈ ಪ್ರಕಾರ ಶ್ರೀ ಸುದೃಷ್ಟಿತರಂಗಿಣಿಯೆಂಬ ಹೆಸರಿನ ಗ್ರಂಥದಲ್ಲಿ ಸಾಗಾರ ಧರ್ಮದ ಹನ್ನೊಂದು
ನೆಲೆಗಳ ಅಂತರ್ಗತ ಇಪ್ಪತ್ತೆರಡು ಅಭಕ್ಷ್ಯ, ಅತಿಚಾರ ಸಹಿತ ಏಳು ವ್ಯಸನಗಳ ತ್ಯಾಗ,
ಅಷ್ಟಮೂಲಗುಣಯುಕ್ತ ಪ್ರಥಮ ದರ್ಶನ ನೆಲೆಯ ಕಥನ ಮಾಡುವಂಥ
ಮೂವತ್ತೆರಡನೆಯಪರ್ವವು ಸಂಪೂರ್ಣವಾಯಿತು.

★★★★★

ಜಗತ್ತಿನಲ್ಲಿ ಎಂಥ ಅಜ್ಞಾನೀ ಮೂರ್ಖ ಪ್ರಾಣಿಗಳಿದ್ದಾರೆಂದರೆ ಅವರು ಸ್ವಯಂ ತಮ್ಮ ಗುಡಿಸಲಿಗೆ ಬೆಂಕಿ ಹಚ್ಚುತ್ತಾರೆ ಮತ್ತು ಅದಕ್ಕೆ ತುಪ್ಪ ಸುರಿಯುತ್ತ ಆರಿಸುವ ಪ್ರಯತ್ನ ಮಾಡುತ್ತಾರೆ ಅಷ್ಟೇ ಅಲ್ಲ ನಮ್ಮ ಜತೆಯಲ್ಲಿರುವವರು ದರ್ಶಕರು ನಮಗೆ ಇನ್ನಷ್ಟು ಅಧಿಕ ತುಪ್ಪ ಸುರಿದು ಅಗ್ನಿಯನ್ನು ನಂದಿಸುವ ಸಲಹೆ ನೀಡುತ್ತಾರೆ.

ಇದ್ದಕ್ಕಿದ್ದಂತೆ ಆ ಸಮಯದಲ್ಲಿ ಯಾರೋ ತಿಳಿವಳಿಕೆಯುಳ್ಳವರು ಅಲ್ಲಿಂದ ಹಾಯ್ದು ಹೋಗುವಂಥವರು ಎಲ್ಲವನ್ನೂ ನೋಡಿ ಪ್ರೀತಿಯಿಂದ ತಿಳಿಸಿಕೊಡುತ್ತ, ಇದನ್ನೇನು ಮಾಡುತ್ತಿರುವಿರಿ ? ಅಯ್ಯಾ ! ಎಷ್ಟು ತುಪ್ಪ ಹಾಕುವಿರಿ ಅಷ್ಟು ಅಗ್ನಿಯು ಅಧಿಕವಾಗುವುದು, ಆರುವುದಿಲ್ಲ - ಎಂದಾಗ ಮೂರ್ಖನೊಬ್ಬನು ಆವೇಶದಿಂದ ಹೇಳುತ್ತಾನೆ, - ತಾವೊಬ್ಬರೇ ಬುದ್ಧಿವಂತರಿರುವಿರೇನು ? ನಾವೆಲ್ಲರೂ ಮೂರ್ಖರಿದ್ದೇವೇನು ? ಅಯ್ಯಾ ! ಇಂಥ ಬೆಲೆಯುಳ್ಳ ತುಪ್ಪದಿಂದ ಆರದ ಅಗ್ನಿಯು ಪುಕ್ಕಟೆಯಾದ ನೀರಿನಿಂದ ಹೇಗೆ ಆರುವುದು ? ಹೋಗಯ್ಯಾ ನಿನ್ನ ಕೆಲಸ ನೋಡಿಕೋ.

ಇದನ್ನು ಓದಿ ನಮಗೆ ಹಾಸ್ಯ, ಅಚ್ಚರಿಯೆನಿಸಬಹುದು, ಆದರೆ ಪ್ರತಿಯೊಬ್ಬ ಮೋಹೀ ಸಂಸಾರಿ ಪ್ರಾಣಿಯ ಪ್ರವೃತ್ತಿಯು ಇಂಥದೇ ಇದೆ ಮತ್ತು ಅವನು ತುಪ್ಪ ಸುರಿಯುತ್ತ ಅಗ್ನಿಯನ್ನು ಆರಿಸುವ ವ್ಯರ್ಥ ಪ್ರಯತ್ನದಿಂದ ನಿರಂತರ ದುಃಖಿಯಾಗುತ್ತಿದ್ದಾನೆ. ಅಜ್ಞಾನೀ ಜೀವನು ತನ್ನ ಅಂತರಂಗದಲ್ಲಿ ವಿಷಯ-ಕಷಾಯದ ಅಗ್ನಿಯಿಂದ ನಿರಂತರ ಸುಟ್ಟು ಹೋಗುತ್ತಿದ್ದಾನೆ. ಅದರ ದಾಹವನ್ನು ದೂರ ಮಾಡುವ ಸಲುವಾಗಿ ಬಾಹ್ಯದಲ್ಲಿ ನಿರಂತರ ತೀವ್ರ ಆರಂಭ-ಪರಿಗ್ರಹಪೂರ್ವಕ ಸಂಯೋಗಗಳನ್ನು ಏಕತ್ರಿತ ಮಾಡುತ್ತ ಸುಖಿಯಾಗಬಯಸುತ್ತಿದ್ದಾನೆ. ಜಗತ್ತಿನ ಮೋಹೀ ಜನರು ಅಂಥದೇ ಸಲಹೆ ನೀಡುತ್ತಾರೆ ಮತ್ತು ಜಗತ್ತಿನಲ್ಲಿ ಅಧಿಕ ಪರಿಗ್ರಹವುಳ್ಳವರನ್ನೇ ಸುಖಿಗಳೆಂದು ಮನ್ನಿಸಲಾಗುತ್ತದೆ.

ಮಹಾಭಾಗ್ಯದಿಂದ ಸಮ್ಯಗ್ಜ್ಞಾನಿ ಸದ್ಗುರುಗಳ ಸಮಾಗಮವಾಗಿ ಅತ್ಯಂತ ಕರುಣೆಯ ಭಾವದಿಂದ ನಮ್ಮ ಮಿಥ್ಯಾಬುದ್ಧಿಯನ್ನು ಬಿಡಿಸುತ್ತ, ನೀನು ಪರಿಗ್ರಹದಲ್ಲಿ ಪ್ರಭುತ್ವ ಮನ್ನಿಸುತ್ತಿರುವೆ, ಆದರೆ ಅದಂತೂ ರೌದ್ರಧ್ಯಾನವಿದೆ ಪ್ರತ್ಯಕ್ಷ ನರಕಕ್ಕೆ ತಗೆದುಕೊಂಡು ಹೋಗುವಂಥದ್ದಿದೆ ಈ ವಿಷಯ ಕಷಾಯದ ಅಗ್ನಿಯು ನಿನ್ನೊಳಗೆ ಮಮತೆಯಿಂದ ಹೊತ್ತಿಕೊಂಡಿದೆ ಅದನ್ನು ಸಮತೆಯ ಜಲದಿಂದ ಶೀಘ್ರವಾಗಿ ನಂದಿಸು ! - ಎಂದು ಹೇಳುತ್ತಾರೆ.

## ೩೩ : ಮೂವತ್ಮೂರನೆಯ ಪರ್ವ
# ವ್ರತನೆಲೆ - ಮೂರು ಗುಣವ್ರತ

**ಎರಡನೆಯ ವ್ರತನೆಲೆ** - ದ್ವಿತೀಯ ವ್ರತ ನೆಲೆಯಲ್ಲಿ ವ್ರತದ - ಐದು ಅಣುವ್ರತ, ಮೂರು ಗುಣವ್ರತ ಮತ್ತು ನಾಲ್ಕು ಶಿಕ್ಷಾವ್ರತವೆಂದು ಹನ್ನೆರಡು ಭೇದಗಳಿವೆ. ಅಹಿಂಸಾಣುವ್ರತ, ಸತ್ಯಾಣುವ್ರತ, ಅಚೌರ್ಯಾಣುವ್ರತ, ಬ್ರಹ್ಮಚರ್ಯಾಣುವ್ರತ ಮತ್ತು ಪರಿಗ್ರಹ ಪರಿಮಾಣ ಅಣುವ್ರತ - ಇವು ಐದು ಅಣುವ್ರತಗಳಿವೆ.

ಪಂಚ ಪಾಪಗಳ ಏಕದೇಶ ತ್ಯಾಗವಾಗುವುದು ಅಣುವ್ರತವಿದೆ. ಅಣು ಎಂದರೆ ಅಲ್ಪ. ಇವನು ಸಂಪೂರ್ಣ ರೂಪದಿಂದ ತ್ರಸಹಿಂಸೆಯ ತ್ಯಾಗಿಯಾಗಿದ್ದರೂ ಹನ್ನೆರಡರೊಳಗಿಂದ ಉಳಿದ ಹನ್ನೊಂದರ ಸಂಬಂಧದಲ್ಲಿ ಅಸಂಯಮಿಯಿದ್ದಾನೆ; ಆದಾಗ್ಯೂ ಮಹಾದಯಾಳುವಿದ್ದಾನೆ.

ಕೇವಲ ತ್ರಸದ ರಕ್ಷಕನಾಗಿರುವ ಕಾರಣ ಇವನು ಸ್ಥಾವರಗಳ ಘಾತ ಮಾಡುತ್ತಿರಬಹುದು ಹಾಗೂ ಮನಸ್ಸು ಮತ್ತು ಇಂದ್ರಿಯಗಳು ವಶದಲ್ಲಿ ಇಲ್ಲದಿರುವ ಕಾರಣ ಮನಸ್ಸು ಮತ್ತು ಇಂದ್ರಿಯಗಳಿಂದ ಮಹಾವಿಕಲ ದುಃಖಿಯಾಗುತ್ತಿರಬಹುದೆಂದು ಯಾರಾದರೂ ವಿಚಾರ ಮಾಡುತ್ತಿದ್ದರೆ - ಹಾಗೆ ಇಲ್ಲ; ಎಲೈ ಭವ್ಯನೇ ! ಈ ಅಣುವ್ರತೀ ಶ್ರಾವಕನು ಸಾಂಸಾರಿಕ ಇಂದ್ರಿಯ ಭೋಗಗಳ ಕುರಿತಾಗಿ ಅತ್ಯಂತ ಉದಾಸನಿರುತ್ತಾನೆ. ಪಂಚ ಪಾಪಗಳ ಕುರಿತಾಗಿ ಮಹಾಭಯಭೀತನಾಗಿರುತ್ತಾನೆ. ಎಂದರೆ ಇಂದ್ರಿಯ-ಮನವನ್ನು ತಡೆಯುತ್ತ ಯಾವಾಗಲೂ ಧರ್ಮ ಧ್ಯಾನಮಯ ಪ್ರವೃತ್ತಿ ಮಾಡುತ್ತಾನೆ. ಭೋಗದ ಭಾವಗಳು ಅವನಿಗೆ ಕೃಷ್ಣ ಸರ್ಪದಂತೆ ಭಾಸಿತವಾಗುವುದರಿಂದ, ಅವುಗಳಲ್ಲಿ ಇವನ ಮನಸ್ಸು ಆಸಕ್ತವಾಗುವುದಿಲ್ಲ. ಸ್ಥಾವರ ಹಿಂಸೆಯ ತ್ಯಾಗಿಯಿಲ್ಲದಿದ್ದರೂ ಪಂಚ ಸ್ಥಾವರಗಳ ಕುರಿತಾಗಿ ಆರಂಭ ಮಾಡುವಾಗ ದಯೆಯ ಭಾವಪೂರ್ವಕ ಆರಂಭ ಮಾಡುತ್ತಾನೆ. ಅಲ್ಪ ಹಿಂಸೆಯಾದ ಮೇಲೆಯೂ ಅದರಲ್ಲಿ ಆಗಿರುವ ಪಾಪದ ಆಲೋಚನಾರೂಪ ಪ್ರವೃತ್ತಿ ಮಾಡುತ್ತಾನೆ. ಈ ಅಣುವ್ರತಿಯು ಮನಸ್ಸು ಮತ್ತು ಇಂದ್ರಿಯಗಳನ್ನು ವಶದಲ್ಲಿಟ್ಟುಕೊಳ್ಳುವ ಉಪಾಯ ಮಾಡುತ್ತಾನೆ. ಸ್ಥಾವರಗಳ ರಕ್ಷಣೆಯರೂಪ ಭಾವದ ಧಾರಕನಿದ್ದಾನೆ. ಈ ವ್ರತೀ ಶ್ರಾವಕನು ಮಹಾದಯಾಧರ್ಮದ ಧಾರಕನಾಗಿದ್ದರೂ ಕೂಡ ಗೃಹ ಸಂಬಂಧದ ಆರಂಭ - ಪರಿಗ್ರಹಗಳ ಕಾರಣ ಪೂರ್ಣವಾಗಿ ಸ್ಥಾವರ ಹಿಂಸೆಯಿಂದ ತಪ್ಪಿಸಿಕೊಳ್ಳುವ ಸಾಧ್ಯತೆಯಿಲ್ಲ; ಅದರಿಂದ ಈ ಶ್ರಾವಕನನ್ನು ಅಣುವ್ರತಿಯೆಂದಿದ್ದಾರೆ. ತನ್ನ ಕೈಯಿಂದ ಕೇವಲ ತ್ರಸ ಹಿಂಸೆಗೆ ಸಂಬಂಧಿಸಿದ ಆರಂಭ ಮಾಡದಿರುವುದರಿಂದ ಅಹಿಂಸಾಣುವ್ರತಿಯಿದ್ದಾನೆ.

ಅಹಿಂಸಾಣುವ್ರತದ ಈ ಕೆಳಗಿನ ಐದು ಅತಿಚಾರಗಳ ತ್ಯಾಗ-

೧. ತನ್ನ ಕೈಯಿಂದ ಯಾವುದೇ ತ್ರಸ ಜೀವವನ್ನು ಕಟ್ಟಿಹಾಕುವುದಿಲ್ಲ, ಆನೆ, ಕುದುರೆ, ಹಸು, ಎಮ್ಮೆ, ಎತ್ತು, ಮೇಕೆ, ಮನುಷ್ಯ ಇತ್ಯಾದಿ ತ್ರಸ ಜೀವಗಳ ಕೈ-ಕಾಲುಗಳನ್ನು ಬಂಧನದಿಂದ ಬಂಧಿಸುವುದಿಲ್ಲ. ಕೊರಳಿಗೆ ದಾರ, ಸಂಕಲೆಗಳನ್ನು ಹಾಕಿ ಯಾವ ಪ್ರಾಣಿಯನ್ನೂ ಕಟ್ಟಿ ಹಾಕುವುದಿಲ್ಲ. ಮನೋರಂಜನೆ ಅಥವಾ ಕೇವಲ ಕೌತುಕದ ಸಲುವಾಗಿ ಬಾಲಕನನ್ನೂ ಬಂಧಿಸುವುದಿಲ್ಲ - ಇದು ಬಂಧವೆಂಬ ಹೆಸರಿನ ಅತಿಚಾರದ ತ್ಯಾಗವಿದೆ.

೨. ದ್ವೀಂದ್ರಿಯ, ತ್ರೀಂದ್ರಿಯ, ಚತುರಿಂದ್ರಿಯ, ಪಂಚೇಂದ್ರಿಯ ಇತ್ಯಾದಿ ಜೀವಗಳನ್ನು ಕೋಲು, ಬಾರಕೋಲು ಮೊದಲಾದವುಗಳಿಂದ ಹೊಡೆಯುವುದಿಲ್ಲ - ಇದು ವಧ ದೋಷದ ತ್ಯಾಗವಿದೆ.

೩. ಮರ್ಯಾದೆ ಮೀರಿ ಪಶು ಅಥವಾ ಮನುಷ್ಯನ ಮೇಲೆ ಭಾರ ಹೊರಿಸದಿರುವುದು- ಅತಿಭಾರಾರೋಪಣ ದೋಷ ತ್ಯಾಗವಿದೆ.

೪. ತ್ರಸ ಜೀವಗಳ ಅಂಗ-ಉಪಾಂಗಗಳನ್ನು ತನ್ನ ಕೈಯಿಂದ ಕತ್ತರಿಸದಿರುವುದು-ಛೇದನ ದೋಷ ನಿವಾರಣವಿದೆ.

೫. ಯಾವುದೇ ತ್ರಸ ಜೀವದ ಅನ್ನ, ನೀರು, ಹುಲ್ಲು ಮೊದಲಾದ ಆಹಾರ-ಪಾನೀಯಗಳನ್ನು ತಡೆಯದಿರುವುದು. ಎಂದರೆ ಯಾವನೋ ವ್ಯಕ್ತಿಯ ತಲೆಯ ಮೇಲೆ ತನ್ನ ಸಾಲವಿದ್ದರೆ - ನಮ್ಮ ಸಾಲ ಕೊಟ್ಟು ಬಿಡು, ಇಲ್ಲದಿದ್ದರೆ

ನೀನು ತಿನ್ನುವ ಅನ್ನ-ನೀರಿನ ಮೇಲೆ ನಿನಗೆ ಆಣೆಯಿದೆಯೆಂಬ ವಚನವನ್ನು ವ್ರತೀ ಶ್ರಾವಕನು ಆಡುವುದಿಲ್ಲ. ಹಸು, ಎತ್ತು, ಆನೆ, ಕುದುರೆಗಳ ಆಹಾರ-ಪಾನೀಯಗಳನ್ನು ತಡೆಯುವುದಿಲ್ಲ - ಇದರ ಹೆಸರು ಅನ್ನ-ಪಾನನಿರೋಧ ದೋಷ ತ್ಯಜನವಿದೆ.

ಇವು ಐದು ಅತಿಚಾರ ದೋಷಗಳನ್ನು ತಗಲಿಸದಿರುವಂಥವನು ಶುದ್ಧ ಅಹಿಂಸಾಣುವ್ರತಿಯಿದ್ದಾನೆ.

**ಸತ್ಯಾಣುವ್ರತ** - ಲೋಕನಿಂದಿತ, ಬೇರೆಯವರಿಗೆ ಕೆಡಕೆನಿಸುವಂಥ ಸ್ಥೂಲ ಅಸತ್ಯವನ್ನಾಡದಿರುವುದು. ವಂಚನೆಯಿಂದ ಕೂಡಿದ ವಚನ, ಕಠೋರ ವಚನ, ಮರ್ಮಭೇದಕವಚನ, ಅನ್ಯರ ದೋಷ ಪ್ರಗಟ ಮಾಡುವಂಥ ವಚನ, ಕಲಹಕಾರೀವಚನ, ದ್ರೋಹವಚನ, ಬೈಗುಳದವಚನ, ಪಾಪಬಂಧಕಾರೀವಚನಗಳು, ಅನ್ಯರ ಮನೆ-ಧನ-ತನು-ಮನಗಳ ಹರಣ ಮಾಡುವಂಥ ವಚನ, ಸುಳ್ಳು ಸಾಕ್ಷಿಯುಕ್ತ ವಚನ, ಪರನಿಂದೆಯ ವಚನ, ಕ್ರೋಧಪರ ವಚನ, ಲೋಭಯುಕ್ತ ವಚನ, ರಾಗ-ದ್ವೇಷ ಗರ್ಭಿತ ವಚನ, ಅವಿಚಾರಮಯ ವಚನ, ಇತ್ಯಾದಿ ಅಸತ್ಯದ ಸಮಸ್ತ ಭೇದಗಳ ತ್ಯಾಗ ಮಾಡುವುದು ಸತ್ಯಾಣುವ್ರತವಿದೆ. ಇದರ ಅತಿಚಾರಗಳೂ ಮಿಥ್ಯೋಪದೇಶ, ರಹೋಭ್ಯಾಖ್ಯಾನ, ಕೂಟ ಲೇಖನ ಕ್ರಿಯೆ, ನ್ಯಾಸಾಪಹಾರ ಮತ್ತು ಸಾಕಾರ ಮಂತ್ರ ಭೇದವೆಂದು ಐದು ಇವೆ.

೧. ಅಸತ್ಯ ಉಪದೇಶ ಕೊಡುವುದು, ಅಸತ್ಯ ಮಾರ್ಗ ಹೇಳುವುದು, ಬಾಲಕರೊಂದಿಗೆ ಅಸತ್ಯ ಭಾಷಣ ಮಾಡುತ್ತ ಕ್ರೀಡೆ ಮಾಡುವುದು ಇತ್ಯಾದಿ ಅಸತ್ಯ ವಚನಗಳನ್ನಾಡುವುದು ಮಿಥ್ಯೋಪದೇಶವಿದೆ.
೨. ಅನ್ಯರ ಮೂಲಕ ಏಕಾಂತದಲ್ಲಿ ಆಡಿದ ಗುಪ್ತ ಮಾತನ್ನು ಯಾವುದೋ ಅನುಮಾನದಿಂದ ತಿಳಿದು, ಬೇರೆಯವರ ಹತ್ತಿರ ಪ್ರಕಾಶಿತ ಮಾಡುವುದು ರಹೋಭ್ಯಾಖ್ಯಾನ ಅತಿಚಾರವಿದೆ.
೩. ಸುಳ್ಳು ಪತ್ರ, ಹುಂಡಿ (ಚೆಕ್ಕು), ಚೀಟಿ ಬರೆಯುವುದು; ಸುಳ್ಳು ಬರವಣಿಗೆ ಮಂಡಿಸುವುದು ಇತ್ಯಾದಿಗಳು ಕೂಟಲೇಖಕ್ರಿಯಾದೋಷವಿದೆ.
೪. ಸತ್ಯಘೋಷ ಪುರೋಹಿತನ ಹಾಗೆ ಅನ್ಯರ ಆಭೂಷಣಾದಿ ಇಟ್ಟುಕೊಂಡಿರುವ-ಬೆಲೆ ಬಾಳುವ ವಸ್ತುವನ್ನು ಇಟ್ಟುಕೊಂಡು ಚನ್ನಾಗಿ ತಿಳಿದೂ-ಸ್ಮರಣೆಯಲ್ಲಿದ್ದರೂ ಇಲ್ಲವೆಂದು ನಿರಾಕರಿಸುವುದು ನ್ಯಾಸಾಪಹಾರವೆಂಬ ಹೆಸರಿನ ಅತಿಚಾರವಿದೆ.
೫. ಶರೀರದ ಯಾವುದೇ ಚಿಹ್ನೆಯಿಂದ, ನೇತ್ರಗಳ ಚಿಹ್ನೆಯಿಂದ, ಮುಖದ ಚಿಹ್ನೆಯಿಂದ, ಅವರ ಆಕೃತಿ ನೋಡಿ ಅವರ ಮರ್ಮದ ಮಾತನ್ನು ತಿಳಿದು, ನಂತರ ದ್ವೇಷ ಭಾವದಿಂದ ಅನ್ಯರ ಗುಪ್ತ ಮಾತನ್ನು ಎಲ್ಲರ ಎದುರಿಗೆ ಪ್ರಕಟಪಡಿಸುವುದು ಸಾಕಾರ ಮಂತ್ರಭೇದ ದೋಷವಿದೆ.

ಇವು ಐದು ಅತಿಚಾರಗಳಿಂದ ರಹಿತವಾದುದು ಸತ್ಯಾಣುವ್ರತವಿರುತ್ತದೆ.

**ಅಚೌರ್ಯಾಣುವ್ರತ** - ಕೊಡದಿರುವ ಅನ್ಯರ ಧನವನ್ನು ತಗೆದುಕೊಳ್ಳುವುದು ಅದತ್ತಾದಾನರೂಪ ಚೋರಿಯಿದೆ. ಬೇರೆಯವರ ಪುತ್ರ, ಪತ್ನಿ, ದಾಸಿ, ದಾಸ, ಆನೆ, ಕುದುರೆ, ಹಸು, ಮೇಕೆ, ಎತ್ತು ಇತ್ಯಾದಿ ಚೇತನ ವಸ್ತುಗಳು ಮತ್ತು ರತ್ನ, ಚಿನ್ನ, ಬೆಳ್ಳಿ, ವಸ್ತ್ರ,ಧನ, ಇತ್ಯಾದಿ ಅಚೇತನ ವಸ್ತುಗಳು - ಈ ಚೇತನ - ಅಚೇತನ ವಸ್ತುಗಳನ್ನು ಕದಿಯುವುದು ಕಳವು ಇದೆ, ಈ ಕಳವಿನ ತ್ಯಾಗವನ್ನು ಸ್ಥೂಲರೂಪದಿಂದ ಮಾಡುವುದು ಅಚೌರ್ಯಾಣುವ್ರತವಿದೆ. ಇದರ ಅತಿಚಾರಗಳು - ಸ್ತೇನ ಪ್ರಯೋಗ, ಸ್ತೇಯ ವಸ್ತು ಆದಾನ, ರಾಜ್ಯವಿರುದ್ಧ ಕ್ರಿಯೆ, ಹೀನಾಧಿಕ ಮಾನೋನ್ಮಾನ ಮತ್ತು ಪ್ರತಿರೂಪಕ ವ್ಯವಹಾರ - ಇವು ಐದು ಇವೆ.

೧. ಕಳವಿನ ಉಪದೇಶ ಕೊಡುವುದು, ಕಳ್ಳನಿಗೆ ಮಾರ್ಗ ತಿಳಿಸಿಕೊಡುವುದು, ಅನ್ಯರ ಮನೆ-ಮಂದಿರಗಳನ್ನು ಒಡೆದು ಹಾಕುವ ಸಲುವಾಗಿ ಹಾರಿ, ಗುದ್ದಲಿಗಳನ್ನು ಕೊಟ್ಟು ಕಳವಿನ ಪದ್ಧತಿ ಹೇಳಿಕೊಡುವುದು ಇತ್ಯಾದಿ ರೂಪದಲ್ಲಿ ಕಳವಿನ ಪದ್ಧತಿ ತಿಳಿಸಿಕೊಡುವುದು ಅದು ಸ್ತೇನ ಪ್ರಯೋಗವೆಂಬ ಹೆಸರಿನ ದೋಷವಿದೆ.

೨. ಕಳವು ಮಾಡಿ ತಂದಿರುವ ವಸ್ತುವು ಅಲ್ಪ ಮೌಲ್ಯದಲ್ಲಿ ಸಿಗುತ್ತಿರುವುದನ್ನು ಕಂಡು ಅದರಲ್ಲಿ ಅಧಿಕ ಲಾಭ ತಿಳಿದು ಖರೀದಿಸುವುದು ತದಾಹೃತಾದಾನವೆಂಬ ಹೆಸರಿನ ದೋಷವಿದೆ. ಅದನ್ನೇ ಸ್ತೇನವಸ್ತು ಆದಾನ ದೋಷವೆಂದೂ ಹೇಳುತ್ತಾರೆ.

೩. ದೊರೆಯ ಮರ್ಯಾದೆಯನ್ನು ಲುಪ್ತ ಮಾಡುವುದು, ಎಂದರೆ ದೊರೆಯ ತೆರಿಗೆ ಕದಿಯುವುದು ಮತ್ತು ದೊರೆಯ ಆಜ್ಞೆಯ ಉಲ್ಲಂಘನೆ ಮಾಡುವುದು ರಾಜ್ಯವಿರುದ್ಧವೆಂಬ ಹೆಸರಿನ ದೋಷವಿದೆ.

೪. ವಸ್ತುಗಳನ್ನು ತಗೆದುಕೊಳ್ಳುವ ಅಳತೆ-ತೂಕದ ಕಲ್ಲುಗಳನ್ನು ದೊಡ್ಡವು ಇಟ್ಟುಕೊಳ್ಳುವುದು ಮತ್ತು ಅನ್ಯರಿಗೆ ಕೊಡುವ ಅಳತೆ-ತೂಕದ (ಮಿಲಿಗ್ರಾಂ, ಸೆಂಟೀಗ್ರಾಂ, ಕಿಲೋಗ್ರಾಂ, ಕ್ವಿಂಟಲ್) ಮೊದಲಾದುವನ್ನು ಚಿಕ್ಕವೇ ಇರಿಸಿಕೊಳ್ಳುವುದು ಅದು ಹೀನಾಧಿಕ ಮಾನೋನ್ಮಾನವೆಂಬ ಹೆಸರಿನ ಅತಿಚಾರವಿದೆ.

೫. ಅತ್ಯಧಿಕ ಬೆಲೆಯುಳ್ಳ ವಸ್ತುಗಳಲ್ಲಿ ಅಲ್ಪ ಬೆಲೆಯ ವಸ್ತುಗಳನ್ನು ಕೂಡಿಸಿ ಮಾರುವುದು ಅದು ಪ್ರತಿರೂಪಕ ವ್ಯವಹಾರವೆಂಬ ಹೆಸರಿನ ಅತಿಚಾರ ದೋಷವಿದೆ.

ಇವು ಐದು ಅತಿಚಾರರಹಿತ ಅಚೌರ್ಯಾಣುವ್ರತವಿದೆ.

**ಬ್ರಹ್ಮಚರ್ಯಾಣುವ್ರತ** - ಅನ್ಯ ಸ್ತ್ರೀಜಾತಿಯ ಸಂಬಂಧದಲ್ಲಿ - ಕಿರಿಯರನ್ನು ಪುತ್ರಿಯ ಸಮಾನ, ಸಮ ವಯಸ್ಕರನ್ನು ಸಹೋದರಿಯ ಸಮಾನ, ದೊಡ್ಡವರನ್ನು ಮಾತೆಯ ಸಮಾನವೆಂದು ನೋಡುವಂಥವನು, ತನ್ನ ವಿವಾಹಿತ ಸ್ತ್ರೀಯಲ್ಲಿ ಸಂತೋಷಮಯ-ತೀವ್ರರಾಗರಹಿತ, ಸಮತೆಯ ಭಾವಸಹಿತ ಪ್ರವೃತ್ತಿ ಮಾಡುವಂಥ ಪುರುಷನು ಸಂತಾನೋತ್ಪತ್ತಿಯ ಸಲುವಾಗಿ ಸ್ವಸ್ತ್ರೀಯೊಂದಿಗೆ ರತಿಸಮಯದಲ್ಲಿ ಸಂಗಮ ಮಾಡುತ್ತಾನೆ. ಉಳಿದ ನಾಲ್ಕು ಪ್ರಕಾರದ ಚೇತನ-ಅಚೇತನ ಸ್ತ್ರೀಯರ ಕುರಿತಾಗಿ ರಾಗ-ದ್ವೇಷದ ಅಭಾವವಿರುವ ಕಾರಣ ವಿಕಾರಮಯ ದೃಷ್ಟಿಯಿಂದ ನೋಡುವುದಿಲ್ಲ. ಪರಸ್ತ್ರೀಯರಲ್ಲಿ ಕಾಮಚೇಷ್ಟೆಯ ರೂಪದ ವಿಕಾರ ವಚನ, ಹಾಸ್ಯವಚನ, ಪರಸ್ಪರರಲ್ಲಿ ಪ್ರೀತಿಯನ್ನು ಹೆಚ್ಚಿಸುವಂಥ ನಿರ್ಲಜ್ಜವಚನ, ಅವರನ್ನು ಕುಶೀಲ ರಾಗಯುಕ್ತ ದೃಷ್ಟಿಯಿಂದ ನೋಡುವುದು, ಪರಸ್ತ್ರೀಯರೊಂದಿಗೆ ಗೋಷ್ಠಿ, ಚರ್ಚೆ, ಮಾತುಕತೆ ಮಾಡುವುದು-ಇತ್ಯಾದಿಗಳು ಪರಸ್ತ್ರೀ ಸಂಬಂಧದ ದೋಷಗಳಿವೆ.

ವಿಷಯುಕ್ತ ನಾಗಸರ್ಪದ ಸಮಾನ, ರಾಗರೂಪ ವಿಷದಿಂದ ತುಂಬಿಕೊಂಡಿರುವ, ಯೌವನದಿಂದ ಮದೋನ್ಮತ್ತ, ವಿಕರಾಳ ಸ್ವರೂಪವನ್ನು ಧಾರಣ ಮಾಡುವಂಥ, ಶೀಲವಂತ ಪುರುಷರಿಗೆ ಭಯವನ್ನುಂಟು ಮಾಡುವಂಥ ಮಹಾವಿಷಯುಕ್ತ ನಾಗಿಣಿ; ಬಾಲಕ, ವೃದ್ಧ, ದೇವ, ಪಶುರೂಪ ಮೂರು ಗತಿಯ ಸಮಸ್ತ ಜೀವಗಳನ್ನು ದಂಶ ಮಾಡುವಂಥ, ಹಿರಿಯರ ಆಜ್ಞೆಯರೂಪದ ಮಂತ್ರ-ಮರ್ಯಾದೆಗಳ ಲೋಪ ಮಾಡುವಂಥ ಪರಸ್ತ್ರೀಯ ಕುರಿತಾದ ದೃಷ್ಟಿಯ - ಪರಸ್ತ್ರೀಯ ತ್ಯಾಗವು ಬ್ರಹ್ಮಚರ್ಯಾಣುವ್ರತವಿದೆ. ಪರವಿವಾಹಕರಣ, ಇತ್ವರಿಕಾಗಮನ, ಪರಗೃಹೀತಾಗೃಹೀತಗಮನ, ಅನಂಗಕ್ರೀಡೆ, ಕಾಮತೀವ್ರಾಭಿನಿವೇಶ - ಇವು ಐದು ಇದರ ಅತಿಚಾರಗಳಿವೆ.

೧. ಬೇರೆಯವರ ವಿವಾಹ ಮಾಡಿಸುವುದು, ಮಧ್ಯಸ್ಥನಾಗಿ ನಿಶ್ಚಿತಾರ್ಥ ಮಾಡಿಸುವುದು, ಮಧ್ಯಸ್ಥನಾಗಿ ಹುಡುಗ-ಹುಡುಗಿಯರ ಸಂಬಂಧ ಕೂಡಿಸುವುದು, ಕುಲ-ವಂಶ ಹೊಂದಿಸುವುದು, ವಿವಾಹದ ಮಾತುಕತೆ, ಕೊಡ-ಕೊಳ್ಳುವ ಚರ್ಚೆ ಮಾಡುವುದು ಇತ್ಯಾದಿ ವಿವಾಹ ಕಾರ್ಯ ಮಾಡಿಸುವುದು ಪರವಿವಾಹಕರಣವೆಂಬ ಹೆಸರಿನ ದೋಷವಿದೆ.

೨. ದಾಸಿಯನ್ನು ಮನೆಯಲ್ಲಿ ಇರಿಸಿಕೊಳ್ಳುವುದು, ಅವಳೊಂದಿಗೆ ಸ್ತ್ರೀ(ಪತ್ನಿ) ವ್ಯವಹಾರದ ಚೇಷ್ಟೆ ಮಾಡುವುದು ಇತ್ವರಿಕಾಗಮನವೆಂಬ ಹೆಸರಿನ ದೋಷವಿದೆ.

೩. ಅನ್ಯರಿಂದ ಗೃಹೀತ (ಪತಿ ಸಹಿತಳೂ) ಅಥವಾ ವಿಧವೆ ಸ್ತ್ರೀ ಹಾಗೂ ಅನ್ಯರಿಂದ ಅಗೃಹೀತ ಕುಮಾರಿ (ಅವಿವಾಹಿತೆ) ಸ್ತ್ರೀಯೊಂದಿಗೆ ವಿಕಾರದ ಪ್ರವೃತ್ತಿ ಮಾಡುವುದು, ಅವಳ ಮನೆಗೆ ಬರ ಹೋಗುವುದು ಪರಗೃಹೀತಾಗೃಹೀತಗಮನವೆಂಬ ಹೆಸರಿನ ದೋಷವಿದೆ.

೪. ಭೋಗಯೋಗ್ಯ ಸ್ಥಾನವನ್ನು ಬಿಟ್ಟು, ಮೇಲೆ ಮೇಲೆ ಕ್ರೀಡೆ ಮಾಡುವಂಥ ಶ್ವಾನಾದಿಗಳ ಹಾಗೆ ಸ್ತ್ರೀಯ ಭೋಗಯೋಗ್ಯ ಯೋನಿಸ್ಥಾನವನ್ನು ಬಿಟ್ಟು ಅನ್ಯ ಬಾಹ್ಯ ಅಂಗಗಳೊಂದಿಗೆ ಕ್ರೀಡಿಸುವುದು; ಕೈ, ಕಾಲು ಮೊದಲಾದ ಅಂಗಗಳೊಂದಿಗೆ ಕ್ರೀಡೆ ಮಾಡಿ ವೀರ್ಯಸ್ಖಲನ ಮಾಡುವುದು ಅನಂಗ ಕ್ರೀಡೆಯರೂಪದ ದೋಷವಿದೆ.

೫. ತೀವ್ರಕಾಮದ ವೃದ್ಧಿ ಮಾಡಿಸುವಂಥ ಭೋಜನ ಮಾಡುವುದು, ವಚನವನ್ನಾಡುವುದು, ಕ್ರಿಯೆ ಮಾಡುವುದು ಇತ್ಯಾದಿಯು ಕಾಮತೀವ್ರಾಭಿನಿವೇಷವೆಂಬ ಹೆಸರಿನ ದೋಷವಿದೆ.

ಇವು ಐದು ಅತಿಚಾರ ರಹಿತವಾದ ಬ್ರಹ್ಮಚರ್ಯಾಣುವ್ರತವಿದೆ.

**ಪರಿಗ್ರಹ ಪರಿಮಾಣಾಣುವ್ರತ -** ಕ್ಷೇತ್ರ, ವಾಸ್ತು, ಧನ, ಧಾನ್ಯ, ಚತುಷ್ಪದ, ದ್ವಿಪದ, ಆಸನ, ಶಯನ, ಕುಪ್ಯ (ವಸ್ತ್ರ) ಮತ್ತು ಪಾತ್ರೆರೂಪ ಹತ್ತು ಪ್ರಕಾರದ ಪರಿಗ್ರಹಗಳ ಪರಿಮಾಣ ಮಾಡುವುದು ಪರಿಗ್ರಹ ಪರಿಮಾಣಾಣುವ್ರತವಿದೆ.

೧. ನಾಲ್ಕೂ ಕಡೆಗಿನ ಕ್ಷೇತ್ರದ ಪರಿಮಾಣ ಮಾಡುವುದು ಎಂದರೆ ಇಂತಿಷ್ಟು ಕ್ಷೇತ್ರಗಳಲ್ಲಿ ಕರ್ಮ ಸಂಬಂಧದ ಕಾರ್ಯ ಮಾಡುವುದರ ಸೀಮೆಯನ್ನಿಟ್ಟುಕೊಂಡು, ಅದರಿಂದ ಅಧಿಕ-ಹೊರಗಿನ ಕ್ಷೇತ್ರಗಳಲ್ಲಿ ಕರ್ಮ ಸಂಬಂಧದ ಕಾರ್ಯ ಮಾಡುವ ಮಮತೆಯ ತ್ಯಾಗ ಮಾಡುವುದು ಕ್ಷೇತ್ರ ಪರಿಮಾಣವಿದೆ. ಇಷ್ಟು ಕ್ಷೇತ್ರದಲ್ಲಿ ನೇಗಿಲು ನಡೆಸಿ-ಹರಗಿ ವ್ಯವಸಾಯ ಮಾಡುವ, ಅಧಿಕ ಕ್ಷೇತ್ರವನ್ನು ಹರಗದಿರುವ ಪರಿಣಾಮ ಮಾಡುವುದು ಕ್ಷೇತ್ರ ಪರಿಗ್ರಹ ಪರಿಮಾಣವಿದೆ.

೨. ಇಂತಿಷ್ಟು ಮನೆಯನ್ನಿಟ್ಟುಕೊಳ್ಳುವುದು - ಈ ರೂಪದಲ್ಲಿ ಮನೆ, ಅಂಗಡಿ, ಮಂದಿರ, ನಗರದ ಪರಿಮಾಣ ಮಾಡುವುದು ವಾಸ್ತು ಪರಿಗ್ರಹ ಪರಿಮಾಣವಿದೆ.

೩. ಇಂತಿಷ್ಟು ಧನವನ್ನಿಟ್ಟುಕೊಳ್ಳುವುದು - ಈ ರೂಪದಲ್ಲಿ ಚಿನ್ನ, ಬೆಳ್ಳಿ, ರತ್ನ ಇತ್ಯಾದಿಗಳ ಪರಿಮಾಣ ಮಾಡುವುದು ಧನ ಪರಿಗ್ರಹ ಪರಿಮಾಣವಿದೆ.

೪. ಇಷ್ಟು ಧಾನ್ಯ, ಇಂತಿಷ್ಟು ಅಳತೆ ಮಾಡುವುದು - ಈ ರೂಪದಲ್ಲಿ ಅಕ್ಕಿ, ಗೋದಿ, ಜವೆಗೋದಿ, ಜೋಳ, ಹೆಸರು, ಉದ್ದು, ಮಡಕೆ, ಕಡಲೆ, ಬಟಾನೆ, ಚನ್ನಂಗಿ, ತೊಗರಿ, ನವಣೆ, ಸಜ್ಜೆ ಇತ್ಯಾದಿ ಧಾನ್ಯಗಳ ಸಂಖ್ಯೆ ಹಾಗೂ ಅಳತೆಯ ಪರಿಮಾಣ ಮಾಡುವುದು ಧಾನ್ಯ ಪರಿಗ್ರಹ ಪರಿಮಾಣವಿದೆ.

೫. ದಾಸಿ, ದಾಸ, ಸೇವಕ ಮೊದಲಾದ ದ್ವಿಪದಧಾರೀ ಜೀವಗಳನ್ನು ಇಟ್ಟುಕೊಳ್ಳುವ ಸಂಖ್ಯೆ ಸುನಿಶ್ಚಿತ ಮಾಡುವುದು ದ್ವಿಪದ ಪರಿಗ್ರಹ ಪರಿಮಾಣವಿದೆ.

೬. ಆನೆ, ಕುದುರೆ, ಒಂಟೆ, ಹಸು, ಎಮ್ಮೆ, ಮೇಕೆ ಮೊದಲಾದ ಚತುಷ್ಪದಗಳನ್ನು ತಮ್ಮ ಆಧೀನವಿಟ್ಟುಕೊಳ್ಳುವ ಸಂಖ್ಯೆ ಪರಿಮಾಣ ಮಾಡುವುದು ಚತುಷ್ಪದ ಪರಿಗ್ರಹ ಪರಿಮಾಣವಿದೆ.

೭. ರಥ, ಚಕ್ಕಡಿ, ಗಾಡಿ, ಪಲ್ಲಕ್ಕಿ, ಸಿಂಹಾಸನ, ಮೇಣೆ ಮೊದಲಾದ ಆಸನದ ಪರಿಮಾಣ ಮಾಡುವುದು ಆಸನ ಪರಿಗ್ರಹ ಪರಿಮಾಣವಿದೆ.

೮. ಮಂಚ, ಪಲ್ಲಂಗ, ಹಾಸಿಗೆ, ಒರಗು ದಿಂಬು ಇತ್ಯಾದಿಯ ಪರಿಮಾಣ ಮಾಡುವುದು ಶಯನ ಪರಿಗ್ರಹ ಪರಿಮಾಣವಿದೆ.

೯. ನೂಲಿನ, ರೇಷ್ಮೆಯ (ಹುಳುಗಳಿಂದ ತಗೆದುದಲ್ಲ ಆದರೆ ಹೊಳಪುಳ್ಳ ಬಟ್ಟೆ) ನಾರಿನ, ಉಣ್ಣೆಯ ಇತ್ಯಾದಿ ಕೋಮಲ-ಕಠೋರ ವಸ್ತ್ರಗಳ ಪ್ರಮಾಣ ಮಾಡುವುದು ಕುಪ್ಯ ಪರಿಗ್ರಹ ಪ್ರಮಾಣವಿದೆ. ಕರ್ಪೂರ, ಕೇಶರ, ಚಂದನ, ಸುಗಂಧ ಇತ್ಯಾದಿ ಪರಿಮಳ ಪದಾರ್ಥಗಳನ್ನಿಟ್ಟುಕೊಳ್ಳುವ ಪರಿಮಾಣ ಮಾಡುವುದೂ ಕುಪ್ಯ ಪರಿಗ್ರಹ ಪರಿಮಾಣವಿದೆ.

೧೦. ಧಾತುವಿನ ಪಾತ್ರೆ, ಚಿನ್ನ, ಬೆಳ್ಳಿ, ಕಂಚು, ಹಿತ್ತಾಳೆ, ತಾಮ್ರ, ಕಬ್ಬಿಣ, ಸತುವು, ಸೀಸ, ತವರ ಇತ್ಯಾದಿ ಪೃಥ್ವಿಕಾಯ ಧಾತು ಪಾತ್ರೆಗಳ ಪರಿಮಾಣ ಮಾಡುವುದು, ತಟ್ಟೆ ತಂಬಿಗೆ, ಬಟ್ಟಲು, ಬೇಯಿಸುವ ಪಾತ್ರೆ, ನೀರು ತುಂಬುವ ಪಾತ್ರೆಗಳು ಕೊಡ-ಮುಚ್ಚಳ ಇತ್ಯಾದಿ ಎಲ್ಲ ಪಾತ್ರೆಗಳ ಎಣಿಕೆ, ಅಳತೆಯ ಪರಿಮಾಣ ಮಾಡುವುದು ಭಾಂಡ-ಪಾತ್ರೆಯೆಂಬ ಹೆಸರಿನ ಪರಿಗ್ರಹ ಪರಿಮಾಣವಿದೆ.

ಈ ಹತ್ತು ಜಾತಿಯ ಪರಿಗ್ರಹ ಪರಿಮಾಣದ ಹೆಸರು ಪ್ರಶ್ನೋತ್ತರ ಶ್ರಾವಕಾಚಾರದ ಅನುಸಾರ ಹೇಳಲಾಗಿದೆ. ತತ್ತ್ವಾರ್ಥಸೂತ್ರದಲ್ಲಿ ಕ್ಷೇತ್ರ, ವಾಸ್ತು, ಹಿರಣ್ಯ, ಸುವರ್ಣ, ಧನ, ಧಾನ್ಯ, ದಾಸ, ದಾಸೀ, ಭಾಂಡ, ಕುಪ್ಯ - ಇವು ಹತ್ತು ಇವೆ. ಈ ಪ್ರಕಾರ ಎರಡರಲ್ಲಿ ನಾಮಭೇದವಿದೆ. ಅರ್ಥ ಭೇದವು ಕೇವಲೀ ಗಮ್ಯ ಹಾಗೂ ವಿಶೇಷ ಜ್ಞಾನಿಗಳಿಗೆ ಗಮ್ಯವಿದೆ. ಈ ಹತ್ತು ಜಾತಿಯ ಪರಿಗ್ರಹದ ಪರಿಮಾಣ ಮಾಡುವುದು, ಪರಿಗ್ರಹ ಪರಿಮಾಣವು ಅಣುವ್ರತವಿದೆ. ಇದರ ಅತಿಚಾರಗಳು - ಅತಿವಾಹನ, ಅತಿಸಂಗ್ರಹ, ಅತಿವಿಸ್ಮಯ, ಅತಿಲೋಭ ಮತ್ತು ಅತಿಭಾರಾರೋಪಣವೆಂದು ಐದು ಇವೆ.

೧. ಚಕ್ಕಡಿ, ಬಂಡಿ, ರಥ, ಆನೆ, ಕುದುರೆ ಮೊದಲಾದ ಜಾತಿಯ ಎಂದರೆ ಹತ್ತು ಆನೆ, ಕುದುರೆ, ಹತ್ತು ರಥ ಮೊದಲಾದವುಗಳ ಪರಿಮಾಣ ಮಾಡಿದ ನಂತರ ವರ್ತಮಾನದಲ್ಲಿ ಅದಕ್ಕಿಂತ ಕಡಿಮೆಯಿದ್ದರೆ ಅವನ್ನು ಪೂರ್ಣ ಮಾಡುವ ಸಲುವಾಗಿ, ಅನೇಕ ಉಪಾಯ ಮಾಡುವುದು - ನನ್ನದು ಹತ್ತರ ಪರಿಮಾಣವಿದೆಯೆಂದು ಯೋಚಿಸುವುದು. ಈಗ ನನ್ನ ಹತ್ತಿರ ಐದು ಇವೆ ಅದರಿಂದ ಇನ್ನೂ ಐದು ತಗೆದುಕೊಳ್ಳುವವರೆಗೆ ನನ್ನ ವ್ರತದಲ್ಲಿ ದೋಷ ತಗಲುವುದಿಲ್ಲವೆಂಬ ವಿಚಾರದೊಂದಿಗೆ ಅದನ್ನು ಪೂರ್ಣಗೊಳಿಸುವ ಇಚ್ಛೆ ಮಾಡುವುದು ಅತಿವಾಹನ ಬಯಕೆಯೆಂಬ ಹೆಸರಿನ ದೋಷವಿದೆ.

ತನ್ನ ಪರಿಮಾಣಕ್ಕಿಂತ ಅಧಿಕ ಸಂಗ್ರಹ ಮಾಡುವ ಇಚ್ಛೆಯಿರುವುದರಿಂದ, ಪರಿಮಾಣಕ್ಕಿಂತ ಅಧಿಕ ವಾಹನಗಳಾಗಿ ಹೋದಮೇಲೆ 'ಇವು ನನ್ನವಲ್ಲ, ನನ್ನ ಪುತ್ರನವಿವೆ, ಅಥವಾ ನನ್ನ ಪತ್ನಿಯವಿವೆ ಅಥವಾ ನನ್ನ ತಮ್ಮನವಿವೆ' ಇತ್ಯಾದಿಯರೂಪದಲ್ಲಿ ತನ್ನ ಮನಸ್ಸಿನಿಂದ ಕಲ್ಪನೆ ಮಾಡಿ ಅವುಗಳ ಸಂಗ್ರಹ ಮಾಡುವುದು ಅತಿವಾಹನ ದೋಷವಿದೆ.

೨. ತನ್ನ ಮರ್ಯಾದೆಯ ಉಲ್ಲಂಘನೆ ಮಾಡಿ, ಸಂತೋಷ ವೃತ್ತಿಯನ್ನು ಬಿಟ್ಟುಕೊಟ್ಟು, ಅತ್ಯಂತ ಲೋಭದ ವಶೀಭೂತನಾಗಿ ತನ್ನಿಂದ ಮಾಡಲಾದ ಧಾನ್ಯದ ಮರ್ಯಾದೆಯ ಪರಿಮಾಣದಲ್ಲಿ ಅನೇಕ ಜಾತಿಯ ಧಾನ್ಯ ಸಂಗ್ರಹ ಮಾಡಿ ಅನೇಕ ದಿನಗಳವರೆಗೆ ಉಗ್ರಾಣ(ಭಂಡಾರ)ದಲ್ಲಿ ಇಡುವುದು. ಅವುಗಳಲ್ಲಿ ಅನೇಕ ಹುಳುಗಳಾದ ಮೇಲೆ ಅವನ್ನು ನೋಡಿ, ನಿರ್ದಯಭಾವದೊಂದಿಗೆ 'ನನ್ನದು ಇಂತಿಷ್ಟು ಧಾನ್ಯದ ಮರ್ಯಾದೆಯಿದೆ, ಮರ್ಯಾದೆಯ ಉಲ್ಲಂಘನೆ ಮಾಡಿ ನಾನು ಧಾನ್ಯವನ್ನಿಟ್ಟಿಲ್ಲ ಅಲ್ಲದೇ ಯಾವ ಹುಳುಗಳಾಗಿವೆ ಅದರಲ್ಲಿ ನಾವಾದರೂ ಏನು ಮಾಡಬಹುದಾಗಿದೆ ? ಧಾನ್ಯದಲ್ಲಿ ಜೀವಗಳಂತೂ ಆಗಿಯೇ ಆಗುತ್ತವೆ ಅವನ್ನು ಹೇಗೆ ತಡೆಯಬಹುದಾಗಿದೆ ? ವ್ಯಾಪಾರದಲ್ಲಿಯಂತೂ ಇದೆಲ್ಲ ಇದ್ದೇ ಇರುತ್ತದೆ. ವ್ಯಾಪಾರ ಮಾಡದೆಯೂ ಕೂಡ ನಡೆಯುವುದಿಲ್ಲ'ವೆಂದು ವಿಚಾರ ಮಾಡಿ ಕಠೋರ ಭಾವವಿಟ್ಟುಕೊಳ್ಳುವುದು ದಯೆ ಮಾಡದಿರುವುದು ಅತಿಸಂಗ್ರಹ ನಾಮದ ದೋಷವಿದೆ.

೩. ಪೇಟೆಯಲ್ಲಿ ಅಥವಾ ಸಂತೆಯಲ್ಲಿನ ಅಂಗಡಿಗೆ ಸಂಬಂಧಿಸಿದ ಮಸಾಲೆ ಸಾಮಾನು-ಕೊತ್ತಂಬರಿ ಬೀಜ, ಜೀರಿಗೆ, ಅರಿಷಿಣ ಮೊದಲಾದ ಅನೇಕ-ಅನೇಕ ವಸ್ತುಗಳನ್ನು ಖರೀದಿಸುವ-ವಿಕ್ರಯಿಸುವಲ್ಲಿ ಸಾಮಾನ್ಯ-ವಿಶೇಷ ಲಾಭಾದಿಗಳನ್ನು ತಿಳಿಯದಿರುವುದರಿಂದ ಪರಿಣಾಮದೊಳಗೆ ಖೇದ ಪಡುವುದು, ಸಂಕ್ಲೇಶತೆಯನ್ನಿಟ್ಟುಕೊಳ್ಳುವುದು; ಮೊದಲು ಲಾಭ ತಿಳಿದು ವಸ್ತುಗಳನ್ನು ಖರೀದಿಸಿದ ನಂತರ ಲಾಭವು ಭಾಸಿತವಾಗದಿದ್ದಾಗ ಅತಿಶಯ ತೃಷ್ಣೆಯೊಂದಿಗೆ ಅವನ್ನು ಮಾರುವುದು, ತನ್ನ ಮರ್ಯಾದೆಗಿಂತ ಅಧಿಕ ವಸ್ತು ಬಂದಿರುವುದೆಂದು ತಿಳಿದು ಅದನ್ನು ಮರಳಿ ಕಳಿಸುವ ಸಲುವಾಗಿ ವಿಸಂವಾದ ಮಾಡುವುದು ವಿಸ್ಮಯವೆಂಬ ಹೆಸರಿನ ದೋಷವಿದೆ.

೪. ವಾಣಿಜ್ಯದ ಸಲುವಾಗಿ ವಸ್ತುಗಳ ಸಂಗ್ರಹ ಮಾಡುವುದು, ಅವನ್ನು ಖರೀದಿಸುವುದು, ನಂತರ ಮಾರುವ ಸಮಯದಲ್ಲಿ ಅಗ್ಗದ ವಸ್ತು ಬೆರೆಸಿ ಮಾರುವುದು ಅತಿಲೋಭವೆಂಬ ಹೆಸರಿನ ದೋಷವಿದೆ.

೫. ಎತ್ತು, ಕೋಣ, ಕತ್ತೆ, ಹಮಾಲ-ಕೂಲಿ ಮೊದಲಾದವರ ಮೇಲೆ ಮರ್ಯಾದೆಗಿಂತ ಅಧಿಕ ಭಾರ ಹೊರಿಸುವುದು-ಎಂದರೆ ಅವರ ಭಾರದ ಮರ್ಯಾದೆಯ ಅನುಸಾರ ಮನುಷ್ಯನಿಂದ ಕೂಲಿ ನಿಶ್ಚಿತ ಮಾಡಿದ ಮೇಲೆ ಪುನಃ ರಾಜಕರದ ಭಯದಿಂದ ಮರೆಮಾಡಿ ಅವನ ಮೇಲೆ ಅಧಿಕ ಭಾರ ಹೊರಿಸುವುದು; ಲಾಭದ ಲೋಭದಿಂದ ಅನ್ಯ ಜೀವಗಳ ಮೇಲೆ ಮರ್ಯಾದೆಯ ಉಲ್ಲಂಘನೆ ಮಾಡಿ ಭಾರ ಹೊರಿಸುವುದು ಅತಿ ಭಾರಾರೋಪಣ ದೋಷವಿದೆ - ಇವು ಐದು ಅತಿಚಾರಗಳಿಂದ ರಹಿತವಾಗಿಯೇ ಪರಿಗ್ರಹ ಪರಿಮಾಣ ವ್ರತವು ಶುದ್ಧವಾಗುತ್ತದೆ.

ದಿಗ್ವ್ರತ, ದೇಶವ್ರತ ಮತ್ತು ಅನರ್ಥದಂಡತ್ಯಾಗವ್ರತ - ಇವು ಮೂರು ಗುಣವ್ರತಗಳಿವೆ.

೧. ದಿಗ್ವ್ರತ - ಪೂರ್ವದಿಕ್ಕು, ಪಶ್ಚಿಮದಿಕ್ಕು, ಉತ್ತರದಿಕ್ಕು, ದಕ್ಷಿಣದಿಕ್ಕು ಮತ್ತು ಪೂರ್ವ-ದಕ್ಷಿಣದ ಮಧ್ಯ ಆಗ್ನೇಯಕೋಣ, ದಕ್ಷಿಣ-ಪಶ್ಚಿಮದ ಮಧ್ಯ ನೈಋತ್ಯ-ಕೋಣವಿದಿಶೆ, ಪಶ್ಚಿಮ-ಉತ್ತರದ ಮಧ್ಯದಲ್ಲಿ ವಾಯವ್ಯಕೋಣ ಉತ್ತರ-ಪೂರ್ವದ ಮಧ್ಯದಲ್ಲಿ ಈಶಾನಕೋಣ - ಇವು ನಾಲ್ಕು ವಿದಿಕ್ಕು ಹಾಗೂ ಊರ್ಧ್ವದಿಕ್ಕು ಮತ್ತು ಅಧೋದಿಕ್ಕು ಇವು ಹತ್ತು ದಿಕ್ಕುಗಳ ಪ್ರಮಾಣ ಮಾಡುವುದು ಮತ್ತು ದಿಕ್ಕು-ವಿದಿಕ್ಕುಗಳಿಂದ ಬಂಧಿತ ಪ್ರತಿಜ್ಞೆ ಮಾಡುವುದು. ಎಂದರೆ ಇಂಥ ದಿಕ್ಕು-ವಿದಿಕ್ಕುಗಳಲ್ಲಿ ಇಂಥದೊಂದು ನದಿಯವರೆಗೆ, ಒಂದು ಪರ್ವತದವರೆಗೆ, ಒಂದು ವಿಶಿಷ್ಟ ನಗರದವರೆಗೆ, ಇಷ್ಟು ಮರ್ಯಾದೆಯಲ್ಲಿ ಕರ್ಮ-ಕಾರ್ಯ ಮಾಡುವೆನು, ಇಂತಿಷ್ಟೇ ದೂರದವರೆಗೆ ಪತ್ರ ಬರೆಯುವೆನು (ಸಂದೇಶ ಕಳಿಸುವೆನು) ಇಷ್ಟೇ ದೂರದಿಂದ ಬಂದಿರುವ ಪತ್ರವನ್ನು ಓದುವೆನು, ಇಷ್ಟೇ ಮರ್ಯಾದೆಯಲ್ಲಿ ವಸ್ತು ಕಳಿಸುವೆನು; ಇಷ್ಟೇ ಮರ್ಯಾದೆಯಿಂದ ತರಿಸುವೆನು. ಈ ಮರ್ಯಾದೆಯ ಉಲ್ಲಂಘನೆ ಮಾಡಿ ಪತ್ರ ಬರೆಯುವುದಿಲ್ಲ ಮತ್ತು ವಸ್ತುವನ್ನೂ ತರಿಸುವುದಿಲ್ಲ. ಊರ್ಧ್ವ ದಿಕ್ಕಿನಲ್ಲಿ ಇಂತಿಷ್ಟು ಎತ್ತರದ ಪರ್ವತದವರೆಗೆ ಹತ್ತುವೆನು ಮತ್ತು ಅಧೋ ದಿಕ್ಕಿನಲ್ಲಿ ಇಂತಿಷ್ಟು ಕೆಳಗೆ ಭೂಮಿಯವರೆಗೆ ಪಾತಾಳದಲ್ಲಿ - ನದಿ, ಬಾವಿಗಳಲ್ಲಿ ಇಳಿಯುವೆನು. - ಈ ಪ್ರಕಾರ ಹತ್ತೂ ದಿಕ್ಕುಗಳ ಪ್ರಮಾಣ ಮಾಡುವುದು ದಿಗ್ವ್ರತವಿದೆ. ಇದರ ಅತಿಚಾರಗಳು - ಅಧೋತಿಕ್ರಮ, ಊರ್ಧ್ವ ಅತಿಕ್ರಮ, ತಿರ್ಯಗ್ಗಮನ ಅತಿಕ್ರಮ, ಕ್ಷೇತ್ರ ಪರಿಮಾಣ ಉಲ್ಲಂಘನ ಮತ್ತು ಅಂತರಸ್ಮರಣ - ಎಂದು ಐದು ಇವೆ.

೧. ತನ್ನ ಮರ್ಯಾದೆಯ ಉಲ್ಲಂಘನೆ ಮಾಡಿ ಪೃಥ್ವಿ, ಕೂಪ, ಬಾವಿ, ನದಿ ಮೊದಲಾದವುಗಳಲ್ಲಿ ಇಳಿಯುವುದು ಅಧೋದಿಶಾ ಅತಿಕ್ರಮ ನಾಮದ ಅತಿಚಾರವಿದೆ.
೨. ತನ್ನ ಮರ್ಯಾದೆಯ ಉಲ್ಲಂಘನೆ ಮಾಡಿ ಪರ್ವತ, ಶಿಖರಗಳ ಮೇಲೆ ಹತ್ತುವುದು ಊರ್ಧ್ವದಿಶಾತಿಕ್ರಮ ಅತಿಚಾರವಿದೆ.
೩. ಮರ್ಯಾದೆಯ ಉಲ್ಲಂಘನೆ ಮಾಡಿ ದಿಕ್ಕು, ವಿದಿಕ್ಕುಗಳಲ್ಲಿ ಗಮನ ಮಾಡುವುದು ತಿರ್ಯಗ್ಗಮನ ಅತಿಕ್ರಮ ಅತಿಚಾರವಿದೆ.
೪. ಕ್ಷೇತ್ರದ ಅನುಸಾರ ಮಾಡಲಾದ ಮರ್ಯಾದೆಯ ಉಲ್ಲಂಘನೆ ಮಾಡಿ ಅಧಿಕ ಕ್ಷೇತ್ರದಲ್ಲಿ ಕರ್ಮ-ಕಾರ್ಯ ಮಾಡುವುದು ಕ್ಷೇತ್ರ ಉಲ್ಲಂಘನ ಅತಿಚಾರವಿದೆ.
೫. ದಿಕ್ಕುಗಳ ಅನುಸಾರ ಮಾಡಲಾದ ಸೀಮೆಯನ್ನು ಅಂತರಂಗದಲ್ಲಿ ಮರೆತು ಹೋಗಿ ಪುನಃ ತನ್ನ ಮೂಲಕ ಮಾಡಲಾದ ದಿಕ್ಕು ಸೀಮೆಯ ವಿಚಾರ ಮಾಡುವುದು - ಹೀಗೆ ಮರ್ಯಾದೆಯನ್ನು ಮರೆತು ಬಿಡುವುದು ಅಂತರಸ್ಮರಣವೆಂಬ ಹೆಸರಿನ ದೋಷವಿದೆ.

ಈ ಅತಿಚಾರಗಳಿಂದ ರಹಿತ ದಿಗ್ವ್ರತದ ಪಾಲನೆ ಮಾಡುವುದು ದಿಗ್ವ್ರತವೆಂಬ ಹೆಸರಿನ ಗುಣವ್ರತವಿದೆ.

**೨. ದೇಶವ್ರತ** - ಪೂರ್ವೋಕ್ತ ಆಯುವಿನವರೆಗೆ ಮಾಡಲಾದ ದಿಗ್ವ್ರತದ ಮರ್ಯಾದೆಗಳನ್ನು ವರ್ಷ, ಆರು

ತಿಂಗಳು, ಚಾತುರ್ಮಾಸ, ಒಂದು ತಿಂಗಳು, ಹದಿನೈದು ದಿನ, ಒಂದುವಾರ, ಒಂದುದಿನ, ಪ್ರಹರ, ಗಳಿಗೆ ಮೊದಲಾದವುಗಳ ಅನುಸಾರ ಕಡಿಮೆ ಮಾಡಿ ಪ್ರತಿದಿನದ ಮರ್ಯಾದೆ ಮಾಡುತ್ತ ನಿಯಮ ತಗೆದುಕೊಳ್ಳುವುದು ದೇಶವ್ರತವಿದೆ. ಎಂದರೆ ಇಂತಿಷ್ಟು ಕಾಲ, ಇಷ್ಟುದಿನ, ಇಷ್ಟು ತಿಂಗಳವರೆಗೆ ಇಷ್ಟೇ ಭೋಗ - ಉಪಭೋಗ ವಿಟ್ಟುಕೊಳ್ಳುವುದು; ಭೋಗವಸ್ತುಗಳಲ್ಲಿ ಕೂಡ ಇಷ್ಟು ಆಹಾರ (ಧಾನ್ಯ), ಇಷ್ಟೇ ಮಿಠಾಯಿ, ಇಷ್ಟೇ ಒಣಹಣ್ಣು ತಿನ್ನುವುದು ಇದಕ್ಕಿಂತ ಅಧಿಕವಿಲ್ಲ. ಉಪಭೋಗದಲ್ಲಿ ಪತ್ನಿ, ವಸ್ತ್ರ, ಚಕ್ಕಡಿ, ರಥ, ಆನೆ, ಕುದುರೆ, ಮಹಲು, ಹಾಸಿಗೆ ಮೊದಲಾದುವನ್ನು ಇಷ್ಟಿಷ್ಟೇ ಇಟ್ಟುಕೊಳ್ಳುವುದು, ಭೋಗಿಸುವುದು; ಇದಕ್ಕಿಂತ ಅಧಿಕವಿಲ್ಲ. ಈ ಕ್ಷೇತ್ರದಲ್ಲಿ ಇಷ್ಟು ಕಿಲೋಮೀಟರ ಅಥವಾ ಮೀಟರ ಅಥವಾ ಅಡಿಗಳವರೆಗೆ ಹೋಗುವೆನು, ಈ ಕ್ಷೇತ್ರದಲ್ಲಿ ಇಷ್ಟು ಕಾಲದವರೆಗೆ ಉಳಿಯುವೆನು ಇತ್ಯಾದಿ ನಿಯಮರೂಪ ಮರ್ಯಾದೆ ಮಾಡುವುದು ದೇಶವ್ರತವಿದೆ. ಇದರ ಅತಿಚಾರಗಳು - ಆಸನ ಶಯನ, ಪರಪ್ರೇಕ್ಷಣ, ಶಬ್ದ, ರೂಪ ಮತ್ತು ಪುದ್ಗಲಕ್ಷೇಪಣ - ಎಂಬಿವು ಐದು ಇವೆ.

೧. ಸ್ಥಾನ, ಕಾಲದ ಮರ್ಯಾದೆ ಮಾಡಿ ಉಳಿಯುವುದು, ಮಲಗಿಕೊಳ್ಳುವುದು, ಕುಳಿತುಕೊಳ್ಳುವುದು ಮೊದಲಾದವುಗಳ ನಿಯಮ ತಗೆದುಕೊಂಡ ನಂತರವೂ ಆ ಕ್ಷೇತ್ರ-ಕಾಲಗಳ ಉಲ್ಲಂಘನೆ ಮಾಡಿ ಕ್ರಿಯೆ ಮಾಡುವುದು ಆಸನ-ಶಯನ ಅತಿಚಾರವಿದೆ.

೨. ಕ್ಷೇತ್ರ ಮತ್ತು ಕಾಲದ ಮರ್ಯಾದೆಯಲ್ಲಿ ಇರುತ್ತಿದ್ದರೂ ಅನ್ಯರಿಗೆ ನಾಮದಿಂದ ಉಪದೇಶ ಮಾಡಿ, ಅದರಿಂದ ಹೊರಗೆ ಕಾರ್ಯ ಮಾಡಿಸುವುದು ಪರಪ್ರೇಕ್ಷಣ ಅತಿಚಾರವಿದೆ.

೩. ತನ್ನ ಸೀಮೆಯಲ್ಲಿ ಕುಳಿತುಕೊಂಡೇ ಅನ್ಯರನ್ನು ಕರೆಯಿಸಿ ಕಾರ್ಯ ಮಾಡಿಸುವುದು ದೂರದಲ್ಲಿರುವ ಯಾರೋ ಅನ್ಯರಿಗೆ ಹೇಳುವುದು ಮತ್ತು ಬೇರೆ ಯಾರೋ ಕಾರ್ಯ ಮಾಡುವಂಥವರು ತನ್ನ ಕುರಿತಾಗಿ ವಿಚಾರಿಸಿದ ಮೇಲೆ ಅಲ್ಲಿಂದ ಏಳದೇ ಕೆಮ್ಮುತ್ತ, ಕೇಕರಿಸುತ್ತ 'ನಾನು ಇಲ್ಲಿದ್ದೇನೆ'ಂಬ ರೂಪದಲ್ಲಿ ತನ್ನ ಅಸ್ತಿತ್ವ ತಿಳಿಸುವುದು ಶಬ್ದ ದೋಷವಿದೆ.

೪. ತನ್ನ ಸ್ಥಾನದಲ್ಲಿ ಇದ್ದುಕೊಂಡೇ ಯಾವುದೋ ಪ್ರಯೋಜನ ವಿಶೇಷದಿಂದ ಬೇರೆಯವರು ತನ್ನ ಕುರಿತಾಗಿ ವಿಚಾರಿಸಿದ ಮೇಲೆ, ಅವರ ಧ್ವನಿಯನ್ನಾಲಿಸಿ, ಪ್ರಯೋಜನ ತಿಳಿದು; ಬಾಗಿಲು, ಕಿಟಕಿ ಮೊದಲಾದವುಗಳಿಂದ ತನ್ನ ಮೊಗವನ್ನು ತೋರಿಸಿ, ಸಂಕೇತಾದಿಗಳಿಂದ ತನ್ನ ಕಾರ್ಯ ಸಿದ್ಧಿ ಮಾಡಿಕೊಳ್ಳುವುದು ರೂಪವೆಂಬ ಹೆಸರಿನ ಅತಿಚಾರವಿದೆ.

೫. ತನ್ನ ಪರಿಮಾಣ ಕ್ಷೇತ್ರದಲ್ಲಿದ್ದರೂ ಬೇರೆಯವರಿಂದ ಯಾವುದೋ ಕಾರ್ಯದ ಮಾಹಿತಿ ದೊರೆತ ಮೇಲೆ ಸ್ವಯಂ ಏನನ್ನೂ ಮಾತನಾಡದೆಯೇ ಕೇವಲ ಹರಳು (ಪಾಷಾಣ ತುಂಡು) ವಸ್ತ್ರಾದಿಗಳನ್ನು ಎಸೆದು ತನ್ನ ಕಾರ್ಯದ ಸಿದ್ಧಿ ಮಾಡುವುದು ಪುದ್ಗಲಕ್ಷೇಪವೆಂಬ ಹೆಸರಿನ ದೋಷವಿದೆ.

ಇವು ಐದು ಅತಿಚಾರಗಳು ತಗಲದಿದ್ದರೇನೆ ಶುದ್ಧ ದೇಶವ್ರತವಿದೆ.

೩. **ಅನರ್ಥದಂಡ ತ್ಯಾಗವ್ರತ -** ಪಾಪೋಪದೇಶ, ಹಿಂಸಾದಾನ, ಅಪಧ್ಯಾನ, ದುಃಶ್ರುತಿ ಮತ್ತು ಪ್ರಮಾದಚರ್ಯೆಯ ರೂಪದಲ್ಲಿ ಯಾವುದೇ ಪ್ರಯೋಜನವಿಲ್ಲದೆ ಪಾಪಕಾರ್ಯ ಮಾಡುವುದು ಅನರ್ಥದಂಡವಿದೆ.

೧. **ಪಾಪೋಪದೇಶ -** ಬನ್ನಿರಿ, ಕುಳಿತುಕೊಳ್ಳಿರಿ; ಏನು ಮಾಡುತ್ತಿರುವಿರಿ ? ಚದುರಂಗ, ಪಗಡೆಯಾಟ, ಜೂಜಾಡಿ ದಿನಕಳೆಯುವುದು - ಇತ್ಯಾದಿ ರೂಪದಲ್ಲಿ ಬೇರೆಯವರಿಗೆ ಪಾಪದ ಉಪದೇಶ ಕೊಡುವುದು ಅನರ್ಥದಂಡವಿದೆ. ಕಳವು ಮಾಡುವ ಯೋಜನೆಗಳನ್ನು ನಿರ್ಮಿಸುವುದು, ಚೋರರ ಕುರಿತಾಗಿರುವ ಚತುರತೆಯ ಪ್ರಶಂಸೆ ಮಾಡುವುದು, ಕಳವಿನ ಉಪದೇಶ ಕೊಡುವುದು. ಕುಶೀಲ ಸೇವನೆಯ ಯೋಜನೆಗಳನ್ನು ತಯಾರಿಸುವುದು, ಕುಶೀಲ ಸೇವನೆಯ ಚರ್ಚೆ ಮಾಡುವುದು, ಕುಶೀಲ ಸೇವನೆಯಲ್ಲಿ ಕಾರಣಭೂತವಿರುವ ಧಾತು ಮೊದಲಾದ

ಕಾಮೋದ್ದೀಪಕ ಔಷಧಗಳ ಚರ್ಚೆ ಮಾಡುವುದು ಅನರ್ಥದಂಡವಿದೆ. ವೇಶ್ಯೆ, ನೃತ್ಯಾಂಗನೆಯರ ರೂಪದ ಚರ್ಚೆ ಮಾಡುವುದು. ಅವರುಗಳ ನೃತ್ಯ, ಹಾವ-ಭಾವ, ಹಾಡುಗಾರಿಕೆಯ ಚರ್ಚೆ ಮಾಡುವುದು ಅನರ್ಥದಂಡವಿದೆ.

ಪರಿಗ್ರಹ ಹೆಚ್ಚಿಸುವಂಥ ಉಪದೇಶ ಕೊಡುವುದು, ಮೋಹ, ಮಾನ, ಮಾಯೆ, ಲೋಭ, ಮತ್ಸರ ಮೊದಲಾದ ದೋಷ ಹೆಚ್ಚಿಸುವಂಥ ಉಪದೇಶ ಕೊಡುವುದು. ಭೂಮಿ ಅಗೆಯುವ ಉಪದೇಶ, ಅಧಿಕ ಅಗ್ನಿ ಉರಿಸುವ ಉಪದೇಶ; ಬೇರೆಯವರ ಮನೆ, ನಗರ, ವನಗಳಲ್ಲಿ ಅಗ್ನಿ ಹಚ್ಚುವ ಉಪದೇಶ ಕೊಡುವುದು ಅನರ್ಥದಂಡವಿದೆ. ಭೂಮಿಯನ್ನು ಹದಮಾಡಿ ಬಿತ್ತಿಗೆ ಮಾಡುವ ಉಪದೇಶ ಕೊಡುವುದು; ನದಿ, ಕೆರೆ, ಬಾವಿ, ಕೂಪದ ಜಲವನ್ನು ಹರಿಸುವುದು, ಬಾವಿ, ಕೆರೆಗಳನ್ನು ತೋಡುವ ಉಪದೇಶ ಕೊಡುವುದು. ವಸ್ತ್ರಗಳನ್ನು ತೊಳೆದು ಹಾಕುವ ಉಪದೇಶ ಕೊಡುವುದು. ಬಾವಿ, ಕೆರೆ, ಮಹಲು, ಮಂದಿರ ನಿರ್ಮಿಸುವ ಉಪದೇಶ ಕೊಡುವುದು. ಅನ್ಯರಿಗೆ ಪರಸ್ಪರ ಯುದ್ಧ ಮಾಡಿಸುವ ಉಪದೇಶ ಕೊಡುವುದು ಮೊದಲಾದವೆಲ್ಲವೂ ಅನರ್ಥದಂಡವಿವೆ. ನದಿ, ಕೆರೆ, ಬಾವಿಗಳಲ್ಲಿ ಹಾರುವ, ಸ್ನಾನ ಮಾಡುವ ಉಪದೇಶ; ಅನೇಕ ವೃಕ್ಷ, ವನಸ್ಪತಿಗಳನ್ನು ಛೇದಿಸುವ ಉಪದೇಶ, ವನವನ್ನು ಕತ್ತರಿಸುವ ಉಪದೇಶ, ಉದ್ಯಾನವನವನ್ನು ಕತ್ತರಿಸುವ ಉಪದೇಶ, ಹುಲ್ಲು ಕೊಯ್ಯುವ ಉಪದೇಶ, ಧಾನ್ಯ ಎಳ್ಳು, ಜೇನುತುಪ್ಪ, ನಾರು, ಮೂಳೆ ಮೊದಲಾದವುಗಳ ಸಂಗ್ರಹ ಮಾಡುವ, ಉಗ್ರಾಣ ನಿರ್ಮಿಸುವ ಇತ್ಯಾದಿಗಳೆಲ್ಲವೂ ಪಾಪೋಪದೇಶ 'ಅನರ್ಥದಂಡ'ವಿವೆ.

'ಎಲೈ ಸೋದರರನೇ ! ಹೊಟ್ಟೆ ತುಂಬ ಆಹಾರ ದೊರಕಿದ ಮೇಲೆಯೇ ಧರ್ಮದ ಸ್ಮರಣೆಯಾಗ-ಬಹುದಾಗಿದೆ. ಅದಕ್ಕಾಗಿ ಯಾವುದರಿಂದ ನಾಲ್ಕು ದುಡ್ಡು ಉತ್ಪನ್ನವಾಗುತ್ತವೆ, ಅದನ್ನು ಮಾಡುವುದು ದೊಡ್ಡ ಧರ್ಮವಿದೆ. ಕೇವಲ ಧರ್ಮದ ಸೇವನೆ ಮಾಡಿ ತಿನ್ನುವೆ ಏನನ್ನು ?' - ಇತ್ಯಾದಿ ರೂಪದಲ್ಲಿ ಧರ್ಮಘಾತಕ ಉಪದೇಶ ಕೊಡುವುದು ಅನರ್ಥದಂಡವಿದೆ. ಯಾರೋ ತೀರ್ಥಯಾತ್ರೆಗೆ ಹೊರಟಿರುವುದನ್ನು ಕಂಡು 'ಎಲೈ ಸೋದರನೇ ! ಈಗಂತೂ ಸಂಪಾದನೆ ಮಾಡುವ ಸಮಯವಿದೆ. ನಿನಗೆ ಮೂರು-ನಾಲ್ಕು ತಿಂಗಳು ಮನೆಯಿಂದ ಸಂಪಾದನೆಯ ಕಾರ್ಯದಿಂದ ದೂರವಿರಬೇಕಾಗುತ್ತದೆ ಅಲ್ಲದೆ ನಲವತ್ತು, ಐವತ್ತು ಸಾವಿರ ರೂಪಾಯಿ ಖರ್ಚಾಗಿ ಹೋಗುವವು; ಅಂಥ ತೀರ್ಥದಲ್ಲಿ ನಿನಗೇನು ಪ್ರಾಪ್ತವಾಗುವುದಿದೆ ? ಅದರಿಂದ ನಿಜವಾಗಿ ಮನೆಯೇ ತೀರ್ಥವಿದೆ, ಇಲ್ಲಿಯೇ ನಿನ್ನ ಭಾವವನ್ನು ನಿರ್ಮಲವಾಗಿಟ್ಟುಕೊ' ಇತ್ಯಾದಿ ಉಪದೇಶ ಕೊಡುವುದು ಅನರ್ಥದಂಡವಿದೆ. ನೀನು ನಿನ್ನ ಸಂಪೂರ್ಣ ದಿನವನ್ನು ಧರ್ಮದ ಸೇವನೆಯಲ್ಲಿ; ಓದುವುದರಲ್ಲಿ-ಕಲಿಯುವುದರಲ್ಲಿ, ಜಪ-ತಪ ಇತ್ಯಾದಿ ಧರ್ಮ ಮಾಡುವುದರಲ್ಲಿ ತೊಡಗಿಸುತ್ತಿರುವೆ, ಮನೆಯ ವಿಚಾರ ಮಾಡುವುದಿಲ್ಲ, ಹೀಗೇ ನಡೆದರೆ ತಿನ್ನುವುದೇನು - ಜೀವಿಸುವುದು ಹೇಗೆ ? ಮನೆಯ ಖರ್ಚು ಹೇಗೆ ನಡೆಸುವುದು ? ಅದಕ್ಕಾಗಿ ಸಂಪಾದನೆಯಲ್ಲಿ ತೊಡಗು - ಹೀಗೆಲ್ಲ ಧರ್ಮಘಾತಕ ಉಪದೇಶ ಕೊಡುವುದು 'ಪಾಪೋಪದೇಶ ಅನರ್ಥದಂಡ'ವಿದೆ.

ಪಾಪಕಾರಕ ವ್ಯಾಪಾರಾದಿಗಳ ಉಪದೇಶ ಕೊಡುವುದು, ತಾನು ಸ್ವಯಂ ದೀರ್ಘಹಿಂಸೆಯಿಂದ ಕೂಡಿದ ವ್ಯಾಪಾರ ಮಾಡುವುದು, ಬೇರೆಯವರಿಗೆ ಅದರ ಉಪದೇಶ ಕೊಡುವುದು. ಅನ್ಯರಿಗೆ ಪಾಪಮಯ ವ್ಯಾಪಾರ-ವಾಣಿಜ್ಯದ ಉಪಾಯ ತಿಳಿಸಿಕೊಡುವುದು. ಬುದ್ದಲಿ(ಶೀಷೆ), ಸೋರುಪ್ಪು, ಜೇನುತುಪ್ಪ, ಹಸಿಶುಂಠಿ ಮೊದಲಾದವುಗಳ ವಾಣಿಜ್ಯದಲ್ಲಿ ಬಹಳಷ್ಟು ಲಾಭವಿದೆಯೆಂದು ಹೇಳಿ ಪಾಪಮಯ ವ್ಯಾಪಾರದ ಉಪದೇಶ ಕೊಡುವುದು ಪಾಪೋಪದೇಶ ಅನರ್ಥದಂಡವಿದೆ.

**೨. ಹಿಂಸಾದಾನ -** ಹಿಂಸೆಯ ಉಪದೇಶ ಕೊಡುವುದು, ಹಿಂಸೆಯ ಉಪಕರಣಗಳನ್ನು ಮಾಡಿಸುವುದು, ಒರಳು, ಕಲ್ಲು, ವನಕೆ, ಚಾಕು, ಚೂರಿ, ಕತ್ತಿ, ಕೊಡಲಿ, ಗುದ್ದಲಿ, ಸಲಿಕೆ ಇತ್ಯಾದಿಗಳನ್ನು ಮಾಡಿಸುವುದು,

ಬೇರೆಯವರು ಕೇಳಿದರೆ ಕೊಡುವುದು ಇತ್ಯಾದಿ ಪಾಪಕಾರ್ಯ ಮಾಡುವುದು, ಮಾಡಿಸುವುದು, ಅನುಮೋದಿಸುವುದು ಹಿಂಸಾದಾನವೆಂಬ ಹೆಸರಿನ ಅನರ್ಥದಂಡವಿದೆ.

೩. **ಅಪಧ್ಯಾನ -** ಬೇರೆಯವರನ್ನು ಸುಖಿ-ದುಃಖಿ ಮಾಡುವ ಸಂಬಂಧದ ಚಿಂತನೆ ಮಾಡುವುದು; ನಿಷ್ಪ್ರಯೋಜನ ಲಾಭ, ಹಾನಿ, ಸೋಲು, ಗೆಲವಿನ ವಿಚಾರ ಮಾಡುತ್ತಿರುವುದು, ಭೂತಕಾಲದ ಘಟನೆಗಳನ್ನು ಸ್ಮರಿಸಿಕೊಳ್ಳುತ್ತಾ ಇರುವುದು. ತನ್ನ ಶಕ್ತಿ, ಸಾಮರ್ಥ್ಯದ ವಿಚಾರ ಮಾಡದೇ ಭವಿಷ್ಯದ ಕಲ್ಪನೆ ಮಾಡುತ್ತಿರುವುದು, ಮನೆ, ಸಮಾಜ, ನಗರ, ದೇಶ, ರಾಷ್ಟ್ರ, ಪಶು, ಧನ ಇತ್ಯಾದಿ ವಿಷಯಗಳ ಚಿಂತೆ ಮಾಡುತ್ತ ಇರುವುದು ಅಪಧ್ಯಾನವೆಂಬ ಹೆಸರಿನ ಅನರ್ಥದಂಡವಿದೆ.

೪. **ದುಃಶ್ರುತಿ -** ಸ್ವೇಚ್ಛೆಯಿಂದ, ಕಪೋಲ ಕಲ್ಪಿತ, ಕಾಮೀ ಜೀವರುಗಳಲ್ಲಿ ವಿಕಾರ ಭಾವವನ್ನು ಉತ್ಪನ್ನ ಮಾಡುವ ಸಲುವಾಗಿ ರಾಗೀ-ದ್ವೇಷೀ ಕವೀಶ್ವರರುಗಳಿಂದ ನಿರ್ಮಿಸಲಾದ ಶೃಂಗಾರ ಶಾಸ್ತ್ರ, ಸಂಗೀತಶಾಸ್ತ್ರ; ಕೇವಲ ಅವುಗಳನ್ನು ಆಲಿಸುತ್ತಿದ್ದಂತೆಯೇ ಮುಗ್ಧ ಮೋಹೀ ಜೀವನು ತನ್ನ ಭಾವವನ್ನು ಕಾಮಚೇಷ್ಟೆಯ ರೂಪವನ್ನಾಗಿಸಿಕೊಂಡು, ಪರಸ್ತ್ರೀ, ಮೊದಲಾದವರನ್ನು ಭೋಗಿಸುವ ಅಭಿಲಾಷೆ ಹೊಂದಿ ಪಾಪದಬಂಧ ಮಾಡಿಕೊಳ್ಳುವಂಥ ರಾಗಮಾಲಿಕೆ, ರಸಿಕ ಪ್ರಿಯ, ಸುಂದರ, ಶೃಂಗಾರ ಶಾಸ್ತ್ರ, ಕಾಮಶಾಸ್ತ್ರ, ಪರಸ್ತ್ರೀ ಸೇವನೆಯಲ್ಲಿ ಪಾಪವಿಲ್ಲವೆಂದು ಹೇಳುವಂಥ; ವಿಧವೆ ಸ್ತ್ರೀಯನ್ನು ಮನೆಯಲ್ಲಿಟ್ಟುಕೊಳ್ಳುವಲ್ಲಿ, ಅವಳೊಂದಿಗೆ ಕಾಮಸೇವನೆಯಲ್ಲಿ ಪಾಪವಿಲ್ಲವೆಂದು ಹೇಳುವಂಥ, ಕಾಮುಕರಿಗೆ ಮೋಹವನ್ನು ಉತ್ಪನ್ನ ಮಾಡುವಂಥ, ಆಸಕ್ತರನ್ನಾಗಿಸುವಂಥ, ತನ್ನ ವಿಕಾರಿ ಭಾವಗಳನ್ನು ಪುಷ್ಟ ಮಾಡುವಂಥ ಶಾಸ್ತ್ರಗಳ ಕಥನ ಮಾಡುವುದು ಅನರ್ಥದಂಡವಿದೆ.

ಲೋಭೀ ಕವಿಗಳು ಅಭಕ್ಷ್ಯ ಭೋಜನದಲ್ಲಿ ಪಾಪವಿಲ್ಲವೆಂದು ಹೇಳಿದ್ದಾರೆ. ಮದ್ಯ-ಮಾಂಸಗಳ ಸೇವನೆಯ ಅಭಿಲಾಷಿಗಳನ್ನು ಪ್ರಸನ್ನ ಪಡಿಸುವ ಸಲುವಾಗಿ ತಮ್ಮ ಕಲ್ಪಿತ ಮತಿಯ ಅನುಸಾರ ನಿರ್ಮಿಸಲಾದ ಶಾಸ್ತ್ರಗಳಲ್ಲಿ ಹಿಂಸೆಯು ಪಾಪವಿಲ್ಲವೆಂದು ಹೇಳಿದ್ದಾರೆ. ಮದ್ಯ-ಮಾಂಸ-ಮಧುವಿನ ಸೇವನೆಯಲ್ಲಿ ಪಾಪವಿಲ್ಲವೆಂದು ಹೇಳಿದ್ದಾರೆ; ಅವನ್ನು ಓದುವುದು, ಕೇಳುವುದು ಕುಶಾಸ್ತ್ರ ಅನರ್ಥದಂಡವಿದೆ.

ಯಾವುದರಲ್ಲಿ ಹುಲಿ, ಜಿಂಕೆ, ಸೂಕರಗಳನ್ನು ಸಾಯಿಸುವುದರಲ್ಲಿ ಪಾಪವಿಲ್ಲವೆನ್ನಲಾಗಿದೆ; ವನಸ್ಪತಿಗಳನ್ನು ಕತ್ತರಿಸುವುದರಲ್ಲಿ ಪಾಪವಿಲ್ಲವೆನ್ನಲಾಗಿದೆ, ಶೋಧಿಸದ ನೀರನ್ನು ಕುಡಿಯುವ, ಅದರಿಂದ ಸ್ನಾನ ಮಾಡುವಲ್ಲಿ ಪಾಪವಿಲ್ಲವೆನ್ನಲಾಗಿದೆ - ಇತ್ಯಾದಿ ರೂಪದಲ್ಲಿ ಯೋಗೀಶ್ವರರುಗಳ ಪರಂಪರೆಯಿಂದ ರಹಿತ ಕಥನವಿದೆ. ಕಷಾಯೀ ಜೀವರುಗಳಿಂದ ರಚಿಸಲ್ಪಟ್ಟಿರುವ ಕಲ್ಪಿತ ಶಾಸ್ತ್ರಗಳಲ್ಲಿ ಉಪಯೋಗ ತೊಡಗಿಸುವುದು ಅನರ್ಥದಂಡವಿದೆ. ಯಾವುದರಲ್ಲಿ ಮಾಟಗಾರಿಕೆ, ವಶೀಕರಣ, ಪರರನ್ನು ಮೋಹಿತ ಮಾಡುವ ಕಲ್ಪಿತ ಮಂತ್ರ, ಯಂತ್ರ, ತಂತ್ರ, ಸ್ತಂಭನ ಮೊದಲಾದ ಚಮತ್ಕಾರ ತಿಳಿಸಿಕೊಡುವ ಕಥನ ಮಾಡಿದೆ, ಮುಗ್ಧ ಜೀವಗಳನ್ನು ಆಶ್ಚರ್ಯಚಕಿತಗೊಳಿಸುವಂಥ, ಕಲ್ಪಿತ ಸ್ವೇಚ್ಛಾಚಾರೀ ಶಾಸ್ತ್ರಗಳ ಸಂಗ್ರಹ ಮೊದಲಾದವನ್ನು ಮಾಡುವುದು ದುಃಶ್ರುತಿಯೆಂಬ ಹೆಸರಿನ ಅನರ್ಥದಂಡವಿದೆ.

೫. **ಪ್ರಮಾದಚರ್ಯೆ -** ಪ್ರಮಾದಸಹಿತ, ಈರ್ಯಾಭಾವರಹಿತ ಶೀಘ್ರತೆಯಿಂದ ಗಮನ ಮಾಡುವುದು; ತ್ರಸ ಜೀವಗಳ ವಿರಾಧನೆ ಮಾಡುತ್ತ ಅದಯಾಭಾವದಿಂದ ಗಮನ ಮಾಡುವುದು. ಪ್ರಯೋಜನವಿಲ್ಲದೆ ಪೃಥ್ವಿ, ಜಲ, ಅಗ್ನಿ, ವಾಯು, ವನಸ್ಪತಿ ಮೊದಲಾದುವನ್ನು ಛೇದಿಸುವುದು - ಇತ್ಯಾದಿಯು ಪ್ರಮಾದ ಚರ್ಯೆಯೆಂಬ ಹೆಸರಿನ ಅನರ್ಥದಂಡವಿದೆ.

ಇವು ಐದು ಭೇದಮಯ ಅನರ್ಥ ದಂಡಗಳ ತ್ಯಾಗವನ್ನು ಪರಿಪೂರ್ಣವಾಗಿ ಮಾಡುವುದು ಅನರ್ಥದಂಡ ತ್ಯಾಗವ್ರತವಿದೆ. ಇದರ ಅತಿಚಾರಗಳು - ಕಂದರ್ಪ, ಕೌತ್ಕುಚ್ಯ, ಮೌಖರ್ಯ, ಅಸಮೀಕ್ಷ್ಯಾಧಿಕರಣ, ಭೋಗೋಪಭೋಗಾನರ್ಥಕ್ಯ (ಅತಿಪ್ರಸಾಧನ)-ವೆಂದು ಐದು ಇವೆ.

**ಕಂದರ್ಪ -** ಕಾಮಚೇಷ್ಟೆಯೊಂದಿಗೆ ಕಾಮವನ್ನು ಸ್ಫುರಾಯಮಾನ (ಉತ್ತೇಜಿತ) ಮಾಡುವುದು, ನೇತ್ರಗಳ ವಿಕಾರರೂಪ ಪ್ರವೃತ್ತಿ ಮಾಡುವುದು, ಮುಖವನ್ನು ವಿಕಾರರೂಪ ಮಾಡುವುದು; ಕಾಮಪೋಷಕ, ಶೀಲಭಂಜಕ, ಭಯಾನಕ, ರಾಗದಿಂದ ತುಂಬಿದ ವಚನವಾಡುವುದು, ಭಯ ಹುಟ್ಟಿಸುವುದು, ಅನ್ಯರಿಗೆ ಲೋಭ ತೋರಿಸುವುದು, ಮೈ ಮುರಿಯುವುದು, ಅನೇಕ ಕುಚೇಷ್ಟೆಗಳಿಂದ ಕೂಡಿದ, ಕಾಮವಿಚಾರಯುಕ್ತ ವಚನವಾಡುವುದು ಕಂದರ್ಪವೆಂಬ ಹೆಸರಿನ ಅತಿಚಾರವಿದೆ.

**ಕೌತ್ಕುಚ್ಯ -** ಕೌತುಕಪೂರ್ವಕ ಮದೋನ್ಮತ್ತನಾಗಿ, ಹಾಸ್ಯ ಸಹಿತ ಅಶ್ಲೀಲ ವಚನವಾಡುವುದು, ಬೈಗುಳ ರೂಪದ ಹಾಸ್ಯವಚನ, ಶೀಲಖಂಡಿತಗೊಳಿಸುವ ಪಾಪರೂಪದ ವಚನಗಳನ್ನಾಡುವುದು; ಕಾಮಚೇಷ್ಟೆಯುಕ್ತ ವಿಕಾರಮಯ ಆಕಾಳಿಕೆ (ಆಲಸ್ಯ) ತಗೆಯುವುದು, ದೀರ್ಘ ಉಚ್ಛ್ವಾಸ ತಗೆದುಕೊಳ್ಳುವುದು, ತನ್ನ ಶರೀರದ ಗೂಢ ಚಿಹ್ನೆಯನ್ನು ಪ್ರಕಟಪಡಿಸಿ ಅನ್ಯರಿಗೆ ತೋರಿಸುವುದು ಕೌತ್ಕುಚ್ಯವೆಂಬ ಹೆಸರಿನ ಅನರ್ಥದಂಡ ದೋಷವಿದೆ.

**ಮೌಖರ್ಯ -** ವಿದೂಷಕನಂತೆ ಪ್ರಯೋಜನರಹಿತ ವ್ಯರ್ಥವಚನವಾಡುವುದು, ಧರ್ಮ-ಕರ್ಮದಿಂದ ರಹಿತ, ಪ್ರಯೋಜನವಿಲ್ಲದೆ ಸನ್ನಿಪಾತರೋಗಿಯಂತೆ ನಗುವುದು ಮೌಖರ್ಯವೆಂಬ ಹೆಸರಿನ ದೋಷವಿದೆ.

**ಅಸಮೀಕ್ಷ್ಯಾಧಿಕರಣ -** ಹಿತಾಹಿತಜ್ಞಾನದಿಂದ ರಹಿತವಾದ, ಅವಿಚಾರಸಹಿತ ಮೂರ್ಖತೆಯಿಂದ ತುಂಬಿದ ವಚನವಾಡುವುದು, ಪ್ರಯೋಜನವಿಲ್ಲದೆಯೇ ಬಹಳಷ್ಟು ಜನರು ದ್ವೇಷಭಾವ ಮಾಡುವಂಥ, ಮೂರ್ಖನೆನ್ನುವಂಥ, ನಿಂದೆಗೆ ಗುರಿಯಾಗುವಂಥ, ದ್ವೇಷೋತ್ಪಾದಕ ವಚನವಾಡುವುದು ಅಸಮೀಕ್ಷ್ಯಾಧಿಕರಣ ದೋಷವಿದೆ.

**ಭೋಗೋಪಭೋಗ (ಅತಿ ಪ್ರಸಾಧನ) ದೋಷ -** ಪುಣ್ಯ ಹೀನನಾಗಿರುವ ಕಾರಣ ಉದರ ಪೂರ್ತಿ ಕೂಡ ಆಗದಿದ್ದರೂ ಸಂಸಾರದ ಅನೇಕ ಭೋಗ್ಯ ವಸ್ತುಗಳನ್ನು ವಿವಿಧ ಇಂದ್ರಿಯ ಸುಖಗಳನ್ನು; ದೇವ, ಇಂದ್ರ , ಚಕ್ರವರ್ತಿ, ಕಾಮದೇವ, ಭೋಗಭೂಮಿಜ ಮೊದಲಾದ ಪುಣ್ಯಾಧಿಕಾರೀ ಜೀವರುಗಳಿಗೆ ಯೋಗ್ಯವಿರುವ ವಸ್ತುಗಳನ್ನು ಭೋಗಿಸುವ ಅಭಿಲಾಷೆ ಮಾಡುವುದು. ದೇವೇಂದ್ರರುಗಳ ಸಮಾನ ಇಂದ್ರಿಯ ಸುಖ ಭೋಗಿಸುವ ಇಚ್ಛೆ ಮಾಡುವುದು. ಪುಣ್ಯಹೀನನಾಗಿದ್ದರೂ ಅನ್ಯರ ರಾಜ್ಯ-ಭೋಗಗಳನ್ನು ಕಂಡು 'ಇವನಿಗೆ ರಾಜ್ಯ ಮಾಡುವುದು ಗೊತ್ತಿಲ್ಲ, ರಾಜ್ಯಲಕ್ಷ್ಮಿಯನ್ನು ಭೋಗಿಸುವ ಜ್ಞಾನವಿಲ್ಲ; ಆನೆ, ಕುದುರೆ, ಪಲ್ಲಕ್ಕಿಗಳಲ್ಲಿ ಆರೋಹನೆ ಮಾಡುವುದನ್ನು ತಿಳಿಯುವುದಿಲ್ಲ. ಒಂದುವೇಳೆ ಈ ರಾಜ್ಯವು ನನಗೆ ಸಿಗುತ್ತಿದ್ದರೆ ನಾನು ಹೇಗೆ ರಾಜ್ಯ ನಡೆಸುತ್ತಿದ್ದೆನೆಂದರೆ, ಆನೆ-ಕುದುರೆ-ರಥ-ಪಲ್ಲಕ್ಕಿಗಳಲ್ಲಿ ಹತ್ತುವ ಆರೂಢನಾಗುವ ನನ್ನ ರೀತಿಯೇ ಬೇರೆ ಇರುತ್ತಿತ್ತು ! ರಾಜಲಕ್ಷ್ಮಿಯ ಭೋಗ ಭೋಗಿಸುವುದು ಎಲ್ಲರಿಗೂ ಬರುವುದಿಲ್ಲ' ಇತ್ಯಾದಿಯಾಗಿ ನಿರರ್ಥಕ ವಿಚಾರ ಮಾಡುವುದು ಭೋಗೋಪಭೋಗಾನರ್ಥಕ್ಯವೆಂಬ ದೋಷವಿದೆ.

ಇವು ಐದು ದೋಷಗಳಿಂದ ರಹಿತ ಅನರ್ಥದಂಡತ್ಯಾಗವೆಂಬ ಹೆಸರಿನ ಗುಣವ್ರತವಿರುತ್ತದೆ.

ಈ ಪ್ರಕಾರ ಸುದೃಷ್ಟಿತರಂಗಿಣಿಯೆಂಬ ಹೆಸರಿನ ಗ್ರಂಥದಲ್ಲಿ ಶ್ರಾವಕಧರ್ಮ ಪ್ರರೂಪಣೆಯರೂಪ ಏಕಾದಶ ನೆಲೆಗಳ ಪ್ರಸಂಗದಲ್ಲಿ ಎರಡನೆಯ ವ್ರತನೆಲೆಯ ಹನ್ನೆರಡು ವ್ರತಗಳೊಳಗಿಂದ ಐದು ಅಣುವ್ರತ, ಮೂರು ಗುಣವ್ರತಗಳ ಅತಿಚಾರಸಹಿತ ವರ್ಣನೆ ಮಾಡುವಂಥ ಮೂವತ್ಮೂರನೇ ಪರ್ವವು ಸಮಾಪ್ತವಾಯಿತು.

★★★★★

# ೩೪ : ಮೂವತ್ನಾಲ್ಕನೆಯ ಪರ್ವ
# ನಾಲ್ಕು ಶಿಕ್ಷಾವ್ರತ ಹಾಗೂ ಸಲ್ಲೇಖನದ ವರ್ಣನೆ

ಶಿಕ್ಷಾವ್ರತ - ಸಾಮಾಯಿಕ, ಪ್ರೋಷಧೋಪವಾಸ, ಭೋಗೋಪಭೋಗ ಪರಿಮಾಣ ಮತ್ತು ಅತಿಥಿ ಸಂವಿಭಾಗ - ಇವು ನಾಲ್ಕು ಶಿಕ್ಷಾವ್ರತಗಳಿವೆ.

**೧. ಸಾಮಾಯಿಕ -** ದ್ರವ್ಯ ಸಾಮಾಯಿಕ ಮತ್ತು ಭಾವ ಸಾಮಾಯಿಕವೆಂದು ಸಾಮಾಯಿಕದ ಎರಡು ಭೇದಗಳಿವೆ. ಸಾಮಾಯಿಕ ಮಾಡುವ ಸಮಯದಲ್ಲಿ ವಿನಯಸಹಿತ, ಸಮತೆಯೊಂದಿಗೆ, ಶಾಂತಮುದ್ರೆಯನ್ನು ಧಾರಣ ಮಾಡಿ ಕಾಯೋತ್ಸರ್ಗ ಅಥವಾ ಪದ್ಮಾಸನದಲ್ಲಿ ಕುಳಿತುಕೊಂಡು, ಸಾಮಾಯಿಕ ಪಾಠವನ್ನು ಶುದ್ಧವಾಗಿ ಹೇಳುತ್ತಿದ್ದರೂ ಕೂಡ ಪರಿಣತಿಯು ಸಾಮಾಯಿಕದಿಂದ ಭಿನ್ನವಾಗಿ ಬೇರೆ ಕಡೆಗೆ ಹೊರಟು ಹೋಗುವುದು, ಪ್ರಮಾದದ ವಶದಿಂದ ಬೇರೆ ವಿಕಲ್ಪಗಳು ಬರಲಾರಂಭಿಸುವುದು ದ್ರವ್ಯಸಾಮಾಯಿಕವಿದೆ. ಸಾಮಾಯಿಕ ಮಾಡುತ್ತಿರುವಂಥ ಭವ್ಯನು ಶುದ್ಧಾಸನದಲ್ಲಿ ಕುಳಿತುಕೊಂಡು ಪಾಠ ಹೇಳುತ್ತಿರುವಾಗ ಅದರ ಅರ್ಥದಲ್ಲಿಯೇ ಮನಸ್ಸನ್ನಿಟ್ಟು ಸಾಮಾಯಿಕ ಮಾಡುವುದು ಭಾವಸಾಮಾಯಿಕವಿದೆ.

**ಸಂದೇಹ -** ಸಾಮಾಯಿಕ ನೆಲೆಯು ಮೂರನೆಯದಿದೆ, ಆದಾಗ್ಯೂ ಇಲ್ಲಿ ಎರಡನೆಯ ನೆಲೆಯಲ್ಲಿ ಅದರ ವ್ಯಾಖ್ಯೆಯನ್ನು ಏತಕ್ಕಾಗಿ ಮಾಡಲಾಗಿದೆ.

**ಸಮಾಧಾನ -** ಅತಿಚಾರ ರಹಿತ ಸಾಮಾಯಿಕ ನೆಲೆಯ ಧಾರಕನಂತೂ ಮೂರನೆಯ ನೆಲೆಯವನೇ ಇದ್ದಾನೆ. ಇಲ್ಲಿಯಂತೂ ಶಿಕ್ಷಾವ್ರತದಲ್ಲಿ ಅದರ ಸಾಧನರೂಪದಿಂದ ಕಥನ ಮಾಡಲಾಗಿದೆ. ಹೇಗೆ ಬಾಣ, ಖಡ್ಗ, ಬಂದೂಕನಿಟ್ಟುಕೊಂಡು ರಣರಂಗದಲ್ಲಿ ಯುದ್ಧ ಮಾಡುವಂಥ ಸುಭಟ ಪುರುಷನು ಅವಶ್ಯಕತೆ ಬಿದ್ದ ಮೇಲೆ ತನ್ನ ಪೌರುಷ ಪ್ರಕಟಪಡಿಸಿ ಬಾಣಬಿಟ್ಟು, ಗುಂಡು ಹಾರಿಸಿ ವೈರಿಯನ್ನು ಗೆಲ್ಲುವಂಥ ಸುಭಟ-ಯೋಧನಂತೂ ಶೂರನೇ ಇದ್ದಾನೆ. ಆದರೆ ಅಂಥ ಸುಭಟರ ಮಕ್ಕಳ ಅಭಿಪ್ರಾಯವು ಕೂಡ ತಮ್ಮ ಹಿರಿಯರ ಹಾಗೆ ಯುದ್ಧ ಮಾಡಿ-ಯುದ್ಧರಂಗದಲ್ಲಿ ಶಸ್ತ್ರಪ್ರಯೋಗ ಮಾಡಿ ಶತ್ರುಗಳನ್ನು ಗೆದ್ದು ಕೀರ್ತಿ ಪಡೆಯುವರೂಪವಾಗಿದ್ದರೂ ಅವರು ಇನ್ನೂ ತಮ್ಮ ತಂದೆ ಮೊದಲಾಗಿ ಹಿರಿಯರಿಂದ ಶಸ್ತ್ರವಿದ್ಯೆಯನ್ನು ಕಲಿಯುತ್ತಿದ್ದಾರೆ. ಅವರೂ ಶೂರರಿದ್ದಾರೆ, ಬಾಣ, ಗುಂಡಿಟ್ಟುಕೊಂಡಿದ್ದರೂ ಮತ್ತು ಗುಂಡು ಹಾರಿಸುತ್ತಿದ್ದರೂ ಅವರು ಇನ್ನೂ ಕಲಿಯುವಂಥವರೆನಿಸಿಕೊಳ್ಳುತ್ತಾರೆ. ಈಗಲೇ ಅವರು ಯುದ್ಧ ಗೆಲ್ಲುವ ಸಾಧ್ಯತೆಯಿಲ್ಲ ಏಕೆಂದರೆ ಅವರು ಯೋಧರಲ್ಲ. ಶಸ್ತ್ರವಿದ್ಯೆಯನ್ನು ಪೂರ್ಣ ಕಲಿತುಕೊಂಡ ನಂತರವೇ ಅವರನ್ನು ಸುಭಟರೆನ್ನಲಾಗುತ್ತದೆ. ಅವರಂತೂ ಇನ್ನೂ ಶಸ್ತ್ರಗಳನ್ನಿಟ್ಟುಕೊಂಡು ಬಾಣ, ಗುಂಡನ್ನು ಮಣ್ಣಿನ ರಾಶಿ- ಮುದ್ದೆಗೆ ಹೊಡೆಯುವುದನ್ನು ಕಲಿಯುತ್ತಿದ್ದಾರೆ.

ಅದೇ ಪ್ರಕಾರ ಈ ಶಿಕ್ಷಾವ್ರತಿಯೂ ಸಾಮಾಯಿಕ ಮಾಡುವುದನ್ನು ಕಲಿಯುತ್ತಿದ್ದಾನೆ, ಸಾಮಾಯಿಕ ನೆಲೆಯ ಧಾರಕನಲ್ಲ. ಇಲ್ಲಿ ಯಾವುದಾದರೂ ಅತಿಚಾರವೂ ತಗಲುತ್ತದೆ. ಕೆಲವೊಮ್ಮೆ ಸಮಯಾಂತರ - ಕಾಲದ ಉಲ್ಲಂಘನೆಯೂ ಆಗಿ ಹೋಗುತ್ತದೆ. ಅಂತೆಯೇ ಇದನ್ನು ಶಿಕ್ಷಾವ್ರತವೆಂದಿದ್ದಾರೆ. ಈ ಶಿಕ್ಷಾವ್ರತಿಯು ಅತಿಚಾರರೂಪದ ಶತ್ರುವನ್ನು ಜಯಿಸಲಾಗುವುದಿಲ್ಲ. ಮೂರನೆಯ ನೆಲೆಯಲ್ಲಿ ಈ ವ್ರತವು ನಿರ್ದೋಷವಿರುತ್ತದೆಯೆಂದು ತಿಳಿಯುವುದು.

**೨. ಪ್ರೋಷಧೋಪವಾಸ ಶಿಕ್ಷಾವ್ರತ -** ಹದಿನಾರು ಪ್ರಹರದ ಅನಶನದೊಂದಿಗೆ ತನ್ನ ಮರ್ಯಾದೆಯ ಅನುಸಾರ ಒಂದು ಸ್ಥಾನದಲ್ಲಿ ವಾಸ ಮಾಡುತ್ತ ಸಂಪೂರ್ಣ ಸಮಯವನ್ನು ಧರ್ಮಧ್ಯಾನದಲ್ಲಿಯೇ ಕಳೆಯುವುದು ಪ್ರೋಷಧೋಪವಾಸ ಶಿಕ್ಷಾವ್ರತವಿದೆ. ಇದರ ಅತಿಚಾರಗಳ ಕಥನವನ್ನು ಮುಂದೆ ಇದಕ್ಕೆ ಸಂಬಂಧಿಸಿದ ನೆಲೆಯಲ್ಲಿ ಮಾಡಲಾಗುವುದು.

**೩. ಭೋಗೋಪಭೋಗ ಪರಿಮಾಣ ಶಿಕ್ಷಾವ್ರತ -** ಒಂದು ಬಾರಿ ಭೋಗಿಸಿದ ಮೇಲೆ ಅಯೋಗ್ಯವಾಗಿ

ಹೋಗುವಂಥ ವಸ್ತುವು ಭೋಗವಿದೆ ಮತ್ತು ಪುನಃ ಪುನಃ ಭೋಗಿಸುವುದರಲ್ಲಿ ಬರುವಂಥ ವಸ್ತುವು ಉಪಭೋಗವಿದೆ. ಭೋಗ ವಸ್ತುವಿನ ಎರಡು ಭೇದಗಳು - ೧. ಭೋಗಯೋಗ್ಯವಸ್ತು, ೨. ಭೋಗ ಅಯೋಗ್ಯ ವಸ್ತು. ಆಹಾರ, ಮಿಠಾಯಿ, ಪಕ್ವಾನ್ನ ಇತ್ಯಾದಿ ನಿರ್ದೋಷ ವಸ್ತುಗಳು ಭೋಗಯೋಗ್ಯ ವಸ್ತುಗಳಿವೆ. ಸಿಹಿ, ಹುಳಿ, ಕಾರ, ಒಗರು, ಹಾಲು, ತುಪ್ಪ ಮೊದಲಾದ ಷಟ್‌ರಸಗಳು ಭೋಗ ಯೋಗ್ಯ ವಸ್ತುಗಳಿವೆ. ಚಂದನ, ಕರ್ಪೂರ, ಕೇಸರಿ, ಗಂಧಾದಿ ಅಂತರ್ಜಾತಿ ಖಾದ್ಯ, ಸ್ವಾದ್ಯ, ಲೇಹ್ಯ, ಪೇಯ ಇತ್ಯಾದಿ ಸಮಸ್ತ ವಸ್ತುಗಳು ಭೋಗಯೋಗ್ಯ ವಸ್ತುಗಳಿವೆ. ಕಂದಮೂಲ ಮೊದಲಾದ ಇಪ್ಪತ್ತೆರಡು ಅಭಕ್ಷ್ಯಗಳು ಭೋಗದ ಅಯೋಗ್ಯ ವಸ್ತುಗಳಿರುವುದರಿಂದ ಅವೆಲ್ಲವುಗಳ ತ್ಯಾಗ ಮಾಡುವುದು ಉಚಿತವಿದೆ. ಈ ಪ್ರಕಾರ ಭೋಗ ವಸ್ತುಗಳಲ್ಲಿ ಎರಡು ಭೇದಗಳಿವೆ.

ಪತ್ನಿ, ವಸ್ತ್ರ, ಆಭೂಷಣ, ಚಿನ್ನ, ಬೆಳ್ಳಿ, ರತ್ನ, ಮಾಣಿಕ್ಯ, ಮುತ್ತು, ವಜ್ರ; ದೇಶ, ನಗರ, ಮಂದಿರ, ಆನೆ, ಕುದುರೆ ಮೊದಲಾದ ಚತುಷ್ಪದ ಹಾಗೂ ಸೇವಕರು-ದಾಸ, ದಾಸಿ ಮೊದಲಾದ ರೂಪದಲ್ಲಿ ಚೇತನ-ಅಚೇತನದ ಅಪೇಕ್ಷೆಯಿಂದ ಎರಡು ಭೇದರೂಪ ಉಪಭೋಗ ವಸ್ತುಗಳಿವೆ.

ಈ ಭೋಗೋಪಭೋಗದ ಪ್ರಮಾಣ ಮಾಡುವುದು ಭೋಗೋಪಭೋಗ ಪರಿಮಾಣ ಶಿಕ್ಷಾವ್ರತವಿದೆ. ಇದರ ಅತಿಚಾರಗಳು ಸಚಿತ್ತ, ಸಚಿತ್ತ ಸಂಬಂಧ, ಸಮ್ಮಿಶ್ರ, ಅಭಿಷವ ಮತ್ತು ದುಃಪಕ್ವಾಹಾರವೆಂದು ಐದು ಇವೆ.

ಸಚಿತ್ತ ವಸ್ತುವನ್ನು ಭೋಗಿಸುವುದು ಸಚಿತ್ತನಾಮದ ಅತಿಚಾರವಿದೆ. ಸಚಿತ್ತದಿಂದ ಮುಚ್ಚಿಡಲಾದ ವಸ್ತು ಅಥವಾ ಸಚಿತ್ತದ ಮೇಲೆ ಇರಿಸಿರುವ ವಸ್ತು ಇತ್ಯಾದಿ ರೂಪದಲ್ಲಿ ಸಚಿತ್ತದ ಸಂಯೋಗವುಳ್ಳ ವಸ್ತುವನ್ನು ಭೋಗಿಸುವುದು ಸಚಿತ್ತ ಸಂಯೋಗವಿದೆ. ಸಚಿತ್ತಾ ಚಿತ್ತ ವಸ್ತುವಿನ ಮಿಶ್ರಣ ಮಾಡುವುದು ಸಮ್ಮಿಶ್ರ ಅತಿಚಾರವಿದೆ. ವಿವಿಧ ಬಲಕಾರಿ, ಪುಷ್ಟಿಕಾರಕ ರಸಗಳ ಸೇವನೆ ಮಾಡುವುದು ಅಭಿಷವವೆಂಬ ಹೆಸರಿನ ಅತಿಚಾರವಿದೆ. ಆಹಾರ ಸೇವನೆಯ ನಂತರ ಕಷ್ಟಪೂರ್ವಕ ಪಚನವಾಗುವಂಥ, ಗ್ಲಾನಿಯನ್ನುಂಟು ಮಾಡುವಂಥ, ತೇಗು ತರುವಂಥ ಗರಿಷ್ಠ ಭೋಜನ ಮಾಡುವುದು ದುಃಪಕ್ವಾಹಾರ ಅತಿಚಾರವಿದೆ.

ಇವು ಐದು ಅತಿಚಾರಗಳಿಂದ ರಹಿತ, ಶುದ್ಧ ಭೋಗೋಪಭೋಗ ಪರಿಮಾಣವೆಂಬ ಹೆಸರಿನ ಶಿಕ್ಷಾವ್ರತವಿದೆ. ಈ ವ್ರತದ ಧಾರಕನು ಉತ್ತಮಫಲದ ಲೋಭಿಯಾಗಿರುವುದರಿಂದ ದೋಷಗಳನ್ನು ದೂರಮಾಡಿ ವ್ರತದ ನಿರ್ದೋಷತೆ ಕಾಯ್ದುಕೊಳ್ಳುತ್ತಾನೆ.

**೪. ಅತಿಥಿ ಸಂವಿಭಾಗ ಶಿಕ್ಷಾವ್ರತ** - ತಿಥಿಯ ಒಂದು ಅರ್ಥವು ಪರಿಗ್ರಹವಿದೆ. ಪರಿಗ್ರಹದಿಂದ ರಹಿತನು ಅತಿಥಿಯಿದ್ದಾನೆ. ತಿಥಿಯ ಒಂದು ಅರ್ಥವು ವಾಂಛೆಯಿದೆ, ವಾಂಛೆಯಿಂದ ರಹಿತನು ಅತಿಥಿಯಿದ್ದಾನೆ. 'ಮೂರ್ಛ್ಛಾಪರಿಗ್ರಹಃ ಮಮತ್ವಭಾವವು ಪರಿಗ್ರಹವಿದೆ' - ಎಂಬುದು ತತ್ತ್ವಾರ್ಥಸೂತ್ರದ ವಚನವಿದೆ.

ಅತಿಥಿಯ ಭೇದಗಳು ಎರಡು ಇವೆ - ೧. ಪಾಪದ ಉದಯದಿಂದ ಆಹಾರ, ಧನ, ವಸ್ತ್ರಗಳು ತನ್ನ ಹತ್ತಿರ ಇಲ್ಲದೆ ಇರುವುದರಿಂದ, ಹೊಟ್ಟೆ ತುಂಬಿಕೊಳ್ಳುವ ಸಲುವಾಗಿ ಅನ್ಯರ ಮನೆಗಳ ಬಾಗಿಲಿಗೆ ಅಲೆಯುತ್ತ ಬೇಡುತ್ತಿದ್ದರೂ ಕೇವಲ ಉದರ ಪೂರ್ತಿಯ ವಾಂಛೆಯನ್ನು ಪೂರ್ಣ ಮಾಡಲಾಗದಂಥ, ಮಹಾದೀನ, ದರಿದ್ರ, ಅನೇಕ ರೋಗಗಳಿಂದ ದುಃಖಿ, ವೃದ್ಧ, ಬಾಲಕ, ಕುರುಡ, ಕುಂಟ, ಅಸಹಾಯ ಒಂದು ಬಾರಿಯ ಆಹಾರದಿಂದ ಕೂಡ ರಹಿತ; ಬೇರೆಯವರಿಂದ ದಯೆ ಮಾಡಲಾದರೆ ಹೊಟ್ಟೆ ತುಂಬಿಕೊಂಡು ಸುಖಿಯಾಗುವಂಥ ವಾಂಛೆಯಿಂದ ಯುಕ್ತನಾದ ಅತಿಥಿಯಿದ್ದಾನೆ. ಈ ವಾಂಛೆಯುಕ್ತ ಅತಿಥಿಯು ಅಶರಣನಿರುವುದರಿಂದ ದಯೆಗೆ ಪಾತ್ರನಿದ್ದಾನೆ. ವಾಂಛೆಯು ಯಾಚನೆ ಮಾಡಿಸುತ್ತದೆ. ಇಂಥ ಯಾಚನೆಯ ಧಾರಕ, ವಾಂಛೆಯುಕ್ತ ರಂಕ(ದರಿದ್ರ)ನಿಗೆ ಅಸಹಾಯನೆಂದು ತಿಳಿದು ದಯಾಭಾವಪೂರ್ವಕ ದಾನ ಕೊಡುವುದು 'ಕರುಣಾಸಹಿತ ಅತಿಥಿದಾನ'ವಿದೆ.

೨. ವೀತರಾಗೀ, ತಪಸ್ವೀ, ಜ್ಞಾನಿ, ಧ್ಯಾನಿ, ಯಮ-ದಮಧಾರೀ, ಶಾಂತರಸದಭೋಗಿ, ನಗ್ನದಿಗಂಬರ,

ಯಾಚನಾರಹಿತ, ಜಗತ್‌ಪಿತ, ಎಲ್ಲರ ಗುರು, ತ್ರಿಲೋಕ ಪೂಜ್ಯ , ಸಮಸ್ತ ಜೀವಗಳ ಕಷ್ಟನಿವಾರಕ, ದಯೆಯ ಸಾಗರ, ಷಟ್ಕಾಯಿಕ ಜೀವಗಳಿಗೆ ಅಭಯದಾನದ ದಾತೃ , ಯೋಗೀಶ್ವರ, ಮೋಕ್ಷಾಭಿಲಾಷಿ, ಪರೀಷಹಗಳನ್ನು ಸಹಿಸುವಂಥ ಸಾಹಸಿ, ತನುವಿನ ಮಮತೆಯಿಂದ ರಹಿತ-ಇತ್ಯಾದಿ ಗುಣಸಹಿತ ಮುನೀಶ್ವರರು 'ಉತ್ತಮ ಪಾತ್ರ ಅತಿಥಿ'ಯಿದ್ದಾರೆ.

ಇಂಥ ಪಾತ್ರರುಗಳಿಗೆ ಮಹಾಭಕ್ತಿಭಾವಸಹಿತ, ನವಧಾ ಭಕ್ತಿಪೂರ್ವಕ ದಾನ ಕೊಡುವಂಥ ದಾತೃವಿನ ಏಳು ಗುಣಗಳನ್ನು ಹೇಳುತ್ತಾರೆ.

**ಸಧ್ಧಾ ಭಜಿ ಸತ್ತಹ, ವಿಣಾಣಮಲುಬ್ಧ ಹೋಯ ಕ್ಷಮಭಾವೋ ।**
**ಜಮ್ಮಂಗುಣ ಸುಹ ತಜ್ಝೋ, ಇವ ಸತ್ತಯ ಗುಣ ಜ್ಞೇಯ ಆದಾಏ ॥೧೩೮॥**

**ಗಾಥಾರ್ಥ :-** ಶ್ರದ್ಧೆ, ಭಕ್ತಿ , ಶಕ್ತಿ , ವಿಜ್ಞಾನ, ಅಲುಬ್ಧತೆ, ಕ್ಷಮಾಭಾವಸಹಿತ, ಅಂತ್ಯದ ಶುಭಗುಣ ತ್ಯಾಗ ಇವು ಏಳು ಗುಣಗಳು ದಾತಾರನವಿವೆ.

**ಭಾವಾರ್ಥ :-** ಶ್ರದ್ಧೆ, ಭಕ್ತಿ , ಶಕ್ತಿ , ವಿಜ್ಞಾನ, ಅಲುಬ್ಧತೆ, ಕ್ಷಮೆ ಮತ್ತು ತ್ಯಾಗ - ಇವು ಏಳು ಗುಣಗಳಿವೆ.

೧. ಪರಲೋಕವಿದೆ, ನಾಲ್ಕು ಗತಿಗಳಿವೆ, ಪಾಪದ ಫಲದಿಂದ ನರಕ-ಪಶುಗತಿಗಳಾಗುತ್ತವೆ, ಪುಣ್ಯ ಫಲದಿಂದ ಸುರ-ನರರ ಸುಖದ ಪ್ರಾಪ್ತಿಯಾಗುತ್ತದೆ. ಮುನಿರಾಜರಿಗೆ ಕೊಡುವ ದಾನವು ಸ್ವರ್ಗ-ಮೋಕ್ಷದ ದಾತೃವಿದೆ. ಅಲ್ಪ ಸಂಸಾರೀ ಜೀವರುಗಳ ಮನೆಯಲ್ಲಿ ಯತೀಶ್ವರರಿಗೆ ದಾನ ಸಲ್ಲುತ್ತದೆ - ಇಂಥ ಶ್ರದ್ಧೆಯಿಂದ ಸಹಿತನಾದ ದಾತೃವಿನ ಶ್ರದ್ಧೆಯ ಅಸ್ತಿತ್ವ ಸಹಿತ ದಾನ ಕೊಡುವುದು ಶ್ರದ್ಧಾಗುಣವಿದೆ.

೨. ಆಹಾರದ ಸಲುವಾಗಿ ತಮ್ಮ ಮನೆಗೆ ಆಗಮಿಸಿದ ಮುನಿರಾಜರ ಗುಣಗಳಲ್ಲಿ ಪ್ರೀತಿಯ ಭಾವವಿರುವುದು ಭಕ್ತಿ ಗುಣವಿದೆ.

೩. ಜಗತ್ತಿನ ಗುರುಗಳಿಗೆ ಪ್ರಮಾದರಹಿತ, ವಿನಯಪೂರ್ವಕ ಆಹಾರ ನೀಡುವ ಶಕ್ತಿಯಿರುವುದು ಶಕ್ತಿಗುಣವಿದೆ.

೪. ಯಥಾಯೋಗ್ಯ ದ್ರವ್ಯ , ಕ್ಷೇತ್ರ , ಕಾಲ, ಭಾವವನ್ನು ತಿಳಿದುಕೊಂಡು ಮುನಿರಾಜರಿಗೆ ಆಹಾರ ಕೊಡುವುದರಲ್ಲಿ ಪ್ರವೀಣನಿರುವುದು; ಹೇಗೆಂದರೆ - ವಿವೇಕವಂತ ದಾತೃವು ವಿಚಾರ ಮಾಡುವುದೇನೆಂದರೆ ಈ ಮುನಿಗಳು ವೃದ್ಧರಿದ್ದಾರೆ, ಇವರಿಗೆ ಲಘು ಆಹಾರ ಕೊಡುವುದು ಯೋಗ್ಯವಿದೆ, ಗರಿಷ್ಠ ಆಹಾರ ಕೊಟ್ಟರೆ ಇವರಿಗೆ ಖೇದವಾಗುವುದು, ಅದಕ್ಕಾಗಿ ವೃದ್ಧರ ವಯಸ್ಸಿನ ಅನುಸಾರ ಆಹಾರ ಕೊಡುವುದು. ತರುಣ ಮುನಿರಾಜರಿಗೆ ಅವರ ಅನುಸಾರ ಆಹಾರ ಕೊಡುವುದು; ಈ ಯತಿಗಳ ದೇಹವು ವಾಯು ಸಹಿತವಿದೆ, ಪಿತ್ತ ಸಹಿತವಿದೆ, ಕಫ ಸಹಿತವಿದೆ-ಇತ್ಯಾದಿ ರೂಪದಲ್ಲಿ ದ್ರವ್ಯದ ವಿಚಾರ ಮಾಡುವುದು. ಅಲ್ಲದೆ ಈ ಋತುವು ಉಷ್ಣವಿದೆ, ಶೀತವಿದೆ, ಮಧ್ಯಮವಿದೆ; ಈ ಮುನಿರಾಜರ ಪ್ರಕೃತಿ ಹೀಗಿದೆ - ಇವರಿಗೆ ಇಂಥ ಭೋಜನ ಹಿತಕಾರಕವಿದೆ, ಇಂಥದು ಹಿತಕಾರಕವಿಲ್ಲ ಎಂಬ ವಿಚಾರವನ್ನೂ ಮಾಡುತ್ತಾನೆ - ಇತ್ಯಾದಿ ರೂಪದಲ್ಲಿ ದ್ರವ್ಯ , ಕ್ಷೇತ್ರ , ಕಾಲ, ಭಾವಗಳ ವಿಚಾರ ಮಾಡಿ ಮುನೀಶ್ವರರಿಗೆ ಆಹಾರ ದಾನದಲ್ಲಿ ಪ್ರವೀಣತೆ, ದಾನದ ಸಂಪೂರ್ಣ ವಿಧಿಯನ್ನು ತಿಳಿಯುವುದು ವಿಜ್ಞಾನಗುಣವಿದೆ.

೫. ಮುನಿರಾಜರಿಗೆ ದಾನ ಕೊಡಲು ಯೋಗ್ಯ ವಸ್ತುಗಳಲ್ಲಿ ಲೋಲುಪಿಯಾಗದಿರುವುದು; ಮನೆಯಲ್ಲಿ ಯಾವುದೋ ಒಂದು-ಎರಡು ಪದಾರ್ಥಗಳು ನನ್ನ ರುಚಿಯ ಅನುಸಾರ ಸಿದ್ಧವಾಗಿವೆ, ಆ ಪದಾರ್ಥಗಳು ಅಲ್ಪವಿವೆ, ತನ್ನ ಸಲುವಾಗಿ ಮಾಡಲಾದ ವಸ್ತುಗಳು ಅಲ್ಪವಿರುವುದರಿಂದ ಮುನೀಶ್ವರರಿಗೆ ಅವನ್ನು ಕೊಟ್ಟರೆ ನನ್ನ ಸಲುವಾಗಿ ಉಳಿಯುವುದಿಲ್ಲ. ಅದಕ್ಕಾಗಿ ಅವನ್ನು ಕೊಡದೆ ಬೇರೆ ಅನೇಕ ವಸ್ತುಗಳನ್ನು ಕೊಡುವುದು - ಎಂಬ ವಿಚಾರ ಮಾಡದಿರುವುದು ಅಲುಬ್ಧತಾಗುಣವಿದೆ.

೬. ಮುನಿಗಳಿಗೆ ಆಹಾರ ಕೊಡುವ ಸಮಯದಲ್ಲಿ ಮಾನ, ಮಾತ್ಸರ್ಯ, ಕ್ರೋಧ, ಲೋಭ ಮೊದಲಾದ

ಭಾವಗಳನ್ನು ಬಿಟ್ಟುಕೊಟ್ಟು ಸಮತಾಭಾವಸಹಿತ, ಪ್ರಾಣಿಮಾತ್ರರ ಕುರಿತು ಸ್ನೇಹಭಾವಧಾರಣ ಮಾಡಿ ಕ್ಷಮಾಭಾವಪೂರ್ವಕ ಆಹಾರ ನೀಡುವುದು ಕ್ಷಮಾಗುಣವಿದೆ.

೭. ಉದಾರತೆಯೊಂದಿಗೆ, ಲೋಭರಹಿತ, ಭಕ್ತಿಯಿಂದ ಪರಿಪೂರ್ಣನಾಗಿ ಮುನಿಗಳಿಗೆ ಆಹಾರ ಕೊಡುವುದು ತ್ಯಾಗ ಗುಣವಿದೆ.

ಇವು ಏಳು ಗುಣಗಳಿಂದ ಸಹಿತನಾಗಿ ಯತಿಗಳಿಗೆ ದಾನ ಕೊಡುವಂಥ ದಾತೃವು ಉತ್ತಮ ಫಲ ಪಡೆಯುತ್ತಾನೆ.

ಈ ಏಳು ಗುಣಸಹಿತ ದಾತೃವು ಯತೀಶ್ವರರಿಗೆ ಮುಂದೆ ಹೇಳುವ ನವಧಾ ಭಕ್ತಿಪೂರ್ವಕ ದಾನಕೊಡುತ್ತಾನೆ-

**ಪಿತಗಹಣಂ ಉಚಥಾಣಂ, ಪದಧೋವಣಮರ್ಚ ಹೋಹು ಪಣಣಾಮೋ ।**

**ಮನ ವಯತಣ ತ್ರಣ ಸುದ್ಧಾ, ಏಷಣ ಸುಧ್ಯಯ ಭಕ್ತಣಾವ ಸುಹದಾ ॥೧೩೯॥**

**ಗಾಥಾರ್ಥ -** ಪ್ರತಿಗ್ರಹಣ, ಉಚ್ಚಸ್ಥಾನ, ಪಾದ ತೊಳೆಯುವುದು, ಅರ್ಚನೆ ಮಾಡುವುದು, ಪ್ರಣಾಮ ಮಾಡುವುದು, ಮನ-ವಚನ-ಕಾಯ ಇವು ಮೂರರ ಶುದ್ಧತೆ, ಏಷಣಾಶುದ್ಧಿ - ಈ ನವಧಾ ಭಕ್ತಿಗಳು ಸುಖದಾಯಕವಿವೆ.

**ಭಾವಾರ್ಥ :-** ಪ್ರತಿಗ್ರಹಣ, ಉಚ್ಚಸ್ಥಾನ, ಪಾದ ಪ್ರಕ್ಷಾಲನೆ, ಅರ್ಚನೆ, ಪ್ರಣಾಮ, ಮನಶುದ್ಧಿ, ವಚನಶುದ್ಧಿ, ಕಾಯಶುದ್ಧಿ ಮತ್ತು ಏಷಣಾಶುದ್ಧಿ - ಇವು ಒಂಭತ್ತು ಭಕ್ತಿಗಳಿವೆ.

೧. ಮುನಿಗಳ ಆಹಾರದ ಸಮಯದಲ್ಲಿ ಶ್ರಾವಕನು ಉಜ್ವಲ ವಸ್ತ್ರಧಾರಣ ಮಾಡಿ ಪ್ರಾಸುಕ ಜಲದ ಗಿಂಡಿಯೊಂದಿಗೆ ತನ್ನ ಮನೆಯ ಬಾಗಿಲಲ್ಲಿ ವಿನಯ ಸಹಿತ ನಿಂತುಕೊಳ್ಳುವುದು, ಮುನಿರಾಜರು ಬಂದ ಮೇಲೆ ಅವರನ್ನು ಬಲಗೊಳ್ಳುವುದು 'ಪ್ರತಿಗ್ರಹಣವೆಂಬ ಹೆಸರಿನ ಭಕ್ತಿ' ಇದೆ.

೨. ಈರ್ಯಾ ಸಮಿತಿಪೂರ್ವಕ, ದಾತೃವಿನ ಮನೆಯ ಭೂಮಿಯನ್ನು ಪವಿತ್ರಗೊಳಿಸುತ್ತ, ಯೋಗೀಶ್ವರರ ಪ್ರವೇಶವನ್ನು ದಾತೃವಿನ ಮನೆಯಲ್ಲಿ ಮಾಡಿಸಿ, ಭೋಜನ ಶಾಲೆಯನ್ನು ತಲುಪಿದ ಮೇಲೆ ಅವರನ್ನು ವಿನಯಪೂರ್ವಕ ಉಚ್ಚ ಆಸನದ ಮೇಲೆ ಕೂಡ್ರಿಸುವುದು 'ಉಚ್ಚಸ್ಥಾನವೆಂಬ ಹೆಸರಿನ ಭಕ್ತಿ' ಇದೆ.

೩. ಅಲ್ಲಿ ಮುನಿರಾಜರ ಚರಣಕಮಲಗಳನ್ನು ಶ್ರಾವಕನ ಮೂಲಕ ತನ್ನ ಕೈಗಳಿಂದ ಸ್ಪರ್ಶ ಮಾಡಿ ತನ್ನ ಕೈಯಿಂದ ಸ್ವಚ್ಚಗೊಳಿಸುವುದು, ಪ್ರಾಸುಕ ಅಲ್ಪ ಜಲದಿಂದ ಪಾದ ತೊಳೆಯುವುದು 'ಪಾದಪ್ರಕ್ಷಾಲನ ಭಕ್ತಿ' ಇದೆ.

೪. ಅದರ ನಂತರ ಅಷ್ಟ ದ್ರವ್ಯಗಳಿಂದ ಜಗತ್ಪೂಜ್ಯ ಗುರುಗಳ ಪೂಜೆ ಮಾಡುವುದು 'ಅರ್ಚನೆಭಕ್ತಿ ಇದೆ.

೫. ವಿನಯಸಹಿತ ನಮಸ್ಕಾರ ಮಾಡುವುದು 'ಪ್ರಣಾಮ ಭಕ್ತಿ'ಇದೆ.

೬. ತನ್ನ ಮನಸ್ಸನ್ನು ಭಕ್ತಿ ಸಹಿತ, ವಿನಯರೂಪ ಮಾಡಿ ಮುನೀಶ್ವರರಲ್ಲಿ ತೊಡಗಿಸುವುದು, ಉತ್ಸಾಹ ಸಹಿತ ಪ್ರಮಾದ ರಹಿತನಾಗುವುದು, ವಿಕಲ್ಪವನ್ನು ಬಿಟ್ಟು ಏಕಾಗ್ರನಾಗಿ ಮುನಿಗಳ ದಾನದಲ್ಲಿ ಚಿತ್ತ ತೊಡಗಿಸುವುದು 'ಮನಶುದ್ಧಿಭಕ್ತಿ' ಇದೆ.

೭. ಮುನೀಶ್ವರರ ಆಹಾರದ ಸಮಯದಲ್ಲಿ ಯಾವುದೇ ಕಾರಣದಿಂದ ಮನೆಯ ಜನರಿಗೆ ಸಲಹೆ ನೀಡುವ ಪ್ರಸಂಗದಲ್ಲಿ ಪರಂಪರೆಯ ವಿಚಾರ ಮಾಡಿ ಮಾತನಾಡುವುದು 'ವಚನ ಶುದ್ಧಿ ಭಕ್ತಿ' ಇದೆ.

೮. ಮುನಿರಾಜರಿಗೆ ಆಹಾರ ಕೊಡುವ ಸಮಯದಲ್ಲಿ ದಾತೃವು ತನ್ನ ಶರೀರವನ್ನು ಶುದ್ಧ ಮಾಡಿಕೊಂಡು, ಅನ್ಯ ಕ್ರಿಯೆಗಳಿಂದ ಭಿನ್ನನಾಗಿದ್ದು ಆಹಾರ ಕೊಡುವಲ್ಲಿ ಏಕಾಗ್ರತೆಯೊಂದಿಗೆ ಶುದ್ಧವಾಗಿಟ್ಟುಕೊಳ್ಳುವುದು 'ಕಾಯಶುದ್ಧಿಭಕ್ತಿ' ಇದೆ.

೯. ಅಧಃಕರ್ಮರಹಿತ ಭೋಜನವು 'ಏಷಣಾಭಕ್ತಿ' - ಶುದ್ಧ ಭೋಜನ ಭಕ್ತಿಯಿದೆ.

ಅಧಃಕರ್ಮವು - ಆರಂಭ, ಉಪದ್ರವ, ವಿದ್ರಾವಣ ಮತ್ತು ಪರಿತಾಪನವೆಂದು ನಾಲ್ಕು ಪ್ರಕಾರದ್ದಿದೆ.

ಜೀವಗಳ ಪ್ರಾಣಘಾತದಿಂದ ಉತ್ಪನ್ನವಾದ ಭೋಜನವು ಆರಂಭ ದೋಷ ಸಹಿತವಿದೆ. ಅನ್ಯ ಜೀವಗಳನ್ನು ಮನ-ವಚನ-ಕಾಯದಿಂದ ದುಃಖಿಯನ್ನಾಗಿಸಿ ಸಿದ್ಧಪಡಿಸಿದ ಭೋಜನವು ಉಪದ್ರವ ದೋಷಯುಕ್ತವಿದೆ. ಅನ್ಯ ಜೀವಗಳ ಅಂಗೋಪಾಂಗಗಳನ್ನು ಛೇದಿಸಿ ಉತ್ಪನ್ನವಾದ ಭೋಜನವು ವಿದ್ರಾವಣ ದೋಷಯುಕ್ತವಿದೆ. ಅನ್ಯ ಜೀವಗಳಿಗೆ ಸಂತಾಪ-ಕ್ಲೇಶವನ್ನು ಉತ್ಪನ್ನ ಮಾಡಿ ನಿರ್ಮಿಸಲಾದ ಭೋಜನವು ಪರಿತಾಪನ ದೋಷಯುಕ್ತವಿದೆ.

ಇವು ನಾಲ್ಕೂ ದೋಷಗಳಿಂದ ಸಹಿತ ಭೋಜನವು ಅಧಃ ಕರ್ಮದೋಷದಿಂದ ಸಂಯುಕ್ತವಿದೆ. ಈ ನಾಲ್ಕು ಭೇದರೂಪ ಅಧಃ ಕರ್ಮದಿಂದ ರಹಿತವಾದ ಭೋಜನ ನೀಡುವುದು 'ಏಷಣಾ ಶುದ್ಧಿ ಭಕ್ತಿ'ಇದೆ.

ಈ ಪ್ರಕಾರ ದಾತೃವಿನ ಏಳು ಗುಣ ಮತ್ತು ನವಧಾಭಕ್ತಿಸಹಿತ ಮುನೀಶ್ವರರಿಗೆ ಆಹಾರ ಕೊಡುವುದು ಪಾತ್ರದಾನವಿದೆ. ಶ್ರಾವಕನು ತನ್ನ ಮನೆಯಲ್ಲಿ ತನ್ನ ಸಲುವಾಗಿ ನಿರ್ಮಿಸಲಾದ ಆಹಾರದೊಳಗಿಂದ ಅತಿಥಿಗೆ ಯಾವ ಆಹಾರ ಕೊಡುತ್ತಾನೆ, ಅದು ಅತಿಥಿ ಸಂವಿಭಾಗ ವ್ರತವಿದೆ. ಯತಿಗಳು ಅತಿಥಿಯಾಗಿರುವ ಕಾರಣ ಅವರು ಭಕ್ತಿಪೂರ್ವಕ ದಾನ ಕೊಡಲು ಯೋಗ್ಯರಿದ್ದಾರೆ. ಭಕ್ತಿಪೂರ್ವಕ ಪಾತ್ರರಿಗೆ ದಾನ ಕೊಡುವುದರಿಂದ ಮಹಾನ ಫಲದ ಲಾಭವಾಗುತ್ತದೆ. ಈ ಪಾತ್ರರಿಗೆ ಆಹಾರದಾನ, ಔಷಧ ದಾನ, ಶಾಸ್ತ್ರದಾನ ಮತ್ತು ಅಭಯದಾನ ಕೊಡಲಾಗುತ್ತದೆ.

**ಸಂದೇಹ -** ತಾವು ಮುನಿಗಳ ಸಲುವಾಗಿ ನಾಲ್ಕೂ ದಾನ ಕೊಡುವುದು ಯೋಗ್ಯವೆಂದು ಹೇಳಿದಿರಿ. ಆದರೆ ಅವರಿಗೆ ಹೇಗೆ ಅಭಯದಾನ ಕೊಡುವುದು ಸಂಭವವಿದೆ ? ಅಭಯದಾನವನ್ನಂತೂ ದಯಾಮಯ ಭಾವಗಳಿಂದ ಕೊಡಲಾಗುತ್ತದೆ. ಏಕೇಂದ್ರಿಯ, ವಿಕಲೇಂದ್ರಿಯ ಮೊದಲಾದ ದೀನ ದುಃಖೀ ಜೀವಗಳ ಮೇಲೆಯೇ ದಯೆ ಮಾಡಲಾಗುತ್ತದೆ. ಅದರಿಂದ ಅವುಗಳ ಕುರಿತಾಗಿ ಅಭಯದಾನವು ಸಂಭವವಿದೆ. ಜಗತಗುರು, ತ್ರಿಲೋಕಪೂಜ್ಯರ ಕುರಿತಾಗಿ ಹೇಗೆ ದಯೆ ಮಾಡುವುದು ?

**ಸಮಾಧಾನ -** ಹೇಗೆ ಯಾವನೋ ದೊರೆಯ ಪ್ರಬಲ ವೈರಿಯು ಯಾವುದೋ ಮೋಸದಿಂದ, ದೊರೆಯು ಏಕಾಕಿಯಾಗಿರುವುದನ್ನು ಕಂಡು ಬಂಧಿಸಿ, ಸಾಯಿಸುವ ಉದ್ಯಮ ಮಾಡುತ್ತಾನೆ. ಅಂಥ ಸಮಯದಲ್ಲಿ ಆ ದೊರೆಯ ಮಹಾಯೋಧ ಸೇವಕನು ಬಂದು ತನ್ನ ಒಡೆಯನು ದುಃಖಿಯಾಗಿರುವುದನ್ನು ಕಂಡು ವೈರಿಗಳೊಂದಿಗೆ ಯುದ್ಧ ಮಾಡುತ್ತಾನೆ ಮತ್ತು ತನ್ನ ಪುರುಷಾರ್ಥದಿಂದ ಅವರನ್ನು ಗೆದ್ದು ತನ್ನ ಸ್ವಾಮಿ ದೊರೆಯನ್ನು ರಕ್ಷಿಸಿದನು. ನಂತರ ದೊರೆಯನ್ನು ಸುಖಿಯನ್ನಾಗಿಸಿ ನಮಸ್ಕಾರ ಮಾಡುತ್ತಾನೆ. ಓ ಸ್ವಾಮೀ ! ನಾನು ತಮ್ಮ ಸೇವಕನಿದ್ದೇನೆಂದು ಅರಿಕೆ ಮಾಡಿಕೊಳ್ಳುತ್ತಾನೆ.

ಅದೇ ಪ್ರಕಾರ ದೇಹದಿಂದ ನಿಸ್ಪೃಹರೂ, ಶತ್ರು-ಮಿತ್ರರ ಕುರಿತಾಗಿ ಸಮಭಾವವಿಟ್ಟುಕೊಂಡಿರುವಂಥವರೂ ಆದ ತಮ್ಮ ಸ್ವಾಮೀ, ವೀತರಾಗೀ ಗುರುನಾಥರ ಮೇಲೆ ಯಾರೋ ಪಾಪಿಗಳು ಪೂರ್ವದ ದ್ವೇಷಭಾವದಿಂದ ಉಪಸರ್ಗ ಮಾಡುತ್ತಾರೆ. ಆ ಮಹಾ ಘೋರ ಉಪಸರ್ಗದ ಸಮಯದಲ್ಲಿ ಯಾವನೋ ಮಹಾ ಧರ್ಮಾತ್ಮಾ ಯತಿನಾಥರ ಸೇವಕನು ಬಂದು ತನ್ನ ಬಲದಿಂದ ಪಾಪೀ ಜನರನ್ನು ದಂಡಿಸಿ, ಮುನೀಶ್ವರರ ಉಪಸರ್ಗವನ್ನು ದೂರ ಮಾಡುತ್ತಾನೆ. ನಂತರ ಯತೀಶ್ವರರಿಗೆ ನಮಸ್ಕಾರ ಮಾಡಿ, ಸ್ತುತಿ ಮಾಡುತ್ತಾನೆ, ಪ್ರಾರ್ಥನೆ ಮಾಡುತ್ತಾನೆ - ಇದು ಮುನಿರಾಜರ ಕುರಿತಾಗಿ ಅಭಯದಾನವಿದೆಯೆಂದು ಹೇಳುವುದರಲ್ಲಿ ಯಾವ ದೋಷವಿಲ್ಲ. ಅದರಿಂದ ಮುನಿಗಳಿಗೆ ನಾಲ್ಕೂ ದಾನ ಕೊಡಲಾಗುತ್ತದೆ. ಇದರಲ್ಲಿ ಯಾವ ದೋಷವಿಲ್ಲ. ವಿಶೇಷವೆಂದರೆ ದೀನನಿಗೆ ಕೊಡುವ ಅಭಯದಾನದಲ್ಲಿ ಕರುಣೆಯ ಭಾವವಿರುತ್ತದೆ ಮತ್ತು ಮುನಿಗಳಿಗೆ ಅಭಯದಾನಕೊಡುವಲ್ಲಿ ಭಕ್ತಿಯ ಭಾವವಿರುತ್ತದೆ

ಇವು ನಾಲ್ಕೂ ದಾನಗಳಲ್ಲಿ ಅಭಯದಾನವು ಉತ್ಕೃಷ್ಟವಿದೆ. ಇದರ ಫಲವು ಕೂಡ ಬೇರೆಯವುಗಳಿಗಿಂತ

ಉತ್ಕೃಷ್ಟವಿದೆ. ಯಾವ ರೀತಿ ದೊರೆಯ ಅನ್ಯ ಅನೇಕ ಸೇವೆ ಮಾಡುವುದಕ್ಕಿಂತ ಮರಣದಿಂದ ದೊರೆಯ ರಕ್ಷಣೆ ಮಾಡುವುದು ಉತ್ಕೃಷ್ಟ ಸೇವೆಯಿದೆ. ಮರಣದ ಸಮಯದಲ್ಲಿ ಸಹಾಯ ಮಾಡಿ, ಶತ್ರುಗಳಿಂದ ರಕ್ಷಿಸುವಂಥವನು ಉತ್ಕೃಷ್ಟ ಸೇವಕನಿದ್ದಾನೆ, ಆ ಉತ್ಕೃಷ್ಟ ಸೇವೆಯ ಫಲವು ಉತ್ಕೃಷ್ಟವಿದೆ. ಅದೇ ಪ್ರಕಾರ ಮುನಿರಾಜರನ್ನು ಉಪಸರ್ಗದಿಂದ ರಕ್ಷಿಸುವುದು ಉಳಿದ ಮೂರು ದಾನದ ಅಪೇಕ್ಷೆಯಿಂದ ಮಹಾನ ಪುಣ್ಯದ ಕಾರ್ಯವಿದೆ. ಈ ಪ್ರಕಾರ ಮುನಿರಾಜರ ಕುರಿತಾಗಿ ನಾಲ್ಕೂ ದಾನಗಳನ್ನು ಹೇಳಿದ್ದಾರೆ. ಇದನ್ನು ನಯ-ಪ್ರಮಾಣದಿಂದ ತಿಳಿದುಕೊಳ್ಳುವುದು.

ಯಾವುದೋ ನಯ(ಅಪೇಕ್ಷೆ)ದಿಂದ ಶಾಸ್ತ್ರದಾನವು ಮಹಾನವಿದೆ. ಶಾಸ್ತ್ರದಾನದಿಂದ ಜಿನವಾಣಿಯ ಅಭ್ಯಾಸ ಮಾಡಿ ಕೇವಲಜ್ಞಾನ ಪ್ರಾಪ್ತ ಮಾಡಿಕೊಳ್ಳುತ್ತಾರೆ - ಆ ನಯದಿಂದ ಶಾಸ್ತ್ರದಾನವು ಮಹಾನವಿದೆ. ಯಾವುದೋ ನಯದಿಂದ ಔಷಧ ದಾನವು ದೊಡ್ಡದಿದೆ. ರೋಗದ ವೃದ್ಧಿಯಾದ ಮೇಲೆ ಯತಿ-ಶ್ರಾವಕರದು ಧ್ಯಾನದಲ್ಲಿ ಸ್ಥಿರತೆಯಾಗುವುದಿಲ್ಲ. ರೋಗವು ನಾಶವಾಗಿ ಹೋದ ಮೇಲೆ ಧ್ಯಾನ-ಅಧ್ಯಯನದ ಪ್ರಾಪ್ತಿಯಾಗುತ್ತದೆ. ಎಂದರೆ ಆ ನಯದಿಂದ ಔಷಧ ದಾನವು ದೊಡ್ಡದಿದೆ. ಯಾವುದೋ ನಯದಿಂದ ಆಹಾರ ದಾನವು ಶ್ರೇಷ್ಠವಿದೆ. ಕ್ಷುಧೆಯು ಪ್ರತಿನಿತ್ಯ ಖೇದಕರವಿರುವುದರಿಂದ ಶಿಥಿಲವಾಗಿ ಹೋಗುವ ಕಾರಣ, ಆಹಾರವಿಲ್ಲದೇ ಶರೀರವು ಕ್ಷೀಣವಾಗಿ ಹೋಗುತ್ತದೆ ಅದರಿಂದ ಧರ್ಮಧ್ಯಾನವನ್ನು ಸಾಧಿಸಲಾಗುವುದಿಲ್ಲ. ದೇಹದ ಸ್ಥಿರತೆಯಿಂದ ಭಾವದ ಸ್ಥಿರತೆಯಾಗುತ್ತದೆ; ಭಾವದ ಸ್ಥಿರತೆಯಿಂದ ಕರ್ಮನಷ್ಟ ಮಾಡಿ, ಕೇವಲಿಯಾಗಿ, ಸಿದ್ಧಪದದ ಪ್ರಾಪ್ತಿಯಾಗುತ್ತದೆ. ಅದರಿಂದ ಈ ನಯದಿಂದ ಆಹಾರದಾನವು ಶ್ರೇಷ್ಠವಿದೆ.

ಈ ಪ್ರಕಾರ ನಯ ಪ್ರಮಾಣದಿಂದ ತಮ್ಮ-ತಮ್ಮ ಸ್ಥಾನದಲ್ಲಿ ಎಲ್ಲವೂ ಉತ್ಕೃಷ್ಟವಿವೆ. ಈ ಆತ್ಮನು ಆಹಾರ ದಾನದಿಂದ ಸದೈವ ಸುಖಿಯಾಗಿರುತ್ತಾನೆ. ಅನೇಕ ಜೀವರುಗಳ ಪೋಷಣೆ ಮಾಡುವಂಥವನಾಗುತ್ತಾನೆ. ಔಷಧ ದಾನದಿಂದ ರೋಗರಹಿತ ಶರೀರವಾಗುತ್ತದೆ. ಅನೇಕರ ಅನೇಕ ರೋಗ ನಷ್ಟ ಮಾಡುವ ಕಲೆಯ ಧಾರಕನಾಗುತ್ತಾನೆ. ಶಾಸ್ತ್ರದಾನದಿಂದ ಅಂಗಪೂರ್ವ ಮೊದಲಾದ ಶ್ರುತಜ್ಞಾನ, ಅವಧಿಜ್ಞಾನ, ಮನಃಪರ್ಯಯ ಜ್ಞಾನದ ಪ್ರಾಪ್ತಿ ಯಾಗುತ್ತದೆ. ಸ್ವಯಂ ಭವಾಂತರದಲ್ಲಿ ಅನ್ಯರಿಗೆ ಜ್ಞಾನದಾತೃವಾಗುತ್ತಾನೆ. ಅಭಯದಾನದಿಂದ ಭವಾಂತರದಲ್ಲಿ ಕೋಟಿಭಟ ಮೊದಲಾಗಿ ಮಹಾಯೋಧನಾಗುತ್ತಾನೆ. ದಯೆಯುಳ್ಳವನಾಗುತ್ತಾನೆ ಹಾಗೂ ಅನುಕ್ರಮದಿಂದ ಅನಂತಕಾಲದವರೆಗೆ ಸುಖದ ಸ್ಥಾನ, ಸ್ಥಿರೀಭೂತ, ಲೋಕಶಿಖರದ ಮೇಲೆ ಸಿದ್ಧನಾಗುತ್ತಾನೆ. ಹೀಗೆ ತಿಳಿದು ನಾಲ್ಕೂ ದಾನ ಕೊಡುವುದು ಯೋಗ್ಯವಿದೆ.

ಇಲ್ಲಿ ಮುಖ್ಯ ಕಥನವು ಅತಿಥಿ ಸಂವಿಭಾಗ ವ್ರತದ್ದಿದೆ. ತನ್ನ ಭೋಜನದೊಳಗೆ ಅತಿಥಿಯ ಸಮವಿಭಾಗ ಮಾಡುವುದು ಅತಿಥಿ ಸಂವಿಭಾಗ ವ್ರತವಿದೆ. ಇದರ ಅತಿಚಾರಗಳು - ಸಚಿತ್ತ ನಿಕ್ಷೇಪ, ಸಚಿತ್ತಾಪಿಧಾನ, ಪರವ್ಯಪದೇಶ, ಮಾತ್ಸರ್ಯ ಮತ್ತು ಕಾಲಾತಿಕ್ರಮವೆಂದು ಐದು ಇವೆ. ಭೋಜನದ ವಸ್ತುವನ್ನು ಸಚಿತ್ತ ಪದಾರ್ಥದ ಮೇಲೆ ಇಡುವುದು, ಸಚಿತ್ತನಿಕ್ಷೇಪವೆಂಬ ಹೆಸರಿನ ಅತಿಚಾರವಿದೆ. ಭೋಜನದ ವಸ್ತುವನ್ನು ಸಚಿತ್ತ ಪದಾರ್ಥದಿಂದ ಮುಚ್ಚಿಡುವುದು, ಸಚಿತ್ತಾಪಿಧಾನವೆಂಬ ಹೆಸರಿನ ಅತಿಚಾರವಿದೆ. ಭೋಜನದ ಸಮಯದಲ್ಲಿ ಮುನೀಶ್ವರರು ಬಂದಿರುವುದನ್ನು ತಿಳಿದು 'ನನಗೆ ಕೆಲಸವಿದೆ, ನೀವು ಮುನಿಗಳಿಗೆ ಆಹಾರ ಕೊಡುವುದು' - ಎಂದು ಹೇಳಿ ಅನ್ಯರಿಂದ ಆಹಾರದಾನ ಮಾಡಿಸುವುದು, ಪರವ್ಯಪದೇಶವೆಂಬ ಹೆಸರಿನ ಅತಿಚಾರವಿದೆ. ಅನ್ಯ ದಾತೃವು ದಾನ ಕೊಡುತ್ತಿರುವುದನ್ನು ಕಂಡು ತನ್ನ ಭಾವದಲ್ಲಿ ಮಾತ್ಸರ್ಯ ಮಾಡುವುದು, ಮಾತ್ಸರ್ಯ ದೋಷವಿದೆ. ತನ್ನ ಪ್ರಯೋಜನದ ವಶೀಭೂತನಾಗಿ ಮನೆಯ ಕೆಲಸದಲ್ಲಿ ತೊಡಗಿ, ಮುನೀಶ್ವರರ ಭೋಜನಕಾಲದ ಉಲ್ಲಂಘನೆಯಾಗಿ ಹೋದ ಮೇಲೆ, ದೈನಿಕ ಕ್ರಿಯೆ ಮಾಡುವಾಗ ಸ್ಮರಣೆಯಾದ ಮೇಲೆ ನಂತರ ದ್ವಾರಪ್ರೇಕ್ಷಣ ಮಾಡುವುದು, ಕಾಲಾತಿಕ್ರಮವೆಂಬ ಹೆಸರಿನ ಅತಿಚಾರವಿದೆ.

ಇವು ಐದು ಅತಿಚಾರಗಳಿಂದ ರಹಿತ, ಶುದ್ಧ ಅತಿಥಿ ಸಂವಿಭಾಗ ವ್ರತವಿದೆ.

ಈ ಪ್ರಕಾರ ಐದು ಅಣುವ್ರತ, ಮೂರು ಗುಣವ್ರತ, ನಾಲ್ಕು ಶಿಕ್ಷಾವ್ರತ - ಇವು ಹನ್ನೆರಡು ವ್ರತಗಳಿವೆ. ಪ್ರತಿಯೊಂದು ವ್ರತದ ಐದೈದು ಅತಿಚಾರಗಳಿವೆ. ಎಲ್ಲ ಸೇರಿ ಅರವತ್ತು ಆದವು. ಜತೆಯಲ್ಲಿಯೇ ಸಮ್ಯಕ್ತ್ವದ ಶಂಕೆ, ಕಾಂಕ್ಷೆ, ವಿಚಿಕಿತ್ಸೆ, ಅನ್ಯದೃಷ್ಟಿಪ್ರಶಂಸೆ ಮತ್ತು ಅನ್ಯದೃಷ್ಟಿ ಸಂಸ್ತವ- ಇವು ಐದು ಅತಿಚಾರಗಳಿವೆ.

ಜಿನಾಗಮದಲ್ಲಿ ಹೇಳಿರುವ ಧಾರ್ಮಿಕ ಅಂಗಗಳ ಸೇವನೆಯಲ್ಲಿ ಶಂಕೆ(ಸಂದೇಹ)ಯನ್ನಿಟ್ಟುಕೊಳ್ಳುವುದು ಶಂಕೆಯೆಂಬ ಹೆಸರಿನ ಅತಿಚಾರವಿದೆ. ಧರ್ಮಸೇವನೆಯಿಂದ ಈ ಭವಕ್ಕೆ ಸಂಬಂಧಿಸಿದ ವಾಂಛೆ ಹಾಗೂ ಪರಭವಕ್ಕೆ ಸಂಬಂಧಿಸಿದ ಇಂದ್ರಿಯ ಸುಖಗಳ ವಾಂಛೆ ಮಾಡುವುದು, ಕಾಂಕ್ಷೆಯೆಂಬ ಹೆಸರಿನ ದೋಷವಿದೆ. ಧರ್ಮಾತ್ಮರಾದ ಮುನಿ, ಶ್ರಾವಕರು ಮೊದಲಾದ ನಿರ್ಮಲ ದೃಷ್ಟಿಧಾರೀ ಪುರುಷರ ಶರೀರದಲ್ಲಿ ರೋಗ ಕಂಡು ಗ್ಲಾನಿ ಮಾಡುವುದು ವಿಚಿಕಿತ್ಸೆಯೆಂಬ ಹೆಸರಿನ ದೋಷವಿದೆ. ಮಿಥ್ಯಾದೃಷ್ಟಿ ಜೀವಗಳ ಗುಣಕಂಡು, ಮತ್ತೆ ಮತ್ತೆ ನೆನೆಸಿಕೊಂಡು, ಅವರ ಗುಣಗಳನ್ನು ಒಳ್ಳೆಯವೆಂದು ತಿಳಿದು, ಅವುಗಳ ಪ್ರಶಂಸೆ ಮಾಡುವುದು, ಅನ್ಯದೃಷ್ಟಿ ಪ್ರಶಂಸೆಯೆಂಬ ಹೆಸರಿನ ದೋಷವಿದೆ. ತನ್ನ ವಚನಗಳಿಂದ ಮಿಥ್ಯಾದೃಷ್ಟಿಯ ಸ್ತುತಿ ಮಾಡುವುದು ಅನ್ಯದೃಷ್ಟಿ ಸಂಸ್ತವವೆಂಬ ಹೆಸರಿನ ಅತಿಚಾರದೋಷವಿದೆ.

ಇವು ಐದು ಅತಿಚಾರ ರಹಿತ, ಸಮ್ಯಗ್ದರ್ಶನ ಸಹಿತ ವ್ರತಗಳ ಧಾರಕ, ಕೋಮಲಚಿತ್ತ ಸಹಿತ ದಯೆಯ ಭಂಡಾರ, ಸಂಸಾರದಿಂದ ಉದಾಸೀನ, ಪಾಪದಿಂದ ಭಯಭೀತ, ನಾಲ್ಕೂ ಗತಿಗಳಲ್ಲಿ ವಾಸ ಮಾಡುವುದನ್ನು ದುಃಖದಾಯಕವೆಂದು ತಿಳಿದು, ದೇಹಧಾರಣ ಮಾಡುವ ಮತ್ತು ಮರಣ ಹೊಂದುವುದರಿಂದ ಬೇಸತ್ತ ಮನಸುಳ್ಳವ, ಮೋಕ್ಷಾಭಿಲಾಷಿ, ಅಜರ-ಅಮರ ಪದದ ಲೋಭವುಳ್ಳ ಧರ್ಮಾತ್ಮನು ತನ್ನ ಮನ-ವಚನ-ಕಾಯದಿಂದ ಕ್ರಿಯೆ ಮಾಡುವಂಥವ, ಸಮಸ್ತ ಜೀವಗಳನ್ನು ಸಮಾನವೆಂದು ತಿಳಿಯುವಂಥವನು ಈ ತ್ರಸಹಿಂಸೆಯ ತ್ಯಾಗಿಯಾದ ಶ್ರಾವಕನು ಯತ್ನಪೂರ್ವಕ ಕ್ರಿಯೆ ಮಾಡುತ್ತಾನೆ.

ನಿರಂತರ ಸಮತೆಯೊಂದಿಗೆ ಕಾಲವನ್ನು ವ್ಯತೀತ ಮಾಡಬಯಸುವವನು, ನಿರಾಕುಲ ಪರಿಣತಿ ಸಹಿತ, ಶಾಂತ ರಸದ ಅಭಿಲಾಷಿಯಾದ ಭವ್ಯನು, ಷಟ್ಕಾಯಿಕ ಜೀವಗಳಿಗೆ ಅಭಯದಾನ ಕೊಡಲಿಚ್ಛಿಸುವ ಧರ್ಮಾತ್ಮಾ ಶ್ರಾವಕನು ತನು-ಧನದಿಂದ ಉದಾಸನಾಗಿ ಸಲ್ಲೇಖನ ವ್ರತ ಧಾರಣ ಮಾಡಬಯಸುತ್ತಾನೆ. ಅದರಲ್ಲಿ ಎಲ್ಲಕ್ಕಿಂತ ಮೊದಲು ಅವನು ಸಮಸ್ತ ಜೀವಗಳ ಕುರಿತಾಗಿ ಸಮತೆಯ ಭಾವವಿಡುತ್ತಾನೆ. ಅದರ ನಂತರ ತನ್ನ ತನು, ಧನ, ರಾಜ್ಯಲಕ್ಷ್ಮೀ ಇಂದ್ರಿಯ ಸುಖ, ಕುಟುಂಬ ವರ್ಗದವರು, ಸಜ್ಜನರು ಮೊದಲಾಗಿ ಎಲ್ಲರ ಕುರಿತಾಗಿ ಮೋಹ ಮಮತೆಯ ಭಾವವನ್ನು ಬಿಟ್ಟುಕೊಟ್ಟು ಆ ಧರ್ಮಾತ್ಮನು ತನ್ನ ಆಯುಕರ್ಮದ ಕೊನೆಯು ನಿಕಟವಾಗಿರುವುದನ್ನು ತಿಳಿದು, ಅಥವಾ ಶರೀರದಲ್ಲಿ ಯಾವುದೋ ತೀವ್ರ ರೋಗ ತಿಳಿದು ಅಥವಾ ಶರೀರದ ಮೇಲೆ ಯಾವುದೋ ಸಿಂಹ, ಸರ್ಪಾದಿ ದುಷ್ಟ ಪಶು ವಿಷಜಂತುವಿನ ಉಪದ್ರವ ತಿಳಿದು ಸಂನ್ಯಾಸ ಅಥವಾ ಸಲ್ಲೇಖನ ಧಾರಣ ಮಾಡುತ್ತಾನೆ.

ಯಾವುದೋ ಕಾರಣವಶದಿಂದ ದೊರೆ ಮೊದಲಾದವರ ತೀವ್ರ ಕೋಪ ಇತ್ಯಾದಿ ದೀರ್ಘ ಉಪದ್ರವ ತಿಳಿದು ಸಲ್ಲೇಖನ ಧಾರಣ ಮಾಡುವ ಶ್ರಾವಕನು - 'ಒಂದುವೇಳೆ ಈ ಉಪದ್ರವದಿಂದ ಬದುಕಿ ಉಳಿದರೆ ಅನ್ನ-ನೀರು ಗ್ರಹಣ ಮಾಡುವೆನು, ಇಲ್ಲದಿದ್ದರೆ ಅನ್ನ-ಜಲಾದಿಗಳ ತ್ಯಾಗವಿದೆ'ಯೆಂದು ವಿಚಾರ ಮಾಡಿ ಇಂಥ ಪ್ರತಿಜ್ಞೆ ಧಾರಣ ಮಾಡಿ ಸನ್ಯಾಸ ತಗೆದುಕೊಳ್ಳುವುದು ಸಾಗಾರ ಸನ್ಯಾಸವಿದೆ. ಯಾವುದೇ ರೂಪದಲ್ಲಿ ತಾನು ಬದುಕಿ ಉಳಿಯುವ ಯಾವ ಉಪಾಯವೂ ಭಾಸಿತವಾಗದಿರುವಾಗ ಸನ್ಯಾಸ ತಗೆದುಕೊಳ್ಳುವುದು ಅನಾಗಾರ ಸನ್ಯಾಸವಿದೆ.

ಉಪಸರ್ಗವಾಗದಿದ್ದರೂ ಅನಂತ ಸಂಸಾರ-ಭೋಗದಿಂದ ಉದಾಸೀನ ಹಾಗೂ ದೇಹಧಾರಣದ ಆಕುಲತೆ ತಿಳಿದು; ಯತಿಪದ ಧಾರಣ ಮಾಡಲು ಯೋಗ್ಯ ದ್ರವ್ಯ, ಕ್ಷೇತ್ರ, ಕಾಲ, ಭಾವಗಳ ಪ್ರಾಪ್ತಿಯಾಗದ ಕಾರಣದಿಂದ ಮುನಿಪದ ಧಾರಣ ಮಾಡುವಲ್ಲಿ ಅಸಮರ್ಥನಾದ ಭವ್ಯಾತ್ಮನು ತನ್ನ ದೇಹದಿಂದ ನಿಸ್ಪೃಹನಾಗಿ ಕ್ರಮದಿಂದ ಕಾಯ ತ್ಯಾಗದ ಉಪಾಯ ಮಾಡುತ್ತಾನೆ. ಅವು ಹೀಗಿವೆ,-

ಎಲ್ಲಕ್ಕಿಂತ ಮೊದಲು ತನ್ನ ಪರಿಣಾಮಗಳ ವಿಶುದ್ಧಿಯ ವೃದ್ಧಿಯ ಸಲುವಾಗಿ, ಸಂಕ್ಲೇಶ ಭಾವಗಳಾಗದಂಥ ತಪಸ್ಸು ಮಾಡುತ್ತಾನೆ. ಏಕಾಶನ ಮಾಡುತ್ತಾನೆ, ಅದರ ನಂತರ ಒಂದೊಂದು ಉಪವಾಸ ಸಾಧಿಸುತ್ತಾನೆ. ನಂತರ ಎರಡೆರಡು ಉಪವಾಸ ಮಾಡುತ್ತಾನೆ. ೩, ೪, ೫ ಉಪವಾಸಗಳ ಸಾಧನೆ ಮಾಡುತ್ತಾನೆ. ನಂತರ ಪಾರಣೆಯ ದಿವಸ ಅಲ್ಪಾಹಾರ ತಗೆದುಕೊಂಡು, ಊನೋದರದ ಸಾಧನೆ ಮಾಡುತ್ತಾನೆ. ಎಷ್ಟೋ ದಿವಸಗಳವರೆಗೆ ಹೀಗೆ ಮಾಡಿದ ನಂತರ ರಸತ್ಯಾಗದ ಸಾಧನೆ ಮಾಡುತ್ತಾನೆ. ಅದರ ನಂತರ ಎಷ್ಟೋ ದಿವಸಗಳು ಕಳೆದು ಹೋದ ಮೇಲೆ ಮೃದು ಆಹಾರ, ನಂತರ ಪೇಯಾಹಾರ-ಹಿಟ್ಟಿನ, ರವೆಯ ಗಂಜಿ, ಅನ್ನದ ಗಂಜಿ ತಗೆದುಕೊಳ್ಳುತ್ತಾನೆ. ಅದರ ನಂತರ ಧಾನ್ಯದ ತ್ಯಾಗ ಮಾಡಿ ಹಾಲು, ನಂತರ ಹಾಲಿನ ತ್ಯಾಗ ಮಾಡಿ ಮಜ್ಜಿಗೆ, ಅದರ ನಂತರ ಮಜ್ಜಿಗೆಯನ್ನೂ ತ್ಯಾಗ ಮಾಡಿ ನೀರನ್ನಿಟ್ಟುಕೊಳ್ಳುತ್ತಾನೆ. ಅನುಕ್ರಮದಿಂದ ಹೀಗೆ ಮಾಡುತ್ತ-ಮಾಡುತ್ತ ಶರೀರ ಬಿಟ್ಟು ಹೋಗುವ ಸಮಯವು ನಿಕಟವಿರುವುದು ತಿಳಿದು ಬಂದ ಮೇಲೆ ತಮ್ಮ ಸ್ವಜನ-ಕುಟುಂಬ ವರ್ಗದವರನ್ನು ಕರೆದು, ಅವರಿಂದ ಮೋಹ ಕಡಿಮೆ ಮಾಡಿಕೊಳ್ಳುವ ಸಲುವಾಗಿ ಅವರಿಗೆ ಉಪದೇಶ ನೀಡಿ, ಮಹಾಹಿತ-ಮಿತ ವಚನಗಳಿಂದ ಅವರನ್ನು ಸಂತುಷ್ಟ ಪಡಿಸುತ್ತಾನೆ.

ಅದರ ನಂತರ ಸಮ್ಯಗ್ದರ್ಶನದ ಧಾರಕನೂ, ಜಗತ್ತಿನಿಂದ ಉದಾಸನೂ, ಆತ್ಮ ಮತ್ತು ಶರೀರಗಳ ಭಿನ್ನ-ಭಿನ್ನ ಅವಲೋಕನೆ ಮಾಡುವಂಥವನೂ ಆದ ಸನ್ಯಾಸಧಾರಕ ಧರ್ಮಾತ್ಮನು ಸಮಸ್ತ ಜೀವಗಳ ಸುಖವನ್ನು ಬಯಸುತ್ತ ಹೀಗೆ ವಿಚಾರ ಮಾಡುತ್ತಾನೆ-'ಎಲ್ಲ ಜೀವಗಳೂ ಸುಖಿಯಾಗಲಿ. ಯಾವುದೇ ಪ್ರಾಣಿಯು ದುಃಖಿಯಾಗದಿರಲಿ ಯಾರೂ ರೋಗದ ಪೀಡೆಯಿಂದ, ದುಃಖ-ದಾರಿದ್ರ್ಯ, ಅನ್ನ, ದೇಹದಿಂದ ದುಃಖಿಯಾಗದಿರಲಿ. ಎಲ್ಲ ಜೀವಗಳ ಕುರಿತಾಗಿ ನನ್ನದು ಕ್ಷಮೆಯ ಭಾವವಿದೆ. ಎಲ್ಲ ಜೀವಗಳು ಮೋಕ್ಷಮಾರ್ಗ ಪ್ರಾಪ್ತ ಮಾಡಿಕೊಳ್ಳುವ ಭಾವನೆ ಮಾಡಲಿ. ಈಗ ನಾನು ಮನ-ವಚನ-ಕಾಯಪೂರ್ವಕ ಏಕೇಂದ್ರಿಯ, ವಿಕಲೇಂದ್ರಿಯ ಮೊದಲಾದ ಸಮಸ್ತ ಸ್ಥಾವರ-ತ್ರಸ ಜೀವಗಳಿಗೆ ಅಭಯದಾನ ನೀಡಿದ್ದೇನೆ. ಎಲ್ಲ ಜೀವಗಳು ನನ್ನ ಮೇಲೆ ದಯೆಭಾವ ಮಾಡಿ, ನನಗೆ ಅಭಯದಾನ ನೀಡಲಿ.'

ಈ ಪ್ರಕಾರ ಎಲ್ಲ ಜೀವಗಳಿಂದ ಕ್ಷಮೆಯಾಚಿಸಿ, ನಂತರ ತನ್ನ ಆಲೋಚನೆ ಮಾಡುತ್ತ - ನಾನು ನನ್ನ ಅಜ್ಞಾನತೆಯಿಂದ ಮೋಹಪಾಶದಲ್ಲಿ ಮೋಸಹೋಗಿ, ರಾಗ-ದ್ವೇಷದ ಕಾರಣ ಪರವಸ್ತುಗಳಲ್ಲಿ ಮಮತೆ ಮಾಡಿ, ಅವನ್ನು ನನ್ನದು-ನನ್ನದೆನ್ನುತ್ತ ಆತ್ಮನನ್ನು ಪಾಪದ ಪಾಶದಲ್ಲಿ ಸಿಲುಕಿಸಿದೆನು. ಮನುಷ್ಯ ಪರ್ಯಾಯ ಪ್ರಾಪ್ತ ಮಾಡಿಕೊಂಡು ವ್ಯರ್ಥವಾಗಿ ದುಃಖ ಹೆಚ್ಚಿಸಿಕೊಂಡಿದ್ದೇನೆ. ಅಯ್ಯಯ್ಯೋ ! ನನ್ನಂಥ ಅಜ್ಞಾನ ಪ್ರವೃತ್ತಿಮಾಡುವಂಥ ಬುದ್ಧಿ ಭ್ರಷ್ಟರು ಬೇರೆ ಯಾರಿದ್ದಾರೆ; ಅಹುದು ಯಾರೂ ಇಲ್ಲ.

ನೋಡಿರಿ, ಮೊದಲು ಆದ ಮಹಾಬುದ್ಧಿಶಾಲಿಗಳು ಮನುಷ್ಯ ಪರ್ಯಾಯ ಪಡೆದು ಧರ್ಮದ ಸಾಧನೆ ಮಾಡಿದರು. ನಂತರ ಸಂಸಾರ, ಭೋಗಗಳಿಂದ ಉದಾಸರಾದರು. ರಾಜ್ಯ, ಸಂಪತ್ತು, ಇಂದ್ರಿಯಜನಿತ ಸುಖವನ್ನು ಕೃಷ್ಣ ಸರ್ಪದಂತೆ ತಿಳಿದು ಬಿಟ್ಟುಕೊಟ್ಟರು. ಶರೀರದ ಕುರಿತಾಗಿರುವ ಮಮತೆಯ ನಿವಾರಣೆ ಮಾಡಿ ದಿಗಂಬರರಾದರು. ನಗ್ನ ಮುದ್ರೆಯನ್ನು ಧಾರಣ ಮಾಡಿ, ಮೋಹರೂಪದ ಪಾಶವನ್ನು ಕತ್ತರಿಸಿ ವನವಿಹಾರಿಯಾದರು. ಇಪ್ಪತ್ತೆರಡು ಪರೀಷಹಗಳನ್ನು ಸಹಿಸುತ್ತ ಕರ್ಮರೂಪದ ಇಂಧನವನ್ನು ಧ್ಯಾನರೂಪದ ಅಗ್ನಿಯಿಂದ ಭಸ್ಮ ಮಾಡಿ, ಸಿದ್ಧಲೋಕದಲ್ಲಿ ಹೋಗಿ ವಿರಾಜಮಾನರಾದರು, ಅವಿನಾಶಿಯಾದರು. ದೇಹಧಾರಣ ಮಾಡಿ ನಿರಂಜನರಾಗಿರುವ ಅವರೇ ಧನ್ಯರಿದ್ದಾರೆ.

ನಾನಂತೂ ಕಲ್ಪವೃಕ್ಷದ ಸಮಾನ ಮನೋವಾಂಛಿತ ಸುಖ ನೀಡುವಂಥ ಮನುಷ್ಯ ಪರ್ಯಾಯವನ್ನು ಪ್ರಾಪ್ತ ಮಾಡಿಕೊಂಡು ಕೂಡ, ಹಾಲಹಲ ವಿಷದ ಸಮಾನ ವಿಷಯಗಳ ಇಚ್ಛೆ ಮಾಡಿದೆನು. ಯಾವ ಸುಕೃತವನ್ನೂ ಮಾಡಲಾಗಲಿಲ್ಲ. ಈಗ ಮರಣದ ಸಮಯವು ಬಂದು ಬಿಟ್ಟಿದೆ - ಇತ್ಯಾದಿ ರೂಪದಲ್ಲಿ ಆಲೋಚನೆ ಮಾಡಿ, ಕಷಾಯಗಳ ಮದವನ್ನು ತುಂಡರಿಸುತ್ತ ಮಂದ ಕಷಾಯಿಯಾಗಿ, ಮತ್ತೆ-ಮತ್ತೆ ಆ ಪಂಚಗುರುಗಳ ಸ್ತುತಿ ಮಾಡುತ್ತ

ತನ್ನ ಪರಿಣತಿಯನ್ನು ವಿಶುದ್ಧವಾಗಿಟ್ಟುಕೊಳ್ಳುತ್ತಾನೆ. ಸಮಸ್ತ ನಯಗಳ ವೇತ್ತಾರ ಶ್ರಾವಕರ ಲೌಕಿಕ ಪರಂಪರೆ-ಮರ್ಯಾದೆಯನ್ನು ತಿಳಿಯುವಂಥ ಅಪೂರ್ವ ಗುಣದ ಧಾರಕನು ಈ ಮೋಹದಿಂದ ರಹಿತನಾಗಿ, ವ್ಯವಹಾರದ ಪೋಷಣೆಯ ಸಲುವಾಗಿ ತನ್ನ ಶರೀರದೊಂದಿಗೆ ಪ್ರಯೋಜನವನ್ನಿಟ್ಟುಕೊಳ್ಳುವಂಥ ಕುಟುಂಬ ವರ್ಗದವರಲ್ಲಿ ಯಥಾಯೋಗ್ಯ ವಿನಯಪೂರ್ವಕ ಕ್ಷಮೆಯೊಂದಿಗೆ ಮಿಷ್ಟ(ಪ್ರಿಯ) ವಚನಗಳಿಂದ - ಶುಭ ಅಕ್ಷರಗಳ ಉಚ್ಚಾರಣೆ ಮಾಡುತ್ತ , ಧರ್ಮ ರಸದಿಂದ ನೆನೆದು ಹೋದ ನ್ಯಾಯಯುಕ್ತ ವಚನ, ಸಂಸಾರದಿಂದ ಉದಾಸೀನತೆಯಿಂದ ಕೂಡಿದವನಾಗಿ, ಮರ್ಯಾದೆಯ ಪ್ರಮಾಣದಲ್ಲಿ ಹೇಳುತ್ತಾನೆ.

ಎಲೈ ಕುಟುಂಬ ವರ್ಗದವರೇ ! ಪರ್ಯಾಯ ಸಂಬಂಧವಶ ನಮ್ಮ-ನಿಮ್ಮದು ಒಂದು ಕ್ಷೇತ್ರದಲ್ಲಿ ಇಷ್ಟು ದಿವಸಗಳವರೆಗೆ - ಇಲ್ಲಿಯವರೆಗೆ ಇರುವುದಾಯಿತು. ಅದರಿಂದ ಪರಸ್ಪರ ಮೋಹದ ಬಂಧನದಿಂದ ಏಕತ್ವವಾಯಿತು. ಈಗ ನಾವು ಈ ಪರ್ಯಾಯದಿಂದ ಭಿನ್ನವಾಗುವೆವು, ಆಗ ನೀವು ಮೋಹಭಾವದ ಕಾರಣ ಆರ್ತಭಾವ ಮಾಡಬಾರದು; ಅಶುಭ ಕರ್ಮದ ಬಂಧ ಮಾಡಿಸುವಂಥ, ಪರಭವದಲ್ಲಿ ದುಃಖ ಉತ್ಪನ್ನ ಮಾಡುವಂಥ ಭಾವಮಾಡಬೇಡಿರಿ, ನೀವೆಲ್ಲರೂ ಜಿನಧರ್ಮ ತಿಳಿದಿರುವವರಿದ್ದೀರಿ, ಸಂಸಾರವನ್ನು ವಿನಷ್ಟ ಮಾಡುವ ಕಲೆಯನ್ನು ಬಲ್ಲವರಿರುವಿರಿ. ಎಲೈ ಪುತ್ರನೇ ! ನೀನು ಈ ಪರ್ಯಾಯ ಸಂಬಂಧದ ಪುತ್ರನಿರುವೆ. ಎರಡೂ ಒಳ್ಳೆಯ ಕುಲದ ಧಾರಕ, ಧರ್ಮಾತ್ಮಾ, ಸಜ್ಜನ, ಅಂಗಧಾರಕನಿರುವೆ. ಹೇಗೆ ನಾನು ಈ ಭವದಲ್ಲಿ ಪರ್ಯಾಯ ಪ್ರಾಪ್ತ ಮಾಡಿಕೊಂಡು ನ್ಯಾಯಪೂರ್ವಕ ಧನದ ಉಪಾರ್ಜನೆ ಮಾಡಿ ಕುಟುಂಬದ ರಕ್ಷಣೆ ಮಾಡಿದ್ದೇನೆ, ಸಜ್ಜನರ ಯಥಾ ಯೋಗ್ಯ ವಿನಯ ಮಾಡಿದ್ದೇನೆ; ಜಿನಧರ್ಮದಲ್ಲಿ ದೃಢ ಪ್ರತೀತಿಪೂರ್ವಕ ಪ್ರವರ್ತನೆ ಮಾಡಿದ್ದೇನೆ; ಹಾಗೆ ನೀನೂ ಮಾಡುವುದು. ನ್ಯಾಯಪೂರ್ವಕ ಧನ, ಕೀರ್ತಿ ಹಾಗೂ ಪುಣ್ಯದ ಉಪಾರ್ಜನೆ ಮಾಡುವುದು; ಮೋಹದ ವೃದ್ಧಿ ಮಾಡಬೇಡ.

ಈ ಭವದ ತಾಯಿ, ತಂದೆ, ಪತ್ನಿ, ಸೋದರ, ಸ್ನೇಹಿತರುಗಳೇ ! ನಮ್ಮದು ನಿಮ್ಮದು ಈ ಪರ್ಯಾಯದ ಸಂಬಂಧವಿದೆ. ಅನಂತ ಪರ್ಯಾಯಗಳಲ್ಲಿ ಈ ಜೀವನು ಅನೇಕ ಬಾರಿ ಪುತ್ರನಿಂದ ಪಿತ, ಪಿತನಿಂದ ಪುತ್ರ , ಮಾತೆಯಿಂದ ಪುತ್ರಿ , ಪುತ್ರಿಯಿಂದ ಮಾತೆ, ಪತ್ನಿಯಿಂದ ಸಹೋದರಿ, ಸಹೋದರಿಯಿಂದ ಪತ್ನಿ , ಸಹೋದರನಿಂದ ತಂದೆ, ತಂದೆಯಿಂದ ಸಹೋದರ, ಮಿತ್ರನಿಂದ ಶತ್ರು , ಶತ್ರುವಿನಿಂದ ಮಿತ್ರ ಇತ್ಯಾದಿ ಅನೇಕ ಸಂಬಂಧವುಳ್ಳವನಾಗಿದ್ದಾನೆ. ಯಾವ ಪರ್ಯಾಯದಲ್ಲಿ ಈ ಜೀವನು ಬಂದಿದ್ದಾನೆ - ಬರುತ್ತಾನೆ, ಅಂಥದೇ ಸಂಬಂಧದ ಪಾಲನೆ ಮಾಡುತ್ತ ಆ ರೂಪನಾಗಿಯೇ ಪ್ರವರ್ತನೆ ಮಾಡುತ್ತಾನೆ.

ತಾವೆಲ್ಲರೂ-ಕುಟುಂಬದವರು ಇಲ್ಲಿ ಈ ಪರ್ಯಾಯದ ಸಂಬಂಧಿಗಳಾಗಿದ್ದೀರಿ. ತಾವೆಲ್ಲರೂ ಸಜ್ಜನಾಂಗಿಗಳಿದ್ದೀರಿ. ಸುಕೃತ್ಯದ ಇಚ್ಛೆಯುಳ್ಳವರಿರುವಿರಿ. ತಾವು ನನ್ನ ಮೇಲೆ ಉಪಕಾರ ಮಾಡಿ ಈ ಪರ್ಯಾಯವನ್ನು ಯತ್ನಪೂರ್ವಕ ಬೆಳೆಸಿ ಪುಷ್ಟ ಮಾಡಿದಿರಿ; ಆದರೆ ಅಜ್ಞಾನ ರಸದಿಂದ ನೆನೆದು ಹೋಗಿ ನಾನು ಅವಿನಯ ಚೇಷ್ಟೆ ಮಾಡುತ್ತ, ಈ ಕಾಯದಿಂದ ತಮ್ಮ ಯಾವ ಸೇವೆ-ಶುಶ್ರೂಷೆ ಮಾಡಲಿಲ್ಲ. ಈ ಪರ್ಯಾಯದಿಂದ ಬೇರೆ ಯಾವ ಶುಭ ಕಾರ್ಯವನ್ನೂ ಮಾಡಲಾಗಲಿಲ್ಲ.

ಎಲೈ ಕುಟುಂಬದ ಪ್ರಿಯ ಜನರೇ ! ಮಂದಬುದ್ಧಿಯವನಾದ ನಾನು ಈ ಪರ್ಯಾಯವನ್ನು ಪ್ರಾಪ್ತ ಮಾಡಿಕೊಂಡು ಕುಸಂಗ ಯೋಗದಿಂದ ಕುಮಾರ್ಗದೊಳಗೆ ಹೊರಟು ಹೋಗಿದ್ದೆನು; ಸುಪಾತ್ರರಿಗೆ ಭಕ್ತಿಸಹಿತನಾಗಿ ದಾನ ಕೊಡಲಿಲ್ಲ. ದೀನ-ದುಃಖಿಗಳ ಮೇಲೆ ಕರುಣೆ ಮಾಡಿ ಅವರಿಗೆ ದಾನ ಕೊಡಲಿಲ್ಲ. ಮೋಸದಿಂದ-ಬಲದಿಂದ ಅನ್ಯರ ಧನ ಕಿತ್ತುಕೊಂಡೆನು, ಶರೀರ ಪಡೆದು ಶೀಲವ್ರತ ಪಾಲಿಸಲಿಲ್ಲ. ಪಶುಗಳಂತೆ ಕುಶೀಲ ಸೇವನೆ ಮಾಡಿದೆನು. ಸುದೇವ, ಸುಧರ್ಮ, ಸುಗುರುಗಳ ಸೇವೆ ಮಾಡಲಿಲ್ಲ. ಶುಭ ಅತಿಶಯ ಸಹಿತವೆಂದು ತಿಳಿದು ಪಾಖಂಡಿ ಕುದೇವ,

ಕುಧರ್ಮ, ಕುಗುರುವನ್ನು ಪೂಜಿಸಿದೆನು. ಸಂತರ ಸಂಗತಿ ಬಿಟ್ಟುಕೊಟ್ಟು ಅವರ ನಿಂದೆ ಮಾಡಿದ್ದೇನೆ; ಪಾಪಾಚಾರೀ ಕುಮಾರ್ಗಿಗಳ ಪ್ರಶಂಸೆ ಮಾಡಿದ್ದೇನೆ. ಅನ್ಯರಿಗೆ ದೋಷ ತಗಲಿಸಿ ನನ್ನ ದೋಷ ಮುಚ್ಚಿ ಹಾಕಿದ್ದೇನೆ. ಶುಭಾಚರಣೆಯನ್ನು ಬಿಟ್ಟುಕೊಟ್ಟು ಕುಆಚರಣೆಯ ಸೇವನೆ ಮಾಡಿದ್ದೇನೆ. ರಾತ್ರಿ ಭೋಜನ ಮೊದಲಾದ ಕುಕಾರ್ಯರೂಪ ಪ್ರವರ್ತನೆ ಮಾಡಿ ಪಾಪದ ಬಂಧ ಮಾಡಿಕೊಂಡಿದ್ದೇನೆ. ಖಾದ್ಯ-ಅಖಾದ್ಯಗಳ ವಿಚಾರ ಮಾಡಲಿಲ್ಲ. ಉತ್ತಮ ಮಾರ್ಗದ ತ್ಯಾಗ ಮಾಡಿ, ಹೀನ ಮಾರ್ಗದಲ್ಲಿ ಗಮನ ಮಾಡಿದ್ದೇನೆ. ದ್ವೇಷ ಭಾವದಿಂದ ಅನೇಕ ದೀನ ಮನುಷ್ಯರಿಗೆ, ಪಶುಗಳಿಗೆ ಪೀಡಿಯಿತ್ತು ದುಃಖಿ ಮಾಡಿದ್ದೇನೆ, ಮತ್ಸರ ಭಾವದಿಂದ ಸತಾಯಿಸಿದ್ದೇನೆ. ದಯಾರಹಿತ ಭಾವಗಳಿಂದ ಅನೇಕ ಸಾಮಾನ್ಯ ಪ್ರಾಣಧಾರಕ ಜೀವಗಳ ಘಾತ ಮಾಡಿದ್ದೇನೆ. ಇತ್ಯಾದಿ ರೂಪದಲ್ಲಿ ಮಂದಬುದ್ಧಿಯಾದ ನಾನು ನಿಮ್ಮ ಕುಲಕ್ಕೆ ಅಯೋಗ್ಯವಾದ ಹೀನಕ್ರಿಯೆಗಳನ್ನು ಮಾಡಿ ಪಾಪಬಂಧರೂಪ ಅಶುಭದ ಭಾರವನ್ನು ತಲೆಯ ಮೇಲೆ ಎಳೆದು ಕೊಂಡಿದ್ದೇನೆ. ಅಕಾರ್ಯಸಹಿತ ಪ್ರವರ್ತನೆ ಮಾಡಿ ಅಪಕೀರ್ತಿಯನ್ನು ಹರಡಿದ್ದೇನೆ.

ನನ್ನಂಥ ಅಜ್ಞಾನೀ ಜೀವದ ಇಂಥ ವಿವಿಧ ಪ್ರವೃತ್ತಿಗಳನ್ನು ಸಹಿಸಿ ತಾವು ತಮ್ಮ ಸಜ್ಜನಿಕೆಯನ್ನು ಪ್ರಗಟ ಪಡಿಸಿದ್ದೀರಿ. ನನ್ನೊಂದಿಗೆ ಮೋಹಬುದ್ಧಿ ಮಾಡಿ ತಮ್ಮ ಹತ್ತಿರ ಇರಿಸಿಕೊಂಡಿರಿ. ಇತ್ಯಾದಿ ರೂಪದಿಂದ ಓ ಸಜ್ಜನರೇ ! ತಾವು ತಮ್ಮ ವಿಶೇಷ, ಪ್ರೀತಿಯನ್ನು ನನ್ನ ಮೇಲೆ ವ್ಯಕ್ತ ಪಡಿಸಿದಿರಿ; ಆದರೆ ಓ ಸಜ್ಜನರೇ ! ಕುಟುಂಬ ವರ್ಗದವರೇ ! ಈಗ ನನ್ನ ಆಯುವು ಪೂರ್ಣತೆಯನ್ನು ತಲುಪುತ್ತಿದೆ; ಅದರಿಂದ ನನ್ನ ಮೇಲೆ ಸಮತೆಯ ಭಾವವಿಡಿರಿ. ಮಹಾ ಅಜ್ಞಾನಿಯಾದ ನನ್ನಿಂದ ತಮ್ಮ ಯಾವ ಸೇವೆಯನ್ನೂ ಮಾಡಲಾಗಲಿಲ್ಲ ಮತ್ತು ಈಗ ನನ್ನ ನಿಮ್ಮ ವಿಯೋಗದ ಸಮಯವು ಬಂದಿದೆ. ಅದಕ್ಕಾಗಿ ತಾವು ಯಾವ ಚಿಂತೆ ಹಾಗೂ ಆರ್ತತೆ ಮಾಡಬೇಡಿರಿ. ಈ ಜೀವನು ಇದೇ ರೀತಿ ಅನಂತ ಸಂಬಂಧಗಳನ್ನು ಮಾಡುತ್ತ ಅನಾದಿ ಅನಂತ ಕಾಲದಿಂದ ಜನ್ಮ-ಮರಣ ಮಾಡುತ್ತ ಬರುತ್ತಿದ್ದಾನೆ. ಪ್ರಾಪ್ತ ಪರ್ಯಾಯವು ಕಾಲದ ಮೂಲಕ ನಷ್ಟವಾಗಿ ಹೋದರೂ, ನನ್ನ ಅಜ್ಞಾನತೆಯು ನಷ್ಟವಾಗಲಿಲ್ಲ.

ಹೇಗೆ ಯಾವನೋ ಅನ್ಯಾಯ ಅಥವಾ ಕಳವು ಮಾಡುವಂಥವನಿಗೆ ದೊರೆಯು ಅನೇಕ ಪ್ರಕಾರದ ಶಿಕ್ಷೆ ನೀಡುತ್ತಾನೆ. ಇತರ ಸಾಮಾನ್ಯ ಶಿಕ್ಷೆಗಳಿಂದ ಅವನು ಸರಿಹೋಗದಿದ್ದರೆ ಅವನಿಗೆ ಮರಣದಂಡನೆ ನೀಡುತ್ತಾನೆ. ಇಂಥ ಕಠೋರ ಶಿಕ್ಷೆ ಪಡೆದೂ ಒಂದುವೇಳೆ ಈ ಜೀವನು ಅಮಾರ್ಗ ಅಥವಾ ಕಳವನ್ನು ಬಿಟ್ಟುಕೊಡದಿದ್ದರೆ ಆಗ ದೊರೆಯು ಏನು ಮಾಡಬಹುದಾಗಿದೆ ? ಅದೇ ಪ್ರಕಾರ ರಾಗ-ದ್ವೇಷಾದಿ ಪ್ರವೃತ್ತಿಯಿಂದ ಅನೇಕ ಪಾಪಕಾರ್ಯ ಮಾಡುವುದರ ಫಲದಲ್ಲಿ ಅನೇಕ ಪ್ರಕಾರದ ರಾಗ,ದ್ವೇಷ ಚಿಂತೆ, ಶೋಕ, ಭಯ ಇತ್ಯಾದಿಗಳನ್ನು ಭೋಗಿಸುತ್ತಿದ್ದರೂ ಈ ಜೀವನು ಪಾಪದ ತ್ಯಾಗ ಮಾಡುವುದಿಲ್ಲ-ಮಾಡಲಿಲ್ಲ; ರಾಗ-ದ್ವೇಷ ಭಾವರೂಪ ಅಪರಾಧವನ್ನು ಮಾಡುತ್ತಲೇ ಹೋದನು. ಆಗ ಕಾಲರೂಪದ ದೊರೆಯು ಮಹಾದೋಷಿಯೆಂದು ತಿಳಿದು ಮರಣ ದಂಡನೆ ನೀಡಿದನು; ಆದಾಗ್ಯೂ ನನ್ನ ರಾಗಾದಿ ಕುಮಾರ್ಗವು ಬಿಟ್ಟು ಹೋಗಲಿಲ್ಲ. ಈ ಪ್ರಕಾರ ಭ್ರಮಣ ಮಾಡುತ್ತ ನನ್ನದು ಅನಂತಕಾಲ ವ್ಯತೀತವಾಗಿ ಹೋಯಿತು. ಪ್ರತಿಯೊಂದು ಗತಿಯಲ್ಲಿ ರಾಗಾದಿ ಕುಮಾರ್ಗದ ಮೇಲೆ ನಡೆಯುವ ಕಾರಣ ಕಾಲರೂಪ ದೊರೆಯಿಂದ ಸಾಯಿಸಲ್ಪಟ್ಟೆನು. ಈ ಪರ್ಯಾಯದಲ್ಲಿಯೂ ರಾಗ-ದ್ವೇಷ ಭಾವದ ಮೂಲಕ ಅನೇಕಾನೇಕ ಪಾಪ ಮಾಡಿರುವುದರಿಂದ ಕಾಲರೂಪಿ ದೊರೆಯ ವಶವಾಗಿದ್ದೇನೆ. ಕಾಲದೊರೆಯು ಈಗ ನನ್ನನ್ನು ಸಾಯಿಸುವ ಉಪಾಯ ಮಾಡುತ್ತಿದ್ದಾನೆ. ಎಂದರೆ ಸಾಯಿಸಿಯೇ ಸಾಯಿಸುತ್ತಾನೆ. ನೀವು ಮೋಹ ಬಿಟ್ಟು ಬಿಡಿರಿ.

ಹೀಗೆ ಅನೇಕ ಪ್ರಕಾರದಿಂದ ಸಮತೆಯೊಂದಿಗೆ, ವಿವಿಧ ವೈರಾಗ್ಯ ಭಾವನೆ ಸಹಿತ ಈ ಸಂನ್ಯಾಸೀ ಧರ್ಮಾತ್ಮನು ತನ್ನ ಚಿತ್ತವನ್ನು ನಿರ್ಮಲ ಮಾಡಿ, ಶುಭ ಭಾವನೆ ಭಾವಿಸಿ, ವ್ಯವಹಾರ ನಯದಿಂದ ಕುಟುಂಬ ವರ್ಗದವರಿಗೆ ಮತ್ತೆ - ಮತ್ತೆ ವಿವಿಧ ಸಂಬೋಧನೆಯ ರೂಪ, ಹಿತಕಾರಕ, ಧರ್ಮಸೂಚಕ ವಚನ ಹೇಳಿ, ಅವರನ್ನು ಮೋಹರೂಪ ಪಾಶದಿಂದ ಬಿಡಿಸುತ್ತಾನೆ.

ಈ ಪರ್ಯಾಯದ ಸ್ನೇಹಿಗಳಾದ ಸಜ್ಜನರುಗಳೇ ! ಎಲ್ಲರೂ ಚಿತ್ತದ ಏಕಾಗ್ರತೆಯಿಂದ ಆಲಿಸಿರಿ !! ನೀವು ಈ ಪರ್ಯಾಯದ ಜತೆ ಮೋಹ ಬೆಳೆಸಿ ಇಲ್ಲಿಯವರೆಗೆ ನನ್ನ ಯೋಗ್ಯ-ಅಯೋಗ್ಯ ಕ್ರಿಯೆಗಳ ಕಡೆಗೆ ದೃಷ್ಟಿ ಹರಿಸಿಲ್ಲ; ಸ್ನೇಹಬುದ್ಧಿಯಿಂದ ಇಲ್ಲಿಯವರೆಗೆ ನನ್ನ ಶರೀರದ ರಕ್ಷಣೆ ಮಾಡಿದಿರಿ. ನೀವು ಸಜ್ಜನ ವಶತೆಯಿಂದ ಈ ಶರೀರದ ಪರಿಪಾಲನೆ ಮಾಡಿದಿರಿ. ಸ್ನೇಹ ಬುದ್ಧಿಯ ಧಾರಕರಾದ ನೀವು ಮಹಾಬುದ್ಧಿವಂತರಿರುವುದರಿಂದ ನನ್ನ ಕುರಿತಾಗಿ ಮಾಡಲು ಯೋಗ್ಯವಿರುವುದನ್ನೆಲ್ಲ ಮಾಡಿದಿರಿ; ಆದರೆ ಓ ಪ್ರಿಯರೇ ! ಸ್ಥಿತಿಯು ಪೂರ್ಣವಾಗುತ್ತಿರುವ ಈ ಶರೀರವನ್ನು ಈಗ ಯಾರ ಮೂಲಕವೂ ಉಳಿಸಿಕೊಳ್ಳಲಾಗುವುದಿಲ್ಲ. ಎಲ್ಲರೂ ನಿರುಪಾಯರಿದ್ದಾರೆ. ಈ ಶರೀರದಿಂದ ಈಗ ನಿಮ್ಮ ವಿಯೋಗವಾಗುವುದು. ತಾವೆಲ್ಲರೂ ವಿವೇಕವುಳ್ಳವರಿದ್ದೀರಿ; ಅದಕ್ಕಾಗಿ ಮೋಹದಿಂದ ಶೋಕ, ಚಿಂತೆ ಮಾಡಬಾರದು. ಅನಾದಿಯಿಂದ ಜಗತ್ತಿನಲ್ಲಿ ಇಂಥದೇ ಪರಂಪರೆಯು ನಡೆಯುತ್ತ ಬರುತ್ತಿದೆ. ಅನೇಕ ಭವಗಳಲ್ಲಿ ಅನೇಕ ಸಂಬಂಧಗಳ ಸಂಯೋಗವಾಯಿತು ಮತ್ತು ಬಿಟ್ಟು ಹೋಯಿತು. ಈಗ ಕೂಡ ತಮ್ಮೊಂದಿಗೆ ಕುಟುಂಬದ ಸಂಬಂಧವಾಗಿತ್ತು. ಇದೂ ಬಿಟ್ಟು ಹೋಗುವುದು. ಅದರಿಂದ ಇಲ್ಲಿಯವರೆಗೆ ಈ ಶರೀರದಿಂದ ವಚನ-ಕಾಯದ ಮೂಲಕ ನಿಮ್ಮಗಳ ಕುರಿತಾಗಿ ಯೋಗ್ಯ ವಿನಯಕ್ರಿಯೆಯಾಗಿರದಿದ್ದರೆ, ಅವಿನಯವಾಗಿದ್ದರೆ ನೀವು ನಿಮ್ಮ ಸರಳ ಬುದ್ಧಿಯಿಂದ ನನ್ನ ಬಗ್ಗೆ ಕ್ಷಮೆಯ ಭಾವವಿಟ್ಟುಕೊಳ್ಳುವುದು - ಇತ್ಯಾದಿ ಶುಭ ಶಬ್ದಗಳಿಂದ ಎಲ್ಲರನ್ನು ಸಂತುಷ್ಟಗೊಳಿಸಿ, ಸುಖಿಯನ್ನಾಗಿಸಿ, ಲೌಕಿಕ ಮೋಹ ಬಿಡಿಸುತ್ತಾನೆ. ನಂತರ ಈ ಭವ್ಯಾತ್ಮನು ನಾಲ್ಕು ಪ್ರಕಾರದ ಆಹಾರಗಳ ತ್ಯಾಗ ಮಾಡುತ್ತಾನೆ.

ನಾಲ್ಕು ಪ್ರಕಾರದ ಆಹಾರ-ಯಾವುದರ ಸೇವನೆಯಿಂದ ಹೊಟ್ಟೆ ತುಂಬುತ್ತದೆ, ಅದು ಖಾದ್ಯ ಆಹಾರವಿದೆ. ಲವಂಗ, ಅಡಿಕೆ ಮೊದಲಾದ ಸ್ವಾದದ ಸಲುವಾಗಿ ತಿನ್ನಲಾಗುತ್ತವೆ, ಅವು ಸ್ವಾದ್ಯ ಆಹಾರವಿವೆ. ಬೆರಳಿನಿಂದ ನೆಕ್ಕಲು ಯೋಗ್ಯವಿರುವಂಥವು ಲೇಹ್ಯ ಆಹಾರವಿದೆ. ಜಲದ ಹಾಗೆ ಕುಡಿಯಲು ಯೋಗ್ಯವಿರುವಂಥವು ಪೇಯ ಆಹಾರವಿವೆ.

ಈ ಖಾದ್ಯ, ಸ್ವಾದ್ಯ, ಲೇಹ್ಯ, ಪೇಯ ನಾಲ್ಕು ಪ್ರಕಾರದ ಆಹಾರಗಳ ತ್ಯಾಗ ಮಾಡಿ, ನಿರ್ಜಂತುಕ ಭೂಮಿಯನ್ನು ಶೋಧಿಸಿ, ಅದರ ಮೇಲೆ ಹುಲ್ಲಿನ ಹಾಸಿಗೆ ಹಾಸುತ್ತಾನೆ. ಅದರ ಮೇಲೆ ಕುಳಿತುಕೊಂಡು ಅಥವಾ ಮಲಗಿಕೊಂಡು ಸಾಧರ್ಮಿಗಳ ಜತೆ ಚರ್ಚೆ ಮಾಡುತ್ತ, ತತ್ತ್ವವಿಚಾರ ಮಾಡುತ್ತ, ದ್ವಾದಶ ಅನುಪ್ರೇಕ್ಷೆಗಳ ಚಿಂತನೆ ಮಾಡುತ್ತ, ವೀತರಾಗೀ ದೇವರ ಸ್ಮರಣೆ, ವೀತರಾಗೀ ಗುರು, ದಯಾಮಯ ಧರ್ಮದ-ಪಂಚ ಪರಮೇಷ್ಠಿಗಳ ಗುಣಗಳ ಚಿಂತನೆ ಮಾಡುತ್ತ ಧರ್ಮಧ್ಯಾನ ಭಾವನೆಯ ಪೂರ್ವಕ ಶರೀರದಿಂದ ಭಿನ್ನ(ಪೃಥಕ್)ನಾಗುತ್ತಾನೆ.

ಈ ಪ್ರಕಾರ ಸಂನ್ಯಾಸಪೂರ್ವಕ ದೇಹತ್ಯಾಗ ಮಾಡಿ ಮಹಾಋದ್ಧಿಧಾರೀ ಕಲ್ಪವಾಸೀ ದೇವನಾಗುತ್ತಾನೆ.

ಈ ರೀತಿ ಇದು ಸಲ್ಲೇಖನ ವ್ರತವಿದೆ.

ಈ ವ್ರತದ ಅತಿಚಾರಗಳು-ಜೀವಿತ ಸಂಶಯ, ಮರಣ ಸಂಶಯ, ಮಿತ್ರಾನುರಾಗ, ಸುಖಾನುಬಂಧ ಮತ್ತು ನಿದಾನವೆಂದು ಐದು ಇವೆ. ಸಂನ್ಯಾಸ ಧಾರಣ ಮಾಡಿದ ನಂತರ 'ನಾನು ಬಹಳಷ್ಟು ದಿವಸಗಳವರೆಗೆ ಜೀವಂತನಾಗಿ ಉಳಿಯದಿದ್ದರೆ ಒಳ್ಳೆಯದಿದೆ.' ಎಂದು ವಿಚಾರ ಮಾಡುವುದು ಜೀವಿತ ಸಂಶಯ ಅತಿಚಾರವಿದೆ. ಸಂನ್ಯಾಸ ತಗೆದುಕೊಂಡ ನಂತರ 'ನಾನು ಸಾಯುವೆನೋ ಅಥವಾ ಇಲ್ಲ, ಇನ್ನು ಪರ್ಯಾಯದ ಇರುವಿಕೆಯು ಒಳ್ಳೆಯದಿಲ್ಲ' - ಇತ್ಯಾದಿ ಭಾವನೆಯು ಮರಣ ಸಂಶಯವಿದೆ. ಸಂನ್ಯಾಸ ತಗೆದುಕೊಂಡ ನಂತರ 'ಇಂಥವರೋರ್ವರು ನಮ್ಮ ಬಾಲಸ್ನೇಹಿತರಿದ್ದಾರೆ ಅವರ ಭೇಟ್ಟಿಯಾದರೆ ಒಳ್ಳೆಯದಿದೆ' - ಹೀಗೆ ವಿಚಾರ ಮಾಡುವುದು ಮಿತ್ರಾನುರಾಗ ಅತಿಚಾರವಿದೆ. ಮೊದಲು ಭೋಗಿಸಿದ ಭೋಗಗಳ ವಿಚಾರ ಮಾಡುವುದು ಸುಖಾನುಬಂಧ ಅತಿಚಾರವಿದೆ. ಸಂನ್ಯಾಸ ತಗೆದುಕೊಂಡ ನಂತರ ಆ ವ್ರತದ ವಿಶಿಷ್ಟ ಫಲದ ಅಪೇಕ್ಷೆ - ವಾಂಛೆಯು ನಿದಾನ ಬಂಧ ಅತಿಚಾರವಿದೆ.

ಈ ಪ್ರಕಾರ ಇವು ಐದು ಅತಿಚಾರಗಳಿಂದ ರಹಿತ ಶುದ್ಧ ಸಲ್ಲೇಖನ ವ್ರತವಿರುತ್ತದೆ. ಈ ರೀತಿ ವ್ರತಪೂರ್ವಕ ಶರೀರವನ್ನು ಬಿಡುವುದು. ಚ್ಯುತ, ಚ್ಯಾವಿತ ಮತ್ತು ತ್ಯಕ್ತವೆಂದು ಶರೀರ ಬಿಡುವ ಮೂರು ಭೇದಗಳಿವೆ.

ಕದಲಿಘಾತವಿಲ್ಲದೆ, ಸಂನ್ಯಾಸವಿಲ್ಲದೆ ತನ್ನ ಸಂಪೂರ್ಣ ಆಯುವನ್ನು ಪೂರ್ಣವಾಗಿ ಭೋಗಿಸಿ, ಮರಣಹೊಂದಿ - ಆತ್ಮನು ಯಾವ ಶರೀರ ಬಿಡುತ್ತಾನೆ ಅದು ಚ್ಯುತ ಶರೀರವಿದೆ. ವಿಷದಿಂದ, ಶಸ್ತ್ರದಿಂದ, ಜಲದಿಂದ, ಅಗ್ನಿಯಿಂದ, ಪರ್ವತಾದಿಗಳಿಂದ ಉರುಳಿ ಸಾಯುವುದು, ರೋಗದ ತೀವ್ರ ವೇದನೆಯಿಂದ ಸಾಯುವುದು - ಇತ್ಯಾದಿ ಕಾರಣಗಳಿಂದ ಮರಣವಾಗುವುದು ಕದಲೀ ಘಾತವಿದೆ. ಈ ಕದಲೀ ಘಾತ ಸಹಿತ ಆದರೆ ಸಂನ್ಯಾಸ ರಹಿತ ಯಾವ ಶರೀರವನ್ನು ಆತ್ಮನು ಬಿಟ್ಟುಕೊಟ್ಟನು ಅದು ಚ್ಯಾವಿತ ಶರೀರವಿದೆ. ಯಾವುದನ್ನು ಆತ್ಮನು ಬಯಸಿ ತನ್ನ ಇಚ್ಛೆಯಪೂರ್ವಕ ಬಿಡುತ್ತಾನೆ. ಅದು ತ್ಯಕ್ತ ಶರೀರವಿದೆ. ಈ ತ್ಯಕ್ತ ಶರೀರವು ಮಹಾ ಉತ್ತಮ ಮುನಿ ಹಾಗೂ ಶ್ರಾವಕನದಾಗುತ್ತದೆ. ಇದರ ಭೇದಗಳು-ಭಕ್ತಪ್ರತಿಜ್ಞಾ, ಇಂಗಿತ ಮತ್ತು ಪ್ರಾಯೋಪಗಮನವೆಂದು ಮೂರು ಇವೆ.

ಜಘನ್ಯ ಅಂತರ್ಮುಹೂರ್ತ, ಉತ್ಕೃಷ್ಟ ಹನ್ನೆರಡು ವರ್ಷಗಳವರೆಗೆ ಮತ್ತು ಮಧ್ಯಮ ಒಂದು ಅಂತರ್ಮುಹೂರ್ತ ಒಂದು ಸಮಯದಿಂದ ಹಿಡಿದು ಒಂದು ಸಮಯ ಕಡಿಮೆ ಹನ್ನೆರಡು ವರ್ಷಗಳವರೆಗಿನ ಸಮಯ-ಸಮಯದ ಅನೇಕ ಭೇದಗಳವರೆಗೆ ಆಹಾರದ ತ್ಯಾಗ ಮಾಡಿ ಅನಶನದೊಂದಿಗೆ ಬಿಟ್ಟುಕೊಟ್ಟಿರವ ಶರೀರವು ಭಕ್ತ ಪ್ರತಿಜ್ಞಾ ಸಂನ್ಯಾಸ ಸಹಿತ ಶರೀರವಿದೆ.

ಭಕ್ತ ಪ್ರತಿಜ್ಞಾವಂತ ಸಂನ್ಯಾಸಿಯು ಶರೀರದಲ್ಲಿ ವೇದನೆಯಾದ ಮೇಲೆ ತನ್ನ ಕೈಯಿಂದ ತನ್ನ ಕೈಕಾಲು, ತಲೆ, ಬೆನ್ನು ಮೊದಲಾದ ಅಂಗೋಪಾಂಗಗಳನ್ನು ಒತ್ತಿಕೊಳ್ಳುತ್ತಾನೆ. ಶಿಷ್ಯಾದಿಕರಿಂದಲೂ ಒತ್ತಿಸಿಕೊಳ್ಳುತ್ತಾನೆ. ಆದರೆ ಇಂಗಿನಿಪೂರ್ವಕ ಸಂನ್ಯಾಸ ಮಾಡುವಂಥವನು ತಪದ ಯೋಗದಿಂದ ಶರೀರದಲ್ಲಿ ಒಂದುವೇಳೆ ನೋವು - ಖೇದವಾದರೆ ತನ್ನ ಕೈಯಿಂದಲೇ ತನ್ನ ಶರೀರದ ವೈಯಾವೃತ್ತಿ ಮಾಡುತ್ತಾನೆ; ಶಿಷ್ಯಾದಿಕರಿಂದ ಮಾಡಿಸಿಕೊಳ್ಳುವುದಿಲ್ಲ. ಅಂಥದರಲ್ಲಿ ಬಿಟ್ಟು ಹೋದ ಶರೀರವು ಇಂಗಿನಿ ಸಂನ್ಯಾಸ ಸಹಿತ ಶರೀರವಿದೆ.

ಸಂನ್ಯಾಸ ಧಾರಣ ಮಾಡಿದ ಮೇಲೆ ಶರೀರದ ವೈಯಾವೃತ್ತಿಯನ್ನು ಸ್ವಯಂ ತಾನೂ ಮಾಡುವುದಿಲ್ಲ ಮತ್ತು ಅನ್ಯರಿಂದಲೂ ಮಾಡಿಸುವುದಿಲ್ಲ. ಶರೀರದ ಮೇಲೆ ಉಪದ್ರವ, ಖೇದ, ದುಃಖಗಳು ಬಂದರೂ ಸಮತೆಯೊಂದಿಗೆ ಏಕಾಸನದಿಂದ ಸಹನೆ ಮಾಡುತ್ತಾನೆ. ಶರೀರವನ್ನು ಅಲುಗಾಡಿಸುವುದಿಲ್ಲ. ಸಂನ್ಯಾಸ ಧಾರಣ ಮಾಡುವ ಸಮಯದಲ್ಲಿ ಯಾವ ಆಸನದಲ್ಲಿ ಕುಳಿತಿದ್ದನು, ಅದೇ ಆಸನದಲ್ಲಿ ಹಲನ-ಚಲನ ಮಾಡದೇ ಜೀವನ ಪರ್ಯಂತ ಉಳಿಯುತ್ತಾನೆ. ಅದರಲ್ಲಿ ಬಿಟ್ಟುಹೋದ ಶರೀರವು ಪ್ರಾಯೋಪಗಮನ ಸಂನ್ಯಾಸ ಸಹಿತ ತ್ಯಕ್ತ ಶರೀರವಿದೆ.

ಇತ್ಯಾದಿ ರೂಪದಲ್ಲಿ ಸಂನ್ಯಾಸದ ಅನೇಕ ಭೇದಗಳಿವೆ. ಜನ್ಮ-ಮರಣಗಳಿಂದ ಭಯಭೀತ, ನಿಕಟ ಸಂಸಾರೀ ಭವ್ಯಾತ್ಮನೇ ಸಂನ್ಯಾಸಪೂರ್ವಕ ಶರೀರದ ತ್ಯಾಗ ಮಾಡಬಹುದಾಗಿದೆ. ದೀರ್ಘ ಸಂಸಾರೀ, ಧರ್ಮವಾಸನೆಯಿಂದ ರಹಿತನಾದ ಮೋಹೀ ಜೀವನು ಹೀಗೆ ಮರಣ ಮಾಡಲಾಗುವುದಿಲ್ಲವೆಂಬುದು ವಿಶೇಷವಿದೆ.

ಈ ಪ್ರಕಾರ ಶ್ರೀಸುದೃಷ್ಟಿತರಂಗಿಣಿಯೆಂಬ ಹೆಸರಿನ ಗ್ರಂಥದಲ್ಲಿ ಶ್ರಾವಕನ ಹನ್ನೊಂದು ನೆಲೆಗಳ
ಅಂತರ್ಗತ ಸಮ್ಯಕ್ತ್ವಸಹಿತ ಹನ್ನೆರಡು ವ್ರತ ಮತ್ತು ಸಲ್ಲೇಖನ ವ್ರತ-ಇವು
ಹದಿನಾಲ್ಕರ ಐದೈದು ಅತಿಚಾರಸಹಿತ ಎರಡನೆಯ ವ್ರತ
ನೆಲೆಯ ಕಥನ ಮಾಡುವಂಥ ಮೂವತ್ನಾಲ್ಕನೆಯ
ಪರ್ವವು ಸಂಪೂರ್ಣವಾಯಿತು.

★★★★★

## ೩೫ : ಮೂವತ್ತೈದನೆಯ ಪರ್ವ
## ಸಾಮಾಯಿಕ ನೆಲೆಯ ವರ್ಣನೆ

ಈಗ ಮೂರನೆಯ ಸಾಮಾಯಿಕ ನೆಲೆಯ ಸ್ವರೂಪ ಹೇಳುತ್ತಾರೆ -

**ಸಹುಚರ ಕಿಪ್ಪಾ ಭಾವೋ ತವ ಸಂಜಯ ವರತ ಭಾವ ಬಧವಾಏ ।**
**ಆರದಿ ರುದ್ದವಿಹೀಣೋ ಸಾಮಾಯೋ ತಸ ಭಾಸಯೋ ಸುತ್ತ ॥೧೪೦॥**

**ಗಾಥಾರ್ಥ :-** ಸಮಸ್ತ ಜೀವಗಳ ಮೇಲೆ ಕ್ಷಮಾಭಾವಪೂರ್ವಕ ಯಾವುದರಲ್ಲಿ ತಪ, ಸಂಯಮ, ವ್ರತ ಭಾವದ ವೃದ್ಧಿಯಾಗುವುದು; ಯಾವುದು ಆರ್ತ, ರೌದ್ರ ಧಾನದಿಂದ ರಹಿತವಿದೆ, ಅದನ್ನು ಶಾಸ್ತ್ರದಲ್ಲಿ ಸಾಮಾಯಿಕವೆಂದು ಹೇಳಿದ್ದಾರೆ.

**ಭಾವಾರ್ಥ :-** ಪಂಚ ಸ್ಥಾವರಗಳಲ್ಲಿನ ಪೃಥ್ವಿಯನ್ನು ಅಗೆಯುವುದಿಲ್ಲ, ಜಲವನ್ನು ಮಥಿಸುವುದಿಲ್ಲ, ಅಗ್ನಿಯನ್ನು ಉರಿಸುವ-ಆರಿಸುವುದನ್ನು ಮಾಡುವುದಿಲ್ಲ. ಪಂಖಾದಿಗಳಿಂದ ವಾಯುಕಂಪನಮಾಡಿ ವಾಯುಕಾಯಿಕವನ್ನು ಸಾಯಿಸುವುದಿಲ್ಲ. ವನಸ್ಪತಿಯನ್ನು ಛೇದಿಸುವ, ವಿದೀರ್ಣಗೊಳಿಸುವ, ಸುಲಿಯುವುದನ್ನು ಮಾಡುವುದಿಲ್ಲ- ಈ ಪ್ರಕಾರ ಪಂಚಸ್ಥಾವರ ಏಕೇಂದ್ರಿಯ ಜೀವಗಳ ಕುರಿತಾಗಿ ಸಮತೆಯ ಭಾವದೊಂದಿಗೆ ದಯೆಯನ್ನು ಧಾರಣ ಮಾಡಿ, ಅವುಗಳಿಗೆ ಅಭಯದಾನ ನೀಡುತ್ತಾನೆ, ಅವುಗಳ ಘಾತ ಮಾಡುವುದಿಲ್ಲ. ಎರಡು ಇಂದ್ರಿಯ ಮೊದಲಾದ ಎಲ್ಲ ತ್ರಸಗಳನ್ನು ಕೂಡ ಸಮಾನವೆಂದು ತಿಳಿದುಕೊಂಡು, ತ್ರಸ ಹಿಂಸೆಯ ತ್ಯಾಗಿಯಾಗಿ ಯಾವುದನ್ನೂ ಸತಾಯಿಸುವುದಿಲ್ಲ. ಎಲ್ಲವನ್ನು ತನ್ನ ಸಮಾನ ತಿಳಿದು ಅವುಗಳ ಮೇಲೆ ಸಮತೆಯ ಭಾವವಿರಿಸಿ ತನ್ನ ಕಡೆಯಿಂದ ಎಲ್ಲವುಗಳಿಗೆ ಸುಖವಾಗಲೆಂದು ಬಯಸುತ್ತ ತ್ರಸ-ಸ್ಥಾವರ ಎಲ್ಲ ಜೀವಗಳಿಗೆ ಅಭಯದಾನ ನೀಯುವ ಪರಿಣತಿಯನ್ನು ಹೊಂದಿರುತ್ತಾನೆ. ಅಂತರಂಗ-ಬಹಿರಂಗ ತಪಸ್ಸು, ಹನ್ನೆರಡು ಪ್ರಕಾರದ ಸಂಯಮ ಮತ್ತು ಹನ್ನೆರಡು ವ್ರತಗಳ ವೃದ್ಧಿಯ ವಾಂಛಕನಿದ್ದಾನೆ. ಆರ್ತ ರೌದ್ರ ಧ್ಯಾನದ ತ್ಯಾಗಿಯಿರುತ್ತಾನೆ. ಇತ್ಯಾದಿ ಭಾವರೂಪ ಪ್ರವರ್ತನೆಯು ಸಾಮಾಯಿಕವಿದೆ.

ಇದರ ಅತಿಚಾರಗಳು - ಮನದೋಷ, ವಚನದೋಷ, ಕಾಯದೋಷ, ವಿಸ್ಮರಣೆ ದೋಷ ಮತ್ತು ಅನಾದರ ದೋಷವೆಂದು ಐದು ಇವೆ.

ಸಾಮಾಯಿಕ ಮಾಡುವ ಸಮಯದಲ್ಲಿ ಸಮಯತೆಯ ಭಾವವನ್ನು ಬಿಟ್ಟುಕೊಟ್ಟು ಪ್ರಮಾದದಿಂದ ಅನೇಕ ಆರ್ತ-ರೌದ್ರಭಾವರೂಪ ವಿಕಲ್ಪ ಮಾಡುವುದು, ಮನದೋಷವಿದೆ.

ಸಾಮಾಯಿಕ ಮಾಡುವ ಸಮಯದಲ್ಲಿ ಪಂಚಪರಮೇಷ್ಠಿಗಳ ಸ್ತುತಿ, ಆಲೋಚನೆ, ತತ್ತ್ವವಿಚಾರ, ವೈರಾಗ್ಯ ಭಾವದ ಚಿಂತನೆ, ಧ್ಯಾನ, ಧ್ಯಾತಾ-ಧ್ಯೇಯಗಳ ವಿಚಾರ, ಅಧ್ಯಯನ ಇತ್ಯಾದಿ ಶುಭ ಕ್ರಿಯೆಯನ್ನು ಬಿಟ್ಟುಕೊಟ್ಟು ದುರ್ವಚನವನ್ನಾಡುವುದು, ವಚನದೋಷವಿದೆ.

ಸಾಮಾಯಿಕ ಮಾಡುವ ಸಮಯದಲ್ಲಿ ಶುದ್ಧಾಸನವನ್ನು ಬಿಟ್ಟುಕೊಟ್ಟು ಆಸನವನ್ನು ಚಂಚಲ ಮಾಡುತ್ತಿರುವುದು, ಕಾಯ ಅತಿಚಾರವಿದೆ. ಸಾಮಾಯಿಕ ಮಾಡುವ ಸಮಯದಲ್ಲಿ ನಾನು ಯಾವ ಪಾಠ ಓದಿದೆನು? ಯಾವ ಪಾಠ ಓದಲಿಲ್ಲ ? ನಾನು ಯಾವುದನ್ನು ಓದುತ್ತಿದ್ದೇನೆ ? ಇತ್ಯಾದಿ ರೂಪದಲ್ಲಿ ವಿಸ್ಮೃತಿಯಾಗಿ ವಿಭ್ರಮೆಯ ಭಾವವಿರುವುದು, ವಿಸ್ಮರಣೆ ದೋಷವಿದೆ.

ಸಾಮಾಯಿಕ ಮಾಡುವ ಸಮಯದಲ್ಲಿ ಮನ, ವಚನ, ಕಾಯಗಳು ಪ್ರಮಾದ ಸಹಿತವಾಗಿರುವುದು, ಅನಾದರ ಭಾವದಿಂದ ಸಾಮಾಯಿಕ ಮಾಡುವುದು, ಅನಾದರ ದೋಷವಿದೆ. - ಇವು ಐದು ದೋಷಗಳಿಂದ ರಹಿತ ಶುದ್ಧ ಸಾಮಾಯಿಕ ವ್ರತವಿದೆ.

ವ್ರತಧಾರೀ, ಧರ್ಮಾತ್ಮನು ದೂರ ಮಾಡಲು ಯೋಗ್ಯವಾದ ಸಾಮಾಯಿಕ ವ್ರತದ ಮೂವತ್ತೆರಡು ಅತಿಚಾರಗಳಿವೆ - ಅನಾದರ, ತತಧ್ವ, ಪ್ರತಿಷ್ಠೆ, ಪ್ರತಿಪೀಡಿತ, ದೋಲಾಪಿತ, ಅಂಕುಶ, ಕಚ್ಛಪ, ಮಛೋವತ, ಮನದುಷ್ಟ, ಬಂಧನ, ಭಯ, ಬಿಭ್ಯ, ಗೌರವವೃದ್ಧಿ, ಗೌರವ, ನ್ಯತಿ, ಪ್ರತಿನೀತಿ, ಪ್ರದುಷ್ಟ, ಶಬ್ದ, ತಾಡಿತ, ಹೀಲಿತ, ತ್ರಿಬಲಿತ, ಸಂಕುಚಿತ, ದೃಷ್ಟಿ, ಅದೃಷ್ಟಿ, ಕರಮೋಚನ, ಲಬ್ಧಿ, ಆಲಬ್ಧಿ, ಹೀನ, ಉದ್ಧತ, ದೋಚೂಲಿ, ಮೂಕ, ದಾದುರ ಮತ್ತು ಚೂಲಿತ - ಇವು ಮೂವತ್ತೆರಡು ದೋಷಗಳಿವೆ.

೧. ಸಾಮಾಯಿಕ ಮಾಡುವಾಗ ಪ್ರಮಾದ ಸಹಿತ ವಿನಯರಹಿತನಾಗಿ ನಮಸ್ಕಾರ ಮೊದಲಾದ ಕ್ರಿಯೆ ಮಾಡುವುದು, ಅನಾದರ ದೋಷವಿದೆ.

೨. ಸಾಮಾಯಿಕದ ಸಮಯದಲ್ಲಿ ವಿದ್ಯೆಯ ಮದ ಸಹಿತ, ಉದ್ಧತನಾಗಿ ಅಶುದ್ಧ ಕ್ರಿಯೆ ಮಾಡುವುದು ತತಧ್ವ ದೋಷವಿದೆ.

೩. ಭಗವಂತರ ಬಿಂಬದ ಅತ್ಯಧಿಕ ಸಮೀಪ, ಸನ್ಮುಖನಾಗಿ ಸಾಮಾಯಿಕ ಮಾಡುವುದು ಪ್ರತಿಷ್ಠಾ ದೋಷವಿದೆ.

೪. ಎರಡೂ ಕೈಗಳಿಂದ ಜಂಘಾ(ತೊಡೆ)ಒತ್ತಿಕೊಂಡು ನಮಸ್ಕಾರ ಮಾಡುವುದು. ಪ್ರತಿಪೀಡಿತ ದೋಷವಿದೆ.

೫. ಸಾಮಾಯಿಕ ಮಾಡುವ ಸಮಯದಲ್ಲಿ ಪೂರ್ಣ ಶುದ್ಧ ಪಾಠ ಓದುತ್ತಿದ್ದರೂ ಪಾಠವು ಪೂರ್ಣವಾಗಿ ಹೋದ ಮೇಲೆ ಕೂಡ ನಾನು ಈ ಪಾಠ ಓದಿದೆನೋ ಅಥವಾ ಇಲ್ಲ ? ಓದಿರುವುದಂತೂ ನನಗೆ ಸ್ಮರಣೆಯಲ್ಲಿ ಇಲ್ಲವಲ್ಲ ? ಹೀಗೆ ಚಿತ್ತವು ಸಂಶಯರೂಪವಾಗಿರುವುದು. ಮನಸ್ಸು ಚಂಚಲವಾಗಿರುವುದು ಹಾಗೂ ಕಾಯವನ್ನು ಜೋಕಾಲಿಯಂತೆ ಅಲ್ಲಾಡಿಸುತ್ತ ಇರುವುದು ಅದು ದೋಲಾಪಿತ ಅತಿಚಾರವಿದೆ.

೬. ಕೈಯ ಬೆರಳನ್ನು ಅಂಕುಶಾಕಾರ ಮಾಡಿ ಮಸ್ತಕಕ್ಕೆ ತಾಗಿಸಿ ನಮಸ್ಕಾರ ಮಾಡುವುದು ಅಂಕುಶ ದೋಷವಿದೆ.

೭. ಸಾಮಾಯಿಕ ಮಾಡುವ ಸಮಯದಲ್ಲಿ ಕಟಿ-ಟೊಂಕದ ಮೇಲೆ ಕೈಯಿಟ್ಟು, ಕಾಯವನ್ನು ಸಂಕುಚಿತ ಮಾಡಿ ಆಮೆಯ ಆಕಾರದ್ದಾಗಿಸುವುದು ಕಚ್ಛಪ ದೋಷವಿದೆ.

೮. ಸಾಮಾಯಿಕ ಮಾಡುವಾಗ ಸೊಂಟವನ್ನು ಅಲ್ಲಾಡಿಸುತ್ತ-ಕಾಯವನ್ನು ಮತ್ಸ್ಯದಂತೆ ಚಂಚಲ ಮಾಡುವುದು ಮಛೋವತ ದೋಷವಿದೆ.

೯. ಸಾಮಾಯಿಕ ಮಾಡುವ ಸಮಯದಲ್ಲಿ ಸೂರ್ಯನ ಕಾಂತಿಯನ್ನು ಸಹಿಸುವಲ್ಲಿ ಅಸಮರ್ಥನಾಗುವ ಕಾರಣ ಸಂಕ್ಲೇಶರೂಪ ಪರಿಣತಿ ಮಾಡುವುದು, ಮನದುಷ್ಟವೆಂಬ ಹೆಸರಿನ ಅತಿಚಾರವಿದೆ.

೧೦. ಸಾಮಾಯಿಕ ಮಾಡುವಾಗ ಕಾಯವನ್ನು ಕೈಗಳಿಂದ ಒತ್ತಿ, ದೃಢ ಬಂಧನದಂತೆ ಮಾಡುವುದು ಬಂಧನ ಅತಿಚಾರವಿದೆ.

೧೧. ಸಾಮಾಯಿಕ ಮಾಡುವಾಗ ಯಾವನೋ ದೇವ, ಮನುಷ್ಯ, ಸಿಂಹ, ಸರ್ಪಾದಿ ಜೀವಗಳ ಭಯ ಸಹಿತ ಕಾಯೋತ್ಸರ್ಗ ಮಾಡುವುದು ಭಯ ದೋಷವಿದೆ.

೧೨. ಸಾಮಾಯಿಕ ಮಾಡುವ ಸಮಯದಲ್ಲಿ ತನ್ನಲ್ಲಿ ಸ್ಥಿರತೆಯಾಗದಿದ್ದರೂ ಮತ್ತು ಧರ್ಮಫಲದ ಇಚ್ಛೆಯಿಲ್ಲದಿದ್ದರೂ ಗುರುಗಳ ಭಯದಿಂದ ಅಥವಾ ಸಂಘದ ಭಯದಿಂದ, ಪರಮಾರ್ಥ ರಹಿತವೇ ಸಾಮಾಯಿಕ ಮಾಡುವುದು ಬಿಭ್ಯ ದೋಷವಿದೆ.

೧೩. ನಾಲ್ಕು ಪ್ರಕಾರದ ಸಂಘವನ್ನು ಪ್ರಸನ್ನ ಪಡಿಸುವ ಸಲುವಾಗಿ ಹಾಗೂ ಅನ್ಯರ ಬಾಯಿಂದ ತನ್ನ ಮಹಿಮೆಯನ್ನಾಲಿಸುವ ಸಲುವಾಗಿ, ಶೋಭೆಯ ದೃಷ್ಟಿಯಿಂದ ಸಾಮಾಯಿಕ ಮಾಡುವುದು ಗೌರವ ವೃದ್ಧಿ ದೋಷವಿದೆ.

೧೪. ತನ್ನ ಮಾಹಾತ್ಮ್ಯವನ್ನು ಹೆಚ್ಚಿಸುವ ಸಲುವಾಗಿ, ಇಂದ್ರನ ಸುಖಗಳ ಇಚ್ಛೆ ಸಹಿತ ಮಾನ-ದೊಡ್ಡಸ್ತನದ ಸಲುವಾಗಿ ಸಾಮಾಯಿಕ ಮಾಡುವುದು ಗೌರವ ದೋಷವಿದೆ.

೧೫. ಗುರುಗಳ ಹತ್ತಿರದಲ್ಲಿ ಸಾಮಾಯಿಕ ಮಾಡಿದರೆ, ಯಾರಾದರೂ ನನ್ನ ಪ್ರಮಾದವನ್ನು ನೋಡಿ ಅವಗುಣ ಪ್ರಗಟ ಮಾಡಬಹುದೆಂದು ತಿಳಿದು ಏಕಾಂತದಲ್ಲಿ ಗುರುಗಳಿಗೆ ಕಾಣಿಸದಂತೆ ಸಾಮಾಯಿಕ ಮಾಡುವುದು ಸ್ತೃತಿ ದೋಷವಿದೆ.

೧೬. ಸಾಮಾಯಿಕ ಮಾಡುವಾಗ ಗುರುಗಳ ಆಜ್ಞೆಯಿಲ್ಲದೆಯೇ ಗುರುಗಳಿಂದ ಪ್ರತಿಕೂಲನಾಗಿ-ಗುರು ಆಜ್ಞೆಯಿಂದ ರಹಿತನಾಗಿ ತನ್ನ ಇಚ್ಛಾನುಸಾರ ಸಾಮಾಯಿಕ ಮಾಡುವುದು ಪ್ರತಿನೀತಿ ದೋಷವಿದೆ.

೧೭. ಸಾಮಾಯಿಕ ಮಾಡುವ ಕಾಲದಲ್ಲಿ ಅನ್ಯ ಜೀವಗಳ ಕುರಿತು ದ್ವೇಷ ಭಾವವಿಟ್ಟುಕೊಳ್ಳುವುದು, ಯುದ್ಧ ಮಾಡುವ ಅಥವಾ ಕಲಹ ಮಾಡುವ ಅಭಿಪ್ರಾಯವಿಟ್ಟುಕೊಳ್ಳುವುದು ಪ್ರದುಷ್ಟದೋಷವಿದೆ.

೧೮. ಅವಿನಯಿ, ಪ್ರಮಾದಿ, ಧರ್ಮಭಾವನೆಯಿಂದ ರಹಿತನೆಂದು ತಿಳಿದು ಸಂಘದಿಂದ ಹೊರಗೆ ಹಾಕಿ ಬಿಡುವ ರೂಪದಲ್ಲಿ ಗುರುವಿನಿಂದ ಬೆದರಿಕೆ ಹಾಕಿದ ಮೇಲೆ, ಗುರುವಿನ ಭಯದಿಂದ ಅಥವಾ ಸಂಘದ ಭಯದಿಂದ ಸಾಮಾಯಿಕ ಮಾಡುವುದು ತಾಡಿತ ದೋಷವಿದೆ.

೧೯. ಸಾಮಾಯಿಕ ಮಾಡುವಾಗ ಮೌನ ತೊರೆದು ಮಾತನಾಡತೊಡಗುವುದು ಶಬ್ದ ದೋಷವಿದೆ.

೨೦. ಸಾಮಾಯಿಕ ಮಾಡುವಾಗ ಗುರುವಿನ ಅವಿನಯದ ಭಾವವಿರುವುದು, ಗುರುವಿನ ಮಾನ ಖಂಡನ ರೂಪ ಪರಿಣತಿಯಿರುವುದು ಮಾಯೆಯ ಭಾವವಿರುವುದು, ಹೀಲಿತ ದೋಷವಿದೆ.

೨೧. ಸಾಮಾಯಿಕ ಮಾಡುವಾಗ ಉನ್ನತನಾಗಿ ತ್ರಿಬಲೀ ಭಂಗ ಮಾಡುವುದು, ಹಣೆಯ ಮೇಲೆ ತ್ರಿಬಲಿ (ಮೂರು ಮಡಿಕೆ) ಮಾಡುವುದು, ತ್ರಿಬಲಿತ ದೋಷವಿದೆ.

೨೨. ಸಾಮಾಯಿಕ ಮಾಡುವಾಗ, ತಲೆಯನ್ನು ಕೈಗಳಿಂದ ಮುಟ್ಟಿ, ಶರೀರವನ್ನು ಸಂಕುಚಿತಗೊಳಿಸಿ ಗಂಟಿನ ಹಾಗೆ ಆಗುವುದು ಸಂಕುಚಿತ ದೋಷವಿದೆ.

೨೩. ಗುರುಗಳನ್ನು ನೋಡುತ್ತಿದ್ದಂತೆ ಅಥವಾ ಬೇರೆ ಯಾರನ್ನೋ ನೋಡುತ್ತಿರುವಂತೆ ಸಾಮಾಯಿಕ ಮಾಡಿದ ಮೇಲೆ ಮಹಾ ವಿನಯದಿಂದ ಎದ್ದು ನಿಂತುಕೊಂಡು ಸಾಮಾಯಿಕ ಮಾಡುವುದು, ಕಾಯದ ಶುದ್ಧ ಒಳ್ಳೆಯ ಕ್ರಿಯೆಯೊಂದಿಗೆ ಸಾಮಾಯಿಕ ಮಾಡುವುದು ಹಾಗೂ ಯಾರೂ ನೋಡದಿದ್ದರೆ ಪ್ರಮಾದ ಸಹಿತ ಸ್ವೇಚ್ಛಾಚಾರಿಯಾಗಿ ಕಾಯ ಮತ್ತು ಮನಸ್ಸನ್ನು ನಾಲ್ಕೂ ದಿಕ್ಕುಗಳ ಅವಲೋಕನರೂಪ ಚಂಚಲವಾಗಿಟ್ಟುಕೊಂಡು ಸಾಮಾಯಿಕ ಮಾಡುವುದು ದೃಷ್ಟಿ ದೋಷವಿದೆ.

೨೪. ಸಾಮಾಯಿಕ ಮಾಡುವಾಗ ತನ್ನ ಗುರುವಿನಿಂದ ಪ್ರಚ್ಛನ್ನನಾಗಿದ್ದು ಹಾಗೂ ಸಂಘದ ಅನ್ಯ ವೃದ್ಧಮುನಿ ದೊಡ್ಡ-ದೊಡ್ಡ ಗುರು ಜನರಿಂದ ಕಣ್ಣು ತಪ್ಪಿಸಿ, ತನ್ನ ಶರೀರದ ಶೋಭೆಯನ್ನು ನಿರೀಕ್ಷಿಸುವುದು, ಕಾಯದ ಸೌಂದರ್ಯ ಕಂಡು ಪ್ರಸನ್ನನಾಗಿ ತನು ಮನಗಳನ್ನು ಚಂಚಲಗೊಳಿಸುವುದು ಅದೃಷ್ಟಿ ದೋಷವಿದೆ.

೨೫. ಚತುರ್ವಿಧ ಸಂಘವನ್ನು ಹಾಗೂ ಅನ್ಯ ಜನರನ್ನು ಪ್ರಸನ್ನ ಪಡಿಸುವ ಸಲುವಾಗಿ ಸಾಮಾಯಿಕ ಮಾಡುವುದು ಕರಮೋಚನ ದೋಷವಿದೆ.

೨೬. ಸಾಮಾಯಿಕ ಮಾಡುವಾಗ ನನ್ನ ಹತ್ತಿರ ಪಿಂಛಿ, ಶಾಸ್ತ್ರ ಮೊದಲಾದ ಉಪಕರಣಗಳಿಲ್ಲ; ದೊರೆತರೆ ಒಳ್ಳೆಯದಾಗುವುದು-ಈ ರೂಪದಿಂದ ಪಿಂಛಿ ಮೊದಲಾದ ಪದಾರ್ಥಗಳನ್ನು ಪ್ರಾಪ್ತ ಮಾಡಿಕೊಳ್ಳುವ ವಾಂಛೆಯನ್ನಿಟ್ಟುಕೊಂಡು ಸಾಮಾಯಿಕ ಮಾಡುವುದು ಲಬ್ಧಿ ದೋಷವಿದೆ.

೨೭. ಶ್ರಾವಕನ ಷಟ್ಕರ್ಮರೂಪ ಉಪಕರಣಗಳ ಪ್ರಾಪ್ತಿ ತಿಳಿದು ಸಾಮಾಯಿಕ ಮಾಡುವುದು ಅಲಬ್ಧಿ ದೋಷವಿದೆ.

೨೮. ಕಾಲದ ಮರ್ಯಾದೆಯನ್ನು ಮೀರಿ ಸಾಮಾಯಿಕ ಮಾಡುವುದು ಮತ್ತು ಗ್ರಂಥಗಳ ಅರ್ಥದ ವಿಚಾರ ರಹಿತ ಭಾವವಿಟ್ಟುಕೊಳ್ಳುವುದು ಹೀನ ದೋಷವಿದೆ.

೨೯. ಬೇಗ-ಬೇಗ ಕ್ರಿಯೆ ಮಾಡಿ ಅಲ್ಪ ಕಾಲದಲ್ಲಿ ಸಾಮಾಯಿಕವನ್ನು ಪೂರ್ಣ ಮಾಡುವುದು ಅಥವಾ ನಿದಾನವಾಗಿ ಪ್ರಮಾದ ಸಹಿತ ಕ್ರಿಯೆ ಮಾಡಿ ದೀರ್ಘಕಾಲದಲ್ಲಿ ಪೂರ್ಣ ಮಾಡುವುದು ಪಾಠ ಓದುತ್ತ-ಓದುತ್ತ ಪುನಃ ಪುನಃ ಮರೆತು ಹೋಗುವ ಕಾರಣ ಮತ್ತೆ-ಮತ್ತೆ ಓದುತ್ತ ಮರೆಯುತ್ತ ಸಾಮಾಯಿಕ ಮಾಡುವುದು ಉದ್ದತದೋಚೂಲಿ ದೋಷವಿದೆ.

೩೦. ಸಾಮಾಯಿಕ ಮಾಡುವ ಸಮಯದಲ್ಲಿ ಮೂಗನ ಹಾಗೆ ಹೂಂ, ಹೂಂ ಶಬ್ದವನ್ನಾಡುತ್ತ ಬೆರಳು, ನೇತ್ರ ಮೊದಲಾದವುಗಳಿಂದ ಸಂಕೇತ ಮಾಡುವುದು ಮೂಕ ದೋಷವಿದೆ.

೩೧. ಸಾಮಾಯಿಕ ಮಾಡುವಾಗ ಕಪ್ಪೆಯಂತೆ ಕೋಲಾಹಲ ಮಾಡುತ್ತ ಪಾಠ ಹೇಳುತ್ತ ಗದ್ದಲ ಮಾಡುವುದು ದರ್ದುರ ದೋಷವಿದೆ.

೩೨. ಅನ್ಯರ ಮನಸ್ಸನ್ನು ರಂಜಿಸುವ ಸಲುವಾಗಿ ಸಾಮಾಯಿಕ ಮಾಡುವಾಗ ಏಕಾಸನದಿಂದ ಏಕಕ್ಷೇತ್ರದಲ್ಲಿ ಕುಳಿತುಕೊಂಡೇ ಸಮಸ್ತ ದೇವ-ಗುರುಗಳ ಸ್ತುತಿ ಮಾಡಿ ನಮಸ್ಕಾರ ಮಾಡುತ್ತ ಮಹಾಮಧುರ ಸ್ವರದಿಂದ ರಾಗವಾಗಿ ಪಾಠ ಓದುವುದು ಚೂಲಿತ ದೋಷವಿದೆ.

ಈ ಮೂವತ್ತೆರಡು ದೋಷಗಳನ್ನು ದೂರ ಮಾಡಿ ಸಾಮಾಯಿಕ ಮಾಡುವಂಥವನು ಶುದ್ಧ ಸಾಮಾಯಿಕಧಾರಿ ಶ್ರಾವಕನಿದ್ದಾನೆ.

ಸಾಮಾಯಿಕ ಮಾಡುವ ಸಮಯದಲ್ಲಿ ಕಾಯೋತ್ಸರ್ಗ ಸಂಬಂಧದ ಘೋಟಕ, ಲತೆ, ಸ್ತಂಭ, ಕುಟ್ಯಾ, ಮಾಲಾ, ವಧೂ, ಲಂಬೋದರ, ತನದೃಷ್ಟಿ, ವಾಯಸ, ಖಲಿನ, ಜುಗ, ಕಪಿತ್ಥ, ಸಿರಕಂಪಿತ, ಮೂಕ, ಅಂಗುಲಿ, ಭ್ರೂವಿಕಾರ, ಸುರಾಪಾನ, ದಿಶಾವಲೋಕನ, ಗ್ರೀವಾ, ಪರಿಣಮನ, ನಿಷ್ಠೀವನ ಮತ್ತು ಅಂಗಮ್ರಕ್ಷರೂಪ ಇಪ್ಪತ್ತೆರಡು ದೋಷಗಳ ನಿವಾರಣೆ ಮಾಡುತ್ತಾನೆ.

೧. ಕುದುರೆಯ ಹಾಗೆ ನಿಂತುಕೊಂಡು ಸಾಮಾಯಿಕ ಮಾಡುವುದು ಘೋಟಕ ದೋಷವಿದೆ.

೨. ಸಾಮಾಯಿಕ ಮಾಡುವಾಗ ಶರೀರವನ್ನು ಬಳ್ಳಿಯಂತೆ ಅಂಕು-ಡೊಂಕಾಗಿ ಮಾಡುವುದು ಲತಾ ದೋಷವಿದೆ.

೩. ಸಾಮಾಯಿಕ ಮಾಡುವ ಸಮಯದಲ್ಲಿ ಶರೀರಕ್ಕೆ ಕಂಬ ಅಥವಾ ಗೋಡೆಯ ಆಧಾರ ತಗೆದುಕೊಂಡು ನಿಂತುಕೊಳ್ಳುವುದು ಹಾಗೂ ಶಾಸ್ತ್ರಗಳ ಅರ್ಥ ಚಿಂತನದಿಂದ ರಹಿತ, ಶೂನ್ಯ ಚಿತ್ತದಿಂದ ಸ್ತಂಭದ ಹಾಗೆ ನಿಂತುಕೊಂಡು ಸಾಮಾಯಿಕ ಮಾಡುವುದು ಸ್ತಂಭ ದೋಷವಿದೆ.

೪. ಸಾಮಾಯಿಕ ಮಾಡುವುದರ ಫಲದಲ್ಲಿ ಮಹಲು, ಗೃಹ, ಗುಹೆ, ಗುಡಿಸಲು ಮಂಟಪಾದಿಗಳ ವಾಂಛೆ ಮಾಡುವುದು ಕುಟ್ಯಾ ದೋಷವಿದೆ.

೫. ಸಾಮಾಯಿಕ ಮಾಡುವಾಗ ಎತ್ತರದ ಸಿಂಹಾಸನ, ಮಣೆ, ಕುರ್ಚಿಯ ಮೇಲೆ ನಿಂತುಕೊಂಡು ಸಾಮಾಯಿಕ ಮಾಡುವುದು ಮಾಲಾ ದೋಷವಿದೆ.

೬. ಲಜ್ಜೆಯೊಂದಿಗೆ ಮೈ ಮುಚ್ಚಿಕೊಂಡು ನಿಂತಿರುವ ಯಾವಳೋ ಒಳ್ಳೆಯ ಸ್ತ್ರೀಯಂತೆ, ವಸ್ತ್ರದಿಂದ ಅಥವಾ ಕೈಗಳಿಂದ ಮೈಮುಚ್ಚಿಕೊಂಡು ನಿಂತುಕೊಳ್ಳುವುದು, ವಧೂ ದೋಷವಿದೆ.

೭. ಸಾಮಾಯಿಕದಲ್ಲಿ ಕಾಯೋತ್ಸರ್ಗದ ಸಮಯ ಕೈಗಳನ್ನು ಉದ್ದ ಮಾಡಿ ಅರ್ಧ ನಮಸ್ಕಾರ ಮಾಡುವುದು ಲಂಬೋತರ ದೋಷವಿದೆ.

೮. ಸಾಮಾಯಿಕ ಮಾಡುವಾಗ ತನ್ನ ಶರೀರವನ್ನು ನಿರೀಕ್ಷಿಸುತ್ತ - ಒಳ್ಳೆಯ, ಕೋಮಲ, ಸುಂದರ, ಶುಭಾಕಾರ ನೋಡಿ ಪ್ರಸನ್ನನಾಗುವುದು; ಹಾಗೂ ಮಲಿನ, ಕ್ಷೀಣ, ಶೋಭೆಯಿಲ್ಲದ, ಶ್ಯಾಮವರ್ಣ, ಕರ್ಕಶವನ್ನು ನೋಡಿ ಮನಸ್ಸಿನಲ್ಲಿ ಖೇದ ಪಡುವುದು ತನ್ನ ದೃಷ್ಟಿ ದೋಷವಿದೆ.

೯. ಸಾಮಾಯಿಕ ಮಾಡುವಾಗ ಕಾಕದಂತೆ ನೇತ್ರ ಚಂಚಲಗೊಳಿಸುತ್ತ ನಾಲ್ಕೂ ದಿಕ್ಕುಗಳನ್ನು ಅವಲೋಕಿಸುವುದು ವಾಯಸ ದೋಷವಿದೆ.

೧೦. ಸಾಮಾಯಿಕ ಮಾಡುವಾಗ ಕುದುರೆಯ ಹಾಗೆ ಹಲ್ಲು ಕಚ್ಚುತ್ತ ಇರುವುದು, ಮುಖ ಮತ್ತು ಶರೀರವನ್ನು ಕಠೋರವಾಗಿರಿಸುವುದು ಖಲಿನ ದೋಷವಿದೆ.

೧೧. ಸಾಮಾಯಿಕ ಮಾಡುವಾಗ ವೃಷಭದಂತೆ ಕುತ್ತಿಗೆಯನ್ನು ಮೇಲೆ-ಕೆಳಗೆ ಮಾಡುವುದು ಜುಗದೋಷವಿದೆ.

೧೨. ಸಾಮಾಯಿಕ ಮಾಡುವಾಗ ಮುಷ್ಟಿಕಟ್ಟಿ ಸಾಮಾಯಿಕದ ಸಲುವಾಗಿ ನಿಂತುಕೊಳ್ಳುವುದು ಕಾಪಿತ್ಥ ದೋಷವಿದೆ.

೧೩. ಸಾಮಾಯಿಕ ಮಾಡುವಾಗ ತಲೆ ಅಲ್ಲಾಡಿಸುವುದು-ತಿರುಗಿಸುವುದು ಶಿರಃಕಂಪಿತ ದೋಷವಿದೆ.

೧೪. ಸಾಮಾಯಿಕ ಮಾಡುವಾಗ ಮುಖ, ಮೂಗು, ನೇತ್ರಗಳನ್ನು ವಕ್ರ ಮಾಡುತ್ತಿರುವುದು ಮೂಕದೋಷವಿದೆ.

೧೫. ಸಾಮಾಯಿಕ ಮಾಡುವಾಗ ಕೈ-ಕಾಲಿನ ಬೆರಳುಗಳನ್ನು ಅಲ್ಲಾಡಿಸುವುದು ಅಂಗುಲಿ ದೋಷವಿದೆ.

೧೬. ಸಾಮಾಯಿಕ ಮಾಡುವಾಗ ನೇತ್ರವಕ್ರ ಮಾಡುವುದು ಹುಬ್ಬುಗಳನ್ನು ಧನುಷ್ಯಾಕಾರ ಎತ್ತರಿಸುವುದು, ದೃಷ್ಟಿಯನ್ನು ಕುಟಿಲಗೊಳಿಸುವುದು ಭ್ರೂವಿಕಾರ ದೋಷವಿದೆ.

೧೭. ಸಾಮಾಯಿಕ ಮಾಡುವಾಗ ಮತ್ತು ಬಂದವರಂತೆ ತೋಲಾಡುವುದು ಸುರಾಪಾನ ದೋಷವಿದೆ.

೧೮. ಸಾಮಾಯಿಕ ಮಾಡುವ ಸಮಯದಲ್ಲಿ ಮೇಲೆ-ಕೆಳಗೆ ಮೊದಲಾಗಿ ಹತ್ತೂ ದಿಕ್ಕುಗಳಲ್ಲಿ ಅತ್ತ-ಇತ್ತ ನೋಡುವುದು ದಿಶಾ ಅವಲೋಕನ ದೋಷವಿದೆ.

೧೯. ಸಾಮಾಯಿಕ ಮಾಡುವಾಗ ಕುತ್ತಿಗೆಯನ್ನು ಅತ್ತ-ಇತ್ತ ಅಲ್ಲಾಡಿಸಿ ವಕ್ರ , ಮೇಲೆ ಕೆಳಗೆ ಮಾಡುವುದು ಗ್ರೀವಾ ದೋಷವಿದೆ.

೨೦. ಸಾಮಾಯಿಕ ಮಾಡುವಾಗ ಧ್ಯಾನದ ತ್ಯಾಗ ಮಾಡಿ ಬೇರೆಯೇ ಕ್ರಿಯೆಗಳನ್ನು ಮಾಡತೊಡಗುವುದು ಪರಿಣಮನ ದೋಷವಿದೆ.

೨೧. ಸಾಮಾಯಿಕ ಮಾಡುವಾಗ ಬಾಯಿಂದ ಉಗುಳುವುದು, ಮೂಗು-ಕಿವಿಗಳಲ್ಲಿನ ಕೊಳೆಯನ್ನು ತಗೆಯುವುದು, ಶರೀರದ ಅಂಗೋಪಾಂಗಗಳ ಮರ್ದನ ಮಾಡಿ ಮಣ್ಣು (ಕೊಳೆ) ತಗೆಯುವುದು, ನಾಲಿಗೆ ಅಲ್ಲಾಡಿಸುವುದು, ಹಲ್ಲುಗಳನ್ನು ತುಟಿಯ ಮೇಲೆ ತರುವುದು, ಪದ್ಮಾಸನದಲ್ಲಿ ಕುಳಿತುಕೊಂಡು ಅಂಗಾಲುಗಳನ್ನು ಮುಟ್ಟುವುದು ತಿಕ್ಕುವುದು ನಿಷ್ಠೀವನ ದೋಷವಿದೆ.

೨೨. ಸಾಮಾಯಿಕ ಮಾಡುವಾಗ ಮಲ-ಮೂತ್ರ ವಿಸರ್ಜನೆಯ ಸ್ಥಾನಗಳನ್ನು ಮುಟ್ಟುವುದು ಅಂಗಮ್ರುಕ್ಷದೋಷವಿದೆ.

ಈ ಪ್ರಕಾರ ಸಾಮಾಯಿಕದ ಐದು ಹಾಗೂ ಮೂವತ್ತೆರಡು ಅತಿಚಾರ ಮತ್ತು ಇವು ಇಪ್ಪತ್ತೆರಡು ಅಂತರಾಯಗಳನ್ನು ದೂರ ಮಾಡಿ ಧರ್ಮಫಲದ ಲೋಭಿಯು-ಸಾಮಾಯಿಕ ನೆಲೆಯ ಧಾರಕನು ತನ್ನ ವ್ರತದ ರಕ್ಷಣೆ ಮಾಡುತ್ತ ಸಾಮಾಯಿಕ ಮಾಡುತ್ತಾನೆ.

ಸಾಮಾಯಿಕವನ್ನು ಶೂನ್ಯ ಮಹಲಿನಲ್ಲಿ ಶೂನ್ಯ ಗೃಹ-ಮಂದಿರದಲ್ಲಿ ಯಜಮಾನನ ಮಮತ್ವವಿರಹಿತ, ಎಲ್ಲರ ಸ್ವಾಮಿತ್ವದಿಂದ ರಹಿತ ಮಂಟಪದಲ್ಲಿ, ಸಿಂಹಾದಿಗಳ ಮಮತ್ವರಹಿತ ಗುಹೆ ಮೊದಲಾದವುಗಳಲ್ಲಿ ಮಾಡಬೇಕಾಗುವುದು, ವನ, ಸ್ಮಶಾನಭೂಮಿ, ವೃಕ್ಷದ ಪೊಟರೆಗಳಲ್ಲಿ, ಜಿನಮಂದಿರ ಇತ್ಯಾದಿ ಏಕಾಂತ ಶುದ್ಧ ಸ್ಥಾನ

ನೋಡಿ ಸಾಮಾಯಿಕದ ಸಲುವಾಗಿ ಕುಳಿತುಕೊಳ್ಳಬೇಕು. ಅತಿ ಶೀತದಿಂದ ರಹಿತ ಮತ್ತು ಅತಿ ಉಷ್ಣದಿಂದ ರಹಿತ, ಸೊಳ್ಳೆದೊಮೆಗಳಿಂದ ರಹಿತ, ಕೋಲಾಹಲಮಯ ಶಬ್ದಗಳಿಂದ ಶೂನ್ಯ, ಯುದ್ಧ ವಾತಾವರಣದಿಂದ ರಹಿತ ಪಾರಸ್ಪಾರಿಕ ಕಠೋರ ಕಟು ಶಬ್ದಗಳಿಂದ ಶೂನ್ಯ, ಶುದ್ಧ, ಪ್ರಾಸುಕ, ಜೀವರಹಿತ ಗುಹೆ ಮೊದಲಾದವುಗಳಲ್ಲಿ, ವೈರಾಗ್ಯ ಭಾವನೆಯನ್ನು ವೃದ್ಧಿಸುವಲ್ಲಿ ಕಾರಣಭೂತ ನಿರ್ಜನ ಸ್ಥಾನಗಳಲ್ಲಿ ಸಾಮಾಯಿಕದ ಸಲುವಾಗಿ ಕುಳಿತುಕೊಳ್ಳಬೇಕಾಗುವುದು.

ಉಕ್ತ ಸ್ಥಾನಗಳೊಳಗಿನ ಯಾವುದಾದರೂ ಯಥಾಯೋಗ್ಯ ಸ್ಥಾನದಲ್ಲಿ ಕುಳಿತುಕೊಂಡು, ಮನ-ವಚನ-ಕಾಯವನ್ನು ಏಕಾಗ್ರಗೊಳಿಸಿ ಶುದ್ಧನಾಗಿ ಸಮಸ್ತ ಜೀವಗಳ ಕುರಿತಾಗಿ ದಯೆಯ ಭಾವದೊಂದಿಗೆ, ಕೋಮಲ ಪರಿಣಾಮಸಹಿತ ಸಾಮಾಯಿಕ ಮಾಡುವಂಥವನು ಶುದ್ಧ ಸಾಮಾಯಿಕ ನೆಲೆಯ ಧಾರಕ ಉತ್ತಮ ಶ್ರಾವಕನೆಂದು ತಿಳಿಯುವುದು. ಸಾಮಾಯಿಕದ ಸಲುವಾಗಿ ಕೇವಲ ಲಂಗೋಟಿ ಮೊದಲಾಗಿ ಅಲ್ಪ ಪರಿಗ್ರಹ ಧಾರಣ ಮಾಡಿ ಕುಳಿತುಕೊಳ್ಳುತ್ತಾನೆ. ಚಿತ್ತದ ವೃತ್ತಿಯನ್ನು ಮುನಿಯ ಸಮಾನ ನಿರ್ಮಲವಾಗಿಟ್ಟುಕೊಳ್ಳುತ್ತ ತನ್ನ ದೇಹದಿಂದ ಮಮತೆಯ ಭಾವ ತೊರೆದು, ವೈರಾಗ್ಯ ಭಾವದ ಭಂಡಾರ, ಮೋಕ್ಷಮಾರ್ಗದಲ್ಲಿ ವಿಹಾರ ಮಾಡುವ ಇಚ್ಛೆ ಮಾಡುವಂಥವನು, ನಾಲ್ಕು ಗತಿಗಳಿಗೆ ಸಂಬಂಧಿಸಿದ ಶುಭಾಶುಭ ಶರೀರಗಳ ವಾಸವನ್ನು ಬಯಸದಂಥವನು, ತನ್ನ ಪದದಿಂದ ಮೇಲಿನ ಗುಣಸ್ಥಾನ ಪ್ರಾಪ್ತ ಮಾಡಿಕೊಳ್ಳುವ ಇಚ್ಛೆಯುಳ್ಳವನು, ಜಗತ್ತಿನ ಸುಖದಿಂದ ಉದಾಸೀನನು, ಶ್ರಾವಕ ಧರ್ಮದ ಧಾರಕ, ಸಾಧರ್ಮೀ ಶ್ರಾವಕನು ಮೂರನೇ ಸಾಮಾಯಿಕ ನೆಲೆಯ ಧಾರಕನಿದ್ದಾನೆ.

ಈ ಪ್ರಕಾರ ಶ್ರೀ ಸುದೃಷ್ಟಿತರಂಗಿಣಿಯೆಂಬ ಹೆಸರಿನ ಗ್ರಂಥದಲ್ಲಿ ಏಕಾದಶ ನೆಲೆಗಳ
ಅಂತರ್ಗತ ಮೂರನೇ ನೆಲೆಯ ಕಥನ ಮಾಡುವಂಥ ಮೂವತ್ತೈದನೆಯ
ಪರ್ವವು ಸಂಪೂರ್ಣವಾಯಿತು.

★★★★★

ಯಾರು ರಾಗವನ್ನು ಮೋಕ್ಷದ ಸಾಧನವೆಂದು ಮನ್ನಿಸುತ್ತಾರೆ, ಅವರು ರಾಗದಲ್ಲಿಯೇ ಮೋಕ್ಷದ ಸಾಧನವನ್ನು ಹುಡುಕುತ್ತಾರೆ; ಆದರೆ ರಾಗವಂತೂ ಬಂಧದ ಸಾಧನವಿದೆ. ಅದರಲ್ಲಿ ಮೋಕ್ಷದ ಸಾಧನವು ಎಲ್ಲಿಂದ ಸಿಗುವುದು ? ರಾಗವನ್ನು ಮೋಕ್ಷದ ಸಾಧನ ಮನ್ನಿಸುವವರು ನಿಜವಾಗಿ ಆ ರಾಗವನ್ನು ಆತ್ಮ ಸ್ವಭಾವದಿಂದ ಅಭಿನ್ನ ಮನ್ನಿಸುತ್ತಾರೆ; ಹೀಗಾದಮೇಲೆ ಯಾವುದನ್ನು ತಮ್ಮಿಂದ ಅಭಿನ್ನ ಮನ್ನಿಸುತ್ತಾರೆ, ಅದರಿಂದ ಸ್ವಯಂ ಪೃಥಕ್ ಹೇಗಾಗುವರು ? ಮತ್ತು ರಾಗದಿಂದ ಪೃಥಕ್ಕಾಗದಿದ್ದರೆ ಅವರು ಮೋಕ್ಷವನ್ನು ಹೇಗೆ ಪ್ರಾಪ್ತ ಮಾಡಿಕೊಳ್ಳುವರು ? ಆದುದರಿಂದ ಎಲೈ ಜೀವನೇ ! ನೀನು ಗಂಭೀರವಾಗಿ ವಿಚಾರ ಮಾಡಿ ನಿಜವಾದ ಸಾಧನದ ಸಂಶೋಧನೆ ಮಾಡು. ಕರ್ತೃವಿನ ಸಾಧನವು ನಿಜವಾಗಿ ಕರ್ತೃವಿನಿಂದ ಭಿನ್ನವಿರುವುದಿಲ್ಲ. ಮೋಕ್ಷದ ಕರ್ತೃವು ನೀನಿರುವೆ - ಎಂದ ಮೇಲೆ ಸಾಧನವು ನಿನ್ನಿಂದ ಭಿನ್ನವಿರಲಾರದು. ಆ ಸಾಧನವೇ ರಾಗಾದಿ ಬಂಧ ಭಾವಗಳನ್ನು ಸರ್ವಥಾ ತುಂಡರಿಸಿ ಬಿಡುವಂಥ ಮತ್ತು ಸಮಸ್ತ ಚೈತನ್ಯ ಭಾವಗಳನ್ನು ಅಂಗೀಕಾರ ಮಾಡುವಂಥ ಯಾವ ವೀತರಾಗೀ ಜ್ಞಾನಪರಿಣತಿಯಿದೆ - ಭಗವತೀ ಪ್ರಜ್ಞೆಯಿದೆ ಅದು ಬಂಧಗಳ ಛೇದ ಮಾಡುವಂಥ ನಿನ್ನ ಸಾಧನವಿದೆ.

## ೩೬ : ಮೂವತ್ತಾರನೆಯ ಪರ್ವ
## ನಾಲ್ಕನೆಯ-ಐದನೆಯ-ಆರನೆಯ ನೆಲೆಗಳ ವರ್ಣನೆ

**ನಾಲ್ಕನೆಯ ಪ್ರೋಷಧ ನೆಲೆ** - ಸಮಸ್ತ ಪಾಪಾರಂಭದ ತ್ಯಾಗ ಮಾಡಿ, ಶರೀರ-ಭೋಗಗಳ ಇಚ್ಛೆಯ ನಿವಾರಣೆ ಮಾಡಿ, ಉದಾಸೀನ ಭಾವ ಧಾರಣ ಮಾಡಿ; ಧರ್ಮಧ್ಯಾನದ ಅಭಿಲಾಷಿಯಾಗಿ, ಆಹಾರ- ಪಾನೀಯಗಳ ತ್ಯಾಗ ಮಾಡುವುದು ಪ್ರೋಷಧೋಪವಾಸವಿದೆ. ಪ್ರೋಷಧೋಪವಾಸ ಮಾಡುವಂಥವನು ಒಂದು ತಿಂಗಳಿನಲ್ಲಿ ಎರಡು ಅಷ್ಟಮಿ, ಎರಡು ಚತುರ್ದಶಿ - ಇವು ನಾಲ್ಕು ಉಪವಾಸ ಮಾಡುತ್ತಾನೆ. ತ್ರಯೋದಶಿಯ ದಿವಸ ಪ್ರಾತಃಕಾಲ ಎದ್ದು ಶುಚಿರ್ಭೂತನಾಗಿ ಭಗವಂತರ ಪೂಜೆ ಮಾಡುತ್ತಾನೆ. ಅದರ ನಂತರ ಶಾಸ್ತ್ರ ಶ್ರವಣ ಹಾಗೂ ಪಠನ ಮಾಡುತ್ತಾನೆ. ಎರಡು ಪ್ರಹರಗಳವರೆಗೆ ಧರ್ಮಧ್ಯಾನದ ಸೇವನೆ ಮಾಡಿ, ಮುನಿ-ಶ್ರಾವಕರಿಗೆ ದಾನ ನೀಡಿ ನಿಷ್ಪ್ರಮಾದಿಯಾಗಿರುವ ಸಲುವಾಗಿ ಸ್ವಯಂ ಅಲ್ಪ ಭೋಜನ ಮಾಡಿ ಅದರ ನಂತರ ಹದಿನಾರು ಪ್ರಹರದವರೆಗಿನ ಸಲುವಾಗಿ ಆಹಾರ-ಪಾನೀಯಗಳ ಸೇವನೆಯ ತ್ಯಾಗ ಮಾಡುತ್ತಾನೆ (ಒಂದು ಪ್ರಹರವು ಮೂರು ಗಂಟೆಯದಿರುತ್ತದೆ) ತ್ರಯೋದಶಿ ದಿವಸದ ಹಗಲಿನ ಎರಡು ಪ್ರಹರ, ತ್ರಯೋದಶಿಯ ರಾತ್ರಿಯ ನಾಲ್ಕು ಪ್ರಹರ, ಚತುರ್ದಶಿಯ ಹಗಲು-ರಾತ್ರಿಯ ಎಂಟು ಪ್ರಹರ-ಹೀಗೆ ಹದಿನಾರು ಪ್ರಹರ ಜಾಗರಣೆ ಮಾಡಿ ಪೂಜೆ, ಧ್ಯಾನ, ಸ್ವಾಧ್ಯಾಯ, ಚರ್ಚೆ, ಶುಭ ಅನುಪ್ರೇಕ್ಷೆಯ ಚಿಂತನೆ ಇತ್ಯಾದಿ ಧರ್ಮಧ್ಯಾನದಲ್ಲಿ ಪೂರ್ಣ ಮಾಡುತ್ತಾನೆ. ಪೌರ್ಣಿಮೆಯ ದಿವಸ ಎರಡು ಪ್ರಹರದ ನಂತರ ಮನೆಗೆ ಹೋಗಿ, ದ್ವಾರ ಪ್ರೇಕ್ಷಣೆಯ ಭಾವನೆ ಭಾವಿಸಿ, ಮುನಿ-ಶ್ರಾವಕರಿಗೆ ದಾನ ನೀಡಿ, ದುಃಖಿತ-ಹಸಿದಿರುವವರನ್ನು ಸಂತುಷ್ಟಗೊಳಿಸಿ ಅದರ ನಂತರ ಸ್ವಯಂಪಾರಣೆ -ಒಂದು ಬಾರಿ ಭೋಜನ ಮಾಡುತ್ತಾನೆ.

ಈ ಪ್ರಕಾರ ಪ್ರಮಾದರಹಿತನಾಗಿ ಆಯುವಿರುವವರೆಗೆ ಪ್ರತಿ ತಿಂಗಳು ನಾಲ್ಕು ಉಪವಾಸ ಮಾಡುತ್ತಾನೆ. ಕೆಳಗಿನ ನೆಲೆಗಳಲ್ಲಿ ಹೇಳಲಾದ ಸಮಸ್ತ ಕ್ರಿಯೆಗಳು ಮೇಲಿನ ನೆಲೆಗಳಲ್ಲಿ ಗರ್ಭಿತವಿರುತ್ತವೆಂದು ತಿಳಿಯುವುದು. ಮೊದಲನೇ ಎರಡನೆಯ ನೆಲೆಗಳಲ್ಲಿ ಹೇಳಲಾದ ಪ್ರೋಷಧವು ಕೇವಲ ಕಲಿಯುವಿಕೆ, ಸಾಧನರೂಪವಿತ್ತು ಇಲ್ಲಿ ನಾಲ್ಕನೆಯ ನೆಲೆಯಲ್ಲಿ ಪ್ರೋಷಧದ ಸ್ವಾಮಿತ್ವ ಭಾವವಿದೆ. ಇಲ್ಲಿ ವ್ರತದ ಧಾರಣವು ಆಯುವಿರುವವರೆಗೆ ಅತಿಚಾರರಹಿತವಿರುತ್ತದೆ; ಅದರಿಂದ ಇದು ಪ್ರೋಷಧ ನೆಲೆಯಿದೆ. ಇದರ ಅತಿಚಾರಗಳು - ಅಪ್ರತ್ಯವೇಕ್ಷಿತ, ಅಪ್ರಮಾರ್ಜಿತ, ಉತ್ಸರ್ಗಾದಾನ, ಸಂಸ್ತರೋಪಕ್ರಮಣ, ಮತ್ತು ಅನಾದರ-ಅನುಸ್ಮೃತ್ಯವೆಂದು ಐದು ಇವೆ.

೧. ಪ್ರೋಷಧಕ್ಕೆ ಕೂಡ್ರುವಾಗ ಭೂಮಿಯ ಶೋಧನೆ ಮಾಡದೆಯೇ ಕುಳಿತುಕೊಳ್ಳುವುದು ಅಪ್ರತ್ಯವೇಕ್ಷಿತ ಅತಿಚಾರವಿದೆ.

೨. ವ್ರತಧಾರಿಯು ಪ್ರೋಷಧ ಮಾಡುವಾಗ ಭೂಮಿಯ ಶೋಧನೆ ಮಾಡುತ್ತಿದ್ದರೂ, ಕೋಮಲ ಪಿಂಛಿ ಅಥವಾ ಕೋಮಲ ವಸ್ತ್ರದಿಂದ ಶೋಧನ ಮಾಡದೇ ದಪ್ಪದಾದ ವಸ್ತ್ರ ಅಥವಾ ಕಠೋರ ಪಿಂಛಿಯಿಂದ ಶೋಧನ ಮಾಡುವುದು ಅಪ್ರಮಾರ್ಜಿತ ಅತಿಚಾರವಿದೆ.

೩. ನೋಡದ, ಶೋಧಿಸದ ಭೂಮಿಯಲ್ಲಿ ಮಲ-ಮೂತ್ರಗಳ ಕ್ಷೇಪಣ ಮಾಡುವುದು ಉತ್ಸರ್ಗಾದಾನ ಅತಿಚಾರವಿದೆ.

೪. ನೋಡದ, ಶೋಧಿಸದ ಸ್ಥಾನದ ಮೇಲೆ ಆಸನ, ಹಾಸಿಗೆ, ಚಾಪೆ ಮೊದಲಾದುವನ್ನು ಹಾಸುವುದು, ಹರಡುವುದು ಸಂಸ್ತರೋಪಕ್ರಮಣ ಅತಿಚಾರವಿದೆ.

೫. ಉತ್ಸಾಹವಿಲ್ಲದೆ, ಧರ್ಮ ಭಾವನೆಯಿಂದ ರಹಿತನಾಗಿದ್ದು, ಪ್ರಮಾದ ಸಹಿತ, ಪರಮಾರ್ಥದಿಂದ

ಶೂನ್ಯನಾಗಿ, ಲೌಕಿಕ ಯಶಸ್ಸಿನ ಲೋಭದ ವಶನಾಗಿ ಅನ್ಯರಿಗೆ ತೋರಿಸುವ ಸಲುವಾಗಿ, ಅನಾದರಪೂರ್ವಕ ಪ್ರೋಷಧ ಮಾಡುವುದು ಅನಾದರ ಅನುಸ್ಮೃತ್ಯ ಅತಿಚಾರವಿದೆ.

ಪ್ರೋಷಧೋಪವಾಸದ ಇವು ಐದು ಅತಿಚಾರಗಳಿದ್ದು ಇವುಗಳಿಂದ ರಹಿತ ಶುದ್ಧ ಭಾವದಿಂದಯುಕ್ತ ವೈರಾಗಿಯು, ತನ್ನ ವ್ರತದ ಪರಿಪಾಲನೆ ಮಾಡುವಂಥ ವ್ರತಿಯು, ಪ್ರೋಷಧ ನೆಲೆಯ ಧಾರಕನು ಉತ್ತಮ ಶ್ರಾವಕನೆನಿಸಿಕೊಳ್ಳುತ್ತಾನೆ.

**ಐದನೆಯ ಸಚಿತ್ತತ್ಯಾಗ ನೆಲೆ –** ಐದನೇ ನೆಲೆಯ ಧಾರಕ ಶ್ರಾವಕನು ಸಚಿತ್ತ ವಸ್ತುವಿನ ತ್ಯಾಗಿಯಿರುತ್ತಾನೆ. ಅವನು ಸಚಿತ್ತ ಜಲದ ಉಪಯೋಗ ಮಾಡುವುದಿಲ್ಲ. ಕೈ, ಕಾಲು, ತಲೆ ಮೊದಲಾದ ಅಂಗೋಪಾಂಗಗಳನ್ನು ಅಪ್ರಾಸುಕ ಜಲದಿಂದ ತೊಳೆದುಕೊಳ್ಳುವುದಿಲ್ಲ. ತನ್ನ ಕೈಯಿಂದ ನದಿ, ಸರೋವರ, ಬಾವಿಯ ನೀರನ್ನು ತುಂಬುವುದಿಲ್ಲ. ಕಾಯಿಸದೆ ಇರುವ ನೀರಿನಿಂದ ಸ್ನಾನ ಮಾಡುವುದಿಲ್ಲ. ವನಸ್ಪತಿಯನ್ನು ಕತ್ತರಿಸುವುದಿಲ್ಲ. ಭೋಗಿಗಳು ಭೋಗಿಸಲು ಯೋಗ್ಯವಾದ ಹೂವು, ಮಾಲೆ ಹಾಗೂ ಮಹಾ ಪರಿಮಳಯುಕ್ತ ಅನೇಕ ಜಾತಿಯ ಪುಷ್ಪಗಳನ್ನು ವ್ರತಿಯು ತನ್ನ ಕೈಯಿಂದ ಬಿಡಿಸುವುದಿಲ್ಲ, ಮುಟ್ಟುವುದಿಲ್ಲ, ಧರಿಸುವುದಿಲ್ಲ, ಆಘ್ರಾಣಿಸುವುದಿಲ್ಲ.

ಭೋಗೀ ಜೀವಗಳು ಭೋಗಿಸಲು ಯೋಗ್ಯವಿರುವ ಅನೇಕ ಜಾತಿಯ ಸಚಿತ್ತ ಹಣ್ಣು ಹಂಪಲು, ದ್ರಾಕ್ಷಿ, ದಾಳಿಂಬೆ, ಬಾಳೆಹಣ್ಣು, ಮಾವು, ಸೀಬೆ, ಕಿತ್ತಳೆ, ನಿಂಬೆ, ಸೀತಾಫಲ, ಸೇಬು, ಬೋರಿ, ಖರ್ಜೂರ, ಅಖರೋಟ ಇತ್ಯಾದಿ ಸಚಿತ್ತ ವಸ್ತುಗಳನ್ನು ಸಚಿತ್ತ ತ್ಯಾಗಿಯು ತಿನ್ನುವುದಿಲ್ಲ. ಮರದಿಂದ ಕೀಳುವುದಿಲ್ಲ ಮತ್ತು ಹೆಚ್ಚುವುದಿಲ್ಲ. (ಕತ್ತರಿಸುವುದಿಲ್ಲ) ಸೌತೆಕಾಯಿ, ಕಲ್ಲಂಗಡಿ ಮೊದಲಾದವನ್ನು ತಿನ್ನುವುದಿಲ್ಲ. ಅನೇಕ ವ್ಯಂಜನಗಳು, ಅಯೋಗ್ಯ ವಸ್ತುಗಳು, ವಿಧ-ವಿಧದ ತರಕಾರಿಗಳು, ಎಲೆ, ಫಲ-ಪುಷ್ಪ, ಮಿಡಿಗಾಯಿ, ಮೊಗ್ಗು, ಜಡಜಾತಿ, ಕಂದಜಾತಿ, ತೊಗಟೆಯಜಾತಿ, ಔಷಧಜಾತಿ, ಚಮತ್ಕಾರಿಕ ಗುಣಯುಕ್ತ, ಪ್ರತ್ಯಕ್ಷ ರೋಗನಷ್ಟ ಮಾಡುವಂಥ, ಹಸಿರು ವನಸ್ಪತಿ ಇತ್ಯಾದಿಗಳಿಗೆ ಸೇರಿದ, ವಿಷಯೇಚ್ಛೆಯುಳ್ಳ ಜೀವರುಗಳ ಭೋಗಯೋಗ್ಯ ವಸ್ತುವನ್ನು ಸಚಿತ್ತ ತ್ಯಾಗಿಯಾದ ಧರ್ಮಾತ್ಮಾ ಶ್ರಾವಕನು ತಿನ್ನುವುದಿಲ್ಲ.

ಭೋಗಿಗಳಿಗೆ ಪ್ರಿಯವಿರುವ ಅನೇಕ ಒಳ್ಳೆಯ ವಸ್ತುಗಳು, ಅವನ್ನು ಭೋಗಿಸುವ ಸಲುವಾಗಿ ಭೋಗಿಯು ಅವುಗಳ ಪ್ರಾಪ್ತಿಯ ಸಲುವಾಗಿ ಮನ-ವಚನ-ಧನ-ತನುವನ್ನು ತೊಡಗಿಸಿ ಅನೇಕ ಕಷ್ಟಗಳನ್ನು ಸಹಿಸಿಯೂ ಅವನ್ನು ಭೋಗಿಸುತ್ತಾನೆ. ದೊಡ್ಡ ದೊಡ್ಡ ಸುಭಟ ಪುರುಷರು ಕೂಡ ಯಾವವುಗಳ ಭೋಗದಲ್ಲಿ ಸುಖ ಮನ್ನಿಸುತ್ತಾರೆ, ಅಂಥ ಆ ಸಚಿತ್ತ ವಸ್ತುಗಳನ್ನು ಶರೀರ ಭೋಗಗಳ ಕುರಿತಾಗಿ ಉದಾಸೀನ, ಆತ್ಮಿಕ ಸುಖದ ಭೋಗಿಯಾದ ಸಚಿತ್ತ ತ್ಯಾಗಿ ಧರ್ಮಾತ್ಮಾ ಶ್ರಾವಕನು ತಿನ್ನುವುದಿಲ್ಲ. ಈ ಸಚಿತ್ತ ತ್ಯಾಗಿಗೆ ಜಗತ್ತಿನ ಭೋಗ, ಇಂದ್ರಿಯ ಜನಿತ ಸುಖವು ಪ್ರಿಯವೆನಿಸುವುದಿಲ್ಲ. ಈ ಐದನೇ ನೆಲೆಯಧಾರಕ ಸಚಿತ್ತ ತ್ಯಾಗೀ ಶ್ರಾವಕನು ಮನೆಯಲ್ಲಿಯೇ ಯತಿಯ ಸಮಾನ ಭಾವಧಾರಣ ಮಾಡಿ ವಿರಕ್ತ ಭಾವದೊಂದಿಗೆ ಕಾಲ ಕಳೆಯುತ್ತಾನೆ.

**ಆರನೆಯ ರಾತ್ರಿ ಭುಕ್ತಿತ್ಯಾಗನೆಲೆ –** ಈ ನೆಲೆಯ ಧಾರಕನು, ರಾತ್ರಿ ಭೋಜನ ತ್ಯಾಗೀ ಧರ್ಮಾತ್ಮನು ಹಗಲು ಹೊತ್ತಿನಲ್ಲಿ ಕುಶೀಲ ಸೇವನೆ ಮಾಡುವುದಿಲ್ಲ. ಇದರಲ್ಲಿ ರಾತ್ರಿ ಭೋಜನದ ತ್ಯಾಗವು ಪೂರ್ಣ ರೂಪದಿಂದ ಆಗುತ್ತದೆ. ಅದರಿಂದ ರಾತ್ರಿ ಭುಕ್ತಿಯ ತ್ಯಾಗಿಯಿದ್ದಾನೆ.

**ಸಂದೇಹ –** ರಾತ್ರಿ ಭೋಜನದ ತ್ಯಾಗವು ಇದರಲ್ಲಿ ಆಯಿತು; ಹಾಗಾದರೆ ಕೆಳಗಿನ ನೆಲೆಗಳ ಧಾರಕರು ರಾತ್ರಿ ಭೋಜನ ಮಾಡುತ್ತಿದ್ದರೇನು ? ಹಾಗೂ ಹಗಲಿನಲ್ಲಿ ಕುಶೀಲ ಸೇವನೆಯು ಇಲ್ಲಿ ಬಿಟ್ಟುಹೋಯಿತು, ಹಾಗಾದರೆ ಕೆಳಗಿನ ನೆಲೆಯುಳ್ಳವರು ಹಗಲಿನಲ್ಲಿ ಕುಶೀಲ ಸೇವನೆ ಮಾಡುತ್ತಿದ್ದರೇನು ?

**ಸಮಾಧಾನ -** ಸೋದರನೇ ! ನಿನ್ನ ಪ್ರಶ್ನೆಯಂತೂ ಸರಿಯಿದೆ, ಆದರೆ ಈಗ ಚಿತ್ತದ ಏಕಾಗ್ರತೆಯಿಂದ ಆಲಿಸು!! ಈಗಲೂ ಜಗತ್ತಿನಲ್ಲಿ ಅಂಥ ಪ್ರವೃತ್ತಿಯು ಕಂಡು ಬರುತ್ತದೆ. ಹೀನಜ್ಞಾನೀ, ಹೀನ ಪುಣ್ಯವಂತರಾದ ಮುಗ್ಧ ಜೀವಗಳು ಬಾಯಿದಂತೂ ಬಹಳಷ್ಟು ಹೇಳುತ್ತಾರೆ. ವಾಚಾಳ ಕ್ರಿಯೆಯನ್ನು ವಿಶೇಷವಾಗಿ ಮಾಡುತ್ತಾರೆ, ಆದರೆ ಕಾರ್ಯವೇನೂ ಮಾಡುವುದಿಲ್ಲ. ಅವರಿಂದ ಮಾಡಲಾಗುವುದಿಲ್ಲ. ಏಂದರೆ ಅವರು ಅಸತ್ಯ ಮಾತನಾಡುವಂಥವರಿದ್ದಾರೆ, ಪಾಖಂಡಿಗಳಿದ್ದಾರೆ, ಅನ್ಯರನ್ನು ವಂಚಿಸುವಂಥ ಅವರು ಬಾಲಬುದ್ಧಿಯಿದ್ದಾರೆ ತಮ್ಮ ಕೀರ್ತಿಯ ಲೋಭಿಯಿದ್ದಾರೆ.

ಇದರಿಂದ ವಿಪರೀತ ಮಹಾಜ್ಞಾನಿ, ಪಂಡಿತ, ದೀರ್ಘ ಪುಣ್ಯವಂತರು, ಸಜ್ಜನ ಸ್ವಭಾವದ ಧರ್ಮಾತ್ಮರು ಧೀರ ಬುದ್ಧಿಯಿಂದ ಮಹಾನಕಾರ್ಯ ಮಾಡುತ್ತಿದ್ದರೂ ತಮ್ಮ ಮುಖದಿಂದ ಅಲ್ಪ ಪ್ರಕಟ ಮಾಡುತ್ತಾರೆ. ಅದೇ ರೀತಿ ಬೇರೆಯವರಿಗೆ ತೋರಿಸಿಕೊಡುವ ಸಲುವಾಗಿ, ಬೇರೆಯವರನ್ನು ಆಕರ್ಷಿತ ಮಾಡುವ ಸಲುವಾಗಿ ಮುಗ್ಧ ಜೀವರುಗಳ ಮಾನ-ಧನ ಹರಣ ಮಾಡುವ ಸಲುವಾಗಿ, ತಮ್ಮ ಚರಣಗಳಿಗೆ ಅವರನ್ನು ಬಾಗಿಸುವ ಸಲುವಾಗಿ ಆ ಪಾಖಂಡಿಗಳು ತಮ್ಮ ಕುಜ್ಞಾನದ ಪ್ರಬಲತೆಯಿಂದ, ಧರ್ಮ ಸೇವನೆಯ ಅನೇಕ ಸೋಗುಗಳನ್ನು ಧಾರಣ ಮಾಡಿ ಜಪ, ತಪ ಹಾಗೂ ವಚನದ ಆಡಂಬರದಿಂದ ಕಥನವನ್ನು ಬಹಳಷ್ಟು ಮಾಡುತ್ತಾರೆ; ಆದರೆ ಆ ಪರಮಾರ್ಥಶೂನ್ಯ ಪ್ರಾಣಿಗಳಿಂದ ಯಾವುದೂ ಸಾಧ್ಯವಾಗುವುದಿಲ್ಲ; ಅದರಿಂದ ಆ ಜೀವರುಗಳು ಧರ್ಮಾತ್ಮರೂ ಇಲ್ಲ ಮತ್ತು ಧರ್ಮಾರ್ಥಿಗಳೂ ಇರುವುದಿಲ್ಲ.

**ಜೇ ಜಗತ ಯಶತೈ ಉದಾಸೀ, ಜಿನನೇ ತೋಡೀ ಮಮತಾ ಫಾಂಸೀ,**
**ತೇ ಅಲ್ಪಕಾಲಮೇ ಶಿವಜಾಸೀ, ಸ್ವರ್ಗ ಸಂಪದಾ ಹೋಯ 'ಜಿನ' ದಾಸೀ ।**
**ಮಿಥ್ಯಾದೃಷ್ಟಿ' - ತಿನ ಕೀ ನಾಶೀ, ಭವ್ಯ ವಹೀ ಹೋವೇ ಸುಖರಾಶೀ ॥**

ಇಂಥ ನಿಕಟ ಸಂಸಾರಿಗಳು ಬಹಳಷ್ಟು ಧರ್ಮದ ಸೇವನೆ ಮಾಡುತ್ತಿದ್ದರೂ ತಮ್ಮ ಮಹಿಮೆಯನ್ನು ಬಯಸದಂಥ ಧರ್ಮಾತ್ಮರಿದ್ದಾರೆ. ಈ ಪ್ರಕಾರ ನೀನು ವಿಚಾರ ಮಾಡಿ ನೋಡು ! ಯಾವ ಜೀವಗಳು ಅಲ್ಪದಾದ ಧರ್ಮ ಸೇವನೆಯನ್ನು ಕೂಡ ಉತ್ಕೃಷ್ಟವೆಂದು ತಿಳಿದುಕೊಂಡು ಪಾಪದಿಂದ ಭಯಭೀತರಾಗಿರುತ್ತಾರೆ. ಆ ಜೀವರುಗಳೇ ವಿಷಯ-ಕಷಾಯದ ತ್ಯಾಗ ಮಾಡಿ ಶುಭಾಚರಣೆಯ ರೂಪ ಪರಿಣಮಿತರಾಗುತ್ತಾರೆ. ಕೆಲವರು ಮನೆ-ಪತ್ನಿಯ ತ್ಯಾಗ ಮಾಡುತ್ತಾರೆ, ಕೆಲವರು ಭೋಜನದ್ದೂ ತ್ಯಾಗ ಮಾಡಿ ಉಪವಾಸ ಮಾಡುತ್ತಾರೆ. ಕೆಲವರು ಜೀವನದುದ್ದಕ್ಕೂ ಸ್ತ್ರೀ ವಿಷಯದ ತ್ಯಾಗ ಮಾಡುತ್ತಾರೆ, ಕೆಲವರು ರಾತ್ರಿಯಲ್ಲಿ ಜಲದ್ದೂ ತ್ಯಾಗ ಮಾಡುತ್ತಾರೆ - ಇತ್ಯಾದಿ ರೂಪದಲ್ಲಿ ಮುಗ್ಧ ಜೀವರುಗಳೇ ಧರ್ಮಾನುರಾಗದಿಂದ ಪ್ರವೃತ್ತಿ ಮಾಡುತ್ತಾರೆ.

**ಜೇ ಸಮತಾರಸ ಸ್ವಾದ ಚಖ್ಯೆಯ್ಯಾ, ಜೀನಕೋ ದರ್ಶನ ಮೋಹ ಗಯೋ ।**
**ತಬ ಸಮ್ಯಕ್ತ್ವ ಸ್ವ ಘರ ಸು-ಭಾಯೋ, ಭೇದಜ್ಞಾನ ತಬ ಸಹಜಹಿ ಲಯೋ ॥**
**ತಬ ಹೀ ಐಸೋ-ಭಾವ ಸು-ಭಾಯೋ, 'ವಿಷಯಭೋಗ'-ವಿಷ ರೋಗ ಕೂ ಮಯೋ ।**
**ಗುಣಸ್ಥಾನ ಸು-ಚೌಥೋ ಲಯೋ, ಪರಸೇತೀ ಸ್ವ-ಭಿನ್ನ ಸು-ಭಯೋ ॥**
**ವಿಷಯ ರಾಗ ತಬ ಸಹಜಹಿ ಗಯೋ, ಸಮತಾ-ಭಾವ ಸಹಜ ಪರಿಣಯೋ ।**
**ದಿಖತ ಬಾಹ್ಯ ವಿಷಯೀ ಸೋ ರಹೋ, ಅಂತರಂಗಮೇ ಭೇದಿತ ಭಯೋ ॥**

ಈ ಪ್ರಕಾರ ಜಿನ-ಆಜ್ಞೆಯ ಪ್ರಮಾಣ ತತ್ತ್ವ ತಿಳಿಯುವಂಥವರು, ಭವ್ಯ, ಅವ್ರತಿಗಳು ಕೂಡ ವಿಷಯಗಳ ಕುರಿತಾಗಿ ವಿರಕ್ತರಿರುವುದರಿಂದ ರಾತ್ರಿ ಭೋಜನ ಮಾಡುವುದಿಲ್ಲ, ಹಗಲು ಹೊತ್ತಿನಲ್ಲಿ ಕುಶೀಲ ಸೇವನೆ ಮಾಡುವುದಿಲ್ಲ. ಎಲೈ ಭವ್ಯನೇ ! ಪಂಚಮಗುಣಸ್ಥಾನವರ್ತೀ ವ್ರತಿ ಶ್ರಾವಕರ ಕುರಿತಾಗಿ ಮೊದಲನೇ ಎರಡನೇ,

ಮೂರನೇ, ನಾಲ್ಕನೆಯ, ಐದನೆಯ ನೆಲೆಗಳ ತ್ಯಾಗ, ಆ ನೆಲೆಗಳ ಕ್ರಿಯೆ, ಪ್ರವೃತ್ತಿ ಅವುಗಳ ಧಾರಕ ಶ್ರಾವಕರ ವೈರಾಗ್ಯ ದೃಷ್ಟಿಯ ರಸದ ವರ್ಣನೆಯನ್ನಂತೂ ಒಳ್ಳೆಯ ರೀತಿಯಿಂದ ಮಾಡಿ ಬಂದಿದ್ದೇವೆ, ಅದನ್ನು ನೀನು ಗಮನವಿಟ್ಟು ಆಲಿಸಿಯೇ ಆಲಿಸಿರುವೆ. ಈಗ ನೀನು ಸ್ವಯಂ ವಿಚಾರ ಮಾಡಿ ನೋಡು ! ಈ ಕೆಳಗಿನ ನೆಲೆಗಳಲ್ಲಿ ಹಗಲು ಹೊತ್ತಿನಲ್ಲಿ ಪತ್ನಿಯ ಭೋಗವಾಗಲಿ ಅಥವಾ ರಾತ್ರಿ ಭೋಜನವಾಗಲಿ ಹೇಗೆ ಇರುವ ಸಾಧ್ಯತೆಯಿದೆ ?

ಮಹಾಉದಾಸೀನ ವೃತ್ತಿಯ ಧಾರಕ, ವೈರಾಗಿ, ಮಹಾಭಾಗ್ಯವಂತನಾದ ಆರನೇ ನೆಲೆಯ ಧಾರಕ ಶ್ರಾವಕನಿಗೆ ಹಗಲು ಹೊತ್ತಿನಲ್ಲಿ ಪತ್ನಿಯ ಭೋಗವಾಗುವಷ್ಟು ವಿಷಯದ ರಸವಿರುವುದಿಲ್ಲ. ಇಂಥ ಮಹಾಧರ್ಮಾತ್ಮರಿಗೆ ರಾತ್ರಿ ಕಾಲದಲ್ಲಿ ಕೂಡ ಪತ್ನಿಯ ನಾಮಮಾತ್ರದಿಂದಲೇ ಸಂತೋಷವಾಗಿ ಹೋಗುತ್ತದೆ, ಆಸಕ್ತಿಯು ಇರುವುದಿಲ್ಲವೆಂದು ತಿಳಿಯುವುದು. ಒಂದು ದಿವಸದಲ್ಲಿ ಒಂದೇ ಬಾರಿ ಹಗಲು ಹೊತ್ತಿನಲ್ಲಿ ಅಲ್ಪ ಮತ್ತು ನೀರಸ ಭೋಜನ ಮಾಡುವಂಥ ಧರ್ಮಾತ್ಮರಿಗೆ ರಾತ್ರಿ ಭೋಜನವೆಲ್ಲಿಂದ ಇರುವ ಸಾಧ್ಯತೆಯಿದೆ ? ಆದಾಗ್ಯೂ ಜಿನದೇವರ ಆಜ್ಞೆಯ ಅನುಸಾರ ಐದನೇ ನೆಲೆಯವರೆಗೆ ಯಾವುದಾದರೂ ಅತಿಚಾರ ತಗಲುವ ಭಯದಿಂದ ಅಲ್ಲಿ ಇವುಗಳ ತ್ಯಾಗ ಹೇಳಿಲ್ಲ.

ಈ ಆರನೇ ನೆಲೆಯಲ್ಲಿ ರಾತ್ರಿ ಭೋಜನದ ಮತ್ತು ಹಗಲಿನಲ್ಲಿ ಕುಶೀಲದ ಅತಿಚಾರಗಳು ಕೂಡ ತಗಲುವುದಿಲ್ಲ. ಅದರಿಂದ ವ್ರತದ ರೂಪದಲ್ಲಿ ಹೇಳಿದ್ದಾರೆಂದು ತಿಳಿಯುವುದು. ರಾತ್ರಿಯಲ್ಲಿ ಬೀಸಿದ, ಕುಟ್ಟಿದ, ರಾತ್ರಿಯಲ್ಲಿ ಆಯ್ದ (ಕಸ-ಕಡ್ಡಿಗಳಿಂದ ಬೇರ್ಪಡಿಸಿದ), ಬೇಯಿಸಿದ, ಶೋಧಿಸಿದ, ಹಂಚಿದ, ತಿಕ್ಕಿದ, ತೊಳೆದ - ಇತ್ಯಾದಿ ರೂಪದಲ್ಲಿ ರಾತ್ರಿಯ ಆರಂಭವುಳ್ಳ ಭೋಜನ-ಆಹಾರವನ್ನು ಆರನೇ ನೆಲೆಯ ಧಾರಕನು ತಿನ್ನುವುದಿಲ್ಲ. ರಾತ್ರಿಯಲ್ಲಿ ಮಾಡಲಾದ ಆರಂಭಯುಕ್ತ ಭೋಜನವನ್ನು ತಗೆದುಕೊಳ್ಳುವುದರಿಂದ ರಾತ್ರಿ ಭೋಜನದ ದೋಷ ತಗಲುತ್ತದೆ. ಈ ಪ್ರಕಾರದ ಕೆಳಗಿನ ನೆಲೆಗಳಲ್ಲಿ ತಗಲುವಂಥ ಯಾವುದೇ ಸೂಕ್ಷ್ಮ ಅತಿಚಾರವು ಈ ಆರನೇ ನೆಲೆಯಲ್ಲಿ ತಗಲುವುದಿಲ್ಲ. ಮೊದಲು ಹಗಲು ಹೊತ್ತಿನಲ್ಲಿಯೂ ತನ್ನ ಪತ್ನಿಯನ್ನು ಕಂಡು ವಿಕಾರ ಭಾವವಾಗುತ್ತಿತ್ತು. ಕೆಲವೊಮ್ಮೆ ಸರಾಗತೆಯಿಂದ ಕೂಡಿದ ಮಾತುಗಳು ಮತ್ತು ಕಾಮದ ಯಾವುದೋ ವಿಕೃತ ಚೇಷ್ಟೆಯೂ ಸಂಭವಿಸುತ್ತಿತ್ತು. ಆದರೆ ಈಗ ಇಲ್ಲಿ ಆರನೇ ನೆಲೆಯಲ್ಲಿ ಮನ-ವಚನ-ಕಾಯಗಳಿಗೆ ಸಂಬಂಧಿಸಿದ ದೋಷಗಳು ತಗಲುವುದಿಲ್ಲ. ಅದರಿಂದ ಈ ಆರನೇ ನೆಲೆಯಲ್ಲಿ ರಾತ್ರಿ ಭೋಜನದ ಮತ್ತು ಹಗಲಿನ ಕುಶೀಲದ ತ್ಯಾಗ ಹೇಳಿದ್ದಾರೆ. ಈ ರೀತಿ ಇದರ ಹೆಸರು ರಾತ್ರಿಭುಕ್ತಿತ್ಯಾಗ ನೆಲೆಯೆಂದು ಹೇಳಲಾಗಿದೆ.

ಈ ಪ್ರಕಾರ ಶ್ರೀ ಸುದೃಷ್ಟಿ ತರಂಗಿಣಿಯೆಂಬ ಹೆಸರಿನ ಗ್ರಂಥದಲ್ಲಿ ಹನ್ನೊಂದು ನೆಲೆಗಳ ಅಂತರ್ಗತ ಆರನೇ ನೆಲೆಯ ಕಥನ ಮಾಡುವಂಥ ಮೂವತ್ತಾರನೆಯ ಪರ್ವವು ಸಂಪೂರ್ಣವಾಯಿತು.

★★★★★

ಯಾರ ಭಾವಗಳಲ್ಲಿ ಸಮ್ಯಗ್ದರ್ಶನದ ಭೂಮಿಕೆಯು ನಿರ್ಮಾಣವಾಗಿದೆ, ಯಾರು ತಮ್ಮ ಆತ್ಮನನ್ನು ಪರಮಾತ್ಮನ ಸಮಾನ ಶಕ್ತಿಶಾಲಿಯೆಂಬುದನ್ನು ತಿಳಿದು ನಿಶ್ಚಯ ಮಾಡಿದ್ದಾರೆ, ಯಾರಿಗೆ ತಮ್ಮ ಆತ್ಮನಲ್ಲಿ ಮತ್ತು ಪರಮಾತ್ಮನಲ್ಲಿ ಸಮಾನತೆ, ಸಮಾನತೆಯು ಹೊಳೆಯುತ್ತಿದೆ, ಯಾರು ನಿಜವಾದ ಆತ್ಮಿಕ ಸುಖವನ್ನೇ ಸುಖವೆಂದು ತಿಳಿದಿದ್ದಾರೆ ಯಾರು ನಿಶ್ಚಯ ರತ್ನತ್ರಯ ರೂಪದ ತೀರ್ಥವನ್ನೇ ಧರ್ಮ ತಿಳಿದು ಆತ್ಮಾನುಭವವೇ ಮುಕ್ತಿಯ ಸೋಪಾನವೆಂದು ವಿಶ್ವಾಸ ಮಾಡಿದ್ದಾರೆ ಅವರೇ ಈ ಜಗತ್ತಿನಲ್ಲಿ ಸುಖಿಗಳಿದ್ದಾರೆ.

# ೩೭ : ಮೂವತ್ತೇಳನೆಯ ಪರ್ವ
# ಬ್ರಹ್ಮಚರ್ಯಾದಿಗಳ ಕಥನ

**ಏಳನೆಯ ಬ್ರಹ್ಮಚರ್ಯನೆಲೆ** - ಆರನೇ ನೆಲೆಯವರೆಗೆ ಸ್ವಸ್ತ್ರೀಯ ತ್ಯಾಗವಾಗದಿರುವುದರಿಂದ ಮಹಾ ಸಂತೋಷಿ, ತನ್ನ ಪದದ ಯೋಗದಿಂದ ತನ್ನ ವಿವಾಹಿತ ಪತ್ನಿಯನ್ನು 'ಇವಳು ನನ್ನ ಪತ್ನಿಯಿದ್ದಾಳೆ'ಂದು ಅವಳನ್ನು ಸ್ತ್ರೀಯ ಭಾವದಿಂದ ತಿಳಿಯುತ್ತಿದ್ದನು. ಆದರೆ ಈಗ ಏಳನೇ ನೆಲೆಯ ಧಾರಕನು ಸ್ವ-ಪರ ಎರಡೂ ಸ್ತ್ರೀಯರ ತ್ಯಾಗಿಯಾಗಿ ಹೋಗಿದ್ದಾನೆ. ಪರಸ್ತ್ರೀಯ ತ್ಯಾಗಿಯಂತೂ ಮೊದಲಿನಿಂದಲೇ ಇದ್ದನು. ಸ್ವಸ್ತ್ರೀಯ ತ್ಯಾಗಿ ಈ ಏಳನೇ ನೆಲೆಯಲ್ಲಿ ಆದನು. ಈಗ ಅವನು ತನ್ನ ಪತ್ನಿಯನ್ನು ಕೂಡ ವಿಕಾರ ಭಾವದಿಂದ ನೋಡುವುದಿಲ್ಲ. ಈ ನೆಲೆಯಲ್ಲಿ ಮಹಾಶೀಲವ್ರತದ ಧಾರಕ, ಬ್ರಹ್ಮಚರ್ಯವ್ರತಿಯು ಚೇತನ-ಅಚೇತನ ಸಮಸ್ತ ಸ್ತ್ರೀಯರ ತ್ಯಾಗಿಯಾಗಿ ಹೋಗಿರುವುದರಿಂದ ಅವನು ಬ್ರಹ್ಮಚಾರಿಯೆನಿಸಿಕೊಳ್ಳುತ್ತಾನೆ.

ಇಲ್ಲಿ ಈಗ ಬ್ರಹ್ಮ ಶಬ್ದದ ನಾಲ್ಕು ಭೇದ ಹೇಳುತ್ತಾರೆ -

**ಬಂಭ ಸುಭಾವೋ ಆದಾ, ತ್ಯಾಜ ಬಂಭೋಯ ಜೋಯ ಪಯ ಹಾರೋ ।**
**ಕಿಪ್ಪಾ ಬಂಭಾಚಾರೋ, ಭತ್ತೋ ಕಿತ್ತೇಯ ಬಂಧ ಕುಲ ಹೋಈ ॥೧೪೧॥**

**ಗಾಥಾರ್ಥ :-** ಆತ್ಮನ ಸ್ವಭಾವವೇ ಬ್ರಹ್ಮವಿದೆ. ನಿಜಸ್ತ್ರೀಯ ತ್ಯಾಗವು ತ್ಯಾಗ ಬ್ರಹ್ಮವಿದೆ. ಆಚಾರ ವ್ರತದ ಧಾರಕತೆ ಕ್ರಿಯಾಬ್ರಹ್ಮವಿದೆ. ಭರತನ ಮೂಲಕ ಮಾಡಲಾಗಿರುವುದು ಕುಲ ಬ್ರಹ್ಮವಿದೆ.

**ಭಾವಾರ್ಥ :-** ಸ್ವಭಾವವು ಬ್ರಹ್ಮವಿದೆ, ತ್ಯಾಗವು ಬ್ರಹ್ಮವಿದೆ, ಕ್ರಿಯೆಯು ಬ್ರಹ್ಮವಿದೆ, ಮತ್ತು ಕುಲವು ಬ್ರಹ್ಮವಿದೆ. ಇವು ನಾಲ್ಕು ಬ್ರಹ್ಮವಿವೆ. ಆತ್ಮನ ನಾಮರೂಪ ಸ್ವಭಾವ ಬ್ರಹ್ಮದ ಭೇದಗಳು-ಬ್ರಹ್ಮ ಮತ್ತು ಪರಬ್ರಹ್ಮವೆಂದು ಎರಡು ಇವೆ.

ಕರ್ಮಮಲಸಹಿತ, ಜನ್ಮ-ಮರಣಧಾರೀ, ರಾಗ-ದ್ವೇಷದಿಂದ ಸಂಪನ್ನ; ಇಷ್ಟ ವಸ್ತು ದೊರೆತ ಮೇಲೆ ಸುಖಿ, ಅನಿಷ್ಟ ವಸ್ತು ದೊರೆತ ಮೇಲೆ ದುಃಖಿಯಾಗುವಂಥ, ಹಸಿವೆ-ಬಾಯಾರಿಕೆಯೆಂಬ ರೋಗದ ಉತ್ಪತ್ತಿಯಿಂದ ಸಹಿತ ಆತ್ಮನು ಬ್ರಹ್ಮನಿದ್ದಾನೆ. ಮತ್ತು ಜನ್ಮ-ಜರೆ-ಮರಣದಿಂದ ರಹಿತ, ಅಮೂರ್ತಿಕ, ಸಂಪೂರ್ಣ ದುಃಖ, ದೋಷಗಳಿಂದ ರಹಿತ, ಕೇವಲಜ್ಞಾನಧಾರಿ, ಅಂತರ್ಯಾಮಿ ಆತ್ಮನು ಪರಬ್ರಹ್ಮನಿದ್ದಾನೆ. ಈ ಪ್ರಕಾರ ಸ್ವಭಾವ ಬ್ರಹ್ಮನ ಭೇದಗಳು ಎರಡು ಇವೆ. ಇಲ್ಲಿ ಬ್ರಹ್ಮದ ಅರ್ಥವು ಆತ್ಮವಿದೆ.

ಪೂರ್ವೋಕ್ತ ಸ್ವ-ಪರಸ್ತ್ರೀಯ ತ್ಯಾಗಿ ಏಳನೇ ನೆಲೆಯ ಧಾರಕ ಬ್ರಹ್ಮಚಾರಿಯು ಎರಡನೇ ಬ್ರಹ್ಮನಿದ್ದಾನೆ. ಇವನ ಪದವು ಅನುಕ್ರಮದಿಂದ ಮೊದಲನೇ ನೆಲೆಯಿಂದ ಹಿಡಿದು ಏಳನೇ ನೆಲೆಯವರೆಗೆ ತ್ಯಾಗಾನುಸಾರ ಹೆಚ್ಚುತ್ತ ಹೋಗುತ್ತದೆ. ಅದರಿಂದ ಇವನನ್ನು ತ್ಯಾಗ ಬ್ರಹ್ಮನೆಂದು ಹೇಳುತ್ತಾರೆ.

ಮೂರನೆಯ ಕ್ರಿಯಾ ಬ್ರಹ್ಮನ ಸ್ವರೂಪ ತಿಳಿಯುವ ಸಲುವಾಗಿ ಉಪಾಸಕಾಧ್ಯಯನದ ಏಳನೇ ಅಂಗದ ಅನುಸಾರ ಮಹಾಪುರಾಣದಲ್ಲಿ ಹತ್ತು ಅಧಿಕಾರಗಳನ್ನು ಹೇಳಿದ್ದಾರೆ. ಅದರ ಅನುಸಾರ ಪ್ರಸಂಗ ಪಡೆದು ಇಲ್ಲಿಯೂ ಹೇಳುತ್ತೇವೆ.

**ಸಿಸಿವಿದ್ಯಾಪ ಕುಲಾವಿಧಿ ವಣ್ಣೋತ್ತಮ ಪಾತ ಸೇಯ ವಿವಹಾರೋ ।**
**ಅವಧ್ಯಾಪ ಅದಂಡ ಮಣನೀಯೋ ಪಜ್ಜಾ ಸಮ್ಮ ಧಾನ ದಹ ಭೇಯೋ ॥೧೪೨॥**

**ಗಾಥಾರ್ಥ :-** ಬಾಲವಿದ್ಯೆ, ಕುಲವಿಧಿ, ವರ್ಣೋತ್ತಮ, ಪಾತ್ರತ್ವ, ಶ್ರೇಷ್ಠಪದ, ವ್ಯವಹಾರತೆ, ಅಬಾಧ್ಯತೆ, ಅದಂಡತೆ, ಮಾನನೀಯತೆ, ಪ್ರಜಾಸಂಬಂಧಾಂತರ - ಇವು ಹತ್ತು (ಬ್ರಹ್ಮ ಸ್ವರೂಪ ತಿಳಿಯುವ) ಭೇದಗಳಿವೆ.

**ಭಾವಾರ್ಥ :-** ಬಾಲವಿದ್ಯೆ, ಕುಲವಿಧಿ, ವರ್ಣೋತ್ತಮ, ಪಾತ್ರತ್ವ, ಶ್ರೇಷ್ಠತೆ, ವ್ಯವಹಾರತೆ, ಅಬಧ್ಯತೆ, ಅದಂಡತೆ ಮಾನನೀಯತೆ, ಮತ್ತು ಪ್ರಜಾ ಸಂಬಂಧಾಂತರ - ಇವು ಹತ್ತು ಕ್ರಿಯೆಗಳಿಂದ ಕೂಡಿದ ಕ್ರಿಯೆಯು ಬ್ರಹ್ಮವೆನಿಸುತ್ತದೆ, ಅವುಗಳ ವಿಶೇಷ ವರ್ಣನೆಯು ಈ ಪ್ರಕಾರವಿದೆ.

೧. ಬಾಲ್ಯಾವಸ್ಥೆಯಿಂದಲೇ ವಿದ್ಯೆಯ ಅಧ್ಯಯನ ಮಾಡಿ ಪಂಡಿತನಾಗಿ ಹೋದ ಮೇಲೆ ಶುಭಾಶುಭ ಮಾರ್ಗವು ತಿಳಿದು ಬರುತ್ತದೆ. ಖಾದ್ಯ-ಅಖಾದ್ಯವು ತಿಳಿಯತೊಡಗುತ್ತದೆ. ಪುಣ್ಯ-ಪಾಪದ ಭೇದವು ತಿಳಿದು ಬಿಡುತ್ತದೆ. ಅದರಿಂದ ಯಾವ ಅಜ್ಞಾನೀ ಕುವಾದಿಯು ಸ್ವಯಂ ತನ್ನನ್ನು ಶುದ್ಧ ಧರ್ಮದಿಂದ ಚ್ಯುತಗೊಳಿಸಿ; ವಿಷಯೀ, ಮೋಹೀ ಮತ್ತು ಹಿಂಸಕ ಧರ್ಮದಲ್ಲಿ ತೊಡಗಿಸಬಯಸಿದರೂ ಆ ಕಾರ್ಯವು ಸಾಧ್ಯವಾಗುವುದಿಲ್ಲ. ಅವನು ಪಾಖಂಡಿಗಳಿಂದ ಮೋಸ ಹೋಗುವುದಿಲ್ಲ. ಎಂದರೆ ಮೂರು ಕುಲಗಳಲ್ಲಿ ಉತ್ಪನ್ನ ಭವ್ಯ ಬಾಲಕನು ವಿದ್ಯಾಭ್ಯಾಸ ಮಾಡುತ್ತಾನೆ. ವಿದ್ಯೆ ಕಲಿತುಕೊಳ್ಳದಿದ್ದರೆ ಸ್ವಯಂ ಕುಧರ್ಮ-ಸುಧರ್ಮಗಳ ಪರೀಕ್ಷೆ ಮಾಡಲಾಗುವುದಿಲ್ಲ. ಅದರಿಂದ ಆತ್ಮಧರ್ಮರೂಪ ತನ್ನ ಒಳ್ಳೆಯ ಧರ್ಮವನ್ನು ಬಿಟ್ಟುಕೊಟ್ಟು, ಕುಧರ್ಮದ ಸೇವನೆಯಲ್ಲಿ ತೊಡಗಿ ಪರಭವ ಕೆಡಿಸಿಕೊಳ್ಳುತ್ತಾನೆ. ಅಜ್ಞಾನದ ಕಾರಣ ಖಾದ್ಯ-ಅಖಾದ್ಯಗಳ ಜ್ಞಾನವಿಲ್ಲದಿರುವುದರಿಂದ ಅಭಕ್ಷ್ಯಗಳ ಭಕ್ಷಣೆ ಮಾಡಿ ತನ್ನ ಬುದ್ಧಿಯ ನಾಶ ಮಾಡುತ್ತಾನೆ. ವಿದ್ಯೆಯಿಲ್ಲದೆ ಜಗತ್ತಿನಲ್ಲಿ ನಿಂದೆಯಾಗುತ್ತದೆ, ದೀನನೆನಿಸಿಕೊಳ್ಳುತ್ತಾನೆ. ದೀನತೆಯ ಯೋಗದಿಂದ ಯಾಚನೆ ಮಾಡಲು ಆರಂಭಿಸುತ್ತಾನೆ. ಅದರಿಂದ ತನ್ನ ಉತ್ತಮ ಕುಲವನ್ನು ಕಲಂಕಿತ ಮಾಡುತ್ತಾನೆ. ಒಂದು ವಿದ್ಯೆಯೇ ಸಂಪೂರ್ಣ ಸುಖಗಳ ದಾತೃವಿದೆ ಹಾಗೂ ಅನೇಕ ಗುಣಗಳಿಂದ ಮಂಡಿತವಿದೆಯೆಂಬ ನಿಷ್ಕರ್ಷವಿದೆ.

'ಈ ವಿದ್ಯೆಯ ಅಧ್ಯಯನವನ್ನು ಬಾಲ್ಯಾವಸ್ಥೆಯಲ್ಲಿಯೇ ಮಾಡಬೇಕು; ಏಕೆಂದರೆ ಬಾಲ್ಯಾವಸ್ಥೆಯು ವ್ಯತೀತವಾಗಿ ಹೋದಮೇಲೆ ಜಿಹ್ವೆಯು ಕಠೋರವಾಗುವುದರಿಂದ, ಕಷಾಯಾಂಶವು ವಿಶೇಷವಾಗಿ ಹೋಗುವುದರಿಂದ ಇತ್ಯಾದಿ ದೋಷಗಳಿಂದ ವಿದ್ಯಾದಾತೃವಿನ ವಿನಯವು ಸಂಭವಿಸುವುದಿಲ್ಲ. ಬಾಲ್ಯಾವಸ್ಥೆಯು ಮಂದ ಕಷಾಯ ಸಹಿತವಿರುವ ಕಾರಣ ಚಿಕ್ಕವಯಸ್ಸಿನಲ್ಲಿಯೇ ವಿದ್ಯೆಯ ಅಭ್ಯಾಸ ಮಾಡಬೇಕು. ಆ ವಿದ್ಯೆಯಿಂದ ಪಾಪವನ್ನು ಬಿಟ್ಟುಕೊಟ್ಟು ಜೀವನು ಪುಣ್ಯದ ಗ್ರಹಣ ಮಾಡುತ್ತಾನೆ. ಪರೋಪಕಾರಿಯಾಗುತ್ತಾನೆ. ತನ್ನ ಹಾಗೂ ಇತರರ ಒಳಿತು ಮಾಡುತ್ತಾನೆ' - ಇದರ ಹೆಸರು ಬಾಲವಿದ್ಯಾ ಅಧಿಕಾರವಿದೆ.

೨. ಬ್ರಾಹ್ಮಣ (ಬ್ರಹ್ಮಮಯ-ಓಂ ಆತ್ಮನ ಉಪಾಸನೆ ಮಾಡುವಂಥ ಬ್ರಾಹ್ಮಣ ಅರ್ಥಾತ್ ಜೈನ) ಕುಲವು ಎಲ್ಲ ಕುಲಗಳಲ್ಲಿ ದೊಡ್ಡದಿದೆ-ಉತ್ತಮವಿದೆ. ಬ್ರಾಹ್ಮಣರ ಆಚರಣವು ಕೂಡ ಎಲ್ಲರಿಗಿಂತ ಉಜ್ವಲವಿದೆ. ದಯಾಸಹಿತವಿದೆ, ಉತ್ತಮವಿದೆ. ಅಂಧಕಾರಯುಕ್ತ ಮನೆಯಲ್ಲಿ ಭೋಜನ ಮಾಡುವುದರಿಂದ ರಾತ್ರಿ ಭೋಜನದ ದೋಷವು ಬರುತ್ತದೆ. ಅದಕ್ಕಾಗಿ ಅವನು ರಾತ್ರಿರಹಿತ, ಅಂಧಕಾರ ರಹಿತ, ಉದ್ಯೋತಕಾರಿ ಉತ್ತಮ ಸ್ಥಾನದ ಮೇಲೆ - ಒಂದು ದಿವಸದಲ್ಲಿ ಒಂದು ಬಾರಿ ಒಂದು ಸ್ಥಾನದ ಮೇಲೆ ಕುಳಿತು ನಿರ್ದೋಷ ಆಹಾರ ಮಾಡುತ್ತಾನೆ. ಹೀಗೆ ಅವನ ಪ್ರವೃತ್ತಿಯು ಅನೇಕ ಶುಭಾಚರಣಮಯವಿರುತ್ತದೆ. ಉತ್ತಮ ಆಚರಣವಿಲ್ಲವಾದ ಮೇಲೆ ಕ್ರಿಯೆಯಿಂದ ಭ್ರಷ್ಟನಾಗಿ, ಕಂದ ಮೂಲಾದಿ ಅಭಕ್ಷ್ಯ ಭೋಜನ, ರಾತ್ರಿ ಭೋಜನ, ಶೋಧಿಸದ ಜಲದಿಂದ ನಿರ್ಮಿಸಿದ ಆಹಾರಾದಿಗಳ ಸೇವನೆ ಮಾಡಿ, ದಯಾರಹಿತ-ಕುಭಾವನಾ ಸಹಿತನಾಗಿ ಉತ್ಕೃಷ್ಟ ಕುಲಾಚಾರದಿಂದ ಭ್ರಷ್ಟನಾಗಿ ಹೋಗುತ್ತಾನೆ. ಆದುದರಿಂದ ಉತ್ತಮ ಆಚಾರ ಸಹಿತ ಬ್ರಾಹ್ಮಣನಿಗೆ ಇಂಥ ಕಾರ್ಯ ಬಿಟ್ಟುಕೊಡಬೇಕಾಗುವುದು. ಇದರ ಹೆಸರು ಕುಲವಿಧಿನಾಮಕ ಅಧಿಕಾರವಿದೆ.

೩. ಎಲ್ಲ ಕುಲಗಳಲ್ಲಿ ಬ್ರಾಹ್ಮಣ ಕುಲವು ಉತ್ಕೃಷ್ಟವಿರುವ ಕಾರಣ ಅವನ ಆಚರಣೆಯು ಕೂಡ ಉತ್ಕೃಷ್ಟವೇ ಇರಬೇಕಾಗುವುದು. ನಿರ್ದಯನಾಗಿ ಹೋದರೆ ಬೇಟೆಗಾರನಂತೆ ಹಿಂಸೆ ಮಾಡಿ ಪಾಪಚಾರಿಯಾಗಿ ನಿಂದೆಗೆ

ಪ್ರಾಪ್ತನಾಗುತ್ತಾನೆ; ಅದರಿಂದ ಅವನು ಮಹಾದಯಾವಂತ - ಅನ್ಯ ಜೀವಗಳ ರಕ್ಷಣೆಯರೂಪ ಭಾವವುಳ್ಳವನಿರುತ್ತಾನೆ ಅಸತ್ಯವನ್ನಾಡಿದರೆ ಬ್ರಹ್ಮ ವಚನದ ಮರ್ಯಾದೆಯು ನಷ್ಟವಾಗಿ ಹೋಗುವುದರಿಂದ ಶುಭಾಚಾರಿ ಬ್ರಾಹ್ಮಣನು ಸರ್ವ ಅಸತ್ಯ ವಚನಗಳ ತ್ಯಾಗ ಮಾಡಿ ಸತ್ಯವಾದಿಯಿರುತ್ತಾನೆ. ಕಳವು ಮಾಡುವುದರಿಂದ ರಾಜದಂಡನೆ ಹಾಗೂ ಪಂಚರಿಂದ ದಂಡನೆಯು ಪ್ರಾಪ್ತವಾಗುತ್ತದೆ, ಅಪಕೀರ್ತಿಯಾಗುತ್ತದೆ; ಅದರಿಂದ ಬ್ರಾಹ್ಮಣನು ಕಳ್ಳಕಲೆಯ ದೋಷಗಳಿಂದ ರಹಿತ ಸರ್ವ ಚೋರಿಯ ತ್ಯಾಗಿಯಿರುತ್ತಾನೆ. ದೊರೆಯು ಪರಸ್ತ್ರೀ ಲಂಪಟಿಯ ತಲೆ, ಮೂಗು, ಕಿವಿ, ಕೈ-ಕಾಲುಗಳನ್ನು ಛೇದಿಸುತ್ತಾನೆ. ಪಂಚರು ಜಾತಿಯಿಂದ ಹೊರಗೆ ಹಾಕುತ್ತಾರೆ. ಉಚ್ಚ ಕುಲವು ಕಲಂಕಿತವಾಗುತ್ತದೆ. ಅದರಿಂದ ಬ್ರಾಹ್ಮಣನು ಪರಸ್ತ್ರೀಯ ತ್ಯಾಗೀ-ಶೀಲವಂತನಿರುತ್ತಾನೆ. ಅನಾಚಾರಿಯಾಗಿ ಮಹಾಆರಂಭ ಮಾಡುವುದರಿಂದ, ಮಹಾಲೋಭಿಯಾಗಿ ನಿರ್ದಯನಂತೆ ಕಂಡು ಬರುವುದರಿಂದ ಉತ್ತಮ ಕುಲವು ದೂಷಿತವಾಗುತ್ತದೆ. ಅದರಿಂದ ಬ್ರಾಹ್ಮಣನು ಅಧಿಕ ಆರಂಭ ಹಾಗೂ ಅಧಿಕ ಪರಿಗ್ರಹದ ತ್ಯಾಗ ಮಾಡಿ ನಿರ್ಲೋಭಿಯಾಗಿರುತ್ತಾನೆ - ಇತ್ಯಾದಿ ಗುಣಗಳಿಂದ ಯುಕ್ತನಾದ ಬ್ರಾಹ್ಮಣನು ಶೋಭೆಗೆ ಪ್ರಾಪ್ತನಾಗುತ್ತಾನೆ.

ಬ್ರಾಹ್ಮಣನು ಸ್ವಯಂ ದಯಾವಂತ, ಶೀಲವಂತ, ಸಮತಾಭಾವಿಯಾಗಿರುವ ಕಾರಣ ತನಗಿಂತ ಹೀನ ಆಚರಣೆ ಮಾಡುವಂಥ ಹೀನ ದೇವ, ಹೀನ ಗುರುವಿನ ಉಪಾಸನೆ ಮಾಡುವುದಿಲ್ಲ. ಪ್ರತಿಯಾಗಿ ತನಗಿಂತಲೂ ಅಧಿಕ ವೀತರಾಗೀ ದೇವ-ಗುರುವಿನ ಉಪಾಸನೆ ಮಾಡುತ್ತಾನೆ. ಹೇಗೆ ಸ್ವಯಂ ಪತ್ನಿ, ಪುತ್ರ, ಕುಟುಂಬ ಪರಿಗ್ರಹದ ಕಾರಣ ಕ್ರೋಧೀ, ಮಾನೀ, ಕಪಟೀ - ಲೋಭಿಯಿದ್ದಾನೆ, ಅದೇ ಪ್ರಕಾರ ಕ್ರೋಧ, ಮಾನ ಮೊದಲಾದ ದೋಷಗಳಿಂದ ತುಂಬಿಕೊಂಡಿರುವ ದೇವ-ಗುರುಗಳ ಉಪಾಸನೆ ಮಾಡುವುದಿಲ್ಲ. ಉಪಾಸನೆ ಮಾಡುವಾಗ ಪರೀಕ್ಷೆ ಮಾಡಿಯೇ ಉಪಾಸನೆ ಮಾಡುತ್ತಾನೆ. ತನ್ನ ಸಮಾನ ರಾಗೀ-ದ್ವೇಷೀ, ಧನ, ಪರಸ್ತ್ರೀ, ವಾಹನಾದಿ ಪರಿಗ್ರಹಧಾರಕ ದೇವ-ಗುರುವಿನ ಸೇವನೆ ಮಾಡುವುದಿಲ್ಲ. ಸಮಸ್ತ ದೋಷಗಳಿಂದ ರಹಿತ ವೀತರಾಗ, ಸರ್ವಜ್ಞ, ಆರಂಭ ಪರಿಗ್ರಹದಿಂದ ರಹಿತ, ಪತ್ನಿ, ಧನ, ಮನೆರಹಿತ ದೇವ-ಗುರುಗಳ ಸೇವೆ ಮಾಡುತ್ತಾನೆ. ಹೀನ ದೇವ-ಗುರುವಿನ ಸೇವೆ ಮಾಡುವುದಿಲ್ಲ - ಇದು ವರ್ಣೋತ್ತಮವೆಂಬ ಹೆಸರಿನ ಮೂರನೆಯ ಅಧಿಕಾರವಿದೆ.

೪. ಬ್ರಾಹ್ಮಣನಲ್ಲಿ ಗುಣಗಳ ಅಧಿಕತೆಯಿರುವುದರಿಂದ ಅವುಗಳ ಪಾತ್ರತ್ವ ಭಾವವಿವೆ - ಇವರು ಪಾತ್ರರಿದ್ದಾರೆ ಆದರಪೂರ್ವಕ ದಾನ ಕೊಡಲು ಯೋಗ್ಯರಿದ್ದಾರೆ, ಮಹಾಪುರುಷರಿಂದ ಮಾನ್ಯರಿದ್ದಾರೆ; ಆದುದರಿಂದ ವಿವೇಕೀ ಬ್ರಾಹ್ಮಣನಿಗೆ ತನ್ನ ಗುಣಗಳ ವೃದ್ಧಿ ಮಾಡಿಕೊಳ್ಳಬೇಕಾಗುವುದು. ಶೀಲ, ಸಂತೋಷ, ದಯೆ, ಕ್ಷಮೆ, ನಿರ್ಲೋಭ ಮೊದಲಾದ ಉತ್ತಮ ಗುಣಗಳಿಂದ ಪೂಜ್ಯತೆಯಾಗುತ್ತದೆ. ಈ ಗುಣಗಳಿಲ್ಲದೆ ಮಹಾ ಪುರುಷರ ಮೂಲಕ ಮನ್ನಣೆ ಪಾತ್ರರಾಗುವುದಿಲ್ಲ. ದೊಡ್ಡ ದೊಡ್ಡ ದೊರೆ ಮೊದಲಾದ ಗುಣವಂತರಿಂದ ಅನಾದರವು ಪ್ರಾಪ್ತವಾಗುತ್ತದೆ. ಪಂಡಿತರುಗಳ ಸಭೆಯಲ್ಲಿ ಹೋದ ಮೇಲೆ ಲಜ್ಜಿತನಾಗಬೇಕಾಗುತ್ತದೆ. ಅದರಿಂದ ಬ್ರಾಹ್ಮಣನು ದಾನ, ಪೂಜೆ, ಜಪ, ತಪ, ಸಂಯಮ, ಶೀಲ, ದಯೆ, ಸಂತೋಷ ಮೊದಲಾದ ಅನೇಕ ಗುಣಗಳ ಸಂಗ್ರಹ ಮಾಡುವುದು ಉಚಿತವಿದೆ. ಇದರ ಹೆಸರು ಪಾತ್ರತ್ವವೆಂಬ ಹೆಸರಿನ ನಾಲ್ಕನೆಯ ಅಧಿಕಾರವಿದೆ.

೫. ಶ್ರೇಷ್ಠ ಬ್ರಾಹ್ಮಣರಿಗೆ ಮಿಥ್ಯಾ ಶ್ರದ್ಧೆಯನ್ನು ಬಿಟ್ಟುಕೊಟ್ಟು ಸರ್ವಜ್ಞ, ವೀತರಾಗೀ, ಕೇವಲೀ ಭಗವಂತರ ಮೂಲಕ ಭಾಷಿತ ಪದಾರ್ಥಗಳ ಶ್ರದ್ಧೆ ಮಾಡುವುದು ಉಚಿತವಿದೆ. ಕೆಲವು ಸಾಮಾನ್ಯ ಜ್ಞಾನದಧಾರಕ ಮಾನೀ ಜೀವರುಗಳು ತಮ್ಮ ಮಾನದ ಪೋಷಣೆಯ ಸಲುವಾಗಿ, ಮುಗ್ಧ ಜೀವಗಳನ್ನು ಪುಸಲಾಯಿಸುವ ಸಲುವಾಗಿ ತಮ್ಮ ಇಚ್ಛೆಯಿಂದ ಕಲ್ಪಿತ ಶಾಸ್ತ್ರಗಳ ರಚನೆ ಮಾಡಿ ಅವುಗಳಲ್ಲಿ ಮೂರು ಲೋಕಗಳ ಯಥಾರ್ಥ ಸ್ವರೂಪ ಹೇಳದೆ, ಮೂರು ಲೋಕಗಳ ತುಚ್ಛ ಪ್ರಮಾಣವನ್ನು ಹೇಳಿದ್ದಾರೆ.

ಅವರುಗಳಲ್ಲಿನ ಕೆಲವು ಮುಗ್ಧ ಭವ್ಯ ಜೀವಗಳಂತೂ ಭಗವಂತನು ನಿರಂತರ ಈ ಲೋಕದ ರಕ್ಷಣೆ

ಮಾಡುತ್ತಾನೆ, ಇಲ್ಲದಿದ್ದರೆ ಯಾವನೋ ಕಳ್ಳನು ಈ ಸಂಪೂರ್ಣ ಲೋಕವನ್ನು ಕದ್ದುಕೊಂಡು ವಸ್ತ್ರದಲ್ಲಿ ಸುತ್ತಿ ತಗೆದುಕೊಂಡು ಹೋಗುತ್ತಾನೆಂದು ಮನ್ನಿಸುತ್ತಾರೆ. ಮತ್ತೆ ಕೆಲವರು ಯಾವನೋ ಕರ್ತೃವು ಈ ಲೋಕವನ್ನು ನಿರ್ಮಿಸಿದ್ದಾನೆ; ಅದರಿಂದ ಇದು ಕಾಲ ಪಡೆದು ನಾಶವಾಗಿ ಹೋಗುತ್ತದೆಯೆಂದು ಹೇಳುತ್ತಾರೆ - ಹೀಗೆ ಕಪೋಲಕಲ್ಪಿತ ವಿಕಲ್ಪರೂಪ ಲೋಕದ ಸ್ವರೂಪ ಹೇಳುತ್ತಾರೆ, ಆದರೆ ಇದು ಅಸತ್ಯವಿದೆ - ಎಂಬುದಾಗಿ ಇದರ ರಹಸ್ಯ ಭಾವ ತಿಳಿಯುವುದು.

ಸರ್ವ ಕೇವಲಿಗಳಿಂದ ಹೇಳಲಾದ ಲೋಕದ ಸ್ವರೂಪವು ಅನಾದಿ, ಅಕೃತ್ರಿಮ, ಅವಿನಾಶಿ, ಧ್ರುವ, ಪುರುಷಾಕಾರಮಯ ಸತ್ಯವಿದೆ. ಅದರ ರಹಸ್ಯ ತಿಳಿದುಕೊಂಡು ಶುದ್ಧ ಕೇವಲಿಗಳ ಮುಖಾಂತರ ಭಾಷಿತ ಲೋಕದ ಶ್ರದ್ಧೆ ಮಾಡುವುದು. ಮಿಥ್ಯಾ ಕಲ್ಪಿತ ಲೋಕ ಸ್ವರೂಪದ ಶ್ರದ್ಧೆಯನ್ನು ಬಿಟ್ಟುಕೊಡಬೇಕು. ಬೇರೆಯೂ ಜೀವ-ಅಜೀವಗಳ ಶ್ರದ್ಧೆಸಹಿತ ಶುದ್ಧ ಸಮ್ಯಗ್ಜ್ಞಾನದ ಧಾರಕ ಬ್ರಾಹ್ಮಣನಾಗಬೇಕು. ಒಂದುವೇಳೆ ತನಗೆ ಯಥಾರ್ಥ ದರ್ಶನ-ಜ್ಞಾನವಾಗದಿದ್ದರೆ ಬೇರೆಯವರಿಗೆ ಮಿಥ್ಯಾ ಉಪದೇಶ ಕೊಟ್ಟು ಬೇರೆಯವರ ಕೇಡು ಮಾಡಬಹುದಾಗಿದೆ. ಅದರಿಂದ ತಮ್ಮ ಉತ್ತಮ ಕುಲವು ಕಲಂಕಿತವಾಗುವುದು. ಆದುದರಿಂದ ಬ್ರಾಹ್ಮಣರು ಸ್ವಯಂ ಯಥಾರ್ಥ ಶ್ರದ್ಧಾನಿಗಳಾಗಬೇಕಾಗುವುದು ಹಾಗೂ ಅನ್ಯರಿಗೂ ಸತ್ಯ ಉಪದೇಶ ನೀಡಿ ಅನ್ಯರ ಒಳಿತು ಮಾಡಿದರೆ ಬ್ರಾಹ್ಮಣ ಕುಲದ ಶ್ರೇಷ್ಠತೆಯು ಉಳಿಯುತ್ತದೆ - ಇದು ಶ್ರೇಷ್ಠತೆಯೆಂಬ ಹೆಸರಿನ ಐದನೆಯ ಅಧಿಕಾರವಿದೆ.

೬. ಬ್ರಾಹ್ಮಣನು ಸ್ವಯಂ ಪಂಡಿತ, ದಯಾ ಧರ್ಮದಧಾರಕ, ಅನ್ಯ ಶಿಷ್ಯ ಜನರ ಕಲ್ಯಾಣಾರ್ಥ ಮೋಕ್ಷ ಲಕ್ಷ್ಮಿಯ ವಾಂಛಕ, ಅನೇಕ ಪ್ರಾಯಶ್ಚಿತ್ತ ಶಾಸ್ತ್ರಗಳ ವೇತ್ತಾ, ಶ್ರಾವಕರ ವ್ಯವಹಾರದ ಪರಿಪಾಟವನ್ನು ತಿಳಿಯುವಂಥವನಿರಬೇಕು. ಯಾವನೋ ಶ್ರಾವಕನ ಸಂಯಮದಲ್ಲಿ ಪ್ರಮಾದವಶ ದೋಷ ತಗಲಿದ ಮೇಲೆ ದಯಾಭಾವಪೂರ್ವಕ ಅದನ್ನು ನಾಶ ಮಾಡುವ ಸಲುವಾಗಿ, ಶಿಷ್ಯರ ಪಾಪನಷ್ಟಗೊಳಿಸುವ ಉದ್ದೇಶದಿಂದ ಪ್ರಾಯಶ್ಚಿತ್ತ ತಿಳಿಸಿಕೊಟ್ಟು ಶುದ್ಧ ಮಾಡುವಂಥವನಿರಬೇಕು. ಒಂದುವೇಳೆ ಸ್ವಯಂ ಕ್ರೋಧ, ಮಾನ, ಮಾಯೆ, ಲೋಭರೂಪ ಪಾಖಂಡದಿಂದ ಪರಿಪೂರ್ಣ ಹಾಗೂ ಅಜ್ಞಾನಿಯಾಗಿದ್ದರೆ ಅನ್ಯರಿಗೆ ಧರ್ಮಮಾರ್ಗವನ್ನು ಹೇಗೆ ತಿಳಿಸಿಕೊಡುವುದು ?

ಹೇಗೆ ಯಾವನೋ ವಂಚಕನಿಗೆ ಯಾರೋ ವನದ ಸರಿಯಾದ ಮಾರ್ಗ ವಿಚಾರಿಸಿದರೆ ಆ ಮೋಸಗಾರನು ಅವರಿಗೆ ನಿಜವಾದ ಮಾರ್ಗವನ್ನು ಹೇಗೆ ಹೇಳುವ ಸಾಧ್ಯತೆಯಿದೆ ? ಕುರುಡನಿಗೆ ಕಾನನದ ಮಾರ್ಗ ವಿಚಾರಿಸಿದರೆ, ಅವನು ಕಾನನದ ಮಾರ್ಗವನ್ನು ಹೇಗೆ ಹೇಳಬಹುದಾಗಿದೆ ? ಅದೇ ಪ್ರಕಾರ ವಂಚಕನ ಸಮಾನ ಕಷಾಯಸಹಿತ ಜೀವನು ಶುದ್ಧ ಮಾರ್ಗ ತಿಳಿಸಿಕೊಡುವ ಸಾಧ್ಯತೆಯಿಲ್ಲ; ಕುರುಡನ ಸಮಾನನಾದ ಅಜ್ಞಾನಿಯು ತಾನೇ ಸ್ವಯಂ ಸನ್ಮಾರ್ಗವನ್ನು ನೋಡುವುದಿಲ್ಲವೆಂದ ಮೇಲೆ ಅವನು ಬೇರೆಯವರಿಗೆ ಹೇಗೆ ಸನ್ಮಾರ್ಗ ತೋರಿಸುವನು ? ಅದರಿಂದ ಬ್ರಾಹ್ಮಣನು ಕಷಾಯ ಮತ್ತು ಅಜ್ಞಾನ-ಇವೆರಡೂ ದೋಷಗಳಿಂದ ರಹಿತ, ಸಜ್ಜನ ಸ್ವಭಾವಿ, ದಯೆಯ ಸಾಕಾರಮೂರ್ತಿ, ಮಹಾಪಂಡಿತ, ಅನೇಕ ಪ್ರಾಯಶ್ಚಿತ್ತ ಶಾಸ್ತ್ರಗಳ ಜ್ಞಾತಾನಾಗಿರಬೇಕು. ತನಗೆ ಪ್ರಾಯಶ್ಚಿತ್ತ ಶಾಸ್ತ್ರಗಳ ಜ್ಞಾನವಿಲ್ಲದಿದ್ದರೆ ಸ್ವಯಂ ತನಗೆ ದೋಷ ತಗಲಿದ ಮೇಲೆ ತಾನು ಅನ್ಯರ ಎದುರಿಗೆ ದೀನನಾಗಿ ಪ್ರಾಯಶ್ಚಿತ್ತ ಬೇಡಬೇಕಾಗುವುದು; ಆದುದರಿಂದ ತನ್ನನ್ನು ಹಾಗೂ ಇತರರನ್ನು ಸುಧಾರಿಸುವ ಸಲುವಾಗಿ ಅನೇಕ ನಯಗಳ ವೇತ್ತಾ ಹಾಗೂ ಗೃಹಸ್ಥರ ಕ್ರಿಯೆ - ವ್ಯವಹಾರದ ಜ್ಞಾತಾನಾಗಿರಬೇಕು - ಇದು ವ್ಯವಹಾರವೆಂಬ ಹೆಸರಿನ ಆರನೆಯ ಅಧಿಕಾರವಿದೆ.

೭. ಉತ್ತಮ ಗುಣ ಸಂಪದದ ಧಾರಕ, ಉತ್ಕೃಷ್ಟ-ಪೂಜನೀಯ ಗುಣಸಹಿತ, ಧೀರಬುದ್ಧಿ; ಪೂಜೆ, ಜಪ, ತಪ, ಸಂಯಮ ಸಹಿತ ಅನೇಕ ಗುಣಗಳ ಪಾಲಕನಾದ ಸತ್ಪುರುಷ ಬ್ರಾಹ್ಮಣನು ದೊರೆಗಳಿಂದ ಅವಧ್ಯನಿದ್ದಾನೆ.

ಹೇಗೆ ಕಳ್ಳಕಾಕರು, ಸಪ್ತ ವ್ಯಸನಗಳ ಧಾರಕ, ಪಾಪೀ ಜೀವಗಳು ವಧೆ ಮಾಡಲು ಯೋಗ್ಯರಿದ್ದಾರೆ ಹಾಗೆಯೇ ಅನೇಕ ಗುಣಗಳ ಧಾರಕ ಬ್ರಾಹ್ಮಣನು ಪೂಜೆ ಮಾಡಲು ಯೋಗ್ಯನಿದ್ದಾನೆ, ವಧೆ ಅಥವಾ ಕಷ್ಟಕ್ಕೆ ಗುರಿಪಡಿಸಲು ಯೋಗ್ಯನಿಲ್ಲ. ಗುಣವಂತ, ಪೂಜಾಯೋಗ್ಯ , ದೀರ್ಘ ಜ್ಞಾನಿಯನ್ನು ಹೊಡೆಯುವುದರಿಂದ, ಪೀಡಿಸುವುದರಿಂದ ಮಹಾಪಾಪವಾಗುತ್ತದೆ. ಉತ್ತರೋತ್ತರ ದೀರ್ಘ ಜ್ಞಾನಿಯ ಘಾತದಿಂದ ತದನುಸಾರ ವಿಶೇಷ ಪಾಪವಾಗುತ್ತದೆ. ಹೇಗೆ ಏಕೇಂದ್ರಿಯಗಳ ಘಾತಕ್ಕಿಂತ ದ್ವೀಂದ್ರಿಯಗಳ ಘಾತದ ಪಾಪವು ಅಧಿಕವಿದೆ. ಎರಡು ಇಂದ್ರಿಯದ ಘಾತಕ್ಕಿಂತ ಮೂರು ಇಂದ್ರಿಯ ಜೀವಗಳ ಘಾತದ ಪಾಪವು ದೊಡ್ಡದಿದೆ. ಮೂರು ಇಂದ್ರಿಯ ಘಾತಕ್ಕಿಂತ ನಾಲ್ಕು ಇಂದ್ರಿಯ ಧಾರಕ ಜೀವಗಳ ಘಾತದ ಪಾಪವು ವಿಶೇಷವಿದೆ. ನಾಲ್ಕು ಇಂದ್ರಿಯಕ್ಕಿಂತ ಐದು ಇಂದ್ರಿಯ ಜೀವಘಾತವು ಬಹಳಷ್ಟು ಪಾಪದಾಯಕವಿದೆ. ಈ ಪ್ರಕಾರ ಜ್ಞಾನದ ಘಾತದಿಂದ ಇಂದ್ರಿಯಗಳ ಘಾತ ಮತ್ತು ಇಂದ್ರಿಯಗಳ ಘಾತದಿಂದ ಜ್ಞಾನದ ಘಾತವಾಗುತ್ತದೆ; ಅಧಿಕ-ಅಧಿಕ ಜ್ಞಾನದ ಘಾತದಿಂದ ಅದರ ಅನುಸಾರ ಘಾತದ ಪಾಪವು ಕೂಡ ದೊಡ್ಡ-ದೊಡ್ಡದಿರುತ್ತದೆ.

ಪಶುವಿನ ಅಪೇಕ್ಷೆಯಿಂದ ಪಾಪಾಚಾರೀ ಕಳ್ಳ, ಜೂಜುಗಾರ, ಪರಸ್ತ್ರೀ ಸೇವಿ - ಇತ್ಯಾದಿ ಅಶುಭ ಕರ್ಮೀ ಮನುಷ್ಯರ ಘಾತದ ಪಾಪವು ವಿಶೇಷವಿದೆ. ಇವರಿಗಿಂತ ವ್ಯಸನಾದಿ ದೋಷರಹಿತ ಒಳ್ಳೆಯ ಮನುಷ್ಯನ ಘಾತದ ಪಾಪವು ವಿಶೇಷವಿದೆ. ಇನ್ನು ಸಾಮಾನ್ಯ ಮನುಷ್ಯರ ಅಪೇಕ್ಷೆಯಿಂದ ಜಪ-ತಪ ಮಾಡುವಂಥ, ಸಂಯಮೀ, ದಾನೀ, ದಯಾಮಯೀ, ನಿರ್ದೋಷ ವ್ಯಕ್ತಿಗಳ ಜ್ಞಾನವು ವಿಶೇಷವಿರುತ್ತದೆ; ಅದಕ್ಕಾಗಿ ಇವರನ್ನು ಹೊಡೆಯುವಲ್ಲಿ ವಿಶೇಷ ಪಾಪವಿದೆ. ಬ್ರಾಹ್ಮಣನು ಸಂಯಮ, ಜಪ-ತಪ, ವ್ರತಗಳ ಧಾರಕನಿರುವುದರಿಂದ ಅವನ ಘಾತದ ಪಾಪವು ವಿಶೇಷವಿರುವ ಕಾರಣ ವಿವೇಕವಂತ ದೊರೆಯು ಅಂಥ ದೀರ್ಘ ಪಾಪ ಮಾಡುವುದಿಲ್ಲ. ಈ ಪ್ರಕಾರ ಬ್ರಾಹ್ಮಣನು ದೊರೆಯ ಮೂಲಕ ವಧರಹಿತನಿದ್ದಾನೆ; ಪೂಜಿಸಲು ಯೋಗ್ಯನಿದ್ದಾನೆ, ಹೊಡೆಯಲು ಯೋಗ್ಯನಾಗಿರುವುದಿಲ್ಲ. ಧರ್ಮಾತ್ಮನಿಗೆ ಯಾರೂ ಪೀಡೆ ಕೊಡುವುದಿಲ್ಲ-ಇದು ಧರ್ಮದ ಮಾಹಾತ್ಮ್ಯವಿದೆ.

ಒಂದುವೇಳೆ ಬ್ರಾಹ್ಮಣನು ಕೂಡ ದಯಾಧರ್ಮ ರಹಿತನಿದ್ದರೆ, ಕ್ರೋಧ-ಮಾನ-ಮಾಯೆ-ಲೋಭಾದಿ ವ್ಯಸನಗಳ ಧಾರಕನಾಗಿದ್ದರೆ, ದೀನತೆಗೆ ಪ್ರಾಪ್ತನಾಗುತ್ತಾನೆ ; ಗುಣಗಳಿಲ್ಲದೆ ಮಹತ್ವವು ನಷ್ಟವಾಗಿ ಹೋಗುತ್ತದೆ. ಸಾಮಾನ್ಯ ಮನುಷ್ಯನ ಸಮಾನ ದೊರೆಯ ಮೂಲಕವೂ ದಂಡಿತನಾಗುತ್ತಾನೆ; ಅನ್ಯರೂ ಅವನಿಗೆ ಪೀಡೆ ಕೊಡುತ್ತಾರೆ, ದುರ್ವಚನಗಳನ್ನಾಡುತ್ತಾರೆ. ಬ್ರಾಹ್ಮಣ ಪದವಿದ್ದರೂ ಹೀಗೆ ಆಗುವುದರಿಂದ ಸುಮಾರ್ಗದ ಲೋಪವಾಗುತ್ತದೆ. ಉಚ್ಚ ಕುಲದವನು ಕುಮಾರ್ಗದಲ್ಲಿ ತೊಡಗುವುದರಿಂದ ದೀನತೆಯು ಬರುತ್ತದೆ, ಅಪಕೀರ್ತಿಯಾಗುತ್ತದೆ, ಧರ್ಮಾಚಾರವು ನಷ್ಟವಾಗುತ್ತದೆ. ಸುಮಾರ್ಗವು ದಯಾಧರ್ಮದಿಂದ ರಹಿತವಾಗಿ ಹೋದಮೇಲೆ ಪೂಜ್ಯಪದವು ನಷ್ಟವಾಗಿ ಹೋಗುತ್ತದೆ, ದೊರೆಯಿಂದ ಅನಾದರ ಪಡೆಯುವುದಾಗುತ್ತದೆ.

ಅದರಿಂದ ವಿವೇಕವಂತ ಉತ್ತಮ ಬ್ರಾಹ್ಮಣನು ಉತ್ತಮದಾನ, ಧರ್ಮ, ಸಂತೋಷ, ಜಪ, ತಪ ಇತ್ಯಾದಿ ಅನೇಕ ಗುಣಗಳ ರಕ್ಷಣೆ ಮಾಡುತ್ತ, ತ್ರಸ-ಸ್ಥಾವರ ಎಲ್ಲ ಜೀವಗಳ ಹಿತದ ಇಚ್ಛೆಯುಳ್ಳವನಾಗಿರಬೇಕು. ಇದು ಉತ್ತಮಗುಣವಿದೆ. ಎಲ್ಲರ ಒಳಿತಿನಲ್ಲಿ ತನ್ನ ಒಳಿತು ಇದೆ. ಅದಕ್ಕಾಗಿ ಬ್ರಾಹ್ಮಣನಿಗೆ ಧರ್ಮದ ರಕ್ಷಣೆ ಮಾಡಬೇಕಾಗುವುದು - ಇದು ಏಳನೆಯ ಅವಧ್ಯ ಅಧಿಕಾರವಿದೆ.

೮. ಧರ್ಮದಲ್ಲಿ ಸ್ಥಿರೀಭೂತ ಆತ್ಮಸಂಪನ್ನ ಬ್ರಾಹ್ಮಣನು ಎಲ್ಲರಿಂದ ಅದಂಡಿತನಿದ್ದಾನೆ, ಯಾರಿಂದಲೂ ದಂಡನೆ ಯೋಗ್ಯನಿಲ್ಲ. ಯಾವನೋ ಧರ್ಮಬುದ್ಧಿಗೆ ಧರ್ಮ ಸೇವನೆಯಲ್ಲಿ ದೋಷ ತಗಲಿದ ಮೇಲೆ ಅವನನ್ನು ಶುದ್ಧ ಮಾಡುವ ಸಲುವಾಗಿ ಈ ಧರ್ಮಾತ್ಮಾ ಬ್ರಾಹ್ಮಣನು ಅವನಿಗೆ ದಂಡನೆ ನೀಡಿ ಶುದ್ಧ ಮಾಡುತ್ತಾನೆ; ಆದರೆ

ಸ್ವಯಂ ದಂಡನೆ ಯೋಗ್ಯನಿರುವುದಿಲ್ಲ. ಸ್ವಯಂ ತನ್ನ ಶಾಂತ ದಶಾಮಯ, ದಯಾಭಾವ ಸಹಿತನಿದ್ದು ಶಾಸ್ತ್ರಗಳ ಅಭ್ಯಾಸ ಮಾಡುತ್ತಾನೆ. ಅದರ ಅರ್ಥವನ್ನು ಪ್ರಕಟಪಡಿಸಿ, ಸ್ವಯಂ ಧರ್ಮಾತ್ಮನಾಗಿರುತ್ತ ಅನ್ಯ ಧರ್ಮೀ ಜೀವರುಗಳಿಗೆ ಉಪದೇಶವಿತ್ತು ಸುಮಾರ್ಗದಲ್ಲಿ ತೊಡಗಿಸುತ್ತಾನೆ. ಧರ್ಮಾತ್ಮಾ ಜೀವರು ಧರ್ಮೀ ಜೀವದ ಮೂಲಕ ಕೊಡಲ್ಪಡುವ ಉಪದೇಶವನ್ನು ಹಾಗೂ ಅತಿಚಾರ ತಗಲಿದ ಮೇಲೆ ಕೊಡಲಾದ ಪ್ರಾಯಶ್ಚಿತ್ತವನ್ನು ಅಂಗೀಕಾರ ಮಾಡುತ್ತಾರೆ. ಅದರಿಂದ ಧರ್ಮಾತ್ಮಾ ಪುರುಷನು ದೊರೆಯಿಂದ ದಂಡನೆಯೋಗ್ಯನಿರುವುದಿಲ್ಲ.

ಒಂದುವೇಳೆ ಎಂದಾದರೂ ಯಾವುದೇ ಕರ್ಮಯೋಗದಿಂದ ಧರ್ಮೀ ಜೀವದ ಮೇಲೆ ದೋಷವು ಬಂದುಬಿಟ್ಟರೆ, ಧರ್ಮಾತ್ಮನಾದ ದೊರೆಯು ಯಥಾಯೋಗ್ಯ ದಂಡನೆ ನೀಡಿ ಪುನಃ ಅವನನ್ನು ಧರ್ಮದಲ್ಲಿ ದೃಢಗೊಳಿಸುತ್ತಾನೆ. ಅವನದು ಧರ್ಮದಲ್ಲಿ ಅರುಚಿಯಾಗುವಂಥ, ಧರ್ಮಸೇವನೆಯಲ್ಲಿ ಆಕುಲತೆಯು ವೃದ್ಧಿಸುವಂಥ ದಂಡನೆ ನೀಡುವುದಿಲ್ಲ. ಅವನ ಧನ-ಮನೆಯನ್ನು ಲೂಟಿ ಮಾಡುವುದಿಲ್ಲ. ತನುವಿನ ಘಾತ ಮಾಡುವುದಿಲ್ಲ. ಆದರೆ ಇವನದು ಧರ್ಮದಲ್ಲಿ ಪ್ರೀತಿಯು ಉತ್ಪನ್ನವಾಗುವಂಥ, ಜಿನಧರ್ಮದ ಅತಿಶಯ ಕಂಡು ದಯಾಧರ್ಮದ ಸೇವನೆ ಮಾಡಲಾರಂಭಿಸುವಂಥ ದಂಡನೆ ನೀಡುತ್ತಾನೆ.

ಈ ಪ್ರಕಾರ ಸರ್ವ ಲೌಕಿಕ ದೋಷದಿಂದ ರಹಿತ, ಉತ್ತಮ ಆಚಾರವಂತ, ದಯಾಧರ್ಮದ ಧಾರಕನಾದ ಈ ಧರ್ಮಾತ್ಮಾ ಬ್ರಾಹ್ಮಣನು ದೊರೆಗಳಿಂದ ಅದಂಡ್ಯನಿದ್ದಾನೆ. ಪಾಪೀ ಜನರ ಸಮಾನ ಧರ್ಮಾತ್ಮನು ಇವನೂ ದಂಡನೆ ನೀಡಲು ಯೋಗ್ಯನಿದ್ದಾನೆಂದು ತಿಳಿದು ದಂಡನೆ ನೀಡುವಂಥ ಪ್ರಜಾಪಾಲಕ ದೊರೆಯು ಅನ್ಯಾಯದ ಕಾರಣ ಅಪಕೀರ್ತಿಗೆ ಪ್ರಾಪ್ತನಾಗಿ ಕೆಲವೇ ದಿನಗಳಲ್ಲಿ ರಾಜ್ಯದಿಂದ ಭ್ರಷ್ಟನಾಗಿ ಹೋಗುತ್ತಾನೆ. ಆತನ ಅನೀತಿಯನ್ನು ಕಂಡು ಧರ್ಮಾತ್ಮಾ ಪುರುಷರುಗಳ ಮೂಲಕ ದೇಶ ಬಿಟ್ಟುಕೊಡುವ ಕಾರಣವಾಗಿ ದೇಶವು ಧರ್ಮಾತ್ಮಾ ಜೀವರುಗಳಿಂದ ರಹಿತವಾಗಿ ಹೋಗುತ್ತದೆ. ಅದರಿಂದ ಪಾಪಕಾರ್ಯಗಳ ವೃದ್ಧಿಯಾಗುತ್ತದೆ. ಪಾಪದ ವೃದ್ಧಿಯಿಂದ ನಿಧಾನವಾಗಿ ಅನುಕ್ರಮದಿಂದ ಗ್ರಾಮ, ದೇಶಗಳು ನಷ್ಟವಾಗಿ ಹೋಗುತ್ತವೆ. ಅದರಿಂದ ಧರ್ಮಾತ್ಮಾ ಬ್ರಾಹ್ಮಣನು ಅದಂಡ್ಯನಿದ್ದಾನೆ-ಇದು ಅದಂಡ್ಯವೆಂಬ ಹೆಸರಿನ ಎಂಟನೆಯ ಅಧಿಕಾರವಿದೆ.

೯. ಧರ್ಮಾತ್ಮಾ ಜೀವರುಗಳನ್ನು ಎಲ್ಲರೂ ಪೂಜಿಸುತ್ತಾರೆ, ಎಲ್ಲರೂ ಯಥಾಯೋಗ್ಯ ಮನ್ನಿಸುತ್ತಾರೆಂಬ ಮಾತು ಸತ್ಯವೇ ಇದೆ. ಗುಣಗಳಿಂದ ಅಧಿಕನಾದ ಧರ್ಮಾತ್ಮನು, ಧರ್ಮೀ ಜೀವರುಗಳಿಂದ ಮನ್ನಣೆ ಯೋಗ್ಯನಿದ್ದೇ ಇರುತ್ತಾನೆ. ವಿಪ್ರನಲ್ಲಿ ಗುಣಗಳ ಅಧಿಕತೆ ಇಲ್ಲವಾದ ಮೇಲೆ ಪೂಜ್ಯಪದವು ನಷ್ಟವಾಗಿ ಅನಾದರ ಪಡೆಯುತ್ತಾನೆ. ಪದದಿಂದ ಭ್ರಷ್ಟನಾಗಿ ರಂಕದಶೆ ಧಾರಣ ಮಾಡುತ್ತಾನೆ.; ಅದಕ್ಕಾಗಿ ವಿವೇಕವಂತ ಬ್ರಾಹ್ಮಣನು ಪ್ರಯತ್ನಪೂರ್ವಕ ಸಮತೆ ಮೊದಲಾದ ಗುಣಗಳನ್ನು ಸ್ವಯಂ ಧಾರಣ ಮಾಡುತ್ತಾನೆ. ಈ ಜ್ಞಾನ, ಚಾರಿತ್ರ ಮತ್ತು ತಪಸ್ಸುಗಳು ಉತ್ಕೃಷ್ಟ ಋದ್ಧಿಯಿರುವುದರಿಂದ ಗುಣವಂತರು ಈ ಗುಣ ವಿಭೂತಿಯನ್ನು ಕಾಯ್ದುಕೊಳ್ಳುವ ಪ್ರಯತ್ನ ಮಾಡುತ್ತಾರೆ. ಜಪ-ತಪ ರೂಪದ ಈ ಸಂಪದವು ಪೂಜ್ಯವಿರುವುದರಿಂದ ವಿವೇಕವಂತರು ತಪ್ಪಿಯೂ ಇವನ್ನು ಮರೆಯುವುದಿಲ್ಲ-ಇದು ಮಾನನೀಯತೆಯೆಂಬ ಹೆಸರಿನ ಒಂಭತ್ತನೆಯ ಅಧಿಕಾರವಿದೆ.

೧೦. ಈ ಧರ್ಮಾತ್ಮಾ ಬ್ರಾಹ್ಮಣನಲ್ಲಿ ಪ್ರಜಾ ಸಂಬಂಧಾಂತರ ಗುಣವಿರುವುದರಿಂದ, ಈ ವಿವೇಕಿಯು ತನ್ನ ಉತ್ಕೃಷ್ಟ ಗುಣವನ್ನು ಬಿಟ್ಟುಕೊಟ್ಟು ಜಗತ್ತಿನ ಜೀವರುಗಳ ಹಾಗೆ ಆಗದೇ ತನ್ನ ಪ್ರಜಾ ಸಂಬಂಧಾಂತರ ಗುಣದ ಸಂರಕ್ಷಣೆ ಮಾಡುತ್ತಾನೆ. ತಾತ್ಪರ್ಯವೆಂದರೆ ಅನ್ಯ ಪ್ರಜೆಗಳಲ್ಲಿ ಕಂಡುಬಾರದಿರುವ ಉತ್ತಮ ಗುಣಗಳನ್ನು ಸ್ವಯಂ ಧಾರಣೆ ಮಾಡಿ ಪ್ರಜೆಗಳಲ್ಲಿರುವ ಗುಣಗಳಿಂದ ಅಧಿಕ ಗುಣಸಂಪದದ ಧಾರಕನಾಗಿರುವುದರಿಂದಲೇ ಪ್ರಜೆಗಳಿಂದ ಪೂಜ್ಯನಾಗುತ್ತಾನೆ. ಪ್ರಜೆಗಳ ಸಮಾನ ಅಜ್ಞಾನ ಚೇಷ್ಟೆಗಳ ರೂಪ ಗುಣವನ್ನು ಸ್ವಯಂ ತನ್ನಲ್ಲಿ ಧಾರಣ ಮಾಡದಿದ್ದರೇನೆ

ಪ್ರಜೆಗಳಿಂದ ಭಿನ್ನನಾಗಿ ತಿಳಿದು ಬರುತ್ತಾನೆ. ಪ್ರಜೆಗಳ ಸಮಾನ ಗುಣ, ಅಜ್ಞಾನ, ವಿಷಯಗಳಲ್ಲಿ ಪ್ರವೃತ್ತಿಯನ್ನು ತನ್ನಲ್ಲಿ ಧಾರಣ ಮಾಡಿದರೆ ತನ್ನ ಪೂಜ್ಯಪದವು ನಷ್ಟವಾಗುತ್ತದೆ. ಮಹಂತತೆಯು ಉಳಿಯುವುದಿಲ್ಲ ಸ್ವಯಂ ಪ್ರಜೆಗಳ ಹಾಗೆ ಆಗಿ ಹೋಗುತ್ತಾನೆ.

ಹೇಗೆ ನಿರ್ಮಲ ಸುವರ್ಣ(ಚಿನ್ನ)ದಲ್ಲಿ ಕುಧಾತುವಿನ ಸಂಬಂಧದಿಂದ ಮಲಿನತೆಯಾಗುತ್ತದೆ, ನಿರ್ಮಲ ಸ್ಫಟಿಕ ಮಣಿಯು ಟಂಕದ ಸಂಯೋಗದಿಂದ ತನ್ನ ಸ್ವಚ್ಛ ಗುಣವನ್ನು ಬಿಟ್ಟು ಶ್ಯಾಮ, ಹರಿತ, ರಕ್ತಾದಿ ಅನೇಕ ವರ್ಣಕ್ಕೆ ಪ್ರಾಪ್ತವಾಗುತ್ತದೆ. ಅದೇ ಪ್ರಕಾರ ಬ್ರಹ್ಮಚಾರಿ, ಉತ್ಕೃಷ್ಟ ಗುಣಗಳ ಧಾರಕ, ಆಚಾರವಂತ, ಸೌಮ್ಯ ಮೂರ್ತಿಯಾದ ಧರ್ಮಾತ್ಮಾ ಜೀವನು ಸಂಸಾರೀ ಅಜ್ಞಾನೀ ಜೀವಗಳ ಸಂಗತಿಯಿಂದ ಸ್ವಯಂ ತಾನೂ ಅಜ್ಞಾನಿ ಜೀವಗಳ ಸಮಾನ ಪ್ರಜೆಗಳೊಂದಿಗೆ ಒಂದಾಗುತ್ತ ಕ್ರೋಧ, ಮಾನ, ಮಾಯೆ, ಲೋಭರೂಪ ಪ್ರವೃತ್ತಿಯಿಂದ ತನ್ನ ಪದದ ಲೋಪ ಮಾಡುತ್ತಾನೆ. ಅದರಿಂದ ಇವನ ಎಲ್ಲ ಗುಣಗಳ ಅಭಾವವಾಗಿ ಹೋಗುತ್ತದೆ.

ವಿವೇಕವಂತ ಧರ್ಮಾತ್ಮಾ ಬ್ರಾಹ್ಮಣನಂತೂ ತನ್ನ ಗುಣಗಳಿಂದ ಅನ್ಯ ಗುಣರಹಿತ ಅಜ್ಞಾನೀ ಜೀವಗಳನ್ನು ಗುಣವಂತರನ್ನಾಗಿ ಮಾಡುತ್ತಾನೆ, ಅಜ್ಞಾನಿಗಳ ಸಂಗತಿಯಿಂದ ಸ್ವಯಂ ಅಜ್ಞಾನಿಯಾಗಿ ಹೋಗುವುದಿಲ್ಲ. ಹೇಗೆ ಪರುಷ ಪಾಷಾಣವು ತನ್ನ ಗುಣದಿಂದ ಲೋಹ ಕುಧಾತುವನ್ನು ಕಂಚನ(ಚಿನ್ನ)ವನ್ನಾಗಿಸುತ್ತದೆ. ಆದರೆ ಸ್ವಯಂ ಲೋಹವಾಗುವುದಿಲ್ಲ. ಅದೇ ಪ್ರಕಾರ ಉತ್ತಮ ಬ್ರಹ್ಮಚಾರಿಯು ತನ್ನ ಶೀಲ, ಸಂತೋಷ, ತಪ, ಸಂಯಮ, ವ್ರತ, ದಯಾಸಹಿತ ಗುಣಗಳನ್ನು ಜಗತ್ತಿನಲ್ಲಿ ಪ್ರಕಟ ಮಾಡಿ, ಅನ್ಯ ಜೀವಗಳನ್ನು ತನ್ನ ಸಮಾನ ಗುಣವಂತರನ್ನಾಗಿ ಮಾಡಿ ಬಿಡುತ್ತಾನೆ. ಮುಗ್ಧ, ಅಜ್ಞಾನೀ, ಅಶುಭಾಚಾರೀ, ದಯಾರಹಿತ, ಪಾಪಕಲಂಕಸಹಿತ, ಜೀವಗಳಿಗೆ ಧರ್ಮೋಪದೇಶ ನೀಡಿ ಅವರ ದೋಷ ನಷ್ಟಮಾಡಿ ಅವರನ್ನು ಶುದ್ಧ ನಿರ್ದೋಷರನ್ನಾಗಿ ಮಾಡುತ್ತಾನೆ. ಮೂರು ಕುಲಗಳಲ್ಲಿ ಉತ್ಪನ್ನವಾದ ಬ್ರಹ್ಮ ಪದದ ಧಾರಕ ಗೃಹಸ್ಥಾಚಾರ್ಯರು ಈ ಪ್ರಜಾ ಸಂಬಂಧಾಂತರ ಗುಣದ ಕಾರಣ ಅನ್ಯರನ್ನು ಗುಣರೂಪ ಮಾಡುತ್ತಾರೆ. ಈ ಗುಣವು ಇಲ್ಲದೇ ಹೋದರೆ ಅಜ್ಞಾನಿಯ ಸಂಗತಿಯಿಂದ ಸ್ವಯಂ ಅಜ್ಞಾನಿ, ಗುಣರಹಿತನಾಗಿ ಹೋಗುವುದರಿಂದ ತಮ್ಮ ಪೂಜ್ಯಪದದ ನಾಶ ಮಾಡುತ್ತಾರೆ. ಅದರಿಂದ ಅವರು ಪ್ರಜೆಗಳ ಗುಣಗಳೊಂದಿಗೆ ಬೆರೆಯುವುದಿಲ್ಲ, ಪೃಥಕ್ಕಾಗಿಯೇ ಇರುತ್ತಾರೆ - ಇದು ಪ್ರಜಾ ಸಂಬಂಧಾಂತರವೆಂಬ ಹೆಸರಿನ ಹತ್ತನೆಯ ಗುಣವಿದೆ -ಅಧಿಕಾರವಿದೆ.

ಈ ಪ್ರಕಾರ ಬಾಲವಿದ್ಯೆಯಿಂದ ಹಿಡಿದು ಪ್ರಜಾಸಂಬಂಧಾಂತರದವರೆಗೆ ಹತ್ತು ಅಧಿಕಾರಗಳ ಪೃಥಕ್-ಪೃಥಕ್ ಕ್ರಿಯೆಗಳ ಕಥನ ಮಾಡಲಾಯಿತು. ಈ ಹತ್ತು ಕ್ರಿಯೆಗಳ ರೂಪ ಪ್ರವೃತ್ತಿ ಮಾಡುವಂಥವನು ಕ್ರಿಯಾ ಬ್ರಾಹ್ಮಣನಿದ್ದಾನೆ. ಮೂರು ಕುಲಗಳಲ್ಲಿ ಉತ್ಪನ್ನ, ಈ ಕ್ರಿಯೆಗಳಿಂದ ಸಹಿತ ಶೀಲಾದಿ ಗುಣಗಳ ಪಾಲನೆ ಮಾಡುವಂಥ ಧರ್ಮೀ ಜೀವನು ಕ್ರಿಯಾ ಬ್ರಾಹ್ಮಣನಿದ್ದಾನೆ.

ಶೀಲಗುಣದ ಪರಿಪಾಲನೆ ಮಾಡುವಂಥ ಬ್ರಾಹ್ಮಣನು ಬ್ರಹ್ಮಚಾರಿಯೆನಿಸುತ್ತಾನೆ. ಈಗ ಆ ಶೀಲಾಧಿಕಾರವನ್ನು ಹೇಳುತ್ತಾರೆ.

**ಸಿವ ಮಿಂದ ಜಾಣ ದ್ವಾರಯು, ಭವಸಾಯರ ಪಾರ ತಾರ ತಂಣೇಏ ।**

**ಅಘ ತಮ ಹರ ರವಿ ಜೇಹೋ, ಮೋಖ ಮಗ್ಗೋ ಯ ಬಂಭ ಭಾವಾಏ ॥೧೪೩॥**

**ಗಾಥಾರ್ಥ :-** ಮೋಕ್ಷ ಮಹಲಿನಲ್ಲಿ ಹೋಗುವ ಸಲುವಾಗಿ ದ್ವಾರ, ಸಂಸಾರ ಸಾಗರವನ್ನು ದಾಟುವ ಸಲುವಾಗಿ ನೌಕೆಯ ಸಮಾನ, ಪಾಪರೂಪದ ಅಂಧಕಾರವನ್ನು ನಷ್ಟ ಮಾಡುವ ಸಲುವಾಗಿ ಸೂರ್ಯನ ಸಮಾನ, ಒಂದು ಬ್ರಹ್ಮ ಭಾವವೇ ಮೋಕ್ಷಮಾರ್ಗರೂಪವಿದೆ.

**ಭಾವಾರ್ಥ :-** ಮೋಕ್ಷ ಮಹಲಿನಲ್ಲಿ ಹೋಗುವುದರ ಏಕ ಮಾತ್ರ ಮಾರ್ಗವು ಬ್ರಹ್ಮಚರ್ಯಭಾವವಿದೆ. ಈ ಶೀಲದ ವಿನಹ ಮೋಕ್ಷದಲ್ಲಿ ಹೋಗುವ ದ್ವಾರವು ಬೇರೆ ಯಾವುದೂ ಇಲ್ಲ. ಈ ಶೀಲಭಾವವು ಮಹಾಗಂಭೀರ, ರಾಗ-ದ್ವೇಷರೂಪ ಜಲದಿಂದ ತುಂಬಿಕೊಂಡಿದ್ದು ವಿಕಾರರೂಪದ ಅನೇಕ ವಿಶಾಲ ತರಂಗಗಳಿಂದ ತರಂಗಿತ, ವೇದಭಾವ, ಅರತಿ, ರತಿ, ಕ್ರೋಧ, ಮಾನ, ಮಾಯೆ, ಲೋಭಾದಿರೂಪ ಮೊಸಳೆ ಮೊದಲಾದ ಕ್ರೂರ ಜಲಚರ ಜೀವಗಳು ಕ್ರೀಡೆ ಮಾಡುವ ಸ್ಥಾನರೂಪ ವಿಕಟ ಸಂಸಾರ-ಸಮುದ್ರದಿಂದ ಪಾರಾಗುವ ಸಲುವಾಗಿ ಹಡಗಿನ ಸಮಾನವಿದೆ. ನಾಲ್ಕು ಗತಿಗಳಲ್ಲಿನ ಜೀವಗಳಿಗೆ ಮೋಕ್ಷ ಮಾರ್ಗವು ಕಂಡು ಬರದಿರುವಲ್ಲಿ ಕಾರಣಭೂತ ಪಾಪರೂಪದ ಅಂಧಕಾರವನ್ನು ನಷ್ಟಗೊಳಿಸುವ ಸಲುವಾಗಿ ಈ ಬ್ರಹ್ಮಚರ್ಯ ಭಾವವು ಸೂರ್ಯನ ಸಮಾನವಿದೆ. ಈ ಒಂದು ಶೀಲವೇ ಮೋಕ್ಷದ ಮಾರ್ಗವಿದೆ.

ಎಂದರೆ ಈ ಶೀಲಗುಣವಿಲ್ಲದೆ ಧರ್ಮದ ಅನೇಕ ಅಂಗಗಳ ಸಾಧನವು ಕಾರ್ಯಕಾರಿಯಾಗಿಲ್ಲವೆಂಬ ತಾತ್ಪರ್ಯವಿದೆ. ಅದಕ್ಕಾಗಿ ಮೋಕ್ಷಾಭಿಲಾಷೀ ಜೀವರುಗಳು ಮೋಕ್ಷದ ಕಾರಣಭೂತವಿರುವ ಈ ಶೀಲದ್ದೇ ರಕ್ಷಣೆ ಮಾಡಬೇಕಾಗುವುದು.

ಶೀಲಗುಣದ ಮಹಿಮೆಯನ್ನು ಇನ್ನೂ ಹೇಳುತ್ತಾರೆ,-

**ಸೋಪಾಣೋ ಸಿವಗೇಹೋ, ಸಿವತಿಯ ಲಾವಣ ದೂತ ಸಮ ಜೋಈ ।**

**ಧಮ್ಮಾಭೂಷಣ ಭಣಯಂ, ಸಿವದೀಯೋ ಜಾಣ ಬಂಭ ಗುಣ ಗೇಯೋ ।।೧೪೪।।**

**ಗಾಥಾರ್ಥ :-** ಈ ಬ್ರಹ್ಮಭಾವವು ಮೋಕ್ಷಮಂದಿರವನ್ನು ಹತ್ತುವ ಸಲುವಾಗಿ ಮೆಟ್ಟಲಿನ ಸಮಾನವಿದೆ. ಮೋಕ್ಷರೂಪ ಸ್ತ್ರೀಯನ್ನು ಕರೆತರುವ ಸಲುವಾಗಿ ದೂತಿಯ ಸಮಾನವಿದೆ. ಧರ್ಮದ ಆಭೂಷಣವಿದೆ, ಬ್ರಹ್ಮಚರ್ಯವು ಶಿವದ್ವೀಪದಲ್ಲಿ ತಲುಪಿಸುವ ಸಲುವಾಗಿ ವಾಹನದ ಸಮಾನವಿದೆ.

**ಭಾವಾರ್ಥ :-** ಹೇಗೆ ಮಂದಿರದೊಳಗೆ ಹೋಗುವ ಸಲುವಾಗಿ ಮೆಟ್ಟಲುಗಳ ಮೇಲಿಂದ ಹೋಗಬೇಕಾಗುತ್ತದೆ. ಅದೇ ಪ್ರಕಾರ ಮಧ್ಯಲೋಕದಿಂದ ಏಳು ರಜ್ಜು ಮೇಲೆ, ಲೋಕ ಶಿಖರದ ಮೇಲೆ ಸ್ಥಿತವಿರುವ, ಅದ್ಭುತ ಸುಖದ ಸ್ಥಾನಭೂತ ಮೋಕ್ಷ ಮಹಲನ್ನು ಹತ್ತುವ ಸಲುವಾಗಿ ಶೀಲವ್ರತವು ಮೆಟ್ಟಿಲುಗಳ ಸಮಾನವಿದೆ. ಈ ಶೀಲರೂಪ ಮೆಟ್ಟಿಲುಗಳ ಮಾರ್ಗದಿಂದ ಹತ್ತುವಂಥ ಭವ್ಯನು ಸಹಜವಾಗಿಯೇ ಮೋಕ್ಷ ಮಹಲಿನಲ್ಲಿ ತಲುಪಿ ಬಿಡುತ್ತಾನೆ.

ಹೇಗೆ ದೂತಿಯು ಶೀಘ್ರವಾಗಿ ಪತ್ನಿಯೊಂದಿಗೆ ಸೇರಿಸುತ್ತಾಳೆ, ಅದೇ ಪ್ರಕಾರ ಮೋಕ್ಷರೂಪದ ವನಿತೆಯೊಂದಿಗೆ ಶೀಘ್ರವೇ ಸೇರಿಸುವ ಸಲುವಾಗಿ ಬ್ರಹ್ಮಭಾವವನ್ನು ದೂತಿಯ ಸಮಾನ ತಿಳಿಯುವುದು.

ಹೇಗೆ ಆಭೂಷಣಗಳಿಂದ ಶರೀರವು ಶೋಭೆಗೆ ಪ್ರಾಪ್ತವಾಗುತ್ತದೆ; ಅದೇ ಪ್ರಕಾರ ದಾನ, ಪೂಜೆ, ಜಪ, ತಪ, ತ್ಯಾಗ, ಚಾರಿತ್ರ ಇತ್ಯಾದಿ ಧರ್ಮದ ಅಂಗಗಳನ್ನು ಅಲಂಕರಿಸುವ ಸಲುವಾಗಿ, ಶೋಭಾಯಮಾನ ಮಾಡುವ ಸಲುವಾಗಿ ಶೀಲಗುಣವು ಆಭೂಷಣದ ಸಮಾನವಿದೆ.

ಹೇಗೆ ಯಾವುದೋ ದೇಶಾಂತರಕ್ಕೆ ಹೋಗುವ ಸಲುವಾಗಿ ರಥ, ಬಂಡಿ, ಗಾಡಿ, ಪಲ್ಲಕ್ಕಿ ಮೊದಲಾದವು ಸುಖಪೂರ್ವಕ ಪರದೇಶಕ್ಕೆ ತಗೆದುಕೊಂಡು ಹೋಗುತ್ತವೆ; ಅದೇ ಪ್ರಕಾರ ಶಿವದ್ವೀಪವನ್ನು ತಲುಪಿಸುವ ಸಲುವಾಗಿ ಶೀಲಗುಣವು ಯಾನ ಅರ್ಥಾತ್ ಸವಾರಿಯ ಸಮಾನವಿದೆ. ಅದಕ್ಕಾಗಿ ಈ ಶೀಲಗುಣದ ರಕ್ಷಣೆ ಮಾಡುವುದು ಉಚಿತವಿದೆ.

ಈಗ ಶೀಲಗುಣದ ಮಹಿಮೆಯನ್ನು ಮತ್ತಷ್ಟು ಹೇಳುತ್ತಾರೆ,-

**ಮೋಖ ತರು ದಿಢೀ ಮೂಲೋ, ಖಗ ದೇವಣರಯ ಪೂಜ್ಯ ಅಸುರಾಯೋ ।**
**ತಿಭವಣ ಚರ ಜಯಕರಈ, ಹರಈ ಭವ ದುಃಖ ಬಂಭ ವಾತಾಏ ॥೧೪೫॥**

**ಗಾಥಾರ್ಥ ಃ-** ಬ್ರಹ್ಮಭಾವವು ಮೋಕ್ಷರೂಪ ವೃಕ್ಷದ ದೃಢವಾದ ಮೂಲವಿದೆ. ವಿದ್ಯಾಧರ, ದೇವ, ಮನುಷ್ಯ ಮತ್ತು ಅಸುರರಿಂದ ಪೂಜ್ಯವಿದೆ. ಮೂರು ಲೋಕದ ಜೀವಗಳು ಅದರ ಕೀರ್ತಿ ಹಾಡುತ್ತಾರೆ. ಬ್ರಹ್ಮಚರ್ಯವು ಸಂಸಾರ ದುಃಖವನ್ನು ನಾಶಮಾಡುತ್ತದೆ.

**ಭಾವಾರ್ಥ ಃ-** ಈ ಶೀಲವ್ರತವು ಮೋಕ್ಷರೂಪ ವೃಕ್ಷದ ದೃಢವಾದ ಮೂಲ (ತಾಯಿಬೇರು) ಇದೆ. ಹೇಗೆ ದೃಢವಾದ ಮೂಲವಿಲ್ಲದೆ ವೃಕ್ಷವು ನಿಂತುಕೊಳ್ಳುವುದಿಲ್ಲ, ಅಲ್ಪ ಕಾಲದಲ್ಲಿಯೇ ನಷ್ಟವಾಗಿ ಹೋಗುತ್ತದೆ; ಅದೇ ಪ್ರಕಾರ ಶೀಲಭಾವರೂಪದ ಮೂಲವಿಲ್ಲದೆ ಮೋಕ್ಷರೂಪದ ಕಲ್ಪವೃಕ್ಷವು ಉಳಿಯುವುದಿಲ್ಲ. ನಷ್ಟವಾಗಿ ಹೋಗುತ್ತದೆ. ಈ ಶೀಲಭಾವವು ವಿದ್ಯಾಧರ, ದೊರೆ; ಜ್ಯೋತಿಷ, ವ್ಯಂತರ, ಭವನವಾಸೀ, ಕಲ್ಪವಾಸೀ - ಈ ನಾಲ್ಕು ದೇವಗಳ ಮೂಲಕ; ಚಕ್ರವರ್ತಿ, ಅರ್ಧಚಕ್ರಿ, ಕಾಮದೇವ, ಬಲಭದ್ರ, ಮಂಡಲೇಶ್ವರ ಮೊದಲಾದ ಮಹಾನ್ ಋದ್ಧಿಧಾರೀ ದೊಡ್ಡ-ದೊಡ್ಡ ದೊರೆಗಳು - ಹೀಗೆ ದೇವ ಮನುಷ್ಯರಿಂದ ಪೂಜಿತವಿದೆ. ಈ ಶೀಲಭಾವದ ಕೀರ್ತಿಯನ್ನು ಮೂರು ಲೋಕದ ಜೀವಗಳು ಹಾಡುತ್ತಾರೆ. ಈ ಶೀಲಭಾವವು ಜನ್ಮ-ಮರಣಗಳ ದುಃಖವನ್ನು ನಷ್ಟ ಮಾಡುವಂಥದ್ದಿದೆ. ಹೀಗೆ ಅನೇಕ ಗುಣಗಳಿಂದ ಯುಕ್ತವಿರುವ ಶೀಲಗುಣದ ರಕ್ಷಣೆ ಮಾಡುವುದು ಯೋಗ್ಯವಿದೆ.

ಇಲ್ಲಿ ಶೀಲಗುಣದ ಮಾಹಾತ್ಮ್ಯವನ್ನು ಮತ್ತಷ್ಟು ಹೇಳುತ್ತಾರೆ, -

**ಸಿಂಹ ಣ ಬಾಧಾ ಕರಈ, ಚಂಪಯ ಪದಣಾಗ ದಾಗ ಣಹ ಹೋಈ ।**
**ವಣ ವಾರಣ ಮಿಗ ಜಾಯೋ, ಯಹ ಫಲ ಶೀಲೋ ಯ ಹೋಯ ಣಿಯಮೇಣ ॥೧೪೬॥**

**ಗಾಥಾರ್ಥ ಃ-** ಬ್ರಹ್ಮಚಾರಿಗೆ ಸಿಂಹವು ಬಾಧೆ ಮಾಡುವುದಿಲ್ಲ, ನಾಗಸರ್ಪವು ಕಾಲುಕೆಳಗೆ ಬಂದರೂ ಕಚ್ಚುವುದಿಲ್ಲ. ಕಾನನದ ಆನೆಯು, ಜಿಂಕೆಯಂತೆ ಆಗುತ್ತದೆ - ಇಂಥ ಫಲವು ನಿಯಮದಿಂದ ಶೀಲವ್ರತದ್ದಿರುತ್ತದೆ.

**ಭಾವಾರ್ಥ ಃ-** ಭಯಾನಕ ಆಕಾರವುಳ್ಳ, ತೀಕ್ಷ್ಣ ನಖ ಹಾಗೂ ಹಲ್ಲುಗಳಿಂದ ಸಂಯುಕ್ತ, ಕಾಲಪುತ್ರನ ಹಾಗಿರುವ ವಿಕರಾಳ, ಭಯಾನಕ ರೂಪಮಯ ನಾಹರ-ಸಿಂಹವು ಕಾನನದಲ್ಲಿ ಶೀಲವಂತನನ್ನು ಪೀಡಿಸುವುದಿಲ್ಲ. ಪ್ರತ್ಯಕ್ಷ ಕಾಲದ ಸಮಾನ ವಿಕರಾಳ ಫಣೆಯಧಾರಕ, ಮುಖದಿಂದ ಹೊರಡುತ್ತಿರುವ ವಿಷ ಸಮೂಹಸಹಿತ, ಅಗ್ನಿಯಂತಿರುವ ಹಾಲಾಹಲ ವಿಷದ ಜ್ವಾಲೆಯ ವೃಷ್ಟಿ ಮಾಡುತ್ತಿರುವ ಮಣಿಧಾರಿ ಭಯಂಕರ ನಾಗಸರ್ಪವು ಶೀಲವಂತ ಪುರುಷನ ಕಾಲು ಕೆಳಗೆ ಬಂದು ಒತ್ತಲ್ಪಟ್ಟರೆ ಎರೆ ಹುಳುವಿನಂತೆ ದೀನವಾಗಿ ಬಿಡುತ್ತದೆ; ಶೀಲದ ಮಾಹಾತ್ಮ್ಯದಿಂದ ಪೀಡೆ ತಗಲಿಸುವುದಿಲ್ಲ.

ಮಹಾರಣ್ಯದಲ್ಲಿ ಸ್ವೇಚ್ಛೆಯೊಂದಿಗೆ ಪ್ರವರ್ತನೆ ಮಾಡುತ್ತಿರುವ, ತನ್ನ ಲೀಲೆಯಿಂದ ದೊಡ್ಡ-ದೊಡ್ಡ ವೃಕ್ಷಗಳನ್ನು ಕಿತ್ತೆಸೆಯುತ್ತ; ನದಿ, ಸರೋವರದ ಜಲವನ್ನು ಮಥಿಸುತ್ತಿರುವ ಕಾಲದ ಸಮಾನ ಭಯಾನಕ, ವರ್ಷಾ ಋತುವಿನ ಮೇಘದಂತೆ ಗರ್ಜಿಸುವಂಥ ದೀರ್ಘ ಶಬ್ದ ಎಂದರೆ ಘೀಳಿಡುತ್ತಿರುವ, ಅಂಜನಗಿರಿಯಂತೆ ಉನ್ನತ, ಮೇಘಘಟದ ಸಮಾನ ಶ್ಯಾಮವರ್ಣಧಾರೀ ಮದೋನ್ಮತ್ತ ಆನೆ-ಗಜೇಂದ್ರನ ಭೇಟ್ಟಿಯು ಗಹನ ವನದಲ್ಲಿ ಆಗಿ ಹೋದರೆ ಅದು ಶೀಲದ ಮಾಹಾತ್ಮ್ಯದಿಂದ ಜಿಂಕೆಯಂತೆ ಸರಳವಾಗಿ ಬ್ರಹ್ಮಚಾರಿಗೆ ಬಾಧೆ ತಗಲಿಸುವುದಿಲ್ಲ.

ಇತ್ಯಾದಿ ಗುಣಗಳನ್ನು ಪ್ರಕಟ ಮಾಡುವಂಥದು ಶೀಲಗುಣವಿದೆ ಆದುದರಿಂದ ಈ ಶೀಲಗುಣದ ರಕ್ಷಣೆ ಮಾಡುವುದು ಉಚಿತವಿದೆ.

ಈಗ ಮತ್ತೆ ಶೀಲಗುಣದ ಮಾಹಾತ್ಮ್ಯ ಹೇಳುತ್ತಾರೆ,-

**ಸುರ ಸುಹ ಕರ ಸಿವಕರಊ, ವಹಣೀ ಣೆಜ ಪತನ ಹೋಯ ದುಹಸಾಮೋ ।**

**ಸುರತರು ದಹದಾ ಸುಹ ದಯ, ಗಹಣೋ ವಣ ಸಾಯ ಬಂಭ ವಯ ಕರಈ ।।೧೪೭।।**

**ಗಾಥಾರ್ಥ ಃ-** ಸ್ವರ್ಗ ಸುಖವನ್ನುಂಟು ಮಾಡುವ, ಮೋಕ್ಷವನ್ನು ಪ್ರದಾನ ಮಾಡುವ, ಅಗ್ನಿಯಲ್ಲಿ ಬಿದ್ದಿರುವಾಗ ಆಗುವಂಥ ದುಃಖವನ್ನು ಶಾಂತ ಮಾಡುವ; ಹತ್ತು ಪ್ರಕಾರದ ಕಲ್ಪವೃಕ್ಷಗಳ ಸುಖ ನೀಡುವಂಥ ಬ್ರಹ್ಮಚರ್ಯ ವ್ರತವು ಸಘನ ವನದಲ್ಲಿ ಸಹಾಯಕವಾಗುತ್ತದೆ.

**ಭಾವಾರ್ಥ ಃ-** ಬ್ರಹ್ಮಚರ್ಯ ವ್ರತದ ಫಲದಲ್ಲಿ ವಿವಿಧ ದೇವ್ರೋ ಪುನೀತ ಅದ್ಭುತ, ದೇವ ಪರ್ಯಾಯದ ಪಂಚೇಂದ್ರಿಯಜನ್ಯ ಸುಖವಾಗುತ್ತದೆ. ಶೀಲವಂತ ಜೀವನಿಗೆ ಕರ್ಮರಹಿತ, ಅಖಂಡ, ಅವಿನಾಶೀ, ಅಚಲ, ಅತೀಂದ್ರಿಯ ಮೋಕ್ಷರೂಪ ಸುಖವಾಗುತ್ತದೆ. ನಾಲ್ಕೂ ನಿಟ್ಟಿಗೆ ಅಗ್ನಿಯ ಜ್ವಾಲೆಯು ಹೊತ್ತಿ ಉರಿಯುತ್ತಿದ್ದರೂ ಶೀಲವಂತನಿಗೆ ಬಾಧೆಯಾಗುವುದಿಲ್ಲ. ಯಾವನೋ ಪಾಪಿಯ ಮೂಲಕ ಶೀಲವಂತನನ್ನು ಅಗ್ನಿಯಲ್ಲಿ ನೂಕಿ ಬಿಟ್ಟರೆ ಆ ಅಗ್ನಿಯು ಜಲವಾಗಿ ಹೋಗುತ್ತದೆ. ಹೇಗೆ ಅಗ್ನಿಯಲ್ಲಿ ಪ್ರವೇಶ ಮಾಡಿದ ಮೇಲೆ ಸೀತೆಯ ಶೀಲದ ಮಾಹಾತ್ಮ್ಯದಿಂದ ಅಗ್ನಿಯು ನೀರಾಗಿ ಪರಿವರ್ತಿತವಾಗಿ ಹೋಗಿತ್ತು ಹಾಗೆ. ಶೀಲವಂತನಿಗೆ ಅಗ್ನಿಯ ಭಯವಿರುವುದಿಲ್ಲ. ಶೀಲದ ಮಾಹಾತ್ಮ್ಯದಿಂದ ಹತ್ತು ಪ್ರಕಾರದ ಕಲ್ಪವೃಕ್ಷಗಳ ಮೂಲಕ ಕೊಡಲ್ಪಡುವ ವಾಂಛಿತ ಸುಖವು ಸಹಜವಾಗಿ ಆಗುತ್ತದೆ.

ದೊಡ್ಡ-ದೊಡ್ಡ ಸಘನ ವೃಕ್ಷಗಳ ಸಮೂಹಮಯ, ಮಹಾಭಯಾನಕ ಸಿಂಹಗಳ ಗರ್ಜನೆಯಿಂದ ತುಂಬಿಕೊಂಡಿರುವ, ಮೇಘಗರ್ಜನೆಯಂತೆ ಆನೆಗಳ ಘೀಳಿಡುವಿಕೆಯಿಂದ ಆಪೂರಿತ; ಸಿಂಹ ಗರ್ಜನೆಯ ಶಬ್ದವನ್ನಾಲಿಸಿ ಅಲ್ಲಿ-ಇಲ್ಲಿ ಅಲೆಯುತ್ತಿರುವ, ಲೀಲೆ ಮಾಡುತ್ತ ಮದೋನ್ಮತ್ತ ಸ್ವೇಚ್ಛಾಚಾರೀ ಆನೆಗಳ ಸಮೂಹದ ಮೂಲಕ ಕಿತ್ತೆಸೆದ ವೃಕ್ಷಗಳಿಂದ ಕೂಡಿದ; ಸಿಂಹದ ಧ್ವನಿಯನ್ನಾಲಿಸಿ ಮದವು ಇಳಿದು ಹೋಗಿ ಭಯದಿಂದ ತಮ್ಮ ಮರಿಗಳೊಂದಿಗೆ ಧಾವಿಸುತ್ತಿರುವ ಆನೆಗಳಿಂದ ಸಂಯುಕ್ತ; ಕಾನನದಲ್ಲಿ ಸ್ಥಿತವಿರುವ ದೊಡ್ಡ-ದೊಡ್ಡ ಪರ್ವತಗಳು ಪೊಳ್ಳಾಗಿ ಹೋಗುವುದರಿಂದ ಉಂಟಾದ ಗುಹೆಗಳಿಂದ ಹೊರ ಬರುತ್ತಿರುವ ದೀರ್ಘ ಉಚ್ಛ್ವಾಸ ತಗೆದುಕೊಳ್ಳುತ್ತಿರುವ ವಿಶಾಲ ದೀರ್ಘ ತನುವಿನ ಧಾರಕ ಹೆಬ್ಬಾವುಗಳಿಂದ ಆಕ್ರಾಂತವಿರುವ ಮಹಾ ಭೀಕರ ಕಾನನದಲ್ಲಿ ಶೀಲವಂತನು ಬಂದು ಬಿದ್ದರೆ ಅವನು ಶೀಲಗುಣದ ಮಾಹಾತ್ಮ್ಯದಿಂದ ನಿಷ್ಖೇದನಾಗಿದ್ದುಕೊಂಡು ಅಲ್ಲಿಂದ ಹೊರಗೆ ಬಂದು ಬಿಡುತ್ತಾನೆ.

ಇಂಥ ಅತಿಶಯ ಸಹಿತವಿರುವ ಶೀಲಗುಣದ ರಕ್ಷಣೆ ಮಾಡುವುದು ವಿವೇಕವಂತರ ಕರ್ತವ್ಯವಿದೆ.

ಈಗ ಮತ್ತೆ ಶೀಲಗುಣದ ಮಾಹಾತ್ಮ್ಯ ತಿಳಿಸಿಕೊಡುತ್ತಾರೆ.

**ಸಿಸರೋ ಅಬಂಭ ಭುಂಜಈ, ಬಂಭ ಬತೋಯ ವಜ್ಜ ಛಿಣ ಏಕೋ ।**

**ಕಾಮಭುಯಂಗಾಯ ಮಂತ್ತೋ , ವಸಿಕರಈ ಬಂಭ ಏಕ ಗರುಡಾಯೇ ।।೧೪೮।।**

**ಗಾಥಾರ್ಥ -** ಅಬ್ರಹ್ಮರೂಪದ ಪರ್ವತವನ್ನು ಒಡೆದುಹಾಕುವ ಸಲುವಾಗಿ ಬ್ರಹ್ಮಚರ್ಯವು ಒಂದು ವಜ್ರದ ಸಮಾನವಿದೆ; ಕಾಮರೂಪದ ಸರ್ಪವನ್ನು ವಶದಲ್ಲಿಟ್ಟುಕೊಳ್ಳುವ ಸಲುವಾಗಿ ಬ್ರಹ್ಮಚರ್ಯವು ಒಂದು ಮಂತ್ರದ ಸಮಾನವಿದೆ; ಅದನ್ನು ವಶದಲ್ಲಿಟ್ಟುಕೊಳ್ಳುವ ಸಲುವಾಗಿ ಬ್ರಹ್ಮಚರ್ಯವು ಗರುಡದ ಸಮಾನವಿದೆ.

**ಭಾವಾರ್ಥ -** ಕ್ಷಣಾರ್ಧದಲ್ಲಿ ಕುಶೀಲರೂಪದ ಪರ್ವತಗಳನ್ನು ಒಡೆದುಹಾಕುವಂಥದ್ದಿರುವುದರಿಂದ ಕುಶೀಲರೂಪದ ಉತ್ತುಂಗ ಪರ್ವತವನ್ನು ಪುಡಿ ಮಾಡುವ ಸಲುವಾಗಿ ಶೀಲಭಾವವು ವಜ್ರದ ಸಮಾನವಿದೆ. ಕುಶೀಲಭಾವರೂಪದ ಸರ್ಪವನ್ನು ವಶದಲ್ಲಿಟ್ಟುಕೊಳ್ಳುವ ಸಲುವಾಗಿ ಇದು ಮಂತ್ರದ ಸಮಾನವಿದೆ. ಅದನ್ನು ವಶಪಡಿಸಿಕೊಳ್ಳುವ ಸಲುವಾಗಿ ಈ ಶೀಲಭಾವವು ಗರುಡದ ಸಮಾನವಿದೆ; ಅದಕ್ಕಾಗಿ ಶೀಲವ್ರತದ ರಕ್ಷಣೆ ಮಾಡುವುದು ಉಚಿತವಿದೆ.

ಶೀಲವ್ರತದ ಮಹಿಮೆಯನ್ನು ಮತ್ತೆ ಹೇಳುತ್ತಾರೆ,-

**ಮದನೋ ಮದಗಯ ಥಂಬಲು, ಅಂಕಸ ಸಿರ ದಾಗ ಲಾಗ ಬಸ ಕರಈ ।**

**ಮಣ ಕಪಿ ಬಸಕರ ಘಂದಈ, ಬಂಭೋ ವಯ ಗಯ ಗೇಯ ಣಿಯಮೇಣ ॥೧೪೯॥**

**ಗಾಥಾರ್ಥ :-** ಮದನರೂಪದ ಮದೋನ್ಮತ್ತ ಆನೆಯನ್ನು ಜಯಿಸುವ ಸಲುವಾಗಿ ತಲೆಯಲ್ಲಿ ಅಂಕುಶದ ಬರೆ ತಾಗಿಸಿ ವಶಪಡಿಸಿಕೊಳ್ಳುವಂತೆಯೂ; ಮನಸ್ಸು ರೂಪದ ಮರ್ಕಟವನ್ನು ವಶದಲ್ಲಿಟ್ಟುಕೊಳ್ಳುವ ಸಲುವಾಗಿ ಪಾಶದ ಸಮಾನವಾಗಿರುವ ಒಂದು ಬ್ರಹ್ಮಚರ್ಯ ವ್ರತವೇ ನಿಯಮದಿಂದ ಸಮರ್ಥವಿದೆ.

**ಭಾವಾರ್ಥ :-** ಯಾವುದನ್ನು ಜಯಿಸುವ ಸಲುವಾಗಿ - ವಶದಲ್ಲಿಟ್ಟುಕೊಳ್ಳುವ ಸಲುವಾಗಿ, ದೊಡ್ಡ-ದೊಡ್ಡ ವೈರಿಗಳನ್ನು ಗೆಲ್ಲುವಂಥ ಬಲಶಾಲಿ ಇಂದ್ರ, ದೇವ, ಕಾಮದೇವ, ನಾರಾಯಣ, ಬಲಭದ್ರ, ಕೋಟಿಭಟ ಮೊದಲಾದ ಮಹಾ ಪುರುಷರು ದೊಡ್ಡ-ದೊಡ್ಡ ಸಾಮಂತರು ಕೂಡ ಸಮರ್ಥರಾಗುವುದಿಲ್ಲವೋ ಆ ಕಾಮರೂಪ ಮದೋನ್ಮತ್ತ ಮಹಾಬಲಶಾಲಿ ಹಸ್ತಿ(ಆನೆ)ಯನ್ನು ವಶದಲ್ಲಿಟ್ಟುಕೊಳ್ಳುವ ಸಲುವಾಗಿ ಈ ಶೀಲಭಾವವು ಅಂಕುಶದ ಬರೆಯ ಸಮಾನವಿದೆ. ಮನಸ್ಸುರೂಪದ ಮಂಗನನ್ನು ಕಟ್ಟಿಹಾಕುವ ಸಲುವಾಗಿ ಲೋಹದ ಸಂಕಲೆಯ ಸಮಾನವಿದೆ. ಶೀಲಭಾವವು ಇತ್ಯಾದಿ ಅನೇಕ ಗುಣಸಂಪನ್ನವಿದೆಯೆಂದು ತಿಳಿಯುವುದು.

ಈಗ ಪುನಃ ಶೀಲವ್ರತದ ಮಹಿಮೆಯನ್ನು ತಿಳಿಸಿಕೊಡುತ್ತಾರೆ,-

**ಕುಗಯ ವಾರ ಕಪಾಟೋ, ಅಬಂಭ ತರುಭೇದ ತೀಚ್ಛ ಕುಠಹಾರೋ ।**

**ಸಿವ ಗಚ್ಛತ ಸುಹ ಸುಕಣೋ, ಇಂದೀ ಮಿಗ ಜಾಲ ಬಂಭ ಬತಾಏ ॥೧೫೦॥**

**ಗಾಥಾರ್ಥ -** ಈ ಬ್ರಹ್ಮ ಭಾವವು ಕುಗತಿಯ ದ್ವಾರದ ಸಲುವಾಗಿ ಕವಾಟದ (ಬಾಗಿಲಿನ) ಸಮಾನವಿದೆ; ಕುಶೀಲರೂಪದ ವೃಕ್ಷವನ್ನು ಭೇದಿಸುವ ಸಲುವಾಗಿ ತೀಕ್ಷ್ಣ ಕುಠಾರವಿದೆ; ಮೋಕ್ಷಕ್ಕೆ ಹೊರಡುವ ಸಲುವಾಗಿ ಶುಭ ಶಕುನವಿದೆ. ಇಂದ್ರಿಯ ರೂಪದ ಮೃಗವನ್ನು ಹಿಡಿಯುವ ಸಲುವಾಗಿ ಬ್ರಹ್ಮಚರ್ಯವು ಜಾಲದ ಸಮಾನವಿದೆ.

**ಭಾವಾರ್ಥ :-** ಈ ಬ್ರಹ್ಮಚರ್ಯ ವ್ರತವು ನರಕ, ತಿರ್ಯಂಚರೂಪದ ಗತಿಗಳಲ್ಲಿ ಹೋಗುವುದನ್ನು ತಡೆಯುವ ಸಲುವಾಗಿ ಭದ್ರ ಬಾಗಿಲಿನಂತಿದೆ. ಈ ಶೀಲವ್ರತವು ಆರ್ತ-ರೌದ್ರಭಾವರೂಪದ ಮುಳ್ಳುಗಳಿಂದ ಕೂಡಿದ, ಆಕುಲಭಾವರೂಪ ಛಾಯೆಯ ಧಾರಕ, ಅಪಕೀರ್ತಿರೂಪದ ಪುಷ್ಪಗಳಿಂದ ಪುಷ್ಪಿತವಿರುವ ನರಕ-ತಿರ್ಯಂಚ ಗತಿಗಳ ರೂಪದ ಫಲಗಳಿಂದ ಸಂಪನ್ನವಾಗಿರುವ ಕುಶೀಲರೂಪದ ವಿಕಟ ವೃಕ್ಷವನ್ನು ಕತ್ತರಿಸಿ ಹಾಕುವ ಸಲುವಾಗಿ ತೀಕ್ಷ್ಣ ಕುಠಾರದ ಸಮಾನವಿದೆ. ಹೇಗೆ ಯಾವುದೋ ವಿಶಾಲ ಲಾಭದ ಸಲುವಾಗಿ ದ್ವೀಪಾಂತರಗಳಿಗೆ ಹೋಗುವಾಗ ಒಳ್ಳೆಯ ಶಕುನವಾದರೆ, ಹೋಗುತ್ತಿದ್ದಂತೆಯೇ ಕಾರ್ಯವು ಸಿದ್ಧವಾಗಿ ಬಿಡುತ್ತದೆ; ಹಾಗೆಯೇ ಮೋಕ್ಷರೂಪ ದ್ವೀಪದ ಸಲುವಾಗಿ ಗಮನ ಮಾಡುವಂಥ ಯತೀಶ್ವರ ಹಾಗೂ ಭವ್ಯ ಶ್ರಾವಕರುಗಳಿಗೆ ಶುದ್ಧ ಶೀಲವ್ರತದ ಜೊತೆಗಾರಿಕೆಯು ಶುಭ ಶಕುನದ ಸಮಾನವಿದೆ.

ಹೇಗೆ ಪರಿಪೂರ್ಣ ಬೆಳೆದು ನಿಂತ ಧಾನ್ಯದ ಫಸಲಿನ ಹೊಲ ಅಥವಾ ತೋಟವು ಪಶು (ಮೃಗ)ಗಳಿಂದ ಹಾಳಾಗಿ ಹೋದರೆ, ತಿನ್ನಲ್ಪಟ್ಟರೆ ಹೊಲದ ಲೋಭಿ ಒಕ್ಕಲಿಗನು ಆ ಪಶುಗಳನ್ನು ಜಾಲದಿಂದ ಹಿಡಿದು ಬಂಧಿಸಿ ತನ್ನ ಹೊಲದ ರಕ್ಷಣೆ ಮಾಡುತ್ತಾನೆ; ಅದೇ ಪ್ರಕಾರ ಅನೇಕ ಗುಣಗಳನ್ನು ಉತ್ಪನ್ನಮಾಡುವಂಥ ಸಂಯಮರೂಪದ ಹೊಲವನ್ನು ಇಂದ್ರಿಯರೂಪದ ಪಶುಗಳಿಂದ ಕೆಟ್ಟು ಹೋಗುತ್ತಿರುವುದನ್ನು ಕಂಡು, ತನ್ನ ಸಂಯಮರೂಪ ಹೊಲದ ರಕ್ಷಣೆ ಮಾಡುವಂಥ ಧರ್ಮಾತ್ಮಾ ಪುರುಷನು ಇಂದ್ರಿಯ ರೂಪದ ಮೃಗಗಳನ್ನು ಶೀಲರೂಪ ಜಾಲದಿಂದ ಹಿಡಿದು - ತನ್ನ ವಶದಲ್ಲಿಟ್ಟುಕೊಂಡು ತನ್ನ ಸಂಯಮರೂಪದ ಹೊಲ-ಗದ್ದೆಯನ್ನು ರಕ್ಷಿಸುತ್ತಾನೆ- ಹೀಗೆ ಅನೇಕ ಗುಣಗಳ

ಭಂಡಾರವಾದ ಈ ಶೀಲವ್ರತದ ರಕ್ಷಣೆ ಮಾಡುವುದರಿಂದ ಸ್ವರ್ಗ ಸಂಪದವು ದಾಸಿಯಾಗುತ್ತದೆ, ಮೋಕ್ಷ ಸಂಪದವು ಮನೆಯಲ್ಲಿ ಬಂದು ಬಿಡುತ್ತದೆ. ಅದಕ್ಕಾಗಿ ಎಲೈ ವಿವೇಕವಂತರೇ ! ಈ ಶೀಲದ ರಕ್ಷಣೆ ಮಾಡಿರಿ.

ಈಗ ಕುಶೀಲದ ಸ್ವರೂಪ ಹೇಳುತ್ತಾರೆ,-

**ಧಮ್ಮತರು ಭಂಜಗಯಂದೋ, ಮಿಚ್ಛಾ ರಯಣೀಯ ಮಾಂಹಿ ಮಿಗ್ಗಾಂಕೋ।**
**ಆಪದ ಧನ ಗಹ ಭರಈ, ಯೇಸಲೂ ದೋಸಾಯ ಜಣಣೀ ಅಬಂಭೋ ॥೧೫೧॥**

**ಗಾಥಾರ್ಥ :-** ಧರ್ಮರೂಪದ ವೃಕ್ಷವನ್ನು ಭೇದಿಸುವ ಸಲುವಾಗಿ ಆನೆ, ಮಿಥ್ಯಾತ್ವರೂಪದ ರಾತ್ರಿಯನ್ನುಂಟು ಮಾಡುವ ಸಲುವಾಗಿ ಚಂದ್ರನ ಸಮಾನ; ಆಪದಗಳ ರೂಪದ ಧನದಿಂದ ಮನೆಯನ್ನು ತುಂಬಿಬಿಡುವಂಥದು - ಇವೆಲ್ಲ ದೋಷಗಳ ಜನನಿಯು ಅಬ್ರಹ್ಮವಿದೆ.

**ಭಾವಾರ್ಥ :-** ಕೀರ್ತಿರೂಪ ಪರಿಮಳಯುಕ್ತ ಪುಷ್ಪಗಳಿಂದ ಪುಷ್ಪಿತವಾಗಿರುವ, ಸ್ವರ್ಗ-ಮೋಕ್ಷರೂಪದ ಫಲಗಳಿಂದ ಸಮೃದ್ಧವಿರುವ ಧರ್ಮರೂಪದ ವೃಕ್ಷವನ್ನು ಕತ್ತರಿಸುವ, ವಿಧ್ವಂಸ ಮಾಡುವ ಸಲುವಾಗಿ ಕುಶೀಲ ಭಾವನೆಯು ಮದಗಜದ ಸಮಾನವಿದೆ. ಎಲ್ಲ ಪದಾರ್ಥಗಳ ಜ್ಞಾನ ಮಾಡಿಸುವಂಥ ಸಮ್ಯಗ್ಜ್ಞಾನರೂಪದ ಹಗಲನ್ನು ನಷ್ಟಮಾಡುವ ಸಲುವಾಗಿ ಹಾಗೂ ಮಿಥ್ಯಾತ್ವರೂಪದ ರಾತ್ರಿಯನ್ನು ಪ್ರಕಾಶಿತ ಮಾಡುವ ಸಲುವಾಗಿ ಕುಶೀಲ ಭಾವನೆಯು ರಜನಿಪತಿ ಚಂದಿರನ ಸಮಾನವಿದೆ. ಈ ಕುಶೀಲವು ಅನೇಕ ಪ್ರಕಾರದ ದುಃಖ, ದಾರಿದ್ರ್ಯ, ರೋಗ, ಭಯ, ಆಪದರೂಪ ಸಂಪದದಿಂದ ಮನೆಯನ್ನು ತುಂಬಿ ಬಿಡುವಂಥದ್ದಿದೆ. ಎಂದರೆ ಕುಶೀಲದ ವಿದ್ಯಮಾನತೆಯಲ್ಲಿ ಮನೆಯಿಂದ ಆಪತ್ತುಗಳೆಂದೂ ನಷ್ಟವಾಗುವುದಿಲ್ಲ. ಹೊರಟು ಹೋಗುವುದಿಲ್ಲ. ಕುಶೀಲ ಭಾವನೆಯು ಅನೇಕ ದೋಷಗಳಿಗೆ ಜನ್ಮವೀಯುವಲ್ಲಿ ಸಮರ್ಥ ಮಾತೆಯ ಸಮಾನವಿದೆಯೆಂದು ತಿಳಿದುಕೊಂಡು ಕುಶೀಲ ಭಾವನೆಯ ತ್ಯಾಗ ಮಾಡುವುದು ಉಚಿತವಿದೆ, ಹಿತಕರವಿದೆ.

ಈಗ ಪುನಃ ಕುಶೀಲದ ಸ್ವಭಾವ ಹೇಳುತ್ತಾರೆ, -

**ಬಂಭ ಹಣಣ ತಿಯ ಕುಟಿಲಾ, ಕುಗಾಯ ಗಮಣಕರ ಹರಯ ಸಿವಮಗ್ಗೋ।**
**ಏಹೋ ಭಾವ ಅಬಂಭೋ, ಹೇಯೋ ಕೀಯ ಭವ್ವ ಬಂಭ ಪಾದೇಯೋ ॥೧೫೨॥**

**ಗಾಥಾರ್ಥ -** ಬ್ರಹ್ಮಚರ್ಯವನ್ನು ನಷ್ಟಗೊಳಿಸುವ ಸಲುವಾಗಿ ಕುಟಿಲಸ್ತ್ರೀ, ಕುಗತಿಯಲ್ಲಿ ಗಮನ ಮಾಡಿಸುವಂಥದು, ಮೋಕ್ಷಮಾರ್ಗದ ಹರಣ ಮಾಡುವಂಥದು ಈ ಕುಶೀಲ ಭಾವವಿದೆ. ಇದು ಭವ್ಯ ಜೀವನಿಗೆ ಹೇಯವಿದೆ. ಬ್ರಹ್ಮಚರ್ಯಭಾವವು ಉಪಾದೇಯವಿದೆ.

**ಭಾವಾರ್ಥ -** ಹೇಗೆ ಕುಟಿಲ ಸ್ತ್ರೀಯು ಅನೇಕ ಪ್ರಕಾರದ ಹಾವ-ಭಾವ ಮಾಡಿ, ಪರ ಪುರುಷನ ಮನಸ್ಸನ್ನು ಮೋಹಿತಗೊಳಿಸಿ, ಅವನ ಶೀಲಹರಣ ಮಾಡಿಬಿಡುತ್ತಾಳೆ, ಹಾಗೆಯೇ ಕುಶೀಲ ಭಾವವು ಬ್ರಹ್ಮಚರ್ಯವನ್ನು ನಷ್ಟಗೊಳಿಸುವ ಸಲುವಾಗಿ ಕುಟಿಲ ಸ್ತ್ರೀಯ ಸಮಾನವಿದೆ. ಈ ಕುಶೀಲ ಭಾವವು ನರಕ, ತಿರ್ಯಂಚರೂಪ ಕುಗತಿಯ ಮಾರ್ಗವನ್ನು ತೋರಿಸಿಕೊಡುತ್ತದೆ ಮತ್ತು ಸಮ್ಯಗ್ದರ್ಶನ-ಜ್ಞಾನ-ಚಾರಿತ್ರರೂಪ ಮೋಕ್ಷ ಮಾರ್ಗದ ಹರಣ ಮಾಡುತ್ತದೆ; ಅದಕ್ಕಾಗಿ ಎಲೈ ಭವ್ಯರೇ ! ಈ ಕುಶೀಲ ಭಾವದ ತ್ಯಾಗ ಮಾಡಿ ಶೀಲಭಾವದ ಅಂಗೀಕಾರ ಮಾಡಿರಿ.

ಈ ಪ್ರಕಾರ ಶೀಲಭಾವ ಮತ್ತು ಕುಶೀಲ ಭಾವದ ಸ್ವಭಾವವನ್ನು ತನ್ನ ಬುದ್ಧಿಯ ಬಲದಿಂದ ಗುರುತಿಸಿ, ಸಮತಾರಸದ ಆಸ್ವಾದಿಯಾಗಿ; ಈ ಜಗತ್ತಿನ ವಿಡಂಬನೆಯ ರೂಪದ ವಿಕಾರ ಸಹಿತವಿರುವ ಕುಶೀಲ ಭಾವವನ್ನು ಬಿಟ್ಟುಕೊಡಬೇಕು. ಮೋಕ್ಷರೂಪ ಸ್ತ್ರೀಯ ಸಂಬಂಧದಿಂದ ಉತ್ಪನ್ನವಾಗುವ ನಿರಾಕುಲ, ಅದ್ಭುತ ಅತೀಂದ್ರಿಯ ಸುಖವನ್ನು ಶೀಲಭಾವದ ಪ್ರಸಾದದಿಂದ ಭೋಗಿಸಿ ತಾವು ಸುಖಿಯಾಗುವುದು.

ಇಲ್ಲಿ ಹೇಳಲಾದ ಕುಶೀಲಗಳ ಸ್ವರೂಪದ ತ್ಯಾಗ ಮಾಡಿ, ಪೂರ್ವೋಕ್ತ ಶೀಲಗುಣವನ್ನು ಧಾರಣ ಮಾಡುವಂಥವನು ಕ್ರಿಯಾಬ್ರಹ್ಮನಿದ್ದಾನೆ.

ಈಗ ನಾಲ್ಕು ಭೇದವುಳ್ಳ ಕ್ರಿಯಾಬ್ರಹ್ಮನ ಕ್ರಿಯೆಗಳನ್ನು ಹೇಳುತ್ತಾರೆ,-

**ಸಿರ ಲಿಂಗನ ಉರಲಿಂಗೋ, ಕಟಿಲಿಂಗೋ ಚವ ಭೇಯೋ ।**

**ಧಾರಯ ಸೋ ದುಜ ಸುದ್ಧೋ, ಬಂಭಚಾರೋ ಯ ಧಾರ ಸಮುಭಾವೋ ।।೧೫೩।।**

**ಗಾಥಾರ್ಥ ః-** ತಲೆಯ ಚಿಹ್ನೆ, ಉರ(ಹೃದಯ)ದ ಚಿಹ್ನೆ, ಸೊಂಟದ ಚಿಹ್ನೆ, ಜಂಘಾಚಿಹ್ನೆ- ಇವು ನಾಲ್ಕು ಪ್ರಕಾರಗಳು ಕ್ರಿಯಾಬ್ರಹ್ಮವಿವೆ. ಸಮತೆಯ ಭಾವವನ್ನು ಧಾರಣೆ ಮಾಡುವಂಥವನು ಬ್ರಹ್ಮಚಾರಿಯಿದ್ದಾನೆ. ಅವನೇ ಶುದ್ಧ ದ್ವಿಜನಿದ್ದಾನೆ.

**ಭಾವಾರ್ಥ ః-** ಮೂರು ಕುಲಗಳಲ್ಲಿ ಉತ್ಪನ್ನನಾದ ಧರ್ಮಾತ್ಮಾ ಗೃಹಸ್ಥನ ಬಾಲಕರು ಎಷ್ಟು ಸಮಯದ ವರೆಗೆ ಗೃಹಸ್ಥಾಚಾರ್ಯರ ಹತ್ತಿರ ವಿದ್ಯೆಯ ಅಭ್ಯಾಸ ಮಾಡುತ್ತಾರೆ, ಅಷ್ಟು ಸಮಯದವರೆಗೆ ಗುರುಗಳ ಆಜ್ಞೆಯ ಅನುಸಾರ ಬ್ರಹ್ಮಚರ್ಯ ವ್ರತದ ಪಾಲನೆ ಮಾಡುತ್ತ ಈ ಕೆಳಗೆ ಹೇಳುವ ನಾಲ್ಕು ಚಿಹ್ನೆಗಳಿಂದ ಸಹಿತರಾಗಿರುತ್ತಾರೆ.

೧. ಶಿರಚಿಹ್ನೆ - ನಗ್ನ ತಲೆಯಿಂದಿರುತ್ತ ಕೂದಲಿಗೆ ಗಂಟು ಹಾಕಿಕೊಂಡಿರುವುದು ಶಿರಚಿಹ್ನೆಯಿದೆ.

೨. ಉರಲಿಂಗ - ಯಥಾರ್ಥ ಜೈನಿಯಿಂದ ತನ್ನ ಜೈನತ್ವ ಪ್ರಕಟ ಪಡಿಸುವ ಸಲುವಾಗಿ ರತ್ನತ್ರಯದ ಪ್ರಸಿದ್ಧ ಚಿಹ್ನೆ; ಜಿನಧರ್ಮದ ಗುರುತಾಗಿರುವ ಮೂರು ಎಳೆಯ ದಾರವು ಹೃದಯದವರೆಗೆ ಜೋತಾಡುತ್ತಿರುವುದು - ಕೊರಳಲ್ಲಿ ಜನಿವಾರ ಹಾಕಿಕೊಳ್ಳುವುದು ಉರದ ಚಿಹ್ನೆಯಿದೆ.

೩. ಡಾಭ ಅಥವಾ ದರ್ಭೆಯ ದಾರದಿಂದ ಸೊಂಟದ ಕರಧನೀಯ ಸ್ಥಾನವನ್ನು ಕಟ್ಟಿಕೊಂಡಿರುವುದು ಕಟಿ ಚಿಹ್ನೆಯಿದೆ.

೪. ಉರು ಅರ್ಥಾತ್ ಜಂಘಾದವರೆಗೆ ಉಜ್ವಲವಾದ ಪಂಚೆಯನ್ನಿಟ್ಟುಕೊಳ್ಳುವುದು ಉರು ಚಿಹ್ನೆಯಿದೆ.

ಉರಚಿಹ್ನೆ ಜನಿವಾರವನ್ನು ಒಂಭತ್ತು ಗುಣಗಳಿಂದ ಸಂಪನ್ನನಾದ ಭವ್ಯನು ಧಾರಣ ಮಾಡುತ್ತಾನೆ. ಗುಣಗಳಿಲ್ಲದೆ ಜನಿವಾರವನ್ನಿಟ್ಟುಕೊಂಡರೆ ಪರಂಪರೆಯಿಂದ ಧರ್ಮದ ಲೋಪವಾಗಿ ಹೋಗುವುದರಿಂದ ಅವನು ಪಾಪಬಂಧ ಮಾಡುವಂಥವನಾಗುತ್ತಾನೆ. ವಿಜ್ಞಾನತೆ, ಕ್ಷಮಾವಂತ, ಅದತ್ತತ್ಯಾಗ, ಅಷ್ಟಮೂಲಗುಣಧಾರಕ, ಲೋಭರಹಿತ, ಶುಭಾಚರಣೆ, ಸಮಿತಿಧರ, ಶೀಲವಂತ ಮತ್ತು ತ್ಯಾಗ - ಇವು ಒಂಭತ್ತು ಜನಿವಾರ ಧಾರಣ ಮಾಡುವಂಥವನ ಗುಣಗಳಿವೆ.

೧. **ವಿಜ್ಞಾನತೆ** - ಅನೇಕ ಪ್ರಕಾರದಿಂದ ವಿಶೇಷ ಗುಣಗಳಲ್ಲಿ ಸಾವಧಾನತೆಯನ್ನಿಟ್ಟುಕೊಳ್ಳುವುದು, ಕ್ಷಮಾವಂತನಿರುವುದು, ತಪಸ್ವೀ ಇರುವುದು, ದಯಾಸಹಿತ, ಎಲ್ಲ ಜೀವಗಳನ್ನು ತನ್ನ ಸಮಾನ ತಿಳಿಯುವಂಥವನಿರುವುದು, ಉದಾರ ಚಿತ್ತವುಳ್ಳವನಿರುವುದು, ಸರ್ವಜ್ಞಭಾಷಿತ ಶಾಸ್ತ್ರಗಳ ಧಾರಕ ಪಂಡಿತನಿರುವುದು. ಯಥಾಯೋಗ್ಯ ದೇವ-ಗುರು-ಧರ್ಮದ ಹಾಗೂ ತನ್ನ ಸಮಾನರ ಮತ್ತು ತನಗಿಂತ ಚಿಕ್ಕವರ ವಿನಯದ ಕುರಿತಾಗಿ ತಿಳಿವಳಿಕೆಯನ್ನಿಟ್ಟುಕೊಂಡಿರುವವ, ಸ್ವಯಂ ಹೃದಯದಿಂದ ವಿನಯವಂತನಿರುವುದು - ಇತ್ಯಾದಿಯಾಗಿ ವಿಶೇಷ ಜ್ಞಾನವಂತನಿರುವುದು ವಿಜ್ಞಾನ ಗುಣವಿದೆ.

೨. **ಕ್ಷಮಾಗುಣ** - ಶಾಂತ ಸ್ವಭಾವಿಯಿರುವುದು, ಕ್ರೋಧವಿಲ್ಲದಿರುವುದು, ಎಲ್ಲ ಜೀವಗಳ ಮಂಗಲದ ಬಯಕೆಯುಳ್ಳವನಿರುವುದು, ಇನ್ನೊಬ್ಬರ ಉನ್ನತಿಯನ್ನು ಕಂಡು ಸಹಿಸಲಾಗದ ಗುಣವಿಲ್ಲದಿರುವುದು, ಕ್ರೋಧ, ಮಾನ, ಮಾಯೆ, ಲೋಭ, ಪಾಖಂಡದ ತ್ಯಾಗಿಯಿರುವುದು. ಕಷಾಯಗಳು ಇಲ್ಲದಿರುವುದು- ಇತ್ಯಾದಿ ಗುಣಸಂಪನ್ನನಾಗಿರುವುದು ಕ್ಷಮಾಗುಣವಿದೆ.

೩. **ಅದತ್ತ ತ್ಯಾಗ -** ಅದತ್ತದ ತ್ಯಾಗಿಯಾಗಿರುವುದು. ದಾರಿಯಲ್ಲಿ ಬಿದ್ದಿರುವ ಧನವನ್ನು ಸ್ಪರ್ಶಿಸದಿರುವುದು, ಕೊಡಲಾರದ ಯಾರೋ ಇಟ್ಟಿರುವ, ಭೂಮಿಯಲ್ಲಿ ಹೂಳಿಡಲಾದ, ಅಥವಾ ಮರೆತುಹೋದ ಧನವನ್ನು ತಗೆದುಕೊಳ್ಳದಿರುವುದು - ಇತ್ಯಾದಿ ರೂಪದಲ್ಲಿ ಚೋರಿಯ ತ್ಯಾಗಿಯಾಗಿರುವುದು ಅದತ್ತ ತ್ಯಾಗ ಗುಣವಿದೆ.

೩. **ಅಷ್ಟ ಮೂಲಗುಣಧಾರಕ -** ಅತ್ತಿ, ಆಲ, ಬಸರಿ, ಗೋರಿ, ಅರಳೆಯೆಂಬ ಐದು ಉದಂಬರ ಫಲ; ಮದ್ಯ, ಮಾಂಸ, ಮಧುರೂಪ ಮೂರು ಮಕಾರ - ಇವು ಎಂಟರ ತ್ಯಾಗವು ಅಷ್ಟಮೂಲಗುಣವಿದೆ. ಈ ಗುಣಗಳ ಧಾರಕನಾಗಿರುವುದು, ರಾತ್ರಿ ಭೋಜನದ ತ್ಯಾಗಿಯಾಗಿರುವುದು, ಕಂದಮೂಲ ಮೊದಲಾದ ಅಭಕ್ಷ್ಯ ಪದಾರ್ಥಗಳ ತ್ಯಾಗಿಯಾಗಿರುವುದು ಅಷ್ಟಮೂಲಗುಣಧಾರಕ ಗುಣವಿದೆ.

೫. **ನಿರ್ಲೋಭತೆ -** ಪರಿಗ್ರಹ-ತೃಷ್ಣೆಯ ತ್ಯಾಗಿಯಿರುವುದು, ಸಂತೋಷಿಯಾಗಿರುವುದು; ನಾನು ಇಂಥವನಿದ್ದೇನೆ ನನ್ನ ಸಮಾನ ಬೇರೆ ಯಾರೂ ಇಲ್ಲವೆಂಬ ಅಹಂಕಾರ; ಇದು ನನ್ನದು, ಅದು ನನ್ನದು, ತನು ಧನ, ಮನೆ, ಪತ್ನಿ, ಪುತ್ರ, ನನ್ನವೆನ್ನುವ ಮಮಕಾರ - ಈ ಭಾವಗಳ ತ್ಯಾಗಿಯಾಗಿರುವುದು ನಿರ್ಲೋಭತೆ ಗುಣವಿದೆ.

೬. **ಶುಭಾಚಾರಿ -** ಪೂಜೆ, ಜಪ, ತಪ, ಸಂಯಮದಿಂದಿರುವುದು, ಅಯೋಗ್ಯ ಭೋಜನ - ಪಾನೀಯಗಳ ತ್ಯಾಗ ಮಾಡುವುದು. ಒಳ್ಳೆಯ ಆಹಾರವನ್ನು ನೋಡಿ ತಗೆದುಕೊಳ್ಳುವುದು, ಶೋಧಿಸದಿರುವ ನೀರು ಕುಡಿಯದಿರುವುದು - ಅಂಥ ನೀರಿನಿಂದ ಸ್ನಾನಾದಿಗಳನ್ನು ಮಾಡದಿರುವುದು; ನದಿ, ಸರೋವರ, ಬಾವಿಗಳಲ್ಲಿ ಮೇಲಿನಿಂದ ಜಿಗಿದು ಸ್ನಾನ ಮಾಡದಿರುವುದು - ಇತ್ಯಾದಿ ಶುಭಕ್ರಿಯೆ ಮಾಡುವುದು. ಒಳ್ಳೆಯ ಗುಣಗಳನ್ನು ಧಾರಣ ಮಾಡುವುದು ಶುಭಾಚಾರಗುಣವಿದೆ.

೭. **ಸಮಿತಿ ಗುಣ -** ಗಮನ ಮಾಡುವಾಗ ಕೆಳಗೆ ಭೂಮಿಯನ್ನು ನೋಡುತ್ತ ನಡೆಯುವುದು. ತನ್ನ ದೃಷ್ಟಿಗೆ ಕಂಡು ಬರುವ ಚಿಕ್ಕ-ದೊಡ್ಡ ಜೀವಗಳ ಮೇಲೆ ದಯೆಯ ಭಾವ ಮಾಡಿ ಅವುಗಳ ರಕ್ಷಣೆ ಮಾಡುತ್ತ ದಾರಿ ನಡೆಯುವುದು; ಮೇಲೆ ನೋಡುತ್ತ ನಡೆಯದಿರುವುದು, ಶೀಘ್ರ-ಬೇಗ ಬೇಗನೆ ನಡೆಯದಿರುವುದು. ದಾರಿಯಲ್ಲಿ ನಡೆಯುವಾಗ ಇಲ್ಲಿ ಅಲ್ಲಿ ನೋಡದಿರುವುದು, ಓಡದಿರುವುದು. ಮಾತನಾಡುವಾಗ ವಿಚಾರ ಮಾಡಿ ಮಾತನಾಡುವುದು. ಭೋಜನದ ಸಮಯದಲ್ಲಿ ಮಾತನಾಡದಿರುವುದು. ಜಗಳ ಮಾಡದಿರುವುದು. ಯಾರ ಸಲುವಾಗಿಯೂ ಬೈಗುಳ-ಅಪಶಬ್ದವನ್ನಾಡದಿರುವುದು - ಇತ್ಯಾದಿ ಶುದ್ಧತೆಯೊಂದಿಗೆ ಆಹಾರ ಸೇವನೆ ಮಾಡುವುದು ವಸ್ತುವನ್ನು ಎತ್ತಿಕೊಳ್ಳುವಾಗ ನೋಡಿ ಎತ್ತಿಕೊಳ್ಳುವುದು, ಎಳೆದುಕೊಳ್ಳದಿರುವುದು. ವಸ್ತುವನ್ನು ಇಡುವ ಸಮಯದಲ್ಲಿ ನೋಡಿ ಇಡುವುದು-ನೋಡದೇ ಭೂಮಿಯ ಮೇಲೆ ಇಡದಿರುವುದು. ತನ್ನ ದೇಹದ ಮಲ-ಮೂತ್ರಗಳನ್ನು ಬಿಡುವ ಸಮಯದಲ್ಲಿ ಜೀವರಹಿತ ಸ್ಥಾನದ ಮೇಲೆ ನೋಡಿ ನಂತರ ಬಿಡುವುದು- ಇತ್ಯಾದಿ ಶುದ್ಧತೆ ಸಹಿತವಾಗಿರುವುದು ಸಮಿತಿ ಗುಣವಿದೆ.

೮. **ಶೀಲಗುಣ -** ಪರಸ್ತ್ರೀಯರಲ್ಲಿ ವಿಕಾರ ಬುದ್ಧಿಯ ತ್ಯಾಗಿಯಾಗಿರುವುದು; ನಿಜಸ್ತ್ರೀಯ ಸಂಭೋಗದಲ್ಲಿ ಸಂತುಷ್ಟನಾಗಿರುವುದು. ದೀರ್ಘ ನಿದ್ರೆ ಮಾಡುವುದರಿಂದ ತನ್ನ ಗುಣ ಕಲಂಕಿತವಾಗುವ ಕಾರಣ ಮತ್ತು ಅಲ್ಪ ನಿದ್ರೆ ಮಾಡುವುದರಿಂದ ಪ್ರಮಾದಿಯಾಗದಿರುವ ಕಾರಣ ಅಲ್ಪನಿದ್ರೆ ಮಾಡುವುದು; ಅಧಿಕ ಆಹಾರ ಗ್ರಹಿಸುವುದರಿಂದ ಶೀಲದಲ್ಲಿ ದೋಷ ತಗಲುವ ಕಾರಣ ಅಲ್ಪ ಆಹಾರಿಯಾಗಿರುವುದು. ಕಾಷ್ಟ-ಪಾಷಾಣದಿಂದ ಮಾಡಿದ ಸ್ತ್ರೀಯನ್ನು ಕಂಡು ಚಿತ್ತವನ್ನು ವಿಕಾರರೂಪ ಮಾಡಿಕೊಳ್ಳದಿರುವುದು - ಇತ್ಯಾದಿ ಶೀಲಭಾವವನ್ನಿಟ್ಟುಕೊಳ್ಳುವುದು ಅದು ಶೀಲಗುಣವಿದೆ.

೯. **ತ್ಯಾಗ -** ಕುಟುಂಬ, ಪರಿಗ್ರಹ ಮತ್ತು ಶರೀರದ ಕುರಿತಾಗಿರುವ ಮೋಹದ ತ್ಯಾಗಿಯಾಗುವುದು, ಅನರಂಜನ (ಉದಾಸೀನ) ಭಾವವಿರುವುದು. ಮೋಹದ ಮಂದತೆಯಿಂದ ಕೂಡಿದ ಸರಳ ಚಿತ್ತದ ಧಾರಕನಿರುವುದು;

ಚಿಂತೆ, ಶೋಕ, ಭಯದಿಂದ ರಹಿತನಿರುವುದು, ದಾನಿಯಾಗಿರುವುದು ಇತ್ಯಾದಿ ಗುಣಗಳಿರುವುದು ತ್ಯಾಗ ಗುಣವಿದೆ.

ಇವು ಒಂಭತ್ತು ಗುಣಗಳಿಂದ ಯುಕ್ತನಿರುವ ಭವ್ಯಾತ್ಮನಿಗೆ ಜನಿವಾರ-ಯಜ್ಞೋಪವೀತವು ಫಲದಾಯಕವಿದೆ. ಈ ಗುಣಗಳಿಲ್ಲದೆ ಜನಿವಾರ ಧಾರಣ ಮಾಡುವುದರಿಂದ ಪರಭವವು ದೂಷಿತವಾಗುತ್ತದೆ. ಅಂಥವನು ಪ್ರಾಯಶ್ಚಿತ್ತಧಾರಕ, ಸತ್ಪುರುಷ, ಬ್ರಹ್ಮಚರ್ಯ ಧಾರಕರಿಂದ ನಿಂದಿತನಾಗಿ ದುಃಖ ಪಡೆಯುತ್ತಾನೆ. ಹೇಗೆ ಮಂತ್ರವನ್ನು ತಿಳಿಯುವಂಥವನ ಮೂಲಕ ಸರ್ಪವನ್ನಿಟ್ಟುಕೊಳ್ಳುವುದು ನಿರ್ದೋಷತೆಯಿದೆ; ಆದರೆ ಮಂತ್ರವನ್ನು ತಿಳಿಯದೇ ಸರ್ಪವನ್ನು ಸಾಕಹೋದರೆ ದುಃಖಿಯಾಗುತ್ತಾನೆ. ಅದೇಪ್ರಕಾರ ಮೇಲೆಹೇಳಿದ ಗುಣಗಳಿಂದ ಸಹಿತನು ಜನಿವಾರವನ್ನಿಟ್ಟು ಕೊಂಡರೆ ಸುಖ ಪಡೆಯುತ್ತಾನೆ, ಇಲ್ಲದೇ ಹೋದರೆ ಅವನು ದುಃಖವನ್ನೇ ಪಡೆಯುತ್ತಾನೆಂಬುದನ್ನು ತಿಳಿದು ಗುಣ ಸಂಪನ್ನನಾಗಿದ್ದು ಜನಿವಾರವನ್ನಿಟ್ಟುಕೊಳ್ಳುವಂಥವನು ಕ್ರಿಯಾಬ್ರಹ್ಮನಿದ್ದಾನೆ.

ಇಂಥ ಶ್ರಾವಕರಿಗೆ ಭೋಜನದ ಸಮಯದಲ್ಲಿ ಕೌಡಿ ಮೊದಲಾದ ನಿರ್ಜೀವ ಮೂಳೆ ಕಂಡು ಬಂದ ಮೇಲೆ, ರಕ್ತದ ಧಾರೆ ಕಂಡು ಬಂದಮೇಲೆ, ಮಾಂಸಪಿಂಡ ಕಂಡು ಬಂದಮೇಲೆ, ಭೋಜನ ಮಾಡುವಾಗ ತಟ್ಟೆಯಲ್ಲಿ ಜೀವವು ಬಂದು ಬಿದ್ದರೆ, ಪಂಚೇಂದ್ರಿಯದ ಮಲವು ಕಂಡು ಬಂದ ಮೇಲೆ, ಚರ್ಮವು ಕಂಡು ಬಂದರೆ ಅಥವಾ ಸ್ಪರ್ಶವಾಗಿ ಹೋದರೆ ಮತ್ತು ತ್ಯಾಗ ಮಾಡಿದ ಪದಾರ್ಥವು ಭೋಜನದಲ್ಲಿ ಬಂದರೆ ಅಂತರಾಯವಾಗುತ್ತದೆ. ಇವುಗಳ ನಿಮಿತ್ತ ದೊರಕಿದ ಮೇಲೆ ದಯಾಮಯೀ ಕೋಮಲ ಚಿತ್ತದಧಾರಕ ಶ್ರಾವಕನು ಭೋಜನದ ತ್ಯಾಗ ಮಾಡುತ್ತಾನೆ, ಆ ದಿವಸ ಅನಶನ ಮಾಡುತ್ತಾನೆ. ಯಾವ ಸಮಯದಲ್ಲಿ ಅಂತರಾಯವಾಯಿತು ಅದೇ ಸಮಯದಿಂದ ಆಹಾರ-ಪಾನೀಯಗಳ ಗ್ರಹಣ ಮಾಡುವುದಿಲ್ಲವೆಂದು ತಿಳಿಯುವುದು.

ಈಗ ಕ್ರಿಯಾಬ್ರಹ್ಮನು ಪಾಲಿಸಲು ಯೋಗ್ಯವಿರುವ ಹದಿನೇಳು ನಿಯಮ ಹೇಳುತ್ತಾರೆ,-

**ಭೋಯಣ ಷಡ ರಸ ಪಾಣೋ, ಲೇಯ ಪುಖೋ ಯ ಗೀತ ತಂಬೋಲೋ ।**

**ಣಿತ ಅಬಂಭ ಸಣಾಣೋ, ಆಭೂಷಣ ಪಟ್ಟ ಪಮ್ಮಾಣೋ ॥೧೫೪॥**

**ವಾಹಣ ಸಜ್ಜಾ ಆಸಣ ಸಚಿತ್ತ ಸಂಜ್ಞಾ ಯ ಸತ್ತದಸ ಣಿಯಯೋ ।**

**ಧಮ್ಮೋ ಸಾವಯ ಧಾರಯ, ಜಾಮ ದಿಣ ಪಕ್ಷ ಮಾಸ ವಸ್ಸಾದಿ ॥೧೫೫॥**

**ಗಾಥಾರ್ಥ ೞ-** ಷಟ್‌ರಸ ಭೋಜನ, ಕುಡಿಯಲು ಯೋಗ್ಯ ಜಲಾದಿ, ಲೇಪ ಮಾಡಲು ಯೋಗ್ಯ ವಸ್ತುಗಳು, ಪುಷ್ಪ, ರಾಗ, ನೃತ್ಯ, ತಾಂಬೂಲ, ಕುಶೀಲ, ಸ್ನಾನ, ಒಡವೆ, ವಸ್ತ್ರ ಇವುಗಳ ಪ್ರಮಾಣ-ಪರಿಮಾಣ ಮಾಡುವುದು.

ವಾಹನ, ಶಯ್ಯೆ, ಮಲಗುವ ಸ್ಥಾನ, ಕುಳಿತುಕೊಳ್ಳುವ ಸ್ಥಾನ, ಜೀವಸಹಿತ-ಸಚಿತ್ತ ವಸ್ತುಗಳ ಪ್ರಮಾಣ ಮಾಡುವುದು - ಇವು ಹದಿನೇಳು ನಿಯಮಗಳನ್ನು ಪ್ರಹರ, ದಿವಸ, ಪಕ್ಷ, ಮಾಸ, ವರ್ಷಾದಿಯವರೆಗೆ ಧರ್ಮಾತ್ಮಾ ಶ್ರಾವಕನು ಮಾಡುತ್ತಾನೆ.

**ಭಾವಾರ್ಥ ೞ-** ಭೋಜನ, ರಸ, ಪಾನ, ಲೇಪನ, ಪುಷ್ಪ, ತಾಂಬೂಲ, ಗೀತೆ, ನೃತ್ಯ, ಅಬ್ರಹ್ಮ, ಸ್ನಾನ, ಆಭೂಷಣ, ವಸ್ತ್ರ, ವಾಹನ, ಶಯ್ಯೆ, ಆಸನ ಮತ್ತು ಸಚಿತ್ತ ವಸ್ತು - ಇವು ಹದಿನೇಳರ ನಿಯಮ ಮಾಡಬೇಕಾಗುವುದು ಅದು ಈ ಪ್ರಕಾರ -

೧. ಜೋಳ, ಗೋದಿ, ಅಕ್ಕಿ, ಹೆಸರು, ಮಡಿಕೆ ಮೊದಲಾದ ಧಾನ್ಯಗಳ ಪ್ರಮಾಣ ಮಾಡುವುದು - ನಾನು ಇಂತಿಷ್ಟು ಪ್ರಕಾರದ ಧಾನ್ಯ ತಿನ್ನುವೆನು; ಉಳಿದವುಗಳ ತ್ಯಾಗವಿದೆ - ಈ ಪ್ರಕಾರ ಆಹಾರ ಧಾನ್ಯಗಳ ಸಂಖ್ಯೆಯನ್ನಿಟ್ಟುಕೊಳ್ಳುವುದು ಅದು ಭೋಜನ ಪ್ರಮಾಣವಿದೆ.

೨. ಈ ಹೊತ್ತು ಆರು ರಸಗಳೊಳಗಿಂದ ಕೇವಲ-ಇಷ್ಟು ರಸಗಳ ಸೇವನೆ ಮಾಡುವೆನು, ಉಳಿದವುಗಳ ತ್ಯಾಗವಿದೆ - ಈ ಪ್ರಕಾರ ಷಟ್ ರಸಗಳಲ್ಲಿನ ಒಂದು, ಎರಡು, ಮೂರು ಮೊದಲಾಗಿ ರಸಗಳ ಪ್ರಮಾಣ ಮಾಡುವುದು ರಸನಿಯಮವಿದೆ.

೩. ಕುಡಿಯಲು ಯೋಗ್ಯ ನೀರು, ಮಜ್ಜಿಗೆ, ಹಾಲು, ಇಕ್ಷುರಸ ಮೊದಲಾದ ವಸ್ತುಗಳ ಪ್ರಮಾಣ ಮಾಡುವುದು - ಪೇಯ ಯೋಗ್ಯ ಇಂತಿಷ್ಟು ವಸ್ತುಗಳನ್ನೇ ಗ್ರಹಿಸುವೆನು, ಉಳಿದವುಗಳ ತ್ಯಾಗವಿದೆ. ಹೀಗೆ ಪ್ರಮಾಣ ಮಾಡುವುದು ಪಾನ ನಿಯಮವಿದೆ.

೪. ಎಣ್ಣೆ, ಸುಗಂಧದೆಣ್ಣೆ, ಚಂದನ ಇತ್ಯಾದಿ ಲೇಪಯೋಗ್ಯ ಪರಿಮಳಯುಕ್ತ ಪದಾರ್ಥಗಳ ಪ್ರಮಾಣ ಮಾಡುವುದು - ಇಷ್ಟು ಸುಗಂಧದ ವಸ್ತುಗಳನ್ನು ಇಟ್ಟುಕೊಳ್ಳುವೆ, ಉಳಿದವುಗಳ ತ್ಯಾಗವಿದೆಯೆಂಬುದಾಗಿ ಪ್ರತಿಜ್ಞೆ ತಗೆದುಕೊಳ್ಳುವುದು ಅದು ಲೇಪ ನಿಯಮವಿದೆ.

೫. ಅನೇಕ ಜಾತಿಯ ಪುಷ್ಪಗಳಲ್ಲಿನ ಪುಷ್ಪಗಳ ಸಂಖ್ಯೆಯ ಪ್ರಮಾಣ ಮಾಡುವುದು- ಈ ಹೊತ್ತು ಇಷ್ಟು ಪುಷ್ಪಗಳನ್ನು ಇಟ್ಟುಕೊಳ್ಳುವೆನು, ಆಘ್ರಾಣಿಸುವೆನು; ಇದೇ ಪ್ರಕಾರ ಹಾರಿಸುವ, ಧರಿಸುವುದರದೂ ಪ್ರಮಾಣ ಮಾಡುವುದು, ಪುಷ್ಪ ನಿಯಮವಿದೆ.

೬. ಈ ಹೊತ್ತು ಇಟ್ಟಿರುವ ಇಷ್ಟು ತಾಂಬೂಲ ತಿನ್ನುವೆನೆಂಬುದು ತಾಂಬೂಲ ನಿಯಮವಿದೆ.

೭. ಈ ಹೊತ್ತು ಇಷ್ಟು ಮಾತ್ರ ರಾಗ ಆಲಿಸುವೆನು; ಆರು ರಾಗ, ಮೂವತ್ತಾರು ರಾಗಣಿ ಮತ್ತು ಅವುಗಳ ಅನೇಕ ಆಲಾಪಾದಿಗಳ ಪ್ರಮಾಣ ಮಾಡುವುದು - ಈ ಹೊತ್ತು ಇಷ್ಟು ರಾಗ ಆಲಿಸುವೆನು ಉಳಿದವನ್ನು ಆಲಿಸುವುದಿಲ್ಲವೆಂಬುದು ರಾಗ ನಿಯಮವಿದೆ.

೮. ನೃತ್ಯಾಂಗನೆಯ ನೃತ್ಯ, ವೇಶ್ಯೆಯ ನೃತ್ಯ, ದೇವಾಂಗನೆಯ ನೃತ್ಯ, ಮನೆಯ ಪತ್ನಿಯರ ನೃತ್ಯ, ಭಂಡ ನೃತ್ಯ, ನರನು ನಾರಿಯಾಗಿ ಮಾಡುವ ನೃತ್ಯ, ನಾರಿಯು ನರನ ರೂಪಾಗಿ ಮಾಡುವ ನೃತ್ಯ ಇತ್ಯಾದಿ ಅನೇಕ ಜಾತಿಯ ನೃತ್ಯಗಳಲ್ಲಿನ ಇವಿಷ್ಟು ನೃತ್ಯಗಳನ್ನು ಈ ಹೊತ್ತು ನೋಡುವೆನು, ಉಳಿದವುಗಳ ತ್ಯಾಗವಿದೆಯೆಂಬುದಾಗಿ ಪ್ರಮಾಣ ಮಾಡುವುದು ಅದು ನೃತ್ಯ ನಿಯಮವಿದೆ.

೯. ಪರಸ್ತ್ರೀಯ ಸರ್ವಥಾ ತ್ಯಾಗವನ್ನಂತೂ ಮೊದಲೇ ಮಾಡಲಾಗಿದೆ. ಈಗ ಸ್ವಸ್ತ್ರೀಯಲ್ಲಿಯೇ ಸಂತುಷ್ಟನಾಗಿರುತ್ತ ಈ ಹೊತ್ತು ಇಷ್ಟು ಬಾರಿ ಕುಶೀಲ ಸೇವನೆ ಮಾಡುವೆನು ಉಳಿದುದರ ತ್ಯಾಗವಿದೆಯೆಂದು ಪ್ರಮಾಣ ಮಾಡುವುದು ಅದು ಕುಶೀಲ ನಿಯಮವಿದೆ.

೧೦. ಈ ಹೊತ್ತು ಇಷ್ಟು ಬಾರಿ ಸ್ನಾನ ಮಾಡುವೆನು ಶೇಷ ತ್ಯಾಗವಿದೆಯೆಂಬುದು ಸ್ನಾನ ನಿಯಮವಿದೆ.

೧೧. ಈ ಹೊತ್ತು ಇಷ್ಟೇ ಇಟ್ಟಿರುವ ಆಭರಣ-ಒಡವೆ ಧರಿಸುವೆನು, ಉಳಿದವುಗಳ ತ್ಯಾಗವಿದೆಯೆಂದು ಪ್ರಮಾಣ ಮಾಡುವುದು ಅದು ಆಭೂಷಣ ತ್ಯಾಗವಿದೆ.

೧೨. ಇಷ್ಟು ವಸ್ತ್ರವನ್ನಿಟ್ಟುಕೊಳ್ಳುವುದು; ಇಂತಿಷ್ಟು ನೂಲಿನ, ಇಂತಿಷ್ಟು ರೇಷ್ಮೆ, ಇಂತಿಷ್ಟು ಬೆಚ್ಚನೆಯ ಉಣ್ಣೆಯ ವಸ್ತ್ರವೆಂದು ಪ್ರಮಾಣ ಮಾಡುವುದು ಅದು ವಸ್ತ್ರನಿಯಮವಿದೆ.

೧೩. ಆನೆ, ಕುದುರೆ, ರಥ, ಒಂಟೆ, ಎತ್ತು, ಎಮ್ಮೆ, ಪಲ್ಲಕ್ಕಿ, ಚಕ್ಕಡಿ, ಇಂದ್ರ ವಿಮಾನ ಇತ್ಯಾದಿ ಅನೇಕ ವಾಹನಗಳ ಭೇದಗಳೊಳಗಿಂದ ಇಂತಿಷ್ಟು ಇಟ್ಟುಕೊಂಡು ಉಳಿದವುಗಳ ತ್ಯಾಗ ಮಾಡುವುದು. ಈ ಪ್ರಕಾರ ಅನೇಕ ಪುಣ್ಯ ಪ್ರಮಾಣದೊಳಗಿಂದ ಕೂಡ ಸಂತೋಷದೊಂದಿಗೆ ವಾಹನಗಳ ಸಂಖ್ಯೆಯ ಪ್ರಮಾಣ ಇಟ್ಟುಕೊಳ್ಳುವುದು ಅದು ವಾಹನ ನಿಯಮವಿದೆ.

೧೪. ಮಲಗುವ ಸ್ಥಾನ, ಮಹಲು, ಮಂಚ, ಹಾಸಿಗೆ, ಒರಗುದಿಂಬು, ಹೊದಿಕೆ ಇತ್ಯಾದಿಗಳ ಪ್ರಮಾಣ ಮಾಡುವುದು ಅದು ಶಯ್ಯಾ ನಿಯಮವಿದೆ.

೧೫. ಇಂತಿಷ್ಟು ಸ್ಥಾನಗಳಲ್ಲಿ ಕೂಡ್ರುವುದು, ಇಂತಿಷ್ಟು ಕಡೆಗೆ ಹೋಗುವುದು ಎಂಬುದಾಗಿ ಪ್ರಮಾಣ ಮಾಡುವುದು ಅದು ಆಸನ ನಿಯಮವಿದೆ.

೧೬. ಈ ಹೊತ್ತು ಇಂತಿಷ್ಟು ಸಚಿತ್ತ ವಸ್ತು ತಿನ್ನುವೆನು. ಉಳಿದವುಗಳ ತ್ಯಾಗವಿದೆಯೆಂಬುದು ಸಚಿತ್ತ ನಿಯಮವಿದೆ.

೧೭. ಈ ಹೊತ್ತು ಇಟ್ಟಿರುವ ಇವಿಷ್ಟೇ ವಸ್ತು ತಗೆದುಕೊಳ್ಳುವೆನು ಉಳಿದವುಗಳ ತ್ಯಾಗವಿದೆ ಎಂಬುದಾಗಿ ಪ್ರತಿಜ್ಞೆ ಮಾಡುವುದು ಅದು ವಸ್ತುತ್ಯಾಗ ನಿಯಮವಿದೆ.

ಈ ಪ್ರಕಾರ ಇವು ಹದಿನೇಳು ನಿಯಮ ಹೇಳಲಾಗಿದ್ದು, ಇವನ್ನು ಧರ್ಮಾತ್ಮಾ ಅವ್ರತಿ ಶ್ರಾವಕನಿಂದ ಹಿಡಿದು ನೆಲೆಗಳ ಧಾರಕ ಶ್ರಾವಕನವರೆಗೆ ಮಾಡುವುದು ಯೋಗ್ಯವಿದೆ. ಇವುಗಳ ಪ್ರಮಾಣವಿದ್ದಮೇಲೆ ಈ ಜಗತ್ತಿನಿಂದ ಉದಾಸ ಧರ್ಮಾತ್ಮಾ ಶ್ರಾವಕನ ಚಿತ್ತವು ವಿಷಯ ಭೋಗಗಳಿಂದ ವಿರಕ್ತ ಉಳಿಯುತ್ತದೆ. ಅದರಿಂದ ಪ್ರಮಾದವು ಬೆಳೆಯುವುದಿಲ್ಲ. ಇವುಗಳ ವಿಚಾರದಿಂದ ಪ್ರತಿಸಮಯ ಧರ್ಮಧ್ಯಾನದ ಸ್ಮರಣೆಯು ಉಳಿದುಕೊಳ್ಳುತ್ತದೆ ಅನರ್ಥದಂಡ ಪಾಪಗಳು ಬಿಟ್ಟುಹೋಗುತ್ತವೆ. ಇವುಗಳ ವಿಚಾರ ಮಾಡುವಂಥ, ಇವುಗಳನ್ನು ಸ್ಮರಣೆಯಲ್ಲಿಟ್ಟುಕೊಳ್ಳುವಂಥ ಬ್ರಹ್ಮಚರ್ಯ ವ್ರತಧಾರೀ ಧರ್ಮಾತ್ಮನು ಕ್ರಿಯಾಬ್ರಹ್ಮನಿದ್ದಾನೆ.

ಕ್ರಿಯಾಬ್ರಹ್ಮ ಧರ್ಮಾತ್ಮಾ ಶ್ರಾವಕನ ಇಪ್ಪತ್ತೊಂದು ಗುಣಗಳು ಈ ಪ್ರಕಾರವಿವೆ, -

೧. ಲಜ್ಜಾವಂತನಿರುತ್ತಾನೆ. ನಿರ್ಲಜ್ಜನಾದರೆ ದೇವ, ಗುರು, ಧರ್ಮದ ಮರ್ಯಾದೆಯ ಲೋಪ ಮಾಡಿ ಬಿಡುವ ಕಾರಣ, ಕುಲಧರ್ಮವನ್ನು ಬಿಟ್ಟುಕೊಟ್ಟು, ಕುಧರ್ಮದ ಸೇವನೆ ಮಾಡುತ್ತ ಗುರು ಜನರ ಕುರಿತಾಗಿ ಅವಿನಯರೂಪ ಪ್ರವೃತ್ತಿ ಮಾಡತೊಡಗುತ್ತಾನೆ. ಇಂಥ ದೋಷಗಳಾಗುವುದರಿಂದ ಧರ್ಮದ ಅಭಾವವಾಗಿ ಹೋಗುತ್ತದೆ. ಏಕೆಂದರೆ ಧರ್ಮದ ಸ್ವಭಾವವು ಲಜ್ಜೆಯಿದೆ; ಅದರಿಂದ ಧರ್ಮೀ ಜೀವನು ಲಜ್ಜೆಯ ಧಾರಕನಿರುತ್ತಾನೆ.

೨. ಅದಯೆಯು ಎಲ್ಲ ಪಾಪಗಳ ಮೂಲವಿದೆ; ಅದರಿಂದ ಅವನು ದಯಾವಂತನಿರುತ್ತಾನೆ, ನಿರ್ದಯಿಯಿರುವುದಿಲ್ಲ.

೩. ತೀವ್ರ ಕಷಾಯಿಯಾಗಿದ್ದರೆ ಲೋಕದಲ್ಲಿ ನಿಂದೆಯಾಗುತ್ತದೆ, ಧರ್ಮರೂಪದ ಕಲ್ಪವೃಕ್ಷವು ನಷ್ಟವಾಗುತ್ತದೆ; ಅದರಿಂದ ಧರ್ಮೀ ಜೀವನು ಶಾಂತಸ್ವಭಾವಿಯಿರುತ್ತಾನೆ. ಅವನ ಕ್ರೋಧಾದಿ ಕಷಾಯಗಳು ತೀವ್ರವಿರುವುದಿಲ್ಲ.

೪. ಅವನು ಕೇವಲಿ-ಸರ್ವಜ್ಞ ಭಾಷಿತ ಧರ್ಮದ ಶ್ರದ್ಧೆಯಿಂದ ಸಹಿತನಾಗಿದ್ದು ಜಿನಧರ್ಮದ ಉಪದೇಶಕನಿರುತ್ತಾನೆ. ಸ್ವೇಚ್ಛಾಚಾರಿ, ಮಿಥ್ಯಾಧರ್ಮದ ಉಪದೇಶಕನಿರುವುದಿಲ್ಲ.

೫. ಅವನು ಅನ್ಯರ ದೋಷವನ್ನು ಮುಚ್ಚುವಂಥವ ಮತ್ತು ತನ್ನ ಅವಗುಣಗಳನ್ನು ಪ್ರಕಟ ಪಡಿಸುವಂಥವನಿರುತ್ತಾನೆ.

೬. ಅವನು ಪರೋಪಕಾರಿಯಿರುತ್ತಾನೆ, ಅನ್ಯರ ದ್ವೇಷ ಮಾಡುವಂಥವನಿರುವುದಿಲ್ಲ.

೭. ಅವನು ನೋಡುತ್ತಿದ್ದಂತೆಯೇ ಪ್ರೀತಿಯು ಉತ್ಪನ್ನವಾಗುವಂಥ ಸೌಮ್ಯಮೂರ್ತಿಯಿರುತ್ತಾನೆ. ಭಯಾನಕ ಆಕಾರವುಳ್ಳವನಿರುವುದಿಲ್ಲ.

೮. ಅವನು ಗುಣಗ್ರಾಹಕನಿರುತ್ತಾನೆ. ಅವಗುಣಗಳನ್ನು ಗ್ರಹಿಸುವಂಥವನಿರುವುದಿಲ್ಲ.

೯. ಅವನು ಎಲ್ಲರಲ್ಲಿ ಯಥಾಯೋಗ್ಯ ವಿನಯವುಳ್ಳ ಮಾರ್ದವ ಧರ್ಮದ ಧಾರಕನಿರುತ್ತಾನೆ.

೧೦. ಎಲ್ಲ ಜೀವರುಗಳನ್ನು ತನ್ನ ಸಮಾನ ಮನ್ನಿಸುವ ಕಾರಣ ಅವನಿಗೆ ಎಲ್ಲರ ಕುರಿತಾಗಿ ಮೈತ್ರಿಯ ಭಾವವಿರುತ್ತದೆ. ಯಾವ ಜೀವದ ಕುರಿತಾಗಿಯೂ ದ್ವೇಷ ಭಾವವಿರುವುದಿಲ್ಲ.

೧೧. ನ್ಯಾಯ ಪಕ್ಷದ ಧಾರಕನಿರುತ್ತಾನೆ, ಅವನು ಅನ್ಯಾಯದ ಪೋಷಣೆಯನ್ನೆಂದೂ ಮಾಡುವುದಿಲ್ಲ.

೧೨. ಮಿಷ್ಟ, ಮಧುರ ಸ್ವರದಿಂದ ಮಾತನಾಡುತ್ತಾನೆ, ಅವನು ಕಠೋರ ವಚನಗಳನ್ನಾಡುವುದಿಲ್ಲ.

೧೩. ಅವನು ಗಂಭೀರ ಸ್ವಭಾವ ಸಹಿತ, ದೀರ್ಘ ವಿಚಾರಕನಿರುತ್ತಾನೆ; ಬಾಲಕನಂತೆ ಸಾಮಾನ್ಯ ವಿಚಾರವುಳ್ಳವನಿರುವುದಿಲ್ಲ.

೧೪. ಅವನು ವಿಶೇಷ ಜ್ಞಾನಿಯಾಗಿರುತ್ತಾನೆ, ಯಾರೋ ಕುವಾದಿಗಳ ಅಸತ್ಯ ನಯ-ಯುಕ್ತಿಗಳ ಕಾರಣವಾಗಿ ಧರ್ಮದಿಂದ ವಿಚಲಿತನಾಗುವುದಿಲ್ಲ. ಸ್ವಯಂ ಅನೇಕ ಸದ್‌ಯುಕ್ತಿ, ಸದ್‌ದೃಷ್ಟಾಂತ, ಸತ್ಯಶಾಸ್ತ್ರ, ನ್ಯಾಯದಿಂದ ಸತ್ಯ ಸ್ವರೂಪವನ್ನು ತಿಳಿಸಿಕೊಟ್ಟು ಕುವಾದಿಗಳ ಖಂಡನೆ ಮಾಡುವಂಥ ನಿಜವಾದ ಜ್ಞಾನಿಯಿರುತ್ತಾನೆ.

೧೫. ಎಲ್ಲರೂ ಸುಖಿಯಿರುವುದನ್ನು ಕಂಡು ಸುಖ ಪಡೆಯುವಂಥ ಸಜ್ಜನ ಸ್ವಭಾವದವನಿರುತ್ತಾನೆ, ನೋಡಲಾಗದಂಥ ದುರ್ಜನ ಸ್ವಭಾವವು ಅವನದಿರುವುದಿಲ್ಲ.

೧೬. ಧರ್ಮದ ಅಂಗರೂಪ ದಯೆಯ ಧಾರಕನಾದ ಧರ್ಮಾತ್ಮನು ದಾನ, ಪೂಜಾದಿ ಗುಣಸಹಿತನಿರುತ್ತಾನೆ, ಪಾಪಿಯಿರುವುದಿಲ್ಲ.

೧೭. ಅವನು ಒಳ್ಳೆಯ ಬುದ್ಧಿಯ ಧಾರಕನಿರುತ್ತಾನೆ, ಕುಬುದ್ಧಿಯ ಧಾರಕನಿರುವುದಿಲ್ಲ.

೧೮. ಯೋಗ್ಯ ಅಯೋಗ್ಯದ ತಿಳಿವಳಿಕೆಯುಳ್ಳವನಿರುತ್ತಾನೆ, ಮೂರ್ಖನಿರುವುದಿಲ್ಲ.

೧೯. ಧರ್ಮಾತ್ಮನು ದೀನತೆ ಹಾಗೂ ಉದ್ದಟತೆಯಿಂದ ರಹಿತನಿರುತ್ತಾನೆ, ಮಧ್ಯಮ ಸ್ವಭಾವದವನಿರುತ್ತಾನೆ.

೨೦. ಸ್ವಾಭಾವಿಕ ವಿನಯವಂತನಿರುತ್ತಾನೆ, ಅವಿನಯಿ ಇರುವುದಿಲ್ಲ.

೨೧. ಪಾಪಾರಂಭ ಕ್ರಿಯೆಗಳಿಂದ ರಹಿತನಿರುತ್ತಾನೆ. ಶುಭಾಚರಣೆಯುಳ್ಳವನಿರುತ್ತಾನೆ.

ಈ ಉಕ್ತ ಗುಣಗಳಿಂದ ಸಹಿತನು ಕ್ರಿಯಾಬ್ರಹ್ಮನಿರುತ್ತಾನೆ.

ಈಗ ಅನ್ಯಮತಾನುಸಾರ ಕ್ರಿಯಾಬ್ರಹ್ಮನ ಭೇದ ಹೇಳುತ್ತಾರೆ. ಮಾರ್ಕಂಡೇಯಕೃತ ಸುಮತಿ ಶಾಸ್ತ್ರದ ಅನುಸಾರ ಇವೇ ಗುಣ ಮತ್ತು ಕ್ರಿಯೆಗಳಿಂದ ಯುಕ್ತ ಕ್ರಿಯಾಬ್ರಹ್ಮನಿರುತ್ತಾನೆ. ಶೋಧಿಸದ ನೀರು ಕುಡಿಯುವುದು ಮದ್ಯ ಕುಡಿಯುವುದರ ಸಮಾನವಿದೆ, ಶೋಧಿಸದ ಜಲದಿಂದ ಸ್ನಾನ ಮಾಡುವುದರಿಂದ ದೇಹ(ಕಾಯ)ವು ಅಶುಚಿಯಾಗುತ್ತದೆ, ಶೋಧಿಸದ ನೀರಿನಿಂದ ಅಡಿಗೆ ಮಾಡಿದರೆ ಏಳು ಭವಗಳವರೆಗೆ ಜಲಚರ ಜೀವನಾಗುತ್ತಾನೆ; ಅದರಿಂದ ಉತ್ತಮ ದ್ವಿಜನಿಗೆ ಶೋಧಿಸದ ಜಲದಿಂದ ಯಾವುದೇ ಕ್ರಿಯೆ ಮಾಡುವುದರ ನಿಷೇಧವಿದೆ.

ಮಹಾಭಾರತದ ಏಳನೆಯ ಖಂಡದಲ್ಲಿ ವ್ಯಾಸ ಋಷಿಯ ವಚನಾನುಸಾರ ಬ್ರಾಹ್ಮಣನ ಶೃಂಗಾರವು ಶೀಲವ್ರತವೇ ಇದೆ. ಶೀಲವಿಲ್ಲದೆ ಮಾಡುವ ಪೂಜೆ, ಜಪ, ತಪಗಳೆಲ್ಲವೂ ವಿನಾಶಕಾರಿಯಿವೆ; ಫಲ ಪ್ರದವಾಗುವುದಿಲ್ಲ. ಅದರಿಂದ ಉತ್ತಮಗುಣಗಳ ಲೋಭಿಯು ಶೀಲಸಹಿತನಿರುತ್ತಾನೆ. ಬ್ರಾಹ್ಮಣನು ದಯೆಯ ಪಾಲನೆ ಮಾಡುತ್ತ ಗಮನ ಮಾಡುತ್ತಾನೆ. ಎಲ್ಲ ಜೀವಗಳನ್ನು ತನ್ನ ಸಮಾನವೆಂದು ತಿಳಿದು, ಅವುಗಳ ರಕ್ಷಣೆಯ ಸಲುವಾಗಿ ಕೆಳಗೆ ನೆಲ ನೋಡುತ್ತ ಗಮನ ಮಾಡುತ್ತಾನೆ. ಕಣ್ಣಿಗೆ ಕಾಣಿಸುವಂಥ ಹುಳು-ಕ್ರಿಮಿಗಳ ಮೇಲೆ ಕಾಲು ಬೀಳದಂತೆ ಅವುಗಳ ರಕ್ಷಣೆ ಮಾಡುತ್ತ ವಿಧಿಪೂರ್ವಕ ಗಮನ ಮಾಡುತ್ತಾನೆ. ಭೋಗಿಗಳ ಶಯನಸ್ಥಾನ-ಮಂಚ ಮೊದಲಾದವುಗಳ ಮೇಲೆ ಮಲಗುವುದಿಲ್ಲ. ಭೂಮಿಯ ಮೇಲೆ ಮಲಗುತ್ತಾನೆ.

ರಾಗ ಭಾವವನ್ನು ಹೆಚ್ಚಿಸುವಂಥ, ಕಾಮವರ್ಧಕ ವಸ್ತ್ರಗಳನ್ನಿಟ್ಟುಕೊಳ್ಳುವುದಿಲ್ಲ. ರಾಗರಹಿತ ವೈರಾಗ್ಯದ ಕಾರಣಭೂತ ವಸ್ತ್ರಗಳನ್ನು ಧರಿಸುತ್ತಾನೆ. ಶರೀರದ ಮೇಲೆ ಚಂದನ, ಸುಗಂಧದೆಣ್ಣೆ ಮೊದಲಾದ ಸುಗಂಧಮಯ

ವಸ್ತುಗಳನ್ನು ಪೂಸಿಕೊಳ್ಳುವುದಿಲ್ಲ. ವೀಳ್ಯ-ತಾಂಬೂಲ ತಿನ್ನುವುದಿಲ್ಲ, ಸಂಸಾರಿ, ಮೋಹಿ, ಪ್ರಮಾದಿ, ಕುಶೀಲವಂತನ ಹಾಗೆ ನಿಃಶಂಕನಾಗಿ ನಿದ್ರಿಸುವುದಿಲ್ಲ. ಕಾಮೀ ಪುರುಷನಂತೆ ವಿಷಯಗಳಲ್ಲಿ ಮೋಹಿತನಿರುವುದಿಲ್ಲ. ರಾಗಭಾವಪೂರ್ವಕ ಭೋಗಾಭಿಲಾಷಿ ಕಾಮುಕ ಪುರುಷರ ಮುಖದಿಂದ ಸ್ತ್ರೀಯರ ಕಥೆಯನ್ನಾಲಿಸುವುದಿಲ್ಲ. ತನ್ನ ಮುಖದಿಂದ ಕಾಮ ಕಥೆ, ಸ್ತ್ರೀಯರ ಗುಣರೂಪ ಭೋಗದ ಕಥೆಯನ್ನು ಹೇಳುವುದಿಲ್ಲ. ಇತರರಿಗೆ ಕ್ರೋಧ, ಮಾನ, ಮಾಯೆ, ಲೋಭಗಳನ್ನು ಬಿಟ್ಟುಕೊಡುವ ಉಪದೇಶ ಮಾಡುತ್ತಾನೆ. ತನ್ನ ಶರೀರ ಶೃಂಗಾರ ಮಾಡಿಕೊಳ್ಳುವುದಿಲ್ಲ.

ಆನೆ, ಕುದುರೆ, ಪಲ್ಲಕ್ಕಿ, ರಥ ಮೊದಲಾದ ವಾಹನಗಳನ್ನೇರುವುದಿಲ್ಲ. ದಯೆಯ ಪಾಲನೆಯ ಸಲುವಾಗಿ ಕಾಲ್ನಡಿಗೆಯಿಂದ ಭೂಮಿ ಶೋಧನೆಯೊಂದಿಗೆ ನಡೆಯುತ್ತಾನೆ. ಹಲ್ಲುಜ್ಜುವುದಿಲ್ಲ, ಇತ್ಯಾದಿ ತನ್ನ ಬ್ರಹ್ಮಚರ್ಯದ ರಕ್ಷಣೆ ಮಾಡುತ್ತ ಒಳ್ಳೆಯ ಕ್ರಿಯೆಗಳನ್ನು ಮಾಡುತ್ತಾನೆ. ಸೂರ್ಯೋದಯ ಮತ್ತು ಸೂರ್ಯಾಸ್ತದ ಸಮಯ ಸಂಧ್ಯಾಕ್ರಿಯೆ ಮಾಡುವುದನ್ನು ಮರೆಯುವುದಿಲ್ಲ. ಈ ಕ್ರಿಯೆಗಳಿಂದ ಕೂಡಿದ ಆ ಬ್ರಹ್ಮನು ಸತ್ಪುರುಷರ ಮೂಲಕ ಶುಶ್ರೂಷೆಗೆ ಯೋಗ್ಯನಾಗುತ್ತಾನೆ - ಈ ಲಕ್ಷಣಗಳು ಕ್ರಿಯಾ ಬ್ರಹ್ಮನವಿವೆ. ಇಂಥ ಕ್ರಿಯೆಗಳಿಂದ ರಹಿತ ಕ್ರಿಯಾಬ್ರಹ್ಮನಿರುವುದಿಲ್ಲ. ಕುಶೀಲಭಾವ ಮತ್ತು ಕ್ರೋಧ, ಮಾನ, ಮಾಯೆ, ಲೋಭದಿಂದ ಸಂಯುಕ್ತ ಅಹಂಕಾರ -ಮಮಕಾರ ಸಹಿತ ಜೀವನು ಶೀಲವಂತರಿಂದ ಶುಶ್ರೂಷೆ ಪ್ರಾಪ್ತನಾಗುವುದಿಲ್ಲ; ಅವನು ದೋಷಸಹಿತ ನಿದ್ದಾನೆ. ಉಕ್ತ ಗುಣಗಳಿಂದ ರಹಿತನು ಅವನು ಕುಲಬ್ರಾಹ್ಮಣನಿದ್ದಾನೆ, ಕ್ರಿಯಾಬ್ರಾಹ್ಮಣನಿಲ್ಲವೆಂದು ತಿಳಿಯುವುದು.

ಮಾರ್ಕಂಡೇಯಕೃತ ಸುಮತಿ ಶಾಸ್ತ್ರದಲ್ಲಿ ಹೇಳಿರುವುದೇನೆಂದರೆ - ದಿನದ ಪ್ರಥಮ ಪ್ರಹರದಲ್ಲಿ ಮಾಡಲಾದ ಭೋಜನವು ದೇವ ಭೋಜನವಿದೆ, ಎರಡನೆಯ ಪ್ರಹರದಲ್ಲಿ ಮಾಡಲಾದ ಭೋಜನವು ಋಷಿಭೋಜನವಿದೆ; ಮೂರನೆಯ ಪ್ರಹರದಲ್ಲಿ ಮಾಡಲಾದ ಭೋಜನವು ಶ್ರಾದ್ಧದ ಭೋಜನವಿದೆ. ನಾಲ್ಕನೆಯ ಪ್ರಹರದಲ್ಲಿ ಭೋಜನ ಮಾಡುವಂಥವನು, ದೈತ್ಯ (ರಾಕ್ಷಸ)ರ ಭೋಜನ ಮಾಡುತ್ತಾನೆ. ದಿನದ ಎಂಟನೆಯ ಭಾಗ, ನಾಲ್ಕು ಗಳಿಗೆ ಶೇಷ ಉಳಿದ ಮೇಲೆ ಸೂರ್ಯನ ಕಾಂತಿಯು ಮಂದವಾಗಿ ಹೋಗುವ ಕಾರಣ ಉತ್ತಮ ಆಚರಣೆ ಮಾಡುವಂಥ ಬ್ರಹ್ಮಚರ್ಯದ ಧಾರಕನು ಭೋಜನ ಮಾಡುವುದಿಲ್ಲ; ಮಾಡಿದರೆ ತನ್ನ ಬ್ರಹ್ಮಚರ್ಯ ಪದವಿಯನ್ನು ದೂಷಿತ ಮಾಡುತ್ತಾನೆಂದು ತಿಳಿಯುವುದು.

ಇನ್ನು ಶಿವಪುರಾಣದಲ್ಲಿ ಹೇಳುತ್ತಾರೆ - ಉತ್ತಮ ಬ್ರಹ್ಮವ್ರತಿಯು ಬದನೆಕಾಯಿ, ಗಜ್ಜರಿ, ಮೂಲಂಗಿ, ಹಸಿಶುಂಠಿ, ಸ್ವರ್ಣಗೆಡ್ಡೆ, ಮದ್ಯ, ಮಧು, ಮಾಂಸ ಇತ್ಯಾದಿ ಅಭಕ್ಷ್ಯ ವಸ್ತುಗಳನ್ನು ತಿನ್ನುವುದಿಲ್ಲ. ಹಾಗೇನಾದರೂ ತಪ್ಪಿ ಎಂದಾದರೂ ಒಂದುವೇಳೆ ಲೋಭದ ವಶೀಭೂತನಾಗಿ ತಿಂದರೆ ಹನ್ನೆರಡು ವರ್ಷಗಳವರೆಗೆ ಮಾಡಲಾದ ದಾನ, ಜಪ, ತಪ, ಪೂಜೆಯ ಫಲವು ನಷ್ಟವಾಗಿ ಹೋಗುತ್ತದೆ; ಅದರಿಂದ ಬ್ರಹ್ಮವ್ರತಿಯು ಈ ವಸ್ತುಗಳನ್ನು ತಿನ್ನುವುದಿಲ್ಲ.

ಅನ್ಯ ಪುರಾಣಗಳಲ್ಲಿಯೂ ಹೇಳಿರುವುದೇನೆಂದರೆ ಕೃಷ್ಣ ಮಹಾರಾಜನು ಯುಧಿಷ್ಠಿರನಿಗೆ ಹೇಳುತ್ತಾನಂತೆ - ಎಲೈ ಯುಧಿಷ್ಠಿರನೇ ! ಬ್ರಹ್ಮವ್ರತಿಯು ನನ್ನ ಭಕ್ತನಾಗಿಯೂ ಒಂದು ವೇಳೆ ಕಂದಮೂಲ ತಿಂದನೆಂದರೆ ಅವನ ದಯೆ, ಪೂಜೆ, ದಾನ, ಇಂದ್ರಿಯ-ಮನವನ್ನು ಗೆಲ್ಲುವುದು ಇತ್ಯಾದಿ ಎಲ್ಲ ಕ್ರಿಯೆಗಳು ವಿಫಲವಾಗಿ ಹೋಗುತ್ತವೆ; ಅದರಿಂದ ನನ್ನ ಭಕ್ತನಿಗೆ ಕಂದಮೂಲದ ತ್ಯಾಗ ಮಾಡುವುದೇ ಉಚಿತವಿದೆ.

ಕಶ್ಯಪ ಮುನಿಯ ವಚನಾನುಸಾರ ಬ್ರಹ್ಮಭಕ್ತನ ಪೂಜೆಯು ಅವನು ಯಾವಾಗ ಕಂದಮೂಲ ತಿನ್ನುವುದಿಲ್ಲ ಆವಾಗಲೇ ಸಫಲವಿದೆ; ಕಂದಮೂಲ ತಿನ್ನುವುದರಿಂದ ಸಮಸ್ತ ಧರ್ಮ ಕ್ರಿಯೆಗಳು ನಷ್ಟವಾಗಿ ಹೋಗುತ್ತವೆ.

ಶಿವ ಪುರಾಣದಲ್ಲಿ ದಯೆಯ ಸಮಾನ ತೀರ್ಥವು ಇನ್ನೊಂದಿಲ್ಲವೆಂದು ಹೇಳಿದ್ದಾರೆ. ದಯಾಭಾವವೇ ಒಂದು ಒಳ್ಳೆಯ ತೀರ್ಥವಿದೆ, ದಯೆಯಿಲ್ಲದೆ ಹೋದರೆ ತೀರ್ಥಯಾತ್ರೆಯ ಯಾವ ಫಲವೂ ದೊರಕುವುದಿಲ್ಲ.

ಈ ಪ್ರಕಾರ ಹೇಳಲಾಗಿರುವ ಧರ್ಮದ ಅನೇಕ ಅಂಗಗಳ ಪಾಲನೆ ಮಾಡುವಂಥವನು ಉತ್ತಮ ಧರ್ಮದ ಧಾರಕ ಕ್ರಿಯಾಬ್ರಹ್ಮನಿದ್ದಾನೆ.

ಈಗ ಭರತಕೃತ ಕುಲಬ್ರಹ್ಮನ ಅನ್ಯಮತ ಸಂಬಂಧದ ಹತ್ತು ಭೇದ ಹೇಳುತ್ತಾರೆ,-

**ಸುರೋ ಮುನೀಶ್ವರೋ ವಿಪ್ರೋ, ವೈಶ್ಯಃ ಕ್ಷತ್ರಿಯ ಶೂದ್ರಕೋ ।**
**ವಿಜಾತಿ ಪಶು ಮಾತಂಗ, ಮ್ಲೇಚ್ಛಾಶ್ಚ ದಶ ಜಾತಯಃ ॥**

**ಅರ್ಥ** - ದೇವಜಾತಿ, ಮುನೀಶ್ವರಜಾತಿ, ವಿಪ್ರಜಾತಿ, ವೈಶ್ಯಜಾತಿ, ಕ್ಷತ್ರಿಯಜಾತಿ, ಶೂದ್ರಜಾತಿ, ವಿಜಾತಿ, ಪಶುಜಾತಿ, ಮ್ಲೇಚ್ಛಜಾತಿ, ಮಾತಂಗಜಾತಿ-ಇವು ಹತ್ತು ಭೇದಗಳು ವ್ಯಾಸಭಾಷಿತ ಮತ್ಸ್ಯ ಪುರಾಣದ ಅನುಸಾರ ಇವೆ.

೧. ತತ್ತ್ವಜ್ಞಾನದಲ್ಲಿ ಪ್ರವೀಣ, ತನ್ನ ಆತ್ಮಕಲ್ಯಾಣದ ಇಚ್ಛೆಯುಳ್ಳವ, ಅಹಿಂಸಕ ಕ್ರಿಯೆ ಮಾಡುವಂಥವ, ಬಹು ಆರಂಭ-ಪರಿಗ್ರಹದ ತ್ಯಾಗಿ, ಸಂತೋಷಿ, ತ್ರಿಕಾಲ ಸಂಧ್ಯಾ ಕ್ರಿಯೆಗಳಲ್ಲಿ ಸಾವಧಾನ, ಸ್ವ-ಪರ ಜ್ಞಾನಧಾರಕ, ಆತ್ಮ ತತ್ತ್ವದ ವೇತ್ತಾರ ಇತ್ಯಾದಿ ಗುಣಗಳಿಂದ ಯುಕ್ತನು ದೇವ ಜಾತಿಯ ಬ್ರಾಹ್ಮಣನಿದ್ದಾನೆ.

೨. ಉತ್ತಮ ಮೂರು ಕುಲಗಳ ಭೋಜನ ಮಾಡುವಂಥವನು, ನಗರದ ವಾಸವನ್ನು ಬಿಟ್ಟುಕೊಟ್ಟು ವನದಲ್ಲಿ ಇರುವಂಥವನು, ಮೂರೂ ಕಾಲ ಆತ್ಮಧ್ಯಾನದಲ್ಲಿ ಪ್ರವೃತ್ತಿ ಮಾಡುವಂಥವನು ಇತ್ಯಾದಿ ಗುಣಗಳಿಂದ ಸಹಿತನು ಋಷೀಶ್ವರ ಜಾತಿಯ ಬ್ರಾಹ್ಮಣನಿದ್ದಾನೆ.

೩. ಅನೇಕ ಪ್ರಾಸುಕ ಸುಗಂಧಿತ ದ್ರವ್ಯಗಳನ್ನು ಕೂಡಿಸಿ ಅಗ್ನಿಯಲ್ಲಿ ಹಾಕುತ್ತ, ಹೋಮ ಮಾಡುವಂಥ, ಅಗ್ನಿಯನ್ನು ಎಂದೂ ಆರಗೊಡದಂಥವನು, ಹೋಮಕ್ರಿಯೆಯಲ್ಲಿ ಸಾವಧಾನನು, ದಯಾರೂಪದ ಧರ್ಮವನ್ನು ತಿಳಿಯುವಂಥವನು, ದೇವ-ಗುರು ಪೂಜೆಯಲ್ಲಿ ವಿನಯವಂತನು ತನ್ನ ಭೋಜನದೊಳಗಿಂದ ಅತಿಥಿಗೆ ಕೊಡುವರೂಪ ಅತಿಥಿ ವ್ರತದ ಧಾರಕನು, ಗೃಹಸ್ಥನ ಷಟ್ಕರ್ಮ-ಕ್ರಿಯೆಗಳಲ್ಲಿ ಸಾವಧಾನನು ಇತ್ಯಾದಿ ಗುಣಗಳಿಂದ ಸಹಿತನು ಅವನು ವಿಪ್ರಜಾತಿಯ ಬ್ರಾಹ್ಮಣನಿದ್ದಾನೆ.

೪. ಆನೆ, ಕುದುರೆ, ರಥಾದಿಗಳನ್ನು ನಡೆಸುವುದರಲ್ಲಿ ಪ್ರವೀಣ, ಯುದ್ಧ ಮಾಡುವ ಇಚ್ಛೆಯುಳ್ಳವ, ಬಾಣ, ಕತ್ತಿ, ಗುಂಡು, ಚೂರಿ, ಕಿರುಗತ್ತಿಗಳನ್ನು ಪ್ರಯೋಗಿಸುವ, ಬಿಸಿಲು, ಪರ್ವತ, ಕಾನನ ಪ್ರದೇಶಗಳಲ್ಲಿ ಹೆದರದೇ ಯುದ್ಧ ಮಾಡುವ ಕಲೆ-ಶಸ್ತ್ರ ಕಲೆಗಳಲ್ಲಿ ಸಾವಧಾನತೆಯುಳ್ಳವನು, ಯುದ್ಧದಲ್ಲಿ ಮರಣಕ್ಕೆ ಭಯಪಡದವನು, ಮನಸ್ಸಿನಿಂದ ಶೂರ-ವೀರನು, ಮಹಾ ಆರಂಭ ಮಾಡುವಂಥವ, ರಾಜ್ಯ ಸಂಪದದ ಭೋಗಿ ಇತ್ಯಾದಿ ಗುಣ ಸಹಿತನು ಅವನು ಕ್ಷತ್ರಿಯ ಜಾತಿಯ ಬ್ರಾಹ್ಮಣನಿದ್ದಾನೆ.

೫. ಬ್ರಾಹ್ಮಣ ಕುಲದಲ್ಲಿ ಉತ್ಪನ್ನನಾಗಿ ಕೂಡ ಒಕ್ಕಲುತನ ಮಾಡುವಂಥವನು; ಹಸು, ಎಮ್ಮೆ, ಎತ್ತು ಮೊದಲಾದ ಪಶುಗಳನ್ನು ಸಾಕುವ ಕಲೆಯಲ್ಲಿ ಪ್ರವೀಣನು; ಆಚಾರ-ವಿಚಾರ ರಹಿತ ಆಹಾರ-ಪಾನೀಯಗಳ ಸೇವನೆ ಮಾಡುವಂಥವನು ಇತ್ಯಾದಿ ಲಕ್ಷಣಯುಕ್ತನು ಶೂದ್ರ ಜಾತಿಯ ಬ್ರಾಹ್ಮಣನಿದ್ದಾನೆ.

೬. ಬ್ರಾಹ್ಮಣ ಕುಲದಲ್ಲಿ ಉತ್ಪನ್ನನಾಗಿದ್ದರೂ ವಾಣಿಜ್ಯ, ವ್ಯಾಪಾರಗಳ ಚತುರತೆ ಬಲ್ಲವನು; ವಸ್ತ್ರ ಪರೀಕ್ಷೆ, ಚಿನ್ನ-ಬೆಳ್ಳಿಗಳ ಪರೀಕ್ಷೆ ತಿಳಿದವನು; ರೂಪಾಯಿ, ಮುದ್ರೆ, ರತ್ನಗಳ ಪರೀಕ್ಷೆ ಮಾಡುವಂಥವನು; ಧಾನ್ಯಾದಿಗಳನ್ನು ಕೊಡ-ಕೊಳ್ಳುವಲ್ಲಿ ಸಾವಧಾನನು ಅಂಥ ಪತ್ರಗಳನ್ನು ಬರೆಯುವುದರ ಕೂಡಿಸುವ-ಕಳೆಯುವ - ಬಡ್ಡಿ ಬೆಳೆಸುವ ಕಲೆ ಇತ್ಯಾದಿ ಜ್ಞಾನಸಹಿತ ಆಜೀವಿಕೆ ಮಾಡುವಂಥ ಲಕ್ಷಣವುಳ್ಳವನು ವೈಶ್ಯ ಜಾತಿಯ ಬ್ರಾಹ್ಮಣನಿದ್ದಾನೆ.

೭. ಬ್ರಾಹ್ಮಣ ಕುಲದಲ್ಲಿ ಅವತಾರವೆತ್ತಿದ್ದರೂ ಅನ್ಯರ ನಿಂದೆ ಮಾಡುವಂಥವ, ಅನ್ಯರ ದೋಷ ನೋಡುವಂಥವ, ಅನೇಕ ಸ್ವ-ಪರ ಸ್ತ್ರೀಯರನ್ನು ಭೋಗಿಸುವಂಥವ, ಪಶುವಿನ ಸಮಾನ ಕುಶೀಲವಂತ, ಪಂಚೇಂದ್ರಿಯ ವಿಷಯಗಳ ಲೋಲುಪಿ, ತನ್ನ ಬಾಯಿಂದ ತನ್ನ ಯಶಸ್ಸನ್ನು ಹೇಳುವಂಥವ; ತನ್ನ ಸಂತೋಷೀ ವೃತ್ತಿಯನ್ನು

ಬಿಟ್ಟುಕೊಟ್ಟು ದ್ರವ್ಯದ ಲೋಭವಶನಾಗಿ ಅನೇಕ ಸೋಗುಗಳನ್ನು ಧಾರಣ ಮಾಡುವಂಥವ; ಮಾಯೆ-ಕಪಟದಿಂದ ಧನ ಸಂಚಯ ಮಾಡುವಂಥವ; ಹಾಡುವ, ಬಾರಿಸುವ, ಕುಣಿಯುವ ಇತ್ಯಾದಿ ಕಲೆಗಳಿಂದ ಆಜೀವಿಕೆ ನಡೆಸುವಂಥವ; ಜನರಿಗೆ ಅನೇಕ ಮಂತ್ರ, ತಂತ್ರ, ಯಂತ್ರಾದಿಗಳ ಚಮತ್ಕಾರ ತೋರಿಸಿ ತನ್ನ ಕುಟುಂಬದ ಪರಿಪಾಲನೆ ಮಾಡುವ ಲಕ್ಷಣವುಳ್ಳವನು ವಿಜಾತಿ ಬ್ರಾಹ್ಮಣನಿದ್ದಾನೆ.

೮. ಬ್ರಾಹ್ಮಣ ಕುಲದಲ್ಲಿ ಜನ್ಮ ತಗೆದುಕೊಂಡಿದ್ದರೂ ತಿನ್ನಲು ಯೋಗ್ಯವಸ್ತುಗಳು ಮತ್ತು ಉಚ್ಚ ಕುಲದವರು ತಿನ್ನಲು ಯೋಗ್ಯವಲ್ಲದ ವಸ್ತುಗಳ ಸಂಬಂಧದಲ್ಲಿ ವಿಚಾರರಹಿತನಾಗಿರುವುದು; ಪರರಿಗೆ ಪೀಡೆಯನ್ನುಂಟು ಮಾಡುವಂಥ ಪಾಪಮಯ, ಕ್ರೋಧದ ವಚನ, ಅಪಶಬ್ದ ಬೈಗುಳ ವಚನ, ಶಾಪದ ವಚನ, ಮುಸಲ್ಮಾನರು ಆಡುವಂಥ ಭಂಡ ವಚನ ಇತ್ಯಾದಿ ದುರ್ವಚನಗಳನ್ನಾಡುವ ಸ್ವಭಾವವಿರುವುದು; ಒಳ್ಳೆಯ ಕ್ರಿಯೆಗಳಿಂದ ರಹಿತ ಮಹಾಪ್ರಮಾದಿ, ಅಧಿಕ ಮಲಗಿಕೊಳ್ಳುವ ಸ್ವಭಾವಲಕ್ಷಣವುಳ್ಳವನು ಅವನು ಪಶು ಜಾತಿಯ ಬ್ರಾಹ್ಮಣನಿದ್ದಾನೆ.

೯. ಬ್ರಾಹ್ಮಣ ಕುಲದಲ್ಲಿ ಜನ್ಮ ಪಡೆದಿದ್ದರೂ ನದಿ, ಕೆರೆ, ಬಾವಿಗಳಲ್ಲಿ ಕ್ರೀಡಿಸುವಂಥವನು, ಈಜುವ, ನೀರಿನಲ್ಲಿ ಜಿಗಿಯುವ ಕಾರ್ಯದಲ್ಲಿ ರುಚಿಯುಳ್ಳವನು; ಮದ್ಯ-ಮಾಂಸದ ಸೇವನೆ ಮಾಡುವಂಥವನು, ಬಹಳಷ್ಟು ಹಿಂಸೆ ಮಾಡುವಂಥವ; ದಯಾಧರ್ಮ, ಶುಭಾಚರಣೆಗಳಿಂದ ದೂರವಿರುವ ಲಕ್ಷಣವುಳ್ಳವನು ಅವನು ಮ್ಲೇಚ್ಛಜಾತಿಯ ಬ್ರಾಹ್ಮಣನಿದ್ದಾನೆ.

೧೦. ಮಹಾಹಿಂಸೆ ಮಾಡುವಂಥವನು; ಮನುಷ್ಯ, ಪಶುಗಳನ್ನು ಸಾಯಿಸುವಲ್ಲಿ ನಿರ್ದಯಿ, ಒಳ್ಳೊಳ್ಳೆಯ ದ್ವಿಜ ಯೋಗ್ಯ ಕ್ರಿಯೆಗಳಿಂದ ರಹಿತನೂ, ಹಿತಾಹಿತದ ವಿಚಾರದಿಂದ ಶೂನ್ಯನು ಹಾಗೂ ಪೂಜೆ, ದಾನ, ಜಪ, ತಪ ಇತ್ಯಾದಿ ಧರ್ಮ ಕ್ರಿಯೆಗಳಿಂದ ದೂರನಾಗಿದ್ದು ಪಾಪ ಪರಿಣತಿಯಿಂದ ಕೂಡಿದವನು ಇತ್ಯಾದಿ ಲಕ್ಷಣ ಸಹಿತನು ಮಾತಂಗ ಜಾತಿಯ ಬ್ರಾಹ್ಮಣನಿದ್ದಾನೆ - ಈ ಪ್ರಕಾರ ಆಚರಣೆಯ ಅಪೇಕ್ಷೆಯಿಂದ ಬ್ರಾಹ್ಮಣನ ಹತ್ತು ಭೇದಗಳಾಗುತ್ತದೆ.

ಬೇಕಾದಂಥ ಕ್ರಿಯೆ ಮಾಡುತ್ತಿದ್ದರೂ ಯಾವ ಕುಲದಲ್ಲಿ ಉತ್ಪನ್ನನಾಗಿದ್ದಾನೆ, ಅದೇ ಹೆಸರು ಪಡೆಯುತ್ತಾನೆ - ಈ ಅಪೇಕ್ಷೆಯಿಂದ ಬ್ರಾಹ್ಮಣ ಕುಲದಲ್ಲಿ ಉತ್ಪನ್ನನಾದವನನ್ನು ಬ್ರಾಹ್ಮಣನೆನ್ನುವುದು ಕುಲಬ್ರಹ್ಮವಿದೆ.

ಈ ಪ್ರಕಾರ ಸ್ವಭಾವಬ್ರಹ್ಮ, ಕ್ರಿಯಾಬ್ರಹ್ಮ, ತ್ಯಾಗಬ್ರಹ್ಮ ಮತ್ತು ಕುಲಬ್ರಹ್ಮ - ಇವು ಬ್ರಹ್ಮನ ನಾಲ್ಕು ಭೇದಗಳಿವೆ. ನಾಲ್ಕೂ ಕುಲಗಳಲ್ಲಿ ಉತ್ಪನ್ನ, ಸೌಮ್ಯಮೂರ್ತಿ, ಸಮಸ್ತ ಸ್ತ್ರೀಯರ ತ್ಯಾಗಿ, ಏಳನೆಯ ನೆಲೆಧಾರಕ ಧರ್ಮಾತ್ಮಾ ಶ್ರಾವಕನು ತ್ಯಾಗಬ್ರಹ್ಮನೆನಿಸಿಕೊಳ್ಳುತ್ತಾನೆ.

ಈ ಪ್ರಕಾರ ಸುದೃಷ್ಟಿ ತರಂಗಿಣಿಯೆಂಬ ಹೆಸರಿನ ಗ್ರಂಥದಲ್ಲಿ, ಶ್ರಾವಕನ ಭೇದರೂಪದಲ್ಲಿ
ಹನ್ನೊಂದು ನೆಲೆಗಳ ಅಂತರ್ಗತ ಏಳನೇ ಬ್ರಹ್ಮಚರ್ಯ ನೆಲೆಯ ಭೇದ, ಶೀಲದ
ಮಹಿಮೆ, ಭೋಜನದ ಏಳು ಅಂತರಾಯ, ಹದಿನೇಳು ನಿಯಮ, ಶ್ರಾವಕನ
ಇಪ್ಪತ್ತೊಂದು ಗುಣ, ಅನ್ಯಮತ ಸಂಬಂಧದ ಎಷ್ಟೋ ಶಿಕ್ಷಣ ಸಹಿತ
ಕ್ರಿಯಾ ಬ್ರಹ್ಮನ ಭೇದ, ದಶಭೇದ, ಕುಲಬ್ರಹ್ಮ ಇತ್ಯಾದಿಯ
ಕಥನ ಮಾಡುವಂಥ ಮೂವತ್ತೇಳನೆಯ ಪರ್ವವು
ಸಂಪೂರ್ಣವಾಯಿತು.

★★★★★

## ೩೮ : ಮೂವತ್ತೆಂಟನೆಯ ಪರ್ವ
## ಉತ್ಕೃಷ್ಟ ಶ್ರಾವಕ ನೆಲೆಯ ಕಥನ

**ಎಂಟನೆಯ ಆರಂಭ ತ್ಯಾಗ ನೆಲೆ** - ಪಾಪಾರಂಭದಿಂದ ಉದಾಸನಾಗಿ, ಮೋಕ್ಷಾಭಿಲಾಷಿ, ಎಂಟನೆಯ ನೆಲೆಯನ್ನು ಧಾರಣ ಮಾಡುವಂಥ ಭವ್ಯನು ವಿಚಾರ ಮಾಡುವುದೇನೆಂದರೆ - ಈ ಸಂಸಾರದಲ್ಲಿ ಮೋಹದ ವಶೀಭೂತನಾಗಿರುವ ಈ ಆತ್ಮನು ಗೃಹಸ್ಥನ ಪಾಪದಿಂದ ತನ್ನ ಆತ್ಮನನ್ನು ನರಕದ ದುಃಖದಲ್ಲಿ ಮುಳುಗಿಸುತ್ತಾನೆ. ಯಾರ ಕುರಿತಾಗಿ ಮೋಹಬುದ್ಧಿ ಮಾಡಿ ಪಾಪಗಳ ಭಾರವನ್ನು ಹೊತ್ತುಕೊಳ್ಳುತ್ತಾನೆ, ಆ ಪಾಪದ ಉದಯವು-ಫಲವು ಬಂದಮೇಲೆ ಆ ಮೋಹಿಗಳ ಯಾವ ಸುಳಿವೂ ಅಲ್ಲಿ ಕಂಡು ಬರುವುದಿಲ್ಲ.

ಸಂಬಂಧಿಗಳು ದ್ರವ್ಯ-ಧನವನ್ನು ತಿಂದು-ತಿಂದು (ಭೋಗಿಸಿ) ತಮ್ಮ-ತಮ್ಮ ಮಾರ್ಗದಿಂದ ಹೊರಟು ಹೋಗುವರು; ಆ ಪಾಪಗಳ ಫಲವನ್ನು ನಾನೇ ಭೋಗಿಸಬೇಕಾಗುವುದು.

ಹೇಗೆ ಓರ್ವ ಕಳ್ಳನ ಮನೆಯಲ್ಲಿ ಸ್ವಯಂ ಕಳ್ಳನು, ಮಾತೆ, ಪಿತ, ಪತ್ನಿ ಮತ್ತು ಪುತ್ರ - ಹೀಗೆ ಐದು ಜನರಿದ್ದರು. ಪಾಪದ ಫಲದಲ್ಲಿ ಆ ಐವರೂ ಆಹಾರವಿಲ್ಲದೆ ಸಂಕಟ ಪಡುತ್ತ ಮೂರು ದಿನಗಳಾದವು. ಅದರ ನಂತರ ಪುತ್ರನು ರೋದನ ಮಾಡುತ್ತ ಹೇಳುತ್ತಾನೆ - ಅಪ್ಪಾ ! ನಾವೆಲ್ಲರೂ ಆಹಾರವಿಲ್ಲದೇ ಹಸಿವೆಯ ಬಾಧೆಯಿಂದ ಸಾಯುತ್ತಿದ್ದೇವೆ. ಆಹಾರವಿಲ್ಲದೆ ಮೂರು ದಿನಗಳಾದವು. ನಾವೆಲ್ಲ ದುಃಖಿಯಾಗಿದ್ದೇವೆ; ಅದಕ್ಕಾಗಿ ಆಹಾರ ತಂದುಕೊಡಪ್ಪಾ !!

ಆಗ ಕಳ್ಳನು ಹೇಳುತ್ತಾನೆ - ಮಗನೇ ! ಬಹಳಷ್ಟು ತಿರುಗುತ್ತಿದ್ದೇನೆ ಆದರೆ ಪಾಪದ ಉದಯದಿಂದ ಎಲ್ಲಿಯೂ ಏನೂ ದೊರಕುತ್ತಿಲ್ಲ. ನೀವು ಧೈರ್ಯದಿಂದಿರಿ, ನಾನು ಪುನಃ ಹೋಗುತ್ತೇನೆ - ಹೀಗೆ ಹೇಳಿ ಆ ಕಳ್ಳನು ಕುಟುಂಬದ ಮೋಹದಿಂದ ಕಳವು ಮಾಡಲು ಹೋಗುತ್ತಾನೆ. ಒಂದು ಮನೆಯಲ್ಲಿ ಪಾಯಸವು ಸಿದ್ಧವಾಗಿತ್ತು. ಈ ಕಳ್ಳನು ತನ್ನ ಚತುರತೆಯಿಂದ ಪಾಯಸದ ಪಾತ್ರೆಯನ್ನು ಕದ್ದುಕೊಂಡು ತನ್ನ ಮನೆಗೆ ತಗೆದುಕೊಂಡು ಬಂದನು. ತನ್ನ ಕುಟುಂಬದ ಎದುರಿಗೆ ಆ ಪಾತ್ರೆಯನ್ನಿಟ್ಟು ಐವರಿಗೂ ಐದು ತಟ್ಟೆಗಳನ್ನು ತಂದು ಪಾಯಸವನ್ನು ಬಡಿಸಿದನು. ಆಗ ಭೋಜನವಂತೂ ಒಳ್ಳೆಯದಿದೆ ಆದರೆ ಮೃಷ್ಟಾನ್ನವಿರುತ್ತಿದ್ದರೆ ಒಳ್ಳೆಯದಿರುತ್ತಿತ್ತು - ಎಂದು ಎಲ್ಲರೂ ಹೇಳುತ್ತಾರೆ. ಆಗ ಕಳ್ಳ ಚತುರನು - ಅದಕ್ಕೇನು ನೀವು ಬಯಸಿದರೆ ನಾನು ಮೃಷ್ಟಾನ್ನವನ್ನೂ ತಗೆದುಕೊಂಡು ಬರುತ್ತೇನೆ - ಎಂದು ಹೇಳಿ ಕಳ್ಳನು ಮೃಷ್ಟಾನ್ನ ತರುವ ಸಲುವಾಗಿ ಹೊರಟು ಹೋದನು. ಅವನಿಗೆ ಅಲ್ಲಿ ಬಹಳಷ್ಟು ಸಮಯ ಬೇಕಾಯಿತು. ಇತ್ತ ಇವರಿಗೆ ಹಸಿವೆಯನ್ನು ಸಹಿಸಿ ಇರುವುದಾಗಲಿಲ್ಲ; ಅದರಿಂದ ತಮ್ಮ ತಮ್ಮ ತಟ್ಟೆಯ ಪಾಯಸವನ್ನು ತಿಂದುಬಿಟ್ಟರು. ಕಳ್ಳತನ ಮಾಡಲು ಹೋಗಿರುವವನ ತಟ್ಟೆಯನ್ನು ಮುಚ್ಚಿ ಇಟ್ಟರು. ಅಷ್ಟರಲ್ಲಿ ಅತಿಥಿಯ ಆಗಮನವಾಗುವುದರಿಂದ ಆ ಕಳ್ಳನ ತಟ್ಟೆಯನ್ನು ಅತಿಥಿಯ ಮುಂದೆ ಇಡುತ್ತಾರೆ. ಅದನ್ನು ಅವನು ತಿಂದುಬಿಡುತ್ತಾನೆ.

ಆ ಕಳ್ಳನು ಯಾವಾಗ ಯಾರದೋ ಮನೆಯ ಮೃಷ್ಟಾನ್ನವನ್ನು ಕದ್ದುಕೊಂಡು ಮರಳಿ ಮನೆಗೆ ಬಂದು ನೋಡುತ್ತಾನೆ, ಆಗ ಅಲ್ಲಿ ಪಾಯಸವಿರಲಿಲ್ಲ. ಮನೆಯವರನ್ನು ವಿಚಾರಿಸಿದ ಮೇಲೆ ಮನೆಗೆ ಬಂದ ಅತಿಥಿಯು ತಿಂದನೆಂಬ ವಿಷಯವು ತಿಳಿದು ಬರುತ್ತದೆ. ಅದನ್ನು ಕೇಳಿ ಮೂರು ದಿನಗಳಿಂದ ಏನೂ ಇಲ್ಲದೆ ಹಸಿದು ಕಂಗಾಲಾದ ಕಳ್ಳನು ದುಃಖಿಯಾದನು. ಅಷ್ಟರಲ್ಲಿ ಪಾಯಸ ಮತ್ತು ಮಿಷ್ಟಾನ್ನದ ಶೋಧ ಮಾಡುತ್ತ ಕೋತವಾಲನು ಕಳ್ಳನನ್ನು ಹುಡುಕುತ್ತ ಅಲ್ಲಿ ಬಂದು ಬಿಟ್ಟನು. ಮತ್ತು ಈ ಕಳ್ಳನನ್ನು ಹಿಡಿದುಕೊಂಡನು. ಆಗ ಪಾಯಸ ತಿಂದಿರುವ ಮನೆಯ ಸದಸ್ಯರು ಮತ್ತು ಅತಿಥಿಯಂತೂ ಪಲಾಯನ ಮಾಡಿದರು; ಆದರೆ ಕಳ್ಳನಿಗೆ ದಂಡನೆಯಾಯಿತು. ಅನೇಕ ಪ್ರಕಾರದ ಹೊಡೆತ ತಿನ್ನುತ್ತ ಕಳ್ಳನು ಮಹಾದುಃಖಿಯಾದನು.

ಅದೇ ಪ್ರಕಾರ ನಾನು ಕುಟುಂಬದ ಸಲುವಾಗಿ ಪಾಪಾರಂಭ ಮಾಡಿದೆನು; ಅದರಿಂದ ನನಗೆ ಕೂಡ ಆ ಕಳ್ಳನ ಹಾಗೆ ದುಃಖ ಭೋಗಿಸಬೇಕಾಗುವುದು. ದುಃಖವು ಬಂದಮೇಲೆ ಕುಟುಂಬವರ್ಗದವರೆಲ್ಲರೂ ಹೊರಟು ಹೋಗುತ್ತಾರೆ. ಈ ಶಿವಸುಖದ ಅಭಿಲಾಷಿಯು ಸಂಸಾರ-ಭೋಗಗಳಿಂದ ಉದಾಸನಾಗಿ ಇಂಥ ವಿಚಾರ ಮಾಡುತ್ತಾನೆ. ಅದರ ನಂತರ ಕುಟುಂಬದಿಂದ ಮತ್ತು ಗೃಹಸ್ಥತೆಯಿಂದ ಮಮತೆಯನ್ನು ಬಿಟ್ಟುಕೊಟ್ಟು ವಿವೇಕ ಪ್ರಾಪ್ತನೂ, ಮನೆ ನಡೆಸುವಲ್ಲಿ ಸಮರ್ಥನೂ ಇರುವ ಮನೆಯ ಮಗನನ್ನು ಕರೆದು, ಮೊದಲಂತೂ ಅವನಿಗೆ ಹಿತ-ಮಿತ ಉಪದೇಶ ನೀಡಿ ಸಂತುಷ್ಟಗೊಳಿಸುತ್ತಾನೆ. ನಂತರ ತನ್ನ ಮನಸ್ಸಿನ ರಹಸ್ಯವನ್ನು ತಿಳಿಸಿಕೊಡುತ್ತ ಹೇಳುತ್ತಾನೆ, - ಎಲೈ ಭವ್ಯನೇ ! ಇಲ್ಲಿಯವರೆಗೆ ಮನೆಯ ಭಾರವನ್ನು ನಾವು ನಡೆಸಿಯಾಯಿತು, ನೀನು ಸುಪುತ್ರ, ಸಜ್ಜನಾಂಗ, ವಿವೇಕಸಂಪನ್ನ, ವಿನಯವಂತನಾಗಿರುವುದನ್ನು ಕಂಡು ತುಂಬ ಪ್ರಸನ್ನತೆಯಾಗಿದೆ. ನಮ್ಮ ಗೃಹಪಾಲನೆಯ ಚಿಂತೆಯು ಸಮಾಪ್ತವಾಗಿ ಹೋಗಿದೆ. ಎಲೈ ಧರ್ಮಾತ್ಮನೇ ! ಇನ್ನು ನೀನು ಈ ಕುಟುಂಬದ ರಕ್ಷಣೆ ಮಾಡು. ನ್ಯಾಯಪೂರ್ವಕ ಧನೋಪಾರ್ಜನೆ ಮಾಡುತ್ತ ಧರ್ಮದ ಸೇವನೆಮಾಡಿ ಪರಭವದ ಸುಧಾರಣೆ ಮಾಡಿಕೋ.

ಅದರ ನಂತರ ತಮ್ಮ ಜಾತಿಯವರನ್ನು, ಕುಟುಂಬದವರನ್ನು ಮತ್ತು ಪಂಚರನ್ನು ಕರೆದು ವಿನಯಪೂರ್ವಕ ಹಿತ-ಮಿತ ವಚನಗಳನ್ನಾಡುತ್ತ, - ಓ ಪಂಚರೇ ! ಇಲ್ಲಿಯವರೆಗೆ ನಾವು ಕುಟುಂಬದ ಕಾರಣ ಆರಂಭ ಮಾಡಿದೆವು, ಈಗ ಪರಭವದ ಸುಖದ ಸಲುವಾಗಿ ನಮಗೆ ಆರಂಭ ರಹಿತ ಧರ್ಮಸೇವನೆ ಮಾಡುವ ಮನೋರಥವುಂಟಾಗಿದೆ. ಇನ್ನು ಈ ಮನೆಯ ಭಾರವನ್ನು ಈ ಪುತ್ರನಿಗೆ ವಹಿಸಿಕೊಡುತ್ತಿದ್ದೇನೆ, ಆದುದರಿಂದ ತಾವು ಇನ್ನು ಈತನ ಪ್ರತಿಪಾಲನೆ ಮಾಡುವುದು. ಹೇಗೆ ತಾವೆಲ್ಲ ಸೋದರರು ನನ್ನ ಮೇಲೆ ಧರ್ಮಸ್ನೇಹ ಮಾಡಿ ನನ್ನ ಪ್ರತಿಪಾಲನೆ ಮಾಡಿರುವಿರಿ; ಅದೇ ಪ್ರಕಾರ ಇವನದು ಮಾಡಬೇಕು. ಯಾವ ಪ್ರಕಾರ ಪ್ರಯೋಜನವಶದಿಂದ ನನಗೆ ಆಜ್ಞೆ ನೀಡುತ್ತಿದ್ದಿರಿ, ಅದೇ ಪ್ರಕಾರ ಇವನಿಗೆ ಆಜ್ಞೆ ನೀಡಬೇಕು. ಯಾವ ರೀತಿ ನನ್ನಂಥ ಅಲ್ಪಜ್ಞನ ಮೇಲೆ ಕ್ಷಮೆ ಮಾಡಿ ನನಗೆ ಎಲ್ಲವನ್ನು ಕಲಿಸಿಕೊಟ್ಟಿರುವಿರಿ, ಅದೇ ರೀತಿ ಇವನಿಗೆ ಶಿಕ್ಷಣವಿತ್ತು ಇವನನ್ನು ಪ್ರವೀಣನನ್ನಾಗಿ ಮಾಡುವುದು.

ಈಗ ನಾನು ತಮ್ಮೆಲ್ಲರಲ್ಲಿ ವಿನಂತಿಸಿಕೊಳ್ಳುವುದೇನೆಂದರೆ ಇಲ್ಲಿಯವರೆಗೆ ಆರಂಭ ಪ್ರಾರಂಭಗಳಲ್ಲಿ ನನ್ನ ಮೇಲೆ ದಯೆ ಮಾಡಿ, ನನ್ನ ನೆನಪು ಮಾಡಿಕೊಂಡು, ನನ್ನ ಹೆಸರು ಹೇಳಿ ನನ್ನನ್ನು ಕರೆಯಲು ಕಳಿಸುತ್ತಿದ್ದಿರಿ, ಅದೇ ಪ್ರಕಾರ ಇನ್ನು ಪಂಚಾಯತಿ ಹಾಗೂ ವಿವಾಹಾದಿ ಕಾರ್ಯಗಳಲ್ಲಿ ಇವನ ನೆನಪು ಮಾಡಿ ಇವನ ಹೆಸರಿನ ಆಮಂತ್ರಣ ಕಳಿಸಿ ಕರೆಸಿಕೊಳ್ಳುವುದು. ಈಗ ನಾನು ತಮ್ಮೆಲ್ಲರ ಸಾಕ್ಷಿಯಲ್ಲಿ ಗೃಹ-ಆರಂಭದಿಂದ ಪೃಥಕ್ಕಾಗಿ ಹೋಗಿದ್ದೇನೆ. ಈ ಪ್ರಕಾರ ಪಂಚರು ಮೊದಲಾಗಿ ಎಲ್ಲರ ಕುರಿತಾಗಿ ಶುಭವಚನ ಹೇಳುತ್ತಾನೆ. ಎಲ್ಲ ಪಂಚರು ಕೂಡ ಇವನ ಧೀರತೆಯನ್ನು ಕಂಡು ಬಹಳಷ್ಟು ಪ್ರಶಂಸೆ ಮಾಡುತ್ತಾರೆ ಮತ್ತು ಅದರ ಅನುಸಾರ ಮಾಡುತ್ತಾರೆ. ಅದೇ ದಿನದಿಂದ ಅವನು ಸ್ವಯಂ ಪಾಪಾರಂಭದ ತ್ಯಾಗಿಯಾಗಿ, ಪಾಪಾರಂಭದಿಂದ ಪೃಥಕ್ಕಾಗಿ ಮನೆಯಲ್ಲಿದ್ದುಕೊಂಡು ಧರ್ಮ-ಸಾಧನೆ ಮಾಡುತ್ತಾನೆ. ಮನೆಯಲ್ಲಿಯೇ ಸ್ತುತಿ, ಪೂಜೆ, ದಾನ, ಧ್ಯಾನ ಮಾಡುತ್ತ ಸಂಯಮದ ಪಾಲನೆ ಮಾಡುತ್ತ ಕಾಲ ವ್ಯತೀತ ಮಾಡುತ್ತಾನೆ. ಭೋಜನದ ಸಮಯದಲ್ಲಿ ಮನೆಯವರಿಂದ ಕರೆ ಬಂದ ಮೇಲೆ ಭೋಜನದ ಸಲುವಾಗಿ ಹೋಗುತ್ತಾನೆ ಮತ್ತು ತನ್ನ ಪದವಿಯ ಪ್ರಮಾಣ ಅಲ್ಪ ಪರಿಗ್ರಹವಿಟ್ಟುಕೊಳ್ಳುತ್ತಾನೆ.-ಈ ಆರಂಭ ತ್ಯಾಗಿಯು ಎಂಟನೆಯ ನೆಲೆಯ ಧಾರಕನಿದ್ದಾನೆ.

**ಒಂಭತ್ತನೆಯ ಪರಿಗ್ರಹ ತ್ಯಾಗನೆಲೆ** - ಈ ನೆಲೆಯಲ್ಲಿ ಸಮಸ್ತ ಪರಿಗ್ರಹ-ಆರಂಭಗಳ ಮಮತ್ವದ ತ್ಯಾಗಿಯಾಗುತ್ತಾನೆ. ಮೊದಲು ಎಂಟನೇ ನೆಲೆಯಲ್ಲಿ ಅಲ್ಪ ಪರಿಗ್ರಹವನ್ನು ಇಟ್ಟುಕೊಂಡಿದ್ದನು. ಸಾಮಾನ್ಯ ಪರಿಗ್ರಹವಿತ್ತು.

ಈಗ ಸಂಪೂರ್ಣ ಪರಿಗ್ರಹ ತ್ಯಾಗ ಮಾಡಿ ಏಕಾಂತ ಸ್ಥಾನದಲ್ಲಿದ್ದು ಧರ್ಮಧ್ಯಾನದ ಸೇವನೆ ಮಾಡುತ್ತಾನೆ. ಒಂದು ದಿವಸ ಮೊದಲು ಯಾರ ಮನೆಯಿಂದ ಭೋಜನದ ಸಲುವಾಗಿ ನಿಮಂತ್ರಣ (ಕರೆ) ಬಂದ ಮೇಲೆ ಅಲ್ಲಿ ಹೋಗಿ ಭೋಜನ ಮಾಡಿ ಬರುತ್ತಾನೆ. ತನ್ನ ಮನೆ ಮತ್ತು ಬೇರೆಯವರ ಮನೆಯನ್ನು ಸಮಾನವಾಗಿ ಕಾಣುತ್ತಾನೆ. ಮುಂಡಾಸು, ಹೊದಿಕೆಗಳನ್ನು ಇಟ್ಟುಕೊಳ್ಳುತ್ತಾನೆ. ನಿಮಂತ್ರಣದಿಂದ ಭೋಜನ ಮಾಡುತ್ತಾನೆ. ಮಹಾ ಸೌಮ್ಯ ಮೂರ್ತಿಯ ಧಾರಕನೂ, ದಯಾಧರ್ಮದ ಪಾಲಕನೂ ಆಗಿರುತ್ತಾನೆ- ಇವು ಒಂಭತ್ತನೆಯ ಪರಿಗ್ರಹತ್ಯಾಗ ನೆಲೆಯ ಗುಣಗಳೆಂದು ತಿಳಿಯುವುದು.

**ಹತ್ತನೆಯ ಅನುಮತಿ ತ್ಯಾಗನೆಲೆ -** ಅನುಮತಿ ಎಂದರೆ ಉಪದೇಶ. ಹತ್ತನೇ ನೆಲೆಯ ಧಾರಕನು ಪಾಪಾರಂಭರೂಪ ಉಪದೇಶದ ತ್ಯಾಗಿಯಿರುತ್ತಾನೆ. ಅವನು ಆಹಾರವನ್ನು ಕೂಡ ಹೇಳಿ ಮಾಡಿಸುವುದಿಲ್ಲ. ನಿಮಂತ್ರಣ ಸ್ವೀಕಾರ ಮಾಡುವುದಿಲ್ಲ ಭೋಜನದ ಸಮಯದಲ್ಲಿ ಯಾರ ಮೂಲಕವಾದರೂ ಕರೆ ಬಂದರೆ - ಕರೆದುಕೊಂಡು ಹೋದರೆ ಭೋಜನ ಮಾಡುತ್ತಾನೆ; ಪೂರ್ವನಿಮಂತ್ರಣದ ಮೇಲೆ ಹೋಗುವುದಿಲ್ಲ - ನಿಮಂತ್ರಣವಿಲ್ಲದೆಯೇ ಕರೆದುಕೊಂಡು ಹೋದರೆ ಭೋಜನದ ಸಲುವಾಗಿ ಹೋಗುತ್ತಾನೆ; ಅವನು ಅನುಮತಿ ತ್ಯಾಗ ನೆಲೆಯ ಧಾರಕನಿದ್ದಾನೆ.

**ಹನ್ನೊಂದನೆಯದು ಉದ್ದಿಷ್ಟತ್ಯಾಗ ನೆಲೆಯಿದ್ದು** ಅದರಲ್ಲಿ - ೧. ಐಲಕ, ೨. ಕ್ಷುಲ್ಲಕವೆಂದು ಎರಡು ಭೇದಗಳಿವೆ. ಐಲಕ - ಕಟಿಬಂಧನ ಮತ್ತು ಕೇವಲ ಲಂಗೋಟಿ ಪರಿಗ್ರಹವನ್ನಿಟ್ಟುಕೊಳ್ಳುವಂಥ, ವನವಿಹಾರಿ, ಅನುದ್ದಿಷ್ಟ ಆಹಾರ ತಗೆದುಕೊಳ್ಳುವಂಥ, ಪೃಥ್ವಿಯ ಹಾಸಿಗೆ ಮತ್ತು ಆಕಾಶವನ್ನು ಹೊದಿಕೆಯನ್ನಾಗಿಸಿಕೊಳ್ಳುವಂಥ, ಮಹಾದಯಾಳು, ಮುನಿಯ ಸಮಾನ ಚಿತ್ತದ ಧಾರಕ, ನಗ್ನ ಪರೀಷಹವನ್ನು ಹೊರತು ಪಡಿಸಿ ಇಪ್ಪತ್ತೊಂದು ಪರೀಷಹಗಳನ್ನು ಜಯಸುವಂಥ ನಿರ್ಮಲ ಆಚರಣೆಯುಳ್ಳ, ಕಮಂಡಲು-ಪಿಂಛಿ ಇಟ್ಟುಕೊಳ್ಳುವಂಥ, ಯತಿಯ ಸಮಾನ ವ್ರತಗಳ ಧಾರಕ, ಮುನಿಪದದ ಅಭಿಲಾಷಿಯಾದ ಈ ಧರ್ಮಾತ್ಮನ ಪರಿಣತಿಯು ಯಾವುದೋ ಸೂಕ್ಷ್ಮ ಜಾತಿಯ ಅಂಶದ ಕಾರಣ ಶಂಕಾರೂಪವಾಗುವುದರಿಂದ ತನಗೆ ಜ್ಞಾತವಾಗದಂಥ, ಕೇವಲ ಕೇವಲೀಗಮ್ಯ ಮನ-ವಚನ-ಕಾಯದೊಳಗಿನ ಯಾವುದೋ ಜಾತಿಯ ಭಂಗಸಹಿತ ಕೆಲಸೂಕ್ಷ್ಮ ಅಂಶಯುಕ್ತ ಕಾಮವಿಕಾರವು ವಿದ್ಯಮಾನವಿರುವುದರಿಂದ ನಗ್ನ ಮುದ್ರೆಯನ್ನು ಧಾರಣ ಮಾಡುವಲ್ಲಿ ಅಸಮರ್ಥನೂ; ಸೂಕ್ಷ್ಮ ಕಾಮವಿಕಾರವನ್ನು ನಷ್ಟಮಾಡಿ ಯತಿ ಪದ ಧಾರಣ ಮಾಡುವ ಸಲುವಾಗಿ ಪ್ರಯತ್ನಶೀಲ ಶ್ರಾವಕನು ಐಲಕ ಶ್ರಾವಕನಿದ್ದಾನೆ. ಶ್ರಾವಕನ ಈ ಐಲಕ ಪದವು ಮೂರು ಉತ್ತಮ ಕುಲಗಳಲ್ಲಿ ಉತ್ಪನ್ನನಾದ ಭವ್ಯಾತ್ಮನಿಗೆ ಆಗುತ್ತದೆ. ಶೂದ್ರನಿಗೆ ಆಗುವುದಿಲ್ಲ.

**ಕ್ಷುಲ್ಲಕ ಪದ -** ನೀಚಕುಲ ಹಾಗೂ ಉಚ್ಚಕುಲ ಎರಡೂ ಜಾತಿಯವರಿಗೆ ಈ ಪದವಾಗುತ್ತದೆ. ಕ್ಷುಲ್ಲಕನ ಹತ್ತಿರ ಸ್ವಲ್ಪ ಬಟ್ಟೆಗಳಷ್ಟೇ ಪರಿಗ್ರಹವಿರುತ್ತದೆ. ಒಂದು ಮೈಮೇಲೆ ಹೊತ್ತುಕೊಳ್ಳುವ ಶಲ್ಯ ತಲೆಯ ಮೇಲೆ ಒಂದು ಚಿಕ್ಕ ರುಮಾಲು ಇಟ್ಟುಕೊಂಡಿರುತ್ತಾನೆ; ಅದೂ ಕೂಡ ಸರಾಗ ಭಾವ ಉತ್ಪನ್ನ ಮಾಡುವಲ್ಲಿ ಸಮರ್ಥವಾಗದಂಥ ತುಂಬ ಚಿಕ್ಕದು ಇರುತ್ತದೆ. ಅವು ತುಂಬ ನಯವಾದವು ಅಥವಾ ಜೀವಗಳ ಉತ್ಪತ್ತಿಯಾಗಲು ಯೋಗ್ಯವಾದ ದಪ್ಪವೂ ಇರುವುದಿಲ್ಲ. ಅಲ್ಲದೆ ಮಲಿನವಾದ ಮೇಲೆ ದರಿದ್ರನ ಹಾಗೆ ಕಾಣುವಂಥವಿರುತ್ತವೆ; ಎಂದರೆ ಮಧ್ಯಮ ಬೆಲೆಯುಳ್ಳ ರಾಗರಹಿತ ವಸ್ತ್ರವಿಟ್ಟುಕೊಳ್ಳುತ್ತಾನೆ. ಅವನು ಶೂದ್ರ ಜಾತಿಯ ಕ್ಷುಲ್ಲಕನಿದ್ದಾನೆ. ಶೂದ್ರರಲ್ಲಿ ೧. ಸ್ಪೃಶ್ಯ ಶೂದ್ರ, ೨. ಅಸ್ಪೃಶ್ಯ ಶೂದ್ರವೆಂದು ಎರಡು ಭೇದಗಳಿವೆ. ಲೋಕದಲ್ಲಿ ಯಾರನ್ನು ಮುಟ್ಟಿದ ಮೇಲೆ ಗ್ಲಾನಿಯಾಗುವುದಿಲ್ಲ ಅಂಥ ಮಡಿವಾಳ, ಬಡಿಗ, ಸಿಂಪಿಗ, ನಾವಲಿಗ ಇತ್ಯಾದಿಗಳು ಸ್ಪೃಶ್ಯ ಶೂದ್ರರಿದ್ದಾರೆ. ಲೋಕದಲ್ಲಿ ಯಾರನ್ನು ಮುಟ್ಟುವುದರಿಂದ

ಗ್ಲಾನಿಯಾಗುತ್ತದೆ; ಸ್ನಾನ ಮಾಡಿದ ಮೇಲೆ ಶುದ್ಧರಾಗುತ್ತಾರೆ ಅಂಥ ಭಂಗೀ, ಚಾಂಡಾಲ, ಚರ್ಮಕಾರ ಮೊದಲಾದವರು ಅಸ್ಪೃಶ್ಯ ಶೂದ್ರರಿದ್ದಾರೆ. ಇವರಲ್ಲಿ ಸ್ಪೃಶ್ಯ ಶೂದ್ರನಿಗೆ ಕ್ಷುಲ್ಲಕ ವ್ರತವಾಗುತ್ತದೆ, ಅಸ್ಪೃಶ್ಯ ಶೂದ್ರನಿಂದ ವ್ರತಗಳಾಗುವುದಿಲ್ಲ; ಸಮ್ಯಗ್ದರ್ಶನಾದಿ ಗುಣಗಳಾಗುತ್ತವೆ. ಇವರೊಳಗಿನ ಮೂರು ಉತ್ತಮ ಕುಲವುಳ್ಳ ಕ್ಷುಲ್ಲಕ ಶ್ರಾವಕನಂತೂ ಭೋಜನದ ಸಲುವಾಗಿ ಹೋಗುವಾಗ ಗೃಹಸ್ಥನ ಅಡಿಗೆ ಮನೆಯಲ್ಲಿಯೇ ಆಹಾರ ಮಾಡುತ್ತಾನೆ. ಆದರೆ ಶೂದ್ರ ಜಾತಿಯ ಕ್ಷುಲ್ಲಕನು ಕುಲದಿಂದ ಹೀನನಾಗಿರುವ ಕಾರಣ ಗೃಹಸ್ಥನ ಭೋಜನ ಸ್ಥಾನದಲ್ಲಿ ಹೋಗುವುದಿಲ್ಲ.

ಸಂಸಾರದಿಂದ ಉದಾಸೀನ, ವ್ರತಗಳ ಧಾರಕ, ಧರ್ಮದ ಮರ್ಯಾದೆಯನ್ನು ತಿಳಿಯುವಂಥವ, ಪುಣ್ಯ ಫಲದ ಲೋಭಿ, ಪರಭವ ಸುಧಾರಣೆಯ ಇಚ್ಛೆಯುಳ್ಳವ, ಪರಂಪರೆಯಿಂದ ಮೋಕ್ಷದ ಇಚ್ಛೆಯುಳ್ಳವ, ಜನ್ಮ-ಮರಣಗಳಿಂದ ಭಯಭೀತ ಚಿತ್ತವುಳ್ಳವ, ಸೌಮ್ಯಸ್ವಭಾವಿ, ಧರ್ಮಮೂರ್ತಿ, ಮಾರ್ದವ ಧರ್ಮವನ್ನು ಸಾಧಿಸುವಂಥ ಈ ಧರ್ಮಾತ್ಮಾ ನೀಚ ಕುಲದ ಶ್ರಾವಕನು ತನ್ನ ನೀಚ ಕುಲವನ್ನು ಪ್ರಗಟ ಪಡಿಸುವ ಸಲುವಾಗಿ ಭೋಜನ ಮಾಡುವುದಕ್ಕೆ ಒಂದು ಲೋಹದ ಪಾತ್ರವನ್ನು ಜತೆಯಲ್ಲಿಟ್ಟುಕೊಂಡಿರುತ್ತಾನೆ. ಯಾವನೋ ಧರ್ಮಾತ್ಮಾ ಶ್ರಾವಕನ ಮೂಲಕ ಈ ಕ್ಷುಲ್ಲಕನನ್ನು ಭೋಜನದ ಸಲುವಾಗಿ ತನ್ನ ಮನಗೆ ಕರೆದುಕೊಂಡು ಹೋದ ಮೇಲೆ ಈ ಶೂದ್ರ ಕುಲದ ಧರ್ಮಾತ್ಮನು ಅವನ ಜತೆಗೆ ಎಲ್ಲಿಯವರೆಗೆ ಯಾರನ್ನೂ ಯಾರೂ ತಡೆಯುವುದಿಲ್ಲ ಅಲ್ಲಿಯವರೆಗೆ ಹೋಗುತ್ತಾನೆ. ಅದರ ನಂತರ ಒಳ ಅಂಗಳದಲ್ಲಿ ನಿಂತುಕೊಳ್ಳುತ್ತಾನೆ. ಇವನನ್ನು ಉತ್ತಮನೆಂದು ತಿಳಿದು ಶ್ರಾವಕನಿಂದ ಕರೆಯಲ್ಪಟ್ಟ ಮೇಲೆ ಈ ಧರ್ಮಾತ್ಮನು ಅಂಗಳದಲ್ಲಿಯೇ ನಿಂತು ಲೋಹದ ಪಾತ್ರವನ್ನು ತೋರಿಸುತ್ತಾನೆ. ಲೋಹದ ಪಾತ್ರವನ್ನು ನೋಡಿ ದಾತೃವು ಈ ಧರ್ಮಾತ್ಮನು ಶೂದ್ರ ಜಾತಿಯವನಿದ್ದ ಕಾರಣ ಮೇಲೆ ಬರುತ್ತಿಲ್ಲವೆಂಬುದನ್ನು ತಿಳಿಯುತ್ತಾನೆ. ಆಗ ಆ ಶ್ರಾವಕನು ಈ ಕ್ಷುಲ್ಲಕನನ್ನು ತುಂಬ ಆದರದಿಂದ ವಿನಯಪೂರ್ವಕ ಅನುಮೋದಿಸುತ್ತ ಹರುಷದೊಂದಿಗೆ ಭೋಜನ ನೀಡುತ್ತಾನೆ. ಆ ಸ್ಥಾನದಲ್ಲಿ ನಾಲ್ಕು, ಎರಡು ಅಥವಾ ಒಂದು ಮನೆಯು ಶ್ರಾವಕರವಿದ್ದರೆ ಎಲ್ಲ ಮನೆಗಳಿಂದ ಸ್ವಲ್ಪ-ಸ್ವಲ್ಪ ಆಹಾರ ತಗೆದುಕೊಳ್ಳುತ್ತಾನೆ; ಇಲ್ಲದಿದ್ದರೆ ಎರಡು ಮನೆಗಳ ಅಥವಾ ಒಂದು ಮನೆಯ ಆಹಾರ ಮಾಡುತ್ತಾನೆ. ಈ ಉತ್ತಮ ವ್ರತಧಾರಕ ಶ್ರಾವಕನು ತನ್ನ ಕುಲವನ್ನು ಮರೆಮಾಚುವುದಿಲ್ಲ.

ಈ ಪ್ರಕಾರ ಉಚ್ಚಕುಲ ಹಾಗೂ ಸ್ಪೃಶ್ಯ ನೀಚಕುಲ - ಎರಡೂ ಕುಲಗಳಲ್ಲಿ ಈ ಶ್ರಾವಕ ಪದವಿರುತ್ತದೆ. ಐಲಕ ಪದವು ಉಚ್ಚ ಕುಲವಂತರಿಗೇ ಆಗುತ್ತದೆ. ಇದು ಉತ್ಕೃಷ್ಟ ಶ್ರಾವಕ ಪದವಿದೆ.

ಈ ಪ್ರಕಾರ ಏಳನೆಯ ನೆಲೆಯಿಂದ ಹಿಡಿದು ಹನ್ನೊಂದನೇ ನೆಲೆಯವರೆಗಿನ ಭೇದಗಳು ತ್ಯಾಗಬ್ರಹ್ಮನ ಭೇದಗಳೆಂದು ತಿಳಿಯುವುದು. ಎಂಥೆಂಥ ತ್ಯಾಗವು ಯಾವ ಯಾವ ನೆಲೆಯಲ್ಲಿ ಆಗಿದೆ, ಅದರ ಹೆಸರು ಹಾಗೆಯೇ ಆಗಿದೆ. ಶ್ರಾವಕನ ಉತ್ಕೃಷ್ಟ ತ್ಯಾಗದ ಸೀಮೆಯು ಲಂಗೋಟಿ ಮಾತ್ರ ಪರಿಗ್ರಹಧಾರೀ ಐಲಕನದಿದೆ. ಇದರ ಮುಂದೆ ಶ್ರಾವಕನ ಭೇದವಿಲ್ಲ, ಮುನಿಪದವೇ ಇರುತ್ತದೆ. ಏಳನೆಯ ನೆಲೆಯಿಂದ ಹಿಡಿದು ಹನ್ನೊಂದನೇ ನೆಲೆಯವರೆಗೆ ಶ್ರಾವಕನದು ಬ್ರಹ್ಮಚರ್ಯ ಪದವಿಯಿದೆ. ಅದರ ನಂತರ ಲಂಗೋಟಿ (ಕೌಪೀನ ಮಾತ್ರ) ಪರಿಗ್ರಹದ್ದೂ ಪರಿಹಾರ ಮಾಡಿ ಯತಿಪದವಾಗುತ್ತದೆ.

ಭರತಕ್ಷೇತ್ರದ ಇಂದ್ರ, ಭರತನಾಥ, ಆದಿನಾಥರ ಹಿರಿಯ ಪುತ್ರ, ಮಹಾಧರ್ಮಾತ್ಮಾ ಭರತ ಚಕ್ರಿಯ ಮೂಲಕ ಪರಂಪರೆಯಿಂದ ಧರ್ಮದ ಮರ್ಯಾದೆಯನ್ನು ನಡೆಸುವ ಸಲುವಾಗಿ ಸ್ಥಾಪನೆ ಮಾಡಿದ ಬ್ರಹ್ಮ ಭೇದವು ಕುಲಬ್ರಹ್ಮವೆನಿಸಿಕೊಳ್ಳುತ್ತದೆ. ಈ ಅವಸರ್ಪಿಣಿಯ ಪ್ರಾರಂಭದಲ್ಲಿ ಒಂಭತ್ತು ಕೋಟಾಕೋಟಿ ಸಾಗರ ಕಾಲದವರೆಗೆ ಭೋಗಭೂಮಿಯಿತ್ತು. ಅದರಲ್ಲಿ ವರ್ಣಭೇದವಿರಲಿಲ್ಲ. ಎಲ್ಲರೂ ಒಂದೇ ರೀತಿಯಿದ್ದರು. - ಸಮಾನರಿದ್ದರು. ಅದರ ನಂತರ ಹದಿನಾಲ್ಕನೆಯ ಕುಲಂಕರ ನಾಭಿರಾಜರಾದರು. ಅವರ ಕುಲಮಂಡನ ಪುತ್ರ ಶ್ರೀ ಆದಿನಾಥರು

ಕರ್ಮಭೂಮಿಯ ಉಪದೇಶ ನೀಡುತ್ತ ಕ್ಷತ್ರಿಯ, ವೈಶ್ಯ ಮತ್ತು ಶೂದ್ರ - ಇವು ಮೂರು ವರ್ಣಗಳ ಸ್ಥಾಪನೆ ಮಾಡಿ ಸಂಸಾರ ಮಾರ್ಗವನ್ನು ತಿಳಿಸಿದರು. ಅವರ ನಂತರ ಅವರ ಪುತ್ರ ಭರತೇಶನು ಧರ್ಮದ ಪ್ರವೃತ್ತಿಯನ್ನು ನಡೆಸುವ ಸಲುವಾಗಿ ಬ್ರಾಹ್ಮಣ ಕುಲದ ಸ್ಥಾಪನೆ ಮಾಡಿದನು - ಈ ಪ್ರಕಾರ ನಾಲ್ಕು ವರ್ಣ ತಿಳಿಯುವುದು.

ಈಗ ಕಾಲದೋಷದಿಂದ ಎಲ್ಲ ಕುಲಗಳ ಆಚಾರವು ಹೀನವಾಗಿ ಹೋಗಿದೆ, -

೧. ಅದರಿಂದ ಬ್ರಹ್ಮಕ್ರಿಯೆಯು ದಯಾರಹಿತವಾಗಿ ಹೋಯಿತು. ಜೀವನು ಅನೇಕ ಕ್ರಿಯಾರೂಪ- ನಾದನು; ಆದರೆ ಕುಲಭೇದವು ಹೋಗಿಲ್ಲ. ಅನೇಕ ಪ್ರಕಾರದ ಆಚರಣೆಯಾಗಿ ಹೋದಮೇಲೆ ಕೂಡ ಕುಲಬ್ರಹ್ಮವು ಜಗತ್ತಿನಲ್ಲಿ ಪ್ರಗಟವೇ ಇದೆ.

೨. ಯಾವುದೇ ಕುಲವಿದ್ದರೂ ದಯಾಸಹಿತ ಕ್ರಿಯೆಯ ಆಚರಣೆ ಮಾಡುವಂಥವರು, ಉತ್ತಮ ಶೀಲ ಮೊದಲಾದ ಗುಣಸಹಿತರು ಕ್ರಿಯಾಬ್ರಹ್ಮರಿದ್ದಾರೆ.

೩. ಸ್ತ್ರೀ ಮೊದಲಾದ ಪರಿಗ್ರಹ ತ್ಯಾಗಿಗಳು ತ್ಯಾಗಬ್ರಹ್ಮರಿದ್ದಾರೆ.

೪. ಚೈತನ್ಯ ಗುಣಸಹಿತ ಅಮೂರ್ತಿಕ ಜೀವ ಪದಾರ್ಥವು ಸ್ವಭಾವ ಬ್ರಹ್ಮವಿದೆ.

ಇವು ನಾಲ್ಕು ಬ್ರಹ್ಮನ ಭೇದಗಳಿವೆ. ವಿವೇಕವಂತರಾದ ಉತ್ತಮ ಪುರುಷರು ಎಲ್ಲವುಗಳ ರಹಸ್ಯವನ್ನು ಧಾರಣ ಮಾಡುವುದು ಯೋಗ್ಯವಿದೆ.

ಈ ಪ್ರಕಾರ ಸುದೃಷ್ಟಿ ತರಂಗಿಣಿಯೆಂಬ ಹೆಸರಿನ ಗ್ರಂಥದಲ್ಲಿ ಕ್ರಮವಾಗಿ ಎಂಟನೆಯ ನೆಲೆಯಿಂದ
ಹನ್ನೊಂದನೆಯ ನೆಲೆಯವರೆಗಿನ ಕಥನ ಮಾಡುವಂಥ ಮೂವತ್ತೆಂಟನೆಯ
ಪರ್ವವು ಸಂಪೂರ್ಣವಾಯಿತು.

★★★★★

- ಎಷ್ಟು ಜ್ಞಾನವಿದೆ, ಅಷ್ಟು ಸುಖವಿದೆ; ಪೂರ್ಣ ಜ್ಞಾನವಿದ್ದರೆ ಪೂರ್ಣ ಸುಖವಿದೆ; ಆದಾಗ್ಯೂ ಎರಡೂ ಪರ್ಯಾಯಗಳು ಸ್ವತಂತ್ರವಿವೆ. ಜ್ಞಾನರೂಪ ಪರಿಣಮನವು ಜ್ಞಾನಗುಣದ್ದಿದೆ ಮತ್ತು ಸುಖರೂಪ ಪರಿಣಮನವು ಸುಖಗುಣದ್ದಿದೆ. ಜ್ಞಾನಗುಣವು ಸುಖರೂಪವಾಗಿ ಪರಿಣಮಿಸುವುದಿಲ್ಲ ಮತ್ತು ಸುಖಗುಣವು ಜ್ಞಾನಗುಣರೂಪದಿಂದ ಪರಿಣಮಿಸುವುದಿಲ್ಲ ಅರ್ಥಾತ್ ಯಾವುದೂ ಯಾವುದರ ಆಧೀನವಿಲ್ಲ ಇಂಥ ಸ್ವತಂತ್ರತೆಯನ್ನು ತಿಳಿಯದ ವಿನಹ ಪರಿಣತಿಯು ಸ್ವಸನ್ಮುಖವಾಗುವುದಿಲ್ಲ.
- ಯಾವ ಪ್ರಕಾರ ಆತ್ಮನಿಂದ ರಹಿತವಾದ ಶರೀರವು ಶವವಿದೆ ಮತ್ತು ಶವದ ಶೃಂಗಾರವು ನಿರರ್ಥಕವಿದೆ. ಅದೇ ಪ್ರಕಾರ ಸಮ್ಯಗ್ದರ್ಶನದಿಂದ ರಹಿತವಾದ ಜೀವದ ಜೀವನವೇ ಇಲ್ಲ. ಅದು ಶವದ ಸಮಾನವಿದೆ. ವ್ರತ ಮೊದಲಾದವುಗಳಿಂದ ಅದನ್ನು ಅಲಂಕರಿಸುವುದು ನಿರರ್ಥಕವೇ ಇದೆ. ಅದಕ್ಕಾಗಿ ಸಮ್ಯಗ್ದರ್ಶನ ಪ್ರಾಪ್ತಿಯ ಸಲುವಾಗಿ ತತ್ತ್ವಾಭ್ಯಾಸದ ಉದ್ಯಮವು ಕರ್ತವ್ಯವಿದೆ.

## ೩೯ : ಮೂವತ್ತೊಂಭತ್ತನೆಯ ಪರ್ವ
## ತೀರ್ಥಂಕರಾದಿ ಜಿನಕ್ಷೇತ್ರಗಳ ಕಥನ

ಈ ಪ್ರಕಾರ ಉಕ್ತ ಶ್ರಾವಕಧರ್ಮ ಮತ್ತು ಪೂರ್ವೋಕ್ತ ಇಪ್ಪತ್ತೆಂಟು ಮೂಲಗುಣ ಸಂಪನ್ನ ಮುನಿ ಧರ್ಮಗಳು ಪರಂಪರೆಯಿಂದ ಮೋಕ್ಷ ಫಲವನ್ನು ಪ್ರಕಟ ಪಡಿಸುತ್ತವೆ. ಇದರ ತಕ್ಷಣದ ಫಲವಂತೂ ದೇವಲೋಕದ ವಿಭೂತಿ ಸಹಿತ, ಅನೇಕ ಪ್ರಕಾರದ ಇಂದ್ರಿಯಜನಿತ ಭೋಗವಿದೆ. ಯಾರಿಗೆ ಎಷ್ಟು ಕಾಲದವರೆಗೆ ಸಂಸಾರದಲ್ಲಿ ಇರುವುದಿದೆ ಆ ಜೀವಗಳು ಅದರ ಅನುಸಾರ ಶ್ರಾವಕ ಧರ್ಮದಿಂದ ಮನುಷ್ಯನ ನಂತರ ದೇವಸುಖ ಪಡೆಯುತ್ತಾರೆ; ಅದರ ನಂತರ ಭವಸ್ಥಿತಿಯು ಪೂರ್ಣವಾದ ಮೇಲೆ ಮನುಷ್ಯರಾಗಿ ಮುನಿಧರ್ಮದ ಸಾಧನೆ ಮಾಡಿ ಮೋಕ್ಷ ಪದದ ಪ್ರಾಪ್ತಿ ಮಾಡಿಕೊಳ್ಳುತ್ತಾರೆ. ಈ ಪ್ರಕಾರ ಒಂದುವೇಳೆ ಯಾವನೋ ಭವ್ಯನಿಗೆ ಇಂದ್ರಿಯ ಸುಖದ ಲೋಭವಿದ್ದರೆ ಈ ಶ್ರಾವಕ ಧರ್ಮದ ಸಾಧನೆ ಮಾಡಬೇಕು ಮತ್ತು ಯಾವ ನಿಕಟ ಸಂಸಾರೀ ಭವ್ಯನು ಅತೀಂದ್ರಿಯ ಮೋಕ್ಷ ಸುಖವನ್ನು ಬಯಸುತ್ತಾನೆ ಅವನು ಮುನಿಧರ್ಮದ ಅಂಗೀಕಾರ ಮಾಡುವುದು. ಈ ಪ್ರಕಾರ ಈ ಮುನಿ-ಶ್ರಾವಕರ ಧರ್ಮವು ಭವ್ಯ ಜೀವರುಗಳಿಗೆ ಸದಾಕಾಲ ಮಂಗಲಕಾರಕವಿದೆ.

ಈ ಸುದೃಷ್ಟಿ ತರಂಗಿಣಿಯೆಂಬ ಹೆಸರಿನ ಗ್ರಂಥದಲ್ಲಿ ಮೊದಲಂತೂ ಜ್ಞೇಯ, ಹೇಯ, ಉಪಾದೇಯಗಳ ಕಥನ ಮಾಡಲಾಗಿದೆ. ಅದರಿಂದ ವಿವೇಕಿಗಳು ತಮ್ಮ ಹಿತವನ್ನು ತಿಳಿದುಕೊಂಡು ಹೇಯ, ಜ್ಞೇಯ, ಉಪಾದೇಯ ಮಾಡುವುದು. ಇದರಲ್ಲಿ ಸ್ವಲ್ಪ ಕಥನವು ವಿವೇಕದ ವೃದ್ಧಿಯ ಸಲುವಾಗಿ ಉಪದೇಶರೂಪವಿದೆ. ಅದರ ರಹಸ್ಯವನ್ನು ತಿಳಿದುಕೊಂಡು ಧರ್ಮಾತ್ಮರು ತಮ್ಮ ಕಲ್ಯಾಣ ಮಾಡಿಕೊಳ್ಳುವುದು.

ಈಗ ಇಲ್ಲಿ ಈ ಗ್ರಂಥದ ಕರ್ತೃಗಳು ಜೈನ ಶಾಸ್ತ್ರಗಳ ಅರ್ಥವು ಅಗಾಧವೆಂದು ತಿಳಿದುಕೊಂಡು ತಮ್ಮ ಬುದ್ಧಿಯನ್ನು ಸಾಮಾನ್ಯರೂಪವೆಂದು ತಿಳಿಯುತ್ತಿದ್ದಾರೆ. ಈ ಜಿನವಚನಗಳ ಅರ್ಥವಂತೂ ಅಪಾರವಿದೆ, ಇದರ ಸಂಪೂರ್ಣ ವ್ಯಾಖ್ಯೆ ಮಾಡುವಲ್ಲಿಯಂತೂ ಗಣಧರ ದೇವರೂ ಸಮರ್ಥರಿಲ್ಲವೆಂದ ಮೇಲೆ ನಮ್ಮಂಥ ಕಿಂಚಿತ್ ಬುದ್ಧಿ ಧನದ ಧಾರಕರಿಂದ ಸಂಪೂರ್ಣ ಅರ್ಥವನ್ನು ಹೇಗೆ ಹೇಳುವ ಸಾಧ್ಯತೆಯಿದೆ ? ಇದನ್ನು ತಿಳಿದು ಈ ಗ್ರಂಥವನ್ನು ಪೂರ್ಣ ಮಾಡುವ ಅಭಿಲಾಷೆಯಿಂದ ಕೊನೆಯಲ್ಲಿ ಮಂಗಲವಾಗುವ ಸಲುವಾಗಿ ಮಂಗಲಕಾರಕ, ಪುಣ್ಯದಲ್ಲಿ ಕಾರಣಭೂತ ತೀರ್ಥಂಕರ ಮೊದಲಾದ ಅರವತ್ಮೂರು ಶಲಾಕಾ ಮಹಾಪುರುಷರ ನಾಮ ಹಾಗೂ ಕುಲದ ಸ್ಮರಣೆ ಮಾಡುತ್ತಾರೆ -

**ಇಪ್ಪತ್ನಾಲ್ಕು ತೀರ್ಥಂಕರರ ಹೆಸರು -** ಋಷಭನಾಥ, ಅಜಿತನಾಥ, ಸಂಭವನಾಥ, ಅಭಿನಂದನನಾಥ, ಸುಮತಿನಾಥ, ಪದ್ಮಪ್ರಭ, ಸುಪಾರ್ಶ್ವನಾಥ, ಚಂದ್ರಪ್ರಭ, ಪುಷ್ಪದಂತ, ಶೀತಲನಾಥ, ಶ್ರೇಯಾಂಸನಾಥ, ವಾಸುಪೂಜ್ಯ , ವಿಮಲನಾಥ, ಅನಂತನಾಥ, ಧರ್ಮನಾಥ, ಶಾಂತಿನಾಥ, ಕುಂಥುನಾಥ, ಅರನಾಥ, ಮಲ್ಲಿನಾಥ, ಮುನಿಸುವ್ರತನಾಥ, ನಮಿನಾಥ, ನೇಮಿನಾಥ, ಪಾರ್ಶ್ವನಾಥ ಮತ್ತು ಮಹಾವೀರಸ್ವಾಮೀ - ಇವರು ಇಪ್ಪತ್ನಾಲ್ಕು ತೀರ್ಥಂಕರ ಜಿನರು ಅವಸರ್ಪಿಣಿ ಕಾಲದ ತೀರ್ಥರಿದ್ದಾರೆ.

**ಇಪ್ಪತ್ನಾಲ್ಕು ಜಿನರ ತಂದೆ (ಪಿತ)ರ ಹೆಸರು -** ನಾಭಿರಾಜ, ಜಿತಶತ್ರು , ಧ್ರುತರಾಜ, ಸ್ವಯಂವರ, ಮೇಘರಥ, ಧರಣ, ಸುಪ್ರತಿಷ್ಠ, ಮಹಾಸೇನ, ಸುಗ್ರೀವ, ಧೃತರಥ, ವಿಷ್ಣು, ವಾಸುಪೂಜ್ಯ , ಕೃತವರ್ಮಾ, ಸಿಂಹಸೇನ, ಭಾನುಸೇನ, ವಿಶ್ವಸೇನ, ಶೂರಸೇನ, ಸುದರ್ಶನ, ಕುಂಭರಾಜ, ಸುಮಿತ್ರ , ಶ್ರೀವಿಜಯ, ಸಮುದ್ರವಿಜಯ, ಅಶ್ವಸೇನ ಮತ್ತು ದೊರೆ ಸಿದ್ಧಾರ್ಥ - ಇವರು ಇಪ್ಪತ್ನಾಲ್ವರು ಪ್ರಜೆಗಳ ಪ್ರತಿಪಾಲಕ ಮಹಾನ ರಾಜೇಂದ್ರರು ತೀರ್ಥಂಕರರೂಪದ ದಿನಕರರನ್ನು ಉದಿತಗೊಳಿಸುವ ಸಲುವಾಗಿ ಉದಯಾಚಲ ಪರ್ವತದ ಸಮಾನ ತಿಳಿಯುವುದು.

**ಇಪ್ಪತ್ನಾಲ್ಕು ಜಿನರ ತಾಯಿ-ಮಾತೆಯರ ಹೆಸರು -** ಮರುದೇವಿ, ವಿಜಯಾದೇವಿ, ಶ್ರೀಷೇಣದೇವಿ, ಸಿದ್ಧಾರ್ಥಾದೇವಿ, ಮಂಗಲಾದೇವಿ, ಸುಶೀಮಾದೇವಿ, ಪೃಥ್ವಿದೇವಿ, ಲಕ್ಷ್ಮಣಾದೇವಿ, ರಾಮೀದೇವಿ, ಸುನಂದಾದೇವಿ, ವಿಮಲಾದೇವಿ, ಜಯಾದೇವಿ, ರಾಮಾದೇವಿ, ಸೂರ್ಯಾದೇವಿ, ಸುವ್ರತಾದೇವಿ, ಐರಾದೇವಿ, ಶ್ರೀಮತೀದೇವಿ, ಸುಮಿತ್ರಾದೇವಿ, ಸರಸ್ವತೀದೇವಿ, ಮಹಾಪದ್ಮದೇವಿ, ವಿಪ್ರಾದೇವಿ, ಶಿವಾದೇವಿ, ವಾಮಾದೇವಿ ಮತ್ತು ತ್ರಿಶಲಾದೇವಿ - ಇವರು ಇಪ್ಪತ್ನಾಲ್ವರು ಮಹಾದೇವಿಯರು, ಪರಮಪವಿತ್ರ ಜಗತ್ ಗುರುವಿನ ಮಾತೆಯರಿರುವುದರಿಂದ ಜಗತ್ತಿನ ಮಾತೆಯರಿದ್ದಾರೆ, ಮಹಾಸತಿಯರಿದ್ದು ಭಗವಂತರೂಪದ ಸೂರ್ಯನಿಗೆ ಜನ್ಮವೀಯುವ ಸಲುವಾಗಿ ಪೂರ್ವ ದಿಕ್ಕಿನ ಸಮಾನರಿದ್ದಾರೆ ಜಗತ್ಪತಿ ಭಗವಂತರ ರೂಪದ ರತ್ನಕ್ಕೆ ಜನ್ಮವೀಯುವ ಸಲುವಾಗಿ ರತ್ನದ ಗಣಿಯಿದ್ದಾರೆ. ಇಪ್ಪತ್ನಾಲ್ಕು ಜಿನರ ಮಾತೆಯರ ನಾಮಗಳು ಭವ್ಯರಿಗೆ ಮಂಗಲವನ್ನುಂಟುಮಾಡಲಿ.

**ಇಪ್ಪತ್ನಾಲ್ಕು ಜಿನರ ಕಾಯದ ಎತ್ತರ -** ಐನೂರು ಧನುಷ್ಯ, ನಾಲ್ಕೂವರೆನೂರು, ನಾಲ್ಕುನೂರು, ಮೂರುವರೆ ನೂರು, ಮುನ್ನೂರು, ಎರಡೂವರೆನೂರು, ಎರಡುನೂರು, ಒಂದುನೂರೈವತ್ತು, ಒಂದು ನೂರು, ತೊಂಬತ್ತು, ಎಂಭತ್ತು, ಎಪ್ಪತ್ತು, ಅರವತ್ತು, ಐವತ್ತು, ನಲವತ್ತೈದು, ನಲವತ್ತು, ಮೂವತ್ತೈದು, ಮೂವತ್ತು, ಇಪ್ಪತ್ತೈದು, ಇಪ್ಪತ್ತು, ಹದಿನೈದು, ಹತ್ತು ಧನುಷ್ಯ, ಒಂಭತ್ತು ಮೊಳ, ಏಳು ಮೊಳ - ಹೀಗೆ ಕ್ರಮದಿಂದ ಇಪ್ಪತ್ನಾಲ್ವರು ಜಿನರ ಶರೀರದ ಎತ್ತರವಿದೆ.

**ಇಪ್ಪತ್ನಾಲ್ವರು ಜಿನರ ಪ್ರತಿಬಿಂಬ ಗುರುತಿಸುವ ಸಲುವಾಗಿ ಚಿಹ್ನೆಗಳು -** ಆದಿನಾಥರದು ಎತ್ತು ಚಿಹ್ನೆಯಿದೆ. ಅನ್ಯ ಜಿನರ ಚಿಹ್ನೆಗಳು ಕ್ರಮದಿಂದ ಈ ಪ್ರಕಾರವಿವೆ - ಆನೆ, ಕುದುರೆ, ಕೋತಿ, ಚಕ್ರವಾಕ ಪಕ್ಷಿ, ಕೆಂಪು ಕಮಲ, ಸ್ವಸ್ತಿಕ, ಚಂದ್ರಮ, ಮೊಸಳೆ, ಕಲ್ಪವೃಕ್ಷ, ಖಡ್ಗಮೃಗ (ಗೇಂಡಾ), ಕೋಣ, ಸೂಕರ, ಮುಳ್ಳುಹಂದಿ, ವಜ್ರದಂಡ, ಜಿಂಕೆ, ಮೇಕೆ, ಮೀನು, ಕಲಶ, ಆಮೆ, ಕಮಲ, ಶಂಖ, ಸರ್ಪ ಮತ್ತು ಸಿಂಹ - ಇವು ಇಪ್ಪತ್ನಾಲ್ಕು ಜಿನರ ಚಿಹ್ನೆಗಳಿವೆ. ಜಿನರ ಶರೀರದ ಅಂಗ-ಉಪಾಂಗಗಳಲ್ಲಿ ಯಥಾಯೋಗ್ಯ ಸ್ಥಾನದ ಮೇಲೆ ಒಂದು ಸಾವಿರದೆಂಟು ಚಿಹ್ನೆಗಳಿರುತ್ತವೆ. ಆದರೆ ಈ ಯಾವ ಚಿಹ್ನೆಯು ಪ್ರತಿಬಂಬದ ಸಿಂಹಾಸನದ ಮೇಲೆ ಮಾಡಲಾಗಿರುತ್ತವೆ ಅವು ಭಗವಂತರ ಬಲಗಾಲಿನ ಚರಣ (ಅಂಗಾಲಿನಲ್ಲಿ) ಇರುವಂಥವಿವೆ. ಹೇಗೆಂದರೆ ಆದಿದೇವರ ಚರಣದಲ್ಲಿ ವೃಷಭದ ಚಿಹ್ನೆಯಿತ್ತು. ಅದೇ ಪ್ರಕಾರ ಎಲ್ಲ ಜಿನರ ಚರಣಗಳಲ್ಲಿ ಕ್ರಮದಿಂದ ಮೇಲೆ ಹೇಳಿದ ಚಿಹ್ನೆಗಳಿರುತ್ತವೆ.

**ಇಪ್ಪತ್ನಾಲ್ಕು ಜಿನರ ಶರೀರದ ವರ್ಣ -** ಚಂದ್ರಪ್ರಭ ಮತ್ತು ಪುಷ್ಪದಂತ - ಇವರಿಬ್ಬರು ಜಿನರದು ಶುಕ್ಲವರ್ಣ, ಮುನಿಸುವ್ರತ ಸ್ವಾಮಿಯದು ಅಂಜನಗಿರಿಯ ಸಮಾನ ಶ್ಯಾಮವರ್ಣ, ನೇಮಿನಾಥ ಜಿನರ ಶರೀರವು ಮಯೂರ ಕಂಠದ ಸಮಾನ ಹರಿತ, ಪದ್ಮಪ್ರಭರ ಶರೀರವು ರಕ್ತಕಮಲದ ಸಮಾನ, ಹನ್ನೆರಡನೆಯ ವಾಸುಪೂಜ್ಯ ಜಿನರ ಶರೀರವು ಮುತ್ತಳ ಗಿಡದ ಹೂವಿನ ಸಮಾನ, ಸುಪಾರ್ಶ್ವನಾಥರ ಕಾಯವು ವೈಢೂರ್ಯಮಣಿಯ ಸಮಾನ ಹರಿತ ವರ್ಣ, ಪಾರ್ಶ್ವನಾಥ ಜಿನರ ಕಾಯವು ಸಜಲ ಮೇಘಘಟದ ಸಮಾನ ಶ್ಯಾಮವರ್ಣದ್ದು ಮತ್ತು ಉಳಿದ ಹದಿನಾರು ಜಿನರ ಶರೀರಗಳು ಕಾಯ್ದ ಕಾರ್ತಸ್ವರದಂತೆ ವರ್ಣವುಳ್ಳವಿವೆ.

**ಇವರುಗಳ ಪೂರ್ವಭವದ ಮನುಷ್ಯ ಜೀವನದ ಹೆಸರು -** ವೃಷಭದೇವರು ಪೂರ್ವ ಭವದಲ್ಲಿ ವಜ್ರನಾಭಿ ಚಕ್ರವರ್ತಿಯಿದ್ದರು. ಶೇಷ ಜಿನರ ಪೂರ್ವ ಭವದ ಹೆಸರುಗಳು ಕ್ರಮದಿಂದ - ವಿಮಲರಾಜ, ವಿಮಲವಾಹನ, ಮಹಾಬಲಭೂಪ, ಅತಿಬಲ, ಅಪರಾಜಿತ, ನಂದಸೇನ ದೊರೆ, ಪದ್ಮ, ಮಹಾಪದ್ಮ, ಪದ್ಮಗುಲ್ಮ, ನೀಲಗುಲ್ಮ, ಪದ್ಮೋತ್ತರ, ಪದ್ಮಾಸನ, ಪದ್ಮ, ದಶರಥ, ಮೇಘರಥ, ಸಿಂಹರಥ, ಧನಪತಿ, ವೈಶ್ರವಣ, ಶ್ರೀಧರ್ಮ, ಸಿದ್ಧಾರ್ಥ, ಸುಪ್ರತಿಷ್ಠಿತ, ಆನಂದರಾಯ ಮತ್ತು ಅಂತಿಮ ಜಿನ ಮಹಾವೀರರು ಪೂರ್ವಭವದಲ್ಲಿ ನಂದರಾಜನಿದ್ದರು. ಇವರೆಲ್ಲ ರಾಜರೊಳಗಿಂದ ಆದಿದೇವರ ಜೀವನಂತೂ ಚಕ್ರವರ್ತಿಯಿದ್ದನು ಮತ್ತು ಉಳಿದೆಲ್ಲ ಇಪ್ಪತ್ಮೂರು ದೊರೆಗಳು

ಮಹಾಮಂಡಲೇಶ್ವರರಿದ್ದರು. ಕೆಲ ಸಮಯ ರಾಜ್ಯ ನಡೆಸಿದ ನಂತರ ಸಂಸಾರದಿಂದ ವಿರಕ್ತರಾಗಿ, ರಾಜ್ಯದ ತ್ಯಾಗ ಮಾಡಿ ದೀಕ್ಷೆ ಧಾರಣ ಮಾಡಿದರು.

**ಇಪ್ಪತ್ನಾಲ್ವರು ಜಿನರ ಪೂರ್ವ ಭವದ ದೀಕ್ಷಾಗುರು ಆಚಾರ್ಯರ ಹೆಸರು** - ವಜ್ರನಾಭಿ ಚಕ್ರವರ್ತಿಯು ವಜ್ರಸೇನ ಆಚಾರ್ಯರಿಂದ ದೀಕ್ಷೆ ತಗೆದುಕೊಂಡನು. ವಿಮಲರಾಜ ಮೊದಲಾದವರ ಗುರುಗಳು ಕ್ರಮದಿಂದ - ಅರಿದಮನ ನಾಮದ ಆಚಾರ್ಯ, ಸ್ವಯಂಪ್ರಭ ಮುನಿ, ವಿಮಲವಾಹನ ಯತಿ, ಶ್ರೀಮಂದಿರಗುರು, ಪಿಹಿತಾಶ್ರವ ಯತಿ, ಅರಿಂದಾವಯತಿ, ಯುಗಮಂಧರ ಋಷೀಶ್ವರ, ಸರ್ವಜನಾನಂದ ಋಷಿ, ಉಭಯಾನಂದ ಯೋಗಿ, ವಜ್ರದಂತ ಯೋಗೀಶ್ವರ, ವಜ್ರನಾಭಿ ಗುರುವರ್ಯ, ಸರ್ವಗುಪ್ತ ವೀತರಾಗ, ತ್ರಿಗುಪ್ತ ತಪಸ್ವೀ, ಚಿತಾರಕ್ಷಕ ಗುರು, ವಿಮಲವಾಹನ ಗುರುದೇವ, ಧನರಥ ಮುನಿ, ಸಂವರ ಯತಿ, ವರಧರ್ಮ ಋಷಿ, ಸುನಂದಗುರು, ಆನಂದಯೋಗಿ, ವೀತಶೋಕ ಆಚಾರ್ಯ, ದಾಮರ ನಾಮದ ಮುನಿ, ಪ್ರೋಷ್ಠಿಲ ಯತಿ - ಈ ಇಪ್ಪತ್ನಾಲ್ವರು ಯತೀಶ್ವರರು ಜಗತ್ಪೂಜ್ಯರಿದ್ದಾರೆ ಏಕೆಂದರೆ ಇವರ ಹತ್ತಿರ ಪೂರ್ವ ಭವದಲ್ಲಿ ಇಪ್ಪತ್ನಾಲ್ವರು ಜಿನರ ಜೀವರುಗಳು ದೀಕ್ಷೆ ಧಾರಣ ಮಾಡಿದ್ದರು, ಅದರಿಂದ ಈ ಯತಿಗಳೆಲ್ಲರೂ ಜಗತ್ಪೂಜ್ಯರಿದ್ದಾರೆ.

**ಮುನಿಯಾಗಿ ಯಾರು ಯಾವ ಸ್ವರ್ಗದೊಳಗೆ ಹೋದರು ಮತ್ತು ಅಲ್ಲಿಂದ ಬಂದು ತೀರ್ಥಂಕರ ರಾದರು ಎಂಬುದನ್ನು ಈಗ ಹೇಳುತ್ತಾರೆ. ಎಂದರೆ ತೀರ್ಥಂಕರರಾಗುವ ಪೂರ್ವದ ದೇವ ಭವಗಳು** - ಆದಿನಾಥ, ಧರ್ಮನಾಥ, ಶಾಂತಿನಾಥ, ಕುಂಥುನಾಥ - ಇವರು ನಾಲ್ವರು ಜಿನರು ಸರ್ವಾರ್ಥಸಿದ್ಧಿಯಿಂದ ಬಂದಿದ್ದರು. ಅಭಿನಂದನನಾಥರು ವಿಜಯ ವಿಮಾನದಿಂದ ಬಂದಿದ್ದರು, ಅಜಿತನಾಥರು ಮತ್ತು ಚಂದ್ರಪ್ರಭ ಜಿನರು ವೈಜಯಂತ ವಿಮಾನದಿಂದ ಬಂದಿದ್ದರು. ಸುಮತಿನಾಥ, ನೇಮಿನಾಥ, ಅರನಾಥ ಇವರು ಮೂವರು ಜಿನರು ಜಯಂತ ವಿಮಾನದಿಂದ ಬಂದಿದ್ದರು. ನೇಮಿನಾಥರು ಮತ್ತು ಮಲ್ಲಿನಾಥ ಜಿನರು ಅಪರಾಜಿತ ವಿಮಾನದಿಂದ ಬಂದಿದ್ದರು. ಇವಂತೂ ಐದು ಅನುತ್ತರಗಳಿಂದ ಬಂದಿರುವ ಜಿನರ ಹೆಸರುಗಳಿವೆ. ಪುಷ್ಪದಂತರು ಆರಣವೆಂಬ ಹೆಸರಿನ ಹದಿನೈದನೇ ಸ್ವರ್ಗದಿಂದ ಬಂದಿದ್ದರು. ಶೀತಲನಾಥರು ಅಚ್ಯುತ ಸ್ವರ್ಗದಿಂದ ಬಂದಿದ್ದರು. ಮುನಿಸುವ್ರತ ಮತ್ತು ಪಾರ್ಶ್ವನಾಥರು ಹದಿನಾಲ್ಕನೇ ಪ್ರಾಣತಸ್ವರ್ಗದಿಂದ ಬಂದಿದ್ದರು. ಶ್ರೇಯಾಂಸನಾಥ, ವಿಮಲನಾಥ, ಅನಂತನಾಥ ಮತ್ತು ಮಹಾವೀರ ಜಿನರು ಹನ್ನೆರಡನೇ ಸ್ವರ್ಗದಿಂದ ಬಂದಿದ್ದರು. ಸಂಭವನಾಥ, ಸುಪಾರ್ಶ್ವನಾಥ ಮತ್ತು ಪದ್ಮಪ್ರಭ ಜಿನರು ಗ್ರೈವೇಯಕದಿಂದ ಬಂದಿದ್ದರು. ವಾಸುಪೂಜ್ಯ ಜಿನರು ಮಹಾಶುಕ್ರವೆಂಬ ಹೆಸರಿನ ಹತ್ತನೆಯ ಸ್ವರ್ಗದಿಂದ ಬಂದಿದ್ದರು. ಹೀಗೆ ಇಪ್ಪತ್ನಾಲ್ವರು ಜಿನರು ದೇವಗತಿಯಿಂದ ಬಂದಿರುವ ಸ್ಥಾನಗಳಿವೆ.

**ಇಪ್ಪತ್ನಾಲ್ಕು ಜಿನರ ಜನ್ಮಪುರಿಗಳು** - ಅನುಕ್ರಮದಿಂದ - ಅಯೋಧ್ಯಾಪುರಿ, ಅಯೋಧ್ಯಾಪುರಿ, ಶ್ರಾವಸ್ತೀಪುರಿ, ಅಯೋಧ್ಯಾಪುರಿ, ಅಯೋಧ್ಯಾಪುರಿ, ಕೌಶಾಂಬೀಪುರಿ, ಕಾಶೀಪುರಿ, ಚಂದ್ರಪುರಿ, ಕಿಷ್ಕಿಂಧಾಪುರಿ, ಭದ್ರಶಾಲಪುರಿ, ಸಿಂಹಪುರಿ, ಚಂಪಾಪುರಿ, ಕಂಪಿಲಾಪುರಿ, ಅಯೋಧ್ಯಾಪುರಿ, ರತ್ನಪುರಿ, ಹಸ್ತಿನಾಪುರಿ, ಹಸ್ತಿನಾಪುರಿ, ಹಸ್ತಿನಾಪುರಿ, ಮಿಥಿಲಾಪುರಿ, ಕುಶಾಗ್ರಪುರಿ, ಮಿಥಿಲಾಪುರಿ, ಶೌರ್ಯಪುರ, ವಾರಾಣಸೀ ಮತ್ತು ಕುಂಡಲಪುರ.

**ಅನುಕ್ರಮದಿಂದ ಜನ್ಮದ ನಕ್ಷತ್ರಗಳು** - ಉತ್ತರಾಷಾಢದಲ್ಲಿ ವೃಷಭನಾಥರ ಜನ್ಮ; ಅನ್ಯ ಜಿನರದು ಕ್ರಮದಿಂದ - ರೋಹಿಣಿ, ಜೇಷ್ಠಾ, ಪುನರ್ವಸು, ಮಘಾ, ಚಿತ್ರಾ, ವಿಶಾಖಾ, ಅನುರಾಧಾ, ಮೂಲ, ಪೂರ್ವಾಷಾಢ, ಶ್ರವಣ, ಶತಭಿಷಾ, ಉತ್ತರಾಭಾದ್ರಪದಾ, ರೇವತಿ, ಪುಷ್ಯ, ಭರಣಿ, ಕೃತ್ತಿಕಾ, ರೋಹಣಿ, ಅಶ್ವಿನಿ, ಶ್ರವಣ, ಅಶ್ವಿನಿ, ಚಿತ್ರಾ, ವಿಶಾಖಾ ಮತ್ತು ಉತ್ತರಾಫಾಲ್ಗುಣಿ.

**ದೀಕ್ಷಾ ವೃಕ್ಷಗಳು** - ವೃಷಭದೇವರ ದೀಕ್ಷಾ ವೃಕ್ಷವು ವಟ; ಅನ್ಯ ಜಿನರದು ಕ್ರಮದಿಂದ - ಸಪ್ತಚ್ಛದ, ಶಾಲ,

ಸರಲ, ಪ್ರಿಯಂಗು, ಪಿಯಂಗು, ಸಿರೀಷವೃಕ್ಷ, ನಾಗ, ಸಾಲಿ, ಶಾಲ, ಬಿಂದುಕ, ಜಯಪ್ರಿಯ, ಜಂಬು, ಪಿಂಪಲ, ದಧಿಪರ್ಣ, ನಂದ, ತಿಲಕ, ಆಮ್ರ, ಅಶೋಕ, ಚಂಪಕ, ಮೌಲಶ್ರೀ, ಮೇಷಪರ್ಣ, ಧವ, ಭವ ಮತ್ತು ಶಾಲ.

**ನಿರ್ವಾಣ ಸಮಯದ ನಕ್ಷತ್ರ** - ಸುಪಾರ್ಶ್ವನಾಥರದು ಅನುರಾಧ, ಚಂದ್ರಪ್ರಭರದು ಜೇಷ್ಠಾ, ವಾಸುಪೂಜ್ಯರದು ಅಶ್ವಿನಿ, ವಿಮಲನಾಥರದು ಭರಣಿ, ಮಹಾವೀರರದು ಸ್ವಾತಿ, ಇವು ಐವರು ಜಿನರ ನಿರ್ವಾಣ ನಕ್ಷತ್ರಗಳಿವೆ. ಉಳಿದವರ ನಿರ್ವಾಣ ನಕ್ಷತ್ರ ಮತ್ತು ಜನ್ಮ ನಕ್ಷತ್ರಗಳು ಒಂದೇ ಇವೆ.

ಇವರು ಇಪ್ಪತ್ನಾಲ್ವರು ಜಿನರೊಳಗಿಂದ ಶಾಂತಿನಾಥ, ಕುಂಥುನಾಥ ಮತ್ತು ಅರಹನಾಥರು - ಮೂವರು ಜಿನರು ಷಟ್ಖಂಡನಾಥ ಚಕ್ರವರ್ತಿಗಳಾದರು. ಉಳಿದ ತೀರ್ಥಂಕರರೆಲ್ಲರು ಮಹಾಮಂಡಲೇಶ್ವರ ದೊರೆಗಳಾದರು ನಂತರದಲ್ಲಿ ದೀಕ್ಷೆ ಧಾರಣ ಮಾಡಿ ನಿರ್ವಾಣ ಪಡೆದರು. ವಾಸುಪೂಜ್ಯ, ಮಲ್ಲಿನಾಥ ನೇಮಿನಾಥ ಪಾರ್ಶ್ವನಾಥ ಮತ್ತು ಮಹಾವೀರ - ಇವರು ಐವರು ಜಿನರು ಕುಮಾರಾವಸ್ಥೆಯಲ್ಲಿ ಬಾಲಬ್ರಹ್ಮಚಾರಿಯಾಗಿ ದೀಕ್ಷಿತರಾದರು. ಇವರು ವಿವಾಹವಾಗಲಿಲ್ಲ ಮತ್ತು ರಾಜ್ಯ ನಡೆಸಲಿಲ್ಲ. ತಂದೆಯ ವಿದ್ಯಮಾನತೆಯಲ್ಲಿ ಕುಮಾರ ರೂಪದಲ್ಲಿಯೇ ಮುನಿಯಾದರು. ಉಳಿದ ಎಲ್ಲರು ಜಿನರಾಜರು ಭೋಗಸಂಪದವನ್ನು ಭೋಗಿಸಿ ಯತಿಪತಿಗಳಾದರು.

**ತಪಕಲ್ಯಾಣಕದ ಸ್ಥಾನಗಳು** - ವೃಷಭನಾಥರ ತಪಕಲ್ಯಾಣಕವು ವಿನೀತಾಪುರಿಯಲ್ಲಿ, ನೇಮಿನಾಥರ ತಪಕಲ್ಯಾಣಕವು ದ್ವಾರಿಕಾಪುರಿಯಲ್ಲಿ ಮತ್ತು ಉಳಿದ ಎಲ್ಲರದು ತಮ್ಮ - ತಮ್ಮ ಜನ್ಮನಗರಿಯಲ್ಲಿ ಆಯಿತು.

**ದೀಕ್ಷೋಪವಾಸದ ನಂತರ ಪಾರಣೆ** - ವೃಷಭನಾಥ ಜಿನರದು ದೀಕ್ಷೆಯ ಹದಿಮೂರು ತಿಂಗಳು ಮತ್ತು ಎಂಟು ದಿನದ ನಂತರ ಪಾರಣೆಯಾಯಿತು. ಮಲ್ಲಿನಾಥ ಮತ್ತು ಪಾರ್ಶ್ವನಾಥ ಇವರಿಬ್ಬರು ಜಿನರು ದೀಕ್ಷೆಯ ನಂತರ ಮೂರು ದಿನ ಉಪವಾಸದ ನಿಯಮ ತಗೆದುಕೊಂಡಿದ್ದರು. ವಾಸುಪೂಜ್ಯ ಜಿನರು ಏಕಂತರದ ಉಪವಾಸ ಮಾಡಿದ್ದರು. ಉಳಿದೆಲ್ಲ ಜಿನರು ಎರಡು ದಿನ ಉಪವಾಸ ಮಾಡಿದ ಮೇಲೆ ಪಾರಣೆ ಮಾಡಿದ್ದರು.

**ದೀಕ್ಷೆಯ ಸಮಯ** - ಶ್ರೇಯಾಂಸನಾಥ, ಸುಮತಿನಾಥ, ಮಲ್ಲಿನಾಥ - ಇವರು ಮೂವರು ಜಿನರು ಪೂರ್ವಾಹ್ನ ಸಮಯದಲ್ಲಿ ದೀಕ್ಷೆ ಧಾರಣ ಮಾಡಿದ್ದರು. ಉಳಿದವರೆಲ್ಲರು ಅಪರಾಹ್ನ ಸಂಧ್ಯಾಸಮಯದಲ್ಲಿ ದೀಕ್ಷಿತರಾದರು.

**ಇಪ್ಪತ್ನಾಲ್ವರು ಜಿನರ ದೀಕ್ಷಾವನ** - ವೃಷಭನಾಥರು ಸಿದ್ಧಾರ್ಥ ವನದಲ್ಲಿ ದಿಗಂಬರರಾದರು. ಮಹಾವೀರರು ಜ್ಞಾನವನದಲ್ಲಿ ಯತಿಯಾದರು. ವಾಸುಪೂಜ್ಯರು ಕ್ರೋಡೋದ್ಯಾನವೆಂಬ ಹೆಸರಿನ ವನದಲ್ಲಿ ಮುನಿಪದ ಧಾರಣ ಮಾಡಿದರು. ಧರ್ಮನಾಥರು ವಪ್ರಕಾವನದಲ್ಲಿ ಯತಿಯಾದರು. ಪಾರ್ಶ್ವನಾಥರು ಮನೋರಮಾ ಉದ್ಯಾನದಲ್ಲಿ ಪರಿಗ್ರಹದ ತ್ಯಾಗ ಮಾಡಿದರು. ಮುನಿಸುವ್ರತ ಜಿನರು ನೀಲಗುಹೆಯ ನಿಕಟ ನಿರ್ಗ್ರಂಥರಾದರು. ಉಳಿದೆಲ್ಲ ಜಿನರು ತಮ್ಮ-ತಮ್ಮ ನಗರದ ಹತ್ತಿರ ಆಮ್ರವನದಲ್ಲಿ ಯೋಗೀಶ್ವರರಾದರು.

ಇಪ್ಪತ್ನಾಲ್ವರು ಜಿನರು ತಪದ ಸಲುವಾಗಿ ಗಮನ ಮಾಡುವ ಸಮಯದ ಪಲ್ಲಕ್ಕಿಗಳ ಹೆಸರು ಅನುಕ್ರಮದಿಂದ - ಸುದರ್ಶನಾ, ಸುಪ್ರಭಾಸ, ಸಿದ್ಧಾರ್ಥಾ, ಕಮಲಾಭಾ, ಅರ್ಥಸಿದ್ಧಾ, ಅಭಯಂಕರಿ, ನಿರ್ವೃತ್ತಿಕರಿ, ಮನೋರಮಾ, ಮನೋಹರಾ, ಸೂರ್ಯಪ್ರಭಾ, ವಿಮಲಪ್ರಭಾ, ಪುಷ್ಪಪ್ರಭಾ, ದೇವದತ್ತಾ, ಸಾಗರದತ್ತಾ, ನಾಗದತ್ತಾ, ಸಿದಾರ್ಥಕಾ, ವಿಜಯಾ, ವೈಜಯಂತಿ, ಜಯಂತಿ, ಅಪರಾಜಿತಾ, ಉತ್ತರಕುರು, ದೇವಕುರು, ವಿಮಲಾಭಾ, ಮತ್ತು ಚಂದ್ರಭಾ - ಇವು ಇಪ್ಪತ್ನಾಲ್ಕು ಜಿನರ ತಪ ಸಮಯದ ಪಲ್ಲಕ್ಕಿಗಳು ಇಂದ್ರಕೃತವಿರುತ್ತವೆ.

ಕ್ರಮದಿಂದ ಇಪ್ಪತ್ನಾಲ್ಕು ಜಿನರ ದೀಕ್ಷಾ ತಿಥಿ - ಚೈತ್ರವದ್ಯ ನವಮಿ, ಮಾಘಶುದ್ಧ ನವಮಿ, ಮಾರ್ಗಶೀರ್ಷ ಶುದ್ಧ ಪೌರ್ಣಿಮೆ, ಮಾಘ ಶುದ್ಧ ದ್ವಾದಶಿ, ವೈಶಾಖ ಶುದ್ಧ ನವಮಿ, ಕಾರ್ತಿಕ ವದ್ಯ ತ್ರಯೋದಶಿ, ಜೇಷ್ಠ ಶುದ್ಧ ದ್ವಾದಶಿ, ಪೌಷವದ್ಯ ಏಕಾದಶಿ, ಮಾರ್ಗಶೀರ್ಷ ಶುದ್ಧ ಪ್ರತಿಪದೆ, ಮಾಘ ವದ್ಯದ್ವಾದಶಿ, ಫಾಲ್ಗುಣ ವದ್ಯ

ತ್ರಯೋದಶಿ, ಫಾಲ್ಗುಣ ವದ್ಯ ಚತುದರ್ಶಿ, ಮಾಘ ಶುದ್ಧ ಚತುರ್ದಶಿ, ಜೇಷ್ಠ ವದ್ಯ ದ್ವಾದಶಿ, ಮಾಘ ಶುದ್ಧ ತ್ರಯೋದಶಿ, ಜೇಷ್ಠ ವದ್ಯ ಚತುರ್ದಶಿ, ವೈಶಾಖ ಶುದ್ಧ ಪ್ರತಿಪದೆ, ಮಾರ್ಗಶೀರ್ಷ ಶುದ್ಧ ದಶಮಿ, ಮಾರ್ಗಶೀರ್ಷ ಶುದ್ಧ ಏಕಾದಶಿ, ವೈಶಾಖ ವದ್ಯ ನವಮಿ, ಆಷಾಢ ವದ್ಯ ದಶಮಿ, ಶ್ರಾವಣ ಶುದ್ಧ ಷಷ್ಠಿ, ಪೌಷ ವದ್ಯ ಏಕಾದಶಿ ಮತ್ತು ಮಾರ್ಗಶೀರ್ಷ ವದ್ಯ ದಶಮಿ.

ಅನುಕ್ರಮದಿಂದ ಇಪ್ಪತ್ನಾಲ್ಕು ಜಿನರ ಕೇವಲಜ್ಞಾನದ ದಿನ - ಫಾಲ್ಗುಣ ವದ್ಯ ಏಕಾದಶಿ, ಪೌಷ ಶುದ್ಧ ಏಕಾದಶಿ, ಕಾರ್ತಿಕವದ್ಯ ಚತುರ್ಥಿ, ಪೌಷ ಶುದ್ಧ ಚತುರ್ದಶಿ, ಚೈತ್ರ ಶುದ್ಧ ಚತುರ್ದಶಿ, ಚೈತ್ರ ಶುದ್ಧ ಪೌರ್ಣಿಮೆ, ಫಾಲ್ಗುಣ ವದ್ಯ ಷಷ್ಠಿ, ಫಾಲ್ಗುಣ ವದ್ಯ ಸಪ್ತಮಿ, ಕಾರ್ತಿಕವದ್ಯ ಚತುರ್ದಶಿ, ಪೌಷವದ್ಯ ಚತುರ್ದಶಿ, ಮಾಘ ವದ್ಯ ಅಮವಾಸ್ಯೆ, ಮಾಘ ಶುದ್ಧ ದ್ವಿತಿಯೆ, ಮಾಘ ಶುದ್ಧ ಷಷ್ಠಿ, ಚೈತ್ರ ವದ್ಯ ಅಮಾವಾಸ್ಯೆ, ಪೌಷ ಶುದ್ಧ ಪೌರ್ಣಿಮೆ, ಪೌಷ ಶುದ್ಧ ದಶಮಿ, ಚೈತ್ರ ಶುದ್ಧ ತೃತಿಯೆ, ಕಾರ್ತಿಕ ಶುದ್ಧ ದ್ವಾದಶಿ, ಪೌಷ ವದ್ಯ ದ್ವಿತೀಯೆ, ವೈಶಾಖ ವದ್ಯ ನವಮಿ, ಮಾರ್ಗಶಿರ್ಷ ವದ್ಯ ಏಕಾದಶಿ, ಆಶ್ವಿನ ಶುದ್ಧ ಪ್ರತಿಪದೆ, ಚೈತ್ರ ವದ್ಯ ಅಮಾವಾಸ್ಯೆ ಮತ್ತು ವೈಶಾಖ ಶುದ್ಧ ದಶಮಿ - ಇವು ಇಪ್ಪತ್ನಾಲ್ಕು ಜಿನರ ಕೇವಲಜ್ಞಾನದ ತಿಥಿಗಳಿವೆ.

ಅನುಕ್ರಮದಿಂದ ಇಪ್ಪತ್ನಾಲ್ಕು ಜಿನರ ನಿರ್ವಾಣ ದಿನಗಳು - ಮಾಘವದ್ಯ ಚತುರ್ದಶಿ, ಚೈತ್ರ ಶುದ್ಧ ಪಂಚಮಿ, ಚೈತ್ರ ಶುದ್ಧ ಷಷ್ಠಿ, ವೈಶಾಖ ಶುದ್ಧ ಷಷ್ಠಿ, ಚೈತ್ರ ಶುದ್ಧ ಏಕಾದಶಿ, ಫಾಲ್ಗುಣ ವದ್ಯ ಚತುರ್ಥಿ, ಫಾಲ್ಗುಣ ವದ್ಯ ದ್ವಿತೀಯೆ, ಫಾಲ್ಗುಣ ಶುದ್ಧ ಸಪ್ತಮಿ, ಭಾದ್ರಪದ ವದ್ಯ ಅಷ್ಟಮಿ, ಆಶ್ವಿನ ಶುದ್ಧ ಅಷ್ಟಮಿ, ಶ್ರಾವಣ ಶುದ್ಧ ಪೌರ್ಣಿಮೆ, ಭಾದ್ರಪದ ಶುದ್ಧ ಚತುರ್ದಶಿ, ಆಷಾಢ ವದ್ಯ ಅಷ್ಟಮಿ, ಚೈತ್ರ ವದ್ಯ ಅಮಾವಾಸ್ಯೆ, ಜೇಷ್ಠ ವದ್ಯ ಚತುರ್ಥಿ, ಜೇಷ್ಠ ವದ್ಯ ಚತುರ್ದಶಿ, ವೈಶಾಖ ಶುದ್ಧ ಪ್ರತಿಪದೆ, ಚೈತ್ರವದ್ಯ ಅಮಾವಾಸ್ಯೆ, ಫಾಲ್ಗುಣ ಶುದ್ಧ ಪಂಚಮಿ, ಫಾಲ್ಗುಣ ವದ್ಯ ದ್ವಾದಶಿ, ವೈಶಾಖ ವದ್ಯ ಚತುರ್ದಶಿ, ಆಷಾಢ ಶುದ್ಧ ಅಷ್ಟಮಿ, ಶ್ರಾವಣ ಶುದ್ಧ ಸಪ್ತಮಿ ಮತ್ತು ಕಾರ್ತಿಕ ವದ್ಯ ಅಮಾವಾಸ್ಯೆ - ಇವು ಇಪ್ಪತ್ನಾಲ್ಕು ಜಿನರ ನಿರ್ವಾಣ ದಿನಗಳಿವೆ.

ತಪ, ಜ್ಞಾನ, ನಿರ್ವಾಣ - ಇವು ಮೂರು ಕಲ್ಯಾಣಕಗಳು ವೀತರಾಗ ದಶೆಯವಿವೆ. ಮೊದಲಿನ ಎರಡು ಕಲ್ಯಾಣಕಗಳು ಸರಾಗ ಅವಸ್ಥೆಯಿವೆ. ಅವುಗಳೊಳಗಿನ ಗರ್ಭಕಲ್ಯಾಣಕ ಪರೋಕ್ಷ ಸರಾಗ ಉತ್ಸವವಿದೆ ಮತ್ತು ಜಿನರಾಜರ ಜನ್ಮೋತ್ಸವವು ಪ್ರತ್ಯಕ್ಷ ಸರಾಗ ಪುಣ್ಯ ಅತಿಶಯವಿದೆ.

ಜಿನರಾಜರ ಗರ್ಭಕಲ್ಯಾಣಕರೂಪ ಪರೋಕ್ಷ ಉತ್ಸವದ ದಿನಗಳು ಕ್ರಮದಿಂದ - ಆಷಾಢ ವದ್ಯ ದ್ವಿತೀಯೆ, ಜೇಷ್ಠ ವದ್ಯ ಅಮಾವಾಸ್ಯೆ, ಫಾಲ್ಗುಣ ಶುದ್ಧ ಅಷ್ಟಮಿ, ವೈಶಾಖ ಶುದ್ಧ ಷಷ್ಠಿ, ಶ್ರಾವಣ ಶುದ್ಧ ದ್ವಿತೀಯೆ, ಮಾಘ ವದ್ಯ ಷಷ್ಠಿ, ಭಾದ್ರಪದ ಶುದ್ಧ ಷಷ್ಠಿ, ಚೈತ್ರ ವದ್ಯ ಪಂಚಮಿ, ಫಾಲ್ಗುಣ ವದ್ಯ ನವಮಿ, ಚೈತ್ರ ವದ್ಯ ಅಷ್ಟಮಿ, ಜೇಷ್ಠ ವದ್ಯ ಷಷ್ಠಿ, ಆಷಾಢವದ್ಯ ಷಷ್ಠಿ, ಜೇಷ್ಠ ವದ್ಯ ದಶಮಿ, ಕಾರ್ತಿಕ ವದ್ಯ ಪ್ರತಿಪದೆ, ವೈಶಾಖ ವದ್ಯ ತ್ರಯೋದಶಿ, ಭಾದ್ರಪದ ಶುದ್ಧ ಸಪ್ತಮಿ, ಶ್ರಾವಣ ಶುದ್ಧ ದಶಮಿ, ಫಾಲ್ಗುಣ ಶುದ್ಧ ತೃತೀಯೆ, ಚೈತ್ರ ಶುದ್ಧ ಪ್ರತಿಪದೆ, ಶ್ರಾವಣ ವದ್ಯ ದ್ವಿತೀಯೆ, ಆಶ್ವಿನ ವದ್ಯ ದ್ವಿತೀಯೆ, ಕಾರ್ತಿಕ ಶುದ್ಧ ಷಷ್ಠಿ, ವೈಶಾಖ ವದ್ಯ ದ್ವಿತೀಯೆ ಮತ್ತು ಆಷಾಢ ಶುದ್ಧ ಷಷ್ಠಿ.

ಇಪ್ಪತ್ನಾಲ್ಕು ಜಿನರ ಜನ್ಮದಿನಗಳು ಅನುಕ್ರಮದಿಂದ - ಚೈತ್ರ ವದ್ಯ ನವಮಿ, ಮಾಘ ಶುದ್ಧ ದಶಮಿ, ಕಾರ್ತಿಕ ಶುದ್ಧ ಪೌರ್ಣಿಮೆ, ಮಾಘ ಶುದ್ಧ ದ್ವಾದಶಿ, ಚೈತ್ರ ಶುದ್ಧ ಏಕಾದಶಿ, ಕಾರ್ತಿಕ ವದ್ಯ ತ್ರಯೋದಶಿ, ಜೇಷ್ಠವದ್ಯ ದ್ವಾದಶಿ, ಪೌಷ ವದ್ಯ ಏಕಾದಶಿ, ಮಾರ್ಗಶೀರ್ಷ ಶುದ್ಧ ಪ್ರತಿಪದೆ, ಮಾಘ ವದ್ಯ ದ್ವಾದಶಿ, ಫಾಲ್ಗುಣ ವದ್ಯ ಏಕಾದಶಿ, ಫಾಲ್ಗುಣ ವದ್ಯ ಚತುರ್ದಶಿ, ಮಾಘ ಶುದ್ಧ ಚತುರ್ಥಿ, ಜೇಷ್ಠ ವದ್ಯ ದ್ವಾದಶಿ, ಮಾಘ ಶುದ್ಧ ತ್ರಯೋದಶಿ, ಜೇಷ್ಠ ವದ್ಯ ಚತುರ್ದಶಿ, ವೈಶಾಖ ಶುದ್ಧ ಪ್ರತಿಪದೆ, ಮಾರ್ಗಶೀರ್ಷ ಶುದ್ಧ ಚತುರ್ದಶಿ,

ಮಾರ್ಗಶೀರ್ಷ ಶುದ್ಧ ಏಕಾದಶಿ, ವೈಶಾಖ ಶುದ್ಧ ದಶಮಿ, ಆಷಾಢ ವದ್ಯ ದಶಮಿ, ಶ್ರಾವಣ ಶುದ್ಧ ಷಷ್ಠಿ, ಪೌಷ ವದ್ಯ ಏಕಾದಶಿ ಮತ್ತು ಚೈತ್ರ ಶುದ್ಧ ತ್ರಯೋದಶಿ.

ಇಪ್ಪತ್ನಾಲ್ಕು ಜಿನರ ಪಾರಣೆಯ ಅಂತರ ಹಾಗೂ ಪದಾರ್ಥ - ಆದಿನಾಥ ಸ್ವಾಮಿಯವರು ಹದಿಮೂರು ತಿಂಗಳು ಎಂಟು ದಿನದ ನಂತರ ಪಾರಣೆಯಲ್ಲಿ ಇಕ್ಷುರಸದ ಆಹಾರ ಮಾಡಿದ್ದರು. ಮಲ್ಲಿನಾಥ ಮತ್ತು ಪಾರ್ಶ್ವನಾಥರು ಮೂರು ದಿನಗಳ ನಂತರ ಪಾರಣೆಯಲ್ಲಿ ಹಸುವಿನ ಹಾಲಿನ ಪಾಯಸವನ್ನು ತಗೆದುಕೊಂಡಿದ್ದರು. ವಾಸುಪೂಜ್ಯ ಸ್ವಾಮಿಯವರು ಏಕಾಂತರದ ನಂತರ ಪಾರಣೆಯಲ್ಲಿ ಹಸುವಿನ ಹಾಲಿನ ಪಾಯಸದ ಭೋಜನ ಮಾಡಿದ್ದರು. ಉಳಿದೆಲ್ಲ ಜಿನರು ಎರಡು ದಿನಗಳ ನಂತರ ಪಾರಣೆಯಲ್ಲಿ ಹಸುವಿನ ಹಾಲಿನ ಪಾಯಸದ ಭೋಜನ ಮಾಡಿದ್ದರು.

ಇಪ್ಪತ್ನಾಲ್ಕು ಜಿನರ ಪ್ರಥಮ ಪಾರಣೆಯ ನಗರ ಹಾಗೂ ನಗರದ ದೊರೆ ಪ್ರಥಮ ದಾನೇಶ್ವರರ ಹೆಸರುಗಳು ಅನುಕ್ರಮದಿಂದ - ಹಸ್ತಿನಾಪುರದಲ್ಲಿ ಶ್ರೇಯಾಂಸದೊರೆ, ಅಯೋಧ್ಯಾಪುರಿಯಲ್ಲಿ ಬ್ರಹ್ಮದತ್ತ ದೊರೆ, ಶ್ರಾವಸ್ತಿ ಪುರಿಯಲ್ಲಿ ಸುರೇಂದ್ರದತ್ತ ದೊರೆ, ವಿನೀತಾ ನಗರದಲ್ಲಿ ಇಂದ್ರದತ್ತ ದೊರೆ, ವಿಜಯಪುರದಲ್ಲಿ ಪದ್ಮದೊರೆ, ಮಂಗಲಾಪುರದಲ್ಲಿ ದೊರೆ ಸೋಮದತ್ತ, ಪಾಟಲೀ ಖಂಡದಲ್ಲಿ ದೊರೆ ಮಹಾದತ್ತ, ಪದ್ಮಖಂಡ ಪುರದಲ್ಲಿ ದೊರೆ ಸೋಮದೇವ, ಶ್ವೇತಾನಗರಿಯಲ್ಲಿ ದೊರೆ ಪಹುಪ, ಅರಿಷ್ಟ ಪುರದಲ್ಲಿ ದೊರೆ ಪುನರ್ವಸು, ಇಷ್ಟಪುರದಲ್ಲಿ ದೊರೆ ಸುನಂದ, ಸಿದ್ಧಾರ್ಥಪುರದಲ್ಲಿ ಜಯರಾಜ, ಮಹಾಪುರದಲ್ಲಿ ದೊರೆ ವಿಶಾಖ, ಧ್ಯಾನಪುರದಲ್ಲಿ ದೊರೆ ಧರ್ಮವರ್ಧನ, ವರ್ಧಮಾನಪುರದಲ್ಲಿ ದೊರೆ ಸುಮತಿ, ಸೋಮನಪುರದಲ್ಲಿ ದೊರೆ ಧರ್ಮಮಿತ್ರ, ಮಂದಿರಪುರದಲ್ಲಿ ದೊರೆ ಅಪರಾಜಿತ, ಹಸ್ತಿನಾಪುರದಲ್ಲಿ ದೊರೆ ನಂದಷೇಣ, ಚಕ್ರಪುರದಲ್ಲಿ ದೊರೆ ವೃಷಭದತ್ತ, ಮಿಥಿಲಾಪುರದಲ್ಲಿ ದೊರೆದತ್ತ, ರಾಜಗೃಹಪುರದಲ್ಲಿ ದೊರೆ ಸಂಜಯ, ದ್ವಾರಾಪುರದಲ್ಲಿ ದೊರೆ ವರದತ್ತ, ಕಾಮ್ಯಾಕೃತ ಪುರದಲ್ಲಿ ದೊರೆ ಧನ್ಯ ಮತ್ತು ಕುಂಡಲಪುರದಲ್ಲಿ ದೊರೆ ಬಕುಲ-ಇವು ಇಪ್ಪತ್ನಾಲ್ಕು ಜಿನರ ಪ್ರಥಮ ಪಾರಣೆಯ ನಗರಗಳು ಮತ್ತು ದಾನೇಶ್ವರ ದೊರೆಗಳಿದ್ದಾರೆ. ಇವರೆಲ್ಲರ ಮನೆಯಲ್ಲಿ ಪಂಚಾಶ್ಚರ್ಯವಾಯಿತು.

ಇಪ್ಪತ್ನಾಲ್ಕು ಪ್ರಥಮ ಭಾಗ್ಯಶಾಲೀ ದಾನೇಶ್ವರರ ಶರೀರಗಳ ವರ್ಣ - ಅನುಕ್ರಮದಿಂದ - ಮೊದಲನೆಯ ಶ್ರೇಯಾಂಸ ದೊರೆ ಮತ್ತು ಬ್ರಹ್ಮದತ್ತ ದೊರೆ - ಇವರಿಬ್ಬರು ಶ್ಯಾಮ ಶರೀರಧಾರಿಗಳಿದ್ದು ಮಹಾಸುಂದರರಿದ್ದರು. ಉಳಿದ ಇಪ್ಪತ್ತೆರಡು ಜಿನರಾಜರಿಗೆ ದಾನ ಕೊಡುವಂಥ ದೊರೆಗಳ ಶರೀರವು ಕಾಯ್ದ ಕಾರ್ತಸ್ವರದ ಸಮಾನವಿತ್ತು ಇವರೊಳಗಿನ ಕೆಲವರಂತೂ ಮೋಕ್ಷಕ್ಕೆ ಹೋದರು ಮತ್ತು ಕೆಲವರು ಕಲ್ಪವಾಸಿಗಳಾಗಿ ಅಲ್ಲಿಂದ ಬಂದು ಮೋಕ್ಷಕ್ಕೆ ಹೋಗುವರೆಂಬ ಕಥನವು ಮಹಾಪುರಾಣದ ಕರ್ತೃಗಳಾದ ಶ್ರೀ ಜಿನಸೇನಾಚಾರ್ಯರದಿದೆ. ಕೆಲವು ಶಾಸ್ತ್ರಗಳಲ್ಲಿ ಪ್ರಥಮ ದಾನೇಶ್ವರರು ಮೋಕ್ಷಕ್ಕೆ ಹೋಗುತ್ತಾರೆಂಬ ಕಥನವಿದೆ. ಇದರ ಕುರಿತಾದ ವಿಶೇಷ ಪಾಠಾಂತರ ಭೇದವಂತೂ ಹೇಗೆ ಕೇವಲಜ್ಞಾನದಲ್ಲಿ ಜ್ಞಾತವಾಗಿದೆ ಅದುವೇ ಪ್ರಮಾಣವಿದೆ.

ಇಪ್ಪತ್ನಾಲ್ಕು ಜಿನರಿಗೆ ಅಂತಿಮ ಆಹಾರದ ನಂತರ ಕೇವಲಜ್ಞಾನವಾಗುವ ಮೊದಲು ಆಗಿರುವ ಉಪವಾಸದ ಸಂಖ್ಯೆ - ವೃಷಭದೇವ, ಮಲ್ಲಿನಾಥ, ಪಾರ್ಶ್ವನಾಥ - ಇವರು ಮೂವರು ಜಿನರಿಗೆ ಮೂರು ದಿನ ಉಪವಾಸದ ನಂತರ ಕೇವಲಜ್ಞಾನವು ಪ್ರಗಟವಾಯಿತು. ವಾಸುಪೂಜ್ಯರಿಗೆ ಒಂದು ಉಪವಾಸವು ಪೂರ್ಣವಾದ ಮೇಲೆ ಕೇವಲಜ್ಞಾನವಾದರೆ ಉಳಿದೆಲ್ಲ ಜಿನರಿಗೆ ಎರಡು ದಿನಗಳ ಉಪವಾಸದ ನಂತರ ಕೇವಲಜ್ಞಾನವಾಯಿತು.

ಇಪ್ಪತ್ನಾಲ್ಕು ಜಿನರ ಕೇವಲಜ್ಞಾನ ಉತ್ಪತ್ತಿಯ ಸ್ಥಾನ - ವೃಷಭದೇವರ ಕೇವಲಜ್ಞಾನ ಕಲ್ಯಾಣಕವು ಪುರಮತಾಲವೆಂಬ ಹೆಸರಿನ ನಗರದ ಹತ್ತಿರ ಸಕಟಾಮುಖವೆಂಬ ಹೆಸರಿನ ವನದಲ್ಲಿ ಆಯಿತು. ನೇಮಿನಾಥರಿಗೆ ಗಿರನಾರದ ಮೇಲೆ, ಪಾರ್ಶ್ವನಾಥರಿಗೆ ಕಾಶಿಯ ಹತ್ತಿರ, ಮಹಾವೀರರಿಗೆ ಋಜುಕೂಲಾ ನದಿಯ ದಡದಲ್ಲಿ ಆಯಿತು. ಉಳಿದೆಲ್ಲ ಜಿನರ ಕೇವಲಜ್ಞಾನ ಕಲ್ಯಾಣಕವು ಮನೋಹರ ವನದಲ್ಲಿ ಆಯಿತು.

ಕೇವಲಜ್ಞಾನದ ಸಮಯ- ವೃಷಭನಾಥ, ಶ್ರೇಯಾಂಸಜಿನ, ಮಲ್ಲಿನಾಥ, ನೇಮಿನಾಥ, ಪಾರ್ಶ್ವನಾಥ - ಇವರು ಐವರು ಜಿನರಿಗೆ ಪ್ರಭಾತ ಸಮಯದಲ್ಲಿ ಕೇವಲಜ್ಞಾನವಾಯಿತು. ಉಳಿದವರೆಲ್ಲರಿಗೆ ದಿನದ ಕೊನೆಯ ಪ್ರಹರದಲ್ಲಿ ಕೇವಲಜ್ಞಾನವಾಯಿತು.

ನಿರ್ವಾಣವಾಗಿರುವ ಸಮಯ - ವೃಷಭನಾಥ, ಅಜಿತನಾಥ, ಶ್ರೇಯಾಂಸ ಜಿನ, ಶೀತಲ ಜಿನ, ಅಭಿನಂದನನಾಥ, ಸುಮತಿನಾಥ, ಸುಪಾರ್ಶ್ವನಾಥ, ಚಂದ್ರಪ್ರಭ ಜಿನರಿಗೆ ದಿನದ ಪ್ರಥಮ ಪ್ರಹರದಲ್ಲಿ ಮೋಕ್ಷವಾಯಿತು. ವಾಸುಪೂಜ್ಯ, ವಿಮಲನಾಥ, ಅನಂತನಾಥ, ಶೀತಲನಾಥ, ಕುಂಥುನಾಥ, ಮಲ್ಲಿನಾಥ, ಮುನಿಸುವ್ರತನಾಥ, ನೇಮಿನಾಥ, ಪಾರ್ಶ್ವನಾಥರ ಮುಕ್ತಿಯು ರಾತ್ರಿಯ ಸಮಯದಲ್ಲಿ ಆಯಿತು. ಧರ್ಮನಾಥ, ಅರನಾಥ, ನಮಿನಾಥ, ಮಹಾವೀರರ ಮುಕ್ತಿಯು ಸೂರ್ಯೋದಯದ ಸಮಯ - ಪ್ರಭಾತ ಕಾಲದಲ್ಲಿ ಆಯಿತು.

ಇಪ್ಪತ್ನಾಲ್ಕು ಜಿನರ ಮೋಕ್ಷ ಗಮನದ ಆಸನ - ವೃಷಭನಾಥ, ವಾಸುಪೂಜ್ಯ ಮತ್ತು ನೇಮಿನಾಥ - ಇವರು ಮೂವರು ಜಿನರು ಪದ್ಮಾಸನದಲ್ಲಿ ಮೋಕ್ಷಕ್ಕೆ ಹೋದರು. ಉಳಿದೆಲ್ಲ ಜಿನರು ಖಡ್ಗಾಸನದಲ್ಲಿ ಸಿದ್ಧಲೋಕಕ್ಕೆ ಹೋದರು.

ಇಪ್ಪತ್ನಾಲ್ಕು ಜಿನರ ಸಮವಸರಣ ವಿಘಟನ ಮತ್ತು ವಾಣಿ ಹೊರಡದಿರುವ (ಯೋಗ ನಿರೋಧದ) ಪ್ರಮಾಣ - ಆದಿಜಿನರು ಮತ್ತು ಅಂತಿಮ ವೀರಜಿನರು ಮೋಕ್ಷ ಗಮನದ ಹದಿನಾಲ್ಕು ದಿನ ಶೇಷವಿರುವಾಗ ಸಮವಸರಣವು ವಿಘಟಿತವಾಯಿತು ಮತ್ತು ವಾಣಿಯು ಹೊರಡಲಿಲ್ಲ. ಉಳಿದೆಲ್ಲ ಜಿನರದು ಒಂದು ತಿಂಗಳು ಮೊದಲು ಸಮವಸರಣವು ವಿಘಟಿತವಾಯಿತು ಮತ್ತು ದಿವ್ಯಧ್ವನಿಯು ಹೊರಡಲಿಲ್ಲ.

ಇಪ್ಪತ್ನಾಲ್ಕು ಜಿನರ ಜೊತೆಯಲ್ಲಿ ಮೋಕ್ಷಕ್ಕೆ ಹೋಗುವಂಥ ಯತಿಗಳ ಪ್ರಮಾಣ - ಮಹಾವೀರರ ಜತೆ ಮೂವತ್ತಾರು ಮುನಿಗಳು ಮೋಕ್ಷಕ್ಕೆ ಹೋದರು. ಪಾರ್ಶ್ವನಾಥರ ಜೊತೆಗೆ ಐನೂರಾ ಮೂವತ್ತಾರು ಮುನಿಗಳು ಮುಕ್ತರಾದರು. ನೇಮಿನಾಥರ ಜತೆ ಐನೂರಾ ಮೂವತ್ತಾರು ಋಷೀಶ್ವರರು ಮೋಕ್ಷಕ್ಕೆ ಹೋದರು. ಮಲ್ಲಿನಾಥರ ಜತೆ ಐನೂರು ಯತಿಗಳು ಮೋಕ್ಷಕ್ಕೆ ಹೋದರು. ಶಾಂತಿನಾಥರ ಜತೆ ಒಂಭೈನೂರು ಯೋಗೀಶ್ವರರು ಮುಕ್ತರಾದರು. ಧರ್ಮನಾಥರ ಜತೆ ಎಂಟುನೂರಾ ಒಂದು ತಪೋಧನರು ಮೋಕ್ಷಕ್ಕೆ ಹೋದರು. ವಿಮಲನಾಥರ ಜತೆಗೆ ಆರು ಸಾವಿರದಾ ಆರು ನೂರಾ ಹನ್ನೆರಡು ಆಚಾರ್ಯರು ಮುಕ್ತರಾದರು. ಅನಂತನಾಥರ ಜತೆಗೆ ಐದು ಸಾವಿರದಾ ಐನೂರಾ ಏಳು ನಿರ್ಗ್ರಂಥರು ನಿರಂಜನರಾದರು. ಪದ್ಮಪ್ರಭರ ಜತೆ ಮೂರು ಸಾವಿರದಾ ಎಂಟುನೂರು ದೊರೆಗಳು ದಿಗಂಬರರಾಗಿ ಸಿದ್ಧಲೋಕಕ್ಕೆ ಹೋದರು. ವೃಷಭದೇವರ ಜೊತೆಗೆ ಹತ್ತು ಸಾವಿರ ಗುರುನಾಥರು ಅಮೂರ್ತಿಕರಾದರು. ಉಳಿದೆಲ್ಲ ತೀರ್ಥಂಕರರ ಜತೆ ಒಂದೊಂದು ಸಾವಿರ ಮುನಿಗಳು ಮೋಕ್ಷಕ್ಕೆ ಹೋದರು.

ಹನ್ನೆರಡು ಚಕ್ರವರ್ತಿಗಳ ಹೆಸರು ಮತ್ತು ಕಾಲ - ಪ್ರಥಮ ಚಕ್ರವರ್ತಿ ಭರತನು ಆದಿನಾಥರ ಸಮಯದಲ್ಲಿ ಆದನು. ಎರಡನೆಯವನಾದ ಸಗರನು ಅಜಿತನಾಥರ ಸಮಯದಲ್ಲಿ ಆದನು. ಮೂರನೆಯ ಮಘವಾ ಮತ್ತು ನಾಲ್ಕನೆಯ ಸನತ್‌ಕುಮಾರ ಚಕ್ರವರ್ತಿಯು ಧರ್ಮನಾಥ ಜಿನರು ಮೋಕ್ಷಕ್ಕೆ ಹೋದ ಮೇಲೆ ಮತ್ತು ಶಾಂತಿನಾಥರ ಪೂರ್ವದ ಅಂತರಾಲದಲ್ಲಿ ಆದರು. ಶಾಂತಿನಾಥ, ಕುಂಥುನಾಥ ಮತ್ತು ಅರನಾಥ - ಇವರು ಮೂವರು ಜಿನರು ತಮ್ಮ-ತಮ್ಮ ಕಾಲದಲ್ಲಿ ಸ್ವಯಂ ತಾವೇ ಚಕ್ರವರ್ತಿಗಳಾದರು. ಅರನಾಥರು ಮೋಕ್ಷಕ್ಕೆ ಹೋದ ಮೇಲೆ ಮತ್ತು ಮಲ್ಲಿನಾಥರ ಪೂರ್ವದ ಅಂತರಾಲದಲ್ಲಿ ಎಂಟನೆಯ ಸುಭೌಮ ಚಕ್ರವರ್ತಿಯಾದನು. ಮಲ್ಲಿನಾಥರ ನಂತರ ಮತ್ತು ಮುನಿಸುವ್ರತರ ಮೊದಲಿನ ಅಂತರಾಲದಲ್ಲಿ ಮಹಾಪದ್ಮನಾಮದ ಚಕ್ರಿಯಾದನು. ಮುನಿಸುವ್ರತರ ನಂತರ ಮತ್ತು ನೇಮಿನಾಥರ ಪೂರ್ವದ ಕಾಲದಲ್ಲಿ ಹತ್ತನೆಯ ಹರಿಷೇಣ ಚಕ್ರವರ್ತಿಯಾದನು. ನಮಿನಾಥರ ನಂತರ ಮತ್ತು ನೇಮಿನಾಥರ ಮೊದಲು ಹನ್ನೊಂದನೆಯ ಜಯಸೇನವೆಂಬ ಹೆಸರಿನ ಚಕ್ರಿಯಾದನು. ನೇಮಿನಾಥರ ನಂತರದ ಕಾಲವು ಕಳೆದ ಮೇಲೆ ಪಾರ್ಶ್ವನಾಥರ ಮೊದಲು ಹನ್ನೆರಡನೆಯ ಬ್ರಹ್ಮದತ್ತನೆಂಬ ಹೆಸರಿನ ಚಕ್ರಿಯಾದನು.

ಚಕ್ರವರ್ತಿಗಳ ಗತಿ - ಎಂಟನೆಯ ಸುಭೌಮ ಮತ್ತು ಹನ್ನೆರಡನೆಯ ಬ್ರಹ್ಮದತ್ತ - ಇವರಿಬ್ಬರು ಚಕ್ರವರ್ತಿಗಳು ಏಳನೆಯ ನರಕದೊಳಗೆ ಹೋದರು. ಮೂರನೆಯ ಮಘವಾ ಮತ್ತು ನಾಲ್ಕನೆಯ ಸನತ್‌ಕುಮಾರ - ಇವರೀರ್ವರು ಚಕ್ರಿಗಳು ಮೂರನೆಯ ಸ್ವರ್ಗಕ್ಕೆ ಹೋದರು. ಉಳಿದ ಎಂಟು ಜನ ಚಕ್ರಿಗಳು ಅಷ್ಟಕರ್ಮಗಳನ್ನು ನಷ್ಟಮಾಡಿ ಅಷ್ಟಮಭೂಮಿಯಲ್ಲಿ ಸಿದ್ಧಪದ ಪಡೆದು ವಿರಾಜಮಾನರಿದ್ದಾರೆ.

ಒಂಭತ್ತು ನಾರಾಯಣರ ಹೆಸರು ಮತ್ತು ಕಾಲ - ಮೊದಲನೆಯ ತ್ರಿಪೃಷ್ಠನೆಂಬ ಹೆಸರಿನ ನಾರಾಯಣನು ಶ್ರೇಯಾಂಸನಾಥರ ಸಮಯದಲ್ಲಿ ಆದನು. ಎರಡನೇ ದ್ವಿಪೃಷ್ಠ ನಾರಾಯಣನು ವಾಸುಪೂಜ್ಯ ಜಿನರ ಸಮಯದಲ್ಲಿ ಆದನು. ಮೂರನೆಯ ಸ್ವಯಂಭೂ ನಾರಾಯಣನು ವಿಮಲನಾಥರ ಸಮಯದಲ್ಲಿ ಆದನು. ನಾಲ್ಕನೆಯ ಪುರುಷೋತ್ತಮ ನಾರಾಯಣನು ಅನಂತನಾಥರ ಸಮಯದಲ್ಲಿ ಆದನು. ಐದನೆಯ ಪುರುಷಸಿಂಹ ನಾರಾಯಣನು ಧರ್ಮನಾಥರ ಸಮಯದಲ್ಲಿ ಆದನು. ಆರನೆಯ ಪುಂಡರೀಕ ನಾರಾಯಣನು ಅರನಾಥರ ನಂತರ ಮತ್ತು ಮಲ್ಲಿನಾಥರ ಪೂರ್ವದ ಅಂತರಾಲದಲ್ಲಿ ಆದನು. ಮಲ್ಲಿನಾಥರ ನಂತರ ಮತ್ತು ಮುನಿಸುವ್ರತನಾಥರ ಪೂರ್ವದ ಅಂತರಾಲದಲ್ಲಿ ಏಳನೆಯ ದತ್ತನೆಂಬ ಹೆಸರಿನ ನಾರಾಯಣನಾದನು. ಮುನಿಸುವ್ರತರ ನಂತರ ಮತ್ತು ನಮಿನಾಥರ ಪೂರ್ವದಲ್ಲಿ ಎಂಟನೆಯ ಲಕ್ಷ್ಮಣನೆಂಬ ಹೆಸರಿನ ನಾರಾಯಣನಾದನು. ಒಂಭತ್ತನೆಯ ನಾರಾಯಣ ಕೃಷ್ಣ ದೇವನು ನೇಮಿನಾಥರ ಸಮಯದಲ್ಲಿ ಆದನು. ಮೊದಲನೆಯ ತ್ರಿಪೃಷ್ಠ ಮೊದಲಾಗಿ ಆರು ಜನರು-ದ್ವಿಪೃಷ್ಠ, ಸ್ವಯಂಭೂ ಪುರುಷೋತ್ತಮ,  ಪುರುಷಸಿಂಹ ಮತ್ತು ಪುಂಢರೀಕ - ಇವರಂತೂ ಆರನೆಯ ಮಧವಿಯೆಂಬ ಹೆಸರಿನ ಆರನೆಯ ಪೃಥ್ವಿ ತಲುಪಿದರು. ಉಳಿದ ಏಳು, ಎಂಟು ಹಾಗೂ ಒಂಭತ್ತನೆಯ ದತ್ತಾದಿ ಮೂವರು ಮೇಘ ಎಂಬ ಹೆಸರಿನ ಮೂರನೆಯ ಪೃಥ್ವಿಗೆ ಪ್ರಾಪ್ತರಾದರು. ಈ ಒಂಭತ್ತೂ ಜನ ನಾರಾಯಣರು ಮೂರು ಖಂಡದ ಅಧಿಪತಿ, ಮಹಾವಿಭೂತಿಯುಕ್ತ; ದೇವ, ವಿದ್ಯಾಧರ, ಭೂಮಿಗೋಚರಿ ಮೊದಲಾದ ದೊಡ್ಡ-ದೊಡ್ಡ ದೊರೆಗಳಿಂದ ವಂದನೀಯ ಪ್ರಜಾಪಾಲಕರಿದ್ದರು. ಇವರುಗಳ ರಾಜ್ಯದಲ್ಲಿ ಅನ್ಯಾಯವಿರುತ್ತಿರಲಿಲ್ಲ. ಪ್ರಜೆಗಳಲ್ಲಿ ದರಿದ್ರತೆಯಿರಲಿಲ್ಲ. ಎಲ್ಲರೂ ಸುಖಿಗಳಾಗಿದ್ದರು. ಈ ನಾರಾಯಣರು ಪರಂಪರೆಯಿಂದ ಜ್ಯೋತಿಸ್ವರೂಪ(ಮುಕ್ತ)ರಾಗುವರು.

ಬಲಭದ್ರರ ಹೆಸರುಗಳು - ವಿಜಯ, ಅಚಲ, ಸುಧರ್ಮ(ಭದ್ರ), ಸುಪ್ರಭ (ಸುಭದ್ರ), ಸುದರ್ಶನ, ನಂದಿಷೇಣ (ಆನಂದ), ನಂದಿಮಿತ್ರ (ನಂದನ), ಪದ್ಮ (ರಾಮಚಂದ್ರ) ಮತ್ತು ಬಲರಾಮ - ಇವರು ಒಂಭತ್ತು ಬಲಭದ್ರರು ನಾರಾಯಣರ ಹಿರಿಯ ಸೋದರರಿರುತ್ತಾರೆ.

ನಾರಾಯಣರ ಪ್ರತಿಪಕ್ಷಿ ಪ್ರತಿನಾರಾಯಣರ ಹೆಸರುಗಳು - ಅಶ್ವಗ್ರೀವ, ತಾರಕ, ಮೇರುಕ, ನಿಶುಂಭ, ಪ್ರಹ್ಲಾದ, ಮಧುಕೈಟಭ, ಬಲಿ, ರಾವಣ ಮತ್ತು ಜರಾಸಿಂಧು ಇವರೊಳಗಿನ ಮೊದಲಿನ ಎಂಟು ಜನರು ವಿದ್ಯಾಧರರಿದ್ದರು ಮತ್ತು ಒಂಭತ್ತನೆಯ ಜರಾಸಿಂಧುವು ಭೂಮಿಗೋಚರಿಯಿದ್ದನು.

ಬಲಭದ್ರರ ಗತಿ - ವಿಜಯ, ಅಚಲ, ಭದ್ರ, ಸುಭದ್ರ, ಸುದರ್ಶನ, ಆನಂದ, ನಂದಿಮಿತ್ರ ಮತ್ತು ರಾಮಚಂದ್ರ - ಇವರು ಎಂಟು ಜನ ಬಲದೇವರು ಅಷ್ಟಕರ್ಮಗಳ ನಾಶ ಮಾಡಿ ಸಿದ್ಧರಾದರು. ಒಂಭತ್ತನೆಯ ಬಲರಾಮ (ಬಲದೇವ)ನು ದಿಗಂಬರ ವ್ರತಧಾರಣ ಮಾಡಿ ಪಂಚಮ ಸ್ವರ್ಗದಲ್ಲಿ ಮಹಾಋದ್ಧಿಧಾರೀ ದೇವನಾದನು. ಅಲ್ಲಿಂದ ಬಂದು ಮನುಷ್ಯನಾಗಿ ಮೋಕ್ಷಕ್ಕೆ ಹೋಗುವನು. ಕೃಷ್ಣ ಮಹಾರಾಜನು ತೀರ್ಥಂಕರನ ಅವತಾರ ಧಾರಣ ಮಾಡಿ, ಅನೇಕ ಜೀವರುಗಳಿಗೆ ಧರ್ಮೋಪದೇಶ ನೀಡಿ - ಸುಮಾರ್ಗದಲ್ಲಿ ತೊಡಗಿಸಿ ಪರಮಧಾಮ ಪ್ರಾಪ್ತ ಮಾಡಿಕೊಳ್ಳುವನು ಎಂದರೆ ಭವಧಾರಣ ಮಾಡುವುದಿಲ್ಲ.

ಅನುಕ್ರಮದಿಂದ ಇಪ್ಪತ್ನಾಲ್ಕು ಜಿನರ ಆಯುವಿನ ಪ್ರಮಾಣ - ಎಂಭತ್ನಾಲ್ಕು ಲಕ್ಷಪೂರ್ವ, ಎಪ್ಪತ್ತೆರಡು ಲಕ್ಷಪೂರ್ವ, ಅರವತ್ತು ಲಕ್ಷಪೂರ್ವ, ಐವತ್ತು ಲಕ್ಷ ಪೂರ್ವ, ನಲವತ್ತು ಲಕ್ಷಪೂರ್ವ, ಮೂವತ್ತು ಲಕ್ಷಪೂರ್ವ,

ಇಪ್ಪತ್ತು ಲಕ್ಷಪೂರ್ವ, ಹತ್ತು ಲಕ್ಷಪೂರ್ವ, ಎರಡು ಲಕ್ಷಪೂರ್ವ, ಒಂದು ಲಕ್ಷಪೂರ್ವ, ಎಂಭತ್ನಾಲ್ಕು ಲಕ್ಷ ವರ್ಷ, ಎಪ್ಪತ್ತೆರಡು ಲಕ್ಷವರ್ಷ, ಅರವತ್ತು ಲಕ್ಷ ವರ್ಷ, ಮೂವತ್ತು ಲಕ್ಷ ವರ್ಷ, ಹತ್ತು ಲಕ್ಷ ವರ್ಷ, ಒಂದು ಲಕ್ಷ ವರ್ಷ, ತೊಂಭತ್ತೈದು ಸಾವಿರ ವರ್ಷ, ಎಂಭತ್ನಾಲ್ಕು ಸಾವಿರ ವರ್ಷ, ಐವತ್ತೈದು ಸಾವಿರ ವರ್ಷ ಮೂವತ್ತು ಸಾವಿರ ವರ್ಷ, ಹತ್ತು ಸಾವಿರ ವರ್ಷ, ಒಂದು ಸಾವಿರ ವರ್ಷ, ನೂರು ವರ್ಷ ಮತ್ತು ಎಪ್ಪತ್ತೆರಡುವರ್ಷ - ಆಯುವುಳ್ಳ ಇಪ್ಪತ್ನಾಲ್ವರು ಜಿನರು ಜಗತ್ತಿಗೆ ಮಂಗಲವನ್ನುಂಟು ಮಾಡಲಿ.

ಚಕ್ರವರ್ತಿಗಳ ಆಯು - ಮೊದಲನೆಯವನ ಆಯು ಎಂಭತ್ನಾಲ್ಕು ಲಕ್ಷಪೂರ್ವ, ಎರಡನೆಯವನದು ಎಪ್ಪತ್ತೆರಡು ಲಕ್ಷ ಪೂರ್ವ, ಮೂರನೆಯವನದು ಐದು ಲಕ್ಷ ಪೂರ್ವ, ನಾಲ್ಕನೆಯವನದು ಮೂರು ಲಕ್ಷ ಪೂರ್ವ, ಐದನೆಯವನದು ಒಂದು ಲಕ್ಷ ವರ್ಷ, ಆರನೆಯವನದು ತೊಂಭತ್ತೈದು ಸಾವಿರ ವರ್ಷ, ಏಳನೆಯವನದು ಎಂಭತ್ನಾಲ್ಕು ಸಾವಿರ ವರ್ಷ, ಎಂಟನೆಯವನದು ಅರವತ್ತು ಸಾವಿರ ವರ್ಷ, ಒಂಭತ್ತನೆಯವನದು ಮೂವತ್ತು ಸಾವಿರ ವರ್ಷ, ಹತ್ತನೆಯವನದು ಇಪ್ಪತ್ತಾರು ಸಾವಿರ ವರ್ಷ, ಹನ್ನೊಂದನೆಯವನದು ಮೂರು ಸಾವಿರ ವರ್ಷ ಮತ್ತು ಹನ್ನೆರಡನೆಯವನದು ಏಳು ನೂರು ವರ್ಷ.

ನಾರಾಯಣರ ಆಯು - ಮೊದಲನೆಯವನದು ಎಂಭತ್ನಾಲ್ಕು ಲಕ್ಷ ಪೂರ್ವ, ಎರಡನೆಯವನದು ಎಪ್ಪತ್ತೆರಡು ಲಕ್ಷ ವರ್ಷ, ಮೂರನೆಯವನದು ಅರವತ್ತು ಲಕ್ಷ ವರ್ಷ, ನಾಲ್ಕನೆಯವನದು ಮೂವತ್ತು ಲಕ್ಷ ವರ್ಷ, ಐದನೆಯವನದು ಹತ್ತು ಲಕ್ಷ ವರ್ಷ, ಆರನೆಯವನದು ಅರವತ್ತು ಸಾವಿರ ವರ್ಷ, ಏಳನೆಯವನದು ಮೂವತ್ತು ಸಾವಿರ ವರ್ಷ, ಎಂಟನೆಯವನದು ಹನ್ನೆರಡು ಸಾವಿರ ವರ್ಷ, ಒಂಭತ್ತನೆಯವನದು ಒಂದು ಸಾವಿರ ವರ್ಷ. ಒಂಭತ್ತು ಪ್ರತಿನಾರಾಯಣರದೂ ಇಷ್ಟೇ ಆಯುವೆಂದು ತಿಳಿಯುವುದು. ಬಲಭದ್ರರದು ಇವರಿಗಿಂತ ಸ್ವಲ್ಪ ಅಧಿಕವಿರುತ್ತದೆ.

ಬಲಭದ್ರರ ಆಯು-ಮೊದಲನೆಯವನದು ಎಂಭತ್ತೇಳು ಲಕ್ಷ ವರ್ಷ, ಎರಡನೆಯವನದು ಎಪ್ಪತ್ನಾಲ್ಕು ಲಕ್ಷ ವರ್ಷ, ಮೂರನೆಯವನದು ಅರವತ್ತೈದು ಲಕ್ಷ ವರ್ಷ, ನಾಲ್ಕನೆಯವನದು ಮೂವತ್ತೆರಡು ಲಕ್ಷ ವರ್ಷ, ಐದನೆಯವನದು ಹತ್ತು ಲಕ್ಷ ವರ್ಷಕ್ಕಿಂತ ಸ್ವಲ್ಪ ಅಧಿಕ, ಆರನೆಯವನದು ಅರವತ್ತೈದು ಸಾವಿರ ವರ್ಷ, ಏಳನೆಯವನದು ಮೂವತ್ತೆರಡು ಸಾವಿರ ವರ್ಷ, ಎಂಟನೆಯವನದು ಹದಿನೇಳು ಸಾವಿರ ವರ್ಷ, ಒಂಭತ್ತನೆಯವನದು ಹನ್ನೆರಡು ನೂರು ವರ್ಷ.

ಚಕ್ರವರ್ತಿ ಮತ್ತು ನಾರಾಯಣರು ಉತ್ಪನ್ನವಾಗುವ ಸಮಯ - ಆದಿ ಜಿನರಿಂದ ಹಿಡಿದು ಹದಿನೈದನೆಯ ಧರ್ಮನಾಥರವರೆಗೆ ವೃಷಭ, ಅಜಿತರ ಸಮಯದಲ್ಲಿ ಇಬ್ಬರು ಚಕ್ರವರ್ತಿಗಳಾದರು; ಅದರ ನಂತರ ಹದಿನೈದು ಲಕ್ಷ ಕೋಟಿಸಾಗರದವರೆಗಿನ ಅಂತರಾಲದಲ್ಲಿ ಯಾವ ಪದವಿಯ ಧಾರಕ ಪುರುಷರೂ ಆಗಲಿಲ್ಲ. ಶ್ರೇಯಾಂಸನಾಥರಿಂದ ಹಿಡಿದು ಧರ್ಮನಾಥರವರೆಗೆ ಐವರು ತೀರ್ಥಂಕರರ ಸಮಯದಲ್ಲಿ ಐವರು ನಾರಾಯಣರಾದರು. ಅವರುಗಳ ಕಾಲದಲ್ಲಿಯೇ ಸಭಾನಾಯಕರಾದರು, ಅಂತರಾಲದಲ್ಲಿ ಆಗಿಲ್ಲ. ಧರ್ಮನಾಥರ ನಂತರ ಮೂರನೆಯ ಮತ್ತು ನಾಲ್ಕನೆಯ ಚಕ್ರವರ್ತಿಗಳಾದರು. ಅದರ ನಂತರ ಶಾಂತಿನಾಥ, ಕುಂಥನಾಥ ಮತ್ತು ಅರನಾಥ - ಇವರು ಮೂವರು ತೀರ್ಥಂಕರರು ಸ್ವಯಂ ಚಕ್ರವರ್ತಿಯಾದರು. ಅದರ ನಂತರ ಆರನೆಯ ನಾರಾಯಣನಾದನು. ಅದರ ನಂತರ ಎಂಟನೆಯ ಚಕ್ರವರ್ತಿಯಾದನು. ಅದರ ನಂತರ ಮಲ್ಲಿನಾಥ ಜಿನರಾದರು. ಅದರ ನಂತರ ಒಂಭತ್ತನೆಯ ಮಹಾಪದ್ಮನಾಮದ ಚಕ್ರಿಯಾದನು. ಅದರ ನಂತರ ಏಳನೆಯ ನಾರಾಯಣನಾದನು ಅದರ ನಂತರ ಮುನಿಸುವ್ರತನಾಥರಾದರು. ನಂತರ ಹತ್ತನೆಯ ಚಕ್ರವರ್ತಿ ಹರಿಷೇಣನಾದನು. ಅದರ ನಂತರ ನಾರಾಯಣನಾದನು. ಅದರ ನಂತರ ನಮಿನಾಥ ಜಿನರಾದರು ಅದರ ನಂತರ ಹನ್ನೊಂದನೆಯ ಚಕ್ರವರ್ತಿಯಾದನು. ಅದರ ನಂತರ ನೇಮಿನಾಥರಾದರು. ಅವರ ಸಮಯದಲ್ಲಿ ಒಂಭತ್ತನೆಯ ನಾರಾಯಣ ಮತ್ತು ಬಲಭದ್ರರು ಅವರ ವಿದ್ಯಮಾನತೆಯಲ್ಲಿ

ಸಭಾನಾಯಕರಾದರು. ನೇಮಿನಾಥರ ನಂತರ ಹನ್ನೆರಡನೆಯ ಚಕ್ರವರ್ತಿಯಾದನು. ಅದರ ನಂತರ ಪಾರ್ಶ್ವನಾಥ ಮತ್ತು ಮಹಾವೀರರಾದರು - ಈ ಪ್ರಕಾರ ಅರವತ್ಮೂರು ಶಲಾಕಾ ಪುರುಷರ ಉತ್ಪತ್ತಿಯ ಕ್ರಮವಿದೆ.

ತೀರ್ಥಂಕರರ ಆಯುವಿನ ವಿಶ್ಲೇಷಣೆ - ವೃಷಭದೇವರ ಕುಮಾರ ಕಾಲವು ಇಪ್ಪತ್ತು ಲಕ್ಷ ಪೂರ್ವ, ಅರವತ್ಮೂರು ಲಕ್ಷ ಪೂರ್ವ ರಾಜ್ಯ ಮಾಡಿದರು, ಒಂದು ಸಾವಿರ ವರ್ಷ ತಪಸ್ಸು ಮಾಡಿದರು ಮತ್ತು ಕೇವಲಜ್ಞಾನ ಸಹಿತ ಉಪದೇಶವನ್ನು ಒಂದು ಸಾವಿರ ವರ್ಷ ಕಡಿಮೆ ಒಂದು ಲಕ್ಷ ಪೂರ್ವದವರೆಗೆ ಮಾಡಿದರು - ಹೀಗೆ ಇದು ಸಂಪೂರ್ಣ ಎಂಭತ್ನಾಲ್ಕು ಲಕ್ಷ ಪೂರ್ವದ ವಿಶ್ಲೇಷಣೆಯಿದೆ. ಅಜಿತನಾಥ ಜಿನರ ಕುಮಾರ ಕಾಲವು ಹದಿನೆಂಟು ಲಕ್ಷಪೂರ್ವ, ಒಂದು ಪೂರ್ವಾಂಗ ಅಧಿಕ ಅರವತ್ಮೂರು ಲಕ್ಷ ಪೂರ್ವ ರಾಜ್ಯಕಾಲ, ಸಂಯಮಕಾಲವು ಹನ್ನೆರಡು ವರ್ಷ ಹಾಗೂ ಒಂದು ಪೂರ್ವಾಂಗ ಮತ್ತು ಹನ್ನೆರಡು ವರ್ಷ ಕಡಿಮೆ ಒಂದು ಲಕ್ಷ ಪೂರ್ವದವರೆಗೆ ಕೇವಲಜ್ಞಾನ ಸಹಿತ ಸಮವಸರಣ ಹಾಗೂ ವಿಹಾರ ಮಾಡಿದರು - ಇದು ಎಪ್ಪತ್ತೆರಡು ಲಕ್ಷ ಪೂರ್ವದ ವಿಸ್ತಾರವಿದೆ.

ಸಂಭವನಾಥರು ಅರವತ್ತು ಲಕ್ಷ ಪೂರ್ವದೊಳಗಿನ ಹದಿನೈದು ಲಕ್ಷ ಪೂರ್ವ ಕುಮಾರ ಕಾಲ, ನಾಲ್ಕು ಪೂರ್ವಾಂಗ ಅಧಿಕ ನಲವತ್ನಾಲ್ಕು ಲಕ್ಷ ಪೂರ್ವದವರೆಗೆ ರಾಜ್ಯ ಕಾಲದಲ್ಲಿ, ಹದಿನಾಲ್ಕು ವರ್ಷ ಸಂಯಮಕಾಲದಲ್ಲಿ ಹಾಗೂ ನಾಲ್ಕು ಪೂರ್ವಾಂಗ ಮತ್ತು ಹದಿನಾಲ್ಕು ವರ್ಷ ಕಡಿಮೆ ಒಂದು ಲಕ್ಷ ಪೂರ್ವ ಕೇವಲಜ್ಞಾನ ಸಹಿತ ದಿವ್ಯೋಪದೇಶ ಕೊಡುತ್ತ ವ್ಯತೀತ ಮಾಡಿ ನಂತರದಲ್ಲಿ ಮುಕ್ತರಾದರು.

ಅಭಿನಂದನನಾಥರು ಐವತ್ತು ಲಕ್ಷ ಪೂರ್ವ ಆಯುವಿನೊಳಗಿಂದ ಹನ್ನೆರಡೂವರೆ ಲಕ್ಷ ಪೂರ್ವ ಕುಮಾರ ಕಾಲದಲ್ಲಿ ಎಂಟು ಪೂರ್ವಾಂಗ ಅಧಿಕ ಮೂವತ್ತಾರೂವರೆ ಲಕ್ಷ ಪೂರ್ವ ರಾಜ್ಯದಲ್ಲಿ, ಹದಿನೆಂಟು ವರ್ಷ ಸಂಯಮದಲ್ಲಿ ಹಾಗೂ ಎಂಟು ಪೂರ್ವಾಂಗ ಮತ್ತು ಹದಿನೆಂಟು ವರ್ಷ ಕಡಿಮೆ ಒಂದು ಲಕ್ಷ ಪೂರ್ವದವರೆಗಿನ ಕಾಲವನ್ನು ಕೇವಲಜ್ಞಾನ ಸಹಿತ ಉಪದೇಶ ಕೊಡುತ್ತ ವ್ಯತೀತ ಮಾಡಿ ಮುಕ್ತರಾದರು.

ಸುಮತಿನಾಥರು ನಲವತ್ತು ಲಕ್ಷ ಪೂರ್ವ ಆಯುವಿನೊಳಗಿಂದ ಕುಮಾರ ಕಾಲದಲ್ಲಿ ಹತ್ತು ಲಕ್ಷಪೂರ್ವ, ರಾಜ್ಯ ಅವಸ್ಥೆಯ ಕಾಲದಲ್ಲಿ ಹನ್ನೆರಡು ಪೂರ್ವಾಂಗ ಅಧಿಕ ಇಪ್ಪತ್ತೊಂಭತ್ತು ಲಕ್ಷ ಪೂರ್ವ, ಸಂಯಮಕಾಲದಲ್ಲಿ ಇಪ್ಪತ್ತು ವರ್ಷ ಹಾಗೂ ಹನ್ನೆರಡು ಪೂರ್ವಾಂಗ ಮತ್ತು ಇಪ್ಪತ್ತು ವರ್ಷ ಕಡಿಮೆ ಒಂದು ಲಕ್ಷ ಪೂರ್ವದವರೆಗೆ ಇಲ್ಲಿ ಕೇವಲಜ್ಞಾನ ಸಹಿತರಾಗಿದ್ದು ಮುಕ್ತರಾದರು.

ಪದ್ಮಪ್ರಭರು ಮೂವತ್ತು ಲಕ್ಷಪೂರ್ವ ಆಯುವಿನೊಳಗಿಂದ ಕುಮಾರ ಕಾಲದಲ್ಲಿ ಏಳೂವರೆ ಲಕ್ಷ ಪೂರ್ವ, ಹದಿನಾರು ಪೂರ್ವಾಂಗ ಅಧಿಕ ಇಪ್ಪತ್ತೊಂದು ಲಕ್ಷಪೂರ್ವದವರೆಗೆ ರಾಜ್ಯಕಾಲದಲ್ಲಿ, ಸಂಯಮಕಾಲದಲ್ಲಿ ಆರು ತಿಂಗಳು ಹಾಗೂ ಹದಿನಾರು ಪೂರ್ವಾಂಗ ಮತ್ತು ಆರು ತಿಂಗಳು ಕಡಿಮೆ ಒಂದು ಲಕ್ಷ ಪೂರ್ವದವರೆಗೆ ಇಲ್ಲಿ ಕೇವಲಜ್ಞಾನ ಸಹಿತರಾಗಿದ್ದು ಎಂದರೆ ಕೇವಲಜ್ಞಾನಸಹಿತ ಉಪದೇಶ ಕೊಡುತ್ತ ವ್ಯತೀತ ಮಾಡಿ ಸಿದ್ಧರಾದರು.

ಸುಪಾರ್ಶ್ವನಾಥ ಜಿನರು ಇಪ್ಪತ್ತು ಲಕ್ಷ ಪೂರ್ವ ಆಯುವಿನೊಳಗಿಂದ ಕುಮಾರ ಕಾಲದಲ್ಲಿ ಐದು ಲಕ್ಷ ಪೂರ್ವ, ಇಪ್ಪತ್ತು ಪೂರ್ವಾಂಗ ಅಧಿಕ ಹದಿನಾಲ್ಕು ಲಕ್ಷ ಪೂರ್ವ ರಾಜ್ಯ ಕಾಲದಲ್ಲಿ, ಸಂಯಮ ಕಾಲದಲ್ಲಿ ಒಂಭತ್ತು ವರ್ಷ ಹಾಗೂ ಇಪ್ಪತ್ತು ಪೂರ್ವಾಂಗ ಮತ್ತು ಒಂಭತ್ತು ವರ್ಷ ಕಡಿಮೆ ಒಂದು ಲಕ್ಷಪೂರ್ವದವರೆಗೆ ಕೇವಲ ಜ್ಞಾನಸಹಿತ ವಿಹಾರ ಮಾಡುತ್ತ ವ್ಯತೀತ ಮಾಡಿ ಮುಕ್ತರಾದರು.

ಚಂದ್ರಪ್ರಭರು ಹತ್ತು ಲಕ್ಷ ಪೂರ್ವ ಆಯುವಿನೊಳಗಿಂದ ಕುಮಾರ ಕಾಲದಲ್ಲಿ ಎರಡೂವರೆ ಲಕ್ಷಪೂರ್ವ, ರಾಜ್ಯಕಾಲದಲ್ಲಿ ಇಪ್ಪತ್ನಾಲ್ಕು ಪೂರ್ವಾಂಗ ಅಧಿಕ ಆರೂವರೆ ಲಕ್ಷಪೂರ್ವ, ಸಂಯಮ ಕಾಲದಲ್ಲಿ ಮೂರು ತಿಂಗಳು ಹಾಗೂ ಇಪ್ಪತ್ನಾಲ್ಕು ಪೂರ್ವಾಂಗ ಮತ್ತು ಮೂರು ತಿಂಗಳು ಕಡಿಮೆ ಒಂದು ಲಕ್ಷ ಪೂರ್ವದವರೆಗೆ ಸಮವಸರಣ ಸಹಿತ ಕೇವಲಜ್ಞಾನೀ ಭಗವಂತರಾಗಿ ವಿಹಾರ ಮಾಡುತ್ತ ವ್ಯತೀತ ಮಾಡಿ ನಂತರ ಮುಕ್ತರಾದರು.

ಪುಷ್ಪದಂತ ಜಿನರು ಎರಡುಲಕ್ಷ ಪೂರ್ವ ಆಯುವಿನೊಳಗಿಂದ ಕುಮಾರ ಕಾಲದಲ್ಲಿ ಐವತ್ತು ಸಾವಿರ ಪೂರ್ವ, ಐವತ್ತು ಸಾವಿರ ಪೂರ್ವ ಮತ್ತು ಇಪ್ಪತ್ತೆಂಟು ಪೂರ್ವಾಂಗ ರಾಜ್ಯಕಾಲದಲ್ಲಿ, ಸಂಯಮ ಕಾಲದಲ್ಲಿ ನಾಲ್ಕು ತಿಂಗಳು ಹಾಗೂ ಇಪ್ಪತ್ತೆಂಟು ಪೂರ್ವಾಂಗ ಮತ್ತು ನಾಲ್ಕು ತಿಂಗಳು ಕಡಿಮೆ ಒಂದು ಲಕ್ಷ ಪೂರ್ವದವರೆಗೆ ಕೇವಲಜ್ಞಾನ ಸಹಿತ ವಿಹಾರ ಮಾಡುತ್ತ ವ್ಯತೀತ ಮಾಡಿ ಮುಕ್ತರಾದರು.

ಶೀತಲನಾಥ ಜಿನರು - ಒಂದು ಲಕ್ಷ ಪೂರ್ವ ಆಯುವಿನೊಳಗಿಂದ ಕುಮಾರ ಕಾಲದಲ್ಲಿ ಇಪ್ಪತ್ತೈದು ಸಾವಿರ ಪೂರ್ವ, ರಾಜ್ಯಕಾಲದಲ್ಲಿ ಐವತ್ತು ಸಾವಿರ ಪೂರ್ವ, ಸಂಯಮಕಾಲದಲ್ಲಿ ಮೂರು ತಿಂಗಳು ಹಾಗೂ ಮೂರು ತಿಂಗಳು ಕಡಿಮೆ ಇಪ್ಪತ್ತೈದು ಸಾವಿರ ಪೂರ್ವ ಕೇವಲಜ್ಞಾನಸಹಿತರಾಗಿದ್ದು ವ್ಯತೀತ ಮಾಡಿ ಮುಕ್ತರಾದರು.

ಶ್ರೇಯಾಂಸ ಜಿನರು ಎಂಭತ್ನಾಲ್ಕು ಲಕ್ಷ ವರ್ಷ ಆಯುವಿನೊಳಗಿಂದ ಕುಮಾರಾವಸ್ಥೆಯಲ್ಲಿ ಇಪ್ಪತ್ತೊಂದು ಲಕ್ಷ ವರ್ಷ, ರಾಜ್ಯಪದದಲ್ಲಿ ನಲವತ್ತೆರಡು ಲಕ್ಷ ವರ್ಷ, ಸಂಯಮಕಾಲದಲ್ಲಿ ಎರಡು ತಿಂಗಳು ಹಾಗೂ ಎರಡು ತಿಂಗಳು ಕಡಿಮೆ ಇಪ್ಪತ್ತೊಂದು ಲಕ್ಷ ವರ್ಷ ಕೇವಲಜ್ಞಾನದ ಕಾಲವಿದೆ ಅದರ ನಂತರ ಮುಕ್ತರಾದರು.

ವಾಸುಪೂಜ್ಯರ ಎಪ್ಪತ್ತೆರಡು ಲಕ್ಷ ವರ್ಷ ಆಯುವಿನೊಳಗಿಂದ ಕುಮಾರ ಕಾಲವು ಹದಿನೆಂಟು ಲಕ್ಷ ವರ್ಷದ್ದು ಇದೆ. ಇವರು ರಾಜ್ಯಾವಸ್ಥೆಯಲ್ಲಿ ಉಳಿಯಲಿಲ್ಲ ಮತ್ತು ವಿವಾಹವನ್ನೂ ಮಾಡಿಕೊಳ್ಳಲಿಲ್ಲ. ಹದಿನೆಂಟು ಲಕ್ಷ ವರ್ಷದ ನಂತರ ತಪದ ಅಂಗೀಕಾರ ಮಾಡಿದರು. ಸಂಯಮಕಾಲವು ಒಂದು ತಿಂಗಳು ಮತ್ತು ಒಂದು ತಿಂಗಳು ಕಡಿಮೆ ಐವತ್ನಾಲ್ಕು ಲಕ್ಷ ವರ್ಷದವರೆಗೆ ಇಲ್ಲಿ ಕೇವಲಜ್ಞಾನ ಸಹಿತರಾಗಿದ್ದುಕೊಂಡು ನಂತರ ಮುಕ್ತರಾದರು.

ವಿಮಲ ಜಿನರು ಅರವತ್ತು ಲಕ್ಷ ವರ್ಷ ಆಯುವಿನೊಳಗಿಂದ ಕುಮಾರ ಕಾಲದಲ್ಲಿ ಹದಿನೈದು ಲಕ್ಷ ವರ್ಷ, ರಾಜ್ಯಾವಸ್ಥೆಯಲ್ಲಿ ಮೂವತ್ತು ಲಕ್ಷ ವರ್ಷ, ಸಂಯಮಕಾಲದಲ್ಲಿ ಮೂರು ತಿಂಗಳು, ಮೂರು ತಿಂಗಳು ಕಡಿಮೆ ಹದಿನೈದು ಲಕ್ಷ ವರ್ಷದವರೆಗೆ ಇಲ್ಲಿ ಕೇವಲಜ್ಞಾನ ಸಹಿತರಾಗಿದ್ದುಕೊಂಡು ನಂತರ ಮುಕ್ತರಾದರು.

ಅನಂತ ಜಿನರು ಮೂವತ್ತು ಲಕ್ಷ ವರ್ಷ ಆಯುವಿನೊಳಗಿಂದ ಕುಮಾರ ಕಾಲದಲ್ಲಿ ಏಳೂವರೆ ಲಕ್ಷ ವರ್ಷ, ರಾಜ್ಯಾವಸ್ಥೆಯಲ್ಲಿ ಹದಿನೈದು ಲಕ್ಷ ವರ್ಷ, ಸಂಯಮಕಾಲದಲ್ಲಿ ಎರಡು ತಿಂಗಳು ಮತ್ತು ಎರಡು ತಿಂಗಳು ಕಡಿಮೆ ಏಳೂವರೆ ಲಕ್ಷ ವರ್ಷ ಕೇವಲಜ್ಞಾನದಲ್ಲಿದ್ದು ಮುಕ್ತರಾದರು.

ಧರ್ಮ ಜಿನರು ಹತ್ತು ಲಕ್ಷ ವರ್ಷಗಳ ಆಯುವಿನೊಳಗಿಂದ ಎರಡೂವರೆ ಲಕ್ಷ ವರ್ಷ ಕುಮಾರ ಕಾಲದಲ್ಲಿ, ಐದು ಲಕ್ಷ ವರ್ಷ ರಾಜ್ಯಕಾಲದಲ್ಲಿ, ಒಂದು ತಿಂಗಳು ಸಂಯಮಕಾಲದಲ್ಲಿ ಮತ್ತು ಒಂದು ತಿಂಗಳು ಕಡಿಮೆ ಎರಡೂವರೆ ಲಕ್ಷ ವರ್ಷಗಳವರೆಗೆ ಕೇವಲಜ್ಞಾನ ಸಹಿತ ವಿಹಾರ ಮಾಡಿ ಮುಕ್ತರಾದರು.

ಶಾಂತಿನಾಥರು ಒಂದು ಲಕ್ಷ ವರ್ಷಗಳ ಆಯುವಿನೊಳಗಿಂದ ಕುಮಾರ ಕಾಲದಲ್ಲಿ ಇಪ್ಪತ್ತೈದು ಸಾವಿರ ವರ್ಷ, ರಾಜ್ಯಕಾಲದಲ್ಲಿ ಐವತ್ತು ಸಾವಿರ ವರ್ಷ, ಸಂಯಮಕಾಲದಲ್ಲಿ ಹದಿನಾರು ವರ್ಷ ಮತ್ತು ಹದಿನಾರು ವರ್ಷ ಕಡಿಮೆ ಇಪ್ಪತ್ತೈದು ಸಾವಿರ ವರ್ಷಗಳವರೆಗೆ ಕೇವಲಜ್ಞಾನಸಹಿತ ವಿಹಾರದಲ್ಲಿ ವ್ಯತೀತ ಮಾಡಿ ಮೋಕ್ಷಕ್ಕೆ ಹೋದರು.

ಕುಂಥುನಾಥರು ತೊಂಭತ್ತೈದು ಸಾವಿರ ವರ್ಷ ಆಯುವಿನೊಳಗಿಂದ ಇಪ್ಪತ್ಮೂರು ಸಾವಿರದಾ ಏಳುನೂರೈವತ್ತು ವರ್ಷ ಕುಮಾರ ಕಾಲದಲ್ಲಿ, ನಲವತ್ತೇಳು ಸಾವಿರದಾ ಐನೂರು ವರ್ಷ ರಾಜ್ಯಾವಸ್ಥೆಯ ಕಾಲದಲ್ಲಿ, ಹದಿನಾರು ವರ್ಷ ಸಂಯಮ ಕಾಲದಲ್ಲಿ ಮತ್ತು ಇಪ್ಪತ್ಮೂರು ಸಾವಿರದಾ ಏಳುನೂರಾ ಮೂವತ್ನಾಲ್ಕು ವರ್ಷಗಳವರೆಗೆ ಕೇವಲಜ್ಞಾನ ಸಹಿತ ಉಪದೇಶ ಕೊಡುವಲ್ಲಿ ವ್ಯತೀತ ಮಾಡಿ ಮುಕ್ತರಾದರು.

ಅರನಾಥ ಜಿನರು ಎಂಭತ್ನಾಲ್ಕು ಸಾವಿರ ವರ್ಷ ಆಯುವಿನೊಳಗಿಂದ ಕುಮಾರ ಕಾಲದಲ್ಲಿ ಇಪ್ಪತ್ತೊಂದು ಸಾವಿರ ವರ್ಷ, ರಾಜ್ಯಾವಸ್ಥೆಯಲ್ಲಿ ನಲವತ್ತೆರಡು ಸಾವಿರ ವರ್ಷ ಸಂಯಮ ಕಾಲದಲ್ಲಿ ಹದಿನಾರು ವರ್ಷ ಹಾಗೂ

ಹದಿನಾರು ವರ್ಷ ಕಡಿಮೆ ಇಪ್ಪತ್ತೊಂದು ಸಾವಿರ ವರ್ಷಗಳವರೆಗೆ ಕೇವಲಜ್ಞಾನ ಸಹಿತ ಉಪದೇಶ ನೀಯುವಲ್ಲಿ ವ್ಯತೀತ ಮಾಡಿ ಮುಕ್ತರಾದರು.

ಮಲ್ಲಿನಾಥರು ಐವತ್ತೈದು ಸಾವಿರ ವರ್ಷ ಆಯುವಿನೊಳಗಿಂದ ನೂರುವರ್ಷ ಕುಮಾರ ಕಾಲದಲ್ಲಿ ವ್ಯತೀತವಾಗಿ ಹೋದಮೇಲೆ ರಾಜ್ಯ ಹಾಗೂ ವಿವಾಹ ಮಾಡಿಕೊಳ್ಳದೆಯೇ ತಪದ ಅಂಗೀಕಾರ ಮಾಡಿದರು. ಅವರು ಸಂಯಮಕಾಲದಲ್ಲಿ ಆರು ದಿನ ಮತ್ತು ಆರು ದಿನ ಕಡಿಮೆ ಐವತ್ನಾಲ್ಕು ಸಾವಿರದಾ ಒಂಬೈನೂರು ವರ್ಷಗಳವರೆಗೆ ಕೇವಲಜ್ಞಾನ ಸಹಿತ ಉಪದೇಶ ಕೊಡುತ್ತ ಆಯು ವ್ಯತೀತ ಮಾಡಿ ಮುಕ್ತಿಧಾಮಕ್ಕೆ ಪ್ರಾಪ್ತರಾದರು.

ಮುನಿಸುವ್ರತ ಜಿನರು ಮೂವತ್ತು ಸಾವಿರ ವರ್ಷಗಳ ಆಯುವಿನೊಳಗಿಂದ ಏಳೂವರೆ ಸಾವಿರ ವರ್ಷ ಕುಮಾರ ಕಾಲದಲ್ಲಿ, ಹದಿನೈದು ಸಾವಿರ ವರ್ಷ ರಾಜ್ಯಕಾಲದಲ್ಲಿ, ಹನ್ನೊಂದು ತಿಂಗಳು ಸಂಯಮಕಾಲದಲ್ಲಿ ಮತ್ತು ಹನ್ನೊಂದು ತಿಂಗಳು ಕಡಿಮೆ ಏಳೂವರೆ ಸಾವಿರ ವರ್ಷಗಳವರೆಗೆ ಕೇವಲಜ್ಞಾನ ಸಹಿತ ವಿಹಾರದಲ್ಲಿ ಕಳೆದು ಮುಕ್ತರಾದರು.

ನಮಿನಾಥರು ಹತ್ತು ಸಾವಿರ ವರ್ಷದ ಆಯುವಿನೊಳಗಿಂದ ಎರಡೂವರೆ ಸಾವಿರ ವರ್ಷ ಕುಮಾರ ಕಾಲದಲ್ಲಿ ಐದು ಸಾವಿರ ವರ್ಷ ರಾಜ್ಯಕಾಲದಲ್ಲಿ, ಒಂಭತ್ತು ವರ್ಷ ಸಂಯಮಕಾಲದಲ್ಲಿ ಮತ್ತು ಒಂಭತ್ತು ವರ್ಷ ಕಡಿಮೆ ಎರಡೂವರೆ ಸಾವಿರ ವರ್ಷ ಕೇವಲಜ್ಞಾನ ಸಹಿತ ವಿಹಾರ ಮಾಡುತ್ತ ವ್ಯತೀತ ಮಾಡಿ ಪರಮಧಾಮಕ್ಕೆ ಪ್ರಾಪ್ತರಾದರು.

ನೇಮಿನಾಥ ಜಿನರು ಒಂದು ಸಾವಿರ ವರ್ಷದ ಆಯುವಿನೊಳಗಿಂದ ಮೂರು ನೂರು ವರ್ಷ ಕುಮಾರ ಕಾಲದಲ್ಲಿ ವ್ಯತೀತ ಮಾಡಿ, ರಾಜ್ಯ ಮಾಡದೆಯೇ ಮುನ್ನೂರು ವರ್ಷಗಳ ನಂತರ ತಪದ ಅಂಗೀಕಾರ ಮಾಡಿ ಹೊರಟು ಹೋದರು. ಸಂಯಮಕಾಲದಲ್ಲಿ ಐವತ್ತಾರು ದಿನ ಮತ್ತು ಐವತ್ತಾರು ದಿನ ಕಡಿಮೆ ಏಳು ನೂರು ವರ್ಷ ಕೇವಲಜ್ಞಾನದಿಂದ ಧರ್ಮೋಪದೇಶ ಕೊಡುವಲ್ಲಿ ವ್ಯತೀತ ಮಾಡಿ ಸಿದ್ಧರಾದರು.

ಪಾರ್ಶ್ವನಾಥ ಜಿನರು ನೂರು ವರ್ಷದ ಆಯುವಿನೊಳಗಿಂದ ಮೂವತ್ತು ವರ್ಷ ಕುಮಾರ ಕಾಲದಲ್ಲಿ ವ್ಯತೀತ ಮಾಡಿ ರಾಜ್ಯ ಹಾಗೂ ವಿವಾಹ ಮಾಡಿಕೊಳ್ಳದೆಯೇ ಮೂವತ್ತು ವರ್ಷದಲ್ಲಿ ದೀಕ್ಷೆ ಧಾರಣ ಮಾಡಿ, ನಾಲ್ಕು ತಿಂಗಳು ಸಂಯಮ ಕಾಲದಲ್ಲಿ ವ್ಯತೀತ ಮಾಡಿ, ನಾಲ್ಕು ತಿಂಗಳು ಕಡಿಮೆ ಎಪ್ಪತ್ತು ವರ್ಷ ಕೇವಲಜ್ಞಾನ ಸಹಿತರಾಗಿದ್ದುಕೊಂಡು ಭವ್ಯರಿಗೆ ಸಂಬೋಧನೆ ಮಾಡಿ ಮುಕ್ತರಾದರು.

ಮಹಾವೀರ ಜಿನರು ಎಪ್ಪತ್ತೆರಡು ವರ್ಷ ಆಯುವಿನೊಳಗಿಂದ ಮೂವತ್ತು ವರ್ಷ ಕುಮಾರ ಕಾಲದಲ್ಲಿ ವ್ಯತೀತ ಮಾಡಿ ವಿವಾಹ ಹಾಗೂ ರಾಜ್ಯ ಮಾಡದೆಯೇ ಮೂವತ್ತು ವರ್ಷದಲ್ಲಿ ತಪ ಧಾರಣ ಮಾಡಿ, ಹನ್ನೆರಡು ವರ್ಷ ಸಂಯಮಕಾಲದಲ್ಲಿದ್ದು ಉಳಿದ ಮೂವತ್ತು ವರ್ಷ ಕೇವಲಜ್ಞಾನಸಹಿತರಾಗಿದ್ದುಕೊಂಡು ಮುಕ್ತರಾದರು.

ಹೀಗೆ ಎಲ್ಲ ಜಿನರ ಆಯುವಿನ ವಿಭಾಜನೆಯಿದೆ. ಅವರಲ್ಲಿ ಕೆಲವರ ಆಯುವಿನ ನಾಲ್ಕು ವಿಭಾಗಗಳಿದ್ದರೆ ಕೆಲವರದು ರಾಜ್ಯಾವಸ್ಥೆಯಿಂದ ರಹಿತ ಮೂರು ವಿಭಾಗಗಳಿವೆ.

ಈಗ ಇಪ್ಪತ್ನಾಲ್ಕು ಜಿನರ ಗಣಧರ ದೇವರುಗಳ ಪ್ರಮಾಣ ಅನುಕ್ರಮದಿಂದ - ಎಂಭತ್ನಾಲ್ಕು, ತೊಂಭತ್ತು, ಒಂದು ನೂರಾ ಐದು, ಒಂದು ನೂರಾ ಮೂರು, ಒಂದು ನೂರಾ ಹದಿನಾರು, ಒಂದು ನೂರಾ ಹತ್ತು, ತೊಂಭತ್ತೈದು, ತೊಂಭತ್ಮೂರು, ಎಂಭತ್ತೆಂಟು, ಎಂಭತ್ತೊಂದು, ಎಪ್ಪತ್ತೇಳು, ಅರವತ್ತಾರು, ಐವತ್ತೈದು, ಐವತ್ತು, ನಲವತ್ಮೂರು, ಮೂವತ್ತಾರು; ಮೂವತ್ತೈದು, ಮೂವತ್ತು, ಇಪ್ಪತ್ತೆಂಟು, ಹದಿನೆಂಟು,ಹದಿನೇಳು, ಹನ್ನೊಂದು, ಹತ್ತು, ಹನ್ನೊಂದು- ಇವರು ಇಪ್ಪತ್ನಾಲ್ಕು ಜಿನರ ಹದಿನಾಲ್ಕು ನೂರಾ ಐವತ್ತೆರಡು ಗಣಧರರಿದ್ದಾರೆ.

ಪ್ರತಿಯೊಬ್ಬ ಜಿನರ ಒಬ್ಬ ಮುಖ್ಯ ಗಣಧರರ ಹೆಸರು ಅನುಕ್ರಮದಿಂದ - ವೃಷಭಸೇನ, ಸಿಂಹಸೇನ, ಚಾರುದತ್ತ, ವಜ್ರ, ಚಮರ, ವಜ್ರಬಲಿ, ಚರವಲಿ, ದಂಡಿಕ, ವೈದರ್ಭ, ಅನಾಗಾರ, ಕುಂಥು, ಸುಧರ್ಮ,

ನಂದರಾಜ, ಜಯ, ಅರಿಷ್ಟ, ಚಕ್ರಾಯು, ಸ್ವಯಂಭೂ, ಕುಂಥು, ವಿಶಾಖ, ಮಲ್ಲಿ, ಸೋಮ, ವರದತ್ತ, ಸ್ವಯಂಭೂ ಮತ್ತು ಇಂದ್ರಭೂತಿ - ಇವರು ಇಪ್ಪತ್ನಾಲ್ಕು ಜನ ಮುಖ್ಯ ಗಣಧರರಿದ್ದಾರೆ. ಇವರೆಲ್ಲ ಗಣಧರರು ಸಪ್ತ ಋದ್ಧಿ ಸಹಿತರಿರುತ್ತಾರೆ ಮತ್ತು ಸಂಪೂರ್ಣ ಜಿನಶ್ರುತದ ಪಾರಗಾಮಿಗಳಿರುತ್ತಾರೆ.

ಪ್ರತಿಯೊಬ್ಬ ಜಿನರ ಜತೆ ವೈರಾಗಿಗಳಾದ ದೊರೆಗಳ ಪ್ರಮಾಣ ಅನುಕ್ರಮದಿಂದ - ಮಹಾವೀರರ ಜತೆ ಮುನ್ನೂರು ದೊರೆಗಳು ಯತಿಗಳಾದರು. ಪಾರ್ಶ್ವನಾಥ ಮತ್ತು ಮಲ್ಲಿನಾಥರ ಜತೆ ಆರು ನೂರಾ ಆರು, ಆರುನೂರಾ ಆರು; ವಾಸುಪೂಜ್ಯರ ಜತೆ ಆರು ನೂರು, ಆದಿನಾಥರ ಜತೆ ನಾಲ್ಕು ಸಾವಿರ ದೊರೆಗಳು ಯತಿಗಳಾದರು. ಉಳಿದೆಲ್ಲ ಜಿನರ ಜತೆ ಒಂದೊಂದು ಸಾವಿರ ದೊರೆಗಳು ತಪ ಧಾರಣ ಮಾಡಿದರು.

ಇಪ್ಪತ್ನಾಲ್ವರು ಜಿನರ ಯತೀಶ್ವರರುಗಳ ಸಂಖ್ಯೆ - ವೃಷಭನಾಥರ ಸರ್ವ ಮುನೀಶ್ವರರು ಎಂಭತ್ನಾಲ್ಕು ಸಾವಿರ, ಅಜಿತನಾಥರ ಒಂದು ಲಕ್ಷ, ಸಂಭವನಾಥರ ಎರಡು ಲಕ್ಷ, ಅಭಿನಂದನನಾಥರ ಮೂರು ಲಕ್ಷ, ಸುಮತಿನಾಥರ ಮೂರು ಲಕ್ಷ ಇಪ್ಪತ್ತುಸಾವಿರ, ಪದ್ಮಪ್ರಭರ ಮೂರು ಲಕ್ಷ ಮೂವತ್ತು ಸಾವಿರ, ಸುಪಾರ್ಶ್ವನಾಥರ ಮೂರು ಲಕ್ಷ, ಚಂದ್ರಪ್ರಭರ ಎರಡೂವರೆ ಲಕ್ಷ, ಪುಷ್ಪದಂತ ಜಿನರ ಎರಡು ಲಕ್ಷ, ಶೀತಲನಾಥರ ಒಂದು ಲಕ್ಷ, ಶ್ರೆಯಾಂಸನಾಥರ ಎಂಭತ್ನಾಲ್ಕು ಸಾವಿರ, ವಾಸುಪೂಜ್ಯರ ಎಪ್ಪತ್ತೆರಡು ಸಾವಿರ, ವಿಮಲನಾಥರ ಅರವತ್ತೆಂಟು ಸಾವಿರ, ಅನಂತನಾಥರ ಅರವತ್ತಾರು ಸಾವಿರ, ಧರ್ಮನಾಥರ ಅರವತ್ನಾಲ್ಕು ಸಾವಿರ, ಶಾಂತಿನಾಥರ ಅರವತ್ತೆರಡು ಸಾವಿರ, ಕುಂಥುನಾಥರ ಅರವತ್ತುಸಾವಿರ, ಅರನಾಥರ ಐವತ್ತು ಸಾವಿರ, ಮಲ್ಲಿನಾಥರ ನಲವತ್ತು ಸಾವಿರ, ಮುನಿಸುವ್ರತರ ಮೂವತ್ತು ಸಾವಿರ, ನಮಿನಾಥರ ಇಪ್ಪತ್ತುಸಾವಿರ, ನೇಮಿನಾಥರ ಹದಿನೆಂಟು ಸಾವಿರ, ಪಾರ್ಶ್ವನಾಥರ ಹದಿನಾರು ಸಾವಿರ ಮತ್ತು ಮಹಾವೀರಸ್ವಾಮಿಯ ಸರ್ವಮುನೀಶ್ವರರು ಹದಿನಾಲ್ಕು ಸಾವಿರರಿದ್ದಾರೆ.

ಮುನಿಸಂಘದಲ್ಲಿ ಹದಿನಾಲ್ಕು ಪೂರ್ವದ ಪಾಠಿ, ಸೂತ್ರ ಅಭ್ಯಾಸಿ, ಅವಧಿ ಜ್ಞಾನಿ, ಕೇವಲಿ, ವಿಕ್ರಿಯಾ ಋದ್ಧಿಯಧಾರೀ, ವಿಪುಲಮತಿ ಮನಃಪರ್ಯಯಜ್ಞಾನಿ, ಮತ್ತು ವಾದಿತ್ವ ಋದ್ಧಿಧಾರಿ - ಹೀಗೆ ಏಳು ಪ್ರಕಾರದ ಮುನಿರಾಜರಿರುತ್ತಾರೆ.

ವೃಷಭದೇವರ ಎಂಭತ್ನಾಲ್ಕು ಸಾವಿರ ಮುನಿಗಳಲ್ಲಿ ನಲವತ್ತೇಳೂವರೆ ನೂರು ಹದಿನಾಲ್ಕು ಪೂರ್ವದ ಪಾಠಿಗಳು, ಸೂತ್ರ ಅಭ್ಯಾಸು ಶಿಷ್ಯರು ನಲವತ್ತೊಂದು ನೂರು ಐವತ್ತು, ಅವಧಿಜ್ಞಾನಿಗಳು ಒಂಭತ್ತು ಸಾವಿರ, ಕೇವಲಜ್ಞಾನಿಗಳು ಇಪ್ಪತ್ತು ಸಾವಿರ, ವಿಕ್ರಿಯಾ ಋದ್ಧಿಯ ಧಾರಕರು ಮೂವತ್ತು ಸಾವಿರದಾ ಆರು ನೂರು, ವಿಪುಲಮತಿ ಮನಃಪರ್ಯಯ ಜ್ಞಾನಿಗಳು ಹನ್ನೆರಡು ಸಾವಿರದಾ ಏಳೂವರೆ ನೂರು, ವಾದಿತ್ವ ಋದ್ಧಿಯ ಧಾರಕರು ಹನ್ನೆರಡು ಸಾವಿರದಾ ಏಳುನೂರು ಇದ್ದಾರೆ. (ಇದ್ದರು)

ಅಜಿತನಾಥರ ಒಂದು ಲಕ್ಷ ಮುನಿಗಳಲ್ಲಿ ಹದಿನಾಲ್ಕು ಪೂರ್ವದ ಪಾಠಿಗಳು ಮೂರು ಸಾವಿರದಾ ಐನೂರು ಮುನಿಗಳಿದ್ದರು. ಆಚಾರಾಂಗ ಸೂತ್ರದ ಧಾರಕ ಶಿಷ್ಯರು ಇಪ್ಪತ್ತೊಂದು ಸಾವಿರದಾ ಆರು ನೂರು, ಅವಧಿಜ್ಞಾನಿಗಳು ಒಂಭತ್ತು ಸಾವಿರದಾ ನಾಲ್ಕು ನೂರು, ಕೇವಲಜ್ಞಾನಿಗಳು ಇಪ್ಪತ್ತು ಸಾವಿರ, ವಿಕ್ರಿಯಾ ಋದ್ಧಿಯ ಧಾರಕರು ಇಪ್ಪತ್ತು ಸಾವಿರದಾ ನಾಲ್ಕು ನೂರಾ ಐವತ್ತು, ವಿಪುಲಮತಿ ಮನಃ ಪರ್ಯಯಧಾರಿಗಳು ಹನ್ನೆರಡು ಸಾವಿರದಾ ನಾಲ್ಕು ನೂರು, ವಾದಿತ್ವ ಋದ್ಧಿಯ ಧಾರಕರು ಹನ್ನೆರಡು ಸಾವಿರದಾ ನಾಲ್ಕು ನೂರು - ಹೀಗೆ ಎಲ್ಲರೂ ಸೇರಿ ಅಜಿತ ಜಿನರ ಸಮವಸರಣದಲ್ಲಿರುವ ಮುನಿಗಳು ಒಂದು ಲಕ್ಷ.

ಸಂಭವನಾಥ ಜಿನರ ಧರ್ಮಸಭೆಯಲ್ಲಿ ಹದಿನಾಲ್ಕು ಪೂರ್ವದ ಪಾಠಿಗಳು ಇಪ್ಪತ್ತೊಂದು ನೂರಾ ಐವತ್ತು, ಸೂತ್ರ ಅಭ್ಯಾಸಿ ಶಿಷ್ಯ ಮುನಿಗಳು ಎರಡು ಲಕ್ಷ ಮೂವತ್ತು ಸಾವಿರದಾ ಐವತ್ತು, ಅವಧಿ ಜ್ಞಾನಿಗಳು ಒಂಭತ್ತು

ಸಾವಿರದಾ ಎಂಟುನೂರು, ಕೇವಲಿಜ್ಞಾನಿಗಳು ಹದಿನಾರು ಸಾವಿರ, ವಿಕ್ರಿಯಾಋದ್ಧಿ ಧಾರಿಗಳು ಹತ್ತೊಂಭತ್ತು ಸಾವಿರ, ವಿಪುಲಮತಿ ಮನಃ ಪರ್ಯಾಯ ಜ್ಞಾನಧಾರಿಗಳು ಹನ್ನೆರಡು ಸಾವಿರ, ವಾದಿತ್ವ ಋದ್ಧಿಯಧಾರಕರು ಹನ್ನೊಂದು ಸಾವಿರದಾ ಒಂದು ನೂರು - ಹೀಗೆ ಮೂರನೇ ಜಿನರ ಏಳು ಪ್ರಕಾರದ ಸಂಘದೊಂದಿಗೆ ಎರಡು ಲಕ್ಷ ಮುನಿಗಳಿದ್ದರು.

ಅಭಿನಂದನ ಜಿನರ ಮೂರು ಲಕ್ಷ ಮುನಿಗಳಲ್ಲಿ ಹದಿನಾಲ್ಕು ಪೂರ್ವದ ಪಾಠಿಗಳು ಎರಡು ಸಾವಿರದಾ ಐನೂರು, ಸೂತ್ರದ ಅಭ್ಯಾಸಿ ಶಿಷ್ಯರು ಎರಡು ಲಕ್ಷ ಮೂವತ್ತು ಸಾವಿರದಾ ಐವತ್ತು, ಅವಧಿಜ್ಞಾನಿಗಳು ಒಂಭತ್ತು ಸಾವಿರದಾ ಎಂಟು ನೂರು, ಕೇವಲಜ್ಞಾನಿಗಳು ಹದಿನಾರು ಸಾವಿರ, ವಿಕ್ರಿಯಾಋದ್ಧಿಯ ಧಾರಕರು ಹತ್ತೊಂಭತ್ತು ಸಾವಿರ, ವಿಪುಲಮತಿ ಮನಃಪರ್ಯಾಯ ಜ್ಞಾನಧಾರಿಗಳು ಹನ್ನೊಂದು ಸಾವಿರದಾ ಆರುನೂರಾ ಐವತ್ತು, ವಾದಿತ್ವ ಋದ್ಧಿಯ ಧಾರಕರು ಹನ್ನೊಂದು ಸಾವಿರ ಮುನಿಗಳಿದ್ದರು.

ಸುಮತಿನಾಥರ ಮೂರು ಲಕ್ಷ ಇಪ್ಪತ್ತು ಸಾವಿರ ಮುನಿಗಳಲ್ಲಿ ಹದಿನಾಲ್ಕು ಪೂರ್ವದ ಪಾಠಿಗಳು ಇಪ್ಪತ್ನಾಲ್ಕು ನೂರು, ಸೂತ್ರ ಅಭ್ಯಾಸಿ ಶಿಷ್ಯ ಮುನಿಗಳು ಎರಡು ಲಕ್ಷ ಅರವತ್ನಾಲ್ಕು ಸಾವಿರದಾ ಮೂನ್ನೂರೈವತ್ತು, ಅವಧಿಜ್ಞಾನದ ಧಾರಕರು ಹನ್ನೊಂದು ಸಾವಿರ, ಕೇವಲಜ್ಞಾನದ ಧಾರಕರು ಹದಿಮೂರು ಸಾವಿರ, ವಿಕ್ರಿಯಾ ಋದ್ಧಿಯ ಧಾರಕರು ಹದಿನೆಂಟು ಸಾವಿರದಾ ನಾಲ್ಕು ನೂರು, ವಿಪುಲ ಮತಿ ಮನಃಪರ್ಯಾಯ ಜ್ಞಾನಿಗಳು ಹತ್ತು ಸಾವಿರದಾ ನಾಲ್ಕು ನೂರು, ವಾದಿತ್ವ ಋದ್ಧಿಯ ಧಾರಕರು ನಾಲ್ಕುನೂರಾ ಐವತ್ತು ಮುನಿಗಳಿದ್ದರು.

ಸುಪಾರ್ಶ್ವನಾಥರ ಸಂಘಸ್ಥ ಮೂರು ಲಕ್ಷ ಮುನಿಗಳಲ್ಲಿ ಹದಿನಾಲ್ಕು ಪೂರ್ವದ ಧಾರಿಗಳು ಎರಡು ಸಾವಿರದಾ ಮೂವತ್ತು ಯತಿಗಳಿದ್ದರು, ಸೂತ್ರ ಅಭ್ಯಾಸಿ ಶಿಷ್ಯ ಮುನಿಗಳು ಎರಡು ಲಕ್ಷ ಮೂವತ್ನಾಲ್ಕು ಸಾವಿರದಾ ಒಂಭೈನೂರಾ ಇಪ್ಪತ್ತು ಇದ್ದರು, ಅವಧಿಜ್ಞಾನಿಗಳು ಒಂಭತ್ತು ಸಾವಿರ, ಕೇವಲಿಗಳು ಹನ್ನೊಂದು ಸಾವಿರದಾ ಮುನ್ನೂರು, ವಿಕ್ರಿಯಾ ಋದ್ಧಿಯ ಧಾರಕರು ಹದಿನೈದು ಸಾವಿರದಾ ಒಂದು ನೂರೈವತ್ತು, ವಿಪುಲಮತಿ ಮನಃಪರ್ಯಾಯ ಜ್ಞಾನಿಗಳು ಒಂಭತ್ತು ಸಾವಿರದಾ ಆರುನೂರು, ವಾದಿತ್ವ ಋದ್ಧಿಯ ಧಾರಕರು ಎಂಟು ಸಾವಿರ ಮುನಿಗಳಿದ್ದರು.

ಎಂಟನೆಯ ಚಂದ್ರಪ್ರಭ ಜಿನರ ಎರಡೂವರೆ ಲಕ್ಷ ಮುನಿಗಳಲ್ಲಿ ಹದಿನಾಲ್ಕು ಪೂರ್ವದ ಪಾಠಿಗಳು ಎರಡು ಸಾವಿರ, ಸೂತ್ರ ಅಭ್ಯಾಸಿ ಶಿಷ್ಯ ಮುನಿಗಳು ಎರಡುಲಕ್ಷ ಹತ್ತು ಸಾವಿರದಾ ನಾನೂರು, ಅವಧಿಜ್ಞಾನದ ಧಾರಕರು ಎಂಟು ಸಾವಿರ, ಕೇವಲಿಗಳು ಹತ್ತು ಸಾವಿರ, ವಿಕ್ರಿಯಾ ಋದ್ಧಿಯ ಧಾರಕರು ನಾಲ್ಕು ಸಾವಿರ, ವಿಪುಲಮತಿ ಮನಃಪರ್ಯಾಯದ ಧಾರಕರು ಎಂಟು ಸಾವಿರ, ವಾದಿತ್ವ ಋದ್ಧಿಯ ಧಾರಕರು ಏಳು ಸಾವಿರದಾ ಆರು ನೂರು ಇದ್ದರು.

ಪುಷ್ಪದಂತ ಜಿನರ ಎರಡು ಲಕ್ಷ ಮುನಿಗಳಲ್ಲಿ ಹದಿನಾಲ್ಕು ಪೂರ್ವದ ಧಾರಕರು ಹದಿನೈದು ನೂರು, ಸೂತ್ರಪಾಠಿ ಶಿಷ್ಯ ಮುನಿಗಳು ಒಂದು ಲಕ್ಷ ಅರವತ್ತೈದು ಸಾವಿರದಾ ಐನೂರು, ಅವಧಿಜ್ಞಾನದ ಧಾರಕರು ಎಂಟು ಸಾವಿರದಾ ನಾಲ್ಕುನೂರು. ಕೇವಲಜ್ಞಾನಿಗಳು ಏಳೂವರೆ ಸಾವಿರ, ವಿಕ್ರಿಯಾ ಋದ್ಧಿಯ ಧಾರಕರು ಮೂರು ಸಾವಿರದಾ ನಾಲ್ಕುನೂರು, ವಿಪುಲಮತಿ ಮನಃಪರ್ಯಾಯ ಜ್ಞಾನಿಗಳು ಅರವತ್ತೈದುನೂರು, ವಾದಿತ್ವ ಋದ್ಧಿಯ ಧಾರಕರು ಎಪ್ಪತ್ತೆರಡು ನೂರು ಇದ್ದರು.

ಶೀತಲನಾಥರ ಸಂಘಕ್ಕೆ ಸಂಬಂಧಿಸಿದ ಒಂದು ಲಕ್ಷ ಮುನಿಗಳಲ್ಲಿ ಹದಿನಾಲ್ಕು ಪೂರ್ವಗಳ ಧಾರಕರು ಹದಿನಾಲ್ಕು ನೂರು, ಸೂತ್ರ ಅಭ್ಯಾಸಿ ಶಿಷ್ಯ ಮುನಿಗಳು ಐವತ್ತೊಂಭತ್ತು ಸಾವಿರದಾ ಇನ್ನೂರು, ಅವಧಿಜ್ಞಾನಿಗಳು ಏಳು ಸಾವಿರದಾ ಇನ್ನೂರು, ಕೇವಲಿಗಳು ಏಳು ಸಾವಿರ, ವಿಕ್ರಿಯಾ ಋದ್ಧಿಯ ಧಾರಕರು ಹನ್ನೆರಡು ಸಾವಿರ, ವಿಪುಲಮತಿ ಮನಃಪರ್ಯಾಯ ಜ್ಞಾನಿಗಳು ಏಳು ಸಾವಿರದಾ ಐನೂರು, ವಾದಿತ್ವ ಋದ್ಧಿಯ ಧಾರಕರು ಐದು ಸಾವಿರದಾ ಏಳು ನೂರು ಇದ್ದರು.

ಶ್ರೇಯಾಂಸ ಜಿನರ ಎಂಬತ್ನಾಲ್ಕು ಸಾವಿರ ಮುನಿಗಳಲ್ಲಿ ಹದಿನಾಲ್ಕು ಪೂರ್ವದ ಧಾರಿಗಳು ಹದಿಮೂರು ನೂರು ಸೂತ್ರಪಾಠಿ ಶಿಷ್ಯ ಮುನಿಗಳು ನಲವತ್ತೆಂಟು ಸಾವಿರದಾ ಎರಡು ನೂರು, ಅವಧಿಜ್ಞಾನದ ಧಾರಕರು ಆರು ಸಾವಿರ, ಕೇವಲಜ್ಞಾನಿಗಳು ಆರೂವರೆ ಸಾವಿರ, ವಿಕ್ರಿಯಾ ಋದ್ಧಿಯ ಧಾರಕರು ಹನ್ನೊಂದು ಸಾವಿರ, ವಿಪುಲಮತಿ ಮನಃಪರ್ಯಾಯ ಜ್ಞಾನಿಗಳು ಐದು ಸಾವಿರದಾ ನಾಲ್ಕುನೂರು, ಉಳಿದವರು ವಾದಿತ್ವ ಋದ್ಧಿಯ ಧಾರಕರಿದ್ದರು.

ವಾಸುಪೂಜ್ಯ ಜಿನರ ಎಪ್ಪತ್ತೆರಡು ಸಾವಿರ ಬುದ್ಧಿಸಾಗರ ಯತಿಗಳಲ್ಲಿ ಅದೆಷ್ಟೋ ಹದಿನಾಲ್ಕು ಪೂರ್ವ ಧಾರಿಗಳು, ಅದೆಷ್ಟೋ ಸೂತ್ರ ಅಭ್ಯಾಸಿ ಶಿಷ್ಯ ಮುನಿಗಳು, ಅದೆಷ್ಟೋ ಅವಧಿ ಜ್ಞಾನದ ಧಾರಕರು, ಆರು ಸಾವಿರ ಕೇವಲಿಗಳು, ಹತ್ತು ಸಾವಿರ ವಿಕ್ರಿಯಾ ಋದ್ಧಿಯಧಾರಕರು, ಆರು ಸಾವಿರ ವಿಪುಲಮತಿ ಮನಃಪರ್ಯಾಯ ಜ್ಞಾನಿಗಳು ನಾಲ್ಕು ಸಾವಿರದಾ ಎರಡು ನೂರು ವಾದಿತ್ವ ಋದ್ಧಿಯ ಧಾರಕ ಮುನಿಗಳಿದ್ದರು.

ವಿಮಲನಾಥ ಜಿನರ ಅರವತ್ತೆಂಟು ಸಾವಿರ ಯತಿಗಳಲ್ಲಿ ಹದಿನಾಲ್ಕು ಪೂರ್ವದ ಪಾಠಿಗಳು ಹನ್ನೊಂದು ನೂರು, ಸೂತ್ರಪಾಠಿ ಶಿಷ್ಯ ಜಾತಿಯ ಮುನಿಗಳು ಮೂವತ್ತೆಂಟು ಸಾವಿರದಾ ಐನೂರು, ಅವಧಿಜ್ಞಾನದ ಧಾರಕರು ನಲವತ್ತೆಂಟು ನೂರು, ಕೇವಲಿಗಳು ಐವತ್ತೈದು ನೂರು, ವಿಕ್ರಿಯಾ ಋದ್ಧಿಗಳು ಒಂಭತ್ತು ಸಾವಿರ, ವಿಪುಲಮತಿ ಮನಃ ಪರ್ಯಾಯ ಜ್ಞಾನಿಗಳು ಐದು ಸಾವಿರದಾ ಐನೂರು, ವಾದಿತ್ವ ಋದ್ಧಿಯ ಧಾರಕ ಮುನೀಶ್ವರರು ಮೂವತ್ತಾರು ನೂರು ಇದ್ದರು.

ಅನಂತನಾಥರ ಸಂಘದಲ್ಲಿರುವ ಅರವತ್ತಾರು ಸಾವಿರ ಮುನಿಗಳಲ್ಲಿ ಹದಿನಾಲ್ಕು ಪೂರ್ವಗಳ ಧಾರಕರು ಒಂದು ಸಾವಿರ, ಸೂತ್ರ ಅಭ್ಯಾಸಿ ಶಿಷ್ಯ ಮುನಿಗಳು ಹತ್ತೊಂಭತ್ತು ಸಾವಿರದಾ ಐನೂರು, ಅವಧಿಜ್ಞಾನದ ಧಾರಕರು ಮೂವತ್ಮೂರು ನೂರು, ಕೇವಲಜ್ಞಾನಿಗಳು ಐದು ಸಾವಿರ, ವಿಕ್ರಿಯಾ ಋದ್ಧಿಯ ಧಾರಕರು ಎಂಟು ಸಾವಿರ, ವಿಪುಲಮತಿ ಮನಃಪರ್ಯಾಯ ಜ್ಞಾನಿಗಳು ಐದು ಸಾವಿರ, ವಾದಿತ್ವ ಋದ್ಧಿಯ ಧಾರಕರು ಮೂವತ್ತೆರಡು ನೂರು ಇದ್ದರು.

ಧರ್ಮನಾಥ ಜಿನರ ಅರವತ್ನಾಲ್ಕು ಸಾವಿರ ಯತಿಗಳಲ್ಲಿ ಹದಿನಾಲ್ಕು ಪೂರ್ವದ ಧಾರಕರು ಒಂಭೈನೂರು, ಶಿಷ್ಯ ಜಾತಿಯವರು ನಲವತ್ತು ಸಾವಿರದಾ ಏಳು ನೂರು, ಅವಧಿಜ್ಞಾನಿಗಳು ಮೂವತ್ತಾರು ನೂರು, ಕೇವಲಿಗಳು ನಲವತ್ತೈದು ನೂರು, ವಿಕ್ರಿಯಾ ಋದ್ಧಿಯ ಧಾರಕರು ಏಳು ಸಾವಿರ, ವಿಪುಲಮತಿ ಮನಃಪರ್ಯಾಯ ಜ್ಞಾನಿಗಳು ನಲವತ್ತೈದು ನೂರು, ವಾದಿತ್ವ ಋದ್ಧಿಯ ಧಾರಕರು ಇಪ್ಪತ್ತೆಂಟು ನೂರು ಇದ್ದರು.

ಶಾಂತಿನಾಥ ಜಿನರ ಅರವತ್ತೆರಡು ಸಾವಿರ ಯತಿಗಳಲ್ಲಿ ಹದಿನಾಲ್ಕು ಪೂರ್ವದ ಧಾರಕರು ಎಂಟು ನೂರು, ಶಿಷ್ಯ ಜಾತಿಯ ಮುನಿಗಳು ನಲವತ್ತೊಂದು ಸಾವಿರದಾ ಎಂಟು ನೂರು, ಅವಧಿ ಜ್ಞಾನಿಗಳು ಮೂರು ಸಾವಿರ, ಕೇವಲ ಜ್ಞಾನಿಗಳು ನಾಲ್ಕು ಸಾವಿರ, ವಿಕ್ರಿಯಾ ಋದ್ಧಿಯ ಧಾರಕರು ಆರು ಸಾವಿರ, ವಿಪುಲಮತಿ ಮನಃಪರ್ಯಾಯ ಜ್ಞಾನಿಗಳು ನಾಲ್ಕು ಸಾವಿರ, ವಾದಿತ್ವ ಋದ್ಧಿಯಧಾರಕರು ಇಪ್ಪತ್ನಾಲ್ಕು ನೂರು ಇದ್ದರು.

ಕುಂಥುನಾಥ ಜಿನರ ಅರವತ್ತು ಸಾವಿರ ಯತಿಗಳಲ್ಲಿ ಹದಿನಾಲ್ಕು ಪೂರ್ವದ ಧಾರಕರು ಏಳು ನೂರು, ಶಿಷ್ಯ ಜಾತಿಯ ಮುನಿಗಳು ನಲವತ್ಮೂರು ಸಾವಿರದಾ ಒಂದು ನೂರಾಐವತ್ತು, ಅವಧಿ ಜ್ಞಾನಿಗಳು ಎರಡೂವರೆ ಸಾವಿರ, ಕೇವಲ ಜ್ಞಾನಿಗಳು ಎರಡು ಸಾವಿರದಾ ಎಂಟು ನೂರು, ವಿಕ್ರಿಯಾ ಋದ್ಧಿಯ ಧಾರಕರು ಐವತ್ತೊಂದು ನೂರು, ವಿಪುಲಮತಿ ಮನಃಪರ್ಯಾಯ ಜ್ಞಾನಿಗಳು ಮೂವತ್ತೇಳು ನೂರಾ ಐವತ್ತು, ವಾದಿತ್ವ ಋದ್ಧಿಯ ಧಾರಕರು ಎರಡು ಸಾವಿರ ಇದ್ದರು.

ಅರನಾಥರ ಐವತ್ತು ಸಾವಿರ ಸಂಘದಲ್ಲಿ ಹದಿನಾಲ್ಕು ಪೂರ್ವದ ಧಾರಕರು ಆರುನೂರಾ ಹತ್ತು, ಶಿಷ್ಯ ಜಾತಿಯ ಮುನಿಗಳು ಮೂವತ್ತೈದು ಸಾವಿರದಾ ಎಂಟುನೂರಾ ಮೂವತ್ತೈದು, ಅವಧಿ ಜ್ಞಾನಿಗಳು ಇಪ್ಪತ್ತೆಂಟು ನೂರು, ಕೇವಲಜ್ಞಾನಿಗಳು ಇಪ್ಪತ್ತೆಂಟು ನೂರು, ವಿಕ್ರಿಯಾಋದ್ಧಿಯ ಧಾರಕರು ಮೂವತ್ಮೂರು ನೂರು, ವಿಪುಲಮತಿ ಮನಃಪರ್ಯಾಯ ಜ್ಞಾನಿಗಳು ಎರಡು ಸಾವಿರದಾ ಐವತ್ತೈದು, ವಾದಿತ್ವ ಋದ್ಧಿಯ ಧಾರಕರು ಹದಿನಾರುನೂರು ಇದ್ದರು.

ಮಲ್ಲಿನಾಥರ ನಲವತ್ತು ಸಾವಿರ ಯತಿಗಳಲ್ಲಿ ಹದಿನಾಲ್ಕು ಪೂರ್ವದ ಧಾರಕರು ಐನೂರಾಐವತ್ತು, ಶಿಷ್ಯ ಜಾತಿಯ ಮುನಿಗಳು ಇಪ್ಪತ್ತೊಂಭತ್ತು ಸಾವಿರ, ಅವಧಿ ಜ್ಞಾನಿಗಳು ಇಪ್ಪತ್ತೆರಡು ನೂರು, ಕೇವಲ ಜ್ಞಾನಿಗಳು ಇಪ್ಪತ್ತಾರೂವರೆ ನೂರು, ವಿಕ್ರಿಯಾಋದ್ಧಿಯ ಧಾರಕರು ಹದಿನಾಲ್ಕು ನೂರು, ವಿಪುಲಮತಿ ಮನಃಪರ್ಯಾಯ ಜ್ಞಾನಿಗಳು ಇಪ್ಪತ್ತೆರಡು ನೂರು, ವಾದಿತ್ವ ಋದ್ಧಿಯ ಧಾರಕರು ಇಪ್ಪತ್ತು ನೂರು ಇದ್ದರು.

ಮುನಿಸುವ್ರತರ ಮೂವತ್ತು ಸಾವಿರ ಯತಿಗಳಲ್ಲಿ ಹದಿನಾಲ್ಕು ಪೂರ್ವದ ಧಾರಿಗಳು ಐನೂರು, ಶಿಷ್ಯ ಜಾತಿಯ ಮುನಿಗಳು ಇಪ್ಪತ್ತೊಂದು ಸಾವಿರ, ಅವಧಿಜ್ಞಾನಿಗಳು ಹದಿನೆಂಟು ನೂರು, ಕೇವಲಜ್ಞಾನಿಗಳು ಹದಿನೆಂಟು ನೂರು, ವಿಕ್ರಿಯಾ ಋದ್ಧಿಯ ಧಾರಕರು ಇಪ್ಪತ್ತೆರಡು ನೂರು, ವಿಪುಲಮತಿ ಮನಃಪರ್ಯಾಯ ಜ್ಞಾನಿಗಳು ಹದಿನೈದು ನೂರು, ವಾದಿತ್ವ ಋದ್ಧಿಯಧಾರಕರು ಹನ್ನೆರಡು ನೂರು ಇದ್ದರು.

ನಮಿನಾಥರ ಇಪ್ಪತ್ತು ಸಾವಿರ ಯತಿಗಳಲ್ಲಿ ಹದಿನಾಲ್ಕು ಪೂರ್ವದ ಧಾರಿಗಳು ನಾಲ್ಕು ನೂರಾ ಐವತ್ತು, ಶಿಷ್ಯ ಜಾತಿಯ ಯತಿಗಳು ಹನ್ನೆರಡು ಸಾವಿರದಾ ಆರುನೂರು, ಅವಧಿಜ್ಞಾನಿಗಳು ಹದಿನಾರು ನೂರು, ಕೇವಲಿಗಳು ಹದಿನಾರು ನೂರು, ವಿಕ್ರಿಯಾ ಋದ್ಧಿಯ ಧಾರಕರು ಹದಿನೈದು ನೂರು, ವಿಪುಲಮತಿ ಮನಃಪರ್ಯಾಯ ಜ್ಞಾನಿಗಳು ಹನ್ನೆರಡೂವರೆ ನೂರು, ವಾದಿತ್ವ ಋದ್ಧಿಯ ಧಾರಕರು ಒಂದು ಸಾವಿರ ಮುನಿಗಳಿದ್ದರು.

ನೇಮಿನಾಥರ ಹದಿನೆಂಟು ಸಾವಿರ ಯತಿಗಳಲ್ಲಿ ಹದಿನಾಲ್ಕು ಪೂರ್ವದ ಧಾರಕರು ನಾಲ್ಕು ನೂರು, ಶಿಷ್ಯ ಜಾತಿಯ ಮುನಿಗಳು ಹನ್ನೊಂದು ಸಾವಿರದಾ ಎಂಟು ನೂರು, ಅವಧಿಜ್ಞಾನಿಗಳು ಹದಿನೈದು ನೂರು, ಕೇವಲಜ್ಞಾನಿಗಳು ಹದಿನೈದು ನೂರು, ವಿಕ್ರಿಯಾ ಋದ್ಧಿಯ ಧಾರಕರು ಹನ್ನೊಂದು ನೂರು, ವಿಪುಲಮತಿ ಮನಃಪರ್ಯಾಯ ಜ್ಞಾನಿಗಳು ಒಂಭೈನೂರು, ವಾದಿತ್ವ ಋದ್ಧಿಯ ಧಾರಕರು ಎಂಟು ನೂರು ಮುನಿಗಳಿದ್ದರು.

ಪಾರ್ಶ್ವನಾಥರ ಹದಿನಾರು ಸಾವಿರ ಯತಿಗಳಲ್ಲಿ ಹದಿನಾಲ್ಕು ಪೂರ್ವದ ಧಾರಿಗಳು ಮೂರೂವರೆ ನೂರು, ಶಿಷ್ಯ ಜಾತಿಯ ಮುನಿಗಳು ಹತ್ತು ಸಾವಿರದಾ ಒಂಭೈನೂರು, ಅವಧಿಜ್ಞಾನಿಗಳು ಹದಿನಾಲ್ಕು ನೂರು, ಕೇವಲ ಜ್ಞಾನಿಗಳು ಒಂದು ಸಾವಿರ, ವಿಕ್ರಿಯಾ ಋದ್ಧಿಯ ಧಾರಕರು ಒಂದು ಸಾವಿರ, ವಿಪುಲಮತಿ ಮನಃಪರ್ಯಾಯ ಜ್ಞಾನಿಗಳು ಏಳೂವರೆ ನೂರು, ವಾದಿತ್ವ ಋದ್ಧಿಯ ಧಾರಕ ಮುನಿಗಳು ಆರುನೂರು ಇದ್ದರು.

ಮಹಾವೀರ ಜಿನರ ಹದಿನಾಲ್ಕು ಸಾವಿರ ಯತಿಗಳಲ್ಲಿ ಹದಿನಾಲ್ಕು ಪೂರ್ವದ ಧಾರಿಗಳು ಮೂರು ನೂರು, ಶಿಷ್ಯ ಜಾತಿಯ ಮುನಿಗಳು ಒಂಭತ್ತು ಸಾವಿರದಾ ಒಂಭತ್ತು, ಅವಧಿಜ್ಞಾನಿಗಳು ಹದಿಮೂರು ನೂರು, ಕೇವಲಿಗಳು ಏಳು ನೂರು, ವಿಕ್ರಿಯಾ ಋದ್ಧಿಯ ಧಾರಕರು ಒಂಭೈನೂರು, ವಿಪುಲಮತಿ ಮನಃಪರ್ಯಾಯ ಜ್ಞಾನಿಗಳು ಐನೂರು, ವಾದಿತ್ವ ಋದ್ಧಿಯ ಧಾರಕರು ನಾಲ್ಕು ನೂರು ಮುನಿಗಳಿದ್ದರು.

ಇಪ್ಪತ್ನಾಲ್ಕು ಜಿನರ ಸಂಘದ ಆರ್ಯಿಕೆಯರ ಪ್ರಮಾಣ - ಆದಿದೇವರ ಸಂಘದ ಆರ್ಯಿಕೆಯರು ಮೂರು ಲಕ್ಷ ಐವತ್ತು ಸಾವಿರ, ಅಜಿತನಾಥರದು ಮೂರು ಲಕ್ಷ ಇಪ್ಪತ್ತು ಸಾವಿರ, ಸಂಭವ, ಅಭಿನಂದನ ಮತ್ತು ಸುಮತಿನಾಥ ಇವರು ಮೂವರು ಜಿನರ ಸಂಘದಲ್ಲಿ ಮೂರು ಲಕ್ಷ ಮೂವತ್ತು ಸಾವಿರ, ಮೂರು ಲಕ್ಷ ಮೂವತ್ತು ಸಾವಿರ, ಪದ್ಮಪ್ರಭರ ಸಂಘದಲ್ಲಿ ನಾಲ್ಕು ಲಕ್ಷ ಇಪ್ಪತ್ತು ಸಾವಿರ, ಸುಪಾರ್ಶ್ವನಾಥ ಜಿನರ ಸಂಘದಲ್ಲಿ ಮೂರು ಲಕ್ಷ ಮೂವತ್ತು ಸಾವಿರ; ಚಂದ್ರಪ್ರಭ, ಪುಷ್ಪದಂತ, ಶೀತಲನಾಥ - ಇವರು ಮೂವರು ಜಿನರ ಸಂಘದಲ್ಲಿ ಮೂರು ಲಕ್ಷ ಎಂಭತ್ತು ಸಾವಿರ; ಮೂರು ಲಕ್ಷ ಎಂಭತ್ತು ಸಾವಿರ, ಶ್ರೇಯಾಂಸನಾಥರ ಸಂಘದಲ್ಲಿ ಒಂದು ಲಕ್ಷ ಇಪ್ಪತ್ತುಸಾವಿರ, ವಾಸುಪೂಜ್ಯರ ಸಂಘದಲ್ಲಿ ಒಂದು ಲಕ್ಷ ಆರು ಸಾವಿರ, ವಿಮಲ ಜಿನರ ಸಂಘದಲ್ಲಿ ಒಂದು ಲಕ್ಷ ಮೂರು ಸಾವಿರ, ಅನಂತನಾಥರ ಸಂಘದೊಳಗೆ ಒಂದು ಲಕ್ಷ ಎಂಟು ಸಾವಿರ, ಧರ್ಮನಾಥರ ಸಂಘದಲ್ಲಿ ಅರವತ್ತೆರಡು ಸಾವಿರದಾ ನಾನೂರು. ಶಾಂತಿಜಿನರ ಸಂಘದಲ್ಲಿ ಅರವತ್ತು ಸಾವಿರದಾ ಮುನ್ನೂರು. ಕುಂಥುನಾಥರ ಸಂಘದಲ್ಲಿ ಅರವತ್ತು ಸಾವಿರದಾ

ಮುನ್ನೂರು, ಅರನಾಥರ ಸಂಘದಲ್ಲಿ ಅರವತ್ತು ಸಾವಿರ, ಮಲ್ಲಿನಾಥರ ಸಂಘದಲ್ಲಿ ಐವತ್ತೈದು ಸಾವಿರ, ಮುನಿಸುವ್ರತರ ಸಂಘದಲ್ಲಿ ಐವತ್ತು ಸಾವಿರ. ನಮಿನಾಥ, ನೇಮಿನಾಥ, ಪಾರ್ಶ್ವನಾಥ ಮತ್ತು ವರ್ಧಮಾನರ ಸಂಘದಲ್ಲಿ ಕ್ರಮದಿಂದ ನಲವತ್ತೈದು ಸಾವಿರ, ನಲವತ್ತು ಸಾವಿರ, ಮೂವತ್ತಾರು ಸಾವಿರ, ಮೂವತ್ತಾರು ಸಾವಿರ ಆರ್ಯಿಕೆಯರಿದ್ದರು.

ಶ್ರಾವಕರ ಪ್ರಮಾಣ - ವೃಷಭದೇವರಿಂದ ಚಂದ್ರಪ್ರಭರವರೆಗೆ ಎಂಟು ತೀರ್ಥಂಕರರ ಸಮಯಕ್ಕೆ ಮೂರು ಮೂರು ಲಕ್ಷ ಶ್ರಾವಕರಾದರು. ಪುಷ್ಪದಂತರಿಂದ ಶಾಂತಿನಾಥರವರೆಗೆ ಎರಡೆರಡು ಲಕ್ಷ ಶ್ರಾವಕರಾದರು ಮತ್ತು ಕುಂಥುನಾಥರಿಂದ ಮಹಾವೀರರವರೆಗೆ ಒಂದೊಂದು ಲಕ್ಷ ಶ್ರಾವಕರಾದರು.

ಶ್ರಾವಿಕೆಯರ ಪ್ರಮಾಣವು - ವೃಷಭದೇವರಿಂದ ಹಿಡಿದು ಮಹಾವೀರರವರೆಗೆ ಶ್ರಾವಕರ ಸಂಖ್ಯೆಗಿಂತಲೂ ಶ್ರಾವಿಕೆಯರದು ಅಧಿಕವಿರುವುದು ಕಂಡು ಬಂದಿದೆ. ಆಗಮ ಪ್ರಮಾಣ ತಿಳಿಯುವುದು.

ಈ ಪ್ರಕಾರ ಇಪ್ಪತ್ನಾಲ್ಕು ಜಿನರ ಚತುರ್ವಿಧ ಸಂಘದ ನಿರೂಪಣೆ ಮಾಡಲಾಯಿತು.

ಇಪ್ಪತ್ನಾಲ್ಕು ಜಿನರ ಶಿಷ್ಯರು ಸಿದ್ಧರಾಗಿ ಹೋದವರ ಸಂಖ್ಯೆ ಅನುಕ್ರಮದಿಂದ - ವೃಷಭದೇವರ ಅರವತ್ತು ಸಾವಿರದಾ ಒಂಭೈನೂರು ಶಿಷ್ಯರು ಸಿದ್ಧರಾದರು. ಅಜಿತನಾಥ ಜಿನರ ಎಪ್ಪತ್ತೆರಡು ಸಾವಿರದಾ ಒಂದು ನೂರು, ಸಂಭವ ಜಿನರ ಒಂದು ಲಕ್ಷ ಎಪ್ಪತ್ತು ಸಾವಿರದಾ ಒಂದು ನೂರು, ಅಭಿನಂದನ ಜಿನರ ಎರಡು ಲಕ್ಷ ಎಂಭತ್ತು ಸಾವಿರದಾ ಒಂದು ನೂರು, ಸುಮತಿನಾಥರ ಮೂರು ಲಕ್ಷ ಒಂದು ಸಾವಿರದಾ ಆರು ನೂರು, ಪದ್ಮಪ್ರಭ ಜಿನರ ಮೂರು ಲಕ್ಷ ಹದಿಮೂರು ಸಾವಿರದಾ ಆರು ನೂರು, ಸುಪಾರ್ಶ್ವನಾಥರ ಎರಡು ಲಕ್ಷ ಎಂಭತ್ತೈದು ಸಾವಿರ, ಚಂದ್ರಪ್ರಭರ ಎರಡು ಲಕ್ಷ ಮೂವತ್ನಾಲ್ಕು ಸಾವಿರ, ಪುಷ್ಪದಂತರ ಒಂದು ಲಕ್ಷ ಎಪ್ಪತ್ತೊಂಭತ್ತು ಸಾವಿರದಾ ಆರು ನೂರು, ಶೀತಲನಾಥರ ಎಂಭತ್ತು ಸಾವಿರದಾ ಆರು ನೂರು, ಶ್ರೇಯಾಂಸ ಜಿನರ ಅರವತ್ತೈದು ಸಾವಿರದಾ ಆರು ನೂರು, ವಾಸುಪೂಜ್ಯರ ಐವತ್ನಾಲ್ಕು ಸಾವಿರದಾ ಆರು ನೂರು, ವಿಮಲ ಜಿನರ ಐವತ್ತೊಂದು ಸಾವಿರದಾ ಮೂರು ನೂರು, ಅನಂತ ಜಿನರ ಐವತ್ತೊಂದು ಸಾವಿರ, ಧರ್ಮನಾಥ ಜಿನರ ನಲವತ್ತೊಂಭತ್ತು ಸಾವಿರದಾ ಏಳು ನೂರು, ಶಾಂತಿನಾಥ ಜಿನರ ನಲವತ್ತೆಂಟು ಸಾವಿರದಾ ನಾಲ್ಕು ನೂರು, ಕುಂಥು ಜಿನರ ನಲವತ್ತಾರು ಸಾವಿರದಾ ಎಂಟು ನೂರು, ಅರ ಜಿನರ ಮೂವತ್ತು ಸಾವಿರದಾ ಎರಡು ನೂರು, ಮಲ್ಲಿನಾಥ ಜಿನರ ಇಪ್ಪತ್ತೆಂಟು ಸಾವಿರದಾ ಎಂಟು, ಮುನಿಸುವ್ರತ ಜಿನರ ಇಪ್ಪತ್ತೊಂಭತ್ತು ಸಾವಿರದಾ ಎರಡು ನೂರು, ನಮಿ ಜಿನರ ಒಂಭತ್ತು ಸಾವಿರದಾ ಆರು ನೂರು, ನೇಮಿನಾಥ ಜಿನರ ಎಂಟು ಸಾವಿರ, ಪಾರ್ಶ್ವನಾಥ ಜಿನರ ಆರು ಸಾವಿರದಾ ಎರಡು ನೂರು ಮತ್ತು ಮಹಾವೀರ ಜಿನರ ಏಳು ಸಾವಿರದಾ ಎರಡು ನೂರು ಶಿಷ್ಯರು ಮುಕ್ತರಾದರು.

ಇವರಲ್ಲಿಯೂ ವೃಷಭದೇವರಿಂದ ಹಿಡಿದು ಶಾಂತಿನಾಥರವರೆಗೆ ಹದಿನಾರು ತೀರ್ಥಂಕರರ ಸಿದ್ಧಲೋಕ ಗಮನದ ಮಧ್ಯದಲ್ಲಿಯೇ ಅವರ ಶಿಷ್ಯರು ಮುಕ್ತರಾದರು. ಎಂದರೆ ಪ್ರಾರಂಭದ ಹದಿನಾರು ತೀರ್ಥಂಕರರಿಗೆ ಕೇವಲಜ್ಞಾನ ಉತ್ಪನ್ನವಾಗಿರುವ ಸಮಯದಿಂದ ಹಿಡಿದು ನಿರ್ವಾಣವಾಗುವ ಮುನ್ನ-ಮಧ್ಯದ ಕಾಲದಲ್ಲಿಯೇ ಅವರುಗಳ ಶಿಷ್ಯರು ಮುಕ್ತರಾಗಿ ಹೋದರು. ಉಳಿದ ಎಂಟು ತೀರ್ಥಂಕರರ ಶಿಷ್ಯರು ತೀರ್ಥಂಕರರ ಮುಕ್ತಿಯ ನಂತರವೂ ಕೆಲವರು ಒಂದು ತಿಂಗಳಿನಲ್ಲಿ, ಕೆಲವರು ಎರಡು ತಿಂಗಳಿನಲ್ಲಿ, ಕೆಲವರು ನಾಲ್ಕು ತಿಂಗಳಿನಲ್ಲಿ, ಕೆಲವರು ಒಂದು ವರ್ಷದಲ್ಲಿ, ಕೆಲವರು ಎರಡು ವರ್ಷದಲ್ಲಿ - ಇತ್ಯಾದಿ ಕಾಲದ ನಂತರವೂ ಮೋಕ್ಷಕ್ಕೆ ಹೋದರು - ಇದೇ ಪ್ರಕಾರ ಎಲ್ಲ ಜಿನರ ಶಿಷ್ಯರುಗಳ ಮೋಕ್ಷವು ಅನುಕ್ರಮದಿಂದ ಆಯಿತೆಂದು ತಿಳಿಯುವುದು.

ಇಪ್ಪತ್ನಾಲ್ಕು ಜಿನರಲ್ಲಿ ಪಾರಸ್ಪಾರಿಕ ಅಂತರ - ವೃಷಭದೇವರ ನಂತರ ಐವತ್ತು ಲಕ್ಷ ಕೋಟಿ ಸಾಗರ ಕಾಲವು ವ್ಯತೀತವಾಗಿ ಹೋದ ಮೇಲೆ ಅಜಿತನಾಥರಾದರು, ಅಜಿತನಾಥರ ನಂತರ ಮೂವತ್ತು ಲಕ್ಷ ಕೋಟಿ ಸಾಗರದ ನಂತರ ಸಂಭವ ಜಿನರಾದರು. ಸಂಭವನಾಥರ ನಂತರ ಹತ್ತು ಲಕ್ಷ ಕೋಟಿ ಸಾಗರ ಕಾಲ ಕಳೆದ ಮೇಲೆ ನಾಲ್ಕನೆಯ ಅಭಿನಂದನ

ಜಿನರಾದರು. ಅಭಿನಂದರ ನಂತರ ಒಂಭತ್ತು ಲಕ್ಷ ಕೋಟಿ ಸಾಗರ ಕಾಲದ ಅವಧಿಯು ಪೂರ್ಣವಾದ ಮೇಲೆ ಸುಮತಿನಾಥರಾದರು. ಸುಮತಿನಾಥರು ನಿರ್ವಾಣ ಪಡೆದ ಮೇಲೆ ತೊಂಭತ್ತು ಸಾವಿರ ಕೋಟಿ ಸಾಗರದ ನಂತರ ಪದ್ಮಪ್ರಭ ಜಿನರಾದರು. ಪದ್ಮಪ್ರಭರ ನಂತರ ಒಂಭತ್ತು ಸಾವಿರ ಕೋಟಿ ಸಾಗರ ಕಳೆದ ಮೇಲೆ ಸುಪಾರ್ಶ್ವನಾಥರಾದರು. ಸುಪಾರ್ಶ್ವನಾಥರ ನಂತರ ಒಂಭೈನೂರು ಕೋಟಿ ಸಾಗರ ಕಳೆದ ಮೇಲೆ ಚಂದ್ರಪ್ರಭರಾದರು. ಚಂದ್ರಪ್ರಭರ ನಂತರ ತೊಂಭತ್ತು ಕೋಟಿ ಸಾಗರ ಕಳೆದ ಮೇಲೆ ಪುಷ್ಪದಂತರಾದರು. ಪುಷ್ಪದಂತರ ನಂತರ ಒಂಭತ್ತು ಕೋಟಿ ಸಾಗರ ಕಳೆದ ಮೇಲೆ ಶೀತಲನಾಥರಾದರು. ಶೀತಲ ಜಿನರ ನಂತರ ಶ್ರೇಯಾಂಸನಾಥರ ಮಧ್ಯದಲ್ಲಿನ ಅಂತರವು ಆರವತ್ತಾರು ಲಕ್ಷ ಇಪ್ಪತ್ತಾರು ಸಾವಿರ ವರ್ಷ ಕಡಿಮೆ ಒಂದು ಕೋಟಿ ಸಾಗರ ಕಾಲವಿದೆ. ಶ್ರೇಯಾಂಸ ಜಿನರ ನಂತರ ಐವತ್ನಾಲ್ಕು ಸಾಗರ ಕಾಲ ಕಳೆದು ಹೋದ ಮೇಲೆ ವಾಸುಪೂಜ್ಯ ಜಿನರಾದರು. ವಾಸುಪೂಜ್ಯರ ನಂತರ ಮೂವತ್ತು ಸಾಗರ ವ್ಯತೀತವಾಗಿ ಹೋದಮೇಲೆ ವಿಮಲನಾಥ ಜಿನರಾದರು. ವಿಮಲನಾಥರ ನಂತರ ಒಂಭತ್ತು ಸಾಗರ ಕಳೆದು ಹೋದ ಮೇಲೆ ಅನಂತನಾಥ ಜಿನರಾದರು. ಅನಂತನಾಥರ ನಂತರ ಅರ್ಧ ಪಲ್ಯಕಾಲವು ವ್ಯತೀತವಾದ ಮೇಲೆ ಧರ್ಮನಾಥರಾದರು. ಧರ್ಮನಾಥರ ನಂತರ ಮುಕ್ಕಾಲು ಪಲ್ಯ ಕಡಿಮೆ ಮೂರು ಸಾಗರ ಕಾಲ ಕಳೆದ ಮೇಲೆ ಶಾಂತಿನಾಥರಾದರು. ಶಾಂತಿನಾಥರ ನಂತರ ಅರ್ಧ ಪಲ್ಯಕಾಲವು ವ್ಯತೀತವಾಗಿ ಹೋದ ಮೇಲೆ ಕುಂಥುನಾಥರಾದರು. ಕುಂಥುನಾಥರ ನಂತರ ಸಾವಿರ ಕೋಟಿ ವರ್ಷ ಕಡಿಮೆ ಕಾಲುಭಾಗ ಪಲ್ಯಕಾಲ ಕಳೆದ ಮೇಲೆ ಅರನಾಥರಾದರು. ಅರನಾಥರ ನಂತರ ಸಾವಿರ ಕೋಟಿ ವರ್ಷಗಳು ವ್ಯತೀತವಾಗಿ ಹೋದ ಮೇಲೆ ಮಲ್ಲಿನಾಥರಾದರು. ಮಲ್ಲಿನಾಥರ ನಂತರ ಐವತ್ನಾಲ್ಕು ಲಕ್ಷ ವರ್ಷಗಳು ಕಳೆದ ಮೇಲೆ ಮುನಿಸುವ್ರತ ಜಿನರಾದರು. ಮುನಿಸುವ್ರತರ ನಂತರ ಆರು ಲಕ್ಷ ವರ್ಷಗಳು ಕಳೆದ ಮೇಲೆ ನಮಿ ಜಿನರಾದರು. ನಮಿನಾಥರ ನಂತರ ಐವತ್ತು ಲಕ್ಷ ವರ್ಷಗಳು ವ್ಯತೀತವಾದ ಮೇಲೆ ನೇಮಿನಾಥರಾದರು. ನೇಮಿನಾಥರ ನಂತರ ಎಂಭತ್ಮೂರು ಸಾವಿರದಾ ಏಳು ನೂರೈವತ್ತು ವರ್ಷ ಕಳೆದ ಮೇಲೆ ಪಾರ್ಶ್ವನಾಥರಾದರು. ಪಾರ್ಶ್ವನಾಥರ ನಂತರ ಇನ್ನೂರೈವತ್ತು ವರ್ಷಗಳು ವ್ಯತೀತವಾದ ಮೇಲೆ ವರ್ಧಮಾನ ಜಿನರಾದರು.

ಈ ಪ್ರಕಾರ ಇಪ್ಪತ್ನಾಲ್ಕು ಜಿನರ ಇಪ್ಪತ್ಮೂರು ಅಂತರವನ್ನು ಹೇಳಲಾಯಿತು. ಭಗವಾನ ಮಹಾವೀರರ ನಿರ್ವಾಣ ಸಮಯದಲ್ಲಿ ಚತುರ್ಥ ಕಾಲದ ಮೂರು ವರ್ಷ ಎಂಟು ತಿಂಗಳು ಹದಿನೈದು ದಿನ ಶೇಷವಿತ್ತು. ಚತುರ್ಥ ಕಾಲವು ನಲವತ್ತೆರಡು ಸಾವಿರ ವರ್ಷ ಕಡಿಮೆ ಒಂದು ಕೋಟಾಕೋಟಿ ಸಾಗರದ್ದಿತ್ತು. ನಲವತ್ತೆರಡು ಸಾವಿರ ವರ್ಷದಲ್ಲಿ ಇಪ್ಪತ್ತೊಂದು ಸಾವಿರ ವರ್ಷದ್ದು ಪಂಚಮಕಾಲ ಮತ್ತು ಇಪ್ಪತ್ತೊಂದು ಸಾವಿರ ವರ್ಷದ್ದು ಆರನೆಯ ಕಾಲವಿದೆ. ಪಂಚಮಕಾಲದ ಕೊನೆಯವರೆಗೆ ಮಹಾವೀರರ ಧರ್ಮವಿರುತ್ತದೆ; ಷಷ್ಠಮ ಕಾಲದಲ್ಲಿ ಧರ್ಮದ ಅಭಾವವಿರುತ್ತದೆ.

ಧರ್ಮದ ವಿರಹ ಕಾಲ - ವೃಷಭದೇವರಿಂದ ಹಿಡಿದು ಪುಷ್ಪದಂತರವರೆಗೆ ಧರ್ಮವು ಅಖಂಡ ರೂಪದಿಂದ ನಡೆಯುತ್ತಲಿತ್ತು. ಕೆಲವೊಮ್ಮೆ ಶ್ರಾವಕರು, ಕೆಲವೊಮ್ಮೆ ಮುನಿಗಳು, ಕೆಲವೊಮ್ಮೆ ಕೇವಲಜ್ಞಾನಿಗಳಾಗುತ್ತಲಿದ್ದರು; ಅವರುಗಳ ಪ್ರಸಾದದಿಂದ ಧರ್ಮೋಪದೇಶವು ನಡೆಯುತ್ತಿತ್ತು. ಧರ್ಮವು ಹರಿಗೆಡಲಿಲ್ಲ. ಪುಷ್ಪದಂತರ ನಂತರ ಕಾಲುಭಾಗ ಪಲ್ಯದವರೆಗೆ ಧರ್ಮದ ವಿಚ್ಛೇದವಾಯಿತು. ಶೀತಲನಾಥರ ನಂತರ ಅರ್ಧ ಪಲ್ಯದವರೆಗೆ ಧರ್ಮದ ವಿಚ್ಛೇದವಾಯಿತು. ಶ್ರೇಯಾಂಸ ಜಿನರ ನಂತರ ಮುಕ್ಕಾಲು ಪಲ್ಯದವರೆಗೆ ಧರ್ಮದ ವಿಚ್ಛೇದವಾಯಿತು. ವಾಸುಪೂಜ್ಯರ ನಂತರ ಒಂದು ಪಲ್ಯದವರೆಗೆ ಧರ್ಮದ ವಿಚ್ಛೇದ ಉಳಿಯಿತು, ನಂತರ ವಿಮಲ ಜಿನರಾದರು ವಿಮಲಜಿನರ ನಂತರ ಮುಕ್ಕಾಲು ಪಲ್ಯದವರೆಗೆ ಧರ್ಮದ ಅಭಾವವಾಯಿತು. ಅದರ ನಂತರ ಅನಂತನಾಥರಾದರು ಅನಂತನಾಥರ ನಂತರ ಅರ್ಧ ಪಲ್ಯದವರೆಗೆ ಧರ್ಮದ ವಿಚ್ಛೇದ ಉಳಿಯಿತು. ಧರ್ಮನಾಥರ ನಂತರ ಕಾಲುಭಾಗ ಪಲ್ಯದವರೆಗೆ ಧರ್ಮದ ಅಭಾವ ಉಳಿಯಿತು - ಈ ಪ್ರಕಾರ ತೀರ್ಥಂಕರರ ಅಂತರಾಲದಲ್ಲಿ

ನಾಲ್ಕು ಪಲ್ಯದವರೆಗೆ ಮುನಿ, ಆರ್ಯಿಕೆ, ಶ್ರಾವಕ, ಶ್ರಾವಿಕೆಯೆಂಬ ಚತುಃಸಂಘದ ಅಭಾವ ಉಳಿಯಿತು. ಜಿನಧರ್ಮದ ನಾಶವಾಯಿತು. ತೀರ್ಥಂಕರರ ಜನ್ಮವಾದ ಮೇಲೆ ಪುನಃ ಧರ್ಮದ ಪ್ರಾರಂಭವಾಯಿತು.

ಮೊದಲನೆಯ ತೀರ್ಥಂಕರರಿಂದ ಹಿಡಿದು ಎಂಟು ತೀರ್ಥಂಕರರವರೆಗೆ ನಿರಂತರ ಧರ್ಮವಿತ್ತು . ಮೊದಲನೇ ತೀರ್ಥಂಕರರಿಂದ ಹಿಡಿದು ಏಳು ತೀರ್ಥಂಕರರವರೆಗೆ ಕೇವಲಜ್ಞಾನರೂಪದ ಸಂಪದವು ಸತತ ನಡೆಯುತ್ತ ಬಂತು. ಕೇವಲಜ್ಞಾನಿಗಳ ಅಭಾವವೆಂದೂ ಆಗಲಿಲ್ಲ. ಚಂದ್ರಪ್ರಭರ ನಂತರ ತೊಂಭತ್ತು ಕೇವಲಿಗಳಾದರು. ಶೇಷ ಕಾಲದಲ್ಲಿ ಕೇವಲಿಗಳಾಗಲಿಲ್ಲ, ಮುನಿಗಳಾದರು. ಪುಷ್ಪದಂತರ ನಂತರ ತೊಂಭತ್ತು ಕೇವಲಿಗಳಾದರು. ಶೀತಲನಾಥರ ತೀರ್ಥದಲ್ಲಿ ಎಂಭತ್ನಾಲ್ಕು ಕೇವಲಿಗಳಾದರು. ಶ್ರೇಯಾಂಸನಾಥರ ನಂತರ ಅವರ ತೀರ್ಥದಲ್ಲಿ ಎಪ್ಪತ್ತೆರಡು ಕೇವಲಿಗಳಾದರು. ವಾಸುಪೂಜ್ಯರ ನಂತರ ಅವರ ತೀರ್ಥದಲ್ಲಿ ನಲವತ್ನಾಲ್ಕು ಕೇವಲಿಗಳಾದರು. ವಿಮಲನಾಥರ ನಂತರ ಅವರ ತೀರ್ಥದಲ್ಲಿ ನಲವತ್ತು ಕೇವಲಿಗಳಾದರು. ಅನಂತನಾಥರ ನಂತರ ಮೂವತ್ತಾರು ಕೇವಲಿಗಳಾದರು. ಧರ್ಮನಾಥರ ನಂತರ ಮೂವತ್ತೆರಡು ಕೇವಲಿಗಳಾದರು. ಕುಂಥುನಾಥರ ನಂತರ ಇಪ್ಪತ್ನಾಲ್ಕು ಕೇವಲಿಗಳಾದರು. ಅರನಾಥರ ನಂತರ ಹದಿನಾರು ಕೇವಲಿಗಳಾದರು. ಮುನಿಸುವ್ರತರ ನಂತರ ಹನ್ನೆರಡು ಕೇವಲಿಗಳಾದರು. ನಮಿನಾಥರ ನಂತರ ಎಂಟು ಕೇವಲಿಗಳಾದರು. ನೇಮಿನಾಥರ ನಂತರ ನಾಲ್ಕು ಕೇವಲಿಗಳಾದರು. ಪಾರ್ಶ್ವನಾಥರ ನಂತರ ಮೂವರು ಕೇವಲಿಗಳಾದರು. ಮಹಾವೀರರ ನಂತರ ಮೂವರು ಕೇವಲಿಗಳಾದರು - ಈ ಪ್ರಕಾರ ಇಪ್ಪತ್ನಾಲ್ಕು ತೀರ್ಥಂಕರರ ನಂತರ ಆಗಿರುವಂಥ ಕೇವಲಿಗಳ ಸಂಖ್ಯೆಯಿದೆ.

ಒಬ್ಬರು ತೀರ್ಥಂಕರರ ನಂತರ ಎಲ್ಲಿಯವರೆಗೆ ಇನ್ನೊಬ್ಬರು ತೀರ್ಥಂಕರರ ದಿವ್ಯ ದೇಶನಾ ಪ್ರಾರಂಭವಾಗುವುದಿಲ್ಲ. ಅಲ್ಲಿಯವರೆಗಿನ ಕಾಲವು ಪೂರ್ವ ತೀರ್ಥಂಕರರ ತೀರ್ಥಕಾಲವೆನಿಸಿಕೊಳ್ಳುತ್ತದೆ. ಹೇಗೆಂದರೆ ಮೊದಲನೆಯ ತೀರ್ಥಂಕರರ ನಂತರ ಅಜಿತನಾಥರಿಗೆ ಕೇವಲಜ್ಞಾನವಾಗುವ ಪೂರ್ವದ ಐವತ್ತು ಲಕ್ಷ ಕೋಟಿ ಸಾಗರ ಕಾಲವನ್ನು ಪ್ರಥಮ ಜಿನರದೆಂದು ತಿಳಿಯುವುದು. ಹೀಗೆಯೇ ಎಲ್ಲ ಕಡೆಗೆ ತಿಳಿಯುವುದು. ಮಹಾವೀರ ನಂತರ ಅರವತ್ತೆರಡು ವರ್ಷಗಳಲ್ಲಿ ಮೂವರು ಕೇವಲಿಗಳಾದರು-ಗೌತಮಗಣಧರ ಕೇವಲಿ, ಸುಧರ್ಮಾಚಾರ್ಯ ಕೇವಲಿ ಮತ್ತು ಕೊನೆಯದಾಗಿ ಜಂಬೂಸ್ವಾಮಿ ಕೇವಲಿ ಅವರ ನಂತರ ಕೇವಲಿಗಳಾಗಲಿಲ್ಲ.

ಜಂಬೂಸ್ವಾಮಿಯ ನಂತರ ನೂರು ವರ್ಷಗಳಲ್ಲಿ ಹನ್ನೊಂದು ಅಂಗ, ಹದಿನಾಲ್ಕು ಪೂರ್ವದ ಪಾಠೀ, ಮಹಾಬುದ್ಧಿಸಾಗರ, ಸರ್ವ ಶ್ರುತದ ಪಾಠೀ ವಿಷ್ಣು, ನಂದೀಮಿತ್ರ, ಅಪರಾಜಿತ, ಗೋವರ್ಧನ ಮತ್ತು ಭದ್ರಬಾಹು - ಎಂಬ ಐವರು ಆಚಾರ್ಯರು ಶ್ರುತಕೇವಲಿಗಳಾದರು. ಅವರ ನಂತರ ಒಂದು ನೂರಾ ಎಂಭತ್ಮೂರು ವರ್ಷಗಳಲ್ಲಿ ಹನ್ನೊಂದು ಅಂಗ ಮತ್ತು ಹತ್ತು ಪೂರ್ವದ ಪಾಠೀ ವಿಶಾಖ, ಪ್ರೋಷ್ಠಿಲ, ಕ್ಷತ್ರಿಯ, ಜಯಸೇನ, ನಾಗಸೇನ, ಸಿದ್ಧಾರ್ಥ ಧೃತಿಷೇಣ, ವಿಜಯ, ಬುದ್ಧಿಮಾನ, ಗಂಗದೇವ ಮತ್ತು ಧರ್ಮಸೇನ - ಎಂಬ ಹನ್ನೊಂದು ಜನ ಆಚಾರ್ಯರಾದರು. ಅವರ ನಂತರ ಪೂರ್ವಗಳ ಪಾಠಿಗಳಾಗಲಿಲ್ಲ. ಅವರ ನಂತರ ಇನ್ನೂರಾ ಇಪ್ಪತ್ತು ವರ್ಷಗಳಲ್ಲಿ ನಿಷಧ, ಜಯಪಾಲ, ಪಾಂಡವ, ಧ್ರುವಸೇನ ಮತ್ತು ಕಂಸ - ಎಂಬ ಐವರು ಆಚಾರ್ಯರು ಹನ್ನೊಂದು ಅಂಗಗಳ ಪಾಠಿಯಾದರು. ಹನ್ನೊಂದು ಅಂಗಗಳ ಜ್ಞಾನವು ಇಲ್ಲಿಯವರೆಗೆ ಉಳಿಯಿತು. ಇವರ ನಂತರ ಒಂದು ನೂರಾ ಹದಿನೆಂಟು ವರ್ಷದಲ್ಲಿ ಒಂದು ಆಚಾರಾಂಗದ ಪಾಠೀ ಸುಭದ್ರಾಚಾರ್ಯ, ಯಶೋಭದ್ರಾಚಾರ್ಯ, ಭದ್ರಬಾಹು ಆಚಾರ್ಯ, ಮತ್ತು ಲೋಹಾಚಾರ್ಯ - ಇವರು ನಾಲ್ವರು ಮುನಿಗಳಾದರು. ಇವರ ನಂತರ ಅಂಗಗಳ ಜ್ಞಾನವು ಉಳಿಯಲಿಲ್ಲ.

ಮಹಾವೀರರ ಹನ್ನೊಂದು ಗಣಧರರ ಆಯು-ಮೊದಲನೇ ಗಣಧರರ ಆಯು ತೊಂಭತ್ತೆರಡು ವರ್ಷ, ಎರಡನೆಯವರದು ಎಂಭತ್ನಾಲ್ಕು ವರ್ಷ, ಮೂರನೆಯವರದು ಎಂಭತ್ತು ವರ್ಷ, ನಾಲ್ಕನೆಯವರದು ನೂರು ವರ್ಷ, ಐದನೆಯವರದು ಎಂಭತ್ಮೂರು ವರ್ಷ, ಆರನೆಯವರದು ಎಂಭತ್ತೈದು ವರ್ಷ, ಏಳನೆಯವರದು

ಎಪ್ಪತ್ತೆಂಟು ವರ್ಷ, ಎಂಟನೆಯವರದು ಎಪ್ಪತ್ತೆರಡು ವರ್ಷ, ಒಂಭತ್ತನೆಯವರದು ಅರವತ್ತು ವರ್ಷ, ಹತ್ತನೆಯವರದು ಐವತ್ತು ವರ್ಷ ಮತ್ತು ಹನ್ನೊಂದನೆಯವರದು ನಲವತ್ತು ವರ್ಷ - ಇದು ಹನ್ನೊಂದು ಜನ ಗಣಧರರ ಆಯುವಿದೆ - ಈ ಪ್ರಕಾರ ಇಪ್ಪತ್ನಾಲ್ಕು ಜಿನರ ಸಂಘದ ವರ್ಣನೆಯು ಪೂರ್ಣವಾಯಿತು.

ತೃತೀಯ ಕಾಲದಲ್ಲಿ ಪಲ್ಯದ ಎಂಟನೆಯ ಒಂದು ಭಾಗವು ಶೇಷವಿರುವಾಗ ಪ್ರತಿಶ್ರುತ, ಸನ್ಮತಿ, ಕ್ಷೇಮಂಕರ, ಕ್ಷೇಮಂಧರ, ಸೀಮಂಕರ, ಸೀಮಂಧರ, ವಿಮಲವಾಹನ, ಚಕ್ಷುಷ್ಮಾನ, ಯಶಸ್ವೀ, ಅಭಿಚಂದ್ರ, ಚಂದ್ರಾಭ, ಮರುದೇವ, ಪ್ರಸೇನಜಿತ ಮತ್ತು ನಾಭಿರಾಜರೆಂಬ ಹದಿನಾಲ್ಕು ಕುಲಂಕರರಾದರು.

ಇವರುಗಳ ಆಯು, ಕಾಯಾದಿಗಳ ರಚನೆ - ಮೊದಲನೆಯ ಪ್ರತಿಶ್ರುತ ಕುಲಂಕರನ ಕಾಯವು ಹದಿನೆಂಟುನೂರು ಧನುಷ ಎತ್ತರವಿತ್ತು. ಇವನ ಸಮಯದಲ್ಲಿ ಜ್ಯೋತಿಷೀ ಜಾತಿಯ ಕಲ್ಪವೃಕ್ಷಗಳ ಜ್ಯೋತಿಯು ಮಂದವಾಗಿ ಹೋಗುವುದರಿಂದ ಸೂರ್ಯ-ಚಂದ್ರರು ಕಾಣಿಸಲಾರಂಭಿಸುವ ಕಾರಣ ಅವರನ್ನು ನೋಡಿ ಪ್ರಜೆಗಳು ಭಯಭೀತರಾದರು. ಮತ್ತು ಪ್ರಭು ! ಇದೇನಿದೆ ? ಇಲ್ಲಿಯವರೆಗೆ ಹೀಗೆಂದೂ ಕಂಡು ಬಂದಿರಲಿಲ್ಲ. ಇದರಿಂದ ನಮಗೆ ಏನಾಗುವುದು ? ಎಂದು ಕುಲಂಕರನಿಗೆ ಕೇಳಿದಾಗ - ಮಹಾವಿವೇಕೀ ಕುಲಂಕರನು ಎಲ್ಲರನ್ನು ಸಂಬೋಧಿಸುತ್ತ 'ಭಯಭೀತರಾಗಬೇಡಿರಿ, ಇವರು ಜ್ಯೋತಿಷೀ ದೇವಗಳ ಇಂದ್ರರಿದ್ದಾರೆ, ಇವರ ವಿಮಾನಗಳು ಅನಾದಿ ನಿಧನವಿವೆ. ಇಲ್ಲಿಯವರೆಗೆ ಕಲ್ಪವೃಕ್ಷಗಳ ಪ್ರಭೆಯ ಕಾರಣ ಕಂಡು ಬರುತ್ತಿರಲಿಲ್ಲ; ಈಗ ಕಲ್ಪವೃಕ್ಷಗಳ ಜ್ಯೋತಿಯು ಮಂದವಾಗುವುದರಿಂದ ಕಂಡು ಬರಲಾರಂಭಿಸಿದ್ದಾರೆ. ಇದರಲ್ಲಿ ಖೇದ ಮನ್ನಿಸುವ ಮಾತಿಲ್ಲ'ವೆಂದು ತಿಳಿಸಿಕೊಟ್ಟು ಪ್ರಜೆಗಳನ್ನು ಸುಖಿಗಳನ್ನಾಗಿಸಿದನು.

ಎರಡನೆಯ ಕುಲಂಕರನ ಕಾಯವು ಹದಿಮೂರು ನೂರು ಧನುಷ್ಯ ಎತ್ತರವಿತ್ತು. ಇವನ ಕಾಲದಲ್ಲಿ ಜ್ಯೋತಿಷೀ ಜಾತಿಯ ಕಲ್ಪವೃಕ್ಷಗಳ ಪ್ರಭೆಯು ಇನ್ನೂ ಅಧಿಕ ಮಂದವಾಗಿ ಹೋಗಿರುವುದರಿಂದ ನಕ್ಷತ್ರ-ತಾರೆಗಳ ವಿಮಾನಗಳೂ ಕಾಣಿಸತೊಡಗುವುದರಿಂದ ಮುಗ್ಧ ಜಗತ್ತು ಕುಲಂಕರನ ಹತ್ತಿರ ಹೋಗಿ ಕೇಳುತ್ತದೆ. ಕುಲಂಕರನು ಇದರ ರಹಸ್ಯವನ್ನೆಲ್ಲ ತಿಳಿಸಿಕೊಟ್ಟು ಅವರನ್ನು ಸುಖಿ ಮಾಡುವುದರಿಂದ ಇವನ ಹೆಸರು ಸನ್ಮತಿಯಾಯಿತು.

ಮೂರನೆಯ ಕುಲಂಕರನ ಕಾಯವು ಎಂಟುನೂರು ಧನುಷ್ಯವಿತ್ತು. ಇವನ ಕಾಲದಲ್ಲಿ ಸಿಂಹಾದಿ ಜೀವಗಳು ಕ್ರೂರವಾಗಿ ಹೋಗುವ ಕಾರಣ, ಅವುಗಳನ್ನು ನೋಡಿ, ಭಯಭೀತರಾದ ಮುಗ್ಧ ಜನರು ಕುಲಂಕರನ ಹತ್ತಿರ ಬಂದು, ಓ ಪ್ರಭು ! ಇಲ್ಲಿಯವರೆಗೆ ನಾವು ಈ ಜೀವಗಳ ಜೊತೆಗೆ ರಮಿಸುತ್ತಿದ್ದೆವು, ಕ್ರೀಡಿಸುತ್ತಿದ್ದೆವು - ಅವುಗಳಿಂದ ವಿವಿಧ ಸುಖ ದೊರಕುತ್ತಿತ್ತು; ಆದರೆ ಈಗ ಇವು ಭಯದಿಂದ ನಮಗೆ ತೊಂದರೆ ಮಾಡುತ್ತಿವೆಯಲ್ಲ ? ಎಂದಾಗ ಕುಲಂಕರನು ಆ ಜನರನ್ನು ಮುಗ್ಧ, ಸರಳ ಪರಿಣಾಮಿಗಳೆಂದು ತಿಳಿದು 'ನೀವು ಇವುಗಳ ವಿಶ್ವಾಸ ಮಾಡಬೇಡಿರಿ ದೊಣ್ಣೆ, ಮುಷ್ಟಿಯಿಂದ ಇವುಗಳ ಪ್ರತಿಕಾರ ಮಾಡಿರಿ' ಎಂದು ಹೇಳಿ ಅವರನ್ನು ಸುಖಿಯನ್ನಾಗಿಸಿದನು. ಅದರಿಂದ ಇವನ ಹೆಸರು ಕ್ಷೇಮಂಕರವಾಯಿತು.

ನಾಲ್ಕನೆಯ ಕುಲಂಕರನ ಶಾರೀರಿಕ ಉತ್ತುಂಗತೆಯು ಏಳು ನೂರಾ ಎಪ್ಪತ್ತೈದು ಧನುಷ್ಯವಿತ್ತು. ಇವನ ಸಮಯದಲ್ಲಿ ಸಿಂಹಾದಿ ಜೀವಗಳು ಮತ್ತಷ್ಟು ಕ್ರೂರವಾದವು ಆಗ ಕುಲಂಕರನು 'ನೀವೆಲ್ಲ ದೊಣ್ಣೆ ಇಟ್ಟುಕೊಂಡಿರಬೇಕು ಮತ್ತು ಅವು ಬಂದರೆ ಹೊಡೆಯಬೇಕು, ಅವುಗಳ ವಿಶ್ವಾಸ ಮಾಡಬಾರದು ಕಾಲದೋಷದಿಂದ ಅವು ಮುಂದೆ ಇನ್ನೂ ಅಧಿಕ ಕ್ರೂರವಾಗುವವು' ಎಂಬ ಉಪಾಯ ತಿಳಿಸಿಕೊಟ್ಟು ಸುಖಿ ಮಾಡಿದನು; ಅದರಿಂದ ಕ್ಷೇಮಂಧರ ಹೆಸರಾಯಿತು.

ಐದನೆಯ ಕುಲಂಕರನ ಸಮಯದಲ್ಲಿ ಕಾಯದ ಎತ್ತರವು ಏಳು ನೂರಾ ಐವತ್ತು ಧನುಷ್ಯ ಉಳಿಯಿತು. ಕಲ್ಪವೃಕ್ಷಗಳು ಕಡಿಮೆಯಾದವು. ಕೆಲವರ ಹತ್ತಿರ ಕೆಲವು ಜಾತಿಯ ಕಲ್ಪವೃಕ್ಷಗಳು ಉಳಿಯಲಿಲ್ಲ; ಆಗ ಬೇರೆಯವರ

ಹತ್ತಿರ ಕೆಲವು ಬೇರೆ ಜಾತಿಯ ಕಲ್ಪವೃಕ್ಷ ಇಲ್ಲದಿರುವುದರಿಂದ ಪರಸ್ಪರರಲ್ಲಿ ಖೇದವು ಹೆಚ್ಚಾಗುವುದರಿಂದ ಅವರು ಕುಲಂಕರನ ಹತ್ತಿರ ಹೋದರು. ಕುಲಂಕರನು ಅವರಿಗೆ ಅವರವರ ಸೀಮೆಯನ್ನು ತಿಳಿಸಿಕೊಟ್ಟು ತಮ್ಮ-ತಮ್ಮ ಕ್ಷೇತ್ರದಲ್ಲಿ ಯಾವುದು ಇರುತ್ತದೆ ಅದನ್ನು ಭೋಗಿಸಬೇಕು. ಬೇರೆಯವರ ಸೀಮೆಯೊಳಗೆ ಅವರ ಅನುಮತಿಯಿಲ್ಲದೆ ಪ್ರವೇಶ ಮಾಡಬಾರದು. ಪರಸ್ಪರರಲ್ಲಿ ಯಾಚನೆ ಮಾಡಿ ಪಡೆಯಿರಿ. ಯಾವುದು ನಿಮ್ಮ ಹತ್ತಿರ ಇಲ್ಲ ಅದನ್ನು ಇನ್ನೊಬ್ಬರ ಹತ್ತಿರದಿಂದ ಕೇಳಿ ತಗೆದುಕೊಳ್ಳಿ. ನಿಮ್ಮ ಹತ್ತಿರ ಇರುವುದನ್ನು ಅವರಿಗೆ ಕೊಡಿರಿ. - ಈ ಪ್ರಕಾರ ಸೀಮೆಯನ್ನು ತಿಳಿಸಿಕೊಟ್ಟಿರುವುದರಿಂದ ಅವರನ್ನು ಸೀಮಂಕರ ಎನ್ನಲಾಯಿತು.

ಆರನೆಯ ಕುಲಂಕರನ ಕಾಯವು ಏಳು ನೂರಾ ಇಪ್ಪತ್ತೈದು ಧನುಷ್ಯವಿತ್ತು. ಈತನ ಸಮಯದಲ್ಲಿ ಕಲ್ಪವೃಕ್ಷಗಳು ಇನ್ನೂ ವಿಶೇಷ ರೂಪದಿಂದ ಕಡಿಮೆಯಾಗಿ ಹೋಗುವ ಕಾರಣ ಜನರು ನೊಂದು ಕಷಾಯರೂಪವಾಗ ತೊಡಗಿದರು ಆಗ ಕುಲಂಕರನು ಅವರ ಸಲುವಾಗಿ ಅವರವರ ಕಲ್ಪವೃಕ್ಷಗಳನ್ನು ಚಿಹ್ನೆಯ ಮೂಲಕ ತಿಳಿಸಿಕೊಟ್ಟು ತಮ್ಮ-ತಮ್ಮ ಚಿಹ್ನೆಯುಳ್ಳವುಗಳನ್ನೇ ಭೋಗಿಸಬೇಕು. ಬೇರೆಯವರದವುಗಳನ್ನಲ್ಲ - ಎಂದು ತಿಳಿಸಿಕೊಡುವುದರಿಂದ ಇವರ ಹೆಸರು ಸೀಮಂಧರವಾಗಿ ಹೋಯಿತು.

ಏಳನೆಯ ಕುಲಂಕರನ ಕಾಯವು ಏಳುನೂರು ಧನುಷ್ಯ ಎತ್ತರವಿತ್ತು. ಇವನು ಜನರಿಗೆ ಆನೆ, ಕುದುರೆಗಳ ಸವಾರಿ ಮಾಡುವುದನ್ನು ಕಲಿಸಿಕೊಟ್ಟನು. ಅದರಿಂದ ಇವರ ಹೆಸರು ವಿಮಲವಾಹನವಾಯಿತು.

ಎಂಟನೆಯ ಕುಲಂಕರನ ಶರೀರವು ಆರು ನೂರಾ ಎಪ್ಪತ್ತೈದು ಧನುಷ್ಯ ಎತ್ತರವಿತ್ತು - ಈತನ ಸಮಯದಲ್ಲಿ ಬಾಲಕನ ಮುಖ ನೋಡಿದ ಮೇಲೆ ಮಾತಾ-ಪಿತರ ಮೃತ್ಯುವಾಗಲಾರಂಭಿಸಿತು. ಇವನ ಮೊದಲು ತಾಯಿ-ತಂದೆಗಳು ಪುತ್ರನ ಮುಖ ನೋಡಲು ಉಳಿಯುತ್ತಿರಲಿಲ್ಲ. ಇಲ್ಲಿಂದ ಆರಂಭವಾಯಿತು.

ಒಂಭತ್ತನೆಯ ಕುಲಂಕರನ ಶರೀರವು ಆರು ನೂರಾ ಐವತ್ತು ಧನುಷ್ಯವಿತ್ತು. ಈತನ ಕಾಲದಲ್ಲಿ ತಾಯಿ-ತಂದೆಯರು ಬಾಲಕನ ಜನ್ಮವಾದ ನಂತರ ಕೆಲಕಾಲದವರೆಗೆ ಜೀವಂತವಾಗಿ ಉಳಿಯತೊಡಗಿದರು.

ಹತ್ತನೆಯ ಕುಲಂಕರನ ಶರೀರವು ಆರು ನೂರಾ ಇಪ್ಪತ್ತೈದು ಧನುಷ್ಯವಿತ್ತು. ಇವನ ಸಮಯದಲ್ಲಿ ಮಾತಾ-ಪಿತರು ಬಾಲಕನನ್ನು ಎತ್ತಿಕೊಂಡು ಚಂದಿರಾದಿಗಳ ಮಾಧ್ಯಮದಿಂದ ಆಡಿಸತೊಡಗಿದರು. ಮಕ್ಕಳ ಮನಸ್ಸನ್ನು ಆನಂದಿತಗೊಳಿಸುತ್ತ ಉಳಿದರು.

ಹನ್ನೊಂದನೆಯ ಕುಲಂಕರನ ಶರೀರವು ಆರು ನೂರು ಧನುಷ್ಯವಿತ್ತು. ಈತನ ಸಮಯದಲ್ಲಿ ಜನರು ಪರಿವಾರ ಸಹಿತವಾಗಿ ಬಹಳಷ್ಟು ಕಾಲದವರೆಗೆ ಜೀವಂತ ಉಳಿಯತೊಡಗಿದರು.

ಹನ್ನೆರಡನೆಯ ಕುಲಂಕರನ ಶರೀರವು ಐದು ನೂರಾ ಎಪ್ಪತ್ತೈದು ಧನುಷ್ಯ ಎತ್ತರವಿತ್ತು. ಈತನ ಸಮಯದಲ್ಲಿ ಪುತ್ರನೊಂದಿಗೆ ಸುಖದಿಂದ ಬಾಳತೊಡಗಿದರು.

ಹದಿಮೂರನೆಯ ಕುಲಂಕರನ ಶರೀರವು ಐದುನೂರಾ ಐವತ್ತು ಧನುಷ್ಯ ಎತ್ತರವಿತ್ತು. ಇವನ ಕಾಲದಲ್ಲಿ ಬಾಲಕರು ಗರ್ಭವೇಷ್ಟನ ಸಹಿತ ಉತ್ಪನ್ನವಾಗತೊಡಗಿದರು. ಅದನ್ನು ಕಂಡು ಭಯಗೊಂಡ ಜನರು ಗರ್ಭವೇಷ್ಟನ ಸಹಿತ ಬಾಲಕನನ್ನು ಕುಲಂಕರನಿಗೆ ತೋರಿಸಿದರು. ಆಗ ಇವನು ಅದನ್ನು ಬಿಡಿಸುವ ವಿಧಿಯನ್ನು ತಿಳಿಸಿಕೊಟ್ಟನು.

ಹದಿನಾಲ್ಕನೆಯ ಕುಲಂಕರ ನಾಭಿರಾಯನ ಶರೀರವು ಐದುನೂರಾ ಇಪ್ಪತ್ತೈದು ಧನುಷ್ಯವಿತ್ತು. ಇವನ ಸಮಯದಲ್ಲಿ ಬಾಲಕರು ನಾಭಿಯಲ್ಲಿರುವ ನಲಿಕೆಸಹಿತ ಉತ್ಪನ್ನವಾಗತೊಡಗಿದರು. ಇವನು ಅವರಿಗೆ ನಾಭಿ ಛೇದನದ ಕಲೆಯನ್ನು ತಿಳಿಸಿಕೊಟ್ಟನು. ಅದರಿಂದ ನಾಭಿರಾಜನೆನಿಸಿದನು.

ಈ ಹದಿನಾಲ್ಕು ಜನ ಕುಲಂಕರರು ಸ್ವಯಂ ಅನೇಕ ಕಲೆ ಚತುರತೆಯಿಂದ ಸಂಪನ್ನರಾದ ಮಹಾಬುದ್ಧಿಶಾಲಿಯಿದ್ದರು. ಮಹಾಸೌಮ್ಯದೃಷ್ಟಿಯ ಮಂದಕಷಾಯಿಗಳಿದ್ದರು-ಈ ಪ್ರಕಾರ ಪಲ್ಯದ ಎಂಟನೆಯ ಭಾಗ ಕಾಲದಲ್ಲಿ ಹದಿನಾಲ್ಕು ಕುಲಂಕರರಾದರು.

ತೃತಿಯ ಕಾಲದ ಮೂರು ವರ್ಷ ಎಂಟು ತಿಂಗಳು ಹದಿನೈದು ದಿನ ಶೇಷವಿರುವಾಗ ಶ್ರೀ ಆದಿನಾಥರ ನಿರ್ವಾಣ ಕಲ್ಯಾಣವಾಯಿತು ಮತ್ತು ಚತುರ್ಥ ಕಾಲದ ಮೂರು ವರ್ಷ ಎಂಟು ತಿಂಗಳು ಹದಿನೈದು ದಿನ ಶೇಷವಿರುವಾಗ ಅಂತಿಮ ತೀರ್ಥಂಕರ ಮಹಾವೀರರ ನಿರ್ವಾಣ ಕಲ್ಯಾಣಕವಾಯಿತು. ಮಹಾವೀರರ ಮುಕ್ತಿಯ ನಂತರ ಇಪ್ಪತ್ತೊಂದು ಸಾವಿರ ವರ್ಷದ ಪಂಚಮ ಕಾಲದಲ್ಲಿ ಇಪ್ಪತ್ತೊಂದು ಕಲಂಕಿಗಳಾಗುವರು ಹಾಗೂ ಇವರ ಮಧ್ಯದಲ್ಲಿ ಇಪ್ಪತ್ತೊಂದು ಉಪಕಲಂಕಿಗಳಾಗುವರು. ತಾತ್ಪರ್ಯವೆಂದರೆ ಇಪ್ಪತ್ತೊಂದು ಸಾವಿರ ವರ್ಷಗಳ ಪಂಚಮ ಕಾಲದಲ್ಲಿನ ಒಂದು ಸಾವಿರ ವರ್ಷ ಪೂರ್ಣವಾದ ಮೇಲೆ ಒಬ್ಬನು ಕಲಂಕಿ(ಕಲ್ಕಿ)ಯಾಗುವನು. ಅದರ ನಂತರ ಐನೂರು ವರ್ಷ ಕಳೆದ ಮೇಲೆ ಒಬ್ಬನು ಉಪಕಲಂಕಿಯಾಗುವನು. ಈ ಪ್ರಕಾರ ಪ್ರತಿ ಸಾವಿರ ವರ್ಷದ ನಂತರ ಒಬ್ಬನು ಕಲಂಕಿ ಹಾಗೂ ಪ್ರತಿ ಸಾವಿರ ವರ್ಷದ ನಂತರ ಒಬ್ಬನು ಉಪಕಲಂಕಿಯಾಗುವನು. ಬಹಳಷ್ಟು ಉಪದ್ರವಿ ಅತ್ಯಧಿಕ ಕ್ಷೇತ್ರದ ಧರ್ಮಘಾತಕರು ಕಲಂಕಿಗಳಿದ್ದಾರೆ ಹಾಗೂ ಅಲ್ಪಕ್ಷೇತ್ರದ ಧರ್ಮಘಾತಕರನ್ನು ಉಪಕಲಂಕಿಗಳೆಂದು ಹೇಳಲಾಗುತ್ತದೆ. ಇವರೆಲ್ಲರೂ (ಕಲ್ಕಿ, ಉಪಕಲ್ಕಿಗಳು) ಪಾಪಾಂಧಕಾರವನ್ನು ಉತ್ಪನ್ನ ಮಾಡುವ ಸಲುವಾಗಿ ರಾತ್ರಿಯ ಸಮಾನರಾಗುವರು. ಇವರ ರಾಜ್ಯದಲ್ಲಿ ಧರ್ಮರೂಪ ಸೂರ್ಯನ ಪ್ರಕಾಶವು ನಷ್ಟವಾಗಿ ಹೋಗುವುದು. ಪಾಪದ ಅಧಿಕಾರವೇ ಉಳಿಯುವುದು; ಅದರಿಂದಾಗಿ ಆ ಪಾಪಮೂರ್ತಿಗಳಾದ ಧರ್ಮಘಾತಕರು ಅಶುಭ ಗತಿಗಳಲ್ಲಿ ಗಮನ ಮಾಡುವರು.

ಹನ್ನೆರಡು ಚಕ್ರವರ್ತಿಗಳ ಆಯು ವಿಭಾಜನೆ - ಪ್ರಥಮ ಚಕ್ರವರ್ತಿ ಭರತ ಚಕ್ರಿಯ ಆಯು ಎಂಭತ್ನಾಲ್ಕು ಲಕ್ಷ ಪೂರ್ವದೊಳಗಿನ ಕುಮಾರ ಕಾಲವು ಎಪ್ಪತ್ತೇಳು ಲಕ್ಷ ಪೂರ್ವ ಮಹಾಮಂಡಲೇಶ್ವರ ಪದದ ರಾಜ್ಯ ನಲವತ್ತು ಸಾವಿರ ವರ್ಷ ಅದರ ನಂತರ ಚಕ್ರರತ್ನವು ಉತ್ಪನ್ನವಾದ ಮೇಲೆ ದಿಗ್ವಿಜಯದ ಕಾಲವು ಅರವತ್ತು ಸಾವಿರ ವರ್ಷ, ರಾಜ್ಯ ಕಾಲವು ಒಂದು ಲಕ್ಷ ವರ್ಷ ಕಡಿಮೆ ಆರು ಲಕ್ಷ ಪೂರ್ವ ಮತ್ತು ಸಂಯಮಕಾಲವು ಅಂತರ್ಮುಹೂರ್ತವಿದೆ. ಅದರ ನಂತರ ಸ್ವಲ್ಪ ಕಡಿಮೆ ಒಂದು ಲಕ್ಷ ಪೂರ್ವ ವರ್ಷಗಳವರೆಗೆ ಕೇವಲಜ್ಞಾನ ಸಹಿತರಾಗಿದ್ದುಕೊಂಡು ಮೋಕ್ಷಕ್ಕೆ ಹೊರಟು ಹೋದರು. (ಭರತ ಚಕ್ರಿಯು ದೀಕ್ಷೆ ಧರಿಸಿದ ಹದಿನೆಂಟು ಗಂಟೆಯಲ್ಲಿ ಮೋಕ್ಷ ಪಡೆದನೆಂಬ ಕಥನವೂ ಪ್ರಚಲಿತವಿದೆ.)

ಎರಡನೆಯ ಸಗರ ಚಕ್ರಿಯ ಆಯು ಎಪ್ಪತ್ತೆರಡು ಲಕ್ಷ ಪೂರ್ವದೊಳಗಿಂದ ಕುಮಾರಕಾಲ ಮೊದಲಾದುವನ್ನು ಯಥಾಯೋಗ್ಯ ತಿಳಿದುಕೊಳ್ಳುವುದು.

ಮೂರನೆಯ ಮಧವಾ ಚಕ್ರವರ್ತಿಯ ಆಯು ಐದು ಲಕ್ಷದೊಳಗಿಂದ ಕುಮಾರಕಾಲವು ಇಪ್ಪತ್ತೈದು ಸಾವಿರ ವರ್ಷ, ಮಹಾಮಂಡಲೇಶ್ವರ ಪದ ಇಪ್ಪತ್ತೈದು ಸಾವಿರ ವರ್ಷ, ಅದರ ನಂತರ ಚಕ್ರರತ್ನದ ಲಾಭವಾದ ಮೇಲೆ ದಿಗ್ವಿಜಯದ ಕಾಲವು ಹತ್ತು ಸಾವಿರ ವರ್ಷ, ರಾಜ್ಯಕಾಲವು ಮೂರು ಲಕ್ಷ ತೊಂಭತ್ತು ಸಾವಿರ ವರ್ಷ ಹಾಗೂ ಸಂಯಮಕಾಲವು ಐವತ್ತು ಸಾವಿರ ವರ್ಷ ಪೂರ್ಣ ಮಾಡಿ ಸ್ವರ್ಗಲೋಕಕ್ಕೆ ಹೋದನು.

ನಾಲ್ಕನೆಯ ಸನತ್ಕುಮಾರ ಚಕ್ರವರ್ತಿಯ ಮೂರು ಲಕ್ಷ ವರ್ಷ ಆಯುವಿನೊಳಗಿಂದ ಕುಮಾರ ಕಾಲವು ಐವತ್ತು ಸಾವಿರ ವರ್ಷ, ಮಂಡಲೇಶ್ವರ ಪದ ಐವತ್ತು ಸಾವಿರ ವರ್ಷ, ಅದರ ನಂತರ ಚಕ್ರರತ್ನ ಲಭಿಸಿದ ಮೇಲೆ ದಿಗ್ವಿಜಯ ಕಾಲವು ಹತ್ತು ಸಾವಿರ ವರ್ಷ, ರಾಜ್ಯಾವಸ್ಥೆಯು ತೊಂಭತ್ತು ಸಾವಿರ, ಸಂಯಮಕಾಲವು ಒಂದು ಲಕ್ಷ ವರ್ಷ ಪೂರ್ಣ ಮಾಡಿ ಸ್ವರ್ಗಕ್ಕೆ ಹೋದನು.

ಐದನೆಯ ಚಕ್ರವರ್ತಿ ಶಾಂತಿನಾಥ ಜಿನರು ಒಂದು ಲಕ್ಷ ವರ್ಷ ಆಯುವಿನೊಳಗಿಂದ ಕುಮಾರ ಕಾಲವು ಇಪ್ಪತ್ತೈದು ಸಾವಿರ ವರ್ಷ, ಮಂಡಲೇಶ್ವರ ಪದವು ಇಪ್ಪತ್ತೈದು ಸಾವಿರ ವರ್ಷ, ದಿಗ್ವಿಜಯ ಕಾಲವು ಎಂಟು ನೂರು ವರ್ಷ, ಚಕ್ರಿಯ ಪದವು ಇಪ್ಪತ್ನಾಲ್ಕು ಸಾವಿರದಾ ಇನ್ನೂರು ವರ್ಷ ಮತ್ತು ಸಂಯಮ ಕಾಲವು ಹದಿನಾರು ವರ್ಷವಿದೆ. ಅದರ ನಂತರ ಹದಿನಾರು ವರ್ಷ ಕಡಿಮೆ ಇಪ್ಪತ್ತೈದು ಸಾವಿರ ವರ್ಷಗಳವರೆಗೆ ಸಮವಸರಣಸಹಿತ ವಿಹಾರ ಮಾಡಿ ಸಿದ್ಧರಾದರು.

ಆರನೆಯ ಚಕ್ರವರ್ತಿ ಕುಂಥುನಾಥ ಜಿನರ ತೊಂಭತ್ತೈದು ಸಾವಿರ ವರ್ಷ ಆಯುವಿನೊಳಗೆ ಕುಮಾರ ಕಾಲವು ಇಪ್ಪತ್ಮೂರು ಸಾವಿರದಾ ಏಳು ನೂರೈವತ್ತು ವರ್ಷ, ಮಾಂಡಲಿಕ ರಾಜ್ಯಪದ ಇಪ್ಪತ್ಮೂರು ಸಾವಿರದಾ ಏಳು ನೂರೈವತ್ತು ವರ್ಷ. ದಿಗ್ವಿಜಯವು ಆರು ನೂರು ವರ್ಷ, ಚಕ್ರಿಯ ಪದವು ಇಪ್ಪತ್ತು ಸಾವಿರದಾ ಒಂದು ನೂರಾ ಐವತ್ತು ವರ್ಷ, ಸಂಯಮ ಕಾಲವು ಹದಿನಾರು ವರ್ಷವಿದೆ. ಅದರ ನಂತರ ಇಪ್ಪತ್ಮೂರು ಸಾವಿರದಾ ಏಳು ನೂರಾ ಮೂವತ್ನಾಲ್ಕು ವರ್ಷಗಳವರೆಗೆ ಕೇವಲಜ್ಞಾನಸಹಿತ ಉಪದೇಶ ಕೊಡುತ್ತ ಕೊನೆಗೆ ಲೋಕಶಿಖರದ ಮೇಲೆ ಹೋಗಿ ವಿರಾಜಮಾನರಾದರು.

ಏಳನೆಯ ಚಕ್ರವರ್ತಿ ಅರನಾಥ ಜಿನರ ಎಂಭತ್ನಾಲ್ಕು ಸಾವಿರ ವರ್ಷ ಆಯುವಿನೊಳಗಿಂದ ಕುಮಾರ ಕಾಲವು ಇಪ್ಪತ್ತೊಂದು ಸಾವಿರ ವರ್ಷ, ಮಾಂಡಲಿಕ ರಾಜ್ಯಪದವು ಇಪ್ಪತ್ತೊಂದು ಸಾವಿರ ವರ್ಷ, ದಿಗ್ವಿಜಯ ಕಾಲವು ನಾಲ್ಕು ನೂರು ವರ್ಷ, ಚಕ್ರಿ ಪದವು ಇಪ್ಪತ್ತು ಸಾವಿರ ಆರು ನೂರು ವರ್ಷ, ಸಂಯಮ ಕಾಲವು ಹದಿನಾರು ವರ್ಷ, ಹದಿನಾರು ವರ್ಷ ಕಡಿಮೆ ಇಪ್ಪತ್ತೊಂದು ಸಾವಿರ ವರ್ಷಗಳವರೆಗೆ ಕೇವಲಜ್ಞಾನ ಸಹಿತ ಉಪದೇಶ ನೀಡಿ ನಂತರ ಲೋಖಶಿಖರದ ಮೇಲೆ ವಿರಾಜಮಾನರಾದರು.

ಎಂಟನೆಯ ಚಕ್ರವರ್ತಿ ಸುಭೌಮನ ಆಯು ಅರವತ್ತೆಂಟು ಸಾವಿರ ವರ್ಷಗಳಲ್ಲಿ ಕುಮಾರ ಕಾಲವು ಐದು ಸಾವಿರ ವರ್ಷ, ದಿಗ್ವಿಜಯ ಕಾಲವು ಐನೂರು ವರ್ಷ, ಚಕ್ರಿ ಪದವು ಅರವತ್ತೆರಡು ಸಾವಿರ ಐನೂರು ವರ್ಷವಿದೆ. ಈತನಿಗೆ ಬಾಲ್ಯಾವಸ್ಥೆಯಲ್ಲಿ ಪರಶುರಾಮನ ಭಯದಿಂದ ಸನ್ಯಾಸಿಗಳ ಆಶ್ರಮದಲ್ಲಿ ಗುಪ್ತರೂಪದಿಂದ ಇರಬೇಕಾಯಿತು, ಅದರಿಂದ ವೈರಾಗ್ಯವು ಸಂಭವಿಸಲಿಲ್ಲ. ರಾಜ್ಯಾವಸ್ಥೆಯಲ್ಲಿ ಸತ್ತು ಮಹಾತಮವೆಂಬ ಏಳನೆಯ ಲೋಕಪಾತಾಳ(ಏಳನೇ ನರಕ)ದಲ್ಲಿ ಹೋದನು.

ಒಂಭತ್ತನೆಯ ಮಹಾಪದ್ಮ ಚಕ್ರಿಯ ಮೂವತ್ತು ಸಾವಿರ ವರ್ಷ ಆಯುವಿನಲ್ಲಿ ಕುಮಾರ ಕಾಲವು ಐನೂರು ವರ್ಷ, ಮಾಂಡಲಿಕ ಪದವು ಐನೂರು ವರ್ಷ, ದಿಗ್ವಿಜಯ ಕಾಲವು ಮುನ್ನೂರು ವರ್ಷ, ಚಕ್ರಿಪದವು ಹದಿನೆಂಟು ಸಾವಿರ ಏಳು ನೂರು ವರ್ಷ, ಉಳಿದ ಹತ್ತು ಸಾವಿರ ವರ್ಷದಲ್ಲಿ ಮುನಿಪದ (ಸಂಯಮಧಾರಣ ಮಾಡಿ) ಮತ್ತು ಕೇವಲಜ್ಞಾನ ಪಡೆದು ನಂತರ ಸಿದ್ಧರಾದರು.

ಹತ್ತನೆಯ ಹರಿಷೇಣ ಚಕ್ರವರ್ತಿಯ ಆಯು ಇಪ್ಪತ್ತಾರು ಸಾವಿರ ವರ್ಷಗಳೊಳಗೆ ಕುಮಾರ ಕಾಲವು ಮುನ್ನೂರಾ ಇಪ್ಪತ್ತೈದು ವರ್ಷ, ದಿಗ್ವಿಜಯವು ನೂರೈವತ್ತು ವರ್ಷ, ಚಕ್ರಿಪದವು ಇಪ್ಪತ್ತೈದು ಸಾವಿರದಾ ಒಂದುನೂರಾ ಎಪ್ಪತ್ತೈದು ವರ್ಷ ಮತ್ತು ಸಂಯಮಕಾಲದ ಮುನ್ನೂರೈವತ್ತು ವರ್ಷಗಳಲ್ಲಿಯೇ ದೀಕ್ಷೆ ಮತ್ತು ಕೇವಲಜ್ಞಾನ ಪಡೆದು ಮುಕ್ತನಾದನು.

ಹನ್ನೊಂದನೆಯ ಜಯಸೇನ ಚಕ್ರವರ್ತಿಯ ಇಪ್ಪತ್ನಾಲ್ಕುನೂರು ವರ್ಷ ಆಯುವಿನಲ್ಲಿ ಕುಮಾರ ಕಾಲವು ನೂರು ವರ್ಷ, ದಿಗ್ವಿಜಯ ಕಾಲವು ನೂರು ವರ್ಷ, ಚಕ್ರಿಪದದ ರಾಜ್ಯಕಾಲವು ಹದಿನೆಂಟುನೂರು ವರ್ಷ, ಕೇವಲಜ್ಞಾನಸಹಿತ ಸಂಯಮಕಾಲವು ನಾಲ್ಕು ನೂರು ವರ್ಷ ಪಡೆದು ಮುಕ್ತನಾದನು.

ನೇಮಿನಾಥರ ನಂತರ ಮತ್ತು ಪಾರ್ಶ್ವನಾಥರ ಪೂರ್ವ ಮಧ್ಯದ ಅಂತರ ಕಾಲದಲ್ಲಿ ಆಗಿರುವ ಬ್ರಹ್ಮದತ್ತ ಚಕ್ರಿಯ ಏಳು ನೂರು ವರ್ಷ ಆಯುವಿನಲ್ಲಿ ಇಪ್ಪತ್ತೆಂಟು ವರ್ಷ ಕುಮಾರ ಕಾಲದಲ್ಲಿ, ಮಾಂಡಲಿಕ ಪದವು ಐವತ್ತಾರು ವರ್ಷ, ದಿಗ್ವಿಜಯ ಕಾಲವು ಹದಿನಾರು ವರ್ಷ, ಚಕ್ರಿಪದದ ರಾಜ್ಯವನ್ನು ಆರು ನೂರು ವರ್ಷಗಳವರೆಗೆ ಭೋಗಿಸುತ್ತ ರಾಜ್ಯಪದದಲ್ಲಿ ಮರಣ ಹೊಂದಿ ಏಳನೇ ಮಾಧವೀಧರೆಗೆ (ಏಳನೇ ನರಕಕ್ಕೆ) ಹೋದನು.

ಹೀಗೆ ಹನ್ನೆರಡು ಚಕ್ರಿಗಳ ಆಯುವಿನ ವಿಸ್ತಾರವಿತ್ತು. ಇವರಲ್ಲಿ ಎಂಟು ಚಕ್ರಿಗಳು ಸಿದ್ಧರಾದರು, ಇಬ್ಬರು ಸ್ವರ್ಗಲೋಕಕ್ಕೆ ಹೋದರು ಮತ್ತು ಇಬ್ಬರು ಪಾತಾಳ ಧರೆ-ನರಕಕ್ಕೆ ಹೋದರು.

ಒಂಭತ್ತು ಜನ ಅರ್ಧ ಚಕ್ರವರ್ತಿಗಳ ಆಯುವಿನ ವಿಸ್ತಾರ - ಮೊದಲನೆಯ ವಾಸುದೇವ ತ್ರಿಪೃಷ್ಠನ ಎಂಭತ್ನಾಲ್ಕು ಲಕ್ಷ ವರ್ಷ ಆಯುವಿನೊಳಗಿಂದ ಕುಮಾರ ಕಾಲವು ಇಪ್ಪತ್ತೈದು ಸಾವಿರ ವರ್ಷ, ದಿಗ್ವಿಜಯ ಕಾಲವು ಒಂದು ಸಾವಿರ ವರ್ಷ ಮತ್ತು ರಾಜ್ಯ ಪದವು ಎಂಭತ್ಮೂರು ಲಕ್ಷ ಎಪ್ಪತ್ಮೂರು ಸಾವಿರ ವರ್ಷವಿದೆ.

ಎರಡನೆಯ ವಾಸುದೇವ ದ್ವಿಪೃಷ್ಠನ ಎಪ್ಪತ್ತೆರಡು ಲಕ್ಷ ವರ್ಷ ಆಯುವಿನೊಳಗಿಂದ ಕುಮಾರ ಕಾಲವು ಇಪ್ಪತ್ತೈದು ಸಾವಿರ ವರ್ಷ, ಮಂಡಲೇಶ್ವರ ಪದದ ರಾಜ್ಯವು ಇಪ್ಪತ್ತೈದು ಸಾವಿರ ವರ್ಷ, ದಿಗ್ವಿಜಯದ ಕಾಲವು ನೂರು ವರ್ಷ ಮತ್ತು ವಾಸುದೇವ ಪದದ ಕಾಲವು ಎಪ್ಪತ್ತೊಂದು ಲಕ್ಷ ನಲವತ್ತೊಂಭತ್ತು ಸಾವಿರದಾ ಒಂಭೈನೂರು ವರ್ಷ ಇದೆ.

ಮೂರನೆಯ ವಾಸುದೇವ ಸ್ವಯಂಭೂವಿನ ಅರವತ್ತು ಸಾವಿರ ವರ್ಷ ಆಯುವಿನೊಳಗಿಂದ ಕುಮಾರ ಕಾಲವು ಇಪ್ಪತ್ತೈದು ನೂರು ವರ್ಷ, ಮಾಂಡಲಿಕಪದ ಇಪ್ಪತ್ತೈದು ನೂರು ವರ್ಷ, ದಿಗ್ವಿಜಯ ಕಾಲವು ತೊಂಭತ್ತು ವರ್ಷ ಮತ್ತು ಮೂರು ಖಂಡಗಳ ರಾಜ್ಯಕಾಲವು ಐವತ್ತೊಂಭತ್ತು ಲಕ್ಷ ತೊಂಭತ್ನಾಲ್ಕು ಸಾವಿರ ಒಂಭೈನೂರಾ ಹತ್ತು ವರ್ಷವಿದೆ.

ನಾಲ್ಕನೆಯ ವಾಸುದೇವ ಪುರುಷೋತ್ತಮನ ಮೂವತ್ತು ಲಕ್ಷ ವರ್ಷ ಆಯುವಿನೊಳಗಿಂದ ಕುಮಾರ ಕಾಲವು ಏಳು ನೂರು ವರ್ಷ, ಮಾಂಡಲಿಕ ರಾಜ್ಯಪದವು ಹದಿಮೂರು ನೂರು ವರ್ಷ, ದಿಗ್ವಿಜಯವು ಎಂಭತ್ತು ವರ್ಷ ಹಾಗೂ ಮೂರು ಖಂಡಗಳ ರಾಜ್ಯಕಾಲವು ಇಪ್ಪತ್ತೊಂಭತ್ತು ಲಕ್ಷ ತೊಂಭತ್ತೇಳು ಸಾವಿರ ಒಂಭೈನೂರಾ ಇಪ್ಪತ್ತು ವರ್ಷವಿದೆ.

ಐದನೆಯ ವಾಸುದೇವ ಸುದರ್ಶನನ ಹತ್ತು ಲಕ್ಷ ವರ್ಷ ಆಯುವಿನಲ್ಲಿ ಕುಮಾರ ಕಾಲವು ಮುನ್ನೂರು ವರ್ಷ, ಮಾಂಡಲಿಕ ಪದವು ನೂರು ವರ್ಷ, ದಿಗ್ವಿಜಯ ಕಾಲವು ಎಪ್ಪತ್ತು ವರ್ಷ ಹಾಗೂ ಅರ್ಧ ಚಕ್ರಿಪದ ಕಾಲವು ಒಂಭತ್ತು ಲಕ್ಷ ತೊಂಭತ್ತೊಂಭತ್ತು ಸಾವಿರ ಐನೂರಾ ಮೂವತ್ತು ವರ್ಷವಿದೆ.

ಆರನೆಯ ಪುಂಡರೀಕ ವಾಸುದೇವನ ಅರವತ್ತೈದು ಸಾವಿರ ವರ್ಷ ಆಯುವಿನೊಳಗಿಂದ ಕುಮಾರ ಕಾಲವು ಎರಡೂವರೆ ನೂರು ವರ್ಷ, ಮಾಂಡಲಿಕ ಪದವು ಎರಡೂವರೆ ನೂರು ವರ್ಷ, ದಿಗ್ವಿಜಯಕಾಲವು ಅರವತ್ತು ವರ್ಷ ಮತ್ತು ಮೂರು ಖಂಡಗಳ ರಾಜ್ಯಕಾಲವು ಅರವತ್ನಾಲ್ಕು ಸಾವಿರದಾ ನಾನೂರಾನಲವತ್ತು ವರ್ಷವಿದೆ.

ಏಳನೆಯ ದತ್ತ ನಾರಾಯಣನ ಮೂವತ್ತೆರಡು ಸಾವಿರ ವರ್ಷ ಆಯುವಿನೊಳಗಿಂದ ಕುಮಾರ ಕಾಲವು ಎರಡುನೂರು ವರ್ಷ, ಮಾಂಡಲಿಕ ಪದವು ಐವತ್ತು ವರ್ಷ, ದಿಗ್ವಿಜಯ ಕಾಲವು ಐವತ್ತು ವರ್ಷ ಮತ್ತು ಮೂರು ಖಂಡಗಳ ರಾಜ್ಯ ಕಾಲವು ಮೂವತ್ತೊಂದು ಸಾವಿರದ ಏಳು ನೂರು ವರ್ಷವಿದೆ.

ಎಂಟನೆಯ ವಾಸುದೇವ ಲಕ್ಷ್ಮಣನ ಹನ್ನೆರಡು ಸಾವಿರ ವರ್ಷ ಆಯುವಿನೊಳಗಿಂದ ಕುಮಾರ ಕಾಲವು ನೂರು ವರ್ಷ, ದಿಗ್ವಿಜಯ ಕಾಲವು ನಲವತ್ತು ವರ್ಷ, ಮತ್ತು ರಾಜ್ಯಕಾಲವು ಹನ್ನೊಂದು ಸಾವಿರದಾ ಎಂಟುನೂರು ವರ್ಷವಿದೆ.

ಒಂಭತ್ತನೆಯ ವಾಸುದೇವ ಕೃಷ್ಣದೇವನ ಒಂದು ಸಾವಿರ ವರ್ಷ ಆಯುವಿನೊಳಗಿಂದ ಕುಮಾರ ಕಾಲವು ಹದಿನಾರು ವರ್ಷ, ಮಾಂಡಲಿಕ ಪದವು ಐವತ್ತಾರು ವರ್ಷ, ದಿಗ್ವಿಜಯ ಕಾಲವು ಎಂಟು ವರ್ಷ ಮತ್ತು ವಾಸುದೇವ ಪದದ ರಾಜ್ಯಕಾಲವು ಒಂಭೈನೂರು ವರ್ಷವಿದೆ. ಇದು ಒಂಭತ್ತು ವಾಸುದೇವರ ಆಯುವಿನ ವಿಸ್ತಾರವಿದೆ.

ಈಗ ಎಂಟನೆಯ ಒಂಭತ್ತನೆಯ ನಾರಾಯಣನ ತಂದೆ-ತಾತ ಮೊದಲಾದ ಪುರುಷರ, ಅವರ ಪುತ್ರರುಗಳ ಮತ್ತು ಅವರ ಸಮಯದಲ್ಲಿ ಆಗಿರುವಂಥ ದೊಡ್ಡ-ದೊಡ್ಡ ದೊರೆಗಳ ಹೆಸರು ಹೇಳುತ್ತಾರೆ-

ಎಂಟನೆಯ ನಾರಾಯಣನ ಮೂರು ತಲೆಮಾರುಗಳು - ಅನೇಕ ದೊರೆಗಳಿಂದ ವಂದನೆಯೋಗ್ಯ, ಸೂರ್ಯನ ಸಮಾನ ತೇಜಸ್ಸಿನ ಧಾರಕ, ಪ್ರಜೆಗಳಿಗೆ ತಂದೆ-ತಾಯಿಯ ಸಮಾನ, ಮಹಾ ನ್ಯಾಯವಂತ ರಘುನಾಮದ ದೊರೆಯಾದನು. ಅವನಿಂದ ರಘುವಂಶವು ಪ್ರಗಟವಾಯಿತು. ಅವನ ವಂಶದಲ್ಲಿ ದೊಡ್ಡ-ದೊಡ್ಡ ಮಹಾನ ದೊರೆಗಳಾದರು. ಪ್ರಜಾಪಾಲಕತೆ ಮತ್ತು ನ್ಯಾಯದ ಪ್ರಭಾವದಿಂದ ಅವರ ಕೀರ್ತಿಯಾಯಿತು. ಅದರ ನಂತರ ಸಾಂಸಾರಿಕ ಸಾಮಗ್ರಿಗಳನ್ನು ವಿನಾಶಶೀಲವೆಂದು ತಿಳಿದು ಪುತ್ರರಿಗೆ ದೇಶ-ನಗರಗಳ ರಾಜ್ಯ ಒಪ್ಪಿಸಿ, ದೀಕ್ಷೆ ಧಾರಣ ಮಾಡಿ ಸ್ವರ್ಗ-ಮೋಕ್ಷಗಳಿಗೆ ಪ್ರಾಪ್ತರಾದರು. ಇಂಥ ಅನೇಕ ದೊರೆಗಳ ನಂತರ ಅನರಣ್ಯ ದೊರೆಯಾದನು. ಅವನಿಂದ ನ್ಯಾಯ ಸೂರ್ಯನು, ಪ್ರಜೆಗಳ ರೂಪದ ಕಮಲಗಳಿಗೆ ಸೂರ್ಯಸಮಾನ ಆನಂದದಾಯಕ, ಕೀರ್ತಿಯ ಸಾಕಾರ ಮೂರ್ತಿ, ತನ್ನ ಪ್ರಭೆಯಿಂದ ವೈರಿಗಳ ರೂಪದ ಸರೋವರವನ್ನು ಬತ್ತಿಸಿ ಬಿಡುವಂಥ, ಮಹಾನ್ಯಾಯದ ನೌಕೆಯಂತಿರುವ ದಶರಥನೆಂಬ ಹೆಸರಿನ ಪುತ್ರನಾದನು.

ದಶರಥನಿಗೆ ಪರಮಸತಿ, ರೂಪದಲ್ಲಿ ಸ್ವರ್ಗದ ದೇವಿಯರನ್ನು ಮೀರಿಸುವಂಥ ಕೌಸಲ್ಯೆ, ಸುಮಿತ್ರೆ, ಕೈಕೇಈ ಮತ್ತು ಸುಪ್ರಭೆಯೆಂಬ ಹೆಸರಿನ ನಾಲ್ವರು ರಾಣಿಯರಿದ್ದರು. ಈ ಮಹಾಭಾಗ್ಯಶಾಲಿ ರಾಣಿಯರಿಂದ ನಾಲ್ವರು ಪುತ್ರರಾದರು. ಕೌಸಲ್ಯೆಯ ಗರ್ಭದಿಂದ ಶ್ರೀರಾಮಚಂದ್ರ ಬಲಭದ್ರನ ಜನ್ಮವಾಯಿತು. ಸುಮಿತ್ರೆಯ ಗರ್ಭದಿಂದ ಲಕ್ಷ್ಮಣಕುಮಾರ ನಾರಾಯಣನು ಉತ್ಪನ್ನನಾದನು. ಕೈಕೇಈಯ ಗರ್ಭದಿಂದ ಭರತನೆಂಬ ಕುಮಾರನ ಮತ್ತು ಸುಪ್ರಭೆಯ ಗರ್ಭದಿಂದ ಶತ್ರುಘ್ನಕುಮಾರನ ಜನ್ಮವಾಯಿತು. ನ್ಯಾಯ ನೌಕೆಯಂತಿರುವ ಇವರು ನಾಲ್ವರು ಪುತ್ರರು ಪೃಥ್ವಿರೂಪದ ಮಂದಿರವು ನಿಂತುಕೊಳ್ಳುವ ಸಲುವಾಗಿ ನಾಲ್ಕು ಸ್ತಂಭಗಳ ಸಮಾನರಿದ್ದರು. ಸೀತೆಯ ಗರ್ಭದಿಂದ ರಾಮಚಂದ್ರನಿಗೆ ಲವ ಮತ್ತು ಅಂಕುಶರೆಂಬ ಈರ್ವರು ಪುತ್ರರ ಜನ್ಮವಾಯಿತು. ಇವರು ರಘುವಂಶಿಯೆನಿಸಿದರು.

ರಾಮ-ಲಕ್ಷ್ಮಣರ ಸಮಯದಲ್ಲಿ ಆಗಿರುವ ರಾವಣ ಮೊದಲಾದ ದೊರೆಗಳ ವಂಶ ಪರಂಪರೆ-ಭೀಮನೆಂಬ ಹೆಸರಿನ ರಾಕ್ಷಸನು ಮೇಘವಾಹನನನ್ನು ಪೂರ್ವ ಜನ್ಮದ ಪುತ್ರನೆಂದು ತಿಳಿದು ಲಂಕೆ, ಪಾತಾಳಲಂಕೆ, ರಾಕ್ಷಸವಿದ್ಯೆ ಹಾಗೂ ನವರತ್ನ ಹಾರವನ್ನು ಕೊಟ್ಟನು. ಅದರ ನಂತರ ಅನೇಕ ರಾಜರುಗಳಾದ ನಂತರ ರಾಕ್ಷಸನೆಂಬ ಹೆಸರಿನ ರಾಜನಾದನು. ಇವನು ರಾಕ್ಷಸವಂಶ ನಡೆಸಿದನು. ನಂತರ ಅನೇಕ ದೊರೆಗಳಾದ ಮೇಲೆ ಆಕಾಶದ ಸಮಾನ ನಿರ್ಮಲವಿರುವ ಈ ವಿದ್ಯಾಧರರ ವಂಶದಲ್ಲಿ ಮಹಾಪ್ರತಾಪಿಯಾದ ಸುಕೇಸು ದೊರೆಯಾದನು. ಅವನಿಗೆ ಮಾಲಿ, ಸುಮಾಲಿ ಮತ್ತು ಮಾಲ್ಯವಾನರೆಂಬ ಮೂವರು ಪುತ್ರರಿದ್ದರು. ಮಾಲಿಯದಂತೂ ಇಂದ್ರನೆಂಬ ಹೆಸರಿನ ವಿದ್ಯಾಧರನ ಜತೆ ಯುದ್ಧ ಮಾಡುವುದರಿಂದ ಮರಣವಾಗಿ ಹೋಯಿತು.

ಸುಮಾಲಿಯಿಂದ ವಂಶವನ್ನು ಬೆಳಗುವ ರತ್ನಶ್ರವನೆಂಬ ಹೆಸರಿನ ಪುತ್ರನಾದನು. ನ್ಯಾಯಪೂರ್ವಕ ರಾಜ್ಯ ಮಾಡುತ್ತ ಅವನಿಗೆ ಕೇಕಸಿಯೆಂಬ ಹೆಸರಿನ ಪಟ್ಟದರಸಿಯಿಂದ ಸ್ವರ್ಗದ ದೇವಗಳ ಸಮಾನ ರೂಪವಂತರೂ ಗುಣ ಹಾಗೂ ಪರಾಕ್ರಮಧಾರಿಗಳಾದ ದಶಮುಖ, ಕುಂಭಕರ್ಣ ಮತ್ತು ವಿಭೀಷಣರೆಂಬ ಮೂವರು ಪುತ್ರರು ಹಾಗೂ ಚಂದ್ರನಖಿಯೆಂಬ ಹೆಸರಿನ ಪುತ್ರಿಯ ಉತ್ಪತ್ತಿಯಾಯಿತು. ಮಂಡೋದರಿಯ ಗರ್ಭದಿಂದ ದಶಮುಖ ರಾವಣನಿಗೆ ಇಂದ್ರಜೀತ ಮತ್ತು ಮೇಘನಾದನೆಂಬ ಹೆಸರಿನ ಇಬ್ಬರು ಪುತ್ರರಾದರು. ಮಂಡೋದರಿಯ ತಂದೆ ರಾಜಾಮಯನು

ಅನೇಕ ವಿದ್ಯಾಧರರ ಅಧಿಪತಿ ಮಹಾಸಾಮಂತನಾದನು. ಮೇಘಪ್ರಭನೆಂಬ ಹೆಸರಿನ ವಿದ್ಯಾಧರನ ಪುತ್ರ ಖರದೂಷಣ ಮಹಾಯೋಧನು ರಾವಣನ ಸಹೋದರಿ ಚಂದ್ರನಖಿಯನ್ನು ಬಲವಂತತೆಯಿಂದ ಅಪಹರಣ ಮಾಡಿದನು. ನಂತರ ಆ ಖರದೂಷಣನ ವಿವಾಹವು ಚಂದ್ರನಖಿಯೊಂದಿಗೆ ಆಯಿತು.

ಚಂದ್ರೋದಯ ದೊರೆಯ ಪುತ್ರ ವಿರಾಧಿತನು ರಾವಣನ ಮಹಾಸಾಮಂತನಿದ್ದನು. ವಿಜಯಾರ್ಧ ಪರ್ವತದ ಮೇಲೆ ಇಂದ್ರಲೋಕದಂತಿರುವ ರಥನೂಪುರವೆಂಬ ಹೆಸರಿನ ಸುಂದರ ನಗರವಿದೆ. ಅದರ ದೊರೆ ಸಹಸ್ರಾರನಿಂದ ಮಹಾಬಲಶಾಲಿ ಇಂದ್ರನೆಂಬ ಹೆಸರಿನ ಪುತ್ರನಾದನು. ಅವನು ತನ್ನ ಸೇವಕ ವಿದ್ಯಾಧರರಲ್ಲಿ ದೇವಗಳ ನಾಮದ ಸ್ಥಾಪನೆ ಮಾಡಿ ತನ್ನ ಹೆಸರು ಇಂದ್ರನೆಂದು ಇಟ್ಟುಕೊಂಡನು ಅವನು ರಾವಣನ ತಾತ ಮಾಲಿಯನ್ನು ಯುದ್ಧದಲ್ಲಿ ಸಾಯಿಸಿದ್ದನು. ಅದರ ನಂತರ ಮಹಾಪ್ರತಾಪಿ, ಪರಾಕ್ರಮಶಾಲಿ ರಾವಣನು ತನ್ನ ತಾತನ ಮರಣದ ಸೇಡು ತೀರಿಸಿಕೊಳ್ಳುವ ಸಲುವಾಗಿ ಇಂದ್ರನೊಂದಿಗೆ ಯುದ್ಧ ಮಾಡಿ ಅವನನ್ನು ಜಯಿಸಿ ಜೀವಂತವಾಗಿ ಬಂಧಿಸಿ ನನ್ನ ಮನೆಯಲ್ಲಿ ನೀರು ತುಂಬಿದರೆ ನಿನ್ನನ್ನು ಬಿಟ್ಟು ಬಿಡುತ್ತೇನೆಂದು ಇಂದ್ರನಿಗೆ ಹೇಳುತ್ತಾನೆ. ಆಗ ಅಭಿಮಾನವನ್ನು ತೊರೆದು ಇಂದ್ರನೆಂಬ ಹೆಸರಿನ ವಿದ್ಯಾಧರನು 'ತುಂಬುತ್ತೇನೆ'ಂದು ಹೇಳಿದ ಮೇಲೆ ರಾವಣನು ಅವನನ್ನು ಮುಕ್ತಗೊಳಿಸಿದನು. ಆಗ ಇಂದ್ರನು ಸಂಸಾರದಿಂದ ಉದಾಸನಾಗಿ, ರಾಜ್ಯದ ತ್ಯಾಗ ಮಾಡಿ, ದೀಕ್ಷೆ ಧಾರಣ ಮಾಡಿ ಅನೇಕ ಪ್ರಕಾರದಿಂದ ತಪಶ್ಚರಣೆ ಮಾಡಿದನು.

ಯಕ್ಷಪುರದ ವೈಶ್ರವವೆಂಬ ಹೆಸರಿನ ದೊರೆಯ ಪಟ್ಟದರಸಿ ಕೌಶಕಿಯ ಗರ್ಭದಿಂದ ವೈಶ್ರವಣನೆಂಬ ಹೆಸರಿನ ಪುತ್ರನಾದನು. ಅವನು ಇಂದ್ರನ ಮುಖ್ಯ ಸೇವಕನಿದ್ದನು. ಮತ್ತು ಇಂದ್ರನ ಜತೆಯಲ್ಲಿಯೇ ಯತೀಶ್ವರನಾಗಿ ಹೋದನು - ಈ ಪ್ರಕಾರ ರಾವಣನ ಕುರಿತಾಗಿ ತಿಳಿಯುವುದು. ಈ ರಾವಣನು ರಾಕ್ಷಸವಂಶಿಯಿದ್ದನು. ರಾಕ್ಷಸನೆಂಬ ಹೆಸರಿನ ದೇವನಿರಲಿಲ್ಲ; ಆದರೆ ರಾವಣನೆಂಬ ಹೆಸರಿನ ಮಹಾಸುಂದರ ವಿದ್ಯಾಧರ ಮನುಷ್ಯನಿದ್ದನು.

ವಿದ್ಯಾಧರರಲ್ಲಿ ವಾನರ ವಂಶಿಗಳ ಕಥೆ - ಮೊದಲು ಶ್ರೀಕಂಠ ನಾಮದ ವಿದ್ಯಾಧರನೊಬ್ಬನು ಸಮುದ್ರದ ದ್ವೀಪದಲ್ಲಿ ವಾನರವೆಂಬ ಹೆಸರಿನ ರಾಜ್ಯ ಕಟ್ಟಿದನು. ಆ ಶ್ರೀಕಂಠನ ಕುಲದಲ್ಲಿ ಅಮರಪ್ರಭನೆಂಬ ದೊರೆಯಿಂದ ಬಾವುಟದಲ್ಲಿ ವಾನರ ಚಿಹ್ನೆ ಮಾಡಿಸುವ ಕಾರಣ ಅವನು ವಾನರವಂಶಿಯ ರೂಪದಲ್ಲಿ ಪ್ರಸಿದ್ಧನಾದನು. ಅಮರಪ್ರಭನ ಕುಲದಲ್ಲಿ ಕಿಷ್ಕಿಂಧ ದೊರೆಯ ಸೂರ್ಯರಜ ಮತ್ತು ರಕ್ಷರಜನೆಂಬ ಇಬ್ಬರು ಪುತ್ರರಿದ್ದರು. ಸೂರ್ಯರಜನಿಗೆ ವಾಲಿ ಮತ್ತು ಸುಗ್ರೀವರೆಂಬ ಇಬ್ಬರು ಪುತ್ರರು ಮತ್ತು ರಕ್ಷರಜನಿಗೆ ನಲ ಮತ್ತು ನೀಲನೆಂಬ ಇಬ್ಬರು ಪುತ್ರರಾದರು. ಸುಗ್ರೀವನಿಗೆ ಅಂಗ ಮತ್ತು ಅಂಗದರೆಂಬ ಇಬ್ಬರು ಪುತ್ರರಾದರು-ಇದು ಸುಗ್ರೀವನ ವಂಶವಾಯಿತು.

ಇದೇ ವಂಶದಲ್ಲಿ ದೊರೆಗಳ ದೊರೆ, ಮಹಾತೇಜಸ್ವಿ, ಅನೇಕ ವಿದ್ಯಾಧರರ ಒಡೆಯ ಪ್ರಹ್ಲಾದನಾದನು. ಅವನಿಗೆ ಮಹಾಪುಣ್ಯಾಧಿಕಾರಿ ಪವನದ ಸಮಾನ ಪವನಂಜಯನೆಂಬ ಹೆಸರಿನ ಪುತ್ರನಾದನು ಆ ಪವನಂಜಯನಿಗೆ ಅಂಜನೆಯ ಗರ್ಭದಿಂದ ಮಹಾಭಾಗ್ಯಶಾಲಿ, ಚರಮಶರೀರಿ ಹನುಮಂತನೆಂಬ ಹೆಸರಿನ ಪುತ್ರನಾದನು. ಅವನು ಕಾಮದೇವನಿದ್ದನು-ಹೀಗೆ ವಾನರ ವಂಶಿಗಳ ಕುಲಹೇಳಲಾಯಿತು. ಈ ಕುಲದ ಮನುಷ್ಯರು ಮಹಾರೂಪವಂತ ಪುರುಷ ದೊರೆಗಳಿದ್ದರು. ವಾನರರಿರಲಿಲ್ಲ; ಅವರದು ವಾನರ ವಂಶವಿತ್ತು - ಎಂಬುದನ್ನು ತಿಳಿಯುವುದು.

ಈ ಪ್ರಕಾರ ಎಂಟನೆಯ ನಾರಾಯಣನ ಸಮಯದ ಸಾಮಾನ್ಯ ಕಥನವಿದೆ. ಇದನ್ನೆಲ್ಲ ವಿಶೇಷವಾಗಿ ತಿಳಿಯಬಯಸುವವರು ಪದ್ಮಪುರಾಣದ ವಾಚನ ಮಾಡುವುದು.

ಒಂಭತ್ತನೆಯ ನಾರಾಯಣ ಮತ್ತು ಬಲಭದ್ರರ ಪಟ್ಟಾವಲಿ ಹಾಗೂ ಇವರ ಸಮಕಾಲೀನ ಮಹಾನ ದೊರೆ ಪಾಂಡವಾದಿಗಳ ಉತ್ಪತ್ತಿ-ಮುನಿಸುವ್ರತರ ಕುಲ(ಹರಿವಂಶ)ದಲ್ಲಿ ಅನೇಕ ಕುಲಮಂಡನ ದೊರೆಗಳಲ್ಲಿ ಒಬ್ಬ

ಮಹಾಪ್ರತಾಪಶಾಲಿ 'ಯದು' ವೆಂಬ ದೊರೆಯಿದ್ದನು. ಅವನ ಕಾರಣ ಯದುವಂಶವು ಪ್ರಗಟವಾಯಿತು. ಅವನ ಕುಲದಲ್ಲಿ ನರಪತಿ ದೊರೆಗೆ ಸೂರ್ಯ ಮತ್ತು ಸುವೀರನೆಂಬ ಇಬ್ಬರು ಪುತ್ರರಿದ್ದರು. ಸೂರ್ಯನಿಂದ ಅಂಧಕವೃಷ್ಟಿ ಮತ್ತು ಸುವೀರನಿಂದ ಭೋಜಕವೃಷ್ಟಿ ನಾಮದ ಪುತ್ರರಾದರು. ಅಂಧಕವೃಷ್ಟಿಗೆ ಹತ್ತು ಜನ ಪುತ್ರರಿದ್ದು ಅವರಲ್ಲಿ ಹಿರಿಯ ಪುತ್ರನು ಸಮುದ್ರವಿಜಯನಿದ್ದರೆ ಕಿರಿಯನ ಹೆಸರು ವಸುದೇವನಿತ್ತು. ಭೋಜಕವೃಷ್ಟಿಗೆ - ಉಗ್ರಸೇನ, ಮಹಾಸೇನ ಮತ್ತು ದೇವಸೇನನೆಂಬ ಹೆಸರಿನ ಮೂವರು ಪುತ್ರರಾದರು. ಉಗ್ರಸೇನನಿಗೆ ಕಂಸನೆಂಬ ಹೆಸರಿನ ಪುತ್ರನಾದನು. ದೇವಸೇನನಿಗೆ ದೇವಕಿಯೆಂಬ ಹೆಸರಿನ ಪುತ್ರಿಯಾದಳು. ಸಮುದ್ರವಿಜಯನಿಂದ ಜಗದ್ಗುರು ನೇಮಿನಾಥರ ಅವತಾರವಾಯಿತು. ಅವರು ತಪದ ಅಂಗೀಕಾರ ಮಾಡಿ ಮೋಕ್ಷಕ್ಕೆ ಹೋದರು. ವಸುದೇವನಿಗೆ ಪದ್ಮನೆಂಬ ಹೆಸರಿನ ಬಲಭದ್ರ, ಕೃಷ್ಣದೇವ ನಾರಾಯಣ, ಜರತ್ಕುಮಾರ ಮತ್ತು ಗಜಕುಮಾರನೆಂಬ ನಾಲ್ವರು ಪುತ್ರರಾದರು. ಕೃಷ್ಣ ನಾರಾಯಣನಿಗೆ ಪದ್ಯುಮ್ನಕುಮಾರ, ಶಂಭೂಕುಮಾರ ಮತ್ತು ಭಾನುಕುಮಾರನೆಂಬ ಮೂವರು ಪುತ್ರರಾದರು. ಅಂಧಕವೃಷ್ಟಿಗೆ ಕುಂತಿ ಮತ್ತು ಮಾದ್ರಿಯೆಂಬ ಹೆಸರಿನ ಇಬ್ಬರು ಪುತ್ರಿಯರಿದ್ದರು - ಈ ಪ್ರಕಾರ ಸಾಮಾನ್ಯರೂಪದಿಂದ ದೊರೆ'ಯದು'ವಿನ ವಂಶ ಹೇಳಲಾಯಿತು.

ಕೌರವ ಪಾಂಡವ ವಂಶ - ಕುರು ವಂಶಿಗಳಲ್ಲಿ ಶಾಂತನು ಎಂಬ ಹೆಸರಿನ ಒಬ್ಬ ದೊರೆಯಿದ್ದನು. ಅವನ ಶಿವಕಿಯೆಂಬ ಹೆಸರಿನ ಮಹಾಸತಿ ರಾಣಿಯ ಗರ್ಭದಿಂದ ಪರಾಶರನೆಂಬ ಹೆಸರಿನ ಮಹಾಪ್ರತಾಪವಂತ ದೊರೆಯಾದನು, ಗಂಗಾಧರ ದೊರೆಯ ಪುತ್ರಿ ಗಂಗೆಯೆಂಬ ಹೆಸರಿನ ಆತನ ಪತ್ನಿಯಿಂದ ಗಾಂಗೇಯ ನಾಮದ ಪುತ್ರನಾದನು. ಅವನು ಮಹಾನ್ಯಾಯವಂತ ಹಾಗೂ ಬಾಲಬ್ರಹ್ಮಚಾರಿ ಉಳಿದನು. ಜಾಲಗಾರನ ಮನೆಯಲ್ಲಿ ಬೆಳೆದಿರುವ ರಾಜಕನ್ಯೆ ಗುಣವತಿಯೆಂಬ ಹೆಸರಿನ ಪರಾಶರನ ಎರಡನೇ ಪತ್ನಿಯಿಂದ ವ್ಯಾಸನೆಂಬ ಹೆಸರಿನ ಪುತ್ರನ ಜನ್ಮವಾಯಿತು. ಮಹಾಗುಣವಂತ ವ್ಯಾಸ ದೊರೆಯ ಪತ್ನಿ ಸುಭದ್ರೆಯ ಗರ್ಭದಿಂದ ಧೃತರಾಷ್ಟ್ರ, ಪಾಂಡು ಕುಮಾರ ಮತ್ತು ವಿದುರ - ಇವರು ಮೂವರು ಪುತ್ರರಾದರು. ಧೃತರಾಷ್ಟ್ರನಿಂದ ದುರ್ಯೋಧನ, ದುಃಶಾಸನ ಮೊದಲಾದ ನೂರು ಜನ ಪುತ್ರರಾದರು. ಪಾಂಡುವಿನ ವಿವಾಹವು ಅಂಧಕವೃಷ್ಟಿಯ ಪುತ್ರಿಯಾದ ಕುಂತಿ ಮತ್ತು ಮಾದ್ರಿಯರೊಂದಿಗೆ ಆಯಿತು. ಕುಂತಿಗೆ ನಾಲ್ವರು ಪುತ್ರರಾದರು. ಹಿರಿಯ ಕುಮಾರ ಕರ್ಣನ ಉತ್ಪತ್ತಿಯು ಗುಪ್ತ ರೂಪದಿಂದ ಆಗಿರುವ ಕಾರಣ ಬಾಲಕನನ್ನು ಪತ್ರದೊಂದಿಗೆ ಪೆಟ್ಟಿಗೆಯಲ್ಲಿಟ್ಟು ನೀರನಲ್ಲಿ ತೇಲಿ ಬಿಡಲಾಯಿತು. ಅವನು ಚಂಪಾಪುರದ ಅರಸ ಸೂರ್ಯನ ಅರಮನೆಯಲ್ಲಿ ಬೆಳೆದನು. ನಂತರ ಕುಂತಿಯಿಂದ ಯುಧಿಷ್ಠಿರ, ಭೀಮ ಮತ್ತು ಅರ್ಜುನರೆಂಬ ಮೂವರು ಪುತ್ರರು ಮತ್ತು ಮಾದ್ರಿಯಿಂದ ನಕುಲ ಮತ್ತು ಸಹದೇವರೆಂಬ ಇಬ್ಬರು ಪುತ್ರರಾದರು. ಅರ್ಜುನನಿಂದ ಅಭಿಮನ್ಯುವೆಂಬ ಪುತ್ರನಾದನು - ಈ ಪ್ರಕಾರ ಕೌರವ ಪಾಂಡವರ ಉತ್ಪತ್ತಿಯನ್ನು ಹೇಳಲಾಯಿತು.

ದ್ರೋಣಾಚಾರ್ಯರ ವಂಶ ಪಟ್ಟಾವಲಿ - ಭಾರ್ಗವ ನಾಮದ ವಂಶದಲ್ಲಿ ಮಹಾವಿದ್ಯೆಯ ತಿಲಕ ವಾಮದೇವನಾದನು. ಅವನ ಕಾಪಿಷ್ಠಲನೆಂಬ ಪುತ್ರನಿಂದ ಯಶಸ್ಥಾಮನೆಂಬ ಪುತ್ರನಾದನು. ಅವನಿಂದ ಶ್ರವರ, ಶ್ರವರನಿಂದ ಸರಾಸರ, ಸರಾಸರನಿಂದ ದ್ರಾವಣ ಮತ್ತು ದ್ರಾವಣನಿಂದ ವಿದ್ರಾವಣನಾದನು. ವಿದ್ರಾವಣನ ಪುತ್ರ ದ್ರೋಣಾಚಾರ್ಯ ಹಾಗೂ ಅವನ ಪುತ್ರ ಅಶ್ವತ್ಥಾಮನಾದನು.

ಜರಾಸಿಂಧುವಿನ ಪಟ್ಟಾವಲಿ - ಹರಿವಂಶದ ದೊರೆ ವಸುವಿನಿಂದ ಮಗಧ ದೇಶದ ದೊರೆ ನಿಹತ ಶತ್ರುವಾದನು. ಅವನಿಂದ ದೊರೆ ಸತಿಪತಿ, ಸತಿಪತಿಯಿಂದ ದೊರೆ ಬೃಹದ್ರಥನಾದನು ದೊರೆ ಬೃಹದ್ರಥನಿಂದ ಜರಾಸಿಂಧು ಮತ್ತು ಅವನಿಂದ ಅಪರಾಜಿತ ದೊರೆಯಾದನು. ಜರಾಸಿಂಧುವೆಂಬ ಹೆಸರಿನ ಒಂಭತ್ತನೆಯ ಪ್ರತಿ ಹರಿಗೆ ಕಾಲಯಮನನೆಂಬ ಹೆಸರಿನ ಪುತ್ರನಾದನು - ಹೀಗೆ ಜರಾಸಿಂಧುವಿನ ವಂಶ ಹೇಳಲಾಯಿತು.

ಈ ಪ್ರಕಾರ ಒಂಭತ್ತನೆಯ ನಾರಾಯಣನ ಸಮಕಾಲದ ಮಹಾಪುರುಷರ ಕಥನವಾಯಿತು.

ಸಗರ ಚಕ್ರಿಯ ವಂಶ - ಇಕ್ಷ್ವಾಕು ವಂಶದಲ್ಲಿ ಆದಿ ಜಿನರ ನಂತರ ಅಸಂಖ್ಯಾತ ದೊರೆಗಳು ಆಗಿ ಹೋದ ಮೇಲೆ ಧರಣೀಧರ ನಾಮದ ದೊರೆಯ ತಿರಯಶಜಯನೆಂಬ ಹೆಸರಿನ ಪುತ್ರನಾದನು. ಅವನಿಗೆ ಜಿತಶತ್ರು ಮತ್ತು ವಿಜಯಸಾಗರ - ಎಂಬ ಈರ್ವರು ಪುತ್ರರಿದ್ದರು. ಜಿತಶತ್ರುವಿನಿಂದ ಅಜಿತನಾಥ ಮತ್ತು ವಿಜಯಸಾಗರನಿಂದ ಸಗರ ಚಕ್ರಿಯಾದರು. ಸಗರ ಚಕ್ರಿಗೆ ಅರವತ್ತು ಸಾವಿರ ಪುತ್ರರು ಮತ್ತು ಭಾಗೀರಥರಾದರು. - ಹೀಗೆ ಸಗರನ ವಂಶವಿತ್ತು.

ಈ ಪ್ರಕಾರ ಮಹಾಪುರುಷರ ಈ ಪರಂಪರೆಯು ಭವ್ಯರ ಸಲುವಾಗಿ ಮಂಗಲಕಾರಕವಾಗಲಿ.

ಹನ್ನೊಂದು ರುದ್ರರ ವರ್ಣನೆ - ಆದಿನಾಥರ ಸಮಯದಲ್ಲಿ ಆಗಿರುವ ಭೀಮನೆಂಬ ಹೆಸರಿನ ಮೊದಲನೇ ರುದ್ರನ ಆಯು ಎಂಭತ್ಮೂರು ಲಕ್ಷಪೂರ್ವ ಮತ್ತು ಶರೀರದ ಎತ್ತರವು ಐನೂರು ಧನುಷ್ಯವಿತ್ತು.

ಅಜಿತನಾಥರ ಸಮಯದಲ್ಲಿ ಆಗಿರುವ ಎರಡನೆಯ ರುದ್ರ ಜಯತಿ ಶತ್ರುವಿನ ಆಯು ಎಪ್ಪತ್ತೊಂದು ಲಕ್ಷಪೂರ್ವ ಮತ್ತು ಶರೀರದ ಎತ್ತರ ನಾಲ್ಕು ನೂರಾ ಐವತ್ತು ಧನುಷ್ಯವಿತ್ತು.

ಒಂಭತ್ತನೆಯ ತೀರ್ಥಂಕರರ ಸಮಯದಲ್ಲಿ ಆಗಿರುವ ರುದ್ರನೆಂಬ ಹೆಸರಿನ ಮೂರನೇ ರುದ್ರನ ಆಯು ಎರಡು ಲಕ್ಷಪೂರ್ವ ಮತ್ತು ಕಾಯವು ನೂರು ಧನುಷ್ಯವಿತ್ತು.

ಹತ್ತನೆಯ ತೀರ್ಥಂಕರರ ಸಮಯದಲ್ಲಿ ಆಗಿರುವ ನಾಲ್ಕನೆಯ ವಿಶ್ವಾನಲ ರುದ್ರನ ಆಯು ಒಂದು ಲಕ್ಷಪೂರ್ವ ಮತ್ತು ಶರೀರದ ಎತ್ತರವು ತೊಂಭತ್ತು ಧನುಷ್ಯವಿತ್ತು.

ಶ್ರೇಯಾಂಸ ತೀರ್ಥಂಕರರ ಸಮಯದಲ್ಲಿ ಆಗಿರುವ ಐದನೆಯ ಸುಪ್ರತಿಷ್ಠ ರುದ್ರನ ಆಯುವು ಎಂಭತ್ನಾಲ್ಕು ಲಕ್ಷ ವರ್ಷ ಹಾಗೂ ಕಾಯದ ಎತ್ತರವು ಎಂಭತ್ತು ಧನುಷ್ಯವಿತ್ತು.

ವಾಸುಪೂಜ್ಯ ಜಿನರ ಸಮಯದಲ್ಲಿ ಆಗಿರುವ ಆರನೆಯ ಅಚಲ ರುದ್ರನ ಆಯುವು ಅರವತ್ತು ಲಕ್ಷ ವರ್ಷ ಮತ್ತು ಕಾಯವು ಎಪ್ಪತ್ತು ಧನುಷ್ಯವಿತ್ತು.

ವಿಮಲನಾಥರ ಸಮಯದಲ್ಲಿ ಆಗಿರುವ ಏಳನೆಯ ಪುಂಡರೀಕ ರುದ್ರನ ಆಯುವು ಐವತ್ತು ಲಕ್ಷ ಹಾಗೂ ಕಾಯದ ಎತ್ತರವು ಅರವತ್ತು ಧನುಷ್ಯವಿತ್ತು.

ಅನಂತನಾಥ ತೀರ್ಥಂಕರರ ಸಮಯದಲ್ಲಿ ಆಗಿರುವ ಎಂಟನೇ, ಅಜಿತಧರ ರುದ್ರನ ಆಯುವು ನಲವತ್ತು ಲಕ್ಷ ವರ್ಷ ಮತ್ತು ಕಾಯದ ಎತ್ತರವು ಐವತ್ತು ಧನುಷ್ಯವಿತ್ತು.

ಧರ್ಮನಾಥ ಜಿನರ ಸಮಯದಲ್ಲಿ ಆಗಿರುವ ಒಂಭತ್ತನೇ ಜಿತನಾಭಿ ರುದ್ರನ ಆಯುವು ಇಪ್ಪತ್ತು ಲಕ್ಷ ವರ್ಷ ಮತ್ತು ಕಾಯವು ಇಪ್ಪತ್ತೆಂಟು ಧನುಷ್ಯ ಎತ್ತರವಿತ್ತು.

ಶಾಂತಿನಾಥರ ಸಮಯದಲ್ಲಿ ಆಗಿರುವ ಹತ್ತನೆಯ ಪೀಠಿರುದ್ರನ ಆಯುವು ಒಂದು ಲಕ್ಷ ವರ್ಷ ಮತ್ತು ಕಾಯವು ಇಪ್ಪತ್ನಾಲ್ಕು ಧನುಷ್ಯ ಎತ್ತರವಿತ್ತು.

ಮಹಾವೀರರ ಸಮಯದಲ್ಲಿ ಆಗಿರುವ ಕೊನೆಯ ಹನ್ನೊಂದನೆಯ ಸಾತ್ಯಕೀ ರುದ್ರನ ಆಯುವು ಅರವತ್ತೊಂಭತ್ತು ವರ್ಷ ಮತ್ತು ಕಾಯದ ಎತ್ತರವು ಏಳು ಮೊಳವಿತ್ತು.

ಈ ಎಲ್ಲ ರುದ್ರರು ಹನ್ನೊಂದು ಅಂಗ, ಹತ್ತು ಪೂರ್ವದ ಪಾಠಿಗಳಿರುತ್ತಾರೆ ಮತ್ತು ಸ್ವಭಾವದಿಂದಲೇ ಸಹಜ ಕ್ರೋಧರೂಪರಾಗಿರುತ್ತಾರೆ. ಇವರೆಲ್ಲರ ಕುಮಾರ ಕಾಲ, ಸಂಯಮಕಾಲ ಮತ್ತು ಸಂಯಮದಿಂದ ಪತನದ ಕಾಲವು ಅದು ಅಸಂಯಮ ಕಾಲವೇ ಇರುತ್ತದೆ. ಇವರು ಮೊದಲು ಸಂಯಮ ಧಾರಣ ಮಾಡುತ್ತಾರೆ. ಅನೇಕ

ತಪ ಬಲದಿಂದ ಇವರುಗಳ ಜ್ಞಾನಶಕ್ತಿ, ಋದ್ಧಿ ಶಕ್ತಿಗಳು ವೃದ್ಧಿಂಗತವಾಗುತ್ತವೆ. ನಂತರದ ಕಾಲದಲ್ಲಿ ಭೋಗವಿಲಾಸಿ, ಮಾನಾರ್ಥಿಗಳಾಗಿ ಸಂಯಮ ಬಿಟ್ಟುಕೊಡುತ್ತಾರೆ - ಎಲ್ಲ ರುದ್ರರ ಸ್ವಭಾವವು ಹೀಗೆಯೇ ಇರುತ್ತದೆಯೆಂದು ತಿಳಿಯುವುದು.

ಒಂಭತ್ತು ನಾರದರ ಕಥನ - ನಾರದರು ನಾರಾಯಣರ ಸಮಯದಲ್ಲಿಯೇ ಆಗುತ್ತಾರೆ. ಇವರುಗಳ ಆಯು ಕಾಯಗಳು ನಾರಾಯಣ-ಬಲಭದ್ರರ ಸಮಾನವೇ ಇರುತ್ತವೆಯೆಂದು ತಿಳಿಯುವುದು. ಭೀಮ, ಮಹಾಭೀಮ, ರುದ್ರ, ಮಹಾರುದ್ರ, ಕಾಲ, ಮಹಾಕಾಲ, ದುರ್ಮುಖ, ನರಮುಖ ಮತ್ತು ಅಧೋಮುಖ - ಇವು ಒಂಭತ್ತು ನಾರದರ ಹೆಸರುಗಳಿವೆ.

ಇಪ್ಪತ್ನಾಲ್ಕು ಕಾಮದೇವರ ಹೆಸರು - ಬಾಹುಬಲಿ, ಅಮಿತತೇಜ, ಶ್ರೀಧರ, ದಶಭದ್ರ, ಪ್ರಸೇನಜಿತ, ಚಂದ್ರವರ್ಣ, ಅಗ್ನಿಮುಕ್ತ, ಸನತ್ಕುಮಾರ, ವತ್ಸರಾಜ, ಕನಕಪ್ರಭ, ಮೇಘವರ್ಣ, ಶಾಂತಿನಾಥ, ಕುಂಥುನಾಥ, ಅರನಾಥ, ವಿಜಯರಾಜ, ಶ್ರೀಚಂದ್ರ, ನಳರಾಜ, ಹನುಮಂತ, ಬಲಿರಾಜ, ವಸುದೇವ, ಪ್ರದ್ಯುಮ್ನ, ನಾಗಕುಮಾರ, ಶ್ರೀಪಾಲ ಮತ್ತು ಜಂಬೂಸ್ವಾಮೀ (ಗ್ರಂಥಾಂತರಗಳಲ್ಲಿ ನಾಮಭೇದವಿದೆ) - ಇವರು ಇಪ್ಪತ್ನಾಲ್ಕು ಕಾಮದೇವರಿದ್ದಾರೆ.

ಈ ಪ್ರಕಾರ ತೀರ್ಥಂಕರ ಮೊದಲಾದವರ ಕಥನ ಮಾಡಲಾಯಿತು.

ಅಂತಿಮ ಮಹಾವೀರ ಸ್ವಾಮಿಯ ಮುಕ್ತಿಯ ನಂತರ ಆರು ನೂರಾ ಐವತ್ತು ವರ್ಷಗಳು ಕಳೆದು ಹೋದ ಮೇಲೆ ದೊರೆ ವಿಕ್ರಮಾದಿತ್ಯನಾದನು ಹಾಗೂ ಭಗವಂತರ ಮುಕ್ತಿಯಾದ ಒಂದು ಸಾವಿರ ವರ್ಷದ ನಂತರ ಕಲಂಕಿಯಾದನು. ಈ ಪ್ರಕಾರ ಪಂಚಮ ಕಾಲದ ಮರ್ಯಾದೆಯಲ್ಲಿ ಇಪ್ಪತ್ತೊಂದು ಕಲಂಕಿ(ಕಲ್ಕಿ) ಮತ್ತು ಇಪ್ಪತ್ತೊಂದು ಉಪಕಲಂಕಿ(ಉಪಕಲ್ಕಿ)- ಇವರು ನಲವತ್ತೆರಡು ದೊರೆಗಳು ಧರ್ಮನಾಶಕರಾಗುವರು. ಪಂಚಮ ಕಾಲದ ಕೊನೆಯಲ್ಲಿ ಜಲಮಥನೆಂಬ ಕೊನೆಯ ಕಲಂಕಿಯಾಗುವನು. ಆ ಸಮಯದಲ್ಲಿ ಚತುರ್ವಿಧ ಸಂಘದ ನಾಲ್ಕು ಜೀವಗಳಿರುವರು - ೧. ಇಂದ್ರರಾಜರೆಂಬ ಹೆಸರಿನ ಆಚಾರ್ಯರ ಶಿಷ್ಯ ವೀರಾಂಗದ ಯತೀಶ್ವರ, ೨. ಸರ್ವಶ್ರೀಯೆಂಬ ಹೆಸರಿನ ಆರ್ಯಿಕೆ, ೩. ಅಗ್ನಿಲವೆಂಬ ಹೆಸರಿನ ಮಹಾಧರ್ಮಾತ್ಮಾ ಶ್ರಾವಕ ಮತ್ತು ೪. ಪಂಗುಶ್ರೀಯೆಂಬ ಹೆಸರಿನ ಶ್ರಾವಿಕೆ.

ಈ ಮುನಿ, ಆರ್ಯಿಕೆ, ಶ್ರಾವಕ, ಶ್ರಾವಿಕೆಯರೂಪದ ನಾಲ್ವರು ಮನುಷ್ಯರು ಕೊನೆಯ ಧರ್ಮಾತ್ಮರಾಗುವರು. ಇವರ ನಂತರ ಧರ್ಮಾತ್ಮಾ ಜೀವರುಗಳ ಅಭಾವವಾಗುವುದು. ಇವರ ಸಮಯದಲ್ಲಿ ಜಲಮಥ ನಾಮದ ಕಲಂಕಿಯು ತನ್ನ ಮಂತ್ರಿಗಳನ್ನು ಉದ್ದೇಶಿಸಿ - 'ಎಲೈ ಮಂತ್ರಿಗಳೇ ! ಯಾವುದಾದರೂ ಜೀವಗಳು ನನ್ನ ಆಜ್ಞೆಯಿಂದ ರಹಿತರೂ ಇದ್ದಾರೆಯೋ ಅಥವಾ ಎಲ್ಲ ಜೀವಗಳು ನನ್ನ ಆಜ್ಞೆಯನ್ನು ಮನ್ನಿಸುತ್ತಿದ್ದಾರೆ ?' - ಎಂದು ಕೇಳಿದಾಗ, ಮಂತ್ರಿಗಳು ಹೇಳುವರು - ಓ ಪ್ರಭು ! ಉಳಿದವರಂತೂ ಎಲ್ಲರೂ ತಮ್ಮ ಆಜ್ಞೆಯನ್ನು ಮನ್ನಿಸುತ್ತಾರೆ; ಕೇವಲ ಒಬ್ಬರು ವೀತರಾಗೀ ಮುನಿಗಳು ತಮ್ಮ ಆಜ್ಞೆಯನ್ನು ಮನ್ನಿಸುವುದಿಲ್ಲ. ಆಗ ದೊರೆಯು ಆ ಮುನಿಗಳು ಎಲ್ಲಿ ಇರುತ್ತಾರೆ, ಏನು ಮಾಡುತ್ತಾರೆ ? - ಎಂದು ಕೇಳುವನು. ಉತ್ತರ ಸ್ವರೂಪವಾಗಿ ಮಂತ್ರಿಗಳು ಹೇಳುತ್ತಾರೆ - ಅವರು ವನದಲ್ಲಿ ಇರುತ್ತಾರೆ; ಶರೀರದಿಂದಲೂ ನಿಸ್ಪೃಹರಿದ್ದಾರೆ. ಅವರಿಗೆ ಶತ್ರು-ಮಿತ್ರ, ಚಿನ್ನ-ಮಣ್ಣುಗಳು ಸಮಾನವಿವೆ. ಮಹಾವೀತರಾಗ, ಸೌಮ್ಯ ದೃಷ್ಟಿ ಸಂಪನ್ನರಿದ್ದಾರೆ. ಆಹಾರದ ಸಮಯದಲ್ಲಿ ಶ್ರಾವಕರ ಮನೆಯೊಳಗೆ ಅನೇಕ ದೋಷಗಳನ್ನು ದೂರ ಮಾಡಿ, ಶುದ್ಧ ಪ್ರಾಸುಕ ಆಹಾರವನ್ನು ಗ್ರಹಣ ಮಾಡಿ ಮತ್ತೆ ಕಾನನದ ಏಕಾಂತ ಸ್ಥಾನದಲ್ಲಿದ್ದು ಧ್ಯಾನಲೀನರಾಗಿರುತ್ತಾರೆ, ಆ ಯತಿಗಳು ಯಾರ ಆಜ್ಞೆಯಲ್ಲಿ ಇರುವುದಿಲ್ಲ. ಆಗ ಕಲಂಕಿಯು 'ಯಾವಾಗ ಅವರು ಆಹಾರ ತಗೆದುಕೊಳ್ಳುವ ಸಲುವಾಗಿ ನಮ್ಮ ಗ್ರಾಮದಲ್ಲಿ ಬರುತ್ತಾರೆ, ಆಗ ಅವರ ಮೊದಲನೆಯ ತುತ್ತನ್ನು ಕರದ ರೂಪದಲ್ಲಿ ತಗೆದುಕೊಳ್ಳುವುದು ಎಂದು ಹೇಳುವನು.

ಮುನಿಯ ಆಹಾರದೊಳಗಿಂದ ಪ್ರಥಮ ತುತ್ತನ್ನು ತಗೆದುಕೊಳ್ಳುತ್ತಿದ್ದಂತೆಯೇ ಅವರು ಅಂತರಾಯ, ಮಾಡಿಕೊಂಡು, ವನದೊಳಗೆ ಹೋಗಿ, ಸಂನ್ಯಾಸ ಧಾರಣ ಮಾಡಿ ಮೂರನೆಯ ದಿನ ಕಾರ್ತಿಕ ವದ್ಯ ಅಮಾವಾಸ್ಯೆಯಂದು ಪರ್ಯಾಯ ತ್ಯಾಗ ಮಾಡಿ ಒಂದು ಸಾಗರ ಆಯುವಿನೊಂದಿಗೆ ಪ್ರಥಮ ಸ್ವರ್ಗದಲ್ಲಿ ದೇವನಾಗುವರು. ಅದೇ ಸಮಯದಲ್ಲಿ ಈ ಸಮಾಚಾರವನ್ನಾಲಿಸಿ ಉಳಿದ ಆರ್ಯಿಕೆ, ಶ್ರಾವಕ ಮತ್ತು ಶ್ರಾವಿಕೆ ಮೂವರು ಸಂನ್ಯಾಸ ಧಾರಣ ಮಾಡಿ ಅದೇ ಸ್ವರ್ಗದಲ್ಲಿ ಮಹಾಋದ್ಧಿಧಾರಕ ದೇವಗಳ ರೂಪದಲ್ಲಿ ಉತ್ಪನ್ನರಾಗುತ್ತಾರೆ. ಅದೇ ದಿನ ಮೊದಲನೆಯ ಪ್ರಹರದಲ್ಲಿ ಧರ್ಮದ ನಾಶವಾಗುವುದು; ಇಡೀ ಆರ್ಯ ಖಂಡದಲ್ಲಿ ಧರ್ಮದ ಅಭಾವವಾಗಿ ಹೋಗುವುದು. ಅದೇ ದಿನ ಮಧ್ಯಾಹ್ನದೊಳಗೆ ರಾಜ್ಯದ ನಾಶವಾಗಿ ಹೋಗುವುದು ಮತ್ತು ಅದೇ ದಿನದ ಅಂತಿಮ ಸಮಯದಲ್ಲಿ ಅಗ್ನಿಯು ನಷ್ಟವಾಗಿ ಹೋಗುವುದು. ಆರ್ಯಖಂಡದಲ್ಲಿ ಅಗ್ನಿಯು ದೊರಕಲಾರದು. ವಸ್ತುಗಳು ನಷ್ಟವಾಗಿ ಹೋಗುವವು. ಅದರಿಂದ ಎಲ್ಲರು ನಗ್ನರಾಗಿ ಉಳಿಯುವರು. ಅನ್ನ-ಧಾನ್ಯ ನಷ್ಟವಾಗಿ ಹೋಗುವುದರಿಂದ ಎಲ್ಲ ಜೀವಗಳು ಮಾಂಸಾಹಾರಿಯಾಗುವರು. ಮುನಿಯ ಮೇಲೆ ಉಪಸರ್ಗವಾಗಿದೆಯೆಂಬುದನ್ನು ತಿಳಿದು, ಅಸುರೇಂದ್ರನು ಬಂದು ಕಲಂಕಿಯನ್ನು ವಜ್ರದಿಂದ ಸಾಯಿಸುವನು; ಅದರಿಂದ ಅವನು ಸತ್ತು ಕುಗತಿಗೆ ಹೋಗುವನು. ಅದರ ನಂತರ ಎಲ್ಲರೂ ಕುರುಡರು ಮತ್ತು ಮಹಾಕ್ರೋಧಿಯಾಗುವರು. ಸತ್ತು ನಾರಕಿ ಅಥವಾ ಪಶುವಾಗುವರು. ಅಲ್ಲಿಯ ಜೀವಗಳೇ ಇಲ್ಲಿ ಬಂದು ಉತ್ಪನ್ನರಾಗುವರು. ಆರ್ಯಖಂಡದಿಂದ ಎರಡು ಶುಭಗತಿಗಳಿಗೆ ಆವಾಗಮನ (ಬರ ಹೋಗುವುದರ) ನಾಶವಾಗುವುದು. ಧರ್ಮವು ನಷ್ಟವಾಗಿ ಹೋಗುವ ಕಾರಣ ಆರ್ಯಖಂಡದ ಜೀವಗಳೆಲ್ಲ ಮಹಾದುಃಖಿಯಾಗುವವು - ಈ ಪ್ರಕಾರ ಅವಸರ್ಪಿಣಿಯ ಪಂಚಮ ಕಾಲವು ಪೂರ್ಣವಾಗುವುದು.

ಅದರ ನಂತರ ಆರನೆಯ ಕಾಲದ ಇಪ್ಪತ್ತೊಂದು ಸಾವಿರ ವರ್ಷಗಳು ಮಹಾಕಷ್ಟದಿಂದ ಪೂರ್ಣವಾಗುವವು. ಈ ಆರನೇ ಕಾಲದ ನಲವತ್ತೊಂಭತ್ತು ದಿವಸಗಳು ಉಳಿದಿರುವಾಗ ಏಳು-ಏಳು ದಿವಸಗಳವರೆಗೆ ಅಶುಭ ಅಶುಭ ವೃಷ್ಟಿ(ಮಳೆ)ಗಳಾಗುವವು. ಅವು ಈ ಪ್ರಕಾರವಿವೆ - ೧. ಅತಿ ತೀವ್ರ ಪವನದ ವೃಷ್ಟಿಯಾಗುವುದು ಅದರಿಂದ ಪರ್ವತಗಳೆಲ್ಲವೂ ತರಗೆಲೆಗಳಂತೆ ಹಾರಿ ಹೋಗುವವು, ೨. ಬಹಳಷ್ಟು ಶೀತದ ವೃಷ್ಟಿಯಾಗುವುದು. ೩. ಉಪ್ಪು ನೀರಿನ ವೃಷ್ಟಿ, ೪. ವಿಷದ ವೃಷ್ಟಿ, ೫. ವಜ್ರಾಗ್ನಿಯ ವೃಷ್ಟಿ, ೬. ಮಳಲು-ಧೂಳಿನ ವೃಷ್ಟಿ ಹಾಗೂ ಹೊಗೆ (ಧೂಮ್ರ)ದ ವೃಷ್ಟಿಯಿಂದ ಸರ್ವತ್ರ ಅಂಧಕಾರವಾಗಿ ಹೋಗುವುದು - ಈ ಏಳು ವೃಷ್ಟಿಗಳಿಂದ ಈ ಕ್ಷೇತ್ರದಲ್ಲಿ ಪ್ರಲಯವಾಗಿ ಹೋಗುವುದು - ಈ ಪ್ರಕಾರ ಅವಸರ್ಪಿಣಿಯ ಸಾಮಾನ್ಯ ವಾಖ್ಯಾನವಾಯಿತು.

ಅದರ ನಂತರ ಉತ್ಸರ್ಪಿಣಿ ಕಾಲದ ಪ್ರಾರಂಭವಾಗುವುದು. ಅದರ ಆರನೆಯ (ಪ್ರಥಮ ದುಖಮಾ-ದುಖಮಾ) ಕಾಲವು ಪ್ರಾರಂಭವಾಗುತ್ತಿದ್ದಂತೆಯೆ ಒಳ್ಳೆಯ ವೃಷ್ಟಿ(ಮಳೆ)ಯಾಗುವುದು; ಅದರಿಂದ ಪೃಥ್ವಿಯು ರಸ-ರೂಪ ಸಂಪನ್ನವಾಗುವುದು. ಮೊದಲನೇ ಪ್ರಲಯದ ಸಮಯದಲ್ಲಿ ಕೆಲವು ಜೀವಗಳನ್ನು ವಿದ್ಯಾಧರ-ದೇವಗಳು ಕೈಯಿಂದ ಎತ್ತಿಕೊಂಡು ಹೋಗಿ ಗಂಗಾ-ಸಿಂಧು ನದಿಗಳ ದಡದ ಹಾಗೂ ವಿಜಯಾರ್ಧದ ಗುಹೆಗಳಲ್ಲಿ ಇರಿಸಿದ್ದರು. ಅವರು ಈಗ ಸಾತಾವಾಗಿದೆಯೆಂದು ತಿಳಿದು ಇಲ್ಲಿ ಬಂದು ಬಿಡುವರು, ಅವರಿಂದ ಇಲ್ಲಿ ಪುನರ್‌ರಚನೆಯಾಗುವುದು. ಇದು ಉತ್ಸರ್ಪಿಣಿಯ ಪ್ರಥಮ ಕಾಲವಾಗುವುದು; ಆದರೆ ಪರಂಪರೆಯು ಆರನೆಯ ಕಾಲದ ಸಮಾನವಿರುವುದು, ವಿಶೇಷವೆಂದರೆ ಈ ಆರನೇ ಕಾಲದಲ್ಲಿ ಆಯು, ಕಾಯ ಮತ್ತು ಜ್ಞಾನದ ವೃದ್ಧಿಯಾಗುವುದು ಈ ಪ್ರಕಾರ ಆರನೆಯ ಕಾಲದ ಇಪ್ಪತ್ತೊಂದು ಸಾವಿರ ವರ್ಷಗಳು ಪೂರ್ಣವಾಗುವವು.

ಅದರ ನಂತರ ಐದನೆಯ - ಉತ್ಸರ್ಪಿಣಿಯ ಎರಡನೆಯ ಕಾಲವು ಪ್ರಾರಂಭವಾಗುವುದು. ಇದರ ಇಪ್ಪತ್ತೊಂದು ಸಾವಿರ ವರ್ಷಗಳೊಳಗಿಂದ ಇಪ್ಪತ್ತು ಸಾವಿರ ವರ್ಷಗಳು ವ್ಯತೀತವಾದ ಮೇಲೆ, ಒಂದು ಸಾವಿರ ವರ್ಷ ಶೇಷವಿರುವಾಗ ಉತ್ಸರ್ಪಿಣಿ ಕಾಲದ ಹದಿನಾಲ್ಕು ಕಲಂಕರರಾಗುವರು. ಅವರ ಹೆಸರು ಮತ್ತು ಪ್ರಕಾರ -

ಕನಕ, ಕನಕಪ್ರಭ, ಕನಕರಾಜ, ಕನಕಧ್ವಜ ಮತ್ತು ಕನಕಪುಂಗವ - ಇವರು ಐವರಂತೂ ಕನಕ(ಸುವರ್ಣ)ದ ಸಮಾನ ತನುವಿನಧಾರಕರಾಗುವರು. ನಲಿನ, ನಲಿನಪ್ರಭ, ನಲಿನರಾಜ, ನಲಿನಧ್ವಜ ಮತ್ತು ನಲಿನ ಪುಂಗವ - ಇವರು ಐವರು ಕಮಲದ ಸಮಾನ ತನುವಿನ ಧಾರಕರಾಗುವರು. ಉಳಿದ ಪದ್ಮ, ಪದ್ಮಪ್ರಭ, ಪದ್ಮರಾಜ ಮತ್ತು ಪದ್ಮಧ್ವಜ-ಇವರು ನಾಲ್ವರು; ಈ ಪ್ರಕಾರ ಇವರು ಹದಿನಾಲ್ಕು ಕುಲಂಕರರು ಐದನೇ ಕಾಲದ ಕೊನೆಯಲ್ಲಿ ಆಗುವರು.

ಅದರ ನಂತರ ನಲವತ್ತೆರಡು ಸಾವಿರ ವರ್ಷ ಕಡಿಮೆ ಒಂದು ಕೋಟಾಕೋಟಿ ಸಾಗರದ ನಾಲ್ಕನೆಯ ಕಾಲ - ಉತ್ಸರ್ಪಿಣಿಯ ಮೂರನೆಯ ಕಾಲವು ಪ್ರಾರಂಭವಾಗುವುದು. ಅದರಲ್ಲಿ ಮಹಾಪದ್ಮ, ಸುರದೇವ, ಸುಪಾರ್ಶ್ವ, ಸ್ವಯಂಪ್ರಭ, ಸರ್ವಾತ್ಮಭೂತ, ದೇವಪುತ್ರ, ಕುಲಪುತ್ರ, ಉದಂಕ, ಪ್ರೌಷ್ಠಿಲ, ಜಯಕೀರ್ತಿ, ಸುವ್ರತ, ಅರನಾಥ, ಪುಣ್ಯಮೂರ್ತಿ, ನಿಷ್ಕಷಾಯ, ವಿಪುಲ, ನಿರ್ಮಲ, ಚಿತ್ರಗುಪ್ತ, ಸಮಾಧಿಗುಪ್ತ, ಸ್ವಯಂಭೂ, ಅನುವೃತ್ತಿಕ, ಜಯ, ವಿಮಲ, ದೇವಪಾಲ ಮತ್ತು ಅನಂತವೀರ್ಯ - ಇವರು ಇಪ್ಪತ್ನಾಲ್ಕು ತೀರ್ಥಂಕರರು ಧರ್ಮತೀರ್ಥದ ಕರ್ತೃ ಹಾಗೂ ಮೋಹಾಂಧಕಾರವನ್ನು ದೂರ ಮಾಡುವ ಸಲುವಾಗಿ ಸೂರ್ಯ ಸಮಾನರಾಗುವರು.

ಆಗಾಮೀ ಹನ್ನೆರಡು ಚಕ್ರವರ್ತಿಗಳ ಹೆಸರು - ಭರತ, ದೀರ್ಘದತ್ತ, ಜಯದತ್ತ, ಗುಣದತ್ತ, ಶ್ರೀಷೇಣ, ಶ್ರೀಭೂತಿ, ಶ್ರೀಕಾಂತ, ಪದ್ಮ, ಮಹಾಪದ್ಮ, ಚಿತ್ರವಾನ, ವಿಮಲವಾಹನ ಮತ್ತು ಅರಿಷ್ಟಸೇನ.

ಆಗಾಮೀ ಒಂಭತ್ತು ನಾರಾಯಣರ ಹೆಸರು - ನಂದ, ನಂದಮಿತ್ರ, ನಂದಸೇನ, ನಂದಭೂತಿ, ಬಲ, ಮಹಾಬಲ, ಅತಿಬಲ, ತ್ರಿಪಿಷ್ಠ ಮತ್ತು ದ್ವಿಪಿಷ್ಠ.

ಇವರೇ ನಾರಾಯಣರ ಹಿರಿಯ ಸೋದರ ಆಗಾಮಿ ಬಲಭದ್ರರುಗಳ ಹೆಸರು - ಚಂದ್ರ, ಮಹಾಚಂದ್ರ, ಚಂದ್ರಧರ, ಸಿಂಹಚಂದ್ರ, ಹರಿಶ್ಚಂದ್ರ, ಶ್ರೀಚಂದ್ರ, ಪೂರ್ಣಚಂದ್ರ, ಶುಭಚಂದ್ರ, ಬಾಲಚಂದ್ರ.

ಆಗಾಮೀ ಒಂಭತ್ತು ಪ್ರತಿನಾರಾಯಣರ ಹೆಸರು - ಶ್ರೀಕಂಠ, ಹರಿಕಂಠ, ನೀಲಕಂಠ, ಅಶ್ವಕಂಠ, ಸುಕಂಠ, ಶಿಷ್ಯಕಂಠ, ಅಶ್ವಗ್ರೀವ, ಹಯಗ್ರೀವ ಮತ್ತು ಮಯೂರಗ್ರೀವ.

ಆಗಾಮೀ ಹನ್ನೊಂದು ರುದ್ರರ ಹೆಸರು - ಪ್ರಮದ, ಸಮ್ಮದ, ಹರ್ಷ, ಪ್ರಕಾಮ, ಕಾಮಾದ, ಭವ, ಹರ, ಮನೋಭವ, ಮಾರು, ಕಾಮ ಮತ್ತು ಅಂಗಜ. - ಈ ಪ್ರಕಾರ ಉತ್ಸರ್ಪಿಣಿಯ ತೀರ್ಥಂಕರ, ಚಕ್ರವರ್ತಿ, ನಾರಾಯಣ, ಬಲಭದ್ರ, ಪ್ರತಿನಾರಾಯಣ, ರುದ್ರ ಮೊದಲಾದ ಮಹಾಪುರುಷರಾಗುವರು.

ಭರತಕ್ಷೇತ್ರ ಸಂಬಂಧದ ಅತೀತ ಕಾಲದ ಇಪ್ಪತ್ನಾಲ್ಕು ಜಿನ ತೀರ್ಥಂಕರರ ಹೆಸರು - ನಿರ್ವಾಣ - ಸಾಗರ, ಮಹಾಸಾಧು, ವಿಮಲಪ್ರಭ, ಶುದ್ಧಾತ್ಮ, ಶ್ರೀಧರ, ಸುದತ್ತನಾಥ, ಅಮಲಪ್ರಭ, ಉದ್ಧಾರ, ಅಗ್ನಿದೇವ, ಸಂಯಮ, ಶಿವ, ಕುಸುಮಾಂಜಲಿ, ಶಿವಗಣ, ಉತ್ಸಾಹ, ಜ್ಞಾನೇಶ್ವರ, ಪರಮೇಶ್ವರ, ವಿಮಲೇಶ್ವರ, ಜಥಾರಥ, ಯಶೋಧರ, ಕೃಷ್ಣಮತಿ, ಜ್ಞಾನಮತಿ, ಶುದ್ಧಮತಿ, ಶ್ರೀಭದ್ರ ಮತ್ತು ಶಾಂತ.

ಈ ಪ್ರಕಾರ ಮೂರು ಕಾಲ ಸಂಬಂಧದ ಮೂರು ಚೌವಿಸಿಗಳ ಹೆಸರು ಹೇಳಿ, ಅಂತ್ಯ ಮಂಗಲದ ಸಲುವಾಗಿ ಅವರಿಗೆ ನಮಸ್ಕಾರ ಮಾಡಲಾಯಿತು. ಈ ಭಗವಂತರು ಭವ್ಯರಿಗೆ ಮಂಗಲವನ್ನುಂಟು ಮಾಡಲಿ. ಇವರುಗಳ ತಾಯಿ-ತಂದೆ, ಆಯುವಿನ ಪ್ರಮಾಣ ಹಾಗೂ ಚಿಹ್ನೆಗಳ ವರ್ಣನೆ ಮಾಡಲಾಯಿತು. ಇವರುಗಳ ಕಾಲದಲ್ಲಿ ಆಗಿರುವ ಕಾಮದೇವ, ಚಕ್ರವರ್ತಿ, ನಾರಾಯಣ, ಬಲಭದ್ರ, ಪ್ರತಿನಾರಾಯಣ, ಕುಲಂಕರ, ರುದ್ರ, ನಾರದ ಮೊದಲಾದ ಭವ್ಯ ಪುರುಷರ, ಭವ್ಯರಾಶಿ, ನಿಕಟ ಸಂಸಾರಿಗಳ ನಾಮ ಕೂಡ ಮಂಗಲಕಾರಕವಿದೆ. ಏಕೆಂದರೆ ಇವರೆಲ್ಲರೂ ಜಿನಧರ್ಮದ ಪಾರಗಾಮಿ, ಮೋಕ್ಷಗಾಮಿಗಳಿದ್ದಾರೆ. ಇಲ್ಲಿ ಇವರ ಕಥೆಯನ್ನು ಮಂಗಲದ ಸಲುವಾಗಿ ಪ್ರರೂಪಿತ ಮಾಡಲಾಗಿದೆ.

ಅಂತ್ಯಮಂಗಲದ ಸಲುವಾಗಿ ಭರತಕ್ಷೇತ್ರ ಸಂಬಂಧದ ಸಿದ್ಧಕ್ಷೇತ್ರಗಳ ಹೆಸರು - ಎಲ್ಲಿಂದ ಮಹಾವ್ರತಧಾರಿಗಳು, ಯೋಗೀಶ್ವರರು ಶುಕ್ಲಧ್ಯಾನರೂಪದ ಅಗ್ನಿಯ ಮೂಲಕ ಅಷ್ಟಕರ್ಮಗಳರೂಪದ ಇಂಧನವನ್ನು ಸುಟ್ಟು, ನಿರಂಜನರಾಗಿ ಲೋಕಾಂತ್ಯದಲ್ಲಿ ಸ್ಥಿತ, ಅನಂತ ಸಿದ್ಧರಿಂದ ಸಂಪನ್ನ ಸಿದ್ಧಕ್ಷೇತ್ರದಲ್ಲಿ ಹೋಗಿ ವಿರಾಜಮಾನರಾಗುತ್ತಾರೆ, ಅವು ಸಿದ್ಧಕ್ಷೇತ್ರಗಳಿವೆ. ಎಲ್ಲಿಂದ ಪ್ರಭುಗಳು ಮೋಕ್ಷ ತಲುಪಿದರು ಆ ಎಲ್ಲ ಸಿದ್ಧಕ್ಷೇತ್ರಗಳ ಪ್ರತ್ಯಕ್ಷ ವಂದನೆ ಮಾಡುವ ಸಾಮರ್ಥ್ಯವಂತೂ ಇಲ್ಲ. ಅದಕ್ಕಾಗಿ ಈ ಗ್ರಂಥವನ್ನು ಪೂರ್ಣ ಮಾಡುವ ಸಲುವಾಗಿ ಅಂತ್ಯ ಮಂಗಲದ ಭಾವದಿಂದ ಎಲ್ಲ ಕ್ಷೇತ್ರಗಳ ಹೆಸರು ಹೇಳಿ ಮಂಗಲಾಚರಣೆ ಮಾಡುತ್ತೇವೆ.

ಸರ್ವ ಪ್ರಥಮ ಆದಿನಾಥರ ನಿರ್ವಾಣ ಕ್ಷೇತ್ರ ಕೈಲಾಸ ಪರ್ವತ - ಅಷ್ಟಾಪದಕ್ಕೆ ನನ್ನ ನಮಸ್ಕಾರವಿರಲಿ. ಅಜಿತನಾಥರು ಮೊದಲಾಗಿ ಇಪ್ಪತ್ತು ತೀರ್ಥಂಕರರ ನಿರ್ವಾಣ ಕ್ಷೇತ್ರ ಸಮ್ಮೇದ ಶಿಖರಕ್ಕೆ ನನ್ನ ನಮಸ್ಕಾರವಿರಲಿ. ವಾಸುಪೂಜ್ಯ ಜಿನರ ನಿರ್ವಾಣ ಕ್ಷೇತ್ರ ಚಂಪಾಪುರ - ವನಕ್ಕೆ ನಮಸ್ಕಾರವಿರಲಿ. ನೇಮಿನಾಥ ಜಿನರು ಮೊದಲಾಗಿ ಎಪ್ಪತ್ತೆರಡು ಕೋಟಿ ಏಳು ನೂರು ಮುನಿಗಳ ನಿರ್ವಾಣ ಕ್ಷೇತ್ರ ಗಿರನಾರ ಶಿಖರಕ್ಕೆ ನಮಸ್ಕಾರವಿರಲಿ. ಮಹಾವೀರರ ನಿರ್ವಾಣ ಕ್ಷೇತ್ರ ಪಾವಾಪುರಕ್ಕೆ ನಮಸ್ಕಾರವಿರಲಿ.

ವರದತ್ತ ಮೊದಲಾದ ಮೂರೂವರೆ ಕೋಟಿ ಮುನಿಗಳ ಮುಕ್ತಿಕ್ಷೇತ್ರ ತಾರಂಗಾ ಶಿಖರಕ್ಕೆ ನಮಸ್ಕಾರವಿರಲಿ. ಲಾಡ ನರೇಂದ್ರ ಮೊದಲಾದ ಐದು ಕೋಟಿ ಮುನಿರಾಜರ ನಿರ್ವಾಣ ಕ್ಷೇತ್ರ ಪಾವಾಗಿರಿಗೆ ನಮಸ್ಕಾರವಿರಲಿ. ಮೂವರು ಪಾಂಡವರು ಮೊದಲಾಗಿ ಎಂಟು ಕೋಟಿ ಮುನಿರಾಜರ ನಿರ್ವಾಣ ಕ್ಷೇತ್ರ ಶತ್ರುಂಜಯಗಿರಿಗೆ ನನ್ನ ನಮಸ್ಕಾರವಿರಲಿ. ಬಲಭದ್ರರು ಮೊದಲಾಗಿ ಎಂಟು ಕೋಟಿ ಮುನಿಗಳ ಮುಕ್ತಿಸ್ಥಳ ಗಜಪಂಥ ಶಿಖರಕ್ಕೆ ನಮಸ್ಕಾರವಿರಲಿ. ರಾಮಚಂದ್ರ, ಸುಗ್ರೀವ, ಹನುಮಂತ ಮೊದಲಾಗಿ ತೊಂಭತ್ತೊಂಭತ್ತು ಕೋಟಿ ಯತೀಶ್ವರರ ನಿರ್ವಾಣಕ್ಷೇತ್ರ ತುಂಗಿ ಗಿರಿಗೆ ನಮಸ್ಕಾರವಿರಲಿ. ರಾವಣನ ಪುತ್ರ ಮೊದಲಾಗಿ ಐದೂವರೆ ಕೋಟಿ ಮುನಿಗಳ ನಿರ್ವಾಣ ಕ್ಷೇತ್ರ ರೇವಾನದಿ ದಡದಲ್ಲಿರುವ ಸಿದ್ಧವರ ಕೂಟಕ್ಕೆ ನನ್ನ ನಮಸ್ಕಾರವಿರಲಿ. ರಾವಣನ ಪುತ್ರ ಹಾಗೂ ಸೋದರ ಅರ್ಥಾತ್ ಇಂದ್ರಜಿತ ಹಾಗೂ ಕುಂಭಕರ್ಣರ ನಿರ್ವಾಣ ಕ್ಷೇತ್ರ ಚೂಲಗಿರಿ (ಬಡವಾನಿ) ಶಿಖರಕ್ಕೆ ನನ್ನ ನಮಸ್ಕಾರವಿರಲಿ. ಮೂರುವರೆ ಕೋಟಿ ಮುನಿಗಳ ಮುಕ್ತಿಕ್ಷೇತ್ರ, ಅಚಲಾಪುರದ ಈಶಾನ್ಯ ದಿಕ್ಕಿನಲ್ಲಿರುವ ಮೇಂಢಗಿರಿ ಶಿಖರವೆಂಬ ಹೆಸರಿನ ಮುಕ್ತಾಗಿರಿಗೆ ನಮಸ್ಕಾರವಿರಲಿ. ದೊರೆ ದಶರಥನ ಪುತ್ರರು ಮೊದಲಾಗಿ ಎಂಟು ಕೋಟಿ ಮುನಿಗಳ ನಿರ್ವಾಣ ಕ್ಷೇತ್ರ ಕೋಟಿಶಿಲೆಗೆ ನಮಸ್ಕಾರವಿರಲಿ.

- ಇತ್ಯಾದಿ ಎರಡೂವರೆ ದ್ವೀಪದಲ್ಲಿರುವ ಸಮಸ್ತ ಸಿದ್ಧಕ್ಷೇತ್ರಗಳಿಗೆ ನನ್ನ ನಮಸ್ಕಾರವಿರಲಿ ಈ ಸಿದ್ಧಕ್ಷೇತ್ರಗಳು ಗ್ರಂಥದ ಸಮಾಪ್ತಿಯಲ್ಲಿ ಕವೀಶ್ವರರ ಸಲುವಾಗಿ ಭವ-ಭವದಲ್ಲಿ ಮಂಗಲ ಮಾಡುವಲ್ಲಿ ಸಹಾಯಕವಾಗಲಿ ಈ ಗ್ರಂಥದ ಅಭ್ಯಾಸ ಮಾಡುವಂಥ ಭವ್ಯ ಜೀವರುಗಳಿಗೆ ಸಿದ್ಧಕ್ಷೇತ್ರದ ಯಾತ್ರೆಯ ಸಮಾನ ಫಲದಲ್ಲಿ ಸಹಾಯಕವಾಗಲಿ ಅದಕ್ಕಾಗಿ ಸಿದ್ಧಕ್ಷೇತ್ರಗಳಿಗೆ ನಮಸ್ಕಾರ ಮಾಡಿ ಅಂತ್ಯಮಂಗಲ ಮಾಡಲಾಗಿದೆ.

ಸಿದ್ಧಲೋಕದ ಸಮಾನ ಅಕೃತ್ರಿಮ ಚೈತ್ಯಾಲಯಗಳು ಮಂಗಲಕಾರಿ ಇವೆ. ಅದರಿಂದ ಇಲ್ಲಿ ಗ್ರಂಥದ ಕೊನೆಯಲ್ಲಿ ಎಂಟು ಕೋಟಿ ಐವತ್ತಾರು ಲಕ್ಷ ತೊಂಭತ್ತೇಳು ಸಾವಿರದಾ ನಾಲ್ಕು ನೂರಾ ಎಂಭತ್ತೊಂದು ಅನಾದಿ ನಿಧನ ಅಕೃತ್ರಿಮ, ಪ್ರತಿಯೊಂದರಲ್ಲಿ ಒಂದು ನೂರಾ ಎಂಟು ಜಿನಬಿಂಬ ಸಹಿತ ಜಿನಮಂದಿರಗಳಿಗೆ ನಮಸ್ಕಾರವಿರಲಿ. ಇವುಗಳಲ್ಲಿ ಏಳು ಕೋಟಿ ಎಪ್ಪತ್ತೆರಡು ಲಕ್ಷ ಪಾತಾಳ ಲೋಕದಲ್ಲಿ, ನಾಲ್ಕು ನೂರಾ ಐವತ್ತೆಂಟು ಮಧ್ಯಲೋಕದಲ್ಲಿ ಮತ್ತು ಎಂಭತ್ನಾಲ್ಕು ಲಕ್ಷ ತೊಂಭತ್ತೇಳು ಸಾವಿರದಾ ಇಪ್ಪತ್ಮೂರು ಊರ್ಧ್ವಲೋಕದಲ್ಲಿವೆ.

ಮಂಗಲದ ರಾಶಿಯಾದ ಇವೆಲ್ಲ ಜಿನಮಂದಿರಗಳು ಉತ್ಕೃಷ್ಟ, ಮಧ್ಯಮ ಮತ್ತು ಜಘನ್ಯದ ಭೇದದಿಂದ

ಮೂರು ಪ್ರಕಾರವಿವೆ. ಉತ್ಕೃಷ್ಟ ಜಿನಮಂದಿರಗಳು ನೂರು ಯೋಜನ ಉದ್ದ, ಐವತ್ತು ಯೋಜನ ಅಗಲ ಮತ್ತು ಎಪ್ಪತ್ತೈದು ಯೋಜನ ಎತ್ತರವಿವೆ. ಮಧ್ಯಮ ಚೈತ್ಯಾಲಯಗಳ ಪ್ರಮಾಣವು ಐವತ್ತು ಯೋಜನ ಉದ್ದ ಇಪ್ಪತ್ತೈದು ಯೋಜನ ಅಗಲ ಮತ್ತು ಮೂವತ್ತೇಳೂವರೆ ಯೋಜನ ಎತ್ತರದಿಂದ ಕೂಡಿವೆ. ಇಪ್ಪತ್ತೈದು ಯೋಜನ ಉದ್ದ, ಹನ್ನೆರಡೂವರೆ ಯೋಜನ ಅಗಲ ಮತ್ತು ಹದಿನೆಂಟು ಪೂರ್ಣಾಂಕ ಮೂರು ನಾಲ್ಕಾಂಶ ಯೋಜನ ಎತ್ತರ ಜಘನ್ಯ ಚೈತ್ಯಾಲಯಗಳ ಪ್ರಮಾಣವಿದೆ.

ಭದ್ರಶಾಲ ವನದಲ್ಲಿ, ನಂದನ ವನದಲ್ಲಿ, ನಂದೀಶ್ವರ ದ್ವೀಪದಲ್ಲಿ ಮತ್ತು ಕಲ್ಪವಾಸಿಗಳ ವಿಮಾನಗಳಲ್ಲಿ ಉತ್ಕೃಷ್ಟ ಅವಗಾಹನೆಯ ಧಾರಕ ಜಿನಮಂದಿರಗಳಿವೆ. ಅವುಗಳ ತಳಹದಿ (ಪಾಯವು) ಭೂಮಿಯಲ್ಲಿ ಎರಡು ಹರದಾರಿಯಿದೆ. ಸೌಮನಸವನ, ರುಚಕಗಿರಿ ಪರ್ವತ, ಕುಂಡಲಗಿರಿಪರ್ವತ, ವಕ್ಷಾರಗಿರಿ ಪರ್ವತ, ಇಷ್ವಾಕಾರ ಪರ್ವತ ಮಾನುಷೋತ್ತರ ಪರ್ವತ ಹಾಗೂ ಕುಲಾಚಲಗಳ ಮೇಲೆ ಮಧ್ಯಮ ಅವಗಾಹನದ ಜಿನಮಂದಿರಗಳಿವೆ. ವಿಜಯಾರ್ಧ, ಜಂಬೂವೃಕ್ಷ, ಶಾಲ್ಮಲಿ ವೃಕ್ಷಗಳ ಮೇಲಿರುವ ಚೈತ್ಯಾಲಯಗಳ ಅವಗಾಹನವು ಒಂದು ಹರದಾರಿ ಉದ್ದ, ಅರ್ಧ ಹರದಾರಿ ಅಗಲ ಮತ್ತು ಮುಕ್ಕಾಲು ಹರದಾರಿ ಎತ್ತರವಿದೆ. ಭವನವಾಸಿ ಮತ್ತು ವ್ಯಂತರ ದೇವಗಳ ಕ್ಷೇತ್ರಗಳಲ್ಲಿರುವ ಅಕೃತ್ರಿಮ ಚೈತ್ಯಾಲಯಗಳ ಅವಗಾಹನದ ಪ್ರಮಾಣವನ್ನು ಅನ್ಯ ಗ್ರಂಥಗಳಿಂದ ತಿಳಿಯುವುದು.

ಉತ್ಕೃಷ್ಟ ಚೈತ್ಯಾಲಯಗಳ ಮುಖ್ಯದ್ವಾರವು ಹದಿನಾರು ಯೋಜನ ಎತ್ತರ ಮತ್ತು ಎಂಟು ಯೋಜನ ಅಗಲವಿದೆ; ಮತ್ತು ಎರಡೂ ಕಡೆಗೆ ಇರುವಂಥ ಗೌಣ ದ್ವಾರಗಳು ಎಂಟು ಯೋಜನ ಎತ್ತರ ಮತ್ತು ನಾಲ್ಕು ಯೋಜನ ಅಗಲವಿವೆ. ಮಧ್ಯಮ ಚೈತ್ಯಾಲಯಗಳಲ್ಲಿ ಮುಖ್ಯದ್ವಾರ ಎಂಟು ಯೋಜನ ಎತ್ತರ ಮತ್ತು ನಾಲ್ಕು ಯೋಜನ ಅಗಲವಿದೆ. ಹಾಗೂ ಎರಡೂ ಪಾರ್ಶ್ವಗಳ ಗೌಣ ದ್ವಾರಗಳು ನಾಲ್ಕು ಯೋಜನ ಎತ್ತರ ಮತ್ತು ಎರಡು ಯೋಜನ ಅಗಲವಿವೆ. ಇಪ್ಪತ್ತೈದು ಯೋಜನ ಉದ್ದ, ಹನ್ನೆರಡೂವರೆ ಯೋಜನ ಅಗಲ ಮತ್ತು ಹದಿನೆಂಟು ಪೂರ್ಣಾಂಕ ಮೂರು ನಾಲ್ಕಾಂಶ ಯೋಜನ ಎತ್ತರದ ಚೈತ್ಯಾಲಯಗಳ ಎದುರಿಗಿನ ಮುಖ ದ್ವಾರವು ನಾಲ್ಕು ಯೋಜನ ಎತ್ತರ ಮತ್ತು ಎರಡು ಯೋಜನ ಅಗಲವಿದೆ ಹಾಗೂ ಎರಡೂ ಪಾರ್ಶ್ವಗಳ ಗೌಣದ್ವಾರಗಳು ಎರಡು ಯೋಜನ ಎತ್ತರ ಮತ್ತು ಒಂದು ಯೋಜನ ಅಗಲವಿವೆ. ಈ ಪ್ರಕಾರ ಮೂರು ಭೇದರೂಪ ಚೈತ್ಯಾಲಯಗಳೆಂದು ತಿಳಿಯುವುದು.

ಈ ಚೈತ್ಯಾಲಯಗಳಿಗೆ ಮೂರು-ಮೂರು ರತ್ನಮಯ ಕೋಟೆಗಳಿವೆ. ಪ್ರತಿಯೊಂದು ಕೋಟೆಗೆ ನಾಲ್ಕು-ನಾಲ್ಕು ದ್ವಾರಗಳಿವೆ. ಪ್ರಥಮ ದ್ವಾರದಿಂದ ಮಂದಿರದವರೆಗೆ ಹೋಗುವ ಸಲುವಾಗಿ ನಾಲ್ಕು ಬೀದಿಗಳಿವೆ. ನಾಲ್ಕೂ ಕಡೆಗೆ ನಾಲ್ಕು ಮಾನಸ್ತಂಭಗಳಿವೆ. ದ್ವಾರಗಳ ಮೇಲೆ ನವರತ್ನ ಸ್ತೂಪಗಳಿವೆ. ಆ ಕೋಟೆಗಳ ಮಧ್ಯದಲ್ಲಿ ಎರಡು ಅಂತರಾಲಗಳಿವೆ. ಆ ಅಂತರಾಲಗಳಲ್ಲಿನ ಮೊದಲನೆಯ - ಎರಡನೆಯ ಕೋಟೆಯ ಮಧ್ಯದಲ್ಲಿ ವನವಿದೆ. ಎರಡನೇ ಮತ್ತು ಮೂರನೆಯ ಕೋಟೆಯ ಮಧ್ಯದಲ್ಲಿ ಧ್ವಜೆಗಳ ಸಮೂಹವಿದೆ. ಮೂರನೆಯ ಕೋಟೆ ಮತ್ತು ಜಿನ ಮಂದಿರದ ಮಧ್ಯದಲ್ಲಿ ಗರ್ಭಗೃಹಗಳಿವೆ. ಲೋಕದಲ್ಲಿ ಹೇಗೆ ಪೃಥಕ್, ಪೃಥಕ್ ಕೋಣೆಗಳಿರುತ್ತವೆ ಅದೇ ಪ್ರಕಾರ ಪೃಥಕ್-ಪೃಥಕ್ ಗರ್ಭಗೃಹಗಳಿರುತ್ತವೆಯೆಂದು ತಿಳಿಯುವುದು.

ಆ ಗರ್ಭಗೃಹಗಳ ಮಧ್ಯದಲ್ಲಿ ರತ್ನಮಯ ಸ್ತಂಭಗಳ ಮೇಲೆ ಕನಕವರ್ಣದ ದೇವಚ್ಛಂದವೆಂಬ ಹೆಸರಿನ ಮಂಟಪವಿದೆ. ಆ ಮಂಟಪವು ಎಂಟು ಯೋಜನ ಉದ್ದ, ಎರಡು ಯೋಜನ ಅಗಲ ಮತ್ತು ನಾಲ್ಕು ಯೋಜನ ಎತ್ತರವಿದೆ. ಅದರ ಮಧ್ಯಭಾಗದಲ್ಲಿ ರತ್ನ-ಕನಕಮಯ ಸಿಂಹಾಸನವಿದೆ. ಅದರ ಮೇಲೆ ಪ್ರತ್ಯಕ್ಷ ತೀರ್ಥಂಕರ ದೇವರ ಸಮಾನ ಜಿನಬಿಂಬಗಳು ವಿರಾಜಮಾನವಿವೆ. ಅವುಗಳ ರತ್ನಮಯ ಅವಗಾಹನವು ಐನೂರು ಧನುಷ್ಯವಿದೆ. ನೀಲಮಯ ಪರಿಣಮಿತವಾಗಿರುವ ಶ್ಯಾಮವರ್ಣದ ರತ್ನವು ಅವರ ಮಸ್ತಕದ ಮೇಲೆ ಸುಂದರ ಕೇಶಗಳ

ಪ್ರಭೆಯನ್ನು ಧಾರಣ ಮಾಡುತ್ತದೆ. ಮಹಾಉಜ್ವಲ ವಜ್ರಮಯ ದಂತ ಹಾಗೂ ಹವಳದ ಸಮಾನ ಕೆಂಪು ಅಧರ -ತುಟಿಗಳು ಶೋಭಾಯಮಾನವಾಗಿರುತ್ತವೆ. ಚಿಗುರೆಲೆಯ ಸಮಾನ ಕೆಂಪು ಕೋಮಲ, ಉತ್ತಮ ಶೋಭೆಯಿಂದ ಕೂಡಿದ ಅಂಗೈ ಮತ್ತು ಅಂಗಾಲುಗಳು ಶೋಭಿಸುತ್ತವೆ.

ಈ ಪ್ರಕಾರ ಶ್ರೀ ಜಿನೇಂದ್ರರ ಪ್ರತಿಬಿಂಬಗಳಿವೆ. ಅವು ಅದೇನು ಈಗ ಮಾತನಾಡುವವು. ಈಗ ವಿಹಾರ ಮಾಡಬಹುದು; ಅದೇನು ನೋಡುತ್ತಿರುವಂತೆ, ಧ್ಯಾನರೂಪವಿರುವಂತೆ, ಅದೇನು ವಾಣಿಯು ಹೊರಡುತ್ತಿರುವಂತೆ ಎಂದರೆ ಚೈತನ್ಯಮಯವೇ ಇರುವಂತೆ ತಿಳಿದು ಬರುತ್ತವೆ. ಆ ಬಿಂಬಗಳು ಒಂದು ಸಾವಿರದಾ ಎಂಟು ಚಿಹ್ನೆಗಳಿಂದ ಸಹಿತವಿವೆ. ಅರವತ್ನಾಲ್ಕು ಜಾತಿಯ ವ್ಯಂತರ ದೇವಗಳು ರತ್ನಮಯ ಚಾಮರಗಳನ್ನು ತಗೆದುಕೊಂಡು ಪಂಕ್ತಿಬದ್ಧ ಕೈ ಜೋಡಿಸಿ ನಿಂತುಕೊಂಡಿದ್ದಾರೆ. ಅವರು ಚಾಮರ ಬೀಸುತ್ತಿರುವಂತೆಯೇ ಕಂಡು ಬರುತ್ತಾರೆ. ಮೂರು ಲೋಕದ ಕೊಡೆಯ ಸಮಾನ ರತ್ನಮಯ ಮುಕ್ಕೊಡೆಗಳು ತಲೆಯ ಮೇಲೆ ಶೋಭಾಯಮಾನವಿವೆ. ಪ್ರತಿಯೊಂದು ಗರ್ಭಗೃಹದಲ್ಲಿ ಈ ಪ್ರಕಾರ ಒಂದೊಂದು ಜಿನಬಿಂಬಗಳಿವೆ. ಅರ್ಥಾತ್ ಒಂದು ನೂರಾ ಎಂಟು ಗರ್ಭಗೃಹಗಳಲ್ಲಿ ಒಂದು ನೂರಾ ಎಂಟು ಪ್ರತಿಬಿಂಬಗಳು ವಿರಾಜಮಾನವಿವೆ. ಅವುಗಳಿಗೆ ನಮ್ಮ ನಮಸ್ಕಾರವಿರಲಿ.

ಈ ಜಿನಬಿಂಬಗಳ ಹತ್ತಿರ ಎರಡೂ ಪಾರ್ಶ್ವಗಳಲ್ಲಿ ಶ್ರೀದೇವಿ, ಸರಸ್ವತಿ, ಸರ್ವಾಹ್ಣಯಕ್ಷದೇವ ಮತ್ತು ಸನತಕುಮಾರದೇವ ಇವರು ನಾಲ್ವರು ಮಹಾಭಕ್ತರ ರತ್ನಮಯ ಆಕಾರಗಳಿರುತ್ತವೆ. ಜಿನಬಿಂಬಗಳ ಹತ್ತಿರ ಕಲಶ, ಕನ್ನಡಿ, ಗಿಂಡಿ, ಧ್ವಜ, ಛತ್ರ , ಚಾಮರ, ಮಣೆ, ಬೀಸಣಿಕೆ - ಇವು ಎಂಟು ಮಂಗಲದ್ರವ್ಯಗಳು ಸುಶೋಭಿಸುತ್ತಿರುತ್ತವೆ. ಇವು ಕಲಶ, ಕನ್ನಡಿ ಪ್ರತಿಯೊಂದು ಒಂದುನೂರಾ ಎಂಟು, ಒಂದು ನೂರಾ ಎಂಟು ಇರುತ್ತವೆ. ಈಪ್ರಕಾರ ಗರ್ಭಗೃಹದ ಸಾಮಾನ್ಯ ಸ್ವರೂಪ ಹೇಳಲಾಯಿತು.

ಗೃಹಬಾಹ್ಯದ ರಚನೆ-ಪೂರ್ವೋಕ್ತ ದೇವಚ್ಛಂದ ಮಂಟಪವು ಅನೇಕ ಪ್ರಕಾರದ ರತ್ನಮಯ, ಸುವರ್ಣಮಯ ಪುಷ್ಪ ಮಾಲೆಗಳಿಂದ ಶೋಭಾಯಮಾನವಿದೆ. ಆ ಮಂಟಪದ ಪೂರ್ವದಿಕ್ಕಿಗೆ ಜಿನಮಂದಿರವಿದೆ. ಅದರ ಮಧ್ಯದಲ್ಲಿ ಸುವರ್ಣ-ರೂಪ್ಯಮಯ ಮೂವತ್ತೆರಡು ಸಾವಿರ ಧೂಪಘಟಗಳಿವೆ. (ಧೂಪ ಘಟಗಳು ಪೃಥ್ವಿಕಾಯಮಯವಿದ್ದು ಮಹಾ ಸುಗಂಧಯುಕ್ತವಿವೆ; ಅಗ್ನಿಯವಿರುವುದಿಲ್ಲ). ಮುಖ್ಯದ್ವಾರದ ಎರಡೂ ಪಾರ್ಶ್ವಗಳಲ್ಲಿ ಇಪ್ಪತ್ನಾಲ್ಕು ಸಾವಿರ ಧೂಪಘಟಗಳಿವೆ. ಮುಖ್ಯದ್ವಾರದ ಹೊರಗೆ ಎಂಟು ಸಾವಿರ ರತ್ನಮಯ ಮಾಲೆಗಳು ಶೋಭಿಸುತ್ತವೆ. ಆ ಮಾಲೆಗಳ ಮಧ್ಯದಲ್ಲಿ ಇಪ್ಪತ್ನಾಲ್ಕು ಸಾವಿರ ಸ್ವರ್ಣಮಯ ಮಾಲೆಗಳಿವೆ. ಆ ಮುಖ್ಯದ್ವಾರಗಳ ಎದುರಿಗೆ ಮುಂದೆ ಚಿಕ್ಕ ಮಂಟಪಗಳಿವೆ ಅವುಗಳಲ್ಲಿ ಹದಿನಾರು-ಹದಿನಾರು ಸಾವಿರ ಕನಕಮಯ ಧೂಪಘಟ, ಕನಕಮಯ ಮಾಲೆ ಮತ್ತು ಕನಕ ಕಲಶಗಳು ವಿದ್ಯಮಾನವಿವೆ. ಆ ಮುಖ್ಯ ಮಂಟಪದ ಮಧ್ಯದಲ್ಲಿ ಅನೇಕ ಪ್ರಕಾರದ ರಮಣೀಯ ಶಬ್ದ ಮಾಡುವಂಥ ಚಿಕ್ಕ-ಚಿಕ್ಕ ರತ್ನಮಯ ಗಂಟೆಗಳಿವೆ. ಮುಖ್ಯದ್ವಾರದ ಎರಡೂ ಕಡೆಗಿರುವ ಗೌಣ (ಚಿಕ್ಕ) ದ್ವಾರಗಳ ಸಂಪೂರ್ಣ ರಚನೆಯು ಮತ್ತು ಮಾಲೆ ಮೊದಲಾದವುಗಳ ವಿಸ್ತಾರವು ಮುಖ್ಯದ್ವಾರದ ಅರ್ಧವೆಂದು ತಿಳಿಯುವುದು.

ಎಲ್ಲ ಮಂದಿರಗಳಲ್ಲಿ ಮೂರು ಮೂರು ದ್ವಾರಗಳಿವೆ. ಹಿಂಭಾಗದಲ್ಲಿ ದ್ವಾರವಿಲ್ಲ. ಮಂದಿರದ ಹಿಂದಿನ ಗೋಡೆಯ ಕಡೆಗೆ ಎಂಟು ಸಾವಿರ ರತ್ನಮಯ ಮತ್ತು ಇಪ್ಪತ್ನಾಲ್ಕು ಸಾವಿರ ಸ್ವರ್ಣಮಯ ಮಾಲೆಗಳಿವೆ. ಗಂಟೆ, ಧೂಪಘಟ ಮೊದಲಾದ ಅನೇಕ ರಚನೆಗಳು ಹಿಂಭಾಗದಲ್ಲಿರುತ್ತವೆಯೆಂದು ತಿಳಿಯುವುದು. ಅವುಗಳಲ್ಲಿ ಗಂಟೆಗಳಂತೂ ಮಂಟಪದ ಛಾವಣಿಯ ಆಶ್ರಯದಿಂದ ನೇತಾಡುವುದನ್ನು ತಿಳಿಯಬೇಕು ಹಾಗೂ ಧೂಪ ಘಟಗಳು ಭೂಮಿಯ ಮೇಲಿರುತ್ತವೆಂದು ತಿಳಿಯುವುದು. ಮಾಲೆಗಳು ಗೋಡೆಗಳ ಮೇಲೆ ನಾಲ್ಕೂ ಕಡೆಗೆ ತೂಗುತ್ತಿರುವುದನ್ನು ತಿಳಿಯುವುದು. ಈ ಪ್ರಕಾರದ ರಚನೆಗಳಿಂದ ಕೂಡಿದ ಜಿನಮಂದಿರಗಳಿವೆ.

ಅದರ ಮುಂದೆ ನೂರು ಯೋಜನ ಉದ್ದ, ಐವತ್ತು ಯೋಜನ ಅಗಲ ಮತ್ತು ಹದಿನಾರು ಯೋಜನ ಎತ್ತರ ಜಿನಮಂದಿರದ ಸಮಾನ ಅನೇಕ ರಚನೆಗಳಿಂದ ಕೂಡಿದ ಒಂದು ಮುಖ್ಯ ಮಂಟಪವಿದೆ. ಈ ಮುಖ್ಯ ಮಂಟಪದ ಮುಂದೆ ಚೌಕಾಕಾರದ ನೂರು ಯೋಜನ ಉದ್ದಗಲದ ಮತ್ತು ಸ್ವಲ್ಪ ಅಧಿಕ ಹದಿನಾರು ಯೋಜನ ಎತ್ತರವಾದ ಪ್ರೇಕ್ಷಣ ಮಂಟಪವಿದೆ. ಈ ಪ್ರೇಕ್ಷಣ ಮಂಟಪದ ಮುಂದೆ ಎರಡು ಯೋಜನ ಎತ್ತರ, ಎಂಭತ್ತು ಯೋಜನ ಉದ್ದ-ಅಗಲ ಒಂದು ಕನಕಮಯ ಪೀಠವಿದೆ.ಆ ಪೀಠಿಕೆಯ ಮಧ್ಯದಲ್ಲಿ ಚೌಕಾಕಾರದ ಮಣಿಮಯ, ಅರವತ್ನಾಲ್ಕು ಯೋಜನ ಉದ್ದ ಮತ್ತು ಹದಿನಾರು ಯೋಜನ ಎತ್ತರ ಒಂದು ಮಂಟಪವಿದೆ. ಇದೇ ಮಂಟಪದ ಎದುರಿಗೆ ಒಂದು ಮಣಿಮಯ ಸ್ತೂಪದ ನಲವತ್ತು ಯೋಜನ ಎತ್ತರ ಪೀಠಿಕೆಯಿದೆ.ಆ ಪೀಠಿಕೆಯ ನಾಲ್ಕೂ ಕಡೆಗೆ ಹನ್ನೆರಡು ವೇದಿಕೆಗಳಿವೆ. ಪ್ರತಿಯೊಂದು ವೇದಿಕೆಯ ನಾಲ್ಕು-ನಾಲ್ಕು ದ್ವಾರಗಳಿವೆ. ಆ ಪೀಠಿಕೆಯ ಮಧ್ಯ ಭಾಗದಲ್ಲಿ ಮೂರು ಕಟಿತಗಳಿಂದ ಕೂಡಿದ ಅರವತ್ನಾಲ್ಕು ಯೋಜನ ಎತ್ತರದಲ್ಲಿ ಅನೇಕ ರತ್ನಮಯ ಸ್ತೂಪಗಳಿವೆ. ಆ ಸ್ತೂಪದ ಮೇಲೆ ಜಿನಬಿಂಬಗಳು ವಿರಾಜಮಾನವಿವೆ. ಅಲ್ಲಿ ಇಂಥ ಒಂಭತ್ತು ಸ್ತೂಪಗಳಿವೆ. ಅವುಗಳ ವರ್ಣನೆಯನ್ನು ಇದೇ ಪ್ರಕಾರ ತಿಳಿಯುವುದು.

ಆ ಸ್ತೂಪಗಳ ಮುಂದೆ ಒಂದು ಸಾವಿರ ಯೋಜನ ಉದ್ದ-ಅಗಲದ ಒಂದು ಸ್ವರ್ಣಮಯ ಪೀಠವಿದೆ. ಅದರ ನಾಲ್ಕೂ ಕಡೆಗೆ ಹನ್ನೆರಡು ವೇದಿಗಳಿವೆ. ಮೂರು ಕೋಟೆ ಮತ್ತು ನಾಲ್ಕು-ನಾಲ್ಕು ದ್ವಾರಗಳಿಂದ ಕೂಡಿದ ಕೋಟೆ ವೇದಿಯಿದೆಯೆಂದು ತಿಳಿಯುವುದು.

ಆ ಪೀಠದ ಮೇಲೆ ನಾಲ್ಕು ಯೋಜನ ಉದ್ದ ಮತ್ತು ಒಂದು ಯೋಜನ ಅಗಲ ಸ್ಕಂಧವುಳ್ಳ ಒಂದು ಸಿದ್ಧಾರ್ಥ ವೃಕ್ಷವಿದೆ. ಅದಕ್ಕೆ ಹನ್ನೆರಡು ಯೋಜನ ಉದ್ದದ ನಾಲ್ಕು ದೊಡ್ಡ-ದೊಡ್ಡ ಶಾಖೆಗಳಿವೆ ಹಾಗೂ ಚಿಕ್ಕ ಶಾಖೆಗಳು ಅನೇಕವಿವೆ. ಈ ಸಿದ್ಧಾರ್ಥವೆಂಬ ಹೆಸರಿನ ದೊಡ್ಡ ವೃಕ್ಷವು ಮೇಲೆ ಹನ್ನೆರಡು ಯೋಜನ ಅಗಲ ಹಾಗೂ ಅನೇಕ ಪರ್ಣ, ಫಲ, ಪುಷ್ಪಗಳಿಂದ ಸಹಿತ ರತ್ನಮಯವಿದೆ. ಇದರ ಪರಿವಾರದಲ್ಲಿ ಅನೇಕ ವೃಕ್ಷಗಳಿವೆ ಇದರ ಸಮಾನ ರಚನೆ ಹಾಗೂ ವಿಸ್ತಾರ ಸಹಿತ ಚೈತ್ಯ ವೃಕ್ಷವಿದೆ. ಈ ಸಿದ್ಧಾರ್ಥ ಮತ್ತು ಚೈತ್ಯ ವೃಕ್ಷ ಎರಡೂ ಮಹಾವೃಕ್ಷಗಳಿವೆ. ಸಿದ್ಧಾರ್ಥ ವೃಕ್ಷದ ಮೂಲದಲ್ಲಿ ಸಿದ್ಧ ಪ್ರತಿಮೆಗಳು ವಿರಾಜಮಾನವಿವೆ ಹಾಗೂ ಚೈತ್ಯ ವೃಕ್ಷದ ಮೂಲಭಾಗದಲ್ಲಿ ಸಮಭೂಮಿಯ ಮೇಲೆ ಮೂರು ಪೀಠಿಕೆ, ಸಿಂಹಾಸನ, ಛತ್ರ ಮೊದಲಾದ ಅನೇಕ ಪ್ರಕಾರದ ರಚನೆ ಸಹಿತ ನಾಲ್ಕೂ ದಿಕ್ಕುಗಳಲ್ಲಿ ಅರಹಂತ ಪ್ರತಿಮೆಗಳು ವಿರಾಜಮಾನವಿವೆ. ಅರಹಂತ ಮತ್ತು ಸಿದ್ಧರ ಪ್ರತಿಮೆಗಳಲ್ಲಿ ಇರುವ ಅಂತರವೆಂದರೆ ಸಿದ್ಧರ ಪ್ರತಿಮೆಗಳಿಗೆ ಛತ್ರ, ಚಾಮರಗಳ ರಚನೆಯಿಲ್ಲ ಮತ್ತು ಅರಹಂತ ಪ್ರತಿಮೆಗಳಿಗೆ ಛತ್ರ ಚಾಮರಾದಿಗಳ ರಚನೆ ಇರುತ್ತದೆ.

ಆ ಪೀಠದ ಎದುರಿಗೆ ಅನೇಕ ಪ್ರಕಾರದ ಧ್ವಜಗಳಿಂದ ಶೋಭಿಸುತ್ತಿರುವ ಒಂದು ಪೀಠವಿದೆ. ಆ ಧ್ವಜಗಳ ಸುವರ್ಣಮಯ ದಂಡಗಳು ಹದಿನಾರು ಯೋಜನ ಉದ್ದ, ಒಂದು ಯೋಜನ ಅಗಲವಿವೆ. ಆ ಧ್ವಜಗಳ ವಸ್ತ್ರಗಳು ಅನೇಕ ವರ್ಣಗಳಿಂದ ಕೂಡಿರುವ ರತ್ನಮಯವಿವೆ. ಆ ಧ್ವಜೆಗಳ ಮೇಲೆ ಮೂರು-ಮೂರು ಛತ್ರಗಳು ಶೋಭಿಸುತ್ತಿವೆ. ಆ ಧ್ವಜೆಯ ಪೀಠಗಳ ಎದುರಿಗೆ ಜಿನಮಂದಿರಗಳಿವೆ. ಜಿನಮಂದಿರಗಳ ಮುಂದೆ ನಾಲ್ಕೂ ಕಡೆಗೆ ನಾಲ್ಕೂ ದಿಶೆಗಳಲ್ಲಿ ನೂರು ಯೋಜನ ಉದ್ದ, ಐವತ್ತು ಯೋಜನ ಅಗಲ ಹಾಗೂ ಹತ್ತು ಯೋಜನ ಆಳದ ನಾಲ್ಕು ಹ್ರದ (ಕೆರೆ)ಗಳಿವೆ. ಕನಕಮಯ ವೇದಿಗಳಿಂದ ಒಳ್ಳೆಯ ರೀತಿ ಸುಶೋಭಿತ ಈ ಹ್ರದಗಳಲ್ಲಿ ಕಮಲಗಳು ಅರಳಿರುತ್ತವೆ.

ಅವುಗಳಿಂದ ಮುಂದೆ ನಾಲ್ಕು ವೀಥಿಗಳ ಎರಡೂ ಪಾರ್ಶ್ವಗಳಲ್ಲಿ ಐವತ್ತು ಯೋಜನ ಎತ್ತರ, ಇಪ್ಪತ್ತೈದು ಯೋಜನ ಅಗಲ ರತ್ನಮಯವಾದ ದೇವಗಳ ಕ್ರೀಡಾಮಂದಿರಗಳಿವೆ. ಆ ಮಂದಿರಗಳ ಮುಂದೆ ಮಣಿಮಯ ಸ್ತಂಭಗಳ ಮೇಲೆ ಗೋಲಾಕಾರದ ಗೋಡೆಗಳಿಲ್ಲದ ತೋರಣಗಳಿವೆ. ಅನೇಕ ರಚನೆಗಳಿಂದ ಕೂಡಿದ ರಮಣಿಯ

ಮುತ್ತಿನ ಮಾಲೆಗಳು, ಗಂಟೆಗಳ ಸಮೂಹದಿಂದ ಶೋಭಿಸುತ್ತಿರುವ ಆ ತೋರಣಗಳು ಐವತ್ತು ಯೋಜನ ಎತ್ತರ ಮತ್ತು ಇಪ್ಪತ್ತೈದು ಯೋಜನ ಅಗಲವಿವೆ. ಆ ತೋರಣಗಳ ಮೇಲ್ಭಾಗದಲ್ಲಿ ಜಿನಬಿಂಬಗಳು ವಿರಾಜಮಾನವಿವೆ. ಆ ತೋರಣಗಳ ಮುಂದೆ ಸ್ಫಟಿಕಮಣಿಯ ಪ್ರಥಮ ಕೋಟೆಯಿದೆ. ಅಭ್ಯಂತರ ಕೋಟೆಯ ದ್ವಾರದ ಎರಡೂ ಪಾರ್ಶ್ವಗಳಲ್ಲಿ ನೂರು ಯೋಜನ ಎತ್ತರ ಮತ್ತು ಐವತ್ತು ಯೋಜನ ಅಗಲವಾದ ರತ್ನಮಯ ಎರಡು ಮಂದಿರಗಳಿವೆ. - ಈ ಪ್ರಕಾರ ಪ್ರಥಮ ಕೋಟೆಯ ವರ್ಣನೆಯಾಯಿತು. ಪೂರ್ವದ್ವಾರ ಸಂಬಂಧದ ಮಂಟಪ ಮೊದಲಾದವುಗಳ ಪ್ರಮಾಣದಿಂದ ಅರ್ಧ ಪ್ರಮಾಣ ದಕ್ಷಿಣ ಮತ್ತು ಉತ್ತರ ದ್ವಾರದ್ದೆಂದು ತಿಳಿಯುವುದು. ಶೇಷ ಕಥನವಂತೂ ಮೂರೂ ಕಡೆಯದು ಸಮಾನವಿದೆ.

ಮೊದಲನೆಯ ಮತ್ತು ಎರಡನೆಯ ಕೋಟೆಯ ಅಂತರಾಲದಲ್ಲಿ (ಮಧ್ಯದಲ್ಲಿ) ಸ್ಥಿತವಿರುವ ಧ್ವಜಾಸಮೂಹಗಳ ಮೇಲೆ ಸಿಂಹ, ಆನೆ, ವೃಷಭ, ಗರುಡ, ಮಯೂರ, ಸೂರ್ಯ, ಹಂಸ, ಕಮಲ ಮತ್ತು ಚಕ್ರ ಈ ಹತ್ತು ಜಾತಿಯ ಚಿಹ್ನೆಗಳಿವೆ. ಪ್ರತಿಯೊಂದು ಚಿಹ್ನೆಯುಳ್ಳ ಧ್ವಜಗಳು ಒಂದು ನೂರಾ ಎಂಟು ಸಂಖ್ಯೆಯಲ್ಲಿ ಇವೆ. ಈ ಪ್ರಕಾರ ಜಿನಮಂದಿರದ ಒಂದು ಕಡೆಯ ಧ್ವಜಗಳು ಒಂದು ಸಾವಿರದಾ ಎಂಭತ್ತು ಆದವು. ಜಿನಮಂದಿರದ ನಾಲ್ಕು ಕಡೆಯ ದೊಡ್ಡ ಧ್ವಜಗಳ ಸಂಖ್ಯೆಯು ನಾಲ್ಕು ಸಾವಿರದಾ ಮೂರು ನೂರಾ ಇಪ್ಪತ್ತು ಇರುವುದನ್ನು ತಿಳಿಯುವುದು. ಈ ದೊಡ್ಡ ಧ್ವಜಗಳ ಜೊತೆ ಒಂದು ನೂರಾ ಎಂಟು, ಒಂದು ನೂರಾ ಎಂಟು ಚಿಕ್ಕಧ್ವಜಗಳೂ ಇವೆ. - ಈ ಪ್ರಕಾರ ಧ್ವಜಗಳ ವನ ಹೇಳಲಾಯಿತು.

ಮೂರನೇ ಮತ್ತು ಎರಡನೇ ಕೋಟೆಯ ಮಧ್ಯದಲ್ಲಿ ನಾಲ್ಕೂ ಕಡೆಗೆ ಅಶೋಕವನ, ಸಪ್ತಚ್ಛದವನ, ಚಂಪಕವನ ಮತ್ತು ಆಮ್ರವನ - ಇವು ನಾಲ್ಕು ವನಗಳಿವೆ. ಅವುಗಳ ಪುಷ್ಪಗಳು ಸುವರ್ಣಮಯ, ಎಲೆಗಳು ವೈಢೂರ್ಯ ರತ್ನಮಯ ಹರಿತ ವರ್ಣದವಿದ್ದರೆ, ತಳಿರುಗಳು ಮರಕತಮಣಿಮಯ ಹಾಗೂ ಫಲಗಳು ಮಹಾಮನೋಜ್ಞ ರತ್ನಮಯವಿವೆ. - ಈ ಪ್ರಕಾರ ನಾಲ್ಕೂ ವನಗಳು ಹತ್ತು ಪ್ರಕಾರದ ಕಲ್ಪವೃಕ್ಷಗಳಿಂದ ಸಹಿತ ರಮಣೀಯವಿವೆ. ಆ ವನಗಳಲ್ಲಿ ಒಂದೊಂದು ಚೈತ್ಯ ವೃಕ್ಷವಿದ್ದು ಅವುಗಳ ಮೂಲಭಾಗದಲ್ಲಿ ನಾಲ್ಕೂ ದಿಶೆಗಳಲ್ಲಿ ಛತ್ರ , ಚಾಮರ ಮೊದಲಾದ ಪ್ರಾತಿಹಾರ್ಯಗಳಿಂದ ಶೋಭಿಸುತ್ತಿರುವ ಶ್ರೀ ಅರಹಂತರ ಬಿಂಬಗಳು ಪದ್ಮಾಸನದಲ್ಲಿ ವಿರಾಜಮಾನವಿವೆ. ಈ ಪ್ರಕಾರ ಪ್ರತಿಯೊಂದು ವನದಲ್ಲಿ ಒಂದು ಚೈತ್ಯ ವೃಕ್ಷವಿದೆ. ಅವುಗಳ ಮೂರು -ಮೂರು ಕೋಟೆಗಳಲ್ಲಿ ಮೂರು-ಮೂರು ಕಡಿತದಿಂದ ಕೂಡಿದ ಪೀಠಗಳಿವೆ - ಇತ್ಯಾದಿ ರಚನೆಯುಳ್ಳ ಚೈತ್ಯವೃಕ್ಷವು ರತ್ನಮಯವಿದೆ.

ಈ ಪ್ರಕಾರ ತೋಟ-ವನಗಳು, ಧ್ವಜಪಂಕ್ತಿ , ಕಲಶ, ಧೂಪಘಟ, ಮುತ್ತಿನ ಮಾಲೆ ಮೊದಲಾದ ಅನೇಕ ರಚನೆಯುಳ್ಳ ಅಕೃತ್ರಿಮ ಜಿನಮಂದಿರಗಳ ಸಾಮಾನ್ಯ ಸ್ವರೂಪ ಹೇಳಲಾಯಿತು. ಅವುಗಳ ಹತ್ತಿರ ಸಾಮಾಯಿಕ ಮಾಡುವ ಸಲುವಾಗಿ ನಿರ್ಮಿತ ಮಂದಿರಗಳಲ್ಲಿ ಭವ್ಯ ಜೀವರುಗಳು ಸಾಮಾಯಿಕ ಮಾಡುತ್ತಾರೆ. ವಂದನಾ ಮಂಟಪದ ಹತ್ತಿರ ಸ್ನಾನ ಮಾಡುವ ಸಲುವಾಗಿ ನಿರ್ಮಿತ ಅಭಿಷೇಕ ಮಂಟಪಗಳಲ್ಲಿ ಭವ್ಯ ಜನರು ಪೂಜೆ ಮಾಡುವ ಸಲುವಾಗಿ ಸ್ನಾನ ಮಾಡುತ್ತಾರೆ. ಭವ್ಯ ಜನರಿಗೆ ನೃತ್ಯ ಮಾಡುವ ಸಲುವಾಗಿ ನಿರ್ಮಿತ ಸ್ಥಾನದರೂಪದಲ್ಲಿ ನೃತ್ಯ ಮಂಟಪವಿದೆ. ಭವ್ಯ ಜೀವರುಗಳಿಗೆ ಭಗವಂತರ ಗುಣಮಾಲೆಯ ಕೀರ್ತನೆ ಮಾಡುವ ಸಲುವಾಗಿ ನಿರ್ಮಿತ ಸ್ಥಾನ ಸಂಗೀತ ಮಂಟಪಗಳಿವೆ. ಅನೇಕ ಪ್ರಕಾರದ ಚಿತ್ರಕಲೆ ಮೊದಲಾದ ವಿವಿಧ ರಚನಾಯುಕ್ತ ಸ್ಥಾನವನ್ನು ಕಂಡು ಭವ್ಯರು ಪ್ರಸನ್ನತೆಯೊಂದಿಗೆ ಅನುಮೋದಿಸುತ್ತಾರೆ; ಅವುಗಳನ್ನು ನೋಡುತ್ತ ಮನಸ್ಸು ತೃಪ್ತವಾಗದಂಥ ಅವಲೋಕನ ಮಂಟಪವಿದೆ. ಅಲ್ಲಿ ಅದೆಷ್ಟೋ ಧರ್ಮಾತ್ಮಾ ಜೀವರುಗಳ ಸಲುವಾಗಿ ಧರ್ಮಕ್ರೀಡೆಯ ಸ್ಥಾನಗಳಿವೆ. ಧರ್ಮಾತ್ಮಾ ಪುರುಷರಿಗೆ ಶಾಸ್ತ್ರಗಳ ಸ್ವಾಧ್ಯಾಯ ಮಾಡುವ ಸಲುವಾಗಿ ಅದೆಷ್ಟೋ ಗುಣಗ್ರಹಣ ಮಂಟಪಗಳಿವೆ.

ಅನೇಕ ಪಟ ಚಿತ್ರಗಳನ್ನು ನೋಡುವ ಸಲುವಾಗಿ ಅದೆಷ್ಟೋ ಪಟಶಾಲೆಯ ಸ್ಥಾನಗಳಿವೆ. ಈ ಪ್ರಕಾರ ಧರ್ಮಾತ್ಮರಿಗೆ ಧರ್ಮದ ಸಾಧನೆ ಮಾಡುವ ಸಲುವಾಗಿ ಅಂಥ ಅನೇಕ ಸ್ಥಾನಗಳು ಅಕೃತ್ರಿಮ ಚೈತ್ಯಾಲಯಗಳ ಹತ್ತಿರದಲ್ಲಿವೆ.

ಈ ಪ್ರಕಾರ ಮೂರು ಲೋಕ ಸಂಬಂಧದ ಸಮಸ್ತ ಅಕೃತ್ರಿಮ ಜಿನಮಂದಿರಗಳಿಗೆ ಗ್ರಂಥದ ಅಂತಿಮ ಮಂಗಲದ ಉದ್ದೇಶದಿಂದ ಮನ, ವಚನ, ಕಾಯಪೂರ್ವಕ ಪುನಃ ಪುನಃ ನಮ್ಮ ನಮಸ್ಕಾರಗಳು.

ಸಮಸ್ತ ಕರ್ಮರಹಿತ ಸಿದ್ಧ ಭಗವಂತರು, ನಾಲ್ಕು ಘಾತಿ ಕರ್ಮರಹಿತ ಅನಂತ ಚತುಷ್ಟಯ ಸಹಿತ ಅರಹಂತದೇವ, ಮುನಿಸಂಘದ ಅಧಿಪತಿ ಆಚಾರ್ಯದೇವ, ಗ್ರಂಥಾಭ್ಯಾಸದಲ್ಲಿ ಸ್ವಯಂ ಪ್ರವೃತ್ತರಾಗುವಂಥ ಮತ್ತು ಇತರರನ್ನು ಪ್ರವೃತ್ತ ಮಾಡಿಸುವಂಥ ಉಪಾಧ್ಯಾಯರು ಮತ್ತು ಇಪ್ಪತ್ತೆಂಟು ಮೂಲಗುಣ ಸಹಿತ ಸಾಧುಗಳು - ಈ ಪಂಚಪರಮೇಷ್ಠೀ ಪಂಚ ಪರಮಗುರುಗಳಿಗೆ ಮನ-ವಚನ-ಕಾಯದ ಶುದ್ಧಿಪೂರ್ವಕ ಅಂತ್ಯ ಮಂಗಲದ ಸಲುವಾಗಿ ನಮ್ಮ ನಮಸ್ಕಾರವಿರಲಿ.

ಈ ಪ್ರಕಾರ ಈ ಗ್ರಂಥವು ಪೂರ್ಣವಾಗುವುದರಿಂದ ಉತ್ಪನ್ನವಾದ ಪ್ರಸನ್ನತೆಯ ಕಾರಣ ಅಂತ್ಯ ಮಂಗಲದ ಸಲುವಾಗಿ ತಮ್ಮ ಇಷ್ಟ ದೇವರಿಗೆ ನಮಸ್ಕಾರ ಮಾಡಿ ಇದರಿಂದ ಪಾಪ ಮಲವನ್ನು ತೊಳೆದು ಹಾಕಿ, ನಿರ್ಮಲವಾಗುವ ಕಾರಣವೆಂದು ತಿಳಿದು ಕವೀಶ್ವರರು ಕೃತಕೃತ್ಯಾವಸ್ಥೆಗೆ ಪ್ರಾಪ್ತರಾಗಿ ತಮ್ಮ ಭವ ಸಫಲವೆಂದು ಮನ್ನಿಸಿದ್ದಾರೆ.

ಈ ಪ್ರಕಾರ ಸುದೃಷ್ಟಿತರಂಗಿಣಿಯೆಂಬ ಹೆಸರಿನ ಗ್ರಂಥದಲ್ಲಿ ಗ್ರಂಥವು ಪೂರ್ಣವಾದ ಮೇಲೆ ಅಂತ್ಯಮಂಗಲದ ಸಲುವಾಗಿ ನಮಸ್ಕಾರಪೂರ್ವಕ ಅಕೃತ್ರಿಮ ಚೈತ್ಯಾಲಯಗಳ ವರ್ಣನೆ, ಪಂಚ ಪರಮೇಷ್ಠೀ ನಮಸ್ಕಾರ ವರ್ಣನೆಯೆಂಬ ಹೆಸರಿನ ಮೂವತ್ತೊಂಭತ್ತನೆಯ ಪರ್ವವು ಪೂರ್ಣವಾಯಿತು.

★★★★★

◆ ಎಲ್ಲಿಯವರೆಗೆ ಜೀವನು ತನ್ನಿಂದ ಸರ್ವಥಾ ಭಿನ್ನವಿರುವ ಕರ್ಮ ಹಾಗೂ ಕರ್ಮದ ಕಾರ್ಯಗಳಾದ ಸುಖ-ದುಃಖ ಮೊದಲಾದುವನ್ನು ತನ್ನವುಗಳೆಂದು ಮನ್ನಿಸುತ್ತಾನೆ, ಅಲ್ಲಿಯವರೆಗೆ ಅವನಿಗೆ ಕಿಂಚಿತ್ ಮಾತ್ರವೂ ಸುಖವಾಗುವುದಿಲ್ಲ. ಕರ್ಮ ಹಾಗೂ ಕರ್ಮದ ಕಾರ್ಯಗಳನ್ನು ಸ್ವೀಕರಿಸುವ ಕಾರಣ ಅವನಿಗೆ ಸಂಸಾರದಲ್ಲಿ ಪರಿಭ್ರಮಣ ಮಾಡಬೇಕಾಗುತ್ತದೆ ಮತ್ತು ಅದರಿಂದ ಅವನಿಗೆ ನರಕ ಮೊದಲಾದ ದುರ್ಗತಿಗಳಲ್ಲಿ ಅನಂತ ದಾರುಣ ದುಃಖಗಳನ್ನು ಎದುರಿಸಬೇಕಾಗುತ್ತದೆ. ಆದುದರಿಂದ ಮೋಕ್ಷದ ಇಚ್ಛೆ ಮಾಡುವಂಥ ಭವ್ಯ ಜೀವನು ಕರ್ಮ ಹಾಗೂ ಕರ್ಮದ ಕಾರ್ಯಗಳನ್ನು ಸ್ವೀಕಾರ ಮಾಡುವುದಿಲ್ಲ. ಅದರಿಂದ ಅವನಿಗೇನೆ ಸುಖದ ಪ್ರಾಪ್ತಿಯಾಗುತ್ತದೆ.

◆ ಶರೀರದಲ್ಲಿ ಇರುತ್ತಿದ್ದರೂ ಶರೀರರಹಿತ 'ಸ್ವ-ಜ್ಞಾನಪಿಂಡ'ದ ಅನುಭವ ಮಾಡುವುದು ! ಕೇವಲ ಇದೊಂದೇ ಶಾಂತಿಯ ಉಪಾಯವಿದೆ. ರತ್ನತ್ರಯಮಯ ಮೋಕ್ಷ ಮಾರ್ಗದ ಸಲುವಾಗಿ ಕರ್ತವ್ಯವಿದೆ. ಇದನ್ನು ಹೊರತುಪಡಿಸಿ ಬೇರೆ ಯಾವ ಮಾರ್ಗವಿಲ್ಲ. ಮೂರುಕಾಲ, ಮೂರು ಲೋಕದಲ್ಲಿ ಶಾಂತಿಯ ಪ್ರಾಪ್ತಿಯು ತನ್ನ-ಜ್ಞಾನಪಿಂಡದ ಅನುಭೂತಿಯಿಂದಲೇ ಆಗುತ್ತದೆ.

## ೪೦ : ನಲವತ್ತನೆಯ ಪರ್ವ
## ಸಮವಸರಣ, ವಿಹಾರಕರ್ಮ ವರ್ಣನೆ

ಈಗ ಜಗತ್ತಿನ ಸಲುವಾಗಿ ಮಂಗಲಕಾರಕ ಜಿನರಾಜರ ಸಮವಸರಣದ ಸಂಕ್ಷಿಪ್ತ ವರ್ಣನೆ ಮಾಡುತ್ತಾರೆ. ಮಂಗಲಮೂರ್ತಿ, ಕಲ್ಯಾಣದ ಸಾಕಾರರೂಪ, ಭಗವಂತರು ಮಂಡಿಸುವ ಸ್ಥಾನರೂಪ ಸಮವಸರಣವು ಅನೇಕ ಮಹಿಮೆಯಿಂದ ಸಂಪನ್ನ ದೇವೋಪುನೀತ ಸಮವಸರಣವಿದೆ. ಅವರ ದರ್ಶನ ಮಾಡುವ, ಹೆಸರು ಹೇಳುವ, ಸ್ಮರಣೆ ಮಾಡುವುದರಿಂದ ಪಾಪಗಳು ನಷ್ಟವಾಗುತ್ತವೆ, ಪುಣ್ಯದ ಸಂಚಯವಾಗುತ್ತದೆ - ಎಂದು ತಿಳಿದು ಗ್ರಂಥದ ಅಂತ್ಯ ಮಂಗಲದ ಉದ್ದೇಶದಿಂದ ಅನೇಕ ಶಾಸ್ತ್ರಗಳ ಸಾರ ಗ್ರಹಿಸಿ ಸಮವಸರಣದ ಸ್ವರೂಪ ಹೇಳುತ್ತಾರೆ,-

ಸಮವಸರಣದ ಭೂಮಿಯು ಸಮಭೂಮಿಯಿಂದ ಐದು ಸಾವಿರ ಧನುಷ್ಯ ಮೇಲೆ ಆಕಾಶದಲ್ಲಿ ಇರುತ್ತದೆ. ಅದರ ನಾಲ್ಕೂ ದಿಶೆಗಳಲ್ಲಿ ಸಮಭೂಮಿಯಿಂದ ಹಿಡಿದು ಸಮವಸರಣ ಭೂಮಿಯವರೆಗೆ ಪ್ರತಿಯೊಂದು ದಿಕ್ಕಿನಲ್ಲಿ ಸ್ವರ್ಣಮಯ ಇಪ್ಪತ್ತು ಸಾವಿರ ಮೆಟ್ಟಿಲುಗಳಿರುತ್ತವೆ. ವೃಷಭದೇವರ ಸಮವಸರಣದಲ್ಲಿ ಪ್ರತಿಯೊಂದು ಮೆಟ್ಟಿಲು ಋಷಭದೇವರ ಕೈಯಿಂದ ಒಂದು ಮೊಳ ಅಗಲ, ಒಂದು ಮೊಳ ಎತ್ತರ ಮತ್ತು ಒಂದು ಹರದಾರಿ ಉದ್ದವಿತ್ತು. ಅನ್ಯ ತೀರ್ಥಂಕರರದು ಕ್ರಮದಿಂದ ಹೀನವಿರುತ್ತವೆ. ಹೀನತೆಯ ಪ್ರಮಾಣವು ಹೀಗಿದೆ-

ವೃಷಭ ದೇವರ ಪ್ರಮಾಣದಲ್ಲಿ ಇಪ್ಪತ್ನಾಲ್ಕರಿಂದ ಭಾಗಿಸಿ, ಆ ಭಾಜನ ಫಲದಲ್ಲಿ ಒಂದೊಂದನ್ನು ಕಡಿಮೆ ಕಡಿಮೆ ಮಾಡುತ್ತ ನೇಮಿನಾಥರವರೆಗಿನ ಪ್ರಮಾಣ ತಗೆಯುವುದು. ಪಾರ್ಶ್ವನಾಥ ಮತ್ತು ಮಹಾವೀರರ ಪ್ರಮಾಣ ತಗೆಯುವ ಸಲುವಾಗಿ ಅದರೊಳಗಿಂದ ಅರ್ಧ ಭಾಗ ಕಡಿಮೆ ಮಾಡುವುದು. ಈ ಪ್ರಕಾರ ಸಮಭೂಮಿಯಿಂದ ಎರಡೂವರೆ ಹರದಾರಿ ಮೇಲೆ ಆಕಾಶದಲ್ಲಿ, ಹನ್ನೆರಡು ಯೋಜನ, ವೃತ್ತಾಕಾರದ ಶಿಲಾಮಯ ನೀಲರತ್ನಮಯವಾದ ಸಮಭೂಮಿಯ ಮೇಲೆ ವೃಷಭದೇವರ ಸಮವಸರಣದ ಸಮಸ್ತ ರಚನೆಯಿತ್ತು.

ಶೇಷ, ತೀರ್ಥಂಕರರ ಸಮವಸರಣದ ಕ್ರಮವು ಹೀನವಿದೆ. ಅದರೊಳಗಿಂದ ನೇಮಿನಾಥರವರೆಗೆ ಅರ್ಧ ಅರ್ಧ ಯೋಜನ ಹೀನವಿದೆ ಮತ್ತು ಪಾರ್ಶ್ವನಾಥ ಹಾಗೂ ವೀರರದು ನಾಲ್ಕನೆಯ ಒಂದು-ನಾಲ್ಕನೆಯ ಒಂದು ಭಾಗ ಯೋಜನ ಹೀನವಿದೆ. ಈ ಪ್ರಕಾರ ಮಹಾವೀರರ ಸಮವಸರಣದ ವಿಸ್ತಾರವು ಒಂದು ಯೋಜನದಲ್ಲಿತ್ತು.

ಆ ಶಿಲೆಯ ಮೇಲೆ ನಾಲ್ಕೂ ದಿಕ್ಕುಗಳಲ್ಲಿ ಶಿವಾನನರ ಕಡೆಗೆ ನಾಲ್ಕು ಬೀದಿಗಳಿರುತ್ತವೆ. ಆ ಬೀದಿಗಳು ಶಿವಾನನ-ಭಗವಂತರ ಎತ್ತರದಷ್ಟು ಅಗಲವಿರುತ್ತವೆ. ಹೇಗೆಂದರೆ ವೃಷಭದೇವರದು ಒಂದು ಹರದಾರಿ ಅಗಲ, ಇಪ್ಪತ್ಮೂರು ಹರದಾರಿ ಉದ್ದವಾದ ಬೀದಿ, ಧೂಲಶಾಲದ ದ್ವಾರದಿಂದ ಹಿಡಿದು ಗಂಧಕುಟಿಯ ದ್ವಾರದವರೆಗೆಂದು ತಿಳಿಯುವುದು. ಈ ಬೀದಿಗಳ ಎರಡೂ ಮಗ್ಗುಲಿಗೆ ಸ್ಥಿತವಿರುವ ಸ್ಫಟಿಕಮಣಿಮಯ ಗೋಡೆಗಳನ್ನು ವೇದಿಯೆಂದು ಹೇಳುತ್ತಾರೆ. ಇವೆರಡೂ ವೇದಿಗಳ ಮಧ್ಯದ ಅಗಲವು ಬೀದಿಯ ಅಗಲದಷ್ಟಿದೆ ಆ ವೇದಿಗಳ ಅಗಲವು ವೃಷಭದೇವರ ಮೊಳದಿಂದ ಏಳುನೂರೈವತ್ತು ಧನುಷ್ಯವಿದೆ. ಅನ್ಯ ತೀರ್ಥಂಕರರದು ಕಡಿಮೆಯಿದೆ. ಆ ಬೀದಿಗಳ ಮಧ್ಯದಲ್ಲಿ ನಾಲ್ಕು ಕೋಟೆ ಮತ್ತು ಐದು ವೇದಿಗಳಿಂದ ಕೂಡಿದ ನಾಲ್ಕು ಅಂತರಾಳ ರೂಪದ ಭೂಮಿಗಳಿವೆ. ಇವೆಲ್ಲ ಒಂಭತ್ತರ ಅಂತರಾಲದಲ್ಲಿ ಎಂಟು ಭೂಮಿಗಳು ಹಾಗೂ ಶಿಲೆಯ ಕೊನೆಯ ಭಾಗದಲ್ಲಿ ಕೋಟೆಯಿದೆ.

ಅದರ ಮುಂದೆ ಒಂದರ ನಂತರ ಒಂದು ಕ್ರಮದಿಂದ ಚೈತ್ಯಪ್ರಸಾದಭೂಮಿ, ಕಂದಕಭೂಮಿ, ವೇದಿ, ಪುಷ್ಪವಾಟಿಕಾ ಭೂಮಿ, ಎರಡನೆಯ ಕೋಟೆ, ಉಪವನ ಭೂಮಿ, ವೇದಿ, ಧ್ವಜಾಸಮೂಹಭೂಮಿ, ಮೂರನೆಯ ಕೋಟೆ, ಕಲ್ಪವೃಕ್ಷಭೂಮಿ, ವೇದಿ, ಮಂದಿರಭೂಮಿ, ನಾಲ್ಕನೆಯ ಕೋಟೆ, ಸಭಾಭೂಮಿ ಮತ್ತು ವೇದಿಯಿದೆ. - ಈ ಪ್ರಕಾರ ಆ ಬೀದಿಗಳ ಅಂತರಾಲ (ಮಧ್ಯದ) ರೂಪ ಭೂಮಿಯ ರಚನೆ ತಿಳಿಯುವುದು. ಆ ಬೀದಿಗಳಲ್ಲಿ ನಾಲ್ಕು ಕೋಟೆ ಮತ್ತು ಐದು ವೇದಿಗಳ ಒಂದು ಬೀದಿಗೆ ಸಂಬಂಧಿಸಿದ ಒಂಭತ್ತು ದ್ವಾರಗಳಿವೆ. ಹೀಗೆ ನಾಲ್ಕೂ ಬೀದಿಗಳಿಗೆ

ಸಂಬಂಧಿಸಿದ ಮೂವತ್ತಾರು ದ್ವಾರಗಳಿವೆ. ಪ್ರಥಮ ಕೋಟೆ ಮತ್ತು ಪ್ರಥಮ ವೇದಿಯ ಮಧ್ಯದಲ್ಲಿ ಪ್ರಥಮ ಭೂಮಿ ಇರುವ ಕಾರಣ ಪ್ರಥಮ ಕೋಟೆ ಮತ್ತು ಪ್ರಥಮ ವೇದಿಯ ಮಧ್ಯದ ಬೀದಿಯು ಪ್ರಥಮ ಭೂಮಿಯೆನಿಸಿಕೊಳ್ಳುತ್ತದೆ. ಇದೇ ಪ್ರಕಾರ ಅನ್ಯ ದ್ವಾರಗಳ ಮಧ್ಯದಲ್ಲಿ ದ್ವಿತೀಯಾದಿ ಭೂಮಿ ತಿಳಿಯುವುದು.

ಪ್ರಥಮ ಭೂಮಿಯ ಬೀದಿಯ ಮಧ್ಯದಲ್ಲಿ ನಾಲ್ಕು ದಿಶೆಗಳಿಗೆ ಸಂಬಂಧಿಸಿದ ನಾಲ್ಕು ಮಾನಸ್ತಂಭಗಳಿವೆ. ಪ್ರತಿಯೊಂದು ಮಾನಸ್ತಂಭದ ನಾಲ್ಕೂ ದಿಕ್ಕುಗಳಲ್ಲಿ ನಾಲ್ಕು-ನಾಲ್ಕು ಬಾವಿಗಳಿವೆ. ಈ ಬೀದಿಯ ಎರಡೂ ಪಾರ್ಶ್ವಗಳಲ್ಲಿ ಎರಡು ನಾಟ್ಯ ಶಾಲೆಗಳಿವೆ-ಇದೇ ಪ್ರಕಾರ ನಾಲ್ಕನೆಯ ಬೀದಿಯಲ್ಲಿಯೂ ಎರಡು ನಾಟ್ಯ ಶಾಲೆಗಳಿವೆ; ಆದರೆ ಆರನೆಯ ಬೀದಿಯ ಎರಡೂ ಪಾರ್ಶ್ವಗಳಲ್ಲಿ ಇದರ ಎರಡರಷ್ಟು ನಾಟ್ಯ ಶಾಲೆಗಳಿವೆ. ಏಳನೇ ಭೂಮಿಯ ನಾಲ್ಕೂ ದಿಶೆಗಳಲ್ಲಿ ಒಂಭತ್ತು-ಒಂಭತ್ತು ರತ್ನಸ್ತೂಪಗಳಿವೆ. ಎಂಟನೇ ಭೂಮಿಯ ಮೇಲೆ ಹನ್ನೆರಡು ಸಭೆಗಳಿವೆ. ರತ್ನಮಯ ಬಾಗಿಲುಗಳಿಂದ ಯುಕ್ತ ಅನೇಕ ದ್ವಾರಗಳಿಂದ ಸಹಿತ ಬೀದಿಯ ಪಾರ್ಶ್ವಗಳ ಉದ್ದದಿಂದ ಸಹಿತ ವೇದಿಗಳಿವೆ. ಇವುಗಳ ನಾಲ್ಕೂ ಕಡೆಯ ರಚನೆಯನ್ನು ನೋಡಿಲಿಚ್ಛಿಸುವ ಕೆಲವು ಭವ್ಯರು ಬೀದಿಗಳ ದ್ವಾರಗಳಿಂದ ಹಾಯ್ದು ಹೋಗಿ ಬರುತ್ತಾರೆ - ಈ ಪ್ರಕಾರ ಬೀದಿಗಳ ರಚನೆಯ ಸಾಮಾನ್ಯ ಕಥನವಾಯಿತು.

ಇವೆಲ್ಲವುಗಳ ಮಧ್ಯಭಾಗದಲ್ಲಿ ಮೂರು ಪೀಠಗಳ ಮೇಲೆ ಗಂಧಕುಟಿಯಿರುತ್ತದೆ. ಅದರಲ್ಲಿ ಸಿಂಹಾಸನದ ಮೇಲೆ ಕಮಲವಿದೆ. ಅದರ ಮೇಲೆ ನಾಲ್ಕು ಅಂಗುಲ ಮೇಲೆ ಅಂತರಿಕ್ಷದಲ್ಲಿ, ಅಷ್ಟಪ್ರಾತಿಹಾರ್ಯಸಹಿತ, ನಾಲ್ಕು ಅನಂತಚತುಷ್ಟಯ ಸಂಪನ್ನ ಶ್ರೀ ಭಗವಂತರು ವಿರಾಜಮಾನರಿದ್ದಾರೆ - ಇದು ಇವರ ಸಾಮಾನ್ಯ ರಚನೆಯ ಕಥನವಾಯಿತು. ಈಗ ಅವರ ಸ್ಥಾನ ತಿಳಿಸಿಕೊಡುವ ಸಲುವಾಗಿ ವಿಶೇಷ ಕಥನ ಮಾಡಲಾಗುತ್ತದೆ.

ನಾಲ್ಕು ಕೋಟೆಗಳಲ್ಲಿನ ಪಂಚವರ್ಣ ಮತ್ತು ರತ್ನಚೂರ್ಣ ಸಂಪನ್ನ ಮೊದಲನೆಯ ಧೂಲಿಶಾಲ ಕೋಟೆಯು ಸಮವಸರಣದ ಕೊನೆಯ ಭೂಮಿಯಲ್ಲಿದೆ. ಇದು ವಿವಿಧ ವರ್ಣ ಸಹಿತ ಇಂದ್ರ ಧನುಷ್ಯದ ಸಮಾನ ವಿಚಿತ್ರವಿದೆ. ಎರಡನೆಯ ಕೋಟೆಯು ಕಾಯ್ದ ಕಾರ್ತಸ್ವರದ ಸಮಾನ ಕೆಂಪು ಇದೆ. ಮೂರನೆಯ ಕೋಟೆಯು ಸ್ವರ್ಣದ ಸಮಾನ ಹಳದಿಯಿದೆ. ನಾಲ್ಕನೆಯ ಕೋಟೆಯು ಸ್ಫಟಿಕ ಮಣಿಯ ಸಮಾನ ಶ್ವೇತವಿದೆ. ಐದೂ ವೇದಿಗಳು ಸ್ವರ್ಣದ ಸಮಾನ ಹಳದಿಯಿವೆ. ಇವು ನಾಲ್ಕು ಕೋಟೆಗಳು (ಅನ್ಯ ಗ್ರಂಥಗಳಲ್ಲಿ ಸಮವಸರಣದ ಮೂರು ಕೋಟೆಗಳನ್ನು ಹೇಳಲಾಗಿದೆ) ಮತ್ತು ಐದು ವೇದಿಗಳು - ಒಂಭತ್ತರ ಮೇಲೆಯೂ ಅನೇಕ ವರ್ಣದ ಧ್ವಜಗಳು ಮತ್ತು ಅನೇಕ ಶೋಭೆಯುಕ್ತ ಮಂದಿರಗಳು ಶೋಭಿಸುತ್ತಿವೆ. ಇಲ್ಲಿ ವೇದಿ ಮತ್ತು ಕೋಟೆಯಲ್ಲಿ ಇರುವ ಅಂತರವೆಂದರೆ ವೇದಿಯಂತೂ ಕೆಳಗಿನಿಂದ ಹಿಡಿದು ಮೇಲಿನವರೆಗೆ ಸಮಾನ ಅಗಲವಿರುತ್ತದೆ ಹಾಗೂ ಕೋಟೆಯು ಕೆಳಗೆ ಅಗಲವಿರುತ್ತದೆ. ಆದರೆ ಮೇಲೆ-ಮೇಲೆ ಕ್ರಮದಿಂದ ಕಡಿಮೆ-ಕಡಿಮೆಯಾಗುತ್ತ ಹೋಗುತ್ತದೆ.

ಈಗ ಇವುಗಳ ಮಧ್ಯದಲ್ಲಿರುವ ಎಂಟು ಭೂಮಿಗಳ ವಿಶೇಷ ಹೇಳಲಾಗುವುದು-ಪ್ರಥಮ ಭೂಮಿಯಲ್ಲಿ ಒಂದು ಚೈತ್ಯಾಲಯ ಮತ್ತು ಐದು ಅನ್ಯ ಮಂದಿರಗಳಿವೆ. ಇವುಗಳ ಮಧ್ಯದಲ್ಲಿ ಕೊಳ, ವನ, ವೃಕ್ಷ ಇತ್ಯಾದಿಯ ಅನೇಕ ರಚನೆಗಳಿವೆ. ಎರಡನೆಯ ಭೂಮಿಯಲ್ಲಿ ರತ್ನಮಯ ಮೆಟ್ಟಿಲುಗಳಿಂದ ಕೂಡಿದ, ನಿರ್ಮಲ ಜಲದಿಂದ ತುಂಬಿದ ಕಂದಕವಿದೆ. ಆ ಜಲದ ಆಳವು ಜಿನದೇವರ ಶರೀರದ ನಾಲ್ಕನೆಯ ಒಂದು ಭಾಗವಿದೆ. ಆ ಕಂದಕವು ಕಮಲಗಳಿಂದ ಪರಿಪೂರಿತ, ಅನೇಕ ಪ್ರಕಾರದ ಜಲಚರಗಳು ಮತ್ತು ಹಂಸ ಮೊದಲಾದ ಜೀವಗಳಿಂದ ಸುಶೋಭಿತವಿದೆ. ಮೂರನೆಯ ಭೂಮಿಯಲ್ಲಿ ಅನೇಕ ಪ್ರಕಾರದ ವೃಕ್ಷ, ಬಳ್ಳಿ, ಪುಷ್ಪಗಳಿಂದ ಸುಶೋಭಿತ ಪುಷ್ಪವಾಟಿಕೆಯಿದೆ.

ನಾಲ್ಕನೆಯ ಭೂಮಿಯ ನಾಲ್ಕೂ ದಿಶೆಗಳಲ್ಲಿ ಅಶೋಕವನ, ಸಪ್ತಪರ್ಣವನ, ಚಂಪಕವನ ಮತ್ತು ಆಮ್ರವನ-ಇವು ನಾಲ್ಕು ಉಪವನಗಳಿವೆ. ಅನೇಕ ಪ್ರಕಾರದ ಉತ್ತಮ ವೃಕ್ಷಗಳಿಂದ ಕೂಡಿರುವ ಈ ವನಗಳಲ್ಲಿ ದೇವಗಳು ಕ್ರೀಡೆ ಮಾಡುವ ಸಲುವಾಗಿ ವಿವಿಧ ಮಂದಿರಗಳಿವೆ ಹಾಗೂ ಈ ವನಗಳು ನೃತ್ಯ ಶಾಲೆ, ಕೊಳ (ಬಾವಿ)

ಕ್ರೀಡಾ ಪರ್ವತ ಮೊದಲಾದ ಅನೇಕ ಉತ್ತಮ ರಚನೆಯಿಂದ ಸುಶೋಭಿತವಿವೆ.

ಅಶೋಕ ವನದಲ್ಲಿ ಅಶೋಕವೆಂಬ ಹೆಸರಿನ ವೃಕ್ಷ, ಚೈತ್ಯದ ನಾಲ್ಕೂ ಕಡೆಗೆ, ಮೂರು ಕೋಟೆಗಳೊಳಗಿಂದ ಮೂರು ಕೋನಗಳ ಒಳಗೆ ಮೂರು ಪೀಠಗಳಿವೆ. ಅವುಗಳ ಮೇಲೆ ಸ್ಥಿತವಿರುವ ಅಶೋಕ ವೃಕ್ಷದ ಮೂಲಭಾಗದಲ್ಲಿ ನಾಲ್ಕೂ ದಿಶೆಗಳಲ್ಲಿ ನಾಲ್ಕು ಅರಹಂತ ಪ್ರತಿಮೆಗಳಿವೆ. ಆ ಪ್ರತಿಮೆಗಳ ಎದುರಿಗೆ ಒಂದೊಂದು ಮಾನಸ್ತಂಭವಿದೆ. ಇದೇ ಪ್ರಕಾರ ಉಳಿದ ಮೂರು ವನಗಳೊಳಗಿನ ಸಪ್ತಪರ್ಣವನದಲ್ಲಿ ಸಪ್ತಪರ್ಣ ಚೈತ್ಯ ವೃಕ್ಷ ಚಂಪಕ ವನದಲ್ಲಿ ಚಂಪಕ ಚೈತ್ಯವೃಕ್ಷ, ಆಮ್ರವನದಲ್ಲಿ ಆಮ್ರ ಚೈತ್ಯ ವೃಕ್ಷದ ರೂಪದಲ್ಲಿ ವನಗಳ ರಚನೆ ತಿಳಿಯುವುದು. ಈ ವನಗಳ ಬಾವಿಗಳ ಜಲದಲ್ಲಿ ಸ್ನಾನ ಮಾಡಿದ ಮೇಲೆ ಒಂದು ಭವ ಸಂಬಂಧದ ಮುಂದಿನ-ಹಿಂದಿನದು ತಿಳಿಯತೊಡಗುತ್ತದೆ. ಹಾಗೂ ಬಾವಿಗಳ ಜಲದಲ್ಲಿ ನೋಡಿದ ಮೇಲೆ ಹಿಂದೆ-ಮುಂದಿನ ತಮ್ಮ ಏಳು ಭವಗಳು ಕಾಣತೊಡಗುತ್ತವೆ.

ಪಂಚಮ ಭೂಮಿಯಲ್ಲಿ ಧ್ವಜಗಳ ಸಮೂಹವಿದೆ. ಒಂದು ದಿಶೆಯಲ್ಲಿ ಸಿಂಹ, ಆನೆ, ವೃಷಭ, ಮಯೂರ, ಮಾಲೆ, ಆಕಾಶ, ಗರುಡ, ಚಕ್ರ, ಕಮಲ ಮತ್ತು ಹಂಸ - ಇವು ಹತ್ತು ಜಾತಿಯ ಧ್ವಜಗಳೊಳಗಿಂದ ಪ್ರತಿಯೊಂದು ಚಿಹ್ನೆಯು ಒಂದು ನೂರಾ ಎಂಟು - ಒಂದು ನೂರಾ ಎಂಟು ಮಹಾಧ್ವಜಗಳು ಹಾಗೂ ಪ್ರತಿಯೊಂದು ಮಹಾಧ್ವಜ ಸಂಬಂಧದ ಒಂದು ನೂರಾ ಎಂಟು - ಒಂದು ನೂರಾ ಎಂಟು ಚಿಕ್ಕ ಧ್ವಜಗಳು ಇರುತ್ತವೆ. - ಈ ಪ್ರಕಾರ ನಾಲ್ಕೂ ದಿಶೆಗಳಿಗೆ ಸಂಬಂಧಿಸಿದ ಒಟ್ಟು ನಾಲ್ಕು ಲಕ್ಷ ಎಪ್ಪತ್ತು ಸಾವಿರ ಎಂಟು ನೂರಾ ಎಂಭತ್ತು ಧ್ವಜಗಳಿರುತ್ತವೆ. ಇವೆಲ್ಲ ಧ್ವಜಗಳು ರತ್ನಮಯ ದಂಡದಿಂದ ಸಹಿತವಿರುತ್ತವೆ. ಆ ದಂಡಗಳು ವೃಷಭದೇವರವು ಎಂಭತ್ತೆಂಟು ಅಂಗುಲ ಅಗಲವಿದ್ದವು - ಪರಸ್ಪರ -ಒಂದು ಧ್ವಜದಿಂದ ಇನ್ನೊಂದು ಧ್ವಜದ ಅಂತರ ಇಪ್ಪತ್ತೈದು ಧನುಷ್ಯವೆಂದು ತಿಳಿಯುವುದು.

ಆರನೆಯ ಭೂಮಿಯಲ್ಲಿ ಪಾತ್ರೆ, ಗೃಹ, ಆಭೂಷಣ, ವಸ್ತ್ರ, ಭೋಗ, ಪಾನ, ಜ್ಯೋತಿಷ, ಮಾಲೆ, ವಾದ್ಯ, ದೀಪಕರೂಪ ಹತ್ತು ಜಾತಿಯ ಕಲ್ಪವೃಕ್ಷಗಳ ವನವಿವೆ. ಇವು ನಾಲ್ಕು ದಿಶೆಗಳಲ್ಲಿ ನಾಲ್ಕೇ ವನವಿವೆ. ಪ್ರತಿಯೊಂದು ದಿಶೆಯ ಪ್ರತಿಯೊಂದು ವನದಲ್ಲಿ ಮೇರು, ಮಂದಾರ, ಪಾರಿಜಾತ ಮತ್ತು ಸಂತಾನಕವೆಂಬ ಹೆಸರಿನ ನಾಲ್ಕು ಕಲ್ಪವೃಕ್ಷಗಳು ಚೈತ್ಯ ವೃಕ್ಷಗಳಿವೆ. ಇವುಗಳ ವಿಸ್ತಾರದ ವರ್ಣನೆಯು ಪೂರ್ವೋಕ್ತ ಅಶೋಕ ಚೈತ್ಯ ವೃಕ್ಷದ ಸಮಾನ ತಿಳಿಯುವುದು. ವಿಶೇಷವೆಂದರೆ ಇಲ್ಲಿ ಸಿದ್ಧ ಪ್ರತಿಮೆಗಳು ವಿರಾಜಮಾನವಿವೆ. ಉಳಿದೆಲ್ಲ ಬಾವಿ, ಮಂದಿರ, ಕ್ರೀಡಾ ಪರ್ವತ ಮೊದಲಾದವುಗಳ ಸಂಪೂರ್ಣ ರಚನೆಯು ಎರಡರಲ್ಲಿ ಸಮಾನ ತಿಳಿಯುವುದು.

ಏಳನೆಯ ಭೂಮಿಯಲ್ಲಿ ವನದ ಅನೇಕ ಶೋಭೆಗಳಿಂದ ಸಹಿತ ರತ್ನಮಯ ಮಂದಿರಗಳ ಪಂಕ್ತಿಗಳಿವೆ. ಅವುಗಳಲ್ಲಿ ದೇವ-ದೇವಿಯರು ಭಗವಂತರ ಗುಣಸ್ತವನ ಮಾಡುತ್ತಾರೆ.

ಹನ್ನೆರಡು ಸಭೆಗಳುಳ್ಳ ಎಂಟನೆಯ ಭೂಮಿಯಲ್ಲಿ ಆ ಪೃಥ್ವಿ ಸಂಬಂಧದ ನಾಲ್ಕು ಅಂತರಾಲಗಳಲ್ಲಿ ಎರಡೆರಡು ಬೀದಿಯ ವೇದಿಯಿರುವುದರಿಂದ ಹಾಗೂ ಎರಡೆರಡರ ಮಧ್ಯದಲ್ಲಿ ಸ್ಫಟಿಕ ಮಣಿಮಯ ಗೋಡೆಯಿರುವುದರಿಂದ ನಾಲ್ಕೂ ಗೋಡೆಗಳ ಮಧ್ಯದಲ್ಲಿ ಮೂರು ಅಂತರಾಲರೂಪದ ಪ್ರಾಸಾದಗಳಾಗುವ ಕಾರಣ ನಾಲ್ಕೂ ದಿಶೆಗಳಲ್ಲಿ ಹನ್ನೆರಡು ಪ್ರಾಸಾದ ಮತ್ತು ಹದಿನಾರು ಗೋಡೆಗಳಿವೆ. ಅಲ್ಲಿ ರತ್ನ ಸ್ತಂಭಗಳ ಮೇಲೆ ಅನ್ಯ ಸ್ಥಾನಗಳ ಅಪೇಕ್ಷೆಯಿಂದ ಉತ್ಕೃಷ್ಟತಮ ರಚನೆಯಿಂದ ಕೂಡಿದ ಹಾಗೂ ಮುತ್ತುಗಳ ಮಾಲೆ, ರತ್ನಗಂಟೆ, ರತ್ನಮಯ ಧೂಪ ಘಟ ಮೊದಲಾದ ಅನೇಕ ರಚನೆ ಸಹಿತವಾದ ಶ್ರೀ ಮಂಟಪವು ವಿರಾಜಮಾನವಿದೆ.

ಅಷ್ಟಮ ಭೂಮಿಯ ಹನ್ನೆರಡು ಸಭೆಗಳ ಹನ್ನೆರಡು ಕೋಷ್ಟಗಳಲ್ಲಿ ಕ್ರಮದಿಂದ - ೧. ಮುನಿರಾಜರು, ೨. ಕಲ್ಪವಾಸಿ ದೇವಿಯರು, ೩. (ದೇಶವ್ರತೀ ಆರ್ಯಿಕೆ ಮೊದಲಾದ) ಮನುಷ್ಯ ಸ್ತ್ರೀಯರು, ೪. ಜ್ಯೋತಿಷಿ ದೇವಗಳ ದೇವಿಯರು, ೫. ವ್ಯಂತರ ದೇವಗಳ ದೇವಿಯರು, ೬. ಭವನವಾಸಿನಿ ದೇವಿಯರು, ೭. ಭವನವಾಸೀ

ದೇವಗಳು, ೮. ವ್ಯಂತರ ದೇವಗಳು, ೯. ಜ್ಯೋತಿಷೀ ದೇವಗಳು, ೧೦. ಕಲ್ಪವಾಸೀ ದೇವಗಳು, ೧೧. (ದೇಶವ್ರತೀ ಐಲಕ ಮೊದಲಾದ) ಮನುಷ್ಯರು ಮತ್ತು ೧೨. ಹನ್ನೆರಡನೆಯ ಸಭೆಯಲ್ಲಿ ತಿರ್ಯಂಚಗಳು ಕುಳಿತುಕೊಳ್ಳುತ್ತಾರೆ.

ಎಂಟು ಭೂಮಿಗಳ ಬೀದಿಗಳ ವಿಶೇಷ ಕಥನ - ಪ್ರಥಮ ಧೂಲಿಶಾಲ ಕೋಟೆಯ ಪೂರ್ವ ದಿಶೆಯಲ್ಲಿ ವಿಜಯ, ದಕ್ಷಿಣ ದಿಶೆಯಲ್ಲಿ ವೈಜಯಂತ, ಪಶ್ಚಿಮ ದಿಶೆಯಲ್ಲಿ ಜಯಂತ ಮತ್ತು ಉತ್ತರ ದಿಶೆಯಲ್ಲಿ ಅಪರಾಜಿತವೆಂಬ ಹೆಸರುಳ್ಳ ನಾಲ್ಕು ಬಾಗಿಲುಗಳಿವೆ. ನಾಲ್ಕೂ ದಿಶೆಗಳಿಗೆ ಸಂಬಂಧಿಸಿದ ನಾಲ್ಕು ಕೋಟೆ ಮತ್ತು ಐದು ವೇದಿಗಳ ಮೂವತ್ತಾರು ದ್ವಾರಗಳಿವೆ. ಅವುಗಳೊಳಗಿನ ಧೂಲಿಶಾಲ ಕೋಟೆಯ ನಾಲ್ಕು ಬಾಗಿಲುಗಳಂತೂ ಸ್ವರ್ಣಮಯವಿವೆ ಹಾಗೂ ಮಧ್ಯದ ಎರಡು ಕೋಟೆ ಮತ್ತು ನಾಲ್ಕು ವೇದಿ -ಇವು ಆರರ ಸಂಬಂಧದ ಇಪ್ಪತ್ನಾಲ್ಕು ಬಾಗಿಲುಗಳು ರೌಪ್ಯಮಯವಿವೆ. ನಾಲ್ಕನೆಯ ಸ್ಫಟಿಕ ಮಣಿಯ ಕೋಟೆ ಹಾಗೂ ಅಭ್ಯಂತರದ ವೇದಿ ಸಂಬಂಧದ ಎಂಟು ದ್ವಾರಗಳು ಪಚ್ಚರತ್ನದ ಸಮಾನ ಹಸಿರು ಇವೆ. ಇವು ಮೂವತ್ತಾರೂ ಬಾಗಿಲಗಳ ಒಳಗೆ-ಹೊರಗೆ ಎರಡೂ ಕಡೆಗೆ ಮಂಗಲ ದ್ರವ್ಯ ಮತ್ತು ನವನಿಧಿ ಗಳ ಸಮೂಹವಿವೆ. ಅವುಗಳೊಳಗಿನ ಒಂದು ದ್ವಾರದ ಎರಡೂ ಪಾರ್ಶ್ವಗಳ ಬಾಹ್ಯಾಭ್ಯಂತರದ ಅಪೇಕ್ಷೆಯಿಂದ ನಾಲ್ಕು ಪಾರ್ಶ್ವಗಳೊಳಗಿಂದ ಪ್ರತಿಯೊಂದು ಪಾರ್ಶ್ವದಲ್ಲಿ ಎಂಟೆಂಟು ಮಂಗಲ ದ್ರವ್ಯಗಳಿವೆ. ಆ ಪ್ರತಿಯೊಂದು ಮಂಗಲ ದ್ರವ್ಯಗಳೂ ಒಂದು ನೂರಾ ಎಂಟು ಇರುತ್ತವೆ. ಹೇಗೆಂದರೆ ಛತ್ರ ಒಂದು ನೂರಾ ಎಂಟು, ಚಾಮರ ಒಂದು ನೂರಾ ಎಂಟು ಇತ್ಯಾದಿ. ಒಂಭತ್ತು ಜಾತಿಯ ನವನಿಧಿಗಳೊಳಗಿನ ಪ್ರತಿಯೊಂದು ಜಾತಿಯ ನಿಧಿಯು ಒಂದು ನೂರಾ ಎಂಟು-ಒಂದು ನೂರಾ ಎಂಟು ಇರುತ್ತವೆ. ಪ್ರತಿಯೊಂದು ಪಾರ್ಶ್ವದಲ್ಲಿ ಇಷ್ಟೊಂದು ರಚನೆ ತಿಳಿಯುವುದು.

ದೇವಾದಿಕರಿಂದ ಧೂಪಘಟಗಳಲ್ಲಿ ಸುಗಂಧಿತ (ಪೃಥ್ವಿಕಾಯಿಕ) ದ್ರವ್ಯ ಹಾಕಲ್ಪಡುವ ಕಾರಣ ಅವುಗಳಿಂದ ಮಹಾಸುಗಂಧವು ಪ್ರಗಟವಾಗುತ್ತಿರುತ್ತದೆ. ಎಲ್ಲ ದ್ವಾರಗಳ ಮೇಲೆ ಮುತ್ತಿನ ಮಾಲೆ, ಕಲ್ಪವೃಕ್ಷಗಳ (ಪೃಥ್ವಿಕಾಯಿಕ) ಪುಷ್ಪಗಳ ಮಾಲೆ ಮತ್ತು ರತ್ನಗಂಟೆ ಇತ್ಯಾದಿಗಳ ರಚನೆಯಿಂದ ಕೂಡಿದ ರತ್ನಮಯ ತೋರಣಗಳಿವೆ. ಆ ತೋರಣ ದ್ವಾರಗಳು ಕೋಟೆಗಳಿಗಿಂತ ಎತ್ತರವಿವೆ ಮತ್ತು ಕೋಟೆಗಳ ಬಾಗಿಲಗಳು ತೋರಣಗಳಿಗಿಂತಲೂ ಎತ್ತರವಾಗಿವೆ.

ಸಮವಸರಣದ ಒಂದು ಕಡೆಯ ಒಂಭತ್ತು ಬಾಗಿಲುಗಳೊಳಗಿನ ಧೂಲಿಶಾಲದಿಂದ ಹಿಡಿದು ಮೂರು ಬಾಗಿಲುಗಳ ದ್ವಾರಪಾಲರು ಜ್ಯೋತಿಷಿ ದೇವಗಳಿದ್ದಾರೆ. ಇದರ ಮುಂದೆ ಎರಡು ಬಾಗಿಲುಗಳ ದ್ವಾರಪಾಲರು ಯಕ್ಷ ಜಾತಿಯ ವ್ಯಂತರದೇವಗಳಿದ್ದಾರೆ. ಮುಂದಿನ ಎರಡು ಬಾಗಿಲುಗಳ ದ್ವಾರಪಾಲರು ನಾಗಕುಮಾರ ಜಾತಿಯ ಭವನವಾಸೀ ದೇವಗಳಿದ್ದಾರೆ. ಮುಂದೆ ಎರಡು ಬಾಗಿಲುಗಳ ದ್ವಾರಪಾಲರು ಕಲ್ಪವಾಸೀ ದೇವಗಳಿದ್ದಾರೆ. ಈ ಪ್ರಕಾರ ನಾಲ್ಕೂ ದಿಕ್ಕುಗಳಲ್ಲಿ ಮಹಾಭಕ್ತಿವಂತರಾದ ನಾಲ್ಕೂ ಜಾತಿಯ ದೇವಗಳು ಕೈಯಲ್ಲಿ ಖಡ್ಗ, ಚಿನ್ನದ ದಂಡ ತಗೆದುಕೊಂಡು ದ್ವಾರಪಾಲರ ರೂಪದಲ್ಲಿ ನಿಂತುಕೊಂಡಿರುತ್ತಾರೆ-ಈ ಪ್ರಕಾರ ಬಾಗಿಲುಗಳ ಸ್ವರೂಪವಿದೆ.

ಪ್ರಥಮ ಭೂಮಿಯ ಬೀದಿಯಲ್ಲಿ ಸ್ಥಿತವಿರುವ ಮಾನಸ್ತಂಭದ ಸ್ವರೂಪ- ಪ್ರಥಮ ಬೀದಿಯ ಮಧ್ಯದಲ್ಲಿ ನಾಲ್ಕು-ನಾಲ್ಕು ದ್ವಾರಗಳಿಂದ ಕೂಡಿದ ಮೂರು ಕೋಟೆಗಳ ದ್ವಾರಗಳು ಅನೇಕ ಗಂಟೆ, ಧ್ವಜ, ಮಾಲೆಗಳಿಂದ ಸುಶೋಭಿತವಿವೆ. ಅವುಗಳೊಳಗಿನ ಮೊದಲನೇ - ಎರಡನೇ ಮತ್ತು ಎರಡನೇ - ಮೂರನೆಯ ಕೋಟೆಗಳ ಮಧ್ಯದಲ್ಲಿ ಅನೇಕ ಶುಭ ವೃಕ್ಷಗಳಿಂದ ಶೋಭಾಯಮಾನವೂ ಕೋಗಿಲೆ, ಮಯೂರ ಮೊದಲಾದ ವಿವಿಧ ಪಕ್ಷಿಗಳ ಮಧುರ ಧ್ವನಿಯಿಂದ ಸಂಯುಕ್ತ ವನಗಳಿವೆ. ಆ ವನಗಳಲ್ಲಿ ಲೋಕಪಾಲ ದೇವಗಳ ನಗರಗಳಿವೆ. ಪ್ರಥಮ ವನದ ನಾಲ್ಕೂ ದಿಶೆಗಳಲ್ಲಿನ ಒಂದು ದಿಶೆಯಲ್ಲಿ ಇಂದ್ರ ಲೋಕಪಾಲನ, ಎರಡನೆಯ ದಿಶೆಯಲ್ಲಿ ಯಮನೆಂಬ ಹೆಸರಿನ ಲೋಕಪಾಲನ, ಮೂರನೆಯ ದಿಶೆಯಲ್ಲಿ ವರುಣನೆಂಬ ಹೆಸರಿನ ಲೋಕಪಾಲನ ಮತ್ತು ನಾಲ್ಕನೆಯ ದಿಶೆಯಲ್ಲಿ ಕುಬೇರನೆಂಬ ಹೆಸರಿನ ಲೋಕಪಾಲನ ನಗರವಿದೆ - ಈ ಪ್ರಕಾರ ಪ್ರಥಮ ಅಂತರಾಲದ ಕಥನವಾಯಿತು.

ಎರಡನೇ-ಮೂರನೆಯ ಕೋಟೆಯ ಮಧ್ಯದ ಅಂತರಾಲದಲ್ಲಿ ಒಂದು ಕಡೆಗೆ ಅಗ್ನಿ ಜಾತಿಯ

ಲೋಕಪಾಲರುಗಳ, ಎರಡನೆಯ ಕಡೆಗೆ ನೈಋತ್ಯ ಜಾತಿಯ ದೇವಗಳ, ಮೂರನೆಯ ಕಡೆಗೆ ಪವನಕುಮಾರ ದೇವಗಳ ಮತ್ತು ನಾಲ್ಕನೆಯ ಕಡೆಗೆ ಈಶಾನ ಜಾತಿಯ ದೇವಗಳ ನಗರವಿದೆ - ಈ ಪ್ರಕಾರ ಮೂರು ಕೋಟೆಗಳಿಗೆ ಸಂಬಂಧಿಸಿದ ಎರಡು ಅಂತರಾಲಗಳ ನಗರದ ಕಥನವಾಯಿತು.

ಮೂರನೆಯ ಕೋಟೆಯ ಅಭ್ಯಂತರದಲ್ಲಿ ಮೇಲೆ-ಮೇಲಕ್ಕೆ ಮೂರು ಕಡಿತವುಳ್ಳ ಮೂರು ಪೀಠಗಳಿವೆ. ಮೊದಲನೆಯ ಪೀಠವು ಪಚ್ಚದ ಸಮಾನ ಹರಿತ ವರ್ಣದ್ದು, ಅದರ ಮೇಲೆ ಎರಡನೆಯ ಪೀಠವು ಸ್ವರ್ಣಮಯ ಹಾಗೂ ಅದರ ಮೇಲೆ ಮೂರನೆಯ ಪೀಠವು ರತ್ನಮಯವಿದೆ. ಇವುಗಳಲ್ಲಿನ ಪ್ರಥಮ ಪೀಠದ ಎತ್ತರವು ವೃಷಭ ದೇವರ ಮೊಳದಿಂದ ಎಂಟು ಧನುಷ್ಯ ಮತ್ತು ಮೇಲಿನ ಎರಡೂ ಪೀಠಗಳು ನಾಲ್ಕು-ನಾಲ್ಕು ಧನುಷ್ಯದವಿವೆ. ಅನ್ಯ ತೀರ್ಥಂಕರರ ಪೀಠಗಳು ಕ್ರಮದಿಂದ ಹೀನವಿರುತ್ತವೆ.

ಪೀಠಗಳ ಅಗಲ-ಕೆಳಗಿನ ಎರಡೂ ಪೀಠಗಳ ಅಗಲವನ್ನಂತೂ ಅನ್ಯ ಗ್ರಂಥಗಳ ಅನುಸಾರ ತಿಳಿಯುವುದು. ವೃಷಭದೇವರಿಗೆ ಸಂಬಂಧಿಸಿದ ಮೇಲಿನ ಮೂರನೆಯ ಪೀಠದ ಅಗಲವು ಒಂದು ಸಾವಿರ ಧನುಷ್ಯವಿತ್ತು. ಅನ್ಯ ತೀರ್ಥಂಕರರದು ಕ್ರಮದಿಂದ ಹೀನ-ಹೀನವಾಗುತ್ತ ಹೋಯಿತು. ಮೂರನೆಯ ಪೀಠದಲ್ಲಿ ಕೆಳಗೆ ಚೌಕಾಕಾರ ಹಾಗೂ ಮೇಲೆ ವೃತ್ತಾಕಾರದ ಮಾನಸ್ತಂಭಗಳಿವೆ. ಅವು ಕೆಳಗೆ ವಜ್ರಮಯ, ಮಧ್ಯದಲ್ಲಿ ಸ್ಫಟಿಕಮಯ ಮತ್ತು ಮೇಲೆ ಪಚ್ಚರತ್ನದ ಸಮಾನ ಹರಿತವಿವೆ. ಸ್ತಂಭದ ಮಗ್ಗಲುಗಳ ಸಮಾನ ಎರಡು ಸಾವಿರ ಧಾರೆಯಿಂದ ಕೂಡಿದ ಆ ಮಾನಸ್ತಂಭಗಳು ಗಂಟೆ, ಮುತ್ತಿನ ಮಾಲೆ, ಕಲ್ಪವೃಕ್ಷದ ಪುಷ್ಪಗಳ ಮಾಲೆ, ಧ್ವಜೆಗಳು ಇತ್ಯಾದಿ ಅನೇಕ ರಚನೆಗಳಿಂದ ಸಹಿತ ಸುಶೋಭಿತವಾಗುತ್ತವೆ.

ಮಾನಸ್ತಂಭದ ಮೇಲ್ಭಾಗದಲ್ಲಿ ನಾಲ್ಕೂ ದಿಶೆಗಳಲ್ಲಿ ಅಶೋಕವೃಕ್ಷ, ಪುಷ್ಪವೃಷ್ಟಿ, ದಿವ್ಯಧ್ವನಿ, ಚಾಮರ, ಸಿಂಹಾಸನ, ಭಾಮಂಡಲ, ದೇವಗಳಿಂದ ಮಾಡಲಾಗುವ ದುಂದುಭಿ ಶಬ್ದ, ಮತ್ತು ಛತ್ರ (ಮುಕ್ಕೊಡೆ)ಯೆಂಬ ಪ್ರಾತಿಹಾರ್ಯಗಳಿಂದ ಸಹಿತ ನಾಲ್ಕು ಅರಹಂತರ ಬಿಂಬಗಳಿವೆ. ಅವುಗಳಿಂದ 'ಅದೇನು ಈಗ ದಿವ್ಯಧ್ವನಿ ಹೊರಡುವುದು'-ಎನ್ನುವಂತೆ ದಿವ್ಯಧ್ವನಿಯ ಆಭಾಸವಾಗುತ್ತದೆ ಹಾಗೂ ಉಳಿದೆಲ್ಲ ಪ್ರಾತಿಹಾರ್ಯಗಳು ವಿದ್ಯಮಾನವಿವೆ. ಅವುಗಳ ದರ್ಶನದಿಂದ ಪಾಪಗಳು ನಷ್ಟವಾಗುತ್ತವೆ. ಆಕಾಶದಲ್ಲಿ ಒಂದು ಯೋಜನದವರೆಗೆ ಉದ್ಯೋತವನ್ನುಂಟು ಮಾಡುತ್ತಿರುವ ಮಾನಸ್ತಂಭದ ಪ್ರಭೆಯನ್ನು ನೋಡುವುದರಿಂದ ಆಶ್ಚರ್ಯವು ಉತ್ಪನ್ನವಾಗುತ್ತದೆ. ಇದರ ಅತಿಶಯದಿಂದ ಇಂದ್ರಾದಿ ದೇವಗಳು ಮೊದಲಾಗಿ, ಎಲ್ಲರ ಮಾನವು ನಷ್ಟವಾಗಿ ಹೋಗುತ್ತದೆ. 'ಎಲ್ಲರೂ ನಮಸ್ಕಾರ ಮಾಡಬೇಕು' - ಅಂಥ ಮಹಿಮೆಯ ಧಾರಕವಿರುವುದರಿಂದ ಇದರ ಹೆಸರು ಮಾನಸ್ತಂಭವಿದೆ. - ಈ ಪ್ರಕಾರ ಮಾನಸ್ತಂಭದ ಸಾಮಾನ್ಯ ಸ್ವರೂಪ ಹೇಳಲಾಯಿತು. ನಾಲ್ಕೂ ದಿಶೆಗಳ ಮಾನಸ್ತಂಭದ ಇಂಥದೇ ಸ್ವರೂಪ ತಿಳಿಯುವುದು.

ಆ ಮಾನಸ್ತಂಭದ ಕೋಟೆಯಲ್ಲಿ ನಾಲ್ಕೂ ದಿಶೆಗಳಲ್ಲಿ ನಾಲ್ಕು-ನಾಲ್ಕು ಬಾವಿಗಳಿರುತ್ತವೆ. ಪೂರ್ವ ದಿಶೆಗೆ ಸಂಬಂಧಿಸಿದ ಬಾವಿಗಳ ಹೆಸರು ನಂದಾ, ನಂದೋತ್ತರಾ, ನಂದವತಿ ಮತ್ತು ನಂದಘೋಷಾ ಇವೆ. ದಕ್ಷಿಣ ದಿಶೆಯ ಮಾನಸ್ತಂಭ ಸಂಬಂಧದ ಬಾವಿಗಳ ಹೆಸರು ವಿಜಯಾ, ವೈಜಯಂತಿ, ಜಯಂತಿ ಮತ್ತು ಅಪರಾಜಿತಾ ಇವೆ. ಪಶ್ಚಿಮ ದಿಶೆಗೆ ಸಂಬಂಧಿಸಿದ ಮಾನಸ್ತಂಭದ ಬಾವಿಗಳ ಹೆಸರು ಅಶೋಕ, ಸುಪ್ರತಿಬುದ್ಧಾ, ಕುಮುದಾ ಮತ್ತು ಪುಂಡರೀಕಿಣಿ ಎಂಬುದಾಗಿವೆ. ಉತ್ತರ ದಿಶೆಗೆ ಸಂಬಂಧಿಸಿದ ಮಾನಸ್ತಂಭದ ಬಾವಿಗಳ ಹೆಸರು ನಂದಾ, ಮಹಾನಂದಾ, ಸುಪ್ರಬುದ್ಧಾ ಮತ್ತು ಪ್ರಭಂಕರೀ ಇವೆ. - ಈ ಪ್ರಕಾರ ನಾಲ್ಕು ದಿಶೆ ಸಂಬಂಧದ ನಾಲ್ಕು ಮಾನಸ್ತಂಭಗಳ ಹದಿನಾರು ಬಾವಿಗಳನ್ನು ತಿಳಿಯುವುದು. ಪ್ರತಿಯೊಂದು ಬಾವಿಯ ಬಾಹ್ಯ ಮುಖದ ಮೇಲೆ ಎರಡೆರಡು ಕುಂಡಗಳು ಸ್ಥಿತವಿವೆ. ಅವುಗಳ ಜಲದಿಂದ ಭವ್ಯ ಜೀವಗಳು ಪಾದ ಪ್ರಕ್ಷಾಲನೆ ಮಾಡಿಕೊಳ್ಳುತ್ತಾರೆ. ಬಾವಿಯ ಜಲದಿಂದ ಪ್ರತಿಮೆಗಳ ಅಭಿಷೇಕವಾಗುತ್ತದೆ. ಇವೆಲ್ಲ ಸ್ವರ್ಣ ರತ್ನಮಯ ಬಾವಿಗಳು ಸ್ವರ್ಣಮಯ ಮೆಟ್ಟಿಲುಗಳಿಂದ ಸಹಿತವಿದ್ದು

ಚೌಕಾಕಾರವಿವೆ. ನಿರ್ಮಲ ಜಲದಿಂದ ತುಂಬಿಕೊಂಡಿರುವ ಈ ಬಾವಿಗಳು ಕಮಲಗಳಿಂದ ಸುಶೋಭಿತವಿವೆ. - ಈ ಪ್ರಕಾರ ಮಾನಸ್ತಂಭದ ಸಾಮಾನ್ಯ ಸ್ವರೂಪ ಹೇಳಲಾಯಿತು.

ನಾಟ್ಯ ಶಾಲೆಯ ಸಾಮಾನ್ಯಸ್ವರೂಪ-ಪ್ರಥಮ ಬೀದಿಯ ಎರಡೂ ಪಾರ್ಶ್ವಗಳಲ್ಲಿ ಮೂರು ಖಂಡದ ಎರಡು ನಾಟ್ಯ ಶಾಲೆಗಳಿವೆ. ಪ್ರತಿಯೊಂದು ನಾಟ್ಯ ಶಾಲೆಯಲ್ಲಿ ಮೂವತ್ತೆರಡು ರಂಗಭೂಮಿಗಳಿವೆ. ಪ್ರತಿಯೊಂದು ರಂಗಭೂಮಿಯಲ್ಲಿ ಮೂವೆತ್ತರಡು-ಮೂವತ್ತೆರಡು ಭವನವಾಸಿನಿದೇವಿಯರು ನೃತ್ಯ ಮಾಡುತ್ತಿರುತ್ತಾರೆ. ಪ್ರತಿಯೊಂದು ನಾಟ್ಯ ಶಾಲೆಯಲ್ಲಿ ಎರಡೂ ಪಾರ್ಶ್ವಗಳಲ್ಲಿ ಎರಡೆರಡು ಧೂಪಘಟಗಳಿವೆ. ರತ್ನಮಯವಾದ ಈ ನೃತ್ಯ ಶಾಲೆಗಳು ವಿವಿಧ ಶೋಭೆಗಳಿಂದ ಕೂಡಿವೆ. ಇದರ ಸಮಾನವೇ ರಚನೆಯುಕ್ತ ನಾಟ್ಯ ಶಾಲೆಗಳು ನಾಲ್ಕನೇ ಹಾಗೂ ಆರನೆಯ ಬೀದಿಯಲ್ಲಿವೆ. ಕೇವಲ ಅಂತರವೆಂದರೆ ನಾಲ್ಕನೆಯ ಬೀದಿಯ ನಾಟ್ಯ ಶಾಲೆಗಳಲ್ಲಿ ಕಲ್ಪವಾಸಿನೀ ದೇವಿಯರು ನೃತ್ಯ ಮಾಡುತ್ತಾರೆ ಹಾಗೂ ಐದನೇ ಖಂಡವುಳ್ಳ ಆರನೆಯ ಬೀದಿಯ ನಾಟ್ಯಶಾಲೆಯಲ್ಲಿ ಜ್ಯೋತಿಷೀ ಜಾತಿಯ ದೇವಾಂಗನೆಯರು ನೃತ್ಯ ಮಾಡುತ್ತಾರೆ - ಈ ಪ್ರಕಾರ ಈ ನಾಟ್ಯ ಶಾಲೆಗಳಲ್ಲಿ ತಮ್ಮ-ತಮ್ಮ ನಿಯೋಗದ ಅನುಸಾರ ಭಕ್ತಿಭಾವದಿಂದ ಪರಿಪೂರ್ಣ ದೇವಿಯರು ನೃತ್ಯಮಾಡಿ ತಮ್ಮ ಭವ ಸಫಲ ಮಾಡುತ್ತಾರೆ.

ರತ್ನಸ್ತೂಪಗಳ ಸ್ವರೂಪ- ಏಳನೇ ಬೀದಿಯ ಪ್ರತಿಯೊಂದು ದಿಶೆಯಲ್ಲಿ ರತ್ನರಾಶಿಯ ಸಮಾನ ಉತ್ತುಂಗ ಶಿಖರವುಳ್ಳ ಒಂಭತ್ತು-ಒಂಭತ್ತು ರತ್ನಸ್ತೂಪಗಳಿವೆ. ಅವುಗಳ ಮಧ್ಯದಲ್ಲಿ ನೂರು ತೋರಣಗಳಿವೆ. ಆ ಸ್ತೂಪಗಳ ಅಗ್ರಭಾಗದಲ್ಲಿ ಎಂಟೆಂಟು ಮಂಗಲದ್ರವ್ಯ ಮತ್ತು ಪ್ರಾತಿಹಾರ್ಯ ಸಹಿತ ಅರಹಂತರ ಬಿಂಬ (ಪ್ರತಿಮೆ)ಗಳಿವೆ. ಅವುಗಳಲ್ಲಿ ಛತ್ರ, ಚಾಮರ, ಸಿಂಹಾಸನ ಮೊದಲಾದ ಇನ್ನೂ ಅನೇಕ ಅತಿಶಯಗಳು ಕಂಡು ಬರುತ್ತವೆ.-ಈ ಪ್ರಕಾರ ಸ್ತೂಪಗಳ ಸಂಕ್ಷಿಪ್ತ ವರ್ಣನೆ ಮಾಡಲಾಯಿತು

ಈ ಪ್ರಕಾರ ಇವೆಲ್ಲ ಪೃಥ್ವಿಗಳ ರಚನೆಯಿದೆ.

ಐದನೇ ವೇದಿಯ ಅಭ್ಯಂತರ ಮಧ್ಯದಲ್ಲಿ ಮೇಲೆ-ಮೇಲೆ ದುಂಡಗಿನ ಮೂರು ಪೀಠಗಳಿವೆ. ವೈಢೂರ್ಯ ರತ್ನಮಯ ಹಸಿರು ವರ್ಣದ ಪ್ರಥಮ ಪೀಠವು ಎಂಟು ಧನುಷ್ಯ ಎತ್ತರವಿದೆ. ಎರಡನೆಯ ಸ್ವರ್ಣಮಯ ಪೀಠವು ನಾಲ್ಕು ಧನುಷ್ಯ ಎತ್ತರವಿದೆ. ಮೂರನೆಯ ಅನೇಕ ರತ್ನಮಯ ಪೀಠವು ನಾಲ್ಕು ಧನುಷ್ಯ ಎತ್ತರವಿದೆ. ಪ್ರಥಮ ಪೀಠದ ಮೆಟ್ಟಲುಗಳು ಹದಿನಾರು ಇದ್ದರೆ ಉಳಿದ ಎರಡರ ಮೆಟ್ಟಿಲುಗಳು ಎಂಟು-ಎಂಟು ಇವೆ. ಆ ಪೀಠಗಳೊಳಗಿನ ಪ್ರಥಮ ಪೀಠದ ಅಗಲವು ವೃಷಭದೇವರ ಸಮಯಕ್ಕೆ ಒಂದು ಹರದಾರಿಯಿತ್ತು. ಅನ್ಯ ಜಿನರಾಜರದು ಹೀನಕ್ರಮ (ಕ್ರಮದಿಂದ ಕಡಿಮೆ) ಯುಕ್ತವಿದೆ. ಪ್ರಥಮ ಪೀಠದ ನಾಲ್ಕೂ ದಿಶೆಗಳಲ್ಲಿ ನಾಲ್ಕು ಯಕ್ಷ ದೇವಗಳು ಮಸ್ತಕದ ಮೇಲೆ ಒಂದು ಸಾವಿರ ಹಲ್ಲುಗಳುಳ್ಳ ಧರ್ಮಚಕ್ರವನ್ನಿಟ್ಟುಕೊಂಡು ವಿನಯಪೂರ್ವಕ ಕೈ ಮುಗಿದು ನಿಂತುಕೊಂಡಿದ್ದಾರೆ. ಆ ಚಕ್ರದ ಆಕಾರವು ದುಂಡಗೆ ಇದ್ದು ಅದರ ಪ್ರಭೆಯ ಎದುರಿಗೆ ಅನೇಕ ಸೂರ್ಯರು ಮಂದ ಪ್ರತಿಭಾಸಿತರಾಗುತ್ತಾರೆ.

ಪ್ರಥಮ ಪೀಠದ ಮೇಲೆ ಅಷ್ಟಮಂಗಲದ್ರವ್ಯಗಳಿವೆ ಮತ್ತು ಗಣಧರ ದೇವ, ಇಂದ್ರ, ಚಕ್ರವರ್ತಿ ಮೊದಲಾದ ಭಕ್ತ ಜನರು ಈ ಪ್ರಥಮ ಪೀಠವನ್ನೇರಿ ಜಿನದೇವರ ಪೂಜೆ-ಭಕ್ತಿ ಮಾಡುತ್ತಾರೆ; ಇದಕ್ಕಿಂತ ಮುಂದೆ ಹೋಗುವುದಿಲ್ಲ. ಪೂಜೆಯ ನಂತರ ಹಿಂದೆ-ಹಿಂದೆ ಸರಿಯುತ್ತ ಮೆಟ್ಟಲುಗಳ ಮಾರ್ಗದಿಂದ ಇಳಿದು ತಮ್ಮ-ತಮ್ಮ ಸಭೆಯಲ್ಲಿ ಬಂದು ಕುಳಿತುಕೊಳ್ಳುತ್ತಾರೆ.

ಎರಡನೆಯ ಪೀಠದಲ್ಲಿ ಚಕ್ರ, ಹಸ್ತಿ, ಸಿಂಹ, ಮಾಲೆ, ವೃಷಭ, ಗರುಡ ಮತ್ತು ಕಮಲದ ಆಕಾರವುಳ್ಳ ಎಂಟು ಧ್ವಜಗಳಿವೆ ಹಾಗೂ ಮಂಗಲ ದ್ರವ್ಯ ಮೊದಲಾದ ಅನೇಕ ರಚನೆಗಳಿವೆ. ಮೂರನೆಯ ಪೀಠದ ಮೇಲೆ ಚೌಕಾಕಾರದ ಗಂಧ ಕುಟಿಯಿದೆ. ಆ ಗಂಧ ಕುಟಿಯು ವೃಷಭದೇವರ ಸಮಯದಲ್ಲಿ ಆರು ನೂರು ಧನುಷ್ಯ ಉದ್ದ, ಅಗಲ ಮತ್ತು ಎತ್ತರವಿತ್ತು ಉಳಿದ ತೀರ್ಥಂಕರರದು ಕ್ರಮದಿಂದ ಕಡಿಮೆಯಿದೆ. ಅದು ಅನೇಕ ಮುತ್ತಿನ ಮಾಲೆ,

ಕಲ್ಪವೃಕ್ಷಗಳ ಪುಷ್ಪಮಾಲೆ, ರತ್ನಮಾಲೆ, ಅನೇಕ ಜಾತಿಯ ಧ್ವಜಗಳು, ಸುಗಂಧಿತ ದ್ರವ್ಯಾದಿ ಸಹಿತ ಶೋಭಿಸುವುದರಿಂದ ಗಂಧಕುಟಿಯೆನಿಸಿಕೊಳ್ಳುತ್ತದೆ.

ಅದರ ಮಧ್ಯದಲ್ಲಿ ಸ್ಫಟಿಕ ಮಣಿಮಯ, ನಿರ್ಮಲ, ಅನೇಕ ರತ್ನಜಡಿತ, ಅನೇಕ ಗಂಟೆಗಳಿಂದ ಸುಶೋಭಿತ ಸಿಂಹಾಸನವಿದೆ. ಅದರ ನಾಲ್ಕು ಕಾಲುಗಳ ಸ್ಥಾನದಲ್ಲಿ ಪ್ರತ್ಯಕ್ಷ ಜೀವಂತವಿರುವ ಹಾಗೆ ಕಂಡು ಬರುವಂಥ, ಕುಳಿತು ಕೊಂಡಿರುವ ನಾಲ್ಕು ರತ್ನಮಯ ಸಿಂಹಗಳ ಆಕಾರವಿವೆ. ಅದೇನು ಶ್ರಾವಕ ವ್ರತಧಾರೀ, ಸೌಮ್ಯಭಾವನೆ ಸಹಿತ ಸಾಕ್ಷಾತ್ ಸಿಂಹಗಳೇ ಭಗವಂತರ ಭಕ್ತಿ ಮಾಡುವ ಸಲುವಾಗಿ, ಧರ್ಮ ಶ್ರವಣ ಮಾಡುವ ಸಲುವಾಗಿ ಬಂದಿರುವಂತೆ ಪ್ರತೀತವಾಗುತ್ತವೆ. ಈ ಸಿಂಹಾಕಾರಗಳ ಕಾರಣದಿಂದಲೇ ಅದು ಸಿಂಹಾಸನವೆನಿಸಿಕೊಳ್ಳುತ್ತದೆ. ಆ ಸಿಂಹಾಸನದ ಮಧ್ಯದಲ್ಲಿ ಒಂದು ಸಾವಿರ ದಳವುಳ್ಳ ಕೆಂಪು ವರ್ಣಮಯ ಕಮಲದ ಕರ್ಣಿಕೆಯ ಮೇಲೆ ಅಂತರಿಕ್ಷದಲ್ಲಿ ಭಗವಂತರು ವಿರಾಜಮಾನರಿದ್ದಾರೆ. ಅವರಿಗೆ ಪುನಃ ಪುನಃ ನಮ್ಮ ನಮಸ್ಕಾರವಿರಲಿ.

ಸಮವಸರಣದ ಕೋಟೆ, ವೇದಿ ಮೊದಲಾದವುಗಳ ರಚನೆಯ ಎತ್ತರದ ಪ್ರಮಾಣ - ಸಮವಸರಣದ ಐದು ವೇದಿಗಳು, ನಾಲ್ಕು ಕೋಟೆಗಳು ಮತ್ತು ಬೀದಿಗಳ ವೇದಿಗಳ ಎತ್ತರವು ತಮ್ಮ ತೀರ್ಥಂಕರರ ಶರೀರದ ಎತ್ತರಕ್ಕಿಂತ ನಾಲ್ಕು ಪಟ್ಟು ಇರುತ್ತದೆ. ಕ್ರೀಡಾ ಮಂದಿರ, ಜಿನಮಂದಿರ, ಸುತ್ತಾಲಯಗಳ ವೇದಿ ಸಂಬಂಧದ ದ್ವಾರಗಳ ರತ್ನಸ್ತೂಪ, ಮಾನಸ್ತಂಭ, ಧ್ವಜಾದಂಡ, ಕ್ರೀಡಾಪರ್ವತ, ನೃತ್ಯಶಾಲೆಗಳು, ಚೈತ್ಯವೃಕ್ಷ, ಕಲ್ಪವೃಕ್ಷ, ಸಿದ್ಧಾರ್ಥವೃಕ್ಷ, ಅಶೋಕವೃಕ್ಷ, ಹನ್ನೆರಡು ಸಭೆ ಹಾಗೂ ಶ್ರೀಮಂಟಪ - ಈ ಸ್ಥಾನಗಳು ತಮ್ಮ-ತಮ್ಮ ತೀರ್ಥಂಕರರ ಶರೀರದ ಎತ್ತರಕ್ಕಿಂತ ಹನ್ನೆರಡು ಪಟ್ಟು ಎತ್ತರವಿರುತ್ತವೆ.

ವೃಷಭದೇವರ ಸಮವಸರಣದ ಪ್ರಮಾಣವು ಹನ್ನೆರಡು ಯೋಜನವಿತ್ತು. ಉಳಿದವರದು ಯಥಾಯೋಗ್ಯ ಕಡಿಮೆ-ಕಡಿಮೆಯಾಗುತ್ತ ಹೋಗುತ್ತದೆ. ಹೇಗೆ ಅವಸರ್ಪಿಣಿ ಕಾಲದ ಜಿನರ ಸಮವಸರಣದ ಪ್ರಮಾಣವು ಕಡಿಮೆಯಾಗುತ್ತ ಹೋಗುತ್ತದೆ; ಅದೇ ಪ್ರಕಾರ ಉತ್ಸರ್ಪಿಣಿ ಕಾಲದ ಜಿನರ ಸಮವಸರಣದ ಪ್ರಮಾಣವು ಹೆಚ್ಚಾಗುತ್ತ ಹೋಗುತ್ತದೆ. ವಿದೇಹ ಕ್ಷೇತ್ರಗಳಲ್ಲಿ ಸಮವಸರಣದ ಪ್ರಮಾಣವು ಯಾವಾಗಲೂ ಎಲ್ಲ ತೀರ್ಥಂಕರರದು ವೃಷಭದೇವರ ಸಮಾನವೆಂದು ತಿಳಿಯುವುದು.

ಈ ಪ್ರಕಾರ ಸಮವಸರಣದ ವರ್ಣನೆಯನ್ನು ತ್ರೈಲೋಕಪ್ರಜ್ಞಪ್ತಿ, ಧರ್ಮಸಂಗ್ರಹ, ಸಮವಸರಣ ಸ್ತೋತ್ರ, ಆದಿಪುರಾಣ ಇತ್ಯಾದಿ ಗ್ರಂಥಗಳ ಅನುಸಾರ ಮಾಡಲಾಗಿದೆ. ಒಂದುವೇಳೆ ಯಾರೋ ಆಚಾರ್ಯರಿಂದ ಈ ರಚನೆಯ ಕಥನವು ಸ್ವಲ್ಪ ಸಾಮಾನ್ಯ-ವಿಶೇಷವಾಗಿದ್ದರೆ ಅದು ಕೇವಲಜ್ಞಾನಗಮ್ಯವಿದೆಯೆಂದು ತಿಳಿಯುವುದು- ಈ ಪ್ರಕಾರ ಸಮವಸರಣದ ಸಾಮಾನ್ಯ ರಚನೆಯ ವರ್ಣನೆ ಮಾಡಲಾಯಿತು.

ಈ ಸಮವಸರಣದಲ್ಲಿ ಅಷ್ಟಪ್ರಾತಿಹಾರ್ಯಗಳಿಂದ ಮಂಡಿತ ಶ್ರೀ ಜಿನೇಂದ್ರ ದೇವರು ವಿರಾಜಮಾನರಿರುತ್ತಾರೆ. ಆ ಅಷ್ಟಪ್ರಾತಿಹಾರ್ಯಗಳು - ೧. ಆ ಗಂಧಕುಟಿಯ ಮಧ್ಯದಲ್ಲಿ ಮೂಲ ಸಹಿತ, ನಾಲ್ಕೂ ಕಡೆಗೆ ವಿಶಾಲ ವಿಸ್ತಾರಮಯ, ಅನೇಕ ಪ್ರಕಾರದ ರತ್ನಮಯ ಶಾಖೆಗಳು ಹಾಗೂ ಅನೇಕ ಪ್ರಕಾರದ ರತ್ನಮಯ ಫಲ, ಪುಷ್ಪ, ಪರ್ಣಗಳಿಂದ ಸಹಿತವಾದ ಅಶೋಕ ವೃಕ್ಷವಿರುತ್ತದೆ. ಅದನ್ನು ನೋಡುತ್ತಿದ್ದಂತೆಯೇ ಅನೇಕ ಜಾತಿಯ ಶೋಕವು ನಷ್ಟವಾಗಿ ಹೋಗುವುದರಿಂದ ಅದನ್ನು ಅಶೋಕ ವೃಕ್ಷವೆನ್ನಲಾಗುತ್ತದೆ.

೨. ಸಂಪೂರ್ಣ ಸಮವಸರಣದಲ್ಲಿ ಭಗವಂತರ ದರ್ಶನದ ಸಲುವಾಗಿ ಬಂದಿರುವ ಜ್ಯೋತಿಷೀ ದೇವಗಳ ವಿಮಾನಗಳ ಪ್ರಭೆಯ ಸಮಾನ ದೇವಗಳ ಮೂಲಕ ಆಕಾಶದಿಂದ ವೃಷ್ಟಿಸಲಾದ, ಅದ್ಭುತ ಮಹಿಮಾಕಾರಿ, ವಿವಿಧ ರತ್ನಮಯಿ, ಮಹಾಸುಗಂಧ ಸಂಪನ್ನ ಕಲ್ಪವೃಕ್ಷದ ಪುಷ್ಪಗಳ ವೃಷ್ಟಿಯಾಗುವುದು ಪುಷ್ಪವೃಷ್ಟಿ ಪ್ರಾತಿಹಾರ್ಯವಿದೆ.

೩. ಆಕಾಶದಲ್ಲಿ ದೇವಗಳ ಮೂಲಕ ಬಾರಿಸಲಾಗುವ ಹನ್ನೆರಡೂವರೆ ಕೋಟಿ ಜಾತಿಯ ಅನೇಕ ಸುಂದರ

ವಾದ್ಯಗಳ ಶಬ್ದ, ದುಂದುಭಿಗಳ ನಾದವು ದುಂದುಭಿ ಪ್ರಾತಿಹಾರ್ಯವಿದೆ.

೪. ಜಿನದೇವರ ಶರೀರದ ವರ್ಣದ ಸಮಾನ, ಶರೀರದ ನಾಲ್ಕೂ ಕಡೆಗೆ ವೃತ್ತಾಕಾರವಾಗಿ ಶರೀರದ ಪ್ರಭೆಯು ಮಂಡಲವಾಗುವುದು ಪ್ರಭಾಮಂಡಲವಿದೆ. ಅದರಲ್ಲಿ ಭವ್ಯ ಜೀವರುಗಳು ತಮ್ಮ-ತಮ್ಮ ಮುಂದಿನ-ಹಿಂದಿನ ಭವಗಳನ್ನು ನೋಡುತ್ತಾರೆ. ಇದುವೇ ಪ್ರಭಾಮಂಡಲ ಅಥವಾ ಭಾಮಂಡಲವೆಂಬ ಹೆಸರಿನ ಪ್ರಾತಿಹಾರ್ಯವಿದೆ.

೫. ಅನೇಕ ರತ್ನಗಳಿಂದ ರಚಿತ ಪರಮ ಶೋಭೆಗೆಪ್ರಾಪ್ತ ಯಾವ ಸಿಂಹಾಸನದ ಮೇಲೆ ಜಿನದೇವರು ವಿರಾಜಮಾನರಾಗುತ್ತಾರೆ, ಅದು ಸಿಂಹಾಸನ ಪ್ರಾತಿಹಾರ್ಯವಿದೆ.

೬. ಮೇಘ ಗರ್ಜನೆಯ ಸಮಾನ ಓಂ ಧ್ವನಿಯು ಶಬ್ದ ಮಾಡುತ್ತ, ಓಷ್ಠ ತಾಲುಗಳ ಹಲನ-ಚಲನೆಯಿಂದ ರಹಿತ, ಅಕ್ಷರ ರಹಿತ, ಸಂಪೂರ್ಣ ಶರೀರದಿಂದ ಉತ್ಪನ್ನವಾಗುವಂಥ, ಒಂದು ಹಗಲು-ರಾತ್ರಿಯಲ್ಲಿ ನಾಲ್ಕು ಬಾರಿ ಆರಾರು ಗಳಿಗೆಯವರೆಗೆ ಭಗವಂತರ ಓಂ ವಾಣಿ ಹೊರಡುವುದು ದಿವ್ಯಧ್ವನಿ ಪ್ರಾತಿಹಾರ್ಯವಿದೆ. ಇದರ ನಿಮಿತ್ತ ಪಡೆದು ಪ್ರತಿಯೊಂದು ಜೀವಕ್ಕೆ ಅದರದರ ಭಾಷೆಯಲ್ಲಿ, ಅದರದರ ಅಭಿಪ್ರಾಯದ ಅನುಸಾರ ಯಥಾಯೋಗ್ಯ ಉಪದೇಶದ ಪ್ರಾಪ್ತಿಯಾಗಿ ಹೋಗುತ್ತದೆ. ಆ ದಿವ್ಯಧ್ವನಿಯಿಂದ ಜೀವದ ಕರ್ಣೇಂದ್ರಿಯ ದ್ವಾರದ ಹತ್ತಿರ ವಿದ್ಯಮಾನ ಪುದ್ಗಲ ಸ್ಕಂಧಗಳು ಅದರ ಅನುಸಾರ ಅಕ್ಷರ ರೂಪದಿಂದ ಪರಿಣಮಿತವಾಗಿ ಬಿಡುತ್ತವೆ. ಅದರಿಂದ ಎಲ್ಲ ಜೀವಗಳು ತಮ್ಮ-ತಮ್ಮ ಯೋಗ್ಯತೆಯ ಅನುಸಾರ ಪೃಥಕ್ - ಪೃಥಕ್ ಉಪದೇಶ ಧಾರಣ ಮಾಡಿಕೊಳ್ಳುತ್ತವೆ. - ಈ ಪ್ರಕಾರ ಅತಿಶಯ ಸಹಿತವಾದ ಭಗವಂತರ ಓಂ ವಾಣಿಯು ದಿವ್ಯಧ್ವನಿ ಪ್ರಾತಿಹಾರ್ಯವಿದೆ.

೭. ಭಗವಂತರ ಮಸ್ತಕದ ಮೇಲೆ ರತ್ನಮಯ ಮೂರು ಛತ್ರಗಳು ತಿರುಗುವುದು, ಛತ್ರ ಪ್ರಾತಿಹಾರ್ಯವಿದೆ.

೮. ಸಮವಸರಣದಲ್ಲಿ ಭಗವಂತರು ದೇವಗಳ ಮೂಲಕ ಢಾಳಿಸುವ ಗಂಗೆಯ ಧಾರೆಯ ಸಮಾನ ಉಜ್ವಲ ರತ್ನಮಯ ಅರವತ್ನಾಲ್ಕು ಚಾಮರ ಪ್ರಾತಿಹಾರ್ಯ ಸಹಿತ ವಿರಾಜಮಾನರಿರುತ್ತಾರೆ.

ಭಗವಂತರ ಮುಖವು ಒಂದು ಇದ್ದರೂ ನಾಲ್ಕೂ ದಿಕ್ಕುಗಳಲ್ಲಿ ಕುಳಿತಿರುವ ಜೀವಗಳಿಗೆ ನಾಲ್ಕೂ ಕಡೆಗೂ ಅವರ ಮುಖವು ಕಾಣಿಸುತ್ತದೆ. ನಾಲ್ಕೂ ದಿಕ್ಕುಗಳಲ್ಲಿರುವ ಜೀವಗಳಿಗೆ ಭಗವಂತರ ಮುಖವು ನಮ್ಮ ಕಡೆಗೇ ಇದೆಯೆನಿಸುತ್ತದೆ. ಅವರಿಗೆ ನಾಲ್ಕು ಮುಖಗಳು ಕಂಡು ಬರುತ್ತವೆ. ಭಗವಂತರ ಮುದ್ರೆಯು ಪ್ರಯತ್ನವಿಲ್ಲದೆಯೇ ನಾಸಾಗ್ರದೃಷ್ಟಿ ಸಂಪನ್ನ (ಸ್ವಜ್ಞಾನತನ) ಧ್ಯಾನರೂಪ, ಸಮತಾರಸಮಯವಿರುವುದರಿಂದ ಭಗವಂತರ ದರ್ಶನ ಮಾಡುವಂಥ ಭವ್ಯರಿಗೆ ದರ್ಶನ ಮಾಡುತ್ತಿದ್ದಂತೆಯೇ ಧ್ಯಾನಮುದ್ರೆಯ ಸ್ಮರಣೆಯಾಗಿ ಶಾಂತದಶೆಯಾಗಿ ಹೋಗುತ್ತದೆ; ಅದರಿಂದ ವೀತರಾಗ ಭಾವದ ವೃದ್ಧಿಯಾಗುತ್ತದೆ. ಈ ಪ್ರಕಾರ ಮುದ್ರೆಯು ಅತಿಶಯ ಸಹಿತವಿದೆ. ಶಾಂತಮುದ್ರೆ ಇಲ್ಲದಿದ್ದರೆ ಭಕ್ತರ ಒಳಿತು ಆಗುವ ಸಾಧ್ಯತೆಯಿಲ್ಲ. ಅಂತೆಯೇ ಭಗವಂತರದು ಅನ್ಯ ಜೀವರುಗಳ ಒಳಿತು ಮಾಡುವ, ಅವರಿಗೆ ವಿಶ್ವಾಸವನ್ನುಂಟು ಮಾಡುವಂಥ, ಧ್ಯಾನರೂಪ ಪದ್ಮಾಸನ - ಕಾಯೋತ್ಸರ್ಗ ಮುದ್ರೆಯೇ ಇರುತ್ತದೆ. ಇಂಥ ಧ್ಯಾನ ಮುದ್ರೆಯಧಾರಕರೂ, ಸಮವಸರಣರೂಪ ಬಾಹ್ಯ ಸಂಪದದಿಂದ ಸುಶೋಭಿತರೂ ಅನಂತ ಚತುಷ್ಟಯಾದಿ ಅನಂತಗುಣ ಸಂಪನ್ನ ಅಭ್ಯಂತರ ಗುಣ ಸಹಿತರೂ ಆದ ಭಗವಂತರಿಗೆ ನಮ್ಮ ನಮಸ್ಕಾರವಿರಲಿ.

ಭಗವಂತರ ದರ್ಶನದ ಉದ್ದೇಶದಿಂದ ಹೋಗುವಂಥ ಭವ್ಯ-ದೇವ, ವಿದ್ಯಾಧರರಂತೂ ಅಲ್ಲಿಗೆ ಸ್ವೇಚ್ಛೆಯಿಂದ (ನೇರವಾಗಿಯೇ ಅಥವಾ ಮೆಟ್ಟಲುಗಳನ್ನು ಹತ್ತಿ) ಹೋಗುತ್ತಾರೆ; ಆದರೆ ಭೂಮಿಗೋಚರರಾದ ಮನುಷ್ಯರು ಹಾಗೂ ತಿರ್ಯಂಚಗಳು ಮಾರ್ಗದಿಂದ ಮೆಟ್ಟಲುಗಳನ್ನು ಹತ್ತಿ ಹೋಗುತ್ತಾರೆ. ಅವರೊಳಗಿನ ಕೆಲವು ಜೀವರುಗಳಂತೂ ಮೆಟ್ಟಲುಗಳನ್ನು ಹತ್ತಿ ನೇರವಾಗಿ ದರ್ಶನದ ಸಲುವಾಗಿ ಹೊರಟು ಹೋಗುತ್ತಾರೆ ಮತ್ತು ಕೆಲವು ಜೀವರುಗಳು ಮೆಟ್ಟಲುಗಳನ್ನು ಹತ್ತಿದ ಮೇಲೆ ಸಮಭೂಮಿಯ ಮೇಲೆ ಹೋಗಿ ಸಮವಸರಣದ ಬೀದಿಗಳಲ್ಲಿ ಪ್ರವೇಶ ಮಾಡಿ ಅನೇಕ ರಚನೆಗಳನ್ನು ನೋಡುತ್ತ ದರ್ಶನದ ಸಲುವಾಗಿ ಹೋಗುತ್ತಾರೆ. ದೇವ, ವಿದ್ಯಾಧರ, ಚಕ್ರವರ್ತಿ ಮೊದಲಾದ

ಭವ್ಯರು ಪ್ರಥಮ ಪೀಠದವರೆಗೆ ಹೋಗಿ, ದರ್ಶನ ಮಾಡಿ ನಂತರ ತಮ್ಮ ಕೋಷ್ಠದಲ್ಲಿ ಬಂದು ಕುಳಿತುಕೊಳ್ಳುತ್ತಾರೆ. ಕೆಲವರು ನಂತರ ಹೊರಗೆ ಬಂದು ಜಿನೇಂದ್ರ ಭಗವಂತರ ಗುಣಸ್ತವನ ಮಾಡುತ್ತಾರೆ.

ಸಮವಸರಣದ ಅತಿಶಯ ಎಂಥದ್ದಿರುತ್ತದೆಯೆಂದರೆ ಅಲ್ಲಿ ಹೋದ ಮೇಲೆ ಕುರುಡನಿಗೆ ಕಾಣಿಸತೊಡಗುತ್ತದೆ, ಕಿವುಡನಿಗೆ ಕೇಳಿಸಲಾರಂಭಿಸುತ್ತದೆ, ರೋಗಿಯು ನಿರೋಗಿಯಾಗಿ ಬಿಡುತ್ತಾನೆ, ಅನೇಕ ದುಃಖಯುಕ್ತ ಜೀವನು ದುಃಖ ಬಿಟ್ಟು ಸುಖಿಯಾಗುತ್ತಾನೆ. ಸಮವಸರಣದಲ್ಲಿ ಹೋದ ಮೇಲೆ ನಾನಾ ಪ್ರಕಾರದ ಆರ್ತ, ದುಃಖ, ಶೋಕ, ಚಿಂತೆ, ಭಯಗಳು ದೂರವಾಗಿ ಹೋಗುತ್ತವೆ. ಅಲ್ಲಿ ಜೀವನು ಎಲ್ಲ ಪ್ರಕಾರದಿಂದ ಸುಖಿಯಾಗುತ್ತಾನೆ. ಜೀವಗಳ ಪಾರಸ್ಪಾರಿಕ ವೈರ ಭಾವಗಳು ಉಳಿಯುವುದಿಲ್ಲ. ಅಲ್ಲಿ ಹಸು-ಹುಲಿ, ಸರ್ಪ-ಮಯೂರ, ಮೂಷಕ-ಮಾರ್ಜಾಲ, ನಾಯಿ-ಬೆಕ್ಕು ಇತ್ಯಾದಿ ಜಾತಿ ವಿರೋಧೀ ಜೀವಗಳು ಕೂಡ ವೈರಭಾವದ ತ್ಯಾಗ ಮಾಡಿ ಮೈತ್ರಿ ಭಾವಧಾರಣ ಮಾಡುತ್ತವೆ. ಅಲ್ಲಿ ಸ್ಥಾನವು ಕೇವಲ ಸಂಖ್ಯಾತ ಅಂಗುಲ ಪ್ರಮಾಣವಿದ್ದರೂ ಅಸಂಖ್ಯಾತ ಜೀವಗಳು ಬಂದ ಮೇಲೆಯೂ ದಟ್ಟಣೆ (ಕಷ್ಟ)ವಾಗುವುದಿಲ್ಲ. ಅಲ್ಲಿ ಹಸಿವೆ, ಬಾಯಾರಿಕೆಗಳಾಗುವುದಿಲ್ಲ. ರಾಗ-ದ್ವೇಷಗಳಾಗುವುದಿಲ್ಲ; ಕ್ರೋಧ, ಮಾನ, ಮಾಯೆ, ಲೋಭಗಳು ಉತ್ಪನ್ನವಾಗುವುದಿಲ್ಲ. ಇತ್ಯಾದಿ ಅನೇಕ ಅತಿಶಯಗಳಾಗುತ್ತವೆ.

ಸಮವಸರಣದ ಹೊರಗೆ ನೂರು ಯೋಜನಗಳವರೆಗೆ ದುರ್ಭಿಕ್ಷ, ಭಯಾದಿಗಳಿರುವುದಿಲ್ಲ. ಈ ಪ್ರಕಾರ ಭಗವಂತರ ಅತಿಶಯವಿರುತ್ತದೆ. ಇಂದ್ರನ ಆಜ್ಞೆಯಿಂದ ಧನಪತಿ ದೇವನು ಸಮವಸರಣದ ರಚನೆ ಮಾಡುತ್ತಾನೆ. ಇಂಥ ಸಮವಸರಣದಲ್ಲಿ ವಿರಾಜಮಾನ ಶ್ರೀ ಭಗವಂತರ ಪ್ರತ್ಯಕ್ಷ ದರ್ಶನ ಮಾಡುವಂಥ ಭವ್ಯರು ಧನ್ಯರಿದ್ದಾರೆ. ಪುಣ್ಯ ರೂಪ ಸಂಪದದಿಂದ ರಹಿತರಾದ ನಾವು ಪ್ರತ್ಯಕ್ಷ ದರ್ಶನದ ಸಲುವಾಗಿ ಅಸಮರ್ಥರಿರುವ ಕಾರಣ ಮನ, ವಚನ, ಕಾಯಪೂರ್ವಕ ಆ ಜಿನದೇವರಿಗೆ ಪರೋಕ್ಷ ನಮನ ಮಾಡೋಣ ! ಆ ಭಗವಂತರು ನಮ್ಮ ಸಲುವಾಗಿ ಈ ಗ್ರಂಥದ ಪೂರ್ಣತೆಯ ಸಮಯದಲ್ಲಿ ಅಂತ್ಯಮಂಗಲರೂಪದಿಂದ ಸಹಾಯಕರಾಗಲಿ.

ಭಗವಂತರ ವಿಹಾರ ಕರ್ಮದ ಸ್ವರೂಪ - ಸಮವಸರಣದಲ್ಲಿ ವಿರಾಜಮಾನ ಭಗವಂತರ ವಿಹಾರ ಕಾಲವಿದ್ದ ಮೇಲೆ, ಇಂದ್ರನು ಅವಧಿಜ್ಞಾನದಿಂದ ತಿಳಿದು ಲೌಕಿಕ ಸಮಯ ಸಾಧಿಸುವ ಸಲುವಾಗಿ ಅವರಲ್ಲಿ ವಿನಂತಿಸಿಕೊಳ್ಳುತ್ತಾನೆ. ಓ ಭಗವಾನ ! ಇದು ವಿಹಾರ ಕಾಲವಿದೆ; ಅದಕ್ಕಾಗಿ ವಿಹಾರ ಮಾಡಿ ಅನೇಕ ಭವ್ಯ ಜೀವರುಗಳಿಗೆ ಧರ್ಮೋಪದೇಶ ನೀಡಿ - ಅವರಿಗೆ ಸುಮಾರ್ಗ ತಿಳಿಸಿಕೊಟ್ಟು ಅವರ ಉದ್ಧಾರ ಮಾಡಿರಿ. ದೇವೇಂದ್ರನ ಪ್ರಶ್ನೆ ಪಡೆದು ಭಗವಂತರ ವಿಹಾರ ಕರ್ಮ(ಕ್ರಿಯೆ)ವಾಗುತ್ತದೆ. ಹಿಂದಿನ ಸಮವಸರಣದ ರಚನೆಯು ವಿಘಟಿತವಾಗಿ ಹೋಗುತ್ತದೆ. ಭಗವಂತರು ವಿಹಾರ ಮಾಡುವ ಮಾರ್ಗದಲ್ಲಿ ಎರಡೂ ಕಡೆಗೆ ಅನೇಕ ಪ್ರಕಾರದ ಆರೂ ಋತುಗಳ ಫಲ ಪುಷ್ಪಗಳಿಂದ ಕೂಡಿದ ಅನೇಕ ವೃಕ್ಷಗಳ ಸಘನ ಪಂಕ್ತಿಯು ನಿರ್ಮಿತವಾಗುತ್ತದೆ. ಎರಡೂ ಮಗ್ಗುಲಿಗೆ ಮಹಾರಮಣೀಯ ಹಚ್ಚು ಹಸಿರಾದ ಭತ್ತದ ಗದ್ದೆಯಾಗುತ್ತದೆ. ನದಿ, ಬಾವಿ,ಮಹಲುಗಳ ಪಂಕ್ತಿ, ಪರ್ವತಗಳ ಶೋಭೆ ಮನೋಹರವಾಗಿ ಹೋಗುತ್ತದೆ. ಆ ಮಾರ್ಗದ ಭೂಮಿಯೆಲ್ಲವು ಕನ್ನಡಿಯ ಹಾಗೆ ನಿರ್ಮಲವಾಗುತ್ತದೆ. ಅದರ ಎರಡೂ ಮಗ್ಗುಲಿಗೆ ಅರಳಿನಿಂತ ವನ ಪಂಕ್ತಿಯ ಸಮೀಪ ಎರಡೂ ಕಡೆಗೆ ನಿರ್ಮಲ ಜಲದ ಪ್ರವಾಹಯುಕ್ತ ನದಿಯ ಸಮಾನ ಕಾಲುವೆಗಳು ಹರಿಯುತ್ತಿರುತ್ತವೆ.

ಆ ಮಾರ್ಗದ ಮೇಲೆ ಮೇಘಕುಮಾರ ಜಾತಿಯ ದೇವನು ಆಕಾಶದಿಂದ ಸೂಕ್ಷ್ಮ ಮುತ್ತಿನಂಥ ಪರಿಮಳಯುಕ್ತ ಜಲದ ಕಣಗಳನ್ನು ವರ್ಷಿಸುತ್ತ ಹೋಗುತ್ತಾನೆ. ಪವನಕುಮಾರ ಜಾತಿಯ ದೇವಗಳು ಮಂದವಾದ ಸುಗಂಧಮಯ ಗಾಳಿಯನ್ನು ಹರಡುತ್ತ ಹೋಗುತ್ತಾರೆ. ಒಂದು ಯೋಜನದವರೆಗೆ ಭೂಮಿಯನ್ನು ಕಂಟಕ ರಹಿತ ಮಾಡುತ್ತ ಸಾಗುತ್ತಾರೆ. ಆ ಮಾರ್ಗದಲ್ಲಿ ಸಮವಸರಣದ ಎತ್ತರದಷ್ಟು ಪ್ರಮಾಣ ಆಕಾಶದಲ್ಲಿ ಗಮನ ಮಾಡುತ್ತಿರುವ ಭಗವಂತರ ಪದಕಮಲಗಳ ಕೆಳಗೆ ಹದಿನೈದು-ಹದಿನೈದು ಕಮಲ ಪುಷ್ಪಗಳ ಪಂಕ್ತಿ, ಹದಿನೈದು ಪಂಕ್ತಿಗಳ

ರಚನೆಯನ್ನು ದೇವಗಳು ಮಾಡುತ್ತಾರೆ. ಅದರಿಂದ ಒಂದು ಸ್ಥಾನದ ಮೇಲೆ ಎರಡು ನೂರಾ ಇಪ್ಪತ್ತೈದು ಕಮಲಗಳ ಸಮೂಹವು ಹೋಳಿಹಬ್ಬದಲ್ಲಿ ಸ್ತ್ರೀಯರು ಗುಂಪು ಕಟ್ಟಿ ಕುಣಿಯುವ ತೆರದಲ್ಲಿ ವಿದ್ಯಮಾನವಿರುತ್ತದೆ. ಅವುಗಳಲ್ಲಿನ ಮಧ್ಯದ ಕಮಲದ ಮೇಲೆ ನಾಲ್ಕು ಅಂಗುಲ ಅಂತರದಿಂದ ಪಾದಗಳನ್ನಿರಿಸುತ್ತ ಭಗವಂತರು ಆಕಾಶದಲ್ಲಿ ವಿಹಾರ ಮಾಡುತ್ತಾರೆ.

**ಸಂದೇಹ -** ಇಚ್ಛಾರಹಿತ ವೀತರಾಗ ಭಗವಂತರು ಇಚ್ಛೆಯಿಲ್ಲದೆ ವಿಹಾರ ಹೇಗೆ ಮಾಡುತ್ತಾರೆ ?

**ಸಮಾಧಾನ -** ಭಗವಂತರ ನಾಲ್ಕು ಅಘಾತಿ ಕರ್ಮಗಳು ವಿದ್ಯಮಾನವಿರುವುದರಿಂದ, ಅವುಗಳ ಉದಯದಲ್ಲಿ ವಾಣಿ ಹೊರಡುವುದು. ನಿಂತುಕೊಳ್ಳುವುದು, ಕುಳಿತುಕೊಳ್ಳುವುದು, ವಿಹಾರ ಮಾಡುವುದು ಮೊದಲಾದ ಕ್ರಿಯೆಗಳು ಸಂಭವಿಸುತ್ತವೆ. ಈ ಪ್ರಕಾರ ಇಚ್ಛೆಯಿಲ್ಲದೆ ಕ್ರಿಯೆಗಳಾಗುವಲ್ಲಿ ಯಾವ ದೋಷವಿಲ್ಲವೆಂದು ತಿಳಿಯುವುದು. ಈ ಪ್ರಕಾರ ಭಗವಂತರ ವಿಹಾರವು ಆಕಾಶದಲ್ಲಿ ಆಗುತ್ತದೆ.

ಮುನಿ, ಆರ್ಯಿಕೆ, ಶ್ರಾವಕ, ಶ್ರಾವಿಕೆ - ಈ ನಾಲ್ಕು ಪ್ರಕಾರದ ಸಂಘದ ವಿಹಾರವು ವೀಥಿ(ಮಾರ್ಗ) ರೂಪದ ಭೂಮಿಯ ಮೇಲೆ ಆಗುತ್ತದೆ. ವಿಥಿಯ ಎರಡೂ ಕಡೆಯ ಪ್ರಾಕಾರದ ಒಂದು ಯೋಜನ ಉದ್ದ, ಅರ್ಧ ಯೋಜನ ಅಗಲ ರಸ್ತೆಯ ಸಮಾನ, ದೇವಗಳ ಮೂಲಕ ನಿರ್ಮಿಸಲಾದ, ಮಹಾಶೋಭಾಯಮಾನವಾದ, ರಮಣೀಯ, ನಿರ್ಮಲಸ್ಥಾನರೂಪದ ಬೀದಿಯಿದೆ. ದೇವಗಳು, ವಿದ್ಯಾಧರರು, ಚಾರಣ ಮುನಿಗಳು ಮತ್ತು ಸಾಮಾನ್ಯ ಕೇವಲಿಗಳು ಭಗವಂತರಿಂದ ತೀರ ಹತ್ತಿರವೂ ಅಲ್ಲ ಮತ್ತು ತುಂಬ ದೂರವೂ ಅಲ್ಲದೇ ಯಥಾಯೋಗ್ಯ ಅಂತರದಿಂದ ಆಕಾಶದಲ್ಲಿ ಗಮನ ಮಾಡುತ್ತಾರೆ. ಇಂದ್ರರಂತೂ ಭಕ್ತಿಪೂರ್ವಕ ಭಗವಂತರ ಹತ್ತಿರದಿಂದ ಸಾಗುತ್ತಿರುತ್ತಾರೆ. ಉಳಿದ ನಾಲ್ಕು ಪ್ರಕಾರದ ಸಾಮಾನ್ಯ ದೇವಗಳು ಅವರಿಂದ ದೂರದಲ್ಲಿ ನಡೆಯುತ್ತಿರುತ್ತಾರೆ. ಅವರೊಳಗಿನ ಕೆಲವು ದೇವಗಳು ಚಾಮರ ಢಾಳಿಸುತ್ತ ಸಾಗಿದರೆ ಕೆಲವು ದೇವಗಳು ಜಯ-ಜಯಕಾರದ ಶಬ್ದ ಮಾಡುತ್ತ ನಡೆಯುತ್ತಾರೆ. ಕೆಲವು ದೇವಗಳು ವೇತ್ರಧಾರಿಗಳಂತೆ ಕೈಯಲ್ಲಿ ರತ್ನದಂಡನ್ನು ತಗೆದುಕೊಂಡು ಅನ್ಯ ದೇವಗಳ ಕುರಿತಾಗಿ 'ನಡೆಯಿರಿ, ಮುಂದೆ ಸಾಗಿರಿ' ಎನ್ನುತ್ತ ಸಾಗುತ್ತಿರುತ್ತಾರೆ. ಅವರು ವಿನಯಪೂರ್ವಕ ದೇವಗಳ ಸಮೂಹವನ್ನು ವ್ಯವಸ್ಥಿತಗೊಳಿಸುತ್ತ ಇಲ್ಲಿ-ಅಲ್ಲಿ ಮಾಡುತ್ತ ನಡೆಯುತ್ತಾರೆ. ಕೆಲವು ದೇವಗಳು ಭಗವಂತರ ಸ್ತುತಿ ಮಾಡುತ್ತ ಸಾಗಿದರೆ ಕೆಲವು ದೇವಗಳು ವಂದನೆ, ನಮಸ್ಕಾರ-ಸ್ತುತಿ ಮಾಡುತ್ತ ಸಾಗುತ್ತಾರೆ. ಹರ್ಷ ಸಂಪನ್ನರಾಗಿ ಕೆಲವರು ಕೌತೂಹಲದೊಂದಿಗೆ ಸಾಗುತ್ತಾರೆ.

ಇದೇ ಪ್ರಕಾರ ಹರ್ಷಿತರಾದ ಮನುಷ್ಯ, ತಿರ್ಯಂಚಗಳು ಭೂಮಿಯ ಮೇಲೆ ನಡೆಯುತ್ತಿರುತ್ತಾರೆ. ಕೆಲವು ಭವ್ಯರು ಭಗವಂತರ ಕಡೆಗೆ ನೋಡುತ್ತ ಸಾಗುತ್ತಾರೆ. ಇತ್ಯಾದಿ ರೂಪದಿಂದ ಭಗವಂತರ ವಿಹಾರದ ಸಮಯದಲ್ಲಿ ಅನೇಕ ಶುಭ ಕಾರ್ಯಗಳು ಆಗುತ್ತಿರುತ್ತವೆ. ಸಮಸ್ತ ವ್ಯಾಖ್ಯಾನವಂತೂ ವಿಶೇಷ ಜ್ಞಾನಿಗಳಿಗೆ ಗಮ್ಯವಿದೆ. ಸಂಪೂರ್ಣ ಕಥೆ ಹೇಳುವ ಸಾಮರ್ಥ್ಯವು ನಮ್ಮದಿಲ್ಲ, ಹೀಗೆ ವಿಹಾರ ಕರ್ಮದ ಕಥನ ಮಾಡಲಾಯಿತು.

ವಿಹಾರದ ನಂತರ ಭಗವಂತರು ಎಲ್ಲಿ ಹೋಗಿ ವಿರಾಜಮಾನರಾಗುತ್ತಾರೆ, ಅಲ್ಲಿ ಇಂದ್ರಾದಿ ದೇವಗಳು ಪೂರ್ವೋಕ್ತ ಸಮವಸರಣದ ರಚನೆ ಮಾಡುತ್ತಾರೆ. ವಿಹಾರದ ನಂತರ ಅದರಲ್ಲಿ ವಿರಾಜಮಾನ ಭಗವಂತರಿಗೆ ನಮ್ಮ ನಮಸ್ಕಾರವಿರಲಿ. ಆ ಜಿನೇಂದ್ರದೇವರು ಈ ಗ್ರಂಥದ ಅಂತ್ಯಮಂಗಲ ಮಾಡಲಿ !

ಈ ಪ್ರಕಾರ ಶ್ರೀ ಸುದೃಷ್ಟಿತರಂಗಿಣಿಯೆಂಬ ಹೆಸರಿನ ಗ್ರಂಥದಲ್ಲಿ ಅಂತ್ಯಮಂಗಲದ ಸಲುವಾಗಿ
ಅರಹಂತ ದೇವರಿಗೆ ನಮಸ್ಕಾರಪೂರ್ವಕ ಸಮವಸರಣ ಕಥನ, ವಿಹಾರ ಕರ್ಮ ಕಥನ
ಮಾಡುವಂಥ ನಲವತ್ತನೆಯ ಪರ್ವವು ಸಂಪೂರ್ಣವಾಯಿತು.

★★★★★

## ೪೧ : ನಲವತ್ತೊಂದನೆಯ ಪರ್ವ
## ವಾದಿರಾಜ, ಮಾನತುಂಗಾಚಾರ್ಯರ ಚರಿತ್ರೆ

ಈಗ ಪುನಃ ಅಂತ್ಯಮಂಗಲದ ಸಲುವಾಗಿ ಭಗವಂತರ ಮಹಾಭಕ್ತ, ಸ್ತೋತ್ರಗಳ ಕರ್ತೃಗಳಾದ ಆಚಾರ್ಯರಿಗೆ ನಮಸ್ಕಾರ ಮಾಡುತ್ತಾರೆ. ಅಲ್ಲಿ ಮೊದಲಿಗೆ ಜಿನಧರ್ಮದ ಉದ್ಯೋತ ಮಾಡುವಲ್ಲಿ ಸೂರ್ಯನ ಸಮಾನ ಮಹಾತೇಜಸ್ವಿ, ಏಕೀಭಾವ ಸ್ತೋತ್ರದ ಕರ್ತೃಗಳಾದ ಶ್ರೀ ವಾದಿರಾಜ ಆಚಾರ್ಯರಿಗೆ ನಮಸ್ಕಾರವಿರಲಿ. ವಾದಿರಾಜ ಮುನಿರಾಜರಿಂದ ಏಕೀಭಾವ ಸ್ತೋತ್ರ ನಿರ್ಮಿಸುವ ಕಾರಣ ಹೇಳುತ್ತಾರೆ,-

ಕಾಮದೇವನ ಸಮಾನ ಸುಂದರರಾದ ಇವರು ಗೃಹಸ್ಥಾವಸ್ಥೆಯಲ್ಲಿ ಅನೇಕ ರಾಜ್ಯ ಭೋಗಗಳನ್ನು ಭೋಗಿಸಿ, ಸಂಸಾರ ಭೋಗಗಳಿಂದ ಉದಾಸರಾಗಿ, ರಾಜ್ಯಭಾರದ ತ್ಯಾಗ ಮಾಡಿ ಯತಿವ್ರತ ಧಾರಣ ಮಾಡಿದರು. ಪೂರ್ವಕರ್ಮದ ಉದಯದಿಂದ ಮಹಾವೀತರಾಗ ಪದದಧಾರಕರಾದ ಇವರ ಶರೀರದಲ್ಲಿ ಕುಷ್ಟರೋಗವಾಗಿ ಹೋಯಿತು. ಶರೀರದ ಪ್ರತಿಯೊಂದು ಅಂಗದಿಂದ ಇದು ಹೊರಗೆ ಬರುವುದರಿಂದ ಮಹಾದುರ್ಗಂಧವು ಉತ್ಪನ್ನವಾಗತೊಡಗಿತು. ಶರೀರದಿಂದ ನಿಸ್ಪೃಹಿಗಳೂ ಆತ್ಮನ ರಸದಲ್ಲಿ ರಮಿಸುವಂಥವರೂ, ಮೊದಲಿನಿಂದಲೇ ಶರೀರವನ್ನು ಪೌದ್ಗಲಿಕ ಸಪ್ತಧಾತುಗಳ ಪಿಂಡವೆಂದು ತಿಳಿಯುವಂಥ ವೀತರಾಗೀ ಯೋಗೀಶ್ವರರು ಶರೀರದ ಉಪಚಾರದ ಇಚ್ಛೆಯನ್ನು ಸ್ವಲ್ಪವೂ ಮಾಡಲಿಲ್ಲ.

ವಿಹಾರ ಮಾಡುತ್ತ-ಮಾಡುತ್ತ ಒಂದು ಸಲ ಅವರು ನಗರದ ಉಪವನದಲ್ಲಿ ಬಂದು ವಿರಾಜಮಾನರಾದರು. ಆಹಾರದ ಸಲುವಾಗಿ ಗ್ರಾಮದಲ್ಲಿ ಹೋದಮೇಲೆ ನಿರ್ವಿಚಿಕಿತ್ಸಾಗುಣಧಾರಕ, ನಗರದ ಮಹಾಧರ್ಮಾತ್ಮಾ ಶ್ರಾವಕನು ಯತಿಗಳ ಸಲುವಾಗಿ ನವಧಾ ಭಕ್ತಿಪೂರ್ವಕ ಹರ್ಷಿತನಾಗಿ ದಾನವಿತ್ತು ತನ್ನ ಭವ ಸಫಲವೆಂದು ಮನ್ನಿಸುತ್ತಿದ್ದನು. ಈ ಪ್ರಕಾರ ವನದಲ್ಲಿರುತ್ತ ಕೆಲವು ದಿನ ಕಳೆದು ಹೋದವು. ದೊರೆಯ ಮಂತ್ರಿ ಓರ್ವ ಧರ್ಮಾತ್ಮಾ ಶ್ರೇಷ್ಠಿಯು ದಿನ ನಿತ್ಯವೂ ವನದೊಳಗೆ ಹೋಗಿ ವಾದಿರಾಜ ಮುನಿಗಳ ದರ್ಶನ ಮಾಡಿ ಅವರಿಂದ ಧರ್ಮಶ್ರವಣ ಮಾಡಿ ನಂತರ ದೊರೆಯ ಆಸ್ಥಾನಕ್ಕೆ ಬರುತ್ತಿದ್ದನು.

ಈ ಶ್ರೇಷ್ಠಿಯೊಂದಿಗೆ ದ್ವೇಷಭಾವವಿಟ್ಟುಕೊಂಡಿರುವ ಯಾವನೋ ಪಾಪೀ ಪುರುಷನು ದೊರೆಯ ಹತ್ತಿರ ಹೋಗಿ 'ಓ ರಾಜನ್ ! ಈ ಶ್ರೇಷ್ಠಿಯ ಗುರುಗಳು ಕುಷ್ಠರೋಗಿಯಿದ್ದಾರೆ. ಇವನು ನಿತ್ಯವೂ ಮೊದಲು ಆ ಕುಷ್ಠ ರೋಗಿಯ ದರ್ಶನ ಮಾಡಿ, ಅವನ ಮುಖದಿಂದ ಧರ್ಮವನ್ನಾಲಿಸಿ ನಂತರ ತಮ್ಮ ಆಸ್ಥಾನಕ್ಕೆ ಬರುತ್ತಾನೆ. ಈತನ ಆ ಮಹಾಕುಷ್ಠರೋಗಿ ಗುರುವಿನಿಂದ ದುರ್ಗಂಧವು ಹೊರಡುತ್ತಿರುವ ಕಾರಣ ಅವರ ಹತ್ತಿರ ಯಾರೂ ನಿಂತುಕೊಳ್ಳುವ ಸಾಧ್ಯತೆಯಿಲ್ಲ. ಇವನ ಈ ಪ್ರವೃತ್ತಿಯು ಯೋಗ್ಯವಾಗಿಲ್ಲ'ವೆಂದು ಹೇಳುತ್ತಾನೆ. ಆಗ ದೊರೆಯು - 'ಈ ಮಾತು ಅಸತ್ಯವಿದೆ. ಈ ಶ್ರೇಷ್ಠಿಯು ಇಂಥ ಅವಿನಯ ರೂಪದ ಅಪಚಾರ ನಮ್ಮೊಂದಿಗೆ ಮಾಡುವ ಸಾಧ್ಯತೆಯಿಲ್ಲ'ವೆಂದು ಹೇಳಿದಾಗ ಆ ಚಾಡಿಖೋರನು 'ಇದು ಒಂದುವೇಳೆ ಅಸತ್ಯವಿದ್ದರೆ ಅಪರಾಧಿಗೆ ನೀಡುವ ದಂಡನೆ ನನಗೆ ನೀಡಿರೆ'ಂದು ಹೇಳುತ್ತಾನೆ.

ಮರುದಿನ ದೊರೆಯು ಶ್ರೇಷ್ಠಿಯನ್ನು ಉದ್ದೇಶಿಸಿ - ಎಲೈ ಶ್ರೇಷ್ಠಿಗಳೇ ! ನಿಮ್ಮ ಗುರುಗಳು ಕುಷ್ಠರೋಗಿಯಿದ್ದಾರೇನು ? ಎಂದಾಗ, ಶ್ರೇಷ್ಠಿಯು ಸರಿಯಾದ ಉತ್ತರವನ್ನು ಗುರುಗಳ ಕುರಿತಾಗಿ ಅವಿನಯ ತುಂಬಿದ ವಚನವೆಂದು ತಿಳಿದು, 'ಓ ಸ್ವಾಮಿ ! ಹೇಳುವಂಥವರು ಅಸತ್ಯ ಹೇಳಿದ್ದಾರೆ, ನಮ್ಮ ಗುರುಗಳು ಶುದ್ಧರಿದ್ದಾರೆ'ಂದು ಹೇಳುತ್ತಾನೆ. ಆಗ ದೊರೆಯು 'ಒಂದುವೇಳೆ ನಿನ್ನ ಗುರುಗಳು ಶುದ್ಧರಿದ್ದರೆ ನಾಳೆ ಬೆಳಗು ಮುಂಜಾನೆ ನಾವು ಅವರ ದರ್ಶನಕ್ಕೆ ಹೊರಡೋಣ'ವೆಂದು ಹೇಳುತ್ತಾನೆ.

ದೊರೆಯ ಈ ವಚನವನ್ನಾಲಿಸಿ ಶ್ರೇಷ್ಠಿಗೆ ಚಿಂತೆಯಾಯಿತು-ನಾನು ಗುರುಗಳ ಕುರಿತಾಗಿ ವಿನಯಶೀಲತೆಯ

ಕಾರಣ ದೊರೆಗಳಿಗೆ ಅಸತ್ಯ ಹೇಳಿದೆನು. ನನ್ನ ಬಾಯಿಂದ ನನ್ನ ಗುರುವಿಗೆ ಕುಷ್ಠವಿದೆಯೆಂಬ ಅಯೋಗ್ಯ ವಚನವನ್ನು ಹೇಗೆ ಹೇಳಬಹುದಾಗಿದೆ ? ಅದರಿಂದ ಅಸತ್ಯವನ್ನಾಡಿದೆನು. ದೊರೆಯು ನಾಳೆ ಬಂದು ನನ್ನ ಗುರುವಿನ ಶರೀರವು ರೋಗಸಹಿತವಿರುವುದನ್ನು ನೋಡಿದರೆ ಈ ಪಾಪಿಯು ಗುರುಗಳಿಗೆ ಯಾವ ಉಪದ್ರವ ಮಾಡುತ್ತಾನೋ ಏನೋ! ನನ್ನದು ಮರಣವಾಗಿ ಹೋದರೂ ಚಿಂತೆಯಿಲ್ಲ; ಆದರೆ ನನ್ನ ಅಸತ್ಯ ವಚನದಿಂದ ಗುರುಗಳಿಗೆ ಯಾವುದೇ ಉಪಸರ್ಗವಾಗದಿರಲಿ. ಇತ್ಯಾದಿ ಪ್ರಕಾರದಿಂದ ಮಹಾ ಚಿಂತೆಗೊಳಗಾದ ಶ್ರೇಷ್ಠಿಯು ಕೂಡಲೇ ಹೊರಟು ಗುರುವಿನ ಹತ್ತಿರ ವನಕ್ಕೆ ಬರುತ್ತಾನೆ.

ಜ್ಞಾನಭಂಡಾರ ಸಂಪನ್ನ ಮುನೀಶ್ವರರು ಅವನನ್ನು ನೋಡಿ, ವತ್ಸ ! ನಿನ್ನ ಮುಖದಲ್ಲಿ ಚಿಂತೆಯೇಕೆ ಆವರಿಸಿದೆ ಯಾವ ಕಾರಣದಿಂದ ಉದಾಸನಿರುವೆ ? ಅಲ್ಲದೆ ಪ್ರಭಾತ ಕಾಲದಲ್ಲಿ ಬಂದು ಹೋಗಿರುವ ನೀನು ಪುನಃ ಇಲ್ಲಿಗೆ ಬಂದಿರುವ ಕಾರಣವಾದರೂ ಏನು ? - ಎಂದು ಕೇಳಿದಾಗ, ಶ್ರೇಷ್ಠಿಯು ರಾಜಾಲಯದಲ್ಲಿ ನಡೆದುದೆಲ್ಲವನ್ನು ತಿಳಿಸಿ, ನಾಳೆ ದೊರೆ ಬರುವ ಸಮಾಚಾರವನ್ನೂ ಹೇಳಿದನು. ಆತಂಕ ತುಂಬಿದ ಸ್ವರದಿಂದ - ಪ್ರಭು ! ಈ ದೊರೆಯು ಮಹಾಕ್ರೂರ ಸ್ವಭಾವದವನಿದ್ದಾನೆ. ನನ್ನನ್ನು ದಂಡಿಸುವನು, ಅದರಲ್ಲಿ ನನಗೆ ಯಾವುದೇ ಕಷ್ಟವಿಲ್ಲ. ನನ್ನನ್ನು ಸಾಯಿಸಿದರೂ ಸಾಯಿಸಲಿ; ಆದರೆ ತಾವು ಇಲ್ಲಿಂದ ವಿಹಾರ ಬೆಳೆಸಿದರೆ ಒಳ್ಳೆಯದು, ಇಲ್ಲದಿದ್ದರೆ ಅವನು ತಮಗೆ ಉಪಸರ್ಗ ಮಾಡುವನು. ಪಾಪಿಯಾದ ನನ್ನ ನಿಮಿತ್ತದಿಂದ ಪ್ರಭು ! ತಮಗೆ ಉಪಸರ್ಗವಾಗುವುದು.

ಇತ್ಯಾದಿ ರೂಪದಿಂದ ಶ್ರೇಷ್ಠಿಯು ಭಯಭೀತ ಹಾಗೂ ತನ್ನ ಆಲೋಚನಾರೂಪ ವಚನಗಳನ್ನಾಡುತ್ತಿರುವುದನ್ನು ಕಂಡು, ಮುನೀಶ್ವರರು ಕರುಣೆಯ ರಸದಿಂದ ನೆನೆದು ಧರ್ಮದ ಪ್ರಭಾವನೆ ಮಾಡುವ ಸಲುವಾಗಿ - 'ಎಲೈ ವತ್ಸ ! ಎಲೈ ಆರ್ಯನೇ ! ಭಯಪಡಬೇಡ. ದೊರೆಯು ದರ್ಶನದ ಸಲುವಾಗಿ ಬರುತ್ತಿದ್ದರೆ ಬರಲಿ' ಎನ್ನುತ್ತಾರೆ.

ಗುರುಗಳ ಈ ವಚನವನ್ನಾಲಿಸಿ 'ಜಗತ್ತಿನ ಒಡೆಯರಾದ ನನ್ನ ಗುರುಗಳು ನನಗೆ ಅಭಯದಾನ ನೀಡಿದರು ಅದರಿಂದ ಇನ್ನು ನನಗೆ ಭಯವಿಲ್ಲ'ವೆಂದು ಮನ್ನಿಸಿ ಶ್ರೇಷ್ಠಿಯ ಮನವು ಹರ್ಷಿತವಾಯಿತು. ಶ್ರೇಷ್ಠಿಯು ವಿಚಾರ ಮಾಡುತ್ತ - ಗುರುಗಳ ಶರೀರದಲ್ಲಿ ರೋಗವು ಪ್ರತ್ಯಕ್ಷ ವಿದ್ಯಮಾನವಿದ್ದರೂ ಗುರುಗಳು ನನಗೆ ಅಭಯದಾನ ನೀಡಿದ್ದಾರೆಂಬುದು ಆಶ್ಚರ್ಯಕಾರಕವಾದ ಮಾತಿದ್ದರೂ ವೀತರಾಗೀ ಗುರುಗಳ ಆಜ್ಞೆಯು ಅಖಂಡವಿರುತ್ತದೆ. ಸುಮೇರು ಪರ್ವತವು ಚಲಾಯಮಾನವಾಗಿ ಹೋದರೂ ಗುರುಗಳ ವಚನವು ಅನ್ಯಥಾವಾಗುವುದಿಲ್ಲ' ಗುರುಗಳು ನನಗೆ ಭಯಪಡಬೇಡವೆಂದು ಹೇಳಿದ್ದಾರೆ; ಅದರಿಂದ ನನಗೆ ಭಯವಿಲ್ಲ. - ಹೀಗೆ ವಿಚಾರದಲ್ಲಿ ನಿಶ್ಚಯ ಮಾಡುತ್ತ ಶ್ರೇಷ್ಠಿಯು ತನ್ನ ಮನೆ ತಲುಪಿದನು.

ಯತೀಶ್ವರರು ಮನ, ವಚನ, ಕಾಯದ ಏಕತೆಯೊಂದಿಗೆ ಶುಭೋಪಯೋಗದ ಮೂಲಕ ಜಿನದೇವರ ಗುಣಾನುವಾದ ಮಾಡುತ್ತ ಇಪ್ಪತ್ನಾಲ್ಕು ಕಾವ್ಯ(ಶ್ಲೋಕ)ಗಳಲ್ಲಿ ಭಗವಂತರ ಸ್ತುತಿ ಮಾಡಿದರು. ಸ್ತುತಿಯ ಪ್ರಭಾವದಿಂದ ಅಂತಿಮ ಕಾವ್ಯವು ಪೂರ್ಣವಾಗುತ್ತಿರುವಂತೆ ಯತಿರಾಜರ ಶರೀರದ ಸಮಸ್ತ ರೋಗವು ನಷ್ಟವಾಗಿ ಹೋಯಿತು. ದೇಹ ಕಾಂತಿಯೂ ಸೂರ್ಯನ ಪ್ರಕಾಶದಂತೆ ಪ್ರಕಟವಾಯಿತು. ದೊರೆಯ ಪ್ರತೀತಿಯ ಸಲುವಾಗಿ ಮುನಿರಾಜರು ಎಡಗೈಯ ಕಿರು ಬೆರಳಿನ ತುದಿಯನ್ನು ರೋಗ ಸಹಿತವಾಗಿ ಇರಿಸಿಕೊಂಡರು. ಉಳಿದ ಸಂಪೂರ್ಣ ದೇಹವು ಕಂಚನ ವರ್ಣದ್ದಾಯಿತು.

ಪ್ರಭಾತ ಸಮಯದಲ್ಲಿ ಚತುರಂಗ ಸೇನೆಯುಕ್ತ ಮಹಾದಲದ ಜತೆ ದರ್ಶನದ ಸಲುವಾಗಿ ಬಂದಿರುವ ದೊರೆಯ ಕಾರಣ ಮತ್ತು ಸಂಪೂರ್ಣ ನಗರಕ್ಕೆ ಯತಿರಾಜರ ಶರೀರದ ರೋಗವು ಜ್ಞಾತವಾಗಿರುವುದರಿಂದ ಕುತೂಹಲವಶರಾಗಿ ನಗರವಾಸಿಗಳೆಲ್ಲರೂ ಬಂದು ಸೇರುವುದರಿಂದ ವನದ ತುಂಬೆಲ್ಲ ಮನುಷ್ಯ ಸಮೂಹವೇ ಹರಡಿಕೊಂಡಿತ್ತು. ದೊರೆಯು ವಾಹನದಿಂದ ಇಳಿದು ಮುನಿ ದರ್ಶನದ ಸಲುವಾಗಿ ಯತೀಶ್ವರರ ಹತ್ತಿರ ಬರುತ್ತಾನೆ. ಶರದ ಋತುವಿನ ಪೌರ್ಣಿಮೆಯ ಚಂದಿರನ ಸಮಾನ ನಿರ್ಮಲ ಕಾಂತಿಯ ಧಾರಕರೂ, ಶಾಂತಿಯ ಸಾಗರರೂ

ಆಗಿರುವ ವೀತರಾಗೀ ಯೋಗೀಶ್ವರರನ್ನು ಹಾಗೂ ಅವರ ದೇಹದ ದೀಪ್ತಿಯನ್ನು ಕಂಡು ವಿಸ್ಮಯಕ್ಕೆ ಪ್ರಾಪ್ತನಾದ ಆ ದೊರೆಯು ಅನೇಕ ಪ್ರಕಾರದಿಂದ ಮುನಿರಾಜರ ಸ್ತುತಿ ಮಾಡುತ್ತ ಅವರಿಗೆ ದೂರದಿಂದಲೇ ನಮಸ್ಕಾರ ಮಾಡಿದನು.

ಅದರ ನಂತರ ಚಾಡಿ ಹೇಳುವಂಥವನ ಕುರಿತು ಕ್ರೋಧಿತನಾಗಿ ಅವನನ್ನು ದಂಡಿಸುವ ವಿಚಾರ ಮಾಡುತ್ತಿರುವಂಥ ದೊರೆಯ ಮನದ ಅಭಿಪ್ರಾಯವನ್ನು ತಿಳಿದು ಯತೀಂದ್ರರು ದೊರೆಯನ್ನುದ್ದೇಶಿಸಿ, ನೃಪೇಂದ್ರನೇ! ಕ್ರೋಧ ಮಾಡಬೇಡ. ಅವನು ಅಸತ್ಯ ಹೇಳಿರಲಿಲ್ಲ, ನಮ್ಮ ಶರೀರವು ಕುಷ್ಠರೋಗ ಸಹಿತವಿತ್ತು; ಆದರೆ ಈ ಶ್ರೇಷ್ಠಿಯು ಅವಿನಯದ ಭಯದಿಂದ ಆ ರೋಗದ ಹೆಸರು ಎತ್ತಲಿಲ್ಲ. ಈತನ ಭಯದ ನಿವಾರಣೆ ಮಾಡುವ ಸಲುವಾಗಿ, ಪ್ರಭುವಿನ ಭಕ್ತಿಯ ಪ್ರಸಾದದಿಂದ ಶರೀರವು ಶುದ್ಧವಾಯಿತು.

ವಾಸ್ತವದಲ್ಲಿಯಂತೂ ಈ ಶರೀರವು ಮಹಾ ಅಶುಚಿ, ಸಪ್ತ ಧಾತುಗಳ ಪಿಂಡವಿದ್ದು ಗ್ಲಾನಿಯ ಸ್ಥಾನವಿರುವುದರಿಂದ ಯತಿಗಳು ಇದರ ಕುರಿತು ನಿಸ್ಪೃಹರಿರುತ್ತಾರೆ; ಆದರೆ ಶ್ರೇಷ್ಠಿಯ ಧರ್ಮಾನುರಾಗವಶ ಈ ಕಾರ್ಯ ಮಾಡಲಾಯಿತು. ತಮ್ಮ ಎಡಗೈ ಬೆರಳು ರೋಗ ಸಹಿತವಿರುವುದನ್ನು ದೊರೆಗೆ ತೋರಿಸುತ್ತ ಅವರು ಹೇಳುತ್ತಾರೆ ನರೇಂದ್ರನೇ ! ಈ ಬೆರಳಿನ ಹಾಗೆ ಇಡೀ ಶರೀರವಿತ್ತು; ಆದರೆ ಧರ್ಮದ ಪ್ರಸಾದದಿಂದ, ಪ್ರಭುವಿನ ಭಕ್ತಿಯ ಪ್ರಸಾದದಿಂದ ಈ ತನುವು ಶುದ್ಧವಾಗಿದೆ. ಅದಕ್ಕಾಗಿ ನೀನು ಕ್ರೋಧ ಮಾಡಬೇಡ. ಅವನು ಸತ್ಯವನ್ನೇ ಹೇಳಿದ್ದನು.

ಮುನಿರಾಜರ ವಚನಗಳನ್ನಾಲಿಸಿ ಆಶ್ಚರ್ಯಕ್ಕೆ ಪ್ರಾಪ್ತನಾದ ದೊರೆಯು ಮಿಥ್ಯಾಬುದ್ಧಿಯನ್ನು ಬಿಟ್ಟುಕೊಟ್ಟು ಶುದ್ಧ ಧರ್ಮದ ಧಾರಕನಾಗಿ ಮತ್ತೆ-ಮತ್ತೆ ಸರ್ವಜ್ಞರ ಧರ್ಮದ ಪ್ರಶಂಸೆ ಮಾಡತೊಡಗಿದನು. ಸಮಸ್ತ ಜನರು ಕೂಡ ಈ ಅತಿಶಯವನ್ನು ಕಂಡು ಮಿಥ್ಯಾಭಾವ ತೊರೆದು ಶುದ್ಧ ಧರ್ಮದ ಧಾರಕರಾಗಿ ಶ್ರೀ ವಾದಿರಾಜ ಮುನಿರಾಜರ ಸ್ತುತಿ ಮಾಡತೊಡಗಿದರು. ವಾದಿರಾಜ ಯೋಗೀಶ್ವರರಿಂದ ಮಾಡಲಾದ ಏಕೀಭಾವ ಸ್ತೋತ್ರವನ್ನು ಅನೇಕ ಭವ್ಯರು ಮಂಗಲದ ಸಲುವಾಗಿ ಓದುತ್ತಾರೆ, ಆಲಿಸುತ್ತಾರೆ.

ಆ ಏಕೀಭಾವಸ್ತೋತ್ರ ಮತ್ತು ಅದರ ಕರ್ತೃ ಜಗದ್ಗುರು ಶ್ರೀ ವಾದಿರಾಜ ಮುನೀಶ್ವರರು ಈ ಗ್ರಂಥದ ಕೊನೆಯಲ್ಲಿ ಈ ಗ್ರಂಥದ ಕರ್ತೃವಿನ ಹಾಗೂ ಈ ಗ್ರಂಥವನ್ನು ಓದುವಂಥವರ ಮಂಗಲ ಮಾಡಲಿ. ಈ ಪ್ರಕಾರ ಶ್ರೀ ವಾದಿರಾಜರೆಂಬ ಹೆಸರಿನ ಆಚಾರ್ಯದೇವರಿಗೆ ನಮಸ್ಕಾರ ಮಾಡಿ ಅಂತ್ಯಮಂಗಲದಲ್ಲಿ ಅವರ ಗುಣಗಳ ಸ್ಮರಣೆ ಮಾಡಲಾಯಿತು.

ಈ ಗ್ರಂಥದ ಅಂತ್ಯಮಂಗಲ ಮಾಡುತ್ತ ಶ್ರೀ ಭಕ್ತಾಮರ ಸ್ತೋತ್ರದ ಕರ್ತೃ ಶ್ರೀ ಮಾನತುಂಗಾಚಾರ್ಯರಿಗೆ ನಮಸ್ಕಾರ ಮಾಡುತ್ತಾರೆ. ಜಿನಧರ್ಮದ ಪ್ರಕಾಶವನ್ನುಂಟು ಮಾಡುವಲ್ಲಿ ಸೂರ್ಯನ ಸಮಾನ, ಮಿಥ್ಯಾ ಸಂದೇಹಮಯ ಶಿಖರವನ್ನು ನಷ್ಟಮಾಡುವಲ್ಲಿ ಇಂದ್ರನ ವಜ್ರದ ಸಮಾನ, ಪ್ರತ್ಯಕ್ಷ ಭಗವಂತ ದೇವರ ಮಹಾಭಕ್ತ; ಕುನಯರೂಪ ತರಂಗಗಳಿಂದ ಕೂಡಿದ, ಜ್ಞಾನರೂಪದ ಜೀರ್ಣ ವೃಕ್ಷವನ್ನು ಕೀಳುವಂಥ, ಸ್ವೇಚ್ಛೆಯಿಂದ ವೇಗ ಧಾರಣ ಮಾಡುವಂಥ, ಕುವಾದಿಗಳ ಅತತ್ತ್ವಶ್ರದ್ಧೆಯ ರೂಪದ ತರಂಗಿಣಿ- ನದಿಯನ್ನು ತಡೆಯುವ ಸಲುವಾಗಿ ಕುಲಾಚಲ-ಶಿಖರದ ಸಮಾನ; ಭಕ್ತಾಮರ ಸ್ತೋತ್ರದ ರಚನೆಯಿಂದ ಪ್ರಗಟರೂಪದಲ್ಲಿ ಕೀರ್ತಿ ಪಡೆದಿರುವ ಮಾನತುಂಗ ಗುರುವಿಗೆ ನಮಸ್ಕಾರವಿರಲಿ.

ಭಕ್ತಾಮರ ಸ್ತೋತ್ರ ನಿರ್ಮಾಣದ ಕಥೆ – ಉಜ್ಜೈನೀ ನಗರದ ಮಹಾಪ್ರತಾಪೀ ದೊರೆ ರಾಜಸಿಂಹನ ಮಹಾಸತಿ ಶಚಿದೇವಿಯಂಥ ರೂಪವತಿ ರತ್ನಾವಳಿ ಅರಸಿಗೆ ಪುತ್ರನಿಲ್ಲದಿರುವ ಕಾರಣ ದೊರೆಯು ಯಾವಾಗಲೂ ಚಿಂತೆಯಲ್ಲಿರುತ್ತಿದ್ದನು. ಒಂದು ಸಲ ಮಂತ್ರಿಯು ದೊರೆಗೆ ಹೇಳುತ್ತಾನೆ. ಓ ಪ್ರಭು ! ಧರ್ಮದ ಪ್ರಸಾದದಿಂದ ಏನೆಲ್ಲವೂ ಸಾಧ್ಯವಿದೆ; ಆದುದರಿಂದ ಧರ್ಮದ ಸೇವನೆ ಮಾಡಿರಿ. ಒಂದು ದಿನ ಪರಿವಾರ ಸಹಿತ ವನದೊಳಗೆ ಹೋಗುವಾಗ, ಒಂದು ಸರೋವರದ ದಂಡೆಯ ಮೇಲೆ ಮುಂಜವೃಕ್ಷದ ಕೆಳಗೆ ಮೆತ್ತನೆಯ ಹುಲ್ಲಿನ ಮೇಲೆ ಒಂದು

ಶಿಶುವನ್ನು ಮಲಗಿಸಿರುವುದನ್ನು ದೊರೆಯು ನೋಡುತ್ತಾನೆ. ಕೂಡಲೇ ಮಗುವನ್ನು ಎತ್ತಿಕೊಂಡು ಮುಂಜಕುಮಾರನೆಂದು ಹೆಸರನ್ನಿಟ್ಟು ಅರಸಿಯ ಕೈಗೆ ಕೊಡುತ್ತಾನೆ. ಆ ಬಾಲಕನು ತನ್ನ ರೂಪು ಗುಣಗಳೊಡನೆ ಬೆಳೆಯತೊಡಗಿದನು.

ಕೆಲವೇ ದಿನಗಳುರುಳಿದ ಮೇಲೆ ರತ್ನಾವಳಿ ರಾಣಿಗೂ ಗರ್ಭಧಾರಣೆಯಾಗುತ್ತದೆ. ನವಮಾಸಗಳು ಪೂರ್ಣವಾದ ಮೇಲೆ ಪುತ್ರನು ಉತ್ಪನ್ನನಾದನು. ಆತನಿಗೆ ಸಿಂಹಳಕುಮಾರನೆಂದು ನಾಮಕರಣ ಮಾಡಲಾಯಿತು. ಕ್ರಮದಿಂದ ಬೆಳೆಯುತ್ತ ಬಾಲಕನು ಯೌವನಾವಸ್ಥೆಗೆ ತಲುಪುತ್ತಾನೆ. ಆಗ ದೊರೆಯು ಆ ಸಿಂಹಳಕುಮಾರನ ವಿವಾಹವನ್ನು ಶುಭನೆಂಬ ದೊರೆಯ ಪುತ್ರಿಯರೊಡನೆ ಮಾಡುತ್ತಾನೆ. ಅವರೊಳಗಿನ ಮೃಗಾವತಿಯೆಂಬ ಹೆಸರಿನ ಅರಸಿಯ ಗರ್ಭದಿಂದ ಅವನಿಗೆ ಯುಗಲ ಪುತ್ರರಾಗುತ್ತಾರೆ. ಅವರೊಳಗಿನ ಹಿರಿಯ ಕುಮಾರನಿಗೆ ಶುಭಚಂದ್ರ ಮತ್ತು ಕಿರಿಯವನಿಗೆ ಭರ್ತೃಹರಿಯೆಂದು ನಾಮಕರಣ ಮಾಡಲಾಯಿತು. ಅವರಿಬ್ಬರೂ ರಾಜಕುಮಾರರು ಕ್ರಮದಿಂದ ಚತುರರಾಗಿ ಅನೇಕ ವಿದ್ಯೆಗಳಲ್ಲಿ ಪ್ರವೀಣರಾದರು.

ಸಂಸಾರದಿಂದ ಉದಾಸನಾಗಿ ದೊರೆ ರಾಜಸಿಂಹನು ಒಂದು ದಿನ ಮುಂಜನಿಗೆ ರಾಜ್ಯಪದವಿತ್ತು ಸಿಂಹಳನಿಗೆ ಯುವರಾಜ ಪದವಿತ್ತು ಸ್ವಯಂ ಯತಿಪದ ಧಾರಣ ಮಾಡಿ ಆತ್ಮಕಲ್ಯಾಣ ಮಾಡಿಕೊಂಡನು.

ರಾಜ್ಯ ನಡೆಸಿಕೊಂಡು ಹೋಗುತ್ತಿರುವಾಗ, ದೊರೆ ಮುಂಜನು ಒಂದು ದಿವಸ ವನಕ್ರೀಡೆಯಿಂದ ಮರಳಿ ಬರುವಾಗ ಒಂದು ಮಂದಿರದ ದ್ವಾರದಲ್ಲಿ ಕುದಾಲವೆಂಬ ಹೆಸರಿನ ವಿದ್ಯೆಯ ಸಿದ್ಧಿ ಮಾಡುತ್ತಿರುವಂಥ ಒಬ್ಬ ಗಾಣಿಗನು ಹೇಳುವುದೇನೆಂದರೆ - ಓ ದೊರೆಗಳೇ ! ನನಗೆ ವಿದ್ಯೆಯು ಸಿದ್ಧವಾಗಿ ಹೋಗಿರುವುದರಿಂದ ನನ್ನ ಸಮಾನ ಬಲಶಾಲಿಗಳು ಈ ಪೃಥ್ವಿಯ ಮೇಲೆ ಬೇರೆ ಯಾರೂ ಇಲ್ಲವೆನ್ನುತ್ತಾನೆ, ಆಗ ದೊರೆಯು ನಿನ್ನಂಥ ನೀಚ ಕುಲದವರಿಗೆ ವಿದ್ಯೆಯ ಬಲವು ಅಷ್ಟು ಇರುವ ಸಾಧ್ಯತೆಯೇ ಇಲ್ಲವೆಂದು ಹೇಳುತ್ತಾನೆ. ಅದಕ್ಕೆ ಗಾಣಿಗನು ತನ್ನ ಎರಡೂ ಕೈಗಳಿಂದ ಭಾರ ಹಾಕಿ ವಿದ್ಯೆಯ ಕುದಾಲ(ಗುದ್ದಲಿ)ವನ್ನು ಭೂಮಿಯಲ್ಲಿ ಹೂಳಿ, ಯಾವನಾದರೂ ಯೋಧನಿದ್ದರೆ ಈ ಗುದ್ದಲಿಯನ್ನು ಹೊರಗೆ ತಗೆದು ತೋರಿಸಬಹುದಾಗಿದೆ-ಎನ್ನುತ್ತಾನೆ. ದೊರೆಯು ಸಾಮಂತರಿಗೆ ಅದನ್ನು ಹೊರತಗೆಯುವಂತೆ ಹೇಳುತ್ತಾನೆ. ಆಗ ಎಲ್ಲ ಸಾಮಂತರು, ದೊಡ್ಡ-ದೊಡ್ಡ ಜಟ್ಟಿಗಳು ತಮ್ಮ ಸಂಪೂರ್ಣ ಶಕ್ತಿ ತೊಡಗಿಸಿದರೂ ಆ ಗುದ್ದಲಿಯನ್ನು ಹೊರತಗೆಯಲಾಗಲಿಲ್ಲ; ಆದರೆ ಯುವರಾಜ ಸಿಂಹಳನು ಒಂದು ಕೈಯಿಂದಲೇ ಅದನ್ನು ಮೇಲೆತ್ತಿದನು - ಹೊರಗೆ ತಗೆದನು.

ನಂತರ ದೊರೆ ಸಿಂಹಳನು ಒಂದು ಕೈಯಿಂದ ಗುದ್ದಲಿಯನ್ನು ನೆಲದಲ್ಲಿ ಹೂಳಿ, ಇದನ್ನು ಮೇಲೆತ್ತಿರಿ ನೋಡೋಣ ಎನ್ನುತ್ತಾನೆ. ಆಗ ಗಾಣಿಗನು ತನ್ನ ವಿದ್ಯೆಯ ಬಲದಿಂದಲೂ ಅದನ್ನು ಹೊರಗೆ ತಗೆಯುವುದು ಸಾಧ್ಯವಾಗಲಿಲ್ಲ. ದೊರೆಯ ಜಟ್ಟಿಗಳು, ಸುಭಟರು ಸೋತು ಹೋದರು; ಆದರೆ ಅದು ಅಲ್ಲಾಡಲಿಲ್ಲ. ಅಷ್ಟರಲ್ಲಿ ದೊರೆ ಸಿಂಹಳನ ಇಬ್ಬರೂ ಪುತ್ರರು ಅಲ್ಲಿಗೆ ಬಂದು ಪ್ರಭು ! ಇದನ್ನು ಹೊರಗೆ ತಗೆಯುವ ಸಲುವಾಗಿ ನಮಗೆ ಅನುಮತಿ ನೀಡಿರಿ - ಎಂದಾಗ, ದೊರೆಯು ನಸುನಗುತ್ತ ಮಕ್ಕಳೇ ! ಇಲ್ಲಿ ನಿಮ್ಮ ಕೆಲಸವೇನೂ ಇಲ್ಲ. ನೀವು ನಿಮ್ಮ ಸಮಾನ ಬಾಲಕರೊಂದಿಗೆ ಆಟವಾಡಿರಿ. ಎನ್ನುತ್ತಾನೆ. ಆಗ ಕುಮಾರರಿಬ್ಬರೂ. 'ಓ ಸ್ವಾಮೀ ! ಆ ಗುದ್ದಲಿಗೆ ಕೈ ಹಚ್ಚದೇ ಅದನ್ನು ಹೊರಗೆ ತಗೆದರೆ ನಮ್ಮನ್ನು ತಮ್ಮ ಪುತ್ರರೆಂದು ತಿಳಿಯಿರಿ' - ಈ ಪ್ರಕಾರ ಹಟ ಮಾಡಿ ತಮ್ಮ ತಂದೆಯವರಿಂದ ಆಜ್ಞೆ ಪಡೆದು ತಮ್ಮ ತಲೆಗೂದಲನ್ನು ಗುದ್ದಲಿಗೆ ಕಟ್ಟಿ ಅದನ್ನು ಎಳೆದು, ಒಮ್ಮೆಲೇ ಎತ್ತಿ ಹೊರಗೆ ತಗೆಯುತ್ತಾರೆ.

ಅವರುಗಳ ಪೌರುಷವನ್ನು ಕಂಡು ದೊರೆ ಮುಂಜನು - ಇವರ ವಿದ್ಯಮಾನತೆಯಲ್ಲಿ ನನ್ನ ರಾಜ್ಯವು ಉಳಿಯುವ ಸಾಧ್ಯತೆಯಿಲ್ಲ; ಅದಕ್ಕಾಗಿ ಇವರನ್ನು ಸಾಯಿಸಿ ಬಿಡಬೇಕೆಂದು ತನ್ನ ಮಂತ್ರಿಗಳಿಗೆ ಹೇಳುತ್ತಾನೆ.

ಆಗ ಯಾವನೋ ಮಂತ್ರಿಯು ಕುಮಾರನನ್ನು ಉದ್ದೇಶಿಸಿ - ನಿಮ್ಮ ದೊಡ್ಡಪ್ಪನು ನಿಮ್ಮನ್ನು ಸಾಯಿಸ ಬಯಸಿದ್ದಾನೆ; ಅದಕ್ಕಾಗಿ ನೀವು ಒಂದು ದಿನ ಸಮಯ ನೋಡಿ ಈ ರಾಜ್ಯದಿಂದ ದೂರ ಹೋಗಿ ಬಿಡಿರಿ-ಎಂದು ಹೇಳುತ್ತಾನೆ.

ಅದನ್ನು ಕೇಳಿ ಕುಮಾರರಿಬ್ಬರೂ ತಮ್ಮ ತಂದೆಯ ಹತ್ತಿರ ಬಂದು - ಸ್ವಾಮೀ ! ಪೂಜ್ಯರೇ ! ದೊರೆ ಮುಂಜನು ನಮ್ಮನ್ನು ಸಾಯಿಸುವ ಇಚ್ಛೆಯನ್ನಿಟ್ಟುಕೊಂಡಿದ್ದಾನೆ; ಅದಕ್ಕಾಗಿ ನಮ್ಮ ಸಲುವಾಗಿ ತಮ್ಮ ಆಜ್ಞೆಯೇನಿದೆ? - ಎಂದು ಕೇಳುತ್ತಾರೆ. ಆಗ ದೊರೆ ಸಿಂಹಳನು - ಯಾರು ನಿಮ್ಮನ್ನು ಸಾಯಿಸ ಬಯಸುತ್ತಾರೆ, ಅವರನ್ನು ನೀವುಗಳು ಸಾಯಿಸಿ ಬಿಡಿ. ಅದರಲ್ಲಿ ಯಾವ ದೋಷವಿಲ್ಲ; ಇದು ರಾಜನೀತಿಯಿದೆ - ಎಂದು ಹೇಳುತ್ತಾನೆ.

ತಂದೆಯ ವಚನಗಳನ್ನಾಲಿಸಿ ಶುಭಚಂದ್ರ ಮತ್ತು ಭರ್ತೃಹರಿ ಇಬ್ಬರೂ ಕುಮಾರರು-ಪ್ರಭು ! ಅವರಂತೂ ನಮ್ಮ ಸಲುವಾಗಿ ತಮ್ಮ ಸಮಾನರಿದ್ದಾರೆ. ನಾವು ದೊಡ್ಡಪ್ಪನನ್ನು ಹೇಗೆ ಸಾಯಿಸಬಹುದಾಗಿದೆ ?-ಎಂದು ಹೇಳಿದರು. ನಂತರ ಅವರಿಬ್ಬರೂ ಸಂಸಾರದಿಂದ ಉದಾಸರಾಗಿ, ವಿರಕ್ತರಾಗಿ ಇಬ್ಬರೂ ಸೋದರರು ತಪದ ಅಂಗೀಕಾರ ಮಾಡುತ್ತಾರೆ.

ಶುಭಚಂದ್ರರಂತೂ ವನದೊಳಗೆ ಹೋಗಿ ಧರ್ಮಧುರಂಧರ ಗುರುವಿನ ಹತ್ತಿರ ಜಿನದೀಕ್ಷೆ ಧಾರಣ ಮಾಡಿ, ಅನೇಕ ಪ್ರಕಾರದ ತಪಸ್ಸುಗಳಿಂದ ಅನೇಕ ಋದ್ಧಿಗಳನ್ನು ಪ್ರಾಪ್ತ ಮಾಡಿಕೊಂಡರು. ಮತ್ತು ಕಿರಿಯ ಸೋದರ ಭರ್ತೃಹರಿಯು ವನದೊಳಗೆ ಹೋಗಿ ತಾಪಸಿಯ ವ್ರತಧಾರಣ ಮಾಡಿ, ಅನೇಕ ಅಜ್ಞಾನ ತಪ ಮಾಡಿದನು.

ಒಂದು ದಿನ ಅವನು ಕಾನನದಲ್ಲಿ ದಾರಿಯನ್ನು ಮರೆತುಹೋಗಿ ಪಥಭ್ರಷ್ಟನಾಗಿ ಭ್ರಮಿಸುತ್ತಿರುವಾಗ ಬಾಯಾರಿಕೆಯಾಗುವುದರಿಂದ ನೀರನ್ನು ಅರಸುತ್ತ, ಕಾನನದಲ್ಲಿ ಪಂಚಾಗ್ನಿ ಹೊತ್ತಿಸಿಕೊಂಡು ತಪ ಮಾಡುತ್ತಿರುವ ಓರ್ವ ತಾಪಸಿಯ ಹತ್ತಿರ ಬಂದು ತಲುಪುತ್ತಾನೆ. ಭರ್ತೃಹರಿಯು ಅವನಿಗೆ ನಮಸ್ಕಾರ ಮಾಡಿದ ಮೇಲೆ ಆ ತಾಪಸಿಯು ಅವನ ಹೆಸರು ಕುಲಾದಿಗಳನ್ನು ವಿಚಾರಿಸುತ್ತಾನೆ. ಭರ್ತೃಹರಿಯು ತನ್ನ ನಾಮ-ಕುಲಾದಿಗಳ ಪರಿಚಯ ನೀಡಿ ಅವನ ಸೇವೆ ಮಾಡುತ್ತಾನೆ. ಅದರಿಂದ ಸಂತುಷ್ಟನಾಗಿ ಅವನು ತುಂಬಿ-ಸೋರೆ ಬುರುಡಿಯಲ್ಲಿ ಕಲಂಕಿಯನ್ನು ತುಂಬಿ ಕೊಡುತ್ತ - ಇದರಿಂದ ತಾಮ್ರವು ಚಿನ್ನವಾಗುತ್ತದೆಯೆಂದು ಹೇಳುತ್ತಾನೆ. ಜತೆಯಲ್ಲಿಯೇ ಮಂತ್ರ-ತಂತ್ರ ಮೊದಲಾದ ಆಶ್ಚರ್ಯಕರವಾದ ವಿದ್ಯೆಗಳನ್ನೂ ಕೊಡುತ್ತಾನೆ. ಹೀಗೆ ಹನ್ನೆರಡು ವರ್ಷಗಳವರೆಗೆ ತಾಪಸಿಯ ಸೇವೆ ಮಾಡುತ್ತಾನೆ ಮತ್ತು ಕೊನೆಗೆ ಭರ್ತೃಹರಿಯು ಅದನ್ನು ನಿರ್ಮಿಸುವ ವಿದ್ಯೆಯನ್ನೂ ಗುರುವಿನಿಂದ ಕಲಿತುಕೊಳ್ಳುತ್ತಾನೆ.

ಅದರ ನಂತರ ಅಣ್ಣನಾದ ಶುಭಚಂದ್ರನ ಸಮಾಚಾರ ತಿಳಿಯುವ ಸಲುವಾಗಿ ತನ್ನ ಶಿಷ್ಯರನ್ನು ಕಳಿಸುತ್ತಾನೆ. ಶಿಷ್ಯರು ಗಂಧಮರ್ದನ ಪರ್ವತದ ಮೇಲೆ ಧ್ಯಾನಾರೂಢ, ನಗ್ನದೇಹಧಾರೀ ವೀತರಾಗೀ ಶುಭಚಂದ್ರನನ್ನು ನೋಡಿದರು. ಭರ್ತೃಹರಿಯ ಶಿಷ್ಯರು ಎರಡು ದಿನ ಅಲ್ಲಿಯೇ ಉಪವಾಸದಿಂದ ಕಳೆದು, ನಂತರ ಹಸಿವೆಯ ಬಾಧೆಯನ್ನು ತಾಳಲಾರದೇ ವ್ಯಾಕುಲರಾಗಿ ಅಲ್ಲಿಂದ ಹೊರಟು ಬರುತ್ತಾರೆ. ಬಂದು ಭರ್ತೃಹರಿಗೆ ವರದಿ ಒಪ್ಪಿಸುತ್ತ ನಿಮ್ಮ ಅಣ್ಣನ ಹತ್ತಿರ ಒಂದು ಲಂಗೋಟಿಯೂ ಇಲ್ಲ. ಅವರು ಹಸಿವೆಯಿಂದ ಕ್ಷೀಣರಾಗಿ ಹೋಗಿದ್ದಾರೆ ಮತ್ತು ನೀವು ಇಲ್ಲಿ ರಾಜ್ಯ ಸುಖ ಭೋಗಿಸುತ್ತಿರುವಿರಿ. ನಿಮ್ಮ ಹತ್ತಿರವಿರುವುದರೊಳಗಿಂದ ಸ್ವಲ್ಪ ಅಣ್ಣನವರಿಗೂ ಕೊಟ್ಟರೆ ಅವರ ದರಿದ್ರತೆಯು ದೂರವಾಗಬಹುದಾಗಿದೆಯೆಂದು ಹೇಳುತ್ತಾರೆ.

ಆಗ ಭರ್ತೃಹರಿಯು ಅರ್ಧ ತುಂಬಿಯಷ್ಟು ಕಲಂಕಿಯನ್ನು ಅಣ್ಣನಿಗೆ ಕೊಟ್ಟು ಕಳಿಸುತ್ತಾನೆ. ಶುಭಚಂದ್ರರು ಅದನ್ನು ಪಾಷಾಣದ ಮೇಲೆ ಸುರಿದು ಬಿಡುತ್ತಾರೆ. ಆಗ ಶಿಷ್ಯರು ಭರ್ತೃಹರಿಯ ಹತ್ತಿರ ಮರಳಿ ಬಂದು 'ನಿಮ್ಮ ಅಣ್ಣನು ಭಾಗ್ಯಹೀನನಿದ್ದಾನೆ. ಅವನು ತಾವು ಕೊಟ್ಟ ಕಲಂಕಿಯ ತುಂಬಿಯನ್ನು ಪಾಷಾಣದ ಮೇಲೆ ಹಾಕಿ ಬಿಟ್ಟನು' ಎಂದು ಹೇಳುತ್ತಾರೆ. ನಂತರ ಭರ್ತೃಹರಿಯು ಸ್ವಯಂ ಶುಭಚಂದ್ರರ ಹತ್ತಿರ ಬಂದು ಹಿರಿಯ ಅಣ್ಣನನ್ನು ತಂದೆಯ ಸಮಾನವೆಂದು ಭಾವಿಸಿ ವಿನಯದಿಂದ ಅವರಿಗೆ ನಮಸ್ಕಾರ ಮಾಡಿ ಕಲಂಕಿಯ ತುಂಬಿಯನ್ನು ಅವರ ಮುಂದೆ ಇಡುತ್ತಾನೆ. ಶುಭಚಂದ್ರರು 'ತುಂಬಿಯಲ್ಲಿ ಏನಿದೆ ?' ಎಂದು ಕೇಳಿದ ಮೇಲೆ ಭರ್ತೃಹರಿಯು, ಪ್ರಭು! ಇದರಲ್ಲಿ ತಾಮ್ರವನ್ನು ಚಿನ್ನವನ್ನಾಗಿಸುವ ಗುಣವಿದೆಯೆಂದು ಹೇಳುತ್ತಾನೆ. ಅದನ್ನಾಲಿಸಿದ ಶುಭಚಂದ್ರರು ಆ ತುಂಬಿಯನ್ನೆತ್ತಿ ಪಾಷಾಣದ ಮೇಲೆ ಎಸೆದು ನಷ್ಟಮಾಡಿ ಬಿಡುತ್ತಾರೆ.

ಅದನ್ನು ಕಂಡು ಭರ್ತೃಹರಿಯು - ಅಣ್ಣಾ ! ಅನೇಕ ಪ್ರಕಾರದ ರಾಜ್ಯಸಂಪದದ ಕಾರಣಭೂತ ದ್ರವ್ಯವನ್ನು ತಾವು ನಷ್ಟ ಮಾಡಿಬಿಟ್ಟಿರಿ. ತಾವು ಹೀಗೆ ಮಾಡಿ ಒಳ್ಳೆಯದು ಮಾಡಲಿಲ್ಲ. ಅಣ್ಣಾ ! ಹನ್ನೆರಡು ವರ್ಷಗಳವರೆಗೆ ಗುರುಗಳ ಸೇವೆ ಮಾಡಿದ ಮೇಲೆ ನನಗೆ ಇದರ ಪ್ರಾಪ್ತಿಯಾಗಿತ್ತು - ಎಂದನು. ಈ ಪ್ರಕಾರ ಖೇದ ಖಿನ್ನನಾದ ಭರ್ತೃಹರಿಯನ್ನು ನೋಡಿ ಶುಭಚಂದ್ರರು - ವತ್ಸ ! ರಾಜ್ಯವನ್ನು ತೊರೆದು, ವನವಾಸ ಮಾಡುತ್ತಿದ್ದರೂ ನೀನು ಈ ಕಲಂಕಿಯನ್ನು ಬಿಡಲಿಲ್ಲ. ಈ ಕಲಂಕಿಯು ಮುನೀಶ್ವರರ ಸಲುವಾಗಿ ಕಲಂಕದ ಸಮಾನವಿರುವುದರಿಂದ ಇದನ್ನು ಬಿಡುವುದೇ ಯೋಗ್ಯವಿದೆ. ವತ್ಸ ! ನಿನ್ನ ಕಲಂಕಿಯಿಂದ ಪಾಷಾಣವಂತೂ ಚಿನ್ನವಾಗಲಿಲ್ಲ ಮತ್ತು ನಿನಗೆ ಚಿನ್ನದ ಬಯಕೆಯಿದ್ದರೆ ಇಲ್ಲಿ ನೋಡು !! ಎಂದು ಹೇಳಿ ಶುಭಚಂದ್ರರು ತಮ್ಮ ಕಾಲು ಕೆಳಗಿನ ಧೂಳನ್ನು ತಗೆದುಕೊಂಡು ಒಂದು ದೊಡ್ಡ ಶಿಲೆಯ ಮೇಲೆ ಹಾಕಿದರು; ಅದರಿಂದ ಸಂಪೂರ್ಣ ಶಿಲೆಯು ಕಂಚನವಾಗಿ ಹೋಯಿತು.

ಈ ಅತಿಶಯವನ್ನು ಕಂಡು ಭರ್ತೃಹರಿಯು ಅಣ್ಣನ ಚರಣಗಳಲ್ಲಿ ಮಣಿದು ಸಮರ್ಪಿತನಾಗಿ ಅನೇಕ ಪ್ರಕಾರದಿಂದ ಸ್ತುತಿ ಮಾಡಿ ಜಿನದೀಕ್ಷೆಯ ಯಾಚನೆ ಮಾಡತೊಡಗಿದನು. ಶುಭಚಂದ್ರರು ಅವನಿಗೆ ದೀಕ್ಷೆ ಕೊಟ್ಟು, ಸಂಬೋಧನೆ ಮಾಡುವ ಸಲುವಾಗಿ ಜ್ಞಾನಾರ್ಣವವೆಂಬ ಹೆಸರಿನ ಗ್ರಂಥ ರಚಿಸಿ ಅವನನ್ನು ದೀಕ್ಷೆಯಲ್ಲಿ ದೃಢಗೊಳಿಸಿದರು. ನಂತರ ಇಬ್ಬರೂ ಸಹೋದರರು ಜಿನದೀಕ್ಷಾಸಹಿತ ತಪಸ್ಸು ಮಾಡತೊಡಗಿದರು.

ಅತ್ತ ಉಜ್ಜೈನೀ ನಗರದ ರಾಜ್ಯ ನಡೆಸುತ್ತಿರುವ ದೊರೆ ಮುಂಜನು ಒಂದು ದಿವಸ ಕಪಟಪೂರ್ಣ ವಿಚಾರ ಮಾಡುತ್ತ ಸಿಂಹಳನು ಬಲಶಾಲಿಯಾಗಿರುವ ಕಾರಣ ನನ್ನ ರಾಜ್ಯವು ಉಳಿಯುವುದಿಲ್ಲ; ಅದಕ್ಕಾಗಿ ಅವನು ತನ್ನ ಮಂತ್ರಿಯನ್ನುದ್ದೇಶಿಸಿ, ಸಿಂಹಳನನ್ನು ಸಾಯಿಸಿ ಬಿಡಿರೆಂದು ಹೇಳುತ್ತಾನೆ. ಆಗ ಮಂತ್ರಿಯು ಆತನ ದೋಷವಾದರೂ ಏನಿದೆ ? ನಿರ್ದೋಷನನ್ನು ಸಾಯಿಸುವುದು ಮಹಾಪಾಪವಿದೆಯೆಂದು ತಿಳಿಸಿಕೊಡುತ್ತಾನೆ. ಆಗ ಅವನು ಓರ್ವ ದಾಸಿಯೊಡನೆ ಕೂಡಿಕೊಂಡು ಷಡಯಂತ್ರ ರಚಿಸಿದನು. ದಾಸಿಯು ತೈಲಮರ್ದನ ಮಾಡುವ ಸಮಯದಲ್ಲಿ ಅವನ ಕಣ್ಣುಗಳನ್ನು ಒಡೆದು ಬಿಡುತ್ತಾಳೆ.

ಅದರ ನಂತರ ದೊರೆ ಮುಂಜನಿಗೆ ಕೃತಾಪರಾಧದಿಂದ ಬಹಳಷ್ಟು ದುಃಖವಾಯಿತು. ಅಯ್ಯೋ ! ಆ ಕುಮಾರರಂತೂ ಮೊದಲೇ ದೀಕ್ಷೆಧಾರಣ ಮಾಡಿ ಹೊರಟು ಹೋದರು. ಈಗ ತಮ್ಮನನ್ನೂ ಅಂಧನನ್ನಾಗಿ ಮಾಡಿದೆನು ಈ ಪ್ರಕಾರ ಕುಲದ ನಾಶವಾಯಿತು. ನಾನು ಮಹಾಪಾಪ ಮಾಡಿದೆನೆಂದು ಪಶ್ಚಾತ್ತಾಪವಾಯಿತು. ಅದರ ನಂತರ ಓರ್ವ ಭೋಜಕ ಯಾಚಕನು ಬಂದು ಮುಂಜನಿಗೆ ಅಭಿನಂದನೆ ಸಲ್ಲಿಸುತ್ತ 'ಪ್ರಭು ! ನಿಮ್ಮ ತಮ್ಮನಾದ ಸಿಂಹಳನಿಗೆ ಪುತ್ರರತ್ನದ ಪ್ರಾಪ್ತಿಯಾಯಿತು' ಎಂದು ಹೇಳುತ್ತಾನೆ. ಅದನ್ನು ಆಲಿಸಿ ಮುಂಜನು ಪ್ರಸನ್ನನಾಗಿ ಸಿಂಹಳನ ಅರಮನೆಗೆ ಬಂದನು ಅಲ್ಲಿ ಅವನು ದ್ವಾರದ ಮೇಲೆ ಒಂದು ಶ್ಲೋಕವನ್ನು ನೋಡಿದನು.

**ವರ್ಷಾಣಿ ಪಂಚ ಪಂಚಾಶತ್, ಸಪ್ತ ಮಾಸಾನ್ ದಿನತ್ರಯಂ ।**
**ಭೋಜರಾಜೇನ ಭೋಕ್ತವ್ಯಾ, ಸುಖೇನ ದಕ್ಷಿಣಾದಿಶಾ ॥**

ದೊರೆ ಮುಂಜನು ಶ್ಲೋಕವನ್ನು ನೋಡಿ ಪಂಡಿತರನ್ನು ಕರೆಯಿಸಿ ಈ ಶ್ಲೋಕವನ್ನು ಯಾರು ಬರೆದಿದ್ದಾರೆ? ಎಂದು ಕೇಳಿದಾಗ, ಓರ್ವ ಪಂಡಿತನು, - ಪ್ರಭು ! ಈ ಬಾಲಕನ ಪುಣ್ಯದ ಮಾಹಾತ್ಮ್ಯ, ಭವಿಷ್ಯವನ್ನು ನಾನು ಬರೆದಿದ್ದೇನೆಂದು ಹೇಳುತ್ತಾನೆ. ಈ ಭೋಜರಾಜನು ದಕ್ಷಿಣ ದಿಶೆಯಲ್ಲಿ ಐವತ್ತೈದು ವರ್ಷ, ಏಳು ತಿಂಗಳು ಮೂರು ದಿವಸದವರೆಗೆ ರಾಜ್ಯ ನಡೆಸುವನೆಂದು ಹೇಳುತ್ತಾನೆ. ಅದನ್ನು ಆಲಿಸಿ ಎಲ್ಲರೂ ಸಂತುಷ್ಟರಾಗುತ್ತಾರೆ. ಬಾಲಕನೂ ಕ್ರಮದಿಂದ ಬೆಳೆಯುತ್ತ ಅನೇಕ ವಿದ್ಯೆಗಳ ನಿಧಾನನಾಗುತ್ತಾನೆ. ದೊರೆ ಮುಂಜನು ಪುತ್ರ ಭೋಜನ ವಿವಾಹ ಮಾಡಿ ರಾಜ್ಯವನ್ನು ನೀಡುತ್ತಾನೆ. ದೊರೆ ಭೋಜರಾಜನು ತನ್ನ ಪ್ರತಾಪದಿಂದ ವಿಶಾಲ ರಾಜ್ಯ ನಡೆಸತೊಡಗಿದನು.

ಭೋಜನ ರಾಜ್ಯದಲ್ಲಿ ವರರುಚಿಯೆಂಬ ಹೆಸರಿನ ಓರ್ವ ಪಂಡಿತನಿದ್ದನು. ಅವನ ಪುತ್ರಿಯು ವಿವಾಹ

ಯೋಗ್ಯಳಾದ ಮೇಲೆ ಪಿತನು ಪುತ್ರಿಗೆ ಹೇಳುತ್ತ ಮಗಳೇ ! ನೀನು ಯಾರನ್ನು ಬಯಸುವಿಯೋ ಅವನ ಜೊತೆಗೇ ನಿನ್ನ ವಿವಾಹ ಮಾಡೋಣ-ಎನ್ನುತ್ತಾನೆ. ಆಗ ಪುತ್ರಿಯು-ಅಪ್ಪಾಜೀ ! ಉಚ್ಚ ಕುಲದ ಕನ್ಯೆಯರು ತಾವಾಗಿಯೇ ಯಾವ ವಿಶಿಷ್ಟ ವರನ ಯಾಚನೆ ಮಾಡುವುದಿಲ್ಲ; ಭಾಗ್ಯದ ಅನುಸಾರ ಪ್ರಾಪ್ತ ಮಾಡಿಕೊಳ್ಳುತ್ತಾರೆ, ಹಾಗೂ ವ್ಯವಹಾರ ನಯದಿಂದ ಮಾತಾ-ಪಿತರು ಯಾರ ಜತೆ ಪರಿಣಯ ಮಾಡಿ ಕೊಡುತ್ತಾರೆ, ಅವರನ್ನು ಸಾನಂದ ಸ್ವೀಕಾರ ಮಾಡುತ್ತಾರೆ. ಪುತ್ರಿಯ ಬಾಯಿಂದ ಇಂಥ ವಚನವನ್ನಾಲಿಸಿ ಪಿತನು ತೀವ್ರ ಕ್ರೋಧವಶನಾಗಿ ಅತ್ಯಂತ ದರಿದ್ರ , ಮೂರ್ಖ ಪುರುಷನನ್ನು ಹುಡುಕಿ ಅವನೊಂದಿಗೆ ತನ್ನ ಪುತ್ರಿಯ ವಿವಾಹ ಮಾಡಿಕೊಡುತ್ತಾನೆ.

''ಪೂರ್ವ ಕರ್ಮವನ್ನು ಯಾರು ತಾನೇ ನಷ್ಟ ಮಾಡುವ ಸಾಧ್ಯತೆಯಿದೆ'' - ಎಂಬುದನ್ನು ತಿಳಿದುಕೊಂಡು ಕನ್ಯೆಯು ಸಮತೆಯ ಭಾವ ಧಾರಣ ಮಾಡುತ್ತಾಳೆ.

ಅದರ ನಂತರ ವರರುಚಿಯು ವಿಚಾರ ಮಾಡುವುದೇನೆಂದರೆ ಭೋಜರಾಜನು ನನ್ನ ಅಳಿಯನ ಕುರಿತಾಗಿ ಎಂಥ ಪಂಡಿತನಿರುವನು ? ಎಂದು ವಿಚಾರಿಸಿದರೆ, ನನ್ನದೇ ಅಪಮಾನವಿದೆ ಎಂದು ವಿಚಾರ ಮಾಡಿ ವರರುಚಿಯು ಅಳಿಯನಿಗೆ ಬಹಳಷ್ಟು ಕಲಿಸಿದನು; ಆದರೆ ಅವನಿಗೆ ಒಂದು ಅಕ್ಷರವೂ ಬರುತ್ತಿರಲಿಲ್ಲ. ತುಂಬ ಕಾಲದವರೆಗೆ ಕೇವಲ ಆಶೀರ್ವಾದ ಪಾಠ ಕಲಿಸುವ ಸಾಧ್ಯತೆಯಾಯಿತು. ಒಂದು ಬಾರಿ ಅನೇಕ ಪಂಡಿತರುಗಳ ಸಮೂಹದ ಮಧ್ಯೆ ಭೋಜರಾಜನ ಸಭೆಯಲ್ಲಿ ವರರುಚಿಯ ಅಳಿಯನು ಬಂದು ದೊರೆಗೆ ಆಶೀರ್ವಚನ ನೀಡುತ್ತ ಅಶುದ್ಧ ವಚನ ಹೇಳಿದನು. ಅದನ್ನು ಕೇಳಿ ದೊರೆಯು ಅವನಿಗೆ ಮೂರ್ಖನೆಂದನು. - ವರರುಚಿಯು ಅಶುದ್ಧ ವಚನವನ್ನು ತನ್ನ ಪಾಂಡಿತ್ಯದಿಂದ ಶುದ್ಧ ಮಾಡಿ ದೊರೆಗೆ ಹೇಳಿದನು; ಆದರೆ ಮನೆಗೆ ಹೋಗಿ ಅಳಿಯನ ಮಾನವು ತುಂಡರಿಸಿ ಹೋಗುವ ವಚನಗಳನ್ನಾಡಿದನು.

ಅವನು ಕೂಡ ತನ್ನನ್ನು ಮೂರ್ಖನೆಂದು ಮನ್ನಿಸಿ ಕಾಳೀ ದೇವಿಯ ಮಠದಲ್ಲಿ ಬಂದು - 'ನನಗೆ ವಿದ್ಯೆಯ ವರ ನೀಡು ಇಲ್ಲದಿದ್ದರೆ ನಾನು ಸತ್ತು ಹೋಗುವೆನು' ಎಂದು ಹೇಳಿ ಅಧೋಮುಖನಾಗಿ ಬಿದ್ದುಕೊಂಡನು. ಏಳನೇ ದಿವಸ ದೇವಿಯು ಪ್ರಸನ್ನಳಾಗಿ ವಾಂಛಿತವರ, ವಚನಸಿದ್ಧಿಯ ವರ ನೀಡುತ್ತ ನಿನ್ನ ಹೆಸರು ಕವಿ ಕಾಳಿದಾಸನಾಗಲೆಂದು ಹರಿಸಿದಳು.

ದೇವಿಯ ವರಪ್ರಸಾದದಿಂದ ಅನೇಕ ವಿದ್ಯಾ ಶಬ್ದಗಳು ಸ್ಫುರಿತವಾಗುವುದರಿಂದ ಅವನು ಎಲ್ಲ ಪಂಡಿತರನ್ನು ಸೋಲಿಸಿದನು. 'ಎಲ್ಲಿ ವಿದ್ಯೆಯ ಪ್ರಾಪ್ತಿ ಮಾಡಿಕೊಂಡೆ ?' - ಎಂದು ಎಲ್ಲರೂ ಕೇಳುವುದರಿಂದ ಅವನು 'ಕಾಳಿಕಾ ದೇವಿಯಿಂದ' ಎಂದು ಹೇಳುತ್ತಾನೆ. ಆಗ ವರರುಚಿಯು ಕೂಡ ಅವನ ಚರಣಗಳಲ್ಲಿ ಮಸ್ತಕ ಮಣಿಸುತ್ತ ನನ್ನ ಕನ್ಯೆಯು ಧನ್ಯಳಿದ್ದಾಳೆ, ಇವಳ ವಚನಗಳು ಸತ್ಯವಿವೆಯೆಂದು ಹೇಳಲಾರಂಭಿಸುತ್ತಾನೆ.

ಕಾಳಿದಾಸನ ರೂಪದಲ್ಲಿ ಪ್ರಕಟನಾದ ಮೇಲೆ ಅವನು ಒಂದು ದಿನ ರಾಜಾಭೋಜನ ಸಭೆಯಲ್ಲಿ ಬಂದು ಕಾಳಿದೇವಿಯ ಆರಾಧನೆ ಮಾಡಿದನು. ಕಾಳಿಯನ್ನು ಪ್ರತ್ಯಕ್ಷ ಕಂಡು ನಮಸ್ಕಾರ ಮಾಡಿ ಸಂಪೂರ್ಣ ಸಭೆಯು ಕಾಳೀದಾಸನ ಪ್ರಶಂಸೆ ಮಾಡತೊಡಗಿದರು. ಈ ಪ್ರಕಾರ ಕಾಳಿದಾಸನು ಪ್ರಸಿದ್ಧನಾದನು.

ಇದೇ ಉಜ್ಜೈನಿ ನಗರದಲ್ಲಿ ವಾಸಿಸುತ್ತಿರುವ ಮಹಾಧರ್ಮಾತ್ಮಾ ವಸುದತ್ತ ಶ್ರೇಷ್ಠಿಯು ಒಂದು ಸಲ ತನ್ನ ಪುತ್ರ ಮನೋಹರನನ್ನು ಕರೆದುಕೊಂಡು ಭೋಜರಾಜನ ಹತ್ತಿರ ಬರುತ್ತಾನೆ. ಭೋಜರಾಜನು 'ನಿನ್ನ ಪುತ್ರನು ಏನು ಓದಿದ್ದಾನೆ ? ಎಂದು ಕೇಳಿದ ಮೇಲೆ, ಶ್ರೇಷ್ಠಿಯು ವಿನಯದಿಂದ ಸ್ವಾಮೀ ! ಅರ್ಥ ಸಹಿತ ನಾಮಮಾಲಾ ಗ್ರಂಥದ ಅಧ್ಯಯನ ಮಾಡಿದ್ದಾನೆಂದು ಹೇಳುತ್ತಾನೆ. ನಾಮಮಾಲಾಗ್ರಂಥದ ಕರ್ತೃಗಳು ಯಾರಿದ್ದಾರೆ? - ಎಂದು ದೊರೆಗಳಿಂದ ವಿಚಾರಿಸಿದ ಮೇಲೆ 'ಮಹಾಪಂಡಿತ ಧನಂಜಯ ಕವಿಗಳು ಅದರ ಕರ್ತೃವಿದ್ದಾರೆಂದು ಹೇಳುತ್ತಾನೆ. ಆಗ ದೊರೆಯು ಆ ಧನಂಜಯರನ್ನು ನಾವು ಭೇಟಿ ಮಾಡಬೇಕೆಂದು ಹೇಳುತ್ತಾನೆ.

ಅದರ ನಂತರ ಮಹಾಪಂಡಿತ, ಗುಣೀಜನರದಾಸ, ಭೋಜರಾಜನು ಆದರಪೂರ್ವಕ ಧನಂಜಯನನ್ನು ಕರೆತರುವ ಸಲುವಾಗಿ ಒಳ್ಳೆಯ ಮನುಷ್ಯನನ್ನು ಕಳಿಸುತ್ತಾನೆ. ಅದನ್ನು ಕಂಡು ಕಾಳಿದಾಸನು ಓ ಪ್ರಭು ! ಧನಂಜಯನು ಏನನ್ನೂ ತಿಳಿಯುವುದಿಲ್ಲ, ಎಂದು ನುಡಿಯುತ್ತಾನೆ. ಧನಂಜಯ ಕವಿಯು ಆಸ್ಥಾನಕ್ಕೆ ಆಗಮಿಸಿದ ಮೇಲೆ ದೊರೆಯು ಅವನನ್ನು ಉಚ್ಚಾಸನದ ಮೇಲೆ ವಿರಾಜಮಾನ ಮಾಡಿ ತಮ್ಮ ಹೆಸರು-ಕೀರ್ತಿಯು ವಿಶಾಲವಿದೆ. ತಾವು ಯಾವ-ಯಾವ ಗ್ರಂಥಗಳ ರಚನೆ ಮಾಡಿರುವಿರಿ-ಎಂದು ಕೇಳುತ್ತಾನೆ. ಅದಕ್ಕೆ ಧನಂಜಯನು ರಾಜೇಂದ್ರರೇ ! ನನ್ನ ಮೂಲಕ ಬರೆಯಲ್ಪಡುವ ಗ್ರಂಥಗಳೊಳಗಿನ ನನ್ನ ನಾಮವನ್ನು ಲುಪ್ತ ಮಾಡಿ ಈ ಪಂಡಿತರು ತಮ್ಮ ಹೆಸರು ಹಾಕಿಕೊಂಡಿದ್ದಾರೆ - ಎಂದು ಅರಹುತ್ತಾನೆ.

ಅದನ್ನು ಆಲಿಸಿದ ಭೋಜನು ಪಂಡಿತರುಗಳಿಗೆ ತಿರಸ್ಕಾರದ ವಚನಗಳನ್ನಾಡುತ್ತ ನೀವೆಲ್ಲ ಎಂಥ ಪಂಡಿತರು? ಎನ್ನುತ್ತಾನೆ. ಆಗ ಎಲ್ಲ ಪಂಡಿತರು ಹೇಳುವುದೇನೆಂದರೆ ದೊರೆಗಳೇ ! ಈ ಧನಂಜಯನು ಯಾವಾಗಿನಿಂದ ಪಂಡಿತನಾಗಿದ್ದಾನೆ ? ಇವನ ಗುರುವಂತೂ ಮಹಾಮೂರ್ಖ ಮಾನತುಂಗ ಮುನಿಯಿದ್ದಾನೆ; ಹೀಗಿರುವಾಗ ಇವನಿಗೆ ವಿದ್ಯೆಯೆಲ್ಲಿಂದ ಬಂತು ? ಈಗಲೂ ಇವನ ಗುರುಗಳು ವನದಲ್ಲಿದ್ದಾರೆ; ಅವರು ಬಂದು ಬೇಕಾದರೆ ನಮ್ಮೊಡನೆ ವಾದವಿವಾದ ಮಾಡಲಿ ! ಆಗ ಧನಂಜಯನು 'ಪಂಡಿತ ಮಹಾಶಯರೇ ! ನನ್ನ ಗುರುಗಳ ಹೆಸರಂತೂ ಉತ್ತಮ ಗುಣರೂಪವಿದೆ. ಅದಕ್ಕಾಗಿ ಅವರಂತೂ ಅಲ್ಲಿಯೇ ವಿರಾಜಮಾನರಿರಲಿ; ತಮ್ಮಗಳಿಗೆ ಒಂದುವೇಳೆ ವಾದ ಮಾಡುವ ಇಚ್ಛೆಯಿದ್ದರೆ ನನ್ನೊಡನೆ ತಾವು ವಾದ ಮಾಡಿರಿ' ಎಂದು ಹೇಳುತ್ತಾನೆ.

ಪರಸ್ಪರರಲ್ಲಿ ವಾದ ವಿವಾದವಾದ ಮೇಲೆ ಧನಂಜಯನು ರಾಜಾ ಭೋಜನ ಸಭೆಯಲ್ಲಿ ಅನೇಕ ನಯ, ದೃಷ್ಟಾಂತ, ಪ್ರಶ್ನೋತ್ತರಗಳಿಂದ ಕಾಳಿದಾಸ ಮೊದಲಾದ ಎಲ್ಲ ಪಂಡಿತರನ್ನು ಜಯಿಸಿ ವಚನಬದ್ಧ ಮಾಡಿದನು. - ನಿರುತ್ತರರನ್ನಾಗಿಸಿದನು. ಇದರಿಂದ ಕುಪಿತನಾದ ಕಾಳಿದಾಸನು ದೊರೆಯನ್ನುದ್ದೇಶಿಸಿ ಓ ರಾಜನ್ ! ಇವನು ಮಹಾ ಮೂರ್ಖನಿದ್ದಾನೆ. ಇವನೊಂದಿಗೆ ವಾದವನ್ನೇನು ಮಾಡುವುದು ? ಈತನ ಗುರು ಮಾನತುಂಗರನ್ನು ಕರೆಸಿರಿ; ಅವರೊಂದಿಗೆ ನಾವು ವಾದ ಮಾಡುವೆವು ಎನ್ನುತ್ತಾನೆ.

ದೊರೆಯು ಮಾನತುಂಗರೆಂಬ ಹೆಸರಿನ ಮುನೀಶ್ವರರನ್ನು ಕರೆತರುವ ಸಲುವಾಗಿ ತನ್ನ ವಿನಯಸಂಪನ್ನ ಮನುಷ್ಯರನ್ನು ಕಳಿಸುತ್ತಾನೆ. ಅವರು ಮುನೀಶ್ವರರು ಇರುವಲ್ಲಿಗೆ ಬಂದು ನಮಸ್ಕಾರ ಮಾಡಿ ಓ ಪ್ರಭು ! ಭೋಜರಾಜನು ತಮ್ಮನ್ನು ಕರೆದುಕೊಂಡು ಬರುವಂತೆ ಹೇಳಿದ್ದಾರೆ; ಆದರೆ 'ನಮಗೆ ದೊರೆಯ ಹತ್ತಿರವಾಗಲಿ ಅಥವಾ ಅರಮನೆಯಿಂದಾಗಲಿ ಯಾವ ಪ್ರಯೋಜನವಿಲ್ಲ' ಎಂದು ಹೇಳಿ, ಯತಿರಾಜರು ಹೋಗಲಿಲ್ಲ. ಅದಕ್ಕೆ ಕಾಳಿದಾಸನು - ರಾಜನ್ ಅವನು ಮಾನದ ಶಿಖರದಂತಿದ್ದಾನೆ, ಮಹಾಮಾನೀ ಮಾನತುಂಗನು ಈ ಪ್ರಕಾರ ಸುಲಭವಾಗಿ ಬರುವ ಸಾಧ್ಯತೆಯಿಲ್ಲವೆಂದು ಹೇಳುತ್ತಾನೆ. ಆಗ ಕ್ರೋಧಿತನಾದ ಭೋಜರಾಜನು 'ಯತಿಯನ್ನು ಬಂಧಿಸಿ ಕರೆತರುವಂತೆ ಸೇವಕರಿಗೆ ಆಜ್ಞೆ ಮಾಡುತ್ತಾನೆ. ಅದನ್ನು ಆಲಿಸಿ ದೊರೆಯ ಸೇವಕರು ಹೋಗಿ ಯತಿಗಳನ್ನು ಎತ್ತಿಕೊಂಡು ಬಂದು ದೊರೆಯ ಎದುರಿಗೆ ಇಡುತ್ತಾರೆ. ಯತಿರಾಜರು ಮೌನಪೂರ್ವಕ ಪಂಚಪರಮೇಷ್ಠಿಗಳ ಧ್ಯಾನ ಮಾಡುತ್ತಾ ವಿರಾಜಮಾನರಿದ್ದರು. ಇದರಿಂದ ಇನ್ನಷ್ಟು ಕ್ರುದ್ಧನಾದ ದೊರೆಯು ಅವರನ್ನು ಕಾರಾಗೃಹದಲ್ಲಿ ಹಾಕಿ ಬಿಡುವ ಆಜ್ಞೆ ಮಾಡಿದನು.

ದೊರೆಯ ಆಜ್ಞೆ ಪಡೆದು ಕಿಂಕರರು ಯತಿಯನ್ನು ನಲವತ್ತೆಂಟು ಕೋಣೆಗಳೊಳಗೆ ಪ್ರತಿಯೊಂದಕ್ಕೆ ಪೃಥಕ್-ಪೃಥಕ್ ಬೀಗಗಳನ್ನು ಹಾಕಿ ಅವಕ್ಕೆ ರಾಜಮುದ್ರೆಯಿಂದ ಸೀಲು ಮಾಡಿ ಯತಿಗಳ ಕಾಲುಗಳಿಗೆ ಸಂಕೋಲೆ ಕೈಗಳಿಗೆ ಬೇಡಿ ಹಾಕಿ ದೃಢವಾದ ಬಂಧನದಲ್ಲಿ ಬಂಧಿಸಿ ನಲವತ್ತೆಂಟು ಕೊಠಡಿಗಳ ಒಳಗೆ ಬಂಧಿಸಿಟ್ಟರು ಹಾಗೂ ಅವುಗಳನ್ನು ನೋಡಿಕೊಳ್ಳುವ ಸಲುವಾಗಿ ವಿಶ್ವಾಸಪಾತ್ರ ಸುಭಟರನ್ನು ನೇಮಿಸಲಾಯಿತು. ಇಂಥ ಮಹಾಸಂಕಟದ ಸ್ಥಾನದಲ್ಲಿ ಇರುತ್ತಿದ್ದರೂ ವೀತರಾಗೀ ಯತಿ-ಮುನೀಶ್ವರರು ಸಮತೆಯ ಭಾವಪೂರ್ವಕ ಉಳಿದರು. ಅಲ್ಲಿ ಮೂರು

ದಿವಸ ವ್ಯತೀತವಾದ ಮೇಲೆ ಮುನಿರಾಜರು ಯೋಚನೆ ಮಾಡುತ್ತಾರೆ - ಇದರಿಂದ ಜೈನ ಧರ್ಮದ ನ್ಯೂನತೆಯು ಸಿದ್ಧವಾಗುವುದು. ಪಾಪೀ ಜನರು ಧರ್ಮಾತ್ಮಾ ಪುರುಷರಿಗೆ ಕಷ್ಟ ಕೊಡಬಹುದಾಗಿದೆ - ಎಂದು ತಿಳಿದು ಅವರು ಮಹಾಭಕ್ತಿಯ ಭಾವದೊಂದಿಗೆ ನಲವತ್ತೆಂಟು ಕಾವ್ಯ(ಶ್ಲೋಕ)ಗಳಿಂದ ಆದಿನಾಥ ಸ್ವಾಮಿಯ ಸ್ತುತಿ ಮಾಡಿದರು. ಅದರಲ್ಲಿ ಆದಿನಾಥರ ಗುಣಗಳನ್ನು ಹೇಳುತ್ತ ಅತಿಯಶಯ ಭಕ್ತಿಯೊಂದಿಗೆ ಮಂತ್ರ ಗರ್ಭಿತಮಾಡಿ, ಮಂತ್ರಗಳ ಸಮಾನ ಉತ್ತಮ ಕಾವ್ಯ ರಚಿಸಿ ಅದಕ್ಕೆ ಭಕ್ತಾಮರವೆಂದು ಹೆಸರನ್ನಿಟ್ಟರು.

ಪ್ರಭುಗಳ ಸ್ತುತಿಯ ಪ್ರಸಾದದಿಂದ ಎಲ್ಲ ಕೊಠಡಿಗಳ ಬೀಗಗಳು ಮುರಿದು ಹೋದವು. ಯತಿರಾಜರ ದೇಹದ ಬಂಧನವೂ ಕಳಚಿ ಹೋಯಿತು. ಅವರು ನಿರ್ಬಂಧರಾಗಿ ಹೊರಗೆ ಬಂದರು. ಇದನ್ನೆಲ್ಲ ಕಂಡ ಸೇವಕರು ಗಾಬರಿಗೊಂಡು ಯತಿಗಳನ್ನು ಪುನಃ ಇನ್ನಷ್ಟು ಅಧಿಕ ಬಂಧನದೊಳಗೆ ಹಾಕಿಬಿಟ್ಟರು; ಆದರೆ ಆ ಬಂಧನಗಳೂ ಕಳಚಿ ಹೋದವು. ಆಗ ಸೇವಕರು ಹೋಗಿ ಭೋಜರಾಜನಿಗೆ ಕೈಮುಗಿದು ಓ ಸ್ವಾಮೀ ! ಮೂರು ಬಾರಿ ಬಂಧನದೊಳಗೆ ಇರಿಸಿದರೂ, ಮೂರು ಬಾರಿಯೂ ಬಂಧನವು ತಾನಾಗಿ ಮುರಿದು ಬಿದ್ದು ಯತಿಗಳು ಹೊರಗೆ ಬಂದಿದ್ದಾರೆ - ಇಂಥ ಆಶ್ಚರ್ಯವನ್ನೆಂದೂ ನೋಡಿಲ್ಲ ಮತ್ತು ಕೇಳಿಯೂ ಇಲ್ಲವೆಂದು ಹೇಳುತ್ತಾರೆ.

ಭೋಜರಾಜನು ಯತಿಗಳ ಇಂಥ ಅತಿಶಯವನ್ನು ಕಾಳಿದಾಸ ಮೊದಲಾದ ಪಂಡಿತರಿಗೆಲ್ಲ ಹೇಳಿದಾಗ, ಎಲ್ಲರೂ ಏಕಕಂಠದಿಂದ ಪ್ರಭು ! ಈ ಯತಿಯು ಮಹಾ ಮಾಟಗಾರನಿರುವುದರಿಂದ ಮಂತ್ರ-ತಂತ್ರಗಳ ಬಲದಿಂದ ಬಂಧನವನ್ನು ಮುರಿದು ಹೊರಗೆ ಬಂದಿದ್ದಾನೆಂದು ಹೇಳುತ್ತಾರೆ. ಆಗ ದೊರೆಯು ಇನ್ನಷ್ಟು ಬಿಗಿಯಾದ ಬಂಧನದಿಂದ ಪುನಃ ಬಂಧಿಸಿಡುವ ವ್ಯವಸ್ಥೆಯಾಗಲಿ ಮತ್ತು ಸುರಕ್ಷೆಯನ್ನೂ ಕಠೋರಗೊಳಿಸಬೇಕೆಂದು ಹೇಳಿದನು. ದೊರೆಯ ಆಜ್ಞೆಯನ್ನು ಕೂಡಲೇ ಜಾರಿಗೊಳಿಸಲಾಯಿತು; ಆದರೆ ಯತಿರಾಜರು ಭಕ್ತಾಮರ ಸ್ತುತಿಯ ಪ್ರಸಾದದಿಂದ ಪುನಃ ಸರ್ವಬಂಧನದಿಂದ ರಹಿತ, ನಿರ್ಬಂಧರಾಗಿ ಭೋಜರಾಜನ ಸಭೆಯಲ್ಲಿ ಬಂದು ಬಿಡುತ್ತಾರೆ.

ದೊರೆಯು ಯತಿರಾಜರನ್ನು ನೋಡಿ ಕಂಪಿಸುತ್ತ ಕಾಳಿದಾಸನನ್ನು ಕರೆಯಿಸಿ ' ಈ ಯತಿಯ ತೇಜಸ್ಸು ನನಗೆ ಅಸಹ್ಯವಾಗುತ್ತಿದೆ, ಇದಕ್ಕೆ ಏನಾದರೂ ಉಪಾಯಮಾಡು' ಎಂದಾಗ, ಕಾಳಿದಾಸನು ಪ್ರಭು ! ಭಯಪಡುವ ಅವಶ್ಯಕತೆಯಿಲ್ಲವೆಂದು ಹೇಳಿ ಕಾಳೀದೇವಿಯ ಆರಾಧನೆಯನ್ನು ಪ್ರಾರಂಭ ಮಾಡಿದನು. ದೇವಿಯು ಮಹಾವಿಕರಾಳ ರೂಪು ಧಾರಣ ಮಾಡಿ ಬರುತ್ತಾಳೆ ಮತ್ತು ಹೇಳು ಕಾಳಿದಾಸ ! ನನ್ನ ಆರಾಧನೆಯನ್ನೇಕೆ ಮಾಡಿದೆ ? ನಿನಗೆ ಯಾವ ಕಷ್ಟವಿದೆಯೆಂಬುದನ್ನು ಹೇಳು ಎನ್ನುತ್ತಿರುವಂತೆ,-

ಚಕ್ರೇಶ್ವರಿ ದೇವಿಯು ಬಂದು ಯತಿರಾಜರಿಗೆ ನಮಸ್ಕಾರ ಮಾಡಿದಳು ಮತ್ತು ಕಾಳಿಯನ್ನು ಕಂಡು ಎಲೈ ಮಹಾ ಪಾಪಿನಿ ! ನೀನು ಮೂರ್ಖರ ಸಂಗತಿ ಮಾಡಿ ನಿನ್ನ ಆತ್ಮನನ್ನು ಪಾಪದಿಂದ ಲಿಪ್ತಮಾಡಿ ಪರಭವ ಕೆಡಿಸಿಕೊಂಡಿರುವೆ. ಈಗ ನಿನ್ನನ್ನು ಸ್ಥಾನ ಭ್ರಷ್ಟ ಮಾಡುವೆನು, ದ್ವೀಪದಿಂದ ಹೊರಗೆ ಹಾಕುವೆನು. ನೀನು ಯತಿರಾಜರ ಮೇಲೆ ಉಪಸರ್ಗ ಮಾಡಿರುವೆಯೆಂದು ಗುಡುಗುತ್ತಾಳೆ - ಚಕ್ರೇಶ್ವರಿಯ ಈ ಪ್ರಕಾರದ ವಚನಗಳನ್ನಾಲಿಸಿ ಕಾಳಿಯು ಪಾಪ ಫಲದಿಂದ ಕಂಪಿಸುತ್ತ ಚಕ್ರೇಶ್ವರಿಯ ಚರಣಗಳಲ್ಲಿ ಹೊರಳಿ ಬಿದ್ದು, ಮಾತೇ! ನನ್ನ ಅಪರಾಧವನ್ನು ಕ್ಷಮಿಸಬೇಕು; ಇನ್ನು ತಮ್ಮ ಆಜ್ಞೆಯಂತೆ ವರ್ತಿಸುವೆನು - ಎನ್ನುತ್ತ ವಿಧ-ವಿಧದಿಂದ ಚಕ್ರೇಶ್ವರಿಯ ಸ್ತುತಿ ಮಾಡತೊಡಗುತ್ತಾಳೆ.

ಅದರ ನಂತರ ಕಾಳಿಯು ಗುರು ಮಾನತುಂಗರ ಚರಣಗಳಲ್ಲಿ ನತಮಸ್ತಕಳಾಗಿ ಅನೇಕ ಪ್ರಕಾರದಿಂದ ಗುರುಗಳಲ್ಲಿ ವಿನಂತಿ ಮಾಡಿಕೊಳ್ಳುತ್ತ , ಗುರುಗಳೇ ! ನನಗೆ ಆಜ್ಞೆ ನೀಡಿರಿ. ನಾನು ತಮ್ಮ ಆಜ್ಞೆಯ ಅನುಸಾರ ಕಾರ್ಯ ಮಾಡುವೆನು ಎಂದಾಗ, ಯತಿರಾಜರು - ದೇವಿ ! ಪೂರ್ವಭವದಲ್ಲಿ ಮಾಡಿರುವ ಪುಣ್ಯದ ಫಲದಿಂದ ಮಹಾಶಕ್ತಿ ಹಾಗೂ ವಿವೇಕಸಂಪನ್ನ ದೇವಿಯಾಗಿರುವೆ ಮತ್ತು ಈಗ ಹಿಂಸಕ ಪ್ರವೃತ್ತಿ ನಡೆಸುತ್ತಿರುವೆಯಲ್ಲವೇನು? ಇದು

ಒಳ್ಳೆಯದಲ್ಲ. ಹಿಂಸೆಯ ತ್ಯಾಗ ಮಾಡಿ ದಯಾಧರ್ಮದ ಪಾಲನೆ ಮಾಡು-ಎಂಬುದಾಗಿ ಗುರುಗಳು ಆಜ್ಞೆ ನೀಡಿದರು.

ಆಗ ಕಾಳಿ ದೇವಿಯು ಮುನಿರಾಜರಿಗೆ ನಮಸ್ಕಾರ ಮಾಡಿ - ಓ ಪ್ರಭು ! ನಾನು ಇಂದಿನಿಂದ ಮನ-ವಚನ-ಕಾರ್ಯಪೂರ್ವಕ ಹಿಂಸೆಯ ತ್ಯಾಗ ಮಾಡುತ್ತೇನೆ. ತಮ್ಮ ಆಜ್ಞೆಯು ನನ್ನ ಕಲ್ಯಾಣದ ಸಲುವಾಗಿಯೇ ಇರುವುದರಿಂದ ನಾನು ಅದನ್ನು ಸ್ವಲ್ಪ ಮಾತ್ರವೂ ವಿಲಂಬ ಮಾಡದೆ ಅಂಗೀಕಾರ ಮಾಡುತ್ತೇನೆ. ಓ ಯತಿನಾಥರೇ! ನನ್ನ ಅಪರಾಧವನ್ನು ಕ್ಷಮಿಸಿರಿ - ಎಂದು ಹೇಳುತ್ತಾಳೆ.

ಕಾಳೀ ದೇವಿಯು ಮುನಿಸೇವೆ ಮಾಡುತ್ತಿರುವುದನ್ನು ನೋಡಿ, ಭೋಜರಾಜನೂ ಬಂದು ಮುನೀಶ್ವರರ ಚರಣಾರವಿಂದಗಳಲ್ಲಿ ನತಮಸ್ತಕನಾಗಿ, ದೀನಸ್ವರದಿಂದ, ಗದ್ಗದವಾಣಿಯಿಂದ - ಓ ದಯಾನಿಧಾನರೇ ! ರಕ್ಷಿಸೀ!! ರಕ್ಷಿಸೀ!!! ನನ್ನ ಅಪರಾಧವನ್ನು ಕ್ಷಮಿಸಬೇಕು. ಓ ದಯಾಮೂರ್ತಿ ! ನನ್ನ ಸಲುವಾಗಿ ಪ್ರಾಯಶ್ಚಿತ್ತ ಹೇಳಿರಿ ಮತ್ತು ಭವಭ್ರಮಣ ನಾಶಮಾಡುವ ಉಪದೇಶ ದಯಪಾಲಿಸಿರಿ - ಎಂದು ಬೇಡಿಕೊಳ್ಳುತ್ತಾನೆ.

ಆಗ ಗುರುಗಳು ಹೇಳುತ್ತಾರೆ-ಭೋಜರಾಜ ! ಆದಿನಾಥರ ಧರ್ಮದ ಸೇವನೆ ಮಾಡುವುದರಿಂದ ಕಲ್ಯಾಣವಾಗುವುದು. ಆಗ ಭೋಜರಾಜನು ಮುನಿರಾಜರಿಂದ ಶ್ರಾವಕ ವ್ರತದ ಗ್ರಹಣ ಮಾಡಿದನು. ಈ ಅತಿಶಯವನ್ನು ಕಂಡು ವಾದ ಮಾಡುವ ಸಲುವಾಗಿ ಬಂದಂಥ ಪಂಡಿತರೂ ಮಾನ ತೊರೆದು, ಮಿಥ್ಯಾಭಾವದ ತ್ಯಾಗ ಮಾಡಿ, ಶ್ರಾವಕ ವ್ರತದ ಅಂಗೀಕಾರ ಮಾಡಿದರು. ಆಗ ಕಾಳಿದಾಸನೂ ಬಂದು ಮಾನತುಂಗ ಮುನಿರಾಜರ ಚರಣಗಳಲ್ಲಿ ಮಸ್ತಕ ಮಣಿಸಿ - ಓ ಸ್ವಾಮೀ ! ನನ್ನ ಅಪರಾಧವನ್ನು ಕ್ಷಮಿಸಿ ನನಗೂ ಶ್ರಾವಕ ವ್ರತವನ್ನು ಕರುಣಿಸಿರಿ - ಎಂದು ಪ್ರಾರ್ಥಿಸುತ್ತಾನೆ. ಆಗ ಗುರುಗಳು ದಯೆಮಾಡಿ ಕಾಳಿದಾಸನಿಗೂ ಶ್ರಾವಕ ವ್ರತ ನೀಡಿದರು.

ನಂತರ ಭೋಜರಾಜನು ಗುರುಗಳಿಗೆ ವಂದಿಸಿ- ಓಗುರುದೇವ ! ನನಗೆ ಒಂದು ಸಂದೇಹವಿದೆ, ಅದನ್ನು ವ್ಯಕ್ತಪಡಿಸುತ್ತೇನೆ - ಎಂದು ಶಿರಬಾಗಿ, ಓ ಗುರುದೇವಾ ! ತಮ್ಮ ಬಂಧನಗಳೆಲ್ಲವೂ ಯಾವ ಮಂತ್ರದಿಂದ ಕಳಚಿ ಹೋದವು; ಕೃಪೆ ಮಾಡಿ ಆ ಮಂತ್ರವನ್ನು ನಮಗೆ ಪ್ರದಾನ ಮಾಡಿರಿ, ಎಂದಾಗ ಗುರುಗಳು ಭಕ್ತಾಮರ ಮಹಾಮಂತ್ರವು ಅನೇಕ ವಿಘ್ನಗಳ ನಾಶಕವಿದೆ. ಅದರ ಪಠನೆ, ಸ್ಮರಣೆ, ಧ್ಯಾನವು ಸುಖಕಾರಕವಿದೆಯೆಂದು ಹೇಳಿದರು.- ಈ ಎಲ್ಲ ಅತಿಶಯವನ್ನು ಪ್ರತ್ಯಕ್ಷ ಕಂಡು ಅನ್ಯ ಜನರು ಕೂಡ ಮಿಥ್ಯಾಭಾವದ ತ್ಯಾಗ ಮಾಡಿದರು. ಶ್ರೀ ಮಾನತುಂಗ ಆಚಾರ್ಯರು ಸರ್ವ ಪ್ರಥಮ ಭಕ್ತಾಮರ ಸ್ತವನವನ್ನು ರಾಜಾ ಭೋಜನಿಗೆ ಕಲಿಸಿದರು - ಹೇಳಿಸಿದರು. ಅದರ ನಂತರ ಜಗತ್ತಿನ ಅನ್ಯ ಭವ್ಯ ಜೀವರುಗಳೂ ಅದರ ಪಠನೆ ಮಾಡತೊಡಗಿದರು.

ಭಕ್ತಾಮರ ಸ್ತೋತ್ರದ ಕರ್ತೃಗಳೂ, ವಿಘ್ನಹರ್ತೃಗಳೂ, ಮಂಗಲದ ಕರ್ತಾರರೂ ಆದ ಶ್ರೀಮಾನತುಂಗ ಗುರುಗಳು ಈ ಗ್ರಂಥದ ಪೂರ್ಣತೆಯ ಸಮಯದಲ್ಲಿ ನನ್ನ ಸಲುವಾಗಿ ಅಂತ್ಯಮಂಗಲದಲ್ಲಿ ಸಹಾಯಕರಾಗಲಿ.

ಇದೇ ಪ್ರಕಾರ ಪಂಚಮಕಾಲದಲ್ಲಿ ಮಹಾಅತಿಶಯದಧಾರಕ ಬೇರೆಯೂ ಯಾವ ಸಾಧುಗಳಾಗಿದ್ದಾರೆ; ಅವರಿಗೂ ನಾನು ಗ್ರಂಥದ ಅಂತ್ಯಮಂಗಲದ ಸಲುವಾಗಿ ನಮಸ್ಕಾರ ಮಾಡಿ ಸ್ಮರಣೆ ಮಾಡುತ್ತೇನೆ.

ಈ ಪ್ರಕಾರ ಸುದೃಷ್ಟಿತರಂಗಿಣಿಯೆಂಬ ಹೆಸರಿನ ಗ್ರಂಥದಲ್ಲಿ ಅಂತ್ಯಮಂಗಲದ ಸಲುವಾಗಿ ಏಕೀಭಾವದ ಕರ್ತೃ
ಶ್ರೀ ವಾದಿರಾಜ ಮುನೀಶ್ವರರ ಗುಣಗಳ ಸ್ಮರಣೆ ಹಾಗೂ ಭಕ್ತಾಮರದ ಕರ್ತೃ ಶ್ರೀ ಮಾನತುಂಗ ಗುರುಗಳ
ಗುಣ ಚಿಂತನೆ ಮಾಡಿ, ಸ್ತೋತ್ರ ರಚನೆಯ ಕಾರಣಗಳ ವರ್ಣನೆ ಮಾಡುವಂಥ
ನಲವತ್ತೊಂದನೆಯ ಪರ್ವವು ಸಂಪೂರ್ಣವಾಯಿತು.

★★★★★

## ೪೨ : ನಲವತ್ತೆರಡನೆಯ ಪರ್ವ

## ಕವಿ ಆಲೋಚನಾದಿ

ಈ ಪ್ರಕಾರ ಈ ಗ್ರಂಥದ ಪೂರ್ಣತೆಯ ಸಮಯದಲ್ಲಿ, ಅಂತ್ಯಮಂಗಲದ ಸಲುವಾಗಿ, ಕಲ್ಯಾಣದ ಭಾವನೆಯಿಂದ ಇಷ್ಟದೇವ, ಪಂಚ ಪರಮಗುರು, ಸಿದ್ಧಕ್ಷೇತ್ರ ಸಮವಸರಣದಲ್ಲಿ ವಿರಾಜಮಾನ ಭಗವಂತರು, ಅಕೃತ್ರಿಮ  ಜಿನಭವನ ಇತ್ಯಾದಿ ಎಲ್ಲವುಗಳ ಸ್ಮರಣೆ, ಧ್ಯಾನ ಮಾಡಿ, ಅವರಿಗೆ ನಮಸ್ಕಾರ ಮಾಡಿ ನಾವು ನಮ್ಮ ಮನುಷ್ಯ ಜನ್ಮ ಪ್ರಾಪ್ತಿಯ ಸಫಲತೆ ಮನ್ನಿಸಿದ್ದೇವೆ. ಏಕೆಂದರೆ ಸಾಗರದ ಸಮಾನ ಗಂಭೀರ, ನಯರೂಪದ ತರಂಗಗಳಿಂದ ಪರಿಪೂರ್ಣ, ಸಾಮಾನ್ಯ ಜ್ಞಾನದ ಮೂಲಕ ಅರ್ಥರೂಪದ ಮರ್ಯಾದೆ-ದಡದ ದೃಷ್ಟಿಯಿಂದ ಅಗೋಚರ, ಅಗಾಧ ಗುಣನಿಧಿ ಸಂಪನ್ನ ಈ ಗ್ರಂಥದ ದಡ ತಲುಪುವುದು ನನ್ನಂಥ ಜ್ಞಾನದರಿದ್ರನಿಗೆ ಅಲ್ಪ(ಜ್ಞಾನಿ)ಗೆ ಮಹಾದುರ್ಲಭವಿತ್ತು ; ಆದರೆ ನಮ್ಮ ಇಷ್ಟ ದೇವ-ಗುರುಗಳ ಪ್ರಸಾದದಿಂದ, ಅವರುಗಳ ಭಕ್ತಿಯ ಅತಿಶಯದಿಂದ ಈ ಗ್ರಂಥವು ಪೂರ್ಣವಾಯಿತು. ವಾಸ್ತವದಲ್ಲಿಯಂತೂ ಇದು ಹೇಗೆ ಯಾವನೋ ಭುಜರಹಿತ  ಪುರುಷನ ಮೂಲಕ ಅಂತಿಮ ಸ್ವಯಂಭೂರಮಣ ಸಮುದ್ರವನ್ನು ಈಜಿ ದಡ ತಲುಪಿದ ಮೇಲೆ ಎಲ್ಲರಿಗೆ ವಿಸ್ಮಯವಾಗುತ್ತದೆ, ಅಂಥದೇ ಆಶ್ಚರ್ಯಕಾರಿ  ಕಾರ್ಯವಾಯಿತು.

ಹೇಗೆ ಯಾವನೋ ಧನರಹಿತ ದರಿದ್ರ ಪುರುಷನು ವಿವಾಹ ಮಾಡುವ ಸಲುವಾಗಿ ಯಾವನೋ ಧನಾಢ್ಯ ಮನೆತನದಲ್ಲಿ ನಿಶ್ಚಿತಾರ್ಥದ ಸಂಬಂಧ ಬೆಳೆಸಿ, ಅನ್ಯ ದೇಶಗಳಿಂದಲೂ ವ್ಯಕ್ತಿಗಳನ್ನು ಕರೆಸಿ, ಸಾವಿರಾರು ಮನುಷ್ಯರಿಗೆ ಭೋಜನದ ನಿಮಂತ್ರಣ ಕೊಡುತ್ತಾನೆ. ಅವನ ಈ ಕ್ರಿಯೆಯನ್ನು ನೋಡಿ ಶ್ರೀಮಂತರು ಹಾಸ್ಯ ಮಾಡುತ್ತ ನೋಡಿರಿ! ಮನೆಯಲ್ಲಿ ಒಪ್ಪತ್ತಿನ ಊಟಕ್ಕೂ ಗತಿಯಿಲ್ಲ ಮತ್ತು ಇಷ್ಟೊಂದು ವಿಜೃಂಭಣೆಯಿಂದ ವಿವಾಹ ಮಾಡಬಯಸುತ್ತಾನೆ - ಇದನ್ನೆಲ್ಲ ಹೇಗೆ ನಿಭಾಯಿಸುವನೆಂದು ಆಡಿಕೊಳ್ಳುತ್ತಾರೆ. ಈ ಪುರುಷನೂ ತನ್ನ ಅಜ್ಞಾನಮಯ ಚೇಷ್ಟೆ(ಪ್ರವೃತ್ತಿ)ಯನ್ನು ಕಂಡು ಚಿಂತೆಗೊಳಗಾಗುತ್ತಾನೆ ರಾತ್ರಿಯಲ್ಲಿ ಒಬ್ಬನೇ ಕುಳಿತು ಚಿಂತೆ ಮಾಡುತ್ತ ನಾನು ನನ್ನ ಪುಣ್ಯ ಬಲದ ವಿಚಾರ ಮಾಡದೇ ಇಷ್ಟೊಂದು ದೀರ್ಘ ಕಾರ್ಯದ ಆರಂಭ ಮಾಡಿದ್ದೇನೆ, ಇದು ಹೇಗೆ ಪೂರ್ಣವಾಗುವ ಸಾಧ್ಯತೆಯಿದೆ? ಆದರೆ ಅಷ್ಟರಲ್ಲಿಯೇ ಅವನ ಪೂರ್ವ ಪುಣ್ಯದ ಯೋಗದಿಂದ ಯಾವನೋ ದೇವನು ಬಂದು ಚಿಂತಾಮಣಿ ರತ್ನವನ್ನು ಕೊಟ್ಟು ಹೋದನು. ಆ ಚಿಂತಾಮಣಿಯ ಪ್ರಭಾವದಿಂದ ಈ ಪುರುಷನು ಅತ್ಯಧಿಕ ವಿಜೃಂಭಣೆಯಿಂದ ವಿವಾಹ ಮಾಡಿ, ಎಲ್ಲರಿಗೂ ವಾಂಛಿತ ಭೋಜನ ನೀಡಿ ಜಗತ್ತನ್ನು ಆಶ್ಚರ್ಯಚಕಿತಗೊಳಿಸುವಂಥ ಯಶಸ್ಸನ್ನು ಪ್ರಾಪ್ತ ಮಾಡಿಕೊಂಡನು. ಅದೇ ಪ್ರಕಾರ ನಾನು ಜ್ಞಾನಧನ ರಹಿತನಾಗಿದ್ದರೂ ಗ್ರಂಥವನ್ನು ಪೂರ್ಣಗೊಳಿಸುವ ರೂಪದ ದೊಡ್ಡ ವಿವಾಹ ರಚಿಸಿದ್ದೆನು. ಅದು ಪೂರ್ಣವಾಗುವ ಎಂದರೆ ಇದು ಹೇಗೆ ಪೂರ್ಣವಾಗಬಹುದಾಗಿದೆ ? ಎನ್ನುವ ಚಿಂತೆಯು ಅತ್ಯಧಿಕವಾಗಿತ್ತು ಆದರೆ ಯಾವುದೋ ಪೂರ್ವ ಪುಣ್ಯದ ಯೋಗದಿಂದ ನನ್ನ ಇಷ್ಟದೇವರಿಂದ ಜ್ಞಾನದ ಅಂಶಮಯ ಚಿಂತಾಮಣಿಯ ಪ್ರಾಪ್ತಿಯಾಗಿ ಹೋಯಿತು. ಅದರ ಪ್ರಸಾದದಿಂದ ಕಾರ್ಯದ ನಿರ್ವಿಘ್ನ ಸಿದ್ಧಿಯಾಯಿತು. ಇದರದು ನಮಗೆ ಮಹಾನ ಸುಖದ ಆಶ್ಚರ್ಯವಿದೆ.

ಅಲ್ಲದೆ ಹೇಗೆ ಯಾವನೋ ಶಕ್ತಿರಹಿತ ಬಾಲಬುದ್ಧಿ ಪುರುಷನ ಮೂಲಕ ಕಾಷ್ಠದ ಖಡ್ಗವನ್ನು ಸೊಂಟಕ್ಕೆ ಕಟ್ಟಿಕೊಂಡು ಪ್ರಬಲ ವೈರಿಯ ಕೋಟೆಯನ್ನು ಗೆಲ್ಲುವ ಸಲುವಾಗಿ ಸಂಗ್ರಾಮಗೈದು, ಜಯಶಾಲಿಯಾಗಿ ಕೋಟೆಯನ್ನು ಪ್ರಾಪ್ತ ಮಾಡಿಕೊಂಡ ನಂತರ ಅವನು ಜಗತ್ತಿಗೆ ಅಚ್ಚರಿಯನ್ನುಂಟು ಮಾಡುವ ಕೀರ್ತಿ ಪಡೆಯುತ್ತಾನೆ. ಅದೇ ಪ್ರಕಾರ

ಜ್ಞಾನ ಬಲದಿಂದ ರಹಿತ, ಅಲ್ಪ ಅಕ್ಷರಜ್ಞಾನದ ಮೂಲಕ ಇಂಥ ಮಹಾನ ಗ್ರಂಥದ ಪೂರ್ಣತೆಯ ಕಾರ್ಯವೂ ಆಶ್ಚರ್ಯಕಾರಕವಿದೆ.

ಇತ್ಯಾದಿ ಆಶ್ಚರ್ಯಸಹಿತ ಈ ಗ್ರಂಥದ ಪೂರ್ಣತೆಯಿಂದ ಹರ್ಷವಾಗಿದೆ. ಗ್ರಂಥಕರ್ತೃಗಳು ತಮ್ಮ ಜನ್ಮವು ಧನ್ಯವೆಂದು ಮನ್ನಿಸುತ್ತಾರೆ. ಈ ದೇಹದಿಂದ ಯಾವ ಶುಭಕಾರ್ಯ ಮಾಡಬಯಸುತ್ತಿದ್ದರು ಅದನ್ನು ಮಾಡಿರುವುದರಿಂದ ತಮ್ಮ ಜನ್ಮವನ್ನು ಧನ್ಯವೆಂದು ಮನ್ನಿಸಿದ್ದಾರೆ. ಮುಂಗಡ (ಸಂಚಕಾರ)ದ ಸಮಾನ ಈ ಕಾರ್ಯದ ಮೂಲಕ ಪರಭವ ಸುಧಾರಣೆಯ ಆಶೆಯುಂಟಾಗಿರುವುದರಿಂದ ಪರಮ ಸುಖವಾಗಿದೆ. ಉತ್ಪನ್ನವಾಗಿರುವ ಅನೇಕ ಜ್ಞಾನ ತರಂಗಗಳ ಕಥನವು ವಿದ್ಯಮಾನವಿರುವುದರಿಂದ ಇದರ ಅಧ್ಯಯನದ ಮೂಲಕ ಸುದೃಷ್ಟಿಯಾಗುತ್ತದೆ. ಅನೇಕ ಜ್ಞಾನತರಂಗಗಳ ರಹಸ್ಯವನ್ನು ತಿಳಿದುಕೊಳ್ಳುವುದರಿಂದ, ತತ್ತ್ವಜ್ಞಾನದ ಪ್ರಾಪ್ತಿ ಮಾಡಿಕೊಂಡು ಪರಮ ಸುಖಿಯಾಗಿ ಜೀವನು ಮೋಕ್ಷಮಾರ್ಗದ ಜ್ಞಾತಾನಾಗುತ್ತಾನೆ. ಪುಣ್ಯ-ಪಾಪಗಳ ಶುಭಾಶುಭ ಫಲದ್ದೂ ವೇತ್ತಾರನಾಗುತ್ತಾನೆ. ಉಚ್ಚಪದ ಪಡೆದು ಪರಂಪರೆಯಿಂದ ಜನ್ಮ-ಮರಣಗಳು ನಾಶವಾಗಿ ಹೋಗುತ್ತವೆ- ಹೀಗೆ ತಿಳಿದು ಈ ಗ್ರಂಥದ ಅಭ್ಯಾಸದಲ್ಲಿ ಪ್ರವೃತ್ತಿ ಮಾಡುವುದು ಯೋಗ್ಯವಿದೆ. ಈ ರೀತಿಯಿಂದ ತಮ್ಮ ಆಲೋಚನೆಯೊಂದಿಗೆ ಈ ಗ್ರಂಥದ ಬಾಲಬೋಧ ವಚನಿಕೆಯ ರೂಪದ ಟೀಕೆಯನ್ನು ಆದಿ-ಅಂತ್ಯದಲ್ಲಿ ತಮ್ಮ ಇಷ್ಟದೇವರಿಗೆ ನಮಸ್ಕಾರ ಮಾಡಿ ಪೂರ್ಣ ಮಾಡಲಾಗಿದೆ.

**ಎಂಟು ಗುಣ ಸಹಿತರು, ಎಂಟು ಕರ್ಮ ರಹಿತರು, ಸಿದ್ಧರೆನ್ನುವವರು ಅವರು ನಮ್ಮ ದೇವರು ।**
**ನಾಲ್ಕು ಘಾತಿ ಕರ್ಮಗಳ ನಿವಾರಣೆ ಮಾಡಿ ನಾಲ್ಕು ಗುಣಗಳ ಧಾರಕ ಸಕಲ ಪರಮಾತ್ಮನ ಸೇವಿಪೆನು ॥**
**ಅವರ ಯಾವ ವಾಣಿಯಿದೆ ಅದು ಧರ್ಮಕಥೆಯಿದೆ, ಶಿವಪದವ ದರ್ಶಿಪುದು ಅದನು ನಾನು ಧ್ಯಾನಿಪೆನು ।**
**ಆ ನಗ್ನ ಶರೀರಿ ಜಗಜನರ ಪೀಡೆ ನಾಶಿಪರೆಲ್ಲ ತಪಧರರು ನಿಜದಲಿ ಧೀರರು ಅವರ ಗುಣ ಪಾಡುವೆನು ॥೧॥**

**ಈ ದೇವ ಧರ್ಮ ಗುರು ನೆಲೆಸಲಿ ನನ್ನ ಹೃದಯದಲಿ ಓ ಶಿವಸುಖಕರ ಜಗನಾಥರೇ ।**
**ನಾನು ಇವರ ದಾಸನು ಬೇರೆ ಯಾವುದಿಲ್ಲ ಆಸೆಯು ತಣಿಸಲಿ ಇರಿಸುತ ಚರಣದಲೇ ॥**
**ಈ ಬಯಕೆಯು ನಮ್ಮದು ಗುಣಕಾರಿಯಿದೆ ತಮ್ಮಯ ಸ್ತುತಿ ಪಾಪನಾಶಿಪುದು ಚೆನ್ನಾಗಿಯೇ ।**
**ಅದ ನೀಡಿರಿ ನಮಗೆ ಮರೆಯದೇ ದಯೆಪಾಲಿಸಿ ತಲುಪಿಸಿ ನಮ್ಮನು ಮೋಕ್ಷದ ಮನೆಗೇ ॥೨॥**

ಈ ಪ್ರಕಾರ ಸುದೃಷ್ಟಿ ತರಂಗಿಣಿಯೆಂಬ ಹೆಸರಿನ ಗ್ರಂಥದಲ್ಲಿ ಕವಿ ಆಲೋಚನೆ ಮೊದಲಾದವುಗಳ ವರ್ಣನೆ ಮಾಡುವಂಥ ನಲವತ್ತೆರಡನೆಯ ಪರ್ವವು ಸಂಪೂರ್ಣವಾಯಿತು.

ಈ ಪ್ರಕಾರ ಶ್ರೀ ಪಂಡಿತ ಟೇಕಚಂದರು ಬರೆದಿರುವ ಸುದೃಷ್ಟಿತರಂಗಿಣಿಯೆಂಬ ಹೆಸರಿನ ಗ್ರಂಥ ಮತ್ತು ಅದರ ಬಾಲಬೋಧಿನಿ ಟೀಕೆಯ ಕನ್ನಡ ಅನುವಾದವು ಸಂಪೂರ್ಣವಾಯಿತು.

ಭದ್ರಂ ಶುಭಂ ಮಂಗಲಂ

★★★★★

# ಆಗಮ ಮಹಾಸಾಗರದ ಅಮೌಲ್ಯ ಮೌಕ್ತಿಕಗಳು

■ ಕ್ರೋಧರೂಪದ ಅಗ್ನಿಯು ಪುರುಷನ ಒಳ್ಳೆಯ ಗುಣಗಳನ್ನು ದಗ್ಧ ಮಾಡುವಂಥದ್ದಿದೆ ಮತ್ತು ಪರಜೀವಗಳ ಘಾತ ಮಾಡುವಂಥದ್ದಿದೆ, ಆದುದರಿಂದ ಇದನ್ನು ಕ್ಷಮಾರೂಪದ ಜಲದಿಂದ ನಂದಿಸಬೇಕು. ಬೇರೆ ಪ್ರಕಾರದಿಂದ ಇದು ನಂದುವುದಿಲ್ಲ ಮತ್ತು ಕ್ಷಮಾಗುಣವು ಎಲ್ಲ ಗುಣಗಳಲ್ಲಿ ಮುಖ್ಯವಿದೆ. ಆದುದರಿಂದ ಕ್ರೋಧವನ್ನು ಬಿಟ್ಟುಕೊಟ್ಟು ಕ್ಷಮೆಯನ್ನು ಗ್ರಹಣ ಮಾಡಬೇಕೆಂಬ ಉಪದೇಶವಿದೆ.

■ ಯಾವ ಪ್ರಕಾರ ನಿರ್ಮಲ ಮತ್ತು ಶೀತಲವಾದ ಜಲವನ್ನು ಕುಡಿಯುವುದರಿಂದ ಪಿತ್ತದ ದಾಹರೂಪವಾದ ವ್ಯಾಧಿಯು ದೂರವಾಗಿ ಸಾತಾ ಆಗುತ್ತದೆ, ಅದೇ ಪ್ರಕಾರ ಈ ಜ್ಞಾನವು ಯಾವಾಗ ರಾಗಾದಿಗಳ ಮಲದಿಂದ ರಹಿತವಾಗಿ ನಿರ್ಮಲವಾಗುತ್ತದೆ ಆಗ ಆಕುಲತೆಯಿಲ್ಲದೆ ಜೀವನಿಗೆ ಶಾಂತಭಾವವಾಗುತ್ತದೆ. ಆದುದರಿಂದ ಅದರ ಭಾವನೆ ಮಾಡಿ, ಶ್ರದ್ಧೆ, ಪ್ರತೀತಿಯಿಂದ ಅದರ ಅನುಭವ ಮಾಡಿ ಅದರಲ್ಲಿ ತನ್ಮಯವಾದರೆ ಜರಾ-ಮರಣರೂಪದ ದಾಹವು-ವೇದನೆಯು ಅಳಿಸಿ ಹೋಗುತ್ತದೆ ಮತ್ತು ಜೀವನು ಸಂಸಾರದಿಂದ ನಿವೃತ್ತನಾಗಿ ಸುಖರೂಪನಾಗುತ್ತಾನೆ, ಆದುದರಿಂದ ಜ್ಞಾನದಲ್ಲಿ ಲೀನರಾಗಬೇಕೆಂದು ಭವ್ಯ ಜೀವರುಗಳಿಗೆ ಉಪದೇಶವಿದೆ.

■ ಸಂಸಾರದ ಬೀಜವು 'ಜ್ಞಾನಾವರಣಾದಿ' ಕರ್ಮಗಳಿವೆ. ಈ ಕರ್ಮಗಳು ಭಾವಶ್ರಮಣನಿಗೆ ಧ್ಯಾನರೂಪದ ಅಗ್ನಿಯಿಂದ ಭಸ್ಮವಾಗಿ ಹೋಗುತ್ತವೆ. ಆದುದರಿಂದ ಮತ್ತೆ ಸಂಸಾರರೂಪದ ಅಂಕುರವು ಯಾವುದರಿಂದ ಆಗುವುದು? ಅದಕ್ಕಾಗಿ ಭಾವಶ್ರಮಣರಾಗಿ ಧರ್ಮ-ಶುಕ್ಲಧ್ಯಾನದಿಂದ ಕರ್ಮಗಳನ್ನು ನಾಶಮಾಡುವುದು ಯೋಗ್ಯವಿದೆಯೆಂಬ ಉಪದೇಶವಿದೆ. ಕರ್ಮವು ಅನಾದಿಯಿದೆ, ಅದರ ಕೊನೆಯೇ ಇಲ್ಲವೆಂದು ಯಾರಾದರೂ ಸರ್ವಥಾ ಏಕಾಂತವಾದಿಗಳು ಅನ್ಯಥಾ ಹೇಳುತ್ತಿದ್ದರೆ ಅವರದೂ ನಿಷೇಧವಾಯಿತು. ಬೀಜವು ಅನಾದಿಯಿದ್ದರೂ ಅದು ಒಂದುಬಾರಿ ದಗ್ಧವಾಗಿ ಹೋದರೆ ಮತ್ತೆ ಅಂಕುರಿಸುವುದಿಲ್ಲ, ಅದೇ ರೀತಿ ತಿಳಿಯುವುದು.

■ ಒಂದು ವೇಳೆ ಯಾರಾದರೂ ಪರಸ್ಪರ ಮಾತನಾಡುವವರಿದ್ದಾಗ ಪರಸ್ಪರದಲ್ಲಿ ಮಾತನಾಡುವುದು ಸಂಭವವಿದೆ, ಆದರೆ ಆತ್ಮನಂತೂ ಅಮೂರ್ತಿಕನಿದ್ದು ಅವನಿಗೆ ವಚನವುಚ್ಚರಣೆಯಿಲ್ಲ ಮತ್ತು ಆ ರೂಪಿ ಪುದ್ಗಲವಿದೆ ಅದು ಅಚೇತನವಿದೆ, ಅದು ಯಾರನ್ನೂ ತಿಳಿಯುವುದಿಲ್ಲ ನೋಡುವುದಿಲ್ಲ, ಆದುದರಿಂದ ನಾನು ಯಾರೊಡನೆ ಮಾತನಾಡುವುದು ? ಅದಕ್ಕಾಗಿಯೇ ನನ್ನದು ಮೌನವಿದೆಯೆಂದು ಧ್ಯಾನ ಮಾಡುವವನು ಹೇಳುತ್ತಾನೆ.

■ ಊರ್ಧ್ವ, ಅಧೋ, ಮಧ್ಯ ಲೋಕದಲ್ಲಿ ಜೀವನು ಏಕಾಕಿಯಿದ್ದಾನೆ, ಇವನ ಸಂಬಂಧಿಗಳು ಬೇರೆ ಯಾರೂ ಇಲ್ಲವೆಂದು ಮುನಿಗಳು ಭಾವನೆ ಮಾಡುವರು, ಇದು ಪರಮಾರ್ಥರೂಪದ ಏಕತ್ವಭಾವನೆಯಿದೆ. ಇಂಥ ಭಾವನೆಯು ನಿರಂತರವಾಗಿ ಇರುವಂಥ ಮುನಿಯೇ ಮೋಕ್ಷಮಾರ್ಗಿಯಾಗಿದ್ದಾನೆ. ದೀಕ್ಷೆಯ ಅಂಗೀಕಾರ ಮಾಡಿಯೂ ಕೂಡ ಲೌಕಿಕ ಜನರಿಂದ ಲಾಲನೆ-ಪಾಲನೆಯ ಭಾವವನ್ನಿಡುವವನು ಮೋಕ್ಷಮಾರ್ಗಿಯಿಲ್ಲ.

■ ಮೊದಲಂತೂ ಈ ಪುರುಷನ ಸಲುವಾಗಿ ಜ್ಞಾನವು ಸಾರವಿದೆ. ಏಕೆಂದರೆ ಜ್ಞಾನದಿಂದ ಎಲ್ಲ ಹೇಯ-ಉಪಾದೇಯಗಳು ತಿಳಿದು ಬರುತ್ತವೆ. ಪುನಃ ಆ ಪುರುಷನ ಸಲುವಾಗಿ ಸಮ್ಯಕ್ತ್ವವು ನಿಶ್ಚಯದಿಂದ ಸಾರವಿದೆ. ಏಕೆಂದರೆ ಸಮ್ಯಕ್ತ್ವವಿಲ್ಲದೆ ಜ್ಞಾನವು ಮಿಥ್ಯೆಯೆಂಬ ಹೆಸರು ಪಡೆಯುತ್ತದೆ, ಸಮ್ಯಕ್ತ್ವದಿಂದ ಚಾರಿತ್ರವಾಗುತ್ತದೆ. ಏಕೆಂದರೆ ಸಮ್ಯಕ್ತ್ವವಿಲ್ಲದ ಚಾರಿತ್ರವು ಕೂಡ ಮಿಥ್ಯೆಯೇ ಇದೆ. ಚಾರಿತ್ರದಿಂದ ನಿರ್ವಾಣವಾಗುತ್ತದೆ.

■ ಯಾವ ಮುನಿಗಳು ಸಮ್ಯಗ್ದರ್ಶನ, ಶ್ರೇಷ್ಠ (ವಿಶಿಷ್ಟ) ಜ್ಞಾನ ಮತ್ತು ನಿರ್ದೋಷ ಚಾರಿತ್ರಗಳಿಂದ ಶುದ್ಧರಿರುವುದರಿಂದ ಭಾವಸಹಿತರಿದ್ದಾರೆ ಮತ್ತು ಯಾರ ಮಾಯೆಯು ಪ್ರಣಷ್ಟವಾಗಿ ಹೋಗಿದೆ ಎಂದರೆ ಯಾರು ಕಪಟ ಪರಿಣಾಮದಿಂದ ರಹಿತರಿದ್ದಾರೆ ಅವರು ಧನ್ಯರಿದ್ದಾರೆ, ಅವರ ಸಲುವಾಗಿ ಮನ-ವಚನ-ಕಾಯದಿಂದ ಯಾವಾಗಲೂ ನಮಸ್ಕಾರವಿರಲಿ...